ಅಭಿವಂದನಾ



ಅಭಿವಂದನಾ

ಪ್ರೊ|| ಹೆಚ್.ಕೆ. ಸಿದ್ಧಗಂಗಯ್ಯ
ಸಂಪಾದಕರು

ಪಂಡಿತ ಭೋಗನಂಜಪ್ಪ
ಸಹಸಂಪಾದಕರು

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ
ಶ್ರೀ ಆದಿಚುಂಚನಗಿರಿಕ್ಷೇತ್ರ, ಮಂಡ್ಯ ಜಿಲ್ಲೆ.

ಅಭಿವಂದನಾ: ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರ ಸುವರ್ಣಮಹೋತ್ಸವಬಿ ಸಂದರ್ಭದ ಅಭಿವಂದನಾ ಗ್ರಂಥ. ಪ್ರಕಾಶಕರು: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಶ್ರೀ ಆದಿಚುಂಚನಗಿರಿ ಕ್ಷೇತ್ರ. ಪುಟಗಳು 32+32+664=728.

ಪ್ರಥಮ ಮುದ್ರಣ : 1996

ಪ್ರತಿಗಳು : 5,000

ಬೆಲೆ : 200/-

ಮುದ್ರಣ:
ಅಭಿಮಾನಿ ಪ್ರಕಾಶನ,
ಡಾ|| ರಾಜ್‌ಕುಮಾರ್ ರಸ್ತೆ,
ರಾಜಾಜಿನಗರ, ಬೆಂಗಳೂರು-560 10.

ಅಭಿವಂದನಾ

ಅಂತರಂಗ

ಸಾಹಿತ್ಯ ಪ್ರಭಾ

ಆಶೀರ್ವಾದ

ಮಠಾಧಿಪತಿಗಳಾದ ನಾವು ಕೇವಲ ನಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇವೆ 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' ಎಂಬ ಉಕ್ತಿಯಂತೆ 'ಮೋಕ್ಷ-ಜಗತ್ತಿಗೆ ಹಿತ' ಈ ಎರಡನ್ನೂ ಸಾಧಿಸುವುದರಲ್ಲಿ ನಾವು ತೊಡಗಿದ್ದೇವೆ. ಲಕ್ಷಾಂತರ ಮಂದಿ ವಿದ್ಯಾರ್ಥಿಗಳು ಮತ್ತು ಜನರು ನಮ್ಮ ಸಂಸ್ಥೆಗಳಿಂದ ಉಪಕೃತರಾಗಿದ್ದಾರೆ. ಈ ಕಾರಣದಿಂದಾಗಿ ಭಕ್ತಾದಿಗಳೆಲ್ಲರೂ ಸೇರಿ ನಮ್ಮ ಸುವರ್ಣಮಹೋತ್ಸವವನ್ನು ಆಚರಿಸುತ್ತಿದ್ದಾರೆ. ಅವರ ಭಕ್ತಿ, ಪ್ರೀತಿ, ವಿಶ್ವಾಸ, ಸೇವಾಬುದ್ಧಿಗಳಿಂದ ನಾವು ತುಂಬಾ ಸಂತುಷ್ಟರಾಗಿದ್ದೇವೆ.

ಈ ಸಂದರ್ಭದಲ್ಲಿ ಶಾಶ್ವತವಾಗಿ ಉಳಿಯುವಂತಹ ಉಪಯುಕ್ತ ಲೇಖನಗಳನ್ನು ಒಳಗೊಂಡ ಕೃತಿಯೊಂದನ್ನು ಹೊರತರಬೇಕೆಂಬ ಭಕ್ತಾದಿಗಳ ಸದಾಶಯದಂತೆ ನಮ್ಮ ಮಠದ ಸದ್ಭಕ್ತರುಗಳಾದ ಪ್ರೊ॥ ಹೆಚ್.ಕೆ. ಸಿದ್ಧಗಂಗಯ್ಯನವರು ಮತ್ತು ಪಂಡಿತ ಭೋಗನಂಜಪ್ಪನವರು ಈ ಸಂಪಾದನಾ ಕಾರ್ಯವನ್ನು ಕೈಗೆತ್ತಿಕೊಂಡು ತುಂಬಾ ಶ್ರದ್ಧೆಯಿಂದ ನಿರ್ವಹಿಸಿದ್ದಾರೆ. ಇದರಲ್ಲಿ ಸಾಧ್ಯವಾದಷ್ಟು ಎಲ್ಲ ದರ್ಶನಗಳ ಸಂಗ್ರಹವನ್ನೂ, ಸಾಂಸ್ಕೃತಿಕ ಹರವನ್ನೂ, ಸಾಹಿತ್ಯದ ಸೊಬಗನ್ನೂ ಪರಿಚಯ ಮಾಡಿಕೊಡಲು ಪ್ರಯತ್ನಿಸಿದ್ದಾರೆ. ಈ ಕೃತಿಯ ಅವಲೋಕನದಿಂದ ಜಿಜ್ಞಾಸುಗಳಿಗೆ ಲಾಭ ದೊರೆಯುತ್ತದೆಂದು ಭಾವಿಸುತ್ತೇವೆ.

ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅದ್ವಿತೀಯ ಪಂಡಿತರಾದ ಪ್ರೊ॥ ಹೆಚ್.ಕೆ. ಸಿದ್ಧಗಂಗಯ್ಯನವರು ಅನೇಕ ವರ್ಷಗಳಿಂದಲೂ ನಮ್ಮ ಮಠದಲ್ಲಿಯೇ ಇದ್ದು ಅನುಪಮವಾದ ಸಾಹಿತ್ಯ ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗೆ ಗುರುಹಿರಿಯರಲ್ಲಿ ಹಾಗೂ ಮಠಗಳ ಬಗೆಗೆ ಇರುವ ಅನನ್ಯ ಭಕ್ತಿಯನ್ನು ಕಂಡು ನಾವು ತುಂಬಾ ಸಂತೋಷಪಟ್ಟಿದ್ದೇವೆ. ಶ್ರೀಯುತರು ಈ ಇಳಿವಯಸ್ಸಿನಲ್ಲಿಯೂ ಆಸೀರು ಶ್ರದ್ಧಾಭಕ್ತಿಗಳಿಂದ ಸರಸ್ವತೀ ದೇವಿಯ ಆರಾಧನೆಯನ್ನು ಮಾಡುತ್ತಿದ್ದಾರೆ. ಇವರು ತಮ್ಮ ವಿನಯ, ಸರಳಜೀವನ, ಆಳವಾದ ಪಾಂಡಿತ್ಯ, ಸೇವಾಮನೋಭಾವಗಳಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಶ್ರೀಯುತ ಭೋಗನಂಜಪ್ಪನವರು ಹಿಡಿದ ಕಾರ್ಯವನ್ನು ಬಿಡದೆ ಪೂರೈಸುವ ಸ್ವಭಾವದವರು. ಇವರು ಶ್ರೀ ಹೆಚ್.ಕೆ. ಸಿದ್ಧಗಂಗಯ್ಯನವರ ಆತ್ಮೀಯ ಶಿಷ್ಯರಾಗಿದ್ದು ಒಳ್ಳೆಯ ಪಾಂಡಿತ್ಯವನ್ನು ಗಳಿಸಿಕೊಂಡಿರುವ ಶ್ರದ್ಧಾವಂತರು. ಈ ಇಬ್ಬರೂ ದೊರೆತ ಕಡಿಮೆ ಅವಧಿಯಲ್ಲಿಯೇ ಲೇಖನಗಳನ್ನು ಸಂಗ್ರಹಿ, ಸಂಪಾದಿಸಿ 'ಅಭಿವಂದನಾ' ಕೃತಿಯನ್ನು ನಮಗೆ ಸಮರ್ಪಿಸಿದ್ದಾರೆ.

ಇವರಿಗೆ ಶ್ರೀ ಕಾಲಭೈರವೇಶ್ವರ ಸ್ವಾಮಿಯು ಸಕಲ ಸನ್ಮಂಗಳಗಳನ್ನು ಅನುಗ್ರಹಿಸಲೆಂದು ತುಂಬು ಹೃದಯದಿಂದ ಹಾರೈಸುತ್ತೇವೆ.

ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು

ಒಂದು ಮಾತು

ಮಹಾತ್ಮರು, ಮಹಾಪುರುಷರು ತಮ್ಮನ್ನು ಲೋಕಸೇವೆಗೆ ಸಮರ್ಪಿಸಿಕೊಂಡಿರುತ್ತಾರೆ. ಕರ್ಮಯೋಗಿಗಳಾಗಿ, ಧರ್ಮೋಪದೇಶಕರಾಗಿ ಲೋಕದ ಸುಖಶಾಂತಿಗಳಿಗೆ, ಜನತೆಯ ಉದ್ಧಾರಕ್ಕೆ ಪರಿಶ್ರಮಿಸಿದ ಈ ಮಹಾನುಭಾವರ ಹುಟ್ಟು ಹಬ್ಬವನ್ನು ಆಚರಿಸುವ ಸಂಪ್ರದಾಯ ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ಈ ಜನ್ಮೋತ್ಸವಗಳಿಂದ ಆ ತ್ಯಾಗಜೀವಿಗಳಿಗೆ ಕೃತಜ್ಞತೆ ಮತ್ತು ನಮನಗಳನ್ನು ಸಲ್ಲಿಸುವುದರ ಜೊತೆಗೆ ಅವರಿತ್ತ ಆದರ್ಶಗಳನ್ನು ಸ್ಮರಿಸಿಕೊಂಡು, ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದುಕೊಂಡು ನೆಮ್ಮದಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಎಲ್ಲರೂ ತಮ್ಮ ಜನ್ಮೋತ್ಸವಗಳನ್ನು ತಮ್ಮ ತಮ್ಮ ಮನೆಗಳಲ್ಲಿ ಆಚರಿಸಿಕೊಳ್ಳುವುದುಂಟು. ಇವು ಕೇವಲ ಸಂತೋಷಕೂಟಗಳು. ಮಹಾತ್ಮರ ಜನ್ಮೋತ್ಸವಗಳು ಸಾರ್ವಜನಿಕವಾಗಿರುತ್ತವೆ.

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಸಣ್ಣಹಳ್ಳಿಯ ಸಾಮಾನ್ಯ ಕುಟುಂಬವೊಂದರಲ್ಲಿ ಜನಿಸಿ, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಸಿದ್ಧಸಿಂಹಾಸನಾರೋಹಣ ಮಾಡಿ, ಗ್ರಾಮೀಣ ಬಡಜನತೆಯ ಹಂಬಲದ ಕಲ್ಪವೃಕ್ಷವಾಗಿ ಬೆಳೆದು, ನೂರಾರು ವಿದ್ಯಾಸಂಸ್ಥೆಗಳನ್ನು, ಆರೋಗ್ಯ ಸಂಸ್ಥೆಗಳನ್ನು, ತಾಂತ್ರಿಕ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ; ಜ್ಞಾನ ಸೂರ್ಯರಾಗಿ ಬೆಳಗಿ ತಮ್ಮ ದಿವ್ಯೋಪದೇಶಗಳಿಂದ ಜನರ ಹೃದಯಗಳಲ್ಲಿ ತುಂಬಿದ್ದ ಅಂಧಕಾರವನ್ನು ಹೋಗಲಾಡಿಸಿದ್ದಾರೆ. ಈ ಯೋಗಿವರ್ಯರ ಕೇವಲ ಎರಡು ದಶಕಗಳ ಸಾಧನೆಯು ಎಲ್ಲರನ್ನೂ ಮೂಕವಿಸ್ಮಿತರನ್ನಾಗಿಸಿದೆ. ಇವರ ಹೃದಯ ಸಂಪತ್ತು ಅಪಾರವಾದುದು. ಇವರು ಸ್ವಚ್ಛ ಸನಾತನ ಧರ್ಮ ಸಂಸ್ಕೃತಿಗಳ ಸಾಕಾರಮೂರ್ತಿ. ಇವರ ದಯೆ, ಮೃದುವಚನ, ಲೋಕಸಂಗ್ರಹ ಚಿಂತನ, ಮುಖದ ಮಂದಹಾಸಗಳಿಗೆ ಮಾರು ಹೋಗದವರಿಲ್ಲ; ಇವರು ಸ್ಥಾಪಿಸಿರುವ ಸುಮಾರು ಇನ್ನೂರ ಮೂವತ್ತು ವಿವಿಧ ಸಂಸ್ಥೆಗಳಿಂದ ಉಪಕೃತರಾಗದವರಿಲ್ಲ. ಅನಾಥ ಮಕ್ಕಳು, ಅಂಗವಿಕಲರು, ಪರಿತ್ಯಕ್ತ ವೃದ್ಧರು ಮತ್ತು ಅನಾಥ ಮಹಿಳೆಯರಿಗಾಗಿ ಪ್ರತ್ಯೇಕ ಸಂಸ್ಥೆಗಳನ್ನು ತೆರೆದು ಅವರಿಗೆ ಆಶ್ರಯ ಕಲ್ಪಿಸಿದ್ದಾರೆ. ಮಹಾಸ್ವಾಮಿಗಳವರ ಸೇವೆಯು ಬಹುಮುಖವಾದುದು. ಜಾತಿ, ಮತ ಭೇದ ಇವರ ಹತ್ತಿರ ಸುಳಿಯುವಂತಿಲ್ಲ. ಇವರು ಎಲ್ಲರ ಗುರುಗಳೂ ಆಗಿದ್ದಾರೆ.

ಮಹಾಸ್ವಾಮಿಗಳವರು ಪಟ್ಟಾಭಿಷಿಕ್ತರಾಗಿ ಇಪ್ಪತ್ತೆರಡು ವರ್ಷಗಳಾದವು; ಜನಿಸಿ ಐವತ್ತು ವರ್ಷಗಳಾದವು. ಐವತ್ತು ಸಾರ್ಥಕ ಸಂವತ್ಸರಗಳು ತುಂಬಿದ ಈ ಶುಭ ಸಂದರ್ಭದಲ್ಲಿ ಭಕ್ತರು ಮತ್ತು ಅಭಿಮಾನಿಗಳು ಮಹಾಸ್ವಾಮಿಗಳವರ ಸುವರ್ಣ ಮಹೋತ್ಸವವನ್ನು ಆಚರಿಸಲು ನಿರ್ಣಯಿಸಿದರು. ಸಮಾರಂಭಗಳು ಮುಗಿದನಂತರ ಮರೆತು

ಹೋಗುತ್ತವೆ. ಆದ್ದರಿಂದ ಈ ಸಂದರ್ಭದಲ್ಲಿ ಶಾಶ್ವತ ಕಾರ್ಯಗಳನ್ನು ಮಾಡಲು ಆಲೋಚಿಸಿದರು. ತತ್ಫಲವಾಗಿ ಅಂತಹ ಕಾರ್ಯಗಳಲ್ಲೊಂದಾದ 'ಅಭಿವಂದನಾ'ಗ್ರಂಥವೊಂದನ್ನು ಹೊರತರಲು ನಿರ್ಣಯಿಸಲಾಯಿತು.

ನಮ್ಮ ಮುಂದಿದ್ದ ಕಾಲ ಕೇವಲ ನಲವತ್ತೈದು ದಿವಸಗಳು. ಸಂಪಾದಕ ಸಮಿತಿಯನ್ನು ರಚಿಸಿ, ಸಭೆಗಳನ್ನು ಕರೆದು ಚರ್ಚಿಸಿ, ಲೇಖನಗಳನ್ನು ಸಂಗ್ರಹಿಸಿ ಈ ಕೃತಿಯನ್ನು ಹೊರತರುವುದು ಸರ್ವಥಾ ಅಸಾಧ್ಯವೆಂದು ನನಗೆ ತೋರಿತು. ಪೂಜ್ಯ ಸ್ವಾಮಿಗಳವರಲ್ಲಿ ಈ ವಿಚಾರವನ್ನು ಅರಿಕೆ ಮಾಡಿಕೊಂಡೆನು. ಆಗ ಅವರು ನನ್ನ ಅಭಿಪ್ರಾಯವನ್ನು ಒಪ್ಪಿಕೊಂಡು, ಶ್ರೀ ಭೋಗನಂಜಪ್ಪನವರನ್ನು ಸಹಸಂಪಾದಕರನ್ನಾಗಿ ತೆಗೆದುಕೊಂಡು ಕಾರ್ಯವನ್ನು ಪ್ರಾರಂಭಿಸಿ, ದೇವರ ಕೃಪೆಯಿಂದ ಅದು ಸಕಾಲದಲ್ಲಿ ಮುಗಿಯುತ್ತದೆಂದು ಅಪ್ಪಣೆ ಕೊಡಿಸಿದರು. ಕೂಡಲೇ ಸುಪ್ರಸಿದ್ಧ ವಿದ್ವಾಂಸರಿಗೆ ಲೇಖನಗಳನ್ನು ಕಳುಹಿಸಿಕೊಡುವಂತೆ ಮನವಿ ಪತ್ರಗಳನ್ನು ಬರೆಯಲಾಯಿತು. ವಿದ್ವಾಂಸರು ನಮ್ಮ ಕೋರಿಕೆಯನ್ನು ಮನ್ನಿಸಿ ಸಕಾಲದಲ್ಲಿ ಲೇಖನಗಳನ್ನು ಕಳುಹಿಸಿ ಕೊಟ್ಟರು. ದರ್ಶನ, ಸಂಸ್ಕೃತಿ, ಸಾಹಿತ್ಯ ಮುಂತಾದ ವಿಷಯಗಳ ಬಗ್ಗೆ ಪ್ರೌಢಲೇಖನಗಳು ದೊರೆತವು.

ಲೇಖನಗಳನ್ನು ಸಂಗ್ರಹಿಸಿದುದಾಯಿತು. ಇನ್ನು ಅಲ್ಪಾವಧಿಯಲ್ಲಿ ಮುದ್ರಣದ ಸಮಸ್ಯೆ ಬೃಹದಾಕಾರವಾಗಿ ಮುಂದೆ ನಿಂತಿತು. ಏಕಕಾಲದಲ್ಲಿ ಯುಗಯೋಗಿ, ಅಭಿವಂದನಾ, ಜನಪದ ಆಧಾರಿತ ಸಿರಿಚುಂಚನಗಿರಿ, ಸುವರ್ಣ ಪರುಷಗಳೆಂಬ ನಾಲ್ಕು ಕೃತಿಗಳನ್ನು ಮುದ್ರಿಸಬೇಕಾಗಿದ್ದಿತು. ಸಾಮಾನ್ಯ ಮುದ್ರಣಾಲಯದಲ್ಲಿ ಇದು ಆಗದ ಬದುಕು. 'ಅಭಿಮಾನಿ ಪ್ರಕಾಶನ' ದವರು ತಮ್ಮ ಇತರೆ ಮುದ್ರಣ ಕಾರ್ಯಗಳನ್ನು ನಿಲ್ಲಿಸಿ ಈ ಕೃತಿಗಳನ್ನು ಹೇಗಾದರೂ ಮುದ್ರಿಸಿಕೊಡಲು ಮುಂದೆ ಬಂದರು. ಇದರಿಂದ ನಮ್ಮ ನಿರಾಶೆ ಕಳೆಯಿತಾದರೂ, ಮನಸ್ಸಿನ ವ್ಯಾಕುಲ ಉಳಿಯಿತು. ದೈವಕೃಪೆಯೋ, ನಮ್ಮ ಭಾಗ್ಯವೋ ನಾಲ್ಕೂ ಕೃತಿಗಳು ಮುದ್ರಣಗೊಂಡವು. ಸಮಾಧಾನದ ಉಸಿರನ್ನಾಡುವಂತಾಯಿತು.

ಇದೊಂದು ನನ್ನ ಕಿರಿಯ ಸೇವೆ ಅಥವಾ ಅಳಿಲು ಸೇವೆ. ಈ ಭಾಗ್ಯವನ್ನು ನನಗೆ ದೊರಕಿಸಿಕೊಟ್ಟ ಪೂಜ್ಯ ಮಹಾಸ್ವಾಮಿಗಳವರ ಚರಣಕಮಲಗಳಲ್ಲಿ 'ಅಭಿವಂದನಾ' ಗ್ರಂಥಪುಷ್ಪವನ್ನು ಭಕ್ತಿಪೂರ್ವಕವಾಗಿ ಸಮರ್ಪಿಸಿದ್ದೇನೆ.

ಸುವರ್ಣವಿಲ್ಲದೆ ಆಭರಣಗಳನ್ನು ಮಾಡಲು ಸಾಧ್ಯವೇ? ಲೇಖನಗಳಿಲ್ಲದೆ ಕೃತಿ ಸಂಪಾದನೆಯೆಂತು? ಸಕಾಲದಲ್ಲಿ ಲೇಖನಗಳನ್ನು ಕಳುಹಿಸಿಕೊಟ್ಟ ಎಲ್ಲ ವಿದ್ವಾಂಸರಿಗೂ ನನ್ನ ಗೌರವಪೂರ್ವಕ ವಂದನೆಗಳು.

ನನ್ನೊಡನೆ ಹಗಲು ರಾತ್ರಿಯೆನ್ನದೆ ಶ್ರದ್ಧೆಯಿಂದ ಕೆಲಸ ಮಾಡಿದ ಶ್ರೀ ಭೋಗನಂಜಪ್ಪನವರಿಗೂ, ವಿರಾಮವಿರದಿದ್ದರೂ ಹೇಗೋ ವಿರಾಮ ಕಲ್ಪಿಸಿಕೊಂಡು ಮುದ್ರಣದೋಷಗಳನ್ನು ತಿದ್ದುವುದೇ ಮುಂತಾದ ಎಲ್ಲ ಕಾರ್ಯಗಳಲ್ಲಿಯೂ ಸಹಕರಿಸಿದ ಶ್ರೀ ಶ್ರೀನಿವಾಸ ಮೂರ್ತಿಯವರಿಗೂ ನನ್ನ ಹಾರ್ದಿಕ ಧನ್ಯವಾದಗಳು.

ಪ್ರೊ.ಎಂ. ಶಿವಕುಮಾರಸ್ವಾಮಿಗಳವರನ್ನು ವಿಶೇಷವಾಗಿ ಸ್ಮರಿಸಿಕೊಳ್ಳಬೇಕಾದುದು ನನ್ನ ಕರ್ತವ್ಯ. ಸ್ವಲ್ಪವೂ ಬೇಸರಪಟ್ಟುಕೊಳ್ಳದೆ ಕೃತಿ ಸಂಪಾದನೆಯ ಎಲ್ಲ ಕಾರ್ಯಗಳಲ್ಲಿ ಪೂರ್ಣ ಸಹಕಾರ ನೀಡಿದ ಅವರಿಗೆ ನನ್ನ ಕೃತಜ್ಞತಾ ಪೂರ್ವಕ ಧನ್ಯವಾದಗಳು.


ಮುದ್ರಣ ದೋಷಗಳನ್ನು ತಿದ್ದುವುದು, ಮುದ್ರಣ ಸಮಯದಲ್ಲಿ ಮುದ್ರಣಾಲಯದಲ್ಲಿದ್ದು, ಕೃತಿಗಳು ಅಚ್ಚುಕಟ್ಟಾಗಿ ಬರುವಂತೆ ನೋಡಿಕೊಂಡ ಮೇಲುಕೋಟೆ ಶ್ರೀ ವಿ.ಎನ್. ಗೌಡ ಮತ್ತು ಶ್ರೀ ಎನ್. ಕೆಂಪರಾಜು ಹಾಗೂ ಲೇಖಕರಿಂದ ಲೇಖನಗಳನ್ನು ತರುವ ಕಾರ್ಯವನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸಿದ ಶ್ರೀ ಯಾಲಕ್ಕಿಗೌಡ ಮತ್ತು ಬೆರಳಚ್ಚು ಮಾಡಿಕೊಟ್ಟ ಶ್ರೀಮತಿ ವಿ. ರತ್ನಮ್ಮ ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಅಭಿಮಾನಿ ಪ್ರಕಾಶನದವರು ಈ ಕೆಲಸವನ್ನು ತಮ್ಮದೆಂದೇ ತಿಳಿದು ಕಡಮೆ ಸಮಯದಲ್ಲಿ ಈ ಕೃತಿಯ ಮುದ್ರಣ ಕಾರ್ಯವನ್ನು ಅತ್ಯಂತ ಸುಂದರವಾಗಿ ಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ಇದರ ಮಾಲೀಕರಾದ ಶ್ರೀ ಟಿ. ವೆಂಕಟೇಶ್ ಮತ್ತು ಸಹೋದರರಿಗೂ, ಸಂಬಂಧಪಟ್ಟ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳು.

ಹೆಚ್.ಕೆ. ಸಿದ್ಧಗಂಗಯ್ಯ,

ಸಂಪಾದಕರು

ಸಂದೇಶಗಳು



His Excellency Khurshid Alam Khan


Governor, Karnataka Govt., Rajbhavana
Bangalore.

19, January, 96.

I am happy to know that Sri Adichunchanagiri Maha Samsthana Mutt is celebrating the Golden Jubilee of the birth of its illustrious Peethadhipathi, His Holiness Jagadguru Sri Balagangadharanatha Swamiji during the first week of February.

On this happy occasion, I extend my warm felicitations to Swamiji and to the organisers and wish the celebration every success.

Sd



ಶ್ರೀ ಹೆಚ್.ಡಿ. ದೇವೇಗೌಡ,

ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ,
ವಿಧಾನಸೌಧ, ಬೆಂಗಳೂರು.
20.1.96

ಶೈಕ್ಷಣಿಕ ಹಾಗೂ ಆಧ್ಯಾತ್ಮಿಕ ಧ್ರುವೀಕರಣಕ್ಕೆ ಪಾತ್ರರಾದ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳಿಗೆ ಐವತ್ತು ವರ್ಷಗಳು ತುಂಬಿರುವ ಸಂದರ್ಭದಲ್ಲಿ ಅವರ ಸುವರ್ಣ ಮಹೋತ್ಸವವನ್ನು ಭಕ್ತವೃಂದ ಏರ್ಪಡಿಸಿರುವುದನ್ನು ಕೇಳಿ ನನಗೆ ಸಂತೋಷವಾಗಿದೆ.

ಭಗವಂತನಾಡಿಸುವ ಜೀವನ ನಾಟಕದಲ್ಲಿ ನಿಮಿತ್ತ ಮಾತ್ರವಾಗಿ ಜನಿಸುವ ಮನುಷ್ಯ ಆಸೆ, ಆಕಾಂಕ್ಷೆ, ಅಹಂಕಾರ, ಮೋಹ, ಮತ್ಸರಗಳಿಂದ ತನ್ನ ಹುಟ್ಟನ್ನು ಅಪವಿತ್ರಗೊಳಿಸದಂತೆ ತಡೆಯುವ ಏಕೈಕ ಶಕ್ತಿ ಗುರುಪೀಠಗಳಾಗಿವೆ. ದುರ್ಮಾರ್ಗದಿಂದ ಸನ್ಮಾರ್ಗಕ್ಕೆ ಮನುಷ್ಯನನ್ನು ಕೊಂಡೊಯ್ಯುವ ಈ ಅದ್ಭುತ ಶಕ್ತಿ ಧಾರ್ಮಿಕ ಪೀಠಗಳಾಗಿರುವುದೇ ಭಾರತದ ಸನಾತನ ಸಂಸ್ಕೃತಿಯಾಗಿದೆ.

ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡು ಸಾಮಾಜಿಕ ಜಾಗೃತಿಯನ್ನು ಉಂಟುಮಾಡುವುದೊಂದೇ ಅಲ್ಲದೆ ಶೈಕ್ಷಣಿಕ ಉನ್ನತಿಗೂ ಕಾರಣರಾಗಿ ಆ ಮೂಲಕ ಸಮಾಜದಲ್ಲಿ ಶಾಂತಿ ಸಂವರ್ಧನೆಗೆ ಕಾರಣರಾಗಿದ್ದಾರೆ.

ಶ್ರೀ ಸ್ವಾಮೀಜಿಯವರ ಅಭಿವಂದನಾ ಗ್ರಂಥವೊಂದು ಈ ಸಂದರ್ಭದಲ್ಲಿ ಹೊರಬರುತ್ತಿರುವುದನ್ನು ಕೇಳಿ ನನಗೆ ಆನಂದವಾಗಿದೆ. ಇಡೀ ಮನಕುಲಕ್ಕೆ ಮಾರ್ಗದರ್ಶನವಾಗುವಂತಹ ಈ ಗ್ರಂಥ ಸುಂದರವಾಗಿ ಮೂಡಿಬರಲಿ.

ಸಹಿ



ಡಾ॥ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು,


ಶ್ರೀ ಸಿದ್ಧಗಂಗಾಮಠ, ತುಮಕೂರು ಜಿಲ್ಲೆ.

12.1.96

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನಮಠದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರಿಗೆ ಐವತ್ತು ಸಂವತ್ಸರಗಳು ತುಂಬಿದ ಶುಭಾವಸರದಲ್ಲಿ ಭಕ್ತಕೋಟಿ ೧೯೯೬ನೇ ಫೆಬ್ರವರಿ ತಿಂಗಳಿನ ಮೊದಲನೆ ವಾರದಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಲಿರುವುದನ್ನು ತಿಳಿದು ಸಂತೋಷವಾಯಿತು. ಸಮಾರಂಭದಲ್ಲಿ ಶ್ರೀಗಳವರ ಜೀವನ ಚರಿತ್ರೆ, ಅಭಿವಂದನಾ ಗ್ರಂಥ, ಸ್ಮರಣಸಂಚಿಕೆ ಹಾಗೂ ಜನಪದಾತ್ಮಕ ಸಿರಿಚುಂಚನಗಿರಿ ಕೃತಿಗಳನ್ನು ಹೊರತರುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಧರ್ಮದ ದೀವಟಿಗೆಯನ್ನು ಹಿಡಿದು ನಡೆದ ಧರ್ಮ ದೀಪಕರ ಜೀವನ ಕೇವಲ ಆತ್ಮಸಾಧನೆಗಾಗಿ ಮಾತ್ರವಲ್ಲ, ಲೋಕಕಲ್ಯಾಣಕ್ಕಾಗಿಯೂ ಮೀಸಲಾದದ್ದು. ವ್ಯಷ್ಟಿ-ಸಮಷ್ಟಿಗಳ ಉನ್ನತಿಯೇ ಅವರ ಧ್ಯೇಯ ಧೋರಣೆಗಳು. ಮಠ ಮಾನ್ಯಗಳು ಸಮಾಜದ ಕಣ್ಣಾಗಿ, ಹೃದಯವಾಗಿ ದುಡಿದಾಗ ಜನಜೀವನ ಹಸನಾಗುವುದರಲ್ಲಿ ಸಂದೇಹವೆಲ್ಲಿಯದು? ಆದಿಚುಂಚನಗಿರಿಯ ಶ್ರೀಗಳವರ ಸೇವೆ ಸಮಾಜಕ್ಕೆ ಲಭ್ಯವಾದದ್ದು ಬಹುದೊಡ್ಡ ಭಾಗ್ಯ. ಸಮಾಜ ಸಂಘಟನೆಯಲ್ಲಿ ಅಸೀಮ ಧೈರ್ಯ ಸ್ಥೈರ್ಯಗಳನ್ನು ಪ್ರದರ್ಶಿಸುತ್ತ ಸಾಕ್ಷರತೆಯ ಕ್ರಾಂತಿಯನ್ನೇ ನಡೆಸಿರುವ ಶ್ರೀಗಳವರ ದಣಿವರಿಯದ ನಿಷ್ಕಾಮ ಸೇವೆ ಶ್ಲಾಘನೀಯ. ದೇಶ, ವಿದೇಶಗಳ ಪರ್ಯಟನದ ಮೂಲಕ ಸಮೃದ್ಧ ಲೋಕಾನುಭವ ಸಂಪನ್ನರಾಗಿ, ಮಣ್ಣಿನ ಮಕ್ಕಳ ಅಭಿವೃದ್ಧಿಗಾಗಿ ಅಹರ್ನಿಶಿ ದುಡಿಯುತ್ತಿರುವ ಶ್ರೀಗಳವರು ವಿನಯ ಸೌಜನ್ಯಗಳ ಶೀಲ ಶ್ರೀಮಂತರು. ಐವತ್ತು ತುಂಬಿ ಪ್ರವರ್ಧಿಸುತ್ತಿರುವ ಶ್ರೀಗಳು ದೀರ್ಘಾಯುಗಳಾಗಿ ಸೇವಾ ದಿಗಂತವನ್ನು ವಿಸ್ತರಿಸುವಂತಾಗಲಿ, ಸಮಾಜವನ್ನು ಸತ್ಪಥದಲ್ಲಿ ಮುನ್ನಡೆಸುವುದಾಗಲಿ ಎಂದು ಹಾರೈಸುತ್ತೇವೆ.

ಸಹಿ



ಶ್ರೀ ಮದುಜ್ಜಯಿನಿ
ಸದ್ಧರ್ಮಸಿಂಹಾಸನಾಧೀಶ ಶ್ರೀ ತರಳಬಾಳು
ಜಗದ್ಗುರು ಡಾ॥ ಶಿವಮೂರ್ತಿಶಿವಾಚಾರ್ಯ
ಮಹಾಸ್ವಾಮಿಗಳು,

ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ.
7.1.96

ಶ್ರೀ ಆದಿಚುಂಚನಗಿರಿ ಜಗದ್ಗುರು ಬಾಲಗಂಗಾಧರನಾಥ ಮಹಾಸ್ವಾಮಿಗಳವರ ಸುವರ್ಣ ಮಹೋತ್ಸವದ ಸ್ಮರಣಾರ್ಥವಾಗಿ ಭಕ್ತಕೋಟಿಯು 'ಅಭಿವಂದನ ಗ್ರಂಥ'ವನ್ನು ಹೊರತರುತ್ತಿರುವುದನ್ನು ತಿಳಿದು ತುಂಬಾ ಸಂತೋಷವಾಯಿತು.

ಶ್ರೀ ಆದಿಚುಂಚನಗಿರಿ ಮಠವು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ರಂಗಗಳಲ್ಲಿ ಅಪೂರ್ವ ಕೊಡುಗೆಯನ್ನು ನೀಡುತ್ತಾ ಬಂದಿದೆ. ಅದರ ಹಿಂದಿರುವ ದಿವ್ಯ ಚೇತನ ಶಕ್ತಿ ಜಗದ್ಗುರು ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು. ಸಮಾಜವನ್ನು ಸರ್ವತೋಮುಖವಾಗಿ ಸಂಘಟಿಸಿ, ಬೆಳೆಸಿ ಹೆಮ್ಮರವನ್ನಾಗಿಸಿದ್ದಾರೆ. ಜನಸಾಮಾನ್ಯರ ಏಳಿಗೆಯೇ ಅವರ ಜೀವನದ ಉಸಿರು, ಜಪ, ತಪ ಎಲ್ಲವೂ ಆಗಿದೆ. ಅವರಲ್ಲಿ ನಾವು ಕಂಡದ್ದು ನಿರ್ಮಲಾಂತಃಕರಣ, ನಿರಾಡಂಬರ ವ್ಯಕ್ತಿತ್ವ, ನಿಶ್ಚಲ ನಿಲುವು. ಎಲ್ಲಕ್ಕೂ ಮಿಗಿಲಾಗಿ ಅವರ ಹೃದಯದಲ್ಲಿರುವ ತಾಯ್ತನದ ಕರುಳು. ಸಂಭಾಷಣೆಯ ಸಂದರ್ಭದಲ್ಲಿ ಅವರ ಮುಖದ ಮೇಲೆ ಮೂಡಿ ಬರುವ ಮಂದಹಾಸ ಎಂಥವರಿಗೂ ಮನೋಲ್ಲಾಸವನ್ನು ನೀಡುತ್ತದೆ. ವಯಸ್ಸಿನಲ್ಲಿ ನಮಗಿಂತ ಬಹಳ ಹಿರಿಯರಾದರೂ ಅವರು ತೋರುವ ಆ ಸರಳ ಸಜ್ಜನಿಕೆ, ಆ ಆತ್ಮೀಯತೆ ನಮ್ಮನ್ನು ಅವರತ್ತ ಗಾಢವಾಗಿ ಸೆಳೆದಿದೆ. ಇಂತಹ ಪುಣ್ಯಜೀವವೊಂದು ಬಹಳ ಕಾಲ ನಮ್ಮ ಮಧ್ಯೆ ಇರಬೇಕು.

ನೀವು ಹೊರತರುತ್ತಿರುವ 'ಅಭಿವಂದನ' ಗ್ರಂಥವು ಪೂಜ್ಯ ಶ್ರೀಗಳವರ ಸಾಧನೆ, ಸಿದ್ಧಿಗಳನ್ನು ಪ್ರತಿಬಿಂಬಿಸುವ ಕೈಗನ್ನಡಿಯಾಗಲಿ. ಸಮಾಜಕ್ಕೆ ಅವರು ಮಾಡಿರುವ ಉಪಕಾರವನ್ನು ಎಷ್ಟು ಸ್ಮರಿಸಿದರೂ ಸಾಲದು. ಈ ಸಂಬಂಧವಾಗಿ ಹಮ್ಮಿಕೊಂಡಿರುವ ಸುವರ್ಣ ಮಹೋತ್ಸವದ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇವೆ.

ಸಹಿ



ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು,

ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಠ, ಮೈಸೂರು-570 004.

1.2.96

ತನ್ನ ಮಕ್ಕಳು ದಷ್ಟಪುಷ್ಟರಾಗಲು, ಶಿಷ್ಟರಾಗಲು, ಸುಶಿಕ್ಷಿತರಾಗಲು, ಹೃದಯಶ್ರೀಮಂತರಾಗಲು, ಸತ್ಪ್ರಜೆಗಳಾಗಲು ತಾಯಿ ಅಹರ್ನಿಶಿ ಶ್ರಮಿಸುತ್ತಾಳೆ. ಮಕ್ಕಳು ರೋಗಪೀಡಿತರಾದರೆ, ದುಷ್ಟರಾದರೆ ಅಶಿಕ್ಷಿತರಾದರೆ ಶಿಲಾಹೃದಯಿಗಳಾದರೆ, ಅನೀತಿವಂತರಾದರೆ ಇದೇ ತಾಯಿ ಮಮ್ಮಲ ಮರುಗುತ್ತಾಳೆ. ಪ್ರಾಣ ಪಣತೊಟ್ಟು ಅನ್ನಾಹಾರನಿದ್ರೆ ತೊರೆದು ಅವರ ಉದ್ಧಾರಕ್ಕೆ ಕಂಕಣಬದ್ಧಳಾಗುತ್ತಾಳೆ.

ಇಂದು ನಮ್ಮ ಸಮಾಜ-ಶಿಶು ಎರಡನೆಯ ಗುಂಪಿಗೆ ಸೇರಿದೆ. ಅಜ್ಞಾನ ಪೀಡಿತವಾಗಿದೆ; ಸ್ವಾರ್ಥ ಲಾಲಸೆಗಳ ಶಿಲಾ ಹೃದಯಿಯಾಗುತ್ತಿದೆ. ಭ್ರಷ್ಟಾಚರದ ದೌಷ್ಟ್ಯ ಮೂರ್ತಿಯಾಗುತ್ತಿದೆ. ಇಂಥ 'ಸಮಾಜ-ಶಿಶು'ವನ್ನು ತಾಯ ಹೃದಯದ ಸಾಧು-ಸಂತ-ಸತ್ಪುರುಷರೇ ಉದ್ಧರಿಸುತ್ತ ಪವಿತ್ರ ಕಾಯಕದಲ್ಲಿ ತೊಡಗಿಸಿದಲ್ಲದೆ ಈ ದೇಶಕ್ಕೆ ಭವಿಷ್ಯವಿಲ್ಲ.

ಈ ನಿಟ್ಟಿನಲ್ಲಿ ನಿರಂತರವಾಗಿ ಸಮಾಜ-ಶಿಶುವಿನ ಉದ್ಧಾರಕ್ಕಾಗಿ ಕಂಕಣಬದ್ಧರಾಗಿ ದುಡಿಯುತ್ತಿರುವ ಜಗದ್ಗುರು ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು ಐವತ್ತು ವಸಂತಗಳನ್ನು ಪೂರೈಸುತ್ತಿರುವ ಶುಭಸಂದರ್ಭದಲ್ಲಿ ಪುರಸ್ಕರಿಸಿಕೊಂಡು ಭಕ್ತವೃಂದ ಶ್ರೀಗಳ ಕುರಿತು ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವುದು ಮುದಾವಹದ ಸಂಗತಿ. ಈ ಸುಸಂದರ್ಭದಲ್ಲಿ ಶ್ರೀಗಳ ಜೀವನ ಚರಿತ್ರೆ, ಅಭಿವಂದನಾ ಗ್ರಂಥ, ಸ್ಮರಣಸಂಚಿಕೆ, ಜನಪದ ಆಧಾರಿತ ಸಿರಿ ಚುಂಚನಗಿರಿ ಕೃತಿಗಳನ್ನು ಬಿಡುಗಡೆ ಮಾಡುತ್ತಿರುವುದು ಸಕಾಲಿಕವೂ ಸಂದರ್ಭೋಚಿತವೂ, ಸ್ತುತ್ಯವೂ ಆಗಿದೆ.

ಶ್ರೀಗಳ ಕಾಯಕ ಇತೋಽಪ್ಯತಿಶಯವಾಗಿ ಬೆಳೆಯಲಿ, ಬೆಳಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಸಹಿ

ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ
ಮಹಾಸ್ವಾಮಿಗಳು,

ಶ್ರೀ ಬೃಹನ್ಮಠ, ಚಿತ್ರದುರ್ಗ.
07.1.96

ಭಾರತ ದೇಶ ಹಲವು ಧರ್ಮಗಳ ನೆಲೆ. ಅನೇಕ ಮತ-ಪಂಥಗಳ ಸಾಗರ. ಇಲ್ಲಿ ಸಾವಿರಾರು ಸಾಧು-ಸಂತ-ಶರಣರು ಆಗಿ ಹೋಗಿದ್ದಾರೆ. ಇವರೆಲ್ಲರ ಗುರಿ, ಮಾನವ ಮಾನವನಾಗಿ ಬಾಳಬೇಕು; ಮೃಗತ್ವದಿಂದ ದೂರವಿರಬೇಕು, ಮಾನವ ಕಲ್ಯಾಣಕ್ಕಾಗಿ ಶ್ರಮಿಸಬೇಕು ಎಂಬುದಾಗಿದೆ. ಈ ನಿಟ್ಟಿನಲ್ಲಿ ತಮ್ಮ ಅಮೂಲ್ಯ ಬೋಧನೆ ಹಾಗೂ ಕೊಡುಗೆಗಳನ್ನು ಕೊಟ್ಟು ಹೋಗಿದ್ದಾರೆ. ಪರಂಪರಾಗತವಾಗಿ ಇಂದಿಗೂ ಉಳಿದು ಬಂದಿರುವ ಆ ತತ್ತ್ವಗಳ ಮೂಲಕ ಇಂದಿಗೂ ಅನೇಕ ಮಹಾನ್ ಚೇತನಗಳು ಧರ್ಮೋಪದೇಶದ ತಮ್ಮ ಕಾಯಕವನ್ನು ನೆರವೇರಿಸಿಕೊಂಡು ಬರುತ್ತಿದ್ದಾರೆ.

ಅವರಲ್ಲಿ ಶ್ರೀ ಆದಿಚುಂಚನಗಿರಿಯ ಪ್ರಸ್ತುತ ಪೀಠಾಧೀಶರಾದ ಜಗದ್ಗುರು ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು ಅಗ್ರಗಣ್ಯರಾಗಿದ್ದಾರೆ. ಸರಳ-ಸಾತ್ವಿಕ ಸ್ವಭಾವದ, ಸರ್ವರನ್ನು ಸಮಾನತೆಯಿಂದ ಕಾಣುವ ವಿಶಾಲ ಹೃದಯ ಉಳ್ಳವರಾಗಿದ್ದಾರೆ. ಅಂತೆಯೇ ಶಿಕ್ಷಣ-ಸಂಸ್ಕೃತಿ-ಧಾರ್ಮಿಕ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಇವರ ಸೇವೆ ಆದರ್ಶ ಹಾಗೂ ಅನುಕರಣೀಯವಾಗಿದೆ. ಅಲ್ಪಾವಧಿಯಲ್ಲೇ ಬೃಹತ್ತಾಗಿ ಸಾಧನೆಗೈದಿರುವ ಇವರ ಸೇವಾದೃಷ್ಟಿ ಹಿರಿದಾದುದು ಹಾಗೂ ಈ ನೆಲದ ಧರ್ಮ-ಸಂಸ್ಕೃತಿಯನ್ನು ದೇಶ ವಿದೇಶಗಳಲ್ಲಿ ಪರಿಚಯಿಸಿ, ಆ ಮೂಲಕ ತಮ್ಮಲ್ಲಿರುವ ಕನ್ನಡ ಪ್ರೇಮವನ್ನು ಅಭಿವ್ಯಕ್ತಿಸಿದ ಇವರ ಸೃಜನಶೀಲತೆ ಮೆಚ್ಚುವಂತಹುದು.

ಜಗತ್ತಿನ ಪ್ರಸ್ತುತ ಸಮಸ್ಯೆಗಳ ನಿವಾರಣೆಗೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವ ಇಂತಹ ಮಹಾಸ್ವಾಮಿಗಳವರ ಸುವರ್ಣ ಮಹೋತ್ಸವವನ್ನು ಆಚರಿಸುವುದು ನಾಡಿನ ಜನರ ಕರ್ತವ್ಯವಾಗಿದೆ. ಈ ದಿಶೆಯಲ್ಲಿ ಭಕ್ತಾದಿಗಳು, ಅಭಿಮಾನಿಗಳು ಸೇರಿ, ಬರುವ ಫೆಬ್ರವರಿ ಮೊದಲ ವಾರದಲ್ಲಿ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿರುವ ವಿಷಯ ತಿಳಿದು ತುಂಬಾ ಸಂತೋಷವಾಗಿದೆ.

ಕಾರ್ಯಕ್ರಮಗಳೆಲ್ಲ ಯಶಸ್ವಿಯಾಗಿ ಜರುಗಲೆಂದು ಹಾಗೂ ಆ ಸಂದರ್ಭದಲ್ಲಿ ಬಿಡುಗಡೆಯಾಗಲಿರುವ ಗ್ರಂಥಗಳು, ಉಪಯುಕ್ತ ಮೌಲಿಕ ಲೇಖನಗಳೊಂದಿಗೆ ಹೊರಬಂದು ಜನತೆಗೆ ಸನ್ಮಾರ್ಗ ದೊರೆಯಲೆಂದು ಹಾರೈಸುತ್ತೇವೆ.

ಸಹಿ

ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ
ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ,

ಶ್ರವಣಬೆಳಗೊಳ ಮಠ.
15.1.96

ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಜನ ಜಾಗೃತಗೊಳಿಸಿ ಸಾರ್ಥಕ ಜೀವನವನ್ನು ನಡೆಸುವ ವಿಷಯದಲ್ಲಿ ಅಮೋಘ ಮಾರ್ಗದರ್ಶನ ಮಾಡುತ್ತಲಿರುವ ಆದಿಚುಂಚನಗಿರಿ ಮಹಾಸಂಸ್ಥಾನ ಮಠಾಧೀಶರಾದ ಶ್ರೀ ಬಾಲಗಂಗಾಧರನಾಥಸ್ವಾಮಿಗಳವರ ಮಹೋಪಕಾರವು ಮಹತ್ವಪೂರ್ಣವಾದುದಾಗಿದೆ. ಇಂದು ಶ್ರೀಗಳವರ ಮಹಾಸಾಧನೆಯ ಫಲವಾಗಿ ಆದಿಚುಂಚನಗಿರಿ ಮಹಾಕ್ಷೇತ್ರದ ಕೀರ್ತಿಸೌರಭವು ವಿಶ್ವದಾದ್ಯಂತ ಪ್ರಸರಿಸಿರುವುದು ಕನ್ನಡನಾಡಿನ ಪುಣ್ಯವಿಶೇಷವಾಗಿದೆ. ಮಹಾವಿದ್ಯಾಲಯಗಳನ್ನು ಹಾಗೂ ಉಚಿತ ಪ್ರಸಾದ ನಿಲಯಗಳನ್ನು ನಡೆಸುತ್ತಲಿರುವುದು ಶ್ರೀಗಳವರ ಜನಕಲ್ಯಾಣ ಭಾವನೆ ಹಾಗೂ ಉದಾರ ಹೃದಯಶ್ರೀಮಂತಿಕೆಯ ಜ್ವಲಂತ ನಿದರ್ಶನವಾಗಿರುತ್ತದೆ. ಅಂತೆಯೇ ಆದಿಚುಂಚನಗಿರಿಯ ಮಹಾಕ್ಷೇತ್ರದಲ್ಲಿ ಸಕಲ ಕಾರ್ಯಗಳಿಗೂ ಶ್ರೀಗಳವರ ಮಹಾ ಸಾಧನೆ-ತಪಸ್ಸು-ಕಾರ್ಯಸಂಯೋಜನಾ ವಿಧಾನಾದಿಗಳೇ ಪ್ರಮುಖ ಕಾರಣಗಳಾಗಿವೆ. ಆದಿಚುಂಚನಗಿರಿಯಲ್ಲಿ ಈ ಹಿಂದೆ ಆಗಿಹೋದ ಸ್ವಾಮಿಗಳಿಗಿಂತ ಇವರ ಸಾಧನೆ ನಿಜಕ್ಕೂ ಸಾಹಸಮಯವಾದುದು. ಶ್ರೀ ಕ್ಷೇತ್ರ ಆದಿಚುಂಚನಗಿರಿಯನ್ನು ನಾಡಿನ ಎಲ್ಲೆಡೆ ಪ್ರಭಾವ ಬೀರುವಂತೆ ಮಾಡಿದ ಮಹಾಕೀರ್ತಿ ಈಗಿನ ಶ್ರೀಗಳವರದ್ದು.

ಪ್ರಸಕ್ತ ಸಮಯದಲ್ಲಿ ಶ್ರೀಗಳವರಿಗೆ ಐವತ್ತು ಸಾರ್ಥಕ ಸಂವತ್ಸರಗಳು ಯಶಸ್ವಿಯಾಗಿ ತುಂಬಿದ ಶುಭಸಂದರ್ಭದಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಲಿರುವುದು ಹಾಗೂ ಶ್ರೀಗಳವರ ಜೀವನ ಚರಿತ್ರೆ, ಅಭಿವಂದನ ಗ್ರಂಥ, ಸ್ಮರಣ ಸಂಚಿಕೆ ಮುಂತಾದ ಕೃತಿಗಳನ್ನು ಬಿಡುಗಡೆ ಮಾಡಲಿರುವುದು ಸಮಯೋಚಿತ ಹಾಗೂ ಅತ್ಯಂತ ಸಂತೋಷದ ಸಂಗತಿಯಾಗಿರುತ್ತದೆ. ತ್ಯಾಗಮೂರ್ತಿಗಳೂ, ಸಹೃದಯಿಗಳೂ ಆದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಮಹಾಸ್ವಾಮಿಗಳವರು ನೂರು ವರ್ಷಕ್ಕಿಂತಲೂ ಹೆಚ್ಚು ವರ್ಷ ದೀರ್ಘಾಯುರಾರೋಗ್ಯ ಸಂಪನ್ನರಾಗಿ, ಅವರ ಮಾರ್ಗದರ್ಶನವು ಜನತೆಗೆ ಸದಾ ದೊರೆಯುವಂತಾಗಲೆಂದು ಆಶಿಸುತ್ತೇವೆ.

ಸಹಿ

ಶ್ರೀ ಗಣಪತಿ ಸಚ್ಚಿದಾನಂದ ಅವಧೂತ ದತ್ತ ಪೀಠ

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ದತ್ತನಗರ, ಮೈಸೂರು

ಯುವ ನಾಮ ಸಂವತ್ಸರ
ಮಾಘ ಶುಕ್ಲ ದ್ವಾದಶಿ

ಜಯಗುರುದತ್ತ

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನಮಠದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರಿಗೆ ಐವತ್ತು ಸಾರ್ಥಕ ಸಂವತ್ಸರಗಳು ತುಂಬಿದ ಶುಭಸಂದರ್ಭದಲ್ಲಿ ಅವರ ಭಕ್ತಕೋಟಿಯು ಸುವರ್ಣ ಮಹೋತ್ಸವವನ್ನಾಚರಿಸಲಿರುವುದು ದತ್ತ ಪೀಠಾಪತಿ ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳವರಿಗೆ ಅತೀವ ಹರ್ಷವನ್ನುಂಟು ಮಾಡಿದೆ.

ಇಷ್ಟು ಕಡಿಮೆ ಅವಧಿಯಲ್ಲಿ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಪೂಜ್ಯರು ಮಾಡಿರುವ ಸಾಧನೆಯು ಅವರಲ್ಲಿರುವ ಹಾಗೂ ಅವರ ಮಾಧ್ಯಮದಿಂದ ಕೆಲಸಮಾಡುತ್ತಿರುವ ದಿವ್ಯಶಕ್ತಿಯ ದ್ಯೋತಕವಾಗಿದೆ.

ಪೂಜ್ಯಶ್ರೀಗಳವರು ನಿಃಸ್ಪೃಹತೆಯಿಂದ ಕೈಗೊಂಡಿರುವ, ಕೈಗೊಳ್ಳಲಿರುವ ಸಕಲ ಮಾನವ ಕಲ್ಯಾಣ ಕಾರ್ಯಚಟುವಟಿಕೆಗಳ ಫಲವು ಸಮಾಜಕ್ಕೆ ಇತ್ಯೋಪ್ಯತಿಶಯವಾಗಿ ದೊರಕುವಂತಾಗಲೆಂದು ತ್ರಿಮೂರ್ತ್ಯಾತ್ಮಕ ಭಗವಾನ್ ದತ್ತಾತ್ರೇಯನಲ್ಲೂ, ದತ್ತಾಪೀಠಾಧಿಪತಿ ಶ್ರೀ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳವರಲ್ಲೂ, ಬೇಡುತ್ತೇನೆ.

ಜಯಗುರು ದತ್ತ

ಸಹಿ



ಶ್ರೀ ಶ್ರೀ ವಿಭುದೇಶತೀರ್ಥರು,

ಶ್ರೀ ಅದಮಾರು ಮಠ, ಉಡುಪಿ.

17.1.96


ಶ್ರೀ ಆದಿಚುಂಚನಗಿರಿ ಕ್ಷೇತ್ರದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಸಮಾಜಕ್ಕೆ ಮಾಡಿದ ಉಪಕಾರ ಅನೇಕ ಮುಖದ್ದಾಗಿದೆ. ಉದ್ದಾಮ ಪಂಡಿತರ ಬಳಿ ಶಾಸ್ತ್ರಗಳ ಅಭ್ಯಾಸ ಮಾಡಿದ ಇವರು ಸಂಸ್ಕೃತ ಶಾಸ್ತ್ರಗಳ ಸಂರಕ್ಷಣೆಗಾಗಿ ಆದಿಚುಂಚನಗಿರಿ ಕ್ಷೇತ್ರದಲ್ಲಿ ಒಂದು ಸಂಸ್ಕೃತ ಮಹಾಪಾಠಶಾಲೆಯನ್ನು ಸ್ಥಾಪಿಸಿ ನಡೆಸುತ್ತಿದ್ದಾರೆ. ಇಲ್ಲಿ ನುರಿತ ವಿದ್ವಾಂಸರಿಂದ ಪಾಠ ಹೇಳಿಸಿ ವಿವಿಧ ಶಾಸ್ತ್ರಗಳಲ್ಲಿ ಪಂಡಿತರನ್ನು ಸಿದ್ಧಪಡಿಸುತ್ತಿದ್ದಾರೆ.

'ಒಂದು ರಾಷ್ಟ್ರವನ್ನು ಆ ರಾಷ್ಟ್ರದ ಎಳೆಯರನ್ನು ಉತ್ತಮ ವಿದ್ಯಾಭ್ಯಾಸದ ಮೂಲಕ ತಿದ್ದಿ ಕಟ್ಟಬೇಕು ಮತ್ತು ಬೆಳೆಸಬೇಕು' ಎಂಬ ಸತ್ಯದ ಸ್ಪಷ್ಟ ಅರಿವಿರುವವರಾದುದರಿಂದ ಹತ್ತಾರು ಶಾಲಾ-ಕಾಲೇಜುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸಿ ಅತ್ಯುತ್ತಮ ರೀತಿಯಲ್ಲಿ ನಡೆಸುತ್ತಿದ್ದಾರೆ. ಇವರಿಂದಾಗಿ ವಿದ್ಯಾವಂತರಾದವರು ಅನೇಕ ಲಕ್ಷಮಂದಿ. ಇವರು ಸ್ಥಾಪಿಸಿ ನಡೆಸುತ್ತಿರುವ ಚಿಕ್ಕಮಗಳೂರು ಹಾಗೂ ಚಿಕ್ಕಬಳ್ಳಾಪುರದ ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ಆದಿಚುಂಚನಗಿರಿ ಬಳಿಯ ಮೆಡಿಕಲ್ ಕಾಲೇಜು ಸಮಾಜಕ್ಕೆ ದಕ್ಷರಾದ ಎಂಜಿನಿಯರ್‌ಗಳನ್ನು, ಡಾಕ್ಟರ್‌ಗಳನ್ನು ಒದಗಿಸುತ್ತಿದೆ. ರಾಷ್ಟ್ರದ ಮುನ್ನಡೆಯಲ್ಲಿ ಊರುಗೋಲುಗಳಾಗಿವೆ.

ಸ್ವಾಮೀಜಿಯವರು ಅನೇಕ ಬಾರಿ ಇತರ ರಾಷ್ಟ್ರಗಳಲ್ಲೂ ಪ್ರವೇಶ ಮಾಡಿ ಅಂತಾರಾಷ್ಟ್ರೀಯ ಮಟ್ಟದಲ್ಲೂ ಮನ್ನಣೆ ಹಾಗೂ ಆದರ ಗೌರವಗಳನ್ನು ಪಡೆಯುತ್ತಿರುವರು. ಇಷ್ಟೆಲ್ಲಾ ಮಹಾಸಾಧನೆಗಳನ್ನು ಮಾಡಿದ್ದರೂ ಅಮಿತ ಜನಾನುರಾಗವನ್ನು ಪಡೆದಿದ್ದರೂ ಇವರು ನಿರಾಡಂಬರರು, ವಿನಯಶೀಲರು ಮತ್ತು ಸದಾ ಹಸನ್ಮುಖಿಗಳು. ಇತರರ ಕಷ್ಟಸುಖಗಳಿಗೆ ಸ್ಪಂದಿಸುವ ಹೃದಯಸಂಪತ್ತು ಉಳ್ಳವರು.

ಇವರ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಇವರ ಶಿಷ್ಯವೃಂದ, ವಿದ್ಯಾರ್ಥಿವೃಂದ ಹಾಗೂ ಬೃಹತ್ ಸಮಾಜ ಇವರ ಸಾರ್ಥಕ ಬಾಳಿನ ಶತಮಾನೋತ್ಸವವನ್ನೂ ಆಚರಿಸುವಂತಾಗಲೆಂದು ನಮ್ಮ ಆರಾಧ್ಯದೇವರಾದ ಶ್ರೀ ಕೃಷ್ಣನಲ್ಲಿ ಸಂಪ್ರಾರ್ಥಿಸುತ್ತೇವೆ.

ಸಹಿ



ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು,

ಜಗದ್ಗುರು ಶ್ರೀ ಮಧ್ವಾಚಾರ್ಯಮೂಲ
ಮಹಾಸಂಸ್ಥಾನ, ಶ್ರೀ ಪುತ್ತಿಗೆ ಮಠ, ಉಡುಪಿ.

ಆದಿಚುಂಚನಗಿರಿ ಮಹಾಸಂಸ್ಥಾನದ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳಿಗೆ ಐವತ್ತು ತುಂಬುತ್ತಿರುವ ಸಂದರ್ಭದಲ್ಲಿ ಭಕ್ತಜನತೆ ಸುವರ್ಣ ಮಹೋತ್ಸವವನ್ನು ವೈಭವದಿಂದ ಆಚರಿಸುತ್ತಿರುವ ವಿಷಯ ತಿಳಿದು ತುಂಬಾ ಸಂತೋಷವಾಗಿದೆ.

ಐದುನೂರು ವರ್ಷಗಳ ಮಹಾಸಾಧನೆಯನ್ನು ಮಾಡಿರುವ ಮಹಾಸ್ವಾಮಿಗಳ ಐವತ್ತು ಸಾಮಾನ್ಯ ಐವತ್ತಲ್ಲ. ಅಂತಹ ವರಮಹತ್ವವನ್ನು ಪಡೆದ ಈ ಸಂದರ್ಭವನ್ನು ಗುರುತಿಸಿ ಗೌರವಿಸುವ ಭಕ್ತಜನತೆ ನಿಜವಾಗಿಯೂ ಅಭಿಂದನಾರ್ಹವಾಗಿದೆ.

ಶ್ರೀ ಶ್ರೀಗಳವರ ಯೋಜನಾ ಕೌಶಲ, ಸಂಘಟನಾ ಚಾತುರ್ಯ, ಮಹತ್ಕಾರ್ಯಗಳನ್ನು ನಿರ್ವಹಿಸುತ್ತಿದ್ದರೂ ಕಾಪಾಡಿಕೊಂಡಿರುವ ಪ್ರಸನ್ನತೆ, ಎಲ್ಲರನ್ನೂ ಆತ್ಮೀಯವಾಗಿ ಕಾಣುವ ಸಹೃದಯತೆ, ನಿಜವಾಗಿಯೂ ಬೆರಗುಗೊಳಿಸುವಂತಾಗಿದೆ.

ಸಮಾಜ ಅವರಿಂದ ಚಿರಕಾಲ ಅನುಗೃಹೀತವಾಗಲೆಂದೂ, ಸುವರ್ಣ ಮಹೋತ್ಸವವು ಸುವರ್ಣಾಕ್ಷರದಲ್ಲಿ ಬರೆದಿಡುವಂತಾಗಲೆಂದೂ ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಸಹಿ

ಶ್ರೀ ವಿದ್ಯಾಸಾಗರ ತೀರ್ಥಶ್ರೀಪಾದಂಗಳು,

ಶ್ರೀ ಕೃಷ್ಣಾಪುರಮಠ, ಉಡುಪಿ.

8.1.96

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನಮಠದ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಸುವರ್ಣ ಮಹೋತ್ಸವವನ್ನು ಫೆಬ್ರವರಿ ತಿಂಗಳ ೩, ೪ ರಂದು ಆಚರಿಸುವುದೆಂದು ತಿಳಿದು ಬಹಳ ಸಂತೋಷವಾಯಿತು. ಶ್ರೀ ಶ್ರೀಗಳವರು ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದ್ದು ಮಾತ್ರವಲ್ಲದೆ, ದೇಶ, ವಿದೇಶಗಳಲ್ಲಿ ಧರ್ಮ, ಸಂಸ್ಕೃತಿಗಳನ್ನು ಪ್ರಚಾರ ಮಾಡಿಕೊಂಡು ಬಂದಿರುತ್ತಾರೆ. ಶ್ರೀ ಶ್ರೀಗಳವರ ಶಿಷ್ಯ ವೃಂದದವರು, ಅಭಿಮಾನಿಗಳೆಲ್ಲರೂ, ಸುವರ್ಣ ಮಹೋತ್ಸವದಲ್ಲಿ ಪಾಲುಗೊಂಡು ಕಾರ್ಯಕ್ರಮವು ಬಹು ವಿಜೃಂಭಣೆಯಿಂದ ನಡೆಯಲಿ ಎಂದು ಹಾರೈಸುತ್ತೇವೆ.

ಸಹಿ

ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳು,

ಶ್ರೀ ಸೋದೆವಾದಿರಾಜ ಮಠ, ಉಡುಪಿ.

6.1.96

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡುವ ಅವಶ್ಯಕತೆಯೇ ಇಲ್ಲ. ಲೌಕಿಕ ಮತ್ತು ಪಾರಲೌಕಿಕರೂಪವಾದ ಎರಡೂ ಮಾರ್ಗಗಳಲ್ಲಿಯೂ ಅವರ ಸಾಧನೆ ಮತ್ತು ಪಡೆದ ಯಸಶ್ಸು ಅಪಾರ. ಭಾರತ ದೇಶದಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿ ಸಹ ಸಂಚರಿಸಿ ಭಾರತೀಯ ಸಂಸ್ಕೃತಿಯ ಪರಿಮಳವನ್ನು ಇವರು ಬೀರಿದ್ದಾರೆ. ಪರರಿಗೆ ಹಿತವನ್ನು ಬಯಸುವುದರಲ್ಲಿ ಅದಕ್ಕಾಗಿ ತಮ್ಮ ಜೀವನವನ್ನು ಉಪಯೋಗಿಸಿ, ನಿಷ್ಕಾಮ ಕರ್ಮ ಮಾಡಿ, ತನ್ಮೂಲಕ ದೇವರನ್ನು ತುಷ್ಟಿಗೊಳಿಸುವುದರಲ್ಲಿಯೇ ಜೀವನದ ನೈಜ ಸಾರ್ಥಕತೆ ಅಡಗಿದೆ ಎಂಬ ಸಂದೇಶವನ್ನು ತಮ್ಮ ಬಾಳಿನ ಮೂಲಕವೇ ಜನತೆಗೆ ತೋರಿಸಿಕೊಟ್ಟಿದ್ದಾರೆ. ಇವರು ಈಗ ಐವತ್ತು ಸಾರ್ಥಕ ವರ್ಷಗಳನ್ನು ಕಳೆದು ಐವತ್ತೊಂದನೆಯ ವರ್ಷದಲ್ಲಿ ಪಾದಾರ್ಪಣ ಮಾಡುವ ಶುಭ ಸಂದರ್ಭದಲ್ಲಿ, ಇವರ ಅಭಿಮಾನಿಗಳೆಲ್ಲರೂ ಇವರ ಸುವರ್ಣಮಹೋತ್ಸವವನ್ನು ಹಮ್ಮಿಕೊಂಡು, ಅದರ ಮೂಲಕ ಅನೇಕ ಅಮೂಲ್ಯ ಕೃತಿಗಳನ್ನು ಪ್ರಕಟಿಸಿ, ಸಾಹಿತ್ಯ ಕ್ಷೇತ್ರಕ್ಕೆ ಅಮೋಘ ಸೇವೆ ಮಾಡುವ ಉದ್ದೇಶ ಹೊಂದಿರುವುದು ನಮಗೆ ತುಂಬಾ ಸಂತಸ ತಂದಿದೆ. ಶ್ರೀ ಶ್ರೀಗಳವರು ಶತಾಯುಷಿಗಳಾಗಿ ಜೀವಿಸಿ, ಕನ್ನಡಿಗರ ಏಳಿಗೆಯನ್ನು ಭದ್ರವಾದ ಬುನಾದಿಯ ಮೇಲೆ ಸರ್ವಕ್ಷೇತ್ರಗಳಲ್ಲಿ ಸಾಧಿಸಲಿ ಎಂದು ಹಾರೈಸುತ್ತೇವೆ.

ಸಹಿ

ಶ್ರೀಮನ್ನಿರಂಜನ ಜಗದ್ಗುರು ತೋಂಟದ
ಸಿದ್ಧಲಿಂಗಮಹಾಸ್ವಾಮಿಗಳು,

ಶ್ರೀ ಜಗದ್ಗುರು ತೋಂಟದಾರ್ಯ
ಸಂಸ್ಥಾನಮಠ, ಡಂಬಳ, ಗದಗ.

ಕರ್ನಾಟಕದಲ್ಲಿ ಜನಸಂಖ್ಯಾ ಬಾಹುಳ್ಯ ಹಾಗೂ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ರಂಗಕ್ಕೆ ಒಕ್ಕಲಿಗ ಜನಾಂಗ ಕೊಟ್ಟ ಕೊಡುಗೆ ಸ್ಮರಣೀಯ. ಉನ್ನತ ಐತಿಹಾಸಿಕ ಪರಂಪರೆಯನ್ನು ಹೊಂದಿದ ಈ ಜನಾಂಗ ಕರ್ನಾಟಕ ಕಟ್ಟುವಲ್ಲಿ ಸಲ್ಲಿಸಿದ ಸೇವೆಯನ್ನು ಮರೆಯುವಂತಿಲ್ಲ.

ಈ ಜನಾಂಗದ ಏಕೈಕ ಜಗದ್ಗುರುಗಳಾದ ಶ್ರೀ ಬಾಲಗಂಗಾಧರನಾಥ ಶ್ರೀಗಳವರು ದಕ್ಷಿಣ ಕರ್ನಾಟಕದಲ್ಲಿ ಸಲ್ಲಿಸಿದ ಶೈಕ್ಷಣಿಕ ಸೇವೆ ಅಪರೂಪವಾದುದು. ತೆಂಗಿನಮರಕ್ಕೊಂದು ತೆಂಗಿನ ಕಾಯಿಯನ್ನು ಭಿಕ್ಷೆಯಾಗಿ ಸ್ವೀಕರಿಸಿ, ದಕ್ಷಿಣ ಕರ್ನಾಟಕದ ಶ್ರೀಸಾಮಾನ್ಯನ ಆರೋಗ್ಯಕ್ಕಾಗಿ ಕಟ್ಟಿದ ವೈದ್ಯಕೀಯ ಮಹಾವಿದ್ಯಾಲಯ, ಅಗ್ಗ ದರದ ಆಸ್ಪತ್ರೆ, ತಾಂತ್ರಿಕ ಮಹಾವಿದ್ಯಾಲಯಗಳ ಸೇವೆ, ಪ್ರತಿವರ್ಷ ಜರುಗಿಸುವ ಜನಪದ ಮೇಳ, ಪ್ರತಿ ಕಲಾವಿದರಿಗೆ ಬಸ್‌ಚಾರ್ಜ್ ಹಾಗೂ ಬಟ್ಟೆ ವಿತರಿಸುವ ಅವರ ಮಾನವೀಯ ಗುಣ, ಜನಪದ ಕೆಲಸಗಳ ಬಗೆಗೆ ಶ್ರೀಗಳಿಗಿರುವ ಕಾಳಜಿಗೆ ಮಾರು ಹೋಗದವರಾರು?

ಸಮಕಾಲೀನ ಕರ್ನಾಟಕ ಚರಿತ್ರೆಯಲ್ಲಿ ಅವಿಸ್ಮರಣೀಯ ಹೆಸರು. ಈ ಯುಗದ, ಜಗದ ಕವಿಯಾದ ವಿಶ್ವಮಾನವ ಕುವೆಂಪು ಹೆಸರಿನ ಶಾಲೆ, ಕಾಲೇಜು ಹಾಗೂ ಕುವೆಂಪು ಬೋಧಿಸಿದ ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿಯ ಶಿಕ್ಷಣ ಸೇವೆ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದಿಂದ ನಡೆಯುತ್ತಿರುವದು ಲೋಕ ವಿದಿತ. ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ, ಮೊದಲಾದ ಕ್ಷೇತ್ರದಲ್ಲಿ ಅಪಾರವಾದ ಸೇವೆ ಸಲ್ಲಿಸಿದ ಸದ್ಯದ ಪೀಠಾಧಿಪತಿಗಳಾದ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು ಕಳೆದ ಕಾಲು ಶತಮಾನದಲ್ಲಿ ಅಗಾಧವಾದ ಕಾರ್ಯಗೈದಿದ್ದಾರೆ. ಅವರನ್ನು ಗೌರವಿಸುವುದೆಂದರೆ ಸೇವೆಯನ್ನು ಗೌರವಿಸಿದಂತೆ. ಕಾರ್ಯಕ್ರಮ ಯಶಸ್ವಿಯಾಗಲಿ.

ಇತಿ ಶುಭಂ

ಶ್ರೀಮದಭಿನವವಾಗೀಶ ಬ್ರಹ್ಮತಂತ್ರ
ಸ್ವತಂತ್ರ ಪರಕಾಲ ಮಹಾದೇಶಿಕ ಸ್ವಾಮಿಗಳು,

ಪರಕಾಲಮಠ, ಮೈಸೂರು.
10.1.96

ವಿಶುದ್ಧ ವಿಜ್ಞಾನಘನಸ್ವರೂಪಂ ವಿಜ್ಞಾನವಿಶ್ರಾಣನಬದ್ಧದೀಕ್ಷಮ್।
ದಯಾನಿಧಿಂ ದೇಹಭೃತಾಂ ಶರಣ್ಯಂ ದೇವಂ ಹಯಗ್ರೀವಮಹಂ ಪ್ರಪದ್ಯೇ॥

ಶ್ರೀ ಲಕ್ಷ್ಮೀಹಯಗ್ರೀವದಿವ್ಯಪಾದುಕಾಸೇವಂ ಶ್ರೀ ಮದಭಿನವವಾಗೀಶ ಬ್ರಹ್ಮತಂತ್ರಸ್ವತಂತ್ರ ಪರಕಾಲ ಮಹಾದೇಶಿಕರ ದಿವ್ಯ ಅಮೃತ ಸಂದೇಶ

ಸನಾತನಾರ್ಯಭಾರತ ಮಹರ್ಷಿಗಳ ಬೀಡಾದ ಭಾರತವು ಮಹರ್ಷಿಗಳ ಆತ್ಮ ಕ್ರೀಡಾದಿವ್ಯಕ್ಷೇತ್ರವಾಗಿ ಬೆಳಗುತ್ತಿದೆ. ಮಹರ್ಷಿಗಳು ಈ ದಿವ್ಯ ಕ್ಷೇತ್ರದಲ್ಲಿ ಸನಾತನಾರ್ಯಧರ್ಮದ ವಿವಿಧ ಬೀಜಗಳನ್ನು ಬಿತ್ತಿ ವಿಶ್ವತೋಮುಖವಾದ ಜ್ಞಾನವಿಕಾಸ ಪ್ರಕಾಶಗಳಿಗೆ ಮೂಲಸ್ತಂಭರಾಗಿರುತ್ತಾರೆ. ಈ ದಿವ್ಯ ಭವ್ಯ ಪರಂಪರೆಯನ್ನು ವಿವಿಧ ರೀತಿಗಳಲ್ಲಿ ಜ್ಞಾನಿಗಳೂ, ಭಕ್ತರೂ, ತತ್ತ್ವದರ್ಶಿಗಳೂ, ವೇದ-ವೇದಾಂಗ-ತತ್ತ್ವಜ್ಞರೂ ಬೆಳಗಿ ಮೆರಸಿ ಆ ಆನಂದ ನಂದಾದೀಪಪ್ರಕಾಶ ಪಥದಲ್ಲಿ ಲೋಕವನ್ನು ಮುನ್ನಡೆಯ ಮಾರ್ಗದಲ್ಲಿ ಮುಂದುವರಿಸುತ್ತಾ ಆದರ್ಶರಾಗಿರುತ್ತಾರೆ.

ಈ ದಿಶೆಯಲ್ಲಿ ತತ್ತ್ವದರ್ಶಿಗಳೂ, ಜ್ಞಾನಿಗಳೂ, ಶಾಸ್ತ್ರವೇತ್ತೃಗಳೂ ತಮ್ಮ ವಿಶಿಷ್ಟ ಕೊಡುಗೆಗಳನ್ನು ಲೋಕಕ್ಕೆ ಅನುಗ್ರಹಿಸಿ ಎಂದೆಂದಿಗೂ ಧ್ರುವತಾರೆಯಾಗಿ ಪ್ರಕಾಶಮಾನರಾಗಿರುತ್ತಾರೆ. ಈ ಪ್ರಕಾರ ರೂಢಮೂಲವಾದ ಭಾರತದ ವಿಶಿಷ್ಟ ಪರಂಪರೆಗಳನ್ನು ತತ್ತ್ವದರ್ಶಿಗಳಾದ ಮಠಪೀಠಾಧ್ಯಕ್ಷರು ತಮ್ಮಲ್ಲಿ ಅಳವಡಿಸಿಕೊಂಡು ತಪಸ್ಯೆಯ ಮೂಲಕ ಚೇತನರ ಉದ್ಧಾರಕ್ಕಾಗಿ ತಮ್ಮ ತಮ್ಮ ಶಿಷ್ಯರಿಗೆ ಉಪದೇಶಿಸುತ್ತಿದ್ದಾರೆ. ಶಿಷ್ಯ ಮತ್ತು ಉಪಾಧ್ಯಾಯರ ನಡುವೆ ಇರುವ, ಗ್ರಾಂಥಿಕವಾಗಿಯೂ, ಆರ್ಥಿಕವಾಗಿಯೂ ಇರುವ ಅವಿಚ್ಛಿನ್ನ ಶಾಸ್ತ್ರ ಬಂಧವೇ ಉಪದೇಶ:-

''ಶಿಷ್ಯೋಪಾಧ್ಯಾಯಿಕ-ವೃತ್ತ್ಯಾ ಗ್ರಂಥತಃ ಅರ್ಥತಃ ಅವಿಚ್ಛಿನ್ನಶಾಸ್ತ್ರಸಂಬಂಧಃ ಉಪದೇಶಃ'' ಎಂದು ಭರದ್ವಾಜರು ತಮ್ಮ ನ್ಯಾಯವಾರ್ತಿಕದಲ್ಲಿ ನುಡಿದಿದ್ದಾರೆ.

ಪ್ರಕೃತ ಶ್ರೀ ಆದಿಚುಂಚನಗಿರಿ ಮಠದ ಅಧ್ಯಕ್ಷರಾಗಿ ಬಿಜಯಮಾಡಿರುವ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳ ಐವತ್ತನೆಯ ವಾರ್ಷಿಕ ವರ್ಧಂತಿಯ ಮಹೋತ್ಸವವು ಶೋಭನವರ್ಣಯುತವಾಗಿರುವುದರಿಂದ ಅವರ ಸ್ಮರಣೆಯಲ್ಲಿ ಶಿಷ್ಯಕೋಟಿಯು ಸುವರ್ಣಮಹೋತ್ಸವವನ್ನು ಆಚರಿಸುತ್ತಿರುವುದೂ ಅತ್ಯಂತ ಉಚಿತವಾಗಿದೆ. ''ಪ್ರತ್ಯಕ್ಷೇ ಗುರವಸ್ತುತ್ಯಾಃ'' ಎಂಬಂತೆ ಅವರ ದಿವ್ಯಶಕ್ತಿ ತೇಜಸ್ಸುಗಳನ್ನು ಲೋಕದಲ್ಲಿ ಬೆಳಗಲು ಈ ಮಹೋತ್ಸವವು ಉತ್ತಮ ಮಾಧ್ಯಮವಾಗಿದೆ. ಪೂಜ್ಯಸ್ವಾಮಿಗಳವರ ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಮೊದಲಾದ ಕ್ಷೇತ್ರಗಳ ವ್ಯಾಪ್ತಿಯು ಇತೋಪ್ಯತಿಶಯವಾಗಿ ವೃದ್ಧಿಗೊಳ್ಳಲಿ. ಆಧುನಿಕ ವಿವೇಕಾನಂದರೂ, ಕರ್ನಾಟಕದ ವಿದ್ಯಾರಣ್ಯರೂ ಆಗಿರುವ ಶ್ರೀ ಶ್ರೀ ಶ್ರೀ ಸ್ವಾಮೀಜಿಯವರಿಗೆ ಸರ್ವವಿಧ ಮಂಗಳಗಳನ್ನುಂಟುಮಾಡಲೆಂದು ಶ್ರೀ ಲಕ್ಷ್ಮೀಹಯಗ್ರೀವ ಭಗವಂತನಲ್ಲಿ ಪ್ರಾರ್ಥಿಸುತ್ತಾ ಹಾರೈಸುತ್ತೇವೆ.

ಇತಿ ನಾರಾಯಣಸ್ಮೃತಯಃ

ಜಗದ್ಗುರು ಶ್ರೀ ಶ್ರೀ ಶ್ರೀ ಬೀರೇಂದ್ರ
ಕೇಶವತಾರಕಾನಂದಪುರಿ ಸ್ವಾಮೀಜಿ,

ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರುಪೀಠ,
ಕಾಗಿನೆಲೆ, ಧಾರವಾಡ ಜಿಲ್ಲೆ.
17.1.96

ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳ ಐವತ್ತು ವರ್ಷಗಳು ತುಂಬಿದ ಅವರ ಸಾರ್ಥಕ ಜೀವನದ ಸಂಕೇತವಾಗಿ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವುದನ್ನು ತಿಳಿದು ನಮಗೆ ಅತೀವ ಸಂತೋಷವನ್ನುಂಟುಮಾಡಿದೆ. ಅವರ ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸೇವಾ ಕ್ಷೇತ್ರಗಳು ವಿಪುಲವಾಗಿ ಬೆಳೆದು ಜನತೆಯ ಕಲ್ಯಾಣಕ್ಕಾಗಿ ಶ್ರಮಿಸುತ್ತಿವೆ. ಅವರ ವ್ಯಕ್ತಿತ್ವ,, ಸೇವಾನಿಷ್ಠೆಗಳು ಉನ್ನತವಾಗಿವೆ ಎಂಬುದು ನಮಗೆ ಮನವರಿಕೆಯಾಗಿದೆ. ಲೋಕ ಸಂಗ್ರಹಕ್ಕಾಗಿ ಅವರು ಮಾಡುತ್ತಿರುವ ಕಾರ್ಯಗಳಿಂದ ಅವರ ಜೀವನ ಧನ್ಯ.

ಮಹಾಸ್ವಾಮಿಗಳ ಸೇವೆಯು ನಿರಂತರವಾಗಿ ನಡೆಯಲಿ. ಅವರಿಗೆ ಭಗವಂತನು ದೀರ್ಘಾಯುರಾರೋಗ್ಯವನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಸಹಿ

ಶ್ರೀ ಶ್ರೀ ಸ್ವಾಮಿಗಳು,

''ಶ್ರೀಮಠ'' ಹರಿಹರಪುರ ಚಿಕ್ಕಮಗಳೂರು ಜಿಲ್ಲೆ.

ನಾರಾಯಣ ಸ್ಮರಣಗಳು,

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನಮಠದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರಿಗೆ ಐವತ್ತು ಸಾರ್ಥಕ ವರ್ಷಗಳು ತುಂಬಿದ ಶುಭ ಸಂದರ್ಭದಲ್ಲಿ ಭಕ್ತಕೋಟಿಯು ಫೆಬ್ರವರಿ ತಿಂಗಳ ೩ ಮತ್ತು ೪ನೇ ದಿನಾಂಕಗಳಂದು ಆಚರಿಸಲಿರುವ ಸುವರ್ಣಮಹೋತ್ಸವ ಮತ್ತು ಕೃತಿಬಿಡುಗಡೆ ಸಮಾರಂಭಗಳ ವಿಷಯ ತಿಳಿದು ಆನಂದವಾಗಿದೆ.

''ಯಾ ದೇವೀ ಸರ್ವಭೂತೇಷು ಬುದ್ಧಿರೂಪೇಣ ಸಂಸ್ಥಿತಾ'' ಎಂಬ ಋಷಿವಚನದಂತೆ ಆದಿಶಕ್ತಿಯು ಸಮಸ್ತ ಜೀವಿಗಳಲ್ಲಿ ಬುದ್ಧಿ ರೂಪದಿಂದ ವ್ಯಾಪಿಸಿದ್ದು, ಅಂತಹ ಬುದ್ಧಿಯನ್ನು ಪ್ರಚೋದಿಸುವ ವಿದ್ಯೆಯ ಪ್ರಚಾರಕ್ಕಾಗಿ ಶ್ರೀ ಶ್ರೀ ಸ್ವಾಮೀಜಿಯವರು ಅನೇಕ ಶಿಕ್ಷಣ ಸಂಸ್ಥೆಗಳನ್ನು ತೆರೆದು ಜನತೆಗೆ ಬದುಕಿನ ಗುರಿ ಸಾಧನೆಯ ಮಾರ್ಗವನ್ನು ತೋರಿಸಿದ್ದಾರೆ. ತಮ್ಮ ಉಪನ್ಯಾಸಗಳಿಂದ ದೇಶ ವಿದೇಶಗಳ ಜನಮನದಲ್ಲಿ ಭಾರತೀಯ ಧಾರ್ಮಿಕ-ಸಾಂಸ್ಕೃತಿಕ ಮೌಲ್ಯಗಳನ್ನು ಬಿಂಬಿಸಿದ್ದಾರೆ. ಸಮಾಜದ ಏಳಿಗೆಗಾಗಿ ಶ್ರೀ ಶ್ರೀ ಸ್ವಾಮೀಜಿಯವರ ಹಲವು ಚಟುವಟಿಕೆಗಳನ್ನು ಗುರುತಿಸದವರಿಲ್ಲ.

ವಿವಿಧ ಕ್ಷೇತ್ರಗಳಲ್ಲಿ ಶ್ರೀ ಶ್ರೀ ಸ್ವಾಮೀಜಿಯವರ ಅಮೂಲ್ಯ ಸಾಧನೆಗಳನ್ನು ಗುರುತಿಸುವ ಈ ಸಮಾರಂಭ ಅತ್ಯಂತ ಔಚಿತ್ಯಪೂರ್ಣ. ಮಹೋತ್ಸವ ಯಶಸ್ವಿಯಾಗಲೆಂದು ಹಾರೈಸುತ್ತೇವೆ. ಸಮಾಜಕ್ಕೆ ಚಿರಕಾಲ ಸೇವೆ ಸಲ್ಲಿಸುವ ಸರ್ವಶಕ್ತಿಯನ್ನೂ, ಇತೋಪ್ಯತಿಶಯ ಸಾಮರ್ಥ್ಯವನ್ನೂ ಶ್ರೀ ಶ್ರೀ ಶ್ರೀ ಸ್ವಾಮೀಜಿಯವರಿಗೆ ಅನುಗ್ರಹಿಸುವಂತೆ ನಮ್ಮ ಆರಾಧ್ಯ ದೈವವನ್ನು ಪ್ರಾರ್ಥಿಸುತ್ತೇವೆ.

ನಾರಾಯಣ ಸ್ಮರಣೆಗಳು



ಜಗದ್ಗುರು ಶ್ರೀ ಶ್ರೀ ಶ್ರೀ ಬಸವರಾಜ ದೇಶಿಕೇಂದ್ರ ಮಹಾಸ್ವಾಮೀಜಿ,

ಐರಣಿ ಮಹಾಸಂಸ್ಥಾನ ಮಠ, ಶ್ರೀಕ್ಷೇತ್ರ,
ಬೀರನಕೆರೆ, ಶಿವಮೊಗ್ಗ ಜಿಲ್ಲೆ.

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರ ಸುವರ್ಣ ಮಹೋತ್ಸವದ ಶುಭ ಸಂದರ್ಭದಲ್ಲಿ ಪರಮ ಸದ್ಭಕ್ತರುಗಳಿಗೆ ಶುಭ ಸಂದೇಶ.

ಸ್ವಾಮೀಜಿಯವರನ್ನು ಪಡೆದ ನೀವೆಲ್ಲರೂ ಧನ್ಯರು. ಮಾನ್ಯರು, ತಪಸ್ವಿಗಳು, ಋಷಿಗಳು, ಮುನಿಗಳು, ಮಹಾನ್ ವಿಭೂತಿ ಪುರುಷರು, ದೈವಾಂಶ ಸಂಭೂತ ದೇವತೆಗಳು ಜಗತ್ತಿಗೋಸುಗ ಧರ್ಮಕ್ಕೋಸ್ಕರ ಅದ್ಭುತ ಕಾರ್ಯ ಮಾಡಿದ್ದಾರೆಂದು ಪುರಾಣ ಇತಿಹಾಸಗಳಿಂದ ಕೇಳಿದ್ದೇವೆ.

ಪೂಜ್ಯ ಸ್ವಾಮೀಜಿಯವರು ಕಾರ್ಯ ಸಾಧನೆಯಲ್ಲಿಯೂ ಕೂಡ ಅವರಿಗಿಂತ ಒಂದು ಕೈ ಮುಂದೆ ಎಂದರೆ ಅತಿಶಯೋಕ್ತಿಯಾಗಲಾರದು. ಅನ್ನವನು ಇಕ್ಕುವುದು, ನನ್ನಿಯನು ನುಡಿಯುವುದು, ತನ್ನಂತೆ ಪರರ ಕಂಡೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ. ಎಂದಂತೆ ಸ್ವಾಮೀಜಿಯವರು ಹಸಿದ ಭಕ್ತ ವೃಂದಕ್ಕೆ ಅನ್ನದಾಸೋಹದ ಜೊತೆಗೆ ವಚನ ಮಾತ್ರದೊಳು ಶುಚಿವೀರ ಸಾಧುಗಳಾಗದೆ ಆಚರಣೆಯಲ್ಲಿಯೂ ಸತ್ಯ, ಧರ್ಮ, ನಿಷ್ಠೆಯಿಂದ ಇದ್ದು ಹಿತೋಪದೇಶ, ಧರ್ಮೋಪದೇಶ ಮಾಡುತ್ತಿರುವುದರಿಂದಲೇ ಅವರ ಉಪದೇಶ ಭಕ್ತರಲ್ಲಿ, ಶಿಷ್ಯರಲ್ಲಿ ಪರಿಣಾಮಕಾರಿಯಾಗಿರುವುದು.

ಪರರ ದುರ್ಗುಣಗಳ ಮರೆವುತ ಆದರಿಪುದೆ ಚಂದ, ಎಲ್ಲರೊಡನೆ ವೈರವಿಲ್ಲದೆ ಕೂರ್ಪುದೆ ಚೆಂದ, ಎಂದಂತೆ ಇವ ನಮ್ಮವ ಇವ ನಮ್ಮವನೆಂದು ಸರ್ವರನ್ನು ತನ್ನ ಆತ್ಮವೆಂದು ಭಾವಿಸಿ, ಅಂಧರಿಗೆ ಕಣ್ಣಾಗಿ, ಅನಾಥರಿಗೆ ನಾಥರಾಗಿ, ಅಬಲರಿಗೆ ಬಲವಾಗಿ, ಅಸಹಾಯಕರಿಗೆ ಸಹಾಯಕರಾಗಿ, ಜಾತಿಭೇದವನ್ನೆಣಿಸದೆ ಸರ್ವರಿಗೂ ಆಶ್ರಯವಾಗಿರುವರು. ಇಂಥ ಮಹಾ ಪುರುಷರ ದರ್ಶನ ಆಶೀರ್ವಾದ ಪಡೆಯುವುದು ಮಹಾಭಾಗ್ಯ. ಅದು ಎಲ್ಲರಿಗೂ ದೊರಕಲೆಂದು ಸಮಿತಿಯವರು ಮಾಡುತ್ತಿರುವ ಕಾರ್ಯ ನಿಜಕ್ಕೂ ಸ್ತುತ್ಯರ್ಹ. ಇದು ಯಶಸ್ವಿಯಾಗಿ ಜರುಗಲೆಂದು ಹಾರೈಸುವ,

ಸಹಿ




ಶ್ರೀ ಶ್ರೀ ಜಗದ್ಗುರು
ಶ್ರೀ ರುದ್ರಾಕ್ಷಿಮುನಿದೇಶಿಕೇಂದ್ರ ಸ್ವಾಮಿಗಳು

ಶ್ರೀ ಆದಿಜಾಂಬವ ಮಹಾಸಂಸ್ಥಾನ ಮಠ
ಕೋಡಿಹಳ್ಳಿ, ಚಿತ್ರದುರ್ಗ ಜಿಲ್ಲೆ
19.1.96

ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರ ೫೦ನೇ ಹುಟ್ಟುಹಬ್ಬ ಆಚರಿಸುತ್ತಿರುವ ಈ ಶುಭ ಸಂದರ್ಭದಲ್ಲಿ ಒಂದು ಸ್ಮರಣಸಂಚಿಕೆಯನ್ನು ಹೊರತರುತ್ತಿರುವುದು ತುಂಬಾ ಸಂತೋಷದ ಸಂಗತಿ. ಶ್ರೀ ಸ್ವಾಮೀಜಿಯವರು ಇಡೀ ರಾಷ್ಟ್ರದ ಸರ್ವತೋಮುಖ ಏಳಿಗೆಗಾಗಿ ಯಾವುದೇ ಜಾತಿ, ಮತ ಭೇದವಿಲ್ಲದೆ ''ಸರ್ವೇ ಜನಾಃ ಸುಖಿನೋ ಭವಂತು'' ಎಂಬಂತೆ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅಹರ್ನಿಶಿ ಶ್ರಮಿಸುತ್ತಿರುವುದು ಸ್ತುತ್ಯಾರ್ಹವೂ, ಶ್ಲಾಘನೀಯವೂ ಆಗಿರುತ್ತದೆ. ಅನ್ನದಾನ, ವಿದ್ಯಾದಾನ, ಜ್ಞಾನದಾನ ಇವುಗಳ ತ್ರಿವಿಧ ದಾಸೋಹಿಯಾಗಿ ಭಾರತದಲ್ಲೇಕೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿಯೂ ತಮ್ಮ ಮಠದ ಶಾಖೆಗಳನ್ನು ಸ್ಥಾಪಿಸಿ ''ಅಭಿನವ ವಿವೇಕಾನಂದ''ರಾಗಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಅತಿಮುಖ್ಯವಾಗಿ ಇಡೀ ರಾಷ್ಟ್ರಕ್ಕೆ ಹೇಯವೂ, ಕ್ಷುಲ್ಲಕವೂ ಹಾಗೂ ಆಘಾತವೂ ಆಗಿರತಕ್ಕ ಅಸ್ಪೃಶ್ಯತೆಯನ್ನು ಕಿತ್ತೊಗೆಯಲು ಈ ಮಠದಲ್ಲಿ ಹರಿಜನರನ್ನು ಸೇರಿಸಿ ಸಮಾನತೆಯನ್ನೀಯುತ್ತಿರುವುದೇ ಸಾಕ್ಷೀಭೂತವಾಗಿದೆ. ಇವರು ಲೋಕಕ್ಕೆ ಮಾದರಿ ಸ್ವಾಮೀಜಿಯಾಗಿದ್ದಾರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಶ್ರೀ ಸ್ವಾಮಿಗಳು ರಾಷ್ಟ್ರಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸಲು ಶ್ರೀ ಆದಿಜಾಂಬವ ಮಹಾಮುನಿಯು ಚಿರಾಯುರಾರೋಗ್ಯವನ್ನಿತ್ತು ಕಾಪಾಡಲೆಂದು ಅನವರತ ಪ್ರಾರ್ಥಿಸುತ್ತೇವೆ.

ಸಹಿ



ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು
ಪಶ್ರೀ ಧರ್ಮಸ್ಥಳ - 574216
ಕರ್ನಾಟಕ
ದಿನಾಂಕ : 29-1-1996

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರಿಗೆ ಐವತ್ತು ಸಂವತ್ಸರಗಳು ತುಂಬಿರುವ ಈ ಶುಭ ಸಂದರ್ಭದಲ್ಲಿ ಭಕ್ತಾಭಿಮಾನಿಗಳು ಸೇರಿ ಸುವರ್ಣ ಮಹೋತ್ಸವವನ್ನು ಆಚರಿಸಲಿರುವ ವಿಚಾರ ತಿಳಿದು ಸಂತೋಷವಾಯಿತು. ಪೀಠಾಧಿಕಾರದ ಅಲ್ಪಾವಧಿಯಲ್ಲಿ ಅವರು ಶೈಕ್ಷಣಿಕ ರಂಗದಲ್ಲಿ ಸಲ್ಲಿಸಿರುವ ಸೇವೆಯು ಅಪಾರವಾಗಿದೆ. ದೇಶ-ವಿದೇಶಗಳಲ್ಲಿ ಸಂಚರಿಸಿ ಧಾರ್ಮಿಕ ಪ್ರವಚನಗಳನ್ನು ನೀಡಿ ಧರ್ಮ ಪ್ರಭಾವನೆಯನ್ನು ಮಾಡಿರುತ್ತಾರೆ. ಸಾಂಸ್ಕೃತಿಕ, ಸಾಮಾಜಿಕ ರಂಗಗಳಲ್ಲಿಯೂ ಅನುಪಮ ಸೇವೆ ಸಲ್ಲಿಸಿ ಜನಾನುರಾಗಿಯಾಗಿದ್ದಾರೆ. ಮುಂದೆಯೂ ಅವರ ದಕ್ಷ ನೇತೃತ್ವದಲ್ಲಿ ಹಮ್ಮಿಕೊಳ್ಳುವ ಎಲ್ಲಾ ಸೇವಾ ಕಾರ್ಯಗಳು ಯಶಸ್ವಿಯಾಗಿ ನಡೆಯುವಂತೆ ಶ್ರೀ ಮಂಜುನಾಥಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

ಸುವರ್ಣ ಮಹೋತ್ಸವದ ಈ ಶುಭ ಸಂದರ್ಭದ ಸವಿನೆನಪಿಗಾಗಿ ಸ್ಮರಣ ಸಂಚಿಕೆಯೊಂದನ್ನು ಪ್ರಕಟಿಸಲಿರುವುದು ಸ್ತುತ್ಯಾರ್ಹವಾಗಿದೆ. ಶ್ರೀಗಳವರು ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಅನುಪಮ ಸೇವಾ ಕಾರ್ಯಗಳನ್ನು ಪರಿಚಯಿಸಬಲ್ಲ ವಿಚಾರಪೂರ್ಣ ಲೇಖನಗಳು ಸಂಚಿಕೆಯಲ್ಲಿ ಮೂಡಿ ಬರಲೆಂದು ಹಾರೈಸುತ್ತೇನೆ.

ಇತಿ,

(ಡಿ. ವೀರೇಂದ್ರ ಹೆಗ್ಗಡೆಯವರು)

ಡಾ॥ ಬಿ.ಡಿ. ಜತ್ತಿ,
ಶಿವಾನಂದ, ೨೨೪, ರಮಣಮಹರ್ಷಿರಸ್ತೆ,
ಬೆಂಗಳೂರು.
9.1.96

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರ ಸುವರ್ಣ ಮಹೋತ್ಸವವನ್ನು ಭಕ್ತಕೋಟಿಯ ಪರವಾಗಿ ಫೆಬ್ರುವರಿ ತಿಂಗಳ ಮೊದಲನೆ ವಾರದಲ್ಲಿ ಆಚರಿಸಬೇಕೆಂದು ನಿರ್ಣಯಿಸಿರುವುದು ತಿಳಿಯಿತು.

ಅದೇ ಕಾಲಕ್ಕೆ ಮಹಾಸ್ವಾಮಿಗಳವರ ಜೀವನಚರಿತ್ರೆ, ಅಭಿವಂದನ ಗ್ರಂಥ, ಸ್ಮರಣಸಂಚಿಕೆ, ಜನಪದ ಆಧಾರಿತ ಸಿರಿ ಚುಂಚನಗಿರಿ ಕೃತಿಗಳನ್ನು ಬಿಡುಗಡೆ ಮಾಡುತ್ತಿರುವುದು ಸಂತೋಷದ ಸಂಗತಿ.

ಜಗದ್ಗುರುಗಳ ಪರಿಚಯ ನನಗೆ ಹಲವಾರು ವರ್ಷಗಳಿಂದ ಇದೆ. ಅವರು ಸರಳ, ಸಾತ್ವಿಕ ಮತ್ತು ಮಾನವರೆಲ್ಲ ಒಂದೇ ಎಂಬ ಭಾವನೆಯಿಂದ ಸಾರ್ವಜನಿಕ ಕೆಲಸವನ್ನು ಮಾಡುತ್ತಾ ಬಂದಿದ್ದಾರೆ. ಅವರು ಅನೇಕ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ನನಗೆ ತಿಳಿದಂತೆ ಪ್ರತಿಯೊಂದು ತಾಲ್ಲೂಕಿಗೆ ಒಂದು ಹೈಸ್ಕೂಲು ನಡೆಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇದಲ್ಲದೆ ಅಂಗವಿಕಲರಿಗೆ ಅನೇಕ ರೀತಿಯಿಂದ ಸಹಾಯ ಮಾಡಿ ಅವರ ಜೀವನವನ್ನು ಪಾವನಗೊಳಿಸುತ್ತಿದ್ದಾರೆ. ಅವರು ಯಾವ ಕಾರ್ಯವನ್ನು ಮಾಡಿದರು ಧರ್ಮದ ತಳಹದಿಯ ಮೇಲೆ ಮಾಡುತ್ತಾರೆ. ಅವರನ್ನು ಹಲವಾರು ಬಾರಿ ಕಂಡಿದ್ದೇನೆ ಮತ್ತು ಅವರು ಮಾಡುವ ಕಾರ್ಯವನ್ನು ಪ್ರತ್ಯಕ್ಷ ನೋಡಿ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೇನೆ.

ಅವರಿಗೆ ಪರಮಾತ್ಮನು ದೀರ್ಘಾಯುಷ್ಯವನ್ನು ಕೊಟ್ಟು ಇನ್ನೂ ಹೆಚ್ಚಿನ ಸಮಾಜ ಕಲ್ಯಾಣ ಕಾರ್ಯವನ್ನು ಮಾಡುವ ಶಕ್ತಿಯನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುವೆ.

ಸಹಿ



ಶ್ರೀ ಎಸ್. ನಿಜಲಿಂಗಪ್ಪ

ವಿನಯ, ವಿ.ಪಿ. ಬಡಾವಣೆ, ಚಿತ್ರದುರ್ಗ.
13.1.96

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನಮಠದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಯವರಿಗೆ ೫೦ ಸಾರ್ಥಕ ಸಂವತ್ಸರಗಳು ತುಂಬಿದ ಸಂದರ್ಭದಲ್ಲಿ ಅವರ ಭಕ್ತಕೋಟಿಯು ಫೆಬ್ರವರಿಯಲ್ಲಿ ಸುವರ್ಣಮಹೋತ್ಸವವನ್ನು ಆಚರಿಸಲು ತೀರ್ಮಾನಿಸಿರುವುದು ಅತ್ಯಂತ ಸಂತೋಷದ ಸಂಗತಿ.

ಶ್ರೀಗಳವರು ಸಿಂಹಾಸನಕ್ಕೆ ಬಂದಾಗಿನಿಂದಲೂ ಭಕ್ತರ ನಾನಾ ರೀತಿಯ ಬೆಳವಣಿಗೆಯ ಅವಶ್ಯಕತೆಯನ್ನು ಕಂಡು, ಅದಕ್ಕಾಗಿ ಅನೇಕ ರೀತಿಯಲ್ಲಿ ಶ್ರಮಿಸುತ್ತಿರುವುದು ಎಲ್ಲರಿಗೂ ಮನದಟ್ಟಾದ ವಿಚಾರ. ಜನಸಾಮಾನ್ಯರ ಸಂಸ್ಕೃತಿ, ಜೀವನ ಹಾಗೂ ಜ್ಞಾನದಮಟ್ಟ ಬೆಳೆಯಬೇಕಾದರೆ, ವಿದ್ಯಾಭಿವೃದ್ಧಿಯು ಅವಶ್ಯಕವೆಂದು ಶ್ರೀಗಳವರು ಗ್ರಹಿಸಿ, ಅದಕ್ಕಾಗಿ ಎಲ್ಲಾ ಮಟ್ಟದಲ್ಲಿಯೂ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ, ಯಶಸ್ವಿಯಾಗಿ ನಡೆಸಿಕೊಂಡು ಬಂದಿರುವುದು ಅತ್ಯಂತ ಸ್ತುತ್ಯಕಾರ್ಯ. ಮಾನವ ಸಮಾಜದ ನಾನಾ ಮುಖದ ಏಳಿಗೆಗಾಗಿ ಶ್ರೀಗಳವರು ಸತತವಾಗಿ ದುಡಿಯುತ್ತಿರುವುದು, ಸಾಕಷ್ಟು ಮಟ್ಟಿಗೆ ಯಶಸ್ವಿಯಾಗಿರುವುದು ಸಹ ಎಲ್ಲರಿಗೂ ಗೊತ್ತಾದ ವಿಷಯ. ಇದಕ್ಕಾಗಿ ಸಮಾಜವು ಶ್ರೀಗಳವರಿಗೆ ಋಣಿಯಾಗಿದೆ.

ಶ್ರೀಗಳವರ ಈ ನಾನಾ ಮುಖದ ಸಮಾಜ ಸೇವೆಯು ಇನ್ನೂ ಹೆಚ್ಚು ಯಶಸ್ವಿಯಾಗಲೆಂದು, ಅವರ ಸುವರ್ಣಮಹೋತ್ಸವವು ಯಶಸ್ವಿಯಾಗಲೆಂದೂ, ಅವರ ಜೀವನ ಚರಿತ್ರೆ, ಅಭಿವಂದನಾ ಗ್ರಂಥವು ಜನತೆಗೆ ಜ್ಞಾನಪ್ರದವಾಗಲೆಂದು ಹಾರೈಸುತ್ತೇನೆ.

ಸಹಿ

ಶ್ರೀ ಡಿ.ಎಂ. ಚಂದ್ರಶೇಖರ್,

ನಿವೃತ್ತ ಮುಖ್ಯನ್ಯಾಯಾಧೀಶರು, ಸ್ಕಂದ,
೨೨, ಕುಮಾರಕೃಪ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು.
10.1.96

ಶ್ರೀ ಆದಿಚುಂಚನಗಿರಿ ಮಹಾಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳಿಗೆ ಐವತ್ತು ವರ್ಷಗಳು ತುಂಬುವ ಶುಭ ಸಂದರ್ಭದಲ್ಲಿ ನನ್ನ ಭಕ್ತಿ ಪೂರ್ವಕ ಅಭಿವಂದನೆಗಳನ್ನು ಅರ್ಪಿಸುತ್ತೇನೆ.

ಪೀಠಾರೋಹಣ ಮಾಡಿದ ಮೇಲೆ ಕೇವಲ ಇಪ್ಪತ್ತೊಂದು ವರ್ಷಗಳಲ್ಲಿ ಶ್ರೀ ಶ್ರೀಯವರ ಸಾಧನೆಗಳು ಮಹತ್ತರವೂ ಬಹುಮುಖಿಗಳದ್ದೂ ಆಗಿವೆ.


ವಿದ್ಯಾಸಂಸ್ಥೆಗಳನ್ನೂ, ಉಚಿತ ವಿದ್ಯಾರ್ಥಿನಿಲಯಗಳನ್ನೂ ಸ್ಥಾಪಿಸಿ, ಬೆಳೆಸಿ ಗ್ರಾಮಾಂತರ ಬಡ ವಿದ್ಯಾರ್ಥಿಗಳ ವಿದ್ಯಾಪ್ರಗತಿಗೆ ಕಾರಣರಾಗಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ವೈದ್ಯಕೀಯ ಕಾಲೇಜಿಗೆ ಸೇರಿದಂತೆ ಒಂದು ದೊಡ್ಡ ಆಸ್ಪತ್ರೆಯನ್ನು ಸ್ಥಾಪಿಸಿ ಗ್ರಾಮಾಂತರ ಬಡ ಜನರಿಗೆ ಉತ್ತಮ ವೈದ್ಯಕೀಯ ಸೇವೆಯನ್ನು ಉಚಿತವಾಗಿ ಒದಗಿಸಿದ್ದಾರೆ. ನಾನಾ ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಅನೇಕ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಶಾಖಾಮಠಗಳನ್ನು ಸ್ಥಾಪಿಸಿ ಸಾಮಾನ್ಯ ಜನಗಳಲ್ಲಿ ಆಧ್ಯಾತ್ಮ ಜಾಗೃತಿಯನ್ನುಂಟುಮಾಡುತ್ತಿದ್ದಾರೆ.

ಬೇಸಿಗೆ ರಜಾಕಾಲದಲ್ಲಿ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಉಚಿತ ಶಿಬಿರಗಳನ್ನು ಏರ್ಪಡಿಸಿ ಅವರಿಗೆ ಯೋಗ, ಸಂಸ್ಕೃತ, ಮಹಾತ್ಮರ ಜೀವನ, ಸಂಸ್ಕೃತಿ, ಶಿಸ್ತು ಸಂಯಮಗಳ ಪರಿಚಯವನ್ನು ಮಾಡಿ ಆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಕಾರಣರಾಗಿದ್ದಾರೆ.

ಶ್ರೀ ಶ್ರೀಯವರು ಜನಹಿತ ಮಹತ್ಸಾಧನೆಗಳನ್ನು ಇನ್ನೂ ಹೆಚ್ಚಾಗಿ ಮಾಡಲು ಪರಮಾತ್ಮನು ಅವರಿಗೆ ಆಯುರಾರೋಗ್ಯಗಳನ್ನು ದಯಪಾಲಿಸಲಿ ಎಂದು ನನ್ನ ಭಕ್ತಿಪೂರ್ವಕ ಶುಭಾಶಯಗಳು.

ಸಹಿ



ACADEMY OF LIBERAL EDUCATION (R).

KURUNJI VENKATARAMANA GOWDA,

Founder President

ಸ್ವಾಮೀಜಿಯವರೇ,

ತಾವು ತಮ್ಮ ಮಠಾಧಿಪತಿ ಸ್ಥಾನದಿಂದ ದೇಶದಲ್ಲಿ ಶಾಂತಿ, ಪ್ರೇಮ, ಏಕತೆ ಹಾಗೂ ದೇಶದ ಅಭಿವೃದ್ಧಿಗಾಗಿ ಬಹಳಷ್ಟು ಯೋಜನೆಗಳನ್ನು ಹಾಕಿಕೊಂಡು 232 ಸಂಸ್ಥೆಗಳನ್ನು ಕಟ್ಟಿ ದೇಶ ವಿದೇಶದ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ಕೊಡುತ್ತಿದ್ದೀರಿ. ಅಲ್ಲದೆ ಮೂಕ, ಕಿವುಡ, ಅನಾಥರಿಗೆ ವೃದ್ಧಾಶ್ರಮ, ಅಬಲಾಶ್ರಮ ತೆರೆದು ಅವರ ಜೀವನವನ್ನೂ ಹಸನಾಗಿಸಿರುತ್ತೀರಿ. ಹಲವು ಕಲ್ಯಾಣ ಮಂಟಪಗಳನ್ನೂ ಕಟ್ಟಿಸಿ ಕಲ್ಯಾಣ ಕಾರ್ಯಕ್ರಮಗಳಿಗೆ ಅನುಕೂಲ ಮಾಡಿದ್ದೀರಿ. ತಾವು ಪಟ್ಟಾಭಿಷೇಕಕ್ಕೆ ಬಂದು ಸುಮಾರು 22 ವರ್ಷಗಳಾಗಿರುತ್ತವೆ. ಈ ಅವಧಿಯಲ್ಲಿ ಹಿಂದೆಂದೂ ಕಾಣದಷ್ಟು ಶ್ರೀಮಠದ ಪ್ರಗತಿಯಾಗಿದೆ. ತಾವು ಪವಾಡಪುರುಷರಾಗಿದ್ದೀರಿ. ನಾವು ನಮ್ಮ ಸಮಾಜವು ಚಿರಋಣಿಯಾಗಿದ್ದೇವೆ.

ನಮ್ಮ ಎಲ್ಲಾ ಸಂಸ್ಥೆಗಳ ಪರವಾಗಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಜಿಲ್ಲೆಯ ಭಕ್ತರ ಹಾಗೂ ಸಂಘ-ಸಂಸ್ಥೆಗಳ ಪರವಾಗಿ, ನಾವು ತಮಗೆ ಚಿನ್ನದ ಹಾಗೂ ವಜ್ರದ ಕಿರೀಟವನ್ನು ಅರ್ಪಿಸಲಿರುವೆವು. ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇವೆ.

ತಮ್ಮ ವಿಧೇಯರು

ಕುರುಂಜಿ ವೆಂಕಟರಮಣಗೌಡ

ಸೂಳ್ಯ, ದಕ್ಷಿಣಕನ್ನಡ, ಕೊಡಗು.



ಶ್ರೀ ಗಂಗಾಧರೇಶ್ವರ ಸ್ವಾಮಿ



ಶ್ರೀ ಕಾಲಭೈರವೇಶ್ವರ ಸ್ವಾಮಿ



ಪರಮಪೂಜ್ಯ ಶ್ರೀ ಶ್ರೀ ಶ್ರೀ ಭಕ್ತನಾಥ ಸ್ವಾಮಿಗಳವರು




ಪರಮಪೂಜ್ಯ ಶ್ರೀ ಶ್ರೀ ಶ್ರೀ ಚಂದ್ರಶೇಖರನಾಥ ಸ್ವಾಮಿಗಳವರು



ಪರಮಪೂಜ್ಯ ಶ್ರೀ ಶ್ರೀ ಶ್ರೀ ರಾಮಾನಂದನಾಥಸ್ವಾಮಿಗಳವರು



ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಯವರು






ಪರಮಪೂಜ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು



















ಶ್ರೀ ಆದಿಚುಂಚನಗಿರಿ ಕ್ಷೇತ್ರ

ಶ್ರೀ ಪ್ರಭಾ

ಶ್ರೀ ಆದಿಚುಂಚನಗಿರಿ ಕ್ಷೇತ್ರ

ಪ್ರೊ॥ ಹೆಚ್.ಕೆ. ಸಿದ್ಧಗಂಗಯ್ಯ

ಭಾರತವು ಧರ್ಮಭೂಮಿ, ಕರ್ಮಭೂಮಿ, ಪುಣ್ಯಭೂಮಿ, ಆಧ್ಯಾತ್ಮಿಕಭೂಮಿ, ತಪೋಭೂಮಿ ಮುಂತಾದ ಪ್ರಶಂಸೆಗೆ ಪ್ರಾಚೀನ ಕಾಲದಿಂದಲೂ ಪಾತ್ರವಾಗಿದೆ. ಈ ರಾಷ್ಟ್ರದ ಬೆಟ್ಟ, ಗುಡ್ಡ, ಗಿರಿ, ಪರ್ವತಗಳ ಮೇಲೆ, ವಾಪೀ, ಕೂಪ, ತಟಾಕ, ಕಾಸಾರ, ನದ ನದೀತೀರಗಳಲ್ಲಿ, ದುರ್ಗಮ ಕಾನನ, ಕಣಿವೆ, ಗುಹೆಗಳಲ್ಲಿ; ನಿಸರ್ಗ ರಮಣೀಯ ಪ್ರಶಾಂತ ಪ್ರದೇಶಗಳಲ್ಲೆಲ್ಲಾ ಚಿಕ್ಕ, ದೊಡ್ಡ ದೇವಮಂದಿರಗಳೂ ತೀರ್ಥಕ್ಷೇತ್ರಗಳೂ ಇವೆ. ಮಾನವನ ಇಹ ಜೀವನದ ಝುಟಿಲ ಸಮಸ್ಯೆಗಳನ್ನೂ, ಜೀವನದ ಸಾರ್ಥಕ್ಯಕ್ಕೆ ಸಾಧನವಾದ ಆದರೆ ಕೈಗೆಟುಕದ ಪರದ ಸಮಸ್ಯೆಗಳನ್ನೂ ಬಿಡಿಸಿ ಜೀವನದ ಪರಮ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಅನ್ಯೋನ್ಯ ಬಾಧಕವಾಗದಂತೆ ಗಳಿಸಲು ಬೆಳಕನ್ನು ಚೆಲ್ಲುವ ಪುಣ್ಯಕ್ಷೇತ್ರಗಳಲ್ಲಿ ಶ್ರೀ ಆದಿಚುಂಚನಗಿರಿ ಕ್ಷೇತ್ರವೂ ಒಂದಾಗಿದೆ.

ಶ್ರೀ ಆದಿಚುಂಚನಗಿರಿ ಕ್ಷೇತ್ರವು ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿದೆ. ಮೈಸೂರಿನಿಂದ ತುಮಕೂರು, ತಿಪಟೂರಿಗೆ ಹೋಗುವ ಹೆದ್ದಾರಿಯಲ್ಲಿ ಬೆಳ್ಳೂರಿನಿಂದ ಮುಂದೆ ಸಾಗಿ ವರವೈಷ್ಣವೀ ನದಿಯನ್ನು ದಾಟಿ ಮುಂದಕ್ಕೆ ಸ್ವಲ್ಪ ದೂರ ಹೋದರೆ ಚುಂಚನಹಳ್ಳಿಯೆಂಬ ಚಿಕ್ಕಗ್ರಾಮವೊಂದು ಸಿಕ್ಕುತ್ತದೆ. ಬೆಂಗಳೂರಿನಿಂದ ಹೊರಟು ನೆಲಮಂಗಲ, ಕುಣಿಗಲ್, ಎಡೆಯೂರು, ನೆಲ್ಲಿಗೆರೆ ಮಾರ್ಗದಲ್ಲಿ ಪ್ರಯಾಣ ಮಾಡಿ ಚುಂಚನಹಳ್ಳಿಯನ್ನು ತಲುಪಬಹುದು. ಹಾಸನದಿಂದ ಹೊರಟು ಚನ್ನರಾಯಪಟ್ಟಣ, ಬೆಳ್ಳೂರಿನಮಾರ್ಗವಾಗಿ ಪ್ರಯಾಣ ಮಾಡಿಯೂ ಚುಂಚನಹಳ್ಳಿಯನ್ನು ತಲುಪಬಹುದು.

ಚುಂಚನಹಳ್ಳಿಯಲ್ಲಿ ನಿಂತು ಗಿರಿಯ ಕಡೆಗೆ ನೋಡಿದರೆ ತನ್ನನ್ನರಸಿಬಂದವರನ್ನು ಆದರದಿಂದ ಕೈಬೀಸಿ ಕರೆದು ತಂಪನ್ನೂ ಕಂಪನ್ನೂ, ಇಂಪನ್ನೂ ನೀಡಬಲ್ಲ, ನಿತ್ಯಾನಂದದಲ್ಲಿ ಮುಳುಗಿಸಿ ನಿರ್ಮಲ ಶಾಂತಿಯನ್ನೀಯಬಲ್ಲ, ರಮಣೀಯವೂ ಪುಣ್ಯಪ್ರದವೂ ಆದ ಆದಿಚುಂಚನಗಿರಿ ಆಶ್ರಮದ ಪವಿತ್ರ ದರ್ಶನವಾಗುತ್ತದೆ. ನಾಲ್ಕೂ ದಿಕ್ಕುಗಳಿಂದ ಪ್ರಯಾಣ ಮಾಡುವ ಯಾತ್ರಿಕರು ಇಪ್ಪತ್ತು ಮೈಲಿಗಳ ದೂರದಿಂದಲೇ ಈ ಮಹೋನ್ನತಗಿರಿಯ ಭವ್ಯದರ್ಶನವನ್ನು ಪಡೆಯಬಹುದು. ಸುತ್ತಲೂ ತಬ್ಬಿ ಹಬ್ಬಿರುವ ಗುಡ್ಡಗಳ ನಡುವೆ ಬಾನೆತ್ತರ ಎದ್ದು ನಿಂತಿರುವ ಈ ದಿವ್ಯ ಗಿರಿಯು ಎಲ್ಲ ದಿಕ್ಕುಗಳಿಂದಲೂ ಬರುವ

ಅಭಿವಂದನಾ

ಯಾತ್ರಿಕರಿಗೆ ದೂರದಿಂದ ಅದ್ಭುತ ಉದ್ಭವಲಿಂಗದಂತೆ ಕಂಗೊಳಿಸುತ್ತದೆ; ಹತ್ತಿರದಿಂದ ನೋಡಿದಾಗ ಸುತ್ತಲೂ ರಮಣೀಯವಾಗಿರುವ ಹಸಿರುಕಾನನದ ಉಡುಗೆಯನ್ನುಟ್ಟು, ಗೈರಿಕಾದಿಧಾತುಗಳಿಂದ ನಾನಾವರ್ಣವಾಗಿ ರಂಜಿಸುವ ಬಂಡೆಗಳ ತೊಡುಗೆಗಳನ್ನು ತೊಟ್ಟು ಗಜಾಜಿನಧರನೂ ಸರ್ಪಾಭರಣನೂ ಆದ ಪರಶಿವನ ವಿನೂತನ ಲೀಲಾವತಾರದಂತೆ ವಿರಾಜಿಸುತ್ತಿದೆ. ಬೆಟ್ಟವನ್ನು ಹತ್ತಿ ಆದಿಶಕ್ತಿ ಸ್ವರೂಪಿಣಿಯಾದ ಕಂಬದಮ್ಮನ ಹತ್ತಿರ ನಿಂತು ಗಿರಿಯ ತ್ರಿಕೂಟಗಳನ್ನು ಕಂಡಾಗ ಶಿವನ ತ್ರಿಶೂಲದ ಅನುಭವವಾಗುತ್ತದೆ. ತಲೆಎತ್ತಿ ಬಸವನ ಕೋಡುಗಳಂತಿರುವ ಗಳಿಗ್ಗಲ್ಲಿನ ಕಂಬ ಮತ್ತು ಚೋಳೂರು ಕಂಬಗಳನ್ನು ನೋಡಿದಾಗ ಹರನ ವಾಹನವಾದ ನಂದಿಯ ಮುಡಿಯೋ ಎನಿಸುತ್ತದೆ.

ಆದಿಚುಂಚನಗಿರಿಯು ಕರ್ನಾಟಕದ ಪವಿತ್ರನದಿಗಳಾದ ತುಂಗಾ ಕಾವೇರಿಗಳ ನಡುವೆ ವರವೈಷ್ಣವೀ ನದಿಯ ಮೂಡಲ ಕಡೆಯ ಉದ್ದಕ್ಕೂ ಉತ್ತರ ದಕ್ಷಿಣವಾಗಿ ಹಬ್ಬಿರುವ ಕರ್ನಾಟಕದ ಮಧ್ಯಮ ಪರ್ವತ ಶ್ರೇಣಿಗೆ ಸೇರಿದ ಒಂದು ಉತ್ತುಂಗಗಿರಿ. ಈ ಗಿರಿಯ ಒಂದು ಶಿಖರದಲ್ಲಿರುವ ಆಕಾಶ ಭೈರವನೆಂದು ಸುಪ್ರಸಿದ್ಧವಾದ ಗಳಿಗಗಲ್ಲಿನ ಎತ್ತರ ಸುಮಾರು ೧೨೫ ಅಡಿ. ಬೆಟ್ಟದ ನಡುನೆತ್ತಿಯಲ್ಲಿ ಹೆಬ್ಬಂಡೆಯೊಂದು ಗೇಣಿನಷ್ಟು ತಳದ ಮೇಲೆ ಲಿಂಗದಂತೆ ನಿಂತಿರುವ ದೃಶ್ಯ ಆಶ್ಚರ್ಯಕರವಾದುದು. ಗಿರಿಯ ಶೃಂಗದಲ್ಲಿ ನಿಂತು ಸಾಯಂಸಂಧ್ಯಾ ಸಮಯದಲ್ಲಿ ಪಶ್ಚಿಮ ಕರಾವಳಿಯಲ್ಲಿ ಮೋಹಕ ಪ್ರಭೆಯಿಂದ ಅಸ್ತಂಗತನಾಗುವ ಸೂರ್ಯನನ್ನು ನೋಡುವುದು ಬಹಳ ಮನೋರಂಜಕವಾಗಿರುತ್ತದೆ. ರಾತ್ರಿ ಕಾಲದಲ್ಲಿ ಬೆಂಗಳೂರು, ಮೈಸೂರು, ಹಾಸನ, ತುಮಕೂರು ಮುಂತಾದ ಪಟ್ಟಣಗಳಲ್ಲಿ ಬೆಳಗುವ ವಿದ್ಯುದ್ದೀಪಗಳ ಕಾಂತಿಯು ಮಸುಕಾಗಿ ಗೋಚರಿಸುತ್ತದೆ. ಚುಂಚನಗಿರಿಯ ಆಗ್ನೇಯಕ್ಕೆ ಅಂಜನೇಯಸ್ವಾಮಿಯ ಬೆಟ್ಟವೂ, ಉತ್ತರಕ್ಕೆ ಮಾದೇಶ್ವರ ಸ್ವಾಮಿಯ ಕ್ಷೇತ್ರವೂ, ದಕ್ಷಿಣಕ್ಕೆ ಶ್ರೀ ರಂಗನಾಥ ದೇವಾಲಯವೂ ಇವೆ. ಬೆಟ್ಟದಿಂದ ೮ ಕಿ.ಮೀ. ದೂರದಲ್ಲಿರುವ ಬೆಳ್ಳೂರಿನಲ್ಲಿ ಶಿಲ್ಪಕಲಾ ನೈಪುಣ್ಯದಿಂದ ಕೂಡಿದ ಪುರಾತನ ದೇವಾಲಯಗಳೂ, ಅನತಿ ದೂರದಲ್ಲಿರುವ ಕಂಚನಹಳ್ಳಿಯಲ್ಲಿ ಪುಷ್ಕರಣಿಗಳೂ, ಮಂಟಪಗಳೂ, ಶಾಸನಗಳೂ, ದೇವತಾಮೂರ್ತಿಗಳೂ, ಆದಿಚುಂಚನಗಿರಿಯ ಹಿಂದಿನ ಮಠಾಧಿಪತಿಗಳ ಹೆಸರನ್ನು ಕೆತ್ತಿರುವ ಶಿಲಾಸ್ತಂಭಗಳೂ ಇವೆ. ಈ ಹಳ್ಳಿಯು ಆದಿಚುಂಚನಗಿರಿಯ ಅನೇಕ ಯೋಗಿಗಳ ಅನುಷ್ಠಾನ ಭೂಮಿಯಾಗಿದ್ದಿತೆಂದು ತೋರುತ್ತದೆ. ಇಲ್ಲಿನ ಅವಶೇಷಗಳ ಬಗ್ಗೆ ಸಂಶೋಧನೆ ಮತ್ತು ವಿಮರ್ಶೆಗಳ ಅಗತ್ಯವಿದೆ. ಶ್ರೀ ಕ್ಷೇತ್ರದ ಸುತ್ತಲೂ ಪ್ರಸಿದ್ಧ ಯಾತ್ರಾಸ್ಥಳಗಳಾದ ಶ್ರವಣಬೆಳಗೊಳದ ಗೋಮಟೇಶ್ವರ ಕ್ಷೇತ್ರ, ಎಡೆಯೂರಿನ ತೋಂಟದ ಸಿದ್ಧಲಿಂಗೇಶ್ವರ ಕ್ಷೇತ್ರ, ಚುಂಚನಕಟ್ಟೆಯ ರಾಮಕ್ಷೇತ್ರ, ಮೇಲುಕೋಟೆಯ ಚೆಲುವರಾಯಸ್ವಾಮಿಯ ಕ್ಷೇತ್ರ, ಹಾಲ್ತಿಯ ಪರಶುರಾಮಕ್ಷೇತ್ರ, ನಾಗಮಂಗಲದ ಸೌಮ್ಯಕೇಶವಸ್ವಾಮಿ ದೇವಾಲಯ ಮುಂತಾದ ಪುಣ್ಯಕ್ಷೇತ್ರಗಳಿವೆ. ಸ್ವಲ್ಪ ದೂರದಲ್ಲಿ ಶಿಲ್ಪಕಲೆಗೆ ಹೆಸರಾಂತ ಬೇಲೂರು ಚನ್ನಕೇಶವ ದೇವಾಲಯ, ಹಳೇಬೀಡು ಹೊಯ್ಸಳೇಶ್ವರ ದೇವಾಲಯ, ಮಾಗಡಿ ರಂಗನಾಥ ದೇವಾಲಯ, ಸಾವನ ದುರ್ಗ,

ಹುತ್ರಿದುರ್ಗ, ಹುಲಿಯೂರು ದುರ್ಗ, ತಲಕಾಡು, ಶಂಭುಲಿಂಗನ ಬೆಟ್ಟ, ಶಿವಗಂಗೆ ಬೆಟ್ಟಗಳಿವೆ. ಹೀಗೆ ಆದಿಚುಂಚನಗಿರಿಯು ಪುಣ್ಯ ಕ್ಷೇತ್ರಗಳ ನಡುವೆ ಮಹಾಪುಣ್ಯಕ್ಷೇತ್ರವಾಗಿ ನೆಲಸಿದೆ.

> **ಹಿಂದೆ ಐನೂರು ಮಠವು ಮುಂದೆ ಐನೂರು ಮಠವು**
> **ಸಿದ್ಧರ ಮಠವು ಶಿವಮಠವು**
> **ಬೆಟ್ಟಕ್ಕೆ ಸಿದ್ಧಭೈರವನ ದೊರೆತನ**

ಎಂದು ಜನಪದ ಕವಿಗಳು ಶ್ರೀ ಕ್ಷೇತ್ರದ ಹಿರಿಮೆ ಗರಿಮೆಗಳನ್ನು ಕೊಂಡಾಡಿದ್ದಾರೆ. ಈ ಕ್ಷೇತ್ರವು ಗಿರಿ, ಗುಹೆ, ಹೆಬ್ಬಂಡೆಗಳು, ಮಠ, ಮಂಟಪ, ದೇಗುಲ, ಪುಷ್ಕರಣಿ, ಕೆರೆ, ಕೊಳ, ಬಾವಿ, ನಾನಾ ತರುಲತಾ ಮೃಗ ಪಕ್ಷಿಗಳಿಂದ ಕೂಡಿ ಪ್ರಶಾಂತವೂ ಮನೋಹರವೂ ಆಗಿದೆ. ಇದು ಪ್ರಕೃತಿಯ ಸೌಂದರ್ಯದ ತೌರೂರು: ಕಾಲಭೈರವನ ನೆಲೆವೀಡು.

> **ನಾಗಮಂಗಲದಾಚೆ ಬೆಳ್ಳೂರ ಬಯಲಾಚೆ**
> **ಆಚೆ ಜೀರಳ್ಳಿ ಕೆರೆಯಾಚೆ ಭೈರುವನ**
> **ದೊರೆತನ ಚುಂಚನಗಿರಿಯಲ್ಲಿ**

ಗಿರಿಯ ತಪ್ಪಲಿನಲ್ಲಿ ಕನ್ನಡಿಗಳಂತೆ ಕಂಗೊಳಿಸುವ ಸುಂದರವಾದ ಜೋಡಿ ತಾವರೆಕೆರೆಗಳಿವೆ. ಇವು ತರುಲತಾಗುಲ್ಮಗಳಿಂದಾವೃತವಾಗಿವೆ. ಈ ಕೆರೆಗಳ ತುಂಬ ಬೆಳೆದಿರುವ ಕೆಂದಾವರೆಗಳು, ಅವುಗಳ ಹರಡಿರುವ ಹಸಿರೆಲೆಗಳು, ಎಲೆಗಳ ನಡುವೆ ಎದ್ದು ನಿಂತಿರುವ ಬಿರಿಯದ, ಬಿರಿದ ಹೂಗಳು, ನೀರಿನಲ್ಲಿ ಮುಳುಗೇಳುವ ನೀರುಹಕ್ಕಿಗಳು, ಮೇಲೆ ಏರಿಳಿತದ ಆಟದಲ್ಲಿ ನಿರತವಾಗಿ ಚಿಲಿಪಿಲಿಗುಟ್ಟುವ ಪುಟ್ಟ ಹಕ್ಕಿಗಳ ಸಂಕುಲ, ನೀರಿನಲ್ಲಿ ಮಂದೆ ಮಂದೆಯಾಗಿ ಈಜುವ ಮೀನುಗಳು. ಅವುಗಳಿಗಾಗಿ ದಡದಲ್ಲಿ ಮೌನ ಧ್ಯಾನವನ್ನು ನಟಿಸುತ್ತಾ ಕಾದಿರುವ ಬಕಗಳು, ಅಂಗಳದಲ್ಲಿ ನಲಿದಾಡುವ ನವಿಲುಗಳು, ತಟದಲ್ಲಿ ಬೆಳೆದಿರುವ ತರುಲತೆಗಳ ಕುಸುಮಗಳನ್ನು ಮುತ್ತಿ ಝೇಂಕರಿಸುವ ದುಂಬಿಗಳು, ಕೆರೆಗಳ ತಂಪಿನ ಭಾರದಿಂದ ಮಂದವಾಗಿ ಸುಳಿಯುವ ಗಾಳಿ, ಜಲಪಾನದಲ್ಲಿ ತೊಡಗಿರುವ ಜಿಂಕೆಗಳು ತಮ್ಮ ಸಮಷ್ಟಿ ಸೌಂದರ್ಯದಿಂದ ಯಾತ್ರಿಕರನ್ನು ಮೈಮರೆಸುತ್ತವೆ. ಈ ಸೊಬಗನ್ನೆಷ್ಟು ಸವಿದರೂ ಕಣ್ಮನಗಳ ಹಸಿವು ಹಿಂಗುವುದಿಲ್ಲ, ಯಾತ್ರಿಕರಂತೆ ಗಂಗಾಧರೇಶ್ವರ ಮತ್ತು ಕಾಲಭೈರವೇಶ್ವರರೂ ಈ ಕೆರೆಗಳಚೆಲುವಿಗೆ ಮಾರು ಹೋಗಿದ್ದಾರೆ.

> **ಆ ಬೆಟ್ಟ ಈ ಬೆಟ್ಟ ನಡುವೆ ತಾವರೆಕೊಳ**
> **ತಾವರೆ ಹೂವ ಕೊಯ್ಯ ಬಂದ ಭೈರುವ**
> **ತಾವೊಳ್ಳೆದೆಂದು ನೆಲೆಗೊಂಡ**

ಅಭಿವಂದನಾ

ಸಂಜೆಯ ಮಳೆಗರೆದು ಗಂಧದ ಕೆರೆತುಂಬಿ
ಸಣ್ಣ ಮಲ್ಲಿಗೆ ಜಾಜಿ ಅರಳೀದೊ ಗಂಗಾಧರನ
ಸಂಜೆಯ ಪೂಜೆಗೆ ಹಸನಾದೊ

ಈ ಕೆರೆಗಳ ಬದಿಯಲ್ಲಿ ಬಿದ್ದಿರುವ ವೀರಗಲ್ಲುಗಳು ಮತ್ತು ಶಾಸನಗಳು ಆದಿಚುಂಚನಗಿರಿಯ ಪ್ರಾಚೀನ ಇತಿಹಾಸವನ್ನು ಸಾರುತ್ತವೆ. ಇವುಗಳ ಪರಿಶೀಲನೆಯಿಂದ ಹಲವು ಐತಿಹಾಸಿಕಾಂಶಗಳು ಬೆಳಕಿಗೆ ಬರಬಹುದು.

ಆಲ, ಬೇಲ, ಬೇವು, ಬನ್ನಿ, ಬಿಲ್ವ, ಬಿಲ್ವಾರ, ಚಂದನ, ದೇವದಾರು, ತಾರೆ, ಹಲಸು, ಮಾವು, ಮಂದಾರ ಮುಂತಾದ ತರುಲತಾಗುಲ್ಮಗಳಿಂದ ಸೊಂಪಾಗಿ ದಟ್ಟವಾಗಿ ಬೆಳೆದಿರುವ ಅರಣ್ಯ ತಪ್ಪಲಿನಲ್ಲಿ ನಿರ್ಮಿಸಿರುವ ಭವ್ಯ ಭವನಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡು ಗಿರಿಯನ್ನು ಅಡಿಯಿಂದ ಮುಡಿಯವರೆಗೆ ತಬ್ಬಿ ಆಶ್ರಮಕ್ಕೆ ವಿಶೇಷ ಕಳೆಯನ್ನು ತಂದಿದೆ. ಮಂದಾರ ಕುಸುಮವು ಶಿವನಿಗೆ ಬಹಳ ಪ್ರಿಯವಾದುದೆಂದು ಹೇಳುತ್ತಾರೆ. ಬನ್ನಿ, ಮಂದಾರ, ಚಂದನ ಮರಗಳು ಅಧಿಕವಾಗಿವೆ. ಈ ಗಿರಿಯಲ್ಲಿ ಅನೇಕ ರೋಗಗಳ ಚಿಕಿತ್ಸೆಗೆ ಬಹಳ ಉಪಯುಕ್ತವಾದ ಗಿಡಮೂಲಿಕೆಗಳು ಹೇರಳವಾಗಿ ದೊರೆಯುತ್ತವೆ. ರೋಗ ಚಿಕಿತ್ಸಾ ತಜ್ಞರು ಆಗಾಗ ಬಂದು ಇವುಗಳನ್ನು ಸಂಗ್ರಹಿಸಿಕೊಂಡು ಹೋಗುತ್ತಾರೆ. ಈ ಅಡವಿಯ ಮರಗಳು ಮುಗಿಲನ್ನು ಮುಟ್ಟಲು ಹೊರಟಿವೆ. ಹೂಗುದಿಗಳ ಭಾರದಿಂದ ಬಳುಕುವ ಲತೆಗಳು ಮರಗಳನ್ನು ತಬ್ಬಿವೆ. ತರುಗಳ ತಣ್ಣೆಳಲಲ್ಲಿ ದನಗಳ ಮಂದೆ ಮಲಗಿ ಮೆಲುಕು ಹಾಕುತ್ತದೆ. ಗುಲ್ಮ ಕುಟೀರಗಳಲ್ಲಿ ಮೊಲಗಳು ವಿಶ್ರಾಂತಿ ಪಡೆಯುತ್ತವೆ. ಈ ಕಾನನದಲ್ಲಿ ನಿರ್ಭಯವಾಗಿ ನವಿಲು ಹಿಂಡು, ವಾನರಹಿಂಡು ಸಂಚರಿಸುತ್ತವೆ. ಮರಗಳ ಕೊಂಬೆಗಳಲ್ಲಿ ಕಪಿಗಳು, ಎಲೆಗಳ ರಾಶಿಯಲ್ಲಿ ಪಕ್ಷಿಗಳು, ಕುಸುಮಗಳಲ್ಲಿ ದುಂಬಿಗಳು ಕುಳಿತು ಉಯ್ಯಾಲೆಯಾಡುತ್ತವೆ. ಆಶ್ರಮದ ಆತಿಥ್ಯವನ್ನನುಕರಿಸಲೋ ಎಂಬಂತೆ ಬಿರಿದ ವನಸುಮಗಳ ಮಕರಂದ, ಶಾಂತಿಗೆ ಭಂಗ ಬಂದೀತೆಂದು ಹೆದರಿ ಚಲಿಸುವ ಮಂದ ಮಾರುತ ಯಾತ್ರಿಕರನ್ನು ಸ್ವಾಗತಿ ಆದರಿಸುತ್ತವೆ. ಹಾಸು ಬಂಡೆಗಳು, ಕೋಡುಗಲ್ಲುಗಳು, ಅನ್ಯೋನ್ಯ ಸ್ಪರ್ಧೆಯಿಂದ ರೆಂಬೆಗಳನ್ನು ಸುತ್ತ ಚಾಚಿರುವ ಮರಗಳು, ಸಹಜೋಟಜಗಳಾದ ಲತಾನಿಕುಂಜಗಳು, ಹುಲ್ಲಿನ ಹಸಿರುಮೈದಾನಗಳಲ್ಲಿ ನಲಿದಾಡುವ, ನರ್ತಿಸುವ, ಕೇಕೆಗೈಯ್ಯುವ, ಇಲ್ಲಿಂದಲ್ಲಿಗೆ ಹಾರಿ ಇಳಿಯುವ ಮಯೂರಗಳು- ಈ ದೃಶ್ಯ ಮೋಹಕವಾದುದು. ಪುಳಕಿತಗೊಂಡ ಪ್ರಕೃತಿಯೂ ಮಂದಹಾಸ ಚೆಲ್ಲದಿಲ್ಲ; ಆಶ್ರಮಕ್ಕೆ ಬರುವವರೂ ಅಪೂರ್ವ ರಸೈಕತಾನದಲ್ಲಿ ತಲ್ಲೀನರಾಗಿ ಮುಂದಡಿಯಿಡುವುದನ್ನು ಮರೆತು ನಿಲ್ಲದಿಲ್ಲ. ಶತಶತಮಾನಗಳಿಂದ ಮಯೂರಗಳ ತಾಣವಾಗಿರುವ ಈ ಕಾನನವನ್ನು ಮಯೂರವನವೆಂದೇ ಕರೆಯುತ್ತಾರೆ. ಕರ್ನಾಟಕ ಸರ್ಕಾರವು ಇದನ್ನು ಅಭಯಾರಣ್ಯವೆಂದು ಘೋಷಿಸಿದೆ. ಶುಕ, ಪಿಕ, ಕಪೋತ ಮುಂತಾದ ನಾನಾ ಜಾತಿಯ ಪಕ್ಷಿಗಳೂ ಇಲ್ಲಿ ವಾಸಿಸುತ್ತಿವೆ. ಇಲ್ಲಿ ಬೇಟೆಗಾರರ ಕಾಟವಿಲ್ಲ, ದುಷ್ಟ ಪ್ರಾಣಿಗಳ ಭಯವಿಲ್ಲ; ತಿನ್ನಲು ಕುಡಿಯಲು ಕೊರತೆಯಿಲ್ಲ; ವಾಸಕ್ಕೆ ಚಿಂತೆಯಿಲ್ಲ, ಆದ್ದರಿಂದ ಇದು ಖಗಮೃಗಗಳಿಗೆ ಸ್ವರ್ಗ.

ಅಭಿವಂದನಾ

ಪುರಾಣೋಕ್ತಿಯಂತೆ ಈ ಗಿರಿ ಶ್ರೇಣಿಯನ್ನು ಆವರಿಸಿಕೊಂಡು ವಿಸ್ತಾರವಾಗಿ ಹರಡಿದ್ದ ಕಾನನವನ್ನು ಹಿಂದೆ ಗಜಾರಣ್ಯವೆಂದು ಕರೆಯುತ್ತಿದ್ದರು. ಸೀತೆಯನ್ನರಸುತ್ತಾ ಬಂದು, ತಪೋಮಗ್ನನಾಗಿದ್ದ ತನ್ನನ್ನು ಕಂಡು, ಭಕ್ತಿಯಿಂದ, ವಂದಿಸಿದ ಶ್ರೀ ರಾಮಚಂದ್ರನನ್ನು ಪರಶಿವನು ಹರಸಿ ಚುಂಚನಕಟ್ಟೆಯನ್ನು ಶ್ರೀ ರಾಮಚಂದ್ರನಿಗೇ ಬಿಟ್ಟುಕೊಟ್ಟು ಚುಂಚನಗಿರಿಗೆ ಬಂದು ಇಲ್ಲಿನ ಪ್ರಕೃತಿ ಸೌಂದರ್ಯ ಮತ್ತು ನೀರವತೆಗಳಿಗೆ ಮನಸೋತು ಇದು ತನ್ನ ತಪಸ್ಸಿಗೆ ಯೋಗ್ಯ ಸ್ಥಾನವೆಂದು ನಿರ್ಧರಿಸಿ ಕೈಲಾಸವನ್ನೂ ಮರೆತು ಇಲ್ಲಿಯೇ ದೀರ್ಘ ಕಾಲ ನಿಂತನು. ಅಂದಿನಿಂದ ಚುಂಚನಕಟ್ಟೆಯು ಶ್ರೀ ರಾಮ ಕ್ಷೇತ್ರವೆಂದು ಪ್ರಸಿದ್ಧವಾಯಿತು. ಅಲ್ಲಿನ ದೇವಾಲಯದಲ್ಲಿರುವ ಶ್ರೀರಾಮಮೂರ್ತಿಯ ಕೈಯಲ್ಲಿ ತ್ರಿಶೂಲವಿರುವುದನ್ನು ನೋಡಬಹುದು, ಇದು ಪರಶಿವನ ಆಶೀರ್ವಾದದ ಸಂಕೇತ.

ಗಿರಿದರ್ಶನ

ರಮ್ಯವೂ ಪ್ರಶಾಂತವೂ ನಿರ್ವಿಘ್ನವೂ ಆದ ಈ ಮಹೋನ್ನತಗಿರಿಯ ಸುತ್ತಲೂ ತಪಸ್ಸಿಗೆ ಯೋಗ್ಯವಾದ ನೂರಾರು ಗುಹೆಗಳಿವೆ. ನಿರಾಯಾಸವಾಗಿ ಗೆಡ್ಡೆಗೆಣಸುಗಳೂ, ಹಣ್ಣು ಹಂಪಲುಗಳೂ, ಕುಡಿಯಲು ನೀರೂ ದೊರೆಯುತ್ತವೆ. ಇಲ್ಲಿನ ಗಾಳಿ ಬೆಳಕೂ ಹಿತಕರ, ಆದ್ದರಿಂದ ಪ್ರಾಚೀನ ಕಾಲದಿಂದಲೂ ಸಿದ್ಧರು, ಸಂತರು, ಸಾಧುಗಳು, ಋಷಿಗಳು, ಯೋಗಿಗಳು ಮತ್ತು ತಪಸ್ವಿಗಳು ಈ ಪರ್ವತದಲ್ಲಿ ನೆಲೆಸಿ ತಮ್ಮ ಅನುಷ್ಠಾನದಲ್ಲಿ ನಿರತರಾಗಿ ಜೀವನದ ಪರಮ ಗುರಿಯನ್ನು ಸಾಧಿಸಿಕೊಂಡಿದ್ದಾರೆ.

ಇಲ್ಲಿನ ಸೊಬಗಿಗೆ ಪರವಶರಾಗಿ ಓದುಬಾರದ ಹಳ್ಳಿಗರೂ ಭಕ್ತಿಭಾವ ತುಂಬಿಬಂದಾಗ ತಾನಾಗಿ ಮೂಡಿದ ಹಾಡುಗಳನ್ನು ಮನಸಾರೆ ಹಾಡಿ ನಲಿದಿದ್ದಾರೆ. ಇದರಿಂದಾಗಿ ಚುಂಚನಗಿರಿಗೆ ಸಂಬಂಧಿಸಿದ ಜನಪದ ಸಾಹಿತ್ಯ ಹೇರಳವಾಗಿದೆ. ಸಾಕಷ್ಟು ಅದರ ಸಂಗ್ರಹವಾಗಿದೆ. ಸಂಗ್ರಹಿಸಬೇಕಾದುದೂ ಅಪಾರವಾಗಿಯೇ ಉಳಿದಿದೆ. ಜನಪದ ಕವಿಗಳ ಗಿರಿದರ್ಶನವು ಹೀಗಿದೆ:

ಮೊಲ್ಲೆ ಮಲ್ಲಿಗೆ ಜಾಜಿ ಮಡಿವಾಳ ಕೇದಗೆಯು
ಎಲ್ಲಿ ನೋಡಿದರೂ ಪರಿಮಳ, ಎಸಗಿವೆ
ಸ್ವಾಮಿ ಬೈರುವನ ಗಿರಿ ಮೇಲೆ.

ನವಿಲುಕುಣಿದಾವೊ ಯಿಂಡಿಕ್ಕಿ ಆಡ್ಯಾವೊ
ವುಲ್ಲೆಯ ಮರಿ ಕುಣಿದಾವೊ ಚುಂಚನ ಗಿರಿಯ
ಸುತ್ತೆಲ್ಲ ಸ್ವಾಮಿ ನಲಿದಾನೊ.

ಅಭಿವಂದನಾ

ಗೋವು ಹುಲಿಗಳೆಲ್ಲ ಒಂದಾಗಿ ಮೇಯುವುವು
ಚಂದ್ರಗಿರಿ ಮೇಲೆ ತಾವು ಮೇದು
ಒಂದೇ ಮಂದೇಲಿ ಮಲಗುವುವು.

ಸರ್ಪಮುಂಗಸಿಗಳು ಕಾಗೆಕೋಗಿಲೆಗಳು
ನಾಗಭೂಷಣಗಿರಿ ಮೇಲೆ ಪಕ್ಷಿಗಳು
ವೈರವ ಮರೆತು ಇರುವುವು

ಗಿರಿಯ ತಪ್ಪಲಿನಲ್ಲಿ ವಿಶಾಲವೂ ದೀರ್ಘವೂ ಆದ ತೇರು ಬೀದಿ ಇದೆ. ತೇರು ಬೀದಿಯ ಪ್ರಾರಂಭದಲ್ಲಿ ತೇರು ಮನೆ ಇದೆ; ತುದಿಯಲ್ಲಿ ಬಸವನ ಮಂಟಪವಿದೆ. ಉತ್ಸವಗಳು ಬಸವನ ಮಂಟಪವನ್ನು ಬಳಸಿಕೊಂಡು ಹಿಂದಿರುಗುತ್ತವೆ. ಬೀದಿಯ ಇಕ್ಕೆಡೆಗಳಲ್ಲಿ ಜಾತ್ರೆಮತ್ತು ವಿಶೇಷ ದೇವತಾ ಸಮಾರಂಭಗಳಲ್ಲಿ ಜನರ ಉಪಯೋಗಕ್ಕಾಗಿ ಭಕ್ತರು ಹಿಂದೆ ನಿರ್ಮಿಸಿದ್ದ ನೂರಾರು ಕಲ್ಲು ಮಂಟಪಗಳ ಅವಶೇಷಗಳನ್ನು ಇಂದೂ ನೋಡಬಹುದು. ತೇರುಮಂಟಪದಿಂದ ಗಿರಿಯನ್ನು ಹತ್ತಲು ಕಡಿದೂ ವಿಶಾಲವೂ ಆದ ಶಿಲಾಸೋಪಾನ ಮಾರ್ಗವಿದೆ. ಇದರ ಎರಡೂ ಪಕ್ಕಗಳಲ್ಲಿ ಉದ್ದಕ್ಕೂ ಬಂಡೆಗಳು, ಅವುಗಳ ನಡುವೆ ಸೊಂಪಾಗಿ ಬೆಳೆದಿರುವ ತರುಲತೆಗಳು ಅಕೃತ್ರಿಮ ಗೋಡೆಗಳನ್ನು ನಿರ್ಮಿಸಿವೆ. ಈ ಸೋಪಾನಮಾರ್ಗದಲ್ಲಿ ನಿರಂತರವಾಗಿ ಸಾಧುಸಂತರು, ಭಕ್ತರು, ಉಪಾಧ್ಯಾಯರು, ವಿದ್ಯಾರ್ಥಿಗಳು ಹತ್ತಿ ಇಳಿಯುತ್ತಿರುತ್ತಾರೆ. ಆಶ್ರಮದ ಮಹಾದ್ವಾರದ ಸಮೀಪದಲ್ಲಿ ಸಹಜ ಶಿಲಾಪೀಠದಂತಿರುವ ಬಂಡೆಯ ಮೇಲೆ ಕೆತ್ತಿರುವ ಕ್ಷೇತ್ರ ಪ್ರಧಾನ



ಶ್ರೀ ಗಂಗಾಧರೇಶ್ವರ ಸ್ವಾಮಿ

ದೇವತೆಯಾದ ಗಂಗಾಧರೇಶ್ವರನ ಪವಿತ್ರ ಪಾದಗಳ ದರ್ಶನವಾಗುತ್ತದೆ. ಈ ಬಂಡೆಯು ಸಿಂಹದ ಸಕೇಸರ ಶಿರೋಭಾಗದಂತೆ ಕಾಣಿಸುತ್ತದೆ. ಆದಿಶಕ್ತಿಯ ವಾಹನವಾದ ಸಿಂಹವು ಬಂದು ಗಿರಿಯನ್ನು ಹತ್ತುವ ಗಂಗಾಧರನ ಪವಿತ್ರಪಾದಗಳಿಗೆ ಭಕ್ತಿಯಿಂದ ತಲೆಬಾಗಿ ಅವನ ಪಾದಗಳ ಚಿಹ್ನೆಯನ್ನು ಪಡೆದು ಶಿಲಾಪೀಠವಾಗಿರುವಂತೆ ತೋರುತ್ತದೆ. ಈ ಪೀಠದ ಸಮೀಪದಲ್ಲಿರುವ ಮಂಟಪದ ಮೇಲೆ ಗಂಗಾಧರನ ವಾಹನವಾದ ನಂದಿಯ ಮೂರ್ತಿ ಇದೆ. ಯಾತ್ರಿಕರು ಭಯ, ಭಕ್ತಿ, ಶ್ರದ್ಧೆ, ವಿನಮ್ರ ಭಾವಗಳಿಂದ ಬಗ್ಗಿ ಪಾದಗಳನ್ನು ಮುಟ್ಟಿ ತಮ್ಮ ಕಣ್ಣುಗಳಿಗೆ ಒತ್ತಿಕೊಂಡು, ಪ್ರದಕ್ಷಿಣೆ ಬಂದು ವಂದಿಸಿ, ನಂದಿಗೆ ಕೈ ಮುಗಿದು ಮಹಾದ್ವಾರದ ಕಡೆಗೆ ಸಾಗುತ್ತಾರೆ.

ಶ್ರೀ ಆದಿಚುಂಚನಗಿರಿ ಪುಣ್ಯಕ್ಷೇತ್ರದ ಪ್ರಧಾನ ದೇವತೆ ಗಂಗಾಧರೇಶ್ವರ. ಇದು ಉದ್ಭವ ಲಿಂಗ: ಕೆಳಗೆ ಚಾಚಿರುವ ಬೃಹತ್ತಾದ ಬಂಡೆಯ ಮೇಲೆ ಈ ಉದ್ಭವಲಿಂಗವಿದೆ. ಇದಕ್ಕೆ ಪೀಠವನ್ನು ಕಲ್ಪಿಸಲಾಗಿದೆ. ಈ ಲಿಂಗದ ಮೇಲೆ ಮತ್ತೊಂದು ಹೆಬ್ಬಂಡೆಯು ಚಾಚಿಕೊಂಡು ನಿಸರ್ಗ ದೇವಾಲಯದ ನಿರ್ಮಾಣವಾಗಿದೆ. ಇತ್ತೀಚೆಗೆ ಈ ಗುಹೆಗೆ ಒಂದು ಬಾಗಿಲನ್ನಿಟ್ಟು ಗರ್ಭಗುಡಿಯನ್ನಾಗಿ ಪರಿವರ್ತಿಸಲಾಗಿದೆ. ಈ ಲಿಂಗದ ಮೇಲೆ ಕತ್ತಿಯ ಏಟಿನ ಗುರುತಿದೆ. ಗರ್ಭಗುಡಿಗೆ ಸೇರಿದಂತೆ ಲಿಂಗದ ಮೇಲೆ ಬಿದಿರು ತೊಟ್ಟಿಲಿದೆ. ಇದಕ್ಕೆ ಸಂಬಂಧಿಸಿದಂತೆ ಒಂದು ಜನಪದ ಕಥೆಯು ಬಹಳ ಪ್ರಚಾರದಲ್ಲಿದೆ. ಈ ಕಥೆಗೆ ಪೋಷಕವಾಗಿ ಕೆಲವು ಚಿಹ್ನೆಗಳೂ ದೊರಕುತ್ತವೆ.

ಅರಣಿ ಪಾಳೆಯಗಾರನಿಗೆ ಬಹಳ ಕಾಲ ಮಕ್ಕಳಿರಲಿಲ್ಲ. ಶಿವನ ಕೃಪೆಯಿಂದ ವಯಸ್ಸಾದ ಮೇಲೆ ಅವನಿಗೊಂದು ಮಗುವಾಯಿತು. ಪಾಳೆಯಗಾರನು ಆ ಮಗುವಿಗೆ ಗೆಣ್ಣಿಲ್ಲದ ಬಿದಿರಿನಿಂದ ತೊಟ್ಟಿಲೊಂದನ್ನು ಮಾಡಿಸಲು ಬಯಸಿದನು. ಅವನು ಅಂಥ ಬಿದಿರನ್ನು ತರಲು ಮೂವರು ಮೇದರರನ್ನು ಕಳುಹಿಸಿದನು. ಅವರು ಚುಂಚನಗಿರಿಯನ್ನೆಲ್ಲಾ ಸುತ್ತಿ ತುದಿಗೆ ಬಂದು ಅಲ್ಲಿ ಬೆಳೆದಿದ್ದ ಒಂದು ಬಿದಿರುಮೆಳೆಯನ್ನು ಕಂಡರು. ಆ ಮೆಳೆಯ ನಡುವೆ ಒಂದು ಹುತ್ತವಿದ್ದಿತು. ಅಲ್ಲಿನ ಬಿದಿರುಗಳಿಗೆ ಗೆಣ್ಣಿರಲಿಲ್ಲ. ಸಂತೋಷಗೊಂಡ ಮೇದರು ಬಿದಿರು ಕಡಿಯಲು ಕತ್ತಿಗಳನ್ನು ಬೀಸಿದರು. ಆ ಕತ್ತಿಯು ಒಳಗಿದ್ದ ಹುತ್ತಕ್ಕೆ ತಾಕಿ ರಕ್ತ ಹೊರಚಿಮ್ಮಿತು. 'ಎಲೈ ಮೇದರೆ ನೀವು ಕೂಡಲೆ ಇಲ್ಲಿಂದ ಹಿಂದಿರುಗಿನೋಡದೆ ಹೊರಟು ಹೋಗಿರಿ' ಎಂದು ಅಶರೀರವಾಣಿ ಆಯಿತು. ಹೆದರಿ-ಬೆದರಿದ ಮೇದರು ಅಲ್ಲಿಂದ ಕಾಲ್ಕಿತ್ತರು. ಬೆಟ್ಟದ ಹಿಂದುಗಡೆಯ ತಪ್ಪಲಿಗೆ ಬಂದಾಗ ಒಬ್ಬ ಮೇದನು ಕುತೂಹಲದಿಂದ ಹಿಂದಿರುಗಿ ನೋಡಿ ಅಲ್ಲಿಯೇ ಸತ್ತುಬಿದ್ದನು. ಆ ಸ್ಥಳದಲ್ಲಿ ಇಂದೂ ಒಂದು ಗುಡ್ಡವಿದೆ. ಮುಂದೆ ಸಾಗಿದ ಇಬ್ಬರಲ್ಲಿ ಮತ್ತೊಬ್ಬನೂ ಸ್ವಲ್ಪ ದೂರ ಹೋದಮೇಲೆ ಕುತೂಹಲದಿಂದ ಹಿಂದಿರುಗಿ ನೋಡಿ ಆ ಸ್ಥಳದಲ್ಲಿ ಅಸುನೀಗಿದನು. ಅಲ್ಲಿಯೂ ಒಂದು ಮೇದರ ಗುಡ್ಡವಿದೆ. ಮೂರನೆಯವನು ಹಿಂದಿರುಗದೆ

ಹೋಗಿ ಪಾಳೆಯಗಾರನಿಗೆ ಸಮಾಚಾರವನ್ನು ಮುಟ್ಟಿಸಿದನು. ಹೆದರಿದ ಪಾಳೆಯಗಾರನು ನೇರವಾಗಿ ಬಿದಿರುಮೆಳೆಯಿದ್ದ ಸ್ಥಳಕ್ಕೆ ಬಂದು, ತಪೋಮಗ್ನನಾಗಿದ್ದ ಪರಶಿವನನ್ನು ಕಂಡು ತನ್ನ ಸರ್ವಾಪರಾಧವನ್ನೂ ಕ್ಷಮಿಸುವಂತೆ ಬೇಡಿಕೊಂಡನು. ಕರುಣಾಮಯಿಯಾದ ಮಹೇಶ್ವರನು ಅವನನ್ನು ಕ್ಷಮಿಸಿ ಅಲ್ಲೊಂದು ಗುಡಿಯನ್ನು ಕಟ್ಟಿಸುವಂತೆ ಆಜ್ಞಾಪಿಸಿ ಕಳುಹಿಸಿಕೊಟ್ಟನು. ಗಂಗಾಧರೇಶ್ವರನ ದೇವಾಲಯಕ್ಕೆ ಹೋಗುವ ಸೋಪಾನ ಮಾರ್ಗದ ದ್ವಾರ ಒಂದರಲ್ಲಿ ಇದರ ಕುರುಹಾಗಿ ಇಟ್ಟಿರುವ ಇಬ್ಬರು ಮೇದರ ತಲೆಗಳನ್ನು ಇಂದೂ ನೋಡಬಹುದಾಗಿದೆ.

ಪರಶಿವನು ಈ ಗಿರಿಗೆ ಬಂದ ಬಗ್ಗೆಯೂ ಒಂದು ಐತಿಹ್ಯವಿದೆ:

ಸಿದ್ಧಯೋಗಿಯ ಅವತಾರವನ್ನು ತಾಳಿದ ಪರಶಿವನು ಗಜಾರಣ್ಯದಲ್ಲಿದ್ದ ಚುಂಚನಕಟ್ಟೆಗೆ ಬಂದು ಕಾವೇರಿಯ ತಟದಲ್ಲಿ ತಪೋಮಗ್ನನಾದನು. ರಾವಣನಿಂದ ಸೀತಾಪಹರಣವಾದ ಮೇಲೆ ಶ್ರೀರಾಮ ಲಕ್ಷ್ಮಣರು ಸೀತೆಯನ್ನರಸುತ್ತಾ ಶಿವನ ಈ ತಪೋಭೂಮಿಗೆ ಬಂದಾಗ ಅಲ್ಲಿ ಶಿವನನ್ನು ಕಂಡು ಭಕ್ತಿಯಿಂದ ವಂದಿಸಿ ಶಿವನಿಗೆ ಪ್ರಾರ್ಥನೆ ಸಲ್ಲಿಸಿದರು. ಪ್ರಸನ್ನನಾದ ಶಿವನು ನಿಮ್ಮ ಇಷ್ಟಾರ್ಥವು ನೆರವೇರಲೆಂದು ಆಶೀರ್ವದಿಸಿ ಶ್ರೀರಾಮನಿಗೆ ತನ್ನ ಸ್ಥಾನವನ್ನು ಬಿಟ್ಟುಕೊಟ್ಟು ಪ್ರಶಾಂತವೂ ರಮಣೀಯವೂ ಆದ ಚುಂಚನಗಿರಿಗೆ ಬಂದು ತಪೋ ನಿರತನಾದನು. ಚುಂಚನಕಟ್ಟೆಯಲ್ಲಿ ಇಂದೂ ಒಂದು ಶ್ರೀರಾಮ ದೇವಾಲಯವಿದೆ. ಇಲ್ಲಿನ ರಾಮ ಲಕ್ಷ್ಮಣರ ವಿಗ್ರಹಗಳ ಕೈಗಳಲ್ಲಿ ತ್ರಿಶೂಲವಿರುವುದನ್ನು ಗಮನಿಸಬಹುದು.

ಮತ್ತೊಂದು ಐತಿಹ್ಯದಂತೆ ಶಿವನು ಚುಂಚನಗಿರಿಗೆ ಆಗಮಿಸಿದಾಗ ಆ ಪ್ರದೇಶವು ದಟ್ಟವಾದ ಅರಣ್ಯ. ಅಲ್ಲಿ ಚುಂಚಕಂಚರೆಂಬ ಇಬ್ಬರು ರಾಕ್ಷಸ ಸೋದರರು ವಾಸಮಾಡಿಕೊಂಡಿದ್ದು ಸುತ್ತಣ ಪ್ರದೇಶದ ಜನರಿಗೆ ಹಿಂಸೆ ಕೊಡುತ್ತಿದ್ದರು. ಜನರು ಶಿವನನ್ನು ಪ್ರಾರ್ಥಿಸಿದಾಗ ಶಿವನು ಅವರನ್ನು ಸಂಹರಿಸಿದನು. ಆ ಚುಂಚನ ನಿವಾಸದಿಂದಾಗಿ ಚುಂಚನಗಿರಿಗೆ ಚುಂಚನಕೋಟೆ ಎಂಬ ಹೆಸರೂ ಬಂದಿತು.

ಈ ಕಥೆಗಳು ಪುರಾಣೇತಿಹಾಸಗಳಲ್ಲಿ ದೊರೆಯದಿದ್ದರೂ ಜನಪದದಲ್ಲಿ ರೂಢಮೂಲವಾಗಿ ಇಂದಿಗೂ ಪ್ರಚಾರದಲ್ಲಿವೆ. ಇವು ಶಿವನ ಮಹಿಮೆಯನ್ನೂ ಭಕ್ತವಾತ್ಸಲ್ಯವನ್ನೂ, ದುಷ್ಟ ನಿಗ್ರಹ-ಶಿಷ್ಟ ರಕ್ಷಣೆಯನ್ನೂ ನಿರೂಪಿಸುತ್ತವೆ.

ನೆಲಕ್ಕೆ ಅಮೃತ ಶಿಲೆಯನ್ನು ಹಾಸಿರುವ, ಶಿಲ್ಪ, ಕಲಾ ವೈಭವದಿಂದ ವಿರಾಜಿಸುವ, ೩೮ ಕಂಬಗಳಿಂದ ನಿರ್ಮಿತವಾದ, ಕಂಬಗಳಲ್ಲಿ ಕೆತ್ತಿರುವ ನಾನಾ ದೇವತೆಗಳ, ನಾಥ ಯೋಗಿಗಳ, ನಾಥ ಭಕ್ತ-ಭಕ್ತೆಯರ ಮೂರ್ತಿಗಳ ದರ್ಶನದಿಂದ ಭಕ್ತಿಯನ್ನು ಚಿಮ್ಮಿಸಿ ಕೈಲಾಸಾನಂದವನ್ನುಂಟುಮಾಡುವ ಗಂಗಾಧರೇಶ್ವರನ ಆಸ್ಥಾನಮಂಟಪ ಅಥವಾ ನವರಂಗ ಮಂಟಪವು ಬಹಳ ಸುಂದರವಾಗಿದೆ. ಗರ್ಭಗುಡಿಗೂ ನವರಂಗ ಮಂಟಪಕ್ಕೂ ಇರುವ

ದ್ವಾರದ ಮುಂದೆ ನರ್ತನ, ಭಜನೆ, ಪ್ರವಚನ, ಕೀರ್ತನೆ, ಸಂಗೀತಾದಿಗಳಿಂದ ದೇವತಾ ಕೈಂಕರ್ಯಗಳನ್ನು ಸಲ್ಲಿಸಲು ಅನುಕೂಲವಾದ ವಿಶೇಷ ಸ್ಥಾನವಿದೆ. ಗೋಳಾಕಾರವಾಗಿರುವ ಈ ಸ್ಥಾನದಲ್ಲಿ ವೀಣೆಯನ್ನು ನುಡಿಸುತ್ತಿರುವ ನಾರದ, ಮೃದಂಗವನ್ನು ಮಿಡಿಸುತ್ತಿರುವ ನಂದಿ, ಡೋಲನ್ನು ಬಾರಿಸುತ್ತಿರುವ ವಿಷ್ಣು, ತಾಳ ಹಾಕುತ್ತಿರುವ ಚತುರ್ಮುಖ ಬ್ರಹ್ಮನನ್ನು ನಿಂತಿರುವ ಭಂಗಿಯಲ್ಲಿ ಕಂಬಗಳಿಗೆ ಸೇರಿದಂತೆ ಮನೋಹರವಾಗಿ ಬಿಡಿಸಲಾಗಿದೆ. ಅರಣಿ ಪಾಳೆಯಗಾರ ಮತ್ತು ಇವನ ಪತ್ನಿಯು ಕೈಮುಗಿದು ನಿಂತಿರುವ ವಿಗ್ರಹಗಳೂ ಇವೆ. ಉಳಿದ ಎಲ್ಲಾ ಕಂಬಗಳ ಮೇಲೂ ನಾನಾವಿಧವಾದ ಆಕೃತಿಗಳನ್ನು ಬಿಡಿಸಲಾಗಿದೆ. ಇಲ್ಲಿ ಪ್ರತಿನಿತ್ಯವೂ ತ್ರಿಕಾಲ ಪೂಜೆ ನಡೆಯುತ್ತದೆ. ಪ್ರತಿ ಅಮಾವಾಸ್ಯೆ ಮತ್ತು ವಿಶೇಷ ದಿನಗಳಲ್ಲಿ ಶ್ರೀಗಳವರು ಗಂಗಾಧರೇಶ್ವರನ ದೇವಾಲಯಕ್ಕೆ ಆಗಮಿಸಿ ವಿಧ್ಯುಕ್ತವಾಗಿ ಶೋಡಶೋಪಚಾರ ಪೂಜೆಯನ್ನು ಸಲ್ಲಿಸುವರು. ಈ ಸಮಯದಲ್ಲಿ ಗುರು ದೇವತಾ ದರ್ಶನದಿಂದ ಮಹಾ ಪುಣ್ಯ ಬರುತ್ತದೆಂದು ಜನರು ಭಾವಿಸಿದ್ದಾರೆ. ಇದಕ್ಕಾಗಿ ಸಹಸ್ರಾರು ಮಂದಿ ಭಕ್ತರು ದೇವಾಲಯಕ್ಕೆ ಬರುತ್ತಾರೆ.

ಚುಂಚನಕಟ್ಟೆಯಿಂದ ಒಂದೆ ಘಳಿಗೆಗೆ ಬಂದು
ಪಂಚಮುಖದ ಪ್ರಧಾನಿ ಗಂಗಾಧರ
ಸಿರಿ ಒಳ್ಳೆದೆಂದು ನೆಲೆಗೊಂಡ॥

ಗಂಗಾಧರೇಶ್ವರ ದೇವಾಲಯದಿಂದ ಎಡಕ್ಕೆ ಮೆಟ್ಟಿಲುಗಳನ್ನು ಹತ್ತಿ ಬಂಡೆಗಳ ನಡುವೆ ನುಸುಳಿ, ಕುಳಿತು, ನಿಂತು, ತೆವಳಿ ಉತ್ತರಾಭಿಮುಖವಾಗಿ ಕಾಡುದಾರಿಯಲ್ಲಿ ಸಾಗಿದರೆ ಪ್ರಸಿದ್ಧವಾದ ಗವಿಸಿದ್ದೇಶ್ವರ ಲಿಂಗವನ್ನು ಕಾಣಬಹುದು. ಈ ಗವಿಯು ಒಂದೇ ಹೆಬ್ಬಂಡೆಯಲ್ಲಿದ್ದು ಆಮೆಯು ಬಾಯಿತೆರೆದಂತಿದೆ. ಈ ಗುಹೆಗೆ ಒಂದು ದ್ವಾರವನ್ನು ಜೋಡಿಸಲಾಗಿದೆ. ಈ ಲಿಂಗದ ಮುಂದಿರುವ ಬಸವನನ್ನು ಎತ್ತು ಬಸವನೆಂದು ಕರೆಯುತ್ತಾರೆ. ಈ ಗುಹೆಯಲ್ಲದೆ ಇದಕ್ಕೂ ಚಿಕ್ಕದಾದ ಇನ್ನೆರಡು ಗುಹೆಗಳು ಇದೇ ಬಂಡೆಯಲ್ಲಿವೆ. ಇವೆಲ್ಲಾ ಸಹಜ ಗುಹೆಗಳು.

ಗಂಗಾಧರೇಶ್ವರನ ದೇವಾಲಯದಿಂದ ಪೂರ್ವಾಭಿಮುಖವಾಗಿ ಹೊರಟು, ಬಂಡೆಯನ್ನು ಹತ್ತಿ ಇಳಿಯುತ್ತಾ ಸಾಗಿ, ನಡುವೆ ಸಿಕ್ಕುವ ಕೊಳದಲ್ಲಿ ನೀರನ್ನು ಕುಡಿದು ಮುನ್ನಡೆದರೆ , ವಿಶಾಲ ಪ್ರದೇಶವೊಂದು ಕಾಣಸಿಗುತ್ತದೆ. ಇಲ್ಲೊಂದು ದೊಡ್ಡಬಂಡೆಯು ಕೆಳಗಿನ ಹಾಸು ಬಂಡೆಯನ್ನು ಮೂರುಕಡೆ ಮುಟ್ಟಿ ದೇವರು ಕರುಣಿಸಿದ ಸಹಜ ಛತ್ರಿಯಂತೆ ನಿಂತಿದೆ. ಈ ಪ್ರದೇಶದಲ್ಲಿ ಮಧ್ಯಸ್ತಂಭವಿದೆ. ಇಲ್ಲಿಂದ ಮುಂದಕ್ಕೆ ಹೋದರೆ ಕತ್ತಲೆ ಸೋಮೇಶ್ವರ ದೇವಾಲಯ ಸಿಕ್ಕುತ್ತದೆ. ಇದೂ ನಿಸರ್ಗ ನಿರ್ಮಿತ ದೇವಾಲಯ. ಐದು ಹೆಬ್ಬಂಡೆಗಳು ಮೇಲೆ, ಒಗ್ಗೂಡಿವೆ. ಇವುಗಳ ಮೇಲೊಂದು ಹೆಬ್ಬಂಡೆಯು ಕಿರು ಬಂಡೆಗಳೊಡನೆ ಇದೆ. ಬಂಡೆಗಳ ನಡುವೆ ಒಳಕ್ಕೆ ಪ್ರವೇಶಿಸಲು ಮಾರ್ಗವಿದೆ. ಇಲ್ಲಿ

ಕತ್ತಲೆಸೋಮೇಶ್ವರ ಲಿಂಗವಿದೆ. ಒಳಗೆ ಕತ್ತಲೆ ಕವಿದಿರುತ್ತದೆ. ಶ್ರದ್ಧಾಭಕ್ತಿಗಳಿಂದ ಕುಳಿತುಕೊಂಡರೆ ಸ್ವಲ್ಪಹೊತ್ತಿನಲ್ಲಿ ಕಿರುಬೆಳಕು ಹರಡಿ ಲಿಂಗವು ಕಾಣಿಸುತ್ತದೆ. ಇದು ಶಿವನು ತನ್ನ ಪಂಚಮುಖಗಳಿಂದ ತನ್ನನ್ನೇ ಕಂಡು ಆನಂದಿಸುತ್ತಿರುವಂತೆ ಭಾವುಕನಿಗೆ ತೋರುತ್ತದೆ. ವಿದೇಶಗಳಿಂದ ತಂಡತಂಡವಾಗಿ ಬರುವ ಪಾಶ್ಚಾತ್ಯ ಸ್ತ್ರೀ ಪುರುಷರು ಗಂಗಾಧರೇಶ್ವರ ಮತ್ತು ಕತ್ತಲೆ ಸೋಮೇಶ್ವರ ದೇವಾಲಯಗಳಲ್ಲಿ ಭಾರತೀಯ ಸಂಸ್ಕೃತಿಯಂತೆ ಭಜನೆ ಮಾಡುತ್ತಾ ಮಾಡುತ್ತಾ ಧ್ಯಾನಮಗ್ನರಾಗಿ ಮೈಮರೆತು ದೀರ್ಘಕಾಲ ಸಮಾಧಿಸ್ಥರಂತೆ ಮೌನವಾಗಿ ಕುಳಿತುಬಿಡುತ್ತಾರೆ. ಬೆಟ್ಟದ ತುದಿಯ ಒಂದು ಭಾಗದಲ್ಲಿ ೧೨೫ ಅಡಿ ಎತ್ತರದ ಬೃಹದಾಕಾರದ ಒಂದು ಬಂಡೆಯಿದೆ. ಇದನ್ನು ಗಳಿಗಗಲ್ಲು ಎಂದು ಸಾಧಾರಣವಾಗಿ ಕರೆಯುತ್ತಾರೆ. ಇದನ್ನು ಆಕಾಶ ಭೈರವನೆಂದೂ, ಗಡಿಭೈರವನೆಂದೂ ಕರೆಯುವುದುಂಟು. ಈ ಗಳಿಗಗಲ್ಲಿನ ಮೇಲಿರುವ ಸ್ತಂಭವನ್ನು ಪೂಜಿಸುತ್ತಾರೆ. ಕತ್ತಲೆ ಸೋಮೇಶ್ವರನ ದಕ್ಷಿಣಕ್ಕೆ ಚೇಳೂರು ಕಂಬ ಸಿಕ್ಕುತ್ತದೆ. ರಥೋತ್ಸವದ ಸಮಯದಲ್ಲಿ ಈ ಕಂಬದ ಮೇಲೆ ವಿಶೇಷ ದೀಪವನ್ನು ಹಚ್ಚುತ್ತಾರೆ. ಇದರ ಜ್ಯೋತಿಯು ಇಲ್ಲಿಂದ



ನಾಗರಕಲ್ಲು

ಸುಮಾರು ೫೦ ಮೈಲಿ ದೂರದಲ್ಲಿರುವ ಚೇಳೂರಿನ ಕಲ್ಯಾಣಿಯ ಜಲದಲ್ಲಿ ಪ್ರತಿಬಿಂಬಿಸುತ್ತದೆ. ಈ ಜ್ಯೋತಿಯ ದರ್ಶನವಾದ ನಂತರವೇ ಅಲ್ಲಿ ದೇವತಾಕಾರ್ಯಗಳನ್ನು ನಡೆಸಲಾಗುತ್ತದೆ.

ನಾಗಳಕ್ಕಿ ಪರ ಆದ ಮಲ್ಲಿಗೆ ಸರ
ನೋಡಿರೆ ಭೈರವನ ಮಹಿಮೆಯ। ಚೇಳೂರ
ಬಾವೀಲಿ ಜ್ಯೋತಿ ಉರಿಯೋದ॥

ಗಂಗಾಧರೇಶ್ವರ ದೇವಾಲಯದಿಂದ ಸೋಪಾನ ಮಾರ್ಗವಾಗಿ ಕೆಳಕ್ಕಿಳಿದರೆ ಎಡಗಡೆ ಸೋಮೇಶ್ವರ ಲಿಂಗದ ದರ್ಶನವಾಗುತ್ತದೆ. ಈ ಸೋಪಾನ ಮಾರ್ಗದುದ್ದಕ್ಕೂ ಶ್ರೀಗಂಧ ಮತ್ತು ಮಂದಾರತರುಗಳು ಇಕ್ಕೆಲಗಳಲ್ಲಿಯೂ ಬೆಳೆದಿವೆ.

ಹಳೆಯ ಮಠಕ್ಕೆ ಸೇರಿದಂತೆ ಚಂದ್ರಮೌಳೀಶ್ವರ ಲಿಂಗದ ದೇವಾಲಯವಿದೆ. ಇದು ಶ್ರೀಗಳವರ ಆತ್ಮಾರ್ಥಲಿಂಗ. ಶ್ರೀಗಳವರು ಪ್ರತಿನಿತ್ಯ ತ್ರಿಕಾಲಗಳಲ್ಲಿಯೂ ಅನುಷ್ಠಾನ ಮಾಡುತ್ತಾರೆ. ಈ ದೇವಾಲಯದಲ್ಲಿಯೇ ಅನ್ನಪೂರ್ಣೇಶ್ವರಿ ಮೂರ್ತಿಯೂ ಇದೆ.

ಹೀಗೆ ನವದ್ವಾರದ ಈ ಗಿರಿಯಲ್ಲಿ ಗಂಗಾಧರೇಶ್ವರ, ಗವಿಸಿದ್ಧೇಶ್ವರ, ಕತ್ತಲೆ ಸೋಮೇಶ್ವರ, ಮಲ್ಲೇಶ್ವರ, ಚಂದ್ರಮೌಳೀಶ್ವರ ಎಂಬ ಪಂಚ ಲಿಂಗಗಳಿವೆ. ಒಂಬತ್ತು ಹೆಬ್ಬಾಗಿಲುಗಳಲ್ಲಿ ಈಗ ಕೆಲವು ಮಾತ್ರ ಇವೆ. ಉಳಿದವುಗಳ ಅವಶೇಷಗಳನ್ನು ಮಾತ್ರ ನೋಡಬಹುದು.

ಮಠದ ಹೆಬ್ಬಾಗಿಲಿನ ಮುಂದೆ ಭೈರವೇಶ್ವರನ ದೇವಾಲಯವಿದೆ. ಈಗಿರುವ ಪ್ರಾಚೀನ ದೇವಾಲಯವು ಚಿಕ್ಕದು ಅದರೂ ಮೂರ್ತಿಯು ಮೋಹಕವಾದುದು. ನಗ್ನರೂಪನೂ, ಮುಕ್ಕಣ್ಣನೂ, ಸರ್ಪಾಭರಣನೂ, ರತ್ನಕುಂಡಲಯುಕ್ತನೂ, ಶಿರೋಮಾಲೆಯಿಂದಲಂಕೃತನೂ, ಖಡ್ಗ, ತ್ರಿಶೂಲ, ಕಪಾಲ, ಢಮರುಗಧರನೂ, ಚತುರ್ಭುಜನೂ, ಪ್ರಸನ್ನನೂ ಆದ ಭೈರವನ ಮೂರ್ತಿಯ ಮುಖದಲ್ಲಿ ಮಂದಹಾಸವು ಮಿನುಗುತ್ತಿದೆ. ಜನರ ಪಾಲಿಗೆ ಭೈರವನು ಕಷ್ಟನಷ್ಟಗಳಲ್ಲಿ ಭಾಗಿಯಾಗುವ, ತೊಡಕಿನಿಂದ ಪಾರುಮಾಡುವ, ಮನಸ್ಸಿಗೆ ಶಾಂತಿಯನ್ನು ನೀಡುವ ಒಬ್ಬ ಆತ್ಮೀಯ ಬಂಧು. ಈ ಭೈರವನು ಕ್ಷೇತ್ರ ಪಾಲಕ. ಇವನನ್ನು ಬಾಗಿಲು ಭೈರವ, ಬೆಟ್ಟದ ಭೈರವ, ಚುಂಚನಭೈರವ, ಗಡಿಯ ಭೈರವ, ಅನ್ನದಾನಿ ಭೈರವ, ಕಾಲಭೈರವ ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. ಜಾತಿಮತ ಭೇದಗಳಿಲ್ಲದೆ ಎಲ್ಲರೂ ಭೈರವನ ಒಕ್ಕಲಾಗಿದ್ದಾರೆ. ಇವನ ಭಕ್ತರು ಭಾರತದ ನಾನಾ ಭಾಗಗಳಲ್ಲಿ ಹರಡಿದ್ದಾರೆ.

ಭೈರವೇಶ್ವರನ ಗರ್ಭಗುಡಿಯ ಹೊರಗಡೆಯ ಎಡಭಾಗದಲ್ಲಿ ಮಾಳಮ್ಮನ ವಿಗ್ರಹವಿದೆ. ಎರಡು ಕೈಗಳಲ್ಲಿ ಕಮಲಗಳನ್ನೂ, ಒಂದು ಕೈಯಲ್ಲಿ ಅಭಯ ಮುದ್ರೆಯನ್ನೂ, ಮತ್ತೊಂದು ಕೈಯಲ್ಲಿ ವರದ ಮುದ್ರೆಯನ್ನೂ, ತಲೆಯಲ್ಲಿ ಕಿರೀಟವನ್ನೂ ಧರಿಸಿ

ಸರ್ವಾಲಂಕಾರ ಭೂಷಿತವಾಗಿ ಮುಖದಲ್ಲಿ ಮಂದಹಾಸ ಬೀರುತ್ತಾ ಇರುವ ಈ ವಿಗ್ರಹವು ಸುಂದರವೂ ಚಿತ್ತಾಕರ್ಷಕವೂ ಆಗಿದೆ. ಜನಪದ ಸಾಹಿತ್ಯದಲ್ಲಿ ಮಾಳಮ್ಮನ ವಿಚಾರವು ವಿಸ್ತಾರವಾಗಿ ಬಂದಿದೆ.

ದೈವಭಕ್ತನೂ, ಸಾತ್ವಿಕನೂ, ಶುದ್ಧಚರಿತನೂ ಆದ ರೈತನೊಬ್ಬನಿಗೆ ಮುದ್ದಾದ ಹೆಣ್ಣುಮಗುವೊಂದಿದ್ದಿತು. ಅದು ಚೆನ್ನಾಗಿ ಬೆಳೆದು ಓಡಾಡುವ ಹುಡುಗಿಯಾದ ಮೇಲೆ ತಂದೆಯ ಜೊತೆಯಲ್ಲಿ ಕುರಿಯನ್ನು ಮೇಯಿಸಲು ಹೋಗುತ್ತಿದ್ದಿತು. ಆಗ ತಂದೆಯು ಮಗಳಿಗೆ ಭೈರವನ ಅನೇಕ ಜನಪದ ಹಾಡುಗಳನ್ನು ಕಲಿಸಿದನು. ಅವಳ ಹಾಡುಗಳನ್ನು ಕೇಳಿ ಹಳ್ಳಿಯವರೆಲ್ಲಾ ಬಹಳ ಸಂತೋಷ ಪಡುತ್ತಿದ್ದರು. ಅವಳಿಗೆ ಭೈರವನ ವಿಚಾರವನ್ನು ಹೆಚ್ಚಾಗಿ ತಿಳಿದುಕೊಳ್ಳಲು ಕುತೂಹಲವುಂಟಾಯಿತು. ತಂದೆಯು ತಾನು ತಿಳಿದ ಭೈರವನ ಕತೆಗಳನ್ನೂ, ಭೈರವನು ಚುಂಚನಗಿರಿಯಲ್ಲಿ ನೆಲೆಸಿದುದನ್ನೂ. ಅವನ ಮಹಿಮೆಯನ್ನೂ ಮನಮುಟ್ಟುವಂತೆ, ಭಕ್ತಿಯ ಹೊಳೆ ಹರಿಯುವಂತೆ ಮಗಳಿಗೆ ವರ್ಣಿಸಿ ಹೇಳುತ್ತಿದ್ದನು. ಅವಳಲ್ಲಿ ಭಕ್ತಿಲತೆಯು ಚಿಗುರಿ, ಹೂಬಿಟ್ಟು ಘಮಘಮಿಸುತ್ತಾ ಬೆಳೆಯತೊಡಗಿತು.



ಮಾಳಮ್ಮ

ಎಷ್ಟೋ ಬಾರಿ ಅವಳು ಭಕ್ತಿ ಪರವಶೆಯಾಗಿ ಲೋಕವನ್ನು ಮರೆಯುತ್ತಿದ್ದಳು. ಜನರು ಅವಳನ್ನು ಭೈರವನ ಮಾಳಮ್ಮನೆಂದು ಕರೆಯಲಾರಂಭಿಸಿದರು. ತರುಣಿಯಾದ ಮಾಳಮ್ಮನು ಲೋಕದ ಗಂಡನನ್ನೊಲ್ಲದೆ, ಭೈರವನೇ ತನ್ನ ನಲ್ಲನೆಂದು ನಿಶ್ಚಯಿಸಿಕೊಂಡಳು. ತಂದೆ-ತಾಯಿಗಳಿಗಾಗಲಿ, ಬಂಧು ಬಳಗದವರಿಗಾಗಲಿ, ಊರಿನ ಜನರಿಗಾಗಲಿ ಅವಳ ನಿರ್ಧಾರವನ್ನು ಬದಲಿಸಲಾಗಲಿಲ್ಲ. ಕೊನೆಗೆ ಅವಳು ತನ್ನ ಅದಮ್ಯವಾದ ಆಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ಏಕಾಕಿನಿಯಾಗಿ ಕಲ್ಲು-ಮುಳ್ಳು ಕಾಡುಮೃಗಗಳಿಂದ ತುಂಬಿದ ಭಯಂಕರವಾದ ಅರಣ್ಯದಲ್ಲಿ ಸಾಗಿ ಮಹೋನ್ನತವಾದ ಗಿರಿಯನ್ನು ಮುಟ್ಟಿ ಭೈರವನ ಸನ್ನಿಧಿಯನ್ನು ಸೇರಿ, ಸುಂದರವಾದ ಭೈರವ ಮೂರ್ತಿಯನ್ನು ನೋಡಿ ಶಿವನನ್ನು ಕಂಡ ಗಿರಿಜೆಯಂತೆ ಆನಂದಪರವಶಳಾಗಿ ಭೈರವನ ಕಾಲ್ಗೆರಗಿದಳು. ತನ್ನ ಕಂಬನಿಗಳಿಂದ ಅವನ ಪಾದಗಳನ್ನು ತೋಯ್ಸಿದಳು. ಅವಳ ಅನನ್ಯ ಭಕ್ತಿಗೆ ಭೈರವನು ಮೆಚ್ಚಿ ಪ್ರತ್ಯಕ್ಷನಾಗಿ ಅವಳನ್ನು ಸ್ವೀಕರಿಸಿದನು. ಶಿವನು ಶಕ್ತಿ ಸಮೇತನಾದನು. ಮಾಳಮ್ಮನ ಪೀಠವು ಅವಳು ಹುಟ್ಟಿದ ಗ್ರಾಮದಲ್ಲಿದೆ, ಮೂರ್ತಿ ಮಾತ್ರ ಭೈರವನ ಸನ್ನಿಧಿಯಲ್ಲಿದೆ.



ಕಂಬದಮ್ಮ



ಬಿಂದು ಸರೋವರ

ಪ್ರಥಮ ಮಹಾದ್ವಾರವನ್ನು ದಾಟಿ ಶ್ರೀ ಕ್ಷೇತ್ರಕ್ಕೆ ಕಾಲಿಟ್ಟರೆ ಆದಿಶಕ್ತಿ ಸ್ವರೂಪಿಣಿಯಾದ ಸ್ತಂಭ ದೇವತೆಯ (ಕಂಬದಮ್ಮ) ದರ್ಶನವಾಗುತ್ತದೆ. ಕಂಬದಮ್ಮನು ಕ್ಷೇತ್ರಾಧಿದೇವತೆ. ಸ್ತ್ರೀಯರು ಕಂಬದಮ್ಮನನ್ನು ಅನನ್ಯ ಭಕ್ತಿಯಿಂದ ಪೂಜಿಸುತ್ತಾರೆ. ಸುತ್ತಮುತ್ತಣ ಹಳ್ಳಿಗಳಲ್ಲಿ ಕಂಬದಮ್ಮನ ಹಬ್ಬವನ್ನು ವಿಶೇಷ ಶ್ರದ್ಧಾಭಕ್ತಿಗಳಿಂದ ಆಚರಿಸುತ್ತಾರೆ.

ಗಂಗಾಧರೇಶ್ವರಸ್ವಾಮಿಯ ಅಭಿಷೇಕಕ್ಕಾಗಿ ಇಲ್ಲೊಂದು ಸರೋವರವಿದೆ. ಶಿವನ ಜಟೆಯಿಂದ ಜಾರಿದ ಗಂಗಾ ಬಿಂದು ಈ ಸರೋವರದಲ್ಲಿ ಬಿದ್ದುದರಿಂದ ಇದು ಬಿಂದು ಸರೋವರವೆಂದು ಖ್ಯಾತವಾಗಿದೆ ಎಂದು ಹೇಳುತ್ತಾರೆ. ಗಂಗಾಧರೇಶ್ವರನ ಅಭಿಷೇಕ ಜಲವು ಗುಪ್ತದ್ವಾರದ ಮೂಲಕ ಹರಿದುಬಂದು ಈ ಸರೋವರವನ್ನು ಸೇರುತ್ತದೆಂಬ ಪ್ರತೀತಿಯೂ ಇದೆ. ಪುಣ್ಯ ಪ್ರದವಾದ ಈ ಸರೋವರದಲ್ಲಿ ಹೆಣ್ಣುಮಕ್ಕಳು ವಿಶೇಷ ಭಕ್ತಿಯಿಂದ ಗಂಗೆಯನ್ನು ಪೂಜಿಸುತ್ತಾರೆ. ಪ್ರತಿದಿನ ಅರ್ಚಕರು ಈ ಸರೋವರದ ತೀರ್ಥವನ್ನೇ ಗಂಗಾಧರೇಶ್ವರನ ಅಭಿಷೇಕಕ್ಕಾಗಿ ಸಕಲ ಮರ್ಯಾದೆಗಳೊಡನೆ ಕೊಂಡೊಯ್ಯುತ್ತಾರೆ.

ಚಂದ್ರಮೌಳೀಶ್ವರ ದೇವಾಲಯಕ್ಕೆ ಸೇರಿದಂತೆ ಇಪ್ಪತ್ತು ಕಂಬಗಳ ಮಂಟಪವೊಂದಿದೆ. ಇದು ಪೌರಾಣಿಕವೂ, ಐತಿಹಾಸಿಕವೂ ಪುಣ್ಯಪ್ರದವೂ, ಪವಿತ್ರವೂ ಸುಪ್ರಸಿದ್ಧವೂ ಆದುದು. ಈ ಮಂಟಪದ ಮಧ್ಯೆ ನಾಲ್ಕು ಕಂಬಗಳ ನಡುವೆ ಜನರ ಭಕ್ತಿಯ ಕೇಂದ್ರವಾದ ಜ್ವಾಲಾಪೀಠ ಅಥವಾ ಉರಿಗದ್ದುಗೆ ಇದೆ. ಇದನ್ನು ಅಗ್ನಿಪೀಠವೆಂದೂ

ಕರೆಯುವುದುಂಟು. ಇದು ಮರದಿಂದ ನಿರ್ಮಿತವಾದ ಪೀಠ. ಈ ಮರದ ಮಂಟಪಕ್ಕೆ ಉತ್ತರ ಮತ್ತು ಪಶ್ಚಿಮದಲ್ಲಿ ಪ್ರವೇಶದ್ವಾರಗಳಿವೆ. ಈ ಉರಿಗದ್ದಿಗೆಗೆ ಅಮೃತಶಿಲೆಯನ್ನು ಹೊದಿಸಲಾಗಿದೆ. ಅದರ ಮೇಲಿರುವ ಪೀಠವು ಕಂದು ಬಣ್ಣದ ಶಿಲೆಯಿಂದ ನಿರ್ಮಿತವಾಗಿದೆ. ಈ ಮಂಟಪಕ್ಕೆ ಸೇರಿದಂತೆ ಪೂರ್ವಭಾಗದಲ್ಲಿ ಕಲ್ಲುಕಂಬಗಳ ಒಂದು ಹಜಾರವಿದೆ. ಈ ಹಜಾರದ ಉತ್ತರ ಮೂಲೆಯಲ್ಲಿ ತಪೋಗುಹೆಗೆ ಪ್ರವೇಶದ್ವಾರವಿದೆ. ಹಿಂದೆ ಅನೇಕಮಹನೀಯರು ತಪೋನುಷ್ಠಾನ ಮಾಡಿದ ಗುಹೆ ಇದು. ಕತ್ತಲು ತುಂಬಿದ ಈ ಗುಹೆಗೆ ಪ್ರವೇಶವು ಕಷ್ಟ. ಜ್ವಾಲಾಪೀಠಕ್ಕೆ ಮುಸಲ್ಮಾನರು ಬಹಳ ಭಯ ಭಕ್ತಿಯಿಂದ ನಡೆದುಕೊಳ್ಳುತಾರೆ, ವಾರಕ್ಕೊಮ್ಮೆ ಬಂದು ನಮಾಜು ಮಾಡಿ ತಮ್ಮ ಸಂಪ್ರದಾಯದಂತೆ




ಜ್ವಾಲಾಪೀಠ

ಸೇವೆ ಸಲ್ಲಿಸುತ್ತಾರೆ. ಜ್ವಾಲಾಪೀಠವು ಶಿವನು ತಪಸ್ಸು ಮಾಡಿದ ಸ್ಥಳವೆಂದು ಪ್ರಸಿದ್ಧವಾಗಿದೆ. ಸಿದ್ಧಯೋಗಿಗಳ ಪ್ರಿಯಶಿಷ್ಯರಾದ ಕರ್ಮನಾಥರು ಕಾಲಾನುಕ್ರಮದಲ್ಲಿ ಅಧಿಕಾರವನ್ನು ತನ್ನ ಶಿಷ್ಯರಿಗೆ ವಹಿಸಿ ಬಹಿರ್ಲೋಕವನ್ನು ಮರೆತು ಅಂತರ್ಮುಖಿಗಳಾಗಿ ಇಲ್ಲಿ ಘೋರ ತಪಸ್ಸನ್ನು ಆಚರಿಸಿದರೆಂಬ ಪ್ರತೀತಿ ಇದೆ. ಇವರು ಜೀವಂತ ಸಮಾಧಿಸ್ಥರಾದರು. ಈ

ಜ್ವಾಲಾಪೀಠಕ್ಕೆ ಶ್ರದ್ಧಾ ಭಕ್ತಿಗಳಿಂದ ನಿತ್ಯಪೂಜೆ ನಡೆಯುತ್ತದೆ. ಮಹಾಸ್ವಾಮಿಗಳವರು ಪ್ರಾತಃಕಾಲದ ತಮ್ಮ ಅನುಷ್ಠಾನಾನಂತರ ಇದಕ್ಕೆ ನಮನಗಳನ್ನು ಸಲ್ಲಿಸುತ್ತಾರೆ ಉರಿಗದ್ದುಗೆಯ ಮೇಲೆ ಬತ್ತದ ಕಾಳುಗಳನ್ನು ಚೆಲ್ಲಿದರೆ ಅವು ಸಿಡಿದು ಹರಳಾಗುತ್ತಿದ್ದವಂತೆ. ದೈವನಿಷ್ಠೆಯಿಲ್ಲದ ಮನುಷ್ಯನು ಇದನ್ನು ಮುಟ್ಟಿದರೆ ಕೆಡಕಾಗುತ್ತದೆಂಬ ಭಾವನೆಯೂ ಇದೆ.

ಸಿದ್ಧಯೋಗಿಯ ಕಾಲದಿಂದಲೂ ನಡೆದು ಬಂದಿರುವ ಸಂಪ್ರದಾಯದಂತೆ ಈಗಿನ ಪೀಠಾಧಿಕಾರಗಳಾದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಶಿವರಾತ್ರಿ, ವಿಜಯದಶಮಿ, ಕಾಮನ ಹುಣ್ಣಿಮೆಯ ದಿನಗಳಲ್ಲಿ ಉಪವಾಸವಿದ್ದು ಮಂಗಳ ಸ್ನಾನಮಾಡಿ, ಕಿರೀಟ ಧಾರಣೆ ಮಾಡಿ ಸರ್ವಾಭರಣ ವಿಭೂಷಿತರಾಗಿ ಅಂತರಂಗದಲ್ಲಿ ಸೋಹಂಭಾವವನ್ನು ತುಂಬಿಕೊಂಡು ಮಠದ ಸಕಲ ಮರ್ಯಾದೆಯೊಡನೆ ಜ್ವಾಲಾಪೀಠಾರೋಹಣಮಾಡಲು ಹೊರಡುತ್ತಾರೆ. ನಗಾರಿ, ನಾಗಸ್ವರ, ಮೃದಂಗ ಮುಂತಾದ ವಾದ್ಯಘೋಷ ಮತ್ತು ಸುಶ್ರಾವ್ಯವಾದ ವೇದಘೋಷಗಳು ಮೊಳಗುತ್ತವೆ. ಜನಪದರು ಗೀತೆಗಳನ್ನು ಸುಮಧುರವಾಗಿ ಹಾಡುತ್ತಾರೆ. ತಂಡೋಪತಂಡವಾಗಿ ಜಾನಪದ ನೃತ್ಯಗಳು ನಡೆಯುತ್ತವೆ. ಅನೇಕ ಲಕ್ಷ ಜನರು ಕಿಕ್ಕಿರಿದು ತುಂಬಿರುತ್ತಾರೆ. ಉಸಿರಾಡಲೂ ಆಗದ ಜನಸಂದಣಿ ಅದು. ಶ್ರೀಗಳವರು ಭೈರವೇಶ್ವರನ ದಿವ್ಯ ಸನ್ನಿಧಿಗೆ ದಯಮಾಡಿಸಿ ಪ್ರದಕ್ಷಿಣೆ ಬಂದು ಭೈರವನನ್ನು ಭಕ್ತಿಯಿಂದ ಪೂಜಿಸುತ್ತಾರೆ. ತರುವಾಯ ಚಂದ್ರಮೌಳೀಶ್ವರನಿಗೆ ಪೂಜೆ ಸಲ್ಲಿಸಿ ಅಲ್ಲಿಂದ ಅಕ್ಷಯ ಪಾತ್ರೆಯನ್ನು ಹಿಡಿದು ನಡೆ-ಮುಡಿಯೊಡನೆ ಬಂದು ಜ್ವಾಲಾಪೀಠದಲ್ಲಿ ಅದನ್ನಿಟ್ಟು, ಪ್ರದಕ್ಷಿಣೆ ಮಾಡಿ, ಪೂಜಿಸಿ ನಂತರ ಪಶ್ಚಿಮ ದ್ವಾರದಿಂದ ಪ್ರವೇಶಿಸಿ ಜ್ವಾಲಾಪೀಠದ ಮೇಲೆ ಕೆಲ ನಿಮಿಷಗಳು ಮಾತ್ರ ಆಸೀನರಾಗುತ್ತಾರೆ. ಆಗ ಶ್ರೀಗಳವರ ಮುಖದಿಂದ ಅಗ್ನಿಜ್ವಾಲೆಯಂತಹ ಕಾಂತಿ ಹೊರಹೊಮ್ಮುತ್ತಿರುತ್ತದೆ. ಇಡೀ ಉರಿಗದ್ದುಗೆಯು ವಿಶೇಷ ತೇಜಸ್ಸಿನಿಂದ ಪ್ರಜ್ವಲಿಸುತ್ತಿರುತ್ತದೆ. ಆ ಸಮಯದಲ್ಲಿ ಶ್ರೀ ಶ್ರೀಗಳವರ ದರ್ಶನವು ಬಹಳ ಪುಣ್ಯಪ್ರದವೆಂದು ಭಕ್ತರ ಭಾವನೆ.

ಜ್ವಾಲಾಪೀಠದ ಮತ್ತೊಂದು ದ್ವಾರದಿಂದ ಹೊರಬಂದ ಶ್ರೀಗಳವರು ಸಿದ್ಧ ಸಿಂಹಾಸನಾರೋಹಣ ಮಾಡುತ್ತಾರೆ. ಆಗ ಭಕ್ತರ ಜಯನಿನಾದವು ದಿಗಂತಗಳಲ್ಲಿ ಪ್ರತಿಧ್ವನಿಸುತ್ತದೆ. ಅನಂತರ ಶಾಸ್ತ್ರೋಕ್ತ ರೀತಿಯಲ್ಲಿ ವಿಶೇಷ ಪೂಜೆಯು ನಡೆಯುತ್ತದೆ. ಸಾಧುಸಂತರೂ, ಶಿಷ್ಯರೂ, ಭಕ್ತರೂ ಈ ಪೂಜೆಯಲ್ಲಿ ಭಾಗವಹಿಸುತ್ತಾರೆ. ಉರಿಗದ್ದುಗೆಯ ಮುಂಭಾಗದಲ್ಲಿ ನಾಗಚಾವಡಿ ಇದೆ. ಇದನ್ನು ಬಹಳ ಹಿಂದೆ ನಾಗೇಶ್ವರ ದೇಸಿ ಎಂಬುವವನು ಶ್ರಾವಣ ಮಾಸದಲ್ಲಿ ಪುಟ್ಟಯ್ಯ ಎಂಬಾತನಿಂದ ಕಟ್ಟಿಸಿದನೆಂದು ಶಾಸನವೊಂದರಿಂದ ತಿಳಿದುಬರುತ್ತದೆ. ಹಿಂದೆ ಈ ಚಾವಡಿಯನ್ನು ಹೋಮಶಾಲೆಯನ್ನಾಗಿ ಮಾಡಿಕೊಂಡಿದ್ದರು. ಇಲ್ಲಿ ಪ್ರತಿನಿತ್ಯ ಪ್ರಾತಃಕಾಲ ಮತ್ತು ಸಾಯಂಸಂಧ್ಯಾ ಸಮಯಗಳಲ್ಲಿ



ಸಿದ್ಧ ಸಿಂಹಾಸನ

ಭಜನೆ, ಪ್ರವಚನಾದಿಗಳು ನಡೆಯುತ್ತವೆ.

ಹಳೆ ಮಠಕ್ಕೆ ಸೇರಿದಂತೆ ಬಹಳ ಗದ್ದಿಗೆಗಳಿವೆ. ಇವುಗಳ ಮೇಲೆ ಕಮಲಗಳನ್ನು ಬಿಡಿಸಿದ ಗೋಳಾಕಾರದ ಪೀಠಗಳಿವೆ. ಎಲ್ಲಾ ಪೀಠಗಳ ಮೇಲೂ ಎರಡು ಪಾದಗಳನ್ನು ಕೆತ್ತಲಾಗಿದೆ. ಭೈರವೇಶ್ವರ ದೇವಾಲಯದ ಪಕ್ಕದಲ್ಲಿ ಶ್ರೀ ಭಕ್ತನಾಥಸ್ವಾಮಿಗಳು ಶ್ರೀ ಚಂದ್ರಶೇಖರನಾಥ ಸ್ವಾಮಿಗಳು ಮತ್ತು ಶ್ರೀ ರಾಮಾನಂದನಾಥ ಸ್ವಾಮಿಗಳು- ಇವರ ಗದ್ದುಗೆಗಳಿವೆ.

ಪುರಾಣದಲ್ಲಿ ಶ್ರೀ ಆದಿಚುಂಚನಗಿರಿ ಕ್ಷೇತ್ರದ ಮಹಿಮೆಯು ವಿಸ್ತಾರವಾಗಿ ಬಂದಿದೆ. ಈ ಸ್ಥಳಪುರಾಣ ಭಾಗವನ್ನು ಕನ್ನಡ ಅನುವಾದ ಸಹಿತ 'ಆದಿಚುಂಚನಗಿರಿ ಸ್ಥಳ ಮಹಾತ್ಮ್ಯವು' ಎಂಬ ಹೆಸರಿನಿಂದ ಪ್ರತ್ಯೇಕ ಕೃತಿಯನ್ನಾಗಿ ೧೯೬೩ ರಲ್ಲಿ ಪ್ರಕಟಿಸಲಾಗಿದೆ. ಇದು ನಾಥರವೃತ್ತಾಂತವನ್ನೂ ಶ್ರೀ ಆದಿಚುಂಚನಗಿರಿ ಕ್ಷೇತ್ರದ ಮಾಹಾತ್ಮ್ಯವನ್ನೂ ವಿಶದವಾಗಿ ತಿಳಿಸುತ್ತದೆ.

ಅಭಿವಂದನಾ

ಧರ್ಮವು ಕ್ಷೀಣಿಸಿ, ಅಧರ್ಮವು ಬೆಳೆಯುತ್ತಿರುವುದನ್ನು ಕಂಡು ಶಿವನು ಲೋಕಾನುಗ್ರಹ ನಿಮಿತ್ತವಾಗಿ, ಶೃಂಗ, ತ್ರಿಶೂಲ ಕಪಾಲಗಳನ್ನು ಧರಿಸಿ, ಮಹಾ ಸಿದ್ಧಯೋಗಿಯ ರೂಪವನ್ನು ತಾಳಿದನು. ಆಗ-

ಇಚ್ಛಯಾ ಪಾರ್ವತೀಶಸ್ಯ ಕಪಾಲಾದ್ದಕ್ಷಿಣಾದ್ವಿಭೋಃ।
ಯೋಗಿನಾಥಸ್ಸಮಜನಿ ಶೂಲಶೃಂಗಕಪಾಲವಾನ್॥

ತ್ರಿಶೂಲ, ಶೃಂಗ, ಕಪಾಲಗಳನ್ನು ಧರಿಸಿ ಶಿವನ ದಕ್ಷಿಣ ಕಪಾಲದಿಂದ ಯೋಗಿನಾಥನಾದ ಸಿದ್ಧ ಯೋಗಿಯು ಜನಿಸಿದನು. ಅವನು ಮಹೇಶ್ವರನನ್ನು ಕುರಿತು ಗಂಗಾತೀರದಲ್ಲಿ ದೀರ್ಘಕಾಲ ತಪಸ್ಸನ್ನಾಚರಿಸಿದನು. ತನ್ನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ಪರಶಿವನನ್ನು ಕುರಿತು ಅವನು 'ತನ್ನನ್ನೇಕೆ ಸೃಷ್ಟಿಸಿದೆ' ಎಂದು ಕೇಳಿದನು. ಆಗ ಶಿವನು 'ಸ್ವಸ್ವರೂಪನೇ ಆದ ಸಿದ್ಧ ಯೋಗಿಯೇ, ನೀನು ಸಕಲ ಯೋಗಿಗಳ ಅಗ್ರಪೀಠವನ್ನಲಂಕರಿಸಿ ಲೋಕೋದ್ಧಾರಕ್ಕಾಗಿ ಸಂಚರಿಸು' ಎಂದು ಅಪ್ಪಣೆ ಮಾಡಿದನು. ಆ ಸಿದ್ಧಯೋಗಿಯೇ ನಾಥ ತತ್ತ್ವದ ಪ್ರಥಮ ಗುರು. ಶಿವನ ಅನುಗ್ರಹದಿಂದ ಸತ್ಯನಾಥ, ಸ್ವತೋನಾಥ, ಆದಿನಾಥ, ಅಕುಲೀನಾಥ, ಮಾತಂಗನಾಥ, ಮತಂಗನಾಥ, ಮತ್ಸ್ಯೇಂದ್ರನಾಥ, ಯಂತ್ರಘಟನಾಥ, ಗೋರಕ್ಷನಾಥರೆಂಬ ನವನಾಥರು ಮತ್ಸ್ಯದ ಗರ್ಭದಿಂದ ಜನಿಸಿದರು. ಸಿದ್ಧಯೋಗಿಯ ಅಂಶದಿಂದ ಸಾರಂಗನಾಥ, ಅಘೋರನಾಥರು ಜನಿಸಿದರು. ಈ ದ್ವಾದಶನಾಥರು ಯೋಗ ಸಾಮ್ರಾಜ್ಯ ದೀಕ್ಷಿತರೂ, ನಾನಾ ವಿದ್ಯಾವಿಶಾರದರೂ, ತಪೋ ನಿಷ್ಠರೂ, ಯೋಗರತರೂ, ನಿತ್ಯಕರ್ಮಾನುಷ್ಠಾನಪರರೂ ಆಗಿದ್ದರು. ಅವರು ದ್ವಾದಶ ಪೀಠಗಳ ಅಧಿಪತಿಗಳಾಗಿ ನಿರಂತರ ಸಂಚರಿಸುತ್ತಾ ಧರ್ಮವನ್ನು ಬೋಧಿಸುತ್ತಿದ್ದರು.

ಹನ್ನೆರಡು ಮಂದಿ ನಾಥರಲ್ಲಿ ಶಿವಸ್ವರೂಪನೂ, ಪ್ರಥಮನಾಥನೂ ಆದ ಸಿದ್ಧಯೋಗಿಯು ಅಲ್ಲಲ್ಲಿ ಸಂಚರಿಸಿ ಧರ್ಮವನ್ನುಪದೇಶಿಸುತ್ತಾ ಚುಂಚನಗಿರಿಗೆ ಬಂದನು. ಅಲ್ಲಿ ನೆಲೆಸಿದ್ದ ಶಿವನು ಸಿದ್ಧಯೋಗಿಯನ್ನು ನೋಡಿ ಸಂತೋಷಗೊಂಡನು. ಎಲೈ ಸಿದ್ಧಯೋಗಿಯೇ, ಈ ಕ್ಷೇತ್ರವು ನನ್ನ ಅಂಶದಿಂದ ಪವಿತ್ರವಾಗಿದೆ. ಇಲ್ಲಿ ನಾನು ನನ್ನ ಪಂಚಪ್ರಾಣಗಳಿಂದ ಪಂಚಲಿಂಗಗಳಾಗಿ ಮೂರ್ತೀಭವಿಸಿರುತ್ತೇನೆ. ನೀನು ಇಲ್ಲಿದ್ದುಕೊಂಡು ಪಂಚಲಿಂಗಗಳನ್ನೂ, ಆದಿಶಕ್ತಿ ಸ್ವರೂಪಿಣಿಯಾದ ಸ್ತಂಭಾಂಬೆಯನ್ನೂ ಆರಾಧಿಸುತ್ತಾ ಲೋಕೋಪಕಾರವನ್ನು ಮಾಡು.

ನನ್ನ ಈ ವಾಸಸ್ಥಾನವನ್ನು ನಿನಗೆ ಕೊಟ್ಟಿದ್ದೇನೆ. ಇದು ಆದಿಪೀಠ. ಇದು ನಿನ್ನ ಪರಂಪರೆಯವರಿಗೆ ಸೇರಿದ್ದು. ಉಳಿದ ಹನ್ನೊಂದು ನಾಥ ಪೀಠಗಳಿಗೆ ಅಧಿಪತಿಗಳನ್ನು ನೇಮಿಸುವ ಅಧಿಕಾರ ನಿನ್ನದು. ಅವರು ನಿನಗೆ ಸಮಾನರಲ್ಲ. ಅವರು ನಿನ್ನ ಆಜ್ಞಾನುವರ್ತಿಗಳಾಗಿ ನಡೆದುಕೊಳ್ಳಬೇಕು ಎಂದು ಹೇಳಿ ಪರಶಿವನು ರಜತಾದ್ರಿಗೆ ತೆರಳಿದನು.

ಪರಶಿವನ ಆಜ್ಞೆಯಂತೆ ಆದಿಪೀಠವಾದ್ದರಿಂದ ಚುಂಚನಗಿರಿಗೆ ಆದಿ



ಹಿರಿಯ ಜಗದ್ಗುರುಗಳ ಗದ್ದುಗೆಗಳು

ಚುಂಚನಗಿರಿಯೆಂಬ ಹೆಸರು ಬಂದಿತು. ಮಹಾ ತಪಸ್ವಿಯಾದ ಸಿದ್ಧಯೋಗಿಯು ಇಲ್ಲಿ ನೆಲಸಿ ತನ್ನ ಮುಂದಿನ ಸಮಸ್ತ ಕಾರ್ಯಗಳನ್ನು ಚಿಂತಿಸಿದನು. ಶಮದಮಾದಿಗಳಿಂದ ಕೂಡಿ ತನ್ನ ನಿತ್ಯಾನುಷ್ಠಾನದಲ್ಲಿ ತತ್ಪರನಾದನು.

ನಿತ್ಯಂ ಶಮದಮಾಚಾರ ಆನ್ನಶಂಸ್ಕರತೋ ಮುನಿಃ|
ಋಜುರ್ಮೃದುಹ್ರೀನಿಷೇವೀ ಧೀರ ಆಸ್ತೇ ಜಿತೇಂದ್ರಿಯಃ||

ಕಾಲಕ್ರಮದಲ್ಲಿ ಕರ್ಮನಾಥನೆಂಬ ವ್ಯಕ್ತಿಯು ಬಂದು ಈ ಸಿದ್ಧಯೋಗಿಯ ಸೇವೆಯಲ್ಲಿ ನಿರತನಾದನು. ಅವನ ಸೇವೆಯಿಂದ ಸಂಪ್ರೀತನಾದ ಸಿದ್ಧಯೋಗಿಯು ಸಂಪ್ರದಾಯದಂತೆ ಅವನಿಗೆ ದೀಕ್ಷೆಕೊಟ್ಟು, ಮಂತ್ರೋಪದೇಶ ಮಾಡಿ, ಯೋಗ ರಹಸ್ಯವನ್ನು ತಿಳಿಸಿ, ವಿಧ್ಯುಕ್ತವಾಗಿ ಉಪದೇಶಮಾಡಿ, ಅವನನ್ನು ತನ್ನ ಶಿಷ್ಯನನ್ನಾಗಿ ಸ್ವೀಕರಿಸಿದನು. ಸಿದ್ಧಯೋಗಿಯ ಪ್ರಭಾವ ಎಲ್ಲೆಲ್ಲೂ ಹರಡಿತು. ನಾನಾ ದೇಶಗಳಿಂದ ಜನರು ತಂಡೋಪತಂಡವಾಗಿ ಬರುವುದು ಪ್ರಾರಂಭವಾಯಿತು. ಅರಸಿಬಂದ ಭಕ್ತರಿಗೆ ದರ್ಶನವಿತ್ತು ಹರಸಿ ತಾನು ತನ್ನ ಯೋಗಾನುಷ್ಠಾನದಲ್ಲಿ ಮಗ್ನನಾಗುತ್ತಿದ್ದನು. ಸಿದ್ಧಯೋಗಿಯು ಭಕ್ತಾದಿಗಳಿಂದ ಬಂದ ಕಾಣಿಕೆಗಳನ್ನು ಸ್ವೀಕರಿಸಿ ಗಂಗಾಧರೇಶ್ವರ ಮೊದಲಾದ ಕ್ಷೇತ್ರ ದೇವತೆಗಳಿಗೆ ದೇವಾಲಯಗಳನ್ನೂ, ತನಗೂ ಮುಂದಿನ ಪೀಠಾಧಿಪತಿಗಳಿಗೂ ವಾಸಕ್ಕೆ ಅನುಕೂಲವಾಗುವಂತೆ ಶಿಲೆಯಿಂದ ದೃಢವಾದ ಮಠವನ್ನೂ ಕಟ್ಟಿಸಿದನು. ವೇದ, ವೇದಾಂತ, ಸಾಂಖ್ಯಯೋಗಾದಿಗಳನ್ನು ಬಲ್ಲ ಸಿದ್ಧಯೋಗಿಯು ಶಿಷ್ಯರ ರಕ್ಷಣೆ ಮತ್ತು ದುಷ್ಟರ

ದಂಡನೆಗಾಗಿ ಪರಮೇಶ್ವರ ಸ್ವರೂಪನಾದ ಭೈರವನನ್ನೂ ಯಂತ್ರೋದ್ಧಾರ ಪೂರ್ವಕವಾಗಿ ವಿಧ್ಯನುಸಾರ ಪ್ರತಿಷ್ಠೆ ಮಾಡಿಸಿ, ಪರಮೇಶ್ವರನ ಆದಿ ಮಾಯಾ ಶಕ್ತಿಯಾದ ಸ್ತಂಭನಾಮಕ ಕ್ಷೇತ್ರಾಭಿಮಾನಿ ದೇವತೆಯನ್ನೂ ಪ್ರತಿಷ್ಠೆ ಮಾಡಿಸಿದನು. ಶೈವಾಗಮದಂತೆ ಉತ್ಸವಾದಿಗಳು ನಡೆಯುವಂತೆ ವ್ಯವಸ್ಥೆ ಮಾಡಿದನು. ಜಾತಿ, ಮತ ಭೇದವಿಲ್ಲದೆ ಎಲ್ಲಗೂ ಮಠದ ಭಕ್ತರಾದರು. ಅನ್ನದಾನವು ಪ್ರಾರಂಭವಾಯಿತು. ವಿಶೇಷ ಸಂದರ್ಭಗಳಲ್ಲಿ ಈ ಸಿದ್ಧ ಯೋಗಿಯು ಸರ್ವಾಲಂಕಾರ ಭೂಷಿತನಾಗಿ ವಾದ್ಯಗಳು ಮೊಳಗುತ್ತಿರಲು, ಶಿಷ್ಯವೃಂದವು ಸೇವಿಸುತ್ತಿರಲು ಪರಮೇಶ್ವರ ದತ್ತವಾದ ಪೀಠದಲ್ಲಿ ಕುಳಿತು ಭಕ್ತ ಸಮೂಹವನ್ನು ಹರಸುತ್ತಿದ್ದನು. ಕಾಲಕ್ರಮದಲ್ಲಿ ಅವನು ಲೋಕ ವ್ಯವಹಾರವನ್ನು ತ್ಯಜಿಸಿ, ತಪಸ್ಸಿಗೆ ಹೋಗಲು ಬಯಸಿ ಸದಾಚಾರ, ಶಮ, ದಮ, ಸತ್ಯ, ಯೋಗ, ತಪಸ್ಸು, ಜ್ಞಾನಾದಿಗಳಲ್ಲಿ ನಿಷ್ಣಾತನಾದ ಕರ್ಮನಾಥನೇ ಪೀಠಕ್ಕೆ ಅರ್ಹನೆಂದು ಮನಸ್ಸಿನಲ್ಲಿ ನಿರ್ಧರಿಸಿ ಭಕ್ತ ಸಮೂಹವನ್ನು ಬರಮಾಡಿಕೊಂಡು, ತನ್ನ ಮನೋಗತವನ್ನು ತಿಳಿಸಿ ಅನಾದಿ ಸಿದ್ಧ ಸಿಂಹಾಸನವೆಂದು ಪ್ರಸಿದ್ಧವಾದ ಆದಿಪೀಠದಲ್ಲಿ ಕರ್ಮನಾಥನನ್ನು ಕೂರಿಸಿ ವಿಜೃಂಭಣೆಯಿಂದ ಪಟ್ಟಾಭಿಷೇಕ ನಡೆಸಿದನು. ತರುವಾಯ ಸಿದ್ಧಯೋಗಿಯು ತಪೋಮಗ್ನನಾಗಿ ನಿರ್ವೃತಿ ಸುಖವನ್ನು ಪಡೆದನು.

ಶ್ರೀ ಕರ್ಮನಾಥರು ಗುರುವಿನ ಆಜ್ಞೆಯಂತೆ ಎಲ್ಲಾ ಸೇವಾ ಕಾರ್ಯಗಳನ್ನು ತಪ್ಪದೆ ನಡೆಸುತ್ತಿದ್ದರು. ಅವರು ಉಳಿದ ಪೀಠಗಳಿಗೆ ನಾಥರನ್ನು ಪೀಠಾಧಿಪತಿಗಳನ್ನಾಗಿ ನೇಮಿಸಿದರು. ಇವು ಚುಂಚನಗಿರಿ ಮಠದ ಶಾಖಾಮಠಗಳು.

ಹೀಗೆ ಪುರಾಣವು ಶ್ರೀ ಆದಿಚುಂಚನಗಿರಿ ಕ್ಷೇತ್ರದ ಉಗಮ, ಸ್ವರೂಪ, ವ್ಯವಸ್ಥೆಗಳನ್ನು ತಿಳಿಸಿ ನಾಥ ಸಂಪ್ರದಾಯಕ್ಕೆ ವಿಹಿತವಾದ ದೀಕ್ಷಾಕ್ರಮ, ಆಚಾರ, ಗೋತ್ರಾದಿಗಳನ್ನು ತಿಳಿಸುತ್ತದೆ.

ಪುರಾಣೇತಿಹಾಸಪ್ರಸಿದ್ಧವಾದ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ಬಹಳ ಪ್ರಾಚೀನವಾದುದು. ಇದರ ಗುರುಪರಂಪರೆಯೂ ಸುದೀರ್ಘವಾದುದು. ಆದಿ ಚುಂಚನಗಿರಿ ಸ್ಥಳ ಮಹಾತ್ಮ್ಯವೆಂಬ ಕೃತಿಯಲ್ಲಿ ಗುರು ಪರಂಪರೆಯ ಒಂದು ಪಟ್ಟಿಯನ್ನು ಕೊಡಲಾಗಿದೆ. ಈ ಪಟ್ಟಿಯಲ್ಲಿ ೬೬ ಗುರುಗಳ ಹೆಸರುಗಳಿವೆ. ಅಲ್ಲಿಂದೀಚೆಗೆ ೫ ಮಂದಿ ಮಠಾಧಿಪತಿಗಳಾಗಿದ್ದಾರೆ. ಈಗ ಪೀಠಾಧಿಕಾರಿಗಳಾಗಿರುವ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು ೭೧ ನೆಯವರು.

ಶ್ರೀ ಕ್ಷೇತ್ರದ ೬೭ ನೆಯ ಗುರುಗಳಾಗಿದ್ದ ಶ್ರೀ ತೇಜನಾಥರು ಕೃಷ್ಣರಾಜಪೇಟೆಯ ಭಕ್ತರೊಬ್ಬರ ಮನೆಯಲ್ಲಿ ತಂಗಿದ್ದಾಗ ರೋಗಪೀಡಿತರಾದರು. ಅವರ ರೋಗ ಉಲ್ಬಣಿಸಿತು. ಗುಣ ಮುಖರಾಗುವ ಲಕ್ಷಣ ಕಾಣಲಿಲ್ಲ. ಹೆದರಿದ ಆ ಮನೆಯವರು'ಮುಂದೆ ಮಠದ

ಗತಿ ಏನು?' ಎಂದು ಅವರನ್ನು ಕೇಳಿದರು. ಆಗ ಅವರು 'ಇದು ಒಕ್ಕಲಿಗರ ಮಠ, ಹೇಗೋ ನಮ್ಮ ಕೈಗೆ ಬಂದಿತ್ತು. ಸ್ವಲ್ಪಕಾಲ ನಾವು ಆಡಳಿತ ನಡೆಸಿದೆವು. ಮಠದ ಹಕ್ಕುದಾರರಾದ ಒಕ್ಕಲಿಗರೇ ಮುಂದಿನ ಏರ್ಪಾಡನ್ನು ಮಾಡಿಕೊಳ್ಳಲಿ' ಎಂದು ಹೇಳಿ ೧೯೨೪ ನೆಯ ಜುಲೈ ಮಾಹೆ ೨೪ ನೆಯ ತಾರೀಖಿನಲ್ಲಿ ಶಿವ ಸಾಯುಜ್ಯ ಹೊಂದಿದರು.

ಭೈರವನ ಲೀಲೆಯನ್ನು ಬಲ್ಲವರಾರು? ಸನ್ನಿವೇಶ, ಪರಿಸ್ಥಿತಿ, ಸಂದರ್ಭಗಳು ನಾಯಕನೊಬ್ಬನನ್ನು ಸೃಷ್ಟಿಸುತ್ತವೆ. ಚುಂಚನಗಿರಿ ಪುಣ್ಯಕ್ಷೇತ್ರವು ಅನಾಯಕವಾದ ಸಂಗತಿಯು ಆಗ ದೀನದಲಿತರ ಒಳಿತಿಗಾಗಿ ಶ್ರಮಿಸುತ್ತಿದ್ದ ಸನ್ಮಾನ್ಯ ಕೆ.ಹೆಚ್. ರಾಮಯ್ಯನವರ ಕಿವಿ ಮುಟ್ಟಿ ಅವರನ್ನು ತಟ್ಟಿ ಎಬ್ಬಿಸಿತು. ಅವರು ತಮ್ಮ ಎಲ್ಲಾ ಗಣ್ಯ ಮಿತ್ರರನ್ನೂ ಬರಮಾಡಿಕೊಂಡು ವಿಚಾರ ವಿನಿಮಯ ನಡೆಸಿ ಪೀಠ ಪ್ರಭುತ್ವದ ವಿಷಯದಲ್ಲಿ ಒಂದು ನಿರ್ಣಯಕ್ಕೆ ಬಂದರು. ಮುಂದಿನ ಪೀಠಾಧಿಕಾರಿಯನ್ನು ಆಯ್ಕೆ ಮಾಡುವ ಯತ್ನ ಪ್ರಾರಂಭವಾಯಿತು. ಶ್ರೀ ಕ್ಷೇತ್ರವು ಒಕ್ಕಲಿಗರದಾದರೂ ಕೇವಲ ಜಾತಿಯನ್ನವಲಂಬಿಸದೆ ಜನಕೋಟಿಯನ್ನು ತಬ್ಬಿಕೊಂಡಿದೆ. ಆದ್ದರಿಂದ ಭಕ್ತಮಹಾಶಯರೆಲ್ಲ ಶ್ರೀ ಕ್ಷೇತ್ರದಲ್ಲಿ ಸಭೆ ಸೇರುವಂತೆ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸಲಾಯಿತು. ಭಕ್ತ ಮಹಾಜನರು ೨೧.೨.೧೯೨೫ ರಂದು ವಿಶೇಷ ಸಂಖ್ಯೆಯಲ್ಲಿ ಬಂದು ಸೇರಿದರು. ಭಕ್ತರ ಈ ಬೃಹತ್ ಸಭೆಯು ಪಾಂಡವಪುರದ ಕುಂತೀಬೆಟ್ಟದ ಸಮೀಪದಲ್ಲಿರುವ ದರಸಗುಪ್ಪೆ ಎಂಬ ಹಳ್ಳಿಯ ಗುರುರಾಮಯ್ಯನವರನ್ನು ಏಕಕಂಠದಿಂದ ಆದಿ ಚುಂಚನಗಿರಿಯ ಪೀಠಾಧಿಕಾರಿಗಳನ್ನಾಗಿ ಚುನಾಯಿಸಿತು. ಇದಕ್ಕೆ ಆಗಿನ ಶ್ರೀಮನ್ ಮಹಾರಾಜರವರು ತಮ್ಮ ಅಂಗೀಕಾರವನ್ನಿತ್ತರು. ಅಲ್ಲಿಂದ ಮುಂದೆ ಗುರು ರಾಮಯ್ಯನವರಿಗೆ ಶ್ರೀ ಭಕ್ತನಾಥಸ್ವಾಮಿಗಳೆಂಬ ನಾಮಧೇಯವು ಬಂದಿತು. ತರುವಾಯ ಪ್ರಭವ ಸಂವತ್ಸರ ಪಾಲ್ಗುಣ ಶುದ್ಧ ಬಿದಿಗೆ ಗುರುವಾರ ಪಾತ್ರಃಕಾಲ ೮ ರಿಂದ ೯ ಗಂಟೆಯೊಳಗೆ ಸಲ್ಲುವ ಶುಭ ಮೀನಲಗ್ನದಲ್ಲಿ ೨೫.೨.೧೯೨೮ರಂದು ಶ್ರೀ ಶ್ರೀ ಭಕ್ತನಾಥ ಸ್ವಾಮಿಗಳವರ ಪಟ್ಟಾಭಿಷೇಕ ಮಹೋತ್ಸವವು ಜನತೆಯ ಮತ್ತು ಸರ್ಕಾರದ ಸಹಕಾರದಿಂದ ಬಹಳ ವಿಜೃಂಭಣೆಯಿಂದ ನಡೆಯಿತು. ಲಕ್ಷಗಟ್ಟಲೆ ಭಕ್ತರು ಸೇರಿದ್ದರು. ಅಂದಿನ ಸಭೆಯಲ್ಲಿ ಸನ್ಮಾನ್ಯ ಕೆ.ಹೆಚ್. ರಾಮಯ್ಯನವರು ಲೋಕೋತ್ತರ ಭಾಷಣ ಮಾಡಿದರು. ಪ್ರಾಂತೀಯ ಮಹಮದೀಯರು ಶ್ರೀ ಸ್ವಾಮಿಗಳವರಿಗೆ ಭಿನ್ನವತ್ತಳೆಯನ್ನು ಸಮರ್ಪಿಸಿ ತಮ್ಮ ಗೌರವವನ್ನೂ ತಮಗುಂಟಾಗಿರುವ ಆನಂದವನ್ನೂ ಪ್ರಕಟಿಸಿದರು. ಅಂದು ಕ್ಷೇತ್ರಕ್ಕೆ ಕವಿದಿದ್ದ ಕತ್ತಲೆ ಸರಿಯಿತು, ಸೂರ್ಯೋದಯವಾಯಿತು; ಭಕ್ತರಿಗೆ ಪೂಜ್ಯಗುರುವಿನ ಲಾಭವಾಯಿತು.

ಶ್ರೀ ಶ್ರೀ ಭಕ್ತನಾಥ ಸ್ವಾಮಿಗಳವರ ಪಟ್ಟಾಭಿಷೇಕವಾದಾಗ ಶ್ರೀ ಮಠವು ಬಹಳ ದುರ್ದಶೆಯಲ್ಲಿದ್ದಿತು. ಮಠದ ಉಗ್ರಾಣ ಬರಿದಾಗಿದ್ದಿತು. ಮಠವು ಸಾಲ-ಸೋಲಗಳಿಗೆ ಗುರಿಯಾಗಿದ್ದಿತು. ಮಠದ ಹೊಲ-ಗದ್ದೆಗಳು ಬೇಸಾಯವಿಲ್ಲದೆ ಬಂಜರು ಬಿದ್ದಿದ್ದವು. ಆಡಳಿತ ವ್ಯವಸ್ಥೆ ಸಡಿಲಗೊಂಡಿದ್ದಿತು. ಸಾಕಷ್ಟು ಸಿಬ್ಬಂದಿ ವರ್ಗವೂ ಇರಲಿಲ್ಲ. ಶ್ರೀ ಸ್ವಾಮಿಗಳವರು ಪ್ರಾರಂಭದಲ್ಲಿಯೇ ಮಠದ ಪುನರುಜ್ಜೀವನದ ಕಡೆಗೆ ಗಮನ ಕೊಡಬೇಕಾಯಿತು. ಅವರು ಬೇಸಾಯ, ಗೊಬ್ಬರ ಮತ್ತು ಹಾಲಿಗೆ ಅನುಕೂಲವಾಗುವಂತೆ ದನ-ಕರುಗಳನ್ನು ಸಂಗ್ರಹಿಸಿ ಗೋಶಾಲೆಯನ್ನು ಕಟ್ಟಿಸಿದರು. ಸಿಬ್ಬಂದಿಯನ್ನು ಹೆಚ್ಚಿಸಿಕೊಂಡು ಬೇಸಾಯಕ್ಕೆ ಗಮನಕೊಟ್ಟರು. ಮಠಕ್ಕೆ ಬರುವ ಯಾತ್ರಿಕರಿಗೆ ಊಟದ ವ್ಯವಸ್ಥೆ ಆಯಿತು. ಪಾಠಶಾಲೆ ಮತ್ತು ವಿಶ್ರಾಂತಿ ಮಂದಿರಗಳನ್ನು ನಿರ್ಮಿಸಲಾಯಿತು. ಇದು ಕ್ಷೇತ್ರದ ಅಭಿವೃದ್ಧಿಯ ಪ್ರಥಮ ಹಂತ. ಆಗ ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಅವರು ಶ್ರೀ ಮಠದ ವಿಷಯದಲ್ಲಿ ಬಹಳ ಅಭಿಮಾನ ಮತ್ತು ಸಹಾನುಭೂತಿಯನ್ನುಳ್ಳವರಾಗಿದ್ದರು. ಅವರು ಶ್ರೀ ಕ್ಷೇತ್ರಕ್ಕೆ ಬಂದಿದ್ದಾಗ ಅರ್ಪಿಸಿದ ವಿಜ್ಞಾಪನಾ ಪತ್ರಕ್ಕೆ ಕೊಟ್ಟ ಉತ್ತರ ಚಿರಸ್ಮರಣೀಯ. ಅವರ ಉತ್ತರದ ಕೆಲವು ಮಾತುಗಳನ್ನಿಲ್ಲಿ ಉದ್ಧರಿಸಲಾಗಿದೆ. '**ಶ್ರೀ ಆದಿಚುಂಚನಗಿರಿ ಮಠವು ಪುರಾತನವೂ, ಇತಿಹಾಸ ಪ್ರಸಿದ್ಧವೂ ಆದುದು.. ಶ್ರೀ ಸ್ವಾಮಿ ಭಕ್ತಾನಾಥಜೀ** ಅವರು ನಿಮ್ಮ ಗುರು ಪೀಠವನ್ನಲಂಕರಿಸಿ ನಿಮ್ಮನ್ನು ಅನುಗ್ರಹಿಸುತ್ತಿರುವುದಕ್ಕಾಗಿ ನೀವೆಲ್ಲರೂ ಅಭಿಮಾನ ಪಡುವುದು ಯುಕ್ತವಾಗಿಯೇ ಇದೆ.. ಸ್ವಾಮಿಗಳವರು ಈಗಿನ ಕಾಲದ ಸ್ಥಿತಿಗತಿಗಳಿಗೆ ಅನುಸಾರವಾಗಿ ಹೊಂದಿಕೊಂಡು ನಡೆಯಬೇಕೆಂಬ ಉದ್ದೇಶವುಳ್ಳವರಾಗಿದ್ದಾರೆ. ಜೊತೆಗೆ ಉದಾರ ಭಾವನೆಗಳಿಂದ ಕೂಡಿ ದೂರದೃಷ್ಟಿಯುಳ್ಳವರೂ ಆಗಿದ್ದಾರೆ.. ನಿಮ್ಮ ಅಭಿನಂದನಾ ಪತ್ರಿಕೆಯಲ್ಲಿ ಮಾಡಿರುವ ನಾನಾ ಬಗೆಯ ಅರಿಕೆಗಳನ್ನು ಸರ್ಕಾರದವರು ಸಹಾನುಭೂತಿಯಿಂದ ಪರ್ಯಾಲೋಚಿಸುವರೆಂಬ ಭರವಸೆಯನ್ನು ನೀವು ಖಂಡಿತವಾಗಿಯೂ ಇಟ್ಟುಕೊಳ್ಳಬಹುದು. ಸರ್ಕಾರದವರು ತಮಗೆ ಸಾಧ್ಯವಾದ ಸಹಾಯವನ್ನು ಎಷ್ಟೇ ಕೊಟ್ಟಾಗ್ಯೂ ಆದರಿಂದ ವಿಶೇಷ ಫಲವು ಲಭಿಸಲಾರದು. ಮಠದ ಭಕ್ತಾದಿಗಳು ಸಹಾನುಭೂತಿಯನ್ನು ತೋರ್ಪಡಿಸಿ ದ್ರವ್ಯ ಸಹಾಯವನ್ನು ಇತರ ಸಹಾಯಗಳನ್ನೂ ಕೊಟ್ಟು ಮಠದ ಸೇವೆಗೆ ನೆರವಾಗಿ ನಿಲ್ಲಬೇಕು. ನಿಮ್ಮ ಸ್ವಾಮಿಗಳವರು ಸಂಕಲ್ಪ ಮಾಡಿರುವ ಶ್ಲಾಘನೀಯವಾದ ಉದ್ದೇಶಗಳನ್ನು ಸಾಧಿಸುವುದಕ್ಕೆ ನೀವೆಲ್ಲರೂ ಸಹಾಯಕರಾಗುವಿರೆಂದು ನಂಬಿದ್ದೇನೆ.....'

ಶ್ರೀ ಶ್ರೀ ಭಕ್ತನಾಥ ಸ್ವಾಮಿಗಳವರು ಶ್ರೀ ಶ್ರೀ ಚಂದ್ರಶೇಖರನಾಥ ಸ್ವಾಮಿಗಳವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ತಾವು ಸುಮಾರು ೪೦ ವರ್ಷಗಳ ಕಾಲ ಶ್ರೀ ಕ್ಷೇತ್ರದ ಶ್ರೇಯಸ್ಸನ್ನು ಸಾಧಿಸಿ ೧೯೬೭ ನೇ ಇಸವಿಯ

ಪ್ರಾರಂಭದಲ್ಲಿ ಶಿವೈಕ್ಯರಾದರು. ಶ್ರೀ ಶ್ರೀ ಚಂದ್ರಶೇಖರನಾಥ ಸ್ವಾಮಿಗಳವರ ಪೂರ್ವಾಶ್ರಮದ ಹೆಸರು ಶ್ರೀ ಮುನಿಸ್ವಾಮಪ್ಪ, ಬೆಂಗಳೂರಿನ ಬಡಾವಣೆಯಾದ ಅಲಸೂರು ಇವರ ಜನ್ಮಸ್ಥಳ. ಪೂಜೆ, ದಾನ, ಧರ್ಮಗಳಿಗೆ ಹೆಸರಾಂತ ಒಕ್ಕಲಿಗರ ಉತ್ತಮ ಮನೆತನದಲ್ಲಿ ಜನ್ಮತಾಳಿ, ಪದವೀಧರರಾದ ಇವರು ಕನ್ನಡ, ತೆಲುಗು, ತಮಿಳು, ಹಿಂದೂಸ್ತಾನಿ, ಹಿಂದಿ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿದ್ದರು. ನಿರ್ಮಲ ಚಿತ್ತರೂ, ಶಾಂತರೂ ಆದ ಇವರಿಗೆ ಗುರುಹಿರಿಯರಲ್ಲಿಯೂ, ದೇವರಲ್ಲಿಯೂ ಇದ್ದ ಭಕ್ತಿ ಅನುಪಮ. ವಿದ್ವಾಂಸರೂ, ಸಾಧು ಶ್ರೇಷ್ಠರೂ ಆದ ಶ್ರೀ ಶ್ರೀ ಚಂದ್ರಶೇಖರನಾಥ ಸ್ವಾಮಿಗಳವರು ಶ್ರೀ ಕ್ಷೇತ್ರದ ಪುರೋಭಿವೃದ್ಧಿಯ ಕಡೆಗೆ ತಮ್ಮ ಗಮನ ಹರಿಸಿ. ಹಲವು ಯೋಜನೆಗಳನ್ನು ಹಾಕಿಕೊಂಡರು. ಅವರು ಶ್ರೀ ಮಠದಲ್ಲಿ ಮಾಧ್ಯಮಿಕ ಶಾಲೆ ಮತ್ತು ಉಚಿತ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿ ತಾವೇ ಉಪಾಧ್ಯಾಯರಾಗಿ ನಿಂತು ಪಾಠ ಪ್ರವಚನಗಳನ್ನಾರಂಭಿಸಿ ಪ್ರಾಚೀನ ಗುರುಕುಲಾಶ್ರಮದ ಸ್ವರೂಪವನ್ನು ಶ್ರೀ ಕ್ಷೇತ್ರಕ್ಕೆ ತಂದುಕೊಟ್ಟರು. ವಿದ್ಯಾಪ್ರಗತಿಗಾಗಿ ಘನ ಸರ್ಕಾರದಿಂದ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಶ್ರೀ ಕ್ಷೇತ್ರಕ್ಕೆ ದೊರಕಿಸಿಕೊಂಡರು. ಜನತೆಯನ್ನು ಸಂಕಷ್ಟಗಳಿಂದ ಪಾರುಮಾಡಲು ಶ್ರೀಗಳವರು ಸರಳ ವಿವಾಹ ಪದ್ಧತಿಯನ್ನು ಜಾರಿಗೆ ತಂದರು. ಗ್ರಾಮದ ಎಲ್ಲಾ ಕೋಮಿನ ಜನರು ಒಂದೇ ದಿನ ವಿವಾಹ ನಡೆಸುವಂತೆ ಒಪ್ಪಿಸಿ ತಾವೇ ಪೌರೋಹಿತ್ಯ ವಹಿಸಿ ವಿವಾಹ ಕಾರ್ಯವನ್ನು ನೆರವೇರಿಸಿದರು. ಇದರಿಂದ ಇಂತಹ ಕಾರ್ಯಗಳಲ್ಲಿ ಜನರಿಗೆ ಧೈರ್ಯ ಬಂದಿತು. ಇದೊಂದು ಸಾಮಾಜಿಕ ಕ್ರಾಂತಿಯೇ ಸರಿ. ಶ್ರೀ ಶ್ರೀ ಚಂದ್ರಶೇಖರನಾಥ ಸ್ವಾಮಿಗಳವರು ಕೇವಲ ಹನ್ನೊಂದು ತಿಂಗಳ ಕಾಲ ಪೀಠಾಧ್ಯಕ್ಷರಾಗಿದ್ದು ಶಿವೈಕ್ಯರಾದುದು ನಾಡಿನ ದೌರ್ಭಾಗ್ಯ.

ಶ್ರೀ ಶ್ರೀ ಚಂದ್ರಶೇಖರ ನಾಥರ ನಂತರ ಶ್ರೀ ಶ್ರೀ ರಾಮಾನಂದನಾಥರು ಪೀಠಾಧಿಕಾರಿಗಳಾದರು. ಇವರ ಪೂರ್ವಾಶ್ರಮದ ಹೆಸರು ನರಸಪ್ಪ, ಒಕ್ಕಲಿಗ ರೈತ ಮನೆತನದಲ್ಲಿ ಹುಟ್ಟಿದ ಇವರು ಉಪಾಧ್ಯಾಯ ವೃತ್ತಿಯನ್ನವಲಂಬಿಸಿದ್ದರು. ಇವರ ಜನ್ಮಸ್ಥಳ ಪಡುವಲಪಟ್ಟಣ. ಚಿಕ್ಕಂದಿನಿಂದಲೂ ಇವರು ಸೇವಾಬುದ್ಧಿ ಮತ್ತು ಬ್ರಹ್ಮ ಜಿಜ್ಞಾಸೆಯನ್ನುಳ್ಳವರಾಗಿದ್ದರು. ಶ್ರೀ ನರಸಪ್ಪನವರು ಉಪಾಧ್ಯಾಯ ವೃತ್ತಿಗೆ ರಾಜೀನಾಮೆ ಕೊಟ್ಟು ಶ್ರೀ ಗುರುರಾಮಯ್ಯನವರ ಶಿಷ್ಯರಾದರು. ಮೇಲುಕೋಟೆ ಛತ್ರ ಮತ್ತು ವಿದ್ಯಾರ್ಥಿ ನಿಲಯದ ಮೇಲ್ವಿಚಾರಣೆ ನೋಡುತ್ತಿದ್ದ ಶ್ರೀ ಶಿವಾನಂದ ಸ್ವಾಮಿಗಳವರು ಶಿವೈಕ್ಯರಾದ ಮೇಲೆ ಶ್ರೀ ಶ್ರೀ ಭಕ್ತಾನಾಥ ಸ್ವಾಮಿಗಳವರು ಶ್ರೀ ನರಸಪ್ಪನವರಿಗೆ ದೀಕ್ಷೆ ಇತ್ತು ಶ್ರೀ ಶ್ರೀ ರಾಮಾನಂದನಾಥಸ್ವಾಮಿಗಳವರೆಂದು ನಾಮಕರಣ ಮಾಡಿ. ಮೇಲ್ಕೋಟೆ

ಛತ್ರ ಮತ್ತು ವಿದ್ಯಾರ್ಥಿನಿಲಯಗಳ ಮೇಲ್ವಿಚಾರಣೆಗೆ ನಿಯೋಜಿಸಿದರು. ಶ್ರೀ ಶ್ರೀ ರಾಮಾನಂದನಾಥ ಸ್ವಾಮಿಗಳವರು ಈ ಕಾರ್ಯವನ್ನು ೧೮ ವರ್ಷಗಳಿಗೂ ಹೆಚ್ಚು ಕಾಲ ಉತ್ತಮವಾಗಿ ನಿರ್ವಹಿಸಿದರು.

ಶ್ರೀ ಶ್ರೀ ಚಂದ್ರಶೇಖರನಾಥ ಸ್ವಾಮಿಗಳ ತರುವಾಯ ಇಳಿವಯಸ್ಸಿನ ಶ್ರೀ ಶ್ರೀ ರಾಮಾನಂದನಾಥ ಸ್ವಾಮಿಗಳವರನ್ನು ಶ್ರೀ ಆದಿಚುಂಚನಗಿರಿ ಕ್ಷೇತ್ರದ ಪೀಠಾಧಿಕಾರಿಗಳನ್ನಾಗಿ ಮಾಡಲಾಯಿತು. ಶ್ರೀ ಕ್ಷೇತ್ರದ ಮಹಾಕಾರ್ಯವನ್ನು ನಿರ್ವಹಿಸುವುದು ಶ್ರಮಸಾಧ್ಯವಾದ್ದರಿಂದ ಇವರು ಇಬ್ಬರು ಶಿಷ್ಯರನ್ನು ಸ್ವೀಕರಿಸಿದರು. ಈ ಶಿಷ್ಯರಲ್ಲಿ ಒಬ್ಬರಾದ ಶ್ರೀ ಶ್ರೀ ಬಾಲಗಂಗಾಧರನಾಥರಲ್ಲಿ ಕಾರ್ಯದಕ್ಷತೆ, ಸೇವಾಬುದ್ಧಿ, ಸೌಮ್ಯಸ್ವಭಾವ, ಆತ್ಮಚಿಂತನೆ, ಸಂಘಟನಾ ಶಕ್ತಿ, ಲೋಕೋಪದೇಶ ಸಾಮರ್ಥ್ಯ ಮೊದಲಾದ ಸದ್ಗುಣ ಸಂಪತ್ತನ್ನು ಗಮನಿಸಿ ಅವರಿಗೇ ಮುಂದಿನ, ಪೀಠಾಧಿಕಾರವೆಂದು ಉಯಿಲನ್ನು ಬರೆದಿಟ್ಟು ೧೯೭೪ ನೇ ಇಸವಿಯ ಅಂತ್ಯದಲ್ಲಿ ಶಿವೈಕ್ಯರಾದರು. ತರುವಾಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಶ್ರೀ ಕ್ಷೇತ್ರ ಸಿದ್ಧಸಿಂಹಾಸನಾಧೀಶರರಾದರು.

***

ಅಭಿವಂದನಾ

ಶ್ರೀಗಳವರು

ವಿದ್ವಾನ್ ಶ್ರೀನಿವಾಸಮೂರ್ತಿ

ದಯಾಮಯನಾದ ಆ ಪರಮಾತ್ಮನು ನೀರು, ಗಾಳಿ, ಭೂಮಿ, ಆಕಾಶ, ಸೂರ್ಯ, ಚಂದ್ರ, ನಕ್ಷತ್ರಗಳು, ಸಸ್ಯವರ್ಗ, ಪ್ರಾಣಿ ವರ್ಗ- ಮೊದಲಾದ ಅಮೂಲ್ಯ ಸಂಪತ್ತನ್ನು ಮಾನವಕೋಟಿಗೆ ಕರುಣಿಸಿದ್ದಾನೆ. ಮಾನವನು ಈ ಸಂಪತ್ತನ್ನು ಸಮಾನವಾಗಿ ಹಂಚಿಕೊಂಡು ಸುಖ ಶಾಂತಿಗಳಿಂದ ಬಾಳಬೇಕೆಂಬುದೇ ಭಗವದಿಚ್ಛೆ. ಆದರೆ ಇವನು ಪ್ರಕೃತಿಜನ್ಯವಾದ ತ್ರಿಗುಣಗಳಿಗೆ ವಶನಾಗಿ ದೈವದತ್ತವಾದ ಸಕಲ ಸಂಪತ್ತೂ ತನಗೇ ಬೇಕೆಂದು ಬಯಸಿ ಪರರ ಭಾಗವನ್ನೂ ಅಪಹರಿಸುತ್ತಾನೆ. ಲೋಕಕ್ಕೆ ಅಹಿತವನ್ನೂ ಬಗೆಯುತ್ತಾನೆ. ಇದರಿಂದ ಜನರ ಜೀವನದಲ್ಲಿ ಏರು-ಪೇರುಗಳುಂಟಾಗಿ ರಾಗ-ದ್ವೇಷ, ಮಾತ್ಸರ್ಯ, ಅಸೂಯೆ ದುರಾಸೆ-ಮೊದಲಾದ ದುರ್ಗುಣಗಳು ತಲೆಯೆತ್ತುತ್ತವೆ. ಜನತೆ ಅನೀತಿ, ಅನ್ಯಾಯ, ಅಧರ್ಮ, ಕಪಟ, ಕೊಲೆ-ಸುಲಿಗೆಗಳಲ್ಲಿ ತೊಡಗಿ ಕಂಗೆಟ್ಟು ವಿನಾಶದ ಕಡೆಗೆ ಸಾಗುತ್ತದೆ. ಜನರು ಸಹನೆ, ವಿವೇಕ, ವಿಶ್ವಾಸಗಳನ್ನು ಕಳೆದುಕೊಂಡು ದುರಭಿಮಾನದಿಂದ ಅನಾಹುತಗಳನ್ನು ಸಂಕಟಗಳನ್ನು ತಾವಾಗಿಯೇ ಬರಮಾಡಿಕೊಳ್ಳುತ್ತಾರೆ. ಹೀಗೆ ಲೋಕವು ವಿಪುಲ ಗೊಂದಲಕ್ಕೀಡಾಗಿ ವಿನಾಶದಂಚಿನತ್ತ ಧಾವಿಸುತ್ತಿರುವಾಗ ಅದನ್ನು ತಡೆದು ನಿಲ್ಲಿಸಲು ಸಮರ್ಥನಾದ ಒಬ್ಬ ಮಾರ್ಗದರ್ಶಕ, ಮಹಾಪುರುಷನ ಅಗತ್ಯ ಉಂಟಾಗುತ್ತದೆ. ಧರ್ಮಕ್ಕೆ ಚ್ಯುತಿಬಂದು ಅಧರ್ಮದ ಆಳ್ವಿಕೆ ಪ್ರಾರಂಭವಾದಾಗ ಮತ್ತೆ ಧರ್ಮವನ್ನು ಸ್ಥಾಪಿಸಲು ಭಗವಂತನು ಅವತರಿಸುತ್ತಾನೆಂದು ಜನರು ನಂಬಿರುತ್ತಾರೆ. ಈಗ ದೇಶದ ಪರಿಸ್ಥಿತಿಯು ಗಂಭೀರವಾಗಿದೆ. ಅಜ್ಞಾನ, ದಾರಿದ್ರ್ಯಗಳು ಎಲ್ಲೆಡೆ ತಾಂಡವವಾಡುತ್ತಿವೆ. ಜನತೆ ದುಸ್ತರ ಮೂಕವೇದನೆಯನ್ನನುಭವಿಸುತ್ತಿದೆ. ಧರ್ಮಸಂಸ್ಕೃತಿಗಳು ನಿರ್ಲಕ್ಷ್ಯಕ್ಕೆ ಗುರಿಯಾಗಿವೆ. ಇಂಥ ಪರಿಸ್ಥಿತಿಯಲ್ಲಿ ಜನತೆಯನ್ನು ಸಂಘಟಿಸಿ ಸಾಮರಸ್ಯವನ್ನು ಬಿತ್ತಿ ಅವರನ್ನುದ್ಧರಿಸುವ ಮಹಾಕಾರ್ಯವನ್ನು ನಿರ್ವಹಿಸುವ ಮಹಾ ಪುರುಷನ ಅಗತ್ಯವಿರುತ್ತದೆ. ಇದನ್ನು ಪೂರಯಿಸಲೋ ಎಂಬಂತೆ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಜನ್ಮತಾಳಿದುದು ದೇಶದ ಭಾಗ್ಯ.

ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿರುವ ಬಿಡದಿಯಿಂದ ದಕ್ಷಿಣಕ್ಕೆ ಮೂರು ಕಿ.ಮೀ. ದೂರದಲ್ಲಿ ಹೊಲಗದ್ದೆಗಳ ನಡುವೆ ಸದ್ದುಗದ್ದಲವಿಲ್ಲದೆ ಬಾನಂದೂರು ಎಂಬ ಗ್ರಾಮವಿದೆ. ಸದಾ ನೀರಿನಿಂದ ತುಂಬಿದ ಕೆರೆ, ಹರಿಯುವ ಹೊಳೆ, ತೆಂಗಿನ ತೋಟಗಳು ಸುತ್ತಲೂ ಸೊಂಪಾಗಿ ಬೆಳೆದ ಹಸಿರು ಮರಗಳು ಈ ಗ್ರಾಮಕ್ಕೆ ಸಹಜ ಚೆಲುವನ್ನು ನೀಡಿವೆ. ಇಲ್ಲಿನ ಬಸವೇಶ್ವರ, ಆಂಜನೇಯ, ಮಾರಮ್ಮ, ದಂಡಿನಮ್ಮ, ಹುಚ್ಚಮ್ಮ, ಭೈರವೇಶ್ವರ ದೇವಾಲಯಗಳು ಊರಿಗೆ ಭಕ್ತಿಯ ವಾತಾವರಣವನ್ನು ನೀಡಿವೆ.

ಅಭಿವಂದನಾ

ಬಹಳ ಹಿಂದೆ ಮಾಗಡಿ ತಾಲ್ಲೂಕಿನ ಬಾಣವಾಡಿಯಿಂದ ಬಂದ ಮೂರು ವೀರಶೈವ ಕುಟುಂಬಗಳು ಇಲ್ಲಿ ನೆಲೆಸಿ, ಕ್ರಮೇಣ ಗ್ರಾಮವು ಬೆಳೆದುದರಿಂದ-ಬಾಣವಾಡಿಯಿಂದ ಬಂದವರ ಊರು-ಬಾಣಂದೂರು ಎಂಬ ಹೆಸರು ಬಂದಿತೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಬಿಡದಿಯ ಮಾರ್ಗವಾಗಿ ಸಂಚರಿಸುತ್ತಿದ್ದ ವರ್ತಕರೂ, ಪ್ರಯಾಣಿಕರೂ ಇಲ್ಲಿದ್ದ ತೋಪಿಗೆ ಬಂದು ತಾವು ತಂದಿದ್ದ ಬುತ್ತಿಯನ್ನುಂಡು ವಿಶ್ರಮಿಸಿಕೊಂಡು ಮುಂದಕ್ಕೆ ಪ್ರಯಾಣ ಮಾಡುತ್ತಿದ್ದರು. ಬಾನವನ್ನು ಉಂಡ ಊರು.... ಬಾನಂದೂರು ಎಂಬ ಹೆಸರು ಬಂದಿತೆಂದು ಕೆಲವರ ಅಭಿಪ್ರಾಯ. ಒಂದು ವೇಳೆ ಎರಡು ಅಭಿಪ್ರಾಯಗಳ ಸಮನ್ವಯವೂ ಆಗಿರಬಹುದು.

ಬಾನಂದೂರಿನ ಜನಸಂಖ್ಯೆ ಸುಮಾರು ಎರಡು ಸಾವಿರ. ಎಲ್ಲ ಕೋಮಿನ ಜನರೂ ಇಲ್ಲಿದ್ದಾರೆ. ಎಲ್ಲರೂ ಒಂದೇ ಕುಟುಂಬಕ್ಕೆ ಸೇರಿದಂತೆ, ಉಚ್ಚ-ನೀಚ ಭಾವನೆಯಿಲ್ಲದೆ ಪ್ರೀತಿಸೌಹಾರ್ದಗಳಿಂದ ಬಾಳುತ್ತಿದ್ದಾರೆ. ಯಾವ ಭೇದ-ಭಾವವನ್ನೂ ಎಣಿಸದೆ ಪರಸ್ಪರ ಅಕ್ಕ-ಅಣ್ಣ, ತಮ್ಮ-ತಂಗಿ, ದೊಡ್ಡಪ್ಪ,ದೊಡ್ಡಮ್ಮ, ಚಿಕ್ಕಪ್ಪ, ಅತ್ತೆ-ಮಾವ ಮುಂತಾದ ಬಾಂಧವ್ಯ ಸೂಚಕ ಶಬ್ದಗಳಿಂದ ವ್ಯವಹರಿಸುತ್ತಾರೆ. ಹರಿಜನರೂ ಗೌರವದಿಂದ, ನೆಮ್ಮದಿಯಿಂದ ಬಾಳುತ್ತಿದ್ದಾರೆ. ೧೦೫ ವರ್ಷ ತುಂಬಿದ ಹರಿಜನ ಮುದುಕನೊಬ್ಬ, ಗ್ರಾಮಕ್ಕೆ ಪಟ್ಟದ ಯಜಮಾನನೆಂದರೆ ಅನೇಕರಿಗೆ ಆಶ್ಚರ್ಯವಾಗಬಹುದು. ಅವನನ್ನು ಎಲ್ಲರೂ ಗೌರವದಿಂದ ಕಾಣುತ್ತಾರೆ. ಸಾಮಾನ್ಯವಾಗಿ ಈ ಗ್ರಾಮದ ಜನರು ಕೋರ್ಟು, ಕಛೇರಿ, ಪೊಲೀಸ್ ಠಾಣೆಗಳಿಗೆ ಹೋಗುವುದಿಲ್ಲ. ಹಲವು ಜನರಿರುವಲ್ಲಿ ಅಭಿಪ್ರಾಯ ಭೇದವಿದ್ದೇ ಇರುತ್ತದೆ; ಒಂದಲ್ಲೊಂದು ಕಾರಣದಿಂದ ಕಠಿಣ ಸಮಸ್ಯೆಗಳು ಉದ್ಭವಿಸುವುದು ಸಹಜ. ಜನರು ಅವನ್ನು ತಮ್ಮ ತಮ್ಮಲ್ಲಿಯೇ ಯಾರಿಗೂ ನೋವಾಗದಂತೆ ಬಗೆಹರಿಸಿಕೊಳ್ಳುತ್ತಾರೆ. ಗ್ರಾಮದ ಈ ಆದರ್ಶ ಪರಿಸ್ಥಿತಿಗೆ ಭೌಗೋಳಿಕ ಪರಿಸರ ಒಂದು ಕಾರಣವಾದರೆ ಧಾರ್ಮಿಕ ಸುಭೇದಾರ ಮನೆತನ ಮತ್ತೊಂದು ಕಾರಣ. ಈ ಮನೆತನದ, ಬಗ್ಗೆ ಊರಿನ ಎಲ್ಲರಿಗೂ ಮೆಚ್ಚುಗೆ, ಆದರ, ಗೌರವಗಳಿವೆ.

ಹಲವು ತಲೆಮಾರುಗಳ ಹಿಂದಿನಿಂದಲೂ ಈ ಸುಭೇದಾರ್ ಮನೆತನವು ಈ ಭಾಗದ ಸುಮಾರು ೩೩ ಹಳ್ಳಿಗಳ ಆಡಳಿತವನ್ನು ಪಡೆದಿದ್ದಿತು. ಈ ಮನೆತನದವರು ಭಕ್ತಾದಿಗಳ ಮನೆಗಳಲ್ಲಿ ದೇವತಾ ಪೂಜಾದಿಕಾರ್ಯ ಮತ್ತು ಶ್ರೀ ಆದಿಚುಂಚನಗಿರಿ ಕ್ಷೇತ್ರಕ್ಕೆ ಕಪ್ಪಕಾಣಿಕೆಗಳ ಸಂಗ್ರಹ ಮುಂತಾದ ಕಾರ್ಯಗಳನ್ನು ಶ್ರದ್ಧಾಭಕ್ತಿಗಳಿಂದ ತಪ್ಪದೆ ನಡೆಸಿಕೊಂಡು ಬರುತ್ತಿದ್ದರು. ಈ ಮನೆತನದವರು ಆದಿಕಾಲದಿಂದಲೂ ಈ ಪದವಿಯು ತಮ್ಮ ಮನೆತನಕ್ಕೆ ಬಂದಿದೆಯೆಂದು ಹೇಳುತ್ತಾರೆ.

ಇವರು ಶಿವೋಪಾಸಕರಾದರೂ ವಿಷ್ಣು ದ್ವೇಷಿಗಳಲ್ಲ. ಎಲ್ಲ ದೇವತೆಗಳಿಗೂ ಸಮಾನ ಭಕ್ತಿಯಿಂದ ನಡೆದುಕೊಂಡರೂ ಇವರ ಮನೆದೇವರು ಗಂಗಾಧರೇಶ್ವರ ಮತ್ತು

ಸ್ತಂಭಾಂಬೆ. ಇವರು ಶಿವಕ್ಷೇತ್ರವಾದ ಶ್ರೀ ಆದಿಚುಂಚನಗಿರಿಯ ಭಕ್ತರು. ಸದ್ಗುಣ ಸಂಪನ್ನರೂ ಧರ್ಮಪ್ರವೃತ್ತಿಯುಳ್ಳವರೂ, ದೈವಭಕ್ತರೂ ಸದಾಚಾರ ನಿಷ್ಠರೂ, ವಿಚಾರಪರರೂ ಆದ ಈ ಮನೆತನದವರು ಲೋಕ ಮೆಚ್ಚುವಂತೆ; ಶಿವನೊಲಿಯುವಂತೆ, ಸಾತ್ವಿಕ ಜೀವನವನ್ನು ನಡೆಸುತ್ತಿದ್ದರು. ಪ್ರತಿನಿತ್ಯ ಸ್ನಾನಮಾಡಿ, ದೇವತಾಪೂಜೆ ಮುಗಿಸಿ, ಮನೆಗೆ ಬಂದ ಅತಿಥಿಗಳನ್ನು ಸತ್ಕರಿಸಿ ಸಾತ್ವಿಕಾಹಾರವನ್ನು ಸೇವಿಸುತ್ತಿದ್ದರು. ಹಬ್ಬ ಹರಿದಿನಗಳಲ್ಲಿ, ವಿಶೇಷ ಪೂಜಾ ದಿನಗಳಲ್ಲಿ ಗ್ರಾಮಸ್ಥರೆಲ್ಲರನ್ನೂ ಬರಮಾಡಿಕೊಂಡು ಸತ್ಕರಿಸಿ ಸಂತೋಷಪಡುತ್ತಿದ್ದರು. ಈ ಮನೆತನದಲ್ಲಿ ಹಿರಿಯ ಮಗನಿಗೆ ಸುಭೇದಾರ ಪದವಿಯ ಅಧಿಕಾರವಿದ್ದರೂ ಮನೆತನದ ಎಲ್ಲರನ್ನೂ ಸುಭೇದಾರರೆಂದೇ ಕರೆಯುವ ವಾಡಿಕೆ ಇದೆ. ಇವರನ್ನು ಗರಡಿಯ ಮನೆಯವರೆಂದೂ ಕರೆಯುತ್ತಿದ್ದರು. ಇವರು ಗರಡಿ, ಕತ್ತಿವರಸೆ, ದೊಣ್ಣೆ ವರಸೆಗಳಲ್ಲಿ ನಿಷ್ಣಾತರಾಗಿದ್ದರು. ಸುಭೇದಾರ ಮನೆತನ ಶ್ರೀಮಂತ ಮನೆತನವಲ್ಲ; ಮಧ್ಯಮ ದರ್ಜೆಯದು. ಅವರದು ಸಂತೃಪ್ತ ಜೀವನ, ಗೃಹಸ್ಥರಾದರೂ, ಆತ್ಮಜ್ಞಾನ ನಿಷ್ಠರು; ಇದು ಅವರ ಪರಂಪರಾಗತ ಸಂಪತ್ತು. ಇಂತಹ ಒಳ್ಳೆಯ ಮನೆತನ ತಾನೆ ಲೋಕಕ್ಕೆ ಒಬ್ಬ ಮಹಾ ಪುರುಷನನ್ನು ಕೊಡಬಲ್ಲದು.

ಈ ಸುಭೇದಾರ್ ವಂಶದ ಚಿಕ್ಕಲಿಂಗಪ್ಪನವರು ಸರಳ ಜೀವಿಗಳು. ಸಾತ್ವಿಕರು, ಸುಸಂಸ್ಕೃತರು, ಗೌರವಾನ್ವಿತರೂ ಆಗಿದ್ದರು. ಇವರು ಊರಿನ ಎಲ್ಲ ಜನರನ್ನೂ ಸಮಾನವಾಗಿ ಪ್ರೀತಿಸುತ್ತಿದ್ದರು; ಯಾರೊಡನೆಯೂ ವೈಷಮ್ಯವಿಲ್ಲದೆ ಅಜಾತ ಶತ್ರುವೆನಿಸಿದ್ದರು. ಜನರ ಕಷ್ಟ ಸುಖಗಳಲ್ಲಿ ಭಾಗಿಗಳಾಗುತ್ತಿದ್ದರು. ಗ್ರಾಮದ ಸುಖಶಾಂತಿಗಾಗಿ ಸದಾ ಶ್ರಮಿಸುತ್ತಿದ್ದರು. ಚಿಕ್ಕಲಿಂಗಯ್ಯನವರದು ಸುಭೇದಾರ ಎಂಬ ಶಬ್ದವನ್ನು ಸಾರ್ಥಕ ಪಡಿಸಿಕೊಂಡ ಏಕೈಕ ಕುಟುಂಬ. ಕರೇನಹಳ್ಳಿಯ ಶ್ರೀ ಗೋವಿಂದಪ್ಪನವರ ಮಕ್ಕಳಾದ ಶ್ರೀ ತಿಮ್ಮೇಗೌಡರಿಗೆ ಬಾಣಂದೂರಿನಲ್ಲಿ ಮದುವೆಯಾಗಿದ್ದಿತು. ಅವರು ಬಾಣಂದೂರಿನಲ್ಲಿಯೇ ಮಾವನ ಮನೆಯಲ್ಲಿ ನೆಲೆಸಿದ್ದರು. ಅವರದು ಹೆಣ್ಣು ಬಳುವಳಿ ಆಸ್ತಿ. ಅವರು ತಕ್ಕಮಟ್ಟಿಗೆ ಓದು-ಬರಹ ಬಲ್ಲವರಾಗಿದ್ದು ಅಂಚೆ ಇಲಾಖೆಯಲ್ಲಿ ಒಂದು ಸಣ್ಣ ನೌಕರಿಯಲ್ಲಿದ್ದರು. ಅಗ್ಗೆ ಆ ನೌಕರಿಯನ್ನೇ ಜನ ದೊಡ್ಡದೆಂದು ಭಾವಿಸಿದ್ದರು. ಶ್ರೀ ತಿಮ್ಮೇಗೌಡರನ್ನು ಅಂಚೆತಿಮ್ಮಯ್ಯನವರೆಂದೇ ಎಲ್ಲರೂ ಕರೆಯುತ್ತಿದ್ದರು. ಇವರಲ್ಲಿ ಒಳ್ಳೆಯ ಸಾಹಿತ್ಯ ಜ್ಞಾನವಿತ್ತು. ಜ್ಯೋತಿಷವನ್ನು ಬಲ್ಲವರಾಗಿ ಪಂಚಾಂಗವನ್ನು ಹೇಳುತ್ತಿದ್ದರು, ಹರಿಕಥೆಯನ್ನೂ ಮಾಡುತ್ತಿದ್ದರು. ಶಿವರಾತ್ರಿಯ ಸಮಯದಲ್ಲಿ ಮೂರುದಿನ ಬಸವ ಪುರಾಣದ ಪ್ರವಚನ ಮಾಡಿ ಗ್ರಾಮಸ್ಥರೆಲ್ಲರಿಗೂ ಸಂತರ್ಪಣೆ ಮಾಡಿಸುತ್ತಿದ್ದರು. ಜ್ಞಾನಿಗಳೂ ವೇದಾಂತಿಗಳೂ ಹಿರಿಯರೂ ಆದ ಇವರನ್ನು ಗ್ರಾಮಸ್ಥರೆಲ್ಲರೂ ತುಂಬ ಗೌರವದಿಂದ ಕಾಣುತ್ತಿದ್ದರು. ಅವರು ಹೇಳಿದುದು ನಡೆಯುತ್ತದೆಂಬ ವಿಶ್ವಾಸ ಜನರಲ್ಲಿ ಮೂಡಿದ್ದಿತು. ಅವರ ಪತ್ನಿಯೂ ಪತಿಗೆ ತಕ್ಕ ಗುಣಶೀಲವುಳ್ಳವರಾಗಿದ್ದರು. ಇವರದು ಪರೋಪಕಾರ, ಔದಾರ್ಯ, ದೀನದಲಿತರ ಬಗ್ಗೆ

ಅನುಕಂಪ, ನಿಸ್ವಾರ್ಥ ಸೇವೆ, ದೈವಭಕ್ತಿಗಳಿಂದ ಕೂಡಿದ ಸಂತೃಪ್ತ ಕೌಟುಂಬಿಕ ಜೀವನ. ಅಂಚೆ ತಿಮ್ಮಯ್ಯನವರು ಕೆಲವು ಗಿಡಮೂಲಿಕೆಗಳನ್ನು ಬಲ್ಲವರಾಗಿದ್ದು ರೋಗಿಗಳಿಗೆ ಔಷಧ ನೀಡಿ ಶುಶ್ರೂಷೆ ಮಾಡುತ್ತಿದ್ದರು. ಇವರ ಸೇವಾಕ್ಷೇತ್ರವು ತಮ್ಮ ಗ್ರಾಮಕ್ಕೇ ಸೀಮಿತವಾಗದೆ ಸುತ್ತಣ ಹಲವು ಗ್ರಾಮಗಳಿಗೂ ವ್ಯಾಪಿಸಿಕೊಂಡಿದ್ದಿತು. ಇವರಿಗೆ ತಿಮ್ಮಕ್ಕ, ಬೋರಮ್ಮ, ಕಮಲಮ್ಮ ಮತ್ತು ತಿಮ್ಮಯ್ಯ ಎಂಬ ನಾಲ್ವರು ಮಕ್ಕಳಿದ್ದರು. ಇವರಲ್ಲಿ ಎರಡನೆಯವರಾದ ಶ್ರೀಮತಿ ಬೋರಮ್ಮನವರನ್ನು ಸುಬೇದಾರ್ ಮನೆತನದ ಶ್ರೀ ಚಿಕ್ಕಲಿಂಗಪ್ಪನವರಿಗೆ ಕೊಟ್ಟು ವಿವಾಹವಾಯಿತು. ಶ್ರೀಮತಿ ಬೋರಮ್ಮನವರು ತೌರುಮನೆಯ ಸಕಲ ಸದ್ಗುಣಗಳನ್ನೂ ಮೈಗೂಡಿಸಿಕೊಂಡೇ ಪತಿಗೃಹ ಸೇರಿದರು. ಸುವರ್ಣವು ರತ್ನಖಚಿತವಾದಂತಾಯಿತು; ಹಾಲಿಗೆ ಸಕ್ಕರೆ ಬೆರೆತಂತಾಯಿತು. ಇವರ ದಾಂಪತ್ಯ ಜೀವನವು ಅನ್ಯೋನ್ಯತೆ, ಆತ್ಮೀಯತೆಗಳ ಸಂಗಮವೆನಿಸಿ ಸುಖಮಯವಾಗಿತ್ತು.

ಶ್ರೀ ಚಿಕ್ಕಲಿಂಗಪ್ಪನವರು ಆದಿಚುಂಚನಗಿರಿ ಕ್ಷೇತ್ರದಲ್ಲಿ ಬಹಳ ವರ್ಷಗಳಿಂದ ಶ್ರೀಗಂಗಾಧರೇಶ್ವರ ಪಲ್ಲಕ್ಕಿ ಹೊರುವ ಕಾಯಕವನ್ನು ತಪ್ಪದೆ ನಡೆಸಿಕೊಂಡು ಬರುತ್ತಿದ್ದರು. ಒಮ್ಮೆ ಭಾರವನ್ನು ಹೊರಲಾಗದೆ ಮೆಲ್ಲನೆ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಅವರ ಕಿವಿಯಿಂದ ಚಿನ್ನದ ಹತ್ತ ಕಡಗ ಬಿದ್ದು ಧ್ವನಿಮಾಡುತ್ತಾ ಮೆಟ್ಟಲುಗಳ ಮೇಲೆ ಉರುಳಿ ಕಾಣದಾಯಿತು. ಮಾಡಿದ ಅಪರಾಧಕ್ಕೆ ಹೆದರಿ ಅವರು ಗಂಗಾಧರೇಶ್ವರನನ್ನು ಮರೆಹೊಕ್ಕು ಪ್ರಾರ್ಥಿಸಿದಾಗ ಕಳೆದು ಹೋದ ಆಭರಣ ಕಣ್ಣಿಗೆ ಕಾಣಿಸಿಕೊಂಡಿತು. ಅವರು ಹರ್ಷದಿಂದ ಮತ್ತೆ ಆ ಕಾರ್ಯವನ್ನು ಹೆಚ್ಚು ಶ್ರದ್ಧಾಭಕ್ತಿಗಳಿಂದ ಮಾಡತೊಡಗಿದರು. ಚಿಕ್ಕಲಿಂಗಪ್ಪನವರಿಗೆ ಪುಟ್ಟಸ್ವಾಮಯ್ಯ ಮತ್ತು ಹನುಮಕ್ಕನವರು ಜನಿಸಿದ ಮೇಲೆ ಬಹಳ ಕಾಲದವರೆಗೆ ಮಕ್ಕಳಿರಲಿಲ್ಲ; ಮನೆಗೆ ಒಂದೇ ಗಂಡು ಮಗುವಿದ್ದುದರಿಂದ ರೈತರಾದ ಚಿಕ್ಕಲಿಂಗಪ್ಪನವರು ಚಿಂತೆಗೊಳಗಾದರು. ಶ್ರೀಮತಿ ಬೋರಮ್ಮನವರಿಗೂ ಈ ಚಿಂತೆಕಾಡಿಸುತ್ತಿತ್ತು. ಪತಿ-ಪತ್ನಿಯರು ಗಂಗಾಧರೇಶ್ವರನಿಗೆ ಭಯಭಕ್ತಿಗಳಿಂದ ಮತ್ತೊಂದು ಗಂಡು ಮಗುವಿಗಾಗಿ ಹರಕೆ ಹೊತ್ತರು. ಮನೆಯಲ್ಲಿ ವಿಶೇಷ ಪೂಜೆಗಳನ್ನು ನೆರವೇರಿಸಿದರು. ಶ್ರೀ ಆದಿಚುಂಚನಗಿರಿಗೆ ಹಲವು ಬಾರಿ ಯಾತ್ರೆಗಳನ್ನು ಮಾಡಿದರು. ಇದರಿಂದ ಗಂಗಾಧರೇಶ್ವರನು ಪ್ರಸನ್ನನಾದನು. ದೇವನೊಲಿದರೆ ಯಾವುದು ತಾನೆ ಅಸಾಧ್ಯ? ಶ್ರೀಮತಿ ಬೋರಮ್ಮನವರು ಗರ್ಭವತಿಯಾದರು. ಇದನ್ನು ತಿಳಿದು ಮನೆಯವರಿಗೆ ಮಾತ್ರವಲ್ಲ ಇಡೀ ಊರಿಗೇ ಹರ್ಷವಾಯಿತು. ಗರ್ಭಿಣಿಯಾದ ಇವರಿಗೆ ದೇವಾಲಯಗಳಿಗೆ ಹೋಗಬೇಕು. ಸಾಧು ಸಂತರನ್ನು ಸಂದರ್ಶಿಸಬೇಕು, ದಾನಧರ್ಮಗಳನ್ನು ಮಾಡಬೇಕೆಂಬ ಬಯಕೆ ಉಂಟಾಯಿತು. ಮನೆಯವರು ಇವರ ಎಲ್ಲಾ ಬಯಕೆಗಳನ್ನೂ ನಡೆಸಿಕೊಟ್ಟರು. ಗಂಗಾಧರೇಶ್ವರನು ತನ್ನ ಬಳಿ ನಿಂತು ಹಸನ್ಮುಖಿಯಾಗಿ ಆಶೀರ್ವದಿಸಿದಂತೆ, ದಿವ್ಯ ಕಳೆಯೊಂದು ತನ್ನೊಳಕ್ಕೆ ಪ್ರವೇಶಿಸಿದಂತೆ ಶ್ರೀಮತಿ ಬೋರಮ್ಮನವರು ಆಗಾಗ ಕನಸು ಕಾಣುತ್ತಿದ್ದರು. ನವಮಾಸಗಳು ತುಂಬಿದವು; ಎಲ್ಲರಿಗೂ ಪುತ್ರರತ್ನವನ್ನು ನೋಡುವ

ಕಾತುರ; ಆ ದಿನ ಯಾರೂ ಮನೆಬಿಟ್ಟು ಕದಲಲಿಲ್ಲ. ಲೋಕವನ್ನು ಬೆಳಗಿಸಲು ಸೂರ್ಯೋದಯ ಸಮೀಪಿಸಿತು. ಅದು ಖಗಮೃಗಾದಿಗಳೆಲ್ಲ ನವಚೈತನ್ಯದಿಂದ ಮೈಕೊಡವಿ ಮೇಲೇಳುವ ಕಾಲ; ಅಜ್ಞಾನಾಂಧಕಾರದಲ್ಲಿ ಮುಳುಗಿ, ದುಃಖ ದಾರಿದ್ರ್ಯಗಳಿಂದ ನೊಂದ ಮಾನವ ಕೋಟಿಗೆ ಸನ್ಮಾರ್ಗವನ್ನು ತೋರಿಸುವ ವಿಭೂತಿಪುರುಷನು ಧರೆಗಿಳಿಯುವ ಕಾಲ, ದಿನಾಂಕ ೧೮-೧-೧೯೪೫ ನೇ ಗುರುವಾರ ಬೆಳಗಿನ ಜಾವ ೪.೪೪ ಗಂಟೆಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಕಾರಣಿಕ ಪುರುಷನಾಗುವ ಗಂಡುಮಗುವಿಗೆ ಬೋರಮ್ಮನವರು ಜನ್ಮಕೊಟ್ಟರು. ಆ ಸಮಯದಲ್ಲಿ ಹೂ ಚೆಲ್ಲಿದಂತೆ ಮಳೆಯಾಯಿತು. ಸೂರ್ಯನ ಹೊಂಗಿರಣಗಳು, ಧರೆಯ ಮೇಲೆ ಚೆಲ್ಲಿದವು, ತರುಲತೆಗಳ ವಿಕಸಿತ ಕುಸುಮಗಳ ಪರಿಮಳ ಹೊತ್ತ ಮಂದಮಾರುತ ಎಲ್ಲೆಡೆ ಸುಳಿಯಿತು; ಹರ್ಷದಿಂದ ನಿಂತ ಸಸ್ಯವರ್ಗದಿಂದ ಭೂಮಿ ಪುಳಕಿತವಾಯಿತು. ಗಂಡುಮಗು ಜನಿಸಿದ ಸುದ್ದಿ ಕೇಳಿ ಮನೆಯ ಮುಂದೆ ಜನರ ಜಾತ್ರೆ ಸೇರಿತು; ಮನೆಯಿಂದ ಹರ್ಷ ಹೊನಲಾಗಿ ಹರಿಯಿತು. ಮಗುವು ಜನಿಸಿದ ಕೆಲವೇ ನಿಮಿಷಗಳಲ್ಲಿ ಹೆಂಗಸರು ಉಲ್ಲಾಸದಿಂದ ಮಗುವನ್ನು ತಂದು ತಾತನವರಾದ ತಿಮ್ಮೇಗೌಡರಿಗೆ ತೋರಿಸಿದರು. ಜ್ಞಾನಿಗಳಾದ ತಿಮ್ಮೇಗೌಡರು ದುಂಡಗೆ ಮುದ್ದಾಗಿದ್ದ ಮಗುವಿನ ಸುಂದರ ಮುಖದ ದಿವ್ಯ ತೇಜಸ್ಸನ್ನು ಗಮನಿಸಿ ಯಾವ ಪಂಚಾಂಗವನ್ನೂ ನೋಡದೆ 'ಇವರು ಮಠಾಧಿಪತಿಗಳಾಗುತ್ತಾರೆ; ಜಗದ್ಗುರುಗಳಾಗುತ್ತಾರೆ' ಎಂದು ಹೇಳಿದರು. ಇದೇ ಸಮಯದಲ್ಲಿ ತೌರುಮನೆಯಲ್ಲಿಯೂ ಮತ್ತೊಂದು ಮಗುವಿನ ಜನನವಾಗಿದ್ದುದರಿಂದ ಶ್ರೀಮತಿ ಬೋರಮ್ಮನವರನ್ನು ತೌರುಮನೆಗೆ ಕರೆದುಕೊಂಡು ಹೋಗಿರಲಿಲ್ಲ. ಆದುದರಿಂದ ಶ್ರೀ ಆದಿಚುಂಚನಗಿರಿಯ ಕ್ಷೇತ್ರಪಾಲನಾದ ಶ್ರೀ ಭೈರವ ದೇವಾಲಯವಿರುವ ತಂದೆಯ ಮನೆಯಲ್ಲಿಯೇ ಈ ಮಗುವಿನ ಜನನವಾದುದು ಒಂದು ಸುಯೋಗ. ಸಂಪ್ರದಾಯದಂತೆ ಸೂತಕ ಕಳೆದ ಮೇಲೆ ಶ್ರೀ ಗಂಗಾಧರೇಶ್ವರನ



ತಂದೆ ಚಿಕ್ಕಲಿಂಗಪ್ಪ



ತಾಯಿ ಬೋರಮ್ಮ

ಅನುಗ್ರಹದಿಂದ ಜನಿಸಿದ ಈ ಮಗುವಿಗೆ ಗಂಗಾಧರನೆಂದೇ ನಾಮಕರಣ ಮಾಡಿದರು. ಈ ಹೆಸರು ಮಗುವಿನ ಬೆಳವಣಿಗೆಯ ಮೇಲೆ ಹೆಚ್ಚು ಪ್ರಭಾವ ಬೀರಿತು. ಮಗು ತೊಟ್ಟಿಲಲ್ಲಿ ಮಲಗಿದ್ದಾಗ ಪ್ರಶಾಂತವಾಗಿ ಆಡುತ್ತಿತ್ತು. ಇದ್ದಕ್ಕಿದ್ದ ಹಾಗೆ ನಗುತ್ತಿತ್ತು. ಮಗುವಿನ ಮುಖದಿಂದ ಅನಿರ್ವಚನೀಯ ಕಾಂತಿ ಹೊರ ಹರಿಯುತ್ತಿದ್ದಿತು. ಸಂಬಂಧಿಕರ ಒಂದು ಹುಡುಗಿ ತೊಟ್ಟಲು ತೂಗುತ್ತಿದ್ದಿತು. ಅವಳು ತೂಗಿದಾಗ ಮಗು ಸುಮ್ಮನೆ ಆಡುತ್ತಿದ್ದಿತು. ಬೇರೆಯವರು ತೂಗಿದರೆ ಅಳುತ್ತಿದ್ದಿತು. ಆ ಹುಡುಗಿ ತನ್ನ ಮನೆಗೆ ಹೋದಮೇಲೆ ತೂಗಲು ಅಂತಹ ಮತ್ತೊಬ್ಬ ಹುಡುಗಿಯನ್ನೆ ಹುಡುಕಬೇಕಾಯಿತು. ಒಂದು ದಿನ ಒಬ್ಬ ಮೌನಿಯಾದ ಸಾಧು ಮನೆಗೆ ಬಂದನು. ಮಗುವಿನ ದೈವಲೀಲೆಯನ್ನು ಕಂಡು ಅವನು ಸಂಜ್ಞೆಗಳಿಂದಲೇ ಈ ಮಗು ಮುಂದೆ ಮಹಾಪುರುಷನಾಗುವನೆಂದು ತಿಳಿಸಿ ಭಿಕ್ಷೆಗೂ ಕಾಯದೆ ಹೊರಟು ಹೋದನು. ಇದನ್ನು ಕಂಡು ಮನೆಯಲ್ಲಿದ್ದವರಿಗೆ ಪರಮಾಶ್ಚರ್ಯವಾಯಿತು. ಗ್ರಾಮದ ತಾಯಂದಿರಿಗೆ ಆ ಮಗುವನ್ನು ನೋಡುವ ಎತ್ತಿಕೊಳ್ಳುವ ಮತ್ತು ಆಡಿಸುವ ಹಂಬಲ ಬಹಳ. ವಿರಾಮ ದೊರೆತಾಗಲೆಲ್ಲಾ ಅವರು ಸಾಲುಗಟ್ಟಿ ಬರುತ್ತಿದ್ದರು. ಇವರ ಕೈಗಳೇ ಮಗುವಿಗೆ ತೊಟ್ಟಿಲಾಯಿತು. ಕ್ರಮವಾಗಿ ಮಗು ಬೆಳೆದು ವರ್ಷ ತುಂಬಿ ಅಂಬೆಗಾಲಿಟ್ಟು ಚಲಿಸುವಂತಾಯಿತು. ಈ ಆನಂದಕಂದನನ್ನು ಎಷ್ಟು ನೋಡಿದರೂ. ಎಷ್ಟು ಮುದ್ದಾಡಿದರೂ ಜನರ ತೃಪ್ತಿ ಪೂರ್ಣವಾಗುತ್ತಿರಲಿಲ್ಲ. ಹೀಗೆ ಗ್ರಾಮದ ಭಾಗ್ಯವಾಗಿ ಬೆಳೆಯುತ್ತಿದ್ದ ಮಗುವಿಗೆ ಐದು ವರ್ಷಗಳು ತುಂಬಿದವು.

ತಾತನವರಾದ ತಿಮ್ಮೇಗೌಡರ ಹತ್ತಿರವೇ ಬಾಲಕನಾದ ಗಂಗಾಧರನು ಹೆಚ್ಚುಕಾಲ ಕಳೆಯುತ್ತಿದ್ದನು; ತಾತನ ನಡೆನುಡಿಗಳನ್ನು ಗಮನಿಸುತ್ತಿದ್ದನು. ತಾತನವರಾದ ತಿಮ್ಮೇಗೌಡರ ಹತ್ತಿರವೇ ಬಾಲಕನಾದ ಗಂಗಾಧರನು ಹೆಚ್ಚುಕಾಲ ಕಳೆಯುತ್ತಿದ್ದನು; ತಾತನ ನಡೆನುಡಿಗಳನ್ನು ಗಮನಿಸುತ್ತಿದ್ದನು. ತಾತನ ಆದರ್ಶ ಗುಣಗಳೆಲ್ಲಾ ಗಂಗಾಧರನಲ್ಲಿ ಪ್ರತಿಬಿಂಬಿಸಿದವು. ಗಂಗಾಧರನಿಗೆ ಐದು ವರ್ಷಗಳು ತುಂಬಿದುದನ್ನು ಕಂಡು ಇನ್ನು ಇದು ಪಾಠ ಶಾಲೆಗೆ ಕಳುಹಿಸುವ ಸಮಯವೆಂದರಿತ ಶ್ರೀ ತಿಮ್ಮೇಗೌಡರು ಬಾನಂದೂರಿನಲ್ಲಿಯೆ ಇದ್ದ ಪ್ರಾಥಮಿಕ ಪಾಠಶಾಲೆಗೆ ಶುಭ ದಿನದಲ್ಲಿ ಸೇರಿಸಿದರು. ಈವರೆಗೆ ಸಪ್ಪೆಯಾಗಿದ್ದ ಪಾಠಶಾಲೆಗೆ ಹೊಸ ಕಳೆ ಬಂದಿತು; ವಿದ್ಯಾರ್ಥಿಗಳ ಸಂಖ್ಯೆ ಬೆಳೆಯಿತು; ಪಾಠಶಾಲೆಗೆ ಬಂದು ಹೋಗುವ ತಂದೆ-ತಾಯಿಗಳ ಸಂಖ್ಯೆಯೂ ಹೆಚ್ಚಾಯಿತು. ಪಾಠಶಾಲೆಯು ಗ್ರಾಮದ ಸಕಲ ಕಾರ್ಯಗಳ ಕೇಂದ್ರವಾಯಿತು. ಅಕ್ಕಪಕ್ಕ ಗ್ರಾಮಗಳ ಮಕ್ಕಳು ಈ ಶಾಲೆಗೆ ಬಂದು ಸೇರಿದರು. ಬೋಧಿಸುವ ಅಧ್ಯಾಪಕರ ಉತ್ಸಾಹವೂ ಅಧಿಕವಾಯಿತು.

ಗಂಗಾಧರಯ್ಯನು ಪಾಠಶಾಲೆಯ ಅಧ್ಯಾಪಕರ ಕಣ್ಮಣಿಯಾಗಿ, ಎಲ್ಲಾ ವಿದ್ಯಾರ್ಥಿಗಳ ಮಿತ್ರನಾಗಿ, ಆಟ-ಪಾಠಗಳಲ್ಲಿ ಆದರ್ಶ ವ್ಯಕ್ತಿಯಾಗಿ ತನ್ನ ಅಧ್ಯಯನದಲ್ಲಿ ತೊಡಗಿದನು. ಬೆರಳನ್ನು ತೋರಿಸಿದರೆ ಹಸ್ತವನ್ನು ನುಂಗುವ ಇವನ ಗ್ರಹಣ ಶಕ್ತಿಯನ್ನು

ಕಂಡು ಉಪಾಧ್ಯಾಯರು ಬೆರಗಾದರು. ಗಂಗಾಧರಯ್ಯನಿಗೆ ಮನೆಯಲ್ಲಿ ತಾತನೇ ಪ್ರಥಮ ಗುರು. ಅವನು ತಾತನಿಂದ ಲೌಕಿಕ, ಆಧ್ಯಾತ್ಮಿಕ, ಜ್ಯೋತಿಷಿಕ, ವೈದ್ಯಕೀಯ ವಿಚಾರಗಳನ್ನು ಆಗಲೇ ಸಾಕಷ್ಟು ಸಂಗ್ರಹಿಸಿದ್ದನು. ಇವನ ನಡೆನುಡಿಗಳಲ್ಲಿ ಗಾಂಭೀರ್ಯ ತುಂಬಿದ್ದಿತು. ಬಾಲಕನಾಗಿದ್ದರೂ ಇವನೊಡನೆ ಯಾರೂ ಹಗುರವಾಗಿ ನಡೆದುಕೊಳ್ಳುತ್ತಿರಲಿಲ್ಲ. ಮೌನವು ಇವನ ಸಹಜಗುಣ. ಒಮ್ಮೊಮ್ಮೆ ಈ ಚಿಕ್ಕ ಬಾಲಕನು ಕೇಳುತ್ತಿದ್ದ ಜಟಿಲ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಉಪಾಧ್ಯಾಯರು ತಬ್ಬಿಬ್ಬಾಗುತ್ತಿದ್ದರು. ಈತನ ಮನೋವೇಗ ಮತ್ತು ಚಿಂತನದಾಳ ಮಿಗಿಲಾದವು. ಪೂರ್ವ ಜನ್ಮದ ಜಾಗ್ರತ ಸಂಸ್ಕಾರದ ಬುನಾದಿಯ ಮೇಲೆ ನಿಂತ ಇವನ ಜ್ಞಾನಪಿಪಾಸೆಯನ್ನು ಪೂರೈಸಲು ಯಾರಿಗೆ ತಾನೆ ಸಾಧ್ಯ?

ಬಿಡದಿಯಿಂದ ಬಾನಂದೂರ ಮೂಲಕ ಹೆಗಡೆ ಕೆರೆಗೆ ಹೋಗಲು ಗಾಡಿ ರಸ್ತೆ ಇದೆ. ಗ್ರಾಮಕ್ಕೆ ಸಮೀಪವಾಗಿ ಗಾಡಿ ರಸ್ತೆಯ ಪಕ್ಕದಲ್ಲಿ ತಿಳಿ ನೀರಿನ ಕೆರೆ ಇದೆ. ಇದನ್ನು ಮಗೆಕೆರೆ ಎಂದು ಕರೆಯುತ್ತಾರೆ. ಜನರು ಇದರ ತಿಳಿನೀರನ್ನು ಕುಡಿಯಲು ಮಣ್ಣಿನ ಮಗೆಗಳಲ್ಲಿ ಮಗೆದುಕೊಳ್ಳುತ್ತಿದ್ದುದರಿಂದ ಇದಕ್ಕೆ ಪ್ರಾಯಶಃ ಮಗೆಕೆರೆಯೆಂಬ ಹೆಸರು ಬಂದಿರಬೇಕು. ಕೆರೆಯ ಅಂಗಳಕ್ಕೆ ಸೇರಿದಂತೆ ರಸ್ತೆಯ ಪಕ್ಕದಲ್ಲಿ ಒಂದು ಇಪ್ಪೆಯ ಮರವಿದೆ. ಆ ಹೆಮ್ಮರಕ್ಕೆ ಸುತ್ತಲೂ ಕಟ್ಟೆಯನ್ನು ಕಟ್ಟಿ ಅದರ ಮೇಲೆ ಕಲ್ಲಿನ ಚಪ್ಪಡಿಗಳನ್ನು ಹಾಸಲಾಗಿದೆ. ಈ ಕಟ್ಟೆಯ ಮೇಲೆ ದೇವರನ್ನು ಕೂರಿಸಿ ಗ್ರಾಮಸ್ಥರೆಲ್ಲರೂ ವಿಜೃಂಭಣೆಯಿಂದ ಪೂಜಿಸುವ ಸಂಪ್ರದಾಯ ಹಿಂದಿನಿಂದಲೂ ನಡೆದು ಬಂದಿದೆ. ಗಂಗಾಧರಯ್ಯನು ಕೆರೆಯ ಹಿಂದಿರುವ ಮಾವಿನ ತೋಪಿನಲ್ಲಿ ದನಕರುಗಳನ್ನು ಮೇಯಿಸುತ್ತಿದ್ದನು. ಅವುಗಳಿಗೆ ಇವನನ್ನು ಕಂಡರೆ ಬಹಳ ಅಕ್ಕರೆ. ಇವನು ಮರದ ನೆರಳಿನಲ್ಲಿ ಕುಳಿತಾಗ ಅವು ಬಂದು ಇವನ ಸುತ್ತಲೂ ಮಲಗಿ ಮೆಲಕು ಹಾಕುತ್ತಿದ್ದವು. ಆಗ ಅವನು ಕೊಳಲಿಲ್ಲದ ಗೋಪಾಲಕೃಷ್ಣನಂತೆ ತೋರುತ್ತಿದ್ದನು. ವಿರಾಮ ಸಮಯದಲ್ಲಿ ಹುಡುಗರು ಇಪ್ಪೆಯ ಮರದ ಕೆಳಗೆ ಆಟಕ್ಕೆ ಸೇರುತ್ತಿದ್ದರು. ಗಂಗಾಧರಯ್ಯನಿಗೆ ಆಟದಲ್ಲಿ ಆಸಕ್ತಿ ಕಡಮೆ. ಮೌನವಾಗಿ ಅವ್ಯಕ್ತ ಚಿಂತನೆಯಲ್ಲಿ ತೊಡುಗುವುದು ಅವನ ಸ್ವಭಾವ. ಚಿಕ್ಕ ಬಾಲಕನಾಗಿದ್ದಾಗಲೇ ಇಪ್ಪೆ ಮರದ ಕಟ್ಟೆಯ ಮೇಲೆ ಕುಳಿತು ಧ್ಯಾನದಲ್ಲಿ ಮೈಮರೆಯುತ್ತಿದ್ದನು. ಇವನ ಸ್ವಭಾವವನ್ನು ಕಂಡ ಸಂಗಡಿಗರಿಗೆ ಆಶ್ಚರ್ಯವಾಗುತ್ತಿತ್ತು. ಇವನ ರೀತಿ ನೀತಿಗಳು ಹಿರಿಯರಿಗೂ ಅರ್ಥವಾಗುತ್ತಿರಲಿಲ್ಲ. ಜಮೀನಿನಿಂದ ಹಿಂತಿರುಗುವಾಗ ಅತ್ತಿತ್ತ ನೋಡದೆ ಮೌನವಾಗಿ, ನೇರವಾಗಿ ತನ್ನ ಮನೆಗೆ ಹೋಗುತ್ತಿದ್ದನು. ಹೆಚ್ಚಾಗಿ ಇತರರೊಡನೆ ಬೆರೆಯುತ್ತಿರಲಿಲ್ಲ. ಗ್ರಾಮದವರಿಗೆ ಈ ಹುಡುಗನ ವಿಚಾರ ಬಿಡಿಸಲಾಗದ ಒಂದು ಒಗಟಾಯಿತು. ೯ ವರ್ಷ ತುಂಬುವ ವೇಳೆಗೆ ಇವನ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಯಿತು. ವಿದ್ಯಾಭ್ಯಾಸವನ್ನು ಪರಸ್ಥಳಗಳಲ್ಲಿ ಮುಂದುವರಿಸಿದ ನಂತರವೂ ರಜಾ ದಿನಗಳಲ್ಲಿ ಊರಿಗೆ ಬಂದಾಗ ತನ್ನ ಮಿತ್ರರೊಡನೆ ಬೆರೆತು ಅದೇ ಇಪ್ಪೆಯ ಕಟ್ಟೆ ಮೇಲೆ ಕುಳಿತು 'ಜನನ ಮರಣಗಳೆಂದರೇನು? ಆತ್ಮವುಂಟೇ? ಇದ್ದರೆ ಜನನಕ್ಕೆ

ಹಿಂದೆ, ಮರಣದ ನಂತರ ಆತ್ಮನ ಸ್ಥಿತಿ ಹೇಗಿರುತ್ತದೆ? ಸ್ವರ್ಗನರಕಗಳುಂಟೆ? ಲೋಕದಲ್ಲಿ ಏತಕ್ಕೆ ಅಧಿಕವಾಗಿ ದುಃಖವೇ ತುಂಬಿದೆ? ಯಾವ ಪ್ರಾಣಿಯು ಸ್ಥಿರವಾಗಿ ಉಳಿಯುವುದಿಲ್ಲವಲ್ಲಾ ಏಕೆ? ಸತ್ತು ಎಲ್ಲಿಗೆ ಹೋಗುತ್ತಾರೆ? ಕರ್ಮವೆಂದು ಹೇಳುತ್ತಾರಲ್ಲಾ ಅದು ಏನು? ಈ ದುಃಖದಿಂದ ಬಿಡುಗಡೆಯುಂಟೆ? ಉಂಟಾದರೆ ಅದು ಹೇಗೆ ಸಾಧ್ಯ?'' ಮುಂತಾಗಿ ಚರ್ಚಿಸುತ್ತಿದ್ದನು. ಈ ಇಪ್ಪೇ ಮರದ ಕಟ್ಟೆಯೇ ಗಂಗಾಧರಯ್ಯನ ಆತ್ಮಾನ್ವೇಷಣೆಯ ಸ್ಥಾನವಾಯಿತು. ಸುಂದರ ಪ್ರಕೃತಿಯ ನಡುವೆ ಪ್ರಶಾಂತ ಪ್ರದೇಶದಲ್ಲಿ ಬಾನೆತ್ತರ ಬೆಳೆದಿದ್ದ ಈ ಇಪ್ಪೇ ಮರದ ತಂಪಾದ ಕಟ್ಟೆಯು ಗಂಗಾಧರಯ್ಯನು ಅಂತರ್ಮುಖಿಯಾಗಲು ನಿಮಿತ್ತವಾಯಿತು. ಅವನು ತನ್ನ ಪ್ರಶ್ನೆಗಳನ್ನು ಮಿತ್ರರ ಮುಂದೆ ಇಡುತ್ತಿದ್ದ; ತನ್ನ ಅನುಭವವನ್ನು ತಿಳಿಸುತ್ತಿರಲಿಲ್ಲ. ತನ್ನ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ದೊರೆತು. ಅನುಭವ ಪಕ್ವಗೊಂಡು, ಯೋಗ್ಯ ಸಮಯ ದೊರೆತ ಮೇಲೆ ತನ್ನ ಅನುಭವವನ್ನು ತಿಳಿಸಿದರೆ ಉತ್ತಮ ಪರಿಣಾಮವುಂಟಾಗುತ್ತದೆ; ಇಲ್ಲವಾದರೆ ತನ್ನ ಪರಿಶ್ರಮ ವ್ಯರ್ಥವೆಂಬ ಅರಿವು ಅವನಿಗಿದ್ದಿತು.

ಚಿಕ್ಕಲಿಂಗಪ್ಪನವರು ತಮ್ಮ ದೊಡ್ಡ ಮಗನಾದ ಪುಟ್ಟಸ್ವಾಮಯ್ಯನಿಗೆ ಬೇಸಾಯವನ್ನು ವಹಿಸಿ, ಕಿರಿಯ ಮಗನಾದ ಮರಿಸ್ವಾಮಯ್ಯನನ್ನು ವ್ಯಾಪಾರದಲ್ಲಿ ತೊಡಗಿಸಿ, ಗಂಗಾಧರೇಶ್ವರನ ವರಪುತ್ರನಾದ ನಡುಮಗ ಗಂಗಾಧರಯ್ಯನನ್ನು ಓದಿಸಲು ಇಚ್ಛಿಸಿದರು. ಅಣ್ಣ-ತಮ್ಮಂದಿರ ಇಚ್ಛೆಯೂ ಇದೇ ಆಗಿದ್ದಿತು. ಈ ತೀರ್ಮಾನಕ್ಕೆ ಇವನ ರೀತಿ-ನೀತಿಗಳೆ ಕಾರಣವಾಗಿರಬೇಕು. ಇವನ ತಾತನವರಾದ ತಿಮ್ಮೇಗೌಡರು 'ಬನ್ನಿ ಗುರುಗಳೆ' ಎಂದೆ ಯಾವಾಗಲೂ ಕರೆಯುತ್ತಿದ್ದರು. ಈ ಬಾಲಕನ ಅಂತರಂಗ ಬಾಲ್ಯದಲ್ಲಿಯೇ ಭಗವಂತನ ಕಡೆಗೆ ತಿರುಗಲು ಇವನ ತಾತನವರೇ ಬಹಳ ಮಟ್ಟಿಗೆ ಕಾರಣರಾದರು.

ಬಾನಂದೂರಿನಲ್ಲಿ ಮಾಧ್ಯಮಿಕ ಶಾಲೆ ಇರಲಿಲ್ಲ. ಆದ್ದರಿಂದ ಗಂಗಾಧರಯ್ಯನು ವಿದ್ಯಾಭ್ಯಾಸವನ್ನು ಮುಂದುವರಿಸಲು ತನ್ನ ೧೦ ನೇ ವಯಸ್ಸಿನಲ್ಲಿ ತನ್ನೂರಿಗೆ ಹತ್ತಿರವಿದ್ದ ಬಿಡದಿಯ ಮಾಧ್ಯಮಿಕ ಶಾಲೆಗೆ ಸೇರಿದನು. ಸುಮಾರು ಒಂದು ವರ್ಷ ಕಾಲ ಬಾನಂದೂರಿನಿಂದ ನಡೆದುಕೊಂಡು ಹೋಗಿ ವಿದ್ಯಾಭ್ಯಾಸ ಮಾಡಿದನು. ಹುಡುಗನು ಮಳೆಗಾಳಿ, ಬಿಸಿಲುಗಳಲ್ಲಿ ದೀರ್ಘಕಾಲ ಓಡಾಡಿಕೊಂಡು ಓದುವುದು ಕಷ್ಟವೆಂದೂ, ಓದಲೂ ಸಾಕಷ್ಟು ಸಮಯ ದೊರೆಯದೆಂದೂ, ತಂದೆ ತಾಯಿಗಳು ಭಾವಿಸಿದರು. ಬಿಡದಿ ಪಾಠಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಮರಿಗಂಗಪ್ಪನವರು ಸಾತ್ವಿಕರೂ, ಉದಾರಿಗಳೂ ಉತ್ತಮ ಅಧ್ಯಾಪಕರೂ ಆಗಿದ್ದು ಚಿಕ್ಕಲಿಂಗಪ್ಪನವರಿಗೆ ಆಪ್ತರಾಗಿದ್ದರು. ಆದ್ದರಿಂದ ಚಿಕ್ಕಲಿಂಗಪ್ಪನವರು ತಮ್ಮ ಬಾಲಕನನ್ನು ವೀರಶೈವರಾದ ಮರಿಗಂಗಪ್ಪನವರ ಮನೆಯಲ್ಲಿ ಬಿಟ್ಟರು. ಗಂಗಾಧರಯ್ಯನು ಮೂರು ವರ್ಷಗಳ ಕಾಲ ಅವರ ಮನೆಯಲ್ಲಿ

ಆ ಮನೆಯವರಲ್ಲೊಬ್ಬನಂತೆ ಯಾವ ಭೇದ ಭಾವವೂ ಇಲ್ಲದೆ ಓದಿಕೊಂಡಿದ್ದನು. ಮರಿಗಂಗಪ್ಪನವರ ಸಹೋದರರಾದ ಯಜಮಾನ್ ಜಯಶೆಟ್ಟರು ಉಪಾಧ್ಯಾಯರಾಗಿದ್ದರು. ಇದೊಂದು ಉಪಾಧ್ಯಾಯರ ಮನೆತನ, ವಿದ್ಯಾರ್ಥಿಗಳ ಸಂಕಷ್ಟಗಳನ್ನು ವಿಚಾರಿಸಿ ಅವರಿಗೆ ಸಾಧ್ಯವಾದ ನೆರವು ನೀಡುವುದು ಜಯಶೆಟ್ಟರ ಸ್ವಭಾವವು. ಗಂಗಾಧರಯ್ಯನು ಶುಭ್ರತೆ, ಮಾತುಗಾರಿಕೆಯಲ್ಲಿ ಎಲ್ಲಾ ಮಕ್ಕಳಿಗಿಂತಲೂ ಮಿಗಿಲಾದ ಆಸಕ್ತಿಯನ್ನು ಹೊಂದಿದ್ದನು. ಗುರುಗಳು ಹೇಳಿಕೊಟ್ಟುದನ್ನು ಅರಗಿಸಿಕೊಂಡು, ಅವನು ತನ್ನ ಸಹಪಾಠಿಗಳಿಗೂ ಅದನ್ನು ಹೇಳಿಕೊಡುತ್ತಿದ್ದನು. ಜಯಶೆಟ್ಟರ ಮನೆಯು ಹಲವಾರು ವಿದ್ಯಾರ್ಥಿಗಳಿಂದ ಕೂಡಿ ಒಂದು ಮಾದರಿ ಪಾಠಶಾಲೆಯಂತಿದ್ದಿತು. ಜಯಶೆಟ್ಟರು ಗಂಗಾಧರಯ್ಯನನ್ನು ಈ ವಿದ್ಯಾರ್ಥಿಗಳಿಗೆ ನಾಯಕನನ್ನಾಗಿ ಮಾಡಿದರು. ತುಂಟತನವನ್ನು ನಿಗ್ರಹಿಸಿ ಯೋಗ್ಯ ಮಾರ್ಗದಲ್ಲಿ ನಿಯಂತ್ರಿಸಿ ಎಲ್ಲರನ್ನೂ ಸಂಘಟಿಸಿ ಮುನ್ನಡೆಸುವ ಶಕ್ತಿಯು ಗಂಗಾಧರಯ್ಯನಲ್ಲಿ ಬಾಲ್ಯದಲ್ಲಿಯೇ ಇದ್ದಿತು. ಇವನ ಮುಂದಿನ ಲೋಕ ಸಂಗ್ರಹದ ಸಾಮರ್ಥ್ಯವು ಇದೇ ಅಂಕುರ ರೂಪವಾಗಿ ತೋರುತ್ತಿದ್ದಿತು. ತುಂಟಾಟವು ಮಕ್ಕಳಿಗೆ ಸಹಜವಾದರೂ ಅವರು ಗಂಗಾಧರಯ್ಯನ ನಾಯಕತ್ವಕ್ಕೆ ತಲೆಬಾಗಿ ಅವನ ಮಾತನ್ನು ಸ್ವಲ್ಪವೂ ಉಲ್ಲಂಘಿಸುತ್ತಿರಲಿಲ್ಲ. ಅವರು ತಮಗೆ ಗೊತ್ತಾಗದ ಪಾಠವನ್ನು ಗಂಗಾಧರಯ್ಯನಿಂದ ಹೇಳಿಸಿಕೊಳ್ಳುತ್ತಿದ್ದರು. ಬಿಡದಿಯ ಮಾಧ್ಯಮಿಕ ಪಾಠ ಶಾಲೆಯಲ್ಲಿ ಗಂಗಾಧರಯ್ಯನ ಹತ್ತನೆಯ ವರ್ಷದಿಂದ ಹದಿನಾಲ್ಕನೆಯ ವರ್ಷದವರೆಗಿನ ನಾಲ್ಕು ವರ್ಷಗಳ ವಿದ್ಯಾಭ್ಯಾಸ ಮುಗಿಯಿತು. ಆನೇ ತರಗತಿಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣನಾಗಿದ್ದನು. ಆಗ ಪ್ರೌಢಶಾಲೆಯು ಬಿಡದಿಯಲ್ಲಿರಲಿಲ್ಲ. ಪ್ರೌಢಶಾಲೆಗೆ ಸೇರಲು ಬೇರೆ ಕಡೆಗೆ ಹೋಗಬೇಕಾಗಿದ್ದಿತು. ಆದ್ದರಿಂದ ಟಿ.ಸಿ. ಪಡೆಯಲು ಗಂಗಾಧರಯ್ಯನು ಪಾಠಶಾಲೆಯ ಮುಖ್ಯೋಪಾಧ್ಯಾಯರ ಕೊಠಡಿಗೆ ಹೋದನು. ಆಗ ಮುಖ್ಯೋಪಾಧ್ಯಯರು ಇವನನ್ನು ನೋಡಿ, ನೀನು ಈ ಪಾಠ ಶಾಲೆಯ ವಿದ್ಯಾರ್ಥಿಯೇ ಎಂದು ಆಶ್ಚರ್ಯದಿಂದ ಕೇಳಿದರು. ಎಂದೂ ತುಂಟಾಟ ಮಾಡದ ಗದ್ದಲ ಗಲಾಟೆಗಳಲ್ಲಿ ಭಾಗವಹಿಸದ, ಮೌನವಾಗಿ ತನ್ನ ಪಾಡಿಗೆ ತಾನು ಅಧ್ಯಯನದಲ್ಲಿ ನಿರತನಾಗಿದ್ದ ಗಂಗಾಧರಯ್ಯನು ನಾಲ್ಕು ವರ್ಷಗಳ ಕಾಲ ಆ ಪಾಠಶಾಲೆಯಲ್ಲಿದ್ದರೂ ಇರದಿದ್ದವನಂತೆ ತೋರಿದುದು ಆಶ್ಚರ್ಯ!

ಬಿಡದಿಯಲ್ಲಿ ಪ್ರೌಢಶಾಲೆ ಇರಲಿಲ್ಲ. ಮನೆಯ ಹಿರಿಯರು ಗಂಗಾಧರಯ್ಯನನ್ನು ರಾಮನಗರದಲ್ಲಿ ಓದಿಸುವುದೆಂದು ತೀರ್ಮಾನಿಸಿದರು. ಅದರಂತೆ ಅವನನ್ನು ರಾಮನಗರದ ಸರ್ಕಾರಿ ವಿವಿಧೋದ್ದೇಶ ಪ್ರೌಢಶಾಲೆಗೆ ಸೇರಿಸಲಾಯಿತು. ಊಟ ವಸತಿಗಳಿಗಾಗಿ, ಜೊತೆಗೊಬ್ಬನನ್ನು ಸೇರಿಸಿ ಒಂದು ರೂಂ ಅನ್ನು ಬಾಡಿಗೆಗೆ ತೆಗೆದುಕೊಳ್ಳಲಾಯಿತು. ಗಂಗಾಧರಯ್ಯನು ಅಡುಗೆ ಮಾಡಿ ಊಟ ಮಾಡಿಕೊಂಡು ಪಾಠಶಾಲೆಗೆ ಹೋಗುತ್ತಿದ್ದನು. ಹೊಸ ಊರು, ಹೊಸ ಶಾಲೆ, ಹೊಸ ಉಪಾಧ್ಯಾಯ ವರ್ಗ, ಹೊಸ ವಿದ್ಯಾರ್ಥಿ ವೃಂದ,

ಗಂಗಾಧರಯ್ಯನಲ್ಲಿ ಉತ್ಸಾಹವನ್ನು ಮೂಡಿಸಿದವು. ಹಿಂದೆ ಶ್ರೀರಾಮನು ಸೀತೆಯೊಡನೆ ಅಯೋಧ್ಯೆಗೆ ಪ್ರಯಾಣ ಮಾಡುವಾಗ ಒಂದು ದಿನ ಇಲ್ಲಿ ತಂಗಿದ್ದನಂತೆ. ಆದ್ದರಿಂದ ಈ ಊರಿಗೆ ರಾಮನಗರವೆಂಬ ಹೆಸರು ಬಂದಿತೆಂದು ಹೇಳುತ್ತಾರೆ. ಕ್ಲೋಸ್ ಎಂಬ ಆಂಗ್ಲ ಅಧಿಕಾರಿಯು ಬ್ರಿಟಿಷರ ಆಡಳಿತಕಾಲದಲ್ಲಿ ಇಲ್ಲಿ ನೆಲೆಸಿದ್ದುದರಿಂದ ಈ ಊರನ್ನು ಕ್ಲೋಸ್ ಪೇಟೆಯೆಂದು ಕರೆಯುತ್ತಿದ್ದರು. ಊರಿನ ಪಕ್ಕದಲ್ಲಿ ರಾಮದೇವರ ಬೆಟ್ಟವಿದೆ. ಅರ್ಕಾವತೀ ನದಿಯು ಊರಿನ ಪಕ್ಕದಲ್ಲಿ ಹರಿಯುತ್ತದೆ.

ಗಂಗಾಧರಯ್ಯನು ಪ್ರೌಢಶಾಲೆಯಲ್ಲಿ ಕನ್ನಡ ಇಂಗ್ಲಿಷ್ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಶಾಸ್ತ್ರಗಳನ್ನು ತೆಗೆದುಕೊಂಡು ಚೆನ್ನಾಗಿ ಅಧ್ಯಯನ ಮಾಡಿ, ಆ ವಿಷಯಗಳಲ್ಲಿ ಒಳ್ಳೆಯ ಜ್ಞಾನವನ್ನು ಸಂಪಾದಿಸಿದನು. ಫುಟ್‌ಪಾಲ್, ಬ್ಯಾಟ್‌ಮಿಟನ್, ಕೇರಂ, ಡ್ರಾಫ್ಟ್ ಮತ್ತು ಚೆಸ್ ಆಟಗಳಲ್ಲಿ ಅವನಿಗೆ ಬಹಳ ಆಸಕ್ತಿಯಿದ್ದಿತು. ಈ ಕ್ರೀಡೆಗಳಿಂದಾಗಿ ಬಹಳ ಮುಸಲ್ಮಾನ್ ವಿದ್ಯಾರ್ಥಿಗಳು ಅವರ ಆಪ್ತ ಗೆಳೆಯರಾದರು. ಎನ್.ಸಿ.ಸಿ ಸೇವಾದಳಗಳಿಗೆ ಸೇರಿದ್ದುದರಿಂದ ಗಂಗಾಧರಯ್ಯನಿಗೆ ದೇಶಸೇವೆ ಮತ್ತು ರಾಷ್ಟ್ರ ಪ್ರೇಮಗಳಲ್ಲಿ ಹೆಚ್ಚು ಆಸಕ್ತಿಯುಂಟಾಯಿತು. ಅವನಿಗೆ ಶಾಲೆಯಲ್ಲಿ ದೊರೆಯುತ್ತಿದ್ದ ಜ್ಞಾನಕ್ಕಿಂತ, ಧ್ಯಾನಪ್ರಧಾನವಾಗಿದ್ದಿತು, ಅದು ಅವನ ಪ್ರಕೃತಿ, ಬೆಟ್ಟದ ಪ್ರಶಾಂತವಾದ ತಪ್ಪಲು ಮತ್ತು ಜುಳು ಜುಳು, ಧ್ವನಿಗೈಯ್ಯುತ್ತಾ ಹರಿಯುವ, ಅರ್ಕಾವತೀ ನದಿಯ ಸುಂದರ ತಟಗಳು, ಸುತ್ತಣ ಗುಡ್ಡಗಾಡುಗಳ ಚೆಲುವು ಅವನನ್ನು ಆಕರ್ಷಿಸಿದವು. ಗಂಗಾಧರಯ್ಯನು ಬೆಟ್ಟದ ನಿರ್ಜನವಾದ ತಪ್ಪಲಿನಲ್ಲಿ ಸಂಜೆಹೊತ್ತು ಅಡ್ಡಾಡಿ ಇಷ್ಟವಾದ ಬಂಡೆಯೊಂದರ ಮೇಲೆ ಮೌನವಾಗಿ ಕುಳಿತು ಅಂತರ್ಮುಖಿಯಾಗುತ್ತಿದ್ದನು. ಅವನು ಎಷ್ಟೋ ದಿವಸ ರಾತ್ರಿ ಹನ್ನೆರಡು ಅಥವಾ ಒಂದು ಗಂಟೆಗೆ, ತನ್ನ ಕೊಠಡಿಗೆ ಬರುತ್ತಿದ್ದನು. ಇದರಿಂದ ಅವನ ಯೋಗ ಧ್ಯಾನಗಳು ಬಲಿತು. ಆತ್ಮಜ್ಞಾನ ಪಡೆಯಲು ಬೇಕಾದ, ಪೂರ್ವಸಿದ್ಧತೆಯು ಒಳಗೊಳಗೇ ವರ್ಧಿಸಿತು. ಅವನು ಶಾಲೆಯಲ್ಲಿ ವಿದ್ಯಾರ್ಥಿ; ಬೆಟ್ಟದ ತಪ್ಪಲಿನಲ್ಲಿ ಯೋಗಿ.

ಒಂದು ದಿನ ಇದ್ದಕ್ಕಿದ್ದ ಹಾಗೆ, ಒಂದು ದೊಡ್ಡ ಸರ್ಪ ಗಂಗಾಧರಯ್ಯನ ಕೊಠಡಿಗೆನುಗ್ಗಿ ಬಂದಿತು. ಅದು ಇಸ್ತ್ರಿ ಪೆಟ್ಟಿಗೆಗೆ ಸುತ್ತಿಕೊಂಡು ಸ್ವಲ್ಪ ದೂರ ಎಳೆದುಕೊಂಡು ಹೋಯಿತು. ಗಂಗಾಧರಯ್ಯನು ಕಿಟಕಿಯಲ್ಲಿ ಹತ್ತಿಕುಳಿತನು. ಸರ್ಪ ಕಾಣದಾಯಿತು. ಉದ್ದವಾದ ಕೋಲಿನಿಂದ ಮೂಲೆಯಲ್ಲಿದ್ದ ಇದ್ದಿಲು ಮೂಟೆಯನ್ನು ತಿವಿದನು. ಸರ್ಪವು ಕಾಣಿಸಲಿಲ್ಲ. ಕೊಠಡಿಯನ್ನೆಲ್ಲಾ ಶೋಧಿಸಿದನು. ಸರ್ಪವು ಸಿಗಲಿಲ್ಲ. ಧೈರ್ಯ ಮಾಡಿ ಕದವನ್ನು ತೆರೆದು ಹೊರಗಡೆ ನೋಡಿದರೆ, ಅಲ್ಲಿಯೂ ಸರ್ಪವು ಕಾಣಿಸಲಿಲ್ಲ, ಇದೊಂದು ಒಗಟಾಗಿಯೇ ಉಳಿಯಿತು.

ಒಂದು ಸಾರಿ, ಗಂಗಾಧರಯ್ಯನನ್ನು ಅವನ ಗೆಳೆಯನು ಸುಮಾರು ಮೂರು

ಮೈಲಿ ದೂರದ, ತನ್ನ ಊರಿಗೆ ಊಟಕ್ಕೆ ಆಹ್ವಾನಿಸಿದನು. ಮಿತ್ರನ ಕರೆಯನ್ನು ತಿರಸ್ಕರಿಸಲಾರದೆ, ಗಂಗಾಧರಯ್ಯನು ಒಪ್ಪಿಕೊಂಡನು. ಸಂಜೆ ಇಬ್ಬರೂ ಆ ಊರಿಗೆ ಹೋದರು. ಆದರಪೂರ್ವಕವಾದ ಸತ್ಕಾರ ದೊರೆಯಿತು. ರಾತ್ರಿಯೇ ಹಿಂದಿರುಗಲು ಗಂಗಾಧರಯ್ಯನು ನಿಶ್ಚಯಿಸಿದನು. ಆಗಲೇ ಬಹಳ ವೇಳೆಯಾಗಿದ್ದಿತು. ಕಗ್ಗತ್ತಲು ಕವಿದಿದ್ದಿತು. ಇಬ್ಬರೂ ರಾಮನಗರಕ್ಕೆ ಹೊರಟೇ ಬಿಟ್ಟರು. ದಾರಿಯಲ್ಲಿ ದಟ್ಟವಾಗಿ ಬೆಳೆದಿದ್ದ, ಹೆಮ್ಮರಗಳ ಒಂದು ತೋಪು ಇದ್ದಿತು. ಹಿಂದೆ ಅಲ್ಲಿ ಅನೇಕ ದುರ್ಘಟನೆಗಳು ಸಂಭವಿಸಿದ್ದವು. ಅಲ್ಲಿ ಪೀಡೆ ಪಿಶಾಚಿಗಳು, ವಾಸಿಸುತ್ತವೆಂದು, ಅವು ಕಾಟಕೊಡುತ್ತವೆಂದೂ ಜನರು ನಂಬಿದ್ದರು. ಈ ನಂಬಿಕೆಯು ಗಂಗಾಧರಯ್ಯನ ಗೆಳೆಯನ ಮನಸ್ಸಿನಲ್ಲಿ ತುಂಬಿದ್ದಿತು. ಮರದ ಹತ್ತಿರ ಬರುವ ವೇಳೆಗೆ ಸರಿಯಾಗಿ, ಬಿರುಗಾಳಿ ಬೀಸಿತು. ಬಯಲಿನ ನಡುವೆ ನಿಂತಿದ್ದ ತೋಪಿನ ಮರಗಳ ರೆಂಬೆಗಳೆಲ್ಲಾ ಭಯಂಕರ ಧ್ವನಿ ಮಾಡುತ್ತಾ, ತೂಗಾಡಿದವು. ಮೊದಲೇ ಕತ್ತಲು, ಜೊತೆಗೆ ಮುಗಿಲು ಮುಟ್ಟುವಂತೆ ಮೇಲೆದ್ದ ಧೂಳು. ಜೊತೆಯಲ್ಲಿದ್ದವನು ಜೋರಾಗಿ ಚೀರಿ ಕೆಳಗೆ ಬಿದ್ದನು. ಆವೇಳೆ, ನಿರ್ಜನ ಪ್ರದೇಶ, ಮುಸುಕಿದ ಕತ್ತಲೆ, ವ್ಯಾಪಿಸಿದ ಧೂಳು ಮತ್ತು ಚೀರಿ ಬಿದ್ದ ಜೊತೆಗಾರನನ್ನು ನೋಡಿ ಗಂಗಾಧರಯ್ಯನಿಗೆ, ಕ್ಷಣಕಾಲ ಏನು ಮಾಡಬೇಕೆಂಬುದು ತೋಚಲಿಲ್ಲ. ನಿರ್ಲಿಪ್ತ ಪ್ರಕೃತಿಯ ಅವನು ಹೆದರಲಿಲ್ಲ. ರಕ್ತಕಾರಿ ಪ್ರಜ್ಞೆ ಇಲ್ಲದೆ ಬಿದ್ದಿದ್ದ ಸ್ನೇಹಿತನನ್ನು ನೋಡಿದನು. ಅವನನ್ನು ರಾಮನಗರಕ್ಕೆ ಸಾಗಿಸುವುದು ಹೇಗೆಂಬ ಚಿಂತೆ ಮೂಡಿತು. ಅವನು ತನಗಿಂತ ದೊಡ್ಡವನು; ಜೊತೆಗೆ ದಡೂತಿ ಅಸಾಮಿ; ಹೊರುವುದೂ ಕಷ್ಟ. ಆದರೂ ಗಂಗಾಧರಯ್ಯನು, ಅವನನ್ನು ತನ್ನ ಬೆನ್ನಮೇಲೆ ಹೊತ್ತುಕೊಂಡು ರೂಮಿಗೆ ತಂದು ಮಲಗಿಸಿದನು. ಅವನ ಬಾಯಿತೊಳೆದು, ನೀರು ಚಿಮುಕಿಸಿ ಗಾಳಿ ಬೀಸಿದನು. ವೈದ್ಯನನ್ನು ಕರೆತಂದು ಚಿಕಿತ್ಸೆ ಮಾಡಿಸಿದನು. ಮನಸ್ಸು ಎಂತಹ ವಿಪತ್ತಿಗೆ ಕಾರಣವೆಂಬುದನ್ನು ಗಂಗಾಧರಯ್ಯನು ಈ ಘಟನೆಯಿಂದ ಚೆನ್ನಾಗಿ ಅರಿತುಕೊಂಡನು. ಹೆದರಿಕೆ ಇದ್ದವನಿಗೆ ಕತ್ತಲಲ್ಲಿ, ಒಂದು ಮೊಂಡು ಮರವೂ ಪಿಶಾಚಿಯಾಗಬಲ್ಲದು. ಒಳಗೆ ಹುದುಗಿರುವ ಹೆದರಿಕೆಯನ್ನು ಒಂದು ಸಣ್ಣ ಘಟನೆ ನೂರ್ಮಡಿಗೊಳಿಸುತ್ತದೆ. ಮೂಢ ನಂಬಿಕೆಯುಳ್ಳವರ ಪಾಡೇ ಹೀಗೆ.

ಎಸ್.ಎಸ್.ಎಲ್.ಸಿ ಪ್ರಸಿದ್ಧ ಪರೀಕ್ಷೆಯು ಸಮೀಪಿಸಿತು. ಅವರ ರಿ. ನಂಬರ್ ೮೮೨೧. ೧೯೬೩ ನೇ ಸಾಲಿನಲ್ಲಿ ಗಂಗಾಧರಯ್ಯನು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದನು. ಈ ವೇಳೆಗೆ ಹನ್ನೊಂದು ವರ್ಷಗಳ ವಿದ್ಯಾಭ್ಯಾಸ ಮುಗಿದು, ಗಂಗಾಧರಯ್ಯನ ವಯಸ್ಸು ಹದಿನಾರು ವರ್ಷ ತುಂಬಿತ್ತು. ಇದು ಪ್ರಾಯದ ಆರಂಭಸಮಯ; ಬಾಳಿನ ತಿರುವಿನ ಕಾಲ. ಈ ತಿರುವು ಬಹಳ ಮಟ್ಟಿಗೆ ಜೀವನ ಪರ್ಯಂತ ಉಳಿದುಕೊಳ್ಳುತ್ತದೆ. ಗಂಗಾಧರಯ್ಯನು ತನ್ನ ಅಧ್ಯಯನವನ್ನು ಮುಂದುವರಿಸಿ. ಪಿ.ಯು.ಸಿ. ಪರೀಕ್ಷೆಯನ್ನು ಮುಗಿಸಿದನು. ತರುವಾಯ ಕಾರಣಾಂತರದಿಂದ ಅವನು ತಾನು

ಓದಿದ ಪ್ರೌಢಶಾಲೆಯಲ್ಲಿ ೧೧-೧-೧೯೬೭ ರಿಂದ ೧೭-೭-೧೯೬೭ ರವರೆಗೆ ಎರಡನೇ ದರ್ಜೆಯ ಗುಮಾಸ್ತನಾಗಿ ಕೆಲಸ ಮಾಡಿದನು. ಇದರಿಂದ ಅವನಿಗೆ ಸ್ವಲ್ಪ ಆಡಳಿತದ ಅನುಭವವೂ ದೊರೆಯಿತು. ಗಂಗಾಧರಯ್ಯನು ಕೆಲಸದಿಂದ ಬಿಡುಗಡೆ ಹೊಂದಿ ಮನೆಯವರ ನೆರವಿಗೆ ನಿಂತನು. ಗುಮಾಸ್ತನ ಹುದ್ದೆಯಲ್ಲಿದ್ದಾಗ ಗಂಗಾಧರಯ್ಯನು, ಶ್ರೀ ಆದಿಚುಂಚನಗಿರಿ ಕ್ಷೇತ್ರದ ಶ್ರೀಗಳವರಿಗೆ ಒಂದು ಪತ್ರವನ್ನು ಬರೆದಿದ್ದನು:

ಓಂ ಶ್ರೀ ಸದ್ಗುರುವೇ ನಮಃ

ಸರ್ವಭಾಗ್ಯದಂತೆ, ಸದಾ ನನ್ನ ಮನದಿ ನೆಲೆಸಿರುವ ಆದಿಚುಂಚನಗಿರಿ ಭೈರವ ಮಠಾಧೀಶರವರ ಪಾದ ಕಮಲಗಳಿಗೆ ಗಾಳಿಯಿಂದೆರಗಿ ಬಂದಿದೆ, ಈ ನನ್ನ ಪತ್ರ ಕುಸುಮ. ಕೋಟಿ ಶಿಷ್ಯರಲ್ಲಿ ಅಲ್ಪನಾದ ಬಾನಂದೂರು ಸುಭೇದಾರ್ ಲಿಂಗೇಗೌಡರ ಎರಡನೆಯ ಮಗ ಚಿಕ್ಕಲಿಂಗಪ್ಪನ ಎರಡನೆಯ ಮಗ ಗಂಗಾಧರಯ್ಯನ ಹೃದಯಾರ್ಪಣೆ ತಮ್ಮ ಪಾದಗಳಿಗೆ.

ಜೀಯಾ, ತಾತಂದಿರ ಕಾಲದಿಂದಲೂ ತಮ್ಮ ಸೇವೆ ನಡೆಯುತ್ತಿರುವುದರಲ್ಲಿ ಯಾವ ಲೋಪವೂ ಇಲ್ಲದಿದ್ದರೂ, ಈ ಮರಿ ಸೇವಕನ ಆಶೆಯೊಂದಿದೆ. ನಾನು ಇನ್ನೂ ವಿದ್ಯಾರ್ಥಿಯ ದೆಸೆಯಲ್ಲಿರುವ ಪ್ರಯುಕ್ತ ತಮ್ಮ ಪಾದ ದರ್ಶನವೆನಗಿಲ್ಲ. ದೂರದಲ್ಲಿರುವ ನನಗೆ ನಿಮ್ಮ ಸುವರ್ಣಅಕ್ಷರಗಳಲ್ಲಿ ಬರೆದ ಎರಡು ಆಶೀರ್ವಾದ ನುಡಿ ದೊರೆತರೆ, ನಾನು ನಿಜವಾಗಿ ಧನ್ಯ. ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ನನ್ನ ಪಿ.ಯು.ಸಿ ಮುಗಿದ ನಂತರ ನಾನು ತಾತ್ಕಾಲಿಕವಾಗಿ ಹುದ್ದೆಯಲ್ಲಿದ್ದೇನೆ. ಮುಂದೆ ಜೂನ್‌ಗೆ ಬಿ.ಫಾರ್ಮ ಅಥವಾ ಬಿ.ಎಸ್ಸಿಗೆ ಸೇರುವ ಉದ್ದೇಶವಿದೆ. ಅಲ್ಲಿಯವರೆಗೆ ಉಳಿದಿರುವ ವೇಳೆಯನ್ನು ವ್ಯರ್ಥಗೊಳಿಸಬಾರದೆಂದು, ನಾನು ಓದಿದ ಶಾಲಾ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಸಂಕಲ್ಪಿಸಿ, ಈ ಹುದ್ದೆಗೆ ಸೇರಿದ್ದೇನೆ. ಈ ಅವಕಾಶವನ್ನು ಕಲ್ಪಿಸಿಕೊಟ್ಟ ಶ್ರೀ ಭೈರವ ದೇವರಿಗೆ ನಾನು ಚಿರಋಣಿಯಾಗಿ ಕಾಣಿಕೆ ಸಲ್ಲಿಸಿದ್ದೇನೆ. ನನಗೆ ನಿತ್ಯ ದರ್ಶನವೀವ, ತಮ್ಮ ಹಾಗೂ ಸ್ವಾಮಿಯ, ಭಾವ ಚಿತ್ರಗಳನ್ನು ಕೆಳಕಂಡ ವಿಳಾಸಕ್ಕೆ ಕಳುಹಿಸಿದರೆ, ನನಗೆ ಅದಕ್ಕಿಂತ ಹೆಚ್ಚಿನ ಭಾಗ್ಯವಿನ್ನಿಲ್ಲ. ಪೂಜ್ಯರ ಪಾದಕ್ಕೆ ಮತ್ತೊಮ್ಮೆ ಹೃದಯಾರ್ಪಣೆ ಮಾಡಿಕೊಳ್ಳುವ ಗಂಗಾಧರಯ್ಯ.

Gangadharaiah, clerk, Multipurpose High School, Ramanagaram, Ramanagara Taluk.

Ramanagara,

24 th Feb, 1967 12‘O’ Clock noon

ಈ ಪತ್ರವು ಗಂಗಾಧರಯ್ಯನ ವಿನಯ, ಸಂಸ್ಕೃತಿ, ಕಾಲದ ಮಹತ್ವ,

ಅಧ್ಯಯನಾಕಾಂಕ್ಷೆ ಮತ್ತು ಆಧ್ಯಾತ್ಮಿಕ ಒಲವನ್ನು ತೋರಿಸುತ್ತದೆ. ತಾರುಣ್ಯದಲ್ಲಿ ಈ ವಿಧವಾದ ಪ್ರವೃತ್ತಿಯೂ ಉತ್ತಮ ಭವಿಷ್ಯಕ್ಕೆ ದ್ಯೋತಕ.

ಗಂಗಾಧರಯ್ಯನು ಪಿ.ಯು.ಸಿ ವ್ಯಾಸಂಗ ಮಾಡಿದುದು ಬೆಂಗಳೂರಿನ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ. ಅವನು ತನ್ನ ಬಿ.ಎಸ್ಸಿ ಅಧ್ಯಯನವನ್ನು ಮುಂದುವರಿಸಿದುದು ಬೆಂಗಳೂರಿನಲ್ಲಿಯೇ, ಬೆಂಗಳೂರು ದೊಡ್ಡ ನಗರವಾಗಿ ಮತ್ತು ಅಧ್ಯಯನಗಳಿಗೆ ಅನುಕೂಲವಾದಸ್ಥಳವನ್ನು ಹುಡುಕಬೇಕಾಯಿತು. ಚಿದ್ಗಗನಾನಂದಾಶ್ರಮವು ಗಂಗಾಧರಯ್ಯನಿಗೆ ಒಪ್ಪಿಗೆಯಾಯಿತು. ಈ ಆಶ್ರಮದಲ್ಲಿ ಭಾರತ ಸಾಧುಸೇವಾ ಸಮಾಜವಿದ್ದಿತು. ಇಲ್ಲಿ ಕೆಲವು ವಿದ್ಯಾರ್ಥಿಗಳಿಗೆ ಆಶನ ವಸತಿಗಳ ಸೌಕರ್ಯವನ್ನು ಕಲ್ಪಿಸಿದ್ದರು. ಗಂಗಾಧರಯ್ಯನು ಇಲ್ಲಿ ಆಶ್ರಯ ಪಡೆದನು. ಅವನ ಸ್ವಭಾವ. ಆಸಕ್ತಿ ಮತ್ತು ಧ್ಯೇಯಗಳಿಗೆ ಅನುಗುಣವಾದ ಸ್ಥಳವೇ ದೊರೆತಂತಾಯಿತು. ಒಂದು ದಿನ ಗಂಗಾಧರಯ್ಯನು ತನ್ನ ಚಿಕ್ಕಮ್ಮನನ್ನು ತಾನಿದ್ದ ಆಶ್ರಮದ ಮಹರ್ಷಿಗಳ ಹತ್ತಿರಕ್ಕೆ ಕರೆದುಕೊಂಡು ಹೋದನು. ಆ ಹುಡುಗನನ್ನು ನೋಡಿ ಚಕಿತರಾದ ಮಹರ್ಷಿಗಳು ಅವನ ಚಿಕ್ಕಮ್ಮನನ್ನು ಕುರಿತು 'ಇವನು ಸಾಮಾನ್ಯನಲ್ಲ, ಯಾರಿಗೂ ಇವನ ವಿಚಾರ ತಿಳಿಯದು, ತಿಳಿಯುವುದು ಸುಲಭವೂ ಅಲ್ಲ. ಸಾಕಷ್ಟು ಪ್ರಯತ್ನವಿಲ್ಲದೇ ತಿಲದೊಳಗಣ ತೈಲವನ್ನಾಗಲೀ, ತಿರೆಯೊಳಗಣ ಜಲವನ್ನಾಗಲೀ, ಕಾಷ್ಠದೊಳಗಣ ಅಗ್ನಿಯನ್ನಾಗಲೀ ಕಾಣಲು ಸಾಧ್ಯವೇ? ಬಲ್ಲವನೇ ಬಲ್ಲ, ಬೆಲ್ಲದ ಸವಿಯಾ, ಮಹಾ ಪುರುಷನ ಸಕಲ ಸಲ್ಲಕ್ಷಣಗಳೂ ಇವನಲ್ಲಿವೆ. ಒಂದು ಗಳಿಗೆ ನನ್ನ ಬಳಿಯಲಿ ಕುಳಿತುಕೊಳ್ಳುವಂತೆ ಅವನಿಗೆ ಹೇಳಿರಿ. ಆಗ ಅವನ ಮಹತ್ವವನ್ನು ನೀವೇ ಕಾಣುವಿರಿ' ಎಂದು ಹೇಳಿದರು. ವಿಜ್ಞಾನ ವಿದ್ಯಾರ್ಥಿಯಾಗಿದ್ದ ಗಂಗಾಧರಯ್ಯನು ಅವರ ಮಾತಿಗೆ ಮಹತ್ವ ಕೊಡದೇ ನಿರ್ಲಕ್ಷ ಭಾವದಿಂದ ಹೊರ ನಡೆದನು. ಸ್ವಲ್ಪ ಕಾಲದ ನಂತರ ಮಹರ್ಷಿಗಳು ರೋಗ ಗ್ರಸ್ಥರಾದರು. ಅವರ ಕಾಯಿಲೆ ಉಲ್ಬಣಿಸಿತು. ಎಂಟು ದಿವಸಗಳ ಕಾಲ ಅವರಿಗೆ ಆಹಾರ ಸೇರಲಿಲ್ಲ. ಒಂದು ವಾರದ ನಂತರ ಗಂಗಾಧರಯ್ಯನು ಮಹರ್ಷಿಗಳ ಸಮೀಪಕ್ಕೆ ಬಂದನು ಹಸು, ಹಸಿದ ಕರುವಿನ ಬಳಿಗೆ ಬಂದಂತಾಯಿತು. ಗಂಗಾಧರಯ್ಯನ ಆದರದಿಂದ ಹಣ್ಣಿನ ರಸವನ್ನು ಮಹರ್ಷಿಗಳು ಸೇವಿಸಿದರು. ಅದರಿಂದ ಅವರಿಗೆ ಅವ್ಯಕ್ತವಾದ, ಅಪರಿಮಿತ ಆನಂದವಾಯಿತು. ಅಲ್ಪಕಾಲದಲ್ಲಿಯೇ ಅವರು ಚೇತರಿಸಿಕೊಂಡರು. ಗಂಗಾಧರಯ್ಯನು ಅಲ್ಲಿಂದ ತೆರಳಿದ ಮೇಲೆ ಮಹರ್ಷಿಗಳು ಅಲ್ಲಿದ್ದವರನ್ನು ಕುರಿತು 'ನಾನು ಚೇತರಿಸಿಕೊಳ್ಳುವೆನೆಂದು ಭಾವಿಸಿರಲಿಲ್ಲ, ದೈವಚಿತ್ತವನ್ನು ಬಲ್ಲವರಾರು. ಗಂಗಾಧರಯ್ಯನು ಸಾಮಾನ್ಯ ಮಾನವನಲ್ಲ, ಅವನು ಲೀಲಾ ಪುರುಷ' ಎಂದು ಹೇಳಿದರು.

ಗಂಗಾಧರಯ್ಯನು ಪರಸ್ಥಳದಲ್ಲಿ ಓದುತ್ತಿದ್ದಾಗ ಬಿಡುವಾದಾಗಲೆಲ್ಲಾ ತನ್ನೂರಿಗೆ ಬರುತ್ತಿದ್ದನು. ತಾನು ಓದಿದವನೆಂಬ ಅಹಂಕಾರವಿಲ್ಲದೆ ಹೊಲ, ಗದ್ದೆ, ತೋಟಗಳಿಗೆ

ಹೋಗಿ, ಸಾಧ್ಯವಾದ ಕೆಲಸಗಳನ್ನು ಮಾಡುತ್ತಿದ್ದನು. ಕೆಲಸ ಮಾಡುತ್ತಿದ್ದಾಗ ಆಳುಗಳನ್ನು ಎಂದೂ, ಯಾವ ರೀತಿಯಲ್ಲೂ ಆಕ್ಷೇಪಿಸಿದ ಸಂದರ್ಭವಿಲ್ಲ. ಕೆಲಸ ಮಾಡುವಾಗಲೂ ಇವನದು ಮೌನವೇ. ಆಳುಗಳು ಪ್ರಸಂಗ ಕಲ್ಪಿಸಿಕೊಂಡು 'ಇದೇನು, ನೀವು ಯಾರೊಡನೆಯೂ ಮಾತನಾಡುವುದಿಲ್ಲ. ನಮ್ಮ ಕೆಲಸವನ್ನು ನೋಡುವುದಿಲ್ಲ; ತಲೆ ಬಗ್ಗಿಸಿಕೊಂಡು ನಿಮ್ಮ ಕೆಲಸದಲ್ಲಿ ತೊಡಗಿರುತ್ತೀರಿ' ಎಂದು ಕೇಳಿದರೆ, 'ನಿಮ್ಮ ಪಾಡು ನಿಮ್ಮದು; ನನ್ನ ಪಾಡು ನನ್ನದು, ನಿಮ್ಮ ಕೆಲಸವನ್ನು ನೀವು ಮಾಡಿ; ನನ್ನ ಕೆಲಸವನ್ನು ನಾನು ಮಾಡುತ್ತೇನೆ' ಎಂದು ಉತ್ತರಿಸಿ ಮಾತನ್ನು ಮುಗಿಸುತ್ತಿದ್ದನು. ಅವನ ಮಾತಿನಲ್ಲಿ ನಿರ್ಲಿಪ್ತತೆ ಎದ್ದು ಕಾಣುತ್ತಿತ್ತು. ಹೋಗುವಾಗ ಬರುವಾಗ ನಿಷ್ಕಾರಣವಾಗಿ ಯಾರೊಡನೆಯೂ ಮಾತನಾಡುತ್ತಿರಲಿಲ್ಲ. ಅವರ ಮೌನವು ಅಹಂಕಾರವಾಗಿರದೆ, ಆತ್ಮ ಚಿಂತನವಾಗಿತ್ತು. ಅದು ಅವನ ಬಗ್ಗೆ ಜನರಲ್ಲಿ ಗೌರವ ಬುದ್ಧಿಯನ್ನುಂಟುಮಾಡಿತ್ತು. ಮನೆಯ ಆಳುಗಳು ಕೂಲಿ ಸಾಲದೆಂದಾಗಲೀ, ಹೆಚ್ಚು ಸೌಕರ್ಯ ಬೇಕೆಂದಾಗಲೀ ಕೇಳಿದಾಗ 'ನಿಮ್ಮ ಕೆಲಸವನ್ನು ನೀವು ಶ್ರದ್ಧೆಯಿಂದ ಮಾಡಿರಿ; ನಿಮ್ಮ ದುಡಿಮೆಗೆ ತಕ್ಕ ಫಲ ದೊರೆತೆ ದೊರೆಯುತ್ತದೆ; ಫಲಕ್ಕಾಗಿ ತಲೆ ಕೆಡಿಸಿಕೊಳ್ಳಬಾರದು' ಎಂದು ಹೇಳುತ್ತಿದ್ದನು. ಇವನ ಮಾತುಗಳು ಶ್ರೀ ಸಾಮಾನ್ಯನಿಗೆ ಅರ್ಥವಾಗುತ್ತಿರಲಿಲ್ಲ. ಗಂಗಾಧರಯ್ಯನು, ಮಾಧ್ಯಮಿಕ ಶಾಲೆಯ ನಾಲ್ಕನೇ ತರಗತಿಯಲ್ಲಿದ್ದಾಗ ಮನೆಗೆ ಶ್ರೀಮತಿ ಬಸಮ್ಮನವರು ಹಿರಿಯ ಸೊಸೆಯಾಗಿ ಬಂದರು. ಗಂಗಾಧರಯ್ಯನು ಅವರನ್ನು ಗೌರವವಾಗಿ ಮಾತನಾಡಿಸುತ್ತಿದ್ದನು; ಅವರು ಹೇಳಿದ ಕೆಲಸವನ್ನು ಸ್ವಲ್ಪವೂ ತಪ್ಪದೇ ಮಾಡುತ್ತಿದ್ದನು. ಅವನ ಕೆಲಸಗಳು ಅಚ್ಚುಕಟ್ಟಾಗಿರುತ್ತಿದ್ದವು. ಒಂದು ದಿನಕ್ಕೆ ಸೌದೆ ತರಲು ಹೇಳಿದರೆ, ಒಂದು ವಾರಕ್ಕಾಗುವಷ್ಟನ್ನು ಸಂಗ್ರಹಿಸಿ ತರುತ್ತಿದ್ದನು. ತನಗೆ ಇಂತಹ ಆಹಾರ ಬೇಕೆಂದು ಎಂದೂ ಗಲಾಟೆ ಮಾಡಿದವನಲ್ಲ. ಮನೆಯವರಿಗೆ ತೊಂದರೆಯಾಗಬಾರದೆಂದು ತಂಗಳನ್ನವನ್ನು ತಿಂದು. ಅಷ್ಟರಿಂದಲೇ ತೃಪ್ತನಾಗಿ, ತನ್ನ ಕೆಲಸಕ್ಕೆ ಹೋಗುತ್ತಿದ್ದನು. ಅವನಿಗೆ ಕೆಲಸಮುಖ್ಯ; ಉಳಿದುದುಗೌಣ.

ಗಂಗಾಧರಯ್ಯನಿಗೆ ತೊಗರಿಬೇಳೆ ಮತ್ತು ಸೊಪ್ಪುಹಾಕಿ ಮಾಡಿದ ಉಪ್ಪುಸಾರು ಮತ್ತು ರಾಗಿ ಮುದ್ದೆ ಬಹಳ ಪ್ರಿಯ. ತಮಾಷೆ ಮಾಡುತ್ತಾ ಬಡಿಸುವವರನ್ನು ನಗಿಸುತ್ತಾ ಸಂತೋಷವಾಗಿ ಊಟ ಮಾಡುತ್ತಿದ್ದನು. ಬಹಳ ಬೇಗ ಊಟ ಮಾಡುವುದು ಅವನ ಸ್ವಭಾವ. ಸಿದ್ಧಪಡಿಸಿದ ಆಹಾರವನ್ನು ಎಂದೂ ಟೀಕಿಸುತ್ತಿರಲಿಲ್ಲ. ಅತಿಯಾಗಿ ತಿನ್ನುವುದು, ಬಡಿಸಿದುದನ್ನು ಬಿಡುವುದು ಅವನ ಸ್ವಭಾವವಲ್ಲ. ಅವನು ಅನ್ನವನ್ನು ಗೌರವದಿಂದ ಕಾಣುತ್ತಿದ್ದನು. ಏಕಾಂತವಾಸ ಪ್ರಿಯನಾದ ಗಂಗಾಧರಯ್ಯನಿಗೆ ಮನೆಯಲ್ಲಿ ಪ್ರತ್ಯೇಕವಾದ ಒಂದು ಕೊಠಡಿ ಇದ್ದಿತು. ಯಾರೂ ಅಕಡೆ ಸುಳಿಯುತ್ತಿರಲಿಲ್ಲ. ಅವನು ತನ್ನ ಕೊಠಡಿಯಲ್ಲಿ ಏಕಾಗ್ರ ಚಿತ್ತನಾಗಿ ಅಧ್ಯಯನ ಮಾಡುತ್ತಿದ್ದನು. ಚಿಕ್ಕ ವಯಸ್ಸಿನಲ್ಲಿಯೇ ಕತೆ ಕವನ ವಿಮರ್ಶೆ ಪ್ರಬಂಧ ಮೊದಲಾದವುಗಳನ್ನು ಬರೆಯುತ್ತಿದ್ದನು. ಅವನ ಕೊಠಡಿ

ಓದು, ಬರಹ, ಚಿಂತನೆ, ಧ್ಯಾನಗಳ ಮಂದಿರವಾಗಿತ್ತು. ಗಂಗಾಧರಯ್ಯನು ಎಲ್ಲರನ್ನೂ ಸಮದೃಷ್ಟಿಯಿಂದ ನೋಡುವ ಮನೋಭಾವವನ್ನು ಹೊಂದಿದ್ದನು. ತಾರತಮ್ಯವು ಅವನಿಗೆ ಒಗ್ಗುತ್ತಿರಲಿಲ್ಲ. ಔದಾರ್ಯ, ಪ್ರೀತಿ, ವಿಶ್ವಾಸಗಳು, ಅವನ ಸಹಜ ಗುಣಗಳು. ಊರಿಗೆ ಬಂದಾಗ ಅವನಿಗೆ ಬೇಕಾದ ಸಾಮಾನುಗಳನ್ನೆಲ್ಲಾ ಮನೆಯವರು ಅಣಿ ಮಾಡಿಕೊಳ್ಳುತ್ತಿದ್ದರು. ಆದರೆ ಅವನು ಮನೆಯಿಂದ ತೆಗೆದುಕೊಂಡು ಹೋದ ಸಾಮಾನುಗಳನ್ನು ಇಲ್ಲದವರಿಗೆ ಹಂಚಿ ಆನಂದ ಪಡುತ್ತಿದ್ದುದೇ ಹೆಚ್ಚು. ಮತ್ತೆ ಬರಿಗೈಯಲ್ಲಿ ಮನೆಗೆ ಬರುತ್ತಿದ್ದನು. ಇದ್ದ ಸ್ಥಳವನ್ನೂ ಬಿಟ್ಟು ಹೊಸ ಸ್ಥಳಕ್ಕೆ ಹೋಗುವಾಗ, ತನ್ನ ಬಟ್ಟೆ, ಪುಸ್ತಕ ಮುಂತಾದ ಎಲ್ಲಾ ಸಾಮಾನುಗಳನ್ನೂ ಮೊದಲಿದ್ದಲ್ಲಿಯೇ ಬಿಟ್ಟು ನಿಶ್ಚಿಂತನಾಗಿ ಹೋಗಿಬಿಡುತ್ತಿದ್ದನು. ಅವನ ವಿದ್ಯಾಭ್ಯಾಸ ಮುಗಿಯುವವರೆಗೂ, ಅವನ ನಡತೆಯು ಹೀಗೇ ಸಾಗಿತು. ಯಾವುದಕ್ಕೂ ಅಂಟಿಕೊಳ್ಳದೇ ಎಲ್ಲವನ್ನೂ ಕೊಡವಿಕೊಂಡು ಮುಂದೆ ಸಾಗುವುದು ಅವನ ಸಹಜ ಗುಣವಾಗಿಬಿಟ್ಟಿತು. ಹುಟ್ಟು ಸಾವುಗಳ ವಿಚಾರ ಕಿವಿಗೆ ಬಿದ್ದಾಗ, ಎಲ್ಲರಂತೆ ಸುಖ, ದುಃಖಗಳಲ್ಲಿ ಮುಳುಗದೇ, ಅವುಗಳ ಹಿನ್ನೆಲೆಯ ಪರಿಶೀಲನೆಗೆ ತೊಡಗುತ್ತಿದ್ದನು. ಆಗ ಅವನ ಮನೋಭಾವ ಗಂಭೀರವಾಗಿರುತ್ತಿದ್ದಿತು.

ಗಂಗಾಧರಯ್ಯನು ಪ್ರಾಣಿ ಹಿಂಸೆಯನ್ನು ಸಹಿಸುತ್ತಿರಲಿಲ್ಲ. ಭೂಮಿಯನ್ನು ಉಳುವಾಗ, ಗಾಡಿಯನ್ನು ಎಳೆಯುವಾಗ, ಎತ್ತುಗಳನ್ನು ಹೊಡೆಯದೇ ಅವುಗಳಿಗೆ ಸಾಕಷ್ಟು ವಿರಾಮ ಕೊಡಬೇಕು; ಅವುಗಳ ಮೈ ತೊಳೆಯಬೇಕು; ಅವುಗಳಿಗೆ ಒಳ್ಳೆಯ ಆಹಾರವನ್ನು ಕೊಡಬೇಕು; ನಮಗಾಗಿ ದುಡಿಯುವ ಅವುಗಳನ್ನು ಕರುಣೆಯಿಂದ ಕಾಣಬೇಕು; ಅವುಗಳನ್ನು ಚೆನ್ನಾಗಿ ಸಾಕಬೇಕು- ಇದು ಗಂಗಾಧರಯ್ಯನ ಇಚ್ಛೆ. ಒಂದು ಸಾರಿ ಒಬ್ಬ ಆಳು ಕೊಟ್ಟಿಗೆಯಲ್ಲಿ ಹಸುವಿನಿಂದ ಹಾಲು ಕರೆಯುತ್ತಿದ್ದನು. ಅದು ಹಾಲು ಕೊಡದಿದ್ದಾಗ, ಅವನು ಅದನ್ನು ಹೊಡೆದನು. ಅದು ಅಲ್ಲಿಯೇ ಇದ್ದ ಗಂಗಾಧರಯ್ಯನ ಕಡೆಗೆ ದೈನ್ಯದಿಂದ ನೋಡಿತು. ಆಗ ಅವನ ಹೃದಯ ಕರಗಿತು; ಕಣ್ಣಲ್ಲಿ ನೀರು ಬಂದಿತು. ಆಗ ಅವನು ಆಳನ್ನು ಕಟುವಾಗಿ ಬೆದರಿಸಿ, ಇನ್ನು ಮುಂದೆ ಹೀಗೆ ಹೊಡೆಯಕೂಡದೆಂದು ಕಟ್ಟುನಿಟ್ಟಾಗಿ ತಿಳಿಸಿದನು.

ಚಿಕ್ಕಲಿಂಗಪ್ಪನವರ ಒಂದುಗದ್ದೆಗೆ, ನಾಗಪ್ಪನ ಗದ್ದೆ ಎನ್ನುತ್ತಾರೆ. ಒಂದು ದಿನ ಆಳುಗಳು ಅಲ್ಲಿ ಕೆಲಸ ಮಾಡುತ್ತಿದ್ದರು. ಆ ದಿವಸ ಗಂಗಾಧರಯ್ಯನು ಅವರೊಡನಿದ್ದನು. ಆ ಗದ್ದೆಯಲ್ಲೊಂದು ಕಡೆ ಲಾವಂಚ ಹುಲ್ಲು ತೆಂಡೆಯಾಗಿ ಬೆಳೆದಿದ್ದಿತು. ಅದರಲ್ಲಿ ನಾಗರ ಹಾವೊಂದು ಹೆಡೆಯೆತ್ತಿ ನಿಂತುಕೊಂಡಿದ್ದಿತು. ಅದನ್ನು ಕಂಡ ಗಂಗಾಧರಯ್ಯನು ಆಳುಗಳನ್ನು ಕರೆದು ತೋರಿಸಿದನು. ಆವರೆಗೆ ಆಳುಗಳು ಹಾವನ್ನು ಎಂದೂ ಕಂಡಿರಲಿಲ್ಲ; ಮುಂದೆಯೂ ತಾವಾಗಿ ಎಂದೂ ನೋಡಲಿಲ್ಲ. ಗಂಗಾಧರಯ್ಯನು ಅದನ್ನು ಆಳುಗಳಿಗೆ ಹಲವಾರು ಸಾರಿ ತೋರಿಸಿದ್ದನು. ಅದನ್ನು ಸಾಯಿಸಲು ಆಳುಗಳು ಬಯಸಿದರು. ಆದರೆ ಅವನು ಅದಕ್ಕೆ ಅವಕಾಶಕೊಡದೆ, ಅದಕ್ಕೆ ತೊಂದರೆ ಕೊಡದಿದ್ದರೆ ಅದು ಏನೂ ಮಾಡದೆಂದು ತಿಳಿಸಿದನು. ಕಾಲಕ್ರಮದಲ್ಲಿ ಕಣ್ಣಿಗೆ ಅದು ಕಾಣದಾಯಿತು. ಇದೊಂದು ಅದ್ಭುತ ಘಟನೆಯಾಗಿ ಮನೆಯ ಆಳುಗಳ ಮನಸ್ಸಿನಲ್ಲಿ ಇಂದಿಗೂ ಉಳಿದುಕೊಂಡಿದೆ.

ಅಭಿವಂದನಾ

ಬೆಂಗಳೂರಿನಲ್ಲಿ ಅಧ್ಯಯನ ಮಾಡುತ್ತಿದ್ದಾಗ ಗಂಗಾಧರಯ್ಯನಿಗೆ ಕೆಲವು ಒಳ್ಳೆಯ ಮಿತ್ರರಿದ್ದರು. ಇವರ ಜೀವನವೂ ಪರಿಶುದ್ಧವಾಗಿದ್ದಿತು. ಎಲ್ಲರಲ್ಲಿಯೂ ದೈವಭಾವನೆ ಸಮಾನವಾಗಿದ್ದಿತು. ಇವರೆಲ್ಲರೂ ಜೊತೆಯಾಗಿ ಬೆಂಗಳೂರು ಮತ್ತು ಸುತ್ತಲ ಪ್ರದೇಶಗಳಲ್ಲಿದ್ದ ಹಲವು ಆಶ್ರಮಗಳಿಗೆ ಆಗಾಗ ಭೇಟಿ ಕೊಡುತ್ತಿದ್ದರು. ಅಲ್ಲಿ ನೆಲೆಸಿದ್ದ ಸಾಧುಗಳೊಡನೆ ಅಧ್ಯಾತ್ಮ ಚರ್ಚೆ ನಡೆಸುತ್ತಿದ್ದರು. ಇದರ ಫಲವಾಗಿ, ಗಂಗಾಧರಯ್ಯನಲ್ಲಿ ಗುಪ್ತವಾಗಿದ್ದ ಆಧ್ಯಾತ್ಮ ಚಿಂತನವು ಬಹಿರಂಗವಾಗತೊಡಗಿತು. ರಾತ್ರಿ ಮಲಗಿದ್ದಾಗ ಕನಸಿನಲ್ಲಿ ಯಾರೋ ಬಂದು ಕರೆದಂತಾಗುತ್ತಿದ್ದಿತು. ಎಷ್ಟೋ ಸಾರಿ ಕನಸಿನಲ್ಲಿ ಪರಶಿವನ ದರ್ಶನವು ಒಂದಲ್ಲ ಒಂದು ರೀತಿಯಲ್ಲಿ ದೊರೆಯುತ್ತಿದ್ದಿತು. ಇವರ ಚಿಕ್ಕಮ್ಮನವರಿಗೂ ಬಗೆಬಗೆಯ ಕನಸುಗಳು ಬೀಳುತ್ತಿದ್ದವು. ಆ ಕನಸುಗಳು ಗಂಗಾಧರಯ್ಯನ ಸಂನ್ಯಾಸ ಸ್ವೀಕಾರಕ್ಕೆ ಸೂಚಕಗಳಾಗಿದ್ದವು. ಈ ಮಧ್ಯೆ ಊರಿನಲ್ಲಿ ದಾಯಾದಿಗಳಲ್ಲಿ ಜಗಳ ಹುಟ್ಟಿತು. ಹೊಡೆದಾಟವು ಪ್ರಾರಂಭವಾದಾಗ ಗಂಗಾಧರಯ್ಯನ ತಾಯಿಯವರು ಮಧ್ಯೆ ಪ್ರವೇಶಿಸಿದರು. ಕ್ರೋಧೋನ್ಮತ್ತರಾಗಿದ್ದ ಒಬ್ಬ ದಾಯಾದಿ ಹಾರಿಸಿದ ಗುಂಡು ಅವರಿಗೆ ತಾಕಿತು. ಆಗ ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ಸೇರಿಸಲಾಯಿತು. ಗಂಗಾಧರಯ್ಯನು ತನ್ನ ವ್ಯಾಸಂಗವನ್ನು ನಿಲ್ಲಿಸಿ, ಹಲವು ತಿಂಗಳುಗಳ ಕಾಲ ತಾಯಿಯ ಶುಶ್ರೂಷೆಗಾಗಿ ಆಸ್ಪತ್ರೆಯಲ್ಲಿ ನಿಂತನು. ತಾಯಿಯು ಚೇತರಿಸಿಕೊಂಡರು. ಆಗ ಅವನು ತನ್ನ ವ್ಯಾಸಂಗವನ್ನು ಮುಂದುವರಿಸಿದನು. ಈ ಘಟನೆಯು ಅವನ ಮನಸ್ಸಿನ ದೈವಹಂಬಲವನ್ನು ಹಿಂಗಿಸಲಿಲ್ಲ. ತನಗೆ ಸಂನ್ಯಾಸ ಸ್ವೀಕಾರ ಮಾಡಬೇಕೆಂಬ ಆಸೆಯಿದೆಯೆಂಬುದನ್ನು ತನ್ನ ಮಿತ್ರರಿಗೂ, ಮನೆಯವರಿಗೂ ತಿಳಿಸಿದನು. ಓದಿದ ಒಬ್ಬನೇ ಮಗ ಸಂನ್ಯಾಸಿಯಾಗುವುದನ್ನು ಮನೆಯವರು ಒಪ್ಪಲಿಲ್ಲ. ಈ ಮಧ್ಯೆ ತಂದೆಯವರಾದ ಚಿಕ್ಕಲಿಂಗಪ್ಪನವರು ಆತ್ಮೀಯರಾದ ಬಿಡದಿಯ ಶರಬಣ್ಣನವರನ್ನು ಸಂಧಿಸಿ, ಯುವಕನಾಗಿದ್ದ ಗಂಗಾಧರಯ್ಯನಿಗೆ ವಿವಾಹ ಮಾಡುವ ವಿಚಾರವನ್ನು ಪ್ರಸ್ತಾಪಿಸಿದರು. ಶರಬಣ್ಣನವರು ಇದನ್ನು ಗಂಗಾಧರಯ್ಯನ ಗಮನಕ್ಕೆ ತಂದಾಗ ಅವನು 'ನನಗೆ ಮದುವೆ ಇಷ್ಟವಿಲ್ಲ. ನಾನು ವಿವಾಹವಾಗುವುದೇ ಇಲ್ಲ. ನನಗೆ ಮದುವೆ ಬೇಡವೆಂದೂ ನನ್ನ ಪರವಾಗಿ ನೀವೇ ಹೇಳಿಬಿಡಿ' ಎಂದು ನಿರ್ಣಯಾತ್ಮಕವಾಗಿ ಉತ್ತರಿಸಿದನು. ಈ ವೇಳೆಗಾಗಲೇ ಅವನ ಅಂತರಂಗ ಪಕ್ವಗೊಂಡು, ಸಂನ್ಯಾಸ ಸ್ವೀಕಾರಕ್ಕೆ ಅರ್ಹವಾಗಿತ್ತು. ಮಹಾತ್ಮರು ಲೋಕದ ಕಣ್ಣಿಗೆ ಸಾಮಾನ್ಯರಾಗಿ ತೋರುತ್ತಾರೆ, ಅವರ ಅಂತರಂಗದ ಆಳವನ್ನು ಅರಿಯುವುದು ಸುಲಭವಲ್ಲ.

ಶ್ರೀ ಆದಿಚುಂಚನಗಿರಿಯು ಸುಪ್ರಸಿದ್ಧವಾದ ಪುಣ್ಯ ಕ್ಷೇತ್ರ. ಇದರ ೭೦ ನೆಯ ಗುರುಗಳು ಶ್ರೀ ಶ್ರೀ ರಾಮಾನಂದನಾಥ ಸ್ವಾಮಿಗಳವರು. ಅವರು, ವಯೋವೃದ್ಧರೂ, ಜ್ಞಾನವೃದ್ಧರೂ ಆಗಿದ್ದರು. ವೃದ್ಧಾಪ್ಯದಲ್ಲಿ ಅವರು ರೋಗಕ್ಕೆ ತುತ್ತಾದರು. ರೋಗವು ಪರಿಹಾರವಾಗುವ ಲಕ್ಷಣಗಳು ಕಾಣಲಿಲ್ಲ. ಇದನ್ನು ತಿಳಿದ ಶ್ರೀ ಕ್ಷೇತ್ರದ ಭಕ್ತರು ದಿಕ್ಕು ಕಾಣದವರಾದರು. ಅದಷ್ಟು ಶೀಘ್ರವಾಗಿ ಶಿಷ್ಯರೊಬ್ಬರನ್ನು ತಮ್ಮ ಗುರುಗಳಿಗೆ ಒದಗಿಸಿ ಕೊಡಲು ನಿಶ್ಚಯಿಸಿದರು. ಯೋಗ್ಯ ಶಿಷ್ಯನಿಗಾಗಿ ಹುಡುಕಾಟ ಪ್ರಾರಂಭವಾಯಿತು. ಶ್ರೀ ಕ್ಷೇತ್ರದಲ್ಲಿರುವುದು ಸಿದ್ಧ ಸಿಂಹಾಸನ, ಇದನ್ನಲಂಕರಿಸುವ ವ್ಯಕ್ತಿಯಲ್ಲಿ ಆತ್ಮಶಕ್ತಿ ಸಹಜವಾಗಿ

ಬೆಳೆದಿರಬೇಕು; ವಿದ್ಯಾವಂತನೂ, ಜ್ಞಾನಿಯೂ, ಆಗಿರಬೇಕು. ಶಮದಮಾದಿಗಳಿಂದ ಕೂಡಿರಬೇಕು. ದಯೆ, ಉಪಕಾರಬುದ್ಧಿ, ಲೋಕ ಸಂಘಟನಾ ಶಕ್ತಿ ಮೊದಲಾದ ಸದ್ಗುಣಗಳನ್ನುಳ್ಳವನಾಗಿರಬೇಕು. ಈ ವಿಚಾರವನ್ನು ವೃತ್ತಪತ್ರಿಕೆಯಲ್ಲಿಯೂ ಪ್ರಕಟಿಸಿ ಅರ್ಹರಾದವರು ಅರ್ಜಿ ಸಲ್ಲಿಸುವಂತೆ ಕೋರಿದರು. ಈ ಪ್ರಕಟಣೆಯು ಗಂಗಾಧರಯ್ಯನಿಗೂ ತಿಳಿದುಬಂದಿತು. ದರಿದ್ರನು ನಿಧಿಯನ್ನೇ ಎಡವಿದಂತಾಯಿತು. ತನ್ನ ಬಯಕೆ ಪೂರೈಸುವ ಕಾಲ ಬಂದಿತೆಂದು ಅವನು ಭಾವಿಸಿದನು. ತನ್ನ ಒಪ್ಪಿಗೆಯನ್ನು ಸೂಚಿಸಿ, ಪತ್ರವನ್ನೂ ಬರೆದನು. ಸಮಾಜದ ಗಣ್ಯ ಪ್ರಮುಖರನ್ನು ಸಂಧಿಸಿ. ತನ್ನ ಮನೋಗತವನ್ನು ತಿಳಿಸಿದನು. ಭೈರವನ ಲೀಲೆಯನ್ನು ಬಲ್ಲವರಾರು. ಅಂತಿಮವಾಗಿ ಪೂಜ್ಯ ಶ್ರೀ ಶ್ರೀ ರಾಮಾನಂದನಾಥ ಸ್ವಾಮೀಜಿಯವರು, ಗಂಗಾಧರಯ್ಯನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ ವಿಧ್ಯುಕ್ತವಾಗಿ ದೀಕ್ಷೆ ಕೊಟ್ಟು, ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರೆಂಬ ಸಂನ್ಯಾಸಾಶ್ರಮದ ನಾಮದೇಯವನ್ನಿತ್ತರು.

ಸಂನ್ಯಾಸಿಗಳು, ಭಾರತೀಯ ಧರ್ಮ ಮತ್ತು ಸಂಸ್ಕೃತಿಗಳನ್ನು ಚೆನ್ನಾಗಿ ಬಲ್ಲವರಾಗಿರಬೇಕು. ವೇಂದಾಂತಗಳನ್ನು ತಿಳಿದಿರಬೇಕು. ಶಾಸ್ತ್ರಗಳ ಜ್ಞಾನವೂ ಅಗತ್ಯವಾಗಿರಬೇಕು. ಸಂಸ್ಕೃತವನ್ನು ಅಧ್ಯಯನ ಮಾಡದೇ ಈ ಎಲ್ಲಾ ಜ್ಞಾನವನ್ನೂ ಸರಿಯಾಗಿ ತಿಳಿದುಕೊಳ್ಳುವುದು ಅಸಾಧ್ಯ. ಆದ್ದರಿಂದ ಶ್ರೀ ಶ್ರೀ ರಾಮಾನಂದನಾಥ ಸ್ವಾಮಿಗಳವರು, ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರನ್ನು ವಿಶೇಷಾಧ್ಯಯನಕ್ಕಾಗಿ ಬೆಂಗಳೂರಿಗೆ ಅಂಟಿಕೊಂಡಂತಿರುವ ಕೈಲಾಸಾಶ್ರಮಕ್ಕೆ ಕಳುಹಿಸಿಕೊಟ್ಟರು. ಅಲ್ಲದೆ ಅಗತ್ಯವಾದ ಎಲ್ಲಾ ವ್ಯವಸ್ಥೆಯನ್ನೂ ಮಾಡಿಕೊಟ್ಟರು. ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು ಕೈಲಾಸಾಶ್ರಮದಲ್ಲಿ ಉಳಿದುಕೊಂಡು, ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠ ಶಾಲೆಯಲ್ಲಿ ಅಧ್ಯಯನ ಮಾಡಲು ಪ್ರಾರಂಭಿಸಿದರು. ಕ್ರಮವಾಗಿ ಅದ್ವೈತ ವೇದಾಂತದ ವಿಶೇಷಾಧ್ಯಯನದಲ್ಲಿ ತೊಡಗಿದರು. ಇವರ ಪ್ರತಿಭೆಯನ್ನು ಅಧ್ಯಾಪಕ ವರ್ಗದವರೆಲ್ಲರೂ ಮೆಚ್ಚಿಕೊಂಡರು. ಇವರ ಆಗಮನದಿಂದ ಮಹಾ ಪಾಠ ಶಾಲೆಗೆ ಕಳೆ ಬಂದಿತು.

ಇವರು ಆಶ್ರಮವನ್ನು ಸ್ವೀಕರಿಸುವ ಮೊದಲು ಇವರ ಮನೆಯಲ್ಲಿ ಮುತ್ತಯ್ಯನೆಂಬ ಒಬ್ಬ ಆಳು ಇದ್ದನು. ಅವನನ್ನು ತೋಪಯ್ಯನೆಂದು ಕರೆಯುತ್ತಾರೆ. ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು ಕೈಲಾಸಾಶ್ರಮದಲ್ಲಿ ನೆಲೆಸಿದ್ದಾಗ ಒಂದು ದಿನ ಮುತ್ತಯ್ಯನು ಇವರಲ್ಲಿಗೆ ಬಂದು ತನಗೆ ದೊರೆಯುತ್ತಿರುವ ಕೂಲಿಯು ಸಂಸಾರದ ಜೀವನ ನಿರ್ವಹಣೆಗೆ ಸಾಲದೆಂದೂ, ತನಗೆ ಅನ್ಯ ಮಾರ್ಗವು ತೋರದೆಂದೂ ತನ್ನ ಮೂಕವೇದನೆಯನ್ನು ಅರಿಕೆಮಾಡಿಕೊಂಡನು. ಆಗ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು 'ಹೆದರಬೇಡ ನಿನ್ನ ಕುಲ ಕಸುಬಾದ ಮೋಚಿ ಕೆಲಸವನ್ನು ಪ್ರಾರಂಭಿಸು. ನಿನಗೆ ಜೀವನದಲ್ಲಿ ನೆಮ್ಮದಿಯು ದೊರೆಯುತ್ತದೆ' ಎಂದು ಹೇಳಿದರು. ಅವನು 'ನನಗೆ ಆ ಕಸುಬಿನ ಪರಿಚಯವಿಲ್ಲ; ಏನು ಮಾಡಲಿ' ಎಂದು ಗೊಣಗಾಡಿದನು. ಆಗ

ಶ್ರೀಗಳವರು'ಕಸುಬಿನ ಪರಿಚಯವಿಲ್ಲವೆಂದು ಹೆದರಬೇಡ; ಪ್ರಾರಂಭಿಸು; ಎಲ್ಲವೂ ಸರಿಹೋಗುತ್ತದೆ' ಎಂದು ತಿಳಿಸಿದರು. ಅವನು ಹಾಗೆಯೇ ತನ್ನ ಕುಲಕಸುಬನ್ನು ಆರಂಭಿಸಿ ಚೆನ್ನಾಗಿ ಸಂಪಾದಿಸಿ, ಸುಖವಾಗಿ ಜೀವನ ನಡೆಸಿದನು. ಇವನು ಹಣ್ಣು ಹಣ್ಣು ಮುದುಕನಾಗಿ ಇಂದೂ ಬದುಕಿದ್ದಾನೆ. ಅವನ ಕಣ್ಣು ಕಿವಿಗಳು ಮಂದವಾಗಿವೆ. ಅವನು ತನ್ನ ಬಾಳಿನಲ್ಲಿ ನೆಮ್ಮದಿಯ ದಾರಿಯನ್ನು ತೋರಿದ ಮಹಾ ಗುರುವೆಂದು, ಶ್ರೀಗಳವರನ್ನು ಭಕ್ತಿಯಿಂದ ಪೂಜಿಸುತ್ತಾನೆ; ಆನಂದದಿಂದ ಕೊಂಡಾಡುತ್ತಾನೆ. ಮಹಾನುಭಾವರ ಒಂದು ಮಾತು ಬಾಳಿನಲ್ಲಿ ನೆಮ್ಮದಿಯನ್ನೇ ತಂದಿತು. ಈ ಹರಿಜನನ ಭಾಗಕ್ಕೆ ಶ್ರೀಗಳವರು ಮಹಾ ಭೈರವ.

ಶ್ರೀ ರಾಮಾನಂದನಾಥ ಸ್ವಾಮಿಗಳವರ ಆರೋಗ್ಯವು ಹದಗೆಟ್ಟಿತು. ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರನ್ನು ಗತ್ಯಂತರವಿಲ್ಲದೆ ಶ್ರೀ ಕ್ಷೇತ್ರಕ್ಕೆ ಶೀಘ್ರವಾಗಿ ಕರೆಸಿಕೊಂಡರು. ಶ್ರೀ ಶ್ರೀ ರಾಮಾನಂದನಾಥ ಸ್ವಾಮಿಗಳನ್ನು ಮೈಸೂರಿನ ಆಸ್ಪತ್ರೆಗೆ ಸೇರಿಸಿದರು. ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು ತಮ್ಮ ಗುರುಗಳ ಪಕ್ಕದಲ್ಲಿಯೇ ಕುಳಿತು ಅವರ ಶುಶ್ರೂಷೆಯಲ್ಲಿಯೇ ನಿರತರಾಗಿದ್ದರು. ದೈವೇಚ್ಛೆಯನ್ನು ಮೀರಲು ಯಾರಿಗೂ ಸಾಧ್ಯವಿಲ್ಲ. ಗುರುಗಳು ಶಿವೈಕ್ಯರಾದರು. ಅವರನ್ನು ಕೂಡಲೇ ಶ್ರೀ ಕ್ಷೇತ್ರಕ್ಕೆ ತರಲಾಯಿತು. ಶಾಸ್ತ್ರೋಕ್ತ ಪ್ರಕಾರವಾಗಿ ಉತ್ತರಕ್ರಿಯೆಗಳು ನಡೆದವು. ಅಂದೇ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಪಟ್ಟಾಭಿಷೇಕವೂ ಜರುಗಿತು. ಈ ಮಹಾಗುರುವು ಸಿದ್ಧ ಸಿಂಹಾಸನ ಆರೋಹಣ ಮಾಡಿದುದು ೨೪.೯.೧೯೭೪ ರಂದು.

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು ಅಯಸ್ಕಾಂತದಂತೆ, ನಾಡಿನ ಸಮಸ್ತ ಜನರನ್ನೂ ತಮ್ಮೆಡೆಗೆ ಆಕರ್ಷಿಸಿಕೊಂಡರು. ಶ್ರೀ ಕ್ಷೇತ್ರದ ಕಾರ್ಯಗಳು ವೇಗಗೊಂಡವು. ಶ್ರೀಗಳವರು ಲೋಕೋದ್ಧಾರಕ್ಕಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡರು.. ಒಂದು ಶತಕದಲ್ಲಿ ಸಾಧಿಸಲಾಗದುದನ್ನು ಒಂದೇ ದಶಕದಲ್ಲಿ ಸಾಧಿಸಿ ಪವಾಡ ಮೆರೆದಿದ್ದಾರೆ. ಇವರ ಯೋಜನೆಗಳು ಇನ್ನೂ ಹೆಚ್ಚುತ್ತಿವೆ. ಶ್ರೀಗಳವರ ಧಾರ್ಮಿಕ ಪ್ರವಾಸ ಸಮಯದಲ್ಲಿ, ಹತ್ತಾರು ಸಹಸ್ರ ಜನರು ಸೇರಿ, ಶ್ರೀಗಳವರು. ಉಪದೇಶವಾಣಿಯನ್ನು ಆಲಿಸಿ, ಕೃತಕೃತ್ಯರಾಗುತ್ತಾರೆ. ಇಂದು ಶ್ರೀಗಳವರು ನಾಡಿನಲ್ಲಿ ಎಲ್ಲರ ಮನ, ಮನೆಗುರುವಾಗಿದ್ದಾರೆ. ಅವರನ್ನು ಸಿದ್ಧ ಪುರುಷರೆಂದು, ಅವರ ದರ್ಶನದಿಂದ ಪಾಪ ಪರಿಹಾರವಾಗುತ್ತದೆಂದು, ಅವರ ಆಶೀರ್ವಾದದಿಂದ ಸಕಲ ಇಷ್ಟಾರ್ಥಗಳು ನೆರವೇರುತ್ತವೆಂದು ಭಕ್ತರು ಭಾವಿಸಿದ್ದಾರೆ. ಅನೇಕರು ಈ ಪರಮಪೂಜ್ಯರನ್ನು ಭೈರವನ ಅವತಾರವೆಂದೇ ಪರಿಗಣಿಸಿದ್ದಾರೆ.

***

ಕಾಯಕ

ಭೋಗಾನಂಜಪ್ಪ

ಆತ್ಮಶ್ರೀ ಸಂಪನ್ನರಾದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಲೋಕೋದ್ಧಾರಕರಾದ ಮಹಾಕರ್ಮಯೋಗಿಗಳು. ಇವರು ತಮ್ಮ ಕೇವಲ ಧ್ಯಾನ, ತಪಸ್ಸುಗಳಿಗೆ ಸೀಮಿತರಾಗದೆ ಸಕಲ ಜೀವಕೋಟಿಯಲ್ಲಿ ದೇವನ ಇರವನ್ನು ಗುರುತಿಸಿ, ಜನಸೇವೆಯೇ ನಿಜವಾದ ಜನಾರ್ಧನ ಪೂಜೆಯೆಂದು ಭಾವಿಸಿ, ಲೋಕಹಿತಕಾರ್ಯಗಳಿಗೆ ತಮ್ಮನ್ನು ಸಮರ್ಪಿಸಿಕೊಂಡರು. ಕಾಯಕವೇ ಕೈಲಾಸ, ದುಡಿಮೆಯೇ ದೇವರೆಂಬ ಸತ್ಯವನ್ನು ಕಾರ್ಯರೂಪಕ್ಕೆ ತಂದವರು. ಇವರು ಶಿಕ್ಷಣ, ಆರೋಗ್ಯ, ಧರ್ಮ, ಸಂಸ್ಕೃತಿ, ಸಾಹಿತ್ಯ ಮುಂತಾದುವುಗಳಿಗೆ ಸಂಬಂಧಿಸಿದ ಹಲವು ಯೋಜನೆಗಳನ್ನು ಹಮ್ಮಿಕೊಂಡು ಅವುಗಳನ್ನು ಸಾಧಿಸುವಲ್ಲಿ ಯಶಸ್ವಿಗಳಾಗಿದ್ದಾರೆ. ಅವರ ಸಾಧನೆಗಳು ಮತ್ತು ಸಿದ್ಧಿಗಳ ಕಿರುಪರಿಚಯವನ್ನಿಲ್ಲಿ ಕೊಡಲಾಗಿದೆ.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು ಪೀಠಾಧ್ಯಕ್ಷರಾದ ಮೇಲೆ ಶ್ರೀಕ್ಷೇತ್ರವು ಸರ್ವಾಂಗೀಣ ಅಭಿವೃದ್ಧಿಯನ್ನು ಹೊಂದಿತು. ಇಲ್ಲಿನ ಅಧಿದೇವತೆ ಶ್ರೀ ಗಂಗಾಧರೇಶ್ವರ ಸ್ವಾಮಿಯ ದೇವಾಲಯ ಹಾಗೂ ಕ್ಷೇತ್ರಪಾಲಕನಾದ ಶ್ರೀ ಕಾಲಭೈರವೇಶ್ವರ ಸ್ವಾಮಿ ದೇವಸ್ಥಾನದ ಪೂಜಾದಿಕಾರ್ಯಗಳು ತ್ರಿಕಾಲಗಳಲ್ಲಿ ಆಗಮೋಕ್ತ ರೀತಿಯಲ್ಲಿ ಅಬಾದಿತವಾಗಿ ನಡೆಯುತ್ತಿವೆ. ಪ್ರತಿನಿತ್ಯವೂ ಸಹಸ್ರಾರು ಭಕ್ತಾದಿಗಳು ಬಂದು ಗುರುದೇವತಾದರ್ಶನ ಪಡೆದು ಧನ್ಯತೆಯನ್ನು ಹೊಂದುತ್ತಾರೆ. ಬರುವ ಭಕ್ತಾದಿಗಳಿಗೆ ಎಲ್ಲ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಅವರು ಹರ್ಷಚಿತ್ತರಾಗಿರುವಂತೆ ಮಾಡಲಾಗಿದೆ. ಭಕ್ತಾದಿಗಳಿಗೆ ನಿತ್ಯ ಅನ್ನದಾಸೋಹ ವ್ಯವಸ್ಥೆ ಮಾಡಲಾಗಿದೆ.

ಪರಮಪೂಜ್ಯಶ್ರೀಗಳವರು ಪ್ರಾಚೀನವಾದ ಕಾಲಭೈರವೇಶ್ವರ ದೇವಾಲಯವು ಇಕ್ಕಟ್ಟಾದ ಜಾಗದಲ್ಲಿದ್ದು ಭಕ್ತಾದಿಗಳು ಒಟ್ಟಾಗಿ ನಿಂತು ಭಕ್ತಿಯಿಂದ ಪೂಜೆಯನ್ನು ಸಲ್ಲಿಸಲು ಸಾಧ್ಯವಾಗದಿರುವುದನ್ನೂ, ಭಕ್ತರ ಅಭಿಲಾಷೆಯನ್ನು ಗಮನಿಸಿ ಬಹಳ ವೆಚ್ಚ ತಗಲುವ ಭವ್ಯವಾದ ಭೈರವೇಶ್ವರ ಸ್ವಾಮಿ ದೇವಾಲಯದ ನಿರ್ಮಾಣವನ್ನು ಪ್ರಾರಂಭಿಸಿದ್ದಾರೆ.

ಜನತೆ ಶಿಕ್ಷಣ ಪಡೆಯದಿದ್ದರೆ ಯಾವ ನಾಡೂ ಉದ್ಧಾರವಾಗದು. ಜನರು

ವಿದ್ಯಾವಂತರಾದರೆ ಸಾಲದು ಗುಣವಂತರೂ ಆಗಬೇಕು. ಮಾನವೀಯತೆಯನ್ನೇ ರೂಢಿಸದ ಶಿಕ್ಷಣದಿಂದ ಯಾವ ಲಾಭವೂ ಆಗುವುದಿಲ್ಲ. ಗ್ರಾಮೀಣ ಪ್ರದೇಶದ ಮಕ್ಕಳಿಗಂತೂ ಉತ್ತಮ ಶಿಕ್ಷಣವು ಕನಸಾಗಿದೆ. ಪ್ರಾಚೀನ ಕಾಲದಿಂದಲೂ ಶ್ರೀ ಆದಿಚುಂಚನಗಿರಿ ಕ್ಷೇತ್ರವು ಸಾಧಕರ ತಪೋಭೂಮಿಯಾಗಿದ್ದು ಅನ್ನದಾಸೋಹಕಾಯಕವನ್ನೂ ನಡೆಸುತ್ತಿದ್ದಿತು. ಮಹಾಸ್ವಾಮಿಗಳವರು ಪಟ್ಟಾಭಿಷಿಕ್ತರಾದ ಮೇಲೆ ಶಿಕ್ಷಣ ಟ್ರಸ್ಟನ್ನು ರಚಿಸಿ ಜ್ಞಾನದಾಸೋಹ ಕಾಯಕವನ್ನೂ ಕೈಗೆತ್ತಿಕೊಂಡರು. ಕರ್ನಾಟಕದ ಅನೇಕ ಜಿಲ್ಲೆಗಳ ಗ್ರಾಮಗಳಲ್ಲಿ ಶಾಲೆಗಳನ್ನು ತೆರೆದು ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯುವಂತೆ ವ್ಯವಸ್ಥೆ ಮಾಡಿದರು. ಇವುಗಳ ಮೇಲ್ವಿಚಾರಣೆಗೆ ಒಬ್ಬ ಅಧಿಕಾರಿಯನ್ನೂ ನೇಮಿಸಿದರು. ಎಲ್ಲ ಶಾಲೆಗಳೂ ಸುಸೂತ್ರವಾಗಿ ನಡೆಯುತ್ತಿವೆ.

ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ-ಆಗಮ ಮಹಾವಿದ್ಯಾಲಯ

ಶ್ರೀಗಳವರು ಪ್ರಾಚೀನ ಸಂಸ್ಕೃತಿ, ವೇದ, ಆಗಮಗಳನ್ನು ಅಧ್ಯಯನ ಮಾಡಲು ಅನುವಾಗುವಂತೆ ಈ ಕಾಲೇಜನ್ನು ಸ್ಥಾಪಿಸಿದ್ದಾರೆ. ಸ್ವತಃ ಸಂಸ್ಕೃತ ವಿದ್ವಾಂಸರಾದ ಶ್ರೀಗಳವರು ಪ್ರಾರಂಭದಲ್ಲಿ ಸಂಸ್ಕೃತವನ್ನು ಮಕ್ಕಳಿಗೆ ಬೋಧನೆ ಮಾಡುತ್ತಿದ್ದರು, ಇಂದೂ ಈ ಭಾಷಾಬೋದನೆಗೆ ಅಧಿಕ ಪ್ರೋತ್ಸಾಹ ನೀಡುತ್ತಿದ್ದಾರೆ.

೧೯೭೭ರಲ್ಲಿ ಕೇವಲ ಕೆಲವೇ ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಸಂಸ್ಕೃತ ಕಾಲೇಜಿನಲ್ಲಿ ಇಂದು ಒಂದು ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿದ್ದಾರೆ. ಇದು ರಾಜ್ಯದ ಕಾಲೇಜುಗಳಲ್ಲಿಯೆ ಅಗ್ರಪಂಕ್ತಿಯಲ್ಲಿದೆ. ಇಲ್ಲಿ ಎಲ್ಲ ವರ್ಗದ ಮಕ್ಕಳಿಗೂ ಉಚಿತವಾಗಿ ಸಂಸ್ಕೃತ-ವೇದ-ಆಗಮ ಶಿಕ್ಷಣವನ್ನು ನೀಡಲಾಗುತ್ತಿದೆ. ಶಾಸ್ತ್ರಭಾಗದಲ್ಲಿ ಅಲಂಕಾರ, ಅದ್ವೈತವೇದಾಂತ, ವೇದಭಾಗದಲ್ಲಿ ಕೃಷ್ಣಯಜುರ್ವೇದ ಹಾಗೂ ಆಗಮ ವಿಭಾಗದಲ್ಲಿ ಶೈವಾಗಮ ತರಗತಿಗಳು ನಡೆಯುತ್ತಿವೆ. ಇಲ್ಲಿ ಪ್ರಥಮಾ ಹಂತದಿಂದ ವಿದ್ವತ್ ಉತ್ತಮಾವರೆಗೆ ಶಿಕ್ಷಣವನ್ನು ನೀಡಲಾಗುತ್ತಿದೆ. ಸಂಸ್ಕೃತ ವೇದಾಗಮಗಳನ್ನು ಕೇಳರಿಯದ ಕುಟುಂಬದ ಮಕ್ಕಳೂ ಅತ್ಯಂತ ಆಸಕ್ತಿಯಿಂದ ಅಧ್ಯಯನ ಮಾಡುತ್ತಿರುವುದು ಇಲ್ಲಿನ ವೈಶಿಷ್ಟ್ಯ. ಇಲ್ಲಿ ಆಗಮವನ್ನು ಅಭ್ಯಾಸ ಮಾಡಿದವರು ಪಾಶ್ಚಾತ್ಯ ದೇಶಗಳಲ್ಲಿರುವ ದೇವಾಲಯಗಳಲ್ಲಿ ಪೂಜಕರಾಗಿ ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಷಯ.

ಈ ಸಂಸ್ಕೃತ ಕಾಲೇಜಿನಲ್ಲಿ ದಕ್ಷರೂ, ಅನುಭವಿಗಳೂ, ವಿದ್ವಾಂಸರೂ ಆದ ಅಧ್ಯಾಪಕರು ಅತ್ಯಂತ ಶ್ರದ್ಧೆಯಿಂದ ಅಧ್ಯಾಪನ ಕಾರ್ಯದಲ್ಲಿ ತೊಡಗಿದ್ದಾರೆ. ಭವ್ಯವಾದ ಕಟ್ಟಡ, ಪೀಠೋಪಕರಣಗಳು, ಒಳ್ಳೆಯ ಗ್ರಂಥಗಳು, ಆಸಕ್ತ ವಿದ್ಯಾರ್ಥಿ ಸಮೂಹ— ಇವುಗಳಿಂದ ಇದು ಹಿಂದಿನ ಗುರುಕುಲಾಶ್ರಮಗಳನ್ನು ನೆನಪಿಗೆ ತರುತ್ತದೆ. ಶ್ರೀಮಠಕ್ಕೆ ಸೇರುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಕಡ್ಡಾಯವಾಗಿ ಸಂಸ್ಕೃತವನ್ನು ಅಧ್ಯಯನ

ಮಾಡಬೇಕೆಂಬುದು ಪರಮಪೂಜ್ಯ ಶ್ರೀಗಳವರ ಆಶಯವಾಗಿರುತ್ತದೆ. ಗ್ರಾಮೀಣ ಮಕ್ಕಳಿಗೆ ಧರ್ಮ-ಸಂಸ್ಕೃತಿಗಳ ಪರಿಚಯವಾಗಬೇಕೆಂಬುದು ಶ್ರೀಗಳವರ ಪರಮಧ್ಯೇಯವಾಗಿದೆ. ಈ ಕಾಲೇಜು ಶ್ರೀಗಳವರ ಮಮತೆಯ ಶಿಶುವಾಗಿ ಬೆಳೆಯುತ್ತಿದೆ.

ಈ ಸಂಸ್ಕೃತ ಕಾಲೇಜಿನಲ್ಲಿ ರಾಜ್ಯದ ನಾನಾ ಮಠಗಳ ವಟುಗಳು ಅಧ್ಯಯನ ಮಾಡುತ್ತಿದ್ದಾರೆ. ಭಾವಿ ಮಠಾಧೀಶರುಗಳಿಗೆ ಸೂಕ್ತವಾದ ಶಾಸ್ತ್ರ, ವೇದ, ಆಗಮ ಶಿಕ್ಷಣವನ್ನು ನೀಡಲಾಗುತ್ತಿದೆ. ಶ್ರೀಗಳವರು ಈ ಬಗೆಗೆ ಹೆಚ್ಚು ಗಮನ ನೀಡಿ ಇವರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಿರುತ್ತಾರೆ. ಈ ಕಾಲೇಜಿನಲ್ಲಿ ಸುಮಾರು ೩೦ ಮಂದಿ ವಟುಗಳು ಅಧ್ಯಯನವನ್ನು ಮಾಡುತ್ತಿದ್ದಾರೆ. ಅಲ್ಲದೆ ನೆರೆರಾಜ್ಯಗಳಿಂದ ಬಂದ ಸುಮಾರು ನಲವತ್ತು ವಿದ್ಯಾರ್ಥಿಗಳು ಸಂಸ್ಕೃತ ವೇದಾಗಮಗಳನ್ನು ಅಧ್ಯಯನ ಮಾಡುತ್ತಿದ್ದಾರೆ. ಈ ಕಾಲೇಜಿನ ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ರಾಜ್ಯಮಟ್ಟದ, ರಾಷ್ಟ್ರಮಟ್ಟದ ಸಂಸ್ಕೃತ ಭಾಷಣ ಮತ್ತಿತರ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಬಹುಮಾನಗಳನ್ನು ಪಡೆದಿದ್ದಾರೆ. ಸಂಸ್ಕೃತ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾಗಿರುವರಲ್ಲದೆ ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಸಂಸ್ಕೃತ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ.

ಗುರುಕುಲ ಮಾಧ್ಯಮಿಕ ಶಾಲೆ

ಶ್ರೀಕ್ಷೇತ್ರವು ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ವಿಶೇಷ ಗಮನ ನೀಡುತ್ತಿದೆ. ಬಡಮಕ್ಕಳ ಅನುಕೂಲಕ್ಕಾಗಿಯೇ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ನಡೆಸುತ್ತಿದೆ. ಪೂಜ್ಯ ಶ್ರೀ ಶ್ರೀ ಭಕ್ತನಾಥ ಮಹಾಸ್ವಾಮಿಗಳವರ ಅಧಿಕಾರವಧಿಯಲ್ಲಿ ಈ ಶಾಲೆಯನ್ನು ಪ್ರಾರಂಭಿಸಲಾಯಿತು. ಶ್ರೀ ಕಲ್ಲುಮಾಳಿಗೆ ಗೌಡರ ಅಮೂಲ್ಯ ಧನಸಹಾಯ ಹಾಗೂ ಇತರೆ ಭಕ್ತಾದಿಗಳ ಪ್ರೋತ್ಸಾಹ ಸಹ ಇದಕ್ಕೆ ಸಹಕಾರಿಯಾಯಿತು. ಈ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿಯ ಸೌಲಭ್ಯವನ್ನು ಕಲ್ಪಿಸಲು ವಿದ್ಯಾರ್ಥಿನಿಲಯವೊಂದನ್ನು ತೆರೆಯಲಾಯಿತು. ಪೂಜ್ಯ ಶ್ರೀ ಶ್ರೀ ಚಂದ್ರಶೇಖರನಾಥ ಸ್ವಾಮಿಗಳೇ ಈ ಶಾಲೆಯ ವಿದ್ಯಾರ್ಥಿಗಳಿಗೆ ಸ್ವತಃ ಪಾಠ ಹೇಳಿಕೊಡುತ್ತಿದ್ದರು.

ಶ್ರೀ ಗಂಗಾಧರೇಶ್ವರಸ್ವಾಮಿ ಸಂಯುಕ್ತ ಪದವಿಪೂರ್ವ ಕಾಲೇಜು

ಪ್ರೌಢಶಾಲೆಗಳು ಕೇವಲ ತಾಲ್ಲೂಕು ಕೇಂದ್ರಗಳಲ್ಲಿದ್ದು ಗ್ರಾಮೀಣ ಮಕ್ಕಳು ಅಲ್ಲಿಗೆ ಹೋಗಿ ಅಧ್ಯಯನ ಮಾಡುವುದು ಅತ್ಯಂತ ಕಷ್ಟವಾಗಿದ್ದರಿಂದ ಶ್ರೀಕ್ಷೇತ್ರದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಲಾಯಿತು. ಇಲ್ಲಿನ ವಿದ್ಯಾರ್ಥಿಗಳಿಗೆ ಊಟ-ವಸತಿಗಳ ಉಚಿತ ವ್ಯವಸ್ಥೆಯನ್ನು ಮಾಡಲಾಗಿದೆ. ಇದರಿಂದಾಗಿ ಮಕ್ಕಳು ತಮ್ಮ ಅಧ್ಯಯನವನ್ನು ಮಾಡಲು ತುಂಬಾ ಸಹಕಾರಿಯಾಗಿದೆ. ಶ್ರೀಶ್ರೀಗಳವರು ಈ ಶಾಲೆಗೆ ಭವ್ಯವಾದ ಕಟ್ಟಡ

ಹಾಗೂ ವಿಶಾಲವಾದ ಆಟದ ಮೈದಾನವನ್ನು ನಿರ್ಮಿಸಿಕೊಟ್ಟಿದ್ದಾರೆ. ಸೇವಾಪರರಾದ ಅಧ್ಯಾಪಕ ವೃಂದ, ಚೆನ್ನಾಗಿ ಅಧ್ಯಯನ ಮಾಡುವ ವಿದ್ಯಾರ್ಥಿಸಮೂಹ, ಉತ್ತಮವಾದ ಪರಿಸರ— ಇವುಗಳಿಂದ ಇದೊಂದು ಆದರ್ಶ ಶಾಲೆಯೆನಿಸಿದೆ. ಇಲ್ಲಿ ಓದಿದ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಂದುವರಿಸಲು ಅನುಕೂಲವಾಗುವಂತೆ ಶ್ರೀ ಗಂಗಾಧರೇಶ್ವರ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಲಾಗಿದೆ. ಈ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಒಂದು ಸಾವಿರಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಿದ್ದು ಇವರು ಸಾರ್ವತ್ರಿಕ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶವನ್ನು ಪಡೆಯುತ್ತಿದ್ದಾರೆ.

ಪ್ರಥಮ ದರ್ಜೆ ಕಾಲೇಜು

ಹಿಂದೊಮ್ಮೆ ಪದವಿ ಶಿಕ್ಷಣ ಗ್ರಾಮೀಣ ಮಕ್ಕಳಿಗೆ ಕನ್ನಡಿಯ ಗಂಟಾಗಿತ್ತು. ಗ್ರಾಮೀಣ ಮಕ್ಕಳು ಹಳ್ಳಿಗಳಿಂದ ಪಟ್ಟಣಗಳಿಗೆ ಹೋಗಿ ಶಿಕ್ಷಣ ಪಡೆಯಲು ಆರ್ಥಿಕ ಅಡಚಣೆ ಇತ್ತು. ಇದನ್ನರಿತ ಪರಮಪೂಜ್ಯರು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅನುಕೂಲವಾಗಲೆಂದು ಶ್ರೀಕ್ಷೇತ್ರದಲ್ಲಿ ಪ್ರಥಮ ದರ್ಜೆ ಕಾಲೇಜನ್ನು ೧೯೭೭ರಲ್ಲಿ ಪ್ರಾರಂಭಿಸಿದರು. ಇದರಿಂದ ತುರುವೇಕೆರೆ, ಮಾಯಸಂದ್ರ, ಬೆಳ್ಳೂರು, ನಾಗಮಂಗಲ— ಮೊದಲಾದ ಸ್ಥಳಗಳ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು ಅನುಕೂಲವಾಯಿತು. ಜೊತೆಗೆ ಶ್ರೀಕ್ಷೇತ್ರದಲ್ಲಿ ಊಟ, ವಸತಿಯ ವ್ಯವಸ್ಥೆ ಉತ್ತಮವಾಗಿತ್ತು. ಆದ್ದರಿಂದ ಪದವಿ ತರಗತಿಗಳಲ್ಲಿ ಅಧ್ಯಯನ ಮಾಡಲು ಅವಕಾಶ ದೊರೆತು ನೂರಾರು ವಿದ್ಯಾರ್ಥಿಗಳು ಬಿ.ಎ. ಮತ್ತು ಬಿ.ಕಾಂ. ಪದವಿಗಳನ್ನು ಪಡೆಯಲು ತುಂಬಾ ಅನುಕೂಲವಾಯಿತು. ಈಗ ಈ ಕಾಲೇಜು ನಾಗಮಂಗಲಕ್ಕೆ ಸ್ಥಳಾಂತರಗೊಂಡಿದೆ.

ವಿದ್ಯಾರ್ಥಿನಿಲಯಗಳು

ಅನ್ನದಾನ, ವಿದ್ಯಾದಾನಗಳು ಮಠಗಳ ವೈಶಿಷ್ಟ್ಯ. ಶ್ರೀಗಳವರು ಶ್ರೀಕ್ಷೇತ್ರದಲ್ಲಿ ಸಹಸ್ರಾರು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಶ್ರೀಗಂಗಾಧರೇಶ್ವರ ಅನಾಥಾಲಯ ಮತ್ತು ಶ್ರೀ ಗಂಗಾಧರೇಶ್ವರ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿದ್ದಾರೆ. ಬಡಮಕ್ಕಳಿಗೆ, ಅನಾಥರಿಗೆ ಅನುಕೂಲವಾಗಲೆಂದು ಅನಾಥಾಲಯವನ್ನು ತೆರೆದಿದ್ದಾರೆ. ಇಲ್ಲಿನ ಮಕ್ಕಳಿಗೆ ಊಟದ ಜೊತೆಗೆ ಪುಸ್ತಕ, ಬಟ್ಟೆಗಳನ್ನು ಉಚಿತವಾಗಿ ಒದಗಿಸಿ ಅವರ ವಿದ್ಯಾಭ್ಯಾಸಕ್ಕೆ ಎಲ್ಲ ಅನುಕೂಲಗಳನ್ನು ಕಲ್ಪಿಸಿದ್ದಾರೆ. ಯಾವ ಜಾತಿಭೇದವೂ ಇಲ್ಲದೆ ಎಲ್ಲ ವರ್ಗದ ಅರ್ಹ ವಿದ್ಯಾರ್ಥಿಗಳಿಗೂ ಆಶ್ರಯವನ್ನು ನೀಡಲಾಗಿದೆ. ಇಲ್ಲಿ ಸುಮಾರು ಮೂರು ಸಾವಿರಕ್ಕಿಂತ ಹೆಚ್ಚು ಮಕ್ಕಳಿಗೆ ಅನ್ನ ದಾಸೋಹ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದಾರೆ. ವಿದ್ಯಾರ್ಥಿಗಳಿಗೆ ಹಾಗೂ ದೇವರ ಸೇವೆಗೆ ಬರುವ ಭಕ್ತಾದಿಗಳು ಪ್ರಸಾದವನ್ನು ಸ್ವೀಕರಿಸಲು ವಿಶಾಲವೂ ಭವ್ಯವೂ ಆದ ಪ್ರಸಾದ ನಿಲಯವನ್ನು ಕಟ್ಟಿಸಿದ್ದಾರೆ. ಇದನ್ನು **ಅನ್ನದಾನಿ**

ಭೈರವ ಭವನವೆಂದು ಕರೆಯುತ್ತಾರೆ. ಇಲ್ಲಿ ಸಭೆ, ಸಮಾರಂಭಗಳನ್ನು ನಡೆಸಲು ಅನುಕೂಲವಾದ ದೊಡ್ಡ ಸಭಾಂಗಣವೂ ಇದೆ. ಹೀಗೆ ಶ್ರೀ ಕ್ಷೇತ್ರವು ಶಾಲಾ, ಕಾಲೇಜುಗಳು ಹಾಗೂ ವಿದ್ಯಾರ್ಥಿನಿಲಯಗಳಿಂದ ಕೂಡಿ ಜ್ಞಾನ ದೇಗುಲವೆನಿಸಿದೆ.

ಅತಿಥಿ ಗೃಹಗಳು

ಶ್ರೀ ಗುರುದೇವತಾ ದರ್ಶನ ಹಾಗೂ ಸೇವೆಗಾಗಿ ದೂರ ದೂರದಿಂದ ಶ್ರೀ ಮಠಕ್ಕೆ ಆಗಮಿಸುತ್ತಿದ್ದ ಭಕ್ತಾದಿಗಳಿಗೆ ಇಳಿದುಕೊಳ್ಳಲು ಸೌಲಭ್ಯವಿರಲಿಲ್ಲ. ಈ ಕೊರತೆಯನ್ನು ಮನಗಂಡ ಶ್ರೀಮಠದ ಆಸ್ತಿಕ ಸದ್ಭಕ್ತರು ಸುಸಜ್ಜಿತವಾದ ಕೆಲವು ಅತಿಥಿಗೃಹಗಳನ್ನು ನಿರ್ಮಿಸಿಕೊಟ್ಟರು. ಪೂಜ್ಯಶ್ರೀ ಚಂದ್ರಶೇಖರನಾಥ ಮಹಾಸ್ವಾಮಿಗಳವರ ಅಧಿಕಾರಾವಧಿಯಲ್ಲಿ ಮೂರು ಅತಿಥಿಗೃಹಗಳ ನಿರ್ಮಾಣವಾಗಿದ್ದು, ಪೂಜ್ಯ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು ಪೀಠಾಧಿಕಾರಿಗಳಾದ ಮೇಲೆ ಇವುಗಳ ಸಂಖ್ಯೆ ಹೆಚ್ಚಿದೆ.

ಮೈಸೂರಿನ ಕಂಟ್ರಾಕ್ಟರ್ ಟಿ. ಕೆಂಪಯ್ಯ ಮತ್ತು ಸಿದ್ಧಪ್ಪನವರು, ಬೆಂಗಳೂರಿನ ಜೆ. ಭೈರಪ್ಪನವರು (ದೇವಾಂಗ), ಆವಲಹಳ್ಳಿ ಎ.ಸಿ. ದೇವೇಗೌಡರು, ಕದಲೂರು ಭೈರೇಗೌಡರು, ಲಕ್ಷ್ಮಮ್ಮನವರು, ಬೆಂಗಳೂರಿನ ಸಿದ್ಧಮ್ಮ ದವಳಗಿಯವರು, ಊಟಿಯ ಪ್ರಿಮ್ ರೋಜ್ ಕಾಟೇಜಿನ ಚುಂಚಯ್ಯನವರು, ಕಪನೀಪತಿ ಸಹೋದರರು, ದೇವಾಂಗ ಸಮಾಜದವರು, ಮಲ್ಲೇನಹಳ್ಳಿ ಸಿದ್ದೇಗೌಡರು, ದೊಮ್ಮಸಂದ್ರದ ಸರೋಜಮ್ಮನವರು, ಬಾಬುರಾಯನ ಕೊಪ್ಪಲಿನ ಬೋರಯ್ಯ ಸಹೋದರರು, ನೀಲಗಿರಿಯ ಸಿ.ಎಸ್. ನಂಜುಂಡಯ್ಯ, ಬೆಂಗಳೂರು ಕಬ್ಬನ್‌ಪೇಟೆಯ ಭೈರಲಿಂಗಪ್ಪನವರು ಮತ್ತು ಮಕ್ಕಳು ಮುಂತಾದವರು ಶ್ರೀಕ್ಷೇತ್ರಕ್ಕೆ ಬರುವ ಯಾತ್ರಿಕರು ತಂಗುವ ಸೌಕರ್ಯಕ್ಕಾಗಿ ಸುಸಜ್ಜಿತವಾದ ಅನೇಕ ಅತಿಥಿಗೃಹಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ.

ಇವುಗಳಲ್ಲದೆ ಊಟಿಯ ಲಕ್ಷ್ಮಮ್ಮನವರು ಭಕ್ತಾದಿಗಳ ಅನುಕೂಲಕ್ಕಾಗಿ ಸ್ನಾನಗೃಹಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಗುಡ್ಡದ ಮನೆಯ ಜಿ.ಬಿ. ಈರೇಗೌಡರು ಮದುವೆ ಮುಂತಾದ ಶುಭಸಮಾರಂಭ ನಡೆಸಲು ಅನುಕೂಲವಾಗುವಂತೆ ಸುಸಜ್ಜಿತವಾದ ಒಂದು ಕಲ್ಯಾಣ ಮಂಟಪವನ್ನು ತೇರು ಬೀದಿಯಲ್ಲಿ ಕಟ್ಟಿಸಿಕೊಟ್ಟಿದ್ದಾರೆ.

ಮುಡಿಕಟ್ಟೆ

ಶ್ರೀ ಗುರುದೇವತಾ ಸೇವೆಗಾಗಿ ಶ್ರೀಮಠಕ್ಕಾಗಮಿಸುವ ಭಕ್ತಾದಿಗಳು ಸಾಮಾನ್ಯ ಹಲವು ಹರಕೆಗಳನ್ನೊತ್ತೇ ಬರುತ್ತಾರೆ. ಅವುಗಳಲ್ಲಿ ಮುಡಿಕೊಡುವುದೂ ಒಂದು ಹರಕೆ. ಜಾತ್ರಾಕಾಲದಲ್ಲಿ ಈ ಹರಕೆಯವರ ಸಂಖ್ಯೆ ಅಧಿಕ. ಬಹಳ ವರ್ಷಗಳಿಂದಲೂ ಮುಡಿ

ತೆಗೆಯುವವರಿಗಿದ್ದ ತೊಂದರೆಗಳನ್ನು ಗಮನಿಸಿದ ಪೂಜ್ಯಶ್ರೀಗಳವರು ಪ್ರತ್ಯೇಕ ಮುಡಿ ಕಟ್ಟೆ ನಿರ್ಮಿಸಲು ಸಂಕಲ್ಪಿಸಿದರು. ಲಕ್ಷಾಂತರ ರೂ.ಗಳನ್ನು ಖರ್ಚುಮಾಡಿ ಬಿಂದು ಸರೋವರದ ಹಿಂಭಾಗದಲ್ಲಿ ಮುಡಿ ತೆಗೆಸಿಕೊಳ್ಳುವವರು ಹಾಗೂ ತೆಗೆಯುವವರು ಹಗುರವಾಗಿ ಕುಳಿತುಕೊಳ್ಳಲು ಅನುಕೂಲವಾಗುವಂತೆ ಕಟ್ಟೆಗಳನ್ನು ನಿರ್ಮಾಣ ಮಾಡಿಸಿದರು. ಸೂರನ್ನು ಕಟ್ಟಿಸಿದರು. ಇದರಿಂದ ಭಕ್ತಾದಿಗಳು ಒಟ್ಟಿಗೆ ಕುಳಿತು ಮುಡಿ ತೆಗೆಸಿಕೊಳ್ಳಲು ತುಂಬಾ ಅನುಕೂಲವಾಯಿತು.

ಕರೋಟಿ

ಶ್ರೀ ಮಠದ ಭಕ್ತರು ತಾವು ಸಾಕಿದ ಹಸುಗಳು ಕರುವನ್ನು ಹಾಕದ ಸಂದರ್ಭಗಳಲ್ಲಿ ಚುಂಚನಗಿರಿಗೆ ಹರಕೆ ಹೊರುವ ಸಂಪ್ರದಾಯ ನಡೆದುಬಂದಿದೆ. ಅದರಂತೆ ಹುಟ್ಟುವ ಮೊದಲ ಕರುವನ್ನು ಶ್ರೀಮಠಕ್ಕೆ ಅರ್ಪಿಸುವುದುಂಟು. ಅಲ್ಲದೆ ದೈಹಿಕವಾಗಿ ಊನವಾದ ದನ, ಕರು, ರಾಸುಗಳನ್ನು ಸಹ ಶ್ರೀಮಠಕ್ಕೆ ತಂದು ಬಿಡುತ್ತಾರೆ. ಇಂತಹ ಮೂಕ ಪ್ರಾಣಿಗಳನ್ನು ಸಲಹುವ ಜವಾಬ್ದಾರಿ ಶ್ರೀಮಠದ್ದು. ಇವುಗಳಿಗೂ ಮತ್ತು ಶ್ರೀ ಮಠದ ಹಾಲು ಮತ್ತು ವ್ಯವಸಾಯಕ್ಕೆ ಬೇಕಾದ ರಾಸುಗಳಿಗಾಗಿ ಒಂದು ಗೋಶಾಲೆ ಇದೆ. ಇದಕ್ಕೆ ಕರೋಟಿ ಎಂದು ಕರೆಯುತ್ತಾರೆ.

ಡೈರಿ

ಶ್ರೀಮರದ ತೋಟದ ಬಳಿ ಇದನ್ನು ಸ್ಥಾಪಿಸಲಾಗಿದೆ. ಇಲ್ಲಿ ಅನೇಕ ಹಾಲು ಕರೆಯುವ ಹಸುಗಳಿವೆ. ಶ್ರೀಮಠದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೂ, ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಶೂಶ್ರೂಷೆ ಪಡೆಯುವ ರೋಗಿಗಳಿಗೂ ಹಾಲನ್ನು ಒದಗಿಸಲೆಂದೇ ಪೂಜ್ಯಶ್ರೀಗಳವರು ಈ ಡೈರಿಯನ್ನು ಸ್ಥಾಪಿಸಿದ್ದಾರೆ. ಹಾಲು ಕರೆಯಲು ಅನುಕೂಲವಾದ ಯಂತ್ರಗಳನ್ನು ತರಿಸಿ, ಸುಸಜ್ಜಿತವಾಗಿ ಇಲ್ಲಿ ಅಳವಡಿಸಲಾಗಿದೆ. ಇಲ್ಲಿನ ಸುವ್ಯವಸ್ಥಿತ ನಿರ್ವಹಣೆಗಾಗಿ ಪ್ರತ್ಯೇಕ ಸಿಬ್ಬಂಧಿ ವರ್ಗವನ್ನೇ ನೇಮಿಸಲಾಗಿದೆ. ಗೋವುಗಳಿಗೆ ಬೇಕಾದ ಅಗತ್ಯ ಹುಲ್ಲನ್ನು ಇಲ್ಲಿನ ತೋಟದಲ್ಲಿಯೇ ಬೆಳೆಯಲಾಗುತ್ತಿದೆ.

ತೋಟಗಳು

ಕರೋಟಿಯ ಸುತ್ತಮುತ್ತಲಿನ ವಿಶಾಲವಾದ ಭೂಪ್ರದೇಶ ಅನಾವೃಷ್ಟಿಯ ಪರಿಣಾಮವಾಗಿ ಬೇಸಾಯಕ್ಕೆ ಉಪಯೋಗವಾಗದೆ ಬಂಜರಾಗಿ ಉಳಿದುಹೋಗಿತ್ತು. ಸಮೀಪದಲ್ಲಿಯೇ ಇರುವ ಶ್ರೀಮಠಕ್ಕೆ ಸೇರಿದ ಜೋಡಿಕಟ್ಟೆಯಲ್ಲಿ ಸಂಗ್ರಹವಾದ ಅಲ್ಪಸ್ವಲ್ಪ ನೀರು ಕಿಂಚಿತ್ ಗದ್ದೆಗೂ ಸಾಕಾಗುತ್ತಿರಲಿಲ್ಲ.

ಪೂಜ್ಯಶ್ರೀಗಳವರು ಪಟ್ಟಾಭಿಷಿಕ್ತರಾದ ಮೇಲೆ ಇಲ್ಲೆಲ್ಲಾ ಹಲವಾರು ಬಾವಿಗಳನ್ನು



ಹಿಂದಿನ ಜಗದ್ಗುರುಗಳವರುಗಳ ಗದ್ದುಗೆಗಳು, ಶ್ರೀ ಕ್ಷೇತ್ರ



ಶ್ರೀ ಗವಿಸಿದ್ದೇಶ್ವರ



ಚೋಳೂರ ಕಂಬ



ಉರಿಗದ್ದುಗೆ



ಶ್ರೀ ಕಂಬದಮ್ಮ



ಸಿದ್ಧ ಸಿಂಹಾಸನ



ಶ್ರೀ ಮಾಳವ್ವೆ



ನಾಗರಕಲ್ಲು



ಶ್ರೀ ಶ್ರೀಗಳವರ ಅಡ್ಡಪಾಲಕಿ ಉತ್ಸವ



ಶ್ರೀ ಗಂಗಾಧರೇಶ್ವರ ದೇವಾಲಯ



ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಮಾಡಿಸಿದ
ಶ್ರೀ ಗಂಗಾಧರೇಶ್ವರ ಸ್ವಾಮಿ ನೂತನ ರಥ



ಶ್ರೀ ಅನ್ನದಾನಿ ಭೈರವ ಭವನದಲ್ಲಿ ವಿದ್ಯಾರ್ಥಿಗಳು ಪ್ರಸಾದ ಸ್ವೀಕರಿಸುತ್ತಿರುವುದು



ತರಕಾರಿ ತೋಟದಲ್ಲಿ ಕಾರ್ಯನಿರತರಾಗಿರುವ ಶ್ರೀಕ್ಷೇತ್ರದ ವಿದ್ಯಾರ್ಥಿಗಳು



ಶ್ರೀ ಆದಿಚುಂಚನಗಿರಿ ಆಸ್ಪತ್ರೆ, ಬಿ.ಜಿ. ನಗರ



ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾಮಠ, ಮಂಡ್ಯ



ಶ್ರೀ ಆದಿಚುಂಚನಗಿರಿ ಆಸ್ಪತ್ರೆಯ ಒಳಾಂಗಣದ ಒಂದು ನೋಟ



ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿಲಯ



ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾಮಠ, ಅರ್ಚಕರ ಹಳ್ಳಿ



ತೋಟದಲ್ಲಿರುವ ಅತಿಥಿ ಗೃಹ, ಶ್ರೀ ಕ್ಷೇತ್ರ



ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾಮಠ, ಬೆಂಗಳೂರು



ಶ್ರೀ ಆದಿಚುಂಚನಗಿರಿ ಅತಿಥಿಗೃಹ, ಕುಂಬಳಗೋಡು



ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾಮಠ, ಕನಕಪುರ



ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾಮಠ, ಹಾಸನ



ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪ್ರೌಢಶಾಲೆ, ಶಿವಮೊಗ್ಗ



ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾಮಠ, ಮೈಸೂರು



ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾಮಠ, ಹೇಮಗಿರಿ



ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾಮಠ, ಮೇಲುಕೋಟೆ

ತೋಡಿಸಿದರು. ಬಂಜರಾಗಿದ್ದ ಭೂಮಿಗೆ ಸಮೃದ್ಧವಾಗಿ ನೀರುಣಿಸಿದರು. ವಿಶಾಲವಾದ ತೆಂಗಿನ ತೋಟವನ್ನು ನಿರ್ಮಾಣ ಮಾಡಿಸಿದರು. ಈಗ ಇಲ್ಲಿ ಸಮೃದ್ಧವಾದ ಫಸಲು ಬರುತ್ತಿದೆ. ವಿದ್ಯಾರ್ಥಿಗಳ ಹಾಗೂ ಭಕ್ತಾದಿಗಳ ಅನ್ನದಾಸೋಹಕ್ಕೆ ಅನುಕೂಲವಾಗುವಂತೆ ಸಮೃದ್ಧವಾದ ಹಣ್ಣು, ತರಕಾರಿಗಳ ಒಂದು ತೋಟವೂ ಸಹ ಇಲ್ಲಿದೆ. ಬಿಡುವಿನ ವೇಳೆಯಲ್ಲಿ ಶ್ರೀಮಠದ ವಿದ್ಯಾರ್ಥಿಗಳೇ ಇಲ್ಲಿಗೆ ಬಂದು ಕೃಷಿ ಮಾಡಿ ಹಣ್ಣು, ತರಕಾರಿಗಳನ್ನು ಬೆಳೆಯುತ್ತಾರೆ.

ವಸತಿಗೃಹಗಳು

ಪೂಜ್ಯಶ್ರೀಗಳವರು ಪಟ್ಟಾಭಿಷಿಕ್ತರಾದ ಮೇಲೆ ಶ್ರೀಮಠದ ಅಭಿವೃದ್ಧಿ ಪರಕಾರ್ಯಗಳು ಅಧಿಕಗೊಂಡವು. ಶಿಕ್ಷಣ ಸಂಸ್ಥೆಗಳು ಹೆಚ್ಚಿದವು. ವಿದ್ಯಾರ್ಥಿಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚತೊಡಗಿತು. ಕಾರ್ಯವ್ಯಾಪ್ತಿ ವಿಸ್ತಾರವಾಯಿತು. ಅಧ್ಯಾಪಕರೂ, ಸಿಬ್ಬಂದಿ ವರ್ಗದವರೂ ಅಧಿಕಗೊಂಡರು. ಅವರ ವಸತಿ ಸಮಸ್ಯೆ ಶ್ರೀಗಳವರನ್ನು ಕಾಡಿತು. ಆಗ ಶ್ರೀಗಳವರು ತಾವರೆಕೊಳದ ಹಿಂಭಾಗದ ಭೂಮಿಯನ್ನು ಚುಂಚನಹಳ್ಳಿಯವರಿಂದ ಖರೀದಿಸಿ ಸುಸಜ್ಜಿತವಾದ ವಸತಿಗೃಹಗಳನ್ನು ನಿರ್ಮಿಸಿದರು. ಈಗ ಅದು ಒಂದು ಬೃಹತ್ ಬಡಾವಣೆಯಾಗಿ ರೂಪುಗೊಂಡಿದೆ.

ಆದಿಚುಂಚನಗಿರಿ ವೈದ್ಯಕೀಯ ಕಾಲೇಜು

ಶ್ರೀಗಳವರು ದೇಶದಾದ್ಯಂತ ಸಂಚಾರ ಮಾಡಿ ಹಳ್ಳಿ ಜನರ ಬದುಕನ್ನು ತೀರ ಸಮೀಪದಿಂದ ವೀಕ್ಷಿಸಿದವರು. ಅಮೆರಿಕಾ, ಜರ್ಮನಿ ಮೊದಲಾದ ಪಾಶ್ಚಾತ್ಯ ದೇಶಗಳಿಗೂ ಭೇಟಿ ನೀಡಿ ಅಲ್ಲಿನ ಜನರ ಜೀವನ ವಿಧಾನವನ್ನು ತಿಳಿದುಕೊಂಡರು. ನಮ್ಮ ದೇಶದ ಗ್ರಾಮೀಣ ಜನರಿಗೆ ಕನಿಷ್ಠ ವೈದ್ಯಕೀಯ ಸೌಲಭ್ಯವಿಲ್ಲದುದನ್ನು ಕಂಡು ಅವರ ಹೃದಯ ನೊಂದಿತು. ಈ ಜನರಿಗೆ ವೈದ್ಯಕೀಯ ಸೇವೆ ಒದಗಿಸಿಕೊಡಬೇಕೆಂಬ ಹಂಬಲ ಶ್ರೀಗಳವರಲ್ಲಿ ಉಂಟಾಯಿತು. ಇದಕ್ಕಾಗಿ ಅನೇಕ ಉಚಿತ ವೈದ್ಯಕೀಯ ಚಿಕಿತ್ಸಾ ಶಿಬಿರಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಏರ್ಪಡಿಸಿದರು. ಇದು ತಾತ್ಕಾಲಿಕವಾದುದು. ಅಲ್ಲದೆ ಸಹಸ್ರಾರು ವಿದ್ಯಾರ್ಥಿಗಳಿದ್ದ ಶ್ರೀಕ್ಷೇತ್ರದಲ್ಲಿ ಇದಕ್ಕಿದ್ದಂತೆ ಅನಾರೋಗ್ಯಕ್ಕೆ ಒಳಗಾದ ಮಕ್ಕಳಿಗೆ ಎಷ್ಟೇ ಪ್ರಯತ್ನಪಟ್ಟರೂ ಸೂಕ್ತ ವೈದ್ಯಕೀಯ ಚಿಕಿತ್ಸೆ ದೊರೆಯದುದನ್ನು ಕಂಡು ಇವೆಲ್ಲಕ್ಕೂ ಶಾಶ್ವತ ಪರಿಹಾರವನ್ನು ಹುಡುಕಲೇಬೇಕೆಂದು ಆಲೋಚಿಸುತ್ತಿದ್ದರು. ನಮ್ಮ ದೇಶದಲ್ಲಿ ನಗರ-ಪಟ್ಟಣ ಪ್ರದೇಶಗಳಲ್ಲಿ ಮಾತ್ರ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳು ಇದ್ದು ಗ್ರಾಮೀಣರಿಗೆ ವಿಶೇಷ ಕಾಯಿಲೆಗಳು ಬಂದಾಗ ಪರಿಣಿತ ವೈದ್ಯರಿಗಾಗಿ ಪಟ್ಟಣದ ಆಸ್ಪತ್ರೆಗಳಿಗೆ ಹೋಗಬೇಕಾಗಿದ್ದ ಪರಿಸ್ಥಿತಿಯ ಅರಿವಾಯಿತು. ಬಡತನದ ಬೇಗೆಯಿಂದ ಬಸವಳಿದ, ತುತ್ತು ಅನ್ನಕ್ಕಾಗಿ ಕಷ್ಟಪಡುವ ಈ ಜನ ರೋಗನಿವಾರಣೆಗೆ ಹೆಚ್ಚು ಹಣವನ್ನು

ಅಭಿವಂದನಾ

ಎಲ್ಲಿಂದ ತಂದಾರು? ಗ್ರಾಮೀಣರ ಆರ್ಥಿಕ ಪರಿಸ್ಥಿತಿಯನ್ನರಿತಿದ್ದ ಶ್ರೀ ಶ್ರೀಗಳವರು ಇವರಿಗೆ ವೈದ್ಯಕೀಯ ಸೌಲಭ್ಯವನ್ನು ದೊರಕಿಸಿಕೊಡಲೇಬೇಕೆಂಬ ನಿರ್ಧಾರಕ್ಕೆ ಬಂದರು. ಇದಕ್ಕಾಗಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಬೇಕೆಂದು ತೀರ್ಮಾನಿಸಿದರು. ಸ್ಥಳದ ನಿರ್ಣಯ ಬಂದಾಗ ಇತರರಂತೆ ದೊಡ್ಡ ನಗರದತ್ತ ಇವರ ಗಮನ ಹೋಗಲಿಲ್ಲ. ಶ್ರೀಕ್ಷೇತ್ರದಿಂದ ಸುಮಾರು ೫ ಕಿ.ಮೀ ದೂರದ ಬೆಂಗಳೂರು-ಹಾಸನ ಹೆದ್ದಾರಿಯ ಕುಗ್ರಾಮವೆನಿಸಿದ್ದ ಜವರನಹಳ್ಳಿಯ ಬಳಿ ವಿಸ್ತಾರವಾದ ಬಂಜರು ಭೂಮಿ ಇತ್ತು. ಇದು ಮಂಡ್ಯ ಜಿಲ್ಲೆಗೆ ಸೇರಿದ್ದರೂ ಹಾಸನ, ತುಮಕೂರು, ಮೈಸೂರು ಜಿಲ್ಲೆಗಳ ಗ್ರಾಮಗಳಿಗೆ ಕೇಂದ್ರವಾಗಿತ್ತು. ಆದುದರಿಂದ ಇಲ್ಲಿ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗಳನ್ನು ಪ್ರಾರಂಭಿಸಿದರೆ ತಮ್ಮ ಬಹುದಿನಗಳ ಆಶಯ ನೆರವೇರುತ್ತದೆಂದು ಶ್ರೀಗಳವರು ಭಾವಿಸಿದರು. ಅದರಂತೆ ೧೯೮೬ರಲ್ಲಿ ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆಯನ್ನು ಪ್ರಾರಂಭಿಸಿದರು. ಇದು ನಗರದ ಕಲುಷಿತ ವಾತಾವರಣದಿಂದ ದೂರವಿದ್ದು ಪ್ರಶಾಂತ ಸುಂದರ ಪರಿಸರದ ಹಿನ್ನೆಲೆಯಿಂದ ಕೂಡಿದೆ. ಕೆಲವೇ ವರ್ಷಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳು ನಿರ್ಮಾಣಗೊಂಡವು. ಆಧುನಿಕ ಸಲಕರಣೆಗಳಿಂದ ಸಜ್ಜುಗೊಂಡ ಚಿಕಿತ್ಸಾ ವಿಭಾಗಗಳು ರೂಪಗೊಂಡವು. ಅನಾಟಮಿ, ಫಿಜಿಯಾಲಜಿ, ಬಯೋಕೆಮಿಸ್ಟ್ರಿ, ಫಾರ್ಮಕಾಲಜಿ, ಫೆಥಾಲಜಿ, ಮೈಕ್ರೊ ಬಯಾಲಜಿ, ಕಮ್ಯುನಿಟಿ ಮೆಡಿಸನ್, ಫೊರೆನ್ಸಿಕ್ ಮೆಡಿಸನ್, ಇಎನ್‌ಟಿ, ಪೀಡಿಯಾಟ್ರಿಕ್ಸ್, ಆರ್ಥೋಪೆಡಿಕ್ಸ್, ಮೆಡಿಸಿನ್, ಸರ್ಜರಿ, ಒಬಿಜಿ, ಸ್ಕಿನ್, ರೇಡಿಯಾಲಜಿ ಮೊದಲಾದ ವಿಭಾಗಗಳು ಅತ್ಯಾಧುನಿಕ ಸಲಕರಣಗಳನ್ನೊಳಗೊಂಡು ಚಿಕಿತ್ಸೆಗಾಗಿ ಸಿದ್ಧವಾಗಿವೆ. ಇವುಗಳಿಗೆ ಹೊಂದಿಕೊಂಡಂತೆ ಪ್ರಯೋಗಶಾಲೆಗಳೂ ಇವೆ. ವಿಶಾಲವಾದ ತರಗತಿಕೊಠಡಿಗಳು, ವಿಶೇಷ ಅರ್ಹತೆಯನ್ನುಳ್ಳ ಪ್ರತಿಭಾವಂತ ಅಧ್ಯಾಪಕವರ್ಗ ಇವೆ. ಅತ್ಯಂತ ಬೆಲೆಬಾಳುವ ಉಪಯುಕ್ತವಾದ ೧೦,೦೦೦ ಕ್ಕಿಂತ ಹೆಚ್ಚಾದ ಪುಸ್ತಕಗಳನ್ನುಳ್ಳ ಗ್ರಂಥಾಲಯವಿದೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ೧೨೦ಕ್ಕೂ ಹೆಚ್ಚು ನಿಯತಕಾಲಿಕಗಳನ್ನು ತರಿಸಲಾಗುತ್ತಿದೆ. ಇಲ್ಲಿ ಹಗಲಿನಲ್ಲಿ ಮಾತ್ರವಲ್ಲದೆ ರಾತ್ರಿ ವೇಳೆಯೂ ಅಧ್ಯಯನ ಮಾಡಬಹುದು. ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆಗಳಿಗೆ ವಿಶಾಲವಾದ ಆಟದ ಮೈದಾನವಿದೆ. ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಗಳನ್ನು ನಡೆಸಲು ವ್ಯವಸ್ಥೆ ಮಾಡಲಾಗಿದೆ. ಇವೆಲ್ಲವೂ ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ತುಂಬಾ ನೆರವಾಗಿವೆ.

ದೂರದಿಂದ ಬರುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಲಾಗಿದೆ. ಇವು ಆಧುನಿಕ ಸೌಲಭ್ಯಗಳಿಂದ ಕೂಡಿವೆ. ಪ್ರತಿ ವಿದ್ಯಾರ್ಥಿನಿಲಯಕ್ಕೂ ಪ್ರತ್ಯೇಕ ಪುಸ್ತಕಭಂಡಾರ ಹಾಗೂ ನಿಯತಕಾಲಿಕಗಳ ವ್ಯವಸ್ಥೆ ಇದೆ. ನಗರದಿಂದ ದೂರವಿದ್ದು ಪ್ರಶಾಂತ ವಾತಾವರಣವಿರುವುದರಿಂದ ಅಧ್ಯಯನಕ್ಕೆ ಹೇಳಿಮಾಡಿಸಿದ ತಾಣವೆನಿಸಿದೆ.

ಆದಿಚುಂಚನಗಿರಿ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ

ಯಾವುದೇ ವೈದ್ಯಕೀಯ ಕಾಲೇಜಿಗೆ ಹೊಂದಿಕೆಯಾಗಿ ಅಲ್ಲಿನ ವಿದ್ಯಾರ್ಥಿಗಳ ಪ್ರಮಾಣಕ್ಕೆ ತಕ್ಕಂತೆ ದೊಡ್ಡ ಆಸ್ಪತ್ರೆಯೊಂದು ಇರಲೇಬೇಕು. ಅದರಂತೆ ಆದಿಚುಂಚನಗಿರಿ ವೈದ್ಯಕೀಯ ಕಾಲೇಜಿನ ಸಮೀಪದಲ್ಲಿಯೆ ವಿಶಾಲವಾದ ಪ್ರದೇಶದಲ್ಲಿ ೧೯೯೦ರಲ್ಲಿ ಆಸ್ಪತ್ರೆ ಪ್ರಾರಂಭವಾಯಿತು. ಇಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣ ನೀಡುವುದರ ಜೊತೆಗೆ ಸುತ್ತಮುತ್ತಲಿನ ನೂರಾರು ಹಳ್ಳಿಗಳಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗಿದೆ. ಈ ಆಸ್ಪತ್ರೆಯಲ್ಲಿ ೭೦೦ ರೋಗಿಗಳಿಗೆ ಹಾಸಿಗೆಗಳಿದ್ದು ಅತ್ಯಂತ ಸೂಕ್ಷ್ಮವಾದ ಆಧುನಿಕ ಸಲಕರಣೆಗಳನ್ನು ಒಳಗೊಂಡಿದೆ. ಇಲ್ಲಿನ ರೋಗಿಗಳ ಹಾಸಿಗೆಯ ಸಂಖ್ಯೆಯನ್ನು ೧೦೫೦ಕ್ಕೆ ಹೆಚ್ಚಿಸಲು ಎಲ್ಲ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪೂಜ್ಯಶ್ರೀಗಳವರಿಗೆ ಅತ್ಯಂತ ಮೆಚ್ಚಿನ ವಿಷಯ ಗ್ರಾಮೀಣರಿಗೆ ವೈದ್ಯಕೀಯ ಸೌಲಭ್ಯ ದೊರಕಿಸುವುದು. ಅದಕ್ಕಾಗಿ ಅವರು ವಿದೇಶಗಳಿಗೆ ಹೋದಾಗಲೂ ಆಸ್ಪತ್ರೆಗೆ ಬೇಕಾದ ಸಲಕರಣೆಗಳನ್ನು ಪಡೆದು ರೈತರಿಗೆ ಅವರ ಮನೆಬಾಗಿಲಿನಲ್ಲಿ ತಜ್ಞವೈದ್ಯಕೀಯ ನೆರವನ್ನು ನೀಡಬೇಕೆಂಬ ಅಪೇಕ್ಷೆಯಿಂದ ವ್ಯವಹರಿಸಿದುದೂ ಉಂಟು.

ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಕಾರ್ಡಿಯೊ ತೆರಾಪಿಕ್ ಸರ್ಜರಿ, ನ್ಯೂರೊ ಸರ್ಜರಿ, ಯುರಾಲಜಿ, ಪ್ಲಾಸ್ಟಿಕ್ ಸರ್ಜರಿ ಮೊದಲಾದ ವಿಭಾಗಗಳಲ್ಲಿ ಅತ್ಯಾಧುನಿಕ ಸಲಕರಣೆಗಳನ್ನು ಬಳಸಿ ಚಿಕಿತ್ಸೆ ನೀಡುವ ವ್ಯವಸ್ಥೆ ಇದೆ. ಆಸ್ಪತ್ರೆಯ ಕೇಂದ್ರ ಭಾಗದಲ್ಲಿ ಹವಾನಿಯಂತ್ರಿತ ಎಂಟು ಶಸ್ತ್ರಚಿಕಿತ್ಸಾ ಗೃಹಗಳ ಸಂಕೀರ್ಣ, ತೀವ್ರತರ ಹೃದ್ರೋಗಗಳನ್ನು ಅತ್ಯಂತ ಎಚ್ಚರಿಕೆಯಿಂದ ನೋಡಿಕೊಳ್ಳುವಂತೆ ೧೨ ಹಾಸಿಗೆಗಳು ಹಾಗೂ ತುರ್ತು ವೈದ್ಯಕೀಯ ಗಮನನೀಡಿ ನೋಡಿಕೊಳ್ಳುವ ಘಟಕಗಳಿವೆ. ಇವುಗಳಿಗೆ ಆಧುನಿಕ ಗಣಕಯಂತ್ರೀಕೃತ ಕಾರ್ಯವಿಧಾನ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಇವಲ್ಲದೆ ಔಷಧ ವಿಭಾಗ, ಶವಪರೀಕ್ಷಾ ಗೃಹಗಳು, ಪ್ರಯೋಗಶಾಲೆಗಳು ಇವೆ. ಆಸ್ಪತ್ರೆಗೆ ಬರುವ ಹೊರ ರೋಗಿಗಳಿಗೆ ಉಚಿತ ವೈದ್ಯಕೀಯ ಚಿಕಿತ್ಸೆಯನ್ನು ನೀಡಲಾಗುತ್ತದೆ. ಅವಶ್ಯಕತೆಯುಳ್ಳವರಿಗೆ ಉಚಿತ ಆಹಾರವನ್ನು ಕೊಡಲಾಗುತ್ತದೆ. ಬಡರೋಗಿಗಳಿಗೆ ಶಸ್ತ್ರಚಿಕಿತ್ಸೆಗಳನ್ನು ಉಚಿತವಾಗಿ ಮಾಡಲಾಗುತ್ತದೆ. ಇಂಥ ದೊಡ್ಡ ಆಸ್ಪತ್ರೆಯ ಸಹಸ್ರಾರು ಹೊರ-ಒಳರೋಗಿಗಳನ್ನು ನೋಡಿಕೊಳ್ಳಲು ಶುಶ್ರೂಕರು ಬೇಕು. ಇವರಿಗೆ ತರಬೇತಿ ನೀಡಲು ಅವಶ್ಯಕ ಸೌಲಭ್ಯಗಳನ್ನೊಳಗೊಂಡ ಇನ್ಸಿಟ್ಯೂಟ್ ಆಫ್ ನರ್ಸಿಂಗ್ ಶಾಲೆಯನ್ನು ಆಸ್ಪತ್ರೆಯ ಆವರಣದಲ್ಲಿ ತೆರೆಯಲಾಗಿದೆ. ಇದು ಮಾದರಿ ಶುಶ್ರೂಷಕರ ತರಬೇತಿ ಶಾಲೆಯೆನಿಸಿದೆ. ವೈದ್ಯಕೀಯ ಪದವಿಯೋತ್ತರ ಶಿಕ್ಷಣ ವ್ಯವಸ್ಥೆ ಮಾಡಬೇಕೆಂದು ಶ್ರೀಗಳವರ ಮನದಾಸೆ ಈಗತಾನೆ ಕಾರ್ಯಗತವಾಗಿದೆ. ೯೫-೯೭ನೆ ಸಾಲಿನಿಂದ ಎಂ.ಡಿ, ಎಂ.ಎಸ್ ತರಗತಿಗಳನ್ನು ತೆರೆಯಲಾಗಿದೆ. ಈ ಕಾಲೇಜು ಮತ್ತು ಆಸ್ಪತ್ರೆ ನಗರ-ಪಟ್ಟಣಗಳಿಂದ

ದೂರದಲ್ಲಿರುವುದರಿಂದ ಇಲ್ಲಿ ಕೆಲಸ ಮಾಡುವ ನೌಕರರಿಗೂ, ವೈದ್ಯರಿಗೂ ವಿಭಾಗೀಯ ಮುಖ್ಯಸ್ಥರುಗಳಿಗೂ ಎಲ್ಲ ಆಧುನಿಕ ಸೌಲಭ್ಯಗಳಿಂದ ಕೂಡಿದ ವಸತಿ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಇದರಿಂದ ಇವರು ಹಗಲು-ರಾತ್ರಿಯೆನ್ನದೆ ಅವಶ್ಯಕತೆ ಒದಗಿದಾಗಲೆಲ್ಲಾ ಸೇವೆ ಮಾಡಲು ಅನುಕೂಲವಾಗಿದೆ. ಈ ವೈದ್ಯಕೀಯ ಕಾಲೇಜು ರಾಷ್ಟ್ರೀಯ ಹೆದ್ದಾರಿಯಲಿದ್ದು ಎದುರಿನಲ್ಲಿಯೆ ವ್ಯಾಪಾರ ಮಳಿಗೆಗಳ ಸಂಕೀರ್ಣ ಹಾಗೂ ಬಸ್ ನಿಲ್ದಾಣ ಇವೆ.

ಇವು ಶ್ರೀ ಶ್ರೀಗಳವರ ಸಾಧನೆಗೆ ಕರ್ತೃತ್ವಶಕ್ತಿಗೆ, ದೂರದೃಷ್ಟಿಗೆ, ಜನೋಪಕಾರಿ ಕಾರ್ಯಗಳಿಗೆ ಹಿಡಿದ ಕನ್ನಡಿಯಾಗಿದೆ. ಮುಳ್ಳುಗಳಿಂದ ಕೂಡಿ ಬಂಜರು ಭೂಮಿಯೆನಿಸಿದ್ದ ಜವರನಹಳ್ಳಿಯನ್ನು ಇಂದು ವೈದ್ಯಕೀಯ, ಶಿಕ್ಷಣ-ಆಧುನಿಕ ಆಸ್ಪತ್ರೆಯ ತಾಣವಾಗಿಸಿರುವ ಶ್ರೀಗಳವರು ಜ್ಞಾನಗಂಗೆಯನ್ನು ಗ್ರಾಮೀಣ ಪ್ರದೇಶಕ್ಕೆ ತಂದ ಆಧುನಿಕ ಭಗೀರಥರೆಂದರೆ ಅತ್ಯುಕ್ತಿಯೆನಿಸದು.

ಕಲ್ಪತರು ಭವನ

ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಾಗುವ ರೋಗಿಗಳನ್ನು ನೋಡಿಕೊಳ್ಳಲು ಬರುವ ಅವರ ಬಂಧುಗಳು ಉಳಿದುಕೊಳ್ಳಲು ಅನುಕೂಲಗಳಿರಲಿಲ್ಲ. ಇದರಿಂದಾಗಿ ಬಹಳ ತೊಂದರೆಗಳನ್ನು ಅನುಭವಿಸಬೇಕಾಗಿದ್ದು ರೋಗಿಗಳ ಸೇವೆಯಲ್ಲಿ ಕೊರತೆ ಉಂಟಾಗುತ್ತಿತ್ತು. ಇದನ್ನು ಗಮನಿಸಿದ ಶ್ರೀಗಳವರು ಈ ಬಗೆಗೆ ಚಿಂತನೆ ಮಾಡಿದರು ಹಾಗೂ ಚೆನ್ನರಾಯಪಟ್ಟಣ ತಾಲ್ಲೂಕಿನ ರೈತರ ಸಭೆಯನ್ನು ಏರ್ಪಡಿಸಿದರು. ಅವರೆಲ್ಲರೂ ತಮ್ಮ ಪಟ್ಟಣದ ತಾಲ್ಲೂಕಿನ ರೈತರ ಸಭೆಯನ್ನು ಏರ್ಪಡಿಸಿದರು. ಅವರೆಲ್ಲರೂ ತಮ್ಮ ತೋಟದ ತೆಂಗಿನ ಮರಗಳಿಂದ ತಲಾ ಒಂದು ತೆಂಗಿನಕಾಯಿಯನ್ನು ದೇಣಿಗೆಯಾಗಿ ಕೊಡಲು ಮುಂದೆ ಬಂದರು. ಇದರಿಂದ ಸಂಗ್ರಹಿಸಿದ ಮೊಬಲಗಿನಿಂದ ಆಸ್ಪತ್ರೆಗೆ ಹೊಂದಿಕೊಂಡಂತೆ ಹಲವು ಕೊಠಡಿಗಳ ಒಂದು ಕಟ್ಟಡವನ್ನು ಕಟ್ಟಿಸಿದರು. ಇದಕ್ಕೆ 'ಕಲ್ಪತರು ಭವನ' ಎಂಬ ಸಾರ್ಥಕ ಹೆಸರನ್ನೆ ಇಡಲಾಗಿದೆ. ಈ ಭವನ ನಿರ್ಮಾಣವಾದ ಮೇಲೆ ಆಸ್ಪತ್ರೆಯ ಒಳರೋಗಿಗಳ ಸಂಬಂಧಿಕರ ವಾಸಕ್ಕೆ ಹೆಚ್ಚು ಅನುಕೂಲವಾಯಿತು. ಪೂಜ್ಯಶ್ರೀಗಳವರ ದೂರದೃಷ್ಟಿಗೆ, ಸಂಘಟನಾ ಶಕ್ತಿಗೆ ಇದು ಉತ್ತಮ ನಿದರ್ಶನವಾಗಿದೆ. ಶ್ರೀಕ್ಷೇತ್ರಕ್ಕೆ ಹೊಂದಿಕೊಂಡಂತೆ ತೆಂಗಿನ ತೋಟಗಳು ಇವೆ. ಇಲ್ಲಿ ಹಲವು ಬಗೆಯ ಹಣ್ಣಿನ ಗಿಡಗಳನ್ನು ಬೆಳೆಸಲಾಗಿದೆ. ಆದರೂ ಇವುಗಳಲ್ಲಿ ತೆಂಗಿನ ಮರಗಳೇ ಹೆಚ್ಚು. ಇಲ್ಲಿ ವಿದ್ಯಾರ್ಥಿನಿಲಯಕ್ಕೆ ಬೇಕಾದ ತರಕಾರಿ ಸೊಪ್ಪು ಮೊದಲಾದುವನ್ನು ಬೆಳಸಲಾಗುತ್ತಿದೆ. ಸಂಜೆಯ ವೇಳೆ ವಿದ್ಯಾರ್ಥಿನಿಲಯದ ಮಕ್ಕಳು ತಂಡ, ತಂಡವಾಗಿ ತೋಟಗಾರಿಕೆ ಮಾಡುತ್ತಾರೆ. ವಿದ್ಯಾರ್ಥಿಗಳಲ್ಲಿ ಕಾರ್ಯಪ್ರಜ್ಞೆಯನ್ನುಂಟು ಮಾಡಲು ಪೂಜ್ಯಶ್ರೀಗಳವರ ಮಾಡಿರುವ ಈ ವ್ಯವಸ್ಥೆ ಅನುಕರಣೀಯವಾದುದು.

ಶ್ರೀ ಆದಿಚುಂಚನಗಿರಿ ಇಂಗ್ಲಿಷ್ ಶಾಲೆ

ಒಮ್ಮೆ ಬಂಜರು ಭೂಮಿ ಎನಿಸಿದ್ದ ಜವರನಹಳ್ಳಿ, ವೈದ್ಯಕೀಯ ಕಾಲೇಜು, ಭವ್ಯವಾದ ಆಸ್ಪತ್ರೆ ಮೊದಲಾದ ಸೌಕರ್ಯಗಳನ್ನು ಪಡೆದ ಮೇಲೆ ಇಲ್ಲಿನ ಸಿಬ್ಬಂದಿ ವರ್ಗದ ಮಕ್ಕಳು ಹಾಗೂ ಗ್ರಾಮೀಣ ಮಕ್ಕಳಿಗೆ ಅನುಕೂಲವಾಗವಂತಹ ಒಳ್ಳೆಯ ಗುಣಮಟ್ಟದ ಶಾಲೆಯ ಅವಶ್ಯಕತೆಯನ್ನರಿತು ಪೂಜ್ಯಶ್ರೀಗಳವರು ೧೯೮೮-೮೯ನೇ ಸಾಲಿನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರು. ಇಲ್ಲಿ ನರ್ಸರಿಯಿಂದ ಏಳನೆ ತರಗತಿವರೆಗೂ ಶಿಕ್ಷಣವನ್ನು ನೀಡಲಾಗುತ್ತಿದೆ. ಪ್ರಾಥಮಿಕ ಶಾಲೆಯಲ್ಲಿ ಓದಿದ ಮಕ್ಕಳು ತಮ್ಮ ಶಿಕ್ಷಣವನ್ನು ಮುಂದುವರಿಸಲು ಅನುಕೂಲವಾಗುವಂತೆ ಶ್ರೀ ಭಕ್ತಾನಾಥ ಸ್ವಾಮಿ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ದಕ್ಷರೂ ಅನುಭವಿಗಳೂ ಉತ್ತಮ ಶಿಕ್ಷಣ ಪಡೆದ ಅಧ್ಯಾಪಕ ಸಮೂಹ, ಒಳ್ಳೆಯ ಪೀಠೋಪಕರಣಗಳು, ಪ್ರಯೋಗ ಶಾಲೆ ಮೊದಲಾದ ಎಲ್ಲ ಆಧುನಿಕ ಸೌಲಭ್ಯಗಳನ್ನು ಒಳಗೊಂಡ ಈ ಶಾಲೆಗಳಲ್ಲಿ ಉತ್ತಮದರ್ಜೆಯ ಶಿಕ್ಷಣವನ್ನು ನೀಡಲಾಗುತ್ತಿದೆ. ಇದು ಪಟ್ಟಣಗಳಲ್ಲಿರುವ ಉತ್ತಮ ಶಾಲೆಗಳನ್ನು ಮೀರಿಸುವಂತಿದೆ. ಈ ಶಾಲೆ ಮಕ್ಕಳ ಬೌದ್ಧಿಕ ಮತ್ತು ದೈಹಿಕ ಬೆಳವಣಿಗೆಗೆ ವಿಶೇಷವಾದ ಆಸಕ್ತಿಯನ್ನು ವಹಿಸುತ್ತಿದೆ.

ಈ ಶಾಲೆಗೆ ಭವ್ಯವಾದ ಕಟ್ಟಡ, ವಿಶಾಲವಾದ ಆಟದ ಮೈದಾನವಿದ್ದು ಹೆದ್ದಾರಿಯಲ್ಲಿ ಸಂಚರಿಸುವವರ ಗಮನವನ್ನು ಸೆಳೆಯುತ್ತಿದೆ. ಗ್ರಾಮೀಣ ಮಕ್ಕಳಿಗೆ ಗುಣಾತ್ಮಕವಾದ ಶಿಕ್ಷಣ ನೀಡಬೇಕೆಂಬ ಶ್ರೀಗಳವರ ಮಹತ್ವಾಕಾಂಕ್ಷೆಗೆ ಇದು ನಿದರ್ಶನವಾಗಿದೆ. ಇದು ಸಹಜವಾಗಿ ಮುಂದೆ ಉನ್ನತ ಶಿಕ್ಷಣ ಕೇಂದ್ರವಾಗುವುದರಲ್ಲಿ ಸಂದೇಹವಿಲ್ಲ.

ಬೆಳ್ಳೂರಿನಲ್ಲಿ ಒಕ್ಕಲಿಗ ಸಂಘದವರು ಶ್ರೀಮಠಕ್ಕೆ ದಾನ ಮಾಡಿರುವ ನಿವೇಶನದಲ್ಲಿ ಬೃಹತ್ತಾದ ಒಂದು ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಲಾಗಿದೆ.

ಶ್ರೀಕ್ಷೇತ್ರಕ್ಕೆ ಸಮೀಪದಲ್ಲಿರುವ ತಾವರೆಕೆರೆಯಲ್ಲಿ ಶ್ರೀಗಣೇಶನಾಥ ಸ್ವಾಮೀಜಿ ಪ್ರಾಢಶಾಲೆಯನ್ನು ಪ್ರಾರಂಭಿಸಲಾಗಿದೆ. ಇದು ಸುತ್ತಲಿನ ಗ್ರಾಮೀಣ ಮಕ್ಕಳು ಶಿಕ್ಷಣವನ್ನು ಮುಂದುವರಿಸಲು ತುಂಬ ಅನುಕೂಲವಾಗಿದೆ. ಒಳ್ಳೆಯ ಪರಿಸರವನ್ನುಳ್ಳ ಈ ಶಾಲೆಗೆ ಸ್ವಂತ ಕಟ್ಟಡವಿದ್ದು ಅಧ್ಯಯನಕ್ಕೆ ತುಂಬಾ ಸಹಕಾರಿಯಾಗಿದೆ. ನಾಗಮಂಗಲ ತಾಲ್ಲೂಕು ಹುಲಿಕೆರೆಯಲ್ಲಿ ಶ್ರೀ ಆದಿಶಕ್ತಿ ಪ್ರೌಢಶಾಲೆಯು ಉತ್ತಮ ಅಧ್ಯಾಪಕರು, ಓದುವ ಮಮತೆಯುಳ್ಳ ವಿದ್ಯಾರ್ಥಿಗಳನ್ನೊಳಗೊಂಡು ಉತ್ತಮ ಶಾಲೆ ಎನಿಸಿದೆ. ನಾಗಮಂಗಲ ತಾಲ್ಲೂಕಿನ ಬ್ರಹ್ಮದೇವರಹಳ್ಳಿಯಲ್ಲಿ ಶ್ರೀರಾಮಾನಂದನಾಥ ಸ್ವಾಮಿ ಪ್ರೌಢಶಾಲೆ ಇದೆ.

ಇದು ಊರಿನ ಸಮೀಪದ ಎತ್ತರ ಪ್ರದೇಶದಲ್ಲಿದ್ದು ತನ್ನದೇ ಆದ ಕಟ್ಟಡದಿಂದ ಕೂಡಿ ಗ್ರಾಮಾಂತರ ಪ್ರದೇಶದ ಆದರ್ಶ ಶಾಲೆ ಎನಿಸಿದೆ. ಇಲ್ಲಿ ಸುಮಾರು ಮುನ್ನೂರು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದು, ಉತ್ತಮ ಫಲಿತಾಂಶಕ್ಕಾಗಿ ಅಧ್ಯಾಪಕರು ಮಾಡುತ್ತಿರುವ ಪ್ರಯತ್ನ ಪ್ರಶಂಸನೀಯವಾಗಿದೆ. ಪೀಠೋಪಕರಣ ವಿಶಾಲವಾದ ಆಟದ ಮೈದಾನ-ಶಾಲೆಯ ಅಭಿವೃದ್ಧಿಗೆ ಸಹಕಾರಿಯಾಗಿದೆ.

ಜಾತ್ರಾ ಮಹೋತ್ಸವ

ಶ್ರೀ ಆದಿಚುಂಚನಗಿರಿಯು ಕರ್ನಾಟಕದಲ್ಲಿ ಸುಪ್ರಸಿದ್ಧವಾದ ಪ್ರಾಚೀನ ಪುಣ್ಯಕ್ಷೇತ್ರ. ಇಲ್ಲಿ ವರ್ಷಕ್ಕೊಮ್ಮೆ ಜಾತ್ರೆಯು ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಇದು ಉತ್ತರಾಯಣ ಪಾಲ್ಗುಣ ಶುದ್ಧ ಸಪ್ತಮಿಯಿಂದ ಬಹುಳ ಪಾಡ್ಯಮಿವರೆಗೆ ಒಂದು ವಾರದ ಕಾಲ ಬಹು ವೈಭವವಾಗಿ ನಡೆಯುತ್ತದೆ. ಶ್ರೀ ಗಂಗಾಧರೇಶ್ವರ ಸ್ವಾಮಿ ರಥೋತ್ಸವವು ಹೋಳಿ ಹುಣ್ಣುಮೆಯೆಂದು ಬೆಳಗಿನ ಜಾವ ಬ್ರಾಹ್ಮೀ ಮುಹೂರ್ತದಲ್ಲಿ ನಡೆಯುತ್ತದೆ.

ಧರ್ಮಧ್ವಜ ಸ್ಥಾಪನೆಯೊಡನೆ ಈ ಜಾತ್ರೆಯು ಪ್ರಾರಂಭವಾಗುತ್ತದೆ. ಕ್ರಮವಾಗಿ ಪ್ರತಿ ದಿನ ರಾತ್ರಿ ಶ್ರೀ ಚಂದ್ರಮೌಳೀಶ್ವರ ಸ್ವಾಮಿ, ಶ್ರೀ ಮಲ್ಲೇಶ್ವರ ಸ್ವಾಮಿ, ಶ್ರೀ ಕಾಲಭೈರವೇಶ್ವರ ಸ್ವಾಮಿ ಹೂವಿನ ಪಾಲಕಿ, ಮತ್ತು ಶ್ರೀಗಳವರ ಹೂವಿನ ಪಾಲಕಿ, ಉತ್ಸವಗಳು ನಡೆಯುತ್ತವೆ. ಶ್ರೀ ಕಾಲಭೈರವೇಶ್ವರ ಸ್ವಾಮಿಗೆ ರಜತಕವಚ ಅಲಂಕಾಲ ಪೂಜೆ, ಶ್ರೀ ಗಂಗಾಧರೇಶ್ವರ ಸ್ವಾಮಿಗೆ ರಜತಕವಚ ಹಾಗೂ ರಜತ ನಾಗಾಭರಣ ಅಲಂಕಾರ ಪೂಜೆಗಳೂ ನಡೆಯುತ್ತವೆ.

ಜಾತ್ರಾ ಸಮಯದಲ್ಲಿ ಶ್ರೀಗಳವರು ಜ್ವಾಲಾಪೀಠ ಮತ್ತು ಸಿಂಹಾಸನಾರೋಹಣ ಮಾಡುತ್ತಾರೆ. ಚಂದ್ರಮಂಡಲೋತ್ಸವ, ಶ್ರೀ ಕಾಲಭೈರವೇಶ್ವರ ಸ್ವಾಮಿಯ ತಿರುಗಣೆ ಉತ್ಸವಗಳೂ ನಡೆಯುತ್ತವೆ.

ರಥೋತ್ಸವದ ಹಿಂದಿನ ದಿನ ಸರ್ವಧರ್ಮ ಸಮ್ಮೇಳನವು ನಡೆಯುತ್ತದೆ. ಮರುದಿನ ಶ್ರೀ ಗಂಗಾಧರೇಶ್ವರ ಸ್ವಾಮಿ ರಥೋತ್ಸವ, ಶ್ರೀಗಳವರ ಅಡ್ಡಪಾಲಕಿ ಉತ್ಸವ ಜಾನಪದ ಕಲಾವಿದರ ಮೆರವಣಿಗೆ ಮತ್ತು ವಿಶೇಷ ಬಾಣಬಿರುಸುಗಳ ಪ್ರದರ್ಶನ ನಡೆಯುತ್ತವೆ. ರಥೋತ್ಸವದಲ್ಲಿ ಲಕ್ಷಾಂತರ ಮಂದಿ ಭಕ್ತರು ಭಾಗವಹಿಸುತ್ತಾರೆ. ಶ್ರೀ ಸೋಮೇಶ್ವರ ಸ್ವಾಮಿ ಉತ್ಸವ, ಅವಭೃತ ಸ್ನಾನದೊಂದಿಗೆ ಜಾತ್ರೆಯು ಮುಕ್ತಾಯವಾಗುತ್ತದೆ.

ಶ್ರೀಮಠವು ಎಲ್ಲಾ ಭಕ್ತರಿಗೂ ದಾಸೋಹವನ್ನು ವ್ಯವಸ್ಥೆ ಮಾಡಿರುತ್ತದೆ.

ಅಲ್ಲದೆ ನಾಟಕ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳು ಪ್ರತಿನಿತ್ಯ ನಡೆಯುತ್ತವೆ.

ಪ್ರಾಚೀನ ಕಾಲದಿಂದಿದ್ದ ತೇರು ಹಳೆಯದಾಗಿ ಶಿಥಿಲಗೊಂಡಿತ್ತು. ಇದು ಕಲ್ಲುಗಾಲಿಗಳ ತೇರು. ಇದನ್ನು ರಥೋತ್ಸವಕ್ಕೆ ಬಳಸುವುದು ಅಪಾಯಕರವೆಂದು ಭಾವಿಸಿದ ಶ್ರೀಗಳವರು ವಿನೂತನವೂ, ಸುಂದರವೂ ಆದ ಹೊಸ ರಥವನ್ನು ನಿರ್ಮಿಸಿದ್ದಾರೆ. ಇದು ಬಿಡಿಸಿದ ಅನೇಕ ದೇವತಾ ಮೂರ್ತಿಗಳಿಂದ ಅಲಂಕೃತವೂ, ಆಕರ್ಷಕವೂ ಆಗಿದೆ.

ಜಾತ್ರಾಸಮಯದಲ್ಲಿ ಶ್ರೀಗಳವರು ಭಕ್ತಾದಿಗಳಿಗೆ ಯಾವ ತೊಂದರೆಯೂ ಆಗದಂತೆ ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ದೀಪಗಳ ವ್ಯವಸ್ಥೆಯನ್ನು ಮಾಡಿರುತ್ತಾರೆ.

ಪರಮಪೂಜ್ಯ ಶ್ರೀಗಳವರು ರಾಜ್ಯಾದ್ಯಂತ ಭಕ್ತಕೋಟಿಯ ಬೇಕು-ಬೇಡಗಳಿಗೆ ಸ್ಪಂದಿಸಬೇಕಾಗಿರುವುದರಿಂದ ಒಂದೆಡೆ ನೆಲೆಸಿ ಕ್ಷೇತ್ರದ ಚಟುವಟಿಕೆಗಳನ್ನು ಗಮನಿಸುವುದು ಕಷ್ಟಸಾಧ್ಯವಾಯಿತು. ಆದುದರಿಂದ ಶ್ರೀಕ್ಷೇತ್ರದ ಎಲ್ಲಾ ಸೇವಾ ಕಾರ್ಯಗಳನ್ನು ಸ್ವಲ್ಪವೂ ಲೋಪಬಾರದಂತೆ ತಮ್ಮ ಮಾರ್ಗದರ್ಶನಕ್ಕನುಗುಣವಾಗಿ ನಿರ್ವಹಿಸಲು ತ್ಯಾಗಿಗಳು ಸೇವಾಪರರೂ, ಕರ್ತೃತ್ವಶಾಲಿಗಳೂ ಆದ ಶ್ರೀ ಶ್ರೀ ಪುರುಷೋತ್ತಮಾನಂದನಾಥ ಸ್ವಾಮಿಗಳನ್ನು ನೇಮಿಸಿದ್ದಾರೆ. ಇವರು ಪೂಜ್ಯಶ್ರೀಗಳವರ ಆದೇಶಕ್ಕೆ, ಮಾರ್ಗದರ್ಶನಕ್ಕೆ ಸ್ವಲ್ಪವೂ ಲೋಪಬಾರದಂತೆ ಬಹಳ ದಕ್ಷತೆಯಿಂದ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಇವರ ದೃಷ್ಟಿಯಲ್ಲಿ ವಿಶ್ರಾಂತಿ ಎಂದರೆ ಒಂದು ಕೆಲಸದಿಂದ ಮತ್ತೊಂದು ಕೆಲಸಕ್ಕೆ ತೊಡಗುವುದು ಎಂದೇ ಅರ್ಥ. ಕೃಷಿ ಇವರ ಹವ್ಯಾಸಗಳಲ್ಲಿ ಒಂದು. ವಿದ್ಯಾರ್ಥಿನಿಲಯಗಳ ಮೇಲ್ವಿಚಾರಣೆ, ಗುರುದೇವತಾ ದರ್ಶನಕ್ಕೆಂದು ಬರುವ ಭಕ್ತರ ಯೋಗಕ್ಷೇಮ ನೋಡಿಕೊಳ್ಳುವುದು, ಮೊದಲಾದ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಇವರ ಯಾವುದೆ ಕೆಲಸದಲ್ಲಿ ಅಚ್ಚುಕಟ್ಟು, ಪರಿಶ್ರಮ, ತನ್ಮಯತೆ, ನಿಪುಣತೆ ಎದ್ದುಕಾಣುತ್ತದೆ. ವೈದ್ಯಕೀಯ ಕಾಲೇಜು-ಆಸ್ಪತ್ರೆ, ಶಾಲೆಗಳ ಕಟ್ಟಡಗಳ ನಿರ್ಮಾಣ ಮೊದಲಾದ ಕೆಲಸಗಳನ್ನು ಪೂಜ್ಯಶ್ರೀಗಳವರ ಆದೇಶದಂತೆ ಕಾರ್ಯಗತಗೊಳಿಸುವುದರಲ್ಲಿ ಇವರು ದಕ್ಷರು.

***

ಬೆಂಗಳೂರು

ಪೂಜ್ಯಶ್ರೀಗಳವರು ಜನೋಪಯೋಗಿಯಾದ ಬಹು ಯೋಜನೆಗಳನ್ನು ಕಾರ್ಯಗತಗೊಳಿಸಲು ಪ್ರಾರಂಭಿಸಿರುವ ಶಾಖಾ ಮಠಗಳಲ್ಲಿ ವಿಜಯನಗರದಲ್ಲಿರುವ ಶಾಖಾಮಠವೂ ಒಂದು. ಬೆಂಗಳೂರಿನ ಮಾಗಡಿ ರಸ್ತೆಯಿಂದ ವಿಜಯನಗರ ಬಡಾವಣೆಗೆ ಪ್ರವೇಶಿಸುತ್ತಿದ್ದಂತೆ ಈ ಶಾಖಾಮಠ ಎದುರಾಗುತ್ತದೆ. ಪೂಜ್ಯಶ್ರೀಗಳವರು ಬೆಂಗಳೂರಿನಲ್ಲಿ ಬಿಡಾರ ಮಾಡಿದಾಗ ಗಣ್ಯರು, ಅಧಿಕಾರಿಗಳು, ಜನತಾ ಪ್ರತಿನಿಧಿಗಳು, ಭಕ್ತರು ಈ ಶಾಖಾ ಮಠಕ್ಕೆ ಶ್ರೀ ಶ್ರೀಗಳವರ ದರ್ಶನಾಶೀರ್ವಾದಗಳಿಗಾಗಿ ಬರುತ್ತಿರುತ್ತಾರೆ. ಸಾಮಾಜಿಕ, ಧಾರ್ಮಿಕ ಸಮ್ಮೇಳನಗಳೂ ಇಲ್ಲಿ ನಡೆಯುತ್ತಿರುತ್ತವೆ. ವಿದೇಶಗಳಿಂದ ಬರುವ ಶ್ರೀ ಕ್ಷೇತ್ರದ ಭಕ್ತರು ಇಲ್ಲಿಗೆ ಬಂದು ನಂತರ ಶ್ರೀಕ್ಷೇತ್ರಕ್ಕೆ ಪಯಣಿಸುತ್ತಾರೆ. ಈ ಬಗೆಯ ಕಾರ್ಯಚಟುವಟಿಕೆಗಳಿಂದ ಈ ಶಾಖಾ ಮಠದ ಕಾರ್ಯವ್ಯಾಪ್ತಿ ಅಧಿಕವಾಗಿದೆ.

ಶಾಖಾಮಠಕ್ಕೆ ಹೊಂದಿಕೊಂಡಂತೆ ಭವ್ಯವಾದ ಗಂಗಾಧರೇಶ್ವರಸ್ವಾಮಿ ದೇವಾಲಯವಿದೆ. ಇದರಿಂದ ವಿಜಯನಗರ ಬಡಾವಣೆಯ ಈ ಭಾಗದ ಜನರಿಗೆ ತುಂಬಾ ಉಪಕಾರವಾಗಿದೆ. ಜನರಲ್ಲಿ ಭಕ್ತಿ ಭಾವಗಳು ಮೈದುಂಬಿ ದೈವಭಕ್ತಿ, ಧಾರ್ಮಿಕ ಭಾವನೆಗಳು ಹೆಚ್ಚಲು ತುಂಬಾ ಸಹಕಾರಿಯಾಗಿದೆ. ವಿಶಾಲವಾದ ಈ ದೇವಾಲಯವನ್ನು ಪ್ರವೇಶಿಸುತ್ತಿದ್ದಂತೆ ಶ್ರೀ ಗಂಗಾಧರೇಶ್ವರಸ್ವಾಮಿಯ ದರ್ಶನವಾಗುತ್ತದೆ. ಸ್ವಾಮಿಯ ವಿಗ್ರಹದ ಎಡಭಾಗದಲ್ಲಿ ಜಗಜ್ಜನನಿ, ಮಹಾಮಾತೆ ಶಕ್ತಿ ಸ್ವರೂಪಿಣಿ ಪಾರ್ವತೀ ದೇವಿ, ಬಲಭಾಗದಲ್ಲಿ ವಿಘ್ನನಿವಾರಕ ಗಣಪತಿ ಮೂರ್ತಿಗಳಿದ್ದು ಭಕ್ತರ ಮನದಲ್ಲಿ ಭಕ್ತಿಭಾವವನ್ನು ನೂರ್ಮಡಿಗೊಳಿಸುವಷ್ಟು ಪ್ರಭಾವ ಬೀರುತ್ತಿವೆ. ದೇವಾಲಯದ ಹೊರಭಾಗದ ಗೋಡೆಗಳ ಮೇಲೆ ಈಶ್ವರನ ಅದ್ಭುತ ಮಹಿಮೆಯನ್ನು ತಿಳಿಸುವ ಕೆತ್ತನೆಗಳು ಭಕ್ತರನ್ನು ಮೈಮರೆಯುವಂತೆ ಮಾಡುತ್ತವೆ. ಚಿಕ್ಕ ಚಿಕ್ಕ ಮಕ್ಕಳೂ ಈ ಕೆತ್ತನೆಗಳನ್ನು ನೋಡುತ್ತಾ ಇವುಗಳಿಗೆ ಸಂಬಂಧಿಸಿದ ಕಥೆಗಳನ್ನು ಕುತೂಹಲದಿಂದ ಕೇಳಿ ತಿಳಿದುಕೊಂಡು ಭಕ್ತಿ ಭಾವುಕರಾಗುತ್ತಾರೆ. ದೇವಾಲಯದ ಒಳಭಾಗದ ಗೋಡೆಗಳ ಮೇಲೆ ಸುಲಭವೂ, ಸರಳವೂ ಆದ ಪ್ರಾರ್ಥನೆಗಳನ್ನು ಕೆತ್ತಲಾಗಿದೆ. ಗರ್ಭಗುಡಿಯ ಮೇಲೆ ದೇವತೆಗಳ ಸುಂದರವಾದ ವಿಗ್ರಹಗಳನ್ನು ಒಳಗೊಂಡ ಗೋಪುರ ಆಕರ್ಷಕವಾಗಿದೆ. ದೇವಾಲಯದಲ್ಲಿ ಆಗಮೋಕ್ತ ರೀತಿಯಲ್ಲಿ ಅಭಿಷೇಕ, ಪೂಜಾದಿಗಳು ನಡೆಯುತ್ತವೆ. ಪ್ರತಿನಿತ್ಯ ಭಕ್ತರು ತಂಡೋಪತಂಡವಾಗಿ ಬಂದು ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿ, ಭಕ್ತಿಯಿಂದ ನಮಿಸುವ ದೃಶ್ಯ ನಾಸ್ತಿಕರನ್ನೂ ಆಸ್ತಿಕರನ್ನಾಗಿಸುತ್ತದೆ. ದೇವಾಲಯದಲ್ಲಿ ದಿನವೂ ಹರಿಕಥೆ, ಪ್ರವಚನ, ಭಜನೆ ಇತ್ಯಾದಿ ಕಾರ್ಯಕ್ರಮಗಳಿರುತ್ತವೆ. ಹಬ್ಬ ಹರಿದಿನಗಳಲ್ಲಿ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಒಟ್ಟಿನಲ್ಲಿ ಇದೊಂದು ಪವಿತ್ರವಾದ ಧಾರ್ಮಿಕ, ಸಾಂಸ್ಕೃತಿಕ ಕೇಂದ್ರವಾಗಿದೆ. ಇದರ ನಿರ್ಮಾಣ ಸಮಯದಲ್ಲಿ ಬಿ. ಕೃಷ್ಣಪ್ಪನವರು

ಸಲ್ಲಿಸಿದ ಸೇವೆಯು ಸ್ಮರಣೀಯ. ಶ್ರೀ ಗಂಗಾಧರೇಶ್ವರಸ್ವಾಮಿ ದೇವಾಲಯದ ಸನಿಹದಲ್ಲಿಯೇ ಶ್ರೀ ಆದಿಚುಂಚನಗಿರಿ ವಿದ್ಯಾರ್ಥಿನಿಲಯವಿದೆ. ಉನ್ನತ ಶಿಕ್ಷಣದ ತಾಣವೆನಿಸಿರುವ ಬೆಂಗಳೂರು ನಗರಕ್ಕೆ ಉನ್ನತ ಪದವಿ ತರಗತಿಗಳಲ್ಲಿ ಅಧ್ಯಯನ ಮಾಡಲು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಬರುತ್ತಾರೆ. ಇಂಥವರಿಗಾಗಿ ವಿದ್ಯಾರ್ಥಿನಿಲಯವನ್ನು ತೆರೆಯಲಾಗಿದೆ. ಇಂಜಿನಿಯರಿಂಗ್, ವೈದ್ಯಕೀಯ, ಪದವಿಯೋತ್ತರ ತರಗತಿಗಳಲ್ಲಿ ಅಭ್ಯಾಸ ಮಾಡುವ ಮಕ್ಕಳಿಗೆ ಪ್ರವೇಶ ನೀಡಲಾಗುತ್ತದೆ. ಇಲ್ಲಿ ಶ್ರೀಮಠಕ್ಕನುಗುಣವಾದ ಶಿಸ್ತು-ಶ್ರದ್ಧೆಗಳನ್ನು ವಿದ್ಯಾರ್ಥಿಗಳು ಪಾಲಿಸಬೇಕಾಗಿರುತ್ತದೆ. ಇಲ್ಲಿ ಸುಮಾರು ನೂರೈವತ್ತು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. ಇದಕ್ಕೆ ಹೊಂದಿಕೊಂಡಂತಿರುವ ಅಂಗಡಿ ಸಾಲುಗಳಿಂದ ಬರುವ ಆದಾಯವನ್ನು ವಿದ್ಯಾರ್ಥಿನಿಲಯಕ್ಕೆ ವಿನಿಯೋಗಿಸಲಾಗುತ್ತಿದೆಸೀ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ಉದಾರ ದಾನಿಗಳು ಮುಂದೆ ಬಂದು ಮುಕ್ತಹಸ್ತದಿಂದ ದಾನ ನೀಡಿದ್ದಾರೆ. ವಿದ್ಯಾದಾನ ಮಹಾದಾನವೆಂದು ಹೇಳುವುದರಿಂದ ಅವರ ಈ ಕಾರ್ಯ ಅನುಕರಣೀಯ. ಇದಲ್ಲದೆ ಮೆಜೆಸ್ಟಿಕ್ ವೃತ್ತದ ಬಳಿ ಒಂದು ವಿದ್ಯಾರ್ಥಿನಿಲಯ ಇದೆ. ಇಲ್ಲಿ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯಮಾತ್ರ ಉಂಟು.

ಈ ಶಾಖಾಮಠದ ಬಲಭಾಗದಲ್ಲಿ ಉತ್ತಮವಾದ ಶ್ರೀ ಆದಿಚುಂಚನಗಿರಿ ಸಮುದಾಯ ಭವನವಿದೆ. ಇಲ್ಲಿ ಮಂಗಳ ಕಾರ್ಯಗಳನ್ನು ನಡೆಸಲು ಎಲ್ಲ ಅನುಕೂಲಗಳೂ ಇವೆ. ಇದರಿಂದ ಬರುವ ಹಣವನ್ನು ಶಾಲೆಗಳು ಹಾಗೂ ವಿದ್ಯಾರ್ಥಿನಿಲಯಗಳನ್ನು ನಡೆಸಲು ವಿನಿಯೋಗಿಸಲಾಗುತ್ತಿದೆ. ಇದಲ್ಲದೆ ಈ ಸಮುದಾಯಭವನದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಸಮಾರಂಭಗಳನ್ನು, ಶೈಕ್ಷಣಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

ವೈಜ್ಞಾನಿಕ ಸಂಶೋಧನೆ ಹೆಚ್ಚಿದಂತೆಲ್ಲಾ ಹೊಸ ಹೊಸ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಅಪರಿಹಾರ್ಯವಾದ ರೋಗಗಳೂ ತಲೆದೋರುತ್ತಿವೆ. ಪಾಶ್ಚಾತ್ಯವೈದ್ಯ ಪದ್ಧತಿಯ ರೋಗ ನಿವಾರಣಾ ಔಷಧಿಗಳಿಂದ ಜನ ಬೇಸತ್ತಿದ್ದಾರೆ. ತತ್ಫಲವಾಗಿ ಅನಪಾಯಕಾರಿಯೂ, ಸರಳವೂ ಆದ ರೋಗ ನಿವಾರಣಾ ಕ್ರಮಗಳಿಗೆ ಶರಣುಹೋಗಿದ್ದಾರೆ. ಈ ದಿಸೆಯಲ್ಲಿ 'ಯೋಗಾಸನ' ತರಬೇತಿ ಕೇಂದ್ರಗಳು ಬಹಳ ಜನಪ್ರಿಯವಾಗುತ್ತಿವೆ. ಇದರ ಬಹೂಪಯೋಗವನ್ನರಿತು ಈ ಶಾಖಾಮಠದ ಸಮುದಾಯಭವನಕ್ಕೆ ಹೊಂದಿಕೊಂಡಿರುವ ಕಟ್ಟಡದಲ್ಲಿ ಯೋಗಶಾಲೆಯನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಗಂಡಸರು, ಹೆಂಗಸರು, ಮಕ್ಕಳು ಯೋಗಾಸನವನ್ನು ಕಲಿಯುತ್ತಿದ್ದಾರೆ. ಇಲ್ಲಿ ಪ್ರಕೃತಿ ಚಿಕಿತ್ಸಾ ತರಗತಿಗಳನ್ನೂ ನಡೆಸಲಾಗುತ್ತಿದೆ. ಇವೆಲ್ಲವೂ ಪರಿಣತರಾದ ಅಧ್ಯಾಪಕರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಡೆಯುತ್ತಿವೆ.

ಸಮಾಜದ ಹಲವಾರು ಸಮಸ್ಯೆಗಳನ್ನು ಪರಿಹರಿಸಬೇಕೆಂಬ ಸದ್ಭಾವನೆಯಿಂದ

ಸಮಾಜ ಸಂಪರ್ಕವೇದಿಕೆಯನ್ನು ಪ್ರಾರಂಭಿಸಲಾಗಿದೆ. ಇದು ವಧೂ-ವರರ ಅನ್ವೇಷಣೆಗೆ ಮಹತ್ತರ ಸೇವೆ ಸಲ್ಲಿಸುತ್ತಿದೆ. ಇದಲ್ಲದೆ ಐ.ಎ.ಎಸ್, ಐ.ಪಿ.ಎಸ್ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಗತಿಗಳನ್ನು ನಡೆಸಿ ಆಯಾ ವಿಷಯಗಳಲ್ಲಿ ಪರಿಣತರ, ತಜ್ಞರ ಮೂಲಕ ಪಾಠಪ್ರವಚನಗಳನ್ನು ಮಾಡಿಸಿ ತರಬೇತಿಯನ್ನು ನೀಡಲಾಗುತ್ತಿದೆ.

ವಿಜಯನಗರ ಬಡಾವಣೆಯಲ್ಲಿ ಮಧ್ಯಮವರ್ಗದ ಜನರೇ ಅಧಿಕವಾಗಿದ್ದು, ಹೆಚ್ಚು ದೇಣಿಗೆ ನೀಡಿ ತಮ್ಮ ಮಕ್ಕಳನ್ನು ಆಂಗ್ಲಮಾಧ್ಯಮ ಶಾಲೆಗೆ ಸೇರಿಸುವುದು ಕಷ್ಟ ಸಾಧ್ಯ. ಇದನ್ನರಿತು ಪೂಜ್ಯಶ್ರೀಗಳವರು ಈ ಭಾಗದ ಜನರಿಗೆ ಅನುಕೂಲವಾಗುವಂತೆ ಕನ್ನಡ ಮತ್ತು ಆಂಗ್ಲಮಾಧ್ಯಮ ಶಾಲೆಯನ್ನು ೧೯೮೫ರಲ್ಲಿ ಪ್ರಾರಂಭಿಸಿದರು. ಇಲ್ಲಿ ಪೂರ್ವ ಪ್ರಾಥಮಿಕದಿಂದ ಪ್ರೌಢಶಾಲೆಯ ಹತ್ತನೇ ತರಗತಿಯವರೆಗೆ ತರಗತಿಗಳನ್ನು ನಡೆಸಲಾಗುತ್ತಿದೆ. ಈಗ ಈ ಶಾಲೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭ್ಯಾಸಮಾಡುತ್ತಿದ್ದಾರೆ. ೧೯೯೫ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಈ ಶಾಲೆಯ ಮಕ್ಕಳು ಶೇಕಡ ನೂರರಷ್ಟು ತೇರ್ಗಡೆಯಾಗಿದ್ದಾರೆ. ಒಳ್ಳೆಯ ತರಬೇತಿ ಹೊಂದಿದ ಅಧ್ಯಾಪಕರು, ಅಧ್ಯಯನಾಸಕ್ತರಾದ ಮಕ್ಕಳು- ಇವುಗಳಿಂದ ಕೂಡಿ ಈ ಶಾಲೆ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಈ ಶಾಲೆಯಲ್ಲಿ ದೀನರು, ದಲಿತರು, ಅವಿದ್ಯಾವಂತರು ಕೂಲಿಕಾರರ ಮಕ್ಕಳಿಗೂ ಪ್ರವೇಶ ನೀಡುತ್ತಿರುವುದು ಕೆಳವರ್ಗದ ಜನರಿಗೂ ಶಿಕ್ಷಣ ಸೌಲಭ್ಯ ದೊರೆಯಬೇಕೆಂಬ ಶ್ರೀಗಳವರ ಮಹದಾಸೆಗೆ ಅನುಗುಣವಾಗಿದೆ. ಇಲ್ಲಿ ಯಾವುದೇ ಬಗೆಯ ತಾರತಮ್ಯವಿಲ್ಲದೆ ಪ್ರವೇಶ ನೀಡಲಾಗುತ್ತದೆ. ಕಡುಬಡವರ ಹಾಗೂ ಪ್ರತಿಭಾನ್ವಿತ ಮಕ್ಕಳಿಗೆ ಶುಲ್ಕದಲ್ಲಿ ವಿನಾಯಿತಿ ನೀಡುವ ಅವಕಾಶವೂ ಉಂಟು. ಇದೊಂದು ಆದರ್ಶಶಾಲೆಯಾಗಿ ಈ ಬಡಾವಣೆಯ ಜನರಿಗೆ ಒಳ್ಳೆಯ ವಿದ್ಯಾಕೇಂದ್ರವೆನಿಸಿದೆ. ಈ ಶಾಖಾ ಮಠಕ್ಕೆ ಸ್ವಲ್ಪ ದೂರದಲ್ಲಿಯೆ ಭವ್ಯವಾದ ನಾಲ್ಕಂತಸ್ತಿನ ಶಾಲಾ ಕಟ್ಟಡದ ನಿರ್ಮಾಣ ಭರದಿಂದ ಸಾಗುತ್ತಿದೆ.

ಪೂಜ್ಯಶ್ರೀಗಳವರು ಸಮಾಜದಲ್ಲಿ ತೊಂದರೆಗೊಳಗಾದ ಮಹಿಳೆಯರು ಗೌರವದಿಂದ ಬಾಳಲು ಸೌಲಭ್ಯ ದೊರಕಿಸಿಕೊಡಬೇಕೆಂಬ ತೀವ್ರ ಆಶಯವುಳ್ಳವರು. ಇದಕ್ಕನುಗುಣವಾಗಿ ಬೆಂಗಳೂರಿನ ಪೀಣ್ಯ ಕೈಗಾರಿಕಾ ನಗರದಲ್ಲಿ ಹೆಚ್‌ಎಂಟಿ ವಿಭಾಗವನ್ನು ತೆರೆಯಲಾಗಿದೆ. ಇಲ್ಲಿ ಅನಾಥ ಮಹಿಳೆಯರು, ಕಡುಬಡವರಾಗಿ ಜೀವನ ನಿರ್ವಹಣೆ ಮಾಡಲು ದಾರಿಗಾಣದೆ ತತ್ತರಿಸುತ್ತಿರುವ ಹೆಣ್ಣು ಮಕ್ಕಳಿಗೆ ಹೆಚ್‌ಎಂಟಿ ಸಬ್‌ಕಾಂಟ್ರಾಕ್ಟ್‌ನ ಮೇರೆಯಲ್ಲಿ ಕೈಗಡಿಯಾರಗಳ ಡಬರಿಂಗ್, ಶ್ಯಾಂಪರಿಂಗ್ ಕಾರ್ಯ ನಡೆಯುತ್ತಿದೆ. ಸುಮಾರು ೫೦ ಹೆಣ್ಣು ಮಕ್ಕಳಿಗೆ ಹೆಚ್‌ಎಂಟಿ ಕಾರ್ಖಾನೆಯಲ್ಲಿ ತರಬೇತಿ ಕೊಡಿಸಿ ಇಲ್ಲಿನ ಕೆಲಸದಲ್ಲಿ ತೊಡಗಿಸಲಾಗಿದೆ. ಇವರಿಗೆ ಒಂದು ವಸತಿ ನಿಲಯವನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಕೆಲಸ ಮಾಡುವವರು ನೆಮ್ಮದಿಯಿಂದ, ಗೌರವದಿಂದ ಜೀವನ

ನಡೆಸಲು ಅನುಕೂಲವಾಗಿದೆ.

ಶ್ರೀ ಶ್ರೀ ಗಳವರು ನಮ್ಮ ದೇಶದ ನಿರುದ್ಯೋಗ ನಿವಾರಣೆಗೆ ಸಹಕಾರಿಯಾದ ಸಂಸ್ಥೆಗಳನ್ನು ತೆರೆಯಬೇಕೆಂಬ ಮಹೋದ್ದೇಶ ಉಳ್ಳವರು. ಅದರಂತೆ ೧೯೮೪ರಲ್ಲಿ ನೆಲಮಂಗಲದಲ್ಲಿ ಶ್ರೀ ಜಗದ್ಗುರು ಚಂದ್ರಶೇಖರನಾಥ ಸ್ವಾಮಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ಗ್ರಾಮೀಣ ಮಕ್ಕಳಿಗೆ ಇಲ್ಲಿ ತರಬೇತಿ ನೀಡಿ ಉದ್ಯೋಗ ದೊರಕಿಸಿಕೊಳ್ಳಲು ಅನುಕೂಲ ಕಲ್ಪಿಸಿದ್ದಾರೆ.

ಇಲ್ಲಿ ಜನರಲ್ ಮೆಕ್ಯಾನಿಕ್, ಎಲೆಕ್ಟ್ರಾನಿಕ್‌ಗಳಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ. ಈ ಸಂಸ್ಥೆ ರಾಷ್ಟ್ರೀಯ ಕೈಗಾರಿಕಾ ವೃತ್ತಿ ಕೌನ್ಸಿಲ್‌ನಿಂದ ಪುರಸ್ಕರಿಸಲ್ಪಟ್ಟಿದೆ. ಇಲ್ಲಿ ಎರಡು ವರ್ಷಗಳ ತರಬೇತಿಯ ಅವಧಿ ಇದ್ದು ಎರಡು ತಂಡಗಳಲ್ಲಿ ತರಬೇತಿ ನೀಡಲಾಗುತ್ತದೆ.

ಬೆಂಗಳೂರಿನ ಈ ಶಾಖಾಮಠಕ್ಕೆ ಸೇರಿದ ಎಲ್ಲ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಪೂಜ್ಯಶ್ರೀಗಳವರ ಆದೇಶದಂತೆ ನಿರ್ವಹಿಸಲು ಶ್ರೀ ಶ್ರೀ ಸೌಮ್ಯನಾಥ ಸ್ವಾಮಿಗಳವರನ್ನು ನೇಮಿಸಲಾಗಿದೆ. ಸಂಸ್ಕೃತ ವೇದಆಗಮಗಳನ್ನು ಅಭ್ಯಾಸ ಮಾಡಿರುವ ಇವರು ಈ ಹಿರಿಯ ಹೊಣೆಯನ್ನು ಅತ್ಯಂತ ಯಶಸ್ವಿಯಾಗಿ ಶ್ರೀ ಶ್ರೀಗಳವರ ಸಂಕಲ್ಪಕ್ಕೆ ಸ್ವಲ್ಪವೂ ಊನಬಾರದಂತೆ ನಿರ್ವಹಿಸುತ್ತಿದ್ದಾರೆ.

ಅರ್ಚಕರ ಹಳ್ಳಿ

ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ರಾಮನಗರದ ಬಳಿಯ ಅರ್ಚಕರ ಹಳ್ಳಿಯ ಸಮೀಪದಲ್ಲಿ ಶ್ರೀ ಆದಿಚುಂಚನಗಿರಿ ಶಾಖಾಮಠವಿದೆ. ತೆಂಗಿನ ತೋಟದ ನಡುವೆ ಭವ್ಯ ಕಟ್ಟಡಗಳ ಸಮೂಹ ನೋಡಿದವರಿಗೆ ವೈಜ್ಞಾನಿಕ ಸಂಶೋಧನೆಯ ಬೃಹತ್ ಕಟ್ಟಡಗಳೋ ವಿಶ್ವವಿದ್ಯಾಲಯದ ಅಧ್ಯಯನ ಮಂದಿರಗಳೋ, ಎನಿಸುತ್ತಾ ಕಣ್ಮನಗಳಿಗೆ ಅತೀವ ಆನಂದ ನೀಡುತ್ತಿವೆ. ಹಚ್ಚಹಸುರಾದ ವಿಶಾಲ ಭೂ ಪ್ರದೇಶದಲ್ಲಿ ಹರಡಿರುವ ಈ ಶಾಖಾಮಠ ಪ್ರಾಚೀನ ಋಷ್ಯಾಶ್ರಮವನ್ನು ನೆನಪಿಗೆ ತರುತ್ತದೆ.

ದೃಷ್ಟಿವಂಚಿತರಾಗಿ ಜೀವನವಿಡೀ ಅಂಧಕಾರದಲ್ಲಿ ತೊಳಲುವವರನ್ನು ನಮ್ಮ ದೇಶದಲ್ಲಿ ಕಾಣಬಹುದಾಗಿದೆ. '**ಸರ್ವೇಂದ್ರಿಯಾಣಾಂ ನಯನಂ ಪ್ರಧಾನಮ್**' ಎಂಬ ಮಾತು ಕಣ್ಣು (ದೃಷ್ಟಿ) ಇಂದ್ರಿಯಗಳಲ್ಲಿ ಎಷ್ಟು ಪ್ರಾಮುಖ್ಯವೆಂಬುದನ್ನು ತಿಳಿಸುತ್ತದೆ. ಹುಟ್ಟಿನಿಂದಲೇ ದೃಷ್ಟಿಹೀನರಾದ ಮಕ್ಕಳು ಭೀಕರ ಅಂಧಕಾರದಲ್ಲಿ ಬಾಳಬೇಕಾಗುತ್ತದೆ. ಇದಕ್ಕಿಂತ ಘೋರ ಕಷ್ಟ ಇನ್ನೊಂದಿಲ್ಲ. ಆದರೆ ಪರಿಸ್ಥಿತಿ ಕಷ್ಟವಾದರೂ, ಎಷ್ಟೇ ಕಹಿಯಾದರೂ ಅನುಭವಿಸದೆ ಬೇರೆ ದಾರಿಯಿಲ್ಲ. ದಿನಮಣಿಯ ವರ್ಣರಂಜಿತ ಬೆಳಕನ್ನು ಕಾಣದೆ, ಜಗತ್ತಿನ ಸೌಂದರ್ಯದ ಪರಿವೆಯೂ ಇಲ್ಲದೆ ಪರಾವಲಂಬಿಗಳಾಗಿ ಜೀವನ

ಸಾಗಿಸಬೇಕಾದ ಇಂಥ ನತದೃಷ್ಟ ಮಕ್ಕಳ ಬಗೆಗೆ ಮಾನವೀಯತೆಯುಳ್ಳ ಪ್ರತಿಯೊಬ್ಬರೂ ಅನುಕಂಪ ತೋರಿಸಬೇಕಾದುದು ಆದ್ಯ ಕರ್ತವ್ಯ.

ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಅತ್ಯಂತ ಕರುಣಾಮಯಿಗಳು. ಕಡು ಬಡವರನ್ನು ಕಂಡು ಮರುಗುವ ಇವರು ಆಗಾಗ್ಗೆ ಅಂಧ ಮಕ್ಕಳನ್ನು ನೋಡಿ ಅವರ ಬಗೆಗೆ ವಿಶೇಷವಾದ ಮಮತೆ ತಾಳುತ್ತಿದ್ದರು. ಎಲ್ಲ ಹಂತದ ಶಾಲಾಕಾಲೇಜುಗಳನ್ನು ಪ್ರಾರಂಭಿಸಿ ಶಿಕ್ಷಣಕ್ಕೆ ವಿಶೇಷ ಆದ್ಯತೆ ನೀಡಿರುವ ಶ್ರೀಗಳು ದೃಷ್ಟಿಹೀನ ಮಕ್ಕಳಿಗೆ ಆಸರೆ ನೀಡಬೇಕೆಂದು ಸಂಕಲ್ಪ ಮಾಡಿದರು. ತತ್ಫಲವಾಗಿಯೇ ಅರ್ಚಕರಹಳ್ಳಿಯಲ್ಲಿ ಜಗದ್ಗುರು ಶ್ರೀ ಬಾಲಗಂಗಾಧರನಾಥಸ್ವಾಮಿ ಅಂಧರ ಶಾಲೆ ನಡೆಸುತ್ತಿದ್ದಾರೆ. ದೃಷ್ಟಿಹೀನ ಮಕ್ಕಳಿಗೆ ಸೂಕ್ತ ಶಿಕ್ಷಣವನ್ನು ನೀಡಿ ಸ್ವತಂತ್ರವಾಗಿ ಜೀವನವನ್ನು ನಡೆಸಲು ಅವಶ್ಯಕವಾದ ತರಬೇತಿಯನ್ನು ನೀಡಿ ತಾವು ಯಾರಿಗಿಂತಲೂ ಕೀಳಲ್ಲ ಎಂಬ ಆತ್ಮವಿಶ್ವಾಸವನ್ನು ಅವರಲ್ಲಿ ಮೂಡಿಸಲು ತಕ್ಕುದಾದ ಎಲ್ಲ ಸೌಲಭ್ಯಗಳಿಂದ ಕೂಡಿದ ವಸತಿ ಶಾಲೆಯನ್ನು ನಿರ್ಮಿಸಿದ್ದಾರೆ. ಇಲ್ಲಿ ಸುಮಾರು ೧೨೦ ಕ್ಕಿಂತಲೂ ಹೆಚ್ಚು ಅಂಧ ಮಕ್ಕಳಿಗೆ ಉಚಿತವಾಗಿ ಶಿಕ್ಷಣ, ಊಟ, ವಸತಿ, ಬಟ್ಟೆಗಳನ್ನು ನೀಡಲಾಗುತ್ತಿದೆ. ಇವರಿಗಾಗಿ ವಿಶಾಲವಾದ ಶಾಲಾ ಕೊಠಡಿಗಳು, ಅರ್ಹ ಅಧ್ಯಾಪಕರೂ ಇದ್ದು ಉತ್ತಮಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಇದಲ್ಲದೆ ಆಧುನಿಕ ಸೌಲಭ್ಯದಿಂದ ಕೂಡಿದ ಅಡುಗೆ ಮನೆ, ವಿಸ್ತಾರವಾದ ಊಟದ ಹಜಾರ, ಸ್ನಾನಗೃಹಗಳು, ಶೌಚಾಲಯಗಳು, ಪ್ರಾರ್ಥನಾ ಮಂದಿರಗಳು ಇವೆ. ಇವರಿಗೆ ಉಪಯುಕ್ತವಾದ ಬ್ರೈಲ್ ಲಿಪಿಯ ದೊಡ್ಡ ಪುಸ್ತಕ ಭಂಡಾರವಿದೆ. ಸಾಂಸ್ಕೃತಿಕ ಚಟುವಟಿಕೆಗಳಿಗೆ, ಸಭೆ-ಸಮಾರಂಭಗಳಿಗೆ ಅನುಕೂಲವಾದ ಸುಸಜ್ಜಿತ ರಂಗಮಂದಿರ, ಸಭಾಭವನಗಳನ್ನು ನಿರ್ಮಿಸಲಾಗಿದೆ. ಪೂಜ್ಯ ಶ್ರೀಗಳವರಿಗೆ ಈ ಶಾಲೆ ಅತ್ಯಂತ ಮೆಚ್ಚಿನದಾಗಿದೆ. ತಾಂತ್ರಿಕ, ವೈದ್ಯಕೀಯ ಕಾಲೇಜುಗಳ ಅಭಿವೃದ್ಧಿಗೆ ನೀಡುವುದಕ್ಕಿಂತ ಮಿಗಿಲಾದ ಗಮನವನ್ನು ಇದಕ್ಕೆ ನೀಡಿದ್ದಾರೆ. ಇಲ್ಲಿ ಎಸ್.ಎಸ್.ಎಲ್.ಸಿ. ವರೆಗೆ ತರಗತಿಗಳನ್ನು ನಡೆಸಲಾಗುತ್ತಿದೆ. ಈ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತ ಅಂಧಮಕ್ಕಳು ನೂರಕ್ಕೆ ನೂರರಷ್ಟು ತೇರ್ಗಡೆಯಾಗುತ್ತಿರುವುದು ಸಂತೋಷದ ಸಂಗತಿಯಾಗಿದೆ. ಎಲ್ಲ ವರ್ಗಗಳ ಮಕ್ಕಳೂ ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇವರಿಗೆ ಕೈಕಸುಬಿನ ತರಬೇತಿ ನೀಡಲು ಕೈಗಾರಿಕಾ ಷೆಡ್ಡುಗಳನ್ನು ನಿರ್ಮಿಸಲಾಗಿದೆ. ಇಲ್ಲಿನ ತೋಟದಲ್ಲಿ ಮಕ್ಕಳಿಗೆ ಬೇಕಾಗುವ ತರಕಾರಿಯನ್ನು ಬೆಳೆಯುವರಲ್ಲದೆ ಹಾಲಿಗಾಗಿ ಗೋಶಾಲೆಯೂ ಇದೆ.

ಅಂಧಮಕ್ಕಳು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಎಲ್ಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಎಲ್ಲ ಮಕ್ಕಳು ಸಂಗೀತ ಶಿಕ್ಷಣ ಪಡೆಯುತ್ತಿದ್ದು ಸುಶ್ರಾವ್ಯವಾಗಿ ಭಜನೆಯನ್ನು ಮಾಡುತ್ತಾರೆ. ರಾಜ್ಯದ ಅನೇಕ ಕಡೆಗಳಲ್ಲಿ ಅಂಧಮಕ್ಕಳಿಗೆ ಏರ್ಪಡಿಸಿದ್ದ

ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿರುತ್ತಾರೆ.

ಪೂಜ್ಯಶ್ರೀಗಳವರು ವಿಶೇಷವಾಗಿ ಈ ಶಾಲೆಗೆ ಭೇಟಿ ಕೊಡುತ್ತಿರುತ್ತಾರೆ. ಬರಿಗೈಯಲ್ಲಿ ಎಂದೂ ಹೋಗುವುದಿಲ್ಲ. ಹಣ್ಣಿನ ಬುಟ್ಟಿಗಳು ಮಕ್ಕಳಿಗೆ ಸದಾ ಸಿದ್ಧವಾಗಿರುತ್ತವೆ. ಅಲ್ಲಿನ ಮಕ್ಕಳಿಗೆ ಶ್ರೀ ಶ್ರೀಗಳವರೆಂದರೆ ಅತೀವ ಭಕ್ತಿ, ಗೌರವ, ಪ್ರೀತಿ; ಶ್ರೀಗಳವರನ್ನು ತಮ್ಮ ಸಾಕ್ಷಾತ್ ದೇವರೆಂದೇ ಆರಾಧಿಸುವರು. ಈ ಅಂಧರ ಶಾಲೆ ರಾಜ್ಯಕ್ಕೆ ಮಾದರಿಯಾಗಿದೆ. ಸುಮಾರು ಒಂದು ಕೋಟಿ ರೂ.ಗಳ ವೆಚ್ಚದ ಕಟ್ಟಡಗಳನ್ನು ಕಟ್ಟಿಸಲಾಗಿದೆ. ಅನೇಕ ದಾನಿಗಳು ಈ ಪವಿತ್ರ ಕಾರ್ಯದಲ್ಲಿ ಪಾಲ್ಗೊಂಡಿದ್ದಾರೆ. ಪ್ರಥಮ ದರ್ಜೆ ಕಾಲೇಜು, ವಿದ್ಯಾರ್ಥಿನಿಲಯಗಳನ್ನು ಮೀರಿಸುವಂತಹ ಎಲ್ಲಾ ಅನುಕೂಲಗಳಿಂದ ಕೂಡಿದ ಈ ಶಾಲೆ ಶ್ರೀ ಶ್ರೀಗಳವರ ವಿಶಿಷ್ಟ ಪ್ರೀತಿಗೆ ಪಾತ್ರವಾಗಿ ಅಭಿವೃದ್ಧಿ ಹೊಂದುತ್ತಿರುವುದು ಹೆಮ್ಮೆಯ ವಿಷಯ.

ಈ ಶಾಖಾಮಠದಿಂದ ೪ ಕಿ.ಮೀ. ದೂರವಿರುವ ರಾಮನಗರದಲ್ಲಿ ಗ್ರಾಮಾಂತರ ಮಕ್ಕಳ ಅನುಕೂಲಕ್ಕಾಗಿ ಶ್ರೀ ಆದಿಚುಂಚನಗಿರಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಲಾಗಿದೆ. ಸುಮಾರು ೧೫೦ಕ್ಕೂ ಹೆಚ್ಚು ಮಕ್ಕಳು ಇಲ್ಲಿ ಊಟ-ವಸತಿಗಳನ್ನು ಪಡೆದು ವಿವಿಧ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಈ ಕಟ್ಟಡ ನಿರ್ಮಾಣಕ್ಕೆ ಶ್ರೀ ಮಹಾದಾನಿ ವಿ. ನಂಜಪ್ಪನವರು ಉದಾರವಾಗಿ ಸಹಾಯ ಮಾಡಿದ್ದಾರೆ. ಇದಲ್ಲದೆ ಕೊಡುಗೈ ದಾನಿಗಳಾದ ಇವರು ಶ್ರೀಕ್ಷೇತ್ರದ ಇನ್ನೂ ಅನೇಕ ಸೇವಾ ಕಾರ್ಯಗಳಿಗೆ ವಿಶೇಷ ನೆರವನ್ನು ನೀಡಿದ್ದಾರೆ.

ಕುಂಬಳಗೋಡು

ಬೆಂಗಳೂರಿನಿಂದ ೨೫ ಕಿ.ಮೀ. ದೂರದಲ್ಲಿ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿರುವ ಕುಂಬಳಗೋಡಿನಿಂದ ಪೂರ್ವಕ್ಕೆ ೬ ಕಿ.ಮೀ. ದೂರದಲ್ಲಿ ನಿತ್ಯಾನಂದನಗರವಿದೆ. ಅಲ್ಲಿ ಶ್ರೀಕ್ಷೇತ್ರಕ್ಕೆ ಸೇರಿದ ನಿಸರ್ಗ ರಮಣೀಯವಾದ ಒಂದು ದೊಡ್ಡ ತೋಟವಿದೆ. ಇದಕ್ಕೆ ಬಿಜಿಎಸ್ ಆರ್ಚರ್ಡ್ಸ್ ಎಂದು ಹೆಸರಿಡಲಾಗಿದೆ. ಇಲ್ಲಿ ಬಗೆ ಬಗೆಯ ಹಣ್ಣಿನ ಗಿಡಗಳು, ಬಾಳೆಯ ತೋಟ, ತೆಂಗಿನ ಮರಗಳು ಇವೆ. ಸಾಲುಸಾಲಾಗಿ ನೆಟ್ಟಿರುವ ತೇಗದ ಗಿಡಗಳು ಗಾಳಿಗೆ ಬಳುಕುತ್ತಾ ತೋಟ ಪ್ರವೇಶಿಸುವವರನ್ನು ವಿನಯದಿಂದ ತಲೆಬಾಗಿ ಸ್ವಾಗತಿಸುತ್ತಿರುವಂತೆ ಕಾಣುತ್ತವೆ. ಪಟ್ಟಣಗಳಲ್ಲಿ ಉಸಿರು ಕಟ್ಟುಸುವಂತಹ ವಾತಾವರಣದಲ್ಲಿದ್ದು ಬೇಸತ್ತ ಜನರು ಒಳಹೋಗುತ್ತಿದ್ದಂತೆಯೇ ತಂಪಾದ ಗಾಳಿ, ಬಗೆ ಬಗೆಯ ಬಣ್ಣದ ಗುಲಾಬಿ ಹೂ ಗಿಡಗಳು ಅವರನ್ನು ಸ್ವಾಗತಿಸಿ ಅವರ್ಣನೀಯವಾದ ಶಾಂತಿ ನೆಮ್ಮದಿಗಳನ್ನು ನೀಡುತ್ತವೆ.

ಅಭಿವಂದನಾ

ತೋಟಕ್ಕೆ ಪ್ರವೇಶಿಸುತ್ತಿದ್ದಂತೆಯೆ ನಾವು ಬೇರಾವುದೋ ಲೋಕದಲ್ಲಿರುವಂತೆ ಭಾಸವಾಗುತ್ತದೆ. ಕುವೆಂಪು ಅವರ 'ಕೈಮುಗಿದು ಒಳಗೆ ಬಾ ಯಾತ್ರಿಕನೆ, ಇದು ಸಸ್ಯಕಾಶಿ'— ಎಂಬ ಮಾತು ನೆನಪಿಗೆ ಬಂದು ಇದು ಸತ್ಯಸ್ಯ ಸತ್ಯವೆನಿಸುತ್ತದೆ.

ಈ ತೋಟದ ಗಿಡ-ಮರಗಳಿಗೆ ನೀರು ಒದಗಿಸಲು ಕೊಳವೆ ಬಾವಿಗಳಿಂದ ಬರುವ ಜಲಧಾರೆ, ಇದನ್ನು ಸಂಗ್ರಹಿಸಲು ಕಟ್ಟಿರುವ ಚಿಕ್ಕಕೆರೆ ಅಥವಾ ಕೊಳವನ್ನು ನೆನಪಿಗೆ ತರುವಂತಹ ದೊಡ್ಡದಾದ ನೀರಿನ ಸಂಗ್ರಹಣಾ ತೊಟ್ಟಿಗಳು, ಅತ್ತಲಿಂದ ಬೀಸುವ ತಂಗಾಳಿ ತನುಮನಗಳಿಗೆ ಮುದನೀಡುತ್ತವೆ. ಇಲ್ಲಿ ಎತ್ತರವಾದ ಪ್ರದೇಶದಲ್ಲಿ ಎರಡು ಅತಿಥಿಗೃಹಗಳಿವೆ. ತೋಟದ ಪ್ರವೇಶ ದ್ವಾರದ ಬಳಿ ಇರುವ ಅತಿಥಿಗೃಹ ನೆಲ ಮತ್ತು ಮೊದಲನೆ ಅಂತಸ್ತನ್ನು ಉಳ್ಳದ್ದು. ಇದು ಎತ್ತರ ಪ್ರದೇಶದಲ್ಲಿದ್ದು ಮೊಗಸಾಲೆಯಲ್ಲಿ ಕುಳಿತು ಈ ತೋಟದ ಸೌಂದರ್ಯವನ್ನು ಸವಿಯಬಹುದು. ತೋಟದ ದಕ್ಷಿಣದಲ್ಲಿರುವ ಮತ್ತೊಂದು ಅತಿಥಿ ಗೃಹವನ್ನು ನೀರು ಸಂಗ್ರಹಣಾಗಾರದ ಮೇಲೆ ಕಟ್ಟಲಾಗಿದ್ದು ಬೇಸಿಗೆಯ ದಿನಗಳಲ್ಲಿ ಇದೊಂದು ಹವಾನಿಯಂತ್ರಿತ ಗೃಹದಂತೆ ಕಂಡು ಬರುತ್ತದೆ. ಈ ಎರಡೂ ಕಟ್ಟಡವಿನ್ಯಾಸದ architecture ದೃಷ್ಟಿಯಿಂದ ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ.

ಪರಮಪೂಜ್ಯ ಶ್ರೀಗಳರ ನಿಸರ್ಗ ಪ್ರೀತಿಗೆ ಇದು ನಿದರ್ಶನವಾಗಿದೆ. ಶ್ರೀಗಳವರು ಇದಕ್ಕೆ ಹೊಂದಿಕೊಂಡಂತಿರುವ ಪ್ರದೇಶದಲ್ಲಿ ಆದರ್ಶವಾದ ಕೇಂದ್ರೀಯ ಶಾಲೆಯನ್ನು ತೆರೆಯಲು ನಿರ್ಧರಿಸಿದ್ದಾರೆ. ಒಟ್ಟಿನಲ್ಲಿ ಈ ಸಸ್ಯಕಾಶಿ ಶೀಘ್ರವೇ ಶಿಕ್ಷಣಕಾಶಿಯೂ ಆಗಲಿದೆ.

ಈ ಬಿ.ಜಿ.ಎಸ್. ಆರ್ಚರ್ಡ್ಸ್‌ನ ಮೇಲುಸ್ತುವಾರಿಯನ್ನು ನೋಡಿಕೊಳ್ಳಲು ಪೂಜ್ಯ ಶ್ರೀಗಳವರು ಶ್ರೀ ಪ್ರಕಾಶನಾಥ ಸ್ವಾಮಿಗಳವರನ್ನು ನೇಮಿಸಿರುತ್ತಾರೆ. ಇವರು ಚಿಕ್ಕವಯಸ್ಸಿನಲ್ಲೇ ಶ್ರೀಕ್ಷೇತ್ರಕ್ಕೆ ಬಂದು ಪೂಜ್ಯಶ್ರೀಗಳವರ ಕೃಪಾಶ್ರಯದಲ್ಲಿ ಸಂಸ್ಕೃತ, ವೇದ ಆಗಮಗಳಲ್ಲಿ ಶಿಕ್ಷಣ ಪಡೆದವರು. ಶ್ರೀ ಮಠದ ಹಾಗೂ ಪೂಜ್ಯಶ್ರೀಗಳವರ ಸೇವೆಯನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ಮಾಡುತ್ತಿದ್ದಾರೆ. ಇವರು ತಮ್ಮ ಕಾರ್ಯದಕ್ಷತೆ, ವ್ಯವಹಾರ ಚಾತುರ್ಯತೆಗಳಿಂದ ಶ್ರೀ ಶ್ರೀಗಳವರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇವರು ಸಮರ್ಥವಾಗಿ ಇಲ್ಲಿನ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಇವರು ದೃಢ ಮನಸ್ಸುಳ್ಳವರು ಹಾಗೂ ಸದಾ ಶ್ರೀ ಶ್ರೀಗಳವರು ವಹಿಸುವ ಎಲ್ಲ ಕರ್ತವ್ಯಗಳನ್ನು ಯಶಸ್ವಿಯಾಗಿ ನೆರವೇರಿಸುವ ಸಾಮರ್ಥ್ಯವುಳ್ಳವರಾಗಿದ್ದಾರೆ.

ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿರುವ ಬಿಡದಿಯಲ್ಲಿ ಶ್ರೀ ಆದಿಚುಂಚನಗಿರಿ ಹೆಣ್ಣುಮಕ್ಕಳ ಪ್ರೌಢಶಾಲೆ, ಶಿಕ್ಷಕರ ತರಬೇತಿ ಸಂಸ್ಥೆ ಮತ್ತು ಔಷಧ ವಿಜ್ಞಾನ ಸಂಸ್ಥೆಗಳನ್ನು ನಡೆಸಲಾಗುತ್ತಿದೆ. ಶಿಕ್ಷಕರ ತರಬೇತಿ ಸಂಸ್ಥೆ ಹಾಗೂ ಪ್ರೌಢಶಾಲೆಗಳಿಗೆ ವಿಶಾಲವಾದ ಆಟದ ಮೈದಾನವುಳ್ಳ ಉತ್ತಮವಾದ ಶಾಲಾ ಕಟ್ಟಡಗಳಿವೆ. ಇವೆಲ್ಲ ಶ್ರೀಗಳವರು

ಅಭಿವಂದನಾ

ಗ್ರಾಮಾಂತರ ಪ್ರದೇಶದ ಮಕ್ಕಳಿಗಾಗಿ ಶಿಕ್ಷಣ ಸೌಕರ್ಯವನ್ನು ದೊರಕಿಸಿಕೊಡಬೇಕೆಂಬ ಮಹತ್ವಾಕಾಂಕ್ಷೆಯ ಫಲ.

ಬಿಡದಿಯಿಂದ ಸುಮಾರು ೩ ಕಿ.ಮೀ. ದೂರದಲ್ಲಿರುವ ಬಾನಂದೂರು ಚುಂಚನಗಿರಿಯನ್ನು ಚಿನ್ನದಗಿರಿಯನ್ನಾಗಿಸಿದ ಪೂಜ್ಯಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರ ಜನ್ಮಸ್ಥಳ. ಶ್ರೀಗಳವರು ಜನ್ಮತಾಳಿದ ಮನೆಯ ಸ್ಥಳದಲ್ಲಿ ಈಗ ಒಂದು ಭವ್ಯವಾದ ಮಂದಿರವನ್ನು ನಿರ್ಮಿಸಲಾಗಿದೆ. ಇದು ಆ ಗ್ರಾಮದ ಜನರ ಪ್ರಾರ್ಥನೆ, ಭಜನೆ ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಕೇಂದ್ರವಾಗಲಿದೆ. ಇದಕ್ಕೆ ಹೊಂದಿಕೊಂಡಂತೆ ಒಂದು ಹೂದೋಟವನ್ನು ನಿರ್ಮಿಸುವ ಯೋಜನೆ ಇದೆ. ಮುಂದೆ ಭಕ್ತಾದಿಗಳಿಗೆ ಇದು ಪವಿತ್ರ ಯಾತ್ರಾಸ್ಥಳವಾಗಲಿದೆ.

ಈ ಮಂದಿರವನ್ನು ಕರ್ನಾಟಕ ರಾಜ್ಯ ಒಕ್ಕಲಿಗರ ಮಹಾಸಂಘದವರು ಶ್ರೀಗಳವರ ಸುವರ್ಣ ಮಹೋತ್ಸವದ ಜ್ಞಾಪಕಾರ್ಥವಾಗಿ ನಿರ್ಮಿಸಿ, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠಕ್ಕೆ ಸಮರ್ಪಿಸಿರುತ್ತಾರೆ. ಅಲ್ಲದೆ ಇವರು ಶ್ರೀಮಠವು ನಡೆಸುವ ಜನಜಾಗೃತಿ ಶಿಬಿರಗಳಿಗೂ ಪ್ರೋತ್ಸಾಹ ಧನವನ್ನು ನೀಡುತ್ತಾರೆ.

ಬೆಂಗಳೂರು ಹೆದ್ದಾರಿಯ ಮಾಗಡಿ ಕ್ರಾಸ್ ಸಮೀಪದಲ್ಲಿರುವ ಭಗಿನಿಗೆರೆಯಲ್ಲಿ ಆದಿಚುಂಚನಗಿರಿ ಪ್ರೌಢಶಾಲೆ ಇದೆ. ಇದಕ್ಕೆ ಉತ್ತಮವಾದ ಕಟ್ಟಡವೂ ಇದೆ. ಮಾಗಡಿಯಲ್ಲಿ ಶ್ರೀ ರಂಗನಾಥಸ್ವಾಮಿ ಪ್ರೌಢಶಾಲೆ ಇದೆ. ಎಲ್ಲ ಸೌಕರ್ಯಗಳಿಂದ ಕೂಡಿದ ನೂತನ ಶಾಲಾ ಕಟ್ಟಡವನ್ನು ನಿರ್ಮಿಸಲಾಗಿದೆ. ಇಲ್ಲಿ ಅಧ್ಯಾಪಕರ ಪ್ರಯತ್ನ ಹಾಗೂ ವಿದ್ಯಾರ್ಥಿಗಳ ಪರಿಶ್ರಮದಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬರುತ್ತಿದೆ. ಶ್ರೀ ಕ್ಷೇತ್ರಕ್ಕೆ ಸೇರಿದ ಈ ಶಾಲೆಗಳು ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡುತ್ತಿವೆ.

ಈ ತಾಲ್ಲೂಕಿನ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಚಟುವಟಿಕೆಗಳನ್ನು ಪೂಜ್ಯ ಶ್ರೀಗಳವರ ಆದೇಶದಂತೆ ನಡೆಸಿಕೊಂಡು ಹೋಗಲು ಶ್ರೀ ಸಿದ್ದೇಶ್ವರನಾಥ ಸ್ವಾಮಿಗಳನ್ನು ನೇಮಿಸಲಾಗಿದೆ. ಇವರು ತುಂಬಾ ಸರಳಸ್ವಭಾವದವರು, ಕರ್ತವ್ಯ ನಿರತರು, ಕಷ್ಟಸಹಿಷ್ಣುಗಳು, ಧರ್ಮನಿಷ್ಠರು. ಆಗಾಗ್ಗೆ ಕುರುಡರ ಶಾಲೆಯನ್ನು ಸಂದರ್ಶಿಸಲು ವಿದೇಶದ ಅನೇಕ ಜನರು ಬರವುದೂ ಉಂಟು. ಇವರೆಲ್ಲರಿಗೂ ಸರಿಯಾದ ರೀತಿಯ ಆದರಾತಿಥ್ಯಗಳನ್ನು ಒದಗಿಸುವ ಜವಾಬ್ದಾರಿಯು ಶ್ರೀ ಸಿದ್ದೇಶ್ವರನಾಥ ಸ್ವಾಮಿಗಳವರಿಗೆ ಸೇರಿದುದು.

***

ಮಾಯಸಂದ್ರ

ಕಲ್ಪತರು ಆಶ್ರಮ,

ಪೂಜ್ಯಶ್ರೀಗಳವರು ತಾವು ಹಮ್ಮಿಕೊಂಡಿರುವ ಜನಪರ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು, ಭಕ್ತಾದಿಗಳ ಆಶೋತ್ತರಗಳನ್ನು ನೆರವೇರಿಸಲು ಶಾಖಾಮಠಗಳನ್ನು ಪ್ರಾರಂಭಿಸಿದರು. ತತ್ಫಲವೇ ಮಾಯಸಂದ್ರದ ಕಲ್ಪತರು ಆಶ್ರಮದ ಸ್ಥಾಪನೆ. ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ತುಮಕೂರು-ಮೈಸೂರು ಹೆದ್ದಾರಿಯಲ್ಲಿ ಮಾಯಸಂದ್ರವಿದೆ. ಮಾಯಸಂದ್ರಕ್ಕೆ ಹೊಂದಿಕೊಂಡಂತೆ ಇರುವ ವಿಸ್ತಾರವಾದ ಭೂಪ್ರದೇಶದಲ್ಲಿ ಈ ಆಶ್ರಮವಿದೆ. ಇದನ್ನು ಬಹಳ ಹಿಂದೆಯೇ ದಾನಿಗಳಾದ ಕಡಬದ ಹುಚ್ಚವೀರಗೌಡರು ಶ್ರೀಕ್ಷೇತ್ರದ ದಾಸೋಹ ವ್ಯವಸ್ಥೆಗಾಗಿ ಕಳೆದ ಸುಮಾರು ಒಂದೂವರೆ ದಶಕದಲ್ಲಿ ಇದು ಅದ್ಭುತವಾದ ಪ್ರಗತಿಯನ್ನು ಸಾಧಿಸಿದೆ. ನಿಸರ್ಗದ ನಡುವೆ ಇರುವ ಈ ಆಶ್ರಮ ಪ್ರಾಚೀನ ಋಷಿಮುನಿಗಳ ಆಶ್ರಮಗಳನ್ನು ನೆನಪಿಗೆ ತರುತ್ತದೆ. ಹೆಸರಿಗೆ ತಕ್ಕಂತೆ ಇದು ಸಾವಿರಾರು ಕಲ್ಪವೃಕ್ಷಗಳಿಂದಲೂ ಬಗೆ ಬಗೆಯ ಹಣ್ಣಿನ ಗಿಡಮರಗಳಿಂದಲೂ ಕಂಗೊಳಿಸುತ್ತಿದೆ. ಇಲ್ಲಿನ ಪ್ರಶಾಂತ ವಾತಾವರಣ ಭಕ್ತಾದಿಗಳಿಗೆ ಅನಿರ್ವಚನೀಯವಾದ ಆನಂದವನ್ನು ನೀಡುತ್ತದೆ.

ಈ ಆಶ್ರಮಕ್ಕೆ ಹೊಂದಿಕೊಂಡಂತೆ ವಿದ್ಯಾರ್ಥಿನಿಲಯವಿದೆ. ರಾಜ್ಯಾದ್ಯಂತ ಬಂದಿರುವ ಸುಮಾರು ನೂರ ಐವತ್ತು ವಿದ್ಯಾರ್ಥಿಗಳು ಇಲ್ಲಿ ವಾಸ ಮಾಡುತ್ತಿದ್ದಾರೆ. ಇಲ್ಲಿನ ಮಕ್ಕಳ ಚಟುವಟಿಕೆ ಬೆಳಿಗ್ಗೆ ೫ ಗಂಟೆಗೆ ಪ್ರಾರಂಭ. ಯೋಗಾಸನ, ಗೀತಾಪಾರಾಯಣ ಕಡ್ಡಾಯ. ಸಂಜೆ ಶಾಲೆಮುಗಿಸಿ ಬಂದ ಮಕ್ಕಳು ವಿಶಾಲವಾದ ತೋಟದಲ್ಲಿ ಶ್ರಮದಾನ ಮಾಡುವ ದೃಶ್ಯ, ಶಿಸ್ತಿನ ಜೀವನ ಅನನ್ಯವಾದುದು. ಇವರಿಗೆ ಸಂಜೆ ವೇಳೆ ಮಹಾಪುರುಷರ ಜೀವನೋದ್ದೇಶಗಳ ಪರಿಚಯ, ಪ್ರವಚನ, ಭಜನೆ ಅನಿವಾರ್ಯ. ಮಕ್ಕಳಿಗೆ ವೈದ್ಯಕೀಯ ಸೌಕರ್ಯವೂ ಉಂಟು. ಉತ್ತಮ ಗ್ರಂಥಭಂಡಾರವೂ ಇದೆ. ಸಮವಸ್ತ್ರ ಧರಿಸಿದ ಮಕ್ಕಳ ಚಟುವಟಿಕೆಗಳು ಆಶ್ರಮಕ್ಕೆ ವಿಶೇಷ ಕಳೆಯನ್ನು ತಂದಿವೆ.

ಸಂಸ್ಕೃತ ಪಾಠಶಾಲೆ

ಕಲ್ಪತರು ಆಶ್ರಮದಲ್ಲಿ ಸಂಸ್ಕೃತ ಪಾಠಶಾಲೆ ಇದೆ. ಇದಕ್ಕೆ ಉತ್ತಮವಾದ ಕಟ್ಟಡವೂ ಇದೆ. ಇಲ್ಲಿನ ವಿದ್ಯಾರ್ಥಿನಿಲಯದ ಮಕ್ಕಳಿಗೆ ಸಂಸ್ಕೃತ ಶಿಕ್ಷಣ ಕಡ್ಡಾಯ.

ವೇದಮಂತ್ರಗಳ ಪಠನವೂ ಉಂಟು. ಇವೆಲ್ಲಾ ಮಕ್ಕಳ ಮನಸ್ಸಿನ ಮೇಲೆ ಅಪೂರ್ವವಾದ ಪರಿಣಾಮವನ್ನು ಬೀರುತ್ತವೆ.

ವೃದ್ಧಾಶ್ರಮ

ಶಿಕ್ಷಣ, ನಾಗರಿಕತೆ, ವೈಜ್ಞಾನಿಕ ಪ್ರಗತಿ ಹೆಚ್ಚಿದಂತೆಲ್ಲಾ ಸಾಂಸಾರಿಕ ಸಮಸ್ಯೆಗಳು ಅಧಿಕವಾಗುತ್ತಿವೆ. ಜನರ ನೆಮ್ಮದಿ ಕಡಿಮೆಯಾಗುತ್ತಿದೆ. ಕುಟುಂಬದಲ್ಲಿದ್ದ ಸಾಮರಸ್ಯ ಮರೆಯಾಗುತ್ತಿದೆ. ಪಾಶ್ಚಾತ್ಯ ನಾಗರಿಕತೆ, ಸ್ವಾರ್ಥದ ಬದುಕು, ಹಿರಿ-ಕಿರಿಯರ ಬಗೆಗೆ ಅನಾದರ- ಇವುಗಳಿಂದ ನಮ್ಮ ಜನ ತಮ್ಮ ಕುಟುಂಬದ ವಯಸ್ಸಾದವರ ಬಗೆಗೆ ಔದಾಸೀನ್ಯದಿಂದ ನಡೆದುಕೊಳ್ಳುವುದು ಎಲ್ಲ ಕಡೆಯೂ ಕಂಡು ಬರುತ್ತಿದೆ. ಇದರಿಂದಾಗಿ ಜೀವನದ ಸಾಯಂ ಸಂಧ್ಯೆಯಲ್ಲಿನ ಜನರ ಬದುಕು ದುರ್ಭರವಾಗುತ್ತಿದೆ. ತಮ್ಮ ಸ್ವಂತ ಮಕ್ಕಳಿಂದಲೇ ತಿರಸ್ಕಾರ. ಇದೆಲ್ಲವನ್ನೂ ಕಣ್ಣಾರೆ ಕಂಡ ಪೂಜ್ಯಶ್ರೀಗಳವರು ನೆಲೆತಪ್ಪಿದ ಇಂಥವರು ನೆಮ್ಮದಿಯ ಜೀವನ ಸಾಗಿಸಲೆಂದು ವೃದ್ಧಾಶ್ರಮವನ್ನು ೧೯೮೨ರಲ್ಲಿ ಪ್ರಾರಂಭಿಸಿದ್ದಾರೆ. ಇಲ್ಲಿ ಅನೇಕ ಮಂದಿ ವೃದ್ಧರಿದ್ದಾರೆ. ಇವರಿಗೆ ಎಲ್ಲ ಬಗೆಯ ಅನುಕೂಲಗಳನ್ನು ಒದಗಿಸಿಕೊಡಲಾಗಿದೆ.

ಶಾಲೆಗಳು

ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಶಾಲೆಗಳನ್ನು ತೆರೆದು ಆ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬುದು ಶ್ರೀಗಳವರ ಮಹದಾಸೆ. ಇದಕ್ಕನುಗುಣವಾಗಿ ಶ್ರೀಗಳವರು ಈ ಜಿಲ್ಲೆಯಲ್ಲಿ ಅನೇಕ ಶಾಲೆಗಳನ್ನು ಪ್ರಾರಂಭಿಸಿದ್ದಾರೆ. ಮಾಯಸಂದ್ರದ ಆದಿಚುಂಚನಗಿರಿ ನೆಹರೂ ವಿದ್ಯಾಶಾಲೆಯಲ್ಲಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳು ಇವೆ. ಇಲ್ಲಿ ಸುಮಾರು ಸಾವಿರಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಅನುಭವಿ ಅಧ್ಯಾಪಕ ವರ್ಗ, ವಿಸ್ತಾರವಾದ ಆಟದ ಮೈದಾನ, ವಿಶಾಲಕೊಠಡಿಗಳನ್ನುಳ್ಳ ಶಾಲಾ ಕಟ್ಟಡ, ಪ್ರಯೋಗಶಾಲೆ, ಪುಸ್ತಕ ಭಂಡಾರ— ಇವುಗಳಿದ್ದು ಈ ಶಾಲೆ ಆದರ್ಶವಾಗಿ ನಡೆಯುತ್ತಿದೆ. ಪದವಿಪೂರ್ವ ಶಾಲೆಯಲ್ಲಿ ರೇಷ್ಮೆ ಕೃಷಿ, ಎಲೆಕ್ಟ್ರಿಕಲ್ ವೈರಿಂಗ್ ಮೊದಲಾದ ವೃತ್ತಿ ಆಧಾರಿತ ತರಬೇತಿ ವಿಭಾಗಗಳಿದ್ದು ಇವು ಸುತ್ತಮುತ್ತಲ ಗ್ರಾಮಾಂತರ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಅನುಕೂಲವಾಗಿದೆ. ಪೂಜ್ಯಶ್ರೀಗಳವರು ಗ್ರಾಮಾಂತರ ಹೆಣ್ಣು ಮಕ್ಕಳು ಅವಿದ್ಯಾವತಿಯರೆಂಬ ಅರಿವುಳ್ಳವರು. ಒಬ್ಬ ಹೆಣ್ಣುಮಗಳು ವಿದ್ಯಾವಂತೆಯಾದರೆ ಒಂದು ಕುಟುಂಬವೇ ಮುಂದುವರಿದಂತೆ ಎಂಬುದನ್ನು ತಿಳಿದು ಹೆಣ್ಣುಮಕ್ಕಳಿಗಾಗಿಯೇ ಮಾಯಸಂದ್ರದಲ್ಲಿ ಆದಿಚುಂಚನಗಿರಿ ನೆಹರೂ

ವಿದ್ಯಾಶಾಲಾ ಬಾಲಿಕಾ ಪ್ರೌಢಶಾಲೆಯನ್ನು ನಡೆಸುತ್ತಿದ್ದಾರೆ. ಇಲ್ಲಿ ಸುಮಾರು ಐದುನೂರು ಹೆಣ್ಣುಮಕ್ಕಳು ಅಧ್ಯಯನ ಮಾಡುತ್ತಿದ್ದಾರೆ. ಭವ್ಯವಾದ ಕಟ್ಟಡ ಶಾಲೆಗೆ ಬೇಕಾದ ಸಲಕರಣಗಳನ್ನೊಳಗೊಂಡು ಆದರ್ಶ ಶಾಲೆ ಎನಿಸಿದೆ.

ಮಾಯಸಂದ್ರಕ್ಕೆ ಸ್ವಲ್ಪ ದೂರದಲ್ಲಿರುವ ಸೀಗೆಹಳ್ಳಿಯಲ್ಲಿ ಶ್ರೀ ಆದಿಚುಂಚನಗಿರಿ ಪ್ರೌಢಶಾಲೆ ಇದೆ. ಸ್ವಂತ ಕಟ್ಟಡ, ಉತ್ತಮ ಶಿಕ್ಷಕರು, ವಿಶಾಲವಾದ ಆಟದ ಮೈದಾನಗಳಿಂದ ಇದೊಂದು ಉತ್ತಮ ಗ್ರಾಮೀಣ ಪ್ರೌಢಶಾಲೆ ಎನಿಸಿದೆ. ಇಲ್ಲಿ ಸುಮಾರು ಮುನ್ನೂರು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ತುರುವೇಕೆರೆ ತಾಲ್ಲೂಕು ಮಾಯಸಂದ್ರ ಹೋಬಳಿ ಬ್ಯಾಲಹಳ್ಳಿ ಗೇಟಿನಲ್ಲಿ ನೆಹರೂ ವಿದ್ಯಾಶಾಲಾ ರಜತಮಹೋತ್ಸವದ ಸವಿನೆನಪಿಗಾಗಿ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಸುಮಾರು ೨೫೦ ಮಕ್ಕಳು ಅಧ್ಯಯನ ಮಾಡುತ್ತಿದ್ದಾರೆ. ತುರುವೇಕೆರೆ ತಾಲ್ಲೂಕಿನ ಪುರದಲ್ಲಿ ಶ್ರೀಮಠದ ಶಂಭುಲಿಂಗೇಶ್ವರ ಸ್ವಾಮಿ ಗ್ರಾಮಾಂತರ ಪ್ರೌಢಶಾಲೆ ಇದೆ. ಇದು ಉತ್ತಮ ಸಿಬ್ಬಂದಿವರ್ಗವನ್ನು ಹೊಂದಿದ್ದು ಕೇವಲ ಪಾಠಪ್ರವಚನಗಳು ಮಾತ್ರವಲ್ಲದೆ ವಿಜ್ಞಾನ ತೋಟಗಾರಿಕೆ ಮೊದಲಾದ ಚಟುವಟಿಕೆಗಳಲ್ಲೂ ಮಕ್ಕಳು ತೊಡಗಿ ಉತ್ತಮ ಶಿಕ್ಷಣವನ್ನು ಪಡೆಯುತ್ತಿದ್ದಾರೆ.

ತುರುವೇಕೆರೆಯಲ್ಲಿರುವ ಆದಿಚುಂಚನಗಿರಿ ಸರಸ್ವತಿ ಪ್ರೌಢಶಾಲೆಯಲ್ಲಿ ಸುಮಾರು ಐದುನೂರು ಮಕ್ಕಳು ಅಧ್ಯಯನ ಮಾಡುತ್ತಿದ್ದಾರೆ. ಇತ್ತೀಚೆಗೆ ಪೂಜ್ಯಶ್ರೀಗಳವರ ೨೧ನೇ ಪೀಠಾರೋಹಣದ ಸವಿನೆನಪಿಗಾಗಿ ಉತ್ತಮವಾದ ನೂತನ ಶಾಲಾ ಕಟ್ಟಡವನ್ನು ನಿರ್ಮಿಸಲಾಗಿದೆ. ೧೯೯೫ನೇ ವರ್ಷದಿಂದ ಪದವಿ ಪೂರ್ವ ತರಗತಿಗಳನ್ನು ಪ್ರಾರಂಭಿಸಲಾಗಿದೆ.

ಮಾಯಸಂದ್ರಕ್ಕೆ ಸಮೀಪದಲ್ಲಿರುವ ಮಣೆಚೆಂಡೂರು ಅತ್ಯಂತ ಹಿಂದುಳಿದ ಪ್ರದೇಶ. ಇಲ್ಲಿನ ಸುತ್ತಮುತ್ತಲ ಮಕ್ಕಳ ಅನುಕೂಲಕ್ಕಾಗಿ ಪ್ರೌಢಶಾಲೆಯನ್ನು ಶ್ರೀಗಳವರು ಪ್ರಾರಂಭಿಸಿದ್ದಾರೆ. ಉತ್ಸಾಹಿಗಳಾದ ಗ್ರಾಮೀಣರ ನೆರವಿನಿಂದ ಭವ್ಯವಾದಶಾಲಾಕಟ್ಟಡವನ್ನು ೧೯೯೫ರಲ್ಲಿ ನಿರ್ಮಿಸಲಾಗಿದೆ. ಇದಕ್ಕೆ ಹೊಂದಿಕೊಂಡಂತೆ ವಿಸ್ತಾರವಾದ ಆಟದ ಮೈದಾನವಿದ್ದು ಆದರ್ಶಶಾಲೆ ಎನಿಸಿದೆ. ಗ್ರಾಮಾಂತರ ಜನರ ಶಿಕ್ಷಣದ ಆಸಕ್ತಿಗೆ ಈ ಶಾಲೆ ಸಾಕ್ಷಿಯಾಗಿದೆ.

ಪ್ರಾಥಮಿಕ ಹಂತದಲ್ಲಿಯೆ ಮಕ್ಕಳಿಗೆ ಒಳ್ಳೆಯ ಶಿಕ್ಷಣ ದೊರಕಿಸಿ

ಕೊಡಬೇಕೆಂಬುದು ಶ್ರೀಗಳವರ ಆಶಯ. ಅದರಂತೆ ಮಾಯಸಂದ್ರದಲ್ಲಿ ಆದಿಚುಂಚನಗಿರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ ಒಳ್ಳೆಯ ಶಿಕ್ಷಕರನ್ನು, ಉತ್ತಮ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದಾರೆ. ಇದು ಅತ್ಯಂತ ಯಶಸ್ವಿಯಾಗಿ ಕೆಲಸ ಮಾಡುತ್ತಿದೆ. ಮಾಯಸಂದ್ರದಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಪೂರ್ವಪ್ರಾಥಮಿಕ ತರಗತಿಗಳು ಇವೆ. ತುರುವೇಕೆರೆಯಲ್ಲಿ ಶ್ರೀ ಆದಿಚುಂಚನಗಿರಿ ಕನ್ನಡ ಆಂಗ್ಲ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲಾಗಿದೆ. ಕಿರಿಯ ವಯಸ್ಸಿನ ಮಕ್ಕಳಿಗೆ ಆಟವಾಡಲು ಉಪಕರಣಗಳು, ವಿಶಾಲವಾದ ಆಟದ ಮೈದಾನ ಉತ್ತಮ ಅಧ್ಯಾಪಕ ವರ್ಗ— ಇವುಗಳಿಂದ ಈ ಶಾಲೆ ಸಮರ್ಪಕ ಸೇವೆಯನ್ನು ಸಲ್ಲಿಸುತ್ತಿದೆ. ತುರುವೇಕೆರೆ ತಾಲ್ಲೂಕು ದಬ್ಬೇಘಟ್ಟದಲ್ಲಿ ಶ್ರೀ ಭೈರವೇಶ್ವರ ಕಾನ್ವೆಂಟ್ ಶಾಲೆಯನ್ನು ಪ್ರಾರಂಭಿಸಿದ್ದು, ಪೂರ್ವ ಪ್ರಾಥಮಿಕದಿಂದ ೭ನೇ ತರಗತಿಗಳವರೆಗೆ ಶಿಕ್ಷಣ ನೀಡಲಾಗುತ್ತಿದೆ.

ಈ ಜಿಲ್ಲೆಯ ಗ್ರಾಮಾಂತರ ಪ್ರದೇಶದ ಶಿಕ್ಷಣಾಭಿವೃದ್ಧಿಗೆ ಶ್ರೀಮಠದ ಕೊಡುಗೆ ಅಪಾರ ಹಾಗೂ ವಿಶಿಷ್ಟ. ಪೂಜ್ಯಶ್ರೀಗಳವರು ತಮ್ಮ ಆದೇಶದಂತೆ ಕಾರ್ಯಗಳನ್ನು ನಿರ್ವಹಿಸಲು ಈ ಕಲ್ಪತರು ಆಶ್ರಮಕ್ಕೆ ಶ್ರೀ ಶಿವಕುಮಾರನಾಥ ಸ್ವಾಮಿಗಳವರನ್ನು ನೇಮಿಸಿದ್ದಾರೆ. ಇವರು ಚಿಕ್ಕಂದಿನಿಂದಲೂ ಶ್ರೀ ಕ್ಷೇತ್ರದಲ್ಲಿ ಬೆಳೆದು, ಸಂಸ್ಕೃತವನ್ನು ಓದಿ, ಅದ್ವೈತ ವಿದ್ವಾಂಸರಾದವರು. ಬಾಲ್ಯದಿಂದಲೂ ಇವರಿಗೆ ಗುರುಸೇವೆಯಲ್ಲಿ ಬಹಳ ಆಸಕ್ತಿ. ಇವರು ಶ್ರೀಗಳವರ ಮಾರ್ಗದರ್ಶನದಂತೆ ಜಿಲ್ಲೆಯಾದ್ಯಂತ ಹಳ್ಳಿ-ಹಳ್ಳಿಗಳಲ್ಲಿಯೂ ಸಂಚರಿಸಿ ಜನತೆಯ ಬೇಕು-ಬೇಡಗಳಿಗೆ ಸ್ಪಂದಿಸಿ ಸ್ಥಳೀಯರ ಸಹಕಾರದೊಂದಿಗೆ ಶಾಲಾ ಕಟ್ಟಡಗಳ ನಿರ್ಮಾಣ, ಶಾಲೆಗಳಿಗೆ ಪೀಠೋಪಕರಣಗಳನ್ನು ಸರಬರಾಜು, ದೇವಸ್ಥಾನಗಳ ಪುನರ್ನಿರ್ಮಾಣ ಮೊದಲಾದ ಕಾರ್ಯಗಳನ್ನು ಯಶಸ್ವಿಯಾಗಿ ಮಾಡುತ್ತಿದ್ದಾರೆ. ಇವು ಇವರ ಜನಾನುರಾಗ ಹಾಗೂ ಕಾರ್ಯದಕ್ಷತೆಗಳಿಗೆ ನಿದರ್ಶನ. ಆಶ್ರಮಕ್ಕೆ ಬಂದ ಭಕ್ತರನ್ನು ಆಕರ್ಷಿಸಿ ಅವರ ಮನಸ್ಸನ್ನು ಉಲ್ಲಾಸಗೊಳಿಸುವ ವ್ಯಕ್ತಿತ್ವ ಇವರದು. ಪೂಜ್ಯ ಶ್ರೀ ಶ್ರೀ ಶ್ರೀಗಳವರ ಸಂದೇಶವನ್ನು ಮುಟ್ಟಿಸುವಲ್ಲಿ ಇವರು ಯಶಸ್ವಿಯಾಗಿದ್ದಾರೆ.

***

ಮೈಸೂರು

ಧರ್ಮ, ಸಂಸ್ಕೃತಿ, ಸಾಹಿತ್ಯಸಂಪನ್ನವಾದ ಮೈಸೂರು ನಗರದಲ್ಲಿ ಶಾಖಾಮಠವನ್ನು ಸ್ಥಾಪಿಸಲಾಗಿದೆ. ಇದು ಹಿಂದೆ ರಾಜಧಾನಿಯಾಗಿದ್ದು ಈಗ ಸಾಂಸ್ಕೃತಿಕ ನಗರವೆಂದೇ ಖ್ಯಾತವಾಗಿದೆ. ಜಿಲ್ಲೆಯಾದ್ಯಂತ ಧಾರ್ಮಿಕ, ಸಾಂಸ್ಕೃತಿಕ ಪ್ರಚಾರ, ಗ್ರಾಮೀಣ ಮಕ್ಕಳಿಗೆ ಶಿಕ್ಷಣ ಸೌಲಭ್ಯದ ಕಲ್ಪನೆ, ವಿದ್ಯಾರ್ಥಿನಿಲಯಗಳ ಸ್ಥಾಪನೆ, ಜನರ ಉಪಯೋಗಕ್ಕಾಗಿ ಸಮುದಾಯಭವನಗಳ ನಿರ್ಮಾಣ— ಇತ್ಯಾದಿ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬುದು ಶ್ರೀಗಳವರ ಪರಮಧ್ಯೇಯ.

ಕುವೆಂಪುನಗರದಲ್ಲಿ ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಅನುಕೂಲವಾದ ದೊಡ್ಡ ನಿವೇಶನವಿದೆ. ಇಲ್ಲಿ ಶ್ರೀ ಆದಿಚುಂಚನಗಿರಿ ಸಂಸ್ಕೃತ-ವೇದ ಪಾಠಶಾಲೆಯನ್ನು ಪ್ರಾರಂಭಿಸಲಾಗಿದೆ. ವರ್ಣ, ವರ್ಗ ಭೇದವಿಲ್ಲದೆ ಎಲ್ಲರೂ ಸಂಸ್ಕೃತ-ವೇದ ಅಧ್ಯಯನ ಮಾಡುವ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಭಾವೀ ಪೀಳಿಗೆ ಸುಸಂಸ್ಕೃತರಾಗಬೇಕೆಂಬುದೇ ಶ್ರೀಗಳವರ ಪರಮ ಉದ್ದೇಶ. ಇದೇ ಆವರಣದಲ್ಲಿ ೧೯೮೯ರಲ್ಲಿ 'ಬಾಲಜಗತ್' ಪಾಠಶಾಲೆಯನ್ನು ಪ್ರಾರಂಭಿಸಲಾಯಿತು. ಈಗ ಇಲ್ಲಿ ಉನ್ನತ ಪ್ರಾಥಮಿಕ ಶಾಲೆಯವರೆಗೂ ತರಗತಿಗಳನ್ನು ನಡೆಸಲಾಗುತ್ತಿದೆ. ೧೯೯೫ರಲ್ಲಿ ಜಗದ್ಗುರು ಶ್ರೀ ಬಾಲಗಂಗಾಧರನಾಥ ಸ್ವಾಮಿ ಬಾಲಿಕಾ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಭವ್ಯವಾದ ಕಟ್ಟಡವುಳ್ಳ ಇಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಲಾಗುತ್ತಿದೆ.

ಪರಮಪೂಜ್ಯ ಶ್ರೀಗಳವರಿಗೆ ನಿರ್ಗತಿಕ ಮಹಿಳೆಯರ ಸಮಸ್ಯೆಗಳ ಪರಿಹಾರಕ್ಕಾಗಿ ಅನಾಥ ಮಹಿಳಾ ಸೇವಾಶ್ರಮವನ್ನು ಪ್ರಾರಂಭಿಸಬೇಕೆಂಬ ಆಲೋಚನೆ ಬಹಳ ದಿನಗಳಿಂದಲೂ ಇದ್ದಿತು. ಒಮ್ಮೆ ಮಧ್ಯವಯಸ್ಸಿನ ತಾಯಿ ತನ್ನ ಮೂವರು ಮಕ್ಕಳೊಡನೆ ಬಂದು ಶ್ರೀಗಳವರಿಗೆ ನಮಸ್ಕರಿಸಿ ಒಂದೇ ಸಮನೆ ದುಃಖಿಸತೊಡಗಿದಳು. 'ಕುಡುಕ ಗಂಡನಿಂದ ಮಕ್ಕಳಿಗೆ ಕುಡಿಯಲು ಗಂಜಿಯೂ ದೊರೆಯದಾಗಿದೆ. ಇತರರ ಮನೆಗಳಲ್ಲಿ ಮುಸುರೆ ಪಾತ್ರೆ ತಿಕ್ಕಿ ಆ ಎಳೆಯ ಮಕ್ಕಳಿಗೆ ಗತಿ ಕಾಣಿಸೋಣವೆಂದರೆ ಆ ಪುಡಿಕಾಸಿನ ಮೇಲೂ ವ್ಯಸನಿ ಗಂಡನ ಕಣ್ಣು' ಎಂದು ಹೇಳಿದ ಆ ಮಹಿಳೆಯ ಪರಿಸ್ಥಿತಿಯನ್ನು ತಿಳಿದು ಶ್ರೀಗಳವರ ಹೃದಯ ನೊಂದಿತು. ಇಂಥ ಮಹಿಳೆಯರಿಗೆ ಪರಿಹಾರ ಒದಗಿಸಬೇಕೆಂದು ದೃಢನಿರ್ಧಾರ ಮಾಡಿದ ಶ್ರೀಗಳವರ ಪ್ರಯತ್ನದ ಫಲವಾಗಿ ೨೫.೧೧.೧೯೮೪ರಂದು ಮೈಸೂರಿನ ಕುವೆಂಪುನಗರದ ವಿಶಾಲವಾದ ನಿವೇಶನದಲ್ಲಿ ಮಹಿಳಾ

ಸೇವಾಶ್ರಮಕ್ಕೆ ಶಿಲಾನ್ಯಾಸ ಮಾಡಲಾಯಿತು. ಶೀಘ್ರವಾಗಿ ಭವ್ಯವಾದ ಕಟ್ಟಡ ನಿರ್ಮಾಣವಾಯಿತು. ಇಲ್ಲಿ ಮಹಿಳೆಯರಿಗೆ ಹೊಲಿಗೆ ಹಾಗೂ ಗೃಹ ಕೈಗಾರಿಕೆಗಳಲ್ಲಿ ತರಬೇತಿ ನೀಡುವ ವ್ಯವಸ್ಥೆ ಮಾಡಲಾಯಿತು. ಇಲ್ಲಿ ಕೆಲಸ ಮಾಡಿ ದೊರೆತ ಹಣದಿಂದ ಮಕ್ಕಳ ಪೋಷಣೆ ಹಾಗೂ ವಿದ್ಯಾಭ್ಯಾಸಕ್ಕೆ ಅನುಕೂಲವಾದಂತಾಯಿತು.

ಮೈಸೂರು ನಗರಕ್ಕೆ ಶಿಕ್ಷಣಕ್ಕಾಗಿ ಬರುವ ಗ್ರಾಮೀಣ ಮಕ್ಕಳ ಅನುಕೂಲಕ್ಕಾಗಿ ವಿನಾಯಕನಗರದಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಗಿದೆ. ಇದಕ್ಕೆ ಉತ್ತಮ ಕಟ್ಟಡವಿದ್ದು ವಿಶಾಲವಾದ ಕೊಠಡಿಗಳು ಇರುವುದರಿಂದ ಅಧ್ಯಯನಕ್ಕೆ ಒಳ್ಳೆಯ ಅನುಕೂಲವಿದೆ. ಇಲ್ಲಿ ಕೇವಲ ಅನ್ನದಾಸೋಹ ಮಾತ್ರವಲ್ಲದೆ ವಿದ್ಯಾರ್ಥಿಗಳಿಗೆ ನೈತಿಕ ಮೌಲ್ಯಗಳ ಅರಿವನ್ನು ಮೂಡಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿನಿಲಯದಲ್ಲಿ ಗಣಪತಿ ದೇವಾಲಯವನ್ನು ನಿರ್ಮಿಸಿ ಪೂಜಾಕಾರ್ಯಗಳು ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಇಲ್ಲಿನ ಮಕ್ಕಳು ಅಧ್ಯಯನದ ಜೊತೆಗೆ ಸದ್ಭಾವನೆ, ದೈವಭಕ್ತಿಯನ್ನು ಬೆಳೆಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಪ್ರಾಚೀನವಾದ ಶ್ರೀ ಕಾಲಭೈರವೇಶ್ವರ ದೇವಾಲಯದಲ್ಲಿ ಆಗಮೋಕ್ತರೀತಿ ಪೂಜಾದಿ ಕಾರ್ಯಗಳು ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಜೀರ್ಣವಾದ ಈ ದೇವಾಲಯದ ಪುನರ್ನಿರ್ಮಾಣದ ಕಾರ್ಯವನ್ನು ಪ್ರಾರಂಭ ಮಾಡಲಾಗಿದೆ. ದೇವಾಲಯಗಳ ನಿರ್ಮಾಣ, ದೇವಾಲಯಗಳ ಜೀರ್ಣೋದ್ಧಾರ ಮಾಡುವುದರ ಮೂಲಕ ಜನರಲ್ಲಿ ದೈವಭಕ್ತಿ, ಸದ್ಭಾವನೆಗಳು ಉಂಟಾಗಲೆಂಬುದೇ ಶ್ರೀಗಳವರ ಆಶಯ.

ಮೈಸೂರಿನ ಕುವೆಂಪುನಗರ ಜನ ನಿಬಿಡವಾಯಿತು. ಮಠದ ಭಕ್ತರ ಸಂಖ್ಯೆ ಹೆಚ್ಚಾಯಿತು. ಸದ್ಯದ ಶಾಖಾಮಠದ ಕಟ್ಟಡ ತಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸಾಲದೆಂದು ಶ್ರೀಗಳವರಿಗೆ ತೋರಿತು. ತತ್ಫಲವಾಗಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಮೈಸೂರು-ನಂಜನಗೂಡಿನ ಹೆದ್ದಾರಿಯಲ್ಲಿ ವಿಶಾಲವಾದ ನಿವೇಶನವನ್ನು ಪಡೆಯಲಾಗಿದೆ. ಇಲ್ಲಿ ಜನಸೇವೆಗೆ ಅನುಕೂಲವಾಗುವ ರೀತಿಯಲ್ಲಿ ಶಾಖಾ ಮಠವನ್ನು ಕಟ್ಟಲು ನಿರ್ಧರಿಸಲಾಗಿದೆ. ಅಲ್ಲದೆ ಕುವೆಂಪುನಗರದಲ್ಲಿ ಬಹು ಉಪಯೋಗಿ ವಾಣಿಜ್ಯ ಸಂಕೀರ್ಣವನ್ನು ಕಟ್ಟಲು ಶಿಲಾನ್ಯಾಸ ಮಾಡಿದ್ದು, ಕಟ್ಟಡ ನಿರ್ಮಾಣ ಬಹಳ ಭರದಿಂದ ಸಾಗುತ್ತಿದೆ. ಮಹಿಳಾ ಸೇವಾಶ್ರಮದಲ್ಲಿ ಪ್ರತಿ ವರ್ಷವೂ ಮಠದ ವತಿಯಿಂದ ಜನಜಾಗೃತಿಶಿಬಿರವನ್ನು ತಪ್ಪದೆ ನಡೆಸಲಾಗುತ್ತಿದೆ. ಇಲ್ಲಿ ಶಿಕ್ಷಣ ಪಡೆದ ಮಕ್ಕಳು

ಸಮಾಜೋಪಯೋಗಿ ಕಾರ್ಯಗಳಲ್ಲಿ ತೊಡಗಿರುವುದರಿಂದ ಶ್ರೀಗಳವರ ಶ್ರಮ ಸಾರ್ಥಕವೆನಿಸಿದೆ.

ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೂಕು ಅತ್ಯಂತ ಹಿಂದುಳಿದ ಭಾಗ. ಈ ಪ್ರದೇಶದ ಜನರ ಕಷ್ಟಕಾರ್ಪಣ್ಯಗಳನ್ನು ಮನಗಂಡ ಶ್ರೀಗಳವರು ಇಲ್ಲಿ ಒಂದು ಪಾಠಶಾಲೆಯನ್ನು, ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿರುತ್ತಾರೆ. ಸಮೀಪದಲ್ಲಿ ಒಂದು ತೆಂಗಿನ ತೋಟವನ್ನು ಮಾಡಿ ಬರುವ ಸಂಪನ್ಮೂಲವನ್ನು ಇವುಗಳ ಸುವ್ಯವಸ್ಥೆಗಾಗಿ ವಿನಿಯೋಗಿಸಲಾಗುತ್ತಿದೆ. ಹೆಗ್ಗಡದೇವನಕೋಟೆ ಜನರ ಕಾರ್ಯಚಟುವಟಿಕೆಗಳಿಗಾಗಿ ಭವ್ಯವಾದ ಸಮುದಾಯಭವನವನ್ನು ನಿರ್ಮಿಸಲಾಗಿದೆ. ಇಲ್ಲಿ ಆಗಾಗ್ಗೆ ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಹೀಗೆಯೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದಲ್ಲಿಯೂ ಜನರ ಸಹಕಾರದಿಂದ ಆಧುನಿಕ ಸೌಲಭ್ಯಗಳಿಂದ ಕೂಡಿದ ಭವ್ಯವಾದ ಸಮುದಾಯಭವನವನ್ನು ನಿರ್ಮಿಸಲಾಗಿದೆ. ಇದು ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಸಹಾಯಕವಾಗುವ ಚಟುವಟಿಕೆಗಳನ್ನು ಸಾಮೂಹಿಕವಾಗಿ ಆಚರಿಸಲು ಉಪಯುಕ್ತವಾಗಿದೆ. ಅದಕ್ಕೆ ಹೊಂದಿಕೊಂಡಂತೆ ದೇವಾಲಯವನ್ನು ನಿರ್ಮಿಸಲಾಗಿದೆ.

ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನಲ್ಲಿರುವ ಚುಂಚನಕಟ್ಟೆ ಪೌರಾಣಿಕ ಪ್ರಸಿದ್ಧ ಸ್ಥಳ. ಇಲ್ಲಿ ಶ್ರೀ ರಾಮನು ಸೀತಾನ್ವೇಷಣೆಯ ಸಮಯದಲ್ಲಿ ತಪೋಮಗ್ನನಾಗಿದ್ದ ಶಿವನ ಆಶೀರ್ವಾದವನ್ನು ಪಡೆದನೆಂದು ಹೇಳುವರು. ಇದು ಪ್ರಕೃತಿಯ ಸಿರಿಮಡಿಲಿನಲ್ಲಿ ಕಂಗೊಳಿಸುತ್ತಿರುವ ಸುಕ್ಷೇತ್ರ. ಇಲ್ಲಿ ಶ್ರೀ ಶ್ರೀಗಳವರು ಅನಾಥ ಮಕ್ಕಳಿಗಾಗಿ ಅನಾಥಾಲಯವನ್ನು ನಡೆಸುತ್ತಿದ್ದಾರೆ. ಇಲ್ಲಿ ಮಕ್ಕಳಿಗೆ ಊಟ-ವಸತಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಎಲ್ಲ ವರ್ಗದ ಮಕ್ಕಳಿಗೂ ಪ್ರವೇಶಾವಕಾಶವುಂಟು. ಶ್ರೀ ಆದಿಚುಂಚನಗಿರಿ ಗುರುಕುಲ ಉನ್ನತ ಪ್ರಾಥಮಿಕ ಶಾಲೆಯನ್ನು ನಡೆಸಲಾಗುತ್ತಿದೆ. ಇದು ಎತ್ತರವಾದ ಪ್ರದೇಶದಲ್ಲಿದ್ದು ವಿಶಾಲವಾದ ಶಾಲಾಕೊಠಡಿಗಳು, ಪೀಠೋಪಕರಣಗಳು, ಆಟದ ಮೈದಾನವನ್ನು ಒಳಗೊಂಡು ಆದರ್ಶಶಾಲೆ ಎನಿಸಿದೆ. ಗ್ರಾಮೀಣ ಮಕ್ಕಳಿಗೆ ಅನುಕೂಲವಾಗುವಂತೆ ಸಂಸ್ಕೃತ ಪಾಠಶಾಲೆಯನ್ನು ತೆರೆದಿದ್ದಾರೆ. ಮಕ್ಕಳು ತುಂಬಾ ಆಸಕ್ತಿಯಿಂದ ಸಂಸ್ಕೃತ ಭಾಷೆಯನ್ನು ಕಲಿಯುತ್ತಿದ್ದಾರೆ. ಅಲ್ಲದೆ ಇಲ್ಲಿ ಜನರಿಗೆ ಅನುಕೂಲವಾಗಲೆಂದು ಒಂದು ಸಮುದಾಯಭವನವನ್ನು ಕಟ್ಟಲು ನಿರ್ಧರಿಸಲಾಗಿದೆ. ಒಟ್ಟಿನಲ್ಲಿ ಶ್ರೀ ಕ್ಷೇತ್ರದಿಂದ ಈ ಭಾಗದ ಜನರಿಗೆ ಧಾರ್ಮಿಕ, ಶೈಕ್ಷಣಿಕ ಸೌಲಭ್ಯಗಳು ದೊರೆತು ಅವರ ಪ್ರಗತಿಗೆ ಸಹಾಯಕವಾಗಿದೆ.

ಅಭಿವಂದನಾ

ಮೈಸೂರು ಜಿಲ್ಲೆಯಲ್ಲಿ ಶ್ರೀ ಮಹದೇಶ್ವರ ಬೆಟ್ಟವು ಪ್ರಸಿದ್ಧವಾದ ಧಾರ್ಮಿಕ ಪುಣ್ಯಕ್ಷೇತ್ರ. ಇಲ್ಲಿನ ಮಹದೇಶ್ವರಸ್ವಾಮಿಯ ದೇವಾಲಯ ಏಳು ಬೆಟ್ಟಗಳ ನಡುವೆ ಭವ್ಯ ಪ್ರಕೃತಿಯ ಮಡಿಲಿನಲ್ಲಿ ಇದೆ. ಇಲ್ಲಿಗೆ ಕರ್ನಾಟಕ ಮತ್ತು ತಮಿಳುನಾಡುಗಳಿಂದ ಸಹಸ್ರಾರು ಭಕ್ತರು ದೇವರ ದರ್ಶನ ಪೂಜಾದಿಗಳಿಗೆ ಆಗಮಿಸುತ್ತಾರೆ. ಈ ಕ್ಷೇತ್ರಕ್ಕೆ ಬರುವ ಭಕ್ತಾದಿಗಳಿಗೆ ಶ್ರೀಮಠದ ವತಿಯಿಂದ ಸೌಕರ್ಯಗಳನ್ನು ಕಲ್ಪಿಸಬೇಕೆಂದು ಶ್ರೀಗಳವರ ಇಚ್ಛೆಯಾಗಿತ್ತು. ಮನಸ್ಸಿದ್ದಲ್ಲಿ ದೈವವೇ ಮಾರ್ಗ ತೋರಿಸುತ್ತದೆ. ಶ್ರೀಮಠದ ಭಕ್ತರಾದ ಮಳವಳ್ಳಿಯ ಶ್ರೀ ಎಂ.ವಿ. ವೆಂಕಟಪ್ಪನವರು ಶ್ರೀ ಮಹದೇಶ್ವರ ಬೆಟ್ಟದಲ್ಲಿದ್ದ ತಮ್ಮ ಎರಡು ಎಕರೆ ಭೂಮಿಯನ್ನು ಶ್ರೀ ಮಠಕ್ಕೆ ದಾನವಾಗಿ ನೀಡಿದ್ದಾರೆ. ಇಲ್ಲಿ ಒಂದು ಸಮುದಾಯಭವನ, ಯಾತ್ರಿಕರು ತಂಗಲು ಅನುಕೂಲವಾದ ಛತ್ರವನ್ನು ನಿರ್ಮಿಸಲು ಶ್ರೀಗಳವರು ನಿರ್ಧರಿಸಿ ಯೋಜನೆಯನ್ನು ಸಿದ್ಧಪಡಿಸಲು ಅಪ್ಪಣೆ ಮಾಡಿರುತ್ತಾರೆ.

ಹೀಗೆ ಪರಮಪೂಜ್ಯ ಶ್ರೀಗಳವರು ಮೈಸೂರು ಜಿಲ್ಲೆಯಲ್ಲಿ ಜನಪರವಾದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಇವುಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಮೈಸೂರು ನಗರದಲ್ಲಿರುವ ಶಾಖಾಮಠಕ್ಕೆ ಶ್ರೀ ಸೋಮನಾಥ ಸ್ವಾಮಿಗಳವರನ್ನು ನಿಯಮಿಸಿರುತ್ತಾರೆ. ಸಂಸ್ಕೃತ, ವೇದ ಆಗಮಗಳಲ್ಲಿ ವಿದ್ವಾಂಸರಾದ ಇವರು ಶ್ರೀಗಳವರ ಭವ್ಯ ಚಿಂತನೆಗಳನ್ನು ಅವರ ಮಾರ್ಗದರ್ಶನದಂತೆ ಕಾರ್ಯಗತಗೊಳಿಸಲು ಅಹರ್ನಿಶಿ ಶ್ರಮಿಸುತ್ತಿದ್ದಾರೆ. ಭಗವದ್ಭಕ್ತರ, ಧರ್ಮಾಸಕ್ತರ, ಅಭಿಮಾನಿಗಳ ಸಹಕಾರ ಔದಾರ್ಯಗಳಿಂದ ಯೋಜಿತ ಕಾರ್ಯಕ್ರಮಗಳನ್ನು ಸಂಪೂರ್ಣಗೊಳಿಸುವುದರಲ್ಲಿ ಮಗ್ನರಾಗಿದ್ದಾರೆ.

***

ಅಭಿವಂದನಾ

ಮಂಡ್ಯ

ಕರ್ನಾಟಕದ ಭತ್ತದ ಕಣಜ, ಸಕ್ಕರೆಯ ನಗರವೆಂದು ಖ್ಯಾತವೆನಿಸಿದ ಮಂಡ್ಯದಲ್ಲಿಯೂ ಶ್ರೀ ಶ್ರೀಗಳವರು ಒಂದು ಶಾಖಾಮಠವನ್ನು ೧೯೮೬ರಲ್ಲಿ ಸ್ಥಾಪಿಸಿದ್ದಾರೆ. ಜಿಲ್ಲೆಯ ಜನರ ಪ್ರಗತಿಯಾಗಬೇಕೆಂಬುದೇ ಅವರ ಮಹದಾಶಯ. ಮೊದಲು ಮಂಡ್ಯನಗರದ ಮಧ್ಯದಲ್ಲಿದ್ದ ಮಠವನ್ನು ಕೆರಗೋಡು-ಮಂಡ್ಯ ಹೆದ್ದಾರಿಯಲ್ಲಿ ಮಂಡ್ಯದಿಂದ ಎಂಟು ಕಿ.ಮೀ. ದೂರದಲ್ಲಿರುವ ವಿಶ್ವಮಾನವ ಕ್ಷೇತ್ರಕ್ಕೆ ಸ್ಥಳಾಂತರಿಸಲಾಗಿದೆ. ಇಲ್ಲಿ ಮೊದಲು ವೈದ್ಯಕೀಯ ಕಾಲೇಜಿಗೆ ಕಟ್ಟಿಸಲಾಗಿದ್ದ ಭವ್ಯಕಟ್ಟಡಗಳಲ್ಲಿ ಶಾಲೆಗಳನ್ನು ನಡೆಸಲಾಗುತ್ತಿದೆ. ಇವುಗಳ ಸಮೀಪದಲ್ಲಿಯೇ ಶಾಖಾಮಠವಿದೆ. ಇದಕ್ಕೆ ಹೊಂದಿಕೊಂಡಂತೆ ದೊಡ್ಡ ತೋಟವಿದೆ. ಈ ಪರಿಸರ ತೆಂಗು, ಬಾಳೆ, ಕಬ್ಬು ಬೆಳೆಗಳ ಹಸಿರಿನಿಂದ ಕಂಗೊಳಿಸುತ್ತಿದೆ.

ಇಲ್ಲಿ ಗ್ರಾಮಾಂತರ ಮಕ್ಕಳ ಅನುಕೂಲಕ್ಕಾಗಿ ಒಂದು ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲಾಗಿದೆ. ಒಳ್ಳೆಯ ಕಟ್ಟಡ, ಗಾಳಿ ಬೆಳಕುಗಳಿಂದ ಕೂಡಿದ ಕೊಠಡಿಗಳು, ಶಾಂತ ವಾತಾವರಣ ಮಕ್ಕಳ ಅಧ್ಯಯನಕ್ಕೆ ಆದರ್ಶ ತಾಣವೆನಿಸಿದೆ. ರಾಜ್ಯದ ನಾನಾ ಭಾಗಗಳಿಂದ ಬಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಊಟ-ವಸತಿಗಳ ವ್ಯವಸ್ಥೆ ಉತ್ತಮವಾಗಿದೆ. ಬೆಳಿಗ್ಗೆ ಹಾಗೂ ಸಂಜೆ ವೇಳೆ ಸಾಮೂಹಿಕ ಪ್ರಾರ್ಥನೆ, ಭಜನೆ, ಭಕ್ತಿಗೀತೆಗಳ ಪಠನ ಕಡ್ಡಾಯ.

ಇದೇ ಆವರಣದಲ್ಲಿ ವಿಶ್ವಮಾನವ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ವಿಶ್ವಮಾನವ ಪ್ರೌಢಶಾಲೆ, ಪದವಿಪೂರ್ವ ಕಾಲೇಜುಗಳನ್ನು ನಡೆಸಲಾಗುತ್ತಿದೆ. ದಕ್ಷರೂ ಅನುಭವಿಗಳೂ ಆದ ಅಧ್ಯಾಪಕ ವರ್ಗ, ಪೀಠೋಪಕರಣಗಳು, ವಿಶಾಲವಾದ ಆಟದ ಮೈದಾನ, ಕಟ್ಟುನಿಟ್ಟಾದ ಶಿಸ್ತು, ಉತ್ತಮ ವಾತಾವರಣ— ಇವುಗಳಿಂದ ಈ ಶಾಲಾಸಂಕೀರ್ಣ ಹಿಂದಿನ ಗುರುಕುಲಾಶ್ರಮವನ್ನು ನೆನಪಿಗೆ ತರುತ್ತದೆ. ಎಲ್ಲಾ ಬೋಧಕರಿಗೂ ವಸತಿ ಗೃಹಗಳಿವೆ. ಅಲ್ಲದೆ ನಗರದಿಂದ ಬರುವ ಮಕ್ಕಳಿಗೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಶೇಕಡ ನೂರರಷ್ಟಿದ್ದು, ಇಲ್ಲಿನ ಉತ್ತಮ ಬೋಧನೆಗೆ ಹಿಡಿದ ಕನ್ನಡಿ ಎನಿಸಿದೆ. ಇಲ್ಲಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ದೇಶಭಕ್ತಿ, ದೈವಭಕ್ತಿ, ಪರಸ್ಪರ ಪ್ರೀತಿ, ವಿಶ್ವಾಸ, ಸೌಹಾರ್ದಗಳಿಂದ ಬದುಕುವುದನ್ನು ಕಲಿಸುತ್ತಾರೆ. ಹೀಗಾಗಿ ವಿಶ್ವಮಾನವಕ್ಷೇತ್ರ ಎಂಬ ಹೆಸರನ್ನು ಸಾರ್ಥಕಗೊಳಿಸಲಾಗಿದೆ.

ಮಂಡ್ಯದಲ್ಲಿ ಹಳೆಯ ಮೈಸೂರುರಸ್ತೆಯಲ್ಲಿರುವ ಶಂಕರಮಠವು ಪ್ರಾಚೀನವಾದುದು. ಶ್ರೀ ಶ್ರೀ ಸುರೇಶ ಸ್ವಾಮೀಜಿಯವರು ಈ ಮಠವನ್ನು ತಾವು ಶಿವಸಾಯುಜ್ಯವನ್ನು ಸೇರುವುದಕ್ಕೆ ಮೊದಲು ಪೂಜ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರಿಗೆ ಸಮರ್ಪಿಸಿದರು. ಈ ಮಠದಲ್ಲಿ ಬಹು ಸುಂದರವಾದ ಶಂಕರನ

ಅಮೃತಶಿಲಾ ವಿಗ್ರಹ, ಶಿವಲಿಂಗ ಹಾಗೂ ದೇವಿ ವಿಗ್ರಹಗಳಿವೆ. ಇಲ್ಲಿ ತ್ರಿಕಾಲಗಳಲ್ಲಿಯೂ ಪೂಜೆ ನಡೆಯುತ್ತದೆ. ಅಲ್ಲದೆ ಶಂಕರ ಜಯಂತ್ಯುತ್ಸವ, ಗೀತಾಪಾರಾಯಣ, ಮಹಾಭಾರತ ಪ್ರವಚನ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಗ್ರಾಮೀಣ ಬಡಮಕ್ಕಳ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಒಂದು ವಿದ್ಯಾರ್ಥಿನಿಲಯವನ್ನು ನಡೆಸಲಾಗುತ್ತಿದೆ. ಇಲ್ಲಿ ಉಚಿತ ಊಟ, ವಸತಿ ವ್ಯವಸ್ಥೆಮಾಡಲಾಗಿದೆ. ಈ ಕಟ್ಟಡಕ್ಕೆ ಹೊಂದಿಕೊಂಡಿರುವ ಮಳಿಗೆಗಳಿಂದ ಬರುವ ಹಣವನ್ನು ಈ ವಿದ್ಯಾರ್ಥಿನಿಲಯಕ್ಕೆ ಉಪಯೋಗಿಸಲಾಗುತ್ತಿದೆ.

ಮಂಡ್ಯ ನಗರದ ಆಸ್ಪತ್ರೆಯಲ್ಲಿ ಅಂತಿಮ ವರ್ಷದ ತರಬೇತಿ ಪಡೆಯುವ ಆದಿಚುಂಚನಗಿರಿ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂತೆ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯವನ್ನು ಮಂಡ್ಯ ನಗರದ ಬಂದೀಗೌಡ ಬಡಾವಣೆಯಲ್ಲಿ ಪ್ರಾರಂಭಿಸಲಾಗಿದೆ. ಇಲ್ಲಿ ವಿದ್ಯಾರ್ಥಿನಿಯರಿಗೆ ಉತ್ತಮ ಊಟ-ವಸತಿ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ಮಂಡ್ಯ ಜಿಲ್ಲೆಯ ಕದಲೂರಿನಲ್ಲಿ ಒಂದು ಪ್ರೌಢಶಾಲೆಯನ್ನು ನಡೆಸಲಾಗುತ್ತಿದೆ. ಇದು ಗ್ರಾಮಾಂತರ ಪ್ರದೇಶದ ಮಕ್ಕಳ ಶಿಕ್ಷಣಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನು ಒಳಗೊಂಡಿದ್ದು ಉತ್ತಮವಾದ ಕಟ್ಟಡವನ್ನು ಹೊಂದಿದೆ. ಅರ್ಹ ಅಧ್ಯಾಪಕ ವರ್ಗ, ಶ್ರದ್ಧಾವಂತ ಮಕ್ಕಳನ್ನುಳ್ಳ ಈ ಶಾಲೆ ಹೆಚ್ಚು ಅಭಿವೃದ್ಧಿ ಹೊಂದುತ್ತಿದೆ. ಮಳವಳ್ಳಿ ತಾಲ್ಲೂಕಿನ ಹಿಟ್ಟನಹಳ್ಳಿ ಕೊಪ್ಪಲಿನಲ್ಲಿ ವಿವೇಕಾನಂದ ಪ್ರೌಢಶಾಲೆಯಿದೆ. ಇದು ಗ್ರಾಮಾಂತರ ಮಕ್ಕಳ ಶಿಕ್ಷಣಕ್ಕೆ ತುಂಬಾ ಉಪಯುಕ್ತವಾಗಿದೆ. ಈ ಶಾಲೆಗೆ ಆಧುನಿಕ ಸೌಲಭ್ಯವನ್ನೊಳಗೊಂಡ ನೂತನ ಕಟ್ಟಡದ ನಿರ್ಮಾಣ ಕೊನೆಯ ಹಂತದಲ್ಲಿದೆ. ಬಹಳ ವರ್ಷಗಳ ಹಿಂದೆಯೇ ಪ್ರಾರಂಭವಾದ ಈ ಶಾಲೆ ಒಳ್ಳೆಯ ಫಲಿತಾಂಶವನ್ನು ಪಡೆಯುತ್ತಿರುವುದು ಸಂತಸದ ವಿಷಯ. ಐತಿಹಾಸಿಕ ಸ್ಥಳವೆನಿಸಿದ ಶ್ರೀರಂಗಪಟ್ಟಣದಲ್ಲಿಯೂ ಪೂಜ್ಯಶ್ರೀಗಳವರು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ನಡೆಸುತ್ತಿದ್ದಾರೆ. ಭವ್ಯವಾದ ಶಾಲಾ ಕಟ್ಟಡ, ನುರಿತ, ದಕ್ಷ ಅಧ್ಯಾಪಕ ವರ್ಗ, ಆಸಕ್ತ ವಿದ್ಯಾರ್ಥಿಸಮೂಹ— ಇವುಗಳಿಂದ ಈ ಶಾಲೆ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಕೆ.ಆರ್. ಪೇಟೆ ತಾಲ್ಲೂಕಿನ ಐಕನಹಳ್ಳಿಯಲ್ಲಿ ಶ್ರೀ ಬಸವೇಶ್ವರಸ್ವಾಮಿ ಪ್ರೌಢಶಾಲೆಯನ್ನು ನಡೆಸಲಾಗುತ್ತಿದೆ. ಇದು ಗ್ರಾಮಾಂತರ ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಾ ಸಹಕಾರಿಯಾಗಿದೆ.

ಮೇಲುಕೋಟೆ

ಮೇಲುಕೋಟೆ ಸುಪ್ರಸಿದ್ಧ ಯಾತ್ರಾಸ್ಥಳ. ಇಲ್ಲಿ ಶ್ರೀ ಆದಿಚುಂಚನಗಿರಿ ಕ್ಷೇತ್ರದ ಅರವತ್ತೆಂಟನೆಯ ಪೀಠಾಧ್ಯಕ್ಷರಾಗಿದ್ದ ಶ್ರೀ ಶ್ರೀ ಶ್ರೀ ಭಕ್ತನಾಥ ಸ್ವಾಮಿಗಳವರು ಒಂದು ಮಠವನ್ನು ಸ್ಥಾಪಿಸಿದ್ದರು. ಈ ಮಠದಲ್ಲಿ ಹಿಂದಿನ ಗುರುಗಳ ಗದ್ದುಗೆಗಳಿವೆ. ಇಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಇದಕ್ಕೆ

ಸೇರಿದಂತೆ ಒಂದು ಕೈಗಾರಿಕಾ ತರಬೇತಿ ಶಾಲೆಯನ್ನು ನಡೆಸಲಾಗುತ್ತಿದೆ. ಗ್ರಾಮೀಣ ಬಡಮಕ್ಕಳು ತಾಂತ್ರಿಕ ವಿಷಯಗಳ ತರಬೇತಿ ಪಡೆಯಲು ಇದು ತುಂಬಾ ಸಹಕಾರಿಯಾಗಿದೆ. ಒಳ್ಳೆಯ ಫಲಿತಾಂಶವೂ ಬರುತ್ತಿದೆ. ಮೇಲುಕೋಟೆಯ ಜಾತ್ರೆಗೆ ಬರುವ ಭಕ್ತಾದಿಗಳ ಅನುಕೂಲಕ್ಕಾಗಿ ಇಲ್ಲಿ ಅನ್ನ ದಾಸೋಹದ ವ್ಯವಸ್ಥೆ ಮಾಡಲಾಗುತ್ತದೆ. ಜಾತ್ರಾ ಸಮಯದಲ್ಲಿ ವೈರಮುಡಿಯನ್ನು ದೇವಾಲಯಕ್ಕೆ ತೆಗೆದುಕೊಂಡು ಹೋಗುವಾಗ ಅದನ್ನು ಇಲ್ಲಿ ಶ್ರೀಮಠದ ಮುಂದೆ ಶ್ರೀ ಶ್ರೀಗಳವರು ಅಥವಾ ಅವರ ಪ್ರತಿನಿಧಿಗಳು ಸ್ವಾಗತಿಸುವ ಸಂಪ್ರದಾಯವಿದೆ.

ಶ್ರೀ ಕ್ಷೇತ್ರಕ್ಕೆ ಸೇರಿದ ಈ ಜಿಲ್ಲೆಯ ಎಲ್ಲ ಕಾರ್ಯಕ್ರಮಗಳನ್ನು ನೋಡಿಕೊಳ್ಳಲು ಈ ಶಾಖಾಮಠಕ್ಕೆ ಶ್ರೀ ಶ್ರದ್ಧಾನಾಥ ಸ್ವಾಮಿಗಳವರನ್ನು ನಿಯಮಿಸಲಾಗಿದೆ. ಇವರು ಪೂಜ್ಯಶ್ರೀಶ್ರೀಗಳವರ ಆದೇಶದಂತೆ ವಿದ್ಯಾರ್ಥಿನಿಲಯ, ಶಾಲಾ ಕಟ್ಟಡಗಳ ನಿರ್ವಹಣೆ, ಶಿಕ್ಷಣ ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗುವ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹೇಮಗಿರಿ

ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ಹೇಮಾವತಿ ನದಿಯ ತಟದಲ್ಲಿ ರಮಣೀಯ ನಿಸರ್ಗದ ನಡುವೆ ಕಂಗೊಳಿಸುತ್ತಿರುವ ಹೇಮಗಿರಿಯಲ್ಲಿ ಶ್ರೀಕ್ಷೇತ್ರದ ಶಾಖಾಮಠವಿದೆ. ಈ ಊರಿನ ಸುತ್ತಮುತ್ತಲ ಗ್ರಾಮೀಣರಿಗೆ ಧಾರ್ಮಿಕ, ಸಾಂಸ್ಕೃತಿಕ ಜಾಗೃತಿಯನ್ನುಂಟುಮಾಡಿ ಶೈಕ್ಷಣಿಕ ಅಭಿವೃದ್ಧಿಗೆ ಅನುಕೂಲ ಕಲ್ಪಿಸುವ ಮಹದಾಶಯದಿಂದ ಈ ಶಾಖಾಮಠವನ್ನು ಆರಂಭಿಸಲಾಗಿದೆ. ಈ ಮಠಕ್ಕೆ ಹೊಂದಿಕೊಂಡಂತೆ ವಿಶಾಲವಾದ ಭತ್ತದ ಗದ್ದೆಗಳು ಇವೆ. ಇಲ್ಲಿ ಉತ್ತಮ ಬೇಸಾಯ ಮಾಡಿ ಒಳ್ಳೆಯ ಬೆಳೆಯನ್ನು ತೆಗೆಯಲಾಗುತ್ತಿದೆ. ಮಠದ ಮುಂಭಾಗದಲ್ಲಿ ವಿದ್ಯಾರ್ಥಿನಿಲಯವಿದೆ. ಅಲ್ಲದೆ ಭವ್ಯವಾದ ಶ್ರೀ ಬಾಲಗಂಗಾಧರನಾಥಸ್ವಾಮಿ ಪ್ರಾರ್ಥನಾಮಂದಿರವನ್ನು ಕಟ್ಟಿಸಲಾಗಿದೆ. ವಿದ್ಯಾರ್ಥಿಗಳು ವಾಸಮಾಡಲು ಒಳ್ಳೆಯ ಗಾಳಿ ಬೆಳಕಿನಿಂದ ಕೂಡಿದ ಕೊಠಡಿಗಳಿವೆ. ಅಧ್ಯಯನ-ಅಧ್ಯಾಪನಗಳಿಗೆ ಇದು ಉತ್ತಮವಾದ ತಾಣ. ಇದರ ಪಕ್ಕದಲ್ಲಿಯೆ ಕಲ್ಯಾಣ ವೆಂಕಟರಮಣಸ್ವಾಮಿ ಪ್ರೌಢಶಾಲೆ ಇದೆ. ಇಲ್ಲಿ ನಾಡಿನ ನಾನಾ ಜಿಲ್ಲೆಗಳಿಂದ ಬಂದ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಪ್ರತಿ ವರ್ಷ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮವಾದ ಫಲಿತಾಂಶ ಬರುತ್ತಿದೆ. ಇಲ್ಲಿ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಬೇಕೆಂಬ ಯೋಜನೆ ಇದೆ.

ಪೂಜ್ಯ ಶ್ರೀಗಳವರ ಆದೇಶದಂತೆ ಈ ಶಾಖಾಮಠದ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ಶ್ರೀ ಮಲ್ಲೇಶ್ವರನಾಥ ಸ್ವಾಮಿಗಳವರನ್ನು ನೇಮಿಸಲಾಗಿದೆ. ಇವರು ಕಷ್ಟಸಹಿಷ್ಣುಗಳು, ವ್ಯವಸಾಯ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ಬಹಳ ಆಸಕ್ತಿಯುಳ್ಳವರು. ಶ್ರೀ ಶ್ರೀಗಳವರ ಆದೇಶದಂತೆ ಸದಾ ಕಾರ್ಯನಿರ್ವಹಿಸುವ ಇವರು ಎಲ್ಲಾ ಕೆಲಸಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

***

ಹಾಸನ

ಮಲೆನಾಡಿನ ಸೆರಗಿನಲ್ಲಿರುವ ಹಾಸನ ನಗರದಲ್ಲಿ ಜಿಲ್ಲೆಯಾದ್ಯಂತ ಜನರಲ್ಲಿ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಜಾಗೃತಿಯನ್ನುಂಟುಮಾಡಲು ಪೂಜ್ಯ ಶ್ರೀಗಳವರು ಶಾಖಾ ಮಠವನ್ನು ಸ್ಥಾಪಿಸಿದ್ದಾರೆ. ಈ ಮಠಕ್ಕೆ ಹೊಂದಿಕೊಂಡಂತೆ ಭವ್ಯವೂ ವಿಶಾಲವೂ ಆದ ಸಮುದಾಯಭವನವನ್ನು ನಿರ್ಮಿಸಲಾಗಿದೆ. ಇಲ್ಲಿ ಆಗಾಗ್ಗೆ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಭಕ್ತ ಜನರ ಅಗತ್ಯಗಳನ್ನರಿತು ಸಮಾಜ ಸೇವಾಕಾರ್ಯಗಳನ್ನೂ ಹಮ್ಮಿಕೊಳ್ಳಲಾಗುತ್ತದೆ. ಸಮುದಾಯ ಭವನಕ್ಕೆ ಹೊಂದಿಕೊಂಡಂತೆ ಭವ್ಯವಾದ ವಿಘ್ನನಿವಾರಕ ಗಣಪತಿಯ ದೇವಾಲಯವಿದೆ. ಸುತ್ತಮುತ್ತಲಿನ ಭಕ್ತಾದಿಗಳು ತ್ರಿಕಾಲಗಳಲ್ಲಿ ನಡೆಯುವ ಪೂಜಾದಿಗಳಲ್ಲಿ ಪಾಲ್ಗೊಂಡು ಧನ್ಯತೆಯನ್ನು ಪಡೆಯುತ್ತಾರೆ. ವಿಶೇಷ ದಿನಗಳಂದು ಹೆಚ್ಚಿನ ಪೂಜಾಕಾರ್ಯಗಳು ನಡೆಯುತ್ತವೆ. ಜನರಲ್ಲಿ ದೈವೀಭಾವನೆ ಮೂಡಿಸಲು ಇವು ಹೆಚ್ಚು ಸಹಾಯಕವಾಗಿವೆ.

ಜ್ಞಾನಪ್ರಸಾರ ಇಂದು ಮಠಗಳ ಮಹೋದ್ದೇಶವಾಗಿರುತ್ತದೆ. ಬಡತನ ನಿರ್ಮೂಲನಕ್ಕೆ ಶಿಕ್ಷಣವೇ ಮುಖ್ಯವೆಂಬುದು ಎಲ್ಲರಿಗೂ ಅರಿವಾಗಿದೆ. ಇದನ್ನರಿತೆ ಈ ಶಾಖಾಮಠದ ಆಶ್ರಯದಲ್ಲಿ ಅನೇಕ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಸಂಸ್ಕೃತ, ವೇದ ಪಾಠಶಾಲೆಯನ್ನು ಶ್ರೀ ಶಾಖಾಮಠದ ಪ್ರಾಂಗಣದಲ್ಲಿ ತೆರೆಯಲಾಗಿದೆ. ಭಾರತೀಯ ಸಂಸ್ಕೃತಿಯ ಖನಿ ಸಂಸ್ಕೃತ. ಎಲ್ಲ ವರ್ಗದ ಜನರೂ ಈ ಭಾಷೆಯನ್ನು ಕಲಿಯುವ ಅವಕಾಶವನ್ನು ಒದಗಿಸಲಾಗಿದೆ. ವೇದಾಧ್ಯಯನವನ್ನು ಮಾಡಲಿಚ್ಛಿಸುವವರಿಗೆ ವೇದಪಾಠವನ್ನು ಹೇಳಿಕೊಡಲಾಗುತ್ತದೆ. ಗ್ರಾಮಾಂತರ ಜನರಿಗೂ ಅನುಕೂಲವಾಗುವಂತೆ ಇಲ್ಲಿ ಶ್ರೀ ಆದಿಚುಂಚನಗಿರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲಾಗಿದೆ. ಪೂರ್ವಪ್ರಾಥಮಿಕ ಹಂತದಿಂದ ಹಿರಿಯ ಪ್ರಾಥಮಿಕಶಾಲೆಯವರೆಗೆ ತರಗತಿಗಳನ್ನು ನಡೆಸಲಾಗುತ್ತಿದೆ. ಉತ್ತಮವಾದ ಕಟ್ಟಡ, ಬೋಧನಾಸಕ್ತ ಅಧ್ಯಾಪಕವರ್ಗ, ಚೆನ್ನಾಗಿ ಅಧ್ಯಯನ ಮಾಡುವ ವಿದ್ಯಾರ್ಥಿ ಸಮೂಹ— ಇವುಗಳಿಂದ ಈ ಶಾಲೆ ಆದರ್ಶವಾಗಿದೆ. ಸದ್ಯದಲ್ಲಿಯೇ ಭವ್ಯವಾದ ನೂತನ ಕಟ್ಟಡದ ನಿರ್ಮಾಣ ಪೂರ್ಣವಾಗಲಿದ್ದು ವಿಶಾಲವಾದ ಆಟದ ಮೈದಾನವೂ ಒದಗುವುದರಿಂದ ಇದೊಂದು ಮಾದರಿ ಶಾಲೆ ಆಗಲಿದೆ.

ಹಾಸನದ ಗೌರಿಕೊಪ್ಪಲಿನಲ್ಲಿ ಶ್ರೀ ಆದಿಚುಂಚನಗಿರಿ ಪ್ರೌಢಶಾಲೆಯಿದೆ. ಇದಕ್ಕೆ ಈಗ ತಾನೆ ವಿಶಾಲವಾದ ಕೊಠಡಿಗಳಿಂದ ಕೂಡಿದ ಉತ್ತಮ ಕಟ್ಟಡವನ್ನು ನಿರ್ಮಿಸಲಾಗಿದೆ. ಶಾಲೆಗೆ ಹೊಂದಿಕೊಂಡಂತೆ ವಿಶಾಲವಾದ ಆಟದ ಮೈದಾನವಿದ್ದು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ತುಂಬಾ ಸಹಾಯಕವಾಗಿದೆ. ಕೆ. ಹಿರೇಹಳ್ಳಿಯಲ್ಲಿ ಶ್ರೀ ಆದಿಚುಂಚನಗಿರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿದ್ದು ಸುಮಾರು ೮೦೦ ಕ್ಕೂ ಹೆಚ್ಚು ವಿದ್ಯಾರ್ಥಿಗಳು

ಅಧ್ಯಯನ ಮಾಡುತ್ತಿದ್ದಾರೆ. ಶಾಲೆಗಳಿಗೆ ತನ್ನದೆ ಆದ ಉತ್ತಮ ಕಟ್ಟಡವಿದೆ. ಇದಕ್ಕೆ ಹೊಂದಿಕೊಂಡಂತೆ ತೋಟವಿದ್ದು ವಿವಿಧ ಬಗೆಯ ಹಣ್ಣಿನ ಗಿಡಗಳನ್ನು ಬೆಳೆಸಲಾಗಿದೆ. ಅಧ್ಯಾಪಕರು, ವಿದ್ಯಾರ್ಥಿಗಳು ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ. ಪ್ರಸಿದ್ಧ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬರುತ್ತಿವೆ. ಹಾಸನ ಜಿಲ್ಲೆಯ ಕಾರ್ಲೆಯಲ್ಲಿ ಆದಿಚುಂಚನಗಿರಿ ಕೆ ಕೆ ವಿ ಪ್ರೌಢಶಾಲೆ ನಡೆಯುತ್ತಿದೆ. ಇದಕ್ಕೆ ದೊಡ್ಡ ಆಟದ ಮೈದಾನವಿದೆ. ಶಾಲಾಭಿವೃದ್ಧಿಗೆ ಅಗತ್ಯವಾದ ಎಲ್ಲ ಅನುಕೂಲಗಳೂ ಇವೆ. ಅರಸೀಕೆರೆಯಲ್ಲಿ ಶ್ರೀ ಆದಿಚುಂಚನಗಿರಿ ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕವೂ ಶಾಲೆ ಇದೆ. ಇಲ್ಲಿ ಪೂರ್ವ ಪ್ರಾಥಮಿಕ ಸೇರಿದಂತೆ ಏಳನೆಯ ತರಗತಿವರೆಗೆ ಶಿಕ್ಷಣವನ್ನು ನೀಡಲಾಗುತ್ತಿದೆ.

ಚನ್ನರಾಯಪಟ್ಟಣದಲ್ಲಿ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗಳ ಸಂಕೀರ್ಣವೇ ಇದೆ. ಇಲ್ಲಿ ಪದವಿಪೂರ್ವ ಕಾಲೇಜು, ಪ್ರಥಮ ದರ್ಜೆ ಕಾಲೇಜು, ಆಂಗ್ಲ ನರ್ಸರಿ ಶಾಲೆ, ಫಾರ್ಮಸಿ ಕಾಲೇಜು, ಶಿಕ್ಷಣ ಮಹಾವಿದ್ಯಾಲಯ, ತಾಂತ್ರಿಕ ಶಾಲೆಗಳು ಇವೆ. ಇವುಗಳಿಗೆ ಭವ್ಯವಾದ ಕಟ್ಟಡ, ಪೀಠೋಪಕರಣಗಳು, ಆಟದ ಮೈದಾನ, ಉತ್ತಮ ಅಧ್ಯಾಪಕವೃಂದ- ಇದ್ದು ಇಲ್ಲಿನ ಎಲ್ಲ ವಿದ್ಯಾಸಂಸ್ಥೆಗಳೂ ಸುವ್ಯವಸ್ಥಿತವಾಗಿ ನಡೆಯುತ್ತಿವೆ. ವಿದ್ಯಾರ್ಥಿಗಳು ಸಾಂಸ್ಕೃತಿಕ, ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಹರ್ಷದಿಂದ ಭಾಗವಹಿಸಿ ಶಾಲೆಗೆ ಕೀರ್ತಿಯನ್ನು ತಂದಿರುತ್ತಾರೆ. ಈ ಶಾಲೆಗಳು ಹೆಚ್.ಸಿ. ಶ್ರೀಕಂಠಯ್ಯನವರ ಮೇಲ್ವಿಚಾರಣೆಯಲ್ಲಿದ್ದು ಪ್ರಗತಿಪಥದಲ್ಲಿ ಸಾಗುತ್ತಿವೆ. ಹಿರೀಸಾವೆ ಹೋಬಳಿಯ ಬಾಗೂರಿನಲ್ಲಿ ಆದಿಚುಂಚನಗಿರಿ ಪ್ರೌಢಶಾಲೆ ಹಾಗೂ ಆದಿಚುಂಚನಗಿರಿ ಪಾಲಿಟೆಕ್ನಿಕ್ ಇವೆ. ಇವು ಗ್ರಾಮಾಂತರ ಮಕ್ಕಳ ಶಿಕ್ಷಣಾಭಿವೃದ್ಧಿಗೆ ತಮ್ಮದೆ ಆದ ದೇಣಿಗೆಯನ್ನು ಸಲ್ಲಿಸುತ್ತಿವೆ. ಕೆ.ಆರ್. ಪೇಟೆ ತಾಲ್ಲೂಕಿನ ಆನೆಕೆರೆಯಲ್ಲಿ ಆದಿಚುಂಚನಗಿರಿ ಪ್ರೌಢಶಾಲೆ ಇದೆ. ಇದು ಸುತ್ತಮುತ್ತಲಿನ ಗ್ರಾಮೀಣ ಮಕ್ಕಳು ಶಿಕ್ಷಣ ಪಡೆಯಲು ತುಂಬ ಅನುಕೂಲವಾಗಿದೆ.

ಪರಮಪೂಜ್ಯ ಶ್ರೀಗಳವರು ಈ ಜಿಲ್ಲೆಯಲ್ಲಿ ಶೈಕ್ಷಣಿಕ ಕ್ರಾಂತಿಗೆ ಭದ್ರಬುನಾದಿಯನ್ನು ಹಾಕಿದ್ದಾರೆ. ಇಲ್ಲಿನ ಶಿಕ್ಷಣ ಸಂಸ್ಥೆಗಳು, ಶಾಖಾಮಠದ ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳ ವ್ಯವಸ್ಥೆ ಮೊದಲಾದವುಗಳನ್ನು ನೋಡಿಕೊಳ್ಳಲು ಶ್ರೀಗಳವರು ಶ್ರೀ ಶ್ರೀ ಶಾಂತಿನಾಥಸ್ವಾಮಿಗಳನ್ನು ನೇಮಿಸಿದ್ದಾರೆ. ಇವರು ಸಂಸ್ಕೃತ ವೇದ, ಆಗಮಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ್ದಾರೆ. ಶ್ರೀ ಶ್ರೀಗಳವರ ಆದೇಶ, ಮಾರ್ಗದರ್ಶನಗಳಂತೆ ಶ್ರೀ ಮಠದ ಎಲ್ಲ ಕೆಲಸಗಳನ್ನು ಇವರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಇವರು ಪೂಜ್ಯಶ್ರೀಗಳವರ ಅಪ್ಪಣೆಯಂತೆ ಮೂರು ವರ್ಷ ಅಮೆರಿಕಾದ ಫ್ಲಿಂಟ್‌ನಗರದಲ್ಲಿದ್ದು ಅಲ್ಲಿನ ಭಾರತೀಯರಿಗೆ ವೇದಾಗಮಗಳನ್ನೂ ಪೂಜಾವಿಧಾನಗಳನ್ನೂ ಕಲಿಸಿಕೊಟ್ಟಿದ್ದಾರೆ. ಇವರು ವಿದೇಶದ ಅನುಭವಗಳ ಹಿನ್ನೆಲೆಯಲ್ಲಿ ಶ್ರೀಗಳವರ ಮಾರ್ಗದರ್ಶನದಂತೆ ಯಶಸ್ವಿಯಾಗಿ ಶಾಖಾಮಠದ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ.

***

ಶಿವಮೊಗ್ಗ

ಪರಮಪೂಜ್ಯ ಶ್ರೀಗಳವರು ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಜನರು ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಲೆಂಬ ಪ್ರಬಲ ಆಕಾಂಕ್ಷೆಯಿಂದ ಶಿವಮೊಗ್ಗ ನಗರದಲ್ಲಿ ಶ್ರೀ ಆದಿಚುಂಚನಗಿರಿ ಶಾಖಾಮಠವನ್ನು ಆರಂಭಿಸಿದ್ದಾರೆ. ಈ ಮಠಕ್ಕೆ ಹೊಂದಿಕೊಂಡಂತೆ ಕನ್ನಡ ಮತ್ತು ಆಂಗ್ಲಮಾಧ್ಯಮ ಶಾಲೆ ಇದೆ. ಇಲ್ಲಿ ಪೂರ್ವಪ್ರಾಥಮಿಕ ಶಾಲೆಯಿಂದಲೂ ತರಗತಿಗಳನ್ನು ನಡೆಸಲಾಗುತ್ತಿದೆ. ಶಿವಮೊಗ್ಗ ನಗರ ಹಾಗೂ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಉನ್ನತ ಮಟ್ಟದ ಶಿಕ್ಷಣ ಸೌಲಭ್ಯವನ್ನು ಒದಗಿಸಿಕೊಡಬೇಕೆಂಬುದೇ ಪೂಜ್ಯಶ್ರೀಗಳವರ ಆಶಯ. ಇಲ್ಲಿ ಶ್ರೀ ಆದಿಚುಂಚನಗಿರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಇದೆ. ಪೂರ್ವ ಪ್ರಾರ್ಥಮಿಕದಿಂದ ಏಳನೆ ತರಗತಿವರೆಗೆ ಬೋಧನೆ ಮಾಡಲಾಗುತ್ತಿದೆ ಇದಲ್ಲದೆ ಜಗದ್ಗುರು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪ್ರೌಢಶಾಲೆಯನ್ನು ನಡೆಸಲಾಗುತ್ತಿದೆ. ಈ ಎರಡು ಶಾಲೆಗಳಲ್ಲಿ ಸುಮಾರು ಒಂದು ಸಾವಿರಕ್ಕಿಂತಲೂ ಹೆಚ್ಚಾಗಿ ವಿದ್ಯಾರ್ಥಿಗಳು ಅಧ್ಯಯನಮಾಡುತ್ತಿದ್ದಾರೆ. ಗುಣಾತ್ಮಕವಾದ ಶಿಕ್ಷಣವನ್ನು ನೀಡುತ್ತಿರುವ ಈ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಮೆಚ್ಚಿದ ಸರ್ಕಾರವು ೧೯೮೮ರಲ್ಲಿ ನಗರದ ಆಯಕಟ್ಟಿನ ಪ್ರದೇಶದಲ್ಲಿ ನಾಲ್ಕು ಎಕರೆ ಭೂಮಿಯನ್ನು ಮಂಜೂರು ಮಾಡಿತು. ಈ ನಿವೇಶನದಲ್ಲಿ ಸುಮಾರು ಒಂದು ಕೋಟಿ ರೂ. ವೆಚ್ಚದಲ್ಲಿ ಭವ್ಯವಾದ ಶಾಲಾಕಟ್ಟಡವನ್ನು ನಿರ್ಮಿಸಲಾಗಿದೆ. ಒಳ್ಳೆಯ ಗಾಳಿ, ಬೆಳಕುಗಳಿಂದ ಕೂಡಿದ ವಿಶಾಲವಾದ ಕೊಠಡಿಗಳು, ವಿಸ್ತಾರವಾದ ಆಟದ ಮೈದಾನ ಇವೆ. ಸಮರ್ಥರಾದ ಅಧ್ಯಾಪಕವೃಂದ, ಅಧ್ಯಯನಾಸಕ್ತ ಮಕ್ಕಳು, ಶಿಕ್ಷಣಾಭಿಮಾನಿ ಪೋಷಕರುಗಳಿಂದ ಈ ಶಾಲೆ ಶೀಘ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿದೆ. ಐದನೆಯ ತರಗತಿಯಿಂದಲೇ ಕಂಪ್ಯೂಟರ್ ತಂತ್ರಜ್ಞಾನದ ಬೋಧನೆಗೂ ಅವಕಾಶವನ್ನು ಕಲ್ಪಿಸಲಾಗಿದೆ. ಸುಸಜ್ಜಿತವಾದ ಪ್ರಯೋಗಾಲಯ, ಗ್ರಂಥಭಂಡಾರ, ವಾಚನಾಲಯಗಳ ಸೌಕರ್ಯಗಳನ್ನು ಒದಗಿಸಲಾಗಿದೆ. ಈ ಶಾಲೆಯ ಮಕ್ಕಳು ರಾಜ್ಯಮಟ್ಟದ ಕ್ವಿಜ್, ಪ್ರಬಂಧ, ಚಿತ್ರಕಲೆ- ಮೊದಲಾದ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದಾರೆ.

ಪರ ಊರಿನಿಂದ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಗಿದೆ. ಸುಮಾರು ೧೫೦ ವಿದ್ಯಾರ್ಥಿಗಳಿಗೆ ಇಲ್ಲಿ ಊಟ-ವಸತಿಗಳನ್ನು ಕಲ್ಪಿಸಲಾಗಿದೆ. ಪ್ರತಿ ವಿದ್ಯಾರ್ಥಿಗೂ ವೈಯಕ್ತಿಕ ಗಮನ ನೀಡುವುದು ಇಲ್ಲಿನ ವೈಶಿಷ್ಟ್ಯ. ಈ ಶಾಲೆ ಜಿಲ್ಲೆಯಲ್ಲಿನ ಅಗ್ರಪಂಕ್ತಿಯಲ್ಲಿರುವ ಶಾಲೆಗಳಲ್ಲೊಂದಾಗಿದೆ.

ಶಿವಮೊಗ್ಗ ಶಾಖಾಮಠದ ಸಮೀಪದಲ್ಲಿ ಸಮುದಾಯಭವನವನ್ನು ನಿರ್ಮಿಸಲಾಗುತ್ತಿದೆ. ಇಲ್ಲಿ ಸಾಂಸ್ಕೃತಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು

ಏರ್ಪಡಿಸಲಾಗುತ್ತದೆ. ಇದು ಎಲ್ಲ ವರ್ಗದ ಜನರಿಗೂ ಅನುಕೂಲವಾಗಬೇಕೆಂಬುದ ಶ್ರೀಗಳವರ ಹಿರಿಯಾಸೆ.

ಶಿವಮೊಗ್ಗನಗರಕ್ಕೆ ಹೊಂದಿಕೊಂಡಂತೆ ಶ್ರೀಕ್ಷೇತ್ರಕ್ಕೆ ಸೇರಿದ ಒಂದು ದೊಡ್ಡತೆಂಗಿನ ತೋಟವಿದೆ. ಇಲ್ಲಿ ಎಲ್ಲ ಬಗೆಯ ಹಣ್ಣಿನ ಗಿಡಗಳನ್ನು ಬೆಳೆಸಲಾಗುತ್ತಿದೆ. ತೋಟದಲ್ಲಿ ಅತ್ಯಂತ ಪ್ರಾಚೀನವಾದ ಒಂದು ಶಿವ ದೇವಾಲಯವಿದೆ. ಆದರೆ ಇದರ ಹೊರಭಾಗದ ಗೋಡೆಗಳಲ್ಲಿ ಜಿನಮೂರ್ತಿಗಳಿರುವುದನ್ನು ಕಂಡಾಗ ಕುತೂಹಲ ಉಂಟಾಗುತ್ತದೆ.

ಭದ್ರಾವತಿಯಲ್ಲಿ ಶ್ರೀ ಆದಿಚುಂಚನಗಿರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಇದೆ. ಇಲ್ಲಿ ಪೂರ್ವ ಪ್ರಾಥಮಿಕ ಶಾಲೆಯ ತರಗತಿಗಳನ್ನು ನಡೆಸಲಾಗುತ್ತಿದೆ. ಇಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮಗಳಲ್ಲಿ ಬೋಧನೆ ಮಾಡಲಾಗುತ್ತದೆ. ಇಲ್ಲಿ ಶ್ರೀ ಆದಿಚುಂಚನಗಿರಿ ಪ್ರೌಢಶಾಲೆ ಇದೆ. ಇದಕ್ಕೆ ವಿಶಾಲವಾದ ಕೊಠಡಿಗಳುಳ್ಳ ಭವ್ಯವಾದ ಕಟ್ಟಡ ಮತ್ತು ದೊಡ್ಡ ಆಟದ ಮೈದಾನವೂ ಇದೆ. ಈ ಸಂಸ್ಥೆಯಲ್ಲಿ ಸುಮಾರು ೮೦೦ ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಇಲ್ಲಿ ನುರಿತ ಅಧ್ಯಾಪಕರಿದ್ದು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಪ್ರಸಿದ್ಧ ಪರೀಕ್ಷೆಯಲ್ಲಿ ನೂರಕ್ಕೆ ನೂರರಷ್ಟು ಫಲಿತಾಂಶ ಪಡೆದಿರುವುದಲ್ಲದೆ ರ್‍ಯಾಂಕನ್ನೂ ಪಡೆದ್ದಿದೆ.

ತೀರ್ಥಹಳ್ಳಿ ತಾಲ್ಲೂಕಿನ ಗಡಿಕಲ್ಲಿನಲ್ಲಿ ಶ್ರೀ ಕ್ಷೇತ್ರದ ಲಾಲ್‌ಬಹದ್ದೂರ್ ಶಾಸ್ತ್ರಿ ಪ್ರೌಢಶಾಲೆ ಇದೆ. ಇದು ಮಹಾಕವಿ, ರಸಋಷಿ ಕುವೆಂಪು ಅವರ ಜನ್ಮಸ್ಥಳ ಕುಪ್ಪಳಿಯ ಸಮೀಪದಲ್ಲಿದೆ. ಶಾಲೆಗೆ ಒಳ್ಳೆಯ ಕಟ್ಟಡವಿದೆ. ಇದಕ್ಕೆ ಹೊಂದಿಕೊಂಡಂತೆ ಹಣ್ಣಿನ ತೋಟವಿದೆ. ಶಾಲೆಯ ಪಕ್ಕದಲ್ಲಿ ವಿಶಾಲವಾದ ಆಟದ ಮೈದಾನವಿದೆ. ಅಧ್ಯಾಪಕವರ್ಗ ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ವಿಶೇಷವಾಗಿ ಶ್ರಮಿಸುತ್ತಿದೆ. ಇದು ಮಲೆನಾಡಿನ ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಾ ಸಹಕಾರಿಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಜಯಪುರದಲ್ಲಿ ಆದಿಚುಂಚನಗಿರಿ ಪ್ರೌಢಶಾಲೆ ಇದೆ. ಈ ಪ್ರದೇಶದ ಗ್ರಾಮಾಂತರ ಮಕ್ಕಳಿಗೆ ಅನುಕೂಲವಾಗಲೆಂದು ಈ ಶಾಲೆಯನ್ನು ನಡೆಸಲಾಗುತ್ತಿದೆ. ಈ ಶಾಲೆಯಲ್ಲಿ ಎಲ್ಲ ಸೌಕರ್ಯಗಳೂ ಇದ್ದು ಉತ್ತಮ ಶಿಕ್ಷಣವನ್ನು ನೀಡಲಾಗುತ್ತಿದೆ.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಕರ್ನಾಟಕದ ಪವಿತ್ರ ಕ್ಷೇತ್ರಗಳಲ್ಲಿ ಒಂದು. ಇಲ್ಲಿ ಶ್ರೀ ಆದಿಚುಂಚನಗಿರಿಯ ದರ್ಶಿನೀ ವಿದ್ಯಾಸಂಸ್ಥೆ ಇದೆ. ಪೂರ್ವ ಪ್ರಾಥಮಿಕದಿಂದ ಏಳನೆಯ ತರಗತಿಗಳವರೆಗೂ ಇಲ್ಲಿ ಬೋಧನೆ ಮಾಡಲಾಗುತ್ತಿದೆ. ಆಯಕಟ್ಟಿನ ಪ್ರದೇಶದಲ್ಲಿರುವ ಈ ಶಾಲೆಯಲ್ಲಿ ಎಲ್ಲ ವರ್ಗದ ಮಕ್ಕಳಿಗೂ ಪ್ರವೇಶಾವಕಾಶವನ್ನು

ಕಲ್ಪಿಸಲಾಗಿದ್ದು ಉತ್ತಮವಾಗಿ ಕೆಲಸಮಾಡುತ್ತಿದೆ.

ಹೀಗೆ ಹಮ್ಮಿಕೊಂಡಿರುವ ಹಲವಾರು ಜನೋಪಯೋಗಿ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಪೂಜ್ಯಶ್ರೀಗಳವರು ಈ ಶಾಖಾಮಠಕ್ಕೆ ಶ್ರೀ ಪ್ರಸನ್ನನಾಥ ಸ್ವಾಮಿಗಳನ್ನು ನೇಮಿಸಿದ್ದಾರೆ. ಇವರು ಸಂಸ್ಕೃತ ವೇದ ಆಗಮಗಳನ್ನು ಅಭ್ಯಾಸ ಮಾಡಿ, ಪೂಜಾದಿ ಕಾರ್ಯಗಳಲ್ಲಿ ಹೆಚ್ಚು ಆಸಕ್ತರಾಗಿದ್ದಾರೆ. ಇವರು ಅತ್ಯಂತ ಉತ್ಸಾಹದಿಂದ ಶ್ರೀಗಳವರ ಮಾರ್ಗದರ್ಶನದಂತೆ ಎಲ್ಲ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುತ್ತಿದ್ದಾರೆ.

***

ಚಿತ್ರದುರ್ಗದಲ್ಲಿ ಜ್ಞಾನವಿಕಾಸ ಪಾಲಿಟೆಕ್ನಿಕ್ ಸಂಸ್ಥೆಯನ್ನು ನಡೆಸಲಾಗುತ್ತಿದೆ. ಸುತ್ತಮುತ್ತಲ ಗ್ರಾಮಾಂತರ ಪ್ರದೇಶದ ಮಕ್ಕಳು ತಾಂತ್ರಿಕ ಶಿಕ್ಷಣವನ್ನು ಪಡೆಯಲು ಎಲ್ಲಾ ಅನುಕೂಲಗಳನ್ನು ಒದಗಿಸಲಾಗಿದೆ. ಇಲ್ಲಿ ಮೆಕ್ಯಾನಿಕಲ್, ಇಂಜಿನಿಯರಿಂಗ್ ಮೊದಲಾದ ಶಿಕ್ಷಣ ವಿಭಾಗಗಳಿವೆ.

ಚಿತ್ರದುರ್ಗ ಜಿಲ್ಲೆಯ ಜಗಳೂರಿನಲ್ಲಿ ಜ್ಞಾನವಿಕಾಸ ಹಿರಿಯ ಪ್ರಾಥಮಿಕ ಶಾಲೆ ಇದೆ. ಅಲ್ಲದೆ ಇದೇ ತಾಲ್ಲೂಕಿನ ಅಣಬೂರಿನ ಮಾರುತಿ ಗ್ರಾಮಾಂತರ ಪ್ರೌಢಶಾಲೆ ಮತ್ತು ಚದುರಗೊಳದ ಉಮಾಮಹೇಶ್ವರ ಪ್ರೌಢಶಾಲೆಗಳನ್ನು ಶ್ರೀ ಕ್ಷೇತ್ರವೆ ನಡೆಸುತ್ತಿದೆ. ಇವು ಗ್ರಾಮಾಂತರ ಮಕ್ಕಳು ಶಿಕ್ಷಣ ಪಡೆಯಲು ಸಹಾಯಕವಾಗಿವೆ. ಇವುಗಳ ಮೇಲ್ವಿಚಾರಣೆಯನ್ನು ಪೂಜ್ಯಶ್ರೀಗಳವರು ಕಬೀರಾನಂದಾಶ್ರಮದ ಶ್ರೀ ಶ್ರೀ ಶಿವಲಿಂಗಾನಂದ ಸ್ವಾಮಿಗಳವರಿಗೆ ವಹಿಸಿದ್ದಾರೆ.

***

ಅಭಿವಂದನಾ

ಚಿಕ್ಕಬಳ್ಳಾಪುರ

ವಿಶ್ವವಿಖ್ಯಾತ ಎಂಜಿನಿಯರ್ ಹಾಗೂ ಮೈಸೂರು ರಾಜ್ಯದ ಆಧುನಿಕ ಶಿಲ್ಪಿ ಎಂದು ಖ್ಯಾತನಾಮರಾಗಿದ್ದ ಸರ್ ಎಂ.ವಿ. ಅವರ ಜನ್ಮಸ್ಥಳಕ್ಕೆ ಚಿಕ್ಕಬಳ್ಳಾಪುರ ತೀರ ಸಮೀಪದ ಊರು. ಇದರ ಪ್ರಭಾವದಿಂದಲೊ ಏನೊ ಇಲ್ಲಿನ ಜನತೆಗೆ ತಮ್ಮ ಪ್ರದೇಶದ ಮಕ್ಕಳು ಇಂಜಿನಿಯರಿಂಗ್ ಓದಲು ಅನುಕೂಲವಾಗುವಂತೆ ಒಂದು ಇಂಜಿನಿಯರ್ ಕಾಲೇಜನ್ನು ಪ್ರಾರಂಭಿಸಬೇಕೆಂಬ ಮಹದಾಸೆ ಆಯಿತು. ಇದರ ಪೂರೈಕೆಗಾಗಿ ಬಹಳ ಪ್ರಯತ್ನಪಡುತ್ತಿದ್ದರು. ಕೆಲವು ಸ್ಥಳೀಯರು ಪೂಜ್ಯಶ್ರೀಗಳವರಲ್ಲಿ ಈ ಬಗೆಗೆ ಕೋರಿಕೆಯನ್ನು ಸಲ್ಲಿಸಿದರು. ಶ್ರೀಗಳವರಿಗೂ ಗ್ರಾಮಾಂತರ ಪ್ರದೇಶಗಳಲ್ಲಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಬೇಕೆಂಬ ಸದಾಶಯ ಬಹಳ ದಿನಗಳಿಂದಲೂ ಇದ್ದಿತು. ಆದ್ದರಿಂದ ಜನರ ಕೋರಿಕೆಗೆ ಒಪ್ಪಿ ೧೯೮೬ರಲ್ಲಿ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಆಶ್ರಯದಲ್ಲಿ **ಶ್ರೀ ಜಗದ್ಗುರು ಚಂದ್ರಶೇಖರನಾಥ ಸ್ವಾಮೀಜಿ ಇಂಜಿನಿಯರಿಂಗ್ ಕಾಲೇಜು** ಪ್ರಾರಂಭವಾಯಿತು. ಆಗ ಸ್ವಂತ ಕಟ್ಟಡವಿಲ್ಲದೆ ಚಿಕ್ಕಬಳ್ಳಾಪುರ ತಾಲ್ಲೂಕು ಒಕ್ಕಲಿಗರ ಸಂಘದ ಕಟ್ಟಡದಲ್ಲಿ ತರಗತಿಗಳನ್ನು ನಡೆಸಲಾಗುತ್ತಿತ್ತು. ಇಲ್ಲಿ ಸಿವಿಲ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ ಹಾಗೂ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ಎಂಬ ನಾಲ್ಕು ವಿಷಯಗಳಲ್ಲಿ ಬೋಧನೆ ಮಾಡಲು ಅನುಮತಿ ದೊರಕಿತ್ತು. ಶ್ರೀ ಶ್ರೀಗಳವರ ವಿಶೇಷ ಮಾರ್ಗದರ್ಶನ ಹಾಗೂ ಅಧ್ಯಾಪಕವರ್ಗದವರ ಶ್ರಮದಿಂದ ಕಾಲೇಜು ಕ್ರಮೇಣ ಉತ್ತಮ ಪ್ರಗತಿಯನ್ನು ಸಾಧಿಸಿತು.

ಪರಮಪೂಜ್ಯ ಶ್ರೀಗಳವರ ಪರಿಶ್ರಮದಿಂದ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ಆವಶ್ಯಕ ಆರ್ಥಿಕ ಸಹಾಯ ದೊರೆತುದರ ಫಲವಾಗಿ ಚಿಕ್ಕಬಳ್ಳಾಪುರದಿಂದ ೪ ಕಿ.ಮೀ. ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ ನಂ.೭ ರಲ್ಲಿ ೧೭ ಎಕರೆ ವಿಸ್ತೀರ್ಣದ ವಿಶಾಲ ಪ್ರದೇಶದಲ್ಲಿ ಆಧುನಿಕ ಸೌಲಭ್ಯಗಳಿಂದ ಕೂಡಿದ ಭವ್ಯವಾದ ಇಂಜಿನಿಯರಿಂಗ್ ಕಾಲೇಜಿನ ಕಟ್ಟಡ ೧೯೯೧ರಲ್ಲಿ ಪೂರ್ಣವಾಯಿತು. ಇದೇ ವರ್ಷ ನೂತನ ಕಟ್ಟಡಕ್ಕೆ ತರಗತಿಗಳನ್ನು ವರ್ಗಾಯಿಸಲಾಯಿತು. ಈ ಕಾಲೇಜಿಗೆ ಅಖಿಲ ಭಾರತ ತಾಂತ್ರಿಕ ಪರಿಷತ್ತಿನ ಅಂಗೀಕಾರವೂ ದೊರೆಯಿತು. ಒಟ್ಟು ೨೪೦ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ಮ್ಯಾನುಫ್ಯಾಕ್ಚರಿಂಗ್ ಇಂಜಿನಿಯರಿಂಗ್ ಮತ್ತು ಟೆಲಿಕಮ್ಯೂನಿಕೇಷನ್ ಇಂಜಿನಿಯರಿಂಗ್ ಎಂಬ ಎರಡು ವಿಷಯಗಳನ್ನು ಹೊಸದಾಗಿ ಪ್ರಾರಂಭಿಸಲು ನಿರ್ಧರಿಸಿ ಎಐಸಿಟಿಇನ ಅನುಮತಿಯನ್ನು ನಿರೀಕ್ಷಿಸಲಾಗಿದೆ.

ಅಭಿವಂದನಾ

ಪ್ರತಿಯೊಂದು ವಿಭಾಗಕ್ಕೂ ವಿಶಾಲವಾದ ಬೋಧನಾ ಕೊಠಡಿಗಳು ಹಾಗೂ ಪ್ರಾಯೋಗಿಕ ತರಬೇತಿಗೆ ಸಕಲ ಸೌಲಭ್ಯಗಳಿಂದ ಕೂಡಿದ ಪ್ರಯೋಗ ಶಾಲೆಗಳು ಇದ್ದು ಇಲ್ಲಿ ವಿದ್ಯಾರ್ಥಿಗಳಿಗೆ ಅತ್ಯುನ್ನತಮಟ್ಟದ ಬೋಧನೆ ಹಾಗೂ ತರಬೇತಿಗೆ ಎಲ್ಲ ಅನುಕೂಲಗಳನ್ನು ಕಲ್ಪಿಸಲಾಗಿದೆ. ಉತ್ತಮ ಗ್ರಂಥಗಳಿಂದ ಕೂಡಿದ ಗ್ರಂಥಭಂಡಾರ ವಿದ್ಯಾರ್ಥಿಗಳ ಅಧ್ಯಯನಕ್ಕೆ ಹೆಚ್ಚು ಸಹಾಯಕವಾಗಿದೆ.

ಈ ಕಾಲೇಜಿನ ಉಪಯೋಗಕ್ಕಾಗಿ ೩೪.೫ ಎಕರೆ ಜಮೀನು ಲಭ್ಯವಿದ್ದು ಇದನ್ನು ಕಾಲೇಜಿನ ವಿಸ್ತರಣೆಯ ಕಟ್ಟಡಗಳು, ವಸತಿ ಗೃಹಗಳ ನಿರ್ಮಾಣಕ್ಕೂ ಉಪಯೋಗಿಸಿಕೊಳ್ಳಲಾಗುವುದು. ಪ್ರಥಮ ಹಂತದಲ್ಲಿ ಮೆಕ್ಯಾನಿಕಲ್ ವಿಭಾಗದ ಕಟ್ಟಡ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಲೇಜಿನ ಅಧ್ಯಾಪಕರ ಕಠಿಣ ಪರಿಶ್ರಮ, ಅಧ್ಯಯನನಿರತ ವಿದ್ಯಾರ್ಥಿಗಳ ಸತತ ಪ್ರಯತ್ನದಿಂದ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ದೊರೆಯುತ್ತಿದೆ. ಹಲವು ರ್‍ಯಾಂಕ್‌ಗಳೂ ಬಂದು ಕಾಲೇಜಿನ ಕೀರ್ತಿ ಎಲ್ಲೆಡೆ ಹರಡುವಂತಾಗಿದೆ.

ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲೂ ಮುಂಚೂಣಿಯಲ್ಲಿದ್ದು ಅಂತರ ಕಾಲೇಜುಗಳ, ಅಂತರ ವಿಶ್ವವಿದ್ಯಾಲಯಗಳ ವಿವಿಧ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಪಡೆದಿದ್ದಾರೆ. ಅಧ್ಯಾಪಕರ, ವಿದ್ಯಾರ್ಥಿಗಳ, ಪೋಷಕರ ಮಧುರ ಬಾಂಧವ್ಯ ಕಾಲೇಜಿನ ಏಳಿಗೆಗೆ ತುಂಬಾ ಸಹಾಯಕವಾಗಿದೆ. ಪರ ಊರುಗಳಿಂದ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿನಿಲಯಗಳ ಸೌಕರ್ಯವನ್ನು ಕಲ್ಪಿಸಲಾಗಿದೆ. ಕಾಲೇಜಿನ ಎದುರೇ ೨೦೦ ಕ್ಕೂ ಹೆಚ್ಚು ಕೊಠಡಿಗಳ ಭವ್ಯವಾದ ವಿದ್ಯಾರ್ಥಿಗಳ ಹಾಸ್ಟೆಲ್ ಇದ್ದು ಅಧ್ಯಯನಕ್ಕೆ ತುಂಬಾ ಸಹಕಾರಿಯಾಗಿದೆ. ಹೆಣ್ಣು ಮಕ್ಕಳಿಗೂ ಪ್ರತ್ಯೇಕ ವಿದ್ಯಾರ್ಥಿನಿಲಯದ ವ್ಯವಸ್ಥೆ ಇರುತ್ತದೆ. ಕಾಲೇಜಿನ ವಿದ್ಯಾರ್ಥಿಗಳ ಮತ್ತು ಸಿಬ್ಬಂದಿ ವರ್ಗದವರ ಅನುಕೂಲಕ್ಕಾಗಿ ಸಾರಿಗೆ ಸೌಕರ್ಯವನ್ನು ಏರ್ಪಡಿಸಲಾಗಿದೆ. ಭಾರತೀಯ ತಾಂತ್ರಿಕ ಸಂಘದ ಶಾಖೆಯನ್ನು ಕಾಲೇಜಿನಲ್ಲಿ ತೆರೆಯಲಾಗಿದ್ದು, ಈ ಸಂಘದ ವತಿಯಿಂದ ಅನೇಕ ತಾಂತ್ರಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದಲ್ಲದೆ ಪರಿಸರ ತಂತ್ರಜ್ಞಾನ ಅಭಿವೃದ್ಧಿಗೆ ಅನೇಕ ಸಂಸ್ಥೆಗಳು ಕೊಡುಗೆ ನೀಡಿರುತ್ತವೆ. ಸಿವಿಲ್ ವಿಭಾಗದಲ್ಲಿ ಮಣ್ಣು ಪರೀಕ್ಷೆ ಮತ್ತು ಸಿಮೆಂಟ್ ಪರೀಕ್ಷೆಗಳನ್ನು ಮಾಡಿಕೊಡುವ ವ್ಯವಸ್ಥೆಯಿದೆ. ಸುತ್ತಮುತ್ತಲಿನ ಜನರಿಗೆ ಇದು ತುಂಬಾ ಸಹಾಯಕವಾಗಿದೆ. ಪರಮಪೂಜ್ಯ ಶ್ರೀಗಳವರ ದಿವ್ಯಾಶೀರ್ವಾದದಿಂದ ಈ ಕಾಲೇಜು ಕೋಲಾರ ಜಿಲ್ಲೆಯ ಶೈಕ್ಷಣಿಕ ಅಭಿವೃದ್ಧಿಗೆ ತನ್ನದೇ ಆದ ದೇಣಿಗೆಯನ್ನು ಸಲ್ಲಿಸುತ್ತಿದೆ.

ಚಿಕ್ಕಬಳ್ಳಾಪುರದಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮಿ ಕನ್ನಡ ಮತ್ತು ಆಂಗ್ಲಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯನ್ನು ನಡೆಸಲಾಗುತ್ತಿದೆ. ಇಲ್ಲಿ ಪೂರ್ವ ಪ್ರಾಥಮಿಕದಿಂದ ಏಳನೆಯ ತರಗತಿಯವರೆಗೆ ಶಿಕ್ಷಣ ನೀಡಲಾಗುತ್ತಿದೆ.

ಚಿಕ್ಕಬಳ್ಳಾಪುರ ಸಮೀಪದ ಮಂಚನ ಬೆಲೆಯಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಪ್ರೌಢಶಾಲೆ ಇದೆ. ಇದಕ್ಕೆ ತನ್ನದೆ ಆದ ಸ್ವಂತಕಟ್ಟಡವಿದ್ದು, ಆಟದ ಮೈದಾನವೂ ಇದೆ. ಗ್ರಾಮೀಣ ಪರಿಸರದ ವಿದ್ಯಾರ್ಥಿಗಳು ಓದು ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ. ಫಲಿತಾಂಶ ಉತ್ತಮವಾಗಿದ್ದು ಶಾಲೆಯ ಅಭಿವೃದ್ಧಿಗೆ ಅಧ್ಯಾಪಕರ, ಪೋಷಕರ, ಸ್ಥಳೀಯರ ಕೊಡುಗೆ ಮೆಚ್ಚುವಂತಹುದು.

ಚಿಕ್ಕಮಗಳೂರು ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯ

ಕರ್ನಾಟಕದ ಬ್ರೆಜಿಲ್ ಎಂದೂ, ಕರ್ನಾಟಕದ ಕಾಶ್ಮೀರವೆಂದೂ ಖ್ಯಾತವಾದ ಚಿಕ್ಕಮಗಳೂರು ಸುಂದರ ನಿಸರ್ಗದ ಮಡಿಲಿನಲ್ಲಿ ಕಂಗೊಳಿಸುತ್ತಿದೆ. ಪರಮಪೂಜ್ಯ ಶ್ರೀ ಶ್ರೀಗಳವರು ಈ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಪ್ರವಾಸಮಾಡಿದಾಗ ಶ್ರೀಗಳವರನ್ನು ಅನೇಕ ಭಕ್ತರು ಈ ಜಿಲ್ಲೆಯ ಮಕ್ಕಳಿಗೆ ತಾಂತ್ರಿಕ ಶಿಕ್ಷಣ ಸೌಲಭ್ಯವನ್ನು ದೊರಕಿಸಿಕೊಡಬೇಕೆಂದು ಆಗಾಗ್ಗೆ ಒತ್ತಾಯಮಾಡುತ್ತಿದ್ದರು. ಶ್ರೀಮಂತರು ತಮ್ಮ ಮಕ್ಕಳನ್ನು ದೂರದ ತಾಂತ್ರಿಕ ಶಿಕ್ಷಣ ವಿದ್ಯಾಲಯಗಳಿಗೆ ಶಿಕ್ಷಣಕ್ಕಾಗಿ ಕಳುಹಿಸಿಕೊಡುವ ಸಾಮರ್ಥ್ಯವುಳ್ಳವರಾಗಿದ್ದರೂ ಸಾಮಾನ್ಯ ವರ್ಗದ ಜನರಿಗೆ ಇದು ಕನಸಿನ ಮಾತಾಗಿತ್ತು. ಇದು ಶ್ರೀ ಶ್ರೀಗಳವರಿಗೆ ವೇದ್ಯವಾಗಿ ೧೯೮೦ರಲ್ಲಿ ಚಿಕ್ಕಮಗಳೂರಿನ ವಿಜಯಪುರ ಬಡಾವಣೆಯಲ್ಲಿ ಬಾಗೆಮನೆ ಚನ್ನೇಗೌಡರ ವಿದ್ಯಾರ್ಥಿನಿಲಯದಲ್ಲಿ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು. ಇಡೀ ಜಿಲ್ಲೆಗೆ ಮೊದಲನೆಯದಾದ ಇದು ಈ ಪ್ರದೇಶದ ವಿದ್ಯಾರ್ಥಿಗಳಿಗೆ ವರದಾನವಾಯಿತು. ಈ ಸಂಸ್ಥೆಯ ಅಭಿವೃದ್ಧಿಗೆ ಪೂಜ್ಯ ಶ್ರೀಶ್ರೀಗಳವರ ಭವ್ಯ ಕಲ್ಪನೆಗೆ ತಕ್ಕಂತೆ ಸ್ಥಳೀಯ ಜನರ ಸಹಾಯ-ಸಹಕಾರ ಸಾಕಷ್ಟು ಲಭ್ಯವಾಗಿದೆ. ೧೯೮೩ರಲ್ಲಿ ಕಾಲೇಜನ್ನು ನಗರದಿಂದ ೪ ಕಿ.ಮೀ. ದೂರದಲ್ಲಿರುವ ಕಡೂರು ರಸ್ತೆಯ ಆದಿಚುಂಚನಗಿರಿ ಬಡಾವಣೆಗೆ ಸ್ಥಳಾಂತರಿಸಲಾಯಿತು.

ಕಾಲೇಜು ಆರಂಭವಾದಾಗ ನಾಲ್ಕು ವಿಭಾಗಗಳನ್ನು ಹೊಂದಿದ್ದು ಈಗ ಆರು ವಿಭಾಗಗಳಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಒಟ್ಟು ೨೯೦ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. ಈ ಮಹಾವಿದ್ಯಾಲಯದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಅಂದರೆ ಭಾರತದ ಎಲ್ಲ ರಾಜ್ಯಗಳ ವಿದ್ಯಾರ್ಥಿಗಳೂ ಅಧ್ಯಯನ ಮಾಡುತ್ತಿದ್ದಾರೆ. ಈ ಕಾಲೇಜು ಭಾರತದ ವಿವಿಧ ಭಾಷೆಯ ಮತ್ತು ಸಂಸ್ಕೃತಿಯ ಆಗರವಾಗಿದ್ದು ರಾಷ್ಟ್ರದ ಸಮಗ್ರತೆಯ ಪ್ರತೀಕವಾಗಿದೆ. ಶಿಸ್ತು, ನಿಯಮಪಾಲನೆ

ಉನ್ನತಮಟ್ಟದಲ್ಲಿದೆ.

ಈ ಮಹಾವಿದ್ಯಾಲಯದಲ್ಲಿ ಸಿವಿಲ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಡಸ್ಟ್ರಿಯಲ್ ಪ್ರೊಡಕ್ಷನ್ ಇಂಜಿನಿಯರಿಂಗ್— ಅಧ್ಯಯನ ವಿಭಾಗಗಳಿವೆ. ಈ ಕಾಲೇಜಿಗೆ ೫೪ ಎಕರೆ ಭೂಮಿ ಮಂಜೂರಾಗಿದ್ದು ಅವಶ್ಯಕ ಕಟ್ಟಡಗಳು ನಿರ್ಮಾಣವಾಗುತ್ತಿವೆ. ಇದರಲ್ಲಿ ಈಗಾಗಲೆ ಭವ್ಯವಾದ ನಾಲ್ಕು ಕಟ್ಟಡಗಳು ಇದ್ದು ಐದನೆಯ ಕಟ್ಟಡ ಮುಕ್ತಾಯದ ಹಂತದಲ್ಲಿದೆ. ಇವಲ್ಲದೆ ಗ್ರಂಥಾಲಯಕ್ಕೆ ಸುಂದರವಾದ ದೊಡ್ಡ ಎರಡಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಅವಶ್ಯಕವಾದ ಸುಮಾರು ೨೦ ಸಾವಿರಕ್ಕೂ ಹೆಚ್ಚು ಗ್ರಂಥಗಳನ್ನು ಸಂಗ್ರಹಿಸಿಡಲಾಗಿದೆ. ಸುಮಾರು ೭೦ಕ್ಕೂ ಹೆಚ್ಚು ನಿಯತಕಾಲಿಕಗಳು ದೊರೆಯುತ್ತವೆ. ಗ್ರಂಥಾಲಯದಲ್ಲಿಯೇ ಕುಳಿತು ಓದಲು ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ.

ಮಹಾವಿದ್ಯಾಲಯದಲ್ಲಿ ಎಲ್ಲಾ ವಿಭಾಗಗಳಲ್ಲಿಯೂ ಅರ್ಹರಾದ ನುರಿತ ಶಿಕ್ಷಕರನ್ನು ನೇಮಿಸಲಾಗಿದೆ. ಇವರೆಲ್ಲರ ವಿಶೇಷ ಪರಿಶ್ರಮ, ಶ್ರದ್ಧಾವಂತರಾದ ವಿದ್ಯಾರ್ಥಿಗಳ ಓದುವಿಕೆ- ಇವುಗಳಿಂದ ಪರೀಕ್ಷೆಗಳಲ್ಲಿ ಪ್ರತಿವರ್ಷವೂ ಉತ್ತಮ ಫಲಿತಾಂಶ ಬರುತ್ತಿದೆ. ಇದಲ್ಲದೆ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳೂ ಸಾಕಷ್ಟಿದ್ದಾರೆ.

ಆದಿಚುಂಚನಗಿರಿ ತಾಂತ್ರಿಕ ಕಾಲೇಜಿನಲ್ಲಿ ಶಿಕ್ಷಣದ ಸೌಲಭ್ಯಗಳ ಜೊತೆಗೆ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳಿಗೂ ಹೆಚ್ಚು ಪ್ರಾಶಸ್ತ್ಯ ನೀಡಿ ಎಲ್ಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಕಾಲೇಜಿನ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ನಡೆದ ಕ್ರೀಡಾಚಟುವಟಿಕೆಗಳಲ್ಲಿ ಭಾಗವಹಿಸಿ ಪಾರಿತೋಷಕಗಳನ್ನು ಗಳಿಸಿದ್ದಾರೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಗಾಗ್ಗೆ ಸೆಮಿನಾರ್‌ಗಳನ್ನು, ತರಬೇತಿ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ೧೯೯೦ರಲ್ಲಿ ಕಾಲೇಜು ದಶಮಾನೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಿ ಅದರ ಸವಿನೆನಪಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ.

ಕಾಲೇಜಿನಲ್ಲಿ ಅಧ್ಯಯನ ಮಾಡುವ ಪರಸ್ಥಳದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ. ಹೆಣ್ಣು ಮಕ್ಕಳು ಮತ್ತು ಗಂಡುಮಕ್ಕಳಿಗೆ ಪ್ರತ್ಯೇಕವಾದ ವಿದ್ಯಾರ್ಥಿನಿಲಯಗಳು ಇವೆ. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿವರ್ಗದವರಿಗೆ ಸಾರಿಗೆ ಸೌಕರ್ಯವನ್ನು ಕಲ್ಪಿಸಿಕೊಡಲಾಗಿದೆ. ಕಾಲೇಜಿನ ಸಿಬ್ಬಂದಿ ವರ್ಗದವರಿಗೆ ವಸತಿ

ಸೌಕರ್ಯವನ್ನು ಮಾಡಿಕೊಡಲಾಗಿದೆ. ಇವಲ್ಲದೆ ಅಧ್ಯಾಪಕರು ಉನ್ನತ ವ್ಯಾಸಂಗ ಮಾಡಲು ಅವಕಾಶವಿದ್ದು ಅನೇಕ ಅಧ್ಯಾಪಕರು ಈ ಸೌಲಭ್ಯವನ್ನು ಉಪಯೋಗಿಸಿಕೊಂಡು ಹೆಚ್ಚಿನ ಶಿಕ್ಷಣ ಪಡೆದು ಬಂದು ಸಂಸ್ಥೆಯಲ್ಲಿಯೇ ಕೆಲಸ ಮಾಡುತ್ತಿದ್ದಾರೆ.

ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯವು ಎಲ್ಲ ಆಧುನಿಕ ಸೌಲಭ್ಯಗಳಿಂದ ಕೂಡಿ ಉತ್ತಮ ತಾಂತ್ರಿಕ ಶಿಕ್ಷಣವನ್ನು ಒದಗಿಸುತ್ತಾ ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅಗ್ರಪಂಕ್ತಿಯಲ್ಲಿದೆ.

ಚಿಕ್ಕಮಗಳೂರಿನಲ್ಲಿ ಶ್ರೀ ಆದಿಚುಂಚನಗಿರಿ ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಕೋರ್ಸ್‌ಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ. ಇದಕ್ಕೆ ಬೋಧನೆಗೆ ಎಲ್ಲ ಸೌಲಭ್ಯಗಳೂ, ಅರ್ಹ ಅಧ್ಯಾಪಕರು ಒಳ್ಳೆಯ ಕಟ್ಟಡ ಇರುವುದರಿಂದ ಉತ್ತಮ ಫಲಿತಾಂಶ ಬರುತ್ತಿದೆ.

ಚಿಕ್ಕಮಗಳೂರಿನ ಆದಿಚುಂಚನಗಿರಿ ಬಡಾವಣೆಯಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯನ್ನು ನಡೆಸಲಾಗುತ್ತಿದೆ. ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಪ್ರಯತ್ನದಿಂದ ಈ ಶಾಲೆ ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಮಾದರಿ ಶಾಲೆಯೆನಿಸಿದೆ.

ಚಿಕ್ಕಮಗಳೂರಿನ ಸಮೀಪದ ಬಾಬಬುಡನ್ ಗಿರಿಯ ತಪ್ಪಲಿನಲ್ಲಿ ಸುಂದರ ಪ್ರಕೃತಿಯ ನೆಲೆಯಲ್ಲಿ ಶ್ರೀಕ್ಷೇತ್ರದ ಒಂದು ಸಂಸ್ಥೆ ಇದೆ. ಇಲ್ಲಿ ಶಾಂತ ವಾತಾವರಣವಿರುವುದರಿಂದ ಶ್ರೀಕ್ಷೇತ್ರದ ಸಾಧುವೃಂದ ಆಗಾಗ ಸಭೆ ಸೇರಿ ಆಧ್ಯಾತ್ಮಿಕ ವಿಷಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ.

***

ಶ್ರೀ ಕ್ಷೇತ್ರದ ಉಪಮಠಗಳು

ಶ್ರೀಗಳವರು ವ್ಯಾಪಕವಾದ ಜನಸೇವೆಯನ್ನು ಸಲ್ಲಿಸಲು ಸಾಧ್ಯವಾಗುವಂತೆ ಅನೇಕ ಶಾಖಾಮಠಗಳನ್ನು ಸ್ಥಾಪಿಸಿರುವುದಲ್ಲದೆ, ಗ್ರಾಮೀಣ ಪ್ರದೇಶದಲ್ಲಿ ಉಪಮಠಗಳನ್ನೂ ಸ್ಥಾಪಿಸಿ ತಮ್ಮ ಯೋಜನೆಯಂತೆ ಸೇವೆ ಮಾಡಬಲ್ಲ ಸಾಧುಗಳನ್ನು ನಿಯಮಿಸಿದ್ದಾರೆ.

ಹಾಲ್ತಿ

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಹಾಲ್ತಿ ಗ್ರಾಮದ ಸಮೀಪದಲ್ಲಿ ಪರುಶುರಾಮ ಕ್ಷೇತ್ರವಿದೆ. ಇಲ್ಲಿರುವ ಬೆಟ್ಟದ ಗುಹೆಯೊಂದರಲ್ಲಿ ಶ್ರೀ ಮಲ್ಲಿಕಾರ್ಜುನ ಲಿಂಗವಿದೆ. ಇದು ಉದ್ಭವ ಲಿಂಗ. ಇದರ ಮೇಲೆ ಗಂಗಾಬಿಂದುಗಳು ಯಾವಾಗಲೂ ತೊಟ್ಟಿಕ್ಕುತ್ತಿರುತ್ತವೆ. ಪರಶುರಾಮಕ್ಷೇತ್ರದಲ್ಲಿ ಸುಂದರ ಪ್ರಕೃತಿಯ ನಡುವೆ ಸ್ವರ್ಗಾಶ್ರಮವಿದೆ. ಇದು ತಪಸ್ಸು ಮತ್ತು ಧ್ಯಾನಗಳಿಗೆ ಬಹಳ ಅನುಕೂಲವಾಗಿದ್ದು ಪ್ರತಿವರ್ಷ ಗೀತಾಸಪ್ತಾಹ, ಗುರುಪೂರ್ಣಿಮೆ, ಶಿವರಾತ್ರಿಗಳನ್ನು ಆಚರಿಸಲಾಗುತ್ತದೆ. ಸುತ್ತಮುತ್ತಲಿನ ಗ್ರಾಮಗಳಿಗೆ ಇದೊಂದು ಸಾಂಸ್ಕೃತಿಕ ಕೇಂದ್ರವೆನಿಸಿದೆ. ಇಲ್ಲಿಗೆ ಆಗಮಿಸುವ ಭಕ್ತಾದಿಗಳಿಗೆ ದಾಸೋಹದ ವ್ಯವಸ್ಥೆಯಯೂ ಉಂಟು. ಈ ಸ್ವರ್ಗಾಶ್ರಮದ ಕಾರ್ಯಚಟುವಟಿಕೆಗಳು ಸುವ್ಯವಸ್ಥಿತವಾಗಿ ನಡೆಯಲು ಅನುಕೂಲವಾಗುವಂತೆ ಆರು ಕಿ.ಮೀ. ದೂರದ ಕವಲಗುಂದಿಯಲ್ಲಿ ಪೂಜ್ಯಶ್ರೀಗಳವರು ಒಂದು ದೊಡ್ಡ ತೆಂಗಿನ ತೋಟವನ್ನು ಮಾಡಿಸಿದ್ದಾರೆ.

ಪೂಜ್ಯಶ್ರೀಗಳವರು ಇಲ್ಲಿನ ಎಲ್ಲ ಕಾರ್ಯಗಳೂ ಸುವ್ಯವಸ್ಥಿತವಾಗಿ ನಡೆಯಲು ಶ್ರೀ ಅಮರನಾಥ ಸ್ವಾಮಿಗಳನ್ನು ನೇಮಿಸಿರುತ್ತಾರೆ. ಇವರು ವೇದಾಂತಿಗಳು, ಉತ್ತಮ ವಾಗ್ಮಿಗಳು, ಧ್ಯಾನ, ಧರ್ಮೋಪದೇಶಗಳಿಗೆ ಹೆಚ್ಚು ಸಮಯ ವಿನಿಯೋಗಿಸುವರು. ಪೂಜ್ಯಶ್ರೀಗಳವರ ಮಾರ್ಗದರ್ಶನದಂತೆ ಇಲ್ಲಿ ಎಲ್ಲ ಕಾರ್ಯಕ್ರಮಗಳನ್ನು ಶ್ರೀ ಅಮರನಾಥಸ್ವಾಮಿಗಳು ನಿರ್ವಹಿಸುತ್ತಿದ್ದಾರೆ.

ಗುಂಗುರುಮೆಳೆ

ತಿಪಟೂರು ತಾಲ್ಲೂಕು ಗುಂಗುರುಮೆಳೆಯಲ್ಲಿ ಒಂದು ಗುರುಕುಲಾಶ್ರಮವಿದೆ. ಇದು ಸಮೀಪದ ಗ್ರಾಮೀಣರಿಗೆ ಒಂದು ಆಧ್ಯಾತ್ಮಿಕ ಕೇಂದ್ರವಾಗಿದೆ. ಪೂಜ್ಯಶ್ರೀಗಳವರು

ಈ ಆಶ್ರಮವನ್ನು ನಡೆಸಲು ಎಲ್ಲಾ ಸೌಕರ್ಯಗಳನ್ನು ಒದಗಿಸಿದ್ದಾರೆ ಹಾಗೂ ಇಲ್ಲಿನ ಕಾರ್ಯಗಳು ಯಶಸ್ವಿಯಾಗಿ ನಡೆಯಲು ಶ್ರೀ ಪ್ರೇಮಾನಂದನಾಥ ಸ್ವಾಮಿಗಳನ್ನು ನಿಯೋಜಿಸಿದ್ದಾರೆ. ಇವರು ಅದ್ವೈತ ಸಿದ್ಧಾಂತವನ್ನು ಬಲ್ಲವರು. ಶ್ರೀ ಶ್ರೀಗಳವರ ಆದೇಶದಂತೆ ಇಲ್ಲಿನ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಈ ಆಶ್ರಮದ ವತಿಯಿಂದ ಒಂದು ಕಾನ್ವೆಂಟ್ ಶಾಲೆಯನ್ನು ನಡೆಸಲಾಗುತ್ತಿದೆ. ಸುತ್ತಲ ಹಳ್ಳಿಗಳ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ದೊರಕಿಸಿಕೊಡಲು ವ್ಯವಸ್ಥೆಮಾಡಲಾಗಿದೆ.

ಹುಲಿಯೂರು ದುರ್ಗ

ಈ ಊರಿನ ಸಮೀಪದಲ್ಲಿ ಶ್ರೀಕ್ಷೇತ್ರಕ್ಕೆ ಸೇರಿದ ಒಂದು ಉಪಮಠವಿದೆ. ಇಲ್ಲಿ ಒಂದು ಪ್ರಾಚೀನ ದೇವಾಲಯವಿದ್ದು ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಇಲ್ಲಿನ ಮೇಲ್ವಿಚಾರಣೆಯನ್ನು ಶ್ರೀಗಳವರ ಆದೇಶದಂತೆ ಶ್ರೀ ರಾಮಾನಂದರೆಂಬ ಸಾಧುಗಳು ನೋಡುಕೊಳ್ಳುತ್ತಿದ್ದಾರೆ.

ಬನ್ನಿಕುಪ್ಪೆ

ರಾಮನಗರ ತಾಲ್ಲೂಕಿನ ಬನ್ನಿಕುಪ್ಪೆಯಲ್ಲಿ ಶ್ರೀ ಆದಿಚುಂಚನಗಿರಿ ಮಠಕ್ಕೆ ಸೇರಿದ ಶ್ರೀ ವರದೇಶಾನಂದಸ್ವಾಮಿ ಆಶ್ರಮ ಇದೆ. ಜನತೆಯಲ್ಲಿ ದೈವಭಕ್ತಿ ಸದ್ಭಾವನೆಗಳನ್ನು ಬೆಳೆಸಲು ಸಹಾಯಕವಾದ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

***

ಕನಕಪುರ

ಬೆಂಗಳೂರು ಜಿಲ್ಲೆಯ ಕನಕಪುರದಲ್ಲಿ ಒಂದು ಉಪಮಠವಿದೆ. ಇದು ಕನಕಪುರದಿಂದ ೨ ಕಿ.ಮೀ. ದೂರದಲ್ಲಿ ಬೆಂಗಳೂರು ಕನಕಪುರ ಹೆದ್ದಾರಿಯಲ್ಲಿ ವಿಸ್ತಾರವಾದ ಪ್ರದೇಶದಲ್ಲಿ ಇದೆ. ಈ ಊರು ರಾಜಧಾನಿಗೆ ಸಮೀಪವಾಗಿದ್ದರೂ ತಾಂತ್ರಿಕ ಶಿಕ್ಷಣ ನೀಡವ ಸಂಸ್ಥೆಗಳು ಇರಲಿಲ್ಲ. ಪೂಜ್ಯ ಶ್ರೀಗಳವರು ಸುತ್ತಮುತ್ತಲ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಅನುಕೂಲವಾಗುವಂತೆ ಶ್ರೀ ಆದಿಚುಂಚನಗಿರಿ ಪಾಲಿಟೆಕ್ನಿಕ್ ಕಾಲೇಜನ್ನು ಪ್ರಾರಂಭಿಸಿದ್ದಾರೆ. ಭಕ್ತಾದಿಗಳ ಉದಾರಕೊಡುಗೆ ಹಾಗೂ ಶ್ರಮದಿಂದ ಇಂದು ಭವ್ಯವಾದ ಕಟ್ಟಡ ನಿರ್ಮಾಣವಾಗುತ್ತಿದೆ. ಈಗಾಗಲೆ ಮೊದಲನೆ ಹಂತ ಮುಗಿದಿದ್ದು, ತರಗತಿಗಳನ್ನು ನಡೆಸಲಾಗುತ್ತಿದೆ. ಇಲ್ಲಿ ಕಂಪ್ಯೂಟರ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಇಂಜಿನಿಯರಿಂಗ್ ಮೊದಲಾದ ಬೋಧನಾ ವಿಭಾಗಗಳಿವೆ. ಶ್ರದ್ಧಾವಂತರಾದ ಅರ್ಹ ಶಿಕ್ಷಕರ ಸತತ ಶ್ರಮ ಮತ್ತು ವಿದ್ಯಾರ್ಥಿಗಳ ಪರಿಶ್ರಮದಿಂದ ಇದು ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ.

ಈ ಉಪಮಠದ ಎಲ್ಲ ಕೆಲಸಗಳನ್ನು ನೋಡಿಕೊಳ್ಳಲು ಶ್ರೀ ಶ್ರೀ ನಿತ್ಯಾನಂದನಾಥ ಸ್ವಾಮಿಗಳನ್ನು ನೇಮಿಸಿರುತ್ತಾರೆ. ಇವರು ಭಕ್ತಾದಿಗಳ ನೆರವಿನಿಂದ ಶ್ರೀಗಳವರ ಆದೇಶದಂತೆ ಎಲ್ಲ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ದಸರೀಘಟ್ಟ

ತಿಪಟೂರು ತಾಲ್ಲೂಕಿನ ದಸರೀಘಟ್ಟದಲ್ಲಿ ಶ್ರೀಕ್ಷೇತ್ರದ ಉಪಮಠವಿದೆ. ಈ ಪ್ರದೇಶದ ಜನರ ಶೈಕ್ಷಣಿಕ, ಧಾರ್ಮಿಕ ಬದುಕನ್ನು ಉತ್ತಮಪಡಿಸುವುದೇ ಇದರ ಉದ್ದೇಶ. ಇಲ್ಲಿ ಅತ್ಯಂತ ಪ್ರಾಚೀನವಾದ ಚೌಡೇಶ್ವರಿ ಅಮ್ಮನವರ ದೇವಾಲಯವಿದೆ. ಈ ದೇವತೆಗೆ ಸುತ್ತಮುತ್ತಲ ಪ್ರದೇಶ ಮಾತ್ರವಲ್ಲದೆ ಬಹಳ ದೂರದ ಊರುಗಳಲ್ಲಿಯೂ ಸಹಸ್ರಾರು ಮಂದಿ ಭಕ್ತರಿದ್ದಾರೆ. ಇದು ಭಕ್ತರ ಸಂಕಷ್ಟಗಳಿಗೆ ಕೂಡಲೆ ಸ್ಪಂದಿಸುವ ಅತ್ಯಂತ ಪ್ರಭಾವೀ ದೇವತೆ. ಚೌಡೇಶ್ವರಿ ದೇವಾಲಯಕ್ಕೆ ಉತ್ತಮ ಕಟ್ಟಡವೂ ಇರಲಿಲ್ಲ. ಪೂಜ್ಯ ಶ್ರೀಗಳವರು ಆ ಊರಿಗೆ ಬಂದು ದೇವಸ್ಥಾನವು ತುಂಬಾ ಶಿಥಿಲವಾಗಿರುವುದನ್ನು ಗಮನಿಸಿದರು. ಪರಿಸ್ಥಿತಿಯನ್ನು ಕಂಡ ಶ್ರೀಗಳವರು ಕೂಡಲೇ ದೇವಾಲಯಗಳ ನಿರ್ಮಾಣ ಮತ್ತು ಶಿಥಿಲ ದೇವಾಲಯಗಳ ಜೀರ್ಣೋದ್ಧಾರ ಕಾಯಕಕ್ಕೆ ಆದ್ಯತೆ ನೀಡಿದವರು. ಈ ದೇವಾಲಯದ ಪುನರ್ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡರು. ಭಕ್ತರನ್ನೆಲ್ಲಾ ಕರೆಯಿಸಿ

ಚರ್ಚಿಸಿ, ಯೋಜನೆ ಹಾಕಿಕೊಂಡರು. ಅದರಂತೆ ಇಂದು ಚೌಡೇಶ್ವರಿ ದೇವತೆಯ ಭವ್ಯವಾದ ದೇವಾಲಯ ಲಕ್ಷಾಂತರ ರೂ.ಗಳ ವೆಚ್ಚದಲ್ಲಿ ನಿರ್ಮಾಣವಾಗಿದೆ. ಪೂಜ್ಯಶ್ರೀಗಳವರು ಅಮ್ಮನವರಿಗೆ ತ್ರಿಕಾಲವೂ ಆಗಮೋಕ್ತ ರೀತಿಯಲ್ಲಿ ಪೂಜೆ ನಡೆಯುವಂತೆ ವ್ಯವಸ್ಥೆ ಮಾಡಿರುತ್ತಾರೆ ಹಾಗೂ ದೇವಾಲಯದ ಮಹಾದ್ವಾರದ ನಿರ್ಮಾಣ ಭರದಿಂದ ಸಾಗುತ್ತಿದೆ. ಇಂದು ಭಕ್ತಾದಿಗಳ ಸಂಖ್ಯೆಯೂ ಅಧಿಕವಾಗಿದೆ. ಪ್ರತಿವರ್ಷವೂ ನಡೆಯುವ ಜಾತ್ರೆಯಲ್ಲಿ ಲಕ್ಷಾಂತರ ಮಂದಿ ಭಕ್ತರು ಸೇರುತ್ತಾರೆ. ದೇವಾಲಯದಲ್ಲಿ ಭಜನೆ, ಗೀತಾಪಾರಾಯಣ, ಹರಿಕಥೆ ಮೊದಲಾದ ಕಾರ್ಯಕ್ರಮಗಳು ನಡೆಯುತ್ತಿವೆ. ಈ ಊರಿನ ಮಕ್ಕಳಿಗೆ ಅನುಕೂಲವಾಗುವಂತೆ ಶ್ರೀ ಚೌಡೇಶ್ವರಿ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಶೀಘ್ರದಲ್ಲಿಯೇ ಒಂದು ಸಂಸ್ಕೃತ ವೇದ ಪಾಠಶಾಲೆಯನ್ನು ತೆರೆಯಬೇಕೆಂದು ಎಲ್ಲ ಪ್ರಯತ್ನಗಳನ್ನು ಮಾಡಲಾಗಿದೆ. ಪೂಜ್ಯ ಶ್ರೀಗಳವರು ಭಕ್ತಾದಿಗಳ ನೆರವಿನಿಂದ ಈ ಊರನ್ನು ದೊಡ್ಡ ಯಾತ್ರಾಸ್ಥಳವನ್ನಾಗಿ ಮಾಡಿದ್ದಾರೆ.

ಈ ಎಲ್ಲಾ ಕಾರ್ಯಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಶ್ರೀ ಧರ್ಮಪಾಲನಾಥ ಸ್ವಾಮಿಗಳವರನ್ನು ನೇಮಿಸಲಾಗಿದೆ. ಇವರು ಸಂಸ್ಕೃತ, ವೇದ ಆಗಮಗಳನ್ನು ಚೆನ್ನಾಗಿ ಅಧ್ಯಯನ ಮಾಡಿರುತ್ತಾರೆ. ಪರಮಪೂಜ್ಯ ಶ್ರೀಗಳವರ ಆದೇಶದಂತೆ ಇಲ್ಲಿನ ದೇವಾಲಯ, ಮಠ ಮತ್ತು ಶಾಲೆಗಳ ಕೆಲಸಗಳನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

ಹೆಸರುಘಟ್ಟ

ಬೆಂಗಳೂರು ನಗರದಿಂದ ಮೂವತ್ತು ಕಿ.ಮೀ. ದೂರದಲ್ಲಿರುವ ಹೆಸರುಘಟ್ಟದ ಸಮೀಪದ ತೋಟಗೆರೆಯಲ್ಲಿ ಒಂದು ಉಪಮಠವನ್ನು ಪ್ರಾರಂಭಿಸಲಾಗಿದೆ. ಪೂಜ್ಯಶ್ರೀಗಳವರು ಶ್ರೀಕ್ಷೇತ್ರದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಶ್ರೀ ಕಾಲಭೈರವೇಶ್ವರಸ್ವಾಮಿ ದೇವಾಲಯಕ್ಕೆ ಬೇಕಾದ ಕಲ್ಲುಕೆತ್ತನೆಯ ಕಾರ್ಯವನ್ನು ತಮಿಳುನಾಡಿನಿಂದ ಬಂದ ಶಿಲ್ಪಿಗಳು ಇಲ್ಲಿ ಮಾಡುತ್ತಿದ್ದಾರೆ. ಈ ಸ್ಥಳದ ಸುತ್ತಮುತ್ತಲ ಬಂಡೆಗಳನ್ನು ಇದಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ. ಈಗಾಗಲೆ ಉತ್ತಮವಾದ ಉಪಮಠದ ಕಟ್ಟಡ ಪೂರ್ಣವಾಗಿದೆ. ಶಿಲ್ಪಿಗಳು ಕೆಲಸ ಮಾಡಲು ಮತ್ತು ವಾಸಮಾಡಲು ಅನುಕೂಲವಾಗುವಂತೆ ದೊಡ್ಡ ಶೆಡ್ಡುಗಳನ್ನು ಮತ್ತು ಮನೆಗಳನ್ನು ನಿರ್ಮಿಸಲಾಗಿದೆ. ಶಿಲ್ಪಿಗಳಿಗೆ ಎಲ್ಲ ಸೌಕರ್ಯಗಳನ್ನು ಒದಗಿಸಲಾಗಿದೆ. ಇಲ್ಲಿ ದೇವಾಲಯ, ವಿದ್ಯಾರ್ಥಿನಿಲಯ

ಮತ್ತು ಶಾಲೆಯನ್ನು ನಿರ್ಮಿಸಬೇಕೆಂಬ ಯೋಜನೆ ಇದೆ.

ಇಲ್ಲಿನ ಎಲ್ಲ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಪೂಜ್ಯಶ್ರೀಗಳವರು ಶ್ರೀ ಪ್ರಣವನಾಥ ಸ್ವಾಮಿಗಳನ್ನು ನೇಮಿಸಿದ್ದಾರೆ. ಇವರು ಸಂಸ್ಕೃತ, ವೇದ-ಆಗಮಗಳನ್ನು ಚೆನ್ನಾಗಿ ಅಭ್ಯಾಸಮಾಡಿದ್ದಾರೆ. ಈ ಹಿಂದೆ ಶ್ರೀಗಳವರು ಇವರನ್ನು ಅಮೆರಿಕದ ಪಶ್ಚಿಮ ಕಾಶಿ ದೇವಾಲಯದ ದೇವತಾಕಾರ್ಯಗಳು ಮತ್ತು ಭಕ್ತರ ವ್ರತಾದಿಕಾರ್ಯಗಳನ್ನು ನಿರ್ವಹಿಸಲು ಅಮೆರಿಕ ದೇಶಕ್ಕೆ ಮೂರು ವರ್ಷಗಳ ಕಾಲ ಕಳುಹಿಸಿಕೊಟ್ಟಿದ್ದರು. ಇವರು ಪೂಜ್ಯಶ್ರೀಗಳವರ ಆದೇಶದಂತೆ ಹೆಸರುಘಟ್ಟದ ಕಾರ್ಯಗಳಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

***

ಹಾಲುವಾಗಿಲು

ಶ್ರೀ ಓಂಕಾರೇಶ್ವರ ಆಶ್ರಮವು ಕುಣಿಗಲ್ ತಾಲ್ಲೂಕು ಹಾಲುವಾಗಿಲುವಿನಲ್ಲಿದೆ. ಇಲ್ಲಿ ಓಂಕಾರೇಶ್ವರ ದೇವಾಲಯವಿದೆ. ದೇವತಾ ಕಾರ್ಯಗಳಿಗೆ ಅಗತ್ಯವಾದ ವ್ಯವಸ್ಥೆಯನ್ನು ಮಾಡಲಾಗಿದೆ.

ಜಿನ್ನಾಗರ

ಶ್ರೀ ಆದಿಚುಂಚನಗಿರಿ ಮಠವು ಕುಣಿಗಲ್ ತಾಲ್ಲೂಕಿನಲ್ಲಿದೆ. ಇಲ್ಲಿರುವ ದೇವಾಲಯದ ಪೂಜಾದಿಗಳಿಗೆ ವ್ಯವಸ್ಥೆಯನ್ನು ಮಾಡಲಾಗಿದೆ.

***

ಕಂಬಂ ಶಾಖಾ ಮಠ-ತಮಿಳುನಾಡು

ಒಮ್ಮೆ ತಮಿಳುನಾಡಿನ ಮಧುರೆ ಜಿಲ್ಲೆಯ ಕಂಬಂನ ಶ್ರೀ ವಿ.ಕೆ. ಗಣಪತಿ ಮತ್ತು ಶ್ರೀ ರಾಮಕೃಷ್ಣ ಅವರು ಬೆಂಗಳೂರಿಗೆ ಬಂದು ಶ್ರೀ ರಾಮಚಂದ್ರನ್ ಅವರೊಡನೆ ಪ್ರಾಸಂಗಿಕವಾಗಿ ಮಾತನಾಡುತ್ತಾ ಕರ್ನಾಟಕದಲ್ಲಿ ತಮ್ಮ ಸಮಾಜದ ದೊಡ್ಡ ದೊಡ್ಡ ವ್ಯಕ್ತಿಗಳನ್ನು ಭೇಟಿಯಾಗಬೇಕೆಂದೂ, ಶ್ರೀ ಆದಿಚುಂಚನಗಿರಿ ಕ್ಷೇತ್ರದ ಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರ ದರ್ಶನಾಶೀರ್ವಾದಗಳನ್ನು ಪಡೆಯಬೇಕೆಂದೂ ಪ್ರಸ್ತಾಪಿಸಿದರು. ಅಂತೆಯೇ ಸಮಾಜದ ಅನೇಕ ಮುಖಂಡರನ್ನು ಭೇಟಿ ಮಾಡಿ ವಿಚಾರವಿನಿಮಯ ಮಾಡಿಕೊಂಡರು. ಅನಂತರ ಶ್ರೀಗಳವರನ್ನು ದರ್ಶನ ಮಾಡಬೇಕೆಂದು ಶ್ರೀಕ್ಷೇತ್ರಕ್ಕೆ ಹೋದರು. ಶ್ರೀ ಶ್ರೀಗಳವರು ಮೆಡಿಕಲ್ ಕಾಲೇಜಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅಲ್ಲಿಗೆ ಹೋದ ಇವರನ್ನು ಶ್ರೀ ಶ್ರೀಗಳವರು ಬಹಳ ಆತ್ಮೀಯತೆಯಿಂದ ಮಾತನಾಡಿಸಿ, ಯೋಗಕ್ಷೇಮವನ್ನು ವಿಚಾರಿಸಿದ ಮೇಲೆ ಅವರನ್ನು ಶ್ರೀಕ್ಷೇತ್ರಕ್ಕೆ ಕರೆದುಕೊಂಡು ಹೋದರು. ಶ್ರೀ ಕ್ಷೇತ್ರದಲ್ಲಿ ಅವರೊಡನೆ ವಿಚಾರವಿನಿಮಯ ಮಾಡುವಾಗ ಕಂಬಂನ ಭಕ್ತರು ತಮಿಳುನಾಡಿನಲ್ಲಿ ತಮ್ಮ ಸಮಾಜದ ಪರಿಸ್ಥಿತಿಯನ್ನು ವಿವರಿಸುತ್ತಾ ಕಾರಣಾಂತರಗಳಿಂದ ಅನೇಕ ಜನ ಸಮಾಜಬಾಂಧವರು ಮತಾಂತರ ಹೊಂದುತ್ತಿರುವುದನ್ನು ತಿಳಿಸಿದರು.

ಮಾರನೆಯ ದಿನ ಶ್ರೀ ಶ್ರೀಗಳವರು ಅವರನ್ನು ತಮ್ಮ ಪ್ರವಾಸಕ್ಕೆ ಕರೆದುಕೊಂಡು ಹೋದರು ಹಾಗೂ ಸಮಾರಂಭಗಳಲ್ಲಿ ತಮ್ಮವರು ಕಾರಣಾಂತರಗಳಿಂದ ತಮಿಳುನಾಡಿಗೆ ವಲಸೆ ಹೋಗಿ ಈಗ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಚಯಮಾಡಿಕೊಟ್ಟರು. ಎಲ್ಲರೂ ಅವರನ್ನು ಅತ್ಯಂತ ಆತ್ಮೀಯವಾಗಿ ನೋಡಿಕೊಂಡರು. ಕಂಬಂನ ಈ ಭಕ್ತರು ಶ್ರೀ ಶ್ರೀಗಳವರು ತೋರಿಸಿದ ಪ್ರೀತಿ, ಆದರ ಹಾಗೂ ಬಗೆಬಗೆಯ ತೊಂದರೆಗಳಿಗೆ ಒಳಗಾಗಿರುವ ಜನತೆಯ ಬಗ್ಗೆ ಶ್ರೀಗಳವರು ತೋರಿದ ಅನುಕಂಪಗಳಿಗೆ ಮಾರು ಹೋದರು.

ಕಂಬಂಗೆ ಹಿಂದಿರುಗಿದ ಇವರು ತಮ್ಮ ಜನತೆಗೆ ತಮ್ಮ ಸಮಾಜದ ಜಗದ್ಗುರುಗಳಿರುವುದನ್ನೂ ಜನತೆಯ ಬಗೆಗೆ ಅವರಿಗಿರುವ ಕಕ್ಕುಲತೆಯನ್ನೂ ವಿವರವಾಗಿ ತಿಳಿಯಪಡಿಸಿದರು. ಕೊನೆಗೆ ಕಂಬಂಗೆ ಜಗದ್ಗುರುಗಳವರನ್ನು ಬಿಜಯ ಮಾಡಿಸಿ ದರ್ಶನಾಶೀರ್ವಾದಗಳನ್ನು ಪಡೆಯಬೇಕೆಂದು ತೀರ್ಮಾನಮಾಡಿದರು. ಅಲ್ಲಿನ ಮುಖಂಡರ ಕೋರಿಕೆಯಂತೆ ಪೂಜ್ಯಶ್ರೀಗಳವರು ಮೂರು ದಿನಗಳ ತಮಿಳುನಾಡಿನ ಪ್ರವಾಸವನ್ನು

ಹಮ್ಮಿಕೊಂಡರು. ಜನರ ಸಡಗರವೋ ಸಡಗರ. ಭಕ್ತಾದಿಗಳು ಶ್ರೀ ಶ್ರೀಗಳವರನ್ನು ಅತ್ಯಂತ ಭಕ್ತಿ ಗೌರವಾದರಗಳಿಂದ ಬರಮಾಡಿಕೊಂಡರು. ಹೂವಿನ ಪಲ್ಲಕ್ಕಿ ಮೆರವಣಿಗೆ ಭವ್ಯವಾಗಿತ್ತು. ಪರಮಪೂಜ್ಯರಲ್ಲಿ ದೇವರ ಸ್ವರೂಪವನ್ನು ಕಂಡು ತಮ್ಮ ಜನ್ಮ ಸಾರ್ಥಕವಾಯಿತೆಂದು ಆನಂದ ತುಂದಿಲರಾದರು. ಅವರ ಉತ್ಸಾಹ ನೂರ್ಮಡಿಯಾಯಿತು. ತಮ್ಮ ಸಮಾಜಕ್ಕೆ ಸೇರಿದ ಗುರುಗಳು ತನ್ನದೇ ಆದ ವಿಶಿಷ್ಟ ಚಾರಿತ್ರಿಕ ಹಿನ್ನೆಲೆಯ ಪೀಠಕ್ಕೆ ಇರುವುದನ್ನು ತಿಳಿದ ಆ ಜನರು ಅತೀವ ಸಂತೋಷಪಟ್ಟರು. ತಮ್ಮ ಹೃದಯ ಸಿಂಹಾಸನದಲ್ಲಿ ಶ್ರೀಗಳವರನ್ನು ಸಂಸ್ಥಾಪಿಸಿಕೊಂಡರು. ಅಂದು ನಡೆದ ಸಭೆಯಲ್ಲಿ ಸಹಸ್ರಾರು ಜನ ಸೇರಿದ್ದರು. ಪ್ರಾಚೀನ ಸಂಪ್ರದಾಯಗಳನ್ನು ಧಿಕ್ಕರಿಸಿ ದ್ರಾವಿಡಕಳಗಂಗೆ ಸೇರಿದ ಅನೇಕ ನಾಯಕರು ಕುತೂಹಲದಿಂದ ಸೇರಿದ್ದರು. ಆ ಪ್ರದೇಶದ ಎಲ್ಲ ವರ್ಗದ ಜನರೂ ಸಭೆಯಲ್ಲಿ ಉಪಸ್ಥಿತರಿದ್ದರು. ಪೂಜ್ಯಶ್ರೀಶ್ರೀಗಳವರು ಭಕ್ತರನ್ನುದ್ದೇಶಿಸಿ ಅಪೂರ್ವವಾದ ಆಶೀರ್ವಚನ ನೀಡಿದರು. ಜಗದ್ಗುರುಗಳ ಭಾಷಣ ಅಧ್ಯಾತ್ಮ, ಜನನ-ಮರಣ, ಸ್ವರ್ಗ-ನರಕಗಳಿಗೆ ಮೀಸಲಾದುದೆಂದು ಭಾವಿಸಿದ್ದ ವಿಚಾರವಾದಿಗಳಿಗೆ ಅಚ್ಚರಿಯಾಯಿತು. ಶ್ರೀಗಳವರು ತಮ್ಮ ಆಶೀರ್ವಾದದಲ್ಲಿ ಸಮಾಜ ಅನುಭವಿಸುತ್ತಿರುವ ಕಷ್ಟಕಾರ್ಪಣ್ಯಗಳು, ಅನಕ್ಷರತೆಯೆ ಎಲ್ಲ ಸಮಸ್ಯೆಗಳಿಗೆ ಮೂಲ. ಸಮಾಜ ಶಿಕ್ಷಿತವಾಗುವುದರ ಮೂಲಕ ಮಾತ್ರ ಅವರ ಉದ್ಧಾರ ಸಾಧ್ಯ; ಅದರಲ್ಲೂ ಹೆಣ್ಣುಮಕ್ಕಳ ಶಿಕ್ಷಣದ ಪ್ರಾಮುಖ್ಯತೆ, ದೀನದಲಿತರ ಉದ್ಧಾರ- ಇವುಗಳ ಬಗೆಗೆ ವಿಶೇಷವಾಗಿ ಪ್ರಸ್ತಾಪಿಸಿದರು; ಪರಿಹಾರವನ್ನು ಸೂಚಿಸಿದರು. ಜಗದ್ಗುರುಗಳವರಿಗೆ ತಮ್ಮ ಸಮಸ್ಯೆಯ ಅರಿವು ಇರುವುದನ್ನು ಕಂಡು ಜನ ತುಂಬಾ ಸಂತೋಷಪಟ್ಟರು. ಪೂಜ್ಯ ಶ್ರೀಗಳವರಿಗೂ ಜನತೆಯ ಶುದ್ಧ ಭಕ್ತಿಯನ್ನು ಕಂಡು ಮೆಚ್ಚಿಕೆಯಾಯಿತು. ಶ್ರೀ ಶ್ರೀಗಳವರು ಬಿಜಯಮಾಡಿಸಿದೆಡೆಗಳಲ್ಲೆಲ್ಲಾ ಅತ್ಯದ್ಭುತವಾದ ಸನ್ಮಾನ, ಸ್ವಾಗತ ದೊರಕಿತು. ಶ್ರೀ ಶ್ರೀಗಳವರು ಹರ್ಷಚಿತ್ತರಾಗಿ ಶ್ರೀ ಕ್ಷೇತ್ರಕ್ಕೆ ಹಿಂದಿರುಗಿದರು.

ಕಂಬಂನ ದೇವಾಲಯವೊಂದು ಶಿಥಿಲವಾಗಿತ್ತು. ಅದನ್ನು ಜೀರ್ಣೋದ್ಧಾರ ಮಾಡಬೇಕೆಂದು ಜನರೆಲ್ಲ ಒಂದೆಡೆ ಸೇರಿದರು. ಇಲ್ಲಿನ ಸಂಪ್ರದಾಯವೆಂದರೆ ಊರಿಗೆ ಸಂಬಂಧಿಸಿದ ಕೆಲಸ ಮಾಡಬೇಕಾದರೆ ಕೇರಳದ ಮಹಾವಿದ್ವಾಂಸರಲ್ಲಿ 'ದೈವ ಪ್ರಸನ್ನಂ' ಅನ್ನು ಕೇಳುವುದು. ಅದರಂತೆ ಅಲ್ಲಿಗೆ ಹೋಗಿ ದೈವಪ್ರಸನ್ನಂ ಕೇಳಿದರು. ಕಂಬಂ ಊರಿನ ಇತಿಹಾಸ, ಸಮಾಜದ ಜಗದ್ಗುರುಗಳು ಕರ್ನಾಟಕದಲ್ಲಿರುವುದನ್ನು ತಿಳಿಸಿ ಅವರ ಮಾರ್ಗದರ್ಶನದಂತೆ ನಡೆಯಬೇಕೆಂದು ಉತ್ತರ ಸಿಕ್ಕಿತು. ಇದಕ್ಕಾಗಿ ಊರಿನ ಜನ

ಮಾಜಿಶಾಸಕ ಶ್ರೀ ಎನ್. ರಾಮಕೃಷ್ಣ ಅವರ ಅಧ್ಯಕ್ಷತೆಯಲ್ಲಿ ೨೦ ಜನರ ಒಂದು ಸಮಿತಿಯನ್ನು ನೇಮಿಸಿದರು. (ತಿರುಪನಖಿಕಳು) ಈ ಸಮಿತಿಯು ಎರಡು ವರ್ಷಗಳ ನಂತರ ಮತ್ತೆ ಬೆಂಗಳೂರಿನ ಶ್ರೀ ರಾಮಚಂದ್ರನ್ ಅವರನ್ನು ಕರೆದುಕೊಂಡು ಪೂಜ್ಯ ಶ್ರೀಗಳವರನ್ನು ಭೇಟಿಯಾದರು. ತಮ್ಮ ಸಮಸ್ಯೆಗಳನ್ನು ಶ್ರೀಗಳವರಲ್ಲಿ ಬಿನ್ನವಿಸಿಕೊಂಡರು. ಎಲ್ಲವನ್ನು ಸಾವಧಾನದಿಂದ ಕೇಳಿದ ಶ್ರೀಗಳವರು ನಿಮ್ಮ ಯೋಜನೆಗಳು ಒಳ್ಳೆಯವು. ಕಾರ್ಯಗತಗೊಳಿಸಿರೆಂದು ಅಪ್ಪಣೆ ಮಾಡಿದರು. ಅಲ್ಲದೆ ಜನಪರವಾದ ಕೆಲಸಗಳಿಗೆ ಯಾವಾಗಲೂ ತಮ್ಮ ಒಪ್ಪಿಗೆ ಇರುವುದೆಂದು ತಿಳಿಯಪಡಿಸಿದರು ಹಾಗೂ ತಾವು ೪೦ಬ೦ ಭೇಟಿಯಲ್ಲಿ ಸೂಚಿಸಿದ್ದ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸುವ ಬಗ್ಗೆ ಪುನರುಚ್ಚರಿಸಿ ಪ್ರಗತಿಯ ಬಗ್ಗೆ ಕೇಳಿದರು. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಅಶಕ್ತರಿಗೆ, ನಿರ್ಗತಿಕರಿಗೆ ವಿದ್ಯಾದಾನ ಮಾಡಬೇಕೆಂದು ಹೇಳಿದರು. ವಿದ್ಯಾದಾನವೇ ನಿಜವಾದ ಸಮಾಜಸೇವೆ ಎಂದು ಹೇಳಿದರು. ಅಲ್ಲಿ ಬಂದಿದ್ದ ಮುಖಂಡರು ಅದನ್ನು ಶೀಘ್ರವೇ ಕಾರ್ಯಗತಗೊಳಿಸುವುದಾಗಿ ಭರವಸೆ ನೀಡಿದರು. ಶ್ರೀ ರಾಮಕೃಷ್ಣನ್ ಅವರ ನೇತೃತ್ವದಲ್ಲಿ ಅಲ್ಲಿನ ಸಮಾಜದ ಎಲ್ಲ ಕೆಲಸಗಳೂ ಸಾಂಗವಾಗಿ ನಡೆಯಲೆಂದು ಆಶೀರ್ವದಿಸಿದರು. ಶ್ರೀಗಳವರ ಆಶೀರ್ವಾದದಿಂದ ಪ್ರಭಾವಿತರಾದ ಇವರು ಕೆಲವೇ ದಿನಗಳಲ್ಲಿ ಜನತೆಯ ಸಹಕಾರದಿಂದ ಅವಶ್ಯಕ ಜಮೀನನ್ನು ಕೊಂಡುಕೊಂಡರು ಹಾಗೂ ಶ್ರೀಕ್ಷೇತ್ರದಲ್ಲಿ ನಡೆಯುತ್ತಿದ್ದ ಜನ ಜಾಗೃತಿ ಶಿಬಿರಕ್ಕೆ ಸುಮಾರು ೧೫೦ ಅಭ್ಯರ್ಥಿಗಳನ್ನು ಕಳುಹಿಸಿಕೊಟ್ಟರು. ಮುಂದೆ ಸಂಸ್ಥೆ ಪ್ರಾರಂಭಿಸಲು ಬೇಕಾದ ಎಲ್ಲ ಸಿದ್ಧತೆಗಳೂ ನಡೆದವು. ಕೆಲ ಸಮಯದಲ್ಲಿಯೇ ಶ್ರೀ ವಿ.ಕೆ. ಗಣಪತಿ, ಎಸ್.ಕೆ. ಪಾರ್ತಿಬಗ್, ಮಾಜಿ ಶಾಸಕ ಎಂ.ಕೆ. ಪಾಂಡ್ಯರಾಜರ್, ಎನ್.ಕೆ. ರಾಮರಾಜಗೌಂಡರ್, ಮಾಜಿ ಶಾಸಕ ಗೋಪಾಲ್, ಟಿ.ಕೆ.ಎಸ್. ಮನೋಹರನ್ ಮತ್ತು ಸಹೋದರರು, ಟಿ.ಕೆ.ಎಸ್. ಸುಬ್ರಮಣಿಯನ್ ಸಹೋದರರು, ರಾಜಗೋಪಾಲ ಗೌಂಡರ್, ರಾಜಾಅಪ್ಪಾಜಿ ಗೌಂಡರ್ ಮೊದಲಾದ ಮಧುರೆ ಜಿಲ್ಲೆಯ ಭಕ್ತಾದಿಗಳು ಶಿಕ್ಷಣ ಸಂಸ್ಥೆಯ ಶಿಲಾನ್ಯಾಸ ಸಮಾರಂಭವನ್ನು ಏರ್ಪಡಿಸಿದ್ದರು. ಪೂಜ್ಯಶ್ರೀಗಳವರ ಅಪ್ಪಣೆಯಂತೆ ಶ್ರೀ ಆದಿಚುಂಚನಗಿರಿ ಕ್ಷೇತ್ರದ ಪುರುಷೋತ್ತಮಾನಂದನಾಥ ಸ್ವಾಮಿಗಳು, ಶ್ರೀ ಪ್ರಸನ್ನನಾಥ ಸ್ವಾಮಿಗಳು, ಶ್ರೀ ಸೋಮೇಶ್ವರನಾಥ ಸ್ವಾಮಿಗಳು, ಶ್ರೀ ಸೌಮ್ಯನಾಥ ಸ್ವಾಮಿಗಳು- ಶ್ರೀ ನಂಜಾವಧೂತ ಸ್ವಾಮಿಗಳು- ಇವರ ದಿವ್ಯ ಸಾನ್ನಿಧ್ಯದಲ್ಲಿ ಶಿಕ್ಷಣ ಸಂಸ್ಥೆಯ ಕಟ್ಟಡ ಶಿಲಾನ್ಯಾಸ ಸಮಾರಂಭವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು.

ಅಭಿವಂದನಾ

ಪೂಜ್ಯ ಶ್ರೀ ಶ್ರೀಗಳವರು ಈ ಪ್ರದೇಶದ ಜನರಿಗೆ ಸಮರ್ಥ ಮಾರ್ಗದರ್ಶನ ನೀಡಲು ಶಾಖಾ ಮಠವನ್ನು ಪ್ರಾರಂಭಿಸಬೇಕೆಂದು ನಿರ್ಧರಿಸಿ ಸೂಕ್ತವಾದ ನಿವೇಶನವನ್ನು ಪಡೆದು ಶಿಲಾನ್ಯಾಸವನ್ನು ಮಾಡಲಾಗಿದೆ. ತೀರ ಹಿಂದುಳಿದ ಕಂಬಂನಲ್ಲಿ ಹೆಣ್ಣುಮಕ್ಕಳ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಬೇಕೆಂದು ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು ಈಗ ಕಾಲೇಜನ್ನು ಪ್ರಾರಂಭಿಸಲು ತಮಿಳುನಾಡು ರಾಜ್ಯ ಸರ್ಕಾರ ಅನುಮತಿ ನೀಡಿರುತ್ತದೆ. ಈ ಕಾರ್ಯದಲ್ಲಿ ಪದ್ಮಭೂಷಣ ಶ್ರೀಮತಿ ಬಿ. ಸರೋಜಾದೇವಿಯವರ ಸಹಾಯವೂ ಒದಗಿತು. ಶೀಘ್ರದಲ್ಲಿಯೇ ಕಾಲೇಜು ಪ್ರಾರಂಭವಾಗಲಿದೆ.

ಪೂಜ್ಯಶ್ರೀಗಳವರ ಧೀಮಂತ ಶಕ್ತಿ, ಭಕ್ತರ ಉದ್ಧಾರದ ಅನನ್ಯ ಚಿಂತನ ತಮಿಳುನಾಡಿನಾದ್ಯಂತ ಪಸರಿಸಿತು. ಭಕ್ತರ ಸಂಖ್ಯೆ ನೂರ್ಮಡಿಯಾಯಿತು. ಇವರೆಲ್ಲರೂ ಶ್ರೀಗಳವರ ದರ್ಶನಾಶೀರ್ವಾದ ಪಡೆಯಲು ತವಕ ಪಡುತ್ತಿದ್ದರು. ಇದನ್ನರಿತ ತಮಿಳುನಾಡು ರಾಜ್ಯ ಒಕ್ಕಲಿಗ ಸಂಘವು ಕೊಯಮತ್ತೂರಿನಲ್ಲಿ ಒಂದು ಸಮಾವೇಶವನ್ನು ೧೯೯೫ರ ಡಿಸೆಂಬರ್ ೨೩ ಮತ್ತು ೨೪ರಂದು ಏರ್ಪಡಿಸಿ ಪೂಜ್ಯಶ್ರೀಗಳವರಿಗೆ ಭಕ್ತಿಪೂರ್ವಕ ಆಮಂತ್ರಣ ನೀಡಿತು. ಇದನ್ನು ಒಪ್ಪಿ ಶ್ರೀಗಳವರು ದಿನಾಂಕ ೨೪.೧೨.೯೫ರಂದು ಕೊಯಮತ್ತೂರಿನ ಸಮಾರಂಭದಲ್ಲಿ ಉಪಸ್ಥಿತರಿದ್ದು ಭಕ್ತರಿಗೆ ದರ್ಶನಾಶೀರ್ವಾದ ನೀಡಿದರು. ಭಕ್ತರ ಮಹಾಪೂರವೇ ಅಲ್ಲಿ ಹರಿದು ಸುಮಾರು ೭-೮ ಲಕ್ಷ ಜನರು ಈ ಸಮಾರಂಭದಲ್ಲಿ ಪಾಲ್ಗೊಂಡು ಶ್ರೀಗಳವರ ದರ್ಶನ ಪಡೆದು ಆನಂದಪಟ್ಟರು. ದಾರಿಯುದ್ದಕ್ಕೂ ಶ್ರೀಗಳವರಿಗೆ ನೀಡಿದ ಭಕ್ತಿಪೂರ್ವಕ ಸ್ವಾಗತ ಅಭೂತಪೂರ್ವವಾದುದು. ತಮಿಳುನಾಡು ರಾಜ್ಯದ ಒಕ್ಕಲಿಗ ಸಂಘದ ಅಧ್ಯಕ್ಷರಾದ ಶ್ರೀ ವಿ.ಕೆ. ಗಣಪತಿ ಹಾಗೂ ಕೊಯಮತ್ತೂರು ಜಿಲ್ಲಾ ಒಕ್ಕಲಿಗ ಸಂಘದ ಅಧ್ಯಕ್ಷರಾದ ಡಾ|| ರಾಮಸ್ವಾಮಿ ಅವರ ಸಂಘಟನಾ ಕೌಶಲ, ಪ್ರಯತ್ನಗಳಿಂದ ಈ ಸಮಾರಂಭ ಅತ್ಯಂತ ಯಶಸ್ವಿಯಾಯಿತು.

ಈಗ ತಮಿಳುನಾಡಿನ ಜನತೆಗೆ ಶ್ರೀ ಶ್ರೀಗಳವರು ದೈವಸ್ವರೂಪಿಗಳಾಗಿದ್ದಾರೆ. ಅಲ್ಲಿನ ಜನತೆ ತಮ್ಮ ಯಾವುದೆ ಕಾರ್ಯಕ್ರಗಳನ್ನು ಹಮ್ಮಿಕೊಳ್ಳಬೇಕಾದರೂ ಶ್ರೀ ಶ್ರೀಗಳವರ ಆಶೀರ್ವಾದ-ಅನುಗ್ರಹಗಳನ್ನು ಪಡೆಯುತ್ತಿದ್ದಾರೆ. ಪೂಜ್ಯಶ್ರೀಗಳವರು ತಮಿಳುನಾಡಿನಲ್ಲಿ ನೂತನ ಇತಿಹಾಸವನ್ನು ದಾಖಲಿಸಿದ್ದಾರೆ.

***

ಉತ್ಸವಗಳು

ಭಾರತದ ಉದ್ದಗಲಕ್ಕೂ ಮಾನವ ಕುಲೋದ್ಧಾರಕ್ಕೆ ಪೂರಕವಾದ ಧಾರ್ಮಿಕ ಕಾರ್ಯಕ್ರಮಗಳು ಎಡಬಿಡದೆ ಸಾಗುತ್ತಿವೆ. ಮಠಮಾನ್ಯಗಳು, ಪುಣ್ಯಕ್ಷೇತ್ರಗಳು, ದೇವ ಮಂದಿರಗಳು ಈ ಸತ್ಕಾರ್ಯಗಳನ್ನು ಯಶಸ್ವಿಯಾಗಿ ನಡೆಸುತ್ತಾ ಸಮಾಜವನ್ನು ಸತ್ಪಥದಲ್ಲಿ ಸಾಗಿಸುತ್ತಿವೆ. ಆಸ್ತಿಕ ಜನತೆಯೂ ಸಹ ಇಂತಹ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಧನ್ಯತೆಯನ್ನು ಪಡೆಯುತ್ತಾರೆ.

ಶ್ರೀ ಆದಿಚುಂಚನಗಿರಿ ಪುಣ್ಯಕ್ಷೇತ್ರದಲ್ಲಿಯೂ ಹಬ್ಬ-ಹರಿದಿನಗಳಲ್ಲಿ ಶ್ರೀ ಗುರುದೇವತಾ ಉತ್ಸವಗಳನ್ನು ಶ್ರದ್ಧಾ-ಭಕ್ತಿಗಳಿಂದ ಆಚರಿಸಲಾಗುತ್ತಿದೆ.

ಶ್ರೀ ಗುರುಪೂರ್ಣಿಮೆ

ಆಷಾಢಮಾಸದ ಪೂರ್ಣಿಮಾ ದಿನದಂದು "ಶ್ರೀ ಗುರುಪೂರ್ಣಿಮೆ" ಉತ್ಸವವನ್ನು ಶ್ರೀಕ್ಷೇತ್ರದಲ್ಲಿ ಆಚರಿಸಲಾಗುತ್ತದೆ. ಅಂದು ಹಿಂದಿನ ಎಲ್ಲಾ ಜಗದ್ಗುರುಗಳವರ ಗದ್ದುಗೆಗಳಲ್ಲಿ ಹಾಗೂ ಶ್ರೀಕ್ಷೇತ್ರಾಧಿದೇವತೆಗಳ ಮಂದಿರಗಳಲ್ಲಿ ಮಹಾಸ್ವಾಮಿಗಳವರೇ ಸ್ವತಃ ವಿಧಿವತ್ತಾಗಿ ಅಭಿಷೇಕಾದಿ ಪೂಜಾಕಾರ್ಯಗಳನ್ನು ನೆರವೇರಿಸುತ್ತಾರೆ. ಈ ಸಂದರ್ಭದಲ್ಲಿ ಅಪಾರ ಸಂಖ್ಯೆಯ ಸಾಧು-ಸಂತರು, ಭಕ್ತಾದಿಗಳು ಶ್ರೀಕ್ಷೇತ್ರಕ್ಕೆ ಆಗಮಿಸುತ್ತಾರೆ. ಅಂದು ಹಗಲು ಮತ್ತು ರಾತ್ರಿ ನಿರಂತರವಾಗಿ ಪ್ರವಚನ, ಭಜನೆ, ಪುರಾಣಕಥಾ ಶ್ರವಣ ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತವೆ. ಈ ಶುಭದಿನದಂದು ಪೂಜ್ಯಶ್ರೀಗಳವರು ಅರ್ಹರಾದ ವಟುಗಳಿಗೆ ಧರ್ಮದೀಕ್ಷೆಯನ್ನು ಪ್ರದಾನ ಮಾಡುತ್ತಾರೆ. ಪೂಜ್ಯಶ್ರೀಗಳವರಿಗೆ ಸಾಮೂಹಿಕವಾಗಿ ಪಾದಪೂಜೆ ನಡೆಯುತ್ತದೆ. ನಂತರ ಸಭೆಯಲ್ಲಿ ಪೂಜ್ಯಶ್ರೀಗಳವರು ತಮ್ಮ ಆಶೀರ್ವಾಣಿಯಿಂದ ಸಮಸ್ತ ಭಕ್ತರನ್ನು ಹರಸುತ್ತಾರೆ.

ವಾರ್ಷಿಕ ಪಟ್ಟಾಭಿಷೇಕೋತ್ಸವ

ಪ್ರತಿವರ್ಷ ಸೆಪ್ಟೆಂಬರ್ ೨೪ರಂದು ಶ್ರೀಕ್ಷೇತ್ರದಲ್ಲಿ ಅವಿಸ್ಮರಣೀಯವಾದ ಅದ್ದೂರಿ ಸಮಾರಂಭ ನಡೆಯುತ್ತದೆ. ಅಂದು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಭಕ್ತ ಕುಲಕೋಟಿಯ ಉದ್ಧಾರಾರ್ಥವಾಗಿ ಧರ್ಮ ದೀಕ್ಷೆ ತೊಟ್ಟು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಎಪ್ಪತ್ತೊಂದನೆಯ ಜಗದ್ಗುರುಗಳಾಗಿ ಶ್ರೀ ಸಿದ್ಧಸಿಂಹಾಸನಾರೋಹಣ ಮಾಡಿದ ಶುಭದಿನ. ಆ ಸಂದರ್ಭದಲ್ಲಿ ಲಕ್ಷಾಂತರ ಮಂದಿ ಭಕ್ತಾದಿಗಳು ಶ್ರೀಕ್ಷೇತ್ರಕ್ಕಾಗಮಿಸಿ ತಮ್ಮ ಭಕ್ತಿಯನ್ನು ಶ್ರೀ ಗುರುಚರಣಕ್ಕೆ ಸಮರ್ಪಿಸಿ ಅವರ ದಿವ್ಯಾಶೀರ್ವಾದ ಪಡೆಯುತ್ತಾರೆ. ಜಗದ್ಗುರು ಶ್ರೀಗಳವರ ಅಡ್ಡಪಲ್ಲಕ್ಕಿ ಉತ್ಸವ ಪ್ರಮುಖ ಬೀದಿಗಳಲ್ಲಿ ವೈಭವದಿಂದ ನಡೆಯುತ್ತದೆ. ಮೆರವಣಿಗೆಯ ನಂತರ

ನಡೆಯುವ ಬೃಹತ್ ಸಾರ್ವಜನಿಕ ಸಮಾರಂಭದಲ್ಲಿ ಪ್ರಮುಖ ಮಠಾಧೀಶ್ವರರು, ಶ್ರೇಷ್ಠ ಸಾಹಿತಿಗಳು, ರಾಜಕೀಯ ಮುಖಂಡರು, ಕಲಾವಿದರು ಭಾಗವಹಿಸಿ ಪೂಜ್ಯ ಮಹಾಸ್ವಾಮಿಗಳವರ ಸಾಧನೆಗಳ ಬಗ್ಗೆ ಬಿಚ್ಚುಮನಸ್ಸಿನಿಂದ ಪ್ರಶಂಸೆಯ ಮಾತುಗಳನ್ನಾಡುತ್ತಾರೆ. ಸಮಾರಂಭಕ್ಕಾಗಿ ಆಗಮಿಸುವ ಸಕಲ ಭಕ್ತಾದಿಗಳಿಗೂ ಶ್ರೀಮಠದ ವತಿಯಿಂದ ಪ್ರಸಾದ ವಿನಿಯೋಗದ ವ್ಯವಸ್ಥೆ ಇರುತ್ತದೆ. ಇದೇ ಸಂದರ್ಭದಲ್ಲಿ ರಾಜ್ಯದ ನಾನಾಕಡೆ ಜಿಲ್ಲಾಮಟ್ಟಗಳಲ್ಲಿ ಸ್ಥಾಪಿಸಿರುವ ಶ್ರೀ ಮಠದ ಶಾಖಾ ಕೇಂದ್ರಗಳಲ್ಲಿ ಭಕ್ತಾದಿಗಳು ''ಸದ್ಗುರು ವಂದನಾ'' ಸಮಾರಂಭಗಳನ್ನು ಏರ್ಪಡಿಸಿ ತಮ್ಮ ಭಕ್ತಿಯ ವಂದನೆಗಳನ್ನು ಸಮರ್ಪಿಸುತ್ತಾರೆ.

ಜಾನಪದ ಕಲಾಮೇಳ

ಪರಮಪೂಜ್ಯ ಶ್ರೀಗಳವರ ಪಟ್ಟಾಭಿಷೇಕ ವಾರ್ಷಿಕೋತ್ಸವದ ಶುಭಸಂದರ್ಭದಲ್ಲಿ 'ಶ್ರೀ ಭೈರವೇಶ್ವರ ಜಾನಪದ ಕಲಾಮೇಳವನ್ನು ರಾಜ್ಯಮಟ್ಟದಲ್ಲಿ ಏರ್ಪಡಿಸಲಾಗುತ್ತದೆ. ಈ ಮಹಾಮೇಳ ಪೂಜ್ಯಶ್ರೀಗಳವರು ಪೀಠಾಧಿಕಾರ ವಹಿಸಿಕೊಂಡಾಗಿನಿಂದಲೂ ಪ್ರತಿವರ್ಷ ನಡೆಯುತ್ತಾ ಬಂದಿದೆ. ಈ ಕಲಾಮೇಳದಲ್ಲಿ ಸುಮಾರು ಆರು ಸಾವಿರಕ್ಕೂ ಹೆಚ್ಚು ಜಾನಪದ ಕಲಾವಿದರು ಪಾಲ್ಗೊಳ್ಳುತ್ತಾರೆ.'

ನಮ್ಮ ಗ್ರಾಮೀಣರು ಜಾನಪದ ನಿಧಿಗಳು. ಅವರ ಗೀತೆಗಳಲ್ಲಿ ಬದುಕಿದೆ; ಅಪಾರವಾದ ಪ್ರೀತಿಯಿದೆ; ಆಳವಾದ ದೈವಭಕ್ತಿಯಿದೆ; ಜೀವನ ಸಾರ್ಥಕ್ಯದಲ್ಲಿ ಒಲವಿದೆ; ನಾಡು-ನುಡಿಯ ಬಗ್ಗೆ ಅಪಾರವಾದ ಕಾಳಜಿಯಿದೆ. ಯುಗದಿಂದ ಯುಗಕ್ಕೆ, ತಲೆಮಾರಿನಿಂದ ತಲೆಮಾರಿಗೆ, ವ್ಯಕ್ತಿಯಿಂದ ವ್ಯಕ್ತಿಗೆ, ಕರ್ಣಾನುಕರ್ಣಿಕೆಯಾಗಿ ಪ್ರವಹಿಸಿ ಬಂದಿರುವ ಈ ಜಾನಪದ ಸಾಹಿತ್ಯ ಸಮಗ್ರ ಹಿಂದೂ ಸಂಸ್ಕೃತಿಯ ಮೂಲ ಸ್ರೋತವೇ ಆಗಿದೆ.

ಪ್ರತಿ ವರ್ಷ ಈ ಕಲಾಮೇಳದಲ್ಲಿ ಭಾಗವಹಿಸುವ ಕಲಾವಿದರ ಸಂಖ್ಯೆ ಅಧಿಕವಾಗಿ ವೃದ್ಧಿಸುತ್ತಿದೆ. ಮೂರು ದಿನಗಳ ಕಾಲ ನಡೆಯುವ ಈ ಮೇಳದಲ್ಲಿ ಗೀತಗಾಯನ, ಸೋಮನಕುಣಿತ, ಪಟದ ಕುಣಿತ, ಸಾಮೂಹಿಕ ಕುಣಿತ, ಕೋಲಾಟ ಮುಂತಾದ ಸ್ಪರ್ಧೆಗಳಿರುತ್ತವೆ. ಕಲಾವಿದರು ಹಾಡುವ ಬಹುತೇಕ ಗೀತೆಗಳಲ್ಲಿ ಚುಂಚನಗಿರಿಯ ವರ್ಣನೆ, ಭೈರವನ ಆರಾಧನೆ, ಗುರುವಿನ ಹೆಗ್ಗಳಿಕೆಗಳೇ ಸಂವೃದ್ಧವಾಗಿರುತ್ತವೆ. ಈ ಕಲಾಮೇಳದಲ್ಲಿ ಭಾಗವಹಿಸುವ ಎಲ್ಲ ಕಲಾವಿದರಿಗೂ ಶ್ರೀಗಳವರು ಸೂಕ್ತ ಸಂಭಾವನೆ ನೀಡಿ, ವಸ್ತ್ರದಾನ ಮಾಡಿ ಹರಸುತ್ತಾರೆ. ಎಲ್ಲ ಕಲಾವಿದರಿಗೂ ಉಚಿತ ಊಟ, ವಸತಿಗಳನ್ನು ಕಲ್ಪಿಸುವುದಲ್ಲದೆ ಬಂದು ಹೋಗಲು ತಗಲುವ ಖರ್ಚಿನ ಹಣವನ್ನೂ ಕೊಡಲಾಗುತ್ತದೆ.

ಸಂಸ್ಕೃತ

''ಸಂಸ್ಕೃತವು ಸುಸಂಸ್ಕೃತ ಭಾಷೆಗಳ ಸುಸಂಸ್ಕೃತ ನಾಲಗೆ'' ಎಂಬುದು ಪಾಶ್ಚಾತ್ಯ ವಿದ್ವಾಂಸರೊಬ್ಬರ ಅಭಿಪ್ರಾಯ. ''ಭಾಷಾಸು ಮುಖ್ಯಾ, ಮಧುರಾ, ದಿವ್ಯಾ, ಗೀರ್ವಾಣಭಾರತೀ''— ಈ ಮಾತು ಸಂಸ್ಕೃತದ ವೈಶಿಷ್ಟ್ಯವನ್ನು ಸುಂದರವಾಗಿ ನಿರೂಪಿಸುತ್ತದೆ.

ಹಿಂದೆ ಸಂಸ್ಕೃತ ಭಾಷೆಗೆ ರಾಜಮಹಾರಾಜರ ಆಶ್ರಯವಿದ್ದಿತು. ಈಗ ಈ ಭಾಷೆಗೆ ರಾಜಾಶ್ರಯ ತಪ್ಪಿಹೋಗಿದೆ.

ಅತ್ಯಂತ ಪ್ರಾಚೀನವೂ, ಜ್ಞಾನಭರಿತವೂ ಆದ ಈ ಭಾಷಾ ಕಲಿಕೆಗೆ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನಮಠವು ಮನ್ನಣೆ ನೀಡಿದೆ. ವಿದ್ಯಾಭ್ಯಾಸಕ್ಕೆಂದು ಬಂದು ಶ್ರೀಮಠದಲ್ಲಿ ಆಶ್ರಯ ಪಡೆಯುವ ಮಕ್ಕಳಿಗೆ ಸಂಸ್ಕೃತ-ವೇದ-ಆಗಮ ಕಲಿಕೆಯನ್ನು ಕಡ್ಡಾಯಗೊಳಿಸಲಾಗಿದೆ.

ರಾಜ್ಯ ಸರ್ಕಾರ ಪ್ರತಿ ವರ್ಷವೂ ನಡೆಸುವ ವಾಕ್ಪ್ರತಿಯೋಗಿತಾ ಸ್ಪರ್ಧೆಗಳಲ್ಲಿ, ರಾಜ್ಯಮಟ್ಟದ ಇತರೆ ಸ್ಪರ್ಧೆಗಳಲ್ಲಿ ನಾಟಕೋತ್ಸವ ಹಾಗೂ ಆಕಾಶವಾಣಿಯ ರಸಮಂಜರಿ ಕಾರ್ಯಕ್ರಮಗಳಲ್ಲಿ ಇಲ್ಲಿನ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಬಹುಮಾನಗಳನ್ನು ಗಳಿಸಿರುತ್ತಾರೆ. ಇವರಲ್ಲಿ ಪಠ್ಯೇತರ ಚಟುವಟಿಕೆಗಳ ಆಸಕ್ತಿಯನ್ನು ಗಮನಿಸಿ ಪೂಜ್ಯಶ್ರೀಗಳು ಶ್ರೀಕ್ಷೇತ್ರದ ವತಿಯಿಂದಲೇ ಹಲವಾರು ರಾಜ್ಯಮಟ್ಟದ ಸಂಸ್ಕೃತ ಸ್ಪರ್ಧೆಗಳನ್ನು ನಡೆಸುತ್ತಿದ್ದಾರೆ. ಪೂಜ್ಯಶ್ರೀಗಳವರ ಈ ಘನಕಾರ್ಯಗಳಿಂದ ಪ್ರೋತ್ಸಾಹಿತರಾದ ಶ್ರೀ ಮಠದ ಆಸ್ತಿಕ ಸದ್ಭಕ್ತರಾದ ಡಾ|| ಹೋ. ಶ್ರೀನಿವಾಸಯ್ಯನವರು, ಶ್ರೀ ಹಿರಿಯಣ್ಣಗೌಡರು, ಯಲಹಂಕದ ಪ್ರೊ|| ಕೆಂಪೇಗೌಡ ಮುಂತಾದವರು ಸ್ಪರ್ಧೆಗಳು ಪ್ರತಿವರ್ಷವೂ ನಿರಂತರವಾಗಿ ನಡೆದುಕೊಂಡು ಹೋಗಲು ನೆರವಾಗುವಂತೆ ದತ್ತಿಗಳನ್ನು ಸ್ಥಾಪಿಸಿದ್ದಾರೆ. ಸಂಸ್ಕೃತ ಶಾಲಾಕಾಲೇಜುಗಳ ವಿದ್ಯಾರ್ಥಿ ಪ್ರತಿನಿಧಿಗಳೂ ಭಾಗವಹಿಸುತ್ತಾರೆ. ಎಲ್ಲರಿಗೂ ಉಚಿತ ಊಟವಸತಿಯ ವ್ಯವಸ್ಥೆಯನ್ನು ಶ್ರೀಮಠದಿಂದ ಅಚ್ಚುಕಟ್ಟಾಗಿ ಮಾಡಿಕೊಡಲಾಗುತ್ತದೆ.

ಸಂಸ್ಕೃತ ಮಹಾಸಮ್ಮೇಳನ

ಶ್ರೀ ಆದಿಚುಂಚನಗರಿ ಮಹಾಕ್ಷೇತ್ರದಲ್ಲಿ ಸಂಸ್ಕೃತ ವೇದಾಗಮ ವ್ಯಾಂಸಗ, ಪ್ರಸಾರಕ್ಕೆ ಹೆಚ್ಚು ಹೆಚ್ಚು ಮಹತ್ವ ಲಭಿಸುತ್ತಿರುವುದನ್ನು ಮನಗಂಡ ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ತಿನ ಪದಾಧಿಕಾರಿಗಳು ೧೯೮೮ರಲ್ಲಿ ಐದನೆಯ ಅಖಿಲ ಕರ್ನಾಟಕ ಸಂಸ್ಕೃತ ಸಮ್ಮೇಳನವನ್ನು ಶ್ರೀ ಕ್ಷೇತ್ರದ ಪ್ರಶಾಂತ ಹಾಗೂ ಪಾವನ ಪರಿಸರದಲ್ಲಿ ನಡೆಸಲು ಸಂಕಲ್ಪಿಸಿ, ಇದಕ್ಕಾಗಿ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ದಿವ್ಯಾಶೀರ್ವಾದ ಬೇಡಲು ಶ್ರೀಕ್ಷೇತ್ರಕ್ಕೆ ಬಂದರು. ಪೂಜ್ಯಪಾದರನ್ನು ಸಂದರ್ಶಿಸಿ ಸನ್ನಿಧಿಯಲ್ಲಿ ಪ್ರಸ್ತುತ ವಿಷಯದ ಪ್ರಸ್ತಾಪ ಮಾಡಿದರು. ಸಂಸ್ಕೃತದ ಹಿರಿಮೆ-ಗರಿಮೆಗೆಂದೇ ಅವತರಿಸಿ ಬಂದಂತಿದ್ದ ಪೂಜ್ಯಶ್ರೀಗಳವರು ಸಂತೋಷದಿಂದ ತಮ್ಮ ಸಮ್ಮತಿಯನ್ನು ಸೂಚಿಸಿ ಸಮ್ಮೇಳನಕ್ಕೆ

ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಶ್ರೀಮಠದಿಂದಲೇ ಮಾಡಿಸಿಕೊಡಲು ಸಮ್ಮತಿಸಿದರು. ಬೃಹತ್ ಸಮ್ಮೇಳನಕ್ಕೆ ಸಕಲ ಸಿದ್ಧತೆಗಳೂ ಭರದಿಂದ ಸಾಗಿದವು.

ಈ ಮಹಾಸಮ್ಮೇಳನದ ಮಹಾಪೋಷಕರು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ಪೂಜ್ಯಶ್ರೀ ಡಿ. ವೀರೇಂದ್ರ ಹೆಗ್ಗಡೆ ಅವರು. ಇವರೀರ್ವರ ಮಾರ್ಗದರ್ಶನದಲ್ಲಿ ಶ್ರೀಮಠದ ವತಿಯಿಂದ ಸ್ವಾಗತ ಸಮಿತಿಯೊಂದನ್ನು ರಚಿಸಲಾಯಿತು. ಪ್ರೊ॥ಹೆಚ್.ಕೆ. ಸಿದ್ಧಗಂಗಯ್ಯನವರು ಸಮಿತಿಯ ಅಧ್ಯಕ್ಷರಾಗಿಯೂ, ಡಾ॥ಹೋ. ಶ್ರೀನಿವಾಸಯ್ಯನವರು ಉಪಾಧ್ಯಕ್ಷರಾಗಿಯೂ ಆಯ್ಕೆಯಾದರು. ಇವರ ದಕ್ಷ ನಿರ್ದೇಶನದಲ್ಲಿ ಹಲವು ಉಪಸಮಿತಿಗಳನ್ನು ರಚಿಸಿ, ಸಮ್ಮೇಳನದ ಕಾರ್ಯಗಳನ್ನು ಹಂಚಲಾಯಿತು. ಶ್ರೀ ಮಠದ ಸಂಸ್ಕೃತ ಕಾಲೇಜಿನ ಅಧ್ಯಾಪಕ ಹಾಗೂ ಸಿಬ್ಬಂದಿವರ್ಗದವರೂ, ಇತರ ಶಿಕ್ಷಣ ಸಂಸ್ಥೆಗಳ ಬೋಧಕ ಹಾಗೂ ಸಿಬ್ಬಂದಿವರ್ಗದವರೂ ತಮ್ಮ ತಮ್ಮ ಪಾಲಿನ ಕರ್ತವ್ಯಗಳನ್ನು ಯಶಸ್ವಿಯಾಗಿ ನೆರವೇರಿಸಲು ಉದ್ಯುಕ್ತರಾದರು.

ಮಹಾಸಮ್ಮೇಳನವನ್ನು ಮೂರು ದಿನಗಳ ಕಾಲ ಆಚರಿಸಬೇಕೆಂದು ನಿರ್ಧರಿಸಲಾಯಿತು. ಅದರಂತೆ ೧೯೮೮ರ ಅಕ್ಟೋಬರ್ ೮, ೯, ೧೦ನೇ ದಿನಾಂಕಗಳನ್ನು ನಿಗದಿಪಡಿಸಲಾಯಿತು. ಈ ಅವಧಿಯಲ್ಲಿ ಸಂಸ್ಕೃತ ಭಾಷಾಭಿವೃದ್ಧಿ, ಸಾಹಿತ್ಯಾಭಿವೃದ್ಧಿ, ಬೋಧನಾಭಿವೃದ್ಧಿ, ಆಡಳಿತಾತ್ಮಕ ವ್ಯವಹಾರ ನಿರ್ವಹಣೆಗಳಿಗೆ ಪೂರಕವಾದ ಗೋಷ್ಠಿಗಳನ್ನು ಏರ್ಪಡಿಸಿ ಅವುಗಳಿಗೆ ಸಮರ್ಥರಾದ ತಜ್ಞರನ್ನು ಆಹ್ವಾನಿಸಬೇಕೆಂದು ತೀರ್ಮಾನಿಸಲಾಯಿತು. ಸಂಸ್ಕೃತ ಕ್ಷೇತ್ರದಲ್ಲಿ ಗಣನೀಯಸೇವೆ ಸಲ್ಲಿಸಿದ ಹಿರಿಯರನ್ನು ಗೌರವಿಸುವ ಕಾರ್ಯಕ್ರಮವನ್ನು ಅಳವಡಿಸಲು ನಿಶ್ಚಯಿಸಲಾಯಿತು.

ನಿಶ್ಚಿತ ಕಾರ್ಯಕ್ರಮದಂತೆ ದಿನಾಂಕ ೮.೧೦.೮೮ರಂದು ಈ ಐತಿಹಾಸಿಕ ಮಹಾಸಮ್ಮೇಳನದ ಉದ್ಘಾಟನಾ ಸಮಾರಂಭ ಬೆಳಿಗ್ಗೆ ೮ ಗಂಟೆಗೆ ನೆರವೇರಿತು. ಸಮಾರಂಭದ ಉದ್ಘಾಟಕರಾಗಿ ಅಂದಿನ ರಾಜ್ಯಪಾಲರಾಗಿದ್ದ ಶ್ರೀ ಅಶೋಕನಾಥ ಬ್ಯಾನರ್ಜಿ ಆಗಮಿಸಿದರು. ಉದ್ಘಾಟನಾ ಭಾಷಣದಲ್ಲಿ ಘನತೆವೆತ್ತ ರಾಜ್ಯಪಾಲರು ಶ್ರೀಕ್ಷೇತ್ರದ ವರ್ಚಸ್ಸು, ಮಹಾಸ್ವಾಮಿಗಳರ ದಿವ್ಯ ತೇಜಸ್ಸು, ಅವರ ಕಾರ್ಯಸಾಧನೆಗಳಿಂದ ತಾವು ಹೆಚ್ಚು ಪ್ರಭಾವಿತರಾಗಿರುವುದಾಗಿಯೂ, ಪ್ರಶಾಂತ ಪರಿಸರದಲ್ಲಿ ನಡೆದಿರುವ ಈ ಸಮಾರಂಭದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶ ಲಭ್ಯವಾದುದು ಪೂರ್ವಾರ್ಜಿತ ಪುಣ್ಯ ವಿಶೇಷವೆಂದೂ ಹೇಳಿದರು. ಸಂಸ್ಕೃತ ಭಾಷೆಯಲ್ಲಡಗಿರುವ ಜ್ಞಾನ ಪ್ರಸಾರ ದೇಶದ ಸಮಗ್ರ ಐಕ್ಯತೆಯ ದೃಷ್ಟಿಯಿಂದ ಅತ್ಯಗತ್ಯವೆಂದೂ ನುಡಿದರು.

***

ರ್‍ಯಾಲಿ

ಚಳಿ, ಗಾಳಿ, ಮಳೆ, ಬಿಸಿಲೆನ್ನದೆ ನೆಲವನ್ನು ಉತ್ತು, ಬೀಜ ಬಿತ್ತಿ, ನೀರೆರೆದು, ದವಸ ಧಾನ್ಯಗಳನ್ನು ಬೆಳೆದು ಲೋಕಕ್ಕೆ ಅನ್ನವನಿಕ್ಕುವ ಈ ನೇಗಿಲ ಯೋಗಿಗಳು, ನಾಡು ಪರಾಕ್ರಾಂತವಾಗಿದ್ದಾಗ ಒಟ್ಟಾಗಿ ಸೇರಿ ಭುಜಬಲ, ಖಡ್ಗಬಲಗಳಿಂದ ಜೀವದಾಸೆಬಿಟ್ಟು ಶತ್ರುಗಳೊಡನೆ ಹೋರಾಡಿ ಕಾಪಿಟ್ಟಿರುವುದು ಇತಿಹಾಸದ ದಾಖಲೆಯಲ್ಲಿದೆ. ಭೂಮಿಪೂಜೆ, ಸಾಮ್ರಾಜ್ಯ ಸೇವೆಯಲ್ಲಿ ಇವರು ಎಂದೂ ಹಿಂದೆ ಬಿದ್ದವರಲ್ಲ. ಇವರು ಭೂಮಿಯ ಮಕ್ಕಳು ಹಾಗೂ ಸೇವಕರು.

ರೈತನ ಶಾಂತ ಬದುಕಿನಲ್ಲಿ ರಾಜಕೀಯ ಕಲ್ಮಶ ಸೇರತೊಡಗಿತು. ರಾಜಕಾರಣಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಮುಗ್ಧ ರೈತನ ಜೀವನದಲ್ಲಿ ಚಕ್ಕಂದವಾಡತೊಡಗಿದರು. ರೈತನ ಶಾಂತಿ, ಸೌಹಾರ್ದ, ಸಾಮರಸ್ಯಗಳನ್ನು ಛಿದ್ರಗೊಳಿಸಿದರು. ಮೀಸಲಾತಿಯ ಅಸಮ ಪದ್ಧತಿಯನ್ನು ಸರ್ಕಾರ ಕಟ್ಟುನಿಟ್ಟಾಗಿ ಜಾರಿಗೊಳಿಸಿತು. ಇದರಿಂದ ರೈತ ಮಕ್ಕಳ ವಿದ್ಯಾಭ್ಯಾಸ ಕುಂಠಿತವಾಯಿತು. ಉದ್ಯೋಗ ಸೌಲಭ್ಯ ಮರೀಚಿಕೆಯಾಯಿತು. ಸಕಾಲದಲ್ಲಿ ವರುಣದೇವನ ಸಮತೋಲನಕೃಪೆದೊರೆಯದೆ ಅತಿವೃಷ್ಟಿ-ಅನಾವೃಷ್ಟಿಗಳಿಂದ ಫಸಲನ್ನು ಪಡೆಯಲಾಗದ ರೈತ ಜನತೆಯ ಬದುಕು ತತ್ತರಿಸಿತು. ಈ ಘೋರ ಅನ್ಯಾಯವನ್ನು ರಾಜಕೀಯ ಧುರೀಣರಾಗಲೀ, ಸಂಘಸಂಸ್ಥೆಗಳಾಗಲೀ ತಡೆಗಟ್ಟಲು ಅಸಮರ್ಥವಾದಾಗ ''ಅಭ್ಯುತ್ಥಾನಮಧರ್ಮಸ್ಯ ತಾದಾತ್ಮಾನಂ ಸೃಜಾಮ್ಯಹಮ್'' ಎಂಬ ಗೀತಾಚಾರ್ಯನ ವಾಣಿಗನುಗುಣವಾಗಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪ್ರಸಕ್ತ ಪೀಠಾಧ್ಯಕ್ಷರಾದ ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರ ಪ್ರವೇಶ ಅನಿವಾರ್ಯವಾಯಿತು.

ದೇಶದ ಒಳಿತಿಗಾಗಿ ಬೆವರು ಸುರಿಸುವ, ಮಣ್ಣಿನ ಮಕ್ಕಳ ಅದರಲ್ಲೂ ಕಡುಬಡವರಾದ ರೈತ ಸಮುದಾಯದ ಹಿತ ಸಾಧನೆಗೆ ಆದಿಚುಂಚನಗಿರಿಯ ಶ್ರೀ ಚೇತನ ಸ್ಪಂದಿಸಬೇಕಾಯಿತು. ಅಜ್ಞಾನದಿಂದ ಸುಜ್ಞಾನದೆಡೆಗೆ, ನೋವಿನಿಂದ ನಲಿವಿನೆಡೆಗೆ, ಆರ್ತನಾದದಿಂದ ಹರ್ಷನಾದದೆಡೆಗೆ ಈ ಶೋಷಿತ ರೈತವರ್ಗವನ್ನು ಕರೆದೊಯ್ಯಬೇಕಾದುದು ಧರ್ಮವಿಹಿತ. ರೈತಕುಟುಂಬದಲ್ಲಿ ಜನಿಸಿ, ಬಡತನದ ಬೇಗೆ, ವಿದ್ಯಾಭ್ಯಾಸದ ಕಷ್ಟಕೋಟಲೆಗಳ ಕಹಿ ಅನುಭವವಿದ್ದುದರಿಂದಲೂ, ಪೀಠಾಧಿಕಾರ ಪಡೆದ ಮೇಲೆ ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿಯೆ ಪ್ರವಾಸ ಮಾಡುತ್ತಿದ್ದುದರಿಂದಲೂ, ತಮ್ಮ ದರ್ಶನಕ್ಕಾಗಿ ಬರುವ ಭಕ್ತಾದಿಗಳ ನೋವುಗಳನ್ನು ಕೇಳುತ್ತಿದ್ದುದ್ದರಿಂದಲೂ ಪೂಜ್ಯಶ್ರೀಗಳವರ ಮನಸ್ಸು ಸರ್ವದಾ ರೈತವರ್ಗದ ಹಿತ ಕಾಯುವ ನಿಟ್ಟಿನಲ್ಲಿಯೇ ತವಕಿಸುತ್ತಿತ್ತು.

ಚಿನ್ನಪ್ಪರೆಡ್ಡಿ ವರದಿಯ ಮೀಸಲಾತಿ ಜಾರಿಯ ಸಂದರ್ಭದಲ್ಲಿ ರೈತ ಸಮೂಹವು ಶ್ರೀಗಳವರ ಸನ್ನಿಧಿಗೆ ಬಂದು ತಮ್ಮ ಅಳಲನ್ನು ತೋಡಿಕೊಂಡರು. ತಾವು

ನೇತೃತ್ವವಹಿಸಬೇಕೆಂದು ಕೇಳಿಕೊಂಡರು. ನಾವು ರಾಜಕಾರಣಿಗಳಂತೆ ನಿಮ್ಮ ನೇತೃತ್ವವಹಿಸಲಾರೆವು; ನಿಮ ಪ್ರತಿಭಟನಾಪ್ರದರ್ಶನ ಮೇಳದಲ್ಲಿ ಭಾಗವಹಿಸಿ ಆಗಿರುವ ಅನ್ಯಾಯವನ್ನು ಸರ್ಕಾರದ ಗಮನಕ್ಕೆ ತರುತ್ತೇವೆಂದು ಹೇಳಿದರು.

ರೈತರ ರ್‍ಯಾಲಿಯ ಬಗ್ಗೆ ಪೂಜ್ಯಶ್ರೀಗಳು ತಳೆದ ದಿಟ್ಟನಿಲುವು ಲಕ್ಷಾಂತರ ರೈತ ಬಾಂಧವರಲ್ಲಿ ಉತ್ಸಾಹ ಮೂಡಿಸಿತು. ದಿನಾಂಕ ೨೫.೭.೯೪ರಂದು ಆಯೋಜಿಸಿದ್ದ ರ್‍ಯಾಲಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ರೈತ ಸಮುದಾಯ ರಾಜಧಾನಿಯೆಡೆಗೆ ಧಾವಿಸಿ ಬಂದಿತು. ತನ್ನ ವಿರಾಟ್ ಶಕ್ತಿಯಸ್ವರೂಪವನ್ನು ಜಗತ್ತಿಗೆ ತೋರಿಸಿತು.

ಹತ್ತು ಲಕ್ಷಕ್ಕೂ ಮಿಗಿಲಾಗಿ ರೈತರು ಭಾಗವಹಿಸಿದ್ದ ಸಮಾವೇಶದಲ್ಲಿ ಗಲಾಟೆ, ದೊಂಬಿಗೆ ಕಿಂಚಿತ್ತೂ ಅವಕಾಶವಿಲ್ಲದಿದ್ದುದು ಪ್ರಶಂಸನೀಯ ಅಂಶವಾಗಿತ್ತು. ಎಲ್ಲೆಡೆಯಲ್ಲಿಯೂ ಶಿಸ್ತು, ಸಂಯಮ, ಶಾಂತಿ, ಸೌಹಾರ್ದ ಮೈದುಂಬಿ ನಿಂತಿತ್ತು. ಇದಕ್ಕೆ ಇಡೀ ರೈತ ಜನತೆಗೆ ಆದ ಅನ್ಯಾಯವನ್ನು ಶಾಂತಿಯುತವಾಗಿ ಪ್ರತಿಭಟಿಸಲು ಪೂಜ್ಯಗುರುಗಳು ನೀಡಿದ್ದ ಕಳಕಳಿಯ ಆದೇಶ ಕಾರಣವಾಗಿತ್ತು.

ಅಂದು ನಿರ್ಧಾರಿತ ವೇಳೆಗೆ ಸರಿಯಾಗಿ ಗುರುಗಳು ನ್ಯಾಷನಲ್ ಕಾಲೇಜು ಮೈದಾನದಲ್ಲಿನ ರ್‍ಯಾಲಿಯ ವೇದಿಕೆಗೆ ದಯಮಾಡಿಸಿದರು. ರೈತ ವರ್ಗದ ಹೃದಯ ತುಂಬಿದ ಘೋಷಣೆ ಮುಗಿಲು ಮುಟ್ಟಿತು. ಮುಗ್ಧ ಜನತೆಯ ಪರಿಶುದ್ಧ ಭಕ್ತಿ ಹಾಗೂ ಶ್ರದ್ಧೆಯನ್ನು ಕಂಡು ಮಾರುಹೋದ ಪೂಜ್ಯಶ್ರೀಗಳವರು ತಮ್ಮ ಅಭಯಹಸ್ತದಿಂದ ಸಕಲರನ್ನು ಹರಸಿದರು. ಶ್ರೀಗಳವರ ಪ್ರಶಾಂತ, ಸೌಮ್ಯ, ಸ್ನಿಗ್ಧ ಸ್ವಭಾವದಿಂದ ಉತ್ತೇಜಿತರಾದ ಸಭಿಕರು ಅವರ ದಿವ್ಯಾಶೀರ್ವಾದ ಹಾಗೂ ಸಲಹೆಗಳನ್ನು ಆಲಿಸಲು ನಿಶ್ಶಬ್ದದಿಂದ ಕಾತರಗೊಂಡರು.

''ನನ್ನ ರೈತ ಕುಲಬಾಂಧವರೇ'' ಎಂದು ಪ್ರಾರಂಭಿಸಿದ ಪೂಜ್ಯಶ್ರೀಗಳವರ ಮಾತು ಪ್ರತಿಭಟನಾಕಾರರ ಮೈಯಲ್ಲಿ ವಿದ್ಯುತ್ ಸಂಚಾರವನ್ನುಂಟುಮಾಡಿತು. ಮತ್ತೊಮ್ಮೆ ಜೈಕಾರ ಭುಗಿಲೆದ್ದಿತು. ಕ್ಷಣಕಾಲ ಅವರ ಮನಸ್ಸಿನಲ್ಲಿ ನೂರು ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರು ಅಮೆರಿಕಾದ ಚಿಕಾಗೋನಲ್ಲಿ ಜನತೆಯನ್ನು ಪುಳಕಿಸಿದ ರೀತಿ ಮರುಕಳಿಸಿದಂತಿತ್ತು. ಅಭಿನವ ವಿವೇಕಾನಂದರ ಕಲ್ಪನೆ ಮೂಡಿದಂತಿತ್ತು. ''ಏಳಿರಿ, ಎಚ್ಚರಗೊಳ್ಳಿರಿ. ಎಲ್ಲರೂ ಒಂದುಗೂಡಿ ಕಬ್ಬನ್ ಪಾರ್ಕಿಗೆ ಬನ್ನಿ. ಶಾಂತಿಯಿಂದ ಅಲ್ಲಿ ನಾವು ನಮ್ಮ ಬೇಡಿಕೆಯನ್ನು ಮಂಡಿಸೋಣ. ಗಲಾಟೆ, ದೊಂಬಿಗೆ ಅವಕಾಶಕೊಡಕೂಡದು. ಶಿಸ್ತು ಹಾಗೂ ಶಾಂತಿಯಿಂದ ನಡೆಯಿರಿ'' ಎಂಬ ಶ್ರೀಗುರುಗಳ ಆಣತಿಯನ್ನು ಶಿರಸಾ ಹೊತ್ತು ಜನತೆ ಮೆರವಣಿಗೆಯಲ್ಲಿ ಘೋಷಣೆ ಕೂಗುತ್ತ ಚಲಿಸಿತು. ಶಾಂತಿ ಹಾಗೂ ಶಿಸ್ತಿನಿಂದ ಸಾಗುತ್ತಿದ್ದ ಮೆರವಣಿಗೆ ಆರಕ್ಷಕ ಇಲಾಖೆಗೆ ಯಾವುದೇ ವಿಧವಾದ ತ್ರಾಸವನ್ನು ನೀಡಲಿಲ್ಲ. ಈ ರೀತಿಯ ಪ್ರತಿಭಟನೆ ಬೆಂಗಳೂರಿನ ಇತಿಹಾಸದಲ್ಲಿ ಮೊದಲನೆಯದಾಯಿತು.

ಮಧ್ಯಾಹ್ನದ ವೇಳೆಗೆ ಕಬ್ಬನ್‌ಪಾರ್ಕಿಗೆ ಬರುವಷ್ಟರಲ್ಲಿ ಪ್ರತಿಭಟನಾಕಾರರ ಸಂಖ್ಯೆ ೧೨ ಲಕ್ಷಕ್ಕೂ ಮಿಗಿಲಾಗಿ ಏರಿತ್ತು. ಭಾಗವಹಿಸಿದ್ದ ಸಮಸ್ತರಿಗೂ ಶ್ರೀಮಠದ ವತಿಯಿಂದ ಪ್ರಸಾದವಿನಿಯೋಗದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು.

ನತ್ವಹಂ ಕಾಮಯೆ ರಾಜ್ಯಂ ನ ಸ್ವರ್ಗಂ ನಾಪುನರ್ಭವಮ್|
ಕಾಮಯೇ ದುಃಖ ತಪ್ತಾನಾಂ ಪ್ರಾಣಿನಾಮಾರ್ತಿನಾಶನಮ್||

"ನನಗೆ ರಾಜ್ಯ ಸುಖಬೇಡ, ಸ್ವರ್ಗವೂ ಬೇಡ, ಮೋಕ್ಷವೂ ಬೇಡ. ದುಃಖದಿಂದ ತಪ್ತರಾದವರ ಸೇವಾಭಾಗ್ಯಮಾತ್ರ ಸಾಕು. ಇದಕ್ಕಾಗಿ ಎಷ್ಟು ಜನ್ಮವಾದರೂ ಬರಲಿ" ಎಂದು ಶ್ರೀಗಳವರು ರ್‍ಯಾಲಿಯನ್ನುದ್ದೇಶಿಸಿ ನುಡಿದ ಪ್ರಾರಂಭಿಕ ಮಾತು ಶೋಷಿತ ವರ್ಗದ ಕಲ್ಯಾಣದ ಬಗ್ಗೆ ಅವರಿಗಿರುವ ಆಸಕ್ತಿಯ ಧಸಂಕೇತವಾಗಿತ್ತು.

ಸರ್ಕಾರದಿಂದ ರೈತವರ್ಗಕ್ಕೆ ಸಿಗಬಹುದಾದ ಮೀಸಲಾತಿ ಶೇ. ೨೫ರಷ್ಟಿರಬಹುದು ಅಥವಾ ೭೫ರಷ್ಟಿರಬಹುದು. ಆದರೆ ಪೂಜ್ಯಶ್ರೀಗಳು ಶೇ. ೧೦೦ರಷ್ಟೇ ತಮ್ಮನ್ನು ದೀನದಲಿತರ, ಅಶಕ್ತರ, ರೈತರ ಸೇವೆಗೆ ತೊಡಗಿಸಿಕೊಂಡಿರುವುದು ಮಹತ್ವದ ಸಂಗತಿ.

ದಕ್ಷಿಣದ ಮಹಾಕುಂಭ ಮೇಳ

೧೯೮೯ರ ಫೆಬ್ರುವರಿ ೨೦ ರಂದು ದಕ್ಷಿಣ ಭಾರತದ ಪ್ರಥಮ ಕುಂಭಮೇಳವು ಕರ್ನಾಟಕದ ಪುರಾಣೇತಿಹಾಸ ಪ್ರಸಿದ್ಧವೂ, ಪವಿತ್ರಯಾತ್ರಾಸ್ಥಳವೂ ಆದ ಟಿ. ನರಸೀಪುರದ ತ್ರಿವೇಣಿ ಸಂಗಮದಲ್ಲಿ ನಡೆದು ಐತಿಹಾಸಿಕ ದಾಖಲೆ ನಿರ್ಮಿಸಿತು.

ಕುಂಭಮೇಲಗಳಂತಹ ಮಹಾಮೇಳಗಳು ಕೇವಲ ಉತ್ತರ ಭಾರತದ ಕೆಲವು ನದೀಸಂಗಮ ಕ್ಷೇತ್ರಗಳಲ್ಲಿ ಮಾತ್ರ ಆಚರಣೆಯಲ್ಲಿದ್ದವು. ೧೯೮೬ರಲ್ಲಿ ಪ್ರಯಾಗದಲ್ಲಿ ನಡೆದ ಕುಂಭಮೇಳಕ್ಕೆ ಪೂಜ್ಯಶ್ರೀಗಳು ಅನಿರೀಕ್ಷಿತವಾಗಿ ಭೇಟಿ ನೀಡಿದ್ದರು. ಇಂತಹ ಒಂದು ಮಹಾಮೇಳವನ್ನು ಕರ್ನಾಟಕಲ್ಲೇಕೆ ಪ್ರಾರಂಭಿಸಬಾರದು ಎಂಬ ಕಲ್ಪನೆ ಅವರ ಮನಸ್ಸಿನಲ್ಲಿ ಮೂಡಿತು. ಈ ಅಮೂಲ್ಯ ವಿಚಾರವನ್ನು ಕೈಲಾಸಾಶ್ರಮದ ಹಾಗೂ ಶ್ರೀ ಸುತ್ತೂರು ಮಠದ ಪೂಜ್ಯಶ್ರೀಗಳವರೊಡನೆ ಪ್ರಸ್ತಾಪ ಮಾಡಿ ಮೈಸೂರು ಸಮೀಪದ ತಿರುಮಕೂಡಲಿನ ಪವಿತ್ರ ಸಂಗಮದಲ್ಲಿ ಪ್ರಾರಂಭಿಸಲು ನಿಶ್ಚಯಿಸಿದರು.

ತಿರುಮಕೂಡಲು "ದಕ್ಷಿಣ ಕಾಶಿ" ಎಂದೇ ಪ್ರಖ್ಯಾತವಾಗಿದೆ. ಇಲ್ಲಿ ಕಾವೇರಿ, ಕಪಿಲೆ ಹಾಗೂ ಸ್ಫಟಿಕತೀರ್ಥಗಳು ಸಂಗಮಗೊಂಡಿವೆ. ಜೊತೆಗೆ ಇಲ್ಲಿನ ದಂಡೆಗಳಲ್ಲಿ ಅನೇಕ ಪ್ರಸಿದ್ಧ ದೇವಾಲಯಗಳಿದ್ದು ಇದು ಒಂದು ಪುಣ್ಯಕ್ಷೇತ್ರವಾಗಿದೆ. ಈ ಪವಿತ್ರ ಸಂಗಮದಲ್ಲಿ ಸ್ನಾನ ಮಾಡಿದರೆ ಉತ್ತರದ ಕಾಶಿಗಿಂತಲೂ ಹೆಚ್ಚು ಪುಣ್ಯ ಲಭಿಸುತ್ತದೆಂಬ ಐತಿಹ್ಯವಿದೆ.

ಐತಿಹಾಸಿಕ ಪುಣ್ಯ ಸಮಾರಂಭದ ಆಚರಣೆಗೆ ಅವಧಿ ಅತ್ಯಲ್ಪವಾಗಿದ್ದರೂ ಪೂಜ್ಯಶ್ರೀಗಳು ಧೃತಿಗೆಡಲಿಲ್ಲ. ಮಿಂಚಿನಂತೆ ಪ್ರವಾಸಕ್ಕೆಗೊಂಡರು. ಕುಂಭಮೇಳ ಹಾಗ೧

ಧಾರ್ಮಿಕ ಸಂಘಟನೆಯ ಬಗ್ಗೆ ಜನರನ್ನು ಜಾಗೃತಿಗೊಳಿಸಿದರು. ಭಕ್ತರ ಮನಸ್ಸಿನಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಮೂಡಿಸಿ ಅವರನ್ನು ತಿರುಮಕೂಡಲಿನ ಸಮಾರಂಭದತ್ತ ಆಕರ್ಷಿಸಿದರು. ಸರ್ಕಾರದ ಅಧಿಕಾರಿಗಳನ್ನು, ಶಾಸಕರನ್ನು, ಜಿಲ್ಲೆ ಪಂಚಾಯತಿ ಹಾಗೂ ಮಂಡಲ ಪಂಚಾಯಿತಿಯ ಪದಾಧಿಕಾರಿಗಳನ್ನು, ಸ್ಥಳೀಯ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರನ್ನು ಸಂಘಟಿಸಿ ಕಾರ್ಯಪ್ರವೃತ್ತರನ್ನಾಗಿ ಮಾಡಿದರು. ಜನತೆಯಲ್ಲಿ ಸುಪ್ತವಾಗಿದ್ದ ಸದ್ಭಾವನೆಯನ್ನು ಜಾಗೃತಗೊಳಿಸಿದರು, ಕ್ರಿಯಾಶೀಲತೆಯ ಪ್ರೇರಕಶಕ್ತಿಯಾದರು.

ನಿಗದಿತ ದಿನಾಂಕದಂದು ಕುಂಭಮೇಳವನ್ನು ನಡೆಸಲು ಸಿದ್ಧತೆಗಳು ಭರದಿಂದ ಸಾಗಿದವು. ವಿಶಾಲವಾದ ನದೀ ಪ್ರದೇಶದಲ್ಲಿ ಯಾಗಶಾಲೆ, ಧರ್ಮವೇದಿಕೆ, ತಾತ್ಕಾಲಿಕ ಸೇತುವೆ, ಪರ್ಣಕುಟೀರಗಳು ನಿರ್ಮಾಣವಾದವು. ವಿದ್ಯುದ್ದೀಪಗಳ ಕಾಂತಿಯಿಂದ ಇಡೀ ಸಂಗಮಕ್ಷೇತ್ರ ಜಗಜಗಿಸುತ್ತಿತ್ತು.

ಮಹೋದಯ ಪುಣ್ಯಕಾಲದಂದು ಲಕ್ಷಾಂತರ ಮಂದಿ ಭಕ್ತಾದಿಗಳು ಪುಣ್ಯಸ್ನಾನ ಮಾಡಲು ತ್ರಿವೇಣಿಸಂಗಮಕ್ಕೆ ಆಗಮಿಸಿದರು. ಕುಂಭಮೇಳದ ನಿಮಿತ್ತ ಏರ್ಪಡಿಸಿದ್ದ ಎಲ್ಲ ಧರ್ಮಗುರುಗಳ ಭವ್ಯ ಮೆರವಣಿಗೆಯಲ್ಲಿ ಪೂರ್ಣಕುಂಭಗಳನ್ನು ಹೊತ್ತ ಸುಮಂಗಲಿಯರ ಸಮೂಹ, ಜಾನಪದ ಕುಣಿತ, ಪಟದ ಕುಣಿತ, ಸೋಮನ ಕುಣಿತ, ನಂದಿಧ್ವಜ ಕುಣಿತ, ವೀರಭದ್ರನ ಕುಣಿತ, ಸ್ತಬ್ಧಚಿತ್ರಗಳು, ಕೊಂಬು, ಕಹಳೆ, ಮಂಗಳವಾದ್ಯ ಮುಂತಾದುವು ಭಾಗವಹಿಸಿದ್ದವು. ದೇಶದ ಇತರೆ ಪವಿತ್ರ ನದಿಗಳಿಂದ ತರಿಸಿದ್ದ ಜಲವನ್ನು ಸಂಗಮ ಸ್ಥಳದಲ್ಲಿ ಐಕ್ಯಗೊಳಿಸಿ ಎಲ್ಲ ಪಂಥಗಳ ಭಕ್ತಾದಿಗಳು ವಿಧಿವತ್ತಾಗಿ ಮಂಗಳಸ್ನಾನ ಮಾಡಿ ಧನ್ಯಭಾವನೆ ಹೊಂದಿದರು.

ನಂತರ ನಡೆದ ಬೃಹತ್ ಧಾರ್ಮಿಕ ಸಮಾರಂಭದಲ್ಲಿ ಪೂಜ್ಯರಾದ ನೂರಾರು ಧರ್ಮಗಳು ಗುರುಗಳು ಭಾಗವಹಿಸಿ ಧಾರ್ಮಿಕ ಜಾಗೃತಿ, ಸಂಸ್ಕೃತಿ, ಭಾವೈಕ್ಯತೆ, ವಿಶ್ವಧರ್ಮ ಸಮನ್ವಯ, ಮಾನವ ಕಲ್ಯಾಣ ಮುಂತಾದ ವಿಚಾರಗಳ ಬಗ್ಗೆ ಮಾತನಾಡಿದರು. ಭಾಗವಹಿಸಿದ್ದ ಭಕ್ತಾದಿಗಳಿಗೆ ಅನ್ನದಾನದ ವ್ಯವಸ್ಥೆಯನ್ನು ಶ್ರೀಮಠದ ವತಿಯಿಂದ ಏರ್ಪಡಿಸಲಾಗಿತ್ತು. ಲೋಕಕಲ್ಯಾಣದ ದೃಷ್ಟಿಯಿಂದ ಪೂಜ್ಯಶ್ರೀಗಳು ಏರ್ಪಡಿಸಿದ್ದ ಈ ಅಪೂರ್ವಕುಂಭಮೇಳವು ಅತ್ಯಂತ ಯಶಸ್ವಿಯಾಗಿ ನೆರವೇರಿತು. ಪ್ರತಿ ಮೂರು ವರ್ಷಕ್ಕೊಮ್ಮೆ ಈ ಸಂಗಮ ಕ್ಷೇತ್ರದಲ್ಲಿ ಕುಂಭಮೇಳವನ್ನಾಚರಿಸುವ ಸಂಕಲ್ಪವನ್ನು ಪೂಜ್ಯಶ್ರೀಗಳು ಈ ಸಂದರ್ಭದಲ್ಲಿ ಉದ್ಘೋಷಿಸಿದರು.

ಮಾನಸಿಕ ಶಾಂತಿ, ಧರ್ಮ-ಸಂಸ್ಕೃತಿಯ ಸಂವರ್ಧನೆ, ಮಾನವೀಯತೆ, ಸಾಮರಸ್ಯ, ಜನಸಂಘಟನೆಗಳಿಗೆ ಕುಂಭಮೇಳದ ಸಮಾಚರಣೆ ಅತ್ಯಂತ ಸಹಕಾರಿಯಾದುದು.

***

ಜನಜಾಗೃತಿ ಶಿಬಿರ

ನಿತ್ಯಸತ್ಯ ಧರ್ಮವನ್ನು ಅಪಾಯಕಾರಿಯಾದ ದೋಷಗಳು ಮುತ್ತಿದಾಗ ಧರ್ಮಗ್ಲಾನಿಯುಂಟಾಗುತ್ತದೆ. ಆಗ ಮಹಾಪುರುಷರು ಅವತರಿಸಿ, ದೋಷಗಳನ್ನು ಪರಿಹರಿಸಿ ಧರ್ಮವನ್ನು ಪುನಶ್ಚೇತನಗೊಳಿಸುತ್ತಾರೆ. ಭಾರತದಲ್ಲಿ ಇಂತಹ ಮಹಾಘಟನೆಗಳು ಆಗಾಗ ನಡೆದಿರುವುದು ಪುರಾಣೇತಿಹಾಸಗಳಿಂದ ತಿಳಿದು ಬರುತ್ತದೆ. ಜನತೆಯ ಕಲ್ಯಾಣಕ್ಕಾಗಿ ಬುದ್ಧನು ಬೋಧಿಸಿದ ತತ್ತ್ವಗಳನ್ನು ಜಗತ್ತು ಆದರದಿಂದ ಸ್ವಾಗತಿಸಿ ನೆಮ್ಮದಿಯನ್ನು ಪಡೆಯಿತು. ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ನಡೆಸಿದ ಧಾರ್ಮಿಕಕ್ರಾಂತಿಯು ಅವಿಸ್ಮರಣೀಯ ಮತ್ತು ಇಂದೂ ಅನುಷ್ಠಾನಯೋಗ್ಯ. ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಸಿದ್ಧಸಿಂಹಾಸನಾಧೀಶ್ವರರಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಇಪ್ಪತ್ತನೆಯ ಶತಮಾನದ ಅಂತ್ಯದಲ್ಲಿ (೧೯೯೩) ಆಯೋಜಿಸಿರುವ ಜನಜಾಗೃತಿ ಶಿಬಿರಗಳ ಗುರಿಯು ದೊಡ್ಡ ಧಾರ್ಮಿಕ ಕ್ರಾಂತಿಯಾಗಿದ್ದು ಜನತೆಯ ಆಚಾರ-ವಿಚಾರಗಳ ಮೇಲೆ ಹೊಸ ಬೆಳಕನ್ನು ಚೆಲ್ಲಿ ಜನಜೀವನಕ್ಕೆ ಹೊಸ ತಿರುವನ್ನು ಕೊಡುವುದಾಗಿದೆ. ಈಗಾಗಲೇ ಈ ಕ್ರಾಂತಿಯು ಕರ್ನಾಟಕದ ಏಳು ಜಿಲ್ಲೆಗಳನ್ನು ವ್ಯಾಪಿಸಿದ್ದು ಮುಂಬರುವ ವರ್ಷಗಳಲ್ಲಿ ಎಲ್ಲ ಜಿಲ್ಲೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲಿದೆ.

ನಾನಾ ಭಾಷೆ, ಜಾತಿ ಮತಾದಿಗಳಿಂದ ಭಾರತವು ಚಿಂದಿ ಚಿಂದಿಯಾಗಿದೆ. ಪರಸ್ಪರ ಸೌದರ್ಯ, ಸಾಮರಸ್ಯ, ಸಮತಾಭಾವಗಳು ಅಳಿದು ಹೋಗಿವೆ. ಮೇಲು ಕೀಳು ಭಾವನೆಗಳು ಜನರನ್ನು ರೊಚ್ಚುಗೊಳಿಸಿವೆ. ಇದರ ಪರಿಣಾಮವಾಗಿ ಹೋರಾಟಗಳು ನಡೆದು ಸಹಸ್ರಾರು ಕುಟುಂಬಗಳು ನಾಮಾವಶೇಷವಾಗಿವೆ. ದೇವರ ಪೂಜೆಗೂ ಜಾತಿ ಮತಗಳು ಅಡ್ಡಿಯಾಗಿ ನಿಂತಿವೆ. ಧರ್ಮದ ಹೆಸರಿನಲ್ಲಿ ಹಿಂಸಾಕಾರ್ಯಗಳು ಜರುಗುತ್ತಿರುವುದು ಅತ್ಯಂತ ಶೋಚನೀಯ. ಅಸಂಘಟಿತ ಜನತೆಯಿಂದ ಸುಭದ್ರವಾದ ದೇಶವನ್ನು ಕಟ್ಟಲಾಗದು. ತಳಪಾಯವೇ ಅಲ್ಲಾಡುತ್ತಿದ್ದರೆ ಅದರ ಮೇಲೆ ನಿರ್ಮಿಸಿದ ಮನೆ ಉಳಿಯುತ್ತದೆಯೇ. ಸಮಗ್ರ ಜನತೆಯನ್ನು ತಬ್ಬಿಕೊಳ್ಳುವ ಧರ್ಮ, ಸಂಸ್ಕೃತಿಗಳು ರಾಷ್ಟ್ರಕ್ಕೆ ಭದ್ರವಾದ ಬುನಾದಿ. ಈ ಧಾರ್ಮಿಕ ಮತ್ತು ಸಾಂಸ್ಕೃತಿಕ ಜಾಗೃತಿಯನ್ನು ಜನತೆಯಲ್ಲುಂಟು ಮಾಡಬೇಕಾಗಿದೆ. ಭಾರತದ ಇಂದಿನ ಬಿಡಿಸಲಾಗದ ಸಮಸ್ಯೆಗಳಿಗೆ ಈ ಜಾಗೃತಿಯು ದಿವ್ಯೌಷಧ. ಇದರಿಂದ ಮನುಷ್ಯರ ಮನಸ್ಸಿನ ರೋಗಗಳನ್ನು ನಿವಾರಿಸಿ ಎಲ್ಲರೂ ಒಟ್ಟುಗೂಡಿ ಒಂದೇ ದಾರಿಯಲ್ಲಿ ನಡೆದು ಗುರಿಯನ್ನು ಮುಟ್ಟಲು ಸಾಧ್ಯವಾಗುತ್ತದೆ. ಧರ್ಮ, ಸಂಸ್ಕೃತಿ, ಸಮತೆ, ಸರ್ವೋದಯ, ಸೋದರ ಭಾವ, ಸಂಘಟನೆ, ಸಹನೆಗಳನ್ನು ಜನರ ಹೃನ್ಮನಗಳಲ್ಲಿ ಬಿತ್ತಿ, ಬೆಳೆಸಿ, ಸುಖಶಾಂತಿ ರೂಪವಾದ ಫಲವನ್ನು ಜನತೆಗೆ ವಿತರಿಸುವ ಸದುದ್ದೇಶದಿಂದ ಮಹಾಸ್ವಾಮಿಗಳವರು ಹಮ್ಮಿಕೊಂಡಿರುವ

ಅಭಿವಂದನಾ

ಜನಜಾಗೃತಿ ಶಿಬಿರಗಳು ಯಶಸ್ವಿಯಾಗಿ ನಡೆಯುತ್ತಿರುವುದು ನಾಡಿನ ಭಾಗ್ಯ.

ಭಾರತದಲ್ಲಿ ಅಪಾರವಾದ ಆಧ್ಯಾತ್ಮಿಕ, ಧಾರ್ಮಿಕ, ಸಾಂಸ್ಕೃತಿಕ ಸಂಪತ್ತು ಇದೆ. ಇದನ್ನು ಜನತೆ ಮೈಗೂಡಿಸಿಕೊಳ್ಳಬೇಕು. 'ಸರ್ವೇಭದ್ರಾಣಿ ಪಶ್ಯಂತು ಮಾಕಶ್ಚಿತ್ ದುಃಖಭಾಗ್ಭವೇತ್'- ಎಲ್ಲರಿಗೂ ಒಳ್ಳೆಯದಾಗಲಿ, ಯಾರೊಬ್ಬರೂ ದುಃಖಭಾಜನರಾಗುವುದು ಬೇಡ; ಸಕಲ ಲೋಕಕೆ ಲೇಸನೇ ಬಯಸುವ ಸೌಹಾರ್ದಯುತವಾದ ಸಮಾಜ ನಿರ್ಮಾಣವಾಗಬೇಕು- ಜನತೆ ಪರಸ್ಪರ ಪ್ರೀತಿಯಿಂದ ಬಾಳುವಂತಾಗಬೇಕು. ಅಲ್ಲದೆ ಪರಿಸರ ನೈರ್ಮಲ್ಯ, ದೈನಂದಿನ ವ್ಯಾಯಾಮ, ಆರೋಗ್ಯ ರಕ್ಷಣೆಯ ಅರಿವು, ಸರ್ಕಾರ ನೀಡುವ ಸವಲತ್ತುಗಳ ಪರಿಚಯ, ದೇವರು, ಧರ್ಮಗಳ ಬಗ್ಗೆ ನಂಬಿಕೆ ಮೂಡಿಸಲು ಸದಾಚಾರ, ಪ್ರಾರ್ಥನೆ, ಭಜನೆ, ನೀತಿಸಂಹಿತೆ ಮೊದಲಾದವುಗಳ ಆಚರಣೆ-ಅತ್ಯವಶ್ಯಕ. ಇಂಥ ಜಾಗೃತಿ ಸಮಾಜದಲ್ಲಿ ಉಂಟಾದಾಗ ಮಾತ್ರ ಜನತೆ ಸುಖ-ಸಂತೋಷಗಳಿಂದ ನೆಮ್ಮದಿಯಿಂದ ಬದುಕಲು ಸಾಧ್ಯ. ಆದ್ದರಿಂದ ಜಾತಿಮತ ಭೇದವಿಲ್ಲದೆ ಯುವಕರನ್ನು ಆಯ್ಕೆಮಾಡಿ ಅವರಿಗೆ ವಿಶೇಷ ಶಿಕ್ಷಣ ನೀಡಬೇಕೆಂದು ತೀರ್ಮಾನಿಸಲು ಹಾಗೂ ಇದಕ್ಕಾಗಿ 'ಮಾನವವಿಕಾಸ' ಎಂಬ ಪುಸ್ತಕವನ್ನು ಸಿದ್ಧಪಡಿಸಲಾಯಿತು. ೧೯೯೩ರಲ್ಲಿ ಪ್ರಥಮವಾಗಿ ಆರು ಜಿಲ್ಲೆಗಳಲ್ಲಿ ಜನಜಾಗೃತಿ ಶಿಬಿರಗಳನ್ನು ಏರ್ಪಡಿಸಲಾಯಿತು.

ಮಹಿಳೆಯರ ಬದುಕನ್ನು ಹಸನುಗೊಳಿಸಿ ಅವರ ಬಾಳಿನಲ್ಲಿ ಸುಖ, ಶಾಂತಿ, ನೆಮ್ಮದಿಗಳನ್ನು ಮೂಡಿಸಿ ಸಮೃದ್ಧ ಬಾಳನ್ನು ನಡೆಸಲು ಸಹಾಯಕವಾಗುವಂತೆಯೂ, ಮಹಿಳೆಯರಲ್ಲಿ ಹಿಂಜರಿಕೆಯನ್ನು ಹೋಗಲಾಡಿಸಿ ಆತ್ಮ ವಿಶ್ವಾಸವನ್ನು, ಆತ್ಮಸ್ಥೈರ್ಯವನ್ನು ತುಂಬಿ ಅವರನ್ನು ಸ್ವಾವಲಂಬಿಗಳನ್ನಾಗಿ, ಆದರ್ಶ ಗೃಹಿಣಿಯರನ್ನಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಪರಮಪೂಜ್ಯ ಶ್ರೀಗಳವರು ಮಹಿಳಾ ಜಾಗೃತಿ ಶಿಬಿರಗಳನ್ನು ಆಯೋಜಿಸಲು ಸಂಕಲ್ಪಿಸಿದರು.

ಪೂಜ್ಯ ಶ್ರೀಗಳವರ ದೃಢಸಂಕಲ್ಪದಂತೆ ಪ್ರಥಮ ಮಹಿಳಾ ಜಾಗೃತಿ ಶಿಬಿರವು ೧೯೯೫ ರ ಮೇ ತಿಂಗಳಿನಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶಾಖಾಮಠ ರಾಮನಗರದ ಬಳಿ ಇರುವ ಅರ್ಚಕರಹಳ್ಳಿಯಲ್ಲಿ ಯಶಸ್ವಿಯಾಗಿ ನಡೆಯಿತು. ಇದು ನಿರೀಕ್ಷೆಗೂ ಮೀರಿದ ಫಲವನ್ನು ತಂದುಕೊಟ್ಟು ನಾಡಿನ ಅನೇಕ ಗಣ್ಯರ ಬುದ್ಧಿ ಜೀವಿಗಳ, ಧರ್ಮನೇತಾರರ ಅಪಾರ ಪ್ರಶಂಸೆಗೆ ಪಾತ್ರವಾಯಿತು. ೧೯೯೫ ರ ಅಕ್ಟೋಬರ್ ತಿಂಗಳಿನಲ್ಲಿ ದ್ವಿತೀಯ ಮಹಿಳಾ ಜಾಗೃತಿ ಶಿಬಿರವೂ ಅತ್ಯಂತ ಯಶಸ್ವಿಯಾಗಿ ನೆರವೇರಿತು. ಪ್ರತಿ ವರ್ಷವೂ ಈ ಶಾಖಾಮಠದಲ್ಲಿ ಮಹಿಳಾ ಜಾಗೃತಿ ಶಿಬಿರವನ್ನು ನಡೆಸಲಾಗುತ್ತದೆ.

೧೯೯೩ ರಿಂದ ಪ್ರತಿ ವರ್ಷತಪ್ಪದೆ ಏಪ್ರಿಲ್ ಮೇ ತಿಂಗಳುಗಳಲ್ಲಿ ಜನಜಾಗೃತಿ ಶಿಬಿರಗಳನ್ನು ಮಂಡ್ಯ, ಮೈಸೂರು, ಹಾಸನ, ಮಾಯಸಂದ್ರ, ಶಿವಮೊಗ್ಗ, ರಾಮನಗರ,

ಚಿತ್ರದುರ್ಗ, ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ. ಈಗಾಗಲೆ ಸುಮಾರು ಐದು ಸಾವಿರ ಅಭ್ಯರ್ಥಿಗಳು ಈ ಶಿಬಿರಗಳಲ್ಲಿ ಶಿಕ್ಷಣವನ್ನು ಪಡೆದು ತಾವು ಕಲಿತುದನ್ನು ತಮ್ಮ ಸ್ಥಳಗಳಲ್ಲಿ ಕಾರ್ಯರೂಪಕ್ಕೆ ತರುತ್ತಿದ್ದಾರೆ.

ಪ್ರತಿದಿನವೂ ನಡೆಯುತ್ತಿದ್ದ ಶಿಬಿರಾನುಭವ ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳು ತೋರುತ್ತಿದ್ದ ಆಸಕ್ತಿ, ಶ್ರದ್ಧೆಗಳು ಶಿಬಿರದಿಂದ ಅವರಿಗಾದ ಅನುಭವ ಮತ್ತು ಅನಿಸಿಕೆಗಳು ಮೆಚ್ಚುವಂತಹವು. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

ಪೂಜ್ಯ ಶ್ರೀ ಶ್ರೀಗಳವರು ತುಕ್ಕು ಹಿಡಿದ ಪಾತ್ರೆಯಾಗಿದ್ದ ನಮ್ಮನ್ನು ಉಜ್ಜಿ ತೊಳೆದು ಪ್ರಕಾಶಿಸುವಂತೆ ಮಾಡಿದ್ದಾರೆ.

***

ಮುಖ್ಯವಾಗಿ ಯಾರ ಬಳಿ ಯಾವ ರೀತಿ ನಡೆದುಕೊಳ್ಳಬೇಕೆಂದು ತಿಳಿದುಕೊಂಡೆವು.

***

ನಮ್ಮ ಬಾಳು ಬೇರೊಬ್ಬರಿಗೆ ಮಾದರಿಯಾಗಿರಬೇಕು, ಆದರ್ಶವಾಗಿರಬೇಕು ಎಂಬುದನ್ನು ಈ ಶಿಬಿರದಿಂದ ಕಲಿತೆವು.

***

ಪೂಜ್ಯ ಶ್ರೀ ಶ್ರೀಗಳವರು ಎಲೆ ಮರೆಯ ಕಾಯಿಯಂತೆ, ಎಲೆಯ ಮರೆಯಲ್ಲಿಯೇ ಉದುರಿ ಹೋಗುತ್ತಿದ್ದ ನಮಗೆ ಬೆಳಕನ್ನು ತೋರಿಸಿದ್ದಾರೆ.

***

ಈ ಶಿಬಿರದಿಂದ ಸಹಬಾಳ್ವೆಯಿಂದ ಬಾಳುವುದನ್ನು ಕಲಿತೆವು.

***

ಪೂಜ್ಯ ಶ್ರೀ ಶ್ರೀಗಳವರು ಕಣ್ಣಿದ್ದರೂ ಕುರುಡರಂತಿದ್ದ ನಮಗೆ ಜ್ಞಾನದ ಬೆಳಕನ್ನು ತುಂಬಿದ್ದಾರೆ.

***

ನನ್ನ ಜೀವನದಲ್ಲಿ ಮರೆಯಲಾರದ ಮುಖ್ಯ ಅಂಶವೆಂದರೆ ನಾನು ಒಂದೇ ಬಾರಿಗೆ ೬೨೫ ಮಂದಿ ಗೆಳತಿಯರನ್ನು ಪಡೆದುದ್ದು ನನ್ನ ಭಾಗ್ಯ.

***

ಅಭಿವಂದನಾ

'ಪಂಚಾಂಗ' ವೆಂದರೇನೆಂದೇ ಗೊತ್ತಿಲ್ಲದ ನಾನೂ ಸಹ ಇಂದು ರಾಶಿ, ನಕ್ಷತ್ರ, ಯೋಗ, ಕರಣ, ಫಲಗಳ ಬಗ್ಗೆ ಮತ್ತೊಬ್ಬರಿಗೆ ಕಲಿಸಿಕೊಡಬಲ್ಲೆ.

***

ಶಿಬಿರಕ್ಕೆ ಬರುವಾಗ ಅಜ್ಞಾನದಿಂದ ತುಂಬಿದ್ದೆ. ಈಗ ಅಜ್ಞಾನವನ್ನು ತೊರೆದು ಸುಜ್ಞಾನವನ್ನು ಪಡೆದುಕೊಂಡಿರುವೆನು.

***

ನಾನು ಜೀವನದಲ್ಲಿ ನೋವು ಸಂಕಟಗಳನ್ನೇ ಅನುಭವಿಸಿ ಕಣ್ಣೀರಿನ ಬಾಳು ಸಾಗಿಸಿದವಳು. ನನ್ನ ಬದುಕಿನ ಪ್ರಾರಂಭದ ದಿನದಲ್ಲೇ ನನಗೆ ಇಂತಹ 'ಜಾಗೃತಿ' ಶಿಕ್ಷಣ ದೊರೆತಿದ್ದರೆ ಬಾಳಿನಲ್ಲಿ ನೋವುಣ್ಣುವ ಸ್ಥಿತಿಗೆ ನಾನು ಬಲಿಯಾಗುತ್ತಿರಲಿಲ್ಲ.

***

ನೆರೆಹೊರೆಯ ಗೆಳತಿಯರನ್ನು ಕರೆದುಕೊಂಡು ಬಂದಿದ್ದರೆ ಅವರೂ ಬಾಳಿನಲ್ಲಿ ಬದುಕುವ ರೀತಿಯನ್ನು ಕಲಿಯುತ್ತಿದ್ದರಲ್ಲ ಎಂದು ನನಗೆ ದುಃಖವಾಗುತ್ತಿದೆ.

***

ಪೂಜ್ಯ ಶ್ರೀ ಶ್ರೀಗಳವರು ಒಂದೇ ಬಾರಿಗೆ ಶಿಬಿರದಲ್ಲಿ ಪಾಲ್ಗೊಂಡಿರುವ ೭೨೫ ಶಿಬಿರಾರ್ಥಿನಿಯರ ಮುಂದಿನ ಬದುಕನ್ನು ಹಸನುಗೊಳಿಸಿದ್ದಾರೆ.

***

ಪೂಜ್ಯ ಶ್ರೀಗಳವರು ನೀಡಿರುವ 'ಜ್ಞಾನಬಾಗಿನ'ದಿಂದ ನಮ್ಮ ಬದುಕನ್ನು ನಾವೇ ರೂಪಿಸಿಕೊಳ್ಳಬಹುದಾಗಿದೆ.

***

ಶಿಬಿರ ನಡೆದ ಹದಿನೈದು ದಿನಗಳ ಕಾಲವೂ ನಮ್ಮನ್ನು ಹೆತ್ತು ಹೊತ್ತು ಸಾಕಿದ ತಂದೆ ತಾಯಿಗಳಿಗಿಂತಲೂ ಚೆನ್ನಾಗಿ ತಮ್ಮ ಮಕ್ಕಳಂತೆ ನೋಡಿಕೊಂಡಿದ್ದಾರೆ. ಜೀವ ಇರುವವರೆಗೂ ನೆನೆಸಿಕೊಳ್ಳುವಷ್ಟು ಪ್ರೀತಿ, ವಾತ್ಸಲ್ಯಗಳನ್ನು ನಮಗೆ ಉಣಿಸಿದ್ದಾರೆ. ಜೀವನದ ಸಂಕಷ್ಟಗಳನ್ನು ಎದುರಿಸುವ ಶಕ್ತಿಯನ್ನು ನೀಡಿದ್ದಾರೆ.

***

ನಮ್ಮ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳಬೇಕು, ಸಮಾಜದಲ್ಲಿ ನಮ್ಮ ಸ್ಥಾನಮಾನಗಳನ್ನು ಹೇಗೆ ಉಳಿಸಿಕೊಳ್ಳಬೇಕು ಎಂಬುದನ್ನು ಶಿಬಿರದಿಂದ ನಾನು ಕಲಿತೆ

***

ಅಭಿವಂದನಾ

ಸಹನೆ, ಸಂಯಮ, ಸನ್ಮಾರ್ಗಗಳನ್ನು ಕಲಿಸಿದ ಈ ಶಿಬಿರವನ್ನು ಬಿಟ್ಟು ಹೋಗಲು, ತವರು ಮನೆಯನ್ನು ಬಿಟ್ಟುಹೋಗುವಾಗ ಆಗುವ ದುಃಖಕ್ಕಿಂತಲೂ ಹೆಚ್ಚು ದುಃಖವಾಗುತ್ತಿದೆ ನನಗೆ.

***

ಈ ಶಿಬಿರದಿಂದ ನಮಗೆ ಎಷ್ಟೆಲ್ಲಾ ಭಾಗ್ಯನಿಧಿ ದೊರಕಿದೆ. ಇಂತಹ ಭಾಗ್ಯ ಇನ್ನೆಲ್ಲಿಯೂ ದೊರೆಯಲಾರದು.

***

ಸ್ನಾತಕೋತ್ತರ ಪದವಿಯನ್ನು ಪಡೆದೂ ಗಳಿಸಲಾಗದ 'ಬಾಳಿನ ಜ್ಞಾನ'ವನ್ನು ಈ ಶಿಬಿರದಿಂದ ಪಡೆದಿದ್ದೇನೆ.

***

ವಿಶ್ವವಿದ್ಯಾಲಯದ ಅನೇಕ ಗ್ರಂಥಗಳಲ್ಲಿ ಸಿಗಬಹುದಾದ ಜ್ಞಾನ ಭಂಡಾರ ಜ್ಞಾನ ಬಾಗಿನ ಗ್ರಂಥದಲ್ಲಿದೆ.

***

ನಾಡಿನ ಎಲ್ಲಾ ಮಹಿಳೆಯರೂ ಇಂಥ ಶಿಬಿರಗಳಲ್ಲಿ ಪಾಲ್ಗೊಂಡು ವೈಚಾರಿಕ ಕ್ರಾಂತಿಯನ್ನುಂಟುಮಾಡಬಹುದು.

***

ಹದಿನೈದು ವರ್ಷಗಳಲ್ಲಿ ಕಲಿಯದ ಸದ್ಗುಣಗಳನ್ನು ಕೇವಲ ಹದಿನೈದು ದಿನಗಳಲ್ಲಿ ಕಲಿತಿದ್ದೇವೆ. ನಾವ ಕಲಿತ ಸದ್ಗುಣಗಳಿಂದ ಒಬ್ಬೊಬ್ಬರೂ ಕನಿಷ್ಠ ಹದಿನೈದು ಜನರನ್ನಾದರೂ ಉದ್ಧಾರ ಮಾಡಿ ಪೂಜ್ಯ ಶ್ರೀಶ್ರೀಗಳವರಿಗೆ ನಮ್ಮ ಗುರುಕಾಣಿಕೆಯನ್ನು ಅರ್ಪಿಸುತ್ತೇವೆ.

***

ಆಗಮಿಕರ ಶಿಬಿರ

ನಮ್ಮ ಪವಿತ್ರ ಸಂಸ್ಕೃತಿಯ ಮೂಲ ಸ್ರೋತ ದೇವತಾರಾಧನೆ. ವೇದಶಾಸ್ತ್ರ-ತಂತ್ರಾನುಸಾರ ಆಚರಿಸುವ ಪೂಜೆ ವೈಜ್ಞಾನಿಕ ವೈಚಾರಿಕ ಮಹತ್ವ ಪಡೆದಿದೆ. ಆಗಮ ಒಂದು ವಿದ್ಯೆ. ಪೂಜಾವಿಧಾನವನ್ನು ವಿಧಿವತ್ತಾಗಿ ಆಚರಿಸುವ ಬಗ್ಗೆ ಬೋಧಿಸುವ ಒಂದು ವಿಶಿಷ್ಟ ಕಲೆ. ದೇವಸ್ಥಾನಗಳಲ್ಲಿ ಪೂಜೆ ಮಾಡುವವರು ಅರ್ಚಕರು. ಆಗಮೋಕ್ತವಾಗಿ ಪೂಜೆ ಮಾಡುವವರೆಲ್ಲರೂ ಆಗಮಿಕರು. ಇವರಿಗೆ ತಮ್ಮದೇ ಆದ ವರ್ಚಸ್ಸಿದೆ. ಅರ್ಚಕರ ಪೂಜಾಪದ್ಧತಿಯನ್ನು ಪುನಶ್ಚೇತನಗೊಳಿಸಲು ಹಾಗೂ ಅವರ ಕಷ್ಟಕಾರ್ಪಣ್ಯಗಳನ್ನರಿಯಲು ಪೂಜ್ಯ ಶ್ರೀಗಳವರು ಶ್ರೀ ಕ್ಷೇತ್ರದಲ್ಲಿ ಪ್ರಥಮ ಬಾರಿಗೆ ರಾಜ್ಯಮಟ್ಟದ ಆಗಮಿಕರ ಶಿಬಿರವೊಂದನ್ನು ೧೯೮೩ ರಲ್ಲಿ ನಡೆಸಿದರು. ವಿಶ್ವ ಹಿಂದೂ ಪ್ರತಿಷ್ಠಾನದ ಸಹಕಾರ ಪಡೆದು ರೂಪಿಸಿದ ಈ ಸಮ್ಮೇಳನ ದಿನಾಂಕ ೨೫.೫.೮೩ ರಿಂದ ೮.೬.೮೩ ರವರೆಗೆ ಹದಿನೈದು ದಿನಗಳ ಕಾಲ ನಡೆಯಿತು. ಪೂಜಾವಿಧಾನ, ಆಗಮಿಕರ ಸ್ಥಿತಿ-ಗತಿಗಳ ಸುಧಾರಣೆ ಬಗ್ಗೆ ಚಿಂತಿಸಿ ಹಲವು ಮಹತ್ವಪೂರ್ಣ ನಿರ್ಧಾರಗಳನ್ನು ಕೈಗೊಳ್ಳಲಾಯಿತು. ಈ ಸಮ್ಮೇಳನದಲ್ಲಿ ೨೦೦ ಮಂದಿ ಅರ್ಚಕರು ಸಕ್ರಿಯವಾಗಿ ಭಾಗವಹಿಸಿದ್ದರು. ಈ ಅವಧಿಯಲ್ಲಿ ಅರ್ಚಕರಿಗೆ ತರಬೇತಿಯನ್ನು ನೀಡಲಾಯಿತು.

ನೇತ್ರ ಚಿಕಿತ್ಸಾ ಶಿಬಿರ

ನಮ್ಮ ದೇಶದಲ್ಲಿ ಅಂಧರ ಸಂಖ್ಯೆ ಅಧಿಕವಾಗಿದೆ. ನಾನಾ ಕಾರಣಗಳಿಂದ ಜನರು ಅಂಧತ್ವವನ್ನು ಪಡೆಯುತ್ತಾರೆ ಕೆಲವರ ಅಂಧತ್ವವನ್ನು ಹೋಗಲಾಡಿಸಲು ಸಾಧ್ಯವಿದೆ. ಬಡ ಜನರು ನಗರಗಳಿಗೆ ಹೋಗಿ ತಜ್ಞ ವೈದ್ಯರಿಂದ ಸಲಹೆ ಮತ್ತು ಚಿಕಿತ್ಸೆಗಳನ್ನು ಪಡೆಯಲು ಅಸಮರ್ಥರಾಗಿದ್ದಾರೆ ಮತ್ತು ಜೀವನದಲ್ಲಿ ನೆಮ್ಮದಿಯನ್ನು ಕಳೆದುಕೊಂಡಿದ್ದಾರೆ. ಇಂದ್ರಿಯಗಳಲ್ಲಿ ಕಣ್ಣು ಬಹಳ ಮುಖ್ಯವಾದುದು. ಕಣ್ಣನ್ನು ಕಳೆದುಕೊಂಡವನಿಗೆ ಲೋಕವು ಕಾರ್ಗತ್ತಲೆಯಾಗುತ್ತದೆ. ಈ ಪರಿಸ್ಥಿತಿಯನ್ನು ಗಮನಿಸಿದ ಶ್ರೀಗಳವರು ನೇತ್ರ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಿ, ಚಿಕಿತ್ಸೆ ನೀಡಲು ನುರಿತ ವೈದ್ಯರನ್ನು ಬರಮಾಡಿಕೊಂಡರು. ಡಾ|| ಎಂ.ಸಿ. ಮೋದಿಯವರ ನೇತೃತ್ವದಲ್ಲಿ ಚಿಕಿತ್ಸೆಯು ನಡೆಯಿತು. ಅನೇಕರ ಕಣ್ಣುಗಳ ಪೊರೆಯನ್ನು ತೆಗೆಯಲಾಯಿತು. ಕಣ್ಣುಬೇನೆ ಇದ್ದವರಿಗೆ ತಕ್ಕ ಚಿಕಿತ್ಸೆ ನೀಡಲಾಯಿತು. ಕಣ್ಣುಗಳ ರಕ್ಷಣೆಗೆ ಅಗತ್ಯ ಸಲಹೆಗಳನ್ನು ನೀಡಲಾಯಿತು. ಚಿಕಿತ್ಸಾಮಂದಿರ, ರೋಗಿಗಳಿಗೆ ವಸತಿ, ಊಟ, ಔಷಧ ಮುಂತಾದುವನ್ನು ಶ್ರೀಮಠವೇ ಉಚಿತವಾಗಿ

ವ್ಯವಸ್ಥೆ ಮಾಡಿದ್ದಿತು. ಜರ್ಮನಿಯ ಭಕ್ತರೊಬ್ಬರು ದೃಷ್ಟಿಮಾಂದ್ಯವುಳ್ಳವರಿಗೆ ಹಂಚಲು ಅಧಿಕ ಪ್ರಮಾಣದಲ್ಲಿ ಕನ್ನಡಕಗಳನ್ನು ಕಳುಹಿಸಿಕೊಟ್ಟಿದ್ದರು. ಅಗತ್ಯವುಳ್ಳವರಿಗೆ ಇವನ್ನು ಉಚಿತವಾಗಿ ಕೊಡಲಾಯಿತು. ಈ ಶಿಬಿರದಿಂದ ಅನೇಕ ಬಡವರು ಬದುಕಿಕೊಂಡಂತಾಯಿತು.

ಆಸ್ತ್ಮಾ ರೋಗ ಚಿಕಿತ್ಸಾ ಶಿಬಿರ

ಕೆಲವರು ಆಸ್ತ್ಮವನ್ನು ಪರಿಹಾರವಾಗದ ರೋಗವೆಂದು ಭಾವಿಸಿದ್ದಾರೆ. ಈ ರೋಗವನ್ನು ಹೋಗಲಾಡಿಸಬಹುದು; ಇಲ್ಲವೆ ತೊಂದರೆಯಾಗದಂತೆ ತಡೆಗಟ್ಟಬಹುದು. ನಮ್ಮ ದೇಶದಲ್ಲಿ ಆಸ್ತ್ಮರೋಗದಿಂದ ನರಳುವ ಬಹಳ ಜನರಿದ್ದಾರೆ. ಸ್ವಾಮಿಗಳವರು ಈ ರೋಗ ಚಿಕಿತ್ಸೆಗಾಗಿ ಶಿಬಿರವೊಂದನ್ನೇರ್ಪಡಿಸಿದರು. ಸಮರ್ಥ ವೈದ್ಯರನ್ನು ಬರಮಾಡಿಕೊಂಡು ಎಲ್ಲ ವ್ಯವಸ್ಥೆಯನ್ನು ಉಚಿತವಾಗಿ ಕಲ್ಪಿಸಿಕೊಟ್ಟರು.ಇಲ್ಲಿ ಚಿಕಿತ್ಸೆ ಪಡೆದ ಅನೇಕರು ಗುಣಮುಖರಾದರು.

ಬಿ.ಎಂ. ಶ್ರೀ ಪ್ರತಿಷ್ಠಾನ

ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಬಿ.ಎಂ. ಶ್ರೀಕಂಠಯ್ಯನವರು ಸುಪ್ತ ಕನ್ನಡಿಗರನ್ನು ಎಚ್ಚರಗೊಳಿಸಿದವರು; ನಿಂತ ಕನ್ನಡ ಸಾಹಿತ್ಯ ಸ್ರೋತವನ್ನು ಹೃನ್ಮನ ಸೆಳೆದು ಪ್ರವಹಿಸುವಂತೆ ಮಾಡಿದವರು. ಬೆಳ್ಳೂರು ಅವರ ಹುಟ್ಟೂರು. ಹಿರಿಯ ಕನ್ನಡ ಸಾಹಿತಿಗಳು ಪರಸ್ಪರ ವಿಚಾರವಿನಿಮಯ ಮಾಡಿಕೊಂಡು ಅಲ್ಲೊಂದು ಬಿ.ಎಂ.ಶ್ರೀ. ಪ್ರತಿಷ್ಠಾನವನ್ನು ಅಸ್ತಿತ್ವಕ್ಕೆ ತರಲು ನಿರ್ಣಯಿಸಿಕೊಂಡರು. ಇಂತಹ ಕಾರ್ಯಕ್ಕೆ ಮಹದಾಶ್ರಯದ ಅಗತ್ಯವಿದ್ದಿತು. ಅವರು ಶ್ರೀಗಳವರನ್ನು ಸಂಧಿಸಿ ಸಹಾಯವನ್ನು ಕೋರಿದರು.

ಕನ್ನಡದ ಅಭಿಮಾನಿಗಳಾದ ಶ್ರೀಗಳವರು ತುಂಬು ಹೃದಯದಿಂದ ಒಪ್ಪಿಕೊಂಡು ಬಿ.ಎಂ.ಶ್ರೀ ಪ್ರತಿಷ್ಠಾನದ ಮಹಾಪೋಷಕರಾದರು. ಸಮಾರಂಭದಲ್ಲಿ ಎಲ್ಲ ಪ್ರಸಿದ್ಧ ಸಾಹಿತಿಗಳು ಪಾಲ್ಗೊಂಡರು. ಎಲ್ಲ ವೆಚ್ಚವನ್ನು ಶ್ರೀ ಮಠವೇ ವಹಿಸಿಕೊಂಡಿತು. ಶ್ರೀಗಳವರ ನೇತೃತ್ವದಲ್ಲಿ ಪ್ರಾರಂಭಗೊಂಡ ಪ್ರತಿಷ್ಠಾನವು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಆಡು ಮುಟ್ಟದ ಸೊಪ್ಪಿಲ್ಲವೆಂಬ ಒಂದು ಗಾದೆಯುಂಟು. ಶ್ರೀಗಳವರು ಕೈಹಾಕದ ನಿರ್ಲಕ್ಷಿತ ಕ್ಷೇತ್ರವಿಲ್ಲ. ಅವರು ಕರುಣೆಯ ಚಿಲುಮೆಯಾಗಿದ್ದಾರೆ. ಅವರು

ಒತ್ತಡದಿಂದ ಒಪ್ಪಿಕೊಳ್ಳುವ ಕಾರ್ಯಕ್ರಮಗಳನ್ನು ನೋಡಿದರೆ ಇವುಗಳನ್ನು ಕಾರ್ಯಗತಗೊಳಿಸಲು ಮಾನವ ದೇಹಿಗೆ ಸಾಧ್ಯವೇ ಎನಿಸುತ್ತದೆ. ಜನತೆಗೆ ಅವರು ನೀಡುವ ಉಪದೇಶ ಅಮರವಾದುದು; ಅವರು ಮಾಡುವ ಕಾಯಕ ಭಗವದರ್ಪಿತ. ಅವರನ್ನು ಪಡೆದ ಕರ್ನಾಟಕ ಧನ್ಯ; ಅವರ ಭಕ್ತರು ಭಾಗ್ಯವಂತರು.

ಶ್ರೀಕ್ಷೇತ್ರಕ್ಕೆ ಲಕ್ಷಾಂತರ ಭಕ್ತರೂ, ಅಭಿಮಾನಿಗಳೂ ಇದ್ದಾರೆ. ಇವರು ಚುಂಚನಗಿರಿಯನ್ನು ಚಿನ್ನದಗಿರಿಯನ್ನಾಗಿಸಿ ಈಗ ಶ್ರೀಗಳವರ ಚಿನ್ನದ ಉತ್ಸವವನ್ನು ಆಚರಿಸುತ್ತಿದ್ದಾರೆ. ಇವರು ಮಹಾಸಂಸ್ಥಾನಮಠದ ಸಕಲ ಸೇವಾಕಾರ್ಯಗಳಲ್ಲಿಯೂ ಪಾಲ್ಗೊಂಡು ಉದಾರ ಸಹಕಾರ ನೀಡುತ್ತಿದ್ದಾರೆ. ಅನೇಕ ದಾನಿಗಳು ಶ್ರೀ ಕ್ಷೇತ್ರಕ್ಕೆ ಬರುವ ಯಾತ್ರಿಕರು ತಂಗಲು ಅನುಕೂಲವಾಗಲೆಂದು ಸುಸಜ್ಜಿತ ಅತಿಥಿಗೃಹಗಳನ್ನು, ಅಲ್ಲಿನ ಅಧ್ಯಾಪಕರು ಮತ್ತು ಸಿಬ್ಬಂದಿವರ್ಗದವರಿಗೆ ವಸತಿ ಗೃಹಗಳನ್ನು, ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಕಾಲೇಜುಗಳ ಕಟ್ಟಡಗಳನ್ನು, ಸಮುದಾಯ ಭವನಗಳನ್ನು, ದೇವಾಲಯಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಕೆಲವರು ಕೃಷಿ ಭೂಮಿಯನ್ನು ನೀಡಿದ್ದಾರೆ. ಅಲ್ಲದೆ ರೈತರು ತಾವು ಬೆಳೆಯುವ ದವಸ ಧಾನ್ಯಾದಿಗಳನ್ನು ಸಂಗ್ರಹಿಸಿಕೊಡುತ್ತಿದ್ದಾರೆ. ಕೆಲವರು ಅನ್ನದಾಸೋಹ ಮತ್ತು ದೇವತಾಕಾರ್ಯಗಳಿಗಾಗಿ ಕಾಣಿಕೆಯ ರೂಪವಾಗಿ ಧನ ಸಹಾಯ ಮಾಡಿದ್ದಾರೆ. ಆದ್ದರಿಂದಲೇ ಆಗಾಗ ಶ್ರೀಗಳವರು ಮಠ ನಮ್ಮದಲ್ಲ, ಜನರದೆಂದು ಹೇಳಿದ್ದಾರೆ. ಈ ಎಲ್ಲ ಮಹನೀಯರನ್ನು ಸ್ಮರಿಸಿಕೊಳ್ಳಬೇಕೆಂಬ ಮಹದಾಸೆ ನಮಗಿದ್ದರೂ ಸ್ಥಳಾಭಾವದ ದೆಸೆಯಿಂದ ಎಲ್ಲರನ್ನೂ ಹೆಸರಿಸಲು ಸಾಧ್ಯವಾಗಲಿಲ್ಲ. ಇವರೆಲ್ಲರೂ ಕೃತಜ್ಞತಾಪೂರ್ವಕವಾದ ಸ್ಮರಣೆಗೆ ಪಾತ್ರರು. ಎಲ್ಲರೂ ಅನ್ಯಥಾ ಭಾವಿಸದೆ ಎಂದಿನಂತೆ ಶ್ರೀಮಠದ ಸೇವೆಯನ್ನು ಮುಂದುವರೆಸುವುದರಲ್ಲಿ ಸಂಶಯವಿಲ್ಲ.

***

ಶ್ರೀ ಆದಿಚುಂಚನಗಿರಿ ಸಂಶೋಧನಾ ಕೇಂದ್ರ

ಕರ್ನಾಟಕದಲ್ಲಿ 'ಒಕ್ಕಲಿಗರು' ಒಂದು ಪ್ರಮುಖ ಜನಾಂಗ. ವ್ಯವಸಾಯ ವೃತ್ತಿಯು ಇವರ ಜೀವನದ ಅವಿಭಾಜ್ಯ ಅಂಗವಾಗಿದೆ. ಒಕ್ಕಲಿಗ ಜನಾಂಗದ ಆಚಾರ ವಿಚಾರಗಳು, ಸಂಪ್ರದಾಯ, ರೀತಿನೀತಿಗಳು, ಧರ್ಮಾಚರಣೆ ಮುಂತಾದ ವಿಷಯಗಳನ್ನು ಕುರಿತು ವೈಜ್ಞಾನಿಕ ಅಧ್ಯಯನ ನಡೆಸುವ ಅವಶ್ಯಕತೆ ಇಂದು ಹೆಚ್ಚಾಗಿದೆ. ಅದರ ಜೊತೆಗೆ ಅವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಇತರ ಸಮಸ್ಯೆಗಳ ಅಧ್ಯಯನ ಹಾಗೂ ಅವರ ಕ್ಷೇಮಾಭಿವೃದ್ಧಿಕಾರ್ಯಗಳ ಕಡೆಗೆ ಗಮನ ಹರಿಸಬೇಕಾಗಿದೆ.

ಒಕ್ಕಲಿಗರು ಪ್ರಮುಖವಾಗಿ ಹಿಂದುಳಿದ ಜಾತಿ ವರ್ಗಕ್ಕೆ ಸೇರಿದ್ದರೂ ಅವರು ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಿಗೆ ಅಮೂಲ್ಯ ಕೊಡುಗೆ ಸಲ್ಲಿಸಿದ್ದಾರೆ. ಅವರು ಅನಾದಿಕಾಲದಿಂದಲೂ ಸ್ಥೈರ್ಯ, ಪರಾಕ್ರಮ, ಧರ್ಮದಿಂದ ಬಾಳಿದವರು. ಪರಧರ್ಮ ಸಹಿಷ್ಣುಗಳಾದ ಅವರು ತಮ್ಮ ಐತಿಹಾಸಿಕ ಪರಂಪರೆಯನ್ನೇ ಮರೆತಿದ್ದಾರೆ.

''**ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು**'' ಎನ್ನುವ ಡಾ|| ಅಂಬೇಡ್ಕರ್ ಅವರ ಮಾತು ಸಮಾಜದ ಎಲ್ಲಾ ವರ್ಗದ ಜನರಿಗೂ ಅನ್ವಯವಾಗುವುದಾದರೂ ವಿಶೇಷವಾಗಿ ಒಕ್ಕಲಿಗ ಜನಾಂಗಕ್ಕೆ ಅದು ಅನ್ವಯವಾಗುತ್ತದೆ. ಇತಿಹಾಸವೆನ್ನುವುದು ಕೇವಲ ಗತಕಾಲದ ಬದುಕಲ್ಲ ಅದು ವರ್ತಮಾನಕ್ಕೆ ಬುನಾದಿ, ಭವಿಷ್ಯತ್ತಿಗೆ ಬೆಳಕು ನೀಡುತ್ತದೆ. ಹೀಗಾಗಿ ಪ್ರಾಚೀನ ಕಾಲದಲ್ಲಿ ಒಕ್ಕಲಿಗರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತಿತರ ಕ್ಷೇತ್ರಗಳಲ್ಲಿ ಆಗಿದ್ದ ಪ್ರಗತಿಯನ್ನು ಪ್ರಸ್ತುತ ಪರಿಸ್ಥಿತಿಗೆ ಹೋಲಿಸಿ ನೋಡಿದಾಗ ಅವುಗಳಲ್ಲಿ ಅಜಗಜಾಂತರ ವ್ಯತ್ಯಾಸಗಳಿರುವುದನ್ನು ಗಮನಿಸಬಹುದು. ಇತ್ತೀಚೆಗೆ ಈ ಕ್ಷೇತ್ರಗಳಲ್ಲಾಗುತ್ತಿರುವ ಬದಲಾವಣೆಗಳನ್ನು ಗುರುತಿಸುವ ಪ್ರಯತ್ನ ನಡೆದಿದೆ. ಒಕ್ಕಲಿಗರು ವರ್ತಮಾನದಲ್ಲಿ ಮಾತ್ರವಲ್ಲ, ಗತ ಕಾಲದಲ್ಲಿಯೂ ತಮಗಿದ್ದ ಸ್ಥಾನಮಾನವನ್ನು ಪುನಃ ಪಡೆಯಬೇಕೆಂಬ ಪ್ರಜ್ಞೆಯಿಂದ ಇಂದು ಎಚ್ಚರಗೊಂಡಿದ್ದಾರೆ. ಈ ಪ್ರಜ್ಞೆ ಮುಖ್ಯವಾಗಿ ಎರಡು ದಾರಿಗಳಲ್ಲಿ ಚಲಿಸತೊಡಗಿದೆ. ಒಂದನೆಯದು ತನ್ನ ಪರಂಪರೆಯ ನಿಜರೂಪವನ್ನು ಮತ್ತು ಅದರ ಬೆಳವಣಿಗೆಯ ಹಂತಗಳನ್ನು ಶೋಧಿಸುವುದು. ಎರಡನೆಯದು ಆ ಪರಂಪರೆಗೆ ಇತಿಹಾಸದ ಪುಟಗಳಲ್ಲಿ ನ್ಯಾಯವಾದ ಪಾಲುದೊರಕಿಸಿ ಕೊಡುವುದು. ಕರ್ನಾಟಕದ ಬಹುದೊಡ್ಡ ಶಕ್ತಿಯಾಗಿರುವ

ಅಭಿವಂದನಾ

ಒಕ್ಕಲಿಗ ಸಮಾಜ ಈ ದಿಕ್ಕಿನಲ್ಲಿ ಸಾಗಲು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು ಪ್ರೇರಕಶಕ್ತಿಯಾಗಿದ್ದಾರೆ. ಶ್ರೀಗಳವರ ಕನಸಿನ ಕೂಸೇ '**ಶ್ರೀ ಆದಿಚುಂಚನಗಿರಿ ಸಂಶೋಧನಾ ಕೇಂದ್ರ**.'

ಪೂಜ್ಯಶ್ರೀಗಳವರ ಆದೇಶಕ್ಕನುಸಾರವಾಗಿ ಒಕ್ಕಲಿಗ ಸಮಾಜದ ಇತಿಹಾಸ, ಸಂಸ್ಕೃತಿಗಳನ್ನು ಕುರಿತ ಗ್ರಂಥ ರಚನೆಗೆ ಸಂಬಂಧಪಟ್ಟ ಪೂರ್ವಭಾವಿ ವಿಷಯಗಳನ್ನು ಚರ್ಚಿಸಲು ಶ್ರೀಗಳವರ ಸಾನ್ನಿಧ್ಯದಲ್ಲಿ ದಿನಾಂಕ ೨೭.೧೦.೧೯೯೩ ರಂದು ಬೆಂಗಳೂರಿನ ಶ್ರೀಮಠದ ಆವರಣದಲ್ಲಿ ಪ್ರಪ್ರಥಮ ಸಭೆ ನಡೆಯಿತು. ಸಭೆಯಲ್ಲಿ ನಾಡಿನ ವಿದ್ವಾಂಸರು, ಗಣ್ಯರು ಭಾಗವಹಿಸಿ ಅತ್ಯಮೂಲ್ಯ ಸಲಹೆಗಳನ್ನು ನೀಡಿದರು. ಅನಂತರ ನಡೆದ ಸಭೆಗಳಲ್ಲಿ 'ಶ್ರೀ ಆದಿಚುಂಚನಗಿರಿ ಸಂಶೋಧನಾ ಕೇಂದ್ರ'ದ ಉದ್ದೇಶ, ಅದರ ಅಡಿಯಲ್ಲಿ ಉದ್ದೇಶಿತ ಗ್ರಂಥ ರಚನೆಗೆ ಬೇಕಾಗುವ ವಿಷಯ ಸಂಗ್ರಹಣೆ, ಕ್ಷೇತ್ರ ಕಾರ್ಯ (Field work), ಸಂಶೋಧಕರ ನೆರವು ಪಡೆಯುವುದು, ಗ್ರಂಥದ ಶೀರ್ಷಿಕೆ, ವಿಷಯಸೂಚಿ, ಸಂಪಾದಕ ಮಂಡಲಿಯ ರಚನೆ ಮುಂತಾದ ವಿಷಯಗಳನ್ನು ಕುರಿತು ದೀರ್ಘವಾಗಿ ಚರ್ಚಿಸಲಾಯಿತು.

ಸಂಶೋಧನಾ ಕೇಂದ್ರದ ಮೂಲ ಉದ್ದೇಶಗಳು

೧. ಒಕ್ಕಲಿಗ ಜನಾಂಗದ ಸಾಂಸ್ಕೃತಿಕ ಅಧ್ಯಯನ ವಿಷಯವನ್ನು ಸಂಶೋಧನೆಗೆ ಆರಿಸಿಕೊಳ್ಳುವ ಅಭ್ಯರ್ಥಿಗಳಿಗೆ ನೆರವಾಗುವಂತಹ ಸಾಂದರ್ಭಿಕ ಗ್ರಂಥಗಳನ್ನು ಸಂಪಾದಿಸುವುದು.

೨. ಒಕ್ಕಲಿಗರ ಇತಿಹಾಸ, ಸಂಸ್ಕೃತಿ- ಕುರಿತ ವಿಷಯಗಳ ಗ್ರಂಥರಚನೆ.

೩. ಸುಸಜ್ಜಿತ ಗ್ರಂಥಭಂಡಾರ ಮತ್ತು ವಾಚನಾಲಯದ ಸ್ಥಾಪನೆ.

೪. ಈ ಕ್ಷೇತ್ರದಲ್ಲಿ ಸಂಶೋಧನೆ ಮಾಡುವವರಿಗೆ ಉತ್ತಮ ಅವಕಾಶ ದೊರಕಿಸಿಕೊಡುವುದು.

೫. ಒಕ್ಕಲಿಗರ ಬಗ್ಗೆ ವಿಶ್ವದ ಎಲ್ಲಾ ಭಾಷೆಗಳಲ್ಲಿ ಪ್ರಕಟವಾಗಿರುವ ಗ್ರಂಥಗಳ ಸಂಗ್ರಹಣೆ.

೬. ಒಕ್ಕಲಿಗ ಜನಾಂಗದ ವಿಷಯ ಕುರಿತು ಸಂಶೋಧನೆ ಮಾಡುವ ಆಸಕ್ತರಿಗೆ ಪಿ.ಎಚ್.ಡಿ. ಮಾಡಲು ಅನುಕೂಲ ಕಲ್ಪಿಸಿಕೊಡುವುದು.

ಅಭಿವಂದನಾ

ದಿನಾಂಕ ೪.೧೨.೯೩ರಂದು ನಡೆದ ಸಂಪಾದಕ ಮಂಡಲಿಯ ಸಭೆಯಲ್ಲಿ ಈ ವಿಷಯಗಳ ಜೊತೆಗೆ ಇನ್ನಿತರ ವಿಷಯಗಳನ್ನು ಚರ್ಚಿಸಿ ಈ ಕೇಂದ್ರಕ್ಕೆ 'ಆದಿಚುಂಚನಗಿರಿ ಸಂಶೋಧನಾ ಕೇಂದ್ರ'ವೆಂದು ಹೆಸರಿಸಲು ಮತ್ತು ಗ್ರಂಥದ ಶೀರ್ಷಿಕೆಯು **'ಒಕ್ಕಲಿಗರ ಇತಿಹಾಸ ದರ್ಶನ,' 'ಒಕ್ಕಲಿಗರ ಸಂಸ್ಕೃತಿ ದರ್ಶನ'** ಎಂಬ ಶೀರ್ಷಿಕೆ ಇರಬೇಕೆಂದು ಸೂಚಿಸಲಾಯಿತು. ಇದೇ ಸಂದರ್ಭದಲ್ಲಿ ಪರಮಪೂಜ್ಯ ಸ್ವಾಮೀಜಿಗಳವರು ಈ ವಿಷಯಕ್ಕೆ ಸಂಬಂಧಪಟ್ಟ ಉದ್ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಉಪಯುಕ್ತವಾಗುವಂತಹ ಉತ್ತಮ ಗ್ರಂಥಗಳನ್ನು ಹೊರತರಬೇಕೆಂದೂ, ಜೊತೆಗೆ ಜನಾಂಗದ ಎಲ್ಲಾ ಒಳಪಂಗಡಗಳ ವಿಷಯಗಳನ್ನೊಳಗೊಂಡ ಸಮಗ್ರ ಗ್ರಂಥಗಳ ರಚನೆಯಾಗಬೇಕೆಂದೂ ತಿಳಿಸಿದರು.

ಪೂಜ್ಯಶ್ರೀಗಳವರ ಮಾರ್ಗದರ್ಶನದಲ್ಲಿ ಸಂಪಾದಕ ಮಂಡಲಿ ಮತ್ತು ಸಲಹಾಸಮಿತಿಯನ್ನು ರಚಿಸಿ ಗ್ರಂಥದ ಸ್ಥೂಲರೂಪರೇಷೆಗಳು ಈ ರೀತಿ ಇರಬೇಕೆಂದು ನಿಷ್ಕರ್ಷೆ ಮಾಡಲಾಯಿತು:

ಸಂಪುಟ ಒಂದು: ಜನಾಂಗದ ಕಲ್ಪನೆ, ವಿಕಾಸ, ಕ್ರಿ.ಪೂ.ದಲ್ಲಿ ಜನಾಂಗಗಳು, ವೃತ್ತಿ ಮತ್ತು ಜಾತಿಗಳ ಕಲ್ಪನೆ, ಒಕ್ಕಲಿಗರ ಪ್ರಾಚೀನತೆ, ವಲಸೆ ಪದ್ಧತಿ, ಒಕ್ಕಲಿಗರು, ಗ್ರಾಮದ ಕಲ್ಪನೆ ಮತ್ತು ವ್ಯವಸಾಯ, ವರ್ಣಧರ್ಮ ಅದರ ಸಾಧಕಬಾಧಕಗಳು.

ಸಂಪುಟ ಎರಡು: ಭಾರತದಲ್ಲಿ ಒಕ್ಕಲಿಗರು, ಬೇರೆ ಬೇರೆ ಪ್ರಾಂತ್ಯಗಳಲ್ಲಿರುವ ಒಕ್ಕಲಿಗರು, ಭಿನ್ನತೆಯಲ್ಲಿ ಏಕತೆ, ಒಳಪಂಗಡಗಳು.

ಸಂಪುಟ ಮೂರು: ಭಾರತದ ರಾಜಕೀಯ ಹಿನ್ನೆಲೆ ಮತ್ತು ಒಕ್ಕಲಿಗ ಅರಸರು, ಕರ್ನಾಟಕದ ರಾಜಕೀಯ ಹಿನ್ನೆಲೆ, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ಯಲಹಂಕ ಪ್ರಭುಗಳು, ನಾಗಮಂಗಲದ ಪ್ರಭುಗಳು, ಕೌಲೇದುರ್ಗದ ಅರಸರು, ಸ್ಥಾನಿಕ ಪ್ರಭುಗಳು, ಒಕ್ಕಲಿಗ ಮಂತ್ರಿ, ಪ್ರಧಾನಿ, ಸೇನಾನಾಯಕರು.

ಸಂಪುಟ ನಾಲ್ಕು: ಜಾನಪದದಲ್ಲಿ ಒಕ್ಕಲಿಗರು, ಶಾಸನಗಳಲ್ಲಿ ಒಕ್ಕಲಿಗರು, ಸಾಹಿತ್ಯದಲ್ಲಿ ಒಕ್ಕಲಿಗರು, ಕರ್ನಾಟಕದಲ್ಲಿ ಒಕ್ಕಲಿಗರು, ಶಿಕ್ಷಣದಲ್ಲಿ ಒಕ್ಕಲಿಗರು.

ಸಂಪುಟ ಐದು: ಸಾಮಾಜಿಕ ಪರಿಕಲ್ಪನೆ ಮತ್ತು ಒಕ್ಕಲಿಗರು, ಗ್ರಾಮ ಸಮಾಜ, ಆರಾಧನೆಯ ದೇವತೆಗಳು, ಹಬ್ಬಹರಿದಿನಗಳು, ವ್ಯವಸಾಯ ಸಂಪ್ರದಾಯಗಳು, ಹುಟ್ಟು ಸಾವಿನ ಸಂಪ್ರದಾಯಗಳು, ಸಂಕೀರ್ಣ ಆಚರಣೆಗಳು.

ಸಂಪುಟ ಆರು: ರಾಜಕೀಯಕ್ಕೆ ಒಕ್ಕಲಿಗರ ಕೊಡುಗೆ, ಒಕ್ಕಲಿಗರ ಕಲಾಕೊಡುಗೆ,

ಮಹಿಳೆಯರು, ಸಂಘಸಂಸ್ಥೆಗಳು, ಜನಾಂಗಕ್ಕಾಗಿ ದುಡಿದವರು, ತಾಂತ್ರಿಕ ಕೊಡುಗೆ, ದೈನಿಕ ಕೊಡುಗೆ, ವಿದೇಶದ ಒಕ್ಕಲಿಗರ ಕೊಡುಗೆ, ಮಠಗಳು.

ಅನಂತರ ನಡೆದ ಸಭೆಗಳಲ್ಲಿ ಗ್ರಂಥದಲ್ಲಿ ಅಳವಡಿಸಿಕೊಳ್ಳಬಹುದಾದ ಈ ಸ್ಥೂಲರೂಪರೇಷೆಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಯಿತು.

ಪ್ರಸ್ತುತ ಸಂಶೋಧನಾ ಕೇಂದ್ರದಲ್ಲಿ ನಡೆಯುತ್ತಿರುವ ಗ್ರಂಥರಚನೆ ಮತ್ತು ವಿಷಯ ಸಂಗ್ರಹಣೆಯ ಕೆಲಸ ವಿವಿಧ ಹಂತಗಳಲ್ಲಿ ಮುಂದುವರಿಯುತ್ತಿದೆ. ಈಗಾಗಲೆ ಒಂದು ಸಂಪುಟದ ಹಸ್ತಪ್ರತಿ ಸಿದ್ಧವಾಗಿದೆ. ಉಳಿದ ಸಂಪುಟಗಳ ಸಿದ್ಧತೆಯ ಕೆಲಸ ಮುಂದುವರಿಯುತ್ತಿದೆ.

ಇತಿಹಾಸವು ಒಂದು ದೇಶದ ಹಾಗೂ ಜನಾಂಗದ ಬದುಕನ್ನು ನಿಷ್ಪಕ್ಷಪಾತವಾಗಿ ವಿವರಿಸುವಂತಾದಾಗ ಮಾತ್ರ ಅದರಿಂದ ಹೆಚ್ಚು ಪ್ರಯೋಜನವಾಗುತ್ತದೆ. ಒಕ್ಕಲಿಗರ ಇತಿಹಾಸವನ್ನು ಅಧ್ಯಯನ ಮಾಡಲು ಇಂಡಾಲಜಿ ಮತ್ತು ಮಾನವಶಾಸ್ತ್ರದ ಅವಶ್ಯಕತೆಯೂ ಇದೆ ಎಂಬುದು ಕೆಲವರ ಅಭಿಮತ. ಒಕ್ಕಲಿಗ ಜನಾಂಗದ ಸಂಸ್ಕೃತಿ, ಪರಂಪರೆ, ಇಂದಿಗೂ ಜೀವಂತವಾಗಿ ಮೌಖಿಕ ಸಂಪ್ರದಾಯದಲ್ಲಿಯೇ ಮುಂದುವರಿಯುತ್ತಿದೆ. ಬುದ್ಧಿಜೀವಿಗಳು, ಈ ಜನಾಂಗದ ನೈಜ ಇತಿಹಾಸವನ್ನು ಬರೆಯುವಂತಾದರೆ ಅದರಿಂದ ಮುಂದಿನ ಜನಾಂಗಕ್ಕೆ ಹೆಚ್ಚು ಪ್ರಯೋಜನವಾಗುತ್ತದೆ.

***

ಅಭಿವಂದನಾ

ಸಾಹಿತ್ಯ

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಅರಮನೆ-ಗುರುಮನೆಗಳು ಸಾಹಿತ್ಯ ಕೃಷಿಯನ್ನು ಪೋಷಿಸಿ, ಸಂವರ್ಧಿಸುತ್ತಾ ಬಂದಿರುವುದನ್ನು ಇತಿಹಾಸದಿಂದ ಕಾಣಬಹುದಾಗಿದೆ. ರಾಜ ಮಹಾರಾಜರುಗಳು ಹಾಗೂ ಮಠಾಧಿಪತಿಗಳು ಸ್ವಯಂಜ್ಞಾನಿಗಳಾಗಿದ್ದು ಅನೇಕ ವಿದ್ವಾಂಸರಿಗೆ ಆಶ್ರಯಕೊಟ್ಟು, ಅವರನ್ನು ಪ್ರೋತ್ಸಾಹಿಸಿ, ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಉತ್ತಮ ಕೃತಿಗಳನ್ನು ರಚನೆ ಮಾಡಿಸಿ, ಪ್ರಕಟಿಸುತ್ತಿದ್ದುದರಿಂದಲೇ ಸಾಹಿತ್ಯ ಕ್ಷೇತ್ರವು ಬೆಳೆಯಲು ಸಾಧ್ಯವಾಗಿದೆ. ಅನೇಕ ಧರ್ಮಾಚಾರ್ಯರು ಮಠ-ಮಂದಿರಗಳನ್ನು ಸ್ಥಾಪಿಸಿ, ವಿದ್ವದ್ಗೋಷ್ಠಿಗಳನ್ನು ನಡೆಸಿ, ವಿಚಾರ ಮಂಥನ ಮಾಡಿ ತಾವು ಕೃತಿಗಳನ್ನು ರಚಿಸುತ್ತಿದ್ದುದರ ಜೊತೆಗೆ, ಶ್ರೇಷ್ಠ ವಿದ್ವಾಂಸರುಗಳಿಂದಲೂ ಸಾಹಿತ್ಯ ಸೇವೆ ಮಾಡಿಸುತ್ತಿದ್ದರು. ಇಂದೂ ಸಹ ಇದೇ ಸಂಪ್ರದಾಯ ಮುಂದುವರಿಯುತ್ತಿದೆ.

ಸಾಹಿತ್ಯ ರಚನೆ, ಪೋಷಣೆ, ಸಂವರ್ಧನೆಯ ನಿಟ್ಟಿನಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ಹಿಂದಿನಿಂದಲೂ ಗಣನೀಯ ಸೇವೆ ಸಲ್ಲಿಸಿದೆ.

ಶ್ರೀ ಆದಿಚುಂಚನಗಿರಿ ಸ್ಥಳ ಮಹಾತ್ಮ್ಯವು ಎಂಬ ಕೃತಿಯು ಲಭ್ಯವಾಗಿದೆ. ಇದರಲ್ಲಿ ಶ್ರೀಕ್ಷೇತ್ರದ ಪೌರಾಣಿಕ, ಧಾರ್ಮಿಕ ಮಹತ್ವಗಳ ಪರಿಚಯ ವಿಪುಲವಾಗಿದೆ.

ಆಧ್ಯಾತ್ಮ, ಧರ್ಮ, ಸಂಸ್ಕೃತಿ, ಸದಾಚಾರ ಸಂಬಂಧವಾದ ಶ್ರೇಷ್ಠ ಲೇಖನಗಳನ್ನೊಳಗೊಂಡ 'ತ್ರಿಶೂಲ' ಎಂಬ ಮಾಸಪತ್ರಿಕೆಯು ಶ್ರೀ ಮಠದ ವತಿಯಿಂದ ಪ್ರಕಟಗೊಳ್ಳುತ್ತಿದ್ದು ಕಾಲಾನಂತರದಲ್ಲಿ ಅದು ನಿಂತು ಹೋಗಿದೆ.

ಶ್ರೀಕ್ಷೇತ್ರದ ೬೫ನೆಯ ಪೀಠಾಧಿಪತಿಗಳಾದ ಶ್ರೀ ಚಂದ್ರಶೇಖರನಾಥ ಮಹಾಸ್ವಾಮಿಗಳವರ ಅವಧಿಯಲ್ಲಿ ಶ್ರೀಕ್ಷೇತ್ರವು ಸಾಹಿತ್ಯ ಬೆಳವಣಿಗೆಯಲ್ಲಿ ಮೇಲುಗೈ ಸಾಧಿಸಿರುವ ಅಂಶ ಸ್ಪಷ್ಟವಾಗಿ ಕಂಡು ಬರುತ್ತದೆ. ಪೂಜ್ಯ ಶ್ರೀ ಚಂದ್ರಶೇಖರ ಮಹಾಸ್ವಾಮಿಗಳವರು ಮಹಾನ್ ವಿದ್ವಾಂಸರೂ, ಸ್ವಯಂಜ್ಞಾನಿಗಳೂ ಆಧ್ಯಾತ್ಮ ವಿಷಯದಲ್ಲಿ ಆಳವಾದ ಅರಿವುಳ್ಳವರೂ, ಶ್ರೇಷ್ಠ ದಾರ್ಶನಿಕರೂ, ಮಹಾತಪಸ್ವಿಗಳೂ, ಕರ್ಮಯೋಗಿಗಳೂ ಆಗಿದ್ದರು. ಶಿಸ್ತು ಬದ್ಧ ಜೀವನ ಅವರದು. ಸಂಸ್ಕೃತವೂ ಸೇರಿದಂತೆ ಏಳು ಭಾಷೆಗಳಲ್ಲಿ ಅದ್ವಿತೀಯ ಪಾಂಡಿತ್ಯ ಗಳಿಸಿದ್ದರು. ಭಾರತೀಯ ಧರ್ಮ ಗ್ರಂಥಗಳ, ಸಾಹಿತ್ಯ ಕೃತಿಗಳ, ಶಾಸ್ತ್ರ ಗ್ರಂಥಗಳ ಆಳವಾದ ಅಧ್ಯಯನ ಮಾಡಿದ್ದರು. ಅವರು ಶ್ರೀ ಮಠದಲ್ಲಿಯೇ ''ಶ್ರೀ ಆದಿಚುಂಚನಗಿರಿ ಗ್ರಂಥಮಾಲೆ '' ಯೊಂದನ್ನು ಸ್ಥಾಪಿಸಿ, ಅನೇಕ ಅಮೂಲ್ಯ ಕೃತಿಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಅವರು ತಮ್ಮ ಆಳವಾದ ಧ್ಯಾನ, ಅಧ್ಯಯನ,

ಚಿಂತನ ಹಾಗೂ ಅನುಭವಗಳನ್ನು ಗ್ರಂಥ ರೂಪದಲ್ಲಿ ಪ್ರಕಟಿಸಿದ್ದಾರೆ. ಇವುಗಳಲ್ಲಿ ಆಧುನಿಕ ಕಾಲಕ್ಕೆ ತಕ್ಕಂತೆ ಸಮನ್ವಯ ದೃಷ್ಟಿಯನ್ನು ಕಾಣಬಹುದಾಗಿದೆ.

ಅವರ 'ಸದ್ವಾಣಿ', 'ಮಂತ್ರೋಪದೇಶ', 'ಪ್ರಾರ್ಥನಾಯೋಗ', 'ಪ್ರಾರ್ಥನಾ ಪ್ರಕಾರಗಳು','ಸನ್ಮಾರ್ಗ ಪ್ರದೀಪ', 'ಪೂಜೆ', 'ಪ್ರಣವೋಪಾಸನೆ' ಸಾರಸ್ವತ ಲೋಕಕ್ಕೆ ಅಮೂಲ್ಯ ಕಾಣಿಕೆಗಳಾಗಿವೆ. ಅವುಗಳಲ್ಲಿ ಅವರು ಉದ್ಧರಿಸಿರುವ ವೇದೋಪನಿಷದ್ವಾಕ್ಯಗಳು ಹಾಗೂ ಆರ್ಯೋಕ್ತಿಗಳು, ಪ್ರತಿಪಾದಿಸಿರುವ ವಿಚಾರಗಳು ಅಮೂಲ್ಯವಾಗಿವೆ. ಅವರೇ ಸಂಪಾದಿಸಿರುವ 'ಶ್ರೀ ಆದಿಚುಂಚನಗಿರಿ ಜನಪದ ಗೀತೆಗಳು' ಎಂಬ ಕೃತಿ ಶ್ರೇಷ್ಠ ಮಟ್ಟದ ಜಾನಪದ ಗೀತೆಗಳ ಸಂಕಲನವಾಗಿದೆ.

ಶ್ರೀ ಚಂದ್ರಶೇಖರನಾಥರ ಜೀವನ ಪರಿಚಯವನ್ನುಳ್ಳ ''ಶ್ರೀ ಗುರುದೇವಚಂದ್ರಶೇಖರನಾಥರು'' ಎಂಬ ಕಿರುಹೊತ್ತಿಗೆಯನ್ನು ಶ್ರೀ ಜೀ.ಶಂ. ಪರಮಶಿವಯ್ಯನವರು ರಚಿಸಿದ್ದಾರೆ.

ಸದ್ಗುರು ಶ್ರೀ ಚಂದ್ರಶೇಖರನಾಥರ ಅವಧಿಯನಂತರ ಕೆಲವು ವರ್ಷಗಳು ಸಾಹಿತ್ಯ ಸೇವೆಯ ಕೆಲಸ ಸ್ಥಗಿತಗೊಂಡಿತ್ತು. ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು ಪೀಠಾಧಿಕಾರಿಗಳಾದ ಬಳಿಕ ನಿಂತು ಹೋಗಿದ್ದ ಸಾಹಿತ್ಯ ಸೇವೆಗೆ ಚಾಲನೆ ದೊರೆಯಿತು.

ಪೂಜ್ಯ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ವಿದ್ಯಾರ್ಥಿ ದೆಶೆಯಲ್ಲಿದ್ದಾಗ ಉತ್ಕಟವಾದ ಸಾಹಿತ್ಯಾಭಿರುಚಿಯುಳ್ಳವರಾಗಿದ್ದರು. ಬಹಳ ಪುಸ್ತಕಗಳನ್ನು ಓದಿದ್ದರು. ಅವುಗಳ ಸಂಗ್ರಹ ಯೋಗ್ಯವಾದ ವಾಕ್ಯಗಳನ್ನು ಬರೆದಿಟ್ಟುಕೊಳ್ಳುತ್ತಿದ್ದರು. ಪ್ರಸಿದ್ಧ ಸಾಹಿತಿಗಳ ಕವನಗಳನ್ನು ಓದಿ, ಆಕರ್ಷಿತರಾಗಿ ತಾವೂ ಕವನ ರಚನೆಗೆ ಕೈ ಹಾಕಿದರು. ಅವರ ಮಿತ್ರರು ಆ ಕವನಗಳನ್ನು ಓದಿ ಆನಂದ ಪಡುತ್ತಿದ್ದರು ಹಾಗೂ ಬರೆಯುವಂತೆ ಪ್ರೋತ್ಸಾಹಿಸುತ್ತಿದ್ದರು. ಗಂಗಾಧರಯ್ಯನವರು ಕನ್ನಡ ಬೀಜ, ಕನ್ನಡ ಮಾತೆ, ಹೊಸವರ್ಷದ ಶುಭಾಶಯ, ವರ್ಷಕ್ಕೆ ಸ್ವಾಗತವು ಕಾಲಗತಿ, ಬಡವರ ಪಾಡು, ಶ್ರೀ ಚಂದ್ರಶೇಖರನಾಥರು, ಸ್ವಾಗತ ಗೀತೆ, ಆನಂದ, ಸತ್ಸಂಗ, ಮಂಗಳ, ಕೈಲಾಸ-ಗಣಪತಿ, ಮಗ ಬಂದ ಮನೆಗೆ, ಸಿದ್ಧರು, ದೇವರು ಮುಂತಾದ ಅನೇಕ ಕವನಗಳನ್ನು ರಚಿಸಿದ್ದರು. ಅವರ ಅಂತರಂಗ ಹರಿಯುತ್ತಿದ್ದ ದಾರಿಯನ್ನು ಈ ಕವನಗಳಲ್ಲಿ ಗುರುತಿಸಬಹುದು. ಅಲ್ಲದೆ ಆ ವಯಸ್ಸಿನಲ್ಲಿ ಅವರಿಗಿದ್ದ ಕವನ ರಚನಾಸಾಮರ್ಥ್ಯವನ್ನೂ ತಿಳಿಯಬಹುದಾಗಿದೆ. ಇದಕ್ಕಾಗಿ ಆಗ ಅವರು ರಚಿಸಿದ್ದ ಅವರ ಕೆಲವು ಕವನಗಳನ್ನಿಲ್ಲಿ ಕೊಡಲಾಗಿದೆ.

ಕನ್ನಡದ ಬೀಜ

ಬೆಲ್ಲಸಕ್ಕರೆಯ ಬದು ಕಟ್ಟಿ
ಹಾಲುತುಪ್ಪದಾ ಬದಿಯಲ್ಲಿ
ದೇವ ನೆಟ್ಟಿಹ ಬೀಜ ಕನ್ನಡದ ಬೀಜ
ಮೊಳೆತು ಬರುತಿದೆ ಧರ್ಮದಾ ಮೂಲ
ಕೊಂಬೆಗಳವು ಕಾಣುತಿವೆ ನಡೆನುಡಿ ಶೀಲ
ಚಿಗುರೊಡೆದು ಹೂ ಮುಡಿದು ಕೂಗಿದೆ ವಸಂತ ಕಾಲ
ಓಡಿ ಬಂದಿವೆ ಜಾತಿಗೊಂದು ಹಕ್ಕಿ
ಗಿಜಿಬಿಜಿಗುಟ್ಟುತ್ತಿವೆ ಮರದಲ್ಲಿ ಸೊಕ್ಕಿ
ತಿಂದು ಮುಗಿಸಿವೆ ಹೂ ಕಾಯನೇ ಮುಕ್ಕಿ
ಇದ್ದ ಎಲೆಕಾಯಿ ಹಕ್ಕಿಯಾ ಪಾಲು
ಬೋಳಾಗಿ ನಿಂತಿದೆ ಮರ ತಾನು ಸಾಲು
ಮಾಗಿ ಕೂಗಿತು ಮರಕಿಂದು ಸೋಲು

ಬೆಲ್ಲ ಸಕ್ಕರೆಯ ಬದು, ಹಾಲು ತುಪ್ಪದಾ ಬದಿ— ಈ ಮಾತುಗಳು ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಸವಿಯನ್ನು ಸುಂದರವಾಗಿ ಪ್ರತಿಪಾದಿಸುತ್ತವೆ. ಕನ್ನಡವು ಕುಭಾಷೆಯಲ್ಲ; ಅದರ ಸಾಹಿತ್ಯ ಕುಸಾಹಿತ್ಯವಲ್ಲ. ಕನಡಿಗರದು ಸದಭಿರುಚಿ ಎಂಬುದನ್ನು ಧರ್ಮದಾ ಮೂಲ, ಕೊಂಬೆಯವು. ನಡೆ-ನುಡಿ-ಶೀಲ ಎಂಬ ಮಾತುಗಳು ಸ್ಪಷ್ಟಪಡಿಸುತ್ತವೆ. ಧರ್ಮವು ಕನ್ನಡ ಸಾಹಿತ್ಯದ ತಿರುಳು. ವಸಂತಕಾಲ ಶಬ್ದವು ಕನ್ನಡ ನಾಡಿನ ಭಾಷೆ, ಸಾಹಿತ್ಯ, ಧನ, ಧಾನ್ಯಾದಿಗಳ ಹಿರಿಮೆ ಗರಿಮೆಗಳನ್ನು ಸೂಚಿಸುತ್ತದೆ. ಜಾತಿಗೊಂದು ಹಕ್ಕಿ, ಮರದಲ್ಲಿ ಸೊಕ್ಕಿ, ಹೂ ಕಾಯನೇ ಮುಕ್ಕಿ, ಬೋಳಾಗಿ ನಿಂತಿದೆ ಮರ— ಈ ಮಾತುಗಳು ಧ್ವನಿಪೂರ್ಣವಾಗಿವೆ. ಇಲ್ಲಿನ ಸಂಪತ್ತಿಗೆ ಆಕರ್ಷಿತರಾಗಿ ಬಂದ ಅನ್ಯರಾಜ್ಯಗಳವರು ಕನ್ನಡ ಭಾಷೆ, ಸಾಹಿತ್ಯಗಳಿಗೆ ಬಹಳ ಅಪಚಾರ ಮಾಡಿದ್ದಾರೆ; ನೆಲ, ಜಲಗಳನ್ನು ತಮ್ಮದನ್ನಾಗಿಸಿಕೊಂಡಿದ್ದಾರೆ; ಕಾರ್ಖಾನೆ, ವ್ಯಾಪಾರ, ವ್ಯವಹಾರಗಳನ್ನು ಆಕ್ರಮಿಸಿಕೊಂಡಿದ್ದಾರೆ; ಕನ್ನಡ ಮರ ಬೋಳಾಗಿದೆ. 'ಕನ್ನಡ ಮಾತೆ' ಎಂಬ ಕವನದಲ್ಲಿನ 'ಕಂದಿಹುದು ಕಳೆಹೆಚ್ಚಿ ಬೆಳೆಯು','ಕಳ್ಳತನದಿ ತಾ ಬಂದು ತಳ ಊರಿಹ ಕಳೆಯು। ಕಡಿಯೆ ಬಾತಾಯಿ ತೊಡೆಯೆ 'ಬಾ ತಾಯಿ' ಈ ಮಾತುಗಳು ಪರಿಸ್ಥಿತಿಯ ನಿಚ್ಚಳ ಸ್ವರೂಪವನ್ನು ನಿರೂಪಿಸಿ ಓದುಗರ ಮೇಲೆ ಬಹಳ ಪರಿಣಾಮವನ್ನುಂಟುಮಾಡುತ್ತವೆ.

ಕಾಲಗತಿ

ಒಂದೊಂದೆ ದಿನವಿದು ಓಡುತಿದೆ
ತುಂಬಿಟ್ಟ ಕೊಡದಿ ತಾ ಜಿನುಗುತಿದೆ
ಎಚ್ಚೆತ್ತು ನೋಡುವಲ್ಲಿ ಇನ್ನೆಷ್ಟು ಉಳಿದಿದೆ
ತುಂಬಿಟ್ಟ ಕೊಡ ತಾ ಜಿನುಗುತಿದೆ
ಹೋದಷ್ಟು ದಿನದಲ್ಲಿ ಗಳಿಸಿದುದೇನು
ಕೊಡದ ತೂತದು ಮುಚ್ಚುವುದೇನು
ಇಂತಿಷ್ಟು ದಿನ ತಾನಿದ್ದುದು ಜೇನು
ಕೊಡದ ನೀರದು ಬರಿದಾಯಿತೇನು

ಬದುಕಿನವಧಿಯನ್ನು ನೀರಿನ ಕೊಡವನ್ನಾಗಿ ರೂಪಿಸಲಾಗಿದೆ. ಇದೊಂದು ಸುಂದರ ರೂಪಕ. ಅರಿವಾಗದಂತೆ ಅವಧಿಯ ದಿನಗಳು ಕಳೆದು ಹೋಗುತ್ತವೆ. ತೂತುಕೊಡದ ನೀರೂ ಸೋರಿಹೋಗುತ್ತದೆ. ಎಚ್ಚೆತ್ತು ನೋಡುವ ವೇಳೆಗೆ ಉಳಿದಿರುವುದು ಅಲ್ಪ. ಕಳೆದ ದಿನಗಳಲ್ಲಿ ಏನನ್ನೂ ಗಳಿಸಲಿಲ್ಲ. ಕೊಡದ ತೂತನ್ನೂ ಮುಚ್ಚುವಂತಿಲ್ಲ; ಓಡಿ ಹೋಗುವ ದಿನಗಳನ್ನೂ ತಡೆಯಲಾಗುವುದಿಲ್ಲ, ಇಂತಿರುವ ಜೀವನದಲ್ಲಿ ದಾನಧರ್ಮಾದಿಗಳನ್ನು ಮಾಡಿ ಪುಣ್ಯವನ್ನು ಗಳಿಸಿಕೊಳ್ಳಬೇಕೆಂಬುದು ತಾತ್ಪರ್ಯ.

'ಬಡವರ ಪಾಡು' ಕವನದ 'ಮುತ್ತಿಟ್ಟು ಮುಖನೋಡಿ ದುಃಖಿಪರು ದಿನ ಬೆಳಗು ಏನೇ ಬರಲಿ ನಾ ದುಡಿವ ತನಕ ನೀನೋದು ಮಗನೆ' ಮಾತುಗಳು ತಮ್ಮ ಮಕ್ಕಳ ಓದಿನ ಬಗ್ಗೆ ಬಡವರ ಹೃದಯದ ತುಡಿತ, ಕೊರಗುಗಳನ್ನೂ; 'ಶ್ರೀ ಚಂದ್ರಶೇಖರನಾಥರು' ಕವನದ 'ಓ ಆದಿಚುಂಚನಗಿರಿರಾಯ ಏನಿದು ಅಚ್ಚರಿಯ ಮಾಯಾ ಬಂಡೆ ಬಂಡೆಯು ಕೂಗುತಿದೆ ಓಂ ನಮಃ ಶಿವಾಯ। ಭಕ್ತನಾಥರ ತರುವಾಯ ಚಂದ್ರಶೇಖರರಾಯ ಕ್ಷಣದಲ್ಲೇ ಗಿರಿ ಬೆಳಗಿ ಹೋದರೆಲ್ಲಿ ಮಾಯಾ' ಮತ್ತು 'ಇನ್ನಿಲ್ಲವಾಯಿಥೇ ಗಿರಿಜನರಿಗೆ ಆ ನಿಮ್ಮ ವಾಣಿ। ವರುಷ ಉರುಳದ ಮುನ್ನಾ। ಜನದ ಹರುಷ ತೀರದ ಮುನ್ನಾ॥ ತೊರೆದಿರೆ ಗಿರಿಮಕ್ಕಳನ್ನಾ' ಈ ಮಾತುಗಳು ಶ್ರೀ ಚಂದ್ರಶೇಖರನಾಥರ ಅಗಲಿಕೆಯ ಅಳಲನ್ನು ಮನಮುಟ್ಟಿಸುವಂತಿದೆ.

ಆನಂದ

ಆನಂದಾ ಆನಂದ ಸರ್ವರು ಪಡೆಯಿರಿ ಆನಂದ
ಜೀವನ್ಮುಕ್ತಿಯೇ ಆನಂದ ಶಾಶ್ವತ ಸುಖವೇ ಆನಂದ
ದುಃಖದ ಶತ್ರುವೇ ಆನಂದ ಬಂಧನ ಇಲ್ಲದ ಆನಂದ ||ಪ||

ಅಭಿವಂದನಾ

ಸಕಲ ಜೀವರೊಳು ಸಮತ್ವಕಾಣುತ ಪ್ರೇಮಿಸಿ
ಬಾಳುವುದಾನಂದ। ವಿಷಯ ಸುಖವನು ವರ್ಜಿಸಿ
ಮನದೊಳು ಬಾಳುವುದದುವೆ ಆನಂದ ||೧||

ಆಧ್ಯಾತ್ಮ ವಿದ್ಯೆಯ ನೋಡುತ ಜನರು ಆತ್ಮವ
ತಮ್ಮೊಳು ತಿಳಿದಿಹರೆಂಬುದೆ ಆನಂದ, ಶಾಶ್ವತ
ಸುಖದಾ ಶಾಂತಿಯ ಪಥದೊಳು ಸಾಗುತ ತನ್ನೊ
ಳು ಆತ್ಮನ ಕೂಡೆ ಕ್ರೀಡಿಪನೆಂಬುದೆ ಆನಂದ ||೨||

ಮಿಥ್ಯವಾಗಿಹ ಮಾಯೆಯ ಮರ್ಮವ ಗುರು
ಮುಖದಿಂದಲಿ ತಿಳಿಯುತಲಿ ಶಾಸ್ತ್ರವು ಸಾರು
ವ ಸತ್ಯಬ್ರಹ್ಮನೊಳು ಶಾಶ್ವತ ಸುಖವನು
ಪಡೆಯುವುದದುವೆ ಆನಂದ ||೩||

ಈ ಕವನದಲ್ಲಿ ಚಿತ್ರಿಸಿರುವುದು ಲೋಕಸಾಧಾರಣ ಆನಂದವನ್ನಲ್ಲ. ರೂಪರಸಾದಿಗಳಿಂದ ದೊರೆಯುವುದು ಕ್ಷಣಿಕವಾದ ಆನಂದ ಅಥವಾ ಭ್ರಾಂತಿ ರೂಪವಾದ ಆನಂದ. ಹಗ್ಗದಲ್ಲಿ ಹಾವಿನ ಭ್ರಾಂತಿಯಂತೆ ದುಃಖದಲ್ಲಿ ಸುಖದ ಭ್ರಾಂತಿ ಬರುತ್ತದೆ. ವಿಷಯ ಸುಖಗಳು ಅಂತಿಮವಾಗಿ ದುಃಖದಲ್ಲಿ ಪರ್ಯವಸಾನಗೊಳ್ಳುತ್ತವೆ. ತನ್ನ ಹಲ್ಲುಗಳ ಮೂಲದಿಂದಲೇ ಒಸರುವ ರಕ್ತವನ್ನು ಚೀಪುತ್ತಿದ್ದೇನೆಂಬುದನರಿಯದೆ ಶುನಕವು ಸವಿಯುತ್ತಿದ್ದೇನೆಂದು ಶುಷ್ಕ ಅಸ್ಥಿಯನ್ನು ಗಂಟೆಗಟ್ಟಲೆ ಜಗಿಯುತ್ತದೆ. ಶಾಸ್ತ್ರಕಾರರು ಪರಬ್ರಹ್ಮನನ್ನು ಸತ್, ಚಿತ್, ಆನಂದ ಸ್ವರೂಪನೆಂದು ವರ್ಣಿಸುತ್ತಾರೆ. ಪರಮಾನಂದವೇ ಬ್ರಹ್ಮವೆಂದು ಉಪನಿಷತ್ತುಗಳಲ್ಲಿ ಹೇಳಲಾಗಿದೆ. ಪರಬ್ರಹ್ಮಾನಂದ ಸ್ವರೂಪ ನಿರ್ವಚನವು ಈ ಕವನದ ಗುರಿ. ಜೀವನ್ಮುಕ್ತಿ, ಸಮತ್ವ ಮುಂತಾದ ಅನೇಕ ಶಬ್ದಗಳನ್ನು ವೇದಾಂತ ಬಲ್ಲವರು ಅರ್ಥಮಾಡಿಕೊಳ್ಳಬಲ್ಲರು. ದೇಹಧಾರಿಯಾಗಿದ್ದೂ ಸ್ವಸ್ವರೂಪಜ್ಞಾನವನ್ನು ಪಡೆದು ಬ್ರಹ್ಮಾನಂದದಲ್ಲಿ ಲೀನವಾಗುವುದೇ ಜೀವನ್ಮುಕ್ತಿ. 'ಬಂಧನ ಇಲ್ಲದ ಆನಂದ'— ಸತಿ, ಸುತ, ಮನೆ, ಮಂದಿರ, ಆಸ್ತಿ ಮುಂತಾದುವುಗಳ ಸಂಬಂಧ ಅಥವಾ ಬಂಧನದಿಂದ ದೊರೆಯುವುದು ಅಶಾಶ್ವತವಾದ ಲೌಕಿಕಾನಂದ. ಇಂತಹ ಯಾವ ಬಂಧನವೂ ಬ್ರಹ್ಮಾನಂದಕ್ಕಿಲ್ಲ. ಸುಖ-ದುಃಖ, ಜಯ-ಅಪಜಯ, ಲಾಭ-ನಷ್ಟ, ಜನನ-ಮರಣ, ನಾನು-ನೀನು ಮುಂತಾದ ಎಲ್ಲ ದ್ವಂದ್ವಗಳನ್ನು ಸಮಭಾವದಿಂದ ಕಾಣುವುದೇ ಸಮತ್ವ.'ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತ ಸ್ಪೃಹಃ' ಇದೇ ಸಮದೃಷ್ಟಿಯುಳ್ಳವನ ರೀತಿ. 'ಸಮತ್ವಂ ಯೋಗ ಉಚ್ಯತೇ' ಭಗವದ್ಗೀತೆಯಲ್ಲಿ ಸಮತ್ವವನ್ನು ಯೋಗವೆಂದು ಕರೆಯಲಾಗಿದೆ. ಸಕಲ ಮಾನವರಲ್ಲಿ ಸಮತ್ವವನ್ನು ಕಾಣುವುದೇ ವಿಶ್ವಮಾನವ ತತ್ತ್ವ. 'ಆತ್ಮನೊಡನೆ ಕ್ರೀಡಿಪುದು'— ಕ್ರೀಡೆಗಳಲ್ಲಿ ಎಲ್ಲರಿಗೂ ಬಹಳ ಆಸಕ್ತಿಯಿರುತ್ತದೆ.

ಆದರೆ ಆಧ್ಯಾತ್ಮ ಸಾಧಕರ ಕ್ರೀಡೆಯೇ ಬೇರೆ; ಕ್ರೀಡಿಸುವ ಮೈದಾನವೂ ಬೇರೆ. ಆರಾಮ ಶಬ್ದಕ್ಕೆ ಉಪವನವೆಂಬರ್ಥವೂ ಇದೆ. ಇಲ್ಲಿ ಆತ್ಮವೇ ಉಪವನ. ಸಾಧಕರು ಈ ಉಪವನದಲ್ಲಿ ಕ್ರೀಡಿಸುತ್ತಾರೆ. ಆತ್ಮಾರಾಮ ಶಬ್ದಕ್ಕೆ ಆತ್ಮನಲ್ಲಿ ಅಥವಾ ಆತ್ಮನೊಡನೆ ಕ್ರೀಡಿಸುವವರೆಂಬ ಅರ್ಥವೂ ಉಂಟು. ಒಬ್ಬ ಕವಿಯು ಯೋಗಿಗಳನ್ನು 'ಆತ್ಮಾರಾಮಾ ವಿಹಿತರತಯೋ ನಿರ್ವಿಕಲ್ಪೇ ಸಮಾಧೌ' ಎಂದು ವರ್ಣಿಸಿದ್ದಾನೆ. ಈ ಕವನದಲ್ಲಿ ಯೋಗಿಗಳ ಸಾಧನೆಯ ಎತ್ತರವನ್ನು ಚಿತ್ತರಿಸಲಾಗಿದೆ.

'ಮಗ ಬಂದ ಮನೆಗೆ' ಕವನದ—

ಬುದ್ಧಿಯ ರೂಪನು ಸಿದ್ಧಿಪ್ರದಾತನು
ಆನಂದಮಯನವ ಅಖಿಲಾಂಡರೂಪನು
ವೇದದ ಮೂಲನು ಓಂಕಾರರೂಪನು
ಒಲುಮೆಯಿಂ ಕರೆಯಲು ಓಡೋಡಿ ಬರುವನು

ಈ ಮಾತುಗಳು ಗಣೇಶನನ್ನೂ

'ಸದ್ಗುರುವರ್ಣನೆ' ಕವನದ

ನಾನು ನೀನೆಂಬ ಭೇದವ ನೇಮದಿ ನೀಗಿಸಿ
ನೀನೇ ನಾನೆಂಬುವ ನಿಶ್ಚಯ ತೋರಿಸಿ ನಿತ್ಯನ
ಮಾಡಿದ ಸತ್ಯ ಶ್ರೀ ಗುರುವಿಗೆ ನಮೋನಮಃ

ಈ ಮಾತುಗಳು ಸದ್ಗುರುವನ್ನೂ ಸುಂದರವಾಗಿ ಬಣ್ಣಿಸುತ್ತವೆ.

ಶ್ರೇಷ್ಠ ಕಾವಿಯನ್ನುಟ್ಟು
ನೀಳ ಜಡೆಯನು ಬಿಟ್ಟು
ಭಿಕ್ಷಾ ಪಾತ್ರೆಯ ಹಿಡಿದು
ನಡೆದಾರು ಯೋಗೀ ತಾ ಮನೆಮನೆಗೆ

ಈ ಕವನದ ಮೊದಲನೆಯ ಮೂರು ಪಾದಗಳಲ್ಲಿ ಕ್ರಮವಾಗಿ ಮೂರು-ನಾಲ್ಕು-ಮೂರು ಮಾತ್ರೆಗಳ ಗಣಗಳಿವೆ. ನಾಲ್ಕನೆಯ ಯೋಗವೆಂದರೆ ಜೀವಾತ್ಮ ಪರಮಾತ್ಮ ಸಂಬಂಧ. ಕರ್ಮಬಂಧನದಿಂದ ಉಪಾಧಿಪ್ರಾಪ್ತಿ; ಉಪಾಧಿ ನಿಮಿತ್ತವಾಗಿ ಜೀವಾತ್ಮ ಪರಮಾತ್ಮ ಭೇದ. ಭಗವದ್ಗೀತೆಯಲ್ಲಿ ಮತ್ತೊಂದು ಕಡೆ—

ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ।
ಶುನಿಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ॥

ಎಂದು ಹೇಳಲಾಗಿದೆ. ಈ ಶ್ಲೋಕಕ್ಕೆ ಬ್ರಾಹ್ಮಣ, ಗೋವು, ಆನೆ, ನಾಯಿ,

ಶ್ವಪಚರನ್ನು ಸಮಾನವಾಗಿ ಕಾಣಬೇಕೆಂದರ್ಥವಲ್ಲ. ಹಸುವನ್ನು ಬಿಟ್ಟು ನಾಯಿಯಿಂದ ಯಾರೂ ಹಾಲನ್ನು ಕರೆಯುವುದಿಲ್ಲ. ಗಾತ್ರ, ಸ್ವಭಾವ, ಆಹಾರಾದಿಗಳಲ್ಲಿ ಆನೆ ನಾಯಿಗಳು ಸಮವಲ್ಲ. ಹಾಗಾದರೆ ಇಲ್ಲಿ ಸಮ ಶಬ್ದದ ಅರ್ಥವೇನು? ಸಮದ ಭಾವ ಸಮತ್ವ; ಸಮತ್ವವೆಂದರೆ ಕ್ಷಯವೃದ್ಧ್ಯಾದಿ ರಹಿತತ್ವ. ಕ್ಷಯವೃದ್ಧಿ ರಹಿತನಾದ ಸಮನೆಂದರೆ ಭಗವಂತನೊಬ್ಬನೆ. ಉಳಿದ ಜೀವಿಗಳೆಲ್ಲಾ ಕ್ಷಯವೃದ್ಧ್ಯಾದಿ ವಿಕಾರಗಳಿಂದ ಕೂಡಿದ ವಿಷಮರು. 'ಸಮಂಪಶ್ಯಂತಿ ಇತಿ ಸಮದರ್ಶಿನಃ' ಆಧ್ಯಾತ್ಮ ಜ್ಞಾನಿಗಳು ಈ ಸಮನನ್ನು ಕಾಣಬಲ್ಲರು. ಸಕಲ ಜೀವಕೋಟಿಯಲ್ಲಿಯೂ ಸಮ-ಭಗವಂತನಿದ್ದಾನೆಂಬುದು ಈ ಶ್ಲೋಕದ ತಾತ್ಪರ್ಯ. ಈ ಜ್ಞಾನ ಪಡೆದವನಲ್ಲಿ ಯಾವ ವಿಧವಾದ ಉಚ್ಚ ನೀಚ ಭಾವವಾಗಲೀ, ಭೇದ ಬುದ್ಧಿಯಾಗಲೀ ಇರುವುದಿಲ್ಲ. ಪಾದದಲ್ಲಿ ಐದು ಮಾತ್ರೆಗಳ ಮೂರು ಗಣಗಳಿವೆ. ಮೊದಲನೆಯ ಎರಡು ಪಾದಗಳ ಅಂತ್ಯದಲ್ಲಿ ಪ್ರಾಸವಿದೆ. ಧಾಟಿ ಮತ್ತು ಓಟಗಳು ರಮ್ಯವಾಗಿವೆ. ಈ ಕವನದಲ್ಲಿ ಉತ್ತಮ ಯೋಗಿಯ ಲಕ್ಷಣವನ್ನು ನಿರೂಪಿಸಲಾಗಿದೆ. ಬರವಣಿಗೆಯಿಂದ ಬರಹಗಾರನ ಇಷ್ಟಾನಿಷ್ಟಗಳನ್ನು ಅರ್ಥಮಾಡಿಕೊಳ್ಳಬಹುದು. ಮಹಾಸ್ವಾಮಿಗಳವರು ಈ ಪದ್ಯವನ್ನು ಸಂನ್ಯಾಸಾಶ್ರಮ ಸ್ವೀಕಾರಕ್ಕೆ ಮೊದಲು ಬರೆದುದು.

ಪೂಜ್ಯ ಶ್ರೀ ಶ್ರೀಗಳವರು ತಮ್ಮ ಪೂರ್ವಾಶ್ರಮದಲ್ಲಿ ೧೯೬೧ ರಿಂದ ೧೯೬೪ರೊಳಗೆ ರಚಿಸಿದ ಕೆಲವು ಕವನಗಳು ದೊರೆತಿವೆ. ಅವುಗಳಲ್ಲಿ ಮೂರು ಕವನಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಅವರು ಟಿಪ್ಪಣಿ ಪುಸ್ತಕವೊಂದರಲ್ಲಿ ಉತ್ತಮ ಹಸುವಿನ ಲಕ್ಷಣ ಮತ್ತು ಕೆಲವು ರೋಗಗಳ ಚಿಕಿತ್ಸೆಗೆ ಬಳಸುತ್ತಿದ್ದ ಗಿಡಮೂಲಿಕೆಗಳ ವಿಷಯವನ್ನು ಸಂಗ್ರಹಿಸಿದ್ದಾರೆ. ಮತ್ತೊಂದು ಟಿಪ್ಪಣಿ ಪುಸ್ತಕದಲ್ಲಿ ಗುರು ಗೀತೆಯನ್ನು ಪೂರ್ಣವಾಗಿ ಬರೆದುಕೊಂಡು ಪ್ರತಿ ಶ್ಲೋಕಕ್ಕೂ ಕನ್ನಡ ಸರಳಾನುವಾದವನ್ನೂ ಬರೆದಿದ್ದಾರೆ. ಅವರು ಬರೆದಿದ್ದ ಅನೇಕ ಕವನಗಳು ಮತ್ತು ಕಥೆಗಳು ಉಪಲಬ್ಧವಿಲ್ಲ.

ಪರಮಪೂಜ್ಯ ಶ್ರೀಗಳವರು ಪೀಠಾಧಿಕಾರಿಗಳಾದ ಮೇಲೆ ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತರಾದ ವಿದ್ವಾಂಸರಿಗೆ ಶ್ರೀಮಠದಲ್ಲಿ ಆಶ್ರಯ ನೀಡಿ, ತಮ್ಮ ಆಸಕ್ತಿಗೆ ಪೂರಕವಾಗಿ ಸಾಹಿತ್ಯ ಸಂವರ್ಧನೆಯ ಕಾರ್ಯವನ್ನು ಮುಂದುವರಿಸಿದರು. ಶ್ರೀ ಮಠದ ವತಿಯಿಂದ ನಡೆಯುವ ಸಭೆ, ಸಮಾರಂಭಗಳಲ್ಲಿ ಹಿರಿಯ ಸಾಹಿತಿಗಳನ್ನು, ವಿದ್ವಾಂಸರನ್ನು ಸನ್ಮಾನಿಸುವುದು, ಲೇಖಕರ ಉತ್ತಮ ಕೃತಿಗಳನ್ನು ತಮ್ಮ ಗ್ರಂಥಮಾಲೆಯ ವತಿಯಿಂದ ಪ್ರಕಟಿಸುವುದು, ಲೇಖಕರನ್ನು ಪ್ರೋತ್ಸಾಹಿಸುವುದಕ್ಕಾಗಿ ಅವರ ಪುಸ್ತಕಗಳನ್ನು ಕೊಂಡು ಗ್ರಂಥಾಲಯದಲ್ಲಿ ಸಂಗ್ರಹಿಸುವುದು, ಶ್ರೇಷ್ಠ ಕೃತಿಗಳ ಪ್ರಕಟಣೆಗೆ ಧನಸಹಾಯ ಮಾಡುವುದು ಇವೇ ಮುಂತಾದ ಪ್ರೋತ್ಸಾಹದಾಯಕ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ಶ್ರೀಗಳವರ ಜೀವನ ಪರಿಚಯವನ್ನೊಳಗೊಂಡಂತೆ ಶ್ರೀನಿವಾಸಮೂರ್ತಿಯವರು ಬರೆದ 'ದಿವ್ಯ ಜೀವನ' ಎಂಬ ಸಂಕ್ಷಿಪ್ತ ಕೃತಿಯು ಪೂಜ್ಯಶ್ರೀಗಳ ಪಟ್ಟಾಭಿಷೇಕೋತ್ಸವದ ದಿನದಂದು ಪ್ರಕಟಗೊಂಡಿತು. ನಂತರ ಇದೇ ಲೇಖಕರ''ಆದಿಚುಂಚನಗಿರಿ ಮಹಾಕ್ಷೇತ್ರ'' ಪುಸ್ತಕ ಪ್ರಕಟಗೊಂಡಿತು. ಪ್ರೊ|| ಸಿ.ಜಿ. ಪುರುಷೋತ್ತಮ್ ಅವರು ಶ್ರೀ ಕ್ಷೇತ್ರದ

ಗುರುದೇವತಾ ಸಂಬಂಧವಾದ ಸುಪ್ರಭಾತ ಸ್ತೋತ್ರ, ಕಂಠ್ಯಮಂತ್ರಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ. ಇದೇ ಲೇಖಕರು ಶ್ರೀಗಳವರ ಆಣತಿ ಮೇರೆಗೆ ಅಮೆರಿಕದ ಪಶ್ಚಿಮ ಕಾಶಿ ಎಂದೇ ಪ್ರಸಿದ್ಧವಾದ ವಿಶ್ವನಾಥ ಮತ್ತು ವಿಶಾಲಾಕ್ಷಿ ದೇವತೆಗಳ ಬಗ್ಗೆ (ಫ್ಲಿಂಟ್) ಸುಪ್ರಭಾತ ಸ್ತೋತ್ರವನ್ನು ರಚಿಸಿದ್ದಾರೆ.

ಶ್ರೀ ಕ್ಷೇತ್ರದ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಸಂಬಂಧವಾದ ವಿಚಾರಗಳನ್ನು ಭಕ್ತಾದಿಗಳಿಗೆ ಮುಟ್ಟಿಸಲು ೧೯೮೪ರಲ್ಲಿ ಆದಿಚುಂಚನಗಿರಿ ಎಂಬ ಒಂದು ತ್ರೈಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಲಾಯಿತು. ಡಾ॥ಹೋ. ಶ್ರೀನಿವಾಸಯ್ಯನವರು ಈ ಪತ್ರಿಕೆಯ ಆರಂಭ ಪ್ರಕಾಶಕರೂ, ಸಂಪಾದಕರೂ ಆಗಿದ್ದರು. ಭಕ್ತಸ್ತೋಮ ಈ ಸಂಚಿಕೆಯನ್ನು ಆದರಿಸಿತು. ಶ್ರೀ ಕ್ಷೇತ್ರದ ವಿವಿಧ ಕಾರ್ಯಚಟುವಟಿಕೆ ವಿಚಾರ ಸರಣಿ ವೃದ್ಧಿಸತೊಡಗಿತು. ವಿಚಾರ ವಾಹಿನಿಯಾಗಿ ತ್ರೈಮಾಸಿಕ ಪತ್ರಿಕೆ ಸಾಲದಾಯಿತು. ಆಗ ೧೯೮೯ರಲ್ಲಿ ಇದನ್ನು ಮಾಸ ಪತ್ರಿಕೆಯನ್ನಾಗಿ ಪರಿವರ್ತಿಸಲಾಯಿತು. ೧೯೮೬ರಲ್ಲಿ ಈ ಪತ್ರಿಕೆಯ ಸಂಪಾದಕತ್ವವನ್ನು ಪ್ರೊ॥ಹೆಚ್.ಕೆ. ಸಿದ್ದಗಂಗಯ್ಯನವರಿಗೆ ವಹಿಸಲಾಯಿತು. ಪ್ರಧಾನವಾಗಿ ಈ ಪತ್ರಿಕೆಯಲ್ಲಿ ನಾಡಿನ ಹೆಸರಾಂತ ಲೇಖಕರು ಬರೆಯುವ ಆಧ್ಯಾತ್ಮ, ಧಾರ್ಮಿಕ, ಸಾಂಸ್ಕೃತಿಕ, ವೈಚಾರಿಕ, ಆರೋಗ್ಯ, ಮನೆ ವೈದ್ಯ, ಮುಂತಾದ ಲೇಖನಗಳನ್ನು ಪ್ರಕಟಿಸುವುದರ ಜೊತೆಗೆ ಶ್ರೀ ಕ್ಷೇತ್ರ ವಾರ್ತೆಗಳು ಶ್ರೀಗಳವರ ಆಶೀರ್ವಾಣಿ, ಶ್ರೀಗಳವರ ಪ್ರವಾಸ ವಿವರ, ಅವರು ವಿವಿಧ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ಮಾಡುವ ಆಶೀರ್ವಚನಗಳು, ಅಮರವಾಣಿ ಮುಂತಾದ ಪ್ರಮುಖ ವಿಚಾರಗಳನ್ನು ಪ್ರಕಟಿಸಲಾಗುತ್ತಿದೆ. ಪ್ರತಿವರ್ಷವೂ ಓದುಗರ ಸಂಖ್ಯೆ ಹೆಚ್ಚುತ್ತಿದ್ದು. ಈ ಪತ್ರಿಕೆಯು ವಿಚಾರವಂತರ ಮುಕ್ತ ಪ್ರಶಂಸೆಗೆ ಪಾತ್ರವಾಗಿದೆ.

ಪ್ರೊ॥ ಹೆಚ್.ಕೆ. ಸಿದ್ದಗಂಗಯ್ಯನವರು ಈ ಪತ್ರಿಕೆಯ ಸಂಪಾದಕತ್ವವನ್ನು ದಕ್ಷತೆಯಿಂದ ನಿರ್ವಹಿಸುವುದರ ಜೊತೆಗೆ ಶ್ರೀಕ್ಷೇತ್ರ ಮತ್ತು ಶ್ರೀಗಳವರ ಸಾಧನೆಗಳನ್ನು ಕುರಿತಂತೆ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಸಂಸ್ಕೃತಿ ಕೇಂದ್ರ', 'ಜೀವನದರ್ಶನ' ಪ್ರಮುಖವಾದುವು. ಇವಲ್ಲದೆ 'ಮಾನವ ವಿಕಾಸ', 'ಅಂತರಗಂಗೆ', 'ಹಿಂದೂ ಧರ್ಮದಲ್ಲಿ ಮಾನವ ಸೇವೆ', 'ಅಭಿವಂದನಾ' ಮುಂತಾದುವು ಸಂಪಾದನಾ ಗ್ರಂಥಗಳಲ್ಲಿ ಪ್ರಮುಖವಾದವು.

ಪ್ರೊ॥ ಹೆಚ್.ಹೆಚ್. ಅಣ್ಣಯ್ಯಗೌಡರು 'Devine Light ಮತ್ತು Devine Power from Adichunchanagiri' ಎಂಬ ಕೃತಿಗಳ ರಚಿಸಿದ್ದಾರೆ.

ಸಾಹಿತಿ ದಂಪತಿಗಳಾದ ಶ್ರೀ ದೊಡ್ಡರಂಗೇಗೌಡ ಮತ್ತು ಶ್ರೀಮತಿ ರಾಜೇಶ್ವರಿಗೌಡ ಅವರು'ಆದಿಚುಂಚನಗಿರಿಯ ಅಭಿನವ ವಿವೇಕಾನಂದ' ಎಂಬ ಕೃತಿಯನ್ನು ರಚಿಸಿರುವವರಲ್ಲದೆ 'ಜ್ಞಾನಬಾಗಿನ' ಎಂಬ ಗ್ರಂಥವನ್ನು ಸಂಪಾದಿಸಿದ್ದಾರೆ. ಶ್ರೀ ಗೌಡಯ್ಯನವರು ''ಗುರುವಂದನಾ'' ಎಂಬ ಕೃತಿಯನ್ನು ರಚಿಸಿದ್ದಾರೆ. ಇಷ್ಟಕ್ಕೇ ನಿಲ್ಲದೆ ಸಾಹಿತ್ಯ ಸೇವೆ ನಿರಂತರವಾಗಿ ಸಾಗುತ್ತಲೇ ಇದೆ.

ಪ್ರವಾಸ

ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಪೀಠಾಧ್ಯಕ್ಷರಾದ ಮೇಲೆ ಸೇವಾಕ್ಷೇತ್ರ ದೊಡ್ಡದಾಯಿತು. ಶ್ರೀಗಳವರು ಸೇವೆಯನ್ನೇ ಪೂಜೆ ಎಂದು ಭಾವಿಸಿದರು. ದೀನರ, ದಲಿತರ, ದುರ್ಬಲರ, ದರಿದ್ರಜ ಸೇವೆಗೆ ತಮ್ಮನ್ನೇ ತೊಡಗಿಸಿಕೊಂಡರು. ಜನರ ಮೌಢ್ಯತೆಯನ್ನು ಹೋಗಲಾಡಿಸಲು ಶಿಕ್ಷಣವೇ ದಿವ್ಯೌಷಧಿಯೆಂದು ತಿಳಿದರು. ಇದಕ್ಕಾಗಿ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿಯೆ ಹೆಚ್ಚಾಗಿ ಶಿಕ್ಷಣ ಸಂಸ್ಥೆಗಳನ್ನು ತೆರೆದರು. ರಾಜ್ಯಾದ್ಯಂತ ಹಳ್ಳಿ, ಪಟ್ಟಣ, ನಗರ ಪ್ರದೇಶಗಳಲ್ಲೆಲ್ಲಾ ಸಂಚಾರ ಮಾಡಿ ಜನತೆಗೆ ಉಪದೇಶ ನೀಡಿದರು. ಧಾರ್ಮಿಕ ಸಮ್ಮೇಳನಗಳಲ್ಲಿ ಪಾಲ್ಗೊಂಡು ಧರ್ಮ ಕಹಳೆಯನ್ನು ಮೊಳಗಿಸಿದರು. ಶ್ರೀಗಳವರ ಧರ್ಮೋಪದೇಶ ಎಲ್ಲೆಡೆ ಪ್ರತಿಧ್ವನಿಗೊಂಡಿತು.

ಶ್ರೀ ಶ್ರೀಗಳವರು ತಮಿಳುನಾಡು, ಆಂಧ್ರಪ್ರದೇಶ ಮೊದಲಾದ ರಾಜ್ಯಗಳಲ್ಲಿಯೂ ಸಂಚಾರ ಮಾಡಿ ಜನತೆಯನ್ನುದ್ದೇಶಿಸಿ ಜಾತಿ, ಕುಲ ಗೋತ್ರಗಳ ಗೊಂದಲದಿಂದ ದೂರವಿರುವಂತೆಯೂ, ಎಲ್ಲರೂ ಐಕ್ಯತೆಯಿಂದ ಸೋದರಭಾವದಿಂದ ಬಾಳಬೇಕೆಂದೂ ಉಪದೇಶ ನೀಡಿದರು.

ಶ್ರೀಗಳವರು ಆಸೇತು ಹಿಮಾಚಲ ಪರ್ಯಂತ ರಾಷ್ಟ್ರದೆಲ್ಲೆಡೆ ಮಾಡಿ, ಇಷ್ಟಕ್ಕೆ ತಮ್ಮ ಪ್ರವಾಸವನ್ನು ಸೀಮಿತಗೊಳಿಸಿಕೊಳ್ಳದೆ, ಭಕ್ತರ ಕರೆಯನ್ನು ಅಂಗೀಕರಿಸಿ ವಿದೇಶಗಳಲ್ಲಿಯೂ ಪ್ರವಾಸ ಕೈಗೊಂಡು ಧರ್ಮೋಪದೇಶ ಮಾಡಿದ್ದಾರೆ. ತಾಯಿನಾಡಿನಿಂದ ಬಹಳ ಕಾಲ ವಿದೇಶದಲ್ಲಿರುವ ಭಾರತೀಯರು ಪಾಶ್ಚಾತ್ಯ ಸಂಸ್ಕೃತಿಯ ಪ್ರವಾಹದಲ್ಲಿ ಕೊಚ್ಚಿ ಹೋಗಿ ಸ್ವಧರ್ಮವನ್ನು ಕಳೆದುಕೊಳ್ಳದಂತೆ ಅವರಿಗೆ ಎಚ್ಚರಿಕೆ ನೀಡುವ ಅಗತ್ಯವಿದೆಯೆಂದು ಭಾವಿಸಿದ ಪರಮಪೂಜ್ಯಸ್ವಾಮಿಗಳವರು ಮಲಯ, ಸಿಂಗಪುರ, ಜಪಾನ್, ಜರ್ಮನಿ, ಇಂಗ್ಲೆಂಡ್, ಅಮೆರಿಕ ಹಾಗೂ ಕೆನಡಾ ದೇಶಗಳಲ್ಲಿ ಸಂಚಾರ ಕೈಗೊಂಡು ಭಾರತೀಯ ಸನಾತನ ಧರ್ಮ ಮತ್ತು ಸಂಸ್ಕೃತಿಗಳ ಮಹತ್ತ್ವವನ್ನು ಪ್ರತಿಪಾದಿಸಿದರು. ವಿದೇಶಗಳಲ್ಲಿರುವ ಭಾರತೀಯರು ತಮ್ಮ ಧರ್ಮ, ಸಂಸ್ಕೃತಿ, ಆಚಾರವಿಚಾರಗಳನ್ನು ಮರೆಯದೆ ಅವುಗಳನ್ನು ನಿತ್ಯಜೀವನದಲ್ಲಿ ಅನುಷ್ಠಾನಕ್ಕೆ ತಂದುಕೊಳ್ಳಬೇಕೆಂದು ಕರೆ ನೀಡಿದರು. ಅಮೆರಿಕಾದ ಚಿಕಾಗೋ ನಗರದಲ್ಲಿ ನಡೆದ ಸ್ವಾಮಿ ವಿವೇಕಾನಂದರ ವಿಶ್ವಧರ್ಮಸಮ್ಮೇಳನ ಶತಮಾನೋತ್ಸವ ಸಮಾರಂಭದಲ್ಲಿ, ಅಲ್ಲಿನವರ ಕರೆಯಂತೆ ಭಾಗವಹಿಸಿ ಹಿಂದೂಧರ್ಮದ ಮಹತ್ವವನ್ನು ಕುರಿತು ಅತ್ಯಂತ ಪರಿಣಾಮಕಾರಿಯಾದ ಉಪನ್ಯಾಸ ನೀಡಿದರು.

ಹೀಗೆ ಶ್ರೀಗಳವರು ಅಖಂಡ ವಿಶ್ವದಲ್ಲಿಯೆ ಧಾರ್ಮಿಕ ಜಾಗೃತಿಯನ್ನು ಮೂಡಿಸಿದ್ದಾರೆ.

***

ವಿಭೂತಿ ಪ್ರಭಾ

ಶ್ರೀಮಠದಲ್ಲಿ ನನ್ನ ಅನುಭವ

ಶ್ರೀ ಪುರುಷೋತ್ತಮಾನಂದನಾಥ ಸ್ವಾಮಿಗಳು

ಜಗತ್ತಿನಲ್ಲಿ ೮೪ ಲಕ್ಷ ಜೀವರಾಶಿಗಳಿವೆಯೆಂದು ಧರ್ಮ ಶಾಸ್ತ್ರಗಳು ತಿಳಿಸುತ್ತವೆ. ಅವುಗಳಲ್ಲಿ ಮಾನವ ಜನ್ಮ ಬಿಟ್ಟು ಇತರ ಜೀವರಾಶಿಗಳು ಕೇವಲ ಬದುಕುವುದು ವಂಶಾಭಿವೃದ್ಧಿ ಮಾಡುವುದು, ಅಂತ್ಯದಲ್ಲಿ ಕಾಲಚಕ್ರಕ್ಕೆ ಸಿಲುಕುವುದು ಆಗಿರುತ್ತದೆ. ಆದರೆ ಮಾನವ ಜನ್ಮವು ಆ ರೀತಿ ಆಗಿರದೆ ಬೆಳವಣಿಗೆ ಆದಂತೆ ಬಗೆಬಗೆಯ ಚಟುವಟಿಕೆಗಳು, ನಾನಾ ಭಾಷೆಯ ಮೂಲಕ ಚಿತ್ರವಿಚಿತ್ರ ವ್ಯವಹಾರಗಳು, ತಮ್ಮ ತಮ್ಮ ನಡೆವಳಿಕೆಗಳಿಂದ ಸುಖ ದುಃಖಾದಿಗಳು, ಜಗತ್ತಿನ ಎಲ್ಲವನ್ನು ಸಹ ತನ್ನ ಹತೋಟಿಯಲ್ಲಿಡಲು ಪ್ರಯತ್ನಗಳು, ಆಸೆಗೆ ತಕ್ಕಂತೆ ಮನುಷ್ಯ ಮನುಷ್ಯರಲ್ಲಿಯೇ ಹೋರಾಟಗಳು, ಕೂಡಿದ್ದಾಗಿರುತ್ತದೆ. ತನ್ನಂತೆ ಇತರರನ್ನು ಕಂಡರೆ ಸುಖ; ಇಲ್ಲದಿದ್ದರೆ ದುಃಖ; ಇತರರಿಗೆ ಸಹಾಯ ಮಾಡಿದರೆ ಶಾಂತಿ; ಇಲ್ಲದಿದ್ದರೆ ಅಶಾಂತಿ; ಜೀವನದ ಜನನ ಮರಣಗಳನ್ನು ಅರಿತು, ತನಗೆ ಸಹಾಯ ಮಾಡಿದವನ ಬಗ್ಗೆ ಅರಿತು, ಸುಗುಣಿಯಾಗುವನು, ಇಲ್ಲದಿದ್ದರೆ ದುರ್ಗುಣಿಯಾಗುವನು. ಹೀಗೆ ಅರಿತವನು ಮಾನವ, ಅರಿಯದಿದ್ದರೆ ವಾನರನಾಗುವನು.

ಪ್ರಪಂಚದಲ್ಲೇ ಭಾರತ ದೇಶ ಅತ್ಯಂತ ಪುಣ್ಯಭೂಮಿ. ಕಾರಣ ಇಲ್ಲಿ ಇರುವಷ್ಟು ಪುಣ್ಯಕ್ಷೇತ್ರಗಳು, ದೇವಾಲಯಗಳು, ಬೇರೆಲ್ಲಿಯೂ ಇಲ್ಲ. ಈ ದೇಶದಲ್ಲಿ ಜನಿಸಿದಷ್ಟು ಸಾಧು ಸಂತರು ಋಷಿಗಳು ಯಾವುದೇ ದೇಶದಲ್ಲಿ ಜನಿಸಿಲ್ಲ. ಆದ್ದರಿಂದಲೇ ಪುಣ್ಯಭೂಮಿ ಎಂಬ ಹೆಸರು ಯಾವುದೇ ದೇಶಕ್ಕೆ ಇಲ್ಲ.

ಭಾರತ ದೇಶದಲ್ಲಿ ಅತಿ ಪುರಾತನ ಕಾಲದಿಂದಲೂ ಧಾರ್ಮಿಕವಾದ ಅಂದರೆ ತನ್ನ ಜನ್ಮಕ್ಕೆ ಕಾರಣನಾದ ಭಗವಂತನನ್ನು ಅರಸುವ, ತಿಳಿಯುವ ಬಗ್ಗೆ ಎಲ್ಲಾ ಮಾನವರು ಒಂದಲ್ಲ ಒಂದು ರೀತಿ ಪ್ರಯತ್ನಿಸಿ ಅಮರರಾಗಿರುತ್ತಾರೆ. ಇವರನ್ನು ಜ್ಞಾನಿಗಳು, ಸಂತರು, ಸಾಧುಗಳು ಮುಂತಾದ ಹೆಸರುಗಳಿಂದ ಕರೆದಿರುತ್ತಾರೆ.

ಇವರು ತಮ್ಮ ಅನುಭವಗಳನ್ನು ಇತರರಿಗೆ ತಿಳಿಸುವುದು, ಬೋಧಿಸುವುದು ಕ್ರಮೇಣ ಈ ಧರ್ಮ ಬೋಧನೆಗಳನ್ನು ಬರವಣಿಗೆಗಳಲ್ಲಿ ಮಾಡಿರುತ್ತಾರೆ. ಎಲ್ಲಾ ದೇವಾಲಯಗಳು, ಮಠಗಳು, ಆಶ್ರಮಗಳು ಸ್ಥಾಪನೆ ಆಗಿ ಜೀವನದಲ್ಲಿ ನೀರಸವಾದ ಜನತೆಗೆ ಧರ್ಮ ಪ್ರಸಾರದ ಮೂಲಕ ಶಾಂತಿ ನೆಮ್ಮದಿ, ನೀಡುವ ಕೇಂದ್ರಗಳಾದವು. ಅಂತಹ ಧಾರ್ಮಿಕ ಕೇಂದ್ರಗಳಲ್ಲಿ ಶ್ರೀ ಆದಿಚುಂಚನಗಿರಿ ಕ್ಷೇತ್ರವೂ ಒಂದು.

ಅಭಿವಂದನಾ

ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ೧೯೨೮ ರಿಂದಲೂ ಮಾನವಕಲ್ಯಾಣದ ಪರ ಅನೇಕ ಶೈಕ್ಷಣಿಕ ಹಾಗೂ ಧಾರ್ಮಿಕ ಕಾರ್ಯಗಳು ಆರಂಭಗೊಂಡವು. ಇವುಗಳ ವೇಗ ಅತಿ ಕಡಮೆ. ೧೯೭೪ ನೇ ಸೆಪ್ಟೆಂಬರ್ ೨೫ ರಂದು ಅತಿ ಮಹತ್ವದ ದಿನ. ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಶ್ರೀ ಕ್ಷೇತ್ರದ ಅಧಿಕಾರ ವಹಿಸಿಕೊಂಡ ನಂತರ ಅಭಿವೃದ್ಧಿ ಕಾರ್ಯಗಳು ಪವಾಡಸದೃಶವಾಗಿ ನಡೆಯುತ್ತಲಿವೆ.

ನಾನು ಬಾಲ್ಯದಿಂದಲೂ ದೈವಿಕ ಹಾಗೂ ಧಾರ್ಮಿಕ ಬಾವನೆಯಿಂದ ಇದ್ದುದರಿಂದಲೋ ಏನೋ ಭಗವಂತನು ನನಗೆ ಕೈಲಾಸ ಆಶ್ರಮದ ದಾರಿ ತೋರಿದ. ಅಲ್ಲಿಯೂ ಪರಮಪೂಜ್ಯ ಶ್ರೀ ಶ್ರೀ ಶ್ರೀ ತಿರುಚ್ಚಿ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಸೇವೆ ಸಲ್ಲಿಸುವ ಕಾಯಕವನ್ನು ನೀಡಿದ. ಶ್ರೀಗಳವರು ದಯೆ, ಕರುಣೆ, ಶಿಸ್ತುಜೀವನ ಬ್ರಹ್ಮಚರ್ಯಪಾಲನೆ ಧಾರ್ಮಿಕಭಾವನೆ, ಸಮಾಜ ಸೇವೆ ಧರ್ಮಶಾಸ್ತ್ರಗಳ ವಿಚಾರ ಮುಂತಾದವುಗಳಿಂದ ಕೂಡಿದವರಾಗಿದ್ದರು.

ಅಲ್ಲಿಗೆ ಪೂಜ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಸಂಸ್ಕೃತ ಅಭ್ಯಾಸಕ್ಕಾಗಿ ಬಂದರು. ಸುಮಾರು ೫ ವರ್ಷಗಳ ಕಾಲ ಶಾಸ್ತ್ರಾಧ್ಯಯನ ಮಾಡುವ ಸಂದರ್ಭದಲ್ಲಿ ಶ್ರೀ ಸ್ವಾಮಿಗಳಲ್ಲಿದ್ದ ಕರುಣೆ, ಪ್ರೀತಿ, ಸೇವಾ ಮನೋಭಾವನೆ, ಧರ್ಮನಿಷ್ಠೆ, ಮುಂತಾದ ಸದ್ಗುಣಗಳಿಂದ ಪ್ರಭಾವಿತನಾದೆ. ಶ್ರೀಗಳವರ ೧೯೭೪ ರಲ್ಲಿನ ಪಟ್ಟಾಭಿಷೇಕ ಕಾರ್ಯಕ್ರಮಕ್ಕೆ ಬಂದೆನು. ಅಂದಿನಿಂದ ಶ್ರೀ ಕ್ಷೇತ್ರದಲ್ಲಿ ಸೇವಾವೃತಿಯಾಗಿರುವೆನು.

ಶ್ರೀ ಕ್ಷೇತ್ರದಲ್ಲಿ ಕಳೆದ ೨೧ ವರ್ಷಗಳಿಂದಲೂ ನಾನು ನೆರಳಿನಂತೆ ಅಲ್ಪ ಸೇವೆ ಸಲ್ಲಿಸಿಕೊಂಡಿರುತ್ತೇನೆ. ನನ್ನ ಅನುಭವದಲ್ಲಿ ಶ್ರೀ ಶ್ರೀಗಳವರ ಗುಣಗಳು ದೈವ ಕೊಡುಗೆಯಾದವು. ಮಕ್ಕಳೇ ನಮ್ಮ ಮುಂದಿನ ಆಸ್ತಿ, ಅವರ ಪ್ರಗತಿಯೇ ಎಲ್ಲರ ಪ್ರಗತಿ. ಅವರಿಗೆ ವಿದ್ಯೆ, ಬುದ್ಧಿ, ಪೋಷಣೆ, ತೀರ ಅಗತ್ಯವಾದವು. ಈ ಮಕ್ಕಳೇ ಮುಂದಿನ ಪ್ರಜೆಗಳು. ಅವರಿಗೆ ಯೋಗ್ಯ ತರಬೇತಿ ಇಲ್ಲವಾದಲ್ಲಿ ಅವರು ಪಶುಗಳಾಗಬಹುದು, ದೇಶದ ಶತ್ರುಗಳೂ ಆಗಬಹುದು. ಪೂಜ್ಯರು ಅನಾಥ ಮಕ್ಕಳಿಗೆ ಅನಾಥಾಲಯ, ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ, ಶ್ರೀ ಕ್ಷೇತ್ರದ ಜೊತೆಗೆ ಚುಂಚನಕಟ್ಟೆಯಲ್ಲಿ ಅನಾಥಾಲಯಗಳಲ್ಲದೆ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳನ್ನು ಅನೇಕ ಕಡೆ ಸ್ಥಾಪಿಸಿ ಈ ಮಕ್ಕಳಿಗೆ ಆಶ್ರಯದಾತರಾಗಿರುತ್ತಾರೆ.

ಒಮ್ಮೆ ಶ್ರೀಗಳು ಶ್ರೀ ಕ್ಷೇತ್ರದಲ್ಲಿರುವಾಗ ಓರ್ವ ಸ್ತ್ರೀ ಹಾಸನದಿಂದ ತನ್ನ ಮಕ್ಕಳ ಜೊತೆಗೂಡಿ ಬಂದು ತನ್ನ ನೋವಿನ ಕಥೆಯನ್ನು ತಿಳಿಸಿದಳು. ಮಹಿಳೆಯರ ಬಗ್ಗೆ ಅನೇಕ ಇಂತಹ ನೋವಿನ ಘಟನೆಗಳನ್ನು ಕೇಳಿ ನೊಂದಿದ್ದ ಪೂಜ್ಯರು ಕೆಲವೇ

ದಿನಗಳಲ್ಲಿ ಮೈಸೂರು ನಗರದಲ್ಲಿ ಒಂದು ಸೇವಾ ಸಂಸ್ಥೆಯನ್ನು ಸ್ಥಾಪಿಸಿ ಮಹಿಳಾ ಸೇವಾ ಸಂಸ್ಥೆಯೆಂದು ಹೆಸರಿಸಿದರು. ಇಲ್ಲಿ ಅಬಲೆಯರು, ಕಷ್ಟದಲ್ಲಿರುವ ಮಹಿಳೆಯರು ಹಾಗೂ ನೊಂದ ಮಾತೆಯರ ಸೇವೆಗೆ ನೆರವು ಮಾಡಿದರು. ಮುಂದೆ ವರದಕ್ಷಿಣೆ ಮತ್ತು ದುಬಾರಿ ವೆಚ್ಚದ ಮದುವೆ, ನಿರುದ್ಯೋಗ, ಮೊದಲಾದ ಕಾರಣಗಳಿಂದ ಕಷ್ಟದಲ್ಲಿರುವ ಹೆಣ್ಣು ಮಕ್ಕಳಿಗೆ ಉದ್ಯೋಗ ಮತ್ತು ಆಶ್ರಯಕ್ಕಾಗಿ ಬೆಂಗಳೂರಿನಲ್ಲಿ ಔದ್ಯೋಗಿಕ ತರಬೇತಿ . ಶಾಲೆಯನ್ನು ಸ್ಥಾಪಿಸಿದರು.

ಶ್ರೀ ಕ್ಷೇತ್ರಕ್ಕೆ ಪ್ರತಿದಿನ ವಯಸ್ಸಾದವರು, ಗಂಡಸರೂ ಹಾಗೂ ಹೆಂಗಸರೂ, ಕುಟುಂಬದ ಜಗಳಗಳಿಂದ ಬೇಸತ್ತು ಶ್ರೀಕ್ಷೇತ್ರದಲ್ಲಿಯೇ ಇರುತ್ತೇವೆಂದು ಬರುತ್ತಿರುತ್ತಾರೆ. ಇದನ್ನು ಅರಿತ ಶ್ರೀ ಸ್ವಾಮಿಗಳವರು ಶ್ರೀ ಕ್ಷೇತ್ರದ ಗೋರಕ್ಷಣಾ ಕುಟೀರದಲ್ಲಿ ಇಂತಹವರಿಗೆ ಆಶ್ರಯ ವ್ಯವಸ್ಥೆ ಮಾಡಿಸಿದರು. ಕೆಲವು ದಿನಗಳು ಇವರುಗಳು ಇದ್ದು ಮನಸ್ಸು ಸಮಾಧಾನವಾದಾಗ ಅಥವಾ ಅವರ ಕುಟುಂಬದವರು ಬಂದು ಸಮಾಧಾನ ಪಡಿಸಿ ಕರೆದುಕೊಂಡು ಹೋಗುವರು. ಒಂದು ಪಕ್ಷ ಈ ರೀತಿ ತಾತ್ಕಾಲಿಕವಾದ ವ್ಯವಸ್ಥೆ ಇಲ್ಲದಿದ್ದಲ್ಲಿ ಆತ್ಮಹತ್ಯೆ ಅಥವಾ ಬೇರೆ ಅನಾಹುತಗಳಾಗುತ್ತಿತ್ತು.

ಭಾರತ ದೇಶದಲ್ಲಿ ಕರ್ನಾಟಕ ಬಹು ಶಾಂತ ಹಾಗೂ ಧಾರ್ಮಿಕ ಸಂಸ್ಕೃತಿಯುಳ್ಳ ರಾಜ್ಯ. ಬಹುಶಃ ಈ ರಾಜ್ಯದಲ್ಲಿರುವಷ್ಟು ಮಠಗಳು, ಆಶ್ರಮಗಳು, ಯಾವುದೇ ರಾಜ್ಯದಲ್ಲಿ ಇಲ್ಲ. ಹಿಂದೂ ಧರ್ಮದ ಅದ್ವೈತ ಪೀಠದ ಕೇಂದ್ರ ಶೃಂಗೇರಿ, ದ್ವೈತ ಪೀಠಗಳ ಕೇಂದ್ರ ಉಡುಪಿ, ವಿಶಿಷ್ಠಾಧ್ವೈತ ಪೀಠ ಕೇಂದ್ರ ಮೇಲುಕೋಟೆ, ಶಕ್ತಿ ವಿಶಿಷ್ಠಾದ್ವೈತದ ವೀರಶೈವ ಸಂಪ್ರದಾಯದ ಬಹಳಷ್ಟು ಮಠಗಳು ರಾಜ್ಯದಲ್ಲಿ ಇವೆ. ಹಾಗಾಗಿ ಈ ಧಾರ್ಮಿಕ ಕೇಂದ್ರಗಳ ಸೇನಾನಿಗಳು ಸಾಧುಗಳು. ಈ ಸಾಧುಗಳಿಗೆ ರಕ್ಷಣೆ, ತರಬೇತಿ ಮತ್ತು ವಿದ್ಯಾಭ್ಯಾಸ ಬಹುಮುಖ್ಯ. ಇದಕ್ಕಾಗಿಯೇ ಶ್ರೀಕ್ಷೇತ್ರದ ಸಂಸ್ಕೃತ ಕಾಲೇಜಿನಲ್ಲಿ ಅದ್ವೈತ, ವೇದಾಂತ, ತರ್ಕ, ವ್ಯಾಕರಣ, ವೇದ, ಶೈವಾಗಮ, ಮೊದಲಾದ ವಿದ್ವತ್ ತರಗತಿಗಳನ್ನು ಆರಂಭಿಸಿ ಸಾಧುಗಳಿಗೆ ಉಚಿತ ಊಟ, ವಸತಿ, ಪಾಠ ಪ್ರವಚನಗಳನ್ನು ವ್ಯವಸ್ಥೆ ಮಾಡಿರುತ್ತಾರೆ. ಯಾವುದೇ ಜಾತಿ ಮತ ಭಾಷೆ, ಭೇದವಿಲ್ಲದೆ ಶಿಕ್ಷಣ ಕೊಟ್ಟು ಹಿಂದುಳಿದಿರುವ ಮಠ ಮತ್ತು ಆಶ್ರಮಗಳಿಗೆ ಆರ್ಥಿಕ ಸಹಾಯ ನೀಡಿ ಸಮಾಜದಲ್ಲಿ ಸರಿ ಸಮಾನವಾಗಿ ನಿಲ್ಲಲು ಅನುಕೂಲ ಮಾಡಿರುತ್ತಾರೆ. ಇತ್ತೀಚೆಗೆ ತೀರ ಬಡ ಹಾಗೂ ಅನಾಥ ಮಕ್ಕಳಿಗೆ ಪ್ರಾಥಮಿಕ ಹಂತದಿಂದಲೇ ಸಂಸ್ಕೃತ ಶಿಕ್ಷಣ ನೀಡಿ ಉತ್ತೇಜಿಸಲಾಗುತ್ತಿದೆ. ಈ ರೀತಿ ಕಲಿತ ಮಕ್ಕಳು ರಾಜ್ಯದ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಶ್ರೀಮಠಕ್ಕೆ ಒಳ್ಳೆಯ ಹೆಸರು ತಂದಿರುತ್ತಾರೆ.

ಇಂದಿನ ಸಮಾಜದಲ್ಲಿ ಹಿಂದುಳಿದ ಮತ್ತು · ಶೋಷಿತ ವರ್ಗದ ಜನತೆಗೆ ಸರ್ಕಾರ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಶ್ರೀಮಠದಲ್ಲಿನ

ಭಕ್ತಾದಿಗಳ ಪೈಕಿ ಈ ವರ್ಗದವರೂ ಸಾಕಷ್ಟು ಇದ್ದಾರೆ. ಪೂಜ್ಯರು ಈ ವರ್ಗದ ಮಕ್ಕಳಿಗೆ ಎಷ್ಟೇ ಜನರಿದ್ದರೂ ಯಾರಿಗೂ ಸೀಟು ಇಲ್ಲಾ ಎನ್ನಬಾರದೆಂದು ಅನಾಥಾಲಯ ಮತ್ತು ವಿದ್ಯಾರ್ಥಿನಿಲಯಗಳಲ್ಲಿ ಎಲ್ಲರಿಗೂ ಅವಕಾಶ ನೀಡಲು ವ್ಯವಸ್ಥೆ ಮಾಡಿರುತ್ತಾರೆ. ಈ ಜನತೆಗೆ ಒಂದೊಂದು ಮಠ ಸ್ಥಾಪಿಸಿ ಅಲ್ಲಿನ ಸ್ವಾಮಿಗಳಿಗೆ ಪ್ರೋತ್ಸಾಹ ನೀಡಿ ಅವರಿಗೂ ಎಲ್ಲಾ ಸಹಾಯವನ್ನು ನೀಡುವುದರ ಜೊತೆಗೆ ಸರ್ಕಾರದಿಂದಲೂ ಸಹಾಯ ನೀಡುವಂತೆ ವ್ಯವಸ್ಥೆ ಮಾಡಿರುತ್ತಾರೆ.

ನಮ್ಮ ದೇಶದಲ್ಲಿ ಜಾತಿ ಪದ್ಧತಿ ಆದಿಯಿಂದಲೂ ಇರುವಂತಹದು. ಅವರ ಜೀವನಮಟ್ಟ ಸಮಾಜದಲ್ಲಿ ಸರಿಸಮಾನವಾಗಿ ಬೆಳೆಯಲು ಸರ್ವರೀತಿಯಲ್ಲೂ ಸಹಾಯ ನೀಡಿ ಸಮಾನವಾಗಿ ಶ್ರೀಶ್ರೀಗಳವರು ಅವರನ್ನು ಕಾಣುತ್ತಾರೆ. ಸಹಾಯ ಮಾಡುವುದರಲ್ಲಿ ಯಾವುದೇ ಜಾತಿ ಮತ ಭಾಷೆಗಳ ಭೇದ ಮಾಡದಿರುವುದೇ ಶ್ರೀಶ್ರೀಶ್ರೀಗಳವರ ವಿಶೇಷತೆ ಆಗಿದೆ.

ಗ್ರಾಮೀಣ ಯುವಕರುಗಳಿಗೆ ಅದರಲ್ಲೂ ಕಡಮೆ ಅಂಕ ಪಡೆದಿರುವವರಿಗೆ ಉನ್ನತ ಶಿಕ್ಷಣ ಪ್ರವೇಶಕ್ಕೆ ಕಷ್ಟವಾಗಿತ್ತು. ಈ ಯುವ ಸಮಾಜಕ್ಕೆ ಈ ಅವಕಾಶ ಹೆಚ್ಚು ಸಿಗಲು ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳನ್ನು ಸ್ಥಾಪಿಸಿ ಶಿಕ್ಷಣ ದೊರೆಯುವಂತೆ ಮಾಡಿದರು.

ಈಚೆಗೆ ಎಲ್ಲರಿಗೂ ತಾಲ್ಲೂಕು, ಜಿಲ್ಲಾಮಟ್ಟದಲ್ಲಿ ಪದವಿ ಮಟ್ಟದಲ್ಲಿ ಶಿಕ್ಷಣ ದೊರೆತರೂ ನಾಗರಿಕ ಮಾನವನಾಗಿ ಬಾಳುವ ಮತ್ತು ಸಮಾಜದಲ್ಲಿ ಸಿಗುವ ಅವಕಾಶಗಳನ್ನು ತಿಳಿಯದೆ ವಂಚಿತನಾಗಿರುವುದು ಶ್ರೀ ಶ್ರೀ ಶ್ರೀ ಗಳವರ ಮನಸ್ಸಿಗೆ ಬಂದಿತು. ಇದರ ಸಾಧನೆಗಾಗಿ ಜನಜಾಗೃತಿ ಶಿಬಿರಗಳನ್ನು ಯುವಕರಿಗೆ ಮತ್ತು ಯುವತಿಯರಿಗೆ ಪ್ರತ್ಯೇಕವಾಗಿ ಏರ್ಪಡಿಸಿ, ಉಚಿತ ಊಟ ವಸತಿಯಲ್ಲದೆ ಅಗತ್ಯ ಇರುವ ಪುಸ್ತಕಗಳನ್ನು ಒದಗಿಸಿ, ಧರ್ಮದ ಬಗ್ಗೆ ಜಾಗೃತಿ, ವೈದ್ಯ, ಜ್ಯೋತಿಷ್ಯ, ಯೋಗಾಸನ, ಪ್ರಾರ್ಥನೆ ಮುಂತಾದವುಗಳ ಬಗ್ಗೆ ಸೂಕ್ತ ತರಬೇತಿ ನೀಡುವುದೇ ಈ ಶಿಬಿರಗಳ ಉದ್ದೇಶ. ಕಳೆದ ೫ ವರ್ಷಗಳಿಂದ ಬೇಸಿಗೆಯಲ್ಲಿ ಸಮಾಜದ ಎಲ್ಲಾ ವರ್ಗದ ಯುವ ಪೀಳಿಗೆಗೆ ಈ ತರಬೇತಿ ನೀಡಲಾಗುತ್ತಿದೆ. ಇದರಿಂದ ರಾಷ್ಟ್ರದ ಅಭಿವೃದ್ಧಿಗೆ ಶ್ರೀ ಶ್ರೀಗಳವರ ಕಾಳಜಿ ಎಷ್ಟಿದೆ ಎಂಬುದು ತಿಳಿಯಬಹುದು.

ಸಮಾಜದಲ್ಲಿ ನಮ್ಮ ಹಿಂದಿನ ಸಂಸ್ಕೃತಿ ವರ್ಧನೆಗಾಗಿ ಗ್ರಾಮೀಣ ಪ್ರದೇಶದ ಜಾನಪದ ಕಲಾವಿದರಿಗೆ ಪ್ರೋತ್ಸಾಹ, ನಾಟಕಗಳಿಗೆ ಪ್ರೋತ್ಸಾಹ, ನಾಡು ನುಡಿಗೆ ಪ್ರೋತ್ಸಾಹ, ಸಮ್ಮೇಳನಗಳಲ್ಲಿ ಭಾಗವಹಿಸುವುದು ಮತ್ತು ಅಗತ್ಯ ಇರುವ ಕಡೆ

ಪ್ರೋತ್ಸಾಹ ನೀಡುವುದು ಸ್ತುತ್ಯರ್ಹ.

ಸಮಾಜದಲ್ಲಿ ಅಂಗವಿಕಲರಿಗೆ, ಅಂಧರಿಗೆ, ಅನುಕೂಲವಾಗಿ ರಾಮನಗರದಲ್ಲಿ ಈ ಮಕ್ಕಳ ಅಭಿವೃದ್ಧಿಗಾಗಿಯೇ ಎಲ್ಲಾ ಅನುಕೂಲವಿರುವ ಉತ್ತಮ ಉಚಿತ ವಸತಿ ಸಹಿತ ವಿದ್ಯಾಲಯ ಸ್ಥಾಪನೆ ಆದರ್ಶವಾಗಿದೆ.

ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆಯಂತೆ ನಮ್ಮ ಶ್ರೀ ಶ್ರೀ ಶ್ರೀ ಸ್ವಾಮೀಜಿಯವರು ಸಮಾಜದ ದುಃಖ ದುಮ್ಮಾನಗಳನ್ನು ದೂರ ಮಾಡಲು ಹಮ್ಮಿಕೊಳ್ಳದ ಯೋಜನೆಗಳೇ ಇಲ್ಲವೆಂದು ಹತ್ತಿರದಿಂದ ಕಂಡ ಯಾರು ಬೇಕಾದರೂ ಹೇಳಬಹುದು.

ನಾಡಿನಲ್ಲಿ ಎಲ್ಲೆಲ್ಲೂ ಪುರಾತನ ದೇವಾಲಯಗಳಿದ್ದರೂ ಅವು ಜೀರ್ಣವಾಗಿ ಅರ್ಚಕರ ಸೌಲಭ್ಯವಿಲ್ಲದೆ ಸರಿಯಾಗಿ ಸೇವಾಕಾರ್ಯ ಮಾಡದೆ ಇರುವುದನ್ನು ಗಮನಿಸಿ ಆಯಾಯ ಪ್ರದೇಶದ ಭಕ್ತಾದಿಗಳನ್ನು ಸೇರಿಸಿ ಅಗತ್ಯ ಇರುವ ಸಲಹೆ ಸಹಾಯಗಳನ್ನು ನೀಡಿ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿ ಪೂಜಾ ಕಾರ್ಯಗಳು ನಿಲ್ಲದಂತೆ ಸೂಕ್ತ ವ್ಯವಸ್ಥೆ ಮಾಡಿಸಿ ಧಾರ್ಮಿಕ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಈ ರೀತಿ ಪೂಜ್ಯರ ಸೇವೆ ಸಾರ್ಥಕ್ಯ ಪಡೆದಿದೆ. ಗುರುಕೃಪೆಯಿಂದ ಜಗತ್ತಿನ ಸಮಸ್ತವೂ ಭೂಸ್ವರ್ಗವಾಗುವಂತೆ, ಜೀವನವು ಸಾರ್ಥಕವಾಗುವಂತೆ ಪರಮಪವಿತ್ರವಾದ ಜ್ಞಾನವು ಎಲ್ಲಾ ಜೀವರಾಶಿಗಳಿಗೆ ಲಭಿಸುವಂತೆ ಆಗಲೆಂದು ಪ್ರಾರ್ಥಿಸುತ್ತೇನೆ.

***

ಅಭಿವಂದನಾ

ನಾ ಕಂಡ ಜಗದ್ಗುರುಗಳು

-ಶ್ರೀ ಶಿವಲಿಂಗಾನಂದಸ್ವಾಮಿಗಳು

ನಾಮರೂಪಾತ್ಮಕವಾದ ಈ ಪ್ರಪಂಚದಲ್ಲಿ ಮನುಷ್ಯನು ಅಚ್ಚಳಿಯದ ನಿತ್ಯ ನಿಚ್ಚಳವಾದ ಸುಖವನ್ನು ಆಳವಾಗಿ ಅನುಭವಿಸಬೇಕೆಂಬ ಹಂಬಲದಿಂದ ಕೂಡಿರುತ್ತಾನೆ. ಆದರೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿಗಳಲ್ಲಿ ವ್ಯಕ್ತಿ ಸುಖ-ಸಂತೋಷವನ್ನು ಅರಸುತ್ತಾನೆ. ಅವನಿಗೆ ಇದರಲ್ಲಿ ಸುಖಕ್ಕಿಂತ ಉಪದ್ರವಗಳೇ ಹೆಚ್ಚು ಕಂಡು ಬಂದಿವೆ. ಹಾಗಾದರೆ ಸಾರಸುಖದ ಹಾದಿಯನ್ನು ತೋರುವ ಮಾರ್ಗದರ್ಶಕನಾರು ಎಂದು ಬಹು ಕೌತುಕದಿಂದ ಕೂಡಿದ ನನಗೆ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಶ್ರೀಗಳು ದೊರೆತರು. '**ಸ್ವಯಂ ತೀರ್ಣಃ ಪರಾನ್ ತಾರಯತಿ**'- ತಾನು ಸಾಗರದ ಆಳವನ್ನು ನೋಡಿ ಅದರ ಲಾಘನವನ್ನು ತಿಳಿದವನು ಬೇರೊಬ್ಬನನ್ನು ಜಲಸಾಗರದಿಂದ ದಾಂಟಿಸುವನು ಎಂಬ ಮಧುಸೂದನ ಸರಸ್ವತಿಯವರು ಹೇಳಿದ್ದಾರೆ. ಈ ಜಗತ್ತಿನಲ್ಲಿ ಮೂರು ಸಾಗರಗಳಿವೆ:- ಒಂದು ಜಲಸಾಗರ, ಎರಡನೆಯದು ಜನ ಸಾಗರ, ಮೂರನೆಯದು ಭವಸಾಗರ. ಜಲಸಾಗರ, ಜನಸಾಗರ ಇವೆರಡನ್ನು ನಾವಿಕಾದಿ ಚತುರೋಪಾಯಗಳಿಂದ ದಾಟಬಹುದು. ಆದರೆ ಭವಸಾಗರವನ್ನು ದಾಟುವುದು. ಯೋಗ್ಯ ಸದ್ಗುರುನಾಥನಿಂದ ಮಾತ್ರ ಸಾಧ್ಯವು. ಅಂತಹ ಶ್ರೋತ್ರಿಯ ಬ್ರಹ್ಮನಿಷ್ಠ ಜಗದ್ಗುರುಗಳು ಇಂದಿನ ಕಾಲಮಾನಗಳಲ್ಲಿ ದೊರೆಯುವುದು ದುರ್ಲಭವೂ, ದುಸ್ಸಾಧ್ಯವೂ ಆಗಿದೆ. ಪೂರ್ವಪುಣ್ಯದ ಫಲವಾಗಿ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು ನನಗೆ ದೊರೆತರು. ನಾನು ಬೆಂಗಳೂರಿಗೆ ಸಂಸ್ಕೃತ ಸಾಹಿತ್ಯ ಅಭ್ಯಾಸ ಮಾಡಲು ಬಂದೆ. ಶ್ರೀ ಸದ್ಗುರು ಸಿದ್ಧಾರೂಢಾಶ್ರಮ ದೊರೆಯಿತು. ಅಭ್ಯಾಸ ನಡೆಸಲು ಸರಿಯಾದ ವ್ಯವಸ್ಥೆ ಆಗಲಿಲ್ಲ. ಅದೇ ಸಂದರ್ಭಕ್ಕೆ ಪೂಜ್ಯರು ಅಲ್ಲಿನ ಕಲ್ಯಾಣಮಂಟಪದ ಉದ್ಘಾಟನೆಗೆಂದು ಬಂದಿದ್ದರು. ಶ್ರೀಗಳವರನ್ನು ನೋಡುವ ಭಾಗ್ಯ ನನ್ನದಾಯಿತು. ಶ್ರೀ ವಿದ್ಯಾನಂದ ಸ್ವಾಮಿಗಳು, ಮಳವಳ್ಳಿ, ಇವರ ಸಹಾಯದಿಂದ ಮುಂದೆ ಶ್ರೀಗಳು ನನಗೆ ತಮ್ಮ ಸಾನ್ನಿಧ್ಯದಲ್ಲಿ ಆಶ್ರಯವನ್ನಿತ್ತರು. ನನ್ನ ಅಭ್ಯಾಸವೂ ಸಾಗಿತು. ಶ್ರೀಗಳವರು ಹೆಚ್ಚಾಗಿ ಶ್ರೀ ಆದಿಚುಂಚನಗಿರಿ ಕ್ಷೇತ್ರದಿಂ ಬೆಂಗಳೂರಿಗೆ ಭಕ್ತರನ್ನು ಆಶೀರ್ವದಿಸಲು ಬರುತ್ತಿದ್ದರು. '**ಭರ್ಗೋ ಸಾಕ್ಷಾತ್ ನರಾಕೃತಿಃ**' (ಭಗವಂತನೇ) ದೇವನೇ ನೇರವಾಗಿ ಮನುಷ್ಯಾಕೃತಿಯನ್ನು ಪಡೆದು ಈ ಧರೆಯ ನರರನ್ನುದ್ಧರಿಸಲು ಭೂಮಿಗೆ ಬರುತ್ತಾನೆ ಎಂಬ ಋಷಿ ನುಡಿಯಂತೆ ಶ್ರೀ ಜಗದ್ಗುರುಗಳು ಬಂದಿರುವರು. ''**ಸಾಧು ಸದಾಶಿವನಾಗಿ ಜಗತ್ತ ಬೋಧಿಸಿ ತನ್ನಯ ಪದನೀವುತ್ತಾ**'' ಎಂಬುದು ಶ್ರೀಮನ್ನಿಜಗುಣ ಶಿವಯೋಗಿಗಳ ಅಮೃತೋಪದೇಶದಂತೆ ಸಾಧು ಸಂನ್ಯಾಸಿಗಳ ರೂಪದಿಂದ ಜೀವಿಗಳ ಮುಮುಕ್ಷು ಜನಗಳ ಕಲ್ಯಾಣಕ್ಕೋಸ್ಕರ ಗಂಗಾಧರನೇ ಜ್ಞಾನ ಗಂಗೆಯನ್ನು ತಲೆಯಲ್ಲಿ ಹೊತ್ತು, ಕೈಯಲ್ಲಿ ಇಂದ್ರಿಯ ನಿಗ್ರಹವೆಂಬುವ

ದಂಡವನ್ನು ಹಿಡಿದು, ಮಾಯೆ ಎಂಬುವ ಮನವನ್ನು ತನ್ನಧೀನದಲ್ಲಿರಿಸಿಕೊಂಡು ಸಮತೆಯೆಂಬುವ ಕಂತೆಯನ್ನುಟ್ಟು, ಕಾಮಾದಿ ಆರು ದುರ್ಗುಣಗಳನ್ನು ಸುಟ್ಟು, ಭಸಿತವೆಂಬುವ ಬೂದಿಯನ್ನು ಪೂಸಿಕೊಂಡು ಬಂದಿರುವವರೇ ಜಗದ್ಗುರು ಶ್ರೀ ಶ್ರೀ ಬಾಲಗಂಗಾಧರನಾಥ ಸನ್ನಿಧಿಯವರು. ಪೂಜ್ಯರನ್ನು ನೋಡಿದಾಗ ನನಗನ್ನಿಸಿತು- ಇವರು ಸಾಮಾನ್ಯ ವ್ಯಕ್ತಿಯಲ್ಲ; ೭೦ ಜನ ಸಿದ್ಧರ ತಪಸ್ಸಿನ ಮೂರ್ತಿಯೇ ಈ ರೂಪದಿಂದ ಅವತರಿಸಿದ ಭವ್ಯ ತೇಜಸ್ವಿಯೆಂದು.

ಒಮ್ಮೆ ಶ್ರೀಗಳು ನನ್ನನ್ನು ತಿರುಪತಿಯಲ್ಲಿ ನಡೆಯುವ ವಿಶ್ವ ಹಿಂದೂ ಪರಿಷತ್ತಿನ ಕಾರ್ಯಕ್ರಮಕ್ಕೆ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ಒಂದು ಮಾತನ್ನು ಹೀಗೆ ಕೇಳಿದರು. 'ಶ್ರೀ ಮನ್ನಿಜಗುಣ ಶಿವಯೋಗಿಗಳು ಶ್ರೀ ಗುರುವಿನ ಬಗ್ಗೆ ಏನು ಹೇಳುತ್ತಾರೆ' ಎಂದು. ಆಗ ನಾನು 'ಶ್ರೀ ಗುರುವಿನ ಲಕ್ಷಣವನ್ನು ಕರುಣೆ, ಸತ್ಕಲೆ, ಶಾಸ್ತ್ರಪರಿಣತೆ, ಸೌಂದರ್ಯ, ಸುಮುಖತ್ವಾದಿ ಗುಣಗಳಿಂದ ಕೂಡಿದವನೇ ಗುರು ಎಂದು ಹೇಳುತ್ತಾರೆ' ಎಂದೆ. ಅಲ್ಲದೆ ''ಇದು ಸತ್ಯಾನುಭವ, ಇದು ಮಿಥ್ಯಾನುಭವ ಎಂದು ಒದಿವಿ ಬೋಧಿಪನೇ ಸದ್ಗುರುವಕ್ಕು, ಇಂದ್ರಿಯಗಳಿಂದ ಗೋಚರಿಸಲ್ಪಡುವುದೇ ಮಿಥ್ಯಾಸಂಭವ ಇಂದ್ರಿಯಾತೀತವಾದ ಅನುಭವವೇ ಸತ್ಯಾನುಭವ'' ಎಂದು ತಿಳಿಸಿಕೊಡುವವನೇ ಜಗದ್ಗುರುವು ಎಂದು ಹೇಳಿದೆ. ಆದರೆ ಅಪ್ಪಗಳು ಹೇಳಿದರು ಇದು ಅನುಭವಕ್ಕೆ ಬರಬೇಕಾದರೆ ಶ್ರೀ ಗುರುವಿನ ಸಂಗದಿಂದ ದೊರೆಯುತ್ತದೆ. ಆ ಗುರುವಿನ ನಡತೆಯಿಂದ, ಬೋಧನೆಯಿಂದ ಎಂದು ಹೇಳುತ್ತಾ, ತಾಯಿ ಮಗುವಿಗೆ ಹಸಿವು ಆಗಿದೆಯೇ ಇಲ್ಲವೇ ಎಂಬುದನ್ನು ಅದರ ವರ್ತನೆಯಿಂದ ತಿಳಿಯುತ್ತಾಳೆ. ಜಿಜ್ಞಾಸುವಾದ ಅಧಿಕಾರಿಯ ಯೋಗ್ಯತೆಗೆ ಅನುಸಾರವಾಗಿ ಗುರುಗಳು ಉಪದೇಶವನ್ನುಗೈಯುತ್ತಾರೆಂದು ಬಹು ಮಾರ್ಮಿಕವಾಗಿ ಅರುಹಿದರು. ಮತ್ತೊಂದು ಪ್ರಸಂಗದಲ್ಲಿ ''ನೋಡಿ! ಸಂನ್ಯಾಸಿ ಜೀವನ ಎಂಬುವುದು ಒಂದು ಮದುವೆಯಾದ ವಧುವಿನಂತೆ. ಕನ್ಯೆಯನ್ನು ಧಾರೆ ಎರೆದು ಕೊಟ್ಟ ಬಳಿಕ ತಂದೆ ತಾಯಿಗಳು ವಧುವನ್ನು ಗಂಡನ ಮನೆಗೆ ಕಳುಹಿಸಿ ಕೊಡುತ್ತಾರೆ. ಮದುವೆಯಾದ ಆ ವಧು ಗಂಡನ ಮನಗೆ ಬರುವಾಗ ತನ್ನ ತಂದೆ, ತಾಯಿ, ಅಣ್ಣ, ಅಕ್ಕ, ಊರು, ಕೇರಿ, ಸ್ನೇಹಿತೆಯರು, ಆಪ್ತರು-ಎಲ್ಲರನ್ನೂ ಬಿಟ್ಟು ಗಂಡನ ಮನೆ, ಅಲ್ಲಿಯ ಅತ್ತೆ ಮಾವನ ಸೇವೆ, ಸ್ನೇಹಿತರಲ್ಲದವರ ಪರಿಸರಕ್ಕೆ ಹೊಂದಿಕೊಂಡು ಹೇಗೆ ತನ್ನ ಜೀವಿತ ಕಾಲವನ್ನು ಪ್ರೀತಿ-ಸ್ನೇಹಗಳಿಂದ ಕಳೆಯುವಳೋ ಹಾಗೆ ತನ್ನ ಪೂರ್ವದ ಹಂಗನ್ನು ತೊರೆದು ತನ್ನ ನಿಲುವಿನಲ್ಲಿ ನಿಂತು ಇಡೀ ವಿಶ್ವವೇ ವಿಶ್ವನಾಥನ ರೂಪವೆಂದು ಅನಾಥವಾದ ಲೋಕವನ್ನು ಸನಾಥದ ಕಡೆಗೆ ತಿರುಗಿಸುವವನೇ ಸಂನ್ಯಾಸಿಯು'' ಎಂದು ಹೇಳಿದರು. ಇದನ್ನು ನೋಡಿದರೆ ಶ್ರೀಗಳಲ್ಲಿ ನಿಜ ಸಂನ್ಯಾಸಿ ಲಕ್ಷಣಗಳು ಬರುತ್ತವೆ.

ಒಮ್ಮೆ ಶ್ರೀ ಮಹಾಸನ್ನಿಧಿಯವರನ್ನು ಕುರಿತು ನಾನು ಲೋಕಬುದ್ಧಿಯನ್ನು

ಅನುಸರಿಸಿ ಹೀಗೆ ಕೇಳಿದೆ ''ಪೂಜ್ಯ ಅಪ್ಪಗಳೇ, ತಾವು ರಾಜಕೀಯದವರು ಬಂದಾಗ ಅವರ ಜೊತೆಯಲ್ಲಿ ಬೆರೆತು ಅವರಿಗೆ ಸರಿಯಾದ ಉತ್ತರ ಕೊಡುತ್ತೀರಿ. ಅಲ್ಲದೆ ಸದಾ ಪರಮಾರ್ಥ ಚಿಂತನೆಗೆ ವಿಭಿನ್ನವಾದ ಲೌಕಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕಗಳ ಚಿಂತನೆಯಲ್ಲಿಯೇ ನಿರತರಾಗಿರುತ್ತೀರಿ. ತಮಗೆ ನಿದ್ರೆ ಬರುತ್ತದೆಯೇ?'' ಎಂದು. ತಕ್ಷಣ ಉತ್ತರ ಹೀಗೆ ಶ್ರೀಮುಖದಿಂದ ಮೂಡಿ ಬಂತು-''ನೋಡಿ! ದೋಣಿ ನೀರಲ್ಲಿರಬೇಕು. ನೀರು ದೋಣಿಯ ಒಳಗೆ ನುಗ್ಗಬಾರದು. ಏಕೆಂದರೆ ದೋಣಿಗೆ ಬೆಲೆ ನೀರಲ್ಲಿದ್ದು, ನೀರಿನ ಮೇಲೆ ಸದಾ ಸಂಚರಿಸುತ್ತಿರುವಾಗ. ಆಗ ದೋಣಿಗೆ ಬೆಲೆ ಬರುತ್ತದೆ. ಆದರೆ ದೋಣಿಯೊಳಗೆ ನೀರು ಹೊಕ್ಕರೆ ದೋಣಿ ಮುಂದಕ್ಕೆ ಚಲಿಸುವ ಬದಲಿಗೆ ಒಳಕ್ಕೆ: ಪ್ರಪಾತಕ್ಕೆ ಹೋಗುತ್ತದೆ. ಹಾಗೆ ನಾವು ಪ್ರಪಂಚವನ್ನು ನಮ್ಮ ಒಳಕ್ಕೆ ತರದೇ ಅದರಲ್ಲಿದ್ದು ನಮ್ಮ ಪಾಲಿಗೆ ಬಂದ ದೇಶಸೇವೆಯೇ ಈಶಪೂಜೆಯೆಂದು ಭಾವಿಸಿ ಆರ್ಥಿಕವಾಗಿ ಹಿಂದುಳಿದ ಬಡವರ ಬದುಕು ಬಂಗಾರವಾಗಬೇಕೆಂಬ ಮಹದಾಶೆ ನಮಗಿರಬೇಕು'' ಎಂದರು. ಇದನ್ನು ಕಂಡಾಗ ನನಗೆ ಅನ್ನಿಸಿತು: ಎಂಥಾ ಲೋಕೋಪಕಾರಕ ಶಿವಾವತಾರಿ ಇವರೆಂದು. ರಾಮ, ಕೃಷ್ಣ, ಬಲಿ, ಪಾರ್ಥ ಇವರನ್ನು ಅವತಾರಿಗಳೆಂದು ಹೇಳುತ್ತಾರೆ. ಗೀತೆಯೂ ಕೂಡ '**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ**'- ದುಷ್ಟರನ್ನು ಸಂಹರಿಸಿ ಶಿಷ್ಟರನ್ನು ರಕ್ಷಿಸಿ ಧರ್ಮವನ್ನು ಕಾಪಾಡಲು ಪುನಃ ಪುನಃ ನಾನು ಮನುಷ್ಯ ರೂಪದಲ್ಲಿ ಬರುತ್ತೇನೆಂದು ಭಗವಂತನು ಹೇಳಿರುತ್ತಾನೆ. ಆದರೆ ಪೂಜ್ಯ ಶ್ರೀಗಳವರು ಹಾಗಲ್ಲ. ಅವರು ದುಷ್ಟರನ್ನು ಶಿಕ್ಷಿಸದೆ, ದುಷ್ಟಗುಣಗಳನ್ನು ದೂರವಿರಿಸಿ ವ್ಯಕ್ತಿಯನ್ನು ಸಮಾಜದ ಮಹಾನ್ ಶಕ್ತಿಯನ್ನಾಗಿಸುವ ಮಹಾದೇವನೆಂದೆನಿಸಿರುತ್ತಾರೆ.

ಒಮ್ಮೆ ನಾನು ಶ್ರೀಗಳವರ ಜೊತೆಯಲ್ಲಿ ಶಿವಮೊಗ್ಗೆಗೆ ಹೋದಾಗ ಒಬ್ಬ ಭಕ್ತ ಶ್ರೀಗಳವರ ಸಂಗಡ ವ್ಯಗ್ರ ಉಗ್ರಕೋಪಕ್ಕೆ ಸಿಕ್ಕು ಏನೇನೋ ಮಾತನಾಡಿದ. ಅದಕ್ಕೆಲ್ಲಾ ಶ್ರೀಗಳವರು ಅವರಿಗೆ ಶಾಂತವಾಗಿ ಉತ್ತರ ಕೊಟ್ಟರೂ ಕೂಡ ಶ್ರೀಗಳ ಶ್ರೀವಾಣಿಗೆ ಮಣಿಯದೆ ಮರುಗದೆ ಹೋದ. ಆದರೂ ಶ್ರೀಗಳು ಆ ವ್ಯಕ್ತಿಯನ್ನು ತಮ್ಮ ಹಿತೋಕ್ತಿಗಳಿಂದ ಸರಿದಾರಿಗೆ ತಂದರು. ಶ್ರೀಗಳವರು ಹೇಳಿದ ಉದಾಹರಣೆ ಹೀಗಿದೆ. ''ಒಂದು ಚೇಳು ಸುಳಿನೀರಿಗೆ ಬಿದ್ದು ಒದ್ದಾಡುತ್ತಿದ್ದಾಗ, ಒಬ್ಬ ವ್ಯಕ್ತಿ ಅದನ್ನು ರಕ್ಷಿಸಲೆಂದು ಕೈಯಿಂದ ಹಿಡಿದು ಹೊರಗೆ ಹಾಕಿದ. ತಕ್ಷಣವೇ ಕ್ರೂರಿ ಆದ ಚೇಳು ಅವನನ್ನು ಅರಿಯದೆ ತನ್ನ ವಿಷಬಾಲದಿಂದ ಕುಟುಕಿತು. ಆದರೆ ಆ ಚೇಳು ಪುನಃ ನೀರಿಗೆ ಬಿತ್ತು. ಇದನ್ನು ಕಂಡು ಅವನು ಪುನಃ ಚೇಳನ್ನು ಹಿಡಿದು ನೀರಿನಿಂದ ಹೊರ ತೆಗೆದ. ಪುನಃ ಕಡಿಯಿತು. ಹೀಗೆ ಸುಮಾರು ಹೊತ್ತಿನವರೆಗೆ ನಡೆಯಿತು ಈ ಕೆಲಸ. ಅಷ್ಟರಲ್ಲಿ ಒಬ್ಬ ಸಂನ್ಯಾಸಿ ಬಂದು ಕೇಳಿದ 'ಏನಯ್ಯಾ, ಇದೇನು ಮಾಡುತ್ತಿದ್ದೀಯಾ? ಇದನ್ನು ಹೊರ ತೆಗೆದು ಕುಟುಕಿಸಿಕೊಂಡು ನರಳುವುದಕ್ಕಿಂತ ಸುಮ್ಮನೆ ನಿನ್ನ ಪಾಡಿಗೆ

ಹೋಗದೆ, ಈ ಕೆಲಸವನ್ನು ಮಾಡುತ್ತಿದ್ದೀಯೆ?' ಎಂದನು. ಅದಕ್ಕೆ ಆ ಪುರುಷ ಹೇಳಿದ, 'ನಾನು ಮನುಷ್ಯನ ಕೆಲಸ(ಕರುಣೆ) ಮಾಡುತ್ತಿದ್ದೇನೆ. ಆದರೆ ಅದು ತನ್ನ ಕೆಲಸವನ್ನು ಮಾಡುತ್ತಿದೆ' ಎಂದನು.' ಈ ದೃಷ್ಟಾಂತದಿಂದ ನನಗೆ ಬಹಳ ಅರಿವಾಯ್ತು. ಎಂತಹ ಉದಾಹರಣೆಯನ್ನು ಶ್ರೀಗಳು ಕೊಟ್ಟರೆಂದು. ಶ್ರೀಗಳ ಶ್ರೀವಾಣಿಯಿಂದ ಬಾರಿ ಬಾರಿಗೆ ಬರುವ ವಾಕ್ಯ ''**ಅಯೋಗ್ಯ: ಪುರುಷೋ ನಾಸ್ತಿ ಯೋಜಕಃ ತತ್ರ ದುರ್ಲಭ**'' ಈ ಲೋಕದಲ್ಲಿ ಯಾರೂ ಅಯೋಗ್ಯರಲ್ಲ; ಎಲ್ಲರೂ ಒಳ್ಳೆಯವರೇ ಇದ್ದಾರೆ. ಆದರೆ ಅವರ ಒಳ್ಳೇತನವನ್ನು ಮನಗಂಡು ಅವರಿಗೆ ಸರಿ ಮಾರ್ಗವನ್ನು ತೋರುವ ದೇಶಿಕನು ಅತ್ಯಗತ್ಯ.

ಸಾಧು ಸಂನ್ಯಾಸಿ ಪ್ರಿಯರೂ ಹಾಗೂ ಧರ್ಮಾಸಕ್ತರೂ ಆಗಿರುವ ಶ್ರೀಗಳು ಸಾಧು ಚಕ್ರವರ್ತಿಗಳಾಗಿರುತ್ತಾರೆ. ಒಮ್ಮೆ ಶ್ರೀಗಳು ಸಂನ್ಯಾಸಿಗಳು ಹೇಗೆ ಇರಬೇಕೆಂಬುದನ್ನು ನನಗೆ ಹೀಗೆ ತಿಳಿಸಿದರು. ''**ಕೈ, ಕಚ್ಚೆ, ಬಾಯಿಗಳು ತನ್ನ ಇಚ್ಛೆಯಲ್ಲಿದ್ದರೆ ಅಚ್ಯುತನಪ್ಪ, ಅಜನಪ್ಪ, ಲೋಕದೊಳು ನಿಶ್ಚಿಂತನಪ್ಪ ಸರ್ವಜ್ಞ**'' ಎಂದು ಹೇಳಿದರು. ವಾಣಿ, ಪಾಣಿ, ಮಾಣಿಗಳು ತನ್ನ ಹತೋಟಿಯಲ್ಲಿರಬೇಕು. ಜಗದ ಜನ ನಮ್ಮತ್ತ ಸಾಗುತ್ತದೆ. ಇಲ್ಲವಾದರೆ ಮೃತ್ಯು ನಮ್ಮ ಬಳಿ ಸಾಗುತ್ತದೆಂದು ಹೇಳಿದರು. ''ಬಾಲೆಯರ ಸಿಂಗರವನೇ ಕಂಡು ಮನದೊಳಗೆ ಸೋಲದಾತನೇ ವಿರತನು, ಜಗದ ಪೂಜ್ಯತೆಯನ್ನು ಮುನ್ನೊದಗುವ ದೇವಗಣ ಪದವಿಯನು ಪಡೆವನು'' ಎಂಬುವ ಶ್ರೀ ನಿಜಗುಣದೇವರ ವಾಕ್ಯ ಸ್ಮೃತಿಪಥಕ್ಕೆ ತರುವುದರ ಮೂಲಕ ಬಂದ ಮಾತು ಇದು.

ನಮ್ಮ ಎದೆಯೊಳಗೆ ಇಟ್ಟುಕೊಳ್ಳುವ ಮಾತು ಹೀಗಿದೆ. ವೀರಾವೇಶದಿಂದ ಒಬ್ಬನೇ ರಣಾಂಗಣದಲ್ಲಿ ಹೋರಾಡಿ ವೀರನೆಂದಿನಿಸಿಕೊಳ್ಳುವುದಕ್ಕಿಂತ ತನ್ನಲ್ಲಿರುವ ಕಾಮಾದಿ ಅರಿಗಳನ್ನು ಜಯಿಸಿ ಶೂರನೆಂದೆನಿಸಿಕೊಳ್ಳುವುದೇ ಧೀರ ಶೂರತನ. ''**ವೀರತನವಾವುದು ಇಳೆಯೊಳು**?'' ಎಂಬುವ ಮಾತನ್ನು ಮುಂದುವರಿಸುತ್ತಾ 'ನಮ್ಮಲ್ಲಿರುವ ಜ್ಞಾನರತ್ನವನ್ನು ಅಪಹರಿಸುವ ಅನಿಮಿತ್ತ ವೈರಿಗಳು ಇದ್ದಾರೆ. ಅವರನ್ನು ಸದ್ವರ್ತಕರನ್ನಾಗಿ ಮಾಡಬೇಕು. ಹೇಗೆಂದರೆ ಕಾಮ ಬೇಕು ಬಡವರ ದೀನ ದಲಿತರ ಅಬಲೆಯರ ಸಮಾಜದ ಜೀವಿಗಳ ಉದ್ಧಾರಕ್ಕೆ ಕಷ್ಟ ಪರಿಹರಿಸಿ ಅಳುವ ಮನೆಯಲ್ಲಿ ಜಗದಲ್ಲಿ ತುಂಬಿ ನಕ್ಕು ನಗುವ ಸಂತೋಷವನ್ನುಂಟು ಮಾಡುವೆನೆಂಬ ಹಂಬಲಬೇಕು; ಕೋಪ ಬೇಕು- ಕೆಟ್ಟ ಗುಣಗಳನ್ನು ಬಗ್ಗ ಬಡಿವನೆಂಬ, ಲೋಭ ಬೇಕು- ಜ್ಞಾನಾರ್ಜನೆ ಮಾಡುವೆನೆಂಬ, ಮೋಹಬೇಕು- ಗುರು ದೇವರಲ್ಲಿ. ಮದಬೇಕು- ಪರಧನ ಪರಸ್ತ್ರೀ ಒಲ್ಲೆನೆಂಬ, ಮಾತ್ಸರ್ಯ ಬೇಕು- ಜಗದಲ್ಲಿ ಹಿಂದಿನವರಂತೆ ಒಳ್ಳೆಯ ಸಚ್ಚರಿತ್ರನಾಗಬೇಕು' ಎಂಬುವ ಮಾತನ್ನು ಹೇಳಿದಾಗ ನನಗೆ ಆನಂದಾಶ್ರುಗಳು ಉಕ್ಕಿ ಉಕ್ಕಿ ಹರಿದವು.

ಒಮ್ಮೆ ಅಪ್ಪಾಜಿಯವರು ಹೀಗೆ ಹೇಳಿದ್ದುಂಟು. 'ನೋಡಿ, ಜನರನ್ನು ನೆಚ್ಚಿ, ಭಕ್ತರನ್ನು ನೆಚ್ಚಿ, ಅವರೇ ನಮಗೆ ದಾರಿ; ಅವರೇ ನಮಗೆ ಸರ್ವಸ್ವ ಎಂದುಕೊಳ್ಳಬಾರದು.

ಏಕೆಂದರೆ ಸಂನ್ಯಾಸಿಗಳೆಂದರೆ ಒಂದು ಬಿಟಿಎಸ್ ಬಸ್ಸು ಇದ್ದ ಹಾಗೆ' ಎಂದರು. ಎಲ್ಲಿಯಾದರೂ ಕೆಟ್ಟು ನಿಂತರೆ ಒಳಗೆ ಇದ್ದ ಪ್ರಯಾಣಿಕರು ಕೆಳಗೆ ಇಳಿದು ಬೇರೆ ವಾಹನಗಳನ್ನು ಹಿಡಿದುಕೊಂಡು ಹೋಗುತ್ತಾರೆಯೇ ಹೊರತು ಈ ಬಸ್ಸಿಗೆ ಏನಾಯ್ತು ನೋಡಿರಿ; ಇದನ್ನು ರಿಪೇರಿ ಮಾಡಿಸಿಕೊಂಡು ಹೋಗೋಣವೆಂದು ಯಾರೂ ಯೋಚಿಸುವುದೇ ಇಲ್ಲ. ಹೀಗೆ ಈ ಸಂನ್ಯಾಸಿ ಜೀವನವು. ಸಮಾಜದ ಒಳಿತಿಗೆ ಚಿಂತಿಸುವ ಜೀವಿಗಳ ಜೀವನವೂ ಹೀಗೆ ಇದೆ. ಬಹು ಎಚ್ಚರಿಕೆಯಿಂದ ನಡೆದುಕೊಳ್ಳಬೇಕೆಂದು ಮಾರ್ಮಿಕವಾಗಿ ಹೇಳಿದರು.

ಒಮ್ಮೆ ನಾ ಕಂಡಂತೆ ಒಬ್ಬ ಆಂಗ್ಲ ದೇಶದ ವ್ಯಕ್ತಿ ಬಂದು ಶ್ರೀಗಳವರನ್ನು ಕಂಡು ಹೀಗೆ ಹೇಳಿದ್ದುಂಟು. 'ಏನು ನಿಮ್ಮ ಸ್ವಾಮಿಗಳನ್ನು ನೋಡಿದರೆ ಇವರೊಬ್ಬ ಬಾಲಕರಂತೆ, ಹಸುಕೂಸಿನಂತೆ ಕಾಣುತ್ತಿರುವರಲ್ಲ' ಎಂದು ಕೇಳಿದಾಗ ನಾನು ಸಮ್ಮತಿಸಿ ನಿಜ ಇವರು ತುಂಬಾ ಚಿಕ್ಕಕೂಸು ಎಂದೆನು. ಅದಕ್ಕೆ ಅವರು ಅದು ಹೇಗೆಂದು ಕೇಳಿದರು. ಅದಕ್ಕೆ ಉತ್ತರ ಇಂತಿದೆ. ನೋಡಿ ಚಿಕ್ಕಕೂಸಿನ ಲಾಲನೆ, ಪಾಲನೆ, ಪೋಷಣೆಯನ್ನು ತಾಯಿಯೇ ಮಾಡುತ್ತಾಳೆ. ಅದಕ್ಕೆ ಹಸಿವಾದರೆ ತಾನೇ ಎದೆಗೆ ಹಾಕಿಕೊಂಡು ಹಾಲು ಉಣಿಸುತ್ತಾಳೆ. ಹೇಸಿಕೆ ಮಾಡಿಕೊಂಡರೆ ತಾನೇ ಸ್ವಹಸ್ತದಿಂದ ತೆಗೆದು ಮಗುವನ್ನು ಸ್ವಚ್ಛಗೊಳಿಸುತ್ತಾಳೆ. ಎಲ್ಲಾ ರೀತಿಯಿಂದ ಲಾಲಿ ಪದಗಳನ್ನು ಹೇಳಿ ತೊಟ್ಟಿಲಲ್ಲಿ ಹಾಕಿ ಮಲಗಿಸುತ್ತಾಳೆ. ಆದರೆ ಮಗು ದೊಡ್ಡವನಾದರೆ, ಅವನ ಕೆಲಸ ಅವನೇ ಮಾಡಿಕೊಳ್ಳುತ್ತಾನೆ. ಶ್ರೀಗಳು ನಿಜಕ್ಕೂ ಹಸುಕೂಸು, ಜಗದ ಕೂಸು, ಇವರನ್ನು ಶ್ರೀ ಭೈರವೇಶ್ವರನೇ ಲಾಲನೆ, ಪಾಲನೆ ಮಾಡುತ್ತಾನೆ. ಇವರ ಯಾವ ಅಭಿಮಾನವೂ ಇಲ್ಲ. ಇವರ ಯೋಗಕ್ಷೇಮವನ್ನು ಜಗನ್ಮಾತೆ ಶ್ರೀ ಕಂಬದಮ್ಮನೇ ನೋಡುತ್ತಾಳೆ. ಇವರಲ್ಲವೇ, ಜಗದ ಜಗದ್ಗುರುಗಳು. ನಮ್ಮನ್ನು ತಿದ್ದುವ ಶಿಕ್ಷಕರು, ಮುಕ್ತಿದಾತರು. ಅನೇಕ ಬಾರಿ ಶ್ರೀಗಳು 'ನಾವು ಸೇವಕರು ಆದರೆ ಸೇವಕರೆಂಬ ಅಭಿಮಾನಬೇಡ. ನೀನು ನಡೆಸಿದಂತೆ ನಡೆಯುವವ. ನೀನು ಬರೆಸಿದಂತೆ ಬರೆಯುವ ಕೈಯಲ್ಲಿಯ ಲೇಖನಿಯಂತೆ' ಎಂಬುದನ್ನು ಸಾಕಾರವಾಗಿ ತೋರಿದ ಮಹಾನ್ ಗುರುಗಳು.

ತಿಂಗಳಿಗೆ ಒಮ್ಮೆಯಾದರೂ ಶ್ರೀಗಳನ್ನು ದರ್ಶನಮಾಡದಿದ್ದರೆ ನನಗೆ ಶಕ್ತಿಯೇ ಇಲ್ಲವಾಗುತ್ತದೆ. ಶ್ರೀಗಳು ಜನರೇಟರ್ ಇದ್ದಹಾಗೆ. ನಾವು ಬ್ಯಾಟರಿ ಇದ್ದ ಹಾಗೆ. ಬ್ಯಾಟರಿಗೆ ಚಾರ್ಜು ಕಡಮೆ ಆದಾಗ ಮಹಾನ್ ಜನರೇಟರ್ ಹತ್ತಿರ ಇಟ್ಟು ಚಾರ್ಜ್ ಮಾಡಬೇಕು. ನಮ್ಮದು ಚಿಕ್ಕ ಬ್ಯಾಟರಿ, ಇದಕ್ಕೆ ತಿಂಗಳಿಗೊಮ್ಮೆಯಾದರೂ ದರ್ಶನ, ಪಾದಸ್ಪರ್ಶನವೆಂಬ ಚಾರ್ಜ್ ಅಗತ್ಯವೆಂದು ನನ್ನ ಭಾವನೆ. ಶ್ರೀಗಳ ದರ್ಶನ ಪಾಪ ನಾಶಕ, ಸುರಭೂಜದಂತೆ (ಕಲ್ಪವೃಕ್ಷ). "**ಜ್ಞಾನಿಯ ಅಂದವನು ಅರಿಯನೆಂಬರು, ಅನುಮಾವೇಕೆ ಅವನಂಗವು ತಾನೇ ಸೂಚಿಸುತ್ತಿಹುದು**" ಎಂಬುವ ಶ್ರೀ ನಿಜಗುಣ

ಅಭಿವಂದನಾ

ಶಿವಯೋಗಿಗಳ ನುಡಿಗಡಣದಂತೆ (ಜ್ಞಾನಿ) ಮಹಾತ್ಮ ಹೇಗಿರುತ್ತಾನೆಂದರೆ ಆ ಮಹಾತ್ಮನ ಶರೀರದ ಅಂಗಗಳೇ ಸೂಚಿಸುತ್ತವೆ. ಹೊಟ್ಟೆ ತುಂಬಿದವನು-ತೃಪ್ತನಾದವನು ಹೇಗಿರುತ್ತಾನೆಂದರೆ ಹಸನ್ಮುಖಿಯಾಗಿರುತ್ತಾನೆ. ಆಗಾಗ್ಗೆ ಹೊಟ್ಟೆ ಮೇಲೆ ಕೈಯಾಡಿಸುತ್ತಾ ಸಂತೋಷದಿಂದಿರುತ್ತಾನೆ. ಹಾಗೇ ಶ್ರೀಗರುಗಳು ಜ್ಞಾನಿಗಳೇ ಎಂಬುದಕ್ಕೆ ಅವರ ಅಂಗವೇ ಸಾಕ್ಷಿಯಾಗಿದೆ. ಅವರಿಗೆ ಬಡವರನ್ನು ಕಂಡರೆ ತಾವೇ ಬಡವನಾದೆನೆಂಬುವ ಆತುರ ತೋರಿ ದುಃಖ ದೂರ ಮಾಡಬೇಕೆಂಬ ಪರಿಹಾರದ ಭರವನ್ನು ನಾನು ಸ್ವತಃ ಕಂಡಿದ್ದೇನೆ.

ಒಂದು ದಿನ ಶ್ರೀಗಳು ನನ್ನನ್ನು ಬೆಳಿಗನ ಸಂಚಾರಕ್ಕೆ ಕರೆದುಕೊಂಡು ಹೋದರು. ಆಗ್ಗೆ ಅಲ್ಲಿ ತಿರುಗುತ್ತಾ ಇರುವ ಸಮಯದಲ್ಲಿ ಬೆಳಗಿನ ಝಾವ ಸುಮಾರು ೫.೩೦ ನಿಮಿಷ ಇರಬೇಕು. ಕಟ್ಟಿಗೆಯ ಹೊರೆಯನ್ನು ಹೊತ್ತ ಸುಮಾರು ನಾಲ್ಕು ಐದು ಜನ ಬಡಹೆಣ್ಣುಮಕ್ಕಳು ಹೋಗುತ್ತಿರುವುದನ್ನು ಶ್ರೀಗಳವರು ನೋಡಿದರು. ನಾನು ಇದಾವುದನ್ನೂ ನೋಡದೆ ಅವರ ಹಿಂದೆಯೇ ಹೋಗುತ್ತಿದ್ದೆ. ಆಗ ಪೂಜ್ಯರೇ ನನ್ನತ್ತ ತಿರುಗಿ ಏನು ನೋಡಿದಿರಾ? ಆ ಹೆಣ್ಣುಮಕ್ಕಳು ತಮ್ಮ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಎಷ್ಟು ಹೊತ್ತು ರಾತ್ರಿಯಲ್ಲಿ ಎದ್ದು ಈ ಕಟ್ಟಿಗೆಯನ್ನು ತರಲು ಹೋಗಿರುವರು. ಮೈಯಲ್ಲಿ ಬೆವರು ಸುರಿಸಿ ಕಷ್ಟಪಟ್ಟು ಜೀವನ ಮಾಡುತ್ತಿರುವರಲ್ಲ. ನಮ್ಮ ದೇಶ ಇನ್ನು ಬಡತನದ ಬೇಗೆಯಲ್ಲಿ ಬೇಯುತ್ತಿದೆಯಲ್ಲ. ಇದಕ್ಕೆ ಪರಿಹಾರ ಕಂಡು ಹಿಡಯಲೇ ಬೇಕೆಂದು ಹೇಳಿದರು. ಇವರ ಕರುಣೆ ನೋಡಿ ನನಗೆ ಆಶ್ಚರ್ಯವಾಯಿತು. ನಿಜಕ್ಕೂ ಇವರೊಬ್ಬ ದಯಾಮೂರ್ತಿಗಳು. ''**ದಯವೇ ಧರ್ಮದ ಮೂಲವಯ್ಯಾ**'' ಎಂದು ಸುರುವ ಧರ್ಮವೇ ರೂಪ ತಾಳಿ ಬಂದಿರುವುವರೆಂದು ತಿಳಿದುಕೊಂಡೆನು. ಶ್ರೀಗಳನ್ನು ನಾನು ಬಹು ಪರಿಯಿಂದ ಕಂಡ ಅಂಶಗಳು ಅನೇಕ. ಆದರೆ ಅವನ್ನೆಲಾ ಇಲ್ಲಿ ಬರೆದರೆ ತುಂಬಾ ಹೆಚ್ಚಾಗಬಹುದೆಂಬ ಅಂಜಿಕೆಯಿಂದ ಬರೆಯಲು ಹಿಂಜರಿಯುತ್ತೇನೆ. ಶ್ರೀ ಮಹಾಸನ್ನಿಧಿಯವರನ್ನು ಪಡೆದ ಈ ನೆಲ, ಜಲ ಪಾವನ. ಅಷ್ಟೇ ಅಲ್ಲದೆ ಶ್ರೀಗಳನ್ನು ಕಂಡ ನನ್ನ ನೇತ್ರ ಮನ, ಶರೀರ, ಧನ್ಯವೆಂದು ಹೇಳುತ್ತಾ ನನ್ನ ಲೇಖನಿಗೆ ವಿರಾಮಗೈಯುತ್ತೇನೆ.

***

ನನ್ನ ಗುರುದೇವ

-ಶ್ರೀ ಶಿವಕುಮಾರನಾಥಸ್ವಾಮಿಗಳು

ನಮ್ಮ ಭಾರತ ದೇಶವು ಧರ್ಮಭೂಮಿ, ಕರ್ಮಭೂಮಿ, ಪುಣ್ಯಭೂಮಿ, ಆಧ್ಯಾತ್ಮಿಕ ಭೂಮಿ ಹಾಗೂ ತಪೋಭೂಮಿಯಾಗಿದೆ. ಇದರಲ್ಲಿ ಹಲವಾರು ದೇವಮಂದಿರಗಳಿವೆ, ಪುರಾಣ ಪ್ರಸಿದ್ಧ ಪುಣ್ಯಕ್ಷೇತ್ರಗಳಿವೆ. ಯಾತ್ರಾಸ್ಥಳಗಳಿವೆ, ಧಾರ್ಮಿಕ ಪೀಠಗಳಿವೆ, ಗುರುಪರಂಪರೆಗಳಿವೆ. ಇಂತಹ ಪ್ರಾಚೀನ ಪುರಾಣ ಪ್ರಸಿದ್ಧ ಮಹತ್ವಪೂರ್ಣ ಧಾರ್ಮಿಕ ಕ್ಷೇತ್ರಗಳಲ್ಲಿ ಕರ್ನಾಟಕ ರಾಜ್ಯ, ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಬೆಳ್ಳೂರು ಹೋಬಳಿಯಲ್ಲಿರುವ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ಒಂದಾಗಿದೆ.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ನಯನ ಮನೋಹರ. ನಿಸರ್ಗ ಸಂಪತ್ತಿನಿಂದೊಡಗೂಡಿದ ಬೃಹತ್ ಗಿರಿಯ ಮೇಲಿದೆ. ಇಲ್ಲಿನ ಪ್ರಶಾಂತವೂ ಮನಮೋಹಕವೂ ಆದ ಸ್ಥಳಕ್ಕೆ ಮಾರುಹೋಗಿ ಪರಶಿವನು ಗಂಗಾಧರೇಶ್ವರನಾಗಿ ಇಲ್ಲಿಯೇ ವಾಸ್ತವ್ಯ ಮಾಡಿದ್ದಾನೆ ಎಂಬುದಾಗಿ ಪುರಾಣೋಕ್ತಿಯಿದೆ. ಪರಶಿವನು ತಪಗೈದ ಪರಮಪವಿತ್ರ ಸ್ಥಳವು ಇಂದಿಗೂ ಜ್ವಾಲಾಪೀಠವಾಗಿ ಕಂಗೊಳಿಸುತ್ತಿದೆ.

ಶ್ರೀಗಳವರು ತಪಸ್ಸು, ದಿವ್ಯದೃಷ್ಟಿ, ಅನುಕಂಪ, ಸೌಮ್ಯ ಸ್ವಭಾವ, ಲೋಕ ಸೇವಾಸಕ್ತಿ ಮೊದಲಾದ ಅಮೂಲ್ಯ ಸಕಲ ಸದ್ಗುಣಗಳ ನಿಧಿಯಾಗಿದ್ದಾರೆ.

ಇಹ-ಪರ, ವೇದಾಂತ-ವಿಜ್ಞಾನ, ಶಿಷ್ಟ-ಜಾನಪದ, ಆಳು-ಒಡೆಯ, ಶ್ರೀಮಂತ-ಬಡವ, ದೇಶ-ವಿದೇಶ ಇವೇ ಮೊದಲಾದವುಗಳ ಅಂತರವನ್ನು ಗಣನೀಯವಾಗಿ ಕಡಮೆ ಮಾಡಿ, ಅವುಗಳಲ್ಲಿ ಸಮನ್ವಯ ಸಾಧಿಸುತ್ತಾ, ವೈಚಾರಿಕ ದೃಷ್ಟಿಯಿಂದ ಎಲ್ಲಾ ಪ್ರಾಂತ್ಯ, ಪಂಗಡ, ಪಂಥ, ವರ್ಗ, ಜಾತಿ, ಮತದ ಜನರಿಗೂ ಆಶ್ರಯ ಕೊಟ್ಟು ಸಹ ಪಂಕ್ತಿ ಭೋಜನ ವ್ಯವಸ್ಥೆಯಿಂದ ಸಮಾನ ಅವಕಾಶ ಒದಗಿಸಿ ಅವರಲ್ಲಿ ಕೀಳರಿಮೆ ತೊಡೆದು ಆತ್ಮವಿಶ್ವಾಸ ಅಪಾರವಾಗಿ ಮೂಡುವಂತೆ ಪರಿಸರ ಸೃಷ್ಟಿಸಿ, ಸರ್ವೋದಯ ಸಿದ್ಧಾಂತಗಳನ್ನು ಅನುಷ್ಠಾನಗೊಳಿಸುವಲ್ಲಿ ಕಂಕಣಬದ್ಧರಾಗಿ, ಸರಳ ಜೀವನ ನಡೆಸುತ್ತಾ, ಉನ್ನತ ಆದರ್ಶ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಪಣತೊಟ್ಟು, ಆಗಾಗ್ಗೆ ವಿದೇಶ ಯಾತ್ರೆ ಕೈಗೊಂಡು, ಭಾರತೀಯ ಭಕ್ತರಲ್ಲಿ ಧಾರ್ಮಿಕ ಜಾಗೃತಿಯನ್ನುಂಟು ಮಾಡಿ, ಅಭಿನವ ಸ್ವಾಮಿ ವಿವೇಕಾನಂದರಾಗಿ, ಜನರ ಬದುಕನ್ನು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ರೂಪಿಸುತ್ತಿರುವ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ

ಮಹಾಸ್ವಾಮೀಜಿಯವರು ಸಮಕಾಲೀನ ಪ್ರಜ್ಞೆಯ ಗುರುವಾಗಿದ್ದಾರೆ.

ಪರಮಪೂಜ್ಯ ಶ್ರೀ ಶ್ರೀಗಳವರು ಶ್ರೀಮಠದ ವ್ಯಾಪ್ತಿಯನ್ನು ರಾಜ್ಯ, ದೇಶ ಹಾಗೂ ವಿದೇಶಗಳಿಗೆ ವಿಸ್ತರಿಸಿ, ಹಲವಾರು ಕಡೆ ಶ್ರೀಕ್ಷೇತ್ರದ ಶಾಖೋಪಶಾಖೆಗಳನ್ನು ತೆರೆದು ಬಡವಿದ್ಯಾರ್ಥಿಗಳಿಗಾಗಿ ಉಚಿತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ, ಶಿಕ್ಷಣ ಸಂಸ್ಥೆಗಳನ್ನು ತೆರೆದು ಸಕಲ ಸಮಸ್ಯೆಗಳಿಗೆ ಸಂಜೀವಿನಿ ಎನಿಸಿದ ಶಿಕ್ಷಣವನ್ನು ನೀಡಿ, ಮಕ್ಕಳ ಮುನ್ನಡೆಗೆ ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ.

ಶ್ರೀ ಶ್ರೀಗಳವರು ಶ್ರೀ ಆದಿಚುಂಚನಗಿರಿಯನ್ನು ಒಂದು ಆಧ್ಯಾತ್ಮಿಕ ಗಿರಿ, ಧಾರ್ಮಿಕ ಗಿರಿ, ಶೈಕ್ಷಣಿಕ ಗಿರಿ, ಸಾಂಸ್ಕೃತಿಕ ಗಿರಿ ಅರ್ಥಾತ್ ಚಿನ್ನದ ಗಿರಿಯನ್ನಾಗಿ ಮಾಡಿ ಪವಾಡ ಸದೃಶ ರೀತಿಯಲ್ಲಿ ಮುನ್ನಡೆಸುತ್ತಿರುವುದು ಅಪಾರ ಅಭಿಮಾನ, ಗೌರವ ಹಾಗೂ ಹೆಮ್ಮೆಯ ವಿಷಯವಾಗಿರುವುದು. ಮುಟ್ಟಿದ್ದೆಲ್ಲವೂ ಚಿನ್ನವಾಗುತ್ತದೆಯಂತೆ, ಅಲ್ಲಾವುದ್ದೀನ್ ಅದ್ಭುತ ದೀಪ ಆಶ್ಚರ್ಯಕರ ಸಾಧನೆಗಳನ್ನು ಸಾಧಿಸುತ್ತಿತ್ತಂತೆ, ಇವೇ ಮೊದಲಾದ ಮಾತುಗಳು ಶ್ರೀ ಶ್ರೀಗಳವರ ಶಕ್ತಿಗೂ ಅನ್ವಯವಾಗಬಲ್ಲವುಗಳಾಗಿರುವುವು. ಶ್ರೀ ಶ್ರೀಗಳವರು ಹಿಡಿದ ಕಾರ್ಯಗಳೆಲ್ಲವೂ ಯಶಸ್ವಿಯಾಗುತ್ತಿರುವುವು.

ಪಟ್ಟಕ್ಕೆ ಬಂದ ಅತ್ಯಲ್ಪ ಅವಧಿಯಲ್ಲಿ ಅದ್ಭುತ ಸಾಧನೆಗಳನ್ನು ಸಾಧಿಸಿ, ಶ್ರೀ ಕ್ಷೇತ್ರವು ಇಂದು ಒಂದು ಅಂತರರಾಷ್ಟ್ರೀಯ ಖ್ಯಾತಿಯ ಕ್ಷೇತ್ರವಾಗಿರುವಂತೆ ಮಾಡಿರುವ ವಿಚಾರ ಶ್ರೀಕ್ಷೇತ್ರದ ಸದ್ಭಕ್ತರು ಹಾಗೂ ಅಭಿಮಾನಿಗಳಿಗೆ ಹೆಚ್ಚಿನ ಸಂತೋಷವನ್ನುಂಟುಮಾಡಿದೆ.

ಬದುಕಿಗೆ ಭಕ್ತರನ್ನು, ಸಮಾಜಕ್ಕೆ ವಿದ್ಯಾರ್ಥಿಗಳನ್ನು, ದೇವತಾಕಾರ್ಯಗಳಿಗೆ ಬ್ರಹ್ಮಚಾರಿಗಳನ್ನು, ಆಧ್ಯಾತ್ಮಿಕಜ್ಞಾನ ಪ್ರಸಾರಕ್ಕೆ ಸಂನ್ಯಾಸಿಗಳನ್ನು ಶಿಸ್ತಿನ ವಾತಾವರಣದಲ್ಲಿ ಬೆಳೆಸುತ್ತಾ, ಸಮಾಜದ ಸುವ್ಯವಸ್ಥೆಗೆ ಹಾಗೂ ಧರ್ಮ ಜಾಗೃತಿಗೆ ಭದ್ರ ಬುನಾದಿಯನ್ನು ಹಾಕುತ್ತಿರುವ ಶ್ರೀ ಶ್ರೀಗಳವರು ಅಭಿವಂದ್ಯರೂ, ಪರಮಪೂಜ್ಯರೂ, ಪ್ರಾತಃಸ್ಮರಣೀಯರೂ ಆಗಿದ್ದಾರೆ.

***

ತಪೋನಿಧಿ ಗುರುದೇವ

-ಶ್ರೀ ಶಾಂತಿನಾಥ ಸ್ವಾಮಿಗಳು

ಜಗತ್ ಪ್ರಸಿದ್ಧ ಪುಣ್ಯಕ್ಷೇತ್ರವಾದ ಶ್ರೀ ಆದಿಚುಂಚನಗಿರಿ ಕ್ಷೇತ್ರಾಧಿದೇವತೆಗಳಾದ ಶ್ರೀ ಗಂಗಾಧರೇಶ್ವರ, ಶ್ರೀ ಕಾಲಭೈರವೇಶ್ವರಸ್ವಾಮಿ ಅವತಾರ ಪುರುಷರೇ ಜಗದ್ಗುರು ಶ್ರೀ ಶ್ರೀ ಶ್ರೀಗಳವರು ಪಟ್ಟಾಭಿಷಿಕ್ತರಾದ ಮೇಲೆ ಚುಂಚನಗಿರಿಯನ್ನು ಶಿವಗಿರಿಯನ್ನಾಗಿ ಮಾಡಿದರು. ನಾಡಿನಾದ್ಯಂತ ಪ್ರವಾಸ ಮಾಡಿ ದರ್ಶನ ಆಶೀರ್ವಾದ ನೀಡಿ ಸರ್ವರಿಗೂ ಆತ್ಮಜ್ಞಾನ ನೀಡಿದರು.

ಶ್ರೀಗಳವರು ನನ್ನನ್ನು ಶ್ರೀಮಠಕ್ಕೆ ಕರೆತಂದು ಅವರ ಸೇವೆ ಮಾಡುವ ಭಾಗ್ಯವನ್ನು ಕರುಣಿಸಿದರು. ನನ್ನ ಪೂರ್ವಜನ್ಮದ ಪುಣ್ಯವೆಂದು ಭಾವಿಸುತ್ತಿದ್ದೇನೆ. ಹಿಂದೆ ಈಗಿನ ರೀತಿ ಕಟ್ಟಡಗಳು ಇರಲಿಲ್ಲ. ಶ್ರೀಗಳವರೇ ನಮಗೆ ಕಲ್ಲುಬಂಡೆಗಳ ಬಳಿ ಸಂಸ್ಕೃತಪಾಠ ಹೇಳುತ್ತಿದ್ದರು. ಶ್ರೀಗಳವರು ಪ್ರತಿದಿನ ಸಂಜೆ ಪ್ರಾರ್ಥನೆಯನ್ನು ಶ್ರೀ ಕಾಲಭೈರವೇಶ್ವರ ದೇವಾಲಯದ ಮುಂಭಾಗದಲ್ಲಿ ಮಾಡಿಸುತ್ತಿದ್ದರು. ಭಜನೆ ಸಾಧುಸಂತರ ಚರಿತ್ರೆ, ಪುರಾಣ ಹೇಳಿಕೊಡುತ್ತಿದ್ದರು. ಭಗವದ್ಗೀತೆ ಪಾರಾಯಣ ಪ್ರತಿದಿನ ನಡೆಯುತ್ತಿತ್ತು. ರಾತ್ರಿ ಭೋಜನ ಆದ ನಂತರ ಶ್ರೀಗಳವರು ಉಪನ್ಯಾಸ ನೀಡುತ್ತಿದ್ದರು.

ಶ್ರೀಕ್ಷೇತ್ರಕ್ಕೆ ಅಧಿಕಾಧಿಕ ಸಂಖ್ಯೆಯಲ್ಲಿ ಭಕ್ತಾದಿಗಳು ದೇವತಾದರ್ಶನಕ್ಕೆ ಬರುತ್ತಿದ್ದರು. ಅವರಿಗೆ ಪೂಜೆ ಮತ್ತು ಪ್ರಸಾದ ಕೊಡಲು ನನಗೆ ಆದೇಶಿಸುತ್ತಿದ್ದರು. ಪ್ರವಾಸಕ್ಕೆ ಜೊತೆಯಲ್ಲಿ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ನಾನು ಪೂಜ್ಯ ಶ್ರೀಗಳವರ ಪಾದಪೂಜೆಯನ್ನು ಭಕ್ತಾದಿಗಳಿಂದ ಮಾಡಿಸುತ್ತಿದ್ದೆನು. ಶ್ರೀಗಳವರೇ ನನಗೆ ಪೂಜೆ ವಿಧಾನ, ಮಂತ್ರಗಳನ್ನು ಕಲಿಸಿಕೊಟ್ಟಿದ್ದರು.

ಒಂದು ದಿನ ಸ್ವಾಮೀಜಿಯವರು 'ರೈತರು ಎಷ್ಟು ಕಷ್ಟಪಡುತ್ತಿದ್ದಾರೆ; ಮಳೆ ಇಲ್ಲ, ಬೆಳೆ ಇಲ್ಲ, ದನಕರುಗಳಿಗೆ ನೀರು ಮೇವು ಇಲ್ಲ. ರೈತರು ಎಷ್ಟು ಕಷ್ಟಪಡುತ್ತಿದ್ದಾರೆ. ಆದರೆ ನೀನು ಮಾತ್ರ ನಿಶ್ಚಿಂತೆಯಿಂದ ನಿದ್ರೆ ಮಾಡುತ್ತೀಯೆ' ಎಂದು ಹೇಳಿದರು. ನೋಡು, ವಿದ್ಯಾರ್ಥಿಗಳು ಚಳಿ-ಬಿಸಿಲು ಅನ್ನದೆ ಬರಿಗಾಲಿನಲ್ಲಿ ಶಾಲೆಗೆ ಹೋಗುತ್ತಿದ್ದರು. ಮನೆಕೆಲಸ ಮುಗಿಸಿ ಶಾಲೆಗೆ ಹೋಗಿ ಕಲಿಯುತ್ತಿದ್ದರು. ಈ ಎಲ್ಲರ ಕಷ್ಟಗಳನ್ನು ಕೇಳುವವರು ಯಾರು? ಅವರೆಲ್ಲ ಕಷ್ಟಜೀವಿಗಳು ಎಂದು ಶ್ರೀಮಠದಿಂದ ನಾಗಮಂಗಲದ ಮೂಲಕ ಮೈಸೂರಿಗೆ ಹೋಗುವಾಗ ನನಗೆ ಸ್ವಾಮೀಜಿಯವರು ತೋರಿಸುತ್ತಿದ್ದರು.

ಮಂಡ್ಯದ ಬಳಿ ಒಂದು ಸಾರಿ ಒಬ್ಬ ರೈತ ಒಂದು ಗಾಡಿಯನ್ನು ಹೊಡೆದುಕೊಂಡು

ಹೋಗುತ್ತಿದ್ದನು. ಗಾಡಿಯ ತುಂಬ ಕಬ್ಬನ್ನು ತುಂಬಲಾಗಿತ್ತು. ಎತ್ತುಗಳು ಎಳೆಯಲಾರದೆ ಕಣ್ಣೆ ಹಾಕಿಕೊಂಡವು. ಅವನು ಚಾವಟಿಯಿಂದ ಹೊಡೆಯುತ್ತಿದ್ದನು. ಎತ್ತುಗಳ ಬಾಯಿಯಲ್ಲಿ ಜೊಲ್ಲು ಸುರಿಯುತ್ತಿತ್ತು. ಶ್ರೀಗಳವರು ಕಾರನ್ನು ಪಕ್ಕಕ್ಕೆ ನಿಲ್ಲಿಸಿ, ಏನಪ್ಪಾ ಯಜಮಾನ, ಈ ಮೂಕ ಪ್ರಾಣಿಗಳನ್ನು ಹೊಡೆಯುತ್ತೀಯೇ? ಇಷ್ಟೊಂದು ಭಾರದ ಕಬ್ಬನ್ನು ತುಂಬಿದರೆ ಹೇಗೆ ತಾನೆ ಎಳೆಯುತ್ತವೆ? ನಿನಗೆ ಗೊತ್ತಾಗುವುದಿಲ್ಲವೆ? ಹೊಡೆಯಬೇಡ. ಮೂಕ ಪ್ರಾಣಿಗಳು ಯಾರಿಗೆ ಕಷ್ಟಗಳನ್ನು ಹೇಳುತ್ತವೆ? ಎಂದು ರೈತನಿಗೆ ಬುದ್ಧಿವಾದ ಹೇಳಿದರು. ಈ ಮಂಡ್ಯ ಜಿಲ್ಲೆಯಲ್ಲಿ ಈ ಎತ್ತುಗಳು ಯಾವ ಪಾಪ ಮಾಡಿ ಈ ರೈತನ ಕೈಗೆ ಸಿಕ್ಕಿದವೊ ಎಂದು ತುಂಬಾ ಸಂಕಟಪಟ್ಟರು.

ನನಗೆ ಶೈವಾಗಮ, ಅದ್ವೈತ, ಅಲಂಕಾರಶಾಸ್ತ್ರ, ವೇದಗಳನ್ನು ಕಲಿಸಿದರು. ನಾಲ್ಕು ವರ್ಷಗಳ ಕಾಲ ಅಮೆರಿಕದಲ್ಲಿ ಸೇವೆ ಮಾಡುವ ಅವಕಾಶವನ್ನು ಕಲ್ಪಿಸಿ ಆಶೀರ್ವದಿಸಿದರು. ನನ್ನ ಜೀವನವು ಸಾರ್ಥಕವಾಯಿತು. ಸಮಯಸಿಕ್ಕಾಗ ನನಗೆ ಅನೇಕ ರೀತಿಯಲ್ಲಿ ತಿಳಿವಳಿಕೆಗಳನ್ನು ಹೇಳುತ್ತಿದ್ದರು. ಅವರಂತೆ ಎಲ್ಲರೂ ಆಗಬೇಕು. ಸಾಧ್ಯವಾಗದಿದ್ದರೆ ಕೆಲವರಾದರೂ ಅವರ ಮಾರ್ಗದರ್ಶನ ಪಡೆಯಬೇಕು.

ನೀವು ಸಂನ್ಯಾಸದೀಕ್ಷೆ ಪಡೆದು ಸಮಾಜಕ್ಕೆ ಸೇವೆ ಸಲ್ಲಿಸಬೇಕು. ನಾಲ್ಕಾರು ಜನರಿಗೆ ಮಾರ್ಗದರ್ಶನ ನೀಡಬೇಕು ಎಂದು ತಿಳಿಸಿದ್ದರು. ಎಲ್ಲಿ ಶುದ್ಧಿ ಇರುತ್ತದೆಯೋ ಅಲ್ಲಿ ದೇವರು ನೆಲೆಸಿರುತ್ತಾನೆ ಎಂದು ತಿಳಿವಳಿಕೆ ಹೇಳುತ್ತಿದ್ದರು. ಸ್ವಾಮಿಗಳವರು ನಮ್ಮ ಪಥ ವಿಶ್ವಪಥವಾಗಬೇಕು ಎಂದು ದಿವ್ಯಜ್ಞಾನದ ವಾಣಿಯಿಂದ ಬೋಧಿಸಿ ದಿವ್ಯ ಜಗಜ್ಜ್ಯೋತಿ ಸ್ವರೂಪರಾಗಿದ್ದಾರೆ. ಎಷ್ಟೆ ಕಷ್ಟ ಸುಖಗಳು ಬಂದರೂ ಕುಗ್ಗದೆ-ಹಿಗ್ಗದೆ ನಿತ್ಯ ಪ್ರಸನ್ನ ಮುಖಿಗಳಾಗಿ, ಮಾರ್ಗದರ್ಶಕರಾಗಿ ಅನ್ನದಾನ, ವಿದ್ಯಾದಾನ, ಜ್ಞಾನದಾನ ನೀಡುತ್ತಿರುವ ತ್ರಿವಿಧ ದಾಸೋಹಿಗಳಾಗಿದ್ದಾರೆ. ನನಗೆ ಗುರು, ದೇವರು, ಧರ್ಮ, ಪೂಜೆ, ಪ್ರಾರ್ಥನೆ ಎಂದರೆ ಒಂದೂ ತಿಳಿಯದು. ಶ್ರೀಗಳವರ ವಾಣಿಯಿಂದ ನನಗೆ ಅವುಗಳ ಅನುಭವವಾಯಿತು.

***

ಮನುಕುಲದ ದಾರಿದೀಪ

-ಶ್ರೀ ಸೌಮ್ಯನಾಥ ಸ್ವಾಮಿಗಳು

ಗುರುಗಳಾದ ಪರಮಪೂಜ್ಯ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಕಲಿಯುಗದಲ್ಲಿ ಮನುಕುಲದ ಇಹ ಪರದ ಸುಖ ಶಾಂತಿಗಳನ್ನು ಕರುಣಿಸಿ ಉದ್ಧಾರ ಮಾಡಲು ಅವತರಿಸಿರುವ ಮಹಾ ಪುರುಷರು. ಈ ಕಲಿಯುಗದಲ್ಲಿ ಮಾನವ ಜನಾಂಗವು ಕ್ಷಣಿಕ ಸುಖದ ಆಸೆ ಆಕಾಂಕ್ಷೆಗಳಿಗೆ ಮಾರುಹೋಗಿ ಧರ್ಮ, ನೀತಿ, ಭ್ರಷ್ಟರಾಗಿ ಆಚಾರ-ವಿಚಾರಹೀನರಾಗಿ ಅನ್ಯಾಯ ಅಧರ್ಮ ಮೋಸ ವಂಚನೆಗಳನ್ನು ಮಾಡುತ್ತಾ ಮಾನವಿಗೆ ಬೇಕಾದಂತಹ ಸುಖ, ಶಾಂತಿ, ನೆಮ್ಮದಿಗಳಿಂದ ವಂಚಿತರಾಗಿ ಜೀವನವನ್ನು ನರಕ ಸದೃಶವನ್ನಾಗಿಸಿಕೊಂಡು, ದುರ್ಭರ ಜೀವನವನ್ನು ಸಾಗಿಸುತ್ತಾರೆ. ಬಳಲುತ್ತಿರುವ ಮಾನವರಿಗೆ ಜೀವನದ ದಾರಿದೀಪವಾಗಿ, ಸುಖ ಸಂತೋಷಾದಿಗಳನ್ನು ನೀಡಲು ಅವತರಿಸಿರುವ ಯೋಗಿವರ್ಯರು ನಮ್ಮ ಸ್ವಾಮಿಗಳವರು.

ಶ್ರೀಗುರುಗಳ ದಿವ್ಯ ಜೀವನವನ್ನು, ದಿವ್ಯಶಕ್ತಿಯನ್ನು ಅರಿಯಲು ಸಾಮಾನ್ಯ ಮಾನವರಿಗೆ ಸಾಧ್ಯವಿಲ್ಲ. ದೇವರು ಕೊಟ್ಟಂತಹ ಪ್ರತಿಯೊಬ್ಬರ ಕಣ್ಣುಗಳಿಗೆ ಕಾಣಿಸುವಂತಹ ಪವಾಡ ಸದೃಶವಾದ ಕಾರ್ಯಗಳನ್ನು ಮಾಡುತ್ತಾ, ಮಾನವ ಜನಾಂಗದ ಶ್ರೇಯಸ್ಸನ್ನು ಬಯಸಿ ಹಗಲು ಇರುಳುಗಳೆನ್ನದೆ ಶ್ರಮಿಸುತ್ತಿದ್ದಾರೆ. ಅವರವರ ದರುಶನಕ್ಕೆ ಅವರವರ ವೇಷದಲಿ ಅವರವರಿಗೆಲ್ಲ ಗುರು ನೀನೊಬ್ಬನೆ ಎಂಬ ಮಾತಿನಂತೆ ಶ್ರೀ ಗುರುಗಳವರು ನಾಡಿನ ಜನತೆಗೆ ದರುಶನವನ್ನು ನೀಡುತ್ತಾ, ಅವರ ಬದುಕು ಸಾರ್ಥಕವಾಗಲಿ ಎಂದು ಹಾರೈಸುತ್ತಿದ್ದಾರೆ. ಶ್ರೀಗಳವರು ಮಾನವ ಜಾತಿಗೆ ಪಿಡುಗಾಗಿರುವ ಜಾತಿ, ಕುಲ, ಗೋತ್ರಾದಿಗಳ ಕಲ್ಪನೆಯ ಅರಿವೇ ಇಲ್ಲದೆ ವಿಶ್ವಮಾನವರಾಗಿ ಎಲ್ಲರನ್ನು ಕೇವಲ ಮನುಷ್ಯ ಮಾತ್ರರನ್ನಾಗಿ ತಿಳಿದು ಇಡೀ ಮನುಕುಲದ ಶ್ರೇಯಸ್ಸನ್ನು ಬಯಸಿ, ಅರಿವು ಮೂಡಿಸಿ, ಅವರಲ್ಲಿರುವ ಭೇದ ಭಾವನೆಗಳನ್ನು ಹೋಗಲಾಡಿಸಿ, ಪರಸ್ಪರ ಪ್ರೀತಿ, ವಿಶ್ವಾಸ, ಗೌರವಗಳಿಂದ ಬಾಳುವಂತೆ ಆಶೀರ್ವದಿಸುತ್ತಿದ್ದಾರೆ.

'ನೀನೊಲಿದರೆ ಕೊರಡು ಕೊನರುವುದಯ್ಯಾ,
ನೀನೊಲಿದರೆ ಬರಡು ಹಯನಹುದಯ್ಯಾ
ನೀನೊಲಿದರೆ ವಿಷವು ಅಮೃತವಹುದಯ್ಯಾ,
ನೀನೊಲಿದರೆ ಸಕಲಪಡಿಪದಾರ್ಥಗಳು ಇದಿರಲಿರುವುವಯ್ಯಾ'

ಎಂಬ ಬಸವಣ್ಣನವರ ಮಾತಿನ ಅಂತರಾರ್ಥದಂತೆ ಆಚಾರ ವಿಚಾರ ವಿವೇಕಗಳ ಅರಿವೇ ಇಲ್ಲದೆ ಸಂಸ್ಕೃತಿ ಸಂಕಾರಗಳ ಪರಿವೆಯೇ ಇಲ್ಲದೆ ಅಜ್ಞಾನ ಅಂಧಕಾರದಿಂದ ಬರಡಾದ ಮನುಷ್ಯರಿಗೆ ಜೀವನದ ಮೌಲ್ಯವನ್ನು ತಿಳಿಸಿ, ಹಾಗೂ ದೇಶದ ಸೇವೆಯನ್ನು ಮಾಡುವ ಮನೋಭಾವನೆಗಳನ್ನು ಬೆಳೆಸಿ, ಅವರಲ್ಲಿರುವ ದ್ವೇಷ ಅಸೂಯೆಗಳನ್ನು ದೂರ ಮಾಡುತ್ತಾ ಎಲ್ಲರ ಪ್ರೀತಿ, ವಿಶ್ವಾಸ ಗೌರವಕ್ಕೆ ಪಾತ್ರರಾಗುವಂತಹ ಮಾನವ ಜನಾಂಗವನ್ನು

ರೂಪಿಸುತ್ತಿದ್ದಾರೆ.

ಶ್ರೀ ಮದ್ರಾಮಾಯಣದ ಶ್ರೀರಾಮಚರಿತ್ರೆಯು ತ್ರೇತ್ರಾಯುಗದಲ್ಲಿ ನಡೆದಿದ್ದರೂ ತ್ರೇತಾಯುಗ, ದ್ವಾಪರಯುಗಗಳು ಮುಗಿದು ಕಲಿಯುಗ ಬಂದಿದ್ದರೂ ಸಹ ಪ್ರತಿಯೊಬ್ಬ ಮಾನವನ ಮನಸ್ಸಿನಲ್ಲಿ ಶ್ರೀ ರಾಮಚಂದ್ರನ ದಿವ್ಯ ಚರಿತ್ರೆ ನೆಲೆಸಿರುವ ಹಾಗೆ ಶ್ರೀ ಗುರುಗಳವರು ಮಾನವ ಜನಾಂಗದ ಶ್ರೇಯಸ್ಸನ್ನು ಬಯಸಿ ಮಾಡುತ್ತಿರುವ ಸೇವಾಕಾರ್ಯಗಳು ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿ ನೆಲೆಸಿ, ದೇವರು ಗುರುಗಳಲ್ಲಿ ಭಕ್ತಿಯನ್ನು, ಸಕಲ ಜೀವಿಗಳಲ್ಲಿ ಕರುಣೆಯನ್ನು, ವೃತ್ತಿಯಲ್ಲಿ ಸೇವಾ ಮನೋಭಾವವನ್ನು ಬೆಳೆಸುತ್ತಿವೆ.

ಜ್ಞಾನಿಗಳು ಶಾಸ್ತ್ರದಲ್ಲಿ ತಿಳಿಸಿರುವ ಹಾಗೆ ಮನುಷ್ಯರು ಮಾಡಿದ ಪುಣ್ಯಕರ್ಮದ ಫಲಗಳೇ ಮಾನವ ಜನಾಂಗವನ್ನು ಉದ್ಧರಿಸಲು ಗುರುಗಳಾಗಿ ಬಂದು ಅವಿದ್ಯಾವಂತರನ್ನು ವಿದ್ಯಾವಂತರನ್ನಾಗಿಯೂ, ಅಸಂಸ್ಕೃತರನ್ನು ಸುಸಂಸ್ಕೃತರನ್ನಾಗಿಯೂ, ಅಜ್ಞಾನಿಗಳನ್ನು ಸುಜ್ಞಾನಿಗಳನ್ನಾಗಿಯೂ, ಅವಿಚಾರವಂತರನ್ನು ವಿಚಾರವಂತರನ್ನಾಗಿಯೂ ಮಾಡುತ್ತಾ ಮನುಷ್ಯ ಜನ್ಮವು ಸಾರ್ಥಕವಾಗುವಂತೆ ಮಾಡುತ್ತವೆ.

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ
ಸಯತ್ ಪ್ರಮಾಣಂ ಕುರುತೇ ಲೋಕಃ ತದನುವರ್ತತೇ

ಎಂಬ ಭಗವದ್ಗೀತೆಯ ಕರ್ಮಯೋಗದ ಆಶಯದಂತೆ ಶ್ರೀಗುರುಗಳ ಮಾತುಗಳು ಮಂತ್ರವಾಗಿಯೂ, ಅವರ ಕೃತಿಯು ಕಾಯಕವಾಗಿಯೂ, ಮಾನವ ಸಮುದಾಯಕ್ಕೆ ಮಾರ್ಗದರ್ಶನವನ್ನು ನೀಡುತ್ತಿವೆ. ಸೂರ್ಯನು ಭೂಮಿಯಿಂದ ಎಷ್ಟೋ ಸಾವಿರ ಮೈಲಿಗಳ ದೂರದಲ್ಲಿದ್ದರೂ ಸಕಲ ಜೀವಕೋಟಿಗಳಿಗೆ ತನ್ನ ಕಿರಣಗಳಿಂದ ಬೆಳಕನ್ನು ಹಾಗೂ ಶಕ್ತಿಯನ್ನು ನೀಡಿ ಜೀವಿಗಳ ಸುಂದರ ಬದುಕಿಗೆ ಕಾರಣವಾದಂತೆ ಶ್ರೀಗಳವರು ಮಾನವರಿಗೆ ಜ್ಞಾನವೆಂಬ ಬೆಳಕನ್ನು ಆತ್ಮಶಕ್ತಿಯನ್ನು ನೀಡಿ ಅವರ ಬದುಕು ಸಾರ್ಥಕವಾಗುವಂತೆ ಮಾಡುತ್ತಿದ್ದಾರೆ.

ಇಡೀ ಭೂಮಂಡಲವನ್ನು ಹಾಳೆಯನ್ನಾಗಿಯೂ ಮಹಾಮೇರುಪರ್ವತವನ್ನು ಲೇಖನಿಯನ್ನಾಗಿಯೂ ಸಮುದ್ರವನ್ನು ಶಾಯಿಯ(ಇಂಕ್)ನ್ನಾಗಿಯೂ ಮಾಡಿಕೊಂಡು ಸೂರ್ಯಚಂದ್ರರು ಉದಯಿಸುವವರೆವಿಗೂ ಶ್ರೀ ಗುರುಗಳ ದಿವ್ಯಚರಿತ್ರೆ ಹಾಗೂ ಅವರ ದಿವ್ಯಶಕ್ತಿಯನ್ನು ವರ್ಣಿಸಲು ಯಾರಿಂದಲೂ ಸಾಧ್ಯವಿಲ್ಲ. ಶ್ರೀ ಗುರುಗಳ ದಿವ್ಯ ಚರಿತ್ರೆಯನ್ನು ಕೆಲವೇ ಮಾತುಗಳಲ್ಲಿ ಹೇಳುವುದಾದರೆ ಶ್ರೀಗಳವರ ಐವತ್ತು ಸಾರ್ಥಕ ಸಂವತ್ಸರಗಳು ಮನುಕುಲ ಸಾರ್ಥಕವಾಗಲು ಅವಶ್ಯವಾಗಿ ಬೇಕಾದಂತಹ ಸೇವೆ, ತ್ಯಾಗ, ದಯೆ, ಕರುಣೆ, ತಾಳ್ಮೆಗಳನ್ನು ಬೋಧಿಸಿವೆ.

***

ಅಭಿವಂದನಾ

ದಯಾಸಮುದ್ರ

-ಶ್ರೀ ಸೋಮನಾಥ ಸ್ವಾಮಿಗಳು

ಆಧ್ಯಾತ್ಮಿಕ ವಿಭೂತಿಪುರುಷರು ನಮ್ಮ ಭಾರತ ಮಾತೆಯ ಮಡಿಲಲ್ಲಿ ಹುಟ್ಟಿ, ಮಾಯೆಯ ಆವರಣಗಳನ್ನು ಸೀಳಿ, ಲೋಕದಿಂದ ಲೋಕಕ್ಕೇರಿ ಸಾಧನ ಸಿದ್ಧಿಗಳ ಸಾಹಸವನ್ನು ಮಾಡಿ, ಮಹಾಯೋಗಿಗಳಾಗಿದ್ದಾರೆ. ಲೌಕಿಕದ ದೃಷ್ಟಿಯಿಂದ ಅವರೆಲ್ಲರೂ ನಮ್ಮಂತೆಯೇ ಹುಟ್ಟಿ ಬೆಳೆದು ಜನಸಾಮಾನ್ಯರಲ್ಲಿ ಒಟ್ಟುಗೂಡಿ ಜಗತ್ತಿನ ಕರ್ಮ, ವ್ಯವಹಾರಾದಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೂ ಅವರು ಅತೀಂದ್ರಿಯವಾದ ಆತ್ಮಶ್ರೀಯ ಆರಾಧಕರಾಗಿದ್ದಾರೆ. ಅವರ ತಪಃಪ್ರಭಾವವು ಲೋಕದ ಬದುಕಿನ ಮೇಲೆ ತನ್ನ ಚಿರ ಮುದ್ರೆಯನ್ನೊತ್ತಿ ಲಕ್ಷಾಂತರ ತಪ್ತ ಜೀವರಾಶಿಗಳಿಗೆ ಅತ್ಯಪೂರ್ವವಾದ ತಪೋವೃಕ್ಷದ ಅದ್ಭುತವಾದ ಮತ್ತು ಅವರ್ಣನೀಯವಾದ ಶಕ್ತಿ ಅಲ್ಲಲ್ಲಿ ಆಗಾಗ ಪ್ರಕಟಗೊಳ್ಳುವುದು ಪ್ರಕೃತಿಯ ಧರ್ಮವಾಗಿದೆ. ಇದಕ್ಕೆ ಶೃತಿಯ ಸಮ್ಮತಿಯೂ ಇದೆ. ''**ಯದಾ ಯಾದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ, ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್**''. ಯಾವಾಗ ಧರ್ಮಕ್ಕೆ ಚ್ಯುತಿ ಬರುತ್ತದೋ ಆಗ ಅಧರ್ಮದ ನಾಶಕ್ಕಾಗಿ ಸ್ವತಃ ನಾನೇ ಹುಟ್ಟಿಬರುತ್ತೇನೆ ಎಂಬ ಭಗವದ್ವಾಣಿಯಂತೆ ರಾವಣ ಕಂಸಾದಿ ದುಷ್ಟರ ಘೋರ ಅನ್ಯಾಯಗಳ ನಿರ್ಮೂಲಕ್ಕಾಗಿ ದುಃಖತಪ್ತ ಹೃದಯದಿಂದ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದ ಕೋಟಿ ಕೋಟಿ ಜೀವಿಗಳ ಉದ್ಧಾರಕ್ಕಾಗಿ ಜಗತ್ಪ್ರಭುವೇ ಶ್ರೀಕೃಷ್ಣನಾಗಿ, ಶ್ರೀರಾಮನಾಗಿ ಕರುಣಾಮೂರ್ತಿಯಾಗಿ, ಭಗವಾನ್ ಬುದ್ಧನಾಗಿ ಅವತರಿಸಿದ್ದಾನೆ. ಯುಗ ಯುಗಾಂತರದಿಂದಲೂ ಜಗತ್ ಕಲ್ಯಾಣಾರ್ಥವಾಗಿ ಲೋಕಸಂಗ್ರಹಕ್ಕಾಗಿ ಭಗವದ್ವಿಭೂತಿ ಮೈದೋರಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಹಿಂದಿನ ಶತಮಾನಗಳನ್ನು ಅವಲೋಕಿಸಿದರೆ ದಿವ್ಯ ಚೇತನಗಳಾದ ಮಹಾಪುರುಷರ ಸುರಿಮಳೆಯೇ ಪಸರಿಸಿದೆ. ಶಂಕರಾಚಾರ್ಯರು, ಬಸವಣ್ಣನವರು, ಮಹಾದೇವಿ ಅಕ್ಕ, ಶ್ರೀ ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಸ್ವಾಮಿ ರಾಮತೀರ್ಥರು, ಮಹಾತ್ಮಾಗಾಂಧೀಜಿ— ಹೀಗೆ ಹಲವು ದಿವ್ಯಾತ್ಮರುಗಳು ಜಗತ್ತನ್ನು ಪ್ರಕಾಶಗೊಳಿಸಿರುತ್ತಾರೆ. ಸೃಷ್ಟಿಯ ಕಾಲಗರ್ಭದಲ್ಲಿ ಸೇರಿರುವ ಮಹಾ ಮಹಿಮರ ಅಮರವಾಣಿಯನ್ನು ಅವರ ಜೀವನದ ಆದರ್ಶಗಳನ್ನು ಸ್ಮರಿಸಿದಾಗ ನಮ್ಮ ಹೃನ್ಮಂದಿರದ ಲಹರಿ ಪೂಜ್ಯರ ದರ್ಶನಾಶೀರ್ವಾದಗಳನ್ನು ಬೇಡಲಿಚ್ಛಿಸುತ್ತದೆ.

ಈಗ ನಮ್ಮ ಮುಂದೆ ಧ್ರುವ ನಕ್ಷತ್ರದಂತೆ ಬೆಳಗುತ್ತಿರುವ ಭಗವಚ್ಚೇತನವಾದ ಸಿದ್ಧಜೀವವೊಂದು ದಯೆಯಿಂದ, ಮರುಕದಿಂದ ಬದ್ಧ ಜೀವರ ಉದ್ಧಾರಕ್ಕಾಗಿ, ತನ್ನ ಬಳಿಗೆ ಬಂದವರಿಗೆ, ನೊಂದವರಿಗೆ ಹೃದಯದ ತಮಸ್ಸನ್ನು ಪರಿಹರಿಸಿ, ಶಾಂತಿ

ಅಭಿವಂದನಾ

ಸಮಾಧಾನಗಳನ್ನು ನೇರವಾಗಿ ಹೃದಯಕ್ಕೆ ತಂದುಕೊಡುವ, ಭಕ್ತಿಯನ್ನುದ್ದೇಪಿಸಿ ಭಗವಂತನೆಡೆಗೆ ನಮ್ಮನ್ನು ಕೊಂಡೊಯ್ಯುವ ಚಿತ್‌ಸ್ವರೂಪಿಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ನಮ್ಮ ಮುಂದೆ ನಡೆದಾಡುವ ದೇವರಾಗಿದ್ದಾರೆ. ಶಿಷ್ಯ ಕೋಟಿಯು ಶತಮಾನಗಳಿಂದ ನೊಂದು ಬೆಂದು, ಭವರೋಗವನ್ನು ಹರಣ ಮಾಡುವ ಗುರುವಿಗಾಗಿ ಕಾದು ಪ್ರಭು ಪರಮಾತ್ಮನಲ್ಲಿ ಇಟ್ಟ ಮೊರೆಯಿಂದ ಜಗತ್‌ಪ್ರಭುವೇ ಮೈದೋರಿ ಬಂದಿದ್ದಾರೆ. ಶತ ಶತಮಾನಗಳಿಗೊಮ್ಮೆ ಇಂತಹ ಭಗವದ್ವಿಭೂತಿ ಪುರುಷರು ವಿಶಾಲ ಲೋಕದ ಉದ್ಧಾರಕ್ಕಾಗಿ ಬಂದಿರುವ ನಿದರ್ಶನಗಳಂತೆ ಪೂಜ್ಯರು ಇಪ್ಪತ್ತನೆ ಶತಮಾನದ ದೇವಮಾನವರಾಗಿ ವಿರಾಜಿಸುತ್ತಿದ್ದಾರೆ. ಇವರ ಕಾರ್ಯವ್ಯಾಪ್ತಿಯು ಲೋಕ ಲೋಚನಕ್ಕೆ ತಿಳಿಯಲು ಅಸಾಧ್ಯವಾಗಿದೆ. ಬಲಿ ಚಕ್ರವರ್ತಿಯಿಂದ ಮೂರು ಹೆಜ್ಜೆ ಭೂ ದಾನವನ್ನು ಪಡೆದ ವಾಮನ ಮೂರುತಿ ತನ್ನ ಒಂದೇ ಹೆಜ್ಜೆಯಿಂದ ಅಳೆದಂತೆ ಶ್ರೀಗಳವರು ತಮ್ಮ ಬಾಹುಗಳನ್ನು ದಶ ದಿಗಂತದವರೆಗೆ ಚಾಚಿದ್ದಾರೆ. ಪೂಜ್ಯರು ಕೇವಲ ಇಹಲೋಕದ ಚಿಂತನೆಯಲ್ಲಿಯೇ, ಸೇವೆಯಲ್ಲಿಯೇ ಇದ್ದಾರೆ ಎನ್ನುವಂತೆ ಭಾಸವಾದರೂ ಅಂತರಂಗದ ಆತ್ಮಶ್ರೀಯಲ್ಲಿ ಸದಾ ಅನುರಕ್ತಿಯನ್ನು ಹೊಂದಿದ್ದಾರೆ.

ಒಬ್ಬ ಹೆಸರಾಂತ ಕವಿ ಹೇಳುವಂತೆ ನಮ್ಮ ಗುರುಗಳು ಹೇಗೆಂದರೆ

ಹೊರಗೆ ಲೋಕಾಸಕ್ತಿ ಒಳಗೆ ಸಕಲ ವಿರಕ್ತಿ
ಹೊರಗೆ ಕಾರ್ಯಧ್ಯಾನ ಒಳಗದರುದಾಸೀನ
ಹೊರಗೆ ಸಂಸ್ಕೃತಿಭಾರ ಒಳಗದರ ತಾತ್ಸಾರ
ವರಯೋಗ ಮಾರ್ಗವಿದು ಮಂಕುತಿಮ್ಮ॥

ಶ್ರೀಗಳು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧೀಶರಾಗಿ ಶ್ರೀ ಕ್ಷೇತ್ರವನ್ನು ಜಗದ್ವಿಸ್ತಾರಗೊಳಿಸಿ ಸ್ತ್ರೀ ಸಾಮಾನ್ಯರಿಗೂ, ದೀನದಲಿತರಿಗೂ, ದುಃಖ ದುಮ್ಮಾನದಲ್ಲಿರುವವರಿಗೂ ಆಶ್ರಯತಾಣವನ್ನಾಗಿಸಿದ್ದಾರೆ. ಕೋಣನ ಬಾಯಿಂದ ವೇದವನ್ನು ಹೇಳಿಸಿದ, ಜ್ಞಾನ ದೇವರಂತೆ ಸಂಸ್ಕಾರವೇ ಇಲ್ಲದವರ ಬಾಯಿಯಿಂದ ಗೀತಾದಿ ವೇದೋಪನಿಷತ್ತುಗಳ ಗಾಯನ ಮಾಡುವಂತೆ ಆಶೀರ್ವದಿಸಿದ್ದಾರೆ.

ನಮ್ಮ ಸದ್ಗುರುಗಳ ದಿವ್ಯಜೀವನವನ್ನು ಸಿಂಹಾವಲೋಕನ ಮಾಡಿದರೆ, ಹನ್ನೆರಡನೆಯ ಶತಮಾನದ ಬಸವಣ್ಣನವರ ಕ್ರಾಂತಿ, ಸ್ವಾಮಿ ವಿವೇಕಾನಂದ 'ಏಳಿ ಎದ್ದೇಳಿ ಗುರಿಮುಟ್ಟುವ ತನಕ ನಿಲ್ಲದಿರಿ' ಎಂಬ ವೀರವಾಣಿ ಸ್ಮರಣೆಗೆ ಬರುತ್ತದೆ.

ದೇಶದ ಹಿತಕ್ಕಾಗಿ, ರಾಷ್ಟ್ರೋನ್ನತಿಗಾಗಿ, ಸಮಾಜದ ಕಲ್ಯಾಣಕ್ಕಾಗಿ ನಿಷ್ಕಾಮಕರ್ಮವನ್ನು ಮಾಡುತ್ತಾ ಶ್ರೀಗಳವರು ಹಸಿದವರಿಗೆ ಅನ್ನ, ರೋಗಿಗೆ ವೈದ್ಯರು,

ಬುದ್ಧಿಗೆ ವಿದ್ಯೆ ಈ ಮೂರನ್ನು ಕೊಡುವುದರ ಜೊತೆಗೆ ನಿರಕ್ಷರಕುಕ್ಷಿಗಳಾದ ಲಕ್ಷಾಂತರ ಜನರಿಗೆ ಆತ್ಮವಿದ್ಯೆಯನ್ನು ಕರುಣಿಸಿ ಭವಸಾಗರವನ್ನು ದಾಟಿಸುವಲ್ಲಿ ನಾವೆಯಾಗಿದ್ದಾರೆ.

ಅವರ ಆಧ್ಯಾತ್ಮಿಕ ಮನೋವೃತ್ತಿ, ರಚನಾತ್ಮಕ ಮನೋಭಾವ. ಸಾಹಿತ್ಯ ಪ್ರೇಮ, ಜನಾನುರಾಗ, ಹೊರ ಒಳಗಿನ ಪರಿಶುದ್ಧತೆ, ಸರಳ ನಿರಾಡಂಬರ ಜೀವನ ಮತ್ತು ಉದಾತ್ತವಾದ ಕರ್ತೃತ್ವ ಶಕ್ತಿಯನ್ನು ನಮಗೆ ಬಳುವಳಿಯಾಗಿ ಕೊಟ್ಟಿದ್ದಾರೆ. ನಮ್ಮಂತಹವರಿಗೆ ದಾರಿದೀಪವಾಗಿದ್ದಾರೆ. ಕುಲವು ಪವಿತ್ರವಾಯಿತು, ನವಮಾಸ ಉದರದಲ್ಲಿ ಹೊತ್ತಂತಹ ತಾಯಿ ಕೃತಾರ್ಥಳಾದಳು. ಭೂಮಾತೆ ಪಾಪದ ಭಾರದಿಂದ ಮುಕ್ತಳಾಗಿ ಪುಣ್ಯವಂತಳಾದಳೆಂದು ಹೇಳಬಹುದು. ಅಂತೆಯೇ ಭಾರತಮಾತೆಯು ಇಂತಹ ದಿವ್ಯ ಪುರುಷರನ್ನು ತನ್ನ ಕೊರಳಿಗೆ ಮಂದಾರ ಪುಷ್ಪವನ್ನಾಗಿ ಧರಿಸಿದ್ದಾಳೆ ಎಂಬುದರಲ್ಲಿ ಸಂಶಯವಿಲ್ಲ.

ಜಗದ್ಗುರುಗಳಿಗೆ ಅರ್ಧ ಶತಮಾನಗಳು ಸಂದಿವೆ ಎಂದು ಲೌಕಿಕ ದೃಷ್ಟಿಯಿಂದ ತಿಳಿದುಬಂದರೂ ಅವರು ಅಮರರು ಎಂದೂ ಯಾವಾಗಲೂ ನಮ್ಮೆಲ್ಲರ ಉದ್ಧಾರಕ್ಕಾಗಿ ಎಷ್ಟು ಜನ್ಮಗಳನ್ನಾದರೂ ಪಡೆಯುವ ಮಹಾಮಂತ್ರ ಅವರದಾಗಿದೆ.

***

ಅಭಿವಂದನಾ

ಮಾನವತಾವಾದಿಗಳು

-ಶ್ರೀ ಸಿದ್ಧೇಶ್ವರನಾಥ ಸ್ವಾಮಿಗಳು

ಶ್ರೀ ಆದಿಚುಂಚನಗಿರಿ ಸುಪ್ರಸಿದ್ಧವಾದ ಪುಣ್ಯಕ್ಷೇತ್ರ. ಶ್ರೀಕ್ಷೇತ್ರದಲ್ಲಿರುವುದು ಸಿದ್ಧಸಿಂಹಾಸನ. ಇದನ್ನಲಂಕರಿಸಿರುವ ಶ್ರೀ ಮಹಾಸ್ವಾಮಿಗಳು ಅಧಿಕ ಸಂಖ್ಯೆಯಲ್ಲಿ ಧಾರ್ಮಿಕ ಮುಖಂಡರ, ಮಠಾಧೀಶರ, ಜಗದಾಚಾರ್ಯರ ಹಾಗೂ ಸಾಧುಸಂತರ ಜೊತೆಗೂಡಿ ಧರ್ಮ ಜಾಗೃತಿ, ಸಂಸ್ಕೃತಿ, ಭಾವೈಕ್ಯತೆ, ವಿಶ್ವಧರ್ಮಸಮನ್ವಯ ಮಾನವ ಕಲ್ಯಾಣ ಮುಂತಾದ ವಿಷಯಗಳ ಬಗ್ಗೆ ಜನತೆಯನ್ನು ಆಶೀರ್ವದಿಸುತ್ತಿದ್ದಾರೆ. ಜಗತ್ತಿನ ಎಲ್ಲೆಡೆಯೂ ಕಾಳ್ಗಿಚ್ಚಿನಂತೆ ಹಬ್ಬುತ್ತಿರುವ ಅಸಮತೆ, ಅಸಹಕಾರ, ಅಶಾಂತ ವಾತಾವರಣವನ್ನು ನಿರ್ಮೂಲಗೊಳಿಸಲು, ದೇಶಪ್ರೇಮ, ದೇಶಭಕ್ತಿ, ಧರ್ಮಶ್ರದ್ಧೆ, ಸಂಸ್ಕೃತಿ ಹಾಗೂ ಸಂಘಟನೆಗಳನ್ನು ಬೆಳೆಸುತ್ತಾ, ಜನಜಾಗೃತಿಯನ್ನು ಮೂಡಿಸುತ್ತಾ, ಹಿಂದೂ ದೇಶದ ಪವಿತ್ರ ಸಂಸ್ಕೃತಿಯ ಹಿನ್ನೆಲೆಯಲ್ಲಿ ಸರ್ವಧರ್ಮಗಳ ಸಮನ್ವಯತೆಯ ದೃಷ್ಟಿಯಿಂದ ಶಾಂತಿ, ಸಮತೆ ಸೋದರಭಾವ, ಸಹಬಾಳ್ವೆಗೆ ಹೆಚ್ಚು ಗಮನ ಕೊಡುತ್ತಾ; ಮತ್ತು ಸಮಾಜವನ್ನು ಕಾಡುತ್ತಿರುವ ಅನೇಕ ಅನಿಷ್ಟಗಳಿಂದ ಜನರನ್ನು ಮುಕ್ತಗೊಳಿಸಿ ಅವರಲ್ಲಿ ಸಾಮಾನ್ಯಜ್ಞಾನ, ವಿಚಾರಶೀಲತೆ, ಉದಾಭಾವನೆ, ಸಮನ್ವಯ ಮನೋಧರ್ಮ ಎಂಬ ಮಾನವೀಯ ಗುಣಗಳನ್ನು ಬಿತ್ತರಿಸುತ್ತಾ ಮಾನವತಾವಾದಿಗಳ ಸಿದ್ಧಾಂತಗಳಿಗೆ ಪುಷ್ಟಿಕೊಡುತ್ತಿದ್ದಾರೆ.

ದೇಹ ಬೆಳೆದರೆ ಸಾಲದು. ಆತ್ಮವಿಕಾಸವೂ ಆಗಬೇಕು. ವ್ಯಕ್ತಿಯ ವಿಕಾಸಕ್ಕೆ ಶಿಕ್ಷಣವೇ ಅಗತ್ಯವೆಂಬುದನ್ನು ಅರಿತ ಮಹಾಸ್ವಾಮಿಗಳು ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಅವುಗಳಲ್ಲಿ ಒಂದಾದ ಜಗದ್ಗುರು ಶ್ರೀ ಬಾಲಗಂಗಾಧರನಾಥ ಸ್ವಾಮಿ ಉಚಿತ ವಸತಿಯುತ ಶಾಲೆಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ ತಾಲ್ಲೂಕಿನ ಅರ್ಚಕರಹಳ್ಳಿಯಲ್ಲಿ ವಿಸ್ತಾರವಾದ ಪ್ರದೇಶದಲ್ಲಿ ನಿರ್ಮಾಣಗೊಂಡು ಪ್ರಕೃತಿಯ ಅಭಿಶಾಪಕ್ಕೆ ತುತ್ತಾದ ನತದೃಷ್ಟ ಅಂಧಮಕ್ಕಳ ಶ್ರೇಯೋಭಿವೃದ್ಧಿಗೆ ಅಹರ್ನಿಶಿ ದುಡಿಯುತ್ತಿದ್ದೆ. ಈ ಅಂಧ ಮಕ್ಕಳು ಯಾವ ನಾಗರಿಕರಿಗೂ, ಬುದ್ಧಿಶಕ್ತಿಯಲ್ಲಾಗಲಿ, ಬಾವಭಕ್ತಿಯಲ್ಲಾಗಲಿ ಕಡಮೆಯಲ್ಲಿ ಎಂಬುದನ್ನು ದೃಢಪಡಿಸುತ್ತಿದ್ದಾರೆ.

ಅಂಧರ ಶಾಲೆಯ ಪ್ರಾಂಗಣದಲ್ಲಿಯೆ ಶ್ರೀ ಬಸವೇಶ್ವರ ದೇವಾಲಯವು ಭಕ್ತಾದಿಗಳ ಸಹಾಯದಿಂದ ನಯನ ಮನೋಹರವಾಗಿ ನಿರ್ಮಾಣಗೊಂಡಿದೆ. ಇಲ್ಲಿಗೆ ದೇಶ ವಿದೇಶಗಳಿಂದ ಭಕ್ತಾದಿಗಳು ತಂಡೋಪತಂಡವಾಗಿ ಭೇಟಿ ನೀಡುತ್ತಿದ್ದಾರೆ. ಶ್ರೀ ಗಳವರು ಮಾಡಿರುವ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಅಂಧಮಕ್ಕಳ ಸಂಸ್ಥೆ ರಾಷ್ಟ್ರಕ್ಕೆ ಮಾದರಿಯಾಗಿ ಹೊರಹೊಮ್ಮುವುದರಲ್ಲಿ ಸಂಶಯವಿಲ್ಲ.

***

ಅಭಿವಂದನಾ

ಶ್ರೀಗಳವರು ನಡೆದುಬಂದ ದಾರಿ

ಶ್ರೀ ಶ್ರದ್ಧಾನಾಥಸ್ವಾಮಿಗಳು

ಶತಶತಮಾನಗಳಿಂದ ಕಷ್ಟನಷ್ಟಗಳಿಗೆ ಸಿಕ್ಕಿ ಪರಿತಪಿಸುತ್ತಿದ್ದ ಮತ್ತು ನಾಗರೀಕರಿಂದ ದೂರವಾಗಿ ವಿದ್ಯೆಯಿಂದ ವಂಚಿತರಾಗಿ ಹೇಗೋ ತಮ್ಮ ಜೀವನವನ್ನು ಸಾಗಿಸುತ್ತಿರುವವರ ಪ್ರತಿ ಹಳ್ಳಿಹಳ್ಳಿಗೂ ಹೋಗಿ ಅವರಿಗೆ ಜೀವನದ ಮೌಲ್ಯಗಳನ್ನು ತಿಳಿಸುತ್ತಾ ಮನುಷ್ಯ ಮಹಾತ್ಮನಾಗುವ ಮಾರ್ಗದ ಬೋಧನೆಯನ್ನು ತುಂಬುತ್ತಿದ್ದಾರೆ. ಭಕ್ತನಿದ್ದ ಕಡೆಗೆ ಭಗವಂತನೇ ಬಂದು ದರ್ಶನ ಕೊಡುವಂತೆ ಜೀವನದ ದಿಕ್ಕನ್ನೇ ಕಾಣದೇ ನಿರಾಶೆಯಿಂದ ಕಂಗಾಲಾದವರಿಗೆ ಅವರ ಬಳಿಗೆ ಹೋಗಿ ನಿಂತು ಶಾಂತಿ ಸಮಾಧಾನವನ್ನು ತುಂಬಿದ್ದಾರೆ ಮತ್ತು ತುಂಬುತ್ತಿದ್ದಾರೆ. ನಿರಾಶೆಗೊಳಗಾದಂತವರ ಮಕ್ಕಳ ಏಳಿಗೆಗಾಗಿ ವಿದ್ಯಾಕ್ಷೇತ್ರಗಳನ್ನು ಮತ್ತು ವಸತಿ ಸೌಕರ್ಯಗಳನ್ನು ಪ್ರಾರಂಭಿಸುವ ಸಲುವಾಗಿ ನಾಡಿನಾದ್ಯಂತ ಭಿಕ್ಷಾಪಾತ್ರೆಯನ್ನಿಡಿದು ಪ್ರತಿ ಹಳ್ಳಿಹಳ್ಳಿಗೂ ಹೋಗಿ ಈ ಮಹತ್ತರ ಕಾರ್ಯದಲ್ಲಿ ಸಮಸ್ತರೂ ಪುಣ್ಯಭಾಜನರಾಗಲು ಅವಕಾಶ ಮಾಡಿಕೊಟ್ಟಿದ್ದಾರೆ. ಇದು ಶ್ರೀಗಳವರ ಹೃದಯಾಂತರಾಳವನ್ನು ಪ್ರಕಟಿಸುತ್ತದೆ.

ಶ್ರೀಕ್ಷೇತ್ರದ ಅಕ್ಕಪಕ್ಕ ಪ್ರವಾಸ ಮಾಡುತ್ತಿದ್ದ ಸಮಯದಲ್ಲಿ ಅನೇಕ ರೋಗಿಗಳ ಆಕ್ರಂದನ ಶ್ರೀಗಳವರ ಹೃದಯವನ್ನು ಮಿಡಿಸಿತು. ಆರೋಗ್ಯವಿಲ್ಲದೇ ರೋಗಗ್ರಸ್ಥರಾಗಿ ಅದರ ನಿವಾರಣೆಗೆ ಉತ್ತಮವಾದ ಆಸ್ಪತ್ರೆ ಇಲ್ಲದೆ ಬಳಲುತ್ತಿದ್ದುದನ್ನು ನೋಡಿದರು ಉತ್ತಮವಾದ ಆಸ್ಪತ್ರೆಗಳು ಬೆಂಗಳೂರು ಮೈಸೂರು ನಗರಗಳಲಿದ್ದವು. ಈ ದರಿದ್ರನಾರಾಯಣರು ಅಲ್ಲಿಗೆ ಹೋಗಲು ಅಶಕ್ತರಾಗಿದ್ದರು. ಹೇಗಾದರೂ ಹೋಗೋಣವೆಂದರೆ ಬಡತನದ ಬೇಗೆ ಒಂದು ಕಡೆ ತಾಂಡವವಾಡುತ್ತಿದೆ. ಹೀಗೆ ದುಃಖ ಕಣ್ಣೀರಿನಿಂದ ಕೈ ತೊಳೆಯುತ್ತಿದ್ದ ಜನರನ್ನು ನೋಡಿ ಒಂದು ಉತ್ತಮವಾದ, ಜನಸಾಮಾನ್ಯರಿಗೆ ಎಟಕುವ ಬೃಹತ್ ಆಸ್ಪತ್ರೆಯನ್ನು ಸ್ಥಾಪಿಸಲು ಸಂಕಲ್ಪಿಸಿದರು. ಈಗ ಆಸ್ಪತ್ರೆಯಿರುವ ಜಾಗದಲ್ಲಿ ಒಂದು ಕುರುಚಲು ಗಿಡವು ಬೆಳೆಯದಂತಹ ಬರಡಾದ ನಿರ್ಜನ ಪ್ರದೇಶದಲ್ಲಿ ಕೇವಲ ಒಂದು ದಶಕದಲ್ಲಿ ಹೊಸದಾದ ನಗರವನ್ನೇ ಕಾಣುತ್ತಿದ್ದೇವೆ. ಸ್ವಾಮೀಜಿಯವರು ಪ್ರಕೃತಿದತ್ತವಾಗಿ ಕರುಣೆಯಿಂದ ನಡೆಸಿದ ಪವಾಡವೆ ಆಗಿದೆ.

ನಮ್ಮ ಉಪನಿಷತ್‌ಕಾರರು "**ಮಾತೃದೇವೋಭವ**" ಎಂದು ತಾಯಿಗೆ ಪ್ರಥಮಸ್ಥಾನವನ್ನು ಕೊಟ್ಟಿದ್ದಾರೆ. ಅಂತೆಯೇ "**ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ**"- ಎಲ್ಲಿ ಹೆಣ್ಣಿಗೆ ಪೂಜ್ಯತೇ ದೊರೆಯುತ್ತದೆಯೋ, ಆಕೆ ಎಲ್ಲಿ ಸಂತೋಷದಿಂದ ಇರುತ್ತಾಳೋ ಅಲ್ಲಿ ಎಲ್ಲಾ ದೇವತೆಗಳು ಇರುತ್ತಾರೆ ಎಂದು ವೇದವು ಸಾರುತ್ತಿದ್ದರೂ ನಮ್ಮ ನಾಡಿನಲ್ಲಿ ಹೆಣ್ಣಿನ ಶೋಷಣೆ ಇತಿಹಾಸದುದ್ದಕ್ಕೂ ನಿರಂತರವಾಗಿ ಸಾಗಿ ಬಂದಿರುವುದನ್ನು ಕಾಣುತ್ತೇವೆ. ಒಮ್ಮೆ ಶ್ರೀಗಳವರು ಚಿಕ್ಕಮಗಳೂರು ಜಿಲ್ಲೆಯ

ಪ್ರವಾಸದಲ್ಲಿದ್ದಾಗ ಒಬ್ಬ ಹೆಣ್ಣುಮಗಳು ಹೃದಯವಿದ್ರಾವಕವಾದ ತನ್ನ ಕಥೆಯನ್ನು ಸ್ವಾಮೀಜಿಯವರ ಮುಂದೆ ನಿವೇದಿಸಿದಳು. ಪ್ರತಿ ದಿವಸ ಕುಡಿದು ಮತ್ತೇರಿ ಮನೆಗೂ ಬಾರದೇ ದಾರಿಯಲ್ಲಿ ಬಿದ್ದಿರುತ್ತಿದ್ದ ತನ್ನ ಗಂಡನನ್ನು ಮನೆಗೆ ಎತ್ತಿ ಕರೆತಂದು ಸಂತೈಸಿದ ಒಂದೆರಡು ಗಂಟೆಗಳಲ್ಲಿ ಕುಡಿದ ಮತ್ತಿನಿಂದ ಪ್ರಜ್ಞೆಯಲ್ಲಿದ್ದವನು ಮನಸಾರೆ ಹೆಂಡತಿಮಕ್ಕಳಿಗೆ ಹೊಡೆದು ಮನೆಯಿಂದ ಹೊರಗೆ ತಳ್ಳಿ ಮಲಗುತ್ತಿದ್ದುದನ್ನು ನೋಡಿ ಬೇಸತ್ತ ಹೆಣ್ಣುಮಗಳು ತನ್ನ ಎರಡು ವರ್ಷದ ಮತ್ತು ನಾಲ್ಕು ವರ್ಷದ ಎರಡು ಮಕ್ಕಳೊಡನೆ ಆತ್ಮಹತ್ಯೆ ಮಾಡಿಕೊಳ್ಳಲು ನಿಶ್ಚಯಿಸಿ, ಊರಿನ ಪಕ್ಕದ ಬಾವಿಯ ಹತ್ತಿರ, ಇದ್ದುದನ್ನು ನೋಡಿದ ಆ ಊರಿನ ಜನರು ಸಮಾಧಾನಪಡಿಸಿ ಮತ್ತೆ ಊರಿಗೆ ಕರೆತಂದರು. ಶ್ರೀಗಳವರು ಚಿಕ್ಕಮಗಳೂರಿಗೆ ಬಂದಿರುವ ವಿಷಯವನ್ನು ತಿಳಿಸಿದರು. 'ಸ್ವಾಮೀಜಿ! ನನ್ನ ಈ ಎರಡು ಮಕ್ಕಳನ್ನು ಸ್ವೀಕರಿಸಿ ನನ್ನ ಜೀವನ ಹೇಗೋ ನಡೆಸುತ್ತೇನೆ' ಎಂದು ತನ್ನ ಜೀವನದ ದುಷ್ಪರಿಣಾಮವನ್ನು ಶ್ರೀಗಳವರಿಗೆ ನಿವೇದಿಸಿದಾಗ ವಿಶಾಲವಾದ ಯೋಚಿಸಿ ನಾಡಿನ ಎಷ್ಟೋ ಹೆಣ್ಣುಮಕ್ಕಳು ಇಂತಹ ಕೆಟ್ಟ ಪರಿಸ್ಥಿತಿಯನ್ನು ಎದುರಿಸುತ್ತಿರುವುದನ್ನು ಮನಗಂಡು ಸಹಸ್ರಾರು ಜನರಿಗೆ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಶ್ರೀ ಮಠದ ವತಿಯಿಂದ ಉದ್ಯೋಗವನ್ನು ಕಲ್ಪಿಸಿ ಸ್ವಾವಲಂಬಿಗಳಾಗುವಂತೆ ಮಾಡಿ, ಸ್ತ್ರೀಸಾಮಾನ್ಯರ ಕಷ್ಟಗಳಿಗೂ ಸ್ಪಂದಿಸಿದ್ದಾರೆ.

''**ಒಲೆಯತ್ತಿ ಉರಿದಡೆ ನಿಲ್ಲಬಹುದು ಧರೆಯತ್ತಿ ಉರಿದಡೆ ನಿಲ್ಲಹುದೇ**'' ಎಂಬಂತೆ ಜನಸಾಮಾನ್ಯರಿಂದಾಗುವ ಅಹಿತಕರ ಘಟನೆಗಳನ್ನು ಹೇಗೋ ಸಹಿಸಬಹುದು. ಆದರೆ ಪ್ರಕೃತಿಯಿಂದಾಗುವ ಅಹಿತಕರ ಘಟನೆಗಳನ್ನು ಸಹಿಸುವುದು ಕಷ್ಟವಾಗುತ್ತದೆ. ಕೆಲವರು ಹುಟ್ಟುತ್ತಿದ್ದಂತೆ ಕೆಲವರು ಹುಟ್ಟಿದ ಮೇಲೆ ನೇತ್ರಹೀನರಾಗಿ ತಮ್ಮ ಇಡೀ ಜೀವನವನ್ನು ಕಾರ್ಗತ್ತಲೆಯಲ್ಲಿ ಕಳೆಯುವುದು ತುಂಬಲಾರದ ನಷ್ಟವೇ ಸರಿ. ಇಂತಹ ಮಕ್ಕಳನ್ನು ನೋಡಿ ಅವರೂ ಸಮಾಜದಲ್ಲಿ ಬದುಕಿಬಾಳಲು ಅರ್ಹರಾಗುವಂತೆ ಅವರಿಗಾಗಿಯೇ ಒಂದು ವಿದ್ಯಾಕೇಂದ್ರವನ್ನು ತೆರೆದು ವಿದ್ಯೆಯನ್ನು ಕೊಡುವುದರ ಜೊತೆಗೆ ಅವರು ಜೀವನದಲ್ಲಿ ಸ್ವಾವಲಂಬಿಗಳಾಗುವಂತೆ ಮಾಡಿದ ಶ್ರೀಗಳವರ ಹೃದಯ ಶ್ರೀಮಂತಿಕೆ ಗಮನಾರ್ಹವಾದುದು.

ಪೂಜ್ಯರು ತಮ್ಮ ಜೀವನದ ಒಂದೊಂದು ಘಟ್ಟದಲ್ಲಿಯಯೂ ಸಮಾಜಕ್ಕಾಗಿ ಮತ್ತು ಜನಸಾಮಾನ್ಯರಿಗಾಗಿ ಸ್ಪಂದಿಸಿ, ಸಮಾಜದಿಂದ ಅವರಿಗೆ ಅನ್ಯಾಯವಾದಾಗ ಪ್ರತಿಭಟಿಸಿ, ನ್ಯಾಯವನ್ನು ದೊರಕಿಸಿಕೊಟ್ಟಿದ್ದಾರೆ. ಹಾಗೆಯೇ ಸಮಾಜದಲ್ಲಿ ಧಾರ್ಮಿಕತೆಯನ್ನು ಬಿತ್ತುತ್ತ ನಾಸ್ತಿಕತೆಯನ್ನು ಹೋಗಲಾಡಿಸಿ ಆಸ್ತಿಕಭಾವನೆಯನ್ನು ತುಂಬುತ್ತಾ, ದುಃಖದಲ್ಲಿರುವ ದರಿದ್ರನಾರಾಯಣರ ರಕ್ಷಣೆಗಾಗಿ ಹಗಲಿರುಳು ಶ್ರಮಿಸುತ್ತಾ ಮಹಾಪುರುಷರು ಹಿಮಾಲಯದೆತ್ತರ ಬೆಳೆದಿದ್ದಾರೆ.

***

ಅಭಿವಂದನಾ

ಶ್ರೀ ಸದ್ಗುರು

ಶ್ರೀ ಪ್ರಸನ್ನನಾಥಸ್ವಾಮಿಗಳು

ಗುರುವೇ ಬ್ರಹ್ಮ, ಗುರುವೇ ವಿಷ್ಣು, ಗುರುವೇ ಮಹೇಶ್ವರ ಎಂಬ ಮಾತು ಪ್ರಾಚೀನ ಕಾಲದಿಂದಲೂ ಕೇಳಿಬರುವಂತಹದೆ ಆಗಿದೆ. ತ್ರಿಮೂರ್ತಿ ಸ್ವರೂಪಿಯಾದ ಶ್ರೀಗುರುವಿನ ಕರುಣಾಕಟಾಕ್ಷ ಶಿಷ್ಯರ ಮೇಲೆ ಬಿದ್ದರೆ ಮಾತ್ರ ಆ ಶಿಷ್ಯರ ಆತ್ಮೋದ್ಧಾರವಾಗಲು ಸಾಧ್ಯ.

ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರಿಗೂ ಅವರ ಕರಕಮಲ ಸಂಜಾತರಾದ ನಮ್ಮಂತಹ ಶಿಷ್ಯರಿಗೂ ಇರುವ ಸಂಬಂಧ ನೋಡಿದಾಗ, ನೆನೆದಾಗ ನಮ್ಮ ಮೈಮನಗಳು ಭಕ್ತಿಭಾವದಿಂದ ಬಾಗುವುದರ ಹೊರತಾಗಿ ಬೇರಾವ ರೀತಿಯಲ್ಲೂ ಅದನ್ನು ವ್ಯಕ್ತ ಪಡಿಸಲಾರೆವು.

ತಂದೆಗೂ ಗುರುವಿಗೂ ಒಂದು ಅಂತರವುಂಟು
ತಂದೆ ತೋರುವನು ಸದ್ಗುರುವ। ಗುರುರಾಯ
ಬಂಧನವ ಕಳೆಯ ಸರ್ವಜ್ಞ

ಸರ್ವಜ್ಞನ ವಚನದಂತೆ ತಂದೆ ತನ್ನ ಮಕ್ಕಳ ಶ್ರೇಯಸ್ಸನ್ನು ಬಯಸಿ ಬೆಳೆಸುವ ರೀತಿ, ತಾಯಿ ತನ್ನ ಕರುಳಿನ ಕುಡಿಯನ್ನು ಮಮತೆಯ ನೀರೆರೆದು ಪೋಷಿಸುವಂತೆ, ಗುರು ತನ್ನ ಶಿಷ್ಯರ ಅಜ್ಞಾನ ನಿವಾರಿಸಿ ಜ್ಞಾನದೀಪವನ್ನು ನೀಡುವಂತೆ, ಇವೆಲ್ಲ ಕಾರ್ಯಗಳನ್ನು ತಾವೊಬ್ಬರೇ ಮಾಡುತ್ತಾ ಭಕ್ತಜನ ಕಲ್ಪವೃಕ್ಷವಾಗಿ ಶಿಷ್ಯರ ಆತ್ಮೋದ್ಧಾರಕರಾಗಿ, ಬೆಳಗುವ ಶ್ರೀಗಳವರ ಅದ್ಭುತ ವ್ಯಕ್ತಿತ್ವಕ್ಕೆ ಆತ್ಮ ಶಕ್ತಿಗೆ, ನಮೋ ಎಂದು ಶರಣಾಗುವೆ.

ಶ್ರೀ ಗುರುದೇವರು ಆದಿಚುಂಚನಗಿರಿ ಮಹಾಸಂಸ್ಥಾನಮಠದವರಾದರೂ ಅನ್ವರ್ಥ ಜಗದ್ಗುರುಗಳು. ಪೂಜ್ಯರ ಶಿಷ್ಯಕೋಟಿ, ಪುಣ್ಯಭೂಮಿ ಭಾರತದಲ್ಲಿ ಮಾತ್ರ ವಿದೇಶಗಳಲ್ಲೂ ನೆಲೆಸಿದ್ದಾರೆ. ಎಲ್ಲೆಡೆ ಸಂಚರಿಸಿ ಧರ್ಮ, ಸಂಸ್ಕೃತಿ ಪ್ರಚಾರ ಮಾಡಿದ ಶ್ರೀಗಳವರು ಕೇವಲ ಅಪ್ಪಣೆ ಮಾಡುವ ಸ್ವಭಾವದವರಲ್ಲ, ತಮ್ಮ ನಡೆ, ನುಡಿಗಳು ಇತರರಿಗೆ ಮೇಲ್ಪಂಕ್ತಿಯಾಗಿದ್ದು ಮಾರ್ಗದರ್ಶನ ಮೂಡುತ್ತಿರುವವರು, ಅವರ ಹಸನ್ಮುಖವನ್ನು ಕಂಡಾಗ ನಮ್ಮಲ್ಲಿ ಮೂಡುವುದು. ಭಯವಲ್ಲ, ಭಕ್ತಿ, ಶ್ರದ್ಧೆ ಮತ್ತು ಪ್ರೀತಿ, ಅವರ ವೈರಾಗ್ಯ ಇತರರಿಗೆ 'ಮೋಹವನ್ನು ದೂರಮಾಡು' ಎಂಬ ಉಪದೇಶ ನೀಡುತ್ತದೆ. ತೀರ ಸರಳ ಜೀವನ, ಸಾಮಾಜಿಕರೊಂದಿಗೆ ಸಹಜವಾಗಿ ಬೆರೆಯುವ ಅವರ ಸ್ವಭಾವ ಪ್ರತಿಯೊಬ್ಬರಲ್ಲೂ ಆತ್ಮೀಯ ಭಾವನೆಯನ್ನು ಮೂಡಿಸುತ್ತದೆ. 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಪಡೆದವರಂತೆ' ಸಮಾಜದಲ್ಲಿ ಉಳ್ಳವರಿಂದ ಕಾಣಿಕೆಯಾಗಿ ಪಡೆದ

ಅಭಿವಂದನಾ

ದ್ರವ್ಯವನ್ನು ಸಮಾಜಕ್ಕಾಗಿ ವಿನಿಯೋಗಿಸಿ, ಸಮಾಜದ ಶೈಕ್ಷಣಿಕ, ನೈತಿಕ ಸರ್ವಾಂಗೀಣ ಅಭಿವೃದ್ಧಿಗಾಗಿ ಗ್ರಾಮಾಂತರ ಪ್ರದೇಶದಲ್ಲಿರುವ ಅವಿದ್ಯಾವಂತರ ದಾರಿದೀಪವಾಗಿ, ವಿದ್ಯಾವಂತರ ಜ್ಞಾನದೀಪವಾಗಿ, ಹಳ್ಳಿಯ ಮುಗ್ಧಜನರ ಕಷ್ಟಕಾರ್ಪಣ್ಯದಲ್ಲಿ ಭಾಗಿಗಳಾಗಿ 'ಜನಸೇವೆಯೇ ಜನಾರ್ದನಸೇವೆ' 'ದರಿದ್ರ ನಾರಾಯಣೊ ಭವ' ಎಂಬಂತೆ ಇಹಲೋಕದ ಸುಖಭೋಗಾದಿಗಳನ್ನು ತ್ಯಜಿಸಿ ಸರ್ವರ ಅಭಿವೃದ್ಧಿಗಾಗಿ ದುಡಿಯುತ್ತಿರುವ ದಿವ್ಯ ಸ್ವರೂಪಿ ನಮ್ಮ ಗುರುಗಳು.

ಗುರು ಗೋವಿಂದ ದೋಊ ಖಡೇ
ಕಾಕೇ ಲಾಗೇ ಪಾಯಾಂ
ಬಲಿ ಹಾರೀ ಗುರು ಆಪುನೋ
ಗೋವಿಂದ ದಿಯೋ ಬತಾಯಾ

ಗುರು ಮತ್ತು ಗೋವಿಂದರು ಇಬ್ಬರೂ ಒಂದೆಡೆ ನಿಂತರೆ ಯಾರ ಪಾದಕ್ಕೆ ಮಣಿವೆ ಎಂಬುದನ್ನು ನಿಮ್ಮಿಂದರಿವೆನು ಗುರುವೇ. ಆದ್ದರಿಂದ ನಿಮಗೆ ಮೊದಲ ಪ್ರಣಾಮ ಎಂಬ ಹಾಗೆ ಪರಮಾತ್ಮನ ಅರಿವನ್ನು ನಮಗೆ ನೀಡುವ ಸದ್ಗುರುವಿಗಿಂತ ದೊಡ್ಡ ದೇವರೇ ಇಲ್ಲ ಎನ್ನ ಬಹುದು.

ಶ್ರೀ ಶ್ರೀ ಶ್ರೀಗಳವರ ೫೦ ನೇ ಸಾರ್ಥಕ ವರ್ಧಂತಿಯನ್ನು ಕಳೆದ ವರ್ಷ ಇದೇ ದಿನದಂದು ಏರ್ಪಡಿಸಿದ್ದಾಗ ಆಕಸ್ಮಿಕವಾಗಿ ನಡೆದ ಘಟನೆಯಿದು. ಪೂಜ್ಯರು ಶಿವಮೊಗ್ಗದಲ್ಲಿ ಮೊಕ್ಕಾಂ ಹೂಡಿದಾಗ ವಿದ್ಯಾರ್ಥಿಯೊಬ್ಬ ಬೆಳಗ್ಗೆಯೇ ಎದ್ದು ಶ್ರೀಗುರುಗಳಿಗೆ ಶುಭಾಶಯ ತಿಳಿಸಿದನು. ಆಗ ಶ್ರೀಗುರುಗಳು ಕಾರಣವೇನೆಂದು ಕೇಳಿದಾಗ, ಆ ವಿದ್ಯಾರ್ಥಿ ಗುರುಗಳ ಜನ್ಮ ದಿನಾಂಕವನ್ನು ನೆನೆಪಿಸಿದ. ಆ ವಿದ್ಯಾರ್ಥಿ ಆದಿಚುಂಚನಗಿರಿ ಪುಸ್ತಕಗಳನ್ನು ಓದಿ Ph.D. ಮಾಡಬೇಕೆಂಬ ಆಕಾಂಕ್ಷೆಯನ್ನೂ ಹೊಂದಿರುತ್ತಾನೆ. ಅದೇ ದಿನ ಅವರ ೫೦ ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸುವ ಸೌಭಾಗ್ಯ ನಮಗೆ ಒದಗಿ ಬಂದುದು ನಮ್ಮ ಪುಣ್ಯ ವಿಶೇಷ ಎನ್ನಬೇಕು. ಈ ವಿಚಾರವನ್ನು ಅವಲೋಕಿಸಿದಾಗ ಕರ್ತವ್ಯ ನಿರ್ವಹಣೆಯಲ್ಲಿ ತಲ್ಲೀನರಾಗಿ, ತಮ್ಮ ಹುಟ್ಟಿದ ದಿನಾಂಕವನ್ನು ಮೈಮರೆಯುವ, ಸದಾ ಶಿಷ್ಯಕೋಟಿಯ ಉದ್ಧಾರವನ್ನೇ ಹಾರೈಸುವ ಇಂತಹ ಗುರುಗಳನ್ನು ಪಡೆದಿರುವ ನಾವೇ ಧನ್ಯರು.

***

ನಾ ಕಂಡ ಶ್ರೀಗಳವರು

-ಶ್ರೀ ಧರ್ಮಪಾಲನಾಥಸ್ವಾಮಿಗಳು

ಮಹಾಸ್ವಾಮಿಗಳವರ ಹೃದಯ ಬಹಳ ಕೋಮಲವಾದುದು. ಮಕ್ಕಳನ್ನು ಕಂಡರೆ ಅವರಿಗೆ ಬಹಳ ಪ್ರೀತಿ. ನಾನು ಶ್ರೀ ಮಠಕ್ಕೆ ಬಂದಾಗ ಅವರು ತೋರಿದ ಮಾತೃವಾತ್ಸಲ್ಯ ಅನುಪಮವಾದುದು. ನಾನು ನನ್ನ ಜೀವನದಲ್ಲಿ ಇಂತಹ ಮಾತೃವಾತ್ಸಲ್ಯವನ್ನು ಕಂಡಿರಲಿಲ್ಲ. ಪ್ರಾತಃಕಾಲದಲ್ಲಿಯೇ ಎದ್ದು ಗೀತಾ ಪಾರಾಯಣ ಮುಗಿಸಿ ಶ್ರೀಗಳವರ ದರ್ಶನಕ್ಕೆ ಹೋಗುವ ಪದ್ಧತಿ ನನ್ನದು. ಎಲ್ಲಾ ಮಕ್ಕಳು ಶ್ರೀಗಳವರ ಮುಂದೆ ನಿಂತು ಕಂಠ್ಯ ಮಂತ್ರವನ್ನು ಹೇಳುವಾಗ ಎಲ್ಲರನ್ನೂ ಗಮನಿಸಿದ ಶ್ರೀಗಳವರು ಯಾರು ಚೆನ್ನಾಗಿ ಕಲಿಯುತ್ತಾರೋ ಅವರನ್ನು ನನ್ನ ಜೊತೆ ಪ್ರವಾಸಕ್ಕೆ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿ ಚೆನ್ನಾಗಿ ಕಲಿತವರನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿಯ ಪರಿಸರದ ಪರಿಜ್ಞಾನವನ್ನು, ಆಧ್ಯಾತ್ಮದ ಮಾತುಗಳನ್ನು, ಒಳ್ಳೆಯ ವಿದ್ವಾಂಸರನ್ನು ಪರಿಚಯ ಮಾಡಿಸುತ್ತಿದ್ದರು. ಆ ಮೂಲಕ ಪ್ರಪಂಚದ ಅರಿವನ್ನು ಮೂಡಿಸುತ್ತಿದ್ದರು. ಇವುಗಳನ್ನು ನೋಡಿದಾಗ ನಮಗೆ ಕಬೀರದಾಸರ

''**ಪಾನೀ ಪೀನಾ ಚಾನಾಕೆ, ಗುರು ಕರಣ ಪಾವಂಕೆ**''

- ನೀರನ್ನು ಸೋಸಿಕುಡಿಯಬೇಕು; ಗುರುಗಳನ್ನು ಆಯ್ದು ಪಡೆಯಬೇಕೆಂಬ ಮಾತು ಜ್ಞಾಪಕಕ್ಕೆ ಬರುತ್ತದೆ. ಜನ್ಮಾಂತರದ ಪುಣ್ಯದಿಂದಲೋ, ದೇವಾತಾಕರುಣೆಯಿಂದಲೋ ಅಂತಹ ಶ್ರೀಗಳವರು ನನಗೆ ಗುರುವಾಗಿ ದೊರೆತರು.

ಯಾವ ಬಾಲಕನಾದರೂ ಹೊಸ ಸುಭಾಷಿತಗಳನ್ನು ಕಲಿತು ಶ್ರೀಗಳವರ ಮುಂದೆ ಹೇಳಿದರೆ, ಅವನಿಗೆ ಹಣ್ಣುಗಳನ್ನು ಕೊಡುವುದರ ಮೂಲಕ ಪ್ರೋತ್ಸಾಹ ನೀಡುತ್ತಿದ್ದರು. ನನಗೆ ೧೯೮೮ರಲ್ಲಿ ಆರೋಗ್ಯದ ಸ್ಥಿತಿ ಚಿಂತಾಜನಕವಾಗಿತ್ತು. ಅದನ್ನು ಶ್ರೀಗಳವರು ಗಮನಿಸಿ, ನನ್ನನ್ನು ಬೆಂಗಳೂರಿಗೆ ಕಳುಹಿಸಿ ಅಲ್ಲಿಯ ವೈದ್ಯರಿಗೆ ಹೇಳಿ ಚಿಕಿತ್ಸೆ ಕೊಡಿಸುವುದರ ಮೂಲಕ ಸಾವಿರಾರು ರೂ. ಗಳನ್ನು ಖರ್ಚು ಮಾಡಿ ನನ್ನನ್ನು ಉಳಿಸಿಕೊಂಡರು. ನನ್ನ ನಡೆ-ನುಡಿಗಳನ್ನು ನೋಡಿ, ಸಂಸ್ಕೃತ, ವೇದ, ಆಗಮ, ಅದ್ವೈತಶಾಸ್ತ್ರ ಇವುಗಳ ಅಧ್ಯಯನವನ್ನು ಮಾಡಿಸಿ ಸಂನ್ಯಾಸ ದೀಕ್ಷೆಯನ್ನು ಕೊಟ್ಟರು. ಆ ನಡುವೆ ಮೈಸೂರಿನಲ್ಲಿರುವ ಸಂಸ್ಕೃತ ಪಾಠಶಾಲೆಗೆ ಹೋಗುವುದನ್ನು ಬಿಟ್ಟ ವಿಷಯ ಶ್ರೀಗಳವರ ಗಮನಕ್ಕೆ ಬಂದಿತು. ಅವರು ನನ್ನನ್ನು ಕರೆದು ಏಕೆಂದು ಕೇಳಿದರು. ನಾನು 'ಸ್ವಾಮೀಜಿ, ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ತುಂಬಾ ತೊಂದರೆ ಮಾಡುತ್ತಾರೆ' ಎಂದು ಹೇಳಿದಾಗ,

ಶ್ರೀಗಳವರು ಹೇಳಿದರು- 'ಯಾರು ಏನೇ ಮಾಡಲಿ, ಯಾರು ಏನೇ ಹೇಳಲಿ. ನಿಮ್ಮ ಸಾಧನೆ ಬಹಳ ಮುಖ್ಯ. ಹಿಂದೆ ರಾಮತೀರ್ಥರು ದೇಶಸಂಚಾರ ಮಾಡುತ್ತಾ ಹೋಗುತ್ತಿದ್ದರು. ಒಬ್ಬ ತುಂಟ ಹುಡುಗ ತಾನು ಕೇಳಿದ ಪದಾರ್ಥವನ್ನು ಕೊಡಲಿಲ್ಲವೆಂದು ಬೇಕರಿಗೆ ಕಲ್ಲು ಎಸೆದು ಓಡಿಬಿಟ್ಟನು. ಆ ಮಾರ್ಗವಾಗಿ ಬರುತ್ತಿದ್ದ ರಾಮತೀರ್ಥರನ್ನು ನೋಡಿದ ಆ ಮಾಲೀಕರು ಅವರನ್ನು ಚೆನ್ನಾಗಿ ಹೊಡೆದುಬಿಟ್ಟರು. ಆಗ ಅವರು 'ಎಲ್ಲಾ ನಿಮ್ಮ ಆಶೀರ್ವಾದ' ಎಂದು ಹೇಳಿ ಮುಂದೆ ಹೊರಟು ಹೋದರು. ಹಾಗೆ ಪ್ರಪಂಚದಲ್ಲಿ ಯಾರು ಏನೇ ಮಾಡಿದರೂ ಸಹಿಸಿಕೊಂಡು ಹೋಗಬೇಕು. ಮಾನ, ಅಭಿಮಾನಗಳನ್ನು ದೂರ ಮಾಡಿ ಸಾಧನೆಯನ್ನು ಮಾಡಬೇಕು' ಎಂದು ಉಪದೇಶ ಮಾಡಿದರು. ಆಗ ನನಗೆ ಒಂದು ತತ್ತ್ವದ ಅರಿವಾಯಿತು-

''**ಮಾನ ಅಭಿಮಾನಗಳನ್ನು ಬಿಡಿಸಿ ಆನಂದವನು ತೋರಿದ ಗುರುವು**'' ಎಂದು.

ಇಂತಹ ಮಾತೃ ಹೃದಯವುಳ್ಳ ಗುರುಗಳು ಸಿಗುವುದು ಬಹಳ ಅಪರೂಪವಾಗಿರುತ್ತದೆ.

***

ಅಭಿವಂದನಾ

ಭಗವದವತಾರ

-ಶ್ರೀಅಮರಾನಂದಪರಮಹಂಸಸ್ವಾಮಿಗಳು

ಲೋಕೋದ್ಧಾರಕ್ಕಾಗಿ ಭಗವಂತನು ಅವತರಿಸುತ್ತಾನೆಂದು ಶೃತಿ ಸ್ಮೃತಿ ಪುರಾಣಗಳಲ್ಲಿ ಹೇಳಿದೆ. ಭಗವದ್ಗೀತೆಯಲ್ಲಿ ಭಗವಂತನು ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥ ಎಂದು ಹೇಳಿರುವ ಅಮೃತವಾಣಿ ಎಂದೆಂದಿಗೂ ಸತ್ಯ ಎಂಬುದನ್ನು ನಮ್ಮ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಮಾಡಿ ತೋರಿಸಿದ್ದಾರೆ. ಶ್ರೀ ಕಾಲಭೈರವೇಶ್ವರ ಮತ್ತು ಶ್ರೀ ಗಂಗಾಧರೇಶ್ವರನ ದಿವ್ಯಶಕ್ತಿ ಸ್ವರೂಪವೇ. ಸಚ್ಚಿದಾನಂದ ಸ್ವರೂಪರಾದ ನಮ್ಮ ಆತ್ಮವೈಭವದ ಮೂರ್ತಿ ಪರಮಪೂಜ್ಯ ಜಗದ್ಗುರು ಮಹಾಸ್ವಾಮಿಗಳವರು.

ಅಶಾಂತಿ, ಅಜ್ಞಾನ, ದುಃಖ, ದುಮ್ಮಾನ, ದಾರಿದ್ರ್ಯದಿಂದ ಕಂಗಾಲಾದ ಮಾನವ ಕೋಟಿಗೆ ಮಹಾಸ್ವಾಮಿಗಳವರ ಅವತಾರ ಅತ್ಯಾವಶ್ಯಕವಾಗಿತ್ತು. ಮಾನವಕೋಟಿಯ ಪ್ರಾರ್ಥನೆ ಭಗವಂತನಿಗೆ ಮುಟ್ಟಿತು. ಕೃಪಾಸಾಗರ ಭಕ್ತೋದ್ಧಾರಕ ಎಂಬ ಬಿರುದನ್ನು ಅಲಂಕರಿಸಿ ನರ ರೂಪದಿಂದ ಬಂದ ದೇವ ದೇವನೆ ನಮ್ಮ ಮಹಾಸ್ವಾಮಿಗಳವರು. ಮಾನವರ ಮಧ್ಯೆಯಿದ್ದ ಅನೇಕ ಸಮಸ್ಯೆಗಳನ್ನು ಸರಾಗವಾಗಿ ಬಿಡಿಸಿ ನಿರ್ಲಿಪ್ತತೆಯಿಂದ ಇರುವವರು ನಮ್ಮ ಗುರುಗಳು. ಅಜ್ಞಾನ ಅಂಧಕಾರವನ್ನು ಕಳೆದು ಜ್ಞಾನದಿಂದ ಸ್ವಸ್ವರೂಪ ಪ್ರಜ್ಞೆಯನ್ನು ಮೂಡಿಸುವವರು ನಮ್ಮ ಗುರುಗಳು. ಮಹಾಸ್ವಾಮಿಗಳವರ ದರ್ಶನ ಮಾತ್ರದಿಂದ ಶಾಂತಿ ಸಮಾಧಾನ ತೃಪ್ತಿಯನ್ನು ಹೊಂದಿ ಆನಂದ ತುಂದಿಲರಾಗದವರಿಲ್ಲ ಎಂದರೆ ಅತಿಶಯೋಕ್ತಿಯಲ್ಲ. '**ಸಾಧುದರ್ಶನಂ ಪೂರ್ವಪುಣ್ಯಂ, ಸ್ಪರ್ಶನಂ ಪಾಪನಾಶನಂ। ಸಂಭಾಷಣಂ ಮೋಕ್ಷ ಪ್ರದಂ, ಧ್ಯಾನೇನ ವಾಂಛಿಕ ಫಲಪ್ರಾಪ್ತಿಂ**' ಎಂಬ ಮಹಾಪುರುಷರ ಅಮೃತವಾಣಿ ನಮ್ಮ ಪರಮಪೂಜ್ಯ ಜಗದ್ಗುರು ಮಹಾಸ್ವಾಮಿಗಳ ಸನ್ನಿಧಿಗೆ ಮೀಸಲಾದುದು. ಪೂಜ್ಯಪಾದ ಮಹಾಸ್ವಾಮಿಗಳವರ ಕೃಪಾಶೀರ್ವಾದದಿಂದ ನಾಡಿನೆಲ್ಲೆಡೆ ಶಾಖಾ ಮಠಗಳು, ಆಶ್ರಮಗಳು, ಶಾಲಾ ಕಾಲೇಜುಗಳು, ಹಾಸ್ಟಲುಗಳು ಸಮುದಾಯ ಭವನಗಳು. ಇವಲ್ಲದೆ ಮಹಾಸ್ವಾಮಿಗಳ ಅಂತರಂಗದಲ್ಲಿ ಅದೆಷ್ಟು ಮಠಮಾನ್ಯ ಆಶ್ರಮಗಳು, ಶಾಲಾ ಕಾಲೇಜುಗಳು ತುಂಬಿರುವವೋ ತಿಳಿಯದು. ಸ್ಪರ್ಶಮಣಿಯು ಕಬ್ಬಿಣವನ್ನು ಸೋಂಕಲು ಕಬ್ಬಿಣ ಚಿನ್ನವಾಗುವುದೆಂದು ಹೇಳುತ್ತಾರೆ. ನಾವು ಸ್ಪರ್ಶಮಣಿಯನ್ನು ನೋಡಿಲ್ಲ. ನೋಡಿರುವ ಮುಟ್ಟಿರುವ ಮಾಹಾಸ್ಪರ್ಶಮಣಿಯೊಂದಿದೆ; ಅದೇ ನಮ್ಮ ಜಗದ್ಗುರು

ಮಹಾಸ್ವಾಮಿಗಳವರು. ಗುರುಕೃಪೆಯೆಂಬ ಜ್ಞಾನಾಂಜನದಿಂದ ಶಿಷ್ಯರು ಗುರುವಾಗುವರು. ದೇಶೋದ್ಧಾರವೇ ಉಸಿರಾಗಿರುವ ಪರಮಪೂಜ್ಯ ಮಹಾಸ್ವಾಮಿಗಳವರು ಜನತೆಯ ಕಲ್ಯಾಣಕ್ಕಾಗಿ ಹಗಲಿರುಳು ಅವಿಶ್ರಾಂತವಾಗಿ ಕಾರ್ಯತತ್ಪರರು, ಶಮ ದಮಾದಿಗಳಲ್ಲಿ ಮಹಾ ತಪೋಧನರು, ಪರಮಾತ್ಮಸ್ವರೂಪರು. ನಮ್ಮ ಮಹಾಸ್ವಾಮಿಗಳ ಕೀರ್ತಿ, ತ್ಯಾಗ, ಔದಾರ್ಯ ದೇಶ ವಿದೇಶಗಳಿಗೆ ಹರಡಿ. ಅಲ್ಲಿರುವ ಭಕ್ತರ ಅಪಾರ ಬೇಡಿಕೆಯನ್ನು ಮನ್ನಿಸಿ, ಮೂರು ನಾಲ್ಕು ಸಾರಿ ವಿದೇಶಕ್ಕೆ ಹೋಗಿ, ಹಿಂದೂ ಧರ್ಮದ ಹಿರಿಮೆಯನ್ನು ಬೋಧಿಸಿ, ಅವರ ಕಷ್ಟ ಸುಖಾದಿಗಳನ್ನು ವಿಚಾರಿಸಿ, ಭಾರತೀಯರನ್ನು ಭಾರತಮಾತೆಯನ್ನು ಮರೆಯದಿರೆಂದು ಎಚ್ಚರಿಸಿದವರು ನಮ್ಮ ಧೀಮಂತ ಗುರುವರ್ಯರು.

ದಣಿದ ಶರೀರಕ್ಕೆ ಕಾಲ ಕಾಲಕ್ಕೆ ಆಹಾರ, ನಿದ್ರೆ, ವಿಶ್ರಾಂತಿ ಬೇಡವೆ ಎಂದರೆ ನಾನೇನು ಮಾಡುತ್ತಿರುವೆ? ಎಲ್ಲವನ್ನೂ ಭೈರವೇಶ್ವರನೆ ಮಾಡುತ್ತಿದ್ದಾನೆ ಎನ್ನುವರು- ಇಂತಹ ತ್ಯಾಗಮೂರ್ತಿಯನ್ನು ನಾವು ಇನ್ನೆಲ್ಲಿ ಕಾಣುವುದು? ಇಂತಹ ಮಹಾಪುರುಷರನ್ನು ಬಳಸಿಕೊಂಡು ಧನ್ಯರಾಗುವುದು ಶಿಷ್ಯಕೋಟಿ ಮತ್ತು ಪ್ರಜಾಕೋಟಿಯ ಜಾಣ್ಮೆಯಲ್ಲಿದೆ.

***

ಚಿಂತನಶೀಲಸ್ವಾಮಿಗಳವರು

-ಶ್ರೀ ವಿದ್ಯಾನಂದ ಸ್ವಾಮಿಗಳು

ಸಿದ್ಧಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರ ೫೦ನೇ ವರ್ಷದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಮಹಾಸ್ವಾಮಿಗಳವರು ಮಾಡಿದ ಅದ್ಭುತ ಕಾರ್ಯಗಳನ್ನು ಸ್ಮರಣೆ ಮಾಡಿಕೊಳ್ಳುತ್ತಿದ್ದೇನೆ.

ಮಹಾಸ್ವಾಮಿಗಳವರು ತಾವು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಎಲ್ಲಿಯಾದರೂ ಸಾಧುಸಂತರನ್ನು ಕಂಡರೆ ಅವರನ್ನು ಆದರದಿಂದ ಕರೆದು ಉಪಚರಿಸಿ ಕಳುಹಿಸುತ್ತಿದ್ದರು. ಎಲ್ಲಿ ಶಾಸ್ತ್ರಶ್ರವಣ, ಪುರಾಣ, ಭಗವದ್ಗೀತೆ ಪ್ರವಚನ ನಡೆಯುತ್ತಿದ್ದಿತೋ ಅಲ್ಲಿಗೆ ಹೋಗಿ ಪ್ರವಚನವನ್ನು ಕೇಳುತ್ತಿದ್ದ ಇವರು ವಿದ್ಯಾಭ್ಯಾಸ ಸಮಯದಲ್ಲಿಯೇ ಆಧ್ಯಾತ್ಮಿಕ ಪ್ರವೃತ್ತಿ ಬೆಳೆಸಿಕೊಂಡು ಬರುತ್ತಿದ್ದ ಪುಣ್ಯಾತ್ಮರು. ಇವರ ಮನೋಭಾವವನ್ನು, ಒಳ್ಳೆಯ ನಡತೆ ಗುಣಗಳನ್ನು ನೋಡಿದರೆ ಇವರು ದೊಡ್ಡ ಮಹಾತ್ಮರಾಗುತ್ತಾರೆಂದು ತೋರುತ್ತಿದ್ದಿತು. ಕಾಲೇಜಿನಲ್ಲಿಯೂ ಎಲ್ಲಾ ಉಪಾಧ್ಯಾಯರ ಪ್ರೀತಿಯನ್ನು ಗಳಿಸಿಕೊಂಡಿದ್ದರು.

ಶ್ರೀಗಳವರು ಶ್ರೀ ಆದಿಚುಂಚನಗಿರಿಯಲ್ಲಿ ಪಟ್ಟಾಧಿಕಾರಕ್ಕೆ ಬಂದನಂತರ ಅನೇಕ ದುಷ್ಟಶಕ್ತಿಗಳು ಕಿರುಕುಳಕೊಟ್ಟ ಕಾಲದಲ್ಲಿಯೂ ಶಾಂತ ರೀತಿಯಿಂದ ಅವರಿಗೆ ಬುದ್ಧಿವಾದವನ್ನು ಹೇಳಿ ಶಾಂತಪಡಿಸುತ್ತಿದ್ದರು. ಹಳ್ಳಿ ಹಳ್ಳಿಗಳಿಗೆ ತಾವೇ ಹೋಗಿ ಭಕ್ತರ ಮನಸ್ಸನ್ನು ಪರಿವರ್ತನೆಗೊಳಿಸಿದರು. ಆದಿಚುಂಚನಗಿರಿ ಮಠಕ್ಕೆ ಎಲ್ಲಾ ಜಾತಿಯ ಎಲ್ಲಾ ವರ್ಗದ ಎಲ್ಲಾ ಪಂಗಡದ ಭಕ್ತರೂ ಇದ್ದಾರೆ. ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ೭೧ನೇ ಪೀಠಾಧಿಪತಿಗಳು. ಧಾರ್ಮಿಕ, ವೈಚಾರಿಕ ಮನೋಧರ್ಮ ಹೊಂದಿರುವ ಇವರು ಪ್ರಗತಿಶೀಲ ಚಿಂತಕರು. ದೀನದರಿದ್ರ ಉದ್ಧಾರ, ಅಜ್ಞಾನ ಮೌಢ್ಯಗಳ ನಿವಾರಣೆ, ಶೈಕ್ಷಣಿಕ ಕ್ರಾಂತಿ ಮುಂತಾದ ಪ್ರಗತಿಪರ ಸಾಧನೆಗಳಿಂದ ಸಮಾಜಲ್ಲಿ ಜಾಗೃತಿಯನ್ನುಂಟು ಮಾಡುತ್ತಿರುವ ಮಹಾನ್ ಮಹಾತ್ಮರು. ಯಾವುದೇ ಜಾತಿ ಬೇಧಗಳಿಲ್ಲದೆ ಸರ್ವರು ಮಾನವ ಜಾತಿ ಎಂಬ ಗುರಿಯನ್ನಿಟ್ಟುಕೊಂಡು ಸರ್ವಧರ್ಮಗಳ ಪ್ರೇಮಕ್ಕೆ, ಗೌರವಕ್ಕೆ ಪಾತ್ರರಾಗಿದ್ದಾರೆ. ಗುರುಗಳಲ್ಲಿ ಕಾಣಬೇಕಾದ ಗುಣಗಳನ್ನು ನಿಜಗುಣ ಶಿವಯೋಗಿಗಳು ''ಕರುಣೆ, ಸತ್ಕಲೆ, ನಿರಾಸೆ, ಸುಜ್ಞಾನಗಳಿರುವವನೆ ಸೇವ್ಯ ಗುರುವಕ್ಕು'' ಎಂದು ಹೇಳಿದ್ದಾರೆ. ಅಂತಹ ಈ ಎಲ್ಲಾ ಗುಣಗಳನ್ನು ಮಹಾಸ್ವಾಮೀಜಿಯವರಲ್ಲಿ ನೋಡಬಹುದು.

ಅಭಿವಂದನಾ

ಪ್ರವಾಸದಿಂದ ಬೇಸತ್ತ ಕಾಲದಲ್ಲಿಯೂ ನಗುಮುಖದಿಂದಲೇ ಭಕ್ತರನ್ನು ಸಾಂತ್ವನಗೊಳಿಸುವ ಶಕ್ತಿಯು ಸ್ವಾಮಿಗಳವರಲ್ಲಿ ತುಂಬಿ ತುಳುಕುತ್ತಿರುತ್ತದೆ. ಸ್ವಾಮೀಜಿಯವರ ಸಮಾಜ ಸೇವೆ ಒಂದಲ್ಲ-ಎರಡಲ್ಲ.

ಅದ್ವೈತ ಸಿದ್ಧಾಂತವೇತ್ತರಾದ ಸ್ವಾಮೀಜಿಯವರು ವೇದಾಂತದಲ್ಲಿ ಪ್ರವಚನವನ್ನು ಕೊಡುವುದರಲ್ಲಿ ಮಹಾವಾಗ್ಮಿಗಳು. ಎಂತಹ ತಿಳಿವಳಿಕೆ ಇಲ್ಲದವರಿಗೂ ತಿಳಿಯುವಂತೆ ಹೇಳುವ ನಿಪುಣರು. ತಮ್ಮ ಮೃದು ಮಧುರ ವಾಣಿಯ ಸ್ನೇಹ, ಸೌಹಾರ್ದ, ಸರಳ ನಡವಳಿಕೆಗಳಿಂದ ಸರ್ವರನ್ನು ಗೆದ್ದು ಬಿಡುವರು. ಅವರು ಅಜಾತ ಶತ್ರುವಿನಂತೆ ಇಡೀ ಕರ್ನಾಟಕದ ಜಿಲ್ಲೆಗಳಲ್ಲಿ, ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿ ಜನತೆಯನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾರ್ಗದರ್ಶನ ನೀಡುವ ಮಹಾನ್ ಶಕ್ತಿಯಾಗಿದ್ದಾರೆ. ಮಹಾಸ್ವಾಮಿಗಳು ಮಠ ನಿಮ್ಮದು, ಮಠದ ಕಾರ್ಯ ನಿಮ್ಮದು ಎಂದು ಹೇಳಿ ತಾವು ನಿರಭಿಮಾನಿಗಳಾಗಿರುವುದರಿಂದಲೇ ಇಂದು ಚುಂಚನಗಿರಿ ಹೋಗಿ ಅಂದದ ಗಿರಿಯಾಗಿದೆ. ಮಹಾಸ್ವಾಮಿಗಳವರು ಸಾಧುಗಳ ಮಧ್ಯದಲ್ಲಿ ನಕ್ಷತ್ರಗಳ ಮಧ್ಯದಲ್ಲಿಯ ಚಂದ್ರನಂತೆ ಶೋಭಿಸುತ್ತಿದ್ದಾರೆ. ಇವರ ಸಮಭಾವವನ್ನು ಯಾವ ಸ್ವಾಮಿಗಳಲ್ಲಿಯೂ ಕಾಣಲಾರೆವು. ಶ್ರೀ ಸ್ವಾಮೀಜಿಯವರು ಒಬ್ಬ ವ್ಯಕ್ತಿಯಲ್ಲ ಅದ್ಭುತ ಶಕ್ತಿಯಾಗಿದ್ದಾರೆ. ಮನುಷ್ಯ ಮನಸ್ಸು ಮಾಡಿದರೆ ಅನೇಕ ಉತ್ತಮ ಕಾರ್ಯಗಳನ್ನು ಮಾಡಬಹುದು ಎಂಬುದಕ್ಕೆ ಸ್ವಾಮೀಜಿವಯರು ಶ್ರೇಷ್ಠವಾದ ಉದಾಹರಣೆಯಾಗಿದ್ದಾರೆ.

***

ಅಭಿವಂದನಾ

ಮಾತುಮನಂಗಳಿಂದತ್ತತ್ತ

-ಶ್ರೀ ಸುರೇಶಭಾರತಿಸ್ವಾಮಿಗಳು

ಪೂಜ್ಯ ಶ್ರೀಗಳವರು ಎಲ್ಲ ಸಿದ್ಧಿಗಳನ್ನು ಭಕ್ತಕೋಟಿ ಸಮುದಾಯಕ್ಕೆ ಸಮರ್ಪಿಸಿ ತಾವು ಯಾವ ಸಿದ್ಧಿಗೂ ಅಂಟದೆ ತಟಸ್ಥವಾಗಿ ನಿಂತಿರುವ ಮಹಾಪುರುಷರು. ಇವರು ಜನ್ಮತಾಳಿದ್ದು ಮುಮುಕ್ಷುಗಳ ಉದ್ಧಾರಕ್ಕೆ ಮಾತ್ರ ಸೀಮಿತವಲ್ಲ. ಇಡೀ ಮಾನವರನ್ನು ಪುನೀತರನ್ನಾಗಿ ಮಾಡುವ ದಿಶೆಯಲ್ಲಿ ಸಾಕ್ಷಾತ್ ಪರಶಿವನ ಅವತಾರವೇ ಇವರು. ನಾವು ಶ್ರೀಗಳವರಿಂದ ಸಂನ್ಯಾಸ ದೀಕ್ಷೆಯನ್ನು ಪಡೆದು ಪೂಜ್ಯರ ಪವಾಡಗಳನ್ನು ನಾವಷ್ಟೇ ಅಲ್ಲಾ, ಇಡೀ ದೇಶ ವಿದೇಶದ ಜನರು ಕಣ್ತುಂಬ ನೋಡಿ ಆನಂದವನ್ನು ಪಡೆದಿರುತ್ತಾರೆ. **ಮಾತು ಮನಂಗಳಿಂದತ್ತತ್ತ ಮೀರಿದ ಸಾತಿಶಯದ ನಿರುಪಾಧಿಕ ನಿರ್ಮಲ ಜ್ಯೋತಿ ಬೆಳಗುತಿದೆ. ವಿಮಲ ಪರಂಜ್ಯೋತಿ ಬೆಳಗುತಿದೆ.** ಮಾತಿಗೆ ನಿಲುಕದ ಅವತಾರವಿದು. ಶ್ರೀಗಳವರ ದರ್ಶನವನ್ನು ಒಂದು ಸಲ ಮಾಡಿದರೆ ಸಾಕು, ನಮ್ಮ ಜನ್ಮವೇ ಸಾರ್ಥಕ. ಅವರ ಸನ್ನಿಧಿಯಲ್ಲಿ ಇದ್ದು ನಾವು ಏನಾಗಿದ್ದೇವೆ ಎಂಬುದು ನಮಗೆ ತಿಳಿಯದಾಗಿದೆ. ಉಣ್ಣದೂಟವನುಣಿಸಿದನು ಗುರು ತನ್ನ ಶಿಷ್ಯರ ಗುಣವ ನೋಡದೆ, ಮನ್ನಣೆಯ ಕೊಟ್ಟವರ ನೀ ಭವ ಜಲಧಿದಾಂಟಿಸಿದೆ ಎಂಬಂತೆ ಶ್ರೀಗಳವರನ್ನು ಎಷ್ಟು ಕೊಂಡಾಡಿದರು ಸಾಲದು. ಇವರ ಆಶೀರ್ವಾದಗಳು ಸದಾ ನಮ್ಮ ಮೇಲೆ ಇರಲೆಂದು ಬೇಡಿಕೊಳ್ಳುತ್ತೇನೆ.

***

ಅಭಿವಂದನಾ

ನಮ್ಮ ಭಾಗ್ಯ

ಶ್ರೀ ಪ್ರೇಮಾನಂದಸ್ವಾಮಿಗಳು

ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳವರ ದೈವೀಶಕ್ತಿ ಕಾರ್ಯಗಳನ್ನು ಎಷ್ಟೆಂದು ಬಣ್ಣಿಸಲು ಸಾಧ್ಯವಿಲ್ಲ. ಅಂದರೆ ಶ್ರೀ ಶಂಕರಾಚಾರ್ಯರ ಕಾಲದಲ್ಲಿ ಕೇವಲ ೮.೧೦ ವರುಷದಲ್ಲಿಯೇ ಸಂನ್ಯಾಸ ಸ್ವೀಕರಿಸಿದ್ದುದನ್ನು ನಾವು ಪುಸ್ತಕದಲ್ಲಿ ಓದುತ್ತಿದ್ದೆವು. ಪ್ರಸ್ತುತದಲ್ಲಿ ಅದನ್ನು ಕಣ್ಣಾರೆ ನೋಡುತ್ತಿದ್ದೇವೆ. ನಮ್ಮ ಗುರುಗಳ ಸಮ್ಮುಖದಲ್ಲಿಯೇ ೮.೧೦ ವರುಷದ ಹುಡುಗರಿಗೆ ಸಂನ್ಯಾಸ ಧೀಕ್ಷೆಯನ್ನು ಆತ್ಮಜ್ಞಾನ ವಿದ್ಯೆಯನ್ನು ಕೊಟ್ಟು ಒಂದು ಸ್ಥಾನವನ್ನು ಕಲ್ಪಿಸಿ ಸೇವಾಕಾರ್ಯದಲ್ಲಿ ತೊಡಗಿಸಿದ್ದಾರೆ. ಗುರುಗಳವರ ಆದೇಶದಂತೆ ಅನೇಕ ಜನಗಳಿಗೆ ವಿದ್ಯಾದಾನ ಮತ್ತು ಅನ್ನದಾನ ಮುಂತಾದ ಸೇವಾಕಾರ್ಯಗಳನ್ನು ನಡೆಸುತ್ತಿದ್ದಾರೆ. ಇಂಥ ನಮ್ಮ ಜಗದ್ಗುರುಗಳು ದೊರೆತಿರುವುದು ನಿಜವಾಗಿಯೂ ನಮ್ಮ ಭಾಗ್ಯವೇ ಸರಿ. ಇಷ್ಟೇ ಅಲ್ಲ ಜಿಲ್ಲಾ ಕೇಂದ್ರಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮಠಗಳನ್ನು ಸ್ಥಾಪಿಸಿ ಅಲ್ಲಿ ಸ್ವಾಮಿಗಳನ್ನು ನೆಲೆ ನಿಲ್ಲಿಸಿ ಅವರ ಯೋಗ ಕ್ಷೇಮಾದಿಗಳನ್ನು ನೋಡಿಕೊಂಡು ಅವರಿಗೆ ಧೈರ್ಯ ಮತ್ತು ಸ್ಥೈರ್ಯಗಳನ್ನು ನೀಡುತ್ತಿದ್ದಾರೆ. ಅನೇಕ ಸಾಧು ಸಂತರಿಗೆ ಸಂಸ್ಕೃತ ವಿದ್ಯೆಯನ್ನು ಕಲಿಸಿ ಅವರ ನೆಮ್ಮದಿಗೆ ದಾರಿದೀಪವಾಗಿರುವ ಬಾಲಗಂಗಾಧರನಾಥ ಸ್ವಾಮಿಗಳವರ ಅಮೋಘವಾದ ಈ ಕಾರ್ಯವು ಪ್ರತಿಯೊಬ್ಬರ ಕಣ್ಣಿಗೆ ಕಾಣುವ ಕಾರ್ಯವಾಗಿದೆ. ಇಷ್ಟೇ ಅಲ್ಲದೆ ಇನ್ನೊಂದು ದೊಡ್ಡ ಕೆಲಸವೆಂದರೆ ದೀನರ, ದಲಿತರ, ಅತ್ಯಂತ ಬಡವರ ಮೇಲೆ ಕರುಣೆ ಇಟ್ಟು ಹಳ್ಳಿಯ ಜನಾಂಗಕ್ಕೆ ಮಾಡಿರುವ ಉಪಕಾರವೆಂದರೆ ಆಸ್ಪತ್ರೆಯನ್ನು ತೆರೆದಿರುವುದು. ಇದು ದೈವಾಂಶಸಂಬೂತ ಪುರುಷರಿಗೆ ಮಾತ್ರ ಸಾಧ್ಯ.

ಅದ್ಭುತವಾದ ಕೆಲಸವನ್ನು ಮಾಡಿದ್ದಾರೆ. ಸಗರಚಕ್ರವರ್ತಿಯ ೬೦ ಸಾವಿರ ಮಕ್ಕಳನ್ನು ಕಪಿಲ ಋಷಿಯ ಶಾಪದಿಂದ ಸುಟ್ಟು ಬಸ್ಮಮಾಡಿದ್ದನು ನಂತರ ಸಗರನ ಮೂರು ತಲೆ ಮಾರಿನ ಭಗೀರಥನು ತಪಸ್ಸು ಮಾಡಿ ತನ್ನ ಪೂರ್ವಜರನ್ನು ಹೇಗೆ ಉದ್ಧರಿಸಿದನೋ ಹಾಗೆಯೇ ನಮ್ಮ ಪೂಜ್ಯ ಜಗದ್ಗುರುಗಳು ಹಿಂದಿನ ಎಪ್ಪತ್ತು ಗುರುಗಳು ಮಾಡದಿದ್ದ ಲೋಕ ಕಲ್ಯಾಣ ಕಾರ್ಯವನ್ನು ಅಲ್ಪಕಾಲದಲ್ಲಿಯೆ ಅವಿರತ ಶ್ರಮದಿಂದ ಮಾಡಿದ್ದಾರೆ. ಚುಂಚನಗಿರಿಯನ್ನು ಶಿವಗಿರಿಯನ್ನಾಗಿ ಮಾಡಿ ತೋರಿದ್ದಾರೆ. ಆದ್ದರಿಂದ ಪೂಜ್ಯ ಗುರುಗಳ ಬಗ್ಗೆ ಎಷ್ಟು ಹೇಳಿದರೂ ಹೊಗಳಿಕೆಯಾಗುವುದಿಲ್ಲ. ಪರಮಪೂಜ್ಯರಿಗೆ ನನ್ನ ಹಾರ್ದಿಕ ನಮನಗಳು.

***

ಅಭಿವಂದನಾ

ಶ್ರೀಕ್ಷೇತ್ರದಲ್ಲಿ ನನ್ನ ಅನುಭವ

ಶ್ರೀ ಶರಣಾನಂದಸ್ವಾಮಿಗಳು

ಭಕ್ತಿಯೆಂದರೆ ಭಗವತ್ ಪ್ರೇಮ. ಶ್ರೀ ಗಂಗಾಧರೇಶ್ವರ ಸ್ವಾಮಿ, ಶ್ರೀ ಕಾಲಭೈರವೇಶ್ವರ ಸ್ವಾಮಿಯವರನ್ನು ಕಾಯಾ, ವಾಚಾ, ಮನಸಾ, ಸೇವಿಸಿ ಸ್ತುತಿಸಿ, ಪೂಜಿಸಿ, ಆ ದೇವರಿಂದ ಬೇರಲ್ಲದ ಅನುಭವ ಸ್ಥಿತಿಯಲ್ಲಿ ನಿಂತಿರುವ ಭಕ್ತಿಯ ಸಾಕಾರ ಮೂರ್ತಿಯಾಗಿದ್ದಾರೆ. ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು. ಸತ್ವ, ರಜಸ್ಸು, ತಮಸ್ಸು ಗುಣಗಳನ್ನು ದಾಟಿದ ನೆಲೆಯದು, ಅಲ್ಲಿ ಅಲಸ್ಯವಿಲ್ಲ, ಅಜ್ಞಾನವಿಲ್ಲ, ಲೋಭವಿಲ್ಲ, ಮೋಹವಿಲ್ಲ; ಲೌಕಿಕ ಜ್ಞಾನದ ಹಂಬಲವೂ ಉಳಿದಿಲ್ಲ, ಕೇವಲ ಆನಂದ ಸಾಗರದಲ್ಲಿ ಓಲಾಡುವ ನಿಸ್ತರಂಗ ಮನೋವಾರಿಧಿ ದೇವಾಂಶರೂಪದಲ್ಲಿ ಸದ್ಗುರುವಿನ ಜ್ಞಾನದ ಬೆಳಕಿನಲ್ಲಿ ಜಗತ್ತಿನ ಕಲ್ಯಾಣ ಕಾರ್ಯದಲ್ಲಿ ಕ್ರಿಯಾನ್ವಿತವಾಗಿರುವುದಕ್ಕೆ ತಕ್ಕ ನಿದರ್ಶನವೊಂದನ್ನು ನಾವಿಲ್ಲಿ ಕಾಣಬಹುದು.

ಮೈಸೂರು-ತುಮಕೂರು ರಸ್ತೆಯಲ್ಲಿ ಆದಿಚುಂಚನಗಿರಿಯ ಗಂಭೀರ ಪರಿಸರದಲ್ಲಿ ಹುಣಿಸೆ, ಆಲ, ಬೇಲ, ಬೇವು ಹಾಗೂ ಇಂಪಾದ ಸುಗಂಧ ಸೂಸುವ ಶ್ರೀಗಂಧದ ವೃಕ್ಷ, ತೆಂಗು ಇತ್ಯಾದಿ ವೃಕ್ಷಗಳಿಂದ ಕೂಡಿದ ರಮಣೀಯ ಸ್ಥಾನದಲ್ಲಿ ತಲೆಯೆತ್ತಿದ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಶ್ರೀ ಶ್ರೀ ಶ್ರೀಗಳವರು ನೆಲೆಸಿದ್ದಾರೆ. ಸಾಕ್ಷಾತ್ ಪರಶಿವನೇ ತಪಸ್ಸು ಮಾಡಿದ ಸ್ಥಳ ಅಗ್ನಿಪೀಠ (ಜ್ವಾಲಾಪೀಠ)ವೆಂದು ಹೆಸರಾದುದು.

ಈ ಪ್ರದೇಶದಲ್ಲಿ ಆಶ್ರಮದ ಭವ್ಯಸೌಧವೂ, ವಸತಿಗೃಹ, ಸಂಸ್ಕೃತ ಕಾಲೇಜು, ಅನ್ನದಾನಿ ಭೈರವೇಶ್ವರನ ಭವನ, ಇತ್ಯಾದಿ ಸುಂದರ ಕಟ್ಟಗಳು ನೂತನವಾಗಿ ಬೃಹತ್ತಾಗಿ ನಿರ್ಮಾಣಗೊಳ್ಳುತ್ತಿರುವ ಭೈರವೇಶ್ವರ ಮಹಾಮಂದಿರದ ದೃಶ್ಯವು, ಇದಕ್ಕೆಲ್ಲ ದೈವಾಂಶ ಸಂಭೂತರಾದ ಶ್ರೀ ಶ್ರೀ ಶ್ರೀ ಸ್ವಾಮೀಜಿಯವರ ಭೈರವ ರೂಪವೇ ಕಾರಣವಲ್ಲದೇ ಬೇರೊಂದಿಲ್ಲ. ಕಣ್ಣು ಕೋರೈಸುವ ಪವಾಡಗಳನ್ನು ಮೆರೆಸದೆ, ಮನಸ್ಸನ್ನು ನೋಯಿಸುವ ಹೆಚ್ಚು ಮಾತುಗಾರಿಕೆಯಿಲ್ಲದೆ ಜೀವನದಲ್ಲಿ ನಾಟಕೀಯತೆಗೆ ಇಂಬುಗೊಡದೆ ಕಳೆದೆರಡು ದಶಕಗಳಲ್ಲಿ ಯಾರು ಮಾಡದಂಥ ಮತ್ತು ಮಾಡದಷ್ಟು ಮಹಾ ಕಾರ್ಯಗಳಿಗೆ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಕಾರಣಕರ್ತರಾಗಿದ್ದಾರೆ. ಸ್ವಾಮೀಜಿಯವರ ವ್ಯಕ್ತಿತ್ವದಲ್ಲಿ ಸಾಧಕರು ಸದ್ಗುರುವನ್ನು, ಆರ್ತರು ದೇವತಾ ಸ್ವರೂಪವನ್ನು, ಭಕ್ತರು ಭಕ್ತಿಯ ಸೆಲೆಯನ್ನೂ, ವಿರಕ್ತರು ವೈರಾಗ್ಯದ ನಿಧಿಯನ್ನು ಕಂಡುಕೊಳ್ಳಬಹುದು. ಇಂತಹ ಅದ್ಭುತ ಚರಿತ್ರೆಯ ವ್ಯಕ್ತಿಗಳಿಗಾಗಿ ದೈವ ಪ್ರಸಾದದಿಂದ ಮಾತ್ರ ಧರಾತಲದ ಮೇಲೆ ಅವಿರ್ಭವಿಸಲು ಸಾಧ್ಯ.

ಅಭಿವಂದನಾ

ಆಧ್ಯಾತ್ಮಿಕ ರಂಗದ ವಿಕಾಸಕ್ಕಾಗಿ ಶ್ರೀಗಳವರು ತೋರುತ್ತಿರುವ ಆಸ್ಥೆಯನ್ನೇ, ಶೈಕ್ಷಣಿಕ ರಂಗದಲ್ಲಿಯೂ ಬೃಹತ್ತಾಗಿ ಹರಿಬಿಟ್ಟಿದ್ದಾರೆ. ಶೈಕ್ಷಣಿಕವು ಧರ್ಮ ವಿಮುಖವಾದರೆ, ವಿನಾಶ ಎಂಬುದನ್ನು ಕಂಡುಕೊಂಡ ಸ್ವಾಮೀಜಿಯವರು ಜಾತಿ-ಭೇದಗಳನ್ನು ಲೆಕ್ಕಿಸದೆ ಮಾನವ ಜಾತಿ ಒಂದೇ ಎಂದು ಖಚಿತ ಪಡಿಸಿದವರಾಗಿ, ಸರ್ವ ಮಾನವ ಬಡ ಬಗ್ಗರ ಮಕ್ಕಳಿಗೆ ಉಚಿತ ಊಟ, ವಸತಿ ಸೌಲಭ್ಯಗಳನ್ನು ಒದಗಿಸಿಕೊಟ್ಟು ವಿದ್ಯಾದಾನವನ್ನು ನೀಡುತ್ತಿದ್ದಾರೆ. ಅದಕ್ಕಾಗಿ ಒಂದು ಶಿಕ್ಷಣ ಟ್ರಸ್ಟನ್ನು ನಿರ್ಮಿಸಿ ಅದರ ಮೂಲಕ ಒಂದು ಸಾವಿರ ಹಾಸಿಗೆಯುಳ್ಳ ಉತ್ತಮ ರೀತಿಯ ಸೌಲಭ್ಯವುಳ್ಳ ಗ್ರಾಮೀಣ ಆಸ್ಪತ್ರೆ, ವೈದ್ಯಕೀಯ ಕಾಲೇಜು, ತಾಂತ್ರಿಕ ಕಾಲೇಜುಗಳು ಹಾಗೂ ಅನೇಕ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜುಗಳು, ಪ್ರಥಮ ದರ್ಜೆ ಕಾಲೇಜು ಮತ್ತು ಅಂಧರ ಶಾಲೆ ಸಹ ಇವೆ. ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಆದರ್ಶ ಸಂಸ್ಥೆಗಳನ್ನಾಗಿ ಮಾಡಿ ವಿದ್ಯಾಭಿಮಾನಿಗಳಿಗೆ ಆದರ್ಶ ಪ್ರಾಯವಾಗಿ ಮಾಡಿರುತ್ತಾರೆ.

ಶ್ರೀ ಶ್ರೀ ಶ್ರೀಗಳವರು ಆತ್ಮ ಕಲ್ಯಾಣವಾಗಲಿ, ಜಗತ್ತಿಗೆ ಹಿತವಾಗಲಿ ಎಂಬ ಸೂತ್ರವನ್ನು ಎತ್ತಿ ಹಿಡಿದು ಲೌಕಿಕ ಮತ್ತು ಆಧ್ಯಾತ್ಮಿಕ ರಂಗಗಳಲ್ಲಿ ತುದಿಗಾಲಿನಲ್ಲಿ ನಿಂತು ನಾಡಿನ ಸಾಧಕ ಕೋಟಿಗೆ ದೀಪ ಕಂಬವಾಗಿ ನಿಶ್ಚಲ ಚಿತ್ತರಾಗಿರುವರು.

ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ಕೈಕೊಂಡಿರುವ ಮಹತ್ವದ ಕಾರ್ಯವೊಂದಿದೆ. ಅದೇ ಜನಜಾಗೃತಿ. ಭಕ್ತರು ಈ ಜಾಗೃತ ತಾಣಕ್ಕೆ ಬಂದಾಗ ಅವರ ಮನಸ್ಸು ಅನೇಕ ಸಲ ಆಶ್ಚರ್ಯವೆಂಬಂತೆ ಶಾಂತಿಸಾಗರದಲ್ಲಿ ಮುಳುಗೇಳುತ್ತದೆ. ಈ ೨೦ನೇ ಶತಮಾನದಲ್ಲಿ ಮಾನವರೆಲ್ಲರೂ ಬಲ್ಲವರಂತೆ ಕಂಡರೂ ಸಹ, ಜಗತ್ತಿನ ಸುಖಶಾಂತಿಗಳಿಗೆ ಮಾರಕವಾಗಿದ್ದಾರೆ. ಪುರುಷರಿಗೆ ಹಾಗೂ ಮಹಿಳೆಯರಿಗೂ ಜನಜಾಗೃತಿ ಶಿಬಿರದ ಮೂಲಕ ಶಾಂತಿ ನೀಡಿಕೆಯ ರುಚಿ ಹಚ್ಚಿಸಿ ಪ್ರಾಪಂಚಿಕ ಜನರನ್ನು ಧಾರ್ಮಿಕ ವ್ಯಕ್ತಿಗಳನ್ನಾಗಿ ಪರಿವರ್ತಿಸಿ ಆತ್ಮ ಮುಖಿಯಾಗಿಸುವುದೇ ಇಂಥ ಜನ ಜಾಗೃತಿ ಶಿಬಿರದ ಮುಖ್ಯ ಕರ್ತವ್ಯವಾಗಿರುತ್ತದೆ.

''ಪರಿತ್ರಾಣಾಯ ಸಾಧೂನಾಂ, ವಿನಾಶಾಯ ಚ ದುಷ್ಕೃತಾಮ್
ಧರ್ಮಸಂಸ್ಥಾಪನಾರ್ಥಾಯ, ಸಂಭವಾಮಿ ಯುಗೇ ಯುಗೇ''॥

ಎಂಬ ಗೀತಾ ವಾಕ್ಯದಂತೆ ಭಗವಂತನೇ ಅವತಾರ ಮಾಡಿ ಮಹಾತ್ಮರ ರೂಪದಲ್ಲಿ ಅವತರಿಸಿ ಸರ್ವ ಜೀವರಾಶಿಗಳ ಪ್ರಾರ್ಥನೆಗೆ ಸಾಕಾರ ಮೂರ್ತಿಯಾಗಿ ಜಗತ್ತನ್ನು ಉದ್ಧರಿಸುವರು. ಇಂತಹ ಮಹಾತ್ಮರ ಸನ್ನಿಧಿಯಿಂದ ಧನ್ಯರಾಗುವವರೆಗೆ ಧನ್ಯತೆ, ದೂರವಾದವರಿಗೆ ಧನ್ಯತೆ ಕೊರತೆ ಅಷ್ಟೇ ಅಲ್ಲವೇ?

***

ಅಭಿವಂದನಾ

ನಾ ಕಂಡ ಸಿದ್ಧಯೋಗಿ

- ಡಾ||ಹೊ. ಶ್ರೀನಿವಾಸಯ್ಯ

ಸಾಧುಸಂತರು, ಸ್ವಾಮೀಜಿಯವರು ಜನರಿಂದ ಆರಾಧನೆ ಮಾಡಿಸಿಕೊಳ್ಳುತ್ತಿದ್ದಂತಹ ಕಾಲ ಒಂದಿತ್ತು. ಆದರೆ ಇಂದು ಜನರಿಂದ ಆರಾಧನೆ ಮಾಡಿಸಿಕೊಳ್ಳುವುದು ಸೂಕ್ತವಲ್ಲ. ಜನರಿಗೇ ಸೇವೆ ಸಲ್ಲಿಸುವುದು ಸೂಕ್ತ; ಜನರ ಸೇವೆಯನ್ನು ಕೈಗೊಳ್ಳಲು ಸಾಧು ಸಂತರ ಮೂಲಕವೂ ಸಾಧ್ಯ ಎಂಬುದನ್ನು ಹಲವಾರು ಮಠಾಧಿಪತಿಗಳು ಎತ್ತಿ ತೋರಿಸಿದ್ದಾರೆ. ಇಂತಹವರಲ್ಲಿ ಧ್ರುವತಾರೆಯಾಗಿ ಮಿನುಗುತ್ತಿರುವ ದೈವಾಂಶ ಸಂಭೂತರಾದ ಶ್ರೀ ಆದಿಚುಂಚನಗಿರಿ ಮಠಾಧೀಶರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು ಅಗ್ರಗಣ್ಯರಲ್ಲೊಬ್ಬರು.

ಶ್ರೀ ಸ್ವಾಮಿಯವರು ಎಲ್ಲರಂತೆ ಬೆಳೆದವರು. ಸಾಧಾರಣ ಬಡಕುಟುಂಬದಲ್ಲಿ ಜನಿಸಿದರೂ ಅವರು ಬೆಳೆದು ಬಂದ ರೀತಿ, ತೋರಿಸಿದ ಆಸಕ್ತಿ ಮಾತ್ರ ವಿಶಿಷ್ಟ.

ಶ್ರೀ ಆದಿಚುಂಚನಗಿರಿ ದಿವ್ಯಕ್ಷೇತ್ರದ ಭಕ್ತಾದಿಗಳು ಕರ್ನಾಟಕದ ಎಲ್ಲೆಡೆಯೂ ಇದ್ದಾರೆ. ಹಾಗೆಯೇ ಬೆಂಗಳೂರು ಜಿಲ್ಲೆಯ ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಗೆ ಸೇರಿದ ಒಂದು ಗ್ರಾಮ ಬಾನಂದೂರು. ಹಿಂದಿನಿಂದಲೂ ಧರ್ಮಕಾರ್ಯಗಳನ್ನು ಮಾಡುತ್ತಾ ಶ್ರೀ ಕ್ಷೇತ್ರದ ಭಕ್ತಾದಿಗಳಾಗಿದ್ದ ಸುಬೇದಾರ್ ಚೆಟ್ಟಪ್ಪ ಈ ಊರಿನವರು. ಇವರ ಎರಡನೆಯ ಮಗ ಚಿಕ್ಕಲಿಂಗಪ್ಪ. ಶ್ರೀ ಸ್ವಾಮೀಜಿಯವರು ಇವರ ದ್ವಿತೀಯ ಪುತ್ರರಾಗಿ ೨೫.೨.೧೯೪೫ರಂದು ಜನ್ಮತಾಳಿದರು. ಇವರಿಗೆ ಗಂಗಾಧರಯ್ಯ ಎಂಬುದು ಪೂರ್ವಾಶ್ರಮದ ಹೆಸರು.

'ಬೆಳೆಯುವ ಪೈರು ಮೊಳಕೆಯಲ್ಲಿಯೇ' ಎಂಬಂತೆ ಶ್ರೀ ಗಂಗಾಧರಯ್ಯ ಬಾಲ್ಯದಲ್ಲಿಯೇ, ಬೇರೆ ಬಾಲಕರಿಗಿಂತ ಭಿನ್ನವಾಗಿ ಬೆಳೆದರು. ಬಾಲ್ಯಕ್ಕೆ ಸಹಜವಾಗಿ ದೊರೆಯುವ ಲಾಲನೆ, ಪಾಲನೆ, ಆಟಪಾಠಗಳು ಇವರಿಗೂ ಲಭಿಸಿತ್ತು. ಆದರೆ ಅವುಗಳಿಗೆ ತಮ್ಮ ಮನಸ್ಸನ್ನು ಹರಿಯಗೊಡಲಿಲ್ಲ. ಅಪೂರ್ವ ತೇಜಸ್ಸಿನಿಂದ ಕಂಗೊಳಿಸುತ್ತಿದ್ದ ಇವರಿಗೆ ಅದಾವುದೊ ಅತೃಪ್ತಿ ಮನಸ್ಸಿನಲ್ಲಿದ್ದಂತೆ ಭಾಸವಾಗುತ್ತಿತ್ತು. ಹಸಿವು ತೃಷೆಗಳನ್ನು ಮರೆತು ಸದಾ ಮೌನಿಯಾಗಿ ಹಸನ್ಮುಖಿಯಾಗಿರುತ್ತಿದ್ದರು.

ಶ್ರೀ ಗಂಗಾಧರಯ್ಯನವರು ಪ್ರಾಥಮಿಕ ಹಾಗೂ ಪ್ರೌಢವಿದ್ಯಾಭ್ಯಾಸವನ್ನು ಬಿಡದಿಯಲ್ಲಿ ಮಾಡಿದರು. ಸಹ ಬಾಲಕರ ಜೊತೆ ವ್ಯಾಸಂಗ ಮಾಡಲು ಬಿಡದಿಗೆ ಹೋಗುತ್ತಿದ್ದಾಗ ಇವರಲ್ಲಿ ತಮ್ಮ ವಯಸ್ಸಿಗೆ ಮೀರಿದ ಯಾವುದೋ ದಿವ್ಯಪ್ರಭೆ ಹೃತ್ಕಮಲವನ್ನು ಆವರಿಸಿಕೊಳ್ಳುತ್ತಿರುವಂತೆ ಭಾಸವಾಗುತ್ತಿತ್ತು. ಆಧ್ಯಾತ್ಮಿಕ

ವಿಚಾರಧಾರೆಯನ್ನು ಬೇರೆಯವರ ಜೊತೆ ಹಂಚಿಕೊಳ್ಳಲು ಸದಾ ಮನಸ್ಸು ಹಾತೊರೆಯುತ್ತಿತ್ತು. ರಾಮಾಯಣ, ಮಹಾಭಾರತ ಪುರಾಣಗಳ ವಾಚನ ನಡೆಯುತ್ತಿದ್ದರೆ ತನಗರಿವಿಲ್ಲದಂತೆ ಅಲ್ಲಿಗೆ ಹೋಗಿ ವಿಚಾರಗಳಲ್ಲಿ ಆಸಕ್ತಿ ವಹಿಸುತ್ತಿದ್ದರು.

ಸಾಧಾರಣ ಕುಟುಂಬದಲ್ಲಿ ಜನಿಸಿದ ಶ್ರೀ ಗಂಗಾಧರಯ್ಯ ಕರುಣೆಯನ್ನು ಹುಟ್ಟು ಗುಣವಾಗಿ ಪಡೆದಿದ್ದರು. ಸಹ ಬಾಲಕರ ಬಡತನವನ್ನು ಕಂಡು ಮರುಗುತ್ತಿದ್ದರು. ಮಧ್ಯಾಹ್ನದ ಫಲಾಹಾರಕ್ಕೆಂದು ತಾಯಿಯು ಕಳಿಸಿದ್ದ ತಿಂಡಿಯನ್ನು ಬಡಹುಡುಗರಿಗೆ ಹಂಚುತ್ತಿದ್ದರು. ಹಂಚಿ ತಿನ್ನುವುದರಲ್ಲಿ ಹೆಚ್ಚುತೃಪ್ತಿ. ಸತ್ಯಸಂಧತೆ, ತ್ಯಾಗಶೀಲತೆ, ಸಜ್ಜನಿಕೆ, ದೈವಭಕ್ತಿಗಳೆಲ್ಲವೂ ತಂದೆ ತಾಯಿಗಳಿಂದ ಬಂದ ಬಳುವಳಿ. 'ಎಲೆ ಮರೆಯ ಕಾಯಿಯಂತೆ' ಈ ಗುಣಗಳು ಅವರ ಹೃದಯವನ್ನು ಶ್ರೀಮಂತಗೊಳಿಸುತ್ತಿದ್ದವು.

ಶ್ರೀ ಗಂಗಾಧರಯ್ಯನವರು, ಬಿಡದಿಯಲ್ಲಿ ಪ್ರೌಢ ವ್ಯಾಸಂಗ ಮುಗಿದ ಮೇಲೆ ಉನ್ನತ ವ್ಯಾಸಂಗಕ್ಕಾಗಿ ಬೆಂಗಳೂರಿಗೆ ಬಂದರು. 'ಭಾರತ ಸಾಧು ಸಮಾಜ'ದಲ್ಲಿ ಪಿಯುಸಿ ವ್ಯಾಸಂಗ ಮಾಡಿದರು. ಅಲ್ಲಿ ಅವರಿಗೆ ಸಾಧು ಸಂತರ ಸತ್ಸಂಗ, ಅಲ್ಲದೆ ಆಧ್ಯಾತ್ಮಿಕ ತೃಷೆಯನ್ನು ಇಂಗಿಸಿಕೊಳ್ಳುವ ಸದವಕಾಶ ಲಭಿಸಿತು. ದಾಯಾದಿಗಳ ಕಲಹವಿದ್ದ ಊರಿನ ಪರಿಸರದಿಂದ ಆದಷ್ಟು ಬೇಗ ಇಲ್ಲಿನ ಪರಿಸರಕ್ಕೆ ಹೊಂದಿಕೊಂಡರು.

'ತಾವೊಂದು ಬಗೆದರೆ ದೈವವೊಂದು ಬಗೆಯಿತೆಂಬಂತೆ' ಮತ್ತೆ ಶ್ರೀ ಗಂಗಾಧರಯ್ಯ ಊರಿಗೆ ಹೋಗಬೇಕಾಯಿತು. ದಾಯಾದಿಗಳ ಕಲಹದಲ್ಲಿ ತಮ್ಮ ತಾಯಿಯವರ ಕಾಲೊಂದು ಮುರಿದು ಹೋದ ಘಟನೆ ತಿಳಿಯಿತು. ಈ ದಾರುಣ ವಾರ್ತೆ ಶ್ರೀ ಗಂಗಾಧರಯ್ಯನವರಿಗೆ ಅಪಾರ ನೋವುಂಟುಮಾಡಿತು. ಮಾತೃಶ್ರೀಯವರ ನೋವಿನ ಮುಂದೆ ಬೇರೆಲ್ಲ ಬಯಕೆಗಳು ಕ್ಷುಲ್ಲಕವೆಂದು ತಿಳಿದರು. ತಮ್ಮ ವ್ಯಾಸಂಗವನ್ನು ತೊರೆದು ತಾಯಿಯ ಶುಶ್ರೂಷೆಯಲ್ಲಿ ನಿರತರಾದರು. ಸುಮಾರು ನಾಲ್ಕು ವರ್ಷ ವ್ಯಾಸಂಗದಿಂದ ವಂಚಿತರಾದರು.

ತಾಯಿಯ ಸೇವೆಯ ಸಮಯದಲ್ಲಿ ಆಸ್ಪತ್ರೆಯಲ್ಲಿ ಕಂಡ ಸಾವು, ನೋವು, ಸಂಕಟಗಳು, ದಾರುಣ ವಾರ್ತೆಗಳು ಶ್ರೀ ಗಂಗಾಧರಯ್ಯನವರ ಮನಸ್ಸಿನಲ್ಲಿ ಅಪೂರ್ಣವಾಗಿ ಉಳಿದಿದ್ದ ಆಧ್ಯಾತ್ಮಿಕ ತತ್ತ್ವಗಳಿಗೆ ಮೂಕ ವಿವರಣೆ ನೀಡುತ್ತಿದ್ದವು. ನಿರಂತರ ತಳಮಳದಿಂದ ಮನಸ್ಸು ಬೇಸರವಾಗಿದ್ದರೂ, ವಿದ್ಯಾದಾಹವನ್ನು ಇಂಗಿಸಿಕೊಳ್ಳಲು ಮತ್ತೆ ಕಾಲೇಜಿಗೆ ಸೇರಿದರು.

ಕಾಲೇಜು ವ್ಯಾಸಂಗ ಶ್ರೀ ಗಂಗಾಧರಯ್ಯನವರಿಗೆ ಹೆಚ್ಚು ಚಿಂತಿಸಲು ಆಧ್ಯಾತ್ಮಿಕವಾಗಿ ಮನಸ್ಸು ವಿಕಾಸಗೊಳ್ಳಲು ಅನುಕೂಲವಾಯಿತು. ಈ ಅವಧಿಯಲ್ಲಿ ಕಾಲೇಜಿನ ಗ್ರಂಥಾಲಯ ಅವರ ಪಾಲಿಗೆ ಜ್ಞಾನ ನಿಧಿಯಾಯಿತು. ಜ್ಞಾನ ಸಾಗರದಲ್ಲಿ ಎಷ್ಟು ಈಜಿದರೂ ಸಾಲದು; ಆಸೆಯ ಅಲೆ ಏರುತ್ತಲೇ ಹೋಯಿತು. ಸುಪ್ತವಾಗಿದ್ದ ಆಧ್ಯಾತ್ಮಿಕತೆ ವಿಕಾಸಗೊಂಡಿತು.

ವ್ಯಾಸಂಗ ಮಾಡುವ ಅವಧಿಯಲ್ಲಿ ಪ್ರತಿದಿನ ಸಂಜೆ ವಾಯು ವಿಹಾರಕ್ಕೆಂದು ಲಾಲ್‌ಬಾಗಿಗೆ ಹೋಗುತ್ತಿದ್ದರು. ಲಾಲ್‌ಬಾಗಿನ ಮನೋಹರತೆಯನ್ನು, ಚೆಲುವಿನ ಚೆತಣವನ್ನೂ ಸವಿಯುತ್ತಿದ್ದರು. ಒಂದು ದಿನ ಸಂಜೆ ಹಾಗೆಯೇ ಪ್ರಕೃತಿಯ ಚೆಲುವನ್ನು ಸವಿಯುತ್ತ ಲಾಲ್‌ಬಾಗಿನ ಕಲ್ಲುಬೆಂಚಿನ ಮೇಲೆ ಕುಳಿತು ವಿಶ್ರಮಿಸಿಕೊಳ್ಳುತ್ತಿದ್ದರು. ಮರವೊಂದು ಬುಡಮೇಲಾಗಿ ಉರುಳಿತು. ಅನಿರೀಕ್ಷಿತ ಆಘಾತದಿಂದ ಪಾರಾದರು. ಭಗವಂತನ ಅನುಗ್ರಹದಿಂದ ಉಳಿದೆ ಎಂಬ ಆತ್ಮವಿಶ್ವಾಸ ಅವರಲ್ಲಿ ಮೂಡಿತು. ಮರವೇನಾದರೂ ಸ್ವಲ್ಪ ಸೋಕಿದ್ದರೆ ತಂದೆ, ತಾಯಿ, ಬಂಧುಬಳಗ ಎಲ್ಲರನ್ನೂ ಬಿಟ್ಟು ಹೋಗುತ್ತಿರಲಿಲ್ಲವೇ? ಎಂದು ಚಿಂತಿಸಿದರು. ಮನಸ್ಸು ವೈರಾಗ್ಯದ ಕಡೆ ಹೊರಳಿತು.

ಆಧ್ಯಾತ್ಮಿಕತೆಯ ಸಾಕಾರ ರೂಪವಾದ ಶ್ರೀ ಗಂಗಾಧರಯ್ಯ, ಶ್ರೀ ಆದಿಚುಂಚನಗಿರಿಯ ಶ್ರೀ ಚಂದ್ರಶೇಖರನಾಥ ಸ್ವಾಮಿಗಳವರ ಪೀಠಾರೋಹಣ ಸಮಾರಂಭದಲ್ಲಿ ಪಾಲ್ಗೊಳ್ಳುವ ಸುಯೋಗ ಲಭಿಸಿತು. ಸಾಧುಸತ್ಪುರುಷರ ಸಹವಾಸಕ್ಕಾಗಿ ಸದಾ ಕಾತರರಾಗಿದ್ದ ಇವರಿಗೆ ಗುರುಸೇವೆ ಮಾಡುವ ಅವಕಾಶವೂ ಸಿಕ್ಕಿತು. ಶ್ರೀ ಗಂಗಾಧರಯ್ಯನವರು ಆದಿಚುಂಚನಗಿರಿಯಲ್ಲಿಯೇ ಉಳಿದರು. ಏಕಚಿತ್ತರಾಗಿ ಶ್ರದ್ಧೆಯಿಂದ ಸ್ವಾಮಿಗಳವರ ಸೇವೆಯಲ್ಲಿ ನಿರತರಾದರು. ಶ್ರೀ ಗಿರಿಯ ತಪೋಭೂಮಿಯು ಶ್ರೀ ಗಂಗಾಧರಯ್ಯನವರಿಗೆ ಹಿಡಿಸಿತು. ಅವರ ಮನಸ್ಸು ಅಲ್ಲಿಯೇ ನಿಂತಿತು.

ಶ್ರೀ ಗಂಗಾಧರಯ್ಯನವರ ತಂದೆಯವರು ಶ್ರೀ ಮಠಕ್ಕೆ ಬಂದು ತಮ್ಮ ಮಗನನ್ನು ಊರಿಗೆ ಕರೆದೊಯ್ದರು. ಆದರೂ ಶ್ರೀ ಕ್ಷೇತ್ರದಿಂದ ದೂರವಿರಲು ಆಗಲಿಲ್ಲ. 'ಗಿರಿಯಲಲ್ಲದೆ ನವಿಲು ಹುಲ್ಲು ಮೊರಡಿಯಲ್ಲಾಡುವುದೆ' ಎಂಬಂತೆ ಶ್ರೀ ಗಂಗಾಧರಯ್ಯ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ ದೈವಾದೀನರಾದ ಮೇಲೆ ಆದಿಚುಂಚನಗಿರಿ ಕ್ಷೇತ್ರಕ್ಕೆ ಬಂದರು. ಸಾಧುಗಳು ದೊರೆಯುವುದೇ ದುರ್ಲಭವಾಗಿದ್ದ ಕಾಲದಲ್ಲಿ ವೇದಾಧ್ಯಯನ ಸಂಪನ್ನರೂ, ದಾರ್ಶನಿಕರೂ, ತೇಜೋರೂಪಿಗಳೂ ಆದ ಶ್ರೀ ಗಂಗಾಧರಯ್ಯನವರು ಶ್ರೀ ಕ್ಷೇತ್ರದ ಕಾರ್ಯನಿರ್ವಾಹಕರ ಗಮನ ಸೆಳೆದರು. ತನ್ನ ಆಶಯವನ್ನು ತಿಳಿಸಿದರು. ಶ್ರೀ ಕ್ಷೇತ್ರದ ಭಕ್ತ ಸಮೂಹದ ಅಭಿಲಾಷೆಯಂತೆ ೧೨.೨.೧೯೭೪ರಂದು ಧರ್ಮದೀಕ್ಷೆ ತೊಟ್ಟು ಶ್ರೀ ಬಾಲಗಂಗಾಧರನಾಥಸ್ವಾಮಿ ಎಂಬ ನಾಮಾಭಿದಾನ ಪಡೆದರು. ಅನಂತರ ವೇದಾಧ್ಯಯನ, ಉಪನಿಷತ್ತು, ಪುರಾಣಗಳ ಅಧ್ಯಯನದಲ್ಲಿ ತೊಡಗಿ ಅದರಲ್ಲಿ ಪಾಂಡಿತ್ಯ ಪಡೆದರು. ತಾ. ೨೫.೯.೧೯೭೪ ರಂದು ಸಿದ್ಧ ಸಿಂಹಾಸನದ ಎಪ್ಪತ್ತೊಂದನೆಯ ಮಹಾಸ್ವಾಮಿಗಳಾಗಿ ರಾಜಗುರುಗಳ ಪೋಷಾಕಿನಲ್ಲಿ ವಜ್ರವೈಡೂರ್ಯ ಖಚಿತ, ಚಿನ್ನದ ಕಿರೀಟ ಹಾಗೂ ಪುಷ್ಪಾಹಾರಗಳನ್ನು ಧರಿಸಿ ಸಿದ್ಧ ಸಿಂಹಾಸನವನ್ನು ಏರಿದರು.

ಸ್ವಾಮೀಜಿಯವರನ್ನು ಬೆಂಗಳೂರಿಗೆ ೧೯೭೬ರಲ್ಲಿ ವೈಭವದಿಂದ ಸ್ವಾಗತಿಸಲಾಯಿತು. ಬೆಂಗಳೂರಿನ ಸಿಟಿ ಮಾರ್ಕೆಟ್ಟಿನಲ್ಲಿ ಸ್ವಾಮೀಜಿಯವರನ್ನು ಸ್ವಾಗತಿಸಿ

ಅಲ್ಲಿಂದ ಹೂವಿನ ಪಲ್ಲಕ್ಕಿಯಲ್ಲಿ ಪೇಟೆ ಪೂರ್ತಿ ಮೆರವಣಿಗೆ ಮಾಡಿ ಒಕ್ಕಲಿಗರ ಸಂಘಕ್ಕೆ ಕರೆದುಕೊಂಡು ಬರಲಾಯಿತು.

ಅಲಂಕರಿಸಿದ ಹೂವಿನ ಮಂಟಪದಲ್ಲಿ, ಕಿರೀಟ ಧರಿಸಿದ ಸ್ವಾಮೀಜಿಯವರನ್ನು ಮೆರವಣಿಗೆಯಲ್ಲಿ ನೋಡುವುದೇ ಒಂದು ಆನಂದ. ಅವರ ಮುಖದಲ್ಲಿ ತೇಜಸ್ಸು ಎಲ್ಲರನ್ನು ಆಕರ್ಷಿಸುತ್ತಿತ್ತು. ಯಲಹಂಕ ಗೇಟ್ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಕಾರ್ಯನಿರ್ವಾಹಕ ಧರ್ಮದರ್ಶಿಯಾಗಿ ಅವರನ್ನು ಸ್ವಾಗತಿಸಿದೆನು. ಮೊದಲಿನಿಂದಲೂ ಬೆಂಗಳೂರಿಗೆ ಯಾರೇ ಸ್ವಾಮಿಗಳು ಬರಲಿ, ಆಂಜನೇಯನ ದರ್ಶನ ಮಾಡಿ ನಂತರ ಬೆಂಗಳೂರಿಗೆ ಭೇಟಿ. ಸ್ವಾಮಿಗಳ ಹೂವಿನ ಮಂಟಪ ದೇವಸ್ಥಾನದ ಬಳಿ ಬಂದಾಗ ಸ್ವಾಮಿಗಳನ್ನು ದೇವರ ದರ್ಶನ ಮಾಡಲು ಸ್ವಾಗತಿಸಿದೆ. ಆದರೆ ಕೆಲವು ಹಿರಿಯರು 'ಮಂಗಳಾರತಿಯನ್ನು ಇಲ್ಲಿಗೇ ತೆಗೆದುಕೊಂಡು ಬನ್ನಿ' ಎಂದರು. ನಾನು ಸ್ವಾಮೀಜಿಯವರಿಗೆ ದೇವಸ್ಥಾನದ ವೈಶಿಷ್ಟ್ಯ ಮತ್ತು ಸಂಪ್ರದಾಯ ತಿಳಿಸಿದೆ. ತಕ್ಷಣ ಒಪ್ಪಿ ಮಂಟಪದಿಂದ ಇಳಿದು ದೇವಸ್ಥಾನದ ಒಳಕ್ಕೆ ಬಂದು ದೇವರ ದರ್ಶನ ಪಡೆದು ಮಂಗಳಾರತಿಯನ್ನು ಸ್ವೀಕರಿಸಿ, ನಂತರ ಹೊರಟರು. ಅವರ ವ್ಯಕ್ತಿತ್ವದ ವಿಶೇಷತೆ ಆಗಲೆ ತಿಳಿಯಿತು. ಅಲ್ಲದೆ ಬೇರೆ ಹಿರಿಯರ ಮಾತನ್ನು ಕೇಳದೆ ಕೆಳಗೆ ಇಳಿದು ಬಂದರೆಂಬುದೇ ನನಗೆ ಆನಂದ.

ಒಕ್ಕಲಿಗರ ಸಂಘದಲ್ಲಿ ಇಳಿದುಕೊಂಡ ಮೇಲೆ ಪ್ರವಾಸದ ಮೊದಲನೆ ಕಾರ್ಯಕ್ರಮ ಮಲ್ಲೇಶ್ವರದ ಕಡೆ. ಹಣ ಸಂಗ್ರಹಣೆಗಾಗಿ ಸುಮಾರು ಒಂದು ತಿಂಗಳ ಮುಂಚಿನಿಂದಲೂ ಯಶವಂತಪುರ, ಮಲ್ಲೇಶ್ವರ, ಗುಟ್ಟಹಳ್ಳಿ ಎಲ್ಲಾ ಪ್ರದೇಶಗಳಿಗೂ ಹೋಗಿ ಸ್ವಾಮಿಗಳ ವಿಚಾರ ಮತ್ತು ಪಾದಪೂಜೆಯ ವಿಚಾರ ತಿಳಿಸಿ ಹಣ ಸಂಗ್ರಹಣೆ ಮಾಡಲಾಯಿತು. ಕೇಳಿದವರಾರೂ ಇಲ್ಲ ಎನ್ನಲಿಲ್ಲ. ಒಂದು ಛತ್ರದಲ್ಲಿ ಸುಮಾರು ೫೦ ಸಾಮೂಹಿಕ ಪಾದಪೂಜೆಗಳನ್ನು ಏರ್ಪಾಡು ಮಾಡಿ ಸ್ವಾಮಿಗಳನ್ನು ಕರೆಸಲಾಯಿತು. ಮೊದಲೇ ಪಾದಪೂಜೆಗೆ ಬೇಕಾದ ವಸ್ತುಗಳ ಪಟ್ಟಿಯನ್ನು ಕೊಟ್ಟಿದ್ದುದರಿಂದ ಎಲ್ಲವನ್ನೂ ತಂದಿದ್ದೆವು. ಪಾದಪೂಜೆ ಮಾಡುವಾಗ ಯಾರಾದರೂ ಪುರೋಹಿತರನ್ನು ಕರೆಸಬೇಕೆಂದು ಕೇಳಿದ್ದೆ. ಅದಕ್ಕೆ ಹೇಳಿದರು, ಸ್ವಾಮಿಗಳ ಜೊತೆಗೇ ಬರುತ್ತಾರೆ ಅಂತ. ಪಾದಪೂಜೆಗೆ ಕುಳಿತಾಗ ರಂಗೇಗೌಡ, ವೀರಣ್ಣಗೌಡ (ಈಗ ಶ್ರೀ ಶಾಂತಿನಾಥ ಸ್ವಾಮೀಜಿ, ಶ್ರೀ ಶಿವಕುಮಾರ ಸ್ವಾಮೀಜಿ ಆಗಿದ್ದಾರೆ) ಇವರಿಬ್ಬರೂ ಮಂತ್ರ ಹೇಳಿ ಪಾದಪೂಜೆ ಮಾಡಿದಾಗ ಮಠದಲ್ಲಿರುವ ಬ್ರಾಹ್ಮಣ ವಟುಗಳನ್ನು ಕರೆದುಕೊಂಡು ಬಂದಿದ್ದಾರೆ ಎಂದು ತಿಳಿದೆ. ಆದರೆ ಅವರಿಬ್ಬರು ರೈತರ ಮಕ್ಕಳು. ಸಂಸ್ಕೃತ ಶಾಲೆಯಲ್ಲಿ ಓದುತ್ತಿರುವವರು ಅಂತ ಗೊತ್ತಾಗಿ ವಿಚಾರಣೆ ಮಾಡಿದ ಮೇಲೆ, ಅವರ ಸ್ಪಷ್ಟವಾದ ಉಚ್ಚಾರಣೆ ಮತ್ತು ಪೂಜಾವಿಧಾನ ನೋಡಿ ಆಶ್ಚರ್ಯವಾಯಿತು. ಅವರ ಭಕ್ತಿ, ಶ್ರದ್ಧೆಯೇ ಇದಕ್ಕೆ ಕಾರಣ.

ಸ್ವಾಮೀಜಿಯವರ ಮಾತು ಕಡಿಮೆ. ಅವರ ಸೌಮ್ಯ ಮುಖ, ತೇಜಸ್ಸಿರುವ

ಕಣ್ಣು, ಎಂತಹವರನ್ನೂ ಸೆಳೆಯುತ್ತಿತ್ತು. ನನ್ನನ್ನಂತೂ ಆಕರ್ಷಿಸಿತು. ಅಲ್ಲಿಯ ಛತ್ರದಲ್ಲಿ ಊಟ ಮಾಡಿ ಮನೆ ಹತ್ತಿರ ಇರುವುದರಿಂದ ಮಧ್ಯಾಹ್ನ ವಿಶ್ರಾಂತಿಗಾಗಿ ಮನೆಗೆ ಕರೆದುಕೊಂಡು ಬಂದೆನು. ಮನೆಯಲ್ಲಿ ವಿಶ್ರಾಂತಿ ತೆಗೆದುಕೊಂಡು ಸಾಯಂಕಾಲ ರಾಮಮಂದಿರದ ಸಭೆಗೆ ಕರೆದುಕೊಂಡು ಹೋದೆ. ಸಾವಿರಾರು ಜನ ಕಾದಿದ್ದರು. ಒಂಭತ್ತರಿಂದ ಒಂಭತ್ತೂವರೆವರೆಗೆ ಸ್ವಾಮಿಗಳ ದರ್ಶನ ಕಾರ್ಯಕ್ರಮ ನಡೆದು ಪ್ರಸಾದ ಸ್ವೀಕರಿಸಲು ಪುನಃ ನಮ್ಮನೆಗೇ ಕರೆದುಕೊಂಡು ಬಂದೆ. ಏನೂ ವಿಶೇಷ ಅಡುಗೆ ಮಾಡಿರಲಿಲ್ಲ. ಸ್ವಲ್ಪ ಭಯವೇ ಆಯಿತು. ಏನಪ್ಪಾ ಸ್ವಾಮಿಗಳಿಗೆ ಈ ಸರಳ ಊಟ ನೀಡಬೇಕಲ್ಲ ಅಂತ. ಆದರೆ ಸ್ವಾಮಿಗಳ ಊಟ ಬಹಳ ಕಡಿಮೆ.

ಊಟ ಆದ ಮೇಲೆ ಬಂದಿದ್ದವರೆಲ್ಲರ ಪರಿಚಯ ಮಾಡಿಕೊಂಡರು. ನನ್ನ ಪರಿಚಯ ಮಾಡಿಕೊಂಡೆ. ಎಲ್ಲ ವಿವರಗಳನ್ನು ತಿಳಿದುಕೊಳ್ಳುವ ಕುತೂಹಲ. ಒಳ್ಳೆಯ ಜ್ಞಾಪಕ ಶಕ್ತಿ. ಹೆಸರುಗಳನ್ನು ಮತ್ತು ಅವರ ಕಾರ್ಯ ಕ್ಷೇತ್ರಗಳನ್ನು ಪರಿಚಯ ಮಾಡಿಕೊಳ್ಳುತ್ತಿದ್ದುದು ಸ್ವಭಾವ. ಸಣ್ಣ ಮನೆಯಾದರೂ ಇಲ್ಲಿಯೇ ಸ್ನಾನ ಮಾಡಿ ಪೂಜೆ ಮಾಡಿ ಪ್ರಸಾದ ಸ್ವೀಕರಿಸಿದರು. ಅವರ ಸರಳತೆಯ ನಿರೂಪಣೆ ಇದು. ಅನೇಕ ಪ್ರದೇಶಗಳಿಗೆ ಇವರಿಗೆ ಪರಿಚಯವಿಲ್ಲದುದರಿಂದ, ಜೊತೆಯಲ್ಲಿ ಹೋಗಿ ಎಲ್ಲವನ್ನು ಪರಿಚಯ ಮಾಡಿಕೊಡವುದು, ಜೊತೆಗೆ ಸ್ವಾಮಿಗಳನ್ನು ಸಭಿಕರಿಗೆ ಪರಿಚಯ ಮಾಡುವುದು ಒಂದು ಕೆಲಸವಾಯಿತು. ಆಗ ಬೆಂಗಳೂರಿನ ಎಲ್ಲ ವಿಭಾಗಗಳಿಗೂ ಭೇಟಿ ನೀಡಿ ಭಕ್ತರ ಪರಿಚಯ ಮಾಡಿಕೊಂಡರು. ಭಕ್ತರಿಗೆ ಇವರ ಪರಿಚಯವಾಯಿತು. ಅವರು ಬೆಂಗಳೂರಿನಲ್ಲಿ ಇದ್ದಷ್ಟು ದಿವಸ ವಿಜೃಂಭಣೆಯ ಸಮಾರಂಭಗಳು ಎಲ್ಲೆಲ್ಲೂ ನಡೆದವು. ಕೊನೆಯ ದಿವಸ ಒಕ್ಕಲಿಗರ ಸಂಘದಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಿ ಬೀಳ್ಕೊಡಲಾಯಿತು.

ಶ್ರೀ ರಾಮ ಕಲ್ಯಾಣಮಂಟಪದ ನಾಟಕಕ್ಕೆ ಬರಬೇಕೆಂದು ಒಮ್ಮೆ ಕೇಳಿಕೊಂಡೆವು. ಸ್ವಾಮೀಜಿಯವರು ಸಾಮಾನ್ಯವಾಗಿ ಎಲ್ಲೂ ನಾಟಕಕ್ಕೆ ಹೋಗುವುದಿಲ್ಲ. ಆದರೆ ನಮ್ಮ ಕೋರಿಕೆ ಮೇರೆಗೆ ನಾಟಕಕ್ಕೆ ಬರಲು ಒಪ್ಪಿದರು. ಕಾರಣ ಮಹಾಭಾರತದ ಕೆಲವು ಭಾಗಗಳನ್ನು ನಾಟಕಕ್ಕೆ ಆರಿಸಿದ್ದೆವು; ಕಲ್ಯಾಣಮಂಟಪದ ಸಹಾಯಾರ್ಥ. ಆ ವಿಷಯದ ಬಗ್ಗೆ ಭಕ್ತ ಸಮೂಹಕ್ಕೆ ತಿಳಿವು ಮೂಡಿಸಲು ಅನುಕೂಲವೆಂದು ತಿಳಿದು ಬಂದರು. ಭಕ್ತರಿಗೆ ಅನುಗ್ರಹ ಭಾಷಣ ಮಾಡಿ ಎಲ್ಲರನ್ನೂ ಆಕರ್ಷಿಸಿದರು. ಅಂದು ನಮ್ಮ ಮನೆಯಲ್ಲಿಯೇ ಉಳಿದುಕೊಂಡಿದ್ದರು. ಭಕ್ತರ ಆಸೆಯನ್ನು ನೆರವೇರಿಸುವ ಮನೋಭಾವ ಅವರದು.

ಸ್ವಾಮೀಜಿಯವರಿಗೆ ಒಳ್ಳೊಳ್ಳೆಯ ಕೆಲಸದಲ್ಲಿ ಆಸಕ್ತಿ. ಶ್ರೀ ರಾಮಮಂದಿರದ ಕಲ್ಯಾಣಮಂಟಪದ ಶಂಕುಸ್ಥಾಪನೆಗೆ ಸ್ವಾಮೀಜಿಯವರನ್ನು ಕರೆಸಿದ್ದೆವು. ಸ್ವಾಮೀಜಿಯವರು ಶಂಕುಸ್ಥಾಪನೆ ನೆರವೇರಿಸುವುದರ ಜೊತೆಗೆ, ಭಕ್ತಾದಿಗಳಿಗೆ ಹಣ ನೀಡುವಂತೆ

ವಿನಂತಿಸಿಕೊಂಡರು. ಅವರಲ್ಲಿ ಮನವಿ ಮಾಡಿಕೊಂಡು ಜನಗಳು ತಾವಾಗಿಯೇ ಕೊಡುವಂತೆ ಮಾಡಿದರು. ನಾಗಮಂಗಲ ತಾಲ್ಲೂಕಿನ ಒಂದು ಹಳ್ಳಿ ಚೌದರೀಕೊಪ್ಪಲು. ಈ ತಾಲ್ಲೂಕಿನ ಹಳ್ಳಿಗೆ ಸ್ವಾಮೀಜಿಯವರು ಮೊದಲನೆಯ ಸಾರಿ ಭೇಟಿ ನೀಡಿ ಅಲ್ಲಿ ರಾಮಮಂದಿರದ ಪ್ರಾರಂಭೋತ್ಸವ ನೆರವೇರಿಸಿದರು. ಹಳ್ಳಿಯ ಹೆಣ್ಣುಮಕ್ಕಳು ಹಾಡುವ ಜನಪದ ಹಾಡುಗಳನ್ನು ಅಲ್ಲಿ ಆಲಿಸಿದರು. ಜನಪದ ಹಾಡುಗಳು, ಅವುಗಳ ಮಹತ್ವ, ನಿಜವಾದ ಸತ್ಯವನ್ನು ಕುರಿತು ಬಹಳ ಚೆನ್ನಾಗಿ ಮಾತನಾಡಿದರು.

ಅಲ್ಲಿ ಮತ್ತೊಂದು ಘಟನೆ ನಡೆಯಿತು. ಏನೆಂದರೆ, ಸ್ವಾಮೀಜಿಯವರು ಊರಿಗೆ ಬಂದಾಗ ಅಲ್ಲಿಯ ಮುಖಂಡರೂ ಹರಿಜನರನ್ನು ಮೊದಲೇ ದೂರ ನಿಲ್ಲಿಸಿದ್ದರು. ಅವರು ದೂರ ನಿಂತಿದ್ದನ್ನು ನೋಡಿದರು. ಸ್ವಾಮೀಜಿಯವರು ಆ ಮುಖಂಡರುಗಳಿಗೆ ಕೇಳಿದರು, ಆ ಜನ ಏಕೆ ದೂರ ನಿಂತಿದ್ದಾರೆ? ಎಂದು. ಅನಂತರ ತಿಳಿದು 'ಮೊದಲು ಅವರನ್ನ ಕರೆಯಿರಿ ಅನಂತರ ಕಾರ್ಯಕ್ರಮ' ಎಂದು ಹೇಳಿ ಅವರಿಂದ ಕಾಲಿಗೆ ನಮಸ್ಕರಿಸಲು ಅವಕಾಶ ನೀಡಿ, ಆಶೀರ್ವದಿಸಿ ಕಾರ್ಯಕ್ರಮಕ್ಕೆ ಬಂದರು. ಜಾತಿಯ ಭೇದ ಭಾವನೆ ಇವರಿಗೆ ಎಳ್ಳಷ್ಟೂ ಇಲ್ಲ. ಎಲ್ಲರನ್ನೂ ಒಂದೇ ರೀತಿ ಕಾಣುವುದು ಇವರ ಸ್ವಭಾವ.

ಆದಿಚುಂಚನಗಿರಿ ಮಠಕ್ಕೆ ಯಾರೇ ಹೋದರೂ ಎಲ್ಲರನ್ನೂ ಆದರದಿಂದ ನೋಡಿಕೊಳ್ಳುವರು.

ಸ್ವಾಮೀಜಿಯವರು ಶ್ರೀಕ್ಷೇತ್ರದ ಅಭಿವೃದ್ಧಿಗೆ ಹಣ ಸಂಗ್ರಹಿಸಲು ಪ್ರವಾಸ ಕೈಗೊಳ್ಳುತ್ತಿರುತ್ತಾರೆ. ಎಲ್ಲ ತಾಲ್ಲೂಕು, ಜಿಲ್ಲೆಗಳಿಗೂ ಭೇಟಿ ನೀಡಿ ಭಕ್ತಾದಿಗಳ ಪರಿಚಯ ಮಾಡಿಕೊಳ್ಳುವರು. ಅವರಿಂದ ಹಣವನ್ನು ದಾನವಾಗಿ ಪಡೆದು ಜಿಲ್ಲೆ, ತಾಲ್ಲೂಕುಗಳಲ್ಲಿ ಒಂದೊಂದು ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ಆ ಕ್ಷೇತ್ರದಲ್ಲಿ ಸಂಗ್ರಹಿಸಿದ ಹಣವನ್ನು ಅಲ್ಲಿಯ ಬೆಳವಣಿಗೆಗೆ ಬಳಸುತ್ತಿದ್ದಾರೆ. ಇದು ಅವರ ಮನೋವಿಶಾಲತೆಗೆ ಸಾಕ್ಷಿ.

ಶ್ರೀ ಕ್ಷೇತ್ರದ ಅಭಿವೃದ್ಧಿಗೆ ಗಮನ ಹರಿಸದೆ ಎಲ್ಲಾ ಕಡೆಯೂ ಸಂಸ್ಥೆಗಳನ್ನು ಪ್ರಾರಂಭಿಸಿ ಅಲ್ಲಿಯ ಬೆಳವಣಿಗೆಗೆ ಮಹತ್ವ ನೀಡುತ್ತಿರುವುದು ಗಮನಾರ್ಹವಾದುದು. ಶ್ರೀ ಕ್ಷೇತ್ರದಲ್ಲಿ ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಿ, ವೃತ್ತಿಶಿಕ್ಷಣಕ್ಕೆ, ತಾಂತ್ರಿಕ ಶಿಕ್ಷಣಕ್ಕೆ ಗಮನ ನೀಡಿದ್ದಾರೆ. ಶಿಕ್ಷಣ ಕಾಲೇಜು, ಪದವಿ ಕಾಲೇಜು, ದೈಹಿಕ ಶಿಕ್ಷಣ ಕಾಲೇಜು, ವೈದ್ಯಕೀಯ ಕಾಲೇಜು, ಇಂಜಿನಿಯರಿಂಗ್ ಕಾಲೇಜು— ಹೀಗೆ ಬೇರೆ ಬೇರೆ ಕಡೆ ಸ್ವಾಮೀಜಿಯವರು ಸಂಸ್ಥೆಗಳನ್ನು ಪ್ರಾರಂಭಿಸಿ ವಿದ್ಯಾರ್ಜನೆಗೆ ಅನುಕೂಲಮಾಡಿದ್ದಾರೆ.

ಆದಿಚುಂಚನಗಿರಿ ಮಠ ಒಂದು ಕಾಲಕ್ಕೆ ಕರ್ನಾಟಕದ ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತು. ಇದರ ಶಾಖೆಗಳು ದೇಶದ ನಾನಾ ಕಡೆಗಳಲ್ಲಿ ಇಂದು ಹರಡಿಕೊಂಡಿವೆ.

ಪುರಾಣ ಪ್ರಸಿದ್ಧವಾದ ಪ್ರಕೃತಿ ಸೌಂದರ್ಯದಿಂದ ಕೂಡಿದ ಈ ಕ್ಷೇತ್ರ 'ಅನ್ನದಾನಿ ಮಠ' ಎಂದು ಹೆಸರು ಪಡೆದಿದೆ. ಜಾತಿ ಮತಗಳ ಬೇಧವಿಲ್ಲದೆ ಸಹ ಪಂಕ್ತಿಯಲ್ಲಿ ಭೋಜನ ನೀಡುವ ಇಂಥ ಮಠ ಭಾರತದಲ್ಲಿ ಬಹುಶಃ ಇದೊಂದೇ.

ಗುರುಗಳ ಮಾರ್ಗದರ್ಶನವಿಲ್ಲದೆ ಮನುಷ್ಯ ತನ್ನ ಜೀವನ ಸಾರ್ಥಕಪಡಿಸಿಕೊಳ್ಳಲು ಆಗೋದಿಲ್ಲವೆ ಎಂಬ ಪ್ರಶ್ನೆ ಬರುವುದುಂಟು. ಒಂದು ಸಂಸಾರಕ್ಕೆ ಮನೆ ಇರುವ ಹಾಗೆ ಒಂದು ಜನಾಂಗಕ್ಕೆ ಮಠ ಬೇಕಲ್ಲವೆ? ಮನೆಗೊಬ್ಬ ಮುಖಂಡ ಇರುತ್ತಾನೆ. ಹಾಗೆ ಮಠಕ್ಕೊಬ್ಬ ಮುಖಂಡ ಇರಬೇಕು. ಅವರಿಗೆ ನಮ್ಮೆಲ್ಲರ ಭಕ್ತಿ ಗೌರವ ಸಲ್ಲಿಸುವುದು ನಮ್ಮ ಕರ್ತವ್ಯವಲ್ಲವೆ?

ಜ್ಞಾಪಕದಲ್ಲಿಡಬೇಕಾದ ಸಂಗತಿ ಏನೆಂದರೆ ಗುರು ಮಠಗಳು ಲೌಕಿಕ ವೈಭವದಿಂದ, ಆಡಂಬರದಿಂದ ದೂರವಿರಬೇಕಷ್ಟೆ. ಗುರು ಎಂದರೆ ದೊಡ್ಡವನು. ಮನುಷ್ಯನಿಗೆ ಸುಲಭಸಾಧ್ಯವಲ್ಲದ, ಅವ್ಯಕ್ತವಾದ ಅತೀತವಾದ ದೇವರು, ನಿಜವಾದ ಜಗದ್ಗುರು. ದೇವನೊಬ್ಬ ನಾಮ ಹಲವು ಎಂಬಂತೆ ಜಗತ್ತು ಒಂದೇ, ಜಗದ್ಗುರುಗಳು ಮಾತ್ರ ಹಲವರು, ಅವರವರ ಸಾಧನೆ ಸಿದ್ಧಿಗಳ ವೃದ್ಧಿಯಿಂದ ಅವರವರ ಹೆಚ್ಚುಗಾರಿಕೆ ಪ್ರಕಾಶವಾಗುತ್ತದೆ. ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಇಂದಿನ ಮನೋಧರ್ಮಕ್ಕೆ ಅನುಗುಣವಾಗಿ ಯೋಜನೆಗಳನ್ನು ಹಾಕಿಕೊಡು ಜನಾಂಗದ ಏಳಿಗೆಗೆ ಕಟಿಬದ್ಧರಾಗಿದ್ದಾರೆ.

ಸ್ವಾಮೀಜಿಯವರದು ಯಾವಾಗಲೂ ನಗುಮುಖ. ಯಾವ ಸಲಹೆ ನೀಡಿದರೂ ಒಪ್ಪಿಕೊಳ್ಳುವರು. ಒಳ್ಳೆಯ ಸಲಹೆಗಳು ಭಕ್ತಾದಿಗಳಿಂದ ಬಂದಾಗ ಅವರ ಅನುಷ್ಠಾನವನ್ನು ಅವರ ಮೂಲಕವೇ ಮಾಡಿಸಲು ಪ್ರಯತ್ನಿಸುವರು. ಕೆಲಸವನ್ನು ಹೇಗೆ ಮಾಡಿಸಿಕೊಳ್ಳಬೇಕೆಂಬುದು ಗೊತ್ತು. ಜವಾಬ್ದಾರಿಯಿಂದ ಯಾವ ಕೆಲಸವನ್ನೇ ಆಗಲಿ ನಿರ್ವಹಿಸುವರು.

ಬೆಂಗಳೂರಿನ ಹೊಸಹಳ್ಳಿಯ ಮಠಕ್ಕೆ ಸೇರಿದ ಖಾಲಿ ನಿವೇಶನವಿತ್ತು. ಬೆಂಗಳೂರಿಗೆ ಬಂದಾಗ ತಾವು ಇಳಿದುಕೊಳ್ಳಲು ಅನುಕೂಲವಾಗಲೆಂದು ಹೊಸಹಳ್ಳಿಯಲ್ಲಿ ಒಂದು ಶಾಖೆ ಪ್ರಾರಂಭಿಸಿದರು. ಇದು ಆಗುವ ಮೊದಲು ಬೆಂಗಳೂರಿಗೆ ಬಂದಾಗ ನಮ್ಮ ಮನೆಯಲ್ಲಿಯೇ ಇಳಿದುಕೊಳ್ಳುತ್ತಿದ್ದರು. ಒಮ್ಮೆ ಬಂದಾಗ ಮನೆಯಲ್ಲಿ ವಿಶೇಷ ಏನೂ ಮಾಡಿರಲಿಲ್ಲ. ಸರಳ ಅಡಿಗೆ. ಸ್ವಾಮಿಯವರಿಗೆ ಹೇಗೆ ಬಡಿಸುವುದು ಎಂಬ ಸಂಕೋಚ. ಹುರುಳಿಕಾಳಿನ ಸಾರು, ಊಟ ಮಾಡಿ ಸೊಗಸಾದ ಊಟವೆಂದು ಶ್ಲಾಘಿಸಿದರು. ಮಾರನೆಯ ದಿನ ಸ್ನಾನ ಪೂಜೆಗಳನ್ನು ಮುಗಿಸಿ ಪ್ರಸಾದ ಸ್ವೀಕರಿಸಿ ಹೊರಟರು. ಬಹಳ ಸರಳ ಸ್ವಭಾವದವರು.

ಹೊಸಹಳ್ಳಿ ಮಠ ಸ್ಥಾಪನೆಯಾದ ಮೇಲೆ ಅಲ್ಲಿಗೆ ಹೋಗುವ ಭಕ್ತಾದಿಗಳು

ಅಪಾರ. ಸ್ವಾಮೀಜಿಯವರು ಅಲ್ಲಿದ್ದಾರೆಂದರೆ ಮುಗಿಯಿತು. ಭಕ್ತಾದಿಗಳ ಜಾತ್ರೆ. ಅವರೆಲ್ಲರನ್ನೂ ಮಾತನಾಡಿಸಿ ಯೋಗಕ್ಷೇಮ ವಿಚಾರಿಸಿ ವಿಶ್ವಾಸ ಬೆಳೆಸಿಕೊಳ್ಳುವರು. ವಿಷಯಗಳನ್ನು ಕೂಲಂಕುಷವಾಗಿ ವಿಚಾರಿಸುವರು. ಒಮ್ಮೆ ನನಗೆ ಬಹಳ ಬೇಸರವಾಗಿತ್ತು. ಸ್ವಾಮೀಜಿಯವರು ಬಂದಿರುವುದನ್ನು ತಿಳಿದು ಮಠಕ್ಕೆ ಹೋದೆ. ನನ್ನನ್ನು ನೋಡುತ್ತಲೇ ಅವರಿಗೆ ಅರ್ಥವಾಯಿತು. ವಿಷಯವೇನೆಂದು ಕೇಳಿದರು, ತಿಳಿಸಿದೆ. ಕೂಲಂಕುಷವಾಗಿ ಚರ್ಚಿಸಿ ನನ್ನ ಮನಸ್ಸಿಗೆ ಹರ್ಷವನ್ನು ನೀಡಿದರು. ಭಕ್ತ ಹಿತದೃಷ್ಟಿಯ ಬಗ್ಗೆ ಗಮನ ಹರಿಸುವರೆಂಬುದಕ್ಕೆ ಇದೊಂದು ನಿದರ್ಶನ.

ಪಾಶ್ಚಿಮಾತ್ಯ ದೇಶಕ್ಕೆ ಹೋಗಬೇಕೆಂಬ ಸಲಹೆ ಭಕ್ತರಿಂದ ಬಂದಾಗ ಭಕ್ತಾದಿಗಳನ್ನು ಸಭೆ ಸೇರಿಸಿ ಒಪ್ಪಿಗೆ ಕೇಳಿದರು. ಯಾವ ಸ್ವಾಮಿಯವರು ಒಪ್ಪಿಗೆ ಪಡೆದು ಹೊರದೇಶಕ್ಕೆ ಹೋಗುವರು. ಹೇಳಿ? 'ನಾವು ಹೋಗುವ ವಿಚಾರ ನಿಮಗೆ ಸೇರಿದ್ದು. ವಿದೇಶಕ್ಕೆ ಹೋಗುವುದು ನಿಮಗಾಗಿ. ನಿಮ್ಮ ಅಭಿವೃದ್ಧಿಗೆ ಸಹಾಯಕವಾಗುವ ವಿಚಾರ ತಿಳಿಯಲು, ನಿಮ್ಮ ಸಲಹೆ ಮೇರೆಗೆ ಮಾತ್ರ ಹೋಗಬಯಸುತ್ತೇವೆ' ಎಂದರು. ಆ ಸಂದರ್ಭದಲ್ಲಿ ವಿಡಿಯೋ ಚಿತ್ರ ತೆಗೆಯಬೇಕೆಂದಾಗ ಒಪ್ಪಿಗೆ ಕೊಡಲಾಯಿತು.

ನಾವು ಹೊರಗಡೆ ಪ್ರವಾಸ ಹೋಗುವ ಮುನ್ನ ಮನಸ್ಸಿನಲ್ಲಿ ಯೋಜನೆ ಹಾಕಿಕೊಳ್ಳುತ್ತೇವೆ. ಎಲ್ಲೆಲ್ಲಿ ಏನೇನು ನೋಡೋಣ. ಯಾವ ಊರಿನಲ್ಲಿ ಏನು ವಿಷಿಷ್ಟತೆ ಇದೆ, ಏನನ್ನು ನೋಡಬಹುದು ಎಂಬುದಾಗಿ, ಆದರೆ ಈಗ ಸ್ವಾಮೀಜಿಯವರು ವಿದೇಶ ಪ್ರವಾಸ ಹೋಗಿರುವುದು ಭಕ್ತರನ್ನು ನೋಡುವುದಕ್ಕೆ ಅಲ್ಲ. ನಮ್ಮ ಸಮಾಜಕ್ಕೆ ಪಾಶ್ಚಿಮಾತ್ಯದಿಂದ ಏನು ಪ್ರಯೋಜನ ಆಗಬಹುದು. ಅವರು ಹೇಗೆ ಮುಂದುವರೆದಿದ್ದಾರೆ, ನಮ್ಮ ಸಮಾಜದ ಅಭಿವೃದ್ಧಿಗೆ ಅಲ್ಲಿಂದ ಏನೇನು ತರಬಹುದು, ವೈಜ್ಞಾನಿಕ ಪ್ರಗತಿ ಹೇಗಾಗಿದೆ. ನಮ್ಮ ದೇಶಕ್ಕೆ ಅದರ ಅಳವಡಿಕೆ ಹೇಗಿರಬೇಕು ಎಂಬುದರ ಕಡೆಗೆ ಸ್ವಾಮೀಜಿಯವರ ದೃಷ್ಟಿ. ಒಂದು ಸಂಸಾರದ ಹೊಣೆ ಕಷ್ಟ, ಅಂತಹದರಲ್ಲಿ ಸಾವಿರಾರು ಜನ ಮಕ್ಕಳು ಇರುವ, ಲಕ್ಷಾಂತರ ಜನ ಭಕ್ತಾದಿಗಳು ಇರುವ ಮಠವನ್ನು ನೋಡಿಕೊಳ್ಳುವುದು ಎಂದರೆ ಅವರ ಜವಾಬ್ದಾರಿ ಎಷ್ಟಿದೆ ಎಂದು ವೇದ್ಯವಾಗುತ್ತದೆ. ಅದನ್ನು ಸರಾಗವಾಗಿ ಲೀಲಾಜಾಲವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆಂಬುದು ಅವರ ಕಾರ್ಯದಕ್ಷತೆಗೆ ಉದಾಹರಣೆಯಾಗಿದೆ.

ಸಾಮಾನ್ಯವಾಗಿ ಅಮೆರಿಕ ದೇಶದಲ್ಲಿ ಸಾಧುಸಂತರು, ಭಾಷಣ ಆದ ಮೇಲೆ ಒಂದು ಲಕೋಟೆಯನ್ನು ಎಲ್ಲರಿಗೂ ಹಂಚುತ್ತಿದ್ದರು. ಅದರಲ್ಲಿ ಡಾಲರ್‌ಗಳನ್ನು ದಕ್ಷಿಣೆಯಾಗಿ ಕೊಡಲೆಂದು. ಆದರೆ ಶ್ರೀಗಳವರು ಆ ರೀತಿ ಹಣ ಕೇಳುವ ಸುದ್ದಿಗೆ ಹೋಗಲಿಲ್ಲ. ನನಗೆ ಎರಡು ಸಂದರ್ಭಗಳಲ್ಲಿ, ಅಮೆರಿಕ ಮತ್ತು ಜರ್ಮನಿಯಲ್ಲಿ ಅವರ ಜೊತೆಯಲ್ಲಿ ಇರುವ ಸೌಭಾಗ್ಯ ದೊರಕಿತು.

ಅಭಿವಂದನಾ

ಜರ್ಮನಿಯಲ್ಲಿ ಅವರು, ಭಕ್ತಾದಿಗಳನ್ನು ಒಂದು ಕಡೆ ಸೇರುವಂತೆ ಮಾಡಿದುದಲ್ಲದೆ, ಅಲ್ಲಿನ ವೃದ್ಧಾಶ್ರಮ, ಶಾಲೆಗಳು, ಕೈಗಾರಿಕಾ ತರಬೇತಿ ಶಾಲೆಗಳನ್ನು ಸಂದರ್ಶಿಸುತ್ತಿದ್ದರು. ಬರ್ಲಿನ್‌ನಲ್ಲಿ ಒಂದು ಫೌಂಡೇಶನ್ ಸ್ಥಾಪಿಸಿದರು.

ಅಮೆರಿಕದಲ್ಲಿ ಒಂದೇ ಊರಿನಲ್ಲಿದ್ದರೂ ಒಬ್ಬರನ್ನೊಬ್ಬರು ಸೇರುವುದು ಕಷ್ಟ. ಆದರೆ ಫ್ಲಿಂಟ್‌ನ, ಪಶ್ಚಿಮ ಕಾಶಿ ಎಂದು ಕರೆಯಲ್ಪಡುವ, ವಿಶ್ವೇಶ್ವರನ ದೇವಸ್ಥಾನದಲ್ಲಿ ಸುಮಾರು ಇನ್ನೂರು ಕುಟುಂಬಗಳು ಒಂದು ಭಾನುವಾರ ಸೇರಿದವು. ಇಷ್ಟು ಜನ ಭಾರತೀಯರು ಒಂದು ಕಡೆ, ಒಬ್ಬ ಸ್ವಾಮೀಜಿ ಕರೆದ ಸಭೆಗೆ ಬಂದಿದ್ದು ವಿಶೇಷ. ಆಗ ಅವರ ಆಶೀರ್ವಚನ ಈಗಲು ನನ್ನ ಕಿವಿಯಲ್ಲಿ ಹೇಳಿದಂತಿದೆ— ''ನಾವು ಇಲ್ಲಿ ಬಂದಿರುವುದು ನಿಮ್ಮೆಲ್ಲರನ್ನು ನೋಡುವುದಕ್ಕಾಗಿ ಮತ್ತು ಭಾರತದ ಸಂಸ್ಕೃತಿಯನ್ನು ಮರೆಯದಂತೆ ಎಚ್ಚರಿಸುವುದೇ ಉದ್ದೇಶ. ನಮಗೆ ನಿಮ್ಮ ಡಾಲರ್‌ಗಳ ಅವಶ್ಯಕತೆ ಇಲ್ಲ. ನಿಮ್ಮ ಪ್ರೀತಿ ವಿಶ್ವಾಸಗಳೇ ಮುಖ್ಯ. ಆದರೆ ಭಾರತದಲ್ಲಿರುವ ನಿಮ್ಮ ಅಣ್ಣತಮ್ಮಂದಿರನ್ನು ಮರೆಯಬೇಡಿ. ನಿಮ್ಮ ಕುಟುಂಬಗಳಲ್ಲಿ ಪ್ರತಿಯೊಬ್ಬರಿಗೂ ಒಂದು ಕಾರಿದೆ. ಯಾವ ಕೊರತೆಯಿಲ್ಲದೆ ಸೊಗಸಾದ ಜೀವನವನ್ನು ನಡೆಸುತ್ತಿದ್ದೀರಿ. ನಿಮ್ಮ ಸೋದರ, ಸೋದರಿಯರು ಹಳ್ಳಿಗಳಲ್ಲಿ ಈಗಲೂ ಚಿಂದಿಬಟ್ಟೆ, ಅರೆ ಹೊಟ್ಟೆಯಲ್ಲೇ ಇದ್ದಾರೆ. ರೋಗ ರುಜಿನಗಳಿಂದ ನರಳುತ್ತಿದ್ದಾರೆ. ಅವರ ಕಡೆ ಸ್ವಲ್ಪ ನಿಮ್ಮ ನಿಗಾ ಹರಿಸಿ. ನಿಮ್ಮ ಸಂತೋಷದಲ್ಲಿ ಸ್ವಲ್ಪವಾದರೂ ಭಾಗಿಯಾಗಲು ಸಹಾಯಮಾಡಿ. ಇದನ್ನು ನಿಮಗೆ ಜ್ಞಾಪಿಸಲು ಬಂದಿದ್ದೇವೆ'' ಎಂಬ ಹಿತವಚನ ಎಲ್ಲರ ಕಣ್ಣಿನಲ್ಲೂ ನೀರು ಬರುವಂತೆ ಮಾಡಿತು. ಎಲ್ಲರೂ ಸಹಾಯ ಮಾಡಲು ವಾಗ್ದಾನ ಮಾಡಿದರು. ಅದರಂತೆ ನಡೆದುಕೊಳ್ಳುತ್ತಲೂ ಇದ್ದಾರೆ.

ಅನೇಕರು ಭಾರತಕ್ಕೆ ಬಂದಾಗ ಸ್ವಾಮೀಜಿಯವರ ದರ್ಶನ ಪಡೆದು ಮತ್ತು ಅವರ ಕಾರ್ಯವನ್ನು ನೋಡಿ, ಆಶೀರ್ವಾದವನ್ನು ಪಡೆದುಕೊಂಡು ಹೋಗುತ್ತಿರುವುದು. ಅವರ ಆಶೀರ್ವಚನದ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ.

ಸ್ವಾಮೀಜಿಯವರು ವಿದ್ಯಾಭ್ಯಾಸ, ಶ್ರೀಕ್ಷೇತ್ರದ ಅಭಿವೃದ್ಧಿಗೆ ಗಮನ ನೀಡುವಂತೆ ವ್ಯವಸಾಯದ ಬಗ್ಗೆಯೂ ಅಷ್ಟೇ ಗಮನ ವಹಿಸಿದ್ದಾರೆ. ರೈತರ ಗುರುಗಳಾಗಿ ಮಾರ್ಗದರ್ಶನ ನೀಡುವರು. ಶ್ರೀಕ್ಷೇತ್ರದಲ್ಲಿ ತಾವು ಇದ್ದಾಗ ಬೆಳಿಗ್ಗೆ ಸಂಜೆ ತೋಟದ ಬಳಿ ಹೋಗಿ ವ್ಯವಸಾಯವನ್ನು ಮಾಡಿಸುವರು. ಸ್ವಾಮೀಜಿಯವರನ್ನು ನೋಡಿದರೆ ಕಾರ್ಮಿಕರಿಗೆ ಅಷ್ಟೇ ಉತ್ಸಾಹ. ಉತ್ಸುಕತೆಯಿಂದ ಕೆಲಸ ನಿರ್ವಹಿಸುವರು. ಕರ್ಮಯೋಗಿಯಾಗಿ ಹಗಲಿರುಳು ದುಡಿಯುವ ಮಹಾನುಭಾವರಿವರು. ಸುಮಾರು ಹತ್ತು ಸಾವಿರ ತೆಂಗಿನ ಸಸಿಗಳನ್ನು ನೆಡಿಸಿ, ಶ್ರೀಕ್ಷೇತ್ರದ ಆರ್ಥಿಕ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಮಾಯಸಂದ್ರದಲ್ಲಿ ದಾನಿಗಳಿಂದ ಜಮೀನನ್ನು ಪಡೆದು ತೆಂಗಿನ ಸಸಿಯನ್ನು ಹಾಕಿಸಿ, ಎಲ್ಲಾ ತರಹದ ವ್ಯವಸಾಯವನ್ನು ಮಾಡಿಸಿ ರೈತರಿಗೆ ಗುರುಗಳಾಗಿರುವರು.

ಅಭಿವಂದನಾ

ಪುರಭವನದಲ್ಲಿ ನನಗೆ ರಾಜ್ಯಮಟ್ಟದ ಸನ್ಮಾನ ಏರ್ಪಡಿಸಿದಾಗ ಬರಬೇಕೆಂದು ಕೇಳಿದೆ. ಭಕ್ತನ ಸನ್ಮಾನಕ್ಕೆ ಬರಲು ಒಪ್ಪಿ, ಅವರೇ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಆ ಸಂದರ್ಭದಲ್ಲಿ ಭಕ್ತಾದಿಗಳಿಗೆ ನೀಡಿದ ಆಶೀರ್ವಚನ ಮನನೀಯ ಆಗಿದೆ.

ಇಂದಿನ ವೈಜ್ಞಾನಿಕ ಕಾಲದಲ್ಲಿ ಮಠಗಳ ಬಗ್ಗೆ ಸ್ವಾಮೀಜಿಯವರ ಅಭಿಪ್ರಾಯ ಹೀಗಿದೆ.''ಇಂದು ಮಠಗಳ ಅಗತ್ಯವಿದೆ. ಮಠಗಳ ವ್ಯವಸ್ಥೆ ಬಹಳ ಹಿಂದಿನಿಂದ ಬಂದದ್ದು. ಇದಕ್ಕೆ ಮನೆಮಠ ಎಂಬ ಪದದ ಬಳಕೆಯನ್ನು ನೋಡಿದರೇ ತಿಳಿಯುತ್ತದೆ. ಜೀವನಕ್ಕೆ ಒಂದು ಗುರಿ ಇರಬೇಕು. ಗುರಿ ಇಲ್ಲದ ಬಾಳು ವ್ಯರ್ಥ. ಜೀವನದ ಗುರಿಯನ್ನು ಮಾನಸಿಕ ನೆಮ್ಮದಿಯನ್ನು ಸಾಧಿಸುವವರಿಗೆ ಮಠ ಬೇಕು, ಗುರುಬೇಕು. ಮಠ ಮನುಷ್ಯನ ಕರ್ತವ್ಯವನ್ನು ಜಾಗೃತಗೊಳಿಸುತ್ತದೆ'' ವೈರಾಗ್ಯದ ಬಗ್ಗೆ ಅವರ ಅಭಿಪ್ರಾಯ ಇದು. ''ನಿಷ್ಕಾಮ ಕರ್ಮಿಯ ವೈರಾಗ್ಯ ನಿಜವಾದುದು. ರೈತ ನಿಜವಾದ ನಿಷ್ಕಾಮಕ ಕರ್ಮಿ. ವೈರಾಗ್ಯಕ್ಕೂ, ವೈಚಾರಿಕತೆಗೂ ಏನು ಸಂಬಂಧ? ಇವೆರಡಕ್ಕೂ ಸಂಬಂಧವಿದೆ. ವೈಚಾರಿಕತೆ ಇಲ್ಲದ ವೈರಾಗ್ಯ ವ್ಯರ್ಥ. ನಮ್ಮ ಜನಾಂಗ ಹೆಚ್ಚು ವ್ಯವಸಾಯ ಅವಲಂಬಿಸಿದೆ. ಇವರಲ್ಲಿ ಹೆಚ್ಚು ಅಜ್ಞಾನ-ಅನಕ್ಷರತೆ ಇದೆ. ಇದನ್ನು ಹೇಗೆ ಹೋಗಲಾಡಿಸಬಹುದು? ವಿಚಾರ ಪ್ರಚೋದನೆಯಿಂದ, ಅಕ್ಷರ ಕಲಿಸುವುದರಿಂದ ಹೋಗಲಾಡಿಸಬಹುದು''. ಮತಾಂತರದ ಬಗ್ಗೆ ಸ್ವಾಮೀಜಿಯವರ ಅಭಿಮತ ಇಷ್ಟೆ; ಅನ್ಯಧರ್ಮಕ್ಕೆ ವಲಸೆ ಹೋಗುವುದನ್ನು ಖಂಡಿತ ಒಪ್ಪುವುದಿಲ್ಲ. ನಮ್ಮ ತಂದೆತಾಯಿಗಳನ್ನು ಬಿಟ್ಟು ಬೇರೆಯವರನ್ನು ತಂದೆ, ತಾಯಿ ಅಂತ ಒಪ್ಪಿಕೊಳ್ಳಲಾಗುತ್ತದೆಯೇ? ಕೆಲವು ಕಾಲ ನಮ್ಮನ್ನು ಮಗ ಎಂದಾಕ್ಷಣ ನಾವು ಅವರ ಮಗನಾಗುವೆವೇ? ಇದು ತಾತ್ಕಾಲಿಕ ಭ್ರಮೆ. ಹೋಟಲಿಗೆ ಹೋಗಿ ಊಟಮಾಡಿದರೂ ಮನೆಯೇ ಮುಖ್ಯ ರುಚಿಯಾಗಿದೆ ಎಂದಾಕ್ಷಣ ಹೋಟೆಲ್ಲನ್ನು ಮನೆಯೆಂದು ನಂಬಿಕೊಳ್ಳುವುದಿಲ್ಲ. ಹಾಗೆ ಸ್ವಧರ್ಮ ಪರಧರ್ಮಕ್ಕಿಂತ ಶ್ರೇಷ್ಠ.

ರಾಜಕೀಯದಲ್ಲಿ ಮಠಾಧೀಶರು ಭಾಗವಹಿಸಬಹುದೆ? ಸ್ವಾಮಿಯವರು ಹೇಳುತ್ತಾರೆ; ರಾಜಕೀಯವು ಮಠಾಧೀಶರ ಕೆಲಸವಲ್ಲ. ಮಠಾಧೀಶರು, ರಾಜಕಾರಣಿಗೆ ಮಾರ್ಗದರ್ಶನ ಮಾಡಬಹುದು. ಮಠಾಧೀಶರಿಗೆ ರಾಜಕೀಯದ ಅಗತ್ಯವೇ ಇಲ್ಲ.''ದಿನನಿತ್ಯ ಶ್ರೀಕ್ಷೇತ್ರದಲ್ಲಿ ದಾಸೋಹ ಇದೆಯಲ್ಲಾ, ಇದಕ್ಕೆ ಹಣ ಎಲ್ಲಿಂದ ಬರುತ್ತೆ?'' ಅವರ ಉತ್ತರ ''ಭಕ್ತರ ಕಾಣಿಕೆ''ಯಿಂದ, ''ಆಗಾಗ್ಗೆ ಜೋಳಿಗೆ ಹಿಡಿದು ಹೋಗುತ್ತೇವೆ.''

ಶ್ರೀ ಮಠಕ್ಕೆ ಇರುವ ಜಮೀನಿನಿಂದ ಬರುವ ಉತ್ಪತ್ತಿಯೂ ಭಕ್ತರ ಸೇವೆಗೇ ವಿನಿಯೋಗವಾಗುತ್ತದೆ. ಭಕ್ತಾದಿಗಳಿಗೆ ಶ್ರೀಗಳವರ ಸಂದೇಶ- ''ಇದು ನಿಮ್ಮ ಮಠ. ಇದರ ಅಭಿವೃದ್ಧಿ ನಿಮಗೆ ಸೇರಿದ'' ಅವರ ಮಾತು ಅವರ ಕಾರ್ಯಚಟುವಟಿಕೆಯ ದ್ಯೋತಕ.

ಶ್ರೀಗಳವರ ಆಶೀರ್ವಚನಗಳು ಮೊದಲಿನಿಂದಲೂ ನನಗೆ ಬಹಳ ಆಕರ್ಷಣೀಯ.

ವಿದ್ಯಾವಂತರಿಗೆ, ನಗರವಾಸಿಗಳಿಗೆ, ವಿದ್ವಾಂಸರಿಗೆ, ಹಳ್ಳಿಯ ಭಕ್ತರಿಗೆ, ವಿದೇಶೀಯ ಭಾರತೀಯರಿಗೆ, ಎಲ್ಲರಿಗೂ ಅವರವರ ಮಟ್ಟಕ್ಕೆ ತಕ್ಕಂತೆ ಉದಾಹರಣೆಗಳೊಡನೆ ಉತ್ತಮ ಜೀವನಕ್ಕೆ ಅವಶ್ಯಕವಾದ ತತ್ತ್ವಗಳನ್ನು ಸರಳವಾಗಿ ನೇರ ಹೃದಯಕ್ಕೆ ಮುಟ್ಟುವಂತೆ ಆಶೀರ್ವಚನವನ್ನು ನೀಡುತ್ತಾರೆ. ನಾನು ವಿವಿಧ ಸಭೆಗಳಲ್ಲಿ ಅವರ ಆಶೀರ್ವಚನವನ್ನೇ ಕೇಳಿ ಆನಂದ ಪಟ್ಟಿದ್ದೇನೆ. ಅವರ ಉದಾಹರಣೆಗಳು ಎಂತಹವರನ್ನು ದಿಗ್ಭ್ರಮೆಗೊಳಿಸುತ್ತದೆ.

ಸೇವೆಗೆ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಹೇಳುವಾಗ ಅವರು ಕೊಡುವ ದಶರಥ, ರಾಮ ಹಾಗೂ ಆಂಜನೇಯರ ಪೂಜೆಯ ಉದಾಹರಣೆ ಯಾರೂ ಮರೆಯುವಂತಿಲ್ಲ. ದಶರಥ, ರಾಮನ ತಂದೆ, ಆದರೂ ಅವನಿಗೆ ದೇವಾಲಯವಿಲ್ಲ, ಪೂಜೆಗಳಿಲ್ಲ. ಜ್ಞಾಪಿಸಿಕೊಳ್ಳುವವರು ಕಡಿಮೆ. ಅವನ ಮಗ ರಾಮನನ್ನು ಎಲ್ಲರೂ ಸ್ಮರಿಸುತ್ತಾರೆ. ಎಲ್ಲರು ಗುಣಗಾನ ಮಾಡುತ್ತಾರೆ. ಅವನ ನಿಷ್ಠೆ ಮತ್ತು ಸತ್ಯಸಂಧತೆ, ಪಿತೃವಾಕ್ಯ ಪರಿಪಾಲನೆ, ಭಾತೃಪ್ರೇಮ ಎಲ್ಲಾ ಗುಣಗಳು ಪೂಜ್ಯತೆಯನ್ನು ಪಡೆದಿದೆ. ಆದರೆ ಇಷ್ಟಾದರೂ ಆಂಜನೇಯ, ರಾಮನ ಸೇವಕ ಅವನಿಗೆ ಮನೆಯಿಲ್ಲ, ಸಂಸಾರವಿಲ್ಲ ರಾಮನ ಸೇವೆಯೊಂದು ಬಿಟ್ಟು ಬೇರೇನೂ ತಿಳಿಯದು. ಯಾವಾಗಲೂ ಸೇವೆ, ಸೇವೆ, ಈ ಸೇವೆಯನ್ನು ಗುರುತಿಸಿಯೇ ಮಾನವರೆಲ್ಲರೂ ಪೂಜೆ ಸಲ್ಲಿಸುತ್ತಾರೆ . ಯಾವ ಹಳ್ಳಿಗೋದರು, ಆಂಜನೇಯ ದೇವಸ್ಥಾನ, ಇದು ಸೇವೆಗೆ ಕೊಡುವ ಬೆಲೆ, ನಾವು ಮಾನವರು ಸೇವೆಯನ್ನು ಮಾಡಿ ಕೃತಾರ್ಥರಾಗಬೇಕು ಎಂದು ಶ್ರೀಗಳವರು ಉದಾಹರಣೆ ಕೊಡುತ್ತಾರೆ, ಯಾರು ಮರೆಯುವಂತಿಲ್ಲ.

ಅವರ ಆಶೀರ್ವಚನಗಳು ಎಂತಹವರಿಗೂ ಮನದಟ್ಟಾಗುವ ನೀತಿವತ್ತಾದ ಆಚರಣೆಗೆ ತರಬಹುದಾದ ತಿಳುವಳಿಕೆಯನ್ನು ಕೊಡುತ್ತದೆ. ಅವರ ಈ ಉದಾಹರಣೆ ಸಹಿತ ಆಶೀರ್ವಚನಗಳನ್ನು ಗ್ರಂಥರೂಪದಲ್ಲಿ ತಂದರೆ, ಇಪ್ಪತ್ತನೆಯ ಶತಮಾನದಲ್ಲಿ ಹಿಂದಿನ ವಚನಕಾರರ ಗುಂಪಿಗೆ ಸೇರುತ್ತಾರೆ.

ಶ್ರೀಗಳವರ ಸಂದೇಶ ಜನ ಸಾಮಾನ್ಯರಿಗೆ ತಲುಪುವಂತೆ ಒಂದು ಪತ್ರಿಕೆಯನ್ನು ಹೊರತರುವ ಜವಾಬ್ದಾರಿಯನ್ನು ನನಗೆ ವಹಿಸಿದರು. ಆಗ ತ್ರೈಮಾಸಿಕ ಪತ್ರಿಕೆಯಾಗಿ ''ಆದಿಚುಂಚನಗಿರಿ'' ಪತ್ರಿಕೆ ಪ್ರಕಟನೆ ಪ್ರಾರಂಭವಾಯಿತು. ಈಗ ಮಾಸ ಪತ್ರಿಕೆಯಾಗಿ ಶ್ರೀ ಮಠದ ಮತ್ತು ಎಲ್ಲರಿಗೂ ಬೇಕಾದ, ಸಂಸ್ಕೃತಿ, ಧರ್ಮದ ಬಗ್ಗೆ ವಿಚಾರಪೂರಿತವಾದ ಲೇಖನಗಳು ಪ್ರಕಟನೆಯಾಗುತ್ತಿರುವುದು ಹೆಮ್ಮೆಯ ಸುದ್ದಿ.

ಹಳ್ಳಿಯ ಯುವಕರನ್ನು ಸತ್ಪ್ರಜೆಯಾಗಿ, ದೇಶಕ್ಕೆ ಉಪಯುಕ್ತವಾದ ರೀತಿಯಲ್ಲಿ ನಡೆದುಕೊಳ್ಳಲು, ಪ್ರತಿಯೊಂದು ಜಿಲ್ಲೆಯಲ್ಲೂ, ಆ ಜಿಲ್ಲೆಯ ಯುವಕರಿಗೆ ೩೦ ದಿನಗಳ 'ಜನ ಜಾಗೃತಿ ಶಿಬಿರವನ್ನು ' ಹಮ್ಮಿಕೊಳ್ಳಲಾಗುತ್ತದೆ. ವರ್ಷಕ್ಕೆ ಸುಮಾರು ಒಂದು ಸಾವಿರ ಯುವಕರು ಈ ಶಿಬಿರದಲ್ಲಿ ತಯಾರಾಗಿ ಸದ್ಗುಣಗಳಿಂದ ಕೂಡಿ ಸನ್ಮಾರ್ಗದಲ್ಲಿ ನಡೆಯಲು ಅವಕಾಶಗಳನ್ನು ಕಲ್ಪಿಸಿದ್ದಾರೆ.

ಮಹಿಳೆಯರಿಗೂ ಪ್ರತ್ಯೇಕವಾಗಿ 'ಮಹಿಳಾ ಜಾಗೃತಿ ಶಿಬಿರ'ವನ್ನು ಯಶಸ್ವಿಯಾಗಿ

ನಡೆಸಿಕೊಂಡು ಬರುತ್ತಿರುವುದು ಶ್ರೀಗಳವರ ಹಿರಿತನವನ್ನು ಪ್ರದರ್ಶಿಸುತ್ತದೆ.

ರಾಮನಗರದಲ್ಲಿ ಕುರುಡರ ಶಾಲೆಯನ್ನು ಸ್ಥಾಪಿಸಿದ್ದಾರೆ. ಅಲ್ಲಿ, ಆ ಮಕ್ಕಳ ನಡುವೆ ಕಾಲ ಕಳೆಯುವುದು ಅವರಿಗೆ ತುಂಬಾ ಇಲ್ಲೆ.

ಬಿ.ಎಂ.ಶ್ರೀ ಶತಮಾನೋತ್ಸವ ಬೆಳ್ಳೂರಿನಲ್ಲಿ ನಡೆದಾಗ ಶ್ರೀಗಳವರದೆ ಮುಖ್ಯ ಪಾತ್ರವಾಗಿತ್ತು. ಅನೇಕ ಹಿರಿಯ ಸಾಹಿತಿಗಳು ಒಂದು ದಿನ ಮುಂಚಿತವಾಗಿ ಆದಿಚುಂಚನಗಿರಿ ಕ್ಷೇತ್ರಕ್ಕೆ ಹೋದರು. ಅವರಲ್ಲಿ ಮುಖ್ಯವಾಗಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಪು.ತಿ.ನರಸಿಂಹಾಚಾರ್, ನಿಟ್ಟೂರು ಶ್ರೀನಿವಾಸರಾವ್, ಜಿ.ನಾರಾಯಣ, ಎಂ.ವಿ.ಸೀತಾರಾಮಯ್ಯ, ಸಿ.ಪಿ. ಕೃಷ್ಣಕುಮಾರ್, ಇನ್ನು ಅನೇಕ ಸಾಹಿತಿಗಳು ಕ್ಷೇತ್ರದಲ್ಲಿ ಒಂದು ದಿವಸ ತಂಗಿದರು. ಅವರುಗಳ ಯೋಗಕ್ಷೇಮ, ನನಗೆ ವಹಿಸಿದ್ದರು. ಎಲ್ಲರಿಗೂ ಈ ಬೆಟ್ಟದ ಮೇಲೆ ಏನು ದೊರೆಯುತ್ತದೆ, ಇಲ್ಲವೋ ಎಂಬ ಶಂಕೆಯು ಇತ್ತು. ಆದರೆ ಶ್ರೀಗಳವರು ಸ್ವತಃ ಅವರು ಇಳಿದುಕೊಂಡಿದ್ದ ಕೊಠಡಿಗಳಿಗೇ ಬಂದು ಕ್ಷೇಮ ಸಮಾಚಾರವನ್ನು ವಿಚಾರಿಸಿದ್ದು, ಅವರೆಲ್ಲರಿಗೂ ವಿಸ್ಮಯವನ್ನು ಉಂಟುಮಾಡಿತು. ಊಟ ಬಡಿಸುವಾಗ ಅಲ್ಲಿಯ ವಿದ್ಯಾರ್ಥಿ ಸ್ವಯಂ ಸೇವಕರು ಸಂಸ್ಕೃತದಲ್ಲಿ ಮಾತನಾಡುವುದನ್ನು ಕೇಳಿ ಹಿರಿಯ ಸಾಹಿತಿಗಳಿಗೆ ಆಶ್ಚರ್ಯವಾಯಿತು.

ಆಗ ಮಾಸ್ತಿಯವರು ಹೇಳಿದ ಮಾತು ಈಗಲು ಜ್ಞಾಪಕಕ್ಕೆ ಬರುತ್ತದೆ. ''ನಿಮ್ಮ ಸ್ವಯಂ ಸೇವಕರು ಈ ಸಣ್ಣ ಹಳ್ಳಿಯಲ್ಲಿ ಕೂಡ ಸಂಸ್ಕೃತದಲ್ಲಿ ಮಾತನಾಡುವುದು ಆಶ್ಚರ್ಯವನ್ನು ಉಂಟುಮಾಡಿದೆ. ಅವರು ಹೇಳಿದ 'ಅತಿಥಿದೇವೋಭವ' ಮಾತಿನಲ್ಲಿರುವ ಸಂಸ್ಕೃತಿ ತಮ್ಮ ತರಬೇತಿಯನ್ನು ಸೂಚಿಸುತ್ತದೆ. ಜಗದ್ಗುರುಗಳ ದರ್ಶನ ಪಡೆಯಲು ನಾವೇ ನಿಮ್ಮಲ್ಲಿಗೆ ಬರಬೇಕು. ಆದರೆ ತಾವೇ ನಮ್ಮ ಯೋಗಕ್ಷೇಮ ವಿಚಾರಿಸಲು ನಮ್ಮಲ್ಲಿಗೆ ಬಂದಿದ್ದೀರಿ, ನಮಗೆ ದಿಗ್ಭ್ರಮೆ ಉಂಟು ಮಾಡಿದೆ. ಇದು ತಮ್ಮ ಹಿರಿತನವನ್ನು ತೋರಿಸುತ್ತದೆ''

ಅದಕ್ಕೆ ಶ್ರೀಗಳವರು ''ತಾವು ಅತಿಥಿಗಳು ಸಾಹಿತಿಗಳು, ಹಿರಿಯರು, ಅತಿಥಿಗಳೇ ದೇವರು ಎಂಬುದನ್ನು ನಾವು ಮರೆಯುವ ಹಾಗಿಲ್ಲ'' ಈ ಹಿರಿಯ ಸಾಹಿತಿಗಳು ಎಲ್ಲರು ಎಲ್ಲೇ ಸಿಕ್ಕಿದರೂ ನನ್ನಲ್ಲಿ ಸ್ವಾಮೀಜಿಯವರ ಯೋಗಕ್ಷೇಮವನ್ನು ವಿಚಾರಿಸುತ್ತಿರುತ್ತಾರೆ.

ಶ್ರೀ ಕ್ಷೇತ್ರದಲ್ಲಿ ಸಂಸ್ಕೃತೋತ್ಸವ ಮಾಡುವ ಯೋಚನೆ ಬಂದಾಗ ಅದರ ಜವಾಬ್ದಾರಿಯನ್ನು ನನಗೆ ವಹಿಸಿದರು. ಆಗ ರಾಜ್ಯಪಾಲರಾಗಿದ್ದ ಬ್ಯಾನರ್ಜಿಯವರು ಸಂಸ್ಕೃತ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ದೇಶದ ನಾನಾ ಕಡೆಯ ಸಂಸ್ಕೃತ ವಿದ್ವಾಂಸರು ಭಾಗವಹಿಸಿದ್ದರು. ಅಷ್ಟು ದೊಡ್ಡ ಪ್ರಮಾಣದಲ್ಲಿ ವಿಜೃಂಭಣೆಯಿಂದ ಸಂಸ್ಕೃತೋತ್ಸವ ನಡೆದಿದ್ದು ಅದೇ ಮೊದಲು ಮತ್ತು ಕೊನೆ ಎನ್ನಬಹುದು.

ಮಕ್ಕಳ ಸಾಹಿತ್ಯ ಅಕಾಡೆಮಿಯ ದೆಸೆಯಿಂದ ಮಕ್ಕಳ ಸಮ್ಮೇಳನ ಒಂದು ನಡೆಯಿತು. ಸುಮಾರು ಆರು ಸಾವಿರ ಮಕ್ಕಳು ಕರ್ನಾಟಕದ ಎಲ್ಲಾ ಕಡೆಯಿಂದ

ಭಾಗವಹಿಸಿದ್ದರು. ಆಗ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗ್ಗಡೆ, ಸಿದ್ದಯ್ಯಪುರಾಣಿಕ್, ಪಾಂಡುರಂಗರಾಯರು ಭಾಗವಹಿಸಿದ್ದರು. ಮಕ್ಕಳ ಮೇಲ್ವಿಚಾರಣೆಯನ್ನು ಮತ್ತು ಅವರ ಊಟದ ವ್ಯವಸ್ಥೆಯನ್ನು ಶ್ರೀಗಳವರೇ ಖುದ್ದಾಗಿ ನಿಂತು ಏರ್ಪಾಡು ಮಾಡಿದರು. ಇಷ್ಟು ದೊಡ್ಡ ಪ್ರಮಾಣದ ಮಕ್ಕಳ ಸಮ್ಮೇಳನ ಕೂಡ ಅದೇ ಕೊನೆ.

ಮೇಲುಕೋಟೆಯಲ್ಲಿ ಸರ್ವೋದಯ ಸಮ್ಮೇಳನ ನಡೆಯಿತು. ಆಗ ಆ ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳಿಗೆ ಊಟದ ವ್ಯವಸ್ಥೆಯನ್ನು ಕೂಡ ಶ್ರೀಗಳವರೇ ವಹಿಸಿಕೊಂಡಿದ್ದರು. ಸುಮಾರು ಮೂರು ಸಾವಿರ ಜನಕ್ಕೆ ಮೂರು ದಿನಗಳ ಕಾಲ ಬಾಳೆ ಎಲೆ ಹಾಕಿ ಊಟ ಹಾಕುವ ವ್ಯವಸ್ಥೆಯನ್ನು ತಾವೇ ಖುದ್ದಾಗಿ ನಿಂತು ಏರ್ಪಾಡು ಮಾಡಿದರು. ಪಂಜಾಬ್, ಕಲ್ಕತ್ತ, ಅಸ್ಸಾಮ್, ಒರಿಸ್ಸಾ ಮತ್ತು ಇತರ ಉತ್ತರ ರಾಜ್ಯಗಳಿಂದ ಬಂದಿದ್ದ ಪ್ರತಿನಿಧಿಗಳಿಗೆ ಒಬ್ಬ ಮಠಾಧಿಪತಿ ತಾವೇ ಸ್ವತಃ ಇಂತಹ ಏರ್ಪಾಡು ಮಾಡುವುದು ಆಶ್ಚರ್ಯವಾಗಿ ಕಂಡಿತು. ಬಹುಗುಣ ಮತ್ತು ಇತರ ಹಿರಿಯ ಸರ್ವೋದಯ ನಾಯಕರು ಕ್ಷೇತ್ರಕ್ಕೆ ಕಲ್ಪತರು ಆಶ್ರಮಕ್ಕೆ ಭೇಟಿ ಕೊಟ್ಟು, ಶ್ರೀಗಳವರ ಕಾರ್ಯವನ್ನು ಯೋಜನೆಗಳನ್ನು ಮೆಚ್ಚಿದರು. ಸರ್ವೋದಯ ಸಮ್ಮೇಳನಕ್ಕೆ ನಾನು ಎಲ್ಲೇ ಹೋದರು ಆಗ ಬಂದಿದ್ದ ಪ್ರತಿನಿಧಿಗಳು, ಮೇಲುಕೋಟೆಯ ಊಟವನ್ನು, ಶ್ರೀಗಳವರನ್ನು ಜ್ಞಾಪಿಸಿಕೊಳ್ಳುತ್ತಾರೆ. ಯಾವ ಸರ್ವೋದಯ ಸಮ್ಮೇಳನವೂ ಇಂತಹ ಏರ್ಪಾಡನ್ನು ಮಾಡಿಲ್ಲ.

ಹೀಗೆ ಬರೆಯುತ್ತಾ ಹೋದರೆ, ಒಂದು ಪುಸ್ತಕವನ್ನೇ ಬರೆಯಬಹುದು. ''ಆಡು ಮುಟ್ಟದ ಸೊಪ್ಪಿಲ್ಲ'', ಶ್ರೀಗಳವರ ದೃಷ್ಟಿಬೀಳದ ಕ್ಷೇತ್ರವಿಲ್ಲ, ಅವರು ಮನಸ್ಸು ಮಾಡಿದರೆ ಸಿದ್ಧಿಯಾಯಿತು ಎಂತಲೇ ತಿಳಿಯಬೇಕು. ಅವರ ಚಿಂತನೆ ಯಾವಾಗಲು ಜನಸೇವೆ. ಜನಸೇವೆಯೇ ದೇವರ ಸೇವೆ ಎನ್ನುತ್ತಾರೆ ಸ್ವಾಮೀಜಿ. ಅವರ ಯೋಜನಾ-ಚಿಂತನೆಗಳ ವೇಗಕ್ಕೆ ನಡೆಯುವುದು ಸಾಮಾನ್ಯರಿಗೆ ಕಷ್ಟ.

ನೂರು ವರ್ಷಗಳಾದರೂ ಸಾಧಿಸಲಾಗದಂತಹ ಕೆಲಸಗಳು, ಜನಾಭಿವೃದ್ಧಿ ಕಾರ್ಯಗಳು ಕೇವಲ ಇಪ್ಪತ್ತು ವರ್ಷಗಳಲ್ಲಿ ಕಾರ್ಯಗತವಾಗಿರುವುದು ಎಂತಹವರಿಗೂ ಸೋಜಿಗ.

ಶ್ರೀಗಳವರಿಗೆ ಸುವರ್ಣ ಮಹೋತ್ಸವ. ಶ್ರೀಗಳವರು, ದೀನ ದಲಿತರ ಅಭಿವೃದ್ಧಿಗೆ ಎಲ್ಲರನ್ನು ಸತ್ಪ್ರಜೆಗಳನ್ನಾಗಿ ಮಾಡುವ, ವಿದ್ಯೆ ಮತ್ತು ಆರೋಗ್ಯದ ಬಗ್ಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ, ನಾವೆಲ್ಲರೂ ಒಟ್ಟಾಗಿ ನಿಂತು, ಅದಕ್ಕಾಗಿ ಸಹಕಾರ ಮತ್ತು ಶ್ರಮದಾನ ಮಾಡಿ, ಎಲ್ಲಾ ಕಾರ್ಯಗಳನ್ನು ಯಶಸ್ವಿಯಾಗಿ ಮಾಡಿ, ಶ್ರೀಗಳವರ ಆಶೀರ್ವಾದ ಪಡೆಯುವಂತೆ ಆಗಲೆಂದು ಪರಮಾತ್ಮನಲ್ಲಿ ಪ್ರಾರ್ಥನೆ.

***

ಅಭಿವಂದನಾ

ಆದಿಚುಂಚನಗಿರಿ ಕ್ಷೇತ್ರ ಮತ್ತು ಪೂಜ್ಯ ಸ್ವಾಮೀಜಿಯವರು

-ಡಾ|| ಎಂ. ಚಿದಾನಂದ ಮೂರ್ತಿ

ಅಪ್ಪಟ ಬಯಲು ಸೀಮೆಯ ಮಧ್ಯೆ ಇದ್ದೂ ದೊಡ್ಡ ಬೆಟ್ಟ, ಅರಣ್ಯ ಹೊಂದಿರುವ ಆದಿಚುಂಚನಗಿರಿ ಕ್ಷೇತ್ರವು ನಾನು ಕಂಡಿರುವ ಅತ್ಯಂತ ಸುಂದರ, ಅಷ್ಟೇ ವಿಸ್ಮಯಕಾರಕ ಪ್ರದೇಶಗಳಲ್ಲಿ ಒಂದು. ಇಂದಿಗೂ ಅದು ನನಗೆ ನಿಗೂಢಗಳನ್ನು ಗರ್ಭೀಕರಿಸಿಕೊಂಡಿರುವ ಒಂದು ಆಶ್ಚರ್ಯ; ನನ್ನಂತಹ ಸಂಶೋಧಕನಿಗೆ ಒಂದು ಸವಾಲು.

ಆ ಕ್ಷೇತ್ರದ ಬಗ್ಗೆ ಕೇಳಿದ್ದೆ; ಓದಿದ್ದೆ. ಅಲ್ಲಿನ ಪ್ರಕಟಿತ ಶಾಸನಗಳನ್ನು ಗಮನಿಸಿದ್ದೆ. ಆ ಕ್ಷೇತ್ರವನ್ನು ವಸ್ತುವಾಗಿಟ್ಟುಕೊಂಡಿದ್ದ ಒಂದು ಹಳೆಯ ''ಮಾಹಾತ್ಮ್ಯ'' ಕೃತಿಯನ್ನೂ ನೋಡಿದ್ದೆ. ಈ ಶತಮಾನದಲ್ಲಿ ನಡೆದ ಕೆಲವು ಬೆಳವಣಿಗೆಗಳನ್ನೂ ಮಾರ್ಪಾಟುಗಳನ್ನೂ ಜನರ ಬಾಯಿಂದ ಕೇಳಿ ನನ್ನ ಕುತೂಹಲವನ್ನು ಹೆಚ್ಚಿಸಿಕೊಂಡಿದ್ದೆ. ನಾನು ಅದನ್ನು ನೋಡಿರಲಿಲ್ಲವಾದರೂ ಅದು ಒಂದು ತಪಸ್ವಿಗಳ ಸಾಧನ ಭೂಮಿ, ಸಿದ್ಧರು ನೆಲಸಿದ್ದ ಅಲೌಕಿಕ ಪ್ರದೇಶವೆಂದು ಮನಸ್ಸಿನಲ್ಲಿ ಚಿತ್ರಿಸಿಕೊಂಡಿದ್ದೆ. ಸುಮಾರು ಹದಿನೈದು ವರ್ಷಗಳ ಹಿಂದೆ ಎಂದು ತೋರುತ್ತದೆ- ಬೆಳ್ಳೂರಿನಿಂದ ಹೊರಟು ಆದಿಚುಂಚನಗಿರಿಯನ್ನು ಸಮೀಪಿಸುತ್ತಿದ್ದಂತೆ ನನಗೆ ದೂರಕ್ಕೆ ಹಿಂದೆ ಚಿತ್ರಗಳಲ್ಲಿ ಕಂಡಿದ್ದ ''ರೋಮನ್ ಕ್ಯಾಸಲ್ಸ್'' ಜ್ಞಾಪಕಕ್ಕೆ ಬಂದುವು. ತೀರ ಕುತೂಹಲದಿಂದ ಬೆಟ್ಟ ಹತ್ತಿ ಭೈರವೇಶ್ವರನ ಗುಡಿ, ಉರಿಗದ್ದುಗೆ, ಗುಹೆ, ಮೇಲಿನ ಈಶ್ವರ ದೇವಾಲಯ, ಸಿದ್ಧರ ಗದ್ದುಗೆಗಳು, ಶಿಲ್ಪಗಳು ಎಲ್ಲವನ್ನೂ ನೋಡಿದೆ. ಬೆಟ್ಟದ ಬುಡದ ಹಳ್ಳಿಯಲ್ಲಿ ಕೆಲವು ಜನರ ಜೊತೆ ಮಾತನಾಡಿ ಉಪಯುಕ್ತ ಮಾಹಿತಿಯನ್ನು ಸಂಗ್ರಹಿಸಿದೆ.

ಮುಂದೆ ಎರಡು ಬಾರಿ ಅಲ್ಲಿಗೆ ಹೋಗಿದ್ದೇನೆ. ಒಮ್ಮೆ ಹೋದಾಗ ಪೂಜ್ಯಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ದರ್ಶನವಾಯ್ತು. ಅವರು ಹಸನ್ಮುಖಿಗಳೂ ತೇಜಸ್ವಿಗಳೂ ಆಗಿದ್ದರು; ನಮ್ಮನ್ನು ತೀರ ವಿಶ್ವಾಸದಿಂದ ಕಂಡರು; ಯೋಗಕ್ಷೇಮ ವಿಚಾರಿಸಿದರು. ಅವರ ಬಗ್ಗೆ ಮುಂದೆ ನಾನು ಕೆಲವು ಮಾತುಗಳನ್ನು ಹೇಳಲಿದ್ದೇನೆ.

ಶ್ರೀ ಆದಿಚುಂಚನಗಿರಿ ಈಗ ಕಾಣುವುದಕ್ಕಿಂತ ಹೆಚ್ಚಿನ ದೊಡ್ಡ ಇತಿಹಾಸವನ್ನು

ಪಡೆದಿದೆಯೆಂಬಲ್ಲಿ ಅನುಮಾನವಿಲ್ಲ. ಇತಿಹಾಸದ ಎಷ್ಟೋ ಕುರುಹುಗಳು ನಾಶವಾಗಿವೆ; ಆಧುನಿಕತೆಯಿಂದಾಗಿ ನಾಶವಾಗುತ್ತಿವೆ. ನನ್ನ ಮೊದಲ ಭೇಟಿಗೂ ಮೂರನೆಯ ಭೇಟಿಗೂ ಸುಮಾರು ಎಂಟು ಹತ್ತು ವರ್ಷ ಅಂತರವಿದೆ. ಅಷ್ಟರಲ್ಲೇ ಕೆಲವು ಕುರುಹುಗಳು ನಾಶವಾಗಿರುವುದನ್ನು ಗಮನಿಸಿದೆ. ಆದರೂ ಉಳಿದುಕೊಂಡಿರುವ ಕುರುಹುಗಳನ್ನಾದರೂ ಮುಂದಿನವರ ಅವಗಾಹನೆಗಾಗಿ ಉಳಿಸುವ ಅಗತ್ಯವಿದೆ. ಅದರ ಇತಿಹಾಸವನ್ನು ಪೂರ್ಣವಲ್ಲದಿದ್ದರೂ ತಕ್ಕಮಟ್ಟಿಗಾದರೂ ಪುನರ್ರಚಿಸುವ ಪ್ರಯತ್ನವನ್ನು ನಾನು ಮಾಡಬೇಕೆಂಬ ಆಸೆ ನನ್ನಲ್ಲಿ ಅಳಿದಿಲ್ಲ. ಹಿಂದೆ ಆಗಲೇ ಸೂಚಿಸಿರುವಂತೆ ಅದೊಂದು ಕಠಿಣ ಸಾಧಕರ ಸಿದ್ಧರ ಅಪೂರ್ವ ತಪೋ ಭೂಮಿ.

ಪರಮಪೂಜ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರನ್ನು ಶ್ರೀಮಠದಲ್ಲಲ್ಲದೆ ಹೊರಗೂ ದರ್ಶನ ಮಾಡಿದ್ದೇನೆ. ಅವರ ಸಜ್ಜನಿಕೆ ನನ್ನಲ್ಲಿ ತೀರ ಸದ್ಭಾವನೆಯನ್ನು ಮೂಡಿಸಿದೆ. ಜನತೆಗೆ ಒಳಿತನ್ನುಂಟುಮಾಡುವ ಕೈಂಕರ್ಯಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ. ಅನೇಕ ವಿದ್ಯಾಸಂಸ್ಥೆಗಳನ್ನು, ವಿದ್ಯಾರ್ಥಿನಿಲಯಗಳನ್ನು ಅನಾಥಾಶ್ರಮಗಳನ್ನು ನಡೆಸುತ್ತಿದ್ದಾರೆ. ಅಂಗವಿಕಲರ ಯೋಗಕ್ಷೇಮದ ಬಗ್ಗೆ ಅವರು ಮರೆತಿಲ್ಲ. ಸಂನ್ಯಾಸಿಗಳ ನಿಜವಾದ ಪರಂಪರೆಯನ್ನು ಮುಂದುವರಿಸಿರುವ ಅವರು ಸಂಸಾರ ತ್ಯಾಗವನ್ನು ಮಾಡಿದ್ದರೂ ಲೋಕವನ್ನೇ ಕಟ್ಟಿಕೊಂಡಿದ್ದಾರೆ. ಭಾರತೀಯ ಸಂಸ್ಕೃತಿಯ ಸಂನ್ಯಾಸದ ಆದರ್ಶವೇ ಅದು. ಅವರು ಒಕ್ಕಲಿಗ ಜನಾಂಗದ ಮಠದ ಮುಖ್ಯಸ್ಥರು; ಸಹಜವಾಗಿಯೇ ಅವರು ಒಕ್ಕಲಿಗ ಜನಾಂಗವನ್ನು ಪ್ರಗತಿ ಪಥದಲ್ಲಿ ಒಯ್ಯಲು ಕಂಕಣಬದ್ಧರಾಗಿದ್ದಾರೆ. ಹಾಗೆಂದು ಇತರ ಜನಾಂಗದ ಜನರನ್ನು ಮರೆತಿಲ್ಲ.

ಈಗಿನ ಕೆಲ ಜನರು ಒಂದು ಜಾತಿ ಅಥವಾ ಮತಕ್ಕೆ ಸೀಮಿತವಾದ ಮಠಗಳ ಬಗ್ಗೆ ಮಠಾಧಿಪತಿಗಳ ಬಗ್ಗೆ ಹಗುರವಾಗಿ ಮಾತನಾಡುವುದುಂಟು. ನನ್ನಂತಹ ತೀರ ಹಿಂದುಳಿದ ಹಳ್ಳಿಯೊಂದರ ತೀರ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ ಬಂದವರು ಬದುಕಿನಲ್ಲಿ ಬೆಳಕು ಕಂಡದ್ದೇ ಮಠಗಳ ಹೆಸರಿನಲ್ಲಿ ಸ್ಥಾಪಿಸಿದ್ದ ವಿದ್ಯಾರ್ಥಿನಿಲಯಗಳಿಂದಲೇ. ನನಗೆ ಅನುಮಾನವೇ ಇಲ್ಲ- ಚಿತ್ರದುರ್ಗದ ಶ್ರೀ ಮುರುಘಾಮಠ, ಮೈಸೂರಿನ ಶ್ರೀ ಸುತ್ತೂರು ಮಠಗಳು ಸ್ಥಾಪಿಸಿರುವ ವಿದ್ಯಾರ್ಥಿನಿಲಯಗಳು ನನಗೆ ಉಚಿತ ಊಟ, ವಸತಿಗಳನ್ನು ನೀಡಿ ಆಶ್ರಯ ನೀಡದೇ ಇದ್ದಿದ್ದರೆ ನಾನು ವಿದ್ಯಾವಂತನಾಗುತ್ತಿರಲಿಲ್ಲ. ಬಡವರಿಗಾಗಿ ಮೀಸಲಿದ್ದ ಆ ವಿದ್ಯಾರ್ಥಿನಿಲಯಗಳು ನನಗೆ ಸಹ ಜೀವನವನ್ನು,

ಸಾಮಾಜಿಕ ಅರಿವನ್ನು, ಆತ್ಮ ವಿಶ್ವಾಸವನ್ನು ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವ ಪ್ರಜ್ಞೆಯನ್ನು ಕಲಿಸಿಕೊಟ್ಟವು. ಆದ್ದರಿಂದಲೇ ಸಹಜ ದೈವೀ ಶ್ರದ್ಧೆಯು ನನಗೆ ಯಾವುದೇ ಪಂಥದ ಪೂಜ್ಯರನ್ನು ಕಂಡರೂ, ಭಕ್ತಿ, ಕೃತಜ್ಞತೆ. ಅದರಲ್ಲೂ ಅವರು ಬಡವರ ಕಲ್ಯಾಣಕ್ಕಾಗಿ ದುಡಿಯುವ ಸಾಮಾಜಿಕ ದೃಷ್ಟಿಯುಳ್ಳವರು ಆಗಿದ್ದರೆ, ಅವರ ಬಗ್ಗೆ ನನ್ನ ಅಭಿಮಾನ ಉಕ್ಕುತ್ತದೆ.

ಪೂಜ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರಿಂದ ಬರೀ ಒಕ್ಕಲಿಗ ಸಮಾಜವಲ್ಲ, ಇಡೀ ಸಮಾಜ ಉಪಕೃತವಾಗುತ್ತಿದೆ.

ನಾನು ಭೇಟಿಯಾದಾಗಲೆಲ್ಲ ಕನ್ನಡದ ಕೆಲಸಗಳ ಬಗ್ಗೆ ವಿಚಾರಿಸುತ್ತಾರೆ. ಈಚೆಗೆ ಕನ್ನಡ ಶಕ್ತಿ ಕೇಂದ್ರದ ರಾಜ್ಯಮಟ್ಟದ ಸಮಾವೇಶಕ್ಕೆ ನಗು ನಗುತ್ತ ಉದಾರವಾಗಿ ಧನಸಹಾಯ ಮಾಡಿದರು. ಇಂದಿನ ಕರ್ನಾಟಕದ ಅಳಿವು ಬೆಳವಣಿಗೆಯ ಬಗ್ಗೆ ಅವರಿಗೆ ಅತೀವ ಕಳಕಳಿ ಇದೆ. ಅವರನ್ನೂ ಇತರ ಪೂಜ್ಯರನ್ನೂ ಕನ್ನಡದ ಕೆಲಸಗಳಿಗೆ ತೊಡಗಿಸಿಕೊಳ್ಳುವ ಬಗೆ ಹೇಗೆ ಎಂಬುದನ್ನು ಯೋಚಿಸುತ್ತಿದ್ದೇನೆ. ಮನಸ್ಸು ಮಾಡಿದರೆ ಶ್ರೀ ಪೂಜ್ಯರು ಆ ಕ್ಷೇತ್ರದಲ್ಲಿ ಅದ್ಭುತವಾದುದನ್ನು ಸಾಧಿಸಬಲ್ಲರು. ಅವರ ಶ್ರೀಪಾದಗಳಲ್ಲಿ ನನ್ನ ಅನಂತನಮನಗಳು.

***

ನೆನಪು ನೂರು ಬರೆದಿಹೆನಿಲ್ಲಿ ಮೂರು

ಎಸ್. ತಮ್ಮಣ್ಣಗೌಡ

"ಗುರುವ ಕಂಡೆನಲ್ಲಾ, ಗುರುವಿನ ಪಾದಕೆರಗೋದ ಮರೆತೆನಲ್ಲಾ" ಎಂಬುದು ಗುರುದರ್ಶನದ ಮಹತ್ವಪ್ರಭೆಗೊಳಗಾಗಿ ದಿಙ್ಮೂಢನಾದ ಭಕ್ತನೊಬ್ಬನ ತಳಮಳವನ್ನು ತಿಳಿಸುವ ಮಾತು. ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರ ದಿವ್ಯ ದರ್ಶನವನ್ನು ಪಡೆದ ಭಕ್ತರೂ ಸಹ ದರ್ಶನ ಮಾತ್ರದಿಂದಲೆ ಸಾರ್ಥಕ್ಯವನ್ನು ಹೊಂದಿದಂತೆ ಆನಂದವನ್ನು ಅನುಭವಿಸುತ್ತಾ ಪಾದಕ್ಕೆರಗಿ ಆಶೀರ್ವಾದ ಪಡೆಯುವುದನ್ನೂ ಮರೆತು ಆನಂತರ ಮರುಗುವುದು ನಿತ್ಯದ ಸಂಗತಿ. ಪೂಜ್ಯ ಸ್ವಾಮೀಜಿಯವರು ಪೀಠಾಧ್ಯಕ್ಷರಾದ ಕೇವಲ ಇಪ್ಪತ್ತು ವರ್ಷಗಳ ಸಾಧನೆ ಕೇಳಿದವರಿಗೆ ಅಚ್ಚರಿಯಾದರೆ ನೋಡಿದವರಿಗೆ ಪವಾಡ. ಶ್ರೀಮಠ, ಶಾಖಾ ಮಠಗಳು, ಶಿಕ್ಷಣ ಸಂಸ್ಥೆಗಳು, ಸಾಮಾಜಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಇವುಗಳ ಜೊತೆಗೆ ನಿರಂತರ ಜರುಗುತ್ತಿರುವ ಕಾರ್ಯಕ್ರಮಗಳ ಕೇಂದ್ರ ಬಿಂದು ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು. ಇವೆಲ್ಲವುಗಳ ನಿರ್ವಹಣೆಯಲ್ಲಿ ಸಮಸ್ಯೆಗಳು ಭಾದಿಸುವುದಿಲ್ಲವೆ ಸ್ವಾಮೀಜಿ ಎಂದು ಭಕ್ತರು ಭಿನ್ನವಿಸಿಕೊಂಡರೆ"ನಮ್ಮ ಮುಂದೆ ಸಮಸ್ಯೆಗಳಾವುವೂ ಇಲ್ಲ, ಇರುವುವೆಲ್ಲ ಯೋಜನೆಗಳು ಮಾತ್ರ" ಎನ್ನುವ ಪೂಜ್ಯರ ಮಾತು ಸಾಧಕರಿಗೆ ಸಮಸ್ಯೆಗಳು ಸಮಸ್ಯೆಗಳೆ ಅಲ್ಲ ಎನ್ನುವುದನ್ನು ಜನರಿಗೆ ತಿಳಿಸಿಕೊಡುತ್ತವೆ. ಕೀರ್ತಿ ಶಿಖರದ ಒಂದೊಂದೆ ಮೆಟ್ಟಲೇರಿ ಧರ್ಮಶೃಂಗದ ತುತ್ತತುದಿಯಲ್ಲಿ ವಿರಾಜಮಾನರಾಗಿರುವವರು ನಮ್ಮ ಗುರುಗಳು. ಪರಮಪೂಜ್ಯರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುವ ಅವಕಾಶವನ್ನು ಪಡೆದ ನಾನು ಮೊದಲು ದರ್ಶನ ಮಾಡಿದ ಹಾಗೂ ಆನಂತರದ ಎರಡು ಸಂದರ್ಭಗಳನ್ನು ನೆನಪು ಮಾಡಿಕೊಳ್ಳುತ್ತಾ "ಗುರುವಿನ ಗುಲಾಮನಾಗುವತನಕ ದೊರೆಯದಣ್ಣಾ ಮುಕುತಿ" ಎಂದುಕೊಂಡು ಗುರುಚರಣಕ್ಕೆ ನಮಿಸುತ್ತೇನೆ.

ಪರೀಕ್ಷಾ ದೃಷ್ಟಿಯಿಂದ ಓದಿದ್ದು ಸಾಕು ಹೊಟ್ಟೆಗೂ ಬಟ್ಟೆಗೂ ಒಂದು ದಾರಿ ಮಾಡಿಕೊಂಡು ಹೆತ್ತವರಿಗಿನ್ನೂ ಹೊರೆಯಾಗಿರಬಾರದು ಎನ್ನಿಸಿದಾಗ ನೆನಪಿಗೆ ಬಂದಿದ್ದು ಚುಂಚನಗಿರಿ, ಚುಂಚನಗಿರಿ ಎನ್ನುವುದಕ್ಕಿಂತ ಚುಂಚನಗಿರಿಯ ಕಾಲೇಜು ಎಂದರೆ ಸತ್ಯಕ್ಕೆ ಸಮಾಧಾನವಾದೀತು. "ಭೈರವನ ನೆತ್ತಿಲಿ ಮಿಂಚಿದರೆ ಮಳೆಗ್ಯಾರಂಟಿ" ಎನ್ನುವ ರೈತ ಸಮುದಾಯದ ನಡುವೆ ಶ್ರೀ ಕ್ಷೇತ್ರದ ಸಾಮೀಪ್ಯದಲ್ಲೆ ಇಪ್ಪತ್ತೈದು ವರ್ಷಗಳನ್ನು ಕಳೆದಿದ್ದರೂ ಚುಂಚನಗಿರಿಗೆ ಬಂದು ಗುರು ದೇವತಾ ದರ್ಶನ ಪಡೆದು ಸಾಧುಸಜ್ಜನ ಸತ್ಸಂಗದಿಂದ ಸತ್ಪಾತ್ರನಾಗುವ ಅವಕಾಶದಿಂದ ವಂಚಿತನಾಗಿದ್ದೆ. ಪರಿಣಿತ ಪದವಿಯ ಅಂಕಪಟ್ಟಿಯನ್ನು ಕೈಯಲ್ಲಿಡಿದು ಅನ್ನದಾನವನ್ನು ಅರಸುತ್ತಾ ಅನ್ನದಾನಿ ಭೈರವನ

ದರ್ಶನಕ್ಕಾಗಿ ಬೆಟ್ಟದ ತಪ್ಪಲಿನ ಚುಂಚನ ಹಳ್ಳಿಯಲ್ಲಿ ಬಸ್ಸಿನಿಂದಿಳಿದು ಕಾಲು ದಾರಿಯನ್ನು ತುಳಿಯುತ್ತಾ ಹಸಿರು ತೋಪುಗಳ ತಂಪು ಸವಿಯುತ್ತಾ ಬೆಟ್ಟದ ಸಮೀಪಕ್ಕೆ ಬಂದಂತೆ ಹಸಿರಿನೌತಣ, ಸೌಂದರ್ಯದ ಸೊಗಸು, ಹಕ್ಕಿಗಳ ಇಂಚರ, ನವಿಲನರ್ತನ, ಮಂಗಗಳ ಚೇಷ್ಟೆಗಳನ್ನು ನೋಡುತ್ತಾ ಮಾತಿಗೆ ಮೀರಿದ ಮಹತ್ತನ್ನು ಪರಿಚಯ ಮಾಡಿಕೊಳ್ಳುತ್ತಾ ಬೆಟ್ಟದ ಒಂದೊಂದೆ ಮೆಟ್ಟಲೇರಿದಂತೆ ಕೇಳಿಬರುತ್ತಿದ್ದ ಅಪರಿಚಿತ ಗಾನಲಹರಿ ಅಚ್ಚರಿಯನ್ನೇ ಉಂಟು ಮಾಡಿತು. ಬೆಟ್ಟದ ಮೇಲಕ್ಕೆ ಬಂದು ಶ್ರೀಮಠದ ಆವರಣವನ್ನು ಪ್ರವೇಶಿಸಿದ ಕೂಡಲೆ ''ಅನ್ನಪೂರ್ಣೇ ಸದಾಪೂರ್ಣೆ ಶಂಕರ ಪ್ರಾಣ ವಲ್ಲಭೆ'' ''ಜ್ಞಾನ ವೈರಾಗ್ಯ ಸಿದ್ಧ್ಯರ್ಥಂ ಭಿಕ್ಷಾಂದೇಹಿ ಚ ಪಾರ್ವತೀ '' ಎನ್ನುವ ಗಾನದ ಅಲೆ ಅರ್ಥವಾಗದವನಿಗೂ ಇದು ಅನ್ನದಾನಿಮಠ ಎನ್ನುವುದನ್ನು ತಿಳಿಸುವಂತಿತ್ತು. ಹೀಗಾಗಿ ನಾನು ಶ್ರೀಮಠದಲ್ಲಿ ಮೊದಲು ಪರಿಚಯ ಮಾಡಿಕೊಂಡದ್ದು ಪ್ರಸಾದನಿಲಯವನ್ನು ಅಂದರೆ ಅರ್ಥಾತ್ ಊಟದ ಮನೆಯನ್ನು. ಪೂಜ್ಯ ಗುರುಗಳು ದರ್ಶನ ನೀಡುವ ಸಮಯವನ್ನು ವಿಚಾರಿಸುವಷ್ಟರಲ್ಲಿ, ವಟುಗಳು ಸುಶ್ರಾವ್ಯವಾಗಿ ಹಾಡುತ್ತಿದ್ದ ''ಓಂ ಪೂರ್ಣಮಿದಂ ಪೂಣಮದ: ಪೂರ್ಣಾತ್ ಪೂರ್ಣಮುದಚ್ಯತೆ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾ ವಶಿಷ್ಯತೇ'' ಶ್ಲೋಕ ಪೂರ್ಣಗೊಳ್ಳುವಷ್ಟರಲ್ಲಿ ಪ್ರಸಾದ ನಿಲಯಕ್ಕೆ ಆಗಮಿಸಿದ್ದರು ಶ್ರೀಗಳವರು. ಬಡವನ ಮನೆಗೆ ಇದ್ದಕ್ಕಿದ್ದಂತೆ ದೊಡ್ಡವರು ಬಂದಾಗ ಬಡವ ತಡವರಿಸುವಂತೆ ಅಕ್ಕಪಕ್ಕದವರು ಗುರುಚರಣಕ್ಕೆ ನಮಿಸಿದ್ದನ್ನು ನೋಡಿ ತಡವರಿಸುತ್ತಲೆ ಗುರುಚರಣಕ್ಕೆ ನಾನೂ ನಮಿಸಿದೆ. ಅಪರಿಚಿತರನ್ನು ಆತ್ಮೀಯವಾಗಿ ವಿಚಾರಿಸುತ್ತಿದ್ದ ಗುರುಗಳ ಸರಳತೆಯಿಂದ ಧೈರ್ಯ ಹೊಂದಿ ಉದ್ಯೋಗಾರ್ಥಿಯಾಗಿ ಬಂದಿರುವ ವಿಚಾರವನ್ನು ಅರಿಕೆ ಮಾಡಿಕೊಂಡೆ. ''ಅಧ್ಯಾಪಕ ವೃತ್ತಿಗೆ ಧಕ್ಕೆಬಾರದಂತೆ ಕೆಲಸ ನಿರ್ವಹಿಸಿ'' ಎಂದು ಅನುಗ್ರಹಿಸಿದರು. ಅಧ್ಯಾಪಕ ಹುದ್ದೆಯೊಂದು ಖಾಲಿಯಿದೆಯೆಂದು ಅಕಸ್ಮಾತ್ತಾಗಿ ತಿಳಿದು ಅಪರಿಚಿತನಾಗಿ ಬಂದು ಗುರುಗಳ ಕೃಪೆಗೆ ಪಾತ್ರನಾಗಿ ವೃತ್ತಿಧರ್ಮಕ್ಕೆ ಕುಂದುಂಟುಮಾಡದಂತೆ ಮುಂದುವರಿಯುತ್ತಿದ್ದೇನೆ.

ಅನುದಿನ ಗುರುದರ್ಶನ, ಮಾಡುವ ಅನುಗಾಲ ಗುರುವಾಣಿಯನ್ನು ಆಲಿಸುವ ಸದವಕಾಶ ದೊರೆತವರೆಲ್ಲರೂ ನೂರಕ್ಕೆ ನೂರರಷ್ಟು ಸಾತ್ವಿಕರಾಗುತ್ತಾರೆಂದು ಹೇಳಿಕೊಳ್ಳುವ ಧೈರ್ಯವಿಲ್ಲ ''ಕಲ್ಲು ನೀರಿನಲ್ಲಿ ಎಷ್ಟು ಕಾಲ ಮುಳುಗಿದ್ದರೂ'' ಮುನ್ನಿನ ಸ್ವಭಾವವನ್ನು ಬಿಡದೆಂಬಂತೆ ಸಂಸಾರಿಗಳ ಸ್ಥಿತಿ. ಸಂನ್ಯಾಸಿಗಳ ಕತೆ ಬೇರೆಯಲ್ಲವೆ, ಒಂದು ದಿವಸ ಪೂಜ್ಯ ಶ್ರೀಗಳವರ ಮಾತೃಶ್ರೀಯವರು ಶಿವೈಕ್ಯರಾದರೆಂಬ ವಾರ್ತೆ ಬಂತು. ಪೂಜ್ಯ ಸ್ವಾಮಿಗಳೇನೊ ''ಸರ್ವಸಂಗ ಪರಿತ್ಯಾಗಿಗಳು'' ಅವರಿಗೆ ಯಾವ, ಯಾರ ಹಂಗೂ ಇಲ್ಲ. ಏನೂ ಆಗಲೆ ಇಲ್ಲವೇನೊ ಎನ್ನುವಂತೆ ಅಂತಿಮ ದರ್ಶನಕ್ಕೆ ಹೋಗಿ ಹಿಂತಿರುಗಿದರು. ಮುನ್ನಿನಂತೆಯೆ ಹಸನ್ಮುಖಿಗಳಾಗಿ ಭಕ್ತರಿಗೆ ದರ್ಶನವಿತ್ತು ಹರಸಿದರು.

ಪ್ರಸಾದಕ್ಕೆ ಮುನ್ನ ಭೈರವೇಶ್ವರ ದೇವಾಲಯದ ಮುಂದೆ ಕುಳಿತು ವಿದ್ಯಾರ್ಥಿಗಳಿಗೆಲ್ಲ ಆಶೀರ್ವಚನ ಮಾಡಿದರು. ಶಿವಗಣಾರಾಧನೆಯ ದಿವಸ ಗುರುಗಳು ಅವರ ಊರಿಗೆ ಹೋಗಿಯೇ ಹೋಗುತ್ತಾರೆ ಎಂಬ ಅನಿಸಿಕೆ ನಮ್ಮದು. ಕಾರಣ ''ಪುತ್ರ ಶೋಕ ನಿರಂತರಂ'' ಎನ್ನುತ್ತಾರೆ ಹಾಗೆಯೆ ಮಾತಾ ಪಿತೃಗಳ ವಿಯೋಗವೂ ತಾನೆ. ಆದರೆ ತಪೋಧನರು, ವಿರಾಗಿಗಳು, ಯೋಗಿಗಳೂ ಆದ ಪರಮಪೂಜ್ಯರು ನಮ್ಮನ್ನು ನಿರಾಸೆಗೊಳಿಸಿದರು. ದೊಡ್ಡವರ ನಡೆಯೇ ಬೇರೆ. ಇದು ಸರಿಯೆ ತಪ್ಪೆ ಎಂಬ ಚರ್ಚೆ ನಮ್ಮ ನಮ್ಮಲ್ಲಿ ಅಂದು ನಡೆಯಿತು. ಶಾಸ್ತ್ರಾಧಾರವನ್ನಾಗಿಸಿಕೊಂಡಿದ್ದ ಪಂಡಿತರಾರೂ ನಮ್ಮಲ್ಲಿ ಇರಲಿಲ್ಲವಾದ್ದರಿಂದ ''ದೊಡ್ಡ ವಿಷಯಕ್ಕೆ ಮನಸ್ಸು ಕೊಡುವ ಅಭ್ಯಾಸವನ್ನು ಚಿಕ್ಕಂದಿನಿಂದ ಮಾಡಿಕೊಳ್ಳಬೇಕು'' ಎಂಬುದನ್ನು ಗುರುಗಳು ಹೀಗೆ ತೋರಿಸಿದರೆಂದುಕೊಂಡೆವು.

೧೯೮೧ ನೆ ಇಸವಿ ''ಸಂಕಲ್ಪ ಹಂಸ'' ಯನ್ನೂ ನಿರಾಕರಿಸಬೇಕೆನ್ನುವ ಜೈನಧರ್ಮೀಯರಿಗೆ ಮರೆಯಲಾಗದ ವರ್ಷ. ಗೊಮ್ಮಟ ಮೂರ್ತಿಗೆ ಸಾವಿರ ವರ್ಷವಾದ ಸಂದರ್ಭ. ಈ ಸಂದರ್ಭದ ಮಹೋತ್ಸವದ ಮಾರ್ಗದರ್ಶಕರಾಗಿ ಪೂಜ್ಯ ಮುನಿವರ್ಯ ಶ್ರೀ ಏಲಾಚಾರ್ಯರು ಶ್ರೀ ಕ್ಷೇತ್ರದ ಮಾರ್ಗವಾಗಿ ಶ್ರವಣರ ತವರೂರಿಗೆ ಹೋಗುವವರಿದ್ದರು. ಈ ಮಾರ್ಗದಲ್ಲಿ ಹೋಗುವ ಮುನಿಗಳು ಒಂದು ದಿವಸ ಶ್ರೀ ಕ್ಷೇತ್ರದಲ್ಲಿ ವಾಸ್ತವ್ಯ ಮಾಡುವ ಕಾರ್ಯಕ್ರಮವಿದ್ದಿತು. ಅದಕ್ಕೆ ಹಿಂದಿನ ದಿನ ಮಾಯಸಂದ್ರ ಗ್ರಾಮದ ಜಿನ ದೇವಾಲಯದಲ್ಲಿ ತಂಗಿದ್ದ ಏಲಾಚಾರ್ಯರನ್ನು ಶ್ರೀಮಠದ ಪರವಾಗಿ ಮಾಯಸಂದ್ರಕ್ಕೆ ಹೋಗಿ ಸ್ವಾಗತಿಸಬೇಕೆಂಬ ಆದೇಶವನ್ನು ಪೂಜ್ಯ ಶ್ರೀಗಳವರು ನೀಡಿ ತಪೋ ಮುನಿಗಳ ಭವ್ಯ ಸ್ವಾಗತಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುವಂತೆ ನಿರ್ದೇಶಿಸಿದ್ದರು. ಶ್ರೀಮಠದ ಸಂಪ್ರದಾಯದಂತೆ ಏಲಾಚಾರ್ಯರಿಗೆ ಆಹ್ವಾನವನ್ನು ನೀಡಿ ಮುಂಜಾನೆ ಅವರು ಆಗಮಿಸುವ ವೇಳೆಯನ್ನು ತಿಳಿದುಕೊಂಡು ಶ್ರೀ ಕ್ಷೇತ್ರಕ್ಕೆ ಹಿಂದಿರುಗಿದೆವು. ನಮಗಿದ್ದ ಕುತೂಹಲವೆಂದರೆ ಪರಮಪೂಜ್ಯ ಸ್ವಾಮೀಜಿಯವರು ಈ ಬೆತ್ತಲೇಶ್ವರರನ್ನು ಹೇಗೆ ಸ್ವಾಗತಿಸುತ್ತಾರೆಂಬುದು. ಪೂಜ್ಯರ ಸ್ವಾಗತಕ್ಕಾಗಿ ಚುಂಚನಹಳ್ಳಿಯಿಂದ ಬೆಟ್ಟದ ಮೇಲ್ಭಾಗದ ಶ್ರೀ ಮಠದವರೆಗೂ ತಳಿರುತೋರಣಗಳನ್ನು ಕಟ್ಟಲಾಗಿತ್ತು. ಹಳ್ಳಿಯಿಂದಲೆ ಮೊದಲಾಗುವ ಗಿರಿಶ್ರೇಣಿಯನ್ನು ಬಾಲವಟುಗಳು ಅಲಂಕರಿಸಿದ್ದರು. ಮಕ್ಕಳಿಗೂ ಕುತೂಹಲ. ದಿಗಂಬರ ಸ್ವಾಮಿಗಳನ್ನು ಇದುವರೆಗೂ ನೋಡಿರಲಿಲ್ಲವಲ್ಲ. ಬಂಡೆಬಂಡೆಗಳ ಮೇಲೆಲ್ಲ ಕುಳಿತಿದ್ದ ಸುಮಾರು ಎರಡು ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಶ್ರೀ ರಾಮಲಕ್ಷ್ಮಣರನ್ನು ಆಹ್ವಾನಿಸಲು ಕುಳಿತಿದ್ದ ಕಿಷ್ಕಿಂಧೆಯ ಪಡೆಯಂತೆ ಕಾಣುತ್ತಿದ್ದರು. ಸ್ವಾಮಿಗಳ ಆಗಮನ

ಸೂಚಕವಾದ ಮಂಗಳ ವಾದ್ಯ ಘೋಷಣೆಗಳು ಮೊಳಗುತ್ತಿದ್ದಂತೆ ಪೂಜ್ಯ ಶ್ರೀಗಳವರಿಗೆ ವಿಷಯವನ್ನು ತಿಳಿಸಿದೆವು. ಶ್ರೀ ಮಠದ ಕಲ್ಯಾಣ ಮಂಟಪದ ಬಳಿ ಬಂದು ನಿಂತ ಪೂಜ್ಯ ಶ್ರೀ ಶ್ರೀ ಶ್ರೀಗಳವರು ಚುಂಚನಹಳ್ಳಿಯ ಕಡೆಯಿಂದ ಸಂಭ್ರಮದಿಂದ ಬರುತ್ತಿದ್ದ ಉತ್ಸವದ ನಡುವೆ ಅದಕ್ಕೂ ನನಗೂ ಸಂಬಂಧವಿಲ್ಲವೆಂಬಂತೆ ವೀತರಾಗರಾಗಿ ಬರುತ್ತಿದ್ದ ಶ್ರೀ ಏಲಾಚಾರ್ಯರನ್ನು ಬಸ್ಸಿನಿಂದಳಿದ ಗೆಳೆಯನೋರ್ವನನ್ನು ಆಲಿಂಗಿಸುವಂತೆ ಆತ್ಮೀಯವಾಗಿ ಅಪ್ಪಿ ಆಹ್ವಾನಿಸಿದಾಗಿನ ದೃಶ್ಯ ನಯನ ಮನೋಹರ, ಚಿರಸ್ಮರಣೀಯ.''ಏರಿದವನು ಸಣ್ಣವನಿರಬೇಕಿಲೆ ಜೀವ'' ಎಂಬ ಕವಿ ವಾಣಿಯನ್ನು ನೆನಪಿಸಿದ ದೃಶ್ಯ ದೊಡ್ಡವರು ನಡೆದುಕೊಳ್ಳುವುದು ಹೀಗೆ ಎಂಬುದನ್ನು ತೋರಿಸಿಕೊಟ್ಟಿದ್ದಲ್ಲದೆ ಉದಾರಚರಿತೆಯನ್ನು ಮೈಗೂಡಿಸಿಕೊಂಡ ಮತ ಮೋಹದಾಚೆನಿಂತ ದೈವೀಚೇತನದ ಸಂವಾದವನ್ನಾಲಿಸುವ ಅವಕಾಶವನ್ನು ಒದಗಿಸಿತು.

ಇನ್ನೊಂದು ಸಂದರ್ಭ. ಐದನೆ ಸಂಸ್ಕೃತ ಸಮ್ಮೇಳನ ಅತ್ಯಂತ ವೈಭವದಿಂದ ಶ್ರೀ ಕ್ಷೇತ್ರದಲ್ಲಿ ನಡೆಯುತ್ತಿದ್ದ ಸಮಯ. ಶ್ರೀಮಠದ ಅಂದಿನ ವಿಶೇಷ ವ್ಯವಸ್ಥೆ ಹೇಗಿತ್ತೆಂದರೆ ಕಲ್ಲುಗಳು ಸಂಸ್ಕೃತ ಕಲಿತುಕೊಂಡಾವು ಎಂದು ಅನುಮಾನ ಉಂಟಾಗುತ್ತಿತ್ತು. ಸಮಾರಂಭಕ್ಕೆ ಆಗಮಿಸಿದ್ದ ಅತಿಥಿವರೇಣ್ಯರು ಸಂಸ್ಕೃತ ಭಾಷೆಯ ಹೊರತು ದೇಶೀಯ ಭಾಷೆಯಲ್ಲಿ ವ್ಯವಹರಿಸಿದರೆ ನಾವು ದೇಶಿಗರಾಗಬಹುದೆಂದು ಭಾವಿಸಿದಂತಿತ್ತು. ವಿದ್ವನ್ಮಣಿಗಳ ವಿದ್ವತ್ ಪ್ರಕಾಶಕ್ಕೆ ವೇದಿಕೆಗಳು ಸದಾ ಸಿದ್ಧವಾಗಿದ್ದವು. ಪೂಜ್ಯ ಸ್ವಾಮೀಜಿಯವರೆ ಸಮಾರಂಭದಲ್ಲಿ ಆಸೀನರಾಗಿರುತ್ತಿದ್ದುದರಿಂದ ದೇವಭಾಷೆಯ ಸೊಗಸನ್ನು, ಶ್ರೀಮಂತಿಕೆಯನ್ನು ತೆರೆದಿಡಲು ವಿದ್ವಾಂಸರುಗಳಿಗೆ ಅಮಿತ ಉತ್ಸಾಹ. ಸಭೆ ಸಂಸ್ಕೃತ ಸೌರಭದ ಪರಿಮಳದಲ್ಲಿ ಮುಳುಗಿದ್ದಾಗ ಇದ್ದಕ್ಕಿದ್ದಂತೆಯೆ ಮೈಸೂರಿನ ಪರಕಾಲ ಮಠದ ಪೂಜ್ಯ ಸ್ವಾಮೀಜಿಯವರು ತಮ್ಮ ಶಿಷ್ಯರೊಂದಿಗೆ ''ಸಾಕ್ಷಾತ್ ವಿಷ್ಣು ಪರಮಾತ್ಮ ಗರುಡವಾಹನ'' ರಾಗಿ ಧರೆಗಿಳಿದಂತೆ ಆಗಮಿಸಿದರು. ಪೂಜ್ಯ ಸ್ವಾಮಿಗಳ ಆಗಮನ ಅನಿರೀಕ್ಷಿತವಾದುದರಿಂದ ವ್ಯವಸ್ಥಾಪಕರಿಗೆ ಅತ್ಯಾಶ್ಚರ್ಯ. ಆದರೂ ಶ್ರೀಮಠದ ಸಂಪ್ರದಾಯಾನುಸಾರ ಸ್ವಾಗತವನ್ನಿತ್ತು ಪೂಜ್ಯ ಶ್ರೀಗಳವರ ಸಾನ್ನಿಧ್ಯಕ್ಕೆ ಪರಕಾಲಮಠದ ಪೂಜ್ಯರನ್ನು ಕರೆದೊಯ್ಯಲಾಯಿತು. ಅಂದಿನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಂಸ್ಕೃತ ಭಾಷೆಯ ಮಹತ್ತ್ವವನ್ನು ಸಭೆಗೆ ತಿಳಿಸುತ್ತಿದ್ದ ಪರಕಾಲಮಠದ ಪೂಜ್ಯರು, ನಿಮಗೆಲ್ಲ ನಮ್ಮ ಅನಿರೀಕ್ಷಿತ ಆಗಮನ ಆಶ್ಚರ್ಯವುಂಟು ಮಾಡಿದೆಯೆಂಬುದು ನಮಗೂ ತಿಳಿದಿದೆ. ಸಂಸ್ಕೃತ ಭಾಷಾ ಸಮ್ಮೇಳನವೊಂದು ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ನಡೆಯುತ್ತಿರುವುದು ವಿಶೇಷ. ಇಂತಹ ವಿಶೇಷ ಸಭೆಗಳಿಗೆ ಆಹ್ವಾನವಿಲ್ಲದರು

ಅಭಿವಂದನಾ

ಅಭಿಮಾನದಿಂದ ಆಗಮಿಸಿದಾಗ ಜನರ ಪ್ರೀತ್ಯಾದರಗಳನ್ನು ಗಳಿಸುವುದು ಸುಲಭ. ಅದರಲ್ಲೂ ಪೂಜ್ಯ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳಿಗೆ ಸಂಸ್ಕೃತ ಭಾಷೆಯ ಬಗ್ಗೆ, ಆ ಭಾಷೆಯ ಅಭಿವೃದ್ಧಿಯ ಬಗ್ಗೆ, ಸಂಸ್ಕೃತ ಪಂಡಿತ ಮಂಡಳಿಯ ಬಗ್ಗೆ ವಿಶೇಷವಾದ ಪ್ರೀತಿ. ಹೀಗೆ ಸಮಾನ ಮನಸ್ಸನ್ನು ಹೊಂದಿರುವವರೆಡೆಗೆ ಬರಲು ಆಹ್ವಾನ ಬೇಕೇ ! ಈಗ ಗುರುಗಳಾಗಿರುವವರು ಪೂಜ್ಯ ಸ್ವಾಮಿಗಳ ಅಭಿಪ್ರಾಯದಂತೆ ಶಿಷ್ಯರಿರುವೆಡೆಗೆ ಹೋಗಬೇಕು. ಕತ್ತಲ ಕೋಣೆಯಲ್ಲಿ ಕುಳಿತು ಮಾಡುವುದೇನು. ಇಲ್ಲಿ ನೋಡಿ ಎಷ್ಟು ಜನ, ಎಂತಹ ಸೊಗಸಿನ ತಾಣ ಈ ಬೆಟ್ಟ, ಇಲ್ಲಿ ಸೇರಿರುವ ವಿದ್ವಜ್ಜನ ಮಂಡಳಿ. ಈ ಸಮೂಹದಲ್ಲಿ ಜನಸಾಗರದಲ್ಲಿ ಸಿಕ್ಕುವ ಸಂತೋಷವನ್ನು ನಾನು ಪಡೆದುಕೊಳ್ಳೋಣ ಎಂದು ಬಂದೆ '' ಎಂದಾಗ ಅಲ್ಲಿ ನೆರೆದಿದ್ದ ಜನರೆಲ್ಲ ಸ್ವಾಮೀಜಿಯವರ ಹೃದಯ ಶ್ರೀಮಂತಿಕೆಗೆ ಹಿಗ್ಗಿ ಹರ್ಷೋದ್ಗಾರ ಮಾಡಿದರು.

ಪೂಜ್ಯ ಶ್ರೀ ಶ್ರೀ ಶ್ರೀಗಳವರ ಸಾನ್ನಿಧ್ಯದಲ್ಲಿ ಸೇವೆಗೈವ ಭಾಗ್ಯ ದೊರೆತಿದ್ದುದರಿಂದ ಸಜ್ಜನರ ಸಹವಾಸ, ಅವರ ಅನುಭವಾಮೃತವನ್ನು ಸವಿಯುವ ಸೌಭಾಗ್ಯ ದೊರೆತು ಬದುಕನ್ನು ಸಹನೀಯವಾಗಿಸಿಕೊಳ್ಳುವ ಅನುಕೂಲ ನಮ್ಮದಾಗಿದೆ. ಅವರ ವಿಚಾರವನ್ನೊಳಗೊಂಡ ಅನುಭವಾಮೃತವನ್ನು ಆಚರಣೆಯಲ್ಲೂ ಅಳವಡಿಸಿಕೊಂಡು ಆತ್ಮವಂಚನೆ ಮಾಡಿಕೊಳ್ಳದೆ ದೈವ ಒಪ್ಪುವ ರೀತಿಯಲ್ಲಿ ಬದುಕು ಸಾಗಿಸುವ ಶಕ್ತಿಯನ್ನು ಅನುಗಾಲ ಪರಮಪೂಜ್ಯ ಗುರುವರ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

***

ಭೈರವನ ಅವತಾರ

ಎಸ್.ಎಲ್. ರಾಮಲಿಂಗಯ್ಯ

ಶ್ರೀ ಆದಿಚುಂಚನಗಿರಿ ಕ್ಷೇತ್ರ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಉಳ್ಳದ್ದು. ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರು ೭೧ ನೇ ಪೀಠಾಧಿಕಾರಿಗಳು. ಇದು ಭೈರವನ ಕ್ಷೇತ್ರ. ಈ ಕ್ಷೇತ್ರ ರಾಜ್ಯದಲ್ಲಿನ ಇತರೆ ಬಲಿಷ್ಠ ಮಠಗಳ ಪಂಕ್ತಿಯಲ್ಲಿ ನಡೆಯಲು ಸಾಧ್ಯವಾಗದೆ ಆರ್ಥಿಕವಾಗಿ ಮುಗ್ಗರಿಸಿತ್ತು. ಕರ್ನಾಟಕದ ಎಲ್ಲ ಮಠಗಳಿಗಿಂತಲೂ ಅತ್ಯಂತ ಪ್ರಾಚೀನವಾದದ್ದಾರೂ, ಎಲ್ಲ ಮಠಗಳಿಗಿಂತಲೂ ಹಿಂದುಳಿದಿತ್ತು ಭೈರವನ ಕ್ಷೇತ್ರದಲ್ಲಿ ಇಂತಹ ಪರಿಸ್ಥಿತಿಯನ್ನು ಮನಗಂಡ ಸಾಕ್ಷಾತ್ ಭೈರವ ಶ್ರೀ ಬಾಲಗಾಂಗಾಧರನಾಥ ಸ್ವಾಮಿಗಳ ರೂಪದಲ್ಲಿ ಮೈದೋರಿದ ಎಂಬುದು ಜನರ ನಂಬಿಕೆ. ಕೇವಲ ಇಪ್ಪತ್ತು ವರ್ಷಗಳಲ್ಲಿ ಕನಸು ಕಾಣಲೂ ಸಾಧ್ಯವಾಗದ ಪ್ರಗತಿಪರ ಶೈಕ್ಷಣಿಕ, ಧಾರ್ಮಿಕ ಹಾಗೂ ಮಾನವೀಯತೆಯ ದೃಷ್ಟಿಯಿಂದ ಸ್ಥಾಪಿತವಾದ ಅಂಧರ ಪಾಠಶಾಲೆ, ದಿಕ್ಕು ಕಾಣದ ಮಹಿಳೆಯರಿಗಾಗಿ ಅಬಲಾಶ್ರಮ, ಎಳೆಯ ವಯಸ್ಸಿನ ಬಾಲಕ ಬಾಲಕಿಯರನ್ನು ತಿದ್ದಿ ಭವಿಷ್ಯವನ್ನು ಭವ್ಯವನ್ನಾಗಿಸುವ ಶಿಕ್ಷಣ ಶಿಬಿರಗಳು ಹೀಗೆ ಹಲವು ಹತ್ತು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶ್ರೀಗಳವರು ದೇಶದ ಪ್ರಮುಖರ ಶ್ಲಾಘನೆಗೆ ಪಾತ್ರರಾಗಿದ್ದಾರೆ. ಭಕ್ತವೃಂದ ದಾರಿಗಾಣದೆ ಸಮರ್ಥರಾದ, ಕ್ಷೇತ್ರವನ್ನು ಸರಿದಾರಿಯಲ್ಲಿ ಕೊಂಡೊಯ್ಯಬಲ್ಲ ಗುರುಬೇಕೆಂದು ಹಂಬಲಿಸುತ್ತಿದ್ದಾಗ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರ ಆಗಮನವಾಯಿತು. ಭಕ್ತರೂ ತುಷ್ಟರಾದರು.

ಶ್ರೀಗಳವರ ಬಗ್ಗೆ ವರಿಷ್ಠರ ಅಭಿಪ್ರಾಯಗಳು

ಶ್ರೀಗಳವರ ಪಟ್ಟಾಭಿಷೇಕೋತ್ಸವ ಸಮಾರಂಭದ ಸಮಯದಲ್ಲಿ ಶ್ರೀ ಸಿದ್ಧಗಂಗಾ ಶ್ರೀಗಳವರು ಒಂದು ಸಂದೇಶ ಕಳುಹಿಸಿ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರ ಆಗಮನದಿಂದ ಶ್ರೀ ಕ್ಷೇತ್ರ ಬೆಳೆದು ಬಡವರ, ವಿದ್ಯಾಕಾಂಕ್ಷಿಗಳ ಅಭಿವೃದ್ಧಿ ಕಡ್ಡಾಯವಾಗಿ ನೆರವೇರುತ್ತದೆ ಎಂದು ಸಾರಿದರು.

ಶ್ರೀಗಳವರ ಪಟ್ಟಾಭಿಷೇಕದ ದಶಮಾನೋತ್ಸವ ಶ್ರೀ ಕ್ಷೇತ್ರದಲ್ಲಿ ಜರುಗಿತ್ತು. ಆ ಸಂದರ್ಭದಲ್ಲಿ ಒಂದು ನೆನಪಿನ ಸಂಚಿಕೆ ತರುವ ಸಲುವಾಗಿ ಶ್ರೀಗಳವರ ಬಗ್ಗೆ ಒಂದು ಲೇಖನ ಕಳುಹಿಸಿ ಎಂದು ಮಲ್ಲಾಡಿಹಳ್ಳಿಯ ಶ್ರೀ ರಾಘವೇಂದ್ರ ಸ್ವಾಮಿಗಳಿಗೆ ಪತ್ರ ಬರೆದಿದ್ದೆ.

ಅದಕ್ಕೆ ಉತ್ತರವಾಗಿ ಅವರು ಈ ರೀತಿ ಬರೆದರು. ಶ್ರೀ ಆದಿಚುಂಚನಗಿರಿ ಶ್ರೀಗಳವರನ್ನು ನಾನು ಹತ್ತಿರದಿಂದ ಬಲ್ಲೆ. ಅವರು ಬಹಳ ಒಳ್ಳೆಯವರು. ಪೂರ್ವಜನ್ಮಗಳ

ಸಂಸ್ಕಾರವನ್ನೆಲ್ಲಾ ತಂದು ಈ ಮಠಕ್ಕೆ ಧಾರೆ ಎರೆದಿದ್ದಾರೆ. ಅವರನ್ನು ನೀವು ಜಾತಿವಾದಕ್ಕೆಳೆಯದಿದ್ದರೆ ಅವರು ಶಿವನ ತಲೆಯ ಮೇಲಿಡಲು ಯೋಗ್ಯ ಮಂದಾರ ಪುಷ್ಪ'' ಎಂದಿದ್ದರು.

ಮತ್ತೊಂದು ಸಂದರ್ಭ. ಅದು ಶ್ರೀಗಳವರ ಪಟ್ಟಾಭಿಷೇಕೋತ್ಸವ. ಮಾಜಿ ಉಪರಾಷ್ಟ್ರಪತಿ ಶ್ರೀ ಬಿ.ಡಿ. ಜತ್ತಿಯವರು ಮತ್ತು ದಾರ್ಶನಿಕ ದಿ॥ ಸಿದ್ಧಯ್ಯ ಪುರಾಣಿಕರು ಆಗಮಿಸಿದ್ದರು.

ಶ್ರೀ ಜತ್ತಿಯವರು ಮಾತನಾಡುತ್ತ ಸ್ವಾಮಿಗಳೆ, 12 ನೇ ಶತಮಾನದ ಬಸವೇಶ್ವರರು ಸ್ಥಾಪಿಸಿದ ಅನುಭವ ಮಂಟಪದ ಬಗ್ಗೆ ಕೇಳಿದ್ದೇನೆ. ನೋಡಿರಲಿಲ್ಲ. ಆದರೆ ಇಲ್ಲಿನ ತಮ್ಮ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳನ್ನು ನೋಡಿದೆ. ಆದರೆ ತಾವು ನಿಜವಾದ ಅನುಭವ ಮಂಟಪವನ್ನು ಸ್ಥಾಪಿಸಿದ್ದೀರಿ ಎಂದರು. ಅಲ್ಲದೆ 'ತಮ್ಮ ಮಠದ ಆದರ್ಶ ನಮ್ಮ ಮಠಗಳಿಗೆ ಅನುಕರಣ ಯೋಗ್ಯವಾಗಿದೆ' ಸ್ವಾಮಿಗಳೇ ನಮ್ಮ ಮಠಗಳು ಕೆಟ್ಟಿವೆ. ನಮ್ಮ ಗುರುಗಳನ್ನು ಕರೆಸಿ ಬುದ್ಧಿಹೇಳಿ, ನಮ್ಮ ಮಠಗಳನ್ನು ಸರಿಪಡಿಸಿಕೊಡಿ ಎಂದರು. ಇದು ಎಲ್ಲ ವೃತ್ತ ಪತ್ರಿಕೆಗಳಲ್ಲಿ, ಆಕಾಶವಾಣಿಯಲ್ಲಿ ಮೊಳಗಿತು.

ಅದೇ ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀ ಸಿದ್ಧಯ್ಯ ಪುರಾಣಿಕರು ಈ ರೀತಿ ನುಡಿದರು.

When there was Roman Empire all roads were running towards Rome and When there was Buddha, all roads were running towards Buddhagaya and When there was British Empire all roads was running towards England and now All roads should run towards Sri Adichunchanagiri since Sri Balagangadharanatha Swamiji has created miraculous work. ಎಂದರು.

ಒಮ್ಮೆ ಮತ್ತೊಂದು ಪಟ್ಟಾಭಿಷೇಕೋತ್ಸವಕ್ಕೆ ಸಾಹಿತಿ, ವಿಮರ್ಶಕ ಹಾಗೂ ಕವಿ ಶ್ರೀ ಮಹದೇವ ಬಣಕಾರರು ಆಗಮಿಸಿದ್ದರು. ಅವರು ಶ್ರೀಗಳವರ ಬಗ್ಗೆ ಮಾತನಾಡುತ್ತ ಹೀಗೆ ಹೇಳಿದರು.

ಶ್ರೀ ಆದಿಚುಂಚನಗಿರಿ ಸ್ವಾಮಿಗಳು ಅನೇಕ ಜನ್ಮಗಳ ಸಾಧನೆಯನ್ನು ತಂದು ಶ್ರೀಮಠಕ್ಕೆ ಧಾರೆ ಎರೆದಿದ್ದಾರೆ. ಆದರಿಂದ ಬಂದ ಫಲವನ್ನೆಲ್ಲಾ ಮತ್ತೆ ದೇಶಕಲ್ಯಾಣಕ್ಕಾಗಿ ಧಾರೆ ಎರೆಯುತ್ತಿದ್ದಾರೆ.

ಅವರೇನಾದರೂ ಪುನಃ ಜನ್ಮಬೇಕೆಂದು ಬಯಸಿದರೆ ಈ ಪುಣ್ಯದ

ಪರಿಪಾಕವನ್ನೆಲ್ಲಾ ಹೊತ್ತು ತಂದು ಇಡೀ ರಾಷ್ಟ್ರಕ್ಕೆ ಲೋಕಗುರುವಾಗುತ್ತಾರೆಂದರು. ಒಮ್ಮೆ ಪಟ್ಟಾಭಿಷೇಕೋತ್ಸವಕ್ಕೆ ರಾಜ್ಯಪಾಲರಾದ ಶ್ರೀ ವೆಂಕಟಸುಬ್ಬಯ್ಯನವರು ಮತ್ತು ಮಾಜಿ ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿಯವರು ಶ್ರೀ ಕ್ಷೇತ್ರಕ್ಕೆ ಆಗಮಿಸಿದ್ದರು.

ಶ್ರೀ ಸಂಜೀವರೆಡ್ಡಿಯವರು ಮಾತನಾಡುತ್ತ ಈ ದೇಶದಲ್ಲಿ ವ್ಯವಸಾಯವೇ ಪ್ರಧಾನ. ದೇಶವನ್ನು ಸಾಕುವವರು ಅವರೆ. ಅವರನ್ನು ಸಂಘಟಿಸಿ ಮಾರ್ಗದರ್ಶನ ನೀಡಲು ಒಬ್ಬ ಪ್ರಬುದ್ಧರು ಬೇಕು. ಆ ಜನ ಮಂತ್ರಿ ಮಹೋದಯರ ಮಾತುಗಳಿಗೆ ಗಮನ ಕೊಡುವುದಿಲ್ಲ. ಅವರ ಜನಾಂಗದ ಗುರುಗಳಿಗೆ ಮಾತ್ರ ತಲೆ ಬಗ್ಗಿಸುತ್ತಾರೆ. ಇಡೀ ರಾಷ್ಟ್ರದ ಕೃಷಿಕರಿಗೆ ಗುರುವಾಗಿ ಅವರನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುವ ಶಕ್ತಿ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳಿಗೆ ಮಾತ್ರ ಸಾಧ್ಯ ಎಂದರು.

ದಿನಾಂಕ ೧೭.೧೨.೯೫ ರಂದು ಕೊಯಮತ್ತೂರಿನಲ್ಲಿ ತಮಿಳುನಾಡಿನ ಒಕ್ಕಲಿಗರ ಸಮಾವೇಶ ಜರುಗಿತು. ಸುಮಾರು ೮-೯ ಲಕ್ಷ ಜನ ಭಕ್ತರು ಶ್ರೀಗಳವರ ದರ್ಶನಕ್ಕಾಗಿಯೇ ಬಂದಿದ್ದರು. ನಾವು ದಾರಿಯಲ್ಲಿ ಹೋಗುವಾಗ ಬಹುದೂರದಿಂದ ವಾಹನಗಳಲ್ಲಿ ಪ್ರಯಾಣಿಸಿದ್ದ ಜನಸಮೂಹ ತಿಂಡಿ ತಿನಸು ತಂದು ಮರಗಳ ಕೆಳಗೆ ಕುಳಿತು ತಿನ್ನುತ್ತಿದ್ದರು. ಅವರು ಊರ ಒಳಗೆ ಬರುವ ಮೊದಲೇ ಬಂದಿದ್ದ ವಾಹನಗಳು, ಕೂರಲು ಜಾಗವಿಲ್ಲದೆ ಸ್ಟೇಡಿಯಂ ಹೊರಗೆ ನಿಂತಿದ್ದ ಜನ, ನಿಲ್ಲಲು ಜಾಗವಿಲ್ಲದೆ ನಿರಾಶರಾಗಿ ಸಮಾರಂಭಕ್ಕೆ ಮೊದಲೇ ಹಿಂದಿರುಗುತ್ತಿದ್ದ ಜನ, ಸುಮಾರು 5-6 ಸಾವಿರ ವಿವಿಧ ವಾಹನಗಳು ಇವುಗಳನ್ನೆಲ್ಲಾ ನೋಡಿದ ಮೇಲೆ ಕೊಯಮತ್ತೂರಿನ ಇತಿಹಾಸದಲ್ಲಿ ಇದೇ ಮೊದಲ ಕಾರ್ಯಕ್ರಮ ಎನಿಸಿತು ಅದು ನಿಜವೂ ಹೌದು.

ಸುಮಾರು ೧೫೦೦ ಅಡಿ ಉದ್ದ, ೫೦೦ ಅಡಿ ಅಗಲದ ಶಾಮಿಯಾನದಲ್ಲಿ ಕುಳಿತಿದ್ದ ಮಹಿಳೆಯರು, ಪುರುಷರಲ್ಲದೆ ಸುತ್ತಲೂ ನಿಂತಿದ್ದ ಜನ ಸ್ತೋಮ, ಜಾಗಸಿಕ್ಕದೆ ಹೊರಗೆ ಧ್ವನಿವರ್ಧಕದಲ್ಲಿ ಕಾರ್ಯಕ್ರಮ ಕೇಳುತ್ತಿದ್ದ ಜನ ಸ್ವಾಮಿಗಳು ಆಗಮಿಸಿ ಇಪ್ಪತ್ತು ಅಡಿ ಎತ್ತರದಲ್ಲಿ ಕಟ್ಟಿದ್ದ ವೇದಿಕೆ ಏರುತ್ತಿದ್ದಾಗ 'ಒಕ್ಕಲಿಗರ ಸ್ವಾಮಿಯಾರ್ ವಾಳ್ಗ' ಎಂದು ಕೂಗಿದರು.

ಈ ಅಬ್ಬರ ಅಂಬರದಲ್ಲಿರುವ ಭಗವಂತನಿಗೂ ಮುಟ್ಟಿರುತ್ತದೆ. ಶ್ರೀಗಳವರ ಮಹತ್ವಕ್ಕೆ ಇನ್ನೇನು ಎಣೆ?

ಬೆಂಗಳೂರು ಸಭೆ

ದೇಶಕ್ಕೆ ಅನ್ನ ಕೊಡುವ ರೈತವರ್ಗಕ್ಕೆ ಚಿನ್ನಪ್ಪರೆಡ್ಡಿ ಆಯೋಗ ಅನ್ಯಾಯ ಮಾಡಿದೆ ಎಂದು ಶ್ರೀಗಳವರು ರೈತ ಸಮುದಾಯದವರನ್ನು ಬೆಂಗಳೂರಿಗೆ ಬರಲು ಕರೆಕೊಟ್ಟರು. ಸುಮಾರು 30 ಲಕ್ಷ ಜನ ಬೆಂಗಳೂರಿಗೆ ನಾನಾ ವಾಹನಗಳಲ್ಲಿ

ಆಗಮಿಸಿದರು. ಕೆಂಪೇಗೌಡ ಕಟ್ಟಿದ ಬೆಂಗಳೂರಿನ 9 ಬಾಗಿಲಲ್ಲೂ ಆಗಮಿಸಿದರು.

ವಾಹನಗಳನ್ನು ಊರೊಳಗೆ ನಿಲ್ಲಿಸಲು ಜಾಗ ಸಾಲದಾದಾಗ ಪೊಲೀಸರು ಮೈಸೂರು ರಸ್ತೆಯಲ್ಲಿ ಬಂದ ವಾಹನಗಳನ್ನು ಸಿಟಿ ಮಾರ್ಕೆಟ್‌ಗಿಂತ ಹಿಂದೆಯೇ ನಿಲ್ಲಿಸಿದರು. ಕನಕಪುರ ರಸ್ತೆಯಲ್ಲಿ ಬಂದ ವಾಹನಗಳನ್ನು ಟೌನ್‌ಹಾಲ್‌ನಿಂದ ಹಿಂದಕ್ಕೆ ತಡೆದರು. ಬಳ್ಳಾರಿ ರಸ್ತೆಯಲ್ಲಿ ಬಂದ ವಾಹನಗಳನ್ನು ಮೇಕ್ರಿ ವೃತ್ತದ ಹಿಂದಕ್ಕೆ ತಡೆದರು. ಜನಸಾಗರ ಈ ರೀತಿ ಶ್ರೀಗಳವರ ಒಂದು ಕೂಗಿಗೆ ಧಾವಿಸಿದಾಗ ಇವರ ಹೃದಯ ತಡೆಯಲಿಲ್ಲ. ಹಸಿದು ಬಂದ ಜನಸಮುದಾಯಕ್ಕೆ ೨೦೦ ಪಲ್ಲ ಅಕ್ಕಿ ಬೇಯಿಸಿದರು. ಅನ್ನದ ಪ್ಯಾಕೆಟ್‌ಗಳನ್ನು ಮಾಡಿ ಈ ಒಂಭತ್ತು ಬಾಗಿಲುಗಳಲ್ಲಿ ಲಾರಿಗಳಲ್ಲಿ ತುಂಬಿ ನಿಲ್ಲಿಸಿದರು. ದಣಿದು ಬಂದ ಜನ ಈ ಪ್ರಸಾದದಿಂದ ಹಸಿದೊಡಲ ತುಂಬಿಕೊಂಡು ದಣಿವಾರಿಸಿಕೊಳ್ಳಲೆಂದು ಈ ವ್ಯವಸ್ಥೆಯನ್ನು ಮಾಡಲಾಗಿತ್ತು.

ಶ್ರೀಗಳವರು ಅಂದು ಬೆಳಿಗ್ಗೆಯೇ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ರ್‍ಯಾಲಿ ಉದ್ಘಾಟನೆ ಮಾಡಿ ರೈತರು ಕಷ್ಟ ಸಹಿಷ್ಣುಗಳು, ಆವೇಶದಿಂದಿದ್ದೀರಿ. ಕೆಟ್ಟಹೆಸರಿಗೆ ದಾರಿಕೊಡಬಾರದು ಎಂದು ಆದೇಶಿಸಿದರು. ಬಂದ ಜನ ಊರಿಗೆ ವಾಪಸಾಗುವ ಮೊದಲು ಗುರುವಾಕ್ಯ ಪಾಲನೆ ಮಾಡಿದರು. ಆ ದಿನದ ಈ ಜನ ಸ್ತೋಮವನ್ನು ನೋಡಿದ ಪಟ್ಟಣಿಗರು ಏನಾಗುವುದೋ ಎಂದು ಭಯಪಟ್ಟಿದ್ದರು.

ಹಿಂದುಳಿದ ವರ್ಗದ ಗುರುಗಳು

ಶ್ರೀಗಳವರು ಅವರ ಆಶ್ರಯದಿಂದ ತಯಾರಾದ ಚಿತ್ರದುರ್ಗದ ಸ್ವಾಮಿಗಳೊಬ್ಬರಿಗೆ ಅವರ ಆಶ್ರಮವನ್ನು ನವೀಕರಿಸಿ ಕೊಟ್ಟರು. ಅದು ಸಿದ್ಧಾರೂಢ ಪಂಗಡದ್ದು. ಆ ಸ್ವಾಮಿಗಳು ಇತ್ತೀಚೆಗೆ ಮತ್ತೊಂದು ಶಾಖೆ ತೆರೆದಿದ್ದಾರೆಂದು ಕೇಳಿದ್ದೇನೆ. ಮಳವಳ್ಳಿಯಲ್ಲೊಂದು ಬೆಸ್ತರ ಮಠ, ಹಿರಿಯೂರಿನಲ್ಲೊಂದು ಆದಿಜಾಂಬವ ಮಠ, ಹೀಗೆ ಇವರು ಹಿಂದುಳಿದ ಮಠಗಳಿಗೆ ಪ್ರೋತ್ಸಾಹ ಕೊಡುತ್ತಿರುವ ಸ್ಥಿತಿಯನ್ನು ಕಂಡ ಜಿಲ್ಲಾಧಿಕಾರಿಯೊಬ್ಬರು ತಾವು ಹಿಂದುಳಿದ ಮಠಗಳ ಜಗದ್ಗುರು ಎಂದರು. ಆದರೆ ವಸ್ತುಸ್ಥಿತಿ ಹಾಗೇನಿಲ್ಲ. ಇಡೀ ದೇಶದ ಎಲ್ಲ ವರ್ಗದ ಜನರ ಹೃದಯ ದೇಗುಲದಲ್ಲಿ ನಮ್ಮ ಸ್ವಾಮಿಗಳು ನೆಲೆಸಿದ್ದಾರೆ.

ಒಮ್ಮೆ ಒಬ್ಬ ಭಾಷಣಕಾರರು ಶ್ರೀಗಳವರ ಹೃದಯವಂತಿಕೆಯ ಬಗ್ಗೆ ಮಾತನಾಡುತ್ತ ಇವರದು ತಾಯಿಯ ಹೃದಯ ಎಂದರು. ಯಾರಾದರೂ ನೊಂದು ಶ್ರೀಗಳವರ ಸಂದರ್ಶನ ಪಡೆದರೆ ನೊಂದವರಿಗಿಂತಲೂ ಹೆಚ್ಚಾಗಿ ನೋಯುತ್ತಾರೆ. ಎಲ್ಲರ ದುಃಖವನ್ನು ತಮ್ಮ ಒಡಲಿಗೆ ತುಂಬಿಕೊಳ್ಳುತ್ತಾರೆಂದರು. ಅದಕ್ಕೆ ಒಂದು ಉದಾಹರಣೆಯನ್ನು ಕೊಟ್ಟರು.

ಅದೇನೆಂದರೆ, God could not be everywhere, Therefore he made mothers. ಎಂದು ಒಬ್ಬ ಆಂಗ್ಲ ಕವಿ ಹೇಳಿದ್ದಾನೆ. ಇಂತಹ ತಾಯಿ ಹೃದಯ ಉಳ್ಳ ಗುರುಗಳನ್ನು ದೇವರು ನಮಗೆ ಕೊಟ್ಟಿದ್ದಾನೆ ಎಂದರು.

ಮತ್ತೊಮ್ಮೆ ಮತ್ತೊಬ್ಬ ಭಾಷಣಕಾರರು ಉಲಿದರು. ಸ್ವಾಮಿಗಳವರು ಸ್ಥಾಪಿಸಿರುವ ಸಂಸ್ಥೆಗಳು ಒಂದಲ್ಲ-ನೂರಾರು. ದೇಶಕ್ಕೆ ಜೀವನಕ್ಕೆ ಅಗತ್ಯವಿರುವ ಎಲ್ಲ ಕೋರ್ಸುಗಳನ್ನು ತೆರೆದಿದ್ದಾರೆ. ಇದನ್ನು ನೋಡಿದಾಗ

What is not found in Adichunchanagiri is no where else ಎಂದರು.

ಶ್ರೀಗಳವರ ದೂರದೃಷ್ಟಿ, ಅವರ ಶ್ರಮದ ದುಡಿಮೆ, ಇದರಿಂದುಂಟಾದ ಫಲ ಇವುಗಳನ್ನು ಕಂಡಿರುವ ಜನ ಇವರನ್ನು ಭೈರವೇಶ್ವರನ ಅವತಾರ ಎನ್ನುತ್ತಾರೆ. ಭೈರವೇಶ್ವರ ಮೂಲಸ್ಥಾನ ಹಿಡಿದಿದ್ದಾನೆ. ಇವರು ನಡೆದಾಡುವ ಭೈರವ, ಮಾತನಾಡುವ ಭೈರವ ಎನ್ನುತ್ತಾರೆ. ನಮಗೆ ನಿತ್ಯವೂ ಪ್ರತ್ಯಕ್ಷವಾಗುವ ಇಬ್ಬರು ದೇವತೆಗಳಿದ್ದಾರೆ. ಒಂದು ಸೂರ್ಯ ಎರಡನೆಯದು ಚಂದ್ರ. ಮೂರನೆಯವರು ಶ್ರೀ ಬಾಲಗಂಗಾಧರನಾಥ ಸ್ವಾಮಿಗಳೆಂದು ಅಭಿಮಾನದಿಂದ, ಭಕ್ತಿ ತುಂಬಿದ ಹೃದಯಾಂತರಾಳದಿಂದ ನಾವು ಹೇಳುತ್ತೇವೆ.

ಶ್ರೀಗಳವರ ಸಾನ್ನಿಧ್ಯ ಮಾತ್ರದಿಂದ, ಅವರ ಆಶೀರ್ವಾದ ಮಾತ್ರದಿಂದ ನಾವು ಪುನೀತರಾಗಿದ್ದೇವೆ. ಪ್ರಬುದ್ಧರಾಗುತ್ತಿದ್ದೇವೆ. ಶ್ರೀಗಳವರ ಆಶೀರ್ವಾದ ನಮ್ಮ ಮೇಲೆ ಎಲ್ಲ ಕಾಲಕ್ಕೂ ಇರಲಿ, ಎಲ್ಲ ಜನ್ಮಕ್ಕೂ ಇರಲಿ, ಅವರು ಮೋಕ್ಷಕ್ಕೆ ಆಶಿಸದೆ ಪದೇಪದೇ ನಮ್ಮ ಮಧ್ಯೆ ಹುಟ್ಟಿ ಬರಲಿ, ನಾವು ಅವರ ಶಿಷ್ಯರಾಗಿಯೇ ಜನ್ಮಗಳನ್ನು ತಳೆಯೋಣ.

***

A GREAT SAVANT

H.H.Anniah Gowda

Fifty years ago on (18.1.1945) was born a divine child to chikalingappa and Boramma of the Subhedar family in Banandur, Bangalore district. The child grew up as a Mahatma took to sanyasa on 25.2.1967 and became Matadhipati at Adichunchanagiri on 24.9.1974.

This in brief are the physical details of the spiritual life of the 71st pontiff of Adichunchanagiri peeta. Sri Adichunchanagiri Mutt is a hoary one which stands in the line of mutts propagating the Hindu dharma, a **dharma** which has neither specific Bible nor an exclusive God. Adichunchanagiri is in a picturesque setting on the hill built on a rock as if true to the Biblical saying. Like all holy places it has **stalapurana** pregnant with meaning, the presiding deity is Lord Kalabhairaveshwara, the Peeta is known as Adi peeta Sidhasimhasana and it has hallowed associations in the minds of all devotees. Lord Gangadhareshwara is in the top of the hill and stairs lead the devotees to the **garbhagruha.** Legends associated with the kshetra live in the consciousness of all those who visit the place. **Kshetras** such as Adichunchanagiri are necessary in today's world where **Asurika sakti** replaces **daivika sakti,** where the supremacy of spirit is questioned and man let loose like a kite in the sky seeking refuge in God.

In his book, **The Heart of Hinduism,** Dr. S. Radhakrishnan says : " The Hindu religion is marked by an eminently rational character. Throughout the bewildering maze of dreamy hopes and practical renunciations, straitest dogmas and reckless adventures of spirit, throughout the four or five millenniums of easeless

metaphysical and theological endeavour, the Hindu thinkers have tried to grapple with the ultimate problems in a spirit of loyalty to truth and feeling for reality. The Brahminical civilisation is so called since it is directed by the Brahmin thinkers, trained to judge issue without emotion and base their conclusions on the fundamentals of experience."

The words emphasise the highly intellectual nature of the Hindu religion in striking contrast to the emotional character of revealed religions like Christianity and Islam. It is **Sanatana Dharma.** It is also one of the oldest, as also the most dynamic of surviving religions. It is called Hindu Religion and the word "Hindu", it must be admitted, is most misleading. Hinduism today is associated with a much narrower, and specifically, religious concept. As a matter of fact, the word "Hindu" does not occur at all in our ancient literature. Experts tell us that the word "Hindu" occurs for the first time in a Tantrik work of the eighth century A.D. and there it means a group of people and not the followers of a particular religion. The word, however, is a very old one and is derived from "Sindhu", ancient Indian name for the river Indus. The Aryans who migrated to India from central Asia about 1500 B.C. made the Sindhu valley their home, gave us the **Vedas** and laid the foundation of a culture that has survived almost intact despite several attempts to destroy it. As Nehru has pointed out in **The Discovery of India.** "The old inclusive term for religion in India was **Arya Dharma. Dharma** really means something more than religion. It is from a root word which means to hold together- it is the inmost constitution of a thing, the law of its inner being. It is an ethical concept which includes the moral codes, righteousness and the whole range of man's duties and responsibilities. **Arya Dharma** would include all the faiths

(Vedic and non-Vedic) that originated in India : it was used by Buddists and Jains as well as by those who accepted the Vedas. Buddha always called his way to salvation that "Aryan Path".

Before coming to the fundamental principles of **Hindu Dharma**. I would like to say a few words about our sacred scriptures. The sacred literature of India is very different from that of the **Bible.** In the first place there is very little interest in the course of events as such. Therfore, there are no "Historical books ", except the two great epics The **Ramayana** and The **Mahabharata.** The Mahabharata has been called "a vast repository of Hindu traditional lore, philosophy and legend ". It is big and great and its size is eight times as big as that of the Iliad and Odyssey put together. Neither is there are sharply defined scriptural canon. Yet the principle of the use of sacred literature in India is much the same as elsewhere. In other words, it is preserved and recited in order to transmit and reproduce from generation to generation a certain religious experience, and is thus regarded as a channel of religious revelaiton.

The **Vedas** constitute the first great section of the sacred literature of India. The word "Veda" means knowledge and is not very different from the Greek word "Aida". The Vedas are four in number **Rig Veda**, the earliest in the order of composition, containing 1028 hymns grouped under ten books, **Sama Veda** containing hymns to be sung on sacrificial occassions, **Yajur Veda** which is purely liturgical and the **Atharva Veda** which is a collection of charms and incantations. These hyms and songs show that the Indians as early as the Vedic times were begining to the orise about the gods and that a class of

people among them enjoyed the ecstasy of religious experience. Albert Schweitzer has remarked that the effect of his ecstasy was to induce an attitude of "world and life negation". Sri Sri Sri Swamiji says, "The human life should be spent rewardingly and in the study of **Sastras, Upanishads** and in prayer and meditation".

The Upanishads form the second great section of the sacred literature of India. Upanishad is a Sanskrit word which means "sitting close to". It means a secret or esoteric communication, an initiation by lecture into the inner meaning of life, to a group of disciples gathered round a "Guru". The word lecture should not, however, be taken too literally. There is nothing precise or clear about the Upanishads. They are not essays, but jumble of lecture notes, miscelloneous quotations, aphorisms, short hymns etc.

As in the case of **Bible,** commentaries on the **Upanishads** are legion. They date from 800 B.C. and mark a very important stage in the development of Indo-Aryan thought. The **Upanishads** are some 250 in number, not all of them are of equal importance. There are about twelve or thirteen principle ones. Taken as a whole, they indicate a consistent development away from the naive polytheism of the **Vedic** period in the direction of a monisticpantheism with a strong philosophical background. The **Upanishads** are instinct with a spirit of inquiry, of mental adventure, of a passion for finding out the truth about things. "The search for the truth", says Nehru, "is of course not by the objective methods of modern science, yet there is an element of the scientific method in the approach. No dogma is allowed to come in the way.... The emphasis is essentially on selfrealization, on knowledge of the individual self and the absolute self, both of which are said to be same in essence. The objective external world is not considered unreal but real in relative sense, an

aspect of the inner reality.'' The ground of all existence, according to the Upanishads, is Brahma, Who is Brahma ? He is not just the most High God, as we understand the expression. He is ether, He is life, He is joy, He is the void. ''That from which these things are born, that by which, when born, they live and that into which, when departing, they enter - that seek to know. That is Brahma''. He embraces all phenomena and yet is beyond definition. Side by side with the doctrine of the ground of existence develops the doctrine of the **atma.** The Sanskrit word, **atma** denotes the invisible part of the individual - the spirit or self. Gradually the idea develops that there is but one atma or self, differentiated into separate selves or egos, yet essentially one and the same. The next stage in the development of Indian thought is marked when Brahma comes to be identified with the one atma or Great-Self. The Supreme Truth can be learnt only by meditation and faith.

Polythesim thus gradually gives place to monism. The gods, goddesses and godlings are not abolished or declared in Hebrew fashion to be ''no gods''. They are merely subordinated to the Great Self. Their position roughly corresponds to he position of angles in Hebrew and Christian scriptures. In such a world the highest blessedness may be considered to be a kind of dreamless sleep or a state in which the individual self becomes completely indentified with the one Great Self. There is parallelism between finite man and the infinite God. We can imagine the effect of such a doctrine upon conduct. It indicates a complete detachment from the affairs of this life and this world. This philosophy requires that when an individual undertakes social service, it should be done with complete absence of interest in the world and life. Death or dreamless sleep alone can bring about this complete identification. The question naturally arises, can this principle operate in life when one is awake ? It is possible only when a kind of waking trance is induced.

This can be achieved through yoga which is a kind of hypnotic technique. "Yoga" is a much misunderstood word. Charlatans and mountebanks, who have mastered a few tricks of the body, are today passing off as experts on yoga. But a true **sanyasi** works for the good of the society.

We must remember that yoga is itself a system of philosophy and it is based upon the psychological conception that by proper training of the mind, certain levels, of higher consciousness can be attained. It is a method by which one can find out things for oneself. It is not necessary that one should be a Hindu to attain yogic insight. A Christian, a Muslim, a Buddhist, any one for that matter, can become a yogi provided he has enough control over his mind and body. Belief in God is by no means an integral part of this system: even atheists can practise yoga. The would be yogi is required to take certain rigorous bodily exercies known as **asanas** in order to attain control over his body and keep it in a proper condition. It is not necessary to emphasise that these peculiarly Indian exercises have become very popular in the West and Europeans and Americans try to practise yoga for its hygienic effects if for nothing else. The main concern of ancient yogis of India was to achieve such control over the body as to leave the spirit free from its interference. In fact the yoga technique is a process of becoming yoked with the Absolute.

Closely associated with yoga is the belief in **karmas.** Literally, the word means "action". According to this belief, one's good or bad actions procure rebirth at death into the body of a higher or lower being. It is documented in the **Mahabharata** that " as a calf traces its mother among thousands of cows, so does the deed previously done follow its doer ". We can never escape from our past. Yoga is a means of

release from **samsara** or the cycle of rebirths. In th **Rig Vedic** hymns, there is no hint of rebirth or transmigration or souls. The idea finds explict mention in the **Brihadaranyaka Upanishad** (the Upanishad that influenced T.S. Eliot most). The idea travelled West: the Greek Philosopher, Pythagoras taught it round about 580 B.C. It travelled East as far as Japan where it became part of the Buddhist doctrine. Belief in **Karma** has had a tremendous effect on the character and outlook of every Indian. The fear of being born as some lower animal has had a wholesome effect on him. At heart every Indian is an ascetic, "Moksha" or spiritual freedom is his aim. For it is written in the **Upanishads** "They who seek the **atman** by austerity, chastity, faith and knowledge....they do not return". "Those who know this (the technique of the way to Brahma) go to the Brahma knowers become merged in Brahma, intent there on, liberated from the womb".

The most important of the sacred books, however, from the point of view of the rank and file of India, is The **Bhagavad Gita.** It forms a whole canto of The **Mahabharata,** one of the two great epics of India, the other being The **Ramayana.** Rama and Krishna are the incarnations or "Avatars" of Vishnu, who is both Preserver and Destroyer. "Whenever there is a decay of righteousness and a rising of unrighteousness, then I embody myself in order to save the good and to destroy evil-doers, to establish righteousness, I am born from age to age". (Ch. 4,7) The number of such incarnations is ten, **dasvatara.** as they are called. Most of these "Avataras" are sub-human, fish, tortoise, boar, man-lion etc., In The **Mahabharata** it is Lord Vishnu in his incarnation as Krishna, the charioteer, who is the divine - human spokesman of The **Bhagavad Gita.** The **Bhagavad Gita** is the **Bible** of the Hindus. It is read widely by all devout Hindus and Mahatma Gandhi declared his indebtedness to it more than to any other sacred literature except perhaps,

ಅಭಿವಂದನಾ

The New Testament.

The **Bhagavad Gita** is not merely a dialogue that took place in the remote past between two well-known epic characters in the **Mahabharata,** Lord Krishna and Arjuna. It is much more than that. It symbolises the eternal dialogue that goes on in the recesses of every human soul. God speaks to us as Lord Krishna spoke to Arjuna on the battle field of Kurukshetra. The Gita gives expreission to the aspirations of the pilgrims of all sects who seek to read the inner way to the City of God. The Gita does not cale upon us to solve the meaning of life, but to find out deed demanded of us and towork, and so my action, master the riddle of life. We should know our **Kartavyam karma.** But the action must be positive and selfless. However, the word Yoga seems to provide the key to some of the tangled problems.

The word "Yoga" of course means thought control. But in The Gita it is used in its primary sense of union or fellowship with God. The Gita is thus Yoga Sastra. it shows us the way to fellowship with God. There are four kinds of Yoga - **Jnana, Bhakti, Karma and Raja Yoga**: the last deals with the way of pranayama and the development of the Kundalini Sakti within us. Swamiji's lectures demostrate that by worshipping the divinity through one's action, one moves towards perfection. Karma Yoga prescribes disinterested service. Lord Krishna advises Arjuna not to think of fruits of action but to do his duty. He represents the best in the Indian temperament which seeks to penetrate the mystery of death so well illustrated in the case of Nachiketa of Kato-Upanishad. We are reminded of what Jesus Christ told his disciples : "Think not of the harvest but only of proper sowing". We shall be judged ultimately not by the kind of work we do but by the spirit in which we do it. Aciton must be positive and selfless. The Gita calls upon us to surrender unto God not only the fruits of our actions, but

also the agency of action. Self effacement and self surrender are most necessary. The Indian soul meditates and reflects on the transitoriness of life and often ignores the human achievement. The final goal is to attain mystical insight into the unity of all things, and with the Supreme. The vision of Viswarupa (Ch. xi) that came to Arjuna in the middle of this discourse is the symbol of the fundamental unity of all things.

Humboldt characterised The Gita as "the most beautiful, perhaps the only true philosophical song in any tongue ". It is a dialogue between Arjuna, who is deeply moved at he prospect of fighting his own kith and kin and Guru, Lord Krishna who acts as Arjuna's charioteer at the Kurukshetra. Krishna encourages him to do his duty like a Kshatriya.The dialogue is manifold in its aspects. Krishna talks about the eternity of the Self and the illusion of the bodily individuality and pre-determined events. life seen as a bondage from which liberation is sought. This is the very essence of Hinduism. The Gita or Krishna Samvada is the communion of the individual with the Supreme. One cannot ignore the facta deep personal relationship conceived as existing between man and Christ, the Son of God. In The Gita, Krishna declares " Surrendering all the laws, come to me alone for refuge. I will deliver thee from all sins : grieve not, " (Ch. 18,66) to which Swamiji refers a number of times. Swamiji has given a new interpretation of "Chaturvarnas" and has shown that a Sudhra is not inferior to anyone. Hindu belief in Karma and Transmigration is interesting and most compelling in the whole range of Indian thought. Swamiji has not discussed these aspects of Hinduism. But he has emphasised devotion and cultivation of implicit faith in God, and the gospel of love and service to humanity. Iņ an age of pop-guru culture and palatable recipes for nirvana, Sri Sri Sri Swamiji's lack of formulas, the honesty and integrity of his insistence of cultivation of faith in God, have appealed to

devotees in India and abroad. In his lectures he has conveyed the lofty teachings of Hinduism through parables. His views on Education, Sanskrit and Yuga Dharma and other aspects which touch human life are born of his vast experience as Matadhipati.

Hinduism is like an ocean into which many streams have flown and still flow. It teaches its followers samadristi on all people to whatever creeds and denominations they belong. Sri Adichunchanagiri Mutt is a monument to this aspect of Hinduism, its devotees are found among all faiths and creeds and its holy embrace is open to all. Hindus ought to look upon their fellow-beings as their kindred, as members of the family of the Supreme. "Vasudaiva Kutumbakam". The lofty Vedic concept is the welfare of all beings, "bahujanasukhaya bahujanahithaya ca".

Hence it became easy for the framers of the Indian constitution to emphasise secularism. The followers of Hinduism says Sri Sri Sri Swamiji should believe in the universal spirit and look upon themselves and others of other religions as belonging to the one household of God.

Mandira Musjid tere dham
Isvara Allah tere nam.

Sri Sri Sri Swamiji is an apostle of Hinduism. His life is devoted to the betterment of humanity, he guides his devotees through human endeavour to the next step in its journey towards pursuit of perfection. He is a great sage whose presence emanates sweetness and light. May he continue to guide all those who seek his blessings!

***

ಆದಿಚುಂಚನಗಿರಿ ನವನಿರ್ಮಾಪಕರು

ಪ್ರೊ.ಹಿ.ಚಿ. ಪುರುಷೋತ್ತಮ್

೧೯೭೪ ರ ನವರಾತ್ರಿ ದಿನಗಳು ಕರ್ನಾಟಕದ ಬಡಬೋರೇಗೌಡನ ಹಾಗೂ ಅವನನ್ನು ಶತಶತಮಾನಗಳಿಂದ ಆಶ್ರಯಿಸಿಕೊಂಡಿರುವ ಕೃಷಿಪ್ರಧಾನ ವೃತ್ತಿನಿರತ ನೇಕಾರ, ದನಗಾಹಿಗೊಲ್ಲ, ಕುಂಬಾರ, ಗಾಣಿಗ, ಬಡಗಿ ಮತ್ತುಳಿದ ಕೃಷಿಕಾರ್ಮಿಕರು ಇವರೆಲ್ಲರ ಮಕ್ಕಳಪಾಲಿಗೆ ಒಂದು ಅಭೂತಪೂರ್ವ ಅಮೃತ ಸಂದರ್ಭ; ಇವರ ಶತಮಾನಗಳ ನಿರೀಕ್ಷೆಯ ಕಗ್ಗತ್ತಲ ಬರಡುಬಾಳಿನಲ್ಲಿ ನವ್ಯ ಆಶಾ-ಜ್ಯೋತಿಯೊಂದು ಕಾಣಿಸಿಕೊಂಡ ಸೌವರ್ಣ ಸನ್ನಿವೇಶ. ತಮ್ಮನ್ನು ತಾವೇ 'ಬುದ್ಧಿವಂತ'ರೆಂದೂ, ವಿರಾಟ್ ಪುರುಷನ ಸಹಸ್ರ ಶೀರ್ಷಗಳ ಬಾಯಿಗಳು ತಾವೇ ಎಂದೂ ಕರೆದುಕೊಂಡ ಅಲ್ಪಸಂಖ್ಯೆಯ ಕೆಲವರು''ನಿಲವು ಈ ಭೂಮಿಯ ಮೇಲೆ ಹುಟ್ಟಿರುವುದು ಕೃಷಿ, ಗೋರಕ್ಷೆ, ವಾಣಿಜ್ಯ ಮಾಡುವುದಕ್ಕೆ, ಬಿಟ್ಟರೆ ಮೇಲಿನವರ 'ಪರಿಚರ್ಯೆ' ಗೆ; ಇದು ನಿಮಗೆ ಹೇಳಿಸಿದ ಕರ್ಮ: ಇದನ್ನು ನಾವಲ್ಲ ಹೇಳುತ್ತಿರುವುದು; ಮನು ಮಹಾರಾಜಾದಿಗಳು ಬರೆದಿಟ್ಟಿದ್ದಾರೆ ಎಂದು ಶಾಸ್ತ್ರಗಳ ಶಾಸನಾಧಾರವನ್ನು ಈ ಜನರ ಮುಖಕ್ಕೆ ಹಿಡಿದು ತೋರಿಸುತ್ತಿದ್ದುದನ್ನು ಈ ಬಡಪಾಯಿಗಳು ಮಣ್ಣಮೇಲೆ ಕಣ್ಣುಬಿಟ್ಟಂದಿನಿಂದ ಕೇಳುತ್ತ ಬಂದಿದ್ದರು. ಸ್ವಾರ್ಥಸಾಧಕರ ಕಟುನಿರ್ದಯದ, ಲೋಭ ಬುದ್ಧಿಯ, ಹೀನ ಕುಟಿಲತಾ'' ಲತೆಯು ಇವರನ್ನು ಅಷ್ಟಪದಿಯಂತೆ ಅತ್ತಿತ್ತ ಅಲುಗದಂತೆ ಬಂಧಿಸಿಟ್ಟಿತ್ತು.'ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು? ನಿನ್ನೆದೆಯ ದನಿಯೆ ಋಷಿ; ಮನು ನಿನಗೆ ನೀನು; ಕಷ್ಟದಲಿ ನೊಂದವರ ಕಣ್ಣೀರನೊರಸುವೊಡೆ ಶಾಸ್ತ್ರಪ್ರಮಾಣದಕಿರಲೆ ಬೇಕೇನು?'' (ಕುವೆಂಪು) ಎಂಬಂತಹ ದನಿ ಆಗಾಗ ತಲೆಯೆತ್ತುತ್ತಿದ್ದರೂ ಬಾಯಿರುವವರು ಬೊಬ್ಬೆಯ ಮಧ್ಯೆ ನೊಂದವರ ಈ ಸೊಲ್ಲು ಅಡಗಿಹೋಗುತ್ತಿತ್ತು.

ಇಷ್ಟಾದರೂ ಮಾದಿಗರ, ಬೆಸ್ತರ, ಬೇಡರ, ಗೊಲ್ಲರ ನಡುವೆ ಒಬ್ಬ ವಸಿಷ್ಠ ಒಬ್ಬ ವ್ಯಾಸ, ಒಬ್ಬ ವಾಲ್ಮೀಕಿ, ಒಬ್ಬ ಜಾಬಾಲಿಯಂತಹ ಕ್ರಾಂತಿಕಾರಿ, ಕ್ರಾಂತದರ್ಶಿ ಯುಗಪುರುಷ ಮಗನೊಬ್ಬ ಹುಟ್ಟಿದ್ದರೆ. 'ಅವನು ನಮ್ಮವನೇ; ಇಂದಿನಜನ್ಮದಲ್ಲಲ್ಲದಿದ್ದರೆ ಹಿಂದಿನ ಜನ್ಮದಲ್ಲಿ; ಶಾಪದಿಂದ ಹೀಗೆ ಹೀನಯೋನಿಯಲ್ಲಿ ಜನಿಸಿದ 'ಎಂದುಕೊಂಡು, ಅವನ ಬಾಯಿಗೆ ತಮ್ಮ ಮಾತುಗಳನ್ನು ತುರುಕಿದ 'ಬುದ್ಧಿವಂತ' ರು ಭಾರತೀಯ ಸಾಮಾಜಿಕ ಧಾರ್ಮಿಕ ಇತಿಹಾಸದಲ್ಲಿ ಗುಪ್ತನಾಮರಾಗಿ ಹೋಗಿದ್ದಾರೆ. ಈ ಮಣ್ಣಿನ ಮಕ್ಕಳು ನಿತ್ಯನಾರಕಿಗಳಾಗಿ ಹುಟ್ಟಿನಿಂದಲೇ ಕಟ್ಟು ಬಿದ್ದುದರಿಂದ ಇವರಿಗಾಗಿ ಯಾವ ದರ್ಜೆಯ ನಾಕವನ್ನಾದರೂ ಸೃಷ್ಟಿಸಬೇಕೆಂಬ ಅನಿವಾರ್ಯತೆ ಸೃಷ್ಟಿ ದೇವತೆಯ ದೃಷ್ಟಿಗೆ ಬೀಳಲಿಲ್ಲ. ಅಷ್ಟೇ ಏಕೆ! ವೈದಿಕಕಾಲದ ಕಾಮ್ಯಕರ್ಮಗಳಾಗಿದ್ದ ನಾನಾಯಾಗಗಳ ಮಧ್ಯೆ

ಅಭಿವಂದನಾ

'ಪುರುಷಮೇಧ' ವೆಂಬ ಯಾಗಕ್ಕೆ ನರಪಶುಗಳು ಧಂಡಿಯಾಗಿ ದೊರಕುತ್ತಿದ್ದುದು ನಾನಾವೃತ್ತಿನಿರತರಾದ ಈ ಜನಜಂಗುಳಿಯಲ್ಲೇ! ಮೌನಿಗಳಾಗಿಯಾದರೂ ತಮ್ಮ ಆತ್ಮಕ್ಕೆ ತೃಪ್ತಿಯುಣಿಸಬಯಸಿದ ಈ ಜನರು 'ನಿತ್ಯಶಂಬೂಕಗಳಾಗಿ ಬಾಳಬೇಕಿತ್ತು. ಇಲ್ಲದಿದ್ದರೆ ಶ್ರೀ ರಾಮಚಂದ್ರನಂತಹ ಆದರ್ಶ ಆರ್ಯನ ತೋಳನ್ನು ಎಳೆದುತಂದು ಈ ಶಂಬೂಕಗಳ ಕುತ್ತಿಗೆಗಳಿಗೆ ಕುತ್ತಾಗಿಸುವ ತಾಕತ್ತು ಈ ಬುದ್ಧಿವಂತರ ವಾಕ್‌ಬಲಕ್ಕಿತ್ತು. (ವಾಲ್ಮೀಕಿಯಂತೂ ಶಂಬೂಕ-ಶೂದ್ರನನ್ನು ಸೃಷ್ಟಿಸಲಿಲ್ಲ, ಉತ್ತರಕಾಂಡವನ್ನು ಕೊರೆದ ಉತ್ತರಪೌರುಷರಿಗಾಗಿ ಈ ಭಾಗ್ಯವನ್ನು ಮೀಸಲಿಟ್ಟದ್ದಿರಬಹುದು).

ಆದರೆ 'ನಮ್ಮನ್ನು ನಾವೇ ಉದ್ಧರಿಸಿಕೊಳ್ಳಬೇಕು. ನಮ್ಮನ್ನು ನಾವೇ ಹಾಳು ಮಾಡಿಕೊಳ್ಳಬಾರದು' ಎಂಬಂತಹ ಕೊಳಲ (ಕೊರಳ!) ದನಿಗಳು ಈ ಹತ ಭಾಗ್ಯರ ಎದೆಯಲ್ಲಿ ಮೊಳಕೆಯೊಡೆದರೂ ಇಂತಹ ಜಾಗೃತ ಕ್ರಾಂತಿಯ ಕುಡಿಯನ್ನು ಚಿಮುಟಲು 'ಸ್ಮೃತಿ'ಗಳೆಂಬ ಸೋಗನ್ನು ಹೊದೆದ ದುಷ್ಟಶಕ್ತಿಗಳು ಭಾರತೀಯ ಇತಿಹಾಸದುದ್ದಕ್ಕೂ ವಿಕಟನಾಟಕವಾಡಿವೆ. ಇಂತಹ ಶಕ್ತಿಸಂಚಿತಡಿಯೊಂದು ಇಲ್ಲಿಗೆ ಎರಡು ಸಹಸ್ರ ವರ್ಷಗಳಿಗೂ ಮೊದಲು ನಮ್ಮೀ ಕನ್ನಡ ಮಣ್ಣಿನ ಪ್ರಸಿದ್ಧ ಗಜಾರಣ್ಯಕ್ಷೇತ್ರ-ಕಾವೇರಿ ಜಲಾನಯನ ಪ್ರದೇಶ-ಚುಂಚನಕಟ್ಟೆ-ಚುಂಚನಗಿರಿಯಲ್ಲಿ ಬೆಳೆದು ಬೇರೂರಿ ಇಂದು ಸುಪ್ರಸಿದ್ಧ ಆದಿಚುಂಚನಗಿರಿ ಮಹಾಸಂಸ್ಥಾನ ಮಠವಾಗಿ ಮುಗಿಲೆತ್ತರಕ್ಕೆ ನಿಮಿರಿನಿಂತು ದಿಗಂತ ವಿಶ್ರಾಂತ ದೃಷ್ಟಿ ಬೀರುತ್ತಿದೆ.' ಮೇಲೆ ಹೇಳಿದ ೧೯೭೪ ರ ನವರಾತ್ರಿಯ ದಿನಗಳು ಈ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಭವ್ಯ ಪರಂಪರೆಯಲ್ಲಿ ಅಭೂತಪೂರ್ವಕ್ರತು-ಶಕ್ತಿಯೊಂದು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಎಂಬ ನಾಮಾಂಕಿತದಿಂದ ಕ್ಷೇತ್ರಾಧ್ಯಕ್ಷ ಪಟ್ಟಕ್ಕೇರಿದುದನ್ನು ಕಂಣರಿಸಿಕೊಂಡು ಸಾರ್ಥಕವಾದುವು.

ಮೊಳಕೆ-ಮಹಾವೃಕ್ಷವಾಯಿತು: ಆದಿ ಚುಂಚನಗಿರಿ ಗಂಗಾಧರೇಶ್ವರನೇ ಮನೆ ದೇವರಾಗಿದ್ದ ಕುಟುಂಬವೊಂದು ರಾಮನಗರದ ಬಾನಂದೂರಿನಲ್ಲಿ ಬಹುಕಾಲದಿಂದ ನೆಲೆ ಯೂರಿತ್ತು. ಆ ಕುಟುಂಬದಲ್ಲಿ ಬಾಲಕ ಗಂಗಾಧರರು ೧೯೪೫ ರಲ್ಲಿ ಜನ್ಮವೆತ್ತಿದರು. ಬಾಲ್ಯ-ಕೌಮಾರ್ಯಗಳಲ್ಲಿ ಒದಗಿಬಂದ ನಾನಾ ಸನ್ನಿವೇಶಗಳ ಒತ್ತಡದಿಂದ, ಅದಕ್ಕಿಂತ ಮಿಗಿಲಾಗಿ, ಕರ್ಮ-ಧರ್ಮ ಸಂಯೋಗದಿಂದ ತಾರುಣ್ಯದಲ್ಲಿ ಅಡಿಯಿಡುತ್ತಿದ್ದ ಗಂಗಾಧರಯ್ಯ ೧೯೬೮ ರಲ್ಲಿ ಅಂದಿನ ಪೀಠಾಧಿಪತಿಗಳಾಗಿದ್ದ ಶ್ರೀ ಶ್ರೀ ಶ್ರೀ ರಾಮಾನಂದನಾಥಸ್ವಾಮಿಗಳಿಂದ ಮಠದ ವಟುವಾಗಿ ಧರ್ಮದೀಕ್ಷೆಪಡೆದು ಶ್ರೀ ಬಾಲಗಂಗಾಧರರೆಂದು ನಾಮಾಂಕಿತರಾದರು. ಕಾಲಗತಿಯಲ್ಲಿ ಶ್ರೀ ಶ್ರೀ ಶ್ರೀ ರಾಮಾನಂದನಾಥಸ್ವಾಮಿಗಳು ಕೈಲಾಸವಾಸಿಗಳಾಗಲು ೨೫.೯.೧೯೭೪ ರಲ್ಲಿ ಶ್ರೀ ಬಾಲಗಂಗಾಧರನಾಥಸ್ವಾಮಿಗಳು ಕ್ಷೇತ್ರಾಧ್ಯಕ್ಷ ಪಟ್ಟಕ್ಕೇರಿದರು.

ಆದಿಚುಂಚನಗಿರಿಯ ಇತಿಹಾಸದಲ್ಲೇ ಕಂಡರಿಯದ ನವ-ಚೈತನ್ಯ ರೂಪೀ

ಸುಪರ್ಣವೊಂದು ಜಗದ್-ವಿಸ್ತಾರ ಪರ್ಯಟನಕ್ಕೆ ಸಿದ್ಧವಾಯಿತು. ಇಷ್ಟು ಶತಮಾನಗಳ ಕಾಲ ಈ ಸಿದ್ಧಸಿಂಹಾಸನವನ್ನೇರಿ ತಪಸ್ಸುಗೈದ ಎಪ್ಪತ್ತು ಯೋಗಿ-ಚೈತನ್ಯಗಳ ಮಹಾತ್ವಾಕಾಂಕ್ಷೆ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಗಳ ಸಂಕೇತದಲ್ಲಿ ಘನೀಭೂತವಾಗಿ ಕನ್ನಡನಾಡಿನ, ಅದರಾಚೆಗಿನ ಕ್ಷಿತಿಜದ ಮೇಲೆ ನವ್ಯಜ್ಯೋತಿರ್ಲೋಕವೊಂದು ಮೂಡಿದಂತಾಯಿತು. ಶ್ರೀ ಸ್ವಾಮಿಗಳ ಕಾಯಕನಿಷ್ಠ ಕಾಯವಾಗಿ ಇಂದು ಅವರೆಲ್ಲರ ಅಭೀಪ್ಸೆಯು ಸಂಸ್ಕೃತಿ ಕೇಂದ್ರಗಳಾಗಿ, ಸಮುದಾಯ ಭವನಗಳಾಗಿ, ವಿದ್ಯಾರ್ಥಿನಿಲಯಗಳಾಗಿ, ಅನ್ನದಾ ನಿಕ್ಷೇತ್ರಗಳಾಗಿ, ಶಿಶುವಿಹಾರಗಳಾಗಿ, ಪ್ರಾಥಮಿಕ-ಪ್ರೌಢ-ಸ್ನಾತಕ ಶಿಕ್ಷಣಕೇಂದ್ರಗಳಾಗಿ ತಾಂತ್ರಿಕ-ತರಬೇತಿ ಶಾಲಾ-ಕಾಲೇಜುಗಳಾಗಿ. ವೈದ್ಯಕೀಯ ಶಿಕ್ಷಣ-ನೆರವಿನಾಗರಗಳಾಗಿ ವೃದ್ಧಾಶ್ರಮಗಳಾಗಿ ಮೈದೋರಿ ಮೆರೆಯುತ್ತಿದೆ.

ಈ ಕ್ಷೇತ್ರದ ಅನನ್ಯ ಸಾಧಾರಣವಾದ ಈ ಪರ್ವತೋಪಮ ಅಭಿವೃದ್ಧಿಯನ್ನು ತನ್ನ ಜ್ಯೋತಿಶ್ಶರೀರದಿಂದ ಪರೀಕ್ಷಿಸುತ್ತಿರುವ, ಇಂತಹ ಸುವರ್ಣ ಸಂದರ್ಭವೊಂದನ್ನು ಸೃಜಿಸಲು ತನ್ನೆಲ್ಲ ಭೌತಿಕ ಶಕ್ತಿಯನ್ನು ಪ್ರಯೋಗಿಸಿ, ಮಡುಗಟ್ಟಿದ್ದ ಮಹಾವಾಹಿನಿಗೆ ದಿಗ್ದರ್ಶನ ನೀಡಿ ತನ್ನ ಗುರಿಯತ್ತ ಸಾಗುವಂತೆ ತಪಗೈದ, ಭಗೀರಥ ಕೆ.ಎಚ್. ರಾಮಯ್ಯನವರ ಅಮೃತಾತ್ಮ ಹರ್ಷಪುಲಕಿತವಾಗಿಲ್ಲವೆ?

ಮಹಿಳಾಸೇವಾಶ್ರಮ: ಎಲೌ ಗಾರ್ಗಿ ಹೆಚ್ಚು ಬೇಡ! ನಿನ್ನ ತಲೆಚೂರುಚೂರಾದೀತು! ಎಂದು ಗದರಿಸಿದ ಗಂಡುನಾಲಗೆಯುಂಟು. ಆಕೆಯ ಪ್ರಶ್ನೆಯನ್ನು ಉತ್ತರಿಸಲಾರದೆ ತತ್ಕಾಲದಲ್ಲೆ 'ಮಾತೃದೇವೋ ಭವ' ಎಂದು ಶಿಷ್ಯಾನುಶಾಸನ ಮಾಡಿತು ಮತ್ತೊಂದು ಗಂಡು ಜಿಹ್ವೆ 'ನಾರಿಯರು ಪೂಜೆಗೊಳ್ಳುವೆಡೆ ರಮಿಸುವುದು ದೇವಗಣ!' ಎಂದು ತನ್ನ ಸ್ಮೃತಿಶಕ್ತಿಯನ್ನು ತೋರಿಸಿಕೊಂಡಿತು ಮತ್ತೊಂದು ಹಳೆಯ ತಲೆ, ಜ್ಞಾನ, ಧನ, ಧಾನ್ಯ, ಧಾರಿಣಿ, ಎಲ್ಲವೂ ಹೆಣ್ಣು, ಹೆಚ್ಚೇನು, ಸೃಷ್ಟಿಶಕ್ತಿಯೇ ಹೆಣ್ಣು, ಯೋಗಿರಾಜ, ಶಿವನೂ ಅರ್ಧಹೆಣ್ಣು. ಈ ರೀತಿ ಹೊಗಳಿದ ಪುರುಷ ಹಸ್ತಗಳೇ ಆಕೆಯ ಸೀರೆ ಸೆಳೆದುವು; ಕದ್ದದ್ದೂ ಉಂಟು ಪೌರಾಣಿಕ ಪ್ರಪಂಚದ ಭಾರತದಲ್ಲಿ. 'ಹೆಣ್ಣು ಹೆಣ್ಣಲ್ಲ; ಹೆಣ್ಣು ರಾಕ್ಷಸಿಯಲ್ಲ; ಹೆಣ್ಣು ಪ್ರತ್ಯಕ್ಷ ಮರುಳಸಿದ್ಧ ಮಲ್ಲಿಕಾರ್ಜುನ ನೋಡಾ; ಆರು ಹಿತವರು ನಿನಗೆ ಈ ಮೂವರೊಳಗೆ ನಾರಿಯೋ! ಧಾರಿಣಿಯೋ! ಬಲುಧನದ ಸಿರಿಯೋ; ಇತ್ಯಾದಿಯಾಗಿ ಹೊಗಳಿದವರು ತೆಗಳಿದವರು ನಾವೇಯೆ. ಹೆಣ್ಣೊಂದು ಚರಮಾಲು, ಅದಕ್ಕೆ ಯಾವಾಗಲೂ ಅರ್ಧ ಕೂಲಿ, ನಾಯಿ ಮುಟ್ಟಿದ ಹಳೇ ಮಡಕೆ; ಅನಾಘ್ರಾತವಾಗಿದ್ದರೆ ಮಾತ್ರ 'ಕುಸುಮ' ಈ ಭಾವನೆಗಳುಂಟು ಈ ಧರ್ಮಕ್ಷೇತ್ರದಲ್ಲಿ. ಸರ್ವಸಂಗಪರಿತ್ಯಕ್ತ 'ಜರತಾರಿಜಗದ್ಗುರು' ಗಳೂ ನಾವೇ.

ಭಗವಂತ ಎಲ್ಲೆಲ್ಲಿಯೂ, ಎಲ್ಲರಲ್ಲಿಯೂ ಇದ್ದಾನೆಂದು ವೇದಾಂತ ಹೇಳುವ ನಾವು ನಾರಿಯನ್ನು ನಡೆಸಿಕೊಂಡುಬಂದ ದಾರಿ ಅನುಕೂಲಸಿಂಧು. ಅಂದರೆ ಬಡಪಾಯಿಗಾಗಿ

ಕಣ್ಣೀರಿಟ್ಟ ಕರುಣೆಯ ಕಣ್ಣುಗಳು ಎಷ್ಟು ? ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ 'ಜೀವನದರ್ಶನ' ಕೃತಿಯ 'ಮಹಿಳಾಸೇವಾಶ್ರಮ' ವೆಂಬ ಭಾಗವನ್ನು ಒಮ್ಮೆಯಾದರೂ ಓದಿ ನೋಡಬೇಕು.

ಪೂಜ್ಯಸ್ವಾಮೀಜಿಯವರು ಭಾರತೀಯ ನಾರಿಯರು ನಡೆದುಬಂದ ಜಟಿಲ ದಾರಿಯನ್ನು ಕೇವಲ ಗುರುತಿಸುವುದರಲ್ಲೇ. ತೃಪ್ತರಾಗದೆ ಅವರಿಗಾಗಿ ಮೈಸೂರುನಗರದಲ್ಲಿ ಭಿಕ್ಷಾಟನ ಮಾಡಿ 'ಮಹಿಳಾ ಸೇವಾಶ್ರಮ'ವೊಂದನ್ನು ಸ್ಥಾಪಿಸಿ ನಡೆಸುತ್ತಿದ್ದಾರೆ. ಭಾರತೀಯ ಮಠ, ಮಠಾಧಿಪತಿಗಳ ಇತಿಹಾಸದಲ್ಲೇ ಇದೊಂದು ಪ್ರಥಮಸ್ಯ ಪ್ರಥಮ ವಿಕ್ರಮ. ಮಾತೆಯರನ್ನು ಅವರ ಸ್ಥಾನವನ್ನು ಹತ್ತಿಕ್ಕುವುದರಲ್ಲಿ ಸನ್ಯಾಸಿಗಳ ಮಠ ಮಠಾಧಿಪತಿಗಳ ಪಾತ್ರವೇನೂ ಕಡಮೆಯಿಲ್ಲ. ಜೈನ, ಬೌದ್ಧ ಇತ್ಯಾದಿ ಕೆಲವೇ ಕೆಲವು ಪಂಥಗಳಲ್ಲಿ ಮಾತ್ರ ಮಹಿಳೆಯರಿಗೆ ಅಲ್ಪಸ್ವಲ್ಪ ಧಾರ್ಮಿಕ ಸ್ವಾತಂತ್ರ್ಯವಿರುವುದು ಕಂಡುಬರುತ್ತದೆ.

ಮಹಾಕಾಯಕ: ಕರ್ನಾಟಕದ-ಅಷ್ಟೇಕೆ-ಅಖಿಲ ಭಾರತದ ಧಾರ್ಮಿಕ ಸಂಘಸಂಸ್ಥೆಗಳ ಮಠ-ಮಾನ್ಯಗಳ ಇತಿಹಾಸದಲ್ಲಿ ಕೇವಲ ಒಂದು ದಶಕದಲ್ಲಿ ಇಂತಹ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಿದ ಮಹಾಚೇತನ ಮತ್ತೊಂದಿಲ್ಲ. ಇಂದು ಶ್ರೀ ಕ್ಷೇತ್ರದ ಆಶ್ರಯದಲ್ಲಿ ಅರವತ್ತಕ್ಕೂ ಮಿಕ್ಕ ಇಂತಹ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಸಂಘಸಂಸ್ಥೆಗಳು ಕಾರ್ಯೋನ್ಮುಖವಾಗಿವೆ (ವಿಸ್ತಾರ ಭಯದಿಂದ ಆ ಸಂಘಸಂಸ್ಥೆಗಳ ಹಾಗೂ ಅವುಗಳ ವ್ಯಾಪ್ತಿ-ಚಟುವಟಿಕೆಗಳ ವಿವರವನ್ನು ಇಲ್ಲಿ ಕೈ ಬಿಡಲಾಗಿದೆ.)

ಇಷ್ಟು ಸಂಘ-ಸಂಸ್ಥೆಗಳ ನಿರ್ವಹಣೆಯ ಬೃಹದ್-ಭಾರ ಮತ್ತು ಅವುಗಳು ಪ್ರಸರಿಸಿರುವ ವ್ಯಾಪ್ತಿಯನ್ನು ಗಮನಿಸಿದಾಗ ಹಾಗೂ ಭಕ್ತಕೋಟಿಯ ಆಕಾಂಕ್ಷೆ, ಆದರ, ಪ್ರಾರ್ಥನೆಗಳನ್ನು ಸಲ್ಲಿಸಲೇಬೇಕಾಗಿ ಬಂದಾಗ, ಇಂತಹ ಬಹುಮುಖ ಒತ್ತಡಗಳನ್ನು ನಿರಾತಂಕವಾಗಿ ಸಮಚಿತ್ತದಿಂದ, ಶಾಂತಿ ಸಮಾಧಾನಗಳಿಂದ ಜೀರ್ಣಿಸಿಕೊಳ್ಳಬೇಕಾದ ಮಹಾವ್ಯಕ್ತಿತ್ವದ ಪರಿಕಲ್ಪನೆಯೂ ಅಸಾಧ್ಯವೆನಿಸುತ್ತದೆ. ಹಗಲಾಗಲಿ ರಾತ್ರಿಯಾಗಲಿ, ಎಷ್ಟು ದೂರವಿರಲಿ, ಎಂತಹ ಮಾರ್ಗಾಯಾಸವನ್ನು ಎದುರಿಸಬೇಕಾಗಿಬರಲಿ; ಯಾವ ಯಾವ ಭಕ್ತವೃಂದವನ್ನು ಆಶೀರ್ವದಿಸಿ ತಣಿಸುವುದಾಗಲಿ; ಜಾತ್ರೆಯೋ ಸಂತೆಯೋ, ಮದುವೆಯೋ ಮಹಾಸಭೆಯೋ, ಶಂಕುಸ್ಥಾಪನೆಯೋ, ಪೂಜೆಯೋ, ಭೇಟಿಯೋ, ಶ್ರೀಗಳವರು 'ದಯೆ ಮಾಡಿ' ಭಾಗವಹಿಸಿಲೇಬೇಕು. ಆ ಮಹಾಕಾಯಕ ನೀರೋಗ ದೃಢಕಾಯ ಹಾಗೂ ಸ್ಥಿತಪ್ರಜ್ಞತೆಯ ಮನೋಭೂಮಿಕೆಗೆ ಮಾತ್ರ ಸಹ್ಯವಾಗುತ್ತದೆ. ಈ ಇಪ್ಪತ್ತು ವರ್ಷಗಳಲ್ಲಿ ಲಕ್ಷಾಂತರ ಕಿಲೋಮೀಟರುಗಳ ದೂರವನ್ನು ಕ್ರಮಿಸಿ ಭಾರತದ ಮತ್ತಾವ ಮಠಾಧಿಪತಿಯೂ ಕೈಗೊಳ್ಳದ ಮಹಾ 'ಪರಿವ್ರಾಜಕ' ವ್ರತವನ್ನು ಶ್ರೀಗಳವರು ಸಾರ್ಥಕಗೊಳಿಸಿದ್ದಾರೆ. ಮುಂಗಾರು ಕಾಲದ 'ಚಾತುರ್ಮಾಸ್ಯ' ವ್ರತವೂ ಸಹ ನಮ್ಮ ಸ್ವಾಮಿಗಳಿಗೆ ಕಾರುಗಾಲಿಗಳ ಮೇಲೆ ಕಳೆಯುತ್ತಿದೆ. 'ಮಠಾಧಿಪತಿಗಳ ಕರ್ತವ್ಯ ಮಠದಲ್ಲಿಲ್ಲ. ಅದಿರುವುದು ಮಠದಿಂದ

ಹೊರಗಡೆ' ಎಂದು ತಾವಾಡಿದಂತೆ ನಡೆದು ಮಾತಿಗೆ ಅರ್ಥತುಂಬುವ ಶ್ರೀಮಂತಿಕೆ ಇಲ್ಲಿ ತನ್ನನ್ನು ತಾನು ಸಾರ್ಥಕಪಡಿಸಿಕೊಳ್ಳುತ್ತಿದೆ. ಈ ಸಿದ್ಧಯೋಗಿಗಳ ದರ್ಶನಲಾಭವನ್ನು ಪಡೆದ ವ್ಯಕ್ತಿಗಳು, ಮನೆಗಳು. ಮಂದಿರಗಳು, ಸಂದರ್ಭಗಳು ಅಗಣಿತ.

ಕ್ರಾಂತಿಕಾರೀ ವಿಚಾರಧಾರೆ: ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಗಳ ವಿಚಾರಧಾರೆ ಯಾರಿಗೂ ಸಹ ದಂಗುಬಡಿಸುವಂತಹದು. ಇವರು ಕಾವಿಧರಿಸಿದ ಮಹಾಕ್ರಾಂತಿಕಾರರು. ಪ್ರಾಚೀನ ಭಾರತದ ವೇದೋಪನಿಷದಾದಿಗಳ ದಾರ್ಶನಿಕ ಧಾರ್ಮಿಕ ಇತಿಹಾಸದ ಸೋಪಾನದ ಮೇಲೆ ನಿಷ್ಠುರರಾಗಿ ನಿಂತು ನವೋನವ್ಯ ಪ್ರಗತಿಪರ ದೃಷ್ಟಿಯನ್ನು ಮೈಗೂಡಿಸಿಕೊಂಡ ಮಹಿಮೆ ಸ್ವಾಮಿ ವಿವೇಕಾನಂದರಂತಹ ಧೀಮಂತ ಧೀರ ಯುಗಪುರುಷ ಸಂನ್ಯಾಸಿಗಳಿಗೆ ಮಾತ್ರ ಲಭ್ಯ. ಕೈಲಾಸವಾಸಿಗಳಾದ ಸುತ್ತೂರು ಶ್ರೀಗಳ ಶ್ರೀವಾಣಿ ಆದಿಚುಂಚನಗಿರಿಯ ಶ್ರೀಗಳನ್ನು 'ಅಭಿನವ ವಿವೇಕಾನಂದ' ರೆಂದು ಘೋಷಿಸಿದ್ದು ಶ್ರೀಗಳಲ್ಲಿ ವಿವೇಕಾನಂದರನ್ನು ಕಂಡೇ.

ಪೂರ್ವಸಿದ್ಧತೆ: ಯೋಗ ಸಾಧನೆ ಮಾಡಿ ಗುರಿ ಮುಟ್ಟದ-ಯೋಗಭ್ರಷ್ಟನಾದ ಸಾಧಕ ಪುನಃ ಯೋಗಿಗಳ ಕುಲದಲ್ಲೇ ಜನಿಸಿ ಪೂರ್ವಸಂಚಿತ ಯೋಗಮಾರ್ಗದಲ್ಲಿ ಮುಂದುವರಿಯುವನೆಂಬ ಗೀತಾವಾಣಿಯಂತೆ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥರು ಯೋಗಿಸದೃಶ ಮಾತಾಪಿತೃಗಳ ಮಡಿಲಲ್ಲಿ ಬೆಳೆದು ಅರಳಿದವರು. ಕುಲವೋ ಪರಂಪರೆಯಿಂದ. ಶ್ರೀ ಆದಿಚುಂಚನಗಿರಿಯ ಭೈರವೇಶ್ವರ-ಗಂಗಾಧರೇಶ್ವರ ಸನ್ನಿಧಿಯ ಕೈಂಕರ್ಯದ ಸುಬೇದಾರ್ ಮನೆತನ. ಮಾತೆಯ ಕರುಣೆ, ನಲಿವು, ನೋವುಗಳು ತ್ರಿಪುಟೀಕರಣವಾಗಿ ಪುಟಗೊಂಡು ಬಾಲ್ಯ-ಕೌಮಾರ-ತಾರುಣ್ಯಗಳ ಹಂತಹಂತಗಳಲ್ಲಿ ಅಚ್ಚಳಿಯದ ಪ್ರಭಾವಬೀರಿದುವು. ಈ ಪ್ರಭಾವವೇ ಇಂದು 'ಮಹಿಳಾ ಸೇವಾಶ್ರಮವಾಗಿ' ಮೈವೆತ್ತು ನಿಂತಿದೆ. ವಂಶಪಾರಂಪರ್ಯ ಭಕುತಿಯು ಶಕ್ತಿರೂಪಿಣಿಯಾಗಿ ಸಂವರ್ಧನೆಗೊಂಡು ಮನೆದೇವರ ಮೂಲಸ್ಥಾನಕ್ಕೆ ಸೆಳೆದೊಯ್ದು ಜ್ವಾಲಾಪೀಠದ ಜ್ಯೋತಿರ್ವಲಯದ ಕೇಂದ್ರ ಸ್ಥಾನದಲ್ಲಿ ನೆಲೆಗೊಳಿಸಿತು. ಇಂದು ಆ ಕೇಂದ್ರ ಬಿಂದು ಮಹಾಮಂಡಲಾಕಾರತಳೆದು ಕರ್ನಾಟಕದ ದೀನದಲಿತರ, ನಿರಕ್ಷರಕುಕ್ಷಿಗಳ ರೈತ-ಕಾರ್ಮಿಕರ ಮನ-ಮನೆಗಳನ್ನು ತನ್ನೊಳಸೆಳೆದು ಅನ್ನದಾನ, ವಿದ್ಯಾದಾನ, ಇತ್ಯಾದಿ ದಾನಾದಿಗಳಿಂದ ಅವರ ಶಿಶುಗಳ ಮೈಮನ ತಣಿಸಿ ತಂಪೆರೆಯುತ್ತಿದೆ; ಕಣ್ತೆರೆಸುತ್ತಿದೆ.

ಶ್ರೀಗಳ ವಿಚಾರ ಸರಣಿಯಲ್ಲಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ದೃಷ್ಟಿಗಳ ಮಧುರ ಸಂಮೇಳವನ್ನು ಗುರುತಿಸಬಹುದು. ಅವರ ಭಾಷಾ ಶೈಲಿಯೂ ಅಷ್ಟೆ. ಸರಳ-ಸುಂದರ, ಕ್ಲಿಷ್ಟತೆಗೆ ಅಲ್ಲಿ ಜಾಗವಿಲ್ಲ. ಶ್ರೀ ರಾಮಕೃಷ್ಣಪರಮಹಂಸರೇನಾದರೂ ಈ ದಕ್ಷಿಣದ ದಕ್ಷಿಣೇಶ್ವರ ಚುಂಚನಗಿರಿಯಲ್ಲಿ ತೇಜಃಕಾಯರಾಗಿ ಸಂಭವಿಸಿದ್ದಾರೆಯೇ ಎನ್ನಿಸುತ್ತದೆ. ತಾರುಣ್ಯದಲ್ಲಿ ಅರ್ಜಿಸಿದ ಪೂರ್ವ-ಪಶ್ಚಿಮ ಪದ್ಧತಿಯ ವಿದ್ಯಾರ್ಜನೆಯಿಂದ

ಅಭಿವಂದನಾ

'ಅಭಿನವ ವಿವೇಕಾನಂದತ್ವ' ಸಂಪಾದನೆಯಾಗಿದ್ದರೆ, ಶ್ರೀಕ್ಷೇತ್ರ ಚುಂಚನಗಿರಿಯ ಗುರುಪದತಲದಲ್ಲಿ, ಭವತಾರಿಣಿ ಸ್ವರೂಪಿಣಿ ಮಾತೃಪದತಲದಲ್ಲಿ ಆವಾಹನೆಗೊಂಡ ಮೃದು ಮಧುರ ಭಾವಾವೇಶ ಶ್ರೀಗಳಲ್ಲಿ ಅಕ್ಷಯ ಶ್ರೀನಿಧಿಯಾಗಿ ಸ್ವಸ್ಥಾನ ಕಲ್ಪಿಸಿಕೊಂಡಿದೆ. ಮೇಲಾಗಿ ಋಷಿ ವಿಭೂತಿಗೆ, 'ಸಿದ್ಧ' ದೃಷ್ಟಿಗೆ ನಿಲುಕದ ನಿಲುವಿಲ್ಲ. ಅವರ ವಿಚಾರಧಾರೆ ಸರ್ವಂಕಷ, ಅಂತೆಯೇ ಕೂಲಂಕಷ. ಅವರ ಆಶೀರ್ವಚನ, ಭಾಷಣಗಳನ್ನು ಕೇಳಿದವರಿಗೆ, ಅವರೊಡನೆ ಸಂಲಾಪ ಮಾಡಿದವರಿಗೆ ಎಂತಹ ಅದ್ಭುತ ರಮ್ಯ ವಿಚಾರಕ್ರಾಂತಿಯ ಮಿಂಚು ಹೊರಚೆಲ್ಲುತ್ತದೆಂಬುದು ಮನದಟ್ಟಾದೀತು. ಶ್ರೀಗಳ ಭಾಷಣಗಳ ಪ್ರಥಮ ಭಾಗ 'ಜೀವನದರ್ಶನ' ವೆಂಬ ಕೃತಿ ಮಠಾಧಿಪತಿಗಳು, ರಾಜಕೀಯ ಧುರೀಣರು, ಸಮಾಜ-ರಾಷ್ಟ್ರಸೇವಕರು, ಶಿಕ್ಷಕರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ಶ್ರೀಸಾಮಾನ್ಯರು ಇತ್ಯಾದಿ ಸರ್ವರಿಗೂ ಅನ್ವಯಿಸುವ ಒಂದು 'ಗುರು' ಕೃಪೆ.

ಮೇಲಿನ 'ಜೀವನದರ್ಶನ' ಕೃತಿಗೆ 'ತೊದಲ್ನುಡಿ' ಯೆಂದು ವಿನಮ್ರರಾಗಿ ಮೊದಲ್ನುಡಿ ಬರೆದಿರುವ ದಕ್ಷ ಆಡಳಿತಗಾರರೂ ಕನ್ನಡದ ಸುಪ್ರಸಿದ್ಧ ಸಾಹಿತಿಗಳೂ ಆಗಿದ್ದ ಡಾ|| ಸಿದ್ಧಯ್ಯ ಪುರಾಣಿಕರು ಶ್ರೀಗಳ ಬಹುಶ್ರುತತ್ವ ಹಾಗೂ ಅವರ ನಿರೂಪಣಾ ಶೈಲಿಯನ್ನು ಹೀಗೆ ವರ್ಣಿಸಿದ್ದಾರೆ.

'ಈ ಉಪನ್ಯಾಸಗಳಲ್ಲಿ ಎಷ್ಟು ಆಕರಗಳಿಂದ ಸಾರೋಕ್ತಿಗಳು ಉದ್ಧೃತವಾಗಿವೆ! ವೇದಾಗಮೋಪನಿಷತ್ತುಗಳು, ಗೀತೆ, ಬುದ್ಧ-ಮಹಾವೀರ ಬೋಧಗಳು, ಶಿವ ಶರಣರು, ಹರಿದಾಸರು, ಸರ್ವಜ್ಞ, ಮಹಾಲಿಂಗರಂಗ, ಗಾಂಧಿ, ರವೀಂದ್ರ ಅರವಿಂದ, ವಿವೇಕಾನಂದ, ರಾಮಕೃಷ್ಣಪರಮಹಂಸ, ಶೇಕ್ಸ್‌ಪಿಯರ್, ಕುವೆಂಪು, ಬೇಂದ್ರೆ.... ಅವರು ವಿಚಾರ ಪ್ರಪಂಚದ ಎಲ್ಲ ಶಿಖರೋಪಮ ವ್ಯಕ್ತಿಗಳು. ದೃಷ್ಟಾಂತ ಕಥೆಗಳಂತೂ ತುಂಬರಮಣೀಯವಾದವುಗಳು, ಮೊದಲ ಸಲ ನನ್ನ ಕಣ್ಣಿಗೆ ಬಿದ್ದುವು. ಈ ಸಾರೋಕ್ತಿಗಳೂ, ದೃಷ್ಟಾಂತಕಥೆಗಳೂ, ವಿಷಯ ವಿವರಣೆಯ ಮೌಲಿಕತೆಯನ್ನೂ, ವ್ಯಂಜಕತೆಯನ್ನೂ, ರಂಜಕತೆಯನ್ನೂ ಹೆಚ್ಚಿಸಿವೆ. ಎಷ್ಟೋಕಡೆ ಅನಾಯಾಸವಾಗಿ ಬಂದಿರುವ ಸೂತ್ರಪ್ರಾಯ ವಾಕ್ಯಗಳಂತೂ ಗಾದೆಗಳಂತೆ ನೆನಪಿನ ಬೊಕ್ಕಸಕ್ಕೆ ಚೊಕ್ಕನಾಣ್ಯಗಳಾಗಿ ಸೇರಿಕೊಳ್ಳುತ್ತವೆ.'

'ಶ್ರೀಗಳವರ ನಿರೂಪಣಾ ಶೈಲಿಯೂ ಸುಮನೋಹರವಾದುದು. ಪೌರಾಣಿಕ ವಿಷಯಗಳನ್ನು ಪ್ರತಿಪಾದಿಸುವಾಗಲೂ ನಿಂತ ನೆಲಕ್ಕೆ ಹೊಂದಿಕೊಂಡೇ ಅರ್ಥೈಸುವ ಅವರ ಯುಗ ಪ್ರಜ್ಞೆ ಶ್ಲಾಘ್ಯವಾದುದು. ಶ್ರೀಗಳವರು ಬಳಸುವ ಭಾಷೆ ಸೀಯಾಳದಂತೆ ಹಿತ ಮಿತ ಪದಪ್ರಯೋಗ, ಸಲಿಗೆಯ ಸಂಭಾಷಣೆಯಂತಿರುವ ನಿರೂಪಣಾ ರೀತಿ, ಖಚಿತ ಜ್ಞಾನ ನೀಡುವ ಅಸಂದಿಗ್ಧತೆ, ಅಭಿಪ್ರಾಯಗಳ ಪ್ರಾಮಾಣಿಕತೆ, ಹೃದಯ ವಂತಿಕೆ ನೀಡುವ ಸ್ನಿಗ್ಧತೆ-ಇವುಗಳಿಂದ ಈ ಗ್ರಂಥ ಅಪ್ರಯತ್ನಿತವಾಗಿ ಓದಿಸಿಕೊಳ್ಳುತ್ತದೆ. ಓದಿಸಿಕೊಂಡು ನಮ್ಮ ಎದೆಯೊಳಕ್ಕೆ ಇಳಿಯುತ್ತದೆ. ಹೃದಯದಿಂದ ಬಂದುದು ಹೃದಯಕ್ಕೆ ಸಲ್ಲುತ್ತದೆ;

ಬುದ್ಧಿಯ ಗರಡಿಯ ಜಟಿಲ ಜಾಲ ಬಂಧಕ್ಕೆ ಸಿಲುಕಿ ಮುಲುಕಾಡುವುದಿಲ್ಲ.

ಈಗ ಶ್ರೀಗಳವರ ವಿಚಾರ ವೈವಿಧ್ಯಕ್ಕೆ ಕೆಲವು ಉದಾಹರಣೆಗಳು°

೧. ಮಠಗಳಿರುವುದು ಗುರುಗಳು ಆಡಂಬರದಿಂದ ಮೆರೆಯುವುದಕ್ಕಲ್ಲ. ವಿಚಾರ ಪ್ರಧಾನವಾದುದು, ಆಚಾರ ಅದಕ್ಕೆ ಪೋಷಕವಾದುದು. ನಮ್ಮ ಗುರುಗಳು ಇಷ್ಟು ಮಾಡಿದರು; ಅಷ್ಟು ಮಾಡಿದರು; ಆದ್ದರಿಂದ ನಾವು ಅವರನ್ನ ಸಂತೋಷಪಡಿಸುತ್ತೇವೆ. ಮೆರೆಸುತ್ತೇವೆ, ತೇರಿನಲ್ಲಿ ಅಥವಾ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಮೆರವಣಿಗೆ ಮಾಡುತ್ತೇವೆ ಎಂದು ಭಕ್ತರು ಹೊರಟಿದ್ದರಿಂದ ವಿಚಾರ ಹೊರಟು ಹೋಯಿತು. ಗುರುಗಳ ಆತ್ಮಶಕ್ತಿ ಹೊರಟುಹೋಯಿತು. ಅವರು ಆಡಂಬರಕ್ಕೆ ಯಾವಾಗ ಇಳಿದರೋ, ಆಚಾರಕ್ಕೆ ಅಂಟಿಕೊಂಡರೋ, ನಾಮ, ವಿಭೂತಿ ಮುಂತಾದ ಚಿನ್ಹೆಗಳನ್ನು ಧರಿಸಿಕೊಂಡ ಕೂಡಲೆ ತಾವು ಸರ್ವೋತ್ಕೃಷ್ಟರೆಂದು ತಿಳಿದರೊ, ಆಗ ವಿಚಾರ ಹೋಗಿ ಆಚಾರ ಉಳಿಯಿತು. ಅಕ್ಕಿಯನ್ನು ಹುಳುತಿಂದು ಹೊಟ್ಟು ಉಳಿದಂತಾಯಿತು.

೨. ಶೂದ್ರರು ಭಗವಂತನ ಪಾದಗಳಿಂದ ಜನಿಸಿದರು. ಕಾಲು ಇಡೀ ಶರೀರದ ಭಾರವನ್ನು ಹೊತ್ತಿರುವ ಹಾಗೆ ಶೂದ್ರರು ಜಗತ್ತಿನ ಭಾರವನ್ನು ಹೊತ್ತಿದ್ದಾರೆ. ಅವರಿಂದ ಜಗತ್ತು ಬದುಕಿದೆ, ಎಲ್ಲಾವರ್ಗದವರಿಗೂ ಶೂದ್ರರೇ ಆಧಾರ. ಆದ್ದರಿಂದ ಕಾಲಿನಿಂದ ಶೂದ್ರಹುಟ್ಟಿದನೆಂದು ಹೇಳುತ್ತಾರೆ. ಹೀಗೆ ವೇದದಲ್ಲಿ ಶೂದ್ರನಿಗೆ ಹೆಚ್ಚು ಬೆಲೆಯನ್ನು ಕೊಟ್ಟರು. ಇತರರಿಗಲ್ಲ. ಇಂದು ಅಮೆರಿಕದಲ್ಲಿ ಬೆಲೆ ಕೊಡುತ್ತಿರುವುದು ಸೇವೆಮಾಡುವವರಿಗೆ, ದುಡಿಯುವವರಿಗೆ, ಕೆಲಸಗಾರರಿಗೆ, ಆದ್ದರಿಂದ ಆ ದೇಶ ಸಮೃದ್ಧವಾಗಿದೆ. ಭಗವಂತನನ್ನು ಕುರಿತು 'ನಿನ್ನ ಪಾದಪೂಜೆ ಮಾಡುತ್ತೇನೆ' ಎಂದು ಹೇಳುತ್ತಾರೆ. 'ತಲೆ ಪೂಜೆಮಾಡುತ್ತೇನೆಂದು' ಯಾರೂ ಹೇಳಿಲ್ಲ. 'ದೇವರ ಪಾದೋದಕಕೊಡಿ, ಪಾದತೀರ್ಥಕೊಡಿ' ಎಂದು ಕೇಳುತ್ತಾರೆ. 'ತಲೆತೀರ್ಥಕೊಡಿ' ಎಂದು ಯಾರೂ ಕೇಳುವುದಿಲ್ಲ, ನಿನ್ನ ಪಾದವೇಗತಿಯಪ್ಪಾ! ಎಂದು ಪ್ರಾರ್ಥನೆ ಮಾಡುತ್ತಾರೆ. ನಿನ್ನ ತಲೆಯೇ ಗತಿಯೆಂದು ಯಾರೂ ಹೇಳುವುದಿಲ್ಲ. ಆದ್ದರಿಂದ ಎಲ್ಲಾ ಗೌರವ ಶೂದ್ರನಿಗೆ, ರೈತನಿಗೆ, ಕಾರ್ಮಿಕನಿಗೆ ಸಲ್ಲಬೇಕಾದುದು ನ್ಯಾಯ. 'ಅನ್ನದಾತಃ ಸುಖೀ ಭವ' ಅನ್ನವನ್ನು ಕೊಡುವವನೇ ನೀನು ಸುಖವಾಗಿರೆಂದು ಶೂದ್ರನನ್ನು ಸ್ಮರಿಸಿಕೊಂಡು ಊಟಮಾಡುತ್ತಿದ್ದರು. ನಿರಾಕಾರ ನಿರ್ಗುಣ ಬ್ರಹ್ಮನಿಗೆ ಅವಯವಗಳಿರುವುದು ಹೇಗೆ ಸಾಧ್ಯ? ಸಾಕಾರ ಸಗುಣ ಬ್ರಹ್ಮನನ್ನು ಒಪ್ಪಿಕೊಂಡರೂ ಅವನ ಒಂದು ಅವಯವ ಶ್ರೇಷ್ಠ ಮತ್ತೊಂದು ಅವಯಮ ಕನಿಷ್ಠವೆಂದು ಹೇಳಬಹುದೇ?

೩. ನಮ್ಮ ಶಾಸ್ತ್ರಗ್ರಂಥಗಳಲ್ಲಿ ಅನೇಕ ಉತ್ತಮ ವಿಚಾರಗಳಿವೆ. ಕಾಲ, ದೇಶ ಪರಿಸ್ಥಿತಿಗನುಗುಣವಾಗಿ ಅವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ವಿಮರ್ಶರಹಿತವಾದ ವಿಚಾರವನ್ನು ನಿರ್ಣಯವೆಂದು ಸ್ವೀಕರಿಸುವುದು ಸರಿಯಲ್ಲ. ಹಳೆಯ ವಿಚಾರ ಧಾರೆಯು

ಹೊಸ ವಿಚಾರಧಾರೆಗೆ ಬುನಾದಿಯಾಗಬೇಕು.'ಪುರಾಣಮಿತ್ಯೇವ ನಸಾಧು ಸರ್ವಂ ನ ಚಾಪಿಕಾವ್ಯಂ ನವಮಿತ್ಯವದ್ಯಂ' ಕಾಳಿದಾಸನು ಕಾವ್ಯದ ಬಗ್ಗೆ ಹೇಳಿರುವ ಈ ಮಾತು ಎಲ್ಲಾ ವಿಚಾರಗಳಿಗೂ, ಅನ್ವಯಿಸುತ್ತದೆ. ಹಳೆಯದೆಲ್ಲಾ ಉತ್ತಮವೆಂದಾಗಲೀ, ಹೊಸದೆಲ್ಲಾ ಅಧಮವೆಂದಾಗಲೀ ಪರಿಶೀಲಿಸದೆ ಹೇಳಬಾರದು. ನಮ್ಮ ವಿವೇಕದಿಂದ ಯುಕ್ತಾ ಯುಕ್ತವನ್ನು ನಿರ್ಣಯಿಸಬೇಕು. ಹಾಗೆ ತೀರ್ಮಾನಿಸುವಾಗ ಅಂಧಾಭಿಮಾನವಾಗಲೀ, ಪಕ್ಷಪಾತವಾಗಲೀ, ಪೂರ್ವಾಗ್ರಹವಾಗಲೀ ಇರಬಾರದು.

೪. ವಿಶ್ವಪ್ರಖ್ಯಾತವಾದ ನಮ್ಮ ಭಾರತೀಯಧರ್ಮದ ತಿರುಳು ಮನುಷ್ಯತ್ವ. **'ಮಾನವ ಜನ್ಮ ದೊಡ್ಡದೋ ಇದ ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ'** ಎಂದು ದಾಸರು ಎಚ್ಚರಿಸಿದ್ದಾರೆ. **'ಜಂತೂನಾಂ ನರಜನ್ಮ ದುರ್ಲಭಂ'** ಆದರೆ ನಾವು ಅದರ ಶ್ರೇಷ್ಠತೆಯನ್ನು ಅರ್ಥಮಾಡಿಕೊಂಡಿಲ್ಲ; ಅದನ್ನು ಹಾಳುಮಾಡಿಕೊಳ್ಳುತ್ತಿದ್ದೇವೆ.

೫. ಮಹತ್ವಪೂರಿತವೂ ಸುಂದರವೂ ಆದ ಪುಸ್ತಕವನ್ನು ಕೊಂಡು ಕೆಡದಂತೆ ಸಂರಕ್ಷಿಸಿ ಪ್ರದರ್ಶನಕ್ಕಿಟ್ಟರೆ ಸಾಲದು. ಓದಿ ಅದರಿಂದ ಜ್ಞಾನವನ್ನು ಪಡೆಯಬೇಕು. ಹೀಗೆಯೇ ದೇಹವನ್ನು ಚೆನ್ನಾಗಿ ನೋಡಿಕೊಂಡರೆ ಸಾಲದು. ಪುಣ್ಯ ಕಾರ್ಯಗಳನ್ನು ಮಾಡಬೇಕು.

೬. ನಶ್ಯ ಸೇವನೆ, ಧೂಮಪಾನ, ಮದ್ಯಪಾನ ಮುಂತಾದವು ಕೆಟ್ಟ ಚಟಗಳು. ಕೆಲವರು ಈ ಚಟಗಳನ್ನು ನಾಗರಿಕತೆಯ, ಶ್ರೀಮಂತಿಕೆಯ, ದೊಡ್ಡತನದ ಲಕ್ಷಣವೆಂದು ಭಾವಿಸುವುದುಂಟು. ಕೆಟ್ಟಪರಿಣಾಮವನ್ನುಂಟುಮಾಡುವ ಇವುಗಳಿಗೆ ಉತ್ತಮ ಸ್ಥಾನ ಕೊಡುವುದು ಅಸಮರ್ಥನೀಯ.

೭. ಭಾರತದಲ್ಲಿರುವ ಹಿಂದೂಗಳಲ್ಲಿ ಮಾತ್ರ ಜಾತೀಯತೆ ಇದೆಯೆಂದು ನಾವು ಭಾವಿಸಿದ್ದೆವು. ಇಲ್ಲಿ (ಅಮೆರಿಕೆಯಲ್ಲಿ) ನೋಡಿದರೆ ನೀವೂ ಬ್ರಾಹ್ಮಣ. ಲಿಂಗಾಯತ, ಒಕ್ಕಲಿಗ, ಹರಿಜನ ಮುಂತಾದ ಜಾತೀಯತೆಯನ್ನೇ ಮುಂದುವರಿಸಿಕೊಂಡು ಬಾಳುತ್ತಿದ್ದೀರಿ. ಜಾತೀಯತೆ ಭಾರತೀಯರ ಸಂಘಟನೆಗೆ, ಸರ್ವೋದಯಕ್ಕೆ ದೇಶದ ಭದ್ರತೆಗೆ ಮಾರಕವಾಗಿದೆ.

೮. ಅಸಂಘಟನೆಗೆ ಕಾರಣವಾದ ಜಾತೀಯತೆ, ಭಾಷಾದುರಭಿಮಾನ ಮತ್ತು ಗಡಿವಿವಾದವೆಂಬ ಮೂವರು ಪ್ರಬಲ ಶತ್ರುಗಳು ನಮ್ಮಲ್ಲಿದ್ದಾರೆ.

೯. ಪೂರ್ವಕಾಲದಲ್ಲಿ ವೈಕುಂಠಕ್ಕೆ ಹೋಗಿದ್ದರು, ಕೈಲಾಸಕ್ಕೆ ಹೋಗಿದ್ದರೆಂದು ಹೇಳಿದರೆ ಅವರು ಪರಮಾತ್ಮನ ಸನ್ನಿಧಿ ಪಡೆದವರೆಂದು ಸಂತೋಷಪಡುತ್ತಿದ್ದರು. ವಿದೇಶಕ್ಕೆ ಹೋದವರ ವಿಷಯದಲ್ಲಿಯೂ ಸುಮಾರು ಇದೇ ಭಾವನೆ ಇದ್ದಿತು. ಇಲ್ಲಿ(ಅಮೆರಿಕೆಗೆ) ಬಂದು ನೋಡಿದರೆ ಕಾಣಿಸುವುದು ವೈಕುಂಠ, ಕೈಲಾಸಗಳ ವಿಪರ್ಯಾಸ.

೧೦. ನಮ್ಮ ಮಠ ಮಂದಿರಗಳಿರುವುದು ನಮ್ಮನ್ನು ವಿಚ್ಛಿದ್ರಗೊಳಿಸುವದಕ್ಕಲ್ಲ.

ನಮ್ಮನ್ನು ಸಂಘಟಿತರನ್ನಾಗಿ ಮಾಡುವುದಕ್ಕೆ.

೧೧. ಜೀವನದ ಮೂಲ ಉದ್ದೇಶವನ್ನು ನಾವು ತಿಳಿದುಕೊಳ್ಳಬೇಕು. ಭಗವಂತ ಕೊಟ್ಟಿರುವುದನ್ನೆಲ್ಲಾ ಹೊಟ್ಟೆಗೆ ಖರ್ಚು ಮಾಡಿದರೆ ಹೇಗೆ? ಹೊಟ್ಟೆಯ ಯೋಗ್ಯತೆ ವೈದ್ಯರಿಗೆ ಗೊತ್ತು. ಹಣ್ಣನ್ನು ರೆಫ್ರಿಜ್ಜಿರೇಟರಿನಲ್ಲಿಟ್ಟರೆ ಒಂದುವಾರ ಅಥವಾ ಒಂದು ತಿಂಗಳು ಕೆಡದೆ ಇರುತ್ತದೆ. ಅದನ್ನೆ ಹೊಟ್ಟೆಯಲ್ಲಿಟ್ಟರೆ ಒಂದೆರಡು ಗಂಟೆಗಳಲ್ಲಿ ಕೆಟ್ಟು ಹೋಗುತ್ತದೆ. ಹೊಟ್ಟೆಯು ರೋಗಗಳಿಗೆ ಆಗರ, ನಾವು ಅದನ್ನೇ ಬಹಳ ಪೂಜೆ ಮಾಡುತ್ತೇವೆ. ಬೆಳಿಗ್ಗೆ ಎದ್ದು ಅದರ ಸೇವೆ ಮಾಡುವುದನ್ನು ಕಲಿತರೆ, ಆ ಹೃದಯವನ್ನು ತುಂಬುವ ವಿಧಾನವನ್ನು ತಿಳಿದರೆ ಪರಮಾತ್ಮನ ನಾಮಾವಳಿಯನ್ನು ಅದರಲ್ಲಿ ತುಂಬಿದರೆ, ಅದರ ಬಾಗಿಲನ್ನು ತೆರೆದು ಪ್ರೀತಿಯಿಂದ, ಆನಂದದಿಂದ, ಅನ್ಯೋನ್ಯತೆಯಿಂದ ಬಾಳುವುದನ್ನು ಕಲಿತರೆ ನೆಮ್ಮದಿ ದೊರೆಯುತ್ತದೆ. ಹೃದಯ ಬರಡಾದರೆ ಜಗತ್ತಿನಲ್ಲಿ ಎಲ್ಲಿಗೆ ಹೋದರೂ ನಮಗೆ ಸುಖವಾಗಲೀ ನೆಮ್ಮದಿಯಾಗಲೀ ಸಿಕ್ಕುವುದಿಲ್ಲ.

೧೨. ಅಧಿಕಾರಿಗಳು ಭ್ರಷ್ಟರಾದರೆ ಇಡೀ ದೇಶವೇ ಹಾಳಾಗುತ್ತದೆ. ಧರ್ಮ, ನೀತಿ, ಇತ್ಯಾದಿ ಸದ್ಗುಣಗಳು ಮಾಯವಾಗುತ್ತವೆ.

೧೩. ತನಗೂ ಲೋಕಕ್ಕೂ ಹಿತವಾಗುವಂತೆ ನಡೆದುಕೊಳ್ಳುವುದೇ ಧರ್ಮ.

೧೪. ಈಗ ನಂಬಿಕೆಗೆ ಲೋಪ ಬಂದಿರುವುದರಿಂದಲೇ ಭಯಂಕರ ಅಸ್ತ್ರಗಳ ನಿರ್ಮಾಣದ ಪೈಪೋಟಿ ನಿರಂತರ ಸಾಗಿದೆ.

೧೫. ನಾವು ಹೋದ ಕಡೆಯಲ್ಲೆಲ್ಲಾ ಕನ್ನಡಿಗರು ತಮ್ಮ 'ಮಗುವಿಗೆ ಕನ್ನಡ ಮಾತನಾಡುವುದಕ್ಕೆ ಬರುವುದಿಲ್ಲ. ತಕ್ಕಮಟ್ಟಿಗೆ ಕನ್ನಡವನ್ನು ಅರ್ಥಮಾಡಿಕೊಳ್ಳುತ್ತದೆಂದು' ಹೇಳುತ್ತಾರೆ. ಇಂಗ್ಲಿಷಿನ ವ್ಯಾಮೋಹಕ್ಕೆ ಬಲಿಯಾಗಿ ಮನೆಯಲ್ಲಿಯೂ ಕನ್ನಡವನ್ನು ಬಳಸದಿರುವುದರಿಂದ ಈ ದಾರುಣ ಪರಿಸ್ಥಿತಿ ಸಂಭವಿಸಿದೆ.

೧೬. ಮೊನ್ನೆ ಒಂದು ಕನ್ನಡ ಸಮ್ಮೇಳನಕ್ಕೆ ಹೋಗಿದ್ದೆವು (ಅಮೆರಿಕೆಯಲ್ಲಿ). ಅಲ್ಲಿಗೆ ಹೋದಾಗ, ತಾವು ಸುಮಾರು ವರ್ಷಗಳಿಂದ ಕನ್ನಡ ಸಮ್ಮೇಳನ ನಡೆಸುತ್ತಿದ್ದೇವೆ. ಆದರೆ ಕನ್ನಡದಲ್ಲಿ ಮಾತುಗಳನ್ನು ಕೇಳುತ್ತಿರುವುದು ಇದೇ ಮೊದಲೆಂದು ಅಲ್ಲಿದ್ದವರು ಹೇಳಿದರು. ಅದು ಹೆಸರಿಗೆ ಕನ್ನಡ ಸಮ್ಮೇಳನ. ಮಾತನಾಡುವುದು ಇಂಗ್ಲಿಷಿನಲ್ಲಿಯೇ.

೧೭. ಈ ವೈಜ್ಞಾನಿಕ ಯುಗದಲ್ಲಿ ಪ್ರತಿಯೊಂದು ಆಚರಣೆಯೂ ಅರ್ಥವತ್ತಾಗಿರಬೇಕು. ಮೌಢ್ಯದ ಆಗರವಾಗಬಾರದು.

೧೮. ನಮ್ಮ ತಾಯಂದಿರು ಹಿಂದೆ ಮಗು ಹೊಟ್ಟೆಯಲ್ಲಿ ಬೆಳೆಯುತ್ತಿರುವಾಗಲೇ ಯಾವುದಾದರೂ ಒಳ್ಳೆಯ ಕಥೆಯನ್ನು ಕೇಳುತ್ತಿದ್ದರು. ತಾಯಿಯ ಮನೋಭಾವ ಮಗುವಿನಲ್ಲಿ ಪ್ರತಿಬಿಂಬಿಸುತ್ತದೆ. ರಾಮಕೃಷ್ಣರ, ಧರ್ಮಗುರುಗಳ, ದೇಶಪ್ರೇಮಿಗಳ

ಕಥೆಗಳನ್ನು ಮಗುವಿಗೆ ಹೇಳುತ್ತಿದ್ದರೆ ಆ ಮಗುವಿನ ಬುದ್ಧಿಯು ಸತ್ತ್ವಸಂಪನ್ನವೂ ಉತ್ತಮವೂ ಆಗಿ ರೂಪುಗೊಳ್ಳುತ್ತದೆ.

೧೯. ವಿಶ್ವದ ಜನರೆಲ್ಲರೂ ಸತ್ಯಾವಲಂಬಿಗಳಾದರೆ, ತಮ್ಮೆಲ್ಲರ ಕುಲ ಮಾನವ ಕುಲವೆಂದು ತಿಳಿದರೆ, ಸಹಬಾಳ್ವೆಯನ್ನು ಸ್ವಾಗತಿಸಿದರೆ ಆಗ ಎಲ್ಲರಿಗೂ ಜೀವನದಲ್ಲಿ ನೆಮ್ಮದಿ ದೊರೆಯುತ್ತದೆ, ಸುಖ ಸಿಕ್ಕುತ್ತದೆ.

೨೦. ಆಶಾದಾಸರಾಗಿ ಲೌಕಿಕ ಭೋಗದ ಹಾದಿಯನ್ನೆ ತುಳಿದರೆ ಸುಖದ ವೇಷದಲ್ಲಿರುವ ಅಸುಖವನ್ನು ಅನುಭವಿಸಬೇಕಾಗುತ್ತದೆ. ಮೃಗಮರೀಚಿಕೆ ಎಂದೂ ನೀರಾಗಲಾರದು. ಹೆಡೆ ಬಿಚ್ಚಿದ ಸರ್ಪವನ್ನು ಸುಂದರವಾಗಿದೆಯೆಂದು ಸಮೀಪಿಸಬಹುದೇ?

೨೧. ಹಿಂದೂಗಳನ್ನು ಮೂರ್ತಿಪೂಜಕರೆಂದು ಹೇಳುತ್ತಾರೆ. 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಮಾತಿನಿಂದಲೇ ನಮ್ಮ ಅಧ್ಯಾತ್ಮಚಿಂತನೆಯು ಪ್ರಾರಂಭವಾಗುತ್ತದೆ. ಚರ್ಚ್ ಮತ್ತು ಮಸೀದಿಗಳಲ್ಲಿ ಮೂರ್ತಿಗಳಿಲ್ಲದಿದ್ದರೂ ಆ ಮಂದಿರಗಳೇ ಮೂರ್ತಿ ಪ್ರತೀಕಗಳಾಗಿವೆ. ಕೆಲವು ಚರ್ಚುಗಳಲ್ಲಿ ಏಸುವಿನ ಮೂರ್ತಿಯೂ ಇರುತ್ತದೆ. ಕೈಮರವು ಇಷ್ಟವಾದ ದಾರಿಯನ್ನು ತೋರಿಸುವಂತೆ ಮೂರ್ತಿಯು ಭಗವಂತನನ್ನು ಮುಟ್ಟುವದಾರಿಯನ್ನು ತೋರಿಸುತ್ತದೆ. ಆತ್ಮಸಾಧನೆಗೆ ಸಹಾಯಕವಾದ ಮೂರ್ತಿ ಪೂಜೆಯನ್ನು ನಿರಾಕರಿಸಬೇಕಿಲ್ಲ.

೨೨. ಅಮೆರಿಕವು ಸಂಪತ್ತಿನಿಂದ ಸಮೃದ್ಧವಾದ ದೇಶ. ಸಾಹಸಿಗಳಾದ ಅಲ್ಲಿನ ಜನರಲ್ಲಿ ದುಡಿಯುವ ಸ್ವಭಾವವಿದೆ. ಆ ದೇಶದಲ್ಲಿ ಸೋಮಾರಿತನಕ್ಕೆ ಸ್ಥಳವೇ ಇಲ್ಲವೆನ್ನಬಹುದು. ವಿದ್ಯಾರ್ಥಿಗಳೂ ತಮ್ಮ ರಜದ ದಿನಗಳಲ್ಲಿ ಕಾರ್ಖಾನೆಗಳಲ್ಲೋ, ಉಪಹಾರಮಂದಿರಗಳಲ್ಲೋ ಎಲ್ಲಾದರೊಂದುಕಡೆ ಕೆಲಸಕ್ಕೆ ಸೇರಿಕೊಂಡು ಹಣವನ್ನು ಸಂಪಾದಿಸುತ್ತಾರೆ. ಕಾಯಕವೇ ಕೈಲಾಸವೆಂದು ನಾವು ಮಾತನಾಡುತ್ತೇವೆ.'ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ' 'ಉದ್ಯೋಗಂ ಪುರುಷಲಕ್ಷಣಂ' ಎಂದು ವೇದಿಕೆಗಳ ಮೇಲೆ ಘೋಷಿಸುತ್ತೇವೆ. 'ಆರಾಮ್ ಹರಾಮ್ ಹೈ' ಎಂದು ನಮ್ಮ ದೇಶದ ನಾಯಕರು ಸಾರುತ್ತಾರೆ. ಆದರೆ ನಾವು ಮಾತಿನಲ್ಲಿಯೇ ಉಳಿದಿದ್ದೇವೆ. ಅಮೆರಿಕನ್ನರು ಅದನ್ನು ಕಾರ್ಯರೂಪಕ್ಕೆ ತಂದುಕೊಂಡಿದ್ದಾರೆ.

೨೩. ನಮ್ಮಲ್ಲಿ ಹೆಸರಿಗೆ ಮಡಿ ಮೈಲಿಗೆ ಇದೆ. ಶುಚಿತ್ವ ಬಹಳ ಕಡಮೆ. ಪ್ರಾಮಾಣಿಕತೆಯನ್ನು ನಾವು ಅವರಿಂದ ಕಲಿಯಬೇಕಾಗಿದೆ.

೨೪. ಸಾಂಸ್ಕೃತಿಕವಾಗಿ ಅಮೆರಿಕ ಭಾರತವಾಗಿಯೂ ಭಾರತ ಅಮೆರಿಕವಾಗಿಯೂ ಪರಿವರ್ತನೆಗೊಳ್ಳುತ್ತಿರುವಂತೆ ಭಾಸವಾಗುತ್ತದೆ. ಇನ್ನು ಮುಂದೆ ಅಮೆರಿಕ ಇಂಡಿಯಾ ಆಗಬಹುದು. ಆದರೆ (ಅಭಿವೃದ್ಧಿಯಲ್ಲಿ) ಭಾರತ ಅಮೆರಿಕವಾಗುವುದು ಸುಲಭವಲ್ಲ.

೨೫. ಭಾರತದಲ್ಲಿ ಹುಟ್ಟಿ, ಬೆಳೆದು, ಓದಿ ಪ್ರತಿಭಾವಂತರಾಗಿ ವಿದೇಶಕ್ಕೆ ಬಂದು ನೆಲೆಸಿ ಸೇವೆ ಸಲ್ಲಿಸುತ್ತಿರುವುದನ್ನು ಕಂಡು ಮನಸ್ಸಿಗೆ ಸ್ವಲ್ಪ ಕಸಿವಿಸಿಯಾಯಿತು. ಈ ಪ್ರತಿಭಾ ಪಲಾಯನದಿಂದ ಭಾರತಕ್ಕೆ ಸಾಕಷ್ಟು ನಷ್ಟವಾಗಿದೆ. ಇನ್ನು ಮುಂದಾದರೂ ಭಾರತ ಬೇಗ ಎಚ್ಚರಗೊಳ್ಳುವುದು ಒಳ್ಳೆಯದು.

೨೬. ವ್ಯಕ್ತಿಯ ದೃಷ್ಟಿಯಿಂದ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸ ಶಿಕ್ಷಣದ ಗುರಿ. ರಾಷ್ಟ್ರದ ದೃಷ್ಟಿಯಿಂದ ನವಭಾರತದ ನಿರ್ಮಾಣದಲ್ಲಿ ಪಾಲ್ಗೊಳ್ಳಲು ವ್ಯಕ್ತಿಗಳನ್ನು ಸಜ್ಜುಗೊಳಿಸುವುದು ಶಿಕ್ಷಣದ ಗುರಿ. ಪ್ರಜಾಸತ್ತಾತ್ಮಕ, ಜಾತ್ಯತೀತವಾದ, ಅಸಮಾನತೆ-ಶೋಷಣೆಗಳಿಂದ ಮುಕ್ತವಾದ, ಸ್ವಾರ್ಥ ಸಂಕುಚಿತ ಭಾವನೆಗಳನ್ನು ನೀಗಿಕೊಂಡ, ಆರ್ಥಿಕವಾಗಿ ಪ್ರಬಲ ಸ್ವತಂತ್ರ ರಾಷ್ಟ್ರವನ್ನು ನಿರ್ಮಿಸುವುದು ಗುರಿಯಾಗಬೇಕು. ವ್ಯಕ್ತಿಯ ಪ್ರತಿಭೆಯ ಪರಮಾವಧಿ ಪ್ರಯೋಜನ ರಾಷ್ಟ್ರಕ್ಕೆ ಮೀಸಲಾಗಬೇಕು.

ಹೀಗೆ ಶ್ರೀಗಳವರ ವಿಚಾರಧಾರೆ ಸಹಸ್ರಮುಖಿಯಾಗಿ, ಹೊಸ ಹೊಸ ದಿಗಂತಗಳತ್ತ ಅವ್ಯಾಹತವಾಗಿ ಮೇಲಿನ 'ಜೀವನದರ್ಶನ' ಕೃತಿಯಲ್ಲಿ ಸಾಗಿ ಸಾರ್ಥಕವಾಗಿದೆ. ಪ್ರತಿಯೊಂದು ವಾಕ್ಯವೂ ಒಂದೊಂದು ಅಣಿಮುತ್ತು. ಮುನ್ನುಡಿಯ 'ಕಾಣಿಕೆ'ಯನ್ನು ಅರ್ಪಿಸಿರುವ ಡಾ|| ಸಿದ್ಧಯ್ಯ ಪುರಾಣಿಕರು ಹೇಳುವಂತೆ 'ಇವೆಲ್ಲವೂ ನುಡಿಮುತ್ತುಗಳು. ಆಯ್ದು ಸರಮಾಡಿ ಧರಿಸಿಕೊಳ್ಳಲು ಓದುಗರೆಲ್ಲರಿಗೆ ಆಹ್ವಾನ' ಹೀಗೆಯೇ ಶ್ರೀಗಳು ದೇವಾಲಯಗಳ, ಮಠಮಂದಿರಗಳ, ಸದುಪಯೋಗ-ದುರುಪಯೋಗ, ದೇವತಾ ಮೂರ್ತಿಗಳ ದುರುಪಯೋಗ, ಭಾಷಾಂಧತೆ, ಪ್ರಾಂತೀಯ ಭಾವನೆ, ದೀನದಲಿತರ ಬಗ್ಗೆ ಸಮಾಜದ ಸೂಕ್ತನಡವಳಿಕೆ, ವರ್ಗಸಂಘರ್ಷ, ಸ್ವಜನ ಪಕ್ಷಪಾತ, ವ್ಯಾಪಕಲಂಚ, ಅವೈಚಾರಿಕತೆ, ದಾರಿದ್ರ್ಯ, ಸರ್ವೋದಯ, ಸಮಷ್ಟಿಭಾವನೆ, ರಾಜಕೀಯ ಭ್ರಷ್ಟಾಚಾರ ಇತ್ಯಾದಿ ನೂರಾರು ವಿಷಯಗಳತ್ತ ಲೋಕದ ಗಮನ ಸೆಳೆದಿದ್ದಾರೆ.

ಇದೆಲ್ಲವೂ ಸಹ ಆಳವಾದ ಅಧ್ಯಯನ, ಶ್ರವಣ, ಮನನ, ಧ್ಯಾನ ಇವುಗಳ ಹಿಂದಿರತಕ್ಕ'ದ್ರಷ್ಟಾರ' ಶಕ್ತಿಯಿಂದ ಹೊಮ್ಮಿಬರುವ ಪ್ರತಿಭಾ ಉನ್ಮೇಷ ರಶ್ಮಿಗಳು' ದೈವದತ್ತವಾದ'ಋಷಿ-ಕವಿತ್ವ' ತನ್ನ ಹೃದಯ-ಕುಲುಮೆಯಲ್ಲೇ ನಾನಾ 'ಪ್ರತಿಮೆ' ಗಳನ್ನು ಸೃಜಿಸಿ ಲೋಕದ ಕಣ್ಮನಗಳನ್ನು ತಣಿಸಬಲ್ಲುದು.

ಕುಲಾಧಿಪತಿ: ಇಂತಹ ಅದ್ವಿತೀಯ ಪ್ರತಿಭೆಯ ಆಚಾರ್ಯಶಕ್ತಿ ಸಮುಚಿತವಾಗಿಯೇ ವಿದ್ಯಾಪ್ರಸಾರ-ತನ್ಮೂಲಕ ಭಾರತೀಯ ಸಂಸ್ಕೃತಿಯ ನಾನಾ ಮುಖಗಳಾದ ದಾರ್ಶನಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಪಾರಿಭಾಷಿಕ ಶಿಕ್ಷಣಕ್ಕಾಗಿ ಈ ಮೊದಲು ಹೇಳಿದಂತೆ ಇಂದು ಅರವತ್ತಕ್ಕೂ ಮಿಕ್ಕು ಸಂಘಸಂಸ್ಥೆಗಳನ್ನು ಯೋಚಿಸಿ, ಯೋಜಿಸಿ ನಡೆಸುತ್ತಿದೆ. ಇಂದು ಸುಮಾರು ಇಪ್ಪತ್ತೈದು ಸಹಸ್ರ ವಿದ್ಯಾರ್ಥಿಗಳು ಶಿಶುವಿಹಾರಗಳಿಂದ ಹಿಡಿದು ಸ್ನಾತಕೋತ್ತರ ಮಟ್ಟದವರೆಗೆ ಶಿಕ್ಷಣ ಪಡೆಯುತ್ತಿದ್ದಾರೆ. ಪ್ರಾಚೀನ ಭಾರತದಲ್ಲಿ ಹತ್ತು

ಸಹಸ್ರ ವಿದ್ಯಾರ್ಥಿಗಳಿಗೆ ಜ್ಞಾನದಾಸೋಹಕ್ಕೆ ಏರ್ಪಾಟು ಮಾಡಿದ ಆಚಾರ್ಯರು ಕುಲಪತಿಗಳೆನ್ನಿಸುತ್ತಿದ್ದರು. ಇಂದು ಆದಿಚುಂಚನಗಿರಿಯ ಶ್ರೀಗಳು ಆ ಹಂತವನ್ನು ಮೆಟ್ಟಿ ಮೇಲೇರಿ ನವೀನಕುಲಾಧಿಪತಿಗಳಾಗಿದ್ದಾರೆ.

ಸರ್ವೋದಯ ಪೀಠ: ಇಂದು ಆದಿಚುಂಚನಗಿರಿಯ ಕ್ಷೇತ್ರ 'ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು' ಎಂಬ ಶ್ರೀ ಕುವೆಂಪು ಕವಿವಾಣಿಯಂತೆ ಸರ್ವೋದಯ ಪೀಠವಾಗಿದೆ. ಇಲ್ಲಿ ವಿದ್ಯೆಗೆ, ದೈವಪೀಠದ ಪೂಜೆಗೆ, ಅನ್ನದಾನದ ಪಂಕ್ತಿಗೆ ಬೇಧವಿಲ್ಲ. ಮೂವತ್ತಕ್ಕೂ ಮೀರಿದ ನಾನಾ ಜಾತಿ, ಪಂಗಡ, ವರ್ಗಗಳ ಮಕ್ಕಳು ಇಲ್ಲಿ ಅಶನ, ವಸತಿ, ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಮಠವನ್ನು ಕರ್ನಾಟಕದ ಅದಕ್ಕೂ ಆಚೆಗಿನ ಮನೆ-ಮನೆಗಳ, ಬಾಗಿಲಿಗೆ ಕೊಂಡೊಯ್ದು ಅದರ ವ್ಯಾಪ್ತಿಯನ್ನು ಶ್ರೀಸಾಮಾನ್ಯವಲಯಕ್ಕೆ ಮುಟ್ಟಿಸಿದ ಭಗೀರಥ-ಕೀರ್ತಿ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಗಳದು. ಮತ್ತಾವ ಮಠವೂ ಹೊರದಿದ್ದಂತಹ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ, ಮಕ್ಕಳ ಸಮ್ಮೇಳನ, ಸಂಸ್ಕೃತ ಸಮ್ಮೇಳನಗಳು, ಕ್ರೀಡಾಕೂಟಗಳ ಬೃಹದ್ಭಾರವನ್ನು ಈ ಕ್ಷೇತ್ರವು ಲೀಲಾಜಾಲವಾಗಿ ಎತ್ತಿ ಮೆರೆದಿದೆ-ಮೆರೆಯಲಿದೆ. ಶ್ರೀ ಕುವೆಂಪು ಅವರ ಮಾತುಗಳಲ್ಲಿ 'ಶ್ರೀ ಆದಿಚುಂಚನಗಿರಿ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಗಳಿಗೆ' ಆ ಮತದ ಈ ಮತದ ಸಹವಾಸ ಸಾಕಿನ್ನು ಸೇರಿರೈ ಮನುಜಮತಕೆ' ಎನ್ನುವ ಮಾತು ಪೂರ್ಣ ಅನ್ವಯವಾಗುತ್ತದೆ. ಜಾತಿ, ಮತ, ಪಂಥಗಳ ಮೇಲುಕೀಳೆಂಬ ಭಾವನೆಯಿಂದ ಹೋರಾಡುತ್ತಿರುವ ಸಂಪ್ರದಾಯವಾದಿಗಳಿಗೆ ಮಾರ್ಗದರ್ಶಿಗಳಾಗಿ ಶ್ರೀಗಳವರು ವಿಶ್ವಮಾನವ ತತ್ವಗಳನ್ನು ಸಾರುತ್ತಿದ್ದಾರೆ. ಸಮಾನತೆ, ಸರ್ವೋದಯಗಳಿಗಾಗಿ ಶ್ರಮಿಸುತ್ತಿರುವ ಶ್ರೀ ಆದಿಚುಂಚನಗಿರಿ ಶ್ರೀಗಳವರು ಸರ್ವೋತ್ಕೃಷ್ಟ ಸ್ವಾಮಿಗಳು'.

ದೇವಕುಸುಮ: 'ಪ್ರಕ್ಷುಬ್ಧ ಸಾಗರದಲ್ಲಿಯೂ ಅಲ್ಲೊಂದು ಇಲ್ಲೊಂದು ಶಾಂತಿ ದ್ವೀಪಗಳಂತೆ, ಮರುಭೂಮಿಯಲ್ಲಿಯೂ ಅಲ್ಲಲ್ಲಿ ಓಯಸಿಸ್ ಇರುವಂತೆ, ನಾರು ಬೇರಿನ ಕುಟಿಲ ಕುಹಕದ ಕಪಟಯೋಗಿಗಳ ಗೊಂದಲದಲ್ಲಿಯೂ ನಿಜವಾದ ಆತ್ಮಶ್ರೀ ಶೋಭಿತ ಸತ್ಯ ಶುದ್ಧ ಸಂನ್ಯಾಸಿಗಳು, ವಿರಾಗ ಪ್ರಭುಗಳು, ಜ್ಞಾನಪ್ರಭುಗಳು ಇರುತ್ತಾರೆ. ಆ ವಿರಳ ಅಧ್ಯಾತ್ಮ ಜ್ಯೋತಿಗಳಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಈಗಿನ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರ ಮಹಾಸ್ವಾಮಿಗಳೂ ಒಬ್ಬರು'

'ತಮ್ಮ ಘೋಷಿತ ಆದರ್ಶಕ್ಕೆ ತಕ್ಕಂತೆ ಅವರು ನಡೆದೂ ನಡೆಯುತ್ತಲೂ ಇದ್ದಾರೆಂಬುದಕ್ಕೆ ಆದಿಚುಂಚನಗಿರಿ ಕ್ಷೇತ್ರವೊಂದೇ ಅಲ್ಲ. ಅವರ ಅಚಲ ಆತ್ಮಶಕ್ತಿ, ಅದ್ಭುತ ಕ್ರತುಶಕ್ತಿಗಳ ದ್ಯೋತಕವಾಗಿ ಅನೇಕ ಸ್ಥಳಗಳಲ್ಲಿ ಎದ್ದು ನಿಂತಿರುವ, ವಿದ್ಯಾದಾನ, ಅನ್ನದಾನ, ಭೈಷಜ್ಯದಾನ, ಅನಾಥ ಮಹಿಳಾಶ್ರಯದಾನ, ವೃದ್ಧಸೇವಾಧಾಮ ಇತ್ಯಾದಿಗಳ ಕಾರ್ಯಕೇಂದ್ರಗಳೂ ಸಾಕ್ಷಿ. ಸಾಂಸ್ಕೃತಿಕ ಚಟುವಟಿಕೆಗಳೂ ಶ್ರೀಗಳವರ ಅನುಗ್ರಹದೃಷ್ಟಿಗೆ

ಬೀಳದಿಲ್ಲ. ಶ್ರೀಗಳವರ ಪ್ರಥಮ ದರ್ಶನ ನನಗಾದದಿನವೇ ನಾನು ಉದ್ಗರಿಸಿದ್ದೆ-ಕನ್ನಡನಾಡಿನ ಕ್ಷಿತಿಜದಮೇಲೆ ಹೊಸ ಜ್ಯೋತಿರ್ಲೋಕವೊಂದು ಮೂಡಿದೆಯೆಂದು. ಇಂದು ಶ್ರೀಗಳವರು ಮಾಡಿಯೂ ಮಾಡುತ್ತಲೂ ಇರುವ ಮಹತ್ಕಾರ್ಯಗಳನ್ನು ನೆನೆದಾಗ ನನ್ನ ಈ ಉದ್ಗಾರ ಸಾರ್ಥಕವಾದುದೆಂದು ನನಗನ್ನಿಸಿದೆ'. ಇದು ಶ್ರೀಗಳ 'ಜೀವನದರ್ಶನ' ಕೃತಿಗೆ'ತೊದಲ್ನುಡಿ' ಬರೆದಿರುವ ಡಾ॥ ಸಿದ್ಧಯ್ಯ ಪುರಾಣಿಕರ ನುಡಿಕಾಣಿಕೆ.

'ದಯಾಮಯರಾದ ಇವರು ದೀನ ದಲಿತರ ಬಾಳಿನ ಗೋಳನ್ನು ನಿವಾರಿಸಲು ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ. ಅಯಸ್ಕಾಂತದಂತೆ ಎಲ್ಲರನ್ನೂ ತನ್ನಡೆಗೆ ಅಕರ್ಷಿಸುವ ಸಾಮರ್ಥ್ಯ ಇವರಲ್ಲಿದೆ. ಇವರ ಔದಾರ್ಯ, ಅನುಕಂಪ, ಮಂದಹಾಸ, ಸಹನೆ ನಿಷ್ಕಾಮಕರ್ಮಗಳು ಲೋಕ ವಿದಿತ. ರಾಷ್ಟ್ರಕವಿ ಕುವೆಂಪುರವರು ಶ್ರೀಗಳವರ ಒಂದು ಉಪನ್ಯಾಸಪುಸ್ತಿಕೆಗೆ 'ಸೇವೆಯೇಪೂಜೆ' ಎಂಬ ಶಿರೋನಾಮೆಯನ್ನು ಕೊಟ್ಟಿದ್ದಾರೆ. (ಜೀವನದರ್ಶನ ಕೃತಿ ಸಂಪಾದಕರು ಪ್ರಾಧ್ಯಾಪಕ, ವಿದ್ವಾನ್, ಹೆಚ್.ಕೆ.ಸಿದ್ಧಗಂಗಯ್ಯನವರು).

ದೇಶದ ಹಿತಕ್ಕಾಗಿ, ರಾಷ್ಟ್ರೋನ್ನತಿಗಾಗಿ ಸಮಾಜ ಕಲ್ಯಾಣಕ್ಕಾಗಿ ಕೆಲಸ ಮಾಡಲು ನಿಂತ ಸ್ವಾಮಿಗಳು ನಮ್ಮಲ್ಲಿ ಇಲ್ಲದಿಲ್ಲ; ಇದ್ದಾರೆ, ಆದರದು ನಿಷ್ಕಾಮಕರ್ಮವಲ್ಲ, ನಿಸ್ವಾರ್ಥಸೇವೆಯೂ ಅಲ್ಲ. ಯಾವುದೋ ರಾಜಕಾರಣದ ಮರೆಯಲ್ಲೇ ಅವರೆಲ್ಲರ ಭೂತನೃತ್ಯ ನಡೆಯುತ್ತಿರುತ್ತದೆ. ಯಾವುದೋ ರಾಜಕಾರಣದ ಗುರಿಯನ್ನಿಟ್ಟುಕೊಂಡು ಒಮ್ಮೊಮ್ಮೆ ಕೆಲಕೆಲವು ಜನ ಸ್ವಾಮಿಗಳು, ಸನ್ಯಾಸಿಗಳು ಸಮಾಜಸೇವೆ, ವಿದ್ಯಾಪ್ರಚಾರವೆಂದು ಕೆಲಸಮಾಡಿದರೂ ಅದು ಭೂತ ಚೇಷ್ಟೆಯ ನಗ್ನ ನೃತ್ಯವೇ. ಆದರೆ ನಮ್ಮಲ್ಲಿ ಎಲ್ಲರೂ ಇಂತಹವರೇ ಎಂದು ಖಂಡಿತವಾಗಿ ಹೇಳಲಾರೆ ಇವುಗಳನ್ನೆಲ್ಲಾ ತುಳಿದು ನಿಂತ ಧೀರ ಸನ್ಯಾಸಿಗಳೂ ನಮ್ಮಲ್ಲಿದ್ದಾರೆ. ಅಂತಹವರಲ್ಲಿ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳೊಬ್ಬರು.

'ಆದಿ ಚುಂಚನಗಿರಿಯ ಸಿದ್ಧರ ಬೆಟ್ಟದ ನಿಸರ್ಗ ಸೌಂದರ್ಯದ ಮಡಿಲಲ್ಲಿ ಬೆಳೆದರಳುತ್ತಿರುವ ಈ ದೇವಕುಸುಮ ಶಿವನ ಮುಡಿಯನ್ನು ಏರೀತು. ಭಾರತಾಂಬೆಯ ಕೊರಳನ್ನು ಅಲಂಕರಿಸೀತು. ಇದೇನೂ ಉತ್ಪ್ರೇಕ್ಷೆಯಲ್ಲ. ತೀರಾಸತ್ಯದ ಸಂಗತಿ. ಯಾಕೆಂದರೆ ಇದೊಂದು ಶುದ್ಧ ಹೃದಯದ ಸುಜೀವ'.

'ಅವರ ಆಧ್ಯಾತ್ಮಿಕ ಮನೋವೃತ್ತಿ, ರಚನಾತ್ಮಕ ಮನೋಭಾವ, ವಿದ್ಯಾಪಕ್ಷಪಾತ, ಸಾಹಿತ್ಯ, ಪ್ರೇಮ, ಜನಾನುರಾಗ, ಹೊರ-ಒಳಗಿನ ಪರಿಶುದ್ಧತೆ, ಸರಳ ನಿರಾಡಂಬರ ಜೀವನ, ಉದಾತ್ತ ಕರ್ತೃತ್ವಶಕ್ತಿ ಯಾರೂ ಮೆಚ್ಚತಕ್ಕವೇ. ಈ ಸುಕೃತ ಜೀವಿ, ಪುಣ್ಯಾಪುತ್ಥಳಿ ಹಿಮಾಲಯದ ಉತ್ತುಂಗ ಶಿಖರಕ್ಕೇರಿ ಚಿರಕಾಲ ಬೆಳೆದು ಬಾಳಬೇಕೆಂದು ನನ್ನ

ಹೃದಯಾಂತರಾಳದ ಬಯಕೆ. ಕ್ಷೇತ್ರದೇವತೆ ಕಾಲಭೈರವ ಹಾಗೇ ನಡೆಯಿಸಿಕೊಡಲಿ.

ಭವದೀಯ, ನಮ್ರ ತಿರುಕ

(ಮಲ್ಲಾಡಿಹಳ್ಳಿ ಅನಾಥಸೇವಾಶ್ರಮದ ಶ್ರೀ ರಾಘವೇಂದ್ರಸ್ವಾಮಿಗಳು)

ಶ್ರೀ ಶಂಕರಾಚಾರ್ಯರು ಹತ್ತಾರು ವರ್ಷಗಳಲ್ಲೇ ಭಾರತದ ನಾಲ್ಕೂ ಮೂಲೆಗಳಲ್ಲಿ ಸುತ್ತಿ ನಾಲ್ಕೂ ದಿಕ್ಕುಗಳಲ್ಲಿ ಪೀಠಸ್ಥಾಪನೆ ಮಾಡಿ 'ಶಂಕರ' ನ ಅವತಾರ ಪುರುಷರಾದರೆಂದು ನಂಬುವವರು ನಮ್ಮಲ್ಲಿ ಇದ್ದಾರೆ. 'ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ಎಂದು ನಾವು ಹಾಡಿ ನಲಿಯುವುದೂ ಉಂಟು. ಹೀಗಿರುವಾಗ-

'ಭಾರತಾಂಬೆಯ ಸಿರಿಯ ಮಕುಟದ ಮಣಿಯು ಕನ್ನಡ ಮಾತೆಯ
ಕೊರಳ ಹಾರದ ಪದಕ ಮಾಣಿಕ ಸಿರಿಗೆ ಮಂಗಳಹಾಡಿರಿ,
ಆದಿ ಚುಂಚನಗಿರಿಯ ಧರ್ಮಕ್ಷೇತ್ರ-ಮಂಗಳ ಹಾಡಿರಿ.
ಮಂಗಳಂ ಶುಭ ಮಂಗಳಂ ಎಂದೆಂದು ಮಂಗಳಹಾಡಿರಿ॥
ವಿಶ್ವ ಚೇತನ ವಿಶ್ವನಾಥನ ವಿಶ್ವ ಪ್ರಜ್ಞೆಯ ಕ್ಷೇತ್ರಕೆ।
ವಿಶ್ವ ಶಕ್ತಿಯ ವಿಶ್ವಮಾಯಾ ವಿಶ್ವಭುಕ್ತಿಯ ಪಾತ್ರಕೆ॥
ವಿಶ್ವವೆಲ್ಲವು ತನ್ನದೆನ್ನುವ ವಿಶ್ವಮಾನವ ಧಾಮಕೆ।
ವಿಶ್ವದೆಲ್ಲರ ದರ್ಶನ ಶ್ರೀನಿಧಿಗೆ ಸದಯಾರಾಮಕೆ॥
ವಿಶ್ವಚೇತನ ವಿಶ್ವಗುರುವಾಗಿಲ್ಲಿ ಕಾಯಕ ಮಾಡಿದೆ।
ನಶ್ವರಕೆ ಶಾಶ್ವತವಾದ ದೀಕ್ಷೆಯ ನೀಡಿ ಪಲ್ಲವಿ ಹಾಡಿದೆ॥
ಮಂಗಳಾತ್ಮಕ ದಿವ್ಯಮಂಗಳ ಮಕ್ಕಳೆಲ್ಲರು ಕೂಡಿರಿ।
ಆದಿಚುಂಚನಗಿರಿಯ ದಿವ್ಯಾತ್ಮರಿಗೆ ಮಂಗಳ ಹಾಡಿರಿ.

ಎಂದು ಹಾಡಿನಲಿದು-

ಮೀರಿ ಬೆಳಗಲಿ ನಮ್ಮ ಪೀಠವು
ದಾರಿದೋರಲಿ ದೂರ ಕಾಣದೆ
ಊರುಗೋಲನು ಹಿಡಿದು ತೆವಳುವ ದಾರಿಹೋಕರಿಗೆ।
ಹಾರಿ ಮತ-ಮತಿ ದೂರ ಸರಿಯಲಿ
ತೋರಿ ಸನ್ಮತಿ-ಸಮನ್ವಯವನು
ಹೀರಿ ಧರ್ಮದ ನಿಜದ ಸಾರವ ನರರು ಅಡಿಯಿಡಲಿ॥

ಎಂದು ತುಂಬು ಹೃದಯದಿಂದ ಆ ವಿಶ್ವಶಕ್ತಿಯನ್ನು ಪ್ರಾರ್ಥಿಸೋಣ.

***

ಅಭಿವಂದನಾ

ಶ್ರೀಗಳ ಜಾನಪದ ಪ್ರೇಮ

ಎಚ್.ಎಲ್.ನಾಗೇಗೌಡ

೧೯೭೯ ರಲ್ಲಿ ಕರ್ನಾಟಕ ಜಾನಪದ ಟ್ರಸ್ಟು ಸ್ಥಾಪನೆಯಾಯಿತಷ್ಟೆ. ಇದಕ್ಕೆ ಮೊದಲೇ ನಾನು ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಲಾರಂಭಿಸಿದ್ದೆ. ೧೯೬೭ ರಲ್ಲಿ ಮೊಟ್ಟ ಮೊದಲು ನಮ್ಮೂರಿನ ಸೋಬಾನೆ ಚಿಕ್ಕಮ್ಮನ ಪದಗಳನ್ನು ಧ್ವನಿಮುದ್ರಿಸಿಕೊಂಡೆ. ಅಲ್ಲಿಂದ ಸುಮಾರು ೧೨ ವರ್ಷಗಳ ಕಾಲ ಸತತವಾಗಿ ಧ್ವನಿಮುದ್ರಣ ಮುಂದುವರಿಸಿದೆ. ಹಳೇ ಮೈಸೂರು ಭಾಗದಲ್ಲಿ, ಅದರಲ್ಲಿಯೂ ಮಂಡ್ಯ, ಮೈಸೂರು, ತುಮಕೂರು, ಹಾಸನ- ಈ ಜಿಲ್ಲೆಗಳಲ್ಲಿ ಧ್ವನಿಮುದ್ರಿಸಿಕೊಳ್ಳುವಾಗ ನಾಡದೇವರುಗಳಾದ ಚುಂಚನಗಿರಿ ಬೈರಪ್ಪ, ನಂಜನಗೂಡು ನಂಜಪ್ಪ, ಬೇಲೂರು ಚನ್ನಪ್ಪ, ಮೇಲುಕೋಟೆ ಚೆಲುವಪ್ಪ, ತಿರುಪತಿ ತಿಮ್ಮಪ್ಪ, ಮಲೆಯ ಮಾದಪ್ಪ- ಇವರುಗಳ ಮೇಲೆ ಸೊಗಸಾದ ಸಾಹಿತ್ಯ, ಅಪೂರ್ವವಾದ ದನಿ-ಧಾಟಿ, ಸೊಲ್ಲು-ಪಲ್ಲವಿಗಳುಳ್ಳ ಹಾಡುಗಳು, ಹೆಂಗಸರಲ್ಲಿ ಇರುವುದನ್ನು ಮನಗಂಡೆ. ಇದೆಲ್ಲ ಈವತ್ತಲ್ಲ ನಾಳೆ ಕಿವಿಮರೆಯಾಗುವ ಕಾಲ ಬಹಳ ದೂರ ಇಲ್ಲ ಎಂದುಕೊಂಡ ನಾನು ಆ ದೇವರುಗಳನ್ನು ಕುರಿತ ಹಾಡುಗಳ ಸಂಗ್ರಹ ವ್ಯಾಪಕವಾಗಿ ಆಗಬೇಕೆಂದುಕೊಂಡು ಆಯಾ ದೇವಸ್ಥಾನಗಳ ಧರ್ಮದರ್ಶಿಗಳಿಗೆ ಅಥವಾ ಕ್ಷೇತ್ರಾಧಿಕಾರಿಗಳಿಗೆ ಪತ್ರ ಬರೆದು ದಯಮಾಡಿ ನಿಮ್ಮ ನಿಮ್ಮ ದೇವರುಗಳ ಮೇಲಿರುವ ಹಾಡುಗಳನ್ನು ಸಂಗ್ರಹಿಸುವುದಕ್ಕೆ ಒಂದು ವ್ಯವಸ್ಥೆ ಮಾಡಿ, ವರ್ಷಕ್ಕೊಂದು ಸಲ ಹಾಡುವವರನ್ನೆಲ್ಲ ಒಂದು ಕಡೆ ಸೇರಿಸಿ ಅವರ ಹಾಡುಗಳನ್ನು ಧ್ವನಿಮುದ್ರಣ ಮಾಡಿ, ಅಥವಾ ನನಗೆ ತಿಳಿಸಿದರೆ ನಾನೇ ಧ್ವನಿಮುದ್ರಣ ಮಾಡಿಕೊಳ್ಳುವ ಏರ್ಪಾಡು ಮಾಡುತ್ತೇನೆ. ನಿಮ್ಮ ನಿಮ್ಮ ಕ್ಷೇತ್ರದ ನಿಜವಾದ ಭಕ್ತರು ಹಳ್ಳಿಯವರೆಂಬುದನ್ನು ಮರೆಯಬೇಡಿ, ಅವರು ತಮ್ಮ ಹಾಡಿನ ಮೂಲಕ ಮಾಡುವ ಸೇವೆ ಬೇರೆ ಸೇವೆಗಳಿಗಿಂತ ಮಿಗಿಲಾದುದು, ಅವೆಲ್ಲ ಬಾಯಲ್ಲಿರುವುದರಿಂದ ಈವತ್ತಲ್ಲ ನಾಳೆ ಅವು ಹಾಡುವವರೊಡನೆ ಮಣ್ಣಾಗುತ್ತವೆ ಎಂದು ತಿಳಿಸಿದೆ. ಈ ಪತ್ರಕ್ಕೆ ಮಲೆ ಮಾದೇಶ್ವರನ ಆಡಳಿತ ಮಂಡಳಿಯವರು ನಾವಾಗಲೇ ಬಲ್ಲವರಿಂದ ಮಾದೇಶ್ವರನ ಮೇಲೆ ಸುಪ್ರಭಾತ ಬರೆಸಿ ಹಾಡಿಸುತ್ತಿದ್ದೇವೆ ಎಂದು ಉತ್ತರ ಕೊಟ್ಟರು. ಸುಪ್ರಭಾತ ಬರೆಯುವವರು ಪಂಡಿತರು, ಅದರಲ್ಲಿ ಬರುವ ಭಾಷೆ ಸಂಸ್ಕೃತಮಯ, ಅದು ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ, ನಾಡ ದೇವತೆಗಳಿಗೂ ಅದು ಒಪ್ಪುವುದಿಲ್ಲ, ಅಪಾರ ಶ್ರದ್ಧಾಭಕ್ತಿಗಳಿಂದ ಹಳ್ಳಿಯವರು ಹೃದಯತುಂಬಿ ಹಾಡುವ ಹಾಡುಗಳೇ ನಿಜವಾದ ಹಾಡುಗಳು, ಇವುಗಳ ಸಂಗ್ರಹಕ್ಕೆ ಏರ್ಪಾಡು ಮಾಡಿ ಎಂದು ಮತ್ತೆ ಕೇಳಿಕೊಂಡೆ. ಆದರೆ ಯಾರೂ ನನ್ನ ಮನವಿಯನ್ನು ಗಮನಿಸಲಿಲ್ಲ. ಹೀಗಿರುವಾಗ ನಾನು ಹೇಳಿದ್ದನ್ನು ಮನಸ್ಸಿಗೆ ತಂದುಕೊಂಡವರು ಶ್ರೀ ಆದಿಚುಂಚನಗಿರಿ ಕ್ಷೇತ್ರದ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು. ಶ್ರೀಗಳು ಪಟ್ಟಕ್ಕೆ ಬಂದು ಅಲ್ಲಿಗೆ ಐದು

ವರ್ಷಗಳಾಗಿದ್ದವು. ಅವರಿಗಾಗಲೇ ಗ್ರಾಮೀಣರು, ಅದರಲ್ಲಿಯೂ ಹೆಂಗಸರು ಹಾಡುವ ಹಾಡುಗಳ ಸ್ವಾರಸ್ಯ ಮಂದಟ್ಟಾಗಿತ್ತು. ಅವರು ಚರಾಯ ಹೋದಕಡೆಯಲ್ಲೆಲ್ಲಾ ಹಳ್ಳಿಯ ಮುಗ್ಧ ಹೆಂಗಸರು ಹಾಡುವ ಹಾಡುಗಳ ಸೊಗಸು ಅವರ ಹೃದಯಕ್ಕೆ ತಟ್ಟಿತ್ತು. ನಾನು ಪತ್ರ ಬರೆದೆನೊ ಇಲ್ಲವೊ ಅವರು ಕೂಡಲೇ ಒಪ್ಪಿ ನೀವು ನಮ್ಮ ಕ್ಷೇತ್ರಕ್ಕೆ ಬನ್ನಿ, ಧ್ವನಿಮುದ್ರಣ ಮಾಡಿಕೊಳ್ಳಿ, ಅದಕ್ಕೆಲ್ಲ ಸೂಕ್ತ ಸಹಾಯ ಒದಗಿಸುವುದಾಗಿ ತಿಳಿಸಿದರು.

ಹೀಗೆ ಆರಂಭವಾಯಿತು 'ಭೈರವೇಶ್ವರ ಗೀತಗಾಯನ ಮೇಳ' ಶ್ರೀ ಆದಿಚುಂಚನಗಿರಿಯಲ್ಲಿ ೧೯೮೦ ರಂದು ಮೊಟ್ಟ ಮೊದಲ ಮೇಳ ಸೆಪ್ಟೆಂಬರ್ ೨೨ ರಿಂದ ೨೪ ರವರೆಗೆ ನಡೆಯಿತು. ಅದೊಂದು ಅಮೋಘವಾದ ಮೇಳ. ನಾನು ಬೆಂಗಳೂರಿನಿಂದ ಮೆ॥ಖೋಡೆ ಸಹೋದರರ ಸಹಾಯ ಪಡೆದು ಟೇಪ್ ರಿಕಾರ್ಡ್‌ರುಗಳ ಸಮೇತ ಚುಂಚನಗಿರಿಗೆ ಹೋಗಿ ಮೂರು ದಿನ ಹಾಡಿದ ಹಾಡುಗಳನ್ನೆಲ್ಲ ಧ್ವನಿಮುದ್ರಿಸಿಕೊಂಡೆ. ತೆಗೆದುಕೊಂಡು ಹೋಗಿದ್ದ ೨೫ ಕ್ಯಾಸೆಟ್ಟುಗಳು ಸಾಕಾಗದೆ ಹೋದವು. ಅಷ್ಟೊಂದು ಹಾಡುಗಳೂ ಕೇವಲ ಏಳೆಂಟು ತಂಡದ ಹೆಂಗಸರು ಬಾಯಿಂದ ಮಾಡಿದ ಅಪೂರ್ವ ಸಾಹಿತ್ಯ. ಶ್ರೀಗಳು ಈ ಮೇಳವನ್ನು ಉದ್ಘಾಟಿಸುತ್ತ 'ಆಡು ಭಾಷೆಯಲ್ಲೇ ನಾಡ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಈ ಕಲೆಯ ರಕ್ಷಣೆ ತಮ್ಮ ಪೀಠದ ಆದ್ಯ ಕರ್ತವ್ಯ' ಎಂದು ಅಪ್ಪಣೆ ಕೊಡಿಸಿದರು.

ಮೂರು ದಿನದ ಈ ಮೇಳದ ವೈಖರಿಯನ್ನು ಪ್ರಜಾವಾಣಿಯ ಪತ್ರಿಕಾ ಪ್ರತಿನಿಧಿ ಶ್ರೀ ಡಿ.ಪಿ. ಪರಮೇಶ್ವರ ಎಂಬುವರು ಮೂರು ಸಂಚಿಕೆಗಳಲ್ಲಿ ತಮ್ಮದೇ ಆದ ಭಾಷೆಯಲ್ಲಿ ವರದಿ ಮಾಡಿದರು. ಆ ವರದಿಗಳನ್ನು ಓದಿದ ನಾಡಿನ ಜನ ಆದರಲ್ಲೂ ನಗರದ ಜನ ಬೆರಗಾದರು.

ಮೊದಲ ವರ್ಷ ಶ್ರೀಗಳು ಅತ್ಯುತ್ತಮ ಹಾಡುಗಾರರಿಗೆ ಮಾತ್ರ ಸೀರೆ ಕುಪ್ಪಸಗಳನ್ನು, ಪಂಚೆ ಟವಲುಗಳನ್ನು ಕೊಟ್ಟು ಪುರಸ್ಕರಿಸಿದರು. ಅವನ್ನೆಲ್ಲ ಬೆಂಗಳೂರಿನ ಸೂಪರಿನ್‌ಟೆಂಡೆಂಟ್ ಇಂಜಿನಿಯರ್ ಶ್ರೀ ಕೃಷ್ಣ ದಂಪತಿಗಳು ಸಂತೋಷವಾಗಿ ಒದಗಿಸಿಕೊಟ್ಟರು. ಅಲ್ಲದೆ, ಶ್ರೀಗಳು ಮೇಳಕ್ಕೆ ಬಂದವರಿಗೆಲ್ಲ ಪ್ರಯಾಣವೆಚ್ಚ, ಊಟೋಪಚಾರಗಳನ್ನು ಒದಗಿಸಿದರು.

ಹೀಗೆ ಆರಂಭವಾದ 'ಭೈರವೇಶ್ವರ ಗೀತಗಾಯನ ಮೇಳ' ಇಂದಿನವರೆಗೂ ನಡೆದುಕೊಂಡು ಬರುತ್ತಿದೆ. ಮೊದಲ ವರ್ಷ ಕೇವಲ ೧೫೦ ಜನ ಬಂದಿದ್ದರು. ಆ ಮೇಲೆ ವರ್ಷೆ ವರ್ಷೆ ಹಾಡುವವರ ಸಂಖ್ಯೆ ಬೆಳೆಯುತ್ತಾ ಬಂತು. ಅಲ್ಲದೆ, ಕೇವಲ ಚುಂಚನಗಿರಿಯ ಸುತ್ತ ಮುತ್ತಲ ಜನರಷ್ಟೇ ಅಲ್ಲದೆ ನಾನಾ ಕಡೆಗಳಿಂದ ಹಾಡುಗಾರ್ತಿಯರು, ನೃತ್ಯ ಕಲಾವಿದರು ಬರಲಾರಂಭಿಸಿದರು. ಈಗ ಈ ಮೇಳಕ್ಕೆ ಬರುವವರ ಸಂಖ್ಯೆ ಆರುಸಾವಿರಕ್ಕೇರಿದೆ. ಇಷ್ಟೊಂದು ಜನರು ಒಂದೇ ಕಡೆ ಕುಳಿತು ಹಾಡಲು ಸಾಧ್ಯವೇ?

ಸಾಧ್ಯವಿಲ್ಲ. ಹೀಗಾಗಿ ಇಡೀ ಕ್ಷೇತ್ರದಲ್ಲಿ ಎಲ್ಲೆಲ್ಲಿ ಬೇಕೊ ಅಲ್ಲಲ್ಲಿ ಹೆಂಗಸರು ತಂಡ ತಂಡವಾಗಿ ಕುಳಿತು ಹಾಡುತ್ತಾರೆ. ಬೆಟ್ಟದ ಮೇಲೆ , ಬೆಟ್ಟದ ತಪ್ಪಲಿನಲ್ಲಿ ಬಾಗಿಲು ಭೈರಪ್ಪನ ಗುಡಿಯ ಮುಂದೆ, ಮೇಲಿರುವ ಗವಿ ಗಂಗಾಧರೇಶ್ವರನ ಬಳಿಯಲ್ಲಿ, ಕಂಬದಮ್ಮನ ಕಲ್ಲಿನ ಕಂಬದ ಸುತ್ತ, ಸ್ವಾಮಿಗಳು ಇರುವ ಕಡೆ, ಆ ಬಂಡೆಯ ತಪ್ಪಲಿನಲ್ಲಿ ಬಾಗಿಲು ಭೈರಪ್ಪನ ಗುಡಿಯ ಮುಂದೆ, ಮೇಲೆ, ಈ ಮರದ ನೆರಳಿನಲ್ಲಿ ಕಲ್ಲು ಮಂಟಪಗಳಲ್ಲಿ, ಊಟ ಮಾಡುವ ಕಡೆ, ತಿರುಗಾಡುವಾಗ, ಮಲಗುವಾಗ, ಬೆಳಿಗ್ಗೆ ಎದ್ದಾಗ-ಹೀಗೆ ಹಾಡಿದ್ದೂ ಹಾಡಿದ್ದೆ. ಅದೇನು ಭಕ್ತಿಯೋ, ಅದೇನು ಶ್ರದ್ಧೆಯೋ ಹೇಳತೀರದು. ಹೆಂಗಸರು ಹೀಗೆ ಹಾಡುತ್ತಾ ಹೋದರೆ ಗಂಡಸರು ತಮ್ಮ ಕುಣಿತಗಳನ್ನು ಮನದುಂಬಿ ಮಾಡಿದ್ದೇ ಮಾಡಿದ್ದು. ಇಡೀ ಬೆಟ್ಟವೇ ಈ ಚಟುವಟಿಕೆಗಳಿಂದ ಝೇಂಕರಿಸುತ್ತದೆ ನವಿಲುಗಳ ಕೇಕೆಯ ಜೊತೆಗೆ, ಮಹಾಸ್ವಾಮಿಗಳ ಅಪಾರ ಸಂತೋಷ, ಅವರ ಮನಸ್ಸಿಗೆ ಇದರಿಂದಾಗುತ್ತಿರುವ ತೃಪ್ತಿ ಹೇಳತೀರದು.

ಮೊದಲು ಮೊದಲು ಕೇವಲ ಬಹುಮಾನಿತರನ್ನು ಬಟ್ಟೆ ಬರೆಗಳಿಂದ ಸನ್ಮಾನಿಸುತ್ತಿದ್ದರು. ಈಗ ಎಲ್ಲರಿಗೂ ಸೀರೆ, ಕುಪ್ಪಸ, ಪಂಚೆ, ಟವಲುಗಳನ್ನು ನೀಡಿ ಸಂತೋಷ ಪಡಿಸುತ್ತಾರೆ. ಬೆಂಗಳೂರು ಮುಂತಾದ ಕಡೆಗಳಿಂದ ಲಾರಿಗಟ್ಟಳೆ ಬಟ್ಟೆ ಚುಂಚನಗಿರಿಗೆ ಬಂದು ಬೀಳುತ್ತದೆ. ಅದನ್ನೆಲ್ಲಾ ಯಾರು ಒದಗಿಸುತ್ತಾರೋ ಏನೋ ಪರಮಾತ್ಮನಿಗೇ ಗೊತ್ತು!

ಖರ್ಚುಲೆಕ್ಕವಿಲ್ಲದಷ್ಟು. ಆರೇಳು ಸಾವಿರ ಜನಕ್ಕೆ ಪ್ರಯಾಣ ವೆಚ್ಚ, ಮೂರು ನಾಲ್ಕು ದಿನ ಊಟೋಪಚಾರ, ಇತ್ಯಾದಿ ಇತ್ಯಾದಿ ಸುಮಾರು ಆರು ಲಕ್ಷ ರೂಪಾಯಿ ಮೀರುತ್ತದೆ. ಇದನ್ನೆಲ್ಲಾ ನೋಡಿ ನನ್ನ ಮನಸ್ಸಿಗೆ ಆಗಾಗ ಯೋಚನೆ ಬರುತ್ತಿದೆ. ನಾನೇ ಅಲ್ಲವೇ ಇಷ್ಟೊಂದು ಖರ್ಚು ಶ್ರಮ ಇತ್ಯಾದಿಗಳಿಗೆಲ್ಲ ಕಾರಣ? ತಪ್ಪು ಮಾಡಿಬಿಟ್ಟೆನಲ್ಲ ಎಂದು ಮನಸ್ಸಿಗೆ ಕಿರಕಿರಿಯಾಗುತ್ತಿದೆ. ಇದನ್ನು ಶ್ರೀಗಳ ಗಮನಕ್ಕೆ ತಂದು 'ಮಹಾಸ್ವಾಮಿಗಳೇ ನಾನು ತಮ್ಮನ್ನು ಈ ಕಾರ್ಯಕ್ಕೆ ಪ್ರೇರೇಪಿಸಿದೆ. ಆದರೆ ಇದರಿಂದ ಶ್ರೀ ಕ್ಷೇತ್ರಕ್ಕೆ ಎಷ್ಟೊಂದು ಹೊರೆ, ಎಷ್ಟೊಂದು ತಾಪತ್ರಯ. ತಾವು ಈ ಕ್ಷೇತ್ರದಲ್ಲಿ ಅಷ್ಟೇ ಅಲ್ಲದೆ ನಾಡಿನ ನಾನಾ ಕಡೆಗಳಲ್ಲಿ ಎರಡು ಶತಮಾನಗಳಲ್ಲಿ ಆಗುವಷ್ಟು ಕೆಲಸವನ್ನು ಕೇವಲ ೨೦ ವರ್ಷಗಳಲ್ಲಿ ಮಾಡಿಬಿಟ್ಟಿದ್ದೀರಿ. ಈ ಹೊರೆಯನ್ನು ತಡೆದುಕೊಳ್ಳುವುದೇ ಕಷ್ಟವಾಗಿರುವಾಗ ಇನ್ನೊಂದು ಹೊರೆ ಏಕೆ? ಇನ್ನು ಮುಂದೆ ಗೀತಗಾಯನ ಮೇಳಕ್ಕೆ ಈಗಾಗಲೇ ಹಾಡಿದವರು ಬರುವುದು ಬೇಡ, ಹೊಸಬರಿಗೆ ಮಾತ್ರ ಅವಕಾಶ ಕೊಡಿ. ಇದರಿಂದ ಖರ್ಚು ಎಷ್ಟೋ ಕಡಮೆಯಾಗುತ್ತದೆ'
ಎಂದೆ. ನಾನು ಹೇಳುವುದನ್ನು ಆಲಿಸಿದ ಶ್ರೀಗಳು ಹಸನ್ಮುಖರಾಗಿ ಏನು ಹೇಳಿದರು ಗೊತ್ತೆ? 'ಇವರನ್ನೆಲ್ಲ ಕರೆಸಿಕೊಳ್ಳುವವನು ಈ ಕ್ಷೇತ್ರದ ಭೈರವೇಶ್ವರ. ಅವನೇ ಈ

ಖರ್ಚು ವೆಚ್ಚಗಳನ್ನೆಲ್ಲಾ ವಹಿಸಿಕೊಳ್ಳುತ್ತಾನೆ. ಇದರಲ್ಲಿ ನನ್ನದೇನಿದೆ? ಅವನು ಆರಲ್ಲ ಹತ್ತು ಸಾವಿರ ಕರೆಸಿಕೊಳ್ಳಲಿ. ನನಗಿನ್ನೂ ಸಂತೋಷ' ಎಂದರು.

ಎಂತಹ ಎದೆಗಾರಿಕೆ, ಎಂತಹ ಪ್ರೇಮ, ಆ ಹಳ್ಳಿಯ ಮುಗ್ಧ ಜನರ ಮೇಲೆ. ಕೇಳಿ, ನಾನು ಮರುಮಾತಾಡಲಿಲ್ಲ. ಹತ್ತಿಪ್ಪತ್ತು ವರ್ಷಗಳಿಂದ ಇಷ್ಟೆಲ್ಲ ನಡೆಯುತ್ತಿರುವುದರ ಪರಿಣಾಮ ಏನು? ಮಹಾಸ್ವಾಮಿಗಳ ಮನಸ್ಸಿನಂತೆ ಭೈರವೇಶ್ವರ ಗೀತಗಾಯನ ಮೇಳ ಬಹು ಉಪಯುಕ್ತವಾಗಿ ಕೆಲಸ ಮಾಡಿದೆ. ಇಲ್ಲಿಯವರೆಗೂ ಮರೆತಿದ್ದವರು ಈಗ ನೆನೆದುಕೊಂಡು ಹಾಡಲಾರಂಭಿಸಿದ್ದಾರೆ. ಹೊಸ ಹೊಸ ಹಾಡುಗಳು ಅವರ ಬಾಯಿಂದ ಹೊಮ್ಮುತ್ತಿವೆ. ಈಗಿನ ಪೀಳಿಗೆಯ ಹೆಣ್ಣುಮಕ್ಕಳು, ಇಲ್ಲಿಯವರೆಗೆ ತಾತ್ಸಾರದಿಂದ ಇದ್ದವರು ಈಗ ಕಲಿಯಲಾರಂಭಿಸಿದ್ದಾರೆ. ಇದೊಂದು ನಿಜವಾಗಿಯೂ ಜಾನಪದದ ಪುನರುಜ್ಜೀವನದಲ್ಲಿ ಮಹತ್ತರವಾದ ಕೆಲಸ.

ಶ್ರೀ ಕ್ಷೇತ್ರ, ಗುರುಗಳು, ಬೆಟ್ಟ, ಕಂಬದಮ್ಮ, ಭೈರಪ್ಪ, ಗಂಗಾಧರ ಇವರ ಮೇಲೆ ಇರುವ ಹಾಡುಗಳು ಅದೆಷ್ಟೋ ಲೆಕ್ಕವಿಲ್ಲ. ೧೯೫೫ ರಲ್ಲಿ ಅಂದಿನ ಪೀಠಾಧಿಪತಿಗಳಾಗಿದ್ದ ಶ್ರೀ ಶ್ರೀ ಶ್ರೀ ಚಂದ್ರಶೇಖರನಾಥ ಮಹಾಸ್ವಾಮಿಗಳು ಈ ಗೀತೆಗಳ ಮೊದಲ ಸಂಗ್ರಹ ಹೊರತಂದರು. ಆನಂತರ ಕರಾಕೃ, ಜೀಶಂಪ ಇವರುಗಳು ಕೆಲವು ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಇನ್ನೂ ಹಲವಾರು ಜನ ಈ ಕೆಲಸ ಮಾಡಿದ್ದಾರೆ. ಆದರೆ ಮುಗಿಯದ ಸಾಹಿತ್ಯಸಂಪತ್ತು ಚುಂಚನಗಿರಿಯ ಭಕ್ತರ ಬಾಯಲ್ಲಿರುವುದು. ಎಷ್ಟೇ ಸಂಗ್ರಹಿಸಿದರೂ ಇನ್ನೂ ಸಂಗ್ರಹಿಸಬೇಕಾದ್ದು ಬೇಕಾದಷ್ಟಿದೆ. ಇತ್ತೀಚೆಗೆ ಜಾನಪದ ಲೋಕಕ್ಕೆ ಬಂದ ಹಲವು ಹೆಂಗಸರು ಹಾಡಿದ ಹಾಡುಗಳನ್ನು ಕೇಳಿದಾಗ ನನಗನ್ನಿಸುತ್ತಿದೆ. ಸಂಗ್ರಹಿಸಿಡಬೇಕಾದ್ದು ಇನ್ನೂ ಇದೆ ಎಂದು.

ಈ ಕೆಳಗೆ ಕಂಡ ಕೆಲವು ಪಲ್ಲವಿಗಳನ್ನು ಹಿಂದೆ ಯಾರಾದರೂ ಸಂಗ್ರಹಿಸಿದ್ದಾರೊ ಹೇಗೊ ಕಾಣೆ:

ಚುಂಚನಗಿರಿ ಚಂದ ಬಾಗಿಲ ಭೈರವ ಚಂದ
ಗಂಧವು ಚಂದ ಹಣೆಯಲಿ. ಗವಿಸಿದ್ಧಗೆ
ಹರಿಸೇವೆ ಚಂದ ಗಿರಿಯಲಿ||
ಸುತ್ತ ಮುತ್ತ ಕೋಲು ಕೊಡಿ ಕಾಲಭೈರವಗೆ
ಅಂದ ಚಂದದ ಕೋಲು ಕೊಡಿ ಅನ್ನದಾನಿಗೆ ||ಪ||
ಮನೆಗೆ ಬಾರೊ ಭೈರವ ಮಗನ
ಮುದ್ದಾಡಿ ಹೋಗೋ
ಮಲ್ಲಿಗೆ ಹೂವ ತಂದು ಮಗನಿಗೆ ಚೆಲ್ಲಾಡಿ ಹೋಗೋ||
ಬಾಜು ಬಿಡಿ ಬಾಜು ಬಿಡೀರಿ
ಚುಂಚನಗಿರಿಯೊಳಗೆ ಮಿಂಚುವ ಭೈರವಗೆ

ಅಭಿವಂದನಾ

ದೊರೆಗಳೆ ದಾರಿ ಬಿಡೀರಿ ||ಪ||
ಭೈರುವ ಬರುತಾನೆ ಮಲ್ಲಿಗೆ ಹರವೀರೆ
ಕ್ಯಾಸಕ್ಕಿ ಮುತ್ತ ಹರವೀರೆ- ಬಾಜು ಬಿಡಿ... ||
ನಮ್ಮೂರ ಭೈರವ ಬರುತಾನೆ ಬಾಜು ಬಿಡಿ.. ||

ಗೆಜ್ಜೆ ಘಲಿರೆಂದವಲ್ಲೇನಮ್ಮ ಭೈರುವನ
ಹೆಜ್ಜೆಜ್ಜೆ ಮೂಡ್ಯವಲ್ಲೆ.
ಗಂಧ ಚೆಲ್ಲಾವೆ ಸಿರಿಗಂಧ ಸೂಸ್ಯಾವೆ
ಆದಿಚುಂಚನಗಿರಿ ತುಂಬ

ಗಂಧ ಚೆಲ್ಲಾವೆ ಸಿರಿಗಂಧ ಸೂಸ್ಯಾವೆ||
ಯಾಲಕ್ಕಿ ಯಾಲಕ್ಕಿ ಗೊನಿ ಗೊನಿ ಯಾಲಕ್ಕಿ
ಗೊನೆಯ ಬಾಗ್ಯಾವೆ ಯಾಲಕ್ಕಿ-ಭೈರವಗೆ
ಮಂಗಳಾರತಿಯ ಬೆಳಗಿ|| ||ಪ||

ಈಗ ಒಂದು ಕೆಲಸ ಆಗಬೇಕಾಗಿದೆ. ಏನೆಂದರೆ ಎಷ್ಟೋ ಹಾಡುಗಳು ಇನ್ನೂ ಸಂಗ್ರಹ ಆಗಿಲ್ಲ. ಆಗಿರಲೂ ಸಾಧ್ಯವಿಲ್ಲ. ಹೀಗಿರುವಾಗ ವ್ಯಾಪಕವಾದ ಕ್ಷೇತ್ರಕಾರ್ಯ ಮಾಡಿಯೇ ಅವುಗಳನ್ನು ಸಂಗ್ರಹಿಸಬೇಕಾಗಿದೆ. ಕಳೆದ ಸುಮಾರು ೨೦ ವರ್ಷಗಳ ಅವಧಿಯಲ್ಲಿ ಹಾಡಿದ ಹೆಂಗಸರು ಯಾರು, ಅವರ ಊರು ಕೇರಿಗಳಾವುವು ಎಂಬುದು ದಾಖಲಾಗಿದೆ. ಕ್ಷೇತ್ರದಲ್ಲಿ ಅದೆಲ್ಲ ದೊರೆಯುತ್ತದೆ. ಮೊದಲ ಮೇಳದಲ್ಲೇನೊ ನಾನು ಧ್ವನಿಮುದ್ರಣ ಮಾಡಿಕೊಂಡೆ. ಏಕೆಂದರೆ ಆಗ ಬಂದವರ ಸಂಖ್ಯೆ ಕಡಿಮೆ, ಆಗಲೂ ನಾನು ಎಲ್ಲವನ್ನೂ ಧ್ವನಿಮುದ್ರಿಸಿಕೊಂಡೆ ಎಂದು ಹೇಳಲಾರೆ. ಏಕೆಂದರೆ, ಬಂದವರೆಲ್ಲ ಹಾಡಲು ಹಾತೊರೆಯುತ್ತಿದ್ದರು. ಸ್ವಲ್ಪ ಸ್ವಲ್ಪ ಹೇಳಿಸಿ ಅವರನ್ನು ಸಮಾಧಾನ ಮಾಡಬೇಕಾಯಿತು. ಮೊದಲ ವರ್ಷ ಬಿಟ್ಟರೆ ಅನಂತರದ ವರ್ಷಗಳಲ್ಲಿ ಧ್ವನಿಮುದ್ರಣ ಕಾರ್ಯ ಆರಂಭಿಸಬೇಕಾಗುತ್ತದೆ. ಇದಕ್ಕಾಗಿ ಹತ್ತಿಪ್ಪತ್ತು ಕ್ಷೇತ್ರ ಕಾರ್ಯಕರ್ತರ ತಂಡವನ್ನೇ ತಯಾರಿಸಬೇಕಾಗುತ್ತದೆ. ಧ್ವನಿಮುದ್ರಣ ಮಾಡುವಾಗ ಅನುಸರಿಬೇಕಾದ ಕೆಲವು ವಿಧಾನಗಳನ್ನು ಅವರಿಗೆ ಹೇಳಿಕೊಡಬೇಕಾಗುತ್ತದೆ. ಹೀಗೆ ಮಾಡಿ ಪ್ರತಿಯೊಬ್ಬರಿಗೂ ಹಾಡುಗಾರರು ಇರುವ ಊರುಗಳನ್ನು ಹಂಚಿ ಹಾಕಿ ಅವರ ಕೈಯಲ್ಲಿ ಕ್ಯಾಸೆಟ್ ಟೇಪ್ ರಿಕಾರ್ಡ್‌ರು ಮತ್ತು ಟೇಪುಗಳನ್ನು ಕೊಟ್ಟು ಹಳ್ಳಿಗಳಿಗೆ ಕಳಿಸಿಕೊಡಬೇಕು. ಅವರ ಊಟೋಪಚಾರಗಳಿಗೆ, ಓಡಾಟಕ್ಕೆ ಕೊಂಚ ಹಣವನ್ನು ಒದಗಿಸಬೇಕಾಗುತ್ತದೆ. ಪ್ರತಿ ವರ್ಷದ ಬೇಸಿಗೆ ರಜದಲ್ಲಿ ಈ ಕೆಲಸವನ್ನು ಮಾಡಿಸಬೇಕು. ಹೀಗೆ ಸಂಗ್ರಹಿಸಲ್ಪಟ್ಟ ಹಾಡುಗಳನ್ನು ಕ್ಷೇತ್ರ ಕಾರ್ಯಕರ್ತರೇ ಕ್ಯಾಸೆಟ್‌ಗಳಿಂದ ಬರೆದುಕೊಂಡು ಎಲ್ಲೆಲ್ಲಿ ಅರ್ಥವಾಗದ ಪದಗಳು ಬರುತ್ತವೋ ಅವುಗಳಿಗೆ ಹಾಡಿದವರಿಂದಲೇ ಅರ್ಥ ಕೇಳಿ ಬರೆದುಕೊಂಡು ಶ್ರೀ ಕ್ಷೇತ್ರಕ್ಕೆ ರವಾನಿಸಬೇಕು. ಹೀಗೆ ಸಂಗ್ರಹವಾಗುವ ಹಾಡುಗಳನ್ನು

ಸಂಪಾದಿಸಿ ಒಂದು ಬೃಹತ್ ಹೊತ್ತಿಗೆಯನ್ನು ತರುವ ಏರ್ಪಾಡಾಗಬೇಕು.

ಕೇವಲ ಸಾಹಿತ್ಯವಷ್ಟೇ ಅಲ್ಲ, ಹಾಡುಗಳನ್ನು ಹಾಡುವ ಧಾಟಿಯೂ ಅಪೂರ್ವವಾಗಿದೆ. ಈಗಾಗಲೇ ನಾನು ಅಂಥ ಧಾಟಿಗಳನ್ನು ವಾದ್ಯ ಸಮೇತ ಹಾಡಿಸಿ ಕ್ಯಾಸೆಟ್ ಮಾಡಿಸಿ ಮಾರಾಟಕ್ಕೆ ಏರ್ಪಾಡು ಮಾಡಿದ್ದೇನೆ. ಈ ಕ್ಯಾಸೆಟ್‌ಗಳಿಗೆ ಅಪಾರ ಬೇಡಿಕೆ ಇದೆ ಎಂಬುದು ಸಂತೋಷದ ಸಂಗತಿ.

ಎರಡು ವರ್ಷಗಳ ಹಿಂದೆ ಈ ಮೇಳಕ್ಕೆ ಬಂದವರನ್ನು ಕೇಳಿದೆ- ನಿಮ್ಮಲ್ಲಿ ಎಷ್ಟು ಜನಕ್ಕೆ ಕತೆಗಳು ಬರುತ್ತವೆ ಎಂದು. ನೂರಾರು ಜನ ಕೈಯೆತ್ತಿದ್ದರು. ನಮ್ಮ ಟ್ರಸ್ಟಿನ ವತಿಯಿಂದ ಇಬ್ಬರನ್ನು ನೇಮಿಸಿದೆ ಕತೆಗಳನ್ನು ಧ್ವನಿಮುದ್ರಣೆಸಿಕೊಳ್ಳಲು. ಒಬ್ಬೊಬ್ಬರ ಬಾಯಲ್ಲಿ ಒಂದಲ್ಲ ಹತ್ತಾರು ಕತೆಗಳು. ಹೀಗೆ ಸಹಸ್ರಾರು ಕತೆಗಳು ನಮ್ಮ ಹಳ್ಳಿಗರ ಬಾಯಲ್ಲಿವೆ. ಅವುಗಳನ್ನು ಧ್ವನಿಮುದ್ರಿಸಿ ಪ್ರಕಟಿಸುವ ಕೆಲಸವೂ ಶ್ರೀ ಕ್ಷೇತ್ರದಿಂದ ಆಗಬೇಕಾಗಿದೆ.

ಜಾನಪದಕ್ಕೆ ಧಾರ್ಮಿಕ ಪೀಠವೊಂದು ಪ್ರೋತ್ಸಾಹ ಕೊಡುತ್ತಿರುವುದರಲ್ಲಿ ಶ್ರೀ ಕ್ಷೇತ್ರ ಮೊದಲಾಗಿದೆ. ಇದನ್ನು ಮುಂದುವರಿಸಿಕೊಂಡು ಹೋಗಬೇಕಾಗಿ ನಮ್ಮೆಲ್ಲರ ಕಣ್ಮಣಿ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳಲ್ಲಿ ನನ್ನ ಪ್ರಾರ್ಥನೆ.

***

ಲೋಕ ಕಲ್ಯಾಣದ ಹಾದಿಯಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ

-ಕೆ. ಪುಟ್ಟಯ್ಯ,

ಬಾಹ್ಯ ಸಮೃದ್ಧಿಯಿಂದ ನಾಗರೀಕವಾಗುತ್ತಾ, ಅಂತರಂಗ ಸಂಸ್ಕಾರಗಳಿಂದ ಸುಸಂಸ್ಕೃತವಾಗುತ್ತಾ ನಮ್ಮ ಬದುಕು ಸಾರ್ಥಕವಾಗಬೇಕೆಂದು ಹಂಬಲಿಸಿದ ಪರಂಪರೆಯ ನಾಡು ನಮ್ಮದು. ನಾವು ಮಾತ್ರವಲ್ಲ ನಮ್ಮ ಸುತ್ತಲಿನವರೂ ಸುಖದಿಂದ ಬದುಕಿದ್ದರೆ ಮಾತ್ರ ನಾವು ನೆಮ್ಮದಿಯಿಂದ ಬದುಕಲು ಸಾಧ್ಯವೆಂಬ ಸರಳ ಸತ್ಯವನ್ನು ಅರಿತ ನಮ್ಮವರು ''ಸರ್ವೇಜನಾಃ ಸುಖಿನೋ ಭವಂತು'' ಎಂದು ಹಾರೈಸಿದರು. ಇದು ಕೇವಲ ಆದರ್ಶವಾಗದೆ ಬದುಕಿನಲ್ಲಿ ಅನುಷ್ಠಾನಕ್ಕೆ ಅಣಿಗೊಳಿಸಲು ರೂಪಿಸಿದ ಸಂಸ್ಥೆಗಳೇ ಮಠಗಳು. ಇವುಗಳ ಉದ್ದೇಶವೇ ಲೋಕಹಿತ, ಲೋಕ ಕಲ್ಯಾಣ.

''ನಮ್ಮ ಹಿರಿಯರು ಮನೆ-ಮಠ ಸರಿಯಾಗಿ ನೋಡಿಕೊ ಎಂದು ಹೇಳುತ್ತಿದ್ದರು. ಅವರು ಎಂದೂ ಮನೆಗೂ ಮಠಕ್ಕೂ ತಾರತಮ್ಯವನ್ನು ಎಣಿಸುತ್ತಿರಲಿಲ್ಲ. ಅವೆರಡು ಪರಸ್ಪರ ಅವಲಂಬಿಸಿಕೊಂಡು, ಪರಸ್ಪರ ಪೋಷಿಸಿಕೊಂಡು ಸಾಗಬೇಕೆಂದು ಅವರು ಬಯಸಿದ್ದರು. ಮನೆ ಒಂದು ಕುಟುಂಬದ ಸದಸ್ಯರು ಬಾಳುವ ಸಂಸ್ಥೆ. ಅಲ್ಲಿ ಎಲ್ಲರೂ ಅನ್ಯೋನ್ಯವಾಗಿ ಶ್ರದ್ಧೆ ವಿಶ್ವಾಸ ಪ್ರೇಮದಿಂದ ಬಾಳಬೇಕು. ಅಲ್ಲಿ ಎಲ್ಲರೂ ಸಮಾನರು. ಅವರೆಲ್ಲರೂ ಸಾಮರಸ್ಯದಿಂದ ಇರುವುದರಿಂದ ಮನೆ-ಮನೆತನಗಳು ಉದ್ಧಾರವಾಗುತ್ತವೆ. ಮಠ ಸಮಷ್ಟಿಯ ಸಂಸ್ಥೆ, ಸಮುದಾಯ ಸಂಸ್ಥೆ, ಸಮಾಜದ ಸಂಸ್ಥೆ, ಮನೆಯ ಹಿರಿಮೆಗೆ ಹೇಗೋ ಹಾಗೆ ಸಮಾಜದ ಸಂಸ್ಥೆಯಲ್ಲಿಯೂ ಎಲ್ಲರೂ ಸಮಾನರಾಗಿ ಶ್ರದ್ಧೆ ವಿಶ್ವಾಸ ಪ್ರೇಮದಿಂದ ಲೋಕಹಿತ ಕಾರ್ಯದಲ್ಲಿ ನೆರವಾಗುವುದೇ ಮಠವನ್ನು ನೋಡಿ ಕೊಂಡಂತಾಗುವುದು. ಮನೆಯ ಸದಸ್ಯರಲ್ಲಿ (ಭಕ್ತರಲ್ಲಿ) ಮೇಲು ಕೀಳುಗಳೆಂಬ ಭಾವವಿಲ್ಲ. ಆದ್ದರಿಂದ ಮನೆ-ಮಠಗಳನ್ನು ಒಂದೆಂದು ಹೇಳಿದ ಹಿರಿಯರ ಮಾತಿನ ನೈಜ ಅರ್ಥವನ್ನು ಮಾಡಿಕೊಂಡು ಮನೆಯನ್ನು ಮತ್ತು ಸಮಾಜದ ಸಂಸ್ಥೆಯನ್ನು ಬೆಳೆಸುವಂತಾಗಲಿ, ಮನೆಯವರ ಹಿತ ಸಮಾಜದ ಸರ್ವರ ಹಿತ ಎರಡೂ ಸಾಧಿಸುವಂತಾಗಲಿ....'' (ಮ)

ಸಮಾಜದ ಹಿತ, ಸಮುದಾಯದ ಸಮಗ್ರ ಅಭಿವೃದ್ಧಿ ಹೇಗೆ ಸಾಧ್ಯ? ಎಂಬುದಕ್ಕೆ ನಮ್ಮ ಪರಂಪರೆ ಕಂಡುಕೊಂಡ ಉತ್ತರ ವಿದ್ಯಾಭ್ಯಾಸ ಎಂದು. ಈ ವಿದ್ಯೆ ಕೇವಲ ಲೋಕ ವ್ಯವಹಾರಕ್ಕೆ, ಗಳಿಸುವುದಕ್ಕೆ ಮಾತ್ರವಲ್ಲ, ಸುಸಂಸ್ಕೃತರಾಗಿ ಸಮಾಜದಲ್ಲಿ ಬದುಕುವ ಸಂಸ್ಕಾರ ಪಡೆಯುವುದಕ್ಕೆ. ಬದುಕು ಸಾಧ್ಯವಾಗುವುದು ಮಾತ್ರವಲ್ಲ ಸಹ್ಯವೂ ಆಗಬೇಕು ಎಂಬುದು ಹಿರಿಯರ ಅಪೇಕ್ಷೆ. ಅದಕ್ಕಾಗಿಯೇ ನಮ್ಮ ಹಿಂದಿನವರು ದೇವಾಲಯ-ಮಠಗಳನ್ನು ಕಟ್ಟಿ ಬೆಳೆಸಿದರು.

ದೇವಾಲಯ-ಮಠಗಳ ಮೂಲ ಉದ್ದೇಶ ಸಮಷ್ಟಿಗೆ ಶಿಕ್ಷಣ ನೀಡುವುದೇ

ಆಗಿತ್ತು. ಅವುಗಳು ಈಗಿನಂತೆ ಪೂಜಾಕೇಂದ್ರಗಳಾಗಿರಲಿಲ್ಲ. ಮೂಲಭೂತವಾಗಿ ವಿದ್ಯಾಕೇಂದ್ರಗಳೂ ಆಗಿದ್ದವು.

''ಪ್ರಾಚೀನ ಕರ್ನಾಟಕದ ದೇವಸ್ಥಾನಗಳನ್ನು ಕಲ್ಪಿಸಿಕೊಂಡಾಗ ಈಗಿನ ಚಿತ್ರಕ್ಕಿಂತ ಭಿನ್ನವಾದ ಚಿತ್ರ ಒಂದು ಮೂಡುತ್ತದೆ.... ಅವು ಜೀವಂತ ಕೇಂದ್ರಗಳು ಮಾತ್ರವಲ್ಲ ಇಡೀ ನಾಡಿನ ನಾಡಿಯನ್ನು ಹಿಡಿದು ನಡೆಸುತ್ತಿದ್ದ ಸಾಂಸ್ಕೃತಿಕ ಕೇಂದ್ರಗಳೂ ಆಗಿದ್ದವು....''

''ದೇವಸ್ಥಾನವು ಮುನಿಗಳಿರುವ ಸ್ಥಾನವಾಗಿದ್ದುದು ಮಾತ್ರವಲ್ಲ ದೊಡ್ಡ ವಿದ್ಯಾಕೇಂದ್ರವೂ ಆಗಿದ್ದಿತು. ಮಠ ಎಂಬ ಪದಕ್ಕೆ (ಯತಿಗಳ) ವಾಸಸ್ಥಾನ ಎಂಬುದು ಮೂಲಾರ್ಥ, ಅಂತಹ ವಾಸಸ್ಥಾನಗಳಲ್ಲಿ ವಿದ್ಯಾದಾನ ನಡೆಯುತ್ತಿದ್ದುದರಿಂದ ವಿದ್ಯಾಕೇಂದ್ರ, ಪಾಠಶಾಲೆ ಎಂಬ ಅರ್ಥಗಳು ಬಂದಿರಬೇಕು. ಅಮರಕೋಶದಲ್ಲಿ ಶಿಷ್ಯರಿರುವ ಸ್ಥಳ ಎಂಬ ಅರ್ಥವನ್ನು ಕೊಟ್ಟಿದೆಯಾದರೂ ಈಗಲೂ ಹಳ್ಳಿಗಳಲ್ಲಿ ಪಾಠಶಾಲೆಗಳನ್ನು 'ಮಠ', 'ಸಾಲೆಮಠ' ಎಂದು ಕರೆಯುವುದನ್ನು ಗಮನಿಸಬಹುದು.''

ನಮ್ಮ ಪುರಾಣೇತಿಹಾಸಗಳಲ್ಲಿ ಬರುವ ಋಷಿ ಮುನಿಗಳೆಲ್ಲ ಮೂಲಭೂತವಾಗಿ ಆಚಾರ್ಯ (ಉಪಾಧ್ಯಾಯರು)ರಾಗಿದ್ದರೆಂಬುದನ್ನು ಮರೆಯುವಂತಿಲ್ಲ. ಇದನ್ನೆಲ್ಲ ಉಲ್ಲೇಖಿಸುವ ಮೂಲ ಉದ್ದೇಶ ಇಷ್ಟೆ; ಮಠ ಲೋಕ ಕಲ್ಯಾಣಾರ್ಥವಾಗಿ ನಡೆಸಬಹುದಾದ ಚಟುವಟಿಕೆಯ ಮುಖ್ಯ ಕ್ಷೇತ್ರವೇ ವಿದ್ಯಾಭ್ಯಾಸ. ಏಕೆಂದರೆ ವಿದ್ಯಾಭ್ಯಾಸದಿಂದ ಮಾತ್ರ ಸಾಮಾಜಿಕ ಜವಾಬ್ದಾರಿ ಬೆಳೆಯಬಲ್ಲದು. ಸಮಾಜದಲ್ಲಿ ಪರಸ್ಪರ ಗೌರವದಿಂದ ವಿನಯದಿಂದ ಬಾಳುವುದನ್ನು ಮತ್ತು ಸ್ವಾವಲಂಬನೆಯನ್ನು ಶಿಕ್ಷಣ ಇಲ್ಲವೆ ವಿದ್ಯೆ ನೀಡಬಲ್ಲದು. ನಮ್ಮ ಪರಂಪರೆ ವಿದ್ಯೆಯನ್ನು ನಂಬಿದ್ದು ಹೀಗೆಯೆ.

'ವಿದ್ಯಾದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಂ ಪಾತ್ರತ್ವಾದ್ಧನಮಾಪ್ನೋತಿ ದನಾಂಧರ್ಮಃ ತತಃ ಸುಖಂ।' ವಿದ್ಯೆಯ ಪರಿಣಾಮವನ್ನು, ವಿದ್ಯೆಯಿಂದ ವಿನಯ, ವಿನಯದಿಂದ ಪಾತ್ರತೆ, ಪಾತ್ರತೆಯಿಂದ ಧನ (ಸಂಪತ್ತು) ಧನದಿಂದ ಧರ್ಮ, ಧರ್ಮದಿಂದ ಸುಖ ಎಂದು ಸೂತ್ರೀಕರಿಸಿದ್ದಾರೆ. ಇಲ್ಲಿ ಧರ್ಮ ಎಂದೊಡನೆ ಮತಧರ್ಮದ ಆಚಾರಗಳು ಎಂದು ಮಾತ್ರ ನಾವು ತಿಳಿಯಬೇಕಾಗಿಲ್ಲ. ಸಮಾಜದಲ್ಲಿ ಎಲ್ಲರೂ ಸೌಹಾರ್ದತೆಯಿಂದ ಬದುಕಲು ಬೇಕಾದ ಶ್ರದ್ಧೆ ವಿಶ್ವಾಸ ವಿನಯ ಇತ್ಯಾದಿ ಗುಣಗಳೇ ಧರ್ಮವೆಂದು ತಿಳಿಯುವುದು ಸೂಕ್ತ.

''.....ಧರ್ಮದ ವ್ಯಾಖ್ಯಾನವನ್ನು ಶಾಸ್ತ್ರ-ತರ್ಕಾದಿಗಳಿಂದ ಮಾಡುವ ರೀತಿಯೂ ಇದೆ. ಇರಲಿ ವಿಶೇಷ ಅಧ್ಯಯನ ಮಾಡದ ಜನಸಾಮಾನ್ಯರು ಧರ್ಮವನ್ನು ಅರಿಯುವುದು ಹೇಗೆ? ಇದಕ್ಕಾಗಿ ಆತಂಕ ಪಡಬೇಕಾಗಿಲ್ಲ. ಏಕೆಂದರೆ ಶ್ರೀಸಾಮಾನ್ಯರು ಧರ್ಮ ಮಾರ್ಗದಲ್ಲಿಯೇ ಇದ್ದಾರೆ; ಇಲ್ಲಿ ನೀವೆಲ್ಲ ಸಂಭ್ರಮದಿಂದ ಸೇರಿದ್ದೀರಿ. ತಳಿರು ತೋರಣಗಳಿಂದ ಗುರುಗಳು ಬರುವರೆಂದು ಸಿಂಗರಿಸಿದ್ದೀರಿ. ಗುರುಗಳು

ಸನ್ಮಂಗಳಕರವಾದುದನ್ನು ಪ್ರವಚನ ಮಾಡುತ್ತಾರೆಂದು ಶ್ರದ್ಧೆಯಿಂದ ಪ್ರೇಮದಿಂದ ನಿಮ್ಮ ನಿಮ್ಮ ವೈಯಕ್ತಿಕ ಸುಖ-ದುಃಖಾದಿಗಳನ್ನು ರಾಗದ್ವೇಷಾದಿಗಳನ್ನು ಮರೆತು ಬಂದು ಸೇರಿದ್ದೀರಿ. ಹೀಗೆ ಒಳ್ಳೆಯದನ್ನು ಸನ್ಮಂಗಳಕರವಾದುದನ್ನು ನಿರೀಕ್ಷಿಸುವುದು ನಮ್ಮ ರಾಗದ್ವೇಷಾದಿಗಳನ್ನು ಮರೆತು ಒಳ್ಳೆಯದಕ್ಕಾಗಿ ಹಾತೊರೆದು ಎಲ್ಲರೊಡನೊಂದಾಗಿ ಬೆರೆಯುವುದೇ ನಿಜವಾದ ಧರ್ಮ. ಇಲ್ಲಿ ಹೇಗೆ ಸಂತಸದಿಂದ ಪ್ರೀತಿಯಿಂದ ಸೇರಿದ್ದೀರೋ ಹಾಗೆ ಸಮಾಜದಲ್ಲಿ ಎಲ್ಲರೂ ಸಂತಸದಿಂದ ಗೌರವದಿಂದ ಬೆರೆತು ಬಾಳಿರಿ. ಇದೇ ಧರ್ಮಾನುಸರಣೆ'' (ಮ)

ನಮ್ಮ ಶಿಕ್ಷಣ ಪದ್ಧತಿಯಲ್ಲಿ, ಅದರ ಗುರಿಯಲ್ಲಿ ಹಲವು ದೋಷಗಳಿರುವುದನ್ನು ವಿದ್ವಾಂಸರನೇಕರು ಎತ್ತಿ ತೋರಿಸಿದ್ದಾರೆ. ಆದರೆ ಅದರಲ್ಲಿರುವ ಲೋಪದೋಷಗಳನ್ನು ತೊಡೆದುಹಾಕಬೇಕೇ ಹೊರತು ಶಿಕ್ಷಣ (ವಿದ್ಯೆ)ವನ್ನೇ ನಿಲ್ಲಿಸುವುದು, ಆತ್ಮಘಾತುಕವಾದ ಸಂಗತಿಯೆಂದು ಪ್ರಾಜ್ಞರ ಅಭಿಮತವಾಗಿದೆ. ಏಕೆಂದರೆ ಜಗತ್ತಿನ ಯಾವ ರಾಷ್ಟ್ರವೂ, ಯಾವ ಜನಾಂಗವೂ ವಿದ್ಯೆಯಿಲ್ಲದೆ ಮುಂದುವರಿದದ್ದಾಗಲಿ, ಶಾಂತಿಯಿಂದ ನಾಗರೀಕವಾಗಿ ಬಾಳಿದ್ದಕ್ಕಾಗಲಿ ಉದಾಹರಣೆಗಳಿಲ್ಲ. ಗ್ರೀಕ್ ದೇಶದ ಪ್ಲಾಟೊನ ಮಾತನ್ನು ಇಲ್ಲಿ ಸ್ಮರಿಸಬಹುದು.

''ಶಿಕ್ಷಣವು, ಅದು ಯಾವ ಬಗೆಯದ್ದಾಗಿರಲಿ, ಅದರ ಮಹತ್ವದ ಪ್ರಭಾವವು ವ್ಯಕ್ತಿಗಳಲ್ಲಿ ನಾಗರೀಕತೆ, ಮಾನವೀಯತೆ ಸಾಮಾಜಿಕ ಒಡನಾಟದ ಸುಸಂಸ್ಕೃತ ವರ್ತನೆಗಳನ್ನು ಉದ್ದೀಪನಗೊಳಿಸುತ್ತದೆ.''೨

ಪ್ರಾಚೀನ ಕಾಲದಿಂದಲೂ ಅಸಹ್ಯಮೃಗೀಯ ಬದುಕಿನ ಸಹ್ಯನಾಗರೀಕರನ್ನಾಗಿ ಜನಸಮುದಾಯವನ್ನು ತಿದ್ದಲು ಬೇಕಾದ ವಿದ್ಯೆಯನ್ನು ಧಾರ್ಮಿಕ ಸಂಸ್ಥೆಗಳೇ ನೀಡುತ್ತಾ ಬಂದಿವೆ. ಕ್ರಿಸ್ತಪೂರ್ವದಲ್ಲಿಯೇ ಬೌದ್ಧ ವಿಹಾರಗಳು ವಿದ್ಯಾಕೇಂದ್ರಗಳಾಗಿದ್ದವು. ಅವೇ ಮುಂದೆ ನಲಂದದಂತಹ ವಿಶ್ವವಿದ್ಯಾನಿಲಯಗಳಾಗಿ ವಿಕಾಸವಾಗಿದ್ದವು. ಚೈನ, ಜಪಾನ್, ಬರ್ಮ, ಥೈಲ್ಯಾಂಡ್ ಮುಂತಾದ ಪೂರ್ವ ರಾಷ್ಟ್ರಗಳಲ್ಲಿ ಬೌದ್ಧ ದೇವಾಲಯಗಳೇ ಸಾರ್ವಜನಿಕರಿಗೆ ಶಿಕ್ಷಣ ನೀಡುತ್ತಾ ಬಂದಿರುವುದು ಸರ್ವವಿದಿತ. ಕ್ರೈಸ್ತ ಮಿಶನರಿಗಳಂತೂ ಜಗತ್ತಿನಾದ್ಯಂತ ಶೈಕ್ಷಣಿಕ ಚಟುವಟಿಕೆಯನ್ನು ನಡೆಸಿಕೊಂಡು ಬಂದಿವೆ. ಕರ್ನಾಟಕದಲ್ಲಿಯೂ ಪ್ರಾಚೀನ ಕಾಲದಿಂದಲೂ ಶೈವ ಮಠಗಳು ಪ್ರಸಿದ್ಧ ವಿದ್ಯಾಕೇಂದ್ರಗಳಾಗಿದ್ದವೆಂದು ಡಾ||ಎಂ. ಚಿದಾನಂದಮೂರ್ತಿಯವರು ಶಿಲಾಶಾಸನಗಳ ಆಧಾರದಿಂದ ಪ್ರತಿಪಾದಿಸಿದ್ದಾರೆ. ಹೊಯ್ಸಳ ವೀರಬಲ್ಲಾಳರಾಯ, ಸಾಳ್ವನರಸಿಂಹರಾಜ, ಯಲಹಂಕದ ಪ್ರಭುಗಳು ಹೊಯ್ಸಳ ವೀರನರಸಿಂಹ ದೇವ- ಇವರೆಲ್ಲ ಶ್ರೀ ಆದಿಚುಂಚನಗಿರಿ ಮಠಕ್ಕೂ ದತ್ತಿಗಳನ್ನು ನೀಡಿ ಅಂದಿನ ಶಿಕ್ಷಣ ಕ್ರಮಕ್ಕೆ ಪ್ರೋತ್ಸಾಹಿಸಿದ್ದನ್ನು ಶಾಸನ ಮತ್ತು ಜಾನಪದಗಳಿಂದ ಅರಿಯಬಹುದು. ಇಂದೂ ಕೂಡ ಶ್ರೀಮಠ ಶಿಕ್ಷಣಕ್ಕೆ ಅಗ್ರಸ್ಥಾನವನ್ನು ನೀಡಿದ್ದು

ಸೂಕ್ತವಾಗಿದೆ.

ನಮ್ಮ ಪ್ರಾಚೀನ ಶಿಕ್ಷಣ ವ್ಯವಸ್ಥೆ ಧಾರ್ಮಿಕ ಸ್ವರೂಪದ್ದಾಗಿತ್ತು. ಅದರಲ್ಲಿ ಮತೀಯ ಅಧಿನಿವೇಶನವೂ ಇತ್ತು. ಇನ್ನೂ ನೇರವಾಗಿ ಹೇಳಬೇಕೆಂದರೆ ಹಲವು ಸಂದರ್ಭಗಳಲ್ಲಿ ಅದು 'ಮತೀಯ'ವಾಗಿತ್ತು. ಮತಕ್ಕೆ ಮಹತ್ವಕೊಟ್ಟಿದ್ದು ಮಾತ್ರವಲ್ಲ ತಮ್ಮ ತಮ್ಮ ಮತದ ಮಕ್ಕಳಿಗೆ ಮಾತ್ರ ಶಿಕ್ಷಣ ಕೊಡುವ ಸಣ್ಣತನವೂ ಇಲ್ಲದಿರಲಿಲ್ಲ. ಆದರೆ ಶ್ರೀ ಆದಿಚುಂಚನಗಿರಿ ನಾಥ ಸಂಘ ಇಲ್ಲವೆ ನಾಥಸಿದ್ಧ ಪರಂಪರೆಗೆ ಸೇರಿದ ಪೀಠ. ನಾಥಸಿದ್ಧ ಸಂಪ್ರದಾಯವು ಯಾವತ್ತು ವರ್ಣಾಶ್ರಮ ಆಧಾರಿತ ಆಚಾರಗಳನ್ನು ಶಿಕ್ಷಣವನ್ನು ಒಪ್ಪುವುದಿಲ್ಲ. ಈ ಬಗೆಯ ವಿಶ್ವ ವಿಶಾಲ ದೃಷ್ಟಿಕೋನ ಈ ಮಠದ ವೈಶಿಷ್ಟ್ಯವೂ ಹಿರಿಮೆಯೂ ಆಗಿದೆ.

''ಮತವೆಂದರೆ ಅಭಿಪ್ರಾಯ. ಅದಕ್ಕಿಂತ ಹೆಚ್ಚಿನ ಅರ್ಥವನ್ನು ಅದಕ್ಕೆ ಆರೋಪಿಸುವುದು ಸಮುದಾಯ ಜೀವನಕ್ಕೆ ದೊಡ್ಡ ಆತಂಕವನ್ನು ಒಡ್ಡಿದಂತೆಯೇ. ಇದು ಮನುಷ್ಯರೆಲ್ಲರೂ ಪರಸ್ಪರ ಗೌರವದಿಂದ, ಸ್ನೇಹದಿಂದ ಬಾಳುವಂತಾಗಬೇಕು. ಮಹಾದಾರ್ಶನಿಕ ಕವಿ ಕುವೆಂಪುರವರ 'ಮನುಜಮತ ವಿಶ್ವಪಥ' ತ್ರಿಕಾಲ ಅಬಾಧಿತವಾದ ತತ್ತ್ವವಾಗಿದೆ. ಅವರವರ ಅಭಿಮತ ಅವರವರಿಗೆ. ಒಬ್ಬರ ಅಭಿಪ್ರಾಯ— ಅಭಿಮತ ಬೇರೆಯಾದ ಕಾರಣದಿಂದಲೇ ಅವರು ಕೀಳೋ ಮೇಲೋ ಎಂದು ಭಾವಿಸುವುದು ಅಧರ್ಮ, ಅದು ಮಾನವೀಯತೆಗೆ ಮಾಡುವ ಅವಮಾನ.....'' (ಮ)

ಸ್ವಾತಂತ್ರ್ಯ ಬಂದು ಅರ್ಧ ಶತಮಾನವೇ ಕಳೆದರೂ ಅನಕ್ಷರತೆಯನನ್ನು ನಾವಿಂದು ತೊಡೆದು ಹಾಕಲಿಲ್ಲ; ಬದಲಿಗೆ ಅನಕ್ಷರಸ್ಥರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಹೋಗಿದೆ. ಮಹಾತ್ಮಗಾಂಧಿಯವರು ಅನಕ್ಷರತೆ ಎನ್ನುವುದು ಒಂದು ಶಾಪ ಎನ್ನುತ್ತಿದ್ದರು. ಸರಕಾರ ಈ ಸಮಸ್ಯೆಯನ್ನು ಬಗೆಹರಿಸಲೆಂದು ಕೈಕಟ್ಟಿಕೂರುವುದು ಕರ್ತವ್ಯದಿಂದ ವಿಮುಖವಾದಂತೆ. ಅದರಲ್ಲಿಯೂ ಗ್ರಾಮೀಣ ಪ್ರದೇಶದ ಜನರಲ್ಲಿಯೇ ನಿರಕ್ಷರಸ್ಥರು ಹೆಚ್ಚುತ್ತಿದ್ದಾರೆ. ಜನರ ಸಂಸ್ಕೃತಿ ಮತ್ತು ಶ್ರದ್ಧೆಯ ಕೇಂದ್ರಗಳಾದ ಮಠಗಳು ಈ ಕಾರ್ಯದಲ್ಲಿ ತೊಡಗುವುದು ಔಚಿತ್ಯಪೂರ್ಣವಾದ ಕರ್ತವ್ಯವಾಗಿದೆ.

''ಅನಕ್ಷರತೆಯೆಂಬುದು ಶಾಪ ಮಾತ್ರವಲ್ಲ, ಅದನ್ನು ನಿವಾರಿಸದೇ ಇರುವುದು ಪಾಪ. ಈ ದೇಶದ ಪ್ರತಿಯೊಬ್ಬ ವ್ಯಕ್ತಿಯೂ ವಿದ್ಯಾವಂತನಾಗುವಂತೆ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದು, ಕಾರ್ಯಪ್ರವೃತ್ತರಾಗುವುದು ಪುಣ್ಯದ ಕಾರ್ಯ, ಅದೇ ನಿಜವಾದ ಧರ್ಮ ಕಾರ್ಯ. ಇದನ್ನು ಧರ್ಮ ಸಂಸ್ಥಾನಗಳು ಕೈಗೆತ್ತಿಕೊಳ್ಳುವುದು ಕರ್ತವ್ಯವಾಗಿದೆ....'' (ಮ)

ಈ ದೃಷ್ಟಿಯಿಂದ ನಾಡಿನಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನವು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿರುವುದು ಈ ನಾಡಿನ

ಭಾಗ್ಯವಾಗಿದೆ.

''ಶಿಕ್ಷಣವೆಂದರೆ ಸಾಕ್ಷರರನ್ನಾಗಿಸುವುದು ಮಾತ್ರವಲ್ಲ ಸ್ವಾವಲಂಬಿಗಳಾಗಿ ಜೀವನ ಸಾಗಿಸಲು ಸಾಧ್ಯವಾಗುವಂಥ ಶಿಕ್ಷಣ ನೀಡಬೇಕು. ಸಾಮಾಜಿಕ ಜವಾಬ್ದಾರಿ ಮತ್ತು ಪ್ರಜಾಪ್ರಭುತ್ವದ ಉನ್ನತ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವಂತಹ ನೈತಿಕ ಶಿಕ್ಷಣ ನೀಡಬೇಕು....'' (ಮ)

ಹರ್ಬರ್ಟ್ ಸ್ಪೆನ್ಸರ್ ಎಂಬ ಪ್ರಾಜ್ಞ ಮನುಷ್ಯ ಬದುಕಿನ ಪರಿಪೂರ್ಣತೆಗೆ ಕಾರಣವಾದ ಪಂಚಮುಖಿ ಸಾಮರ್ಥ್ಯವನ್ನು ಹೀಗೆ ವಿವರಿಸಿದ್ದಾನೆ.

೧. ವ್ಯಕ್ತಿತ್ವದ ಅನನ್ಯತೆ ಮತ್ತು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಅಗತ್ಯವಾದ ಕ್ರಿಯಾಶೀಲತೆ.

೨. ಸ್ವತಂತ್ರ ಬದುಕಿಗಾಗಿ ಗಳಿಕೆಯ ಕ್ರಿಯೆ.

೩. ಸಾಮಾಜಿಕ ವರ್ತನೆ ಅಸಹ್ಯವಾಗದಂತೆ ಶಿಸ್ತನ್ನು ಒದಗಿಸುವ ಸ್ವನಿಯಂತ್ರಕ ಸಾಮರ್ಥ್ಯ.

೪. ಸಾಮಾಜಿಕ ಮತ್ತು ರಾಜಕೀಯ ಹೊಣೆಗಾರಿಕೆಯನ್ನು ನಿರ್ವಹಿಸುವ ಕರ್ತವ್ಯ ನಿಷ್ಠೆ.

೫. ಜೀವನದಲ್ಲಿ ದೊರೆಯುವ ವಿರಾಮಗಳನ್ನು ಸಾಂಸ್ಕೃತಿಕ-ಸಾಹಿತ್ಯಿಕ-ಧಾರ್ಮಿಕ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಸಂಸ್ಕಾರ.

ಈ ಐದೂ ಬಗೆಯ ಸಾಮರ್ಥ್ಯದ ಪೂರ್ಣ ಅಳವಡಿಕೆ ಅನುಷ್ಠಾನಗಳಿಂದ ಮಾತ್ರ ಬದುಕು ಪೂರ್ಣತೆಯನ್ನು ಪಡೆಯುತ್ತದೆ. ಈ ಬಗೆಯ ವ್ಯಕ್ತಿತ್ವದ ವಿಕಾಸಕ್ಕೆ ಒಂದು ಬಗೆಯ ಶಿಕ್ಷಣ ಸಂಸ್ಥೆ ಸಾಲದು. ಅದಕ್ಕಾಗಿಯೇ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಕೇವಲ ಶ್ರೀಕ್ಷೇತ್ರದಲ್ಲಿ ಮಾತ್ರವಲ್ಲದೆ ನಾಡಿನ ಉದ್ದಗಲಕ್ಕೂ ವಿವಿಧ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಸಂಕಲ್ಪ ಮಾಡಿದರು. ಅವಿರತ ಪರಿಶ್ರಮದಿಂದ ಅವರ ದಿವ್ಯ ಸಂಕಲ್ಪ ಕಾರ್ಯಗತವಾಗಿದೆ.

ಹಳೆಬೇರು-ಹೊಸಚಿಗುರು ಕೂಡಿರಲು ಮರಸೊಗಸು. ನವೀನ ವೈಜ್ಞಾನಿಕ ಭೂಮಿಕೆಯಲ್ಲಿ ಹೆಜ್ಜೆ ಇಡಲು ಸನಾತನ ಸಂಸ್ಕೃತಿಯ ಹಿನ್ನೆಲೆಯೂ ಅಗತ್ಯ.

''ಸಮಾನತೆಯ ಬಗೆಗೆ ಮಾತನಾಡುವ ಸಂದರ್ಭಗಳಲ್ಲಿ ವಿದ್ವಾಂಸರನೇಕರು ಆರ್ಥಿಕ ಅಸಮಾನತೆಯನ್ನೇ ಒತ್ತಿ ಹೇಳುತ್ತಾರೆ. ಆರ್ಥಿಕ ಅಸಮಾನತೆ ಅನ್ಯಾಯಕ್ಕೆ ಎಡೆಮಾಡಿಕೊಟ್ಟಿದೆ, ನಿಜ. ಆದರ ಜೊತೆಗೆ ಧಾರ್ಮಿಕ-ಸಾಂಸ್ಕೃತಿಕ ಅಸಮಾನತೆಯೂ ಈ ದೇಶದ ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ ಗ್ರಾಮೀಣ ಜನರು, ದೀನ-ದಲಿತರು, ಸಾಂಸ್ಕೃತಿಕ-ಧಾರ್ಮಿಕ ವಿಚಾರಗಳಲ್ಲಿಯೂ ಅನ್ಯರಿಗಿಂತ ತಾವು ಕೀಳೆಂದು ಭಾವಿಸಬಾರದು.

ಅವರಿಗೆ ಆತ್ಮಾಭಿಮಾನ-ದೇಶಾಭಿಮಾನ ಬರಬೇಕಾದರೆ ಈ ದೇಶದ ಸಾಂಸ್ಕೃತಿಕ ಇತಿಹಾಸದದ ಪರಿಜ್ಞಾನ ಅಗತ್ಯ. ಹೀಗೆಂದ ಮಾತಿಗೆ ನಮ್ಮ ಧಾರ್ಮಿಕ ಸಾಂಸ್ಕೃತಿಕ ಇತಿಹಾಸವೆಲ್ಲಾ ಸದಾ ಒಳ್ಳೆಯದನ್ನೇ ಮಾಡಿದೆಯೆಂದು ಪ್ರತಿಪಾದನೆ ಇಲ್ಲಿಯ ಉದ್ದೇಶವಲ್ಲ. ವಿಶ್ವಮಾನ್ಯವಾದ ಸತ್ವವೂ ಅದರಲ್ಲಿದೆ. ಆಚಾರದಲ್ಲಿ ಕಂದಾಚಾರ ಕಲಬೆರಕೆಯೂ ಆಗಿದ್ದಿದೆ. ಅದರಲ್ಲಿ ಹುರುಳಾವುದು? ತಿರುಳಾವುದು? ಎಂದು ಇಂದು ಅರಿಯಬೇಕಾಗಿದೆ. ಅದಕ್ಕಾಗಿಯೇ ಶ್ರೀಕ್ಷೇತ್ರದಲ್ಲಿ ಸಂಸ್ಕೃತ ಭಾಷೆಯ ಶಿಕ್ಷಣ ಮಾತ್ರವಲ್ಲ, ವೇದ; ಆಗಮ ಮಹಾವಿದ್ಯಾಲಯವನ್ನು ಸ್ಥಾಪಿಸಲಾಗಿದೆ. .... ಈ ಕ್ಷೇತ್ರವನ್ನು ಅನಾದಿಕಾಲದಿಂದಲೂ ಜಗದ್ಗುರು ಸಂಸ್ಥಾನವೆಂದು ಜನತೆ ಮಾನ್ಯ ಮಾಡಿದೆ. ಜಗದ್ಗುರುಗಳೆಂದರೆ ಕೆಲವೇ ಜನರ ಜಗತ್ತೆಂಬ ಸಣ್ಣತನ ಇರಕೂಡದು. ಯಾವ ಮತ-ಧರ್ಮದವರೇ ಆಗಿರಲಿ ಬಡವರಾಗಲಿ-ಬಲ್ಲಿದರಾಗಲಿ, ವೇದ-ಆಗಮಗಳನ್ನು ಶ್ರೀಕ್ಷೇತ್ರದ ಸಂಸ್ಥೆಯಲ್ಲಿ ಪಡೆಯಬಹುದು......'' (ಮ)

ಶ್ರೀಕ್ಷೇತ್ರದಲ್ಲಿ ವೇದಾಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಉಚಿತ ವಸತಿ-ಊಟಗಳನ್ನಿತ್ತು ಪ್ರೋತ್ಸಾಹಿಸಲಾಗುತ್ತಿದೆ.

ಶ್ರೀಮಠವು ಅನ್ನದಾನಿ ಮಠವೆಂದು ಖ್ಯಾತವಾಗಿದೆ. ಶ್ರೀ ಶ್ರೀಗಳವರು ಪೀಠಾರೋಹಣಗೈದ ಸಂದರ್ಭದಲ್ಲಿ ಶ್ರೀಮಠದ ಜಮೀನುಗಳು ಪಾಳುಬಿದ್ದಿದ್ದವು.'ಹಳ್ಳಿಗಳು ಹಸುರಾಗಿದ್ದರೆ ದೇಶ ಉಸಿರಾಡುತ್ತದೆ' ಎನ್ನುವ ಮಹಾ ಸನ್ನಿಧಾನ ಅನೇಕ ಶಾಖಾಮಠ ಮತ್ತು ಉಪಶಾಖಾ ಮಠಗಳನ್ನು ಸ್ಥಾಪಿಸಿ ಕೃಷಿಭೂಮಿಯನ್ನು ಸಾಗು ಮಾಡುವಂತೆ ವ್ಯವಸ್ಥೆ ಮಾಡಿದರು. ಮಾಯಸಂದ್ರದ ಕಲ್ಪತರು ಆಶ್ರಮ, ಹಾಲ್ತಿ ಸ್ವರ್ಗಾಶ್ರಮ ಶಿವಮೊಗ್ಗೆಯ ಶಾಖಾ ಮಠ, ಕುಂಬಳಗೋಡಿನ ಕೃಷಿಕ್ಷೇತ್ರಾದಿಗಳು ಇಂದು ನಂದನವನಗಳಾಗಿವೆ. ''ಶ್ರೀಪೀಠಕ್ಕೆ ಕೃಷಿಕರೆಲ್ಲರೂ ಭಕ್ತರಾಗಿದ್ದಾರೆ. ಅವರಿಗೆ ಉಪದೇಶಮಾಡುವ ಮುನ್ನ ಮಾದರಿ ಕೃಷಿಯನ್ನು ನಡೆಸುವುದು ಧರ್ಮಕಾರ್ಯವಾಗಿದೆ.'' (ಮ)

ಅನೇಕ ಸಂದರ್ಭದಲ್ಲಿ ಸನ್ಯಾಸಾಶ್ರಮದವರು ಕರ್ಮತ್ಯಾಗ ಮಾಡಬೇಕಲ್ಲವೆ? ಎಂದು ಹಲವರು ಹುಬ್ಬೇರಿಸಿದ್ದುಂಟು. ಅದಕ್ಕೆ ಮಹಾಸನ್ನಿದಾನಂಗಳವರು 'ಕರ್ಮಫಲ ತನಗೆ ಬರಲೆಂಬ ವಾಂಛೆಯತ್ಯಾಗ ಮುಖ್ಯ, ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ' ಎಂದು ಸಮಾಧಾನ ಹೇಳಿದ್ದುಂಟು.

ಶ್ರೀ ಜಗದ್ಗುರುವರ್ಯರು ಧರ್ಮಶಾಸ್ತ್ರ ಪಾರಂಗತರು ತಪೋನಿರತರೂ ಆಗಿರಬೇಕೆಂಬುದು ನಿಜವಾದರೂ ಅದಕ್ಕೂ ಮಿಗಿಲಾದ ಅನುಷ್ಠಾನಾದಿಗಳು ಇವೆಯೆಂದು ಮಹಾಸನ್ನಿದಾನದವರ ಅಭಿಮತವಾಗಿದೆ.

''ಬುದ್ಧಭಗವಾನರ ಜೀವನವನ್ನು ಪರಿಶೀಲಿಸಿ, ಆತ ಪರಮ ವೈರಾಗ್ಯ ಮೂರ್ತಿಯಾಗಿದ್ದರೂ, ಜನರನ್ನು ಜನರ ಜೀವನವನ್ನು ಅತ್ಯಂತ ಗೌರವ, ಕರುಣೆ,

ಅಭಿಮಾನದಿಂದ ನೋಡಿದ್ದಾನೆ. ಮೈತ್ರಿ (ಮೆತ್ತ) ಕರುಣೆ, ಮುದಿತ, ಉಪೇಕ್ಷ (ಸಮೂಹಿತ ಮಸ್ಥಿತಿ) ಈ ನಾಲ್ಕು ಮನೋಧರ್ಮದ ನೆಲೆಗಳನ್ನು ಬ್ರಹ್ಮ ವಿಹಾರ ಎಂದು ಕರೆದದ್ದನ್ನು ಸ್ಮರಿಸಬೇಕು. ಎಲ್ಲೋ ದೂರದಲ್ಲಿ ಕಾಯಿಲೆಯಿಂದ ನರಳುತ್ತಿದ್ದರೆ ರೋಗಿಯ ಶುಶ್ರೂಷೆಗಾಗಿ ತಾನೇ ನಡೆದು ಹೋದದ್ದನ್ನು ನೆನೆದರೆ ಧರ್ಮದ ಮೂಲನೆಲೆ ದುಃಖಿಗಳ ದುಃಖವನ್ನು ಉಪಶಮನ ಮಾಡುವುದೇ ಆಗಿದೆ. ನಿಜವಾದ ಜೀವನ ಪ್ರೀತಿ ಒಂದು ಪೀಠದ ಅಧಿಪತಿಯಾಗುವಲ್ಲಿ ಕೇವಲ ಯತೀಶ್ವರರಾಗಿ ತಪೋಧನರಾಗುವ ಜೊತೆಗೆ ಸಮಾಜದ ಅವಗಣನೆಗೆ ಒಳಗಾದವರ ಸೇವೆಯ ಹೊಣೆಗಾರಿಕೆಯೂ ಇದೆ ಎನ್ನದೆ ವಿಧಿಯಿಲ್ಲ. ಶುದ್ಧ ಅಂತಃಕರಣದ ದಯೆ ಶಾಸ್ತ್ರಕ್ಕೆ ಮೀರಿದ ದೈವೀಗುಣವಾಗಿದೆ. ದಯೆಯೇ ಧರ್ಮದ ಮೂಲವಯ್ಯ ಎಂದು ಬಸವಣ್ಣನವರ ಆಶಯವನ್ನು ಸದಾ ಧಾರಣ ಮಾಡುವುದು ಶ್ರೇಯಸ್ಕರ....'' (ಮ)

ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನವು ಅಂಧ ಮಕ್ಕಳ ಅಶ್ರಮ ಶಾಲೆಗಳನ್ನು ತೆರೆದು ಬದುಕಿನಲ್ಲಿ ಸ್ವಾವಲಂಬಿಗಳಾಗಿ ಬದುಕಲು ನೂರಾರು ಜನ ಅಂಧ ಮಕ್ಕಳಿಗೆ ಅವಕಾಶ ಮಾಡಿ ಕೊಟ್ಟಿರುವುದು, ಈ ಬಗೆಯು ದಯೆಯ ಸಂಕೇತವಾಗಿದೆ.

ಧಾರ್ಮಿಕವೆಂದರೆ ಈ ಲೋಕದ ಬದುಕಿನ ತಿರಸ್ಕಾರವಲ್ಲ; ಬದುಕಿನ ಉದ್ಧಾರ, ಬದುಕು ಧರ್ಮಸಮ್ಮತವಾಗುವುದು ಉತ್ತಮ ಜೀವನ ಮಾರ್ಗವನ್ನು ಅನುಸರಿಸುವುದರಿಂದ ಆದಕ್ಕಾಗಿಯೇ ತರಬೇತಿ ಶಾಲೆಗಳನ್ನು (ಮೇಲುಕೋಟೆ, ನಾಗಮಂಗಲ, ಬೆಳ್ಳೂರು, ಚನ್ನರಾಯಪಟ್ಟಣ, ನೆಲಮಂಗಲ) ಗ್ರಾಮೀಣ ಪ್ರದೇಶಗಳಲ್ಲಿ ತೆರೆಯಲಾಗಿದೆ. ತಾಂತ್ರಿಕ ಮಹಾವಿದ್ಯಾಲಯಗಳು, ಬಿ ಫಾರ್ಮ, ಡಿ ಫಾರ್ಮ, ವೈದ್ಯಕೀಯ ಮಹಾವಿದ್ಯಾಲಯ, ಡಿಪ್ಲಮೋ ಕಾಲೇಜುಗಳು, ಕೃಷಿ ತರಬೇತಿ ಕೇಂದ್ರಗಳು ಹೀಗೆ ಹತ್ತು ಹಲವು ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು ತೆರೆದಿರುವುದು ಎಲ್ಲ ಬಗೆಯ ವೃತ್ತಿಪರ ಗ್ರಾಮೀಣ ಬಡಜನರಿಗೆ ಲಭ್ಯವಾಗಲೆಂಬ ಸಂಕಲ್ಪದಿಂದಲೇ.

ಸಾಂಪ್ರದಾಯಿಕ ಶಿಕ್ಷಣಕ್ಕಾಗಿ ಎಲ್ಲೆಡೆಗಳಲ್ಲಿ ಬಾಲವಾಡಿಯಿಂದ ಸ್ನಾತಕ ಕಾಲೇಜಿನವರೆಗೆ ಸಂಸ್ಥೆಗಳನ್ನು ತೆರೆಯಲಾಗಿದೆ. ಇಂಥ ಸಂಸ್ಥೆಗಳು ನೂರ ಎಂಟಕ್ಕೂ ಹೆಚ್ಚು ಎಂದರೆ ಅಚ್ಚರಿಪಡಬೇಕಾಗಿಲ್ಲ.

ಪರಮಪೂಜ್ಯರಿಗೆ ನಮ್ಮ ಸಮಾಜ ತಿರಸ್ಕಾರದಿಂದ ಕಂಡ ಅನಾಥರಂತೆ ದುಃಖಿಗಳಾದ ತಾಯಂದಿರ ಬಗ್ಗೆ ಕರುಣೆಯಿದೆ, ಅವರ ಆರ್ಥತೆಗಾಗಿ ಮರುಕವಿದೆ.

''ಶ್ರೀಮಠವು ಮಾತೆಯರನ್ನು ಗೌರವದಿಂದ ಕಾಣುತ್ತದೆ. ಅಷ್ಟೆಯಲ್ಲ ಅವರು ಗೌರವದಿಂದ ಜೀವನ ನಡೆಸುವಂತಾಗಲೆಂದು ಭಗವಂತನಲ್ಲಿ ಪ್ರಾರ್ಥಿಸುವುದು ಕರ್ತವ್ಯವೆಂದು ನಂಬಿದೆ.'' (ಮ)

ಈ ಅನುಕಂಪೆಯ ಮಹಿಳಾ ಸೇವಾಶ್ರಮಗಳ ಸ್ಥಾಪನೆಗೆ ಕಾರಣವಾಗಿದೆ. ಪರಿಸ್ಥಿತಿಯ ಒತ್ತಡಕ್ಕೆ ನಿಲುಕಿ ಪತಿಯಿಂದ ತಿರಸ್ಕೃತಳಾದ ಮಹಿಳೆಯರು, ಪತಿಯನ್ನು

ಕಳೆದುಕೊಂಡವರು ಅನಾಥರಾಗಿ ಕಣ್ಣೀರಿಡಬಾರದು. ಅವರು ಅನ್ಯರ ಆಶ್ರಯದಲ್ಲಿ ಹಂಗಿನಲ್ಲಿಯೂ ಬಾಳಬಾರದು ತಾವು ಒಂದು ಸಂಸ್ಥೆಯಲ್ಲಿ ಜೀವನಕ್ಕೆ ಅಗತ್ಯವಾದ ಧನ ಸಂಪಾದನೆ ಮಾಡಲು ಯೋಗ್ಯವಾದ ತರಬೇತಿಯನ್ನು ಪಡೆಯಬೇಕು. ದುಡಿಮೆಯಿಂದ ಸಂಪಾದಿಸಿ ಬಾಳಬೇಕು. ಈ ಉದ್ದೇಶದಿಂದಲೇ ಮಹಿಳಾಸೇವಾಶ್ರಮಗಳನ್ನು ತೆರೆಯಲಾಗಿದೆ.

ವೃದ್ಧಾಪ್ಯ ಬದುಕಿನ ಅನಿವಾರ್ಯ ಅಂಗ. ಹಲವು ಬಾರಿ ವೃದ್ಧರು ಮನೆಯಿಂದ ತಿರಸ್ಕೃತರಾಗುವುದುಂಟು ಅಥವಾ ಹೊಸ ಪೀಳಿಗೆಯೊಂದಿಗೆ ಹೊಂದಿಕೊಳ್ಳಲಾಗದೇ ಹೋಗಬಹುದು. ಅಂಥವರಿಗಾಗಿ ವೃದ್ಧಾಶ್ರಮಗಳನ್ನು ತೆರೆಯಲಾಗಿದೆ.

ಲೋಕ ಹಿತದಲ್ಲಿ ಶ್ರೀ ಜಗದ್ಗುರು ಪೀಠಗಳು ಮಾಡಬೇಕಾದುದೇನೆಂಬುದನ್ನು ಶ್ರೀ ಆದಿಚುಂಚನಗಿರಿಯ ಶ್ರೀ ಪೀಠವು ಮಹಾಸ್ವಾಮಿಗಳವರ ಕೃಪಾಶೀರ್ವಾದದಿಂದ ನಡೆಸುತ್ತಿರುವ ಕಾರ್ಯಕ್ರಮಗಳೇ ಸಾರಿ ಹೇಳುತ್ತವೆ. ಶ್ರೀಮಠದ ಪರಮಗುರಿಯೇ ಪೂರ್ಣ ಮಾನವರ ನಿರ್ಮಾಣವೆಂಬುದನ್ನು ಶ್ರೀ ಶ್ರೀಗಳವರ ಮಹಾ ವಾಕ್ಯದಿಂದಲೇ ಗ್ರಹಿಸಬಹುದು.

''ಬೌದ್ಧರ ಮಹಾವಗ್ಗದಲ್ಲಿ ಒಂದು ನಿರೂಪಣೆ ಹೀಗಿದೆ. ರಾಜಗೃಹದ ಶಾಲವತಿ ಪುತ್ರ ಜೀವಕ ವೈದ್ಯ ವಿದ್ಯೆಯನ್ನು ಕಲಿಯಲು ತಕ್ಷ ಶಿಲೆಗೆ ಹೋದ ಏಳು ವರ್ಷಗಳ ಬಳಿಕ ಗುರು ಒಂದು ದಿನ ಜೀವಕನನ್ನು ಕರೆದು 'ನೀನು ಕೊಟ್ಟಿಗೆಗೆ ಸ್ವಲ್ಪ ಸೊಪ್ಪನ್ನು ತಾ ಆದರೆ ಔಷಧ ಗಿಡಗಳನ್ನು ಕಡಿಯಬೇಡ' ಎಂದು ಜೀವಕ ತಕ್ಷಶಿಲೆಯ ಸುತ್ತಮುತ್ತಲ ಕಾಡನ್ನು ತಿರುಗಿ ಸಂಜೆ ಬರಿಗೈಯಲ್ಲಿ ಬಂದ ಗುರುವಿನೆದುರು ತಲೆಬಾಗಿ ವಿನಯದಿಂದ 'ಔಷಧಕ್ಕೆ ಬಾರದ ಯಾವ ಗಿಡವೂ ನನಗೆ ದೊರೆಯಲಿಲ್ಲ ಕ್ಷಮಿಸಿ ಎಂದ'. ಆಗ ಗುರು 'ನೀನು ನಿಜವಾದ ವೈದ್ಯನಾದೆ ಹೋಗಿ ವೃತ್ತಿಯನ್ನು ಆರಂಭಿಸು' ಎಂದನಂತೆ ವಿದ್ಯೆಯ ಗುರಿ ಹೀಗಾಗಬೇಕು ನಾವು ಬದುಕಿನ ರಂಗದಲ್ಲಿ ಉಪಯೋಗವಿಲ್ಲದ್ದು ಯಾವುದೂ ಇಲ್ಲ ಸರಿಯಾದ ರೀತಿಯಲ್ಲಿ ನಮ್ಮ ಸುತ್ತಮುತ್ತಲ ವಸ್ತುಗಳನ್ನು ಬಳಸುವಂತೆ ಮಾಡಬೇಕು ಎಂಬುದನ್ನು ಅರಿಯಬೇಕು. ಈ ದೇಶದ ಸಂಪತ್ತು ಸರಿಯಾದ ಬಳಕೆ ಮತ್ತು ಅಪವ್ಯಯದ ತಡೆ ಇದು ಪೂರ್ಣ ವ್ಯಕ್ತಿತ್ವದ ಬೆಳವಣಿಗೆಗೆ ಅಗತ್ಯ. ಅದಕ್ಕಾಗಿಯೆ ಎಲ್ಲ ವಿಧದ ತರಬೇತಿ ಶಿಕ್ಷಣ ನೀಡುವುದು ಶ್ರೀ ಪೀಠದ ಗುರಿಯಾಗಿದೆ.''

ಸರ್ವೇಷಾಂ ಸ್ವಸ್ತಿರ್ಭವತು
ಸರ್ವೇಷಾಂ ಶಾಂತಿರ್ಭವತು
ಸರ್ವೇಷಾಂ ಪೂರ್ಣಂಭವತು
ಸರ್ವೇಷಾಂ ಮಂಗಲಂಭವತು

***

ಮ— ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರ ಮಹಾವಾಕ್ಯ

೧,೨— ಡಾ.ಎಂ. ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ-೧೭೨, ೧೯೦.

ಶ್ರೀಗಳವರ ಸಾಮಾಜಿಕ ಪ್ರಜ್ಞೆ

-ಕೆ. ರಾಜೇಶ್ವರಿ ಗೌಡ

ಭಾರತೀಯ ಪರಂಪರೆಯಲ್ಲಿ ಗುರುವಿನ ಸ್ಥಾನ ಪೂಜನೀಯವಾಗಿದೆ; ಪ್ರಭಾವಯುತವಾಗಿದೆ. ಅನೇಕ ಸಾಮ್ರಾಜ್ಯಗಳ ಉಗಮಕ್ಕೆ, ಪುನರುತ್ಥಾನಕ್ಕೆ ಕಾರಣಕರ್ತರಾದ ಗುರುಗಳನ್ನು ಇತಿಹಾಸದಲ್ಲಿ ಕಾಣುತ್ತೇವೆ.

ಧರ್ಮದ ತಳಪಾಯದ ಮೇಲೆ ಜನಪದರನ್ನು ಸತ್ಯಪಥದಲ್ಲಿ ಕೈ ಹಿಡಿದು ನಡೆಸುತ್ತಾ ಬಂದವರು ಸದ್ಗುರುಗಳು. ''ಸತ್ಯ ದೊಡ್ಡದು; ಸತ್ಯದಲ್ಲಿ ನಡೆಯುವವನು ಇನ್ನೂ ದೊಡ್ಡವನು; ಸಮಾಜವನ್ನು ಸತ್ಯದ ಹಾದಿಗೊಯ್ಯುವವನು ಮಹಾತ್ಮನು''-(ಸಂತ ಗುರುನಾನಕ) ಈ ಮಾತು ಸತ್ಯ, ಧರ್ಮ, ಮಾನವೀಯತೆಗಳ ಸಿದ್ಧಾಂತಕ್ಕೆ ಬದ್ಧರಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಅನೇಕ ಮಾನವ ಶ್ರೇಷ್ಠರನ್ನು ನೆನೆಯುವಂತೆ ಮಾಡುತ್ತದೆ.

ಪುರಾಣೇತಿಹಾಸ ಪ್ರಸಿದ್ಧ ಪುಣ್ಯ ಶಿವಕ್ಷೇತ್ರ ಶ್ರೀ ಆದಿಚುಂಚನಗಿರಿ. ಭೈರವನ ಭಕ್ತರಿಗೆ ಪರಿಚಿತವಿದ್ದ ಈ ಕ್ಷೇತ್ರ ಇಂದು ಪರಿಮಿತಿಯ ಗಡಿದಾಟಿ ಸಾಗರದಾಚೆಗೂ ತನ್ನ ಕೀರ್ತಿಕೇತನವನ್ನು ಮುಗಿಲೆತ್ತರಕ್ಕೆ ವಿಜೃಂಭಿಸಿದೆ ಎಂಬುದು ಅತ್ಯಂತ ಹೆಮ್ಮೆಯ ಸಂಗತಿ. ಆದಿಚುಂಚನಗಿರಿಯ ಪೀಠಸ್ಥ ಸದ್ಗುರು ಪರಂಪರೆಯಲ್ಲಿ ಪ್ರಸ್ತುತ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಹೆಸರು'ದ್ಯಾವಾಪೃಥ್ವಿ'ಯಂತೆ ಅಖಂಡವಾಗುಳಿಯುವಂತಹುದು. ಶ್ರೀ ಕ್ಷೇತ್ರದ ಸಿದ್ಧಸಿಂಹಾಸನಾಭಿಷಿಕ್ತರಾದ ಒಂದೆರಡು ದಶಕಗಳಲ್ಲಿಯೇ ಅವರು ಮಾಡಿದ ಅಮೋಘ ಸಾಧನೆಗಳು ಅಗಣಿತ; ಮೂಕವಿಸ್ಮಿತವೆನಿಸಿವೆ.

ಕ್ರಿ.ಶ. ೧೬ನೇ ಶತಮಾನದ ವಿಜಯನಗರ ಸಾಮ್ರಾಜ್ಯದ ಲಕ್ಷ್ಮೀಧರ ಅಮಾತ್ಯನು ದಾನಧರ್ಮಕ್ಕೆ ಹೆಸರಾದವನು. 'ಕೆರೆಯಂ ಕಟ್ಟಿಸು, ಬಾವಿಯಂ ತೋಡಿಸು, ದೇವಾಗಾರಂಗಳಂ ನಿರ್ಮಿಸು....' ಎಂದು ತನ್ನ ತಾಯಿ ತಾನು ಮಗುವಾಗಿದ್ದಾಗ ಜೋಗುಳ ಹಾಡಿದ್ದರಿಂದ ತಾನು ಜನೋಪಯೋಗಿ ಕಾರ್ಯಗಳನ್ನು ಮಾಡಲು ಪ್ರೇರಣೆಯಾಯಿತೆಂದು ಹೇಳಿದ್ದಾನೆ.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರೂ ಅಂತಹುದೇ ಧರ್ಮಬದ್ಧ ಪರಿಸರದಲ್ಲಿ ಬೆಳೆದುಬಂದ ಸಹಜ ವಿರಾಗಿಗಳು. ಅವರು ಸಂಘ ಜೀವಿಯೂ ಹೌದು; ಸಂಬುದ್ಧರೂ ಹೌದು; ತಾವು ಕಂಡುಕೊಂಡ ಜ್ಞಾನದ ಬೆಳಕನ್ನು ಸಮಾಜದ ಅಜ್ಞಾನದ

ಕತ್ತಲೆಯನ್ನು ನಿವಾರಿಸಲು ಬಳಸುತ್ತಿರುವ ನಿಷ್ಕಾಮ ಯೋಗಿಗಳೂ ಹೌದು.''ಮಠಗಳಿರುವುದೇ ಸಮಾಜಕ್ಕಾಗಿ'' ಎಂಬ ಅವರ ಮಾತಿನಲ್ಲಿ ಸಮಾಜದ ಒಳಿತೇ ಅವರ ನಿತ್ಯಮಂತ್ರ ಎನ್ನುವುದು ನಿಚ್ಚಳವಾಗುತ್ತದೆ. ಅವರ ಮಹತ್ವದ ಸಾಧನೆಗಳೆಲ್ಲದರ ಮೂಲ ಸತ್ವ ಸಾಮಾಜಿಕ ಕಳಕಳಿಯೇ ಆಗಿದೆ. ಸಮಾಜ ಹೇಗೆ ಒಳಿತಿನತ್ತ ಸಾಗಬೇಕೆಂಬುದನ್ನು ಮಾತುಗಳಲ್ಲಿ ನಿರೂಪಿಸಿ, ಪ್ರಾಯೋಗಿಕವಾಗಿ ಮಾಡಿ ತೋರಿಸಿ ''ನಡೆ ನುಡಿಗಳೊಂದಾದೊಡೆ ಶಿವಮೆಚ್ಚು''ವಂತೆ ಜೀವನ ಸಾರ್ಥಕ ಮಾಡಿಕೊಂಡಿರುವವರೆಂದರೆ ಪೂಜ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು. ಮೇರು ಸದೃಶವಾದ ಅವರ ವ್ಯಕ್ತಿತ್ವವನ್ನು ಕಂಡಾಗ ಕಾರ್ತೀಕದೀಪೋತ್ಸವವನ್ನು ಕಂಡಂತೆ ಮನಸ್ಸು ಪವಿತ್ರವಾದ, ನಿರಾಳವಾದ, ಸುಪ್ರಸನ್ನತೆಯನ್ನು ಅನುಭವಿಸುತ್ತದೆ.

ಸಮಾಜ ಹಿತಚಿಂತಕರಾದ ಅವರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ರಂಗಗಳಲ್ಲಿ ಮಾಡಿರುವ ಮಹತ್ತರ ಕಾರ್ಯಗಳು ಅಸದೃಶವಾಗಿವೆ.

ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿರುವ ಅನ್ನದಾನಿ ಭೈರವ ನಿಲಯ ನಿತ್ಯದಾಸೋಹ ತಾಣ; ಈ ಶತಮಾನದ ಅಪೂರ್ವವೆನಿಸುವ ಪಂಚಗೋಪುರಸಹಿತವಾದ ಕಾಲಭೈರವೇಶ್ವರ ಸ್ವಾಮಿಯ ದೇವಾಲಯ ದ್ರಾವಿಡ ಶೈಲಿಯ ಭವ್ಯ ನಿರ್ಮಾಣ; ಸಂಸ್ಕೃತ ಮಹಾಪಾಠಶಾಲಾ, ಕುಂಭಮೇಳ ನಿಯೋಜನೆ, ಧರ್ಮಗೋಷ್ಠಿಗಳು, ಅರ್ಚಕರ ಸಮ್ಮೇಳನ, ಸಂಸ್ಕೃತ ಗೋಷ್ಠಿ ಇವೆಲ್ಲ ಅವರ ಧರ್ಮಪ್ರಿಯತೆಯ ಪ್ರತೀಕಗಳು.

ಆದಿಚುಂಚನಗಿರಿಗೆ ಸಮೀಪ ಬೆಂಗಳೂರು-ಮಂಗಳೂರು ಹೆದ್ದಾರಿಯಲ್ಲಿ ಕಣ್ಮನ ಸೆಳೆಯುವ 'ಬಾಲಗಂಗಾಧರನಾಥ ನಗರ' ದಲ್ಲಿರುವ 'ಶ್ರೀ ಆದಿಚುಂಚನಗಿರಿ ಆಸ್ಪತ್ರೆ' ಅತ್ಯಾಧುನಿಕ ವೈದ್ಯಕೀಯ ಸವಲತ್ತುಗಳಿಂದ ಕೂಡಿದ ವಿವಿಧ ವ್ಯಾಧಿಗಳ ನಿವಾರಣೆಗೆ ಮೀಸಲಾದ ಸುಸಜ್ಜಿತ ಆಸ್ಪತ್ರೆ. ದಿನದ ಇಪ್ಪತ್ನಾಲ್ಕು ಗಂಟೆಗಳ ಸೇವೆ, ಬಡವರಿಗೆ ಉಚಿತ ಊಟ, ಔಷಧಿ ವಿತರಣೆ ಈ ಆಸ್ಪತ್ರೆಯ ವೈಶಿಷ್ಟ್ಯ. ದೀನದರಿದ್ರರ ಪಾಲಿಗೆ ವರದಾನದಂತಿರುವ ಈ ಆಸ್ಪತ್ರೆಯಲ್ಲಿ ರೋಗಿಗಳನ್ನುನೋಡಿಕೊಳ್ಳಲು ಬರುವ ಬಂಧುಗಳಿಗೂ ಉಚಿತ ವಸತಿ ಸೌಕರ್ಯ ಇದೆ.

ಬೆಂಗಳೂರು, ಮೈಸೂರು, ಹಾಸನ, ಶಿವಮೊಗ್ಗ, ಸಿದ್ಧರಬೆಟ್ಟ, ಪಿರಿಯಾಪಟ್ಟಣಗಳಲ್ಲಿನ ವಿಶಾಲ ಹಾಗೂ ಅನುಕೂಲಕರ ಸಮುದಾಯ ಭವನಗಳು ಸಾಂಘಿಕ ಚಟುವಟಿಕೆಗಳಿಗೆ ಉಪಯುಕ್ತವಾಗಿವೆ.

ವಯೋವೃದ್ಧರಿಗಾಗಿ ನಿರ್ಮಿಸಿದ 'ವೃದ್ಧಾಶ್ರಮ' ವಯಸ್ಸಾದವರ ಬದುಕಿಗೆ ಆಸರೆಯ ನೆಲೆಯಾಗಿದೆ.

ಅಭಿವಂದನಾ

ಅರ್ಚಕರ ಹಳ್ಳಿಯಲ್ಲಿ ಅಂಧಮಕ್ಕಳಿಗೆಂದೇ ಇರುವ 'ಅಂಧ ಮಕ್ಕಳ ಆಶ್ರಮ' ದೃಷ್ಟಿಹೀನ ನತದೃಷ್ಟಮಕ್ಕಳ ಬಾಳಿಗೆ ಪೂರಕವಾಗುವಂತೆ, ಅದೃಷ್ಟದ ಬಾಗಿಲನ್ನು ತೆರೆದಿದೆ. ಉಚಿತ ವಿದ್ಯಾದಾನದೊಡನೆ ಅವರವರ ಪ್ರತಿಭೆಗನುಗುಣವಾಗಿ ಪಠ್ಯೇತರ ತರಬೇತಿಯನ್ನು ಈ ವಸತಿ ಆಶ್ರಮದಲ್ಲಿ ನೀಡುತ್ತಾರೆ.

ಹೆಚ್.ಎಂ.ಟಿ. ಘಟಕವನ್ನು ಒಳಗೊಂಡಿರುವ 'ಮಹಿಳಾ ಸೇವಾಶ್ರಮ' ದಲ್ಲಿರುವ ಮಹಿಳೆಯರು ತಮ್ಮ ಜೀವನದಲ್ಲಿ ನಿರಾಸೆಯ ಕದ್ದಿಂಗಳು ತೊಲಗಿ ಭರವಸೆಯ ಬೆಳ್ದಿಂಗಳು ಮೂಡಿದ ಸಂತೃಪ್ತಿ ಹೊಂದಿದ್ದಾರೆ.

ಯುವಕರಿಗಾಗಿ ಉತ್ತಮ, ಸದೃಢ ವ್ಯಕ್ತಿತ್ವ ನಿರ್ಮಾಣಕ್ಕೆಂದೇ ನಡೆಸಲಾಗುತ್ತಿರುವ'ಜನಜಾಗೃತಿಶಿಬಿರ'ಗಳು ಸತ್ಫಲವನ್ನು ನೀಡಿವೆ.

ಮಹಿಳೆಯರಲ್ಲಿ ಆತ್ಮವಿಶ್ವಾಸ ಮೂಡಿಸಿ, ಸ್ವಾವಲಂಬಿಗಳನ್ನಾಗಿ ಮಾಡುವ 'ಮಹಿಳಾ ಜಾಗೃತಿ ಶಿಬಿರ'ಗಳು ಶ್ರೀಗಳವರು ಸ್ತ್ರೀಯರಿಗೆ ನೀಡಿರುವ ಗೌರವ, ಆದ್ಯತೆಯ ಸಂಕೇತವಾಗಿದೆ.

ತಾಯ್ತಂದೆಗಳಿಂದ ತ್ಯಾಜ್ಯರಾದ ಮಕ್ಕಳು ಸ್ವಾಮೀಜಿಯವರ ಅಕ್ಕರೆಯ ಮಡಿಲಲ್ಲಿ ಅನಾಥರಾಗದೆ ಸನಾಥರಾಗಿದ್ದಾರೆ. ಪ್ರೀತಿ ಕಾಣದೆ ಕಂಗಾಲಾದ ಕಂದಮ್ಮಗಳು'ಅನಾಥಾಶ್ರಮ'ದ ವಾತ್ಸಲ್ಯದ ನೆರಳಲ್ಲಿ ನೆಮ್ಮದಿಯಿಂದಿದ್ದಾರೆ.

ಶ್ರೀಕ್ಷೇತ್ರದಲ್ಲಿ ನಡೆಯುವ 'ಮಕ್ಕಳ ಸಮ್ಮೇಳನ' ಮಕ್ಕಳ ಮನೋವಿಕಾಸದಲ್ಲಿ ಕ್ರಿಯಾಶೀಲವಾಗಿವೆ.

ಸ್ವಾಮೀಜಿಯವರ ಪಟ್ಟಾಭಿಷೇಕ ವಾರ್ಷಿಕ ಮಹೋತ್ಸವದಂದು ನಡೆಯುವ'ಜಾನಪದ ಮೇಳ' ಬಹಳ ವಿಶಿಷ್ಟವಾದದ್ದು. ಆಧುನಿಕ ನಾಗರಿಕತೆಯ ಅಬ್ಬರದಲ್ಲಿ ಸೊರಗಿ ಹೋಗುತ್ತಿರುವ ಜನಪದ ಕಲೆ ಪ್ರತಿವರ್ಷವೂ ಆದಿಚುಂಚನಗಿರಿಯಲ್ಲಿ, ಸ್ವಾಮೀಜಿಯವರ ಸಮ್ಮುಖದಲ್ಲಿ ಜೀವ ತಳೆಯುತ್ತದೆ. ನಮ್ಮ ನಾಡಿನ ನಾಡಿಮಿಡಿತವಾದ ಜನಪದ ಕಲೆಯನ್ನು ಪುನರುಜ್ಜೀವನಗೊಳಿಸಿ, ಭಾಗವಹಿಸಿದ ಜನಪದ ಕಲಾವಿದರಿಗೆಲ್ಲಾ, 'ಅಶನ-ವಸನ-ಧನ'ಗಳ ಆತಿಥ್ಯ ನೀಡಿ ಗೌರವಿಸುವುದನ್ನು ಕಂಡಾಗ, ಪುಳಕಿತರಾದ ಕಲಾವಿದರ ಮಾಸಿದ ಕಣ್ಣುಗಳಲ್ಲಿ ಸಂತಸದ ಹೊಳಪು ಮೂಡಿದಾಗ ಅದೊಂದು ಅವಿಸ್ಮರಣೀಯ ಸಂದರ್ಭವೆನಿಸುತ್ತದೆ.

'ಉಚಿತ ಸಾಮೂಹಿಕ ವಿವಾಹಗಳು' ಬಡವರ ಪಾಲಿಗೆ ಕಂಕಣಬಲದ ದಾರಿದೀಪವಾಗಿವೆ. 'ಉಚಿತ ನೇತ್ರ ಶಿಬಿರಗಳು' ಕಣ್ಣಿನ ಚಿಕಿತ್ಸೆಯನ್ನು ದೂರದೂರಿಗೆ ತೆರಳದೆ ಮಾಡಿಸಿಕೊಳ್ಳಲು ಸಹಕಾರಿಯಾಗಿವೆ.

ಅಭಿವಂದನಾ

ವೈದ್ಯಕೀಯ, ತಾಂತ್ರಿಕ ಮಹಾವಿದ್ಯಾಲಯಗಳು; ಕೈಗಾರಿಕಾ ತರಬೇತಿ ಕೇಂದ್ರ; ಉಪಾಧ್ಯಾಯ ತರಬೇತಿ ಕೇಂದ್ರ; ಪದವಿ ಕಾಲೇಜುಗಳು; ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳು ಸೇರಿದಂತೆ ಸುಮಾರು ಇನ್ನೂರೈವತ್ತಕ್ಕೂ ಮಿಗಿಲಾದ ಶಿಕ್ಷಣ ಸಂಸ್ಥೆಗಳನ್ನು 'ಶ್ರೀ ಆದಿಚುಂಚನಗಿರಿ ಎಜುಕೇಷನಲ್ ಟ್ರಸ್ಟ್'ನಡೆಸುತ್ತಿದೆ. ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವ ಅನೇಕ ಶಾಲೆಗಳನ್ನು ದತ್ತು ತೆಗೆದುಕೊಂಡು ಅವುಗಳಿಗೆ ಜೀವದಾನ ಮಾಡುವ ಮೂಲಕ ಎಷ್ಟೋ ಕುಟುಂಬಗಳಿಗೆ ಅನ್ನ ನೀಡಿದ ಪುಣ್ಯ ಈ ಟ್ರಸ್ಟ್‌ನದು. ಕುಗ್ರಾಮಗಳಲ್ಲೂ ಮಠ ನಡೆಸುತ್ತಿರುವ ಶಾಲೆಗಳನ್ನು ಕಂಡಾಗ ಅವುಗಳ ರೂವಾರಿಯಾದ ಶ್ರೀಸ್ವಾಮೀಜಿಯವರ ಬಗ್ಗೆ ಹೃದಯತುಂಬಿ ಬರುತ್ತದೆ.

'ಸದ್ವರ್ತನೆ, ಪರಹಿತಚಿಂತನೆ, ಸತ್ಪುರುಷರ ಆತ್ಮಸಂಪತ್ತು'ಶ್ರೀ ಬಾಲಗಂಗಾಧರನಾಥಸ್ವಾಮೀಜಿಯವರಲ್ಲಿ ಅದು ಧಾರಾಳವಾಗಿದೆ. ಅವರ ಮಹತ್ವಾಕಾಂಕ್ಷೆಯ ಅಕ್ಷಯ ನಿಧಿಯಿಂದ ಸಾಕಾರ ತಳೆದ ಪ್ರತಿಯೊಂದು ಯೋಜನೆಗಳೂ ಇಂದು ನಿಸ್ಪೃಹಕಾರ್ಯ ತತ್ಪರವಾಗಿವೆ.

ನಮ್ಮ ನಡುವೆ ಇರುವ ಶ್ರೀಗಳವರು ತಾವು ಮಾಡುತ್ತಿರುವ ಜನೋಪಕಾರಿ ಕೆಲಸಗಳಿಂದಲೇ ಅವತಾರ ಪುರುಷರೆನಿಸಿದ್ದಾರೆ. ಸಾಮಾನ್ಯರಿಗೆ ಅಸಾಧ್ಯವೆನಿಸುವ ಅದ್ಭುತಗಳನ್ನು ವಾಸ್ತವವಾಗಿಸಿದ ದೃಷ್ಟಾರರಾಗಿದ್ದಾರೆ.

ವ್ಯಕ್ತಿಯೊಬ್ಬರಿಂದ ಸ್ಥಳಕ್ಕೆ ಖ್ಯಾತಿ ಬರುವುದು ನಿಜವಾದರೂ ಅಪರೂಪ. ಅಂತಹ ಅಪೂರ್ವ ವ್ಯಕ್ತಿತ್ವದಿಂದಲೇ ಭಕ್ತರ, ಅಭಿಮಾನಿಗಳ ಗೌರವಾದರಗಳಿಗೆ ಪಾತ್ರರಾಗಿರುವ ಶ್ರೀಗಳವರು ಜೀವಂತ ದಂತಕತೆಯಾಗಿದ್ದಾರೆ. ತಮ್ಮ ಸತ್ವಭರಿತ ಸಾಧನೆಗಳಿಂದಲೇ ಸಾಮಾಜಿಕ ಪ್ರಜ್ಞೆಯುಳ್ಳ ಸೀಮಾಪುರುಷರ ಸಾಲಿಗೆ ಸೇರುವ ನಿಸ್ಸೀಮ ಮಹಿಮರಾಗಿದ್ದಾರೆ.

***

ಅಭಿವಂದನಾ

KARMAYOGI

H.P.RAMEGOWDA.

Jagadguru Sri Sri Balagangadharnatha Swamiji is a towering personality. He is Saint among saints. I am too small a person to measure his depth of understanding. But I am fortunate to serve this saint for about 15 years very intimately and thus had the opportunity of observing from a very close distance. I had also had the opportunity of accompanying him four times on his foreign tours. These glmipses of mine, about Sri Swamiji, are given as dispassoionately as possible. Though Sri Swamiji like his respected predecessors was initiated to Natha Sampradaya to preserve and to propagate the spiritual and religious aspects of that Samprdaya, he gave new dimensions to social sevice-fields in addition to spiritualism.

It appears that this Saint was greatly influenced by the teachings of Sri Swamy Vivekananda. He would see God, in the hearts of the poor and the suffering. He would repeatedly quote "Daridranarayano Bhavath". He has read teachings of many great saints, and spiritual masters of India. From these teachings he would select only such of them which would dwell on compassion and human kindness. He would certainly help all people whomsoever approach him for relief. He would think and plan to give a permanent relief to many a afflictions of society. These reliefs would be generally in a collective way. His founding and running of many educational institutions, the Institute for the blind, the Institutions for the needy women, the free hostels and the hospital, are all the manifestations of his compassion that he is having towards the needy and the suffering humanity.

The Bhagavad Geetha had also influenced him to a great extent. This is evident from his method of doing any work. He would work tirelessly and only after proper careful and deliberate palnning. He is enterprising and daring. He is a firm

believer in the famous saying "Success often comes to those who dare and act, it seldom goes to the timid". Sri Swamiji in his many observationis would narrate how the Ryots from rural parts are not enterprising. For any venture a Ryot, would hesitate and say how to do this, and he would not even attempt this work. The stone- procurers, in village sides would refer generally to Ryots class as "Yengappa" and they think that in any auspecious set off, if they encounter ryots on the way they would think that "Yengappa" is coming and would say that it is not a good omen for the work that they had set off. This is just to underline the fact, that the village ryots are not daring and enterprising. But Swamiji would do such works with all his concentration and then would never worry about the results. He would accept the result of his action with equipose; never rejoicing at the success, nor having the feeling of dejection at the failure of those actions. He would often say, that "I am only interested in action but never in its fruit; and mine is only to act". He has shunned all desires. I have not seen any instance when he had the feeling of possession, even though the Turst(R) which he heads is quite affluent in almost all aspects. He was never be egoistic even though helping hundreds and thousands of people. It is evident that he has inculcated all the qualities of Karma Yogi of Bhagavad Geetha.

One of his many sterling qualities, is to keep up to his words, come what may. On many an occasion, even when facts are brought to his kind notice, the serious implications or the cost involved; or even about the undesirability of a person, he would reply, "I have already given him the word of honour, and it should be done. It may be your view, but its God's will, so let us help him". Such instance is not in one case or a stray incident, but in all most all cases. He would never go back on his word.

Yet, an other trait of this saint, is never to loose his cool; even at times when he was affended and in the face of

serious provocation. Many a times, even when financial irreguarities are committed, he would cooly excuse all of them, with a mild warning not to repeat. This magnanimous quality of forgiveness is misused in a few cases. Even then they have been generously excused, so long as the work is done or goods delivered. He is a model of forgiveness, which was dear to Lord Buddha.

Ganga Swamy (Sri Balagangadharanatha Swamiji, is affectionately refered to as much) is an embodiment of simplicity. His food, habits are astonishingly simple, so also is his dress. One has to believe this. With all the affluence, the Trust (R) is possessing any other Saint in his position, would have accustomed, to rich or even moderately rich food. But our Ganga Swamy would not. His food is that of any ordinary village people. That too strictly vegetarian. Except on religeous occasions as per religious customs, he would never wear gold or silver on his body. Does it require a better example for his simplicity. Mind you, this simplicity is out of his shear volition.

Sri Swamiji's administrative acumen, his sharp memory, quality of reposing confidence and never letting down any one, are some of his traits, which have made him very efficient. These qualities blended with the milk of human kindness, of compassion, forgiveness,helping nature etc., have resulted in an ideal qulities of head and heart. These have made him a really great saint.

The service oganisations have also generated a very good employment potential, where thousands of people have been empolyed and earn their livelyhood besides rendering social service to needy and down trodden. Blessed is Adichunchanagiri, Blessed is the vast multitude of devotees

.Let this Veera Sanyasi continue his Karmayoga for many many years, to come.

***

ದರ್ಶನ ಪ್ರಭಾ

ಅದ್ವೈತದರ್ಶನ

-ವಿದ್ವಾನ್ ಎನ್. ರಂಗನಾಥ ಶರ್ಮಾ

ನಮ್ಮ ಭಾರತೀಯ ದರ್ಶನಗಳಲ್ಲಿ ಮಾನವನ ಗಮ್ಯಸ್ಥಾನವನ್ನು ತಿಳಿಸಿ ಪರಮಸತ್ಯವನ್ನು ಬೋಧಿಸತಕ್ಕದ್ದು ವೇದಾಂತದರ್ಶನವೆಂದು ನಿಶ್ಚಿತವಾಗಿದೆ. ಉಳಿದ ದರ್ಶನಗಳು, ಮಹಡಿಯನ್ನು ಹತ್ತುವವರಿಗೆ ಮೆಟ್ಟಿಲುಗಳಂತಿದ್ದು, ಸಾಧಕರಿಗೆ ಅವಶ್ಯಕವಾಗಿವೆ. ಅವು ಆಯಾ ಜನರ ಬುದ್ಧಿ ಪರಿಪಾಕಕ್ಕೆ ಅನುಗುಣವಾಗಿ ರಚಿತವಾದವುಗಳೆಂಬುದು ಸರ್ವಸಮನ್ವಯ ದೃಷ್ಟಿ. ವೇದಾಂತವೆಂದರೆ ಜ್ಞಾನಕಾಂಡವಾದ ಉಪನಿಷತ್ತು. ಇದು ಪರಮಾರ್ಥದ ತಥ್ಯವನ್ನು ತಿಳಿಸತಕ್ಕದ್ದು. ಅದ್ವೈತಸಿದ್ಧಾಂತದ ಆಚಾರ್ಯಪುರುಷರಾದ ಶ್ರೀ ಶಂಕರಾಚಾರ್ಯರು ವೇದಾಂತವನ್ನು ಔಪನಿಷದ ದರ್ಶನವೆಂದೂ, ವೇದಾಂತಿಗಳು ಉಪನಿಷದ್ವಾದಿಗಳೆಂದು ಹೇಳಿರುತ್ತಾರೆ. ಅವರ ದೃಷ್ಟಿಯಲ್ಲಿ ಅದ್ವೈತವೇ ಉಪನಿಷತ್ತುಗಳ ಸಿದ್ಧಾಂತ. ಸಮಸ್ತ ಉಪನಿಷದ್ವಾದಿಗಳು ಜೀವಾತ್ಮ ಪರಮಾತ್ಮರ ಐಕ್ಯವನ್ನು ಒಪ್ಪಿದ್ದಾರೆಂದು ಸ್ಪಷ್ಟವಾಗಿ ನುಡಿದಿದ್ದಾರೆ. ಅವರ ಕಾಲದಲ್ಲಿ ದ್ವೈತ ವೇದಾಂತಗಳು ಇರಲಿಲ್ಲವೆಂದು ಇದರಿಂದ ಗೊತ್ತಾಗುತ್ತದೆ. ಒಂದು ವೇಳೆ ಇದ್ದರೆ ಆಚಾರ್ಯರಿಗೆ ಗೊತ್ತಿರಲಿಲ್ಲ ಎನ್ನುವುದು ಅನಿವಾರ್ಯ. ಅದು ಹೇಗಾದರೂ ಇರಲಿ. ಅದ್ವೈತದ ಸೀಮಾರೇಖೆಗಳನ್ನು ಗುರುತಿಸುವುದು, ಈ ಪ್ರಬಂಧದ ಉದ್ದೇಶ.

'ನಾನು ನಾನು ' ಎಂದುಕೊಳ್ಳತಕ್ಕ ಜೀವ, ಸುತ್ತಲೂ ಕಾಣುವ ವಿಶಾಲವಾದ ಜಗತ್ತು. ಇವುಗಳಿಗೆ ಕಾರಣವಾದ ಒಂದು ಚೇತನಶಕ್ತಿ ಇದ್ದರೆ ಅದರ ಸ್ವರೂಪವೇನು? ಮನುಷ್ಯಜೀವನದ ಧ್ಯೇಯ ಯಾವುದು? ಅದನ್ನು ಪಡೆಯುವ ಸಾಧನೋಪಾಯಗಳಾವುವು? ಇವಿಷ್ಟನ್ನು ಸಪ್ರಮಾಣವಾಗಿ ತೋರಿಸಿಕೊಡುವುದು ದರ್ಶನ ಶಾಸ್ತ್ರಗಳ ಉದ್ದೇಶವಾಗಿದೆ. ಅದ್ವೈತದರ್ಶನದ ಸಿದ್ಧಾಂತವನ್ನು ಸಂಕ್ಷೇಪವಾಗಿ ಮೊದಲು ತಿಳಿಯೋಣ.

ಜಗತ್ತಿನ ಸೃಷ್ಟಿ -ಸ್ಥಿತಿ- ಲಯಗಳಿಗೆ ಕಾರಣನಾದ ಈಶ್ವರನಿದ್ದಾನೆ. ಆತನನ್ನು ಉಪನಿಷತ್ತುಗಳು ಬ್ರಹ್ಮ, ಆತ್ಮ ಶಬ್ದಗಳಿಂದ ವಿಶೇಷವಾಗಿ ವ್ಯವಹರಿಸುತ್ತವೆ. ಬ್ರಹ್ಮವು ನಿತ್ಯಶುದ್ಧ-ಬುದ್ಧ- ಮುಕ್ತ ಸ್ವರೂಪವಾಗಿದೆ. ಅದರ ಮಾಯಾಶಕ್ತಿಯ ವಿಜೃಂಭಣೆಯಿಂದ ಜಗತ್ತಿನ ನಿರ್ಮಾಣವಾಗಿದೆ. ನಾನು, ನಾನು ಎಂದುಕೊಳ್ಳತಕ್ಕ ಸಮಸ್ತ ಜೀವರಾಶಿಯೂ ಪರಮಾರ್ಥದಲ್ಲಿ ಬ್ರಹ್ಮವೇ ಆಗಿದೆ. ಏವಂ ಚ ಮೂಲದಲ್ಲಿರುವ ಪರಮಾರ್ಥವಸ್ತು ಬ್ರಹ್ಮ ಒಂದೇ, ಎರಡನೆಯ ವಸ್ತುವೇ ಇಲ್ಲವಾದ್ದರಿಂದ ಬ್ರಹ್ಮವು ಅದ್ವಿತೀಯವಾಗಿಗೆ

ದ್ವಿತೀಯವಸ್ತುವಿಲ್ಲವಾದ್ದರಿಂದ ಬ್ರಹ್ಮವೇ ಅದ್ವೈತ. ಅದೇ ಪರಬ್ರಹ್ಮ. ಇದಿಷ್ಟು ಈ ಸಿದ್ಧಾಂತದ ಸಾರವಾಗಿದೆ.

ಕ್ರಿ.ಶ. ೭೫೦-೭೨೦ ರ ಮಧ್ಯಭಾಗದಲ್ಲಿದ್ದ ಶ್ರೀ ಶಂಕರಾಚಾರ್ಯರು ಅದ್ವೈತ ಸ್ಥಾಪನಾಚಾರ್ಯರೆಂದು ವಿಖ್ಯಾತರಾಗಿದ್ದಾರೆ. ಅಸದೃಶವಾದ ಪ್ರತಿಭೆ, ಪಾಂಡಿತ್ಯ, ಮೇಧಾಶಕ್ತಿಗಳಿಂದ ಕೂಡಿದ್ದ ಆಚಾರ್ಯರ ವಿಚಾರಸರಣಿಯು ವೇದಾಂತದ ಇತಿಹಾಸಕ್ಕೆ ಒಂದು ಹೊಸ ತಿರುವನ್ನೇ ನೀಡಿತು. ಅವರೇನೂ ನೂತನ ಸಿದ್ಧಾಂತವನ್ನು ಮಂಡಿಸಲಿಲ್ಲ. ಪರಂಪರೆಯಿಂದ ಬಂದ ಸಂಪ್ರದಾಯ ಕ್ರಮವನ್ನೇ ಪರಿಷ್ಕರಿಸಿ, ಪ್ರಸ್ಥಾನತ್ರಯಗಳಿಗೆ ಭಾಷ್ಯ/ಗಳನ್ನು, ಹಲವಾರು ಪ್ರಕರಣ ಗ್ರಂಥಗಳನ್ನೂ ರಚಿಸಿ ವಿದ್ವಲ್ಲೋಕವು ತಲೆದೂಗುವಂತೆ ಉಪನಿಷತ್ತುಗಳ ಸಿದ್ಧಾಂತವನ್ನೇ ಬೆಳಕಿಗೆ ತಂದರು. ಅವರು ತಮ್ಮ ಪರಮ ಗುರುಗಳಾದ ಗೌಡಪಾದಾಚಾರ್ಯರನ್ನು ಮಾಂಡೂಕ್ಯಕಾರಿಕಾಭಾಷ್ಯದಲ್ಲಿ ''ವೇದಸಾಗರವನ್ನು ಪ್ರಜ್ಞಾಶಕ್ತಿಯೆಂಬ ಮಂಥನದಂಡದಿಂದ ಕಡೆದು ದೇವದುರ್ಲಭವಾದ ಅಮೃತವನ್ನು ನೀಡಿದವರು '' ಎಂದು ಸ್ತುತಿಸಿದ್ದಾರೆ.

'ಏಕಮೇವಾದ್ವಿತೀಯಂ ಬ್ರಹ್ಮ' 'ಸತ್ಯಜ್ಞಾನಮನಂತಂ ಬ್ರಹ್ಮ' 'ನೇಹನಾನಾಸ್ತಿ ಕಿಂಚನ' ಮುಂತಾದ ಉಪನಿಷದ್ವಾಕ್ಯಗಳಿಂದ ಸಚ್ಚಿದಾನಂದಸ್ವರೂಪವೂ ಅದ್ವಿತೀಯವೂ ಆಗಿರತಕ್ಕದ್ದು ಪರಬ್ರಹ್ಮವೆಂದು ಗೊತ್ತಾಗುತ್ತದೆ. **'ನಿರ್ಗುಣಂ ನಿಷ್ಕ್ರಿಯಂ ಶಾಂತಂ'** ಇತ್ಯಾದಿ ವಚನಗಳಿಂದ ಅದು ಗುಣ ಕ್ರಿಯಾದಿ ರಹಿತವಾಗಿ ಶಾಂತ ರೀತಿಯಲ್ಲಿದೆಯೆಂದೂ ತಿಳಿದು ಬರುತ್ತದೆ. ಹಾಗಾದರೆ ಸಗುಣವೂ ಕ್ರಿಯಾವಿಶಿಷ್ಟವೂ ಆದ ಜಗತ್ತು ಹುಟ್ಟಿದ್ದು ಹೇಗೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆಗ ವಿಚಾರಸರಣಿ ಆರಂಭವಾಗುತ್ತದೆ.

ಸಗುಣಬ್ರಹ್ಮ

ಬ್ರಹ್ಮಶಬ್ದವು 'ಬೃಹ-ವೃದ್ಧೌ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ದೊಡ್ಡದು ಎಂದು ಶಬ್ದಾರ್ಥ. ಬೇರೆ ಯಾವ ಶಬ್ದದಿಂದಲೂ ಅದನ್ನು ಗುರುತಿಸುವುದು ಶಕ್ಯವಲ್ಲವಾದ್ದರಿಂದ ಈ ಶಬ್ದವನ್ನೇ ಹೆಚ್ಚಾಗಿ ಬಳಸುವುದುಂಟು. ಇದು ಅನಿರ್ವಚನೀಯವಾದ ಮಾಯೆಯಿಂದ ಕೂಡಿದಾಗ ಸಗುಣಬ್ರಹ್ಮವೆನಿಸುತ್ತದೆ. ಸಗುಣಬ್ರಹ್ಮವೇ ಈಶ್ವರ. ಈಶ್ವರನೇ ಜಗತ್ತಿಗೆ ಮೂಲಕಾರಣ. ಈತನನ್ನು ಸೃಷ್ಟಿಕಾರ್ಯವನ್ನನುಸರಿಸಿ ಬ್ರಹ್ಮನೆಂದೂ ಸ್ಥಿತಿಕಾರ್ಯವನ್ನೆಸಗುವುದರಿಂದ ವಿಷ್ಣುವೆಂದೂ ಲಯದ ಕಾರ್ಯವನ್ನು ಗಮನಿಸಿ ರುದ್ರನೆಂದೂ ಹೇಳುತ್ತಾರೆ. ಈ ತ್ರಿಮೂರ್ತಿಗಳು ವಸ್ತುತಃ ಭಿನ್ನರಲ್ಲ. ಪುರಾಣಗಳು ನಾನಾ ಪ್ರಕಾರವಾಗಿ ಇವರನ್ನು ವರ್ಣಿಸಿವೆ. ಇವರಲ್ಲಿರುವ ಸೃಷ್ಟಿ ಸ್ಥಿತಿ ಲಯ ಶಕ್ತಿಗಳನ್ನು ಸರಸ್ವತೀ, ಲಕ್ಷ್ಮೀ, ಪಾರ್ವತೀ ಎಂಬ ಹೆಸರುಗಳಿಂದ ಕ್ರಮವಾಗಿ ಬ್ರಹ್ಮಾದಿಗಳ ಪತ್ನಿಯರನ್ನಾಗಿ ರೂಪಿಸಲಾಗಿದೆ. ಈ ಪ್ರಕ್ರಿಯೆ ಪೂರ್ತಿಯಾಗಿ

ಭಕ್ತರ ಉಪಾಸನೆಗೋಸ್ಕರ. ಸಾಮಾನ್ಯ ಜನರ ಬುದ್ಧಿಗೆ ಕೇವಲ ಬ್ರಹ್ಮವು ನಿಲುಕತಕ್ಕದ್ದಲ್ಲ. ಅದನ್ನು ಸಗುಣರೂಪಕ್ಕೆ ತಂದು ನಾನಾ ಗುಣಾಕೃತಿಯುಳ್ಳದ್ದೆಂಬ ವರ್ಣನೆ ಜನರ ಮನಸ್ಸಿಗೆ ಹಿಡಿಸುತ್ತದೆ. ಇದೆಲ್ಲವೂ ಭಕ್ತಿಮಾರ್ಗಕ್ಕೆ ಉಪಯುಕ್ತ ಸಾಧನ.

ಸಗುಣಬ್ರಹ್ಮ - ನಿರ್ಗುಣಬ್ರಹ್ಮ ಇವೆರಡರಲ್ಲಿ ಯಾವ ಭೇದವೂ ಇಲ್ಲ. ಚೈತ್ರ ಎಂಬುವನು ಅರ್ಜುನನ ಪಾತ್ರವನ್ನು ಧರಿಸಿ ರಂಗಸ್ಥಳದ ಮೇಲೆ ಅಭಿನಯಿಸಿದ ಮಾತ್ರಕ್ಕೆ ಅವನು ಚೈತ್ರನಿಗಿಂತ ಬೇರೊಬ್ಬ ವ್ಯಕ್ತಿಯಾಗಿ ಬಿಡುವುದಿಲ್ಲ. ಹಾಗೆಯೇ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳನ್ನೆಸಗುತ್ತ ಅನೇಕ ನಾಮ ರೂಪಗಳನ್ನು ಧರಿಸಿ ಲೀಲಾಪುರುಷನಾಗಿ ವರ್ತಿಸುವ ಪರಭಾವವು ಕೇವಲ ಪರಬ್ರಹ್ಮವೇ ಆಗಿರುತ್ತದೆ.

ಯುಕ್ತಿವಾದ

ಅದ್ವೈತವು ವೇದೋಪನಿಷತ್ತುಗಳಿಂದಲೂ ವಿಷ್ಣುಪುರಾಣ, ಭಾಗವತ, ಸೂತಸಂಹಿತಾ ಮುಂತಾದ ಗ್ರಂಥಗಳಿಂದಲೂ ಪ್ರತಿಪಾದಿಸಲ್ಪಟ್ಟಿರುವುದರಿಂದ ಅದರ ಸಿದ್ಧಿಗಾಗಿ ಯುಕ್ತಿಯು ಬೇಕಾಗಿಲ್ಲ. ಆದರೂ ಸಾಧಕನು ತನಗೆ ಬರುವ ಸಂದೇಹಗಳನ್ನು ಪರಹರಿಸಿಕೊಳ್ಳುವುದಕ್ಕಾಗಿಯೂ ಮನನದಿಂದ ದೃಢಪಡಿಸಿಕೊಳ್ಳುವುದಕ್ಕಾಗಿಯೂ ಪ್ರತಿವಾದಿಗಳ ತರ್ಕಗಳಿಗೆ ಉತ್ತರಗಳನ್ನು ಕೊಡುವುದಕ್ಕಾಗಿಯೂ ಯುಕ್ತಿಗಳನ್ನು ಆಶ್ರಯಿಸಬೇಕಾಗುತ್ತದೆ. ಹೇಗೆಂದರೆ ಈಶ್ವರನು ಜಗತ್ತನ್ನು ನಿರ್ಮಿಸಬೇಕಾದರೆ ಅವನಿಗೆ ಸಾಧನ ಸಾಮಗ್ರಿ ಯಾವುದು? ಯಾವುದೇ ಒಂದು ಕಾರ್ಯವಸ್ತು ಹುಟ್ಟಬೇಕಾದರೆ ಉಪಾದಾನಕಾರಣ ಮತ್ತು ನಿಮಿತ್ತಕಾರಣಗಳೆರಡು ಇರಲೇಬೇಕು. ಕುಂಬಾರನು ಗಡಿಗೆಯನ್ನು ನಿರ್ಮಿಸುವಾಗ ಅವನು ಬಳಸುವ ಮಣ್ಣು ಉಪಾದಾನಕಾರಣವಾಗುತ್ತದೆ. ಕುಂಬಾರನು ನಿಮಿತ್ತಕಾರಣ. ಬಟ್ಟೆಗೆ ಬಳಸುವ ಹತ್ತಿನೂಲು ಉಪಾದಾನಕಾರಣ. ನೇಯ್ಗೆಯವನು ನಿಮಿತ್ತಕಾರಣ. ಅವನು ಬಳಸುವ ಯಂತ್ರವೂ ನಿಮಿತ್ತಕಾರಣದಲ್ಲಿ ಸೇರುತ್ತದೆ. ಹಾಗೆ ಜಗತ್ತಿಗೆ ಉಪಾದಾನ ಯಾವುದು? ನಿಮಿತ್ತ ಯಾವುದು?

ಇಲ್ಲೊಂದು ವಿವಾದ ಉಂಟು. ಮಣ್ಣೆಂಬ ಉಪಾದಾನದಿಂದ ಗಡಿಗೆಯ ನಿರ್ಮಾಣವಾಗುತ್ತದೆ. ಗಡಿಗೆ ಮೊದಲು ಇರಲಿಲ್ಲವೆಂದೂ ಹೊಸದಾಗಿ ಉತ್ಪನ್ನವಾಯಿತೆಂದೂ ತಾರ್ಕಿಕರು ಹೇಳುತ್ತಾರೆ. ಇದಕ್ಕೆ ಆರಂಭವಾದವೆಂದೂ ಅಸತ್‌ಕಾರ್ಯವಾದವೆಂದೂ ಹೆಸರು. ಗಡಿಗೆ ಮೊದಲು ಇರಲಿಲ್ಲ. ಅದು ಅಸತ್ ಆಗಿತ್ತು. ಈಗ ಹೊಸದಾಗಿ ಉತ್ಪನ್ನವಾಗಿದೆ ಎಂದರ್ಥ. ಸಾಂಖ್ಯರು ಇದನ್ನೊಪ್ಪುವುದಿಲ್ಲ. ಗಡಿಗೆಯು ಮಣ್ಣಿನ ಒಂದು ವಿಕಾರ. ಮಣ್ಣಿನಲ್ಲಿ ಆದ ಒಂದು ಪರಿಣಾಮದ ಫಲವೇ ಗಡಿಗೆ. ಮೊದಲು ಅವ್ಯಕ್ತವಾಗಿ ಮಣ್ಣಿನಲ್ಲಿದ್ದದ್ದೇ ಈಗ ವ್ಯಕ್ತವಾಗಿ ಗಡಿಗೆಯಾಗಿ ಕಾಣುತ್ತದೆ. ಅಸತ್ ಎಂದಿಗೂ ಹುಟ್ಟುವುದಿಲ್ಲ. ಬೀಜದಲ್ಲಿ ಎಣ್ಣೆ ಇದ್ದದ್ದರಿಂದಲೇ ಗಾಣಕ್ಕೆ ಕೊಟ್ಟಾಗ

ವ್ಯಕ್ತವಾಗಿ ಕಾಣಿಸುತ್ತದೆ. ಅಸತ್ ಹುಟ್ಟುವುದಾದರೆ ಮರಳಿನಿಂದ ಎಣ್ಣೆ ಹುಟ್ಟಬೇಕಾದೀತು. ಆದ್ದರಿಂದ ಎಲ್ಲ ವಸ್ತುಗಳು ಮೊದಲು ಸೂಕ್ಷ್ಮವಾಗಿದ್ದು ಅನಂತರ ಪರಿಣಾಮ ಹೊಂದಿ ಸ್ಥೂಲವಾಗಿ ಗೋಚರಿಸುತ್ತವೆ ಎನ್ನುತ್ತಾರೆ. ಇದು ಸತ್ಕಾರ್ಯವಾದ. ಇದೇ ಪರಿಣಾಮವಾದ. ಅದ್ವೈತವೇದಾಂತಿಗಳು ಇನ್ನೂ ಮುಂದೆ ಹೋಗುತ್ತಾರೆ. ಜಗತ್ತಿನಲ್ಲಿ ಉಪಾದಾನದಿಂದ ನೂತನವಾದ ರೂಪ ಆಕೃತಿಗಳುಂಟಾಗುವುದು ಪ್ರತ್ಯಕ್ಷವಾಗಿರುವುದರಿಂದ ಇದನ್ನು ಅಂಗೀಕರಿಸಲೇಬೇಕಾಗುತ್ತದೆ. ಎಲ್ಲ ರೂಪಾಕೃತಿಗಳೂ ಮೂಲವಸ್ತುವಿನ ಅವಸ್ಥಾವಿಶೇಷ. ಅದೇನೂ ನೂತನ ವಸ್ತುವಲ್ಲ, ಗುಣರೂಪಾಕೃತಿಗಳಲ್ಲಿ ಪರಿವರ್ತನೆಯಾದಂತೆ ಕಂಡು ಬಂದರೂ ಗುಣಾದಿಗಳು ಹೊಸದಾಗಿ ಬಂದು ಸೇರಲಾರವು. ದ್ರವ್ಯಕ್ಕಿಂತ ಗುಣಕ್ರಿಯೆಗಳು ಬೇರೆಯಲ್ಲ. ಬೇರೆಯಾದರೆ ದ್ರವ್ಯದಲ್ಲಿ ಯಾವ ಸಂಬಂಧದಿಂದ ಸೇರಿಕೊಂಡಿವೆಯೆಂದು ಹೇಳಬೇಕು. ತಾರ್ಕಿಕರು ಸಮವಾಯ ಸಂಬಂಧವೆನ್ನುತ್ತಾರೆ. ಸಮವಾಯವು ಯಾವ ಸಂಬಂಧದಿಂದ ಇದೆ ? ಆ ಸಂಬಂಧವು ಮತ್ತೆ ಯಾವ ಸಂಬಂಧದಿಂದ ಇದೆ ? ಎಂದು ಕೇಳುತ್ತ ಹೋದಾಗ ಅನವಸ್ಥಾದೋಷವೂ ಪ್ರಾಪ್ತವಾಗುವುದು. ಆದ್ದರಿಂದ ಸಮವಾಯವೆಂಬುದೇ ಇಲ್ಲ. ಕೆಂಪಾದ ಚಿಗುರೆಲೆ ಬೆಳೆದು ಹಸುರಾದರೆ ಎಲೆಯೇ ಬೇರೆಯಾಗಿ ಬಿಡುವುದಿಲ್ಲ. ಚೈತ್ರ ಎಂಬವನು ಮಲಗುತ್ತಾನೆ, ತಿನ್ನುತ್ತಾನೆ, ತಿರುಗುತ್ತಾನೆ, ಈ ಕ್ರಿಯೆಗಳಿಂದ ವ್ಯಕ್ತಿಯೇ ಬೇರೆಯಾಗುವುದಿಲ್ಲ. ಮಗು ಬೆಳೆದು ಹುಡುಗನಾಗಿ ಯುವಕನಾಗಿ ಮುದುಕನಾದಾಗ ಅವನ ರೂಪಾಕೃತಿಗಳೆಲ್ಲವೂ ಬದಲಾದರೂ ವ್ಯಕ್ತಿಯೊಬ್ಬನೇ ಎಂಬುದು ನಿಶ್ಚಿತ. ಆದ್ದರಿಂದ ಒಂದೇ ವಸ್ತು ನಾನಾ ರೂಪಾಕೃತಿಗಳಲ್ಲಿ ಕಾಣುತ್ತದೆ. ಇದೆಲ್ಲವೂ ತಾತ್ಕಾಲಿಕವಾದ ಕಾಣುವಿಕೆಯೇ ಹೊರತು ಸತ್ಯವಲ್ಲ. ಆದುದರಿಂದಲೇ ಶ್ರುತಿಯು '**ಮೃತ್ತಿಕೇತ್ಯೇವ ಸತ್ಯಂ**' ಎಂದು ಘೋಷಿಸಿದೆ. ಮಣ್ಣು ಕ್ರಮೇಣ ಗಡಿಗೆಯಾಗಿ ಹೊಸ ನಾಮ ರೂಪಗಳನ್ನು ಪಡೆಯಿತು. ಸತ್ಯವಾಗಿರತಕ್ಕದ್ದು ಮಣ್ಣೇ ಎಂದು ಅದರ ಅಭಿಪ್ರಾಯ. ಪ್ರಪಂಚ ಕಾರ್ಯವೆಲ್ಲವೂ ಮಿಥ್ಯೆ. ರೂಪಾಂತರದಿಂದ ತೋರುವುದಕ್ಕೆ ವಿವರ್ತವೆಂದು ಹೆಸರು. ಜಗತ್ತೆಲ್ಲವೂ ಅಜ್ಞಾನದಿಂದಾದ ವಿವರ್ತವೇ ಸರಿ. ಸತ್ಯವಾದದ್ದು ಬ್ರಹ್ಮ ಒಂದೇ ಎಂದು ಈ ಸಿದ್ಧಾಂತದ ಅಭಿಪ್ರಾಯ. ಇದಕ್ಕೆ ವಿವರ್ತವಾದವೆಂದು ಹೆಸರು.

ಈ ವಾದವನ್ನು ವೇದಾಂತಿಗಳು ಆಶ್ರಯಿಸಿರುವುದಕ್ಕೆ ಕಾರಣವುಂಟು. ಅಸತ್ಕಾರ್ಯವಾದವಾದರೆ ಜಗತ್ತಿಗೆ ಬೇರೊಂದು ಉಪಾದಾನ ಸಾಮಗ್ರಿಯನ್ನು ಜಗತ್ತಿನ ಸತ್ಯತ್ವವನ್ನೂ ಒಪ್ಪಬೇಕಾಗುತ್ತದೆ. ಆಗ ಅದ್ವೈತಕ್ಕೆ ಹಾನಿಯೆಂಬುದು ಸ್ಪಷ್ಟ. ಪರಿಣಾಮವಾದವನ್ನಂಗೀಕರಿಸಿದರೆ ಬ್ರಹ್ಮವೇ ಜಗತ್ತಾಗಿ ಪರಿಣಮಿಸಿದೆಯೆನ್ನಬೇಕಾಗುತ್ತದೆ. ಇದು ಸುತರಾಂ ಅನಿಷ್ಟವಾದದ್ದು. ಪರಿಣಾಮ ಹೊಂದುವ ದ್ರವ್ಯದ ಸಾವಯವವಾಗಲೇಬೇಕು. ಅವಯವಗಳ ಸಂಸ್ಥಾನದ ಬದಲಾವಣೆಯೇ ಪರಿಣಾಮ ಅವಯವವಿಲ್ಲದ್ದಕ್ಕೆ ಪರಿಣಾಮವಾಗುವುದೇ ಇಲ್ಲ. ಬ್ರಹ್ಮವಾದರೋ ಅಖಂಡವಾದ

ಕೂಟಸ್ಥವಾದ ನಿತ್ಯವಸ್ತು. ಅದರಲ್ಲಿ ಅವಯವಗಳಿವೆಯೆಂದರೆ ಬ್ರಹ್ಮವು ನಶ್ವರವಾಗಬೇಕಾಗುತ್ತದೆ. ಅವಯವವಿರುವ ಸಮಸ್ತವಸ್ತುಗಳಿಗೂ ನಾಶವಿದೆ. ಅಲ್ಲದೆ ಬ್ರಹ್ಮವೇ ಜಗತ್ತಾಗಿ ಪರಿಣಮಿಸಿತೆಂದರೆ ಶುದ್ಧವಾದ ಪರಬ್ರಹ್ಮವೇ ಇಲ್ಲವೆಂಬ ದುರವಸ್ಥೆಗೆ ಮುಟ್ಟಬೇಕಾಗುತ್ತದೆ. ಆದ್ದರಿಂದ ವಿವರ್ತವಾದವನ್ನು ಅಂಗೀಕರಿಸಿದ್ದಾರೆ. ಈ ವಾದದಲ್ಲಿ ಮೂಲದ್ರವ್ಯ ಇದ್ದಂತೆಯೇ ಇರುತ್ತದೆ. ಜಗತ್ತಿನ ನಾಮರೂಪಗಳೆಲ್ಲವೂ ಮಿಥ್ಯೆ ಭ್ರಾಂತಿಯಿಂದ ಕಾಣುತ್ತದೆ. ಹಗ್ಗವನ್ನು ಹಾವೆಂದು ಭ್ರಮಿಸಿದಾಗ ಹಗ್ಗದಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲ.

ಉಪನಿಷತ್ತು ಹೇಳುತ್ತದೆ. '**ಸ ಐಕ್ಷತ ಲೋಕಾನ್ನುಸೃಜಾ ಇತಿ**' ಆ ಪರಮಾತ್ಮನು ಈ ಲೋಕಗಳನ್ನು ಸೃಜಿಸಬೇಕೆಂದು ಇಚ್ಛಿಸಿದನು. '**ಬಹು ಸ್ಯಾಂ ಪ್ರಜಾಯೇಯೇತಿ**' ನಾನು ಬಹುರೂಪನಾಗಿ ಜನಿಸಬೇಕು ಎಂದು ಬ್ರಹ್ಮವು ಬಯಸಿತು. ಇತ್ಯಾದಿ ನಾನಾ ಶ್ರುತಿವಾಕ್ಯಗಳಿಂದ ಸಿದ್ಧವಾಗುವುದೇನೆಂದರೆ. ಪರಮಾತ್ಮನಲ್ಲಿ ಅಚಿಂತ್ಯವಾದ ಮಾಯಾಶಕ್ತಿ ಇದೆ. ಅದು ವಿಜೃಂಭಿಸಿದಾಗ ಅಚಿಂತ್ಯವೂ ಅದ್ಭುತವೂ ಆದ ಜಗತ್ತನ್ನು ನಿರ್ಮಿಸಿ ಬಿಡುತ್ತದೆ. ತಾನೇ ಬಹುರೂಪವಾಗಿ ತೋರುವುದರಿಂದ ಜಗತ್ತಿಗೆ ಉಪಾದಾನವು ಮಾಯಾವಿಶಿಷ್ಟ ಬ್ರಹ್ಮವೇ. ಅದರ ಇಚ್ಛೆಯಿಂದ ಜಗನ್ನಿರ್ಮಾಣವಾಗುತ್ತದೆಯಾದ್ದರಿಂದ ನಿಮಿತ್ತಕಾರಣವೂ ಆ ಸಗುಣಬ್ರಹ್ಮವೇ. ಏವಂಚ ಉಪಾದಾನ ನಿಮಿತ್ತ ಕಾರಣಗಳೆರಡೂ ಬ್ರಹ್ಮವೇ ಎಂದು ತಿಳಿಯಬೇಕು. '**ಮಾಯಾಂ ತು ಪ್ರಕೃತಿಂ ವಿದ್ಧಿ ಮಾಯಿನಂ ತು ಮಹೇಶ್ವರಂ**' ಇತ್ಯಾದಿಶ್ರುತಿಗಳು ಈ ಜಗತ್ತು ಮಾಯಾ ಕಲ್ಪಿತವೆಂಬ ಸಿದ್ಧಾಂತಕ್ಕೆ ಪ್ರಮಾಣವಾಗಿವೆ. ಮಾಯಾಕಲ್ಪಿತವೆಂದರೆ ಮಿಥ್ಯೆ ಎಂದರ್ಥ.

ಜಗನ್ಮಿಥ್ಯಾವಾದದ ಅಭಿಪ್ರಾಯ

ನಾವು ವಾಸಿಸುವ ಮನೆ ಮಠಗಳೆಲ್ಲವೂ ಮಿಥ್ಯೆ, ಯಂತ್ರಗಳು ಕಾರ್ಖಾನೆಗಳು ಮೊದಲಾದವು ಸುಳ್ಳು, ಈ ಜಗತ್ತು ಇಲ್ಲವೇ ಇಲ್ಲ - ಎಂದು ಹೇಳಿದರೆ ಆಶ್ಚರ್ಯವೆನಿಸುತ್ತದೆ. ಇಂತಹ ಮಾತನ್ನು ನಂಬಬಹುದೆ? ಎಂದು ಜನರು ಕೇಳಿದರೆ ವಿಸ್ಮಯವೇನಿಲ್ಲ. ಆದ್ದರಿಂದ ಇದರ ಯಥಾರ್ಥತೆಯನ್ನು ತಿಳಿದುಕೊಳ್ಳಬೇಕು. ಸತ್ಯವೆಂದರೆ ಯಾವುದು ? ಯಾವುದು ಯಾವ ಸ್ವರೂಪದಿಂದ ನಿಶ್ಚಿತವಾಗಿದೆಯೋ ಅದು ತನ್ನ ಆ ಸ್ವರೂಪವನ್ನು ಯಾವ ಸಂದರ್ಭದಲ್ಲಿಯೂ ತ್ಯಜಿಸುವುದಿಲ್ಲವಾದರೆ ಅದು ಸತ್ಯ. ಉಳಿದದ್ದು ಮಿಥ್ಯೆ. ಈ ಪರಿಸ್ಥಿತಿಯಲ್ಲಿ ಪರಬ್ರಹ್ಮ ಒಂದೇ ಸತ್ಯವಾಗಿರುತ್ತದೆ. ಅದು ತನ್ನ ಸ್ವರೂಪವನ್ನು ಯಾವಾಗಲೂ ತ್ಯಜಿಸದೆ ಒಂದೇ ರೀತಿ ಬೆಳಗುತ್ತಿರುವುದು. ಉಳಿದ ಜಗತ್ತೆಲ್ಲವೂ ನಾನಾ ವಿಕಾರಗಳನ್ನು ಪಡೆಯುತ್ತಲೇ ಇರುವುದರಿಂದ ಮಿಥ್ಯೆ. ಆತ್ಯಂತಿಕ ಪ್ರಳಯದಲ್ಲಿ ಈಶ್ವರನು ತನ್ನ ಮಾಯೆಯನ್ನು ಉಪಸಂಹರಿಸಿದಾಗ ಜಗತ್ತಿಗೆ ಲಯವೇ ಆಗಿಬಿಡುತ್ತದೆ. ದ್ವೈತಸಿದ್ಧಾಂತಗಳಲ್ಲಿ ಇಂತಹ ಲಯವು ಸಂಭವಿಸುವುದಿಲ್ಲ. ಅಲ್ಲದೆ ಜಗತ್ತು

ಅನಿರ್ವಚನೀಯವೆಂದು ಅದ್ವೈತದ ಸಿದ್ಧಾಂತವಿದೆ. ಏಕೆಂದರೆ, ಇದು ಸತ್‌ಅಲ್ಲ. ಜ್ಞಾನೋದಯವಾದ ಮೇಲೆ ಬಾಧಿತವಾಗುವುದರಿಂದ ಸತ್ಯವಲ್ಲವೆಂದರ್ಥ. ಈಗ ಪ್ರತೀತಿಗೆ ಬರುವುದರಿಂದ ಅಸತ್‌ಕೂಡ ಅಲ್ಲ. ಏಕಕಾಲದಲ್ಲಿ ಒಂದು ವಸ್ತು ಸತ್-ಅಸತ್ ಎರಡೂ ಆಗಲಾರದು. ಆದ್ದರಿಂದ ಇದು ಅನಿರ್ವಚನೀಯವಾದ್ದರಿಂದ ಮಿಥ್ಯೆಯೆಂದು ವ್ಯವಹಾರ ಮತ್ತು ವೇದಾಂತವು ವ್ಯಾವಹಾರಿಕ ಸತ್ತಾ, ಪ್ರಾತಿಭಾಸಿಕ ಸತ್ತಾ, ಪಾರಮಾರ್ಥಿಕ ಸತ್ತಾ - ಎಂಬ ಮೂರು ಬಗೆಯ ಅಸ್ತಿತ್ವವನ್ನು ಒಪ್ಪುತ್ತದೆ. ಜಾಗ್ರತ್ತಿನ ಸ್ಥಿತಿಯೇ ವ್ಯಾವಹಾರಿಕ. ಇದರಲ್ಲಿ ದ್ವೈತವೆಲ್ಲವೂ ಸತ್ಯವೇ. ಜಗತ್ತು, ಪಾಪ, ಪುಣ್ಯ, ವಿಧಿ, ನಿಷೇಧ - ಮೊದಲಾದವುಗಳೆಲ್ಲವೂ ಈ ಸ್ಥಿತಿಯಲ್ಲಿ ಸತ್ಯವೆಂದೇ ತಿಳಿಯಬೇಕು. ಇದು ಮನುಷ್ಯರು ಅವಿದ್ಯೆಯಿಂದ ನಡೆಸುವ ವ್ಯವಹಾರ. ಸಂಸಾರದಲ್ಲಿರತಕ್ಕವರೆಲ್ಲರೂ ಅವಿದ್ಯೆಯ ಬಂಧನಕ್ಕೆ ಸಿಕ್ಕಿದವರೇ ಆದ್ದರಿಂದ ದ್ವೈತದೃಷ್ಟಿ ಅವರಿಗೆ ತಪ್ಪುವುದಿಲ್ಲ. ವ್ಯವಹಾರದಲ್ಲಿ ಸರ್ವವೂ ದ್ವೈತಮಯವೆಂದೇ ತಿಳಿಯತಕ್ಕದ್ದು. ಶಾಸ್ತ್ರಜ್ಞನು ಅದ್ವೈತಭಾವವನ್ನು ತಂದುಕೊಂಡಿರಬೇಕೇ ಹೊರತು, ಕ್ರಿಯೆಯಲ್ಲಿ ಅದ್ವೈತವನ್ನು ತೋರಿಸಿಬಿಡಬಾರದು! ಆದ್ದರಿಂಲೇ-

'ಭಾವಾದ್ವೈತಂ ಸದಾ ಕುರ್ಯಾತ್ ಕ್ರಿಯಾದ್ವೈತಂ ಕದಾಪಿ ನ' ಎಂದು ಶಾಸ್ತ್ರಕಾರರು ಹೇಳಿದ್ದಾರೆ. ಆದ್ದರಿಂದ ಜಗತ್ತು ವ್ಯಾವಹಾರಿಕ ಸತ್ಯವೆಂದೇ ಪರಿಗಣಿಸಿದಾಗ 'ಜಗನ್ಮಿಥ್ಯಾ' ಎಂಬುದು ವಿಸ್ಮಯಕಾರಿಯಾಗುವುದಿಲ್ಲ.

ಪ್ರಾತಿಭಾಸಿಕಸತ್ತಾ

ಪ್ರತಿಭಾಸವೆಂದರೆ ತಾತ್ಕಾಲಿಕವಾದ ತಪ್ಪು ತಿಳಿವಳಿಕೆ. ಸ್ವಪ್ನ ಮತ್ತು ಭ್ರಮೆ ಇವೆರಡು ಪ್ರತಿಭಾಸಗಳು. ಕನಸಿನಲ್ಲಿ ಕಾಣುವುದು ತಾತ್ಕಾಲಿಕವಾಗಿ ಸತ್ಯವೇ ಆಗಿರುತ್ತದೆ. ಎಚ್ಚರವಾದ ಕೂಡಲೇ ಬಾಧಿತವಾಗಿಬಿಡುತ್ತದೆ. ಹಾಗೆಯೇ ದೂರದಲ್ಲಿ ಹಗ್ಗವನ್ನು ನೋಡಿ ಹಾವೆಂದೂ, ಬಳ್ಳಿಯ ಪೊದೆಯನ್ನು ನೋಡಿ ಕಳ್ಳನೆಂದೂ ಭ್ರಮಿಸಿದಾಗ, ಅದು ಎಲ್ಲವೂ ಆ ಕ್ಷಣದಲ್ಲಿ ಸತ್ಯವೆಂದೇ ತೋರುತ್ತದೆ. ಜಗತ್ತು ಪ್ರಾತಿಭಾಸಿಕಸತ್ತೆಗೆ ಒಳಪಟ್ಟಿರುವುದರಿಂದ ಜಗನ್ಮಿಥ್ಯಾ ಎಂದು ಹೇಳುತ್ತಾರೆ.

ಪಾರಮಾರ್ಥಿಕ ಸತ್ತಾ

ಆದರೆ ಆತ್ಮಜ್ಞಾನವಾದಾಗ ಅದ್ವೈತಾನುಭವವಾಗುತ್ತದೆ. ಸರ್ವವೂ ಬ್ರಹ್ಮವೇ. ಬೇರೆ ಏನೂ ಇಲ್ಲವೇ ಇಲ್ಲ. ತಾನು ಅದ್ವಿತೀಯನಾದ ಸಚ್ಚಿದಾನಂದ ಸ್ವರೂಪನೆಂಬ ಅರಿವು ಮೂಡುತ್ತದೆ. ಆಗ ಬ್ರಹ್ಮ ಒಂದೇ ಸತ್ಯವಾಗಿ ಉಳಿದಿರುತ್ತದೆ. ಜಗತ್ತು ಮಿಥ್ಯೆಯಾಗಿಬಿಡುತ್ತದೆ. ಆದ್ದರಿಂದ ಜಗನ್ಮಿಥ್ಯೆ ಎಂಬುದು ಪರಮಾರ್ಥ. ಜ್ಞಾನಕ್ಕೆ ಸಂಬಂಧಿಸಿದುದು. ಸಂಸಾರಿಗಳ ವ್ಯವಹಾರಕ್ಕೆ ಸಂಬಂಧಿಸಿದ್ದಲ್ಲ - ಎಂದು ಸ್ಪಷ್ಟವಾಗಿ ತಿಳಿದಿರಬೇಕು.

ಸೃಷ್ಟಿಕ್ರಮ

ಮಾಯೋಪಾಧಿಯಿಂದ ಕೂಡಿದ ಬ್ರಹ್ಮವೇ ಈಶ್ವರನೆನಿಸುತ್ತದೆ. ಈ ಸಗುಣಬ್ರಹ್ಮದಿಂದ ಇಚ್ಛಾಪೂರ್ವಕವಾಗಿ ಜಗತ್ತಿನ ಸೃಷ್ಟಿಯಾಗುತ್ತದೆ. ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ ಇವು ಕ್ರಮವಾಗಿ ಹುಟ್ಟಿ ಪಂಚೀಕರಣ ಪ್ರಕ್ರಿಯೆಯಿಂದ ಸಂಮಿಶ್ರವಾದವೆಂದೂ, ಅನಂತರ ಓಷಧಿಗಳೂ, ಅನ್ನವೂ, ಪ್ರಾಣಿಗಳೂ ಜನಿಸಿದರೆಂದೂ ಶ್ರುತಿಯು ಹೇಳುತ್ತದೆ. ಮನುಷ್ಯನ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೂ ಆಕಾಶಾದಿಗಳ ಸೂಕ್ಷ್ಮಾಂಶಗಳಿಂದ ರಚಿತವಾದವು. ಇವೆಲ್ಲವನ್ನೂ ಸೃಷ್ಟಿಸಿದ ಈಶ್ವರನು ಮಾನವನನ್ನು ಅನುಪ್ರವೇಶ ಮಾಡಿದನೆಂದು ವೇದದಲ್ಲಿ ಹೇಳಿದೆ. (**ತತ್‌ಸೃಷ್ಟ್ವಾ ತದೇವಾನುಪ್ರಾವಿಶತ್**). ಮಾನವನೆಂದರೆ ಎಲ್ಲ ಪ್ರಾಣಿಗಳಿಗೂ ಉಪಲಕ್ಷಣ. ಮಾನವಾದಿ ಪ್ರಾಣಿಗಳಲ್ಲಿರುವ ಜೀವನೆಂಬ ಚೈತನ್ಯವೇ ಬ್ರಹ್ಮವೆಂದು ಇದರ ಅಭಿಪ್ರಾಯವು ಸ್ಪಷ್ಟವಾಗಿದೆ. ಈಶ್ವರನು ಮೊದಲು ಜಲವನ್ನು ಸೃಜಿಸಿದನೆಂದೂ ಉಪನಿಷತ್ತು ಹೇಳಿದೆಯಾದ್ದರಿಂದ ಕ್ರಮ ಸೃಷ್ಟಿಯೇನೂ ವಿವಕ್ಷಿತವಲ್ಲ. ವಸ್ತುತಃ ಸೃಷ್ಟಿಯ ವರ್ಣನೆಯ ಉದ್ದೇಶವು ಇಂತಹ ಜಗತ್ತಿಗೆ ಮೂಲಕಾರಣವಾದದ್ದು ಬ್ರಹ್ಮವೆಂದು ತಿಳಿಸುವುದಕ್ಕಾಗಿ ಮಾತ್ರ. ಜಗತ್ತಿನ ನಾಮರೂಪಗಳೆಲ್ಲವೂ ಮಾಯಿಕವಾದ್ದರಿಂದ ಜಗತ್ತು ಮಿಥ್ಯೆ ಎಂದು ಸಿದ್ಧವಾಗುತ್ತದೆ.

ಜೀವ

'**ಜೀವೋ ಬ್ರಹ್ಮೈವ ನಾಪರಃ**' ಎಂದು ವೇದಾಂತದ ಸಿದ್ಧಾಂತ. ಆದ್ದರಿಂದ ಬ್ರಹ್ಮವೇ ದೇಹದಲ್ಲಿ ಜೀವಭಾವದಿಂದಿದೆ. ಅದು ವಿಭುವೂ ನಿತ್ಯವೂ ಆಗಿದೆ. ಕೆಲವೆಡೆ ಜೀವನು ಅಂಗುಷ್ಠಮಾತ್ರನೆಂದೂ ಅಣುವೆಂದೂ ಹೇಳಿರುವುದುಂಟು. ಹೃದಯವು ಅಂಗುಷ್ಠ ಪ್ರಮಾಣವಾದ್ದರಿಂದ ಜೀವಾತ್ಮನು ಅಲ್ಲಿ ನೆಲೆಸಿದ್ದಾನೆ ಎಂಬ ಹೇಳಿಕೆಯನ್ನನುಸರಿಸಿ ಅಂಗುಷ್ಠ ಮಾತ್ರನೆಂದು ಅಭಿಪ್ರಾಯ. ಮನಸ್ಸು ಜೀವನಿಗೆ ಉಪಾಧಿಯಾಗಿರುವುದರಿಂದ ಜೀವನು ಅಣು ಎಂದೂ ಹೇಳಿದೆ. ಮನಸ್ಸು ಅಣುಪರಿಮಾಣದ್ದು. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ಮನುಷ್ಯನು ಸತ್ತ ಮೇಲೆ ಜೀವವು ಪರಲೋಕಕ್ಕೆ ಹೋಗುತ್ತದೆ ಇತ್ಯಾದಿ ವರ್ಣನೆಗಳುಂಟಷ್ಟೆ. ಅದೆಲ್ಲವೂ ಜೀವಕ್ಕೆ ಉಪಾಧಿಯಾದ ಮನಸ್ಸು ಅಥವಾ ಅಂತಃಕರಣಕ್ಕೆ ಸಂಬಂಧಿಸಿದ್ದು. ವಿಭುವಾದ ಆತ್ಮನು ಚಲಿಸುತ್ತಾನೆನ್ನುವುದು ಅಸಂಭವವೇ ಸರಿ. ಸರ್ವವ್ಯಾಪಿಯಾದ ವಿಭುವು ಚಲಿಸುವುದೆಂದರೆ ತಾನಿಲ್ಲದ ಸ್ಥಳಕ್ಕೆ ಹೋಗಬೇಕು! ಇಲ್ಲದ ಸ್ಥಳ ಇದ್ದರೆ ಇವನು ವಿಭುವೇ ಆಗುವುದಿಲ್ಲ.

ಸುಖ ದುಃಖಗಳ ಭೋಕ್ತೃತ್ವ, ಪುಣ್ಯಪಾಪಗಳೆಂಬ ಸಂಸ್ಕಾರಗಳಿಂದ ಕೂಡತಕ್ಕದ್ದು ಮುಂತಾದ ಸಂಸಾರಿಧರ್ಮವೆಲ್ಲವೂ ಚಿತ್ತಕ್ಕೆ ಅಥವಾ ಅಂತಃಕರಣಕ್ಕೇ ಹೊರತು ಆತ್ಮನಿಗಲ್ಲ. ಆತ್ಮಚೈತನ್ಯ ವಿಶಿಷ್ಟವಾದ ಚಿತ್ತವೇ ಜೀವ ಎಂದು ಫಲಿತವಾಗುತ್ತದೆ. ದೇಹ, ಇಂದ್ರಿಯ,

ಚಿತ್ತ - ಇತ್ಯಾದಿಗಳೇ ನಾನೆಂಬ ಭ್ರಮೆಗೆ ಒಳಗಾದವರು ಸುಖ ದುಃಖಾದಿಗಳನ್ನನುಭವಿಸುತ್ತ ಸಂಸಾರಿಗಳಾಗಿರುತ್ತಾರೆ.

ಶ್ರೀ ಶಂಕರಾಚಾರ್ಯರು "**ಅಸ್ತಿ ಆತ್ಮಾ ಜೀವಾಖ್ಯಃ ಶರೀರೇಂದ್ರಿಯ ಪಂಜರಾಧ್ಯಕ್ಷಃ ಕರ್ಮಫಲಸಂಬಂಧೀ**- ಶರೀರ ಮತ್ತು ಇಂದ್ರಿಯಗಳಿಗೆ ಅಧ್ಯಕ್ಷನೂ ಕರ್ಮಫಲಗಳನ್ನನುಭವಿಸತಕ್ಕವನೂ ಆದ ಆತ್ಮನು ಜೀವನೆನಿಸಿಕೊಂಡಿದ್ದಾನೆ" ಎಂದು ಹೇಳಿದ್ದಾರೆ. ಈ ಜೀವನು ಪರಮಾರ್ಥದಲ್ಲಿ ಬ್ರಹ್ಮವೇ. ಆದರೆ ಅನಾದಿಯಾದ ಅವಿದ್ಯೆಯಿಂದ ತನ್ನ ನಿಜಸ್ವರೂಪವನ್ನು ಮರೆತು ಅಂತಃಕರಣವೆಂಬ ಉಪಾಧಿಯಿಂದ ಸಹಿತನಾಗಿ ಮಾಯಿಕವಾದ ಲೋಕವ್ಯವಹಾರದಲ್ಲಿ ತೊಡಗಿ ಜೀವನೆನಿಸಿಕೊಂಡಿದ್ದಾನೆ. ಅಂತಃಕರಣೋಪಾಧಿ ಸಹಿತ ಎಂಬುದಕ್ಕೆ ಎರಡು ಬಗೆಯ ವಾದಗಳಿವೆ. ಇವುಗಳಿಗೆ ಅವಚ್ಛೇದಕವಾದ ಮತ್ತು ಪ್ರತಿಬಿಂಬವಾದ ಎಂದು ಹೆಸರು. ದೃಷ್ಟಾಂತಕ್ಕಾಗಿ ಅವಚ್ಛೇದಕವೆಂದರೆ ಒಂದು ಅಳತೆಯಕೋಲು ಎಂದು ಭಾವಿಸಬಹುದು. ಗಜದ ಕಡ್ಡಿ ಅವಚ್ಛೇದಕ. ಇದರಿಂದ ಅಳೆಯಲ್ಪಟ್ಟ ಒಂದು ಗಜದ ಬಟ್ಟೆಯು ಅವಚ್ಛಿನ್ನ. ಸರ್ವವೂ ಬ್ರಹ್ಮಚೈತನ್ಯವೇ ಆದ್ದರಿಂದ ಅಂತಃಕರಣಾವಚ್ಛಿನ್ನಚೈತನ್ಯವೇ ಜೀವವೆನಿಸುತ್ತದೆ. ಅಂತಃಕರಣವು ಮಾಯಿಕವೇ. ಇದರ ಸಂಬಂಧವಿಲ್ಲದಿದ್ದರೆ ಚೈತನ್ಯವು ಬ್ರಹ್ಮವೇ ಆಗಿರುತ್ತದೆ. ಈ ಅಂತಃಕರಣವೆಂಬ ವಿಶೇಷಣದಿಂದ ಕೂಡಿದವನು ಜೀವನೆಂದರ್ಥ. ಇದು ಅವಚ್ಛೇದಕವಾದ ಸೂರ್ಯನು ಬೇರೆ ಬೇರೆ ಜಲಪಾತ್ರೆಗಳಲ್ಲಿ ಪ್ರತಿಬಿಂಬಿಸುವ ಹಾಗೆ, ಅಂತಃಕರಣದಲ್ಲಿ ಪ್ರತಿಬಿಂಬಿತವಾದ ಚೈತನ್ಯವೇ ಜೀವ ಎಂದಾಗ ಪ್ರತಿಬಿಂಬಿವಾದವಾಗುತ್ತದೆ. ಇವೆಲ್ಲವೂ ಶಾಸ್ತ್ರಕಾರರ ಪ್ರಕ್ರಿಯಾಭೇದಗಳು. ತಾತ್ಪರ್ಯ ಒಂದೇ ಆಗಿರುತ್ತದೆ. ಅವಿದ್ಯೆ, ಮಾಯೆ ಇವುಗಳಿಗೆ ಸ್ವಲ್ಪ ಭೇದವನ್ನು ವ್ಯಾಖ್ಯಾನಕಾರರು ಹೇಳುತ್ತಾರೆ. ಶ್ರೀ ಶಂಕರಾಚಾರ್ಯರು ಈ ಭೇದವೇನೆಂಬುದನ್ನು ತಿಳಿಸಿಲ್ಲ. ಒಟ್ಟಿನಲ್ಲಿ ಮಾಯಾಸಂಬಂಧವಿಲ್ಲದೆ ನಿತ್ಯಶುದ್ಧಬುದ್ಧವಾಗಿರುವುದು ಪರಬ್ರಹ್ಮ. ಮಾಯೆಯನ್ನು ಜಾಗೃತಗೊಳಿಸಿ ಅದನ್ನು ತನ್ನ ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಪರಬ್ರಹ್ಮವೇ ಈಶ್ವರ. ಸೃಷ್ಟಿ ಮೊದಲಾದವುಗಳ ಕರ್ತೃ ಮಾಯೆಗೆ ಅಧೀನವಾಗಿ ಅಜ್ಞಾನದಲ್ಲಿ ಪರಿತಪಿಸುವ ಅಂತಃಕರಣದಿಂದ ವಿಶಿಷ್ಟವಾದ ಕಲ್ಪಿತಾಂಶವಾದ ಬ್ರಹ್ಮವೇ ಜೀವ ಎಂದು ತಿಳಿಯತಕ್ಕದ್ದು. ಅಂತಃಕರಣ ಶೂನ್ಯವಾಗಿ ಬ್ರಹ್ಮದ ವಿವರ್ತವಾಗಿರತಕ್ಕದ್ದು ಜಗತ್ತು ಎಂದು ಸಂಕ್ಷೇಪವಾಗಿ ತಿಳಿಯಬಹುದು.

ಅಧ್ಯಾಸ

'**ಸರ್ವಂ ಖಲ್ವಿದಂ ಬ್ರಹ್ಮ, ಆತ್ಮೈವೇದಂ ಸರ್ವಂ, ಇದಂ ಸರ್ವಂ ಯದಯಮಾತ್ಮಾ, ಪುರುಷ ಏವೇದಂ ಸರ್ವಂ**'- ಇತ್ಯಾದಿ ಉಪನಿಷದ್ವಾಕ್ಯಗಳು ಸಮಸ್ತವೂ ಬ್ರಹ್ಮವೆಂದು ಘೋಷಿಸುತ್ತವೆ. ಬ್ರಹ್ಮ, ಜೀವ - ಇವರು ಒಂದೇ ವಸ್ತುವೆಂದು

ತಿಳಿಸಿಕೊಡುವುದಕ್ಕಾಗಿ ಸಕಲೋಪನಿಷತ್ತುಗಳೂ ಹೊರಟಿರುತ್ತವೆ. ಅಲ್ಲಲ್ಲಿ ಭೇದವನ್ನು **'ದ್ವಾಸುಪರ್ಣಾ ಸಯುಜಾ ಸಖಾಯೌ'** ಎಂದು ಅನುವಾದದ ಮೂಲಕ ಹೇಳಿರುವುದು ಲೋಕ ದೃಷ್ಟಿಯಿಂದ ಬೋಧನೆಗೋಸ್ಕರವೇ ಆಗಿದೆ. ದ್ವೈತದಲ್ಲಿ ನಿಂತೇ ಅದ್ವೈತವನ್ನು ತಿಳಿಸಿಕೊಡಬೇಕಾಗುತ್ತದೆ. ಇಲ್ಲದಿದ್ದರೆ ಗುರುಶಿಷ್ಯ ವಿಭಾಗವೇ ಇಲ್ಲದೆ ಹೋದೀತು. ಆಗ ದೃಷ್ಟಾಂತಗಳನ್ನು ಸಹ ಬಳಸಲಾಗದೆ ಮೌನವೇ ಗತಿಯಾಗಿ ಬಿಡುತ್ತದೆ. ಬ್ರಹ್ಮವು ನಿರ್ವಿಶೇಷವಾದದ್ದು ಎಂದರೆ ಯಾವ ವಿಧವಾದ ಭೇದವೂ ಇಲ್ಲದೆ ಗುಣಕ್ರಿಯಾದಿ ಧರ್ಮರಹಿತವೂ ಆಗಿ ಕೇವಲಾದ್ವೈತವಾಗಿರುತ್ತದೆ. ನಾನು ಸುಖಿ, ನಾನು ದುಃಖಿ, ನಾನು ಕರ್ತಾ, ನಾನು ಭೋಕ್ತ, ಇದು ನನ್ನದು ಮೊದಲಾದ ತಿಳಿವಳಿಕೆಯೆಲ್ಲವೂ ಅಧ್ಯಾಸ ಮೂಲಕವಾಗಿ ಮನುಷ್ಯನಲ್ಲಿ ಕಂಡುಬರುತ್ತದೆ. ಅಧ್ಯಾಸವೆಂದರೆ **'ಅತಸ್ಮಿನ್ ತದ್ಬುದ್ಧಿಃ'** ಎಂದರೆ ಅದಲ್ಲದ್ದರಲ್ಲಿ ಅದು ಎಂಬ ಬುದ್ಧಿ. ಇದನ್ನೇ ಅಜ್ಞಾನ, ಭ್ರಮೆ, ಅವಿದ್ಯೆ ಎಂದೂ ಹೇಳಬಹುದು. ಇದರಲ್ಲಿ ಆವರಣ, ವಿಕ್ಷೇಪ ಎಂಬ ಎರಡು ಶಕ್ತಿಗಳಿವೆ. ಆವರಣವೆಂದರೆ ವಸ್ತುವಿನ ನಿಜ ಸ್ವರೂಪವನ್ನು ಮುಚ್ಚುವುದು; ವಿಕ್ಷೇಪವೆಂದರೆ ಇಲ್ಲದ್ದನ್ನು ತೋರಿಸುವುದು. ರಜ್ಜು ಸರ್ಪಸ್ಥಳದಲ್ಲಿಯೇ ಇದನ್ನು ತೋರಿಸಬಹುದು. ಹಗ್ಗವನ್ನು ಹಾವೆಂದು ಭ್ರಮಿಸಿದಾಗ ಹಗ್ಗದ ಸ್ವರೂಪಕ್ಕೆ ಆವರಣವಾಗಿ ಹಾವು ಎಂಬ ಇಲ್ಲದ ವಸ್ತು ತೋರುತ್ತದೆ. ರಜ್ಜುತ್ವಕ್ಕೆ ಆವರಣ, ಸರ್ಪತ್ವಕ್ಕೆ ವಿಕ್ಷೇಪ.

ಹಾಗಾದರೆ ನಮಗೆ ತೋರುವ ಸುಖ, ದುಃಖ, ಕಾಮ, ಕ್ರೋಧಾದಿಗಳು ಎಲ್ಲಿವೆ? ಮನುಷ್ಯನು ದೇಹ, ಇಂದ್ರಿಯ, ಅಂತಃಕರಣಗಳನ್ನು 'ನಾನು' ಎಂಬುದರ ಮೂಲದಲ್ಲಿ ಮಿಂಚುವ ಚೈತನ್ಯದೊಂದಿಗೆ ಕಲಬೆರಕೆ ಮಾಡಿಕೊಂಡು ನಾನು ಚೈತ್ರ, ನಾನು ಮೈತ್ರ ಎಂದು ಲೋಕದಲ್ಲಿ ವ್ಯವಹರಿಸುತ್ತಿದ್ದಾನೆ. ಅಧ್ಯಾಸವೇ ಇದಕ್ಕೆ ಮೂಲಕಾರಣ. ಆತ್ಮನೊಡನೆ ದೇಹಾದಿಗಳು ಅಧ್ಯಸ್ತವಾಗಿವೆ ಎಂದರ್ಥ. ಸುಖ, ದುಃಖ, ಕಾಮ, ಕ್ರೋಧಾದಿಗಳು ಅಂತಃಕರಣದಲ್ಲಿವೆ. ಅವು ಅಂತಃಕರಣಧರ್ಮಗಳು. ಕುರುಡ, ಕುಂಟ, ಕಿವುಡ ಮುಂತಾದ ಮಾತುಗಳಲ್ಲಿ ಕಿವುಡುತನ ಮೊದಲಾದವು ಇಂದ್ರಿಯಗಳ ಧರ್ಮ. ನಾನು ಯುವಕ, ನಾನು ವೃದ್ಧ, ನಾನು ಸ್ತ್ರೀ, ನಾನು ಬಲಿಷ್ಠ ಮೊದಲಾದ ವ್ಯವಹಾರಗಳಲ್ಲಿ ಯೌವನಾದಿಗಳೆಲ್ಲವೂ ದೇಹಧರ್ಮಗಳು, ಆತ್ಮನಲ್ಲಿ ಈ ಯಾವ ಧರ್ಮಗಳೂ ಇಲ್ಲ. ಅಧ್ಯಾಸ ಮೂಲಕವಾಗಿಯೇ ಸಕಲ ವ್ಯವಹಾರಗಳೂ ನಡೆಯುತ್ತವೆಯೆಂದು ಒಂದೇ ಮಾತಿನಲ್ಲಿ ಹೇಳಬಹುದು.

ಸಮ್ಯಗ್‌ಜ್ಞಾನ

ಈ ಅಧ್ಯಾಸವನ್ನು ನಿರ್ಮೂಲ :ಮಾಡಿದಾಗ ಸ್ಫುಟವಾಗಿ ಪ್ರಕಾಶಿಸುವ ಜ್ಞಾನವೇ ಸಮ್ಯಗ್‌ಜ್ಞಾನ. ಸತ್ಯದ ಸರಿಯಾದ ಜ್ಞಾನ. ಇದನ್ನು ಉಂಟುಮಾಡಿ ಮಾನವನನ್ನು ಉದ್ಧರಿಸುವುದಕ್ಕಾಗಿ ಸಕಲ ವೇದೋಪನಿಷತ್ತುಗಳೂ, ಭಗವದ್ಗೀತೆ, ಪುರಾಣಾದಿ

ಸದ್ಗ್ರಂಥಗಳೂ ಪ್ರವೃತ್ತವಾಗಿವೆ. ಅಧ್ಯಾಸವು ಅನಾದಿಯಾಗಿ ಅಂಟಿಕೊಂಡಿರುವುದರಿಂದ ಇದನ್ನು ತೊಡೆದು ಹಾಕುವುದು ಅತ್ಯಂತ ಕಠಿನವಾದದ್ದು. ಆದ್ದರಿಂದ ಈ ಗ್ರಂಥಗಳು ನಾನಾ ಬಗೆಯ ಬಳಸುಮಾರ್ಗಗಳನ್ನನುಸರಿಸಿ, ಸತ್ಯದ ಕಡೆಗೆ ಕೈತೋರಿಸಿ, ವೇದಾಂತಶ್ರವಣಕ್ಕೆ ಮನುಷ್ಯನನ್ನು ಪ್ರೇರಿಸುತ್ತವೆ. ಜೀವಬ್ರಹ್ಮೈಕ್ಯವೇ ಪರಮಸತ್ಯವೆಂದೂ ಅದರ ಜ್ಞಾನವೇ ಸಮ್ಯಗ್ ಜ್ಞಾನವೆಂದೂ ತಿಳಿಸಿಕೊಡುತ್ತವೆ.

ಛಾಂದೋಗ್ಯೋಪನಿಷತ್ತಿನಲ್ಲಿ ಉದ್ದಾಲಕನೆಂಬ ಬ್ರಹ್ಮರ್ಷಿಯು ತನ್ನ ಮಗನೂ ಶಿಷ್ಯನೂ ಆದ ಶ್ವೇತಕೇತುವಿಗೆ '**ತತ್‌ತ್ವಮಸಿ**' ಎಂದು ಒಂಬತ್ತು ಸಲ ಉಪದೇಶಿಸಿದ್ದಾನೆ. ಬ್ರಹ್ಮವೆಂದರೆ ಇದು ಎಂದು ಬ್ರಹ್ಮದ ಸ್ವರೂಪವನ್ನರುಹಿ, '**ಓ ಶ್ವೇತಕೇತು, ತತ್ ಆ ಬ್ರಹ್ಮವೇ ತ್ವಂ - ನೀನು ಅಸಿ - ಆಗಿದ್ದೀಯೆ** ' ಎಂದು ಉಪದೇಶಿಸಿದ್ದಾನೆ. ತಂದೆಯು ತನ್ನ ಪ್ರೀತಿಪಾತ್ರನಾದ ಮಗನಿಗೆ ಒಂದೇ ಮಾತನ್ನು ಒಂಬತ್ತುಸಲ ಉಪದೇಶಿಸಿರಬೇಕಾದರೆ, ಉಪನಿಷತ್ತಿನಲ್ಲಿ ಗಟ್ಟಿಯಾದ ಸಾರಭೂತವಾದ ಉಪದೇಶ ಇದೇ ಎಂದು ಸ್ಪಷ್ಟವಾಗುತ್ತದೆ.

''**ಅಹಂ ಬ್ರಹ್ಮಾಸ್ಮಿ** - ನಾನು ಬ್ರಹ್ಮವಾಗಿದ್ದೇನೆ'' ಎಂಬ ಇನ್ನೊಂದು ಉಪನಿಷದ್ವಾಕ್ಯವು ಏಕತೆಯ ಅನುಸಂಧಾನಕ್ರಮವನ್ನು ಬೋಧಿಸುತ್ತದೆ. ನೀನೊಬ್ಬನೇ ಬ್ರಹ್ಮವೆಂದು ತಿಳಿಯಬಾರದು, ಸಕಲ ಜೀವಕೋಟಿಯೂ ಬ್ರಹ್ಮವೇ, ಅದೇ ನೀನು, ಎಂದು ಬೋಧಿಸುವುದಕ್ಕಾಗಿ '**ಅಯಮಾತ್ಮಾ ಬ್ರಹ್ಮ**' ಎಂಬ ಇನ್ನೊಂದು ವಾಕ್ಯವು ಬಂದಿದೆ. ಈ ಮೂರನ್ನು ಅದ್ವೈತಿಗಳು ಮಹಾವಾಕ್ಯಗಳೆಂದು ಕರೆಯುತ್ತಾರೆ.

ಮೋಕ್ಷ

ಮೋಕ್ಷಶಬ್ದಕ್ಕೆ ಬಿಡುಗಡೆ ಎಂದರ್ಥ. ಯಾವುದರಿಂದ ಬಿಡುಗಡೆ? ದೇಹಾತ್ಮಭಾವದಿಂದ, ತಾಪತ್ರಯಗಳಿಂದ, ಸಂಸಾರವೆಂಬ ಅಧ್ಯಾಸದಿಂದ ಬಿಡುಗಡೆ. ಪರಮಾರ್ಥದಲ್ಲಾದರೋ ಆತ್ಮನಿಗೆ ಯಾವುದೂ ಅಂಟಿಕೊಂಡಿಲ್ಲ. ಅವನು ನಿತ್ಯಶುದ್ಧನೂ ಮುಕ್ತನೂ ಆಗಿದ್ದಾನೆ. ಅಧ್ಯಾಸವೆಂಬ ತಪ್ಪು ತಿಳಿವಳಿಕೆಯಿಂದ ಮಾತ್ರ ಬಿಡುಗಡೆ. ಮೋಕ್ಷವನ್ನು ಪಡೆದವನು ಯಾವುದೋ ಲೋಕಕ್ಕೆ ಹೋಗುವುದಾದರೂ ಎಲ್ಲಿಗೆ ? ನೀರು ತುಂಬಿದ ಗಡಿಗೆಯನ್ನು ಸಮುದ್ರದಲ್ಲಿ ಒಡೆದಾಗ ಗಡಿಗೆಯ ನೀರು ಸಮುದ್ರದಲ್ಲಿ ಕೂಡಿ ಹೋದಂತೆ, ಜೀವಾತ್ಮನು ಪರಮಾತ್ಮನಲ್ಲಿ ಕೂಡಿಹೋಗುತ್ತಾನೆ. ವಸ್ತುತಃ ಈ ದೃಷ್ಟಾಂತವೂ ಪೂರ್ಣಸ್ವರೂಪದ್ದಲ್ಲ. ಸ್ವತಃ ಪರಮಾತ್ಮನೇ ಆಗಿರುವುದರಿಂದ ಹೊಸದಾಗಿ ಕೂಡಬೇಕಾದದ್ದೇನೂ ಇಲ್ಲ.

ಅದ್ವೈತವು ಜೀವನ್ಮುಕ್ತಿಯನ್ನು ಒಪ್ಪುತ್ತದೆ. ಮನುಷ್ಯನಿಗೆ ಸಮ್ಯಗ್‌ಜ್ಞಾನ ಉಂಟಾಗಿ '**ಅಹಂ ಬ್ರಹ್ಮಾಸ್ಮಿ**' ಎಂಬ ಭಾವವು ದೃಢವಾಗಿ ನಿಂತರೆ ಅವನು ಮುಕ್ತನೆ. '**ಅತ್ರ ಬ್ರಹ್ಮ ಸಮಶ್ನುತೇ** - ಈ ದೇಹದಲ್ಲಿರುವಾಗಲೇ ಬ್ರಹ್ಮವನ್ನು ಪಡೆಯುತ್ತಾನೆ'

ಎಂದು ಶ್ರುತಿಯು ಸಾರುತ್ತದೆ. ಬ್ರಹ್ಮಜ್ಞಾನಿಯು ಸಚ್ಚಿದಾನಂದಸ್ವರೂಪಿಯೇ ಆಗಿಬಿಡುತ್ತಾನೆ. ಪ್ರಾರಬ್ಧಕರ್ಮದಿಂದ ದೇಹವು ಮಾತ್ರ ಉಳಿದುಕೊಂಡಿರುತ್ತದೆ. ಆಗ ಅವಿದ್ಯಾಲೇಶವೂ ಸ್ವಲ್ಪ ಅಂಟಿಕೊಂಡಿರುತ್ತದೆ ಎಂದು ಕೆಲವರ ಅಭಿಪ್ರಾಯವಿದೆ. ಯಾವ ಅವಿದ್ಯಾಲೇಶವು ಇರುವುದೇ ಇಲ್ಲವೆಂದೂ ಬ್ರಹ್ಮಜ್ಞಾನಿಯ ಲೋಕವ್ಯವಹಾರವು ಲೋಕಸಂಗ್ರಹಕ್ಕಾಗಿ ತಾನೇ ಬುದ್ಧಿಪೂರ್ವಕವಾಗಿ ಕಲ್ಪಿಸಿಕೊಂಡದ್ದೆಂದೂ ಇನ್ನು ಕೆಲವರ ಅಭಿಪ್ರಾಯವಿದೆ. ದೇಹಪಾತವಾದ ಮೇಲೆ ವಿದೇಹಮುಕ್ತಿಯೆಂದು ವ್ಯವಹಾರ. ದರ್ಶನಾಂತರಗಳಲ್ಲಿ ಹೇಳಿರುವಂತೆ, ಮನುಷ್ಯನು ಸತ್ತ ಮೇಲೆ ಮೋಕ್ಷವು ದೊರೆಯುತ್ತದೆ ಎಂದು ಈ ದರ್ಶನವು ಹೇಳುವುದಿಲ್ಲ. ಮುಕ್ತಿಯು ಇಲ್ಲಿಯೇ ಈ ದೇಹವಿರುವಾಗಲೇ ಅನುಭವಕ್ಕೆ ಬರತಕ್ಕದ್ದೆಂದೂ ಅನುಭವವನ್ನು ನಿರಾಕರಿಸಲು ಯಾರಿಗೂ ಶಕ್ಯವಾದದ್ದಲ್ಲವೆಂದೂ ಅದ್ವೈತದರ್ಶನವು ಸಾರುತ್ತದೆ .

ಸಾಧನಗಳು

ಈ ದರ್ಶನದಲ್ಲಿ ಮೋಕ್ಷವು ಯಾವುದೋ ಲೋಕದಲ್ಲಿ ಪಡೆಯಬೇಕಾದ್ದಲ್ಲ. ಅದು ಆತ್ಮನ ಪರಮಾರ್ಥಸ್ವರೂಪವೇ ಆಗಿರುತ್ತದೆ. ಅದರ ಸಾಕ್ಷಾತ್ಕಾರವಾಗಿ ಸ್ವಾನುಭವಕ್ಕೆ ಬರುವುದೇ ಮೋಕ್ಷ. ಇದಕ್ಕೆ ಅಡ್ಡಿಯಾಗಿರುವುದು ಅಜ್ಞಾನವು ಮಾತ್ರ. ಕತ್ತಲೆಯು ಹೋದರೆ ಇರುವ ವಸ್ತು ತಾನಾಗಿಯೇ ಗೋಚರಿಸುತ್ತದೆ. ಅಜ್ಞಾನವನ್ನು ಕಳೆದುಕೊಳ್ಳಬೇಕಾದ ಸಾಧಕನಿಗೆ ಅದಕ್ಕಾಗಿ ಒಂದು ಅರ್ಹತೆ ಬೇಕಾಗುತ್ತದೆ. ಇದೇ ಅಧಿಕಾರ ಸಂಪತ್ತು. ಇದನ್ನು ಮೊದಲು ಪಡೆದುಕೊಳ್ಳಬೇಕು. ಅದಕ್ಕೆ ಸಾಧನಚತುಷ್ಟಯ ಅವಶ್ಯಕ ಯಾವುದೆಂದರೆ -

೧. **ನಿತ್ಯಾನಿತ್ಯ ವಸ್ತು ವಿವೇಕ-** ಬ್ರಹ್ಮವು ಮಾತ್ರವೇ ನಿತ್ಯವಾದ ವಸ್ತು. ಉಳಿದ ಸಮಸ್ತವೂ ನಾಶವಾಗತಕ್ಕದ್ದು, ಅನಿತ್ಯ ಎಂಬ ವಿವೇಚನೆ.

೨. **ಇಹಾಮುತ್ರ ಫಲಭೋಗವಿರಾಗ-** ಇಹ ಈ ಲೋಕದ ಸುಖ, ಅಮುತ್ರ= ಪರಲೋಕದ ಸುಖಗಳೆರಡೂ ಅಸ್ಥಿರವಾದ್ದರಿಂದ ಬೇಡವೆಂಬ ದೃಢವಾದ ವೈರಾಗ್ಯ.

೩. **ಶಮಾದಿಷಟ್ಕ ಸಂಪತ್ತು-** ಶಮ, ದಮ, ಉಪರತಿ, ತಿತಿಕ್ಷಾ, ಸಮಾಧಾನ, ಶ್ರದ್ಧೆ.

೪. **ಮುಮುಕ್ಷುತ್ವ-** ಮೋಕ್ಷವನ್ನು ಪಡೆಯಬೇಕೆಂಬ ತೀವ್ರವಾದ ಇಚ್ಛೆ.

ಇವಿದ್ದಾಗ ಶ್ರವಣ, ಮನನ, ನಿದಿಧ್ಯಾಸನಗಳೆಂಬ ಮೂರು ಅಂತರಂಗ ಸಾಧನಗಳನ್ನು ಅವಲಂಬಿಸಬೇಕು. ಶ್ರವಣ - ಗುರುಮುಖದಿಂದ ವೇದಾಂತದ ಸಿದ್ಧಾಂತವನ್ನು ಕೇಳಿ ತಿಳಿಯುವುದು. ಮನನ - ಕೇಳಿದ ವಿಷಯವನ್ನು ತನ್ನಲ್ಲಿಯೇ ಯುಕ್ತಿಗಳಿಂದ ಅನುಸಂಧಾನಮಾಡುತ್ತ ದೃಢಪಡಿಸಿಕೊಳ್ಳುವುದು. ನಿದಿಧ್ಯಾಸನ - ನಿರಂತರವಾಗಿ

ಬ್ರಹ್ಮವಸ್ತುವನ್ನೇ ಧ್ಯಾನಿಸುತ್ತ ಏಕಾಗ್ರಚಿತ್ತನಾಗಿರುವುದು.

ಈ ದರ್ಶನದಲ್ಲಿ ಕರ್ಮ, ಭಕ್ತಿ, ಉಪಾಸನೆಗಳು ಚಿತ್ತಶುದ್ಧಿಗಾಗಿ ಆವಶ್ಯಕಗಳೆಂದು ತಿಳಿಸಿದೆ. ನಾವು ಮಾಡುವ ಶಾಸ್ತ್ರೀಯ ಕರ್ಮವಾಗಲಿ ಲೌಕಿಕ ಕರ್ಮವೇ ಆಗಲಿ ಸ್ವಾರ್ಥಾಭಿಲಾಷೆಯಿಂದ ನಡೆಯಕೂಡದು. ಎಲ್ಲವೂ ಭಗವಂತನ ಆಜ್ಞೆ, ಅವನ ಪ್ರೀತಿಗಾಗಿ ಈ ಕಾರ್ಯವನ್ನು ಮಾಡುತ್ತಿದ್ದೇನೆ. ದೇವರು ಸುಪ್ರೀತನಾಗಲಿ - ಎಂಬ ಬುದ್ಧಿಯಿಂದ ಮಾಡುವ ಕರ್ಮ ನಿಷ್ಕಾಮ ಕರ್ಮವೆನಿಸುತ್ತದೆ. ಇದು ಚಿತ್ತಶುದ್ಧಿಗೆ ಆವಶ್ಯಕ. ಅಂತರಂಗವು ಶುದ್ಧವಾಗದೆ ಆತ್ಮಸಾಕ್ಷಾತ್ಕಾರವಾಗದು. ಹಾಗೆಯೇ ಭಗವಂತನು ಪರಮಪ್ರೇಮಾಸ್ಪದನೆಂಬ ದೃಢವಾದ ನಂಬಿಕೆಯನ್ನಿಡುವುದೇ ಭಕ್ತಿ ಎನಿಸುತ್ತದೆ. ಭಕ್ತಿಯಿಂದ ಈಶ್ವರಾನುಗ್ರಹವಾಗುತ್ತದೆ. ಈಶ್ವರಾನುಗ್ರಹವಿಲ್ಲದೆ ಅದ್ವೈತದಲ್ಲಿ ನಿಷ್ಠೆಯೇ ಉಂಟಾಗುವುದಿಲ್ಲ. ಇದೂ ಚಿತ್ತಶುದ್ಧಿಗೆ ಆವಶ್ಯಕ. ಉಪಾಸನೆಯೆಂದರೆ ಏಕಾಗ್ರಚಿತ್ತದಿಂದ ಭಗವಂತನನ್ನು ಧ್ಯಾನಿಸುವುದು. ಪೂಜೆಯೂ ಉಪಾಸನೆಯಲ್ಲಿಯೇ ಸೇರುತ್ತದೆ. ಕರ್ಮ, ಭಕ್ತಿ, ಉಪಾಸನೆಗಳಲ್ಲಿ ಸಾಧಕನಿಗೆ ದ್ವೈತ ಭಾವನೆ ಇರುತ್ತದೆ. ಕೈಗೆ ಅಂಟಿದ ಕೊಳೆಯನ್ನು ತೆಗೆಯುವುದಕ್ಕೆ ಶೀಗೆಯ ಪುಡಿ ಹೇಗೆ ಬೇಕೋ ಹಾಗೆ ಚಿತ್ತದ ಕೊಳೆಯನ್ನು ತೆಗೆಯುವುದಕ್ಕೆ ಇವು ಮೂರೂ ಬೇಕು. ಅನಂತರ ಆತ್ಮಪ್ರಕಾಶವೆಂಬ ತಿಳಿನೀರನ್ನು ಸುರಿದಾಗ ಶೀಗೆ ಪುಡಿಯಂತೆ ಇವು ಮೂರೂ ಲೀನವಾಗಿ ಬಿಡುತ್ತವೆ.

ಈ ಸಿದ್ಧಾಂತದಲ್ಲಿ ತಲೆದೋರುವಷ್ಟು ಸಂದೇಹಗಳು ಇನ್ನು ಯಾವ ದ್ವೈತ ಸಿದ್ಧಾಂತದಲ್ಲಿಯೂ ಹುಟ್ಟುವುದಿಲ್ಲ. ಆದ್ದರಿಂದಲೇ ಶ್ರೀ ವಿದ್ಯಾರಣ್ಯಸ್ವಾಮಿಗಳು ಪಂಚದಶಿಯಲ್ಲಿ -

'**ಈಶ್ವರಾನುಗ್ರಹಾದೇವ ಪುಂಸಾಮದ್ವೈತವಾಸನಾ**- ಭಗವಂತನ ಅನುಗ್ರಹವಿದ್ದರೆ ಮಾತ್ರ ಜನರಿಗೆ ಅದ್ವೈತದಲ್ಲಿ ಆಸಕ್ತಿ ಮೂಡುತ್ತದೆ ' ಎಂದು ಹೇಳಿದ್ದಾರೆ.

ಅದ್ವೈತದರ್ಶನದ ವೈಶಿಷ್ಟ್ಯಗಳು

ಶ್ರೀ ಶಂಕರಾಚಾರ್ಯರು ಪ್ರಚುರಗೊಳಿಸಿದ ಈ ಅದ್ವೈತ ಸಿದ್ಧಾಂತದಲ್ಲಿ ಗಮನಾರ್ಹವಾದ ವೈಶಿಷ್ಟ್ಯಗಳಿವೆ -

೧. ಇದು ಯಾವುದೇ ಮತಾಚಾರವನ್ನೂ ಎತ್ತಿ ಹಿಡಿಯುವುದಿಲ್ಲ. ವಿಭೂತಿ ಹಚ್ಚಿಕೊಳ್ಳುವುದು, ರುದ್ರಾಕ್ಷಿಧಾರಣೆ- ಮೊದಲಾದ ಬಾಹ್ಯಾಚಾರಗಳನ್ನು ಆಚಾರ್ಯರು ಹೇಳಿಲ್ಲ. ಅದೆಲ್ಲವೂ ಧರ್ಮಶಾಸ್ತ್ರ, ಸಂಪ್ರದಾಯಗಳಿಗೆ ಸೇರಿದವು. ದರ್ಶನ ಶಾಸ್ತ್ರದಲ್ಲಿ ಅವುಗಳಿಗೆ ಸ್ಥಾನವಿಲ್ಲ. ಇದು ಶುದ್ಧ ವಿಚಾರಮಾರ್ಗ.

೨. ದೀಕ್ಷೆಯನ್ನಿತ್ತು ತಮ್ಮ ಗುಂಪಿಗೆ ಸೇರಿಸಿಕೊಳ್ಳುವುದು ಮೊದಲಾದ ಒಡಕಿಗೆ ಇದರಲ್ಲಿ ಅವಕಾಶವಿಲ್ಲ.

ಅಭಿವಂದನಾ

೩. ಸಾಂಖ್ಯಾದಿ ದರ್ಶನಗಳಂತೆ ಈ ದರ್ಶನವನ್ನು ಯಾರಾದರೂ ಅಭ್ಯಾಸಮಾಡಿ ನಿಷ್ಠೆಯನ್ನು ಬೆಳೆಸಿಕೊಳ್ಳಬಹುದು. ತಂದೆಯು ಅದ್ವೈತಿಯಾದರೆ ಮಗನೂ ಅದ್ವೈತಿಯಾಗಬೇಕೆಂಬ ನಿಯಮವೇನಿಲ್ಲ.

೪. ಜಗತ್ತಿನಲ್ಲಿರುವ ಸಕಲ ಜಾತಿಯವರೂ ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಇದನ್ನು ಅಭ್ಯಾಸಮಾಡಬಹುದು. ಜ್ಞಾನದಲ್ಲಿ ಸರ್ವರಿಗೂ ಅಧಿಕಾರವಿದೆಯೆಂದು ಆಚಾರ್ಯರು ಹೇಳಿರುತ್ತಾರೆ. ಭಗವದ್ಗೀತೆ, ಪುರಾಣ, ಪ್ರಕರಣ ಗ್ರಂಥಗಳಿಂದ ಅದ್ವೈತವನ್ನು ಸರಿಯಾಗಿ ಅಭ್ಯಾಸ ಮಾಡಲು ಸಾಧ್ಯವಿದೆ. ವೇದಾಧ್ಯಯನವು ಮಾತ್ರ ಧರ್ಮಶಾಸ್ತ್ರದ ವಿಧಿ ನಿಷೇಧಗಳಿಗೆ ಸಂಬಂಧಿಸುತ್ತದೆ.

೫. ಶಿವನು ಅಧಿಕ, ವಿಷ್ಣು ಅಧಿಕ ಮುಂತಾದ ವಿಚಾರದ ಗಂಧ, ಗಾಳಿಯೂ ಇದರಲ್ಲಿಲ್ಲ. ಈಶ್ವರನು ಒಬ್ಬನೇ. ಅವನ ನಾಮರೂಪಗಳು ಭಕ್ತರ ಇಚ್ಛೆಯಂತೆ ನಾನಾ ಬಗೆಯಾಗಬಲ್ಲವು. ಎಲ್ಲ ಬಗೆಯ ಪೂಜೆಗಳೂ, ನದಿಗಳು ಸಮುದ್ರವನ್ನು ಸೇರುವಂತೆ, ಒಬ್ಬ ಈಶ್ವರನಿಗೇ ಸೇರುತ್ತವೆ. ದೇವರಲ್ಲಿ ಹೆಂಗಸು, ಗಂಡಸು ಎಂಬುದೂ ಸಹ ಕಲ್ಪಿತವೇ ಹೊರತು ಸಹಜವಲ್ಲ.

೬. ಸಾಧಕನು ವಿಗ್ರಹಗಳನ್ನು ಪೂಜಿಸಬಹುದು. ಯೋಗ್ಯತೆಯಿದ್ದರೆ ಅವ್ಯಕ್ತನಿರ್ಗುಣೋಪಾಸನೆಯನ್ನೂ ಮಾಡಬಹುದು. ಇದೇ ಸರಿಯೆಂಬ ಆಗ್ರಹವೇನೂ ಇಲ್ಲ.

೭ ಸಮಸ್ತ ಜನರಲ್ಲಿರುವುದೂ ಒಂದೇ ಆತ್ಮವೆಂಬ ಏಕಾತ್ಮತಾಭಾವನೆಯಿಂದ ರಾಗದ್ವೇಷಗಳು ನಿವೃತ್ತವಾಗುತ್ತವೆ. ನಾನು ಬೇರೆ, ನೀನು ಬೇರೆ, ಅವನು ಬೇರೆ, ಎಂಬ ಭೇದ ಭಾವನೆಗೆ ಅವಕಾಶವಿಲ್ಲ. ಜಾತಿದ್ವೇಷಕ್ಕೆ ಎಡೆಯೇ ಇಲ್ಲ. ಆತ್ಮನಿಗೆ ಯಾವ ಜಾತಿಯೂ ಇಲ್ಲವಷ್ಟೆ. ಪರೋಪಕಾರವೂ ಆತ್ಮೋಪಕಾರವೇ ಎಂಬ ಉದಾತ್ತಭಾವನೆ ಅದ್ವೈತಭಾವದಿಂದ ಮೂಡುತ್ತದೆ.

೮. ಜಗತ್ತಿನಲ್ಲಿರುವ ಸಮಸ್ತ ಧರ್ಮಗಳೂ, ಮತಾಚಾರಗಳೂ ದರ್ಶನಗಳೂ ವೇದಾಂತಕ್ಕೆ ವಿರುದ್ಧವಾದವುಗಳಲ್ಲ. ಅವೆಲ್ಲವೂ ವಿವೇಕದಿಂದ ಆಚರಿಸಲ್ಪಟ್ಟರೆ ಸೋಪಾನಗಳಂತೆ ಅದ್ವೈತದೆಡೆಗೇ ಮನುಷ್ಯನನ್ನು ಸಾಗಿಸುತ್ತವೆ. ಯಾವ ದ್ವೈತಶಾಸ್ತ್ರವೂ ಅದ್ವೈತಕ್ಕೆ ವಿರುದ್ಧವಾದ್ದಲ್ಲ. ಎಲ್ಲ ದರ್ಶನಗಳೂ ಈ ದರ್ಶನದಲ್ಲಿ ಸಮನ್ವಯಗೊಳ್ಳುತ್ತವೆ.

***

Ramanujacharya and his philosophy

-Prof. K.S. Ramachandra Rao

Ramanuja is a brilliant exponent of a specific type of vedantic thought known as Visistadvaita. His contribution both in the domain of Vedantic philosophy as well as in the realm of devotion is very valuable.

Ramanuja was born in the year 1017 A.D. in South India at Sriperumbur. His father's name was Kesavayajvan. He received his early training from yadavaprakasa a teacher of Vedanta. He was a monist. Ramanuja married at the age of sixteen and soon after his marriage his father breathed his last. After his father's demise he left his native place and went to kanchi where yadvaprakasa resided. Ramanuja was called yatiraja the prince of ascetics.

Ramanuja being a great genius, it is said that sometimes his teacher yadavaprakasa could not effectively meet the objections raised by him. In philosophical argumentations and discussions the differences between the teacher and the taught went on increasing for his profound insight and talented explanations of certain Vedic stanzas. More than this reason, a fear took hold of him merely for the reason that very shortly, the preceptor's knowledge name and fame might get eclipsed by this young student. In fact yadavaprakasa was not able to successfully repudiate his student's explanation and convince him.

One day yadavaprakasa was explaining a line from Sruti which ran as follows:

"Thasya yatha Kapyasam PundarikamevaaKshine"

The learned teacher yadavaprakasa explained the meaning of the Sruti as " The supreme beings eyes are like the posterior of a monkey" This was not clearly understood by one of the students. After the class, the teacher was resting. Ramanuja was messaging his teacher's legs. That student came and said, "Gurudeva I was not able to comprehend the meaning of that line which you taught us this morning. The teacher smiled and repeated the same explanation. The word 'Kapyasam' was explained by yadavaprakasa as the nates (buttocks)

of a monkey. Ramanuja was not in his moods from that morning itself for the distorted meaning of his teacher. He was very much worried and was waiting for an opportune moment to offer his explanation. As the teacher was explaining to the student, Ramanuja became emotional and tears began flowing from his cheeks. It so happened that a few drops of those hot tears fell on the thigh of the preceptor. Yadavaprakasa was startled and finding tears welling up from the eyes of Ramanuja anxiously asked 'Ramanuja what is the matter? What worries you?'' Ramanuja was mum. After repeated persistent questioning from his teacher Ramanuja controlled himself and said ''gurudeva, the explanation you gave just now worries me and nothing else''. Gurudevs said ''I learnt the meaning of the hymn from the exposition of Adi Sankara himself. And it can never be wrong. Ramanuja said Pardon me, gurudeva if you don't agree with my explanation. Kapi means the Sun. So Kapyasa means ''What is made to blossom by the Sun''.

Again Kapi means water, Hence Kapyasa means ''that which has water as its base or Producing cause''.

Thirsty Kapi means stem. Therefore Kapyasa means that which stands on the stem''. Gurudeva, the final meaning , therefore, is that the eyes of the Supreme Lord are like the the rose coloured petals of the lotus. Gurudeva your explanation is an insult to the supreme Lord and I got worried very much. Such encounters often came in the way of his teacher yadavaprakasa and day by day he had to worry more and more about his pupil Ramanuja. The teacher even made plans with connaivence of other pupils. But he could not succeed in his attempts, God was on the side of Ramanuja.

'Philosophy' says sir charls Eliot, is more closely connected with religion in India than in Europe. This statement is certainly true of South India, because of the rise of Acharyas who were responsible for the great religions revival and the systems of philosophical thought evolved by them from time to time. The doctrine of Bhakti, it must be pointed bout, spread from the south to north, although it did not end there. Therefore, Ramanuja was responsible for the great religions revival in the 12 th century. He developed as already pointed out, the visastadvaita system, which can be called vaishnavism.

'Visistadvaita'means, the Advaita or oneness of God, with

'Visesha' or attributes. It is therefore, called Qualified 'non-duatsm'.According to it, God alone exists, all else that we see is god's attribute or manifestation.

The sine-qua-non of Sri Ramanujacharya's system is the doctrine of the organic relationship of soul-body (Sarira- Sariribhava) and his doctrine furnishes the key by which he solves the contradiction of Sruti, reasoning and perception, the three ultimate provinces of experience. In the words of Dr. Radhakrishnan, 'Ramanuja regards the relation of God to the world as one of soul to body, brings out the organic and complete dependence of the world in God'. The philosophy of Ramanuja is a synthesis of metaphysical moral and religious experience and take's root in the thought that Brahman is the ground of experience. God according to Ramanuja, is thus a personality whose infinite content cannot be exhausted by the forms of finite experience but who pours out his unlimited love in his personal relations with the finite self. To Ramanuja, the absolute is the personal God and the chief aspiration of the Jiva is the realisation of God as the self. So spiritual service is the highest form of religious devotion.

In contradiction to Shankaracharyas doctrine, Ramanujacharya held that the divine soul (Paramathma) and the individual self (Jivatma) are one, not absoulte but are closely connected. The distinctive part of his teaching, in the words of Monier williams is, ' Everlasting happiness is to be attained not by knowledge alone, a devout observance of public.and private worships is also enjoined,' In his teaching, 'there is the assertion of the existence of a triad of principles, viz.,1. The Supreme Being (Isvara). 2. The Soul (chit) and 3. The Non-Soul (Achit). Vishnu is the supreme being, individual spirits are souls and the visible world is the non-soul. All these have an external existence distinct from each other. With the other vaishnava leaders Ramanuja believed and thought that devotion to and faith in Vishnu superseded all distinctions of caste, creed class etc.

'Ramanuja's Sri Bhashya is noteworthly for the lengthy discussion on various topics by which his commentary on the Sutras is preceded. In this discussion he treats of various points of difference with Advaita philosophy and expounds then fully. One of the important points is his statements of objections to Shankaracharya's theory of Maya or Avidya which is a fundamental feature in Advaita philosophy,

Is this Avidya different from or identical with Brahman? The theory of Maya is the most vulnerable point in Advaita philosophy. Ramanuja expounds at great length the difficulties as to the tenability of the theory of Maya or Avidya. He argues that Avidya cannot operate on the Brahman directly, for it is Intelligence nor can it operate on the individual soul; for, these are the outcome of the action of Avidya and cannot, therefore,be acted upon in anticipaion on account of all these reasons. Ramanujacharya concludes that the theory of Maya is untenable and opposed to the spirit of the Vedic texts. There are also other differences of opinion between the two systems of philosophy on the state of Brahman, The purpose of creation etc. It is not tht object of this article to explain all the objections of Ramanujacharya to Shankara's Advaita philosophy, only I have tried such of those principles of the Visistadvaita as is necessary to understand Ramanuja's teachings briefly. It is very difficult to decide who of the two has given a sound interpretation of the upanishads and who has more correctly understood and interpreted the Brahma-Sutras. It is also beyond my capacity to do so. Dr. Paul Deussen says that the system of the Vedanta as expounded by Shankara- equal in rank to plato and kant- is one of the most valuable products of the genius of mankind in his researches of the eternal truth. It must be said to the credit of Ramanujacharya that he evolved a system of philosophy based on the upanishads and Vedanta Sutras, even as Shankara did. He has his own pride of place among the galaxy of philosophers of the Universality of Sankara's system, is yet an eminently sound one, compatible with an admission of the reality of the cosmos, and a high conception of the nature and attributes of the deity.

Philosophers like Dr. Thibant have pointed out that there is nothing sectarian in the philosophy of Ramanuja. Devotion to one God, in practice, was the fundamental teaching of south Indian Vaishnavism. The rapid conversion of a large portion of the masses to Vaishnavism beyond the reach of Brahminism is a characteristic feature of the Ramanuja school.

It must be said to the credit of the great Acharya that the lower classes of the Hindu society were brought into the faith by the works of Azhvars,twelve in number, for religious purposes and secondly by the doctrine of prapathi or surrender to the God for which no status

of caste or creed was demanded. Any individual is immediately liberated by such a self-Surrender (Sarana gati). Prapatti puts an end even to prarabdha karma according to Ramanujacharya. The liberated Jiva goes to vaikunta (the abode of vishnu), thus obtaining His grace and enjoys the pleasures of service to God, acting according to the will of God. The common masses could not understand the abstract conceptions of Advaita philosophy. It is Ramanuja who presented the religion of love and redemption through Bhakti (devotion) and prayer rather than knowledge to the common masses at large. 'By preaching this universal love of Vishnu, he brought to them such a God as they were earning for' he succeded in his mission to establish vasistadvaita philosophy.

***

ಶಕ್ತಿವಿಶಿಷ್ಟಾದ್ವೈತದರ್ಶನ

ಡಾ||ಎಂ.ಶಿವಕುಮಾರ ಸ್ವಾಮಿ

ವೀರಶೈವ ದರ್ಶನವು ಶಕ್ತಿವಿಶಿಷ್ಟಾದ್ವೈತದರ್ಶನವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಈ ದರ್ಶನದಲ್ಲಿ ಸದಾಚಾರ ಮತ್ತು ಸದ್ವಿಚಾರಗಳ ಸಮನ್ವಯವಿದೆ. ಭಕ್ತಿ-ಜ್ಞಾನ-ಕ್ರಿಯಾತ್ಮಕವಾದ ವೀರಶೈವ ಸಾಧನ ಮಾರ್ಗವು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯವೆಂಬ ಆರು ಸ್ಥಲಗಳಿಂದ ಕೂಡಿದೆ. ಅದಕ್ಕೆ ಷಟ್‌ಸ್ಥಲಮಾರ್ಗವೆಂದು ಹೆಸರು. ಈ ಮಾರ್ಗದಲ್ಲಿ ಭಕ್ತ ಮುಂತಾದ ಆರು ಹಂತಗಳಲ್ಲಿ ಸಾಧಕನು ಸದಾಚಾರದ ಮೂಲಕ ಶಿವಜ್ಞಾನವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾ ಹೋಗಬೇಕು. ಆಚರಣೆ ಬೇರೆ ತತ್ತ್ವವಿಚಾರ ಬೇರೆ ಎಂಬ ಸೊಲ್ಲೇ ಇಲ್ಲ. ತತ್ತ್ವಜ್ಞಾನವಿಲ್ಲದ ಆಚರಣೆ ಕುರುಡು, ಆಚರಣೆಯಿಲ್ಲದ ತತ್ತ್ವಜ್ಞಾನ ಕುಂಟು:

ಅಪಶ್ಯನ್ನಂಧಕೋ ದಗ್ಧಃ ಪಶ್ಯನ್ ದಹತಿ ಪಂಗುಲಃ।
ಅಂಧ-ಪಂಗುವದನ್ಯೋನ್ಯಸಾಪೇಕ್ಷೇ ಜ್ಞಾನಕರ್ಮಣೀ॥

(ಚಂದ್ರಜ್ಞಾನಾಗಮ, ೧೨-೭)

ಕಾಣದೆ ಕುರುಡನು ಸುಟ್ಟುಹೋದ ಕುಂಟನು ಕಂಡೂ (ಓಡಲಾಗದೆ) ಸುಟ್ಟುಹೋದ. ಕುರುಡ ಮತ್ತು ಕುಂಟರಂತೆ ಜ್ಞಾನ-ಕರ್ಮಗಳು ಪರಸ್ಪರ ಸಾಪೇಕ್ಷವಾಗಿವೆ. ಕುರುಡ ಮತ್ತು ಕುಂಟರು ಪರಸ್ಪರ ಸಹಕಾರದಿಂದ ಗುರಿಮುಟ್ಟಬಹುದು. ಹಾಗೆ ಜ್ಞಾನ ಮತ್ತು ಕರ್ಮಗಳು ಪರಸ್ಪರ ಹೊಂದಿಕೊಂಡರೆ ಮೋಕ್ಷವೆಂಬ ಗುರಿಯನ್ನು ಮುಟ್ಟಬಹುದು. ಷಟ್‌ಸ್ಥಲ ಮಾರ್ಗದಲ್ಲಿ ಭಕ್ತ, ಮಾಹೇಶ್ವರ ಮತ್ತು ಪ್ರಸಾದಿಯೆಂಬ ಮೊದಲ ಮೂರು ಸ್ಥಲಗಳಲ್ಲಿ ಶ್ರೀಗುರುವಿನ ಉಪದೇಶದಿಂದ ದೊರೆತ ಶಿವ, ಜೀವ, ಜಗತ್ತುಗಳ ಸ್ವರೂಪಜ್ಞಾನವು ಶ್ರದ್ಧಾ, ನಿಷ್ಠಾ, ಅವಧಾನ ಭಕ್ತಿಗಳ ಮೂಲಕ ವಿಶಿಷ್ಟವಾದ ಶಿವಪೂಜೆಗೆ ಪ್ರೇರಕವಾಗಿ, ಪೋಷಕವಾಗಿ ಬಂದಿದೆ. ಪ್ರಾಣಲಿಂಗಿ, ಶರಣ ಮತ್ತು ಐಕ್ಯಸ್ಥಲಗಳಲ್ಲಿ ನೆಲೆಯಿಂದ ನೆಲೆಗೆ ಅನುಭಾವ, ಆನಂದ ಮತ್ತು ಸಮರಸ ಭಕ್ತಿಗಳಿಂದ ವಿಶಿಷ್ಟವಾದ ಆಂತರಿಕ ಶಿವಪೂಜೆಯು ಭಾವಾತ್ಮಕವಾಗುತ್ತಾ ಬಂದು 'ಶಿವೋऽಹಂ' ಭಾವದ ಸಾಕ್ಷಾತ್ಕಾರವಾಗಿ ಶಿವ-ಜೀವರ ಸಮರಸ್ಯೈಕ್ಯದಲ್ಲಿ ಪರ್ಯವಸಾನವಾಗುತ್ತದೆ. ಇದನ್ನೇ 'ಶಕ್ತಿವಿಶಿಷ್ಟಾದ್ವೈತ' ಎಂಬ ಪದವು ಹೇಳುತ್ತದೆ.

ಶಕ್ತಿವಿಶಿಷ್ಟಾದ್ವೈತವೆಂದರೆ 'ಶಕ್ತಿವಿಶಿಷ್ಟಯೋಃ ಅದ್ವೈತಮ್'- ಶಕ್ತಿವಿಶಿಷ್ಟರಾದ ಶಿವಜೀವರ ಅದ್ವೈತ. ಶಿವನೂ ಶಕ್ತಿವಿಶಿಷ್ಟ, ಜೀವನೂ ಶಕ್ತಿವಿಶಿಷ್ಟ. ಶಿವನು ಸೂಕ್ಷ್ಮ ಚಿದಚಿದಾತ್ಮಕಶಕ್ತಿಯಿಂದ ಕೂಡಿದವನು. ಜೀವನು ಸ್ಥೂಲಚಿದಚಿದಾತ್ಮಕ ಶಕ್ತಿಯಿಂದ ಕೂಡಿದವ. ಸೂಕ್ಷ್ಮಚಿತ್ ಎಂದರೆ ಸರ್ವಜ್ಞತ್ವ ಮತ್ತು ಸೂಕ್ಷ್ಮ ಅಚಿತ್ ಎಂದರೆ

ಸರ್ವಕರ್ತೃತ್ವ. ಅಂತಹ ಸರ್ವಜ್ಞತ್ವ ಮತ್ತು ಸರ್ವಕರ್ತೃತ್ವ ಶಾಲಿಯು ಶಿವ. ಸ್ಥೂಲಚಿತ್ ಎಂದರೆ ಕಿಂಚಿಜ್ಞತ್ವ(ಸೀಮಿತ ಜ್ಞಾನ) ಮತ್ತು ಸ್ಥೂಲ ಅಚಿತ್ ಎಂದರೆ ಕಿಂಚಿತ್ಕರ್ತೃತ್ವ (ಸೀಮಿತ ಕರ್ತೃತ್ವ ಶಕ್ತಿ). ಇವುಗಳಿಂದ ವಿಶಿಷ್ಟನಾದವನು ಜೀವ. ಹೀಗೆ ಶಿವನು ಪರಮೋತ್ಕೃಷ್ಟನು, ಶಕ್ತಿವಿಶಿಷ್ಟನು. ಜೀವನು ಶಿವನ ಅಂಶ; ಅವನೂ ಶಕ್ತಿವಿಶಿಷ್ಟನು. ಆರಂಭದಲ್ಲಿ ಪೂಜ್ಯಪೂಜಕಭಾವದಿಂದ ಭೇದ. ಅಂತ್ಯದಲ್ಲಿ ಜೀವನು ತನ್ನ ವಿಕಾರಗಳಿಂದ ಮುಕ್ತನಾಗಿ, ಶಕ್ತಿಯ ಇನ್ನೊಂದು ರೂಪವಾದ ಭಕ್ತಿಯಿಂದ ಪ್ರೇರಣೆಯನ್ನು ಪಡೆದು, ಸಾಧನೆಯ ಮೂಲಕ ಶಿವನೊಂದಿಗೆ ಅಭೇದವನ್ನು ಹೊಂದುತ್ತಾನೆ, ಅಂದರೆ ಸಮರಸೈಕ್ಯದ ಆನಂದವನ್ನು ಅನುಭವಿಸುತ್ತಾನೆ. ಇದು ಶಕ್ತಿವಿಶಿಷ್ಟಾದ್ವೈತದರ್ಶನದ ಸಾರ. ಇದರಲ್ಲಿ ಶಿವ ತತ್ತ್ವ, ಶಕ್ತಿತತ್ತ್ವ, ಜೀವತತ್ತ್ವ, ಶಿವ-ಜೀವರ ಸಂಬಂಧ, ಜಗತ್ತತ್ತ್ವ ಮತ್ತು ಮುಕ್ತಿಯ ಸ್ವರೂಪ, ಈ ಐದು ವಿಚಾರಗಳು ಬಂದಿವೆ. ಇವುಗಳಲ್ಲಿ ಮೊದಲನೆಯದು ಶಿವತತ್ತ್ವ

(೧) ಶಿವತತ್ತ್ವ:

ಶಕ್ತಿವಿಶಿಷ್ಟಾದ್ವೈತದರ್ಶನದ ಶಿವನೇ ಸರ್ವೋತ್ಕೃಷ್ಟವಾದ, ಸರ್ವಕ್ಕೂ ಕಾರಣವಾದ ತತ್ತ್ವ, ಶಿವನೇ ಉಪನಿಷತ್ಪ್ರತಿಪಾದ್ಯನಾದ ಬ್ರಹ್ಮನು:

ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ।
ವೇದಾಂತಿನೋ ಜಗನ್ಮೂಲಂ ತಂ ನಮಾಮಿ ಪರಂ ಶಿವಮ್॥
(ಸಿದ್ಧಾಂತಶಿಖಾಮಣಿ, ೧.೨)

'ಬ್ರಹ್ಮ' ಎಂದು ಕರೆಯಲಾಗುವ ಯಾವ ವಸ್ತುವನ್ನು ವೇದಾಂತಿಗಳು ಜಗತ್ತಿಗೆ ಕಾರಣವೆಂದು ಹೇಳುತ್ತಾರೋ ಅದೇ ಪರಶಿವತತ್ತ್ವ. ಪರಶಿವನು ಮೂಲತಃ ಅದ್ವಿತೀಯನು. ಭೇದವಿಲ್ಲದಿರುವುದು, ಮೂರುಗುಣಗಳ ಸಂಪರ್ಕವಿಲ್ಲದಿರುವುದು ಮತ್ತು ಪ್ರಪಂಚರೂಪವಿಲ್ಲದಿರುವುದು (ಭೇದರಹಿತತ್ತ್ವ, ತ್ರಿಗುಣಶೂನ್ಯತ್ವ ಮತ್ತು ನಿಷ್ಪ್ರಪಂಚತ್ವ) ಇವು ಪರಶಿವನ ಮೂಲ ಸ್ವರೂಪ:

ಏಕ ಏವ ಶಿವಃ ಸಾಕ್ಷಾಚ್ಚಿದಾನಂದಮಯೋ ವಿಭುಃ।
ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ॥
(ಸಿದ್ಧಾಂತಶಿಖಾಮಣಿ, ೫.೩೩-೩೪)

'ಬ್ರಹ್ಮ ವಾ ಇದಮಗ್ರ ಆಸೀದೇಕಮೇವ' (ಬೃಹದಾರಣ್ಯಕೋಪನಿಷತ್, ೧.೪.೧೧),'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' (ಛಾಂದೋಗ್ಯೋಪನಿಷತ್, ೬.೨.೧), 'ಏಕೋ ಹಿ ರುದ್ರೋ ನ ದ್ವಿತೀಯಾಯ ತಸ್ಥುಃ' (ಶ್ವೇತಾಶ್ವತ ರೋಪನಿಷತ್, ३.२), 'ಏಕೋ ರುದ್ರಃ ಪರಂಜ್ಯೋತಿಃ ಪರಮಾತ್ಮಾ

ಸನಾತನಃ' (ಸೂಕ್ಷ್ಮಾಗಮ, ಕ್ರಿಯಾಪಾದ, ೧.೧೬), ಇವೇ ಮುಂತಾದ ನಿಗಮಾಗಮವಾಕ್ಯಗಳು ಇದನ್ನು ಸಮರ್ಥಿಸುತ್ತವೆ. ಸೃಷ್ಟಿಗೆ ಪೂರ್ವದಲ್ಲಿ ಸ್ವಾಭಾವಿಕವಾಗಿ ಇದ್ದ ತನ್ನ ಶಕ್ತಿಯೊಂದಿಗೆ ಅಭಿನ್ನನಾಗಿ ಶಕ್ತಿವಿಶಿಷ್ಟನಾಗಿದ್ದ ಅವನಲ್ಲಿ ಚೇತನಾಚೇತನಾತ್ಮಕವಾದ ಜಗತ್ತು ಅಡಕವಾಗಿತ್ತು. ಹೀಗೆ ಅವನು'ವಿಶ್ವಭಾಜನ' ನಾಗಿದ್ದನು:

ವಿಮರ್ಶಾಖ್ಯಾ ಪರಾಶಕ್ತಿ-ರ್ವಿಶ್ವವೈಚಿತ್ರ್ಯಕಾರಿಣೀ।
ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಮ್॥
(ಸಿದ್ಧಾಂತಶಿಖಾಮಣಿ, ೨೦.೩೬)

ವಿಶ್ವದ ವೈಚಿತ್ರ್ಯವನ್ನು ವ್ಯಕ್ತಗೊಳಿಸುವ ವಿಮರ್ಶಾ ಎಂಬ ಪರಾಶಕ್ತಿಯು ಯಾರಲ್ಲಿ ನೆಲೆಯಾಗಿದೆಯೋ ಆ ಬ್ರಹ್ಮನೇ ವಿಶ್ವಭಾಜನನು, ಅಂದರೆ ವಿಶ್ವದ ಆಶ್ರಯ. ಅವನಲ್ಲಿ ತನ್ನ ಲೀಲೆಗಾಗಿ ಜಗತ್ತನ್ನು ಸೃಷ್ಟಿಸುವ ಇಚ್ಛೆಯುಂಟಾಯಿತು. ಆ 'ಸಿಸೃಕ್ಷಾ' (ಸೃಷ್ಟಿಸುವ ಇಚ್ಛೆ) ಎಂಬುದೇ ಜಗತ್ತಿನ ಮೊದಲ ಬೀಜವಾಯಿತು.

ಶಿವಾಭಿದಂ ಪರಂ ಬ್ರಹ್ಮ ಜಗನ್ನಿರ್ಮಾತುಮಿಚ್ಛಯಾ।
ಸ್ವರೂಪಮಾದಧೇ ಕಿಂಚಿತ್ ಸುಖಸ್ಫೂರ್ತಿವಿಜೃಂಭಿತಮ್॥
(ಸಿದ್ಧಾಂತಶಿಖಾಮಣಿ, ೨.೮)

ಆ ಪರಶಿವಬ್ರಹ್ಮನು ವಿಶ್ವದ ಸೃಷ್ಟಿಗಾಗಿ ತನ್ನ ಇಚ್ಛೆಯಿಂದಲೇ ಆನಂದದಿಂದ ಕೂಡಿದ ಸ್ವರೂಪವನ್ನು ಪಡೆದನು. ಇಲ್ಲಿ 'ಆನೀದವಾತಂ ಸ್ವಧಯಾ ತದೇಕಂ, ತಸ್ಮಾದ್ಧಾನ್ಯನ್ನ ಪರಃ ಕಿಂಚನಾಸ ' (ಅದೊಂದೇ ಆಗ ಗಾಳಿಯಿಲ್ಲದೆ ತನ್ನ ಶಕ್ತಿಯಿಂದ ಉಸಿರಾಡುತ್ತಿತ್ತು. ಅದಲ್ಲದೆ ಬೇರೇನೂ ಇರಲಿಲ್ಲ), 'ಕಾಮಸ್ತದಗ್ರೇ ಸಮವರ್ತತಾಧಿ, ಮನಸೋ ರೇತಃ ಪ್ರಥಮಂ ಯದಾಸೀತ್' (ಆಗ ಪ್ರಥಮವಾಗಿ ಇಚ್ಛೆಯುಂಟಾಯಿತು, ಅದೇ ಮನಸ್ಸಿನ ಮೊದಲ ಬೀಜವಾಗಿತ್ತು) (ಋಗ್ವೇದ, ನಾಸದೀಯ ಸೂಕ್ತ, X, ೧೨೯. ೨, ೪), 'ಸ ಈಕ್ಷತ ಲೋಕಾನ್ನು ಸೃಜಾ ಇತಿ' (ಐತರೇಯೋಪನಿಷತ್, ೧.೨), 'ಸೋಽಕಾಮಯತ ಬಹು ಸ್ಯಾಂ ಪ್ರಜಯೇಯೇತಿ. ಸ ತಪೋಽತಪ್ಯತ. ಸ ತಪಸ್ತಪ್ತ್ವಾ ಇದಂ ಸರ್ವಮಸೃಜತ ಯದಿದಂ ಕಿಂಚ' (ತೈತ್ತಿರೀಯೋಪನಿಷತ್,೨.೬), ಇತ್ಯಾದಿ ಶ್ರುತಿಗಳು ಅದನ್ನು ಹೇಳುತ್ತವೆ.

ಭೋಕ್ತೃತ್ವ, ಭೋಜ್ಯತ್ವ, ಪ್ರೇರಕತ್ವ-ಪಶು, ಪಾಶ, ಪತಿ:

ಪರಶಿವಬ್ರಹ್ಮನಲ್ಲಿ 'ಸಿಸೃಕ್ಷೆ' (ಸೃಷ್ಟಿಸುವ ಇಚ್ಛೆ) ಉಂಟಾದಾಗ ಅವನ ಶಕ್ತಿಯು ಅವನ ಇಚ್ಛೆಗನುಸಾರವಾಗಿ ಸ್ಪಂದಿಸಿ ಸತ್ತ್ವ, ರಜಸ್, ತಮಸ್‌ಗಳೆಂಬ ಮೂರು ಗುಣಗಳನ್ನು ತನ್ನಲ್ಲಿ ತಾಳಿದಳು. ಆಗ ಪರಮಾತ್ಮನು ಮೂರು ರೂಪಗಳಲ್ಲಿ ಅಭಿವ್ಯಕ್ತನಾದನು. ಭೋಕ್ತೃ ಪ್ರಪಂಚ, ಭೋಜ್ಯಪ್ರಪಂಚ ಮತ್ತು ಪ್ರೇರಕ, ಎಂಬವು

ಪರಮಾತ್ಮನ ಮೂರು ರೂಪಗಳು. ಅವುಗಳ ಸ್ವರೂಪ ಹೀಗಿದೆ:

ಕಿಂಚಿತ್ಸತ್ತ್ವರಜೋರೂಪಂ ಭೋಕ್ತೃಸಂಜ್ಞಕಮುಚ್ಯತೇ।
ಅತ್ಯಂತ ತಾಮಸೋಪಾಧಿರ್ಭೋಜ್ಯಮಿತ್ಯಭಿಧೀಯತೇ॥
ಪರತತ್ತ್ವಮಯೋಪಾಧಿರ್ಬ್ರಹ್ಮಚೈತನ್ಯಮೀಶ್ವರಃ॥

(ಸಿದ್ಧಾಂತಶಿಖಾಮಣಿ, ೫.೪೦)

ಸ್ವಲ್ಪ ಸತ್ತ್ವ ಮತ್ತು ರಜೋಗುಣಗಳ ಮಿಶ್ರಣದಿಂದ ಚೈತನ್ಯವು ಭೋಕ್ತೃ. ಅತ್ಯಂತ ತಾಮಸಧರ್ಮವುಳ್ಳದ್ದು ಭೋಜ್ಯ. ಪರತತ್ತ್ವರೂಪಧರ್ಮವುಳ್ಳ ಬ್ರಹ್ಮಚೈತನ್ಯವೇ ಈಶ್ವರ(ಪ್ರೇರಕ). ಹೀಗೆ ಗುಣಭೇದದಿಂದ ಬ್ರಹ್ಮಚೈತನ್ಯದಲ್ಲಾದ ಮೂರು ಭೇದಗಳಿಗೆ ಕ್ರಮವಾಗಿ ಪಶು, ಪಾಶ ಮತ್ತು ಪತಿ ಎಂದು ಹೆಸರು. ಮಿಶ್ರ ಗುಣಗಳಿಂದ ಕೂಡಿದ ಭೋಗಿಗಳೇ ಪಶುಗಳು. ಅತ್ಯಂತ ಗೂಢಚೈತನ್ಯವುಳ್ಳ ಜಡವಾದ ಭೋಗವಸ್ತುಗಳೇ ಪಾಶಗಳು. ಸರ್ವಜ್ಞನಾದ ಶಂಭುವೇ ಪ್ರೇರಕ (ಸಿದ್ಧಾಂತಶಿಖಾಮಣಿ, ೫.೪೨.೪೩).

ಬ್ರಹ್ಮಾದಿಸ್ತಂಭಪರ್ಯಂತಂ ಪಶವಃ ಪರಿಕೀರ್ತಿತಾಃ।
ಶಿವಃ ಪತಿರಿತಿ ಪ್ರೋಕ್ತಃ ಪಾಶಃ ಕರ್ಮಮಲಾದಿಕಮ್॥

(ಸೂಕ್ಷ್ಮಾಗಮ, ೫.೨೦)

ತಾತ್ತ್ವಿಕವಾಗಿ ಸೃಷ್ಟಿಕರ್ತೃ ಬ್ರಹ್ಮನಿಂದ ಹಿಡಿದು ದಂಟಿನವರೆಗೆ ಎಲ್ಲವೂ ಪಶುಗಳು, ಶಿವನು ಪತಿ ಮತ್ತು ಕರ್ಮ, ಮಲ ಮುಂತಾದವುಗಳು ಪಾಶಗಳು. ಈ ಎಲ್ಲಾ ವಿವರಣೆಯಿಂದ ಪರಶಿವಬ್ರಹ್ಮನು ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಮೂಲ ಕಾರಣನು ಎಂಬುದು ಸಿದ್ಧವಾಗುತ್ತದೆ. 'ಯತೋ ವಾ ಇಮಾನಿ ಭೂತಾನಿ ಜಾತಾನಿ, ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತಿ ತದ್ವಿಜಿಜ್ಞಾಸಸ್ವ ತದ್ಬ್ರಹ್ಮ' (ತೈತ್ತಿರೀಯೋಪನಿಷತ್, ೩.೧). ಯಾವುದರಿಂದ ಈ ಭೂತಗಳು ಹುಟ್ಟಿವೆಯೋ, ಯಾವುದರಿಂದ ಇರುತ್ತವೆಯೋ ಮತ್ತು ಯಾರಲ್ಲಿ ಮತ್ತೆ ಲಯ ಹೊಂದುತ್ತವೆಯೋ ಅವನೇ ಬ್ರಹ್ಮ; ಅದನ್ನು ತಿಳಿ, ಎಂಬ ಮಾತಿನಿಂದ ಶಕ್ತಿವಿಶಿಷ್ಟ ಪರಶಿವಬ್ರಹ್ಮನೇ ಜಗತ್ತಿಗೆ ಉಪಾದಾನ ಕಾರಣವೂ ಹೌದು. ನಿಮಿತ್ತ ಕಾರಣವೂ ಹೌದು (ಅಭಿನ್ನನಿಮಿತ್ತೋಪಾದಾನಕಾರಣ): 'ಜಗದುಪಾದಾನ-ಪರಮೇಶ್ವರಶಕ್ತೇಸ್ತು ತದೇಕದೇಶವೃತ್ತಿತ್ತ್ವಂ, ತಸ್ಮಾದಭಿನ್ನನಿಮಿತ್ತೋಪಾದಾನಕಾರಣತ್ವಂ ನತ್ವೇಕಕಾರಣತ್ವಂ' (ಶ್ರೀಕರಭಾಷ್ಯ, ೧.೧.೨). ಜಗತ್ತಿನ ಉಪಾದಾನಕಾರಣವಾದ ಪರಮೇಶ್ವರನ ಶಕ್ತಿಯು ಅವನ ಒಂದು ಭಾಗ. ಆದ್ದರಿಂದ ಅವನು ಅಭಿನ್ನನಿಮಿತ್ತೋಪಾದಾನಕಾರಣನು, ಒಂದೇ ಕಾರಣನೆಂದಲ್ಲ (ಕೇವಲ ನಿಮಿತ್ತಕಾರಣನಲ್ಲ). ಇಂತಹ ಬ್ರಹ್ಮನಿಗೆ ಶಕ್ತಿವಿಶಿಷ್ಟಾದ್ವೈತ-ಪರಿಭಾಷೆಯಲ್ಲಿ ಲಿಂಗವೆಂದೂ ಕರೆಯುತ್ತಾರೆ:

ಅಭಿವಂದನಾ

ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಮ್।
ಪುನಃ ಪುನಃ ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮಶಾಶ್ವತಮ್॥
(ಸಿದ್ಧಾಂತಶಿಖಾಮಣಿ, ೬.೩೭)

ಚರ ಮತ್ತು ಅಚರ (ಚಲಿಸುವುದು ಮತ್ತು ಚಲಿಸದೆ ಇರುವುದು) ಎಂದು ಎರಡು ವಿಧವಾದ ಜಗತ್ತು ಎಲ್ಲಿ ಲಯವನ್ನು ಹೊಂದುತ್ತದೆಯೋ, ಎಲ್ಲಿಂದ ಮತ್ತೆ ಮತ್ತೆ ಉತ್ಪನ್ನವಾಗುತ್ತದೆಯೋ ಅದೇ ಶಾಶ್ವತ ಬ್ರಹ್ಮವೆಂಬ ಲಿಂಗ. ಲೀಯತೇ= ಅದರಲ್ಲಿ ಲೀನವಾಗುತ್ತದೆ, ಗಮ್ಯತೇ= ಅದರಿಂದ ಉತ್ಪನ್ನವಾಗುತ್ತದೆ; ಆ ಸತ್-ಚಿತ್-ಆನಂದ ಸ್ವರೂಪನಾದ ಪರಶಿವಬ್ರಹ್ಮನೇ ಲಿಂಗ.

ಪರಮಾತ್ಮನ ಪಂಚಕೃತ್ಯಗಳು: ಪಶುಪಾಶವಿಮೋಚನೆಯೇ ಉದ್ದೇಶ

ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಲ್ಲದೆ ಜೀವರುಗಳ ತಿರೋಧಾನ ಮತ್ತು ಅನುಗ್ರಹಗಳು ಪರಶಿವನ ಕೃತ್ಯಗಳು. ಹೀಗೆ ಪರಶಿವನು ಪಂಚಕೃತ್ಯಗಳ ಕರ್ತೃ:

ಜಗಜ್ಜನ್ಮ-ಸ್ಥಿತಿ-ಧ್ವಂಸ-ತಿರೋಭಾವ-ವಿಮುಕ್ತಯಃ।
ಕೃತ್ಯಂ ಸಕಾರಕಫಲಂ ಜ್ಞೇಯಮಸ್ಯೈತದೇವ ಹಿ॥
(ಮೃಗೇಂದ್ರಾಗಮ, ಪ್ರ.೨.ಶ್ಲೋ.೩)

ಪರಮಾತ್ಮನ ಈ ಪಂಚಕೃತ್ಯಗಳು ಅವನ ವಿಶ್ವಲೀಲೆಯ ಅಂಗಗಳು. ಅವನ ವಿಶ್ವಲೀಲೆಯೆಂದರೆ ಜೀವರುಗಳನ್ನು ಸಂಸಾರದಿಂದ ಮುಕ್ತರನ್ನಾಗಿ ಮಾಡುವ ಅನುಗ್ರಹಲೀಲೆ. ಲಯವೆಂದರೆ ಜೀವರುಗಳಿಗೆ ವಿಶ್ರಾಂತಿ. ಸುಖವಾದ ನಿದ್ರೆಯಂತೆ ಆ ವಿಶ್ರಾಂತಿಯು ಜೀವಾತ್ಮರಿಗೆ ನವಚೈತನ್ಯವನ್ನು ನೀಡುತ್ತದೆ. ಸೃಷ್ಟಿಯು ಜೀವಾತ್ಮರಿಗೆ ತಮ್ಮ ಕರ್ಮಫಲಗಳನ್ನು ಸವೆಸಲು ಉಪಕರಣಗಳನ್ನು ಒದಗಿಸುತ್ತದೆ ಮತ್ತು ಮುಕ್ತಿಯೆಡೆಗೆ ಮುನ್ನಡೆಯುವಂತೆ ಪ್ರೇರಣೆ ನೀಡುತ್ತದೆ. ಕರ್ಮಫಲಗಳನ್ನು ಅನುಭವಿಸುವಾಗ ಜೀವಾತ್ಮರುಗಳ ಸ್ಥಿತಿಯು ಕಾರ್ಯಗತವಾಗುತ್ತದೆ. ತಿರೋಭಾವವೆಂದರೆ ಜೀವರುಗಳ ನೈಜ ಸಾಮರ್ಥ್ಯಗಳನ್ನು ಮರೆಮಾಡುವುದು. ಅದರಿಂದ ಮಲ ಮುಂತಾದ ಪಾಶಗಳು ಕಾರ್ಯಪ್ರವೃತ್ತವಾಗಿ ಪರಿಪಾಕ ಹೊಂದಿ ಕ್ಷೀಣಿಸುತ್ತವೆ. ಇವು ನಾಲ್ಕು ಅಂತಿಮವಾಗಿ ಜೀವಾತ್ಮರುಗಳನ್ನು ಪರಮಾತ್ಮನ ಅನುಗ್ರಹಕ್ಕೆ ಅಣಿಗೊಳಿಸುತ್ತವೆ. ಪರಮಾತ್ಮನ ಅನುಗ್ರಹದ ಪರ್ಯವಸಾನವಿರುವುದು ಜೀವಾತ್ಮರ ಮುಕ್ತಿಯಲ್ಲಿ. ಹೀಗಿದೆ ಪರಮಾತ್ಮನ ವಿಶ್ವಲೀಲೆಯ ಮರ್ಮ:

ಏವಂ ರೂಪಃ ಪರಾತ್ಮಾ ಹಿ ಪಶುಪಾಶವಿಮೋಚಕಃ।
ಶಂಭುಃ ಕದಾಚಿನ್ನಿಜಯಾ ಪ್ರಕೃತ್ಯಾ ಲೀಲಯಾ ಸ್ವಯಮ್॥
(ಸೂಕ್ಷ್ಮಾಗಮ, ೧.೧೪)

'ಸ ತಪಸ್ತಪ್ತ್ವಾ ಇದಂ ಸರ್ವಮಸೃಜತ' ಎಂಬ ತೈತ್ತಿರೀಯೋಪನಿಷತ್ತಿನ ವಾಕ್ಯದ ಅಭಿಪ್ರಾಯದಂತೆ ಸೃಷ್ಟಿಯು ಹೊಮ್ಮಿದ್ದೇ ತಪಸ್ಸಿನಿಂದ (ಪಾಶ್ಚಾತ್ಯ ಕ್ರೈಸ್ತ ಅಭಿಪ್ರಾಯದಂತೆ ಪಾಪದಿಂದಲ್ಲ). ಹಾಗೆ ತಪಸ್ಸಿನಿಂದ ಹೊಮ್ಮಿದ ಸೃಷ್ಟಿಯ ಉದ್ದೇಶವು ಪಶುಪಾಶವಿಮೋಚನೆಯಲ್ಲದೆ ಬೇರೇನೂ ಅಲ್ಲ.

(೨) ಶಕ್ತಿತತ್ತ್ವ:

ಶಿವತತ್ತ್ವದೊಂದಿಗೆ ಅವಿನಾಭಾವ ಸಂಬಂಧದಿಂದಿದ್ದು ಪಂಚಕೃತ್ಯಗಳಲ್ಲಿ ಸಹಚಾರಿಣಿಯಾದ ಶಕ್ತಿಯು ಶಿವನಂತೆ ಸಚ್ಚಿದಾನಂದ ಸ್ವರೂಪಳು:

ತದೀಯಾ ಪರಮಾ ಶಕ್ತಿಃ ಸಚ್ಚಿದಾನಂದಲಕ್ಷಣಾ॥
(ಸಿದ್ಧಾಂತಶಿಖಾಮಣಿ, ೨.೧೨).

ಆಕೆಗೆ ವಿಮರ್ಶಾಶಕ್ತಿಯೆಂದು ಹೆಸರು. ಪರಾಶಕ್ತಿಯೆಂದು ಇನ್ನೊಂದು ಹೆಸರು. ಪರಶಿವನು ಜಗತ್ತಿನ ಸೃಷ್ಟಿಗೆ ಧ್ಯಾನಿಸಿದಾಗ ಪರಾಶಕ್ತಿಯು ಆದಿಶಕ್ತಿಯಾಗಿ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಯಾಗಿ ಪರಿಣಮಿಸಿದಳು. (ಸೂಕ್ಷ್ಮಾಗಮ, ೧.೨೦-೨೨, ಸಿದ್ಧಾಂತಶಿಖಾಮಣಿ, ೧.೮, ೧೧, ೨.೧೩). ಆ ಶಕ್ತಿ ಪರಿಣಾಮದಿಂದ ಸರ್ವತತ್ತ್ವಗಳ ಸೃಷ್ಟಿಯಾಯಿತು. ಸ್ವಾಭಾವಿಕತ್ವ ಮತ್ತು ಅವಿನಾಭಾವಿತ್ವಗಳು ಶಕ್ತಿಯ ಮೂಲಭೂತ ಅಂಶಗಳು.

ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ।
ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ॥
(ಸಿದ್ಧಾಂತಶಿಖಾಮಣಿ, ೨೦-೩೮).

ಸಮಸ್ತವಸ್ತುಗಳನ್ನು ಬೆಳಗಿಸುವ ಬೆಳದಿಂಗಳು ಚಂದ್ರನಲ್ಲಿ ಸ್ಥಿರವಾಗಿರುವಂತೆಯೇ ಚರಾಚರಾತ್ಮಕವಾದ ಜಗತ್ತನ್ನು ಬೆಳಗಿಸುವ ವಿಮರ್ಶಾಶಕ್ತಿಯು ಸ್ವಯಂ ಪ್ರಕಾಶನಾದ ಪರಶಿವ ಬ್ರಹ್ಮನಲ್ಲಿ ಸ್ಥಿರವಾಗಿರುವಳು. ಇದನ್ನು 'ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್, ' 'ತದಕ್ಷರಂ ತತ್ಸಮಿತುರ್ವರೇಣ್ಯಂ ಪ್ರಜ್ಞಾ ಚ ತಸ್ಮಾತ್ ಪ್ರಸೃತಾಪುರಾಣೀ', 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' (ಶ್ವೇತಾಶ್ವತರೋಪನಿಷತ್, ४.೧೦, ೧೮, ६.೮), ಮುಂತಾದ ಶ್ರುತಿವಾಕ್ಯಗಳು ಹೇಳುತ್ತವೆ. ಸೃಷ್ಟಿಗೆ ಪೂರ್ವದಲ್ಲಿ ಶಿವನೊಂದಿಗೆ ಅವಿಭಾಗ ಪರಾಮರ್ಶದಶೆಯಲ್ಲಿದ್ದ ಶಕ್ತಿಯು ಶಿವನು ಸೃಷ್ಟಿಗೆ ಇಚ್ಛಿಸಿದಾಗ ವಿಭಾಗ ಪರಾಮರ್ಶದಶೆಯನ್ನು ಹೊಂದುತ್ತಾಳೆ ಮತ್ತು ರೂಪಗಳನ್ನು ತಾಳುವಂತೆ ಮಾಡುತ್ತಾಳೆ. ಹೀಗೆ ಪರಶಿವನ ಲೀಲೆಯ ಅಂಗವಾಗಿ ಶಕ್ತಿಯು ಪ್ರವೃತ್ತಿ ಮಾರ್ಗದಲ್ಲಿ ನಡೆಸುವ ವ್ಯವಹಾರವು ಜೀವರಲ್ಲಿ ಮುಕ್ತಿಯ ಬಯಕೆಯನ್ನು ಜಾಗೃತಗೊಳಿಸುವ ಪ್ರವರ್ತನೆ.

ಅಭಿವಂದನಾ

ಮುಮುಕ್ಷುಗಳಿಗೆ ಸುವಿದ್ಯಾಪ್ರದಾಯಿನಿ

'ಅಮೃತಾರ್ಥಂ ಪ್ರಪನ್ನಾನಾಂ ಯಾ ಸುವಿದ್ಯಾಪ್ರದಾಯಿನೀ ।
ಅಹರ್ನಿಶಮಹಂ ವಂದೇ ತಾಮೀಶಾನಮನೋರಮಾಮ್॥
(ಸಿದ್ಧಾಂತಶಿಖಾಮಣಿ, ೧.೧೨).

ಎಂಬ ಶಕ್ತಿಸ್ತುತಿಯಲ್ಲಿ ವ್ಯಕ್ತವಾದಂತೆ ಮುಕ್ತಿಕಾಂಕ್ಷಿಗಳಾದವರಿಗೆ ಶಿವಸಮವೇತಳಾದ ಶಕ್ತಿಯು ನಿವೃತ್ತಿಮಾರ್ಗದಲ್ಲಿ ಭಕ್ತಿಯಾಗಿ ಪರಿವರ್ತನೆಗೊಂಡು ಮುಮುಕ್ಷುವಿನ ಮನದಲ್ಲಿ ಮೂಡಿ ಅವನನ್ನು ಮುಕ್ತಿಯೆಡೆಗೆ ಮುನ್ನಡೆಸುವಳು. ಅವನಿಗೆ ಸುವಿದ್ಯೆಯನ್ನು, ಎಂದರೆ ವೇದಾಂತ ವಾಕ್ಯಗಳಿಂದ ದೊರೆಯುವ ಜ್ಞಾನವನ್ನು, ನೀಡುತ್ತಾಳೆ. ಹೀಗೆ ಶಿವನ ವಿಶ್ವಲೀಲೆಯ ಅಂಗವಾಗಿ ಅವಿದ್ಯಾಮಾಯೆಯಾಗಿ ಆವರಿಸಿ ಜೀವರುಗಳನ್ನು ಸಂಸಾರಿಗಳಾಗುವಂತೆ ಮಾಡಿ ಸುಖ-ದುಃಖಗಳ ಅನುಭವಕ್ಕೆ ಪಕ್ಕಾಗಿಸಿದ ಶಕ್ತಿಯೇ ಭಕ್ತಿಯಾಗಿ ಮುಮುಕ್ಷುಗಳಾದ ಜೀವರಿಗೆ ಮುಕ್ತಿಯ ಮಾರ್ಗವನ್ನು ತೋರುತ್ತಾಳೆ. ಆದ್ದರಿಂದ

ಶಕ್ತಿರೇವ ಸ್ಮೃತಾ ಭಕ್ತಿರ್ಭಕ್ತಿರೇವ ಹಿ ಸಾ ಸದಾ।
ಶಕ್ತಿಭಕ್ತ್ಯೋರ್ನ ಭೇದೋಽಸ್ತಿ ಪರಮಾರ್ಥನಿರೂಪಣೇ॥
ಶಕ್ತಿಃ ಪ್ರವೃತ್ತಿರಾಖ್ಯಾತಾ ನಿವೃತ್ತಿರ್ಭಕ್ತಿರೀರಿತಾ।
ಶಕ್ತ್ಯಾ ಪ್ರಪಂಚಸೃಷ್ಟಿಃ ಸ್ಯಾದ್ಭಕ್ತ್ಯಾ ತದ್ವಿಲಯೋ ಮತಃ॥
(ಅನುಭವಸೂತ್ರ, ೨.೨೬-೨೭).

ಶಕ್ತಿಯೇ ಭಕ್ತಿಯಾಗಿದೆ, ಭಕ್ತಿಯೇ ಶಕ್ತಿಯಾಗಿದೆ. ಪಾರಮಾರ್ಥಿಕವಾಗಿ ವಿಚಾರಮಾಡಿದರೆ ಶಕ್ತಿ ಮತ್ತು ಭಕ್ತಿಗಳಲ್ಲಿ ಭೇದವಿಲ್ಲ. ಶಕ್ತಿಯು ಪ್ರವೃತ್ತಿಯಾದರೆ, ಭಕ್ತಿಯು ನಿವೃತ್ತಿ; ಶಕ್ತಿಯಿಂದ ಪ್ರಪಂಚದ ಸೃಷ್ಟಿ ಮತ್ತು ಭಕ್ತಿಯಿಂದ ಪ್ರಪಂಚದ ವಿಲಯ. ಹೀಗೆ ಶಕ್ತಿವಿಶಿಷ್ಟನಾದ ಪರಶಿವನ ಇಚ್ಛೆಯಿಂದ ಉತ್ಪನ್ನವಾಗುವ ಚರಾಚರಾತ್ಮಕವಾದ ಜಗತ್ತೆಲ್ಲವೂ ಶಕ್ತಿವಿಶಿಷ್ಟವಾಗಿದೆ. ಹಾಗೆ ಶಕ್ತಿವಿಶಿಷ್ಟರಾದ ಜೀವರ ಸ್ವರೂಪವನ್ನು ನೋಡೋಣ.

(೨) ಜೀವರ ಸ್ವರೂಪ

ಜೀವರು ಪರಶಿವನ ಅಂಶರು.
ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಮಕಃ।
(ಸಿದ್ಧಾಂತಶಿಖಾಮಣಿ, ೫.೩೪).

ಜೀವ-ಶಿವ ಎಂದು ವಿಭಾಗಪರವಾದ ವಿಮರ್ಶಾಶಕ್ತಿಯ ರೂಪವಾದ ಅನಾದ್ಯವಿದ್ಯೆಯ, ಅಂದರೆ, ಮಾಯಾಶಕ್ತಿಯ, ಸಂಬಂಧದಿಂದ ಪರಮಾತ್ಮನ ಅಂಶವೇ ಜೀವರುಗಳಾಯಿತು. ಶ್ರೀಪತಿಪಂಡಿತರು ಹೇಳುವಂತೆ ಕಿರಣಗಳು ಪ್ರಕಾಶದ ಅಂಶಗಳೇ ಆದಂತೆ ಜೀವಾತ್ಮರು ಪರಮಾತ್ಮನ ಅಂಶಗಳು.

ಅಭಿವಂದನಾ

ಪ್ರಕಾಶಾದಿವಜ್ಜೀವೋ ಪರಮಾತ್ಮನೋಽಂಶಃ।
(ಶ್ರೀಕರಭಾಷ್ಯ, II.೩.೪೩).

'ಪಾದೋಽಸ್ಯ ವಿಶ್ವಾ ಭೂತಾನಿ' (ಋಗ್ವೇದ, ಪುರುಷಸೂಕ್ತ, X, ೯೦. ೩), 'ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ' (ಭಗವದ್ಗೀತೆ, ೧೫.೭), 'ಅಂಶೋ ನಾನಾವ್ಯಪದೇಶಾತ್ ' (ವೇದಾಂತಸೂತ್ರ, II.೩.೪೩.), ಇತ್ಯಾದಿ ಪ್ರಮಾಣಗಳಿಂದ ಜೀವರು ಪರಮಾತ್ಮನ ಅಂಶಗಳೆಂಬುದು ಸಿದ್ಧವಾಗಿದೆ. ವಿಭಾಗಕ್ಕೆ ಕಾರಣವಾದ ಮಾಯಾಶಕ್ತಿಯ ಪ್ರಭಾವದಿಂದ ಶಿವನು ಜೀವರಲ್ಲಿ ಪ್ರೇರಕನಾಗಿ ನೆಲೆಸಿದ್ದಾನೆ. ಅದು ಹೇಗೆಂದರೆ:

ಚಂದ್ರಕಾಂತೇ ಯಥಾ ತೋಯಂ ಸೂರ್ಯಕಾಂತೇ ಯಥಾಽನಲಃ।
ಬೀಜೇ ಯಥಾಂಕುರಃ ಸಿದ್ಧಸ್ತಥಾತ್ಮನಿ ಶಿವಃ ಸ್ಥಿತಃ॥
(ಸಿದ್ಧಾಂತಶಿಖಾಮಣಿ, ೫,೩೬).

ಚಂದ್ರಕಾಂತ ಶಿಲೆಯಲ್ಲಿ ನೀರು, ಸೂರ್ಯಕಾಂತಮಣಿಯಲ್ಲಿ ಬೆಂಕಿ, ಬೀಜದಲ್ಲಿ ಮೊಳಕೆ ಹೇಗೆ ಅಡಗಿವೆಯೋ ಹಾಗೆ ಶಿವನು ತನ್ನ ಅಂಶನಾದ ಜೀವನಲ್ಲಿ ನೆಲೆಸಿದ್ದಾನೆ. ದೃಷ್ಟಾಂತಗಳಿಂದ ಶಿವನು ಜೀವರೊಂದಿಗೆ ತಾದಾತ್ಮ್ಯಸಂಬಂಧದಿಂದಿದ್ದಾನೆ ಎಂಬುದು ಸ್ಪಷ್ಟವಾಗಿದೆ.

ದುಃಖತ್ರಯ ಪೀಡಿತರು

ಅವಿದ್ಯಾರೂಪ ಮಾಯಾಶಕ್ತಿಯ ಸ್ಪಂದದಿಂದ ಪರಶಿವನಿಂದ ಬೇರ್ಪಟ್ಟ ಅಂಶಗಳಾದ ಜೀವರು ಅವಿದ್ಯೆಯಿಂದ ಮೋಹಿತರಾಗಿ ಜನನ-ಮರಣರೂಪ ಸಂಸಾರಚಕ್ರದಲ್ಲಿ ಸಿಲುಕಿದ್ದಾರೆ

ಅವಿದ್ಯಾಮೋಹಿತಾ ಜೀವಾ ಬ್ರಹ್ಮೈಕಜ್ಞಾನವರ್ಜಿತಾಃ।
ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ॥
(ಸಿದ್ಧಾಂತಶಿಖಾಮಣಿ, ೫.೪೭-೪೮).

ಅವಿದ್ಯಾಮೋಹದ ಪ್ರಭಾವದಿಂದ ಪರಶಿವನೊಂದಿಗೆ ತಮ್ಮ ತಾದಾತ್ಮ್ಯದ ಜ್ಞಾನದಿಂದ ವಂಚಿತರಾಗಿ ತಮ್ಮ ಕರ್ಮಕ್ಕೆ ಅನುಸಾರವಾಗಿ ಸಂಸಾರದಲ್ಲಿ 'ಜೀವತ್ವಂ ದುಃಖಸರ್ವಸ್ವಂ ತದಿದಂ ಮಲಕಲ್ಪಿತಮ್' (ಸಿದ್ಧಾಂತಶಿಖಾಮಣಿ, ೧೮.೧೭) ಎಂಬ ಉಕ್ತಿಯಂತೆ ಜೀವರು ಆಣವಮಲ, ಕಾರ್ಮಿಕಮಲ ಮತ್ತು ಮಾಯೀಯಮಲ ಎಂಬ ಮೂರು ಮಲಗಳಿಂದ ಆವರಿಸಲ್ಪಟ್ಟು ಬಂಧಿತರು. ಇಚ್ಛಾಶಕ್ತಿಯ ಸಂಕೋಚವೇ ಆಣವಮಲ; ಅದರ ಆವರಣದಿಂದ ಜೀವರು ತಮ್ಮ ವ್ಯಾಪಕತ್ವವನ್ನು ಮರೆತು ತಮ್ಮನ್ನು ತಾವು ಕೇವಲ ಶರೀರವಾಸಿಗಳನ್ನಾಗಿ ಭಾವಿಸಿ ಅಲ್ಪರೆಂದು ತಿಳಿದುಕೊಳ್ಳುತ್ತಾರೆ. ಕ್ರಿಯಾಶಕ್ತಿಯ ಸಂಕೋಚವೇ ಕಾರ್ಮಿಕಮಲ, ಅದರ ಆವರಣದಿಂದ ಜೀವರು ಕರ್ಮಗಳ

ವಾಸನಾನುಸಾರವಾಗಿ ಪುಣ್ಯ-ಪಾಪಗಳನ್ನು ಸಂಪಾದಿಸುತ್ತಾರೆ. ಜ್ಞಾನಶಕ್ತಿಯ ಸಂಕೋಚವೇ ಮಾಯೀಯ ಮಲ. ಅದರ ಆವರಣದಿಂದ ಜೀವರು ತಮ್ಮ ದೇಹ ಮತ್ತು ದೇಹಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ತಾವು-ತಮ್ಮದೆಂಬ ಅಭಿಮಾನವನ್ನು ತಾಳುತ್ತಾರೆ. ಅವರು ಮೂರು ವಿಧವಾದ ದುಃಖಗಳಿಂದ ಪೀಡಿತರು. ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕ ಎಂಬವು ಮೂರು ದುಃಖಗಳು. ಅವುಗಳಲ್ಲಿ ಆಧ್ಯಾತ್ಮಿಕ ದುಃಖವು ಬಾಹ್ಯ ಮತ್ತು ಆಂತರಿಕವೆಂದು ಎರಡು ವಿಧ. ವಾತ, ಪಿತ್ತ ಮುಂತಾದವುಗಳಿಂದ ಉಂಟಾಗುವ ದುಃಖಗಳು ಬಾಹ್ಯ ಆಧ್ಯಾತ್ಮಿಕ ದುಃಖಗಳು. ರಾಗ, ದ್ವೇಷ ಮುಂತಾದವುಗಳಿಂದ ಉಂಟಾಗುವ ದುಃಖಗಳು ಆಂತರಿಕ ಆಧ್ಯಾತ್ಮಿಕ ದುಃಖಗಳು. ಇತರ ಪ್ರಾಣಿಗಳಿಂದ ಹಾಗೂ ಭೌತಿಕ ಪ್ರಪಂಚದಿಂದ ಉಂಟಾಗುವ ದುಃಖಗಳು ಆಧಿಭೌತಿಕ ದುಃಖಗಳು. ಗ್ರಹ, ಯಕ್ಷ, ಮುಂತಾದವುಗಳಿಂದ ಉಂಟಾಗುವ ದುಃಖಗಳು ಆಧಿದೈವಿಕ ದುಃಖಗಳು. ಈ ದುಃಖಗಳಿಂದ ಪೀಡಿತರಾದ ಜೀವರಿಗೆ ಅಲ್ಪಮಾತ್ರವೂ ಸುಖವಿಲ್ಲ.

ದುಃಖೈರೇತೈರುಪೇತಸ್ಯ ಕರ್ಮಬದ್ಧಸ್ಯ ದೇಹಿನಃ।
ಸ್ವರ್ಗೇ ವಾ ಯದಿ ವಾ ಭೂಮೌ ಸುಖಲೇಶೋ ನ ವಿದ್ಯತೇ॥
(ಸಿದ್ಧಾಂತಶಿಖಾಮಣಿ, ೫.೭೦)

ಜೀವರ ದುಃಖನಿವೃತ್ತಿ ಹೇಗೆ?

ಜೀವಭಾವಕ್ಕೆ ಕಾರಣವಾದ ಅವಿದ್ಯೆಯು ಅನಾದಿ ಎಂದ ಮೇಲೆ ಜೀವರಿಗೆ ಗತ್ಯಂತರವಿಲ್ಲವೇ? ಜೀವರು ನಿರಂತರವಾಗಿ ದುಃಖದಲ್ಲಿ ತೊಳಲಾಡಬೇಕೇ? ದುಃಖನಿವೃತ್ತಿಯ ಮಾರ್ಗವೇ ಇಲ್ಲವೆ? ಎಂಬ ಪ್ರಶ್ನೆಯನ್ನು ಎತ್ತಿದ ಸಿದ್ಧಾಂತಗ್ರಂಥಗಳು, ನಿರಾಶೆಗೊಳ್ಳುವುದು ಬೇಡ, ದುಃಖನಿವೃತ್ತಿಯ ಮಾರ್ಗ ಇದೆ. ಅದನ್ನು ಹೇಳುವುದಕ್ಕಾಗಿಯೇ ಎಲ್ಲಾ ಶಾಸ್ತ್ರದ ಪ್ರವೃತ್ತಿ, ಅದಕ್ಕೆ ಪ್ರೇರಕನಾಗಿ ಪರಮೇಶ್ವರನಿದ್ದಾನೆ. ಎಂದು ಹೇಳುತ್ತವೆ. ಉದಾಹರಣೆಗೆ ಈ ಪ್ರಶ್ನೆಯನ್ನು ನೋಡಿರಿ:

ಕರ್ಮಮೂಲೇನ ದುಃಖೇನ ಪೀಡ್ಯಮಾನಸ್ಯ ದೇಹಿನಃ।
ಆಧ್ಯಾತ್ಮಿಕಾದಿನಾ ನಿತ್ಯಂ ಕುತ್ರ ವಿಶ್ರಾಂತಿರಿಷ್ಯತೇ॥
(ಸಿದ್ಧಾಂತಶಿಖಾಮಣಿ, ೫,೭೭)

ಅದಕ್ಕೆ ಉತ್ತರ-

ದೇಹಿನಾಂ ಪ್ರೇರಕಃ ಶಂಭುರ್ಹಿತಮಾರ್ಗೋಪದೇಶಕಃ।
ಪುನರಾವೃತ್ತಿರಹಿತ-ಮೋಕ್ಷಮಾರ್ಗೋಪದೇಶಕಃ॥
(ಸಿದ್ಧಾಂತಶಿಖಾಮಣಿ, ೫,೫೧)

ಜೀವರುಗಳಿಗೆ ಈಶ್ವರನು ಪ್ರೇರಕನಾಗಿರುವಂತೆ ಅವರಿಗೆ ಹಿತವಾದ ಮಾರ್ಗವನ್ನು ಉಪದೇಶಿಸುವವನೂ ಆಗಿದ್ದಾನೆ. ಅವನೇ ಮತ್ತೆ ಹುಟ್ಟಿಬರದಂತಹ ಮೋಕ್ಷದ ಮಾರ್ಗವನ್ನು

ಉಪದೇಶಿಸುತ್ತಾನೆ. ಅವನೇ ವಿಶ್ವಲೀಲೆಯ ಅಂಗವಾಗಿ ಜೀವರನ್ನು ಬಂಧಿಸುವವನು; ಅವನೇ ಅವರನ್ನು ಬಂಧನದಿಂದ ಬಿಡಿಸುವವನು:

ಏತಾವತಾಂ ಪಶೂನಾಂ ಹಿ ದ್ವಿಪದಾಂ ಚ ಚತುಷ್ಪದಾಂ।
ಈಶಃ ಶಿವೋ ಬಂಧ-ಮೋಕ್ಷೌ ತದ್ವಶೇ ತಿಷ್ಠತೋ ಧ್ರುವಮ್॥
(ಚಂದ್ರಜ್ಞಾನಾಗಮ, ೧.೪೪).

ಈ ಎಲ್ಲಾ ದ್ವಿಪಾದಿ ಹಾಗೂ ಚತುಷ್ಪಾದಿ ಜೀವಿಗಳಿಗೆ ಶಿವನೇ ಒಡೆಯನು; ಅವುಗಳ ಬಂಧ ಮೋಕ್ಷಗಳೆರಡೂ ನಿಶ್ಚಿತವಾಗಿ ಅವನ ವಶದಲ್ಲಿವೆ. ಈ ವಿಶ್ವಾಸವು ಬೇಕು. ಎಲ್ಲರಲ್ಲಿ ಈ ವಿಶ್ವಾಸವು ಹುಟ್ಟುವುದಿಲ್ಲ. ಶುದ್ಧಮಾನಸನಾದವನಲ್ಲಿ ಮಾತ್ರ ಈ ವಿಶ್ವಾಸವು ಹುಟ್ಟುತ್ತದೆ. ಅದಕ್ಕೂ ಪರಮಾತ್ಮನ ಅನುಗ್ರಹವು ಬೇಕು:

ಸ್ವಕರ್ಮಪರಿಪಾಕೇನ ಪ್ರಕ್ಷೀಣಮಲವಾಸನಃ।
ಶಿವಪ್ರಸಾದಾಜ್ಜೀವೋಽಯಂ ಜಾಯತೇ ಶುದ್ಧಮಾನಸಃ॥
(ಸಿದ್ಧಾಂತಶಿಖಾಮಣಿ, ೫.೫೨)

ತಾನು ಆಚರಿಸಿದ ಕರ್ಮಗಳ ಪರಿಪಾಕದಿಂದ ಆಣವಾದಿ ಮಲಗಳು ಕ್ಷೀಣವಾದವನು ಶಿವನ ಅನುಗ್ರಹದಿಂದ ಶುದ್ಧಮಾನಸನಾಗುತ್ತಾನೆ. ಅಂತಹ ಶುದ್ಧಾಂತಃಕರಣನಾದ ಜೀವನಲ್ಲಿ ಶಿವನ ಕರುಣೆಯಿಂದಲೇ ಭಕ್ತಿಯು ಹುಟ್ಟುತ್ತದೆ.

ಶುದ್ಧಾಂತಃಕರಣೇ ಜೀವೇ ಶುದ್ಧಕರ್ಮವಿಪಾಕತಃ।
ಜಾಯತೇ ಶಿವಕಾರುಣ್ಯಾತ್ ಪ್ರಸ್ಫುಟಾ ಭಕ್ತಿರೈಶ್ವರೀ॥
(ಸಿದ್ಧಾಂತಶಿಖಾಮಣಿ, ೫.೫೩)

ಅದೇ 'ಶಕ್ತಿಪಾತ', ಭಕ್ತಿರೂಪ ಶಕ್ತಿಯ ಉದಯ. ಆ ಭಕ್ತಿಯೇ ತಾರಕ. ಅದರಿಂದಲೇ ಮುಂದೆ ತ್ರಿವಿಧ ದೀಕ್ಷೆಯಿಂದ ಆರಂಭವಾಗುವ ಅಷ್ಟಾವರಣಯುಕ್ತವೂ ಪಂಚಾಚಾರವಿಶಿಷ್ಟವೂ ಆದ ಷಟ್‌ಸ್ಥಲಾತ್ಮಕ ಸಾಧನಮಾರ್ಗ. ಆ ಮಾರ್ಗದಲ್ಲಿ ಭಕ್ತಿಯು ಕ್ರಮವಾಗಿ ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಅವಧಾನಭಕ್ತಿ, ಅನುಭಾವಭಕ್ತಿ, ಆನಂದಭಕ್ತಿ ಮತ್ತು ಸಮರಸಭಕ್ತಿಗಳಾಗಿ ಪರಿಣಮಿಸಿ, ಭಕ್ತಾದಿ ಸ್ಥಲಗಳಲ್ಲಿ ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗ ಪೂಜೆ ಮತ್ತು ದೃಷ್ಟಿಯೋಗದ ಮೂಲಕ ಸಾಧಿಸಿದ ಶಿವಯೋಗದಿಂದ ಎಷ್ಟೆಷ್ಟು ಪ್ರಾಪ್ಯವೋ ಅಷ್ಟಷ್ಟು ಕರ್ಮ-ಜ್ಞಾನಗಳ ಸಮನ್ವಯವನ್ನು ಸಾಧಿಸುವಂತೆ ಮಾಡಿ ಜೀವನನ್ನು ಎಲ್ಲಿಂದ ಬೇರ್ಪಟ್ಟು ಬಂದಿದ್ದನೋ ಅಲ್ಲಿಗೇ ಕೊಂಡೊಯ್ದು ಬೆರೆಸುತ್ತದೆ.

ಶಿವ-ಜೀವರ ಭೇದಾಭೇದ

ಅವಿದ್ಯಾಶಕ್ತಿಯ ಸಂಪರ್ಕದಿಂದ ಪರಶಿವನಿಂದ ಬೇರ್ಪಟ್ಟ ಅಂಶಗಳು ಜೀವರು ಎಂದು ಹೇಳಲಾಗಿದೆ. ಅದಕ್ಕೆ ಶ್ರುತಿಪ್ರಮಾಣ ಹೀಗಿದೆ.

ಯಥಾ ಸುದೀಪ್ತಾತ್ ಪಾವಕಾದ್ ವಿಸ್ಫುಲಿಂಗಾಃ
ಸಹಸ್ರಶಃ ಪ್ರಭವಂತೇ ಸರೂಪಾಃ।
ತಥಾಕ್ಷರಾದ್ವಿವಿಧಾಃ ಸೌಮ್ಯ ಭಾವಾಃ
ಪ್ರಜಾಯಂತೇ ತತ್ರ ಚೈವಾಪಿ ಯಂತಿ।
(ಮುಂಡಕೋಪನಿಷತ್, ೨.೧.೧)

ಪ್ರಜ್ವಲಿತವಾದ ಅಗ್ನಿಯಿಂದ ಅಗ್ನಿಯ ಅಂಶಗಳಾದ ಅನಂತಾನಂತ ಕಿಡಿಗಳು ಹೇಗೆ ಆವಿರ್ಭವಿಸುವುವೋ ಹಾಗೆಯೇ ಅಕ್ಷರನಾದ ಪರಶಿವನಿಂದ ಅವನ ಅಂಶಭೂತರಾದ ಅನಂತ ಭಾವಗಳು (ಜೀವರುಗಳು) ಅವಿರ್ಭವಿಸುವವು ಮತ್ತು ಅಲ್ಲಿಯೇ ಲಯವನ್ನು ಹೊಂದುವವು. ಅಗ್ನಿ ಮತ್ತು ಕಿಡಿಗಳ ಮಧ್ಯೆ ಅತ್ಯಂತ ಭೇದವನ್ನು ಹೇಳಿದರೆ ಅಗ್ನಿಯಿಂದ ಆಗುವ ಪಾಕಾದಿಕ್ರಿಯೆಗಳು ಕಿಡಿಯಿಂದಲೂ ಆಗಬೇಕಾದೀತು; ಹಾಗೆಂದು ಅತ್ಯಂತ ಭೇದವನ್ನು ಹೇಳಿದರೆ ಕಿಡಿಯಿಂದ ಸುಡುವ ಕಾರ್ಯವು ಸರ್ವಥಾ ಆಗಬಾರದು; ಆದರೆ ಹತ್ತಿಯ ಮೂಟೆಯ ಮೇಲೆ ಬಿದ್ದ ಕಿಡಿಯು ಹೊತ್ತಿ ಉರಿಯುವುದನ್ನು ಕಾಣುತ್ತೇವೆ. ಹೀಗೆ ಅಗ್ನಿ-ಕಿಡಿಗಳ ಮಧ್ಯೆ ಅತ್ಯಂತ ಭೇದವನ್ನು ಅತ್ಯಂತ ಅಭೇದವನ್ನೂ ಹೇಳದೆ ಭೇದಾಭೇದವನ್ನು ಅಂಗೀಕರಿಸಬೇಕು.

ಹಾಗೆಯೇ ಶಿವ-ಜೀವರ ಮಧ್ಯೆ ಅತ್ಯಂತ ಅಭೇದವನ್ನು ಹೇಳಿದರೆ ಜೀವರೂ ಕೂಡ ಶಿವನಂತೆ ಸರ್ವಜ್ಞತ್ವ ಮತ್ತು ಸರ್ವಕರ್ತೃತ್ವಗಳಿಂದ ವಿಶಿಷ್ಟರಾಗಿದ್ದಾರೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಮತ್ತೆ ಅತ್ಯಂತ ಭೇದವನ್ನು ಹೇಳಿದರೆ ಜೀವರನ್ನು ಚೈತನ್ಯರಹಿತರೆಂದು ಪರಿಗಣಿಸಬೇಕಾಗುತ್ತದೆ. ಆದ್ದರಿಂದ ಸಂಸಾರದಶೆಯಲ್ಲಿ ಶಿವ-ಜೀವರ ಭೇದವನ್ನೂ ಮುಕ್ತಿ ದಶೆಯಲ್ಲಿ ಅಭೇದವನ್ನು ಸತ್ಯವೆಂದು ತಿಳಿಯಬೇಕು. ಆದ್ದರಿಂದ ಶಕ್ತಿವಿಶಿಷ್ಟಾದ್ವೈತದರ್ಶನವು ಭೇದಾಭೇದವಾದವನ್ನು ಅಂಗೀಕರಿಸುತ್ತದೆ. ಇದೇ ರೀತಿ ಶಿವ ಮತ್ತು ಅಚರ ಜಗತ್ತುಗಳ ಮಧ್ಯೆ ಕೂಡ ಭೇದಾಭೇದವನ್ನೇ ಅಂಗೀಕರಿಸಬೇಕು. ಈ ವಿಚಾರವನ್ನು ಮನಗಂಡ ಶ್ರೀಪತಿಪಂಡಿತರು ವೀರಶೈವದರ್ಶನಕ್ಕೆ ದ್ವೈತಾದ್ವೈತವೆಂದು ಹೆಸರಿತ್ತು, ಸರ್ವಶ್ರುತಿಗಳ ಸಮನ್ವಯಕ್ಕೆ ಈ ದರ್ಶನದಲ್ಲಿ ಸಮಂಜಸವಾದ ದಾರಿಯಿದೆಯೆಂದು ಹೇಳಿದ್ದಾರೆ.

ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಕೇ।
ವೀರಶೈವೈಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ॥
(ಶ್ರೀಕರಭಾಷ್ಯ, ಪೀಠಿಕಾಶ್ಲೋಕಗಳಲ್ಲಿ)

(೪) ಜಗತ್ತಿನ ಸ್ವರೂಪ

ಜಗತ್ತು ಚರಾಚರಾತ್ಮಕ. ಚರಜಗತ್ತೆಂದರೆ ಜೀವರುಗಳ ಜಗತ್ತು. ಅಚರಜಗತ್ತೆಂದರೆ ಅತ್ಯಂತಗೂಢಚೈತನ್ಯವುಳ್ಳ ಪದಾರ್ಥಗಳ ಪ್ರಪಂಚ. ಪರಶಿವನಿಂದ

ಹೊಮ್ಮಿದ ಈ ಜಗತ್ತು ಮುವತ್ತಾರು ತತ್ತ್ವಗಳಿಂದ ಕೂಡಿದೆ. ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ, ಮಾಯಾ, ಕಲಾ, ವಿದ್ಯಾ, ರಾಗ, ಕಾಲ, ನಿಯತಿ, ಪುರುಷ, ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು, ಶ್ರೋತ್ರ, ತ್ವಕ್, ನೇತ್ರ, ಜಿಹ್ವಾ, ಘ್ರಾಣ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ-ಇವು ಮುವತ್ತಾರು ತತ್ತ್ವಗಳು. 'ಯಸ್ಯೋರ್ಮಿಬುದ್ಬುದಾಭಾಸಃ ಷಟ್‌ತ್ರಿಂಶತ್ತತ್ತ್ವಸಂಚಯಃ' (ಸಿದ್ಧಾಂತಶಿಖಾಮಣಿ, ೧.೩) ಎಂಬ ಉಕ್ತಿಯಂತೆ ಈ ಮುವತ್ತಾರು ತತ್ತ್ವಗಳು ಪರಶಿವನೆಂಬ ಚಿನ್ಮಹಾಸಮುದ್ರದ ತರಂಗಗಳು.

ಪರಿಣಾಮವಾದ-ಜಗತ್ಸತ್ಯತ್ವವಾದ

ಚರಾಚರಾತ್ಮಕವಾದ ಜಗತ್ತಿನ ಘಟಕಗಳಾದ ಮೂವತ್ತಾರು ತತ್ತ್ವಗಳು ಸತ್-ಚಿತ್-ಆನಂದ ರೂಪನಾದ ಶಕ್ತಿವಿಶಿಷ್ಟ ಪರಶಿವನ ಪರಿಣಾಮರೂಪವಾಗಿರುವುದರಿಂದ ವೀರಶೈವ ಸಿದ್ಧಾಂತವು (ಶಕ್ತಿವಿಶಿಷ್ಟಾದ್ವೈತವು) ಪರಿಣಾಮವಾದವನ್ನೂ ಜಗತ್ಸತ್ಯತ್ವವಾದವನ್ನೂ ಪ್ರತಿಪಾದಿಸುತ್ತದೆ. ಅದೇ ಕಾರಣದಿಂದ ಜಗತ್ತು ಶಿವಮಯವೆಂದು ಬೋಧಿಸುತ್ತದೆ. ನಿರ್ಗುಣ ಮತ್ತು ಸಗುಣ ಶ್ರುತಿಗಳ ಸಮನ್ವಯವನ್ನು ತೋರಿಸಿ ಶ್ರೀಪತಿಪಂಡಿತರು ಜಗತ್ತು ಶಿವಮಯವೆಂದು ಹೀಗೆ ಸಮರ್ಥಿಸಿದ್ದಾರೆ.

'ಶಕ್ತಿಸಂಕೋಚತಯಾ ಸೃಷ್ಟೇಃ ಪ್ರಾಕ್ ಪರಮೇಶ್ವರಸ್ಯ ನಿರ್ಗುಣತ್ವಮ್. ಸಗುಣಶ್ರುತೀನಾಂ ಸೃಷ್ಟ್ಯುನ್ಮುಖ-ಪರಮೇಶ್ವರ ಶಕ್ತಿವಿಕಾಸಕಲಾಪರತ್ವಮ್. ಸೇಶ್ವರಾದ್ವೈತಭಾನೇತು ಸರ್ವಂ ಶಿವಮಯಂ ಜಗತ್'.

ಸೃಷ್ಟಿಗಿಂತ ಪೂರ್ವದಲ್ಲಿ ಶಕ್ತಿಯ ಸಂಕೋಚದಿಂದ ಪರಮೇಶ್ವರನು ನಿರ್ಗುಣನಾಗಿದ್ದನು. ಸಗುಣ ಶ್ರುತಿಗಳು ಸೃಷ್ಟಿಗೆ ಪ್ರವೃತ್ತಳಾದ ಪರಮೇಶ್ವರ ಶಕ್ತಿಯ ವಿಕಾಸಕಲೆಯ ಪರವಾಗಿವೆ. ಶಿವಾದ್ವೈತವು ಜಾಗೃತವಾದಾಗಲಂತೂ ಜಗತ್ತೆಲ್ಲ ಶಿವಮಯ. ಅದು ಹೇಗೆಂದರೆ-

ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ|
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್||
(ಸಿದ್ಧಾಂತಶಿಖಾಮಣಿ, ೧೦.೬೬)

ಇಲ್ಲಿ ಪರಶಿವನು ತನ್ನ ಶಕ್ತಿಯ ವಿಕಾಸದಿಂದ ಹೇಗೆ ವಿಶ್ವರೂಪದಲ್ಲಿ ಹರಡಿದ್ದಾನೆ ಎಂಬುದನ್ನು ಬಿಂಬಿಸಲು ಒಂದು ಅರ್ಥವತ್ತಾದ ದೃಷ್ಟಾಂತವು ಬಂದಿದೆ. ಬಟ್ಟೆಯು ತನ್ನಲ್ಲಿರುವ ಹರಡುವ ಶಕ್ತಿಯಿಂದ ಡೇರೆಯ ರೂಪದಲ್ಲಿ ಹೇಗೆ ಹರಡಿಕೊಳ್ಳುತ್ತದೆಯೋ ಹಾಗೆ ಪರಶಿವನು ತನ್ನ ಶಕ್ತಿಯಿಂದ ಜಗತ್ತಿನ ರೂಪದಲ್ಲಿ

ವಿಸ್ತರಿಸಿದ್ದಾನೆ. ಇದರಿಂದ ಜಗತ್ತು ಶಿವನಿಗಿಂತ ಭಿನ್ನವಲ್ಲ ಎಂಬುದು ಧ್ವನಿತವಾಗುತ್ತದೆ. ಇದನ್ನೇ ವಿವಿಧ ದೃಷ್ಟಾಂತಗಳಿಂದ ಸ್ಪಷ್ಟೀಕರಿಸಿದ್ದಾರೆ.

ಯಸ್ಮಾದೇತತ್ ಸಮುತ್ಪನ್ನಂ ಮಹಾದೇವಾಚ್ಚರಾಚರಮ್।
ತಸ್ಮಾದೇತನ್ನ ಭಿದ್ಯೇತ ಯಥಾ ಕುಂಭಾದಿಕಂ ಮೃದಃ॥
ಶಿವತತ್ತ್ವಾತ್ ಸಮುತ್ಪನ್ನಂ ಜಗದಸ್ಮಾನ್ನ ಭಿದ್ಯತೇ।
ಫೇನೋರ್ಮಿಬುದ್ಬುದಾಕಾರಂ ಯಥಾ ಸಿಂಧೋರ್ನ ಭಿದ್ಯಂತೇ॥
ಯಥಾ ತಂತುಭಿರುತ್ಪನ್ನಃ ಪಟಸ್ತಂತುಮಯಃ ಸ್ಮೃತಃ।
ತಥಾ ಶಿವಾತ್‌ಸಮುತ್ಪನ್ನಂ ಶಿವ ಏವ ಚರಾಚರಮ್॥
(ಸಿದ್ಧಾಂತಶಿಖಾಮಣಿ, ೧೦.೬೩-೬೫)

ಮಣ್ಣಿನಿಂದ ರೂಪಗೊಂಡ ಘಟಾದಿಗಳು ಹೇಗೆ ಮಣ್ಣಿಗಿಂತ ಬೇರೆಯಲ್ಲವೋ, ಸಮುದ್ರ ಜಲದ ರೂಪಾಂತರಗಳಾದ ನೊರೆ, ತೆರೆ ಮುಂತಾದವು ಹೇಗೆ ಸಮುದ್ರಕ್ಕಿಂತ ಭಿನ್ನವಲ್ಲವೋ, ನೂಲುಗಳಿಂದ ನೇಯಲ್ಪಟ್ಟ ವಸ್ತ್ರವು ಹೇಗೆ ತಂತುಮಯವಾಗಿದೆಯೋ ಹಾಗೆ ಶಿವನಿಂದ ಹೊಮ್ಮಿದ ಜಗತ್ತು ಶಿವನಿಂದ ಭಿನ್ನವಲ್ಲ. ಅಂದರೆ ಜಗತ್ತೆಲ್ಲಾ ಲಿಂಗವೇ ಆಗಿದೆ.

ಆಕಾಶಂ ಲಿಂಗಮಿತ್ಯಾಹುಃ ಪೃಥಿವೀ ತಸ್ಯ ಪೀಠಿಕಾ।
ಆಲಯಃ ಸರ್ವಭೂತಾನಾಂ ಲಯನಾಲ್ಲಿಂಗಮುಚ್ಯತೇ॥
(ಚಂದ್ರಜ್ಞಾನಾಗಮ, ೩.೫೧)

ಆಕಾಶವೇ ಲಿಂಗವೆನ್ನುತ್ತಾರೆ. ಭೂಮಿಯು ಅದರ ಪೀಠ. ಎಲ್ಲಾ ಚರಾಚರಗಳ ಆಲಯವಾದ ಅದು ಲಯಗೊಳಿಸಿಕೊಳ್ಳುವ ಕಲೆಯಿಂದ ಲಿಂಗವೆಂದು ಕರೆಯಲ್ಪಟ್ಟಿದೆ.

(೫) ಮುಕ್ತಿಯ ಸ್ವರೂಪ

ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ ಶಿವ-ಜೀವರ ಸಮರಸಾತ್ಮಕ ಐಕ್ಯವನ್ನು ಮುಕ್ತಿಯೆಂದು ಹೇಳಿ ಅದನ್ನು ಸಚ್ಚಿದಾನಂದಸ್ಥಿತಿಯೆಂದು ವರ್ಣಿಸಲಾಗಿದೆ. ಶಿವೈಕ್ಯದ ಆನಂದದಲ್ಲಿ ಜೀವನು ಮಗ್ನನಾಗುವುದೇ ಮುಕ್ತಿ. ಅದಕ್ಕೆ ಇಡೀ ಸಾಧನಮಾರ್ಗವೇ ಮೀಸಲು.

ಭಕ್ತಾದಿಧಾಮಾರ್ಪಿತಧರ್ಮಯೋಗಾತ್ ಪ್ರಾಪ್ತೈಕಭಾವಃ ಪರಮಾದ್ಭುತೇನ।
ಶಿವೇನ ಚಿದ್‌ವ್ಯೋಮಮಯೇನ ಸಾಕ್ಷಾನ್ಮೋಕ್ಷಶ್ರಿಯೋ ಭಾಜನತಾಮುಪೈತಿ॥
(ಸಿದ್ಧಾಂತಶಿಖಾಮಣಿ, ೧೪.೪೪)

ಭಕ್ತಸ್ಥಲ ಮುಂತಾದ ಆರು ಸ್ಥಲಗಳ ನೆಲೆಗಳಲ್ಲಿ ಬರುವ ಸದಾಚಾರಗಳ ಆಚರಣೆಯಿಂದ ಚಿದಾಕಾರಸ್ವರೂಪನೂ ಪರಮಾದ್ಭುತನೂ ಆದ ಪರಶಿವನೊಂದಿಗೆ

ಸಾಮರಸ್ಯಭಾವವನ್ನು ಹೊಂದಿದ ಶಿವಯೋಗಿಯು ಮೋಕ್ಷಸಂಪತ್ತಿಗೆ ಸಾಕ್ಷಾತ್ ಆಶ್ರಯನಾಗುತ್ತಾನೆ.

ಶಿವನ ಅನುಗ್ರಹವೆಂಬ ಶಕ್ತಿಪಾತದಿಂದ ಶೈವೀ ಭಕ್ತಿಯು ಜಾಗೃತವಾದಾಗ ಜೀವನು ಭಕ್ತಸ್ಥಲದ ಮೊದಲ ನೆಲೆಯಲ್ಲಿರುತ್ತಾನೆ. ಗುರುಕೃಪೆಯಿಂದ ವೇಧಾ, ಮಾಂತ್ರೀ ಮತ್ತು ಕ್ರಿಯಾ ಎಂಬ ತ್ರಿವಿಧದೀಕ್ಷೆಯಿಂದ ಭಾವಲಿಂಗ-ಪ್ರಾಣಲಿಂಗಗಳೆಂಬ ಕಾರಣ-ಸೂಕ್ಷ್ಮಶರೀರಗಳಲ್ಲಿ ಸ್ಥಾಪಿಸಲ್ಪಟ್ಟ ಆಂತರಿಕ ಲಿಂಗಗಳೊಂದಿಗೆ ಸೂತ್ರಿತವಾದ ಇಷ್ಟಲಿಂಗವನ್ನು ಪಡೆದು, ಗುರುಲಿಂಗ-ಜಂಗಮ-ಭಸ್ಮ-ರುದ್ರಾಕ್ಷ-ಮಂತ್ರ-ಪಾದೋದಕ-ಪ್ರಸಾದಗಳೆಂಬ ಅಷ್ಟಾವರಣಗಳಿಂದ ಸಂಪನ್ನನೂ, ಲಿಂಗಾಚಾರ-ಸದಾಚಾರ-ಶಿವಾಚಾರ-ಭೃತ್ಯಾಚಾರ-ಗಣಾಚಾರಗಳೆಂಬ ಪಂಚಾಚಾರಗಳಿಗೆ ಬದ್ಧನೂ ಆಗುತ್ತಾನೆ. ಅವನ ಆರಂಭ ನೆಲೆಯ ಭಕ್ತಿ ಶ್ರದ್ಧಾಭಕ್ತಿ. ಅದು ಪಕ್ವವಾದಾಗ ಭಕ್ತನು ಮಾಹೇಶ್ವರನ ನೆಲೆಯನ್ನು ಏರುತ್ತಾನೆ. ಅದೇ ಮಾಹೇಶ್ವರ ಸ್ಥಲ. ಏಕಾಗ್ರತೆ, ಲಿಂಗೈಕನಿಷ್ಠೆ, ಶಿವನನ್ನು ಇಷ್ಟಲಿಂಗವಲ್ಲದೆ ಬೇರೆಲ್ಲೂ ಕಾಣದ ಮತ್ತು ಏನೇ ಆದರೂ ಲಿಂಗಪೂಜಾವ್ರತವನ್ನು ಬಿಡದ ಛಲ, ಇವು ಮಾಹೇಶ್ವರನ ವೈಶಿಷ್ಟ್ಯ. ಅವನ ಭಕ್ತಿಯು ನಿಷ್ಠಾಭಕ್ತಿ. ಅದು ಪಕ್ವವಾದಾಗ ಅವನ ಮನಸ್ಸು ಪ್ರಸನ್ನತೆಯನ್ನು ಹೊಂದುತ್ತದೆ. ಆಗ ಅವನು ಪ್ರಸಾದಿಸ್ಥಲದ ನೆಲೆಯನ್ನು ಮುಟ್ಟುತ್ತಾನೆ. ಎಲ್ಲವೂ ಶಿವನ ಪ್ರಸಾದವೆಂದು ಗುರುಲಿಂಗ-ಜಂಗಮ ಪ್ರಸಾದವನ್ನು ಸ್ವೀಕರಿಸುತ್ತಾ ಪ್ರಸನ್ನಭಾವದಿಂದ ಶಿವಯೋಗಸಾಧಕನಾಗುತ್ತಾನೆ. ಜಾಗ್ರತ್-ಸ್ವಪ್ನ-ಸುಷುಪ್ತಿಗಳಲ್ಲಿ ನಾನು-ನನ್ನದು ಎಂಬ ಅಹಂಕಾರ-ಮಮಕಾರಗಳನ್ನು ತಾಳದೆ ಎಲ್ಲವೂ ಶಿವಪ್ರಸಾದವೆಂಬ ಭಾವನೆಯನ್ನು ಸದಾ ಎಚ್ಚರಿಕೆಯಿಂದ ಪಾಲಿಸುವ ಅವನ ಭಕ್ತಿಗೆ ಅವಧಾನಭಕ್ತಿ ಯೆಂಬುದು ಅನ್ವರ್ಥವಾದ ಹೆಸರು. ಅವನ ಅವಧಾನಭಕ್ತಿಯು ಪರಿಣಮಿಸಿ ಶಿವಯೋಗ ಸಾಧನೆಯಿಂದ ಅಂತರ್ಲಿಂಗಾನುಸಂಧಾನವು ಸ್ಥಿರವಾದಾಗ ಪ್ರಾಣಲಿಂಗಿಸ್ಥಲದ ನೆಲೆ. ಅದರಲ್ಲಿ ಅಂತರ್ಲಿಂಗಾನುಸಂಧಾನದ ಮೂಲಕ ಪ್ರಾಣಲಿಂಗವನ್ನು ಜ್ಯೋತಿಸ್ಸ್ವರೂಪದಲ್ಲಿ ಪರಿಭಾವಿಸಿ ಕ್ಷಮಾ, ವಿವೇಕ, ಸತ್ಯ, ವೈರಾಗ್ಯ ಮುಂತಾದ ಭಾವ ವಸ್ತುಗಳಿಂದ ಪೂಜಿಸುವುದು ಪ್ರಾಣಲಿಂಗಿಯ ವೈಶಿಷ್ಟ್ಯ. ಇದಕ್ಕೆ ಸದಾ ಅನುಭಾವಸಾಧನೆ ಆಧಾರವಾದ್ದರಿಂದ ಅವನ ಭಕ್ತಿಯು ಅನುಭಾವಭಕ್ತಿ. ಅನುಭಾವ ಬಲಿತಂತೆ ಜೀವಭಾವದ ಪರದೆಗಳು ಕಳಚಿ ಶಿವಭಾವದೊಂದಿಗೆ ಸಖ್ಯ ಮತ್ತು ಸರ್ವಾರ್ಪಣಭಾವಗಳು ಸಹಜವೆಂಬಂತೆ ಮೂಡುತ್ತವೆ. ಆಗ ಅವನು ಶರಣಸ್ಥಲದ ನೆಲೆಯನ್ನು ಹೊಂದುತ್ತಾನೆ. ಇಷ್ಟಲಿಂಗದಲ್ಲಿ ದೃಷ್ಟಿಯೋಗ ಸಾಧನೆಯಿಂದ ಪಡೆದುಕೊಂಡ ಅಂತರ್ಲಿಂಗಾನುಸಂಧಾನ-ಪ್ರಾಣಲಿಂಗಪೂಜೆಯ ಮೂಲಕ 'ಶಿವನು ಪತಿ-ಶರಣ ಸತಿ' ಭಾವದ ಸುಖವನ್ನು ಅನುಭವಿಸುವುದು ಶರಣನ ವೈಶಿಷ್ಟ್ಯ. ಅವನ ಭಾವ ಆನಂದವಲ್ಲದೆ ಬೇರೇನೂ ಅಲ್ಲವಾದ್ದರಿಂದ ಅವನದು ಆನಂದಭಕ್ತಿ. ಆ ಆನಂದಭಕ್ತಿಯ ಪರಿಪಾಕದಿಂದ ಸಾಧಿಸದ ಶಿವಯೋಗದಲ್ಲಿ ಐಕ್ಯಾನುಸಂಧಾನವೇರ್ಪಟ್ಟಾಗ ಅದೇ ಐಕ್ಯಸ್ಥಲದ ನೆಲೆ; ಅದೇ ಜೀವನ್ಮುಕ್ತ

ಸ್ಥಿತಿ. ಅಂತರ್ಲಿಂಗಾನುಸಂಧಾನ ಪೂರ್ವಕವಾಗಿ ಇಷ್ಟಲಿಂಗ ಪೂಜೆಯಲ್ಲಿ ಮಗ್ನನಾಗಿದ್ದರೂ 'ಶಿವೋSಹಂ' ಭಾವದಲ್ಲಿ ಸ್ಥಿರನಾಗಿ ಸಮರಸಾತ್ಮಕ ಐಕ್ಯಸ್ಥಿತಿಯಲ್ಲಿದ್ದು ನೀರಿನಲ್ಲಿ ಕಮಲದೆಲೆಯಂತೆ ನಿರ್ಲಿಪ್ತನಾಗಿರುವನು. ಅವನ ಭಕ್ತಿಯು ಸಮರಸಭಕ್ತಿ. ಆ ಸಾಮರಸ್ಯ ರೂಪದ ಐಕ್ಯದ ಸುಂದರ ವರ್ಣನೆ ಹೀಗಿದೆ.

ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಮ್।
ಪರೇ ಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ॥
(ಸಿದ್ಧಾಂತಶಿಖಾಮಣಿ, ೨೦.೬೧)

ನೀರಿನಲ್ಲಿ ನೀರು ಬೆರೆತಂತೆ, ಬೆಂಕಿಯಲ್ಲಿ ಬೆಂಕಿ ಕಲೆತಂತೆ, ಪರಬ್ರಹ್ಮನಲ್ಲಿ ಲೀನನಾದ ಆತ್ಮನು ಬೇರೆಯಾಗಿ ಗೋಚರಿಸುವುದಿಲ್ಲ. ಈ ದೃಷ್ಟಾಂತಗಳು ಧ್ವನಿಸುವಂತೆ ಶಿವೈಕ್ಯವು ಸಮಾನ ಸಮರಸರೂಪವಾದುದು, ಸ್ವರೂಪದ ವೃದ್ಧಿ-ಕ್ಷಯನಿಮಿತ್ತವಾದ ಏಕಭಾವವಲ್ಲ. ಈ ಮುಕ್ತಿಯ ಸ್ವರೂಪವೆಂದರೆ ಆನಂದಮಯತ್ವ.

ಚಿತ್ತವೃತ್ತಿಸಮಾಲೀನಜಗತಃ ಶಿವಯೋಗಿನಃ।
ಶಿವಾನಂದಪರಿಸ್ಫೂರ್ತಿರ್ಮುಕ್ತಿರಿತ್ಯಭಿಧೀಯತೇ॥
(ಸಿದ್ಧಾಂತಶಿಖಾಮಣಿ, ೧೪.೧೫)

ಪ್ರಪಂಚವಿಷಯಕವಾದ ಅರಿವನ್ನೆಲ್ಲಾ ತನ್ನ ಚಿತ್ತದಲ್ಲಿ ಲಯಗೊಳಿಸಿಕೊಂಡ ಶಿವಯೋಗಿಗೆ ಯಾವ ಶಿವಾನಂದದ ಪರಿಸ್ಫೂರ್ತಿಯಿದೆಯೋ ಅದೇ ಮುಕ್ತಿ.

ಆಕರಗಳು

೧. ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ, ಸೂಕ್ಷ್ಮಾಗಮ, ಇತ್ಯಾದಿ), ಮೈಸೂರು ಪಂಚಾಚಾರ್ಯ ಪ್ರೆಸ್.೧೯೪೨.

೨. ಸಿದ್ಧಾಂತಶಿಖಾಮಣಿ, ವೀರಶೈವ ಸಾಹಿತ್ಯ ಸಂಶೋಧನ ಮಂಡಲಿ, ಸೋಲಾಪುರ, ೧೯೯೦.

೩. ಶ್ರೀಕರಭಾಷ್ಯ. ಓ.ಆರ್.ಐ, ಮೈಸೂರು, ೧೯೭೭, ಭಾಗ ೧,೨

೪. ಬೃಹದಾರಣ್ಯಕೋಪನಿಷತ್. ರಾಮಕೃಷ್ಣಾಶ್ರಮ ಆವೃತ್ತಿ.

೫. ಛಾಂದೋಗ್ಯೋಪನಿಷತ್. ರಾಮಕೃಷ್ಣಾಶ್ರಮ ಆವೃತ್ತಿ.

೬. ಋಗ್ವೇದ. ೧೦ ನೇ ಮಂಡಲ, ಪುಣೆ ವೈದಿಕ ಸಂಶೋಧನ ಮಂಡಲ ಆವೃತ್ತಿ.

೭. ಐತರೇಯೋಪನಿಷತ್, ಶಂಕರಭಾಷ್ಯ ಸಹಿತ.

೮. ತೈತ್ತಿರೀಯೋಪನಿಷತ್, ರಾಮಕೃಷ್ಣಾಶ್ರಮ ಆವೃತ್ತಿ.

೯. ಶ್ವೇತಾಶ್ವತರೋಪನಿಷತ್, ಅಡ್ಯಾರ್ ಥಿಯೋಸೋಫಿಕಲ್ ಸೊಸೈಟಿ ಆವೃತ್ತಿ.

೧೦. ಬ್ರಹ್ಮಸೂತ್ರ, ಶಂಕರಭಾಷ್ಯ ಸಹಿತ.

೧೧. ಮೃಗೇಂದ್ರಾಗಮ.

೧೨. ಮುಂಡಕೋಪನಿಷತ್ ರಾಮಕೃಷ್ಣಾಶ್ರಮ ಆವೃತ್ತಿ.

೧೩. ಅನುಭವಸೂತ್ರ (ಮೊಗ್ಗೆಯ ಮಾಯಿದೇವ ಕೃತ), ಓ.ಆರ್.ಐ. ಮೈಸೂರು೧೯೮೩.

೧೪. ಭಗವದ್ಗೀತೆ.

೧೫. ಕೈವಲ್ಯಸಾರ (ಮರಿತೋಂಟದಾರ್ಯ ಕೃತ), ಓ.ಆರ್.ಐ. ಮೈಸೂರು, ೧೯೮೮.

***

ದ್ವೈತದರ್ಶನ

-ಜಿ. ಗುರುವೆಂಕಟಾಚಾರ್ಯ

ಅಧ್ಯಾತ್ಮ ಚಿಂತನಾಸಂಪತ್ತಿನ ಖನಿ ಎನಿಸಿದ ಪವಿತ್ರವಾದ ಈ ಭಾರತ ಭೂಮಿಯಲ್ಲಿ ಕರ್ನಾಟಕ ಪ್ರಾಂತದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಡುಪಿಯ ಬಳಿ ಇರುವ ಪಾಜಕ ಕ್ಷೇತ್ರದಲ್ಲಿ ಕ್ರಿ.ಶ. ೧೨೩೮ರಲ್ಲಿ ಅವತರಿಸಿದ ಮಹಾತತ್ತ್ವಜ್ಞಾನಿಗಳು ಶ್ರೀಮನ್ ಮಧ್ವಾಚಾರ್ಯರು. ಜಗತ್ ಪ್ರಾಣನಾದ ಶ್ರೀ ಮುಖ್ಯಪ್ರಾಣನೇ ಶ್ರೀ ಹರಿಯಾಜ್ಞೆಯಂತೆ ಭೂಮಿಯಲ್ಲಿ ಅವತರಿಸಿದ. ತಂದೆ ಮಧ್ಯಗೇಹ ಭಟ್ಟರು 'ವಾಸುದೇವ' ಎಂದು ನಾಮಕರಣ ಮಾಡಿದರು.

ಬಾಲ್ಯದಿಂದಲೂ ಅಧ್ಯಾತ್ಮ ಚಿಂತನೆಯಲ್ಲೇ ತೊಡಗಿದ್ದ ವಟು ವಾಸುದೇವನಿಗೆ ಹನ್ನೊಂದನೆಯ ವಯಸ್ಸಿನಲ್ಲಿ ಅಚ್ಯುತ ಪ್ರೇಕ್ಷಾಚಾರ್ಯರೆಂಬ ಯತಿಗಳಿಂದ ಸಂನ್ಯಾಸ ದೀಕ್ಷೆ ದೊರೆಯಿತು. ಬಳಿಕ 'ಪೂರ್ಣಪ್ರಜ್ಞ'ರೆಂದು ಪ್ರಸಿದ್ಧರಾದರು. ಇವರಿಗೆ ವೇದಾಂತ ಸಾಮ್ರಾಜ್ಯದಲ್ಲಿ ಪಟ್ಟಾಭಿಷೇಕಮಾಡುವಾಗ ಗುರುಗಳು 'ಆನಂದತೀರ್ಥ' ಎಂದು ನಾಮಕರಣ ಮಾಡಿದರು. ಇವರ ತಂದೆತಾಯಿಗಳಿಟ್ಟ ಹೆಸರು ವಾಸುದೇವ. ಸಂನ್ಯಾಸದ ನಾಮ ಪೂರ್ಣಪ್ರಜ್ಞ . ಪಟ್ಟಾಭಿಷೇಕದ ನಾಮ ಆನಂದತೀರ್ಥ. ವೇದದಲ್ಲಿ ಉಲ್ಲಿಖಿತವಾದ ನಾಮ 'ಮಧ್ವ'. ಈ ನಾಮದಿಂದಲೇ ಲೋಕದಲ್ಲಿ ಹೆಚ್ಚು ಪ್ರಸಿದ್ಧರು. ಮಧ್ವ ಎಂಬ ಹೆಸರಿನಿಂದ ಇವರು ರಚಿಸಿದ ಗ್ರಂಥಗಳೇ 'ಸರ್ವಮೂಲ' ಎಂದು ಪ್ರಸಿದ್ಧವಾಗಿವೆ. ಇವರು ಜಗತ್ತಿಗೆ ನೀಡಿದ ದರ್ಶನವೇ 'ದ್ವೈತದರ್ಶನ.'

ಪ್ರಮಾಣಗಳು

'ಮಾನಾಧೀನಾ ಮೇಯಸಿದ್ಧಿಃ' ಎಂಬ ನಿಯಮದಂತೆ ಯಾವುದೇ ಪ್ರಮೇಯವನ್ನು ನಿರ್ಧರಿಸಲು ಪ್ರಮಾಣಗಳು ಅತ್ಯಾವಶ್ಯಕ. ದ್ವೈತಸಿದ್ಧಾಂತದಲ್ಲಿ ಪ್ರತ್ಯಕ್ಷ ಅನುಮಾನ ಆಗಮ ಎಂದು ಪ್ರಮಾಣಗಳು ಮೂರು. ಪ್ರತ್ಯಕ್ಷವು ಐಂದ್ರಿಯಿಕ ಅಂದರೆ ಇಂದ್ರಿಯ ಗೋಚರವಾದ ವಿಷಯಗಳನ್ನು ಮಾತ್ರ ತಿಳಿಸುತ್ತದೆ. ಅನುಮಾನಾಗಮಗಳು ಐಂದ್ರಿಯಿಕ ಮತ್ತು ಅತೀಂದ್ರಿಯ ಪದಾರ್ಥಗಳನ್ನು ತಿಳಿಸಲು ಸಾಧನವಾಗಿವೆ. ಪ್ರತ್ಯಕ್ಷ ಮತ್ತು ಅನುಮಾನಗಳಿಂದ ಪ್ರಮೇಯವನ್ನು ನಿರ್ಧರಿಸುವಾಗ ಅನುಮಾನವು ಅವುಗಳಿಗೆ ಪೂರಕವೂ ಆಗುತ್ತದೆ. ಪ್ರತ್ಯಕ್ಷ ಆಗಮಗಳ ಬೆಂಬಲವಿಲ್ಲದ ಅನುಮಾನ ಮಾತ್ರ ಸ್ವತಂತ್ರವಾಗಿ ಪ್ರಮಾಣವಾಗಲಾರದು. ವೇದವಾದರೂ ಪ್ರತ್ಯಕ್ಷಾನುಭವವಿರುದ್ಧವಾದ ಅರ್ಥದಲ್ಲಿ ಪ್ರಮಾಣವೆನಿಸುವುದಿಲ್ಲ. ಅಂತಹ ಪ್ರಸಂಗದಲ್ಲಿ ವೇದಕ್ಕೇನೇ ಅರ್ಥಾಂತರ ಕಲ್ಪಿಸಬೇಕು.

ಆಗಮ ಎಂದರೆ ನಿರ್ದುಷ್ಟವಾದ ಶಬ್ದ. ಶ್ರುತಿ ಸ್ಮೃತಿ ಇತಿಹಾಸ ಪುರಾಣ

ಆಪ್ತವಾಕ್ಯ ಮೊದಲಾದವುಗಳು ಆಗಮ ಎನಿಸುತ್ತವೆ. ಇವುಗಳಲ್ಲಿ ವೇದವು ಅಪೌರುಷೇಯವಾಗಿ ಅನಾದಿನಿತ್ಯವಾದ್ದರಿಂದ ಪರಮಪ್ರಮಾಣವಾಗಿದೆ. ಭಗವಂತನು ಅನಾದಿನಿತ್ಯ. ಅವನ ಬುದ್ಧಿಯೂ ಅನಾದಿನಿತ್ಯ. ಆ ಬುದ್ಧಿಯಲ್ಲಿ ಸರ್ವದಾ ಗೋಚರವಾಗಿರುವ ವೇದವೂ ಅನಾದಿನಿತ್ಯವೇ ಆಗಿದೆ. ಇಂತಹ ಅಪೌರುಷೇಯ ವೇದದ ಆಧಾರದಿಂದ ಮಾತ್ರ ಭಗವಂತನ ಸ್ವರೂಪವನ್ನು ಧರ್ಮ ಅಧರ್ಮಾದಿಗಳನ್ನು ನಿರ್ಣಯಿಸಲು ಸಾಧ್ಯ. ಇದನ್ನೊಪ್ಪದೇ ಕೇವಲ ಆಯಾ ಮತಪ್ರವರ್ತಕರಾದ ಪೂರ್ವಾಚಾರ್ಯರ ಮಾತಿನಿಂದ ಧರ್ಮಾಧರ್ಮಾದಿಗಳನ್ನು ನಿಶ್ಚಯಿಸಲು ಶಕ್ಯವಿಲ್ಲ. ಬೇರೆ ಬೇರೆ ಮತಾಚಾರ್ಯರು ಪರಸ್ಪರ ವಿರುದ್ಧವಾಗಿ ನಾನಾ ವಿಧವಾಗಿ ತಮ್ಮ ತಮ್ಮ ತತ್ತ್ವಗಳನ್ನು ಮಂಡಿಸುತ್ತಿರುವಾಗ ಯಾವುದು ಗ್ರಾಹ್ಯ ಯಾವುದು ಅಗ್ರಾಹ್ಯವೆಂದು ಗೊಂದಲ ಉಂಟಾಗಿ, ಎಲ್ಲರ ಮಾತಿನಲ್ಲೂ ಅವಿಶ್ವಾಸವೇ ಮೂಡುವುದು. ಈ ಸಮಸ್ಯೆಯ ಪರಿಹಾರಕ್ಕಾಗಿ ಯಾರಿಂದಲೂ ರಚಿತವಾಗದ ಒಂದು ಗ್ರಂಥವನ್ನು ಅಂಗೀಕರಿಸಬೇಕು. ಅದು ಸರ್ವಸಮ್ಮತವಾಗಿ ಧರ್ಮಾಧರ್ಮಾದಿಗಳನ್ನು ನಿರ್ಧರಿಸಲು ಸಹಾಯಕವಾಗುತ್ತದೆ. ಇಷ್ಟು ಮಾತ್ರವಲ್ಲದೇ ವೇದಕ್ಕೆ ಕರ್ತೃ ಯಾರು ಎಂಬ ಪ್ರಸಿದ್ಧಿಯೂ ಇಲ್ಲ. ಆದ್ದರಿಂದ ಆಕಾಶ, ಕಾಲ, ಆತ್ಮ ಮುಂತಾದ ಪದಾರ್ಥಗಳಂತೆ ವೇದವೂ ಅಪೌರುಷೇಯ,- ಅನಾದಿನಿತ್ಯ ಎಂದು ಸಿದ್ಧವಾಗುತ್ತದೆ.

ಪರಮಾತ್ಮ ಸೃಷ್ಟಿಕರ್ತ

ಸಮಗ್ರ ಪ್ರಪಂಚವನ್ನು ನಿಯಂತ್ರಿಸುವ ಚೈತನ್ಯಶಕ್ತಿಯೇ ಪರಮಾತ್ಮ. ಅವನು ಸ್ವತಂತ್ರ ಮತ್ತು ಪರಿಪೂರ್ಣ. ಜಗತ್ತಿನ ಸೃಷ್ಟಿ ಪರಿಪಾಲನೆ ಮೊದಲಾದ ಆತನ ಪ್ರವೃತ್ತಿಯೆಲ್ಲವೂ ಪರಾರ್ಥಪ್ರವೃತ್ತಿ. ಜೀವರು ತಮ್ಮ ತಮ್ಮ ಸಾಧನೆ ಮಾಡಿಕೊಂಡು ತಮ್ಮ ಸ್ವರೂಪದ ಆವಿಷ್ಕಾರವನ್ನು ಪಡೆಯಲಿ ಎಂಬ ಉದ್ದೇಶದಿಂದ ಜೀವರಿಗೆ ಸ್ಥೂಲ ದೇಹಕೊಟ್ಟು ಅವರನ್ನು ಈ ಸಾಧನ ಭೂಮಿಗೆ ಕಳಿಸುತ್ತಾನೆ. ಅವರಿಗಾಗಿ ಈ ಜಡಪ್ರಪಂಚವನ್ನೂ ಸೃಷ್ಟಿಸಿದ್ದಾನೆ. 'ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್.' ತನ್ನ ಅಚಿಂತ್ಯಶಕ್ತಿಯಿಂದ ಅದ್ಭುತವಾದ ಈ ಪ್ರಪಂಚವನ್ನು ನಿರ್ಮಾಣಮಾಡಿ ಅದರ ಕಣ ಕಣಗಳಲ್ಲಿಯೂ ಅದೃಶ್ಯನಾಗಿ ಪ್ರವೇಶಿಸಿ ಅದಕ್ಕೆ ಸತ್ತಾಪ್ರದನಾಗಿದ್ದಾನೆ. ಅವನ ಸನ್ನಿಧಾನದಿಂದಲೇ ಜಡಪ್ರಪಂಚವೂ ಕೂಡ ಅರ್ಥಕ್ರಿಯಾಕಾರಿಯಾಗಿದೆ. ''(ಪ್ರಯೋಜನಕಾರಿಯಾಗಿದೆ)'' ತತ್ ಸೃಷ್ಟ್ವಾ ತದೇವಾನುಪ್ರಾವಿಶತ್.

ಅಂತರ್ಯಾಮಿ

ಎಲ್ಲ ಚೇತನರಲ್ಲಿಯೂ ಅಂತರ್ಯಾಮಿಯಾಗಿದ್ದುಕೊಂಡು ಅವರ ಅಸ್ತಿತ್ವ,

ಜ್ಞಾನ, ಪ್ರವೃತ್ತಿಗಳಿಗೆ ಪ್ರೇರಕನಾಗಿದ್ದಾನೆ. ಪ್ರತಿಯೊಬ್ಬ ಜೀವರ ಅನಾದಿಯಾದ ಯೋಗ್ಯತಾ ಕರ್ಮಗಳನ್ನನುಸರಿಸಿ ಅವರಿಂದ ಕರ್ಮಗಳನ್ನು ಮಾಡಿಸಿ ಸುಖ ದುಃಖ ಹಾಗೂ ಮಿಶ್ರವಾದ ಫಲವನ್ನು ಕೊಡುವನು. ಜೀವರ ಅನಾದಿಯಾದ ಯೋಗ್ಯತೆಯನ್ನು ಅನುಸರಿಸಿಯೇ ಕರ್ಮಗಳನ್ನು ಮಾಡಿಸುವುದರಿಂದ ವೈಷಮ್ಯ ನಿರ್ದಯತೆ ಮುಂತಾದ ದೋಷಗಳಿಂದಲೂ ದೂರನಾಗಿದ್ದಾನೆ.

ಸರ್ವಶಬ್ದ ವಾಚ್ಯ

'**ಯೋ ದೇವಾನಾಂ ನಾಮಧಾ ಏಕ ಏವ**' ಎಂದು ಸನಾತನವಾದ ವೇದವು ಸಾರುವಂತೆ ಬ್ರಹ್ಮ, ರುದ್ರ, ಇಂದ್ರ, ಅಗ್ನಿ, ವರುಣ ಮೊದಲಾದ ಎಲ್ಲ ಹೆಸರುಗಳೂ ಭಗವಂತನದ್ದೇ ಆಗಿವೆ. ಸಮಗ್ರ ವೇದ ವಾಙ್ಮಯವು ಪರಮ ಮುಖ್ಯ ವೃತ್ತಿಯಿಂದ ಭಗವಂತನಿಗೇ ವಾಚಕವಾಗಿದ್ದು ಅವನ ಸ್ತೋತ್ರರೂಪವಾಗಿದೆ. ಆದರೂ ನಾರಾಯಣ ವಿಷ್ಣು ಪರಬ್ರಹ್ಮ ಮೊದಲಾದ ಕೆಲವು ಶಬ್ದಗಳನ್ನು ಬಿಟ್ಟು ರುದ್ರ ಅಗ್ನಿ ಮೊದಲಾದ ಬೇರೆ ಶಬ್ದಗಳೂ ಇತರ ದೇವತೆಗಳನ್ನೂ ಬೋಧಿಸುತ್ತವೆ. ಅದರಂತೆ ಯಜ್ಞಾದಿಕರ್ಮಗಳನ್ನು ಬೋಧಿಸುವ ವಾಕ್ಯಗಳೂ ಕೂಡ ಪರಮ ಮುಖ್ಯವೃತ್ತಿಯಿಂದ ಭಗವಂತನನ್ನು ಬೋಧಿಸಿದರೂ ಕರ್ಮಾದಿಗಳನ್ನು ಬೋಧಿಸುವುದಿಲ್ಲವೆಂದು ಭಾವಿಸಬಾರದು. ಆದ್ದರಿಂದ ಎಲ್ಲ ಲೌಕಿಕ ವ್ಯವಹಾರಗಳಿಗೆ ಏನೂ ಬಾಧಕವಿಲ್ಲ.

ಇಷ್ಟೇ ಅಲ್ಲದೆ ಜಗತ್ತಿನಲ್ಲಿರುವ ಪ್ರತಿಯೊಂದು ವೈದಿಕ ಲೌಕಿಕ ಪದ ವರ್ಣ ಸ್ವರ ಧ್ವನಿಗಳೂ ಕೂಡ ಭಗವದ್ವಾಚಕವಾಗಿವೆ. ಸಮುದ್ರ ಘೋಷ, ಹಲ್ಲಿ ಲೊಚಗುಟ್ಟುವಾಗ, ಮೊಸರು ಕಡಿಯುವಾಗ, ಘಂಟಾನಾದ ಮಾಡುವಾಗ ಉಂಟಾಗುವ ಧ್ವನಿಗಳೂ ಕೂಡ ಭಗವಂತನ ದಿವ್ಯವಾದ ಮಹಿಮೆಯನ್ನು ಕೊಂಡಾಡುತ್ತವೆ.

ಸಗುಣ ಸಾಕಾರ

ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರ ನಿಯಮನ ಜ್ಞಾನ ಅಜ್ಞಾನ ಬಂಧ ಮೋಕ್ಷ ಎಲ್ಲವೂ ಅವನಧೀನ. ಅವನು ನಿರ್ಗುಣ ನಿರಾಕಾರನಲ್ಲ. ಅನಂತ ಕಲ್ಯಾಣಗುಣ ಪೂರ್ಣನೂ ಜ್ಞಾನಾನಂದಮಯವಾದ ಸುಂದರ ಆಕಾರಯುಕ್ತನೂ ನಿರ್ದೋಷನೂ ಆಗಿದ್ದಾನೆ. ಅನಂತಾನಂತ ರೂಪಗಳು ಅವನಿಗಿವೆ. ಅವೆಲ್ಲವೂ ಪರಸ್ಪರ ಅಭಿನ್ನವಾಗಿವೆ. ಆದರೂ'ವಿಶೇಷ'ವೆಂಬ ಶಕ್ತಿಯಿಂದ ಒಂದೊಂದು ರೂಪದಿಂದ ಒಂದೊಂದು ಕಾರ್ಯವು ನಡೆಯುತ್ತದೆ. ಅವನ ಗುಣಕ್ರಿಯಾರೂಪಗಳೂ ಕೂಡ ಅವನಿಂದ ಅಭಿನ್ನವೇ ಆಗಿವೆ. ಅವನು ದೇಶಕಾಲಾತೀತನೂ ಆಗಿದ್ದಾನೆ. ಪ್ರಾಕೃತವಾದ ಆಕಾರಗುಣಗಳು ಅವನಲ್ಲಿಲ್ಲ.

ಆದ್ದರಿಂದ ನಿರಾಕಾರ ನಿರ್ಗುಣ ಎನಿಸಿದ್ದಾನೆ. ಪೂರ್ಣವಾಗಿ ಜ್ಞೇಯನೂ ವಾಚ್ಯನೂ ಅಲ್ಲವಾದ್ದರಿಂದ ಅಜ್ಞೇಯ ಅವಾಚ್ಯ ಎನಿಸಿದ್ದಾನೆ.

ಜೀವಾತ್ಮ

ಚೇತನರಲ್ಲಿ ಲಕ್ಷ್ಮೀನಾರಾಯಣರಿಬ್ಬರು ನಿತ್ಯ ಮುಕ್ತರು. ಆ ದಂಪತಿಗಳಿಗೆ ಸಂಸಾರ ಬಂಧನವಿಲ್ಲ. ಅವರಿಬ್ಬರನ್ನು ಬಿಟ್ಟು ಉಳಿದವರೆಲ್ಲರೂ ಜೀವರೆನಿಸುವರು. ಜೀವರು ಸಂಸಾರ ಬದ್ಧರೂ ಪರಿಮಾಣತಃ ಅಣುಸ್ವರೂಪರೂ ಆಗಿದ್ದಾರೆ. ಜೀವರ ಸಂಖ್ಯೆ ಅಪರಿಮಿತ. ಪರಮಾಣು ಪ್ರದೇಶದಲ್ಲಿಯೂ ಅನಂತ ಜೀವರಿದ್ದಾರೆ. ಶರೀರ ಇಂದ್ರಿಯಗಳೇ ಜೀವರಲ್ಲ. ಜೀವರು ಶರೀರೇಂದ್ರಿಯಾದಿಗಳಿಗಿಂತ ಭಿನ್ನರಾಗಿ ಅನಾದಿ ನಿತ್ಯರಾಗಿದ್ದಾರೆ. ಜೀವರ ಹುಟ್ಟು ಸಾವು ಎಂದರೆ ಸ್ಥೂಲ ಶರೀರದ ಸಂಯೋಗ ವಿಯೋಗಗಳೇ ಆಗಿವೆ. ಜೀವಾತ್ಮರೂ ಅಣುಸ್ವರೂಪರಾದರೂ ಕರಚರಣಾದಿ ಅವಯವಗಳನ್ನು ಹೊಂದಿ ಸಾಕಾರರಾಗಿದ್ದಾರೆ. ಪ್ರತಿಯೊಬ್ಬ ಜೀವಾತ್ಮನ ಸ್ವರೂಪದೊಳಗೆ ಆಯಾಯ ಆಕಾರದಿಂದ ಪರಮಾತ್ಮನು ಬಿಂಬಸ್ವರೂಪನಾಗಿದ್ದಾನೆ. ಆದ್ದರಿಂದಲೇ ಜೀವರೆಲ್ಲರೂ ಪರಮಾತ್ಮನಿಗೆ ಪ್ರತಿಬಿಂಬರೆನಿಸುವರು. ನಮ್ಮ ದೇಹದ ನೆರಳು ನಮ್ಮಧೀನವಾಗಿದ್ದಂತೆ ಪ್ರತಿಯೊಬ್ಬ ಜೀವರೂ ಪರಮಾತ್ಮನಿಗೆ ಅಧೀನರು.

ತಾರತಮ್ಯ

ಜೀವರೆಲ್ಲರೂ ಪರಸ್ಪರ ಭಿನ್ನರು. ಒಬ್ಬರಂತೆ ಒಬ್ಬರಿಲ್ಲ. ಸ್ವರೂಪದಿಂದಲೇ ನಾನಾ ವಿಧವಾದ ವೈಚಿತ್ರ್ಯದಿಂದ ಕೂಡಿದವರಾಗಿ ತಾರತಮ್ಯೋಪೇತರಾಗಿದ್ದಾರೆ. ಈ ತಾರತಮ್ಯವು ಸ್ವರೂಪಗತವಾಗಿ ಅನಾದಿನಿತ್ಯವೇ ಆಗಿದೆ ಹೊರತು ಭಗವಂತನಿಂದ ಮಾಡಲ್ಪಟ್ಟದ್ದಲ್ಲ. ಆದ್ದರಿಂದಲೇ ಎಲ್ಲ ಜೀವರು ಮುಕ್ತಿಯನ್ನು ಪಡೆದಾಗಲೂ ತಾರತಮ್ಯಮುಕ್ತರಾಗಿಯೇ ಇರುತ್ತಾರೆ. ಆದರೂ ಪ್ರತಿಯೊಬ್ಬ ಮುಕ್ತ ಜೀವನು ತನ್ನ ಯೋಗ್ಯತಾನುಸಾರ ಪರಿಪೂರ್ಣತೆಯನ್ನು ಪಡೆಯುವುದರಿಂದ ತಾರತಮ್ಯವಿದ್ದರೂ ಅಪೂರ್ಣತೆ ಇರುವುದಿಲ್ಲವಾದ್ದರಿಂದ ದ್ವೇಷಾಸೂಯೆಗಳಿಗೆ ಅಲ್ಲಿ ಅವಕಾಶವಿಲ್ಲ. ಜೀವಾತ್ಮರು ಸ್ವರೂಪತಃ ಸಾತ್ತ್ವಿಕ ರಾಜಸ ತಾಮಸ ಎಂದು ಮೂರು ವಿಧ. ಸಾತ್ವಿಕರು ಮುಕ್ತಿಯೋಗ್ಯರು. ರಾಜಸರು ನಿತ್ಯ ಸಂಸಾರಿಗಳು. ತಾಮಸರು ತಮೋಯೋಗ್ಯರು. ಸ್ಥೂಲದೇಹ ಪಡೆದು ಸಂಸಾರಕ್ಕೆ ಬಂದ ಜೀವರು ತಮ್ಮ ತಮ್ಮ ಸಾಧನೆ ಮಾಡಿಕೊಂಡು ಅದಕ್ಕನುಗುಣವಾದ ಫಲವನ್ನು ಪಡೆಯುವರು.

ಜಗತ್ತು

ಜೀವಾತ್ಮರ ಸಾಧನೆಗೋಸ್ಕರವಾಗಿಯೇ ಭಗವಂತನು ಈ ಜಗತ್ತನ್ನು ಸೃಷ್ಟಿಸಿದ್ದಾನೆ. ಜೀವರಂತೆ ಈ ಜಡಪ್ರಪಂಚವು ಅನಾದಿನಿತ್ಯವಲ್ಲ. ಅನಿತ್ಯ, ಆದರೂ ಸತ್ಯ. ಇರುವಷ್ಟು ಕಾಲ ಅರ್ಥಕ್ರಿಯಾಕಾರಿಯಾಗಿರುತ್ತದೆ. ಅಂದರೆ ಜೀವರು ಅದರ ಉಪಯೋಗವನ್ನು ಪಡೆಯಬಹುದು. ಜಗತ್ತಿನಲ್ಲಿ ಎಷ್ಟೋ ಪದಾರ್ಥಗಳು ಅಜ್ಞಾನದಿಂದ ಭ್ರಾಂತಿಕಲ್ಪಿತವಾಗುವುದುಂಟು. ಆದರೆ ಅದರಂತೆ ಎಲ್ಲ ಪದಾರ್ಥಗಳೂ ಭ್ರಾಂತಿಕಲ್ಪಿತವೆನ್ನಲು ಬರುವುದಿಲ್ಲ. ಕೆಲವೊಮ್ಮೆ ದೂರಪ್ರದೇಶದಲ್ಲಿ ಬಿಸಿಲಿನಲ್ಲಿ ಮರುಭೂಮಿಯನ್ನೇ ನೀರೆಂದು ಭ್ರಮಿಸುವುದುಂಟು. ಅಲ್ಲಿ ನೀರು ಸುಳ್ಳು. ಅದರಿಂದ ಬಾಯಾರಿಕೆ ಹೋಗಿ ತೃಪ್ತಿಯಾಗುವುದಿಲ್ಲ. ಆದರೆ ಬೇರೆ ಕಡೆಯಲ್ಲಿ ನೀರಿನ ಜ್ಞಾನ ಬಂದು ಹತ್ತಿರ ಹೋಗಿ ಕುಡಿದು ತೃಪ್ತಿಯಾದಾಗ ಅಲ್ಲಿಯೂ ನೀರು ಸುಳ್ಳು ಎಂದು ಹೇಳುವುದು ಸಾಹಸದ ಮಾತಾದೀತು. ಆದ್ದರಿಂದ ಅರ್ಥಕ್ರಿಯಾಕಾರಿಯಾದ ಈ ಪ್ರಪಂಚವು ಸತ್ಯವೆಂದು ಭಾವಿಸಬೇಕು. ಬ್ರಹ್ಮನೂ ಸತ್ಯ. ಜೀವಜಡಾತ್ಮಕವಾದ ಈ ಜಗತ್ತೂ ಸತ್ಯವೆಂದು ಎರಡು ಸತ್ಯಗಳನ್ನು ಸಾರಿದ ವೇದಾಂತವೇ ದ್ವೈತವೇದಾಂತ.

‘**ಜಗಚ್ಚ ಜಗತೀನಾಥಃ ದ್ವಾವೇತೌ ನಿಯತೌ ಸದಾ**’.

ಈ ಜಡ ಪ್ರಪಂಚವೂ ನಾನಾ ವಿಧವಾಗಿದೆ. ಒಂದು ಜಡದಂತೆ ಮತ್ತೊಂದಿಲ್ಲ.

ಮೋಕ್ಷ ಸ್ವರೂಪ

ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಮೋಕ್ಷವು ಪರಮಪುರುಷಾರ್ಥವೆನಿಸಿದೆ. ಜ್ಞಾನಾನಂದಸ್ವರೂಪರಾದ ಜೀವರು ಅಜ್ಞಾನಾದಿ ಆವರಣದಿಂದಾಗಿ ತಮ್ಮದೇ ಆದ ಸುಖಸ್ವರೂಪವನ್ನು ಅನುಭವಿಸದೇ ಸಂಸಾರದಲ್ಲಿ ದುಃಖಿಗಳಾಗುವರು. ಭಗವಂತನ ಪ್ರಸಾದದಿಂದಾಗಿ ಆವರಣಗಳನ್ನು ಕಳಚಿಕೊಂಡು ತಮ್ಮ ಸ್ವರೂಪದ ಆವಿಷ್ಕಾರವನ್ನು ಪಡೆದು ದುಃಖಲೇಶವೂ ಇಲ್ಲದ ಸ್ವರೂಪಸುಖವನ್ನು ಅನುಭವಿಸುವುದೇ ಮುಕ್ತಿ ಎನಿಸಿದೆ. ‘**ಮುಕ್ತಿರ್ಹಿತ್ವಾಽನ್ಯಥಾ ರೂಪಂ ಸ್ವರೂಪೇಣ ವ್ಯವಸ್ಥಿತಿಃ**।’ ಮುಕ್ತರಾದ ಯಾವ ಜೀವರಿಗೂ ಅಲ್ಲಿ ಭಗವಂತನ ಇಚ್ಛೆಗೆ ವಿರುದ್ಧವಾದ ಇಚ್ಛೆಯೇ ಉಂಟಾಗುವುದಿಲ್ಲ. ಎಲ್ಲರೂ ಅಲ್ಲಿ ಭಗವದಧೀನವಾಗಿ ಸತ್ಯಕಾಮರೇ ಆಗುವುದರಿಂದ ದುಃಖಲೇಶಕ್ಕೂ ಅಲ್ಲಿ ಅವಕಾಶವಿರುವುದಿಲ್ಲ.

ಮೋಕ್ಷಸಾಧನ

ಬಂಧನವು ಭಗವಂತನಿಗೆ ಅಧೀನವಾಗಿರುವುದರಿಂದ ಮೋಕ್ಷವೂ ಕೂಡ ಅವನಧೀನವೇ ಆಗಿದೆ. ನಮ್ಮನ್ನು ಸಂಸಾರ ಬಂಧನದಲ್ಲಿಟ್ಟ ಭಗವಂತನ ಮಹಿಮೆಯನ್ನರಿತು ಭಕ್ತಿಯಿಂದ ಸ್ತೋತ್ರಗೈದು ಅವನನ್ನು ಪ್ರಸನ್ನಗೊಳಿಸಬೇಕು. ಅವನ ಪ್ರಸಾದದಿಂದ ಮೋಕ್ಷವನ್ನು ಪಡೆಯಬಹುದು. ಮೋಕ್ಷಹೇತುವಾದ ಭಗವಂತನ ಅತ್ಯರ್ಥಪ್ರಸಾದವನ್ನು ಸಂಪಾದಿಸಲು ವೇದೋಕ್ತಕರ್ಮಾನುಷ್ಠಾನ ನಶ್ವರ ಪ್ರಪಂಚದಲ್ಲಿ ವೈರಾಗ್ಯ ಶ್ರವಣ ಮನನ ಧ್ಯಾನ ಪರೋಕ್ಷಜ್ಞಾನ ಅಪರೋಕ್ಷಜ್ಞಾನ ಗುರುಪ್ರಸಾದ ಮೊದಲಾದ ಸಾಧನ ಸೋಪಾನವನ್ನೇರಬೇಕು. ವೇದೋಕ್ತ ಕರ್ಮಾನುಷ್ಠಾನದಿಂದ ಕಾಮ ಕ್ರೋಧಾದಿ ಅಂತಃಕರಣದ ಮಲವು ದೂರವಾಗಿ ಅಂತಃಕರಣವು ಶುದ್ಧವಾಗುವುದು. ಶುದ್ಧವಾದ ಅಂತಃಕರಣದಲ್ಲಿ ಸತ್‌ಶಾಸ್ತ್ರಶ್ರವಣಜನ್ಯವಾದ ಪರೋಕ್ಷಜ್ಞಾನವು ಮೂಡುವುದು. ಸಾರಾಸಾರ ವಿವೇಕದಿಂದ ಜಗತ್ತಿನಲ್ಲಿ ವೈರಾಗ್ಯವೂ ಉಂಟಾಗುತ್ತದೆ. ಮನನದಿಂದ ಸಂಶಯ ವಿಪರೀತಜ್ಞಾನವು ದೂರವಾಗಿ ತತ್ತ್ವನಿಶ್ಚಯ ಉಂಟಾಗುತ್ತದೆ. ಹಂತಹಂತವಾಗಿ ಭಕ್ತಿಯೂ ಅಭಿವೃದ್ಧಿಯಾಗುವುದು. ತತ್ಸಹಿತವಾದ ಧ್ಯಾನೋಪಾಸನೆಯಿಂದ ಭಗವಂತನ ದಿವ್ಯರೂಪದ ಸಾಕ್ಷಾತ್ಕಾರವಾಗುವುದು. ಆಗ ಜಗತ್ತಿನಲ್ಲಿ ಪೂರ್ಣವೈರಾಗ್ಯ ತಾಳಿ ಸಾಧಕನು ಭಗವಂತನಲ್ಲಿ ಮೊದಲಿಗಿಂತ ವಿಶಿಷ್ಟವಾದ ಭಕ್ತಿಯನ್ನು ಮಾಡುವನು. ಇದರಿಂದ ಭಗವಂತನು ಮತ್ತು ಅಧಿಕವಾಗಿ ಪ್ರಸನ್ನನಾಗಿ ಭಕ್ತನಾದ ಜೀವನನ್ನು ಸಂಸಾರ ಬಂಧದಿಂದ ಬಿಡಿಸಿ ಮುಕ್ತಿ ಲೋಕದಲ್ಲಿಟ್ಟು ಆನಂದಪಡಿಸುವನು.

***

ಅಭಿವಂದನಾ

ವೈಶೇಷಿಕ ದರ್ಶನ

-ಎಸ್. ವಿ. ಭೀಮಭಟ್

ರಾತ್ರಿ ಕಳೆಯುತ್ತಾ ಬಂದಿದೆ. ಮೂಡಣ ದಿಕ್ಕಿನಲ್ಲಿ ಕೆಂಪು ಕಾಣಿಸಿದೆ. ಹಕ್ಕಿಗಳು ಗೂಡಿನಲ್ಲಿಯೇ ಉದಯರಾಗದ ಇಂಚರವನ್ನು ಹಾಡುತ್ತಿವೆ. ಕಾಡಿನಲ್ಲಿ ಊರಿನಲ್ಲಿ ಯಾವ ಪ್ರಾಣಿಯ ಸಂಚಾರವೂ ಇಲ್ಲ. ಕೆಲವು ಕ್ರೂರಮೃಗಗಳು ತಮ್ಮ ರಾತ್ರಿ ಸಂಚಾರವನ್ನು ಮೊಟಕುಗೊಳಿಸಿ ತಮ್ಮ ವಾಸಸ್ಥಾನಕ್ಕೆ ತಿರುಗುತ್ತಿವೆ. ಇಂತಹ ಸಮಯದಲ್ಲಿ ನದಿ ತೀರದ ಆಶ್ರಮದಿಂದ ಇಳಿವಯಸ್ಸಿಗೆ ಕಾಲಿಟ್ಟಿರುವ ಒಬ್ಬ ಋಷಿಯು ತನ್ನ ಜೋಳಿಗೆಯನ್ನು ಹೆಗಲಿಗೆ ಹಾಕಿಕೊಂಡು ಹೊರ ಹೊರಟನು. ಆಶ್ರಮದ ಹತ್ತಿರದಲ್ಲಿಯೇ ಇದ್ದ ಹೊಲಗಳಿಗೆ ಹೋಗಿ ಅಲ್ಲಿದ್ದ ಹೊಲಗದ್ದೆಗಳಲ್ಲಿ ಕಟಾವು ಆದ ಮೇಲೆ ಮೊದಲೇ ತೆನೆಗಳಿಂದ ಕಳಚಿಬಿದ್ದಿರುವ ಕಾಳುಗಳನ್ನು ಆರಿಸಿ ತನ್ನ ಜೋಳಿಗೆಗೆ ತುಂಬಿಕೊಂಡು ಹಿಂತಿರುಗಿದನು. ಇವನು ಯಾರಿರಬಹುದು? ಇವನೇ ಕಣಾದ ಮಹರ್ಷಿ. ವೈಶೇಷಿಕದರ್ಶನದ ತಂದೆ. ಅವನೇ 'ಉಂಛ' (ಕಾಳುಗಳನ್ನು ಆರಿಸಿಕೊಂಡು ಮಾಡುವ ಜೀವನ) ವೃತ್ತಿಯಿಂದ. ಜೀವಿಸುತ್ತಾ ತನ್ನ ದರ್ಶನವನ್ನು ಕೆಲವು ಮಂದಿ ಶಿಷ್ಯರಿಗೆ ಬೋಧಿಸುತ್ತಾ ಈ ರೀತಿ ಜೀವನ ಮಾಡುತ್ತಿದ್ದನು.

ಈ ಮಹಾನುಭಾವನಿಗೆ ಈ ದರ್ಶನದ ದರ್ಶನಲಾಭ ಹೇಗಾಯಿತು? ಒಂದು ದಿನ ತನ್ನ ಆಶ್ರಮದಲ್ಲಿ ರಾತ್ರಿ ಮಲಗಿದ್ದಾಗ ರಾತ್ರಿ ಸುಮಾರು ೪ ಗಂಟೆಗೆ ಎಚ್ಚರವಾಗಿದ್ದ ತಾಪಸ ಯುವಕನೊಬ್ಬನಿಗೆ ಪ್ರಪಂಚಕ್ಕೆ ತನ್ನ ಏನಾದರೊಂದು ಕೊಡುಗೆಯನ್ನು ಕೊಡಬೇಕೆಂದು ಉತ್ಕಂಠೆಯುಂಟಾಯಿತು. ನೀರವರಾತ್ರಿಯಲ್ಲಿ ಆಶ್ರಮದ ಎದುರಿನ ಅಂಗಳದ ತುದಿ ಅಂಚಿನಲ್ಲಿ ನಕ್ಷತ್ರಗಳನ್ನು ಕತ್ತೆತ್ತಿ ನೋಡುತ್ತಾ ಎತ್ತರದ ಕೈಲಾಸದ ನೆತ್ತಿಯಲ್ಲಿ ನೆಲಸಿರುವ ಭೂತನಾಥನನ್ನು ನೆನೆಯುತ್ತಾ ಕೈ ಮುಗಿಯುತ್ತಾ ಆ ಋಷಿಕುಮಾರನು ಕುಳಿತಿದ್ದಾಗ ಆ ಕಡೆ ವನರಾಚಿಯ ಮಧ್ಯದಲ್ಲಿರುವ ಮರದ ಕಡೆಯಿಂದ ಉಹೂಂ ಉಹೂಂ ಎಂದು ಗೂಬೆಯೊಂದರ ಪೂತ್ಕಾರಕೇಳಿಸಿತು. ಏಳು ಬಾರಿ ಕೇಳಿಸಿದ ಈ ನಾದವು ದ್ರವ್ಯಂ ಗುಣಃ ಕರ್ಮ, ಸಾಮಾನ್ಯಂ, ವಿಶೇಷಃ ಸಮವಾಯಃ ಅಭಾವಃ ಎಂದೇ ಆ ತಾಪಸಕುಮಾರನಿಗೆ ಕೇಳಿಸಿತಂತೆ. ಪ್ರಪಂಚಕ್ಕೆ ಮೂಲವಾದ ಪದಾರ್ಥಗಳು ಈ ಏಳು. ಇವುಗಳ ತತ್ತ್ವಜ್ಞಾನದಿಂದ ಅಮೃತತತ್ವಪ್ರಾಪ್ತಿಯಾಗುತ್ತದೆ ಎಂದು ಆಯುವ ತಾಪಸನು ಭಾವಿಸಿ ಅನಂತರ ಆ ಏಳು ಪದಾರ್ಥಗಳ ವಿಮರ್ಶಾತ್ಮಕವಾದ ವೈಶೇಷಸೂತ್ರಗಳನ್ನು ಬರೆದನು. ಅನಂತರ ಅವುಗಳ ಅಧ್ಯಾಪನ ಮಾಡಿಸುತ್ತಾ ಕಾಲಕಳೆದನು ಎಂದು ಮತ್ತೊಂದು ಮನೋರಂಜಕವಾದ ಕಥೆಯಿದೆ. ಅವನೇ ಈಗ ವೃದ್ಧತಾಪಸನು. ಹೀಗೆ ಉಲೂಕದ ಮೂಲಕವಾಗಿ ಈ ದರ್ಶನದ ಪ್ರಥಮೋಪದೇಶಬಂದಿರುವುದರಿಂದ

ಇದನ್ನು ಔಲೂಕ್ಯದರ್ಶನವೆಂದು ಕರೆದಿದ್ದಾರೆ ಎಂಬ ದಂತಕಥೆಗಳು ಬಾಲಮನೋರಂಜಕವಾಗಿ ಹರಡಿವೆ.

ಪಾಣಿನೀಯದರ್ಶನವು (ಅಷ್ಟಾಧ್ಯಾಯಿ ಸೂತ್ರಗಳು) ಈಶ್ವರನ ಡಮರುಗನಾದ ಮೂಲಕವಾಗಿ ಬಂದವು ಎಂಬ ಪ್ರಸಿದ್ಧಿಯನ್ನು ಅನುಸರಿಸಿ ಯಾರೋ ಈ ಕಥೆಯನ್ನು ಕಟ್ಟಿರಬಹುದು ಎಂದೂ ತೋರುತ್ತಿದೆ.

ವೈಶೇಷಿಕ ಸೂತ್ರಗಳ ಪ್ರಶಸ್ತ ಭಾಷ್ಯದ ಕೊನೆಯಲ್ಲಿ ಯೋಗಾಚಾರ ವಿಭೂತ್ಯಾಯಃ ತೋಷಯಿತ್ವಾಮಹೇಶ್ವರಂ। ಚಕ್ರೇವೈಶೇಷಿಕಂ ಶಾಸ್ತ್ರಂ ತಸ್ಮೈಕಣಭುಜೇನಮಃ॥ ಎಂದು ಅಂತಿಮಶ್ಲೋಕವಿದೆ. ಇದನ್ನು ಮನಸ್ಸಿನಲ್ಲಿ ಇಟ್ಟುಕೊಡು ಯಾರೋ ಈ ಎರಡು ಕಥೆಗಳನ್ನು ಕಲ್ಪಿಸಿರಬಹುದು ಎಂದು ಹೇಳಲೂ ಅವಕಾಶವಿದೆ. ಆದರೆ ಈ ದರ್ಶನದ ಮೂಲಋಷಿಯ ಗದ್ದೆಯಲ್ಲಿಬಿದ್ದಿರುವ ಕಣಗಳನ್ನು ಆರಿಸಿ ಜೀವನ ಮಾಡುತ್ತಿದ್ದನು ಎಂಬ ಕಥೆಯು ಸರ್ವಥಾ ಸುಳ್ಳೆಂದು ಹೇಳಲು ಬರುವುದಿಲ್ಲ. ಹಿಂದಿನ ನಮ್ಮ ಋಷಿಗಳ ಜೀವನವು ಹೀಗೆಯೇ ಇತ್ತೆಂದು ನಾವು ಪರಂಪರೆಯಿಂದ ಕೇಳುತ್ತಿದ್ದೇವೆ. ಇದರಿಂದಾಗಿ ಈ ದರ್ಶನವನ್ನು ಕಣಾದದರ್ಶನ ಎಂದು ಹೇಳುವುದು ಸರಿಯೆಂದು ನಾವು ತಿಳಿಯಬಹುದು.

'ವೈಶೇಷಿಕಃ ಸ್ಯಾದೌಲೂಕ್ಯಃ' ಎಂದು ಅಮರಕೋಶದ ಬ್ರಹ್ಮವರ್ಗದಲ್ಲಿ ಈ ದರ್ಶನವನ್ನು ಅಧ್ಯಯನ ಮಾಡುವವನಿಗೆ ಎರಡು ಹೆಸರುಗಳನ್ನು ಹೇಳಿದ್ದಾರೆ. ಔಲೂಕ್ಯ ಎಂಬ ಹೆಸರನ್ನೇ ಇಟ್ಟುಕೊಂಡು ನೈಷಧೀಯಚರಿತದಲ್ಲಿ ಶ್ರೀ ಹರ್ಷನು. **ಧ್ವಾಂತಸ್ಯ ವಾಮೋರು ವಿಚಾರಣಾಯಾಂ ವೈಶೇಷಿಕಂ ಚಾರು ಮತಾ ಮತಂ ಮೇ। ಔಲೂಕ್ಯಮಾಹುಃ-** ಸುಂದರಾಂಗಿ! ಕತ್ತಲೆಯ ತತ್ತ್ವವನ್ನು ವಿಮರ್ಶಿಸಲು ವೈಶೇಷಿಕ ಮತವೇ ಸರಿಯಾಗಿದೆ. ಏತಕ್ಕೆಂದರೆ ಗೂಬೆಯು ರಾತ್ರಿ ಸಂಚಾರಿಯು. ಅದಕ್ಕೆ ಕತ್ತಲೆಯಲ್ಲಿಯೂ ಕಣ್ಣು ಕಾಣಿಸುವುದರಿಂದ ಕತ್ತಲೆಯ ಸ್ವರೂಪವನ್ನು ನಿರ್ಧರಿಸಲು ಉಲೂಕವೇ (ಗೂಬೆಯೇ) ಸಮರ್ಥವಾದುದರಿಂದ ಉಲೂಕದ ಮೂಲಕ ಬಂದ ಈ ವೈಶೇಷಿಕದಾರ್ಶನಿಕರಿಗೆ ಕತ್ತಲೆಯ ತತ್ವವನ್ನು ಕಂಡು ಹಿಡಿಯಲು ನಿಜವಾದ ಯೋಗ್ಯತೆಯಿದೆ ಎಂದು ಶ್ರೀ ಹರ್ಷನು ಹೇಳಿದ್ದಾನೆ. ವೈಶೇಷಿಕರು ತೇಜಸ್ಸಿನ ಅಭಾವವೇ ತಮಸ್ಸು ಎಂದು ಹೇಳುತ್ತಾರೆ. ಇದನ್ನು ನಿರ್ಧರಿಸಲು ತೇಜಸ್ಸು ಇರುವಾಗ ಹಗಲಲ್ಲಿ ಕಣ್ಣು ಕಾಣಿಸದ ಕತ್ತಲೆಯಲ್ಲಿಯೇ ಓಡಾಡುವ ಉಲೂಕವೇ ಸಮರ್ಥ ಎಂದು ಕವಿಯು ಈ ದರ್ಶನವನ್ನು ಹಾಸ್ಯಮಾಡಿದ್ದಾನೆಂದು ತೋರುತ್ತಿದೆ.

ಮಹರ್ಷಿಕಣಾದರೂ ಉಲೂಕನೆಂಬ ಋಷಿಯ ವಂಶದಲ್ಲಿ ಹುಟ್ಟಿದವರೆಂದು ಹೇಳುತ್ತಾರೆ. ಆದುದರಿಂದ ಇವರ ದರ್ಶನಕ್ಕೆ ಔಲೂಕ್ಯ ದರ್ಶನ ಎಂಬ ಹೆಸರು ಬಂತು ಎಂದು ಹೇಳುವುದೇ ಸಮುಚಿತವಾಗಿದೆ ಎಂದೂ ಅಭಿಪ್ರಾಯ.

ಈ ದರ್ಶನಕ್ಕೆ ವೈಶೇಷಿಕ ದರ್ಶನ ಎಂಬ ಹೆಸರೂ ಇದೆ. ಪೃಥಿವೀ, ಜಲ,

ತೇಜಸ್ಸು, ವಾಯು, ಪರಮಾಣುಗಳಲ್ಲಿ ವಿಶೇಷ ಎಂಬ ಪದಾರ್ಥವನ್ನು ಒಪ್ಪಿ ಅವುಗಳಿಗೆ ಪರಸ್ಪರಭೇದವನ್ನು ಸಾಧಿಸುವುದರಿಂದ ಈ ಮತಕ್ಕೆ ವೈಶೀಷಿಕ ದರ್ಶನ ಎಂಬ ಹೆಸರು ಬಂದಿದೆ.

ಬುದ್ಧಿ ಸುಖದುಃಖ ಇಚ್ಛಾದ್ವೇಷ ಪ್ರಯತ್ನ ಧರ್ಮ ಅಧರ್ಮ ಭಾವನಾ ಎಂಬ ಸಂಸ್ಕಾರ ಇವುಗಳೆಲ್ಲವುಗಳ ನಿವೃತ್ತಿಯುಂಟಾಗಿ ಮೋಕ್ಷವುಂಟಾಗುತ್ತದೆ ಎಂದು ವಿಶೇಷ ಗುಣಗಳ ಸಂಬಂಧದ ಬಿಡುಗಡೆಯೇ ಮೋಕ್ಷವೆಂದು ಹೇಳುವುದರಿಂದ ಈ ದರ್ಶನಕ್ಕೆ ವೈಶೇಷಿಕ ದರ್ಶನವೆಂದು ಹೆಸರು ಬಂದಿದೆ ಎಂದೂ ಹೇಳುತ್ತಾರೆ.

ಕಾಣಾದರೂ ವಿಶೇಷ ಎಂಬ ಪದಾರ್ಥದಲ್ಲಿ ವಿಶೇಷವನ್ನು ಒಪ್ಪುವುದಿಲ್ಲ.'ನಿರ್ವಿಶೇಷೋ ವಿಶೇಷಃ' ಎಂಬ ಉಕ್ತಿಯಂತೆ ವಿಗತವಾದ ಶೇಷವುಳ್ಳದ್ದು ವಿಶೇಷವು-ಮತ್ತೊಂದು ಶೇಷ=ವಿಶೇಷಣವು ಇಲ್ಲದ್ದು ಆ ವಿಶೇಷವೇ ವೈಶೇಷಿಕವು.

ಹೀಗೆ ವೇದಾಂತಾದಿದರ್ಶನಕ್ಕಿಂತ ವಿಶೇಷವಾಗಿರುವುದರಿಂದಲೂ ಈ ದರ್ಶನಕ್ಕೆ ವೈಶೇಷಿಕವೆಂದು ಹೆಸರು ಎಂದು ಮತ್ತೊಂದು ವ್ಯಾಖ್ಯೆಯೂ ಇದೆ. ವಿಶೇಷವೆಂದರೆ ಪರಮಾಣು ಎಂಬ ಪದಾರ್ಥ- ಅದರ ತತ್ತ್ವವನ್ನು ವಿಚಾರ ಮಾಡಲು ಹೊರಟಿರುವುದರಿಂದ ಈ ದರ್ಶನಕ್ಕೆ ವೈಶೇಷಿಕದರ್ಶನವೆಂದು ಹೆಸರು ಎಂಬ ವ್ಯಾಖ್ಯೆಯೂ ಇದೆ. ಪರಮಾಣು ಎಂಬ ಪದಾರ್ಥವನ್ನು ಅಂಗೀಕಾರ ಮಾಡಿ ಅದರ ಮೂಲಕವೇ ಜಗತ್ತಿನ ಸೃಷ್ಟಿಯಾಗಿದೆ ಎಂದು ಇವರು ಅಂಗೀಕರಿಸುತ್ತಾರೆ.

ಪರಮಾಣುವನ್ನು ಈಗಿನ ವೈಜ್ಞಾನಿಕರು ಆಟಮ್ ಎನ್ನುತ್ತಾರೆ. ಆಟಂ ಎಂಬ ಪದವು ಆತ್ಮಾ (ಮೂಲತತ್ತ್ವ) ಎಂಬ ಪದದಿಂದ ಉತ್ಪನ್ನವಾಗಿದೆ ಎಂದೂ ಹೇಳುತ್ತಾರೆ. ಈ ವಿಶೇಷವಾದ ಮೂಲತತ್ತ್ವವನ್ನೇ ಈ ಶಾಸ್ತ್ರದಲ್ಲಿ ವಿಮರ್ಶಿಸುವುದರಿಂದ ಈ ಶಾಸ್ತ್ರಕ್ಕೆ ವೈಶೇಷಿಕ ದರ್ಶನವೆಂದು ಹೆಸರು ಬಂದಿದೆ ಎಂದೂ ಅಂಗೀಕರಿಸುತ್ತಾರೆ.

ಈ ವಿಷಯದಲ್ಲಿ ಮನೋರಂಜಕವಾದ ಒಂದು ಕಥೆಯೂ ಇದೆ. ಒಂದು ಆಶ್ರಮದಲ್ಲಿದ್ದ ವೃದ್ಧ ಗುರುವೊಬ್ಬನು ಅಂತಿಮಾವಸ್ಥೆಯಲ್ಲಿದ್ದಾಗ ಅವನ ಬಳಿಗೆ ಅವನ ಎಲ್ಲಾ ಶಿಷ್ಯರು ಅವನ ಸುತ್ತಲೂ ಬಂದು ನಿಂತು ಗುರುಗಳೇ ತಾವು ದೊಡ್ಡಶಾಸ್ತ್ರಜ್ಞರು. ತಮ್ಮ ಕೊನೆಗಳಿಯಲ್ಲಿ ತಮ್ಮ ಉಪದೇಶವೇನು ಎಂದು ಕೇಳಿದರು. ಆ ಗುರುವು 'ಪೀಲವಃ ಪೀಲವಃ ಪೀಲವಃ' ಪರಮಾಣುಗಳು, ಪರಮಾಣುಗಳು ಪರಮಾಣುಗಳು ಎಂದು ಮೂರು ಬಾರಿ ಹೇಳಿ ಪ್ರಾಣಬಿಟ್ಟನಂತೆ. ಅಂದರೆ ಪರಮಾಣು ವಿಚಾರವನ್ನೇ ಸರ್ವದಾ ಮಾಡುತ್ತಿರಬೇಕು. ಇದೇ ನನ್ನ ಉಪದೇಶ' ಎಂದು ಅವರ ಅಂತಿಮ ಸಂದೇಶ ಎಂದು ಅರ್ಥವಾಗುತ್ತಿದೆ. ಈ ಕಥೆಯು ಹೇಗೇ ಇರಬಹುದು. ಆದರೆ ಜಗತ್ಕಾರಣವಾದ ಪರಬ್ರಹ್ಮ ಮತ್ತು ಪ್ರಧಾನದಿಂದ ಜಗತ್ತು ಸೃಷ್ಟಿಯಾಯಿತೆಂದು ಹೇಳುವ ವೇದಾಂತ ಸಾಂಖ್ಯದರ್ಶನಗಳಿಗಿಂತ ಭಿನ್ನವಾಗಿ ಈ ಸಿದ್ಧಾಂತವು ಜಗತ್ಕಾರಣ ವಿಚಾರ ಮಾಡುವುದರಿಂದ

ಇದೊಂದು ವಿಶೇಷ-ದರ್ಶನ. ಆದುದರಿಂದಲೇ ಇದೊಂದು ವೈಶೇಷಿಕ ದರ್ಶನ ಎಂದೂ ಅಭಿಪ್ರಾಯವಿದೆ.

ಅಥಾತೋ ಧರ್ಮಂ ವ್ಯಾಖ್ಯಾಸ್ಯಾಮಃ- ಇದು ವೈಶೇಷಿಕದರ್ಶನದ ಮೊದಲನೆಯ ಸೂತ್ರ. ಶಿಷ್ಯರು ಧರ್ಮವನ್ನು ಹೇಳಿರಿ ಎಂದು ಕೇಳಿದ್ದರಿಂದ ಶ್ರವಣಮನನಪಟುಗಳೂ, ಅಸೂಯಾರಹಿತರೂ ಆದ ಶಿಷ್ಯರಿರುವುದರಿಂದ ಧರ್ಮವನ್ನು ವ್ಯಾಖ್ಯಾನಮಾಡಲಿದ್ದೇನೆ ಎಂದು ಈ ಸೂತ್ರದ ಅರ್ಥ. ಈ ಸೂತ್ರದ ಅಭಿಪ್ರಾಯವನ್ನು ನೋಡಿದಾಗ ಈ ದರ್ಶನವು ಒಂದು ವಿಧವಾದ ಧರ್ಮಶಾಸ್ತ್ರವೆಂದೇ ತೋರುತ್ತದೆ. ಮುಂದೆ ೨ನೆಯ ಸೂತ್ರದಲ್ಲಿ ಯತೋಽಭ್ಯುದಯ ನಿಶ್ರ್ಶೇಯಸಸಿದ್ಧಿಃ ಸಧರ್ಮಃ ಎಂದು ಧರ್ಮಲಕ್ಷ್ಯವನ್ನು ಹೇಳಿದ್ದಾರೆ. ಅಭ್ಯುದಯ ಎಂದರೆ ತತ್ತ್ವಜ್ಞಾನ ಮತ್ತು ಇಹಲೋಕದ ಶ್ರೇಯಸ್ಸು ಇವೆರಡರ ಮೂಲಕವಾಗಿ ನಿಶ್ಶ್ರೇಯಸ ಎಂದರೆ ಆತ್ಯಂತಿಕ ದುಃಖನಿವೃತ್ತಿ- ಕಟ್ಟಕಡೆಯ ದುಃಖ ನಿವೃತ್ತಿ-ಧ್ವಂಸ ಇವು ಯಾವುದರಿಂದ ಆಗುತ್ತವೆಯೋ ಅದೇ ಧರ್ಮವು ಎಂದು ಧರ್ಮದ ಲಕ್ಷಣವನ್ನು ಹೇಳಿದ್ದಾರೆ. ಮೂರನೆಯ ಸೂತ್ರದಲ್ಲಿ ತದ್ವಚನಾದಾಮ್ನಾಯಸ್ಯ ಪ್ರಾಮಾಣ್ಯಂ ಎಂದು ಹೇಳುತ್ತಾ ಈಶ್ವರನು ರಚಿಸಿರುವುದರಿಂದ, ಈಶ್ವರನೇರಚಿಸಿ ಹೇಳಿರುವುದರಿಂದ ವೇದವು ಪ್ರಮಾಣವು, ಅಂತಹ ಪ್ರಮಾಣ ರೂಪವಾದ ವೇದದಲ್ಲಿ ಧರ್ಮವನ್ನು ಹೇಳಿರುವುದರಿಂದ ಧರ್ಮಬೋಧಕವಾದ ವೇದವು ಪ್ರಮಾಣವೆಂದು ಹೇಳಿದ್ದಾರೆ. ಈಶ್ವರನನ್ನು ಸಾಧಿಸಿ, ಅವನು ಆಪ್ತನೆಂದೂ ಸಾಧಿಸಿದ್ದಾರೆ. ಹೀಗಿದ್ದರೂ ಕೂಡ ವೇದ ಮತ್ತು ಈಶ್ವರನನ್ನು ಪ್ರಮಾಣಕೋಟಿಯಲ್ಲಿ ಸೇರಿಸದೆ-ಧರ್ಮಕ್ಕೆ ಪ್ರಾಧಾನ್ಯಕೊಟ್ಟಿರುವುದರಿಂದ ಇವರು'ಅರ್ಧವೈನಾಶಿಕರು' ಎಂದು ಅಪವಾದಕ್ಕೆ ಗುರಿಯಾಗಿದ್ದಾರೆ. ಬೌದ್ಧರು ವೈನಾಶಿಕರು, ಪ್ರತಿಕ್ಷಣವೂ ಪದಾರ್ಥ ಪರಮಾಣುಗಳು ನಾಶವಾಗಿ ಪುನಃ ಬೇರೆ ಪರಮಾಣು ಪದಾರ್ಥಗಳು ಅದೇ ಸ್ಥಳದಲ್ಲಿ ಹುಟ್ಟುತ್ತಿವೆ ಎಂದು ಹೇಳುತ್ತಾರೆ. ಕಾಣಾದರು ಹೀಗೆ ಹೇಳದಿದ್ದರೂ ಪರಮಾಣುಗಳಿಂದಲೇ ಪದಾರ್ಥಗಳು ಹುಟ್ಟುತ್ತವೆ ಎಂದು ಹೇಳುತ್ತಾರೆ. ವಾಸ್ತವವಾಗಿ ಬೌದ್ಧರು ಪರಮಾಣು ಪುಂಜವೇ ಮಡಿಕೆ, ಬಟ್ಟೆ ಮುಂತಾದ ಕಾರ್ಯಗಳೆಂದು ಹೇಳುತ್ತಾರೆ. ಕಾಣಾದರು ಎರಡು ಪರಮಾಣುಗಳು ಸೇರಿ ದ್ವ್ಯಣುಕವಾಗುತ್ತದೆ, ಮೂರು ದ್ವ್ಯಣುಕಗಳಿಂದ ತ್ರ್ಯಣುಕ ಇತ್ಯಾದಿ ಕ್ರಮದಿಂದ ಪ್ರಪಾಚೋತ್ಪತ್ತಿಯನ್ನು ಹೇಳುತ್ತಾರೆ. ಹೀಗೆ ಹೇಳಿದರೂ ಅರ್ಧಬೌದ್ಧತ್ವ ತಪ್ಪಿದ್ದಲ್ಲ ಎಂದು ಇತರ ದಾರ್ಶನಿಕರು ಗೇಲಿ ಮಾಡುತ್ತಾರೆ. ತತ್ತ್ವಜ್ಞಾನವು ಮೋಕ್ಷಕ್ಕೆ ಹೇಯವೆಂದು ಹೇಳಿದ ವಿಷಯವನ್ನು ಸಮರ್ಥಿಸುವುದಕ್ಕಾಗಿ ಮುಂದೆ ನಾಲ್ಕನೆಯ ಸೂತ್ರದಲ್ಲಿ

> **ಧರ್ಮವಿಶೇಷ ಪ್ರಸೂತಾದ್ ದ್ರವ್ಯಗುಣಕರ್ಮ ಸಾಮಾನ್ಯ ವಿಶೇಷ**
> **ಸಮವಾಯಾನಾಂ**
> **ಪದಾರ್ಥಾನಾಂ ಸಾಧರ್ಮ ವೈಧರ್ಮ್ಯಾಭ್ಯಾಂ ತತ್ತ್ವಜ್ಞಾನಾತ್**
> **ನಿಶ್ಶ್ರೇಯಸಾಧಿಗಮಃ'**

ಎಂಬ ಸೂತ್ರದಲ್ಲಿಯೂ ದ್ರವ್ಯಾದಿಪದಾರ್ಥಗಳನ್ನು ವಿವೇಚನೆ ಮಾಡಿದರೆ ಅವುಗಳ ಸಮಾನಧರ್ಮ ಮತ್ತು ವಿರುದ್ಧಧರ್ಮಗಳನ್ನು ತಿಳಿದರೆ ವಿಶೇಷವಾದ ಒಂದು ಧರ್ಮದ(ಪುಣ್ಯದ) ಉತ್ಪತ್ತಿಯಾಗುತ್ತದೆ. ಆ ಧರ್ಮದಿಂದ ತತ್ತ್ವಸಾಕ್ಷಾತ್ಕಾರವಾಗುತ್ತದೆ. ಅದರಿಂದ ನಿಶ್ಶ್ರೇಯಸ ಅಂದರೆ ಮೋಕ್ಷ ಉಂಟಾಗುತ್ತದೆ ಎಂದು ಮೋಕ್ಷಕ್ಕೂ ಧರ್ಮವಿಶೇಷ ಜ್ಞಾನವೇ ಕಾರಣವೆಂದು ಹೇಳುತ್ತಾರೆ. ಹೀಗೆ ಈ ಅಖಂಡವಾದ ವೈಶೇಷಿಕ ಶಾಸ್ತ್ರವು ಒಂದು ಅಧ್ಯಾತ್ಮ ಶಾಸ್ತ್ರದಂತೆ ಕಂಡರೂ ಇಲ್ಲಿ ದ್ರವ್ಯಾದಿ ಪದಾರ್ಥಗಳ ವಿವರಣವನ್ನು ನೋಡಿದಾಗ ಭೌತಶಾಸ್ತ್ರದಂತೆಯೇ ಕಾಣುತ್ತದೆ.

ದ್ರವ್ಯ ಎಂದರೆ ನಮ್ಮ ಕಣ್ಣೆತ್ವಕ್ (ಚರ್ಮದಲ್ಲಿರುವ ಇಂದ್ರಿಯ) ಮತ್ತು ಮನಸ್ಸಿಗೆ ಗೋಚರವಾಗುವ ಪೃಥಿವೀ, ಜಲ, ತೇಜಸ್ಸು, ವಾಯು ಆತ್ಮ ಇವುಗಳನ್ನು ವಿವೇಚನ ಮಾಡುವುದು ಈ ಶಾಸ್ತ್ರದ ಉದ್ದೇಶವಾಗಿದೆ. ಜತೆಗೆ ಇನ್ನೊಬ್ಬರ ಆತ್ಮ, ಆಕಾಶ, ಕಾಲ, ದಿಕ್, ಮನಸ್ಸು ಇವುಗಳನ್ನು ವಿವೇಚಿಸುತ್ತಾರೆ. ಇಲ್ಲಿ ಈ ಪದಾರ್ಥಗಳ ವಿವೇಚನೆಯು ಬಹಳ ಸ್ವಾರಸ್ಯವಾಗಿದೆ. ಯಂತ್ರಗಳ ಸಹಾಯವಿಲ್ಲದೆ, ವಿಶೇಷ ಪ್ರಯೋಗಗಳನ್ನು ಮಾಡದೆ ಈ ಎಲ್ಲಾ ಪದಾರ್ಥಗಳ ಗುಣಧರ್ಮಗಳನ್ನು ವಿವೇಚಿಸುವಾಗ ಆ ಮುನಿಗಳ ಪದಾರ್ಥ ಪ್ರತ್ಯವೇಕ್ಷಣ, ಪರೀಕ್ಷೆ, ಪುನಃಪರೀಕ್ಷೆಗಳು ನಮ್ಮನ್ನು ದಂಗುಗೊಳಿಸುತ್ತವೆ. ಹೀಗೆ ನಮಗೆ ತಿಳಿದುಬರುವ ಮತ್ತು ಅನುಮಾನಕ್ಕೆ ವಿಷಯವಾದ ದ್ರವ್ಯಗಳಗುಣಗಳನ್ನು ಅವುಗಳ ಕ್ರಿಯೆಯನ್ನು ಪರಿಶೀಲಿಸಿ, ಅನಂತರ ಕೇವಲ ಬೌದ್ಧವಾದ ಸಾಮಾನ್ಯ, ವಿಶೇಷ ಮತ್ತು ಸಮವಾಯ ಎಂಬ ಪದಾರ್ಥಗಳ ವಿವೇಚನೆಯನ್ನು ಇಲ್ಲಿ ಮಾಡಲಾಗಿದೆ.

ಇನ್ನು ದ್ರವ್ಯಾದಿಭಿನ್ನವಾದ ಸಾಮಾನ್ಯವೇ ಇಲ್ಲ ಎಂಬ ಶಂಕೆಯನ್ನು ಬಹುಮಟ್ಟಿಗೆ ಇಲ್ಲಿ ಪರಿಹರಿಸಿದ್ದಾರೆ. ದ್ರವ್ಯ ಗುಣ ಕರ್ಮಗಳು ಒಂದೊಂದೇ ವ್ಯಕ್ತಿಗಳು, ಅವುಗಳಲ್ಲಿ ಇದುಘಟ, ಇದುಘಟ ಎಂಬುದಾಗಿ ಅನೇಕ ವ್ಯಕ್ತಿಗಳಲ್ಲಿ ಒಂದೇ ಶಬ್ದಪ್ರಯೋಗಕ್ಕೆ ಕಾರಣವಾದುದು. (ಅನುವೃತ್ತಿ ಪ್ರತ್ಯಯ)ಕ್ಕೆ ಕಾರಣವಾದುದೇ ಸಾಮಾನ್ಯವು. ಇದು ದ್ರವ್ಯವೇ ಆಗಿದ್ದಲ್ಲಿ ದ್ರವ್ಯತ್ವ ಗುಣತ್ವ ಕರ್ಮತ್ವಗಳು ದ್ರವ್ಯಗುಣ ಕರ್ಮಗಳ ಸ್ವರೂಪವೇ ಆಗಿದ್ದರೆ ಅವುಗಳು ನಾಶವಾಗುವಾಗ ತಾನೂ ನಾಶವಾಗುತ್ತಿತ್ತು. ಹಾಗಿಲ್ಲ, ಆದುದರಿಂದ ಅವುಗಳಿಗಿಂತ ಭಿನ್ನವಾಗಿ ನಿತ್ಯವಾಗಿದ್ದು ಆ ನಿತ್ಯಾನಿತ್ಯದ್ರವ್ಯಗಳಲ್ಲಿ ಅವಿನಾಭಾವಿಯಾದ ಸಮವಾಯಿ ಎಂಬ ಸಂಬಂಧದಿಂದ ಸೇರಿಕೊಂಡಿದೆ. ಈ ಸಾಮಾನ್ಯವು ಸರ್ವಗತವಾಗಿದ್ದರೂ ವ್ಯಕ್ತ್ಯಂತರದ ಜೊತೆಗೆ ಸಂಬಂಧಹೊಂದುವುದಿಲ್ಲ. ಆ ಸಾಮಾನ್ಯಕ್ಕೆ ವ್ಯಂಜಕವಾದ ವ್ಯಕ್ತಿಯ ಆಕೃತಿ ಇದ್ದಲ್ಲಿಯೇ ಸಂಬಂಧಹೊಂದುತ್ತದೆ. ಇವೇ ಮೊದಲಾದ ವಿಶೇಷವಾದ ತಾರ್ಕಿಕಪ್ರಕ್ರಿಯೆಗಳಿಂದ ಸಾಮಾನ್ಯ (ಜಾತಿ) ಎಂಬ ಪದಾರ್ಥವನ್ನು ಸಾಧಿಸುತ್ತಾರೆ.

ವಿನಾಶ ಮತ್ತು ಹುಟ್ಟು ಇಲ್ಲದ ಪೃಥಿವೀ ಜಲ ತೇಜಸ್ಸು ಮತ್ತು ವಾಯುವಿನ

ಪರಮಾಣುಗಳಲ್ಲಿ ಅವುಗಳಿಗೆ ಪರಸ್ಪರ ಭೇದವನ್ನು ತಿಳಿಸಲು ಬೇಕಾದ ಪದಾರ್ಥವೇ ವಿಶೇಷವು. ಪರಮಾಣುವು ಭೌತಿಕ ಪದಾರ್ಥಗಳ ಸೂಕ್ಷ್ಮವಾದ ಅಣುವೆಂದು ನಾವು ತಿಳಿದಿದ್ದರೂ ಅದು ಹಾಗಲ್ಲ. ಅದು ಇಂದ್ರಿಯಾಗ್ರಾಹ್ಯವಾದ ಅವಯವ ಇಲ್ಲದ ಸೂಕ್ಷ್ಮ ಪದಾರ್ಥ. ಜಾಲಸೂರ್ಯ ಮರೀಚಿಸ್ಥಂ ಯತ್ ಸೂಕ್ಷ್ಮಂ ದೃಶ್ಯತೇ ರಜಃ। ತಸ್ಯ ಷಷ್ಠಸ್ತುಯೋಭಾಗಃ ಪರಮಾಣುಃ ಸ ಉಚ್ಯತೇ॥ ಎಂಬ ಒಂದು ಪ್ರಮಾಣಶ್ಲೋಕವಿದೆ. ಬೆಳಿಗ್ಗೆ ಕಿಟಕಿಯ ಮೂಲಕ ತೂರಿಬರುವ ಎಳೆಯ ಸೂರ್ಯನ ಉದ್ದವಾದ ಕಿರಣಗಳಲ್ಲಿ ಸೂಕ್ಷ್ಮವಾಗಿ ಹಾರಾಡುವ ಅತಿ ಸೂಕ್ಷ್ಮವಾದ ಕಣಗಳು ತ್ರಸರೇಣು ಎನ್ನಿಸಿಕೊಳ್ಳುತ್ತವೆ. ಇಲ್ಲಿ ಮೂರು ದ್ವ್ಯಣುಕಗಳಿವೆ. ಒಂದೊಂದು ದ್ವ್ಯಣೀಕದಲ್ಲಿ ಎರಡು ಪರಮ ಅಣುಗಳಿವೆ. ಅವುಗಳಿಗೂ ಆವಯವವನ್ನು ಹೇಳಿದರೆ ಅನಂತ ಅವಯವ ಧಾರೆಗಳನ್ನು ಹೇಳುತ್ತಾ ಬಂದಾಗ ಅನವಸ್ಥಾ-ಪರ್ಯವಸಾನ ಹೊಂದಿರುವುದು ಎಂಬ ದೋಷವು ಬರುತ್ತದೆ. ಆದುದರಿಂದ ಇಂದ್ರಿಯಗಳಿಗೆ ಸೂಕ್ಷ್ಮದರ್ಶಕಯಂತ್ರಗಳಿಗೂ ಗೋಚರವಾಗಿ ಸೂಕ್ಷ್ಮದ್ರವ್ಯವೇ ಪರಮಾಣು.

ಇವುಗಳನ್ನು 'ಪರಿಮಂಡಲ' ಸುತ್ತಲೂ ಮಂಡಲಾಕಾರವಾದುದು. ಒಂದು ಆಶ್ರಯದಲ್ಲಿನಿಲ್ಲದುದು, ದಶದಿಕ್ಕುಗಳಲ್ಲಿ ಎಲ್ಲಿಯೂತಳವೂರಿ ನಿಲ್ಲಲು ಸಾಧ್ಯವಿಲ್ಲದುದು (Bottomless)- ಇದೇ ಪರಮಾಣುವು. ವೈಶೇಷಿಕರಿಗೆ ಈ ಪರಿಮಂಡಲವೇ ದೇವರು, ದೇವರಂತೆ ಇದೆ ಎಂದು ಹೇಳಬೇಕಾಗುತ್ತದೆ. ಈ ಪರಿಮಂಡಲಶಬ್ದವು ಪರೇರಭಿತೋಭಾವಿಮಂಡಲಂ ಪಾ.ಸೂ.(೬.೩.೧೮೨) ಎಂಬ ಸೂತ್ರದಲ್ಲಿ ಬಂದಿದೆ. ಆದುದರಿಂದ ಪರಮಾಣುವಿನಲ್ಲಿ ಪರಮಂಡಲ ಎಂಬ ಶಬ್ದವು ಕಾಣಾದರ ಕೇವಲ ಕಲ್ಪನೆಯಲ್ಲ. ಈ ಪರಮಾಣುಗಳಿಗೆ ಭೇದವನ್ನು ಸಾಧಿಸಲು ವಿಶೇಷ ಎಂಬ ಪದಾರ್ಥವನ್ನು ಅಂಗೀಕರಿಸಿದ್ದಾರೆ. ವಿಶೇಷಗಳು ಪರಸ್ಪರ ಭಿನ್ನವಾಗಿಲ್ಲದಿದ್ದರೆ ಪರಮಾಣುಗಳಲ್ಲಿ ಭೇದವನ್ನು ಸಾಧಿಸಲಾರವು. ವಿಶೇಷಗಳಲ್ಲಿ ಭೇದವನ್ನು ಸಾಧಿಸಲು ಬೇರೆ ಹೇತುವನ್ನು ಹೇಳಿದರೆ ಅಪರ್ಯವಸಾನ (ಅನವಸ್ಥಾ)ಎಂಬ ದೋಷವು ಬರುತ್ತದೆ. ಆದುದರಿಂದ ವಿಶೇಷಗಳು ಸ್ವಸ್ವರೂಪದಿಂದಲೇ ಪರಸ್ಪರ ಭಿನ್ನವಾಗಿ ಸಿದ್ಧಿಸುತ್ತದೆ ಎಂದು ವೈಶೇಷಿಕರ ಸಿದ್ಧಾಂತವು. ಹೀಗೆಯೇ ಆಕಾಶಕಾಲದಿಕ್ ಆತ್ಮಮನಸ್ಸುಗಳಲ್ಲಿಯೂ ವಿಶೇಷವಿದೆಯೆಂದು ಹೇಳುತ್ತಾರೆ.

ಸಮವಾಯಿ- ಒಂದನ್ನು ಬಿಟ್ಟು ಮತ್ತೊಂದು ಇಲ್ಲದಿರುವ ಪದಾರ್ಥಗಳಿಗೆ ಅಯುತಸಿದ್ಧಗಳೆಂದು ಹೆಸರು. ರೂಪಾರಿಗುಣಗಳು, ಘಟಾದಿಗುಣಿಗಳಾಗಿ (೧) ಚಲನಾದ್ರಿ ಕ್ರಿಯೆಗಳು, ಚಲನವುಳ್ಳ ಬಟ್ಟೆ ಎಲೆ ಮುಂತಾದವುಗಳು ಕ್ರಿಯಾಯುಕ್ತಗಳು (೨) ಅವಯವವಾದ (ಕಪಾಲ-ತಂತು) ಮುಂತಾದವುಗಳು ಆವಯವಿಯಾದ ಘಟಪಟ ಮುಂತಾದವುಗಳು (೩) ಘಟತ್ವಮುಂತಾದ ಜಾತಿಗಳು ಘಟ ಮುಂತಾದ ವ್ಯಕ್ತಿಗಳು ಇವುಗಳಿಗೆ (೪) ಹಿಂದೆ ಹೇಳಿದ ವಿಶೇಷ ಮತ್ತು ಪರಮಾಣು ಮುಂತಾದ ನಿತ್ಯದ್ರವ್ಯಗಳು

ಇವುಗಳಿಗೆ ಹೀಗೆ ಸಂಬಂಧವೇ ಸಮವಾಯವು. ಎಲ್ಲಾ ಸಂಬಂಧವು ಅನಿತ್ಯವಾದರೂ ಸಮವಾಯವು ಒಂದು ಮಾತ್ರ ನಿತ್ಯ. ನಿತ್ಯಸಂಬಂಧ ಎಂಬುದೇ ಸಮವಾಯದ ಸ್ವರೂಪ.

ಇನ್ನು ಏಳನೆಯದಾದ ಅಭಾವವನ್ನು ಕಾಣಾದರು ಕಂಠತಃ ಹೇಳಿಲ್ಲ. ಆದರೂ ಕಾರಣಾಭಾವಾತ್ ಕಾರ್ಯಾಭಾವಃ (ಅಧ್ಯಾಯಣ ಆಹ್ನಿಕ ೨ ಸೂತ್ರ ೩.೨) ನಾಸ್ತಿಘಟೋ ಗೇಹೇ (ಅ.೯ ಆ.೧) ಇತ್ಯಾದಿ ಸೂತ್ರಗಳಿಂದ ವಿಶೇಷಿಕರಿಗೆ ಅಭಾವವೂ ಸಂಮತವೆಂದೇ ತಿಳಿದುಬರುತ್ತದೆ. ಅಭಾವ ಅಮಂಗಳವಾದ್ದರಿಂದ ಅದರ ಹೆಸರನ್ನು ಮೊದಲು ಹೇಳಲಿಲ್ಲ ಎಂದೂ ಅಭಿಪ್ರಾಯವಿದೆ.

ಇನ್ನು ಸೃಷ್ಟಿ ಸಂಹಾರದ ವಿಚಾರವನ್ನು ಸ್ವಲ್ಪ ನೋಡೋಣ. ಪೃಥವೀ, ಜಲ, ತೇಜಸ್ಸು, ವಾಯು ಎಂಬ ನಾಲ್ಕುಭೂತಗಳಿಗೆ ಮಾತ್ರ ಸೃಷ್ಟಿಸಂಹಾರಗಳಿವೆ. ಮನುಷ್ಯರ ೮೬೪ ಕೋಟಿ ವರ್ಷಗಳು ಬ್ರಹ್ಮನ ಒಂದು ಹಗಲು ರಾತ್ರಿ. ಇಂತಹ ದಿವಸಗಳು ೩೬೦ ಬ್ರಹ್ಮನ ಒಂದು ವರ್ಷ. ಇಂತಹ ವರ್ಷಗಳು ೧೦೦ ಬ್ರಹ್ಮದೇವನ ಆಯುಸ್ಸು. ಈ ನೂರು ವರ್ಷ ಮುಗಿದಾಗ ಬ್ರಹ್ಮನಿಗೆ ಮೋಕ್ಷವಾಗುತ್ತದೆ. ಆಗ ಪರಮೇಶ್ವರನು ಸಂಸಾರದಲ್ಲಿ ಖಿನ್ನರಾದ ಪ್ರಾಣಿಗಳ ವಿಶ್ರಾಂತಿಗೋಸ್ಕರವಾಗಿ (ಅತಿಂಗೆ ಮೋಕ್ಷಕ್ಕಾಗಿ) ಪ್ರಪಂಚವನ್ನು ಸಂಹರಿಸಲು ಇಚ್ಛಿಸುತ್ತಾನೆ. ಆಗ ಶರೀರ ಇಂದ್ರಿಯಗಳಿಗೆ ಕಾರಣವಾದ ಅದೃಷ್ಟದ(ಪುಣ್ಯಪಾಪಗಳು) ವ್ಯಾಪಾರ ನಿಂತುಹೋಗುತ್ತದೆ. ಆಗ ಶರೀರಾದಿಗಳಿಗೆ ಕಾರಣವಾದ ಸಂಯೋಗವು ನಾಶವಾಗಿ ಪರಮಾಣು ಪರ್ಯಂತವಾಗಿ ಎಲ್ಲವೂ ವಿಭಾಗ ಹೊಂದಿ ನಾಶವಾಗುತ್ತದೆ. ಮೊದಲು ಪೃಥಿವೀನಾಶ, ಅನಂತರ ಜಲನಾಶ, ಅನಂತರ ತೇಜಸ್ಸಿನ ನಾಶ, ಅನಂತರ ವಾಯುನಾಶ ಈ ಕ್ರಮದಿಂದ ಎಲ್ಲವೂ ನಾಶವಾದ ಮೇಲೆ ಚತುರ್ಮುಖ ಬ್ರಹ್ಮನ ೧೦೦ ವರ್ಷಗಳಷ್ಟು ಕಾಲ ಪ್ರಳಯವಿರುತ್ತದೆ.

ಪುನಃ ಯಾವ ಜೀವರಿಗೆ ಸಂಸಾರದಲ್ಲಿ ಭೋಗ ಆಗಬೇಕಾಗಿದೆಯೋ ಅವರನ್ನು ಸೃಷ್ಟಿಗೆ ತರುವುದಕ್ಕಾಗಿ ಪರಮೇಶ್ವರನಲ್ಲಿ ಸೃಷ್ಟಿಸಬೇಕೆಂಬ ಇಚ್ಛೆಯುಂಟಾಗುತ್ತದೆ. ಅನಂತರ ಜೀವಚೇತನರ ಅದೃಷ್ಟವೂ ಎಚ್ಚರಗೊಳ್ಳುತ್ತದೆ. ಮೊದಲು ವಾಯುಪರಮಾಣುವಿನಲ್ಲಿ ಕರ್ಮ, ಕ್ರಮೇಣ ದ್ವ್ಯಣುಕಾದಿ ಕ್ರಮದಿಂದ ವಾಯುತ್ಪತ್ತಿ ಆದೇ ಕ್ರಮದಿಂದ ಜಲೋತ್ಪತ್ತಿ, ಪೃಥಿವಿಯ ಉತ್ಪತ್ತಿ. ಅನಂತರ ಅದೇ ಕ್ರಮದಿಂದ ತೇಜಸ್ಸಿನ ಉತ್ಪತ್ತಿ- ಅನಂತರ ಪರಮೇಶ್ವರನ ಇಚ್ಛೆಯಿಂದ ತೈಜಸ ಅಣುಗಳಿಂದ ಪೃಥಿವ್ಯಾದಿಪರಮಾಣುಗಳಿಂದ ದೊಡ್ಡ ಅಂಡವು (ಬ್ರಹ್ಮಾಂಡವು) ಉತ್ಪನ್ನವಾಗುತ್ತದೆ. ಅಲ್ಲಿ ಸರ್ವಲೋಕಪಿತಾಮಹನಾದ ಬ್ರಹ್ಮನು ಹುಟ್ಟುತ್ತಾನೆ. ಅವನಿಗೆ ನಾಲ್ಕು ವದನಕಮಲಗಳು, ಅವು ಸರ್ವಲೋಕಗಳಿಗೂ ಪಿತಾಮಹನು. ಅಂತಹ ಚತುರ್ಮುಖ ಬ್ರಹ್ಮನನ್ನೂ ಸೃಜಿಸಿದವನು ಮಹೇಶ್ವರನು. ಮಹೇಶ್ವರನಿಂದ ಸೃಷ್ಟಿಗೆ ಬಂದಿರುವ ಚತುರ್ಮುಖನು ಅತಿಶಯವಾದ ಜ್ಞಾನವೈರಾಗ್ಯ ಐಶ್ವರ್ಯಸಂಪನ್ನನು. ಎಲ್ಲಾ ಪ್ರಾಣಿಗಳ ಕರ್ಮವುಯಾವಯಾವಾಗ ಪಕ್ವವಾಗುತ್ತದೆ ಎಂಬುದು ಅವನಿಗೆ ಚೆನ್ನಾಗಿ

ತಿಳಿದಿದೆ. ಹೀಗೆ - ಪ್ರಾಣಿಗಳ ಆಯುಸ್ಸಿನ ಪ್ರತಿಯೊಂದು ಕ್ಷಣದಕರ್ಮವಿಪಾಕವನ್ನೂಬಲ್ಲ ಲೋಕಪಿತಾಮಹನು ಪ್ರಜಾಪತಿಗಳೆಂಬ ಮಾನಸಪುತ್ರರನ್ನು ಸೃಜಿಸಿದ್ದಾನೆ. ಹೀಗೆಯೇ ಮನುಗಳು, ದೇವತೆಗಳು, ಋಷಿಗಳು, ಪಿತೃಗಳನ್ನು ಗುಂಪುಗುಂಪಾಗಿ ಸೃಷ್ಟಿಗೆ ತಂದಿದ್ದಾನೆ. ತನ್ನ ಮುಖ, ಬಾಹು, ತೊಡೆ ಪಾದಗಳಿಂದ ನಾಲ್ಕುವರ್ಣಗಳನ್ನು ಸೃಷ್ಟಿಸಿದ್ದಾನೆ. ಆಯಾಜೀವದ ಅಂತಃ ಕರಣದಲ್ಲಿರುವ ಅನಾದಿಯಾದ ಸಂಸ್ಕಾರಕ್ಕೆ ಅನುಗುಣವಾಗಿ ತರತಮಭಾವದಿಂದ ಧರ್ಮ-ಜ್ಞಾನ ವೈರಾಗ್ಯ ಐಶ್ವರ್ಯಗಳನ್ನು ಕೊಟ್ಟು ತನ್ನ ಮುಖ ಬಾಹು, ತೊಡೆ ಮತ್ತು ಕಾಲುಗಳಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯಶೂದ್ರರೆಂಬ ನಾಲ್ಕು ವರ್ಣದವರನ್ನು ಸೃಜಿಸಿದ್ದಾನೆ.

ಹೀಗೆ ಪ್ರಶಸ್ತ ಪಾದ ಭಾಷ್ಯದಲ್ಲಿ ಉಲ್ಲೇಖವಿದೆ. ಈ ಅಂಶದಲ್ಲಿ ಈ ವೈಶೇಷಿಕದರ್ಶನವು ಧರ್ಮಶಾಸ್ತ್ರಪುರಾಣ ಮತ್ತು ವೇದವೇದಾಂತಗಳನ್ನೇ - ಅನುಸರಿಸಿದೆ ಎಂದು ಹೇಳಬಹುದು. ಸ್ವಲ್ಪಮಟ್ಟಿಗೆ ಬೌದ್ಧರನ್ನೇ ಅನುಕರಿಸಿದ ಈ ವೈಶೇಷಿಕರು ಪ್ರಶಸ್ತಪಾದರ ಭಾಷ್ಯದಿಂದಾಗಿ ಆಸ್ತಿಕದರ್ಶನದ ಪಥಿಯೊಳಗೆ ಬಂದಿದ್ದಾರೆಂದು ಹೇಳಬಹುದು.

ಈ ವೈಶೇಷಿಕದರ್ಶನದಲ್ಲಿ ಧರ್ಮವನ್ನು ಬಹಳ ದೂರ ವಿಚಾರ ಮಾಡಿದ್ದಾರೆ. ಧರ್ಮವು ಆತ್ಮನಗುಣ. ಇದನ್ನು ಮಾಡುವವನಿಗೆ ಇಹಲೋಕದಲ್ಲಿ ಪ್ರಿಯವೂ ಹಿತವೂ ಉಂಟಾಗುತ್ತದೆ, ಅಷ್ಟೇ ಅಲ್ಲ, ಮೋಕ್ಷವೂ ಉಂಟಾಗುತ್ತದೆ. ಈ ಧರ್ಮವು ನಮ್ಮಂತಹವರ ಯಾವ ಪ್ರಯತ್ನದಿಂದಲೂ ಯಾವ ಇಂದ್ರಿಯಕ್ಕೂ ಗೋಚರವಾಗುವುದಿಲ್ಲ. ವೇದಗಳಲ್ಲಿ ಸ್ಮೃತಿ ಪುರಾಣಗಳಲ್ಲಿ ಹೇಳಿದ ಸಾಮಾನ್ಯ ವಿಶೇಷ ಧರ್ಮಗಳಿಂದ ಅದು ಹುಟ್ಟುತ್ತದೆ. ಧರ್ಮಶ್ರದ್ಧಾ ಅಹಿಂಸಾ ಎಲ್ಲಾ ಪ್ರಾಣಿಗಳಿಗೂ ಹಿತವನ್ನು ಬಯಸುವುದು ಸತ್ಯವನ್ನಾಡುವುದು ಕಳ್ಳತನ ಮಾಡದಿರುವುದು, ಲಂಚ ತೆಗೆದುಕೊಳ್ಳದಿರುವುದು, ಸಿಟ್ಟನ್ನು ಬಿಡುವುದು, ನಿತ್ಯಸ್ನಾನ ಮಾಡುವುದು, ಬ್ರಹ್ಮಚರ್ಯ, ಶುಚಿಯಾದ ಶುದ್ಧ ಆಹಾರದ ಸೇವನೆ, ವೇದಗಳಲ್ಲಿ ಹೇಳಿರುವ ವಿಶಿಷ್ಟದೇವತೆಯಲ್ಲಿ ಭಕ್ತಿ, ಏಕಾದಶೀ ಉಪವಾಸ, ನಿತ್ಯನೈಮಿತ್ತಿಕ ಕರ್ಮಗಳನ್ನು ಎಂದೂ ತಪ್ಪದೇ ಮಾಡುತ್ತಲೇ ಇರುವುದು ಇತ್ಯಾದಿಗಳು ಧರ್ಮಕ್ಕೆ ಕಾರಣವಾದ ಆಚಾರಗಳು. ಇವುಗಳ ಪಟ್ಟಿಯು ಇನ್ನೂ ಬೆಳೆಯುತ್ತದೆ. ಈಶ್ವರ ಮತ್ತು ಧರ್ಮಗಳ ಹೆಚ್ಚಿನ ಗೋಜಿಲ್ಲದೆ ಪ್ರಾರಂಭವಾದ ಈ ತರ್ಕಶಾಸ್ತ್ರದಲ್ಲಿ ಧರ್ಮಮೀಮಾಂಸೆಯು ಹೆಚ್ಚಾಗಿ ಬೆಳೆದುದು ಅನಂತರದ ವ್ಯಾಖ್ಯಾನ ಗ್ರಂಥಗಳಲ್ಲಿ, ಆದರೆ,

ಪ್ರಣಮ್ಯಾಹೇತುಮೀಶ್ವರಂ ಋಷಿಂ ಕಣಾದಮನ್ವತಃ।
ಪದಾರ್ಥ ಧರ್ಮಸಂಗ್ರಹಃ ಪ್ರವಕ್ಷ್ಯತೇ ಮಹೋದಯಃ॥

ಜಗತ್ತಿನ ಸೃಷ್ಟಿ ಸಂಹಾರ ಪಾಲನ ಕಾರಣವಾದ ಈಶ್ವರನನ್ನು ನಮಿಸಿ,

ಅಭಿವಂದನಾ

ಭೂತಭವಿಷ್ಯದ ದ್ರಷ್ಟಾರರವಾದಕಣಾದರರನ್ನು ನಮಿಸಿ, ಪದಾರ್ಥಗಳ ಸಾಧರ್ಮ್ಯ ವೈಧರ್ಮ್ಯ ಮತ್ತು ಅತೀಂದ್ರಿಯವಾದ ಧರ್ಮದ ಸ್ವರೂಪವನ್ನು ಹೇಳುವ ಈ ಗ್ರಂಥವು ಪ್ರಾರಂಭಿಸಲ್ಪಡುತ್ತದೆ. ಇದರ ಪ್ರಯೋಜನವು ಮಹೋದಯವು ಎಂದು ಪ್ರಶಸ್ತಪಾದರು ಭಾಷ್ಯದ ಆರಂಭದಲ್ಲಿ ಪ್ರತಿಜ್ಞೆ ಮಾಡಿದಂತೆ ಈ ವೈಶೇಷಿಕ ತರ್ಕಶಾಸ್ತ್ರ ವಿಜ್ಞಾನದ ಮುಖ್ಯಫಲವು ಮೋಕ್ಷವೇ ಆಗಿದೆ. ಈ ಮೋಕ್ಷಸ್ವರೂಪವನ್ನು ಸ್ವಲ್ಪಮಟ್ಟಿಗೆ ವಿವರಿಸಬೇಕಾಗಿದೆ.

ವರಂ ವೃಂದಾವನೇ ರಮ್ಯೇ ಶೃಗಾಲತ್ವಂವ್ರಜಾಮ್ಯಹಂ।
ನತು ವೈಶೇಷಿಕೀಂ ಮುಕ್ತಿಂ ಪ್ರಾರ್ಥಯಾಮಿಃಕದಾಚನ॥

ನಾನು ರಮ್ಯವಾದ ವೃಂದಾವನದಲ್ಲಿ ನಂದನವನ ಗೋವಿಂದನ ವಿಹಾರ ಭೂಮಿಯಲ್ಲಿ ನರಿಯಾಗಿ ಓಡಾಡುವುದನ್ನಾದರೂ ಬಯಸುವೆನು. ಆದರೆ ವೈಶೇಷಿಕರ ಮುಕ್ತಿಯನ್ನು ಮಾತ್ರ, ಎಂದೂ ಬೇಡುವುದಿಲ್ಲ ಎಂದು ಒಬ್ಬನು ಉದ್ಗರಿಸುತ್ತಾನೆ. ಹೀಗೆ ಹೇಳಲು ಕಾರಣವೇನು? ಎಲ್ಲಾ ವಿಶೇಷಗುಣ ಧರ್ಮಗಳನ್ನು ಕಳೆದುಕೊಂಡು ಬಟ್ಟಬಯಲಂತೆ, ಆಕಾಶದಂತೆ ಇರುವುದೇ ವೈಶೇಷಿಕರ ಮುಕ್ತಿ. ಇಲ್ಲಿ ಸುಖವಿಲ್ಲ ದುಃಖವಿಲ್ಲ, ಯಾವುದೂ ಇಲ್ಲ ಏನೂ ಇಲ್ಲ. ಇಂತಹ ಮೂರ್ಛಾವಸ್ಥೆಯಂತಹ ಮೋಕ್ಷವು ಯಾರಿಗೆ ಬೇಕು? ಎಂದು ಕೆಲವರ ಆಕ್ಷೇಪ? ಆದರೆ ಲೋಕದಲ್ಲಿ ಸುಖವಿದ್ದಲ್ಲಿ ದಃಖವಿದೆ, ದುಃಖವಿದ್ದಲ್ಲಿ ಸುಖವೂ ಇದೆ. ಆದರೆ ಮೋಕ್ಷದಲ್ಲಿ ಸುಖವಿದ್ದರೆ ದುಃಖವೂ ಇರಬೇಕಾಗುತ್ತದೆ. ದುಃಖವು ಲವಲೇಶವಿದ್ದರೂ ಆ ಸುಖವು ಯಾರಿಗೆ ಬೇಕು. ಆದ್ದರಿಂದ ಸುಖದುಃಖ ಇವೆರಡರಲ್ಲಿ ಯಾವುದೂ ಇಲ್ಲದ ನಿಶ್ಚಿಂತಾವಸ್ಥೆಯೇ ಮೋಕ್ಷವೆಂದು ಹೇಳುವುದರಲ್ಲಿ ತುಂಬಾ ಔಚಿತ್ಯವಿದೆ. **ಆಕಾಶವತ್ ಸರ್ವಗತಶ್ಚನಿತ್ಯಃ** ಎಂದು ಪರಮಾತ್ಮನ ವಿಷಯದಲ್ಲಿ ಹೇಳುವಂತೆ ಸಂಸಾರಿಗಳಾಗಿದ್ದು ಕಷ್ಟಕೋಟಲೆಗಳಲ್ಲಿ ಬೆಂದು ಬಸವಳಿದ ಜೀವರಿಗೆ ಹೊರಲಾರದ ಭಾರವನ್ನು ಹೊತ್ತ ಕೂಲಿಯಾಳು ಹೊರೆಯನ್ನು ಇಳಿಸಿ ನಾನೀಗ ಸುಖವಾಗಿದ್ದೇನೆ ಎಂದು ನಿಟ್ಟುಸಿರು ಬಿಟ್ಟು ಕಾಲುಚಾಚಿ ಕುಳಿತಂತೆ ಮುಕ್ತಾತ್ಮನಸ್ಥಿತಿಯನ್ನು ನಾವು ಊಹಿಸಬೇಕು. ಹಿಂದಿನ ಪ್ರಾಜ್ಞರ ಕೊನೆಯ ಸ್ಥಿತಿಯನ್ನು ನಾವು ಹೀಗೆಯೇ ಕಂಡಿದ್ದೇವೆ.

ಹೀಗೆ ಕಣಾದರ ವೈಶೇಷಿಕದರ್ಶನವು ಪ್ರಾಮಾಣಿಕವಾದ ಪ್ರತ್ಯಕ್ಷಾನುಭವ ಮತ್ತು ಅನುಮಾನಾಗಮಗಳ ಸಹಾಯದಿಂದ ಬೆಳೆದುನಿಂತಿದೆ.

***

ಸಾಂಖ್ಯದರ್ಶನ (ಪ್ರಕೃತಿ-ಪುರುಷರ ಸಂಬಂಧ)

-ಜಿ.ಎಸ್. ಕುಂದರಗಿ

ಪೀಠಿಕೆ

ಸಾಂಖ್ಯದರ್ಶನ ತುಂಬ ಹಳೆಯದು. ಈ ದರ್ಶನದ ಮೂಲ ಪುರುಷನಾದ ಕಪಿಲ, ಬುದ್ಧನ ಕಾಲಕ್ಕಿಂತ ಹಿಂದಿನವನು. ಅದರ ಮುಖ್ಯ ಪರಿಕಲ್ಪನೆಗಳಾದ ಪ್ರಕೃತಿ-ಪುರುಷರ ಉಲ್ಲೇಖ ಶ್ವೇತಾಶ್ವತರ ಉಪನಿಷತ್ತಿನಲ್ಲಿ ಇದೆ. ಅವ್ಯಕ್ತ, ಅಹಂಕಾರಗಳೆಂಬ ಅದರ ಪಾರಿಭಾಷಿಕ ಪದಗಳು ಕಠೋಪನಿಷತ್ತಿನಲ್ಲಿ ಸಿಗುತ್ತವೆ. ಮಹಾಭಾರತದಲ್ಲಿ ಇಪ್ಪತ್ತಾರು ತತ್ತ್ವಗಳ ಸೇಶ್ವರ ಸಾಂಖ್ಯ, ಇಪ್ಪತ್ತೈದು ಮತ್ತು ಇಪ್ಪತ್ತನಾಲ್ಕು ತತ್ತ್ವಗಳ ನಿರೀಶ್ವರ ಸಾಂಖ್ಯಗಳ ವಿವರಣೆಯಿದೆ.

ಈಶ್ವರಕೃಷ್ಣರ ಐದನೆ ಶತಮಾನದ ಸಾಂಖ್ಯಕಾರಿಕಾ ಸಾಂಖ್ಯದರ್ಶನವನ್ನು ಕುರಿತ ಮಹತ್ತ್ವದ ಗ್ರಂಥ. ಇದರ ಮೇಲೆ ವಾಚಸ್ಪತಿ ಮಿಶ್ರರ 'ಸಾಂಖ್ಯ ತತ್ತ್ವ ಕೌಮುದಿ' ಎಂಬ ಭಾಷ್ಯವಿದೆ. ಕಪಿಲರಿಗೆ ಅನ್ವಯಿಸುವ ಸಾಂಖ್ಯಗಳು ಇತ್ತೀಚಿನವು ಎಂದು ಹೇಳಲಾಗುತ್ತದೆ. ಅದರ ಮೇಲೆ ವಿಜ್ಞಾನಭಿಕ್ಷುವಿನ 'ಸಾಂಖ್ಯಪ್ರವಚನ ಭಾಷ್ಯ' ಎಂಬ ಗ್ರಂಥವಿದೆ. A.B. Keith ರು ಸಾಂಖ್ಯದರ್ಶನವನ್ನು ಕುರಿತು ಚಿಕ್ಕ ಪುಸ್ತಕ ಬರೆದಿದ್ದಾರೆ.

ಸಾಂಖ್ಯವು ಹಿಂದಾದ ದರ್ಶನ. ಅದು ವಿವೇಚನಾ ಪದ್ಧತಿಯನ್ನೇ ತನ್ನ ವಿವರಣೆಗೆ ಆಧಾರವಾಗಿಟ್ಟುಕೊಂಡಿದೆ. ದೇವರ ಅವಶ್ಯಕತೆಯನ್ನೂ ಅದು ಅಲ್ಲಗಳೆದಿದೆ. ಅದರ ನಿರೂಪಣೆಯಲ್ಲಿ ಕಲಾವಂತಿಕೆ, ಕಾವ್ಯಾತ್ಮಕತೆ ಇದೆ.

ಪ್ರಕೃತಿ ಮತ್ತು ಪುರುಷರು ಸಾಂಖ್ಯದರ್ಶನದ ತಳಹದಿ. ಪ್ರಕೃತಿಯ ವಿಕಾಸವು ಪುರುಷನ ಭೋಗ ಮತ್ತು ಅಪವರ್ಗ (ಮೋಕ್ಷ)ಕ್ಕಾಗಿ ಇದೆ. ಆದಿಭೌತಿಕ, ಆಧ್ಯಾತ್ಮಿಕ ಮತ್ತು ಆದಿದೈವಿಕ ದುಃಖಗಳ ನಿವಾರಣೆಯೇ ತತ್ತ್ವಶಾಸ್ತ್ರ ಅಭ್ಯಾಸದ ಮುಖ್ಯ ಉದ್ದೇಶ ಎಂದು ಸಾಂಖ್ಯರು ಹೇಳುತ್ತಾರೆ.

ಪ್ರಕೃತಿ

ಇದು ವಿಶ್ವದ ಸಕಲ ವಸ್ತುಗಳ ಮೂಲ ಕಾರಣ. ಇದನ್ನು ಪ್ರಧಾನವೆಂದೂ ಕರೆಯುತ್ತಾರೆ. ಇದು ಏಕವಾಗಿದ್ದರೂ ಸರಳ (Simple)ವಾಗಿಲ್ಲ, ಸಂಕೀರ್ಣ (Complex) ವಾಗಿದೆ. ಸತ್ತ್ವ, ರಜಸ್ ಮತ್ತು ತಮಸ್ಸುಗಳನ್ನು ಒಳಗೊಂಡಿದೆ. ಜಗತ್ತಿನ ಎಲ್ಲ

ವಸ್ತುಗಳು ಪ್ರಕೃತಿಯ ಪರಿಣಾಮಗಳು. ಅವೂ ತ್ರಿಗುಣಗಳನ್ನು ಕೂಡಿಕೊಂಡಿವೆ. ದೇಶ, ಕಾಲಗಳು ಕೂಡ ಪ್ರಕೃತಿಯ ಮುಖಗಳೇ ಆಗಿವೆ.

ಸತ್ತ್ವ, ರಜಸ್ ಮತ್ತು ತಮಸ್- ಈ ಗುಣಗಳು ಪ್ರಕೃತಿಯ ವಿಶೇಷಣಗಳಲ್ಲ. ಏಕೆಂದರೆ ಸಾಂಖ್ಯರು ಸತ್‌ಕಾರ್ಯವಾದವನ್ನು ಹೇಳುವುದರಿಂದ ದ್ರವ್ಯ-ಗುಣಗಳ ಭೇದವನ್ನು ಮಾಡುವುದಿಲ್ಲ. ಅವು ಪ್ರಕೃತಿಯ ಮುಖಗಳು(aspects) ಅಥವಾ ಅಂತರ್ಗತ ಎಳೆಗಳು. ಹಗ್ಗವು ಮೂರು ಎಳೆಗಳ ಭಾಗಗಳಿಂದ ಕೂಡಿದಂತೆ ಪ್ರಕೃತಿ ಮತ್ತುಅದರ ಪರಿಣಾಮಗಳು ಸತ್ತ್ವ, ರಜಸ್ ಮತ್ತು ತಮೋ ಗುಣಗಳಿಂದ ಕೂಡಿವೆ.

ವಿಶ್ವದ ವೈವಿಧ್ಯತೆಯನ್ನು ವಿವರಿಸಲು ಮೂರು ಗುಣಗಳು ಕನಿಷ್ಠವಾಗಿ ಇರಲೇಬೇಕು. ಒಂದೇ ಗುಣವಿದ್ದರೆ, ವೈವಿಧ್ಯತೆಯನ್ನು ವಿವರಿಸುವುದು ಅಸಾಧ್ಯ. ಎರಡಿದ್ದರೆ ಒಂದನ್ನೊಂದು ನಾಶಮಾಡಬಹುದು ಅಥವಾ ಒಂದು ಇನ್ನೊಂದನ್ನು ಹತ್ತಿಕ್ಕಿ ತಾನೇ ಮುಂದೊರೆಯಬಹುದು. ಇದನ್ನು ತಪ್ಪಿಸಲು ಸಾಂಖ್ಯರು ತ್ರಿ-ಗುಣಗಳು ಕನಿಷ್ಠವಾಗಿ ಅವಶ್ಯವೆಂದು ಸಾರುತ್ತಾರೆ. ಪ್ರಕೃತಿಯ ಅವ್ಯಕ್ತಸ್ಥಿತಿಯಲ್ಲಿ ಈ ಗುಣಗಳ ಸಮತೋಲನೆಯಿದೆ. ಪ್ರಕೃತಿಯ ವಿಕಾಸದ ಸ್ಥಿತಿಯಲ್ಲಿ ಗುಣಗಳಿಗೆ ಘರ್ಷಣೆ ಪ್ರಾರಂಭವಾಗುತ್ತದೆ.

ಸತ್ತ್ವವು ಹಗುರಾಗಿದೆ, ಪ್ರಕಾಶಮಾನವಾಗಿದೆ ಮತ್ತು ಸುಖಪ್ರದವಾಗಿದೆ. ರಜಸ್ ಚಲಿಸುವಂತಹದು, ಪ್ರಚೋದಕವಾದುದಂತಹುದು. ತಮಸ್ ಭಾರವಾದಂತಹುದು, ತಡೆಯನ್ನು ಉಂಟುಮಾಡುವಂತಹುದು. ಈ ತ್ರಿಗುಣಗಳು ಪರಸ್ಪರ ವಿರುದ್ಧವಾಗಿದ್ದರೂ, ಎಣ್ಣೆ, ಬತ್ತಿ, ಉರಿಗಳಂತೆ ಸಹಕಾರಿಗಳಾಗಿ ಪುರುಷನ ಮೋಕ್ಷಕ್ಕೆ ದಾರಿ ಮಾಡಿಕೊಡುವಂತಹವು.

ಸತ್ತ್ವಂ ಲಘು ಪ್ರಕಾಶಕಮಿಷ್ಟಮ್ ಉಪಷ್ಟಂಭಕಂ ಚಲಂ ಚ ರಜಃ।
ಗುರು ವರಣಕಮೇವ ತಮಃ, ಪ್ರಕ್ಷೇಪವಚ್ಚಾರ್ಥತೋ ವೃತ್ತಿಃ॥[೧]

ಪ್ರಕೃತಿಯ ಅಸ್ತಿತ್ತ್ವಕ್ಕೆ ಸಾಂಖ್ಯರು ಕೆಳಗಿನ ಆಧಾರಗಳನ್ನು ಕೊಡುತ್ತಾರೆ.

೧. ಜಗತ್ತಿನಲ್ಲಿ ಪ್ರತಿಯೊಂದು ಕಾರ್ಯವು ಸೀಮಿತವಿದೆ, ಮಿತವಾಗಿದೆ ಮತ್ತು ಪರಾವಲಂಬಿಯಾಗಿದೆ. ಆದ್ದರಿಂದ ನಿಸ್ಸೀಮವಾದ, ಅಪರಿಮಿತವಾದ, ಸ್ವತಂತ್ರವಾದ ಮೂಲ ಕಾರಣವಿರಬೇಕು. ಅದು ಪ್ರಕೃತಿ (ಭೇದಾನಾಂ ಪರಿಮಾಣಾತ್).

೨. ವಿಶ್ವದ ಪ್ರತಿಯೊಂದು ವಸ್ತು ಸುಖ, ದುಃಖ ಮತ್ತು ಪ್ರವೃತ್ತಿ ಗುಣಗಳನ್ನು ಒಳಗೊಂಡಿದೆ. ಆದ್ದರಿಂದ ಮೂಲ ಕಾರಣವು ಇವುಗಳನ್ನು ಹೊಂದಿರಬೇಕು. ಅದು

---

೧. ಈಶ್ವರ ಕೃಷ್ಣ : ಸಾಂಖ್ಯಕಾರಿಕಾ ೧೩
ಸಂ ಮತ್ತು ಅನು. ಎಸ್.ಎಸ್. ಸೂರ್ಯನಾರಾಯಣ ಶಾಸ್ತ್ರಿ, ಮದ್ರಾಸ್ ವಿಶ್ವವಿದ್ಯಾನಿಲಯ,
೨ನೇ ಪ್ರಕಾಶನ, ತಿದ್ದಿದ ಆವೃತ್ತಿ ೧೯೪೮ ಪು.೩೧

ಪ್ರಕೃತಿ. (ಕಾರಣಮಸ್ತ್ಯವ್ಯಕ್ತಂ, ಪ್ರವರ್ತತೆ ತ್ರಿಗುಣತಃ ಸಮುದಯಾಚ್ಚ)

೩. ಜಗತ್ತಿನ ವಸ್ತುಗಳು ಕಾರ್ಯರೂಪದಲ್ಲಿವೆ. ಅವು ಕಾರಣದಿಂದ ಉದ್ಭವವಾಗಿವೆ. ಪುನಃ ಕಾರಣದಲ್ಲಿ ಸೇರಿಕೊಳ್ಳುತ್ತವೆ. ಆದ್ದರಿಂದ ವಿಶ್ವದ ವಸ್ತುಗಳು ಅಂತರ್ಗತವಾಗಿ ಮೂಲಕಾರಣದಲ್ಲಿ ಸೇರಿಕೊಂಡಿರಲೇಬೇಕು. ಆ ಮೂಲಕಾರಣ ಪ್ರಕೃತಿ(ಕಾರಣಕಾರ್ಯವಿಭಾಗಾ-ವಿಭಾಗಾದ್ವೈಶ್ವರೂಪ್ಯಸ್ಯ)

ಪುರುಷ

ಪುರುಷನು ದೇಹವಲ್ಲ, ಇಂದ್ರಿಯಗಳಲ್ಲ, ಮನಸ್ಸಲ್ಲ ಮತ್ತು ಬುದ್ಧಿಯೂ ಅಲ್ಲ. ಅದು ಚೇತನಾತ್ಮಕ. ಅದು ಶುದ್ಧ ಆಖ್ಯೇಯ. ಅದು ಮೌನಸಾಕ್ಷಿ. ಅದು ದೇಶ, ಕಾಲ ಮತ್ತು ಕ್ರಿಯೆಗಳಿಂದ ಆಚೆ. ಅದಕ್ಕೆ ಹುಟ್ಟಿಲ್ಲ, ಸಾವಿಲ್ಲ. ಅದು ನಿತ್ಯ, ಅದು ಸರಳವಾದುದು. ಅದು ಇನ್ನೊಂದರಿಂದ ಹುಟ್ಟಿದ್ದಲ್ಲ. ಇನ್ನೊಂದರ ಹುಟ್ಟಿಗೆ ಕಾರಣವಲ್ಲ. ಅದು ಉಪನಿಷತ್ತುಗಳಲ್ಲಿ ಬರುವ ಆತ್ಮ ಕಲ್ಪನೆಯಂತೆಯೇ ಇದೆ. ಅದರ ರೂಪದಲ್ಲಾಗಲಿ, ಸ್ಥಾನದಲ್ಲಾಗಲಿ ಯಾವುದೇ ಬದಲಾವಣೆಯಿಲ್ಲ. ಅದು ಅನುಭವಗಳನ್ನು ಸಂತೋಷದಿಂದ ಸ್ವೀಕರಿಸುತ್ತದೆ.

ಪುರುಷನ ಅಸ್ತಿತ್ತ್ವವನ್ನು ಕೆಳಗಿನ ಆಧಾರಗಳಿಂದ ಸಿದ್ಧಪಡಿಸಲಾಗಿದೆ:

೧. **ಉದ್ದೇಶವಾದ**: ಜಗತ್ತಿನ ವಸ್ತುಗಳಾದ ಹಾಸಿಗೆ, ಗಡಿಯಾರ, ಲೇಖನಿ- ಇವು ಒಂದು ಉದ್ದೇಶ ಪೂರ್ತಿಗಾಗಿ ಇವೆ. ಅವುಗಳ ಅಸ್ತಿತ್ತ್ವವು ಅವುಗಳನ್ನು ಉಪಯೋಗಿಸುವ ಮನುಷ್ಯನೆಡೆಗೆ ಬೆರಳು ಮಾಡಿ ತೋರಿಸುತ್ತದೆ. ಅವು ಸಾಧನಗಳಿದ್ದಂತೆ. ಅವುಗಳನ್ನು ಬಳಸುವ ಪುರುಷನಿರಬೇಕು. ಯಾರೂ ಉಪಯೋಗಿಸುವವರಿರದಿದ್ದರೆ, ಗಡಿಯಾರಗಳು ರಚನೆಯಾಗುತ್ತಿರಲಿಲ್ಲ. ಅಚೇತನ ವಸ್ತುಗಳೆಲ್ಲ ಚೇತನಾತ್ಮಕ ತತ್ತ್ವವನ್ನು ತೋರಿಸುತ್ತವೆ. ವಸ್ತುವಿನ ಇಂಗಿತಾರ್ಥ ಅದನ್ನು ಬಳಸುವ ವ್ಯಕ್ತಿ. ಸಂಕೀರ್ಣವಾದ ಪ್ರಕೃತಿಯು ಸರಳವಾದ ಪುರುಷನನ್ನು ಸೂಚಿಸುತ್ತದೆ.

೨. ಪ್ರಕೃತಿಯು ಸತ್ತ್ವ, ರಜಸ್ ಮತ್ತು ತಮಸ್- ಈ ಮೂರು ಗುಣಗಳನ್ನು ಒಳಗೊಂಡಿದೆ. ಅವು ಸುಖ, ದುಃಖ ಮತ್ತು ಔದಾಸೀನ್ಯಗಳನ್ನು ಸೂಚಿಸುತ್ತವೆ. ಅವು ಅನುಭವದ ತಳಹದಿಯಾಗಿವೆ. ಅವುಗಳನ್ನು ಅನುಭವಿಸುವವರು ಯಾರೂ ಇಲ್ಲದೆ ಹೋದಲ್ಲಿ ಅವುಗಳಿಗೆ ಯಾವ ಅರ್ಥವೂ ಇಲ್ಲದಂತಾಗುತ್ತದೆ. ಅವುಗಳನ್ನು ಅನುಭವಿಸುವವನು ಪುರುಷ.

೩. ವಿಶ್ವದಲ್ಲಿ ಕ್ರಮ, ವ್ಯವಸ್ಥೆ ಇರಬೇಕಾದರೆ, ವಸ್ತುಗಳನ್ನು ನಿಯಂತ್ರಿಸುವವರು

ಓರ್ವರು ಬೇಕು. ಜಗತ್ತಿನಲ್ಲಿ ವ್ಯವಸ್ಥೆಯಿದೆ. ಅದಕ್ಕೆ ಕಾರಣ ಚೇತನಾತ್ಮಕ, ಸಾಕ್ಷಿ ಪುರುಷ. ಪ್ರಕೃತಿಯು ಅಚೇತನ. ಅದು ವ್ಯವಸ್ಥೆಗೆ ಕಾರಣವಾಗಲಾರದು.

೪. ಸಾಂಖ್ಯದರ್ಶನದಲ್ಲಿ ಹೇಳಿದ ಮೋಕ್ಷ ಕಲ್ಪನೆಗೆ ಅರ್ಥವಿದ್ದರೆ, ಪುರುಷನಿರಲೇಬೇಕು. ಪ್ರಕೃತಿಯು ಮೋಕ್ಷವನ್ನು ಪಡೆಯಬಾರದು. ಕೈವಲ್ಯವನ್ನು ಪಡೆಯಬೇಕು ಎಂಬ ಆಜ್ಞೆಯು ಪುರುಷರನ್ನು ಕುರಿತಾಗಿದೆ. ಮೋಕ್ಷ ಕಲ್ಪನೆಯು ಪುರುಷನ ಅಸ್ತಿತ್ತ್ವವನ್ನು ತೋರಿಸುತ್ತದೆ.

ಸಙ್ಘಾತಪರಾರ್ಥತ್ವಾತ್, ತ್ರಿಗುಣಾದಿವಿಪರ್ಯಯಾದಧಿಷ್ಠಾತಾತ್।
ಪುರುಷೋऽಸ್ತಿ ಭೋಕ್ತೃಭಾವಾತ್ಕೈವಲ್ಯಾರ್ಥಂ ಪ್ರವೃತ್ತೇಶ್ಚ॥[೧]

ಪುರುಷ ಬಹುತ್ವಕ್ಕೆ ಸಾಂಖ್ಯರು ಕೆಳಗಿನ ಕಾರಣಗಳನ್ನು ಹೇಳುತ್ತಾರೆ:

ಹುಟ್ಟು, ಸಾವು ಮತ್ತು ಸ್ವಭಾವಗಳಲ್ಲಿ ಮನುಷ್ಯರಲ್ಲಿ ಅಂತರಗಳಿವೆ. ಒಬ್ಬನೇ ಪುರುಷನಿದ್ದರೆ, ಆತನ ಹುಟ್ಟು, ಸಾವು ಎಂದರೆ ಎಲ್ಲರ ಹುಟ್ಟು, ಸಾವುಗಳಾಗಬೇಕು. ಇದು ಅನುಭವಕ್ಕೆ ವಿರೋಧವಾದುದು. ದೋಷಗಳ ವಿಷಯವಾಗಿ ಇದೇ ಮಾತು ಅನ್ವಯಿಸುತ್ತದೆ. ಒಬ್ಬನ ಕುರುಡುತನ ಅಥವಾ ಕಿವುಡುತನವೆಂದರೆ ಎಲ್ಲರ ಕುರುಡುತನ ಅಥವಾ ಕಿವುಡುತನವಲ್ಲ.

ಅನುಭವವನ್ನು ನೋಡುವುದಾದರೆ ಒಬ್ಬನು ಹುಟ್ಟಿದಾಗ ಇನ್ನೊಬ್ಬನು ಸತ್ತಿರುತ್ತಾನೆ, ಒಬ್ಬನಿಗೆ ತೇಜಃ ಪುಂಜ ಕಣ್ಣುಗಳಿಂದ್ದರೆ, ಇನ್ನೊಬ್ಬನು ನಿದ್ರಿಸಿರುತ್ತಾನೆ. ಋಷಿಗಳಲ್ಲಿ, ಮನುಷ್ಯರಲ್ಲಿ ಮತ್ತು ಪ್ರಾಣಿಗಳಲ್ಲಿ ತ್ರಿಗುಣಗಳ ವಿಪ್ರಯವಾಗಿ ಅಂತರವಿದೆ. ಈ ಕಾರಣಗಳ ಮೂಲಕ ಪುರುಷರು ಅನೇಕ.

ಸತ್ ಕಾರ್ಯವಾದ

ಸಾಂಖ್ಯರ ಕಾರ್ಯ, ಕಾರಣವಾದವನ್ನು ಸತ್ ಕಾರ್ಯವಾದವೆಂದು ಕರೆಯುತ್ತಾರೆ. ಅದು ನೈಯಾಯಿಕರ ಕಾರ್ಯ, ಕಾರಣವಾದಕ್ಕೆ ವಿರೋಧವಾದುದು. ನೈಯಾಯಿಕರ ಪ್ರಕಾರ ಕಾರ್ಯವು ಕಾರಣದಲ್ಲಿ ಮೊದಲು ಇರುವುದಿಲ್ಲ. ಅದು ಹೊಸದಾಗಿ ಬಂದುದು. ಸಾಂಖ್ಯರ ಪ್ರಕಾರ ಕಾರ್ಯವು ಕಾರಣದಲ್ಲಿ ಅವ್ಯಕ್ತರೂಪದಲ್ಲಿದೆ, ಮೊಸರು ಹಾಲಿನಲ್ಲಿ ಇದ್ದಂತೆ, ಎಣ್ಣೆಯು ಬೀಜದಲ್ಲಿ ಅಡಗಿರುವಂತೆ.

ಸಾಂಖ್ಯರ ಸತ್ ಕಾರ್ಯವಾದವು ಅವರ ಆಧ್ಯಾತ್ಮಶಾಸ್ತ್ರಕ್ಕೆ ತುಂಬ ಹತ್ತಿರವಾಗಿದೆ.

ವಿಶ್ವದ ಸಕಲ ವಸ್ತುಗಳೆಲ್ಲ ಪ್ರಕೃತಿಯ ಗರ್ಭದಲ್ಲಿ ಅಡಗಿವೆ. ಸಾಂಖ್ಯರ ವಿಕಾಸವೆಂದರೆ ಪ್ರಕೃತಿಯಲ್ಲಿ ಅಡಗಿದ ತತ್ತ್ವಗಳು ಬಾಹ್ಯವಾಗಿ ಪ್ರಕಟವಾಗುವದು. ಯಾವುದು ಪ್ರಕೃತಿಯ ಮೂಲದಲ್ಲಿ ಅವ್ಯಕ್ತರೂಪದಲ್ಲಿ ಇಲ್ಲವೊ ಅದು ಎಂದಿಗೂ ವ್ಯಕ್ತವಾಗಲಾರದು.

ಸತ್‌ಕಾರ್ಯವಾದವನ್ನು ಸ್ಥಾಪಿಸಲು ಸಾಂಖ್ಯರು ಕೆಳಗಿನ ಕಾರಣಗಳನ್ನು ಕೊಡುತ್ತಾರೆ.

೧. ಕಾರ್ಯವು ಕಾರಣದಲ್ಲಿರದಿದ್ದರೆ, ಶೂನ್ಯದಿಂದ ಏನೂ ಬರಲಾರದು. ಇದು ಸಾಧ್ಯವೆಂದು ಹೇಳಿದರೆ ಕಾರ್ಯ-ಕಾರಣ ನಿಯಮವು ಮುರಿದು ಬೀಳುತ್ತದೆ. ಸಹಸ್ರಾರು ಕಸಬುದಾರರು ನೀಲಿವರ್ಣವನ್ನು ಹಳದಿವರ್ಣವನ್ನಾಗಿ ಮಾಡಲಾರರು. ಮಡಕೆಯನ್ನು ಬಟ್ಟೆಯನ್ನಾಗಿ ಪರಿವರ್ತಿಸಲಾರರು.

೨. ಜನರು ಸೂಕ್ತ ಕಾರ್ಯಗಳಿಗಾಗಿ ಸೂಕ್ತಕಾರಣಗಳನ್ನು ಅರಸುತ್ತಾರೆ ಎಂದು ಅನುಭವ ಹೇಳುತ್ತದೆ. ಮೊಸರು ಬೇಕಾದವನು ಹಾಲನ್ನು ಹುಡುಕುತ್ತಾನೆಯೆ ಹೊರತು ನೀರನ್ನಲ್ಲ. ಎಣ್ಣೆ ಬೇಕಾದವನು ಬೀಜವನ್ನು ಕೇಳುತ್ತಾನೆಯೆ ಹೊರತು ಉಸುಕನ್ನಲ್ಲ. ಇದರಿಂದ ಕಾರ್ಯವು ಕಾರಣದಲ್ಲಿ ಅವ್ಯಕ್ತವಾಗಿ ಅಡಗಿದೆಯೆಂದು ಸಿದ್ಧವಾಗುತ್ತದೆ.

೩. ಕಾರ್ಯ-ಕಾರಣಗಳು ಸಂಬಂಧದ ರೂಪದಲ್ಲಿವೆ. ನೈಯಾಯಿಕರ ಪ್ರಕಾರ ಕಾರ್ಯವು ಕಾರಣದಲ್ಲಿ ಪೂರ್ವವಾಗಿ ಹುದುಗಿಕೊಂಡಿಲ್ಲ. ಹೀಗಾದಲ್ಲಿ ಅನಸ್ತಿತ್ವ ಮತ್ತು ಅಸ್ತಿತ್ವಗಳ ನಡುವೆ ಸಂಬಂಧ ಸ್ಥಾಪಿಸುವದು ಕಠಿಣವೆಂದು ಸಾಂಖ್ಯರು ಹೇಳುತ್ತಾರೆ. ಎರಡು ಅಸ್ತಿತ್ವಗಳ ನಡುವೆ ಸಂಬಂಧ ಸಾಧ್ಯ. ಸಂಬಂಧವನ್ನು ಕಲ್ಪಿಸಬೇಕಾದರೆ ಎರಡೂ ಪದಗಳು ಅಸ್ತಿತ್ವದಲ್ಲಿರಬೇಕು.

ಅಸದಕರಣಾದುಪಾದಾನಗ್ರಹಣಾತ್ಸರ್ವಸಂಭವಾಭಾವಾತ್
ಶಕ್ತಸ್ಯ ಶಕ್ಯಕರಣಾತ್ ಕಾರಣಭಾವಚ್ಚ ಸತ್ಕಾರ್ಯಂ॥[೨]

ವಿಕಾಸ

ಪ್ರಕೃತಿಯ ವ್ಯಕ್ತಾವಸ್ಥೆಯಲ್ಲಿ ಮೊದಲು ಉದ್ಭವವಾಗುವ ವಸ್ತು ಮಹತ್. ಇದನ್ನು ಬುದ್ಧಿಯೆಂದೂ ಕರೆಯುತ್ತಾರೆ. ಇದರ ಸ್ವರೂಪ ಜಡವಾದರೂ, ಕನ್ನಡಿಯಂತೆ ಪಾರದರ್ಶಕವಿದ್ದು ಪುರುಷನನ್ನು ಪ್ರತಿಬಿಂಬಿಸುತ್ತದೆ. ಇದರ ಕಾರ್ಯ-ವಿವೇಚನೆ ಮತ್ತು ನಿರ್ಧಾರ.

ಬುದ್ಧಿಯಿಂದ ಅಹಂಕಾರ ಹುಟ್ಟುತ್ತದೆ. ನಾನು, ನನ್ನದು ಎಂಬ ಅಭಿಮಾನ ಅಹಂಕಾರಕ್ಕೆ. ಅದು ಇಂದ್ರಿಯ ಸಂವೇದನೆಗಳೆಲ್ಲ ತನ್ನವೆಂದು ತಿಳಿಯುವದು. ತಾನೇ ಕರ್ತೃ ಎಂಬ ಮಮತ್ವ ಅದಕ್ಕೆ.

ಅಹಂಕಾರದಿಂದ ಎರಡು ಟಿಸಿಲುಗಳು: ಸತ್ತ್ವದ ಅಂಶ ಹೆಚ್ಚಾದಾಗ ಮನಸ್ಸು, ಜ್ಞಾನೇಂದ್ರಿಯಗಳು ಮತ್ತು ಕರ್ಮೇಂದ್ರಿಯಗಳು ಹುಟ್ಟುತ್ತವೆ. ತಮಸ್ಸಿನ ಅಂಶ ಹೆಚ್ಚಿದಾಗ ಪಂಚತನ್ಮಾತ್ರಗಳು ಉದ್ಭವಿಸುತ್ತವೆ. ತನ್ಮಾತ್ರಗಳಿಂದ ಪಂಚ ಮಹಾಭೂತಗಳು ಜನಿಸುತ್ತವೆ. ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಇವು ಪಂಚ ಜ್ಞಾನೇಂದ್ರಿಯಗಳು. ವಾಕ್, ಪಾಣಿ, ಪಾದ, ಪಾಯು, ಜನನಾಂಗ- ಇವು ಪಂಚ ಕರ್ಮೇಂದ್ರಿಯಗಳು. ಮನಸ್ಸು ಈ ಇಂದ್ರಿಯಗಳು ತೋರಿಸುವ ಪ್ರತ್ಯೇಕ ವಿಷಯಗಳನ್ನು ಸಮನ್ವಯಗೊಳಿಸುತ್ತದೆ. ಗುಣ, ಪರಿಣಾಮ- ಇತ್ಯಾದಿ ಭೇದಗಳನ್ನು ಅದು ತಿಳಿಸುತ್ತದೆ. ರೂಪ, ರಸ, ಗಂಧ, ಶಬ್ದ ಮತ್ತು ಸ್ಪರ್ಶಗಳೆಂಬ ಪಂಚ ತನ್ಮಾತ್ರಗಳು. ಅವುಗಳಿಂದ ಪೃಥ್ವಿ, ಅಪ್, ತೇಜ, ವಾಯು ಮತ್ತು ಆಕಾಶಗಳೆಂಬ ಪಂಚ ಮಹಾಭೂತಗಳು ಜನಿಸುತ್ತವೆ. ಈ ಪಂಚ ಮಹಾಭೂತಗಳಿಂದ ಸಮಸ್ತ ಪ್ರಪಂಚ ಉದ್ಭವಿಸುತ್ತದೆ. ಪ್ರಳಯಕಾಲದಲ್ಲಿ ಇವೆಲ್ಲ ಪುನಃ ಪ್ರಕೃತಿಯ ಗರ್ಭವನ್ನು ಸೇರುತ್ತವೆ. ಸೃಷ್ಟಿ ಮತ್ತು ಪ್ರಳಯ ಚಕ್ರದಂತೆ ಸಾಗುತ್ತವೆ. ಅವುಗಳ ಉದ್ದೇಶ ಪುರುಷರ ಭೋಗ ಮತ್ತು ಅಪವರ್ಗ. ವ್ಯಕ್ತಾವ್ಯಕ್ತಜ್ಞ ಜ್ಞಾನದಿಂದ ಪ್ರಕೃತಿಯ ನಾಟಕವನ್ನು ಸಾಕ್ಷಿಯಂತೆ ಅನುಭವಿಸಿ ಪುರುಷರು ಮುಕ್ತಗೊಳ್ಳುವರು.

ಪ್ರಕೃತಿ-ಪುರುಷ ಸಂಬಂಧ: ಸಾಂಖ್ಯರ ಸಾದೃಶ್ಯಗಳು ಮತ್ತು ಅವುಗಳನ್ನು ಕುರಿತು ಶಂಕರರ ಆಕ್ಷೇಪಣೆಗಳು

ಪ್ರಕೃತಿಯು ಅಚೇತನವಾದದ್ದು. ಅದರಿಂದ ಜಗತ್ತಿನ ವಿಕಾಸ ಹೇಗೆ ಸಾಧ್ಯ? ಅಚೇತನವಾದ ಪ್ರಕೃತಿಗೆ ವಿಕಾಸದ ಉದ್ದೇಶವನ್ನು ನಾವು ಅನ್ವಯಿಸುವದು ಸಾಧ್ಯವೆ?

ಪ್ರಕೃತಿಯು ತನಗಾಗಿ ಅಲ್ಲ, ಅದು ಪುರುಷನ ಭೋಗ ಮತ್ತು ಅಪವರ್ಗಗಳಿಗಾಗಿ ವಿಕಾಸ ಕ್ರಿಯೆಯನ್ನು ಕೈಕೊಳ್ಳುತ್ತದೆಯೆಂದು ಸಾಂಖ್ಯರ ಉತ್ತರ. ಆಕಳ ಮೊಲೆಗಳಿಂದ ಕರುವಿಗಾಗಿ ಹಾಲು ಒಂದೇ ಸಮನೆ ಸುರಿಯುತ್ತಿರುತ್ತದೆ. ಅದೇ ರೀತಿ ಪುರುಷನ ವಿಮುಕ್ತಿಗಾಗಿ ಪ್ರಕೃತಿ ವಿಕಾಸದ ತನ್ನ ಕಾರ್ಯವನ್ನು ಮುಂದುವರೆಸುತ್ತಾಳೆ.

ಪ್ರಕೃತಿಯ ವಿಕಾಸಕ್ಕೆ ಪುರುಷ ಸನ್ನಿಧಾನವಿದ್ದರೆ ಸಾಕು. ಲೋಹಚುಂಬಕ ದೂರದಿಂದ ಕಬ್ಬಿಣದ ಕಣಗಳನ್ನು ಆಕರ್ಷಿಸುತ್ತದೆ. ಅದೇ ರೀತಿ ಪ್ರಕೃತಿ ದೂರದ ಪುರುಷನಿಂದ ಸ್ಫುರಣೆಗೊಂಡು ವಿಕಾಸವನ್ನು ಪ್ರಾರಂಭಿಸುತ್ತಾಳೆ.

ಪ್ರಕೃತಿ-ಪುರುಷರ ಸಂಬಂಧ ಕುರುಡ ಕುಂಟರ ಸಹಕಾರದಂತೆ. ಹಳ್ಳವನ್ನು

ದಾಟಲು ಹೆಳವ ಕುರುಡನ ಹೆಗಲ ಮೇಲೆ ಕೂಡುತ್ತಾನೆ. ಆತ ದಾರಿ ತೋರಿಸುತ್ತಾನೆ. ಕುರುಡ ಹೆಳವನನ್ನು ಹಳ್ಳ ದಾಟಿಸುತ್ತಾನೆ. ಅದೇ ರೀತಿ ಪ್ರಕೃತಿ ಕುರುಡ. ಅದಕ್ಕೆ ಚೈತನ್ಯವಿಲ್ಲ. ಪುರುಷನು ಚೈತನ್ಯ ಕೇಂದ್ರನೇನೋ ನಿಜ. ಆದರೆ ಹೆಳವ. ವಿಕಾಸದಲ್ಲಿ ಈರ್ವರ ಸಹಕಾರವಿದೆ.

ಶಂಕರರು ಮೇಲಿನ ದೃಷ್ಟಾಂತಗಳನ್ನು ಖಂಡಿಸುತ್ತಾರೆ. ಆಕಳು ಮತ್ತು ಅದರ ಕರು ಜೀವಂತ ಪ್ರಾಣಿಗಳು. ಆದರೆ ಪ್ರಕೃತಿ ಜಡ, ಅದಕ್ಕೆ ಚೈತನ್ಯವಿಲ್ಲ. ತಿಂದ ಹುಲ್ಲು ಆಕಳ ಹೊಟ್ಟೆಯಲ್ಲಿ ಹಾಲಾಗುತ್ತದೆ. ಆದರೆ ಎತ್ತಿನಲ್ಲಿ ಅಥವಾ ಸತ್ತ ಗೂಳಿಯಲ್ಲಿ ಅದು ಹಾಲಾಗಿ ಪರಿವರ್ತನೆ ಹೊಂದುವುದಿಲ್ಲ. ಲೋಹಚುಂಬಕ ತನ್ನ ಕ್ಷೇತ್ರದಲ್ಲಿದ್ದ ಕಬ್ಬಿಣದ ಕಣಗಳನ್ನು ಮಾತ್ರ ಆಕರ್ಷಿಸುತ್ತದೆ. ಈ ಸಾನ್ನಿಧ್ಯ ಇನ್ನೊಬ್ಬರಿಂದ ಸಾಧ್ಯ. ಸಾಂಖ್ಯದರ್ಶನದಲ್ಲಿ ಪುರುಷ-ಪ್ರಕೃತಿಯನ್ನು ಬಿಟ್ಟರೆ ಅವರಿಬ್ಬರನ್ನು ಕೂಡಿಸುವ ಬೇರಾವ ತತ್ತ್ವ ಇಲ್ಲ. ಹೆಳವ-ಕುರುಡರ ದೃಷ್ಟಾಂತವೂ ಸರಿಯಾಗಿಲ್ಲ. ಹೆಳವ ಮತ್ತು ಕುರುಡ ಈರ್ವರೂ ಸಚೇತನರು. ಅವರೀರ್ವರಿಗೆ ಸಾಮಾನ್ಯವಾದ ಉದ್ದೇಶವಿದೆ: ಹಳ್ಳ ದಾಟುವುದು. ಆದರೆ ಸಾಂಖ್ಯದರ್ಶನದಲ್ಲಿ ಪುರುಷ ಮತ್ತು ಪ್ರಕೃತಿ ಸ್ವತಂತ್ರ ತತ್ತ್ವಗಳು. ಒಂದು ಉತ್ತರ ಧ್ರುವ ಮತ್ತೊಂದು ದಕ್ಷಿಣ ಧ್ರುವ. ಅವರಿಬ್ಬರಲ್ಲಿ ಸಾಮಾನ್ಯ ಉದ್ದೇಶವಿರಲು ಸಾಧ್ಯವೇ ಇಲ್ಲ.

ಪರಿಸಮಾಪ್ತಿ

ತತ್ತ್ವಶಾಸ್ತ್ರದ ಇತಿಹಾಸದಲ್ಲಿ ಅನೇಕ ಬದಲಾವಣೆಗಳಾಗಿವೆ. ಸಾರ್ತ್ರನ ಅಸ್ತಿತ್ತ್ವವಾದವು (Existentialism) ಮಾನವ ಅಸ್ತಿತ್ವಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟು, ಅಸ್ತಿತ್ತ್ವದ ಸಾರ, ತಿರುಳು (Essence) - ಆತ್ಮ - ಇವುಗಳನ್ನು ಅಲ್ಲಗಳೆದಿದೆ. ದೇವರು, ಆತ್ಮ, ಅಮರತೆ- ಇವೆಲ್ಲ ಬರಿ ಶಬ್ದಗಳು. ಅವು ಗೊಂದಲ ಎಬ್ಬಿಸಿ ಮನುಷ್ಯನ ಬುದ್ಧಿಯನ್ನು ಮರಳು ಮಾಡಿವೆ. ತತ್ತ್ವಶಾಸ್ತ್ರವು ಭಾಷಾ ವಿಶ್ಲೇಷಣೆಯ ಅಸ್ತ್ರವನ್ನು ಪ್ರಯೋಗಿಸಿ ಈ ಮರುಳತನವನ್ನು ಹೋಗಲಾಡಿಸಬೇಕು. (Philosophy is a bewitchment of Irrelligence by means of Language). ಇದು Wittgensten ಅವರ ವಾದ.

ನನ್ನ ದೃಷ್ಟಿಯಲ್ಲಿ ಮೇಲಿನ ವಾದಗಳನ್ನು ಒಪ್ಪಿಕೊಂಡರೆ ತತ್ತ್ವಶಾಸ್ತ್ರದ ಸಾರವೇ ಹೊರಟು ಹೋಗುತ್ತದೆ. ಪರತತ್ತ್ವ, ಜಗತ್ತು ಮತ್ತು ಜೀವ ಅದರ ಬಂಧ ಮತ್ತು ಮೋಕ್ಷ- ಇವು ತತ್ತ್ವಶಾಸ್ತ್ರದ ನಿರಂತರ ಸಮಸ್ಯೆಗಳೆಂದು ನನಗೆನಿಸುತ್ತದೆ. ಷಡ್‌ದರ್ಶನಗಳಲ್ಲಿ ನ್ಯಾಯ-ವೈಶೇಷಿಕರು ತಮ್ಮ ಸಪ್ತಪದಾರ್ಥಗಳಿಂದ,

ಅಸತ್-ಕಾರ್ಯವಾದದಿಂದ, ಅಣುವಾದದಿಂದ ಈ ಸಮಸ್ಯೆಗಳನ್ನು ಬಿಡಿಸಲು ಯತ್ನಿಸಿದರು. ಅವರಲ್ಲಿಯ ದೋಷಗಳನ್ನು ನಿವಾರಿಸುವ ದೃಷ್ಟಿಯಿಂದ ಸಾಂಖ್ಯರು ಪ್ರಕೃತಿ-ಪುರುಷ ತತ್ತ್ವಗಳನ್ನು ಮುಂದಿಟ್ಟು ವಿಕಾಸವಾದವನ್ನು, ಪರಿಣಾಮವಾದವನ್ನು, ಸತ್-ಕಾರ್ಯವಾದವನ್ನು ವಿವರಿಸಿದರು. ಆದರೆ ಈ ಪ್ರಯತ್ನದಲ್ಲಿ ಅವರಲ್ಲಿಯೂ ಕೊರತೆಗಳಿವೆ.

ಪ್ರಕೃತಿಯ ವಿಕಾಸ ಪ್ರಾರಂಭವಾಗುವದೇ ಕಠಿಣ. ಗುಣಗಳಲ್ಲಿ ಕ್ಷೋಭೆಯುಂಟಾಗಬೇಕಾದರೆ ಬಾಹ್ಯ ಕರ್ತೃ ಬೇಕು. ಆದರೆ ಸಾಂಖ್ಯ ಪುರುಷನು ನಿಷ್ಕ್ರಿಯ.

ಒಮ್ಮೆ ಪ್ರಾರಂಭವಾದ ವಿಕಾಸ ನಿಲ್ಲುವುದು ಕಠಿಣ. ಏಕೆಂದರೆ ಪ್ರಕೃತಿ-ಪುರುಷರು ನಿತ್ಯರು.

ಪರಿಪೂರ್ಣವಾದ ಪುರುಷನಿಗೆ ಬಂಧ-ಮೋಕ್ಷಗಳನ್ನು ಅನ್ವಯಿಸುವದು ತಪ್ಪಾಗುವದು. ಸಾಂಖ್ಯ ಪುರುಷರು ಕೇವಲ ವ್ಯಾವಹಾರಿಕ ಜೀವಗಳಾಗಿ (Emfirical Selves) ತಲೆದೋರುತ್ತಾರೆ.

ಈ ದೋಷವನ್ನು ನಿವಾರಿಸುವುದಕ್ಕಾಗಿ ಅದ್ವೈತಿಗಳು ಬ್ರಹ್ಮ/ಆತ್ಮ ಏಕತತ್ತ್ವವೆಂದು ಹೇಳಿ ಮಾಯೆಯ ಮೂಲಕ ಏಕನಾದ ಬ್ರಹ್ಮ ವಿವಿಧ ಜೀವಗಳಾಗಿ ಮತ್ತು ಭೌತ ವಸ್ತುಗಳಾಗಿ ಕಾಣಿಸಿಕೊಳ್ಳುತ್ತಾನೆಂದು ಪ್ರತಿಪಾದಿಸುತ್ತಾರೆ.

ಮಾಯಾತತ್ತ್ವವನ್ನು ಒಪ್ಪದ ದ್ವೈತಿಗಳು ಪರಮ ಪುರುಷನ-ಪರಮಾತ್ಮನ ಅಧೀನವಾಗಿ ಪ್ರಕೃತಿ, ದೇಶ, ಕಾಲಗಳು ಕೆಲಸ ಮಾಡುತ್ತವೆಯೆಂದು ಸಾರಿ, ಸಾಂಖ್ಯ ವಾಸ್ತವವಾದದ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾರೆ.

***

ನ್ಯಾಯದರ್ಶನ

ಡಿ. ಪ್ರಹ್ಲಾದಾಚಾರ್

ದಾರ್ಶನಿಕರ ನೆಲವೀಡಾದ ಭಾರತ ಭೂಮಿಯಲ್ಲಿ ಅತಿ ಪ್ರಾಚೀನ ಕಾಲದಿಂದ ಹಲವಾರು ದರ್ಶನಗಳು ಬೆಳೆದು ಬಂದಿವೆ ಎನ್ನುವುದು ಸರ್ವವಿದಿತ. ವಿಮರ್ಶಕರು ಈ ದರ್ಶನಗಳನ್ನು ಆಸ್ತಿಕದರ್ಶನ ಮತ್ತು ನಾಸ್ತಿಕದರ್ಶನ ಎಂದು ಎರಡು ಬಗೆಯಾಗಿ ವಿಂಗಡಿಸಿದ್ದಾರೆ. ವೇದಗಳ ಪ್ರಾಮಾಣ್ಯವನ್ನೂ, ಅವುಗಳ ಮಹತಿಯನ್ನು ಅಂಗೀಕರಿಸುವ ದರ್ಶನಗಳು ಆಸ್ತಿಕದರ್ಶನಗಳೆಂದೂ, ಅದನ್ನು ವಿರೋಧಿಸುವ ದರ್ಶನಗಳು ನಾಸ್ತಿಕದರ್ಶನಗಳೆಂದೂ ಕರೆಯಲ್ಪಡುತ್ತವೆ. ಈ ದೃಷ್ಟಿಯಿಂದ, ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸಾ ಮತ್ತು ಉತ್ತರ ಮೀಮಾಂಸಾ ಅಥವಾ ವೇದಾಂತದರ್ಶನಗಳು ಆಸ್ತಿಕದರ್ಶನಗಳೆಂದೂ. ಚಾರ್ವಾಕ, ಜೈನ, ಬೌದ್ಧ ಮೊದಲಾದ ದರ್ಶನಗಳು ನಾಸ್ತಿಕದರ್ಶನಗಳೆಂದೂ ಪರಿಗಣಿತವಾಗಿವೆ. ಆಸ್ತಿಕದರ್ಶನಗಳಲ್ಲಿ ಒಂದಾದ ನ್ಯಾಯದರ್ಶನದ ಸಂಕ್ಷಿಪ್ತ ಪರಿಚಯವನ್ನು ಈ ಲೇಖನದಲ್ಲಿ ಮಾಡಿಕೊಡುವ ಪ್ರಯತ್ನ ಮಾಡಲಾಗಿದೆ.

ನ್ಯಾಯದರ್ಶನದ ಪ್ರವರ್ತಕ-ಅಕ್ಷಪಾದ ಗೋತಮ

ನ್ಯಾಯಸೂತ್ರಗಳ ರಚನೆಯ ಮೂಲಕ ನ್ಯಾಯದರ್ಶನವನ್ನು ಪ್ರತಿಷ್ಠಾಪಿಸಿದ ಕೀರ್ತಿಗೆ ಭಾಜನನಾದ ಅಕ್ಷಪಾದ ಗೋತಮನ ಕಾಲದ ಬಗ್ಗೆ ವಿವಾದವಿದೆ. ಪಾಶ್ಚಾತ್ಯ ವಿಮರ್ಶಕರು ಕ್ರಿ.ಶ. ೨ ನೇ ಶತಮಾನವನ್ನು ಗೋತಮನ ಕಾಲವೆಂದು ಅಂಗೀಕರಿಸಿದರೂ, ಸಾಂಪ್ರದಾಯಿಕ ವಿದ್ವಾಂಸರು ಈ ವಾದವನ್ನು ಕೇವಲ ಊಹಾಪೋಹವೆಂದೂ, ನಿಖರವಾಗಿ ಕಾಲನಿರ್ಣಯಿಸುವ ಆಧಾರವಿಲ್ಲವೆಂದೂ ಅಭಿಪ್ರಾಯಪಡುತ್ತಾರೆ. ಈತನ ಹೆಸರಿನ ಬಗ್ಗೆಯೂ ವಿವಾದವಿದೆ. ಕೆಲವರು ಇವನನ್ನು ಗೌತಮನೆಂದು ಕರೆದರೆ, ಇತರರು ಗೋತಮನೆಂದೇ ಈತನನ್ನು ಕರೆಯುತ್ತಾರೆ. ಇವನು ಹುಟ್ಟಿನಿಂದ ಕುರುಡನಾಗಿದ್ದು ದೇವತಾನುಗ್ರಹದಿಂದ ತನ್ನ ಪಾದದಲ್ಲಿ ನೇತ್ರಗಳನ್ನು ಪಡೆದಿದ್ದರಿಂದ ಅಕ್ಷಪಾದನೆಂದು ಪ್ರಸಿದ್ಧನಾದನೆಂದು ದಂತಕಥೆಗಳಿವೆ. ವೇದಗಳಲ್ಲಿ ಪ್ರಸಿದ್ಧನಾದ ದೀರ್ಘತಮಸ್ ಎಂಬ ಋಷಿಯೇ ಇವನೆಂದೂ, ಜಾತ್ಯಂಧನಾದ್ದರಿಂದ ಅಕ್ಷನೆಂದು ಹೆಸರು ಪಡೆದು ಮುಂದೆ ಗೌರವಸೂಚಕವಾಗಿ ಪಾದಶಬ್ದ ಸೇರಿದ್ದರಿಂದ 'ಅಕ್ಷಪಾದ' ಎಂದು ಪ್ರಸಿದ್ಧನಾದನೆಂದೂ, ದೇವಲೋಕದ ಗೋವು-ಕಾಮಧೇನುವಿನ ಅನುಗ್ರಹದಿಂದ ದೃಷ್ಟಿಯನ್ನು ಪಡೆದಿದ್ದರಿಂದ ಗೋತಮನೆಂದೂ ಕರೆಯಲ್ಪಟ್ಟನೆಂದೂ ಐತಿಹ್ಯಗಳಿವೆ. ಒಟ್ಟಿನಲ್ಲಿ ನ್ಯಾಯದರ್ಶನದ ಆಕರಗ್ರಂಥವಾದ ನ್ಯಾಯಸೂತ್ರಗಳನ್ನು ಅಕ್ಷಪಾದ ಗೋತಮನು ರಚಿಸಿದನೆಂದು ಎಲ್ಲರೂ ಒಪ್ಪಿರುವ ಅಂಶವಾಗಿದೆ.

ನ್ಯಾಯಸೂತ್ರಗಳು ಮತ್ತು ಅದರ ವ್ಯಾಖ್ಯಾನಗಳು

ಗೋತಮ ಮಹರ್ಷಿಯು ರಚಿಸಿರುವ ನ್ಯಾಯಸೂತ್ರ ಗ್ರಂಥವು ೫ ಅಧ್ಯಾಯಗಳನ್ನೊಳಗೊಂಡಿದೆ. ಪ್ರತಿಯೊಂದು ಅಧ್ಯಾಯವೂ ೨ ಆಹ್ನಿಕಗಳೆಂಬ ಪರಿಚ್ಛೇದಗಳನ್ನು ಹೊಂದಿದೆ. ಪ್ರತಿಯೊಂದು ಆಹ್ನಿಕದಲ್ಲಿಯೂ ಅನೇಕ ಪ್ರಕರಣಗಳಿವೆ. ಒಂದೊಂದು ಪ್ರಕರಣವು ಅನೇಕ ಸೂತ್ರಗಳ ಮೂಲಕ ತಾನು ಪ್ರತಿಪಾದಿಸುವ ವಿಷಯದ ಬಗ್ಗೆ ಆಕ್ಷೇಪಗಳನ್ನೆತ್ತಿ ಅವುಗಳಿಗೆ ಸಮಾಧಾನ ನೀಡಿ ಆ ವಿಷಯದ ಬಗ್ಗೆ ನ್ಯಾಯದರ್ಶನದ ನಿಷ್ಕೃಷ್ಟ ನಿಲುಮೆಯನ್ನು ತಿಳಿಸುತ್ತದೆ. ಹೀಗೆ ಸಮಗ್ರ ನ್ಯಾಯಸಿದ್ಧಾಂತದ ದರ್ಶನವನ್ನು ಮಾಡಿಸುವ ಈ ಆಕರ ಗ್ರಂಥಕ್ಕೆ ವಾತ್ಸ್ಯಾಯನರು ಭಾಷ್ಯವನ್ನು ಬರೆದಿದ್ದಾರೆ. ಅನಂತರ ಬಂದ ದಿಙ್ನಾಗ ಮೊದಲಾದ ಬೌದ್ಧರು ನ್ಯಾಯಸಿದ್ಧಾಂತದ ಮೇಲೆ ಎತ್ತಿದ ಆಕ್ಷೇಪಗಳನ್ನು ಪರಿಹರಿಸಲು ನೈಯಾಯಿಕ ಪ್ರವರನೆನಿಸಿದ ಉದ್ಯೋತಕರನು 'ನ್ಯಾಯವಾರ್ತಿಕ' ವೆಂಬ ಗ್ರಂಥವನ್ನು ರಚಿಸಿ ಸೂತ್ರ-ಭಾಷ್ಯಗಳ ವಿಶದ ವಿವರಣೆಯನ್ನು ನೀಡಿದ್ದಾನೆ. ಬೌದ್ಧರು ನ್ಯಾಯವಾರ್ತಿಕ ಗ್ರಂಥವನ್ನೂ ಖಂಡಿಸಿದಾಗ ಷಡ್‌ದರ್ಶನಗಳಲ್ಲೂ ಅಪ್ರತಿಮ ವೈದುಷ್ಯವನ್ನು ಪಡೆದಿದ್ದ ವಾಚಸ್ಪತಿಮಿಶ್ರನು 'ನ್ಯಾಯವಾರ್ತಿಕ ತಾತ್ಪರ್ಯಟೀಕಾ' ಎಂಬ ಗ್ರಂಥವನ್ನು ವಿರಚಿಸಿ ಉದ್ಯೋತಕರನ ಸಮರ್ಥನೆಯನ್ನು ಮಾಡಿದ್ದಾನೆ. ಮಹಾತಾರ್ಕಿಕನೆಂದು ಹೆಸರಾಂತ ಉದಯನಾಚಾರ್ಯನು ನ್ಯಾಯವಾರ್ತಿಕ ತಾತ್ಪರ್ಯಟೀಕಾಕ್ಕೆ ತಾತ್ಪರ್ಯಪರಿಶುದ್ಧಿ ಎಂಬ ವ್ಯಾಖ್ಯಾನವನ್ನು ರಚಿಸಿದ್ದೇ ಅಲ್ಲದೆ ನ್ಯಾಯಕುಸುಮಾಂಜಲಿ, ಆತ್ಮತತ್ತ್ವವಿವೇಕ ಮೊದಲಾದ ಪ್ರೌಢ ಗ್ರಂಥಗಳನ್ನು ನಿರ್ಮಿಸಿ ನ್ಯಾಯಸಿದ್ಧಾಂತದ ಮೇಲ್ಮೆಯನ್ನು ಸಾಧಿಸಿದ್ದಾನೆ. ಜಯಂತಭಟ್ಟನೆಂದು ಮತ್ತೊಬ್ಬ ನೈಯಾಯಿಕ ಮೂರ್ಧನ್ಯನು ರಚಿಸಿದ 'ನ್ಯಾಯಮಂಜರೀ' ಎಂಬ ಉದ್ಗ್ರಂಥವೂ ನ್ಯಾಯಸೂತ್ರಗಳ ವ್ಯಾಖ್ಯಾನವೇ ಆಗಿದ್ದು ಅತಿ ಪ್ರಬಲವಾದ ನ್ಯಾಯಸಿದ್ಧಾಂತದ ಸಮರ್ಥನೆಯನ್ನು ನೀಡುತ್ತದೆ.

ನವ್ಯ ನ್ಯಾಯಶಾಸ್ತ್ರ

ಉದಯನಾಚಾರ್ಯನವರೆಗೆ ರಚಿತವಾದ ನ್ಯಾಯಶಾಸ್ತ್ರದ ಗ್ರಂಥಗಳನ್ನು ಪ್ರಾಚೀನ ನ್ಯಾಯಶಾಸ್ತ್ರವೆಂದು ಗುರುತಿಸುವ ಮತ್ತು ೧೩ ನೇ ಶತಮಾನದಲ್ಲಿ, ಈಗಿನ ಬಿಹಾರದ ಮಿಥಿಲಾಪ್ರದೇಶದಲ್ಲಿ ಜನಿಸಿದ ಗಂಗೇಶೋಪಾಧ್ಯಾಯ ಮತ್ತು ಅನಂತರ ಬಂದ ತಾರ್ಕಿಕರು ರಚಿಸಿದ ಗ್ರಂಥಗಳನ್ನು ನವ್ಯನ್ಯಾಯಶಾಸ್ತ್ರವೆಂದು ಕರೆಯುವ ಸಂಪ್ರದಾಯವಿದೆ. ಗಂಗೇಶೋಪಾಧ್ಯಾಯನು ರಚಿಸಿದ ತತ್ತ್ವಚಿಂತಾಮಣಿ ಎಂಬ ಗ್ರಂಥವು ಗೋತಮನ ನ್ಯಾಯಸೂತ್ರದಲ್ಲಿರುವ ವಿಷಯಗಳ ಸಮರ್ಥನೆಯನ್ನೇ ಮಾಡಿದರೂ, ಅತಿ ನಿಷ್ಕೃಷ್ಟವಾಗಿ ವಿಷಯ ವಿವೇಚನೆಯನ್ನು ಮಾಡಲು ಸಹಾಯಕವಾಗುವ, ನೂತನ ಪರಿಭಾಷೆಯನ್ನೊಳಗೊಂಡ ಶೈಲಿಯನ್ನು ಅಳವಡಿಸಿಕೊಂಡಿದ್ದರಿಂದ, ಆ ಗ್ರಂಥವನ್ನೂ

ಮತ್ತು ಮುಂದಿನ ಅದರ ವ್ಯಾಖ್ಯಾನೋಪವ್ಯಾಖ್ಯಾನಗಳ ರೂಪದಲ್ಲಿರುವ ಗ್ರಂಥಗಳನ್ನು ನವ್ಯನ್ಯಾಯಶಾಸ್ತ್ರವೆಂದು ಕರೆಯುವ ವಾಡಿಕೆ ಬಂದಿತು. ಈ ನವ್ಯ ನೈಯಾಯಿಕರಲ್ಲಿ ಜಗದೀಶ ತರ್ಕಾಲಂಕಾರ, ಗದಾಧರಭಟ್ಟಾಚಾರ್ಯ, ಮಥುರಾನಾಥ ತರ್ಕವಾಗೀಶ ಮೊದಲಾದವರು ಅತ್ಯಂತ ಮಹತ್ತ್ವದ ತತ್ತ್ವಚಿಂತಾಮಣಿ ವ್ಯಾಖ್ಯಾನಗಳನ್ನು ರಚಿಸಿದ್ದಾರೆ.

ನ್ಯಾಯದರ್ಶನಸಾರ

ನ್ಯಾಯದರ್ಶನದ ಪ್ರಕಾರ, ಮಾನವನ ಪರಮಗುರಿಯಾದ ನಿಃಶ್ರೇಯಸ ಅಥವಾ ಮುಕ್ತಿಯು, ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ, ದೃಷ್ಟಾಂತ, ಸಿದ್ಧಾಂತ, ಅವಯವ, ತರ್ಕ, ನಿರ್ಣಯ, ವಾದ, ಜಲ್ಪ, ವಿತಂಡಾ, ಹೇತ್ವಾಭಾಸ, ಛಲ, ಜಾತಿ, ನಿಗ್ರಹಸ್ಥಾನ ಎಂಬ ಹದಿನಾರು ಪದಾರ್ಥಗಳ ತತ್ತ್ವಜ್ಞಾನದಿಂದ ಉಂಟಾಗುತ್ತದೆ. 'ಪ್ರಮಾಣ- ಪ್ರಮೇಯ- ಸಂಶಯ- ಪ್ರಯೋಜನ- ದೃಷ್ಟಾಂತ-ಸಿದ್ಧಾಂತ-ಅವಯವ-ತರ್ಕ-ನಿರ್ಣಯು -ವಾದ-ಜಲ್ಪ-ತಂಡಾ- ಹೇತ್ವಾಭಾಸ-ಛಲ-ಜಾತಿ-ನಿಗ್ರಹಸ್ಥಾನಾನಾಂತತ್ತ್ವಜ್ಞಾನಾತ್ ನಿಃಶ್ರೇಯಸಾಧಿಗಮಃ (ನ್ಯಾ. ಸೂ ೧.೧.೧) ಎಂಬ ಸೂತ್ರವು ಈ ವಿಷಯವನ್ನು ಸ್ಪಷ್ಟಪಡಿಸಿದೆ.

ಈ ಹದಿನಾರು ಪದಾರ್ಥಗಳಲ್ಲಿ ಮೊದಲನೆಯದಾದ ಪ್ರಮಾಣವನ್ನು'ಯಥಾರ್ಥಾನುಭವಸಾಧನ'ವೆಂದು ನೈಯಾಯಿಕರು ವಿವರಿಸುತ್ತಾರೆ. ಒಂದು ಪದಾರ್ಥವನ್ನು, ಅದು ಯಾವು ಧರ್ಮವನ್ನು ಹೊಂದಿದೆಯೋ ಆ ಧರ್ಮವನ್ನು ಪಡೆದಿರುವಂತೆ ಗ್ರಹಿಸುವ ಅನುಭವ-ಯಥಾರ್ಥಾನುಭವ. ಉದಾಹರಣೆಗೆ ಒಂದು ಬಿಳಿಬಣ್ಣದ ಬಟ್ಟೆಯನ್ನು 'ಅದು ಬಿಳಿಯ ಬಟ್ಟೆ' ಎಂದು ಗ್ರಹಿಸುವ ಅನುಭವ. ಇಂತಹ ಯಥಾರ್ಥಾನುಭವಕ್ಕೆ ಸಾಧನವಾದ ಪ್ರಮಾಣಗಳು- ಪ್ರತ್ಯಕ್ಷ, ಅನುಮಾನ,ಉಪಮಾನ ಮತ್ತು ಶಬ್ದ ಎಂದು ನಾಲ್ಕು ವಿಧದ್ದೆಂದು ನೈಯಾಯಿಕರ ಸಿದ್ಧಾಂತ. ಇವುಗಳಲ್ಲಿ ಇಂದ್ರಿಯ ಮತ್ತು ವಸ್ತುಗಳ ಸನ್ನಿಕರ್ಷ ಅಂದರೆ ಸಂಬಂಧವೇ ಪ್ರತ್ಯಕ್ಷಪ್ರಮಾಣ. ಇಂತಹ ಪ್ರತ್ಯಕ್ಷದಿಂದ ಜನಿಸುವ ಪ್ರತ್ಯಕ್ಷಜ್ಞಾನರೂಪವಾದ ಅನುಭವವು ಸವಿಕಲ್ಪಕ ಮತ್ತು ನಿರ್ವಿಕಲ್ಪಕವೆಂದು ಎರಡು ವಿಧ. ಒಂದು ಪದಾರ್ಥವನ್ನು ಒಂದು ಧರ್ಮದಿಂದ ಯುಕ್ತವಾದುದೆಂದು ಗ್ರಹಿಸುವ ಪ್ರತ್ಯಕ್ಷಾನುಭವ ಸವಿಕಲ್ಪಕ ಪ್ರತ್ಯಕ್ಷವೆಂದು ಕರೆಯಲ್ಪಡುವುದು. ಯಾವುದೇ ಧರ್ಮವನ್ನು ಗ್ರಹಿಸದೆ ಕೇವಲ ವಸ್ತುವನ್ನು ಮಾತ್ರ ಗ್ರಹಿಸುವ ಪ್ರತ್ಯಕ್ಷವನ್ನು ನಿರ್ವಿಕಲ್ಪಕ ಪ್ರತ್ಯಕ್ಷವೆಂದು ಪರಿಗಣಿಸಲಾಗುವುದು.

ಅನುಮಾನವೆಂದರೆ ವ್ಯಾಪ್ತಿಜ್ಞಾನ. ಹೇತು-ಸಾಧ್ಯಗಳ ಅವ್ಯಭಿಚರಿತ ಸಂಬಂಧವೇ ವ್ಯಾಪ್ತಿ. ಅಗ್ನಿ ಇಲ್ಲದೇ ಎಂದೂ, ಎಲ್ಲೂ ಧೂಮ ಇರಲಾರದು. ಇಂತಹ ಅಗ್ನಿಯ ಸಂಬಂಧವನ್ನೇ ಅವ್ಯಭಿಚರಿತ ಸಂಬಂಧವೆಂದು ಕರೆಯುವರು. ಈ ಸಂಬಂಧವನ್ನು ಹೊಂದಿರುವ ಹೇತು-ಧೂಮ. ಈ ವ್ಯಾಪ್ತಿಜ್ಞಾನವು ಪರಾಮರ್ಶ ಎಂಬ ಜ್ಞಾನದ ಮೂಲಕ

'ಪರ್ವತವು ಅಗ್ನಿಯುಳ್ಳದ್ದು' ಎಂಬ ಅನುಮಿತಿಗೆ ಕಾರಣವಾಗುವುದು.

'ವ್ಯಾಪ್ತಿ ವಿಶಿಷ್ಟವಾದ ಹೇತುವು ಪಕ್ಷದಲ್ಲಿದೆ' ಎಂಬ ಜ್ಞಾನವನ್ನು ಪರಾಮರ್ಶವೆಂದು ಕರೆಯುವರು. ಎಲ್ಲಿ ನಾವು ಒಂದು ವಸ್ತುವನ್ನು ಸಾಧಿಸಬೇಕಾಗಿದೆಯೋ ಅದು ಪಕ್ಷ. ಉದಾ. ಪರ್ವತ. ಯಾವುದನ್ನು ಸಾಧಿಸಬೇಕಾಗಿರುವುದೋ ಅದು ಹೇತು. ಉದಾ. ಧೂಮ. 'ಅಗ್ನಿ ವ್ಯಾಪ್ತಿಯನ್ನು ಪಡೆದಿರುವ ಧೂಮವು ಪರ್ವತದಲ್ಲಿದೆ' ಎಂಬ ಜ್ಞಾನ ಪರಾಮರ್ಶಕ್ಕೆ ಉದಾಹರಣೆ. ಈ ಪರಾಮರ್ಶವು ನೇರವಾಗಿ 'ಪರ್ವತಃ ಅಗ್ನಿಮಾನ್' ಎಂಬ ಅನುಮಿತಿಯನ್ನು ಜನಿಸುವುದು.

ಪದ-ಪದಾರ್ಥಗಳ ಸಂಬಂಧದ ಜ್ಞಾನ-ಉಪಮಿತಿ, ಇದಕ್ಕೆ ಸಾಧನವಾದದ್ದು ಉಪಮಾನ ಪ್ರಮಾಣ. ಉಪಮಾನವೆಂದರೆ ಸಾದೃಶ್ಯಜ್ಞಾನ. 'ಗವಯವೆಂಬ ಪ್ರಾಣಿ ಗೋಸದೃಶವಾದದ್ದು' ಎಂಬ ಮಾತನ್ನು ಕೇಳಿರುವ ನಾಗರಿಕನೊಬ್ಬನು ಕಾಡಿಗೆ ಹೋದಾಗ ಗವಯವನ್ನು ನೋಡಿ ತಾನು ಹಿಂದೆ ಕೇಳಿದ ಗೋಸಾದೃಶ್ಯದ ಸ್ಮರಣೆ ಉಪಮಾನ ಪ್ರಮಾಣ. 'ಗವಯವು ಗವಯಶಬ್ದದ ಅರ್ಥವಾಗಿದೆ' ಎಂಬ ತಿಳಿವಳಿಕೆ ಉಪಮಿತಿ.

ಆಪ್ತವಾಕ್ಯವು ಶಬ್ದ ಪ್ರಮಾಣ. ವಾಕ್ಯದಲ್ಲಿರುವ ಪ್ರತಿಯೊಂದೂ ಪದಕ್ಕೂ ಅದರ ಅರ್ಥಕ್ಕೂ ಇರುವ ಸಂಬಂಧವನ್ನು ತಿಳಿದವನು ಆಕಾಂಕ್ಷೆ, ಯೋಗ್ಯತೆ, ಸನ್ನಿಧಿ ಮೊದಲಾದ ಸಹಕಾರಿ ಕಾರಣಗಳ ಸಹಾಯದಿಂದ ವಾಕ್ಯದ ಮೂಲಕ ಪಡೆಯುವ ಜ್ಞಾನ ಶಾಬ್ದಬೋಧವೆಂದೆನಿಸುತ್ತದೆ ಎಂದು ನೈಯಾಯಿಕರು ಪ್ರಮಾಣಗಳ ಸ್ವರೂಪವನ್ನು ವಿವರಿಸುವರು.

ಈ ಪ್ರಮಾಣಗಳ ಸಹಾಯದಿಂದ ತಿಳಿಯಬೇಕಾದ 'ಪ್ರಮೇಯ' ಎಂಬ ಪದಾರ್ಥವು ಆತ್ಮ,ಶರೀರ, ಇಂದ್ರಿಯ, ಅರ್ಥ, ಬುದ್ಧಿ, ಮನಸ್ಸು, ಪ್ರವೃತ್ತಿ, ದೋಷ, ಪ್ರೇತ್ಯಭಾವ, ಫಲ, ದುಃಖ ಮತ್ತು ಅಪವರ್ಗ ಎಂದು ಹನ್ನೆರಡು ವಿಧವಾದದ್ದು. ಈ ಪ್ರಮೇಯ ಯಥಾವತ್ತಾಗಿ ತಿಳಿದವನೇ ತತ್ತ್ವಜ್ಞಾನಿ. ಅವನೇ ಆತ್ಯಂತಿಕ ದುಃಖ ನಾಶರೂಪವಾದ ಮೋಕ್ಷವನ್ನು ಪಡೆಯಲು ಅರ್ಹನು. ಈ ಪ್ರಮೇಯಗಳ ತತ್ತ್ವ ಜ್ಞಾನವು, ಆತ್ಮನನ್ನು ಅನಾತ್ಮನೆಂದು, ದುಃಖವನ್ನೇ ಸುಖವೆಂದು, ಅನಿತ್ಯವನ್ನು ನಿತ್ಯವೆಂದು ನಾವು ಗ್ರಹಿಸಿ ಹೊಂದಿರುವ ಮಿಥ್ಯಾಜ್ಞಾನವನ್ನು ನಾಶಗೊಳಿಸುತ್ತದೆ. ಮಿಥ್ಯಾಜ್ಞಾನವು ನಷ್ಟವಾದಾಗ, ಮಿಥ್ಯಾಜ್ಞಾನದಿಂದ ನಮ್ಮಲ್ಲಿ ಉಂಟಾಗಿದ್ದ ರಾಗ ದ್ವೇಷಾದಿ ದೋಷಗಳು ನಷ್ಟವಾಗುತ್ತವೆ. ರಾಗ ದ್ವೇಷಾದಿ ದೋಷಗಳೇ ನಾವು ಮಾಡುವ ಹಿಂಸೆ, ಚೌರ್ಯ ಮೊದಲಾದ ಕಾಯಕ ಪ್ರವೃತ್ತಿಗೆ, ಅಸತ್ಯವಚನ ಮೊದಲಾದ ಮಾನಸಿಕ ಪ್ರವೃತ್ತಿಗೆ ಹಾಗೂ ಪರದ್ರೋಹ, ಪರದ್ರವ್ಯಾಭಿಲಾಷ, ನಾಸ್ತಿಕತೆ ಮೊದಲಾದ ಮಾನಸಿಕ ಪ್ರವೃತ್ತಿಗೂ ಕಾರಣಗಳು. ರಾಗ ದ್ವೇಷಾದಿ ದೋಷಗಳು ಪರಿಹೃತವಾದಾಗ ಇಂತಹ ಪ್ರವೃತ್ತಿಗಳೂ ನಮ್ಮಲ್ಲಿ ಉಂಟಾಗಲಾರವು- ಇಂತಹ ಪ್ರವೃತ್ತಿಯೆ ಶರೀರ- ಇಂದ್ರಿಯ-ಬುದ್ಧಿ ಇವುಗಳ ಪುನಃ ಸಂಬಂಧರೂಪವಾದ ಪುನರ್ಜನ್ಮಕ್ಕೆ ಕಾರಣ. ಪ್ರವೃತ್ತಿ ನಷ್ಟವಾದಾಗ ನಮಗೆ

ಪುನರ್ಜನ್ಮವೂ ಒದಗಲಾರದು. ಜನ್ಮವೆ ನಮಗೆ ಸಾಂಸಾರಿಕ ಪಾಪಸ್ವರೂಪವಾದ ದುಃಖಕ್ಕೆ ಕಾರಣವಾದುದರಿಂದ ಜನ್ಮವಿಲ್ಲದ ಸ್ಥಿತಿ ಒದಗಿದಾಗ ದುಃಖದ ಪ್ರಸಕ್ತಿಯೇ ಇಲ್ಲದೆ ನಾವು ಆತ್ಯಂತಿಕ ದುಃಖ ನಿವೃತ್ತಿಸ್ವರೂಪವಾದ ಅಪವರ್ಗ ಎಂದರೆ ಮುಕ್ತಿಯನ್ನು ಪಡೆಯುವೆವು. ಹೀಗೆ ತತ್ತ್ವಜ್ಞಾನವು ಮುಕ್ತಿಹೇತುವಾಗುವ ಬಗೆಯನ್ನು ಗೋತಮ ಮಹರ್ಷಿಗಳು **'ದುಃಖ-ಜನ್ಮ-ಪ್ರವೃತ್ತಿ-ದೋಷ-ಮಿಥ್ಯಾಜ್ಞಾನಾನಾಂ ಉತ್ತರೋತ್ತರಾಪಾಯೇ ತದನಂತರಾಪಾಯಾದ್ ಅಪವರ್ಗಃ'** (ನ್ಯಾ. ಸೂ. ೧.೧.೨) ಎಂಬ ಸೂತ್ರದ ಮೂಲಕ ವಿವರಿಸಿದ್ದಾರೆ.

ಹೀಗೆ, ಆತ್ಮ, ಶರೀರ ಮೊದಲಾದ ಹನ್ನೆರಡು ಪ್ರಮೇಯಗಳ ತತ್ತ್ವಜ್ಞಾನವೇ ಮುಕ್ತಿಗೆ ಸಾಧನವೆಂದು ಮನಗಾಣಿಸುವ ಅಕ್ಷಪಾದರು ಆತ್ಮಾದಿಗಳ ಸ್ವರೂಪವನ್ನೂ ಅವುಗಳನ್ನು ತಿಳಿಯುವ ಬಗೆಯನ್ನು ನಿರೂಪಿಸಿದ್ದಾರೆ. 'ಅಹಂ' ಎಂದು ನಾವು ಹೊಂದಿರುವ ಜ್ಞಾನವು ನಮ್ಮ ಶರೀರವನ್ನೇ ಗ್ರಹಿಸುವುದೆಂದೂ ಶರೀರಭಿನ್ನವಾದ ಆತ್ಮನೇ ಇಲ್ಲವೆಂದೂ ಕೆಲವರು ವಾದಿಸುವರು. ಆದರೆ ನಮ್ಮಲ್ಲಿ ಉತ್ಪನ್ನವಾಗುವ ಇಚ್ಛೆ, ದ್ವೇಷ, ಸುಖ, ದುಃಖ ಮೊದಲಾದವುಗಳು ಶರೀರದ ಧರ್ಮಗಳು ಆಗಲು ಸಾಧ್ಯವಿಲ್ಲದಿರುವುದರಿಂದ ಶರೀರಭಿನ್ನನಾದ ಆತ್ಮನಿರುವನೆಂದು ಸಿದ್ಧಿಸುವುದು. ಇಂತಹ ಆತ್ಮನಿಗೆ ಸುಃಖ ದುಃಖಗಳ ಭೋಗತಾಣವೇ ಶರೀರ. ಇದರಲ್ಲಿರುವ ಇಂದ್ರಿಯಗಳು ವಿಷಯ ಸಂಬಂಧದಿಂದ ಸುಖ ದುಃಖಗಳಿಗೆ ಕಾರಣವಾಗುವವು. ಆ ಇಂದ್ರಿಯಗಳು ಘ್ರಾಣ, ರಸನ, ಚಕ್ಷುಸ್, ತ್ವಕ್, ಶ್ರೋತ್ರ ಎಂದು ಐದು ವಿಧವಾಗಿವೆ. ಅವು ಪೃಥಿವೀ, ಜಲ, ತೇಜಸ್ಸು, ವಾಯು, ಆಕಾಶ ಎಂಬ ಪಂಚಭೂತಗಳಿಂದಲೇ ಉತ್ಪನ್ನವಾದುವು. ಪೃಥಿವೀ ಮೊದಲಾದ ಪಂಚಭೂತಗಳ ಗುಣಗಳಾದ ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದಗಳು ಈ ಇಂದ್ರಿಗಳ ವಿಷಯಗಳು, ಇವುಗಳನ್ನೇ ಅರ್ಥಗಳೆಂದೂ ಕರೆಯುವರು. ಇಂದ್ರಿಯ ಮತ್ತು ಅರ್ಥಗಳ ಸಂಬಂಧದಿಂದ ನಮಗೆ ಉಪಲಬ್ಧಿ, ಜ್ಞಾನ ಎಂದು ಕರೆಯಲ್ಪಡುವ ಅನುಭವಾತ್ಮಕವಾದ ಬುದ್ಧಿಯು ಜನಿಸುವುದು. ಪಂಚವಿಧವಾದ ಈ ಬಾಹ್ಯೇಂದ್ರಿಯಗಳಲ್ಲದೆ ಮನಸ್ಸೆಂಬ ಇನ್ನೊಂದು ಇಂದ್ರಿಯವೂ ಇದೆ. ಇದು ಅಂತರಿಂದ್ರಿಯ. ಇದರ ಸಂಬಂಧವಿದ್ದಾಗಲೇ ಇತರ ಇಂದ್ರಿಯಗಳು ಜ್ಞಾನವನ್ನು ಜನಿಸಬಲ್ಲವು. ಅಣುವಾದ ಮನಸ್ಸಿನ ಸಂಬಂಧ ಏಕಕಾಲಕ್ಕೆ ಎಲ್ಲ ಇಂದ್ರಿಯಗಳಿಗೂ ಇರಲಾರದಾದ್ದರಿಂದ ನಮಗೆ ಜ್ಞಾನಗಳು ಏಕಕಾಲಕ್ಕೆ ಹುಟ್ಟಲಾರವೆಂದು ನೈಯಾಯಿಕರ ಅಭಿಪ್ರಾಯ. ಈ ಮನಸ್ಸು ಮತ್ತು ಇತರ ಇಂದ್ರಿಯಗಳಿಂದ ಉಂಟಾಗುವ ಜ್ಞಾನವೇ ನಮ್ಮ ಶಾರೀರಿಕ, ಮಾನಸಿಕ ಮತ್ತು ವಾಚಿಕವಾದ ಎಲ್ಲ ಪುಣ್ಯ ಪಾಪಗಳಿಗೆ ಕಾರಣ. ಈ ಪುಣ್ಯಪಾಪಗಳನ್ನೇ ಪ್ರವೃತ್ತಿ ಎಂದೂ ಕರೆಯುವರು. ಪುಣ್ಯ-ಪಾಪರೂಪವಾದ ಪ್ರವೃತ್ತಿಗೆ ಕಾರಣವಾದದ್ದು ಹಿಂದೆ ತಿಳಿಸಿದಂತೆ ರಾಗ ದ್ವೇಷಾದಿ ದೋಷಗಳು. ಈ ಪ್ರವೃತ್ತಿಯು ಪ್ರೇತ್ಯಭಾವ ಅಂದರೆ ಪುನರುತ್ಪತ್ತಿಗೆ ಮುಖ್ಯಕಾರಣವಾಗಿದೆ. ಹೀಗೆ ಪ್ರವೃತ್ತಿ-ದೋಷಗಳು ಸಂಸಾರದ ಫಲವಾದ ಸುಖ, ದುಃಖಗಳ ಸಂವೇದನೆಯನ್ನು ಕೊಡುತ್ತವೆ. ಶರೀರ ಇಂದ್ರಿಯ ಮೊದಲಾದವುಗಳೆಲ್ಲವೂ ಒಟ್ಟಿನಲ್ಲಿ ದುಃಖಕ್ಕೇ ಸಾಧನವಾದ್ದರಿಂದ ದುಃಖಗಳೆಂದೇ

ಕರೆಯಲ್ಪಡುತ್ತವೆ. ಈ ಎಲ್ಲ ದುಃಖಗಳ ಅತ್ಯಂತ ವಿಮೋಕ್ಷವೇ ಅಪವರ್ಗ. ಆದ್ದರಿಂದಲೇ, ಅಪವರ್ಗವನ್ನು ಪಡೆಯಲು ಬಯಸುವವನು, ಆತ್ಮ, ಶರೀರ,ಇಂದ್ರಿಯ ಮೊದಲಾದ ಹನ್ನೆರಡು ಪ್ರಮೇಯಗಳ ತತ್ತ್ವಜ್ಞಾನವನ್ನು ಪಡೆಯುವುದು ಅತ್ಯಾವಶ್ಯಕವೆಂದು ನ್ಯಾಯದರ್ಶನವು ಪ್ರತಿಪಾದಿಸುತ್ತದೆ.

ಹೀಗೆ ನ್ಯಾಯದರ್ಶನವು ಅಪವರ್ಗಕ್ಕೆ ಕಾರಣವಾದ ಪ್ರಮಾಣ, ಪ್ರಮೇಯಗಳ ತತ್ತ್ವಜ್ಞಾನವನ್ನು ಪಡೆಯಬೇಕೆಂದು ಪ್ರತಿಪಾದಿಸಿ ಅವುಗಳ ವಿವೇಚನೆಯನ್ನು ವಿಸ್ತಾರವಾಗಿ ಮಾಡಲು ಹೊರಟಿದೆ. ಉಳಿದ, ಸಂಶಯ, ಪ್ರಯೋಜನ, ದೃಷ್ಟಾಂತ, ಸಿದ್ಧಾಂತ ಮೊದಲಾದ ಮೊದಲ ನ್ಯಾಯಸೂತ್ರದಲ್ಲಿ ಹೇಳಲ್ಪಟ್ಟ ಪದಾರ್ಥಗಳೂ ವಾಸ್ತವಿಕವಾಗಿ ಪ್ರಮಾಣ ಅಥವಾ ಪ್ರಮೇಯ ಎಂಬ ಮೊದಲ ಎರಡು ಪದಾರ್ಥಗಳಲ್ಲೇ ಅಂತರ್ಗತವಾಗುತ್ತವೆ. ಆದರೂ, ಅವುಗಳ ವಿಶೇಷ ರೀತಿಯ ತಿಳಿವಳಿಕೆ ನಮಗೆ ಅತ್ಯಾವಶ್ಯಕವೆಂದು ಸೂಚಿಸಲು ಅಕ್ಷಪಾದರು ಅವುಗಳನ್ನು ಪ್ರತ್ಯೇಕವಾಗಿ ಉಲ್ಲೇಖಿಸಿದ್ದಾರೆ. ಇವುಗಳಲ್ಲಿ ಸೇರಿರುವ ತರ್ಕ, ಹೇತ್ವಾಭಾಸ, ಮೊದಲಾದವುಗಳ ಸರಿಯಾದ ತಿಳಿವಳಿಕೆ ನಾವು ತತ್ತ್ವಜ್ಞಾನಕ್ಕೋಸ್ಕರ ನಡೆಸುವ ಚರ್ಚೆಗಳಲ್ಲಿ ಅತ್ಯಂತ ಉಪಯುಕ್ತವಾದದ್ದು. ಆದ್ದರಿಂದಲೇ ನ್ಯಾಯಶಾಸ್ತ್ರವು ಪ್ರತ್ಯಕ್ಷ, ಅನುಮಾನ ಮೊದಲಾದ ಪ್ರಮಾಣಗಳ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ವಿಸ್ತಾರವಾದ ವಿವೇಚನೆಗೆ ಅತ್ಯಂತ ಮಹತ್ತ್ವವನ್ನು ನೀಡುತ್ತದೆ. ಇದೇ ಕಾರಣದಿಂದ ಈ ಶಾಸ್ತ್ರವನ್ನು ಪ್ರಮಾಣಶಾಸ್ತ್ರವೆಂದು ಕರೆಯುವ ಪದ್ಧತಿ ಬೆಳೆದು ಬಂದಿದೆ. ಆತ್ಮ ಮೊದಲಾದ ಪ್ರಮೇಯಗಳ ವಿವೇಚನೆಯನ್ನು ತಮ್ಮ ಶಾಸ್ತ್ರದಲ್ಲಿ ವಿಶೇಷ ರೀತಿಯಿಂದ ಮಾಡದಿರುವುದರಿಂದಲೆ ನೈಯಾಯಿಕರು ಕಣಾದ ಮಹರ್ಷಿಯಿಂದ ಪ್ರವರ್ತಿತವಾದ ವೈಶೇಷಿಕದರ್ಶನವು ಮಾಡುವ ಪ್ರಮೇಯಗಳ ವಿವೇಚನೆ ಬಹುಮಟ್ಟಿಗೆ ಅಂಗೀಕಾರಾರ್ಹವೆಂದು ಭಾವಿಸಿ ಆ ದರ್ಶನವನ್ನೂ ತಮ್ಮ ದರ್ಶನದಿಂದ ಪೃಥಕ್ ಅಲ್ಲವೆಂದೇ ಪರಿಗಣಿಸಿದ್ದಾರೆ. ಆದ್ದರಿಂದಲೇ ಮುಂದೆ ಈ ಎರಡೂ ದರ್ಶನಗಳು ಸಂಗಮಿಸಿ ನ್ಯಾಯ ವೈಶೇಷಿಕದರ್ಶನವೆಂದು ಪ್ರಸಿದ್ಧವಾಗಿದೆ. ಈ ದರ್ಶನದ ಪರಿಚಯ ಯಾವುದೇ ಇತರ ದರ್ಶನದ ಅಭ್ಯಾಸಿಗೂ ಅತ್ಯಾವಶ್ಯಕವೆನ್ನುವುದು '**ಕಾಣಾದಂ ಪಾಣಿನೀಯಂ ಚ ಸರ್ವಶಾಸ್ತ್ರೋಪಕಾರಕಂ**' ಎಂಬ ನಾಣ್ಣುಡಿಯಿಂದ ಪ್ರಸಿದ್ಧವಾಗಿದೆ. ಇದೇ ಅಂಶವನ್ನು ವಾತ್ಸ್ಯಾಯನನೂ ತನ್ನ ಭಾಷ್ಯದಲ್ಲಿ-

ಪ್ರದೀಪಃ ಸರ್ವವಿದ್ಯಾನಾಂ ಉಪಾಯಃ ಸರ್ವಕರ್ಮಣಾಮ್।
ಆಶ್ರಯಃ ಸರ್ವಧರ್ಮಾಣಾಂ ವಿದ್ಯೋದ್ದೇಶೇ ಪ್ರಕೀರ್ತಿತಾ॥
ಎಂಬ ಶ್ಲೋಕದ ಮೂಲಕ ಪ್ರತಿಧ್ವನಿಸಿದ್ದಾನೆ.

***



ಮೀಮಾಂಸಾ ದರ್ಶನ

ಕೆ.ಹಯವದನ ಪುರಾಣಿಕ

'ಮೀಮಾಂಸಾ' ಎಂದರೆ....

ಮಾನ ಧಾತುವಿಗೆ ಸನ್‌ಪ್ರತ್ಯಯ ಸೇರಿ 'ಮೀಮಾಂಸಾ' ಎಂದಾಗಿದೆ. ಉದಾತ್ತ ವಿಚಾರ ಎಂದರ್ಥ. ವೇದದ ನಿಜವಾದ ಅರ್ಥವನ್ನು ವಿಚಾರಿಸಿ ನಿರ್ಣಯ ಮಾಡುವ ಅವಶ್ಯಕತೆ ಇದೆ. ಮೇಲುನೋಟಕ್ಕೆ ಕಾಣುವ ಅರ್ಥಗ್ರಹಿಸಿದರೆ ಕೆಲವೊಮ್ಮೆ ವೇದಕ್ಕೆ ಅಪಚಾರವಾಗುವುದು. ಕಬ್ಬನ್ನು ಹಿಂಡಿದರೇ ರಸ. ಹಾಗೇ ನೆಕ್ಕಿದರೆ, ಸಿಹಿ ಇಲ್ಲವೆಂದರೆ ಅಪಚಾರ.

ವೇದದಲ್ಲಿ ಎರಡು ಭಾಗಗಳನ್ನು ಗುರುತಿಸಬಹುದು. ಒಂದು ಯಾಗಾದಿ ಕರ್ಮ ಪ್ರತಿಪಾದಕ ಕರ್ಮಕಾಂಡ. ಇನ್ನೊಂದು ಬ್ರಹ್ಮಜೀವ ಮುಂತಾದ ಬಗ್ಗೆ ವಿಚಾರಿಸುವ ಜ್ಞಾನಕಾಂಡ. ಕರ್ಮಕಾಂಡಕ್ಕೇ ಪ್ರಾಶಸ್ತ್ಯವಿತ್ತು, ಅದರ ವಿಚಾರ ಮಾಡುವ ಶಾಸ್ತ್ರ ಪೂರ್ವಮೀಮಾಂಸೆ, ಕರ್ಮ ಮೀಮಾಂಸೆ, ಧರ್ಮಮೀಮಾಂಸೆ, ಪೂರ್ವತಂತ್ರ, ಕರ್ಮತಂತ್ರ ಎಂದು ಮುಂತಾಗಿ ಪ್ರಸಿದ್ಧವಾಗಿದೆ. ವೇದದ ಉತ್ತರಭಾಗವಾದ ಜ್ಞಾನಕಾಂಡದ ವಿಚಾರ ಉತ್ತರ ಮೀಮಾಂಸೆ, ಬ್ರಹ್ಮಮೀಮಾಂಸೆ, ಉತ್ತರತಂತ್ರ, ಬ್ರಹ್ಮತಂತ್ರ ಎಂದು ಮುಂತಾಗಿ ಪ್ರಸಿದ್ಧವಾಗಿದೆ.

ಮೀಮಾಂಸೆಯ ಉದ್ದೇಶ:

ವೇದಾರ್ಥ ನಿರ್ಣಯಕ್ಕಾಗಿ ನ್ಯಾಯಗಳನ್ನು ಪ್ರತಿಪಾದಿಸುವುದೇ ವಿಮಾಂಸಾದರ್ಶನದ ಉದ್ದೇಶ. ನ್ಯಾಯ ಪ್ರತಿಪಾದನೆ ಅಧಿಕರಣ ರೂಪದಲ್ಲಿರುತ್ತದೆ. ಅಧಿಕರಣವೆಂದರೆ-

ವಿಷಯೋ ವಿಶಯಶ್ಚೈವ ಪೂರ್ವಪಕ್ಷಸ್ತಥೋತ್ತರಂ।
ಪ್ರಯೋಜನಂ ಚ ಪಂಚೈತಾನ್ ಪ್ರಾಂಚೋಽಧಿಕರಣಂ ವಿದುঃ॥

ಯಾವುದಾದರೊಂದು ಸಂದಿಗ್ಧಾರ್ಥದ ವೇದವಾಕ್ಯವನ್ನು ವಿಚಾರಕ್ಕೆ ವಿಷಯವನ್ನಾಗಿ ಎತ್ತಿಕೊಳ್ಳಬೇಕು. ಅದರ ಅರ್ಥದ ಬಗ್ಗೆ ಬಂದಿರಬಹುದಾದ ಸಂಶಯವನ್ನು ತೋರಿಸಬೇಕು. ಮೇಲುನೋಟಕ್ಕೆ ಕಾಣುವ ಅರ್ಥವನ್ನು ಸ್ವೀಕರಿಸುವವರು ಅದಕ್ಕೆ ಕೊಡಬಹುದಾದ ಸಮರ್ಥನೆಯನ್ನು ಚೆನ್ನಾಗಿ ನಿರೂಪಿಸಬೇಕು. ನಿಜವಾದ ಅರ್ಥವೇನು? ಬೇರೆ ಅರ್ಥ ಏಕೆ ಅಸಂಗತ? ಎನ್ನುವುದನ್ನು ಯುಕ್ತಯುಕ್ತವಾಗಿ ವಿಚಾರಿಸಿ ನಿರ್ಣಯಿಸಬೇಕು. ಈ ನಿರ್ಣಯದಿಂದ ಏನು ಫಲವೆಂಬುದನ್ನೂ ನಿರೂಪಿಸಬೇಕು. ಇವು ಐದು ಕ್ರಮವಾಗಿ ಸೇರಿದರೆ ಅಧಿಕರಣವೆನಿಸುವುದು.

ಜೈಮಿನಿ ಸೂತ್ರ:

'ಅಥಾತೋ ಧರ್ಮಜಿಜ್ಞಾಸಾ' ಎಂದು ಆರಂಭಿಸಿ, **'ಅನ್ವಾಹಾರ್ಯ ದರ್ಶನಾತ್'** ಎನ್ನುವವರೆಗಿನ ೨೭೪೪ ಜೈಮಿನಿ ಮಹರ್ಷಿ ಪ್ರಣೀತ ಸೂತ್ರಗಳೆ ಪೂರ್ವಮೀಮಾಂಸಾದರ್ಶನಕ್ಕೆ ಮೂಲ ಆಧಾರ. ಈ ಸೂತ್ರಗಳನ್ನು ಹನ್ನೆರಡು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಅವುಗಳಲ್ಲಿ ಮೂರು ಆರು ಹತ್ತನೇ ಅಧ್ಯಾಯಗಳು ಶರಭಾಧ್ಯಾಯಗಳು. ಅಂದರೆ ಅವುಗಳಲ್ಲಿ ಎಂಟು ಪಾದಗಳಿರುತ್ತವೆ. ಉಳಿದವುಗಳಲ್ಲಿ ನಾಲ್ಕು ಪಾದಗಳಿರುತ್ತವೆ. ಸೂತ್ರವೆಂದರೆ ಹೇಳಬೇಕಾದುದನ್ನು ಸಂಕ್ಷೇಪವಾಗಿ ಆದರೆ ನಿಸ್ಸಂದಿಗ್ಧವಾಗಿ, ನಿರ್ಣಯಾತ್ಮಕವಾಗಿ ಯುಕ್ತಿಯುಕ್ತವಾಗಿ ಹೇಳುವ ಮಾತು. ಪೂರ್ವಪಕ್ಷದ ಯುಕ್ತಿಗಳನ್ನು ಹೇಳುವ ಸೂತ್ರ ಪೂರ್ವಪಕ್ಷ ಸೂತ್ರವೆನಿಸುತ್ತದೆ. ಸಿದ್ಧಾಂತ ಯುಕ್ತಿಗಳನ್ನು ಹೇಳುವ ಸೂತ್ರ ಸಿದ್ಧಾಂತ ಸೂತ್ರವೆನಿಸುತ್ತದೆ. ಪೂರ್ವಪಕ್ಷ ಸೂತ್ರ ಮೇಲುನೋಟಕ್ಕೆ ಕಾಣುವ ಅರ್ಥವನ್ನೂ ಸಿದ್ಧಾಂತ ಸೂತ್ರ ನಿಜವಾದ ಅರ್ಥವನ್ನೂ ಬಲವಾಗಿ ಪ್ರತಿಪಾದಿಸುತ್ತದೆ. ಎರಡೂ ಸೇರಿ ಅಧಿಕರಣವಾಗುತ್ತದೆ.

ಶಾಬರ ಭಾಷ್ಯ:

ಸೂತ್ರದ ಅರ್ಥವನ್ನು ವರ್ಣಿಸುವ ಗ್ರಂಥ ಭಾಷ್ಯ. ಅನೇಕ ಮಂದಿ ಭಾಷ್ಯಕಾರರು ಆಗಿಹೋಗಿದ್ದಾರೆ. ಇಂದು ಶಬರಸ್ವಾಮಿಯು ಬರೆದ ಭಾಷ್ಯ ಒಂದೆ ಉಳಿದಿದೆ. ಈ ಭಾಷ್ಯಕ್ಕೇ ಟೀಕಾಟಿಪ್ಪಣಿಗಳು ವಾರ್ತಿಕಗಳು ಹುಟ್ಟಿದುವು. ಕುಮಾರಿಲ ಭಟ್ಟರು ಪ್ರಭಾಕರ ಮಿಶ್ರರು ಮತ್ತು ಮುರಾರಿ ಮಿಶ್ರರೆಂದು ಮೂವರು ಭಾಷ್ಯಕ್ಕೆ ವ್ಯಾಖ್ಯಾನಗಳನ್ನು ಮಾಡಿರುವರು. ಆ ವ್ಯಾಖ್ಯಾನಗಳಿಗೆ ವ್ಯಾಖ್ಯಾನಗಳು. ತಿರುಗಿ ಆ ವ್ಯಾಖ್ಯಾನಗಳಿಗೆ ವ್ಯಾಖ್ಯಾನಗಳೆಂದು ವಿಪುಲವಾಗಿ ಮೀಮಾಂಸಾ ದರ್ಶನ ವಾಙ್ಮಯ ಬೆಳೆದು ಬಂದಿತು.

ಭಾಟ್ಟ ಸಂಪ್ರದಾಯ:

ಕ್ರಿ.ಶ. ಏಳನೆ ಶತಮಾನದಲ್ಲಿ ಕುಮಾರಿಲಭಟ್ಟರು ಶಾಬರ ಭಾಷ್ಯದ ಪ್ರಥಮಾಧ್ಯಾಯ ಪ್ರಥಮಪಾದಕ್ಕೆ ಶ್ಲೋಕವಾರ್ತಿಕ ಬರೆದರು. ಇದು ಅನುಷ್ಟುಪ್ ಶ್ಲೋಕ ರೂಪದಲ್ಲಿದೆ. ಪ್ರಥಮಾಧ್ಯಾಯ ದ್ವಿತೀಯ ಪಾದವನ್ನಾರಂಭಿಸಿ ಮೂರನೆ ಅಧ್ಯಾಯದ ಕೊನೆಯವರೆಗಿನ ಭಾಷ್ಯಕ್ಕೆ ತಂತ್ರವಾರ್ತಿಕ ಬರೆದರು. ಇದು ಹೆಚ್ಚಾಗಿ ಗದ್ಯ ರೂಪದಲ್ಲಿದ್ದು, ಸಾರಸಂಗ್ರಹರೂಪಶ್ಲೋಕಗಳನ್ನು ಒಳಗೊಂಡಿದೆ. ಮುಂದೆ ನಾಲ್ಕನೆ ಅಧ್ಯಾಯದಿಂದಾರಂಭಿಸಿ ಕೊನೆಯವರೆಗೂ 'ಟುಪ್‌ಟೀಕಾ' ಎಂಬ ವ್ಯಾಖ್ಯಾನ ಬರೆದರು. ಟುಪ್ ಟೀಕೆ ಎಂದರೆ ಸಂಕ್ಷೇಪವಾದ ಟೀಕೆ. ವಿಷಯಗಳನ್ನು ಸಂಗ್ರಹವಾಗಿ ಹೇಳುವುದರಲ್ಲಿ ಇವರಿಗೆ ಎಷ್ಟು ಸಾಮರ್ಥ್ಯವಿತ್ತೆಂಬುದು ಇಲ್ಲಿ ವ್ಯಕ್ತವಾಗುವುದು.

ಕುಮಾರಿಲಭಟ್ಟರ ವಾರ್ತಿಕ ಭಾಷ್ಯಕ್ಕೆ ಕೇವಲ ವಿವರಣವಾಗಿರದೆ ವಿಮರ್ಶಾತ್ಮಕ ಅಧ್ಯಯನವಾಗಿದೆ. ವಾರ್ತಿಕವೆಂದರೆ ಹೀಗೆ ವಿಮರ್ಶಾತ್ಮಕವಾಗಿರಬೇಕು. ಸೂತ್ರ-ಭಾಷ್ಯಗಳಲ್ಲಿ ಹೇಳಿರುವ ಹೇಳಿರದ ಅಥವಾ ಅಸಮರ್ಪಕವಾಗಿ ಹೇಳಿರುವ ವಿಷಯಗಳನ್ನೆಲ್ಲ ನಿರ್ದಾಕ್ಷಿಣ್ಯವಾಗಿ ವಿವೇಚಿಸಿ ಇದಮಿತ್ಥಂ ಎಂದು ನಿರ್ಣಯ ನೀಡಬಲ್ಲಗ್ರಂಥವೆ ವಾರ್ತಿಕವೆನಿಸುತ್ತದೆ. ಕುಮಾರಿಲರದು ಅಂಥ ವಾರ್ತಿಕ. ವಾರ್ತಿಕಕಾರರೆಂದೆ ಅವರು ಪ್ರಸಿದ್ಧರು. ಶ್ಲೋಕವಾರ್ತಿಕದಲ್ಲಿ ಅವರು ಸೂತ್ರದ ಪ್ರಾರಂಭದಲ್ಲಿ ಬರುವ ಜಿಜ್ಞಾಸಾಧಿಕರಣ ಭಾಷ್ಯದ ಆರಂಭವಾಕ್ಯವನ್ನು ಆರು ಬೇರೆ ಬೇರೆ ರೀತಿಯಲ್ಲಿ ವಿವರಿಸುತ್ತ ತಮ್ಮ ಅದ್ಭುತ ಪ್ರತಿಭೆಯನ್ನು ತೋರಿದ್ದಾರೆ. ಸ್ವತಃ ಪ್ರಾಮಾಣ್ಯ ಸಮರ್ಥನೆ, ಶೂನ್ಯವಾದ ಸ್ಫೋಟವಾದಗಳ ಖಂಡನೆ, ಜ್ಞಾತತಾ ಲಿಂಗಕಾನುಮಿತಿ ಸಮರ್ಥನೆ, ಶಬ್ದಾರ್ಥ ಸಂಬಂಧ ನಿತ್ಯತ್ವ ಅಭಿಹಿತಾನ್ವಯವಾದ ಮುಂತಾದವು ಈ ಗ್ರಂಥದಲ್ಲಿ ಬರುವ ವಿಶೇಷ ವಿಚಾರಗಳು.

ಕುಮಾರಿಲ ಭಟ್ಟರು ಮೀಮಾಂಸಾಶಾಸ್ತ್ರದಲ್ಲಿ ಭಾಟ್ಟ ಸಂಪ್ರದಾಯವೆಂದು ತಮ್ಮದೇ ಆದ ಒಂದು ಸಂಪ್ರದಾಯವನ್ನು ಹಾಕಿಕೊಟ್ಟ ಧೀಮಂತ ವ್ಯಕ್ತಿಗಳು. ಈ ಸಂಪ್ರದಾಯವನ್ನು ಮುಂದೆ ಮಂಡನ ಮಿಶ್ರರು ಪಾರ್ಥಸಾರಥಿ ಮಿಶ್ರರು ಮಾಧವಾಚಾರ್ಯರು ಖಂಡದೇವ ಆಪದೇವ ಮುಂತಾದವರು ತಮ್ಮ ಉದ್ದಾಮಕೃತಿಗಳಿಂದ ವಿಪುಲವಾಗಿ ಬೆಳೆಸಿದರು. ಈ ಸಂಪ್ರದಾಯದಲ್ಲಿ ಮೊಟ್ಟ ಮೊದಲಿಗೆ ಬಂದ ಅತಿಮಹತ್ವದ ಕೃತಿ ಶಾಸ್ತ್ರ ದೀಪಿಕೆ. ಇದನ್ನು ಬರೆದವರು ಪಾರ್ಥಸಾರಥಿ ಮಿಶ್ರರು. ಹನ್ನೊಂದು ಹನ್ನೆರಡನೆ ಶತಕಗಳ ನಡುವಿನ ಭಾಗದವರು. ಅವರು ಶ್ಲೋಕವಾರ್ತಿಕಕ್ಕೆ ನ್ಯಾಯರತ್ನಾಕರವನ್ನೂ ಟುಪ್‌ಟೀಕೆಗೆ ತಂತ್ರರತ್ನವನ್ನೂ ಬರೆದಿದ್ದಾರೆ. ಮಿಮಾಂಸಾ ನ್ಯಾಯಗಳ ಬಗ್ಗೆ 'ನ್ಯಾಯರತ್ನಮಾಲೆ' ಎಂಬ ಸ್ವತಂತ್ರ ಗ್ರಂಥವನ್ನು ಬರೆದಿದ್ದಾರೆ. ಆದರೆ ವಾರ್ತಿಕದ ಆಧಾರದ ಮೇಲೆ ಮೀಮಾಂಸಾಧಿಕರಣ ಶರೀರವನ್ನು ವಿಶದವಾಗಿ ವಿಸ್ತಾರವಾಗಿ ನಿರೂಪಿಸುತ್ತ ಮುಂದಿನ ಗ್ರಂಥಕಾರರಾದ ಮಾಧವಾಚಾರ್ಯರು ಖಂಡದೇವ ಮುಂತಾದವರಿಗೆ ಮಾದರಿಯಾಗಿ ನಿಂತ ಪ್ರೌಢಗ್ರಂಥ ಶಾಸ್ತ್ರದೀಪಿಕೆ.

ಪ್ರಾಭಾಕರ ಸಂಪ್ರದಾಯ:

ಪ್ರಭಾಕರ ಮಿಶ್ರರು ಕುಮಾರಿಲರ ಶಿಷ್ಯರು, ಆದರೆ ಬುದ್ಧಿ ಪ್ರತಿಭೆಯಲ್ಲಿ ಗುರುವನ್ನೂ ಮೀರಿಸಿದವರು ಭಾಷ್ಯದಲ್ಲಿ ಒಂದೆಡೆ ಒಂದು ವಿಚಿತ್ರ ವಾಕ್ಯ-

ತತ್ರ ತು ನೋಕ್ತಂ। ಅತ್ರಾಪಿ ನೋಕ್ತಂ।
'ಅಲ್ಲಿ ಹೇಳಿಲ್ಲ, ಇಲ್ಲಿಯೂ ಹೇಳಿಲ್ಲ' ಏನಿದು? ಗುರುಗಳು
ಚಿಂತ್ರಾಕ್ರಾಂತರಾದಾಗ,

ತತ್ರ ತು ನಾ ಉಕ್ತಂ। ಅತ್ರ ಅಪಿ ನಾ ಉಕ್ತಂ।

'ಅಲ್ಲಿ ತು ಶಬ್ದದಿಂದ ಹೇಳಿದೆ ಇಲ್ಲಿ ಅಪಿಶಬ್ದದಿಂದ ಹೇಳಿದೆ' ಎಂದನಂತೆ ಶಿಷ್ಯ. ಗುರುಗಳು ಬೆರಗಾದರು. ಭಲೆ! ಎಂದರು. 'ಗುರು' ಎಂದು ಬಿರುದನ್ನೇ ಇತ್ತರು-ಕಥೆ ಏನೇ ಇರಲಿ, ಪ್ರಾಭಾಕರ ಮತವನ್ನು ಗುರುಮತವೆಂದೂ ಕರೆಯುವುದುಂಟು. ಪ್ರಭಾಕರಮಿಶ್ರರು ಶಾಬರ ಭಾಷ್ಯಕ್ಕೆ 'ಲಘ್ವೀ' 'ಬೃಹತೀ' ಎಂಬ ಎರಡು ಟೀಕೆಗಳನ್ನು ಬರೆದರು. ತಮ್ಮದೇ ಆದ ಒಂದು ಹೊಸ ಸಂಪ್ರದಾಯವನ್ನು ಪ್ರಾರಂಭಿಸಿದರು. ಮುಂದೆ ಎಂಟನೆ ಶತಮಾನದಲ್ಲಿ ಶಾಲಿಕನಾಥ 'ಲಘ್ವೀ'ಮೇಲೆ 'ದೀಪ ಶಿಖೆ' ಯನ್ನೂ 'ಬೃಹತೀ'ಮೇಲೆ'ಋಜುವಿಮಲಾ' ವ್ಯಾಖ್ಯಾನವನ್ನೂ, ಜೊತೆಗೆ 'ಪ್ರಕರಣ ಪಂಚಿಕಾ' ಎಂಬ ಪ್ರಕರಣ ಗ್ರಂಥವನ್ನೂ ಬರೆದು ಪ್ರಾಭಾಕರ ಮತದ ಪ್ರಮುಖ ಸಿದ್ಧಾಂತಗಳನ್ನು ವಿಸ್ತಾರವಾಗಿ ನಿರೂಪಿಸಿದ್ದಾನೆ.

ಮೀಮಾಂಸಾ ಹಾಗೂ ವೇದಾಂತ:

ಪ್ರಾಚೀನ ಕಾಲದಿಂದ ಬಂದಿದ್ದ ಯಾಜ್ಞಿಕ ಪರಂಪರೆಯ ರಕ್ಷಣೆಗಾಗಿ ಪಣತೊಟ್ಟು ನಿಂತಿದ್ದ ಮೀಮಾಂಸಕರು ನಡುವೆ ಬೌದ್ಧರಧಾಳಿಯನ್ನು ಬಲವಾಗಿ ಇದಿರಿಸಿದರು. ಆದರೆ ಶಂಕರಾಚಾರ್ಯರ ಅದ್ವೈತ ಸಿದ್ಧಾಂತದ ಮುಂದೆ ನಿಸ್ತೇಜರಾದರು. ಜನಜೀವನದ ಮೇಲೆ ವೇದಾಂತದ ಪ್ರಭಾವವೆ ಅಧಿಕವಾಯಿತು. ಮೀಮಾಂಸಾ ಶಾಸ್ತ್ರ ಕೇವಲ ಪಂಡಿತ ವಿದ್ವಾಂಸರ ಪಠನ ಪಾಠನಗಳ ವಾದವಿವಾದಗಳ ವಸ್ತುವಾಗಿಯೇ ಉಳಿಯಿತು. ಅದಕ್ಕೆ ಅನುಯಾಯಿಗಳೆ ಇಲ್ಲವಾಯಿತು.

ಮಿಥಿಲೆಯಲ್ಲಿಯೂ ಆಂಧ್ರಪ್ರದೇಶದಲ್ಲಿಯೂ ಇದರ ವಿಶೇಷ ಪ್ರಚಾರ ಹಿಂದೆ ಇದ್ದಿತ್ತು. ಅದಕ್ಕೆ ಒಂದು ಉದಾಹರಣೆ ಹೇಳಬೇಕೆಂದರೆ, ಮಿಥಿಲೆಯ ರಾಜ ಭೈರವಸಿಂಹ ಒಂದು ಪುಷ್ಕರಿಣಿಯನ್ನು ನಿರ್ಮಿಸಿ ಯಾಗ ಮಾಡಿದನಂತೆ. ಆ ಯಜ್ಞಕ್ಕೆ ವಿಶೇಷವಾಗಿ ಮೀಮಾಂಸಾ ಶಾಸ್ತ್ರವೇತ್ತರನ್ನು ಆಹ್ವಾನಿಸಿದಾಗ ಒಂದು ಸಾವಿರದ ನಾನೂರು ಮಂದಿ ಮೀಮಾಂಸಾ ಪಂಡಿತರು ಬಂದು ಸೇರಿದರಂತೆ.

ವೇದಾಪೌರುಷೇಯತ್ವ:

ಮೀಮಾಂಸಕರು ವೇದವನ್ನು ಅಪೌರುಷೇಯವೆಂದರು. ಪರಮಪ್ರಮಾಣವೆಂದರು. ವೇದ ಪುರಾಣ ಧರ್ಮಶಾಸ್ತ್ರ ಮುಂತಾದುವು ಎಲ್ಲವೂ ಯಜ್ಞಾದಿ ಧರ್ಮಾಚರಣೆಯ ಬಗ್ಗೆ ವಿಶ್ವಾಸಾರ್ಹ ಪ್ರಮಾಣ ಗ್ರಂಥಗಳು. ಅವುಗಳ ಪ್ರಾಮಾಣ್ಯ ಸ್ವತಃ ಸಿದ್ಧವಾಗುವಂಥದ್ದು. ಏಕೆಂದರೆ ಜ್ಞಾನವು ಹುಟ್ಟುವಾಗ ಯಥಾರ್ಥವಾಗಿ ಹುಟ್ಟುವುದು ಅದರ ಸ್ವಭಾವ. ಕೆಲವೊಮ್ಮೆ ಅಯಥಾರ್ಥವಾಗಿ ಹುಟ್ಟಿದರೆ ಅದಕ್ಕೆ ದೋಷ ಕಾರಣ. ಅದರಿಂದ ದೋಷ ಕಂಡು ಬಂದಾಗಲೇ ಜ್ಞಾನವನ್ನು ಅಯಥಾರ್ಥವೆನ್ನಬೇಕು. ದೋಷವಿಲ್ಲದಿದ್ದರೂ ಅಯಥಾರ್ಥವೆನ್ನುವುದು ವ್ಯಾಹತವಾಗುವುದು. ವೇದ

ಪುರಾಣಾದಿಗಳಲ್ಲಿ ದೋಷವಿಲ್ಲದುದರಿಂದ ಅವು ಪ್ರಮಾಣಗಳು.

ಆದರೆ ವೇದ ಪುರಾಣಗಳಲ್ಲಿ ವ್ಯತ್ಯಾಸ ಉಂಟು. ವೇದ ಅಪೌರುಷೇಯ. ಅದರಲ್ಲಿ ದೋಷ ಸಂದೇಹಕ್ಕೆ ಅವಕಾಶವಿಲ್ಲ. ಪುರಾಣ ಪೌರುಷೇಯ. ದೋಷವಿರುವ ಸಾಧ್ಯತೆ ಇದೆ. ಅದರಿಂದ ವೇದ ವಿರುದ್ಧವಾದ ಪುರಾಣಾಧಿಗಳೇನಿದ್ದರೂ ಅದು ಅಪ್ರಮಾಣ.

ಪೌರುಷೇಯ ಅಂದರೆ ಪುರುಷ ನಿರ್ಮಿತ. ಗ್ರಂಥ ನಿರ್ಮಾಣ ಮಾಡಿದವನೊಬ್ಬನಿದ್ದರೆ ಗ್ರಂಥ ಪೌರುಷೇಯ. ಅದರಲ್ಲಿ ಗ್ರಂಥಕಾರನ ಅಜ್ಞಾನ ಸ್ವಾರ್ಥಬುದ್ಧಿವಂಚನ ಮುಂತಾದವುಗಳ ಪರಿಣಾಮವಾಗಿ ದೋಷ ತಲೆದೋರುವ ಸಂಭವವಿದೆ. ಪುರಾಣಾದಿಗಳನ್ನು ರಚನೆ ಮಾಡಿದವರು ಪ್ರಸಿದ್ಧರಿದ್ದಾರೆ. ಅದರಿಂದ ವೇದವಿರುದ್ಧವಾಗದ ಅಂಶಗಳಲ್ಲಿ ಮಾತ್ರ ಪುರಾಣಾದಿಗಳು ಪ್ರಮಾಣ.

ವೇದಗಳನ್ನು ರಚನೆ ಮಾಡಿದವರಿಲ್ಲ. ಕಂಡವರುಂಟು. ಇವರು ದ್ರಷ್ಟಾರರು ಹೊರತು ಕವಿಗಳಲ್ಲ. ಧ್ಯಾನಾವಸ್ಥೆಯಲ್ಲಿ ತಾವು ಈ ಜನ್ಮದಲ್ಲಿಯೇ ಕಲಿಯದಿದ್ದ ವೇದಮಂತ್ರಗಳನ್ನು ಪ್ರತಿಭಾಬಲದಿಂದ ಕಂಡುಕೊಳ್ಳುತ್ತಾರೆ. ಹಿಂದಿನ ಜನ್ಮದಲ್ಲಿ ಕಲಿತ ಮಂತ್ರಗಳೆ ಈಗ ಅವರ ಬುದ್ಧಿಯಲ್ಲಿ ಹೊಳೆಯುತ್ತವೆ. ಅವರ ಅಜ್ಞಾನಾದಿ ದೋಷಗಳಾವುವೂ ಈ ಮಂತ್ರಗಳಲ್ಲಿ ನುಸುಳಲಾರವು. ದೋಷವಿಲ್ಲದಿದ್ದಾಗ ಉಂಟಾಗುವ ಜ್ಞಾನ ಯಥಾರ್ಥವೆಂದು ಧಾರಾಳ ಒಪ್ಪಬಹುದು.

ವೇದಕ್ಕೆ ಅವಿಚ್ಛಿನ್ನವಾದ ಒಂದು ಅಧ್ಯಯನ ಪರಂಪರೆ ಇದೆ. ಅಧ್ಯಯನ ಮಾಡುವವರೆಲ್ಲರೂ ತಪ್ಪದೆ ಈ ಮಂತ್ರ ಹಿಂದಿನದೆ ಎಂದು ತಿಳಿದೇ ಅಧ್ಯಯನ ಮಾಡುತ್ತಿದ್ದಾರೆ. ಎಷ್ಟೆಷ್ಟು ಹಿಂದೆ ಹೋದರೂ ಈ ಮಂತ್ರ ಹೊಸತೆಂದು ಹೇಳುವವನು ಇಂದಿನವರೆಗೂ ಯಾರೂ ಸಿಕ್ಕಿಲ್ಲ. ಹೀಗೆ ಅನಾದಿ ಅಧ್ಯಯನ ಪರಂಪರೆಯೊಂದೆ ವೇದ ಅಪೌರುಷೇಯವೆನ್ನಲು ಸಾಕ್ಷಿಯಾಗಬಲ್ಲದು.

ವೇದವನ್ನು ಪೌರುಷೇಯವೆಂದೊಪ್ಪಿ ಅದನ್ನು ರಚಿಸಿದವ ಸರ್ವಜ್ಞನಾದ ಈಶ್ವರ ಎನ್ನುತ್ತಾರೆ, ತಾರ್ಕಿಕರು. ಆದರೆ ಸರ್ವಜ್ಞನಾದ ಒಬ್ಬ ಈಶ್ವರನಿದ್ದಾನೆ ಎನ್ನುವುದಕ್ಕೇ ಏನೂ ಆಧಾರ ಸಾಲದು.

ಸೃಷ್ಟಿಕರ್ತ ಈಶ್ವರನಿಲ್ಲ:

ಸರ್ವಜ್ಞನಾದ ಸೃಷ್ಟಿಕರ್ತನಿದ್ದಾನೆ ಎನ್ನುವುದು ನಂಬಲರ್ಹವಲ್ಲ. ಏಕೆಂದರೆ ಸೃಷ್ಟಿಕರ್ತನಿಗೆ ಶರೀರಬೇಕು. ಇಂದ್ರಿಯ ಮನಸ್ಸುಗಳು ಬೇಕು. ಅವಿಲ್ಲದೆ ಯಾರೂ ಏನೂ ಮಾಡಲಾರರು. ಈಶ್ವರನಿಗೆ ಅವು ಇವೆ ಎಂದರೆ ಅವನ್ನು ಅವನೆ ಸೃಷ್ಟಿಸಿದನೆ?ಹೇಗೆ? ಯಾವ ಶರೀರದಿಂದ?

ಸೃಷ್ಟಿಗೆ ಮೊದಲು ಪಂಚಭೂತಗಳಿಲ್ಲದಿದ್ದಾಗ ಅವನ ಶರೀರ ಏತರಿಂದಾಯಿತು? ಯಾವ ಮೂಲ ವಸ್ತುವೂ ಇಲ್ಲದೆ ಶರೀರ ಹುಟ್ಟಿತೆ? ಅದಾಗದು. ಅದು ಬೌದ್ಧರ ವಿಚಾರಧಾರೆಯಾಯಿತು.

ಈ ಸೃಷ್ಟಿಕರ್ತ ಪ್ರಪಂಚವನ್ನು ದುಃಖಮಯವಾಗಿ ಏಕೆ ಸೃಷ್ಟಿಸುತ್ತಾನೆ? ಅದು ಅವನ ಸ್ವಭಾವ. ಜೇಡರಹುಳು ಬಲೆಯನ್ನು ಸೃಷ್ಟಿಸುವಂತೆ. ಅದು ಸುಖಮಯವಿರಲಿ , ದುಃಖಮಯವಿರಲಿ, ಏನೂ ಆಲೋಚಿಸುವುದಿಲ್ಲ ಎನ್ನೋಣವೇ? ಜೇಡರಹುಳು ಹುಳುಹುಪ್ಪಟೆಗಳನ್ನು ತಿನ್ನುತ್ತದೆ. ಅದರ ಬಾಯಲ್ಲಿ ಜೊಲ್ಲು ಸುರಿಯುತ್ತದೆ ಅದರಿಂದ ಬಲೆ ಸೃಷ್ಟಿಯಾಗುತ್ತದೆ. ಈಶ್ವರ ಏನು ತಿನ್ನುತ್ತಾನೆ?

ಸೃಷ್ಟಿಯಿಂದ ಈಶ್ವರನಿಗೇನು ಪ್ರಯೋಜನ? ಪ್ರಯೋಜನವಿಲ್ಲದಿದ್ದರೂ ಕೇವಲ ಅನುಕಂಪದಿಂದ ಜೀವಾತ್ಮರ ಸುಖಕ್ಕಾಗಿ ಸೃಷ್ಟಿ ಮಾಡುತ್ತಾನೆ ಎಂದರೂ ಸೃಷ್ಟಿಗೆ ಮೊದಲು ಯಾರೂ ಇಲ್ಲದಿದ್ದಾಗ ಯಾರನ್ನು ನೋಡಿ ಅನುಕಂಪ ಮೂಡಿತು?

ಅನುಕಂಪದಿಂದ ಮಾಡಿದ ಸೃಷ್ಟಿ ಏಕೆ ದುಃಖಮಯವಾಗಿದೆ?

ಸರ್ವಶಕ್ತನಾದ ಈಶ್ವರ ಸುಖಮಯವಾದ ಪ್ರಪಂಚವನ್ನೇ ಏಕೆ ಸೃಷ್ಟಿಸಬಾರದಿತ್ತು?

ಕ್ರೀಡೆಗಾಗಿ ಸೃಷ್ಟಿ ಎನ್ನುತ್ತಾರೆ ಕೆಲವರು. ಜೀವಾತ್ಮರಿಗೆ ದುಃಖ ನೀಡುವುದೂ ಅವನಿಗೆ ಕ್ರೀಡೆಯೇ?

ತನ್ನ ಶಕ್ತಿ ಪ್ರದರ್ಶನಕ್ಕಾಗಿ ಸೃಷ್ಟಿಮಾಡಿದನೆಂದರೆ ಸೃಷ್ಟಿ ಮಾಡದೆಯೇ ಶಕ್ತಿ ಪ್ರದರ್ಶನ ಮಾಡಬಹುದಿತ್ತು.

ಸೃಷ್ಟಿಪ್ರಳಯಗಳ ಪ್ರವಾಹ ಅನಾದಿ ಎಂದೂ ಜೀವಾತ್ಮರ ಅದೃಷ್ಟವೂ ಈಶ್ವರನ ಇಚ್ಛೆಯೂ ಸೃಷ್ಟಿಗೆ ಕಾರಣವೆಂದೂ ವೈಶೆಷಿಕರು ಹೇಳುವುದು ಅಸಂಗತ. ಅದೃಷ್ಟದಿಂದ ಸೃಷ್ಟಿಯಾಗುವುದಿದ್ದರೆ ಪ್ರಳಯಕಾಲದಲ್ಲಿ ಏಕೆ ಸೃಷ್ಟಿಯಾಗದು? ಈಶ್ವರೇಚ್ಛೆ ಆಗ ಇಲ್ಲ, ಅದೇ ಸೃಷ್ಟಿಗೆ ಕಾರಣ ಎನ್ನುವುದಾದರೆ ಅದೃಷ್ಟವೇಕೆ?

ಸೃಷ್ಟಿಯ ಆದಿಯಲ್ಲಿ ಈಶ್ವರನೊಬ್ಬನೆ ಇದ್ದನೆಂದೂ ಅವನು ಸ್ವೇಚ್ಛೆಯಿಂದ ಪಂಚಭೂತರೂಪನಾಗಿ ಪರಿಣಾಮ ಹೊಂದಿ ಪ್ರಪಂಚವನ್ನು ಸೃಷ್ಟಿಸಿದನೆಂದೂ ಹೇಳಿದರೆ ಮೀಮಾಂಸಕರಿಗೆ ಒಪ್ಪಿಗೆಯಾಗದು. ಜ್ಞಾನಾನಂದ ಸ್ವಭಾವನೂ ಶುದ್ಧನೂ ಆದ ಈಶ್ವರನಿಗೆ ಅಶುದ್ಧ ಜಡರೂಪ ದುಃಖಾತ್ಮಕ ವಿಕಾರ ಹೇಗೆ ಸಾಧ್ಯ?ಧರ್ಮಅಧರ್ಮಗಳ ಪ್ರಭಾವದಿಂದ ಎಂದರೆ ಈಶ್ವರ ಅವುಗಳಿಗೆ ಅಧೀನ ಅಸ್ವತಂತ್ರ ಎಂದಾಯಿತು. ಜಗದಾದಿಯಲ್ಲಿ ಈಶ್ವರನೊಬ್ಬನೆ ಇದ್ದಾಗ, ಬೇರಾವುದೂ ಇಲ್ಲದಿದ್ದಾಗ ಈ ಧರ್ಮಾಧರ್ಮಗಳು ಎಲ್ಲಿದ್ದುವು? ಕೇವಲ ಸ್ವೇಚ್ಛೆಯಿಂದಲೇ ಈಶ್ವರ ವಿಕಾರ ಹೊಂದುವನೆನ್ನುವುದಾದರೆ

ಆನಂದ ಸ್ವಭಾವದ ಈಶ್ವರ ದುಃಖಾತ್ಮಕ ವಿಚಾರ ಹೊಂದಲು ಏಕೆ ಇಚ್ಛಿಸುತ್ತಾನೆ?

ಪರಬ್ರಹ್ಮನು ಅವಿದ್ಯಾವಶದಿಂದ ಪ್ರಪಂಚ ರೂಪದಿಂದ ತನ್ನನ್ನೇ ತಾನು ಕಂಡು ಭ್ರಮಿಸುತ್ತಿದ್ದಾನೆ, ಸ್ವಪ್ನದಂತೆ, ಎನ್ನುವುದೂ ಜಾಣತನವಲ್ಲ. ಶುದ್ಧ ವಿದ್ಯಾಸ್ವಭಾವದ ಪರಬ್ರಹ್ಮನಿಗೆ ಅವಿದ್ಯಾಸಂಬಂಧ ಹೇಗೆ?ಯಾವುದರಿಂದಾಯಿತು?ಅನಾದಿಯಾದ್ದರಿಂದ ಪ್ರಶ್ನೆಗೆ ಅವಕಾಶವಿಲ್ಲವೆಂದರೆ ಅನಾದಿಯಾಗಿ ಸ್ವಾಭಾವಿಕವಾಗಿ ಅವಿದ್ಯೆ ಬ್ರಹ್ಮನಿಗೆ ಅಂಟಿಕೊಂಡು ಬಂದಿದೆ ಎಂದಂತಾಯಿತು. ಹಾಗಿದ್ದರೆ ಅದನ್ನು ನಾಶ ಮಾಡುವುದೂ ಅಸಾಧ್ಯ. ಅನಾದಿಯಾದುದೂ ನಾಶವಾಗುವುದಾದರೆ ಬ್ರಹ್ಮನೂ ನಾಶಹೊಂದಬಹುದು.

ಮೋಕ್ಷ ಸ್ವರೂಪ ಸಾಧನ:

ಅದರಿಂದ ಸೃಷ್ಟಕರ್ತನಿಲ್ಲ. ಸೃಷ್ಟಿಪ್ರಳಯಗಳಿಲ್ಲ. '**ಯಃಕಲ್ಪಃ ಸ ಕಲ್ಪಪೂರ್ವ**' ಎಂಬಂತೆ ಪ್ರತಿಕಲ್ಪಕ್ಕೂ ಮೊದಲು ಕಲ್ಪವಿದೆ. ಜಗದ್ ವ್ಯಾಪಾರ ಅನಾದಿ ಅನಂತ. ಪ್ರಪಂಚ ಯಾವಾಗಲೂ ಹೀಗೆಯೇ ಇರುತ್ತದೆ. ಕರ್ಮದಿಂದ ಜೀವಾತ್ಮರಿಗೆ ಶರೀರಲಾಭ. ಅದರಿಂದ ಸುಖ ದುಃಖಲಾಭ. ಶರೀರದಿಂದ ಕರ್ಮಲಾಭ. ಕರ್ಮದಿಂದ ಶರೀರ ಲಾಭ. ಅದರಿಂದ ರಾಗದ್ವೇಷಗಳನ್ನು ತೊರೆದು ಪ್ರಾರಬ್ಧ ಕರ್ಮ ಅನುಭವಿಸಿ ತೀರಿಸಿದರೆ, ಮುಂದೆ ಕರ್ಮ ಮಾಡದಿದ್ದರೆ ಕರ್ಮಕ್ಷಯದಿಂದ ಶರೀರ ಪಾತವಾಗುವುದು. ಶರೀರಾಂತರ ಲಾಭವಿಲ್ಲವಾಗುವುದು. ಹೀಗೆ ಶರೀರ ಸಂಬಂಧ ಪೂರ್ಣ ನಷ್ಟವಾಗುವುದೇ ಮೋಕ್ಷ. ಭೋಗಾಯತನವಾದ ಶರೀರ, ಭೋಗ ಸಾಧನವಾದ ಇಂದ್ರಿಯ ಮನಸ್ಸುಗಳು ಮತ್ತು ಭೋಗ್ಯವಾದ ವಿಷಯ ಪದಾರ್ಥಗಳು ಹೀಗೆ ವಿಷಯೇಂದ್ರಿಯ ಶರೀರ ರೂಪವಾದ ಈ ಪ್ರಪಂಚದ ಬಂಧನ ಪೂರ್ಣವಾಗಿ ತೊಡೆದು ಹೋಗುವುದೇ ಮೋಕ್ಷ.

ಮೋಕ್ಷ ಅನಪೇಕ್ಷಿತ:

ಮೀಮಾಂಸಕರ ಮೋಕ್ಷಾವಸ್ಥೆಯಲ್ಲಿ ಆತ್ಮನಿಗೆ ಮನಃ ಸಂಬಂಧವಿಲ್ಲ. ಅದರಿಂದ ಆತ್ಮಜ್ಞಾನವಾಗಲಿ ಆನಂದಾನುಭವವಾಗಲಿ ಶಕ್ಯವಿಲ್ಲ. ತಾರ್ಕಿಕರ ಮೋಕ್ಷವೂ ಇದೇ ಬಗೆಯದು. ಶ್ರೀ ಹರ್ಷನು ಇದಕ್ಕೆ ಹಾಸ್ಯ ಮಾಡುತ್ತಾನೆ-

ಮುಕ್ತಯೇ ಯಃ ಶಿಲಾತ್ವಾಯ
ಶಾಸ್ತ್ರಮೂಚೇ ಸಚೇತಸಾಂ।
ಗೋತಮಂ ತಮವೇತ್ಯೈವ
ಯಥಾವಿತ್ಥ ತಥೈವ ಸಃ॥

'ಈಗ ಜ್ಞಾನವಂತರಾಗಿರುವ ಚೇತನರು ಮುಂದೆ ಕಲ್ಲಿನಂತೆ ಜಡರಾಗುವುದೇ ಮೋಕ್ಷವೆಂದೂ ಅಂಥ ಮೋಕ್ಷಕ್ಕೆ ಸಾಧನವನ್ನು ಉಪದೇಶಿಸಲೆಂದೇ ಶಾಸ್ತ್ರ ಹೊರಟಿದೆ ಎಂದೂ ಹೇಳುವವನು ಪಶುವಿಗಿಂತ ಕಡೆ'. ಇಂಥ ಮೋಕ್ಷವನ್ನು ಬುದ್ಧಿಶಾಲಿಯಾದ

ಯಾವನು ಬಯಸಿಯಾನು?

ತಾರ್ಕಿಕರು ಹೇಳುತ್ತಾರೆ-ಆಗಾಗ ಅನಪೇಕ್ಷಿತವಾಗಿ ಬಂದು ಹೋಗುತ್ತ ಕ್ಲೇಶ ಉಂಟು ಮಾಡುವ ಬುದ್ಧಿ ಸುಖ-ದುಃಖ ಇಚ್ಛಾದ್ವೇಷ ಪ್ರಯತ್ನ ಧರ್ಮ ಅಧರ್ಮ ಸಂಸ್ಕಾರಗಳನ್ನು ತೊರೆದು ಆತ್ಮ ತನ್ನ ನಿಜ ಸ್ವರೂಪವನ್ನು ಹೊಂದಲು ಬಯಸುವುದರಿಂದ ಇಂಥ ಮೋಕ್ಷವನ್ನು ಬಯಸುವುದು ಸಹಜ. ಹೀಗೆ ಹೇಳುತ್ತ ಇಂಥ ಮೋಕ್ಷದ ಸಾಧನವನ್ನೇ ಹೇಳಲು ಹೊರಟಿದ್ದಾರೆ ತಾರ್ಕಿಕರು.

ಆದರೆ ಮೀಮಾಂಸಕರಿಗೆ ಮೋಕ್ಷದ ಬಗ್ಗೆ ಆದರವಿಲ್ಲ. ಸ್ವರ್ಗಾದಿ ಸುಖಸಾಧನವಾದ ಯಜ್ಞಕರ್ಮಗಳನ್ನು ಹೇಗೆ ಮಾಡಬೇಕೆಂದು ಬೋಧಿಸುವುದೇ ಅವರಿಗೆ ಮುಖ್ಯ ಉದ್ದೇಶ. ಈ ಉದ್ದೇಶ ಸಾಧನೆಗೆ ತೊಡಕಾಗಿ ನಿಂತವರು ಬೌದ್ಧರು. ಅವರು ಸ್ವರ್ಗ ಮುಂತಾದುದು ಸುಳ್ಳು ಎಂದರು. ವೇದ ಅಪ್ರಮಾಣವೆಂದರು. ಹಿಂಸಾಮಯವಾದ ಯಜ್ಞ ಪಾಪಕರವೆಂದರು. ಅವರನ್ನು ಬಲವಾಗಿ ಖಂಡಿಸುತ್ತಿದ್ದರು ಕುಮಾರಿಲ ಭಟ್ಟರು.

ಒಮ್ಮೆ ಶಂಕರಾಚಾರ್ಯರು ಕುಮಾರಿಲರನ್ನು ಭೆಟ್ಟಿಯಾದಾಗ ಹೀಗೆ ಹೇಳಿದನಂತೆ-

ಶ್ರುತ್ಯರ್ಥ ಕರ್ಮ ವಿಮುಖಾನ್ ಸುಗತಾನ್ ನಿಹಂತುಂ
ಜಾತಂ ಗುಹಂ ಭುವಿ ಭವಂತಮಹಂ ನು ಜಾನೇ।

'ವೇದೋಕ್ತ ಯಜ್ಞಾದಿಕರ್ಮಾನುಷ್ಠಾನವನ್ನು ವಿರೋಧಿಸುವ ಬೌದ್ಧರನ್ನು ಖಂಡಿಸಲೆಂದೇ ಭೂಮಿಯಲ್ಲಿ ಅವತರಿಸಿದ ಷಣ್ಮುಖ ನೀನೆಂದು ನನಗೆ ಗೊತ್ತು? ಹೀಗೆ ಹೇಳುತ್ತಿದೆ ಶಂಕರ ವಿಜಯ.

ಇಲ್ಲೇ ಸ್ವರ್ಗ ಇಲ್ಲೇ ನರಕ:

ಸ್ವರ್ಗ ನರಕಗಳ ಬಗ್ಗೆ ಬಹಳವಾಗಿ ಮಾತನಾಡುವ ಮೀಮಾಂಸಕರು ಸ್ವರ್ಗ ನರಕಗಳು ಇಲ್ಲಿಯೇ ಹೊರತು ಬೇರೆ ಇಲ್ಲ ಎನ್ನುತ್ತಿರುವುದು ಗಮನಾರ್ಹ. ಅವರ ಅಭಿಪ್ರಾಯದಲ್ಲಿ ಸ್ವರ್ಗವೆಂದರೆ ಸತ್ತಮೇಲೆ ಸಿಗುವ, ಎಲ್ಲ ಸುಖ ಭೋಗಗಳಿಗೆ ನೆಲೆಯಾದ ಮೇಲಿನ ಲೋಕವೇನಲ್ಲ.

ಯನ್ನ ದುಃಖೇನ ಸಂಭಿನ್ನಂ
ನಚ ಗ್ರಸ್ತಮನಂತರಂ।
ಅಭಿಲಾಷೋಪನೀತಂ ಚ
ತತ್ ಸುಖಂ ಸ್ವಃ ಪದಾಸ್ಪದಂ॥

ದುಃಖದ ಸಂಪರ್ಕವಿಲ್ಲದ, ಮತ್ತೆ ದುಃಖಕ್ಕೆ ಕಾರಣವಾಗದ, ನಿರಂತರವಾಗಿ ಅನುಭವಕ್ಕೆ ಸಿಗುವ ಬಯಸಿದ್ದನ್ನೆಲ್ಲ ಪಡೆಯುವಂಥ ಸುಖವೇ ಸ್ವರ್ಗವೆನಿಸುತ್ತದೆ' ಎಂದು ಹೇಳುತ್ತಾರೆ. ಈ ಸ್ವರ್ಗಕ್ಕೆ ವಿಪರೀತವಾದುದೆ ನರಕವೆನ್ನುತ್ತಾರೆ.

ಅದರಿಂದ ಇಂದ್ರಲೋಕ ಯಮಲೋಕ ಮುಂತಾದ ಲೋಕಗಳು ಇಂದ್ರಾದಿದೇವತೆಗಳು ಅವರ ವಾಹನಗಳು ಆಯುಧಗಳು ಎಲ್ಲವೂ ಸುಳ್ಳು. ಅವುಗಳ ವರ್ಣನೆಗಳು ವೇದಗಳಲ್ಲಿ ಕಂಡು ಬಂದರೆ ಅವೆಲ್ಲ ಅರ್ಥವಾದಗಳು, ಅಂದರೆ ಯಜ್ಞದ ಪ್ರಶಂಸೆಗಾಗಿ ಹೊರಟ ಮಾತುಗಳೆ ಹೊರತು ಯಥಾಸ್ಥಿತಿಯ ವರ್ಣನೆಯಲ್ಲ.

ದೇವತೆಗಳಿಲ್ಲ:

ದೇವತೆಗಳ ಉದ್ದೇಶದಿಂದ ಆಹುತಿಗಳನ್ನು ಅಗ್ನಿಯಲ್ಲಿ ಹಾಕುವುದೇ ಯಾಗ ಎಂದು ಮೀಮಾಂಸಕರು ಹೇಳುತ್ತಾರೆ. ಆದರೆ ದೇವತೆಗಳೆಂಬ ವ್ಯಕ್ತಿಗಳು ಯಾರೂ ಇಲ್ಲ. ವಿರೋಧವಲ್ಲವೆ? ಎಂದರೆ ಅವರು ಹೇಳುತ್ತಾರೆ-

ಇಂದ್ರ ಯಮ ಎಂದು ಮುಂತಾದ ಶಬ್ದಗಳನ್ನೆ ಆಯಾ ದೇವತೆಗಳೆಂದು ಕರೆಯುತ್ತೇವೆ. ದೇವತೋದ್ದೇಶದಿಂದ ಆಹುತಿ ನೀಡುವುದೆಂದರೆ 'ಇಂದ್ರನಿಗೆ' 'ಯಮನಿಗೆ' ಎಂದು ಮುಂತಾಗಿ ಹೇಳುತ್ತ ಅಗ್ನಿಯಲ್ಲಿ ಆಹುತಿಯನ್ನು ಹಾಕುವುದು ಎಂದಿಷ್ಟೇ ಅರ್ಥ. ಇಂಥ ಯಾಗ ಮಾಡಿದರೆ ಆ ಯಾಗವೆ ಫಲ ಕೊಡುತ್ತದೆ ಹೊರತು ಅದಕ್ಕೆ ಯಾಗದಿಂದ ಸಂತುಷ್ಟನಾದ ಒಬ್ಬ ದೇವತೆ ಬೇರೆ ಬೇಕಾಗಿಲ್ಲ. ಜಡವಾದ ಯಾಗ ಕರ್ಮ ಹೇಗೆ ಬೇರೆ ಬೇರೆ ಫಲವನ್ನು ಸರಿಯಾಗಿ ನೀಡಬಲ್ಲದು ಎಂದರೆ ಅಪೌರುಷೇಯವಾದ ವೇದವೇ ಹಾಗೆ ಹೇಳುತ್ತಿರುವುದರಿಂದ ಹೇಗೆ ಎಂಬ ಪ್ರಶ್ನೆ ಅಸಂಗತವಾಗುತ್ತದೆ.

ದೇವತಾಧೀಕರಣ:

ಮೀಮಾಂಸಾ ಶಾಸ್ತ್ರದಲ್ಲಿ ದೇವತಾಧಿಕರಣ ಹೀಗೆ ಹೇಳುತ್ತದೆ-

ದೇವತೆ ಪ್ರಧಾನ, ದೇವತೆಯನ್ನು ಮೆಚ್ಚಿಸುವುದಕ್ಕಾಗಿಯೇ ಯಾಗ ನಡೆಯುವುದರಿಂದ ಯಾಗ ಅಪ್ರಧಾನ. ಯಾಗದಲ್ಲಿ ನೀಡುವ ಆಹುತಿಯನ್ನು ದೇವತೆ ಉಣ್ಣುತ್ತಾನೆ. ಉಂಡು ತೃಪ್ತನಾಗುತ್ತಾನೆ. ಯಾಗಕರ್ತನಿಗೆ ಒಲಿಯುತ್ತಾನೆ. ಅಭೀಷ್ಟಸಲ್ಲಿಸುತ್ತಾನೆ. ಅವನಿಗೆ ಕಣ್ಣು ಕೈಕಾಲುಗಳಿಂದ ಕೂಡಿದ ಶರೀರ ಉಂಟು. ವಾಹನ ಉಂಟು. ಆಯುಧಗಳುಂಟು. ಒಬ್ಬೊಬ್ಬ ದೇವತೆಗೆ ಒಂದೊಂದು ಯಾಗ ಪ್ರಿಯ. ಒಬ್ಬನಿಗೆ ಪ್ರಿಯವಾದುದು ಇನ್ನೊಬ್ಬನಿಗೆ ಪ್ರಿಯವಾಗುವುದಿಲ್ಲ.

-ಇದು ಪೂರ್ವಪಕ್ಷ

ಯಾಗವೇ ಪ್ರಧಾನ. ಅದೇ ಫಲ ನೀಡುವುದೆಂದು ವೇದ ಸ್ಪಷ್ಟ ಹೇಳುತ್ತಿರುವಾಗ ಯಾಗಕ್ಕೆ ಒಲಿದ ದೇವತೆಯೊಂದು ಫಲ ಕೊಡುತ್ತಾನೆ ಎನ್ನುವುದು ಅಪ್ರಾಮಾಣಿಕ,

ವೇದ ವಿರುದ್ಧ. ಫಲಸಿದ್ಧಿಗಾಗಿ ಯಾಗ. ಯಾಗ ಸಿದ್ಧಿಗಾಗಿ ದೇವತೆ ಎನ್ನಬೇಕು ಹೊರತು ದೇವತೆಗಾಗಿ ಯಾಗವಲ್ಲ. ಅದರಿಂದ ಯಾಗ ಸಿದ್ಧಿಯು ಇಂದ್ರಾದಿ ಶಬ್ದವನ್ನೇ ಇಂದ್ರಾದಿ ದೇವತೆಯೆಂದು ಒಪ್ಪಿದರೂ ಆಗುವುದರಿಂದ ತಲೆ ಕೈಕೈಲುಗಳುಳ್ಳ ದೇವತೆಯೊಂದನ್ನು ಒಪ್ಪುವ ಅವಶ್ಯಕತೆ ಇರುವುದಿಲ್ಲ.

-ಇದು ಸಿದ್ಧಾಂತ.

ದೇವತಾ ಸ್ತುತಿ ಬೇಕು:

ಮೀಮಾಂಸಕರು ದೇವತಾಸ್ತುತಿ ಮಾಡುವುದಿಲ್ಲವೆಂದಿಲ್ಲ. ಮಾಡುತ್ತಾರೆ. ಆದರೆ ಯಾಗದಲ್ಲಿ ದೇವತೋದ್ದೇಶಕ ಯಾಗವೆ ಫಲಪ್ರದ ಹೊರತು ಯಾಗದಿಂದ ತುಷ್ಟವಾದ ದೇವತೆಯಲ್ಲ ಎಂದು ಹೇಗೆ ಹೇಳುವರೋ ಹಾಗೇ ದೇವತಾಸ್ತುತಿಯಲ್ಲಿಯೂ ದೇವತಾ ಸ್ತುತಿಯೇ ಫಲಪ್ರದ ಹೊರತು ಸ್ತುತಿಗೆ ಒಲಿದ ದೇವತೆಯಲ್ಲ ಎನ್ನುತ್ತಾರೆ.

ಕುಮಾರಿಲಭಟ್ಟರು ತಮ್ಮ ವಾರ್ತಿಕ ಗ್ರಂಥದ ಪ್ರಾರಂಭದಲ್ಲಿ,

ವಿಶುದ್ಧಜ್ಞಾನದೇಹಾಯ ತ್ರಿವೇದೀ ದಿವ್ಯಚಕ್ಷುಷೇ।
ಶ್ರೇಯಃ ಪ್ರಾಪ್ತಿ ನಿಮಿತ್ತಾಯ ನಮಃ ಸೋಮಾರ್ಧಧಾರಿಣೇ॥

'ಶುದ್ಧ ಚಿನ್ಮಯ ಶರೀರಿ, ಮೂರು ವೇದಗಳೆಂಬ ದಿವ್ಯಚಕ್ಷುಗಳಿಗೆ ಮಾತ್ರ ಗೋಚರನಾಗುವವ, ಸಕಲಾಭೀಷ್ಟದಾಯಕ, ಅರ್ಧಚಂದ್ರನನ್ನು ತಲೆಯಲ್ಲಿ ಹೊತ್ತ ಇಂಥ ಪರಮೇಶ್ವರನಿಗಿದೊ ನನ್ನ ನಮನ'.

ಎಂದು ಶಿವನಿಗೆ ನಮಿಸಿದಾಗ ವ್ಯಾಖ್ಯಾನಕಾರರು ಕೆಲವರು ಇದು ದೇವತಾಧಿಕಾರಣಕ್ಕೆ ವಿರುದ್ಧವಲ್ಲವೆ ಎಂದು ಪ್ರಶ್ನಿಸಿಕೊಂಡು ಇಲ್ಲ, ಇಲ್ಲಿ ಸ್ತೋತ್ರ ಮಾಡಿದುದು ಶಿವನನ್ನಲ್ಲ, ಯಜ್ಞವನ್ನೆ ಎನ್ನುತ್ತ ಯಜ್ಞಪರವಾಗಿ ಹೀಗೆ ಅರ್ಥ ಸ್ವೀಕರಿಸಿದ್ದಾರೆ.

'ಶುದ್ಧಜ್ಞಾನದಿಂದ ತಿಳಿಯಬಹುದಾದ ಸ್ವರೂಪ ಉಳ್ಳ, ಮೂರು ವೇದಗಳೆಂಬ ದಿವ್ಯ ಚಕ್ಷುಗಳಿಗೆ ಮಾತ್ರ ವೇದ್ಯೆವಾಗುವ, ಅಭೀಷ್ಟಫಲದಾಯಕವಾದ, ಸೋಮಲತೆಯ ಒಂದಂಶವಾದ ಅದರ ರಸವನ್ನು ಆಹುತಿರೂಪದಿಂದ ಧರಿಸಿ ಯಾಗಕ್ಕೆ ನನ್ನ ನಮನ'

ದೇವತಾ ಭಕ್ತಿ:

ಮೀಮಾಂಸಾಶಾಸ್ತ್ರ ಹೀಗೆ ದೇವತಾ ದ್ರೋಹ ಮಾಡುತ್ತಿದ್ದರೂ ಮೀಮಾಂಸಕರು ದೇವತಾ ಭಕ್ತರೆ. ಅವರು ದೇವತಾಧಿಕರಣವನ್ನು ವರ್ಣಿಸುವಾಗ ಅಪರಾಧ ಪ್ರಜ್ಞೆಯಿಂದ ಕಸಿವಿಸಿಗೊಳ್ಳುತ್ತಾರೆ. ಭಾಟ್ಟದೀಪಿಕಾಕಾರ ಖಂಡದೇವ ಹೇಳುತ್ತಾನೆ-

'ಇದು ಜೈಮಿನಿ ಸಿದ್ಧಾಂತ. ಆದರೆ ನಾನು ಇದನ್ನು ಉಚ್ಚರಿಸುವುದರಿಂದ ನನ್ನ ನಾಲಿಗೆ ಹೊಲೆಯಾಗುತ್ತದೆ. ಏನು ಮಾಡಲಿ? ಹರಿಸ್ಮರಣೆಯೆ ನನಗೆ ಗತಿ'.

ಕೆಲವು ವ್ಯಾಖ್ಯಾನಕಾರರ ಪ್ರಕಾರ ಮೀಮಾಂಸಾ ಶಾಸ್ತ್ರ ದೇವತೆಗಳನ್ನೇ ಇಲ್ಲವೆನ್ನುವುದಿಲ್ಲ. ಯಾಗದಲ್ಲಿ ನೀಡುವ ಆಹುತಿ ಸ್ವೀಕರಿಸಲು ದೇವತೆಗಳಿಲ್ಲ ಎಂದು ಮಾತ್ರ ಹೇಳುತ್ತದೆ. ಯಾಗಕ್ಕೂ ದೇವತೆಗಳಿಗೂ ಸಂಬಂಧವಿಲ್ಲ. ಯಾಗದಲ್ಲಿ ಅವರು ಬೇಡ, ಅವರ ನಾಮ ಒಂದೇ ಸಾಕು! ಆದ್ದರಿಂದ ಕುಮಾರಿಲರು ಪರಮೇಶ್ವರನನ್ನು ಸ್ತುತಿಸಿದರೆ ಆ ಶ್ಲೋಕಕ್ಕೆ ಯಜ್ಞಪರವಾಗಿ ಅರ್ಥ ಮಾಡಬೇಕಾಗಿಲ್ಲ. ದೇವಲೋಕದಲ್ಲಿ ದೇವತೆಗಳಿದ್ದಾರೆ. ಅವರು ನಮ್ಮ ಸ್ತುತಿ ಕೇಳಿ ಒಲಿಯುತ್ತಾರೆ. ವರ ನೀಡುತ್ತಾರೆ. ಇದನ್ನು ಒಪ್ಪಲು ಅಡ್ಡಿ ಇಲ್ಲ. ಆದರೂ ಆಗ್ರಹದಿಂದ ಶಿವಸ್ತುತಿಯನ್ನು ಯಾಗಸ್ತುತಿಯೆಂದು ಬಲಾತ್ಕಾರದಿಂದ ಅರ್ಥೈಸುವವರು ಶಿವದ್ರೋಹಿಗಳೇ ಸರಿ ಎನ್ನುತ್ತಾರೆ.

ಇನ್ನು ಕೆಲವರು, ಮೀಮಾಂಸಕರನ್ನು ನಿರೀಶ್ವರವಾದಿಗಳೆಂದೇ ಕರೆದು ಸೇಶ್ವರ ಮೀಮಾಂಸಾ ಎಂದು ಮತ್ತೊಂದು ಸಂಪ್ರದಾಯವನ್ನೇ ಪ್ರಾರಂಭಿಸಿದರು. ಅದರಂತೆ ಹದಿನಾಲ್ಕನೇ ಶತಕದಲ್ಲಿ ವೇದಾಂತದೇಶಿಕರು ಸೇಶ್ವರ ಮೀಮಾಂಸಾ ದರ್ಶನವೆಂದೇ ಒಂದು ಗ್ರಂಥವನ್ನು ರಚಿಸಿದ್ದಾರೆ.

***

ಯೋಗದರ್ಶನ

ಪಿ.ವೆಂಕಟೇಶ ಬಾಯರಿ

'ದೃಶ್ಯತೇಬೋಧ್ಯತೇ ಅಪೂರ್ವಃ ಅರ್ಥಃ ಅನೇನ ಇತಿ ದರ್ಶನಮ್' ಅಂದರೆ ಅಪೂರ್ವವಾದ ಅರ್ಥದ ತಿಳಿವಳಿಕೆಗೆ ಕಾರಣವಾದುದನ್ನು ದರ್ಶನ ಎನ್ನುವರು. ಶಾಸ್ತ್ರ ಎಂದರೂ ಇದೇ ಅರ್ಥ. ಬೇರೆ ಯಾವುದೇ ಪ್ರಮಾಣದಿಂದ ತಿಳಿಯಲಾಗದ ಈಶ್ವರನನ್ನು ಯೋಗದ ಬಲದಿಂದ ಕಾಣಬಹುದಾಗಿದೆ. ಆದ್ದರಿಂದ ಇದನ್ನು 'ಯೋಗದರ್ಶನ' ಎಂದು ಕರೆಯುವುದು ಉಚಿತವೇ ಆಗಿದೆ.

ಈ ದರ್ಶನಕ್ಕೆ ಯೋಗೀಶ್ವರರಾದ ಹಿರಣ್ಯಗರ್ಭರು ಮೂಲಪುರುಷರಾಗಿದ್ದರೂ, ಅವರ ಸಂಪ್ರದಾಯ ಪರಂಪರೆಯಿಂದ ಬಂದ ಮಹರ್ಷಿ ಪತಂಜಲಿಗಳು ಯೋಗದರ್ಶನಕ್ಕೆ ಮೂಲಭೂತವಾದ ಯೋಗಸೂತ್ರಗಳನ್ನು ರಚಿಸಿದ್ದರಿಂದ ಪ್ರವರ್ತಕರಾದರು. ಈ ದರ್ಶನಕ್ಕೆ 'ಪಾತಂಜಲ ದರ್ಶನ' ಎಂಬ ಹೆಸರೂ ಬಂತು. ಕ್ರಿ. ಶ. ೪೦೦ ರ ಸಮಯದಲ್ಲಿ ವ್ಯಾಸನು ಈ ಸೂತ್ರಗಳಿಗೆ ಭಾಷ್ಯವನ್ನು ಬರೆದಿದ್ದು, ವಾಚಸ್ಪತಿಮಿಶ್ರನು ಅದಕ್ಕೆ 'ತತ್ತ್ವವೈಶಾರದೀ' ಎಂಬ ಟೀಕೆಯನ್ನು ರಚಿಸಿದನು. ಎಲ್ಲಾ ದರ್ಶನಗಳೂ ಕಾಲಕ್ರಮದಲ್ಲಿ ಅಭಿಪ್ರಾಯ ಭೇದವನ್ನು ಹೊಂದುವಂತೆ, ಈ ದರ್ಶನವೂ ವಿಜ್ಞಾನಭಿಕ್ಷು ಮೊದಲಾದವರಿಂದ ರಚಿತವಾದ ಟೀಕೆ ಹಾಗೂ ವ್ಯಾಖ್ಯಾನಗಳಿಂದ ವಿಚಿತ್ರರೀತಿಯಾಗಿ ನಿರೂಪಿಸಲ್ಪಟ್ಟಿದೆ.

ವಿಚಾರಪರಶಾಸ್ತ್ರಗಳ ಪ್ರಾರಂಭದ ಸೂತ್ರಗಳಲ್ಲಿ 'ಜಿಜ್ಞಾಸಾ', 'ಮೀಮಾಂಸಾ' ಮೊದಲಾದ ವಿಚಾರಾರ್ಥಕ ಪದಗಳಿರುತ್ತವೆ. ಆದರೆ ಇಲ್ಲಿ 'ಅಥ ಯೋಗಾನುಶಾಸನಂ' ಎಂಬ ಮೊದಲ ಸೂತ್ರದಲ್ಲಿ 'ಅನುಶಾಸನಂ' ಎಂದು ಪ್ರಯೋಗಿಸಿದ್ದು, ಇದು ಉಪದೇಶ ಶಾಸ್ತ್ರವೆಂದು ತಿಳಿಯುತ್ತದೆ. ಆದ್ದರಿಂದ ಇಲ್ಲಿ ಹೇಳಿದುದನ್ನು ವಿಶ್ವಾಸದಿಂದ ತಿಳಿದು ಆಚರಿಸಬೇಕೇ ಹೊರತು ಮೀಮಾಂಸಾ ಶಾಸ್ತ್ರಗಳಂತೆ 'ಏಕೆ' 'ಹೇಗೆ' ಎಂದು ಪ್ರಶ್ನಿಸಬಾರದು. ಹೀಗಾಗಿ ಯುಕ್ತಿಯಿಂದ ವಿಚಾರಮಾಡಲು ಈ ಶಾಸ್ತ್ರದಲ್ಲಿ ಅವಕಾಶವಿಲ್ಲ.

ಈ ದರ್ಶನದ ರೀತಿಯಲ್ಲಿ ಜಗತ್ತಿನಲ್ಲಿ ಜೀವ, ಈಶ್ವರ, ಪ್ರಕೃತಿ ಅದರ ಪರಿಣಾಮಗಳಾದ ಪ್ರಾಪಂಚಿಕ ಜಡವಸ್ತುಗಳಿಗೆ ಅಸ್ತಿತ್ವವಿದೆ. ಒಡವೆಗಳಿಗೆ ಬಂಗಾರವು ಪರಿಣಾಮಿಕಾರಣವಾಗುವಂತೆ ಮೂಲಪ್ರಕೃತಿಯೇ ಉಪಾದಾನಕಾರಣ. ಅಕ್ಕಸಾಲಿಗನಂತೆ ಈಶ್ವರ ನಿಮಿತ್ತಕಾರಣ. ಪುರುಷರನ್ನು ಪ್ರಕೃತಿಯ ಬಂಧದಿಂದ ಮುಕ್ತಗೊಳಿಸಲು ಮಾಡಬೇಕಾದ ಕಾರ್ಯವನ್ನು ಉಪದೇಶಿಸುವುದು ಈ ದರ್ಶನದ ಮುಖ್ಯೋದ್ದೇಶ. ಸಾಂಖ್ಯದರ್ಶನದಂತೆ ಈ ದರ್ಶನವು ಪ್ರಕೃತಿ ಮಹತ್ತತ್ತ್ವ, ಅಹಂಕಾರತತ್ತ್ವ, ಕಣ್ಣು ಮೊದಲಾದ ಐದು ಜ್ಞಾನೇಂದ್ರಿಯಗಳು, ವಾಕ್ ಮೊದಲಾದ ಐದು ಕರ್ಮೇಂದ್ರಿಯಗಳು, ಮನಸ್ಸು ಮೊದಲಾದ ಐದು ತನ್ಮಾತ್ರಗಳು, ಆಕಾಶ ಮೊದಲಾದ ಪಂಚಮಹಾಭೂತಗಳು

ಹಾಗೂ ಜೀವಾತ್ಮನನ್ನು ಒಪ್ಪಿದ್ದು, ಈಶ್ವರನನ್ನೂ ಒಪ್ಪಿದೆ.

ಚೇತನ ತತ್ತ್ವವು ಈಶ್ವರ, ಪುರುಷನೆಂದು ಎರಡು ವಿಧ. ಪುರುಷನು ಅಸಂಖ್ಯಾತ, ವಿಭು, ಉತ್ಪತ್ತಿನಾಶರಹಿತ, ಶಾಶ್ವತ, ಸಾಕ್ಷಿ ಹಾಗೂ ಜ್ಞಾನಸ್ವರೂಪ. ಇವನಲ್ಲಿ ಸ್ವಾಭಾವಿಕವಾಗಿ ಯಾವ ದೋಷವೂ ಇಲ್ಲ. ಆತ ಯಾವಾಗಲೂ ಶುದ್ಧ, ಅಸಂಗ ಹಾಗೂ ಪ್ರಕಾಶರೂಪ. ಆದ್ದರಿಂದ ಅವನ ಸ್ವರೂಪಕ್ಕೆ ಕೈವಲ್ಯ ಎಂದು ಹೆಸರು. ಹೀಗಿದ್ದರೂ ಅನಾದಿಕಾಲದಿಂದ ಪ್ರಕೃತಿಸಂಬಂಧವುಳ್ಳವನಂತೆ ಇರುವನು. ಇವನು ಜ್ಞಾನರೂಪ, ಪ್ರಕೃತಿ ಜ್ಞೇಯಸ್ವರೂಪ, ಜ್ಞಾನ ಜ್ಞೇಯಗಳಿಗೆ ಸಂಬಂಧವು ಸಹಜವಾದರೂ, ಪ್ರಕೃತಿಯ ಸಂಬಂಧವನ್ನು ಹೇಯವೆಂದರಿಯದೆ ಭೋಗ್ಯವೆಂದು ತಿಳಿಯುತ್ತಾನೆ. ಪ್ರಕೃತಿಯ ಪರಿಣಾಮವೇ ಚಿತ್ತ, ಇದೇ ಸತ್ತ್ವ, ಅದರಲ್ಲಿ ಹುಟ್ಟುವುದರಿಂದ ಸುಖ, ದುಃಖ, ಇಚ್ಛೆ, ಕಾಮ, ಕ್ರೋಧ ಮೊದಲಾದವು ಚಿತ್ತದ ಗುಣಗಳೇ. ಸ್ಫಟಿಕ ಶುಭ್ರವಾದರೂ ಸಮೀಪದ ಉಪಾಧಿಯಿಂದಾಗಿ ಬೇರೆ ಬೇರೆ ಬಣ್ಣಗಳು ಕಾಣುವಂತೆ ನಿರ್ಮಲನಾದ ಪುರುಷನಲ್ಲಿ ಚಿತ್ತದ ಗುಣಗಳಲ್ಲೂ ಕಾಣುವುವು. ಆತ್ಮ ತನ್ನ ಸ್ವರೂಪವನ್ನು ಮರೆತು ಚಿತ್ತವೇ ತಾನೆಂದು ಭ್ರಮಿಸುವನು. ಈ ಭ್ರಮೆ ಹೋಗಲು ಚಿತ್ತವು ಬೇರೆ, ತಾನು ಬೇರೆ ಎಂದು ಆತ್ಮನಿಗೆ ಜ್ಞಾನ ಬೇಕು. ಈ ಜ್ಞಾನವನ್ನು 'ಸತ್ತ್ವಪುರುಷಾನ್ಯತಾಖ್ಯಾತಿ' ಎನ್ನುವರು. 'ಸತ್ತ್ವ' ಎಂದರೆ ಚಿತ್ತ,'ಪುರುಷ' ತಿಳಿಯುವ ಆತ್ಮ, 'ಅನ್ಯತಾ' ಎಂದರೇ ಇವೆರಡರ ಭೇದ, 'ಖ್ಯಾತಿ' ಎಂದರೆ ಅರಿವು. ಪುರುಷನು ತಾನು ಪ್ರಕೃತಿಗಿಂತ ಬೇರೆ ಎಂದು ಅರಿತಾಗಲೇ ಮೋಕ್ಷ. ಮೋಕ್ಷದಶೆಯಲ್ಲಿ ಆತ್ಮನು ಚಿತ್ಸ್ವರೂಪನಾಗಿರುವನು; ಇದೇ ಕೈವಲ್ಯ.

ಈಶ್ವರನು ಪ್ರಪಂಚಕ್ಕೆ ನಿಮಿತ್ತಕಾರಣ. ಪ್ರಕೃತಿ ಪುರುಷರಿಗಿಂತ ಭಿನ್ನ. ಇವನಿಗೆ ಅವಿದ್ಯೆಯ ಸಂಬಂಧವಿಲ್ಲ, ಪಾಪಪುಣ್ಯಕರ್ಮಗಳಿಲ್ಲ; ಕರ್ಮವೇ ಇಲ್ಲದಿರುವಾಗ ಅದರ ವಿಪಾಕವಾಗಲೀ, ವಾಸನೆಯಾಗಲೀ ಹೇಗೆ ಸಾಧ್ಯ? ಶುದ್ಧ ಸತ್ತ್ವಪ್ರಧಾನವಾದ ಇಂದ್ರಿಯಗಳು ಇದ್ದು ಅವು ಜಗತ್ತಿನ ಅನುಗ್ರಹ ಹಾಗೂ ಉಪದೇಶಕ್ಕೆ ಹೊರತು ಸ್ವಾರ್ಥಕ್ಕಾಗಿ ಅಲ್ಲ. ಅವನಲ್ಲಿ ಅಜ್ಞಾನ, ಅನೈಶ್ವರ್ಯಾದಿಗಳಿಲ್ಲ. ಆತ ಸರ್ವಜ್ಞ, ನಿರತಿಶಯೈಶ್ವರ್ಯಶಾಲಿ. ಅದ್ದರಿಂದಲೇ ಈಶ್ವರ. ಅವನಲ್ಲಿ ಭಕ್ತಿಯೇ ಈಶ್ವರಪ್ರಣಿಧಾನ. ಇದರಿಂದ ಸಮಾಧಿಪಥದಲ್ಲಿ ಬರುವ ವಿಘ್ನಗಳು ನಾಶವಾಗುವವು. ಈ ಪ್ರಣಿಧಾನದಿಂದ ಪ್ರಸನ್ನನಾದ ಈಶ್ವರನು ಪುರುಷನನ್ನು ಅನುಗ್ರಹಿಸುವನು.

'ಯೋಗ' ಎಂದರೆ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದ ಜೀವ-ಪರಮಾತ್ಮರ ಐಕ್ಯ ಅಥವಾ ಸಂಯೋಗ ಎಂದು ಕೆಲವರ ಅಭಿಪ್ರಾಯ. ಇದು 'ಯುಜಿರ್-ಯೋಗೇ' ಎಂಬ ಧಾತುವಿನಿಂದ ನಿಷ್ಪನ್ನವಾದುದು. ಭಗವದ್ಗೀತೆಯಲ್ಲಾದರೂ ಸಿದ್ಧಿ-ಅಸಿದ್ಧಿಗಳಲ್ಲಿ ಸಮನಾಗಿರುವ ಚಿತ್ತಸಮಾಧಾನ, ಪರಮಾತ್ಮನಲ್ಲಿ ಅನನ್ಯ ಭಾವವನ್ನು ಹೊಂದುವುದು,

ಚಿತ್ತವನ್ನು ನಿರೋಧಿಸಿ ಆತ್ಮಚಿಂತನೆ ಮಾಡುವುದು. ದುಃಖ ಸಂಯೋಗವನ್ನು ದೂರಮಾಡುವ ಅವಸ್ಥಾವಿಶೇಷ ಮೊದಲಾದ ಅರ್ಥಗಳಲ್ಲಿ ಯೋಗಶಬ್ದವು ಪ್ರಯುಕ್ತವಾಗಿದ್ದು, ಪರಮಾತ್ಮಜ್ಞಾನಸಾಧನ ಎಂಬ ಸಾಮಾನ್ಯ ಅರ್ಥವನ್ನು ಹೊಂದಿದೆ. ಆದರೇ ಈ ದರ್ಶನದಲ್ಲಿ ಯೋಗ ಎಂದರೇ ಸಮಾಧಿ-ಚಿತ್ತೈಕಾಗ್ರತೆ ಎಂದರ್ಥ ಹೊರತು ಸಂಯೋಗಾದಿಗಳಲ್ಲ. 'ಯುಜ-ಸಮಾಧೌ' ಎಂಬ ಧಾತುವಿನಿಂದ ನಿಷ್ಪನ್ನವಾದ ಯೋಗ ಶಬ್ದವು ಇಲ್ಲಿ ವ್ಯವಹರಿಸಲ್ಪಡುತ್ತದೆ. ಇದಷ್ಟೇ ಪತಂಜಲಿ ಋಷಿಗಳು 'ಯೋಗಃ ಚಿತ್ತ-ವೃತ್ತಿನಿರೋಧಃ' ಎಂದು ಸ್ಪಷ್ಟವಾಗಿ ಹೇಳಿರುತ್ತಾರೆ.

ಚಿತ್ತ ಎಂದರೆ ಅಂತಃಕರಣ ಸತ್ತ್ವ, ರಜಸ್, ತಮಸ್ ಈ ಮೂರು ಗುಣಗಳಿಂದ ಚಿತ್ತ ವೃತ್ತಿಗಳೂ ಕೂಡಾ ಸಾತ್ವಿಕ, ರಾಜಸ, ತಾಮಸಗಳೆಂದು ಮೂರು ವಿಧ. ಸಾತ್ವಿಕ ವೃತ್ತಿಯಲ್ಲಿ ಪ್ರತಿಬಿಂಬಿತನಾದಾಗ ಜೀವನು 'ಸುಖಿ' ಎಂದೂ, ರಾಜಸ ವೃತ್ತಿಯಲ್ಲಿ ಪ್ರತಿಬಿಂಬಿತನಾದಾಗ 'ದುಃಖಿ' ಎಂದೂ, ತಾಮಸ ವೃತ್ತಿಯಲ್ಲಿ ಪ್ರತಿಬಿಂಬಿತನಾದಾಗ 'ಮೂಢ' ಎಂದೂ ತಿಳಿಯುವನು. ವಾಸ್ತವವಾಗಿ ಪುರುಷನಲ್ಲಿ ಯಾವ ಗುಣವೂ ಇಲ್ಲ.

ಈ ವೃತ್ತಿಗಳು ಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರಾ ಹಾಗೂ ಸ್ಮೃತಿ ಎಂದು ಐದು ವಿಧ. ಪ್ರತ್ಯಕ್ಷ, ಅನುಮಾನ ಹಾಗೂ ಆಗಮ ಎಂದು ಮೂರು ಪ್ರಮಾಣಗಳು. ಇಲ್ಲದ ವಸ್ತುವಿನ ತಿಳಿಯುವಿಕೆ. ವಿಪರ್ಯಯ ಶಬ್ದದಿಂದ ಹುಟ್ಟುವ ಬಾಧಿತ ವಸ್ತುವನ್ನು ಗ್ರಹಿಸುವ ಜ್ಞಾನವೇ ವಿಕಲ್ಪ. ನರಶೃಂಗ (ಮನುಷ್ಯನ ಕೋಡು) ಎಂಬ ಶಬ್ದವನ್ನು ಕೇಳಿದಾಗ ಒಂದು ರೀತಿಯ ಜ್ಞಾನ ಬರುವುದು. ಆದರೆ ನರಶೃಂಗವಿಲ್ಲ. ಈ ಜ್ಞಾನವೇ'ವಿಕಲ್ಪ' ಜಾಗ್ರದವಸ್ಥೆ ಹಾಗೂ ಸ್ವಪ್ನಾವಸ್ಥೆಗಳಲ್ಲಿನ ವೃತ್ತಿಗಳ ಅಭಾವವನ್ನು ಗ್ರಹಿಸುವ ವೃತ್ತಿಯೇ ನಿದ್ರಾವೃತ್ತಿ. 'ನಾನು ಇದುವರೆಗೆ ಸುಖವಾಗಿ ನಿದ್ರಿಸಿದೆ'ಎಂದು ನಿದ್ರೆಯಿಂದ ಎಚ್ಚೆತ್ತವನು ಹೇಳುವುದರಿಂದ ಆ ಕಾಲದಲ್ಲೂ ವೃತ್ತಿ ಇದೆ. ಹಿಂದೆ ಅನುಭವಿಸಿದ ವಿಷಯವನ್ನು ಗ್ರಹಿಸುವುದೇ ಸ್ಮೃತಿ.

ಕ್ಷಿಪ್ತ, ಮೂಢ, ವಿಕ್ಷಿಪ್ತ, ಏಕಾಗ್ರ ಹಾಗೂ ನಿರುದ್ಧ ಎಂದು ಚಿತ್ತಕ್ಕೆ ಐದು ಭೂಮಿಗಳಿವೆ. ಚಂಚಲತೆಯೇ ಕ್ಷಿಪ್ತ. ರಜೋಗುಣದ ಪ್ರಭಾವದಿಂದ ಮನಸ್ಸು ಆಯಾಯ ವಿಷಯಗಳತ್ತ ಓಡುತ್ತಿರುತ್ತದೆ. ಈ ಅವಸ್ಥೆಯಲ್ಲಿ ತಮೋಗುಣದಿಂದಾಗಿ ನಿದ್ರಾವೃತ್ತಿಯಿಂದ ಆವರಿಸಿರುವುದೇ ಮೂಢ. ಮನಸ್ಸು ಚಂಚಲವಾಗಿದ್ದರೂ ಆಗಾಗ ಸ್ಥಿರತೆಯನ್ನು ಹೊಂದುವುದೇ ವಿಕ್ಷಿಪ್ತ. ಒಂದೇ ವಿಷಯವನ್ನು ಗ್ರಹಿಸುತ್ತಿದ್ದಲ್ಲಿ ಏಕಾಗ್ರ. ಕೊನೆಯ ಹಾಗೂ ಮುಖ್ಯವಾದ ಅವಸ್ಥೆ ನಿರುದ್ಧ. ಇದೇ ಸಂಪ್ರಜ್ಞಾತ ಸಮಾಧಿ. ಇದರಲ್ಲಿ ಎಲ್ಲಾ ವೃತ್ತಿಗಳೂ ತಡೆಯಲ್ಪಟ್ಟು ಸಂಸ್ಕಾರ ಮಾತ್ರವಾಗಿರುತ್ತವೆ. ಮೊದಲ ಮೂರು ಅವಸ್ಥೆಗಳಲ್ಲಿ ಏಕಾಗ್ರತೆ ಇರದು.

ಅಭ್ಯಾಸ ಮತ್ತು ವೈರಾಗ್ಯದಿಂದ ಚಿತ್ತವೃತ್ತಿಯನ್ನು ನಿರೋಧಿಸಬಹುದು. ಸಚ್ಚಿದ್ರೂಪನಾದ ಆತ್ಮನಲ್ಲಿ ಏಕಾಗ್ರತೆಯನ್ನು ಹೊಂದಲು ಪುನಃ ಪುನಃ ಪ್ರಯತ್ನಿಸುವುದೇ 'ಅಭ್ಯಾಸ'. ಈ ಪ್ರಯತ್ನಕ್ಕೆ ಉತ್ಸಾಹಾದಿಗಳು ಸಹಕಾರಿ. ಬಾಹ್ಯ ವಿಷಯಗಳತ್ತ ಹೋಗುವ ಚಿತ್ತವನ್ನು ನಿರೋಧಿಸುವುದು 'ಉತ್ಸಾಹ'. ಸಾಧ್ಯ, ಅಸಾಧ್ಯ ಎಂದು ವಿವೇಚಿಸದೆ ಶೀಘ್ರವಾಗಿ ಕಾರ್ಯದಲ್ಲಿ ಪ್ರವೃತ್ತಿಯೇ 'ಸಾಹಸ'. ಫಲ ಈ ಜನ್ಮದಲ್ಲೋ ಮುಂದಿನ ಜನ್ಮದಲ್ಲೋ ಸಿಗುವುದೆಂದು ಭಾವಿಸಿ ವ್ಯಥೆ ಪಡದಿರುವಿಕೆಯೇ 'ಧೈರ್ಯ'. ಇತರ ಪದಾರ್ಥಗಳ ಜ್ಞಾನ ನಿಷ್ಪ್ರಯೋಜನ, ಆತ್ಮನ ಅರಿವೇ ಪ್ರಯೋಜನಕಾರಿ ಎಂದು ವಿವೇಚಿಸಿ ಆತ್ಮವಿದ್ಯೆಯನ್ನು ಅಧ್ಯಯನ ಮಾಡುವುದು, ಹಿರಿಯರನ್ನು ನಮಸ್ಕರಿಸುವುದು, ಸೇವಿಸುವುದು, ಅವರಿಂದ ಹೆಚ್ಚಿನ ವಿಷಯಗಳನ್ನು ಅರಿಯುವುದು ಮುಂತಾದವು ಗುರುಸೇವೆ. ಬ್ರಹ್ಮಚರ್ಯ, ಮಂತ್ರಗಳ ಜಪ, ಅದರಲ್ಲೂ ವಿಶೇಷವಾಗಿ ಪ್ರಣವ ಮಂತ್ರ ಜಪ, ಫಲಾಪೇಕ್ಷೆಯಿಲ್ಲದೆ ಕಾರ್ಯಾಚರಣೆ ಇವೇ ಮೊದಲಾದವುಗಳಿಂದ ಪ್ರಯತ್ನಿಸಿದರೆ ಚಿತ್ತಶುದ್ಧಿಯನ್ನು ಪಡೆಯಬಹುದು.

ಅಂತೆಯೇ ವೈರಾಗ್ಯವೂ ಚಿತ್ತಶುದ್ಧಿಗೆ ಸಹಕಾರಿ, ರಾಗ ಎಂದರೆ ಆಸೆ. ಅನ್ನ ಪಾನ ಮೊದಲಾದ ಲೌಕಿಕ ವಿಷಯಗಳ ಸೇವನೆಗಳಿಂದ ಸುಖವನ್ನು ಬಯಸುವುದು, ವೈದಿಕ ಕರ್ಮಾಚರಣೆಗಳಿಂದ ಸ್ವರ್ಗದಲ್ಲಿ ಬಯಕೆ ಇವೆಲ್ಲಾ ರಾಗ. ಇದನ್ನೆಲ್ಲಾ ಬಿಡುವುದೇ ವೈರಾಗ್ಯ. ಆಧ್ಯಾತ್ಮಿಕ ಪ್ರಗತಿಗೆ ಅನಿವಾರ್ಯ ನಿಯಮವೆಂದರೆ ವೈರಾಗ್ಯ ಬೆಳೆಸಿಕೊಳ್ಳುವುದು. ಅದೂ ಅಗೊಮ್ಮೆ ಈಗೊಮ್ಮೆ ಅಲ್ಲ. ಕ್ರಮಬದ್ಧವಾಗಿ, ನಂತರ ಎಂದೆಂದೂ. ಸ್ತ್ರೀಯರು, ಆಹಾರ, ಪಾನೀಯ, ಬಲ ಮುಂತಾದವು ಇಂದ್ರಿಯಗೋಚರ ವಿಷಯಗಳು. ವೈದಿಕ ಕರ್ಮಾನುಷ್ಠಾನದಿಂದ ಪಡೆಯುವ ಸ್ವರ್ಗ, ದೇಹರಹಿತಸ್ಥಿತಿ ಮುಂತಾದವು ಶ್ರುತ ವಿಷಯಗಳು. ಈ ಪದಾರ್ಥಗಳ ರಾಗಗಳ ಮೇಲೆ ಹತೋಟಿ ಇಡಬೇಕು ಎಂದು ಈ ದರ್ಶನ ಬೋಧಿಸುತ್ತದೆ. ಯಾವುದಾದರೂ ವಸ್ತುವಿನಲ್ಲಿ ಎಲ್ಲಿಯವರೆಗೆ ಆಸಕ್ತಿಯನ್ನು ಉಳಿಸಿಕೊಂಡಿರುತ್ತೇವೆಯೋ ಅಲ್ಲಿಯವರೆಗೆ ಅದರ ಇರುವಿಕೆಯನ್ನು ಗಮನಿಸುವುದು, ಅದರಿಂದಾಗಿ ಅಜ್ಞಾನದ ಪರಿಣಾಮಗಳನ್ನು ಅನುಭವಿಸುವುದೂ ತಪ್ಪಿದ್ದಲ್ಲ. ಇಂದ್ರಿಯಗಳು ತಮ್ಮ ಸಹಜವಾದ ಚಟುವಟಿಕೆಗಳ ಕ್ಷೇತ್ರಗಳಿಗೆ ಪ್ರವೇಶಿಸಕೂಡದೆಂಬ ಬಯಕೆ ವೈರಾಗ್ಯದ ಮೊದಲ ಮೆಟ್ಟಿಲು.

ಈ ವೈರಾಗ್ಯವು ಯತಮಾನ, ವ್ಯತಿರೇಕ, ಏಕೇಂದ್ರಿಯ ಮತ್ತು ವಶೀಕಾರ ಎಂದು ನಾಲ್ಕು ವಿಧ. ವಿಷಯವನ್ನು ಬಿಡದಿದ್ದರೂ ಅದಕ್ಕೆ ಸದೃಶ ವಿಷಯದಲ್ಲಿ ಅಪೇಕ್ಷೆ ಮಾಡದಿರುವಿಕೆಯೇ ಯತಮಾನ ವೈರಾಗ್ಯ. ನಮಗೆ ಬಹಳ ಇಷ್ಟವಾದ ಪದಾರ್ಥವನ್ನು ಬಿಡುವುದಕ್ಕೆ ವ್ಯತಿರೇಕ ವೈರಾಗ್ಯವೆಂದು ಹೆಸರು. ವಿಷಯಗಳ ಮೇಲಿನ ಪ್ರೀತಿಯನ್ನು ಮನಸ್ಸಿನಿಂದ ಬಿಟ್ಟು, ಬಾಹ್ಯೇಂದ್ರಿಯದಿಂದ ಮಾತ್ರ ವಿಷಯ ಪದಾರ್ಥಗಳನ್ನು

ಅನುಭವಿಸುತ್ತಿದ್ದರೆ ಏಕೇಂದ್ರಿಯ ವೈರಾಗ್ಯ. ಮನಸ್ಸಿನಂತೆ ಬಾಹ್ಯೇಂದ್ರಿಯಗಳಿಂದಲೂ ವಿಷಯಗಳಲ್ಲಿನ ಅಭಿಮಾನವನ್ನು ಬಿಟ್ಟಲ್ಲಿ ವಶೀಕಾರ ವೈರಾಗ್ಯವೆನ್ನುವರು. ಈ ವಶೀಕಾರ ವೈರಾಗ್ಯ ಅತ್ಯಂತ ಮುಖ್ಯವಾಗಿದ್ದು, ಇದರಿಂದ ವಿಷಯಗಳಲ್ಲಿ ಆಸೆ ಇಲ್ಲದಿರುವುದರಿಂದ ತೃಷ್ಣಾರಹಿತವಾದ ಚಿತ್ತವೃತ್ತಿಯು ಹುಟ್ಟುವುದು. ಇದೇ ಶುದ್ಧ ಚಿತ್ತವೃತ್ತಿ.

ಚಿತ್ತವೃತ್ತಿಗಳ ನಿರೋಧವೇ ಯೋಗ. ಪತಂಜಲಿಯ ದೃಷ್ಟಿಯಲ್ಲಿ ಜಗತ್ತಿನಲ್ಲಿ ಯಾವುದೂ ಸುಖಕರವಲ್ಲ. ಗುಣ ವೃತ್ತಿಗಳ ವಿರೋಧದಿಂದ ವಿವೇಕಿಗೆ ಎಲ್ಲವೂ ದುಃಖವೇ. ಈ ದುಃಖ ನಿವಾರಣೆಗೆ ಸಾಧನ ವಿವೇಕಖ್ಯಾತಿ.

ವಿವೇಕಖ್ಯಾತಿಃ ಅವಿಪ್ಲವಹಾನೋಪಾಯಃ ಇಂತಹ ವಿವೇಕ ಖ್ಯಾತಿಯ ಸಿದ್ಧಿಗಾಗಿ ಮಾನವನು ಕೆಲವು ಸಾಧನಗಳನ್ನು ಅಭ್ಯಸಿಸಬೇಕು. ಆ ಸಾಧನಗಳೇ ಯೋಗದ ಎಂಟು ಅಂಗಗಳು (ಅಷ್ಟಾಂಗ). ಈ ಯೋಗಾಂಗಗಳ ಅನುಷ್ಠಾನದಿಂದ ಅಶುದ್ಧಿಯು ಕ್ಷಯವಾಗಿ ಸಮ್ಯಗ್‌ಜ್ಞಾನದ ಅಭಿವ್ಯಕ್ತಿಯಾಗುವುದು.

ಯೋಗದ ಎಂಟು ಅಂಗಗಳು :

ಯಮನಿಯಮಾಸನಪ್ರಾಣಯಾಮಪ್ರತ್ಯಾಹಾರಧಾರಣಧ್ಯಾನ
ಸಮಾಧಯೋಽಷ್ಟಾವಂಗಾನಿ ೨.೧೧.೨೯

ಯಮ: ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಇವೆಲ್ಲವೂ ಯಮ ಎನಿಸುತ್ತವೆ. ಯಾವ ಪ್ರಾಣಿಗೂ ಯಾವ ರೀತಿಯಲ್ಲೂ ಹಿಂಸೆಯನ್ನು ಮಾಡದಿರುವಿಕೆಯೇ ಅಹಿಂಸೆ. ಇದು ಯಮದ ಮೊದಲನೆಯ ಅಂಗ. ಮನಸ್ಸು ಮತ್ತು ಮಾತು ಇವುಗಳಲ್ಲಿನ ಏಕತೆಯೇ ಸತ್ಯ. 'ತೇನ ತ್ಯಕ್ತೇನ ಭುಂಜೀಥಾಃ' ಇದು ಶಾಸ್ತ್ರದ ಆಜ್ಞೆ. ಶಾಸ್ತ್ರದ ಆಜ್ಞೆಗೆ ವಿರುದ್ಧವಾಗಿ ಹಣದ ಸ್ವೀಕಾರವೇ ಸ್ತೇಯ. ಅದರಲ್ಲಿ ಆಸೆಯನ್ನು ಬಿಡುವುದೇ ಅಸ್ತೇಯ. ಇಂದ್ರಿಯಗಳನ್ನು ನಮ್ಮ ಅಧೀನದಲ್ಲಿ ಇಟ್ಟುಕೊಳ್ಳುವಿಕೆಯೇ ಬ್ರಹ್ಮಚರ್ಯ. ವಸ್ತುಗಳ ಸಂಪಾದನೆ, ರಕ್ಷಣೆ, ನಾಶ, ಇತ್ಯಾದಿಗಳಲ್ಲಿ ಅನಾಸಕ್ತಿ, ವೈರಾಗ್ಯಭಾವವೇ 'ಅಪರಿಗ್ರಹ'. ಯಮದ ಈ ಐದು ಅಂಗಗಳು ಜಾತಿ, ದೇಶ, ಕಾಲ, ಈ ಉಪಾಧಿಗಳಿಗೆ ಒಳಗಾಗದೆ ಸಾರ್ವಕಾಲೀನ ಸಾರ್ವದೇಶಿಕವಾದಲ್ಲಿ ಸಾರ್ವಭೌಮ ಎನಿಸುತ್ತವೆ. ಹಿಂದಿನ ಕಾಲದ ನಮ್ಮ ಋಷಿಮುನಿಗಳು ಇಂತಹ ಯಮದ ಅನುಷ್ಠಾನಶೀಲರಾಗಿದ್ದದರಿಂದಲೇ ಭಯಾನಕವಾದ ಕಾಡಿನಲ್ಲಿ ಕ್ರೂರಪ್ರಾಣಿಗಳ ಮಧ್ಯೆ ಜೀವಿಸುತ್ತಿದ್ದರು. ಅಹಿಂಸೆಯ ಸಿದ್ಧಿಯಾದಲ್ಲಿ ಪರಸ್ಪರ ವೈರವಿರುವುದಿಲ್ಲ. ಪ್ರಾಚೀನ ಋಷಿ ಮುನಿಗಳಿಗೆ ಸತ್ಯದ ಸಿದ್ಧಿಯಿತ್ತು. ಆದ್ದರಿಂದಲೇ ಅವರು ಶಾಪಾನುಗ್ರಹ ಶಕ್ತಿಯುಳ್ಳವರಾಗಿದ್ದರು. ಈ ಯೋಗಶಾಸ್ತ್ರದ ಹಿನ್ನೆಲೆಯಲ್ಲಿ ಭವಭೂತಿಯ ಮಾತು ಅರ್ಥಪೂರ್ಣ.

ಲೌಕಿಕಾನಿ ಹಿ ಸಾಧೂನಾಂ ಅರ್ಥಂ ವಾಗನುವರ್ತತೇ।
ಋಷೀಣಾಂ ಪುನರಾದ್ಯಾನಾಂ ವಾಚಂ ಅರ್ಥೋಽನುಧಾವತಿ

ನಿಯಮ: ಶೌಚ, ಸಂತೋಷ, ತಪಸ್ಸು ಸ್ವಾಧ್ಯಾಯ ಮತ್ತು ಭಗವಂತನಲ್ಲಿ ಭಕ್ತಿ ಇವು ನಿಯಮಗಳು. ಆಂತರಿಕ ಹಾಗೂ ಬಾಹ್ಯ ಎರಡು ವಿಧವಾದ ಶುದ್ಧಿ ಮುಖ್ಯವಾದುದು.

'ಯೋಽರ್ಥೇ ಶುಚಿಃ ಸ ಹೀ ಶುಚಿಃ' ಎಂಬ ಮನುವಿನ ಮಾತು ಅನುಸರಣೀಯ. ಎಲ್ಲದರಲ್ಲಿಯೂ ಅತಿ ಆಸೆ ಪಡದೇ ತೃಪ್ತಿಯಿಂದಿರುವಿಕೆಯೇ ಸಂತೋಷ.

'ಸ ತು ಭವತಿ ದರಿದ್ರೋ ಯಸ್ಯ ತೃಷ್ಣಾ ವಿಶಾಲಾ' ಮನನಶೀಲನಾಗಿರುವುದೇ ಮೋಹ. ಸುಖದುಃಖಾದಿ ದ್ವಂದ್ವಗಳ ಸಹನೆ ಮೊದಲಾದವು ತಪಸ್ಸು. ಕೃಷ್ಣ ಹೇಳಿದ ಯೋಗವೂ ಇದೇ ಆಗಿದೆ-

'ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ'

ಪ್ರಣವ ಮಂತ್ರದ ಜಪ ಹಾಗೂ ಶಾಸ್ತ್ರದ ಅಧ್ಯಯನ ಇವೇ ಸ್ವಾಧ್ಯಾಯ. ಎಲ್ಲ ಕರ್ಮಗಳನ್ನು ಭಗವಂತನಲ್ಲಿ ಭಕ್ತಿಪೂರ್ವಕ ಸಮರ್ಪಿಸುವುದೇ ಈಶ್ವರಪ್ರಣಿಧಾನ. ಇದನ್ನೇ ಕೃಷ್ಣ ಅರ್ಜುನನಿಗೆ ಉಪದೇಶಿಸಿದ್ದು-

'ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತ ಸಾ'

ಇಂತಹಾ ಭಕ್ತಿಯಿಂದ ಸಮಾಧಿಯೂ ಸಿದ್ಧಿಸುತ್ತದೆ.

ಆಸನ: ಇದರಲ್ಲಿ ಅನೇಕ ವಿಧಗಳಿವೆ. ಈ ಆಸನಗಳ ಸಿದ್ಧಿ ಉಳ್ಳವ ದ್ವಂದ್ವಗಳನ್ನು ಎದುರಿಸಬಲ್ಲ. ಈ ಸಾಧಕನನ್ನು ಶಾರೀರಿಕ ಮಾನಸಿಕ ವ್ಯಾಧಿಗಳು ಪೀಡಿಸವು.

ಪ್ರಾಣಾಯಮ: ಪ್ರಾಣವೆಂದರೆ ಇಂದ್ರಿಯಗಳು. ಇವುಗಳ ಮೇಲೆ ನಮ್ಮ ಹತೋಟಿಯನ್ನು ಹೊಂದಲು ಮಾಡುವ ನಿಯಮಿತ ಶ್ವಾಸೋಚ್ಛ್ವಾಸವೇ ಪ್ರಾಣಾಯಾಮ. ರೇಚಕ, ಪೂರಕ, ಕುಂಭಕಗಳು ಇದರ ಅಂಗಗಳು. ಬಲ ಹೊಳ್ಳೆಯಿಂದ ವಾಯುವನ್ನು ಹೊರಗೆ ಹಾಕುವುದು ರೇಚಕ ಎಡ ಹೊಳ್ಳೆಯಿಂದ ಗಾಳಿಯನ್ನು ಒಳಗೆ ಸೇವಿಸುವುದು ಪೂರಕ. ಶ್ವಾಸ ನಿರೋಧವೇ ಕುಂಭಕ.

ಪ್ರತ್ಯಾಹಾರ: ಇಂದ್ರಿಯಗಳನ್ನು ಕುದುರೆಗಳಿಗೆ ಹೋಲಿಸಿವೆ ಉಪನಿಷತ್ತುಗಳು.

'ಪರಾಂಚಿಖಾನಿ ವ್ಯತೃಣಾತ್ ಸ್ವಯಂಭೂಃ'

ಬ್ರಹ್ಮನು ಇಂದ್ರಿಯಗಳನ್ನು ಬಹಿರ್ಮುಖವನ್ನಾಗಿಸಿದ್ದಾನೆ. ಆದ್ದರಿಂದ ಚಂಚಲ. ಮನುಷ್ಯನು ತನ್ನ ಪ್ರಯತ್ನದಿಂದ ಅವುಗಳನ್ನು ಅಂತರ್ಮುಖಿಗೊಳಿಸಬೇಕು.

'ಯತೋ ಯತೋ ನಿಶ್ಚಲತಿ ಮನಶ್ಚಂಚಲಮಸ್ಥಿರಮ್.'

ಮನಸ್ಸಿನ ಸ್ವಭಾವ ಚಂಚಲ, ಅಸ್ಥಿರ ಎನ್ನುತ್ತಾನೆ ಕೃಷ್ಣ. ಈ ಇಂದ್ರಿಯಗಳನ್ನು ಅಂತರ್ಮುಖಿಗೊಳಿಸುವಿಕೆಯೇ ಪ್ರತ್ಯಾಹಾರ.

ಧಾರಣ: ಇದು ಅಂತರಂಗಸಾಧನ. ನಾಭಿಚಕ್ರ, ಹೃದಯ, ಪುಂಡರೀಕ, ಶಿರಸ್ಸು, ಜ್ಯೋತಿ, ನಾಸಿಕಾಗ್ರ, ಜಿಹ್ವಾಗ್ರ ಇವೇ ಮೊದಲಾದ ಸ್ಥಾನಗಳಲ್ಲಿ ಚಿತ್ತವನ್ನು ಸ್ಥಿರಗೊಳಿಸುವುದೇ ಧಾರಣ.

ಧ್ಯಾನ: ತೈಲಧಾರೆಯಂತೆ ಧ್ಯೇಯ ವಸ್ತುವಿನಲ್ಲಿ ನಮ್ಮ ಪ್ರತ್ಯಯವನ್ನು ಅವಿಚ್ಛಿನ್ನವಾಗಿ ಹರಿಸಬೇಕು. ಇದೇ ಧ್ಯಾನ.

'ಪ್ರಾಣಯಾಮೈರ್ದಹೇದ್ ದೋಷಾನ್ ಧಾರಣಾದಿಭಿಃ ಕಿಲ್ಬಿಷಂ।
ಪ್ರತ್ಯಾಹಾರೇಣ ಸಂಸರ್ಗಾನ್ ಧ್ಯಾನೇನಾನೀಶ್ವರಾನ್ ಗುಣಾನ್॥

ಮನುಸ್ಮೃತಿ.

ಪ್ರಾಣಾಯಾಮದಿಂದ ರಾಜಸ, ತಾಮಸ, ದೋಷಗಳ ನಾಶ, ಧಾರಣ ಮೊದಲಾದುವುಗಳಿಂದ ಪಾಪಧ್ವಂಸ; ಪ್ರತ್ಯಾಹಾರದಿಂದ ವೈಷಯಿಕ ಪದಾರ್ಥಗಳ ಸಂಬಂಧ ತೊಲಗುವಿಕೆ; ಧ್ಯಾನದಿಂದ ಕಾಮಕ್ರೋಧಾದಿಗಳ ನಾಶವು ಆಗುತ್ತದೆ.

ಸಮಾಧಿ: ಇದು ಎರಡು ವಿಧ, ಸಂಪ್ರಜ್ಞಾತ, ಅಸಂಪ್ರಜ್ಞಾತ. ಧ್ಯೇಯವಸ್ತುವಿನಲ್ಲಿ ಚಿತ್ತವು ಲಯವನ್ನು ಹೊಂದುವ ಸ್ಥಿತಿಯನ್ನೇ ಸಂಪ್ರಜ್ಞಾತ ಎನ್ನುವರು. ಅಸಂಪ್ರಜ್ಞಾತ ಸ್ಥಿತಿಯಲ್ಲಿ ಚಿತ್ತವು ಲಯಾಭಿಮುಖವಾಗಿರುವುದು, ಆಗ ಚಿತ್ತದ ಸಮಸ್ತ ವೃತ್ತಿಗಳೂ ನಾಶವಾಗಿರುತ್ತವೆ. ಈ ಅವಸ್ಥೆಯಲ್ಲಿ ಯಾವ ವಿಷಯಗ್ರಹಣವೂ ಇಲ್ಲದಿರುವುದರಿಂದ ಅಸಂಪ್ರಜ್ಞಾತವಾಗಿರುವುದು.

ಸಂಪ್ರಜ್ಞಾತ ಸಮಾಧಿಯು ಸವಿತರ್ಕ, ಸವಿಚಾರ, ಸಾನಂದ, ಹಾಗೂ ಸಾಸ್ಮಿತ ಎಂದು ನಾಲ್ಕು ರೀತಿಯದ್ದಾಗಿದೆ. ಈ ನಾಲ್ಕು ಭಾವನೆಗಳಲ್ಲೂ ಧ್ಯೇಯವಾದ ವಸ್ತುವನ್ನು ಹೊರತಾಗಿ ಯಾವುದೂ ತೋರುವುದಿಲ್ಲ. ಇವನ್ನೇ ಮಧುಮತೀ, ಮಧುಪ್ರತೀಕಾ, ವಿಶೋಕಾ, ಸಾಸ್ಮಿತಾ ಎಂದೂ ಕರೆಯುವರು. ಮಧುಮತಿಯಲ್ಲಿ ಅಭ್ಯಾಸವೈರಾಗ್ಯದಿಂದ ರಜಸ್ ಹಾಗೂ ತಮಸ್ ನಾಶವಾಗಿ ಚಿತ್ತದ ಭಾವನೆಯಿಂದ ವಿಶ್ವದ ಪ್ರಕಾಶ ಸ್ವರೂಪವಾದ ಚಿತ್ತಸಿದ್ಧಿಯಾಗುವುದು.

ಮಧುಪ್ರತೀಕದಲ್ಲಿ ವಿಶೇಷ ಶಕ್ತಿ ಸಿದ್ಧಿಸುವುದು. ಈ ಹಂತದಲ್ಲಿ ಮನೋವೇಗವೂ ಅಂತೆಯೇ ಕಾರಣವಿಲ್ಲದೇ ಕಾರ್ಯವನ್ನು ಹೊಂದುವುದು ಮೊದಲಾದ ಸಿದ್ಧಿಗಳು ಬರುವವು. ವಿಶೋಕಸಿದ್ಧಿಯಲ್ಲಿ ಸಾಧಕನು ಸರ್ವಜ್ಞನಾಗುವುದರಿಂದ 'ಸತ್ತ್ವ ಪುರುಷರ ಭೇದಜ್ಞಾನ' ಆಗುವುದು. ಸಾಸ್ಮಿತಸಿದ್ಧಿಯಲ್ಲಿ ಜೀವಾತ್ಮಸ್ವರೂಪವು ಸ್ಫುಟವಾಗಿ

ಪ್ರಕಾಶಿಸುವುದು. ಇದರಲ್ಲಿ ಚಿತ್ತವು ದಗ್ಧಬೀಜಶಕ್ತಿಯಾಗುವುದು. ಸಂಸಾರವು ನಿವೃತ್ತವಾಗುವುದು. ಈ ಹಂತಕ್ಕೆ ಹತ್ತಿರುವ ಯೋಗಿಯನ್ನು ಸ್ಥಿತಪ್ರಜ್ಞನೆನ್ನುವರು. ನಾವು ಪುರಾಣಗಳಲ್ಲಿ ಓದುವ ಋಷಿಮುನಿಗಳು ಈ ರೀತಿಯ ಯೋಗ ಸಿದ್ಧಿಯನ್ನು ಪಡೆದವರಾಗಿದ್ದರು.

ಚಿತ್ತವು ಅಸಂಪ್ರಜ್ಞಾತಸಮಾಧಿಯಲ್ಲಿರುವಾಗ ಆತ್ಮನ ಸ್ವರೂಪ ಹೇಗಿರುತ್ತದೆ? ಜಾಗ್ರದವಸ್ಥೆಯಲ್ಲಿರುವಂತೆ ಪ್ರಕಾಶರೂಪದಿಂದ ಇರುವನೋ ಅಥವಾ ಜಡದಂತೆ ಅಪ್ರಕಾಶನಾಗಿರುವನೋ ಎಂಬ ಶಂಕೆಗೆ.

'ತದಾ ದ್ರಷ್ಟುಃ ಸ್ವರೂಪೇ ಅವಸ್ಥಾನಮ್'

ಎಂದು ಪತಂಜಲಿಗಳ ಉತ್ತರ. ಆತ ತನ್ನ ಸ್ವರೂಪದಲ್ಲೇ ನೆಲೆಸಿರುವನು. ಜೀವನು ಶುದ್ಧಸ್ಫಟಿಕದಂತೆ ನಿರ್ಮಲ, ನಿರ್ಗುಣ, ಜಪಾಕುಸುಮದ ಸನ್ನಿಧಾನದಿಂದ ಸ್ಫಟಿಕಕ್ಕೆ ಕೆಂಪು ಬಣ್ಣ ಔಪಾಧಿಕವಾಗಿ ಬರುವಂತೆ, ಸತ್ತ್ವಾದಿ ಮೂರು ಗುಣಗಳ ಪೈಕಿ ಒಂದು ಗುಣವು ಉಳಿದೆರಡು ಗುಣಗಳಿಗಿಂತ ಹೆಚ್ಚಾದಾಗ ಚಿತ್ತವೃತ್ತಿಗಳಿಂದಾಗಿ, ಔಪಾಧಿಕವಾಗಿ ಜೀವ ನೀಡಿ ಸುಖ ದುಃಖಾದಿಗಳನ್ನು, ಜಾಗ್ರದವಸ್ಥೆಯಲ್ಲಿ ತಂದುಕೊಡುತ್ತದೆ. ಅಸಂಪ್ರಜ್ಞಾತ ಸಮಾಧಿಯಲ್ಲಿ ಇವುಗಳ ಸಂಪರ್ಕವಿಲ್ಲದ್ದರಿಂದ ಪುರುಷನು ತನ್ನ ಸ್ವರೂಪದಲ್ಲೇ ಕಾಣಿಸಿಕೊಳ್ಳುವನು.

ಯೋಗದ ಉಪಾಯಗಳನ್ನು ತಿಳಿದಂತೆ, ಅದಕ್ಕಿಂತ ಹೆಚ್ಚಾಗಿ ಧ್ಯಾನಕ್ಕೆ ಒದಗುವ ಅಡ್ಡಿಗಳನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕು. ಸರಿಯಾದ ದೇಶ, ಕಾಲ ಮತ್ತು ಯೋಗ್ಯ ಸನ್ನಿವೇಶಗಳನ್ನು ಆರಿಸಿಕೊಂಡಂತೆ, ಪ್ರತಿಬಂಧಕಗಳ ಇಲ್ಲದಿರುವಿಕೆಯ ತಿಳುವಳಿಕೆಯೂ ಅತಿ ಮುಖ್ಯ. ಈ ವಿಘ್ನಗಳು ಒಂಬತ್ತು ವಿಧಗಳಾಗಿವೆ. **'ವ್ಯಾಧಿ-ಸ್ತ್ಯಾನ-ಸಂಶಯ-ಪ್ರಮಾದಾಲಸ್ಯವಿರತಿಭ್ರಾಂತಿದರ್ಶನಾಲಬ್ಧಭೂಮಿಕತ್ವಾನವಸ್ಥಿ ತತ್ವಾನಿ ಚಿತ್ತವಿಕ್ಷೇಪಾಸ್ತೇಽಂತರಾಯಾಃ'**

ವ್ಯಾಧಿ: ಯೋಗಾನುಷ್ಠಾನಕ್ಕೆ ದೇಹ ಸಮಸ್ಥಿತಿಯಲ್ಲಿರಬೇಕು. ದೇಹದಲ್ಲಿ ವಾತ, ಪಿತ್ತಾದಿ ಧಾತುಗಳಾಗಲೀ, ರಸಗಳಾಗಲೀ, ಕರಣೇಂದ್ರಿಯಗಳಾಗಲೀ ಸರಿಯಾದ ಸ್ಥಿತಿಯಲ್ಲಿಲ್ಲದಿರುವಿಕೆಯೇ ವ್ಯಾಧಿ. ದೇಹದ ಬೇರೆ ಬೇರೆ ಅವಯವಗಳು ಸರಿಯಾಗಿ ಕೆಲಸ ಮಾಡುತ್ತಿದ್ದಲ್ಲಿ ಯೋಗದ ಕಡೆ ಮನಸ್ಸು ಹೋಗುತ್ತದೆ. ಇಲ್ಲದಿದ್ದರೇ ಆಗದು. ಜ್ವರದಿಂದ ನರಳುವವನು ಅಚಲಾಸನವನ್ನು ಸಾಧಿಸುವುದೆಂತು? ಅಥವಾ ಸನ್ನಿಪಾತದಲ್ಲಿರುವಾಗ ಮನಸ್ಸಿನ ಏಕಾಗ್ರತೆ ಹೇಗೆ ತಾನೇ ಸಾಧ್ಯ?

ಸ್ತ್ಯಾನ :

ಕರ್ಮವನ್ನಾಚರಿಸಲು ಯೋಗ್ಯತೆಯಲ್ಲದಿರುವಿಕೆಯೇ ಸ್ತ್ಯಾನ.

ಸಂಶಯ :

ನಿಶ್ಚಯಾತ್ಮಕ ಜ್ಞಾನವಿರದಿದ್ದರೆ ಸಂಶಯವು ಬರುವುದು. ಆಗ ಇದೋ ಅದೋ, ನನಗೆ ಸಿದ್ಧಿ ಉಂಟಾಗುವುದೋ ಇಲ್ಲವೋ ಎಂದು ಸಂದೇಹವು ಬಾಧಿಸುತ್ತದೆ. ಉದ್ದಿಷ್ಟ ವಿಷಯದಲ್ಲಿ ಇದು ಸರಿ ಎಂಬ ಶ್ರದ್ಧೆ ಹೊರಟು ಹೋಗುತ್ತದೆ.

ಪ್ರಮಾದ :

ಏಕತೆಯನ್ನು ಸಾಧಿಸಲು ಯೋಗದ ಉಪಾಯಗಳನ್ನು ಅನುಸರಿಸದಿರುವಿಕೆಯೇ ಪ್ರಮಾದ. ಇದರಿಂದ ಜ್ಞಾನವಿಷಯವಾದ ವಸ್ತುವಿನಲ್ಲಿ ಸಂದೇಹವಿಲ್ಲ. ಆದರೆ, ಸಾಧನಗಳನ್ನು ಅನುಸರಿಸದಿದ್ದಾಗ ಏಕಾಗ್ರತೆ ಸಿದ್ಧಿಸದು.

ಆಲಸ್ಯ :

ಧಾತುವಿನ ಆಧಿಕ್ಯದಿಂದಾಗಿ ದೇಹ ಭಾರವಾಗುವುದು ಅಥವಾ ತಮಸ್ಸು ಹೆಚ್ಚಾಗಿ ಮನಸ್ಸು ಭಾರವಾಗುವುದು. ಇದರಿಂದ ಮನಸ್ಸು ಚಲಿಸದಿರುವುದರಿಂದ ಪ್ರವೃತ್ತಿ ಇರದು. ಇದೆ ಆಲಸ್ಯ.

ಅವಿರತಿ :

ವಿಷಯಪದಾರ್ಥಗಳಲ್ಲಿ ಆಸಕ್ತಿಯೇ ಅವಿರತಿ. ದುರಾಸೆ ಹಾಗೂ ವಿಷಯಾಸಕ್ತಿಗಳ ರೂಪದಲ್ಲಿ ಕಾಣಿಸಿಕೊಳ್ಳುವ ಈ ದೋಷವು ಯೋಗಕ್ಕೆ ಎದುರಾಗುವ ಪ್ರಬಲ ಅಡ್ಡಿ. ಮನಸ್ಸನ್ನು ಭೌತಿಕ ವಿಷಯಗಳತ್ತ ಪ್ರವೃತ್ತಿಯಿಂದ ಎಳೆದು ಆಧ್ಯಾತ್ಮಿಕತೆಯಲ್ಲಿ ನೆಲೆಗೂಡಿಸಬೇಕು. ಅದಕ್ಕೆ ವಿರುದ್ಧವಾಗಿ ವಿಷಯಪದಾರ್ಥಗಳಲ್ಲಿ ವಿಶೇಷವಾಗಿ ರಮಿಸುವ ಬಯಕೆ ಯೋಗದಿಂದ ನಮ್ಮನ್ನು ದೂರಕ್ಕೆ ತಳ್ಳುತ್ತದೆಯಷ್ಟೆ.

ಭ್ರಾಂತಿದರ್ಶನ:

ವಿಷಯಪದಾರ್ಥಗಳಲ್ಲಿ ಅನುರಕ್ತಿಯಿಂದಲೇ ಮಿಥ್ಯಾದರ್ಶನ. ಇದರಿಂದ ಮಾನವನಿಗೆ ಅಪರಿಪೂರ್ಣ ಅರಿವು. ಆದ್ದರಿಂದಲೇ ಚಂಚಲತೆ.

ಅಲಬ್ಧಭೂಮಿಕತ್ವ:

ಸಮಾಧಿಗೆ ಅನುಕೂಲವಾದ ಸ್ಥಳ(ಭೂಮಿ), ನೆಲೆಯಿಲ್ಲದಿರುವಿಕೆಯೇ ಅಲಬ್ಧಭೂಮಿಕತ್ವ.

ಅನವಸ್ಥಿತತ್ವ:

ಸಮಾಧಿಯ ಭೂಮಿಯನ್ನು ಪಡೆದರೂ ಅಲ್ಲಿ ನೆಲೆಸದಿರುವಿಕೆ, ಚಿತ್ತಸ್ಥೈರ್ಯವಿಲ್ಲದಿರುವಿಕೆಯೇ ಅನವಸ್ಥಿತತ್ವ.

ಅಭಿವಂದನಾ

ಮೇಲೆ ತಿಳಿಸಿರುವ ವಿಘ್ನಗಳಂತೆ ಇನ್ನೂ ಕೆಲವನ್ನು ಹಲವರು ಸೂಚಿಸುವರು. ತನ್ನ ಮನಸ್ಸಿನಿಂದಾಗಲೀ, ಬಾಹ್ಯ ಜಗತ್ತಿನಿಂದಾಗಲೀ, ದೇವತೆಗಳಿಂದಾಗಲೀ ಒದಗುವ ದುಃಖ, ಬಯಕೆಗಳು ನೆರವೇರದಾಗ ಉಂಟಾಗುವ ಮನಸ್ಸಿನ ತಳಮಳ, ದೇಹವು ಸ್ಥಿರವಾಗಿರದೆ ಕಂಪಿಸುವುದು, ಉಸಿರನ್ನು ಒಳಕ್ಕೆಳೆದ ಕೂಡಲೇ ಬಿಡುವುದು ಮುಂತಾದವು ಕೂಡಾ ಅಡ್ಡಿಗಳೆ. ಅದಕ್ಕಾಗಿ ಸುಖಿಗಳಲ್ಲಿ ಸ್ನೇಹವನ್ನು, ದುಃಖಿಗಳಲ್ಲಿ ದಯೆಯನ್ನು ಪುಣ್ಯಕಾರ್ಯಗಳಲ್ಲಿ ಸಂತೋಷವನ್ನು, ಪಾಪಕಾರ್ಯದಲ್ಲಿ ಔದಾಸೀನ್ಯವನ್ನೂ ತೋರುವುದರಿಂದ ಈ ಅಡ್ಡಿಗಳನ್ನು ಪರಿಹರಿಸಲು ಸಾಧ್ಯ.

ಪಾತಂಜಲದರ್ಶನದಲ್ಲಿ ಪ್ರತಿಪಾದಿತವಾದ ಅಡ್ಡಿ ಹಾಗೂ ಅಷ್ಟಾಂಗಯೋಗವು ಆಧ್ಯಾತ್ಮಿಕತತ್ತ್ವವನ್ನರಿತು ಅದರ ಸಾಧನೆಗೆ ಹೊರಡುವವನಿಗೆ ಅತ್ಯಾವಶ್ಯಕವಾಗಿರುತ್ತದೆ. ತಮ್ಮ ತಮ್ಮ ದರ್ಶನಗಳಲ್ಲಿ ನಿರೂಪಿತವಾದ ಮುಖ್ಯ ಪ್ರಮೇಯವಾದ ತತ್ತ್ವವನ್ನು ಸಾಕ್ಷಾತ್ಕರಿಸಲು ಆಯಾಯ ದರ್ಶನದ ಅನುಯಾಯಿಯು ಬಯಸುತ್ತಾನೆ.

ಪತಂಜಲಿಗಳು ಕೂಡಾ ಸ್ವಯಂ ಶ್ರೇಷ್ಠ ಋಷಿಗಳಾಗಿದ್ದು ಅನುಭವಿಸಿ ನಿರೂಪಿಸಿರುವುದು ಈ ಶಾಸ್ತ್ರ. ಹೀಗಾಗಿ ಸತ್ಯ. ಆದ್ದರಿಂದ ಪಾತಂಜಲಯೋಗವು ಎಲ್ಲಾ ದರ್ಶನಗಳಿಗೂ ಉಪಯುಕ್ತವಾಗಿದೆ.

***

ಅಭಿವಂದನಾ

ವೇದಗಳ ಸಂದೇಶ

ಡಾ॥ ಕೆ.ಕೃಷ್ಣಮೂರ್ತಿ

ಕ್ರಿಶ್ಚಿಯನ್ ಧರ್ಮಕ್ಕೆ ಬೈಬಲ್ ಹೇಗೋ, ಇಸ್ಲಾಂ ಧರ್ಮಕ್ಕೆ ಕೊರಾನ್ ಹೇಗೋ, ಹಾಗೆ ಹಿಂದೂ ಧರ್ಮಕ್ಕೆ ವೇದಗಳೇ ಪರಮ ಪವಿತ್ರ ಆಧಾರಗಳು. ಹಿಂದೂ ಧರ್ಮದಲ್ಲಿ ಯಾವುದೇ ಪೂಜೆ, ಅರ್ಚನೆ ಮುಂತಾದ ಕರ್ಮಗಳಿರಲಿ ಇಲ್ಲವೇ ಕುಟುಂಬದಲ್ಲಿ ಜರಗುವ ಯಾವ ನಾಮಕರಣ, ಗೃಹಪ್ರವೇಶ ಮುಂತಾದ ಶುಭ ಕರ್ಮದ ಆಚರಣೆಯಿರಲಿ ಅಪರ ಕರ್ಮಗಳಿರಲಿ, ವೇದಮಂತ್ರಗಳಿಂದಲೇ ಅವಕ್ಕೆ ಪಾವಿತ್ರ್ಯ. ಹೀಗೆ ಭಾರತೀಯರ ಜೀವನ ಕ್ರಮದಲ್ಲಿ ವೇದಗಳ ಸ್ಥಾನ ಪರಮೋನ್ನತವಾದುದು.

ಬಹು ಪುರಾತನವಾದ ವೇದದ ಭಾಷೆ ಇಂದು ಯಾರಿಗೂ ಅರ್ಥವಾಗುವುದೇ ದುಸ್ತರ. ವಿಜಯನಗರ ರಾಜ್ಯ ಕಾಲದಲ್ಲಿ ವೇದಗಳಿಗೆ ಸಾಯಣಾಚಾರ್ಯರಿಂದ ಭಾಷ್ಯ ಬರೆಸಲಾಯಿತು. ಅವರು ನಿರುಕ್ತ, ವ್ಯಾಕರಣ, ಛಂದಸ್ಸು ಮುಂತಾದ ಸಕಲ ವೇದಾಂಗಗಳನ್ನೂ ಬಳಸಿ ವೇದಗಳನ್ನು ಅರ್ಥೈಸಿದ್ದಾರೆ. ಆದರೆ ಈ ಭಾಷ್ಯ ಪಂಡಿತರಿಗೆ ಮಾತ್ರ ಲಭ್ಯ.

ಇನ್ನೊಂದುಕಡೆ ಎರಡು ಶತಮಾನಗಳ ಕಾಲ ಯೂರೋಪಿನ ಇಂಗ್ಲಿಷ್, ಜರ್ಮನ್, ಫ್ರೆಂಚ್, ಡಚ್ ಮೊದಲಾದ ವಿದೇಶೀಯ ವಿದ್ವಾಂಸರು ಸ್ವಪ್ರತಿಭೆಯಿಂದ ವೇದಾರ್ಥ ವಿವೇಚನೆ ಮಾಡಿ ಹೊಸ ನಿಘಂಟು, ಪದಕೋಶ, ಭಾಷಾಂತರ, ವ್ಯಾಕರಣ ಇತ್ಯಾದಿಗಳನ್ನು ನೀಡಿದ್ದಾರೆ. ಮ್ಯಾಕ್ಸ್‌ಮುಲ್ಲರ್ ಮುಂತಾದವರು ತೌಲನಿಕ ಭಾಷಾಶಾಸ್ತ್ರ, ತೌಲನಿಕ ದೇವತಾಪುರಾಣ ಶಾಸ್ತ್ರ ಮುಂತಾದ ಹೊಸ ಅಧ್ಯಯನ ಕ್ಷೇತ್ರಗಳನ್ನು ನಿರ್ಮಿಸಿದ್ದಾರೆ. ಇವು ಕೂಡ ಸಂಶೋಧಕರಿಗೆ ಮಾತ್ರ ಪ್ರಯೋಜಕ.

ನಮ್ಮ ಬಹುಜನರ ದೈನಂದಿನ ಜೀವನದಲ್ಲಿ ವೇದಗಳ ಪಾತ್ರ ಏನು ಎಂಬುದನ್ನು ಯಾರೂ ಬಿಡಿಸಿ ಹೇಳುವುದಿಲ್ಲ. 'ವೇದ' ಎಂಬ ಶಬ್ದಕ್ಕೆ ವಿಶ್ವ ವಿಶಾಲವಾದ ಅರ್ಥವಿರುವಂತೆ ಬಹುಸಂಕುಚಿತವಾದ ಅರ್ಥವೂ ಉಂಟು. ಈ ಅರ್ಥವ್ಯಾಪ್ತಿಯನ್ನು ತಿಳಿಯದೇ ಮನಬಂದಂತೆ ವ್ಯಾಖ್ಯಾನಿಸುವುದಾಗಲಿ, ಟೀಕಿಸುವುದಾಗಲಿ, ಯಾರಿಗೂ ಸಲ್ಲದು.

ಪ್ರಾಚೀನರು ಗಳಿಸಿದ ಸಕಲ ಜ್ಞಾನರಾಶಿ ಎಂಬುದೇ ಅದರ ವಿಶಾಲಾರ್ಥ. ದೇವತಾಸ್ತೋತ್ರ ರೂಪವಾದ ಪದ್ಯಸರಣಿ ಋಗ್ವೇದ. ಕರ್ಮಾಂಗವಾಗಿ ಬಳಸಿದ ಸೂತ್ರಮಯ ನಿಬಂಧನೆ ಯಜುರ್ವೇದ. ಸ್ವರಸಹಿತವಾಗಿ ಹಾಡುವಂತೆ, ರಚಿತವಾದದ್ದು ಸಾಮವೇದ. ಶಾಂತಿಕ, ಪೌಷ್ಟಿಕ, ಆಭಿಚಾರಿಕ ಕರ್ಮಗಳಿಗೆ ಅದ್ಭುತ ಫಲಪ್ರಾಪಕವಾಗಿ ನಿಯೋಜಿತವಾದ ರೂಪ ಅಥರ್ವವೇದ. ನಾಟ್ಯವೇದ, ಧನುರ್ವೇದ, ಆಯುರ್ವೇದ,

ಗಾಂಧರ್ವವೇದ ಮುಂತಾದವು ಉಪವೇದಗಳು. ಲೌಕಿಕ ಜ್ಞಾನ ಒಂದು ಬಗೆಯದಾದರೆ ಅತೀಂದ್ರಿಯ, ಅಲೌಕಿಕ ಜ್ಞಾನ ಇನ್ನೊಂದು ಬಗೆಯದು. ಎರಡನೆಯದೇ 'ವೇದ' ಇಂದ್ರಿಯಕ್ಕೆ ಅಗೋಚರವಾದ ವಿಷಯಗಳಲ್ಲಿ ಪ್ರತ್ಯಕ್ಷಕ್ಕಿಂತಲೂ ಹೆಚ್ಚು ಪ್ರಬಲವಾದ ಪರಮ ಪ್ರಮಾಣವೇ 'ವೇದ'.

ಈ ಅನಂತ ವಿಶ್ವ ಹೇಗೆ ಸೃಷ್ಟಿಯಾಯಿತು? ಇದರ ಗತಿ ಎತ್ತ? ದೇವರು ಇದ್ದಾನೆಯೇ? ಜೀವ- ದೇವರ ಸಂಬಂಧವೆಂತು ? ಸತ್ತಮೇಲೆ ಸ್ವರ್ಗವೆಂಬುದುಂಟೇ? ಇಲ್ಲಿಯ ಕರ್ಮದಿಂದ ಪುನರ್ಜನ್ಮಕ್ಕೆ ಸಂಬಂಧವುಂಟೇ? ಇಂತಹ ಮಾನವ ಕುಲದ ಮೂಲಭೂತವಾದ ಹಾಗೂ ಅಭೇದ್ಯವಾದ ಸಮಸ್ಯೆಗಳಿಗೆ ನಿರ್ಣಾಯಕ ಪರಿಹಾರ ಪ್ರಾಚೀನ ಋಷಿಗಳ ಜ್ಞಾನ ಭಂಡಾರವಾದ ವೇದಗಳಲ್ಲಿ ಅಡಗಿರುತ್ತದೆ. ಅದನ್ನು ಕಾಲದಿಂದ ಕಾಲಕ್ಕೆ ಸೂತ್ರ- ಭಾಷ್ಯಕಾರರೂ, ಆಚಾರ್ಯರೂ, ಸಾಧು- ಸಂತರೂ, ಶಾಸ್ತ್ರಗಳೂ, ಪುರಾಣಗಳೂ, ತಂತ್ರ-ಆಗಮಗಳೂ ವಿಧವಿಧವಾಗಿ ತಿಳಿಸುತ್ತಾ ಬಂದಿರುವುದನ್ನು ನೋಡಬಹುದು.

ಪ್ರಾಚೀನತಮ ಕಾಲದಲ್ಲಿ ನಾನಾ ದೇವತೆಗಳಿಗೆ- ಅಗ್ನಿ, ವಾಯು, ಇಂದ್ರ, ಸೂರ್ಯ ಇತ್ಯಾದಿ- ಹವಿಸ್ಸನ್ನು ಅರ್ಪಿಸುವ ಯಜ್ಞಕರ್ಮಗಳೇ ವೇದವಿಧಿ ಎನಿಸಿದ್ದವು. ಒಂದೂ ಲೋಪವಿಲ್ಲದಂತೆ ನಡೆಸಿದ ಯಜ್ಞವೇ ಸಂಕಲ್ಪಿತ ಫಲ ನೀಡಲು ಸಮರ್ಥ ಎಂದು ನಂಬುತ್ತಿದ್ದರು. ದೇವತಾ ಮೂರ್ತಿಗಳಾಗಲಿ, ಪುಷ್ಪ ಫಲಾದಿಗಳಿಂದ ಅರ್ಚನೆಯಾಗಲಿ, ದೇವಾಲಯಗಳಾಗಲಿ ಒಂದೂ ಆಗ ಇರಲಿಲ್ಲ. ರಾಜಾದಿಗಳು ಮಾತ್ರ ಅಶ್ವಮೇಧ ಮುಂತಾದ ಬಹು ದೊಡ್ಡ ಯಾಗಗಳನ್ನು ಮಾಡಲು ಶಕ್ಯವಿದ್ದಿತು. ಯಜ್ಞದಿಂದಲೇ ಇಹ-ಪರಗಳಲ್ಲಿ ಕಲ್ಯಾಣ ಎಂಬ ಶ್ರದ್ಧೆ ಜನತೆಯಲ್ಲಿತ್ತು. ಸರ್ವರ ಹಿತಕ್ಕಾಗಿ ತ್ಯಾಗವೇ ಯಜ್ಞಸಂಸ್ಕೃತಿಯ ಧರ್ಮ. ಮುಂದೆ, ಮಹಾಭಾರತದ ಕಾಲಕ್ಕೆ ಯಜ್ಞಾಚರಣೆ ಹಿಂದಾಗಿ ಅಧಿಯಜ್ಞಕ್ಕಿಂತ ವೇದದ ಆಧ್ಯಾತ್ಮಿಕ ಆಯಾಮವನ್ನೇ ಪುರಸ್ಕರಿಸಲಾಯಿತು. ಭಗವದ್ಗೀತೆಯಲ್ಲೇ ಸಂಕುಚಿತ ಯಜ್ಞಕರ್ಮನಿಂದೆ ಬರುತ್ತದೆ. ವೇದವಾದರತರೆಂದೂ, ತ್ರೈಗುಣ್ಯವಿಷಯರೆಂದೂ ವೈದಿಕರನ್ನು ಹೀಯಾಳಿಸಲಾಗಿದೆ.

ಮುಂದಿನದೇ ಪುರಾಣಯುಗ. ವೇದಗಳಿಂದ ಸಣ್ಣ ಸಣ್ಣ ಕಣಗಳನ್ನಷ್ಟೇ ಬಳಸಿಕೊಂಡು ಸಾಮಾನ್ಯ ಜನರಲ್ಲಿ ಹೆಚ್ಚಿನ ಭಕ್ತಿ ಭಾವ ಬೆಳೆಯುವಂತೆ ಮಾಡಿದ ಮಹಾಕಾರ್ಯ ಪುರಾಣಗಳದು. ನಾವೇ ಪಾತ್ರೆಯಲ್ಲಿ ತಂದಿಟ್ಟ ನೀರು ಒಂದು ವೇದ ಮಂತ್ರದ ಉಚ್ಚಾರಣೆಯಿಂದ ಪರಮ ಪಾವನವೂ, ಪೂಜಾರ್ಹವೂ ಆದ ತೀರ್ಥವಾಗುತ್ತದೆ. ನಾವೇ ಮಾಡಿಟ್ಟುಕೊಂಡ ಒಂದು ದೇವತಾ ಮೂರ್ತಿಯಲ್ಲಿ ಇನ್ನೊಂದು ಮಂತ್ರದ ಉಚ್ಚಾರಣ ಮಾತ್ರದಿಂದ ಜೀವ ಮೂಡುತ್ತದೆ. ಕೇವಲ ಕಾಶಿ, ರಾಮೇಶ್ವರ, ಗಯಾ, ಪ್ರಯಾಗ ಮುಂತಾದ ಕ್ಷೇತ್ರಗಳಲ್ಲಿ ನಿರ್ದಿಷ್ಟ ದಿನಗಳಂದು ದರ್ಶನ- ಸ್ನಾನಾದಿಗಳಿಂದಲೇ ಪಾಪನಾಶವಾಗುತ್ತದೆ. ಇವೇ ಮುಂತಾದ ಭಾವನೆಗಳು ಜನಮಾನಸದಲ್ಲಿ ರೂಢ

ಮೂಲವಾಗಿವೆ. ಇವೆಲ್ಲವುಗಳ ಬೇರೂ ವೇದಗಳಲ್ಲಿದೆ.

ನಮ್ಮಲ್ಲಿ ಲೌಕಿಕ ಪುರುಷಾರ್ಥಗಳಿಗಿಂತ ಅಲೌಕಿಕವಾದ ಪರಮಾರ್ಥ ಅಥವಾ ಪರಮ ಪುರುಷಾರ್ಥಕ್ಕೆ ತುಂಬಾ ಮಾನ್ಯತೆ ಇದೆ. ಜೀವನದ ಪರಮ ಲಕ್ಷ್ಯವೇನು ಎಂಬ ಪ್ರಶ್ನೆಗೆ ಮೋಕ್ಷ ಅಥವಾ ಆತ್ಮ-ಸಾಕ್ಷಾತ್ಕಾರವೇ ಸರಿ ಎನ್ನುವುದು ವೈದಿಕ ಸಂಸ್ಕೃತಿಯ ವಿಶೇಷತೆ ಆಗಿದೆ. ಇದಕ್ಕೆ ಬೇಕಾದ ಚಿಂತನ-ಮಂಥನವನ್ನೆಲ್ಲಾ ಅನುಭವ ವೇದ್ಯವಾಗುವಂತೆ ವಿಸ್ತಾರವಾಗಿ ಒಂದು ವೇದಾಂತ ಶಾಸ್ತ್ರಭಂಡಾರವೇ ಬೆಳೆದು ನಿಂತಿದೆ. ಈ ಜ್ಞಾನ ದೃಷ್ಟಿಯಿಂದ ನೋಡಿದಾಗ ಸ್ಥೂಲ, ಸೂಕ್ಷ್ಮ, ಪರ ಎಂಬ ಮೂರು ರೀತಿಯ ದೇವತಾ ತತ್ತ್ವ ನಮಗೆ ಗೋಚರವಾಗುತ್ತದೆ. ಇಂದ್ರಿಯ ಗ್ರಾಹ್ಯವಾದ ದೇವತಾ ಮೂರ್ತಿಗಳು ಸ್ಥೂಲ ರೂಪ; ಅಗೋಚರ ದಿವ್ಯ ಶಕ್ತಿಗಳು ಸೂಕ್ಷ್ಮ ರೂಪ; ನಿಖಿಲಾಂಡ ಕೋಟಿ ಬ್ರಹ್ಮಾಂಡವನ್ನು ಸೃಷ್ಟಿಸುವ ಪರ ರೂಪ ಆದಿಯದು. ಅದೇ ಪರಂಜ್ಯೋತಿ. ಈ ಮೂರರಲ್ಲೂ ನಂಬಿಕೆ, ತತ್ಫಲವಾಗಿ ಪೂಜೆ, ಆರಾಧನೆ, ಉಪಾಸನೆ, ಇವನ್ನೇ ಎಲ್ಲಾ ಆಗಮಗಳೂ, ತಂತ್ರಗಳೂ ವಿಸ್ತಾರವಾಗಿ ವಿವರಿಸುತ್ತವೆ. ನಾಸ್ತಿಕನಿಗೆ 'ವೇದ' ಬೇಕಾಗಿಲ್ಲ. ವೇದವಿಲ್ಲದೇ ಆಸ್ತಿಕನೂ ಇಲ್ಲ.

ಋಚೋಽಕ್ಷರೇ ಪರಮೇವ್ಯೋಮನ್
ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ।

ಯಸ್ತನ್ನವೇದ ಕಿಮೃಚಾ ಕರಿಷ್ಯತಿ?
ಯ ಇತ್ ತದ್ವಿದುಃ ತ ಇಮೇ ಸಮಾಸತೇ॥

'ಋಗ್ವೇದದ ಅವಿನಾಶಿ ಪರಮಾಕಾಶದಲ್ಲಿ ವಿಶ್ವಾಧ್ಯಕ್ಷರಾದ ಸಕಲ ದೇವತೆಗಳೂ ನೆಲಸಿದ್ದಾರೆ. ಅದನ್ನರಿಯದ ಮೇಲೆ, ಋಗ್ವೇದದಿಂದ ಮಾಡುವುದೇನನ್ನು? ಅದನ್ನರಿತವರು ಯಾರೋ ಅವರೇ ಅಮರರು.

''ಅಗ್ನಿರ್ದೇವೋ ದ್ವಿಜಾತೀನಾಂ
ಹೃದಿ ದೇವೋ ಮನೀಷಿಣಾಂ।
ಪ್ರತಿಮಾ ಸ್ವಲ್ಪಬುದ್ಧೀನಾಂ
ಸರ್ವತ್ರ ವಿದಿತಾತ್ಮನಾಮ್॥

ದ್ವಿಜರಿಗೆ ಅಗ್ನಿಯೇ ದೇವರು. ಅನುಭಾವಿಗಳಿಗೆ ಹೃದಯದಲ್ಲೇ ದೇವರು. ಅಲ್ಪಬುದ್ಧಿಗಳಿಗೆ ಪ್ರತಿಮೆಗಳಲ್ಲೇ ದೇವರು. ಆತ್ಮಜ್ಞಾನಿಗಳಿಗೆ ಎಲ್ಲೆಲ್ಲೂ ದೇವರು!

ವೇದಗಳ ಸಂದೇಶ ಸಾರವಿಷ್ಟು:

೧. ಏನೇ ಆಗಲಿ, ಎಂತಹ ಅಗ್ನಿ ಪರೀಕ್ಷೆಯೇ ಬರಲಿ, ಕುಲಕ್ರಮಾಗತವಾಗಿ ಬಂದಿರುವ ಸ್ವಧರ್ಮವನ್ನೂ ಸದಾಚಾರವನ್ನೂ ಬಿಡಬೇಡಿ.

೨. ಹಾಗೆ ಬಿಟ್ಟು ಭ್ರಷ್ಟರಾಗಬೇಡಿ, ಪತಿತರಾಗಬೇಡಿ. ಧರ್ಮಕ್ಕೆ ಎಂದೂ ಚ್ಯುತಿಯಿಲ್ಲ. ಅಧರ್ಮಕ್ಕೆ ಎಂದೂ ಬೆಲೆಯಿಲ್ಲ.

೩. ಬಾಳು ಹಸನಾಗಲು, ಜೀವನದಲ್ಲಿ ಸುಖ ಶಾಂತಿ, ನೆಮ್ಮದಿ, ಸಮೃದ್ಧಿಗಳು ನೆಲೆಸಲು, ಜೀವನ ಸಾರ್ಥಕವಾಗಲು, ಆಸ್ತಿಕ್ಯವನ್ನೂ ಶ್ರದ್ಧೆಯನ್ನೂ ಬೆಳಿಸಿಕೊಳ್ಳಿರಿ. ಲೌಕಿಕ ವ್ಯವಹಾರವೇ ಸರ್ವಸ್ವವಲ್ಲ: ಪರಮಾರ್ಥದ ಬೆಳಕಿಲ್ಲದೆ ಬರಿಯ ವ್ಯವಹಾರ ಬರಡು.

೪. ಪರಮಾರ್ಥಸಾಧನೆಗೆ ದಾರಿಗಳು, ಅನುಭವಸಿದ್ಧವಾದ ಮಾರ್ಗಗಳು ಎಂದರೆ ಗುರುಹಿರಿಯರಲ್ಲಿ ಭಕ್ತಿ, ದೈವಶ್ರದ್ಧೆ, ಸಕಲಜನರಲ್ಲೂ ಬಂಧುಪ್ರೇಮ ಇತ್ಯಾದಿಗಳು. ಸತ್ಯನಿಷ್ಠೆ ಸದಾಚಾರಗಳು ಸುಖಿಜೀವನವೆಂಬ ಪಕ್ಷಿಯ ರೆಕ್ಕೆಗಳು.

೫. ಶ್ರದ್ಧಾಭಕ್ತಿಗಳಿಂದ ಮೂಡಿಬಂದ ಸದಾಚಾರ, ಸದ್ವರ್ತನೆ, ಸತ್ಕರ್ಮ ಇವು ದೇವತಾನುಗ್ರಹದ ಸಂಪಾದಕಗಳು. ಇದರಿಂದಲೇ ಲೋಕೋದ್ಧಾರ, ವಿಶ್ವಕಲ್ಯಾಣ!

೬. ಇಷ್ಟೆಲ್ಲ ಆದರೂ ಸಂಸಾರಚಕ್ರದಿಂದ ಬಿಡುಗಡೆಯಾಗಲು ಮೋಕ್ಷವನ್ನು ಇಹಜೀವನದಲ್ಲೇ, ಸಾಧಿಸಬೇಕು. ಇದಕ್ಕೆ ಜ್ಞಾನಜ್ಯೋತಿಯೊಂದೇ ತಾರಕ.

೭. ವೇದವನ್ನು ತಾಯಿಯಂತೆ ಗೌರವಿಸಿ. ಏಕೆಂದರೆ ವೇದವಿಲ್ಲದೆ ಭಾರತೀಯ ಧರ್ಮ, ಕರ್ಮ, ಜ್ಞಾನ- ಯಾವುದೂ ಶುದ್ಧರೂಪದಲ್ಲಿ ದೊರೆಯಲಾರದು.

೮. ತನುಮನಗಳಲ್ಲಿ ಪೂರ್ಣ ಪರಿಶುದ್ಧಿಯನ್ನು ಕಾಪಾಡಿಕೊಳ್ಳಿ. ಮನಸ್ಸಿನ ನೈರ್ಮಲ್ಯವೇ ಸದಾಚಾರದ ತಿರುಳು.

೯. ಸತ್ಯ, ಅಹಿಂಸೆ, ಪರಸ್ತ್ರೀವಿರತಿ, ವಂಚನೆಗೆ ಮನತಾರದ ಸ್ಥೈರ್ಯ, ಆತ್ಮವಿಶ್ವಾಸ ಮುಂತಾದ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ.

೧೦. ವಿಶ್ವಹಿತವೇ ನಿಮ್ಮ ಬಾಳ ಗುರಿಯಾಗಲಿ.

ಪರಂಪರೆಯನ್ನು ನೋಡಿದರೆ ಇವೇ ವೇದಗಳ ಸಂದೇಶ ಹಾಗೂ ಸಾರ್ವಕಾಲಿಕ ಉಪದೇಶ.

***

ಅಭಿವಂದನಾ

ಗೀತಾ ಸಂದೇಶ

-ಡಾ||ಹು.ಲ. ಚಂದ್ರಶೇಖರ

ದಾರ್ಶನಿಕ ಇತಿಹಾಸದಲ್ಲಿ ಭಗವದ್ಗೀತೆಗೆ ಸಾಟಿಯಾದ ಗ್ರಂಥವಿಲ್ಲ. ಜಗತ್ತಿನಲ್ಲಿ ಈ ಗ್ರಂಥಕ್ಕೆ ಭಕ್ತಿಗೌರವಗಳನ್ನು ಸಲ್ಲಿಸದವರಿಲ್ಲ. ಗೀತೆಯ ಈ ವೈಶಿಷ್ಟ್ಯಕ್ಕೆ ಹಲವಾರು ಕಾರಣಗಳುಂಟು. ಅದು ಜನರ ಮನ್ನಣೆಗೆ ಪಾತ್ರವಾದ ಮಹಾಭಾರತದ ಒಂದು ಭಾಗವೆಂಬುದು ಮೊದಲ ಕಾರಣ. ಅದರಲ್ಲಿ ಬರುವ ಶ್ರೀಕೃಷ್ಣಾರ್ಜುನರ ಪಾತ್ರಗಳು ಅದ್ಭುತವೇ ಸರಿ. ಎರಡನೆಯದಾಗಿ ಅದರ ಬೋಧನೆಯ ಸಾಂದರ್ಭಿಕ ಹಿನ್ನೆಲೆಯು ಬಲು ಗಹನವಾದುದು. ಒಂದು ದೇಶ ಹಾಗೂ ಇಡೀ ಧರ್ಮವು ಅಪಾಯದ ಅಂಚಿನಲ್ಲಿರುವಾಗ ಅದು ಮನುಷ್ಯನು ಮಾಡಬೇಕಾದ ಕಾರ್ಯದ ಬಗ್ಗೆ ಪ್ರಸ್ತಾಪಿಸುತ್ತದೆ. ಗೀತೆಯ ಕರ್ತೃವಾದ ವ್ಯಾಸರು ಯಾವುದೇ ವ್ಯರ್ಥಜಿಜ್ಞಾಸೆಗಳಿಗೆ ಹೋಗದೇ ಮನುಷ್ಯನ ನೈತಿಕ ಆಶಯಗಳಿಗೆ ಸ್ಪಂದಿಸುತ್ತಾರೆ. ಮೂರನೆಯದಾಗಿ ಈ ಗ್ರಂಥದ ಶೈಲಿ ಬಲು ಸರಳ ಹಾಗೂ ಮೋಹಕ. ಶ್ಲೋಕರೂಪದಲ್ಲಿದ್ದರೂ ಸಂವಾದಾತ್ಮಕವಾದ ಅದರ ಶೈಲಿಯು ಓದುಗರ ಆಸಕ್ತಿಯನ್ನು ಕೆರಳಿಸುತ್ತದೆ. ಕೊನೆಯದಾಗಿ ಗೀತೆಯಲ್ಲಿ ನಮ್ಮನ್ನು ಸೆಳೆಯುವ ಅತ್ಯಂತ ಶ್ರೇಷ್ಠ ಅಂಶವೆಂದರೆ ಅದರ ಧಾರ್ಮಿಕ ಸಹಿಷ್ಣುತೆ. ಶ್ರೀ ಕೃಷ್ಣನು ಹೀಗೆ ಹೇಳುತ್ತಾನೆ. ''ಇತರ ದೇವತೆಗಳನ್ನು ನೈಜಭಕ್ತಿಯಿಂದ ಪೂಜಿಸುವವರ ಭಕ್ತಿಯನ್ನು ನಾನು ಇನ್ನೂ ತೀವ್ರಗೊಳಿಸಿ ತನ್ಮೂಲಕವೇ ಅವರ ಇಚ್ಛೆಗಳನ್ನು ಪೂರೈಸುತ್ತೇನೆ''(೭-೨೧ ಮತ್ತು ೨೨). ಇಲ್ಲಿನ ಸಿದ್ಧಾಂತ ಒಬ್ಬನ ದೇವರು ಮತ್ತೊಬ್ಬನ ದೆವ್ವವೆಂಬುದಲ್ಲ. ದೇವರನ್ನು ಕುರಿತ ಪ್ರತಿಯೊಂದು ಕಲ್ಪನೆಗೂ-ಅದೆಷ್ಟೇ ಅಸ್ಪಷ್ಟ ಹಾಗೂ ದೋಷಪೂರಿತವಾಗಿದ್ದರೂ-ತನ್ನದೇ ಆದ ದೈವಿಕ ಮೌಲ್ಯವಿದೆಯೆಂಬುದು ಇಲ್ಲಿನ ತತ್ತ್ವ. ಇಲ್ಲಿ ದೇವರ ಆಕಾರವಾಗಲಿ, ಆತನನ್ನು ಪೂಜಿಸಲು ನಾವು ಬಳಸುವ ಸಾಮಗ್ರಿಯಾಗಲಿ ಹಾಗೂ ಆತನನ್ನು ಯಾರು ಮತ್ತು ಯಾವ ಕರ್ಮದ ಮೂಲಕ ಸುಪ್ರೀತಿಗೊಳಿಸುವರೆಂಬುದಾಗಲಿ ಮುಖ್ಯವಲ್ಲ. ಇಲ್ಲಿ ಮುಖ್ಯವಾದುದು ಆಂತರಿಕ ಭಾವನೆಯು ಮಾತ್ರ (ಅಧ್ಯಾಯ ೯). ಈ ಅಂಶವೇ ಗೀತೆಯನ್ನು ಜಗತ್ತಿನ ಉಳಿದ ಧಾರ್ಮಿಕ ಗ್ರಂಥಗಳಿಗಿಂತಲೂ ಶ್ರೇಷ್ಠವಾಗಿಸಿರುವುದು.

ಅಂದಮಾತ್ರಕ್ಕೆ ಈ ಗ್ರಂಥವು ಸುಲಭಗ್ರಾಹ್ಯವೆಂದು ಅರ್ಥವಲ್ಲ. ಅರ್ಥೈಸಲು ಕಷ್ಟವೆಂಬುದಕ್ಕೆ ಈ ಗ್ರಂಥಕ್ಕಿರುವ ಅನೇಕ ವ್ಯಾಖ್ಯಾನಗಳೇ ನಿದರ್ಶನ. ಇದಕ್ಕೆ ಕಾರಣ ಗೀತೆಯು ನೈತಿಕ ಸಮಸ್ಯೆಯ ಜೊತೆಜೊತೆಗೆ ತಾತ್ತ್ವಿಕ ಸಮಸ್ಯೆಗಳ ಬಗ್ಗೆಯೂ ಚರ್ಚಿಸುತ್ತದೆಂಬುದು. ಅಭೌತದ ನೆಲೆಗಟ್ಟಿಲ್ಲದ ಶುಷ್ಕನೀತಿ ವ್ಯರ್ಥವೆಂಬುದು ಅದರ ನಿಲುವು. ಹೀಗಾಗಿ ಗೀತೆಯು ನೀತಿಶಾಸ್ತ್ರವನ್ನು ಕುರಿತ ಗ್ರಂಥವಷ್ಟೇ ಅಲ್ಲ ಅಭೌತಶಾಸ್ತ್ರವನ್ನು

ಕುರಿತ ಗ್ರಂಥವೂ ಹೌದು. ಮನುಷ್ಯನಿಗೆ ಅದೊಂದು ಪ್ರಾಯೋಗಿಕ ಕೈಪಿಡಿ. ಅದು ತತ್ತ್ವ ನೀತಿಗಳನ್ನು ಜೊತೆಜೊತೆಯಾಗಿ ಪ್ರಸ್ತಾಪಿಸುತ್ತದೆ.

ಗೀತೆಯ ಪ್ರಾಯೋಗಿಕ ಬೋಧನೆಯೇನು? ಇದು ಗೀತೆಯ ಹಿನ್ನೆಲೆಯ ಪರಿಶೀಲನೆಯಿಂದ ನಮಗೆ ಸ್ಪಷ್ಟವಾಗುತ್ತದೆ. ಪ್ರಾರಂಭದಲ್ಲಿ ವಿಷಾದಪೂರಿತನಾದ ಅರ್ಜುನನು ಶತ್ರುಗಳೊಂದಿಗೆ ಯುದ್ಧಮಾಡಲು ನಿರಾಕರಿಸುತ್ತಾನೆ. ಆದರೆ ಶ್ರೀಕೃಷ್ಣನ ಬೋಧನೆಯ ನಂತರ ಯುದ್ಧಸನ್ನದ್ಧನಾಗುತ್ತಾನೆ. ಇದರಿಂದ ಗೀತೆಯ ಬೋಧನೆಯು ಮೂಲತಃ ಕರ್ಮಯೋಗವೆಂದು ನಮಗೆ ಖಚಿತವಾಗುತ್ತದೆ. ಇಲ್ಲಿ ಕರ್ಮವೆಂದರೆ ಸ್ಥೂಲವಾಗಿ ನಾವು ಮಾಡುವ ಯಾವುದೇ ಕೆಲಸವೆಂದರ್ಥ. ನಾವು ಪ್ರಕೃತಿಜನ್ಯಗುಣಗಳಿಗೆ ವಶರಾಗಿ ಯಾವುದಾದರೊಂದು ಕೆಲಸವನ್ನು ಮಾಡುತ್ತಲೇ ಇರುತ್ತೇವೆ.(೩-೫). ಆದರೆ ಗೀತೆಯಲ್ಲಿ ಕರ್ಮಶಬ್ದಕ್ಕೆ ಇತರ ಅರ್ಥಗಳೂ ಉಂಟು. ಒಂದು- ಅದು ಕಾಮ್ಯಕರ್ಮಗಳಾದ ಯಜ್ಞಯಾಗಾದಿಗಳನ್ನು ಸೂಚಿಸುತ್ತದೆ. ಎರಡು- ಅದು ದೇವರನ್ನು ಕುರಿತ ಭಕ್ತಿಪೂರ್ವಕವಾದ ಅರ್ಚನೆ ಅಥವಾ ಪ್ರಾರ್ಥನೆಯನ್ನು ಸೂಚಿಸುತ್ತದೆ. ಕೊನೆಯದು, ಅದು ಸಮಾಜದ ವಿವಿಧವರ್ಗಗಳಿಗೆ ಸಂಬಂಧಿಸಿದಂತೆ ವಿವಿಧ ಕರ್ತವ್ಯಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಕರ್ಮಶಬ್ದವು ಗೀತೆಯಲ್ಲಿ ಹೆಚ್ಚಾಗಿ ಕೊನೆಯ ಅರ್ಥಕ್ಕೇ ಅನ್ವಯಿಸುವುದು. ಗೀತೆಯ ಪ್ರಕಾರ ವ್ಯವಸ್ಥಿತ ಸಮಾಜದಲ್ಲಿ ಒಂದಲ್ಲ ಒಂದು ರೀತಿ ಅಂಗೀಕೃತವಾದ ಕರ್ತವ್ಯಗಳೇ ಕರ್ಮ. ಈ ಕರ್ಮವು ಉಚ್ಚ ಅಥವಾ ನೀಚವಿರಬಹುದು. (೧೮-೪೭ ಮತ್ತು ೪೮) ಇಲ್ಲಿ ಮುಖ್ಯವಾದುದು ಸ್ವಧರ್ಮವೇ ಹೊರತು ಅದರ ನೀಚೋಚ್ಚಯೋಗ್ಯತೆಗಳಲ್ಲ. ಈ ಸ್ವಧರ್ಮದ ಕಲ್ಪನೆಯಲ್ಲಿ ಮನುಷ್ಯನ ಸಾಮಾಜಿಕ ಲಕ್ಷಣವು ಎಂದರೆ ಅವನು ಸಮಾಜದ ಅವಿಭಾಜ್ಯ ಅಂಗವೆಂಬ ಅಂಶವು ಅಡಗಿದೆ. ಇನ್ನು ಯೋಗವೆಂದರೆ ನಮ್ಮನ್ನು ನಾವು ತೊಡಗಿಸಿಕೊಳ್ಳುವುದೆಂದರ್ಥ. ಒಟ್ಟಿನಲ್ಲಿ ಸಮಾಜದ ಸದಸ್ಯರಾಗಿ ನಾವು ನಮ್ಮ ಕರ್ತವ್ಯಗಳಲ್ಲಿ ತೊಡಗುವುದೇ ಕರ್ಮಯೋಗ.

ಈ ಸಂದರ್ಭದಲ್ಲಿ ಮತ್ತೊಂದು ವಿಷಯವು ಗಮನಾರ್ಹ. ನಮ್ಮ ಪ್ರತಿಯೊಂದು ಕೆಲಸದ ಹಿನ್ನೆಲೆಯಲ್ಲೂ ಒಂದು ಬಯಕೆಯಿರುತ್ತದೆ. ಉದ್ದೇಶವಿಲ್ಲದೇ ನಾವು ಕ್ರಿಯಾಶೀಲರಾಗಲಾರೆವು. ಕ್ರಿಯೆಯನ್ನು ಫಲವಿಲ್ಲದೇ ಮತ್ತು ಫಲವನ್ನು ಬಯಕೆಯ ಸಂಬಂಧವಿಲ್ಲದೇ ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ನಮ್ಮ ಪ್ರತಿಯೊಂದು ಕಾರ್ಯದ ಉದ್ದೇಶವೂ ಯಾವುದಾದರೊಂದು ಫಲವನ್ನು ಹೊಂದುವುದಾಗಿರುತ್ತದೆ. ಪ್ರಸ್ತುತ ಅರ್ಜುನನೇನೂ ಇದಕ್ಕೆ ಹೊರತಲ್ಲ. ಆತನು ಸಾಂದರ್ಭಿಕ ವಿಡಂಬನೆಯಿಂದ ತನ್ನ ದುಷ್ಟದಾಯಾದಿಗಳ ಕೈಸೇರಿರುವ ರಾಜ್ಯವನ್ನು ಮರುಪಡೆಯಲು ಯುದ್ಧ ಸನ್ನದ್ಧನಾಗಿದ್ದಾನೆ. ಶ್ರೀಕೃಷ್ಣನ ಪ್ರಕಾರ ಇದು ಕರ್ಮನಿಷ್ಠೆಯಲ್ಲ, ಫಲನಿಷ್ಠೆಯಷ್ಟೆ. ಏಕೆಂದರೆ ಇಲ್ಲಿ ಯುದ್ಧವೆಂಬ ಕರ್ಮವು ರಾಜ್ಯಪ್ರಾಪ್ತಿಯೆಂಬ ಫಲದ ಸಾಧನವಾಗಿದೆ. ಕರ್ಮವನ್ನಾದರೋ

ಸಾಧ್ಯದ ದೃಷ್ಟಿಯಿಂದ ನೋಡಬೇಕೇ ಹೊರತು ಸಾಧನದ ದೃಷ್ಟಿಯಿಂದಲ್ಲ. ಶ್ರೀ ಕೃಷ್ಣನ ಪ್ರಕಾರ ಕರ್ಮವಾಚರಿಸುವ ಮುನ್ನ ಮತ್ತು ಅದನ್ನು ಆಚರಿಸುವಾಗ ಫಲದ ಬಯಕೆಯನ್ನು ತೊರೆಯಬೇಕು. ಹಾಗಿಲ್ಲದೇ ಸ್ವಾರ್ಥವು ನಮ್ಮ ಮೇಲೆ ಪ್ರಭಾವ ಬೀರಲು ಆಸ್ಪದ ನೀಡಿದಲ್ಲಿ ಧರ್ಮವನ್ನು ಕುರಿತ ನಮ್ಮ ಪ್ರಜ್ಞೆಯು ಕುರುಡಾಗಬಹುದು. ಫಲವನ್ನು ಪಡೆಯುವ ತವಕವು ನಮ್ಮನ್ನು ಋಜುಮಾರ್ಗದಿಂದ ವಿಮುಖಗೊಳಿಸಬಹುದು. ಆದ್ದರಿಂದ ನಾವು ನಮ್ಮ ಕರ್ತವ್ಯವನ್ನು ಫಲಾಸಕ್ತಿಯಿಲ್ಲದೇ ಮಾಡಬೇಕೆಂದು ಶ್ರೀಕೃಷ್ಣನ ಬೋಧನೆ. ಹೀಗೆ ಕರ್ಮವನ್ನು ಫಲಾಸಕ್ತಿಯಿಲ್ಲದೇ ಅದಕ್ಕೋಸ್ಕರ ಆಚರಿಸುವುದೇ ಕರ್ಮಯೋಗ. ಈ ಬಗ್ಗೆ ಶ್ರೀಕೃಷ್ಣನು ಅರ್ಜುನನಿಗೆ ಪದೇ ಪದೇ ಹೇಳುತ್ತಾನೆ. ''ನಿನ್ನ ಅಧಿಕಾರವು ನಿನ್ನ ಕರ್ತವ್ಯವನ್ನು ಆಚರಿಸುವುದರಲ್ಲಿ ಇದೆಯೇ ಹೊರತು ಅದರ ಫಲವನ್ನು ಪಡೆಯುವುದರಲ್ಲಿ ಅಲ್ಲ'' (೨-೪೭) ಕರ್ಮದಿಂದ ಫಲವೇನೋ ಬರಬಹುದು. ಆದರೆ ನಿಜವಾದ ಕರ್ಮಯೋಗಿಗೆ ಅದು ಫಲವಾಗುವುದಿಲ್ಲ. ಏಕೆಂದರೆ ಆತನು ಅದನ್ನು ಬಯಸುವುದಿಲ್ಲ. ಕರ್ಮವನ್ನು ಈ ಮನೋಭಾವದಿಂದ ಆಚರಿಸಿದರೆ ಮನುಷ್ಯನಿಗೆ ಚಿತ್ತ ಸಮತೆಯುಂಟಾಗುತ್ತದೆ. ಈ ಸಮತೆಯನ್ನು ಗೀತೆಯು ಯೋಗವೆನ್ನುತ್ತದೆ. ಇಲ್ಲಿ ಮನುಷ್ಯನು ಸುಖದುಃಖದ್ವಂದ್ವವನ್ನು ಮೀರಿ ಕ್ರಿಯಾಶೀಲನಾಗಬಲ್ಲ. ಒಟ್ಟಾರೆ ಕರ್ತವ್ಯನಿಷ್ಠೆ ಮತ್ತು ಫಲತ್ಯಾಗವೇ ಕರ್ಮಯೋಗದ ತಿರುಳು.

ಕರ್ಮಯೋಗದ ರಹಸ್ಯವು ಪ್ರವೃತ್ತಿ ಮತ್ತು ನಿವೃತ್ತಿಗಳೆಂಬ ಆದರ್ಶಗಳನ್ನು ತಿಳಿಯುವುದರಿಂದ ನಮಗಿನ್ನೂ ಸ್ಪಷ್ಟವಾಗುತ್ತದೆ. ಪ್ರವೃತ್ತಿಯು ಕರ್ಮಕ್ಕೆ ಪ್ರಾಧಾನ್ಯ ನೀಡುತ್ತದೆ. ಇಲ್ಲಿ ವ್ಯಕ್ತಿಯು ವ್ಯಾವಹಾರಿಕ ಪ್ರಪಂಚದಲ್ಲೇ ಇದ್ದು ತನ್ನ ಕರ್ತವ್ಯಗಳಲ್ಲಿ ತೊಡಗುತ್ತಾನೆ. ನಿವೃತ್ತಿಯು ಕರ್ಮತ್ಯಾಗಕ್ಕೆ ಪ್ರಾಧಾನ್ಯ ನೀಡುತ್ತದೆ. ಇಲ್ಲಿ ವ್ಯಕ್ತಿಯು ತನ್ನ ವ್ಯಾವಹಾರಿಕ ಜೀವನದಿಂದ ವಿಮುಖನಾಗಿ ಅರಣ್ಯದಲ್ಲಿ ತಪೋನಿರತನಾಗುತ್ತಾನೆ. ಕರ್ತವ್ಯನಿಷ್ಠೆಯು ಪ್ರವೃತ್ತಿಯ ಸತ್ತ್ವವಾದರೆ ತ್ಯಾಗವು ನಿವೃತ್ತಿಯ ಸತ್ತ್ವ. ಹಾಗೆಯೇ ಸಾಮಾಜಿಕ ಕರ್ತವ್ಯಗಳನ್ನು ಅಲಕ್ಷಿಸುವುದು ನಿವೃತ್ತಿಯ ದೋಷವಾದರೆ ಸ್ವಾರ್ಥತೆಯು ಪ್ರವೃತ್ತಿಯ ದೋಷ. ಪ್ರವೃತ್ತಿಮಾರ್ಗದ ಈ ದೋಷವು ವಿಶೇಷವಾಗಿ ಯಜ್ಞಯಾಗಾದಿಗಳಿಗೆ ಅನ್ವಯಿಸುತ್ತದೆ. ಯಾಜಕರು ಸ್ವರ್ಗವೆಂಬ ನಶ್ವರ ಸುಖದ ಆಮಿಷಕ್ಕೆ ಬಲಿಯಾಗಿ ಕ್ರಿಯಾಶೀಲರಾಗುತ್ತಾರೆ. ಪುನರ್ಜನ್ಮದಲ್ಲಿನ ಅವರ ನಂಬಿಕೆಯು ಅವರನ್ನು ಐಹಿಕ ಸುಖವನ್ನು ತ್ಯಜಿಸುವಂತೆ ಮಾಡಿದರೂ ಇಲ್ಲಿ ಅವರ ತ್ಯಾಗದ ಹಿನ್ನೆಲೆಯಲ್ಲಿರುವದು ಸ್ವಾರ್ಥತೆಯು ಮಾತ್ರ. ಅವರು ಸ್ವರ್ಗಸುಖಕ್ಕೆಂದು ಪ್ರಾಪಂಚಿಕ ಸುಖವನ್ನು ಬಿಡುತ್ತಾರೆ. ಅಷ್ಟೇ ಅಲ್ಲ, ಇವರು ಕರ್ತವ್ಯಗಳ ಜೊತೆಗೆ ಹಕ್ಕುಗಳನ್ನೂ ನಿರೀಕ್ಷಿಸುತ್ತಾರೆ. ತಮ್ಮ ಕರ್ತವ್ಯದಲ್ಲಿ ಇತರರಿಗೆ ಹೇಗೆ ಋಣಿಗಳಾಗುವರೋ ಹಾಗೆಯೇ ಇತರರಿಂದ ತಮಗೆ ಬರಬೇಕಾದುದನ್ನೂ ನಿರೀಕ್ಷಿಸುತ್ತಾರೆ. ಇದು ನಿಜವಾದ ಅಧ್ಯಾತ್ಮವಲ್ಲ. ಗೀತೆಯು ಪ್ರವೃತ್ತಿ ನಿವೃತ್ತಿಗಳನ್ನು ಶುದ್ಧೀಕರಿಸಿ ಅವುಗಳನ್ನು ಉದಾತ್ತಗೊಳಿಸುವ ಮೂಲಕ ಈ ಕೊರತೆಯನ್ನು

ನೀಗಿಸುತ್ತದೆ. ಈ ಮಾರ್ಗಗಳ ಸತ್ತ್ವವನ್ನು ಉಳಿಸಿಕೊಂಡು ಅವುಗಳ ದೋಷಗಳನ್ನು ಹೊರದೂಡುವ ಮೂಲಕ ಒಂದು ಸ್ವರ್ಣಮಾಧ್ಯಮವನ್ನು ಕಲ್ಪಿಸುತ್ತದೆ. ನಿವೃತ್ತಿಮಾರ್ಗದಂತೆ ಅದು ಕರ್ಮವನ್ನು ತ್ಯಜಿಸೆನ್ನುವುದಿಲ್ಲ. ಬದಲಾಗಿ ಬದುಕಿನಲ್ಲಿ ಕರ್ಮದ ಅನಿವಾರ್ಯತೆಯನ್ನು ಎತ್ತಿಹಿಡಿಯುತ್ತದೆ. ಹಾಗೆಯೇ ಅದು ಪ್ರವೃತ್ತಿಯಂತೆ ಸ್ವಾರ್ಥವನ್ನು ಎತ್ತಿ ಹಿಡಿಯುವುದಿಲ್ಲ. ಬದಲಾಗಿ ಅದು ನಮ್ಮ ಕೆಲಸದಲ್ಲಿ ತ್ಯಾಗಮಯ ಸ್ಫೂರ್ತಿಯ ಬಗ್ಗೆ ಒತ್ತಿ ನುಡಿಯುತ್ತದೆ. ಒಟ್ಟಾರೆ ಅದು ಮನುಷ್ಯನಿಗೆ ಕರ್ಮವನ್ನೇ ತ್ಯಜಿಸೆನ್ನದೆ ಅದರ ಫಲವನ್ನು ತ್ಯಜಿಸೆಂದು ಬೋಧಿಸುತ್ತದೆ. ಹೀಗೆ ಗೀತೆಯ ಸಂದೇಶವು ಕರ್ಮತ್ಯಾಗವಾಗಿರದೆ, ಕರ್ಮದಲ್ಲಿನ (ಫಲದ) ತ್ಯಾಗವಾಗಿದೆ.

ಮೇಲ್ನೋಟಕ್ಕೆ ಅರ್ಜುನನು ನಿವೃತ್ತಿ ಮಾರ್ಗವನ್ನು ಅನುಸರಿಸುವಂತೆ ಕಂಡುಬಂದರೂ, ಆಳವಾಗಿ ನೋಡಿದಾಗ ಅವನು ಪ್ರವೃತ್ತಿಮಾರ್ಗದಿಂದ ಪ್ರಭಾವಿತನಾಗಿರುವುದು ಕಂಡುಬರುತ್ತದೆ. ಮೊದಲು ಅವನು ಹೋರಾಡಲು ನಿರಾಕರಿಸುತ್ತಾನೆ. ಪ್ರಪಂಚವನ್ನೇ ತೊರೆಯಲು ನಿರ್ಧರಿಸುತ್ತಾನೆ. ಪ್ರಪಂಚದ ತ್ಯಾಗದ ಬಗ್ಗೆ ಬಹಳ ಮಾತನಾಡುತ್ತಾನೆ. ಆದರೆ ಆತನ ಈ ನಿವೃತ್ತಿಯು ಕೇವಲ ತೋರಿಕೆಯದಷ್ಟೆ. ಅದು ನೈಜವೈರಾಗ್ಯದಿಂದ ಹೊರಹೊಮ್ಮಿದುದಲ್ಲ. ಆತನಿಗೆ ತನ್ನ ನೆಂಟರಿಷ್ಟರ ಮೋಹವಿದೆ. ತನ್ನವರ ಮತ್ತು ಇತರರ ನಡುವೆ ತಾರತಮ್ಯ ಭಾವವಿದೆ. ಬಂಧುಗಳಿಗೆ ಹೋಲಿಸಿದಾಗ ಪ್ರಜೆಗಳ ರಕ್ಷಣೆಯು ಗೌಣವೆಂಬ ಭಾವವು ಆತನಿಗೆ ತಿಳಿಯದಂತೆ ಆತನಲ್ಲಿ ಬೇರೂರಿದೆ. (೧-೩೧, ೩೩) ಹೀಗೆ ಅರ್ಜುನನ ವೈರಾಗ್ಯವು ನೈಜವಾಗಿರದೆ ಕ್ಷಣಿಕ ದೌರ್ಬಲ್ಯದಿಂದ ಅಥವಾ ಶ್ರೀಕೃಷ್ಣನು ಸೂಚಿಸುವಂತೆ ಹೃದಯದೌರ್ಬಲ್ಯದಿಂದ ಜನ್ಯವಾಗಿದೆ.(೨-೩) ಹೊರಗೆ ಇದು ವಿರಾಗವಾಗಿ ಕಂಡರೂ ಆಂತರಿಕವಾಗಿ ಇದು ರಾಗವೇ ಸರಿ. ಏಕೆಂದರೆ ಆತನು ಪ್ರಾಪಂಚಿಕ ನೆಲೆಯಲ್ಲಿ ಕರ್ಮವನ್ನು ತ್ಯಜಿಸುವನೇ ಹೊರತು ಆತ್ಯಂತಿಕ ನೆಲೆಯಲ್ಲಿ ಅಲ್ಲ. ತಾನು ಹೋರಾಡುತ್ತಿರುವುದು ತನಗಾಗಲಿ, ತನ್ನ ಕುಟುಂಬ ಅಥವಾ ಕುಲಕ್ಕಾಗಲೀ ಅಲ್ಲವೆಂದೂ ರಾಜನಾಗಿ ಇಡೀ ದೇಶಕ್ಕೋಸ್ಕರವೆಂಬುದನ್ನು ಆತನು ತಿಳಿಯುವುದಿಲ್ಲ. ಧರ್ಮವು ಅವನತಿಯಲ್ಲಿರುವಾಗ ವಿವೇಕಿಯು ಅದನ್ನು ಪುನಃ ಸ್ಥಾಪಿಸಲು ಸಾಧ್ಯವಿದ್ದಷ್ಟೂ ಶ್ರಮಿಸಬೇಕೆಂದು ಆತನು ಮರೆಯುತ್ತಾನೆ. ಅರ್ಜುನನ ವೈರಾಗ್ಯವು ನಿಜವಲ್ಲವೆಂಬುದಕ್ಕೆ ಕಡೆಯ ಸೂಚನೆಯೆಂದರೆ ಆತನ ಮಾತುಗಳಲ್ಲಿ ಕಾಣಬರುವ ದೈನ್ಯ. ಆತನು ದುಃಖಿಯಷ್ಟೇ ಅಲ್ಲ ಸಂದೇಹಿಯೂ ಹೌದು (೨-೧, ೬ ಮತ್ತು ೭). ಯುದ್ಧದಲ್ಲಿ ತಾನು ಗೆಲ್ಲುವೆನೋ ಇಲ್ಲವೋ ಎಂಬ ಸಂದೇಹ ಆತನದು. ದಿಟವಾಗಿ ಸಂಶಯ ವಿಷಾದಗಳು ನೈಜ ಆಧ್ಯಾತ್ಮದ ಸಂಕೇತಗಳಲ್ಲ. ಇವು ಸ್ವಾರ್ಥತೆಯ ಅಭಿವ್ಯಕ್ತಿಗಳಷ್ಟೆ. ಆದ್ದರಿಂದ ಸ್ವಾರ್ಥನಿಗ್ರಹವು ಮನುಷ್ಯನ ಮೊದಲ ಕಾರ್ಯವೆಂದು ಶ್ರೀಕೃಷ್ಣನ ಇಂಗಿತ. ಶ್ರೀ ಕೃಷ್ಣನ ಪ್ರಕಾರ ಇದನ್ನು ಸಾಧಿಸಲು ಮನುಷ್ಯನು ಅರಣ್ಯಕ್ಕೇ ಹೋಗಬೇಕಿಲ್ಲ. ಅವನು ಇಲ್ಲೇ ಮತ್ತು ಈ ಸಮಾಜದಲ್ಲೇ ಇದ್ದು ಫಲಾಪೇಕ್ಷೆಯಿಲ್ಲದೇ ತನ್ನ ಕರ್ತವ್ಯವನ್ನು ಮಾಡುವ

ಮೂಲಕ ಸಾಧಿಸಬಹುದು.

ಗೀತೆಯಲ್ಲಿ ನಮ್ಮನ್ನು ಕಾಡುವ ಮತ್ತೊಂದು ಪ್ರಶ್ನೆಯೆಂದರೆ ವ್ಯಾಸರು ತಮ್ಮ ರಚನೆಗೆ ರಣರಂಗವನ್ನೇ ಏಕೆ ವೇದಿಕೆಯಾಗಿ ಆಯ್ದುಕೊಂಡರು ಎಂಬುದು. ಇದಕ್ಕೆ ಕಾರಣವಿಲ್ಲದಿಲ್ಲ. ಸರ್ವಹಿತಕ್ಕೆ ವ್ಯಕ್ತಿಹಿತವು ಅಧೀನವಾಗಿರುವ ನಿದರ್ಶನವನ್ನು ರಣರಂಗದಲ್ಲಲ್ಲದೇ ಬೇರೆಲ್ಲೂ ನಾವು ಕಾಣಲು ಸಾಧ್ಯವಿಲ್ಲ. ಮನುಷ್ಯನು ಈ ಸ್ಥಳದಲ್ಲಲ್ಲದೇ ಬೇರೆಲ್ಲೂ ತನ್ನ ಹಿತವನ್ನು ಸಾರ್ವತ್ರಿಕ ಹಿತಕ್ಕೆ ಸಮರ್ಪಿಸಿಕೊಳ್ಳಲಾರ. ಸೈನಿಕನಾಗಿ ಆತನಿಗೆ ತನ್ನ ಹೋರಾಟದ ಕಾರಣವು ತಿಳಿದಿದ್ದರೂ ಈ ಹೋರಾಟವು ಹೇಗೆ ಕೊನೆಗೊಳ್ಳುವುದೆಂಬ ಬಗ್ಗೆ ಖಚಿತವಿರುವುದಿಲ್ಲ. ಒಂದು ಪಕ್ಷ ಗೆಲುವು ಆತನ ಪರವೇ ಆಗಿದ್ದರೂ, ಅದರ ಪರಿಣಾಮವನ್ನು ಭೋಗಿಸಲು ಆತನು ಆ ಹೊತ್ತಿಗೆ ಬದುಕಿಲ್ಲದಿರಬಹುದು. ಆದರೆ ಈ ಅನಿಶ್ಚಿತತೆಯು ಸೈನಿಕನಾಗಿ ಅವನ ಹೊಣೆಗಾರಿಕೆಯನ್ನು ಎಳ್ಳಷ್ಟೂ ಕಡಮೆ ಮಾಡುವುದಿಲ್ಲ. ಆತನು ಕರ್ತೃವಾಗಿ ತನ್ನ ಮೌಲ್ಯವನ್ನು ಅರಿಯಲು ಯತ್ನಿಸುತ್ತಾನೆ. ಅದೇ ವೇಳೆಗೆ ಕರ್ಮಫಲದಲ್ಲಿ ಭಾಗಿಯಾಗಲು ನಿರಾಕರಿಸುತ್ತಾನೆ. ಎಂದರೆ ತಾನು ಕರ್ತ ಎಂಬುದನ್ನು ಅರಿತು ಭೋಕ್ತಾ ಎಂಬ ಅಂಶವನ್ನು ಮರೆಯುತ್ತಾನೆ. ತಾನು ಯಾವುದನ್ನು ಸೇವಿಸುತ್ತಿರುವನೋ ಅದು ತನಗಿಂತಲೂ ವಿಶಾಲವೆಂಬ ಪ್ರಜ್ಞೆ ಆತನಿಗಿರುತ್ತದೆ. ಆತನ ಭಾವನೆಯು ಕರ್ತೃತ್ವದ ಗರಿಷ್ಠಮಿತಿಯನ್ನು ದಾಟಲಾರದು. ತ್ಯಾಗದ ಈ ಅತ್ಯುನ್ನತ ಮಟ್ಟವನ್ನು ರಣರಂಗದಲ್ಲಲ್ಲದೆ ಬೇರೆಲ್ಲಿ ನಾವು ಕಾಣಲು ಸಾಧ್ಯ? ಇಲ್ಲಿ ಶ್ರೀಕೃಷ್ಣನು ಬೋಧಿಸುತ್ತಿರುವುದು ಅರ್ಜುನನಿಗೆ ಮಾತ್ರವಲ್ಲ. ಆತನು ಅರ್ಜುನನಂತೆ ನೈತಿಕ ಇಕ್ಕಟ್ಟಿಗೆ ಸಿಲುಕಿರುವ ಎಲ್ಲರಿಗೂ ಬೋಧಿಸುತ್ತಿದ್ದಾನೆ. ಕರ್ಮವು ಮನುಷ್ಯನಿಗೆ ಸಹಜವಾದುದು. ಜೀವನದಲ್ಲಿ ಅದನ್ನು ಕಡೆಗಣಿಸುವ ಅಥವಾ ಅದರ ಪಾತ್ರವನ್ನು ಕುಂಠಿತಗೊಳಿಸುವ ಪ್ರಯತ್ನವು ಎಷ್ಟು ಮಾತ್ರಕ್ಕೂ ಸರಿಯಲ್ಲವೆಂದು ನಮಗೆ ಪದೇ ಪದೇ ನೆನಪಿಸುತ್ತಾನೆ (೩-೫; ೧೮-೧೧) ಆದರೆ ಮನುಷ್ಯ ಸಹಜವಾದ ಈ ಕರ್ಮವು ಸರಿಯಾದ ನಿಟ್ಟಿನಲ್ಲಿ ಸಾಗಬೇಕು. ಇಲ್ಲದಿದ್ದರೆ ಅದನ್ನು ಮನುಷ್ಯನು ಲೌಕಿಕ ಸ್ವಾರ್ಥಕ್ಕೆ ಬಳಸುವ ಸಂಭವವುಂಟಾಗಿ ಆತನು ತನ್ನ ಅಂತಿಮಧ್ಯೇಯವನ್ನು ಸಾಧಿಸಲಾರ.

ಇದುವರೆಗೆ ಕರ್ಮಯೋಗಿಯು ಫಲಾಪೇಕ್ಷೆಯಿಲ್ಲದೆ ಕರ್ಮನಿರತನಾಗುವನೆಂದು ಹೇಳಲಾಯಿತು. ಈಗ ಗುರಿಯಿಲ್ಲದ ಕರ್ಮವು ಸಾಧ್ಯವೇ ಎಂಬುದು ಪ್ರಶ್ನೆ. ಇದಕ್ಕೆ ಇಲವೆಂದೇ ಉತ್ತರ. ನಾವು ಮಾಡುವ ಯಾವುದೇ ಕೆಲಸಕ್ಕೆ 'ಏಕೆ' ಎಂಬ ಪ್ರಶ್ನೆಯನ್ನು ಕೇಳಿಯೇ ತೀರುತ್ತೇವೆ. ಕರ್ಮಯೋಗವೇನೂ ಇದಕ್ಕೆ ಹೊರತಲ್ಲ. ನಮ್ಮ ಕರ್ತವ್ಯದ ಗುರಿಯ ಬಗ್ಗೆ ಗೀತೆಯಲ್ಲಿ ಎರಡು ಉತ್ತರಗಳುಂಟು. ಒಂದು ಚಿತ್ತಶುದ್ಧಿ (೫-೧೧) ಮತ್ತು ಇನ್ನೊಂದು ಈಶ್ವರ ಸೇವೆ (೩-೩೦; ೯-೨೭) ಈ ಗುರಿಗಳಿಗೆ ಅನುಸಾರವಾಗಿ ಕರ್ಮದ ಹಿನ್ನೆಲೆಯಲ್ಲಿನ ಮನೋಭಾವವೂ ಬದಲಿಸುತ್ತದೆ. ಗುರಿಯು ಚಿತ್ತಶುದ್ಧಿಯಾದರೆ

ವ್ಯಕ್ತಿಯು ತಾನು ಅವಿಭಾಜ್ಯ ಅಂಗವಾಗಿರುವ ಸಮಾಜದ ಹಿತಕ್ಕೋಸ್ಕರ ಕರ್ಮವನ್ನು ಮಾಡುತ್ತಾನೆ. ಗುರಿಯು ಈಶ್ವರ ಸೇವೆಯಾದಲ್ಲಿ ಅವನು ತನ್ನ ಕರ್ಮಫಲಗಳನ್ನು ಈಶ್ವರನಿಗೆ ಅರ್ಪಿಸುತ್ತಾನೆ. ಒಂದರಲ್ಲಿ ಕರ್ಮವು ಸಮಾಜಸೇವೆಯಾದರೆ ಮತ್ತೊಂದರಲ್ಲಿ ಅದು ಈಶ್ವರಸೇವೆಯಾಗಿ ಪರಿಣಮಿಸುತ್ತದೆ. ಮೊದಲ ಸಂದರ್ಭದಲ್ಲಿ ವ್ಯಕ್ತಿಗೆ ತನ್ನ ಪರಿಸರದ ಅರಿವಿದೆ. ಎರಡನೆಯದರಲ್ಲಿ ಆತನಿಗಿರುವುದು ಭಗವಂತನ ಅರಿವು ಮಾತ್ರ. ಇಲ್ಲಿ ಅವನ ಪಾಲಿಗೆ ದೇವರು ಪ್ರಪಂಚದೊಡನೆ ಅವಿರತ ಸಂಬಂಧವನ್ನು ಹೊಂದಿರುವ ಒಬ್ಬ ಅಸಾಧಾರಣ ಪುರುಷ. ಇಲ್ಲಿ ಅವನು ತಾನೇನು ಮಾಡಿದರೂ ದೇವರ ಕೆಲಸವೆಂದೇ ಭಾವಿಸುತ್ತಾನೆ. ಒಟ್ಟಿನಲ್ಲಿ ಕರ್ಮವನ್ನು ಸಮಾಜಸೇವೆ ಅಥವಾ ಈಶ್ವರಸೇವೆ - ಈ ಯಾವ ಮನೋಭಾವದಿಂದ ಮಾಡಿದರೂ ಅದಕ್ಕೊಂದು ಗುರಿಯಿದ್ದೇ ಇದೆ. ಮೊದಲನೆಯದರ ಗುರಿ ಚಿತ್ತಶುದ್ಧಿಯಾದರೆ ಎರಡನೆಯದು ಈಶ್ವರರಕ್ಷಣೆಯ ವಿಶ್ವಾಸ. ಎಂದರೆ ಇಲ್ಲಿ ವ್ಯಕ್ತಿಯು ಈಶ್ವರನು ತನ್ನನ್ನು ರಕ್ಷಿಸುವನೆಂಬ ವಿಶ್ವಾಸದಿಂದ ಕರ್ಮವನ್ನು ಆಚರಿಸುತ್ತಾನೆ (೯-೩೧)

ಹೀಗೆ ಕರ್ಮಕ್ಕೆ ಗುರಿಯಿದ್ದಲ್ಲಿ ಅದು ಯಾವ ಅರ್ಥದಲ್ಲಿ ನಿಷ್ಕಾಮವೆನಿಸುವುದೆಂದು ಇನ್ನೊಂದು ಪ್ರಶ್ನೆ. ಏಕೆಂದರೆ ಗುರಿಯನ್ನು ಬಯಕೆಯ ಸಂಬಂಧವಿಲ್ಲದೇ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಗೀತೆಯ ಪ್ರಕಾರ ನಮ್ಮ ಮನಸ್ಸನ್ನು ಪ್ರಾಪಂಚಿಕ ಬಯಕೆಗಳಿಂದ ವಿಮುಖಗೊಳಿಸಿ ಅದನ್ನು ನೈಜಪಥದೆಡೆಗೆ ಹರಿಯುವಂತೆ ಮಾಡುವುದೆಂಬ ಅರ್ಥದಲ್ಲಿ ಕರ್ಮಯೋಗವು ನಿಷ್ಕಾಮವಾದುದು, ಅದಕ್ಕೆ ಗುರಿಯೇ ಇಲ್ಲವೆಂದರ್ಥವಲ್ಲ. ಗೀತೆಯು ಉದ್ದೇಶಗಳನ್ನು ಅಲ್ಲಗಳೆಯುವುದಿಲ್ಲ. ಬದಲಾಗಿ ಅದು ಉದ್ದೇಶಗಳನ್ನು ಪ್ರತಿಪಾದಿಸುತ್ತದೆ. ಸಾಮಾಜಿಕ ಕರ್ತವ್ಯಗಳಿಗೆ ಆದ್ಯತೆ ನೀಡಿ ವ್ಯಕ್ತಿಯನ್ನು ಅಲಕ್ಷಿಸಿದಂತೆ ಕಂಡರೂ ಅದು ವಾಸ್ತವವಾಗಿ ವ್ಯಕ್ತಿಯ ಹಿತಕ್ಕೂ ಬದುಕಿನ ಬೇರೊಂದು ಸ್ತರದಲ್ಲಿ ಆದ್ಯತೆಯನ್ನು ನೀಡುತ್ತದೆ.

ಜೀವನದ ಅಂತಿಮ ಧ್ಯೇಯವನ್ನು ಎರಡು ರೀತಿ ಕಲ್ಪಿಸಿಕೊಳ್ಳಲಾಗಿದೆ. ಕರ್ಮದ ಗುರಿಯು ಚಿತ್ತಶುದ್ಧಿಯಾದಲ್ಲಿ ಈ ಧ್ಯೇಯವು ಆತ್ಮಸಾಕ್ಷಾತ್ಕಾರವಾಗುತ್ತದೆ. ಇಲ್ಲಿ ಜೀವಾತ್ಮವು ಪರಬ್ರಹ್ಮದಲ್ಲಿ ಲೀನವಾಗುತ್ತದೆ. ಕರ್ಮದ ಗುರಿಯು ಈಶ್ವರ ಸೇವೆಯಾದಲ್ಲಿ ಅದು ದೈವಸಾಕ್ಷಾತ್ಕಾರವಾಗುತ್ತದೆ (೪-೯; ೯-೨೫). ಇಲ್ಲಿ ಜೀವವು ಅಂತವಾಗಿಯೇ ಹೇಗೆ ಪೂರ್ಣತೆಯನ್ನು ಪಡೆಯುವುದೆಂದು ಪ್ರಶ್ನೆ. ಎಂದರೆ ಮುಕ್ತಿಯಲ್ಲಿ ಜೀವವು ಬ್ರಹ್ಮದಿಂದ ಪ್ರತ್ಯೇಕವಾಗಿಯೇ ಇದ್ದುಗೊಂಡು ಹೇಗೆ ಮುಕ್ತವಾಗಬಲ್ಲದೆಂದು ಸಮಸ್ಯೆ. ಮೊದಲ ದೃಷ್ಟಿಯ ಪ್ರಕಾರ ಇದು ಅಸಾಧ್ಯವಾದರೆ ಎರಡನೇ ದೃಷ್ಟಿಯ ಪ್ರಕಾರ ಇದು ಸಾಧ್ಯ. ಈ ಎರಡು ದೃಷ್ಟಿಗಳು ಅನಂತರ ಕ್ರಮವಾಗಿ ಅದ್ವೈತ ಮತ್ತು ವಿಶಿಷ್ಟಾದ್ವೈತ ವೇದಾಂತಗಳಿಗೆ ಸ್ವೀಕೃತವಾದವು. ಇದೇನೇ ಇರಲಿ ಆತ್ಯಂತಿಕ ಸ್ಥಿತಿಯಲ್ಲಿ ಮನುಷ್ಯನು

ಸುಖದುಃಖದ್ವಂದ್ವವನ್ನು ಮೀರಿ ನಿಲ್ಲುವನೆಂಬುದಂತೂ ನಿಜ. ಈ ಸ್ಥಿತಿಯನ್ನು ಅವನು ಈ ಜನ್ಮದಲ್ಲೇ ಮತ್ತು ಮರಣಾನಂತರ - ಈ ಎರಡು ಹಂತಗಳಲ್ಲೂ ತಲುಪಬಲ್ಲ. ಎಂದರೆ ಗೀತೆಯು ಜೀವನ್ಮುಕ್ತಿ (೫-೧೯; ೨೬) ಮತ್ತು ವಿದೇಹ ಮುಕ್ತಿಗಳೆಂಬ (೮-೫) ಎರಡು ಆದರ್ಶಗಳನ್ನೂ ಪ್ರತಿಪಾದಿಸುತ್ತದೆ. ಮುಕ್ತಜೀವದ ಮನೋಜ್ಞ ಚಿತ್ರಣವು ಪುನಃ ಪುನಃ ಕಂಡುಬರುತ್ತದೆ. (೨-೫೫ ರಿಂದ ೭೨; ೧೪-೨೨ ರಿಂದ ೨೫) ಹನ್ನೊಂದನೆಯ ಅಧ್ಯಾಯದಲ್ಲಂತೂ ವಿಶ್ವರೂಪದರ್ಶನದ ಅದ್ಭುತ ಚಿತ್ರಣವಿದೆ. ಈ ದರ್ಶನವು ಬರಿಯಗಣ್ಣಿನಿಂದ ಸಾಧ್ಯವಿಲ್ಲ. ಆದ್ದರಿಂದಲೇ ಶ್ರೀಕೃಷ್ಣನು ಅರ್ಜುನನಿಗೆ "**ದಿವ್ಯಂ ದದಾಮಿ ತೇ ಚಕ್ಷುಃ**" ಎಂದು ಹೇಳುವುದು. ಆತ್ಮಸಾಕ್ಷಾತ್ಕಾರವೇ ಧ್ಯೇಯವಾಗಿರುವವನ ಮನೋಭಾವವು ಜ್ಞಾನ. ಇಲ್ಲಿ ಕರ್ಮದ ಸಾರ್ಥಕತೆಯು ಜ್ಞಾನವಾಗುತ್ತದೆ (೪-೩೩). ಇಲ್ಲಿ ಅವನು ತನ್ನನ್ನು ಎಲ್ಲರಲ್ಲೂ ಮತ್ತು ಎಲ್ಲರನ್ನು ತನ್ನಲ್ಲೂ ಕಾಣುತ್ತಾನೆ.(೬-೨೯) ಇನ್ನು ದೈವಸಾಕ್ಷಾತ್ಕಾರವು ಧ್ಯೇಯವಾಗಿರುವವನ ಮನೋಭಾವವು ಭಕ್ತಿ. ಇಲ್ಲಿ ಕರ್ಮದ ಸಾರ್ಥಕತೆಯು ದೇವರೊಡನೆ ಪ್ರೀತಿಪೂರ್ವಕ ಸಂಬಂಧವಾಗಿದೆ. ಇಲ್ಲಿ ಮುಖ್ಯವಾದುದು ಈಶ್ವರನಲ್ಲಿ ತನ್ಮೂಲಕ ಎಲ್ಲರಲ್ಲೂ ಸಾಧಕನ ಪ್ರೀತಿ.

ಇಲ್ಲಿ ಮತ್ತೊಂದು ವಿಷಯ. ಗೀತೆಯ ಪ್ರಕಾರ ಮನುಷ್ಯನು ಮುಕ್ತಿಯಲ್ಲೂ ಇತರರಿಗೆ ಮಾದರಿಯಾಗಲು ಕರ್ಮವಾಚರಿಸಬೇಕು.(೩-೨೧) ಅದರ ದೃಷ್ಟಿಯಲ್ಲಿ ಬಾಹ್ಯಕ್ರಿಯೆ ಮತ್ತು ಆಂತರಿಕ ಶಾಂತಿಗಳ ನಡುವೆ ಯಾವ ವೈರುಧ್ಯವೂ ಇಲ್ಲ. ಒಬ್ಬನು ಆಂತರಿಕವಾಗಿ ಶಾಂತನಾಗಿಯೂ ಹೊರಗೆ ಕ್ರಿಯಾಶೀಲನಾಗಬಲ್ಲ. ಕ್ರಿಯಾಶೀಲತೆಯು ಅವನ ಶಾಂತಿಗೆ ಯಾವ ಧಕ್ಕೆಯನ್ನೂ ತರಲಾರದು. ಇಲ್ಲಿ ಗೀತೆಯು ಕರ್ಮಕ್ಕೆ ನೀಡುವ ಪ್ರಾಧಾನ್ಯವು ನಮಗಿನ್ನೂ ಸ್ಪಷ್ಟವಾಗುತ್ತದೆ. ನಿಷ್ಕ್ರಿಯತೆಯ ಬಗ್ಗೆ ಅದು ಎಲ್ಲೂ ಪ್ರಸ್ತಾಪಿಸುವುದಿಲ್ಲ. ಅದರ ಪ್ರಕಾರ ನಿಷ್ಕ್ರಿಯತೆಯು ಮನುಷ್ಯನಿಗೆ ಅಸಾಧ್ಯವಷ್ಟೇ ಅಲ್ಲ ಹೆಚ್ಚು ಕಡಮೆ ದುಷ್ಕರ್ಮದಷ್ಟೇ ಖಂಡನಾರ್ಹ. ಈ ನಿಟ್ಟಿನಲ್ಲಿ ಅದು ಉಪನಿಷತ್ತುಗಳ ಪ್ರಸಿದ್ಧ ದೊರೆಯಾದ ಜನಕ ಮತ್ತು ಶ್ರೀಕೃಷ್ಣರನ್ನೇ ಉದಾಹರಿಸುತ್ತದೆ. ಜನಕನು ತನ್ನ ತಪಸ್ಸಿನಿಂದ ಹೊಸದಾಗಿ ಪೂರ್ಣತೆಯನ್ನು ಪಡೆದರೆ ಶ್ರೀಕೃಷ್ಣನು ಮೂಲತಃ ಪೂರ್ಣನೇ ಸರಿ. ಆದರೆ ಇಬ್ಬರೂ, ಒಂದೇ ರೀತಿ ಕ್ರಿಯಾಶೀಲರು(೩-೨೦ ರಿಂದ ೨೮). ಗೀತೆಯ ಈ ದೃಷ್ಟಿಯು ಜೀವನವನ್ನು ಕುರಿತ ನಮ್ಮ ಕಲ್ಪನೆಯನ್ನು ಸಂಪೂರ್ಣವಾಗಿ ಬದಲಿಸಿಬಿಡುತ್ತದೆ. ಇಲ್ಲಿ ಸಂನ್ಯಾಸವೆಂದರೆ ತಟಸ್ಥತೆಯಲ್ಲ. ಬದಲಾಗಿ ಅದು ಕಾಮರಹಿತ ಕ್ರಿಯಾಶೀಲತೆ. ಸಂನ್ಯಾಸವನ್ನು ಕುರಿತ ಈ ಪರಿಷ್ಕಾರವು ಹಿಂದೂಧರ್ಮಕ್ಕೆ ಗೀತೆಯು ನೀಡಿರುವ ಒಂದು ಮಹತ್ವದ ಕೊಡುಗೆಯೇ ಸರಿ.

ಒಟ್ಟಿನಲ್ಲಿ ನಿಷ್ಕಾಮ ಕರ್ಮಯೋಗವು ಗೀತೆಯ ಸಂದೇಶ. ಈ ಸಂದೇಶವು ಈಶೋಪನಿಷತ್ತಿನಲ್ಲಿ ಈ ಮೊದಲೇ ಅಡಕವಾಗಿದ್ದರೂ ಅದನ್ನು ಬಹುಮನೋಜ್ಞವಾಗಿ

ಬೋಧಿಸಿದ ಖ್ಯಾತಿ ಗೀತೆಗೇ ಸಲ್ಲುತ್ತದೆ. ಗೀತೆಯ ನಂತರ ಯಾವ ವೈದಿಕ ದರ್ಶನವೂ ಈ ಬೋಧನೆಯನ್ನು ಅಲ್ಲಗಳೆಯುವ ಸಾಹಸವನ್ನು ಮಾಡಲಿಲ್ಲ. ಅನಂತರದ ಎಲ್ಲ ದರ್ಶನಗಳಿಗೂ ನಿಷ್ಕಾಮ ಕರ್ಮಯೋಗವು ಆಧ್ಯಾತ್ಮಯಾತ್ರೆಯ ಪ್ರಥಮ ಹೆಜ್ಜೆಯಾಯಿತು. ಪ್ರವೃತ್ತಿ ನಿವೃತ್ತಿಗಳ ಸಮನ್ವಯವು ಧಾರ್ಮಿಕ ಲೋಕಕ್ಕೆ ಗೀತೆಯ ಅತಿ ಮುಖ್ಯ ಕೊಡುಗೆಗಳಲ್ಲಿ ಒಂದು. ಆದರೂ ಇಂದು ಅದು ಅಪ್ರಸ್ತುತವೇನಲ್ಲ. ಗೀತೆಯ ಕಾಲದಲ್ಲಿ ಈ ಸಮನ್ವಯಕ್ಕೆ ಎಡೆಮಾಡಿಕೊಟ್ಟ ಸಂದರ್ಭಗಳು ಇಂದು ಬದಲಾಗಿರಬಹುದು. ಇದು ಸ್ವಪ್ರತಿಪಾದನೆಯ ಕಾಲ, ಸ್ವದಮನದ ಕಾಲವಲ್ಲ. ಇಂದು ಅಪಾಯವಿರುವುದು ಮತ್ತೊಂದು ಕಡೆಯಲ್ಲಿ, ಹಕ್ಕು ಕರ್ತವ್ಯಗಳ ಸಂಘರ್ಷದಲ್ಲಿ. ನಮ್ಮ ಹಕ್ಕುಗಳನ್ನು ಸಾಧಿಸುವ ತವಕದಲ್ಲಿ ನಾವು ಇತರರಿಗೆ ಸಲ್ಲಿಸಬೇಕಾದ ಕರ್ತವ್ಯಗಳನ್ನೇ ಮರೆಯಬಹುದು. ಈ ನಿಟ್ಟಿನಲ್ಲಿ ಗೀತೆಯ ಬೋದಧನೆಯು ಇಂದಿಗೂ ಸಂಗತ. ಕಾಲ ಜಾರಿದಂತೆ ಅದರ ಮೌಲ್ಯವೇನೂ ತಗ್ಗಿಲ್ಲ ಮತ್ತು ಮುಂದೆಯೂ ಅದು ತಗ್ಗುವುದಿಲ್ಲ. ಇದೇ ಗೀತೆಯ ಮಹತ್ತ್ವದ ಸಂಕೇತ.

***

ಶೈವಾಗಮಗಳು

-ಡಾ||ಎಂ. ಶಿವಕುಮಾರ ಸ್ವಾಮಿ

ಆಗಮವೆಂದರೆ ಪರಂಪರಾಗತವಾದ ಜ್ಞಾನ, ಪರಂಪರೆಯಿಂದ ಪರಿಷ್ಕೃತವಾಗಿ ಬಂದ ಜ್ಞಾನ; ಅಂತಹ ಜ್ಞಾನವು ಸಂಗ್ರಹಿಸಲ್ಪಟ್ಟಿರುವ ಗ್ರಂಥರಾಶಿಗೂ ಕೂಡ ಆಗಮವೆಂದು ಹೆಸರು. 'ಆಙ್' ಉಪಸರ್ಗಪೂರ್ವಕವಾದ '**ಗಮ್ಲೃ ಗತೌ**' ಧಾತುವಿನಿಂದ ಆಗಮ ಶಬ್ದವು ನಿಷ್ಪನ್ನವಾಗಿದ್ದು ಮೇಲಿನ ಅರ್ಥವು ಸಮಂಜಸವಾಗಿದೆ. 'ಆಙ್' ಉಪಸರ್ಗವು ಪರಂಪರೆಯ ಅರ್ಥವನ್ನು ಕೊಡುತ್ತದೆ ಮತ್ತು ಎಲ್ಲಾ ಗತ್ಯರ್ಥಕ ಧಾತುಗಳೂ ಜ್ಞಾನದ ಅರ್ಥವನ್ನು ಕೊಡುತ್ತವೆ ಎಂಬ ನಿಯಮದಂತೆ 'ಗಮ್ಲೃ' ಧಾತುವಿಗೂ ಜ್ಞಾನದ ಅರ್ಥವು ಸಿದ್ಧವಾಗುತ್ತದೆ. ಆಗಮಗಳಲ್ಲಿಯೇ ಆಗಮಶಬ್ದದ ನಿರ್ವಚನವು ಬಂದಿದೆ. ಒಂದು ನಿರ್ವಚನದಂತೆ 'ಆ' ಎಂಬುದು ಶಿವನ ಮುಖದಿಂದ ಬಂದದ್ದೆಂದೂ (ಆಗತಂ), 'ಗ' ಎಂಬುದು ಗಿರಿಜೆಗೆ ಹೇಳಲ್ಪಟ್ಟದ್ದೆಂದೂ (ಗತಂ) ಮತ್ತು 'ಮ' ಎಂಬುದು ವಾಸುದೇವನಿಗೆ ಸಮ್ಮತವಾದದ್ದೆಂದೂ (ಮತಂ) ಆಗಮ ಶಬ್ದದ ಮೂರು ಅಕ್ಷರಗಳು ಸೂಚಿಸುತ್ತವೆ.

ಆಗತಂ ಪಂಚವಕ್ತ್ರಾತ್ತು ಗತಂ ಚ ಗಿರಿಜಾನನೇ ।
ಮತಂ ಚ ವಾಸುದೇವಸ್ಯ ತಸ್ಮಾದಾಗಮಮುಚ್ಯತೇ ॥

(ತಂತ್ರಸಮುಚ್ಚಯ, ಪೀಠಿಕೆ, ಪು.೨)

ಹೀಗೆ ''ಆಗತಂ ಗತಂ ಮತಂ ಚೇತಿ ಆಗಮಮ್'' ಎಂದು ಆಗಮ ಶಬ್ದದ ನಿರ್ವಚನ. ಪರಮಾತ್ಮನಿಂದ ಪ್ರಣೀತವಾಗಿ ಪರಂಪರೆಯಿಂದ ಪರಿಷ್ಕೃತವಾಗಿ ಬಂದದು ಆಗಮಃ ''ಆಗಮೋ ನಾಮ ಆ ಮಹೇಶ್ವರಾತ್ ಗುರುಪಾರಂಪರ್ಯಾಗತಂ ಶಾಸ್ತ್ರಮ್'' (ಪಾಶುಪತಸೂತ್ರ).

ಆಗಮಕ್ಕೆ ''ತಂತ್ರ'' ಎಂಬುದು ಇನ್ನೊಂದು ಹೆಸರು. 'ತನು ವಿಸ್ತಾರೇ' (ತನ್-ವಿಸ್ತರಿಸುವುದು) ಎಂಬ ಧಾತುವಿಗೆ 'ತ್ರನ್' ಪ್ರತ್ಯಯ ಸೇರಿ ತಂತ್ರಶಬ್ದವು ನಿಷ್ಪನ್ನವಾಗಿದೆ. ತಂತ್ರ ಎಂದರೆ (ಜ್ಞಾನವನ್ನು) ವಿಸ್ತರಿಸುವುದು ಎಂದರ್ಥ. ಈ ಅರ್ಥವನ್ನಿಟ್ಟುಕೊಂಡು ಅಜಿತಾಗಮವು ಹೀಗೆ ತಂತ್ರಶಬ್ದದ ನಿಷ್ಪತ್ತಿಯನ್ನು ನೀಡಿದೆ :

ತನೋತಿ ವಿಪುಲಾನರ್ಥಾನ್ ತತ್ತ್ವಮಂತ್ರಸಮಾಶ್ರಿತಾನ್ ।
ತ್ರಾಣಂ ಚ ಕುರುತೇ ಪುಂಸಾಂ ತೇನ ತಂತ್ರಮಿತಿ ಸ್ಮೃತಮ್ ॥

(ಅಜಿತಾಗಮ, ಕ್ರಿಯಾಪಾದ, ೧.೧೧೫)

ತತ್ತ್ವ ಮತ್ತು ಮಂತ್ರಗಳ ಜ್ಞಾನವನ್ನು ವಿಸ್ತರಿಸುವ ಮತ್ತು ಮಾನವರನ್ನು ರಕ್ಷಿಸುವ ಶಾಸ್ತ್ರವೇ ತಂತ್ರ. ಸಾಮಾನ್ಯವಾಗಿ ಶೈವಶಾಸ್ತ್ರಕ್ಕೆ ಆಗಮವೆಂದೂ ಶಾಕ್ತ ಶಾಸ್ತ್ರಕ್ಕೆ

ತಂತ್ರವೆಂದೂ ಪ್ರಯೋಗ ಕಂಡುಬರುತ್ತದೆ. ಆದರೆ ಇದು ನಿಯಮವೇನೂ ಅಲ್ಲ.

ವೇದ ಮತ್ತು ಆಗಮ:

ಭಾರತೀಯ ಪರಂಪರೆಯಲ್ಲಿ ವೇದ ಮತ್ತು ಆಗಮಗಳೆರಡಕ್ಕೂ ಸಮಾನವಾದ ಪ್ರಾಶಸ್ತ್ಯವಿದೆ, ಪ್ರಾಮಾಣ್ಯವಿದೆ. ಶ್ರೀಪತಿಪಂಡಿತರು ವೇದ-ಆಗಮಗಳ ಏಕಕರ್ತೃತ್ವವನ್ನು ಬಿಂಬಿಸುವ ಸ್ಮೃತಿಯ ವಾಕ್ಯವೊಂದನ್ನು ಉಲ್ಲೇಖಿಸಿದ್ದಾರೆ :

ವಿಮರ್ಶರೂಪಿಣೀ ಶಕ್ತಿಃ ಶಿವಸ್ಯ ಪರಮಾತ್ಮನಃ ।
ನಿಗಮಾಗಮ ರೂಪಾ ಸ್ಯಾತ್ ಸರ್ವತತ್ತ್ವಪ್ರಕಾಶಿನೀ ॥
(**ಶ್ರೀಕರಭಾಷ್ಯ,** I.1-3ರಲ್ಲಿ)

ಎಲ್ಲಾ ತತ್ತ್ವಗಳ ಪ್ರಕಾಶಕನಾದ ಪರಶಿವನ ವಿಮರ್ಶಶಕ್ತಿಯೇ ನಿಗಮ (ವೇದ) ಮತ್ತು ಆಗಮಗಳ ರೂಪವನ್ನು ಧರಿಸಿತು. ಹೀಗೆ ಎರಡೂ ಅಪೌರುಷೇಯ. ಪುರಾತನ ಋಷಿಗಳು ಸತ್ತ್ವೋದ್ರೇಕದ ಸ್ಥಿತಿಯಲ್ಲಿದ್ದಾಗ ಸಾಕ್ಷಾತ್ಕರಿಸಿಕೊಂಡ ಸತ್ಯತತ್ತ್ವಗಳೇ ಮಂತ್ರಗಳು. ಅವುಗಳ ಸಂಕಲನಗಳೇ ವೇದಗಳು. ಹಾಗೆಯೇ ಪರಶಿವನ ಅನುಗ್ರಹಕ್ಕೆ ಪಾತ್ರರಾದ ಜ್ಞಾನಿಗಳಿಗೆ ಗೋಚರವಾಗಿ ಪರಂಪರೆಯಲ್ಲಿ ಬಂದ ಜ್ಞಾನವೇ ಆಗಮಗಳಾಯಿತು. ಹಾಗೆಯೇ ವೇದ ಮತ್ತು ಆಗಮಗಳ ಸಮಾನ ಪ್ರಾಮಾಣ್ಯದ ಬಗ್ಗೆ ಶಿವಯೋಗಿ ಶಿವಾಚಾರ್ಯರು ಮಾರ್ಮಿಕವಾದ ವಿಚಾರವನ್ನು ಮುಂದಿಟ್ಟಿದ್ದಾರೆ:

ವೇದೈಕದೇಶವರ್ತಿಭ್ಯಃ ಸಾಂಖ್ಯಾದಿಭ್ಯೋ ಮಹಾಮುನೇ ।
ಸರ್ವವೇದಾನುಸಾರಿತ್ವಾಚ್ಛೈವ ತಂತ್ರಂ ವಿಶಿಷ್ಯತೇ ॥
ಶೈವತಂತ್ರಮಿತಿ ಪ್ರೋಕ್ತಂ ಸಿದ್ಧಾಂತಾಖ್ಯಂ ಶಿವೋದಿತಮ್ ।
ಸರ್ವವೇದಾರ್ಥರೂಪತ್ವಾತ್ ಪ್ರಮಾಣಂ ವೇದವತ್ಸದಾ ॥
(ಸಿದ್ಧಾಂತ ಶಿಖಾಮಣಿ, ೫. ೭-೮)

ವೇದದ ಒಂದೊಂದು ಭಾಗದಲ್ಲಿ ಬರುವ ಸಾಂಖ್ಯ ಮುಂತಾದ ಶಾಸ್ತ್ರಗಳಿಗಿಂತಲೂ ಸಮಗ್ರ ವೇದವನ್ನು ಅನುಸರಿಸುವ ಶೈವಾಗಮಶಾಸ್ತ್ರವು ವಿಶೇಷ ಮಹತ್ವವನ್ನು ಪಡೆದಿದೆ. ಶಿವನಿಂದ ಪ್ರಣೀತವಾದ ಶೈವಾಗಮಶಾಸ್ತ್ರಕ್ಕೆ ಸಿದ್ಧಾಂತವೆನ್ನುತ್ತಾರೆ. ಅದು ಸಮಸ್ತ ವೇದಾರ್ಥವೇ ಆದ್ದರಿಂದ ಯಾವಾಗಲೂ ವೇದದಂತೆ ಪ್ರಮಾಣವಾಗಿದೆ. ಶ್ರೀಕಂಠಶಿವಾಚಾರ್ಯರು— ''ವಯಂತು ವೇದಾಗಮಯೋಃ ಭೇದಂ ನ ಪಶ್ಯಾಮಃ'' (ನಾವಂತೂ ವೇದ ಮತ್ತು ಆಗಮಗಳ ಮಧ್ಯೆ ಭೇದವನ್ನೇ ಕಾಣುವುದಿಲ್ಲ) ಎಂದು ಹೇಳಿ ''ಬ್ರಹ್ಮ, ಪ್ರಣವಪಂಚಾಕ್ಷರೀ, ಪ್ರಸಾದ ಮುಂತಾದ ಮಂತ್ರಗಳಿಗೆ, ಪಶು-ಪತಿ-ಪಾಶ ಮುಂತಾದ ತತ್ತ್ವವಿಚಾರಗಳಿಗೆ, ಭಸ್ಮೋದ್ಧೂಲನ, ತ್ರಿಪುಂಡ್ರಧಾರಣೆ, ಲಿಂಗಾರ್ಚನ, ರುದ್ರಾಕ್ಷಧಾರಣೆ ಮುಂತಾದ ಮುಖ್ಯ ಧರ್ಮಗಳಿಗೆ ಹಾಗೂ ಎಲ್ಲಾ ವ್ಯವಹಾರಗಳಿಗೆ ವೇದ-ಆಗಮಗಳೆರಡೂ ಸಮಪ್ರಮಾಣವೆನಿಸಿವೆ'' (ಶ್ರೀಕಂಠಭಾಷ್ಯ, II,೨-೩೭) ಎಂದು

ಸಮರ್ಥಿಸಿದ್ದಾರೆ.

ಆಗಮಗಳು ವಸ್ತುತಃ ವೇದದ ಉದ್ದೇಶವನ್ನು ಸಾಧಿಸಲು ಪರಂಪರೆಯಲ್ಲಿ ಮೂಡಿಬಂದಿದೆ. ವೇದಮಂತ್ರಗಳು ಫಲಪ್ರದವಾಗಲು ಅನುಷ್ಠಾನ ಬೇಕು. ಆಗಮಗಳು ಈ ಮಂತ್ರಗಳ ಅನುಷ್ಠಾನ ವಿಧಾನವನ್ನು ನಿರೂಪಿಸುತ್ತವೆ. ವೇದದಲ್ಲಿ ಬಂದಿರುವ ಮಂತ್ರಗಳು ಸತ್ಫಲವನ್ನು ಕೊಡಬೇಕಾದರೆ ಅವು ಸ್ವಾಧೀನವಾಗಬೇಕು. ಅವು ಸ್ವಾಧೀನವಾಗಲು ಪುರಶ್ಚರಣ ವಿಧಿಯು ಅವಶ್ಯಕ. ಪುರಶ್ಚರಣದಲ್ಲಿ ಪಂಚಾಂಗೋಪಾಸನೆ, ಜಪ, ಹೋಮ, ತರ್ಪಣ, ಅಭಿಷೇಕ ಮತ್ತು ರುದ್ರಭೋಜನ ಎಂಬ ಆರು ಅಂಗಗಳಿವೆ. ಗೀತೆ, ಸಹಸ್ರನಾಮ, ಸ್ತವ, ಕವಚ ಮತ್ತು ಹೃದಯವೆಂಬವು ಪಂಚಾಂಗೋಪಾಸನೆಯಲ್ಲಿ ಬರುತ್ತವೆ. ಪ್ರತಿಮಂತ್ರಕ್ಕೂ ನಮಃ, ಸ್ವಾಹಾ, ವೌಷಟ್, ಹುಮ್, ಫಟ್ ಎಂಬ ಪಲ್ಲವಗಳು ಮತ್ತು ಅಂಗನ್ಯಾಸ, ಕರನ್ಯಾಸ, ದಿಗ್ಬಂಧನ ಮುಂತಾದವುಗಳು ಬೇಕು. ಈ ಎಲ್ಲಾ ವಿಚಾರಗಳು ಆಗಮಗಳಲ್ಲಿ ವಿಸ್ತಾರವಾಗಿ ಬಂದಿರುವುದರಿಂದ ವೇದಮಂತ್ರಗಳ ಅನುಷ್ಠಾನಕ್ಕೆ ಆಗಮಗಳು ಬೇಕೇ ಬೇಕು. ಹೀಗೆ ವೇದ ಮತ್ತು ಆಗಮಗಳು ಪರಸ್ಪರ ಸಂಬಂಧವನ್ನು ಪಡೆದಿವೆ.

ಆಗಮಗಳ ಭೇದ:

ಆಗಮಗಳು ಆರು ಬಗೆ: ೧. ವೀರಶೈವ, ೨. ವೈಷ್ಣವ, ೩. ಶಾಕ್ತ, ೪. ಸೌರ, ೫. ಗಾಣಾಪತ್ಯ ಮತ್ತು ೬. ಕಾಪಾಲಿಕ :

ತಂತ್ರಂ ತು ಷಡ್ವಿಧಂ ಪ್ರೋಕ್ತಂ ಷಡ್‌ದರ್ಶನ ವಿಭೇದತಃ ।
ವೀರಶೈವಂ ವೈಷ್ಣವಂ ಚ ಶಾಕ್ತಂ ಸೌರಂ ವಿನಾಯಕಮ್ ॥
ಕಾಪಾಲಮಿತಿ ವಿಜ್ಞೇಯಂ ದರ್ಶನಾನಿ ಷಡೇವ ಹಿ।
ತತ್ತತ್ತಂತ್ರೋಕ್ತಮಾರ್ಗೇಣ ತತ್ತತ್ಕರ್ಮ ಸಮಾಚರೇತ್ ॥
(ಪಾರಮೇಶ್ವರ ತಂತ್ರ, I.೨೦-೨೧)

ಹೀಗೆ ಆಗಮಗಳ ಭೇದಕ್ಕೆ ವೀರಶೈವ ಮುಂತಾದ ಆರು ದರ್ಶನಗಳ ಭೇದವು ಆಧಾರ. ಆಯಾಯ ತಂತ್ರಗಳಲ್ಲಿ ಉಕ್ತವಾದ ಕ್ರಮಗಳನ್ನು ಅನುಸರಿಸಿ ತಮ್ಮ ತಮ್ಮ ಮತಗಳ ಆಚರಣೆಗಳನ್ನು ನಿರ್ವಹಿಸಬೇಕೆಂದು ನಿಯಮವಿದೆ. ವೈಷ್ಣವಾಗಮಗಳಲ್ಲಿ ವೈಖಾನಸ, ಪಾಂಚರಾತ್ರ ಮತ್ತು ತಂತ್ರಸಾರ ಎಂಬ ಪ್ರಭೇದಗಳಿವೆ. ಒಂದೊಂದು ಆಗಮ ಪರಂಪರೆಯಲ್ಲಿಯೂ ವಿಪುಲ ಸಂಖ್ಯೆಯ ಆಗಮಗಳು ಪರಿಗಣಿಸಲ್ಪಟ್ಟಿವೆ.

ಆಗಮಗಳ ಕಾಲ:

ಆಗಮಗಳ ಕಾಲವನ್ನು ನಿರ್ಣಯಾತ್ಮಕವಾಗಿ ಹೇಳುವುದು ಬಹುಶಃ ಯಾರಿಗೂ ಸಾಧ್ಯವಿಲ್ಲ. ಉಪಲಬ್ಧವಾದ ಆಗಮಗಳು ಒಂದೇ ಕಾಲದಲ್ಲಿ ಸಂಗ್ರಹಿಸಲ್ಪಟ್ಟವುಗಳೆಂದು

ಹೇಳುವುದು ಸಾಧ್ಯವಿಲ್ಲ. ಅವು ಪರಂಪರೆಯಲ್ಲಿ ಬೆಳೆಯುತ್ತಾ ಪರಿಷ್ಕೃತವಾಗುತ್ತಾ ಬಂದವುಗಳು ಎಂಬ ವಿಷಯವು ನಿರ್ವಿವಾದ. ಆಗಮಗಳಲ್ಲಿ ನಿರೂಪಿಸಲ್ಪಟ್ಟ ಆಚಾರ-ವಿಚಾರಗಳನ್ನು ನೋಡಿದರೆ ಅವುಗಳ ಕಾಲ ಅಷ್ಟು ಪ್ರಾಚೀನವೆಂದು ಹೇಳಲಾಗದಿದ್ದರೂ ಆಗಮಿಕ ಸಂಸ್ಕೃತಿಯು ಮಾತ್ರ ಪ್ರಾಚೀನವೆಂಬುದನ್ನು ಒಪ್ಪಬೇಕಾಗುತ್ತದೆ. ಇಲ್ಲಿ ''ಯಜ್ಞಯಾಗಾದಿಗಳಿಗೆ ವೇದಮಂತ್ರಗಳನ್ನು ಅನ್ವಯ ಮಾಡಿಕೊಂಡು ಸಿದ್ಧವಾದವು ಬ್ರಾಹ್ಮಣಗಳೆಂಬ ಭಾಗಗಳು. ಈ ಬ್ರಾಹ್ಮಣಗಳ ಕಾಲಾನುಕ್ರಮ ಪರಿವರ್ತನೆಯೇ ಆಗಮಗಳೆಂದು ತೋರುತ್ತದೆ'' ಎಂಬ ಪ್ರೊ॥ಎಸ್.ಕೆ. ರಾಮಚಂದ್ರರಾವ್ ಅವರ ಮಾತು (ಶಿವಾಗಮ ಸೌರಭ, ಮುನ್ನುಡಿ, ಪು.೩) ಮಾರ್ಮಿಕವಾಗಿದೆ. ವೇದಮಂತ್ರಗಳ ಅನುಷ್ಠಾನ ಪದ್ಧತಿಗೆ ಸಂಬಂಧಪಟ್ಟ ವಿವರಣೆಯೂ ಕೆಲವು ಪೂಜಾಪದ್ಧತಿಗಳೂ ಆಗಮಗಳ ಆರಂಭಕಾಲಕ್ಕೆ ಸೇರಿದವುಗಳು. ಆನಂತರ ದೇವಮಂದಿರಗಳ ನಿರ್ಮಾಣ, ಮೂರ್ತಿಗಳ ರಚನೆ ಮತ್ತು ಪ್ರತಿಷ್ಠಾಪನೆ ಮುಂತಾದ ವಿವರಗಳು ಆಗಮಗಳಲ್ಲಿ ಸೇರಿರಬೇಕು.

ಆಗಮಗಳ ಆರಂಭಕಾಲವನ್ನು ನಿರ್ಧರಿಸಲು ಕೆಲವು ಆಧಾರಗಳು ದೊರೆಯುತ್ತವೆ. ಮೊದಲನೆಯದಾಗಿ ಶೈವಾಗಮಗಳಲ್ಲಿ ಜೈನ ಮತ್ತು ಬೌದ್ಧ ಮತಗಳ ಉಲ್ಲೇಖವು ಸ್ಪಷ್ಟವಾಗಿದೆ. ಉದಾಹರಣೆಗೆ ಈ ಶ್ಲೋಕವನ್ನು ನೋಡಬಹುದು:

ಆದೌತು ಸೌಗತಮತಂ ತಚ್ಚ ಪಂಚವಿಧಂ ಪ್ರಿಯೇ ।
ಬೌದ್ಧ-ಸೌಗತ-ಚಾರ್ವಾಕ-ಜೈನಾರ್ಹತವಿಭಾಗತಃ ॥
(ಪಾರಮೇಶ್ವರ ತಂತ್ರ, ಆರಂಭದ ಪಟಲ).

ಎರಡನೆಯದಾಗಿ ಭಾಷೆಯ ದೃಷ್ಟಿಯಿಂದ ಆಗಮಗಳು ಪಾಣಿನಿಯ (ಕ್ರಿ.ಪೂ. ೭೦೦) ಅನಂತರದ ಕಾಲಕ್ಕೆ ಸೇರಿದವುಗಳು. ಹೀಗೆ ಆಗಮಗಳ ಆರಂಭಕಾಲ ಸುಮಾರು ಕ್ರಿ.ಪೂ. ೬೦೦ ಎಂದು ಹೇಳಬಹುದು. ಕ್ರಿ.ಪೂ. ೨೦೦ಕ್ಕೆ ಸೇರಿದ್ದೆಂದು ತಿಳಿದ ಮಹಾಭಾರತದ ಭಾಗದಲ್ಲಿ ಉಲ್ಲೇಖಿಸಲ್ಪಟ್ಟ ಪಾಂಚರಾತ್ರಾಗಮೋಕ್ತ ಪೂಜಾಪದ್ಧತಿ ಮತ್ತು ಕ್ರಿ.ಪೂ. ೫೦೦ಕ್ಕೆ ಸೇರಿದ್ದೆಂತು ಹೇಳಲಾದ ಭಗವದ್ಗೀತೆಯಲ್ಲಿ ಪಾಂಚರಾತ್ರಾಗಮೋಕ್ತ ವಾಸುದೇವ ಮಹತ್ತ್ವ (ಶಿವಾಗಮಸೌರಭ, ಪೀಠಿಕೆ, ಪು.XVIII) ಇವುಗಳು ಮೇಲೆ ಹೇಳಿದ ಆರಂಭಕಾಲವನ್ನು ಸೂಚಿಸುತ್ತವೆ. ಈ ಕಾಲ ಇನ್ನೂ ಹಿಂದಕ್ಕೆ ಹೋಗಬಹುದು. ಎಷ್ಟು ಹಿಂದೆ ಎಂದು ನಿಖರವಾಗಿ ಹೇಳುವುದು ಸಾಧ್ಯವಿಲ್ಲ. ಆಗಮ ಸಂಸ್ಕೃತಿಯು, ವಿಶೇಷವಾಗಿ ಶೈವಾಗಮಗಳ ಸಂಸ್ಕೃತಿಯು ಇನ್ನೂ ಹಿಂದೆ ಸೈಂಧವ ಸಂಸ್ಕೃತಿಯ ಕಾಲದವರೆಗೂ ಹೋಗಬಹುದು. ಪಾಂಚರಾತ್ರಾಗಮಗಳಲ್ಲಿ ಶೈವಾಗಮಗಳ ಪ್ರಸ್ತಾಪವಿದೆ. ಆದರೆ ವೈಷ್ಣವಾಗಮಗಳ ಉಲ್ಲೇಖವು ಶೈವಾಗಮಗಳಲ್ಲಿ ಕಂಡುಬಂದಿಲ್ಲ. ಇದರಿಂದ ಶೈವಾಗಮಗಳು ವೈಷ್ಣವಾಗಮಗಳಿಗಿಂತ ಹಿಂದಿನವು ಎಂದು ಹೇಳಬಹುದು. (ಡಾ॥ಶಿ.ಚಿ.

ನಂದಿಮಠ:ಶಿವಾನುಭವ, ಸಂ.೭, ನಂ.೧, ೧೯೩೧ ಏಪ್ರಿಲ್) ಕ್ರಿ.ಶ. ೮ ಮತ್ತು ೧೦ನೇ ಶತಮಾನಗಳ ಮಧ್ಯದಲ್ಲಿ ರಚಿತವಾದ ಸಿದ್ಧಾಂತ ಶಿಖಾಮಣಿಯು ಶೈವಾಗಮಗಳಲ್ಲಿನ ವೀರಶೈವ ಭಾಗಗಳ ಸಾರಸಂಗ್ರಹವಾಗಿದೆ. ಶ್ರೀಕಂಠಭಾಷ್ಯ ಮತ್ತು ಶ್ರೀಕರಭಾಷ್ಯ (ಕ್ರಿ.ಶ. ೧೧ನೇ ಶತಮಾನ), ಬಸವಣ್ಣ, ಚೆನ್ನಬಸವಣ್ಣ ಮುಂತಾದವರ ವಚನಗಳು (ಕ್ರಿ.ಶ. ೧೨ನೇ ಶತಮಾನ) ಮುಂತಾದವುಗಳಲ್ಲಿ ಬರುವ ಶೈವಾಗಮಗಳ ಉಲ್ಲೇಖಗಳು ಸೂಚಿಸುವಂತೆ ೨೮ ಶೈವಾಗಮಗಳ ಬಹುಮಟ್ಟಿನ ಭಾಗಗಳು (ಶೈವ ಹಾಗೂ ವೀರಶೈವ ಪಟಲಗಳು) ಕ್ರಿ.ಶ. ೮ನೇ ಶತಮಾನಕ್ಕಿಂತ ಹಿಂದಿನ ಕಾಲಕ್ಕೆ ಸೇರಿದವುಗಳು ಎಂದು ಹೇಳಬಹುದು. ಆದರೆ ಉಪಲಬ್ಧವಾದ ಆಗಮಗಳಲ್ಲಿ ತಿಳಿದುಬರುವಂತೆ ಅನಂತರ ಕೆಲವು ಭಾಗಗಳು ಸೇರಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಈ ಪ್ರಾಸ್ತಾವಿಕ ಹಿನ್ನೆಲೆಯಲ್ಲಿ ವಿಶೇಷವಾಗಿ ಶೈವಾಗಮಗಳ ಸಂಖ್ಯೆ, ವ್ಯಾಪ್ತಿ, ಉಪಲಬ್ಧಿ ಮತ್ತು ಅನುಪಲಬ್ಧಿ ವಿಚಾರ ಮತ್ತು ಪ್ರತಿಪಾದಿತ ವಿಷಯಗಳ ಬಗ್ಗೆ ಸಂಕ್ಷಿಪ್ತವಾದ ಪರಿಚಯವನ್ನು ಈ ಲೇಖನದಲ್ಲಿ ಮಾಡಿಕೊಡಲಾಗಿದೆ.

ಶೈವಾಗಮಗಳ ಸಂಖ್ಯೆ ಮತ್ತು ವ್ಯಾಪ್ತಿ:

ಶಿವಾಗಮಗಳು ಶೈವ, ಪಾಶುಪತ, ಸೋಮ, ಲಾಕುಲ ಎಂದು ನಾಲ್ಕು ವಿಧ. ಅವುಗಳಲ್ಲಿ ಮೊದಲಿನದಾದ ಶೈವಾಗಮಗಳಲ್ಲಿ ವಾಮ, ದಕ್ಷಿಣ, ಮತ್ತು ಸಿದ್ಧಾಂತವೆಂದು ಮೂರು ವಿಧ (ಪೂರ್ವ ಕಾರಣಾಗಮ, ಪಟಲ ೨೬, ಪದ್ಯ ೫೯). ಸಿದ್ಧಾಂತಶಿಖಾಮಣಿಯ ಪ್ರಕಾರ ಶೈವಾಗಮ ಭೇದಗಳು ವಾಮ, ದಕ್ಷಿಣ ಮಿಶ್ರ ಮತ್ತು ಸಿದ್ಧಾಂತವೆಂದು ನಾಲ್ಕು-(ಸಿ.ಶಿ. ೫.೧೦). ವಾಮತಂತ್ರವು ಶಕ್ತಿಪ್ರಧಾನ, ದಕ್ಷಿಣತಂತ್ರವು ಭೈರವಾತ್ಮಕ, ಮಿಶ್ರತಂತ್ರವು ಸಪ್ತಮಾತೃಕಪರ ಮತ್ತು ಸಿದ್ಧಾಂತತಂತ್ರವು ವೇದಸಮ್ಮತ (ಸಿದ್ಧಾಂತ ಶಿಖಾಮಣಿ, ೫.೧೧). ಕಾಮಿಕಾಗಮದಿಂದ ಹಿಡಿದು ವಾತುಲಾಗಮದವರೆಗಿನ ಇಪ್ಪತ್ತೆಂಟು ಶೈವಾಗಮಗಳು ಮತ್ತು ಅವುಗಳ ಉಪತಂತ್ರಗಳು ಸಿದ್ಧಾಂತ ಶೈವದ ಕಕ್ಷೆಯಲ್ಲಿ ಬರುತ್ತವೆ. ಆ ಇಪ್ಪತ್ತೆಂಟು ಶೈವಾಗಮಗಳು ಇವು:

೧.ಕಾಮಿಕ, ೨.ಯೋಗಜ, ೩.ಅಚಿಂತ್ಯ, ೪.ಕಾರಣ, ೫.ಅಜಿತ, ೬.ದೀಪ್ತ, ೭.ಸೂಕ್ಷ್ಮ, ೮.ಸಹಸ್ರ, ೯.ಅಂಶುಮಾನ್, ೧೦.ಸುಪ್ರಭೇದ, ೧೧.ವಿಜಯ, ೧೨.ನಿಃಶ್ವಾಸ, ೧೩.ಸ್ವಾಯಂಭುವ, ೧೪.ಅನಲ, ೧೫.ವೀರ, ೧೬.ರೌರವ, ೧೭.ಮಕುಟ, ೧೮.ವಿಮಲ, ೧೯.ಚಂದ್ರಜ್ಞಾನ, ೨೦.ಬಿಂಬ, ೨೧.ಪ್ರೋದ್ಗೀತ, ೨೨.ಲಲಿತ, ೨೩.ಸಿದ್ಧ, ೨೪.ಶರ್ವೋಕ್ತ, ೨೫.ಸಂತಾನ, ೨೬.ಪಾರಮೇಶ್ವರ, ೨೭.ಕಿರಣ ಮತ್ತು ೨೮.ವಾತುಲ.

ಇವುಗಳಲ್ಲಿ ಕಾಮಿಕದಿಂದ ಸುಪ್ರಭೇದದವರೆಗೆ ಇರುವ ಹತ್ತು ಆಗಮಗಳು 'ಶಿವಭೇದ'ಕ್ಕೂ ಉಳಿದವು 'ರುದ್ರಭೇದ'ಕ್ಕೂ ಸೇರಿವೆಯೆಂದು ಪರಂಪರೆಯಲ್ಲಿ

ಪರಿಗಣಿಸಲ್ಪಟ್ಟಿವೆ.

ಇವುಗಳಲ್ಲಿ ಒಂದೊಂದು ಶೈವಾಗಮಕ್ಕೂ ಒಂದರಿಂದ ಹಿಡಿದು ಹದಿನಾರರವರೆಗೆ ಉಪಾಗಮಗಳು ಪರಂಪರೆಯಲ್ಲಿ ಪರಿಗಣಿತವಾಗಿವೆ. ಅವುಗಳ ಒಟ್ಟು ಸಂಖ್ಯೆ ಇನ್ನೂರ ಎಂಟು. ಅದೇ ಪರಿಗಣನೆಯಲ್ಲಿ ಒಂದೊಂದು ಆಗಮದ ಶ್ಲೋಕಸಂಖ್ಯೆಯೂ ಉಕ್ತವಾಗಿದೆ. (ತೌರವಾಗಮ, ಪೀಠಿಕೆ) ಇವುಗಳಿಂದ ಶೈವಾಗಮಗಳ ವಾಙ್ಮಯವು ಅತ್ಯಂತ ವಿಪುಲವಾಗಿತ್ತು ಎಂಬುದು ವ್ಯಕ್ತವಾಗುತ್ತದೆ.

ಶೈವಾಗಮಗಳ ಉಪಲಬ್ಧಿ-ಅನುಪಲಬ್ಧಿ ವಿಚಾರ:

ಶೈವಾಗಮಗಳಲ್ಲಿ ಕೆಲವು ಪ್ರಧಾನ ಆಗಮಗಳು ಮತ್ತು ಉಪಾಗಮಗಳು ಉಪಲಬ್ಧವಾಗಿವೆ. ಅವೂ ಕೂಡ ಸಮಗ್ರವಾಗಿ ದೊರೆಯುವುದಿಲ್ಲ. ಪ್ರಧಾನ ಆಗಮಗಳಲ್ಲಾಗಲಿ, ಉಪಾಗಮಗಳಲ್ಲಾಗಲಿ ಕ್ರಿಯಾಪಾದ, ಚರ್ಯಾಪಾದ, ಯೋಗಪಾದ ಮತ್ತು ಜ್ಞಾನಪಾದವೆಂದು ನಾಲ್ಕು ನಾಲ್ಕು ಪಾದಗಳಿರುತ್ತವೆ. ಉಪಲಬ್ಧವಾದ ಕೆಲವು ಆಗಮಗಳಲ್ಲಿ ನಾಲ್ಕೂ ಪಾದಗಳು ದೊರೆಯುವುದಿಲ್ಲ. ಇನ್ನೊಂದು ವಿಚಾರವೆಂದರೆ, ಆಗಮಗಳು ಪೂರ್ವ ಮತ್ತು ಉತ್ತರವೆಂದು ಎರಡೆರಡು ಭಾಗಗಳನ್ನು ಹೊಂದಿವೆ. ಪೂರ್ವಭಾಗದಲ್ಲಿ ಸಾಮಾನ್ಯಶೈವ ಮತ್ತು ಉತ್ತರ ಭಾಗದಲ್ಲಿ ವೀರಶೈವ ವಿಚಾರಗಳು ಹೇಳಲ್ಪಟ್ಟಿವೆ. ಸಿದ್ಧಾಂತ ಶಿಖಾಮಣಿ, ಶ್ರೀಕರ ಭಾಷ್ಯ ಹಾಗೂ ಬಸವಣ್ಣ, ಚನ್ನಬಸವಣ್ಣ ಮುಂತಾದ ಶರಣರ ವಚನಗಳಲ್ಲಿ ಉಲ್ಲೇಖಿಸಲ್ಪಟ್ಟ ಆಗಮೋಕ್ತಿಗಳು ನಮಗೆ ಪ್ರತಿ ಆಗಮದಲ್ಲಿ ವೀರಶೈವಪರವಾದ ಭಾಗಗಳು ಇದ್ದವೆಂಬುದಕ್ಕೆ ಸಾಕ್ಷಿಯಾಗಿವೆ. ಸಿದ್ಧಾಂತ ಶಿಖಾಮಣಿಯಂತೂ ಸ್ಪಷ್ಟವಾಗಿ ಹೇಳುತ್ತದೆ:

> **ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ ।**
> **ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್ ॥**
>
> (ಸಿ.ಶಿ. ೫.೧೪)

ಆದರೆ ಕೆಲವು ಆಗಮಗಳ ಪೂರ್ವಭಾಗ ಮಾತ್ರ ಮತ್ತೆ ಕೆಲವು ಆಗಮಗಳ ಉತ್ತರಭಾಗ ಮಾತ್ರ ಉಪಲಬ್ಧವಾಗಿವೆ. ಉಪಲಬ್ಧವಾದ ಆಗಮಗಳಲ್ಲಿ ಕೆಲವು ಪ್ರಕಟಿತವಾಗಿವೆ. ಇನ್ನೂ ಕೆಲವು ಅಪ್ರಕಟಿತ ಆಗಮಗಳ ಹಸ್ತಪ್ರತಿಗಳು ಪ್ರಾಚ್ಯಹಸ್ತಪ್ರತಿ ಸಂಗ್ರಹಾಲಯಗಳಲ್ಲಿ ದೊರೆಯುತ್ತವೆ. ಮುಂದೆ ಶೈವಾಗಮಗಳ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

ಪ್ರಸ್ತುತ ಪ್ರಕಟಿತ ಹಾಗೂ ಇತರ ಆಗಮಗಳ ಪಟ್ಟಿಯನ್ನು ಕೆಲವು ವಿವರಗಳೊಂದಿಗೆ ಇದೇ ಲೇಖಕರ "ಶೈವಾಗಮಗಳು : ಒಂದು ಅಧ್ಯಯನ" ಎಂಬ ಪುಸ್ತಿಕೆಯಲ್ಲಿ ೧೦ನೇ ಪುಟದಿಂದ ೨೪ನೇ ಪುಟದವರೆಗಿನ ಭಾಗದಲ್ಲಿ ಕೊಟ್ಟಿದೆ. ಆಸಕ್ತರಾದವರು ಅಲ್ಲಿ ನೋಡಬಹುದು.

ಶೈವಾಗಮಗಳ ವಿಷಯಗಳು :

ಶೈವಾಗಮಗಳಲ್ಲಿ ದೇವಸ್ಥಾನಗಳ ನಿರ್ಮಾಣ, ಶೈವ ಪರಂಪರೆಯ ಮೂರ್ತಿಗಳ ರಚನೆ, ಆ ಮೂರ್ತಿಗಳ ಪ್ರತಿಷ್ಠೆ, ಪೂಜಾವಿಧಾನಗಳ ವಿವರಗಳಲ್ಲದೆ ಅನೇಕ ಶೈವಭೇದಗಳ ಆಚಾರ-ವಿಚಾರ ಮತ್ತು ತಾತ್ತ್ವಿಕ ಪರಿಕಲ್ಪನೆಗಳು ನಿರೂಪಿಸಲ್ಪಟ್ಟಿವೆ. ತದನುಗುಣವಾಗಿ ಅವುಗಳ ವಿಷಯ ವಿಭಾಗವು ಈ ಮೊದಲೇ ಹೇಳಿದಂತೆ ಕ್ರಿಯಾಪಾದ, ಚರ್ಯಾಪಾದ, ಯೋಗಪಾದ ಮತ್ತು ಜ್ಞಾನಪಾದವೆಂಬ ವ್ಯವಸ್ಥೆಯನ್ನು ಆಧರಿಸಿದೆ. ಮೊದಲನೆಯದಾದ ಕ್ರಿಯಾಪಾದದಲ್ಲಿ ದೇವಾಲಯಗಳು, ಉಪಾಸ್ಯಮೂರ್ತಿಗಳು ಮತ್ತು ಉಪಾಸನಾವಸ್ತುಗಳ ನಿರ್ಮಾಣ, ಪ್ರತಿಷ್ಠೆ ಮತ್ತು ರಚನೆಗಳ ನಿರೂಪಣೆಯಿರುತ್ತದೆ. ಚರ್ಯಾಪಾದದಲ್ಲಿ ಶೈವರ ನಿತ್ಯ-ನೈಮಿತ್ತಿಕವಾದ ಆಚರಣೆಗಳು, ಅಂದರೆ ಶೌಚ-ಆಚಮನಾದಿ ನಿತ್ಯಕರ್ಮಕಲಾಪಗಳು ಮತ್ತು ಭುಕ್ತಿ-ಮುಕ್ತಿ ಸಾಧನ ಭೂತವಾದ ಶಿವಾರ್ಚನೆ, ಅಗ್ನಿಕಾರ್ಯ, ಅರ್ಚನಾಂಗ-ನಿತ್ಯೋತ್ಸವ, ನೈಮಿತ್ತಿಕ ಮಹೋತ್ಸವ, ಸ್ನಪನ, ವಿಶೇಷಪೂಜೆ, ವ್ರತ ಮುಂತಾದವುಗಳ ವಿವರಗಳು ಬರುತ್ತವೆ. ಯೋಗಪಾದದಲ್ಲಿ ಪ್ರಾಣಾಯಾಮ, ಧ್ಯಾನ, ಧಾರಣ, ಸಮಾಧಿ ಮುಂತಾದ ಯೋಗಸಾಧನೆಯ ಮಾರ್ಗಗಳ ವಿವರಣೆ ಬರುತ್ತದೆ. ಜ್ಞಾನಪಾದದಲ್ಲಿ ಶೈವದರ್ಶನಗಳ ಪರಿಕಲ್ಪನೆಗಳು ಮತ್ತು ತತ್ತ್ವವಿಚಾರಗಳ ವಿವೇಚನೆಯಿರುತ್ತದೆ.

೧. ದೇವಾಲಯ ನಿರ್ಮಾಣ, ಮೂರ್ತಿ ರಚನೆ ಮತ್ತು ಪ್ರತಿಷ್ಠೆ:

ಶೈವಾಗಮಗಳಲ್ಲಿ ದೇವಾಲಯ ನಿರ್ಮಾಣ ಮತ್ತು ಪ್ರತಿಮೆಗಳ ರಚನೆಯ ವಿವರಗಳು ಸಮಗ್ರವಾಗಿ ದೊರೆಯುವುದಿಲ್ಲ. ಆದರೆ ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದ ಈ ವಿಷಯಗಳ ಮುಖ್ಯಾಂಶಗಳು, ಅಂದರೆ ದೇವಮಂದಿರ ನಿರ್ಮಾಣಕ್ಕೆ ಸ್ಥಲಪರೀಕ್ಷೆ, ಶಿವಲಿಂಗ ಮತ್ತು ಇತರ ಪ್ರತಿಮೆಗಳ ಸ್ಥಾಪನೆಗೆ ಯೋಗ್ಯ ಸ್ಥಲ, ಮೂರ್ತಿಗಳ ಭೇದ-ಸ್ವರೂಪ-ಲಕ್ಷಣಗಳ ವಿವರಣೆ, ಮುಂತಾದವು ಅವುಗಳಲ್ಲಿ ಬಂದಿವೆ. ಉದಾಹರಣೆಗೆ ಅಜಿತಾಗಮದ ಕ್ರಿಯಾಪಾದ ಏಳನೆ ಪಟಲದಿಂದ ಹದಿನೆಂಟನೆಯ ಪಟಲದವರೆಗೆ ದೇವಾಲಯ ನಿರ್ಮಾಣಕ್ಕೆ ಸ್ಥಲಪರೀಕ್ಷೆ ಮತ್ತು ತತ್‌ಸಂಬದ್ಧವಾದ ವಿಷಯಗಳಿವೆ. ಪೂರ್ವಕಾರಣಾಗಮದ ವಾಸ್ತುವಿನ್ಯಾಸ, ಆದ್ಯೇಷ್ಟಕಾ, ಅಧಿಷ್ಠಾನ, ಗರ್ಭನ್ಯಾಸ, ಪ್ರಾಸಾದಲಕ್ಷಣ, ಪ್ರಾಕಾರಲಕ್ಷಣ, ಲಿಂಗಲಕ್ಷಣ, ಮೂರ್ಧ್ನೇಷ್ಟಕಾ, ಪ್ರತಿಮಾಲಕ್ಷಣ ಎಂಬ ಒಂಬತ್ತು ಪಟಲಗಳು (೩ನೇ ಪಟಲದಿಂದ ೧೧ ನೇ ಪಟಲದವರೆಗೆ) ದೇವಾಲಯ ನಿರ್ಮಾಣ, ಲಿಂಗಲಕ್ಷಣ, ಪ್ರತಿಮಾ ರಚನೆ, ಪ್ರತಿಷ್ಠೆ ಮುಂತಾದ ವಿಷಯಗಳನ್ನು ನಿರೂಪಿಸುತ್ತವೆ.

ದೇವಾಲಯ ಮುಂತಾದವುಗಳ ನಿರ್ಮಾಣಕ್ಕೆ ಯೋಗ್ಯವಾದ ಭೂಮಿಯನ್ನು

ನಿರ್ಧರಿಸುವುದಕ್ಕಾಗಿ ಅನೇಕ ಭೂಪರೀಕ್ಷಾವಿಧಾನಗಳು ಹೇಳಲ್ಪಟ್ಟಿವೆ. ಉದಾಹರಣೆಗೆ, ಮಂಡಿಯವರೆಗಿನ ಆಳಕ್ಕೆ ಅಗೆದು ಗುಂಡಿ ಮಾಡಿ ಅದರಲ್ಲಿ ಸೂರ್ಯಾಸ್ತವಾದ ಮೇಲೆ ನೀರನ್ನು ತುಂಬಿಸಬೇಕು. ಬೆಳಿಗ್ಗೆ ಎದ್ದು ನೋಡಬೇಕು. ನೀರು ಇನ್ನೂ ಇದ್ದರೆ ಉತ್ತಮ ಭೂಮಿ, ಬರಿ ಕೆಸರಾಗಿದ್ದರೆ ಮಧ್ಯಮ ಮತ್ತು ಒಣಗಿದ್ದರೆ ಅಧಮ. ಅಥವಾ ಗುಂಡಿಯಲ್ಲಿ ನೀರನ್ನು ತುಂಬಿಸುವಾಗ ಹೂವುಗಳನ್ನು ತುಂಬಿಸಬೇಕು. ಮಣ್ಣಿನಿಂದ ತುಂಬಿ ಪುಷ್ಪವೊಂದನ್ನು ಮೇಲ್ಮುಖವಾಗಿ ನಿಲ್ಲಿಸಬೇಕು. ಬೆಳಿಗ್ಗೆ ನೋಡಿದಾಗ ಹೂವು ಬಲಗಡೆಗೆ ಹೊರಳಿದ್ದರೆ ಉತ್ತಮ ಭೂಮಿ, ಅಧೋಮುಖವಾಗಿದ್ದರೆ ಪ್ರಶಸ್ತವಲ್ಲ. ಅಥವಾ ಗುಂಡಿಯಲ್ಲಿ ಮಣ್ಣುತುಂಬಿ ಎಳ್ಳು ಅಥವಾ ಉದ್ದನ್ನು ಬಿತ್ತಿ ನೀರುಣಿಸಬೇಕು. ಮೂರು ರಾತ್ರಿಗಳಲ್ಲಿ ಮೊಳಕೆಯೊಡೆದರೆ ಆ ಭೂಮಿಯು ಉತ್ತಮ, ಐದು ರಾತ್ರಿಗಳಲ್ಲಿ ಹಾಗಾದರೆ ಮಧ್ಯಮ ಮತ್ತು ಏಳುರಾತ್ರಿಗಳಲ್ಲಿ ಆದರೆ ಅಧಮ. ಉತ್ತಮ ಭೂಮಿಯನ್ನು ಆಯ್ದುಕೊಳ್ಳಬೇಕು. ಸುಲಗ್ನದಲ್ಲಿ ಬಲಿಯನ್ನು ಕೊಟ್ಟು ಪ್ರವೇಶಿಸಬೇಕು. ಆ ಭೂಮಿಯನ್ನು ಗೋಮಯದಿಂದ ಬಳಿದು ಬ್ರಾಹ್ಮಣರಿಗೆ ಊಟಮಾಡಿಸಬೇಕು. ಪುಣ್ಯಾಹ ಮುಂತಾದವುಗಳನ್ನು ಆಚರಿಸಿ ಮುಂದಿನ ಕಾರ್ಯಗಳನ್ನು ಕೈಗೊಳ್ಳಬೇಕು. (ಶಿವಾಗಮ ಸಿದ್ಧಾಂತಶೇಖರ, ಮೈಸೂರು, ೧೯೭೧, ಶ್ಲೋಕ ೧-೧೩, ಪು. ೩೫೭-೫೮).

ಅನಂತರ ಕರ್ಷಣ (ಉಳುವ) ವಿಧಿ. ಅದಕ್ಕೆ ಉತ್ತರಾಯಣ ಶ್ರೇಷ್ಠ. ಅವಸರವಿದ್ದರೆ ದಕ್ಷಿಣಾಯನದಲ್ಲಿಯೂ ಮಾಡಬಹುದು. ಶುಕ್ಲಪಕ್ಷದ ಶುಭದಿವಸದಲ್ಲಿ ಸರ್ವಲಕ್ಷಣಸಂಪನ್ನವಾದ ಬಿಳಿಯ ತರುಣ ಹೋರಿಗಳನ್ನು ಬೆಲ್ಲ-ಹಾಲಿನಿಂದ ಸಂತೃಪ್ತಗೊಳಿಸಿ ಅವುಗಳ ಮೂಲಕ ನೇಗಲಿನಿಂದ ಆ ಭೂಮಿಯನ್ನು ಊಳಿಸಬೇಕು. ಹದಗೊಳಿಸಿದ ಭೂಮಿಯಲ್ಲಿ ಎಳ್ಳು, ಉದ್ದು, ಅವರೆ ಬೀಜಗಳನ್ನು ಬಿತ್ತಿಸಬೇಕು. ಮೊಳಕೆಯೊಡೆದು ಸ್ವಲ್ಪ ಬೆಳೆದ ಸಸ್ಯಗಳನ್ನು ಗೋ ಸಮೂಹಕ್ಕೆ ನಿವೇದಿಸಬೇಕು. ಕರುಗಳೊದಿಗೆ ಗೋವುಗಳು ತಿಂದು ತೃಪ್ತವಾಗಿ ಗೋಮಯ-ಗೋಮೂತ್ರಗಳನ್ನು ವಿಸರ್ಜಿಸಿದಾಗಿ ಭೂಮಿಯು ಶುದ್ಧವಾಗುತ್ತದೆ. ಆ ಭೂಮಿಯಲ್ಲಿ ಶಂಕುಸ್ಥಾಪನೆಯನ್ನು ಮಾಡಬೇಕು.

ಶಂಕು (ಗೂಟ)ಗಳನ್ನು ಕಗ್ಗಲಿ (ಪಿಪ್ಪಲ), ಆಲದ (ಖದಿರ) ಅಥವಾ ಅತ್ತಿ (ಉದುಂಬರ) ಮರದ ಶಾಖೆಗಳಿಂದ ತಯಾರಿಸಬೇಕು. ಚತುರ್ಭುಜಾಕಾರದ ಸಮನಾದ ಕ್ಷೇತ್ರದ ಮಧ್ಯದಲ್ಲಿ ಶಂಕುವನ್ನು ನೆಡಬೇಕು. ಆ ಶಂಕುವಿನ ಮೂಲದಲ್ಲಿ ಅದರ ಅಳತೆ ಸುತ್ತಲೂ ವೃತ್ತವನ್ನು ರಚಿಸಬೇಕು. ಶಂಕುವಿನ ಉದ್ದದಷ್ಟು ಇನ್ನೊಂದು ವೃತ್ತವನ್ನು ಎಳೆಯಬೇಕು. ಅದರ ಎರಡರಷ್ಟು ಉದ್ದಕ್ಕೆ ಮೂರನೆಯ ವೃತ್ತ ಮತ್ತು ಮೂರರಷ್ಟು ಉದ್ದಕ್ಕೆ ನಾಲ್ಕನೆಯ ವೃತ್ತ ಹೀಗೆ ನಾಲ್ಕು ವೃತ್ತಗಳನ್ನು ಗುರುತಿಸಬೇಕು. ಅನಂತರ ಶಂಕುವನ್ನು ಗಂಧ-ಪುಷ್ಪಾದಿಗಳಿಂದ ಪೂಜಿಸಬೇಕು. ಅನಂತರ ಆ ಶಂಕುವಿನಿಂದ ಪೂರ್ವಾಹ್ನ

ಮತ್ತು ಅಪರಾಹ್ನಗಳಲ್ಲಿ ಮೂಡುವ ನೆರಳನ್ನು ಅನುಸರಿಸಿ ಪೂರ್ವದಲ್ಲಿ ಮೂರು ಗುರುತುಗಳನ್ನೂ, ಪಶ್ಚಿಮದಲ್ಲಿ ಮೂರು ಗುರುತುಗಳನ್ನೂ ಮಾಡಿರಬೇಕು. ಮೂರು ವೃತ್ತಗಳಲ್ಲಿ ೧೨ (ದ್ವಿಷಟ್) ಬಿಂದುರೂಪದ ಗುರುತುಗಳನ್ನು ಮಾಡಿಕೊಂಡು ಶಂಕುವನ್ನು ತೆಗೆದುಹಾಕಬೇಕು. ಮೊದಲ ವೃತ್ತದಲ್ಲಿ ಎರಡು ಬಿಂದುಗಳ ಮಧ್ಯದಲ್ಲಿ ದಾರವನ್ನು ಕಟ್ಟಿ ಅದನ್ನು ಎರಡನೆ ಮತ್ತು ಮೂರನೆ ವೃತ್ತಗಳಿಗೆ ನೇರವಾಗಿ ವಿಸ್ತರಿಸಬೇಕು. ಅದರ ಅಕ್ಕ-ಪಕ್ಕ ಎರಡು ಬಿಂದುಗಳ ಮಧ್ಯದಿಂದಲೇ ದಾರವನ್ನು ಮೂರು ವೃತ್ತಗಳಿಗೂ ವಿಸ್ತರಿಸಬೇಕು. ಹೀಗೆ ಮೂರು ದಾರಗಳು ಸಿದ್ಧವಾದ ಮೇಲೆ, ಅಕ್ಕ-ಪಕ್ಕದ ಎರಡು ದಾರಗಳನ್ನು ಬಿಟ್ಟು ಮಧ್ಯದ ದಾರವನ್ನು ಹಿಡಿದು ಶುದ್ಧ ಪೂರ್ವದಿಕ್ಕನ್ನು ಗುರುತಿಸಬೇಕು. ಹೀಗೆ ದಾರಗಳ ಸಹಾಯದಿಂದ ಚತುರ್ಭುಜ ಚತುಷ್ಕೋಣ ಕ್ಷೇತ್ರವನ್ನು ಗುರುತಿಸಬೇಕು. (ಶಿವಾಗಮ ಸಿದ್ಧಾಂತಶೇಖರ, ಪು. ೩೫೯-೬೦ ಶ್ಲೋಕ ೨೪-೨೭; ಪು. ೩೬೧ ಶ್ಲೋಕ ೪೨-೪೩; ಪು.೩೬೨, ಶ್ಲೋಕ ೪೬-೫೦) ನಾಲ್ಕು ಮೂಲೆಗಳಲ್ಲಿಯೂ ನಾಲ್ಕು ಶಿಲೆಗಳನ್ನು ನೆಡಬೇಕು. ದೇವಾಲಯಾದಿಗಳ ನಿರ್ಮಾಣಕ್ಕೆ ಗಜ, ಒಂಟೆ, ಖರ, ಸಿಂಹ, ವೃಷ, ಧ್ವಜ, ಧೂಮ ಮತ್ತು ಶ್ವಾನ ಎಂಬ ಎಂಟು ವಿಧವಾದ ಆಯಗಳನ್ನು ಗುರುತಿಸಬೇಕು. ನಿರ್ದಿಷ್ಟ ಅಳತೆಯನ್ನು ಮೀರಿದ ಪ್ರಾಸಾದಾದಿಗಳ ವಿಷಯದಲ್ಲಿ ಆಯದ ವಿವೇಚನೆ ಮಾಡಬೇಕಾಗಿಲ್ಲವೆಂದು ಆಗಮಗಳು ತಿಳಿಸುತ್ತವೆ. (ಶಿವಾಗಮ-ಸಿದ್ಧಾಂತಶೇಖರ, ಪು.೩೬೩ ಶ್ಲೋಕ ೬೩-೬೯)

ದೇವತಾಮೂರ್ತಿಗಳು:

ಶೈವಾಗಮಗಳ ಪ್ರತಿಮಾಲಕ್ಷಣ ಪಟಲಗಳಲ್ಲಿ ಎಲ್ಲಾ ಮೂರ್ತಿಗಳ ಲಕ್ಷಣಗಳನ್ನು ಕುರಿತ ವರ್ಣನೆಗಳು ಹೃದಯಂಗಮವಾಗಿವೆ. ಒಂದೊಂದು ದೇವಾತಾಮೂರ್ತಿಯ ತತ್ತ್ವದ ಮೂಲ ಸಂಕೇತ, ಕೈಯಲ್ಲಿ ಧರಿಸಿರುವ ಆಯುಧವಿಶೇಷಗಳು, ಅವುಗಳನ್ನು ಹಿಡಿದ ಕಾರಣಗಳು, ಸಮಭಂಗಿ, ದ್ವಿಭಂಗಿ-ತ್ರಿಭಂಗಿ ಮೊದಲಾದ ಅಂಗವಿನ್ಯಾಸ ವೈಖರಿಗಳು, ಇವೆಲ್ಲವೂ ಸವಿವರಾಗಿ ನಿರೂಪಿಸಲ್ಪಟ್ಟಿವೆ. ಉದಾಹರಣೆಗೆ ಶಿವನ ಮೂರ್ತಿಗಳಲ್ಲಿ ಸೃಷ್ಟಿಮೂರ್ತಿ, ಸ್ಥಿತಿಮೂರ್ತಿ, ಸಂಹಾರಮೂರ್ತಿ, ತಿರೋಧಾನಮೂರ್ತಿ ಮತ್ತು ಅನುಗ್ರಹಮೂರ್ತಿಗಳೆಂದು ಐದು ವಿಧವಾದ ಮೂರ್ತಿಗಳಿವೆ. ಶಕ್ತಿಯ ಮೂರ್ತಿಗಳಲ್ಲಿ ದ್ವಿಭಂಗಿ-ತ್ರಿಭಂಗಿಗಳ ವರ್ಣನೆಯಿದೆ. ಶಿವಲಿಂಗ ಲಕ್ಷಣದಲ್ಲಿ ಸ್ಥಿತಲಿಂಗ, ಆಸೀನಲಿಂಗ, ಶಯನಲಿಂಗಗಳೆಂಬ ಮೂರು ಪ್ರಕಾರಗಳ ವರ್ಣನೆಯಿದೆ. ಆಯಾಯ ಲಿಂಗಗಳಿಗೆ ಆಧಾರವಾಗಿರುವ ಚತುರಸ್ರ (ಚತುರ್ಭುಜ), ಅಷ್ಟಾಸ್ರ (ಅಷ್ಟಭುಜ), ವೃತ್ತಾಕಾರ ಪೀಠಗಳಿಂದ ಈ ಮೂರು ಪ್ರಕಾರಗಳನ್ನು ತಿಳಿಯಬಹುದು. ಇದಲ್ಲದೆ ಬೇರೆ ಬೇರೆ ದೃಷ್ಟಿಯಿಂದ ಲಿಂಗಗಳ ಪ್ರಕಾರಗಳು ವರ್ಣಿಸಲ್ಪಟ್ಟಿವೆ. (ಶಿವಾಗಮ ಸಿದ್ಧಾಂತ ಶೇಖರ, ಪು. ೪೨೮-೪೩೭). ಶಿವನ ಪಂಚವಿಂಶತಿ (೨೫) ಲೀಲೆಗಳನ್ನು ಬಿಂಬಿಸುವ ಮೂರ್ತಿಗಳು

ಶೈವಾಗಮಗಳಲ್ಲಿ ವರ್ಣಿಸಲ್ಪಟ್ಟಿವೆ. (ಸೂಕ್ಷ್ಮಾಗಮ, ಪಟಲ ೨ ಶ್ಲೋಕ ೬-೬೧: ಲೀಲೆಗಳನ್ನು ಕಾರಣಗಳೂ ವರ್ಣಿಸಲ್ಪಟ್ಟಿವೆ).

ದೇವಾಲಯಗಳನ್ನು ಮತ್ತು ಪ್ರತಿಮೆಗಳನ್ನು ಮಾಡಲು ಉಪಯೋಗಿಸಬೇಕಾದ ಶಿಲೆಯ ಲಕ್ಷಣಗಳನ್ನು ಶೈವಾಗಮಗಳು ವರ್ಣಿಸುತ್ತವೆ. ಶಿಲೆಯಲ್ಲಿ ಸ್ತ್ರೀ, ಪುಮ್, ನಪುಂಸಕವೆಂದು ಮೂರು ವಿಧ. ಸ್ತ್ರೀಶಿಲೆಯು ತಾಳದ ನಾದದಂತಹ ಧ್ವನಿಯುಳ್ಳದ್ದು. ಅದರಲ್ಲಿ ತರುಣಿ ಸ್ತ್ರೀಶಿಲೆಯ ಧ್ವನಿಯು ತಾಳದ ನಾದದಂತೆ; ಬಾಲೆಯೆಂಬ ಸ್ತ್ರೀಶಿಲೆಯು ಅಲ್ಪಧ್ವನಿಯುಳ್ಳದ್ದು; ವೃದ್ಧಾಸ್ತ್ರೀ ಶಿಲೆಯು ದೀರ್ಘಸ್ವರವುಳ್ಳದ್ದು. ತರುಣೀಸ್ತ್ರೀ ಶಿಲೆಯನ್ನು ಸ್ತ್ರೀಪ್ರತಿಮೆಗಳಿಗೆ ಬಳಸಬೇಕು. ಘಂಟೆಯ ನಾದದಂತೆ ಧ್ವನಿಯುಳ್ಳದ್ದು ಪುಂಶಿಲೆ. ಧ್ವನಿಹೀನವಾದದ್ದು ನಪುಂಸಕ ಶಿಲೆ. ಇವುಗಳಲ್ಲಿ ಲಿಂಗ ಮತ್ತು ಪುರುಷ ದೇವತಾ ಪ್ರತಿಮೆಗಳನ್ನು ಪುಂಶಿಲೆಯಿಂದ ಮಾಡಬೇಕು. ಲಿಂಗದ ಪೂಠವನ್ನು ಮತ್ತು ಸ್ತ್ರೀದೇವತಾ ಮೂರ್ತಿಗಳನ್ನು ಸ್ತ್ರೀಶಿಲೆಯಿಂದ ಮಾಡಬೇಕು. (ಸಿದ್ಧಾಂತಶೇಖರ, ಪು.೪೪೧, ಶ್ಲೋಕ ೧೨೦-೧೨೭). ಈ ನಿಯಮಗಳನ್ನು ಮೀರಿ ಮಾಡಿದ ಲಿಂಗ ಮತ್ತು ಇತರ ಪ್ರತಿಮೆಗಳಲ್ಲಿ ದೇವತಾಕಳೆ ನೆಲೆಗೊಳ್ಳುವುದಿಲ್ಲ. ಕಳೆಯಿಲ್ಲದ ಪ್ರತಿಮೆಯು ಪೂಜೆಗೆ ಅರ್ಹವಲ್ಲ.

ಶೈವಾಗಮಗಳಲ್ಲಿ ಪ್ರತಿಷ್ಠೆಯ ವಿವರಗಳಿಂದ ತಿಳಿದುಬರುವಂತೆ ದೊರೆಯುವ ಮೂರ್ತಿಗಳ ಸಂಖ್ಯೆ ಅಪಾರ. ಲಿಂಗವನ್ನು ಬಿಟ್ಟು ಉಳಿದ ಮೂರ್ತಿಗಳು ವೃಷಭ, ಸದಾಶಿವ, ದೇವಿ, ವಿಘ್ನೇಶ, ನೃತ್ಯಮೂರ್ತಿ, ಸ್ಕಂದ, ಚಂದ್ರಶೇಖರ, ಪುರಾರಿ, ಲಿಂಗೋದ್ಭವ, ದಕ್ಷಿಣಾಮೂರ್ತಿ, ಭಿಕ್ಷಾಟನ ಮೂರ್ತಿ, ಶರಭೇಶ, ಚಂಡೇಶ, ವೃಷಾರೂಢ, ಗಂಗಾಧರ, ಗುರು, ಪಾಶುಪತ, ಅರ್ಧನಾರೀಶ್ವರ, ಕಂಕಾಳ, ಗಜಸಂಹಾರ, ಕಾಲನಿಗ್ರಹ, ಗೌರೀ, ಉಮಾ, ಹರಿ, ಲಕ್ಷ್ಮೀ, ಮೋಹಿನೀ, ನಟೇಶ, ವೀರಭದ್ರ, ವಿಷಾಪಹರಣ, ಏಕಪಾದ ತ್ರಿಮೂರ್ತಿ, ಉಮಾ-ಮಹೇಶ್ವರ, ದುರ್ಗಾ ಇತ್ಯಾದಿ.

ಲಿಂಗದ ಪ್ರಭೇದಗಳು:

ಶೈವಾಗಮಗಳಲ್ಲಿ ಪ್ರಧಾನವಾಗಿ ವರ್ಣಿಸಲ್ಪಡುವ ಮೂರ್ತಿಯೆಂದರೆ ಶಿವಲಿಂಗ. ಲಿಂಗವು ಅಚಲ ಮತ್ತು ಚಲ ಎಂದು ಎರಡು ವಿಧ. ಅವೆರಡರಲ್ಲಿ ಒಂದೊಂದು ವ್ಯಕ್ತ, ಅವ್ಯಕ್ತ ಮತ್ತು ಉಭಯಾತ್ಮಕ (ವ್ಯಕ್ತಾವ್ಯಕ್ತ) ವೆಂದು ಮೂರು ವಿಧ. ದೇವಾಲಯದಲ್ಲಿ ಸ್ಥಾಪಿತವಾದದ್ದು ಅಚಲ; ಅದು ಶಿಲೆ ಮುಂತಾದವುಗಳಿಂದ ಮಾಡಲ್ಪಟ್ಟದ್ದು. ಮನೆಯಲ್ಲಿ ಸ್ಥಾಪಿಸಲ್ಪಟ್ಟುದು ಚಲಲಿಂಗ. ಅಚಲ ಲಿಂಗವು ಸ್ವಯಂಭೂ, ದೈವ, ಬಾಣಕ, ಆರ್ಷ ಮತ್ತು ಮಾನುಷವೆಂದು ಐದು ವಿಧ.(ಅಜಿತಾಗಮ, ಪಟಲ೪; ಸುಪ್ರಭೇದಾಗಮ, ಕ್ರಿ.ಪಾ., ಪಟಲ೩೩; ಕಾರಣ ಪೂರ್ವಭಾಗ, ಪಟಲ೯; ಕಾಮಿಕಾಗಮ (ಪೂರ್ವ), ಕ್ರಿ.ಪಾ. ಪಟಲ ೬೨). ಇವುಗಳಲ್ಲಿ ಮಾನುಷಲಿಂಗವು ರತ್ನಜ, ಲೋಹಜ,

ಧಾತುಜ, ಮೃಣ್ಮಯ, ವಾರ್ಕ್ಷ, ಶೈಲ ಎಂದು ಅನೇಕ ವಿಧ. ಇವೆಲ್ಲವುಗಳ ಲಕ್ಷಣ ವರ್ಣನೆಗಳು ಶೈವಾಗಮಗಳಲ್ಲಿ ವಿಸ್ತಾರವಾಗಿ ಬಂದಿವೆ. (ಸುಪ್ರಭೇದಾಗಮ, ಕ್ರಿ.ಪಾ. ಪಟಲ ೩೩; ಕಾಮಿಕಾಗಮ ಪೂವ, ಕ್ರಿ.ಪಾ. ಪಟಲ ೬೨).

೨. ಉಪಾಸನೆ ಮತ್ತು ಉತ್ಸವಾದಿಗಳು:

ಉಪಲಬ್ಧವಾದ ಶೈವಾಗಮ ಪೂರ್ವಭಾಗಗಳಲ್ಲಿ ಲಿಂಗಾದಿಗಳ ಪ್ರತಿಷ್ಠೆಯ ವಿಷಯವಲ್ಲದೆ ಅವುಗಳ ವಿವಿಧ ಉಪಚಾರ, ಪೂಜೆ ಮತ್ತು ಉತ್ಸವಗಳ ವಿವರಗಳು ಬರುತ್ತವೆ. ಪ್ರಸ್ತುತ ಅವುಗಳನ್ನು ಹೆಸರಿಸಲಾಗಿದೆ: ವಿವಿಧೋಪಚಾರ ಪೂಜೆ, ಪಂಚಾಮೃತಾಭಿಷೇಕ, ನಿತ್ಯಾರ್ಚನ, ನೈವೇದ್ಯ, ಪುಣ್ಯಾಹ, ವಿವಿಧ ಸ್ನಾನಗಳು, ಏಕಾದಶ ರುದ್ರಾಭಿಷೇಕ, ತೈಲಾಭ್ಯಂಗ, ಜಲಾಧಾರಾ ಉಷ್ಣೋದಕ, ಸಹಸ್ರಧಾರಾಭಿಷೇಕ, ಧನುರ್ಮಾಸ-ಶಿವರಾತ್ರಿ-ನವರಾತ್ರಿ- ಗ್ರಹಣಾದಿಗಳ ವಿಶೇಷ ಪೂಜೆ, ಶಾಂತ್ಯಾದಿ ಹೋಮಗಳು, ಅಂಕುರಾರ್ಪಣಾದಿಗಳು. ಉತ್ಸವಗಳು: ನಿತ್ಯೋತ್ಸವ, ಮಹೋತ್ಸವ, ಅಷ್ಟಾದಶದಿನ-ಸಪ್ತವಿಂಶತಿ ದಿನ ಇತ್ಯಾದಿ ಉತ್ಸವಗಳು, ರಥೋತ್ಸವ, ಡೋಲೋತ್ಸವ, ವಸಂತೋತ್ಸವ, ವಿಶೇಷೋತ್ಸವ, ವಿವಾಹೋತ್ಸವ, ಶಕ್ತ್ಯುತ್ಸವ ಇತ್ಯಾದಿಗಳು. ಸಾಮಾನ್ಯವಾಗಿ ಪೂಜೆ ಮತ್ತು ಉತ್ಸವಗಳೆರಡೂ ನಿತ್ಯ ಮತ್ತು ನೈಮಿತ್ತಿಕವೆಂದು ಎರಡು ಬಗೆಯವು. ಮೇಲೆ ಹೆಸರಿಸಿದ ಪೂಜೆ ಮತ್ತು ಉತ್ಸವಗಳು ಈ ಎರಡು ಭೇದಗಳಲ್ಲಿ ಅಂತರ್ಗತವಾಗುತ್ತವೆ.

ಈ ಎಲ್ಲಾ ಕಾರ್ಯಗಳನ್ನು, ಅಂದರೆ ಪ್ರತಿಷ್ಠಾದಿ ಉತ್ಸವಾಂತ ಕ್ರಿಯೆಗಳನ್ನು ದೇವಸ್ಥಾನಗಳಲ್ಲಿ ನಡೆಸುವವರು ಯಾರು? ಶೈವಾಗಮಗಳಲ್ಲಿ ಈ ಪ್ರಶ್ನೆಗೆ ಉತ್ತರ ದೊರೆಯುತ್ತದೆ. ಉದಾಹರಣೆಗೆ—

ಅದೀಕ್ಷಿತೋ ನಾಧಿಕಾರೀ ಪ್ರತಿಷ್ಠಾಯಾಂ ಮಮ ಪ್ರಿಯೇ ।
ದೀಕ್ಷಿತೈರೇವ ಕರ್ತವ್ಯಂ ಪ್ರತಿಷ್ಠೇತಿ ಪ್ರತಿಶ್ರುತಮ್ ॥

(ಕಾರಣಾಗಮ, ೧೦.೬)

ದೀಕ್ಷಿತನಲ್ಲದವನು ಲಿಂಗಾದಿ ಪ್ರತಿಷ್ಠೆಗೆ ಅಧಿಕಾರಿಯಲ್ಲ. ಪ್ರತಿಷ್ಠೆಯು ದೀಕ್ಷಿತರಿಂದ ಮಾತ್ರ ಮಾಡಲ್ಪಡಬೇಕು. ವಿಶೇಷವಾಗಿ ಆಗಮಾಂತ ವೇದಾ-ಮನು-ಕ್ರಿಯೆಯೆಂಬ ಮೂರು ದೀಕ್ಷೆಗಳನ್ನು ಹೊಂದಿದ ಶುದ್ಧಶೈವರು ಪತಿಷ್ಠಾದಿಗಳಿಗೆ ಆಚಾರ್ಯತ್ವವನ್ನು ವಹಿಸುತ್ತಾರೆ. ಅಂದರೆ ಮೂರು ದೀಕ್ಷೆಗಳಿಂದ ಇಷ್ಟ, ಪ್ರಾಣ ಮತ್ತು ಭಾವಲಿಂಗ ಧಾರಣೆಯನ್ನು ಹೊಂದಿದ ವೀರಶೈವ ಶಿವಾಚಾರ್ಯರು ಪ್ರತಿಷ್ಠಾದಿ ಕಾರ್ಯಗಳಲ್ಲಿ ಆಚಾರ್ಯತ್ವ ವಹಿಸಲು ಪೂರ್ಣ ಅಧಿಕಾರವನ್ನು ಹೊಂದಿರುವವರು. ಇದು ಆಗಮೋತ್ತರ ಭಾಗಗಳ ಸಿದ್ಧಾಂತ.

೨. ಶೈವ ಹಾಗೂ ವೀರಶೈವರ ಧಾರ್ಮಿಕ ಮತ್ತು ತಾತ್ತ್ವಿಕ ವಿಚಾರಗಳು:

ಉಪಲಬ್ಧವಾದ ಶೈವಾಗಮಗಳ ಉತ್ತರ ಭಾಗಗಳಲ್ಲಿ, ಪಾಶುಪತ ಮುಂತಾದ ಉಪಾಗಮಗಳ ಸಮರ್ಥನೆಯಂತೆ, ವೀರಶೈವವು ಪ್ರತಿಪಾದಿಸಲ್ಪಟ್ಟಿದೆ. ಶ್ರೀಕರಭಾಷ್ಯ, ಕ್ರಿಯಾಸಾರ ಮುಂತಾದ ವೀರಶೈವ ಸಿದ್ಧಾಂತ ಪ್ರತಿಪಾದಕ ಗ್ರಂಥಗಳಲ್ಲಿ ಮತ್ತು ಬಸವಾದಿ ಶರಣರ ವಚನಗಳಲ್ಲಿ ಉಲ್ಲೇಖಿಸಲ್ಪಟ್ಟ ಆಗಮಪ್ರಮಾಣಗಳಿಂದಲೂ ಇದು ಸಿದ್ಧವಾಗುತ್ತದೆ. ಆಗಮಗಳ ಪೂರ್ವಭಾಗಗಳಲ್ಲಿ ಸಾಮಾನ್ಯವಾಗಿ ಬೇರೆ ಶೈವಭೇದಗಳ ವಿಚಾರಗಳು ಬರುತ್ತವೆ. ಅವುಗಳ ಉತ್ತರ ಭಾಗಗಳಲ್ಲಿ ವೀರಶೈವದ ವಿಚಾರಗಳು ಬರುತ್ತವೆ. ಹೀಗೆ ಶೈವ ಮತ್ತು ವೀರಶೈವ ಧಾರ್ಮಿಕ ಹಾಗೂ ದಾರ್ಶನಿಕ ವಿಚಾರಗಳಿಗೆ ಶೈವಾಗಮಗಳೇ ಮೂಲ ಆಧಾರಗಳು. ಆದ್ದರಿಂದ ಉಪಲಬ್ಧವಾದ ಶೈವಾಗಮಗಳ ಪೂರ್ವ ಹಾಗೂ ಉತ್ತರ ಭಾಗಗಳು, ಉಪಾಗಮಗಳು, ಇತರ ಆಗಮೋಲ್ಲೇಖಿಗಳು ಮತ್ತು ಆಗಮಸಾರಸಂಗ್ರಹಗಳ ಆಧಾರದ ಮೇಲೆ ಶೈವ ಹಾಗೂ ವೀರಶೈವ ದೀಕ್ಷೆ, ಸಾಧನಮಾರ್ಗ ಮತ್ತು ತತ್ತ್ವವಿಚಾರಗಳನ್ನು ಇಲ್ಲಿ ನಿರೂಪಿಸಲಾಗಿದೆ.

ಶೈವ ಮತ್ತು ವೀರಶೈವ ದೀಕ್ಷೆ:

ಶೈವಾಗಮಗಳ ಪರಂಪರೆಯಲ್ಲಿ ಬೆಳೆದು ಬಂದ ಎಲ್ಲಾ ಶೈವಮತಗಳಲ್ಲಿ ದೀಕ್ಷೆಗೆ ಪ್ರಾಧಾನ್ಯವಿದೆ. ಆ ದೀಕ್ಷೆಯಿಂದ ಪರಾರ್ಥವಾದ ದೇವಾಲಯಸ್ಥಲಿಂಗಾದಿ ಮೂರ್ತಿಗಳ ಪೂಜೆ ಮತ್ತು ಸ್ವಾರ್ಥವಾದ ಚರಲಿಂಗ-ಇಷ್ಟಲಿಂಗಗಳ ಪೂಜೆ ಮತ್ತು ಅವುಗಳಿಂದ ಶಿವಸಾನ್ನಿಧ್ಯವನ್ನು ಹೊಂದುವ, ಮುಕ್ತಿಯನ್ನು ಪಡೆಯುವ ಅರ್ಹತೆ ಪ್ರಾಪ್ತವಾಗುತ್ತದೆ. ಶೈವದೀಕ್ಷೆಗೆ ಆಗಮದೀಕ್ಷೆಯೆಂದೂ ವೀರಶೈವದೀಕ್ಷೆಗೆ ಆಗಮಾಂತದೀಕ್ಷೆಯೆಂದೂ ಹೆಸರು. ಶೈವಾಗಮಗಳಲ್ಲಿ ಕೊಡುವ ದೀಕ್ಷಾಶಬ್ದ ನಿಷ್ಪತ್ತಿಯು ಮಾರ್ಮಿಕವಾಗಿದೆ, ಶೈವರ ಸಾಧನೆ ಮತ್ತು ಗುರಿಗಳನ್ನು ಬಿಂಬಿಸುತ್ತದೆ:

> ವಿಶಿಷ್ಟಂ ದೀಯತೇ ಜ್ಞಾನಂ ಕ್ಷೀಯತೇ ಪಾಪಸಂಚಯಃ ।
> ಮಾಯಾಕರ್ಮಮಲೋದ್ಭೂತೋ ಯಯಾ ದೀಕ್ಷೇತಿ ಸಾಸ್ಮೃತಾ ॥
> (ಸಿದ್ಧಾಂತಶೇಖರ, ಪು. ೧೪೩, ಶ್ಲೋ.೨)

ವಿಶಿಷ್ಟವಾದ ಜ್ಞಾನವನ್ನು ನೀಡುತ್ತದೆ. (ದೀ=ದೀಯತೇ) ಮತ್ತು ಮಾಯಾ ಕರ್ಮ, ಮಲಗಳಿಂದ ಉಂಟಾದ ಪಾಶಸಮುದಾಯವನ್ನು ನಾಶಮಾಡುತ್ತದೆ (ಕ್ಷಾ=ಕ್ಷೀಯತೆ) ಯಾವುದೋ ಅದು 'ದೀಕ್ಷಾ'. ವೀರಶೈವ ಪರಿಭಾಷೆಯಲ್ಲಿ ಅದರ ಅರ್ಥವನ್ನು ಆಗಮೋತ್ತರ ಭಾಗಗಳು ಹೀಗೆ ನೀಡುತ್ತವೆ:

> ದೀಯತೇ ಲಿಂಗಸಂಬಂಧಃ ಕ್ಷೀಯತೇ ಚ ಮಲತ್ರಯಮ್ ।
> ದೀಯತೇ ಕ್ಷೀಯತೇ ಯಸ್ಮಾತ್ ಸಾ ದೀಕ್ಷೇತಿ ನಿಗದ್ಯತೇ ॥
> (ಕಾರಣಾಗಮ, ಕ್ರಿ.ಪಾ. ೧.೧೨)

ಯಾವುದರಿಂದ ಲಿಂಗಸಂಬಂಧ (ಚಿತ್ಕಲಾ ರೂಪ ಲಿಂಗದ ಸಮಾವೇಶ) ಕೊಡಲ್ಪಡುತ್ತದೆಯೋ (ದೀಯತೇ) ಮತ್ತು ಯಾವುದರಿಂದ ಆಣವ, ಕಾರ್ಮಿಕ ಮತ್ತು ಮಾಯೀಯ ಮಲಗಳು ನಾಶಗೊಳಿಸಲ್ಪಡುತ್ತವೆಯೋ (ಕ್ಷೀಯತೇ) ಅದು 'ದೀಕ್ಷೆ'. ''**ಜ್ಞಾನಾದೇವ ತು ಕೈವಲ್ಯಮ್**'' ಎಂಬಂತೆ ಚಿತ್ಕಲಾತ್ಮಕ ಲಿಂಗನಿಷ್ಠೆ ಮತ್ತು ಲಿಂಗಾಂಗ ಸಾಮರಸ್ಯ (ಶಿವ-ಜೀವೈಕ್ಯ)ದ ಭಕ್ತಿತುಂದಿಲ ಜ್ಞಾನವಿಲ್ಲದೆ ಮೋಕ್ಷವಿಲ್ಲ.

ಶೈವಸಂಪ್ರದಾಯದಲ್ಲಿ ಶೈವಾಗಮೋಕ್ತ ದೀಕ್ಷೆಯು ಸಾಧಾರಾ ಮತ್ತು ಆಧಾರವರ್ಜಿತಾ ಎಂದು ಎರಡು ವಿಧ. ಮೊದಲನೆಯದೀಕ್ಷೆ ಆಚಾರ್ಯನಿಂದ ಮಂದಶಕ್ತಿ ವಿಶಿಷ್ಟರಾದ'ಸಕಲ'ರೆಂಬ ಜೀವರಿಗೆ ನೀಡಲ್ಪಡುವ ದೀಕ್ಷೆ. ಎರಡನೆಯದು ಆಚಾರ್ಯನ ಅಪೇಕ್ಷೆಯಿಲ್ಲದೆ ಶಂಕರನಿಂದಲೇ 'ವಿಜ್ಞಾನಕಲ' ಮತ್ತು 'ಪ್ರಲಯಾ ಕಲ'ರೆಂಬ ಶಕ್ತಿಪಾತ ವಿಶಿಷ್ಟರಾದ ಜೀವರಿಗೆ ಕೊಡಲ್ಪಡುವ ದೀಕ್ಷೆ. ಸಾಧಾರದೀಕ್ಷೆಯು ಸಬೀಜಾ, ಬೀಜವರ್ಜಿತಾ, ಸಾಧಿಕಾರಾ ಮತ್ತು ನಿರಧಿಕಾರಾ ಎಂದು ನಾಲ್ಕುವಿಧ. ಸಮಯಾಚಾರ ಸಂಯುಕ್ತವಾದದ್ದು ಸಬೀಜ ದೀಕ್ಷೆ. ಪ್ರಾರಬ್ಧ-ಸಂಚಿತ-ಆಗಾಮಿ ಕರ್ಮ ಜಾಲಗಳನ್ನು ಶೋಧಿಸುವ ದೀಕ್ಷೆ ಬೀಜವರ್ಜಿತದೀಕ್ಷೆ (ನಿರ್ಬೀಜ ದೀಕ್ಷೆ). ಯಾವುದರಿಂದ ನಿತ್ಯ-ನೈಮಿತ್ತಿಕ-ಕಾಮ್ಯಕರ್ಮಗಳ ಆಚರಣೆಗೆ ಅಧಿಕಾರ ದೊರೆಯುತ್ತದೆಯೋ ಅದು ಸಾಧಿಕಾರದೀಕ್ಷೆ. ಆ ಸಾಧಾರದೀಕ್ಷೆಯ ಮತ್ತೆ ಕ್ರಿಯಾವತೀ ಮತ್ತು ಜ್ಞಾನವತೀ ಎಂದು ಎರಡು ವಿಧ ಮತ್ತು ಚಾಕ್ಷುಷೀದೀಕ್ಷಾ, ಸ್ಪರ್ಶದೀಕ್ಷಾ, ಮಂತ್ರದೀಕ್ಷಾ, ಶಾಸ್ತ್ರೀದೀಕ್ಷಾ, ಯೋಗದೀಕ್ಷಾ, ಹೌತ್ರೀದೀಕ್ಷಾ ಎಂದು ಮುಂತಾಗಿ ಅನೇಕ ವಿಧ. ಗುರುವು ಶಿವತತ್ತ್ವವನ್ನು ಧ್ಯಾನಿಸುತ್ತಾ ಶಿಷ್ಯನನ್ನು ಅವನ ಪಾಶನಿರ್ಮೂಲನಕ್ಕಾಗಿ ನೆಟ್ಟದೃಷ್ಟಿಯಿಂದ ನೋಡುವುದು ಚಾಕ್ಷುಷೀದೀಕ್ಷಾ. ಬಲಗೈಯಲ್ಲಿ ಶಂಭುಲಿಂಗವನ್ನು ಧರಿಸಿ ಶಿಷ್ಯನ ಶಿರಸ್ಸಿನಲ್ಲಿಟ್ಟು ಧ್ಯಾನಿಸುವುದು ಸ್ಪರ್ಶದೀಕ್ಷಾ. ಶಿವತತ್ತ್ವವನ್ನು ಚಿತ್ತದಲ್ಲಿ ಧರಿಸಿ ಈಶ್ವರ ತೇಜಸ್ಸನ್ನು ಬೆಳಗಿಸುತ್ತಾ ಮಂತ್ರಗಳನ್ನು ಜಪಿಸುವುದು ಮಂತ್ರದೀಕ್ಷಾ. ಶಿವಶಾಸ್ತ್ರಗಳನ್ನು ಅನುಗ್ರಹಿಸುವುದು ಶಾಸ್ತ್ರೀದೀಕ್ಷೆ. ಶಿವತತ್ತ್ವವನ್ನು ಬೆಳಗಿಸುವ ಯೋಗವನ್ನು ಹೇಳಿಕೊಡುವುದು ಯೋಗದೀಕ್ಷೆ. ಅಗ್ನಿಕಾರ್ಯಯುಕ್ತವಾದ್ದು ಹೌತ್ರೀದೀಕ್ಷಾ. ಕುಂಡ-ಮಂಡಲ ಪೂರ್ವಕವಾಗಿ ನಡೆಸುವ ದೀಕ್ಷೆ ಕ್ರಿಯಾವತೀ, ಮನೋವ್ಯಾಪಾರದಿಂದ ನೆಲೆಗೊಂಡದ್ದು ಜ್ಞಾನವತೀದೀಕ್ಷಾ. (ಸಿದ್ಧಾಂತಶೇಖರ, ಪು.೧೪೩-೧೪೭, ಶ್ಲೋ ೧-೩೬).

ಶೈವಾಗಮೋತ್ತರ ಸಿದ್ಧಾಂತ ಪರಂಪರೆಯಂತೆ ವೀರಶೈವ ದೀಕ್ಷೆಯ ಮೂರು ವಿಧ: ೧. ವೇಧಾದೀಕ್ಷಾ, ೨. ಮನು (ಮಂತ್ರ) ದೀಕ್ಷಾ ಮತ್ತು ೩. ಕ್ರಿಯಾದೀಕ್ಷಾ. ಅವುಗಳ ಸ್ವರೂಪ ಹೀಗಿದೆ :

ಅಭಿವಂದನಾ

ಹಸ್ತಮಸ್ತಕ ಸಂಯೋಗಾದ್ವೃಷ್ಟೇರ್ವೇಧೇತಿ ಕೀರ್ತ್ಯತೇ ।
ಗುರುಣೋದೀರಿತಾ ಕರ್ಣೇ ಸಾಹಿ ಮಂತ್ರಾತ್ಮಿಕಾ ಭವೇತ್ ॥
ಶಿಷ್ಯಪಾಣಿತಲೇ ದತ್ತಾ ಯಾ ದೀಕ್ಷಾ ಸಾ ಕ್ರಿಯಾ ಭವೇತ್ ॥
(ಕಾರಣಾಗಮ, ಕ್ರಿ.ಪಾ. ೧-೧೩).

ಗುರುವಿನ ಅನುಗ್ರಹ ಹಸ್ತವು ಶಿಷ್ಯನ ಮಸ್ತಕದೊಂದಿಗೆ ಸಂಯೋಗ ಹೊಂದುವುದೂ ಮತ್ತು ಕೃಪಾಕಟಾಕ್ಷ ವೀಕ್ಷಣವೂ ವೇಧಾದೀಕ್ಷಾ. ಗುರುವು ಶಿಷ್ಯ ಕಿವಿಯಲ್ಲಿ ಶಿವಪಂಚಾಕ್ಷರೀ (ಓಂಕಾರದೊಂದಿಗೆ ಷಡಕ್ಷರಿ) ಮಂತ್ರವನ್ನು ಉಪದೇಶಿಸುವುದು ಮಾಂತ್ರೀದೀಕ್ಷಾ. ಕುಂಡ-ಮಂಡಲಾದಿ ಸ್ಥಾಪನೆಯಿಂದ ಕೂಡಿದ, ಶಿಷ್ಯನ ಪಾಣಿಪೀಠದಲ್ಲಿ ಇಷ್ಟ ಲಿಂಗದ ಸ್ಥಾಪನೆಯೊಂದಿಗೆ ಪರ್ಯವಸಾನ ಹೊಂದುವ ಕ್ರಿಯಾಕಲಾಪವು ಕ್ರಿಯಾದೀಕ್ಷಾ ಇವುಗಳಲ್ಲಿ ಒಂದೊಂದು ಏಳು ಏಳು ಲಿಂಗ ದೀಕ್ಷೆಗಳನ್ನು ಒಳಗೊಂಡಿದೆ.

ದೀಕ್ಷಾಕ್ರಮದಲ್ಲಿ ಕ್ರಿಯಾದೀಕ್ಷೆಯಿಂದ ಆರಂಭವಾಗಿ ವೇಧಾ ಮತ್ತು ಮಾಂತ್ರೀದೀಕ್ಷೆಗಳ ಮೂಲಕ ಮುಂದುವರೆಯುತ್ತದೆ. ಆದ್ದರಿಂದ ಕ್ರಿಯಾದೀಕ್ಷೆಯ ಏಳು ಅಂಗದೀಕ್ಷೆಗಳ ನಿರೂಪಣೆ ಮೊದಲು ಬೇಕಾಗುತ್ತದೆ. ಆಜ್ಞಾ, ಉಪಮಾ, ಕಲಶಾಭಿಷೇಕ, ಸ್ವಸ್ತಿಕಾರೋಹಣ, ಭೂತಿಪಟ್ಟ, ಆಯತ್ತ ಮತ್ತು ಸ್ವಾಯತ್ತ— ಇವು ಕ್ರಿಯಾದೀಕ್ಷೆಯ ಏಳು ಅಂಗದೀಕ್ಷೆಗಳು. 'ಸದಾಚಾರವನ್ನು ಮೀರಿ ನಡೆಯಬೇಡ' ಎಂಬ ಗುರುವಿನ ಆದೇಶವು ಆಜ್ಞಾದೀಕ್ಷಾ. 'ಪುರಾತನರು ಆಚರಿಸಿದಂತೆ ಆಚರಿಸು' ಎಂಬುದು ಉಪಮಾದೀಕ್ಷಾ. ಮಧ್ಯದಲ್ಲಿ ಈಶಾನ, ಪೂರ್ವದಲ್ಲಿ ಸದ್ಯೋಜಾತ, ದಕ್ಷಿಣದಲ್ಲಿ ವಾಮದೇವ, ಉತ್ತರದಲ್ಲಿ ತತ್ಪುರುಷ ಮತ್ತು ಪಶ್ಚಿಮದಲ್ಲಿ ಸದ್ಯೋಜಾತ, ದಕ್ಷಿಣದಲ್ಲಿ ವಾಮದೇವ, ಉತ್ತರದಲ್ಲಿ ತತ್ಪುರುಷ ಮತ್ತು ಪಶ್ಚಿಮದಲ್ಲಿ ಅಘೋರ, ಪಂಚಕಲಶಗಳಲ್ಲಿ ಪಂಚಾಚಾರ್ಯರ ಪರಂಪರೆಯಲ್ಲಿ ಬಂದ ಪಂಚಋತ್ವಿಜರಿಂದ ಆಹ್ವಾನಿಸಲ್ಪಟ್ಟು ಪಂಚಬ್ರಹ್ಮರು ಸ್ಥಾಪಿಸಲ್ಪಟ್ಟ ಮೇಲೆ ಆ ಪಂಚ ಕಲಶಗಳನ್ನು ಪೂಜಿಸಿ ಅವುಗಳಲ್ಲಿನ ನೀರಿನಿಂದ ಇಷ್ಟ ಲಿಂಗದ ಅಭಿಷೇಕವನ್ನೂ ಶಿಷ್ಯ ಮಸ್ತಕಾಭಿಷೇಕವನ್ನು ಮಾಡಿಸುವುದು ಕಲಶಾಭಿಷೇಕ ದೀಕ್ಷಾ. ಶಿಷ್ಯನ ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿಸಲು ವರ್ಣ, ಕಲಾ, ಪದ, ತತ್ತ್ವ, ಮಂತ್ರ ಮತ್ತು ಭುವನ ಎಂಬ ಷಡ್‌ಧ್ವಜಗಳನ್ನು ಕ್ರಮವಾಗಿ ಪಾದ, ಮೇಢ್ರ (ಜನನೇಂದ್ರಿಯ), ನಾಭಿ, ಹೃದಯ, ಮುಖ ಮತ್ತು ಶಿರಸ್ಸುಗಳಲ್ಲಿ ಸ್ಥಾಪಿಸಿ, ಆ ಆರು ಸ್ಥಾನಗಳಲ್ಲಿ ಷಡಕ್ಷರ ಮಂತ್ರಾಕ್ಷರಗಳನ್ನು ನೆಲೆಗೊಳಿಸುವ ಕ್ರಿಯೆಯೇ ಸ್ವಸ್ತಿಕಾರೋಹಣದೀಕ್ಷಾ. ಶಿಷ್ಯನ ದೇಹಕ್ಕೆ ವಿಭೂತಿಯಿಂದ ಉದ್ಧೂಲನ ಮತ್ತು ತ್ರಿಪುಂಡ್ರಧಾರಣೆಗಳು ಭೂತಿಪಟ್ಟದೀಕ್ಷಾ. ಗುರುವು ತನ್ನ ಎಡ ಹಸ್ತದಲ್ಲಿ ಇಷ್ಟಲಿಂಗವನ್ನು ಸ್ಥಾಪಿಸಿ, 'ಸೌಮ್ಯ, ಈ ಲಿಂಗವನ್ನು ನೋಡು' ಎಂದು ತೋರಿಸಿ ಸ್ಥೂಲ-ಸೂಕ್ಷ್ಮ-ಕಾರಣ ಶರೀರಗಳಲ್ಲಿ ಲಿಂಗವಂತನಾಗು ಎಂದು ಮಂಗಲಾಕ್ಷತೆಯನ್ನು ಶಿಷ್ಯನ ತಲೆಯ ಮೇಲೆ ಹಾಕಿ ಆಶೀರ್ವದಿಸುವುದು ಆಯತ್ತದೀಕ್ಷಾ. ಗುರುವು ತಾನು ಉತ್ತರಾಭಿಮುಖನಾಗಿ ಕುಳಿತು ಶಿಷ್ಯನನ್ನು ತನ್ನ ಆಸನದ

ಮೇಲೆ ಎಡಭಾಗದಲ್ಲಿ ಕುಳ್ಳಿರಿಸಿ ಅವನ ಮೇಲೆ ವಸ್ತ್ರವನ್ನು ಹೊದಿಸಿ ಅದನ್ನು ತನ್ನ ಮೇಲೂ ಎಳೆದುಕೊಂಡು ಅವನ ಎಡಹಸ್ತವನ್ನು ಮೂಲ ಪಂಚಾಕ್ಷರೀ ಮಂತ್ರದಿಂದ ಅಭಿಮಂತ್ರಿಸಿ ತನ್ನ ಎಡಗೈಯಲ್ಲಿರುವ ಇಷ್ಟಲಿಂಗವನ್ನು ಅವನ ಎಡಹಸ್ತದಲ್ಲಿ ಇರಿಸುವುದು ಸ್ವಾಯತ್ತದೀಕ್ಷಾ. (ಕಾರಣಾಗಮ, ಕಿ.ಪಾ. ೧.೪೩-೪೯, ೭೪-೭೬, ೭೯-೮೨, ೮೩, ೪೯-೯೨, ೯೩-೯೫).

ವೇದಾದೀಕ್ಷೆಯ ಅಂಗದೀಕ್ಷೆಗಳು: ಸಮಯ, ನಿಸ್ಸಂಸಾರ, ನಿರ್ವಾಣ, ತತ್ತ್ವಸಂಜ್ಞಾ, ಅಧ್ಯಾತ್ಮ, ತತ್ತ್ವವಿಶೋಧಿನೀ ಮತ್ತು ತತ್ತ್ವಬೋಧ. ಗುರುವು ಶಿಷ್ಯನ ಮಸ್ತಕವನ್ನು ಪೂಜಿಸಿ ತನ್ನ ಬಲಹಸ್ತವನ್ನು ಷಡಕ್ಷರ ಮಂತ್ರದಿಂದ ಅಭಿಮಂತ್ರಿಸಿ ಅವನ ಮಸ್ತಕದ ಮೇಲೆ ಇರಿಸಿ ದೃಷ್ಟಿಯೋಗವನ್ನು ಸಾಧಿಸಿ 'ಶಿವಭಕ್ತರಲ್ಲಿ ನಿನ್ನ ಪ್ರೀತಿಯನ್ನು ಇರಿಸು' ಎಂದು ಆದೇಶಿಸುವುದು ಸಮಯದೀಕ್ಷೆ. 'ಸಂಸಾರದಲ್ಲಿ ಆಸಕ್ತಿಯನ್ನು ಬಿಟ್ಟು ಗುರು-ಲಿಂಗ-ಜಂಗಮರ ಪೂಜೆಯೇ ನಿನ್ನ ಸಂಸಾರವೆಂದು ತಿಳಿ' ಎಂದು ಆದೇಶಿಸುವುದು ನಿಸ್ಸಂಸಾರ ದೀಕ್ಷೆ. 'ಮಲತ್ರಯದಿಂದ ಹುಟ್ಟಿದ ತಾಪತ್ರಯಗಳಿಂದ ಕೂಡಿದ ದುರಂತವಾದ ಭವದಲ್ಲಿ ಮನಸ್ಸನ್ನಿಡಬೇಡ' ಎಂದು ಬೋಧಿಸುವುದು ನಿರ್ವಾಣದೀಕ್ಷೆ.'ಲಿಂಗ ಮತ್ತು ಅಂಗ ತತ್ತ್ವಗಳನ್ನು ತಿಳಿದು ಲಿಂಗದಲ್ಲಿ ಸಾಯುಜ್ಯವನ್ನು ಹೊಂದು' ಎಂದು ಬೋಧಿಸುವುದು ತತ್ತ್ವದೀಕ್ಷೆ. 'ಪ್ರಾಣದಲ್ಲಿ ಲಿಂಗವನ್ನು ಭಾವಿಸಿ ಲಿಂಗದಲ್ಲಿ ಪ್ರಾಣವನ್ನು ನಿಲ್ಲಿಸಿ ದೃಷ್ಟಿಯೋಗವನ್ನು ಸಾಧಿಸಿ ಲಿಂಗಪ್ರಾಣಿ (ಲಿಂಗವೇ ಪ್ರಾಣವಾದವನು) ನೀನಾಗು' ಎಂದು ಉಪದೇಶಿಸುವುದು ಐದನೆಯ ಅಧ್ಯಾತ್ಮದೀಕ್ಷೆ. ಶಬ್ದ ಮುಂತಾದ ವಿಷಯಗಳನ್ನು ಆಯಾಯ ಇಂದ್ರಿಯಗಳಿಂದ ಬಂದ ಅವುಗಳನ್ನು ಆಚಾರಲಿಂಗ ಮುಂತಾದ ಆರು ಲಿಂಗಗಳಿಗೆ ಅರ್ಪಿಸಿ 'ಶುದ್ಧ ಬುದ್ಧಿಯವನಾಗು' ಎಂದು ಆದೇಶಿಸುವುದು. ತತ್ತ್ವಸಂಶೋಧಿನೀ ದೀಕ್ಷೆ. 'ಸಚ್ಚಿದಾನಂದ ಸ್ವರೂಪ ಬ್ರಹ್ಮಸಂಜ್ಞಿತವಾದ ಲಿಂಗವು ನೀನಾಗಿದ್ದೀಯೆ, ಅದನ್ನು ಉಪಾಸಿಸು, ಅದೇ ನೀನೆಂದು ಸ್ಥಿರವಾಗಿ ತಿಳಿ' ಎಂದು ಕೃಪಾಪರವಶನಾದ ಗುರುವು ಬೋಧಿಸುವುದು ತತ್ತ್ವೋಪದೇಶಿನೀ ದೀಕ್ಷೆ. (ಕಾರಣಾಗಮ, ಕ್ರಿ.ಪಾ. ೧.೯೬-೧೦೮)

ಮಂತ್ರದೀಕ್ಷೆಯ ಅಂಗವಾಗಿ ಬರುವ ಏಳು ಅಂಗದೀಕ್ಷೆಗಳು ಇವು: ಏಕಾಗ್ರಮತಿ, ದೃಢವ್ರತ, ಪಂಚೇಂದ್ರಿಯಾರ್ಪಣ, ಅಹಿಂಸಾ, ಲಿಂಗನಿಷ್ಠಾ, ಲಿಂಗಮನೋಲಯ ಮತ್ತು ಸದ್ಯೋಮುಕ್ತಿ. 'ಶಿಷ್ಯನೇ ಇಷ್ಟಲಿಂಗವಲ್ಲದೆ ಬೇರಾವ ವಸ್ತುವನ್ನೂ ನೀನು ನೋಡಬೇಡ' ಎಂದು ಬೋಧಿಸುವುದು. ಏಕಾಗ್ರಮತಿದೀಕ್ಷೆ. 'ಶರೀರವು ಬಿದ್ದು ಹೋಗುವವರೆಗೂ ವ್ರತಗಳನ್ನು ಬಿಡಬೇಡ' ಎಂಬುದೇ ದೃಢವ್ರತದೀಕ್ಷೆ. 'ನೀನು ಸತಿ, ಲಿಂಗ ಪತಿ ಎಂದು ಸರ್ವಾರ್ಪಣ ಮಾಡು' ಎಂಬ ಭಾವಬೋಧವೇ ಪಂಚೇಂದ್ರಿಯಾರ್ಪಣದೀಕ್ಷೆ. 'ನಿನ್ನಂತೆ ಎಲ್ಲಾ ಪ್ರಾಣಿಗಳು ಎಂಬ ಭಾವದಿಂದ ಅಹಿಂಸಾವ್ರತವನ್ನು ಪಾಲಿಸು' ಎಂದು ಬಿಂಬಿಸುವುದೇ

ಅಹಿಂಸಾದೀಕ್ಷೆ.'ಆದಿಮಧ್ಯಾಂತರಹಿತವಾದ ಬ್ರಹ್ಮವೇ ಆದ ಲಿಂಗದಲ್ಲಿ ನಿಷ್ಠನಾಗು' ಎಂದು ಬೋಧಿಸುವುದೇ ಲಿಂಗನಿಷ್ಠಾದೀಕ್ಷೆ. 'ನಾನು ಹೇಳಿದ್ದನ್ನು ಸ್ಥಿರಮತಿಯಿಂದ ಪರಿಪಾಲಿಸು' ಎಂಬುದೇ ಸದ್ಯೋಮುಕ್ತಿದೀಕ್ಷೆ. (ಕಾರಣಾಗಮ, ಕ್ರಿ.ಪಾ. ೧.೧೧೦-೧೧೭)

ಹೀಗೆ ಶೈವ ಮತ್ತು ವೀರಶೈವ ದೀಕ್ಷೆಗಳ ಸಮಗ್ರ ಚಿತ್ರವು ಶೈವಾಗಮಗಳಲ್ಲಿ ವಿಶೇಷವಾಗಿ ದೊರೆಯುತ್ತದೆ. ವೀರಶೈವ ತ್ರಿವಿಧದೀಕ್ಷೆಯ ಅಂಗವಾಗಿ ಬರುವ ಒಟ್ಟು ೨೧ ದೀಕ್ಷೆಗಳಲ್ಲಿ ಜ್ಞಾನ ಮತ್ತು ಕ್ರಿಯೆಗಳ ಸಮನ್ವಯವನ್ನು ಸ್ಪಷ್ಟವಾಗಿ ತಿಳಿಯಬಹುದು. ಮಂತ್ರದೀಕ್ಷೆಯಲ್ಲಿ ಕೇವಲ ಪಂಚಾಕ್ಷರ (ಓಂಕಾರಸಹಿತವಾಗಿ ಷಡಕ್ಷರ) ಮಂತ್ರದ ಉಪದೇಶವಲ್ಲದೆ, ಅದರ ಸಿದ್ಧಿಗಾಗಿ ಶಿಷ್ಯನ ಮನೋಭೂಮಿಯನ್ನು ಹದಗೊಳಿಸುವ ಏಳು ದೀಕ್ಷಾಂಶಗಳು ನೆಲೆಯಾಗಿವೆ. ಶೈವಪರಂಪರೆಯಲ್ಲಿ ಬರುವ ಸಾಧಾರ ದೀಕ್ಷೆಯ ಭೇದಗಳಾದ ಸಬೀಜ-ನಿರ್ಬೀಜ ದೀಕ್ಷೆಗಳಲ್ಲಿ ಇರುವ ನೈಷ್ಠಿಕೀ, ಸದ್ಯೋನಿರ್ವಾಣದಾ, ಚಿರಾನ್ನಿರ್ವಾಣದಾ ಮುಂತಾದ ದೀಕ್ಷೆಗಳ ಅಂಶಗಳು ವೀರಶೈವ ಮಾಂತ್ರೀದೀಕ್ಷೆಯ ಲಿಂಗನಿಷ್ಠಾ, ಲಿಂಗಮನೋಲಯಾ, ಸದ್ಯೋಮುಕ್ತಿದಾ ಮುಂತಾದ ಅಂಗದೀಕ್ಷೆಗಳಲ್ಲಿ ಕಂಡು ಬರುತ್ತವೆ.

(೨)ಶೈವ ಮತ್ತು ವೀರಶೈವ ಸಾಧನಮಾರ್ಗ

ಶೈವಾಗಮಗಳು ಬೋಧಿಸುವ ಸಾಧನ ಮಾರ್ಗವು ಸಾಮಾನ್ಯವಾಗಿ ಭಕ್ತಿ-ಜ್ಞಾನ-ಕ್ರಿಯೆಗಳಿಂದ ಕೂಡಿದುದು. ಶೈವ ಭೇದಗಳನ್ನು ಹೇಳುವಾಗ ಜಾತಿ ಅನುಕ್ರಮ ಮತ್ತು ಆಚಾರಭೇದಗಳನ್ನು ಹೇಳಿರುವುದರಿಂದ ಶೈವರಲ್ಲಿ ಎಲ್ಲಾ ವರ್ಣದವರೂ ಎಲ್ಲಾ ಕಸುಬಿನವರೂ ಇರುವುದು ಸ್ಪಷ್ಟವಾಗುತ್ತದೆ. ಆಚಾರಭೇದವನ್ನು ಅವಲಂಬಿಸಿ ಮಾಡಿದ ಸಾಮಾನ್ಯ ಮುಂತಾದ ಶೈವಭೇದಗಳ ನಿರೂಪಣೆಯಿಂದ ಅವರ ಸಾಧನ ಮಾರ್ಗಗಳು ಸೂಚಿತವಾಗಿವೆ. ಸಾಧನ ಮಾರ್ಗಗಳು ಹಲವು. ಗುರಿಯು ಮಾತ್ರ ಎಲ್ಲಾ ಸಾಧನ ಮಾರ್ಗಗಳಿಗೂ ಮುಕ್ತಿ ಎಂಬುದೇ ಆಗಿದೆ. ಅವರವರ ದೃಷ್ಟಿಯಲ್ಲಿ ಮುಕ್ತಿಯ ಸ್ವರೂಪ ಕಲ್ಪನೆ ಬೇರೆ ಬೇರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಶೈವಾಗಮಗಳು ಬೋಧಿಸಿದ ಸಾಧನ ಮಾರ್ಗಗಳನ್ನು ಭೇದದ ಸ್ಪಷ್ಟತೆಯ ಆಧಾರದ ಮೇಲೆ ಶೈವ ಮತ್ತು ವೀರಶೈವವೆಂದು ವಿಭಾಗಿಸಿ ನಿರೂಪಿಸಬಹುದು.

ಶೈವರ ಸಾಧನಮಾರ್ಗವು ಚರ್ಯಾಮಾರ್ಗ, ಕ್ರಿಯಾಮಾರ್ಗ, ಯೋಗಮಾರ್ಗ ಮತ್ತು ಜ್ಞಾನಮಾರ್ಗಗಳೆಂಬ ನಾಲ್ಕು ಅಂತಸ್ತುಗಳನ್ನು ಹೊಂದಿದೆ. ಈ ಸಾಧನಮಾರ್ಗವನ್ನು ಹಿಡಿಯಲು ಶೈವ ದೀಕ್ಷೆಯಿಂದ ಅರ್ಹತೆಯ ಸಂಪಾದನೆ. ದೀಕ್ಷಿತರು ಶಿವಾಲಯಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಲಿಂಗ ಮತ್ತು ದೇವತಾಪ್ರತಿಮೆಗಳ ಅರ್ಚನೆ ಮತ್ತು ಕೈಂಕರ್ಯಗಳಿಗೆ ಅರ್ಹತೆಯನ್ನು ಪಡೆಯಬೇಕಾದರೆ ಮಾಡಬೇಕಾದ ಶೌಚ, ಆಚಮನ, ಸ್ನಾನ ಮುಂತಾದ ನಿತ್ಯಕರ್ಮಗಳನ್ನು, ಭಕ್ತಿ-ಮುಕ್ತಿಗೆ ಸಾಧನವಾದ ಶಿವಾರ್ಚನೆಯ ವಿಧಿಗಳನ್ನು, ಅದರ

ಅಂಗವಾಗಿ ಅಗ್ನಿಕಾರ್ಯ, ಅರ್ಚನಾಂಗ, ನಿತ್ಯೋತ್ಸವ, ನೈಮಿತ್ತಿಕೋತ್ಸವ ಮುಂತಾದವುಗಳನ್ನು ಶೈವಾಗಮಗಳ ಪೂರ್ವ ಭಾಗಗಳು ನಿರೂಪಿಸುವವಲ್ಲದೆ ಶೈವರ ಚರ್ಯಾದಿ ಮಾರ್ಗಗಳನ್ನೂ ನಿರೂಪಿಸುತ್ತವೆ. (ರೌರವಾಗಮ, ಕ್ರಿ.ಶ. ೩-೧೦ ಪಟಲಗಳು, ಸುಪ್ರಭೇದಾಗಮ, ಕ್ರಿ.ಪಾ. ೪-೮, ಅಜಿತಾಗಮ, ೧೯-೨೬

ಶಕ್ತಿಪಾತಕ್ಕೆ ಕರ್ಮಸಾಮ್ಯ ಮತ್ತು ಮಲಪರಿಪಾಕ ಎಂಬ ಎರಡು ಸ್ಥಿತಿಗಳು ಕಾರಣ. ಕರ್ಮಸಾಮ್ಯವೆಂದರೆ ಸಮಬಲವುಳ್ಳ ವಿರುದ್ಧಫಲಗಳುಳ್ಳ ಪುಣ್ಯರೂಪ, ಅಪುಣ್ಯರೂಪ, ಪುಣ್ಯಾಪುಣ್ಯರೂಪ ಕರ್ಮಗಳು ಏಕಕಾಲದಲ್ಲಿ ಫಲ ಕೊಡಲು ಉದ್ಯುಕ್ತವಾಗಿರುವಿಕೆ. ಮಲಪರಿಪಾಕವೆಂದರೆ ಆಣವಾದಿ ಮಲಗಳು ಹದಗೊಂಡು ವಿಘಟಿತವಾಗುವ ವಿಶೇಷಸ್ಥಿತಿ. ಶಕ್ತಿಪಾತ ಚಿಹ್ನೆಗಳೆಂದರೆ ಸಂಸಾರದಲ್ಲಿ ವೈರಾಗ್ಯ, ಮೋಕ್ಷಾಪೇಕ್ಷೆ, ಶಿವಭಕ್ತಿ ಮುಂತಾದವುಗಳು. (ಶೈವಪರಿಭಾಷಾ, ಪು.೧೩೨) ಈ ಹಿನ್ನೆಲೆಯಲ್ಲಿ ಶೈವರ ಚರ್ಯಾದಿ ನಾಲ್ಕು ಹಂತಗಳ ಸಾಧನಮಾರ್ಗವನ್ನು ಇಲ್ಲಿ ನಿರೂಪಿಸಲಾಗುತ್ತದೆ.

ಅ. ಚರ್ಯಾಮಾರ್ಗ:

ಆರಂಭದಲ್ಲಿ ಮಂದತರ ಶಕ್ತಿಪಾತವುಳ್ಳ (ಜೇನುಮೇಣವು ಬಿಸಿಲಿಗೆ ಕರಗುವಂತಹ ಸ್ಥಿತಿಯುಳ್ಳ) ಸಾಧಕನಿಗೆ ಗುರುವು ಸಮಯದೀಕ್ಷೆಯನ್ನು ಅನುಗ್ರಹಿಸಿ ಅವನನ್ನು ಚರ್ಯಾಮಾರ್ಗಕ್ಕೆ ಅರ್ಹನನ್ನಾಗಿ ಮಾಡುತ್ತಾನೆ. ಈ ಹಂತದಲ್ಲಿ ಬಾಹ್ಯಪೂಜೆಯ ಕೆಲವು ಅಂಶಗಳನ್ನು ದಾಸಭಾವದಿಂದ ಆಚರಿಸುವುದು ಸಾಧಕನ ಕರ್ತವ್ಯ.

'ತಸ್ಮಾಚ್ಚ ಗುರೋಃ....ಸಮಯದೀಕ್ಷಾಂ ಲಬ್ಧ್ವಾ ಸಮಯಿಧರ್ಮಾನ್ ಶಿವಾರಾಮಪರಿಪಾಲನ ಶಿವಾಲಯಸಂಮಾರ್ಜನ-ಶಿವಪೂಜೋಪಯುಕ್ತ ಪುಷ್ಪಾದ್ಯಾಹರಣ-ಶಿವಭಕ್ತಪೂಜಾ-ಭಸ್ಮೋದ್ಧೂಲನ-ರುದ್ರಾಕ್ಷಧಾರಣಾದೀನ್ ಅನುತಿಷ್ಠತಿ' (ಶೈವಪರಿಭಾಷಾ, ಪು. ೧೩೨).

ದೇವಾಲಯಗಳ ರಕ್ಷಣೆ, ನಿರ್ಮಲೀಕರಣ, ಶಿವಾರ್ಚನೆಗೆ ಉಪಯುಕ್ತವಾದ ಹೂವು ಮುಂತಾದವುಗಳ ಸಂಪಾದನೆ, ಶಿವಭಕ್ತರ ಸೇವೆ, ಭಸ್ಮದ ಉದ್ಧೂಳನ ಮತ್ತು ಭಸ್ಮತ್ರಿಪುಂಡ್ರಧಾರಣೆ, ರುದ್ರಾಕ್ಷಾದಿಗಳ ಧಾರಣೆ ಮುಂತಾದವುಗಳನ್ನು ಅವನು ಆಚರಿಸುತ್ತಾನೆ. ದೇವಾಲಯಗಳಲ್ಲಿ ದೀಪ ಹಚ್ಚುವುದು, ಪ್ರತಿಮೆಗಳನ್ನು ವಸ್ತ್ರಾದಿಗಳಿಂದ ಅಲಂಕರಿಸುವುದು ಮುಂತಾದವುಗಳು ಅವನ ಕರ್ತವ್ಯಗಳು. ಭಸ್ಮಧಾರಣೆ, ರುದ್ರಾಕ್ಷಧಾರಣೆ, ಶಿವಪೂಜೆ, ಶಿವಸ್ತೋತ್ರ ಮುಂತಾದವುಗಳನ್ನು ಆಚರಿಸುತ್ತಾ ಪಂಚಾಕ್ಷರೀ ಮಂತ್ರವನ್ನು ಜಪಿಸುತ್ತಾ ಸಿದ್ಧಿಯನ್ನು ಪಡೆಯುವುದು ಈ ಹಂತದಲ್ಲಿ ಸಾಧಕನ ಗುರಿ. ಇವೇ ಸಮಯಿಧರ್ಮಗಳು.

'ಸಮಯಿಧರ್ಮಾಶ್ಚ ಶಿವಾಲಯ-ಶಿವಭಕ್ತ-ಪರಿಚರ್ಯಾದಯಃ ತ್ರಿಪುಂಡ್ರಧಾರಣೆ ರುದ್ರಾಕ್ಷಧಾರಣಾದಯಶ್ಚ' (ಶೈವಪರಿಭಾಷಾ, ಪು.೧೩೮)

ಈ ಸಮಯಿಧರ್ಮಗಳನ್ನು ಆಚರಿಸುವ ಸಾಧಕನು ಹಿಡಿದ ಮಾರ್ಗಕ್ಕೆ ದಾಸಮಾರ್ಗವೆಂದು ಅನ್ವರ್ಥ ಹೆಸರು:

'ಅಸ್ಯಚ ಸಮಯಿಧರ್ಮಸ್ಯ ದಾಸಮಾರ್ಗ ಇತಿ ವ್ಯವಹಾರಃ।'

(ಶೈವಪರಿಭಾಷಾ, ಪು.೧೩೮)

ಈ ಆಚರಣೆಗಳಿಂದ ಅನುಭವ ಪಡೆದ ಸಾಧಕನು ಮುಂದಿನ ಹಂತದಲ್ಲಿ ವಿಶೇಷ ದೀಕ್ಷೆಯನ್ನು ಪಡೆಯುವ ಅರ್ಹತೆಯನ್ನು ಹೊಂದುಪನು. ಒಂದು ಪಕ್ಷ ಅವನಿಗೆ ತನ್ನ ಜನ್ಮದಲ್ಲಿ ವಿಶೇಷ. ನಿರ್ವಾಣ ದೀಕ್ಷೆಗಳನ್ನು ಪಡೆಯುವ ಅವಕಾಶದೊರೆಯದೆ ಸಮಯಿಧರ್ಮಗಳನ್ನೇ ಪಾಲಿಸುವ ಸಂದರ್ಭ ಮುಂದುವರೆದರೆ ಅವನಿಗೆ ಸಾಲೋಕ್ಯರೂಪ ಪದಮುಕ್ತಿ ದೊರೆಯುತ್ತದೆ. ಅನಂತರ ಒಂದೆರಡು ಜನ್ಮಗಳಲ್ಲಿ ನಿಜಮುಕ್ತಿ ಲಭಿಸುತ್ತದೆ:

ಇತಿ ಯಃ ಕುರುತೇ ಭಕ್ತಿ ಸತತಂ ಶಿವಯೋಗಿನಾಮ್।
ಸ ದ್ವಿತೀಯೇ ತೃತೀಯೇ ವಾ ದೇಹೇಯೋಗಮವಾಪ್ನುಯಾತ್॥

(ಶೈವಪರಿಭಾಷಾ, ಪು.೪೦)

ಆ. ಕ್ರಿಯಾಮಾರ್ಗ.

ಇಲ್ಲಿ ಸಾಧಕನ ಮಂದತರ ಶಕ್ತಿಪಾತವು ಮಂದಶಕ್ತಿಪಾತವಾಗಿ ಪರಿಣಮಿಸುತ್ತದೆ. ಬಾಹ್ಯಕ್ಕಿಂತ ಆಂತರಿಕ ಶಿವಪೂಜೆ-ಧ್ಯಾನಾದಿಗಳಲ್ಲಿ ಮತ್ತು ಆಗಮಾಧ್ಯಯನಾದಿಗಳಲ್ಲಿ ಶ್ರದ್ಧೆಯುಂಟಾಗುತ್ತದೆ. ಈ ರೀತಿಯ ಶ್ರದ್ಧಾಪರಿಣಾಮವನ್ನು ಸಾಧಕನಲ್ಲಿ ಗುರುತಿಸಿದ ಗುರುವು ಅವನಿಗೆ ಆಗಮಗಳ ಅಧ್ಯಯನ, ಶಿವಪೂಜಾ-ಧ್ಯಾನಾದಿಗಳಿಗೆ ಅಧಿಕಾರವನ್ನು ನೀಡುವ ವಿಶೇಷ ದೀಕ್ಷೆಯನ್ನು ಅನುಗ್ರಹಿಸುತ್ತಾನೆ. ಭಕ್ತಿಭಾವ ಬಲಿತು ಅವನು ಶಿವನಿಗೆ ಹತ್ತಿರದವನಾಗುವುದರಿಂದ ಅವನ ದಾಸಭಾವವು ಪುತ್ರಭಾವವಾಗಿ ಪರಿಣಮಿಸುತ್ತದೆ. ಶಿವಪೂಜೆ, ಆಗಮಾಧ್ಯಯನವೆಂಬ ಪುತ್ರಕಧರ್ಮಗಳೊಂದಿಗೆ ನಿತ್ಯ-ನೈಮಿತ್ತಿಕಾದಿ ವೈದಿಕಧರ್ಮಗಳನ್ನು ಅಚರಿಸುವ ಅವನ ಈ ಹಂತದ ಕ್ರಿಯಾಮಾರ್ಗಕ್ಕೆ ಸತ್ಪುತ್ರಮಾರ್ಗವೆಂದು ಅನ್ವರ್ಥ ಹೆಸರು. ಇದರಿಂದ ಅವನ ಮಂದಶಕ್ತಿಪಾತವು ತೀವ್ರಶಕ್ತಿಪಾತವಾಗಿ ಪರಿಣಮಿಸುತ್ತದೆ.

'ಏವಮಾಗಮೋಕ್ತಪುತ್ರಕಧರ್ಮಾನ್ ವೈದಿಕಾಂಶ್ಚ ನಿತ್ಯಾದೀನ್ ಆಚರತೋಽಸ್ಯ ಪೂರ್ವಂಮಂದತಯಾ ಸ್ಥಿತಃ ಶಕ್ತಿಪಾತಸ್ತು ತೀವ್ರೋ ಭವತಿ'

(ಶೈವಪರಿಭಾಷಾ, ಪು. ೧೩೨)

ಆಗ ಅವನು ನಿರ್ವಾಣದೀಕ್ಷೆಗೆ ಅರ್ಹನಾಗುತ್ತಾನೆ. ನಿರ್ವಾಣದೀಕ್ಷೆ ಲಭಿಸದಿದ್ದರೆ ಪುತ್ರಕಧರ್ಮಾಚರಣೆಯಿಂದ ಅವನು ಸಾಮೀಪ್ಯರೂಪ ಪದಮುಕ್ತಿಯನ್ನು ಹೊಂದುತ್ತಾನೆ. ಆ ಜನ್ಮಾಂತದಲ್ಲಿ ಅಥವಾ ಮುಂದಿನ ಜನ್ಮದಲ್ಲಿ ನಿಜಮುಕ್ತಿಯನ್ನು ಹೊಂದುತ್ತಾನೆ. (ಶೈವಪರಿಭಾಷಾ. ಪು.೧೪೬)

೩. ಯೋಗಮಾರ್ಗ

ಕ್ರಿಯಾಮಾರ್ಗದಲ್ಲಿ ಪಡೆದ ಅನುಭವದಿಂದ ಆಗಮಾರ್ಥಗಳಲ್ಲಿ ಪೂರ್ವಾಪರ ವಿಚಾರದಿಂದ ತತ್ತ್ವಜಿಜ್ಞಾಸೆಯು ಉಂಟಾಗುತ್ತದೆ. ಅದನ್ನು ತಿಳಿದ ಗುರುವು ಸಾಧಕನಿಗೆ ಸಕಲ ಸಂಚಿತ ಕರ್ಮವನ್ನು ತೊಡೆದು ಹಾಕುವ ನಿರ್ವಾಣದೀಕ್ಷೆಯನ್ನು ಅನುಗ್ರಹಿಸುತ್ತಾನೆ. (ಶೈವಪರಿಭಾಷಾ, ಪು.೧೪೬). ಅದರಿಂದಲೇ ಯೋಗಮಾರ್ಗಕ್ಕೆ ಅವನಿಗೆ ಅರ್ಹತೆ. ಅವನಿಗೋಸ್ಕರ ಅಷ್ಟಾಂಗಯೋಗಮಾರ್ಗವು ಶೈವಾಗಮಗಳಲ್ಲಿ ಉಕ್ತವಾಗಿದೆ. ಪ್ರಾಣಾಯಾಮದ ಮೂಲಕ ದೇಹದಲ್ಲಿರುವ ಷಟ್‌ಚಕ್ರಗಳಲ್ಲಿ ವಾಯುವನ್ನು ನಿಲ್ಲಿಸಿ ನಿಷ್ಕಲ ಮೂರ್ತಿಯನ್ನು ಆರಾಧಿಸುವ ಮೂಲಕ ಶಿವಸ್ವರೂಪವೇ ಆದ ಸ್ವರೂಪವನ್ನು ಪಡೆಯಲು ಯೋಗಮಾರ್ಗವು ಉಪದೇಶಿಸಲ್ಪಟ್ಟಿದೆ. ಸಾಧಕನು ಯೋಗಸಾಧನೆಯಿಂದ ಪರಮಾತ್ಮನನ್ನು ತನ್ನಲ್ಲಿ ಪರಮ ಪ್ರಕಾಶದ ರೂಪದಲ್ಲಿ ಕಂಡು ಅವನನ್ನೇ ತನ್ನ ಅಂತರ್ಯಾಮಿ ಚೈತನ್ಯವೆಂದು ಧ್ಯಾನಿಸುತ್ತಾ ಅವನ ಸ್ವರೂಪವನ್ನೇ ಹೊಂದುತ್ತಾನೆ. (ಮೃಗೇಂದ್ರಾಗಮ, ಯೋಗಪಾದದ ಒಂದು ಪಟಲ, ಸುಪ್ರಭೇದಾಗಮ, ಯೋಗಪಾದದ ನಾಡೀಸಂಧಾನ, ಕಾಲಚಕ್ರ, ಆಧಾರಾಧೇಯ ಎಂಬ ಪಟಲಗಳು.) ಈ ಮಾರ್ಗಕ್ಕೆ ಸಹಚಾರ ಮಾರ್ಗ ಅಥವಾ ಸಖ್ಯಮಾರ್ಗವೆಂದು ಅನ್ವರ್ಥಹೆಸರು. ಅದರ ಸಾಧನೆಯಿಂದ ಸಾಧಕನು ಸಾರೂಪ್ಯಮುಕ್ತಿಯನ್ನು ಪಡೆಯುವನು.

ಈ. ಜ್ಞಾನಮಾರ್ಗ

ಹಿಂದಿನ ಮಾರ್ಗದಲ್ಲಿನ ಅನುಭವದ ಪರಿಪಾಕದಿಂದ ಹಿಂದೆ ತೀವ್ರವೆನಿಸಿದ್ದ ಶಕ್ತಿಪಾತವು ತೀವ್ರತರವಾಗಿ ಪರಿಣಮಿಸುತ್ತದೆ. ಇದರೊಂದಿಗೆ ಪ್ರಾರಬ್ಧಕರ್ಮವು ನಾಶವಾಗುತ್ತದೆ. ಇದನ್ನು ಗುರುತಿಸಿದ ಗುರುವು ಸದ್ಯೋನಿರ್ವಾಣ ದೀಕ್ಷೆಯನ್ನು ಅನುಗ್ರಹಿಸುತ್ತಾನೆ. ಸಾಧಕನು, ಪತಿ, ಪಶು, ಪಾಶಗಳೆಂಬ ತತ್ತ್ವತ್ರಯದ ಮರ್ಮವನ್ನು ಅರಿಯುತ್ತಾನೆ. ವೇದ, ಶಾಸ್ತ್ರ, ಪುರಾಣ ಮುಂತಾದವುಗಳ ಉಪದೇಶಗಳೆಲ್ಲ ಅಪರಾವಿದ್ಯೆಯೆಂದೂ ಪತಿಜ್ಞಾನವೇ ಪರಾವಿದ್ಯೆಯೆಂದೂ ಸ್ವಾನುಭವದಿಂದ ಅರಿಯುತ್ತಾನೆ. ತನಗೂ ಶಿವನಿಗೂ ಭೇದವನ್ನು ಕಾಣದೆ ಧ್ಯಾನಪೂರ್ವಕ ಸಮಾಧಿಸ್ಥಿತಿಯನ್ನು ಸಾಧಿಸಿ ಶಿವಸಾಯುಜ್ಯವನ್ನು ಪಡೆಯುತ್ತಾನೆ. ಹೀಗೆ ಶಿವನೊಂದಿಗೆ ಏಕೀಭಾವದಿಂದ ಶಿವಾನಂದದ ಅನುಭವವೇ ಮೋಕ್ಷ. (ಶೈವ ಪರಿಭಾಷಾ, ಪು.೧೯೫). ಇದೇ ಜೀವನ್ಮುಕ್ತನ ಸ್ಥಿತಿ. ಜೀವನ್ಮುಕ್ತನಿಗೆ ಮಾಡಬೇಕಾದ ಕರ್ಮ ಯಾವುದೂ ಇಲ್ಲ. ಆದರೂ ಲೋಕಸಂಗ್ರಹಕ್ಕಾಗಿ ಅವನು ಕರ್ಮಾನುಷ್ಠಾನದಲ್ಲಿ ಪ್ರವರ್ತಿಸುತ್ತಾನೆ. ಆದರೆ ಕರ್ಮಗಳಿಂದ ಹುಟ್ಟಿದ ಪುಣ್ಯಾದಿ ಫಲಗಳಿಂದ ಬಂಧಿತನಾಗುವುದಿಲ್ಲ.

ವೀರಶೈವ ಸಾಧನ ಮಾರ್ಗ

ಶೈವಾಗಮೋತ್ತರ ಭಾಗಗಳಲ್ಲಿ ನಿರೂಪಿಸಲ್ಪಟ್ಟ ವೀರಶೈವ ಸಾಧನಮಾರ್ಗವು ಷಟ್‌ಸ್ಥಲಾತ್ಮಕ. ಭಕ್ತಿ-ಜ್ಞಾನ-ಕ್ರಿಯೆಗಳಿಂದ ಮುಪ್ಪುರಿಗೊಂಡ ಈ ಮಾರ್ಗವು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ, (ಸೂಕ್ಷ್ಮಾಗಮ, ಪು. ೫೯, ಶೋ.೩.೨) ಎಂಬ ಆರು ಹಂತಗಳನ್ನು ಒಳಗೊಂಡಿದೆ. ಗುರುವಿನ ಅನುಗ್ರಹದಿಂದ ತ್ರಿವಿಧ ದೀಕ್ಷೆಯ ಮೂಲಕ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳನ್ನು ಕ್ರಮವಾಗಿ ಸ್ಥೂಲ, ಸೂಕ್ಷ್ಮ, ಕಾರಣಶರೀರಗಳಲ್ಲಿ ಹೊಂದಿದ ಮೇಲೆ ಪ್ರಾಣಲಿಂಗ, ಭಾವಲಿಂಗಾನುಸಂಧಾನಪೂರ್ವಕವಾದ ಇಷ್ಟಲಿಂಗ ಪೂಜೆಯಿಂದ ಮತ್ತು ಆಯಾಯ ಹಂತದಲ್ಲಿ ಪಡೆದ ಆಧ್ಯಾತ್ಮಿಕ ಅನುಭವಗಳಿಂದ ಪುಟಗೊಂಡ ಭಕ್ತನು ಐಕ್ಯಸ್ಥಲದವರೆಗೂ ಮುಂದುವರೆಯುತ್ತಾನೆ.

(ಅ)ಭಕ್ತಸ್ಥಲ

'ತ್ಯಕ್ತಾಭಿಮಾನೋ ದೇಹಾದೌ ಭಕ್ತ ಇತ್ಯುಚ್ಯತೇ ಬುಧೈಃ (ಸೂಕ್ಷ್ಮಾಗಮ, ೮.೩೩) ಎಂಬಂತೆ ದೇಹಾದಿಗಳಲ್ಲಿ ಅಭಿಮಾನವನ್ನು ಬಿಟ್ಟವನು ಭಕ್ತ. ದೇಹಾದಿಗಳಲ್ಲಿ ಅಭಿಮಾನವನ್ನು ಬಿಡಬೇಕಾದರೆ ಯಾವುದು ನಿತ್ಯ, ಯಾವುದು ಅನಿತ್ಯ ಎಂಬ ವಿವೇಕ ಜಾಗೃತವಾಗಿರಬೇಕು. ಅದಕ್ಕೆ ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯದ ಫಲವಾಗಿ ಅಂತಃಕರಣವು ಶುದ್ಧವಾಗಿರಬೇಕು. ಆಗ ಶಿವನ ಕಾರುಣ್ಯದಿಂದ ಶಕ್ತಿಪಾತವಾಗಿ ಭಕ್ತಿ ಮೂಡುತ್ತದೆ. (ಕಾರಣಾಗಮ, ಕ್ರಿ.ಪಾ. ೧.೩೪). ಅಲ್ಲಿಂದ ಮುಂದೆ ಗುರುವಿನಿಂದ ದೀಕ್ಷೆ. ಅದರಿಂದಲೇ ಅವನು ಅಷ್ಟಾವರಣ ಸಂಪನ್ನನಾಗುತ್ತಾನೆ:

ಗುರುರ್ಲಿಂಗಂ ಚ ಜಂಗಮಶ್ಚ ತೀರ್ಥ ಚೈವ ಪ್ರಸಾದಕಃ।
ಭಸ್ಮರುದ್ರಾಕ್ಷಮಂತ್ರಾಶ್ಚೇತ್ಯಷ್ಟಾವರಣಸಂಜ್ಞಿತಾಃ॥

(ಚಂದ್ರಜ್ಞಾನಾಗಮ, ೨.೨)

ಇಷ್ಟಲಿಂಗ ಪೂಜೆ, ಗುರು-ಜಂಗಮ ಪೂಜೆ, ಪಾದೋದಕ-ಪ್ರಸಾದಗಳ ಸ್ವೀಕಾರಗಳು ಭಕ್ತನ ನಿತ್ಯಕರ್ತವ್ಯಗಳು. ವೀರಶೈವ ಭಕ್ತನು ಅನುಸರಿಸಬೇಕಾದ ಪಂಚಾಚಾರಗಳೆಂದರೆ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ. ಲಿಂಗಾಚಾರವೆಂದರೆ ಶಿವದೀಕ್ಷೆಯ ಮೂಲಕ ಗುರುವು ಅನುಗ್ರಹಿಸಿದ ಇಷ್ಟಲಿಂಗವನ್ನು ಅನನ್ಯಭಕ್ತಿಯಿಂದ ಪೂಜಿಸಿ, ಅನುಸಂಧಾನ ಮಾಡುವುದು. ಸದಾಚಾರವೆಂದರೆ ಗುರು-ಲಿಂಗ-ಜಂಗಮರನ್ನು ಆರಾಧಿಸಿ, ತೀರ್ಥ-ಪ್ರಸಾದಗಳನ್ನು ಸ್ವೀಕರಿಸುವುದು. ಶಿವಾಚಾರವೆಂದರೆ ದ್ರವ್ಯ, ಕ್ಷೇತ್ರ, ಭಾಂಡ, ತೃಣ, ಕಾಷ್ಠ, ವೀಟಿಕಾ (ತಾಂಬೂಲ), ಪಾಕ, ರಸ (ಕ್ಷೀರಾದಿ), ಭೂಮಿ, ಭವ, ಭಾವ, ಮಾರ್ಗ, ಕಾಲ,ವಾಕ್, ಜನ- ಈ ಹದಿನಾರು

ವಸ್ತುಗಳನ್ನು ಭಕ್ತರು ಅನುಷ್ಠಾನಮಾಡುವ ಆಚಾರ. ಅದರಲ್ಲಿ ೬೪ ಶೀಲಗಳು ಬರುತ್ತವೆ. ಭೃತ್ಯಾಚಾರವೆಂದರೆ ಗುರು-ಲಿಂಗ-ಜಂಗಮರಲ್ಲಿ ಕೈಂಕರ್ಯ ಮತ್ತು ದಾಸೋಽವಹಂಭಾವ. (ಚಂದ್ರಜ್ಞಾನಾಗಮ, ೯ ನೇ ಪಟಲ).

ಇವಲ್ಲದೆ ವೀರಶೈವನಿಗೆ ಪಂಚಯಜ್ಞಗಳನ್ನು ಶೈವಾಗಮಗಳು ಹೇಳಿವೆ. ಮೂರು ಪ್ರಕಾರದ ಪಂಚಯಜ್ಞಗಳ ನಿರೂಪಣೆಯು ಕಂಡುಬರುತ್ತದೆ. ಮೊದಲನೆಯ ಪ್ರಕಾರದ ಪಂಚಯಜ್ಞಗಳೆಂದರೆ ದೇವಯಜ್ಞ, ಪಿತೃಯಜ್ಞ, ಭೂತಯಜ್ಞ, ಮನುಷ್ಯಯಜ್ಞ ಮತ್ತು ಬ್ರಹ್ಮಯಜ್ಞ. ಶಾಂಭವವ್ರತ ನಿಷ್ಠರಾದ ಪ್ರಯತಾತ್ಮರಾದ ಶೈವರ ಆಹ್ನಿಕವನ್ನು ಹೇಳುವ ಸಂದರ್ಭದಲ್ಲಿ ಭಸ್ಮಸ್ನಾನ ಮತ್ತು ತ್ರಿಪುಂಡ್ರಧಾರಣವಿಧಿಯ ಅನಂತರ ಸಂಧ್ಯೋಪಾಸನೆ ಮತ್ತು ಪಂಚಯಜ್ಞಗಳನ್ನು ವಿಧಿಸುತ್ತವೆ:

ಸಂಧ್ಯಾದ್ವಯಮುಪಾಸೀತ ಸಾವಿತ್ರೀ ಮೂಲಮಂತ್ರಗಮ್।
ಕರ್ತವ್ಯಾಃ ಪಂಚಯಜ್ಞಾಶ್ಚ ಗೃಹಿಣಾ ಸ್ವಹಿತೈಷಿಣಾ॥

(ಚಂದ್ರಜ್ಞಾನಾಗಮ, ೧೧.೬೧)

ಅಗ್ನಿಯಲ್ಲಿ ಸಮಿತ್ ಮುಂತಾದವುಗಳನ್ನು ಅರ್ಪಿಸುವುದು ದೇವಯಜ್ಞ, ಪಿತೃಗಳಿಗೆ ತರ್ಪಣಕೊಡುವುದು ಪಿತೃಯಜ್ಞ . ಭೂತಗಳಿಗೆ ಬಲಿಯನ್ನು ನೀಡುವುದು ಭೂತಯಜ್ಞ, ವಿಪ್ರರಿಗೆ ಭೋಜನ ಮಾಡಿಸುವುದು ಮನುಷ್ಯಯಜ್ಞ . ಸ್ವಾಧ್ಯಾಯದ ಅಧ್ಯಯನವು ಬ್ರಹಯಜ್ಞ, (ಕಾರಣಾಗಮ, ಕ್ರಿ.ಪಾ.೩.೬೭.೭೦)

ಎರಡನೆ ಪ್ರಕಾರದ ಪಂಚಯಜ್ಞಗಳೆಂದರೆ:

ಕರ್ಮಯಜ್ಞಸ್ತಪೋಯಜ್ಞೋ ಜಪಯಜ್ಞಸ್ತಥಾಪರಃ।
ಧ್ಯಾನಯಜ್ಞೋ ಜ್ಞಾನಯಜ್ಞಃ ಪಂಚಯಜ್ಞಾ ಇಮೇ ಸ್ಮೃತಾಃ॥

(ಸೂಕ್ಷ್ಮಾಗಮ, ೭.೨೬)

ಕರ್ಮಯಜ್ಞವೆಂದರೆ ಪೂಜಾದಿಗಳು. ಅದು ಸಕಾಮ-ಅಕಾಮವೆಂದು ಎರಡು ವಿಧ. ಸಕಾಮದಲ್ಲಿ ಫಲವನ್ನು ಹೊಂದಿ ಸ್ವರ್ಗದಲ್ಲಿ ಅದನ್ನು ಅನುಭವಿಸಿ ಮತ್ತೆ ಜನ್ಮಾಂತರವನ್ನು ಹೊಂದಬೇಕಾಗುತ್ತದೆ. ನಿಷ್ಕಾಮ (ಅಕಾಮ)ದಲ್ಲಿ ಶ್ರೇಷ್ಠ ಜ್ಞಾನವನ್ನು ಹೊಂದಿ ಮುಕ್ತಿಯನ್ನು ಪಡೆಯಬಹುದು. ಹಿಂಸೆ ಮುಂತಾದ ದೋಷಗಳಿಲ್ಲದ, ರಾಗ ಮುಂತಾದ ಗುಣಗಳಿಲ್ಲದ ತಪೋಯಜ್ಞವು ಮೋಕ್ಷವೊಂದನ್ನೇ ಫಲವಾಗಿ ಪಡೆದಿದೆ. ಜಪಯಜ್ಞವೆಂದರೆ ಅಂತರ್ಯಾಗ, ಇಷ್ಟಲಿಂಗ ಪೂಜೆಯು ಪ್ರಾಣಲಿಂಗ-ಭಾವಲಿಂಗಗಳ ಅನುಸಂಧಾನವನ್ನು ಹೊಂದಿ ಆಭ್ಯಂತರವಾಗಿ ಪರಿಣಮಿಸುವುದು. ಗುರುವಿನಿಂದ ಪಡೆದ ಪರಜ್ಞಾನದಿಂದ ಧ್ಯಾನಯೋಗದಲ್ಲಿ ನಿರತನಾಗುವುದು ಧ್ಯಾನಯಜ್ಞ . ಶಿವಜ್ಞಾನವನ್ನು ಸೇವಿಸಿ ಭಕ್ತಿ ಪರವಶನಾಗಿ ಆತ್ಮಸಂಯಮದಿಂದ ಸ್ಥಿರನಾದವನು ಶಿವನನ್ನು ಚಿತ್ತದಲ್ಲಿ ಪ್ರತಿಷ್ಠಾಪಿಸುವುದೇ ಜ್ಞಾನಯಜ್ಞ . (ಸೂಕ್ಷ್ಮಾಗಮ, ೭ ನೇ ಪಟಲ).

ಮೂರನೆ ಪ್ರಕಾರದ ಪಂಚಯಜ್ಞಗಳು ಇವು: ತಪಸ್ಸು, ಕರ್ಮ, ಜಪ,ಧ್ಯಾನ, ಮತ್ತು ಜ್ಞಾನ. ಶಿವನಿಗಾಗಿ ದೇಹ ದಂಡಿಸುವುದು ತಪಸ್ಸು, ಕೃಚ್ಛ್ರವಾದ ಚಾಂದ್ರಾಯಣಾದಿ ವ್ರತಗಳನ್ನು ಆಚರಿಸುವುದಲ್ಲ. ಕರ್ಮವೆಂದರೆ ಶಿವಪೂಜೆಯೇ ಹೊರತು, ಬಾಹ್ಯವಾದ ಯಜ್ಞ ಯಾಗಾದಿಗಳಲ್ಲ. ಪ್ರಣವಸಹಿತ ಪಂಚಾಕ್ಷರ ಮಂತ್ರದ ಉಚ್ಚಾರ ರುದ್ರಾಧ್ಯಾಯಾದಿಗಳ ಪಾರಾಯಣ, ಇವು ಜಪ. ಆದರೆ ಕರ್ಮಕಾಂಡೋಕ್ತ ಮಂತ್ರಾಧ್ಯಯನವಲ್ಲ.ಶಿವಸ್ವರೂಪ ಚಿಂತನೆಯೇ ಧ್ಯಾನ, ಆತ್ಮಚಿಂತನವಲ್ಲ. ಶಿವಾಗಮಾದಿ ಅರ್ಥಗ್ರಹಣವೇ ಜ್ಞಾನ, ಇತರ ಶಾಸ್ತ್ರಾಭ್ಯಾಸವಲ್ಲ. ಹೀಗೆ ವೀರಶೈವರ ಪಂಚಯಜ್ಞಗಳು ಶಿವಜ್ಞಾನಕ್ಕೆ, ಶಿವಪೂಜೆಗೆ ಅನುಗುಣವಾಗಿಯೇ ಇವೆ.(ಸುಪ್ರಭೇದಾಗಮ, ೭.೬-೮; ಅದೇ ರೀತಿ ಸಿದ್ಧಾಂತಶಿಖಾಮಣಿ, ೯.೨೨-೨೪ ರಲ್ಲಿ ಪಂಚಯಜ್ಞಗಳ ವಿವರವಿದೆ).

ಆ. ಮಾಹೇಶ್ವರ ಸ್ಥಲ.

'ತಚ್ಚಿತ್ತಮಮಲಂ ಯಸ್ಯ ಸ ವೈ ಮಾಹೇಶ್ವರಃ' (ಸೂಕ್ಷ್ಮಾಗಮ, ೮.೩೪) ಎಂಬಂತೆ ಯಾರ ಚಿತ್ತವು ನಿರ್ಮೂಲವಾಗಿದೆಯೋ ಅವನು ಮಾಹೇಶ್ವರ. ಭಕ್ತಸ್ಥಲದಲ್ಲಿ ಪಡೆದ ಅನುಭವದ ಪರಿಪಾಕದಿಂದ ಶಿವಪೂಜೆಯ ಸಾರ್ಥಕ್ಯದ ಬಗ್ಗೆ ವಿಶ್ವಾಸ ಮತ್ತು ಇಷ್ಟಲಿಂಗ ನಿಷ್ಠೆ ಬೆಳೆದು ಎಲ್ಲಾ ರೀತಿಯ ವಿಕಲ್ಪಗಳಿಂದ ದೂರವಾದ ಮನಸ್ಸು ಪರಿಶುದ್ಧವಾಗುತ್ತದೆ. ಅದೇ ಮಾಹೇಶ್ವರ ಸ್ಥಲದ ವೈಶಿಷ್ಟ್ಯ. ಮಾಹೇಶ್ವರ ಸ್ಥಲದಲ್ಲಿ ಗುರುಲಿಂಗ ಪೂಜಕನಾದ ಸಾಧಕ ಗುರುವೀರ, ಗುರುಮೋಹಿ, ಗುರುಭಕ್ತ, ಗುರುಪ್ರಸಾದಿ, ಗುರುಪ್ರಾಣಿ. (ಸೂಕ್ಷ್ಮಾಗಮ, ೮.೪೫, ೪೬, ೪೮-೫೦). ಹಸ್ತವನ್ನು ಶುದ್ಧಗೊಳಿಸಿ ಇಷ್ಟಲಿಂಗವನ್ನು ಕರಪೀಠಕ್ಕೆ ತಂದು ಷಡಂಗನ್ಯಾಸ ಪೂರ್ವಕವಾಗಿ ಷಡಕ್ಷರ ಮಂತ್ರ ಜಪವನ್ನು ಮಾಡುವುದು ಅವನ ಕ್ರಮ. (ಕಾರಣಾಗಮ, ೭.೨೨-೨೩).

ಇ. ಪ್ರಸಾದಿಸ್ಥಲ

'ಚಿತ್ತಂ ಚಿರಂ ಭವೇದ್ಯಸ್ಯ ಸ ಪ್ರಸಾದೀ ಭವತ್ಯಸೌ' (ಸೂಕ್ಷ್ಮಾಗಮ, ೮.೩೪) ಎಂಬಂತೆ ಯಾರ ಚಿತ್ತವು ಸ್ಥಿರವಾಗಿದೆಯೋ ಅವನು ಪ್ರಸಾದಿ. ಲಿಂಗನಿಷ್ಠೆಯು ಬಲಿತು ಎಲ್ಲವೂ ಶಿವನ ಪ್ರಸಾದ ಎಂಬ ಭಾವ ಬಲಿತಾಗ ಮಾಹೇಶ್ವರನು ಪ್ರಸಾದಿಯಾಗುತ್ತಾನೆ. ಇಲ್ಲಿ ಅವನು ಪ್ರಾಣಲಿಂಗದ ಸ್ವರೂಪವಾದ ಶಿವಲಿಂಗದ ಪೂಜಕನಾಗುತ್ತಾನೆ. ಅವನು ಶಿವಲಿಂಗ-ಪ್ರಸಾದಿ. ಬೇರೆಲ್ಲಾ ಮೋಹಗಳಿಂದ ಮುಕ್ತನಾಗಿ ಶಿವಲಿಂಗದ ಭಕ್ತ, ಶಿವಲಿಂಗೈಕಪೂಜಕ ಮತ್ತು ಶಿವಲಿಂಗ ಪ್ರಸಾದಿಯಾಗುತ್ತಾನೆ. (ಸೂಕ್ಷ್ಮಾಗಮ, ೮.೫೨-೫೪). ಪ್ರಸಾದಿಯು ಶಿವಲಿಂಗವೆಂದು ಇಷ್ಟಲಿಂಗವನ್ನು ಹಸ್ತಪೀಠದಲ್ಲಿರಿಸಿ, ಭಸ್ಮವನ್ನು ಹಚ್ಚಿ, ಏಕಾಗ್ರತೆಯಿಂದ ನಿರೀಕ್ಷಿಸಿ, ದಶವಿಧಾನವಿಧಿಯಿಂದ ಪೂಜಿಸಿ ಅನುರಾಗದಿಂದ ನೀರಾಜನ ಮಾಡಿ ಜಪವನ್ನು ನಿರ್ವಹಿಸಬೇಕು. (ಕಾರಣಾಗಮ, ೭.೨೫-೨೬).

ಈ. ಪ್ರಾಣಲಿಂಗಿ ಸ್ಥಲ

'**ತ್ಯಕ್ತ್ವಾ ಜೀವಭ್ರಮಂ ಭೂಯೋ ಲಿಂಗಾತ್ಮಾ ಪ್ರಾಣಲಿಂಗಕಃ**' (ಸೂಕ್ಷ್ಮಾಗಮ. ೮.೩೫) ಎಂಬಂತೆ ಜೀವಭ್ರಮೆಯನ್ನು ಬಿಟ್ಟು ಲಿಂಗಪ್ರಾಣನಾಗಿ ಇರುವವನು ಪ್ರಾಣಲಿಂಗಿ. ಅವನ ಮನಸ್ಸು ಆಂತರಿಕ ಪ್ರಾಣಲಿಂಗದ ಇನ್ನೊಂದು ಸ್ವರೂಪವಾದ ಚರಲಿಂಗದಲ್ಲಿ ಲೀನವಾಗುವುದರಿಂದ ಅವನು ಜೀವವಿಕಾರಗಳಿಂದ ಮುಕ್ತನಾಗುತ್ತಾನೆ. ಅದೇ ಪ್ರಾಣಲಿಂಗಿಯ ಸ್ಥಿತಿ. ಅವನ ಪೂಜಾವೈಭವ ಅಮೋಘ. ಚರಲಿಂಗಾನುಸಂಧಾನವುಳ್ಳ ಇಷ್ಟಲಿಂಗವನ್ನು ಕರಸ್ಥಲದಲ್ಲಿರಿಸಿ ಪಾದ್ಯ, ಅರ್ಘ್ಯ, ಆಚಮನಾದಿಗಳಿಂದ ಅಭಿಷೇಕ ಮಾಡುತ್ತಾನೆ. ಲಿಂಗದೇವನ ಪಾದಪ್ರಕ್ಷಾಲನಕ್ಕೆ ಪಾದ್ಯ, ಹಸ್ತುಶುದ್ಧಿಗಾಗಿ ಅರ್ಘ್ಯ, ಮುಖಕಮಲಶುದ್ಧಿಗಾಗಿ ಆಚಮನವೆಂದು ಭಾವಿಸಿ ಶ್ರೀರುದ್ರ, ನಮಕ-ಚಮಕ, ಪುರುಷ ಸೂಕ್ತಾದಿಗಳನ್ನು ಪಠಿಸುತ್ತಾ ಅಭಿಷೇಕ ಮಾಡಿ ಷೋಡಶೋಪಚಾರ ಪೂಜೆಯನ್ನು ವೈಭವದಿಂದ ಮಾಡುತ್ತಾನೆ. ಅನಂತರ ಅಂತರ್ಮುಖನಾಗಿ ಪ್ರಾಣಲಿಂಗಕ್ಕೆ ಭಾವಪುಷ್ಪಗಳಿಂದ ಪೂಜೆ ಸಲ್ಲಿಸಬೇಕು. (ಕಾರಣಾಗಮ, ೭.೨೭-೨೮; ಸೂಕ್ಷ್ಮಾಗಮ, ೬.೨೩-೨೫) ಅಹಿಂಸೆ, ಇಂದ್ರಿಯ ನಿಗ್ರಹ, ಸರ್ವಪ್ರಾಣಿಗಳಲ್ಲಿ ದಯೆ, ಕ್ಷಮೆ, ಧ್ಯಾನ, ತಪಸ್ಸು, ಜ್ಞಾನ, ಸತ್ಯ ಮುಂತಾದ ಮಾನಸ ಪುಷ್ಪಗಳಿಂದ ಶಿವನನ್ನು ಪೂಜಿಸಬೇಕು. ಇದೇ ಪ್ರಾಣಲಿಂಗಿಯ ಆಂತರಿಕ ಪೂಜೆ.

ಉ. ಶರಣ ಸ್ಥಲ

"**ಶಿವನಿತ್ಯತ್ವನಿಶ್ಚಿಂತಃ ಸಾನಂದಃ ಶರಣೋ ಭವೇತ್**" (ಸೂಕ್ಷ್ಮಾಗಮ, ೮.೩೫), ಎಂಬಂತೆ ಶಿವನು ನಿತ್ಯವೂ ತನ್ನಲ್ಲಿಯೇ ತಾನಾಗಿಯೇ ಇದ್ದಾನೆ ಎಂಬ ಶಿವಭಾವ ಸ್ಥಿರವಾಗಿ ನಿಶ್ಚಿಂತನಾದ ಆನಂದಭಕ್ತಿ ತುಂದಿಲನೇ ಶರಣ. ಭಾವಲಿಂಗದ ಸ್ವರೂಪವಾದ ಪ್ರಸಾದಲಿಂಗರೂಪ ಇಷ್ಟಲಿಂಗವನ್ನು ಪೂಜಿಸುತ್ತಾ, ಧ್ಯಾನಿಸಿ ಅಂತರ್ಮುಖನಾಗಿ, ಅದರ ಸಖ್ಯದಿಂದ ಆನಂದಾನುಭವವನ್ನು ಪಡೆಯುತ್ತಾ ಪ್ರಸಾದಲಿಂಗಮೋಹಿ, ಪ್ರಸಾದಲಿಂಗವೀರ, ಪ್ರಸಾದ ಲಿಂಗಪ್ರಾಣಿ, ಪ್ರಸಾದಲಿಂಗೈಕಪರನೆಂದು ಪರಿಗಣಿಸಲ್ಪಡುತ್ತಾನೆ. (ಸೂಕ್ಷ್ಮಾಗಮ, ೮.೬೩-೬೫). ಲಿಂಗದಲ್ಲಿ ಭಕ್ತಿ, ಲಿಂಗದ ಪೂಜೆ, ಲಿಂಗದ ಸೇವೆ, ಲಿಂಗದ ಧ್ಯಾನ, ಲಿಂಗದಲ್ಲಿ ಮನಸ್ಸು, ಲಿಂಗಪೂಜೆಯಲ್ಲಿ ನಿರತವಾದ ಕೈಗಳು, ಲಿಂಗಸ್ತುತಿಯನ್ನು ಕೇಳುವ ಅಭಿಲಾಷೆಯುಳ್ಳ ಕಿವಿಗಳು, ಲಿಂಗಾರ್ಪಿತ ರಸವನ್ನು ಸ್ವೀಕರಿಸುವ ರಸನೆ, ಲಿಂಗಕ್ಕೆ ಧರಿಸಿದ ಹೂವುಗಳು, ಮೂಸಿ ನೋಡುವ ನಾಸಿಕ, ಲಿಂಗಕ್ಕೆ ಮಾಡಿದ ಅಲಂಕಾರವನ್ನು ನೋಡುವ ಕಣ್ಣುಗಳು, ಲಿಂಗಪ್ರದಕ್ಷಿಣೆಗಾಗಿಯೇ ಇರುವ ಪಾದಗಳು, ಇವು ಶರಣನ ವೈಶಿಷ್ಟ್ಯ. ಲಿಂಗದ ಮುಂದೆ ಲಿಂಗಕ್ಕಾಗಿ ಶರಣನು ಎಲ್ಲಾ ಅಂಗವಿನ್ಯಾಸಗಳನ್ನು ಅರ್ಪಿಸುವುದು ಮತ್ತು ಲಿಂಗಕ್ಕಾಗಿ ಎಲ್ಲವನ್ನೂ ಸಮರ್ಪಿಸುವುದು ಅವನ ವಿಶೇಷ. (ಸೂಕ್ಷ್ಮಾಗಮ, ೭.೪೮-೫೧).

೩೩. ಐಕ್ಯಸ್ಥಲ

'ಶಿವಜೀವೋಭಯಭ್ರಾಂತಿರಹಿತಶ್ಚೈಕ್ಯ ಉಚ್ಯತೇ' (ಸೂಕ್ಷ್ಮಾಗಮ, ೮.೩೫), ಎಂಬಂತೆ ಶಿವ-ಜೀವ ಭೇದ ಭ್ರಾಂತಿಯಿಲ್ಲದವನು ಐಕ್ಯನು. ಶರಣಸ್ಥಲದಲ್ಲಿ ಅನುಭವಕ್ಕೆ ಬಂದ ಶಿವನ ಸಖ್ಯವು ಗಾಢವಾಗಿ ಅಭೇದದಲ್ಲಿ ಪರ್ಯವಸಾನವಾದಾಗ ಐಕ್ಯಸ್ಥಲ. ಈ ಸ್ಥಲದಲ್ಲಿ ಜೀವಭಾವ ನಿವೃತ್ತಿಯಾಗಿ ಜೀವನು ಶಿವಭಾವವನ್ನು ಹೊಂದುವುದೇ ಶಿವೈಕ್ಯ, ಸಮರಸೈಕ್ಯ. ಅದನ್ನು ಹೀಗೆ ವರ್ಣಿಸಿದ್ದಾರೆ:

ಗುರುದೀಕ್ಷಾ-ಪರಿಪ್ರಾಪ್ತ-ಶಿವಲಿಂಗಾಂಗಯೋಗತಃ।
ದ್ವಿರೇಫಕೀಟನ್ಯಾಯೇನ ಶಿವೈಕ್ಯಂ ಪ್ರಾಪ್ತವಾನ್ ದ್ವಿಜಃ॥
(ಮಕುಟಾಗಮ, ೭.೩೫)

ಗುರು ಕೊಟ್ಟ ದೀಕ್ಷೆಯ ಮೂಲಕ ಪಡೆದ ಲಿಂಗ ಮತ್ತು ಅಂಗಗಳ (ಶಿವ-ಜೀವರ) ಯೋಗವು ಹಂತ ಹಂತಕ್ಕೂ ಹದಗೊಂಡು ದುಂಬಿ-ಕೀಟನ್ಯಾಯದಂತೆ ಷಟ್‌ಸ್ಥಲಬ್ರಹ್ಮಿದ್ವಿಜನು ಶಿವೈಕ್ಯವನ್ನು ಹೊಂದುತ್ತಾನೆ. ಕೀಟವು ದುಂಬಿಯನ್ನು ನೆನೆದು ನೆನೆದು ದುಂಬಿಯೇ ಆಗಿ ಪರಿಣಮಿಸುವಂತೆ ಜೀವನು ಶಿವನನ್ನು ನಿರಂತರವಾಗಿ ಧ್ಯಾನಿಸಿ ಶಿವನಾಗಿ ಪರಿಣಮಿಸುತ್ತಾನೆ. ಇದನ್ನೇ ಆಗಮಜ್ಞರು ಹೇಳುವುದು ಮುಕ್ತಿಯೆಂದು.(ಕಾರಣಾಗಮ, ೭.೬೫).

೪. ಶೈವಾಗಮಗಳ ತತ್ತ್ವವಿಚಾರ:

ಶೈವಾಗಮಗಳು ಸಾಧನಮಾರ್ಗದ ವಿಚಾರವನ್ನಲ್ಲದೆ ತತ್ತ್ವವಿಚಾರವನ್ನೂ ಮಾಡಿವೆ. ಸಾಧನಮಾರ್ಗಕ್ಕೆ ತತ್ತ್ವವಿಚಾರವು ಪೂರಕ. ತತ್ತ್ವಜ್ಞಾನನಿಷ್ಠನಿಗೆ ಸಾಧನ ಮಾರ್ಗವು ಸುಲಭ. ಶೈವ ಮತ್ತು ವೀರಶೈವ ಎರಡಕ್ಕೂ ಸಮಾನವಾದ ತತ್ತ್ವವಿಚಾರವು ಶೈವಾಗಮಗಳಲ್ಲಿ ನಿರೂಪಿತವಾಗಿದೆ. ಇಲ್ಲಿಯೂ ಗುರುವು ಮಾರ್ಗದರ್ಶಿ (ಸೂಕ್ಷ್ಮಾಗಮ, ೫.೧೯). ಪರಶಿವನು, ಚರಜಗತ್ತು ಮತ್ತು ಅಚರಜಗತ್ತು-ಇವೇ ಮೂರು ತತ್ತ್ವಗಳು:ಪತಿ, ಪಶು ಮತ್ತು ಪಾಶಃ

ಬ್ರಹ್ಮಾದಿಸ್ತಂಬಪರ್ಯಂತಂ ಪಶವಃ ಪರಿಕೀರ್ತಿತಾಃ।
ಶಿವಃ ಪತಿರಿತಿ ಪ್ರೋಕ್ತಃ ಪಾಶಃ ಕರ್ಮಮಲಾದಿಕಮ್॥
(ಸೂಕ್ಷ್ಮಾಗಮ, ೫.೨೦).

ಬ್ರಹ್ಮನಿಂದ ಹಿಡಿದು ದಂಟಿನವರೆಗೆ ಪಶುಗಳೆಂದು ಪರಿಗಣಿಸಲ್ಪಟ್ಟಿವೆ. ಶಿವನು ಪತಿಯೆಂದು ಕರೆಯಲ್ಪಡುತ್ತಾನೆ. ಕರ್ಮ, ಮಲ ಮುಂತಾದವು ಪಾಶಗಳು.

ಮೂಲತಃ ಸ್ವತಃಸಿದ್ಧ, ಸಚ್ಚಿದಾನಂದ ಸ್ವರೂಪ, ನಿತ್ಯ-ನಿರಂಜನ-ಶುದ್ಧ-ನಿರ್ಮಲ-ನಿರುಪಪ್ಲವ-ನಿರ್ಗುಣ-ನಿತ್ಯಸಂಪನ್ನ-ನಿರ್ಮಾಯ-ನಿರುಪಾಧಿಕ-ಅಕಾಯ-ಪರಾತ್ಪರ-

ಸನಾತನ- ಶಿವ-ಪರಂಜ್ಯೋತಿ ಇತ್ಯಾದಿ ವಿಶೇಷಣವಿಶಿಷ್ಟನಾದ ರುದ್ರ-ಶಿವನೊಬ್ಬನೇ ಇದ್ದನು. ಅವನು ಪಂಚಸಾದಾಕ್ಯಾತೀತ, ವೇದ-ವೇದಾಂತಗೋಚರ, ಷಡಧ್ವಕರ್ತೃ, ಸರ್ವತತ್ತ್ವಗಳನ್ನೂ ಮೀರಿದವನು.(ಸೂಕ್ಷ್ಮಾಗಮ, ೧.೧೪-೧೭). ಅವನೇ ಜಗದುತ್ಪತ್ತಿಗೆ ಕಾರಣಃ

ಏವಂರೂಪಃ ಪರಾತ್ಮಾ ಹಿ ಪಶುಪಾಶವಿಮೋಚಕಃ।
ಶಂಭುಃ ಕದಾಚಿನ್ನಿಜಯಾ ಪ್ರಕೃತ್ಯಾ ಲೀಲಯಾ ಸ್ವಯಮ್॥
ಸೃಷ್ಟ್ಯರ್ಥಂ ಸರ್ವತತ್ತ್ವಾನಾಂ ಜಗದುತ್ಪತ್ತಿಕಾರಣಮ್।
ಯೋಗಿನಾಮುಪಕಾರಾಯ ಸ್ವೇಚ್ಛಯಾವಚಿಂತಯಚ್ಛಿವಃ॥
(ಸೂಕ್ಷ್ಮಾಗಮ, ೧.೧೮-೧೯).

ಮೇಲೆ ವಿವರಿಸಿದ ರೂಪವುಳ್ಳ ಪರಮಾತ್ಮನೇ ಪಶುಗಳ (ಜೀವಿಗಳ) ಪಾಶಗಳನ್ನು (ಮಾಯಾಮಲಾದಿ ಬಂಧನಗಳನ್ನು) ಬಿಡಿಸುವವನು. ಅದಕ್ಕಾಗಿಯೇ ಆ ಶಂಭುವು ಒಮ್ಮೆ ತನ್ನ ಸಹಜ ಶಕ್ತಿಯ ಲೀಲೆಯಿಂದ ಸೃಷ್ಟಿಗೋಸ್ಕರ ಜಗದುತ್ಪತ್ತಿಗೆ ಕಾರಣವಾದ ಸರ್ವತತ್ತ್ವಗಳನ್ನು ಯೋಗಿಗಳಿಗೆ ಉಪಕರಿಸಲು ಸ್ವೇಚ್ಛೆಯಿಂದ ಧ್ಯಾನಿಸಿದನು. ಇದೆಲ್ಲವೂ ಋಗ್ವೇದದ ನಾಸದೀಯಸೂಕ್ತದಲ್ಲಿ ಬರುವ '**ಆನೀದವಾತಂ ಸ್ವಧಯಾ ತದೇಕಂ, ತಸ್ಮಾದ್ಧಾನ್ಯನ್ನ ಪರಃ ಕಿಂಚನಾಸ**' ಮತ್ತು '**ಕಾಮಸ್ತದಗ್ರೇ ಸಮವರ್ತತಾಧಿ, ಮನಸೋ ರೇತಃ ಪ್ರಥಮಂ ಯದಾಸೀತ್**' (X೧೨೯.೨,೪), ಎಂಬ ಶ್ರುತಿವಾಕ್ಯಗಳ ವಿವರಣೆ. ಆ ಪರಶಿವನೇ ತನ್ನ ಶಕ್ತಿಸ್ಪಂದದಿಂದ ಮೂವತ್ತಾರು. ತತ್ತ್ವಗಳ ರೂಪದಲ್ಲಿ ಪರಿಣಮಿಸಿದನು. ಈ ಮೂವತ್ತಾರು ತತ್ತ್ವಗಳಿಂದಲೇ ಚರಾಚರಾತ್ಮಕವಾದ ಜಗತ್ತು ನಿರ್ಮಾಣವಾಗಿದೆ. ಈ ಜಗತ್ತಿನಲ್ಲಿ ಎಲ್ಲವೂ ಪರಮಾತ್ಮನ ಆಜ್ಞಾಬಲದಿಂದಲೇ ನಿಂತಿದೆ:

ಯಚ್ಚ ಕಿಂಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿ ವಾ।
ತತ್ಸರ್ವಂ ಶಂಕರಸ್ಯಾಜ್ಞಾಬಲೇನ ಸಮಧಿಷ್ಠಿತಮ್॥
(ಚಂದ್ರಜ್ಞಾನಾಗಮ, ೧.೪೨)

ಯಾವುದು ಈ ಜಗತ್ತಿನಲ್ಲಿ ಕಾಣುತ್ತದೆಯೋ, ಕೇಳಿ ಬರುತ್ತದೆಯೋ ಅದೆಲ್ಲವೂ ಶಂಕರನ ಆಜ್ಞಾಬಲದಿಂದಲೇ ನಿಂತಿದೆ, ವ್ಯವಹಾರವನ್ನು ನಡೆಸಿದೆ. 'ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದ್ಯಾವಾಪೃಥಿವ್ಯೌ ವಿಧೃತೇ ತಿಷ್ಠತಃ' (ಬೃಹದಾರಣ್ಯಕೋಪನಿಷತ್, ೩.೮.೧೦) ಇತ್ಯಾದಿ ಉಪನಿಷತ್ತುಗಳ ಉಕ್ತಿಗಳ ಪ್ರತಿಧ್ವನಿಯನ್ನು ಕಾಣಬಹುದು. **ಶಕ್ತಿವಿಶಿಷ್ಟನಾದ ಪರಶಿವನೇ ಪತಿ ತತ್ತ್ವ.**

ಪಶುಪದಾರ್ಥ ಮತ್ತು ಪಶುಗಳ ಭೇದದ ಬಗ್ಗೆ ಶೈವಾಗಮಗಳು ಮೂಲ ಭೂತವಾದ ವಿಷಯಗಳನ್ನು ನಿರೂಪಿಸುತ್ತವೆ: ಪಶುವೆಂದರೆ ಅವ್ಯಾಪಕ, ಅಕ್ಷಣಿಕ, ಅನೇಕ, ಅಜಡ, ಅಕರ್ತೃವಲ್ಲದವನು, ಭಿನ್ನಚಿಚ್ಛಕ್ತಿಯುಕ್ತನು, ಪಾಶವಿಮುಕ್ತನಾದಾಗ ಶಿವತ್ವವನ್ನು ಹೊಂದುವವನು, ದೇಹಕ್ಕಿಂತ ಭಿನ್ನ, ಅನಶ್ವರ, ಅವ್ಯಾಪಿ, ವಿಭಿನ್ನ, ಮಲಯುಕ್ತ, ಅಜಡ,

ಸ್ವಕರ್ಮಫಲವನ್ನು ಅನುಭವಿಸುವವನು, ಕಿಂಚಿಜ್ಞನು, ಈಶ್ವರಯುಕ್ತ. ಪಶುಗಳು ಮೂರು ವಿಧ-ಸಕಲ, ಪ್ರಲಯಾಕಲ ಮತ್ತು ವಿಜ್ಞಾನಾಕಲ ಎಂದು. ಮಲದಿಂದ ಪ್ರತಿಬಂಧಿಸಲ್ಪಟ್ಟ, ಚಿಚ್ಛಕ್ತಿಯುಳ್ಳವನಾಗಿ ಅದರ ಪ್ರಸಾದಕ್ಕೆ ಕಲಾದಿಗಳನ್ನು ಹೊಂದಿ ಕರ್ಮವಶನಾದವನು ಸಕಲ. ಸಕಲನಂತೆ ಪ್ರತಿಬಂಧಿಸಲ್ಪಟ್ಟ ಚಿಚ್ಛಕ್ತಿಯುಳ್ಳವನಾಗಿ ಕರ್ಮಪಾಕದಿಂದ ಕಲಾದಿಗಳಿಲ್ಲದ ಏನಾದರೂ ಭೋಗಕ್ಕಾಗಿ ಕಲಾದಿಗಳ ಸಂಬಂಧವನ್ನು ಸ್ವೀಕರಿಸಿದವನು ಪ್ರಲಯಾಕಲ. ವಿಜ್ಞಾನಾದಿಗಳಿಂದ ಎಲ್ಲಾ ಕರ್ಮಗಳನ್ನು ಕಲೆಗಳನ್ನೂ ಬಿಟ್ಟು ಚಿಚ್ಛಕ್ತಿಯನ್ನು ಮುಸುಕಿದ ಮಲಮಾತ್ರ ಯುಕ್ತನಾದವನು ವಿಜ್ಞಾನಾಕಲ. (ಮೃಗೇಂದ್ರಾಗಮ, ೬.೭;ಪರಾಖ್ಯಾಗಮ, ಪಶುಪಟಲ, ೧೫; ಪೌಷ್ಕರಾಗಮ, ಪಶುಪಟಲ ೨-೫).

ಪಾಶಗಳ ವಿಷಯದಲ್ಲಿ ಶೈವಾಗಮಗಳಲ್ಲಿ ಬಂದ ಕೆಲವು ಮುಖ್ಯಾಂಶಗಳು ಹೀಗಿವೆ: ಆಣವ, ತಿರೋಧಾಯಕ ಶಕ್ತಿ, ಬಿಂದು, ಮಾಯಾ ಮತ್ತು ಕರ್ಮ- ಇವು ಪಾಶಗಳು. ಆಣವಮಲಾವೃತವಾದ ಆತ್ಮವು ಕಿಂಚಿಜ್ಞವಾಗುತ್ತದೆ. ಸ್ವರೂಪಜ್ಞಾನವನ್ನು ಮರೆ ಮಾಡುವುದೇ ತಿರೋಧಾಯಕ ಶಕ್ತಿ. ಯಾವುದರಿಂದ ಲಯಾದಿ ಶಿವನ ಭೇದವುಂಟಾಗುತ್ತದೆಯೋ ಅದೇ ಬಿಂದು. ಅದೇ ಕುಂಡಲಿನೀ ಮಾಯೆ ಮತ್ತು ಕರ್ಮಗಳು ದೇಹ ಮತ್ತು ಇಂದ್ರಿಯಗಳಿಗೆ ಕಾರಣವಾಗಿವೆ. (ಪೌಷ್ಕರಾಗಮ, ಪಶು ಪಟಲ, ೧೨೫; ಬಿದು ಪಟಲ ೧,೧೨). ಹೀಗೆ ಪಾಶಗಳನ್ನು ಶೈವಾಗಮಗಳು ಅಲ್ಲಲ್ಲಿ ನಿರೂಪಿಸಿವೆ.

ಮೇಲಿನ ನಿರೂಪಣೆಯಿಂದ ಶೈವ ಮತ್ತು ವೀರಶೈವ ತತ್ತ್ವದರ್ಶನದ ಸಮಾನಾಂಶಗಳು ಶೈವಾಗಮಗಳ ಪೂರ್ವೋತ್ತರ ಭಾಗಗಳಲ್ಲಿ ಕಂಡುಬರುತ್ತವೆಯೆಂಬುದು ಸ್ಪಷ್ಟವಾಗುತ್ತದೆ. ಪತಿ, ಪಶು, ಪಾಶ ಎಂಬ ಮೂರು ತತ್ತ್ವಗಳು ಎರಡೂ ದರ್ಶನಗಳಿಗೆ ಸಮ್ಮತ. ಪತಿತತ್ತ್ವದ ನಿರೂಪಣೆಯಲ್ಲಿ ಶಿವ ಶಕ್ತಿ ವಿಶಿಷ್ಟತ್ವ, ಜಗತ್ತಿನ ಅಭಿನ್ನನಿಮಿತ್ತೋಪಾದಾನಕಾರಣತ್ವ ಮುಂತಾದ ವಿಷಯಗಳು ಸರ್ವಮಾನ್ಯ. ಪಶುಸ್ವರೂಪ, ಪಾಶಗಳ ಸ್ವರೂಪ, ಇವುಗಳ ಬಗ್ಗೆ ಒಮ್ಮತವಿದೆ. ಆದರೆ ಮುಕ್ತಿಗೆ ಸಾಧಕವಾದ ಮಾರ್ಗ ಮತ್ತು ಮುಕ್ತಿಯ ಸ್ವರೂಪದಲ್ಲಿ ಕ್ರಮವಾಗಿ 'ಸಾಯುಜ್ಯ' ಮತ್ತು 'ಸಮರ ಸೈಕ್ಯ' ಎಂಬ ರೀತಿಯ ಭೇದ ಕಂಡರೂ ಆನಂದಾನುಭವರೂಪ ಮುಕ್ತಿಯ ಸ್ವಾರಸ್ಯದ ವಿಷಯದಲ್ಲಿ ಸಾಮ್ಯವಿದೆ.

ಆಕರಗಳು

೧. ಅಜಿತಾಗಮ, ಇನ್‌ಸ್ಟಿಟ್ಯೂಟ್ ಆಫ್ ಫ್ರೆಂಚ್ ಇಂಡಾಲಜಿ, ಪಾಂಡಿಚೆರಿ.

೨. ಸಿದ್ಧಾಂತಶಿಖಾಮಣಿ, ಪಂಚಾಚಾರ್ಯ ಪ್ರೆಸ್, ಮೈಸೂರು.

೩. ಶ್ರೀಕಂಠಭಾಷ್ಯ: ವೇದಾಂತಸೂತ್ರದ ಮೇಲೆ.

೪. ಪಾರಮೇಶ್ವರತಂತ್ರ - 'ತಂತ್ರಸಂಗ್ರಹ', ೧೯೧೪.

೫. ತಂತ್ರಸಮುಚ್ಚಯ, ತ್ರಿವೇಂದ್ರಮ್ ಸಂಸ್ಕೃತ ಸೀರೀಸ್, ನಂ. ೧೫೧.

೬. ಶಿವಾಗಮ ಸೌರಭ, ಜ.ಚ.ನಿ. ಅಧ್ಯಯನ ಪೀಠ, ಬೆಂಗಳೂರು.

೭. ಶಿವಾನುಭವ : ಡಾ|| ಎಸ್.ಸಿ.ನಂದಿಮಠ, ಸಂ. ೭. ಸಂಖ್ಯೆ ೧ (ಏಪ್ರಿಲ್ ೧೯೩೧)

೮. ಪೂರ್ವಕಾರಣಾಗಮ : ಸಂ.ಕೆ.ಷಣ್ಮುಖ ಸುಂದರ ಮುದಲಿಯಾರ್, ೧೯೨೦

೯. ರೌರವಾಗಮ, ಇನ್‌ಸ್ಟಿಟ್ಯೂಟ್ ಆಫ್ ಫ್ರೆಂಚ್ ಇಂಡಾಲಜಿ, ಪಾಂಡಿಚೇರಿ.

೧೦. ಕ್ರಿಯಾಸಾರ ; ನೀಲಕಂಠ ಶಿವಾಚಾರ್ಯ, ಪ್ರಾಚ್ಯ ವಿದ್ಯಾ ಸಂಸ್ಥೆ, ಮೈಸೂರು.

೧೧. ಕೈವಲ್ಯಸಾರ : ಶ್ರೀ ಮರಿತೋಂಟದಾರ್ಯ, ಸೋಲಾಪುರ ವಾರದವರ ಪ್ರಾಕಾಶನ.

೧೨. ಸೂಕ್ಷ್ಮಾಗಮ, ಚಂದ್ರಜ್ಞಾನಾಗಮ, ಕಾರಣಾಗಮ- 'ಶಿವಾಗಮ ಸಂಗ್ರಹ', ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

೧೩. ಸುಪ್ರಭೇದಾಗಮ, ವೀರಶೈವ ಸದಾಚಾರಸಂಗ್ರಹಾಂತರ್ಗತ.

೧೪. ವಾತುಲಶುದ್ಧ, ಓ.ಆರ್.ಐ, ಮೈಸೂರು.

೧೫. ಶಿವಾಗಮ- ಸಿದ್ಧಾಂತಶೇಖರ (ವಿಶ್ವನಾಥ) ಸಂ||ಸೀತಾರಾಮ ಸೋಮಯಾಜಿ, ಮೈಸೂರು, ೧೯೭೧.

೧೬. ಶೈವಪರಿಭಾಷಾ, ಓ.ಆರ್.ಐ. , ಮೈಸೂರು. ೧೯೫೦.

೧೭. ಮೃಗೇಂದ್ರಾಗಮ: ಸಂ. ಪಂಡಿತ ಮಧುಸೂದನ ಕೌಲ್‌ಶಾಸ್ತ್ರಿ, ೧೯೩೦.

೧೮. ಮಕುಟಾಗಮ, 'ಶಿವಾಗಮ ಸಂಗ್ರಹ' ಪಂಚಾಚಾರ್ಯ ಪ್ರೆಸ್, ಮೈಸೂರು.

೧೯. ಪೌಷ್ಕರಾಗಮ, ಸಂ. ಷಣ್ಮುಖ ಸುಂದರ ಮುದಲಿಯಾರ್. ೧೯೧೨.

೨೦. ಪಾಶುಪತಾಗಮ- 'ಶಿವಾಗಮ ಸೌರಭ' ದಲ್ಲಿ ಅನುಬಂಧ ರೂಪದಲ್ಲಿ ಪ್ರಕಟಿತ.

೨೧. ಶ್ರೀಕರ ಭಾಷ್ಯ, ಓ.ಆರ್.ಐ., ಮೈಸೂರು.

೨೨. ಸ್ವಾಯಂಭುವಾಗಮ - ೩ ಪಟಲಗಳು 'ಶಿವಾಗಮಸೌರಭ'ದಲ್ಲಿ ಪ್ರಕಟಿತ.

***

ಜೈನಧರ್ಮದಲ್ಲಿ ಅಹಿಂಸೆ

ಡಾ|| ಎಂ.ಎ.ಜಯಚಂದ್ರ

ಅಹಿಂಸೆ ಮಾನಸಿಕ ಪವಿತ್ರತೆಯ ಹೆಸರಾಗಿದೆ. ಅದರ ವ್ಯಾಪಕ ಕ್ಷೇತ್ರದಲ್ಲಿ ಸತ್ಯ, ಆಚಾರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹವೇ ಮೊದಲಾದ ಸದ್ಗುಣಗಳು ಸೇರುತ್ತವೆ. ಆದ್ದರಿಂದ ಅಹಿಂಸೆಯನ್ನು '**ಪರಮ-ಧರ್ಮ**' ವೆಂದು ಹೇಳಲಾಗಿದೆ. ಜಗತ್ತಿನ ಜಲ,ಸ್ಥಲ ಮತ್ತು ಆಕಾಶದಲ್ಲೆಡೆ ಸೂಕ್ಷ್ಮಜೀವಿಗಳು ತುಂಬಿವೆ. ಆದ್ದರಿಂದ ಬಾಹ್ಯ ಆಚರಣದಲ್ಲಿ ಪೂರ್ಣ ಅಹಿಂಸಕರಾಗಿ ಇರುವುದು ಅಸಂಭವ. ಆದರೆ ಅಂತರಂಗದಲ್ಲಿ ಸಮತೆಯಿದ್ದರೆ, ಹೊರಗಿನ ಪ್ರವೃತ್ತಿಗಳು ಪ್ರಮಾದ-ರಹಿತವಾಗಿದ್ದು, ಪ್ರಯತ್ನ ಪೂರ್ವಕವಾಗಿ ನಿಯಂತ್ರಣಗೊಳಿಸಿದ್ದರೆ, ಹೊರಗೆ ಸೂಕ್ಷ್ಮಜೀವಿಗಳ ಘಾತವಾದರೂ ಸಹ, ಸಾಧಕನು ತನ್ನ ಪವಿತ್ರತೆಯ ಬಲದಿಂದ ಅಹಿಂಸಕನಾಗಿರಬಲ್ಲನು.

ಲೋಕ ತಿಳಿದಿರುವಷ್ಟು ಅಹಿಂಸೆಯ ಕ್ಷೇತ್ರ ಸಂಕುಚಿತವಾಗಿಲ್ಲ. ಅಹಿಂಸೆಯ ಆಚರಣೆ ಒಳಗೆ ಹಾಗೂ ಹೊರಗೆ ಎರಡೂ ಕಡೆಯಿಂದಲೂ ಆಗುತ್ತವೆ. ಅಂತರಂಗದಲ್ಲಿ ಚಿತ್ತ ಸ್ಥಿರವಾಗಿರುವುದೇ ಅಹಿಂಸೆಯಾಗಿದೆ. ಜೀವಿಯು ತನ್ನ ಸಾಮ್ಯ-ಭಾವದಲ್ಲೆ ಚೆನ್ನಾಗಿ ಸೇರಿರುವುದೇ ಅಹಿಂಸೆ. ಕ್ರೋಧ-ಮಾನ-ಮಾಯಾ-ಲೋಭದಿಂದ ದೂರವಾದ ಪವಿತ್ರ ವಿಚಾರ ಮತ್ತು ಸಂಕಲ್ಪವೇ ಅಹಿಂಸೆ. ಅಂತರಂಗದಲ್ಲಿ ಇಂಥ ಆಂಶಿಕ ಸಾಮ್ಯತೆಯನ್ನು ತರದ ಹೊರತು ಅಹಿಂಸೆಯ ಕಲ್ಪನೆ ಮಾಡಲು ಬರುವುದಿಲ್ಲ.

ಅಹಿಂಸೆ ಕೇವಲ ಒಂದು ವ್ರತವಲ್ಲ. ಅಹಿಂಸೆ ಒಂದು ವಿಚಾರ, ಒಂದು ಸಮಗ್ರ ಚಿಂತನೆ. ಅಹಿಂಸೆ ಯಾವುದೇ ಮಂದಿರ ಅಥವಾ ತೀರ್ಥಸ್ಥಳಕ್ಕೆ ಹೋಗಿ ಬೆಳಿಗ್ಗೆ-ಸಂಜೆ ಸಂಪನ್ನಗೊಳಿಸುವ ಯಾವುದೇ ಅನುಷ್ಠಾನವಲ್ಲ. ಅದು ಎಂಟು ಯಾಮಗಳಲ್ಲೂ ಆಚರಿಸಬೇಕಾಗಿರುವ ಸಂಪೂರ್ಣ ಜೀವನದರ್ಶನವಾಗಿದೆ. ಇದು ಪ್ರಪಂಚದ ಸರ್ವ ಧರ್ಮಗಳ ಬೇರಾಗಿದೆ.

ಮಾನವತೆಯ ಪರಿಭಾಷೆಯನ್ನು, ಅದರ ಗುರುತ್ವವನ್ನು ಹೊರಬಲ್ಲ, ಒಂದೇ ಒಂದು ಶಬ್ದದಲ್ಲಿ ಹೇಳುವ ಅವಶ್ಯಕತೆವುಂಟಾದರೆ, ಆಗ 'ಅಹಿಂಸೆ' ಯನ್ನು ಬಿಟ್ಟು ಬೇರೊಂದು ಶಬ್ದ ದೊರೆಯುವುದಿಲ್ಲ.

ಅದು ನಕಾರಾತ್ಮಕ ವಿಚಾರ ಮತ್ತು ಜೀವನದಲ್ಲಿ ವ್ಯವಹಾರ ಯೋಗ್ಯವಾದುದಲ್ಲ ಎಂಬ ಆರೋಪವನ್ನು ಪ್ರಾಯಶಃ ಅಹಿಂಸೆಯ ಮೇಲೆ ಹಾಕುತ್ತಾರೆ. ಆದರೆ ಈಗಾಗಲೇ ಅಹಿಂಸೆಯ ಮೇಲೆ ಅಧ್ಯಯನ ಅಗಿದೆಯೋ, ಹಾಗೂ ಸಮಾಜದಲ್ಲಿ ಅಹಿಂಸಕ ಜೀವನದ ಯಾವ ಕೊಂಚ ಉದಾಹರಣೆಗಳು ಎದುರಿಗೆ ಬಂದಿವೆಯೋ, ಅವುಗಳ ಆಧಾರದ ಮೇಲೆ

ಈ ಎರಡು ಆರೋಪಗಳು ನಿರಾಧಾರವೆಂದು ಸಿದ್ಧವಾಗುವುದು.

ನಮ್ಮ ಸಂತರು ಹಾಗೂ ಮುನಿ-ಆಚಾರ್ಯರನ್ನು ಬಿಟ್ಟರೂ ಸಹ, ಅನೇಕ ಉದಾಹರಣೆಗಳು ನಮ್ಮ ಮುಂದಿವೆ. ಮಹಾತ್ಮ ಗಾಂಧಿಯು ಅಹಿಂಸೆಯ ಸಕಾರಾತ್ಮಕ ಪ್ರಯೋಗವನ್ನು ಮಾಡಿ, ರಕ್ತ-ರಹಿತ ಕ್ರಾಂತಿಯ ಬೆಂಬಲದಿಂದ, ತನ್ನ ರಾಷ್ಟ್ರವನ್ನು ಸ್ವಾಧೀನಗೊಳಿಸುವ ವಿಶಿಷ್ಟ ಕಾರ್ಯವನ್ನು ನಮ್ಮ ಮುಂದೆಯೇ ಸಂಪನ್ನಗೊಳಿಸಿದ್ದಾರೆ. ಇದೇ ರೀತಿ ಅನೇಕ ಮಹಾಪುರುಷರು, ಹಿಂಸಾ-ರಹಿತ ಬದುಕನ್ನು ನಡೆಸಿ, ಅಹಿಂಸೆ ವ್ಯಾವಹಾರಿಕವಾದುದೆಂದು ಸಾಬೀತುಗೊಳಿಸಿದ್ದಾರೆ. ಅದು ಪೂರ್ಣವಾಗಿ ವ್ಯಾವಹಾರಿಕ ಜೀವನ ಪದ್ಧತಿಯಾಗಿದೆ. ಅದು ನಿಷ್ಪಾಪ, ನಿರಾಕುಲ, ಸಂತುಷ್ಟ ಮತ್ತು ಅಖಂಡ ಜೀವನ ನಡೆಸುವ ಒಂದು ಕಲೆಯಾಗಿದೆ. ಅಹಿಂಸೆ ವಿಕಾರದಿಂದ ಉರಿಯುತ್ತಿರುವ ಚಿತ್ತದಲ್ಲಿ ಸಮತೆ ಮತ್ತು ಶಾಂತಿಯ ಪುಷ್ಪ ಅರಳಿಸುವ ಸಾಮರ್ಥ್ಯವನ್ನು ಹೊಂದಿದೆ.

ಅಹಿಂಸೆ ನಿರ್ಮಲ ಚೇತನದಿಂದ ಅನುಶಾಸಿತ, ವಿಧಾಯಕ ಹಾಗೂ ವ್ಯವಹಾರ್ಯ ಜೀವನ ವಿಧಾನವಾಗಿದೆ. ಅದು ಮನುಷ್ಯನ ಎಲ್ಲಕ್ಕಿಂತ ದೊಡ್ಡ ಬಂಡವಾಳವಾಗಿದೆ. ಮನುಜತೆಯ ಪ್ರಧಾನ ವಿಷಯ. ಜೈನಾಚಾರ್ಯರು ಅಹಿಂಸೆಯನ್ನು ಪರಮ ಧರ್ಮವೆಂದೂ, ಹಿಂಸೆಯನ್ನು ದೊಡ್ಡ ಪಾಪವೆಂದೂ ತಿಳಿದಿದ್ದಾರೆ. ಅವರು ಸುಳ್ಳು-ಕಳ್ಳತನ-ಕುಶೀಲ ಮತ್ತು ಪರಿಗ್ರಹ ಮೊದಲಾದ ಎಲ್ಲ ಪಾಪವನ್ನು ಹಿಂಸೆಯ ರೂಪವೆಂದು ಸ್ಥಾಪಿಸಿದ್ದಾರೆ. ಆದ್ದರಿಂದಲೇ ಅಹಿಂಸೆಯನ್ನು ಸಾಧ್ಯವೆಂದೂ, ಸತ್ಯ, ಆಚಾರ್ಯ, ಬ್ರಹ್ಮಚರ್ಯ ಹಾಗೂ ಅಪರಿಗ್ರಹ ಮೊದಲಾದ ಉಳಿದ ವ್ರತಗಳನ್ನು ಸಾಧಕವೆಂದು ಭಾವಿಸಿದ್ದಾರೆ. ಅವರು ಆಂತರಿಕ ಅಹಿಂಸೆಯನ್ನು '**ನಿಶ್ಚಯ-ಅಹಿಂಸೆ**' ಯೆಂದೂ, ಬಾಹ್ಯ ಆಚರಣೆಯಲ್ಲಿ ಪಾಲಿಸುವ ಅಹಿಂಸೆಯನ್ನು '**ವ್ಯವಹಾರ-ಅಹಿಂಸೆ**' ಎಂದು ಹೇಳಿದ್ದಾರೆ.

ಜೈನ ಸಿದ್ಧಾಂತದ ಅನುಸಾರ ಜೀವದ ಅವಿಕಾರ ಭಾವ ಅಹಿಂಸೆ, ವಿಕಾರಿ ಭಾವವೇ ಹಿಂಸೆಯಾಗಿದೆ. ಬೇರೆ ಮಾತುಗಳಲ್ಲಿ, ಯಾವನು ಪ್ರಮಾದದಿಂದ ಅಭಿಭೂತನೋ ಅವನು ಹಿಂಸಕ ಹಾಗೂ ಯಾವನು ಅಪ್ರಮತ್ತನೋ ಅವನೇ ಅಹಿಂಸಕನೆಂದು ಹೇಳಿದ್ದಾರೆ.

ಅಹಿಂಸೆ ಮಾನವ-ಮನದ ಸ್ಥಾಯೀಭಾವ. ರಾಜನೀತಿಯ ಕುಚಕ್ರದಲ್ಲಿ, ಕ್ಷುದ್ರ, ಸ್ವಾರ್ಥಗಳ ಪೂರ್ತಿಗಾಗಿ, ಯಾವುದೋ ಧರ್ಮದ ಹೆಸರಿನಲ್ಲಿ, ಯಾವುದೋ ಭಾಷೆ ಮತ್ತು ವೇಷದ ಹೆಸರಿನಲ್ಲಿ ಮತ್ತೆ ಮತ್ತೆ ಹಿಂಸೆಯನ್ನು ಪ್ರಚೋದಿಸಲಾಗುತ್ತದೆ. ಸಂತರು ಮಹಾತ್ಮರುಗಳ ಮೂಲಕ ಎಚ್ಚರಿಕೆಯಿಂದ ಹಚ್ಚಿಸಿದ ಅಹಿಂಸಾ ಜ್ಯೋತಿಯನ್ನು ಆರಿಸುವ ಪ್ರಯತ್ನ ಮಾಡಲಾಗಿದೆ. ಆ ಜ್ಯೋತಿ ಕೇವಲ ಅತ್ತ ಇತ್ತ ಅಲ್ಲಾಡಿ ಹಾಗೆ ಇದ್ದು ಬಿಡುತ್ತದೆ. ಅದು ಯಾವಾಗಲೂ ಆರುವುದಿಲ್ಲ.

ಅಹಿಂಸೆ ಅನಂತ ಕಾಲದವರೆಗೆ ಮಾನವ ಮನಸ್ಸನ್ನು ಬೆಳಗುತ್ತಲೇ ಇರುವದು. ಅದು ಸ್ವಲ್ಪ ಸಮಯದಲ್ಲೇ ಆರಿ ಹೋಗಲು, ಅದೇನು ಸಾಲ ತಂದ ಎಣ್ಣೆಯಿಂದ

ಉರಿಯುವ ದೀಪವಲ್ಲ. ಅಹಿಂಸೆಯಾದರೋ ಒಂದು ಆಂತರಿಕ ಪ್ರಕಾಶ. ಅದು ಮಾನವತೆಯ ಸಹಜ-ಸ್ವಾಭಾವಿಕ ಹಾಗೂ ಶಾಶ್ವತ ಜ್ಯೋತಿ. ಅದನ್ನು ಎಂದೂ ಆರಿಸಲು ಸಾಧ್ಯವಿಲ್ಲ. ಭಾವನೆಗಳನ್ನು ಉದ್ರೇಕಿಸಿ, ಮನುಷ್ಯನನ್ನು ಕೆಲವು ಕಾಲದವರೆಗೆ ಸೈತಾನನನ್ನಾಗಿ ಮಾಡಬಹುದು, ಆದರೆ ಅವನನ್ನು ಸದಾ ಸೈತಾನನನ್ನಾಗಿ ಮಾಡಲು ಸಾಧ್ಯವಿಲ್ಲ.

ಹಿಂಸೆಯ ಮೇಲೆ ಅಹಿಂಸೆಯ ವಿಜಯಕ್ಕೆ ಇದೇ ಎಲ್ಲಕ್ಕಿಂತಲೂ ದೊಡ್ಡ ಪ್ರಮಾಣವಾಗಿದೆ.

ಜೈನ ಆಗಮದಲ್ಲಿ ಅಹಿಂಸೆ

ಅಹಿಂಸೆ ಜೈನ ಧರ್ಮದ ಪ್ರಾಣ. ಆದ್ದರಿಂದ ಜೈನಾಗಮದಲ್ಲಿ ಅಹಿಂಸೆಯ ಪ್ರೇರಣೆಗಾಗಿ ಮತ್ತು ಹಿಂಸೆಯ ನಿಷೇಧಕ್ಕಾಗಿ ಬಹಳ ಬರೆಯಲಾಗಿದೆ. ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಅಮೃತಚಂದ್ರಸ್ವಾಮಿ ಎಂಬ ಪ್ರಸಿದ್ಧ ದಿಗಂಬರ ಆಚಾರ್ಯರು ಇದ್ದರು. ಅವರು ಅನೇಕ ಶಾಸ್ತ್ರಗಳನ್ನು ರಚಿಸಿದರು. ಹಿಂಸೆ ಮತ್ತು ಅಹಿಂಸೆಯ ಪರಿಭಾಷೆಗಾಗಿಯೇ ಅವರು ಒಂದು ಸ್ವತಂತ್ರ ಗ್ರಂಥ ರಚಿಸಿದರು. ಅಹಿಂಸೆಯ ಮಾರ್ಗದಿಂದ ನಾಲ್ಕೂ ಪುರುಷಾರ್ಥಗಳು ಸಿದ್ಧಿಸುತ್ತವೆ ಎಂಬ ವಿಶ್ವಾಸದಿಂದ ಅವರು ತಮ್ಮ ಗ್ರಂಥಕ್ಕೆ ಇಟ್ಟ ಹೆಸರು ''ಪುರುಷಾರ್ಥ-ಸಿದ್ಧಿ-ಉಪಾಯ''.

ಅಮೃತಚಂದ್ರಸ್ವಾಮಿಯು ಈ ಗ್ರಂಥದಲ್ಲಿ ಹಿಂಸೆ ಮತ್ತು ಅಹಿಂಸೆಯ ಯಾವ ಸೂಕ್ಷ್ಮ ವಿಶ್ಲೇಷಣೆ ಮಾಡಿರುವರೋ, ಅನಂತರದ ಆಚಾರ್ಯರು ಅವರ ವಿಷಯದಲ್ಲಿ,'ಹಿಂಸಾ-ಅಹಿಂಸಾ ವಿಷಯದಲ್ಲಿ ಆಗಮದಲ್ಲಿ ಎಲ್ಲಿಯೇ ಆಗಲಿ, ಏಷ್ಟೆಲ್ಲ ಸಿಗುವುದೋ, ಅದು ಬೀಜ ರೂಪದಿಂದ 'ಪುರುಷಾರ್ಥ-ಸಿದ್ಧಿ-ಉಪಾಯ' ದಲ್ಲಿ ಅವಶ್ಯವಾಗಿದೆ. ಯಾವುದು ಈ ಗ್ರಂಥದಲ್ಲಿ ಇಲ್ಲವೋ ಅದು ಬೇರೆ ಕಡೆ ಎಲ್ಲಿಯೂ ಇಲ್ಲ '' ಎಂದು ಭಾವಿಸಿದ್ದಾರೆ.

ಅವರ ವಿವೇಚನೆಯ ಕೆಲವು ಸೂತ್ರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗುವುದು.

ಹಿಂಸೆ ತನ್ನದೇ ಆಗಿರುತ್ತದೆ-

ಮನಸ್ಸಿನಲ್ಲಿ ಕ್ರೋಧ-ಮಾನ-ಮಾಯಾ-ಲೋಭ ಮೊದಲಾದ ಕಷಾಯಗಳ ಉತ್ಪತ್ತಿಯೇ ಹಿಂಸೆ. ಮನಸ್ಸಿನ ನಿಷ್ಕಷಾಯ, ನಿರ್ಮಲ ಪರಿಣತಿಯೇ ಅಹಿಂಸೆ. ಯಾವಾಗ ಜೀವ ರಾಗ-ದ್ವೇಷ-ಮೋಹ ರೂಪದ ಪರಿಣಾಮಗಳಿಂದ ಪ್ರೇರಿತನಾಗುವುದಿಲ್ಲವೋ, ಆಗ ಪ್ರಾಣಗಳ ವ್ಯಪರೋಪಣವಾದರೂ ಸಹ ಅವನು ಅಹಿಂಸಕನಾಗಿರುತ್ತಾನೆ. ಹಾಗೆಯೇ ಯಾವಾಗ ರಾಗ ಮೊದಲಾದ ಕಷಾಯಗಳಿಂದ ಕೂಡಿದಾಗ ಯಾವುದೇ ಪ್ರಾಣದ ವಿಘಾತವಾಗದಿದ್ದರೂ ಸಹ ಅವನು ಹಿಂಸಕನೇ.

ಹಿಂಸೆಯ ಸಂದರ್ಭದಲ್ಲಿ ಬಹುಶಃ ಬೇರೆಯವರಿಗೆ ಪೀಡೆ ಉಂಟು ಮಾಡುವುದೇ ಹಿಂಸೆಯೆಂದು ತಿಳಿಯಲಾಗಿರುತ್ತದೆ. ಯಾವ ವ್ಯಕ್ತಿ ಕೋಪಿಷ್ಠನಾಗಿ ಯಾರಿಗಾದರೂ ಹೊಡೆದರೆ ಆಗ ನಿಶ್ಚಿತವಾಗಿ ಹೊಡೆಸಿಕೊಳ್ಳುವ ವ್ಯಕ್ತಿಗೆ ಶಾರೀರಿಕ ಹಾಗೂ ಮಾನಸಿಕ ಪೀಡೆ(ನೋವು) ಆಗುತ್ತದೆ. ಈ ಪೀಡೆಯನ್ನೇ ಪ್ರಾಯಶಃ ಹಿಂಸೆಯ ಎಲ್ಲೆಯೆಂದು ತಿಳಿಯಲಾಗುತ್ತದೆ. ಆದರೆ ಹೊಡೆಯುವ ವ್ಯಕ್ತಿಯ ಮಾನಸಿಕ ಅಥವಾ ಶಾರೀರಿಕ ಪೀಡೆಯನ್ನು ಅಥವಾ ಅವನ ಪ್ರಾಣಗಳ ವಿಘಾತವನ್ನು ನೋಡದೆ ಕೊಡಲಾಗುತ್ತದೆ. ಆದರೆ ಅದು ಸಂಪೂರ್ಣ ಸತ್ಯವಲ್ಲ. ಅದು ಅಪೂರ್ಣ ಸತ್ಯ.

ಯಾವಾಗ ವ್ಯಕ್ತಿ ಕ್ರೋಧಗೊಳ್ಳುತ್ತಾನೋ ಹಾಗೂ ಬೇರೆಯವರನ್ನು ಹೊಡೆದು ಬಡಿಯುತ್ತಾನೋ ಆಗ ಅವನ ಸ್ವಂತ ತನು ಮತ್ತು ಮನಗಳೆರಡೂ ವಿಕೃತವಾಗುತ್ತವೆ. ಅವನ ಚಿತ್ತ ಅಶಾಂತವಾಗುತ್ತದೆ. ಅವನು ತನ್ನೊಳಗೇ ಒಂದು ರೀತಿಯ ಬಿಗಿತವನ್ನು ಅನುಭವಿಸುತ್ತಾನೆ. ಇದರ ನಂತರವೇ ಬೇರೊಬ್ಬರ ಜೊತೆ ಹೊಡೆದಾಟ-ಬಡಿದಾಟ ಮಾಡುತ್ತಾನೆ. ಜೈನ ವ್ಯಾಖ್ಯೆಗನುಸಾರ ಹಿಂಸೆಯ ಮೊದಲು, ಹಿಂಸಕನ ತನು ಮನದಲ್ಲಾಗುವ ವಿಕೃತಿಯು ಸಹ ಹಿಂಸೆಯಾಗಿದೆ. ಅದು ಅವನ ಪ್ರಾಣಗಳ ವ್ಯಪರೋಪಣವಾಗಿದೆ ಮತ್ತು ಮೊದಲು ಆ ಹಿಂಸೆಯೇ ಘಟಿತವಾಗುತ್ತದೆ. ಈ ರೀತಿ ಹಿಂಸಕ ವ್ಯಕ್ತಿ, ಹೊರಗಿನ ಹಿಂಸೆಗೆ ಮೊದಲು, ಮನಸ್ಸಿನಲ್ಲಿ ಹಿಂಸೆಯ ಭಾವನೆ ಬಂದೊಡನೆಯೆ ತನ್ನ ಸ್ವ-ದ ಹಿಂಸೆಯ ಅಪರಾಧಿಯಾಗುತ್ತಾನೆ ಮತ್ತು ಅದರ ದಂಡ ಸ್ವರೂಪದ ಪಾಪ-ಬಂಧ ಹೊಂದುತ್ತಾನೆ.

ಅಹಿಂಸೆಯ ಮಾನ್ಯತೆ:

ಬಹುಶಃ ಎಲ್ಲ ವಿಚಾರವಂತರು ಅಹಿಂಸೆಯನ್ನು '**ಪರಮ-ಧರ್ಮ**' ವೆಂದು ಹೇಳಿದ್ದಾರೆ. ತುಲಸೀದಾಸರು ಶ್ರುತಿ ಮತ್ತು ಸಂಹಿತೆಗಳ ಸಾಕ್ಷಿ ಪೂರ್ವಕವಾಗಿ ಈ ಮಾತನ್ನಾಡಿದ್ದಾರೆ-

ಪರಮ್ ಧರಮ್ ಶ್ರುತಿ ಬಿದಿತ ಅಹಿಂಸಾ
ಪರ್ ನಿಂದಾ ಸಮ್ ಅಘ್ ನ ಗರೀಸಾ||

ರಾಮಚರಿತ ಮಾನಸ, ಉತ್ತರಕಾಂಡ, ೧೨೦-೨೧

ಆದರೆ 'ಮಾನಸ'ದಲ್ಲಿ ಅವರು ಸತ್ಯವನ್ನೂ ಸಹ ಪರಮ-ಧರ್ಮವೆಂದು ಕರೆದಿದ್ದಾರೆ-

ಧರಮು ನ ದೂಸರ್ ಸತ್ಯ ಸಮಾನಾ
ಆಗಮ್ ನಿಗಮ್ ಪುರಾನ್ ಬಖಾನಾ||

ಅಯೋಧ್ಯಾಕಾಂಡ, ೯೪

ಮುಂದೆ ಗೋಸ್ವಾಮೀಜಿಯು 'ಪರಮ-ಧರ್ಮ'ಕ್ಕೆ ಮತ್ತೊಂದು ಪರಿಭಾಷೆ ನೀಡಿದರು. ಅವರು ಪರೋಪಕಾರವನ್ನು ಪರಮ-ಧರ್ಮವೆಂದು ಕರೆದರು -

ಪರಹಿತ್ ಸರಿಸ್ ಧರಮ್ ನಹಿ ಭಾಈ
ಪರ್ ಪೀಡಾ ಸಮ್ ನಹಿ ಅಧ್‌ಮಾಈ॥

ಉತ್ತರಕಾಂಡ, ೪೦

ಮೇಲಿನ ಮೂರು ಪದ್ಯಭಾಗಗಳನ್ನು ಒಟ್ಟಿಗೆ ಓದಿದಾಗ ಮನಸ್ಸಿನಲ್ಲಿ ಒಂದು ಬಗೆಯ ಗೊಂದಲ ಹುಟ್ಟುತ್ತದೆ. ಒಂದು ಪ್ರಶ್ನೆ ಉದ್ಭವಿಸುತ್ತದೆ. ಪರಮ ಧರ್ಮವಾದರೋ ಒಂದೇ ಆಗಿರಬೇಕು. ಅದು ಮೂರು ರೀತಿಯಲ್ಲಿ ಹೇಗೆ ಆಗಿರುತ್ತದೆ? ಪ್ರತಿಯೊಂದು ಮುಖ್ಯ ಅಥವಾ ಪ್ರಧಾನವಾದುದು ಒಂದೇ ಆಗಿರುತ್ತದೆ. ಎರಡಂತು 'ಪರಮ' ಎನಿಸಿಕೊಳ್ಳುವುದೇ ಇಲ್ಲ. ಈ ಪ್ರಶ್ನೆ ಬಹು ದಿನಗಳವರೆಗೆ ಅನುತ್ತರವಾಗಿಯೇ ಇತ್ತು. ಒಂದು ದಿನ ಮಧ್ಯ ಪ್ರದೇಶದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಶ್ರೀ ಶಿವದಯಾಲ್ ಜೀ ಅವರ ಮುಂದೆ, ಮಾತನಾಡುವಾಗ ಒಂದು ಸಂದರ್ಭದಲ್ಲಿ ಈ ಪ್ರಶ್ನೆಯನ್ನು ಅವರ ಮುಂದೆ ಇಟ್ಟೆ. ಅವರು ಸುಗಮತಾ ಪೂರ್ವಕವಾಗಿ ಇದಕ್ಕೆ ಸಮಾಧಾನವನ್ನು ನೀಡಿದರು. ಅವರ ಚಿಂತನೆ ಹೀಗಿತ್ತು-

''ನಮ್ಮ ಹತ್ತಿರ ಏನನ್ನಾದರು ಮಾಡಲು ಮನ, ವಾಣಿ ಮತ್ತು ಶರೀರ- ಈ ಮೂರೂ ಸಾಧನಗಳಾಗಿವೆ. ಯಾವುದು ಈ ಮೂರರಲ್ಲಿ ನೆಲೆಸಿ, ಈ ಮೂರನ್ನು ಪವಿತ್ರ ಮಾಡಿರುವುದೋ ಅದೇ ಧರ್ಮವಾಗಿರುತ್ತದೆ. ವಾಸ್ತವವಾಗಿ ಪರಮ-ಧರ್ಮ ಒಂದೇ, ಅದು ಅಹಿಂಸೆ. ಅಹಿಂಸೆ ತನಗೆ ತಾನೆ ಒಂದು ಪರಿಪೂರ್ಣ ಜೀವನದರ್ಶನವಾಗಿದೆ. ಮನಸ್ಸಿನ ಎಲ್ಲಾ ಆಲೋಚನೆಗಳು ಮತ್ತು ಮನಸ್ಸಿನ ಎಲ್ಲ ಸಂಕಲ್ಪಗಳು ಅಹಿಂಸೆಯ ಮೇಲೆ ಆಧಾರಿತವಾಗಿರಬೇಕು. ಅಹಿಂಸಾಮಯವಾಗಿರಬೇಕು. ಆದ್ದರಿಂದ ಚಿಂತನದ ಸ್ತರದಲ್ಲಿ ಅಹಿಂಸೆಯೇ ಪರಮಧರ್ಮವಾಗಿದೆ. ನಮ್ಮ ಕರ್ತವ್ಯವಷ್ಟೆಯಲ್ಲ, ನಮ್ಮ ಭಾವನೆಯೂ ಅಹಿಂಸಾಮಯವಾಗಿರಬೇಕು. ಇದು ಅಹಿಂಸೆಯ ಅನಿವಾರ್ಯ ಶರತ್ತಾಗಿದೆ''

''ಮನಸ್ಸಿನ ಆ ಅಹಿಂಸೆ, ಯಾವಾಗ ಮಾತಿನಲ್ಲಿ ಅವತರಿಸುವುದೋ ಆಗ ಸತ್ಯಕ್ಕೆ ಪರಮ-ಧರ್ಮದ ಸಂಜ್ಞೆ ದೊರೆಯುತ್ತದೆ. ಇದೇ ರೀತಿ ಶರೀರ ಹಾಗೂ ಸಾಧನೆಗಳ ಮಾಧ್ಯಮದಿಂದ ಯಾವಾಗ ಅಹಿಂಸೆಯ ಸಾಧನೆ ಮಾಡಲಾಗುವುದೋ ಆಗ ಪರೋಪಕಾರ ಅಥವಾ ಪರ-ಹಿತವನ್ನು ಸಹ ಪರಮ-ಧರ್ಮವೆಂದು ಕರೆಯಲಾಗುವುದು. ಆದರೆ ವಚನ ಮತ್ತು ಶರೀರದ ಈ ಎರಡು ಪರಮ-ಧರ್ಮಗಳು ಮಿಲನಗೊಂಡು ಅಹಿಂಸೆಗೇ ಶ್ರೇಯವನ್ನು ನೀಡುವುವು. ಅದರ ಪ್ರತಿಷ್ಠೆಯನ್ನು ಮಾಡುವುವು''

ಸಂಸಾರದ ಎಲ್ಲ ಜೀವಿಗಳು ದುಃಖಗಳಿಂದ ಪಾರಾಗಲು ಇಷ್ಟಪಡುತ್ತವೆ ಮತ್ತು ಸುಖಗಳನ್ನು ಇಚ್ಛಿಸುತ್ತವೆ. ದುಃಖಿಯಾಗಲು ಯಾರೂ ಅಶಿಸುವುದಿಲ್ಲ. ಹಿಂಸೆ

ಎಂಥ ಪಾಪವೆಂದರೆ, ಸಾಯುವವನಿಗೂ ಮತ್ತು ಸಾಯಿಸುವವನಿಗೂ ಇಬ್ಬರಿಗೂ ದುಃಖದಾಯಕವಾಗಿದೆ, ದುಃಖದ ಮೂಲವಾಗಿದೆ. ಆದ್ದರಿಂದ ಸ್ವಭಾವತಃ ನಾವೆಲ್ಲರೂ ಹಿಂಸೆಯಿಂದ ಪಾರಾಗಲು ಬಯಸುತ್ತೇವೆ. ಅಹಿಂಸೆ ಎಲ್ಲರಿಗೂ ಸುಖದಾಯಕವಾದುದು. ಆದ್ದರಿಂದ ಎಲ್ಲ ಜೀವಿಗಳೂ ಸ್ವಭಾವತಃ ಅಹಿಂಸಕ ವಾತಾವರಣದಲ್ಲಿರಲು ಇಷ್ಟಪಡುತ್ತವೆ.

ಮಹಾಭಾರತದಲ್ಲಿ ಅಹಿಂಸೆಯ ಉಪದೇಶ ಹೆಜ್ಜೆ ಹೆಜ್ಜೆಗೂ ದೊರೆಯುತ್ತದೆ. ಶಾಂತಿಪರ್ವದ ಒಂದು ಕಡೆ, 'ಅಧ್ಯಯನ, ಯಜ್ಞ , ತಪ, ಸತ್ಯ, ಇಂದ್ರಿಯ-ಸಂಯಮ, ಹಾಗೂ ಅಹಿಂಸಾ ಧರ್ಮದ ಪಾಲನೆ ಯಾವ ಕ್ಷೇತ್ರದಲ್ಲಿರುವುದೋ ಅಲ್ಲಿ ವ್ಯಕ್ತಿ ವಾಸಿಸಲು ಆಶಿಸಲಿ' ಎಂದು ಹೇಳಲಾಗಿದೆ.

ಅಹಿಂಸೆಗೆ ಮಹಾಭಾರತದಲ್ಲಿ ನೈತಿಕ ಹಾಗೂ ಧಾರ್ಮಿಕ ಎರಡು ದೃಷ್ಟಿಯಿಂದಲೂ ಸರ್ವೋಚ್ಚ ಗೌರವವನ್ನು ಕೊಡಲಾಗಿದೆ-

'ಅಹಿಂಸೆ ಪರಮ ಧರ್ಮ, ಅಹಿಂಸೆಯೇ ಪರಮ ತಪ, ಅಹಿಂಸೆಯೇ ಧರ್ಮವನ್ನು ಪ್ರವರ್ತನೆ ಮಾಡುವುದು. ಇದೇ ಸಂಯಮ, ಇದೇ ದಾನ, ಪರಮ ಜ್ಞಾನ ಹಾಗೂ ದಾನದ ಫಲ. ಜೀವಿಗೆ ಅಹಿಂಸೆಗಿಂತ ದೊಡ್ಡದಾದ ಹಿತಕಾರಿ, ಮಿತ್ರ ಹಾಗೂ ಸುಖ ನೀಡುವಂಥದು ಬೇರೆ ಯಾವುದೂ ಇಲ್ಲ''.

ಅನುಶಾಸನ ಪರ್ವದಲ್ಲಿ, 'ದೇವತೆಗಳ ಮತ್ತು ಅತಿಥಿಗಳ ಸೇವೆ, ಧರ್ಮದ ಸತತ ಆರಾಧಾನಾ, ವೇದಗಳ ಅಧ್ಯಯನ, ಯಜ್ಞ-ತಪ-ದಾನ, ಗುರು ಅಥವಾ ಆಚಾರ್ಯರ ಸೇವೆ ಹಾಗೂ ತೀರ್ಥಯಾತ್ರೆ, ಈ ಎಲ್ಲ ಸೇರಿ ಅಹಿಂಸೆಯ ಹದಿನಾರನೆಯ ಕಲೆಗೆ ಸರಿಸಮಾನವಾಗುವುದಿಲ್ಲ. ಅಹಿಂಸೆ ಇವುಗಳೆಲ್ಲಕ್ಕಿಂತ ಶ್ರೇಷ್ಠವಾದುದು' ಎಂದು ತಿಳಿಸಲಾಗಿದೆ.

ಮತ್ಸ್ಯ ಪುರಾಣದಲ್ಲಿ ಅಹಿಂಸೆಯನ್ನು ಸರ್ವ ಧರ್ಮಗಳಲ್ಲಿ ಶ್ರೇಷ್ಠ ಧರ್ಮವೆಂದು ತಿಳಿಸುತ್ತಾ, ''ನಾಲ್ಕು ವೇದಗಳ ಅಧ್ಯಯನದಿಂದ ಅಥವಾ ಸತ್ಯವನ್ನು ಹೇಳುವುದರಿಂದ, ಎಷ್ಟು ಪುಣ್ಯ ಪ್ರಾಪ್ತವಾಗುವುದೋ ಅದಕ್ಕಿಂತಲೂ ಹೆಚ್ಚಿನ ಪುಣ್ಯಪ್ರಾಪ್ತಿ ಅಹಿಂಸೆಯ ಪಾಲನೆಯಿಂದ ಆಗುವುದು'' ಎಂದು ಹೇಳಲಾಗಿದೆ.

ನಾರದ ಪುರಾಣದಲ್ಲೂ ''ಹೇ ರಾಜನ್! ಅಹಿಂಸೆ ಎಲ್ಲ ಕಾಮನೆಗಳನ್ನು ಪೂರ್ಣಗೊಳಿಸುವ ಹಾಗೂ ಪಾಪಗಳಿಂದ ಬಿಡುಗಡೆಗೊಳಿಸುವುದಾಗಿದೆ'' ಎಂದು ಅಹಿಂಸೆಯ ಮಹಿಮೆಯನ್ನು ಹಾಡಲಾಗಿದೆ.

ಬ್ರಹ್ಮ ಪುರಾಣದಲ್ಲಿ, ಮುಕ್ತಿಗೆ ಯಾರು ಪಾತ್ರರಾಗುತ್ತಾರೆ? ಎಂಬ ಪಾರ್ವತಿದೇವಿಯ ಪ್ರಶ್ನೆಗೆ ಶಿವನು ಉತ್ತರವಾಗಿ 'ಮನ, ವಚನ, ಕಾಯದಿಂದ ಯಾರು ಪೂರ್ಣವಾಗಿ ಅಹಿಂಸಕರಾಗಿರುತ್ತಾರೋ, ಯಾರು ಶತ್ರು ಮತ್ತು ಮಿತ್ರರಿಬ್ಬರನ್ನು ಸಮಾನ

ದೃಷ್ಟಿಯಿಂದ ನೋಡುತ್ತಾರೋ ಅವರು ತಮ್ಮ ಬಂಧನದಿಂದ ಬಿಡುಗಡೆ ಹೊಂದುತ್ತಾರೆ. ಎಲ್ಲ ಜೀವಿಗಳ ಮೇಲೆ ದಯೆ ತೋರುವವರು, ಎಲ್ಲ ಜೀವಿಗಳಲ್ಲಿ ಆತ್ಮನ ದರ್ಶನ ಮಾಡುವವರು, ಹಾಗೂ ಮನಸ್ಸಿನಿಂದಲೂ ಯಾವ ಜೀವಿಗೂ ಹಿಂಸೆ ಮಾಡದಿರುವವರು ಸ್ವರ್ಗಗಳ ಸುಖವನ್ನು ಭೋಗಿಸುತ್ತಾರೆ' ಎಂದನು.

ಮಹಾಭಾರತದ ಶಾಂತಿ ಪರ್ವದಲ್ಲಿ ಅಂತಿಮ ನಿಷ್ಕರ್ಷ ತೆಗೆಯುತ್ತಾ, ಹಿಂಸೆಯನ್ನು ಎಲ್ಲಕ್ಕಿಂತಲೂ ದೊಡ್ಡ ಅಧರ್ಮ ಮತ್ತು ಅಹಿಂಸೆಯನ್ನು ಎಲ್ಲಕ್ಕಿಂತಲೂ ದೊಡ್ಡ ಧರ್ಮದ ರೂಪದಲ್ಲಿ ರೇಖಾಂಕಿತಗೊಳಿಸಿದೆ. ಇದೇ ಪ್ರಸಂಗದಲ್ಲಿ, 'ಜೀವಿಗಳಿಗೆ ಅಹಿಂಸೆಗಿಂತ ದೊಡ್ಡ ಯಾವ ಧರ್ಮವೂ ಇಲ್ಲ. ಏಕೆಂದರೆ ಇದರ ಮೂಲಕ ಪ್ರಾಣಿಗಳ ರಕ್ಷಣೆಯಾಗುತ್ತದೆ ಹಾಗೂ ಯಾರಿಗೂ ಯಾವ ಕಷ್ಟವೂ ಆಗುವುದಿಲ್ಲ' ಎಂದು ತಿಳಿಸಲಾಗಿದೆ.

ಇದರಿಂದ ಒಂದು ತಥ್ಯವೂ ಪ್ರಕಟವಾಗುತ್ತದೆ, ಏಕೆಂದರೆ ನಾವು ನಮ್ಮ ಮನಸ್ಸಿನ ಮಲಿನತೆಯ ಕಾರಣದಿಂದ ನಾವು ಇಂಥ ಅಗಣಿತ ಪಾಪಗಳ ಫಲವನ್ನು ಅನುಭವಿಸುತ್ತೇವೆ. ಅವುಗಳನ್ನು ನಾವು ಎಂದೂ ಮಾಡಿಲ್ಲದೆ ಇದ್ದರೂ. ಕೇವಲ ಚಿತ್ತ ಚಂಚಲತೆಯ ಕಾರಣ, ಮತ್ತು ರಾಗ-ದ್ವೇಷದ ತೀವ್ರತೆಯ ಕಾರಣ, ತರಹ -ತರಹದ ಕುತ್ಸಿತ ಪರಿಣಾಮ ಭೋಗಿಸುವುದಕ್ಕೋಸ್ಕರ ನಾವು ಅನಿವಾರ್ಯವಾಗಿ ಬದ್ಧರಾಗಿದ್ದೇವೆ.

ಭಾವ-ಹಿಂಸೆ ಮತ್ತು ದ್ರವ್ಯ-ಹಿಂಸೆಯ ರೀತಿಯಲ್ಲಿ ಎಲ್ಲ ಪಾಪವೃತ್ತಿಗಳನ್ನು ಮಾನಸಿಕ ಸ್ತರದ ಮೇಲೆ ಮತ್ತು ಭೌತಿಕ ಅಥವಾ ಸ್ಥೂಲತೆಯ ಸ್ತರದ ಮೇಲೆ ಎರಡು ಪ್ರಕಾರದಿಂದ ತಿಳಿಯಬೇಕು. ಸುಳ್ಳು ಸಹ 'ಭಾವ-ಸುಳ್ಳು ' ಮತ್ತು 'ದ್ರವ್ಯ-ಸುಳ್ಳು ' ಎಂದು ಎರಡು ತರಹ. ಕಳ್ಳತನ ಮತ್ತು ಕುಶೀಲ (ಅಬ್ರಹ್ಮಚರ್ಯ) ವೂ ಇದೇ ತರಹ ಎರಡೆರಡು ಪ್ರಕಾರವಾಗಿವೆ. ಇದೇ ಪ್ರಕಾರ ಅಪರಿಗ್ರಹವನ್ನು ಸಹ ಮಾನಸಿಕ ಮತ್ತು ಭೌತಿಕ ಸ್ತರದ ಮೇಲೆ ವಿಂಗಡಿಸಿ ತಿಳಿಯಬೇಕು.

ಲೌಕಿಕ ನ್ಯಾಯ-ಪದ್ಧತಿಗಳಲ್ಲಿ ಭಾವ-ಹಿಂಸೆಗೆ ದ್ರವ್ಯ-ಹಿಂಸೆಗಿಂತ ಹೆಚ್ಚಿನ ಮಹತ್ವ ಕೊಡಲಾಗುತ್ತದೆ. ವಿಶ್ವದ ಎಲ್ಲ ನ್ಯಾಯ-ವ್ಯವಸ್ಥೆ ಈ ಆಧಾರದ ಮೇಲೆ ಅವಲಂಬಿತವಾಗಿದೆ.

ಯಾರಿಗೆ ಎಷ್ಟು ಸಜೆ

ನಮ್ಮ ನಗರದಲ್ಲಿ ಒಂದು ದಿನ ಮೂರು ಘಟನೆಗಳು ಘಟಿಸುತ್ತವೆ. ಮೂರರಲ್ಲೂ ಒಬ್ಬೊಬ್ಬ ವ್ಯಕ್ತಿಯ ಸಾವು ಉಂಟಾಗುತ್ತದೆ. ಒಬ್ಬ ವ್ಯಕ್ತಿಯನ್ನು ಲೂಟಿ ಮಾಡುವುದಕ್ಕಾಗಿ ಯಾವನೋ ಒಬ್ಬ ದರೋಡೆಗಾರ ಅವನ ಎದೆಗೆ ಚೂರಿಯನ್ನು ಚುಚ್ಚುತ್ತಾನೆ. ಬೇರೊಂದು ಸ್ಥಳದಲ್ಲಿ ವಾಹನ ದುರ್ಘಟನೆಯಲ್ಲಿ ಒಬ್ಬ ಸಿಕ್ಕಿ ಸಾಯುತ್ತಾನೆ. ಮೂರನೇ ಘಟನೆಯಲ್ಲಿ ಒಬ್ಬ ರೋಗಿ ಅಪರೇಷನ್ ಮೇಜಿನ ಮೇಲೆ ಶಾಂತನಾಗುತ್ತಾನೆ.

ಮೂರು ಘಟನೆಗಳಲ್ಲಿ ಒಬ್ಬೊಬ್ಬ ವ್ಯಕ್ತಿಯ ನಿಮಿತ್ತ ಒಬ್ಬೊಬ್ಬ ವ್ಯಕ್ತಿಯ ಜೀವನ ಸಮಾಪ್ತಿಯಾಗುತ್ತದೆ. ಈ ಪ್ರಕಾರ ಸ್ಥೂಲದೃಷ್ಟಿಯಿಂದ ಮೂರು ಘಟನೆಗಳ ಪ್ರತಿಫಲ ಒಂದೇ ಆದರೂ ಮುವ್ವರು ವ್ಯಕ್ತಿಗಳ ಮಾನಸಿಕತೆಯಲ್ಲಿ ಬಹಳ ಅಂತರವಿದೆ. ಅವರ ಅಭಿಪ್ರಾಯ ಒಂದೇ ಸಲ ಬೇರೆ ಬೇರೆಯಾಗಿದೆ. ಆದ್ದರಿಂದ ಪೋಲೀಸ್ ಡೈರಿಯಲ್ಲಿ, ನ್ಯಾಯಾಲಯದ ತೀರ್ಪಿನಲ್ಲಿ ದರೋಡೆಗಾರ, ಡ್ರೈವರ್ ಮತ್ತು ಡಾಕ್ಟರ್, ಈ ಮೂವರಿಗೆ ಭಿನ್ನ ಭಿನ್ನ ವ್ಯವಸ್ಥೆಗಳಾಗಿರುತ್ತವೆ. ಅವರ ಅಪರಾಧ, ಘಟನೆಯ ಪ್ರತಿಫಲದಿಂದ ಅಲ್ಲ, ಅವರ ಮಾನಸಿಕ ಸಂಕಲ್ಪದಿಂದ ತೂಗಿ ನೋಡಲಾಗುವುದು.

ದರೋಡೆಗಾರನಿಗೆ ವ್ಯಕ್ತಿಯ ಹತ್ಯೆಯ ದೋಷಿಯೆಂದು ತೀರ್ಮಾನಿಸಿ, ಮರಣದಂಡನೆಯಂಥ ಕಠೋರ ದಂಡನೆಯನ್ನು ಕೊಡಲಾಗುವುದು. ಆತನಿಂದ ಪೆಟ್ಟುತಿಂದ ವ್ಯಕ್ತಿ ಒಂದು ವೇಳೆ ಬದುಕುಳಿದಿದ್ದರೂ ದರೋಡೆಗಾರ ಕೊಲೆಯ ಪ್ರಯತ್ನ ಮಾಡಿದನೆಂದು ದಂಡನೆಗೆ ಒಳಪಡುತ್ತಿದ್ದನು.

ಡ್ರೈವರ್‌ನಿಗೆ ಹತ್ಯೆಯ ದೋಷಿಯೆಂದು ನಿರ್ಣಯಿಸುವುದಿಲ್ಲ. ಅವನಿಗೆ ಘಟನೆಯ ತಥ್ಯೆಗಳಿಗೆ ಅನುರೂಪನಾಗಿ ಅಥವಾ ಅಯೋಗ್ಯ ರೀತಿಯಲ್ಲಿ ಗಾಡಿಯನ್ನು ನಡೆಯಿಸಿದ, ಅಥವಾ ಸಾಕಷ್ಟು ಎಚ್ಚರಿಕೆ ವಹಿಸದೆ ವಾಹನವನ್ನು ನಡೆಯಿಸಿದ ದೋಷಿಯೆಂದು ನಿರ್ಣಯಿಸಿ ಲಘುದಂಡವನ್ನು ವಿಧಿಸಲಾಗುವುದು.

ಆದರೆ ಡಾಕ್ಟರ್‌ಗೆ, ಕೊನೆಯ ಉಸಿರಿನವರೆಗೆ ರೋಗಿಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಕ್ಕಾಗಿ ಪ್ರಶಂಸಿಸಲಾಗುವುದು. ಪೊಲೀಸ್ ಮತ್ತು ಕಾನೂನು ಆದರೂ ಅವನೊಂದಿಗೆ ಸ್ವಲ್ಪವೂ ಮಾತಾಡುವುದೇ ಇಲ್ಲ, ರೋಗಿ ಸಂಬಂಧಿಕರೂ,'ತಾವಾದರೋ ಕೊನೆಯವರೆಗೂ ಪ್ರಯತ್ನ ಮಾಡಿದಿರಿ, ಆದರೆ ಅವನ ಆಯುಷ್ಯ ಮುಗಿದು ಹೋಗಿತ್ತು ಅಥವಾ ನಮ್ಮ ಭಾಗ್ಯವೇ ಹಾಗಿತ್ತು' ಎಂದು ಆತನ ಉಪಕಾರವನ್ನೇ ಸ್ಮರಿಸುವರು.

ಲೋಕ-ಪರಲೋಕದ ವ್ಯವಸ್ಥೆ, ಕರ್ಮ-ಬಂಧ ಮತ್ತು ಕರ್ಮ-ಫಲದ ಗಣಿತವೂ ಸಹ ಲೌಕಿಕ ಕಾನೂನಿನ ಅನುರೂಪ, ಪೂರ್ಣವಾಗಿ ಪ್ರಾಕೃತಿಕ ನ್ಯಾಯದ ಮೇಲೆ ಆಧಾರಿತವಾಗಿದೆ. ಭೌತಿಕ-ಹಿಂಸೆಯ ಸ್ವರೂಪ ಹೇಗೆ ಬೇಕಾದರೂ ಇರಲಿ, ಅದರೊಂದಿಗೆ ಸೇರಿಕೊಂಡಿರುವ ಎಲ್ಲ ಜನರಿಗೂ ತಮ್ಮ ತಮ್ಮ ಭಾವ-ಹಿಂಸೆಗೆ ಅನುಸಾರ ಕರ್ಮ-ಬಂಧವಾಗುವುದು. ಆದ್ದರಿಂದ ಕೆಲವೊಮ್ಮೆ ದೂರ ಕುಳಿತಿರುವ ವ್ಯಕ್ತಿ ಆ ಪಾಪದ ಭಾಗೀದಾರ ಆಗುತ್ತಾನೆ. ಆದರೆ ಸಾಕ್ಷಾತ್ ಭಾಗಿಯಾಗಿರುವಂತೆ ತೋರುವ ವ್ಯಕ್ತಿ ಅಷ್ಟು ಭಾಗೀದಾರನಾಗುವುದಿಲ್ಲ. ಯಾವನೋ ಮಾಡುತ್ತಿರುವಂತೆ ಕಂಡು ಬರುತ್ತಾನೆ. ಆದರೆ ಯಥಾರ್ಥವಾಗಿ ಅವನು ಕರ್ತನಲ್ಲ. ಯಾವನೋ ಒಬ್ಬ ಮಾಡುವುದಿಲ್ಲ, ಅದರೂ ಅವನಿಗೆ ಆ ಕರ್ಮದ ಫಲ ಅನುಭವಿಸಬೇಕಾಗುತ್ತದೆ. ಭಾವನೆಗಳಲ್ಲಿ ಇದೇ ರೀತಿಯ ವಿಚಿತ್ರತೆ. ಆದ್ದರಿಂದ ಪಾಪದಲ್ಲಿ ಹೋಗುವ ಮನಸ್ಸಿಗೆ ಅಂಕುಶ ಹಾಕುವ ಅವಶ್ಯಕತೆಯಿದೆ.

ಮಾನಸಿಕ ಪಾಪವೇ ಭಾವಹಿಂಸೆ.

ಹಿಂಸೆ-ಪ್ರತಿಹಿಂಸೆಯ ಕೊನೆಯಿಲ್ಲದ ಶೃಂಖಲೆ

ಕೆಲವರು ಹಿಂಸೆಗೆ ಹಿಂಸೆಯ ಮೂಲಕವೇ ಉತ್ತರ ನೀಡುವುದು ಅವಶ್ಯಕ ಹಾಗೂ ಉಚಿತವಾದುದೆಂದು ತಿಳಿಯುತ್ತಾರೆ. ಪ್ರತಿಹಿಂಸೆಯ ಪ್ರಯೋಗದಿಂದ ಹಿಂಸೆಯನ್ನು ಕೊನೆಗೊಳಿಸಬಹುದೆಂದು ಅವರ ನಂಬಿಕೆಯಾಗಿದೆ. ಆದರೆ ಋಷಿ-ಮುನಿಗಳ ಮಾತುಗಳಿಂದ. ಹಾಗೂ ನಮ್ಮ ಅನುಭವದಿಂದಲೂ, ಪ್ರತಿ ಹಿಂಸೆ ಯಾವುದೇ ಹಿಂಸೆಯನ್ನು ತಡೆಯುವ ಅಥವಾ ಕೊನೆಗೊಳಿಸುವ ಉಪಾಯವಲ್ಲವೆಂದು ಚೆನ್ನಾಗಿ ತಿಳಿದುಕೊಳ್ಳ ಬಲ್ಲೆವು. ಆದ್ದರಿಂದ ಹಿಂಸೆ ಇನ್ನೂ ಹೆಚ್ಚುವುದು. ವೈರಕ್ಕೆ (ವಿರೋಧಕ್ಕೆ) ಮತ್ತೂ ಪ್ರೋತ್ಸಾಹ ಸಿಗುವುದು. ವೈರದ ಈ ವಾಸನೆ ಜನ್ಮಾಂತರದವರೆಗೆ ಜೀವದ ಜೊತೆಯಲ್ಲಿ ಇರುವುದು. ಅವಕಾಶ ದೊರೆತೊಡನೆಯೆ ಮುಯ್ಯಿ ತೀರಿಸಿಕೊಳ್ಳುವುದು. ಈ ರೀತಿ ಹಿಂಸೆ-ಪ್ರತಿಹಿಂಸೆ ಕೊನೆ ಇಲ್ಲದೆ ಮುಂದುವರೆಯುತ್ತಿರುವುದು.

ಈ ಪ್ರಸಂಗದಲ್ಲಿ ಸದನ ಎಂಬ ಕಟುಕನ ಕತೆ ನೆನಪಾಗುವುದು. ಸದನ ಒಬ್ಬ ಧನಿಕನ ಭೋಜನಶಾಲೆಗೆ ಮಾಂಸದ ವ್ಯವಸ್ಥೆ ಮಾಡುತ್ತಿದ್ದ. ಒಂದು ದಿನ ತಿನ್ನುವವರು ಹೆಚ್ಚಿಗೆ ಇರಲಿಲ್ಲ, ಆದ್ದರಿಂದ ಸದನ, 'ಕುರಿಗಳನ್ನು ಪೂರ್ತಿ ಕತ್ತರಿಸುವುದರಿಂದ ಏನು ಲಾಭ? ಎಷ್ಟು ಬೇಕೋ ಅಷ್ಟೇ ಮಾಂಸವನ್ನು ಹೊಂದುವುದರಿಂದ ನಾಳೆಗೂ ತಾಜಾ ಮಾಂಸ ಸಿಗುವುದು' ಎಂದು ವಿಚಾರ ಮಾಡಿದ.

ಸದನ ಚೂರಿಯನ್ನು ತೆಗೆದುಕೊಂಡು ಕುರಿಯ ಮುಂದೆ ಬಂದ. ಅವನನ್ನು ನೋಡಿ ಕುರಿ ನಕ್ಕಿತು. ವಿಚಾರಿಸಿದಾಗ ಕುರಿ ಹೇಳಿತು - 'ಈಗ ಬಹುಶಃ ನಮ್ಮ ಶತ್ರುತ್ವ ಘಟಿಸುವುದು. ಒಂದು ಜನ್ಮದಲ್ಲಿ ನೀನು ನನ್ನನ್ನು ಕಟುಕನಾಗಿ ಕತ್ತರಿಸುತ್ತೀಯ, ಆದರೆ ಇನ್ನೊಂದು ಜನ್ಮದಲ್ಲಿ ನೀನು ಕುರಿಯಾಗಿ ಜನಿಸುತ್ತೀಯ, ಆಗ ನಾನು ಕಟುಕನಾಗಿ ನಿನ್ನನ್ನು ಕತ್ತರಿಸುತ್ತೇನೆ' ಈ ಕ್ರಮ ಅನೇಕ ಜನ್ಮಗಳಿಂದ ನಡೆದುಕೊಂಡು ಬರುತ್ತಿದೆ. ಇಂದು ನೀನು ಕೇವಲ ಅಂಗ-ಭಂಗಗೊಳಿಸುವ ನಿರ್ಧಾರದಿಂದ ಬಂದಿರುವೆಯಲ್ಲವೆ? ಏನಾದರೂ ಹಾಗಾದರೆ ನಮ್ಮ ಶತ್ರುತ್ವ ಸ್ವಲ್ಪ ಘಟಿಸುತ್ತದೆ. ಪ್ರತಿ ಜನ್ಮದಲ್ಲಿ ಕೊಂಚ ಕೊಂಚವೇ ಘಟಿಸುತ್ತಿದ್ದರೆ, ಯಾವ ದಿನ ಇದು ಕೊನೆಗೊಳ್ಳುವುದು? ಇಂದು ಎಷ್ಟು ಮಾಂಸ ತೆಗೆದುಕೊಳ್ಳುವೆಯೋ ಮುಂದಿನ ಜನ್ಮದಲ್ಲಿ ನಾನು ನಿನ್ನ ಶರೀರದಿಂದ ಅದಕ್ಕಿಂತಲೂ ಕಮ್ಮಿ ತೆಗೆದುಕೊಳ್ಳುದಿಲ್ಲ'.

ಸದನ ಇದನ್ನು ಕೇಳಿ ಕೈಯಲ್ಲಿದ್ದ ಚೂರಿಯನ್ನು ಶಾಶ್ವತವಾಗಿ ಎಸೆದು ಓಡಿ-ಬಂದನೆಂದು ಹೇಳುತ್ತಾರೆ. ಅನಂತರ ಅವನ ಬದುಕಿನ ದಿಕ್ಕೇ ಬದಲಾಯಿತು. ಹೇಗೆ ಪ್ರತಿಹಿಂಸೆಯ ವ್ಯವಹಾರ ಘಟಿಸುತ್ತದೆ ಎಂದು ಯೋಚಿಸಬೇಕು.

ಬೆಂಕಿಯನ್ನು ಸೀಮೆಎಣ್ಣೆ ಹಾಗೂ ಪೆಟ್ರೋಲಿನಿಂದ ಆರಿಸಲು ಸಾಧ್ಯವಾಗುವುದಿಲ್ಲ. ಅದನ್ನು ಆರಿಸಲು ನೀರಿನ ವ್ಯವಸ್ಥೆಯನ್ನೇ ಮಾಡಬೇಕು. ಹಿಂಸೆಯನ್ನು ಪ್ರತಿಹಿಂಸೆ ಅಥವಾ ಕ್ರೋಧದಿಂದ ಎಂದೂ ಕೊನೆಗಾಣಿಸಲು ಬರುವುದಿಲ್ಲ. ಕ್ಷಮೆ ಮತ್ತು ಸಮತೆಯಿಂದಲೇ ವಾಸನೆಯನ್ನು ನಿರ್ಮೂಲ ಮಾಡಬಹುದು. ಅದಕ್ಕೆ ಬೇರೆ ಉಪಾಯವೇ ಇಲ್ಲ.

ಹಿಂಸೆಯ ಭೇದಗಳು:

ಈ ಸೃಷ್ಟಿ ಸೂಕ್ಷ್ಮ ಮತ್ತು ಸ್ಥೂಲ, ಸ್ಥಿರ ಮತ್ತು ಜಂಗಮ ಜೀವಿಗಳಿಂದ ಒತ್ತೊತ್ತಾಗಿ ತುಂಬಿ ಹೋಗಿದೆ. ಇಲ್ಲಿ ಯಾವ ಸ್ಥಳವೇ ಆಗಲೀ, ಹಾಗೂ ಯಾವುದೇ ಪದಾರ್ಥವಾಗಲಿ ಜೀವ-ವಿಹೀನವಲ್ಲ, ಆದ್ದರಿಂದ ಮನುಷ್ಯ ಪೂರ್ಣ ಅಹಿಂಸಕನಾಗಿರುವುದು ಸಂಭವವಲ್ಲ. ಮನ-ವಚನ-ಕಾಯಗಳ ಪ್ರವೃತ್ತಿ ಆಗುತ್ತಲೇ ಇರಬೇಕು ಹಾಗೂ ಹಿಂಸೆ ಆಗಬಾರದು ಎಂದರೆ ಇದು ಅಸಂಭವ.

ಇಂಥ ಸ್ಥಿತಿಯಲ್ಲಿ ಹಿಂಸೆಯಿಂದ ಪಾರಾಗಿ, ಅಹಿಂಸೆಯ ಕಡೆ ಜೀವನವನ್ನು ಪ್ರೇರಿತಗೊಳಿಸುವುದಕ್ಕಾಗಿ ಜೈನ ದಾರ್ಶನಿಕರು ಅತ್ಯಲ್ಪ ಹಿಂಸೆಯ ಜೀವನ ಪದ್ಧತಿಯನ್ನು ಆವಿಷ್ಕಾರ ಮಾಡಿದ್ದಾರೆ. ಅವರು ವ್ಯಾವಹಾರಿಕ ರೀತಿಯಿಂದ ವರ್ಗೀಕರಣ ಮಾಡಿ ಹಿಂಸೆಯ ನಾಲ್ಕು ಭೇದಗಳನ್ನು ಹೇಳಿದ್ದಾರೆ-

೧. ಸಂಕಲ್ಪೀ ಹಿಂಸೆ

೨. ಆರಂಭೀ ಹಿಂಸೆ

೩. ಉದ್ಯೋಗಿ ಹಿಂಸೆ

೪. ವಿರೋಧಿ ಹಿಂಸೆ

೧. ಸಂಕಲ್ಪ ಪೂರ್ವಕವಾಗಿ ಯಾವುದೇ ಪ್ರಾಣಿಗೆ ನೋವುಂಟು ಮಾಡುವುದು ಅಥವಾ ಅದರ ವಧೆ ಮಾಡುವುದು 'ಸಂಕಲ್ಪೀ ಹಿಂಸೆ' ಯಾಗಿದೆ. ಇದರ ಪರಿಭಾಷೆಯಲ್ಲಿ ಆತಂಕವಾದ, ಸಾಂಪ್ರದಾಯಿಕ ದಂಗೆಗಳು, ಜಾತಿ ವಿರೋಧಿ ಜಗಳ, ಮತ್ತು ಮಾಂಸ-ಭಕ್ಷಣೆಗಾಗಿ ಮಾಡುವ ಶಿಕಾರಿ ಮೊದಲಾದ ಪ್ರವೃತ್ತಿಗಳು ಬರುತ್ತವೆ. ಧಾರ್ಮಿಕ ಅನುಷ್ಠಾನಗಳ ಕಾರಣದಿಂದ ಎಸಗುವ ಬಲಿ ಸಹ ಸಂಕಲ್ಪ ಹಿಂಸೆಯಾಗಿದೆ. ಮಾಂಸ-ಭಕ್ಷಣೆಯೂ ಇದೇ ಗುಂಪಿನಲ್ಲಿ ಬರುವುದು.

೨. ತನ್ನ ಜೀವನ ನಿರ್ವಹಣೆಯ ಅನಿವಾರ್ಯ ಕಾರ್ಯಗಳಲ್ಲಿ, ಭೋಜನ ತಯಾರಿಸುವಾಗ, ಸ್ನಾನ ಮಾಡುವಾಗ, ಬಟ್ಟೆ ಒಗೆಯುವಾಗ, ವಸ್ತುಗಳನ್ನು ಇಡುವಾಗ-ಎತ್ತುವಾಗ, ಏಳುವಾಗ-ಕೂರುವಾಗ, ಮಲಗಿರುವಾಗ ಹಾಗೂ ನಡೆಯುವಾಗ

ಅಪರಿಹಾರ್ಯ ರೂಪದಲ್ಲಿ ಆಗುವ ಜೀವ-ವಧೆಯನ್ನು 'ಆರಂಭೀ ಹಿಂಸೆ' ಎನ್ನುವರು.

೩. ಆಜೀವಿಕೆಯ ಉಪಾರ್ಜನೆಗಾಗಿ ನೌಕರಿಯಲ್ಲಿ, ಹೊಲ-ಗದ್ದೆಯಲ್ಲಿ ಮತ್ತು ಉದ್ಯೋಗ-ವ್ಯಾಪಾರದಲ್ಲಿ ಅಪರಿಹಾರ್ಯ ರೂಪದಲ್ಲಿ ಜೀವ-ಹಿಂಸೆಯಾಗಿರುವುದೋ ಅವೆಲ್ಲವೂ 'ಉದ್ಯೋಗಿ ಹಿಂಸೆ' ಎಂಬ ಪರಿಭಾಷೆಯ ವ್ಯಾಪ್ತಿಯಲ್ಲಿ ಬರುವುವು. ಇದರಲ್ಲಿ ಸ್ಮರಣೆಯಲ್ಲಿಡಬೇಕಾದುದೇನೆಂದರೆ ಅಹಿಂಸೆಯನ್ನು ಸಮರ್ಥಿಸುವ ವ್ಯಕ್ತಿ ತನ್ನ ಬದುಕಿಗಾಗಿ, ಕಡಮೆ ಎಂದರೆ ಕಡಮೆ ಜೀವಹಾನಿಯಾಗುವ ಉದ್ಯೋಗವನ್ನು ಆರಿಸುವನು. ಅಧಿಕ ಹಿಂಸೆಯಾಗುವ ಕಾರ್ಯಗಳಿಂದ ಅವನು ಯಾವಾಗಲೂ ತನ್ನನ್ನು ಹಾಗೂ ತನ್ನ ಪರಿವಾರವನ್ನು ಪಾರು ಮಾಡಲು ಪ್ರಯತ್ನಿಸುವನು.

೪. ತನ್ನ ಕುಟುಂಬದ ರಕ್ಷಣೆ ಮಾಡುತ್ತಿರುವಾಗ, ತನ್ನ ಶೀಲ-ಸಮ್ಮಾನ ಹಾಗೂ ಸಂಪತ್ತಿಯ ರಕ್ಷಣೆ ಮಾಡುತ್ತಿರುವಾಗ, ಧರ್ಮ ಹಾಗೂ ದೇಶದ ಬಗೆಗಿನ ತನ್ನ ದಾಯಿತ್ವಗಳನ್ನು ನಿರ್ವಹಿಸುತ್ತಿರುವಾಗ, ಯಾವನೋ ಅತ್ಯಾಚಾರಿ ಅಥವಾ ಅಕ್ರಮಣಕಾರಿಯನ್ನು ಎದುರಿಸುತ್ತಿರುವ ಸಮಯದಲ್ಲಿ ಹಿಂಸೆ ಮಾಡಬೇಕಾಗಿ ಬಂದರೆ, ಅದನ್ನು 'ವಿರೋಧಿ ಹಿಂಸೆ' ಎನ್ನುವರು.

ಗೃಹಸ್ಥಾವಸ್ಥೆಯಲ್ಲಿರುವ ಸಾಧಕನು ತನ್ನ ಬದುಕನ್ನು ನಡೆಸುವುದಕ್ಕಾಗಿ ತನ್ನ ಪರಿವಾರ ಅಥವಾ ಸಮಾಜಕ್ಕಾಗಿ, ಹಾಗೂ ತನ್ನ ರಾಷ್ಟ್ರ-ಧರ್ಮ ಹಾಗೂ ಧರ್ಮಾಯತನಗಳಿಗಾಗಿ, ಬಹಳಷ್ಟು ಕರ್ತವ್ಯಗಳನ್ನು ಪಾಲನೆ ಮಾಡಬೇಕಾಗುತ್ತದೆ. ಮೇಲೆ ಹೇಳಿದ ನಾಲ್ಕು ಪ್ರಕಾರದ ಹಿಂಸೆಯನ್ನು ಬಿಡುವುದರಿಂದ ಆ ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಗೃಹಸ್ಥನಿಗೆ ಮಾತ್ರ ಸಂಕಲ್ಪೀ-ಹಿಂಸೆಯ ತ್ಯಾಗದ ಉಪದೇಶವನ್ನು ಕೊಡಲಾಗಿದೆ. ಆತನಿಗೆ ಆರಂಭೀ-ಹಿಂಸೆ ಅಪರಿಹಾರ್ಯವೆಂದು ತಿಳಿಯಲಾಗಿದೆ. ಹಾಗೂ ವಿರೋಧಿ ಮತ್ತು ಉದ್ಯೋಗಿ-ಹಿಂಸೆಯನ್ನು ಸಾಧ್ಯವಿದ್ದಷ್ಟು ಪರಿಹರಿಸಲು ಮತ್ತು ಆಪತ್-ಧರ್ಮವೆಂದು ಭಾವಿಸಿ ಅದರಲ್ಲಿ ಪ್ರವೃತ್ತನಾಗಲು, ಅವನ ವಿವೇಕದ ಮೇಲೆ ಬಿಡಲಾಗಿದೆ.

ಅಹಿಂಸೆಯೆಂದರೆ ಜೀವನದಿಂದ ಪಲಾಯನವಲ್ಲ

ಅಹಿಂಸೆಯ ಸಾಧನೆಯಲ್ಲಿ ತೊಡಗಿರುವ ಗೃಹಸ್ಥ ಹಿಂಸೆಗಾಗಿ ಹಿಂಸೆಯನ್ನು ಮಾಡುವುದಿಲ್ಲ. 'ಸಂಕಲ್ಪಿ ಹಿಂಸೆ'ಅವನ ಆಚರಣೆಯಿಂದ ಹೊರಟುಹೋಗುತ್ತದೆ. ಅವನು ವ್ಯಾಪಾರ ಅಥವಾ ನೌಕರಿ ಮೊದಲಾದವುಗಳ ಮೂಲಕ ತನ್ನ ಪರಿವಾರದ ಅಜೀವಿಕೆಯ ಉಪಾಯವನ್ನು ಮಾಡುತ್ತಾನೆ. ಪರಿವಾರದ ಪಾಲನೆ ಮತ್ತು ಸುರಕ್ಷೆಯನ್ನು ಮಾಡುವನು. ಹಾಗೂ ತನ್ನ ಸಮಾಜದ ಮೇಲೆ, ತನ್ನ ದೇಶ, ಧರ್ಮ ಹಾಗೂ ಸಾಧು-ಸಂತರ ಮೇಲೆ, ಹಾಗೂ ತೀರ್ಥ-ಮಂದಿರಗಳ ಮೇಲೆ ಬರುವ ತೊಂದರೆಗಳನ್ನು ಸಮುಚಿತ ರೂಪದಿಂದ

ನಿವಾರಿಸುವನು. ತನ್ನ ರಾಷ್ಟ್ರದ ಪ್ರತಿಷ್ಠೆಯ ರಕ್ಷಣೆಗಾಗಿ ಅವಶ್ಯಕತೆ ಬಿದ್ದಲ್ಲಿ ಶಸ್ತ್ರವನ್ನು ಹಿಡಿಯುವನು, ಪ್ರಾಣ ತೆಗೆಯುವನು ಹಾಗೂ ಪ್ರಾಣ ಕೊಡುವನು. ಆದರೂ ಸಹ ಇದರಿಂದ ಅವನ ಅಹಿಂಸೆ ಎಲ್ಲಿಯೂ ಖಂಡಿತವಾಗುವುದಿಲ್ಲ.

ಮನಸ್ಸಿನಲ್ಲಿ ಗೌರವಾನ್ವಿತರಾಗಿ ವಿಚಾರ ಮಾಡಿದರೆ, 'ನಾನು, ಅಂತಿಂಥ ಜೀವನ ಹತ್ಯೆ ಮಾಡಿದೆನು' ಮತ್ತು ನಾಚಿಕೆಯಿಂದ, ಪಶ್ಚಾತ್ತಾಪದಿಂದ, ' ಇಷ್ಟವಿಲ್ಲದಿದ್ದರೂ ಬಹಳ ಉಳಿಸುತ್ತಿದ್ದರೂ, ಇಂದು ನನ್ನಿಂದ ಅಂತಿಂಥ ಜೀವದ ಹತ್ಯೆ ಆಗಿ ಹೋಯಿತು. ಈ ಎರಡೂ ಮನಸ್ಥಿತಿಯಲ್ಲಿ ಬಹಳ ಅಂತರವಿದೆ. 'ಹಿಂಸೆ ಮಾಡಬೇಕು, ಮಾಡುತ್ತಲೇ ಇರುವೆನು' ಮತ್ತು ' ಹಿಂಸೆಯಿಂದ ಪಾರಾಗಬೇಕಾಗಿದೆ, ಅದಕ್ಕಾಗಿ ನಾನು ಹಿಂಸೆ ಮಾಡಬೇಕಾಗಿ ಬಂದಿದೆ' ಈ ಎರಡು ಸಂಕಲ್ಪಗಳಲ್ಲಿ ಯಾವ ಅಂತರವಿದೆಯೋ ಅದೇ ಗೃಹಸ್ಥನ ಚಿಕ್ಕ-ಪುಟ್ಟ ಅಪರಿಹಾರ್ಯ ಹಿಂಸೆಯಾಗಿದ್ದರೂ 'ಅಹಿಂಸಕ'ನಾಗಿಯೇ ಇರುತ್ತಾನೆ. ಅವನು ಹಿಂಸಕನಲ್ಲ. ಅವನಿಗೆ ಹಿಂಸೆ ಮಾಡಬೇಕಾಗಿ ಬಂದಿದೆ. ಕರ್ತವ್ಯ ಭಾವನೆಯಿಂದ ಕಠೋರನಾಗುತ್ತಾನೆ.

ಅಹಿಂಸೆಯಿಂದ ವ್ಯಕ್ತಿಯ ಜೀವನ ನಿಷ್ಪಾಪವಾಗುವುದು, ಮತ್ತು ಪ್ರಾಣಿಗಳಿಗೆ ಅಭಯದ ಆಶ್ವಾಸನೆ ದೊರೆಯುತ್ತದೆ. ಈ ವ್ಯವಸ್ಥೆಯಿಂದ ಪ್ರಕೃತಿ ಸಮತೋಲನೆಯಲ್ಲಿಡಲು ಸಹಾಯವಾಗುವುದು. ಪರ್ಯಾವರಣಕ್ಕೆ ಸಂರಕ್ಷಣೆ ಸಿಗುವುದು. ಆದ್ದರಿಂದಲೇ ಸಂತರು ಮನುಷ್ಯರ ಸಂಯಮಯುತ ಆಚರಣೆ ಜೀವಸಮೂಹಕ್ಕೆ ಕಲ್ಯಾಣಕಾರಿಯೆಂದು ಹೇಳಿದ್ದಾರೆ.

ಅಹಿಂಸೆಯ ಅರ್ಥ ಹೇಡಿತನವಲ್ಲ ಎಂಬುದು ಮೇಲಿನ ವಿಧಾನದಿಂದ ಸ್ಪಷ್ಟವಾಗುವುದು. ಜೀವನದಿಂದ ಪಲಾಯನ ಮಾಡುವುದು ಅಹಿಂಸೆಯ ಉದ್ದೇಶವಲ್ಲ. ಅಹಿಂಸೆಯಾದರೋ ಜೀವನವನ್ನು ವ್ಯಾವಹಾರಿಕ ಹಾಗೂ ಸಮತೋಲನ ಮಾಡುತ್ತಲೇ ಸ್ವ ಮತ್ತು ಪರದ ಘಾತದಿಂದ ಪಾರಾಗುವ ಉಪಾಯವಾಗಿದೆ. ಅಹಿಂಸೆ ಮಾನವನಲ್ಲಿ ಮಾನವತೆಯ ಪ್ರತಿಷ್ಠೆಯನ್ನು ಮಾಡುವ ಉಪಾಯವಾಗಿದೆ.

[ಹಿಂದಿಯ ಖ್ಯಾತ ಜೈನ ವಿದ್ವಾಂಸರಾದ ಶ್ರೀ ನೀರಜ್ ಜೈನ್ ಅವರ 'ಅಹಿಂಸಾ ಔರ್ ಅಪರಿಗ್ರಹ' ಎಂಬ ಗ್ರಂಥದಿಂದ ಮೇಲಿನ ವಿಚಾರಗಳನ್ನು ಸಂಗ್ರಹಿಸಲಾಗಿದೆ. ಇನ್ನು ಹೆಚ್ಚಿನ ವಿಷಯಗಳಿಗೆ ಆ ಗ್ರಂಥವನ್ನು ನೋಡಬಹುದು.]

***

ಅಭಿವಂದನಾ

Religious Harmony and Tolerance in Karnataka

-Father Narohna

When speaking of tolerance Gandhiji wrote in Young India of December 22, 1927 : "I plead for the broadest toleration and I am working to that end. I ask people to examine every religion from the point of the religionists themselves. I do not expect the India of my dream to develop one religion,. i.e., to be wholly Hindu or wholly Christian or wholly Mussalman but I want it to be wholly tolerant with its religious working side by side with one another".

In spite of this noble dream, perhaps not a day passes without hearing about communal conflicts in India. We seem to be experts in spreading communalism under various heads such as caste, class, language, region, religion and profession, communalism. Common people, not accustomed to see the evil forces at work behind these conflicts, are genuinely interested in creating an atmosphere of peace, tolerance and harmony.

Any change in society is not automatic. It has to be fostered by creating the right environment. This is true of religious harmony too. But before we attempt to do so, it is necessary to make an analytic study of the prevailing factors that militate against the growth of harmony. This will lead to enlightened action.

In an article " A decalogue for communal harmony" (Vidya Jyothi, August 1993) Fr. Joseph Vellaringatt S.J. makes a critical study of the causes of communal disharmony and proposes some remedial measures. According to him what is at

stake to-day is not the interests of this or that religion but the true spirit of religion itself. It is not a fight between different religions but the effort of power-hungry politicians who seek economic and political interests and religion is used as a tool to achieve them.

True religion is a communion between God and Man and between human beings among themselves. According to the Upanishads an enlightened person sees all beings in the Self (Atman) and the self in all beings (Isopanishad 6). Jesus came to preach about the universal fatherhood of God and brotherhood of men. One cannot go nearer to God without going nearer to man which means that communion, fellowship, and love of neighbour, to which-ever religion, region, caste or language one may belong, is a condition sine qua non for one's communion and friendship with God. No religion teaches you to hate your neighbour under any pretext whatsoever. Hence practice of tolerance of others and love towards them is not only not optional but obligatory. Any person who hates his neighbour whatever may be his religion, excommunicates himself from communion with God. He becomes a traitor to his own religion and its teachings. He cannot call himself a true Hindu, Muslim, Sikh, Jain or Christian, Be you ever so high, God is above you; you may be a religious head, a political dictator or an economic giant, but if you foster communal hatred, you are anti-religion, anti-human and anti-God.

It is not enough for us to live in peace with our neighbours but we need to act as peace-makers as well. Blessed are the peace-makers for they will be called children of God (Mt.5/9). Conflicts are bound to arise on account of the frailty of man. In such a situation we cannot remain silent spectators.

Our indifference may lead to wider conflicts resulting in death, destruction, loot and rape. We have to act as fire fighters at the initial stage itself rather than allow communal disharmony to spread like wild fire. Let us be quite sure of this that what is taking place to-day is not a fight between religious but manipulation of religions and their structures for narrow, selfish and partisan ends.

It is extremely important for us to discover and admire the spirit of tolerance enshrined in the scared books of the Hindus and manifested in the lives of their saints and leaders. Further, a majority of members of post-independence onstituent assembly of India were Hindus and it is they who gave us a secular constitution. Again it is the vast majority of Hindus who are the first to protest against any trace of Hindu communalism. Hence it is necessary that we develop a loving relationship with the sincere, peace-loving tolerant Hindu majority brothren and not allow them or ourselves to become victims of manipulation by unscrupulous and fanatical elements.

Fundamentalists and communal elements are found in every religion. The ingredients of fundamentalism are many. The most important of them are ''Identification of people by their religions, politicization of religion and nurture of a culture of religious exclusivism and intolerance''. (Dimensions of Mission in India P.37) They are led by the craze for power and money and the power to dominate and not to serve. Fundamentalism has two major components: one, an uprooted people in quest of identity and the other, their exploitation by the powerful. The crucial element in fundamentalism according to T.N. Madan, is pursuit of power. Fundamentalism rears its ugly head because both politics and religion are fertile sources of immense power.

If therefore religion is misused and manipulated for wrong ends thus giving rise to fundamentalsim, the anti-dote for it is also to be found in the true understanding of religion and its values which tell us that power is a trust and its proper use is not for domination of others or self-aggrandisement but for the benefit of the community.

If communalism is an evil, it has to be condemned, wherever it is found. Hence minority communalism is as much an evil as majority communalism. Besides often it is minority communalism which gives birth to majority communalism. If the minority have rights, the majority toohave their own rights. Our aim should therefore be to reconcile the rights of both rather than an exaggerated amphasis on minority rights. The question is not of the existence of these rights in the constitution but the enjoyment of these rights in a spirit of dialogue between the majority and minority community. Dialogue will remove many misconceptions and the apprehension of threat to the interests of any community and foster communal harmony. Let us not forget that it is suspicion and fear that is often the cause of communal conflicts and breach of peace.

There is one more in-built cause of conflict in Indian Society and that is the question of subsidies, reservation and preferential treatment to certain catagories of persons. These reservations are linked to caste, education and social backwardness. This link between caste and preferential treatment has given rises to a lot of heartburn, jealousy and hatred against those who benefit from such reservations. There are many categories of reservation-linked castes such as schedule castes, schedule tribes, backward castes, backward classes, etc. So many castes are trying to be classified among these backward castes or classes in order

to get the reserved economic or educational benefits. The objective of reservation is indeed noble. It was meant to undo the past injustice done to the weaker castes and classes but this inevitably leads to a division of Society on communal lines. It is an anomalous situation. On one side we want to eliminate caste consciousness from society and on the other we make reservations based on castes. It is like pressing the accelarator with one leg and the brake with the other leg at the same time. There is already a clamour either to grant reservation based on economic backwardness only or to put an end to these reservations as early as possible. Till then the society will be divided between those who enjoy the reservations and those who do not. What should be our response? Perhaps to consider it as a necessary evil till it is abolished. The richer sections of society will have to tolerate it if the poorer ones are given some extra benefits.

India is multi-religious, multi-cultural society. What is applicable to India in general is also applicable to Karnataka in particualr. In this complex situation, let us try to highlight some of the trends of fostering communal harmony in Karnataka.

Edmurd Brake, the famous English Parliamentarian said "Wars begin in the minds of men. What is applicable for war, is equally applicable for peace. The movement for peace, harmony and tolerance must begin with the change of minds and attitudes of men which in turn depends on the acceptance of and guidance by right religious, moral and human values."

The founding fathers of our constitution have given us a secular constitution which does not abolish religion but allows all persons to have freedom of consicence and grants the right freely to profess, practise and propagate religion subject to public order, morality and health. If secularism is a basic feature of

our constitution, it also shows the direction in which the country should move and make progress. Our beloved country while respecting all religions, should strive for the realization of a secular self- identity transcending all religious communalisms.

Secularism thus becomes an important value to be practised in our day to day life. There is absolutely no doubt that there is a thrust among our people for national integration which has found expression in several kinds of activities. In karnataka, for example, whenever there is an important feast or celebration, the religious heads and leaders of different religious try to arrange Sarva Dharma Sammelan. It is a craving for fellowship with othes. How far such Sammelans achieve the objective of Communal harmony is difficult to say but it has a symbolic value.

More effective perhaps are Sarva Dharma Seva Dals. This is to avoid the tendency to do social service on communal lines. Some times we do come across advertisements in news papers that a particular kind of educational or social service is arranged by a particular community of people for the members of their community. It appears to me that this is partly the application of the principle that charity begins at home. But by and large, all the educational institutions, except perhaps some hostels and orphanages, cater to the students belonging to all sections of society, even when the said institutions are not aided. This is a very healthy sign. It should be a beautiful idea to consider every educational institution not merely as a centre of information but also a centre of formation in tolerance and harmony. It is not enough to have the infrastructure. We should have the vision and the will to use it.

This souvenir is being published on the occasion of the

Golden Jubilee of the Birth day of Jagadguru Sri Sri Sri Bala Gangadharanath Swamiji of Adi Chunchanagiri Mutt. This Mutt has also started a number of educational, medical and charitable institutions all over Karnataka. These instituitions are open to all sections of society and are rendering yeoman service particularly in rural areas.

In our own city of Mysore there is a chain of educational, medical and charitable institutions started by the Swamiji of Suttur Mutt and these are spread over several villages also in Mysore District. These institutions are open to all people irrespective of their religion.

I may mention also the praiseworthly work of Sri Veerendra Heggade, the Dharmadhikari of Dharmasthala. We are given to understand that even a few villages are adopted by the temple and people are given an opportunity to undergo training in simple crafts and trades and thus made self-reliant.

All over Karnataka there are many heads of various religious both Hindus, Muslim, Christain and others who have started a number of institutions catering to the needs of people belonging to different castes and religions. Isn't it a wonderful movement towards secularism? When the objective of harmony and tolerance has taken root in the minds of leaders of various religions it will definitely find expression in the establishment of such institutions for the benefit of all. **God's love is universal and so the service of religious institutions should be universal.**

Another trend that is gaining momentum in Karnataka is a kind of fellowship and cordiality between Jagadgurus and leaders of various religions. The gathering may be on the occasion of a temple feast, the inaguration of an institution or the celebration of a birthday. It is a pleasure to watch the

cordiality and fellowship of religious heads on such occasions. God is a God of love and the religious leaders are serving this God of love. Therefore devotees expect from their religious leaders such an attitude of universal love. It is my personal feeling that when the various religious leaders give expression to such cordiality and harmony, it sends a powerful message to their devotees to cultivate harmony with their fellow men. It has been my good fortune to participate in various celebrations organized by Adi Chunchanagiri Mutt, the Suttur Mutt, the Dakshina Kashi Kumb Mela at T.Narasipur and other functions. Everywhere I have experienced the love and cordiality of the Swamijis. I have also participated in the functions arranged by our Muslim brethren during Bakrid and Ramzan. They have treated me with love and kindness. Last but not the least, I have been elected as one of the Vice-Presidents of a new society recently registered in Mysore under the title "**Hindus Muslim Souhardha Samstha**" though I am neither a Hindu nor a Muslim. It shows their broad mindedness.

While appreciating the above trends, we should bear in mind that although individual expressions of secularism have their own value, social change requires a popular effort to promote harmony in out society. It is therefore necessary to promote education for tolerance and harmony as a wider scale. Our educational institutions with young children belonging to various religions, are fertile ground for imparting such education. Children should be trained to look at their companions beyond the barriers of caste and religion.

Here I would like to give two quotations, one from Michael Gorbachev and another form St. Paul. Speaking to a group of French intellectuals in Paris during the celebration of

the anniversary of the French Revolution, he said : "The new civilizaion that is taking place will not be a monolith, its vitality lies in its spiritual, ethnic, social, political and cultural diversity. This is distinctive feature of the integrity and diversity. This is a distinctive which will undoubtedly increase from decade to decade. If so, one of the major conditions of progress is tolerance of a different way of thinking and life. (Pravda July 22, 1989 Moscow)

Now the very foundation of tolerance and harmony is love and in the first letter to Corinthians, Chapter 13/1-13, St.Paul speaks as follow:

If I speak in the tongues of mortals and of angels but do not have love, I am a noisy gong or a chanting cymbal. And if I have prophetic powers and understand all mysteries and all knowledge and if I have all faith so as to remove mountains but do not have love, I am nothing. If I give away all my possessions and if I hand over the body so that I may boast but do not have love, I gain nothing.

Love is patient, love is kind, love is not envious or boastful or arrogant or rude. It does not insist on its own way, it is not irritable or resentful. It does not rejoice in wrong doing but rejoices in the truth. It bears all things, believes all things, hopes all things, endures all things- - - - - and now faith, hope and love abode, these three and the greatest of these is love.

May I add that one who has love for others, has found the master-key for tolerance, peace and harmony. Harmony and cordialily do not exist in a vaccum. They are shown in the actions of everyday life. May I therefore take the liberty of narrating a few details of my close association with Jagadguru

Balagangadharanatha Swamiji? Actually my association with the said swamiji started about three years ago during his Birth day celebrations at Kuvempunagar. The swamiji was unable to come for the function but I made a speech in absentia highlighting his achievements. My curage reached his ears and from then on it became an ever growing bond of freindship and cordiality.

They say that the family that dines together, stay together. If ever I happen to go to his ashram, the swamiji will not leave me without taking Prasad (or meal) with him, something two of as only in his personal room.

On the occasion the annual festival at Adi Chunchanagiri Mutt, I was invited to give a speech before the devotees numbering about three lakhs on religions harmony. As a remembrance, of that the Swamiji gave me a wrist watch with his photo on it. I have worn it ever since and I proudly alone it to my hindu friends, specially the people of Okkaliga community and this has won me more hindu friends.

Again I was invited by the same swamiji to attend the Kumbha Mela at T.Narasipur. There I was led to one of the "Kutiras" meant for the swamiji coming from various places. People were surprised to see a christian priest over there but all the same were appreciative of my presence in their midst. It gave me a beautiful opportunity to conduct more swamiji's. I was given also an opportunity to address a gathering of nearly four lakhs of people. I did address them showing my appreciation for their love for prayer and the need for interior purification. symbolized by them external both in the conference of views.

Sometimes I was taken by the Swamiji in his own car for some functions. It gave me an opportunity for close, personal

exchange of views on several matters of mutual interest, especially in the field of education and religion.

I have narrated the above details with a definite purpose, namely that harmony requires a human touch and a religions leaders we need to allow a human face. Incidentally. I may mention this swamiji has an ever-smilling face.

The swamiji has also shown great concern and interest in one of my projects for the christian community. Since the project was meant chiefly to help the poor in the community. The swamiji has gone out of the way to help me to overcome some procedural hurdles. He even went to the extent of telling me that I could contact him at any time of the day or night if the need arose. It must be emphasized here that the swamiji was willing to go to such an extent to help a christain community : This altitude for beyond the concept of more tolerance. It is a sign universal love.

May I conclude this article wishing our beloved Swamiji long and fruitful life and may he a champion of peace, harmony and love between all sections of our society.

***

ಗಾಂಧೀಜಿಯ ಧರ್ಮದೃಷ್ಟಿ

ಪ್ರೊ|| ಎಸ್.ಕೆ. ರಾಮಚಂದ್ರರಾವ್

ವಿಶ್ವದ ರಾಜಕಾರಣಿಗಳ ಪಂಕ್ತಿಯಲ್ಲಿ ಗಾಂಧೀಜಿಯವರನ್ನು ಸೇರಿಸುವುದಿದೆ. ನಮ್ಮ ದೇಶದ ರಾಜಕಾರಣಕ್ಕೂ ಅವರಿಗೂ ನಿಕಟವಾದ ಗಂಟು. ನಮ್ಮ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ರಾಷ್ಟ್ರದ ಪಿತನೆನಿಸಿದ ವ್ಯಕ್ತಿ ಅವರು; ನಮ್ಮ ನಾಡಿನ ಸಾರ್ವಜನಿಕ ಜೀವನದಲ್ಲಿ ಸುಮಾರು ನಲವತ್ತು ವರ್ಷಗಳ ಕಾಲ ಎಣೆಯಿಲ್ಲದಂತೆ ಮೆರೆದ ಮಹಾಪುರುಷ. ಆದರೆ ಅವರ ಪ್ರವೃತ್ತಿಗಳ ಬಗ್ಗೆ ಸಂದೇಹವೇ ಇದೆ. ಅವರೇನು ರಾಜಕಾರಣಿಯೋ, ಸಮಾಜ ಸುಧಾರಕರೋ, ಸಂತರೋ, ಆರ್ಥಿಕಚಿಂತಕರೋ ಏನೆಂಬುದು ಹಲವರಿಗೆ ಬಗೆಹರಿಯದ ಸಮಸ್ಯೆ. ಇದು ಅವರ ಕಾಲದಲ್ಲಿಯೇ ಒದಗಿಬಂದಿದ್ದ ಸಂದೇಹ. ಇದನ್ನು ಅವರೂ ಅರಿತಿದ್ದರು. ಇದಕ್ಕೆ ಅವರು ಪರಿಹಾರವನ್ನೂ ಸೂಚಿಸಿದ್ದರು. ಗೆಳೆಯ ಪೋಲಾಕರೊಂದಿಗೆ ಮಾತನಾಡುತ್ತ 'ನನ್ನನ್ನು ರಾಜಕಾರಣದಲ್ಲಿ ಮುಳುಗಿರುವ ಸಂತ ಎಂದು ಜನ ಬಗೆಯುತ್ತಾರೆ. ಆದರೆ ದಿಟವಾಗಿ ನಾನೊಬ್ಬ ರಾಜಕಾರಣಿ, ಆದರೆ ಸಾಧ್ಯವಾದಷ್ಟು ಸಂತನಾಗಬೇಕೆಂದು ಹವಣಿಸುತ್ತಿರುವವನು' ಎಂದು ಹೇಳಿದ್ದರು. ಇನ್ನೊಂದು ಸಂದರ್ಭದಲ್ಲಿ 'ನಾನು ಕಂಡಿರುವ ಧಾರ್ಮಿಕ ಪುರುಷರಲ್ಲಿ ಬಹುಮಂದಿ ದಿಟವಾಗಿ ರಾಜಕಾರಣಿಗಳು; ಧರ್ಮದ ಸೋಗನ್ನು ಏರಿಸಿಕೊಂಡವರು. ಆದರೆ ನಾನು ದಿಟವಾಗಿ ಧಾರ್ಮಿಕ ಪುರುಷ; ರಾಜಕಾರಣದ ಸೋಗನ್ನು ಏರಿಸಿಕೊಂಡಿದ್ದೇನೆ' ಎಂದಿದ್ದರು. ಈ ಎರಡೂ ವಿವರಣೆಗಳಲ್ಲಿ ಏಕಸೂತ್ರವಿರುವಂತೆ ಇಲ್ಲ. ಆದರೆ ಸಂತನಾಗಬೇಕೆಂಬ ಬಯಕೆ. ದಿಟವಾಗಿ ಧಾರ್ಮಿಕ ವ್ಯಕ್ತಿಯಾಗಿರುವುದು ಈ ಎರಡರಲ್ಲಿ ಸಾಮರಸ್ಯವಿಲ್ಲದೆ ಇಲ್ಲ.

ವಿಶ್ವದ ಜನ ಗಾಂಧೀಜಿಯನ್ನು ರಾಜಕಾರಣಿಯೆಂದೇ ಗ್ರಹಿಸುವುದು ವಾಡಿಕೆ. ನಮ್ಮ ದೇಶದಲ್ಲಿ ಮಾತ್ರ ಧಾರ್ಮಿಕವ್ಯಕ್ತಿಯೆಂದೇ ಪರಿಗಣನೆ.

೧೯೫೯ರಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಒಪೀನಿಯನ್ ಎಂಬ ಸಂಸ್ಥೆ ಗಾಂಧೀಜಿಯನ್ನು ನಾವು ಗ್ರಹಿಸಿರುವುದು ಹೇಗೆಂದು ಒಂದು ಸಮೀಕ್ಷೆಯನ್ನು ನಡೆಸಿದರು. ಆದರಿಂದ ತಿಳಿದುಬಂದ ವಿವರಗಳು ಸ್ವಾರಸ್ಯವಾಗಿವೆ. ನೂರರಲ್ಲಿ ೨೭ ಮಂದಿ ಅವರನ್ನು ಸ್ವಾತಂತ್ರ್ಯಸಮರದ ನೇತಾರನೆಂದು ಬಗೆದಿದ್ದರು; ೧೭ ಮಂದಿ ಸಮಾಜಸುಧಾರಕನೆಂದರು; ೧೬ ಮಂದಿ ದೇವರ ಅವತಾರವೆಂದು ಪರಿಗಣಿಸಿದ್ದರು; ೧೫ ಮಂದಿ ಧಾರ್ಮಿಕನಾಯಕನೆಂದರು; ೭ ಮಂದಿ ಮಾತ್ರ ರಾಜಕಾರಣಿಯೆಂದು ಹೇಳಿದರು. ಈ ಗೊಂದಲಕ್ಕೆ ಕಾರಣ ಇಷ್ಟೇ. ದೇಶದ ರಾಜಕಾರಣ, ಸಾಮಾಜಿಕ, ಆರ್ಥಿಕ, ಧಾರ್ಮಿಕ ವಿವರಗಳನ್ನು ಬಿಡಿಬಿಡಿಯಾಗಿ ಕಿತ್ತಾಡುವುದು ಸಲ್ಲದು. ಅದೊಂದು ಸಮಷ್ಟಿ. ನಾಡಿನ

ಬದುಕಿನಲ್ಲಿ ಎಲ್ಲವೂ ಎಳೆಬಿಡಿಸಲಾರದಂತೆ ಸೇರುತ್ತವೆ. ಬರಿಯ ರಾಜಕಾರಣಿಯಾದವನು ಬರಿಯ ಧಾರ್ಮಿಕ ನಾಯಕನಂತೆಯೇ ನಿರರ್ಥಕನಾಗುತ್ತಾನೆ. ಅವನಿಗೆ ನೆಲೆಯೂ ಇರದು. ಅವನ ನೋಟವೂ ಮೊಟಕು.

ಗಾಂಧೀಜಿಯನ್ನು ಸಂತರೆಂದು ನಮ್ಮವರು ಕಂಡುಕೊಂಡರು. ಹಿಂದಿನಿಂದ ಬಂದ ಸಂತರ ಪಂಕ್ತಿಯಲ್ಲಿ, ವಿಶ್ವಾಮಿತ್ರ, ವಶಿಷ್ಠ, ಪರಶುರಾಮ, ಯಾಜ್ಞವಲ್ಕ್ಯ, ಬುದ್ಧ, ಮಹಾವೀರ, ಶಂಕರ, ರಾಮಾನುಜ, ಮಧ್ವ, ಬಸವ, ದಯಾನಂದ, ರಾಮಕೃಷ್ಣ, ವಿವೇಕಾನಂದ ಈ ಮೊದಲಾದವರ ಪರಂಪರೆಯಲ್ಲಿಯೇ ಬಂದವರೆಂದು ನಮ್ಮ ಎಣಿಕೆ. ಗಾಂಧೀಜಿ ಇದ್ದುದೂ ಹಾಗೆಯೇ. ಅವರು ಅಡಿಗಡಿಗೆ ಮಾಡುತ್ತಿದ್ದ ಆಶ್ರಮವ್ಯವಸ್ಥೆ, ಮತ್ತೆ ಮತ್ತೆ ನಡೆಸುತ್ತಿದ್ದ ಉಪವಾಸ-ಮೌನ, ಒತ್ತಿ ಹೇಳುತ್ತಿದ್ದ ವ್ರತಗಳು ಇವು ಅವರಿಗೆ ಹೊರಚೌಕಟ್ಟನ್ನು ಒದಗಿಸಿದವು. ಅವರು ಕೈಗೊಂಡ ಕಠೋರ ಸಾಧನೆ ಮತ್ತು ಅವರ ಬದುಕಿನ ಸರಳರೀತಿ ಇವು ಒಳಗಿನ ತಿರುಳಾದುವು. ಅವರ ಕಾಣ್ಕೆಯಲ್ಲಿ ಇರುತ್ತಿದ್ದ ಸತ್ತ್ವ, ಅಂತರ್ಮುಖತೆ, ಪರಮಾರ್ಥನಿಷ್ಠೆ ಸಾಮಾನ್ಯ ವ್ಯಕ್ತಿಯಲ್ಲಿ ಕಾಣಸಿಗದೆ ಅವರನ್ನು ಅತಿಮಾನುಷ ನೆಲೆಗೆ ಏರಿಸಿದುವು. ನಮ್ಮವರು 'ಋಷಿಶ್ಚ ಕಿಲ ದರ್ಶನಾತ್' ಎಂದರು. ಋಷಿಯಾದವನ ಕಾಣ್ಕೆ ನಮ್ಮಂತೆ ಸಾಧಾರಣವಾದುದಲ್ಲ, ಇಂದ್ರಿಯಬದ್ಧವಾದುದಲ್ಲ, ವಿಷಯತಂತ್ರವಾದುದಲ್ಲ. ನಾವು ಕಾಣದುದನ್ನು ಕಾಣಲಾಗದುದನ್ನು ಅವನು ಕಾಣುತ್ತಾನೆ. ಕಾಣುವುದು ಮಾತ್ರ ಅಲ್ಲ, ಕಂಡದ್ದನ್ನು ನಮ್ಮ ಮನಮುಟ್ಟುವಂತೆ ಹೃದಯತಟ್ಟುವಂತೆ ತಿಳಿಯಹೇಳುತ್ತಾನೆ. ಅವನ ದರ್ಶನವೂ ಸ್ವಚ್ಛ, ವರ್ಣನವು ಸಮರ್ಥ. ಗಾಂಧೀಜಿ ಒಬ್ಬ ಋಷಿಯೇ, ಆ ಕಾಲಕ್ಕಾಗಲೀ ಈ ಕಾಲಕ್ಕಾಗಲೀ ನಮ್ಮ ದೇಶನಾಯಕರು, ನಮ್ಮ ಬುದ್ಧಿವಂತರು ಕಾಣಲಾಗದ ಸತ್ಯವನ್ನು ಅವರು ಕಂಡುಕೊಂಡರು. ಅವರು ತಮ್ಮ ಕಾಣ್ಕೆಯ ಬಲದಿಂದಲೇ ಇಡೀ ನಾಡನ್ನು ಬಿಡುಗಡೆಯ ಕಡೆ ನಡೆಸಿದರು. ಅವರ ಸಿದ್ಧಿ ಮಾತಿನ ಸಿದ್ಧಿಯಲ್ಲ. ಕ್ರಿಯೆಯ ಸಿದ್ಧಿಯೂ ಅಲ್ಲ, ಕಾಣ್ಕೆಯ ಸಿದ್ಧಿ. ಹಾಗೆಂದೇ ಅವರು ದೇಹವಿಟ್ಟು ಮೂವತ್ತು ವರ್ಷಗಳಷ್ಟು ಕಾಲ ಕಳೆದರೂ ಅವರ ಕಾಣ್ಕೆ ನಮ್ಮೆದುರು ಅಚ್ಚಳಿಯದೆ ಉಳಿದಿದೆ. ಅವರ ಹಿಂದೆ ಮತ್ತು ಅವರಾದ ನಂತರ ಬಂದುಹೋದ ರಾಜಕಾರಣಿಗಳೆಷ್ಟೋ ಮಂದಿ. ದೇಶನಾಯಕರೆಷ್ಟೋ ಮಂದಿ. ಅವರೆಲ್ಲರ ನೆನಪು ಬರುಬರುತ್ತ ಮಾಸುವುದು ಸಹಜ. ಇಂದಿನ ಪೀಳಿಗೆಗೆ ಅವರು ಬರಿಯ ಹೆಸರುಗಳಷ್ಟೆ. ಆದರೆ ಗಾಂಧೀಜಿಯ ಸ್ಮರಣೆ ಹಚ್ಚಹಸುರಾಗಿಯೇ ನಿಂತಿದೆ; ಹಾಗೆಯೇ ಉಳಿಯುತ್ತದೆ; ಧಾರ್ಮಿಕ ಮಹಾಪುರುಷನಾದುದರಿಂದ.

ಗಾಂಧೀಜಿಯ ಧಾರ್ಮಿಕಪ್ರವೃತ್ತಿ, ಧಾರ್ಮಿಕಹಿರಿಮೆ ಹೇಗೆ ಒದಗಿ ಬಂದುವೆಂದು ಕಾಣಲು ಅವರ ಬದುಕನ್ನು ಕೊಂಚ ನೋಡಬೇಕು. ಅವರು ಹುಟ್ಟಿದ್ದು ವೈಷ್ಣವ ಮನೆತನದಲ್ಲಿ, ಬೆಳೆದದ್ದು ಜೈನ ಪರಿಸರದಲ್ಲಿ, ಎರಡೂ ಮತಧರ್ಮಗಳು ನಿಷ್ಠೆಗೆ,

ಆಚಾರಕ್ಕೆ ಹೆಸರಾದವು. ತಂದೆ ಅಷ್ಟಾಗಿ ಧಾರ್ಮಿಕ ಒಲುವಿನವರಲ್ಲದಿದ್ದರೂ, ವ್ಯವಹಾರಕುಶಲರಾಗಿ ಅಧಿಕಾರಿಗಳಾಗಿದ್ದರೂ ನೀತಿಪರರು, ನಿಷ್ಠುರರು; ಕಡೆಕಡೆಗೆ ಧಾರ್ಮಿಕಪ್ರಸಕ್ತಿ ಅವರನ್ನು ವಶಪಡಿಸಿಕೊಂಡಿತೆನ್ನಿ. ತಾಯಿಯಂತೂ ಪರಮ ಧಾರ್ಮಿಕ ವ್ಯಕ್ತಿ. ಆಕೆಯ ಚಾತುರ್ಮಾಸ್ಯವ್ರತಗಳು, ವೈಷ್ಣವ ದೇವಾಲಯಸಂದರ್ಶನ, ಪುರಾಣಶ್ರವಣ ಮೊದಲಾದವು ಎಳೆಯ ಗಾಂಧೀಜಿಯ ಮೇಲೆ ಬಲವಾದ ಪರಿಣಾಮವನ್ನು ಮೂಡಿಸಿದುವು. ಸಂಪ್ರದಾಯನಿಷ್ಠೆ ಮತ್ತು ಧಾರ್ಮಿಕಸಂಸ್ಕಾರ ಗಾಂಧೀಜಿಯವರ ಬದುಕಿನ ಮೊದಲ ಹಂತದಲ್ಲೇ ವಿಶೇಷವಾಗಿ ಮೂಡಿದುವು. ಚಿಕ್ಕಂದಿನಲ್ಲೇ ಭಾರತವೀರರ ಕಥೆಗಳನ್ನು ಕೇಳುತ್ತ ಹರಿಶ್ಚಂದ್ರನ ಸತ್ಯಸಂಧತೆ, ಪ್ರಹ್ಲಾದನ ಏಕಾಂತಭಕ್ತಿ, ಗಜೇಂದ್ರಮೋಕ್ಷದ ತಾತ್ಪರ್ಯ ಇವೆಲ್ಲವನ್ನೂ ಅರಗಿಸಿಕೊಂಡರು. ಸಣ್ಣವಯಸ್ಸಿನಲ್ಲೇ ಅಂಜಿಕೆಯ ಸ್ವಭಾವ ಇವರನ್ನು ಕಾಡುತ್ತಿದ್ದು, ಮನೆಯಲ್ಲಿ ಊಳಿಗಕ್ಕಿದ್ದ ರಂಭೆ ಎಂಬಾಕೆಯಿಂದ ರಾಮನಾಮದ ಮಹಿಮೆಯನ್ನು ಅರಿತುಕೊಂಡರು. ಎಲ್ಲ ಬಗೆಯ ಬೆದರಿಕೆಗಳಿಗೂ ರಾಮನಾಮ ರಾಮಬಾಣ ಎಂಬುದು ಆಗ ಅವರಿಗೆ ಮನದಟ್ಟಾದುದು. ಮುಪ್ಪಿನಲ್ಲಿ ಅವರನ್ನು ಆಗದವನೊಬ್ಬ ಗುಂಡಿಕ್ಕಿ ಕೊಂದಾಗಲೂ ಉಸಿರು ನಿಲ್ಲುವ ಮೊದಲು ಬಾಯಿಂದ 'ಹೇ ರಾಮ' ಎಂಬ ಮಾತನ್ನು ಹೊರಡಿಸಿತು.

ಪೋರಬಂದರಿನಲ್ಲಿ ತಮ್ಮ ತಂದೆ ರೋಗದಿಂದ ಹಾಸಿಗೆ ಹಿಡಿದಿದ್ದಾಗ, ಅವರೆದುರು ರಾಮಾಯಣ ಪಾರಾಯಣ ನಡೆಯುತ್ತಿದ್ದಾಗ ಗಾಂಧೀಜಿ ಇರುತ್ತಿದ್ದರು; ಹದಿಮೂರರ ಎಳೆತನವಾದರೂ ರಾಮಾಯಣದ ಹಿರಿಮೆಗೆ ಮಾರುಹೋದರು. ಅಂದಿನಿಂದ ತುಳಸೀದಾಸರ ರಾಮಾಯಣ ಅವರ ಒಲುವನ್ನು ಸೆರೆಹಿಡಿಯಿತು. ರಾಮನಾಮದ ಮಹಿಮೆಯನ್ನು ಆಗಲೇ ಮೈತುಂಬಿಸಿಕೊಂಡಿದ್ದವರು ಈಗ ರಾಮನ ವ್ಯಕ್ತಿತ್ವಕ್ಕೆ ತಲೆಬಾಗಿಸಿದರು. ರಾಮನೇ ಪರಬ್ರಹ್ಮ, ಪರಮಾತ್ಮ, ಈಶ್ವರ ಎಂದು ನಂಬಿಕೊಳ್ಳಲು ಅವರಿಗೆ ಕಷ್ಟವಾಗಲಿಲ್ಲ. ದಾಶರಥಿರಾಮನೇ ಅವರ ಆದರವನ್ನು ಸೂರೆಗೊಂಡರೂ ಮುಂದೆ ಈ ಸಂಕುಚಿತ ಚೌಕಟ್ಟನ್ನು ಮೀರಿ ಪರಮಾರ್ಥದ ತಾತ್ಪರ್ಯವನ್ನು ಪಡೆದುಕೊಳ್ಳುವುದು ಸಾಧ್ಯವಾಯಿತು. ಮುಂದೆ ರಾಜಕೋಟೆಯಲ್ಲಿ ನಡೆದ ಭಾಗವತಪಾರಾಣಯದಲ್ಲಿಯೂ ಇವರು ಪಾಲ್ಗೊಂಡರಾದರೂ. ಅದು ಇವರ ಮೇಲೆ ಅಷ್ಟಾಗಿ ಪ್ರಭಾವವನ್ನು ಬೀರಲಿಲ್ಲ. ರಾಮನೇ ಅವರ ಇಷ್ಟದೈವವಾಗಿ ಉಳಿದ.

ಇಲ್ಲಿನ ಓದು ಮುಗಿಸಿ ವಕೀಲ ತರಬೇತಿಗಾಗಿ ಇಂಗ್ಲೆಂಡಿಗೆ ಹೋದಾಗಲೇ ಅವರಿಗೆ ಭಗವದ್ಗೀತೆಯ ಪರಿಚಯವಾದುದು. ತಮ್ಮ ಥಿಯಾಸೊಫಿಸ್ಟ್ ಮಿತ್ರರ ಬಲವಂತಕ್ಕೆ ಎಡ್ವಿನ್ ಆರ್ನಾಲ್ಡರ ಆಂಗ್ಲ ಅನುವಾದವನ್ನು ಓದಿದ ಮೇಲೆ ಅದರ ಸ್ವಾರಸ್ಯದ ಸವಿಯನ್ನುಂಡು ಮೂಲಸಂಸ್ಕೃತದಲ್ಲಿಯೇ ಗೀತಾಧ್ಯಯನ ಮಾಡುವ ಹಂಬಲ ಅವರನ್ನು ಹಿಡಿಯಿತು. ಸಾಹಸದಿಂದ ಮಾಡಿಯೂ ಮಾಡಿದರು. ಗೀತೆಯನ್ನು ಮೆಚ್ಚಿಕೊಂಡು

ಅಲ್ಲಿಯೇ ಹತ್ತಾರು ಅಧ್ಯಾಯಗಳನ್ನು ಕಂಠಪಾಠಮಾಡಿದರು; ಬಿಡುವಾದಾಗಲ್ಲೆಲ್ಲ ಮನನಮಾಡಿದರು. ಗೀತೆ ಅವರಿಗೆ ತಾಯಿಯಾಯಿತು; ಎಲ್ಲ ಕಾಲದಲ್ಲಿಯೂ ಬೆಂಬಲವಾಯಿತು. ಅವರ ಜೀವಮಾನದುದ್ದಕ್ಕೂ ಗೀತೆ ಅವರನ್ನು ಕಾಯಿತು. ನಡೆಯಿಸಿತು; ಮೇಲೆತ್ತಿತು. ದೇಶವನ್ನೇ ಮೇಲೆತ್ತುವ ಬಲವನ್ನು ತಂದುಕೊಟ್ಟಿತು. ಅವರಂತೆ ಗೀತೆಯನ್ನು ನಂಬಿಕೊಂಡು ನಡೆದವರು ನಮ್ಮ ಸಂತರಲ್ಲಿಯೂ ವಿರಳ.

ಇಂಗ್ಲೆಂಡಿನಲ್ಲಿದ್ದಾಗಲೇ ಕ್ರೈಸ್ತಧರ್ಮದ ಪರಿಚಯವಾಯಿತು; ಆಗದೆ ಇರುವುದು ಹೇಗೆ? ಸಿನಾಯ್ ಬೆಟ್ಟದ ಮೇಲೆ ಏಸು ನಿಂತು ಮಾಡಿದಬೋಧೆ ಅವರ ಹೃದಯವನ್ನು ಹಿಡಿಯಿತು. ಇದರಿಂದ ಇಡೀ ಬೈಬಲ್ ಅವರಿಗೆ ಪ್ರಿಯವೆನಿಸಿತು. ಆದರಣೀಯವಾಯಿತು. ಹಿಂದೆ, ಇಂಗ್ಲೆಂಡಿಗೆ ಬರುವ ಮೊದಲು, ತಮ್ಮ ನಾಡಿನಲ್ಲಿ ತಮಗೆ ತಿಳಿದವನೊಬ್ಬ ಕ್ರೈಸ್ತಧರ್ಮವನ್ನು ಕೈಗೊಂಡಾಗ ಇವರಿಗೆ ಕ್ರೈಸ್ತಧರ್ಮದ ಮೇಲೆ ಆಗ್ರಹಮೂಡಿದ್ದಿತು. ಆದರೆ ಈಗ ಆಗ್ರಹ ಕರಗಿ ಆದರ ಮೊದಲಾಯಿತು. ಮುಂದೆ, ದಕ್ಷಿಣ ಆಫ್ರಿಕಕ್ಕೆ ಉದ್ಯೋಗಕ್ಕಾಗಿ ಬಂದವರು ಕ್ರೈಸ್ತಧರ್ಮಕ್ಕೆ ಸೇರಬೇಕೆನ್ನುವ ಸೂಚನೆ ಬಂದಾಗ ಒಲ್ಲೆನೆನ್ನಲೂ ಕಷ್ಟವಾಯಿತು. ಮಾರ್ಗದರ್ಶನಕ್ಕಾಗಿ ರಾಯಚಂದಭಾಯಿಯವರಿಗೆ ಬರೆದರು. ಅವರು ಬರೆದದ್ದನ್ನು ನೋಡಿ ಹಿಂದುವಾಗಿಯೇ ಉಳಿದರು. ಇಲ್ಲವಾದರೆ ಅವರು ಆಗ ಕ್ರೈಸ್ತರಾಗಿದ್ದರೆ ಸೋಜಿಗವೇನಲ್ಲ. ಆ ಧರ್ಮದ ಮೇಲೆ ಅವರ ಒಲುವು ಅಷ್ಟಿದ್ದಿತು.

ರಾಯಚಂದಭಾಯಿಯ ಮಾತು ಬಂತಲ್ಲ? ಗಾಂಧೀಜಿ ಇಂಗ್ಲೆಂಡಿನಿಂದ ತಾಯಿನಾಡಿಗೆ ಹಿಂದಿರುಗಿ ಬಂದಾಗ ಈ ರತ್ನಪಡಿವ್ಯಾಪಾರಿಯ ಪರಿಚಯವಾಯಿತು. ವ್ಯಾಪಾರಿಯಾದರೂ ಆತ ಧಾರ್ಮಿಕವ್ಯಕ್ತಿ. ಸತ್ಯಾನ್ವೇಷಕ, ಋಜುಮಾರ್ಗಿ. ಆತನ ಮನಸ್ಸು ಕದಡಿದ್ದುದನ್ನು, ಆತ ಸಮಾಧಾನವನ್ನು ಕಳೆದುಕೊಂಡುದನ್ನು ಗಾಂಧೀಜಿ ಕಾಣಲೇ ಇಲ್ಲ. ಧರ್ಮವು ಮಾಡಬೇಕಾದ ಕೆಲಸವೆಂದರೆ ಇದು ಎಂದು ಅವರು ದೃಢಪಡಿಸಿಕೊಂಡರು. ಲೋಕವನ್ನು ಆತ ಬೇಸರಗೊಳಿಸಲಿಲ್ಲ; ಲೋಕದಿಂದ ತಾನು ಬೇಸರಗೊಳ್ಳಲಿಲ್ಲ; ಇದ್ದೂ ಇರದ ಹಾಗೆ ಇದ್ದ. ಗಾಂಧೀಜಿ ಅವನೊಂದಿಗೆ ಒಡನಾಡಿ. ಮಾತುಕತೆಯಾಡಿ ಅವನ ಆದರ್ಶವನ್ನು ತಮ್ಮದಾಗಿಸಿಕೊಂಡರು. ಅವನನ್ನು ತಮ್ಮ ಗುರುವೆಂದೇನು ಕರೆಯಲಿಲ್ಲ; ; ಆದರೆ ಗುರುವಿಗೆ ಸಲ್ಲುವ ಆದರ ಆತನಿಗೆ ಸಲ್ಲುತ್ತಿತ್ತು. ತಮ್ಮ ಮೇಲೆ ಪ್ರಭಾವಬೀರಿದ ಮೂವರು ಆಧುನಿಕರಲ್ಲಿ ರಾಯಚಂದಭಾಯಿಯೊಬ್ಬರು ಎಂದು ಅವರು ಹೇಳುತ್ತಿದ್ದರು; ಟಾಲ್‌ಸ್ಟಾಯ್ ಮತ್ತು ರಸ್ಕಿನ್ ಇವರು ಮತ್ತಿಬ್ಬರು. ಈ ಇಬ್ಬರು ಗಾಂಧೀಜಿಗೆ ಹತ್ತಿರ ಬಂದುದು ದಕ್ಷಿಣ ಆಫ್ರಿಕದಲ್ಲಿ.

ಗಾಂಧೀಜಿ ದಕ್ಷಿಣ ಆಫ್ರಿಕಕ್ಕೆ ೧೮೯೩ ರಲ್ಲಿ ಬಂದರು. ಮತ್ತೆ ಕ್ರೈಸ್ತಧರ್ಮದ ಮತ್ತು ಈಗ ಇಸ್ಲಾಂಧರ್ಮದ ನೆಂಟು ಬೆಳೆಯಿತು. ಅವರನ್ನು ಮತಾಂತರಗೊಳಿಸುವ ಹವಣಿಕೆಯೂ ಇದ್ದಿತು. ಈ ಪರಿಸ್ಥಿತಿಯಲ್ಲಿ ದಾರಿ ಕಾಣದೆ ಗಾಂಧೀಜಿ ರಾಯಚಂದಭಾಯಿಗೆ

ಪತ್ರ ಬರೆದರು. ಆತ ಉತ್ತರ ಬರೆದದ್ದು ಇವರ ಪಾಲಿಗೆ ತಾರಕವಾಯಿತು. 'ತಾಳಿಕೊಂಡಿರು. ಹಿಂದೂ ಧರ್ಮವನ್ನು ಆಳವಾಗಿ ಅಭ್ಯಾಸಮಾಡು. ನಾನು ವಿಚಾರಮಾಡಿ ನಿರ್ಧಾರಕ್ಕೆ ಬಂದಿರುವುದು ಏನೆಂದು ಬಲ್ಲೆಯಾ? ಹಿಂದೂ ಧರ್ಮದಲ್ಲಿರುವ ಸೂಕ್ಷ್ಮವಾದ, ಗಂಭೀರವಾದ ಚಿಂತನೆಯಾಗಲೀ, ಅಲ್ಲಿ ಕಾಣಿಸುವ ಹೃದಯವೈಶಾಲ್ಯವಾಗಲೀ, ಅದರಿಂದ ದೊರೆಯುವ ಆತ್ಮದರ್ಶನವಾಗಲೀ ಬೇರೆ ಯಾವ ಧರ್ಮದಲ್ಲಿಯೂ ಇಲ್ಲ'. ಗಾಂಧೀಜಿಯನ್ನು ಹಿಂದೂ ಧರ್ಮದಲ್ಲಿ ಉಳಿಸಿದ್ದು ಈ ಮಾತೆಂದು ತೋರುತ್ತದೆ. ತಮ್ಮ ಮನೋದಾರ್ಢ್ಯಕ್ಕೆ ಮತ್ತೆ ಗೀತೆಯಲ್ಲಿ ಶರಣುಹೋದರು; ಗೀತೆಯನ್ನು ಮತ್ತೆ ಮತ್ತೆ ಓದಿದಂತೆಲ್ಲ ಮನನಮಾಡಿದಂತೆಲ್ಲ ಅವರ ಧರ್ಮನಿಷ್ಠೆ ಬೇರೂರಿತು. ಲೌಕಿಕವ್ಯಕ್ತಿಯಾಗಿದ್ದವರು ಧಾರ್ಮಿಕವ್ಯಕ್ತಿಯಾಗಿ ಮಾರ್ಪಟ್ಟರು. ಅವರು ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಬಂದೊಡನೆ 'ಬನಿಯ ಬ್ಯಾರಿಸ್ಟರ್' ನನ್ನು ಜನ 'ಮಹಾತ್ಮ' ನೆಂದು ಗುರುತಿಸುವುದಾಯಿತು.

ದಕ್ಷಿಣ ಆಫ್ರಿಕದಲ್ಲಿದ್ದಾಗಲೇ ಟಾಲ್‌ಸ್ಟಾಯ್‌ರವರ ವಿಚಾರಧಾರೆ ಅವರ ಮನಸ್ಸನ್ನು ಗೆದ್ದಿತು. ಆತನ The Kingdom of God is within you ಎಂಬ ಬರಹವಂತೂ ಶ್ರುತಿಗೆ ಸಮಾನವಾಯಿತು. ಒಮ್ಮೆ ನೆಟಾಲಿಗೆ ಪ್ರಯಾಣ ಹೊರಟಿದ್ದಾಗ, ದಾರಿಯ ಓದಿಗೆಂದು ಗೆಳೆಯ ಪೋಲಾಕರು ಕೊಟ್ಟ ರಸ್ಕಿನ್ ಬರೆದ 'Unto This Last' ಎಂಬ ಸಣ್ಣ ಪುಸ್ತಕ ಅವರ ಇಡೀ ನಿಲುವನ್ನೇ ಗುರುತಿಸಿತು, ಅವರ ದಾರಿಯನ್ನು ಬೆಳಗಿಸಿತು. ಗುರಿಯನ್ನು ಕಾಣಿಸಿತು, ಗೀತೆಯಲ್ಲಿ ಓದಿದ್ದು, ರಾಯಚಂದಭಾಯಿಯಿಂದ ಕಲಿತದ್ದು, ಟಾಲ್‌ಸ್ಟಾಯಿಂದ ಪಡೆದುಕೊಂಡಿದ್ದು, ತಾವೇ ಚಿಂತನಮಾಡಿದ್ದು ಎಲ್ಲವೂ ಈಗ ಒಂದು ಕಡೆ ಕೂಡಿದಂತಾಯಿತು. ತಾವು ಮುಂದೆ ಮಾಡಬೇಕಾದುದು ಈಗ ಸ್ಪಷ್ಟವಾಯಿತು. ರಸ್ಕಿನ್ ತನ್ನ ಪ್ರಬಂಧಕ್ಕೆ ಕೊಟ್ಟ ಶೀರ್ಷಿಕೆ ಬೈಬಲ್ಲಿನಿಂದ ಆಯ್ದುಕೊಂಡಿದ್ದು. ಆ ಪ್ರಬಂಧವನ್ನು ಗಾಂಧೀಜಿ ಗುಜರಾತಿ ಭಾಷೆಗೆ ಅನುವಾದ ಮಾಡಿದಾಗ ಕೊಟ್ಟ ಹೆಸರು 'ಸರ್ವೋದಯ' ಎಂದು. ಸರ್ವೋದಯವೇ ಗಾಂಧೀಜಿಯ ಸಂಕಲ್ಪವಾಯಿತು. ಗಾಂಧೀವಾದದ ಚರಿತಾರ್ಥವೇ ಮಥಿತಾರ್ಥವೇ, ಪರಮಾರ್ಥವೇ ಸರ್ವೋದಯ, ಎಲ್ಲಕಾಲಕ್ಕೂ ಉಳಿಯುವ, ಉಳಿಯಬೇಕಾದ ತತ್ತ್ವ ಇದೇ. ಗಾಂಧೀವಾದವು ಮುಂದೆ ವಿನೋಬಾಜಿಯವರಿಗೆ, ವಿನೋಬಾಜಿಯಿಂದ ಜಯಪ್ರಕಾಶ ನಾರಾಯಣರವರೆಗೆ ಹರಿದು ಬಂದುದು ಈ ಸರ್ವೋದಯವೆಂಬ ಸ್ವರ್ಣಪ್ರವಾಹವಾಗಿಯೇ.

ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿ ತಮ್ಮ ಪರ್ಯಾಯ ಮುಗಿಸಿ ಭಾರತಕ್ಕೆ ಹಿಂದಿರುಗಿದಾಗ, ಅಥವಾ ಹಿಂತಿರುಗುವ ಸನ್ನಾಹ ಮಾಡುತ್ತಿದ್ದಾಗ ಅವರು ಗುಜರಾತಿಯಲ್ಲಿ ಬರೆದು ಅಚ್ಚುಮಾಡಿಸಿ, ೧೯೦೮ ರಲ್ಲಿ ಪ್ರಕಟಿಸಿದ ಒಂದು ಬರಹ ಅವರ ಪೂರ್ವಸಂಸ್ಕಾರಗಳೆಲ್ಲದರ ಪರಿಪಾಕವೆನಿಸಿತು. 'ಹಿಂದ್ ಸ್ವರಾಜ್' ಎಂಬ ಹೆಸರಿನ ಈ

ಪ್ರಬಂಧ ಅವರ ಧಾರ್ಮಿಕ ದೃಷ್ಟಿಯನ್ನು ಸ್ಪಷ್ಟಗೊಳಿಸಿತು; ಅವರ ನಿಲವು, ನೆಲೆ, ನೋಟಗಳನ್ನು ದೃಢಪಡಿಸಿತು. ಪ್ರಶ್ನೋತ್ತರರೂಪದಲ್ಲಿರುವ ಈ ಗುಜರಾತಿ ಪುಸ್ತಕವನ್ನು ಆಗಿನ ಮುಂಬಯಿ ಸರಕಾರ ಮುಟ್ಟುಗೋಲು ಹಾಕಿ ಅಡ್ಡಿಪಡಿಸಿತು. ಇದಕ್ಕೆ ಗಾಂಧೀಜಿಯಿಂದ ಬಂದ ಉತ್ತರ ಅದರ ಆಂಗ್ಲಾನುವಾದ! ಈ ಪುಸ್ತಕದಲ್ಲಿ ಹೀನಾಯವೆನಿಸುವುದಾಗಲೀ ಅಹಿತವೆನಿಸುವುದಾಗಲೀ ಏನಿದ್ದೀತೆಂದು ಅವರಿಗೆ ಅಚ್ಚರಿಯಾಯಿತು. 'ಹಸುಳೆಯ ಕೈಗೂ ಕೊಡಬಹುದಾದ ಬರಹ ಇದು' ಎಂದು ಅವರ ವಾದ. ನಮ್ಮ ಪ್ರಸ್ತುತ ವಿಚಾರಕ್ಕೆ ಸಂಬಂಧಪಟ್ಟ ನಿಲುವು ಈ ಪುಸ್ತಕದಲ್ಲಿ ಕಾಣುವುದು. ರಾಜಕಾರಣ ಮತ್ತು ಸಮಾಜಸುಧಾರಣೆಗಳಿಗೆ ಧಾರ್ಮಿಕವಾದ ನೆಲೆಯುಂಟೆಂಬುದು. 'ನಾನು ಆಧ್ಯಾತ್ಮಿಕ ಪ್ರಗತಿಯನ್ನು ಬಯಸಿ ಅದನ್ನು ಸಾಧಿಸಿಕೊಳ್ಳದಿದ್ದರೆ ಬದುಕಿಗೆ ಅರ್ಥವಿಲ್ಲ; ಪರಮಾರ್ಥದ ಸಾಕ್ಷಾತ್ಕಾರವೇ ನನ್ನ ಧ್ಯೇಯ' ಇದನ್ನು ಗಾಂಧೀಜಿ ಮುಂದಿನ ತಮ್ಮ ಎಲ್ಲ ವ್ಯವಹಾರದ ಪ್ರಣಾಳಿಕೆಯಾಗಿ ಘೋಷಿಸಿದರು. ಮಾನವನು ಯಂತ್ರಕ್ಕೆ ಮಿಗಿಲಾದವನು; ಬುದ್ಧಿ ಶಕ್ತಿಗಿಂತ ವ್ಯಕ್ತಿಯ ಶೀಲ ದೊಡ್ಡದು; ಇತರರ ಪರಿವೆಯಿಲ್ಲದೆ ಸಂಪತ್ತನ್ನು ಕೂಡಿಸಿಕೊಳ್ಳುವುದಕ್ಕಿಂತ ತಾನಾಗಿ ಬಡತನವನ್ನು ಬರಮಾಡಿಕೊಳ್ಳುವುದು ಒಳ್ಳೆಯದು; ನಮ್ಮ ಬದುಕಿನಲ್ಲಿ ಅಂಜಿಕೆಯನ್ನು ಓಡಿಸಿದಲ್ಲದೆ ನಾಡಿನಿಂದ ಬ್ರಿಟಿಷರನ್ನು ಓಡಿಸಲಾರೆವು; ಬ್ರಹ್ಮಚರ್ಯ(ಎಂದರೆ ಆತ್ಮಸಂಯಮ) ಪ್ರಬಲವಾದ ಅಸ್ತ್ರವಾಗಬಲ್ಲದು ಇವೇ ಮೊದಲಾದ ಸೂತ್ರಗಳು ಈ ಪುಸ್ತಕದಲ್ಲಿ ಕಾಣಸಿಗುತ್ತವೆ. 'ಸ್ವರಾಜ್ಯ' ದ ಕಲ್ಪನೆ ದೇಶಕ್ಕೆ ಮಾತ್ರ ಸೀಮಿತವಲ್ಲ ; ವ್ಯಕ್ತಿಗೂ 'ಸ್ವರಾಜ್ಯ' ಅನ್ವಯವಾಗಬೇಕು. ವ್ಯಕ್ತಿಯು ತನ್ನ ಮೇಲೆ ತನ್ನ ಒಡೆತನವನ್ನು ಗಳಿಸಿಕೊಳ್ಳುವುದೇ ದಿಟವಾದ ಸ್ವರಾಜ್ಯ; ವ್ಯಕ್ತಿ ಸ್ವರಾಜನಾದರೆ ದೇಶಸ್ವರಾಜವಾಗುವುದು ಕಷ್ಟವಲ್ಲ. ವ್ಯಕ್ತಿಯ ಸ್ವರಾಜ್ಯಸಿದ್ಧಿಗೆ ಧರ್ಮನಿಷ್ಠೆ ಅಗತ್ಯವಾದ ಸಾಧನ.

ಗಾಂಧೀಜಿ ತಮ್ಮನ್ನು 'ಸನಾತನಿ ಹಿಂದು', 'ನಿಷ್ಠಾವಂತ ಹಿಂದು' ಎಂದು ಕರೆದುಕೊಳ್ಳುತ್ತಿದ್ದರು. ತಾವು ಹಿಂದುವಾಗಿರುವುದಕ್ಕೆ ಹೆಮ್ಮೆ ಪಡುತ್ತಿದ್ದುದೂ ಉಂಟು. ಹಿಂದೂಧರ್ಮದ ಹಿರಿಮೆಯನ್ನೂ ಅವರು ಹಲವಾರು ಬಾರಿ ವಿವರಿಸಿದ್ದರು. ಮೂಲದಲ್ಲಿ ಈ ಧರ್ಮವು ಎಲ್ಲರೂ ಒಪ್ಪುವಂಥದೇ; ಯಾರಿಗೂ ಅಹಿತವಾದುದು ಏನೂ ಇದರಲ್ಲಿ ಇರದು. ಎರಡನೆಯದಾಗಿ, ಹಿಂದೂಧರ್ಮ, ಪ್ರಗತಿಶೀಲವಾದುದು, ಹೊಸ ಹೊಸ ಬೆಳವಣಿಗೆ ಇದರಲ್ಲಿ ಕಾಣಬರುತ್ತದೆ; ಕಾಲಕಾಲಕ್ಕೆ ಮಾರ್ಪಾಟು ಒದಗಿದರೂ ಮೂಲತತ್ತ್ವಕ್ಕೆ ಧಕ್ಕೆಯಿಲ್ಲ. ಇದರಿಂದಲೇ ಇದನ್ನು 'ಸನಾತನ ಧರ್ಮ' ಎನ್ನುವುದು. ಮೂರನೆಯದಾಗಿ, ಯೋಗ್ಯವಾದ ಪ್ರಭಾವ ಎಲ್ಲಿಂದಲೇ ಬರಲಿ ಅದನ್ನು ಈ ಧರ್ಮ ಒಳಗೊಳ್ಳುತ್ತದೆ, ಅಳವಡಿಸಿಕೊಳ್ಳುತ್ತದೆ. ಗಾಂಧೀಜಿ ಹೀಗೆ ಹಿಂದೂ ಧರ್ಮವನ್ನು ಮೆಚ್ಚಿಕೊಂಡರೂ, ಅದರ ಹಿರಿಮೆಯ ವಿಚಾರವಾಗಿ ಹಟಮಾಡಲಿಲ್ಲ. ತಾವು ಹಿಂದುವಾಗಿ ಹುಟ್ಟಿದರು. ಆದುದರಿಂದ ಹಿಂದೂಧರ್ಮದಲ್ಲಿಯೇ ಉಳಿದರು; ಅದು ಸ್ವಧರ್ಮ, ತಮಗೆ

ಸಹಜಧರ್ಮ. ಪ್ರತಿಯೊಬ್ಬ ವ್ಯಕ್ತಿಗೆ ತನ್ನ ತಾಯಿ ಆದರಣೀಯಳಾಗಿರುವಂತೆಯೇ ತನ್ನ ಧರ್ಮವೂ ಆದರಣೀಯವೇ; ಈ ದೃಷ್ಟಿಯಿಂದಲೇ ಅವರು ಗೀತೆಯ ಶರಣರು, ರಾಮನ ಭಕ್ತರು; ತಮ್ಮ ಪ್ರಾರ್ಥನಾಪ್ರವಚನಗಳಲ್ಲಿ ಬಳಸಿದ ಪ್ರತಿಮೆಗಳೆಲ್ಲ ಹಿಂದೂಧರ್ಮದವೇ.

ಆದರೆ ಹಿಂದೂಧರ್ಮ ಒಂದು ಮತಧರ್ಮವೂ ಹೌದು ಎನ್ನುವುದನ್ನು ಅವರು ಗಮನಿಸಿದರು. ಇಸ್ಲಾಮಿನಂತೆ, ಕ್ರೈಸ್ತರಂತೆ, ಫಾರಸಿಯಂತೆ ಇದೂ ದೇಶ-ಕಾಲ-ಸಂದರ್ಭಗಳಿಗೆ ಬದ್ಧವಾದ ಮತ್ತು ವ್ಯವಹಾರಶೀಲವಾದ ಮತಧರ್ಮ. ಎಲ್ಲ ಮತಧರ್ಮಗಳೂ ಮರದ ರೆಂಬೆಕೊಂಬೆಗಳಂತೆ; ಧರ್ಮವೆಂದರೆ ಬೇರು, ತಾಯಿಬೇರು. ರೆಂಬೆಕೊಂಬೆಗಳು ಹಲವಿದ್ದರೂ ಅವುಗಳೆಲ್ಲದರ ಮೂಲಸತ್ತ್ವ ಇರುವುದು ಒಂದಾದ ಬೇರಿನಲ್ಲೇ. ಎಲ್ಲ ಮತಧರ್ಮಗಳಿಗೂ ಮೂಲವಾದುದು ಧರ್ಮ; ಮತಧರ್ಮಗಳ ಚೌಕಟ್ಟನ್ನು ಮೀರಿ, ಯಾವ ಕಾಲಕ್ಕೂ ಬದಲಾಗದ ಸತ್ಯ. ಆದುದರಿಂದ ಎಲ್ಲ ಮತಧರ್ಮಗಳೂ ಸತ್ಯದ ಮೇಲೇ ನಿಂತಿರುವುದು; ಆದರೂ ಒಂದೊಂದು ಮತಧರ್ಮವೂ ಅಪೂರ್ಣವೆನ್ನದೆ ವಿಧಿಯಿಲ್ಲ. ಅದರಲ್ಲಿ ಕೆಲವು ದೋಷಗಳು ಮೂಡಿ ಬರದೆ ಇರುವುದು ಸಾಧ್ಯವಿಲ್ಲ. ದಿಟವಾದ, ಮೂಲಭೂತವಾದ ಧರ್ಮವೆಂದರೆ ಮಾನವನ ಪ್ರಕೃತಿಯಲ್ಲೇ ಅಡಗಿದ್ದು ಅವನನ್ನು ಪರಿಶುದ್ಧಗೊಳಿಸುವ ಸಾಧನ. ಈ ವ್ಯತ್ಯಾಸವನ್ನು ಗಾಂಧೀಜಿ ವಿವರಿಸಿದರು. ಈ ನೆಲೆಯಲ್ಲಿ ''ಸರ್ವಧರ್ಮಸಮಭಾವ''ವನ್ನು ವ್ರತವೆಂದು ಪರಿಗಣಿಸಿದರು. ಎಲ್ಲ ಧರ್ಮಗಳೂ ಮೂಲದಲ್ಲಿ ಧರ್ಮದ ಮೇಲೇ ನಿಂತಿರುವುದರಿಂದ ಎಲ್ಲವೂ ಸಮಾನವೇ. ಅವುಗಳಲ್ಲಿಮೇಲು-ಕೀಳೆಂದು ತಾರತಮ್ಯ ಮಾಡುವುದು ತಪ್ಪಾಗುತ್ತದೆ. ಒಂದೊಂದು ಧರ್ಮದವರೂ ಇತರ ಧರ್ಮಗಳ ವಿಚಾರವಾಗಿ ಸಹನೆಯನ್ನೂ ಆದರವನ್ನೂ ಬೆಳೆಸಿಕೊಳ್ಳಬೇಕು.

ಧರ್ಮ ಮುಖ್ಯವಾಗಿ ಹೃದಯಕ್ಕೆ ಸಂಬಂಧಪಟ್ಟ ವಿಷಯ; ವಿಚಾರದಲ್ಲೋ ಅಥವಾ ಆಚಾರದಲ್ಲೆ ಮುಗಿಯುವುದಿಲ್ಲ. ಜನಸಮುದಾಯಕ್ಕೊಂದು ಧರ್ಮ ಎಂದಿದ್ದರೂ ಅದರ ಆಸರೆ ಇರುವುದು ವ್ಯಕ್ತಿಯಲ್ಲೇ ಎಂದ ಮೇಲೆ ಅದು ಹೊರಗಿನ ವಿಚಾರವಲ್ಲ, ಒಳಗಿನ ಅನುಭವ. ಹಲವರ ಅಗತ್ಯಗಳಿಗೆ ತಕ್ಕಂತೆ ಧರ್ಮದ ಅಭಿವ್ಯಕ್ತಿಯೂ ಹಲವು ಬಗೆಗಳಲ್ಲಿ ಆಗುತ್ತದೆ. ಇದು ವಿರಸಕ್ಕೆ, ವೈಷಮ್ಯಕ್ಕೆ ಕಾರಣವಾಗಬಾರದು. ಧರ್ಮಾನುಷ್ಠಾನ ಬರಿಯ ಪಂಥಾಭಿಮಾನವಾಗಬಾರದು. ಪರಸ್ಪರ ಗೌರವ, ಸಹನೆಗಳಿದ್ದರೆ ಎಲ್ಲ ಪಂಥಗಳೂ, ಎಲ್ಲ ಮತಧರ್ಮಗಳೂ ಸಾರ್ಥಕವಾದುವು. ಪರಧರ್ಮ ಸಹಿಷ್ಣುತೆ ಎಂದ ಮಾತ್ರಕ್ಕೆ ತಂತಮ್ಮ ಧರ್ಮಗಳಲ್ಲಿ ಅನಾಸಕ್ತಿ ಅಥವಾ ಔದಾಸೀನ್ಯ ಎಂದು ಅರ್ಥವಲ್ಲ. ತಮ್ಮ ಧರ್ಮವನ್ನೂ ಸರಿಯಾಗಿ ಅರಿತುಕೊಳ್ಳದಿದ್ದರೆ, ತಮ್ಮ ಧರ್ಮದಲ್ಲಿ ಆಸ್ಥೆ ಉಳಿಯದಿದ್ದರೆ ಇತರ ಧರ್ಮಗಳ ಬಗ್ಗೆ ಸಹನೆಯಾಗಲೀ ಆದರವಾಗಲೀ ಉಂಟಾಗುವುದಿಲ್ಲ. ''ಸರ್ವಧರ್ಮ ಸಮಭಾವ'' ಎಂದರೆ ಹಿಂದುವಾದವನು ಇನ್ನೂ ಉತ್ತಮನಾದ ಹಿಂದುವಾಗುವುದು,

ಮುಸ್ಲಿಮನಾದವನು ಇನ್ನೂ ಉತ್ತಮ ಮುಸ್ಲಿಮನಾಗುವುದು, ಕ್ರೈಸ್ತನಾದವನು ಇನ್ನೂ ಉತ್ತಮ ಕ್ರೈಸ್ತನಾಗುವುದು. ಜಗತ್ತಿನಲ್ಲೆಲ್ಲ ಒಂದೇ ಧರ್ಮ, ದೇಶದಲ್ಲೆಲ್ಲ ಒಂದೇ ಧರ್ಮ ಇರುವುದು ಸಾಧ್ಯವೂ ಇಲ್ಲ; ಹಾಗಾಗಬೇಕಾದ ಅಗತ್ಯವೂ ಇಲ್ಲ. ''ಸರ್ವಧರ್ಮಸಮಭಾವ''ವಷ್ಟೇ ಈ ಆತಂಕಕ್ಕೆ ಪರಿಹಾರ. ಇಲ್ಲಿ ಮತಾಂತರದ ಪ್ರಶ್ನೆಯೇ ಏಳುವುದಿಲ್ಲ; ಧರ್ಮಕ್ಕೆ ಬೆನ್ನು ತಿರುಗಿಸುವುದೂ ಸಾಧ್ಯವಿಲ್ಲ.

ಗಾಂಧೀಜಿ ನೀತಿಗೂ ಧರ್ಮಕ್ಕೂ ಇರುವ ಸಂಬಂಧವನ್ನು ಕುರಿತು ಚರ್ಚಿಸಿದರು. ನೀತಿಯ ನೆಲೆಯೇ ಬೇರೆ, ಧರ್ಮದ ನಿಲುವೇ ಬೇರೆ; ಒಂದು ಇನ್ನೊಂದರ ನೆರವಿಲ್ಲದೆ ಇರಬಲ್ಲುದು ಎನ್ನುವ ವಾದ ಅವರಿಗೆ ಹಿಡಿಸಲಿಲ್ಲ. ನೇಟಾಲಿನಲ್ಲಿದ್ದ ಸಾಲ್ಟರ್ ಎಂಬ ಅಮೆರಿಕ ದೇಶೀಯನೊಬ್ಬ ಬರೆದ Ethical Religion ಎಂಬ ಪುಸ್ತಕವನ್ನು ಗಾಂಧೀಜಿ ಮೆಚ್ಚಿಕೊಂಡು ಅದರ ಸಂಗ್ರಹವನ್ನು ಗುಜರಾತಿನಲ್ಲಿ ಪ್ರಕಟಿಸಿದರು. ಇದು 'ನೀತಿಧರ್ಮ' ಎಂಬ ಹೆಸರಿನಿಂದ ೧೯೨೨ರಲ್ಲೇ ಪ್ರಕಟವಾಯಿತು. ಗಾಂಧೀಜಿ ಗುಜರಾತಿ ಪ್ರಕಟನೆಯ ಶೀರ್ಷಿಕೆಯಾಗಿ ''ನೀತಿಧರ್ಮ ಅಥವಾ ಧರ್ಮನೀತಿ'' ಎಂದು ನಿರೂಪಿಸಿದರು. ಇದರ ತಾತ್ಪರ್ಯ, ಯಾವುದು ನೀತಿಯ ಧರ್ಮವೋ ಅದೇ ಧರ್ಮದ ನೀತಿ ಎಂದು. ನೀತಿಯೆನ್ನುವುದು ಸಂವಿಧಾನ, ಧರ್ಮವೆನ್ನುವುದು ಉದ್ದೇಶ. ಸಂವಿಧಾನ ಸರಿಯಾಗಿದ್ದರೆ ಉದ್ದೇಶವೂ ಸಾರ್ಥಕವಾಗುತ್ತದೆ; ಉದ್ದೇಶ ಸರಿಯಾಗಿದ್ದರೆ ಸಂವಿಧಾನವೂ ಸರಿಯಾಗಿರಬೇಕಾಗುತ್ತದೆ. ದಾರಿ ಏನಾದರೂ ಹೇಗಾದರೂ ಇರಲಿ, ಗುರಿ ಸಾಧಿಸಿದರೆ ಸಾಕು ಎನ್ನುವುದು ಧರ್ಮನಿಷ್ಠರ ಮಾರ್ಗವಲ್ಲ. ದಾರಿ-ಗುರಿಗಳ ನಡುವೆ ಏರುಪೇರಿರಬಾರದು. ಎರಡಕ್ಕೂ ಸಮನ್ವಯಮಾಡುವುದೇ ಸಾಧನೆ.

ಗಾಂಧೀಜಿ ತಮ್ಮನ್ನು 'ವ್ಯವಹಾರಶೀಲನಾದ ಆದರ್ಶವಾದಿ' (Practical Idealist) ಎಂದು ನಿರ್ದೇಶಿಸಿಕೊಂಡರು. ಈ ಮಾತಿನ ತಾತ್ಪರ್ಯ, ತಮ್ಮ ನಿಲುವು ಧರ್ಮದ ನೆರಳಿನಲ್ಲಿ ನಿಂತ ಆದರ್ಶವಾದವಾದರೂ, ಆಲೋಚನೆಗಳಲ್ಲಿ ಮಾತ್ರ ಪರ್ಯವಸಾನಗೊಳ್ಳುವುದಲ್ಲ, ಕೆಲಸದಲ್ಲಿ ಕಾಣಿಸಿಕೊಳ್ಳುವಂಥದು. ಗಾಂಧೀಜಿಯ ಉದ್ದೇಶವೇನೋ ಮುಕ್ತಿಯನ್ನು, ಶಾಶ್ವತಶಾಂತಿಯನ್ನು ಪಡೆಯುವುದು. ಆದರೆ ಅದಕ್ಕಾಗಿ ಏಕಾಂತದಲ್ಲಿ ಕುಳಿತು ಯೋಗದಲ್ಲಿ ತಮ್ಮನ್ನು ತಾವು ಮರೆಯಲಿಲ್ಲ. ಅವರ ಮುಕ್ತಿಯ ದಾರಿಯಿದ್ದುದು ತಮ್ಮ ದೇಶಕ್ಕೆ ಎಡೆಬಿಡದೆ ಸೇವೆ ಸಲ್ಲಿಸುವುದರಲ್ಲಿ, ಇಡೀ ಮಾನವಜನಸ್ತೋಮದ ಹಿತವನ್ನು ಸಾಧಿಸುವುದರಲ್ಲಿ, ದೇಶದ ಸ್ವಾತಂತ್ರ್ಯ ಸಾಧನೆ ಅಗತ್ಯವಾಗಿರುವುದು, ಸ್ವಾತಂತ್ರ್ಯವಿಲ್ಲದೆ ಹಿತಸಾಧನೆ ಸಾಧ್ಯವಿಲ್ಲವಾದುದರಿಂದ; ಭಾರತದೇಶದ ಹಿತಸಾಧನೆ ಇಡೀ ಮಾನವ ಸಮಾಜದ ಹಿತಸಾಧನೆಯ ಒಂದು ಅಂಗ, ಒಂದು ಹಂತ. ಗಾಂಧೀಜಿಯ ಆದರ್ಶ ಭಾರತದೇಶದ ಹಿತಸಾಧನೆಗೆ ಸೀಮಿತವಾಗಿರಲಿಲ್ಲ; ಮಾನವಕುಟುಂಬದ ಏಳ್ಗೆ ಅವರ ಕಾಣ್ಕೆಯ ವಿವರ. ತಾವು ಭಾರತೀಯರಾದುದರಿಂದ

ಭಾರತ ದೇಶದ ಹಿತಸಾಧನೆಗೆ ಆದ್ಯಗಮನವನ್ನಿತ್ತುದು ಸಹಜವೇ. ತಮ್ಮ ಮನೆಯ ಓರಣ ಒಟ್ಟಾರೆ ಪರಿಸರದ ಓರಣಕ್ಕೆ ಮುಖ್ಯವಲ್ಲವೆ? ಗಾಂಧೀಜಿ ನಮ್ಮ ಸ್ವಾತಂತ್ರ್ಯ ಸಮರದಲ್ಲಿ ನಾಯಕಪಟ್ಟ ವಹಿಸಿದುದು ಈ ದೃಷ್ಟಿಯಿಂದ. ಆದರೆ ಅವರು ತಮ್ಮ ಆದರ್ಶವನ್ನು ಬಿಟ್ಟುಕೊಡದೆ, ಸ್ವಾತಂತ್ರ್ಯ ಸಮರವೆಂದರೆ ಬ್ರಿಟಿಷರನ್ನು ಹಗೆಗಳಂತೆ ಭಾವಿಸುವುದಲ್ಲ. ಅವರಿಗೆ ಕಷ್ಟ ಒದಗಲೆಂದು ಹಾರೈಸುವುದಲ್ಲ ಎಂದು ಸ್ಪಷ್ಟಪಡಿಸಿದರು.

ಈ ದೃಷ್ಟಿ ಧಾರ್ಮಿಕಚೌಕಟ್ಟಿನಲ್ಲೇ ಅರ್ಥವಾಗಬೇಕು; ಉಳಿದಂತೆ ಅದಕ್ಕೆ ಆಸರೆಯಿರದು. ಧರ್ಮವನ್ನು ಸಮಾಜದಿಂದ ದೂರಮಾಡಬಾರದೆಂದು ಗಾಂಧೀಜಿಯ ಆಗ್ರಹ. ಧರ್ಮವನ್ನು ಬಿಟ್ಟು ಸಮಾಜದ ಹಿತವನ್ನಾಗಲೀ ರಾಜಕಾರಣ ಸ್ವಾತಂತ್ರ್ಯವನ್ನಾಗಲೀ ಸಾಧಿಸಬಯಸುವುದು ಹುಚ್ಚುತನ; ಅದರಿಂದ ನಷ್ಟವೇ ಹೊರತು ಲಾಭವಿಲ್ಲ. ಧರ್ಮದ ನಾಶವಾದರೆ ಸರ್ವನಾಶವಾದಂತೆ ಎಂದು ಅವರು ಮತ್ತೆ ಮತ್ತೆ ಹೇಳಿದರು. ಯಾವ ವ್ಯಕ್ತಿಯಾಗಲೀ ಧರ್ಮವಿಲ್ಲದೆ ಇರಲಾರ, ಬದುಕಲಾರ; ದೇಶಕ್ಕೂ ಇದೇ ನಿಯಮ ಅನ್ವಯಿಸುತ್ತದೆ. ಆದರೆ ಧರ್ಮ ಮಾನವನ ವ್ಯವಹಾರದಿಂದ ಬೇರ್ಪಟ್ಟು ಇರಲಾರದು. ಮನುಷ್ಯನ ಎಲ್ಲ ಕ್ರಿಯೆಗಳಿಗೂ ಧರ್ಮವು ನೀತಿಯ ನೆಲೆಯನ್ನು ಒದಗಿಸುತ್ತದೆ. ಈ ನೆಲೆಯಿಲ್ಲದ ಕೆಲಸ ಅರ್ಥವಿಲ್ಲದ ಗುಡುಗಾಟ ಅಷ್ಟೆ ಎಂದರು ಅವರು; ಬದುಕಿನಲ್ಲೇ ಸ್ವಾರಸ್ಯವಾಗಲೀ ಸಾರ್ಥಕತೆಯಾಗಲೀ ಉಳಿಯುವುದಿಲ್ಲ; ಜನರ ಹಿತಕ್ಕಾಗಿ, ದೇಶದ ಸುಖಕ್ಕಾಗಿ ದುಡಿಯುವುದು ಧರ್ಮದ ರೀತಿ ಎಂದು ಅವರ ಆಗ್ರಹ. ರಾಷ್ಟ್ರಾಭಿಮಾನ ಮಾನವಪ್ರೀತಿಯ ಮೊದಲ ಹೆಜ್ಜೆ. ರಾಷ್ಟ್ರಾಭಿಮಾನ ಮೂಡುವುದು ತನ್ನ ಮನೆಯ ಬಗ್ಗೆ ಆದರ ಒದಗಿ ಬಂದಾಗ; ತನ್ನ ಮನೆಯ ಬಗ್ಗೆ ಆದರ, ತನ್ನ ಹಿರಿಯರ ಬಗ್ಗೆ ಗೌರವಬುದ್ಧಿ ಬೆಳೆಯುವುದು ತನ್ನ ಮೇಲೆ ತನ್ನ ವಿಶ್ವಾಸ ದೃಢವಾದಾಗ, ಧರ್ಮ ಕೈಗೂಡಿಸುವುದು ಇದನ್ನು. ಗಾಂಧೀಜಿ ತಮ್ಮ ಆದರ್ಶವನ್ನೂ ಬಿಡಲಿಲ್ಲ; ವ್ಯವಹಾರವನ್ನೂ ಬಿಡಲಿಲ್ಲ. ಅವರ ವಿರಕ್ತಿಯೆಂದರೆ ಬದುಕಿಗೆ ಅಂಜಿ ಕಾಡಿಗೆ ಓಡುವುದಲ್ಲ; ಬದುಕುತ್ತಲೇ ಬದುಕಿನ ಒಳಗೂ ಹೊರಗೂ ಹರಡಿರುವ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದು. ಅವರು ಒಮ್ಮೆ ಹೇಳಿದರು- ‘‘ನನ್ನ ದೇಶಾಭಿಮಾನ ಅನಂತಸ್ವಾತಂತ್ರ್ಯ, ಅನಂತಶಾಂತಿಗಳತ್ತ ಸಾಗುವ ಯಾತ್ರೆಯಲ್ಲಿ ಒಂದು ಹಂತ’’ ಎಂದು. ಅವರ ನಿಷ್ಠೆ ಭಾರತದೇಶಕ್ಕೆ ಸೀಮಿತವಾದರೂ ಅವರ ಪ್ರೀತಿ ಅಷ್ಟಕ್ಕೇ ಅಡ್ಡಗೊಳ್ಳಲಿಲ್ಲ. ಎಲ್ಲರನ್ನೂ ತನ್ನಂತೆಯೇ, ಹಗೆಗಳನ್ನೂ ಸ್ನೇಹಿತರಂತೆಯೇ ಕಾಣುವ ಅವರ ಸರ್ವಸುಹೃದ್ಭಾವ ಧಾರ್ಮಿಕ ಪ್ರವೃತ್ತಿಯ ಫಲವೇ.

ಸಾಮಾಜಿಕವಾಗಿ ಅವರ ಆದರ್ಶ ನಮ್ಮ ದೇಶದಲ್ಲಿ ‘ರಾಮರಾಜ್ಯ’ವನ್ನು ಏರ್ಪಡಿಸಬೇಕೆಂಬುದು. ‘‘ರಾಮರಾಜ್ಯ’’ ನಮ್ಮಲ್ಲಿ ಯಾವ ಎಡರುತೊಡರುಗಳಿಲ್ಲದ, ಕಷ್ಟ-ಕಾರ್ಪಣ್ಯಗಳಿಲ್ಲದ, ವಿರಸ-ವೈಮನಸ್ಯಗಳಿಲ್ಲದ, ಕಪಟ-ಶೋಷಣೆಗಳಿಲ್ಲದ

ಸುಖೀರಾಜ್ಯ; ಎಲ್ಲರೂ ನೀತಿಪರರಾಗಿ ಉದ್ಯಮಶೀಲರಾಗಿರುವ ಧರ್ಮರಾಜ್ಯ. ರಾಮ ''ವಿಗ್ರಹವಾನ್ ಧರ್ಮಃ'', ಧರ್ಮವೇ ಮೈವೆತ್ತು ಬಂದವನು. ಅವನ ರಾಜ್ಯವೆಂದರೆ ಧರ್ಮದ ಮೇಲಾಟ ಇರುವ ರಾಜ್ಯ. ಗಾಂಧೀಜಿಯ ಕಲ್ಪನೆಯಲ್ಲಿ ವರ್ಣರಹಿತವಾದ, ವರ್ಗರಹಿತವಾದ, ಶೋಷಣೆಯಿಲ್ಲದ ಸಮಾಜ ರಾಮರಾಜ್ಯದ ಪೂರ್ವಭಾವಿ ಸಿದ್ಧತೆ. ಇಂಥ ಸಮಾಜದ ನಿರ್ಮಾಣಕ್ಕೆಂದೇ ಅವರು ದಿನದಿನವೂ ದುಡಿದದ್ದು. ಸಮಾಜದಲ್ಲಿ ಕಾರಣಾಂತರಗಳಿಂದ ಒದಗಿಬಂದಿರುವ ಜಾತೀಯತೆ, ಅಸ್ಪೃಶ್ಯತೆ, ಧನಲಾಲಸೆ, ವರ್ಗಪ್ರತಿಷ್ಠೆ, ಕಪಟಪ್ರವೃತ್ತಿ ಮೊದಲಾದ ದೋಷಗಳ ವಿರುದ್ಧ ಆಂದೋಲನವನ್ನೇ ಎಬ್ಬಿಸಿದರು. ನಿತ್ಯಜೀವನ ಶುದ್ಧವಾಗಬೇಕು, ದಿನದಿನದ ವ್ಯವಹಾರದಲ್ಲಿ ನೀತಿ ಧರ್ಮ ಮೈದುಂಬಿಬರಬೇಕು, ಪರಸ್ಪರ ಮೈತ್ರಿ ಮೂಡಬೇಕು ಎಂದು ಬದುಕಿರುವಷ್ಟು ದಿನವೂ ಅವರು ಹೆಣಗಾಡಿದರು. ವ್ಯಕ್ತಿಯು ತನ್ನ ವೈಯಕ್ತಿಕ ಜೀವನದಲ್ಲಿ ಅನುಸರಿಸುವ ನೀತಿ, ಅನುಸರಿಸಬೇಕಾದ ನೀತಿ ಸಮಾಜದಲ್ಲಿಯೂ ಅಗತ್ಯ. ''ಸ್ವಂತನೀತಿ'' ಮತ್ತು ''ಸಾರ್ವಜನಿಕ ನೀತಿ'' ಎಂಬ ಎರಡು ನೀತಿಗಳಿಲ್ಲ; ನೀತಿ ಒಂದೇ. ಅಲ್ಲಿ ಸಲ್ಲುವುದು ಇಲ್ಲೂ ಸಲ್ಲುವುದು. ಗಂಡಭೇರುಂಡದಂತೆ ಎರಡು ಮುಖಗಳ ನೀತಿಯನ್ನು ನಾವು ಎತ್ತಿಕಟ್ಟಿರುವುದೇ ನಮ್ಮ ದುಃಸ್ಥಿತಿಗೆ ಕಾರಣವಾಗಿದೆ. ಇದೇ ಅವರ ''ವ್ಯವಹಾರಶೀಲ ಆದರ್ಶವಾದ''. ಧರ್ಮ ಇರುವುದು ಭಾವನೆಗಳಿಗಾಗಿ ಅಲ್ಲ, ಆಚರಣೆಗಾಗಿ, ನೀತಿ ಇರುವುದು ಮಾತಿಗಾಗಿ ಅಲ್ಲ, ಕೆಲಸಕ್ಕಾಗಿ. ಭಾವನೆಯು ಆಚರಣೆಯಲ್ಲಿ ಇಳಿಯದಿದ್ದರೆ ಬರಿಯ ಆದರ್ಶವಾಯಿತು; ಆದರ್ಶವು ಆಚರಣೆಯಲ್ಲಿ ಇಳಿದುಬಂದರೆ, ನೀತಿಯು ಕೆಲಸವಾಗಿ ಮಾರ್ಪಟ್ಟರೆ ಅದು ''ವ್ಯವಹಾರಶೀಲ ಆದರ್ಶವಾದ''.

ಅಂತೂ, ಗಾಂಧೀಜಿ ವ್ಯಕ್ತಿ ಮತ್ತು ಸಮಾಜ ಎರಡರ ನಡುವೆ ಇರುವ ಅಂತರವನ್ನು ಮುಚ್ಚಲು ಯತ್ನಿಸಿದರು. ಎರಡನ್ನೂ ಸೇರಿಸುವ ಸ್ವರ್ಣ ಸೇತುವೆಯಾಗಿ ತಮ್ಮ 'ಏಕಾದಶವ್ರತ' ನಿಯಮವನ್ನು ಉಪದೇಶಿಸಿದರು. ಇದರಲ್ಲಿ, ಸತ್ಯ, ಅಹಿಂಸೆ, ಸರ್ವೋದಯ, ಸತ್ಯಾಗ್ರಹ, ಸ್ವದೇಶಿ, ಸ್ಪರ್ಶ ಭಾವನೆ, ಶಾರೀರಶ್ರಮ, ಅಭಯ ಎಲ್ಲವೂ ಅಡಕವಾಗಿವೆ. ಅವರು ಯಾವುದನ್ನೂ ಕೇವಲ ಭಾವನೆಯ ನೆಲೆಯಲ್ಲಿ ನಿಲ್ಲಿಸಲಿಲ್ಲ. ನಿದರ್ಶನಕ್ಕೆ, ಅವರ ದೃಷ್ಟಿಯಲ್ಲಿ ಸತ್ಯವೆಂದರೆ ಕೇವಲ ಔಪನಿಷದ 'ಸತ್' ತತ್ತ್ವವಲ್ಲ, ವೇದಾಂತಿಗಳ ಪರಬ್ರಹ್ಮವಷ್ಟೇ ಅಲ್ಲ. ಹಲವು ಹೆಸರುಗಳನ್ನು ತಳೆದ ದೇವರು ಮಾತ್ರವಲ್ಲ; ಬದುಕಿನ ವಿವರಗಳನ್ನು ಇದ್ದಂತೆ ಅರಿಯುವುದೂ ಸತ್ಯವೇ. ದೇಶದ ಬಡತನ, ಜನರ ಗುಲಾಮಗಿರಿ, ವರ್ಗಗಳ ಶೋಷಣೆ ಇವೂ ಸತ್ಯದ ಮುಖಗಳೇ, ತನ್ನ ಅಂಶಾಸಾಕ್ಷಿಗೆ ಅನುಸಾರವಾಗಿ, ಸ್ವಧರ್ಮಕ್ಕೆ ಅನುಕೂಲವಾಗಿ ನಡೆದುಕೊಳ್ಳುವುದೇ ಸತ್ಯವೆಂದು ಅವರು ವಿವರಿಸಿದರು. ಹಾಗೆಯೇ ಅಹಿಂಸೆಯೆಂದರೆ ಇತರರಿಗೆ ಗಾಸಿಮಾಡದೆ ಇರುವುದಷ್ಟೇ ಅಲ್ಲ; ಅವರ ಮುನಿಸನ್ನು ಕಾಡಿ, ಅವರ ಒಲವನ್ನು ಪಡೆದುಕೊಂಡು, ಅವರ ಹಿತವನ್ನು ಸಾಧಿಸಬೇಕೆಂಬ ಪ್ರೀತಿಯ ತವಕ.

ಅಭಿವಂದನಾ

ಈ ವ್ರತಗಳ, ಶೀಲಗಳ ಕಲ್ಪನೆ ತುಂಬ ಹಳೆಯದು. ವೈದಿಕಯುಗದಲ್ಲೇ ಇದರ ಅವತಾರವಾಯಿತು. ಗೌತಮಬುದ್ಧ, ವರ್ಧಮಾನ-ಮಹಾವೀರ ಮೊದಲಾದವರು ಈ ಕಲ್ಪನೆಯನ್ನು ತಮ್ಮ ಸಂಘವ್ಯವಸ್ಥೆಯಲ್ಲಿ ಬಳಸಿಕೊಂಡರು. ನಿತ್ಯಜೀವನದಲ್ಲೂ ಧಾರ್ಮಿಕ ವಿಧಿಗಳಲ್ಲಿ ಇದರ ಪಾತ್ರವಿದೆ. ಆದರೆ ಧರ್ಮಕ್ಕಷ್ಟೇ ಮುಗಿದಿದ್ದ ವ್ರತಗಳನ್ನು ರಾಜಕಾರಣನೆಲೆಗೂ ಅಳವಡಿಸಿದವರು ಗಾಂಧೀಜಿಯವರೇ. ಅವರ ಪ್ರಯತ್ನ ಸಫಲವಾಯಿತೋ ಇಲ್ಲವೋ ಅದು ಬೇರೆಯ ಮಾತು. ಅವರು ತೋರಿಸಿದ ದಾರಿಯ ಹಿರಿಮೆಯನ್ನು ನಾವು ಅರಿತುಕೊಳ್ಳುವುದು ಸದ್ಯದ ಕರ್ತವ್ಯ. ಇತರ ರಾಜಕಾರಣೆಗಳಂತೆ ಅವರ ವ್ಯಷ್ಟಿ-ಸಮಷ್ಟಿ, ಒಳಗೆ-ಹೊರಗೆ, ತನ್ನದು-ಇತರರದು, ಈಗ-ಆಗ, ಎಂಬಲ್ಲಿ ಭೇದವೆಣಿಸದೆ ಎಲ್ಲ ಕಾಲಕ್ಕೂ ಎಲ್ಲಜನರಿಗೂ ಸರಿಯಾದ ದಾರಿಯನ್ನು ತೋರಿಸಲು ಸಾಧ್ಯವಾದುದು ಅವರ ಧಾರ್ಮಿಕ ದೃಷ್ಟಿಯಿಂದಲೇ ಎಂಬುದನ್ನು ಗಮನಿಸಬೇಕು.

ಇನ್ನು, ಅವರ ಧಾರ್ಮಿಕ ದೃಷ್ಟಿಯ ಮೂಲಭೂತ ವಿವರಗಳಲ್ಲಿ ಕೆಲವನ್ನು ಪರಿಶೀಲಿಸಬೇಕು. ಮೊದಲನೆಯದು ದೇವರ ವಿಚಾರ. ಧರ್ಮವೆಂದರೆ ದೇವರ ಹಿನ್ನೆಲೆಯಲ್ಲಿ ಸಿದ್ಧವಾದುದೇ. ಗಾಂಧೀಜಿಯ ಜೀವನದಲ್ಲಿ ದೇವರ ಪಾತ್ರ ಹಿರಿದಾದುದೇ. ಅವರು ಎಲ್ಲಕ್ಕಿಂತ ಮಿಗಿಲಾಗಿ ಭಕ್ತರು. ದೇವರ ಇರವು ಅವರಿಗೆ ಚಿಕ್ಕಂದಿನಲ್ಲೇ ಪರಿಚಯವಾಯಿತು. ಆದರೆ ಸಂಶಯದ ಕಾಳರಾತ್ರಿಯನ್ನೂ ಅವರು ಕಳೆಯಬೇಕಾಯಿತೆನ್ನಿ. ಕಡೆಗೆ, ಮೊದಲ ನಂಬಿಕೆಯೇ ಗೆದ್ದು ಶ್ರದ್ಧೆಯಾಯಿತು. ದೇವರು ಇದ್ದಾನೆ ಎಂದು ಅವರು ನಂಬಿದ್ದರು; ಅದೇ ಶೀರ್ಷಿಕೆಯಲ್ಲಿ ಪುಸ್ತಕವೊಂದನ್ನೂ ಬರೆದರು. ಆದರೆ ದೇವರು ಇದ್ದಾನೆಂದು ತರ್ಕದಿಂದ, ನ್ಯಾಯದಿಂದ ಸಿದ್ಧಪಡಿಸುವುದು ಸಾಧ್ಯವಿಲ್ಲ; ಹಾಗೆ ಸಿದ್ಧಪಡಿಸುವ ಅಗತ್ಯವೂ ಇಲ್ಲ. ಚಿಂತನೆಗೆ, ತರ್ಕಕ್ಕೆ ಒಳಗಾಗುವ ತತ್ತ್ವವಲ್ಲ ಅದು; ಭಾವವೇದ್ಯ ಅಷ್ಟೆ. ಶ್ರದ್ಧೆಯಿಂದ ಮಾತ್ರ ದೇವರ ಇರವನ್ನು ಅರಿತುಕೊಳ್ಳುವೆವು. ಮನಸ್ಸಿನ ಸಾಮರ್ಥ್ಯಕ್ಕೆ ಮಿತಿಯಿದೆ. ಚಿಂತನಕ್ಕೆ ಕಠಿನವಾದ ಕಟ್ಟುಪಾಡಿದೆ. ದೇವರನ್ನು ಇದರೊಳಗೆ ಕೂಡಿಹಾಕುವುದಾಗದು. ತರ್ಕವನ್ನೂ ಮೀರಿ ಶ್ರದ್ಧೆ ಮೂಡಬೇಕು; ಆಗ ದೇವರನ್ನು ಕಾಣಬಲ್ಲೆವು. ಶ್ರದ್ಧೆಯಿಂದ ಬರಿಯ ನಂಬಿಕೆಯಲ್ಲ , ಕುರುಡು ಕುರುಡಾದ ಉತ್ಸಾಹವಲ್ಲ, ಹೊರಗಿನ ಯಾವುದೇ ವಿವರದಿಂದ ಹೊರಟದ್ದಲ್ಲ. ಒಳಗಿನಿಂದ ಉಕ್ಕಿಬರುವ ಚೇತನ ಅದು;ಗಾಢವಾದ ಅನುಭವ. ಇದನ್ನು ಅವರು 'ಜೀವಂತಶ್ರದ್ಧೆ' ಎಂದು ಕರೆದರು. ಜಾನ್ ಅರ್‌ಮಾಟ್ ಎಂಬಾತ ಗಾಂಧೀಜಿಯನ್ನು 'ನಿಮಗೆ ಕಷ್ಟಗಳಲ್ಲಿ, ಸಂಶಯಗಳಲ್ಲಿ, ಸಮಸ್ಯೆಗಳಲ್ಲಿ ಆಳವಾದ ಸಮಾಧಾನವನ್ನು ಒದಗಿಸುವುದು ಯಾವುದು?' ಎಂದು ಕೇಳಿದಾಗ ಅವರು ಕೊಟ್ಟ ಉತ್ತರ'ದೇವರಲ್ಲಿ ಜೀವಂತಶ್ರದ್ಧೆ' (Living faith in God) ಎಂಬುದು.

ಇಂಥ ಶ್ರದ್ಧೆ ಇರುವುದು ಮನುಷ್ಯನಿಗೆ ಸಹಜವಾದುದೆಂದು ಅವರ ನಿಲುವು.

ನಮ್ಮ ಹೃದಯ ಸರಳವಾಗಿದ್ದರೆ ಶ್ರದ್ಧೆಯಿಲ್ಲದೆ ಇರುವುದು ಸಾಧ್ಯವಿಲ್ಲ. ಕೃತಕಜೀವನದ ಕಪಟದಿಂದ ನಮ್ಮ ಅಂತರವನ್ನು ಮುಚ್ಚಿಕೊಂಡರೆ ಶ್ರದ್ಧೆಯ ಹಿಡಿತ ಸಡಿಲವಾಗುತ್ತದೆ; ಭಾವುಕತೆಯ ಬದಲು ಚಮತ್ಕಾರ ನಮ್ಮನ್ನು ಹಿಡಿಯುತ್ತದೆ. ನಮ್ಮ ಸ್ವಧರ್ಮದಿಂದಲೇ ಜಾರಿಬಿಡುತ್ತೇವೆ. ಹೀಗಾಗಿ ಅಶ್ರದ್ಧೆಯೆನ್ನುವುದು ಒಂದು ರೋಗ, ಒಂದು ಅಸಹಜ ಪರಿಸ್ಥಿತಿ ಎಂದು ಅವರು ವಾದಿಸಿದರು. ತಮಗೂ ಒಂದು ಕಾಲಕ್ಕೆ ಶ್ರದ್ಧೆ ಇರಲಿಲ್ಲವೆಂದೂ ಧ್ಯಾನದಿಂದ ಧರ್ಮಗ್ರಂಥಗಳ ಅಧ್ಯಯನದಿಂದ ಶ್ರದ್ಧೆಯನ್ನು ಗಳಿಸಿಕೊಂಡರೆಂದೂ ಅವರು ಹೇಳಿದ್ದಾರೆ. ಸಾಮಾನ್ಯವಾಗಿ ಕಷ್ಟ ಒದಗಿದಾಗ ಆತಂಕ ಹೆಚ್ಚಿ ಶ್ರದ್ಧೆಯ ಬಲ ಕಡಮೆಯಾಗುತ್ತದೆ. ದಿಟವಾಗಿ, ಕಷ್ಟಗಳು ಹೆಚ್ಚಿದಂತೆ ಶ್ರದ್ಧೆಯೂ ಹೆಚ್ಚಬೇಕು. ಆಗ ಕಷ್ಟ ನಮ್ಮನ್ನು ಕಾಡಲಾರದು. ಕೆಣಕಲಾರದು; ಮುಳುಗಿಸಲಾರದು; ಕಷ್ಟವನ್ನು ಮೆಟ್ಟಿ ನಿಲ್ಲಬಲ್ಲೆವು.

ಗಾಂಧೀಜಿಯ ದೃಷ್ಟಿಯಲ್ಲಿ ದೇವರು ಯಾವ ಮತಧರ್ಮದ ಮೂರ್ತರೂಪವೂ ಅಲ್ಲ. ಎಲ್ಲ ಧರ್ಮಗಳಲ್ಲಿಯೂ ಮೂಲಭೂತವಾದ ಕಲ್ಪನೆ; ಸರ್ವಶಕ್ತ, ಸರ್ವಾಂತರ್ಯಾಮಿ, ಅಜ್ಞೇಯ, ದಯಾಮಯ, ನ್ಯಾಯನಿಷ್ಠುರ, ಅದ್ಭುತ ಚೈತನ್ಯ, ಎಂಬುದು. ಅದು ಯಾವ ವ್ಯಕ್ತಿಯೂ ಅಲ್ಲ, ವಿಶಿಷ್ಟಗುಣಗಳಿಗೆ ಸೀಮಿತವಲ್ಲ. ಪ್ರಪಂಚವನ್ನು ಮೀರಿದ್ದರೂ ಎಲ್ಲ ವ್ಯಕ್ತಿಗಳ ಅಂತರಾಳದಲ್ಲಿ ಅಡಗಿರುವ ಶುದ್ಧ ಚೈತನ್ಯ; ಒಳಗಿದ್ದೂ ಎಲ್ಲವನ್ನೂ ನಡೆಸುವ ಅಂತಃಸತ್ತ್ವ; ಪರಿಪೂರ್ಣತೆಯ ಪರಾಕಾಷ್ಠೆ. ಅದನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಮಾನವಜೀವಿತದ ಪರಮಧ್ಯೇಯ; ನಮ್ಮೆಲ್ಲ ಕೆಲಸಗಳೂ ಅದರಲ್ಲಿಯೇ ಕೊನೆಗೊಳ್ಳಬೇಕು; ಸಾಮರ್ಥ್ಯಗಳನ್ನೂ ಅದರಲ್ಲಿಯೇ ಸವೆಸಬೇಕು. ನಮ್ಮ ಬದುಕು ಅವನಿಂದಲೇ ಮೊದಲಾಗಿ ಅವನಲ್ಲಿಯೇ ಮರೆಯಾಗುತ್ತದೆ.

ಪ್ರತೀಕಪೂಜೆಯ ವಿಚಾರವಾಗಿ ಅವರು ನಿಷ್ಠುರವಾಗಿ ಧೋರಣೆಯನ್ನೇನು ತಳೆಯಲಿಲ್ಲ. ನಮ್ಮ ಪ್ರತಿಮೆಗಳಂತೆಯೇ ದೇವರು ಇರುತ್ತಾನೆ ಎಂದು ಬಗೆಯುವುದು ಹಾಸ್ಯಾಸ್ಪದ; ನಮ್ಮ ಮನಸ್ಸು ಮತ್ತು ಕೈಚಳಕ ಇಷ್ಟರಲ್ಲಿ ದೇವರನ್ನು ಸೆರೆಹಿಡಿಯಲಾದೀತೆ? **'ನ ತಸ್ಯ ಪ್ರತಿಮಾ ಭವತಿ'** ಎಂದು ಶ್ರುತಿಯೇ ಸಾರುತ್ತದೆ. ನಮಗೆ ತೋಚಿದಂತೆ ಮೂರ್ತಿಗಳನ್ನು ಮಾಡಿಟ್ಟು ಅದೇ ಎಲ್ಲರ ದೇವರು ಎನ್ನುವ ಹಟ ಸಲ್ಲದು. ಆದರೆ ನಮ್ಮ ಆದರ್ಶಕ್ಕೆ ಮೂರ್ತರೂಪವೊಂದನ್ನು ಒದಗಿಸಿ ಅದನ್ನು ನಾವು ಆದರಾಭಿಮಾನಗಳಿಗೆ ಅನುಕೂಲವಾಗಿಸಿಕೊಂಡರೆ ಪ್ರತೀಕ ಪೂಜೆಯಿಂದ ಪ್ರಯೋಜನವಿದ್ದೇ ಇದೆ. ದೇವರಲ್ಲಿ ಮನಸ್ಸನ್ನು ನಿಲ್ಲಿಸಲು ಪ್ರತೀಕ ನೆರವಾಗುತ್ತದೆ; ಪ್ರತಿಮೆಯ ಉದ್ದೇಶವೇ ಅದು. ಇನ್ನು ದೇವಾಲಯಗಳಿಗೆ ಹೋಗುವ ಬಗ್ಗೆಯೂ ಅವರಿಗೆ ತೆರೆದ ಮನಸ್ಸೇ. ದೇವಾಲಯಕ್ಕೆ ಹೋಗುವವರೆಲ್ಲ ಧಾರ್ಮಿಕರು, ದೇವಾಲಯಗಳಲ್ಲಿ ಮಾಡುವುದೆಲ್ಲ ಧಾರ್ಮಿಕಭಾವನೆ ಎನ್ನಲಾಗದಷ್ಟೆ. ಆದರೆ ಗಾಂಧೀಜಿಯ ತಾಯಿ ತಪ್ಪದೆ ದೇವಾಲಯಕ್ಕೆ ಹೋಗುತ್ತಿದ್ದರು.

ಹೋಗುವಾಗ ಅವರ ಹೃದಯದಲ್ಲಿ ಎಷ್ಟು ಪವಿತ್ರ ಭಾವನೆ ಮೂಡುತ್ತಿತ್ತು. ದೇವಾಲಯದಿಂದ ಬಂದ ಮೇಲೆ ಅವರ ಮನಸ್ಸು ಎಷ್ಟು ನೆಮ್ಮದಿಯಿಂದ ಇರುತ್ತಿತ್ತು ಎಂಬುದನ್ನು ಅವರು ಅರಿತಿದ್ದರು. ದೇವಾಲಯಕ್ಕೆ ಹೋಗುವುದು ಹೃದಯಶುದ್ಧಿಗಾಗಿ ಎಂದರೆ ಅದು ಸರಿಯೇ; ಪವಿತ್ರ ಭಾವನೆಯಿಂದ ಹೋಗಬೇಕು ಎಂದರೂ ಸರಿಯೇ. ದೇವಾಲಯಕ್ಕೆ ಹೋಗದೆ ಪವಿತ್ರ ಭಾವನೆ ಬರದು ಎನ್ನುವ ಹಾಗಿಲ್ಲ; ದೇವರು ಗುಡಿಯಲ್ಲೇ ಇದ್ದಾನೆ ಎನ್ನುವುದೂ ತಪ್ಪು.

ಅವರ ರಾಮಭಕ್ತಿ ಕೊಂಚ ವಿವಾದಕ್ಕೆ ಎಡೆಮಾಡಿಕೊಟ್ಟಿತು. ಅವರು ರಾಮನನ್ನು ದೇವರೆಂದು ಬಗೆದಿದ್ದರಷ್ಟೆ. ಆದರೆ ಈ ರಾಮ ರಾಮಾಯಣದಲ್ಲಿ ದಶರಥನ ಮಗನಾಗಿ ಸೀತೆಯ ಗಂಡನಾಗಿ, ರಾವಣನನ್ನು ಕೊಂದ ವ್ಯಕ್ತಿಯೇ? ಈ ರಾಮನೇ ಗಾಂಧೀಜಿಗೆ ಮೊದಲು ಪರಿಚಿತನಾದದ್ದು. ಅವರ ಪ್ರಾರ್ಥನೆಯಲ್ಲಿ ರಾಮನಾಮ ಹಾಸುಹೊಕ್ಕಾಗಿ ಸೇರಿದಾಗ, ಅವನನ್ನೂ 'ಸೀತಾರಾಮ', 'ರಾಜಾರಾಮ' ಎಂದು ವ್ಯವಹರಿಸಿದಾಗ ಇದೇ ವ್ಯಕ್ತಿ ರಾಮನನ್ನು ದೇವರೆನ್ನಬಹುದೇ ಎನ್ನುವ ಆಕ್ಷೇಪಣೆ ಕೆಲವರಿಂದ ಬಂದಿತು. ಅದಕ್ಕೆ ಅವರು ಕೊಟ್ಟ ಸಮಾಧಾನ. ತಮ್ಮ ಹೃದಯದಲ್ಲಿ ಮೊದಲು ಮೂಡಿದ ಮೂರ್ತಿ ದಾಶರಥಿರಾಮನನ್ನೇ ಆದರೂ ತಮ್ಮ ಅನುಭವ ಆಳವಾದಂತೆಲ್ಲ ಅವರಿಗೆ ಸ್ಪಷ್ಟವಾದದ್ದು ರಾಮನು ಮೂರ್ತಿಯಲ್ಲ, ತತ್ತ್ವ; ವ್ಯಕ್ತಿಯಲ್ಲ; ಸತ್ಯ ಎಂಬುದು. ರಾಮ, ರಹೀಮ ಎರಡೂ ದೇವರ ಹೆಸರುಗಳೇ; ಈಶ್ವರ, ಅಲ್ಲಾ ಇದ್ದಂತೆ. ಆದುದರಿಂದ ರಾಮನನ್ನು ವೇದಾಂತದ ಬ್ರಹ್ಮನಿಗೆ ಪರ್ಯಾಯವಾಗಿ ಅವರು ಉಳಿಸಿಕೊಂಡರು. ತುಳಸೀದಾಸರೇ ಇದನ್ನು ಸೂಚಿಸಿದ್ದಾರೆಂದು ಅವರ ವಿವರಣೆ. 'ಸರ್ವಧರ್ಮಸಮಭಾವ'ಕ್ಕೆ ರಾಮನಾಮ ಅಡ್ಡಿ ಬರುವುದಿಲ್ಲವೆಂದೂ ಅವರ ವಿಶ್ವಾಸ.

ರಾಮನಾಮದ ಹಿರಿಮೆಯ ಅರಿವು ಅವರಿಗೆ ಸಣ್ಣ ವಯಸ್ಸಿನಲ್ಲೇ ಆಯಿತೆಂದು ಹಿಂದೆಯೇ ಅರಿಕೆಮಾಡಿಕೊಂಡಿದ್ದೇನೆ. ಆಗ ಅವರಿಗಿದ್ದ ಕ್ಲೇಶ ಅಂಜಿಕೆ; ಅದೂ ದೆವ್ವ-ಭೂತಗಳ ವಿಚಾರವಾಗಿ. ಈ ಅಂಜಿಕೆಯನ್ನು ಅಡಗಿಸುವ ಉಪಾಯವಾಗಿ ರಾಮನಾಮ ಅವರ ಪ್ರಯೋಗಕ್ಕೆ ಬಂದಿತು; ಅದು ಕೆಲಸವನ್ನೂ ಮಾಡಿತು. ತಮಗಿಲ್ಲದಿದ್ದ ಬಲ ಈ ರಾಮನಾಮದಿಂದ ಬಂದಿತು ಎಂದವರ ಶ್ರದ್ಧೆ. 'ದುರ್ಬಲಕೇ ಬಲ ರಾಮ್' ಎಂದು ಸಂತ ಸೂರದಾಸರು ಹೇಳಿದ್ದುದು ಅವರ ಅನುಭವದಲ್ಲಿ ಬಂದಿತು. ಹೀಗಾಗಿ ರಾಮನಾಮ ಅವರ ಬದುಕಿನುದ್ದಕ್ಕೂ ಉಳಿಯಿತು.

ದೇವರಿದ್ದಾನೆ ಎನ್ನುವುದು ಖಚಿತವಾದ ನಂತರ ನಮ್ಮ- ಅವನ ಸಂಬಂಧ ಹೇಗಿರಬೇಕೆಂಬುದು ಮುಂದಿನ ಪ್ರಶ್ನೆಯಲ್ಲವೆ? ಈ ಪ್ರಶ್ನೆಗೆ ಉತ್ತರವಾಗಿ ಪ್ರಾರ್ಥನೆಯ ಪಾತ್ರವನ್ನು ಪರಿಶೀಲಿಸಬೇಕು. ಗಾಂಧೀಜಿಯವರು 'ಪ್ರಾರ್ಥನೆ ಧರ್ಮದ ಸಾರಸರ್ವಸ್ವ'

ಎಂದರು. ತಾವು ತಮ್ಮ ಜೀವಮಾನದಲ್ಲಿ ಏನನ್ನಾದರೂ ಸಾಧಿಸುವುದಾಗಿದ್ದರೆ ಅದು ಪ್ರಾರ್ಥನೆಯ ಫಲವಾಗಿ, ಅದರ ಬಲದಿಂದಲೇ ಎಂಬುದು ಅವರ ವಿಶ್ವಾಸವಾಗಿದ್ದಿತು. 'ಪ್ರಾರ್ಥನೆಯಿಲ್ಲದಿದ್ದರೆ ನಾನು ಎಂದೋ ಹುಚ್ಚನಾಗಿಬಿಡುತ್ತಿದ್ದೆ' ಎಂದೂ ಹೇಳಿದರು. ಅವರ ವ್ಯಾವಹಾರಿಕ ಗೊಂದಲದಲ್ಲಿಯೂ ಪ್ರಾರ್ಥನೆ ತಪ್ಪದೆ ನಡೆಯುತ್ತಿತ್ತು. ಅವರಿಗೂ ಜನತೆಗೂ ಒದಗಿ ಬಂದ ನಿಕಟ ಸಂಪರ್ಕ ಪ್ರಾರ್ಥನೆಗಳ ಮೂಲಕವೇ, ಅಲ್ಲಿನ ಪ್ರವಚನಗಳ ಮೂಲಕವೇ. ಅವರು ದೇಹವಿಟ್ಟುದೂ ಪ್ರಾರ್ಥನೆಯ ಸಂದರ್ಭದಲ್ಲಿಯೇ ಎಂಬುದು ಸ್ವಾರಸ್ಯವಾದುದು. ಆದರೆ ಹಾಗಾದದ್ದು ಸಹಜವೇ.

ಪ್ರಾರ್ಥನೆಗೆ ಅವರು ಕೊಟ್ಟ ವ್ಯಾಖ್ಯಾನ, ಪ್ರಾರ್ಥನೆಯಲ್ಲಿ ನಾವು ಅಡಿಗಡಿಗೆ, ಅಥವಾ ದಿನವೂ, ನಮ್ಮ ದೌರ್ಬಲ್ಯವನ್ನು ಒಪ್ಪಿಕೊಳ್ಳುತ್ತೇವೆ. ನಮ್ಮ ಲೋಪದೋಷಗಳನ್ನು ಒಪ್ಪಿಕೊಳ್ಳುತ್ತೇವೆ; ಅಲ್ಲಿ ನಮ್ಮ ಸಣ್ಣತನದ ಅರಿವಾಗುತ್ತದೆ; ನಮಗಿಂತ ಎಷ್ಟೋ ಪಟ್ಟು ಮಿಗಿಲಾದ, ಹಿರಿದಾದ, ಬಲಶಾಲಿಯಾದ ಅದ್ಭುತ ದಿವ್ಯಶಕ್ತಿಯೆದುರು ನಾವು ನಿಂತಾಗ ನಮಗಿರುವ ಬಲವೆಲ್ಲ ಈ ಮೂಲದಿಂದ ಬಂದದ್ದೇ ಎಂಬ ಪ್ರಜ್ಞೆ ಮೂಡುತ್ತದೆ. 'ದುರ್ಬಲ ಕೇ ಬಲ ರಾಮ್' ಎಂದು ಕಂಡುಕೊಳ್ಳುತ್ತೇವೆ. ಈ ಮೂಲ ನಮ್ಮಲ್ಲೇ ಅಡಗಿದೆ. ಈ ದಿವ್ಯಶಕ್ತಿ ನಮ್ಮಲ್ಲೇ ಸುಪ್ತವಾಗಿದೆ ಎಂಬ ತಿಳುವಳಿಕೆಯು ಒದಗುತ್ತದೆ; ಮತ್ತು ಸುಪ್ತವಾದ ಈ ಶಕ್ತಿಯನ್ನು ಎಚ್ಚರಗೊಳಿಸುವ ಯತ್ನವೇ ಪ್ರಾರ್ಥನೆ. ನಮ್ಮಲ್ಲೇ ಇರುವ ದೇವತಾಚೈತನ್ಯದ ಪ್ರಬೋಧ ಪ್ರಾರ್ಥನೆಯ ತಾತ್ಪರ್ಯ.

ಪ್ರಾರ್ಥನೆಯಲ್ಲಿ ಕಾಮ್ಯ ಪ್ರಾರ್ಥನೆಯೆಂಬುದೇ ಸಾಮಾನ್ಯವಾಗಿ ವಾಡಿಕೆಯಲ್ಲಿರುವುದು; ದೇವರನ್ನು ಪ್ರಾಪಂಚಿಕಲಾಭಗಳಿಗಾಗಿ ಬೇಡಿಕೊಳ್ಳುವುದು. ಆದರೆ ಕಾಮ್ಯದಲ್ಲಿಯೂ ನಮ್ಮ ಹೃದಯವನ್ನು ಶುದ್ಧಿಗೊಳಿಸಲು ಬೇಡಿಕೊಂಡರೆ ತಪ್ಪೇನು ಇಲ್ಲ. ಅದಕ್ಕಿಂತ ಮಿಗಿಲಾದ ಪ್ರಾರ್ಥನೆ 'ಆಂತರಿಕ ಸಂಯೋಗ' (inward communion) ಎನ್ನುತ್ತಾರೆ ಗಾಂಧೀಜಿ. ಒಳಗಿರುವ ಸತ್ಯದೊಂದಿಗೆ ಸಂಪರ್ಕವನ್ನು ಏರ್ಪಡಿಸಿಕೊಂಡು ಅದರಿಂದ ಸಾಮರ್ಥ್ಯವನ್ನೂ ಮಾರ್ಗದರ್ಶನವನ್ನೂ ಪಡೆಯುವುದು ಇಂಥ ಪ್ರಾರ್ಥನೆಯ ಪ್ರಯೋಜನ. ನಮ್ಮಲ್ಲಿ ಬೆಳಕಿನ ಕಡೆಗೊಯ್ಯುವ ಶಕ್ತಿಗಳೂ ಕತ್ತಲೆಯ ಕಡೆ ಒಯ್ಯುವ ಶಕ್ತಿಗಳೂ ಎಡೆಬಿಡದೆ ಕಾದಾಡುತ್ತಲೇ ಇರುತ್ತವೆ. ಈ ಹಗರಣದಲ್ಲಿ ನಮಗೆ ಸರಿಯಾಗಿ ದಾರಿ ತೋರಿಸಿ ಸೆಣಸಲು ಬೇಕಾದ ಬಲವನ್ನು ಒದಗಿಸುವುದು ಪ್ರಾರ್ಥನೆಯೇ. ಕೆಲಸಕ್ಕೆ ಕೈಹಾಕಲು ಅಂಜುವವರು, ಸಾಹಸಿಗಳಲ್ಲದವರು ಪ್ರಾರ್ಥನೆಗೆ ಶರಣುಹೋಗುತ್ತಾರೆ ಎನ್ನುವ ವಾದವೊಂದಿದೆ. ಗಾಂಧೀಜಿ ಇದನ್ನು ಒಪ್ಪುವುದಿಲ್ಲ. ಪ್ರಾರ್ಥನೆಯಲ್ಲಿ ನಮ್ಮ ಹೊಣೆಗಾರಿಕೆಯೇನು ತಪ್ಪುವುದಿಲ್ಲ; ಅಲಸಿಗರಾಗಿರಲು ಪ್ರಾರ್ಥನೆ ಅಧಿಕಾರವನ್ನು ಒದಗಿಸುವುದಿಲ್ಲ. ಪ್ರಾರ್ಥನೆಯ ತಾತ್ಪರ್ಯ ಉದ್ಯಮವೇ. ಆದರೆ ಉದ್ಯಮದ ಯಶಸ್ಸಿಗೆ

ಅಗತ್ಯವಾದ ಬಲವನ್ನು, ಸರಿಯಾದ ಮಾರ್ಗದರ್ಶನವನ್ನು, ಬೇರೊಂದು ಮೂಲದಿಂದ (ಎಂದರೆ ನಮ್ಮ ಅಂತರಾಳದಿಂದಲೇ) ಪಡೆದುಕೊಳ್ಳುವ ಕಾತರ ಇರುತ್ತದೆ ಅಷ್ಟೆ. 'ನಾನೇ ಸರ್ವತಂತ್ರ ಸ್ವತಂತ್ರ, ಏನಾದರೂ ಮಾಡಿಯೇನು. ಹೇಗಾದರೂ ಮಾಡಿಯೇನು 'ಎನ್ನುವ ಅಹಂಕಾರ ಇಲ್ಲಿ ಕರಗುತ್ತದೆ ಅದಕ್ಕೆ ಬದಲು 'ಅವನು (ದೇವರು) ನಡೆಸಿದರೆ ನಡೆದೀತು; ಅವನು ಮಾಡಿಸಿದರೆ ನಾನು ಮಾಡುತ್ತೇನೆ' ಎನ್ನುವ ವಿನಮ್ರ ಭಾವನೆ ಮೂಡುತ್ತದೆ.

ಈ ಸಂದರ್ಭದಲ್ಲಿ 'ನನ್ನ ಇಷ್ಟದಂತೆ ಮಾಡುತ್ತೇನೆ' ಎನ್ನುವುದಕ್ಕಿಂತ 'ಅವನ (ದೇವರ) ಇಷ್ಟದಂತೆ ಮಾಡುವಂತಾಗಲಿ' ಎನ್ನುವುದು ಮೇಲೇರಿ ನಿಲ್ಲುತ್ತದೆ. 'Thy will be done' ಎನ್ನುವ ಭಾವನೆ, ಅಥವಾ 'ಈಶ್ವರೇಚ್ಛಾ ಬಲೀಯಸೀ' ಎನ್ನುವ ಸಮಾಧಾನ ಪ್ರಾರ್ಥನಾ ಮನೋವೃತ್ತಿಯಲ್ಲಿ ಹಾಸುಹೊಕ್ಕಾಗಿ ಸೇರುತ್ತದೆ. ತಾನು ದೇವರ ಕೈಗೊಂಬೆಯಾದರೆ ಸಾಕು. ದಿಟವಾಗಿ ನಾವೆಲ್ಲ ಕೈಗೊಂಬೆಗಳೆ, ಅವನು 'ಕಪಟ ನಾಟಕ ಸೂತ್ರಧಾರಿ'ಯಲ್ಲವೇ? ಆದರೆ ಅದರ ಅರಿವು ನಮಗೆ ಮೂಡುವುದು ಪ್ರಾರ್ಥನೆಯಲ್ಲಿ. ನಮ್ಮ ಒಂದೊಂದು ಕೆಲಸವೂ ದೇವರಿಂದಲೇ ಮೊದಲಾಗಿ, ಕೆಲಸ ಮುಗಿದೊಡನೆ ದೇವರಿಗೇ ಒಪ್ಪಿಸುವುದಾದರೆ ಅದು ಆತ್ಮಸಮರ್ಪಣ ಮನೋಭಾವ. ಆಗ ನಾವು ಮಾಡುವ ಕೆಲಸವೆಲ್ಲ ಊರ್ಜಿತವಾಗುತ್ತದೆ. ಸಾರ್ಥಕವಾಗುತ್ತದೆ; ಪಶ್ಚಾತ್ತಾಪಕ್ಕೆ ಅಥವಾ ದುಗುಡಕ್ಕೆ ಅವಕಾಶವಿರುವುದಿಲ್ಲ. '**ತತ್ಪೂಜಾ ಕರ್ಮಚಾಖಿಲಂ**' ಎನ್ನುವಂತಾಗುತ್ತದೆ.

ಹೀಗೆ ಮಾಡುವಾಗ ಸೇವಾಭಾವ ತಾನಾಗಿಯೇ ಹೊರಹೊಮ್ಮುತ್ತದೆ. ಗಾಂಧೀಜಿ ಗುಜರಾತಿ ಸಂತ- ಕವಿ ನರಸೀ ಮೆಹ್ತಾರವರ ನುಡಿಗಳನ್ನು ತುಂಬ ಮೆಚ್ಚಿಕೊಂಡಿದ್ದರು. ಅವರ ನುಡಿಗಳಲ್ಲಿ ಒಂದು '**ವೈಷ್ಣವನ ಹೃದಯ ಬೇರೆಯವನ ದುಃಖಕ್ಕೆ ಕರಗಬಲ್ಲುದು**' ಎನ್ನುತ್ತದೆ. ಇದು ಗಾಂಧೀಜಿಗೆ ಮೆಚ್ಚಿನ ಮಾತು. ಇತರರ ಬೇನೆ, ದುಗುಡಗಳಿಗೆ ನಮ್ಮ ಒಡಲಲ್ಲಿ ಮಾರ್ದನಿ ಮೂಡದಿದ್ದರೆ, ಅವರ ಹಿತವನ್ನು ಸಾಧಿಸಿಯೇನು ಎನ್ನುವ ತವಕ ಕಾಣಬರದಿದ್ದರೆ ಪ್ರಾರ್ಥನೆ ನಿಷ್ಫಲವೆಂದೇ ಅರ್ಥ. ಮಹಾಯಾನ-ಬೌದ್ಧರ 'ಬೋಧಿಸತ್ತ್ವ ಪ್ರಣಿಧಿ', ಭಾಗವತರ'ಕಾಮಯೇ ದುಃಖತಪ್ತಾನಾಂ ಆರ್ತಿನಾಶನಂ' ಎನ್ನುವ, ನಿಶ್ಚಯ ಸ್ಮೃತಿಕಾರರ 'ಆತ್ಮವತ್ ಸರ್ವಭೂತಾನಿ' ಎನ್ನುವ ನಿಲುವು ಇವೆಲ್ಲವೂ ಕೈಗೂಡುವುದು ಪ್ರಾರ್ಥನೆಯಲ್ಲಿಯೇ. ಗಾಂಧೀಜಿ ಹೇಳಿದರು- 'ಸೇವಾಭಾವದಿಂದ ಹೃದಯ ಪ್ರಾರ್ಥನಾಮಯವಾಗುತ್ತದೆ' ಎಂದು.

ಪ್ರಾರ್ಥನೆಯಲ್ಲಿ ಇನ್ನೊಂದು ಪ್ರಯೋಜನವನ್ನೂ ಅವರು ಕಂಡುಕೊಂಡರು. ಪ್ರಾರ್ಥನೆಗೆ ಮನಸೋತವನಿಗೆ ಯಾವ ಅಂಜಿಕೆಯೂ ಇರದು. ದೇವರ ರಕ್ಷೆ ಕಣ್ಣಿಗೆ ಕಾಣದಿದ್ದರೂ ಎಡಬಿಡದೆ ಬೆಂಬಲವಾಗಿ ಇದ್ದೇ ಇರುತ್ತದೆ ಎನ್ನುವ ದೃಢವಿಶ್ವಾಸ

ಪ್ರಾಥನೆಯಿಂದ ಬರುತ್ತದೆ. ದೇವರು ಕೈ ಬಿಡುವುದಿಲ್ಲ ಎನ್ನುವ ನಿಯಮವನ್ನು ನಿರೂಪಿಸಲು ಗಾಂಧೀಜಿ ಗಜೇಂದ್ರಮೋಕ್ಷದ ಕಥೆಯನ್ನು ಮತ್ತೆ ಮತ್ತೆ ನೆನಪಿಗೆ ತಂದು ಕೊಡುತ್ತಿದ್ದರು. ಭಕ್ತನಾದವನಿಗೆ ನಿರಾಶೆಯ ಸೋಂಕೇ ಇರಬಾರದು. ಹೃದಯದಿಂದ ಅಂಜಿಕೆಯನ್ನು ತೊಲಗಿಸದೆ ಶ್ರದ್ಧೆ ದೃಢವಾಗದು. ಗಾಂಧೀಜಿಯ ಬದುಕಿನಲ್ಲಿ ಪ್ರಧಾನವಿವರವಾಗಿದ್ದ ನಿರ್ಭೀತಿ ಪ್ರಾರ್ಥನೆಯ ಬಲದಿಂದ ಒದಗಿದುದೇ. ತುಂಬ ಭೀರುಸ್ವಭಾವದವರೂ ಸಂಶಯಪ್ರಕೃತಿಯವರೂ ಆಗಿದ್ದ ಅವರು ಕಾಲಕ್ರಮದಲ್ಲಿ ನಿರ್ಭೀತರಾದದ್ದೂ ಶ್ರದ್ಧಾವಂತರಾದದ್ದೂ ಅವರ ಧಾರ್ಮಿಕ ನಿಷ್ಠೆಯಿಂದ.

ಪ್ರಾರ್ಥನೆಯಲ್ಲಿ ಸಂಸ್ಕೃತಮಂತ್ರಗಳಿರಬೇಕೆ? ಗಾಂಧೀಜಿ ಸಂಸ್ಕೃತ ಮಂತ್ರಗಳಿಗೆ ವಿಶೇಷವಾದ ಪ್ರಾಧಾನ್ಯವನ್ನು ಕೊಟ್ಟಿದ್ದರು; ಮಂತ್ರಗಳಲ್ಲಿ ಅಲೌಕಿಕವಾದ ಸಾಮರ್ಥ್ಯ ಇರುವುದನ್ನೂ ಒಪ್ಪಿಕೊಂಡಿದ್ದರು. ಆದರೆ ಅರ್ಥ ತಿಳಿಯದೆ ಬರಿದೆ ಮಂತ್ರಗಳನ್ನು ಉಚ್ಚರಿಸಿದರೆ ಸಾಕು ಎನ್ನುವುದನ್ನು ಅವರು ಒಪ್ಪಲಿಲ್ಲ. ಮೇಲಾಗಿ, ಪ್ರಾರ್ಥನೆಯು ಬಾಯಿಯ ಕೆಲಸವಲ್ಲ. ಹೃದಯದ ಕೆಲಸ ಎಂದು ಅವರು ಸ್ಪಷ್ಟಪಡಿಸಿದರು. ನಾವು ಪ್ರಾರ್ಥನೆಯಲ್ಲಿ ಏನು ಹೇಳಿಕೊಳ್ಳುತ್ತಿದ್ದೇವೆ ಎನ್ನುವುದು ಮುಖ್ಯವಲ್ಲ; ಆ ಸಂದರ್ಭದಲ್ಲಿ ದೇವರ ಆಣತಿ ಏನು ಎಂಬುದನ್ನು ಅರಿತುಕೊಳ್ಳುವುದು ಮುಖ್ಯ. ಹೃದಯವನ್ನು ತೆರೆದು ದೇವರ ಸಾನ್ನಿಧ್ಯ ಅಲ್ಲಿ ಬರಮಾಡಿಕೊಳ್ಳುವುದು ಪ್ರಾರ್ಥನೆಯ ಉದ್ದೇಶ. ದೇವರಿಂದ ಮಾರ್ಗದರ್ಶನ ಪಡೆಯುವ ತವಕ ಒಂದಿದ್ದರೆ ಪ್ರಾರ್ಥನೆಯಲ್ಲಿ ಮಾತೇ ಮೂಡಬೇಕಾಗಿಲ್ಲ. ಮಾತು ಮೂಡಿದರೂ ನಮ್ಮ ಸಿದ್ಧತೆಯನ್ನು ಸೂಚಿಸುವ ಮಾತಷ್ಟೇ ಹೊರಬರುವುದು. ಈ ನೆಲೆಯಲ್ಲಿಯೇ ಅವರು ಸುಪ್ರಸಿದ್ಧ 'ಕರುಣಾಳು ಬಾ ಬೆಳಕೆ' (Lead kindly light) ಎಂಬ ಕಾರ್ಡಿನಲ್ ನ್ಯೂಮನ್ನನ ಪ್ರಾರ್ಥನೆಯನ್ನು ತುಂಬ ಮೆಚ್ಚಿಕೊಂಡಿದ್ದುದು ಅತ್ಯುತ್ತಮ ಪ್ರಾರ್ಥನೆಗೆ ನಿದರ್ಶನ ಅದು, ಅವರ ದೃಷ್ಟಿಯಲ್ಲಿ.

ಪ್ರಾರ್ಥನೆಗೆ ಸಂಬಂಧಪಟ್ಟ ಇನ್ನೊಂದು ವಿವರ ಮೌನ. ಗಾಂಧೀಜಿಗೂ ಮೌನಕ್ಕೂ ನೆಂಟು ನಿಕಟವಾದದ್ದು. 'ಮೌನಕ್ಕಾಗಿಯೇ ನಿರ್ಮಾಣವಾಗಿದ್ದೇನೆಯೋ ನಾನು, ಎಂದುಕೊಳ್ಳುವಂತಾಗಿದೆ ' ಎಂದು ಗಾಂಧೀಜಿ ಒಮ್ಮೆ ಹೇಳಿದರು. ಅವರು ಮೌನವನ್ನು ಆಚರಿಸಲು ಮೊದಲು ಮಾಡಿದ್ದು ದೇಹ ಸ್ವಾಸ್ಥ್ಯದ ಅಗತ್ಯವೆಂದು. ಬಿಡುವಿಲ್ಲದ ಕೆಲಸದಿಂದ, ತಡೆಯಿಲ್ಲದ ಮಾತುಕತೆಯಿಂದ ವಿರಾಮಪಡೆಯಲು ಅವರು ಹವಣಿಸಿಕೊಂಡುದು ನೂಲುವುದು, ಮೌನದಿಂದಿರುವುದು, ಮನಸ್ಸಿನ ಉದ್ವೇಗವನ್ನೂ ಹೃದಯದ ಸಂದೇಹವನ್ನೂ ನೀಗಿಕೊಳ್ಳಲು ಉಪವಾಸದ ಉಪಾಯವನ್ನು ಕಂಡುಕೊಂಡರಷ್ಟೆ. ಬಲವಿಲ್ಲದೆ, ದಾರಿಗಾಣದೆ, ಕಂಗಾಲಾದಾಗ ಉಪವಾಸ ಬಲವನ್ನು ಒದಗಿಸಿತು. ದಾರಿ

ಕಾಣಿಸಿತು. ಹುರುಪನ್ನು ನೀಡಿತು. ಬೇರೆಯವರನ್ನು ಬೆದರಿಸಲೆಂದು ಅವರ ಉಪವಾಸವಲ್ಲ; ಹೃದಯಶೋಧನೆಗೆ, ಆತ್ಮಸಾಕ್ಷಾತ್ಕಾರಕ್ಕಾಗಿ ಅದು ಉಪಾಯ. ಅದೊಂದು ಶುದ್ಧೀಕರಣಸಂವಿಧಾನ ಎಂದು ಬಗೆದಿದ್ದರು. ಹಾಗೆಯೇ ಮೌನವೂ ಹೃದಯಶೋಧನೆಗೆ, ಆತ್ಮದರ್ಶನಕ್ಕೆ ನೆರವಾಗುವುದೆಂದು ಕಂಡುಕೊಂಡರು.

ಮೊದಲಿಗೆ ಮೌನ ಒತ್ತಡವನ್ನು ಇಳಿಸುವ ಹವಣಿಕೆಯಾಗಿದ್ದಿತು; ಆಮೇಲೆ, ಬರವಣಿಗೆಗೆ ಸಮಯವನ್ನು ಪಡೆದುಕೊಳ್ಳಲು ಮೌನವನ್ನಾಚರಿಸತೊಡಗಿದರು. ಮೌನವನ್ನಾಚರಿಸುತ್ತ ಬಂದಂತೆ ಅದರ ಆಧ್ಯಾತ್ಮಿಕ ಪ್ರಯೋಜನ ಅವರಿಗೆ ಸ್ಪಷ್ಟವಾಯಿತು. ತಮ್ಮ ಅಂತರಾಳದಲ್ಲಿ ಅಡಗಿರುವ ದೇವರೊಂದಿಗೆ, ಸತ್ಯದೊಂದಿಗೆ, ಸಂಪರ್ಕವನ್ನು ಸಾಧಿಸಿಕೊಳ್ಳುವುದು ಮೌನ ಸ್ಥಿತಿಯಲ್ಲಿ ಸಾಧ್ಯವೆಂಬುದು ಅವರಿಗೆ ಮನವರಿಕೆಯಾಯಿತು. ದೇವರನ್ನು ಅರಸಬೇಕಾದುದು ಮೌನದಲ್ಲಿಯೇ ಎಂಬುದು ಖಚಿತವಾಯಿತು. ಹೊರಗೆ ಹರಡುವ ಪ್ರವೃತ್ತಿಗಳನ್ನು ತಡೆಗಟ್ಟಿ, ಒಳಮುಖ ಮಾಡಿದಾಗ ಆವರೆಗೆ ಕಾಣದಿದ್ದುದು ಕಣ್ಣಿಗೆ ಕಟ್ಟಿದಂತೆ ಎದ್ದು ನಿಲ್ಲುತ್ತದೆ. ಎಲ್ಲೋ ಅಡಗಿದ್ದುದು ತಟ್ಟನೆ ಹೊರಗೆ ಬರುತ್ತದೆ.

ಮಾತು ನಿಂತಾಗ ಮನಸ್ಸು ಬಿಡಿಯಾಗುತ್ತದೆ, ಅದಕ್ಕೆ ಬಿಡುವಾಗುತ್ತದೆ. ಮೌನವೆಂದರೆ ಬರಿ ಮಾತಾಡದಿರುವುದು ಎಂದಷ್ಟೇ ಅರ್ಥವಲ್ಲ. ಮುಖ್ಯವಾಗಿ ಅದು ಮನಸ್ಸಿನ ಮೌನವಾಗಬೇಕು. ಆಲೋಚನೆಗಳು ಅಡಗಿದಾಗಲೇ ಒಳಗಿರುವ ಸತ್ಯ ಕಾಣಸಿಗುವುದು.

***

ಭಾಗವತದಲ್ಲಿ ಭಗವತ್ತತ್ತ್ವ

ಡಾ||ಪಿ.ಎಸ್. ರಾಮಾನುಜಂ

ಇಡೀ ಭಾಗವತವು ಅವತಾರವೊಂದರ ಅಂದರೆ ಕೃಷ್ಣಾವತಾರದ ಕಥೆಯಾದರೂ ಅದರಲ್ಲಿರುವ ಭಗವಂತನ ಸ್ತುತಿಗಳಲ್ಲಿ ವ್ಯಾಸರ ಪರಮಾರ್ಥ ಸತ್ಯದ ದೃಷ್ಟಿ ಹೇಗಿದೆಯೆಂಬುದನ್ನು ಅರಿಯಬಹುದು. ಭಾರತೀಯ ಚಿಂತನೆಯಲ್ಲಿ ಕಷ್ಟದ ಸಮಯದಲ್ಲಿ 'ಋತ'ಕ್ಕೆ ಏರುಪೇರಾದಾಗ ವಿಶ್ವಚೈತನ್ಯವು ಅಂದರೆ ದೈವ್ಯ ಕೆಳಗಿಳಿಯುತ್ತದೆ. ಇದೇ ಅವತಾರ. ಪಾಶ್ಚಾತ್ಯ ಕಲ್ಪನೆಯಲ್ಲಿ ಮನುಷ್ಯನು ದೈವತ್ತ್ವಕ್ಕೇರುತ್ತಾನೆ. ಭಾರತೀಯ ಕಲ್ಪನೆಯಲ್ಲಿ ದೈವವೇ ಭೂಮಿಗೆ ಇಳಿಯುತ್ತದೆ. ಈ ದೃಷ್ಟಿಯಲ್ಲಿ ಅವತಾರಗಳೆಲ್ಲ ಭಗವತ್ತತ್ತ್ವದ ಮೂರ್ತರೂಪಗಳು. ಈ ದೃಷ್ಟಿಯಿಂದ ಶ್ರೀಕೃಷ್ಣನು ಭಗವಂತನ ಮಾನುಷರೂಪವೆನಿಸುತ್ತಾನೆ. ಇಲ್ಲಿ ವಿಶ್ವಚೈತನ್ಯವು ಒಂದು ಪ್ರಮೇಯ ರೂಪವನ್ನು ತೆಗೆದುಕೊಂಡು ಧರ್ಮಸಂಸ್ಥಾಪನೆಯ ತನ್ನ ಲಕ್ಷ್ಯವನ್ನು ಸಾಧಿಸಲು ಅವತರಿಸುತ್ತವೆ. ಇದು ಭಾರತೀಯ ಚಿಂತಕರು ನಂಬಿಕೊಂಡು ಬಂದಿರುವ, ಭಾರತೀಯ ಯೋಗಿಗಳು ಸಾರಿಕೊಂಡು ಬಂದಿರುವ ತತ್ತ್ವ.

ಕೃಷ್ಣಾವತಾರದ ಕಥೆಯನ್ನು ಭಾಗವತದಲ್ಲಿ ಧರ್ಮದ ಪುನರುಜ್ಜೀವನಕ್ಕಾಗಿ ವರ್ಣಿಸುವ ವ್ಯಾಸರು ನಡುನಡುವೆ ಭಗವಂತನ ಸ್ತುತಿಯ ರೂಪದಲ್ಲಿ ಅವನ ಸ್ವರೂಪವನ್ನು ಸ್ಪಷ್ಟಮಾಡುತ್ತಾರೆ. ಇದರಿಂದ ವ್ಯಾಸರ ಭಗವತ್ತತ್ತ್ವಸಿದ್ಧಾಂತ ಗೋಚರವಾಗುತ್ತದೆ.

ಅಂತಹ ಒಂದು ಸ್ತುತಿ ದಶಮಸ್ಕಂಧದಲ್ಲಿ ಬರುವ ವಸುದೇವನ ಸ್ತುತಿ. ಕೃಷ್ಣಾವತಾರವಾದ ಕೂಡಲೇ ವಸುದೇವನು ಸ್ವಕಾಂತಿಯಿಂದ ಸೂತಿಕಾಗೃಹವನ್ನು ಬೆಳಗಿಸುತ್ತಿದ್ದ ಶಿಶುವನ್ನು ನೋಡಿ ಅದು ಪರಮಪುರುಷನೆಂದೇ ನಿರ್ಧರಿಸಿ ಸ್ತುತಿಸುತ್ತಾನೆ.

ನೀನು ಪ್ರಕೃತಿಯನ್ನು ಮೀರಿದವನೂ, ಕೇವಲಾನುಭವಾನಂದ ಸ್ವರೂಪನೂ ಎಲ್ಲರ ಬುದ್ಧಿಸಾಕ್ಷಿಯೂ ಆದ ಪುರುಷನು. ಸೃಷ್ಟಿಗೆ ಮುನ್ನ ನಿನ್ನ ಪ್ರಕೃತಿಶಕ್ತಿಯ ಸಹಾಯದಿಂದ ಈ ಸತ್ವರಜಸ್ತಮೋಮಯವಾದ ಜಗತ್ತನ್ನು ಸೃಷ್ಟಿಸಿ ಅದರೊಳಗೆ ಅಪ್ರವಿಷ್ಟನಾದರೂ ಪ್ರತಿಷ್ಟನಾದಂತೆ ತೋರುತ್ತಿದ್ದೀಯೆ. ಈ ಅವಿಕೃತವಾದ ಭಾವಗಳು ವಿಕೃತವಾದವುಗಳೊಡನೆ ಕಲೆತು ವಿವಿಧ ಶಕ್ತಿಗಳನ್ನು ಹೊಂದಿ ಬೇರೆ ಬೇರೆಯಾಗಿ ವಿರಾಟ್ಪುರುಷನನ್ನೇ ಸೃಷ್ಟಿಸುತ್ತವೆಯಲ್ಲವೆ? ಇವು ಒಟ್ಟಿಗೆ ಸೇರಿ ಬ್ರಹ್ಮಾಂಡವನ್ನು ಸೃಷ್ಟಿಸಿ ಅದರೊಳಗೆ ಪ್ರವೇಶಿಸಿರುವಂತೆ ಕಾಣುತ್ತವೆ. ಇವುಗಳೆಲ್ಲವೂ ಸೃಷ್ಟಿಗೆ ಮೊದಲು ಅವಿಕೃತ ರೂಪದಲ್ಲಿ ಇದ್ದೇ ಇರುವುದರಿಂದ ಅವುಗಳು ಈಗ ಹೊಸದಾಗಿ ಹುಟ್ಟಿಕೊಳ್ಳುವುದಿಲ್ಲವಲ್ಲವೇ?

ಹೀಗೆ ನೀನು ಬುದ್ಧಿಂಬಿಂದ ಅನುಮೇಯವಾದ ಲಕ್ಷಣಗಳುಳ್ಳ ಇಂದ್ರಿಯ ಗ್ರಾಹ್ಯವಾದ ಬಹಿರ್ಗುಣಗಳೊಡನೆ ಇದ್ದರೂ ಆ ಗುಣಗಳನ್ನು ಹೊಂದಿರುವವನಲ್ಲ. ಸರ್ವನೂ, ಸರ್ವಾತ್ಮನೂ, ಪರಮಾತ್ಮನೂ ಆದ ನಿನಗೆ ಆವರಣವೇ ಇಲ್ಲದಿರುವುದರಿಂದ ಒಳಹೊರಗುಗಳೆಂಬುದೇ ಇಲ್ಲ.

ಯಾವನು ಪರಮಾತ್ಮನಿಂದಲೇ ವಿಕಾಸಗೊಂಡ ಐಂದ್ರಿಯಕವಾದ ಹೊರಗಿನ ಗುಣಗಳಲ್ಲಿ ಪರಮಾತ್ಮನನ್ನು ಬಿಟ್ಟು ಬೇರೆಯಾಗಿ ಅವು ಇರುವುದೆಂದು ತಿಳಿದಿದ್ದಾನೆಯೋ ಅವನು ವಿದ್ವಾಂಸನಲ್ಲ. ಏಕೆಂದರೆ ಪರಮಾತ್ಮನೇ ಎಲ್ಲವೂ ಆಗಿರುವಾಗ ಇದು ಸರಿಯಲ್ಲ.

ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳೆಲ್ಲವೂ ನಿಷ್ಕ್ರಿಯನೂ, ನಿರ್ಗುಣನೂ, ನಿರ್ವಿಕಾರನೂ ಆದ ನಿನ್ನಿಂದಲೂ ಆದವುವೆಂದು ಹೇಳುತ್ತಾರೆ. ಅದು ಈಶ್ವರನೂ ಬ್ರಹ್ಮನೂ ಆದ ನಿನ್ನ ಸ್ವರೂಪಕ್ಕೆ ವಿರುದ್ಧವಾದದ್ದಲ್ಲ. ಏಕೆಂದರೆ ಗುಣಗಳೆಲ್ಲ ನಿನ್ನಲ್ಲೇ ಗೌಣವಾಗಿ ಆಶ್ರಿತವಾಗಿವೆ ಎಂದು ಭಾವಿಸುತ್ತಾರಷ್ಟೆ.

ಅಂತಹ ನೀನು ಮೂರು ಲೋಕಗಳ ಸ್ಥಿತಿಗೋಸ್ಕರ ನಿನ್ನ ಮಾಯಾಶಕ್ತಿಯಿಂದ ಶುದ್ಧವರ್ಣವನ್ನೂ, ಸೃಷ್ಟಿಗಾಗಿ ಕೆಂಪು ಬಣ್ಣವನ್ನೂ ಪ್ರಳಯದಲ್ಲಿ ಕೃಷ್ಣವರ್ಣವನ್ನೂ ಧರಿಸುತ್ತೀಯಷ್ಟೆ.

ಈ ಮೇಲಿನ ವಾಕ್ಯಗಳಲ್ಲಿ ಪರಮಾತ್ಮಸ್ವರೂಪವು ಅನಾವರಣಗೊಳ್ಳುತ್ತದೆ. ಇದು ವಿಶ್ಲೇಷಿಸಿ ನೋಡುವಾಗ ಸಾಂಖ್ಯ, ಅದ್ವೈತ, ದ್ವೈತ ಮುಂತಾದ ದರ್ಶನಗಳ ಸಿದ್ಧಾಂತಗಳೆಲ್ಲಾ ಇಲ್ಲಿ ಮೈದಳೆಯುತ್ತವೆ.

ವಸುದೇವನ ಸ್ತುತಿಯಲ್ಲಿ ಪರಮಪುರುಷನ ಬಗ್ಗೆ ಮೊದಲು ಹೇಳುವ ಮಾತೆಂದರೆ ಅವನು ಪ್ರಕೃತಿಗೆ ವರನಾದ ಪುರುಷ ಎಂಬುದು. ಸಾಂಖ್ಯದರ್ಶನದಲ್ಲಿ ಪ್ರಕೃತಿ, ಪುರುಷರು ಪ್ರಧಾನವಾದ ತತ್ತ್ವಗಳು. ಪ್ರಕೃತಿ ಪುರುಷಾನ್ಯತಾಖ್ಯಾತಿಯೇ ಮೋಕ್ಷ. ಅಂದರೆ ಪ್ರಕೃತಿಯೂ ಪುರುಷನು ಬೇರೆ ಬೇರೆ ಎಂದು ತಿಳಿದುಕೊಂಡರೆ ಮೋಕ್ಷ ಲಭಿಸುತ್ತದೆ. ಇಲ್ಲಿ ಪರಮಪುರುಷನು ಪರಮಾತ್ಮನಾದುದರಿಂದ ಅವನು ಪ್ರಕೃತಿಯನ್ನು ಮೀರಿದವನು. ತ್ರಿಗುಣಗಳನ್ನು ಅವನು ಮೀರದವನು. ಅವನು ಕೇವಲಾನಂದ ಸ್ವರೂಪ ಅಂದರೆ ಆನಂದಮಯ, ಕೇವಲಾನುಭವಾನಂದ ಸ್ವರೂಪ ಎಂದಾಗ ಅನುಭವ ವೇದ್ಯವಾದ ಆನಂದಸ್ವರೂಪ ಎಂದರ್ಥ ಮಾಡಬಹುದು. ಈ ಅರ್ಥದಲ್ಲಿ ಪರಮಾತ್ಮನು ಅನುಭವೈಕವೇದ್ಯನಾಗುವುದರಿಂದ ಇದು ನೈಷಾ ತರ್ಕೇಣ ಮತಿರಾಪನೇಯಾ ಎಂಬ ಶ್ರುತಿವಾಕ್ಯಕ್ಕೆ ಹೊಂದುತ್ತದೆ. ಪರಮಾರ್ಥ ಸತ್ಯವು ತರ್ಕಕ್ಕೆ ಸಿಗುವಂತಹುದಲ್ಲ. ಅವನ ಅನುಭವವು ವಿಭಿನ್ನ ಆಯಾಮಕ್ಕೆ ಸೇರಿದುದು. ಲೌಕಿಕತರ್ಕದ ಪರಿಧಿಯಲ್ಲಿ ಬರತಕ್ಕುದಲ್ಲ.

ಪುರುಷ ಎಲ್ಲರ ಬುದ್ಧಿಸಾಕ್ಷಿ ಎಂಬುದು ಗಮನಿಸಬೇಕಾದ ವಿಚಾರ. ಇವನು

ಎಲ್ಲರ ಅಂತರ್ಯಾಮಿಯಾಗಿ ಸರ್ವಸಾಕ್ಷೀಭೂತನಾಗಿದ್ದಾನೆ. ಇದು ಪರಮಾತ್ಮನ ವಿಭುತ್ವವನ್ನು ಸೂಚಿಸುತ್ತದೆ. ಇದನ್ನೇ ಮುಂದೆ ಸಮ, ಸರ್ವಾತ್ಮಾ ಎನ್ನಲಾಗಿದೆ. ಇವನು ವಿಶ್ವಸ್ವರೂಪನಾಗಿ ಸರ್ವನಾಗಿದ್ದಾನೆ. ಇವನೇ ಎಲ್ಲವೂ. ಇದರಲ್ಲಿ ಸರ್ವಂಬ್ರಹ್ಮಮಯಂ ಎಂಬುದರ ಮೂಲ ಅಡಗಿದ್ದರೂ ಸರ್ವಾತ್ಮಾ ಎಂದು ಹೇಳುವುದರಿಂದ ಅವನಲ್ಲಿ ಜಗತ್ತು, ಜೀವಾತ್ಮಗಳೆಲ್ಲ ಇವನ ಶರೀರ ಎಂಬ ವಿಶಿಷ್ಟಾದ್ವೈತ ಸಿದ್ಧಾಂತದ ಮೂಲ ಕಾಣುತ್ತದೆ.

ಪರಮಪುರುಷನು ತ್ರಿಗುಣಾತ್ಮಕವಾದ ಜಗತ್ತನ್ನು ಸ್ವಪ್ರಕೃತಿಯಿಂದ ಸೃಷ್ಟಿಸುತ್ತಾನೆ. ಆ ಜಗತ್ತಿನೊಳಗೆ ಇವನು ಪ್ರವೇಶ ಮಾಡದಿದ್ದರೂ, ಅನುಪ್ರವೇಶ ಮಾಡಿರುವವನಂತೆ ಕಾಣುತ್ತಾನೆ. ಇಲ್ಲಿ ಸಾಂಖ್ಯದರ್ಶನದ ಸಿದ್ಧಾಂತವು ಪ್ರವೇಶಿಸುತ್ತದೆ. ತ್ರಿಗುಣಗಳು ಸಾಮ್ಯಾವಸ್ಥೆಯಲ್ಲಿರುವಾಗ ಅದು ಪ್ರಕೃತಿ. ಅದರಲ್ಲಿ ಚಲನೆಯುಂಟಾದಾಗ ಸೃಷ್ಟಿ. ಪ್ರಕೃತಿಯು ತ್ರಿಗುಣಗಳ ಸಾಮ್ಯಾವಸ್ಥೆಯಾದುದರಿಂದ ಅದರಿಂದ ಸೃಷ್ಟಿಯಾಗುವ ಜಗತ್ತು ತ್ರಿಗುಣಾತ್ಮಕವೇ. ಆದರೆ ಇದರಲ್ಲಿ ಒಂದು ವ್ಯತ್ಯಾಸವೆಂದರೆ ವ್ಯಾಸರ ಪಕ್ಷದಲ್ಲಿ ಪುರುಷನೇ ಸೃಷ್ಟಿಕರ್ತ. ಅವನಿಗೆ ತ್ರಿಗುಣಗಳ ಸಂಸ್ಪರ್ಶವಿಲ್ಲದಿದ್ದರೂ ಅವುಗಳ ಜಗತ್ತಿನೊಳಗೆ ಪ್ರವೇಶಮಾಡಿರುವವನಂತೆ ಕಾಣುತ್ತಾನೆ. ಇದೂ ಒಂದು ಮಾಯೆಯೇ. ಅವನು ಜಗತ್ತಿನೊಳಗೆ ಇದ್ದಾನೆ. ಆದರೆ ಅದರಲ್ಲಿ ಪ್ರವೇಶವಿಲ್ಲ ಎಂಬ ವೈರುಧ್ಯದ ಮಾತಿನಲ್ಲಿ ರಹಸ್ಯವಿದೆ. ಪುರುಷನಲ್ಲಿ ಗುಣಗಳ ಆರೋಪ ಮಿಥ್ಯೆ, ಅದು ನಮ್ಮ ಅಜ್ಞಾನ. ಪುರುಷನು ಜಗತ್ತಿನೊಳಗೆ ಕಂಡೂ **ಅತ್ಯತಿಷ್ಠತ್ ದಶಾಂಗುಲಂ** ಎಂಬಂತೆ ಅದರಿಂದ ಹೊರಗೆ ಇದ್ದಾನೆ.

ಅವಿಕೃತವಾದ ಭಾವಗಳು ವಿಕೃತಗಳೊಡನೆ ನಾನಾರೂಪಶಕ್ತಿಗಳಿಂದ ವಿರಾಜನನ್ನು ಉಂಟುಮಾಡುವ ಹಾಗೆ ಪುರುಷನು ಇವೆಲ್ಲ ಒಟ್ಟಿಗೆ ಜಗತ್ತನ್ನು ಸೃಷ್ಟಿಸಿ ಪ್ರತಿಕಣದಲ್ಲೂ ಹಾಸುಹೊಕ್ಕಾಗಿ ಪ್ರವೇಶಿಸಿರುವಂತೆ ಕಾಣುತ್ತವೆ. ಈ ಪದಾರ್ಥಗಳೆಲ್ಲ ಸೃಷ್ಟಿಗೆ ಮುಂಚೆ ಅವಿಕೃತರೂಪದಲ್ಲಿ ಇದ್ದಿರುವುದರಿಂದ ಅವು ಹೊಸದಾಗಿ ಹುಟ್ಟುವುದಿಲ್ಲ. ಅವ್ಯಾಕೃತ ಸ್ವರೂಪದಲ್ಲಿ ಪದಾರ್ಥಗಳು ಮೊದಲೇ ಇರುವುದರಿಂದ ವ್ಯಾಕೃತರೂಪದಲ್ಲಿ ಅವೇನೂ ಹೊಸದಾಗಿ ಹುಟ್ಟುವುದಿಲ್ಲ. ಇಲ್ಲಿ ಕಾರ್ಯರೂಪ ಜಗತ್ತಿನಲ್ಲಿ ಅವ್ಯಾಕೃತಭಾವಗಳು ಅವಿಕೃತವಾಗಿ ಮೊದಲೇ ಇದ್ದಿವೆ. ಇದೊಂದು ರೀತಿಯ ಸತ್ಕಾರ್ಯವಾದ. ಕಾರ್ಯವು ಅವಿಕೃತವಾಗಿ ಮೊದಲೇ ಸತ್ತೆಯನ್ನು ಹೊಂದಿರುತ್ತದೆ. ಇದರಂತೆಯೇ ಬುದ್ಧಿಯಿಂದ ಅನುಮೇಯವಾದ ಲಕ್ಷಣವನ್ನು ಹೊಂದಿದ ಹೊರಗಿನ ಗುಣಗಳೊಂದಿಗೆ ಸೇರಿಕೊಂಡು ಪುರುಷನು ಇರುವವನಾದರೂ ಆ ಗುಣಗಳನ್ನು ಕೂಡಿಸಿಕೊಳ್ಳುವವನಲ್ಲ.

ಇದರ ಅರ್ಥ, ಪುರುಷನು ಎಲ್ಲೆಲ್ಲೂ ಇದ್ದರೂ ಬಾಹ್ಯಗುಣಗಳ ಸಂಪ್ಪರ್ಶ ಅವನಿಗಿಲ್ಲ. ಅವನು ಗುಣೀ ಹಾಗೂ ಅಗುಣ, ಸಾಕಾರ, ನಿರಾಕಾರ, ಇದೆ, ಇಲ್ಲ ಎಂಬ ಎರಡು ಅಭಿವ್ಯಕ್ತಿಗಳ ಅರ್ಥದಲ್ಲೂ ಬರುವವನು. ಇವನಿಗೆ ಆವರಣವೇ ಇಲ್ಲದ್ದರಿಂದ

ಇವನಿಗೆ ಒಳಗೆ ಹೊರಗೆ ಎಂಬ ವಿಭಾಗವೇ ಇಲ್ಲ. ಅಪ್ರಮೇಯ ಹಾಗೂ ವಿಭುವಾದ್ದರಿಂದ ಪ್ರಮೇಯ ವಸ್ತುವಿಗೆ ಹೊಂದುವ ಯಾವುದೇ ಲಕ್ಷಣ ಅವನಿಗಿಲ್ಲ.

ಈ ವಿಭುವು ನಿಷ್ಕ್ರಿಯ ಹಾಗೂ ನಿರ್ಗುಣ. ಅವನು ನಿರ್ವಿಕಾರನೂ ಹೌದು. ವಿಭುವಾದ್ದರಿಂದ ಕ್ರಿಯೆ ಇರುವುದಿಲ್ಲ. ನಿತ್ಯನಾದುದರಿಂದ ಅವನಿಗೆ ವಿಕೃತಿಯೂ ಇಲ್ಲ ಆದರೆ ಜಗತ್ತಿನ ಸೃಷ್ಟಿಸ್ಥಿತಿಲಯಗಳೆಲ್ಲ ಇವನಿಂದಲೇ ಆಗುವುದು. ಈ ವಿರೋಧವು ಅಸಂಬದ್ಧವಲ್ಲ. ಈಶ್ವರನೂ ಬ್ರಹ್ಮನೂ ಆದ ಇವನಲ್ಲಿ ಈ ವಿಚಾರಗಳು ಸ್ವರೂಪವಿರುದ್ಧವಲ್ಲ. ಇವನ ಅವಿನಾಭೂತಶಕ್ತಿಯ ಕಾರ್ಯಗಳೆಲ್ಲವನ್ನೂ ಗೌಣವಾಗಿ ನಾವು ಇವನಲ್ಲೇ ಭಾವಿಸುತ್ತೇವೆ.

ಈ ಮಾತುಗಳನ್ನೆಲ್ಲ ಸಮನ್ವಯ ಮಾಡಿದರೆ ಈ ಅರ್ಥವು ಬರುತ್ತದೆ. ಬೀಜದಲ್ಲಿ ವೃಕ್ಷವಿರುವಂತೆ ಬ್ರಹ್ಮನಲ್ಲಿ ಜಗತ್ತೆಲ್ಲ ಇದೆ. ಬೀಜದ ವಿಕಾಸವೇ ವೃಕ್ಷವಾಗುವಂತೆ ಬ್ರಹ್ಮತತ್ತ್ವದ ವಿಕಾಸವೇ ಜಗತ್ತು. ಜಗತ್ತಿನ ರೂಪಾದಿಗಳು ಬ್ರಹ್ಮದಲ್ಲಿರುವುದಿಲ್ಲ. ಜಗತ್ತಿಗೂ ಬ್ರಹ್ಮಕ್ಕೂ ಇರುವ ಸಂಬಂಧವೇ ವಿವಿಧ ವೇದಾಂತದರ್ಶನಗಳನ್ನು ವಿವಿಧ ಸಿದ್ಧಾಂತಗಳಿಗೆ ದಾರಿಮಾಡಿದೆ.

ಬೃಹದಾರಣ್ಯಕದ ಈ ವಾಕ್ಯವನ್ನು ಇಲ್ಲಿ ಗಮನಿಸಬಹುದಾಗಿದೆ. **ಬ್ರಹ್ಮ ವಾ ಇದಮಗ್ರ ಆಸೀತ್, ತದಾತ್ಮಾನಮೇವಾವೇತ್। ಅಹಂ ಬ್ರಹ್ಮಾಸ್ಮೀತಿ। ತಸ್ಮಾತ್ ತತ್ಸರ್ವಮಭವತ್।**

ಇಲ್ಲಿ ಬ್ರಹ್ಮನಿಂದ ಎಲ್ಲವೂ ಹುಟ್ಟಿತು. ಇದು ವಿಕಾರವೋ ವಿಕಾಸವೋ ಎಂಬ ವಿಚಾರದಲ್ಲೇ ಅನೇಕ ಸಿದ್ಧಾಂತಗಳು ಹುಟ್ಟಿದುವು. ಇದು ವಿವರ್ತ ಎಂಬ ವಾದವೂ ಹುಟ್ಟಿತು. ಬ್ರಹ್ಮಸತ್ಯ. ಜಗನ್ಮಿಥ್ಯಾ ಎಂದು ಅದ್ವೈತಿಗಳು ಹೇಳಿದರೆ ದ್ವೈತಿಗಳೂ ಇತರರೂ ವಾಸ್ರುವನಾದಿಗಳಾಗಿ ಬ್ರಹ್ಮ, ಜಗತ್, ಜೀವಾತ್ಮಗಳ ಪ್ರತ್ಯೇಕ ಅಸ್ತಿತ್ವವನ್ನು ಪ್ರತಿಪಾದಿಸಿದರು. ಸಾಂಖ್ಯರು ಹಿಂದೆಯೇ ಪ್ರಕೃತಿಯಿಂದ ಮಹತ್, ಅಹಂಕಾರ ಮುಂತಾದ ತತ್ತ್ವಗಳ ಸೃಷ್ಟಿಯನ್ನು ಪ್ರತಿಪಾದಿಸಿ ಒಟ್ಟು ೨೫ ತತ್ತ್ವಗಳನ್ನು ಹೇಳಿದರು. ಜೀವಾತ್ಮನ ಪರಮಾತ್ಮರ ಅಸ್ತಿತ್ವವನ್ನು ಪ್ರತಿಪಾದಿಸುತ್ತಾ ವೈಶೇಷಿಕರು ಜಗತ್ತು ಸೃಷ್ಟಿಯಾಗುವುದು ಪರಮಾಣುಗಳಿಂದ ಎಂದು ಸಾಧಿಸಿದರು.

ಬ್ರಹ್ಮತತ್ತ್ವವು ಲೋಕದ ಸೃಷ್ಟಿಸ್ಥಿತಿಲಯಗಳಿಗೆ ಕಾರಣ ಎನ್ನುವ ಭಾಗವತವು ಬ್ರಹ್ಮನು ತನ್ನ ಮಾಯಾಶಕ್ತಿಯಿಂದ ಲೋಕದ ಸ್ಥಿತಿಗಾಗಿ ಶುಕ್ಲವರ್ಣವನ್ನೂ ಸೃಷ್ಟಿಗಾಗಿ ಕೆಂಪು ಬಣ್ಣವನ್ನೂ ಲಯಕ್ಕೆ ಕೃಷ್ಣವರ್ಣವನ್ನೂ ಧರಿಸುತ್ತಾನೆ ಎನ್ನುತ್ತದೆ. ಇದು ವಿವಿಧ ಕ್ರಿಯೆಗಳಿಗಾಗಿ ಸತ್ವರಜಸ್ತಮೋಗುಣಗಳನ್ನು ಧರಿಸುವುದರ ಬಗ್ಗೆ ಹೇಳುತ್ತಾ ಅದನ್ನೆಲ್ಲ ಮಾಯಾಂತರ್ಗತವಾಗಿಸಿಬಿಡುತ್ತದೆ.

ಈ ಎಲ್ಲವನ್ನೂ ಗಮನಿಸಿದಾಗ ಬ್ರಹ್ಮತತ್ತ್ವ ಸರ್ವವ್ಯಾಪಿಯಾಗಿದ್ದು ಎಲ್ಲಕ್ಕೂ ಕಾರಣವಾಗಿದ್ದು ಒಳಹೊರಗುಗಳಿಲ್ಲದ, ವಿರುದ್ಧವಾದ ಸ್ವರೂಪಗಳ ಅನುಭವವನ್ನು ಕೊಡುವ, ಅಂದರೆ, ಸಾಕಾರ ನಿರಾಕಾರ, ಸಗುಣ-ನಿರ್ಗುಣ, ಸವಿಶೇಷ ನಿರ್ವಿಶೇಷವಾಗಿ ಇರುವ ತತ್ತ್ವವಾಗಿ ಕಾಣುತ್ತದೆ. ಇದನ್ನು ಸಮನ್ವಯ ದೃಷ್ಟಿಯಿಂದ ನೋಡಿದಾಗ ಇದರ ಅಂತಾರಾರ್ಥವು ತಿಳಿಯುತ್ತದೆ. ಸತ್ಯದ ವಿವಿಧ ಹಂತಗಳ ದರ್ಶನವು ಗೋಚರವಾಗುತ್ತದೆ. ಇಂದ್ರಿಯಗಳ ಮೂಲಕ ನಮಗೆ ಲಭಿಸುವ ಯಾವುದೇ ಜ್ಞಾನದಂತೆಯೂ ಬ್ರಹ್ಮತತ್ವದ ಜ್ಞಾನವಿರುವುದಿಲ್ಲ. ಅದರಿಂದಲೇ ಉಪನಿಷತ್ತುಗಳ ದ್ರಷ್ಟಾರರು ನೇತಿ, ನೇತಿ ಎಂದರು. ನಮಗೆ ತಿಳಿದ ತಿಳಿಯುವ ಯಾವುದೂ ಬ್ರಹ್ಮನಲ್ಲ.

ಭಾಗವತದಲ್ಲಿ ಅಕ್ರೂರನು ಕೃಷ್ಣನನ್ನು ಸ್ತುತಿಸುವ ಭಾಗವನ್ನು ನೋಡಬೇಕು. ಆದರೂ ಭಕ್ತಿಯ ಭಿತ್ತಿಯಲ್ಲಿ ಭಗವಂತನ ಸ್ವರೂಪ ವ್ಯಕ್ತವಾಗುತ್ತ ಹೋಗುತ್ತದೆ ಅದರಲ್ಲಿ ಭಗವಂತನ ವಿಭುತ್ವವನ್ನು ಹೇಳುತ್ತಲೇ ಅವನ ಅವತಾರಗಳನ್ನು ಪ್ರಸ್ತಾಪಿಸಲಾಗಿದೆ.

ಅಕ್ರೂರನ ಪ್ರಕಾರ, ಕೃಷ್ಣನು, ಅಂದರೆ ಭಗವಂತನು ಅಖಿಲ ಜಗತ್ತಿಗೆ ಕಾರಣನಾದವನಿಗೆ ಕಾರಣ, ನಾಶರಹಿತ ಹಾಗೂ ಆದಿಪುರುಷ, ಪಂಚಭೂತಗಳು, ಅಹಂಕಾರ, ಮಹತ್, ಪ್ರಕೃತಿ, ಮನಸ್ಸು, ಇಂದ್ರಿಯಗಳು, ಶಬ್ದಸ್ಪರ್ಶಾದಿ ಇಂದ್ರಿಯ ವಿಷಯಗಳು, ಸಕಲ ದೇವತೆಗಳು, ಮತ್ತು ಜಗತ್ತಿಗೆ ಕಾರಣಗಳಾದ ಏನೇನಿವೆಯೋ, ಅವೆಲ್ಲವೂ ಪರಬ್ರಹ್ಮನ ಅವಯವಗಳೇ.

ಜಗತ್ತಿಗೂ ಭಗವಂತನಿಗೂ ಶರೀರ ಶರೀರಿಭಾವವು ಇಲ್ಲಿ ವ್ಯಕ್ತವಾಗುತ್ತದೆ. ಇದು ವಿಶಿಷ್ಟಾದ್ವೈತ ಸಿದ್ಧಾಂತ. ಸರ್ವಾಂತರ್ಯಾಮಿತ್ವ ಇದರಿಂದ ಸಿದ್ಧವಾಗುತ್ತದೆ.

ಆತ್ಮಭಿನ್ನವಾದ ಪ್ರಕೃತಿ ಮುಂತಾದುವು, ಆತ್ಮನಾದ ಪರಮಪುರುಷನನ್ನು ಅರಿಯಲಾರವು. ಸತ್ವರಜಸ್ತಮೋಗುಣಗಳಿಂದ ಅನುಬದ್ಧನಾದ ಬ್ರಹ್ಮನೂ ಗುಣಾತೀತನಾದ ಪರಮ ಪುರುಷನನ್ನು ಅರಿಯಲಾರ.

ಇಲ್ಲಿ ಬ್ರಹ್ಮನೆಂದರೆ ಸಗುಣಬ್ರಹ್ಮ, ನಿರ್ಗುಣಬ್ರಹ್ಮನ ಸ್ವರೂಪವನ್ನು ಸಗುಣಬ್ರಹ್ಮನೂ ಅರಿಯಲಾರ. ಇಲ್ಲಿ ಬ್ರಹ್ಮನ ಎರಡು ಹಂತದ ಅಸ್ತಿತ್ವವನ್ನು ಕಾಣಬಹುದು.

ಪರಮಪುರುಷನು ಜ್ಞಾನಸ್ವರೂಪ, ತತ್ತ್ವಜ್ಞಾನಿಗಳು ಕರ್ಮಗಳೆಲ್ಲವನ್ನೂ ಬಿಟ್ಟು ಜ್ಞಾನಯಜ್ಞದಿಂದ ಅವನನ್ನು ಆರಾಧಿಸುತ್ತಾರೆ.

ಯಜ್ಞಯಾಗಾದಿಗಳನ್ನು ನಾನಾ ರೂಪವುಳ್ಳ ದೇವತಾ ಮೂರ್ತಿಗಳ ಹೆಸರಿನಿಂದ ಆರಾಧಿಸುವುದು ಇವನನ್ನೇ ಆಗಮಶಾಸ್ತ್ರಾನುಸಾರ ಭಗವನ್ಮಯರಾಗಿ ನಾನಾ ಮೂರ್ತಿಗಳಲ್ಲಿ

ಏಕಮೂರ್ತಿಯಾಗಿರುವ ಇವನನ್ನೇ ಆರಾಧಿಸುತ್ತಾರೆ.

ಅನ್ಯದೇವತೆಗಳನ್ನು ಆರಾಧಿಸುವವರೂ ಸರ್ವ ದೇವತಾಮಯನಾದ ಇವನನ್ನು ಆರಾಧಿಸುತ್ತಾರೆ. ಪರ್ವತಗಳಲ್ಲಿ ಹುಟ್ಟಿ ಮಳೆಯ ನೀರಿನಿಂದ ತುಂಬಿಕೊಂಡು ಹರಿಯುವ ನದಿಗಳೆಲ್ಲವೂ ಕೊನೆಗೆ ಸಮುದ್ರಕ್ಕೇ ಹೋಗಿ ಸೇರುವಂತೆ ಎಲ್ಲ ಪೂಜಾಮಾರ್ಗಗಳೂ ಇವನನ್ನೇ ತಲಪುತ್ತವೆ.

ಸತ್ವ, ರಜಸ್, ತಮಸ್ಸುಗಳೆಲ್ಲವೂ ಇವನ ಮಾಯಾಶಕ್ತಿಯ ಗುಣಗಳು. ಆ ಗುಣಗಳಲ್ಲೇ ಬ್ರಹ್ಮನಿಂದ ಹಿಡಿದು ಸ್ಥಾವರಗಳವರೆಗೆ ಎಲ್ಲವೂ ಪೋಣಿಸಲ್ಪಟ್ಟಿವೆ.

ಯಾವ ಅವಿದ್ಯೆಯಿಂದ ಸತ್ವಾದಿ ಗುಣಗಳ ಪ್ರವಾಹವು ದೇವ ಮನುಷ್ಯ ತಿರ್ಯಕ್ ಪ್ರಾಣಿಗಳಲ್ಲಿ ಹರಿಯುತ್ತದೆಯೋ, ಅಂತಹ ಗುಣಗಳಿಗೆ ಸಂಬಂಧಪಡದೆ, ಲಿಪ್ತವಾಗದ ಜ್ಞಾನಶಕ್ತಿಯುಳ್ಳವನು ಪರಮಪುರುಷ. ಇವನು ಸರ್ವಾತ್ಮಕ, ಸರ್ವಬುದ್ಧಿ ಸಾಕ್ಷೀಭೂತ.

ಅಗ್ನಿಯು ಪರಬ್ರಹ್ಮನ ಮುಖ, ಭೂಮಿ ಅವನ ಪಾದ. ಸೂರ್ಯನ ಕಣ್ಣು ಅಂತರಿಕ್ಷವೇ ನಾಭಿ. ದಿಕ್ಕುಗಳೇ ಕಿವಿ. ದ್ಯುಲೋಕವೇ ಶಿರಸ್ಸು, ಸುರೇಂದ್ರಾದಿಗಳೇ ತೋಳುಗಳು. ಸಮುದ್ರವೇ ಉದರ, ವಾಯು ಇವನ ಪ್ರಾಣಬಲ.

ಗಿಡಮರಬಳ್ಳಿಗಳೇ ಇವನ ರೋಮಗಳು. ಮೇಘಮಂಡಲವೇ ತಲೆಗೂದಲು, ಬೆಟ್ಟಗಳೇ ಮೂಳೆ, ಉಗುರುಗಳು. ಹಗಲಿರುಳು ನಿಮೇಷಣಗಳು ಚತುರ್ಮುಖ ಬ್ರಹ್ಮ. ಸೃಷ್ಟಿಸಾಧನ. ಮಳೆಯೇ ವೀರ್ಯ.

ಅವ್ಯಯಾತ್ಮನಾದ ಇವನಲ್ಲಿ ನೀರಿನಲ್ಲಿ ಜಲಜಂತುಗಳಂತೆ, ಅತ್ತಿಯ ಹಣ್ಣಿನಲ್ಲಿ ಕ್ರಿಮಿಗಳಂತೆ, ಈ ಮನೋಮಯನಾದ ಪುರುಷನಲ್ಲಿ ಜೀವಕೋಟಿಗಳಿರುವ ಲೋಕಗಳು ಚಲಿಸುತ್ತಿವೆ.

ಲೀಲಾರ್ಥವಾಗಿ ಈ ಲೋಕದಲ್ಲಿ ಇವನು ಧರಿಸುವ ರೂಪಗಳನ್ನು ನೋಡಿ ಲೋಕಗಳು ಇವನನ್ನು ಹಾಡಿ ಹೊಗಳುತ್ತವೆ.

ಇಡೀ ಜಗತ್ತೇ ಇವನ ಅಂಗ ಎಂಬುದನ್ನು ಅಕ್ರೂರ ಹೇಳುತ್ತಾ ಇಡೀ ಜಗತ್ತೇ ಇವನಲ್ಲಿದೆ ಎನ್ನುತ್ತಾನೆ. ಪರಮಾತ್ಮನು ಜಗತ್ತಿನೊಳಗಿರುತ್ತಾ ಜಗತ್ತನ್ನೇ ತಮ್ಮೊಳಗೆ ಇಟ್ಟುಕೊಂಡಿದ್ದಾನೆ. ಇದು ಇವನ ಅನಿರ್ವಚನೀಯತೆಯನ್ನು ತೋರಿಸುವ ವೈರುಧ್ಯ.

ಜ್ಞಾನಮಯನಾದ,ಲೀಲಾಮಯನಾದ ಪರಮಪುರುಷನನ್ನು ವರ್ಣಿಸಿ ಅಕ್ರೂರನು ಅವನ ಅವತಾರಗಳ ವಿಷಯಕ್ಕೆ ಬಂದು ಭಗವಂತನ ಲೀಲಾವಿಗ್ರಹಗಳನ್ನು ಸ್ತುತಿಸುತ್ತಾನೆ.

ಅಭಿವಂದನಾ

ಮಹಾಪ್ರಳಯದಲ್ಲಿ ಸಾಗರದಲ್ಲಿ ಸಂಚರಿಸುವ ಕಾರಣಮತ್ಸ್ಯನಾದ ನಿನಗೆ ನಮಸ್ಕಾರ. ಮಂದರಧಾರಿಯದ ಕೂರ್ಮರೂಪನಿಗೆ ನಮಸ್ಕಾರ.

ಹೀಗೆಯೇ, ಭೂಮಿಯನ್ನು ಉದ್ಧರಿಸಿದ ಸೂಕರಮೂರ್ತಿಯನ್ನೂ ತ್ರಿಭುವನವನ್ನು ವ್ಯಾಪಿಸಿದ ವಾಮನಮೂರ್ತಿಯನ್ನೂ ದೃಪ್ತರಾದಕ್ಷತ್ರಿಯರನ್ನು ಧ್ವಂಸಮಾಡಿದ ಭೃಗುಪತಿಯಾದ ಪರಶುರಾಮನನ್ನೂ, ರಾವಣಾಂತಕನಾದ ರಘುರಾಮನನ್ನೂ, ವಾಸುದೇವನನ್ನೂ ಸಂಕರ್ಷಣನನ್ನೂ ಪ್ರದ್ಯುಮ್ನನನ್ನೂ, ಅನಿರುದ್ಧನನ್ನೂ, ಬುದ್ಧನನ್ನೂ ಕಲ್ಕಿಯನ್ನೂ ನಮಸ್ಕರಿಸುತ್ತಾನೆ.

ಇಲ್ಲಿ ಬುದ್ಧನನ್ನೂ ಸೇರಿಸಿರುವುದನ್ನು ಗಮನಿಸಬೇಕು. ಸುಮಾರು ಐದುಸಹಸ್ರವರ್ಷಕ್ಕಿಂತ ಹಿಂದೆ ಇದ್ದ ವ್ಯಾಸರು ನಂತರದ ಕಾಲದ ಬುದ್ಧನನ್ನು ಸೇರಿಸಿರುವುದು. ಈ ಸಂದರ್ಭ ಪ್ರಕ್ಷಿಪ್ತವಿರಬಹುದೆಂಬ ಭಾವನೆಗೆ ಎಡೆಗೊಡುತ್ತದೆ.

ಮುಂದೆ ಅಕ್ರೂರನು ಜೀವಿಗಳ ಅಜ್ಞಾನದ ಬಗ್ಗೆ ಹೇಳುತ್ತಾನೆ. ಈ ಜೀವಲೋಕವು ಪರಮಾತ್ಮನ ಮಾಯೆಯಿಂದ ಮೋಹಿತವಾಗಿ ನಾನು, ನನ್ನದು ಎಂಬ ದುರಭಿಮಾನದಿಂದ ಕರ್ಮಮಾರ್ಗಗಳಲ್ಲಿ ಭ್ರಮಿಸುತ್ತದೆ. ಅನಿತ್ಯವೂ ಜಡವೂ ದುಃಖಮಯವೂ ಆದ ವಸ್ತುಗಳಲ್ಲಿ ತದ್ವಿಪರೀತವಾದ ನಿತ್ಯ ಚಿನ್ಮಯ, ಸುಖಮಯ ಎಂಬ ಬುದ್ಧಿಯಿಂದ ನಾನು ಅಜ್ಞಾತಮಸ್ಸಿನಿಂದ ಆವೃತನಾಗಿ ದ್ವಂದ್ವಾತ್ಮಕ ಭಾವಗಳಲ್ಲಿ ರಮಿಸುತ್ತಾ ನನ್ನಾತ್ಮಕ್ಕೆ ಪ್ರಿಯನಾದ ನಿನ್ನನ್ನು ತಿಳಿಯದವನಾಗಿದ್ದೇನೆ, ಎಂದು ಹೇಳುವ ಅಕ್ರೂರನು'ವಿಜ್ಞಾನ ಸ್ವರೂಪನೂ ಸರ್ವವಿಧವಾದ ಜ್ಞಾನಕ್ಕೂ ಕಾರಣನಾಗಿರುವ, ಪುರುಷರಲ್ಲಿ ಪ್ರಧಾನನೂ ಅನಂತಸಂಪನ್ನನೂ, ಆದ ಪರಬ್ರಹ್ಮ ರೂಪಿಯಾದ ನಿನಗೆ ನಮಸ್ಕಾರ' ಎನ್ನುತ್ತಾನೆ.

ಅಕ್ರೂರನ ಮಾತಿನಿಂದ ಪ್ರಕಟವಾಗುವ ಪರಬ್ರಹ್ಮ ಸ್ವರೂಪ ಇದು. ಇಡೀ ಜಗತ್ತೂ, ಜೀವಗಳೂ ಪರಮ ಪುರುಷನ ಅಂಗಗಳು. ಅವನನ್ನು ಅರಿಯುವುದು ಸಾಧ್ಯವಿಲ್ಲ. ಎಲ್ಲರೂ ವಿವಿಧ ಸ್ವರೂಪಗಳಲ್ಲಿ ಅರ್ಚಿಸುವುದು ಇವನನ್ನೇ ಸೇರುತ್ತದೆ. ಇವನು ಜ್ಞಾನಸ್ವರೂಪ. ಸತ್ವ, ರಜಸ್, ತಮಸ್ಸುಗಳು ಇವನ ಪ್ರಕೃತಿಯ ಗುಣಗಳು. ಅವುಗಳಲ್ಲಿ ಇವನನ್ನು ಬಿಟ್ಟು ಉಳಿದೆಲ್ಲವೂ ಪ್ರೋತಗಳಾಗಿವೆ. ಇವನು ಸರ್ವಾತ್ಮಕ, ಸರ್ವಬುದ್ಧಿಸಾಕ್ಷೀಭೂತ. ಮನೋಮಯನಾದ ಇವನಲ್ಲಿ ಇಡೀ ವಿಶ್ವವೇ ಚಲಿಸುತ್ತಿದೆ. ಎಲ್ಲದರ ಒಳಗೆ ಹೊರಗೆ ಇರುವವನು ಇವನೇ, ಲೋಕಕಲ್ಯಾಣಕ್ಕಾಗಿ ವಿವಿಧ ಅವತಾರಗಳನ್ನು ಎತ್ತಿ ಬರುವ ಲೀಲಾಮಯ ಪರಮಪುರುಷ ಇವನು.

ಆಧ್ಯಾತ್ಮಿಕ ದೃಷ್ಟಿಯಿಂದ ಅಕ್ರೂರನು ಪರಬ್ರಹ್ಮನನ್ನು, ಅವನ ಸ್ವರೂಪವನ್ನು ವಿವರಿಸುತ್ತಾ ಹೋಗುವಾಗ; ಅವನ ಭಕ್ತಿಭಾವವು ಶ್ರುತಿಯಂತೆ ಮಧುರವಾಗಿ ಒಂದು ಅಂತಃ ಸ್ರೋತವಾಗಿ ಹರಿಯುವುದನ್ನು ನೋಡಬಹುದು. ಭಕ್ತಿಯ ಭಿತ್ತಿಯಲ್ಲಿ ಭಗವಂತನ ಚಿತ್ರವನ್ನು ಅಕ್ರೂರ ಬಿಡಿಸುತ್ತಾನೆ.

ಭಾಗವತದಲ್ಲಿ ಬ್ರಹ್ಮನು ಶ್ರೀಕೃಷ್ಣನ ಸ್ತುತಿಯನ್ನು ಮಾಡುವ ಸಂದರ್ಭ ಬರುತ್ತದೆ. ಇದರಲ್ಲಿ ತಿಳಿದುಬರುವ ಪರಮಾತ್ಮ ಸ್ವರೂಪ ವಿಶಿಷ್ಟವಾದ ವರ್ಣನೆಯಿಂದೊಡಗೂಡಿ ಸ್ಪಷ್ಟವಾಗುತ್ತದೆ.

ಪರಮಪುರುಷನನ್ನು ಅರಿಯಲು ಶ್ರೇಯೋಮಾರ್ಗ ಭಕ್ತಿಯೇ. ಆದರೂ ಅಂತಹವರು ನಿರ್ವಿಕಾರವಾದ ಸ್ವಾನುಭವಮಾತ್ರ ಸ್ವರೂಪವೂ ಆದ ಪರಮಾತ್ಮ ತತ್ತ್ವಕ್ಕಿಂತಲೂ ತಾನು ಅನ್ಯನಲ್ಲ ಎಂದು ತಿಳಿದಾಗಲೇ ಗುಣಾತೀತನಾದ ಅವನನ್ನು ತಿಳಿಯಲು ಸಾಧ್ಯ. ಪರಮಾತ್ಮನ ಎರಡು ಪ್ರಾಕಟ್ಯವೆಂದರೆ ವಿಶ್ವಾತ್ಮಕವಾದದ್ದು ಹಾಗೂ ವಿಶ್ವಾತೀತವಾದದ್ದು ಇದೇ ಸಗುಣ-ನಿರ್ಗುಣ ಸ್ವರೂಪಗಳು. ಇವೆರಡು ಸೇರಿಯೇ ಪರಮಪುರುಷ ಸ್ವರೂಪವೆನಿಸುವುದು. ಅವನ ವಿಶ್ವಾತೀತ ಸ್ವರೂಪ ಜ್ಞಾನಗಮ್ಯ. ವಿಶ್ವಾತ್ಮಕ ಸ್ವರೂಪವು ಭಕ್ತಿಗೋಚರ. ಪರಮಪುರುಷನು ಅನಂತ, ಮಾಯಿಗಳಲ್ಲೇ ಮಾಯಿ ಭಕ್ತರನ್ನು ಕೈಬಿಡದ ಪ್ರಭು. ಅಸಂಖ್ಯಾತವಾದ ಬ್ರಹ್ಮಾಂಡಗಳೆಂಬ ಪರಮಾಣುಗಳ ಓಡಾಟಕ್ಕೆ ವಾತಾಯನಗಳಂತಿರುವ ರೋಮಕೂಪಗಳುಳ್ಳ ಅನಂತ ಸ್ವರೂಪ ಅವನು. ಇದೆ, ಇಲ್ಲ ಎಂಬ ವ್ಯವಹಾರಕ್ಕೆ ವಿಷಯವಾದ ಯಾವುದೇ ಪದಾರ್ಥವೂ ಅವನ ಉದರದಿಂದ ಹೊರಗೆ ಇರುವುದು ಸಾಧ್ಯವಿಲ್ಲ. ಅವನಿಗೆ ಅಂಗವಾದ ಜೀವರಾಶಿಯಲ್ಲಿ ಮಲಗಿದ ನಾರಾಯಣನಾಗಿ ಬ್ರಹ್ಮಾಂಡದ ಒಂದು ಭಾಗವಾಗಿರುವುದೂ ಅವನ ಒಂದು ಮಾಯೆ. ಯಾವನ ಉದರದಲ್ಲಿ ಈ ಎಲ್ಲ ಪ್ರಪಂಚವೂ ನನ್ನೊಂದಿಗೇ ಸೇರಿ ಕಾಣುವುದೋ ಹಾಗೆಯೇ ಎಲ್ಲ ಪ್ರಪಂಚವೂ ಹೊರಗೂ, ಕೃಷ್ಣನ ಉದರದಲ್ಲಿಯೂ ಹಾಗೆಯೇ ಕಾಣಿಸುತ್ತದೆ. ಇದು ಮಾಯೆಯಲ್ಲದೆ ಮತ್ತೇನು? ಎನ್ನುವ ಅಕ್ರೂರನ ಮಾತು ಎಲ್ಲ ಪ್ರಪಂಚವೂ ನನ್ನಲ್ಲಿದೆ. ಆದರೆ ನಾನು ಅದರಲ್ಲಿಲ್ಲ ಎಂಬ ಗೀತೆಯ ಮಾತೇ ಆಗಿದೆ. ಇದರಲ್ಲಿ ಪರಮಾತ್ಮನಿಗೂ ಜಗತ್ತಿಗೂ ಇರುವ ಆಧಾರಧೇಯ ಭಾವದ ವಿಚಿತ್ರತೆಯು ಗೋಚರವಾಗಿ ಅವನ ಅನಿರ್ವಚನೀಯತೆಯು ಎದ್ದುಕಾಣುತ್ತದೆ.

ಅಕ್ರೂರನ ಈ ಮಾತುಗಳು ಭಗವಂತನ ಸ್ವರೂಪವನ್ನು ತಿಳಿಯಪಡಿಸುತ್ತವೆ. ಮೊದಲು ನೀನೊಬ್ಬನೇ ಇದ್ದೆ ನಂತರ ಗೋಕುಲದ ಎಲ್ಲರೂ, ಎಲ್ಲವೂ ನೀನೇ ಆದೆ. ಅವರೂ ಚತುರ್ಭುಜರಾದರು. ನೀನೇ ಅಷ್ಟೊಂದು ಬ್ರಹ್ಮಾಂಡಗಳ ರೂಪವನ್ನು ತಾಳಿದೆ. ನಿನ್ನಿಂದ ವ್ಯಾಪ್ತವಾದ ಈ ಜಗತ್ತು ಬ್ರಹ್ಮಸ್ವರೂಪನಾದ ನೀನಾಗಿಯೇ ಉಳಿಯುತ್ತದೆ.(ನೀನೊಬ್ಬನೇ ಉಳಿಯುತ್ತೀಯೆ).

ಅಕ್ರೂರನ ಪ್ರಕಾರ, ಈ ಇಡೀ ಜಗತ್ತೇ ಅಸತ್ ಸ್ವರೂಪವುಳ್ಳದ್ದು ಇದು ಸ್ವಪ್ನಸಮಾನ. ಅನಂತದುಃಖ ಸ್ವರೂಪದ್ದು, ಮಾಯೆಯಿಂದ ಉಂಟಾದರೂ ಈ ಜಗತ್ತು ನಿತ್ಯಾನಂದ ಸ್ವರೂಪನಾದ ಅನಂತನಾದ ಅವನಲ್ಲೇ ಸತ್ತಾಗಿ ಅಸ್ತಿತ್ವವುಳ್ಳದ್ದಂತೆ ಕಾಣುತ್ತದೆ.

ಪರಮಾತ್ಮನು ಏಕನಾದ ಆತ್ಮ, ಪುರಾಣ ಪುರುಷ, ಸತ್ಯ, ಸ್ವಯಂಜ್ಯೋತಿ,

ಅನಂತ, ಆದ್ಯ, ನಿತ್ಯ, ಅಕ್ಷರ, ಅಜಸ್ರಸುಖ, ನಿರಂಜನ, ಪೂರ್ಣ, ಅದ್ವಯ, ಉಪಾಧಿಮುಕ್ತ, ಅಮೃತ. ಅವನಿಗೆ ಬಂಧಮೋಕ್ಷಗಳಿಲ್ಲ, ಸೂರ್ಯನಿಗೆ ರಾತ್ರಿಹಗಲುಗಳಿಲ್ಲದಂತೆ. ನಿತ್ಯ ಚೈತನ್ಯ ಸ್ವರೂಪನಾದ ಅವನಿಗೆ ಭವಬಂಧಮೋಕ್ಷಗಳೆರಡೂ ಇಲ್ಲ. ಎಲ್ಲರಿಗೂ ಆತ್ಮಸ್ವರೂಪನಾದ ಇವನನ್ನು ಅನ್ಯನೆಂದು ಆತ್ಮವಲ್ಲದ ಶರೀರಾದಿಗಳನ್ನು ಆತ್ಮವೆಂದೂ ತಿಳಿದು ಆತ್ಮನನ್ನು ಹೊರಗಡೆ ಹುಡುಕುತ್ತಾರೆ. ಇದು ಅಜ್ಞಜನತೆಯ ಅಜ್ಞತೆ.

ಹೀಗೆ ಭಾಗವತದಲ್ಲಿ ಸ್ತುತಿಯ ರೂಪದಲ್ಲಿ ಭಗವತ್‌ಸ್ವರೂಪವನ್ನು ವಿಸ್ತಾರವಾಗಿ ಹೇಳಲಾಗಿದೆ. ಇದರಲ್ಲಿ ವಿವಿಧ ವೇದಾಂತಗಳ ಸಿದ್ಧಾಂತಗಳ ಮೂಲರೂಪವು ವಿದಿತವಾಗುತ್ತದೆ. ಜಗತ್ತಿನೊಳಗೆ ಸರ್ವವ್ಯಾಪಿಯಾಗಿ ಇರುವವನು ಎಂದು ಭೇದವಾದದಿಂದ ಪ್ರಾರಂಭವಾಗುವ ಸಿದ್ಧಾಂತವು ಕೊನೆಗೆ ಮಾಯಾವಾದದ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಆದರೂ ಇವೆಲ್ಲವನ್ನೂ ಸಮನ್ವಿತಗೊಳಿಸಿಕೊಂಡು ನೋಡಿದಾಗ ಭಗವಂತನು ಅನಿರ್ವಚನೀಯ ಎಂಬ ಅಂಶವು ಸ್ಫೂಟವಾಗುತ್ತದೆ. ಈ ಜಗತ್ತೇ ಅವನ ಮಾಯೆಯ ಸೃಷ್ಟಿ. ಅವನನ್ನು ನಮ್ಮೊಳಗೇ ಕಂಡುಕೊಳ್ಳಬೇಕು. ಅವನಿಗೆ ಸಗುಣ ನಿರ್ಗುಣವೆಂಬ ಎರಡು ವಿಧದ ಸತ್ತೆಯಿದೆ. ಅವನು ಜ್ಞಾನಗಮ್ಯನೂ ಹೌದು. ಭಕ್ತಿಗಮ್ಯನೂ ಹೌದು.

ಒಟ್ಟಿನಲ್ಲಿ ಎಲ್ಲ ವೇದಾಂತದರ್ಶನಗಳ ಸಿದ್ಧಾಂತಗಳ ಸಮನ್ವಿತ ರೂಪವಾಗಿ ಭಾಗವತದ ಭಗವದ್ದರ್ಶನ ಕಾಣಿಸುತ್ತದೆ. ಎಲ್ಲ ವೇದಾಂತ ದರ್ಶನಗಳಿಗೂ ಮೂಲವಾಗಿರುವ ಈ ಸಿದ್ಧಾಂತವನ್ನು ನೋಡಿದಾಗ, ಯಾವುದೇ ವಾದ ವಿವಾದಗಳಿಗೆ ಒಳಗಾಗದ ಒಂದು ಸುಂದರಸಮನ್ವಿತದರ್ಶನ, ಉಪನಿಷತ್ತುಗಳಿಗೆ ಹತ್ತಿರವಾಗಿರುವ ಋಷಿದರ್ಶನ, ಸ್ಫುಟಗೊಳ್ಳುತ್ತದೆ. ಸಾಕಾರ ನಿರಾಕಾರ, ಸಗುಣ, ನಿರ್ಗುಣ ಎಂಬ ವಿರುದ್ಧ ಸ್ವರೂಪಗಳಿಂದ ವರ್ಣಿತನಾಗುವ ಪರಮಾತ್ಮನನ್ನು ತಾನು ಸಗುಣನಾಗಿಯೋ, ಕೇವಲ ನಿರ್ಗುಣನಾಗಿಯೇ ತಿಳಿದುಕೊಳ್ಳುವುದು ಅಸಮಗ್ರಜ್ಞಾನವಾಗುತ್ತದೆ. ಅವನನ್ನು ಸಗುಣ ನಿರ್ಗುಣನೆಂದೇ ಆ ಎರಡು ಸ್ವಭಾವಗಳ ಸಮಷ್ಟಿಯಾಗಿಯೇ ತಿಳಿದುಕೊಳ್ಳಬೇಕೆಂಬ ಅಂಶ ಭಾಗವತದಿಂದ ಸ್ಪಷ್ಟವಾಗುತ್ತದೆ.

***

"ಇಸ್ಲಾಂ ಧರ್ಮ"

ಡಾ||ವಿಜಾಸುದ್ದೀನ್

ಈ ಜಗತ್ತು ಇದ್ದಕ್ಕಿದ್ದ ಹಾಗೆ ಸೃಷ್ಟಿ ಹೊಂದಲಿಲ್ಲ. ಇದಕ್ಕೊಬ್ಬ ನಿರ್ಮಾತ ಹಾಗೂ ಒಡೆಯನಿದ್ದಾನೆ. ಆ ಒಡೆಯನಿಗೆ ಭಗವಂತ, ದೇವರು, ಅಲ್ಲಾಹ್, ಗಾಡ್ ಮುಂತಾದ ನಾಮಗಳಿಂದ ಕರೆಯುತ್ತಾರೆ. ಉಪನಿಷತ್ತುಗಳು ಸ್ಪಷ್ಟವಾಗಿ ನುಡಿಯುತ್ತವೆ. "**ಏಕಂ ಸದ್ ವಿಪ್ರಾ ಬಹುಧಾ ವದಂತಿ**" ಪರಮಾತ್ಮನು ಒಬ್ಬನೇ. ಬುದ್ಧಿವಂತರು ವಿವಿಧ ನಾಮಗಳಿಂದ ಅವನನ್ನು ಸ್ಮರಿಸುತ್ತಾರೆ. ಇದೇ ಮಾತನ್ನು ಬಸವಣ್ಣನವರು "**ದೇವನೊಬ್ಬ ನಾಮ ಹಲವು**" ಎಂದು ನುಡಿದರು. ಈ ಸತ್ಯವನ್ನು ಎಲ್ಲಾ ಧರ್ಮಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಂಬುತ್ತವೆ.

ಈ ಸೃಷ್ಟಿಕರ್ತನು ಇಡೀ ಜಗತ್ತನ್ನು ನಿರ್ಮಿಸಿದನು. ವೇದಗಳ ಪ್ರಕಾರ ಹದಿನೆಂಟು ಕೋಟಿ ಜೀವರಾಶಿಗಳ ನಿರ್ಮಾಣ ಮಾಡಿದನು. ಕಣ್ಣಿಗೆ ಕಾಣದಂತಹ ಅಣು. ಅಂದರೆ ಜೀವಾಣುಗಳಿಂದ ಹಿಡಿದು ಬೃಹದಾಕಾರವಾದ ಆನೆ ಮತ್ತು ತಿಮಿಂಗಲಗಳ ನಿರ್ಮಾಣ ಮಾಡಿದನು. ಪರ್ವತ, ನದಿ, ನಯನಮನೋಹರವಾದ ಗಿಡಮರಗಳ ಸೃಷ್ಟಿ ಮಾಡಿದನು. ಇದೆಲ್ಲಾ ನಿರ್ಮಾಣವಾದ ಮೇಲೆ ತನ್ನ ಸೃಷ್ಟಿಯ ಪರಾಕಾಷ್ಠೆಯ ರೂಪದಲ್ಲಿ ಮನುಷ್ಯನ ನಿರ್ಮಾಣ ಮಾಡಿದನು.

ಮನುಷ್ಯನ ಸೃಷ್ಟಿ: ಜಗತ್ತಿನ ಪ್ರಮುಖ ಧರ್ಮಗಳು, ಉದಾಹರಣೆಗೆ ಹಿಂದೂ ಧರ್ಮ, ಕ್ರೈಸ್ತ ಧರ್ಮ, ಇಸ್ಲಾಂ ಹಾಗೂ ಜೊರಾಸ್ಟರ ಧರ್ಮ. ಪರಮಾತ್ಮನು ಪ್ರಪ್ರಥಮವಾಗಿ ಪಂಚತತ್ತ್ವಗಳ ಮೂಲಕ ಒಬ್ಬ ಸ್ತ್ರೀ ಪುರುಷರ ನಿರ್ಮಾಣ ಮಾಡಿದ. ಅವರಿಂದಲೇ ಈ ಜಗತ್ತಿಗೆ ಮಾನವ ಜನಾಂಗ ಬಂದಿತು ಎಂಬ ತತ್ತ್ವದಲ್ಲಿ ನಂಬಿಕೆ ಇಡುತ್ತವೆ. ಈ ಪಂಚತತ್ತ್ವಗಳೆಂದರೆ ಭೂಮಿ, ಮಣ್ಣು, ಜಲ, ವಾಯು, ಅಗ್ನಿ ಮತ್ತು ಆಕಾಶಗಳು. ಇಸ್ಲಾಂ ಧರ್ಮ ಈ ಪ್ರಥಮ ಸ್ತ್ರೀ ಪುರುಷರಿಗೆ ಹವ್ವಾ ಅಲೈಹಿಸ್ಸಲಾಂ ಹಾಗೂ ಅದಮ್-ಅಲೈಹಿಸ್ಸಲಾಂ ಎಂದು ಕರೆಯುತ್ತದೆ. ದಿವ್ಯ ಕುರಾನಿನಲ್ಲಿ ಇದರ ವರ್ಣನೆ ಬರುತ್ತದೆ. ಈ ಸ್ತ್ರೀ ಪುರುಷರೇ ಆದಿಮಾನವರು. ಪ್ರಥಮ ಮಾನವರು ಹಾಗೂ ಜಗತ್ತಿನ ತಂದೆ ತಾಯಿಗಳು.

ಮಾನವನ ವಿಶೇಷತೆ: ಸೃಷ್ಟಿಯಲ್ಲಿ ಅತ್ಯುನ್ನತವಾದ ಸ್ಥಾನ ಮಾನವನಿಗೆ ಮಾತ್ರ. ಈ ಮಾತು ವಿಜ್ಞಾನಿಗಳು, ಜ್ಞಾನಿಗಳು, ದಾರ್ಶನಿಕರು ಎಲ್ಲರೂ ಒಪ್ಪಿಕೊಳ್ಳುತ್ತಾರೆ. Man is the crown of creation -ಮನುಷ್ಯ ಸೃಷ್ಟಿಯ ಕಿರೀಟವೆಂಬ ಮಾತು ಇಲ್ಲಿ ನೆನಪಿಗೆ ಬರುತ್ತದೆ. ದಿವ್ಯ ಕುರಾನ್ ಇವನನ್ನು "ಅಶ್ರಫುಲ್ ಮೊಖ್ಲುಖಾತ್" ಎಂದು ಕರೆಯುತ್ತದೆ. ಅಂದರೆ 'ಸೃಷ್ಟಿಯಲ್ಲಿ ಅತಿ ಶ್ರೇಷ್ಠವಾದ ಸೃಷ್ಟಿ' ಎಂದು. ಇದಕ್ಕೆ

ಕಾರಣವೇನು? ಇವನು ಗಾತ್ರದಲ್ಲಿ ಆನೆ ತಿಮಿಂಗಲಗಳಷ್ಟು ಇಲ್ಲ. ಹಾರಾಟದಲ್ಲಿ ಹಕ್ಕಿಗಳ ಹಾಗಿಲ್ಲ, ಇವನಿಗಿಂತ ಶೀಘ್ರವಾಗಿ ಓಡಬಲ್ಲ ಅಸಂಖ್ಯ ಪ್ರಾಣಿಗಳುಂಟು. ಅಂದಮೇಲೆ ಇವನಿಗಿರುವ ವಿಶೇಷ ಶಕ್ತಿ ಎಂದರೆ ಬುದ್ಧಿಶಕ್ತಿ. ಇದರ ಜೊತೆಯಲ್ಲಿ ವಾಕ್‌ಶಕ್ತಿ ಮತ್ತು ಆತ್ಮಶಕ್ತಿ. ಭಗವಂತನು ಇವನನ್ನು ತನ್ನ ಸೃಷ್ಟಿಯ ಪ್ರತಿನಿಧಿಯಾಗಿ ಮಾಡಿದ್ದಾನೆ. ಆದುದರಿಂದಲೇ ಇವನ ಸ್ಥಾನ ಅದ್ವಿತೀಯ, ಇವನ ಗೌರವ ಅನಂತ.

ಮಾನವನ ಮಾರ್ಗದರ್ಶನ: ಇಸ್ಲಾಂ ಧರ್ಮದ ಪ್ರಕಾರ ಅಲ್ಲಾಹ್‌ನು ಮನುಷ್ಯರ ಮಾರ್ಗದರ್ಶನಕಾರ್ಯ ಆದಮ್ ಅಲೈಹಿಸ್ಸಲಾಮ್ ಅವರಿಂದ ಪ್ರಾರಂಭಿಸುತ್ತಾನೆ. ಅವರೇ ಪ್ರಥಮ ಮಾನವರು ಹಾಗೂ ಪ್ರಥಮ ಪ್ರವಾದಿಗಳೂ ಕೂಡ. ಅವರಿಂದ ಈ ಮಾನವನಿಗೆ ಮಾರ್ಗದರ್ಶನದ ಕಾರ್ಯ ಪ್ರಾರಂಭವಾಯಿತು. ಈಗ ನಮ್ಮ ಮುಂದೆ ಒಂದು ಪ್ರಶ್ನೆ ಏಳುತ್ತದೆ? ಮನುಷ್ಯನಿಗೆ ಮಾತ್ರ ಈ ಮಾರ್ಗದರ್ಶನವೇಕೆ? ಅಹುದು ಇದಕ್ಕೆ ಕಾರಣವಿದೆ, ದಿವ್ಯ ಕುರಾನ್ ಸ್ಪಷ್ಟವಾಗಿ ನುಡಿಯುತ್ತದೆ. ಪ್ರಕೃತಿ ಬೇರೆ ಪ್ರಾಣಿಗಳ, ಜೀವರಾಶಿಗಳ ಮಾರ್ಗದರ್ಶನ ತನ್ನದೇ ಆದ ರೀತಿಯಲ್ಲಿ ಮಾಡುತ್ತಿದೆ. ಭಗವಂತ ಒಂದು ನಿಶ್ಚಿತ ಋತು-ಗತಿಗಳನ್ನು ಅವುಗಳಿಗಾಗಿ ನಿರ್ಮಿಸಿದ್ದಾನೆ. ಸೂರ್ಯ, ಚಂದ್ರ, ನಕ್ಷತ್ರಗಳು, ಅದೇ ರೀತಿಯಲ್ಲಿ ಚಲಿಸುತ್ತಿವೆ. ಪ್ರಾಣಿಗಳು ತಮ್ಮ ಪ್ರವೃತ್ತಿಗನುಗುಣವಾಗಿ ಆಹಾರ, ನಿದ್ರಾ, ಭಯ ಮೈಥುನಾದಿಗಳನ್ನು ಹೊಂದಿವೆ. ಅದರ ಪ್ರಕಾರವೇ ಅವು ಬಾಳು ಮಾಡುತ್ತವೆ. ಅವುಗಳಿಗೆ ಪ್ರತ್ಯೇಕ ಮಾರ್ಗದರ್ಶನದ ಅವಶ್ಯಕತೆ ಇಲ್ಲ. ಆದರೆ ಮನುಷ್ಯ ಬುದ್ಧಿ ಜೀವಿ, ಭಗವಂತ ಅವನಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು ಈ ಜಗತ್ತಿಗೆ ಕಳುಹಿಸಿದ್ದಾನೆ. ಇವನಿಗೆ ಮಾರ್ಗದರ್ಶನದ ಅವಶ್ಯಕತೆ ಇದೆ. ಆದುದರಿಂದಲೇ ಅಲ್ಲಾಹ್‌ನು ಮನುಷ್ಯರ ಮಾರ್ಗದರ್ಶನಕ್ಕಾಗಿ, ಸಮಯ ಸಮಯಕ್ಕೆ ಬೇರೆ ಬೇರೆ ಭೂಭಾಗಗಳಲ್ಲಿ ಬೇರೆ ಬೇರೆ ಬುಡಕಟ್ಟುಗಳ ಮಧ್ಯೆ ತನ್ನ ಪ್ರವಾದಿಗಳನ್ನು ಕಳುಹಿಸುತ್ತಾನೆ. ಅವರೆಲ್ಲರೂ ಮನುಷ್ಯರೇ. ಆದುದರಿಂದ ಅವರು ಪೈಗಂಬರರು ಅಥವಾ ಸಂದೇಶವಾಹಕರಾಗಿದ್ದರು.

ಪ್ರವಾದಿ ಮಹಮದ್(ಸ)ರ ಮೂಲಕ ಅವತೀರ್ಣಗೊಂಡ ಇಸ್ಲಾಮ್ ಧರ್ಮವು ಹಿಂದಿನ ಎಲ್ಲ ದೇವಪ್ರೋಕ್ತ ಧರ್ಮಗಳ ಮುಂದುವರಿಕೆ ಮತ್ತು ಸಂಪೂರ್ಣತೆಯಾಗಿದೆ. ಆದ್ದರಿಂದ ಇದು ಎಲ್ಲ ಕಾಲದ ಜನರಿಗೂ ಅನ್ವಯವಾಗುತ್ತದೆ. ಇಸ್ಲಾಮಿನ ಈ ಸ್ಥಾನವನ್ನು ಪ್ರಬಲ ಸತ್ಯಾಂಶಗಳಿಂದ ಸಂರಕ್ಷಿಸಲಾಗಿದೆ. ಒಂದನೆಯದಾಗಿ, ಇತರ ಯಾವುದೇ ವೇದಗ್ರಂಥವು ಅದು ಅವತೀರ್ಣಗೊಂಡ ಮೂಲರೂಪದಲ್ಲಿ ಉಳಿದಿಲ್ಲ. ಎರಡನೆಯದಾಗಿ, ಇನ್ನಾವುದೇ ದೈವಿಕ ಧರ್ಮವು ಮಾನವ ಜೀವನದ ಎಲ್ಲ ರಂಗಗಳಿಗೂ ಸದಾಕಾಲ ಮಾರ್ಗದರ್ಶನ ನೀಡುವುದೆಂಬ ವಾದವನ್ನು ತೃಪ್ತಿಕರವಾಗಿ ಸಮರ್ಥಿಸುವುದಿಲ್ಲ. ಆದರೆ ಇಸ್ಲಾಮ್ ಧರ್ಮ ಸಂಪೂರ್ಣ ಮನುಕುಲವನ್ನು ಅಭಿಸಂಬೋಧಿಸಿ ಎಲ್ಲ ಮಾನವೀಯ

ಸಮಸ್ಯೆಗಳಿಗೂ ಮೂಲಭೂತ ಪರಿಹಾರವನ್ನು ಸೂಚಿಸುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಅದು ಹದಿನಾಲ್ಕು ಶತಮಾನಗಳಿಂದ ಪರೀಕ್ಷೆಗೆ ಗುರಿಯಾಗಿದೆ. ಅಂತಿಮ ಪ್ರವಾದಿ ಮಹಮ್ಮದ್ (ಸ) ರ ನಾಯಕತ್ವದಲ್ಲಿ ಸ್ಥಾಪಿಸಲಾದ ಮಾದರೀ ಸಮಾಜವನ್ನು ಬೆಳೆಸುವ ಸಾಮರ್ಥ್ಯವನ್ನು ಅದು ಇಂದಿಗೂ ಹೊಂದಿದೆ.

ಪ್ರವಾದಿ ಮಹಮ್ಮದ್(ಸ)ರು ಸಾಕಷ್ಟು ಲೌಕಿಕ ಸಾಧನಾನುಕೂಲತೆಯಿಲ್ಲದೇ ತಮ್ಮ ಕಡು ವೈರಿಗಳನ್ನೂ ಇಸ್ಲಾಮಿನತ್ತ ಆಕರ್ಷಿಸಿರುವುದು ಮಹಾಸೋಜಿಗದ ಸಂಗತಿಯಾಗಿದೆ. ವಿಗ್ರಹಾರಾಧಕರು, ಪೂರ್ವಜರ ಅಂಧಾನುಕರಣೆ ಮಾಡುವವರು, ಮಾನವನ ಮಾನ ಮತ್ತು ರಕ್ತದ ವಂಚಕರು, ಇವರೆಲ್ಲರೂ ಇಸ್ಲಾಮ್ ಮತ್ತು ಅದರ ಪ್ರವಾದಿಯ ಮಾರ್ಗದರ್ಶನದಿಂದ ಶಿಸ್ತು ಬದ್ಧ ಜನತೆಯಾಗಿ ಬೆಳೆದರು. ಇಸ್ಲಾಮ್ ಅವರ ಮುಂದೆ ಆತ್ಮೋನ್ನತಿ, ಮಾನವೀಯ ಗೌರವದ ಕವಾಟವನ್ನು ತೆರೆಯಿತು. ಪುಣ್ಯ ಶೀಲತೆಯ ಶ್ರೇಷ್ಠತೆಯೆಂದು ಸಾರಿತು. ಮಾನವೀಯ ಸಮುದಾಯಕ್ಕೆ ತಕ್ಕುದಾದ ರೀತಿಯಲ್ಲಿ ಅವರ ಸಾಮಾಜಿಕ, ಸಾಂಸ್ಕೃತಿಕ, ನೈತಿಕ ಮತ್ತು ವ್ಯಾವಹಾರಿಕ ಜೀವನವನ್ನು ಮೂಲ ಕಾನೂನು ಮತ್ತು ತತ್ತ್ವಸಿದ್ಧಾಂತಗಳಲ್ಲಿ ಕಟ್ಟಿ ಬೆಳೆಸಿತು. ಮಾನವ ಸ್ವಭಾವವು ಸರ್ವಥಾ ಬದಲಾಗದಿರುವುದರಿಂದ ಅದು ಎಲ್ಲ ಕಾಲಗಳಿಗೂ ವ್ಯಾವಹಾರಿಕವಾಗಿದೆ.

ದುರದೃಷ್ಟವಶಾತ್ ಪಾಶ್ಚಾತ್ಯ ಕ್ರೈಸ್ತ ಜಗತ್ತು ಇಸ್ಲಾಮಿನ ಆರಂಭಕಾಲದಲ್ಲಿ ಅದರ ಅಸಾಮಾನ್ಯ ಯಶಸ್ಸಿನ ಕುರಿತು ಪ್ರಾಮಾಣಿಕವಾಗಿ ತಿಳಿಯಲು ಪ್ರಯತ್ನಿಸದೆ ಪ್ರತಿಸ್ಪರ್ಧಿ ಧರ್ಮವೆಂದು ಪರಿಗಣಿಸಿತು. ಶಿಲುಬೆಯುದ್ಧದ ಶತಮಾನಗಳಲ್ಲಿ ಈ ಪ್ರಕ್ರಿಯೆಯು ಪ್ರಬಲ ಮತ್ತು ತೀವ್ರಗೊಂಡು, ಇಸ್ಲಾಮಿನ ಮುಖಕ್ಕೆ ಮಸಿ ಬಳಿಯಲಿಕ್ಕಾಗಿ ಅನೇಕ ಸಾಹಿತ್ಯಗಳನ್ನು ರಚಿಸಲಾಯಿತು. ಆದರೆ ಇಸ್ಲಾಮ್ ತನ್ನ ನಿಷ್ಕಳಂಕತೆಯನ್ನು ಆಧುನಿಕ ತಜ್ಞರ ಮುಂದೆ ತೆರೆದಿಟ್ಟಿತು. ಅವರ ದಿಟ್ಟ ಹಾಗೂ ವಸ್ತುನಿಷ್ಠ ವಿಶ್ಲೇಷಣೆಗಳು ಪ್ರಸ್ತುತ ಪಕ್ಷಪಾತಿ ಓರಿಯಂಟಲಿಸ್ಟರು ಇಸ್ಲಾಮಿನ ಮೇಲೆ ಹೊರಿಸಿದ್ದ ಎಲ್ಲ ಆರೋಪಗಳನ್ನು ಸುಳ್ಳೆಂದು ಸಾಧಿಸಿತು. ಆಧುನಿಕ ಯುಗದ ಕೆಲವು ಖ್ಯಾತ ಮೇಧಾವಿಗಳು ಇಸ್ಲಾಮಿನ ಬಗೆಗೆ ನೀಡಿರುವ ಅಭಿಪ್ರಾಯಗಳನ್ನು ಇಲ್ಲಿ ಕೊಡಲಾಗಿದೆ. ಸತ್ಯಕ್ಕೆ ತನ್ನ ಪರವಾಗಿ ವಾದಿಸುವವರ ಅಗತ್ಯವಿಲ್ಲ. ಆದರೆ ಇಸ್ಲಾಮಿನ ವಿರುದ್ಧ ನಿರಂತರ ನಡೆಯುತ್ತಿರುವ ಕುಪ್ರಚಾರಗಳು ಮುಕ್ತ ಹಾಗೂ ವಸ್ತುನಿಷ್ಠರಾದ ಚಿಂತಕರಲ್ಲಿ ಸಂದೇಹಗಳನ್ನು ಹುಟ್ಟಿಸಿದೆ.

ಈ ಕೆಳಗಿನ ವಿಮರ್ಶೆಗಳು ಇಸ್ಲಾಮಿನ ಕುರಿತು ವಸ್ತುನಿಷ್ಠ ವಿಶ್ಲೇಷಣೆಗೆ ಪ್ರೇರಣೆ ನೀಡೀತೆಂದು ನಿರೀಕ್ಷಿಸುತ್ತೇವೆ.

ಅದು (ಇಸ್ಲಾಮ್) ಮೃಗೀಯತೆಯನ್ನು ಮಾನವೀತೆಯಾಗಿ ಬದಲಾಯಿಸಿತು. ಅದು ಗುಲಾಮನಲ್ಲಿ ಭರವಸೆ ಹುಟ್ಟಿಸಿತು. ಮನುಕುಲಕ್ಕೆ ಭ್ರಾತೃತ್ವ ಮನೋಭಾವವನ್ನು

ನೀಡಿತು. ಮಾನವೀಯ ಸ್ವಭಾವದ ಮೂಲಭೂತ ವಾಸ್ತವಿಕತೆಗಳಿಗೆ ಮನ್ನಣೆಯನ್ನು ಕೊಟ್ಟಿತು.

ಕೇನನ್ ಟೇಲರ್

ವಾಲ್ಪರ್ ಹೇಮ್ಬನ್ ಚರ್ಚ್ ಕಾಂಗ್ರೆಸ್‌ನಲ್ಲಿ (ಅಕ್ಟೋಬರ್. ೭, ೧೮೮೭) ಓದಿದ ಉಪನ್ಯಾಸದಲ್ಲಿ ಅರ್ನಾಲ್ಡ್‌ರ ಪ್ರೀಚಿಂಗ್ ಓಫ್ ಇಸ್ಲಾಮಿನಿಂದ ಉದ್ಧೃತ (ಪು. ೭೧-೭೨)

ನ್ಯಾಯ ಪ್ರಜ್ಞೆಯು ಇಸ್ಲಾಮಿನ ಅತ್ಯದ್ಭುತ ಆದರ್ಶಗಳಲ್ಲೊಂದಾಗಿದೆ. ಯಾಕೆಂದರೆ ಕುರ್‌ಆನ್‌ನನ್ನು ಓದುತ್ತಾ ಹೋದಂತೆ ನನಗೆ ಅದರಲ್ಲಿ ಜೀವನದ ಸಕ್ರಿಯ ಸಿದ್ಧಾಂತಗಳು ಕಂಡುಬರುತ್ತವೆ. ಅದು ಕೇವಲ ಕಲ್ಪನೆಯಾಗಿರದೆ ದೈನಂದಿನ ಜೀವನಕ್ಕೆ ಯೋಗ್ಯವಾದ, ವ್ಯಾವಹಾರಿಕ ನೀತಿಶಾಸ್ತ್ರವಾಗಿದ್ದು, ಇಡೀ ಜಗತ್ತಿಗೆ ಯೋಗ್ಯವಾಗಿದೆ.

ಸರೋಜಿನಿ ನಾಯ್ಡು

'ಇಸ್ಲಾಮಿನ ಆದರ್ಶಗಳು' ಎಂಬ ಭಾಷಣದಿಂದ, ಸ್ಪೀಚಸ್ ಏಂಡ್ ರೈಟಿಂಗ್ಸ್ ಓಫ್ ಸರೋಜಿನಿ ನಾಯ್ಡು ಮದ್ರಾಸು ೧೯೧೮, ಪುಟ ೧೬

ಧರ್ಮಾಂಧ ಮುಸ್ಲಿಮರ ಜಗತ್ತಿನಲ್ಲಿ ವ್ಯಾಪಿಸಿ ಖಡ್ಗದ ಮೂಲಕ ಆಶ್ರಿತ ಜನಾಂಗಗಳ ಮೇಲೆ ಇಸ್ಲಾಮನ್ನು ಬಲಾತ್ಕಾರವಾಗಿ ಹೇರಿದರೆಂಬುದು ಇತಿಹಾಸಕಾರರ ಅತಿವಿಕೃತ ಪುನರಾವರ್ತಿತ ಕಟ್ಟು ಕಥೆಯೆಂಬುದು ಈಗ ಸ್ಪಷ್ಟಗೊಂಡಿದೆ.

ಡಿ ಲೇಸ್ ಓ ಲಿಯರಿ

ಇಸ್ಲಾಮ್ ಎಟ್ ದಿ ಕ್ರಾಸ್ ರೋಡ್ಸ್ ಲಂಡನ್, ೧೯೨೩ , ಪುಟ ೮.

ಆದರೆ ಮಾನವನ ಶ್ರೇಯೋಭಿವೃದ್ಧಿಗೆ ಇಸ್ಲಾಮ್ ಮುಂದೆಯೂ ಕೊಡುಗೆ ನೀಡಬಲ್ಲುದು. ಅದು ಏನಿದ್ದರೂ ಯೂರೋಪಿಗಿಂತ ನೈಜಪೂರ್ವಕ್ಕೆ ನಿಕಟವಾಗಿದೆ. ಅದು ಮಿತ್ರ ಜನಾಂಗಗಳ ಮಧ್ಯೆ ಪರಸ್ಪರ ತಿಳಿವಳಿಕೆ ಮತ್ತು ಸಹಕಾರವನ್ನು ಮೂಡಿಸಿದ ಉಜ್ವಲ ಪರಂಪರೆಯನ್ನು ಹೊಂದಿದೆ. ಯಾವುದೇ ಸಮಾಜವು ವಿವಿಧ ಜನಾಂಗಗಳನ್ನು ಒಗ್ಗೂಡಿಸಿ ಅವುಗಳ ಸ್ಥಾನಮಾನ ಮತ್ತು ಹಕ್ಕುಗಳನ್ನು ಸಮಾನಗೊಳಿಸುವ ಪ್ರಯತ್ನಗಳಲ್ಲಿ ಈ ರೀತಿ ಯಶಸ್ಸು ಪಡೆದ ದಾಖಲೆಯಿಲ್ಲ, ಎಂದಾದರೂ ಪೂರ್ವ ಮತ್ತು ಪಶ್ಚಿಮದ ಬೃಹತ್ ಸಮಾಜಗಳ ವೈರತ್ವವನ್ನು ಅಳಿಸಿ ಪರಸ್ಪರ ಸಹಕಾರವನ್ನು ಮೂಡಿಸುವುದಕ್ಕೆ ಇಸ್ಲಾಮಿನ ಮಧ್ಯಸ್ಥಿಕೆ ಅನಿವಾರ್ಯ ಉಪಾಧಿಯಾಗಿದೆ. ಪೂರ್ವದ ಸಂಬಂಧಗಳಲ್ಲಿ ಯೂರೋಪು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಅದರ ಹಸ್ತಗಳಲ್ಲಿ ಸಮಗ್ರ ಪರಿಹಾರವಿದೆ. ಅವರು ಒಗ್ಗೂಡಿದರೆ ಶಾಂತಿಯ ಪರಿಣಾಮವು ಅಪಾರವಾಗಿ ವೃದ್ಧಿಸುವುದು.

ಆದರೆ ಯೂರೋಪು ಇಸ್ಲಾಮಿನ ಸಹಕಾರವನ್ನು ತಿರಸ್ಕರಿಸಿ ಅದನ್ನು ವಿರೋಧಿಗಳ ಹಸ್ತಕ್ಕೆ ಎಸೆದರೆ ಅದರ ಪರಿಣಾಮವು ಉಭಯತ್ರರಿಗೂ ಮಾರಕವಾಗಬಹುದು.

ಹೆಚ್.ಎ.ಆರ್. ಗಿಬ್ಬ್

ವೈದರ್ ಇಸ್ಲಾಮ್, ಲಂಡನ್, ೧೯೩೨, ಪುಟ ೩೭೯.

ಮಹಮ್ಮದ್‌ರ ಧರ್ಮದ ಬಗೆಗೆ ಅದರ ಅದ್ಭುತ ಜೀವಂತಿಕೆಯ ಕಾರಣಕ್ಕಾಗಿ ನಾನು ಸದಾ ಉನ್ನತ ಭಾವನೆಯನ್ನು ಹೊಂದಿದ್ದೇನೆ. ಕೇವಲ ಆ ಧರ್ಮ ಮಾತ್ರವೇ ಅಸ್ತಿತ್ವದ ಬದಲಾವಣೆಯೊಂದಿಗೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಅದು ಎಲ್ಲ ಕಾಲಗಳಿಗೂ ಅನ್ವಯವಾಗುವುದೆಂದು ನನಗೆ ಭಾಸವಾಗುತ್ತದೆ. ನಾನು ಆ ಅದ್ಭುತ ವ್ಯಕ್ತಿಯ ಬಗೆಗೆ ಅಧ್ಯಯನ ನಡೆಸಿದ್ದೇನೆ. ನನ್ನ ಅಭಿಪ್ರಾಯದಂತೆ ಅವರು ಕ್ರೈಸ್ತ ವಿರೋಧಿಯಾಗಿರಲಿಲ್ಲ. ಅವರನ್ನು ಮಾನವ ಸಮೂಹದ ಸುರಕ್ಷಕನೆಂದು ಕರೆಯಬೇಕಾಗಿದೆ. ಒಂದು ವೇಳೆ ಆಧುನಿಕ ಜಗತ್ತಿನ ಸರ್ವಾಧಿಕಾರವನ್ನು ಅಂಥ ವ್ಯಕ್ತಿಗಳ ಹಸ್ತ ನೀಡಿದರೆ ಅದರ ಸಕಲ ಸಮಸ್ಯೆಗಳನ್ನು ಬಗೆಹರಿಸಿ ಆಧುನಿಕ ಜಗತ್ತಿಗೆ ಅತ್ಯಗತ್ಯವಾಗಿರುವ ಶಾಂತಿ, ನೆಮ್ಮದಿಗಳನ್ನು ಸ್ಥಾಪಿಸಬಹುದೆಂದು ನಾನು ನಂಬಿದ್ದೇನೆ. ಇಂದು ಯೂರೋಪಿನಲ್ಲಿ ಸ್ವೀಕೃತವಾಗುತ್ತಿರುವಂತೆ ನಾಳೆಯ ಯೂರೋಪಿಗೂ ಮಹಮ್ಮದ್‌ರ ವಿಶ್ವಾಸ ಸಿದ್ಧಾಂತಗಳು ಅಂಗೀಕಾರರ್ಹವಾಗಬಹುದೆಂದು ನಾನು ಭಾವಿಸಿದ್ದೇನೆ.

ಜಿ.ಬಿ.ಶಾ. ದಿ ಜೆನ್ಯೂ ಇನ್ ಇಸ್ಲಾಮ್

ಸಂಪುಟ. ೧, ನಂ. ೧೯೩೬

ಜನಾಂಗೀಯ ಪ್ರಜ್ಞೆಯನ್ನು ಮುಸ್ಲಿಮರಲ್ಲಿ ಅಳಿಸಿ ಹಾಕಿರುವುದೇ ಇಸ್ಲಾಮಿನ ವಿಶಿಷ್ಟ ಸಾಧನೆಯಾಗಿದೆ. ಸಮಕಾಲೀನ ಜಗತ್ತಿನಲ್ಲಿ ಇಸ್ಲಾಮಿನ ಈ ಗುಣವನ್ನು ಪ್ರಚಾರಪಡಿಸಬೇಕಾದುದು ಇಂದಿನ ತುರ್ತು ಅವಶ್ಯಕತೆಯಾಗಿದೆ.

ಎ.ಜೆ. ಟೋಯಂಬಿ, ಸಿವಿಲೈಜೇಷನ್ ಆನ್ ಟ್ರಯಲ್

ನ್ಯೂಯಾರ್ಕ್, ೧೯೪೮, ಪುಟ ೨೦೫.

ಇಸ್ಲಾಮಿನ ಉದಯವು ಪ್ರಾಯಶಃ ಮಾನವ ಚರಿತ್ರೆಯಲ್ಲಿ ವಿಸ್ಮಯಕಾರೀ ಘಟನೆಯಾಗಿರಬಹುದು. ಆ ತನಕ ಸಂಪೂರ್ಣ ನಿರ್ಲಕ್ಷಿಸಲ್ಪಟ್ಟಿದ್ದ ದೇಶ ಮತ್ತು ಜನತೆಯಿಂದ ಕೇವಲ ಒಂದೇ ಶತಮಾನದಲ್ಲಿ ಅದು ಜಗತ್ತಿನ ಅರ್ಧಭಾಗವನ್ನು ವ್ಯಾಪಿಸಿತು. ಮಹಾ ಚಕ್ರವರ್ತಿಗಳನ್ನು ಉರುಳಿಸಿತು. ಅನೇಕ ಸಂಸ್ಥಾಪಿತ ಧರ್ಮಗಳನ್ನು ಕಿತ್ತೆಸೆಯಿತು. ಜನಾಂಗಗಳ ಮನಸ್ಸನ್ನು ಪುನರ್ರಚಿಸಿತು. ಒಂದು ಸಂಪೂರ್ಣ ಹೊಸ

ಜಗತ್ತನ್ನು ಇಸ್ಲಾಮೀ ಜಗತ್ತನ್ನು ಕಟ್ಟಿ ಬೆಳೆಸಿತು.

ಈ ಬೆಳವಣಿಗೆಯನ್ನು ಹತ್ತಿರದಿಂದ ಪರೀಕ್ಷಿಸಿದಷ್ಟು ಅದು ಬಹಳಷ್ಟು ಅಸಾಮಾನ್ಯವಾಗಿ ತೋರುತ್ತದೆ. ಇತರ ಧರ್ಮಗಳು ಅವುಗಳ ಯಶಸ್ಸಿನ ಗುರಿಯನ್ನು ಬಹಳ ಸಾವಧಾನವಾಗಿ ಕ್ರಮಿಸಿ, ತೀವ್ರ ಹೋರಾಟಗಳನ್ನು ನಡೆಸಿ, ಕೊನೆಗೆ ಪ್ರಬಲ ರಾಜಂದಿರ ಸಹಾಯದಿಂದ ಹೊಸ ವಿಶ್ವಾಸಕ್ಕೆ ಬಲಾತ್ಕಾರವಾಗಿ ಮತಾಂತರಿಸಿ ವಿಜಯ ಸಾಧಿಸಿತು. ಕ್ರೈಸ್ತ ಧರ್ಮದಲ್ಲಿ ಕಾನ್‌ಸ್ಟಂಟೈನ್, ಬೌದ್ಧ ಧರ್ಮದಲ್ಲಿ ಅಶೋಕ, ಝೊರಾಸ್ಟದಲ್ಲಿ ಸೈರಸ್ ಇವರೆಲ್ಲರೂ ಪ್ರಬಲ ಜಾತ್ಯಾತೀತ ಅಧಿಕಾರ ಬಲವನ್ನು ಅಲೆಮಾರಿ ಜನಾಂಗ ವಾಸವಾಗಿದ್ದ ಅರಬ್ ಪ್ರದೇಶದಲ್ಲಿ ಉದಯಗೊಂಡಿತು. ಅತ್ಯಲ್ಪಜನರ ಬೆಂಬಲದಿಂದ ತೀವ್ರ ಲೌಕಿಕ ಅನುಕೂಲತೆಗಳ ಕೊರತೆಯ ಹೊರತಾಗಿಯೂ ಇಸ್ಲಾಮ್ ಅದ್ಭುತ ವಿಜಯ ಸಾಧಿಸಿತು. ಒಂದೆರಡು ತಲೆಮಾರುಗಳಲ್ಲಿಯೇ ಆ ಬಾಲಚಂದ್ರವು ಹಿಮಾಲಯದ ಅತ್ಯುನ್ನತಿಗೆ ಏರಿತು. ಮಧ್ಯೇಷ್ಯದ ಮರುಭೂಮಿಯಿಂದ ಮಧ್ಯ ಆಫ್ರಿಕಾದ ಮರುಭೂಮಿಗೆ ಯಶಸ್ವಿಯಾಗಿ ತಲುಪಿತುಷೆ

ಎ.ಯಮ್.ಎಲ್. ಸ್ಕಡ್ಡಾರ್ಡ್

ಇಸ್ಲಾಮ್ ದಿ ರಿಲೀಜನ್ ಓಫ್ ಆಲ್ ಪ್ರೊಫೆಟ್ಸ್‌ನಿಂದ ಉದ್ಧೃತ್ತ ಬೇಗಮ್ ಭವಾನಿ ವರ್ಕ್ಸ್ ಕರಾಚಿ ಪಾಕಿಸ್ತಾನ, ಪುಟ ೫೬.

ಇಸ್ಲಾಮ್ ಅರಬ್ಬೀ ಶಬ್ದದ ಮೂಲ ಧಾತು. 'ಸಿಲ್ಮ್' ಹಾಗೂ 'ಸಿಲ್ಮ್'ನಿಂದ ಬಂದಿದೆ, ಸಲ್ಮ್ ಶಬ್ದದ ಅರ್ಥಶಾಂತಿ, ಹಾಗೂ ಸಿಲ್ಮ್ ಶಬ್ದದ ಅರ್ಥ ಭಗವಂತನಿಗೆ ಪರಿಪೂರ್ಣವಾಗಿ ಶರಣು ಹೋಗುವುದು. ಅಂದಮೇಲೆ ಅಲ್ಲಾಹ್‌ನ ಇಚ್ಛೆಗನುಗುಣವಾಗಿ ತನ್ನನ್ನು ತಾನು ಸಮರ್ಪಿಸುವುದೇ ಇಸ್ಲಾಮ್ ಆಗಿದೆ. ಈ ರೀತಿಯ ಸಮರ್ಪಣಾಭಾವನೆ ವ್ಯಕ್ತಿಯಲ್ಲಿ ಮೂಡಿದಾಗ ಆಂತರಿಕ ಶಾಂತಿ ದೊರಕುತ್ತದೆ. 'ಜಗತ್ತಿನ ಬಹಳ ಧರ್ಮಗಳು ಅವರ ಸಂಸ್ಥಾಪಕರ ಹೆಸರಿನಿಂದ ಗುರುತಿಸಲ್ಪಡುತ್ತವೆ. ಉದಾಹರಣೆಗೆ ಕ್ರಿಸ್ತನಿಂದ ಕ್ರೈಸ್ತಧರ್ಮ, ಬುದ್ಧನಿಂದ ಬೌದ್ಧಧರ್ಮ, ಆದರೆ ಮಹಮ್ಮದ್ (ಸಲ್ಲಲ್ಲಲಾಹು ಅಲೈಹಿವ ಸಲ್ಲಂ) ಅವರ ಮೂಲಕ ಅಲ್ಲಾಹ್‌ನಿಂದ ಜಗತ್ತಿಗೆ ದಯಪಾಲಿಸಿದ ಈ ಧರ್ಮಕ್ಕೆ ಇಸ್ಲಾಂ ಧರ್ಮ ಎಂದು ಕರೆಯಲಾಯಿತು. ಕೆಲವು ಆಂಗ್ಲೇಯ ಲೇಖಕರು ಇದನ್ನು ಮಹಮ್ಮದ್ ಧರ್ಮ ಎಂದು ಕರೆಯುತ್ತಾರೆ. ಇದು ತಪ್ಪು ಮಹಮ್ಮದ್ (ಸ.ಅ.ಸ) ಅವರು ಅಲ್ಲಾಹ್‌ನ ಪ್ರವಾದಿಗಳಾಗಿದ್ದರು. ಜಿಬ್ರೀಲ್ ದೇವದೂತರ ಮೂಲಕ ಅವರಿಗೆ ದೊರಕಿದ ದೈವವಾಣಿಯೇ ದಿವ್ಯ ಕುರಾನ್. ಅದರ ಪ್ರಕಾರ ಅವರು ಜಗತ್ತಿಗೆ ಸಂದೇಶ ನೀಡಿದರು.

ಇಸ್ಲಾಂ ಧರ್ಮದ ಸಿದ್ಧಾಂತಗಳು: ಇಸ್ಲಾಂ ಧರ್ಮ ಆಸ್ತಿಕ ಧರ್ಮ. ಇದು ಒಬ್ಬ ಭಗವಂತನ ಅಸ್ತಿತ್ವದ ಬಗ್ಗೆ ನಂಬುತ್ತದೆ. ಆ ಭಗವಂತನು ನಿರಾಕಾರ, ಸಾರ್ವಕಾಲಿಕ, ಸರ್ವಜ್ಞ, ಸ್ವಯಂಭೂ. ಅವನಲ್ಲಿ ಈಮಾನ್ ಅಥವಾ ನಂಬಿಕೆಯೇ ಇದರ ಮೊದಲ ಸಿದ್ಧಾಂತ. ''ಲಾ ಇಲಾಹ ಇಲ್ಲಲ್ಲಾಹು ಮಹಮ್ಮದ್ ರಸೂಲಿಲ್ಲಾಹಿ'' ಅಲ್ಲಾಹ್‌ನ ಹೊರತುಪಡಿಸಿ ಬೇರೆ ಯಾರು ಇಲ್ಲ. ಮಹಮ್ಮದ್ (ಸ.ಅ.ಸ). ಅವರು ಅಲ್ಲಾಹ್‌ನ ರಸೂಲರು ಅಂದರೆ ಪ್ರವಾದಿಗಳು ಮಾತ್ರ. ಈ ಕಲ್ಮದಲ್ಲಿ ಮನುಷ್ಯ ಭಗವಂತನ ಏಕೈಕ ಸಾರ್ವಭೌಮತ್ವಕ್ಕೆ ಒಪ್ಪಿಗೆ ಹಾಗೂ ಪ್ರವಾದಿ ಮಹಮ್ಮದ್ (ಸ.ಅ.ಸ) ಅವರ ಪೈಗಂಬರಿಕೆಗೆ ಒಪ್ಪಿಗೆ ನೀಡಿದ ಹಾಗಾಗುತ್ತದೆ. ಇಲ್ಲಿ ಪ್ರವಾದಿಗಳು ಭಗವಂತನೂ ಅಲ್ಲ. ಭಗವಂತನ ಅವತಾರವೂ ಅಲ್ಲ, ಭಗವಂತನ ಮಗನೂ ಅಲ್ಲ. ಕೇವಲ ಭಗವಂತನ ಪ್ರವಾದಿಗಳು ಮಾನವರು ಎಂಬುವುದನ್ನು ಮರೆಯಬಾರದು. ಆದರೆ ಅಲ್ಲಾಹ್‌ನ ವಿಶೇಷ ಅನುಗ್ರಹಗಳು ಅವರ ಮೇಲಿದ್ದವು ಅವರು ಪ್ರವಾದಿಗಳು ಮಾನವ ಶ್ರೇಷ್ಠರು.

ನಮಾಜ್ ಅಥವಾ ಸಲಾತ್: ಇಸ್ಲಾಂ ಧರ್ಮದ ಪ್ರಕಾರ ಒಬ್ಬ ವ್ಯಕ್ತಿ ಅರಿವು ಹೊಂದಿದ ಮೇಲೆ ತನ್ನ ಸೃಷ್ಟಿಕರ್ತನ ಮುಂದೆ ತನ್ನ ಕೃತಜ್ಞತೆಯನ್ನು ಸೂಚಿಸಬೇಕು. ಇದೇ ನಮಾಜ್, ಈ ನಮಾಜ್ ದಿನದಲ್ಲಿ ೫ ಹೊತ್ತು ನಡೆಯುತ್ತದೆ. ಬೆಳಗಿನ ಜಾವ, ಮಧ್ಯಾಹ್ನ, ಸಾಯಂಕಾಲ, ಸೂರ್ಯಾಸ್ತ ಹಾಗೂ ರಾತ್ರಿ. ಇಲ್ಲಿ ವ್ಯಕ್ತಿ ಕಾಯಾ, ವಾಚಾ, ಮನಸಾ ಅಲ್ಲಾಹ್‌ನ ಮುಂದೆ ತಲೆ ಬಾಗುತ್ತಾನೆ, ತನ್ನ ಕೃತಜ್ಞತೆ ಸೂಚಿಸುತ್ತಾನೆ.

ನಮಾಜಿನ ಆಂತರಿಕ ಅರ್ಥ ''ಯಾವ ರೀತಿ ಮನುಷ್ಯ ತನ್ನ ಶರೀರವನ್ನು ಶುಭ್ರವಾಗಿಟ್ಟುಕೊಳ್ಳಲು ಸ್ನಾನ ಮಾಡುತ್ತಾನೋ, ಬಟ್ಟೆಯ ಶುಭ್ರತೆಗಾಗಿ ಒಗೆಯುತ್ತಾನೋ ಅದೇ ರೀತಿಯಲ್ಲಿ ಕಾಮ, ಕ್ರೋಧ, ಮದ, ಮೋಹ, ಲೋಭ ಮಾತ್ಸರ್ಯಗಳ ಈ ಜಗತ್ತಿನಲ್ಲಿ ತನ್ನ ಆತ್ಮವನ್ನು ಶುಭ್ರವಾಗಿಟ್ಟುಕೊಳ್ಳಲು ಅವನು ಪ್ರಾರ್ಥನೆ ಮಾಡಬೇಕು. ಇದರಿಂದ ಭಗವಂತನ ಕೃಪಾನುಗ್ರಹಗಳು ಅವನಿಗೆ ದೊರಕುತ್ತದೆ''.

ಜಕಾತ್ : ಜಕಾತ್ ಇಸ್ಲಾಮ್ ಧರ್ಮದ ಆರ್ಥಿಕ ವ್ಯವಸ್ಥೆಯನ್ನು ಸಾಮಾಜಿಕ ಹೊಣೆಯನ್ನು ನಮಗೆ ತಿಳಿಸಿಕೊಡುತ್ತದೆ. ಒಬ್ಬ ಮನುಷ್ಯ ತಾನು ದುಡಿದ ಐಶ್ವರ್ಯದ ಶೇಕಡ ೨, ೧/೨ ಭಾಗವನ್ನು ಬಡಬಗ್ಗರಿಗೆ, ದೀನದಲಿತರಿಗೆ, ದರಿದ್ರರಿಗೆ, ವಿಧವೆಯರಿಗೆ ದಾನ ಮಾಡಬೇಕು. ದಾನ ಮಾಡಿದಾಗ ನಾನು ಕೊಟ್ಟಿದ್ದೇನೆ ಎಂಬ ಅಹಂಭಾವ ಅವನಿಗೆ ಬರಬಾರದು. ಜೊತೆಗೆ ಇವನು ದುಡಿಯುವ ಐಶ್ವರ್ಯ ಧರ್ಮಬದ್ಧವಾಗಿರಬೇಕು. ಹಲಾಲ್ ಆಗಿರಬೇಕು. ಭಗವಂತನ ಸೃಷ್ಟಿಯಲ್ಲಿ ಉಳ್ಳವರು ಇದ್ದಾರೆ. ಉಳ್ಳದವರೂ ಇದ್ದಾರೆ. ಇರುವವನು ಇಲ್ಲದವನಿಗೆ ಮಾಡಬೇಕಾದ ಸಹಾಯ ಜಕಾತ್ ಮೂಲಕ

ನಡೆದು ಹೋಗುತ್ತದೆ. ಇದು ಪ್ರತಿಯೊಬ್ಬ ಮುಸಲ್ಮಾನನಿಗೂ ಕಡ್ಡಾಯವಾದ ನಿಯಮವಾಗಿದೆ.

ರೋಜಾ: ರಂಜಾನ್ ತಿಂಗಳಿನಲ್ಲಿ ಪ್ರತಿಯೊಬ್ಬ ಮುಸಲ್ಮಾನ (ರೋಗಿಗಳಾಗಿದ್ದರೆ ಅವರು ನಂತರ ಉಪವಾಸ ಕೈಗೊಳ್ಳಬಹುದು) ೩೦ ದಿನಗಳವರೆಗೆ ಉಪವಾಸ ವ್ರತವನ್ನು ಆಚರಿಸುತ್ತಾನೆ. ಇದಕ್ಕೆ ರೋಜಾ ಎಂದು ಕರೆಯುತ್ತಾರೆ. ಕೆಲವು ಧರ್ಮಗಳಲ್ಲಿ ಒಬ್ಬ ವ್ಯಕ್ತಿ ನೀರು ಫಲಹಾರ ಇತ್ಯಾದಿಗಳನ್ನು ಉಪವಾಸವಿದ್ದಾಗ ಸೇವಿಸಬಹುದು. ಆದರೆ ಇಸ್ಲಾಮ್ ಧರ್ಮದಲ್ಲಿ ಇದು ನಿಷೇಧ. ಇಲ್ಲಿ ಒಬ್ಬ ವ್ಯಕ್ತಿ ಅರ್ಧರಾತ್ರಿಯಲ್ಲಿ ಊಟೋಪಚಾರ ಮುಗಿಸಿ ಉಪವಾಸ ವ್ರತ ಕೈಗೊಂಡರೆ ಎರಡನೆಯ ದಿನ ಸಾಯಂಕಾಲದವರೆಗೆ ಅವನು ಬಾಯಿಯಲ್ಲಿ ಒಂದು ತೊಟ್ಟು ನೀರೂ ಸಹ ಹಾಕುವ ಹಾಗಿಲ್ಲ. ಇದು ಕೇವಲ ಶರೀರಕ್ಕೆ ಮಾತ್ರವಲ್ಲ, ಇಂದ್ರಿಯಗಳಿಗೂ ಉಂಟು. ರೋಜಾ ಇದ್ದ ವ್ಯಕ್ತಿ ಕೆಟ್ಟದ್ದನ್ನು ನೋಡುವ ಹಾಗಿಲ್ಲ, ಕೆಟ್ಟದ್ದನ್ನು ನುಡಿಯುವ ಹಾಗಿಲ್ಲ, ಮಾಡುವ ಹಾಗಿಲ್ಲ. ಈ ರೀತಿಯಲ್ಲಿ ಪ್ರತಿವರ್ಷ ಒಂದು ತಿಂಗಳ ಉಪವಾಸ ಹಾಗೂ ಇಂದ್ರಿಯ ನಿಗ್ರಹ ಅವನ ಉಳಿದ ಹನ್ನೊಂದು ತಿಂಗಳ ಜೀವನವನ್ನು ಸದೃಢಗೊಳಿಸುತ್ತದೆ. ಜೊತೆಗೆ ಈ ತಿಂಗಳಲ್ಲಿ ವಿಶೇಷವಾಗಿ ದಾನ ಧರ್ಮಕಾರ್ಯಗಳಲ್ಲೂ ಮುಸಲ್ಮಾನರು ತೊಡುಗುತ್ತಾರೆ.

ಹಜ್: ಇಸ್ಲಾಂ ಧರ್ಮದ ಸಮತಾ ಭಾವನೆಯನ್ನು ಹಾಗೂ ಒಬ್ಬ ಭಗವಂತನ ಮುಂದೆ ತಲೆಬಾಗುವುದನ್ನು ತೋರಿಸುವ ಧಾರ್ಮಿಕ ಕ್ರಿಯೆಯೇ ಹಜ್. ಹಜ್ ಯಾತ್ರೆ ಮಕ್ಕಾದಲ್ಲಿರುವ ಕಾಬಾದಲ್ಲಿ ಪ್ರತಿವರ್ಷ ಈದುಲ್‌ಜ್ ಹಾ ಅಥವಾ ಬಕ್ರೀದ್ ತಿಂಗಳಲ್ಲಿ ನಡೆಯುತ್ತದೆ. ಜಗತ್ತಿನ ಎಲ್ಲೆಡೆಯ ಮುಸಲ್ಮಾನರು ಬೇರೆ ಬೇರೆ ಭಾಷೆ, ಸಂಸ್ಕೃತಿ, ಬಣ್ಣ ಹೊಂದಿದವರು ಅಲ್ಲಿ ಸೇರುತ್ತಾರೆ. ಶರೀರದ ಮೇಲೆ ಕೇವಲ ಎರಡು ಬಟ್ಟೆಗಳಿರುತ್ತದೆ. ನಿರಾಭರಣರಾಗಿ ಒಬ್ಬ ಭಗವಂತನ ಮುಂದೆ ತಮ್ಮ ಭಕ್ತಿಯನ್ನು ವ್ಯಕ್ತಪಡಿಸುತ್ತಾರೆ. ಅಲ್ಲಿ ಯಾರು ಯಾರಿಗೂ ಮೇಲಲ್ಲ, ಯಾರು ಯಾರಿಗೂ ಕೀಳಲ್ಲ, ಎಲ್ಲರೂ ಈ ಐಕ್ಯಕ ಭಗವಂತನ ಮುಂದೆ ಒಂದೇ.

ಈ ಐದು ಸಿದ್ಧಾಂತಗಳು ಇಸ್ಲಾಂ ಧರ್ಮದ ಆಧಾರ ಸ್ತಂಭಗಳಾಗಿವೆ.

ಇಸ್ಲಾಂ ಧರ್ಮದ ವಿಶ್ವ ಸಂದೇಶ: ಇಸ್ಲಾಂ ವಿಶ್ವ ಭ್ರಾತೃತ್ವದಲ್ಲಿ ನಂಬಿಕೆ ಇಡುತ್ತದೆ. ದಿವ್ಯ ಕುರಾನ್ ಕೇವಲ ಮುಸಲ್ಮಾನರಿಗಾಗಿ ಬಂದ ದಿವ್ಯ ಗ್ರಂಥವಲ್ಲ, ಇಡೀ ಜಗತ್ತಿನ ಮಾರ್ಗದರ್ಶನಕ್ಕಾಗಿ ಬಂದಂತಹ ಗ್ರಂಥ. ಮನುಷ್ಯ ಹುಟ್ಟಿದ ದಿನದಿಂದ ಸಾಯುವವರೆಗೆ ಯಾವ ರೀತಿ ಧಾರ್ಮಿಕ ಚೌಕಟ್ಟಿನಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ

ಕೌಟುಂಬಿಕ ಜವಾಬ್ದಾರಿಯನ್ನು ಹೊರಬಹುದು ಎಂಬುವುದರ ಮಾರ್ಗದರ್ಶನ ದಿವ್ಯ ಕುರಾನಿನಲ್ಲಿ ದೊರಕುತ್ತದೆ.

ಇದರ ಜೊತೆಯಲ್ಲಿ ಪ್ರವಾದಿಗಳು ನುಡಿದ ಉಪದೇಶಗಳು, ಮಾರ್ಗದರ್ಶನ ವಿವರಗಳು ಹದೀಸ್‌ನಲ್ಲಿ ದೊರಕುತ್ತದೆ. ಇದು ಅವರ ಅನುಭವಾಮೃತದ ಬಿಂದುಗಳು. ಮನುಷ್ಯನ ಚಾರಿತ್ರ್ಯ ಮತ್ತು ದೈವೀ ಸಂಬಂಧಗಳ ಬೆಳಕು ಇದರಲ್ಲಿ ದೊರಕುತ್ತದೆ.

ಇಸ್ಲಾಮ್ ಕೇವಲ ಲೌಕಿಕ ಜೀವನವನ್ನು ಮಾತ್ರ ಒಪ್ಪುವುದಿಲ್ಲ ಇದು ಕೇವಲ ಪ್ರವಾಸವೇ ಹೊರತು, ನಿವಾಸವಲ್ಲ, ಇದಾದ ಮೇಲೆ ಅಂದರೆ ಮರಣಾನಂತರದ ಜೀವನವಿದೆ. 'ಅಖಿರತ್' ನಂದು ಮನುಷ್ಯನಿಗೆ ತಾನು ಮಾಡಿದ ಫಲಾಫಲಗಳ ಮೇಲೆ ಪ್ರಶ್ನೆ ಮಾಡಲಾಗುತ್ತದೆ. ಇದಾದ ಮೇಲೆ ಸ್ವರ್ಗ ನರಕಗಳು ಇತ್ಯರ್ಥವಾಗುತ್ತವೆ.

ಮನುಷ್ಯ ಇದನ್ನರಿತು ಈ ಲೋಕದಲ್ಲಿ ಬಾಳು ಮಾಡಬೇಕು. ಇಲ್ಲಿರುವುದೆಲ್ಲಾ ಇಲ್ಲೆ ಬಿಟ್ಟು ಕೇವಲ ಪುಣ್ಯ ಪಾಪಗಳ ಹೊರೆ ಹೊತ್ತು ಮನುಷ್ಯ ಹೋಗುತ್ತಾನೆ. ಒಂದು ಹದೀಸ್‌ನ ಪ್ರಕಾರ ಈ ಲೋಕದ ಜೀವನ ಮುಂಬರುವ ಶಾಶ್ವತ ಜೀವನಕ್ಕೆ ಕೇವಲ ತರಬೇತಿ ಕೇಂದ್ರ ಮಾತ್ರ.

ಉಪಸಂಹಾರ: ಮಾನವನ ಮಾರ್ಗದರ್ಶನದ ಕಾರ್ಯ ಅಂತಿಮ ಪ್ರವಾದಿ ಮಹಮ್ಮದ್ ಪೈಗಂಬರ್ (ಸ.ಅ.ಸ) ಅವರು ಮಾಡಿದ ರೀತಿಯೇ ಇಸ್ಲಾಂ. ಇದು ಒಬ್ಬ ವ್ಯಕ್ತಿ ಅನುಸರಿಸಬಹುದಾದ ಜೀವನ ಕ್ರಮವಾಗಿದೆ.

***

ಸಂಸ್ಕೃತಿ ಪ್ರಭಾ

ಧಾರ್ಮಿಕ ಸಹಿಷ್ಣುತೆ

ಡಾ||ಸಿ.ಪಿ. ಕೃಷ್ಣಕುಮಾರ್

'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ'

(ಬೇರೆಯವರ ವಿಚಾರ ಹಾಗೂ ಧರ್ಮವನ್ನು ಚೆನ್ನಾಗಿ ಸೈರಿಸುವುದೆ ಸಂಪತ್ತು)

'ಕವಿರಾಜಮಾರ್ಗ'

ಸಹನೆ ಬದುಕಿನ ಮೂಲಭೂತ ತತ್ತ್ವ; ಸಮಷ್ಟಿಹಿತದ ಅಡಿಗಲ್ಲು. ತಾಳಿದವನು ಬಾಳಿಯಾನು ಮಾತ್ರವಲ್ಲ, ಬಾಳಿಸಿಯಾನು. ಮನುಷ್ಯನನ್ನು ಮೃಗಗಳಿಂದ ಬೇರ್ಪಡಿಸುವ, ಅವನನ್ನು ನಾಗರಿಕತೆಯ ನಿಚ್ಚಣಿಗೆ ಹತ್ತಿಸುವ ಪ್ರಮುಖಗುಣಗಳಲ್ಲೊಂದು ಈ ಸಹಿಷ್ಣುತೆ. ದುರ್ದೈವದ ಸಂಗತಿಯೇನೆಂದರೆ, ಪಶುಸಹಜವಾದ ಸ್ಥೂಲ ರೀತಿಯ ಅಸಹನೆಗಳನ್ನು ಕೊಡವಿಕೊಂಡು ಮನುಷ್ಯ ಸಮಾಜಜೀವಿಯಾಗಿ, ನಾಗರಿಕನಾಗಿ ಬೆಳೆದಿದ್ದರೂ ಅನೇಕ ಸೂಕ್ಷ್ಮ ರೀತಿಯ ಅಸಹನೆಗಳಿಂದ ಮುಕ್ತನಾಗಿಲ್ಲ; ಅವು ವೈಚಾರಿಕ ಹಂತದಲ್ಲಿ ಅವನನ್ನು ಕಾಡುತ್ತಿದ್ದು, ಅವನು ಸುಸಂಸ್ಕೃತನಾಗದಂತೆ, ಪರಿಪೂರ್ಣನಾಗದಂತೆ ನಿರ್ಬಂಧಿಸಿವೆ. ಅತ್ಯಂತ ಮುಂದುವರಿದ ಈ ವೈಜ್ಞಾನಿಕ ಯುಗದಲ್ಲೂ ಮಾನವಕುಲ ಸಮಸ್ಯೆಗಳ ಆಗರವಾಗಿದೆ. ಎಲ್ಲೆಡೆ ಅಶಾಂತಿ, ಈರ್ಷ್ಯೆ, ದ್ವೇಷಾಸೂಯೆಗಳು, ಹಿಂಸಾರತಿ ಎಂದಿನಂತೆಯೇ ದಾಂಧಲೆ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಇದಕ್ಕೆಲ್ಲಾ ಅಸಹನೆಯ ನಾನಾ ಪ್ರಕಾರಗಳೆ ಮೂಲ ಕಾರಣವೆಂಬುದು ಸುಸ್ಪಷ್ಟ. ಪ್ರಾಚೀನ ಯುಗಗಳು ರಾವಣ, ದುರ್ಯೋಧನರನ್ನು ಕಂಡಂತೆ ಅರ್ವಾಚೀನ ಯುಗ ಹಿಟ್ಲರ್. ಮುಸಲೋನಿ ಮುಂತಾದವರನ್ನು ಕಂಡಿದೆ; ಇವರೆಲ್ಲಾ ಅಸಹನೆಯ ಪ್ರತೀಕಗಳೇ. ವರ್ಣ ದ್ವೇಷದಂಥ ಪಾತಕವನ್ನು ಈ ಶತಮಾನದಲ್ಲೂ ಕಾಣುತ್ತಿದ್ದೇವೆ. ಇದು ಅಸಹಿಷ್ಣುತೆಯ ಒಂದು ಘೋರರೂಪ. ಹೀಗೆ ಲೋಕಜೀವನದ ಎಲ್ಲ ಕ್ಷೇತ್ರಗಳ ಮೇಲೂ- ಮನೆಯ ದಾಂಪತ್ಯದಿಂದ ಹಿಡಿದು ದೇಶದ ರಾಜಕೀಯದವರೆಗೆ -ಅಸಹನೆ ತನ್ನ ಕರಿನೆರಳನ್ನು ಚಾಚಿದೆ.

ಸಹಿಷ್ಣುತೆಯ ಬೀಜಮಂತ್ರ ಸಿದ್ಧಿಸುವವರೆಗೆ ವ್ಯಷ್ಟಿಯ ಹಾಗೂ ಸಮಷ್ಟಿಯ ಅಭ್ಯುದಯ ಸುಖಗಳು ಕನಸಿನ ಗಂಟಾಗುತ್ತವೆ. ಸಹನೆ ಎನ್ನುವುದು ಸರಳವಾದ ಮಾತಲ್ಲ, ವ್ಯಾಪಕಾರ್ಥದಲ್ಲಿ ಅದು ಅಹಿಂಸೆ, ಪ್ರೇಮ, ಲೋಕಕಾರುಣ್ಯಗಳಿಗೆ ಸಮಾನಾರ್ಥಕವಾದುದು; ಅದು ತಟಸ್ಥ ತತ್ತ್ವವಲ್ಲ, ಕ್ರಿಯಾತ್ಮಕವಾದುದು.

ಅಭಿವಂದನಾ

ಮಾನವನ ಇತಿಹಾಸದಲ್ಲಿ ಉದ್ದಕ್ಕೂ ಶಾಪದಂತೆ ಕಂಡುಬರುವ ಮುಖ್ಯವಾದ ಅಸಹಿಷ್ಣುತೆಗಳಲ್ಲಿ ಧರ್ಮ ಸಂಬಂಧವಾದುದೊಂದು. ಧಾರ್ಮಿಕ ಅಸಹಿಷ್ಣುತೆಯಿಂದ ಇತಿಹಾಸದ ಎಷ್ಟೋ ಪುಟಗಳು ರಕ್ತರಂಜಿತವಾಗಿವೆ. ಧರ್ಮ ಮಾನವನ ಮೂಲ ಪ್ರವೃತ್ತಿಗಳಲ್ಲಿ ಒಂದಾಗಿದ್ದು, ಅವನ ಆತ್ಮವಲಯಕ್ಕೆ ಸೇರಿದ್ದಾದ್ದರಿಂದ ತತ್ಸಂಬಂಧವಾದ ಅಸಹಿಷ್ಣುತೆ ಸುಲಭವಾಗಿ ಕೆರಳುವಂತಹುದು, ಬಲಿಷ್ಠವಾದುದು ಮತ್ತು ತೀವ್ರ ದುಷ್ಪರಿಣಾಮಕಾರಿಯಾದುದು. ಆದರೆ ಇಂಥ ಅಸಹನೆ, ತಮ್ಮ ಧರ್ಮವೇ ಶ್ರೇಷ್ಠ ಇನ್ನೊಬ್ಬರದಲ್ಲ ಎಂಬ ಧರ್ಮದ ತಪ್ಪುಕಲ್ಪನೆಯಿಂದ ಹುಟ್ಟುತ್ತದೆ. ವಾಸ್ತವವಾಗಿ ಮತಗಳು ನೂರಾರು ಇರಬಹುದಾದರೂ ಧರ್ಮ ಎನ್ನುವುದು ಒಂದೇ. ಯಾವುದು ಎಲ್ಲವನ್ನೂ ಧರಿಸಿಕೊಂಡಿದೆಯೋ ಅದು ಧರ್ಮ; ಅದು ಭೂಮಿಯ ಗುರುತ್ವಾಕರ್ಷಣ ಶಕ್ತಿಯಂತೆ ಎಲ್ಲ ದೇಶ ಎಲ್ಲ ಕಾಲಗಳಿಗೂ ಅನ್ವಯಿಸುವಂತಹುದು, ವ್ಯತ್ಯಸ್ತವಾಗದೆ ನಿರ್ವಿಕಾರವಾಗಿ ನಿಲ್ಲತಕ್ಕದ್ದು. 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂಬ ವೇದೋಕ್ತಿ ಧರ್ಮದ ಮೂಲ ಸೂತ್ರ. ಆದರೆ ಮತವನ್ನೇ ಧರ್ಮವೆಂದು ಭ್ರಮಿಸಿದ ಜನ ಅಸಹಿಷ್ಣುಗಳಾಗಿ ವರ್ತಿಸಿ ಅನಾಹುತಗಳನ್ನೆಸಗುತ್ತಾರೆ. ಸಾಮಾನ್ಯರ ಪಾಲಿಗೆ ಮತವು ಧರ್ಮದ ಒಂದು ಅನಿವಾರ್ಯಾಂಗವಾಗಿರುವುದು ಇದಕ್ಕೆ ಕಾರಣ. ಆದರೆ ಧರ್ಮ ಮತವನ್ನು ಮೀರಿದ್ದು; ಅದಕ್ಕೆ ಬೇರೆ ಬೇರೆ ಹೆಸರುಗಳಿದ್ದರೂ ಸಾರತಃ ಅದು ಒಂದು; ಅದರಲ್ಲಿ ಅಸಹಿಷ್ಣುತೆಗೆ ಎಡೆಯಿಲ್ಲ. ದೇವರ ಅಸ್ತಿತ್ವದಲ್ಲಿ ನಂಬಿಕೆ ಹಾಗೂ ಇಹದ ಬದುಕು ಪರಿಶುದ್ಧವಾಗಿರಬೇಕೆಂಬ ಕಲ್ಪನೆ ಇವು ಎಲ್ಲ ಧರ್ಮಗಳಿಗೂ ಸಮಾನ. ದೇವರನ್ನು ಒಪ್ಪದ ಧರ್ಮಗಳೂ ಕೂಡ, ನೈತಿಕತೆ ಧರ್ಮದ ಬೆನ್ನೆಲುಬು ಎಂಬುದನ್ನು ಒಪ್ಪುತ್ತವೆ. ದಯವೇ ಎಲ್ಲ ಧರ್ಮಗಳ ಮೂಲ. ಆದರೂ ಪ್ರಪಂಚದಲ್ಲಿ ಧರ್ಮಗಳ ಮೇಲಾಟದಿಂದ ರಕ್ತದ ಹೊಳೆಗಳು ಹರಿದಿರುವುದು ನಿಜ. ಅದು ಧರ್ಮದ ತಪ್ಪಲ್ಲ. ಅನುಯಾಯಿಗಳ ತಪ್ಪು. ಎಷ್ಟೋ ದುರಂತಗಳು, ಧರ್ಮದ ಹೆಸರಿನಲ್ಲಿ ಅನ್ಯಕಾರಣಗಳಿಗಾಗಿ ನಡೆದುವು ಎಂಬುದನ್ನು ಮರೆಯಬಾರದು. ಸ್ವಾರ್ಥಸಾಧಕರು ಅಧಿಕಾರಲೋಲುಪರು ಪಟ್ಟಭದ್ರ ಹಿತಾಸಕ್ತರು ಧರ್ಮವನ್ನು ಒಂದು ಮುಸುಕನ್ನಾಗಿ ಮಾಡಿಕೊಂಡು ತಮ್ಮ ಉದ್ದೇಶವನ್ನು ನೆರವೇರಿಸಿಕೊಂಡಿರುವ ನಿದರ್ಶನಗಳೇ ಹೆಚ್ಚು. ಆದರೆ ಧರ್ಮ ಸಂಸ್ಥಾಪಕರು ಧರ್ಮದ ನಿಜವಾದ ಆರಾಧಕರು ಅಸಹಿಷ್ಣುತೆಯನ್ನು ಬೋಧಿಸಿಲ್ಲ, ಅಥವಾ ಚೋದಿಸಿಲ್ಲ, ಸರ್ವ ಧರ್ಮ ಸಮಭಾವವನ್ನು, ಸಮನ್ವಯವನ್ನು ಅವರು ಪುರಸ್ಕರಿಸಿದ್ದಾರೆ ಎಂಬುದು ಮಹತ್ವದ ಸಂಗತಿಯಾಗಿದೆ. ಅಂಥವರ ಉದಾಹರಣೆಗಳು ಚರಿತ್ರೆಯಲ್ಲಿ ಕಗ್ಗತ್ತಲ ನಡುವೆ ಜ್ಯೋತಿಸ್ತಂಭಗಳಾಗಿ ಬೆಳಗುತ್ತಿವೆ.

ಜಗತ್ತಿನಲ್ಲಿ ಅತ್ಯಂತ ಪ್ರಬಲವೂ ವ್ಯಾಪಕವೂ ಆದ ಇಸ್ಲಾಂ ಧರ್ಮವನ್ನು ಸ್ಥಾಪಿಸಿದ ಮಹಮದ್ ಪೈಗಂಬರರು 'ಮತವಿಚಾರದಲ್ಲಿ ಬಲಾತ್ಕಾರ ಕೂಡದು, ನಂಬಿಕೆ ದೇವರಿಂದಲೇ ಬರಬೇಕಾದ್ದು, ಆದ್ದರಿಂದ ಜನರಲ್ಲಿ ಬಲಾತ್ಕಾರದಿಂದ ನಂಬಿಕೆ ಹುಟ್ಟಿಸಲು

ಪ್ರಯತ್ನ ಮಾಡಬಾರದು' ಎಂದು ಹೇಳಿ ಸಹಿಷ್ಣುತೆಯನ್ನು ಬೋಧಿಸಿದ್ದಾರೆ. ಇಸ್ಲಾಂ ಧರ್ಮೀಯರು ಅಸಹಿಷ್ಣುಗಳೆಂದು ಸಾಮಾನ್ಯವಾಗಿ ಹೇಳುವುದುಂಟು. ಆದರೆ 'ಪರಮತ ಸಹಿಷ್ಣುತೆ ಇಸ್ಲಾಮೀಯರಲ್ಲಲ್ಲದೆ ಮತ್ತೆಲ್ಲೂ ಕಾಣದು' ಎಂದು ಫಿನ್ಲೆ ಎಂಬ ಚರಿತ್ರಕಾರ ಹೇಳುತ್ತಾನೆ. ಇಸ್ಲಾಮಿಗೆ ಕೆಟ್ಟ ಹೆಸರು ತಂದವರು ರಾಜಕೀಯ ದುರಭಿಸಂಧಿಯುಳ್ಳ ಘಜನಿ, ಘೋರಿಗಳಂತಹ ಸ್ವಾರ್ಥಿಗಳು ಹಾಗೂ ವಿಜಿಗೀಷುಗಳು, ಯೇಸುಕ್ರಿಸ್ತನಾದರೂ ಮತಾಂತರವನ್ನು ಉಪದೇಶಿಸಲಿಲ್ಲ. 'ತಂದೆಯೇ, ಇವರನ್ನು ಕ್ಷಮಿಸಿಬಿಡು, ತಾವೇನು ಮಾಡುತ್ತಿದ್ದೇವೆ ಎಂಬುದು ಇವರಿಗೆ ತಿಳಿಯದು' ಎಂಬ ಅವನ ಪ್ರಾರ್ಥನೆ, ಸಮಕಾಲೀನರನ್ನು ಮಾತ್ರವಲ್ಲ, ಈಚೆಗೆ ಅವನ ಹೆಸರನ್ನು ದುರುಪಯೋಗಪಡಿಸಿಕೊಂಡವರನ್ನು ಕೂಡ ಕುರಿತದ್ದು.

ಅನ್ಯ ದೇಶಗಳಲ್ಲಿ ಧರ್ಮಗಳು ಘರ್ಷಣೆಗೆ, ಹಿಂಸೆಗೆ, ರಕ್ತಪಾತಕ್ಕೆ ಅವಕಾಶ ಕೊಟ್ಟಿರಬಹುದು. ಭಾರತದಲ್ಲಂತೂ ಅಂತಹ ಪ್ರಸಂಗಗಳು ಕಡಮೆಯೆನ್ನಬೇಕು. ಭರತಖಂಡ ಒಟ್ಟಿನಲ್ಲಿ ವಿವಿಧ ಧರ್ಮಗಳ ಆಡುಂಬೊಲವಾಗಿದೆ; ಸಮನ್ವಯ ಭೂಮಿಯಾಗಿದೆ; ಆಶ್ರಯಸ್ಥಾನವಾಗಿದೆ. 'ವಾದೇ ವಾದೇ ಜಾಯತೇ ತತ್ವಬೋಧಃ' ಎಂಬುದು ಭಾರತೀಯ ನಿಲುವು. ಇಲ್ಲಿ ಸಾಮರಸ್ಯಕ್ಕೆ ಪ್ರಾಶಸ್ತ್ಯ. ನೀರನ್ನು ಪಾನಿ, ಜಲ, ವಾಟರ್ ಎಂದು ಯಾವ ಹೆಸರಿನಿಂದ ಕರೆದರೂ ಅದು ಒಂದೇ ಆಗಿರುತ್ತದೆ ಎಂದು ದೃಷ್ಟಾಂತ ಪೂರ್ವಕವಾಗಿ ಸಾರಿದ ಮಹಾವಿಭೂತಿ ಶ್ರೀರಾಮಕೃಷ್ಣ ಪರಮಹಂಸರು ಸರ್ವಧರ್ಮ ಸಮನ್ವಯಾಚಾರ್ಯರೆಂದು ಕೀರ್ತಿಗೊಂಡು, ಉದಾರವಾದ ಭಾರತೀಯ ಪರಂಪರೆಯ ಸಜೀವ ಸಾಕಾರ ನಿದರ್ಶನವಾಗಿದ್ದಾರೆ. ಧರ್ಮಚಕ್ರ ಪ್ರವರ್ತಕನಾದ ಅಶೋಕ ಚಕ್ರವರ್ತಿ, ತಾನು ಸ್ವತಃ ಬೌದ್ಧ ಮತಾವಲಂಬಿಯಾದರೂ ತನ್ನ ೧೨ನೆಯ ಶಿಲಾ ಶಾಸನದಲ್ಲಿ ಹೀಗೆ ವಿಧಿಸಿದ್ದಾನೆ; 'ಸರ್ವ ಪ್ರಕಾರಗಳಲ್ಲೂ ಪರಮತದವರನ್ನು ಪೂಜಿಸಲೇಬೇಕು. ಹೀಗೆ ಮಾಡಿದರೆ, ತನ್ನ ಮತವೂ ವರ್ಧಿಸುತ್ತದೆ; ಪರಮತಕ್ಕೂ ಉಪಕಾರವಾಗುತ್ತದೆ. ಅನ್ಯಥಾ ಮಾಡಿದರೆ ತನ್ನ ಮತಕ್ಕೆ ಹಾನಿ. ಪರಮತಕ್ಕೆ ಅಪಕಾರ, ಏಕೆಂದರೆ ಆತ್ಮಮತವನ್ನು ಹೇಗೆ ಬೆಳಗಿಸಲಿ ಎಂಬ ಆತುರದಿಂದ ಯಾರು ಅದನ್ನೇ ಪೂಜಿಸಿ ಪರಮತವನ್ನು ಹಳಿಯುತ್ತಾರೋ ಅವರು ತಮ್ಮ ವರ್ತನೆಯಿಂದ ತಮ್ಮ ಮತಕ್ಕೆ ಹೆಚ್ಚು ಹಾನಿಯುಂಟು ಮಾಡುತ್ತಾರೆ' ಇತ್ತೀಚಿನ ಕವಿ ಇಕ್ಬಾಲ್ ಹೇಳುತ್ತಾರೆ.'ಮಹ್‌ಜಬ್ ನಹಿನ್ ಸಿಖ್‌ತ ಆಪಸ್ ಮೆನ್ ಬಯಿರ್‌ರಖಿನ'' (ನಾವು ಪರಸ್ಪರ ದ್ವೇಷಿಸಬೇಕೆಂದು ಬೋಧಿಸುವುದಿಲ್ಲ, ಧರ್ಮ).

ಅಖಿಲ ಭಾರತಕ್ಕೆ ಸಂಬಂಧಿಸಿದಂತೆ ಹಿಂದೂ-ಇಸ್ಲಾಂ ಧರ್ಮಗಳ ಸಂಬಂಧವನ್ನು ಮುಖ್ಯವಾಗಿ ಪರಿಗಣಿಸಬೇಕು. ಈ ಸಂಬಂಧ ರಾಜಕೀಯ ಉದ್ದೇಶಗಳನ್ನು ವರ್ಜಿಸಿದರೆ, ಬಹುಮಟ್ಟಿಗೆ ಮಧುರವಾದುದೆಂದೇ ಹೇಳಬೇಕು. ಇದು ಎರಡೂ ಧರ್ಮಗಳ ಮೇಲೆ,

ಅವುಗಳ ಅನುಯಾಯಿಗಳ ಮೇಲೆ ಪ್ರಭಾವ ಬೀರಿದ್ದನ್ನು ನೋಡುತ್ತೇವೆ. ಚರಿತ್ರೆಯಲ್ಲಿ ಅನೇಕ ದೊರೆಗಳು ಹಿಂದೂ-ಮುಸ್ಲಿಂ ಸಾಮರಸ್ಯವನ್ನು ಸಾಧಿಸಲು ಪ್ರಯತ್ನಿಸಿದ್ದಕ್ಕೆ ಆಧಾರವಿದೆ. ಅಕ್ಬರ್ 'ದೀನ್ ಇಲ್ಲಾಹಿ' ಎಂಬ ಸಮನ್ವಯ ಧರ್ಮವೊಂದನ್ನು ಸ್ಥಾಪಿಸಲು ಶ್ರಮಿಸಿದ : ಅಂತೆಯೇ ವಂಗದೇಶದ ಸುಲ್ತಾನರು 'ಸತ್ಯಾಪೀರ್' ಎಂಬ ಹೊಸ ಧರ್ಮವನ್ನು ಸ್ಥಾಪಿಸಿದ್ದರಂತೆ. ಶಿವಾಜಿ ಮೊಗಲರ ವಿರುದ್ಧ ಸಿಡಿದೆದ್ದರೂ, ಮುಸಲ್ಮಾನ್ ಮಸೀದಿಗಳಿಗೆ ಹಿಂದೂಗಳು ಗೌರವ ತೋರಬೇಕೆಂದು ವಿಧಿಸಿದ್ದು ಅಚ್ಚರಿಯ ಸಂಗತಿಯಾದರೂ ಸಹಜವಾಗಿದೆ. ಹಿಂದೂ- ಮುಸ್ಲಿಂ ಧರ್ಮಗಳ ಮಧುರ ಮಿಲನದ ಫಲವೇ ಸಂತ ಶ್ರೇಷ್ಠರಾದ ಕಬೀರ್ ಮತ್ತು ನಾನಕ್. ಹಾಗೆಯೇ ಸೂಫಿ ಧರ್ಮದ ಮೇಲೆ ಹಿಂದೂಗಳ ವೇದಾಂತ ತತ್ತ್ವ ಪ್ರಭಾವ ಬೀರಿದೆ. ಭಾರತೀಯ ಚಿತ್ರ, ಶಿಲ್ಪ, ಸಂಗೀತ, ಮುಂತಾದ ಕಲೆಗಳ ಮೇಲೆ ಇಸ್ಲಾಮಿನ ಪ್ರಭಾವ ಗಣ್ಯವಾದುದು; ಉತ್ತರ ಭಾರತದಲ್ಲಿ ಹಿಂದೂಗಳ ವೇಷಭೂಷಣ ಜೀವನ ಪದ್ಧತಿಗಳು ಇಸ್ಲಾಂ ಪ್ರಭಾವಕ್ಕೊಳಗಾಗಿರುವುದು ಸ್ಪಷ್ಟ. ಈ ಸಮನ್ವಯ ಸಾಧನೆಯ ದಿಶೆಯಲ್ಲಿ ಇತ್ತೀಚಿನ ಉಜ್ವಲವಾದ ಹೆಸರು ಮಹಾತ್ಮ ಗಾಂಧೀಯವರದು . ಅವರು'ಈಶ್ವರ್ ಅಲ್ಲಾ ತೇರೇ ನಾಮ್, ಸಬ್ ಕೋ ಸನ್ಮತಿ ದೇ ಭಗವಾನ್' ಎಂದು ಪ್ರಾರ್ಥಿಸಿ ಹಿಂದೂ- ಮುಸ್ಲಿಂ ಐಕ್ಯಕ್ಕಾಗಿ ತಮ್ಮ ಬಾಳನ್ನೇ ಹೋಮಿಸಿದರು.

ಕರ್ನಾಟಕದ ವಿಷಯಕ್ಕೆ ಬಂದರೆ, ಇದು ಎಲ್ಲ ಧರ್ಮಗಳನ್ನೂ ಸಮಾನ ಗೌರವದಿಂದ ಕಂಡ ಪುಣ್ಯಭೂಮಿ; ಸಮನ್ವಯ ಕೃಷಿಗೆ ಹಸನಾದ ನೆಲ; 'ಬಹುಧರ್ಮಧೇನು ನಿವಹಕ್ಕಾಡುಂಬೊಲಂ' ಜೈನ, ಬೌದ್ಧ, ಶೈವ, ವೈಷವ- ಈ ನಾಲ್ಕೂ ಧರ್ಮಗಳನ್ನು ಬೆಳೆಸಿದ, ಬೆಳಗಿದ ಮಹಾನುಭಾವರ ನಾಡು ಇದು. ಬೇಲೂರಿನ ಈ ಶಾಸನ '**ಏಕಂ ಸತ್‌ವಿಪ್ರಾ ಬಹುಧಾ ವದಂತಿ**' ಎಂಬ ವೇದ-ವಾಕ್ಯಕ್ಕೆ ವ್ಯಾಖ್ಯಾನವಾಗಿದ್ದು, ಕನ್ನಡ ನಾಡಿನ ಧಾರ್ಮಿಕ ಸಮನ್ವಯ ಸಾಕ್ಷಾತ್ಕಾರಕ್ಕೆ ಉಜ್ವಲವಾದ ಪ್ರಮಾಣವಾಗಿದೆ.

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
ಅರ್ಹನ್ನಿತ್ಯಥ ಜೈನ ಶಾಸನರತಾಃ ಕರ್ಮೇತಿ ಮೀಮಾಂಸಕಾಃ
ಸೋಯಂ ವೋ ವಿದಧಾತು ವಾಂಛಿತ ಫಲಂ ಶ್ರೀ ಕೇಶವೇಶಸ್ಸದಾ||

ಕರ್ನಾಟಕವನ್ನಾಳಿದ ಪ್ರಸಿದ್ಧ ರಾಜ ಮನೆತನಗಳೆಲ್ಲ ಧಾರ್ಮಿಕ ಸಾಮರಸ್ಯವನ್ನು ವಿಶೇಷವಾಗಿ ಸಾಧಿಸಿ ಯಶೋಭಾಜನವಾದುವು. ತಾವು 'ಚತುಸ್ಸಮಯ ಸಮುದ್ಧರಣ ಸಮರ್ಥ'ರೆಂದು ಹೇಳಿಕೊಳ್ಳುವುದು ರಾಜರಿಗೆ ಹೆಮ್ಮೆಯ ಮಾತಾಗಿತ್ತು. ಹರಿಹರರಲ್ಲಿ ಭೇದವೆಣಿಸುವುದು ಮಹಾಪಾಪಗಳಲ್ಲಿ ಒಂದಾಗಿತ್ತು. 'ಕೇಶವಾಯ ಶಿವಾಯ ಚ' ಎಂಬುದೇ ಹಲವರ ಸಾಮಾನ್ಯವಾದ ಪ್ರಾರ್ಥನಾ ವಾಕ್ಯ. ಮಹಾಸಾಮಂತ ಬಾಚಿದೇವನನ್ನು ಹೊಗಳುವ ೧೧೫೫ರ ಕೈದಾಳದ ಈ ಶಾಸನ ಬಹುಮಂದಿ ಕನ್ನಡ ರಾಜರ ಮತ್ತು

ಅಭಿವಂದನಾ

ಸಾಮಂತರ ಮನೋಧರ್ಮವನ್ನು ಪ್ರತಿನಿಧಿಸುತ್ತದೆ:

ಉದ್ಧರಿಸಿ ಜೈನ ಭವನಮ
ನುದ್ಧರಿಸಿ ಶಿವಾಲಯಗಳಂ ಮುದದಿನ್ನ
ನ್ನುದ್ಧರಿಸಿ ವಿಷ್ಣುಗೇಹಮ
ನುದ್ಧರಿಸಿದನಲ್ತೆ ಬಾಚಿ ಜಸದುನ್ನತಿಯಂ

ಇತಿಹಾಸದ ಪುಟಗಳನ್ನು ಸ್ವಲ್ಪ ತಿರುವಿ ಹಾಕಬಹುದು. ಶಾತವಾಹನರು ಬೌದ್ಧ ಮತವನ್ನು ಅವಲಂಬಿಸಿದ್ದರೂ ವೈದಿಕ ಧರ್ಮಕ್ಕೆ ರಕ್ಷಣೆ ಕೊಟ್ಟರು. ಬನವಾಸಿಯ ಕದಂಬರು ವೈದಿಕರಾದರೂ ಜೈನಧರ್ಮಕ್ಕೆ ಪ್ರೋತ್ಸಾಹವಿತ್ತರು. ತಲಕಾಡಿನ ಗಂಗರು ಜೈನರಾದರೂ ವೈದಿಕ ಧರ್ಮಕ್ಕೆ ಸಹಾಯಹಸ್ತ ನೀಡಿದರು. ಬಾದಾಮಿ ಚಾಳುಕ್ಯರು ವೈಷ್ಣವರಾದರೂ ಇತರ ಮೂರು ಧರ್ಮಗಳಿಗೆ ಆಶ್ರಯವಿತ್ತರು. ವಿಜಯಾದಿತ್ಯನ ತಾಯಿ ವಿನಯವತಿ ಒಂದೇ ಮಂದಿರದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಮೂರ್ತಿಗಳನ್ನು ಸ್ಥಾಪಿಸಿ, ದತ್ತಿಬಿಟ್ಟುದು ಒಂದು ಶಾಸನದಿಂದ ತಿಳಿದು ಬರುತ್ತದೆ. ರಾಷ್ಟ್ರಕೂಟರು ಮುಖ್ಯವಾಗಿ ಜೈನಧರ್ಮೀಯರಾದರೂ ಸರ್ವಧರ್ಮ ಸಮನ್ವಯ ದೃಷ್ಟಿಯವರಾಗಿದ್ದರು. ಕಲ್ಯಾಣಿ ಚಾಲುಕ್ಯರದೂ ಇದೇ ಮನೋಧರ್ಮವಾಗಿತ್ತು. ಹೊಯ್ಸಳರು ಮೊದಲು ಜೈನರಾಗಿದ್ದು, ಆಮೇಲೆ ವೈಷ್ಣವರಾದರು. ವಿಷ್ಣುವರ್ಧನನ ಮಾವ ಮಾರಸಿಂಗಮಯ್ಯ ಶೈವ, ಅವನಹೆಂಡತಿ ಮಾಚಿಕಬ್ಬೆ ಜೈನಳು. ಈ ದಂಪತಿಗಳ ಮಗಳಾದ ಶಾಂತಲೆಯಲ್ಲಿ ವೈಷ್ಣವ, ಜೈನ, ಶೈವ ಧರ್ಮಗಳು ಮುಪ್ಪುರಿಗೊಂಡಿದ್ದುವು. ಚೆನ್ನಕೇಶವದೇವಾಲಯ, ಹೊಯ್ಸಳೇಶ್ವರ, ಕೇದಾರೇಶ್ವರ ದೇವಾಲಯಗಳು, ಅಂತೆಯೇ ಜೈನ ಬಸದಿಗಳು ಹೊಯ್ಸಳರ ಸಮನ್ವಯ ನಿಷ್ಠೆಗೆ ಜ್ವಲಂತ ಸಾಕ್ಷಿಯಾಗಿವೆ. ವಿಜಯನಗರದ ರಾಜರಂತೂ ಇಸ್ಲಾಂ ಧರ್ಮಕ್ಕೂ ತಮ್ಮ ಗೌರವ ಸಲ್ಲಿಸಿದರು. ಬುಕ್ಕರಾಯನ ಪ್ರಸಿದ್ಧವಾದ ಶ್ರವಣಬೆಳಗೊಳದ ಶಾಸನ, ಜೈನ- ವೈಷ್ಣವ ಸಾಮರಸ್ಯವನ್ನು ಪ್ರತಿಪಾದಿಸುತ್ತದೆ. ಒಮ್ಮೆ ಜೈನರಿಗೂ ವೈಷ್ಣವರಿಗೂ ಕಲಹವಾದಾಗ ಬುಕ್ಕನಿಗೆ ದೂರು ಹೋಯಿತು; ಅವನು ಇಬ್ಬರನ್ನೂ ಕರೆಸಿ, 'ವೈಷ್ಣವ ದರ್ಶನಕ್ಕೂ ಜೈನ ದರ್ಶನಕ್ಕೂ ಭೇದವಿಲ್ಲವೆಂದು ಜೈನರ ಕೈವಿಡಿದುಕೊಟ್ಟು..... ಈ ಜೈನ ದರ್ಶನಕ್ಕೆ ಪೂರ್ವಮರ್ಯಾದೆಯಲು ಪಂಚ ಮಹಾ ವಾದ್ಯಂಗಳೂ ಕಲಶವೂ ಸಲ್ಲುವುದು. ಚಂದ್ರಾರ್ಕ ಸ್ಥಾಯಿಯಾಗಿ ವೈಷ್ಣವ ಸಮಯವು ಜೈನದರ್ಶನವ ರಕ್ಷಿಸಿಕೊಂಡು ಬಹೆವು...' ಎಂದು ಆಜ್ಞೆ ಹೊರಡಿಸಿದನಂತೆ. ಈಚಿನ ರಾಜವಂಶಗಳು ಇಂತೆಯೇ ಎಲ್ಲ ಧರ್ಮಗಳನ್ನು ಪುರಸ್ಕರಿಸಿರುವುದನ್ನು ಗಮನಿಸಬಹುದು.

ಒಂದು ಕಡೆ ರಾಜಮಹಾರಾಜರು ಸರ್ವಧರ್ಮಪೂಜಕರಾಗಿದ್ದಂತೆ ಇನ್ನೊಂದ ಕಡೆ ಧಾರ್ಮಿಕ ಮಹಾಪುರುಷರು, ಸಂತಶ್ರೇಷ್ಠರು ಹಾಗೂ ಕವಿವರೇಣ್ಯ ಏಕೇಶ್ವರವಾದವನ್ನು ಎತ್ತಿ ಹಿಡಿದು, ಧರ್ಮಗಳ ಒಂದುತನವನ್ನು ಅಮೋಘವ ಸಾರಿದ್ದಾರೆ. ವೀರಶೈವ ಧರ್ಮೋದ್ಧಾರಕರಾದ ಬಸವಣ್ಣನವರು 'ದೇವನೊಬ್ಬ ನಾ...

ಹಲವು' ಎಂಬ ಸೂತ್ರಪ್ರಾಯ ಸಂದೇಶವನ್ನಿತ್ತಿದ್ದಾರೆ. ಮಹಾಕವಿ ಕುಮಾರವ್ಯಾಸನದು ಹರಿಹರ ಭೇದವನ್ನು ಬಗೆಯದ ಪರಮಭಾಗವತ ಚೇತನ. ಅವನ ಭಾರತದಂಥ ಉದಾರ ದೃಷ್ಟಿಯ ಕಾವ್ಯ ಕನ್ನಡದಲ್ಲಿ ಇನ್ನೊಂದಿಲ್ಲ. ಮುಪ್ಪಿನ ಷಡಕ್ಷರಿಯ ಈ ಅರ್ಥವತ್ತಾದ ಹಾಡು ಭಾವದಂತೆ ದೇವನೆಂಬುದನ್ನು ಬಹಳ ಸೊಗಸಾಗಿ ವ್ಯಕ್ತಪಡಿಸುತ್ತದೆ.

* ಬುಕ್ಕನ ಈ ಶಾಸನವನ್ನು ಮೌಂಟ್ ಸೆನ್ಯೆ ಕ್ರೈಸ್ತರಿಗೆ ಮಹಮ್ಮದ್ ಪೈಗಂಬರರು ಕೊಟ್ಟ ಸನ್ನದಿನೊಡನೆ ಹೋಲಿಸಬಹುದು: 'ನಜರಾನ್ ಮತ್ತು ಅದರ ಸುತ್ತಮುತ್ತಲಿರುವ ಪ್ರದೇಶಗಳಲ್ಲಿರುವ ಕ್ರೈಸ್ತ ಮತಸ್ಥರಿಗೆ ಅವರ ಪ್ರಾಣ, ಮತ ಮತ್ತು ಆಸ್ತಿಪಾಸ್ತಿಗಳಿಗೆ ದೇವರ ರಕ್ಷಣೆಯನ್ನೂ ಪೈಗಂಬರರ ಅಭಯವಾಗ್ದಾನವನ್ನೂ ಕೊಟ್ಟಿದೆ. ಅವರ ಮತಾಚಾರಗಳಿಗೂ ಹಕ್ಕುಗಳಿಗೂ ಯಾವ ವಿಧವಾದ ಅಡಚಣೆಗಳೂ ಇರಕೂಡದು. ಕ್ರೈಸ್ತ ಗುರುಗಳನ್ನು ಅವರ ಮಠಗಳಿಂದಲೂ ಕ್ರೈಸ್ತ ಸನ್ಯಾಸಿಗಳನ್ನು ಅವರ ಆಶ್ರಮಗಳಿಂದಲೂ ಹೊರಹೊರಡಿಸಕೂಡದು. ಎಂದಿನಂತೆ ದೊಡ್ಡದು ಮತ್ತು ಸಣ್ಣದು ಎಲ್ಲವನ್ನು ಅವರು ಚಿರಕಾಲವೂ ಅನುಭವಿಸಲಿ'

ಅವರವರ ದರುಶನಕೆ। ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ
ಅವರವರ ಭಾವಕ್ಕೆ । ಅವರವರ ಪೂಜೆಗಂ
ಅವರವರಿಗೆಲ್ಲ ದೇವ ನೀನೊಬ್ಬನೆ.

ಭಕ್ತ ಕವಿ ಕನಕದಾಸರು ನಮ್ಮಲ್ಲಿರುವ ಹಲವು -ಹನ್ನೊಂದು ದೇವತೆಗಳನ್ನು ಒಂದೇ ಕುಟುಂಬದವರನ್ನಾಗಿ ಮಾಡಿ, ಅವರಲ್ಲಿ ವಿರೋಧವಿಲ್ಲವೆಂಬುದನ್ನು ಮನಂಬುಗುವಂತೆ ತಿಳಿಸುತ್ತಾರೆ, ಈ ಪದ್ಯದಲ್ಲಿ;

ಸಿರಿಯ ಕುಲಪತಿ ಸುತನು ಕಮಲಜ
ಹಿರಿಯ ಸೊಸೆ ಶಾರದೆ ಸಹೋದರಿ
ಗಿರಿಜೆ ಮೈದುನ ಶಂಕರನು ಸುರರೆಲ್ಲ ಕಿಂಕರರು

ವಿದ್ವಾಂಸರ; ಬುದ್ಧಿಜೀವಿಗಳ ಮಟ್ಟದಲ್ಲಿ ಏನೇ ಭೇದ ಭಾವನೆ ಇರಲಿ, ಕನ್ನಡ ನಾಡಿನ ಜನ ಸಾಮಾನ್ಯರಂತೂ ಎಂದಿನಿಂದಲೂ ಸರ್ವಧರ್ಮ ಸಮನ್ವಯವನ್ನು ಆಚರಿಸುತ್ತ ಬಂದಿದ್ದಾರೆ. ಅವರು ಶಿವನನ್ನು ಸ್ತುತಿಸುವಂತೆಯೇ, ಅದೇ ಉಸಿರಿನಲ್ಲಿಯೇ ವಿಷ್ಣುವನ್ನೂ ಎರೆಯುತ್ತಾರೆ. ಜನಪದ ಸಾಹಿತ್ಯವೆಲ್ಲ ಈ ಸಮನ್ವಯದ ಉಜ್ವಲ ದಾಖಲೆಯೇ ಆಗಿದೆ. ಜಾನಪದರು ಈ ವಿಷಯದಲ್ಲೂ ಪರಿಣತ ಮತಿಗಳು. ಅವರ ಎರಡು ಪದ್ಯಗಳನ್ನು ನೋಡಬಹುದು.

ಅಭಿವಂದನಾ

ಶಿವಶಿವ ಎಂದರೆ ಸಿಡಿಲೆಲ್ಲ ಬಯಲಾಗಿ
ಕಲ್ಲು ಬಂದೆರಗಿ ಕಡೆಗಾಗಿ ಎಲೆ ಮನವೆ
ಶಿವನೆಂಬ ಶಬುದ ಬಿಡಬೇಡ
ನಾರಾಯಣ ನಿನ್ನ ನಾಮದ ಬೀಜವ
ನಾನೆಲ್ಲಿ ಬಿತ್ತಿ ಬೆಳೆಯಲಿ ನಿನನಾಮ
ನಾಲಗೆ ಮೇಲೆ ಬೆಳೆದೇನು

ಹರಿಹರರ ಅಭೇದವನ್ನು ಸಾರುವ ಹರಿಹರೇಶ್ವರ ದೇವಾಲಯ, ಬಾದಾಮಿ ಗವಿಯ ಹರಿಹರೇಶ್ವರಮೂರ್ತಿ, ಈ ಹೊತ್ತಿಗೂ ಸರ್ವಧರ್ಮ ಸಮನ್ವಯಕ್ಕೆ ಜೀವಂತ ಸಾಕ್ಷಿಯಾಗಿರುವ ಧರ್ಮಸ್ಥಳಕ್ಷೇತ್ರ ಮುಂತಾದುವನ್ನು ಅಗತ್ಯವಾಗಿ ಲಕ್ಷಿಸಬೇಕು. ಮಾನವರು ಮಾತ್ರವಲ್ಲ, ದೇವತೆಗಳೇ ಪರಧರ್ಮಬಾಂಧವ್ಯಕ್ಕೆಳೆಸಿರುವ ನಿದರ್ಶನ ಮೇಲುಕೋಟೆಯಲ್ಲಿದೆ; ಅಲ್ಲಿನ ಅಧಿದೈವ ಚೆಲುವ ನಾರಾಯಣನ ಮಡದಿಯಾಗಿ ಪೂಜೆಗೊಳ್ಳುವ ಬೀಬಿ ನಾಚ್ಚಿಯಾರ್ ಡೆಲ್ಲಿ ಸುಲ್ತಾನನ ಮಗಳು! (ಕೆಲವು ಕಡೆ'ನಾಚ್ಚಿಯಾರ್' ಎಂಬುದು 'ನಾಚಾರಮ್ಮ' ಎಂದು ಕನ್ನಡೀಕೃತವಾಗಿದೆ; ಹಳೆಯ ತಲೆಮಾರಿನ ಕೆಲವರು ಹೆಂಗಸರಿಗೆ ನಾಚಾರಮ್ಮ ಎಂದು ಹೆಸರುಂಟು)

ಧಾರ್ಮಿಕ ಸಾಮರಸ್ಯಕ್ಕೆ ಎಷ್ಟೊಂದು ಸಾಕ್ಷಿ ಪುರಾವೆಗಳು! (ಈ ಪಟ್ಟಿ ಪೂರ್ಣವಲ್ಲವೇ ಅಲ್ಲ) ಇಷ್ಟಾದರೂ ನಮ್ಮ ಧರ್ಮ ದೊಡ್ಡದು, ನಮ್ಮ ದೇವರು ದೊಡ್ಡವನು ಎಂದು ತಿಳಿಯುವ ಅವಿವೇಕಿಗಳು ಹಿಂದೆಯೂ ಇದ್ದರು, ಈಗಲೂ ಇದ್ದಾರೆ, ಪ್ರಾಯಃ ಮುಂದೆಯೂ ಇರುತ್ತಾರೆ. ಧರ್ಮದ ಹೆಸರಿನಲ್ಲಿ ಈ ಕಚ್ಚಾಟ ತಿಕ್ಕಾಟ ರಂಪ ರಾದ್ಧಾಂತಗಳು ನಡೆಯುತ್ತವೆಂಬುದನ್ನು ಊಹಿಸಿಯೇ ಇರಬೇಕು, ಭಗವಾನ್ ಶ್ರೀ ಕೃಷ್ಣ ಗೀತೆಯಲ್ಲಿ '**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ**' ಎಂದು ಅಕ್ಕರೆಯ ಮಾತನ್ನು ಹೇಳಿದ್ದು!

'**ಲೋಕೋಭಿನ್ನ ರುಚಿಃ**' ಎಲ್ಲರ ರುಚಿಗಳನ್ನೂ ಗೌರವಿಸೋಣ, ಗಮನಿಸೋಣ, ನಮ್ಮದನ್ನು ಯಾರ ಮೇಲೂ ಆಗ್ರಹಪೂರ್ವಕವಾಗಿ ಹೊರಿಸುವುದು ಬೇಡ. '**ಮನುಷ್ಯ ಜಾತಿ ತಾನೊಂದೆ ವಲಂ!**' ಎಂದು ಪಂಪ ಸಾರಿದ ಮೂಲಭೂತ ಸತ್ಯ ನೆನಪಿನಲ್ಲಿರಲಿ; ಇಲ್ಲಸಲ್ಲದ ಉಚ್ಚ-ನೀಚ ಭೇದಗಳನ್ನು ಕಲ್ಪಿಸಿ ಅಸಹನೆ ಪಟ್ಟುಕೊಳ್ಳುವುದು ತ್ಯಾಜ್ಯ. ನಮ್ಮ ಮನೆಯ ತೆರೆದ ಕಿಟಕಿಯಿಂದ ಹತ್ತೂ ದಿಕ್ಕಿನ ಗಾಳಿಬೆಳಕುಗಳು ಬರಲಿ; ಸ್ವಾಗತಿಸೋಣ. ಇದು ಸರ್ವೋದಯದ ಸೂತ್ರ. ಉಪನಿಷತ್ತಿನ ಋಷಿಯೊಡನೆ ದನಿಗೂಡಿಸೋಣ-

ಸಹನಾವವತು ಸಹನೌ ಭುನಕ್ತು ಸಹವೀರ್ಯಂಕರವಾವಹೈ
ತೇಜಸ್ವಿನಾವಧೀತಮಸ್ತು ಮಾವಿದ್ವಿಷಾವಹೈ

***

ಆಯ್ದಕ್ಕಿ ಮಾರಯ್ಯ (ಶೂನ್ಯ ಸಂಪಾದನೆಯಿಂದ)

-ಡಾ||ಎಲ್. ಬಸವರಾಜು

ಪ್ರಭುದೇವರು ಸಿದ್ಧರಾಮಶಿವಯೋಗಿಯನ್ನು ಒಡಗೊಂಡು ಕಲ್ಯಾಣಕ್ಕೆ ಬಂದಾಗ- ಅಲ್ಲಿ ಬಸವಾದಿ ಪ್ರಮಥರು ಚೆನ್ನಬಸವಣ್ಣನವರ ಕೈಯಲ್ಲಿ ಆ ಯೋಗಿಗೆ ವೀರಶೈವ ದೀಕ್ಷೆಯನ್ನು ಕೊಡಿಸುವರು.

ಹೀಗೆ ಸಿದ್ಧರಾಮ ಶಿವಯೋಗಿಗೆ ದೀಕ್ಷೆಯಾಗಲಿ ಆಗದಿರಲಿ ಆ ಘಳಿಗೆಯಲ್ಲಿ ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆಯ ಪ್ರಕಾರ- ಪ್ರಭುದೇವರು ಶಿವಶರಣರೆಲ್ಲರೊಡನೆ ''ಸುಖಾನುಭವ ಗೋಷ್ಠಿ''ಯಲ್ಲಿದ್ದಾಗ- ಅಲ್ಲಿಗೆ ಮಹಾದೇವಿಯಕ್ಕಗಳು ಬರುತ್ತಾರೆ. ಆಗ ಆಕೆಯ ನಗ್ನ ನಡವಳಿಕೆಯನ್ನು ಸಂಶಯಿಸಿದ ಜನಕ್ಕೆ ಆಕೆಯ ಮಹಿಮೆಯನ್ನು ಪ್ರಕಟಿಸಲೆಂದೇ- ಪ್ರಭುದೇವರು ಆಕೆಗೆ- ನಿನ್ನ ಪತಿಯಾರೆಂದು ಕೇಳಿದರೆ- ಚೆನ್ನಮಲ್ಲಿಕಾರ್ಜುನನೇ ನನ್ನ ಗಂಡ, ಮಿಕ್ಕಿನ ಗಂಡಸರು ನನಗಾಗದ ಮೊರೆಯೆಂದೂ, ಆದುದರಿಂದಲೇ ಆ ಚೆನ್ನಮಲ್ಲಿಕಾರ್ಜುನನ ದಿವ್ಯದರ್ಶನ ಪಡೆಯಲು ಶ್ರೀಶೈಲಕ್ಕೆ ಹೋಗುತ್ತಿರುವುದಾಗಿಯೂ ಬಿನ್ನವಿಸಿಕೊಳ್ಳುತ್ತಾಳೆ. ಹೀಗಾಗಿ ಈಕೆ ಗಂಡನನ್ನು ಬಿಟ್ಟು ಬಂದ ಒಬ್ಬ ಸಾಮಾನ್ಯ ಹೆಂಗಸಲ್ಲ, ಶಿವನನ್ನು ಅರಸಿಕೊಂಡು ಹೊರಟ ಮಾಹಾಸಾಧಕಳೆಂಬುದನ್ನು ಆಗ ಜನ ಮನಗಾಣುತ್ತಾರೆ. ಪ್ರಭುದೇವರೂ ಮತ್ತುಳಿದ ಬಸವಾದಿ ಪ್ರಮಥರೂ ಆಕೆಯನ್ನು ಹರಸಿ ಶ್ರೀಶೈಲಕ್ಕೆ ಕಳಿಸಿಕೊಡುತ್ತಾರೆ.

ಇದಾದೊಡನೆಯೇ, ಶಿವಗಣಪ್ರಸಾದಿ ಮಹಾದೇವಯ್ಯನ ಮೊದಲನೇ ಶೂನ್ಯ ಸಂಪಾದನೆಯಲ್ಲಿ ಪ್ರಭುದೇವರು- ''ಮತ್ತೊಮ್ಮೆ ಬರುತ್ತೇನೆಂದು'' ಕೃಪಾವಲೋಕನ ಪರ್ಯಟನಕ್ಕಾಗಿ ದೇಶಾಂತರ ಹೊರಡುತ್ತಾರೆ. ಆದರೆ ಆ ಮೇಲಣ ಮೂವರು ಶೂನ್ಯ ಸಂಪಾದನಕಾರರೂ ಮೇಲೆ ಹೇಳಿದ ಮಹಾದೇವಿಯಕ್ಕಗಳ ಪ್ರಸಂಗ ನಡೆಯುವುದಕ್ಕೆ ಮುನ್ನವೂ ಅನಂತರವೂ ಕಾಲಕ್ರಮದಲ್ಲಿ ಯಥೋಚಿತವಾಗಿ ಮತ್ತೆ ಕೆಲವು ಹೆಚ್ಚಿನ ಪ್ರಸಂಗಗಳನ್ನು ಸೇರ್ಪಡೆಮಾಡಿರುವರು. ಎರಡನೇ ಶೂನ್ಯ ಸಂಪಾದನಕಾರನಾದ ಹಲಗೆಯಾರ್ಯನು ನುಲಿಯ ಚಂದಯ್ಯನ ಪ್ರಸಂಗವನ್ನೂ, ಮೂರನೆಯವನಾದ ಗುಮ್ಮಳಾಪುರದ ಸಿದ್ಧಲಿಂಗನು ಆಯ್ದಕ್ಕಿ ಮಾರಯ್ಯನ ಪ್ರಸಂಗವನ್ನೂ, ನಾಲ್ಕನೆಯವನಾದ ಗೂಳೂರು ಸಿದ್ಧವೀರನು ಮೋಳಿಗೆ ಮಾರಯ್ಯ ಮತ್ತು ಘಟ್ಟಿವಾಳ ಮುದ್ದಣ್ಣಗಳನ್ನು ಕುರಿತ ಎರಡು ಪ್ರಸಂಗಗಳನ್ನೂ ಸೇರಿಸಿದರು. ಆ ಮೂಲಕ ಕಲ್ಯಾಣದ ಅನುಭವ ಮಂಟಪದಲ್ಲಿ ಪ್ರಭುದೇವರನ್ನು ಮುಂದುಮಾಡಿಕೊಂಡು ಬಸವಾದಿ ಪ್ರಮಥರು, ಕೇವಲ ಮಹಾದೇವಿಯಕ್ಕಳ ಜೊತೆಯಲ್ಲೇ ಅಲ್ಲ- ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಮೋಳಿಗೆ ಮಾರಯ್ಯರೊಡನೆಯೂ, ಅನುಭವ ಮಂಟಪದಿಂದಾಚೆ ಮುದ್ದಣ್ಣನೊಡನೆಯೂ

ಶಿವಾನುಭವ ಗೋಷ್ಠಿಯನ್ನು ನಡೆಸಿದರು ಎಂದಂತಾಗಿದೆ.

ಹಲಗೆಯಾರ್ಯನಾದರೋ ಮಹಾದೇವಿಯಕ್ಕನ ಪ್ರಸಂಗ ಬರುವುದಕ್ಕೆ ಮೊದಲಿಗೇ ನುಲಿಯ ಚಂದಯ್ಯನ ಸಂಪಾದನೆಯನ್ನು ಬರೆದು ಸೇರಿಸುತ್ತಾನೆ. ಗುಮ್ಮಳಾಪುರದ ಸಿದ್ಧಲಿಂಗನು ಈ ನುಲಿಯ ಚಂದಯ್ಯನ ಪ್ರಸಂಗ ಬರುವುದಕ್ಕೆ ಮೊದಲಿಗೇ ಆಯ್ದಕ್ಕಿ ಮಾರಯ್ಯನ ಪ್ರಸಂಗವನ್ನು ಬರೆದು ಸೇರಿಸುತ್ತಾನೆ. ಗೂಳೂರು ಸಿದ್ಧವೀರನು- ತನ್ನ ಕಾಲಕ್ಕಾಗಲೇ ಸೇರಿಸಿದ್ದ ಮಾರಯ್ಯ-ಚಂದಯ್ಯ-ಮಹಾದೇವಿಯಕ್ಕಗಳ ಪ್ರಸಂಗಗಳ ನಡು ನಡುವೆ ಕ್ರಮವಾಗಿ ಮೋಳಿಗೆ ಮಾರಯ್ಯ ಮತ್ತು ಘಟ್ಟಿವಾಳ ಮುದ್ದಣ್ಣಗಳ ಸಂಪಾದನೆಗಳೆರಡನ್ನು ಬರೆದು ಸೇರಿಸುತ್ತಾನೆ.

ನಾವಿಂದು ಗುಮ್ಮಳಾಪುರದ ಸಿದ್ಧಲಿಂಗನ ಆಯ್ದಕ್ಕಿ ಮಾರಯ್ಯನ ಕಥಾ ಪ್ರಸಂಗವನ್ನು ನೋಡುವ ಮುನ್ನ- ಆ ಮಾರಯ್ಯನನ್ನು ಕುರಿತಂತೆ ಐತಿಹ್ಯ ಮತ್ತೆಲ್ಲಿಯಾದರೂ ದೊರೆಯುವುದೇ ಎಂಬುದನ್ನು ಸ್ವಲ್ಪ ಪರಿಶೀಲಿಸಬಹುದು.

ಬಸವಣ್ಣನವರು ಒಬ್ಬ ಮಾರಯ್ಯನನ್ನು ಕುರಿತಂತೆ "ಭಕ್ತಿವಿಶೇಷವ ಮಾಡುವೊಡೆ ಹತ್ತು ಬೆರಳುಂಟು. ಹಾಸಿದುಡಿವೊಡೆ ತನಗುಂಟು ತನ್ನ ಪ್ರಮಥರಿಗುಂಟು ಮಾರಿತಂದೆಗಳಂತೆ ಎನಗಹುದೇಕಯ್ಯ" (ಬ.ಷ.ವ. ೩೨೬) ಎನ್ನುತ್ತ ತಮ್ಮ ಮಂತ್ರಿಪದವಿಯ ಜಂಜಡವನ್ನು ತೋಡಿಕೊಂಡಿರುವರು. ಇಲ್ಲಿ ಬಸವಣ್ಣನವರು ಪ್ರಸ್ತಾಪಿಸಿರುವ ಮಾರಯ್ಯನು ಆಯ್ದಕ್ಕಿ ಮಾರಯ್ಯನೆಂದು ಹೇಳಲಾಗುವುದಿಲ್ಲ- ಆ ಮಾರಯ್ಯನೊಬ್ಬ ಅಕ್ಕಸಾಲಿಗ ವೃತ್ತಿಯವನೆನಿಸುವುದು. ಗೂಳೂರು ಸಿದ್ಧವೀರನಾದರೋ ಬಸವಣ್ಣನವರ ಈ ಮೇಲಣ ವಚನದಲ್ಲಿ ಬರುವ ಮಾರಿತಂದೆ ಎಂಬ ಪದವನ್ನು "ಮೋಳಿಗೆ ಮಾರಿತಂದೆ" ಎಂದು ತಿದ್ದಿರುವನು (೧೩-೭) ಮತ್ತು ಗೂಳೂರು ಸಿದ್ಧವೀರನು ಇದೇ ಆಯ್ದಕ್ಕಿ ಮಾರಯ್ಯನ ಪ್ರಸಂಗದಲ್ಲಿ "ನಾ ನಡೆವುದೆಲ್ಲಾ ಅನಾಚಾರ" ಎಂದು ಪ್ರಾರಂಭವಾಗುವ ವಚನ (೧೨-೪೮)ವನ್ನು ಬಸವಣ್ಣನವರು ಆಯ್ದಕ್ಕಿ ಮಾರಯ್ಯನ ಸಂಬಂಧವಾಗಿಯೇ ಆಡಿದಂತೆ ಕಲ್ಪಿಸಿರುವನು. ಆದರೆ ಈ ವಚನ ಬ.ಷ.ವಚನಗಳಲ್ಲಿ ಸಿಗುವುದೇ ಇಲ್ಲವೆಂಬುದನ್ನು ಗಮನಿಸಬೇಕು ಮತ್ತು ಮೊದ ಮೊದಲ ಬಸವಪುರಾಣಗಳಲ್ಲಿಯೂ ಈ ಆಯ್ದಕ್ಕಿ ಮಾರಯ್ಯನ ಪ್ರಸಂಗ ಬಂದಂತಿಲ್ಲ.

ಆದರೆ ಭೈರವೇಶ್ವರಕಥಾಸೂತ್ರರತ್ನಾಕರ (ಸಂ.೨, ಪುಟ ೧೫೬. ಶಾಂತಲಿಂಗದೇಶಿಕ, ಕ್ರಿ.ಶ. ೧೬೭೨)ದಲ್ಲಿ ಇವನ ವಿಚಾರವಾಗಿ ಕೆಲವು ಅದ್ಭುತ ವಿವರಗಳು ದೊರೆಯುತ್ತವೆ. ಬೀದಿಯಲ್ಲಿ ಬಿದ್ದ ಅಕ್ಕಿಯ ಕಾಳನ್ನು ಆಯುವುದು. ಆ ಮೂಲಕ ದಾಸೋಹ ಮಾಡುವುದು. ಈ ಆಯ್ದಕ್ಕಿ ಮಾರಯ್ಯನ ಕಾಯಕವಾಗಿತ್ತು. ಮಾರಯ್ಯ ಪಡುವ ಈ ಕಷ್ಟವನ್ನು ಕಂಡ ಬಸವಣ್ಣ ತಮ್ಮ ಮನೆಯ ಮುಂದೆ ಅಕ್ಕಿಯನ್ನು ಹೆಚ್ಚಾಗಿ ಚೆಲ್ಲಿಸುತ್ತಾರೆ. ಮಾರಯ್ಯನೂ ಹೆಚ್ಚಾಗಿ ಆಯ್ದುಕೊಂಡು ಹೋಗಿ ಹೆಂಡತಿ ಲಕ್ಕವ್ವನ ಖಂಡನೆಗೆ

ಒಳಗಾಗುತ್ತಾನೆ. ಅದು ಅವನು ಮನೆಗೆ ಆಯ್ದು ಒಯ್ದುದು ಎಂದಿನಂತೆ ಒಂದು ಪಡಿ ಅಕ್ಕಿಯನ್ನಲ್ಲ, ಎರಡು ಪಡಿ ಅಕ್ಕಿಯನ್ನು. ಆದ್ದರಿಂದ ಆತನು ಹೆಚ್ಚಾಗಿ ಆಯ್ದು ತಂದಿದ್ದ ಅಕ್ಕಿಯನ್ನೆಲ್ಲಾ ಎಲ್ಲಿಂದ ಆಯ್ದು ತಂದಿದ್ದನೋ ಅಲ್ಲಿಯೇ ಹೆಂಡತಿಯ ಒತ್ತಾಯದ ಪ್ರಕಾರ ಚೆಲ್ಲಿಬರಬೇಕಾಯಿತು. ಹಾಗೆ ಚೆಲ್ಲಿ ಬರುವ ಮಾರ್ಗಮಧ್ಯದಲ್ಲಿ ಮಾರಯ್ಯನು ಶಿವಾನುಭವಮಂಟಪದೊಳಕ್ಕೆ ಹೋಗಿ-ತನ್ನ ಕಾಯಕರೀತಿಯನ್ನು ಕುರಿತು ತನ್ನ ಹೆಂಡತಿ ಆಕ್ಷೇಪಿಸಿದ್ದು ಸರಿಯೇ ಎಂದು ಅಲ್ಲಿ ಪ್ರಶ್ನಿಸುತ್ತಾನೆ. ಆದರೆ ಲಕ್ಕಮ್ಮನು ಮಹಾಶಿವಶರಣೆಯೆಂಬುದು ಆ ಶರಣರಿಗೆಲ್ಲಾ ತಿಳಿದ ವಿಷಯವೇ ಆಗಿತ್ತಾಗಿ-''ಲಕ್ಕಮ್ಮನು ಆಚರಣೆಯನ್ನು ಬಲ್ಲವಳು. ಅಷ್ಟೇ ಅಲ್ಲ ಆಕೆ ಸಾಕ್ಷಾತ್ ಮುಕ್ತ್ಯಂಗನೆ'' ಎಂದುಬಿಡುವರು.

ಈ ಮಧ್ಯೆ ಗಂಡ ಅಕ್ಕಿಯನ್ನು ಚೆಲ್ಲಿ ಬರುವುದು ತಡವಾಯಿತೆಂದು ಲಕ್ಕಮ್ಮನು ಮಾರಯ್ಯನನ್ನು ಹುಡುಕಿಕೊಂಡು ಮನೆಗೆ ಕರೆತಂದು-ಸತಿಪತಿಗಳಿಬ್ಬರೂ ಕೂಡಿ ಗುರು-ಲಿಂಗ-ಜಂಗಮಕ್ಕೆ ದಾಸೋಹ ನೀಡಿದರು. ಇದು ಆ ಗಂಡಹೆಂಡಿರ ನಿತ್ಯದಿನಚರಿಯಾಗಿತ್ತು.

ಹೀಗಿರುವಲ್ಲಿ- ಒಮ್ಮೆ ಶಿವನೇ ಜಂಗಮ ವೇಷದಲ್ಲಿ ಅವರ ಮನೆಗೆ ಬಂದು ಚಳಿಯಿಂದ ಗಡಗಡ ನಡುಗುವಂತೆ ನಟಿಸುವನು. ಆಗ ಅವನಿಗೆ ಲಕ್ಕಮ್ಮ ತಾನು ಉಟ್ಟಿದ್ದ ಸೀರೆಯಲ್ಲೇ ಅರ್ಧ ಹರಿದುಕೊಡುವಳು. ಶಿವಜಂಗಮನು ಮತ್ತೆಯೂ ತಡೆಯಲಾರದ ಚಳಿಯೆಂದು ನಡುಗಲು ಲಕ್ಕಮ್ಮನು ತಾನು ಉಟ್ಟಿದ್ದ ಉಳಿದರ್ಧಸೀರೆಯನ್ನೂ ಶಿವನಿಗೆ ಕೊಡುವೆನೆನ್ನುವಳು. ಆದರೆ ಶಿವನು ಒಪ್ಪಲಿಲ್ಲ. ಆ ವೇಳೆಗೆ ಸರಿಯಾಗಿ ಮನೆಗೆ ಬಂದ ಮಾರಯ್ಯನು ವೃತ್ತಾಂತವನ್ನೆಲ್ಲಾ ಕೇಳಿ ತಿಳಿದು-ತನ್ನ ಮೈಮೇಲೆ ಬಟ್ಟೆಯೇನೂ ಇಲ್ಲವಾದರೂ-ಕಟ್ಟಿದ್ದ ಕೌಪೀನ ನೆನಪಾಗಿ, ಅದನ್ನೇ ಬಿಚ್ಚಿ ಶಿವನಿಗೆ ಕೊಡುವನು. ಆದರೂ ಶಿವನಿಗೆ ಚಳಿ ಬಿಡಲಿಲ್ಲ. ಆಗ ಲಕ್ಕಮ್ಮನು ಶಿವನ ಮೈಚಳಿಯನ್ನು ಬಿಡಿಸಲು ತನ್ನ ಅಭಿಮಾನ ಅಡ್ಡಿಯಾಗಬಾರದೆಂದು ನಿಶ್ಚಯಿಸಿ, ಮೈಮೇಲಿದ್ದ ಉಳಿದರ್ಧ ಸೀರೆಯನ್ನು ಬಿಚ್ಚಿ ಶಿವನಿಗೆ ಕೊಡುವಳು. ಶಿವನಾದರೋ ಆ ಮುಗ್ಧರಿಬ್ಬರ ಅರ್ಪಣಭಾವಕ್ಕೆ ಮನಸೋತು, ಮುದ್ದಿನಿಂದಲೇ-''ಲಜ್ಜೆಹೋದ ನಿರ್ಲಜ್ಜ''ರಿವರೆನ್ನುತ್ತ ಮೆಚ್ಚಿಕೊಳ್ಳುವನು. ಶಿವನ ಆ ಮಾತು ಆ ಶಿವಭಕ್ತರೀರ್ವರ ನಿರಾವರಣ ನಿತ್ಯಪರಂಜ್ಯೋತಿ ಸ್ವರೂಪವನ್ನೇ ಒತ್ತಿ ಹೇಳುತ್ತದೆ. ಶಿವನು ಅವರಿಗೆ ವರವನ್ನೇನಾದರೂ ಕೇಳಿರೆಂದರೆ-ಶಿವಭಕ್ತಿಯಲ್ಲದೆ ನಮಗಿನ್ನೇನೂ ಬೇಡವೆಂದ ಆ ದಂಪತಿಗಳನ್ನು ''ಪರಮ ಶಾಂತ ನಿರ್ಲಜ್ಜ''ರೆಂದು ಮನದುಂಬಿ ಕೊಂಡಾಡುವನು. ಆಗ ಶಿವನಿಗೆ ನಿರ್ಲಜ್ಜ ಶಾಂತಯ್ಯ ದಂಪತಿಗಳ ನೆನಪಾಗಿರಬೇಕು.

ಹೀಗೆ ಇಹಲೋಕಯಾತ್ರೆ ಮುಗಿದ ಮೇಲೆ ಮಾರಯ್ಯ ಮತ್ತು ಲಕ್ಕಮ್ಮರೀರ್ವರೂ ಅಮರೇಶ್ವರಲಿಂಗದಲ್ಲಿ ಬೆರೆತು ನಿಜ ಸುಖದಲ್ಲಿದ್ದರು. ಇದಿಷ್ಟೂ ಹಿಂದೆ ಹೇಳಿದ ಕಥಾ

ಸೂತ್ರರತ್ನಾಕರದಿಂದ ಮಾರಯ್ಯ ಲಕ್ಕಮ್ಮಗಳ ಸಂಬಂಧವಾಗಿ ತಿಳಿದುಬರುವ ಕುತುಹಲಕಾರಿಯಾದ ವೃತ್ತಾಂತ.

ಇಂಥ ಅಪೂರ್ವ ಸತಿಪತಿಗಳಿಬ್ಬರ ಸಾರ್ಥಕ ಜೀವನವನ್ನು ಕಾಯಕತತ್ತ್ವ ನಿರೂಪಣೆಗಾಗಿ ಗುಮ್ಮಳಾಪುರದ ಸಿದ್ಧಲಿಂಗನು ತನ್ನ ಶೂನ್ಯ ಸಂಪಾದನೆಯೊಳಕ್ಕೆ ಸೇರ್ಪಡೆಮಾಡಿದ್ದರಿಂದ ಬಸವಾದಿ ಪ್ರಮಥರ ಸಂದೇಶದ ಪ್ರಾಣಪದಕದಂತಿರುವ ಕಾಯಕದಾಸೋಹಕಲ್ಪನೆಯನ್ನು ಇಲ್ಲಿ ಸಮರ್ಥವಾಗಿ ಪ್ರತಿಪಾದಿಸಿದಂತಾಗಿದೆ. ಮುಂದೆ ಅದನ್ನೇ ನಾವೀಗ ನೋಡಬಹುದು.

ಅನುಭವ ಮಂಟಪದಲ್ಲಿ ಬಸವಣ್ಣ ಮುಂತಾದ ಶರಣರು ಪ್ರಭುದೇವರೊಡನೆ''ಸುಖಾನುಭವ ಗೋಷ್ಠಿ''ಯಲ್ಲಿದ್ದಾಗ- ಅಲ್ಲಿಗೆ ಆಯ್ದಕ್ಕಿ ಮಾರಯ್ಯ ಬಂದು ನಡೆಯುತ್ತಿದ್ದ ಶಿವಾನುಭಾವ ಸಂವಾದದಲ್ಲಿ ಭಾಗವಹಿಸಿ- ಕಾಯಕವು ನಿರ್ವಂಚನೆಯಿಂದ ನಡೆದದ್ದೇ ಆದರೆ ಅದೇ ಗುರು, ಅದೇ ಲಿಂಗ, ಅದೇ ಜಂಗಮ, ಆ ಕಾಯಕಕ್ಕಿಂತ ಮಿಗಿಲಾದ ಕೈಲಾಸಪದವಿಯಿನ್ನೊಂದಿಲ್ಲವೆನ್ನುತ್ತ ತಮ್ಮ ಆ ನಿಲುವನ್ನು ಈ ಮುಂದಿನಂತೆ ವಿವರಿಸುವನು.

ಮಾರಯ್ಯ ಕಾಯಕದಲ್ಲಿ ನಿರತವಾಗಿರುವಾಗ ಗುರುದರ್ಶನವನ್ನಾಗಲಿ ಲಿಂಗಪೂಜೆಯನ್ನಾಗಲಿ ಮರೆಯಬೇಕು. ಆಗ ಜಂಗಮ ಬಂದು ಮುಂದೆ ನಿಂತರೂ-ಆತನ ಹಂಗಿಲ್ಲದೆ ಪ್ರಾರಂಭಿಸಿದ ದೈನಂದಿನ ಕಾಯಕವನ್ನು ಸಾಂಗವಾಗಿ ಪೂರೈಸಬೇಕು. ಕಾಯಕವೇ ಕೈಲಾಸವಾದ್ದರಿಂದ ಶಿವನಾದರೂ ಇರುವುದು ಆ ಕಾಯಕದಲ್ಲೇ. ಮತ್ತು ಹಾಗದ ಕಾಯಕಮಾಡಿ ಹಣವಡ್ಡವನ್ನು ಕೊಡಿರೆಂದು ಅಧಿಕವಾಗಿ ಕೇಳಿದರೆ- ಅದು''ಸತ್ಯಕಾಯಕ''ವೆನಿಸುವುದಿಲ್ಲ. ತಾನು ಮಾಡಿದ ಕಾಯಕಕ್ಕೆ ಕಡಿಮೆಯಾಗಿಯೇ ಕೇಳಿದರೆ ಅದು ''ಚಿತ್ತಶುದ್ಧಕಾಯಕ'' ಎನಿಸುವುದು. ಇಂಥ ಕಾಯಕವನ್ನೇನೂ ಮಾಡದೆ ಶಿವಭಕ್ತರ ಮನೆಗಳಿಗೆ ನುಗ್ಗಿ ಹಣಕೊಡಿ ಹೊನ್ನುಕೊಡಿ ಎನ್ನುವುದು ಸದ್ಭಕ್ತನಿಗೆ ಸಲ್ಲದ ವರ್ತನೆ. ಗುರು ಲಿಂಗ-ಜಂಗಮಕ್ಕೆ ದಾಸೋಹ ಮಾಡಲು ಹೊನ್ನು-ಹೆಣ್ಣು-ಮಣ್ಣು ಬೇಕು ನಿಜ. ಆದರೆ ಆ ದಾಸೋಹಕ್ಕೆ ಸಾಧನವಾದ ಕಾಯಕದಲ್ಲಿ ತೊಡಗಿರುವಾಗ ಆ ಹೊನ್ನು-ಹೆಣ್ಣು-ಮಣ್ಣು ಮೂರರ ಮೇಲಣ ವ್ಯಾಮೋಹವನ್ನು ತೊರೆದಿರಬೇಕು. ಈ ನಿರ್ಮೋಹಕಾಯಕ ರೀತಿಗೆ ''**ಮಾಟಸ್ವಸ್ಥತೆ**'' ಎಂದು ಹೆಸರು. ಇದು ಶಿವಜ್ಞಾನಕ್ಕೆ ಅತ್ಯವಶ್ಯಕ.

ಪ್ರಭು: ಹೀಗೆ ಮಾರಯ್ಯ ತನ್ನ ಕಾಯಕದ ಸ್ವರೂಪವನ್ನು ಪ್ರಭುದೇವರಿಗೆ ನೀವೇದಿಸಿಕೊಳ್ಳಲು- ಆ ಪ್ರಭುದೇವರು ಹೇಳುತ್ತಾರೆ-ಕಾಯಕ ಮಾಡುವಾಗ ನಾನು ಕಾಯಕ ಮಾಡುತ್ತೇನೆ. ನಾನು ದಾಸೋಹ ಮಾಡುತ್ತೇನೆ ಎಂಬ ಅಹಂಭಾವ ಹೋದಲ್ಲದೆ ''ಮಾಟಸ್ವಸ್ಥತೆ'' ಲಭಿಸದು ಮತ್ತು ಅಹಂಕಾರವಿದ್ದಲ್ಲಿ ಚಿತ್ತಸ್ವಾಸ್ಥ್ಯವಿಲ್ಲ,

ಚಿತ್ತಸ್ವಾಸ್ಥ್ಯವಿಲ್ಲದಿದ್ದಲ್ಲಿ ದಾಸೋಹ ತಾನೇ ಹೇಗೆ ಸಂಪನ್ನವಾದೀತು? ದಾಸೋಹ ಸಂಪನ್ನವಾದಲ್ಲದೆ ಹೇಗೆ ನೀನು ಶಿವನಲ್ಲಿ ಬೆರೆಯಲಾದೀತು? ಎಂದರು.

ಮಾರಯ್ಯ: ಕಾಯಕ ಮಾಡುತ್ತೇನೆನ್ನುವುದೇ ಅಹಂಕಾರವೆಂಬಂತೆ ಇದ್ದ ಪ್ರಭುದೇವರ ಆ ಮಾತನ್ನು ಕೇಳಿ ಮಾರಯ್ಯ-ಅದಲ್ಲ ನನ್ನ ಮಾತು. ನಾವು ಮಾಡುವ ಕಾಯಕದಲ್ಲಿ ನಮ್ಮಮನ ನಿಂತರೆ, ಆ ನಿಂತ ನೆಲೆಯಲ್ಲೇ ನಾವು ಲಿಂಗಸ್ವರೂಪವಾಗುತ್ತೇವೆ ಎಂದನು.

ಪ್ರಭು: ಅದಕ್ಕೆ ಪ್ರಭುದೇವರು ಹೇಳುತ್ತಾರೆ- ನಾನು ಮಾಡುತ್ತೇನೆ, ನಾನು ಆಗುತ್ತೇನೆ ಎಂದು ಕಾಯಕವನ್ನು ಮಾಡುತ್ತಲೇ ಇದ್ದರೆ, ಅದು ಮುಗಿಯಿತು ಎನ್ನುವುದು ಯಾವಾಗ? ತನ್ನಲ್ಲೇ ಇರುವ ಲಿಂಗವನ್ನು ಕಾಣದೆ, ಅದನ್ನು ಕಾಯಕದಲ್ಲಿ ಹುಡುಕಿದರೆ, ನೀರಿನಲ್ಲಿ ನಿಂತಿರುವ ಅಗಸ ಬಾಯಾರಿ ನೀರೆಲ್ಲಿದೆಯೆಂದು ಹುಡುಕಾಡಿದಂತೆ ಹಾಸ್ಯಾಸ್ಪದವಾಗುವುದು ಎಂದರು.

ಮಾರಯ್ಯ: ಕಾಯಕವೆನ್ನುವುದು ಜೀವನಪರ್ಯಂತ ಮಾಡುವುದಲ್ಲ ಎಂಬರ್ಥದ ಪ್ರಭುದೇವರ ಆ ಮಾತನ್ನು ಕೇಳಿ. ಮಾರಯ್ಯ-ತೊಟ್ಟು ಕಳಚಿ ಬೀಳುವ ತನಕ ಹಣ್ಣಿಗೆ ಹೇಗೆ ವೃಕ್ಷದಾಶ್ರಯವಿರಲೇ ಬೇಕೋ- ಹಾಗೆ ಈ ಮರ್ತ್ಯಲೋಕದಲ್ಲಿರುವ ತನಕ ನಮಗೆ ಶರಣರ ಸಂಗ ಮತ್ತು ಜಂಗಮ ಸೇವೆಗೆ ಸಾಧನವಾದ ಕಾಯಕ ಬೇಕೇ ಬೇಕು ಎನ್ನುತ್ತಾನೆ.

ಪ್ರಭು: ಅದಕ್ಕೆ ಪ್ರಭುದೇವರು-ನೀನು ಹೇಳುವಂತೆ ನಾವು ಕಾಯಕವೇನಾದರೊಂದನ್ನು ಮಾಡುತ್ತಿರಬೇಕೆಂಬುದನ್ನು ಒಪ್ಪಿದರೂ- ಆ ಮಾಡುವ ಕಾಯಕ ತನ್ನಲ್ಲಿ ತಾನೇ ಪರಿಪೂರ್ಣವಾಗುವುದಿಲ್ಲ. ಆ ಮಾಡುವ ಕಾಯಕದ ಮೂಲಕವೇ- ಆ ಕಾಯಕಕ್ಕೆ ಉಪರಿಯಾದ ಅತೀತಪರತತ್ತ್ವವದ ಅರಿವನ್ನು ಪಡೆಯಬೇಕು. ಒಮ್ಮೆ ಆ ಅರಿವಾಯಿತೆಂದ ಮೇಲೆ, ತನ್ನ ಸರದಿಯನ್ನು ಮೀರಿ ಕಾಯಕವನ್ನು ಮತ್ತೆಯೂ ಮಾಡುತ್ತಲೇ ಇರಬೇಕು ಎಂಬ ವ್ಯರ್ಥಭ್ರಮೆಯನ್ನು ಬಿಡಬೇಕು. ಆಗಲೇ ಲಿಂಗೈಕ್ಯಸ್ಥಿತಿಯನ್ನು ಸಾಧಿಸಿದಂತಾಗುವುದು ಎನ್ನುವರು.

ಮಾರಯ್ಯ: ಆಗ ಮಾರಯ್ಯ ಕಾಯಕವೇ ತನ್ನ ಪರಮಗಂತವ್ಯವೆಂದು ಪಟ್ಟು ಹಿಡಿಯದೆ- ತನ್ನಲ್ಲಿ ತಾನಾಗಬೇಕೆಂದ ಪ್ರಭುದೇವರ ಮಾತಿಗೆ ಮಾರಯ್ಯ ಉದ್ದೀಪಿತನಾಗಿ ನಿಜ ಕಾಯಕವನ್ನು ಜೀವನಪರ್ಯಂತ ಮಾಡುತ್ತಲೇ ಇದ್ದರೆ ನಾನು ಘನಲಿಂಗ ಸಮಾಧಿಸುಖವನ್ನು ಅನುಭವಿಸುವುದು ಯಾವಾಗ ಎನ್ನುತ್ತ ತನಗೆ ಆ ದಿವ್ಯಜ್ಞಾನವನ್ನು ಉಪದೇಶಿಸಿದ್ದಕ್ಕಾಗಿ ಪ್ರಭುದೇವರಿಗೆ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತಾ- ಹೌದು, ನಿಮ್ಮ ಮಾತು ನಿಜ. ಗೆದ್ದಲುಹುಳು ಹುತ್ತವನ್ನು ಕಟ್ಟಿ ಸರ್ಪನಿಗೆ ಬಿಟ್ಟು ಹೋದಂತೆ, ನಾನು ಕಾಯಕ ಮಾಡಿ ಅಲ್ಲಿಯ ದ್ರವ್ಯವನ್ನು ಇಲ್ಲಿಗೆ ತಂದು ದಾಸೋಹಮಾಡಿದರೆ

ನನಗಿನ್ನೆಲ್ಲಿಯದು ಮುಕ್ತಿ? ತಮ್ಮ ಸಹವಾಸದಿಂದ ಘನಕ್ಕೆ ಘನವಾದ ಪರವಸ್ತು ವೇದ್ಯವಾದ ಮೇಲೆ- ಮಾಡಿದೆ ನೀಡಿದೆನೆಂಬ ದ್ವಂದ್ವವಳಿದು ಲಿಂಗದಲ್ಲಿ ನಾನು ತದ್ಗತನಾದೆ ಎಂದನು.

೨

ಲಕ್ಕಮ್ಮ: ಹೀಗೆನ್ನುತ್ತ, ಆಯ್ದಕ್ಕಿ ಮಾರಯ್ಯ ತನಗೆ ಘನಲಿಂಗದಲ್ಲಿ''ಮನಮಗ್ನಯೋಗ'' ಸಿದ್ಧಿಸಿತೆಂದು ಹಿಗ್ಗಿ ಪ್ರಭುದೇವರಲ್ಲಿ ಬಿನ್ನೈಸುತ್ತಿದ್ದ ಸಮಯಕ್ಕೆ ಆ ಮಾರಯ್ಯನ ಸತಿ ಲಕ್ಕಮ್ಮ ಅನುಭವಮಂಟಪಕ್ಕೆ ಬಂದು, ಪ್ರಭುದೇವರೇ ಮುಂತಾದ ಮಹಾಗಣಂಗಳಿಗೆ ನಮಸ್ಕಾರ ಮಾಡಿ, ಮಾಡಬೇಕಾದ ಕಾಯಕವನ್ನು ಬಿಟ್ಟು ಸ್ವಲೀನವಾಗಿ ಕುಳಿತಿದ್ದ ಮಾರಯ್ಯನನ್ನು ಅಲುಗಿ ಎಚ್ಚರಿಸಿ- ಯಜಮಾನರೇ, ಕಾಯಕ ನಿಂತು ಹೋಯಿತಲ್ಲಾ! ಭಾವಶುದ್ಧತೆಯಿಂದ ಹೋಗಿ, ಮಹಾಶಿವಶರಣರ ತಿಪ್ಪೆಯ ತಿಪ್ಪಲ ಅಕ್ಕಿಯನ್ನು ಆಯ್ದು ತನ್ನಿ. ಮಾರಯ್ಯ ಪ್ರಿಯ ಅಮರೇಶ್ವರ ಲಿಂಗದ ಧ್ಯಾನಧಾರಣ ಸಮಾಧಿಗಿಂತ ಮಿಗಿಲಾದ ದಾಸೋಹ ಮಾಡಬೇಕು. ಹೊತ್ತಾಯಿತು ಬೇಗ ಹೊರಡಿ. ನಾನು ಜ್ಞಾನಿಯೆಂಬ ಅಹಂಭಾವ ಹಿಂಗಿದ ಈ ದೇಹವೆಂಬ ವಸ್ತ್ರದಲ್ಲಿ ಬಯಕೆ ಹಿಂಗಿದ ಹಸ್ತದಿಂದ ಅಕ್ಕಿಯನ್ನು ಆಯ್ದುತನ್ನಿ, ಸಜ್ಜನರಾದ ಪ್ರಮಥರ ಮನೆಯ ಅಂಗಳಕ್ಕೆ ಹೋಗಿ ಎನ್ನುತ್ತಾಳೆ.

ಹೀಗೆ ಆಯ್ದಕ್ಕಿ ಮಾರಯ್ಯನನ್ನು ಲಕ್ಕಮ್ಮ ಕಾಯಕಕ್ಕೆ ಕಳಿಸಿ ಮನೆಗೆ ಹೋಗಲು, ಇತ್ತ ಮಾರಯ್ಯನಿಗೆ ತನ್ನ ಕಾಯಕಶೀಲವೇ ಮೇಲುಗೈಯಾಗಿ, ಪ್ರಭುದೇವರು ಬೋಧಿಸಿದ ಘನಲಿಂಗಸಮಾಧಿಯೋಗವೆಲ್ಲಾ ಎದ್ದುಹೋಯಿತು. ದಡದಡನೆ ಬಸವಣ್ಣನವರ ಮನೆಯ ಅಂಗಳಕ್ಕೆ ಬಂದ. ಅಲ್ಲಿ ''ದಯವೇ ಧರ್ಮದ ಮೂಲವಯ್ಯ'' ಎಂದ ಬಸವಣ್ಣನವರು ನಿರ್ಧನಿಕನಾದ ಮಾರಯ್ಯನಿಗೆ ನಿರಾಯಾಸ ಯಥೇಚ್ಛವಾಗಿ ಲಭಿಸಲೆಂದು ಹೆಚ್ಚಾಗಿ ಚೆಲ್ಲಿದ್ದ ಅಕ್ಕಿಯನ್ನು ಮಾರಯ್ಯ ಆಯ್ದು ಅಂಗವಸ್ತ್ರದಲ್ಲಿ ಗಂಟುಕಟ್ಟಿ ತಲೆಯ ಮೇಲೆ ಹೊತ್ತು ಮನೆಗೆ ತಂದ. ಅದನ್ನು ಕಂಡ ಸತಿಲಕ್ಕಮ್ಮ ಮಾರಯ್ಯನನ್ನು ಆಕ್ಷೇಪಿಸುತ್ತಾಳೆ-ನಮಗೆ ನೀವು ಎಂದಿನಂತೆ ತರುತ್ತಿದ್ದಷ್ಟೇ ಸಾಕು. ಹೆಚ್ಚುವರಿಯಾದ ಅಕ್ಕಿಯನ್ನು ಮರಳಿ ಅಲ್ಲಿಯೇ ಸುರಿದು ಬನ್ನಿ. ಸಿಕ್ಕಿತೆಂದು ಅಪರಿಮಿತವಾಗಿ ತರದೆ, ಅವಶ್ಯವಿದ್ದಷ್ಟನ್ನು ಮಾತ್ರ ಆಯ್ದು ತರುವುದು ನಮ್ಮ ಕಾಯಕದ ಪರಿ. ಈ ಮಿತಿ ಮೀರಿದ ಆಸೆ ರಾಜಕೀಯದವರಿಗಲ್ಲದೆ ಶಿವಭಕ್ತರಿಗೇಕೆ? ಇಷ್ಟೊಂದು ಅಕ್ಕಿಯ ಮೇಲಣ ಆಸೆ ನಿಮಗೇಕೆ? ಇದನ್ನು ಶಿವನೊಪ್ಪುವುದಿಲ್ಲ. ನಮಗೆ ದೈಹಿಕವಾಗಿ ಬಡತನವಿದೆಯೇ ಹೊರತು, ಮಾನಸಿಕವಾಗಿ ನಾವು ಸಂಪದ್ಯುಕ್ತರು. ಎಷ್ಟೇ ದೊಡ್ಡದಾದ ಬೆಟ್ಟವನ್ನಾದರೂ ಸಣ್ಣದೊಂದು ಬಾಣ ಪುಡಿಗುಟ್ಟುವಂತೆ, ನಮ್ಮ ಬಡತನವನ್ನೆಲ್ಲಾ ನಮ್ಮಲ್ಲಿರುವ ಶಿವಭಕ್ತಿ ಪುಡಿಗುಟ್ಟುವುದು. ನಮ್ಮಲ್ಲಿ ಅಂಥ ಭಕ್ತಿಯಿರುವ ತನಕ ನಾವು ಬಡವರೆಂಬ

ಭಾವನೆಗಾದರೂ ಎಡೆಯೆಲ್ಲಿದೆ? ಮಾಡುವ ದುಷ್ಕರ್ಮದಿಂದ ಬರುವ ದಾರಿದ್ರ್ಯಾದಿಗಳು- ಇಚ್ಛಾಪೂರ್ವಕವಾಗಿ ಬಡತನವನ್ನು ಏರಿಸಿರುವ ಮತ್ತು ಸತ್ಯಕಾಯಕನಿಷ್ಠರಾದ ನಮ್ಮಂಥವರಿಗೆಲ್ಲಿಯದು? ಶಿವನಿರುವ ತನಕ ನಮಗೆ ಬಡತನವಿಲ್ಲ. ವಸ್ತುಸ್ಥಿತಿ ಹೀಗಿರುವಲ್ಲಿ- ಸುಲಭವಾಗಿ ನಮಗೆ ಕಾಯಕ ದೊರೆಯಲೆಂದು ತಮ್ಮ ಅಂಗಳದಲ್ಲಿ ಅಕ್ಕಿಯನ್ನು ಚೆಲ್ಲುವ ಬಸವಣ್ಣನವರ ಹಂಗು ನಮಗೆ ಬೇಕಾಗಿಲ್ಲ. ಭಕ್ತರಾದವರು ಕಾಯಕದ ಹೆಸರಿನಲ್ಲಿ, ಹೀಗೆ ಅದ್ದೂರಿಯಾಗಿ ತಂದು ಆಡಂಬರವಾಗಿ ದಾಸೋಹ ಮಾಡಬಹುದೇ? ಒಂದು ಸಾರೆಯಷ್ಟು ತರಲಿ ಮನಸಾರೆ ದಾಸೋಹ ಮಾಡಬೇಕು. ಆಸೆ-ಆತುರವೆಂದು ಮನಸ್ಸು ಇಬ್ಭಾಗವಾಗದೆ, ನಮಗೇನು ಲಭ್ಯವಿದೆಯೋ ಅದು ಒಮ್ಮನವಾಗಿ ಶಿವನಿಗರ್ಪಿತವಾಗಬೇಕು. ನಾವಾದರೂ ದಾಸೋಹ ಮಾಡುವುದು ಮತ್ತು ದಾನ ಮಾಡುವುದು ಭಕ್ತರು ಬಡವರೆಂದಲ್ಲ. ನಮ್ಮ ಮನದ ಬಡತನವನ್ನು ನೀಗಿಕೊಳ್ಳುವುದಕ್ಕಾಗಿಯೇ, ನಾವು ಶಿವಭಕ್ತರಿಗೆ ನೀಡಬೇಕಷ್ಟೆ! ಆ ಶಿವಭಕ್ತರು ದೇವರಿಂದ ಪಡೆದುಬಂದವರಲ್ಲವೆ? ನಮಗೇನಿದೆಯೋ ಅದೇ ಐಶ್ವರ್ಯ-ದೇವರು ಕೊಟ್ಟಿಲ್ಲದೆ ಯಾರಿಗೂ ಏನೂ ದಕ್ಕುವುದಿಲ್ಲ- ಈ ತೃಪ್ತಿ ನಮಗಿರಬೇಕು. ಈ ಭಾವಶುದ್ಧವಿಲ್ಲದ ಮೇಲೆ ಭಕ್ತಿಯೆಲ್ಲಿರುವುದು? ಮತ್ತು ಅಕಾಯಕದಿಂದ ಹೆಚ್ಚಾಗಿ ತಂದು ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ದುರ್ವ್ಯಯವಷ್ಟೆ! ಮಾತಿನಲ್ಲಿ ದಾಸೋಹಂ ಎಂದು, ನಡೆಯಲ್ಲಿ ಆಡಂಬರದ ಗರ್ವವಿದ್ದರೆ ನಮಗೆ ಶಿವಜ್ಞಾನೋದಯವಾಗಿರುವುದಕ್ಕೇನಿದೆ ಸಾಕ್ಷಿ? ಜನಜಂಗುಳಿಯಿಂದ ''ತ್ಯಾಗಿ'' ಎನಿಸಿಕೊಳ್ಳುವುದಕ್ಕಾಗಿ ಮಾಡಿದರೆ, ಅದು ಮುಡಿಯಿಲ್ಲದೆ ಮಾಡಿಕೊಳ್ಳುವ ಬೋಳುಶೃಂಗಾರದಂತೆ ವಿಕೃತವೇ ಆಗುವುದು ಮತ್ತು ದಾಸೋಹಂಭಾವವನ್ನು ಏಕಪ್ರಕಾರವಾಗಿ ರೂಢಿಸಿಕೊಳ್ಳದೆ ಮಾಡುವ ಭಕ್ತಿ ತಳ ಒಡೆದ ಮಡಕೆಯಂತೆ ಅಲ್ಲಿ ಶಿವಭಾವ ನಿಲ್ಲುವುದಿಲ್ಲ. ಎಲೆ ಮಾರಯ್ಯ, ನೀವೀ ದಿನ ಒಂದು ಅಳತೆಮೀರಿದ ಅಕ್ಕಿಯನ್ನು ಅಳತೆಗೆಟ್ಟು ಆಸೆಯಿಂದ ತಂದಿರಿ! ಅಷ್ಟು ಅಕ್ಕಿ ನಿಮಗೆಲ್ಲಿ ಸಿಕ್ಕಿತು? ಅದೇನು ಬಡವರು ಆಯ್ದುಕೊಂಡು ಹೋಗಲೆಂದು ಬಸವಣ್ಣ ಚೆಲ್ಲಿದ್ದಲ್ಲವೇನು? ಹೀಗೆ ಗರ್ವಮೂಲವಾಗಿ ಅವರು ಚೆಲ್ಲಿದ ಮತ್ತು ನೀವು ದುರಾಸೆಯಿಂದ ಆಯ್ದು ತಂದ ಈ ಅಕ್ಕಿಯಿಂದ ಮಾಡಿದ ಅನ್ನ ಲಿಂಗಕ್ಕೆ ಅರ್ಪಿತವಾಗಲು ಯೋಗ್ಯವಲ್ಲ. ಅದನ್ನು ಅಲ್ಲಿಯೇ ಚೆಲ್ಲಿ ಬನ್ನಿ ಹೋಗಿ- ಎಂದಳು ಲಕ್ಕಮ್ಮ.

ಮಾರಯ್ಯ: ಆಗ ಮಾರಯ್ಯ ಎದೆಗುಂದಿ- ಹಾಗಾದರೆ ನದಿ ಹರಿದು ಸಮುದ್ರದಲ್ಲಿ ಒಂದಾಗುವಂತೆ, ಕರ್ಪೂರ ಉರಿದು ನಿರ್ವಾಣವಾಗುವಂತೆ ನಾನಿನ್ನು ಲಿಂಗದಲ್ಲಿ ಬೆರೆತು ಬಯಲಾಗುವ ಬಗೆಯಾವುದು? ಗಂಗೆವಾಳುಕ ಸಮಾರುದ್ರರೂ ಪ್ರಮಥಗಣಂಗಳೂ ಸಾಲೋಕ್ಯಸಾಮೀಪ್ಯಾದಿ ಪದವಿಗಳನ್ನು ಪಡೆದರು- ಆ ಪದವಿ ಪ್ರಾಪ್ತಿಗೆ ಬೇಕಾದ ವಿಧಾನವನ್ನು ನನಗೆ ನೀನು ತಿಳಿಸು ಎಂದು ಹೆಂಡತಿಗೇ ವಿನಂತಿಸಿಕೊಂಡನು.

ಲಕ್ಕಮ್ಮ: ಆಗ ಲಕ್ಕಮ್ಮ ಮಾರಯ್ಯನ ಆ ಪರಲೋಕ ಪದವಿಯ ಲಾಲಸೆಯನ್ನೂ''ಶಿವಲೋಕಭ್ರಮೆ'' ಎಂದು ವಿಡಂಬಿಸುತ್ತ- ಈ ಲೋಕದಲ್ಲಿ ಮಾಡಬೇಕಾದ ಕಾಯಕದಾಸೋಹದಂಥ ಮಹತ್ಕಾರ್ಯವಿರುವಾಗ ಬೇರೆ ಏನಾದರೊಂದು ಫಲ ಪದವಿಗೆ ಹಂಬಲಿಸುವುದೇಕೆ? ಗುರು-ಲಿಂಗ-ಜಂಗಮ ದಾಸೋಹವೆಲ್ಲಿ ನಡೆಯುತ್ತಿರುವುದೋ ಅಲ್ಲೇ ಕೈಲಾಸವಿರುವುದು ಕೂಡ. ಏನಾದರೊಂದನ್ನು ಕರ್ಮದಂತೆ ಚಾಕರಿಯ ಮಾಡಿ ಕೈಲಾಸಕ್ಕೆ ಹೋಗುವೆನೆಂದರೆ- ಆ ಕೈಲಾಸವೇನು ಕೂಲಿಗೆ ದೊರೆಯುವೊಂದು ಸ್ಥಳ ವಿಶೇಷವೆಂದು ತಿಳಿದಿರೇನು? ಮುಂದಿನದನ್ನು ಕನಸದೆ ಹಿಂದಿನದನ್ನು ನೆನೆಸದೆ-ವರ್ತಮಾನದಲ್ಲೇ ಸದಾಚಾರಶೀಲನಾದವನಿಗೆ ತಾನಿರುವ ಜಾಗವೇ ಕೈಲಾಸ. ಕಾಯಕದಲ್ಲಿ ನಿರತನಾಗಿದ್ದಾಗಲಂತೂ- ನಾನಿದ್ದೇನೆ ಎಂಬಷ್ಟು ಅಹಂ ಪ್ರಜ್ಞೆಯಾಗಲಿ, ನಾನು ಮಾಡುತ್ತೇನೆ ಎಂಬಷ್ಟು ಗರ್ವಸಂಭ್ರಮವಾಗಲಿ ಇರಬಾರದು. ಈ ಉಭಯಭಾವ ದೂರವಾಗಿದ್ದರೆ-'ನಾವು ಶಿವನಿಗೆ ಹತ್ತಿರವೇನು-' ಶಿವನೇ ಆಗಿರುತ್ತೇವೆ.

ಮಾರಯ್ಯ: ಆಗ ಮಾರಯ್ಯ ತನ್ನ ಸತಿ ಲಕ್ಕಮ್ಮನ ಮಾತಿನ ಪರಮಾರ್ಥವನ್ನು ಮನವರಿಕೆ ಮಾಡಿಕೊಂಡು- 'ಪ್ರಭುದೇವರ ಘನಲಿಂಗ ನಿಜಸಮಾಧಿಯೋ ಮನಮಗ್ನಯೋಗವೋ ಆ ಪ್ರಭುದೇವರಿಗೆ ಸರಿಹೊಂದಬಹುದು. ಅವರು ವಿರಕ್ತರು, ಸಂಚಾರಮೂರ್ತಿಗಳು. ಸಂಸಾರಿಗಳಾದ ನಮಗಾದರೋ'- ನೀನು ಹೇಳುವ ದಾಸೋಹ ಯೋಗವೇ ಉತ್ತಮಮಾರ್ಗ. ಇದನ್ನು ನಿನ್ನ ಉಪದೇಶದಿಂದ ನಾನೀಗ ಅಚಲವಾಗಿ ಕಂಡುಕೊಂಡೆ ಕುರುಡನಿಗೆ ಎಷ್ಟೇ ಕಸುವಿದ್ದರೇನು. ಅವನು ತನಗೆ ತಾನೆ ನಡೆಯಲಾರ. ನಾನು ಕುರುಡನಾದರೆ, ನೀನು ಕಣ್ಣುಳ್ಳವಳು. ನನ್ನನ್ನು ನೀನೀಗ ಕೈಹಿಡಿದು ನಡೆಸು. ಪತಿಯಾದ ನನಗೆ ಸತಿಯಾದ ನೀನು ಕಡಿಮೆಯೆಂಬ ಭಿನ್ನಭಾವನೆ ನನಗಿಲ್ಲ. ನೀನು ಶಕ್ತಿಸ್ವರೂಪಿಣಿಯಾದ್ದರಿಂದ, ನನ್ನ ಪ್ರಾಣಶಕ್ತಿ ಆತ್ಮಶಕ್ತಿ ನೀನೇ ಆಗಿದ್ದೀಯ ಮತ್ತು ನೀನು ನನಗೆ ಕೇವಲ ಭೋಗಾಂಗನೆಯಲ್ಲ, ಯೋಗಾಂಗನೆಯೂ ಆಗಿದ್ದೀಯ. ಆದ್ದರಿಂದ ನೀನು ನನಗೆ ದಾಸೋಹಯೋಗದ ವಿವರವನ್ನು ತಿಳಿಸು ಎಂದು ಕೇಳಿಕೊಂಡನು.

ಆಗ ಲಕ್ಕಮ್ಮ ತನ್ನ ಮಾತನ್ನೆಲ್ಲಾ ಉಪಸಂಹರಿಸುತ್ತ, ಅಹಂಕಾರವನ್ನು ಬಿಟ್ಟು ತ್ರಿವಿಧದಾಸೋಹ ಮಾಡುವುದೇ ಲಿಂಗಾಂಗ ಸಾಮರಸ್ಯ. ಅದಕ್ಕೆ ಸಾಧನ ಸತ್ಯಶುದ್ಧಕಾಯಕ. ಅದರ ವಿವರವನ್ನು ಅವರವರೇ ಸೇವಾಮಾರ್ಗದಿಂದ ಕಂಡುಕೊಳ್ಳಬೇಕು. ಮತ್ತು ರಣರಂಗಕ್ಕೆ ಹೋಗುವ ಬಂಟನಿಗೆ ಒಡೆಯನು ಆಯುಧವನ್ನು ಕೊಡಬಲ್ಲನೇ ಹೊರತು, ಶೌರ್ಯವನ್ನು ಎತ್ತಿಕೊಡಬರುವುದಿಲ್ಲ ಎಂದಳು.

ಮತ್ತೆಯೂ ಆಕೆ ತನ್ನ ಮಾತನ್ನು ಮುಂದುವರಿಸಿ ಗಂಡನಿಗೆ ಹೆಂಡತಿ ಬುದ್ಧಿ ಹೇಳುತ್ತಿರುವಳಲ್ಲಾ ಎಂದು ತಪ್ಪು ತಿಳಿಯಬೇಡಿ. ನಾನು ಅರಿತವಳೆಂಬ ಅಹಂಕಾರವೂ ನನಗಿಲ್ಲ.

ಮತ್ತೊಂದು ಮಾತನ್ನು ಹೇಳುತ್ತೇನೆ ಕೇಳಿ, ಎಳೆಯ ಸಸಿಗೆ ನೀರೆರೆದರೆ ಚಿಗುರಿ ಶಾಖೋಪಶಾಖೆಯಾಗಿ ಬೆಳೆಯುವುದಲ್ಲದೆ, ಬಡ್ಡೆಯೆಲ್ಲಾ ಡೊಗರು ಬಿದ್ದ ಕೊರಟು ಮರಕ್ಕೆ ನೀರೆರೆದರೇನು ಪ್ರಯೋಜನ? ದುರಾಸೆ ನಿಮ್ಮ ಜೀವನವೃಕ್ಷವನ್ನು ಡೊಗರುಕೊರೆಯುವ ಮುನ್ನವೇ ನಿಮ್ಮ ಕಾಯಕನಿಷ್ಠೆಯನ್ನು ಕಾಪಾಡಿಕೊಳ್ಳಿ. ಲಿಂಗಭಕ್ತಿಯ ಜೊತೆ ಜೊತೆಗೇ ಕಾಯಕದಲ್ಲಿ, ಆ ಮೂಲಕ ದಾಸೋಹದಲ್ಲಿ ನಿರತವಾದರೆ ಶಿವಶರಣರ ಆಶೀರ್ವಾದ ಮತ್ತು ಹೃದಯ ಶ್ರೀಮಂತಿಕೆ ಲಭಿಸುವುದು. ಕಾಯಕವಿಲ್ಲದವರ ಲಿಂಗಪೂಜಾದಿಗಳು ಔಪಚಾರಿಕ ಕ್ರಿಯೆಗಳಾಗಿ ಹಾಳುಬಿದ್ದ ಊರನ್ನು ಕಾವಲು ಕಾದಂತೆ ವ್ಯರ್ಥವಾಗುವವು ಲಿಂಗಪೂಜಾದಿ ಉಪಾಧಿಕ್ರಿಯೆಗಳು ಮತ್ತು ಕಾಯಕವನ್ನು ಮಾಡುವಾಗ ಇಹದ ಅಳತೆಗೆಟ್ಟ ಭೋಗಭಾಗ್ಯಗಳನ್ನಾಗಲಿ, ಪರದ ಪುಣ್ಯಪದವಿಗಳನ್ನಾಗಲಿ ಬಯಸಿ ಮಾಡಲಾಗದು. ಅಂಥ ನಿಸ್ಪೃಹ ಸೇವಾಕಲಾಪವೇ ಶುದ್ಧಕಾಯಕ. ಅದನ್ನು ''ಮಾಟ''ವೆಂದೂ ಕರೆಯುವರು. ಆ ಮಾಟವು ದಾಸೋಹದಲ್ಲಿ ನಿಷ್ಪತ್ತಿಯಾದರೆ ಅದೇ ''ಕೂಟ''-ಅಂದರೆ ಲಿಂಗೈಕ್ಯ ಪ್ರಸನ್ನ ಜೀವನದ ಪರಿ.

ಮತ್ತು ಸತಿಪತಿಗಳಾದ ನಾವಿಬ್ಬರೂ ತಿಳಿಯಬೇಕಾದ್ದು ಇದನ್ನೇ. ಜ್ಞಾನಿಗಳಾದ ನಿಮಗೆ ನಾನಿನ್ನೇನು ಹೇಳುವುದಿದೆ? ಪ್ರತಿಷ್ಠೆ ಮಾಡಬೇಕಾದ ಲಿಂಗ ಕಲ್ಲಿಗೆ ಉಳಿಯ ಪೆಟ್ಟು, ಬೇಕೇ ಹೊರತು ಸ್ವಯಂಭು ಪರಶಿವನು ತನಗೆ ತಾನೇ ಪ್ರತಿಷ್ಠಿತನು. ಹಾಗೆ ನೀವು.

ಅರಿತು ಅರಿತೂ ಮರೆತವರು ನೀವು. ಭೂಮಿಯಲ್ಲಿ ಬೀಜವು ಕೆಳಮುಖವಾಗಿ ಬಿದ್ದರೂ ಮೊಳಕೆ ಮೇಲ್ಮುಖವಾಗಿಯೇ ಬರುವುದಲ್ಲವೆ? ಮತ್ತು ನಾವು ಕೂಟಕ್ಕೆ ಮಾತ್ರ ಸತಿಪತಿಗಳಲ್ಲ ಲಿಂಗಾಂಗ ಸಾಮರಸ್ಯದ ಸುಖಾನುಭವಕ್ಕೂ ಸತಿಪತಿಗಳೇ ಎಂದಳು.

ಹೀಗೆ ತ್ರಿವಿಧದಾಸೋಹವೇ ಸದೇಹಲಿಂಗೈಕ್ಯವೆಂದು ಲಕ್ಕಮ್ಮ ಹೇಳಲು- ಮಾರಯ್ಯ ಲಕ್ಕಮ್ಮನಿಗೆ-''ಹೌದು, ನಿನ್ನನ್ನು ಪಡೆದ ನಾನೇ ಧನ್ಯ'' ಎನ್ನುತ್ತಾನೆ.

ಆಗ ಲಕ್ಕಮ್ಮನು ಮಾರಯ್ಯನಿಗೆ ಬಸವಾದಿ ಪ್ರಮಥರನ್ನು ನಮ್ಮ ಮನೆಗೆ ಬಿನ್ನಹಮಾಡಿ ಬನ್ನಿ, ಹೊತ್ತಾಯಿತು ಹೊರಡಿ ಎನ್ನುತ್ತಾಳೆ. ತಾವು ಬಡವರಾದರೂ ಅಷ್ಟು ಜನ ಗಣಂಗಳಿಗೆ ಎಡೆಮಾಡುವುದು ಹೇಗೆಂಬ ಅಳುಕೇ ಇಲ್ಲ ಲಕ್ಕಮ್ಮನಿಗೆ. ಆದರೆ ಮಾರಯ್ಯನಿಗೆ-ಎದುರಾದ ಈ ಹೊಸ ಸಮಸ್ಯೆಯಿಂದಾಗಿ ಭಯವಾಗುತ್ತದೆ.- ನಾನಾ ವಿಧ ನೇಮಹಿಡಿದಿರುವ ಶರಣರಿಗೆ ಬಡವರಾದ ನಾವು ತೃಪ್ತಿಪಡಿಸುವುದು ಹೇಗೆಂದು ಚಿಂತಿಸುತ್ತ- ನಮ್ಮ ಕೈಯಲ್ಲಿ ಆಗದ್ದನ್ನೆಲ್ಲಾ ಮಾಡುತ್ತೇವೆಂದು ಮುನ್ನುಗ್ಗಿದರೆ- ಈ ನಮ್ಮ ಭಕ್ತಿಯೇ ನಮ್ಮನ್ನು ಪೇಚಿಗೆ ಸಿಲುಕಿಸುತ್ತದೆ ಎನ್ನುತ್ತಾನೆ ಮಾರಯ್ಯ.

ಆದರೆ ಲಕ್ಕಮ್ಮನಿಗೆ ತಾನು ಬಸವಾದಿ ಪ್ರಮಥರಿಗೆ ಮಾಡಬೇಕೆಂದಿರುವ ದಾಸೋಹ ಸುಸೂತ್ರವಾಗಿ ನಡೆಯುವುದೆಂಬುದರಲ್ಲಿ ಸಂಶಯವಿರಲಿಲ್ಲ. ಗಂಡನಿಗೆ

ಹೇಳುತ್ತಾಳೆ, ಧನ ಧಾನ್ಯವಿಲ್ಲವೆಂಬ ಭ್ರಮೆ ಚಿತ್ತಶುದ್ಧವಿಲ್ಲದವರಿಗೆ ಮಾತ್ರ. ಚಿತ್ತಶುದ್ಧಿಯಿಂದ ಕಾಯಕ ಮಾಡುವ ಸದ್ಭಕ್ತನಿಗೆ ಎತ್ತ ನೋಡಿದರತ್ತ ಲಕ್ಷ್ಮಿ ಒದಗಿಬರುವಳು. ಮುಖ್ಯವಾಗಿ ನಮಗಿರಬೇಕಾದ್ದು ಬಡತನ ಭಯವಲ್ಲ, ಸೇವೆ ಮಾಡಬೇಕೆಂಬ ತವಕ ಎಂದಳು.

ಆಗ ಮಾರಯ್ಯನಿಗೆ ಮನಸ್ಸಿನ ಹಿಂಜರಿತವೆಲ್ಲಾ ಹಿಂಗಿತು. ಲಕ್ಕಮ್ಮನ ಮುಖವನ್ನು ಧನ್ಯತೆಯಿಂದ ನೋಡುತ್ತ ಗಳಗಳಗೆ ಬಸವಣ್ಣನವರ ಮಹಾಮನೆಗೆ ಬಂದು ಅಮರೇಶ್ವರ ಲಿಂಗದ ಮನೆಯಲ್ಲಿ ಪ್ರಸಾದ ಸ್ವೀಕರಿಸಲು ಎಲೆ ಬಸವಣ್ಣ, ತಾವು ಗಣಂಗಳು ಸಹಿತವಾಗಿ ಬರಬೇಕು ಎಂದು ಬಿನ್ನಹ ಮಾಡಿದ. ಸತ್ಯವೆಂಬ ತಟ್ಟೆಯಲ್ಲಿ, ಚಿತ್ತಶುದ್ಧವೆಂಬ ವಿಭೂತಿಯನ್ನಿಟ್ಟು ಮಾರಯ್ಯನು ಮಾಡಿದ ಆ ಬಿನ್ನಹವನ್ನು ಕೇಳಿ ಬಸವಣ್ಣನವರಿಗೆ ಮಾತೇ ಬಾರದಾಯಿತು. ಪ್ರಸಾದಕ್ಕೆ ಬರುತ್ತೇವೆಂದರೆ ಮಾರಯ್ಯ ನಿರ್ಧನಿಕ, ಈ ಅಸಂಖ್ಯಾತ ಗಣಂಗಳಿಗೆಲ್ಲಾ ಹೇಗೆ ತೃಪ್ತಿಪಡಿಸಿಯಾನು? ಹಾಗೆಂದು ಬರುವುದಿಲ್ಲವೆಂದರೆ ಶರಣರ ಬಿನ್ನಹಕ್ಕೆ ಪ್ರತಿ ಹೇಳಿದಂತಾಗುವುದೆಂದು ಬಸವಣ್ಣನವರು ಧರ್ಮಸಂಕಟಕ್ಕೆ ಸಿಕ್ಕಿಬಿದ್ದರು.

ಆಗ ಮಾರಯ್ಯನು ಬಸವಣ್ಣನವರ ಮನಸ್ಸಿನ ತುಯ್ದಾಟವನ್ನು ಕಂಡು ನೀವು ಬರುವುದಿಲ್ಲವೆನ್ನಬೇಡಿ, ನೀವೇ ನಮಗೆ ಶಿವನಲ್ಲವೇ ಎಂದು ಬೇಡಿಕೊಂಡನು. ಆಗ ಬಸವಣ್ಣನವರು ನಾವು ಶರಣರಾದ ನಿಮಗಿಂತ ದೊಡ್ಡವರಲ್ಲ, ಆಕಾಶಕ್ಕಿಂತ ಎತ್ತರವಾದ ವೃಕ್ಷವೊಂದುಂಟೆ ಎನ್ನುತ್ತ ಬಿನ್ನಹಕ್ಕೆ ಬರಲು ಒಪ್ಪಿಕೊಂಡರು.

ಸ್ವಲ್ಪ ವೇಳೆಯಲ್ಲೇ ಬಸವಣ್ಣನವರು ಪ್ರಭುದೇವರು ಮುಂತಾದ ಗಣಂಗಳನ್ನು ಕೂಡಿಕೊಡು, ಮಾರಯ್ಯನ ಮನೆಗೆ ಬಂದೇಬಿಟ್ಟರು. ಅವರನ್ನೆಲ್ಲಾ ಸ್ವಾಗತಿಸುತ್ತ ಮಾರಯ್ಯ ಈ ಅಸಂಖ್ಯಾಂತ ಗಣಂಗಳು ಸಹಿತವಾಗಿ ಬಂದಿರುವ ಬರವು ವಿಶ್ವಮಯರೂಪಾಗಿ ಶಿವನೇ ಬಂದಂತಿದೆ ಎನ್ನುತ್ತಾ ಅವರೆಲ್ಲರನ್ನೂ ಬಿಜಯಂಗೈಸಿ ತಂದು ಅವರ ಪಾದಗಳನ್ನು ತೊಳೆದು ಪೀಠಕೊಟ್ಟು ಉಪಚರಿಸಿದ.

ಆ ವೇಳೆಗಾಗಲೇ ಇತ್ತ ಲಕ್ಕಮ್ಮ ತಮ್ಮ ಜ್ಞಾನದೃಷ್ಟಿಯಿಂದ ಶರಣರಲ್ಲಿ ಯಾರು ಯಾರಿಗೆ ಏನೇನು ನೇಮವೆಂದು ತಿಳಿದು ಆಗಲಿ ಎನ್ನುವ ಮುನ್ನವೇ ತಮಗೆ ತಾವೇ ಪಕ್ವಗೊಂಡು ಸಿದ್ಧವಾಗಿದ್ದ ಬಗೆಬಗೆಯ ಭಕ್ಷ್ಯ ಭೋಜನಗಳನ್ನು ಶರಣರಿಗೆ ಬಡಿಸದಳು. ಲಿಂಗಾರ್ಪಿತ ಮಾಡಿ ಸರ್ವರೂ ಸಂತುಷ್ಟರಾದರು.

ಆ ಪವಾಡಸದೃಶವಾದ ಅರ್ಪಣವನ್ನು ಕಂಡು ಪ್ರಭುದೇವರು ಬಸವಣ್ಣನವರಿಗೆ ಹೇಳಿದರು- ಯಾರ್‍ಯಾರನೇಮ ಏನಿತ್ತು. ಆ ಪ್ರಕಾರವೇ ಎಲ್ಲರಿಗೂ ಭೋಜನವಿಟ್ಟು ತೃಪ್ತಿಪಡಿಸಿದರು ಮಾರಯ್ಯ ದಂಪತಿಗಳು ಬಡವರಾದರೂ ಅವರು ಮಾಡಿದ ಈ ಸಮಾರಾಧನೆ ಅವರ ಮನದ ಘನತೆಯನ್ನೇ ತೋರಿಸುತ್ತದೆ ಎಂದು.

ಇದನ್ನೆಲ್ಲಾ ಕಂಡ ಮೇಲೆ ಬಸವಣ್ಣನವರಾದರೋ ಮಾರಯ್ಯ ದಂಪತಿಗಳು ಬಡವರೆಂಬುದನ್ನು ಒಪ್ಪಲಿಲ್ಲ-''ಇವರು ನಿತ್ಯದಾಸೋಹಕ್ಕಿಟ್ಟು ಇಟ್ಟು ಬಡವರಾದರು. ಇವರ ಅಂತಃಕರಣ ಶ್ರೀಮಂತವಾಗಿರುವುದು. ಬಾಣ ನಟ್ಟು ಕರುಳು ಹೊರಬಂದರೂ ವೀರನಾದವನು ಹೋರಾಟವನ್ನು ನಿಲ್ಲಿಸುವುದಿಲ್ಲ, ಹಾಗೆಯೆ ಈ ಭಕ್ತಿಶೂರರು ಬಡತನಬಂದರೂ ದಾಸೋಹಸಮರದಲ್ಲಿ ಹಿಮ್ಮೆಟ್ಟುವುದಿಲ್ಲ''- ಎಂದರು.

ಅದನ್ನು ಪ್ರಭುದೇವರೂ ಒಪ್ಪಿ- ಎರಡೂ ಕಣ್ಣು ಕೂಡಿ ದೃಷ್ಟಿ ಏಕಾಗ್ರವಾಗುವಂತೆ, ಸತಿಪತಿಗಳಿಬ್ಬರೂ ಕೂಡಿ ಒಮ್ಮನದ ಭಕ್ತಿಯಾಗಿದೆ. ಸಂಸಾರಿಗಳು ದಾಸೋಹನಡೆಸುವುದೆಂದರೆ ಹೀಗೆ ಎನ್ನುತ್ತ ಮೆಚ್ಚಿಕೊಂಡರು.

ಅವರು ಹೀಗೆ ಮೆಚ್ಚಿಕೊಳ್ಳುತ್ತಿದ್ದಂತೆಯೇ ಆಯ್ದಕ್ಕಿ ಮಾರಯ್ಯ ದಂಪತಿಗಳು ತಮ್ಮ ಭಕ್ತಿ ಪ್ರಕಟವಾಯಿತೆಂದು ವ್ಯಥೆಪಟ್ಟು ಲಿಂಗೈಕ್ಯರಾದರೆಂಬಲ್ಲಿಗೆ ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯ ಸಂಪಾದನೆಯಲ್ಲಿ ಮಾರಯ್ಯ ಲಕ್ಕಮ್ಮಗಳ ಕಥಾಪ್ರಸಂಗ ಮುಕ್ತಾಯವಾಗುತ್ತದೆ.

ಆದರೆ ಗೂಳೂರು ಸಿದ್ಧವೀರನು ಅದನ್ನು ಪರಿಷ್ಕರಿಸಿ-ಅತ್ಯಂತ ಉಚಿತವೂ ಬೋಧನಾತ್ಮಕವೂ ಆದ ಮುಕ್ತಾಯವನ್ನು ಒದಗಿಸಿದ್ದಾನೆ. ಮಾರಯ್ಯ ದಂಪತಿಗಳು ತಮ್ಮನ್ನು ಆಶೀರ್ವದಿಸಿದ ಪ್ರಭುದೇವರಿಗೆ ಮತ್ತು ಬಸವಣ್ಣನವರಿಗೆ ಧನ್ಯವಾದಗಳನ್ನು ಅರ್ಪಿಸದೆ ಲಿಂಗೈಕ್ಯರಾದರೆಂಬುದು ಸಿದ್ಧವೀರನಿಗೆ ಉಚಿತವೆನಿಸಲಿಲ್ಲ. ಆದ್ದರಿಂದ ಗೂಳೂರು ಸಿದ್ಧವೀರನು ಸೇರಿಸಿದ ಹೆಚ್ಚುವರಿ ಭಾಗ ಈ ಮುಂದಿನಂತಿದೆ:

ಮೇಲೆ ಹೇಳಿದಂತೆ ಪ್ರಭುದೇವರು ಮಾರಯ್ಯ ದಂಪತಿಗಳ ದಾಸೋಹಮಯ ಆದರ್ಶ ದಾಂಪತ್ಯ ಜೀವನವನ್ನು ಕುರಿತು ಮೆಚ್ಚಿದಾಗ ಆ ದಂಪತಿಗಳು ನಿರಹಂಭಾವದಿಂದ ಮಹನೀಯನೇ, ನಮಗೆ ತನು-ಮನ-ಧನವೊಂದೂ ಇಲ್ಲ. ಈ ತ್ರಿವಿಧವೂ ಇರುವ ಶಿವಶರಣರ ತಪ್ಪಲಕ್ಕಿಯನ್ನು ಆಯ್ದು ತಂದು ಜೀವಿಸುತ್ತಿರುವ ಬಡವರು ನಾವು ಎಂದರು.

ಆಗ ಬಸವಣ್ಣನವರು ಮಾರಯ್ಯ ದಂಪತಿಗಳ ನಿರಹಂಭಾವವನ್ನು ಮೆಚ್ಚಿ, ಹಿಂದೆ ತಾವು-ಈ ಬಡವರು ಶಿವಶರಣರಿಗೇನುತಾನೇ ನೀಡಬಲ್ಲರೆಂದು ಸಂಶಯಪಟ್ಟುದನ್ನು ನೆನೆದು ನಾಚುತ್ತ ನನ್ನ ನಡೆಯೆಲ್ಲಾ ಅನಾಚಾರ, ನುಡಿಯೆಲ್ಲಾ ಅವಿಚಾರ. ನಡೆನುಡಿ ಶುದ್ಧವಿಲ್ಲದ ನನಗಿಂದು ನೀವು ಪ್ರಸಾದವನ್ನು ದಯಪಾಲಿಸಿ ನನ್ನನ್ನು ಪವಿತ್ರನನ್ನಾಗಿ ಮಾಡಿದಿರಿ. ನಾನೀಗ ನಿಮ್ಮ ಮನೆಯ ಆಳುಮಗನೆಂಬುದೇ ನನ್ನ ಹೆಮ್ಮೆ ಎಂದರು. ಬಸವಣ್ಣನವರಂಥ ಜಗದಾಚಾರ್ಯರು ತಮ್ಮ ಬಗ್ಗೆ ಆಡಿದ ಮಾತು ಅತಿಶಯವೆನಿಸಿ ಮಾರಯ್ಯ ಆ ಬಸವಣ್ಣನವರಿಗೆ ಹೇಳುತ್ತಾರೆ ಹಮ್ಮುಬಿಮ್ಮಿಲ್ಲದ ಶಿವಸ್ವರೂಪಿಯೇ ನೀವಾಗಿದ್ದೀರಿ, ನನ್ನ ಅಂಗೈಯ ಅಂಗವೇ ನೀವಾಗಿದ್ದೀರಿ, ನನ್ನ ಮನೋಮಧ್ಯದ ಸ್ವಯಂ

ಜ್ಯೋತಿಯೇ ನೀವಾಗಿದ್ದೀರಿ ಎಂದನು.

ಶಿವಶರಣರ ಈ ಪರಸ್ಪರ ಮಧುರ ಭಾವವನ್ನು ಕಂಡು ಮಡಿವಾಳ ಮಾಚಯ್ಯ ಮಾರಯ್ಯ, ನೀವು ಎಲ್ಲಾ ಶಿವಶರಣರ ಭಾವದಲ್ಲಿ ಅಚ್ಚೊತ್ತಿದ್ದೀರಿ. ಎಲ್ಲರೂ ನಿಮ್ಮ ಭಕ್ತಿ-ಜ್ಞಾನ-ವೈರಾಗ್ಯವನ್ನು ಕಂಡು ಪ್ರಸನ್ನರಾಗಿದ್ದಾರೆ. ದಾಸೋಹ ಮಾಡುವಾಗ ಎಂಥ ಶಿವಾರ್ಪಣ ಬುದ್ಧಿಯಿಂದಿರಬೇಕು ಎಂಬ ಬಗ್ಗೆ ನೀವು ನಮಗೆ ಮಾರ್ಗದರ್ಶನ ಮಾಡಿದಂತಾಗಿದೆ. ಸೂರ್ಯ ಬೆಳಕಿನಲ್ಲೇ ಅಲ್ಲವೆ ಜೀವಜಾಲವೆಲ್ಲಾ ಸಂಚರಿಸುವುದು? ಮಾರಯ್ಯ, ನಿಮ್ಮ ಸದಾಚಾರದ ಪ್ರಭೆಯಲ್ಲಿ ನಾವು ಮಾರ್ಗ ಕಂಡುಕೊಂಡೆವು ಎಂದರು.

ಆಗ ಮಾರಯ್ಯ ಆನಂದಬಾಷ್ಪ ತುಂಬಿ ತಮ್ಮ ಬಗ್ಗೆ ಶಿವಶರಣರಾಡುತ್ತಿರುವ ಮಾತಿಗೆ ಮನಸ್ಸುಮೊಗ್ಗಾಗಿ, ಒಡೆಯರಾದ ಬಸವಣ್ಣನವರನ್ನು ಕುರಿತು ನಿತ್ಯತೃಪ್ತರಾದವರಿಗೆ ಅನ್ನದ ಹಂಗೆಲ್ಲಿದೆ? ಅಸಂಖ್ಯಾತಗಣಂಗಳಿಗೆ ಕಟ್ಟಳೆಯ ನೇಮದ ದಾಸೋಹವನ್ನು ನಿತ್ಯವೂ ನೀವು ಮಾಡುತ್ತಿದ್ದೀರಿ. ಆದರೂ ನಿಮಗೆ ಮಾಡಿದೆನೆಂಬ ಅಹಂಭಾವವಿಲ್ಲ. ನಿಮ್ಮ ಪಾದಕ್ಕೆ ನಮಸ್ಕರಿಸಿ ಸತಿಪತಿಗಳು ನಾವಿಬ್ಬರೂ ಧನ್ಯರು ಎಂದನು.

ಆಗ ಮಾರಯ್ಯ ತಮ್ಮ ಗುಪ್ತಭಕ್ತಿ ಪ್ರಕಟವಾಯಿತೆಂದು ಚಂದ್ರಕಾಂತ ಶಿಲೆಯಲ್ಲಿ ಶೀತಲ ಜಲಬಿಂದು ಅಡಗಿರುವಂತೆ, ಗೋವಿನಲ್ಲಿ ಗೋರೋಜನ ಅಡಗಿರುವಂತೆ, ಕಲ್ಲುಕಾಷ್ಠದಲ್ಲಿ ಅಗ್ನಿ ಅಡಗಿರುವಂತೆ, ಸತ್ಯವಂತರ ಹೃದಯದಲ್ಲಿ ಮುತ್ತಿನಂಥ ಮಾತು ಅಡಗಿರುವಂತೆ ಮಾರಯ್ಯ ಶಿವನಲ್ಲಿ ಅಡಗಿ ಶಿವಸುಖದಲ್ಲಿದ್ದರು. ಅವರೊಡನೆಯೇ ಲಕ್ಕಮ್ಮನೂ ಶಿವನಲ್ಲಿ ಐಕ್ಯವಾದರು.

ಗುಮ್ಮಳಾಪುರದ ಸಿದ್ಧಲಿಂಗನ ಆಯ್ದಕ್ಕಿ ಮಾರಯ್ಯಗಳ ಕಥಾ ಪ್ರಸಂಗವೆಂಬ ರತ್ನಕ್ಕೆ ಗೂಳೂರು ಸಿದ್ಧವೀರನ ಹೊನ್ನಿನಕುಂದಣ ಅಳವಟ್ಟು-ಅದು ಇಂದು ನಮ್ಮೆಲ್ಲರ ಕಂಠಾಭರಣವಾಗಿದೆ.

ಇಲ್ಲಿ ಆಯ್ದಕ್ಕಿ ಲಕ್ಕಮ್ಮ ಬೃಹದಾರಣ್ಯಕ ಉಪನಷತ್ತಿನ ಮೈತ್ರೇಯಿಗಿಂತ-ಮಾನವೀಯ ವಿಚಾರ ದೃಷ್ಟಿಯಿಂದ ಮಿಗಿಲಾಗಿ ಕಾಣುವಳು.

ಯಾಜ್ಞವಲ್ಕ್ಯಋಷಿಗೆ ಇಬ್ಬರು ಹೆಂಡಿರು-ಮೈತ್ರೇಯಿ ಮತ್ತು ಕಾತ್ಯಾಯಿನಿ ಎಂದು, ಸನ್ಯಾಸಾಶ್ರಮ ಸ್ವೀಕರಿಸಲು ನಿಶ್ಚಯಿಸಿದ ಯಾಜ್ಞ-ವಲ್ಕ್ಯನು ತನ್ನ ಆ ಇಬ್ಬರು ಹೆಂಡಿರಿಗೂ ಆಸ್ತಿ ಐಶ್ವರ್ಯವನ್ನೆಲ್ಲ ಹಂಚಿಹೋಗಬೇಕೆಂದು, ಯಾರಿಗೆ ಏನು ಬೇಕಾಗಿದೆ ಎಂದು ಕೇಳಿದಾಗ, ಮೈತ್ರೇಯಿ ಕೇಳಿದಳು ಅಖಿಲೈಶ್ವರ್ಯ ತುಂಬಿದ ಈ ಪೃಥ್ವಿಯೇ ನನ್ನ ಪಾಲಿಗೆ ಬಂದರೆ ನಾನು ಮೃತ್ಯುವನ್ನು ದಾಟಿ ಅಮೃತತತ್ವವನ್ನು ಪಡೆವೆಯುವೆನೇನೋ ಎಂದು, ಅದಕ್ಕೆ ಯಾಜ್ಞ-ವಲ್ಕ್ಯ- ನೀನು ಎಲ್ಲ ಐಶ್ವರ್ಯವಂತರಂತೆ ಜೀವನ ನಡೆಸುತ್ತೀಯಷ್ಟೆ- ಐಶ್ವರ್ಯದಿಂದ ಅಮೃತತತ್ವ ದೊರೆಯುವುದಿಲ್ಲ ಎನ್ನುತ್ತಾನೆ. ಆಗ

ಮೈತ್ರೇಯಿ-ಅಮೃತತ್ವವನ್ನು ಕೊಡದ ಈ ಐಶ್ವರ್ಯವನ್ನು ತೆಗೆದುಕೊಂಡು ನಾನೇನು ಮಾಡಲಿ? ಆ ಅಮೃತತ್ವನ್ನು ಪಡೆಯಲು ನೀನು ಯಾವ ಮಾರ್ಗವನ್ನು ತಿಳಿದಿದ್ದೀಯೋ ಅದನ್ನು ಬೋಧಿಸು, ಅದೇ ನನಗೆ ಬೇಕಾದದ್ದು ಎಂದು ಪ್ರಾರ್ಥಿಸಿಕೊಳ್ಳುವಳು. ಆಗ ಯಾಜ್ಞವಲ್ಕ್ಯನು ಮೈತ್ರೇಯಿಯನ್ನು ಮೆಚ್ಚಿಕೊಂಡು-''**ನ ವಾ ಅರೇ ಪತ್ಯುಃಕಾಮಾಯ ಪತಿಃ ಪ್ರಿಯೋ ಭವತಿ-ಆತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ, ನ ವಾ ಅರೇ ಜಾಯಾಯೈ ಕಾಮಾಯ ಜಾಯಾ ಪ್ರಿಯಾ ಭವತಿ**- ಆತ್ಮನಸ್ತು ಕಾಮಾಯ ಜಾಯಾ ಪ್ರಿಯಾ ಭವತಿ.... ನ ವಾ ಅರೇ ವಿತ್ತಸ್ಯ ಕಾಮಾಯ ವಿತ್ತಂ ಪ್ರಿಯಂ ಭವತಿ-ಆತ್ಮನಸ್ತು ಕಾಮಾಯ ವಿತ್ತಂ ಪ್ರಿಯಂ ಭವತಿ. ನ ವಾ ಅರೇ ಬ್ರಹ್ಮಣಃ ಕಾಮಾಯ ಬ್ರಹ್ಮಾ ಪ್ರಿಯಂ ಭವತಿ- ಆತ್ಮನಸ್ತು ಕಾಮಾಯ ಬ್ರಹ್ಮಾ ಪ್ರಿಯಂ ಭವತಿ... ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂಭವತಿ- ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ. ಆತ್ಮಾ ವಾ ಅರೇ ದೃಷ್ಟವ್ಯಃ ಶ್ರೋತವ್ಯೋ ಮಂತ್ರವ್ಯೋ ನಿದಿಧ್ಯಾಸಿತವ್ಯೋ ಮೈತ್ರೇಯಿ ಆತ್ಮನೋ ವಾ ಅರೇ ದರ್ಶನೇನ ಶ್ರವಣೇನ ಮತ್ಯಾ ವಿಜ್ಞಾನೇನೇದಂ ಸರ್ವಂ ವಿದಿತಂ'' ಎಂದು ಆತ್ಮ ವಿಚಾರದಲ್ಲಿ ತೊಡಗುತ್ತಾನೆ. ಈ ವಿಜ್ಞಾನ ಮಾರಯ್ಯನಿಗೆ ಇಲ್ಲ, ಅವನ ಸತಿ ಲಕ್ಕಮ್ಮನಿಗಿದೆ. ಆದರೆ ಲಕ್ಕಮ್ಮ ಆತ್ಮದ ಸ್ಥಾನದಲ್ಲಿ ಕಾಯಕವನ್ನು ದಾಸೋಹವನ್ನು ಅವಧಾರಿಸುತ್ತಾಳೆ.

ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹೆಂಡತಿ ಗಂಡನಿಂದ ತಿಳಿದರೆ, ಶೂನ್ಯ ಸಂಪಾದನೆಯಲ್ಲಿ ಗಂಡನೇ ಹೆಂಡತಿಯಿಂದ ತಿಳಿಯಬೇಕಾದ ಮಹಿಳೆಯ ಉತ್ಕರ್ಷತೆಯಿದೆ.

ಇದೇ ಉಪನಿಷತ್ತಿನ ಅನುಸಾರ ಅಲ್ಲಿ ಕರ್ಮಕ್ಕೆ ಕೈ ಕೊಟ್ಟಿರುವ ಮಹತ್ವವನ್ನು ಶರಣರು ಕಾಯಕಕ್ಕೆ ಕೊಟ್ಟಿರುವರು. ಇದನ್ನು ಸ್ವಲ್ಪ ವಿವರಿಸಿ ಹೇಳುವುದು ಅವಶ್ಯಕ. ಜನಕನು ಯಜ್ಞವೊಂದನ್ನು ಮಾಡಿದಾಗ ಅಲ್ಲಿ ನೆರೆದ ಬ್ರಾಹ್ಮಣ ಶ್ರೇಷ್ಠರಲ್ಲಿ ಯಾರು ಮಹಾಜ್ಞಾನಿಯೆಂಬುದನ್ನು ಗುರುತಿಸಲು, ನಿಮ್ಮಲ್ಲಿ ಯಾರು ಬಹಳ ತಿಳಿದವರೋ ಅವರು ಈ ಸಾವಿರ ಗೋವುಗಳನ್ನು ಕೊಂಡೊಯ್ಯಿರಿ ಎಂದು ಆಹ್ವಾನ ಕೊಟ್ಟು, ಆಗ ಯಾಜ್ಞವಲ್ಕ್ಯನು ತನ್ನ ಶಿಷ್ಯರಿಗೆ ಆ ಸಾವಿರ ಗೋವುಗಳನ್ನು ಆಶ್ರಮಕ್ಕೆ ಹೊಡೆದುಕೊಂಡು ಹೋಗಿರಿ ಎಂದು ಅಪ್ಪಣೆ ಮಾಡುತ್ತಾನೆ.

ಆಗ ಜನಕನ ಆಸ್ಥಾನ ಪುರೋಹಿತ ಆಶ್ವಲನೆಂಬವನು ಸವಾಲಿನ ರೂಪದಲ್ಲಿ ಹಲವು ಪ್ರಶ್ನೆಗಳನ್ನು ಕೇಳುತ್ತಾನೆ, ಅವೆಲ್ಲ ಯಜ್ಞಕ್ಕೆ ಸಂಬಂಧಿಸಿದ್ದವು. ಶರಣರು ಈ ಯಜ್ಞ ಸ್ಥಾನದಲ್ಲಿ ಕಾಯಕವನ್ನು ಅವಧಾರಿಸುತ್ತಾರೆ. ಕಾಯಕದ ಮೂಲಕ ಸತ್ಯಶರಣರ ದಾಸೋಹ ಮಾಡಬಲ್ಲವನೇ ಮಹಾಜ್ಞಾನಿ-ಶಿವಶರಣರ ಪ್ರಕಾರ. ಯಜ್ಞ ಮುಂತಾದ ತೊಡಕಿನ ವಿಚಾರಗಳಲ್ಲಿ ಶಿಷ್ಟರಾದ ಬ್ರಾಹ್ಮಣರು ತೊಡಗಿದ್ದರೆ, ಜಾನಪದರಾದ ಶರಣರು ನಿತ್ಯಜೀವನ ನಿರ್ವಹಣೆಯ ಕಾಯಕದ ವಿಚಾರದಲ್ಲಿ ಆಸಕ್ತಿ ತೋರುತ್ತಾರೆ-ಅಬೇ

ಸಚ್ಚಿದಾನಂದ ಪರಬ್ರಹ್ಮವೆನ್ನುತ್ತಾರೆ. ಅದಿರಲಿ.

ಯಾಜ್ಞವಲ್ಕ್ಯನನ್ನು ಆಶ್ವಲನು ಪ್ರಶ್ನಿಸಿದ ಮೇಲೆ ಆರ್ತಭಾಗನು ಪ್ರಶ್ನಿಸುತ್ತಾನೆ- ಅವನು ಪ್ರಶ್ನಿಸಿದ್ದು ಎಂಟು ಇಂದ್ರಿಯಗಳ ಬಗ್ಗೆ. ಮೂಗು ಮುಂತಾದ ಇಂದ್ರಿಯಗಳು ಪುರುಷನು ಗತಪ್ರಾಣನಾದಾಗ ಅವು ಅವನಿಂದ ಬಿಡುಗಡೆ ಹೊಂದುತ್ತವೆಯೋ ಎಂದಾಗ ಇಲ್ಲ, ಅವು ಅವನಲ್ಲೇ ಅಡಗುತ್ತವೆ. ದೇಹ ಮಾತ್ರ ಕೆಳಗೆ ಬಿದ್ದಿರುತ್ತದೆ ಎನ್ನುತ್ತಾನೆ ಯಾಜ್ಞವಲ್ಕ್ಯ. ಆಗ ಆರ್ತಭಾಗನು-ಸತ್ತ ಪುರುಷನ ಮಾತು ಗಾಳಿಯಲ್ಲಿ, ಕಣ್ಣು ಸೂರ್ಯನಲ್ಲಿ, ಮನಸ್ಸು ಚಂದ್ರನಲ್ಲಿ, ಕಿವಿ ದಿಕ್ಕಿನಲ್ಲಿ, ದೇಹ ಭೂಮಿಯಲ್ಲಿ, ಆತ್ಮಾಕಾಶವು ಮಹಾಕಾಶದಲ್ಲಿ, ದೇಹದ ಮೇಲಣ ಕೂದಲು ಔಷಧಿಗಳಲ್ಲಿ, ತಲೆಯ ಮೇಲಣ ಕೂದಲು ವನಸ್ಪತಿಗಳಲ್ಲಿ, ರಕ್ತ ಮತ್ತು ರೇತ ನೀರಿನಲ್ಲಿ ನಿಧಾನಿಸಲ್ಪಟ್ಟ ಮೇಲೆ ಆ ಪುರುಷನು ಯಾವುದನ್ನು ಅವಲಂಬಿಸಿ ನಿಲ್ಲುತ್ತಾನೆ ಎಂದು ಪ್ರಶ್ನಿಸುತ್ತಾನೆ. ಆಗ ಯಾಜ್ಞವಲ್ಕ್ಯ ಆ ಪ್ರಶ್ನೆಗೆ ಬಹಿರಂಗವಾಗಿ ಉತ್ತರಿಸದೆ- ಆರ್ತಭಾಗನ ಕೈಯನ್ನು ಹಿಡಿದು ಏಕಾಂತ ಸ್ಥಾನಕ್ಕೆ ಕರೆದುಕೊಂಡು ಹೋಗಿ- ಈ ರಹಸ್ಯವನ್ನು ನಾವಿಬ್ಬರೇ ತಿಳಿಯೋಣ ಎನ್ನುತ್ತ ಅವರು ಕರ್ಮದ ಬಗ್ಗೆ ಮಾತನಾಡಿದರು. ಅದನ್ನೇ ಪ್ರಶಂಸಿದರು-''ಪುಣ್ಯೋ ವೈ ಪುಣ್ಯೇನ ಕರ್ಮಣಾ ಭವತಿ, ಪಾಪಃ ಪಾಪೇನೇತಿ'' ಎಂದು ತೀರ್ಮಾನಿಸಿದರು.

ಇಲ್ಲಿ ಆರ್ತಭಾಗ ಮತ್ತು ಯಾಜ್ಞವಲ್ಕ್ಯರಿಬ್ಬರೂ ರಹಸ್ಯವಾಗಿ ಪ್ರಸ್ತಾಪಿಸಿದ''ಕರ್ಮ''ವೇ ಶರಣರ ಕಾಯಕ. ಆದರೆ ಇಲ್ಲಿ ಬರುವ ಪುಣ್ಯ ಎಂಬ ಪದದ ಅರ್ಥವನ್ನು ಫಲಾಪೇಕ್ಷೆಯಿಲ್ಲದ ತ್ರಿವಿಧ ದಾಸೋಹವೆಂದು ಹೇಳಿದರೆ ಕಾಯಕದ ಕಲ್ಪನೆ ಪ್ರಾಚೀನದಲ್ಲಿ ಪ್ರಶಂಸಿತವಾಗಿಯೇ ಇದ್ದು ಶರಣರ ಕಾಲಕ್ಕೆ ಅದು ಕೆಲವರ ರಹಸ್ಯವಾಗಿ ಉಳಿಯದೆ ಪ್ರತಿಯೊಬ್ಬನ ಜೀವನ ರೀತಿಯಾಗಿ ಪ್ರಚಲಿತವಾಯಿತು.

ಬಸವಣ್ಣನವರ ಕಾಲಕ್ಕೆ ಕಲ್ಯಾಣಪ್ರಾಂತದಲ್ಲಿ ಮಹಿಳೆಯರು ಪ್ರಗತಿಪರವಾಗಿ ಚಿಂತಿಸುವಲ್ಲಿ ಮತ್ತು ತಮ್ಮ ಆ ಚಿಂತನೆಗಳನ್ನು ಗಂಡಸರೊಡನೆ ಎಷ್ಟೇ ನಿಷ್ಠುರವಾಗಿಯೇ ಆದರೂ ಸಮರಸವಾಗಿ ಚರ್ಚಿಸುವ ಅಪರೂಪದ ಪ್ರಜ್ಞೆಯನ್ನು ಪಡೆದಿದ್ದರು- ಎಂಬುದನ್ನು ನಾವು ಗಮನಿಸಬೇಕು.

ಅಂದಿನ ಆಧ್ಯಾತ್ಮಿಕ ನಾಯಕನಾಗಿದ್ದ ಪ್ರಭುದೇವನಂಥವನ ಜ್ಞಾನಪಂಥವನ್ನು ಪ್ರಶ್ನಿಸಿ ಕಾಯಕದಾಸೋಹವೆಂಬ ಕರ್ಮಯೋಗವನ್ನು ಸಮರ್ಥಿಸಿಕೊಂಡ ಲಕ್ಕಮ್ಮ ಸಾಮಾನ್ಯ ಮಹಿಳೆಯಲ್ಲ.

ಈ ಪ್ರಸಂಗದಲ್ಲಿ ಪ್ರಭುದೇವರು ಒಬ್ಬ ಸಾಮಾನ್ಯ ಭಕ್ತೆಗೆ ಉಪದೇಶ ಮಾಡಿದಂತಾಗದೆ, ಲಕ್ಕಮ್ಮನಂಥ ಶರಣಸತಿಯಿಂದ ತಾನೇ ತನ್ನ ಆಧ್ಯಾತ್ಮಿಕ ಮುಖ್ಯನಿಲುವಿಗಿಂತ ಕೊಂಚಭಿನ್ನವಾದ ದಾಸೋಹಂ ಧೋರಣೆಯನ್ನು ಒಪ್ಪಬೇಕಾಗಿ ಬಂದುದನ್ನು ನಾವು ಕಾಣುತ್ತೇವೆ.

ಅಭಿವಂದನಾ

ಪ್ರಭುದೇವರಿಗೆ ಪ್ರಾಧ್ಯಾನ್ಯತೆಕೊಟ್ಟಿರುವ ಪ್ರಭುದೇವರ ಶೂನ್ಯ ಸಂಪಾದನೆಯಲ್ಲೇ ನಡೆದಿರುವ ಈ ಮುಕ್ತ ವಿಚಾರ ವಿಧಾನ ಇಂದಿಗೂ ಪ್ರಸ್ತುತವೇ ಆಗಿದೆ.

ಮತ್ತು ಅನುಭವ ಮಂಟಪದಲ್ಲಿ ಯಾವನಾದರೊಬ್ಬನು ಎಷ್ಟೇ ಹಿರಿಯನಾಗಿರಲಿ-ಅವನು ಯಾರನ್ನೂ ವೈಚಾರಿಕವಾಗಿ ಶೋಷಣೆಗೆ ಒಳಪಡಿಸುವಂತಿರಲಿಲ್ಲ.

ಮತ್ತು ಒಬ್ಬ ಪುರುಷನು ಮನೆಗೆ ಯಜಮಾನನಾಗಿಯೂ ಕೂಡ ತನ್ನ ಹೆಂಡತಿಯ ಮಾತು ಸರಿಯಾದುದೇ ಆದರೆ ಅದಕ್ಕೆ ಮನ್ನಣೆ ನೀಡಿ ಅದರಂತೆ ತನ್ನ ನಡವಳಿಯನ್ನು ತಿದ್ದಿಕೊಳ್ಳುವುದು ಒಂದು ಮರ್ಯಾದೆಯ ಮಾತಷ್ಟೇ ಆಗಿರದೆ ಪರಸ್ಪರ ಅರಿವಿನ ಮಾತೂ ಆಗಿತ್ತು. ಸಂಸಾರದಲ್ಲಿ ಪ್ರಾಮುಖ್ಯತೆಯಿರುವುದು ಪೌರುಷಕ್ಕಲ್ಲ ಪ್ರಜ್ಞೆಗೆ ಎಂಬುದು ಇಲ್ಲಿ ಸಾಬೀತಾಗಿದೆ.

ಶರಣಧರ್ಮದ ಪ್ರಕಾರ ಗಂಡಸಾದವನು ತನ್ನ ಹೆಣ್ಣಿಗೆ ಪತಿಯಾಗಿರುವನಾದರೂ ಆ ಸತಿಪತಿಗಳಿಬ್ಬರೂ ಶಿವನ ಸತಿಯರೇ ಎಂಬ ಕಲ್ಪನೆಯಿರುವುದರಿಂದ, ಅವರು ಒಬ್ಬರನ್ನೊಬ್ಬರು ಹೊಂದಿಕೊಂಡು ಅವರಿಬ್ಬರೂ ಶಿವನಲ್ಲಿ ಸಮರ್ಪಿತ ಜೀವನವನ್ನು ನಡೆಸುವುದು ಅಗತ್ಯವಾಗಿತ್ತು.

ಹೆಣ್ಣಿನ ಬಗ್ಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸಿರುವ ಶರಣರ ಧರ್ಮ ಮಹಿಳಾ ಪರವಾದ ಒಂದು ಚಳುವಳಿಯನ್ನೇ ಹೂಡಿತ್ತು ಎನ್ನಬಹುದು. ಹೆಂಡತಿಯ ಮಾತನ್ನು ಕೇಳುವಲ್ಲಿ ಮಾರಯ್ಯನಿಗೆ ಯಾವ ಬಿಗುಮಾನವೂ ಅಡ್ಡಬರಲಿಲ್ಲ.

ಶರಣರ ಕಾಲದ ಹೆಣ್ಣು ಎಷ್ಟೇ ತತ್ತ್ವನಿಷ್ಠುರಳಾದರೂ ಗಂಡನೊಡನೆ ಸಾಂಸಾರಿಕವಾಗಿ ಅನುನಯದಲ್ಲಿಯೇ ಇರುತ್ತಿದ್ದಳು. ಗಂಡನೊಂದು ಪಕ್ಷ ಮಹಿಳೆಯ ನ್ಯಾಯವಾದ ಜೀವನ ಮೌಲ್ಯಗಳಿಗೆ ಸಂಗಮಿಸಿ ಸಹಕರಿಸದಿದ್ದರೆ ಮಾತ್ರ ಅವಳು ಅಂಥವನೊಡನೆ ಹೆಣಗುವ ಪ್ರಮೇಯವೇ ಇರಲಿಲ್ಲ. ಈ ಸಂಬಂಧವಾಗಿ ಅಕ್ಕಮಹಾದೇವಿ ಮನೆಬಿಟ್ಟು ಹೋದುದನ್ನು ನಾವು ನೆನೆಯಬೇಕು. ಆಕೆ ಗಂಡನನ್ನು ತಿದ್ದಲು ಪ್ರಯತ್ನಿಸಿದಳು. ಅದು ಅಸಾಧ್ಯವಾದಾಗ ಆ ಸಂಬಂಧವನ್ನು ಆಕೆ ತೊರೆದುಕೊಳ್ಳಲು ಹಿಂಜರಿಯಲಿಲ್ಲ. ಆದರೆ ಲಕ್ಕಮ್ಮ ಈ ದೃಷ್ಟಿಯಿಂದ ಭಾಗ್ಯವಂತೆ. ಆಕೆ ಗಂಡನಿಗೆ-ಕಾಯಕವನ್ನು ಮಾಡುವುದೇ, ಆ ಮೂಲಕ ತ್ರಿವಿಧದಾಸೋಹ ತತ್ಪರವಾಗಿರುವುದೇ ಧರ್ಮವೆಂದಾಗ-ಮಾರಯ್ಯನು ಅದನ್ನು ಪ್ರೀತಿಯಿಂದಲೇ ಒಪ್ಪಿಕೊಳ್ಳುತ್ತಾನೆ. ಪ್ರಭುದೇವರು ಹೇಳಿದ ಜ್ಞಾನ ಮಾರ್ಗಕ್ಕಿಂತ ಹೆಂಡತಿ ಹೇಳಿದ ಕಾಯಕದಾಸೋಹವೇ ಶ್ರೇಷ್ಠವೆಂಬುದನ್ನು ಮನಗಾಣುತ್ತಾನೆ. ಮತ್ತು ಬಸವಣ್ಣನವರ ಅಂಗಳದಿಂದ ಅಕ್ಕಿಯನ್ನು ಆಯ್ದುತರುವಲ್ಲಿ ತಾನುಮಾಡಿದ್ದು ದುರಾಸೆಯಾಯಿತೆಂದು ಹೆಂಡತಿ ಖಂಡಿಸಿದಾಗ ಅದನ್ನು ಅರಿತುಕೊಂಡು, ಅವಳು ಮಾಡಿದ ಅಪ್ಪಣೆಯ ಪ್ರಕಾರ ಆ ಹೆಚ್ಚುವರಿ ಅಕ್ಕಿಯನ್ನು ಹಿಂದಕ್ಕೆ ಚೆಲ್ಲಿಬರುತ್ತಾನೆ. ಹೀಗೆ ಮೇಲ್ನೋಟಕ್ಕೆ ಹೆಂಡತಿಗೆ ಹೆದರುವನಂತೆ ಕಾಣುವ ಮಾರಯ್ಯ ನಿಜವಾಗಿಯೂ ಸತ್ಪುರುಷ

ಹೆಂಗಸರ ಬಗ್ಗೆ ಅಪರಿಮಿತವಾದ ಗೌರವವುಳ್ಳವನು. ಪ್ರಜ್ಞಾವಂತಳಾದ ಸತಿಯೊಬ್ಬಳು ಸಂಸಾರದಲ್ಲಿ ಗಂಡನನ್ನು ನಡೆಸಿಕೊಳ್ಳಬೇಕಾದ ರೀತಿಗೆ ಉತ್ತಮ ನಿದರ್ಶನ ಲಕ್ಕಮ್ಮ ಕೂಡ. ಹೆಣ್ಣುಗಂಡುಗಳಿಗೆ ಅಂಟಿಬಂದಿರುವ ಕೀಳರಿಮೆ ಮತ್ತು ಬಿಗುಮಾನಗಳನ್ನು ನೀಗಿಕೊಂಡು ಆದರ್ಶದಾಂಪತ್ಯವನ್ನು ನಡೆಸಿದ ಆದರ್ಶ ಜೋಡಿ ಲಕ್ಕಮ್ಮ ಮತ್ತು ಮಾರಯ್ಯಗಳು.

ಶೂನ್ಯ ಸಂಪಾದನೆಯ ಈ ಆಯ್ದಕ್ಕಿ ಮಾರಯ್ಯನ ಪ್ರಸಂಗ ಕಾಯಕವನ್ನೇ ಕುರಿತಿದೆಯೆಂಬಂತೆ ಕಾಣುವುದಾದರೂ, ಅದರ ಧ್ವನಿಪೂರ್ಣವಾದ ಇಂಗಿತವಿರುವುದು ಸಂಸಾರ ಸಂಹಿತೆಯಲ್ಲಿಯೇ.

ಮತ್ತು ಶರಣಧರ್ಮದ ಪ್ರಕಾರ ಸಮಾಜದಲ್ಲಿ ಬಡವರಿಗೆ ಬಲ್ಲಿದರಿಗೆ ಸಮಾನವಾದ ಗೌರವ ಪ್ರತಿಷ್ಠೆಗಳಿದ್ದವು. ಒಬ್ಬ ಸಿರಿವಂತ ತನ್ನ ಸಿರಿವಂತಿಕೆಯ ಕಾರಣದಿಂದಾಗಿ ಅಹಂಕರಿಸುವುದಾಗಲಿ, ಒಬ್ಬ ಬಡವ ತನ್ನ ಬಡತನಕಾರಣದಿಂದಾಗಿ ಅಣಗುವುದಾಗಲಿ ಅಧಾರ್ಮಿಕ ಎಂಬ ಒಪ್ಪಂದವೇರ್ಪಟ್ಟಿತ್ತು. ಹೀಗಾಗಿ ಶರಣಧರ್ಮದ ಛತ್ರದಡಿಯಲ್ಲಿ ದುರಹಂಕಾರಕ್ಕಾಗಲಿ ನೈಚ್ಯಾನುಸಂಧಾನಕ್ಕಾಗಲಿ ಎಡೆಯಿಲ್ಲದ ಜನರು ಪರಸ್ಪರ ಮುಕ್ತಮನಸ್ಕರಾಗಿ ಸಮಾನಸ್ಕಂಧರಾಗಿ ವ್ಯವಹರಿಸುವುದಿತ್ತು. ನಾವು ಬಡವರು-ಸಿರಿವಂತರಾದ ಬಸವಣ್ಣ ಮುಂತಾದ ಶರಣರಿಗೆ ನಾವೇನು ಉಣಬಡಿಸಬಲ್ಲೆವೆಂದು ಮಾರಯ್ಯ ಅಳುಕಿದಾಗ-ಲಕ್ಕಮ್ಮ ಹೇಳುತ್ತಾಳೆ-ಶಿವಶರಣರಿಗೆ ಬಡತನವೆಂಬುದಿಲ್ಲ. ಅವರು ಆತ್ಮಶ್ರೀಮಂತರು ಎಂದು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುತ್ತಾಳೆ.

ಮತ್ತು ಕಾಯಕವೆಂಬುದು ಅಂದಿನ ಶರಣಧರ್ಮದ ಒಂದು ಕಡ್ಡಾಯವಾದ ಆಚರಣೆಯಾಗಿದ್ದುದರಿಂದ, ಆ ಕಾಯಕ ನಿಯಮದನುಸಾರ ಯಾರಾಗಲಿ ಮಿತಿಮೀರಿ ಐಶ್ವರ್ಯವಂತರಾಗುವುದು ಒಂದು ಪಾಪಕಾರ್ಯವೆಂದು ಸಾರಿ ಹೇಳಿತು. ಹೀಗಾಗಿ ಸಮಾಜದಲ್ಲಿ ಸಂಪತ್ತಿಗೆ ಗೌಣಸ್ಥಾನ ದೊರೆತು, ಆತ್ಮಸಂಪತ್ತಿಗೆ ಮಿಗಿಲಾದ ಗೌರವ ಸ್ಥಾನ ಸಂದಿತು. ಬಸವಣ್ಣನವರು ತಂದ ಈ ಸುಧಾರಣೆಯಿಂದ ಒಬ್ಬ ಬಡಸಂಸಾರಿಯೂ ಧನಿಕರಿಗೆ ಹೆಗಲೆಣೆಯಾಗಿ ಬದುಕನ್ನು ಘನತೆಯಿಂದ ಬದುಕುವ ವಿಧಾನವನ್ನು ತೋರಿಸಿಕೊಟ್ಟಿದ್ದರೆಂಬುದನ್ನು ಮಾರಯ್ಯ-ಲಕ್ಕಮ್ಮಗಳ ಪ್ರಸಂಗದಿಂದ ನಾವು ಕಂಡುಕೊಳ್ಳಬಹುದು. ಮಾರಯ್ಯ ದಂಪತಿಗಳು ಶಿವಶರಣರಿಗೇನು ದಾಸೋಹ ಮಾಡಿಯಾರು-ಅವರು ಬಡವರು ಎಂದು ಬಸವಣ್ಣನವರು ಮನಸ್ಸಿನಲ್ಲಿ ಕ್ಷಣಕಾಲ ಯೋಜಿಸಿದ್ದೂ ಕೂಡ ತಪ್ಪಾಯಿತೆಂಬಂತೆ ಅವರು ಪಶ್ಚಾತ್ತಾಪಪಡುತ್ತಾರೆ. ಆದ್ದರಿಂದ ಸಿರಿತನದ ಬಡತನದ ತಾರತಮ್ಯ ಯಾರಾದರ ನಡೆನುಡಿಯಲ್ಲೇ ಅಲ್ಲ ಮಾನಸಿಕವಾಗಿಯೂ ನಡೆಯಬಾರದಿತ್ತು.

ಇಂಥ ಹಿತಕರವಾದ ವಾತಾವರಣದಲ್ಲಿ ಬಡವರಾದವರೂ ಅವಮಾನಿತರಾಗದೆ

ಆತ್ಮವಿಶ್ವಾಸದಿಂದ ಸಮಾಜದ ಸಂಪನ್ನತೆಗೆ ಪೂರಕವೇ ಆದರು. ಹೀಗೆ ಸಿರಿವಂತರು ಮಾಡುವ ತಮ್ಮ ಸಂಪತ್ತಿನ ಸದ್ವಿನಿಯೋಗದಿಂದ ಮತ್ತು ಬಡವರು ಮಾಡುವ ತಮ್ಮ ನಿರ್ವಂಚನೆಯ ಕಾಯಕದಿಂದ ಸಮಾಜ ಇಡಿಯಾಗಿ ಪ್ರಗತಿಯತ್ತ ನಡೆದಿತ್ತು.

ಅಂದಿನ ಕಲ್ಪನೆ ಮುಕ್ತಿಯೆಂದರೆ ದೇಹದಿಂದ ಬಿಡುಗಡೆಯಾಗುವುದಾಗಲಿ, ಬಿಡುಗಡೆಯಾದ ಮೇಲೆ ಕೈಲಾಸ ಮುಂತಾದ ಪರಂಧಾಮಗಳಲ್ಲಿ ನೆಲೆಸುವುದಾಗಲಿ ಆಗಿರಲಿಲ್ಲ. ಆದ್ದರಿಂದ ಶರಣರು ಹೇಳಿದರು-ದೇಹದ ಮೇಲೆ ಲಿಂಗವಿರುವುದರಿಂದ ಆ ದೇಹವೇ ಶಿವನು ವಾಸಮಾಡುವ ಕೈಲಾಸ. ಆದ್ದರಿಂದ ಈ ದೇಹ ದೇವನಿವಾಸದಷ್ಟು ಪವಿತ್ರ. ಆದ್ದರಿಂದ ಇದನ್ನು ಉತ್ತಮ ಕಾರ್ಯಗಳಿಗೆ ಬಳಸಬೇಕು. ಈ ಅರ್ಥದಲ್ಲಿಯೇ ಶರಣರು ಕಾಯವೇ ಕೈಲಾಸ ಅಥವಾ ಕಾಯಕವೇ ಕೈಲಾಸ ಎಂದು ಹೇಳಿದ್ದು. ಇದರನುಸಾರ ಪ್ರತಿಯೊಬ್ಬರ ದೇಹವೂ ದೇವಾಲಯವಾಗಿ, ಅದಕ್ಕೆ ಆಶ್ರಯಸ್ಥಾನವಾದ ಈ ಲೋಕವೆಲ್ಲಾ ಶಿವಲೋಕವಾಗಿ, ಎಲ್ಲರೂ ಶಿವಸ್ವರೂಪಿಗಳಾಗುತ್ತಾರೆ. ಹೀಗಾಗಿ ಈ ನಮ್ಮ ಪೃಥ್ವಿಯೆಲ್ಲಾ ಭೂಕೈಲಾಸವಾಗಬೇಕೆಂಬುದೇ ಬಸವಾದಿ ಪ್ರಮಥರ ಕನಸಾಗಿತ್ತು.

ವೀರಶೈವ ಪರಿಭಾಷೆಯಲ್ಲಿ ''ಲಿಂಗಾಂಗ ಸಾಮರಸ್ಯ''ವೆಂಬುದೇ ಈ ಧರ್ಮದ ಅಂತಿಮ ಗುರಿ. ಇದನ್ನು ಸಾಧಿಸಲು ಕಾಯಕ-ದಾಸೋಹ- ಅನುಭಾವವೆಂಬುವು ಈ ಕ್ರಮದಲ್ಲೇ ಆಚರಣೀಯ. ಕಾಯಕವೆಂದರೆ ನ್ಯಾಯವಾದ ದುಡಿಮೆ. ಈ ಕಾಯಕ ವಿಧಾನವು ಸೌದೆ ಕಡಿಯುವುದೋ, ಅಕ್ಕಿ ಆಯುವುದೋ, ಕೊಟ್ಟಣ ಕುಟ್ಟುವುದೋ, ನೆಯ್ಯುವುದೋ, ಕಮ್ಮಾರಿಕೆಯೋ, ವ್ಯವಸಾಯವೋ, ಕಾರಕೂನಿಕೆಯೋ, ಮಂತ್ರಿಪದವಿಯೋ ಯಾವುದಾದರೂ ಆಗಿರಬಹುದು. ಅವುಗಳಲ್ಲಿ ಯಾವುದೂ ಒಂದಕ್ಕಿಂತ ಕೀಳೂ ಅಲ್ಲ, ಮೇಲೂ ಅಲ್ಲ, ಎಲ್ಲವೂ ಸರಿಸಮ. ಇಂಥ ಸಮಾನ ಗೌರವದ ಕಾಯಕದ ಹಿನ್ನೆಲೆಯಲ್ಲಿ. ಕಾಯಕದಿಂದಲೇ ಹುಟ್ಟಿರುವ ಜಾತಿಪದ್ಧತಿ ತೊಲಗಿ ಸರ್ವಸಮಾನತೆ ನೆಲೆಗೊಳ್ಳಲು ದಾರಿಯಾಯಿತು. ಮತ್ತು ಕಾಯಕದ ಮೂಲಕ ಮಾಡುವ ಆರ್ಜನೆ ಒಂದು ಮಿತಿಯಲ್ಲಿರಬೇಕು ಎಂಬ ಮಾತಿನಿಂದ ಮಾನವನ ಅತ್ಯಂತ ಪ್ರಬಲ ಹುಟ್ಟುಗುಣವಾದ ದಾಸ್ತಾನುಗಾರಿಕೆ ನಿರುತ್ತೇಜನಗೊಂಡಿತು.

ಲಿಂಗಾಂಗ ಸಾಮರಸ್ಯದ ಎರಡನೇ ಅಂಗವಾದ ದಾಸೋಹದಿಂದ ಸಮಾಜದ ಸಂಪತ್ ಸಮೃದ್ಧಿಯು ಸಮಾನವಾಗಿ ವಿತರಣೆಯಾಗುವುದಕ್ಕೆ ಸಹಾಯಮಾಡಿತು. ಮತ್ತು ಈ ಸಂಪತ್ತಿನ ಮಿತಿ ಮೀರಿದ ಕ್ರೋಢೀಕರಣಕ್ಕಾಗಿ ಬಳಕೆಯಾಗುತ್ತಿದ್ದ ದುರಾಸೆ ಹಿಂಸೆ ಮೋಸ ನಿರ್ದಯ ಸ್ವಾರ್ಥ ಕ್ಷುದ್ರತೆ ಮುಂತಾದ ಜೀವದುರ್ಗುಣಗಳು ಮೊಳೆಯದಂತೆ ನೋಡಿಕೊಂಡಿತು. ಅಷ್ಟೇ ಅಲ್ಲದೆ ಈ ದಾಸೋಹವು ತ್ಯಾಗವನ್ನೂ ಪರರ ದುಃಖಕ್ಕೆ ದುಃಖಿಸುವ ಸಹಾನುಭೂತಿಯನ್ನೂ ಪರರ ಸುಖಕ್ಕೆ ಸುಖಿಸುವ ಸಹೃದಯತೆಯನ್ನೂ-ಒಟ್ಟಾರೆಯಾಗಿ ಸಮುದಾಯ ನಿಷ್ಠೆಯನ್ನು ಬೆಳೆಸಿಕೊಳ್ಳಲು ಅನುಮಾಡಿತು. ಆಮೇಲೆ ಈ

ಅಭಿವಂದನಾ

ಲಿಂಗಾಂಗ ಸಾಮರಸ್ಯ ಮೂರನೆಯ ಅಂಗವಾದ ಅನುಭಾವವು ಅರಿವನ್ನು ಪರರಲ್ಲಿ ಗುಣಗಳನ್ನು ಗ್ರಹಿಸುವ ಸಜ್ಜನಿಕೆಯನ್ನೂ ಜ್ಞಾನಿಗಳಿಗೆ ಸಲ್ಲಿಸಬೇಕಾದ ಗೌರವಭಾವವನ್ನೂ, ಅಜ್ಞಾನ ತಿಮಿರವನ್ನೂ ಪರಿಹರಿಸುವ ಅಧ್ಯಯನ-ಶ್ರವಣ-ಮನನ ಕ್ರಮವನ್ನೂ, ವೈಚಾರಿಕ ಮನೋಭಾವವನ್ನೂ ಸಂಪಾದಿಸಿ ಕೊಟ್ಟಿತು.

ಈ ಎಲ್ಲ ಸಾಧನೆಗಳಿಂದ ಈ ಅಂಗವು ಅಂಗಗುಣಗಳನ್ನು ಕಳೆದುಕೊಂಡು ಲಿಂಗವೇ ಆಗುತ್ತದೆ. ಅಂದರೆ ಜೀವನು ಸದೇಹಿಯಾಗಿರುವಾಗಲೇ ದೈಹಿಕ ಮತ್ತು ಮಾನಸಿಕ ದೌರ್ಬಲ್ಯಗಳನ್ನು ನೀಗಿಕೊಂಡು ಅಂಗತ್ರಯದಾಳಕ್ಕೂ ಶುದ್ಧವಾಗಿ, ಉರಿಯುವ ಕರ್ಪೂರದಂತೆ ಜ್ಯೋತಿಸ್ವರೂಪಿಯಾಗಿ ಚಿತ್‌ಶಕ್ತಿಯಲ್ಲಿ ಲೀನವಾಗುತ್ತಾನೆ. ಇದೇ ಅಂಗಲಿಂಗಸಾಮರಸ್ಯ, ಲಿಂಗೈಕ್ಯ, ಬಯಲು, ನಿರ್ವಾಣ.

ಕರ್ಮ-ಜ್ಞಾನ-ಭಕ್ತಿಯೆಂಬ ಮೂರು ಪ್ರಶಸ್ತವಾದ ಯೋಗಗಳಲ್ಲಿ ಭಕ್ತಿಯೋಗವೇ ಸುಲಭವಾದುದು. ಆದರೆ ನಾಲ್ಕನೆಯದಾಗಿ ಶರಣರಿಂದ ಗುರುತಿಸಲಾದ ದಾಸೋಹಂ ಯೋಗವಾದರೋ ಆ ಶರಣರು ಬೋಧಿಸಿದ ಸಮನ್ವಯ ಶ್ರೇಷ್ಠಯೋಗವೇ ಆಗಿದೆ. ಇದರೊಳಗೆ ಕಾಯಕರೂಪದಲ್ಲಿ ಕರ್ಮಯೋಗವೂ, ಶರಣರ ಸಂಗದಲ್ಲಿ ನಡೆಯುವ ಅನುಭಾವರೂಪದಲ್ಲಿ ಜ್ಞಾನಯೋಗವೂ, ಸಕಲ ಸದ್ಭಕ್ತರಿಗೆ ಮಾಡುವ ದಾಸೋಹ ರೂಪದಲ್ಲಿ ಭಕ್ತಿಯೋಗವೂ ಮೇಳೈಸಿರುತ್ತದೆ. ಆದುದರಿಂದಲೇ ಸೋಹಂ ಎಂಬ ಜ್ಞಾನಮಾರ್ಗ ತೀರ ಕಡಿದಾದುದಾದರೆ ದಾಸೋಹಂಯೋಗವು ಸಮತಲದಲ್ಲಿ ಹರಿಯುವ ಗಂಗೆಯಂತೆ ಸರ್ವರಿಗೂ ಸುಲಭ ಸಾಧ್ಯವಾದ ಪವಿತ್ರತೀರ್ಥವಾಗಿದೆ. ಇದನ್ನು ಸಮರ್ಥಿಸಿದವಳು ಲಕ್ಕಮ್ಮ, ಸಾಧಿಸಿದವನು ಆಯ್ದಕ್ಕಿ ಮಾರಯ್ಯ.

***

ಅಭಿವಂದನಾ

ನಮ್ಮ ಮುಂದಿರುವ ಆಯ್ಕೆ

ಪ್ರೊ|| ಎಲ್.ಎಸ್. ಶೇಷಗಿರಿರಾವ್

ಸುಮಾರು ಐವತ್ತು ವರ್ಷಗಳ ಹಿಂದಿನವರೆಗೆ ಅಂದರೆ ಸ್ವಾತಂತ್ರ್ಯ ಬರುವವರೆಗೆ ನಮ್ಮ ಸಂಸ್ಕೃತಿಯ ಮೇಲೆ ಪರಕೀಯ ಧಾಳಿ ಆಗುತ್ತಿದೆ ಎನ್ನುವ ಅರಿವು ನಮಗಿತ್ತು. ಪಾಶ್ಚಾತ್ಯ ಜೀವನ ಸಾಧನಗಳಾದ ರೈಲು, ಟೆಲಿಗ್ರಾಂ, ಬಸ್ ಮತ್ತು ಕಾರು, ಇಂತಹ ಹಲವನ್ನು ನಾವು ಸ್ವೀಕರಿಸಿದರೂ ನಮ್ಮ ಸಂಸ್ಕೃತಿಯಲ್ಲಿ ನಮಗೆ ಅಭಿಮಾನವಿತ್ತು. ಅದನ್ನು ವಿಮರ್ಶಾತ್ಮಕವಾಗಿ ಕಂಡು ಅದರಲ್ಲಿ ಗಟ್ಟಿಯಾಗಿದ್ದುದನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದೆವು. ಆದರೆ ನಾವು ಈ ನೆಲದವರು, ನಾವು ಅರಳುವುದು ಬೆಳೆಯುವುದು ಈ ಸಂಸ್ಕೃತಿಯ ನೆಲೆಯಲ್ಲಿ ಎನ್ನುವುದರ ಅರಿವು ಇತ್ತು. ಹೊರಗಿನ ಸಂಸ್ಕೃತಿ ನಮ್ಮನ್ನು ಆವರಿಸಿಬಿಡುವುದನ್ನು ಪ್ರಜ್ಞಾಪೂರ್ವಕವಾಗಿ ತಡೆಗಟ್ಟುತ್ತಿದ್ದೆವು.

ಇಂದೂ ನಮ್ಮ ಮೇಲೆ ಸಾಂಸ್ಕೃತಿಕ ಆಕ್ರಮಣವು ನಡೆಯುತ್ತಿದೆ. ನಮ್ಮ ಆಹಾರ, ಪಾನೀಯ, ಮಕ್ಕಳ ಆಹಾರ, ನಾವು ಬಳಸುವ ಹಲವಾರು ವಸ್ತುಗಳು, ಎಲ್ಲವನ್ನೂ ಬಹುರಾಷ್ಟ್ರೀಯ ಕಂಪನಿಗಳು ಹೊರಿಸಲು ಪ್ರಯತ್ನಿಸುತ್ತಿವೆ. ನಾವು ಹಾಡುವ ಹಾಡುಗಳ ಅಥವಾ ಅವುಗಳ ಧಾಟಿಗಳು, ನಾವು ಆರಿಸಿಕೊಳ್ಳುವ ನೃತ್ಯಗಳು, ಎಲ್ಲ ಬೇರೆದೇಶಗಳ ಅನುಕರಣೆಗಳು. ಹದಿನೈದು ದಿನ ಅಮೆರಿಕದಲ್ಲಿದ್ದು ಬಂದರೆ ಅಲ್ಲಿ ತಯಾರಾದ ತೊಡುಗೆಗಳನ್ನು (ಅವುಗಳ ಮೇಲೆ Love Me. New York, calsetian gaints ಹೀಗೆ ಏನೇನೋ ಬರಹಗಳಿರಬಹುದು. ಹಲವೊಮ್ಮೆ ಅದನ್ನು ತೊಟ್ಟವರಿಗೇ ಆ ಮಾತುಗಳ ಅರ್ಥ ತಿಳಿದಿರುವುದಿಲ್ಲ) ತೊಡಬೇಕು; ಅಮೆರಿಕದ ಕಡೆ ತಲೆ ಹಾಕಿ ಮಲಗದಿದ್ದವರಿಗೂ ಇದೇ ಚಪಲ ಎಂದರೆ ಈ ಸಾಂಸ್ಕೃತಿಕ ಆಕ್ರಮಣವನ್ನು ನಾವು ಸ್ವಾಗತಿಸುತ್ತಿದ್ದೇವೆ. ಅದು ಆಪ್ಯಾಯಮಾನ, ಅದು ಆಕ್ರಮಣ ಎಂದೇ ನಮಗೆ ಅನ್ನಿಸುವುದಿಲ್ಲ. ಆದುದರಿಂದ ಹಿಂದಿನ ಧಾಳಿಗಿಂತ ಇದೇ ಹೆಚ್ಚು ಅಪಾಯಕಾರಿ.

ಹೀಗೆಂದರೆ ಭಾರತೀಯ ಸಂಸ್ಕೃತಿ ಪರಿಪೂರ್ಣವಾಗಿದೆ ಎಂದು ಅರ್ಥವಲ್ಲ. ಅದು ಇತರ ಸಂಸ್ಕೃತಿಗಳಿಂದ ಪಡೆದು ಅರಗಿಸಿಕೊಳ್ಳಬೇಕಾದ ಎಷ್ಟೋ ಅಂಶಗಳಿವೆ. ಉದಾಹರಣೆಗೆ, ಎಲ್ಲ ಮನುಷ್ಯರ ಘನತೆಯ ಅರಿವು 'ಭಗವದ್ಗೀತೆ' ಯೇನೋ ಜ್ಞಾನಿಯಾದವನ್ನು ಎಲ್ಲರನ್ನೂ ಸಮಭಾವದಿಂದ ಕಾಣುತ್ತಾನೆ ಎಂದು ಹೇಳಿದೆ. ಆದರೆ ಸರ್ವಸಮತಾಭಾವನೆ, ಪ್ರತಿಯೊಬ್ಬ ಮನುಷ್ಯನ ಘನತೆಯನ್ನೂ ಗೌರವಿಸಬೇಕೆಂಬ ಅರಿವು ಸಾಕಷ್ಟು ಪ್ರಬಲವಾಗಿದ್ದರೆ ಅಸ್ಪೃಶ್ಯತೆಗೆ ಎಡೆಯೇ ಇರುತ್ತಿರಲಿಲ್ಲ. ಎಲ್ಲಿ ತನ್ನಲ್ಲಿ ಸಂಕುಚಿತ ಭಾವನೆ ಇದೆಯೋ ಅಲ್ಲಿ ಭಾರತೀಯ ಸಂಸ್ಕೃತಿ ತಿದ್ದಿಕೊಳ್ಳಬೇಕು. ಆದರೆ ಅದೊಂದು ಆರೋಗ್ಯಕರವಾದ ಸಂಸ್ಕೃತಿ. ಸಾವಿರಾರು ವರ್ಷಗಳ ಕಾಲ ಎಲ್ಲ ದಾಳಿಯನ್ನು

ಎದುರಿಸಿಕೊಂಡ ಸಂಸ್ಕೃತಿ.

ಈ ಪಂಕ್ತಿಗಳನ್ನು ನೋಡಿ.

ಎದ್ದೊಂದು ಗಳಿಗೇಲಿ ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೊ ಭೂಮಿ ತಾಯಿ
ಎದ್ದೊಂದು ಗಳಿಗೇಲಿ ನೆನೆದೇನ

ಇವು ನಮ್ಮ ಹಳ್ಳಿಯ ಅನಕ್ಷರಸ್ಥ ಹೆಂಗಸರು ಕಟ್ಟಿದ, ಅವರ ನಾಲಿಗೆಗಳಲ್ಲಿ ಕುಣಿಯುವ ಪಂಕ್ತಿಗಳು. ಈ ಪಂಕ್ತಿಗಳನ್ನು ನೋಡಿ-

ಸಮುದ್ರವಸನೇ ದೇವಿ, ಪರ್ವತಸ್ತನ ಮಂಡಿತೇ। ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೇ॥ ಇವು ವಿದ್ವಾಂಸರು ರಚಿಸಿದ ಪಂಕ್ತಿಗಳು, ಶಿಷ್ಟವಲಯಕ್ಕೆ ಸೇರಿದವರು ಮಾಡುವ ಪ್ರಾರ್ಥನೆ. ಆದರೆ ಇವೆರಡರಲ್ಲಿಯೂ ಭೂಮಿಯು ಪವಿತ್ರ, ಪೂಜ್ಯ ಎನ್ನುವ ಭಾವನೆ ಇದೆ. ಪ್ರಾಚೀನ ಕಾಲದಿಂದ ಇಡೀ ಹಿಂದೂ ಸಮಾಜದಲ್ಲಿ ಬೆಳೆದು ಬಂದಿದ್ದ ಭಾವನೆ ಇದು.

ಈ ಸಂಸ್ಕೃತಿಯೊಂದಿಗೆ ಇತ್ತೀಚಿಗಿನ ವರ್ಷಗಳಲ್ಲಿ ಪಾಶ್ಚಾತ ಜಗತ್ತಿನಿಂದ ದಾಳಿ ಇಡುತ್ತಿರುವ ಸಂಸ್ಕೃತಿಯನ್ನು ಹೋಲಿಸಿ (ಈ ಸಂಸ್ಕೃತಿಗಾದರೂ ಐದು ನೂರೇ ವರ್ಷಗಳ ಇತಿಹಾಸವಿದೆ. ಇದು ಪಾಶ್ಚಾತ್ಯ ದೇಶಗಳಿಗೆ ಆಗರವಾದ ಗ್ರೀಕೊ-ರೋಮನ್ ಸಂಸ್ಕೃತಿಯನ್ನು ತಿಂದು ತೇಗಿದೆ. ಎನ್ನುವುದನ್ನು ನೆನಪಿಸಿಕೊಳ್ಳಬೇಕು. ಆ ಸಂಸ್ಕೃತಿಯಲ್ಲಿ ಜನತೆ ನದಿಯಲ್ಲಿ ಗಿಡದಲ್ಲಿ, ಗಾಳಿಯಲ್ಲಿ ದೇವತೆಗಳನ್ನು ಕಂಡರು. ಅವರು ಸೌಂದರ್ಯಪ್ರಿಯರು. ಗ್ರೀಕೊ-ರೋಮನ್ ಸಂಸ್ಕೃತಿಯನ್ನು ಕಬಳಿಸಿದ ಈಗಿನ ಪಾಶ್ಚಾತ್ಯ ಸಂಸ್ಕೃತಿಯು ಜಗತ್ತಿನ ಇತರ ದೇಶಗಳ ಸಂಸ್ಕೃತಿಗಳನ್ನು ಕಬಳಿಸುತ್ತಿದೆ. ಈ ಪಾಶ್ಚಾತ್ಯ ಸಂಸ್ಕೃತಿಯ ಮುಖ್ಯ ಮಾತು exploitation ಮತ್ತೆ ಮತ್ತೆ ಅದು ಬಳಸುವ ಪದಬಂಧ exploitation of natural resources ಪ್ರಕೃತಿ ಇರುವುದೆ. ಮನುಷ್ಯನು 'ಎಕ್ಸ್‌ಪ್ಲಾಯಿಟ್' ಮಾಡಲೆಂದು, ಶೋಷಿಸವೆಂದು, ಇದು ನಾವು(ಯೂರೋಪಿನ) 'ನವಯುಗ' ಎಂದು ಕರೆಯುವ ಯುಗದಲ್ಲಿ, ಸುಮಾರು ಐದುನೂರು ವರ್ಷಗಳ ಹಿಂದೆ, ಹುಟ್ಟಿಕೊಂಡಿತು. ವಿಜ್ಞಾನವು ಕೊಡವಿಕೊಂಡೆದ್ದು ಗರಿಗೆದರಿ ಹೊರಟ ಈ ಯುಗದ ಘೋಷಣೆ ಎಂದರೆ, knowledge is Power. (ಇಲ್ಲಿ Wisdom ಗೆ ಸ್ಥಾನವಿಲ್ಲ ಎನ್ನುವುದನ್ನು ಗಮನಿಸಬೇಕು.) ನಿಸರ್ಗದ ಗುಟ್ಟುಗಳನ್ನು ತಿಳಿದು ಅದರ ವಸ್ತುಗಳ ಮತ್ತು ಶಕ್ತಿಗಳ ಭಂಡಾರವನ್ನು ಮನುಷ್ಯನು ಕೊಳ್ಳೆ ಹೊಡೆಯುವ ಮನೋಧರ್ಮ ಇದು. ಇದರ ಪರಿಣಾಮವೇ ಇಂದು ಅರಣ್ಯಗಳು ದಿವಾಳಿಯಾಗುತ್ತಿರುವುದು, ಭೂಗರ್ಭದ ಲೋಹಗಳು ಮತ್ತು ಇತರ ವಸ್ತುಗಳು ತೀರುತ್ತ ಬಂದಿರುವುದು, ಓಜೋನ್ ರಂಧ್ರವಾಗಿರುವುದು, ಗಾಳಿ-ನೀರು ಕಶ್ಮಲದಿಂದ ತುಂಬಿಹೋಗಿರುವುದು.

ಅಭಿವಂದನಾ

ಮನುಷ್ಯನು ತನಗಾಗಿ ನಿಸರ್ಗವನ್ನು ಶೋಷಿಸುವದರಲ್ಲಿ ತಪ್ಪಿಲ್ಲ ಎಂಬ ಮನೋಧರ್ಮವು ಇನ್ನೂ ದೂರ ಹೋಗಿ, ಇತರ ಮನುಷ್ಯರನ್ನು ಶೋಷಿಸುವುದರಲ್ಲಿ ತಪ್ಪಿಲ್ಲ ಎಂಬ ಭಾವನೆಯನ್ನು ಮುಟ್ಟಿತು. ಅಮೆರಿಕದಲ್ಲಿನ ಮೂಲ ನಿವಾಸಿಗಳನ್ನು ಬಹುಮಟ್ಟಿಗೆ ನಾಶಮಾಡಿ, ಅಳಿದುಳಿದವರನ್ನು ಅನಾಗರಿಕರಂತೆ ಕಂಡದ್ದು ಇದೇ ಮನೋಧರ್ಮ. ಸಾವಿರಾರು ಮಂದಿ ನೀಗ್ರೋಗಳನ್ನು ಆಫ್ರಿಕದಿಂದ ಹಿಡಿದುಕೊಂಡು ಹೋಗಿ ಗುಲಾಮರನ್ನಾಗಿ ಮಾಡಿಕೊಂಡು, ಅವರನ್ನು ತಿರಸ್ಕಾರದಿಂದ 'ನಿಗರ್ಸ್' ಎಂದು ಕರೆದದ್ದು ಇದೇ ಮನೋಧರ್ಮವೇ. ೧೭ ನೆಯ ಶತಮಾನದಲ್ಲಿ ಡಿಫೋ ಇಂಗ್ಲೆಂಡಿನಲ್ಲಿ ಬರೆದ 'ರಾಬಿನ್‌ಸನ್ ಕ್ರೂಸೊ' ಕಾದಂಬರಿಯು ಬಹು ಜನಪ್ರಿಯವಾಯಿತು ಜನರ ಅನಿಸಿಕೆ ರೂಪಕೊಟ್ಟದ್ದರಿಂದ ಒಂದು ದ್ವೀಪದಲ್ಲಿ ಒಬ್ಬನೇ ಉಳಿದುಕೊಂಡ ಕ್ರೂಸೊ ನಿಸರ್ಗವನ್ನೂ ಪ್ರಾಣಿಗಳನ್ನೂ ಬಳಸಿಕೊಂಡು ಉಳಿಯುತ್ತಾನೆ. ತನ್ನ ದೇಶಕ್ಕೆ ಹಿಂದಿರುಗಿದಾಗ ತನ್ನ ಪ್ರಾಣವನ್ನು ಉಳಿಸಿದ ಮೂರ್ ಹುಡುಗನನ್ನು ಅರವತ್ತು ಬೆಳ್ಳಿ ನಾಣ್ಯಗಳಿಗೆ ಮಾರುತ್ತಾನೆ. (ಕೊಂಡುಕೊಂಡವನು ಅವನನ್ನು ಗುಲಾಮನನ್ನಾಗಿ ಮಾರುತ್ತಾನೆ ಎಂದು ಕ್ರೂಸೊಗೆ ತಿಳಿದಿದೆ). ದ್ವೀಪದಲ್ಲಿ ತನ್ನ ಬಲಗೈಯಾಗಿದ್ದ ಫ್ರೆಡ್ ಎನ್ನುವ ಮನುಷ್ಯನನ್ನು ಗುಲಾಮನನ್ನಾಗಿ ಮಾಡಿಕೊಳ್ಳುತ್ತಾನೆ. (ಇತ್ತೀಚೆಗೆ ನಮ್ಮಲ್ಲಿ ಕಾಣಿಸಿಕೊಳ್ಳುತ್ತಿರುವ ಅಸಹ್ಯಕರವಾದ, ನೀಚ 'ರ‍್ಯಾಗಿಂಗ್' ಅಭ್ಯಾಸ ಇಂಗ್ಲೆಂಡಿನಿಂದ ಬಂದದ್ದು. ೧೯ ನೇ ಶತಮಾನದಲ್ಲಿ ಅಲ್ಲಿನ ಪಬ್ಲಿಕ್ ಶಾಲೆಗಳಲ್ಲಿ 'ರ‍್ಯಾಗಿಂಗ್' ಪದ್ಧತಿ ಜಾರಿಯಲ್ಲಿತ್ತು. ಕಿರಿಯ ತರಗತಿಯ ವಿದ್ಯಾರ್ಥಿಯು ಹಿರಿಯ ತರಗತಿಯ ವಿದ್ಯಾರ್ಥಿಯೊಬ್ಬನಿಗೆ 'ರ‍್ಯಾಗ್' ಹಿರಿಯ ವಿದ್ಯಾರ್ಥಿ ಹೇಳಿದಂತೆ ಕೇಳಬೇಕು. ಇದು ಅಸಹ್ಯವಾದ ರೀತಿಯಲ್ಲಿ ನಮ್ಮ ಶಾಲಾಕಾಲೇಜುಗಳಿಗೆ ಬಂದಿದೆ.

ವಿವೇಕವನ್ನು ಮರೆತು ತಿಳುವಳಿಕೆ (ನಾಲೆಜ್) ಅಷ್ಟನ್ನೇ ಬೆಳೆಸಿಕೊಂಡು ಶಕ್ತಿಯನ್ನು ವರ್ಧಿಸಿಕೊಂಡ ಸಮೂಹದ ಸ್ಥಿತಿ ಏನಾಗಿದೆ? ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗ ಮತ್ತು ಇಪ್ಪತ್ತನೆಯ ಶತಮಾನದಲ್ಲಿ ಯೂರೋಪಿನಲ್ಲಿ 'ಅನಾಥ ಪ್ರಜ್ಞೆ' ಬೆಳೆಯಿತು ಕಾಫ್ಕನ ಕಾದಂಬರಿಗಳಿಂದ ಟಿ.ಎಸ್. ಎಲಿಯಟ್‌ನ ಕಾವ್ಯ 'ದಿ ವೇಸ್ಟ್ ಲ್ಯಾಂಡ್' ವರೆಗೆ ಸಾಹಿತ್ಯವನ್ನು ಈ ಪ್ರಜ್ಞೆ ಪ್ರೇರಿಸಿದೆ. ಶಕ್ತಿಯನ್ನು ಬೆಳೆಸಬಲ್ಲ. ವಿಜ್ಞಾನದ ವಿಧಾನ ಪ್ರಯೋಗ- ವೀಕ್ಷಣೆ ಅನುಮಾನಗಳು. (inference) ದೇವರು, ನೈತಿಕತೆ, ಪ್ರೀತಿ ಯಾವುದನ್ನೂ ವಿಧಾನ ಅಧ್ಯಯನ ಮಾಡಬಾರದು. ಇದರಿಂದ ಮನುಷ್ಯನಿಗೆ ಅನಾಥ ಪ್ರಜ್ಞೆ ಮೂಡಿತು. ತಾನು ವಿಶ್ವದಲ್ಲಿ ತಬ್ಬಲಿ ತಾನು (ಎಂದರೆ ಇಡೀ ಮಾನವ ಕುಲ) ಇರಲಿ. ನಾಶವಾಗಿ ಹೋಗಲಿ ಸೂರ್ಯಚಂದ್ರ ಸಾಗರ ಪರ್ವತ ಯಾವುದಕ್ಕೂ ಲಕ್ಷ್ಯವಿಲ್ಲ, ತಾನು ವಿಶ್ವಕ್ಕೆ ಬೇಡದವನು ಎನ್ನಿಸಿತು. ಅವನು ವಿಜ್ಞಾನ ತಂತ್ರಜ್ಞಾನಗಳ ಬಲದಿಂದ ಸೃಷ್ಟಿಸಿದ ವಸ್ತುಗಳು ಅವನಿಗೇ ಮುಳುವಾದವು. ಕಾಲ-ದೂರಗಳನ್ನು ಗೆಲ್ಲಲು ಸೃಷ್ಟಿಸಿದ ವಿಮಾನವು ನಗರಗಳ ಮೇಲು ಬಾಂಬಿನ ಮಳೆ ಕರೆದು, ನಗರಗಳನ್ನು

ಕ್ಷಣಮಾತ್ರದಲ್ಲಿ ನಾಶಮಾಡುವ ಭಸ್ಮಾಸುರಗಳಾದವು. ಹಿರೋಷಿಮ-ನಾಗಸಾಕಿಗಳು ಸ್ಮಶಾನವಾದವು. ಇನ್ನೊಂದು ಉದಾಹರಣೆಯನ್ನು ನೋಡೋಣ. ಪಶ್ಚಿಮದ ಮನುಷ್ಯ ದೂರದರ್ಶನವನ್ನು ಕಂಡು ಹಿಡಿದ. ಮನೆ ಮನೆಗೆ ದೂರದರ್ಶನ ಬಂದಿತ್ತು. ಇದರ ಪರಿಣಾಮ ಏನಾಗಬಹುದೆಂಬುದನ್ನು ಕಾಣುವ ವಿವೇಕ, 'ನಾಲೆಜ್' ಮತ್ತು 'ಪವರ್' ಗಳನ್ನು ಮಾತ್ರ ಬಯಸಿ ಪಡೆದುಕೊಂಡ ಮನುಷ್ಯನಿಗೆ ಇರಲಿಲ್ಲ. ಪರಿಣಾಮವು ಏನಾಯಿತು? ಅಮೆರಿಕದಲ್ಲಿ ಒಂದು ವರದಿಯು ಹೇಳುತ್ತದೆ "ಅಮೆರಿಕದ ಹುಡುಗ(ಅಥವಾ ಹುಡುಗಿ) ಹದಿನೆಂಟು ವರ್ಷವಾಗುವ ಹೊತ್ತಿಗೆ, ೧೦,೦೦೦ ರಿಂದ ೧೫,೦೦೦ ಗಂಟೆಗಳಷ್ಟು ದೂರದರ್ಶನ ಕಾರ್ಯಕ್ರಮಗಳನ್ನು ನೋಡಿರುತ್ತಾನೆ(ಳೆ). ಈ ಅವಧಿಯಲ್ಲಿ ಎರಡು ಲಕ್ಷ ವಾಣಿಜ್ಯ ಜಾಹೀರಾತುಗಳನ್ನು ನೋಡಿರುತ್ತಾನೆ (ಳೆ)". ಇಂದು ದೂರದರ್ಶನವು (ಮುಖ್ಯವಾಗಿ ವಾಣಿಜ್ಯ ಜಾಹೀರಾತುಗಳು) ಎಲ್ಲ ಮನುಷ್ಯ ಬಾಂಧವ್ಯಗಳನ್ನೂ ಅಗ್ಗಗೊಳಿಸುವ ಸಾಧನವಾಗಿದೆ. ತಾಯಿ-ಮಕ್ಕಳಲ್ಲಿ ಪ್ರೀತಿ ಇರುವುದು ತಾಯಿ ಯಾವುದೋ ಬಿಸ್ಕತ್ತನ್ನೊ ಪಾನೀಯವನ್ನೊ ಮಕ್ಕಳಿಗೆ ಕೊಡುವುದರಿಂದ, ಗಂಡ-ಹೆಂಡತಿಯರಲ್ಲಿ ಪ್ರೇಮ ಇರುವುದು ಯಾವುದೊ ಟೂತ್‌ಪೇಸ್ಟಿನಿಂದ, ಇಡೀ ಕುಟುಂಬ ಪ್ರೀತಿಯಿಂದ ಖುಷಿಯಾಗಿರುವುದು ಯಾವುದೊ ತೈಲವನ್ನು ಅಡುಗೆಗೆ ಉಪಯೋಗಿಸುವುದರಿಂದ ಇಲ್ಲವೇ ಸಾಬೂನನ್ನು ಬಳಸುವುದರಿಂದ. ಹೊಸ ಯಂತ್ರಗಳ ಪರಿಣಾಮವು ನಮ್ಮಲ್ಲಿಯೇ ಏನಾಗಿದೆ ಎನ್ನುವುದನ್ನು ನಾವೇ ಕಾಣುತ್ತಿದ್ದೇವೆ. ೩.೧೨.೧೯೯೫ ರ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ೧೦ ರಿಂದ ೧೫ ವಯಸ್ಸಿನ ಮಕ್ಕಳೊಂದಿಗೆ ನಡೆದ ಸಂದರ್ಶನಗಳು ಪ್ರಕಟವಾಗಿವೆ. ಕಂಪ್ಯೂಟರ್ ಇವರ ಬದುಕಿನ ಬಹು ಮುಖ್ಯ ಭಾಗವಾಗಿ ಹೋಗಿದೆ. ಅವರು ಆಡುವುದು ಕಂಪ್ಯೂಟರಿನೊಡನೆ. ಹತ್ತು ವರ್ಷದ ಹುಡುಗ ಹೇಳುತ್ತಾನೆ, 'ನಾವು ಹುಡುಗರು ಯಾರೂ ಆಟವಾಡುವುದಕ್ಕೆ ಹೊರಕ್ಕೆ ಹೋಗುವುದಿಲ್ಲ. ನನ್ನ ಕಂಪ್ಯೂಟರೇ ನನ್ನ ಅತ್ಯುತ್ತಮ ಸ್ನೇಹಿತ' ಎಂದರೆ, ಹತ್ತು ವರ್ಷದ ಹುಡುಗನ ಬಹು ಹತ್ತಿರದ ಸ್ನೇಹಿತ ಇನ್ನೊಬ್ಬ ಜೀವವಿರುವ ಹುಡುಗನಲ್ಲ ಜೀವವಿಲ್ಲದ, ಲೋಹದಿಂದ ಮಾಡಿದ ಯಂತ್ರ. ಈ ಹುಡುಗರ ಬದುಕಿನಲ್ಲಿ ಪ್ರೀತಿ, ವಿಶ್ವಾಸ, ಅನುಕಂಪಗಳು ಅರಳುವುದು ಹೇಗೆ ಸಾಧ್ಯ? ಈಗ ಹಲವಾರು ದೂರದರ್ಶನಗಳು ಬಂದು, ಬೆಳಗಿನಿಂದ ರಾತ್ರಿಯವರೆಗೆ ನೂರಾರು ವಾಣಿಜ್ಯ ಜಾಹೀರಾತುಗಳನ್ನು ಎಳೆಯರು ನೋಡುತ್ತಾರೆ ಯಾವ ಜಾಹೀರಾತಾದರೂ ಪ್ರೀತಿ, ತ್ಯಾಗ, ಅನುಕಂಪ ಇವನ್ನು ಬೆಳೆಸಬಲ್ಲವೆ? ಗಂಡು-ಹೆಣ್ಣಿನ ಪ್ರೇಮವನ್ನು ಅಗ್ಗಗೊಳಿಸದೆ, 'ಟೆರರ್‍ೈಸ್' ಮಾಡದೆ ಬದುಕನ್ನು ಶ್ರೀಮಂತಗೊಳಿಸುವ ಅನುಭವವನ್ನಾಗಿ ಯಾವ ಜಾಹೀರಾತು ನಿರೂಪಿಸುತ್ತದೆ? ಈ ವಾತಾವರಣದಲ್ಲಿ ಸಂಸಾರವು ಕೆಲವು ವ್ಯಕ್ತಿಗಳ ಕೂಟವಾಗದೆ ಪ್ರೀತಿ ವಿಶ್ವಾಸಗಳ ಭಂಡಾರವಾಗುವುದು ಹೇಗೆ? ಇಂತಹ ಸಂಸ್ಕೃತಿಯು ಸೃಷ್ಟಿಸುವ ಮನರಂಜನೆಯ ಸಾಹಿತ್ಯವು (ಅಮೆರಿಕ, ಇಂಗ್ಲೆಂಡುಗಳಲ್ಲಿ ತರುಣವರ್ಗಕ್ಕೆ ತುಂಬಾ ಪ್ರಿಯವಾದ, ದುರ್ದೈವದಿಂದ ನಮ್ಮಲ್ಲಿಯೂ

ಜನಪ್ರಿಯವಾಗುತ್ತಿರುವ, ಜೇಮ್ಸ್ ಬಾಂಡ್ ಕಥೆಗಳು. ಬಾಂಡ್ ಒಂದು ದುಷ್ಟ ಬಲಶಾಲಿ ಮೃಗ; ಹೆಂಗಸರೆಂದರೆ ಜೇಬಿನಲ್ಲಿರುವ ಕರವಸ್ತ್ರದ ಹಾಗೆ, ಉಪಯೋಗಿಸಿ ಬಿಸಾಡುವುದಕ್ಕೆ ಇರುವುದು. ಅವನ ಒಂದು ಆಸ್ತಿ ಎಂದರೆ ಮೃಗೀಯ ಶಕ್ತಿ. ವಿಷಪೂರಿತ ಸಾಹಿತ್ಯ ಇದು.

ಇದೆಲ್ಲದರ ಇನ್ನೊಂದು ಪರಿಣಾಮ ಏಕಾಕಿಯಾಗಿರುವುದು ತಂದೆ ತಾಯಿ, ಬಂಧುಗಳು ಸ್ನೇಹಿತರು ಯಾರೊಡನೆಯೂ ಅರ್ಥವತ್ತಾದ ಸಂಬಂಧವಿಲ್ಲದ ಜೀವಕ್ಕೆ ತನ್ನನ್ನು ಯಾರೂ ಅರ್ಥಮಾಡಿಕೊಳ್ಳಲಾರರು ಎಂಬ ಕೊರಗು ಹತ್ತುತ್ತದೆ. ಕೆನಡಾ, ಜಪಾನ್, ಹಾಲೆಂಡ್ ಮೊದಲಾದ ದೇಶಗಳಲ್ಲಿ ಯುವ ಜನಾಂಗದಲ್ಲಿ ಈಗ ಮದುವೆಯೇ ಬೇಡ ಎನ್ನುವವರ ಸಂಖ್ಯೆ ಹೆಚ್ಚಾಗಿದೆ.

ತನ್ನನ್ನು ಸೃಷ್ಟಿಯ ಭಾಗವನ್ನಾಗಿ ಕಂಡುಕೊಂಡು ತನ್ನ ಸುತ್ತ ಇರುವವರೊಂದಿಗೆ ಅರ್ಥವತ್ತಾದ ಸಂಬಂಧವನ್ನು ಬೆಳೆಸಿಕೊಳ್ಳುವ ಹಿಂದೂವಿಗೆ ಅನಾಥ ಪ್ರಜ್ಞೆಯಾಗಲಿ ಏಕಾಕಿತನವಾಗಲಿ ಕಾಡುವುದಿಲ್ಲ. ಭೂಮಿ ಅವನಿಗೆ ತಾಯಿ ಮತ್ತು ವಿಷ್ಣು ಪತ್ನಿ ಅವನು ತುಳಸಿಯನ್ನು ಪೂಜಿಸುತ್ತಾನೆ, ಅಶ್ವತ್ಥಕ್ಕೆ ನಮಿಸುತ್ತಾನೆ. ಗರುಡ, ನಂದಿಗಳು ಅವನ ದೇವರುಗಳ ವಾಹನಗಳು. ದೇವರನ್ನು ಪೂಜಿಸಲು ಹೂಗಳು ಬೇಕು. ಮಾವಿನ ಎಲೆ ಶುಭದ ಸಂಕೇತ. ಕಮಲವು ಲಕ್ಷ್ಮಿಯ ಪೀಠ, ಗೋವು ಪವಿತ್ರ, ಮದುವೆಗೆ ಅಗ್ನಿಸಾಕ್ಷಿ. ಅವನ ನಾಗರಿಕತೆ ಹುಟ್ಟಿದ್ದೇ ನದೀತೀರಗಳಲ್ಲಿ. ಗಂಗೆ, ಯಮುನೆ, ಗೋದಾವರಿ, ಕೃಷ್ಣ, ಕಾವೇರಿ ಎಲ್ಲ ನದಿಗಳೂ ಪೂಜಾರ್ಹ. ಹಾವು ವಿಷ್ಣುವಿನ ಹಾಸಿಗೆ, ಶಿವನಿಗೆ ಆಭರಣ. ಸೂರ್ಯನು ಸೂರ್ಯನಾರಾಯಣ. ಹೀಗೆ ತನ್ನ ಸುತ್ತ ಮುತ್ತಲಿನ ಜಗತ್ತನ್ನು ಕಾಣುವ ಹಿಂದೂವಿಗೆ ಅವನ ಸಂಸಾರ ಪ್ರಿಯ. ಗೃಹಿಣಿ ಬೆಳಿಗ್ಗೆ ಏಳುತ್ತಲೆ ಮನೆಯ ಮುಂದೆ ನೀರು ಹಾಕಿ ಸುಂದರವಾಗಿ ಅಲಂಕಾರ ಮಾಡುತ್ತಾಳೆ. ಅವಳ ಸೃಜನಶೀಲತೆ, ಸೌಂದರ್ಯಪ್ರೇಮ ಇದರಲ್ಲಿ ಅಭಿವ್ಯಕ್ತಿ ಪಡೆಯುತ್ತದೆ. ಹಿಂದೂ ಗೃಹಿಣಿಗೆ ಬೀಸುವ ಕಲ್ಲು ಸಹ ಬಂಧು:

ಕಲ್ಲವ್ವ ನನ ತಾಯಿ ಮೆಲ್ಲವ್ವ ರಾಗೀಯ
ಜಲ್ಲಜಲ್ಲನೆ ಉದರವ್ವ
ನಾ ನಿನಗೆ ಬೆಲ್ಲದಾರತಿಯಾ ಬೆಳಗೇನ.

ಅಮೆರಿಕದಲ್ಲಿ ತಂದೆ ತಾಯಿ ಮಕ್ಕಳನ್ನು ನೋಡಲು ಹೋಗುವಾಗ ಮೊದಲೇ ತಿಳಿಸಿ, ಊರಿನ ಒಂದು ಹೋಟೆಲಿನಲ್ಲಿ ಇಳಿದುಕೊಂಡು ಗೊತ್ತಾದ ಸಮಯಕ್ಕೆ ಮಕ್ಕಳನ್ನು ನೋಡಲು ಹೋಗುತ್ತಾರೆ. ಪಾಶ್ಚಾತ್ಯ ಜಗತ್ತಿನ ಪಾರ್ಕುಗಳಲ್ಲಿ ಏಕಾಕಿಗಳಾಗಿ ಗಂಟೆ ಎಣಿಸುವ ವಯೋವೃದ್ಧರು ನಮ್ಮ ದುರದೃಷ್ಟ. ಕುಟುಂಬವೆನ್ನುವ ಸಂಸ್ಥೆ ದುರ್ಬಲವಾಗುತ್ತಿವೆ. ಹೊರಗಿನ ಕಾರಣಗಳು ಹಲವು-ಬೇರೆ ದೇಶಗಳಿಗೆ ಹೋಗಿ ನೆಲಸುವುದು, ಬೇರೆ

ಊರುಗಳಿಗೆ ಉದ್ಯೋಗಕ್ಕಾಗಿ ಹೋಗುವುದು ಇಂತಹವು. ನಿಸರ್ಗದೊಡನೆ ಅರ್ಥವತ್ತಾದ ಸಂಬಂಧವನ್ನಿರಿಸಿಕೊಂಡು ಕುಟುಂಬದ ವರವನ್ನು ಸವಿಯುವವನಿಗೆ ತಬ್ಬಲಿ ಪ್ರಜ್ಞೆಯೂ ಇಲ್ಲ, ಒಂಟಿತನವೂ ಇಲ್ಲ, ಇಪ್ಪತ್ತನೆಯ ಶತಮಾನದ ಜಗತ್ಪ್ರಸಿದ್ಧ ಧೀಮಂತರಲ್ಲಿ ಒಬ್ಬನಾದ ಬರ್ಟ್ರಂಡ್ ರಸೆಲ್ ಸುಮಾರು ೬೦ ವರ್ಷಗಳ ಕೆಳಗೇ, ಪಾಶ್ಚಾತ್ಯ ತರುಣ-ತರುಣಿಯರಲ್ಲಿ 'ಸಿನಿಸಸಂ' ಪ್ರಬಲವಾಗಿದೆ, ಭಾರತ-ಚೀನ-ಜಪಾನ್‌ಗಳ ಯುವ ಜನತೆಯಲ್ಲಿ ಸಿನಿಸಸಂ ಇಲ್ಲ. ಅವರ ಬದುಕಿಗೆ ಗುರಿ ಇದೆ ಎಂದು ಹೇಳಿದ.

ಸುಮಾರು ೧೫ ವರ್ಷಗಳ ಹಿಂದೆ, ಪ್ರಸಿದ್ಧ ಮಾಸಪತ್ರಿಕೆ 'ದಿ ರೀಡರ್ಸ್ ಡೈಜೆಸ್ಟ್' ನಲ್ಲಿ ಒಂದು ಸುದ್ದಿ ಬಂದಿತ್ತು. ಒಂದು ವಾರ ಯುವಜನ ಮೇಳ ಒಂದು ಕಡೆ ನಡೆಯಿತು. ಕಡೆಯ ದಿನ ಅವರನ್ನು ಉದ್ದೇಶಿಸಿ ಭಾಷಣ ಮಾಡಿದ ಕಿವಿಗಂಟಲು ಮೂಗಿನ ತಜ್ಞ ಹೇಳಿದ. 'ನಿಮ್ಮಲ್ಲಿ ಮೂರರಲ್ಲಿ ಒಂದರಷ್ಟು ಮಂದಿ, ನೀವು ಇಲ್ಲಿಗೆ ಬಂದಾಗ ಇದ್ದ ಶ್ರವಣ ಶಕ್ತಿಯಲ್ಲಿ ಕಾಲುಭಾಗವನ್ನು ಕಳೆದುಕೊಂಡು ಮನೆಗೆ ಹಿಂದಿರುಗುತ್ತೀರಿ! ಇದಕ್ಕೆ ಕಾರಣ, ಸುದ್ದುಗದ್ದಲ. ಮನುಷ್ಯನ ಕಿವಿಯು ತಡೆದುಕೊಳ್ಳಬಹುದಾದ ಶಬ್ದಕ್ಕೆ ಮಿತಿ ಇದೆ. ಹಗಲು ೪೫ ಡೆಸಿಬಲ್‌ಗಳು, ರಾತ್ರಿ ೩೫ ಡೆಸಿಬಲ್‌ಗಳು, ಎಂಬತ್ತು ಡೆಸಿಬಲ್‌ಗಳಿಗಿಂತ ಹೆಚ್ಚಿದರೆ ಕಿವಿಗೂ ಅಪಾಯ, ನರಗಳಿಗೂ ಅಪಾಯ. ಒಂದು ಸಮೀಕ್ಷೆಯ ಪ್ರಕಾರ ಹಬ್ಬದ ದಿನಗಳಲ್ಲಿ ಮುಂಬಯಿ ದೆಹಲಿಗಳಲ್ಲಿ ೮೦ ರಿಂದ ೧೧೦ ಡೆಸಿಬಲ್‌ಗಳಷ್ಟು ಗದ್ದಲ ಇರುತ್ತದೆ ಬೆಂಗಳೂರಿನಲ್ಲಿ ಸಾಮಾನ್ಯ ದಿನಗಳಲ್ಲಿ ತುಂಬಾ ವಾಹನ ಸಂಚಾರವಿರುವ ಕಡೆ ೬೦ ರಿಂದ ೭೦ ಡೆಸಿಬಲ್‌ಗಳಷ್ಟು ಗದ್ದಲ ಇರುತ್ತದೆ. ಅಮೆರಿಕದಲ್ಲಿ ಒಂದು ಸಮೀಕ್ಷೆಯ ತೀರ್ಮಾನ. ಕ್ರಿ.ಶ. ೨೦೦೦ ರ ಹೊತ್ತಿಗೆ ಎಂದರೆ ಇನ್ನು ನಾಲ್ಕೈದು ವರ್ಷಗಳಲ್ಲಿ, ಈಗಿನಂತೆಯೆ ಗದ್ದಲ ಏರುತ್ತಿದ್ದರೆ ಹತ್ತು ವರ್ಷ ವಯಸ್ಸನ್ನು ತಲಪುವ ಹೊತ್ತಿಗೆ ಎಲ್ಲರೂ ಸ್ವಲ್ಪಮಟ್ಟಿಗೆ ಕಿವುಡರಾಗುತ್ತಾರೆ. ನಲವತ್ತು ವರ್ಷ ಆಗುವ ಹೊತ್ತಿಗೆ ನೂರರಲ್ಲಿ ಐವತ್ತು ಮಂದಿ ಕಿವುಡಾಗುತ್ತಾರೆ.

ಈ ಗದ್ದಲದ ಪೀಡೆಗೆ ಇನ್ನೊಂದು ಮುಖವಿದೆ. ಆಧುನಿಕ ಮನುಷ್ಯನಿಗೆ ಸ್ವಲ್ಪ ಹೊತ್ತಾದರೂ ನೀರವತೆಯಲ್ಲಿರುವುದಾದರೆ ಹೆದರಿಕೆ. ತಾನು ಕೇಳಲಿ ಕೇಳದಿರಲಿ, ರೇಡಿಯೊ ಹಾಕಿರಬೇಕು, ಟಿ.ವಿ. ಹಾಕಿರಬೇಕು, ಸದ್ದಿರಬೇಕು ಆದರೆ ತಾನೊಬ್ಬನೇ ನೀರವತೆಯಲ್ಲಿ ಇಲ್ಲದ ಮನುಷ್ಯ ತನ್ನನ್ನು ತಾನು ಪರೀಕ್ಷಿಸಿಕೊಳ್ಳುವುದು ಯಾವಾಗ, ಚಿಂತನೆಯಲ್ಲಿ ತೊಡಗುವುದು ಯಾವಾಗ?

ನಮ್ಮ ಸಂಸ್ಕೃತಿ ವೈರಾಗ್ಯವನ್ನು ನಿಷ್ಕ್ರಿಯೆಯನ್ನು ಉಪದೇಶಿಸಲಿಲ್ಲ. '**ನೂರು ವರ್ಷ ಬಾಳು, ಕ್ರಿಯಾಶೀಲನಾಗಿ ಬಾಳು, ಚೆನ್ನಾಗಿ ಬಾಳು**' ಎಂದ ಸಂಸ್ಕೃತಿ, ಅರ್ಥಕಾಮಗಳನ್ನು ಪುರುಷಾರ್ಥಗಳಲ್ಲಿ ಸೇರಿ ಅವನ್ನು ಧರ್ಮ ಮೋಕ್ಷಗಳ ನಡುವೆ ಇಟ್ಟ ಸಂಸ್ಕೃತಿ. ಪಾಶ್ಚಾತ್ಯ ಸಂಸ್ಕೃತಿ ಬೆಳಸುವ 'ಕನ್‌ಸ್ಯೂಮರಿಸಂ' ಹೆಚ್ಚು ಇನ್ನೂ

ಹೆಚ್ಚು ಮತ್ತು ಹೆಚ್ಚು ಸಾಮಾನುಗಳನ್ನು ಕೊಳ್ಳುವ ಹಂಬಲವನ್ನು ಬೆಳೆಸುವುದು. ನಿಸರ್ಗಕ್ಕೆ ಮಾರಕ ವ್ಯಕ್ತಿಯ ಮನಸ್ಸಿನ ನೆಮ್ಮದಿಯ ಶತ್ರು. ನಮ್ಮ ಮುಂದಿರುವ ಆಯ್ಕೆಯ ಪ್ರಶ್ನೆ ಸ್ಪಷ್ಟವಾಗಿದೆ. ನಮ್ಮ ಸಂಸ್ಕೃತಿಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಲೇಬೇಕು. ಅದರ ಮೂಲತಃ ಮನುಷ್ಯನನ್ನು ಇಡೀ ಸೃಷ್ಟಿಯ ಭಾಗವಾಗಿ ಕಾಣುವ, ನಿಸರ್ಗದೊಡನೆ ಮತ್ತು ಸುತ್ತಲಿನವರೊಡನೆ ಅರ್ಥವಾದ ಸಂಬಂಧಗಳನ್ನು ಬೆಳೆಸಿ, ಬದುಕಿಗೆ ಅರ್ಥವಿದೆ ಎನ್ನಿಸುವ ಈ ಸಂಸ್ಕೃತಿಯನ್ನು ಆರಿಸಿಕೊಳ್ಳುತ್ತೇವೆಯೋ? (ಪ್ರಾಚೀನ ಗ್ರೀಸ್ ರೋಮ್‌ಗಳಲ್ಲಿ, ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ಯುಗದ ಮೊದಲು ಹೇಗೆ ಇದ್ದಿರಲಿ) ಸುತ್ತಲಿನ ಜಗತ್ತಿರುವುದು ಮನುಷ್ಯನ ಶೋಷಣೆಗೆ ತುತ್ತಾಗಲಿ ಎಂದು ಎನ್ನುವ ಮನೋಭಾವವನ್ನು ಬೆಳೆಸಿ, ನಿಸರ್ಗದ ಸಂಪನ್ಮೂಲಗಳಿಗೂ ಮನುಷ್ಯನ ನೆಮ್ಮದಿಗೂ ಮಾರಕವಾದ 'ಕನ್‌ಸ್ಯೂಮರಿಸಂ' ಅನ್ನು ಬೆಳೆಸಿ, ವಿಶ್ವದಲ್ಲಿ ತಾನು ಅನಾಥ ಎನ್ನಿಸುವ, ಮನಸ್ಸಿಗೆ ಶಾಂತಿ ಇಲ್ಲದ ಸ್ಥಿತಿಯನ್ನುಂಟು ಮಾಡುವ ಇಂದಿನ ಪಾಶ್ಚಾತ್ಯ ಸಂಸ್ಕೃತಿಯನ್ನು ಆರಿಸಿಕೊಳ್ಳುತ್ತೇವೆಯೋ? ಅಮೆರಿಕವು ಜಗತ್ತಿನ ಅತ್ಯಂತ ಶ್ರೀಮಂತ ರಾಷ್ಟ್ರ. ಆದರೆ ಅದರ ಇತಿಹಾಸವು ಸುಮಾರು ೫೦೦ ವರ್ಷಗಳದು. ಅದರ ಹಣವನ್ನೆಲ್ಲ ಸುರಿದರೂ ಭಾರತದ ಇತಿಹಾಸ, ಪರಂಪರೆಗಳನ್ನು ಕೊಳ್ಳಲು ಸಾಧ್ಯವಿಲ್ಲ ಎನ್ನುವುದನ್ನು ಮರೆಯದಿರೋಣ.

ಭಾರತಕ್ಕೆ ಬಂದು ಇಲ್ಲಿನ ಸಂಸ್ಕೃತಿ ಮತ್ತು ಚಿಂತನಗಳನ್ನು ಅಧ್ಯಯನ ಮಾಡಿದ ಕ್ಯಾಲಿಫೋರ್ನಿಯ ಸ್ಟೇಟ್ ಯುನಿವರ್ಸಿಟಿಯ ತತ್ತ್ವಶಾಸ್ತ್ರ ಪ್ರಾಧ್ಯಾಪಕ ಡಾ|| ಆರ್ಥರ್ ಕೋಡಿ ಹೀಗೆಂದರು.

'ಅಮೆರಿಕದ ಜನತೆಯ ಶ್ರೀಮಂತಿಕೆ ಮೊದಲ ನೋಟಕ್ಕೆ ಆಕರ್ಷಕವಾಗಿ ಕಾಣಬಹುದು. ಆದರೆ ಭಾರತೀಯರು ಅಮೆರಿಕನರ ರೀತಿಯನ್ನು ಅನುಸರಿಸಬಾರದು. ಅಮೆರಿಕದಲ್ಲಿ ಇಂದಿನ ಶ್ರೀಮಂತಿಕೆಯ ಬಿಕ್ಕಟ್ಟಿನಿಂದ ಒಂದು ಪಾಠವನ್ನು ಕಲಿಯಬೇಕಾಗಿದೆ. ಸಮಾಜವನ್ನು ಆಧುನಿಕ ಮಾಡುವ ಹಂಬಲದಲ್ಲಿ ಪರಂಪರಾಗತ ಮೌಲ್ಯಗಳು ನಾಶವಾಗದಂತೆ ಎಚ್ಚರಿಕೆ ವಹಿಸಬೇಕು. ಭಾರತವು ತನ್ನ ಮೌಲ್ಯಗಳನ್ನು ತಿಳಿದುಕೊಂಡು ಅವನ್ನು ರಕ್ಷಿಸಬೇಕು. ಕುಟುಂಬದಲ್ಲಿ ಮತ್ತು ಪರಸ್ಪರವಾಗಿ ಇರುವ ಗೌರವನ್ನು ಉಳಿಸಿಕೊಳ್ಳಬೇಕು. ಸಮಾಜದ ಆಧುನೀಕರಣದ ಹೆಸರಿನಲ್ಲಿ ಇದು ಬೇಕಾಗಬಹುದು. ಅಮೆರಿಕದಲ್ಲಿ ಯಾರ ಮಾತಿನಂತೆ ನಡೆಯಬೇಕೆಂದಿಲ್ಲ. ಬಾಂಧವ್ಯಗಳೆಲ್ಲ ಅಲ್ಪಕಾಲದವು. ತನಗೆ ಬೇಕೆನಿಸುದುದನ್ನೆಲ್ಲ ಕೊಳ್ಳಲು ಪ್ರತಿಯೊಬ್ಬ ಅಮೆರಿಕನಿಗೂ ಸಾಕಷ್ಟು ಹಣವಿದೆ. ಆದರೆ ಅವನಿಗೆ ಏನು ಕೊಳ್ಳಬೇಕೆಂದು ತಿಳಿಯುತ್ತಿಲ್ಲ. ಇನ್ನೂ ಸಾಮಾನುಗಳು ಬೇಕು, ಇನ್ನೂ ಬೇಕು ಎನ್ನುವ ದಾಹಕ್ಕೆ ತೃಪ್ತಿ ಎನ್ನುವುದೇ ಇಲ್ಲವಾಗಿದೆ. ಬದುಕಿನಲ್ಲಿ ಅವರಿಗೆ ಉತ್ಸಾಹವಿದೆಯೇ, ಅದರಲ್ಲಿ ಅರ್ಥವಿದೆ ಎಂದು ಅವರಿಗೆ ಎನ್ನಿಸುತ್ತದೆಯೇ ಎಂದು

ನನ್ನ ವಿದ್ಯಾರ್ಥಿಗಳನ್ನು ಕೇಳುತ್ತೇನೆ. ಮಾನವೀಯ ಮತ್ತು ಹೆಣ್ಣು ಗಂಡಿನ ಸಂಬಂಧಗಳಿಗೆ ಅರ್ಥವೇ ಇಲ್ಲ ಎಂದು ತಮಗನ್ನಿಸುತ್ತದೆ. ಸ್ಥಿರವಾದ ಮಾನವೀಯ ಸಂಬಂಧಗಳನ್ನು ಒಪ್ಪಿಕೊಳ್ಳದಿರಲು ತಮಗೆ ಸ್ವಾತಂತ್ರ್ಯವಿದೆ ಎನ್ನುತ್ತಾರೆ ಅವರು. ಇದರಿಂದ ಒಂಟಿತನದ ಭಾವನೆ ಬಂದುಬಿಡುತ್ತದೆ. ಭಾರತದಲ್ಲಿ ಪರಂಪರಾಗತ ಮೌಲ್ಯಗಳು, ಕುಟುಂಬ ಪದ್ಧತಿ ಮತ್ತು ಆತ್ಮಗೌರವಗಳು ಉಳಿದುಬಂದಿವೆ. ಅವನ್ನು ರಕ್ಷಿಸಿಕೊಳ್ಳಬೇಕು. ಆಹಾರ ಉತ್ಪತ್ತಿ, ವೈದ್ಯಕೀಯ ಸೌಲಭ್ಯ, ನಿರ್ಮಲೀಕರಣ ಮೊದಲಾದುವನ್ನು ಉತ್ತಮಗೊಳಿಸಲು ಕೈಗಾರಿಕೀಕರಣವಾಗುವುದನ್ನು ನಾನು ವಿರೋಧಿಸುವುದಿಲ್ಲ. ಇದರಿಂದ ಜೀವನಮಟ್ಟವು ಸುಧಾರಿಸುತ್ತದೆ. ಆದರೆ ಈ ಪ್ರಕ್ರಿಯೆಯಲ್ಲಿ ಪರಂಪರಾಗತ ಪದ್ಧತಿಗಳೂ ಮೌಲ್ಯಗಳೂ ಕೊಚ್ಚಿ ಹೋಗದಂತೆ ಎಚ್ಚರವಹಿಸಬೇಕು.''

***

ಕಾಯಕದ ಮಹತ್ವ

ಡಾ|| ಓ.ಎ. ನಾರಾಯಣ

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕವು ಕಂಡ ಒಂದು ಮಹತ್ವದ ಘಟನೆಯೆಂದರೆ ವಚನ ಚಳುವಳಿ. ಈ ಚಳುವಳಿಯು ಹನ್ನೊಂದನೇ ಶತಮಾನದ ಕೊನೆಯ ಹೊತ್ತಿಗೇ ಪ್ರಾಯಶಃ ಮೊಳಕೆಯೊಡೆದಿತ್ತು. ದ್ವಿಜಸಂಸ್ಕೃತಿಯನ್ನು ಅಲ್ಲಗಳೆದು ಅದ್ವಿಜ ಅಥವಾ ಶೂದ್ರಸಂಘಟನೆ ಇದರ ಉದ್ದೇಶವಾಗಿತ್ತು. ಶುದ್ಧದ್ರಾವಿಡ ದೈವವಾದ ಶಿವನನ್ನು ಪರಮಾರಾಧ್ಯ ದೈವವನ್ನಾಗಿ ಪರಿಕಲ್ಪಿಸಿಕೊಂಡು, ಯಜ್ಞ-ಯಾಗಾದಿಗಳನ್ನು ಅಲ್ಲಗಳೆದು. ಪುರೋಹಿತ ಮೇಲ್ಮೆಯನ್ನು ಧಿಕ್ಕರಿಸಿ, ವೈಯಕ್ತಿಕ ಭಕ್ತಿಗೆ ಪ್ರಾಧಾನ್ಯವಿತ್ತ ಈ ಚಳುವಳಿಯ ಬೇರುಗಳು ಗಟ್ಟಿಯಾಗಿ ಬಲಿತು, ಹನ್ನೆರಡನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ವಿಸ್ತಾರ ನೆಲೆಯನ್ನು ಅದು ಪಡೆಯಿತು. ವೀರಶೈವ ಅಥವಾ ಲಿಂಗಾಯತ ಮತವನ್ನು ಪ್ರಸಾರಿಸಿ, ಅದರೊಡನೆ ವೈದಿಕೇತರ ಮೌಲ್ಯಗಳನ್ನು ಪ್ರತಿಪಾದಿಸಿದ್ದು ಇದರ ವೈಶಿಷ್ಟ್ಯ. ಪಾರಲೌಕಿಕ ನೆಲೆಯ ಆದರ್ಶಗಳಲ್ಲಿ ಹೇಗೆಯೋ ಹಾಗೆಯೇ ಇಹ ಬದುಕಿನ ನೆಲೆಯಲ್ಲಿಯೂ ಕೆಲವು ಹೊಸ ಮೌಲ್ಯಗಳಿಗೆ ಈ ಚಳುವಳಿಯು ಪ್ರಾಧಾನ್ಯವಿತ್ತಿತು.

ಮರ್ತ್ಯಲೋಕವನ್ನು ಕರ್ತಾರನ ಕಮ್ಮಟಕ್ಕೆ ಹೋಲಿಸಿ, ಇಲ್ಲಿಯ ಬದುಕನ್ನು ಶುಚಿಯಾಗಿ ನಡೆಸುವುದರ ಕಡೆಗೆ ಗಮನವಿತ್ತದ್ದು ವಚನ ಚಳುವಳಿಯ ಒಂದು ಗುಣಾತ್ಮಕ ಅಂಶ. ಇಲ್ಲಿಯ ಬದುಕು ಸುಮುಖಿವಾಗಲು ವ್ಯಕ್ತಿ-ಸಮಾಜಗಳ ಸಂಬಂಧದ ಸ್ವರೂಪವೆಂತಹುದಾಗಿರಬೇಕೆಂಬುದನ್ನು ವಚನಕಾರರು ಕಂಡರಿಸಿಕೊಂಡಿದ್ದರು. ಹಳೆಯ ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿಯು ತನ್ನ ಹುಟ್ಟಿನ ಕಾರಣದಿಂದಾಗಿ, ತನ್ನ ಆಯ್ಕೆಯಾಗಲೀ ಅರಿವಾಗಲಿ ಇಲ್ಲದೆಯೇ, ಒಂದು ನಿಶ್ಚಿತ ಸ್ಥಾನವನ್ನು ಪಡೆಯುತ್ತಿದ್ದ, ಜಾತಿಪೀಡಿತವಾದ ಆ ವ್ಯವಸ್ಥೆಯು ಶ್ರೇಣೀಕೃತವಾಗಿದ್ದುದರಿಂದ, ಅವನು ಹುಟ್ಟಿದ ಜಾತಿಯ ನೆಲೆಗೆ ಅನುಗುಣವಾದ ಸ್ಥಾನ ವ್ಯಕ್ತಿಯದಾಗುತ್ತಿತ್ತು. ಹೀಗಾಗಿ ಅಲ್ಲಿ ವ್ಯಕ್ತಿಯ ವಿಕಾಸಕ್ಕೆ ಅವಕಾಶವಿರಲಿಲ್ಲ; ಅಥವಾ ಅದು ಜಾತಿಪರಿಧಿಗೆ ಮಾತ್ರ ಸೀಮಿತವಾಗಬೇಕಾಗಿತ್ತು. ದೀರ್ಘಕಾಲದಿಂದ ಈ ಶ್ರೇಣಿ ಹರಿದುಬಂದು ಪರಸ್ಪರ ಕೊಳುಕೊಡುಗೆಗಳಿಲ್ಲದೆ ಸಮಾನಾಂತರವಾಗಿ ಉಳಿದುವು. ಒಂದೊಂದು ಜಾತಿಯೂ, ವಿಶೇಷವಾಗಿ ಅದ್ವಿಜವರ್ಗದ ಜಾತಿಗಳು ಒಂದೊಂದು ವೃತ್ತಿಯೊಡನೆ ಬೆಸೆದುಕೊಂಡು ಪ್ರತ್ಯೇಕ ದ್ವೀಪವಾಗಿತ್ತು. ಪಾರಂಪರಿಕವಾಗಿ ಹರಿದು ಬಂದ ವೃತ್ತಿಯು ಆಯಾ ಜಾತಿಗೇ ಸಿಮಿತವಾಗಬೇಕಾದ ಪರಿಸ್ಥಿತಿಯಿತ್ತು.

ವಚನಕಾಲದ ಶರಣರು ಈ ಕಟ್ಟುನಿಟ್ಟಿನ ವ್ಯವಸ್ಥೆಯನ್ನು ಒಡೆದುಹಾಕುವ

ಬಹುದೊಡ್ಡ ಯತ್ನವನ್ನು ಮಾಡಿದರು. ಆದರೆ ಇದನ್ನು ತಾವು ಪ್ರಸಾರಮಾಡುತ್ತಿದ್ದ ಮತದ ಹಿನ್ನೆಲೆಯಲ್ಲಿ ನಡೆಸಿದರು. ಭಕ್ತ (ವೀರಶೈವ) ರಲ್ಲಿ ಜಾತಿಭೇದ ಮಾಡುವುದನ್ನು ಖಂಡಿಸದ ಅವರು ವ್ಯಕ್ತಿ-ಸಮಾಜಗಳ ಸಂಬಂಧವನ್ನು ಖಚಿತಗೊಳಿಸಲು 'ಪಂಚಾಚಾರ'ಗಳನ್ನು ಅಳವಡಿಸಿದರು. ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ- ಒಟ್ಟಾರೆಯಾಗಿ ವ್ಯಕ್ತಿಯು ಭಕ್ತಸಮಾಜದಲ್ಲಿ ನಡೆದುಕೊಳ್ಳಬೇಕಾದ ಆಚಾರಸಂಹಿತೆಯೇ ಅವು. ಅವುಗಳಲ್ಲಿಯೂ ಸದಾಚಾರ ಮತ್ತು ಶಿವಾಚಾರಗಳು ಈ ಬಗ್ಗೆ ವಿಶೇಷವಾಗಿ ವಾಸ್ತವ ನೆಲೆಯ ವ್ಯಕ್ತಿ-ಸಮಾಜ ಸಂಬಂಧದ ಸ್ವರೂಪವನ್ನು ಮಂಡಿಸುತ್ತವೆ. ಶಿವಭಕ್ತರಲ್ಲಿ 'ಜಾತಿವರ್ಣಾಶ್ರಮಧರ್ಮವನರಸದೇ ಇರುವುದೇ' ಶಿವಾಚಾರವೆಂದು ಚೆನ್ನಬಸವಣ್ಣ ಹೇಳುತ್ತಾನೆ. ಹಾಗೆಯೇ ಆತನ ಪ್ರಕಾರ'ಸಜ್ಜನ ಕಾಯಕದಲ್ಲಿ ತಂದು ಗುರುಲಿಂಗಜಂಗಮಕ್ಕೆ ನೀಡಿ ಸತ್ಯಶುದ್ಧನಾಗಿಹುದೇ ಸದಾಚಾರ' ಈ ವ್ಯಾಖ್ಯೆಯಲ್ಲಿ ಬರುವ 'ಕಾಯಕ' ಮತ್ತು 'ನೀಡುವ' ಪರಿಕಲ್ಪನೆಗಳು ಅವಿನಾ ಸಂಬಂಧವನ್ನು ಪಡೆದಿವೆ. ಸಮಾಜದ ಎಲ್ಲ ವ್ಯಕ್ತಿಗಳಿಗೂ ಇವು ಅನ್ವಯಿಸುವಂತಹುದು.

'ಕಾಯಕ' ಎಂಬ ಶಬ್ದದ ಮೂಲದಲ್ಲಿ 'ಕಾಯ' (ದೇಹ) ಇದೆ; ಅದಕ್ಕೆ ಸಂಬಂಧಿಸಿದುದು ಎಂಬ ಅರ್ಥದಲ್ಲಿ ಕಾಯಕ ಶಬ್ದರೂಪಿತವಾಗಿದೆ. ಕಾಯಕವು ಕೆಳಹಂತದಲ್ಲಿ ತನುಮನ ಬಳಲಿಸಿ ಮಾಡುವ ವೃತ್ತಿಯೇ ಆಗಿದೆ. ಮಾಡುವ ವೃತ್ತಿ ಯಾವುದೇ ಆದರೂ, ಅದರಲ್ಲಿ ಭೇದವಿಲ್ಲ; ಯಾಕೆಂದರೆ ಎಲ್ಲ ವೃತ್ತಿಗಳ ಉದ್ದೇಶ ಬದುಕಿಗೆ ಬೇಕಾದ ದ್ರವ್ಯಾರ್ಜನೆ. ಆದರೆ ವಚನಕಾರರು ಕಾಯಕಕ್ಕೆ ಬಂದು ಪಾರಲೌಕಿಕ ಲೇಪವನ್ನು ಮಾಡಿ ಅದರ ಬಗ್ಗೆ ಪಾವಿತ್ರ್ಯದ ಭಾವನೆಯುಂಟಾಗುವಂತೆ ಪ್ರಯತ್ನಿಸಿದರು. ಕಾಯಕನಿರತ ವ್ಯಕ್ತಿಗೆ ವೃತ್ತಿಗಿಂತ ಪವಿತ್ರವಾದದ್ದು ಆ ಕ್ಷಣದಲ್ಲಿ ಯಾವುದೂ ಇಲ್ಲ. ಹಾಗಾಗಿ 'ಕಾಯಕ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು; ಲಿಂಗ ಪೂಜೆಯಾದರೂ ಮರೆಯಬೇಕು; ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು' ಎಂದು ಆಯ್ದಕ್ಕಿ ಮಾರಯ್ಯನ ವಚನವೊಂದು ಹೇಳುತ್ತದೆ. ಲಿಂಗವಂತರಿಗೆ ಗುರುಲಿಂಗ ಜಂಗಮವೆಂದರೆ ಅಷ್ಟಾವರಣಗಳಲ್ಲಿ ಬಹು ಪ್ರಮುಖವಾದ ಮೊದಲ ಮೂರು ಪೂಜ್ಯವಸ್ತುಗಳು. ಅವು ಮೂರು ಒಟ್ಟಿಗೆ ಸೇರಿ 'ತ್ರಿವಿಧ' ವೆನ್ನಿಸಿಕೊಳ್ಳುತ್ತವೆ; ಅಲ್ಲದೆ ಪೂಜ್ಯತೆಯಲ್ಲಿ ಅವು ಮೂರು ಸಮಾನ. ಆದರೆ ಕಾಯಕದಲ್ಲಿ ತೊಡಗಿರುವ ಕಾಲಪೂರ್ತಿ ಭಕ್ತನಿಗೆ ಅದಕ್ಕಿಂತ ಪೂಜ್ಯವಾದದ್ದು ಬೇರಾವುದೂ ಇಲ್ಲ. 'ಶೂನ್ಯಸಂಪಾದನೆ' ಯಲ್ಲಿ ಬರುವ ನುಲಿಯ ಚಂದಯ್ಯನ ಕತೆ ಈ ಭಾವನೆಗೆ ಹಿಡಿದ ಕನ್ನಡಿ; ಅವನದು ನುಲಿಯ ಕಾಯಕ; ಹಗ್ಗ ಹೊಸೆಯುವುದು, ಅವನೂ ಕೊರಳಲ್ಲಿ ಲಿಂಗ ಧರಿಸಿದ್ದಾನೆ, ಒಮ್ಮೆ ಆತ ತನ್ನ ಕಾಯಕಕ್ಕೆ ಬೇಕಾದ ಹುಲ್ಲನ್ನು ಕೊಯ್ಯುತ್ತಿರುತ್ತಾನೆ; ಇವನ ಕಾಯಕನಿಷ್ಠೆಯನ್ನು ಪರೀಕ್ಷಿಸಲು ಅವನ ಕೊರಳಲ್ಲಿದ್ದ ಇಷ್ಟಲಿಂಗ ಜಾರಿ ನೀರಿಗೆ ಬೀಳುತ್ತದೆ. ಆದರೆ ಚಂದಯ್ಯ ಅದನ್ನು ಲೆಕ್ಕಿಸುವುದಿಲ್ಲ; ಹುಲ್ಲ ಹೊರೆಕಟ್ಟಿ ಹೊತ್ತು ಮುಂದೆ ಹೋಗುತ್ತಾನೆ.

ಆಗ ಲಿಂಗವು ತನ್ನ ಗೋಲಾಕಾರದ ಮುಖವನ್ನು ಬಿಟ್ಟು ಮನುಷ್ಯಾಕೃತಿಯನ್ನು ತಳೆದು ತನ್ನನ್ನು ಸ್ವೀಕರಿಸಬೇಕೆಂದು ಚಂದಯ್ಯನನ್ನು ಅಂಗಲಾಚುತ್ತದೆ. ಮೊದಲು ನಿರಾಕರಿಸಿದರೂ, ಆಮೇಲೆ ಮಡಿವಾಳ ಮಾಚಯ್ಯನ ಹೊಣೆ ತಂದ ಲಿಂಗವನ್ನು ಸ್ವೀಕರಿಸುತ್ತಾನೆ. ಚಂದಯ್ಯ; ಅದೂ ತನ್ನ ಕಾಯಕದಲ್ಲಿ ನಿರತವಾಗುವಂತಿದ್ದರೆ ಮಾತ್ರ ಎಂಬ ಷರತ್ತಿನೊಡನೆ.

ಕಾಯಕವೆಂದರೆ ಕೇವಲ ಬಾಹ್ಯಕ್ರಿಯೆಯಲ್ಲ; ಅದು ಆಂತರಂಗಿಕ ಅನುಸಂಧಾನವೂ ಹೌದು. ಚನ್ನಬಸವಣ್ಣನು ಒಂದೆಡೆ 'ಕಾಯ ಕಾಯಕ ಮಾಡುತ್ತಿರಲು, ಮನವು ಲಿಂಗದಲ್ಲಿ ಬೆರಸಿ ತೆರಹಿಲ್ಲದಿಪ್ಪ ಮಡಿವಾಳನ ಪರಿಯ ನೋಡಾ!'' ಎಂದು ಉದ್ಧರಿಸುತ್ತಾನೆ. ಇದು ಶರಣರು ಕಾಯಕವನ್ನು ಪರಿಕಲ್ಪಿಸಿಕೊಂಡ ರೀತಿ. ದೇಹವು ಕಾಯಕದ ಬಾಹ್ಯಕ್ರಿಯೆಯಲ್ಲಿ ತೊಡಗಿದ್ದಾಗ, ಭಕ್ತನ ಮನಸ್ಸು ಸಮಾನಾಂತರವಾಗಿ ತನ್ನ ಆರಾಧ್ಯ ದೈವದ ಅನುಸಂಧಾನದಲ್ಲಿ ನಿರತವಾಗಿರುತ್ತದೆ. ಹರಿಹರ ತನ್ನ ಅನೇಕ ರಗಳೆಗಳಲ್ಲಿ ಈ ಬಗೆಯ 'ದ್ವಿವಿಧ ಏಕಾಗ್ರತೆ' ಯನ್ನು ವರ್ಣಿಸುತ್ತಾನೆ. ಉದಾಹರಣೆಗೆ, ಇಳೆಯಾಂಡ ಗುಡಿಮಾರ ಎಂಬ ಭಕ್ತನು ಕಾಯಕದಲ್ಲಿ ತೊಡಗಿರುತ್ತಿದ್ದ ರೀತಿಯನ್ನು ಈ ರೀತಿ ವರ್ಣಿಸುತ್ತಾನೆ. ಗುಡಿಮಾರ ರೈತ, ಬೇಸಾಯದ ವಿವಿಧ ಹಂತಗಳಲ್ಲಿ ನಿರತನಾದ ಅವನ ಮನಸ್ಸು ಆಧ್ಯಾತ್ಮಿಕ ಕೃಷಿಯಲ್ಲೂ ತೊಡಗಿರುತ್ತದೆ.

ಸಮಚಿತ್ತವೆಂಬ ಭೂಮಿಯನು ಹಸನಾಗಿರಿಸಿ
ಅಮರ್ದ ಶಂಕರನ ನೆನಹೆಂಬ ನೇಗಿಲನಿರಿಸಿ
ಅರಿಪಟ್ಕಮಂ ತಂದು ಹೂಡುವೆತ್ತಂ ಮಾಡಿ
ಹರಿವ ಮನಮಂ ಕಟ್ಟಿ ಹಿಡಿವ ಹಗ್ಗಂ ಮಾಡಿ
ಗರ್ವಿಪ್ಪಹಂಕಾರಮುದುನಚ್ಚುವಂ ಮಾಡಿ
ಸರ್ವೇಶನಿಷ್ಠೆಯಂ ತಳಿವ ಬೀಜಂ ಮಾಡಿ
ಸುರುಚಿರ ಶಿವಜ್ಞಾನ ಶಶಿಕರಂ ಸೋಂಕುತಿರೆ
ಹರನ ಪರಮಾನಂದರಸದ ಮಳೆ ಕೊಳುಕುಮಿರೆ
ಬಿತ್ತಿ ಬೆಳೆವಂ ಶಿವನ ಸದ್ಭಕ್ತಿ ಸಸಿಗಳಂ
ಕಿತ್ತು ಕಳೆವಂ ಕ್ಷುತ್ಪಿಪಾಸಾದಿ ಕಳೆಗಳಂ
ಇಂತು ತನ್ನೊಳಗೆ ಭಕ್ತ್ಯಾರಂಭವಂ ಮಾಳ್ಪನ್
ಅಂತೆಲ್ಲರರಿಯೆ ಪೊರಗಾರಂಭವಂ ಮಾಳ್ಪನ್.

ಅವನು ಹೊರಗೆ ಭೂಮಿಯನ್ನು ಹಸನಾಗಿಸುತ್ತಾನೆ; ಎತ್ತನ್ನು ನೊಗಕ್ಕೆ ಹೂಡಿ ಹಗ್ಗಕಟ್ಟಿ(ಕೂರಿಗೆಯ ಸಹಾಯದಿಂದ) ಬೀಜಗಳನ್ನು ಬಿತ್ತುತ್ತಾನೆ; ಅದರ ಮೇಲೆ ಚಂದ್ರನ ಕಾಂತಿ ಬಿದ್ದು, ಮಳೆಯಾದಾಗ ಸಸಿಗಳು ಮೊಳೆಯುತ್ತವೆ; ಅದರೊಡನೆ ಬೆಳೆದ ಕಳೆಯನ್ನು ಕಿತ್ತು ಗುಡಿಮಾರ ಶುಚಿಗೊಳಿಸುತ್ತಾನೆ. ಹಾಗೆಯೇ ಈ ಬಾಹ್ಯಕ್ರಿಯೆಗಳಿಗೆ ಸಮಾನಾಂತರವಾಗಿ ಅವನ ಆಂತರ್ಯದಲ್ಲಿ ಭಕ್ತಿಯ ಆರಂಭ ನಡೆಯುತ್ತಿರುತ್ತದೆ: ತನ್ನ

ಚಿತ್ರವನ್ನು ಸಮನಾಗಿರಿಸಿಕೊಳ್ಳುತ್ತಾನೆ; ಅದರಲ್ಲಿ ಶಿವನ ನೆನಹನ್ನು ಹರಗುತ್ತಾನೆ; ಮಾನವಭಾವಗಳಾದ ಅರಿಷಡ್ವರ್ಗಗಳನ್ನು ತನ್ನ ಮನೋದಾರ್ಢ್ಯದಿಂದ ನಿಯಂತ್ರಿಸುತ್ತಾನೆ; ತನ್ನ ಅಹಂಕಾರದ ಸುತ್ತ ಶಿವನಿಷ್ಠೆಯನ್ನು ಬೆಳೆಸುತ್ತಾನೆ; ಅವನಿಗೆ ಶಿವನ ಬಗೆಗಿನ ಅರಿವಿನಿಂದಾಗಿ ಆನಂದವುಂಟಾಗುತ್ತದೆ; ಹೀಗೆ ಗುಡಿಮಾರನು ಸದ್ಭಕ್ತಿಯನ್ನು ಬೆಳೆದು ಐಹಿಕ ಬಾಧೆಗಳಿಂದ ಮುಕ್ತನಾಗುತ್ತಾನೆ.

ಅನೇಕ ವಚನಕಾರರಲ್ಲಿ ಈ ತೆರನಾದ ವಚನಗಳೂ ದೊರೆಯುತ್ತವೆ; ತನ್ನ ಕಾಯಕದ ವಿವರಗಳ ಮೂಲಕವಾಗಿಯೇ ತನ್ನ ಆಧ್ಯಾತ್ಮಿಕ ಸಾಧನೆಯ ಸ್ವರೂಪವನ್ನು ವಿವರಿಸುವ ರೀತಿ ಅದು. ಕಾಯಕಜೀವಿಗಳಾಗಿದ್ದ ಬಹುತೇಕ ವಚನಕಾರರಲ್ಲಿ ಈ ಬಗೆಯ ವಚನಗಳಿವೆ. ನಿದರ್ಶನಕ್ಕೆ ದನಕಾಯುವ ಕಾಯಕ ಮಾಡುತ್ತಿದ್ದ ತುರುಗಾಹಿ ರಾಮಣ್ಣನ ವಚನವೊಂದು ಹೀಗಿದೆ:

ಉದಯದಲ್ಲಿ ಬ್ರಹ್ಮನ ಕಾವೆ,
ಮಧ್ಯಾಹ್ನಕ್ಕೆ ವಿಷ್ಣುವ ಕಾವೆ,
ಅಸ್ತಮಯದಲ್ಲಿ ರುದ್ರನ ಕಾವೆ,
ಕತ್ತಲೆಯಾದ ಮತ್ತೆ ತಮ್ಮ ತಮ್ಮ ಮಂದೆಗೆ ಹೊಡೆದು
ಈ ಕಾವ ಕಟ್ಟಿಗೆಯ ಇನ್ನೆಂದಿಗೆ ಬಿಡುವೆ?
ಗೋಪತಿನಾಥ ವಿಶ್ವೇಶ್ವರಲಿಂಗವು ನಷ್ಟವಹನ್ನಕ್ಕ
ಎನ್ನ ಕೈಯ ಕಟ್ಟಿಗೆ ಬಿಡದು.

ಕಾಯುವ, ಮಂದೆಗೆ ಹೊಡೆಯುವ, ಕಾವಕಟ್ಟಿಗೆಯ ಪರಿಭಾಷೆಯ ಮೂಲಕವೇ ಬೇರೊಂದರ್ಥವನ್ನು ಇಲ್ಲಿ ವಚನಕಾರ ಸೂಸುತ್ತಾನೆ. ಕಾಯಕ ಆಧ್ಯಾತ್ಮಿಕ ಸಾಧನೆ ಇವೆರಡರ ಅನನ್ಯತೆಯನ್ನು ಇದು ಸೂಚಿಸುವುದಲ್ಲದೆ, ಸಾಮಾನ್ಯರಲ್ಲೂ ಈ ಪರಿಕಲ್ಪನೆಯು ವ್ಯಾಪಕವಾಗಿ ನೆಲೆಗೊಂಡಿದ್ದುದನ್ನು ಪ್ರಕಟಿಸುತ್ತದೆ.

ಕಾಯಕದ ಮುಖ್ಯ ಉದ್ದೇಶ ಬದುಕಲು ಬೇಕಾದ ದ್ರವ್ಯಸಂಪಾದನೆಯಾದರೂ ಅದರ ಮಾರ್ಗವು ನೇರವಾಗಿರಬೇಕು. ನ್ಯಾಯಯುತವಾಗಿರಬೇಕು ಎಂದರೆ ತನ್ನ ಕಾಯಕಕ್ಕೆ ಎಷ್ಟು ಯೋಗ್ಯವೋ ಅಷ್ಟೇ ಪ್ರತಿಫಲವನ್ನು ಭಕ್ತ ಸ್ವೀಕರಿಸಬೇಕು. ಹಿಂದೆ ಪ್ರಸ್ತಾಪಿಸಿದ ನುಲಿಯ ಚಂದಯ್ಯನ ಕತೆಯ ಮುಂದಿನ ಘಟ್ಟವಿದು: ಮನುಷ್ಯರೂಪದ ಲಿಂಗವನ್ನು ಚಂದಯ್ಯ ತನ್ನಂತೆಯೇ ಕಾಯಕದಲ್ಲಿ ತೊಡಗುವಂತೆ ಮಾಡುತ್ತಾನಷ್ಟೆ. ಆಮೇಲೆ ತಾನು ಮಾಡಿದ ಹಗ್ಗವನ್ನು ಮಾರಿ ಹಣವನ್ನು ತಾರೆಂದು ಅದಕ್ಕೆ ಹೇಳುತ್ತಾನೆ. ವಿಷಯವನ್ನು ತನ್ನ ದಿವ್ಯಜ್ಞಾನದಿಂದ ಅರಿತ ಬಸವಣ್ಣನು ಆ ಹಗ್ಗವನ್ನು ಒಂದು ಸಾವಿರ ಹೊನ್ನುಗಳನ್ನಿತ್ತು ಕೊಂಡುಕೊಳ್ಳುತ್ತಾನೆ. ಇದನ್ನು ತಿಳಿದ ಚಂದಯ್ಯನು ಹಗ್ಗಕ್ಕೆ ಅಷ್ಟು ಬೆಲೆಯಿಲ್ಲವೆಂದೂ, ಅದಕ್ಕೆ ತಕ್ಕುನಾದ ಬೆಲೆಯನ್ನು ಮಾತ್ರ ತೆಗೆಕೊಳ್ಳಬೇಕೆಂದೂ ಹೇಳಿ, ಅತ್ಯಾಸೆಯಿಂದ ಹೆಚ್ಚು ಹಣ ತಂದ ಲಿಂಗವನ್ನು ಬೈದು ಎಲ್ಲಾದರೂ ಹಾಳಾಗಿಹೋಗೆಂದು ಅಟ್ಟುತ್ತಾನೆ.

ಆಮೇಲೆ ತನ್ನ ಹೊಣೆನಿಂದ ಮಡಿವಾಳ ಮಾಚಯ್ಯನ ಬಳಿಗೆ ಲಿಂಗವು ಬಂದು ಅರಿಕೆ ಮಾಡಿಕೊಂಡು, ಹಿರಿಯ ಭಕ್ತರ ಸಮೂಹದಲ್ಲಿ ತಾನು ಪಡೆದಿದ್ದ ಹೆಚ್ಚುವರಿ ಹಣವನ್ನು ಬಸವಣ್ಣನಿಗೆ ಮರಳಿ ನೀಡಿದ ಮೇಲೆ ಚಂದಯ್ಯನು ಲಿಂಗವನ್ನು ಪುನಃ ಧರಿಸುತ್ತಾನೆ. ಕಾಯಕದ ಮಾರ್ಗ ಹೇಗೋ ಅದರ ಫಲವು ನ್ಯಾಯಯುತವಾಗಿರಬೇಕೆಂಬುದನ್ನು ಈ ಪ್ರಸಂಗ ಚಿತ್ರಿಸುತ್ತದೆ.

ಹೀಗೆ ನ್ಯಾಯಯುತವಾಗಿ ಅರ್ಜಿಸಿದ ದ್ರವ್ಯದಲ್ಲಿ ತನಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಬಳಸಿಕೊಳ್ಳಬೇಕು. ಯಾರಯಾರ ಆವಶ್ಯಕತೆ ಎಷ್ಟು ಎಂಬುದು ಸನ್ನಿವೇಶ-ವ್ಯಕ್ತಿಗಳಿಗನುಗುಣವಾಗಿ ವ್ಯತ್ಯಾಸವಾಗುವುದೆಂಬುದು ನಿಜವಾದರೂ, ಉಳಿದ ಹಣವನ್ನು ಬಡ್ಡಿಗೆ ಕೊಟ್ಟು ಬೆಳೆಸುವುದನ್ನು ಶರಣರು ವಿರೋಧಿಸಿದ್ದರಿಂದ, ಇದು ಸರಳ ಜೀವನರೀತಿಯನ್ನು ಪ್ರತಿಪಾದಿಸಲು ಹಾಕಿದ ನಿಯಮವೆಂದು ಭಾವಿಸಬೇಕು. ಹಾಗೆ ಉಳಿದ ಹಣವನ್ನು ದಾಸೋಹಕ್ಕೆ ವಿನಿಯೋಗಿಸಬೇಕೆಂಬುದು ಶರಣರ ಆಶಯ. ಹೀಗೆ 'ಸಜ್ಜನ ಕಾಯಕದಿಂದ ಗುರುಲಿಂಗಜಂಗಮಕ್ಕೆ ಮಾಡಿ ಸತ್ಯವಾಗಿಹುದೆ ಸಮಯಾಚಾರ'. ಇಲ್ಲಿ ಮಾಡಿ ಎಂದರೆ ದಾಸೋಹ ಮಾಡಿ ಎಂದೇ ಅರ್ಥ. ದಾಸೋಹವೆಂಬುದು ದಾಸಃ ಅಹಂ ಶಬ್ದಗಳು ಸೇರಿ ಆಗಿದೆ; ' ನಾನು ದಾಸ' ಎಂಬ ಭಾವನೆಯಿಂದ ಮಾಡುವ ಸೇವೆ ಅದು. ಗುರುಲಿಂಗಜಂಗಮಗಳು ಒಂದೇ ನೆಲಬೆಲೆಯವು; ಅದರಲ್ಲಿ ನಡುವಣ ಲಿಂಗವು ಕುರುಹು, ಉಳಿದೆರಡು, ಮನುಷ್ಯಸ್ವರೂಪದವು. ಹಾಗಾಗಿ ದಾಸೋಹವು ಮಾನವರಿಗೆ ಸಲ್ಲಿಸಬೇಕಾದ ಕರ್ತವ್ಯ. ಬಸವಣ್ಣನ ಒಂದು ವಚನ ಹೀಗಿದೆ: ''ಬಸವ ಬಾರೈ, ಮರ್ತ್ಯಲೋಕದೊಳಗೆ ಭಕ್ತರುಂಟೆ, ಹೇಳಯ್ಯ? ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯ. ನಾನೊಬ್ಬನೇ ಭಕ್ತನು, ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ ಜಂಗಮ, ಲಿಂಗ ನೀನೇ ಅಯ್ಯಾ, ಕೂಡಲಸಂಗಮದೇವಾ'' ಎಂದರೆ ಪ್ರತಿಯೊಬ್ಬ ಭಕ್ತನೂ ಇತರ ಭಕ್ತರನ್ನೆಲ್ಲ ಜಂಗಮ ಎಂದೇ ತಿಳಿಯಬೇಕು; ಹಾಗಾಗಿ ಜಂಗಮದಾಸೋಹವೆಂದರೆ ಒಂದು ನೆಲೆಯಲ್ಲಿ ಸಮಾಜದಾಸೋಹ; ಸಮಾಜಕ್ಕೆ ವ್ಯಕ್ತಿ ಸಲ್ಲಿಸಬೇಕಾದ ಋಣ. ಮನುಷ್ಯರಿಗೆ, ಎಲ್ಲ ಜೀವಿಗಳಿಗೆ ಬೇಕಾದದ್ದು ಮೂಲಭೂತವಾಗಿ ಆಹಾರ. 'ಒಡಲು ಗೊಂಡವ ಹಸಿವ' ಎಂಬುದು ಜೇಡರ ದಾಸಿಮಯ್ಯನ ಮಾತು. ದೇಹ ಹೊತ್ತ ಜೀವ ಬಯಸುವುದು ಆಹಾರ; ಹಾಗಾಗಿ ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದರೆ ಅದರಿಂದ ಮುಕ್ತಿಗಾಣಿಸಬಲ್ಲವನೇ ಗಾರುಡಿಗನೆಂಬುದು ಅವನದೇ ಮತ್ತೊಂದು ಮಾತು. ಎಂದರೆ ಜನರಿಗೆ ಬೇಕಾದದ್ದು ಮೊದಲು ಆಹಾರ, ಅಂಬಿಗರ ಚೌಡಯ್ಯ, ಹಾಗಾಗಿ, ಪೂಜೆಗಿಂತ ಆಹಾರ ನೀಡುವುದನ್ನೇ ಹೆಚ್ಚು ಮುಖ್ಯವೆಂದು ಭಾವಿಸುತ್ತಾನೆ. 'ದೇಹಾರವ ಮಾಡುವ ಅಣ್ಣಗಳಿರಾ ಒಂದು ತುತ್ತು ಆಹಾರವ. ಸಿಕ್ಕಿತೇ, ದೇಹಾರಕ್ಕೆ ಆಹಾರವೇ ನಿಚ್ಚಣಿಗೆ, ದೇಹಾರವ ಮಾಡುತ್ತ ಆಹಾರವನಿಕ್ಕದಿರ್ದಡೆ ಆ ಹರನಿಲ್ಲನೆಂದನಂಬಿಗರ ಚೌಡಯ್ಯ''. ಹೀಗಾಗಿ ಶರಣರು ದಾಸೋಹ ಎಂದರೆ ಹಸಿದವನಿಗೆ

ಉಣಬಡಿಸುವುದು ಎಂದೇ ಭಾವಿಸಿದರು. ವ್ಯಕ್ತಿಯ ಹಸಿವನ್ನು ಇಂಗಿಸುವುದು ಹೇಗೋ ಒಂದು ಹೊತ್ತಿಗೆ ಆಹಾರ ಒದಗಿಸುವುದು ಹೇಗೋ, ಸಮಾಜದ ಆಹಾರ ಸಮಸ್ಯೆಯನ್ನು ಸಮರ್ಪಕವಾಗಿ ಬಿಡಿಸುವ ಪ್ರಯತ್ನಕ್ಕೆ ಹಾಗೇ ಶರಣರು ನೀಡಿದ ಆದ್ಯತೆಯ ಪ್ರತೀಕವಿದು ಎಂದು ಭಾವಿಸಬಹುದು.

ಹೀಗೆ ಅನ್ನವಿಡುವ ಕಾರ್ಯಕ್ಕೆ ಪ್ರಾಮುಖ್ಯ ಬಂದದ್ದರಿಂದಲೇ ಸಮಾಜದ ಪ್ರತೀಕವೆನಿಸುವ ಮಠಗಳು ಅನ್ನದಾಸೋಹಕ್ಕೆ ಮಹತ್ವ ನೀಡುರುವುದು ಸರಿಯೇ ಆಗಿದೆ; ಅಲ್ಲದೆ, ಮಠಗಳಲ್ಲಿ ತರತಮ ಭಾವನೆಯಿಲ್ಲದೆ ಎಲ್ಲರಿಗೂ ಒಂದೇ ಪಂಕ್ತಿಯಲ್ಲಿ ಊಟನಿಡುವ 'ಆದರ್ಶ ಸಾಮುದಾಯ ಪ್ರಜ್ಞೆಯ ಸಂಕೇತವಾಗಿದೆ. ಶರಣರು ದಾಸೋಹಕ್ಕೆ ನೀಡಿದ ಪ್ರಾಮುಖ್ಯವು ಪರಂಪರೆಯಾಗಿ ಇಂದಿಗೂ ಮಠಗಳಲ್ಲಿ ಮುಂದುವರೆದಿರುವುದು ಶರಣರ ಕಾಯಕತತ್ವದ ಗಾಢಪ್ರಭಾವವನ್ನು ಸೂಚಿಸುವುದಲ್ಲದೆ, ಅದು ನೆಲೆಗೊಳ್ಳಲು ಕಾರಣ ಅದರ ಸಮಂಜಸತೆ. ಅಲ್ಲದೆ ದಾಸೋಹವೆಂಬುದುದಾನವಲ್ಲ. ಕೊಡುವವನಿಗಿಂತ ತೆಗೆದುಕೊಳ್ಳುವವನೇ ಇಲ್ಲಿ ಹೆಚ್ಚು ಎಂಬ ಭಾವನೆಯಿದೆ. ವೈದಿಕ ವ್ಯವಸ್ಥೆಯಲ್ಲಿ ದಾನಸ್ವೀಕರಿಸಲು ಬ್ರಾಹ್ಮಣ ಮಾತ್ರ ಅರ್ಹ. ವೀರಶೈವರಲ್ಲಿ ಜಂಗಮನು ದಾಸೋಹಕ್ಕೆ ವಿಶಿಷ್ಟನಾಗಿ ಅರ್ಹ ಎಂಬ ಭಾವನೆಯಿದ್ದುದು, ಇರುವುದು ನಿಜ. ಆದರೆ ಮಠದ ದಾಸೋಹದಲ್ಲಿ ಅಂತಹ ಭಾವನೆಯಿರುವುದು ಕಡಿಮೆ. ಏಕೆಂದರೆ ಅಲ್ಲಿರುವುದು ವ್ಯಕ್ತಿ-ವ್ಯಕ್ತಿಗಳ ನಡುವಣ ಕೊಡುವ-ಕೊಳ್ಳುವ ಕ್ರಿಯೆಯಲ್ಲ; ಸಂಸ್ಥೆ-ವ್ಯಕ್ತಿಗಳ ನಡುವಣ ಕ್ರಿಯೆ. ಹೀಗಾಗಿ ತೆಗೆದುಕೊಂಡ ವ್ಯಕ್ತಿ ನೀಡುವ ವ್ಯಕ್ತಿಗೆ ಕೃತಜ್ಞನಾಗಿರಬೇಕಾದ ಮುಜುಗರವಿಲ್ಲ; ಆದರೆ ನೀಡುವ ಸಂಸ್ಥೆಗೆ ಕೃತಜ್ಞನಾಗಿರುವುದರಲ್ಲಿ ಮುಜುಗರಕ್ಕೆ ಅವಕಾಶವಿಲ್ಲ. ಹೀಗಾಗಿ'ಜಂಗಮ ದಾಸೋಹ' ದ ಪತಿಕಲ್ಪನೆ ಆಧುನಿಕ ಕಾಲದಲ್ಲಿ ಮಠಗಳಲ್ಲಿನ ಅನ್ನದಾಸೋಹವಾಗಿ ಇಳಿದು ಬಂದು ಗಟ್ಟಿಗೊಂಡದ್ದು ಒಂದು ಗುಣಾತ್ಮಕ ಬೆಳವಣಿಗೆಯೆಂದೇ ಹೇಳಬಹುದು.

ಒಟ್ಟಾರೆ, ಕಾಯಕವೆಂದರೆ ಈ ಅಂಶಗಳನ್ನು ಒಳಗೊಳ್ಳುತ್ತದೆ. (ಅ) ಸಮಾಜದ ಯಾರೊಬ್ಬನೂ ಸೋಮಾರಿತನದಿಂದ, ಪರಾವಲಂಬನೆ-ಪರ-ಪೀಡನೆಯಿಂದ ಬದುಕಬಾರದು; (ಆ) ವ್ಯಕ್ತಿ ತನ್ನ ವೃತ್ತಿಯನ್ನು ದೈಹಿಕ ಅಥವಾ ಬೌದ್ಧಿಕ ಶ್ರಮದಿಂದ ನಡೆಸಬೇಕು; (ಇ) ತನ್ನ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಮಾತ್ರ ಪಡೆಯಬೇಕು; (ಈ) ತನ್ನ ಕಾಯಕದಿಂದ ಬಂದ ಹೆಚ್ಚಿನದನ್ನು 'ದಾಸೋಹ' ಕ್ಕೆ ವಿನಿಯೋಗಿಸಬೇಕು, ಹಾಗೂ(ಉ) ಎಲ್ಲ ಕಾಯಕಗಳೂ ಸಮಾನ ಶ್ರೇಷ್ಠ.

***

ಸರ್ವಜ್ಞನ ವಿಚಾರ ಕ್ರಾಂತಿ

-ಡಾ. ಮಳಲಿ ವಸಂತಕುಮಾರ್

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸರ್ವಜ್ಞನ ದಿಕ್ಕುದೆಸೆಗಳೇ ಬೇರೆ; ರೀತಿ ನೀತಿಗಳೇ ಬೇರೆ. ಅವನೆಂದೂ ಎಲ್ಲರಂತಲ್ಲ. ಅವನದು ತನ್ನದೇ ಹಾದಿ; ಅದು ಅವನಿಗೆ ಸರಿಕಂಡ ಹಾದಿ. ಯಾರ ಮುಲಾಜಿಗೂ ಯಾವುದೇ ಹಂಗಿಗೂ ಒಳಗಾದವನಲ್ಲ. ಇನ್ನೊಬ್ಬರ ಅಧೀನದಲ್ಲಿ ವ್ಯಕ್ತಿತ್ವವನ್ನು ರೂಪಿಸಿಕೊಂಡವನಲ್ಲ. ಅವನು 'ಸತ್ಯ'ಕ್ಕೆ ಮಾತ್ರ ಬದ್ಧನಾದವನು. ಅದರ ಹೊರತು ಉಳಿದೆಲ್ಲವನ್ನೂ ಧಿಕ್ಕರಿಸುವ ಎದೆಗಾರಿಕೆ ಅವನಿಗೆ.'ಸತ್ಯವೇ ಅವನ ಜೀವನ ಸತ್ವ ಮತ್ತು ಸಾಹಿತ್ಯ ಸತ್ವ. ಹೀಗಾಗಿ ಒಂದರ್ಥದಲ್ಲಿ ಅವನದು ತತ್ತ್ವರಹಿತವಾದ ಬದುಕು. ಅವನ ಬದುಕು ಮತ್ತು ಬರಹ ಯಾವ ನಿಯಂತ್ರಣಕ್ಕೂ ಒಳಗಾಗಲಿಲ್ಲ. ಅವನದು ನಿಸ್ವಾರ್ಥವಾದ ಬದುಕು. ಅಶನ ವಸನಗಳಿಗೂ ಕೂಡಿಡುವ ಸ್ವಭಾವ ಇರದ ಅವನಿಗೆ ಬೇರಾವ ಋಣ ಇದ್ದೀತು? ಅವನ ಉಡುಗೆ ಒಂದು ಕೌಪೀನ; ಊಟವಾದರೋ ಭಿಕ್ಷಾನ್ನ. ಜೀವನವಾದರೊ ಜೈ ಅಲಕ್ ನಿರಂಜನ ಪ್ರಜ್ಞೆಯ ಪರಿವ್ರಾಜಕ ಪ್ರವೃತ್ತಿ. ಆದ್ದರಿಂದ ಅರಿವೊಂದೇ ಅವನ ಪ್ರಪತ್ತಿ. ಅದರಲ್ಲಿ 'ವಿಚಾರ' ಯಾವತ್ತು ಸ್ಥಾಯಿ.

ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಯ ಮಾತು ಬಂದಾಗ ಮೊದಲು ನೆನೆಯುವ ಹೆಸರು ಬಸವಣ್ಣ. ಬಸವಣ್ಣನ ವಿಚಾರ ಕ್ರಾಂತಿಯನ್ನು ಮೀರುವ ಧೋರಣೆಯುಳ್ಳ ಲೇಖಕರು ಪ್ರಾಚೀನ ಸಾಹಿತ್ಯದಲ್ಲಿ ಕಾಣಬರಲಿಲ್ಲ. ಆದರೆ ಬಸವಣ್ಣನ ನಿಲವನ್ನೂ ಪ್ರಶ್ನಿಸುವ ಎದೆಗಾರಿಕೆಯನ್ನು ತೋರಿದ ಸತ್ವಶಾಲಿ ಕವಿ ಸರ್ವಜ್ಞ. ಜಾತಿಮತದ ಅಂತರವನ್ನು ಸಂಪೂರ್ಣವಾಗಿ ತಿಳಿಸಹೊರಟ ಮಹಾತ್ಮ ಬಸವಣ್ಣ ಎಂಬುದರ ಬಗ್ಗೆ ಎರಡು ಮಾತಿಲ್ಲ. ಆದರೆ ಆತ ಅತಿಭಾವುಕ ಸ್ಥಿತಿಯಲ್ಲಿ ಭವಿ ಭಕ್ತ ಎಂಬೆರಡು ವರ್ಗಗಳನ್ನು ಸೃಷ್ಟಿಸಿದ. ಭಕ್ತನಲ್ಲದವನಿಗೆ ಎಲ್ಲ ಮಾನ್ಯತೆಯನ್ನೂ ತಿರಸ್ಕರಿಸಿದ. ಸರ್ವಜ್ಞ ಈ ಭೇದವನ್ನು ಖಂಡಿಸಿದ.

ಅವಯವಗಳೆಲ್ಲರಿಗೆ ಸಮವಾಗಿ ಇರುತಿರಲು
ಭವಿ ಭಕ್ತ ಶೂದ್ರ ಶ್ವಪಚನೆಂಬ
ಕವನವೆತ್ತಣದು ಸರ್ವಜ್ಞ!

ಎಂಬ ಸರ್ವಜ್ಞನ ಮಾತಿನ ತರ್ಕ ಸಾರ್ವತ್ರಿಕ ಸತ್ಯದ ಹೊಸ ಆವಿಷ್ಕಾರದಂತೆ ಕಂಡು ಬಂತು? ವಿಚಾರದ ಹೊಸ ಮಗ್ಗಲೊಂದನ್ನು ತೆರೆದು ತೋರಿದಂತಾಯಿತು. ಸರ್ವಜ್ಞ ಇನ್ನೊಂದೆಡೆ

ಒಬ್ಬನಲ್ಲದೆ ಜಗಕೆ ಇಬ್ಬರುಂಟೇ ಮತ್ತೆ ಒಬ್ಬ
ಸರ್ವಜ್ಞ ಕರ್ತನೀ ಜಗಕೆಲ್ಲ'।

ಎಂಬ ಹೆಗ್ಗಳಿಕೆಯನ್ನು ಅನೇಕ ಕಡೆಗಳಲ್ಲಿ ಸ್ಥಾಪಿಸಿದ್ದಾನೆ. ಲೋಕಸ್ವೀಕೃತವಾದ ತಾಯಿಯ ಹಿರಿಮೆಯನ್ನು ಇವನು ಗೌಣವಾಗಿಸಿದ್ದಾನೆ. ಭಾರತೀಯ ಪರಂಪರೆಯಲ್ಲಿ ತಾಯಿಗಿರುವ ಮಹತ್ವ ಅನನ್ಯವಾದುದು ಮತ್ತು ಅದ್ವಿತೀಯವಾದುದು. ಭಾರತೀಯ ಸಂಸ್ಕೃತಿಯಲ್ಲಿ ತಾಯಿಗೆ ಕೊಟ್ಟಿರುವ ಮಾತೃದೇವೋ ಭವ ಎಂಬ ಸ್ಥಾನ ಪಾಶ್ಚಿಮಾತ್ಯ ಸಂಸ್ಕೃತಿಗಿಂತ ಹೊರತಾಗಿ ನಿಲ್ಲುವಂತಹದಾಗಿದೆ. ಯಕ್ಷಪ್ರಶ್ನೆಯಲ್ಲಿ ತಾಯಿ ಭೂಮಿಗಿಂತಲೂ ದೊಡ್ಡದು ಎಂಬ ಅಂಶ ವ್ಯಕ್ತಗೊಳ್ಳುತ್ತದೆ. ಆದರೆ ಸರ್ವಜ್ಞ 'ತಾ' ಯೆಂಬೆನಲ್ಲದೆ ತಾಯಿ ನಾನೆಂಬೆನೆ?' ಎಂಬ ಪ್ರಶ್ನೆಯ ಮೂಲಕ ಸೋಜಿಗದ ನೆಲೆಗೆ ನಮ್ಮನ್ನೆಳೆಯುತ್ತಾನೆ. ಒಂದು ವೇಳೆ ಅವನು ತಾಯಿ ಎಂದು ಕರೆಯುವುದಾದರೆ ಅದು ಪರಸ್ತ್ರೀಯನ್ನು ಎಂದು ಹೇಳುತ್ತಾನೆ. ಒಂದು ವೇಳೆ ಜಗತ್ತಿನ ಎಲ್ಲ ಸ್ತ್ರೀಯರು ತಾಯಿಗೆ ಸಮಾನರು ಎಂಬ ಸದ್ಭಾವವನ್ನೇ ಅವನು ಆ ಗ್ರಹಿಸಬಹುದಾದರೂ ಸಹ ತನ್ನ ಸ್ವಂತ ತಾಯಿಯನ್ನು 'ತಾಯಿ' ಮಾತಿನಲ್ಲಿ ಎನ್ನಲಾರದ ಅವನ ಧೋರಣೆಯ ಹಿಂದಿನ ಅಂತರಾರ್ಥ ಸ್ಪಷ್ಟವಾಗದೆ ಪ್ರಶ್ನಾರ್ಥಕವಾಗಿಯೇ ಉಳಿಯುತ್ತದೆ. ತಾಯಿಯ ಬಗ್ಗೆ ಅವನಿಗಿದ್ದ 'ಅಲರ್ಜಿ' ಅವನನ್ನು ಜಗದ ಜನರಿಗಿಂತ ಪೃಥಕ್ಕಾಗಿ ನಿಲ್ಲಿಸುತ್ತದೆ. ಒಮ್ಮೊಮ್ಮೆ ತಾಯಿಯನ್ನು ಮಾತ್ರವಲ್ಲದೆ 'ತಾಯ್ತಂದೆ ಎತ್ತಣದವರು' ಎಂದೂ ಧಿಕ್ಕರಿಸುತ್ತಾನೆ. ಒಂದು ವೇಳೆ ಈ ಕವಿ 'ತಾಯ್ತಂದೆಯ ಅನಾದರಕ್ಕೆ ಪಾತ್ರವಾಗಿ ನೊಂದಿರಬಹುದೇ ಎಂಬ ಊಹೆಗೂ ಇದು ಆಸ್ಪದವೀಯುತ್ತದೆ.

ಜಾತಿ

ಈ ದೇಶಕ್ಕಂಟಿದ ಒಂದು ಮಹಾಕಳಂಕ. ಅದನ್ನು ಅಳಿಸಲು ಕವಿಗಳು, ಸಂತರು, ದಾರ್ಶನಿಕರು ಆದಿಯಿಂದಲೂ ಪ್ರಯತ್ನಿಸುತ್ತಲೇ ಇದ್ದಾರೆ. ಕೆಲವು ಮರಗಳು ಕತ್ತರಿಸಿದಷ್ಟೂ ಮತ್ತೆ ಮತ್ತೆ ಕವಲೊಡೆದು ಮೊದಲಿಗಿಂತಲೂ ಮಹತ್ತರವಾಗಿ ವೃದ್ಧಿಸಿ ಪಸರಿಸುವಂತೆ ಜಾತಿವೃಕ್ಷಗಳೂ ಸಹ ಸಮೃದ್ಧವಾಗಿ ಬೆಳೆಯುತ್ತಲೇ ಇವೆ.

ಸಾವಿರ ವರ್ಷಗಳ ಹಿಂದೆಯೇ ಪಂಪ 'ಕುಲಂ ಕುಲಮಲ್ತು, ಛಲಂ ಕುಲಂ, ಅಣ್ಮುಕುಲಂ, ಅಭಿಮಾನವೊಂದೆ ಕುಲಂ' ಎಂದು ಸಾರಿದ. ಬಸವಣ್ಣ ಅದನ್ನು ಬಹಳ ಉಗ್ರವಾಗಿ ಖಂಡಿಸಿ ಜಾತಿ ನಾಶಕ್ಕೆ ಕ್ರಿಯಾತ್ಮಕ ಆಯಾಮವನ್ನು ಸೃಷ್ಟಿಸಿದ, ಹದಿನಾರನೆಯ ಶತಮಾನದಲ್ಲಿ ಸಂತ ಕನಕದಾಸ 'ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ ಬಲ್ಲಿರಾ?'ಎಂದು ತಾರ್ಕಿಕವಾಗಿ ಪ್ರಶ್ನಿಸಿದ. ಆದರೂ ಸರ್ವಜ್ಞನ ಕಾಲಕ್ಕೂ ಆ ಮತೀಯ ಭ್ರಾಂತಿ ಉಲ್ಬಣವಾಗಿತ್ತೇ ಹೊರತು ಕಡಮೆ ಏನೂ ಆಗಿರಲಿಲ್ಲ. ಸರ್ವಜ್ಞನಾದರೊ ಅನಿಷ್ಟಗಳನ್ನು ಅಳಿಸುವ ಪ್ರಯತ್ನದಲ್ಲಿ ಎಲ್ಲರಿಗಿಂತಲೂ ಮುಂದು. ಆತನೆಂದೂ ಕ್ರಾಂತಿಯ ಹರಿಕಾರ. **ಜಾತಿಹೀನನ ಮನೆಯ ಜ್ಯೋತಿ ತಾ ಹೀನವೆ ಜಾತಿ ವಿಜಾತಿ ಎನಬೇಡ ದೇವನೊಲಿದಾತನೆ ಜಾತ** ಎಂದು ಉದ್ಘೋಷಿಸಿದ. ಮಾತ್ರವಲ್ಲ,

ಜಾತಿ ಮಾನವ ನಿರ್ಮಿತವೇ ಹೊರತು ದೈವ ನಿರ್ಮಿತ ಅಲ್ಲ ಎಂದು ಹೇಳಿದ. ಮಡಿವಂತಿಕೆ, ಸ್ಪೃಶ್ಯ-ಅಸ್ಪೃಶ್ಯ; ಮೇಲು-ಕೀಳು; ಉತ್ತಮ-ಅಧಮ ಇತ್ಯಾದಿ ಅಂತರಗಳನ್ನು ಸಹಿಸದೆ ಲೇವಡಿ ಮಾಡಿದ.

ನಡೆವುದೊಂದೇ ಭೂಮಿ: ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ
ನಡುವೆ ಎತ್ತಣದು?ಸರ್ವಜ್ಞ

ಎಂದು ಸಾರಿದ. ನಾವು ನಡೆಯುವ ಭೂಮಿಯಾಗಲಿ, ಕುಡಿಯುವ ನೀರಾಗಲಿ, ಬಳಸುವ ಅಗ್ನಿಯಾಗಲಿ ಜಾತಿಗನುಗುಣವಾಗಿ ಇರುವುದಿಲ್ಲ. ಅವು ಎಲ್ಲರಿಗೂ ಸಮಾನ. ಅವುಗಳಲ್ಲಿ ಭೇದ ಕಂಡು ಬರುವುದಿಲ್ಲ. ಹೀಗಿರುವಾಗ ಮಾನವ ಮಾತ್ರ ಜಾತಿಗಳನ್ನು ಸೃಷ್ಟಿಸಿಕೊಂಡಿರುವುದು ಅವಿಚಾರತೆಯಿಂದ ಕೂಡಿದೆ ಎಂದು ಭಾವಿಸುತ್ತಾನೆ. ಬಣ್ಣ ಉತ್ತಮವಾದ ಮಾತ್ರಕ್ಕೆ ವ್ಯಕ್ತಿ ಉತ್ತಮನಾಗುವುದಿಲ್ಲ. ಅನ್ಯರನ್ನು ಅನ್ಯಥಾ ಭಾವಿಸುವವರು ಉತ್ತಮರಾಗಲಾರರು '**ತನ್ನಂತೆ ಪರರ ಬಗೆದವರು**' ನಿಜವಾಗಿ ಉತ್ತಮರಾಗುತ್ತಾರೆ. ಎಂಬುದು ಸರ್ವಜ್ಞನ ಮತ! **ಯಾತರ ಹೂವಾದರೇನು ನಾತರದು ಸಾಲದೆ**' ಎಂಬಲ್ಲಿ ಸಹ ಹೂವಿನ ಜಾತಿಗಿಂತ ಪರಿಮಳದ ಗುಣಕ್ಕೆ ಒತ್ತು ಕೊಡುವ ಕವಿದೃಷ್ಟಿ ದಾರ್ಶನಿಕವಾದುದು.

ಮೌಢ್ಯ

ನಮ್ಮಲ್ಲಿ ಆಚಾರಗಳ ಹೆಸರಿನಲ್ಲಿ ಅನಾಚಾರಗಳು ನಡೆಯುವುದೇ ಹೆಚ್ಚು, ಶಾಸ್ತ್ರ ಮೂರ್ಖತೆಯಲ್ಲಿ ಮೌಢ್ಯಗಳ ಪ್ರತಿಪಾದನೆ ಆಯಿತು. ಜೀವನ ಮೌಲ್ಯ (The Values of life) ಗಳಿಗೂ, ಮೌಢ್ಯಗಳಿಗೂ ಅಂತರವರಿಯದೆ ಎಲ್ಲವನ್ನು ಒಂದೇ ಅರ್ಥದಲ್ಲಿ ಗ್ರಹಿಸತೊಡಗಿದರು. ಕಂದಾಚಾರಗಳು, ಅವಿಚಾರಯುಕ್ತವಾದ ಕಟ್ಟುಕಟ್ಟಳೆಗಳು ಅವೈಜ್ಞಾನಿಕ ಬದುಕಿಗೆ ಇಂಬುಕೊಟ್ಟವು. ಧರ್ಮದ ಹೆಸರಿನಲ್ಲಿ ಅಧರ್ಮ ತಲೆಎತ್ತಿತು. ಜನ ಕುರಿಮಂದೆಗಳಂತೆ ಮೌಢ್ಯಗಳಿಗೆ ಶರಣಾದರು. ಕೆಲವರು ಶಾಸ್ತ್ರಗಳ ಹೆಸರಿನಲ್ಲಿ ಮೌಢ್ಯಗಳನ್ನು ಪ್ರತಿಪಾದಿಸುತ್ತ ಜನರನ್ನು ಕ್ರೂರವಾಗಿ ಶೋಷಿಸತೊಡಗಿದರು. ಸರ್ವಜ್ಞಕವಿ ಈ ಮೌಢ್ಯಗಳನ್ನು ಪ್ರಬಲವಾಗಿ ವಿರೋಧಿಸಿದ. ಮೌಢ್ಯದಿಂದ ಕೂಡಿದ ಬದುಕನ್ನು ಬಹಿರಂಗವಾಗಿಯೇ ಲೇವಡಿಮಾಡಿ ಛೇಡಿಸಿದ.

ಜನಿವಾರ ಧಾರಣೆಯಿಂದಷ್ಟೇ ಸ್ವರ್ಗ ಸೇರುತ್ತಾರೆಂಬ ಪ್ರತೀತಿಯನ್ನು ಹಾಸ್ಯ ಮಾಡಿದ. ಇಂತಹ ಬಹಿರಾಚಾರಗಳನ್ನು ಅರ್ಥವಿಲ್ಲದ ನಂಬಿಕೆಗಳೆಂದು ಸಾಬೀತು ಪಡಿಸಿದ.

ಮೂರೆಳೆಯನುಟ್ಟಾತ, ಹಾರುವಡೆ ಸ್ವರ್ಗಕ್ಕೆ
ನೂರೆಂಟು ಎಳೆಯ ಕವುದಿಯನು ಹೊದ್ದಾತ

ಹಾರನೇಕಯ್ಯ? ಸರ್ವಜ್ಞ

ಮೂರೆಳೆಯ ಜನಿವಾರ ಧಾರಣೆ ಸ್ವರ್ಗಕ್ಕೆ ಅರ್ಹತೆ ಆಗುವುದಾದರೆ ಹಲವಾರು ಎಳೆಯ ಮೊತ್ತವುಳ್ಳ ಕವುದಿಯನು ಹೊದ್ದವನು ಇನ್ನೂ ಶೀಘ್ರವಾಗಿ ಹೋಗಲು ಅರ್ಹನಲ್ಲವೆ ಎಂಬುದು ಸರ್ವಜ್ಞನ ಮತ; ನೀರಲ್ಲಿ ಮುಳುಗಿದರೆ ಬ್ರಾಹ್ಮಣ ಸ್ವರ್ಗ ಸೇರುವುದಾದರೆ ಸದಾ ನೀರಿನಲ್ಲಿಯೇ ಇರುವ ಕಪ್ಪೆ ಸಹ ಸ್ವರ್ಗಕ್ಕೆ ಹೋಗಬೇಕಲ್ಲವೆ? ತೇದ ಶ್ರೀಗಂಧವನ್ನು ಹಣೆಯಲ್ಲಿ ಇಟ್ಟವನಿಗೆ ಮೋಕ್ಷ ಸಂಪಾದನೆ ಆಗುವುದಾದರೆ ಅದರ ತಾಡನಕ್ಕೆ ಒಳಗಾದ ಸಾಣೆಕಲ್ಲಿಗೆ ಇರುವ ಅನರ್ಹತೆ ಆದರೂ ಏನು?

ಇಂತಹ ಹಲವಾರು ಪ್ರಶ್ನೆಗಳ ಮೂಲಕ ಸರ್ವಜ್ಞ ಮಾನವನ ಮೌಢ್ಯಗಳನ್ನು ಲೇವಡಿ ಮಾಡುತ್ತಾನೆ. ಜನತೆಯನ್ನು ವಾಸ್ತವತೆಯ ಕಡೆಗೆ ಜಾಗೃತಿಗೊಳಿಸುತ್ತಾನೆ. ಹೀಗಾಗಿ ಸರ್ವಜ್ಞನ ವಚನಗಳು ಚಿಂತನೆಯ ಕಣಜಗಳಾಗಿವೆ. ಆಡುಮುಟ್ಟದ ಸೊಪ್ಪಿಲ್ಲ ಎಂಬಂತೆ ಸರ್ವಜ್ಞಪ್ರಜ್ಞೆ ಸ್ಪರ್ಶಿಸದ ವಿಷಯಗಳಿಲ್ಲ. ಅವನ ಸಾಹಿತ್ಯ ಸಮೃದ್ಧವಾದ ಲೋಕಾನುಭವದಿಂದ ಸಂಪದ್ಭರಿತವಾಗಿದೆ. ಪ್ರತಿಯೊಂದು ತ್ರಿಪದಿಯೂ ಆಲೋಚನೆಯ ಆಗರವಾಗಿದೆ.

ಅವನು ಯಾವ ಮತಕ್ಕೂ ಕಟ್ಟು ಬಿದ್ದಿಲ್ಲ. ಯಾವ ಮತವನ್ನೂ ಟೀಕಿಸದೆ ಬಿಟ್ಟಿಲ್ಲ. ವಿಭೂತಿ ಧಾರಣೆ ಮಾಡಿ ಭಸಿತದಿಂದಲೇ ಭಗವಂತನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುವವರನ್ನು ಕಂಡು

ಕತ್ತೆ ಬೂದಿಲಿ ಹೊರಳಿ।ಮತ್ತೆ ಯತಿಯಪ್ಪುದೇ
ತತ್ತ್ವವರಿಯದಲೆ ಭಸಿತವಿಟ್ಟವ ಶುದ್ಧ।
ಕತ್ತೆಯಂತೆಂದ ಸರ್ವಜ್ಞ

ಎನ್ನುತ್ತಾನೆ. ಆದರೆ ಇಲ್ಲಿ ಭಸಿತದ ನಿರಾಕರಣೆಯಾಗಲಿ, ಭಸಿತದ ಬಗ್ಗೆ ಅಲಕ್ಷ್ಯವಾಗಲಿ ಇಲ್ಲ. ತತ್ತ್ವ ಅರಿಯದೆ, ಭಕ್ತಿಯ ಅಂತರಾರ್ಥದ ಅರಿವಿಲ್ಲದೆ ಕೇವಲ ಬೂದಿಯನ್ನು ಬಳಿದುಕೊಳ್ಳುವುದು ಬೂದಿಯಲ್ಲೇ ಹೊರಳಾಡುವ ಕತ್ತೆಯಷ್ಟೇ ನಿರರ್ಥಕ ಎಂಬುದು ಅವನ ಮತ.

ಇಷ್ಟಾದರೂ ಅವನು ಯಾವೊಂದು ಮತವನ್ನು ಪೂರ್ಣ ಕೆಟ್ಟದೆಂದೂ, ಅಥವಾ ಯಾವೊಂದು ಮತವನ್ನು ಪೂರ್ಣ ಒಳ್ಳೆಯದೆಂದೂ ಕರೆಯುವುದಿಲ್ಲ. ಒಳಿತನ್ನೂ ಕೆಡುಕನ್ನು ಎಲ್ಲದರಲ್ಲೂ ಗುರುತಿಸುವ ಸಮನ್ವಯ ಪ್ರಜ್ಞೆ ಅವನಲ್ಲಿದೆ. ಭಕ್ತಿ, ಪೂಜೆ, ಆಚರಣೆಯ ಹೆಸರಿನಲ್ಲಿ ಅವಿಚಾರ ಸಲ್ಲದು ಎಂಬುದು ಸರ್ವಜ್ಞನ ಧೋರಣೆಯೇ ಹೊರತು ಭಕ್ತಿಯೇ ಸಲ್ಲದು ಎಂಬುದು ಅವನ ಮತವಲ್ಲ. ಶುದ್ಧ ಭಕ್ತಿಯನ್ನಾಗಲಿ, ಪರಮಾತ್ಮನನ್ನಾಗಲಿ ಅವನು ಅಲ್ಲಗಳೆಯುವುದಿಲ್ಲ. ಸರ್ವಜ್ಞ ಭಕ್ತಕವಿ ಎಂಬುದು ನಿರ್ವಿವಾದ. ಆದರೆ ಭಕ್ತಿಯಲ್ಲೇ ಕ್ರಾಂತಿಯನ್ನು ಕಂಡ ಸಂತನೀತ. ಹೀಗಾಗಿ ಸರ್ವಜ್ಞ ಬಸವಣ್ಣನವರಂತೆಯೇ ಕ್ರಾಂತಿಯೋಗಿ. ಅನ್ಯಾಯದ ವಿರುದ್ಧ ಸಿಡಿದೇಳುವ, ಪಾಪಕಾರ್ಯಗಳ ವಿರುದ್ಧ ಪ್ರತಿಭಟನೆ

ತೋರುವ ಧೀಮಂತ ಕವಿ. ಬಸವಣ್ಣನವರಿಗಾದರೂ ಕೆಲವು ಕಾಲ ರಾಜಾಶ್ರಯವಿತ್ತು. ಸರ್ವಜ್ಞನಿಗೆ ಆ ಹಂಗೂ ಇಲ್ಲ. ಯಾವ ನಂಟಿನ ಅಂಟೂ ಇಲ್ಲದ ಶುದ್ಧ ಅಪರಂಜಿ ಈತ.

ಇವನ ಅನುಭವ ಭವ್ಯವಾದ ನುಡಿಗಳು ಶಾಸನ ಬರೆದಂತೆ ಸಿದ್ಧಾಂತ ಸ್ವರೂಪದವಾಗಿವೆ. 'ಬಣಜಿಗನು ಗುಣವಂತನಲ್ಲ' ಎಂಬ ಮಾತು ಹಣದಾಸೆಯ ಲೋಭಿ ಒಳ್ಳೆಯವನಾಗುವುದು ಸಾಧ್ಯವಿಲ್ಲ ಎಂಬುದನ್ನು ತಿಳಿಸುತ್ತದೆ. 'ಜಾಲಗಾರನಲಿ ದಯೆ ಧರ್ಮ ಮುನ್ನಾವ ಕಾಲಕ್ಕೂ ಇಲ್ಲ' ಇದ್ದರೆ ಆ ಬೆಸ್ತ ಮೀನು ಹಿಡಿದು ಬದುಕುವ ವೃತ್ತಿ ಧರ್ಮವನ್ನೆಸಗಲು ಸಾಧ್ಯವಿಲ್ಲ' ಬಂಡಿ ಇಲ್ಲದ ಬೇಸಾಯ ತಲೆಹೋದ ಮುಂಡದಂತಿಕ್ಕು' 'ಸೂಳೆ ಸುಂಕದ ನಾಯಿ' 'ಎಲ್ಲ ಆಸೆಯ ಬಿಟ್ಟರಿಲ್ಲಿಯೇ ಕೈಲಾಸ', 'ಹುಸಿಯ ಪೇಳ್ವುದರಿಂದ ಹಸಿದು ಸಾವುದು ಲೇಸು', ಹಂಗಿನರಮನೆಗಿಂತ ವಿಂಗಡದ ಗುಡಿ ಲೇಸು. 'ನಡೆಯೊಳೆಚ್ಚರವ ಬಿಡದಿರು' 'ಪರಸತಿಯ ಕಡೆಗೆ ನೋಡದಿರು ಮುಂತಾದ ನುಡಿಗಳು ಲೋಗರಿಗೆ ತಿಳಿವಳಿಕೆಯನ್ನೂ, ನೀತಿಯನ್ನೂ ನೀಡುವಂತಹವಾಗಿವೆ.

ಸರ್ವಜ್ಞ ವಿದ್ಯೆಗೆ ಮಹತ್ವ ಕೊಡುತ್ತಾನೆ. ಅದಕ್ಕಿಂತಲೂ ವ್ಯವಸಾಯಕ್ಕೆ ಪ್ರಥಮ ಪ್ರಾಶಸ್ತ್ಯ ನೀಡುತ್ತಾನೆ. 'ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಲೇಸು' ಎಂದು ಒಕ್ಕಲುತನ ಶ್ರೇಷ್ಠ ಕಾಯಕವೆಂದು ಸಾರುತ್ತಾನೆ. ಜೀವನದಲ್ಲಿ ಸ್ವಾತಂತ್ರ್ಯಕ್ಕೆ ಹೆಚ್ಚು ಬೆಲೆಯನ್ನು ಕೊಟ್ಟವರಲ್ಲಿ ಸರ್ವಜ್ಞ ಪ್ರಮುಖನಾಗುತ್ತಾನೆ. 'ಜನಕೆ ಬಂಧನ ಹೊಲ್ಲ' ಎನ್ನುವ ಈ ಕವಿ 'ಬಂಧನದಲಿತುವವನು ಹಂದಿಯಂತಿರುತಿಹನು' ಎಂದು ಸ್ವಾತಂತ್ರ್ಯದ ಅಗ್ಗಳಿಕೆಯನ್ನು ಎತ್ತಿಹಿಡಿಯುತ್ತಾನೆ. ಸದಾ ಸಹಜೋಪಮೆಗಳಲ್ಲಿ ಮಾತನಾಡುವ ಈತ'ತನ್ನತನ' ದಿಂದಾಗಿ ಕನ್ನಡ ಸಾಹಿತ್ಯದಲ್ಲಿ 'ಅನುಪಮ'ಕವಿಯೂ ಸಂತನೂ ಆಗಿದ್ದಾನೆ. ಈತನ ಬಗ್ಗೆ ನಾಡಿನಲ್ಲಿ ನಡೆಯಬೇಕಾದಷ್ಟು ಚಿಂತನೆ, ಅಧ್ಯಯನ ನಡೆಯಲಿಲ್ಲವಲ್ಲ' ಎಂಬ ಕೊರತೆ ಇದ್ದೇ ಇದೆ.

***

ಜೇಡರ ದಾಸಿಮಯ್ಯನವರ ವಚನಗಳಲ್ಲಿ ಭಕ್ತಿಯ ಪರಿಕಲ್ಪನೆ

-ಡಾ||ಎಸ್. ವಿದ್ಯಾಶಂಕರ

ಹಿನ್ನೆಲೆ

ಭಕ್ತಿಯು ವೈಯಕ್ತಿಕವಾದುದು. ಅದನ್ನು ಬೌದ್ಧಿಕವಾಗಿ ಹೀಗೆ ಎಂದು ಖಚಿತವಾಗಿ ವಿವರಿಸಲಾಗದು. ಅದು ಹೃದಯಕ್ಕೆ ಸಂಬಂಧಿಸಿದುದು. ಅಂತರಂಗದ ವಿಕಾಸವನ್ನು ಕುರಿತ ಸಾಧನೆಗೆ, ವಿಶಾಲವಾದ ಅರ್ಥದಲ್ಲಿ, ಭಕ್ತಿಯೆನ್ನುವುದು ತಳಹದಿ. ಭಕ್ತಿಗೆ ಭಯವೇ ಮೂಲ.* ಆದಿಮಾನವ ತನ್ನ ಹಾಗೂ ಕುಟುಂಬದ, ಬಂಧುಬಾಂಧವರ, ತನ್ನ ದನಕರುಗಳ ಕಷ್ಟನಷ್ಟಗಳಿಗೆ ಸಾವು ನೋವುಗಳಿಗೆ ಅದೃಶ್ಯಶಕ್ತಿಯೊಂದು ಕಾರಣವೆಂದು ಬಲವಾಗಿ ನಂಬಿ ನಿಸ್ಸಹಾಯಕತೆಯಿಂದ ಹಾಗೂ ಭೀತಿಯಿಂದ ಆ ಅದೃಶ್ಯಶಕ್ತಿಗೆ ಮಣಿದು ಸಹಾಯಕ್ಕಾಗಿ ಮೊರೆಯಿಟ್ಟನು.

ನಾರದ ಭಕ್ತಿಸೂತ್ರದಲ್ಲಿ ಭಕ್ತಿಯೆಂಬುದು ಪರಮ ಪ್ರೇಮರೂಪವಾದುದು, ಸರ್ವವ್ಯಾಪಿಯಾದ ಶಕ್ತಿಗೆ ಸಂಪೂರ್ಣವಾಗಿ ಅರ್ಪಿಸಿಕೊಳ್ಳುವುದರಿಂದ ಉಂಟಾಗುವ ಅನಿರ್ವಚನೀಯ ಅನುಭವ ಎಂದು ವಿವರಿಸಲಾಗಿದೆ. ಇದನ್ನೇ ಶಾಂಡಿಲ್ಯ ತನ್ನ ಭಕ್ತಿ ಸೂತ್ರದಲ್ಲಿ 'ಈಶ್ವರನ ಮೇಲಣ ತೀವ್ರತರವಾದ ಪ್ರೇಮ'ವೆಂದು ಕರೆದಿರುವನು. ಭಾಗವತದಲ್ಲಿ ಪರಮಾತ್ಮನ ಮೇಲಣ ನಿಸ್ವಾರ್ಥಮಯವಾದ ಪ್ರೇಮವೇ ಭಕ್ತಿಯೆಂದು ಕರೆಯಲಾಗಿದೆ. ನಾರದರು ಭಕ್ತಿಯ ಹನ್ನೊಂದು ರೂಪಗಳನ್ನು ಹೇಳುವರು: ಗುಣಮಹಾತ್ಮ್ಯಾಸಕ್ತಿ, ರೂಪಾಸಕ್ತಿ, ಪೂಜಾಸಕ್ತಿ, ಸ್ಮರಣಾಸಕ್ತಿ, ದಾಸ್ಯಾಸಕ್ತಿ, ವಾತ್ಸಲ್ಯಾಸಕ್ತಿ, ಕಾಂತ್ಯಾಸಕ್ತಿ, ಆತ್ಮನಿವೇದನಾಸಕ್ತಿ, ತನ್ಮಯಾಸಕ್ತಿ, ಪರಮವಿರಹಾಸಕ್ತಿ. ಭಾಗವತದಲ್ಲಿ ನವವಿಧ ಭಕ್ತಿಗಳನ್ನು ಹೇಳಲಾಗಿದೆ: ಶ್ರವಣ, ಕೀರ್ತನ, ವಿಷ್ಣೋಃಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ**. ನವವಿಧ ಭಕ್ತಿಗಳಲ್ಲಿ ಮೊದಲ

---

* ಭಕ್ತಿಗೆ ಭಯವೇ ಮೂಲವೆಂಬ ಸಿದ್ಧಾಂತವನ್ನು ಸಿದ್ಧರಾಮನು ತನ್ನ ವಚನವೊಂದರಲ್ಲಿ ಚೆನ್ನಾಗಿ ಪ್ರತಿಪಾದಿಸಿರುವನು:

''ರೂಹಿಲ್ಲದ ನೆಲದಲ್ಲಿ ಸಸಿಯುನೇ ಬೆಳೆವುದಯ್ಯಾ?
ಭಯವಿಲ್ಲದವನಲ್ಲಿ ಭಕ್ತಿಯುನೇ ಬೆಳೆವುದಯ್ಯಾ?
ಭಯ ಕೆಟ್ಟಡೆ ಭಕ್ತಿ ಬಿಡುವುದು, ಮಹದೇವನೊಲ್ಲ
ಕಪಿಲಸಿದ್ಧಮಲ್ಲಿನಾಥನಾ ಹೋ! ಅಯ್ಯಾ!''

** ಮುರಿಗೆ ಶಾಂತವೀರಸ್ವಾಮಿಗಳು 'ಏಕೋನವಿಂಶತಿ ಪದ'ದಲ್ಲಿ ಭಾಗವತದಲ್ಲಿ ಹೇಳಿರುವ ನವವಿಧ ಭಕ್ತಿಗಳನ್ನೇ ಉಲ್ಲೇಖಿಸಿರುವರು. ಮೂರನೆಯದಾದ'ವಿಷ್ಣೋಃಸ್ಮರಣ'ದ ಬದಲಿಗೆ 'ನಿಜಸ್ಮರಣ'ವೆಂದು ಹೇಳಿ, ಇವು ಶಂಭುವಿನ ಭಕ್ತಿಯ ಒಂಬತ್ತು ಬಗೆ ಎಂದು ಹೇಳುವರು.

ಆರು ಭಕ್ತಿಮಾರ್ಗದ ಸಾಧನಕ್ರಿಯೆಗಳು; ಭಕ್ತಿಯ ಅನುಸಂಧಾನದಲ್ಲಿ ಪೂರ್ವಸಿದ್ಧತೆಗಳು. ಉಳಿದ ಮೂರು ವಿಶಿಷ್ಟವಾದ ಭಕ್ತಿಭಾವಗಳು.

ಭಕ್ತಿಯು ಪರಮಾತ್ಮನನ್ನು ಧಾರ್ಮಿಕವಾಗಿ ಕೂಡಲು ಒಂದು ಮಾಧ್ಯಮ. ಯಾವುದೇ ಧರ್ಮವಿರಲಿ ಅದರಲ್ಲಿ ತೀವ್ರತರವಾದ ಶ್ರದ್ಧೆಯಿರುವ ವ್ಯಕ್ತಿಯು ಆ ಮೂಲಕ ಪರಮಾತ್ಮನನ್ನು ಸೇರಲು ಪ್ರಯತ್ನಿಸುವನು. ಭಕ್ತನಿಗೂ ಪರಮಾತ್ಮನಿಗೂ ಸ್ನೇಹ ಸಂಬಂಧವನ್ನು ಧರ್ಮವು ಕಲ್ಪಿಸುತ್ತದೆ. ಭಕ್ತಿಯ ಗುರಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದು ಅಥವಾ ಪರಮಾತ್ಮನ ಕರುಣೆಯ ಅನುಭವವನ್ನು ಹೊಂದುವುದು. ಮನುಷ್ಯ ಹಾಗೂ ದೇವರ ನಡುವಣ ಸಂಬಂಧವು ಮೂಲತಃ ಪಾರಲೌಕಿಕವಾದುದು. ಆದರೂ ಅದು ಲೌಕಿಕ ಸಂಬಂಧಗಳ ರೂಪದಲ್ಲಿ ವ್ಯಕ್ತಗೊಳ್ಳುತ್ತದೆ. ವ್ಯಕ್ತಿಯ ಭಾವನಾತ್ಮಕ ಹಾಗೂ ಮಾನವೀಯ ನಂಬುಗೆಯ ಕಾರಣಗಳಿಂದಾಗಿ ಅವನು ದೇವರೊಂದಿಗಿನ ಸಂಬಂಧವನ್ನು ಕೌಟುಂಬಿಕ ಸಂಬಂಧಗಳೊಂದಿಗೆ ಹೊಂದಿಸುವನು. ಅವನ ಭಾವನಾತ್ಮಕ ಪ್ರೇಮಸಂಬಂಧವನ್ನು ಆಧರಿಸಿ ದೇವರು ಅವನಿಗೆ ತಂದೆ-ತಾಯಿ-ಗಂಡ-ಮಗ-ಒಡೆಯ ಇತ್ಯಾದಿ ರೂಪಗಳಲ್ಲಿ ಕಾಣುವುದು. ಈ ಹಿನ್ನೆಲೆಯಲ್ಲಿ ಭಕ್ತಿಯನ್ನು ದಾಸ್ಯ, ಸಖ್ಯ ವಾತ್ಸಲ್ಯ, ಮಧುರ, ಶಾಂತ— ಹೀಗೆ ಐದು ಪ್ರಮುಖ ಭಾವಗಳಾಗಿ ಗುರುತಿಸಿರುವರು.

ಭಗವದ್ಗೀತೆಯು ಭಕ್ತಿಯನ್ನು ಒಂದು ಯೋಗವೆಂದು ಪರಿಗಣಿಸಿದೆ. ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ ಭಕ್ತಿಯೋಗದ ಸಾರವನ್ನೆಲ್ಲಾ ಸಂಗ್ರಹವಾಗಿ ನಿರೂಪಿಸಲಾಗಿದೆ. ''ಯಾರು ಸದಾ ಸಂತುಷ್ಟನೂ, ಯೋಗಿಯೂ, ಸಂಯಮಿಯೂ, ದೃಢಶ್ಚಯಿಯೂ, ನನಗೆ ಮನ-ಬುದ್ಧಿಗಳನ್ನರ್ಪಿಸಿದವನೂ ಆಗಿರುವನೋ ಅಂತಹ ಭಕ್ತನೇ ನನಗೆ ಪ್ರಿಯನು; ಯಾರು ಎಲ್ಲವನ್ನೂ ತೊರೆದು ನನ್ನನೇ ನಂಬಿ ನನಗೆ ಶರಣಾಗುವರೂ ಅವರೇ ನನಗೆ ಪ್ರಿಯರಾದವರು''— ಎಂದು ಗೀತೆಯಲ್ಲಿ, ಶ್ರೀ ಕೃಷ್ಣ ಹೇಳಿರುವುದನ್ನು ಗಮನಿಸಬೇಕು. ದೇವರಲ್ಲಿ ನಂಬುಗೆ ಅಥವಾ ವಿಶ್ವಾಸವಷ್ಟೇ ಸಾಲದು. ತದೈಕಚಿತ್ತದಿಂದ ದೇವರಲ್ಲಿ ಅನುರಕ್ತನಾಗುವುದೂ ಆವಶ್ಯಕ. ಗೀತೆಯ ಪ್ರಕಾರ, ಏಕಾಗ್ರಚಿತ್ತದಿಂದ ಕೂಡಿದ ಭಕ್ತಿಯು ಸಾಧನವಾದಂತೆ ಸಿದ್ಧಿಯೂ ಆಗಿದೆ. ಈ ಸ್ಥಿತಿಯಲ್ಲಿ ಸಾಧಕನು ತನ್ನನ್ನು ತಾನು ಸಂಪೂರ್ಣವಾಗಿ ಪರಮಾತ್ಮನಿಗೆ ಅರ್ಪಿಸಿಕೊಂಡು ಶರಣನಾಗುತ್ತಾನೆ. (''ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ''— ಗೀತೆಯಲ್ಲಿನ ಶ್ರೀಕೃಷ್ಣ ಉವಾಚ) ಅನನ್ಯ ಶರಣತೆಯು ಮೋಕ್ಷವನ್ನು ಸಾಧಿಸಲು ಸಾಧಕನಿಗೆ ನೆರವಾಗುತ್ತದೆ. ಭಾಗವತ ಪುರಾಣದಲ್ಲಿ ಸ್ವತಃ ವಿಷ್ಣುವೇ ಭಕ್ತಿಯೋಗದ ಲಕ್ಷಣವನ್ನು ಹೀಗೆ ವ್ಯಾಖ್ಯಾನಿಸಿರುವನು:

> ಭಕ್ತಿಯೋಗದ ಮೂಲಕ ಸತ್ತ್ವ, ರಜಸ್, ತಮಸ್ ಗುಣಗಳನ್ನು ದಾಟಿ
> ಯಾರೂ ನನ್ನೆಡೆಗೆ ಬರಬಹುದಾಗಿದೆ. ಆ ಸ್ಥಿತಿಯನ್ನು ಮುಟ್ಟುವುದೇ ಆತ್ಯಂತಿಕ.

ಅಭಿವಂದನಾ

ನಿರಪೇಕ್ಷೆಯಿಂದ ನನ್ನ ಸೇವೆಯನ್ನು ಮಾಡುತ್ತ, ತಮ್ಮ ಪಾಲಿಗೆ ಬಂದ ಕರ್ತವ್ಯಗಳನ್ನು ನೆರವೇರಿಸುತ್ತ, ಪ್ರಕ್ರಿಯೆಗಳನ್ನು ಸತತವಾಗಿ ಆಚರಿಸುತ್ತ, ಅತಿ ಹಿಂಸೆಯನ್ನು ಮಾಡದೆ,

ನನ್ನ ದರ್ಶನ, ಸ್ಪರ್ಶನ, ಪೂಜೆ, ಸ್ತುತಿಗಳೊಂದಿಗೆ ನನ್ನ ಪ್ರತಿಮೆಗೆ ಕೈ ಮುಗಿಯುತ್ತ, ಸರ್ವಪ್ರಾಣಿಗಳಲ್ಲಿ ನಾನು ಅಡಕವಾಗಿರುವೆನೆಂಬುದನ್ನು ನೆನೆಯುತ್ತ ಸಂಗ ಪರಿತ್ಯಾಗಗಳೊಂದಿಗೆ,

ಕುಲೀನ ವರ್ಗದವರಿಗೆ ಗೌರವ, ದುಃಖಿತರಿಗೆ ಕರುಣೆ, ಸಮಾನರಲ್ಲಿ ಸ್ನೇಹ, ಸಂಯಮ, ತಾಳ್ಮೆಗಳನ್ನು ವ್ಯಕ್ತಪಡಿಸುತ್ತ,

ಸೌಶೀಲ್ಯ, ಮರ್ಯಾದಿತರೊಂದಿಗೆ ಒಡನಾಟ, ವ್ಯಕ್ತಿತ್ವದ ಪರಿತ್ಯಾಗ, ಆತ್ಮನ ಬಗೆಗೆ ತಿಳಿದುಕೊಳ್ಳಬೇಕೆನ್ನುವ ಹವ್ಯಾಸ ಮತ್ತು ನನ್ನ ಹೆಸರಿನ ಕೊಂಡಾಟ—

ಈ (ಭಕ್ತಿಯ) ಗುಣಗಳನ್ನು ಆವರಿಸಿಕೊಂಡಿರುವವನ ಧರ್ಮವೇ ನನ್ನ ಧರ್ಮವಾಗಿ, ಅವನ ಮನಸ್ಸು ನಿರ್ಮಲವಾಗಿ, ನನ್ನ ಲಕ್ಷಣಗಳೇ ಅವನ ಮನಸ್ಸನ್ನು ಸೇರಿ ಅವನು ನನ್ನನ್ನು ಮುಟ್ಟುತ್ತಾನೆ*.

ಭಗವದ್ಗೀತೆಯಾಗಲೀ ಭಾಗವತ ಪುರಾಣವಾಗಲೀ ವರ್ಣಾಶ್ರಮ ಪದ್ಧತಿಯ ಚೌಕಟ್ಟಿನಲ್ಲಿಯೇ ವ್ಯವಹರಿಸುತ್ತದೆ. ಜೈನ ಬೌದ್ಧ ಧರ್ಮಗಳು ವೇದಗಳ ಅಧಿಕಾರ, ವೈದಿಕ ಆಚರಣೆಗಳು, ಜಾತಿಪದ್ಧತಿ— ಇವುಗಳನ್ನು ಪ್ರಶ್ನಿಸುವ ರೀತಿಯಲ್ಲಿ ಹುಟ್ಟಿಬಂದರೂ ಅವುಗಳು ಹಿಂದೂ-ಬ್ರಾಹ್ಮಣರ ಸಾಮಾಜಿಕ ಹಾಗೂ ಧಾರ್ಮಿಕ ವ್ಯವಸ್ಥೆಯ ಪ್ರಭಾವಕ್ಕೆ ಒಳಗಾದುದನ್ನು ಇತಿಹಾಸದಲ್ಲಿ ನಾವು ಮನಗಾಣಬಹುದಾಗಿದೆ.

ತಮಿಳುನಾಡಿನಲ್ಲಿ ನಡೆದ ಭಕ್ತಿಚಳುವಳಿಯು (ಸುಮಾರು ಏಳನೇ ಶತಮಾನ) ಧಾರ್ಮಿಕ ಪರಿಸರದಲ್ಲಿ ಜೈನಧರ್ಮದ ಪ್ರಭಾವದ ವಿರುದ್ಧ ನಡೆದಂತಿದೆ. ಅಲ್ಲಿನ ನೆಲದ ಧರ್ಮವನ್ನು (ಶೈವ, ವೈಷ್ಣವ) ಬದಿಗೊತ್ತಿ ಮೇಲೆ ಬಂದ ಜೈನಧರ್ಮದ ವಿರುದ್ಧ ಈ ಚಳುವಳಿ ತನ್ನ ಸ್ವರೂಪವನ್ನು ರೂಪಿಸಿಕೊಂಡು, ಸಾಮಾಜಿಕ ಹಾಗೂ ಧಾರ್ಮಿಕ ನೆಲೆಗಳಲ್ಲಿ ಬಲವಾದ ಬದಲಾವಣೆಗಳನ್ನು ತರಹೊರಟಿತು. ಈ ಚಳುವಳಿಗೆ ಶೈವಭಕ್ತಿ ಪ್ರತಿಪಾದಕರಾದ ನಾಯನ್ಮಾರರೂ, ವೈಷ್ಣವಭಕ್ತಿ ಪ್ರತಿಪಾದಕರಾದ ಆಳ್ವಾರರೂ ಮುಖ್ಯ ಪ್ರವಾಹವಾದರು. ಈ ಭಕ್ತಿ ಚಳುವಳಿಯಲ್ಲಿ ಎಲ್ಲ ಜಾತಿಯ ಜನರು ಲಿಂಗಭೇದವನ್ನು

*** ಉಲ್ಲೇಖ: ಡಾ|| ಹಿರೇಮಲ್ಲೂರ ಈಶ್ವರನ್: ಬಸವಣ್ಣ ಹಾಗೂ ಲಿಂಗಾಯತ ಧರ್ಮ (೧೯೮೯), ಪುಟ. ೪೮.**
ಈ ಚಳುವಳಿಯ ಬಗೆಗೆ ಹೆಚ್ಚಿನ ವಿವರಗಳನ್ನು ನನ್ನ 'ನಂಬಿಯಣ್ಣ: ಒಂದು ಅಧ್ಯಯನ' (೧೯೮೫) ಕೃತಿಯಲ್ಲಿ ನೋಡಿರಿ.

ಮರೆತು ಒಟ್ಟುಗೂಡಿದರು. ಮುಖ್ಯಸಂಗತಿಯೆಂದರೆ, ಈ ಚಳುವಳಿಯಲ್ಲಿ ಮೇಲುನೋಟಕ್ಕೆ ಎಲ್ಲ ಜಾತಿಯ ಜನರು ಒಟ್ಟುಗೂಡಿದಂತೆ ಕಂಡುಬಂದರೂ ಪರಂಪರೆಯಿಂದ ಬಂದ ವರ್ಣಾವ್ಯವಸ್ಥೆಯು ತನ್ನ ಭದ್ರವಾದ ಹಿಡಿತವನ್ನು ಇಲ್ಲಿಯೂ ಬಿಟ್ಟುಕೊಡಲಿಲ್ಲ. ಭಕ್ತಿಯ ಕೇಂದ್ರ ಸ್ಥಾನ ದೇವಾಲಯಗಳಾಗಿದ್ದುದರಿಂದ ಇಲ್ಲಿಗೆ ಶೂದ್ರರು ಪ್ರವೇಶಿಸಲಾಗಲಿಲ್ಲ, ಕೈಮುಟ್ಟಿ ಪೂಜಿಸಲಾಗಲಿಲ್ಲ. ಡಾ|| ಹಿರೇಮಲ್ಲೂರ ಈಶ್ವರನ್‌ರವರು ಸರಿಯಾಗಿ ಗ್ರಹಿಸಿರುವಂತೆ, ''ನಾಯನ್ಮಾರರೂ ಆಳ್ವಾರರೂ ಆಗಾಗ ಸಾಂಪ್ರದಾಯಿಕ ಕಟ್ಟಳೆಗಳನ್ನು ಮುರಿದು ಭಕ್ತಿಧರ್ಮದ ಪ್ರಸಾರ ಕಾರ್ಯದಲ್ಲಿ ಸಮತಾಭಾವವನ್ನು ಮೆರೆದರೂ ಮಳಲ ತೀರದ ಮೇಲೆ ಭಕ್ತಿಯ ಅರಮನೆಯನ್ನು ಕಟ್ಟಲೆಂದು ಬಂದ ಅವರನ್ನು ಹತ್ತನೆಯ ಶತಮಾನದ ಆರಂಭದ ಹೊತ್ತಿಗೆ ಹೊಡೆದುಹಾಕಿ ವರ್ಣಾಶ್ರಮಿಗಳಾದ ಆಚಾರ್ಯರು ಅವರ ಸ್ಥಾನವನ್ನು ಆಕ್ರಮಿಸಿದುದನ್ನು ಇತಿಹಾಸ ಸೂಚಿಸುತ್ತದೆ.''[೧]

ಕರ್ನಾಟಕದಲ್ಲಿ ಬಸವಪೂರ್ವದಲ್ಲಿ ಕಾಳಾಮುಖ ಶೈವರು ಮಠ ಅಥವಾ ದೇವಾಲಯಗಳನ್ನು ಕೇಂದ್ರವಾಗಿಟ್ಟುಕೊಂಡು ವಿದ್ಯಾದಾನವನ್ನು ಮಾಡುವ ಮೂಲಕ ಸಾಮಾಜಿಕವಾಗಿ ಪ್ರತಿಷ್ಠಿತರಾಗಿದ್ದರು. ವೇದಾಗಮಗಳಲ್ಲಿ ನಿಷ್ಣಾತರಾದ ಇವರಿಗೆ ವರ್ಣಾಶ್ರಮ ವ್ಯವಸ್ಥೆಯ ಬಗೆಗೆ ಆದರಾಭಿಮಾನ. ತಮ್ಮ ಅಸದೃಶ ಪ್ರತಿಭೆ-ಪಾಂಡಿತ್ಯಗಳ ಮೂಲಕ ಜನೋಪಯೋಗಿ ಸಾಮಾಜಿಕ ಚಟುವಟಿಕೆಗಳ ಮೂಲಕ ಪ್ರಭುತ್ವದ ಗೌರವವನ್ನು ಕಾಳಾಮುಖ ಶೈವಗುರುಗಳು ಪಡೆದರಾದರೂ ಸಾಹಿತ್ಯ ರಚನೆಯ ಮೂಲಕ ಜನಮನವನ್ನು ಸಂಘಟಿಸುವ ಪ್ರಯತ್ನವನ್ನು ಇವರು ಮಾಡಲಿಲ್ಲ. ಜನಸಾಮಾನ್ಯರಿಗೆ, ಅದರಲ್ಲೂ ಶೂದ್ರರಿಗೆ, ಇವರ ಪಂಥದಲ್ಲಿ ಭಕ್ತಿಯ ಬಾಗಿಲು ತೆರೆಯಲೇ ಇಲ್ಲ. ಸಂನ್ಯಾಸಿಯಾಗುವವನು ಬ್ರಾಹ್ಮಣನಾಗಿರಬೇಕೆಂದೂ, ಶಿವನ ಬಳಿಗೆ ಹೋಗಲು ಶೂದ್ರರೂ ಮಹಿಳೆಯರೂ ಅನರ್ಹರೆಂದೂ ಹೇಳಿದ ಈ ಪಂಥ ವೈದಿಕ ಧರ್ಮಾವಲಂಬಿಯಾದದ್ದು, ತನ್ನ ಕಾರ್ಯಚಟುವಟಿಕೆಗಳಲ್ಲಿ ವೈದಿಕ ಆಚರಣೆಗಳನ್ನು ಅವಲಂಬಿಸಿದುದು ಗಮನಿಸಬೇಕಾದ ಸಂಗತಿ.

ಹದಿಮೂರನೆಯ ಶತಮಾನದಿಂದ ಹದಿನೇಳನೆಯ ಶತಮಾನದವರೆವಿಗೆ ಮಹಾರಾಷ್ಟ್ರದಲ್ಲಿ ನಡೆದ ಭಾಗವತ ಭಕ್ತಿ ಚಳುವಳಿಯನ್ನು ವಾರಕರಿ ಸಂಪ್ರದಾಯವೆಂದು ಕರೆಯುವರು. ಈ ಚಳುವಳಿಯಲ್ಲಿ ಎಲ್ಲ ಜಾತಿಯವರೂ ಪಾಲುಗೊಂಡಿದ್ದರೂ ಇಲ್ಲೂ ವರ್ಣಾಶ್ರಮಧರ್ಮ ಗೋಡೆ ಎಬ್ಬಿಸಿದೆ. ಇದರಲ್ಲಿ ಭಾಗವಹಿಸಿದ ಸಂತರು ವರ್ಣಾಶ್ರಮ ಧರ್ಮ ಹಾಗೂ ಜಾತಿಪದ್ಧತಿಯನ್ನು ಎತ್ತಿ ಹಿಡಿದಿದ್ದಾರೆ. ವಾರಕರಿಗಳ ಭಕ್ತಿ ಚಳುವಳಿಯ ಕೇಂದ್ರಬಿಂದು ಪಂಡರಪುರದ ವಿಠ್ಠಲನ ಕಾರುಣ್ಯವನ್ನು ಮನದುಂಬಿ ಅಭಂಗಗಳ ಮೂಲಕ ಹಾಡುವುದರಲ್ಲಿದೆ. ಅವರು ಮಹಾರಾಷ್ಟ್ರದ ಹಳ್ಳಿಹಳ್ಳಿಗಳಲ್ಲೂ ಪಂಡರಿನಾಥನ ಕರುಣೆ,

---

೧. ಪೂರ್ವೋಕ್ತ, ಪು.೧೫೫

ಔದಾರ್ಯ, ದಯೆ, ಪ್ರೀತಿಗಳನ್ನು ಪ್ರಸಾರ ಮಾಡಿದರು. ಬ್ರಾಹ್ಮಣನಾದ ಏಕನಾಥನಿಗೆ ಹರಿಜನರ ಬಗೆಗೆ ಗಾಢವಾದ ಪ್ರೀತಿ. ಮಹಾರ್ ಚೋಕಮೇಲಾ ಇವನ ಪರಮ ಸ್ನೇಹಿತ. ಆದರೂ, ಆ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಶೂದ್ರರ ಬಗೆಗಿದ್ದ ತಾತ್ಸಾರ, ಜಿಗುಪ್ಸೆ ಏಕನಾಥನ ಭಾರುಡಿಗಳಲ್ಲಿ ಕಾಣಬರುತ್ತದೆ. ಚೋಕಮೇಲಾನ ಅಭಂಗಗಳಲ್ಲಿ ಅಸ್ಪೃಶ್ಯನೊಬ್ಬನ ನೋವು, ಸಂಕಟಗಳು ಓದುಗನ ಮನ ಕಲಕುವಂತೆ ಬಂದಿವೆ. ಅವನು ತನ್ನ ಅಭಂಗಗಳಲ್ಲಿ ತನ್ನ ಕಾಲದ ಸಮಾಜದಲ್ಲಿದ್ದ ವೈಷಮ್ಯ, ಅಸಮಾನತೆಗಳನ್ನು ಪ್ರಶ್ನಿಸಿರುವನು, ಆಕ್ಷೇಪಿಸಿರುವನು. ಅವನ ಪ್ರತಿಭಟನೆ ಉಚ್ಚವರ್ಣೀಯರ ಶೋಷಣೆಯನ್ನು ಬಲವಾಗಿ ಖಂಡಿಸುವುದಾಗಿದೆ. ಅವನ ಮನದಾಳದ ನೋವು ಸಂಕಟ ಶಾಬ್ದಿಕವಾಗಿ ವ್ಯಕ್ತಗೊಂಡಿದೆಯಷ್ಟೆ. ವ್ಯವಸ್ಥೆಯ ನಡುವೆ ಅವನ ದನಿ ಅಡಗಿಹೋಗುತ್ತದೆ. ಮಹಾರನಾಗಿ ಹುಟ್ಟಿದ ತನಗೆ ಪಂಡರಿನಾಥನ ಸೇವೆ ಮಾಡುವ ಅವಕಾಶ ದೊರೆಯಿತಲ್ಲಾ ಎನ್ನುವ ತೃಪ್ತಿ ಎಲ್ಲ ನೋವನ್ನೂ ಮರೆಯಲು ಔಷಧವಾಗಿದೆ. ಈ ಭಕ್ತಿ ಸಂಪ್ರದಾಯಕ್ಕೆ ಸೇರಿದ ಸಂತರು ಪಂಡರಿನಾಥನ ಮೇಲಣ ಭಕ್ತಿಯ ಪರಮ ಆವೇಶದಲ್ಲಿ ತಮ್ಮ ಕೌಟುಂಬಿಕ ಜವಾಬ್ದಾರಿಗಳನ್ನು ಮರೆತು ತಮ್ಮನ್ನು ನಂಬಿದವರನ್ನು ಕಣ್ಣೀರಿನಲ್ಲಿ ಕೈತೊಳೆಯುವಂತೆ ಸಂಕಟಕ್ಕೀಡುಮಾಡಿದುದು ಬಹುದೊಡ್ಡ ದುರಂತ.*

ಶೈವದ ಪರಿಷ್ಕೃತ ರೂಪ ವೀರಶೈವ. ಇವೆರಡರ ನಡುವೆ ಅಂತರ ಬಹಳವಿದೆ. ಇದನ್ನು ಆದಯ್ಯ ತನ್ನ ವಚನವೊಂದರಲ್ಲಿ ಸ್ಪಷ್ಟವಾಗಿ ತಿಳಿಯಪಡಿಸಿರುವನು. ಅವನ ಪ್ರಕಾರ, ಶುದ್ಧಶೈವನದು ಸ್ಥಾವರಲಿಂಗಪೂಜೆ, ವೀರಶೈವನದು ಇಷ್ಟಲಿಂಗದಲ್ಲಿ ಅಭಿನ್ನಭಾವ ಅರ್ಚನೆ ಪೂಜನೆ. ಶೈವನಿಗೆ ಲಿಂಗದ ನೆನಹು ಸುಖವನ್ನು ಕೊಡುವುದಾದರೆ ವೀರಶೈವನಿಗೆ ಲಿಂಗದ ಸಂಗ ಆನಂದವನ್ನು ನೀಡುತ್ತದೆ. ಅದು ಹೇಗೆಂದರೆ, ಸತಿಗೆ ತನ್ನನ್ನು ಅತಿಶಯವಾಗಿ ಪ್ರೀತಿಸುವ ಪತಿಯ ಒಲುಮೆಯ ನೆನಹಿಗಿಂತ ಸಂಗಸುಖವು ಹೆಚ್ಚಿನ ಆನಂದವನ್ನುಂಟುಮಾಡುತ್ತದೆ. ಶುದ್ಧಶೈವನ ಲಿಂಗದಲ್ಲಿನ ನೆನಹು ನಿಷ್ಪತ್ತಿಯಾದರೆ ಸಾರೂಪ್ಯನಾಗುವನು. ವೀರಶೈವನ ಲಿಂಗದಲ್ಲಿ ಸಂಗ ನಿಷ್ಪತ್ತಿಯಾದರೆ ಸಾಯುಜ್ಯನಾಗುವನು. ಶೈವನು 'ಕೀಟ ಭ್ರಮರ ನ್ಯಾಯದಂತೆ' ಶಿವಧ್ಯಾನದಿಂದ ಶಿವನ ಸಾರೂಪ್ಯ ಪದವನ್ನು ಹೊಂದಿದರೆ ವೀರಶೈವನು ಪ್ರಾಣಲಿಂಗ ಸಂಬಂಧದಿಂದ'ಅಗ್ನಿಯ ಸಂಗವ ಮಾಡಿದ ಕರ್ಪೂರ' ನಾಸ್ತಿಯಾದ ಹಾಗೆ ಶಿವನಲ್ಲಿ ಸಾಯುಜ್ಯ ಪದವನ್ನು ಹೊಂದಿ ರೂಪು ನಾಸ್ತಿಯಾಗಿ ಶಿವನೇ ಆಗುವನು.

ಬಸವಾದಿ ಶಿವಶರಣರು ಬದುಕಿನ ರೀತಿಯನ್ನು ಗಮನಿಸಿದಾಗ 'ಭಕ್ತಿ' ಎನ್ನುವುದು ಪರಮಾತ್ಮನನ್ನು ಕೂಡಲು, ಅವನ ಕರುಣೆಯನ್ನು ಪಡೆಯಲು ಒಂದು ಸಾಧನ (Media)

---

* ಹೆಚ್ಚಿನ ವಿವರಗಳಿಗೆ ಡಾ|| ಹಿರೇಮಲ್ಲೂರು ಈಶ್ವರನ್‌ರವರ ಪೂರ್ವೋಕ್ತ ಕೃತಿಯ ಪು.೧೫೬-೧೬೨ ನೋಡಿರಿ.

ಮಾತ್ರವಾಗಿರುವಂತೆ ತೋರುವುದಿಲ್ಲ. ಅದು ಅವರ ಪಾಲಿಗೆ ಜೀವ ವಿಕಾಸ (evolution of life) ಜೀವನ ವಿಧಾನ (way of life) ಆಗಿರುವಂತೆ ತೋರುತ್ತದೆ. 'ಭಕ್ತಿಯ ಮಾಡಿ. ಜನನ ಮರಣ ವಿರಹಿತನಾಗದಿದ್ದಡೆ ಆ ಭಕ್ತಿಯೇ ಕೇಡು' ಎಂದು ಚೆನ್ನಬಸವಣ್ಣ ಹೇಳುವನು. ಈ ಹುಟ್ಟು ಸಾವುಗಳ ಚಕ್ರಭ್ರಮಣದಿಂದ ಮುಕ್ತನಾಗಲು ಸಾಧಕನಿಗೆ ಅವನ ಸಾಧಕಾವಸ್ಥೆಯಲ್ಲಿ ನೆರವಾಗುವಂತಹದು ಇಷ್ಟಲಿಂಗ. ಇದನ್ನೇ ಬಸವಣ್ಣ 'ಲಿಂಗವಿಡಿದು ಲಿಂಗಸಿದ್ಧಿ' ಎನ್ನುವ ಸೂತ್ರಪ್ರಾಯವಾದ ಮಾತಿನಲ್ಲಿ ಹೇಳಿರುವನು. ತನುವ್ಯಸನಿ, ಮನವ್ಯಸನಿ, ಧನವ್ಯಸನಿಯಾಗದೆ '**ಲಿಂಗವ್ಯಸನಿ**'ಯಾಗಬೇಕೆಂದು ಬಸವಣ್ಣ ಹೇಳುವನು. ಇಷ್ಟಲಿಂಗದ ಅನುಸಂಧಾನದ ಮೂಲಕ ಸಾಧಕನು ಭಕ್ತ ಸ್ಥಿತಿಯಿಂದ ಐಕ್ಯಸ್ಥಿತಿಯನ್ನು ಸಾಧಿಸಬಹುದು. ಈ ಸಾಧನಾವಸ್ಥೆಯನ್ನು ವೀರಶೈವ ಪರಿಭಾಷೆಯಲ್ಲಿ ಷಟ್‌ಸ್ಥಲವೆನ್ನುವರು. ಷಟ್‌ಸ್ಥಲದ ಸಾಧನೆಗೆ ಭಕ್ತಿಯು ನೆರವಾಗುವುದೆಂದು ಭಾವಿಸಿರುವ ವೀರಶೈವರು ಅವೆರಡಕ್ಕೂ ಇರುವ ನಿಕಟವಾದ ಸಂಬಂಧವನ್ನು ಗುರುತಿಸಿರುವರು. ಅವರ ಪ್ರಕಾರ, ಭಕ್ತಸ್ಥಲದಲ್ಲಿ ಶ್ರದ್ಧಾಭಕ್ತಿ, ಮಹೇಶಸ್ಥಲದಲ್ಲಿ ನಿಷ್ಠಾಭಕ್ತಿ, ಪ್ರಸಾದಿಸ್ಥಲದಲ್ಲಿ ಅವಧಾನಭಕ್ತಿ, ಪ್ರಾಣಲಿಂಗಿಸ್ಥಲದಲ್ಲಿ ಅನುಭಾವಭಕ್ತಿ, ಶರಣಸ್ಥಲದಲ್ಲಿ ಆನಂದಭಕ್ತಿ, ಐಕ್ಯಸ್ಥಲದಲ್ಲಿ ಸಮರಸಭಕ್ತಿ ಅಳವಡುವುದು.

ಲಿಂಗಾಂಗ ಸಾಮರಸ್ಯ ಅಥವಾ ಷಟ್‌ಸ್ಥಲ ಜ್ಞಾನವನ್ನು ವೀರಶೈವ ಪರಿಭಾಷೆಯಲ್ಲಿ 'ಅನುಭಾವ' ಎಂದು ಕರೆಯಲಾಗಿದೆ. ಈ ಅನುಭಾವದ ಪರಿಕಲ್ಪನೆಯನ್ನು ನಾವು ಮೊದಲಿಗೆ ಕಾಣುವುದು ಜೇಡರ ದಾಸಿಮಯ್ಯನಲ್ಲಿ. ಅವನ ಎರಡು ವಚನಗಳಲ್ಲಿ 'ಅನುಭಾವ' ಪದದ ಉಲ್ಲೇಖ ಕಂಡುಬರುತ್ತದೆ. (ವ.೮೬, ೧೩೧) ಅನುಭಾವಕ್ಕೂ ಭಕ್ತಿಗೂ ಇರುವ ಅವಿನಾಭಾವ ಸಂಬಂಧವನ್ನು ಬಹಳ ಅರ್ಥಪೂರ್ಣವಾಗಿ ಅವನು ಅಲ್ಲಿ ಹೇಳುವನು:

> ಅನುಭಾವವಿಲ್ಲದ ಭಕ್ತಿ ತಲೆಕೆಳಗಾದುದಯ್ಯ
> ಅನುಭಾವ ಭಕ್ತಿಗಾಧಾರ
> ಅನುಭಾವ ಭಕ್ತಿಗೆ ನೆಲೆವನೆ
> ಅನುಭಾವವುಳ್ಳವರ ಕಂಡು
> ತುರ್ಯ ಸಂಭಾಷಣೆಯ ಬೆಸಗೊಳದಿದ್ದರೆ
> ನರಕದಲ್ಲಿಕ್ಕಯ್ಯ ರಾಮನಾಥ
>
> (ವ. ೧೩೧)*

---

* ಈ ವಚನ ಸಂಖ್ಯೆ ಎಚ್. ದೇವೀರಪ್ಪ, ಆರ್. ರಾಚಪ್ಪ ಸಂಪಾದಿಸಿರುವ 'ಜೇಡರ ದಾಸಿಮಯ್ಯನ ವಚನಗಳು' ಕೃತಿಯದ್ದು.

ಅಭಿವಂದನಾ

ಅನುಭಾವವಿಲ್ಲದೆ ಈ ತನು ಎಳತಟವಾದುದಯ್ಯ
ಅನುಭಾವವೀತನುವಿಂಗಾಧಾರ
ಅನುಭಾವದ ಅನುಭಾವವನು ಮನವಾರೆ ವೇದಿಸಿದವರಿಗೆ
ಜನನವಿಲ್ಲ ಕಾಣಾ ರಾಮನಾಥ

(ವ. ೮೬)

ಶಿವಜ್ಞಾನ ಅಥವಾ ಷಟ್‌ಸ್ಥಲದ ತಿಳಿವಳಿಕೆ ಭಕ್ತನಿಗೆ ಅವಶ್ಯಕ. ಇದನ್ನೇ 'ಅನುಭಾವ'ವೆಂದು ಕರೆದಿರುವ ಶಿವಶರಣರು ಭಕ್ತನಾದವನಿಗೆ ಭಕ್ತಿಯ ಅನುಸಂಧಾನದಲ್ಲಿ ಅನುಭಾವಜ್ಞಾನದ ಅವಶ್ಯಕತೆಯನ್ನು ಒತ್ತಿ ಹೇಳಿರುವರು. ೧೩೧ನೆಯ ವಚನದ ಮೊದಲ ಮೂರು ಸಾಲು ಇದನ್ನೇ ಪ್ರತಿಪಾದಿಸುತ್ತದೆ. ಶಿವಜ್ಞಾನ ಅಥವಾ ಷಟ್‌ಸ್ಥಲದ ತಿಳಿವಳಿಕೆಯುಳ್ಳವರನ್ನು 'ಅನುಭಾವರು', 'ಅನುಭಾವವುಳ್ಳವರು' (=ಅನುಭಾವಿಗಳು) ಎಂದು ಕರೆದಿರುವುದೂ ಇಲ್ಲಿ ಗಮನಿಸಬೇಕಾದ ಸಂಗತಿ. ಚಂಚಲವಾದ ಮನಸ್ಥಿತಿಯನ್ನು ಹದ್ದುಬಸ್ತಿಗೆ ತರಲು ನೆರವಾಗುವುದು ಅನುಭಾವ. ಆ ಕಾರಣದಿಂದಲೇ 'ಅನುಭಾವವೀತನುವಿಂಗಾಧಾರ' ಎಂದು ವ.೮೬ರಲ್ಲಿ ಕರೆದಿರುವುದು. ಭಕ್ತನ ಸ್ಥಿತಿಯಲ್ಲಿ ಚಾಂಚಲ್ಯ ಕ್ರಮಕ್ರಮವಾಗಿ ಷಟ್‌ಸ್ಥಲದ ಅನುಸಂಧಾನದಲ್ಲಿ ಇಲ್ಲವಾಗುತ್ತಾ ಸಾಗುವುದು. ಮನದ ಕಾಳಿಕೆಯನ್ನು ಪರಿಹರಿಸಲು ಅನುಭಾವ ಸಾಧಕನಿಗೆ ಸಾಧಕಾವಸ್ಥೆಯಲ್ಲಿ ನೆರವಾಗುವುದು. ಅನುಭಾವಿಗಳ ಜೊತೆ ಒಡನಾಡುವುದು, ಸಂಭಾಷಿಸುವುದು, ಚರ್ಚಿಸುವುದು- ಇವುಗಳ ಮೂಲಕ ಸಾಧಕನು ಶಿವಜ್ಞಾನದ ಅರಿವನ್ನು ಇನ್ನಷ್ಟು ಚೆನ್ನಾಗಿ ಹೊಂದಬಹುದು. ೮೬ ಹಾಗೂ ೧೩೬ನೇ ವಚನ ಇದನ್ನೇ ಹೇಳುತ್ತಿರುವುದು.*

ಅನುಭಾವಕ್ಕೂ ಭಕ್ತಿಗೂ ಇರುವ ಅವಿನಾಭಾವ ಸಂಬಂಧವನ್ನು ಇನ್ನಷ್ಟು ಸೊಗಸಾಗಿ ಹೇಳಿದವನು ಚನ್ನಬಸವಣ್ಣ. ಶಿವಜ್ಞಾನವನ್ನು ಅಥವಾ ಲಿಂಗಾಂಗ ಸಾಮರಸ್ಯವನ್ನು ಅಥವಾ ಷಟ್‌ಸ್ಥಲ ಜ್ಞಾನವನ್ನು 'ಲಿಂಗಾನುಭಾವ' ಎಂದು ಅವನು ಕರೆದಿರುವನು. ಷಟ್‌ಸ್ಥಲ ಅಥವಾ ಲಿಂಗಾನುಸಂಧಾನದ ಬಗೆಗಿನ ಚರ್ಚೆಯನ್ನು 'ಅನುಭಾವ' ಎಂಬ ಅರ್ಥದಲ್ಲಿಯೂ ಚನ್ನಬಸವಣ್ಣ ಕರೆದಿರುವನು. 'ಅನುಭಾವವ ಮಾಡುವಲ್ಲಿ ವಿನಯದಿಂದ ಕೇಳದಿರ್ದಡೆ ಕೂಡಲ ಚನ್ನಸಂಗಮದೇವ ಅಘೋರನರಕದಲ್ಲಿಕ್ಕುವ' ಎಂದು ಅವನು ಹೇಳಿರುವುದನ್ನು ಗಮನಿಸಬೇಕು. 'ಭಕ್ತಿಗೆ ಅನುಭಾವವೇ ಬೀಜ' 'ಭಕ್ತಿಗೆ ಅನುಭಾವವೇ ಆಚಾರ' 'ಅನುಭಾವವಿಲ್ಲದವನ ಭಕ್ತಿ ಎಳೆತಟ(=ಚಂಚಲ)ಗೊಳಿಸಿತ್ತು' ಎನ್ನುವ ಅಭಿಪ್ರಾಯಗಳು ಸೂತ್ರಪ್ರಾಯವಾಗಿವೆ. ಇಲ್ಲೆಲ್ಲಾ 'ಭಕ್ತಿ' ಎನ್ನುವುದು ಶಿವಜ್ಞಾನವನ್ನು ಹೊಂದಲು ಒಂದು ಸಾಧನ (tool) ಎಂಬ ಅರ್ಥದಲ್ಲಿಯೇ ಬಳಕೆಯಾಗಿದೆ. ಅನುಭಾವವೆಂಬುದು ರಚ್ಚೆಯ ಮಾತಲ್ಲ, ಸಂತೆಯ ಸುದ್ದಿಯಲ್ಲ, ಬೀದಿಯ ಪಸರವಲ್ಲ ಅದೊಂದು ಮಹಾಘನ! ಎನ್ನುವ ಚನ್ನಬಸವಣ್ಣ ಅದು 'ನೆಲದ ಮರೆಯ ನಿಧಾನ

ಕಾಣೆ ಭೋ! ಶಿಶು ಕಂಡ ಕನಸು ಕಾಣೆ ಭೋ!' ಎಂದು ಹೇಳುವನು. ಅನುಭಾವವು ಎಲ್ಲರಿಗೂ ಸಾಧ್ಯವಲ್ಲ, ಅದು ಗುಪ್ತನಿಧಿ. ಶಿವಜ್ಞಾನವೆನ್ನುವ ಅಂಜನವನ್ನು ಕಣ್ಣಿಗೆ ಹಚ್ಚಿಕೊಂಡವರಿಗೆ ಮಾತ್ರ ಆ ಗುಪ್ತನಿಧಿ ಕರಗತವಾಗುವುದು, ಎಲ್ಲರಿಗೂ ಅಲ್ಲ. ಅನುಭಾವವು ಅವ್ಯಕ್ತ, ಅನುಭವಗಮ್ಯ; ಮಾತಿನಲ್ಲಿ ವಿವರಿಸುವಂತಹದ್ದಲ್ಲ. ಚನ್ನಬಸವಣ್ಣ ಈ ಕಾರಣಕ್ಕಾಗಿಯೇ ಅದನ್ನು 'ಶಿಶು ಕಂಡ ಕನಸು' ಎಂದು ಕರೆದದ್ದು.

ಬಸವಾದಿ ಶಿವಶರಣರು ನಿರಾಕಾರಿ ಶಿವನ ಆರಾಧಕರು. ಅವನು ಅಣುರೇಣು ತೃಣಕಾಷ್ಠಗಳ ನಡುವೆ ಗುಣಭರಿತನಾಗಿ ಕಾಣುವನು. ದೇವನೊಬ್ಬ, ಆದರೆ ಆತ ಲೋಕದ ಎಲ್ಲ ಜೀವಿಗಳ ಹೃದಯದಲ್ಲೂ ನೆಲೆಸಿರುವನು. ಮಣಿಗಳು ಹಲವಾದರೂ ಅವುಗಳನ್ನು ಬಂಧಿಸಿರುವ ಸೂತ್ರ (=ದಾರ) ಒಂದೇ. ಹಾಗೆ ಪರಮಾತ್ಮನಿರುವನು ಎಂದು ಜೇಡರದಾಸಿಮಯ್ಯ ಹೇಳುವನು. ಅವನ ಅಭಿಮತದಂತೆ ಪರಮಾತ್ಮ ಕಂಡೂ ಕಾಣದಂತಿರುವನು. ಅವನ ಆ ಲೀಲೆಯನ್ನು ಕಂಡು ಜೇಡರ ದಾಸಿಮಯ್ಯ ತನ್ನ ವಚನವೊಂದರಲ್ಲಿ ಆಶ್ಚರ್ಯವನ್ನು ವ್ಯಕ್ತಪಡಿಸಿರುವನು:

ಮರದೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮನ ನರರು ಕಾಣದಂತಿರಿಸಿದೆ
ನೀ ಬೆರಸುವ ಭೇದಕ್ಕೆ ಬೆರಗಾದೆನಯ್ಯ ರಾಮನಾಥ!

ಪರಮಾತ್ಮ ಅವ್ಯಕ್ತನಾಗಿದ್ದರೂ ಅವನನ್ನು ಕಾಣಲು ಸಾಧ್ಯ. ಭಕ್ತನಾದವನು ತನ್ನ ಅಂತರಂಗದ ಕಾಳಿಕೆಯನ್ನು ಕ್ರಮಕ್ರಮವಾಗಿ ಸಾಧನೆಯ ಮೂಲಕ ಕಡಮೆಮಾಡಿಕೊಳ್ಳುತ್ತಾ ಶುದ್ಧನಾಗುತ್ತ ಬಂದಂತೆ ಆ ಪರಮಾತ್ಮನನ್ನು ಕಾಣಬಹುದು.

ಭಕ್ತಿಗೆ ಶಿವನ ಬಗೆಗಿನ ನಿಷ್ಠೆ ಮೂಲವಾದುದು. ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲಿದ್ದಡೇನು ಅದು ಪಟ್ಟಣವೆನಿಸುವುದು. ಈ ನಿಷ್ಠೆಯನ್ನು ಶಿವ ಬಗೆಬಗೆಯಾಗಿ ಪರೀಕ್ಷಿಸುವನಂತೆ. ಬಸವಣ್ಣ ಹೇಳುವಂತೆ ಭಕ್ತಿಯು ಅಂತರಂಗದ ಪರೀಕ್ಷೆ:

ನಚ್ಚಿದನೆಂದಡೆ ಮಚ್ಚಿದನೆಂದಡೆ
ಸಲೆ ಮಾರುವೋದನೆಂದಡೆ
ತನುವನಲ್ಲಾಡಿಸಿ ನೋಡುವೆ ನೀನು
ಮನವನಲ್ಲಾಡಿಸಿ ನೋಡುವೆ ನೀನು
ಧನವನಲ್ಲಾಡಿಸಿ ನೋಡುವೆ ನೀನು
ಇವೆಲ್ಲಕ್ಕೆ ಅಂಜದಿದ್ದಡೆ ಭಕ್ತ ಕಂಪಿತ
ನಮ್ಮ ಕೂಡಲಸಂಗಮದೇವ

ಜೇಡರ ದಾಸಿಮಯ್ಯ ಇದನ್ನೇ ತನ್ನ ವಚನದಲ್ಲಿ ಪ್ರಸ್ತಾಪಿಸಿರುವನು:

ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರೆದು ನೋಡುವ ಮಿಸುನಿಯ ಚಿನ್ನದಂತೆ
ಅರೆದು ನೋಡುವ ಚಂದನದಂತೆ
ಅರೆದು ನೋಡುವ ಕಬ್ಬಿನ ಕೋಲಿನಂತೆ
ಬೆದರದೆ ಬೆಚ್ಚದೆ ಇರ್ದಡೆ
ಕರವಿಡಿದೆತ್ತಿಕೊಂಬ ನಮ್ಮ ರಾಮನಾಥನು

ಅನುಸರಣೇಯ ಭಕ್ತಿಯ ಕ್ರಮವನ್ನು ಜೇಡರ ದಾಸಿಮಯ್ಯ ಹೀಗೆ ನಿರೂಪಿಸುವನು:

ಭಕ್ತನ ಮಠವೆಂದು ಭಕ್ತ ಹೋದರೆ ಆ ಭಕ್ತ
ಭಕ್ತಂಗೆ ಅಡಿಯಿಟ್ಟು ಇದಿರೆದ್ದು ನಡೆದು ಹೊಡಗೆಡೆದು
ಒಡಗೊಂಡು ಬಂದು ವಿಭೂತಿ ವೀಳ್ಯವನಿಕ್ಕಿ
ಪಾದಾರ್ಚನೆಯಂ ಮಾಡಿ

ಸಮಯವನರಿತು ಲಿಂಗಾರ್ಚನೆಯಂ ಮಾಡಿಸಿ
ಒಕ್ಕುದುಕೊಂಡು ಓಲಾಡುತ್ತಿಪ್ಪುದೇ ಭಕ್ತಿ
ಹೀಂಗಲ್ಲದೆ ಬೆಬ್ಬನೆ ಬೆಱತು ಬಿಬ್ಬನೆ ಬೀಗಿ
ಅಹಂಕಾರಭರಿತನಾಗಿಪ್ಪವನ ಮನೆಯ
ಲಿಂಗಜನುಮತರು ಹೊಗರು ಕಾಣಾರಾಮನಾಥ

ಭಕ್ತಿಯೆನ್ನುವುದು ಜೇಡರ ದಾಸಿಮಯ್ಯನಿಗೆ ಸತ್ಯ ಸದಾಚಾರ. 'ಭಕ್ತಿಯಬಲ್ಲವರಿಗೆ ಸತ್ಯ ಸದಾಚಾರವ ಹೇಳಿದಡೆ ನಂಬುವರು, ನಚ್ಚುವರು, ಮೆಚ್ಚುವರು. ಭಕ್ತಿಯ ಹೊಲಬ (ಮಾರ್ಗ, ದಾರಿ) ನರಿಯದ ವ್ಯರ್ಥರಿಗೆ (=ಅಪ್ರಯೋಜಕರಿಗೆ) ಸತ್ಯ ಸದಾಚಾರವ ಹೇಳಿದಡೆ ಕಚ್ಚುವರು, ಬೊಗಳುವರು' ಎಂದು ದಾಸಿಮಯ್ಯ ಹೇಳುವನು. ಕತ್ತೆಗೆ ಕಸ್ತೂರಿಯ ವಾಸನೆ ತಿಳಿಯದು, ತೊತ್ತಿಗೆ ಗುರುಹಿರಿಯರು ಉತ್ತಮರೆಂಬುದನ್ನು ತಿಳಿಯಲು ಬಾರದು. ಭಕ್ತಿಯ ಅಂತರಾರ್ಥವನ್ನು ತಿಳಿಯದ ವ್ಯರ್ಥಜೀವಿಗಳು (ನಿಷ್ಪ್ರಯೋಜಕರು) ನಿನ್ನ ಭಕ್ತರುಗಳ ಘನಮಹಿಮೆಯನ್ನು ಎಲ್ಲಿ ತಿಳಿದಿರುವರು? ಎಂದು ತನ್ನಲ್ಲಿಯೇ ಕಾಣುವನು. ತನ್ನಲ್ಲಿ ಅವ್ಯಕ್ತನಾಗಿರುವ ಪರಮಾತ್ಮನನ್ನು ಕಾಣಿಸಿಕೊಡಲು ನೆರವಾಗುವವನು ಗುರು. ಗುರು ಶಿಷ್ಯನನ್ನು ಕರೆದು ಹಸ್ತಮಸ್ತಕ ಸಂಯೋಗ ಮಾಡಿ ಚಿತ್ಕಳೆಯನ್ನು ಭಾವಕ್ಕೆ ತಂದು ಹಸ್ತದಲ್ಲಿನ ಇಷ್ಟಲಿಂಗದಲ್ಲಿ ಅದನ್ನು ನೆಲೆಗೊಳಿಸುವನು. ಶಿಷ್ಯನ ಮಲತ್ರಯಗಳನ್ನು ಭೇದಿಸಿ ಪ್ರಣವಯುಕ್ತವಾದ ಪಂಚಾಕ್ಷರೀ ಮಂತ್ರೋಪದೇಶ ಮಾಡುವನು. ಹೀಗೆ ಗುರು ತೋರಿದ ಮಾರ್ಗದಲ್ಲಿ ಶಿವಜ್ಞಾನವನ್ನು ಹೊಂದುವ

ಕಾರ್ಯದಲ್ಲಿ ಶಿಷ್ಯ ನಿರತನಾಗುವನು. ಇದು ಸಾಧನಾಪಥ. ಜ್ಞಾನಿಗಳ ಸಂಗದಲ್ಲಿ, ಅವರ ಜೊತೆಗಿನ ಮಾತುಕತೆಯಲ್ಲಿ ತನ್ನಲ್ಲಿನ ಕೊರತೆಗಳನ್ನು ನೀಗಿಕೊಳ್ಳುತ್ತಾ ಆಚಾರಶುದ್ಧನಾಗಿ, ಸತ್ಯದ ನಡಾವಳಿಯಲ್ಲಿ ಪಕ್ವವಾಗುತ್ತಾ ಸಾಗಿದಂತೆ ಪರಮಾತ್ಮನ ಸಾಕ್ಷಾತ್ಕಾರವಾಗುವುದು. ಇದನ್ನೇ ಜೇಡರ ದಾಸಿಮಯ್ಯ ಹೀಗೆ ಹೇಳುವನು:

ಸಣ್ಣ ನನೆಯೊಳಗಣ ಪರಿಮಳವ
ಹೊಸಸೂಸಿ ಇದಿರಿಂಗೆ ಅರುಹಿಸಬಲ್ಲುದೆ ವಾಯು?
ಕೂಡಿಗೂಸಿನೊಳಗಣ ಮೊಲೆಮುಡಿಯ
ಹಡೆದ ತಾಯಿ ತಂದೆಗಳೆಂದರೆ ಕಾಣಿಸಿಕೊಡಬಲ್ಲರೆ?
ಕಾಬವರ ಕಣ್ಣಿಗೆ
ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು ಕಾಣಾ ರಾಮನಾಥ.

ದೇವರನ್ನು ಕಾಣಲು ಭಕ್ತಿ ಒಂದು ಸಾಧನ; ಹಾಗೆಯೇ ದೇವರನ್ನು ಒಲಿಸಿಕೊಳ್ಳಲೂ ಅದೊಂದು ಬಹು ಸುಲಭವಾದ ಮಾರ್ಗ. ಬಸವಣ್ಣ ಹಾಗೂ ಪ್ರಭುದೇವರು ಹೇಳುವಂತೆ ದೇವರು 'ಭಕ್ತಿಪ್ರಿಯ'. ಬಸವಣ್ಣ ನಂಬಿರುವಂತೆ ದೇವರು 'ಭಕ್ತಿಕಂಪಿತ.' ಭಕ್ತಿ ಎನ್ನುವುದು ನಮ್ಮ ಮನಸ್ಸಿನ ನಂಬಿಕೆ. ಬಸವಣ್ಣ ಹೇಳುವಂತೆ 'ನಂಬಿ ಕರೆದಡೆ ಓ ಎನ್ನನೆ ಶಿವನು.' ಹಿಂದಿನ ಶರಣರು ಪರಮಾತ್ಮನನ್ನು ಏಕವಾಗಿ ನಂಬಿದರು, ಕಷ್ಟದಲ್ಲಿ ಪರಮಾತ್ಮನನ್ನು ಸಹಾಯಕ್ಕಾಗಿ ಕರೆದರು. ಜೇಡರ ದಾಸಿಮಯ್ಯ ಆ ಶರಣರ ಉದಾಹರಣೆಗಳನ್ನು ಕೊಡುವನು. ಮಾಣಿಕ್ಯವಾಸಗರ್ ಎನ್ನುವ ಶಿವಭಕ್ತ ೧೦ನೇ ಶತಮಾನದಲ್ಲಿ ಮಧುರೆಯಲ್ಲಿ ಮಂತ್ರಿಯಾಗಿದ್ದ. ಆತ ಅನಿರೀಕ್ಷಿತವಾಗಿ ಎರಗಿದ ಶತ್ರು ರಾಜರನ್ನು ಹಿಮ್ಮೆಟ್ಟಿಸಲು ಶಿವನ ನೆರವನ್ನು ಪ್ರಾರ್ಥಿಸಿದ. ಶಿವ ಕರುಣಿಸಿ ಮಾಣಿಕ್ಯವಾಸಗರ್ ತಂದ ನರಿಗಳನ್ನು ಕುದುರೆಗಳನ್ನಾಗಿ ಮಾಡಿದ! ೧೧ನೇ ಶತಮಾದಲ್ಲಿದ್ದ ಶಿವನ ನೆಚ್ಚಿನ ಭಕ್ತನಾದ ಕೊಂಡಗುಳಿ ಕೇಶಿರಾಜನ ಇಷ್ಟಲಿಂಗ ನದಿಯೊಳಗೆ ಬಿದ್ದಾಗ ಪರಮಾತ್ಮನನ್ನು ಇಷ್ಟಲಿಂಗವನ್ನು ಮರಳಿ ದೊರಕಿಸಿಕೊಡುವಂತೆ ಅವನು ಪ್ರಾರ್ಥಿಸಿದನು. ನಂಬಿ ಕರೆದಾಗ ಇಷ್ಟಲಿಂಗವು ಅವನ ಕರಸ್ಥಲಕ್ಕೆ ಮತ್ತೆ ಬಂದಿತು! ನಂಬಿದ ತನ್ನ ಭಕ್ತ ಮಾದಾರ ಚನ್ನಯ್ಯನು ಉಣಬಡಿಸಿದ ಅಂಬಲಿಯನ್ನು ಶಿವ ಉಂಡನು! ತನ್ನ ಭಕ್ತ ಕೆಂಬಾವಿ ಭೋಗಣ್ಣ ಊರು ಬಿಟ್ಟು ಹೊರಟಾಗ ಅವನ ಹಿಂದೆ ಶಿವನೂ ಹೊರಟ! ಕುಂಬಾರ ಗುಂಡಯ್ಯನು ಮಡಿಕೆಯನ್ನು ನುಡಿಸಿದಾಗ ನಾದಕ್ಕೆ ತಕ್ಕಂತೆ ಶಿವ ನರ್ತನ ಮಾಡಿದ!— ಈ ಎಲ್ಲ ಘಟನೆಗಳನ್ನು ಹೇಳಿದ ಜೇಡರ ದಾಸಿಮಯ್ಯ 'ನಂಬದೆ ಕರೆದವರ ಹಂಬಲನೊಲ್ಲನೆಮ್ಮ ರಾಮನಾಥ' ಎನ್ನುವನು. ದಾಸಿಮಯ್ಯ ಕೇಳುವನು. ವೇಷಧಾರಿ ಹಾಗೂ ವೇಶ್ಯೆಯರನ್ನು ಸಮಾನರೆಂದು ದಾಸಿಮಯ್ಯ ಕರೆಯುವನು. ಇಬ್ಬರ ಮನಸ್ಸೂ ತಮಗೆ ಬರುವ ಲೌಕಿಕ ಲಾಭದ ಕಡೆಗೇ. ಆದ ಕಾರಣ ಬಜುಸಟೆಗನ (ಹುಸಿಕನ, ವಂಚಕನ, ವೇಷಧಾರಿಯ) ಭಕ್ತಿಯನ್ನು ನಿಜವೆಂದು ನಚ್ಚಬೇಡ. ಅದು ಹುಸಿ.

ಚಂಚಲ. ಮಠದಲ್ಲಿ ಸಂತೃಪ್ತಿಯ ಪರಿಸರದಲ್ಲಿ ಪುಷ್ಟವಾಗಿ ಬೆಳೆದ ಬೆಕ್ಕು ಇಲಿಯನ್ನು ಕಂಡಾಗ ತನ್ನ ಮುನ್ನಿನ ಸ್ವಭಾವವನ್ನು ದಾಸಿಮಯ್ಯ ಹೋಲಿಕೆಗಾಗಿ ಕೊಡುವನು. ಜ್ವರಬಡಿದ ಬಾಯಿಗೆ ನೊರೆ ಹಾಲು ಹೇಗೆ ಹಿಡಿಸುವುದಿಲ್ಲವೊ ಹಾಗೆ ನರಕದಲ್ಲಿ ಬೀಳುವ ಮನುಜರಿಗೆ (ಪಾಪಿಷ್ಠರಿಗೆ) ಶಿವಭಕ್ತಿಯೆಂಬುದು ಕರಗಹಿಯೆಂದೂ ದಾಸಿಮಯ್ಯ ಹೇಳುವನು.

ಭಕ್ತಿಯಲ್ಲಿ ಅಹಂಕಾರ ನಿರಸನಗೊಳ್ಳಬೇಕು. ಹಾಗೆ ಮಾಡದೆ ಹಣವಿದೆಯೆಂದು ಅಹಂಕರಿಸಿ ಮಾಡುವವನ ಭಕ್ತಿ ತೊತ್ತಿನ ಕೂಟ (ಸಂಬಂಧ), ತೊರೆಯನ (ಅಂಬಿಗನ) ಮೇಳದಂತೆ ಎಂದು ದಾಸಿಮಯ್ಯ ಅಭಿಪ್ರಾಯಪಡುವನು. ಊರಿಗೆಲ್ಲ ಊಟ ಹಾಕಿಸಿ ತನ್ನ ಭಕ್ತಿಯನ್ನು ಪ್ರದರ್ಶಿಸುವವನ ಆಡಂಬರದ ಭಕ್ತಿ ವ್ಯರ್ಥ; ದೂರದ ಹೊಲದ ಗೆಯ್ಮೆಯ ಪ್ರತಿಫಲದಂತೆ ಎಂದು ದಾಸಿಮಯ್ಯ ಅದನ್ನು ಅರ್ಥಪೂರ್ಣವಾಗಿ ಹೇಳಿರುವನು. ಅಳಿಮನದವನ (ದುರಾಶೆಯ) ಭಕ್ತಿ ವ್ಯರ್ಥವೆಂಬುದನ್ನು ಹರಿದ ಗೋಣಿಯ ಚೀಲದಲ್ಲಿ ಬತ್ತವನ್ನು ತುಂಬಿಕೊಂಡು ಸುಂಕದವನ ಕಣ್ಣಿಂದ ತಪ್ಪಿಸಿಕೊಳ್ಳಲು ರಾತ್ರಿ ಕದ್ದು ನಡೆದವನ ಪ್ರತಿಮೆಯ ಮೂಲಕ ದಾಸಿಮಯ್ಯ ತಿಳಿಯಪಡಿಸುವನು.

ದಾಸಿಮಯ್ಯ ಶಿವನಲ್ಲಿ ಪ್ರೀತಿ, ಶಿವನ ಪೂಜೆಯಲ್ಲಿ ಲವಲವಿಕೆ, ಶಿವನಲ್ಲಿ ಅಚಲವಾದ ನಂಬಿಕೆ- ಇವನ್ನು ಒತ್ತಿ ಹೇಳುವನು. ಇವು ಇಲ್ಲದವನ ಬಾಳುವೆ 'ಹೊಲೆಯರ ನಾಯಿ' 'ಹುಲ್ಲು ಹಗ್ಗ'- ಇವುಗಳಿಗಿಂತ ನಿಕೃಷ್ಟವೆನ್ನುವನು.

ಭಕ್ತಿಯ ಅನುಸರಣೆಯಲ್ಲಿ ಮನೆ ಮುಖ್ಯಸ್ಥಾನ. ಇಲ್ಲಿ ಸತಿಪತಿಗಳು ಒಂದಾದ ಮನದಿಂದ ಮಾಡುವ ಭಕ್ತಿ ಶಿವನಿಗೆ ಹಿತವಾಗಿರುವುದು. ಒಂದಾಗದ ಭಕ್ತಿ ಅಮೃತದಲ್ಲಿ ವಿಷ ಬೆರಸಿದಂತೆ ಎಂದು ದಾಸಿಮಯ್ಯ ಹೇಳಿದನು.

ದಾಸಿಮಯ್ಯ ಭಕ್ತಿಯ ಸರಳ ವ್ಯಾಖ್ಯೆಯನ್ನು ಮಾಡುವನು. ಅನುಭಾವ ಭಕ್ತಿ ಷಟ್‌ಸ್ಥಲದ ನಾಲ್ಕನೆಯ ಹಂತವಾದ ಪ್ರಾಣಲಿಂಗಿಯದು. ಭಕ್ತನಲ್ಲಿ ಶ್ರದ್ಧೆಯಾಗಿ, ಮಹೇಶನಲ್ಲಿ ನಿಷ್ಠೆಯಾಗಿ, ಪ್ರಸಾದಿಯಲ್ಲಿ ಅವಧಾನವಾಗಿ ಪ್ರಾಣಲಿಂಗಿಯಲ್ಲಿ ಅನುಭಾವವಾಗುತ್ತದೆ. ದಾಸಿಮಯ್ಯನ ಪ್ರಕಾರ ಅನುಭಾವವು (=ಶಿವಜ್ಞಾನವು) ಅನುಭಾವಿ(ಶಿವಜ್ಞಾನಿ)ಗಳ ಸಂಪರ್ಕದಿಂದ, ಒಡನಾಟದಿಂದ, ಆಚರಣೆಯಿಂದ ಬರುವಂಥಹದು. ಅನುಭಾವಿಗಳ ಶಿವಜ್ಞಾನವನ್ನು ಮನಸಾರೆ ವೇದಿಸಿದವರಿಗೆ (ಗ್ರಹಿಸಿದವರಿಗೆ) ಜನನವಿಲ್ಲ.

***

ಆಧುನಿಕ ಕಾಲದಲ್ಲಿ ಧರ್ಮದ ಅವಶ್ಯಕತೆ ಇದೆಯೇ ?

-ದೊಡ್ಡರಂಗೇಗೌಡ

ಜಗತ್ತು ಈ ಹೊತ್ತು ಹೆಚ್ಚು ವೈಜ್ಞಾನಿಕವಾಗಿ ಇಂಥ ಸೌಲಭ್ಯ ಇಲ್ಲ ಎಂದು ಗೊಣಗಲು ಕಾರಣವಾಗದಂತೆ ಬದಲಾಗಿದೆ ; ನೈಸರ್ಗಿಕ ಸಂಪನ್ಮೂಲಗಳನ್ನು ಹಿಂದೆಂದಿಗಿಂತ ಹೆಚ್ಚಾಗಿ ಬಳಸಿಕೊಂಡು ಮಾನವ ಸೌಕರ್ಯಗಳನ್ನು ಏರ್ಪಾಟು ಮಾಡಿಕೊಳ್ಳುತ್ತಿದ್ದಾನೆ. ಮನುಕುಲದಲ್ಲಿ ಈಗ ಹೆಚ್ಚು ಹೆಚ್ಚು ಸುಖ ಭೋಗಗಳ ಕಡೆ ಒತ್ತು ಬೀಳುತ್ತಿದೆ.

ವಿಶ್ವವೇ ಚಿಕ್ಕದಾಗುತ್ತಿದೆಯೋ ಏನೋ ಎಂಬಂತೆ - ಎಲ್ಲಿಂದ ಎಲ್ಲೆಲ್ಲಿಗೆ ಬೇಕಾದರೂ ಸುಲಭವಾಗಿ ಹೋಗಿ ಬರುವಂತೆ ಪ್ರಯಾಣದ ಸೌಕರ್ಯಗಳು ಏರ್ಪಡುತ್ತಾ ವಿದೇಶಗಳಿಗೆ ಹೋಗಿ ಬರುವುದು ಬಹಳ ಸುಲಭವಾಗಿ ಆಧುನಿಕ ಮಾನವನ ಕಪಿಮುಷ್ಟಿಗೆ ಸಿಲುಕುತ್ತಿದೆ ಜಗತ್ತು ! ಹೀಗಿರುವಾಗ ಈ ಅಣುಯುಗದ ಮಾನವನಿಗೆ ''ಧರ್ಮ ''ವಾದರೂ ಏಕೆ ಬೇಕು ಎನ್ನುವಷ್ಟರ ಮಟ್ಟಿಗೆ ಇಂದಿನವರು ಕೆಕ್ಕರಿಸಿ ನೋಡುವಂತಾಗಿದೆ.

ಯಾವುದು ಧರ್ಮ ? ಯಾವುದು ಅಧರ್ಮ ? ಇದನ್ನು ಕುರಿತು ನಮ್ಮ ಹಿಂದಿನವರು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಪೂರ್ವಸೂರಿಗಳಂತೂ ತಮ್ಮ ಕೃತಿಗಳಲ್ಲಿ ಮನೋಜ್ಞವಾಗಿ ಧರ್ಮಾಧರ್ಮದ ಬಗ್ಗೆ ವಿವೇಚನಾಯುತ ಕವಿತೆಗಳನ್ನೇ ರಚಿಸಿದ್ದಾರೆ.

ಕನ್ನಡದ ಅಪೂರ್ವ ಪ್ರತಿಭಾವಂತ ಕವಿ ಪಂಪ ತನ್ನ ಅಭಿಜಾತವಾದ ಅಲೌಕಿಕ ಕಾವ್ಯ ''**ಆದಿಪುರಾಣ**'' ದಲ್ಲಿ ಕೆಲವು ಶ್ರೇಷ್ಠ ಅನಿಸಿಕೆಗಳನ್ನು ಅಭಿವ್ಯಕ್ತಿಸಿದ್ದಾನೆ.

''**ಪುಸಿಯದುದು ಪರಾಂಗನೆಗಾಟಿಸದುದು ಕೊಲ್ಲದುದು ಮೋಹಮಿಲ್ಲದುದು ಅರಿವಂ ಪೊಸೆಯಿಸುವುದು ವೈರಾಗ್ಯದ ದೆಸೆಗೆಸು ಪುದು ಧರ್ಮಂ**''

ಹೀಗೆ ಕನ್ನಡದ ಆದಿಕವಿಯೂ ಅಗ್ರಮಾನ್ಯ ಕವಿಯೂ ಆದ ಪಂಪ ನಿಖರವಾಗಿ ತನ್ನ ಆಲೋಚನೆಗಳಿಗೆ ಸಮರ್ಥ ಪದಪುಂಜಗಳಲ್ಲಿ ಆಕಾರಕೊಟ್ಟಿದ್ದಾನೆ. ಇದು ಅವನ ಕಾಲದ ಚಿಂತನೆಗಳೂ ಆಗಿದ್ದವು ಎಂಬುದು ಮುಖ್ಯ. ಯುಗದ ಮೌಲ್ಯಗಳನ್ನೇ ತನ್ನ ಕಾವ್ಯದ ಮೂಲಕ ಅಪೂರ್ವವಾಗಿ ಧ್ವನಿಸಿದ್ದಾನೆ.

ಈ ಹೊತ್ತು ಎಲ್ಲೆಡೆ ಸುಳ್ಳು ಹೇಳುವುದು, ಅನ್ಯ ಸ್ತ್ರೀಗೆಳೆಸುವುದು, ಹಿಂಸೆಗಿಳಿಯುವುದು, ಮೋಹದಾಹದಲ್ಲಿ ಸಿಲುಕಿ ರಾಕ್ಷಸರಂತೆ ವರ್ತಿಸುವುದು, ಅವಿವೇಕಿಗಳಂತೆ ನಡೆದುಕೊಳ್ಳುವುದು, ಭೋಗದಲ್ಲೇ ಮುಳುಗಿ ತೇಲುತ್ತಾ ಲಂಪಟರಾಗಿ ಉಳಿಯುವುದು ತಾಂಡವವಾಡುತ್ತಿರುವಾಗ ಪಂಪನ ಮಾತುಗಳಿಗೆ ನಾವು ಕಿವಿಗೊಡಬೇಕಾಗಿದೆ. ನಾವು ಬದುಕುವ ರೀತಿಯಲ್ಲಿ ಬದಲಾವಣೆಗಳಾಗಿವೆ. ಯಂತ್ರ ನಾಗರೀಕತೆ ಸೌಲಭ್ಯಗಳ ಮಹಾಪೂರವನ್ನೇ ಹರಿಸಿದೆ. ಕೈಗೆಟುಕದ ವಸ್ತುವೇ ಇಲ್ಲವೇನೋ

ಎಂಬಂತೆ ಭ್ರಾಮಕ ಜಗತ್ತಿನತ್ತ ಸಾಗುತ್ತಿದ್ದಾನೆ ಈ ಇಪ್ಪತ್ತೊಂದನೆ ಶತಮಾನದ ಮಾನವ.... ಇದೆಲ್ಲ ನಿಜ.

ಇದು ಬಾಹ್ಯ ಬದಲಾವಣೆ, ವೇಷಭೂಷಣದ ಆಧುನಿಕತೆ ನವ್ಯಜೀವನ ವಿಧಾನದ ರೂಪಾಂತರ ಸ್ಥಿತಿ. ವಾಸ್ತವದಲ್ಲಿ ನೀವು ಯಾವುದೇ ಆಧುನಿಕ ಮಾನವನನ್ನೂ ಖಾಸಗಿಯಾಗಿ ವಿಚಾರಿಸಿದರೆ, ಆಪ್ತವಾಗಿ ಮಾತನಾಡಿದರೆ ಆಗ ಅರಿವಾಗುತ್ತದೆ. ಅತೃಪ್ತಿಗಳ ಭುಗಿಲೆದ್ದು ಆಧುನಿಕ ಮಾನಸಿಕ ತುಮುಲಗಳಲ್ಲಿ ನಿರ್ಣಯಗಳ ತೆಗೆದುಕೊಳ್ಳಲಾರದ ಹಂತದಲ್ಲಿ ತೂಗುಯ್ಯಾಲೆ ಯಾಡುತ್ತಾ ಒಳಗೊಳಗೇ ಬಳಲುತ್ತಿದ್ದಾನೆ. ಘಾಸಿಗೆ ಒಳಗಾಗುತ್ತಿದ್ದಾನೆ. ವಿಕ್ಷಿಪ್ತತೆಗೆ ಸಿಲುಕುತ್ತಿದ್ದಾನೆ. ಇದಕ್ಕೆಲ್ಲಾ ಮೂಲ ಕಾರಣ- ಎಲ್ಲ ರಂಗಗಳಲ್ಲಿ ನಂಬಿಕೆಯ ಮೂಲ ಬೇರುಗಳೇ ಅಲುಗುತ್ತಿರುವುದು. ಎಲ್ಲವನ್ನು ಪ್ರಶ್ನಿಸುತ್ತಾ ಇಂದು ಮಾನವ ನೇತ್ಯಾತ್ಮಕ ಗುಣಬೆಳೆಸಿಕೊಂಡು ತಲ್ಲಣಗೊಂಡಿದ್ದಾನೆ.

ಇಂದು ಎಲ್ಲೆಡೆ ಧರ್ಮ ದ್ರೋಹಿಗಳದೇ ದರ್ಬಾರು, ನೀಚರದೇ ನೂರಾರು ಕಾರಬಾರು; ಮದ್ಯಪಾನ ವ್ಯಸನಿಗಳದೇ ಮೆರೆದಾಟ. ನರಕದ ತಳಮುಟ್ಟಿದರೂ ಅವರು ಅಧರ್ಮ ಬಿಡದ ಅರಿವುಗೇಡಿಗಳವರು. ಅಂಥವರನ್ನು ತಿದ್ದುವ ಕೆಲಸ ಆಗಬೇಕಾಗಿದೆ. ಧರ್ಮ ಗುರುಗಳು ಅವರ ಮನಃ ಪರಿವರ್ತನೆ ಮಾಡುವ ಅನುಪಮ ಕಾರ್ಯ ಮಾಡಬೇಕಾಗಿದೆ. ಈ ರೂಕ್ಷ ಮಾನವರು ಸುಸಂಸ್ಕೃತ ನಡವಳಿಕೆಗಳನ್ನು ಕಲಿತು ಬದುಕುವಂಥ ಅದ್ವಿತೀಯ ಕಾರ್ಯವನ್ನು ಈಗ ಧರ್ಮಪೀಠಗಳು ನಿರ್ವಹಿಸಬೇಕಾಗಿದೆ.

ಇಂದಿನ ನಾಗರಿಕರು ತಮ್ಮ ತಮ್ಮ ಸಂಸಾರ ಧರ್ಮವನ್ನು ನಿರಂತರವಾಗಿ ಪಾಲಿಸಬೇಕಾಗುತ್ತದೆ. ಜೊತೆಗೆ - ವಿಶ್ವಮಾನ್ಯ ಕವಿಯ ಉದಾತ್ತ ಮನೋಭಾವದಂತೆ "**ಧರ್ಮಮಂ ಗಳಿಯಿಸಿಕೊಳ್ಳುದೊಂದೇ ಚದುರು**" ಪಂಪ ಮಹಾಕವಿ ಹೇಳಿರುವಂತೆ- ಧರ್ಮವನ್ನು ಸಂಪಾದಿಸಿಕೊಳ್ಳುವುದೊಂದೇ ಜಾಣತನ. ನಾವು ಯಾರೂ ಶಾಶ್ವತವಾಗಿ ಈ ಲೋಕದಲ್ಲಿ ಉಳಿಯುವುದು ಸಾಧ್ಯವಿಲ್ಲ. ಆದ್ದರಿಂದ ಇರುವಷ್ಟೂ ಕಾಲ ಧರ್ಮಬದ್ಧವಾಗಿ ಬದುಕುವುದು ನಮ್ಮ ಆಶಯವಾಗಬೇಕು, ಕರ್ತವ್ಯವಾಗಬೇಕು. ಅದೇ ನಮ್ಮ ಜೀವನದ ಮೂಲ ಮಂತ್ರವಾಗಬೇಕು. ವಾಸ್ತವವಾಗಿ ಅಂಥ ಸಂಸಾರ ಧರ್ಮವೇ ನಿಜಕ್ಕೂ ಶ್ರೇಯಸ್ಕರ.

ಆಧುನಿಕರಿಗೆ ಇಂದು ಎಲ್ಲ ಇದೆ ಧರ್ಮಬುದ್ಧಿ ಇಲ್ಲ ಅಷ್ಟೇ. ನವನಾಗರೀಕತೆ ನಮಗೆ ಹೊಸ ಹೊಸ ಜೀವನ ವಿಧಾನ ಕಲಿಸಿದೆ. ನಿಜ ಆದರೆ ಭೋಗಾಭಿಮುಖವಾಗಿ ಮಾನವೀಯ ಮೂಲ ಸೆಲೆಯನ್ನೇ ಮರೆಯುತ್ತಿರುವುದು ದುರಂತ. ಧರ್ಮವೂ ನಮ್ಮ ಬದುಕಿಗೆ ಅಳವಟ್ಟರೆ ಆನಂದದಾಯಕ.

ಹಿಂದಿನವರಿಗೆ ಅನೇಕ ವಿಷಯಗಳಲ್ಲಿ ಅನೇಕ ಪ್ರಗಲ್ಭನಂಬಿಕೆಗಳಿದ್ದವು. ಹೀಗಾಗಿ ನೆಮ್ಮದಿಯ ಜೀವನ ನಡೆದಿತ್ತು. ಈಗ ಪ್ರತಿಯೊಂದನ್ನೂ ಪ್ರಶ್ನಿಸಿ ನೋಡುವ ಗುಣ

ಬೆಳೆಸಿಕೊಂಡು ಕೆದಕುತ್ತಾ ಕೆದುಕುತ್ತಾ ಸೃಷ್ಟಿ ತತ್ತ್ವಕ್ಕೆ ಕೈಹಾಕಿ ಉದ್ವಿಗ್ನರಾಗಿ ಬದುಕಲು ಎಲ್ಲ ಸೌಕರ್ಯಗಳಿದ್ದೂ ಗಲಿಬಿಲಿಗೊಂಡಿದ್ದಾನೆ ಮಾನವ.

ಹಿಂದೆ ಈಗಿರಲಿಲ್ಲ. ದೃಢ ನಂಬಿಕೆಗಳಿದ್ದವು. ಶಾಂತಿಯ ಪರಿಸರ ಇತ್ತು. ಈಗ ಎಲ್ಲವೂ ಎಲ್ಲೆಡೆಯೂ ಪ್ರಕ್ಷುಬ್ಧ. ಯಾಕೆ ಹೀಗೆ? ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಧರ್ಮರಹಿತ ದೃಷ್ಟಿಕೋನಗಳು ಪಾಪಸ್ಸುಕಳ್ಳಿಗಳಂತೆ ಬೆಳೆಯುತ್ತಾ ಪಾರಂಪರಿಕ ಮನೋಭಾವದ ಸಹೃದಯರಿಗೆ ಮೈಪರಚಿಕೊಳ್ಳುವ ಹಾಗಿದೆ.

ವಾಸ್ತವವಾಗಿ ಹಿಂದೆಂದಿಗಿಂತ ಇಂದು ಧರ್ಮಬದ್ಧ ನಡೆ, ಧರ್ಮಬದ್ಧ ನುಡಿ, ಧರ್ಮಬದ್ಧ ಬದುಕು ಹೆಚ್ಚು ಅವಶ್ಯವಾಗಿದೆ. ನೈತಿಕ ಮೌಲ್ಯಗಳ ಮೂಲ ಪಾತಳಿಯೇ ಇಲ್ಲವಾಗುತ್ತಿರುವ ಈ ಕಾಲದಲ್ಲಿ ಧರ್ಮ ನಮ್ಮನ್ನು ಹಾದಿಗೆ ತರಬಲ್ಲದು.

ಸಂಸಾರಸ್ಥರು ನಮ್ಮ ಪ್ರಾಚೀನ ಸಾಹಿತ್ಯ ಕೃತಿಗಳಿಂದ ತಿಳಿದುಕೊಳ್ಳಬೇಕಾದುದು ಬಹಳಷ್ಟಿದೆ. ನಾವು ಈ ಅಣುಯುಗದ ನಾಗಾಲೋಟಕ್ಕೆ ಸಿಲುಕಿ ವಾಸ್ತವವಾಗಿ ವಿಚಾರಮಾಡಿ ನೋಡುತ್ತಿಲ್ಲ.

''ಪಂಚತಂತ್ರ'' ದಲ್ಲಿ (ದುಗ ಸಿಂಹಃ ಕರ್ನಾಟಕ ಪಂಚತಂತ್ರಂ ೧೦೩೦) ೧೧೫ ನೇ ಶ್ಲೋಕದಲ್ಲಿ ಕವಿ ಹೀಗೆ ಹೇಳಿದ್ದಾನೆ. ''**ಧರ್ಮಮೇ ಸಾರಂ... ಸಂಸಾರಿಗೆ** '' ಸಂಸಾರಿಗೆ ಯಾವತ್ತೂ ಧರ್ಮವೇ ಸಾರವಾದದ್ದು.. ಅದೇ ಅವನ ಬದುಕಿಗೆ ನೈತಿಕ ಆಧಾರ. ಹಿಂದೆ ಇಂಥ ಆದರ್ಶಗಳಿದ್ದವು ನಮ್ಮವರಿಗೆ. ಈಗ ನಾವು ಹಣ ಹಣ ಎಂದೂ ರಾಗ ಭೋಗ ಎಂದೂ ಕಾರು ಬಂಗಲೆ ಎಂದೂ ಅಧಿಕಾರ ಅಧಿಕಾರ ಎಂದೂ ಸದಾ ಹಪ ಹಪಿಸುತ್ತಾ ಊರ್ಧ್ವಮುಖಿ ಚಿಂತನೆಗಳಿಗೆ ಮನ ಕೊಡುವುದರ ಬದಲು ಅಧೋಗತಿಗೆ ಇಳಿಯುತ್ತಿದ್ದೇವೆ. ಅನೀತಿಯುತ ಬದುಕು ಯಾರಿಗೂ ಎಂದೂ ಒಳಿತೇನಲ್ಲ. ಇದನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.

ನಾವು ಆಧುನಿಕರು ನಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ಏಳಿಗೆ ಕಾಣಲು ಯಾರ್‍ಯಾರಿಗೋ ದುಂಬಾಲು ಬೀಳುತ್ತೇವೆ. ಹೀಗೆ ಅಧರ್ಮಿಗಳ ಸುತ್ತಾ ಸುತ್ತುತ್ತಾ ಚಮಚಾಗಿರಿ ಮಾಡುವವರಿಗೆ ಕನ್ನಡದ ಶಕ್ತ ಕವಿ ರನ್ನ ಮುತ್ತಿನಂಥ ಮಾತೊಂದನ್ನು ತನ್ನ ಕೃತಿಯಾದ '**ಅಜಿತ ತೀರ್ಥಂಕರ ಪುರಾಣ ತಿಲಕ**' ದಲ್ಲಿ (೯೯೩:ಕಾಲ) ೨ನೆಯ ಅಧ್ಯಾಯದಲ್ಲಿ ೬೩ನೆಯ ಪದ್ಯದಲ್ಲಿ ಮನೋಜ್ಞವಾಗಿ ಹೇಳಿದ್ದಾನೆ.

> **''ಎನ್ನುಕ್ತಿಗೊಡಂಬಡು ಜೀವ ; ನಿನ್ನಕಾಲಂಪಿಡಿವೆಂ**
> **ಧರ್ಮಮನೆ ಮಗುಳೆ ಬಲ್ಪಿಡಿವಿಡಿಯಾ...**

ಧರ್ಮವನ್ನೇ ಮತ್ತೆ ಮತ್ತೆ ಬಲವಾಗಿ ಹಿಡಿದುಕೊಳ್ಳಿ ಎಂಬ ಕವಿ ರನ್ನನ ಮಾತಿಗೆ ನಾವು ಕಿವಿಗೊಡಬೇಕಾಗಿದೆ. ಧರ್ಮವಂತ ಅನೃತ ನುಡಿವುದಿಲ್ಲ; ಧರ್ಮವಂತ ಅನ್ಯಾಯದಲ್ಲಿ ನಡೆವುದಿಲ್ಲ. ಧರ್ಮವಂತ ಚಾರಿತ್ರ್ಯವನ್ನು ಹಾಳು ಮಾಡಿಕೊಳ್ಳುವುದಿಲ್ಲ.

ಏನಾದರೇನಂತೆ? ಸುಖವಾಗಿದ್ದರಾಯಿತು ಎಂಬ ಸಲೀಸು ಯೋಜನೆಗೆ ಬಿದ್ದು ಲಂಪಟತೆಯತ್ತ ಜನತೆ ವಾಲುತ್ತಾ ಭೋಗ ದೀಪ್ತ ಬದುಕಿಗೇ ಹಾತೊರೆಯುತ್ತಾ ನೀತಿ ಬೇಲಿಯನ್ನು ಗಾಳಿಗೆ ತೂರುತ್ತಿರುವುದೇ- ಅಂಥ ವಿಷಮಯ ಪರಿಸರವೇ ಎಲ್ಲೆಡೆ ಧಾಳಾಗಿ ಕಾಣುತ್ತಿದೆ.

ಶ್ರೀ ಸಾಮಾನ್ಯರನ್ನು ಆಪ್ತವಾಗಿ ಮಾತನಾಡಿಸಿದರೆ ಆಗ ಎಲ್ಲಾ ಗೊತ್ತಾಗುತ್ತದೆ. ಸುಳ್ಳು ಹೇಳಿದರೇನಂತೆ? ಲಂಚತೆಗೆದುಕೊಳ್ಳೋದು ತಪ್ಪಲ್ಲ. ಅನ್ಯರ ಹಣ ಅನ್ಯರ ವಸ್ತು ಮುಟ್ಟಿದರೂ ಅದರ ಮೇಲೆ ಪ್ರಭುತ್ವ ಸ್ಥಾಪಿಸಿದರೂ ತಪ್ಪಲ್ಲ ಎಂಬ ಧೋರಣೆ ಬಲವಾಗಿ ಸಮಾಜ ಕಲುಷಿತವಾಗುತ್ತಿದೆ.

ಧರ್ಮಬದ್ಧ ಬದುಕು ನಡೆಸುವುದೆಂದರೆ - ಸನ್ಮಾರ್ಗದಲ್ಲಿ ಬದುಕುವುದೆಂದೇ ಅರ್ಥ. ಹಿರಿಯರ ಬಗ್ಗೆ ಕಿರಿಯರು ಕೊಡಬೇಕಾದ ಗೌರವ, ತಂದೆ ತಾಯಿಗಳನ್ನು ಮಕ್ಕಳು ಗೌರವದಿಂದ ಕಾಣಬೇಕಾದ ಮಾನವೀಯತೆಯ ನೀಯತ್ತು ಯಾವುದೇ ಸಮುದಾಯಕ್ಕೂ ಬೇಕು.

ಈ ಹೊತ್ತಿನ ಮಾನವ ಹಮ್ಮೀರನಾಗಿ ಮೆರೆಯುತ್ತಿದ್ದಾನೆ. ದಿನ ಪತ್ರಿಕೆಗಳ ಪುಟ ತೆಗೆದು ನೋಡಿದರೆ ಸಾಕು ಇಪ್ಪತ್ತೊಂದನೇ ಶತಮಾನದ ಮಾನವರ ಅಟ್ಟಹಾಸಗಳೆಲ್ಲಾ ಒಂದಲ್ಲ ಒಂದು ರೀತಿ ಅಲ್ಲಿ ಪ್ರಕಟವಾಗಿರುತ್ತವೆ. ಐಹಿಕಾಭಿಲಾಶಿಗಳಾಗುವವರಿಗೆ ಇಂಬಾಗಿ ನಿಲ್ಲುವವರೂ, ಸುಖ ಸಂಪತ್ತು ಹಂಚಿ ಉಣ್ಣಲು ಬರುವವರೂ ನೂರಾರು ಜನ. ಆದರೆ ಯಮಧರ್ಮರಾಯ ನಮ್ಮನ್ನು ಕಟ್ಟಿ ಎಳೆದೊಯ್ಯುವಾಗ ಯಾರು ತಾನೆ ಬರುತ್ತಾರೆ, ನಮ್ಮ ಜೊತೆಗೆ ?

ಇಂಥ ಸನ್ನಿವೇಶದಲ್ಲಿ ೧೦೪೨ ರಲ್ಲಿ ಬದುಕಿದ್ದ ನಾಗವರ್ಮ ತನ್ನ ''ವರ್ಧಮಾನ ಪುರಾಣಂ'' ಕೃತಿಯಲ್ಲಿ ಬಹು ಸಮರ್ಥವಾಗಿ ನಮಗೆ ಬುದ್ಧಿಯ ಮಾತುಗಳನ್ನು ಹೇಳಿದ್ದಾನೆ. ನಾವು ಅವುಗಳನ್ನು ಜ್ಞಾಪಿಸಿಕೊಳ್ಳಬೇಕಾಗಿದೆ. ಅವುಗಳ ಬಗ್ಗೆ ಚಿಂತನ - ಮಂಥನ ಮಾಡಿ ಬದುಕಿಗೆ ಅನ್ವಯಿಸಿಕೊಳ್ಳಬೇಕಾಗಿದೆ.

(i) ನಿರಂತರ ಧರ್ಮವೊಂದೆ ನೆರಮಾವೆಡೆಗಂ

***

(೫ನೇ ಅಧ್ಯಾಯ. ೨೨ ನೇ ಪದ್ಯ)

(ii) ಧರ್ಮಮೇ ಸಲೆ ತಲೆಗಾಗುಂ;
ಧರ್ಮಮೇ ಸಂಸಾರ ದುಃಖಮಂಮಗ್ಗಿಸುಗುಂ
ಧರ್ಮಮೇ ಸುಖಮಂ ಮಾಳ್ಕುಂ
ಧರ್ಮಮೇ ನಿವೃತ್ತಿ ಫಳಂಬರಂ ಕೊಂಡೊಯ್ಯುಂ

***

(೫ನೇ ಅಧ್ಯಾಯ; ೨೩ ನೇ ಪದ್ಯ)

ಹೀಗೆ ಕವಿ ನಾಗವರ್ಮ ಹೇಳುವ ಪ್ರಕಾರ ಧರ್ಮವೇ ಬಂಧು; ಅದೇ ನಿಜವಾದ ತವರುಮನೆ; ಧರ್ಮವೇ ದೇಹಿಗೆ ಆಶ್ರಯ; ಪುಣ್ಯ; ಮಹಾರತ್ನ. ಈಗಲೂ ನಮಗೆ ಅದೇ ಕಲ್ಪವೃಕ್ಷವಾಗಬೇಕು ಲೋಕದಲ್ಲಿ ಧರ್ಮಕ್ಕಿಂತ ಮಿಗಿಲಾದುದೆಲ್ಲಿದೆ ?

ಅನ್ಯ ಹೆಣ್ಣು ಕಣ್ಣೆತ್ತಿ ನೋಡದ ಮಾನವನನ್ನು ಈಗ ಹಗಲು ಹೊತ್ತಿನ ಸೂರ್ಯನ ಬೆಳಕಿನ ಜೊತೆಗೆ ಸರ್ಚ್‌ಲೈಟ್ ಹಾಕಿ ಹುಡುಕಬೇಕಾಗಿದೆ. ಶಿಕ್ಷಣ ಬಹುತೇಕ ಮಟ್ಟಿಗೆ ಬಹುದೊಡ್ಡ ವ್ಯಾಪಾರವಾಗಿದೆ. ಸೇವೆ ಎಂಬುದು ಎಲ್ಲೆಡೆ ಅಪರೂಪವಾಗಿದೆ ; ವ್ಯಾಪಾರ ಅಂದರೆ ದುಡ್ಡು ಮಾಡುವ ದಂಧೆಯಾಗಿದೆ. ಹಿಗ್ಗಾಮುಗ್ಗಾ ಮೋಸ ನಡೆಯುತ್ತಿದೆ ; ರಾಜಕಾರಣ ಈ ಹೊತ್ತು ಹಣಗಳಿಕೆಯ ಒಂದು ವೃತ್ತಿಯಾಗಿದೆ. ಇಂಥ ಸಂಕ್ರಮಣ ಸ್ಥಿತಿಯಲ್ಲಿ ಧರ್ಮಗುರುಗಳ ಅವಶ್ಯಕತೆ ಇದೆ, ಧರ್ಮ ಬೋಧೆಯ ಅವಶ್ಯಕತೆ ಇದೆ, ಹಾದಿ ಬಿಟ್ಟು ಬದುಕುವವರನ್ನು ಮತ್ತೆ ಹಾದಿಗೆ ತರಬೇಕಾಗಿದೆ. ಜನಮನದಲ್ಲಿ ಸರಿಯಾದ ತಿಳಿವಳಿಕೆ ಮೂಡಿಸುವಲ್ಲಿ ಧರ್ಮಗುರುಗಳ ಪಾತ್ರ ಮಹತ್ವದ್ದಾಗಿದೆ. ನೀತಿ ಸಂಹಿತೆಯಿಲ್ಲದ ಬದುಕು ಬದುಕಲ್ಲ ಎಂದು ಸಾರಿ ಹೇಳುತ್ತಾ ಅನೀತಿಗಿಳಿದವರನ್ನು ನೀತಿ ಪಥದತ್ತ ಕೊಂಡೊಯ್ಯುವ ಧರ್ಮ ದೀಪಕರ ಅಗತ್ಯ ಈಗ ಹೆಚ್ಚಾಗಿದೆ.

ಇಂದಿನವರಾದ ನಾವು ಬೇಕಾಬಿಟ್ಟಿ ಮಾತಾಡುತ್ತೇವೆ, ಜೀವನದಲ್ಲಿ ಯದ್ವಾತದ್ವ ನಡೆದುಕೊಳ್ಳುತ್ತೇವೆ. ಆದರೆ 'ಧರ್ಮಾಮೃತ' ಬರೆದ ಕವಿ ನಯಸೇನ ಹೇಳಿರುವ ಮಾತುಗಳನ್ನು ಸಂಪೂರ್ಣ ಮರೆತಿದ್ದೇವೆ. ಈ ಹೊತ್ತು ನಾವೆಲ್ಲಾ ಪಂಚವ್ರತಗಳನ್ನು ಕೈಗೊಳ್ಳಬೇಕಾಗಿದೆ. ಸಂಕಲ್ಪ ಮಾಡಬೇಕಾಗಿದೆ.

ಕೊಲ್ಲಬಾರದು, ಹುಸಿಯಬಾರದು, ಕಳ್ಳತನ ಮಾಡಬಾರದು, ಅನ್ಯಸ್ತ್ರೀಗೆ ಆಸೆ ಪಡಬಾರದು, ಅವಶ್ಯಕತೆಗೂ ಮೀರಿ ಸಂಗ್ರಹಿಸಬಾರದು. ಈ ಎಲ್ಲವೂ ಅನಿಷ್ಟಗಳೇ. ಮೋಹಗಳೇ. ಮುಂದೆ ಇವೇ ನಮ್ಮನ್ನು ಅನೇಕ ಬಂಧನಗಳಿಗೆ ಎಳೆದೊಯ್ದು ಸಂಪೂರ್ಣ ಅಧರ್ಮಿಗಳನ್ನಾಗಿಸುತ್ತವೆ. ಆದ್ದರಿಂದಲೇ ಈಗಲೂ ನಮಗೆ ನ್ಯಾಯಯುತ ಬದುಕಿಗೆ ಧರ್ಮ ಅತ್ಯವಶ್ಯ.

ಶಾಂತಿನಾಥ ಕವಿ ' ಸುಕುಮಾರ ಚರಿತೆ ' (೧೦೬೮) ಯಲ್ಲಿ ಹೀಗೆ ನಿರೂಪಿಸಿದ್ದಾನೆ. ಆಧುನಿಕರು ಇವುಗಳನ್ನು ಪರಾಂಬರಿಸಬೇಕಷ್ಟೇ.

ಅ) ಧರ್ಮಮೆ ಪರಮ ಪದಕ್ಕಾಶ್ರಯಂ
ಆ) ಧರ್ಮಮೆ ಸಮಸ್ತ ಸೌಖ್ಯಕ್ಕಾಶ್ರಯಂ
ಇ) ಧರ್ಮಮೆ ದೇಹಿಗೆ ಶರಣಂ
ಈ) ಧರ್ಮಮೆ ಸಂಸಾರಿಗಖಿಳ ಸಂಸೃತಿ ಹರಣಂ

ನಾವು ಇಂದು ಸಂಸಾರದ ದಂದುಗದಲ್ಲಷ್ಟೇ ಹೊರಳಿ ಹೊರಳಿ ನರಳಿ ನರಳಿ ಅಸುಖಿಗಳಾಗಿರುವ ಬದಲು ಮಾನಸಿಕ ನೆಮ್ಮದಿಗೆ ಬದುಕಿನ ಕಲ್ಯಾಣ ಕಾರ್ಯಕ್ಕೆ

ಧರ್ಮಾಚರಣೆಯೊಂದೇ ಏಕೈಕ ಮಾರ್ಗ. ಧರ್ಮದಲ್ಲಿ ನಡೆದುಕೊಳ್ಳುವವರು ತಾಮ್ರ ಮಾಲಿಕೆ ಸೇರಿ ಚಿನ್ನವಾದಂತೆ - 'ಬಾಳೇ ಬಂಗಾರ'ವಾಗುತ್ತದೆ. ಧರ್ಮದಿಂದ ಪರಮ ಸುಖ ಪ್ರಾಪ್ತವಾಗುತ್ತದೆ.

ಅಸತ್ಯದಿಂದ ಏನೆಲ್ಲ ಅನಾಹುತಗಳಾಗುತ್ತವೆ, ಅವ್ಯವಹಾರ ಹೇಗೆ ಬಾಳನ್ನು ಬುಡಮೇಲು ಮಾಡುತ್ತದೆ, ಅನೀತಿಯುತ ನಡೆ ಕ್ರಮ ಕ್ರಮೇಣ ವೈಶಾಲ್ಯಪೂರ್ಣವಾಗಬೇಕಾದ ಬಾಳುವೆಯನ್ನು ಕುಬ್ಜತೆಯುತ್ತ ತಳ್ಳುತ್ತದೆ, ದುರಾಚಾರ ಹೇಗೆ ಹೇಗೆ ಕುಟುಂಬ ನೆಮ್ಮದಿಗೇ ಭಂಗತರುತ್ತದೆ ಎಂಬೆಲ್ಲಾ ವಿಷಯಗಳನ್ನು ವಿಷದವಾಗಿ ತಿಳಿಸಿ ಹೇಳುವ ಅರಿವು ನೀಡುವ ಬೆಳಕು ತೋರುವ ಮಹತ್ವದ ಗುರುಗಳು ಈಗ ಅನಿವಾರ್ಯ.

ಕೆಟ್ಟನಡೆಗೆ ಕೆಟ್ಟನುಡಿಗೆ ಒಗ್ಗಿ ಹೋದ ಕೆಟ್ಟ ಜನರ ಕಲುಷಿತ ಪರಿಸರವನ್ನು ತಿಳಿಗೊಳಿಸುವ, ಮಾನವೀಯವಾಗಿಸುವ, ಮೌಲಿಕವಾಗುವತ್ತ ಪ್ರಯತ್ನಿಸುವ, ತಿದ್ದುವ, ಬುದ್ಧಿ ಹೇಳುವ, ಸರಿ ಹಾದಿಗೆ ತರುವ ಧರ್ಮಾಧಾರಿ ಚೈತನ್ಯಗಳು ಶುದ್ಧೀಕರಣ ಕಾರ್ಯ ಆರಂಭಿಸಬೇಕಾಗುತ್ತದೆ. ಇದುವರೆಗೆ ಇಂಥಕಾರ್ಯ ಆಗಿಲ್ಲವೆಂದಲ್ಲ. ಆದರೆ.. ಇನ್ನೂ ಆಗಬೇಕಾದ ಕಾರ್ಯ ಬೃಹದಾಕಾರವಾಗಿದೆ. ಇದಕ್ಕೆ ಸರ್ವಸಮರ್ಪಣ ಮಾಡಿಕೊಳ್ಳುವ ತ್ಯಾಗಿಗಳು ಅವಶ್ಯ. ಇಂದು ಅಂಥ ಜನರ ಕೊರತೆ ಇದೆ.

ಈಗಂತೂ ವ್ಯಕ್ತಿ ವ್ಯಕ್ತಿಯ ನಡುವೆ ಜಾತೀಯವಾದ, ಭಾಷೆಗೆ ಸಂಬಂಧಿಸಿದ, ಅಂತಸ್ತು ಅಂತಸ್ತೆಂದು ವರ್ಗ ತಾರತಮ್ಯಕ್ಕೆ ಸಂಬಂಧಿಸಿದ ಸಾವಿರದ ಅಡ್ಡಗೋಡೆಗಳೆದ್ದು-ಸ್ನೇಹ ಸೌಹಾರ್ದಗಳು ಹಾಳಾಗಿವೆ. '**ಮನುಷ್ಯ ಜಾತಿ ತಾನೊಂದೆ ವಲಂ**' ಎಂದು ಆದಿಕವಿ ಪಂಪನಂತೆ ವಿಶಾಲ ಭೂಮಿಕೆಯಿಂದ ಚಿಂತಿಸಿ ವಿಶ್ವಮಾನವ ತತ್ತ್ವ ಪ್ರಸಾರ ಮಾಡುವ ಧರ್ಮಗುರುಗಳೂ ಅಂಥ ವೈಶಾಲ್ಯತೆ ಪಡೆದ ಮಾನವೀಯ ಧರ್ಮವೂ ಇಂದು ಕತ್ತಲಲ್ಲಿರುವವರ ಕಣ್ಣು ತೆರೆಸಬೇಕಾಗಿದೆ. ಆಧುನಿಕರ ಜಾಣ ಕುರುಡು ಹೋಗಲಾಡಿಸಬೇಕಾಗಿದೆ. ನಾಗರಿಕರು ಜಾಣ ಕಿವುಡು ತೋರುತ್ತಿದ್ದಾರೆ. ಅಂಥವರ ಪ್ರೀತಿ ವಾತ್ಸಲ್ಯಗಳಿಂದ ಸನಿಹ ಸೆಳೆದು ಧರ್ಮೋಪದೇಶ ಮಾಡಿ ಪರಿವರ್ತನೆಗೆ ನಾಂದಿ ಹಾಡಿ ನವ ಮನ್ವಂತರಕ್ಕೆ ನಾಂದಿ ಹಾಡಬೇಕಾಗಿದೆ.

ಭ್ರಷ್ಟತೆಗೆ ಇಳಿಯದಿರುವ, ಪಾಪಾತ್ಮರಾಗದಿರುವ, ದುರ್ನಡೆಗೆ ನುಸುಳದಿರುವ - ನೀಚ ಮನಸ್ಸಿನವರನ್ನೂ ಸತ್ಪಥದ ಸತ್ಯಶ್ರೀಯ ಸದ್ಧರ್ಮದ ಸನ್ನಡೆಗೆ ಅನುವುಗೊಳಿಸುವ ಕಾರ್ಯ ಇಂದು ವ್ರತದಂತೆ ಅವ್ಯಾಹತವಾಗಿ ನಡೆಯಲೇಬೇಕಾಗಿದೆ. ಇಲ್ಲವಾದರೆ ಎಲ್ಲೆಡೆ ಅನಿಷ್ಟ ಪದ್ಧತಿಗಳೇ ತಾಂಡವವಾಡಿ ಅನೀತಿಯೇ ರಾಜಾರೋಷ ಮೆರೆದು ಅಕ್ರಮವೇ ಸಕ್ರಮವಾಗಿ ಬಿಡುವ ಅಪಾಯವಿದೆ. ಈ ಎಲ್ಲ ಕಾರಣಗಳಿಂದ ಇಂದು ಜನತೆಯ ಪಾಲಿಗೆ ಬಾಳು ಬಂಗಾರವಾಗಲು ಧರ್ಮದ ಅವಶ್ಯಕತೆ ಇದೆ. ಇದು ಈಗ ಹಿಂದೆಂದಿಗಿಂತಲೂ ಅನಿವಾರ್ಯವಾಗಿದೆ.

***

ಜಾತ್ರೆಗಳು–ಜನಪದ ಕಲೆಗಳು

-ಗೊ.ರು. ಚನ್ನಬಸಪ್ಪ

ಅನಕ್ಷರಸ್ಥರ ಅಂಗಳದಲ್ಲಿ ಅಡ್ಡಾಡುತ್ತಿದ್ದ ಜನಪದ ಕಲೆಗಳು ಅಕ್ಷರಸ್ಥರ ಗಮನ ಸೆಳೆದಿರುವುದು ಸಂತೋಷದ ಸಂಗತಿ. ಈ ಕಲೆಗಳ ಹಿನ್ನೆಲೆಯಲ್ಲಿರುವ ಸಾಂಸ್ಕೃತಿಕ ಮೌಲ್ಯವನ್ನು ಕೆಲವರಾದರೂ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಇದೊಂದು ಒಳ್ಳೆಯ ಲಕ್ಷಣ.

ಜನಪದ ಕಲೆಗಳ ಸೊಗಸನ್ನು ಕಾಣಬೇಕೆಂದರೆ ಗ್ರಾಮೀಣ ಜಾತ್ರೆಗಳಿಗೆ ಹೋಗಬೇಕು. ಜಾತ್ರೆಗಳು ಮತ್ತು ಜನಪದ ಕಲೆಗಳ ಮಧ್ಯೆ ಇರುವ ಸಂಬಂಧ ಅವಿರಳವಾದದ್ದು. ಒಂದು ಬಿಟ್ಟು ಒಂದಿಲ್ಲ. ಜನಪದ ಕಲೆಗಳಿಲ್ಲದಿದ್ದರೆ ಅದು ಜಾತ್ರೆ ಎನಿಸಿಕೊಳ್ಳುವುದೇ ಇಲ್ಲ. ಜನಪದ ಕಲೆಗಳಿಗೂ ಅಷ್ಟೆ. ಜಾತ್ರೆಯಂತಹ ವಿಶೇಷ ಸಂದರ್ಭ ಅವುಗಳಿಗೆ ಬೇರೆ ದೊರೆಯುವುದಿಲ್ಲ.

ಸಾಮಾನ್ಯವಾಗಿ ಜಾತ್ರೆಗಳು ಬರುವುದು ಸುಗ್ಗಿಯ ನಂತರ. ಹಳ್ಳಿಗರಿಗೆ ತಾವು ವರ್ಷವೆಲ್ಲ ಪಟ್ಟ ಶ್ರಮ ಕಾಳಿನ ರೂಪದಲ್ಲಿ ಕೈಸೇರಿದ ಸಂಭ್ರಮದ ಕಾಲ. ಆ ಸಂಭ್ರಮದಲ್ಲೇ ಅವರು ಜಾತ್ರೆಗಳಲ್ಲಿ ಪಾಲುಗೊಳ್ಳುತ್ತಾರೆ. ಹಾಗೆ ಪಾಲುಗೊಳ್ಳಲು ಅವರಿಗೆ ಆಹ್ವಾನದ ಅಗತ್ಯವೇನೂ ಇಲ್ಲ. ಎಲ್ಲ ಸ್ವಂತ ಆಸಕ್ತಿ, ಸ್ವಂತ ಉತ್ಸಾಹ, ಸ್ವಂತ ಖರ್ಚು.

ಜಾತ್ರೆಗಳೆಂದರೆ ದೇವರಿಗೆ ವಿಶೇಷ ಪೂಜೆ ಉತ್ಸವಗಳ ಸಡಗರ. ವರ್ಷ, ಎರಡು ವರ್ಷ ಅಥವಾ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಜಾತ್ರೆಗಳಲ್ಲಿ ಸುತ್ತಮುತ್ತಣ ಗ್ರಾಮಗಳಿಂದ ಜನಪದ ಕಲಾತಂಡಗಳು ಸೇರುತ್ತವೆ. ಗ್ರಾಮ ಕಲಾವಿದರ ದೃಷ್ಟಿಯಲ್ಲಿ ತಮ್ಮ ಕಲಾ ಪ್ರದರ್ಶನ ದೇವರಿಗೆ ಸಲ್ಲಿಸುವ ಹರಕೆಯೂ ಹೌದು, ಜನಮನ ರಂಜಿಸುವ ಒಂದು ಮಾಧ್ಯಮವೂ ಹೌದು. ಒಂದು ದೃಷ್ಟಿಯಿಂದ ಜಾತ್ರೆಗಳು ಜನಪದ ಕಲೆಗಳ ನಿಯತಕಾಲಿಕ ಸಮ್ಮೇಳನಗಳೆಂದೇ ಹೇಳಬಹುದು.

ಜಾತ್ರೆಯ ಕಾಲದಲ್ಲಿ, ಜಾತ್ರಾ ಬಯಲಿನ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಕಲೆಗಳು ರಾತ್ರಿ-ಹಗಲೂ ಪ್ರದರ್ಶನಗೊಳ್ಳುತ್ತಿರುತ್ತವೆ. ದೇವರ ಉತ್ಸವ ಬರುವಾಗ, ತೇರಿನ ಬೀದಿಯಲ್ಲಿ ಈ ಕಲಾತಂಡಗಳು ಒಂದರ ಹಿಂದೊಂದು ಸಾಲಾಗಿ ಪ್ರದರ್ಶನ ನೀಡುತ್ತಿರುತ್ತವೆ.

ಜಾತ್ರೆಗಳಲ್ಲಿ ಸಾಮಾನ್ಯವಾಗಿ ಜನ ರಾತ್ರಿಯೆಲ್ಲಾ ಕಾಲ ಕಳೆಯಬೇಕಾಗುವುದರಿಂದ ಅವರಿಗೆ ಯಾವುದಾದರೂ ಮನರಂಜನೆ ಬೇಕಾಗಿರುತ್ತದೆ. ಈ ಅಗತ್ಯವನ್ನು ನಮ್ಮ ಜನಪದ ಕಲೆಗಳು ಪೂರೈಸುತ್ತವೆ. ಜಾತ್ರೆ ಮೈದಾನದಲ್ಲಿ ಎಲ್ಲೆಲ್ಲಿ ಜನ ಗುಂಪುಗಟ್ಟಿಕೊಂಡು

ಕಾಣುವುದೋ ಅಲ್ಲಿ ಯಾವುದಾದರೊಂದು ಮನರಂಜನೆಯಾಟ ನಡೆಯುತ್ತಿದೆಯೆಂದೇ ತಿಳಿಯಬೇಕು. ಒಮ್ಮೊಮ್ಮೆ ಒಂದೇ ಕಡೆ ಒಂದೇ ಕಲೆಯ ಎರಡು-ಮೂರು ತಂಡಗಳು ಪರಸ್ಪರ ಮೇಲಾಟದಿಂದ ತಮ್ಮ ಕಲಾ ಕೌಶಲ್ಯವನ್ನು ಪ್ರದರ್ಶಿಸುತ್ತಿರಬಹುದು.

ಜನಪದ ಕಲೆಗಳಲ್ಲಿ ಕೆಲವಂತೂ ದೈವೀ ಆರಾಧನೆಗೆ ಎಂದು ಪ್ರದರ್ಶಕರು ಭಾವಿಸುತ್ತಾರೆ. ಕರಪಾಲ, ಚೌಡಿಕೆ, ಗೊಂದಲಿಗರು, ಬಹುರೂಪಿಗಳು ಮೊದಲಾದ ಕಲಾವಿದರು ನಿಜವಾಗಿಯೂ ಪರಿಣಾಮಕಾರಿಯಾದ ಸಮಾಜಶಿಕ್ಷಣ ಕಾರ್ಯವನ್ನೇ ನಡೆಸುತ್ತಾರೆಂದು ಹೇಳಬಹುದು. ಜಾತ್ರೆಗಳಲ್ಲಿ ಪ್ರೇಕ್ಷಕರು ತಮ್ಮ ತಮ್ಮ ಒಲವಿನ ಕಲೆಗಳ ಪ್ರದರ್ಶನ ನಡೆಯುವ ಕಡೆ ಗುಂಪುಗೂಡುತ್ತಾರೆ. ಯಾವುದಾದರೂ ಕಲೆಯ ಪ್ರದರ್ಶನ ಬೇಸರವೆನಿಸಿದರೆ, ಇನ್ನೊಂದು ಕಲೆಯ ಪ್ರದರ್ಶನ ನಡೆಯುವ ಸ್ಥಳಕ್ಕೆ ಹೋಗುತ್ತಾರೆ. ಕೆಲವು ವೇಳೆ ಕಲಾತಂಡಗಳೇ ತಮ್ಮ ಪ್ರದರ್ಶನ ಸ್ಥಳಗಳನ್ನು ಬದಲಾಯಿಸಬಹುದು. ಅಂತೂ ಇಡೀ ಜಾತ್ರೆಯ ಬಯಲು ರಾತ್ರಿಯೆಲ್ಲಾ ಎಚ್ಚರವಾಗಿರುತ್ತದೆ. ಜಾತ್ರೆಗೆ ಬಂದು ಯಾರಾದರೂ ನಿದ್ದೆ ಮಾಡಿದರೆ ಅವರು ಶುದ್ಧ ಸೋಮಾರಿಗಳೇ ಸರಿ.

ಈಗ ಕಾಲ ಬದಲಾಗಿದೆ. ಆದರೂ ನಮ್ಮ ಜನಪದ ಜಾತ್ರೆಗಳು ಇಂದಿಗೂ ತಮ್ಮ ಬನಿ-ಬಣ್ಣಗಳನ್ನು ಕಳೆದುಕೊಂಡಿಲ್ಲವೆಂದೇ ನನ್ನ ನಂಬುಗೆ. ಈಗಿನ ಜಾತ್ರೆಗಳಲ್ಲಿ ಸಿನಿಮಾ-ಸರ್ಕಸ್ಸುಗಳು ಪ್ರವೇಶಿಸಿದ್ದರೂ ಕಡಬರಾಟ-ದೊಂಬರಾಟಗಳನ್ನು ಅವು ಸರಿಗಟ್ಟಲಾರವು. ಸರ್ಕಾರದವರೋ, ಜಾತ್ರಾ ಸಮಿತಿಯವರೋ ಶಾಸ್ತ್ರೀಯ ಸಂಗೀತ, ಶಾಸ್ತ್ರೀಯ ನೃತ್ಯ ಕಾರ್ಯಕ್ರಮಗಳನ್ನು ಏರ್ಪಡಿಸಿದರೂ, ಅವು ಜನಪದ ಕಲಾವಿದರೂ ಹೇಳುವ ಮಾರಮ್ಮನ ಪದಗಳು, ಡೊಳ್ಳು ಕುಣಿತಗಳಂತಹ ಕಲೆಗಳಂತೆ ಶೋಭಿಸಲಾರವು. ಜಾತ್ರೆಗಳೆಂದರೆ ಜನಪದ ಕಲೆಗಳೇ ಚೆಂದ. ಅವು ಮುತ್ತೈದೆಗೆ ಮೂಗು ಬೊಟ್ಟಿದ್ದಂತೆ. ಜಾತ್ರೆಗಳಲ್ಲಿ ಆಧುನಿಕವಾದ ಯಾವುದೇ ಕಾರ್ಯಕ್ರಮ ಜೀನ್ಸ್‌ಪ್ಯಾಂಟ್ ಹಾಕಿದ ಹೆಣ್ಣಿನ ಕೈಯಲ್ಲಿ ಆರತಿ ಬಟ್ಟಲು ಇದ್ದಂತೆ ಆಭಾಸವಾಗುತ್ತದೆ. ಜನಪದ ಕಲೆಗಳಿಗೆ ಜಾತ್ರೆಗಳೇ ನಿಜವಾಗಿ ಒಪ್ಪುವ ಪರಿಸರ.

ತಮ್ಮದೇ ಆದ ಪರಿಸರದಲ್ಲಿ ಪ್ರದರ್ಶನಗೊಳ್ಳುತ್ತಿದ್ದ ನಮ್ಮ ಜನಪದ ಕಲೆಗಳು ಈಗ ನಗರವಾತಾವರಣದ ನಿರ್ಮಿತ ವೇದಿಕೆಯನ್ನು ಹತ್ತುತ್ತಿವೆ; ಕಲಿತವರ ಕಣ್ಣು ಸೆಳೆಯುತ್ತಿವೆ. ಅದು ಸಂತೋಷದ ವಿಷಯವೇ. ಆದರೆ, ಈ ಭರದಲ್ಲಿ ನಮ್ಮ ಜನಪದ ಕಲಾವಿದರು ಸಿನಿಮಾ ಮತ್ತಿತರ ಆಧುನಿಕ ಮಾಧ್ಯಮಗಳ ಪ್ರಭಾವದಿಂದ ತಮ್ಮ ಮಾಮೂಲು ವೇಷ-ಭೂಷಣಗಳು ಮತ್ತು ವಾದ್ಯಪರಿಕರಗಳನ್ನು ಬದಲಾಯಿಸಿ ಕೊಳ್ಳುತ್ತಿರುವುದು ವಿಷಾದಕರ. ಹಾಗೆ ಬದಲಾಯಿಸಿಕೊಂಡರೆ ಪಟ್ಟಣದ ಪ್ರೇಕ್ಷಕರಿಗೆ ಮೆಚ್ಚುಗೆಯಾಗುವುದೆಂದು ಅವರು ತಿಳಿದಿದ್ದಾರೆ. ಇದು ಸರಿಯಲ್ಲ. ಅಂತಹ

ಬದಲಾವಣೆಯಿಂದ ಜನಪದ ಕಲೆಗೆ ಅರ್ಥ ಬರುವುದಿಲ್ಲ. ಅಷ್ಟೇ ಏಕೆ, ಅರ್ಥವಾಗುವುದೇ ಇಲ್ಲ. ನೋಡಲು ಎಷ್ಟೇ ಚೆಂದವಾಗಿ ಕಂಡರೂ, ವೀರಗಾಸೆ ಕಲಾವಿದ ಆಧುನಿಕ ಟೈಟ್ ಪ್ಯಾಂಟ್ ಧರಿಸಲಾದೀತೆ? ಕೇಳಲು ಎಷ್ಟೇ ಇಂಪಾದರೂ ಬಯಲಾಟದ ಮೇಳಕ್ಕೆ ಮುಖವೀಣೆ ಬಿಟ್ಟು ಬ್ಯಾಂಡ್ ಬಾರಿಸಲಾದೀತೆ?

ಆದ್ದರಿಂದ, ಜನಪದ ಕಲಾವಿದರು ಸಾಧ್ಯವಾದಷ್ಟು ಹಳೆಯದನ್ನು ಉಳಿಸಿಕೊಂಡು ಹೋಗಬೇಕು. ಕೆಲವು ಸಾಮೂಹಿಕ ನೃತ್ಯಗಳಿಗೆ ನಿರ್ಮಿತ ವೇದಿಕೆಯ ಅಚ್ಚುಕಟ್ಟಿನ ಚೌಕಟ್ಟು ಒದಗಿಸಬೇಕಾದ ಸಣ್ಣಪುಟ್ಟ ಬದಲಾವಣೆಗಳು ನಡೆಯಬಹುದು. ಆಗಲೂ ಮೂಲ ಪದ್ಧತಿಗೆ ಮೇಳಗೂಡಿಸಿಯೇ ಬದಲಾವಣೆ ಮಾಡಿಕೊಳ್ಳಬೇಕು.

ಇನ್ನು ಜನಪದ ಕಲೆಗಳ ಸಂರಕ್ಷಣೆ ಎಂದರೆ, ಆ ಕಲೆಯ ಜನರ ಜೀವನ ನಿರ್ಲಕ್ಷ್ಯ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಹಲಗೆ ಬಾರಿಸುವ ವ್ಯಕ್ತಿ ತಲಾಂತರದಲ್ಲೂ ಹಲಗೆಯನ್ನೇ ಬಾರಿಸುತ್ತಿರಬೇಕೆ? ಭಿಕ್ಷೆ ಬೇಡಿ ಬದುಕುವ ವೃತ್ತಿ ಗಾಯಕರು ಭಿಕ್ಷೆಯನ್ನೇ ಬೇಡುತ್ತಿರಬೇಕೆ? ಅವರ ಜೀವನ ಸುಧಾರಣೆಯಾಗಬೇಡವೆ? -ಇಂತಹ ಪ್ರಶ್ನೆಗಳು ಕೇಳಿಬರುತ್ತವೆ. ಈ ಪ್ರಶ್ನೆಗಳಲ್ಲೂ ಅರ್ಥವಿಲ್ಲದಿಲ್ಲ. ಇವು ಗಂಭೀರವಾಗಿ ವಿಚಾರ ಮಾಡಬೇಕಾದ ಪ್ರಶ್ನೆಗಳೂ ಹೌದು. ನನ್ನ ದೃಷ್ಟಿಯಲ್ಲಿ ಇದಕ್ಕೆ ಪರಿಹಾರವಿದೆ. ಅದೆಂದರೆ, ಯಾವುದೇ ಕಲೆಗೆ ವಂಶಪಾರಂಪರ್ಯದ ಪಟ್ಟ ಕಟ್ಟುವ ಆಗತ್ಯವಿಲ್ಲ. ಹಲಗೆ ಬಾರಿಸಲು ದಲಿತರೇ ಆಗಬೇಕೆಂದಿಲ್ಲ. ಅದನ್ನು ಒಂದು ಆಸಕ್ತಿಯ ಕಲೆಯಾಗಿ, ಆಕರ್ಷಣೆಯ ಕಲೆಯಾಗಿ ಯಾರಾದರೂ ಕಲಿಯುವಂತಿರಬೇಕು. ಸ್ಪಷ್ಟವಾಗಿ ಹೇಳಬೇಕೆಂದರೆ, ಯಾವುದೇ ಕಲೆಗೆ ಸಾಮಾಜಿಕ ಸ್ಥಾನಮಾನ ದೊರಕಿದರೆ ಮಾತ್ರ ಅದು ಉಳಿಯಲು, ಬೆಳೆಯಲು ಸಾಧ್ಯ. ಇಲ್ಲದಿದ್ದರೆ ಕಲಾವಿದರ ಕೀಳರಿಮೆಯ ಪರಿಣಾಮವಾಗಿ ಅಂತಹ ಕಲೆ ಕೀಲೇ ಮುರಿದುಹೋಗಬಹುದು. ಈ ದೃಷ್ಟಿಯಿಂದ ಜನಪದ ಕಲೆಗಳ ಸಂರಕ್ಷಣೆಯಾಗಬೇಕು. ನಾಡಿನ ಸಾಂಸ್ಕೃತಿಕ ವಾತಾವರಣದ ದೃಷ್ಟಿಯಿಂದ ಇದು ಅಗತ್ಯವೂ ಹೌದು.

ಈಗ ನಮ್ಮ ಜನಪದ ಕಲೆಗಳ ಬಳಕೆ ತುಂಬ ವಿಲಕ್ಷಣ ಸಂದರ್ಭಗಳಲ್ಲಿ ಬಳಕೆಯಾಗುತ್ತಿವೆ. ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳಾಗುತ್ತಿವೆ. ಇದರಿಂದಾಗಿ ಜನಪದ ಕಲೆಗಳ ಸಹಜ ಸ್ವರೂಪ, ಆಶಯಗಳೆಲ್ಲವೂ ವಿರೂಪಗೊಳ್ಳುತ್ತಿವೆ. ಜನಪದ ಕಲೆಗಳು ನಮ್ಮ ಜನಜೀವನದ ಮೈ-ಮನಗಳ, ಆಸೆ-ಆಕಾಂಕ್ಷೆಗಳ ಪ್ರತಿಬಿಂಬ ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಂಡು ಅವು ಅಳಿಯದೆ ಉಳಿಯುವ ಸಹಜ ಪರಿಸರ ಕಲ್ಪಿಸಬೇಕಾಗಿದೆ. ಶಿಷ್ಟ ಕಲಾವಿದರಿಗೆ ದೊರೆಯುವ ಮಾನಮನ್ನಣೆಗಳು ಅವರಿಗೂ ದೊರಕಬೇಕು. ಶಿಷ್ಟಕಲಾವಿದ ಹೆಚ್ಚಲ್ಲ; ಜನಪದ ಕಲಾವಿದ ಕಡಮೆಯಲ್ಲ. ಅವರವರ ಪ್ರತಿಭೆ ಅವರವರದು. ಕಲೆ ಶಿಷ್ಟವಿರಲಿ, ಜನಪದವಿರಲಿ ಸಮಾನ ಸ್ಥಾನಮಾನವಿರಬೇಕು.

ಅಭಿವಂದನಾ

ನಮ್ಮ ನಾಡಿನಲ್ಲಿ ಬಹುಶಃ ಭಾರತದ ಬೇರಾವ ಭಾಗಗಳಲ್ಲೂ ಇರದಷ್ಟು ವೈವಿಧ್ಯಮಯವಾದ ಜನಪದ ಕಲೆಗಳಿವೆ. ಒಂದೊಂದು ಕಲೆಯ ಹಿನ್ನೆಲೆಯನ್ನು ಅರ್ಥಮಾಡಿಕೊಂಡು ಅವುಗಳು ನಮ್ಮ ಸಾಂಸ್ಕೃತಿಕ ಬದುಕಿನ ಅಂಗವಾಗುವಂತೆ ನೋಡಿಕೊಳ್ಳಬೇಕು; ಸಾಮಾಜಿಕ ಬದುಕಿನ ಸಂಬಂಧ ತಂತುಗಳಾಗುವಂತೆ ನೋಡಿಕೊಳ್ಳಬೇಕು.

ನಾನಿಲ್ಲಿ ಜನಪದ ಕಲೆಗಳನ್ನು ಪ್ರಧಾನವಾಗಿ ಜಾತ್ರೆಗಳಿಗೆ ಸಂಬಂಧಿಸಿದ್ದರೂ, ಅವು ಗ್ರಾಮೀಣ ಜೀವನದಲ್ಲಿ ನಿತ್ಯ ಸಂಗಾತಿಗಳಾಗಬೇಕಿದೆ. ದಿನದಿನಕ್ಕೆ ನಗರ ಪ್ರಭಾವದ ದಟ್ಟನೆರಳು ಕವಿಯುತ್ತಿರುವ ಇಂದಿನ ಸನ್ನಿವೇಶದಲ್ಲಿ ಜನಪದ ಕಲೆಗಳ ಜ್ವಲಂತ ಬೆಳಕನ್ನು ಉಳಿಸಿಕೊಳ್ಳುವ ಅವಸರ ಬಹಳವಿದೆ. ಶ್ರಮ ಜೀವಿಗಳಾದ ಜನಪದರಿಗೆ ಕೃತಕ ಹಾಗೂ ಅನುಕರಣೆಯ ಮನರಂಜನೆ ಒದಗಿಸಿ ಅವರನ್ನು ದಿಕ್ಕುಗೆಡಿಸುವುದಕ್ಕಿಂತ ಅವರು ತಮ್ಮ ಕಲಾ ಪ್ರತಿಭೆಯ ಪ್ರಭಾವಳಿಯಲ್ಲಿ ಬೆಳೆಯುವಂತೆ ಮಾಡಬೇಕಾಗಿದೆ.

***

ಜನಪದಗೀತೆಗಳಲ್ಲಿ ತೌರಿನ ಚಿತ್ರಣ

-ಚೈರಮಂಗಲ ರಾಮೇಗೌಡ

ಜನಾಂಗದ ಜೀವಾಳವೆನಿಸಿಕೊಂಡಿರುವ ಜನಪದ ಗೀತೆಗಳಲ್ಲಿ ಗ್ರಾಮೀಣ ಬದುಕಿನ ಸಮಸ್ತ ಮುಖಗಳೂ ಪ್ರತಿಫಲನಗೊಂಡಿವೆ. ಗ್ರಾಮಸಂಸ್ಕೃತಿಯ ಬ್ರಹ್ಮಾಂಡವನ್ನೇ ಮೈದುಂಬಿಕೊಂಡಿರುವ ಅವು ತಟ್ಟದ, ತಾಗದ ವಸ್ತುವೇ ಇಲ್ಲ. ಮಾನವ ಹುಟ್ಟಿದಂದಿನಿಂದ ಸಾಯುವವರೆಗೆ ಅವನು ಬದುಕಿನಲ್ಲಿ ಎದುರುಗೊಳ್ಳುವ ಎಲ್ಲ ಸಮಸ್ಯೆಗಳನ್ನೂ ಜನಪದ ಸಾಹಿತ್ಯ ವ್ಯಾಪಕವಾಗಿ ಚರ್ಚಿಸುವುದರಿಂದ ಅಲ್ಲಿ ಜನಸಾಮಾನ್ಯರ ಜೀವಂತ ಅನುಭವ ಹರಳುಗಟ್ಟಿಕೊಂಡಿರುವುದನ್ನು ಕಾಣಬಹುದಾಗಿದೆ. ಈ ಅನುಭವಸಂಪತ್ತಿನ ಒಂದು ಭಾಗವಾಗಿಯೇ ಜನಪದಗೀತೆಗಳಲ್ಲಿ ಮೂಡಿಬಂದಿರುವ ತೌರಿನ ಚಿತ್ರವನ್ನು ಗಮನಿಸಬೇಕಾಗುತ್ತದೆ. ತವರು ಎನ್ನುವ ಶಬ್ದಕ್ಕೆ ತಂದೆ-ತಾಯಿ ಬಾಂಧವರು ತನ್ನವರು ಇರುವ ಊರು, ಹುಟ್ಟಿದ ಊರು, ಆಶ್ರಯಸ್ಥಾನ ಎನ್ನುವ ಅರ್ಥಗಳಿವೆ. ಇವೆಲ್ಲಕ್ಕಿಂತ ಮಿಗಿಲಾಗಿ, ಜನಪದಗೀತೆಗಳಲ್ಲಿ ತೌರೂರನ್ನು ಕುರಿತು ತನ್ನ ಭಾವತರಂಗಗಳನ್ನು ವಿಶೇಷವಾಗಿ ಪ್ರಕಟಿಸುವ ಹೆಣ್ಣಿನ ದೃಷ್ಟಿಯಲ್ಲಿ ಪ್ರೀತಿ-ವಾತ್ಸಲ್ಯಗಳ ಅಮೃತವಾಹಿನಿಯಲ್ಲಿ ಅವಳನ್ನು ಮೀಯಿಸುವ, ಬದುಕಿನ ಎಲ್ಲ ಕಷ್ಟಕಾರ್ಪಣ್ಯಗಳಿಂದ ಅವಳನ್ನು ಬಿಡುಗಡೆಗೊಳಿಸಲು ಅಗತ್ಯವಾದ ಸಿದ್ಧೌಷಧವಿರುವ, ಅವಳ ಎಲ್ಲ ಬೇಗುದಿಗಳನ್ನು ಶಮನಗೊಳಿಸುವ, ಜಗತ್ತಿನ ಬೇರೆಡೆಯಲ್ಲೆಲ್ಲೂ ದೊರೆಯದ ಅಪೂರ್ವ ಆನಂದವನ್ನು ಅವಳಿಗೆ ದೊರಕಿಸಿಕೊಡುವ ಸ್ಥಳವೇ ತವರು. ಜನಪದ ಸಾಹಿತ್ಯದಲ್ಲಿ ತೌರಿನ ಹಂಬಲ ವಿಶೇಷವಾಗಿ ವ್ಯಕ್ತವಾಗಿರುವುದು ಹೆಣ್ಣಿನಿಂದಲೇ ಹೊರತು, ಗಂಡಿನಿಂದಲ್ಲ. ಅದರಲ್ಲೂ ಹತ್ತೋ ಹನ್ನೆರಡೋ ವರುಷಕ್ಕೆ ಮದುವೆಯಾಗಿ ತಾನು ಪ್ರೀತಿಸುವ ತಂದೆ-ತಾಯಿ ಸಹೋದರ-ಸಹೋದರಿಯರಿರುವ ತವರೂರನ್ನು ತೊರೆದು ತಾನು ಕಾಣದ ಅತ್ತೆಯ ಮನೆಗೆ ಪ್ರವೇಶಿಸಿದ ಕ್ಷಣದಲ್ಲಿ ಅವಳನ್ನು ಕಾಡುವ ಅಪರಿಚಿತತೆ, ಒಂಟಿತನಗಳು ಅವಳು ಅನಿವಾರ್ಯವಾಗಿ ತವರನ್ನು ನೆನೆಸಿಕೊಳ್ಳುವಂತೆ ಮಾಡುತ್ತವೆ. ಹಾಗೆಯೇ ಅತ್ತೆಯ ಮನೆಯಲ್ಲಿ ತಾನು ನಿರೀಕ್ಷಿಸಿದ ಪ್ರೀತಿ ವಿಶ್ವಾಸಗಳು ತನಗೆ ದಕ್ಕದೆ ಬದುಕು ಬವಣೆಗಳ ಗೂಡು ಎನ್ನಿಸಿದಾಗ ಅವಳಿಗೆ ಥಟ್ಟನೆ ತವರಿನ ನೆನಪಾಗುತ್ತದೆ. ಕೆಲವೊಮ್ಮೆ ಚೊಚ್ಚಲು ಹೆರಿಗೆಗೆಂದೋ, ಮದುವೆ-ಹಬ್ಬಹರಿದಿನವೆಂದೋ, ಸಾವು-ನೋವುಗಳೆಂದೋ ಒಂದೆರೆಡು ದಿನಗಳ ಮಟ್ಟಿಗೆ ತೌರೂರಿಗೆ ಬಂದಾಗ ಹಿಂದೆ ತಾನು ಇಲ್ಲಿದ್ದಾಗಿನ ಸ್ಥಿತಿಯನ್ನೂ ಈಗಿನ ಸ್ಥಿತಿಯನ್ನೂ ಹೆಣ್ಣು ಹೋಲಿಸಿನೋಡುವ ಸಂದರ್ಭವಾಗಿಯೂ ತೌರೂರಿನ ಚಿತ್ರ ಕಾಣಿಸಿಕೊಳ್ಳುತ್ತದೆ. ಈ ಸನ್ನಿವೇಶಗಳನ್ನು ಹೊರತುಪಡಿಸಿ ಗಂಡು ಅಲ್ಲೊಮ್ಮೆ ಇಲ್ಲೊಮ್ಮೆ ತವರಿನ ಪ್ರಸ್ತಾಪ ಮಾಡಿದ್ದರೂ ಅದು ತೌರನ್ನು ಕುರಿತು ಆತನ ಪ್ರೀತಿ ಭಕ್ತಿಯನ್ನಾಗಲೀ ಕಷ್ಟಸುಖವನ್ನಾಗಲೀ ನಿವೇದಿಸುವುದಕ್ಕಲ್ಲ; ತನ್ನ ಹೆಂಡತಿ ಅಥವಾ ಸಹೋದರಿಯೊಂದಿಗೆ ತೌರಿನ ವಿಚಾರಗಳನ್ನು

ಉಲ್ಲೇಖಿಸುವುದಕ್ಕೆ, ವಿವರಿಸುವುದಕ್ಕೆ ಮಾತ್ರ. ಅಂದರೆ ತೌರು ಎಂದಕೂಡಲೇ ತೌರಿನಿಂದ ದೂರದಲ್ಲಿರುವ ಹೆಣ್ಣುಮಕ್ಕಳಲ್ಲಿ ಉಕ್ಕುವ ಪ್ರೀತಿ ಅಭಿಮಾನಗಳು ಬಹುಪಾಲು ತಾನು ಹುಟ್ಟಿದ ಊರಿನಲ್ಲೇ ಕಾಲ ಕಳೆಯಬೇಕಾದ ಪರಿಸ್ಥಿತಿಯಲ್ಲಿರುವ ಗಂಡು ಮಕ್ಕಳಲ್ಲಿ ಕಾಣಿಸಿಕೊಳ್ಳುವುದು ಸಾಧ್ಯವಾಗಿಲ್ಲ ಎನ್ನುವುದು ಈ ಮಾತಿನ ಅರ್ಥ. ಎದುರಿನಲ್ಲಿರುವುದಕ್ಕಿಂತ ದೂರದಲ್ಲಿರುವುದಕ್ಕೇ ಕನಸುವುದು, ಹಂಬಲಿಸುವುದು ಮನುಷ್ಯನ ಸಹಜ ಪ್ರವೃತ್ತಿಯಾಗಿರುವುದೂ ಇದಕ್ಕೆ ಕಾರಣವಾಗಿರಬಹುದು. ಇವತ್ತಿನ ಅಕ್ಷರ ಸಂಸ್ಕೃತಿಯ ಶಿಷ್ಟಸಮಾಜದಲ್ಲಿ ಗಂಡ-ಮಕ್ಕಳೇ ತನ್ನ ಬದುಕಿನ ಸರ್ವಸ್ವ ಎಂದು ಸ್ವಾರ್ಥಪರವಾದ ಆಲೋಚನೆಗಳನ್ನು ಸ್ವಾಭಾವಿಕವಾಗಿಯೇ ಮೈಗೂಡಿಸಿಕೊಳ್ಳಬೇಕಾದ ಹೆಣ್ಣು ಮದುವೆಯಾಗಿ ಹೋದ ಒಂದೆರಡು ವರ್ಷಗಳವರೆಗೆ ಮಾತ್ರ ತಾಯಿಯ ಪ್ರೀತಿಗಾಗಿ ಹಂಬಲಿಸಬಹುದಾದರೂ ಅನಕ್ಷರಸ್ಥ ಸಂಸ್ಕೃತಿಯ ಗ್ರಾಮೀಣ ಹೆಣ್ಣುಮಗಳ ಭಾವನಾತ್ಮಕ ಒತ್ತಡವಾಗಿ ಕಾಣಿಸಿಕೊಳ್ಳುವ ತವರಿನ ಹಂಬಲದ ಸ್ವರೂಪವೇ ಬೇರೆಯಾಗಿ ನಿಲ್ಲುತ್ತದೆ. ಇದಕ್ಕೆ ಆ ಹೆಣ್ಣುಮಗಳು ಬೆಳೆದ ವಾತಾವರಣ, ಕೌಟುಂಬಿಕ ಪರಿಸರ, ತವರಿನ ವಿಚಾರವಾಗಿ ಅವಳ ಕಿವಿಯ ಮೇಲೆ ಆಗಿಂದಾಗ್ಗೆ ಬೀಳುವ ಮಾತುಕತೆಗಳು, ನೆರೆಹೊರೆಯವರ ನಡವಳಿಕೆ, ಅವರೊಂದಿಗಿನ ಒಡನಾಟ ಇತ್ಯಾದಿಗಳೂ ಕಾರಣವಾಗುತ್ತವೆ. ಹತ್ತಾರು ವರ್ಷಗಳ ಕಾಲ ತಂದೆತಾಯಿಯರ ವಾತ್ಸಲ್ಯದ ಮಹಾಪೂರಕ್ಕೆ ಮೈಯೊಡ್ಡಿ, ಅಕ್ಕತಂಗಿಯರ ಅಕ್ಕರೆಯ ಸವಿನೋಡಿ, ಅಣ್ಣತಮ್ಮಂದಿರ ಕಣ್ಣರಕೆಯಲ್ಲಿ ಮಲ್ಲಿಗೆಯಾಗಿ ಮೂಡಿ ಬೆಳುದಿಂಗಳಿನ ತಂಪಾದ ಅನುಭವದಲ್ಲಿ ಕಷ್ಟಕ್ಲೇಶಗಳಿಲ್ಲದೆ ಆನಂದವಾಗಿ ದಿನದೂಡುತ್ತಿದ್ದ ಮುಗ್ಧ ಹೆಣ್ಣುಮಗಳೊಬ್ಬಳು ಎರಡು ದಿನ ಮದುವೆ ಮಂಟಪದಲ್ಲಿ ಮಿನುಗಿ ದಿಢೀರನೆ ಅತ್ತೆ ಮನೆಯೆಂಬ ಅಪರಿಚಿತ ಲೋಕ ಪ್ರವೇಶಿಸಿಬಿಟ್ಟರೆ ಕಣ್ಣುಕಟ್ಟಿ ಕಾಡಿಗೆ ಬಿಟ್ಟವಳಂತೆ ತಳಮಳವನ್ನನುಭವಿಸಬೇಕಾಗುತ್ತದೆ. ಯಾರೂ ಗೊತ್ತಿಲ್ಲದ ಯಾರ ಸ್ವಭಾವವೂ ಪರಿಚಯವಿಲ್ಲದ ಆ ಕ್ಷಣಗಳಲ್ಲಿ ನಿಲ್ಲುವ, ಕೂರುವ, ಓಡಾಡುವ, ಮಲಗುವ, ತಿನ್ನುವ, ಮಾತಾಡುವ ಸಾಮಾನ್ಯ ವಿಚಾರಗಳಲ್ಲೂ ಸಂದಿಗ್ಧತೆ ತಲೆದೋರಿ ಮಾನಸಿಕ ಸಮತೋಲನ ಕಳೆದುಕೊಂಡು ಹುಚ್ಚು ಹಿಡಿದಂತೆ ಒದ್ದಾಡುವ ಪರಿಸ್ಥಿತಿಯಲ್ಲಿ ಬಂಧಿಯಾಗಬೇಕಾಗುತ್ತದೆ. ಅಲ್ಲಿರಲಾಗದೆ ಅಲ್ಲಿಂದ ಓಡಲಾಗದೆ ಅಸಹಾಯಕತೆಯಲ್ಲಿ ಬೇಯುವಾಗ ಅವಳ ಪುಟ್ಟ ಎದೆಗೂಡಲ್ಲಿ ನೂರು ಭಾವತರಂಗಗಳು ಎದ್ದೆದ್ದು ಹೊರಳುತ್ತವೆ. ಆ ಸಂದಿಗ್ಧದಿಂದ ಪಾರಾಗಬಯಸುವ ಅವಳ ಹವಣಿಕೆಯ ಪರಿಣಾಮವಾಗಿಯೇ ಪ್ರೀತಿಯ ತವರು ತನ್ನೆಲ್ಲ ರಂಗಿನೊಂದಿಗೆ ಅವಳ ಬಗೆಗಣ್ಣೆದುರು ಮೂಡಿ ಅವಳನ್ನು ಸಂತೈಸತೊಡಗುತ್ತದೆ. ಮುಂದೆ ಕಾಲ ಉರುಳತೊಡಗುತ್ತದೆ. ಅಪರಿಚಿತರು ಪರಿಚಿತರಾಗುತ್ತಾರೆ. ಪರಿಚಿತರು ಅವರವರ ಸ್ವಭಾವಕ್ಕನುಗುಣವಾಗಿ, ಇವಳು ಹೊಂದಿಕೊಂಡು ಹೋಗುವ ಗುಣಕ್ಕನುಗುಣವಾಗಿ ಆತ್ಮೀಯರೋ ಕೆಡುಕರೋ ಆಗುತ್ತಾರೆ. ತಾನು ಸೇರಿದ ಮನೆಯನ್ನು ಉದ್ಧರಿಸುವ ಕಾಯಕಕ್ಕೆ ತನ್ನನ್ನು ಸಂಪೂರ್ಣವಾಗಿ

ಒಪ್ಪಿಸಿಕೊಳ್ಳಬೇಕಾಗುತ್ತದೆ. ಇತ್ತ ಕಡೆ ತನ್ನ ಸಂಸಾರ ವಿಸ್ತಾರವಾಗುತ್ತ ಹೋದಂತೆಲ್ಲ ಅತ್ತ ತವರಿನಲ್ಲಿ ಪ್ರೀತಿಯ ತಂದೆ-ತಾಯಿ ಸಾವನ್ನಪ್ಪುತ್ತಾರೆ. ಅಣ್ಣತಮ್ಮಂದಿರ ಜೊತೆಗೆ ಅತ್ತಿಗೆ ನಾದಿನಿಯರು ಕಾಣಿಸಿಕೊಳ್ಳುತ್ತಾರೆ. ತವರಿನ ಬಾಂಧವ್ಯ ಕೊಂಚಕೊಂಚವಾಗಿಯೇ ಹಿಂದೆ ಸರಿಯತೊಡಗುತ್ತದೆ. ಆಮೇಲೆ ತವರು ಕೇವಲ ಒಂದು ನೆನಪಾಗಿ ಉಳಿದುಬಿಡುವ, ತೀರಾ ಅನಿವಾರ್ಯ ಸ್ಥಿತಿಯಲ್ಲಿ ಜನನ ಮರಣ ಹಬ್ಬ ಉತ್ಸವಗಳಿಗೆ ಭೇಟಿ ಕೊಡಹುದಾದ ತಾಣವಾಗಿಬಿಡುತ್ತದೆ. ತಾನು ತವರಿನಲ್ಲಿ ಒಬ್ಬ ಅತಿಥಿಯಾಗಿ ಮಾತ್ರ ಕಾಣಿಸಿಕೊಳ್ಳುವ ಸಂದರ್ಭವೂ ಎದುರಾಗಿಬಿಡುತ್ತದೆ. ಕಾಲದ ಪರಿಧಿಯಲ್ಲಿ ತವರು ಹೇಗೆ ಹೆಣ್ಣಿನ ಮನೋಭೂಮಿಕೆಯಲ್ಲಿ ಹಲವು ರೂಪಾಂತರಗಳನ್ನು ತಾಳುತ್ತಾ ಹೋಗುತ್ತದೆನ್ನುವುದಕ್ಕೆ ಇದು ಉದಾಹರಣೆಯಾಗಿದೆ. ಇಲ್ಲೇ ನಾವು ವಿಚಾರ ಮಾಡಬೇಕಾದ ಮತ್ತೊಂದು ವಿಲಕ್ಷಣ ಅಂಶವೂ ಇದೆ. ಅದೆಂದರೆ, ತವರು ಮನೆಯ ಆತ್ಮೀಯ ನೆಲೆಯನ್ನು ತೊರೆದು ಅಪರಿಚಿತವಾದ ಅತ್ತೆಯ ಮನೆಯನ್ನು ಸೆರಿ ಒಳಗೊಳಗೇ ಮೂಗುಬ್ಬಸಪಡುವ ಹೆಣ್ಣುಮಗಳಿಗೆ ಮುಂದಿನ ದಿನಗಳು ಸಹನೀಯವಾಗತೊಡಗಿದರೆ, ತೌರಿನ ಸದಸ್ಯರ ಪ್ರೀತಿಯನ್ನು ಹಿಂದೊತ್ತಿ ಬಿಡುಬಹುದಾದ ಆತ್ಮೀಯ ವಾತಾವರಣ ಅವಳಿಗೆ ಲಭ್ಯವಾದರೆ, ನಿರೀಕ್ಷೆಗೆ ಮೀರಿದ ಸುಖಸಂತೋಷಗಳು ಅವಳಿಗೆ ದಕ್ಕಿದ್ದಾದರೆ ಅವಳು ತವರಿನ ವ್ಯಾಮೋಹಕ್ಕೊಳಗಾಗುವುದಾಗಲೀ ತವರಿಗೆ ಹಂಬಲಿಸುವುದಾಗಲೀ ಸಾಧ್ಯವೇ ಇಲ್ಲ. ಅಂಥ ಸಂದರ್ಭದಲ್ಲಿ ತಾಯಿಯೋ ಅಣ್ಣನೋ ಬಂದು ತವರಿಗೆ ಬರುವಂತೆ ಆಹ್ವಾನಿಸಿದರೂ 'ಹಚ್ಚಡದ ಪದರಾಗ ಅಚ್ಚಮಲ್ಲಿಗಿ ಹೂವ, ಬಿಚ್ಚಿ ನನಮ್ಯಾಲ ಒಗೆವಂಥ ರಾಯರನ ಬಿಟ್ಯಾಂಗ ಬರಲಿ' ಎಂದು ಪ್ರಶ್ನಿಸುತ್ತಾಳೆಯೇ ಹೊರತು ತೌರಿಗೆ ಹೋಗುವುದಕ್ಕೆ ತುದಿಗಾಲಲ್ಲಿ ನಿಲ್ಲಲಾರಳು. ಈ ಸುಖದ ಸ್ಪಂದನಗಳಿಂದ ಮೈಮರೆತ ಅವಳು ತಾನು ತವರಿನಲ್ಲಿದ್ದಾಗ ಕಂಡಿದ್ದ 'ಕುದುರೇಯ ಕುಣಿಸುತ್ತ, ಆನೇಯ ನಡೆಸುತ್ತ, ಅರಗಿಣಿಗೆ ಮಾತ ಕಲಿಸುತ್ತ' ಬರುತ್ತಿದ್ದ ತಮ್ಮ ನೆನಹಿನಿಂದ ಜಾರಿ ಹೋಗುತ್ತಾನೆ. ದಾರಿಯಲ್ಲಿ ಎದುರಾದ ಹೂವಾಡಿಗನನ್ನು ನಿಲ್ಲಿಸಿ ತನ್ನ ಪ್ರೀತಿಯ ತಂಗಿಗಾಗಿ 'ಅಚ್ಚ ಮಲ್ಲಿಗಿ ಹೂವ ಮುಚ್ಚಿ ಮಾರುವ ಜಾಣ, ನಾ ಕೊಳ್ಳುವೆನಿದರ ಬೆಲೆ ಹೇಳೋ' ಎನ್ನುತ್ತಿದ್ದ ಅಣ್ಣನನ್ನೂ ಮರೆತು ಬಿಡುತ್ತಾಳೆ. ತನ್ನ ಕಷ್ಟಸುಖಗಳಲ್ಲಿ ಪಾಲುಗಾರ್ತಿಯರಾಗುತ್ತಿದ್ದ ಅಕ್ಕತಂಗಿಯರೂ ಮನಸ್ಸಿನಿಂದ ಮರೆಯಾಗಿಬಿಡುತ್ತಾರೆ. ಅತ್ತೆಯ ಮನೆಯಲ್ಲಿ ದೊರೆಯಬಹುದಾದ ತೀವ್ರತರವಾದ ಪ್ರೀತಿ 'ಹೆಣ್ಣಿಗೆ ತೌರೂರು ರಸಬಾಳೆ ಹಣ್ಣಂತೆ, ಮಲೆನಾಡು ತುಡುಬೆ ಜೇನಂತೆ' ಹಾಗೂ'ಹೆಣ್ಣೀಗೆ ತಾಯಾಸೆ ತೌರ ಮನೆಯಾಸೆ' ಎನ್ನುವಂಥ ತಾಯಿಯನ್ನೂ ತಾಯಿ ಇರುವ ತವರೂರನ್ನೂ ಮರೆಸಿಬಿಡಲು ಶಕ್ತವಾಗುತ್ತದೆ.

ಅತ್ತೆಮನೆ ಸೇರಿದ ಹೆಣ್ಣಿಗೆ ಸಾಮಾನ್ಯವಾಗಿ ತವರೂರಿನ ನೆನಪಾಗುವುದು ಎರಡು ಸಂದರ್ಭಗಳಲ್ಲಿ ಮಾತ್ರ. ಒಂದು-ಅನುಭವಿಯಾದ, ಲೋಕದ ನಡೆನುಡಿಯ ಪರಿಚಯವಿಲ್ಲದ, ಜನರ ಗುಣಸ್ವಭಾವಗಳನ್ನರಿಯದ, ಓರಗೆಯ ಗೆಳೆಯ, ಗೆಳತಿಯರೊಂದಿಗೆ

ಅಭಿವಂದನಾ

ಆಟವಾಡಿಕೊಂಡು ಕಾಲಕಳೆಯುತ್ತಿರುವ ಹೆಣ್ಣುಮಗಳನ್ನು ದಿಢೀರನೆ ಹಸೆಮಣೆಗೇರಿಸಿ ಮದುವೆಶಾಸ್ತ್ರ ಮುಗಿಸಿ ಅತ್ತೆಯ ಮನೆಗೆ ಕಳುಹಿಸಿಬಿಟ್ಟಾಗ ಹಿಂದುಮುಂದು ತಿಳಿಯದ ಆಕೆ ಕಣ್ಣಕಣ್ಣು ಬಿಡುತ್ತಾ ಕಂಗಾಲಾಗಿ ನಿಲ್ಲುವ ಪರಿಸ್ಥಿತಿಯಲ್ಲಿ ತಾನು ಹಿಂದೆ ತೌರಿನಲ್ಲಿ ಕಳೆದ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾಳೆ.'ತಾಯವ್ವ ನೀ ಬಿಟ್ಟರೂ ನಿನ್ನ ಮನೆ ಬಿಡದು, ನನ್ನವ್ವಾ ನಿನ್ನಾಸೆ ನನ್ನ ಬಿಡದಲ್ಲೆ' ಎಂದು ತಾಯನ್ನೂ ತವರನ್ನೂ ಒಟ್ಟಾಗಿ ನೆನೆಸಿಕೊಳ್ಳುತ್ತಾಳೆ. 'ಬಾರೋ ಬಾರೋ ನನ್ನ ಬಣ್ಣದೊಲ್ಲಿಯ ತಮ್ಮ' ಎಂದು ತನ್ನ ತಮ್ಮನನ್ನು ಸ್ಮರಿಸಿಕೊಳ್ಳುತ್ತಾಳೆ. ಬಳೆಗಳನ್ನು ತೊಟ್ಟು ಆನಂದಿಸುವ ಭಾಗ್ಯವಿಲ್ಲದ ತನ್ನ ತೌರಿಗೆ ಬಳೆಗಾರನನ್ನು ಕಳುಹಿಸಿಕೊಡಲು ಮುಂದಾಗುತ್ತಾಳೆ. ಕಂಚಿನ ಕದ, ಮಾತಾಡುವ ಗಿಣಿಗಳಿಂದ ಕೂಡಿದ ಹಂಚಿನ ಮನೆಯೇ ತನ್ನ ತವರು ಮನೆಯೆಂದು ಪರಿಚಯ ಮಾಡಿಕೊಡುತ್ತಾಳೆ. ಮುತ್ತಿನ ಚಪ್ಪರ ಹಾಕಿಸಿಕೊಂಡು ನಡುಮನೆಯಲ್ಲಿ ಪಗಡೆಯಾಡುತ್ತ ಕುಳಿತಿರುವ ತನ್ನ ಹಡೆದವ್ವನನ್ನು ಪರಿಚಯಿಸುತ್ತಾಳೆ. ತೌರೂರು ಹಾದೀಲಿ ಕಲ್ಲಿಲ್ಲ ಮುಳ್ಳಿಲ್ಲ, ಸಾಸುವೆಯಷ್ಟು ಮರಳಿಲ್ಲ. ಬಾನಲ್ಲಿ ಬಿಸಿಲಿನ ಬೇಗೆ ಸುಡಲಿಲ್ಲ ಎನ್ನುವ ಮೂಲಕ ತವರಿನ ಬಗ್ಗೆ ತನ್ನ ಹೃದಯದಲ್ಲಿ ತುಂಬಿಕೊಂಡ ಪ್ರೀತಿ, ಅಭಿಮಾನಗಳನ್ನು ಹೃದಯಂಗಮವಾಗಿ ಹೊರಹಾಕುತ್ತಾಳೆ. ಇದೆಲ್ಲ ಅವಳ ಎಳೆಯ ಮನಸ್ಸಿನಲ್ಲಿ ಮೂಡುವ ಮುಗ್ಧಪ್ರೀತಿಯ ಘನೀಕೃತ ರೂಪ ಎನ್ನಬಹುದು. ಹೆಣ್ಣು ತವರನ್ನು ನೆನೆಸಿಕೊಳ್ಳಲು ಕಾರಣವಾಗುವ ಮತ್ತೊಂದು ಅಂಶವೆಂದರೆ ಬದುಕಿನಲ್ಲಿ ಅವಳು ಎದುರುಗೊಳ್ಳುವ ಕಷ್ಟನಿಷ್ಠುರ, ನೋವುನರಳಿಕೆಗಳು. ಅತ್ತೆಯ ಮನೆಯ ಬಾಳುವೆ ಹಿಂಸಾಜನಕವಾಗಿ ಪರಿಣಮಿಸಿ ಕಣ್ಣೀರ ಕಡಲಿನಲ್ಲಿ ಅವಳು ಈಸುವಂತಾದರೆ ಅಥವಾ ತಾನು ತವರಿನ ಬಗೆಗೆ ತೋರುವ ಪ್ರೀತಿ, ಅಭಿಮಾನಗಳಿಗೆ ಸೂಕ್ತ ಪ್ರತಿಕ್ರಿಯೆ ತವರಿನಿಂದ ಬಾರದೇ ಹೋದುದಾದರೆ ಆಗಲೂ ಆಕೆ ತನಗೆ ಭ್ರಮನಿರಸನವಾದ ಬಗೆಯನ್ನು ಹೇಳಿಕೊಳ್ಳಲು ಮುಂದಾಗುತ್ತಾಳೆ. ಆದ್ದರಿಂದಲೇ ತವರನ್ನು ಕುರಿತು ಅತ್ಯಂತ ಉತ್ಕಟವಾದ, ಪರಮಾಪ್ತವಾದ ಅಭಿಮಾನವನ್ನು ವ್ಯಕ್ತಪಡಿಸಿರುವ ಹೆಣ್ಣುಮಗಳೆ ಕೆಲವೊಮ್ಮೆ 'ಗಂಜೀಯ ಕುಡಿದರೂ ಗಂಡನ ಮನೆ ಲೇಸು, ಹಂಗೀನ ತವರು ಮನೆ ಸಾಕು' ಎಂದು ಹೇಳಿ ನಮ್ಮನ್ನು ಚಕಿತಗೊಳಿಸುವುದುಂಟು. ಹೊರಗಿನಿಂದ ಬಂದ ಹೆಣ್ಣುಮಗಳಿಗೆ ಅತ್ತೆಯ ಮನೆಯ ಸದಸ್ಯರಿಂದ ಸ್ವಲ್ಪಮಟ್ಟಿಗೆ ಕಾಟವಿರುವುದು ನಿಜವಾದರೂ ದಿನಗಳು ಕಳೆಯುತ್ತ ಹೋದಂತೆ ಇದು ಗಂಡನ ಮನೆ, ಇದು ತನ್ನ ಮನೆ ಅತ್ತೆ ನಾದಿನಿಯರು ಎಷ್ಟೇ ಕಿರುಕುಳ ನೀಡಿದರೂ ಗಂಡನ ಪ್ರೇಮಕ್ಕಾಗಿ ಅವನ್ನೆಲ್ಲ ಸಹಿಸಿಕೊಳ್ಳಬೇಕು. ತಾನು ಬಾಳಿ ಬದುಕಬೇಕಾಗಿರುವುದು ಇಲ್ಲಿಯೇ. ತನಗೆ ತವರೆಂದೂ ಸ್ಥಿರವಲ್ಲ ಎಂಬ ಭಾವನೆಯೂ ಬಲಿಯುತ್ತ ಹೋಗುತ್ತದೆ. ಅಲ್ಲದೆ ತಾಯಿಲ್ಲದ ತವರಿನಲ್ಲಿ ಅವಳಿಗೆ ದೊರೆಯುವ ಗೌರವವಾದರೂ ಅಷ್ಟರಲ್ಲೇ ಇರುತ್ತದೆ. ಎಷ್ಟೋ ಬಾರಿ ತವರಿನ ಬಗೆಗೆ ನೂರೆಂಟು ಆಸೆ ಕನಸುಗಳನ್ನು ಹೆಣೆದುಕೊಂಡು ಹೋದ ಹೆಣ್ಣುಮಗಳಿಗೆ ಅತ್ತಿಗೆ ನಾದಿನಿಯರಿಂದ

ಅವಮಾನವಾಗುವ ಸಂದರ್ಭಗಳೂ ಏರ್ಪಡುತ್ತವೆ. ಆಗ ಅವಳು ಸಹಜವಾಗಿಯೇ 'ಹಡೆದವ್ವ ಇರೋ ತನಕ ತೌರೀನ ಮನೆ ನಮದು, ಹಡೆದವ್ವ ತೀರಿ ದಿನವೊಂದು ಕಳೆದರೆ ತೌರಿನವರ್ಯಾರೋ ನಾವ್ಯಾರೋ' ಎಂದು ಭಾವಿಸುತ್ತಾಳೆ. 'ತಾಯಿಲ್ಲದ ತವರನ್ನು ಬಯಸದಿರು ನನ ಮನವೇ, ಮೇವಿಲ್ಲದ ಹೊಲಕೆ ಕರು ಹೋಗಿ ಅಳುವಂತೆ ತಾಯಿಲ್ಲದ ತವರಲ್ಲಿ ಹೆಣ್ಣ ಗೋಳು' ಎಂದು ತನಗೆ ತಾನೆ ಬುದ್ಧಿ ಹೇಳಿಕೊಳ್ಳುತ್ತಾಳೆ. ಹಿಂದೊಮ್ಮೆ 'ತವರೂರ ಹಾದೀಲಿ ಕಲ್ಲಿಲ್ಲ ಮುಳ್ಳಿಲ್ಲ ಸಾಸುವೆಯಷ್ಟು ಮರಳಿಲ್ಲ' ಎಂದು ಹೇಳಿದ್ದವಳೇ ತಾಯಿಲ್ಲದ ತವರಿನಲ್ಲಿ ತನ್ನ ವಿಚಾರಿಸಿಕೊಳ್ಳುವವರು, ಆದರಿಸುವವರು, ಪ್ರೀತಿಸುವವರು ಇಲ್ಲದೆ ನಿರಾಶೆಗೊಂಡು ಅತ್ತೆಯ ಮನೆಗೆ ವಾಪಸ್ಸಾಗಲು ತನ್ನ ಸೊಸೆ ಇಷ್ಟುಬೇಗ ತವರಿನಿಂದ ಹಿಂದಿರುಗಲು ಕಾರಣವೇನೆಂದು ಅತ್ತೆ ಪ್ರಶ್ನಿಸಿದಾಗ ತನ್ನ ಪ್ರೀತಿಯ ತವರನ್ನು ಕುರಿತು ಅವಳು 'ಹೋಗುತ್ತ ಹುಲಿ ಕಂಡೆ, ಬರುತ್ತಾ ಕರಡಿ ಕಂಡೆ, ತೌರೂರ ಹಾದೀಲಿ ಏಳ್ಹಾವು ಸರ್ಪನ ಕಂಡು ಹಿಂದಿರುಗಿ ಬಂದೆ ಅತ್ಯಮ್ಮ' ಎಂದು ಮಾರ್ಮಿಕವಾದ ಮಾತುಗಳನ್ನಾಡುತ್ತಾಳೆ.

'ನಾವಿಬ್ಬರು ನಮಗೊಂದೇ ಮಗು' ಎನ್ನುವ ನೀತಿಯನ್ನು ಅಳವಡಿಸಿಕೊಂಡು ಐಷಾರಾಮದ ಬದುಕಿಗೆ ಮಾರು ಹೋಗಿ ಎಷ್ಟು ದುಡಿದರೂ ಸಾಲದೆನ್ನುವ ಹಳಹಳಿಕೆಯಲ್ಲೇ ಕಾಲ ದೂಡುತ್ತ, ಗಂಡ ಹೆಂಡತಿ ಮಕ್ಕಳ ಸುತ್ತ ಒಂದು ಉಕ್ಕಿನ ಕೋಟೆಯನ್ನೇ ಕಟ್ಟಿಕೊಂಡು ನೆಂಟರಿಷ್ಟರಿಗೆ ಪ್ರವೇಶ ನಿಷೇಧಿಸಿ, ತಾವೂ ಆ ಲಕ್ಷ್ಮಣರೇಖೆಯಿಂದಾಚೆಗೆ ಹೋಗಲು ಅಪೇಕ್ಷಿಸದೆ, ಬದುಕಿನ ಸರ್ವಸುಖಗಳನ್ನೂ ಆ ಕೋಟೆಯೊಳಗೇ ಅನುಭವಿಸುವ ಹವಣಿಕೆಯಲ್ಲಿರುವ ದಂಪತಿಗಳು ಇವತ್ತಿನ ದಿನಗಳಲ್ಲಿ ತೌರಿನ ಕಲ್ಪನೆಯಿಂದ ದೂರನಿಂತವರೂ ಅದರ ಸುಖಾನುಭವದಿಂದ ವಂಚಿತರಾದವರೂ ಆಗಿದ್ದಾರೆ. ಹೀಗೆ ಬದಲಾದ ಪರಿಸ್ಥಿತಿಲ್ಲೂ ಹಿಂದೊಮ್ಮೆ ತವರು ಎನ್ನುವುದು ಹೆಣ್ಣು ಮಕ್ಕಳ ಪಾಲಿಗೆ ಎಂಥ ಆಪ್ಯಾಯಮಾನವೂ ಮಧುರವೂ ಆದ ಸುಖದ ಅನುಭವವನ್ನು ಸ್ಪಂದನವನ್ನು ಉಂಟುಮಾಡುತ್ತಿದ್ದ ತಾಣವಾಗಿತ್ತು ಎಂದು ನೆನಪಿಸಿಕೊಳ್ಳಲು ಸಹಾಯಕವಾಗುವ ಒಂದು ಬಿಡಿ ಪದ್ಯವನ್ನು ಇಲ್ಲಿ ಚರ್ಚೆಗೆತ್ತಿಕೊಳ್ಳಬಹುದಾಗಿದೆ. 'ತೊಟ್ಟಿಲ ಹೊತ್ಕೊಂಡು, ತೌರ್ಬಣ್ಣ ಉಟ್ಕೊಂಡು, ಅಪ್ಪ ಕೊಟ್ಟೆಮ್ಮೆ ಹೊಡ್ಕೊಂಡು ತೌರೂರ ತಿಟ್ಟಹತ್ತಿ ತಿರುಗಿ ನೋಡ್ಯಾಳೋ' ಎನ್ನುವ ಪದ್ಯ ತೌರು ಮತ್ತು ಹೆಣ್ಣುಮಗಳ ನಡುವೆ ಒಂದು ಕಾಲದಲ್ಲಿ ರೂಪುಗೊಂಡಿದ್ದ, ಮಾತಿನಲ್ಲಿ ಬಣ್ಣಿಸಲಾಗದ ಆತ್ಮೀಯ ಬಾಂಧವ್ಯವನ್ನು ಅತ್ಯಂತ ಸುಂದರವಾಗಿ ಮಂಡಿಸುತ್ತದೆ ಮಾತ್ರವಲ್ಲ ಅಂಥ ಆತ್ಮೀಯವೂ ಮಾನವೀಯವೂ ಆದ ಸಂಬಂಧಗಳಿಂದ ದೂರನಿಂತ ಬೆಂತರಗಳಂತಿರುವ ಇಂದಿನ ಹೆಣ್ಣುಮಕ್ಕಳ ದೌರ್ಭಾಗ್ಯವನ್ನೂ ಅದು ಸೂಚಿಸುತ್ತದೆ. ಚೊಚ್ಚಲು ಹೆರಿಗೆಗೆ ತವರು ಮನೆಗೇ ಹೋಗಬೇಕೆಂಬ ಹೆಣ್ಣಿನ ತವಕ, ಮೊದಲ ಹೆರಿಗೆ ತವರು ಮನೆಯಲ್ಲೇ ಆಗಬೇಕೆಂದು ಪ್ರೀತಿ ಕಾತರಗಳಿಂದ ಅವಳನ್ನು ಕರೆದೊಯ್ಯುವ ತಂದೆತಾಯಿ ಅಣ್ಣಂದಿರು, ಅಲ್ಲಿ ಅವಳು ತನ್ನ ಬಯಕೆಯಂತೆ ಬೇಕಾದ್ದನ್ನು

ಮಾಡಿಸಿಕೊಂಡು ತಿನ್ನಬಹುದು. ನಿಸ್ಸಂಕೋಚವಾಗಿ ಅನ್ನಿಸಿದ್ದನ್ನೆಲ್ಲ ಹೇಳಬಹುದು, ಬೇಕೆನಿಸಿದ್ದನ್ನೆಲ್ಲ ಕೇಳಬಹುದು. ಅಲ್ಲಿ ಆಸರಿಕೆ ಬೇಸರಿಕೆಗಳಿಗೆ ಅವಕಾಶವಿಲ್ಲ. ಒತ್ತಡ ಕಳವಳಗಳಿಗೆ ಎಡೆಯಿಲ್ಲ, ತಂದೆಯ ವಾತ್ಸಲ್ಯದ ಆಸರೆಯಲ್ಲಿ ಮಗಳ ಸಂತೋಷವೊಂದನ್ನೇ ಗುರಿಯಾಗಿಸಿಕೊಂಡ ತಾಯಿಯ ಮಮತೆಯ ಮಡಿಲಲ್ಲಿ. ಅಣ್ಣತಮ್ಮಂದಿರ ಅಕ್ಕರೆಯ ತೋಳ್ತೆಕ್ಕೆಯಲ್ಲಿ ಸಂಭ್ರಮದಲ್ಲಿ ದಿನಗಳು ಉರುಳುತ್ತಿರುವಾಗ ಅವಳ ಕರುಳಕುಡಿ ಧರೆಗೆ ಅಡಿಯಿರಿಸುತ್ತದೆ. ಮುಂದಿನ ನಾಲ್ಕಾರು ತಿಂಗಳು ತವರಿನ ತಂಪಾದ ಅನುಭವದಲ್ಲಿ ಜಾರಿಹೋದದ್ದೇ ಅವಳ ಅರಿವಿಗೆ ಬರಲಾರದು. ಕೊನೆಗೂ ತನ್ನ ಮಡಿಲುತುಂಬಿದ ಕಂದಮ್ಮನೊಡನೆ ತವರಿನಿಂದ ಗಂಡನ ಮನೆಗೆ ತೆರಳುವ ಅಸಹನೀಯ ವೇದನೆಯ ದಿನವೂ ಬಂದೇಬಿಡುತ್ತದೆ. ತವರೂರಿನ ಗಡಿಯಂತಿರುವ ತಿಟ್ಟಿನವರೆಗೆ ಅವಳನ್ನು ಬೀಳ್ಕೊಡುವ ಸಲುವಾಗಿ ತಂದೆತಾಯಿ ಸಹೋದರ ಸಹೋದರಿಯರೆಲ್ಲ ಬರುತ್ತಾರೆ. ಎಲ್ಲರ ಹೃದಯ ಭಾರವಾಗಿದೆ. ಕಣ್ಣು ನೀರುತುಂಬಿಕೊಂಡಿವೆ. ಮಾತು ಮೂಕವಾಗಿದೆ. ಎಲ್ಲ ತುಸು ಹೊತ್ತು ನಿಂತು ಮಾತಿಗೆ ಮೀರಿದ ಮೌನದಲ್ಲೇ ಭಾವನೆಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಕಂದಮ್ಮನಿರುವ ತೊಟ್ಟಿಲು ತಾಯಿಯಿಂದ ಮಗಳ ತಲೆಯ ಮೇಲ್ಗಡೆಗೆ ಸರಿಯುತ್ತದೆ. ತವರಿನ ಬಳುವಳಿಯಾದ ಹಾಲು ಕರೆಯುವ ಎಮ್ಮೆಯನ್ನು ಅದಕ್ಕೆ ಕಟ್ಟಿರುವ ಹಗ್ಗದ ಮೂಲಕ ಅಪ್ಪ ಮಗಳಿಗೆ ದಾಟಿಸುತ್ತಾನೆ. ಅಗಲಿಕೆಯ ಕ್ಷಣ ಸಮೀಪಿಸಿದಂತೆ ಕಣ್ಣುತುಂಬಿದ್ದ ನೀರು ಸಶಬ್ದವಾಗಿ ಜಾರುತ್ತ ಕೋಡಿಯಾಗಿ ಕೆಳಗಿಳಿಯುತ್ತದೆ.ಕೀಳಲಾಗದ ಕಾಲನ್ನು ಬಲವಂತವಾಗಿ ಎತ್ತಿ ಹಾಕುತ್ತ ಹೆಣ್ಣುಮಗಳು ಅತ್ತೆಯೂರಿನ ಕಡೆಗೆ ಹೆಜ್ಜೆಯಿರಿಸುತ್ತಾಳಾದರೂ ದೂರವಾಗುತ್ತಿರುವ ತಂದೆತಾಯಿ ಸಹೋದರ ಸಹೋದರಿಯರತ್ತ ತಿರುತಿರುಗಿ ನೋಡುತ್ತ ತವರೂರಿನ ಚಿತ್ರವನ್ನು ಕಣ್ಣಲ್ಲಿ ತುಂಬಿಕೊಳ್ಳುತ್ತ ನಡೆಯುತ್ತಾಳೆ. ತವರಿನ ಬಗೆಗೆ ಅವಳಲ್ಲಿರುವ ಪ್ರೀತಿ ಅಭಿಮಾನಗಳೆಲ್ಲ ಸರಳ ಸುಂದರವಾಗಿ ಆದರೆ ಅತ್ಯದ್ಭುತ ಎನಿಸುವಂತೆ ಸೆರೆಹಿಡಿಯಲ್ಪಟ್ಟಿರುವ ಈ ಚಿತ್ರ 'ಸ್ವಭಾವೋಕ್ತಿ'ಗೆ ಅತ್ಯುತ್ತಮ ನಿದರ್ಶನವಾಗಿದೆ. ಜನಪದ ಗೀತೆಗಳಲ್ಲಷ್ಟೇ ಕಾಣಿಸಿಕೊಂಡು ಯಂತ್ರನಾಗರೀಕತೆಯ ಗರಬಡಿದುಕೊಂಡಿರುವ ಇಂದಿನ ಸಮಾಜದಲ್ಲಿ ಪೂರ್ಣವಾಗಿ ಕಣ್ಮರೆಯಾಗುತ್ತಿರುವ ತವರಿನ ಇಂಥ ಆತ್ಮೀಯ ವಿವರಗಳನ್ನು, ಸುಂದರ ಚಿತ್ರಗಳನ್ನು ನಾವು ಇನ್ನೆಂದಾದರೂ ಕಾಣಲು ಸಾಧ್ಯವಾದೀತೆ?

***

ಅಭಿವಂದನಾ

ಕರ್ನಾಟಕದಲ್ಲಿ ಹಿಂದೂ ಮುಸ್ಲಿಮ್ ಭಾವೈಕ್ಯತೆ

ಎಂ.ಬಿ. ಪಾಟೀಲ

ಧರ್ಮ ಯಾವುದಾದರೂ ತತ್ತ್ವ ಒಂದು
ನಾಮ ನೂರಾದರೂ ದೈವ ಒಂದು
ಪೂಜೆ ಯಾವುದಾದರೂ ಭಕ್ತಿ ಒಂದು
ಭಾಷೆ ಭಿನ್ನವಾದರೂ ಭಾವ ಒಂದು
ಕರ್ಮ ಹಲವಾದರೂ ನಿಷ್ಠೆ ಒಂದು.

ಭಾರತಕ್ಕೆ ಸುದೀರ್ಘವಾದ ತಾಂತ್ರಿಕ ಹಿನ್ನೆಲೆ ಇದೆ. ಪ್ರಪಂಚದ ಬಹುಭಾಗವು ಇನ್ನೂ ಅನಾಗರಿಕ ಸ್ಥಿಯಲ್ಲಿದ್ದಾಗಲೆ ಭಾರತವು ಅತ್ಯಂತ ಉನ್ನತಮಟ್ಟದ ನಾಗರಿಕತೆಯನ್ನು ಹೊಂದಿತ್ತು. ಭಾರತದಲ್ಲಿ ಬೇರೆ ಬೇರೆ ಮತಧರ್ಮಗಳು, ಜಾತಿಗಳು ವಿಪುಲವಾಗಿ ಬೆಳೆದು ಬಂದಿದ್ದರೂ ಅನ್ಯಧರ್ಮಗಳನ್ನು ಅನ್ಯ ಧರ್ಮೀಯರನ್ನು ಕಡೆಗಾಣಿಸಿಲ್ಲ. ದೇವನೊಬ್ಬ, ನಾಮ ಹಲವು ಎಂಬ ತತ್ತ್ವವನ್ನು ನಂಬಿ ಇಂದಿಗೂ ಆಚರಣೆಗೆ ತರಲಾಗುತ್ತಿದೆ. 'ಇಸ್ಲಾಂ ಹಾಗೂ ಹಿಂದೂ ಧರ್ಮಗಳ ಜೀವನ ಕ್ರಮಗಳು ಪರಸ್ಪರರ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರಿ ಪರಸ್ಪರರಲ್ಲಿ ಬಂಧುತ್ವ ಭಾವನೆಯನ್ನು ಬೆಳಸಿ, ಈ ನಾಡಿನಲ್ಲಿ ಮುಂದುವರೆದುಕೊಂಡು ಬರುತ್ತಿರುವುದು ನಾಡಿನ ಚರಿತ್ರೆಯನ್ನು ಅವಲೋಕಿಸಿದಾಗ ನಮಗೆ ಗೋಚರವಾಗುವುದು.

'ಹಿಂದುತ್ವ' ಎಂಬ ಪದವು ಬಹು ವ್ಯಾಪಕವಾಗಿ ರೂಢಿಯಲ್ಲಿದ್ದರೂ ಅದು ತನ್ನ ಸಂಕೀರ್ಣತೆಯನ್ನು ಕಳೆದುಕೊಂಡಿಲ್ಲ. ಅದರ ಸದುಪಯೋಗಕ್ಕಿಂತ ದುರುಪಯೋಗವೇ ವಿವಿಧೋದ್ದೇಶ ಗುರಿಗಳನ್ನು ಸಾಧಿಸಲು ಹೆಚ್ಚು ಬಳಕೆಯಾಗುತ್ತಿರುವುದು. 'ಧರ್ಮ' ಎಂಬ ಪದದ ಅತ್ಯಂತ ಸೂಕ್ಷ್ಮ ಮತ್ತು ಭಾವನಾತ್ಮಕ ಸಂಬಂಧವನ್ನು ಕೆರಳಿಸಿ ರಾಜಕೀಯಕ್ಕಾಗಿ ಬಳಸಿಕೊಳ್ಳುವುದು ಇಂದು ನಮ್ಮ ದೇಶದಲ್ಲಿ ಸರ್ವೇಸಾಮಾನ್ಯವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ನಂತರದ ಹಲವು ದಶಕಗಳಲ್ಲಿ ಪರಿಸ್ಥಿತಿ ಇಷ್ಟೊಂದು ವಿಷಮತೆಯಿದ ಕೂಡಿರಲಿಲ್ಲ.'ಹಿಂದು ಮಹಾಸಭಾ' ನಾಯಕ ವೀರಸಾವರಕರ ಅವರಂತಹ, ಕಟ್ಟಾ ದೇಶಾಭಿಮಾನಿ ೧೯೨೪ರಲ್ಲಿ ನಿರ್ಮಿಸಿದ ಪದವೇ 'ಹಿಂದುತ್ವ'.

ಇತ್ತೀಚೆಗೆ ಕಂಡುಬರುತ್ತಿರುವ ಕೋಮು ಗಲಭೆಗಳಿಗೆ ಯಾವುದೇ ನಿರ್ದಿಷ್ಟ ಕಾರಣಗಳಿಲ್ಲ. ಅನೇಕ ಸಂದರ್ಭಗಳಲ್ಲಿ ಅತ್ಯಂತ ಕ್ಷುಲ್ಲಕ, ವೈಯಕ್ತಿಕ ಹಿತಾಸಕ್ತಿಯಿಂದ ಪ್ರೇರಿತವಾದಂತಹ ಸಂಗತಿಗಳನ್ನು ಆಧರಿಸಿ, ಪರಸ್ಪರ ತಪ್ಪು ತಿಳಿವಳಿಕೆಯಿಂದ, ಧಾರ್ಮಿಕ ಮೂಲಭೂತವಾದಿಗಳಿಂದ ಪ್ರಚೋದಿತರಾಗಿ ಕೋಮು ಗಲಭೆಗಳು ನಡೆದ ಉದಾಹರಣೆಗಳು ಉಂಟು. ಅನೇಕ ಸಂದರ್ಭಗಳಲ್ಲಿ ಈ ಮತೀಯ ಗಲಭೆಗಳ ಕೇಡಿನ ಕಿಡಿಗಳು

ದಾವಾನಲದಂತೆ ಆವರಿಸಿ ಅನೇಕ ಅಮಾಯಕರ ಪ್ರಾಣಹಾನಿ ಮತ್ತು ಆಸ್ತಿಪಾಸ್ತಿಗಳ ಲೂಟಿಯು ನಡೆದಿರುವ ಸಂಗತಿಯೂ ನಮಗೆಲ್ಲ ಪರಿಚಿತವಾದ ವಿಷಯವೆ.

ಕೇಂದ್ರ ಗೃಹ ಮಂತ್ರಾಲಯದ ಇತ್ತೀಚಿನ ವರದಿ ತಿಳಿಸುವಂತೆ ಮತೀಯ ಗಲಭೆಗಳಲ್ಲಿ ಭಾರತದಲ್ಲಿ ೧೯೮೯ರಲ್ಲಿ ೨೯೯ ಜನರು ಮರಣ ಹೊಂದಿದ್ದರೆ ಅದರ ಮುಂದಿನ ವರ್ಷ ಸತ್ತವರ ಸಂಖ್ಯೆ ೮೦೨ ಕ್ಕೆ ಹೆಚ್ಚಳಗೊಂಡಿತು. ೧೯೯೦ ರ 'ರಥಯಾತ್ರೆ' ಯ ಸಮಯದಲ್ಲಿ ಉಂಟಾದ ಮತೀಯ ಗಲಭೆಗಳಿಂದ ಸತ್ತವರ ಸಂಖ್ಯೆ ಸುಮಾರು ೧೨೪೮ ಅದರ ಮುಂದಿನ ವರ್ಷ ೧೯೯೨ರಲ್ಲಿ ಐತಿಹಾಸಿಕ ಬಾಬ್ರಿ ಮಸೀದಿ ನೆಲಸಮವಾದ ಘಟನೆಯ ಪ್ರಚೋದನೆಯಿಂದ ಕಳೆದ 'ಮೂರು ದಶಕಗಳಲ್ಲಿ ಆಗದೇ ಇರುವಷ್ಟು ಬೃಹತ್ ಪ್ರಮಾಣದಲ್ಲಿ ಜೀವಹಾನಿ ಮತ್ತು ಹೆಚ್ಚು ಜನರಿಗೆ ಪೆಟ್ಟು ಬಿದ್ದ ವರ್ಷ' ಎಂದು ಗೃಹ ಮಂತ್ರಾಲಯದ ವರದಿಯಲ್ಲಿ ತಿಳಿಸಲಾಗಿದೆ. ಹಿಂದೆ ಇಲ್ಲದಿದ್ದರೂ ಇತ್ತೀಚೆಗೆ ಹೊಸದಾಗಿ ಕೋಮು ಗಲಭೆಗಳನ್ನು ಕಂಡ ರಾಜ್ಯಗಳೆಂದರೆ ಉತ್ತರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಮತ್ತು ಅಸ್ಸಾಮ ಎಂದು ವರದಿಯಾಗಿದೆ. ಈ ಮೇಲಿನ ಅಂಕಿ ಅಂಶಗಳಿಂದ ನಮ್ಮ ದೇಶದಲ್ಲಿ ವಿಷವೃಕ್ಷವಾಗಿ ರಕ್ತಬೀಜಾಸುರರಂತೆ ಹೆಚ್ಚುತ್ತಿರುವ ಮತಾಂಧತೆಯ ಪರಿಕಲ್ಪನೆ ಅರಿವಾಗುವುದು. ಇದನ್ನು ಕುರಿತೇ ದಾರ್ಶನಿಕ ಡಾ|| ಸರ್ವಪಲ್ಲಿ ರಾಧಾಕೃಷ್ಣನ್ ಅವರು 'ಮಾನವನು ಹಕ್ಕಿಯಂತೆ ಹಾರುವುದನ್ನು ನೀರಿನಲ್ಲಿ ಮೀನಿನಂತೆ ತೇಲುವುದನ್ನು ಕಲಿತರೂ ಭೂಮಿಯ ಮೇಲೆ ಮಾನವರಂತೆ ಬಾಳುವುದನ್ನು ಇನ್ನೂ ಕಲಿತಿಲ್ಲ 'ಎಂದು ಉಲ್ಲೇಖಿಸಿರುವರು.

ಹಿಂದೂ ಧರ್ಮ

'ಧರ್ಮ' ಎಂಬ ಪದಕ್ಕೆ ಬಹು ವಿಶಾಲವಾದ ಅರ್ಥವಿದೆ. 'ಧರಿ' (ರಕ್ಷಿಸು ಅಥವಾ ಒಟ್ಟಾಗಿ ಇರಿಸು) ಎಂಬ ಪದದಿಂದ ಧರ್ಮ ಎಂಬ ಪದವು ಹುಟ್ಟಿದೆ ಎಂದು ಹಿರಿಯರು ಹೇಳುತ್ತಾರೆ. ಸೃಷ್ಟಿಯ ಸಕಲ ಜೀವಿಗಳ ವಿಕಾಸಕ್ಕೆ ಎಡೆಮಾಡಿಕೊಡುವ ನೀತಿಯೇ ಧರ್ಮವಾಗಿದೆ. ಸಕಲ ಜೀವಿಗಳ ವಿಕಾಸಕ್ಕೆ ಅಪಚಾರವಾಗದಂತೆ ವರ್ತಿಸುವುದು ನಿಜವಾದ ಧರ್ಮವಾಗಿದೆ.

ಹಿಂದೂ ಧರ್ಮವು ಯಾರೊಬ್ಬ ವ್ಯಕ್ತಿಯಿಂದ ಸೃಷ್ಟಿಯಾದ ಧರ್ಮವಲ್ಲ. ವಿಚಾರ ತತ್ವಗಳು ಮತ್ತು ನಂಬಿಕೆಗಳು ನಿಧಾನವಾಗಿ ಬೆಳೆದು ಹಿಂದೂಧರ್ಮವನ್ನು ಪ್ರವರ್ತಿಸಿವೆ ಎಂದು ಡಾ|| ರಾಧಾಕೃಷ್ಣನ್ ಹೇಳಿದ್ದಾರೆ. ನಾಸ್ತಿಕತೆಯ ತತ್ತ್ವವೂ ಬೆಳೆದುಬಂದಂತೆ ನಿಸರ್ಗವೇ ದೇವರು ಎಂಬ ತತ್ತ್ವದವರೆಗಿನ ವಿವಿಧ ತತ್ವ ನಂಬಿಕೆಗಳ ಸ್ತರವ್ಯಾಪ್ತಿಯನ್ನು ಹೊಂದಿರುವ ಹಿಂದೂಧರ್ಮವು ವಿಶಾಲವಾಗಿದೆ. ಪೂಜಾವಿಧಾನಗಳನ್ನು ಕುರಿತಾದ ನಿಯಮಾವಳಿಗಳು ಅದರಲ್ಲಿ ವೈವಿಧ್ಯಮಯವಾಗಿವೆ. ಎಲ್ಲ ಧರ್ಮಗಳ

ದೇವಾಲಯಗಳು ಪರಮಾತ್ಮನಿರುವ ಸ್ಥಾನಗಳೆಂದೇ ಹಿಂದೂಧರ್ಮವು ಸಾರಿ ಹೇಳುತ್ತದೆ.

ರಾಮಾರಹೀಮರು ಒಂದೇ. 'ಕಾಯಕವೇ ಕೈಲಾಸ' ಎಂದು ನಂಬಿರುವ ಹಿಂದೂ ಧರ್ಮ ಪರಮಾತ್ಮನನ್ನು ತಮ್ಮ ನಿತ್ಯಕಾಯಕದಲ್ಲಿ ಶೋಧಿಸಬೇಕೆಂದು ಹೇಳುತ್ತದೆ. ಅಲ್ಲದೇ ದೇವರು ಸರ್ವವ್ಯಾಪಿ, ಸರ್ವಶಕ್ತ, ಹಿಂದೂ ಸಮಾಜದಲ್ಲಿ ಸಂಸ್ಕಾರಗಳು ನಿರ್ದಿಷ್ಟ ಧ್ಯೇಯಗಳನ್ನು ಹೊಂದಿವೆ. ಕರ್ಮಸಿದ್ಧಾಂತದಲ್ಲಿಯ ನಂಬಿಕೆ ಭಾರತೀಯರ ಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರಿದೆ.

ಮಹಮ್ಮದೀಯರ ಧರ್ಮವಾದ ಇಸ್ಲಾಂ, ಜಾಗತಿಕ ಧರ್ಮಗಳಲ್ಲಿ ಒಂದಾಗಿದ್ದು ಮಹಮ್ಮದ್ ಪೈಗಂಬರರ ಬೋಧನೆಗಳನ್ನು ಕಾಯಾ, ವಾಚಾ, ಮನಸಾ, ಕರಾರುವಕ್ಕಾಗಿ ಅನುಸರಿಸುವುದು ಇಸ್ಲಾಂ ಧರ್ಮದ ಒಂದು ವಿಶಿಷ್ಟ ಗುಣವಾಗಿದೆ. ಭಾರತದ ಎಲ್ಲ ಭಾಗಗಳಲ್ಲಿ ಇಸ್ಲಾಂ ಧರ್ಮೀಯರು ನೆಲೆಸಿದ್ದು ಆಯಾ ಪ್ರದೇಶಗಳ ಸ್ಥಾನಿಕ ಪದ್ಧತಿಗಳೊಂದಿಗೆ ಆಚಾರ ವಿಚಾರಗಳನ್ನು, ನಂಬಿಕೆ ಮೌಲ್ಯಗಳನ್ನು, ಸಂಪ್ರದಾಯ, ಪರಂಪರೆಗಳನ್ನು ತಮ್ಮ ಜೀವನದ ಕ್ರಮದಲ್ಲಿ ಅನುಸರಿಸುತ್ತಿರುವರು.

ಇಸ್ಲಾಂ ಎಂದರೆ 'ತಾಳ್ಮೆ' ಇಸ್ಲಾಮಿನ ಪ್ರಕಾರ ದೇವರು ಒಬ್ಬನೇ. ಅವನೇ 'ಅಲ್ಲಾ' ಮಾನವರಿಗೆ ಜೀವನದ ಸರಿಯಾದ ಮಾರ್ಗವನ್ನು ತೋರಿಸುವುದಕ್ಕೆ ಅಲ್ಲಾ ತನ್ನ ದೂತರನ್ನು ಕಾಲ ಕಾಲಕ್ಕೆ ಕಳುಹಿಸಿಕೊಡುತ್ತಾನೆ. ಧಾರ್ಮಿಕ ಪವಿತ್ರ ಗ್ರಂಥ ಕುರಾನ್ ಅಲ್ಲಾನ ಸಂಕಲ್ಪವಾಗಿದೆ. ಇಸ್ಲಾಂ ಧರ್ಮವು ಐದು ಮುಖ್ಯ ತತ್ತ್ವಗಳಿಂದ ಕೂಡಿದೆ.

೧. ದೇವರು ಒಬ್ಬನೇ; ಅವನು ನಿರಾಕಾರಿ. ೨. ಸದಾ ಸತ್ಯವನ್ನು ನುಡಿಯುವುದು. ೩. ಕೆಟ್ಟ ಕೆಲಸಗಳನ್ನು ಮಾಡದಿರುವುದು ೪. ಮದ್ಯಪಾನ ಮಾಡದಿರುವುದು ೫. ಪರಸ್ತ್ರೀ ವ್ಯಾಮೋಹ ಮಾಡದಿರುವುದು. ಈ ಐದು ತತ್ತ್ವಗಳನ್ನು ಆಚರಿಸುವುದಲ್ಲದೇ ಐದು ಸೂಚನೆಗಳನ್ನು ಜೀವನದ ಉದ್ದಕ್ಕೂ ಪಾಲಿಸಬೇಕು.

೧. ಮಹಮ್ಮದ್ ಪೈಗಂಬರರನ್ನು ದೇವದೂತರೆಂದು ತಿಳಿಯಬೇಕು.

೨. ಪ್ರತಿದಿನ ಐದು ಸಾರಿ ನಮಾಜ್ (ಪ್ರಾಥನೆ) ಮಾಡಬೇಕು.

೩. ಉಪವಾಸ (ರೋಜಾ) ಮಾಡುವುದು.

೪. ಧರ್ಮಕಾರ್ಯಕ್ಕಾಗಿ ತನ್ನ ಉಳಿಕೆಯ ಹಣದಲ್ಲಿ ಸ್ವಲ್ಪಭಾಗವನ್ನು ಕೊಡುವುದು.

೫ ಜೀವನದಲ್ಲಿ ಒಮ್ಮೆಯಾದರೂ ಹಜ್‌ಯಾತ್ರೆ (ಮಕ್ಕಾಗೆ ಹೋಗಿ ಬರುವುದು) ಮಾಡುವುದು.

ಕರ್ನಾಟಕದಲ್ಲಿ ಇಸ್ಲಾಂ ಧರ್ಮ

ಏಳನೆಯ ಶತಮಾನದಲ್ಲಿ ಅರಬಸ್ಥಾನದಲ್ಲಿ ಉದಯಿಸಿದ ಈ ಧರ್ಮ ಅಲ್ಲಿಂದ ಒಂದೆರಡು ಶತಮಾನದಲ್ಲಿ ಅರಬ್ಬೀ ವರ್ತಕರು ಕರ್ನಾಟಕದ ಪಶ್ಚಿಮ ತೀರದ ಪ್ರದೇಶಗಳೊಂದಿಗೆ ವ್ಯಾಪಾರ ನಡೆಸುತ್ತಿದ್ದ ಕಾಲದಲ್ಲಿ ನಮ್ಮ ರಾಜ್ಯಕ್ಕೆ ಬಂದಿರಬಹುದು. ಕರ್ನಾಟಕದ ಮುಸ್ಲಿಮರಲ್ಲಿ ಬಹುಸಂಖ್ಯೆಯವರು ಸುನ್ನಿಗಳು. ಶೇಖ್, ಸೈಯ್ಯದ್, ಮೊಗಲ, ಪಠಾಣ ಎಂಬವು ನಮ್ಮ ರಾಜ್ಯದ ಮುಖ್ಯ ಒಳಪಂಗಡಗಳು. ಇವಲ್ಲದೆ ಉದ್ಯೋಗದ ಆಧಾರದಿಂದ ಬೇರೆ ಬೇರೆ ಜಿಲ್ಲೆಗಳಲ್ಲಿ ಪಿಂಚಾರರು, ಕರಾಲರು, ಪೆಂಡಾರರು, ಅತ್ತಾರರು ಮನಿಯಾರರು ಮತ್ತು ಲೋಹಾರರು ಎಂಬ ಒಳಪಂಗಡಗಳಿವೆ. ನಮ್ಮ ರಾಜ್ಯದಲ್ಲಿ ೧೯೮೧ ರಲ್ಲಿ ಮುಸ್ಲೀಮರ ಸಂಖ್ಯೆ ೪೧.೬೫ ಲಕ್ಷ. ನಮ್ಮ ರಾಜ್ಯದಲ್ಲಿ ಕನ್ನಡದ ನಂತರ ಬಹುಸಂಖ್ಯೆಯ ಜನರು ಮಾತನಾಡುವ ಭಾಷೆ ಉರ್ದು. (ಶೇಕಡಾ ೧೧ರಷ್ಟು) (೧೯೮೧) ರಾಜ್ಯದಲ್ಲಿ ಉರ್ದು ಮಾತನಾಡುವ ಕುಟುಂಬದ ಸಂಖ್ಯೆ 5.38 ಲಕ್ಷ, ಜನಸಂಖ್ಯೆ ೩೫ ಲಕ್ಷಕ್ಕಿಂತ ಹೆಚ್ಚು, ಬೆಂಗಳೂರು, ಧಾರವಾಡ, ಗುಲಬರ್ಗ, ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲೂ ಉರ್ದು ಮಾತನಾಡುವವರು ಹೆಚ್ಚಾಗಿರುವರು. ಬೀದರ್ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅಂದರೆ ಶೇಕಡ ೨೦ರಷ್ಟು ಮುಸ್ಲಿಮರು. ಇದಕ್ಕೆ ಐತಿಹಾಸಿಕ ಕಾರಣಗಳುಂಟು.

ಕರ್ನಾಟಕಕ್ಕೆ ಕೇರಳ, ತಮಿಳುನಾಡಿನಿಂದಲೂ, ಇತ್ತೀಚಿನ ದಶಕಗಳಲ್ಲಿ ಅನೇಕ ಮುಸ್ಲಿಮರು ವ್ಯಾಪಾರಕ್ಕಾಗಿ ವಲಸೆ ಬಂದಿರುವರು. ತಮಿಳುನಾಡಿನಿಂದ ಬಂದ ಮುಸ್ಲಿಮರನ್ನು 'ಲಬ್ಬೆ' ಗಳೆಂದು ಕರೆಯುವರು. ಕರಾವಳಿಯ ಮುಸ್ಲಿಮರನ್ನು 'ಮೊಪ್ಲಾ' ಅಥವಾ 'ಮಾಪಿಳ್ಳೆ' ಎಂದು ಕರೆದರೆ ಉತ್ತರ ಕನ್ನಡ ಜಿಲ್ಲೆಯ ಭಟ್ಕಳದ ಮುಸ್ಲಿಮರನ್ನು 'ನವಾಯಿತರು' ಎಂದು ಕರೆಯುವರು. ಇವರ ಮನೆಯ ಮಾತು ಕೊಂಕಣಿ. ಮೊಪ್ಲಾಗಳದ್ದು ಮಲೆಯಾಳಂ. ಈ ಕಾರಾವಾರ ಜಿಲ್ಲೆಯಲ್ಲಿ ಹಲವರು ಅಫ್ರಿಕಾ ಮೂಲದ 'ಸಿದ್ದಿ' ಮುಸ್ಲಿಮರು ಇರುವರು.

ಕರ್ನಾಟಕದ ಉದ್ದಕ್ಕೂ ಹಿಂದು ಮುಸ್ಲಿಂ ಮೈತ್ರಿಯ ಭಾವೈಕ್ಯತೆಯ ಗಂಗೋತ್ರಿ ಕಾಲದುದ್ದಕ್ಕೂ ವಿವಿಧ ರಂಗ ರೂಪಗಳಲ್ಲಿ ಪ್ರವಹಿಸುತ್ತ ಬಂದಿದೆ. ರಾಷ್ಟ್ರಕೂಟರ ಕಾಲದಲ್ಲಿ ಅವರ ರಾಜ್ಯದಲ್ಲಿಯ ಮುಸ್ಲಿಂ ಪ್ರಜೆಗಳಿಗೆ ತಮ್ಮದೇ ಆದ ನ್ಯಾಯ ನೀತಿಗಳ ನಿರ್ಧಾರಕ್ಕೆ 'ಖಾಜಿ' ಗಳನ್ನು ಹೊಂದಿರುವ ಸ್ವಾತಂತ್ರ್ಯವಿತ್ತು ಎಂಬುದನ್ನು ಅರಬ್ಬೀ ಲೇಖಕರು ತಿಳಿಸಿದ್ದಾರೆ. ಮಹಾರಾಷ್ಟ್ರದ ಒಂದು ಶಾಸನದಲ್ಲಿ (ಕ್ರಿ.ಶ. 926) ತಾಜೀಕ ಎಂಬ ಅರಬ್ಬೀಯನು ರಾಷ್ಟ್ರಕೂಟರ ಪ್ರಾಂತ್ಯದ ಅಧಿಕಾರಿಯಾಗಿದ್ದನು ಎಂದು ಹೇಳಲಾಗಿದೆ. ಹನ್ನೊಂದನೆಯ ಶತಮಾನದಲ್ಲಿ ಪಶ್ಚಿಮ ಕರಾವಳಿಯಲ್ಲಿ ಇಸ್ಲಾಮಿಯರು ಹರಡಿದ್ದರು ಎಂಬ ಬಗ್ಗೆ ನಿದರ್ಶನಗಳು ದೊರೆಯುವುವು.

ಗೋವೆಯ ಕದಂಬ ದೊರೆ ಒಂದನೆಯ ಜಯಕೇಶಿಯ ಅಂಗರಕ್ಷಕ, ದಳದ ಮುಖ್ಯಸ್ಥ ಒಬ್ಬ ಮುಸ್ಲಿಮನಾಗಿದ್ದನೆಂದು 1054 ರ ಒಂದು ಶಾಸನ ತಿಳಿಸುತ್ತದೆ. ಹನ್ನೆರಡು ಮತ್ತು ಹದಿಮೂರನೆಯ ಶತಮಾನದಲ್ಲಿ ಸಹ ಅರಬ್ಬೀ ವರ್ತಕರು ತುರ್ಕಿ ದೇಶದಿಂದ ಉತ್ತಮತಳಿಯ ಕುದುರೆಗಳನ್ನು ತಂದು ಇಲ್ಲಿ ಮಾರುತ್ತಿದ್ದರು ಎಂಬುದಕ್ಕೆ ಆಧಾರಗಳಿವೆ. ಮಲ್ಲಿಕಾಫರನ ದಂಡಯಾತ್ರೆ ಮತ್ತು ಬಹಮನಿ ರಾಜ್ಯದ ಸ್ಥಾಪನೆಯೊಡನೆ ಈ ಧರ್ಮ ಕರ್ನಾಟಕದಲ್ಲಿ ತ್ವರಿತವಾಗಿ ಹರಡಿತು. ಮೊದಲಿಗೆ ಇಲ್ಲಿ ನೆಲೆಸಿದ್ದ ಇಸ್ಲಾಮೀಯರು ಉತ್ತರ ಭಾರತದಿಂದ ಬಂದವರಾದರೂ ನಂತರ ಅನೇಕರು ಪಶ್ಚಿಮ ಏಷ್ಯಾದಿಂದ ಬಂದು ಇಲ್ಲಿ ನೆಲೆಸಿದರು. ಹೀಗೆ ನೆಲೆಸಿದವರಲ್ಲಿ ಕವಿಗಳು ಕಲಾಕಾರರು, ಶಿಲ್ಪತಜ್ಞರು ಹಾಗೂ ಸಂತರೂ ಇದ್ದರು. ಇವರೆಲ್ಲರ ಮೂಲಕ ಕರ್ನಾಟಕದಲ್ಲಿ ಇಸ್ಲಾಂ ಸಂಸ್ಕೃತಿ ಚೆನ್ನಾಗಿ ಬೇರೂರಲು ಅನುಕೂಲವಾಯಿತು.

ಬಹಮನಿ ರಾಜ್ಯ ಒಡೆದ ನಂತರ ಉದಯಿಸಿದ ಶಾಹಿ ರಾಜರುಗಳ ಒಡೆತನದ ಕಾಲದಲ್ಲಿ, ಹೈದರಾಬಾದಿನ ನವಾಬರ ಆಳ್ವಿಕೆಯಲ್ಲಿ, ಹೈದರಅಲಿ ಹಾಗೂ ಟಿಪ್ಪುವಿನ ಕಾಲದಲ್ಲಿ ಅಲ್ಲದೆ ಅನೇಕ ಸಣ್ಣಪುಟ್ಟ ನವಾಬರ ಕಾಲದಲ್ಲಿ ಇಸ್ಲಾಮಾಯರ ಸಂಖ್ಯೆ ವರ್ಧಿಸಿತು. ಇಸ್ಲಾಂ ಸಂಸ್ಕೃತಿ ಎಲ್ಲಾ ದಿಕ್ಕುಗಳಲ್ಲಿಯೂ ಪಸರಿಸಿತು. ಬಹಮನಿ ಅರಸರ ಕಾಲದಲ್ಲಿ ಆಫ್ರಿಕಾದಿಂದ ಇಸ್ಲಾಮಿಯರು ಬಂದು ನೆಲೆಸಿದರು.

ಕರ್ನಾಟಕದಲ್ಲಿ ಕಾಲಕಾಲಕ್ಕೆ ರಾಜ್ಯವಾಳಿದ ಅರಸರು ತಮ್ಮ ತಮ್ಮ ಧರ್ಮಗಳಿಗೆ ರಾಜಾಶ್ರಯ ಕೊಟ್ಟಿದ್ದರೂ ಪರಧರ್ಮ ಸಹಿಷ್ಣುತೆಗೆ ಹೆಸರಾಗಿದ್ದರು. ಅದರಲ್ಲಿಯೂ ವಿಜಯನಗರದ ಅರಸರು ತಮ್ಮ ಮುಸ್ಲಿಂ ಪ್ರಜೆಗಳಿಗೆ, ಸೈನಿಕರಿಗೆ ಗೌರವ ತೋರಿಸಲು ತಮ್ಮ ಸಿಂಹಾಸನದ ಬಳಿಯಲ್ಲಿ ಕುರಾನದ ಪ್ರತಿಯನ್ನು ಇಡುತ್ತಿದ್ದರು. ವಿಜಯನಗರದ ಅರಸು ಎರಡನೆಯ ದೇವರಾಯನು ರಾಜಧಾನಿಯಲ್ಲಿ ಮುಸ್ಲಿಂ ಪ್ರಜೆಗಳಿಗೆ ಮಸೀದಿಯನ್ನು ಕಟ್ಟಿಸಿದ್ದನು. ಶ್ರೀಕೃಷ್ಣದೇವರಾಯನಿಗೆ ಅನೇಕ ಬಿರುದಾವಳಿಗಳ ಜೊತೆಗೆ 'ಯುವನ ಸಿಂಹಾಸನ ಪ್ರತಿಷ್ಠಾಪಕ' ಎಂಬ ಬಿರುದೂ ಸಹ ಇತ್ತು. 'ಮೈಸೂರು ಹುಲಿ' ಎಂದು ಹೆಸರಾದ ಟಿಪ್ಪು ಪರಮತ ಸಹಿಷ್ಣುವಾಗಿದ್ದನು. ತನ್ನ ರಾಜ್ಯದ ಅನೇಕ ಹಿಂದೂ ದೇವಾಲಯಗಳಿಗೆ ಹೇರಳ ದತ್ತಿದಾನಗಳನ್ನು ಕೊಟ್ಟಿರುವನು. ಹಿಂದೂ ದೇವಾಲಯಗಳಿಗೆ ಮಸೀದಿ ದರ್ಗಾಗಳಷ್ಟೇ ಪೂಜ್ಯಭಾವನೆಯಿಂದ ನಡೆದುಕೊಳ್ಳುತ್ತಿದ್ದನು. ಸ್ವತಃ ಹಿಂದುವೊಬ್ಬನು ಆತನ ಮುಖ್ಯಮಂತ್ರಿಯಾಗಿದ್ದನು. ಅಲ್ಲದೆ ಸೈನ್ಯದ ಉಚ್ಚಅಧಿಕಾರಿಗಳಲ್ಲಿ ಅನೇಕರು ಹಿಂದೂಗಳೇ ಇದ್ದರು.

ಟಿಪ್ಪುವಿಗೆ ಹಿಂದು ಮತಾಚಾರ, ಧಾರ್ಮಿಕ ಸಂಪ್ರದಾಯ, ವಿಧಿ ವಿಧಾನಗಳಲ್ಲಿ ಬಲವಾದ ನಂಬಿಕೆಯಿತ್ತು. ಆತ ಶೃಂಗೇರಿಯ ಮಠಕ್ಕೆ ಅನನ್ಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದನು. ಅದರಂತೆ ಇತರ ದೇವಾಲಯಗಳಿಗೂ ಹರಕೆ ಪೂಜೆ

ಸಲ್ಲಿಸುತ್ತಿದ್ದನು. ೧೭೯೧-೯೨ ರಲ್ಲಿ ಮರಾಠಾ ಸೈನಿಕರು ಮಠವನ್ನು ಕೊಳ್ಳೆಹೊಡೆದು ಲೂಟಿ ಮಾಡಿದಾಗ ಮಠದವರ ನೆರವಿಗೆ ಬಂದನು. ಮಠದ ಸೇವಾಕಾರ್ಯಗಳು ಪುನಃ ನಡೆಯುವಂತೆ ಸಹಾಯ ಮಾಡಿದನು. ೧೭೯೭-೯೮ ರಲ್ಲಿ ಮಠದ ಸ್ವಾಮಿಗಳಿಗೆ ಅವನು ಬರೆಯಿಸಿದ ನಿರೂಪದಲ್ಲಿ ಶ್ರೀಗಳವರು ಈ ಹಿಂದೆ ನಡೆಸಿದ ಚಂಡೀಹೋಮ ಯಜ್ಞಗಳಿಂದ ತನಗೆ ಯುದ್ಧದಲ್ಲಿ ಜಯವಾಯಿತು ಎಂದು ಕೃತಜ್ಞತೆಯನ್ನು ಸ್ಮರಿಸುತ್ತ ಪುನಃ ತನ್ನ ಮತ್ತು ರಾಜ್ಯದ ಶ್ರೇಯೋಭಿವೃದ್ಧಿಗೆ ಆಶೀರ್ವದಿಸಿ ಚಂಡೀಹೋಮ ಯಜ್ಞ ಹವನಾದಿಗಳನ್ನು ಮಾಡುವಂತೆ ಸ್ವಾಮಿಗಳಿಗೆ ವಿನಂತಿಸುತ್ತಾನೆ.

ಸಂಕೇಶ್ವರದ ಶಂಕರಭಾರತೀ ಮಠಕ್ಕೆ ಬಿಜಾಪುರದ ಸರದಾರ ರಣದುಲ್ಲಾಖಾನ್ ಇನಾಮ ಹಾಕಿಕೊಟ್ಟಿದ್ದನು. ಸವಣೂರಿನ ನವಾಬರು ಸ್ಥಳೀಯ ಸತ್ಯಬೋಧ ಸ್ವಾಮಿಗಳ ಮಠಕ್ಕೆ ಗೌರವ ಸಲ್ಲಿಸುತ್ತಿದ್ದರು. ಅಥಣಿಯ ಸಿದ್ದೇಶ್ವರ ದೇವಾಲಯವನ್ನು ಬಿಜಾಪುರದ ಅರಸರು ಕಟ್ಟಿಸಿರುವರು. ಧಾರವಾಡ ಜಿಲ್ಲೆಯ ನೆರೇಗಲ್ ಎಂಬಲ್ಲಿ ಇರುವ ಬಿಜಾಪುರದ ಗೋಳಗುಮ್ಮಟವನ್ನು ಹೋಲುವ ಸುಂದರವೂ ಭವ್ಯವೂ ಆದ ದರ್ಗಾವನ್ನು ಒಬ್ಬ ಹಿಂದೂ ಸ್ತ್ರೀ ಕಟ್ಟಿಸಿದಳು ಎಂದು ಹೇಳಲಾಗಿದೆ. ಇವು ಕೇವಲ ಉದಾಹರಣೆಗಳು. ಟಿಪ್ಪುವಿನ ನಂತರ ಮೈಸೂರು ಅರಸರು, ಕೆಳದಿಯ ನಾಯಕರು, ಸ್ಥಳೀಯ ಪಾಳೇಗಾರರು ಈ ಸತ್‌ಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದರು. ಕರ್ನಾಟಕದ ಸೂಫಿ ಸಂತರಲ್ಲಿ ಹಲವರು ದತ್ತಸಂಪ್ರದಾಯ ಪಾಲಿಸುತ್ತಿದ್ದರು. ಅವರಲ್ಲಿ ಬಾಬಾಬುಡನ್ ಒಬ್ಬರಾಗಿದ್ದರು.

ಕನ್ನಡ ಉರ್ದು, ಪರ್ಷಿಯನ್ ಭಾಷಾ ಬಾಂಧವ್ಯ

ಹಿಂದಿ, ತುರ್ಕಿ, ಪಾರಸಿ, ಅರಬ್ಬೀ ಭಾಷೆಗಳ ಸಮ್ಮಿಶ್ರ ಭಾಷೆಯೇ ಉರ್ದು. ಇದರ ಲಿಪಿಯನ್ನು ಬಲದಿಂದ ಎಡಕ್ಕೆ ಬರೆಯುತ್ತಾರೆ. ಉರ್ದು ಮೊದಲು ಜನ್ಮ ತಾಳಿದ್ದು ಉತ್ತರದಲ್ಲಾದರೂ, ಮೊದಲು ಸಂಪರ್ಕ ಪ್ರಸಾರ ಹೆಚ್ಚಿದ್ದು ದಕ್ಷಿಣದಲ್ಲಿ. ೧೩೪೭ ರಲ್ಲಿ ಅಲ್ಲಾವುದ್ದೀನ್ ಬಹಮನಿ ಸ್ವತಂತ್ರನಾಗಿ ಗುಲ್ಬರ್ಗಾವನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಮೇಲೆ ಉರ್ದು ಭಾಷೆಯ ಪ್ರಭಾವ ಕರ್ನಾಟಕದಲ್ಲಿ ಬೆಳೆಯಿತು. ನಮ್ಮ ರಾಜ್ಯದಲ್ಲಿ ಹದಿನಾಲ್ಕನೆಯ ಶತಮಾನದಿಂದ ಇಲ್ಲಿಯವರೆಗೂ ಉರ್ದು ಸಾಹಿತ್ಯ ಪ್ರಚಾರ ನಡೆಯುತ್ತ ಬಂದಿದೆ. ಹೈದರ, ಟಿಪ್ಪುವಿನ ಕಾಲದಲ್ಲಿ ಉರ್ದುವಿನ ಸಂಗಡ ಕನ್ನಡಕ್ಕೂ ಪ್ರೋತ್ಸಾಹ ದೊರೆಯುತ್ತಿತ್ತು. ಅಲ್ಲದೆ ಲೆಕ್ಕ ಪತ್ರಗಳನ್ನೂ ಕನ್ನಡ, ಮರಾಠಿ ಮತ್ತು ಪಾರ್ಸಿ ಭಾಷೆಗಳಲ್ಲಿ ಇಡಲಾಗುತ್ತಿತ್ತು.

ಕನ್ನಡ ನಾಡಿನಲ್ಲಿ ಉರ್ದು ಕನ್ನಡದ ಭಾಷಾ ಬಾಂಧವ್ಯ ಮೊದಲಿನಿಂದಲೂ ಯಾವ ಅಡೆತಡೆಯಿಲ್ಲದೆ ಸರಾಗವಾಗಿ ನಡೆದುಕೊಂಡು ಬಂದಿದೆ. ಎರಡೂ ಜೀವಂತ

ಭಾಷೆಗಳು. ಅಂತೆಯೇ ವಿದ್ವಾಂಸರ ಅಭಿಪ್ರಾಯದಂತೆ ಸುಮಾರು ೪೩೮ ಅರಬ್ಬೀ, ೬೧೪ ಪರ್ಷಿಯನ್ ಪದಗಳು ಉರ್ದು ಮೂಲಕ ಕನ್ನಡದ ಪ್ರವೇಶ ಮಾಡಿವೆ. ಉದಾ: ಜಮೀನ, ಜಮೀನದಾರಿ, ಸಿಪಾರಸ್, ಸಿಬ್ಬಂದಿ, ಸಿಪಾಯಿ, ದಸ್ತಾವೇಜ ಬಂದೋಬಸ್ತ ಇವು ಪರ್ಷಿಯನ್ ಪದಗಳು. ಇದೇ ರೀತಿ ಅನಾಮತ್, ಅಸಾಮಿ, ಕಾಯ್ದಾ, ಖಜಾನಾ, ಜಪ್ತಿ, ನಾಜುಕ್, ಮಾಮೂಲಿ, ವಸ್ಸೂಲಿ, ಇವು ಅರಬ್ಬೀ ಪದಗಳು. ಬೀದರ್, ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಕೋರ್ಟು ಕಚೇರಿಗಳ ಭಾಷೆ ಉರ್ದು ಆಗಿತ್ತು.

ಚರಿತ್ರೆಯ ಉದ್ದಕ್ಕೂ ಈ ಭಾಷಾ ಬಾಂಧವ್ಯ ಹೇಗೆ ಬೆಳೆದುಕೊಂಡು ಬಂದಿದೆ ಎಂಬುದನ್ನು ಕೆಲವು ಉದಾಹರಣೆಗಳಿಂದ ಕಾಣಬಹುದು. ಲಕ್ಷ್ಮೀಶ ಕವಿಯ ಜೈಮಿನಿ ಭಾರತ, ಭೀಮ ಕವಿಯ ಬಸವ ಪುರಾಣ, ಪುರಂದರ ದಾಸರ ಕೀರ್ತನೆಗಳು, ಕುಮಾರರಾಮನ ಕಥೆ, ಕೆಳದಿಯ ನೃಪ ವಿಜಯ ಮುಂತಾದ ಕೃತಿಗಳಲ್ಲಿ ಉರ್ದು ಪದಗಳ ನುಡಿಗಟ್ಟುಗಳನ್ನು ವಿಪುಲವಾಗಿ ಕಾಣಬಹುದು. ಬಂದೇ ನವಾಬ ಖ್ವಾಜಾ (೧೩೨೧-೧೪೨೨) ಗುಲ್ಬರ್ಗಾದಲ್ಲಿ ನೆಲೆಸಿದ್ದ ಸುಪ್ರಸಿದ್ಧ ಸೂಫಿ ಸಂತ ಮತ್ತು ಕವಿ. ಈ ಭಾಗದಲ್ಲಿ ಹಿಂದು ಮುಸ್ಲಿಮರ ಐಕ್ಯತೆಗಾಗಿ ಶ್ರಮಿಸುತ್ತ ಇಸ್ಲಾಂ ಧರ್ಮ ಮತ್ತು ಸಾಹಿತ್ಯದ ಬೆಳವಣಿಗೆಯಲ್ಲಿ ಒಂದು ವಿಶಿಷ್ಟ ಹೆಜ್ಜೆ ಇಟ್ಟರು. ಇವರ ಹಾಗೂ ಇವರ ಶಿಷ್ಯ ಪರಂಪರೆಯಲ್ಲಿ ಹಿಂದೂ ಧರ್ಮದ ಪ್ರಭಾವ ಒಡೆದು ಕಾಣುತ್ತಿತ್ತು. ಚೈತನ್ಯ ಸಂಪ್ರದಾಯ ಒಡಮೂಡಿತ್ತು. ಇವರನ್ನು ಕೇಶವ ಚೈತನ್ಯ ಎಂದು ಕರೆಯುವ ವಾಡಿಕೆ ಉಂಟು. ಬಂದೇ ನವಾಬ ಉರ್ದು ಸಾಹಿತ್ಯಕ್ಕೆ ಬೇರು ಎನಿಸುವ 'ದಖನಿ' ಶೈಲಿಯ ಒಬ್ಬ ಶ್ರೇಷ್ಠ ಕವಿ ಮತ್ತು ಬರಹಗಾರ. ಇವರು ಅರಬ್ಬೀ, ಪಾರ್ಸಿ ಹಾಗೂ ಸಂಸ್ಕೃತ ಭಾಷೆಗಳ ವಿದ್ವಾಂಸರಾಗಿದ್ದರು. ಇವರು ದೊಡ್ಡ ಅನುಭವಿಗಳು. ಭಕ್ತಿಪಂಥದಲ್ಲಿ ಕಾಂತಾ ಭಕ್ತಿ ಹಾಗೂ ಆತ್ಮನಿವೇದನೆ ಮಾರ್ಗವನ್ನು ಅನುಸರಿಸಿದರು. ಎರಡೂ ಧರ್ಮಗಳ ಸೌಹಾರ್ದತೆಗೆ ಸಮನ್ವಯಕ್ಕೆ ಕಂಕಣಬದ್ಧರಾಗಿ ಇಂದಿಗೂ ಮಾನ್ಯರಾಗಿದ್ದಾರೆ.

ಕಿತಾಬ್ ಎ ನವರಸ್ ಎಂಬ ಸಂಗೀತ ಶಾಸ್ತ್ರ ಗ್ರಂಥವು ಬಿಜಾಪುರದ ಸುಲ್ತಾನ ಎರಡನೆಯ ಇಬ್ರಾಹಿಮನಿಂದ ರಚಿತಗೊಂಡು ಅದರಲ್ಲಿ ಮೊದಲಿಗೆ ಗಣಪತಿ ಮತ್ತು ಸರಸ್ವತಿ ಪ್ರಾರ್ಥನೆಯಿಂದ ಪ್ರಾರಂಭವಾಗುವುದು. ದಖನಿ ಭಾಷೆಯಲ್ಲಿ ಮೊದಲು ಕಾವ್ಯರಚನೆ ಮಾಡಿದ ಕೀರ್ತಿ ಕರ್ನಾಟಕದ ವೀರಶೈವ ಶರಣ ಕವಿ ಸಿದ್ಧಲಿಂಗೇಶ್ವರನದು. ಮಹಿಪತಿದಾಸರು ಇನ್ನೊಬ್ಬ ಪ್ರಸಿದ್ಧ ಕವಿಗಳಾಗಿದ್ದರು. ಅಲ್ಲದೇ ಆದಿಲ್‌ಶಾಹಿ ವಂಶದ ಕೆಲವು ಅರಸರಿಗೆ ರಾಜಗುರುಗಳಾಗಿದ್ದರು. ಔರಂಗಜೇಬನ ಆಶ್ರಯದಲ್ಲಿದ್ದ ಬಿಜಾಪುರದ ಜಸವಂತರಾಯ ಮುನ್ಸಿ ಎಂಬ ಅಧಿಕಾರಿ ಪಾರ್ಸಿ ಮತ್ತು ಉರ್ದುವಿನಲ್ಲಿ ಉತ್ತಮ ಕವಿಯಾಗಿದ್ದ. ಅಮೀರ ಖುಸ್ರು, ಅಲ್‌ಬರೂನಿ ಮುಂತಾದ ಪಂಡಿತರು ಸಂಸ್ಕೃತ ಮತ್ತು

ಇತರ ಭಾಷೆಗಳನ್ನು ಕಲಿತು ಹಿಂದೂ ಮುಸ್ಲಿಮರ ಐಕ್ಯತೆಗೆ ನೆರವಾದರು.

ರಾಮಾಯಣ, ಮಹಾಭಾರತ, ಭಗವದ್ಗೀತೆ, ಪೌರಾಣಿಕ, ಕಥೆಗಳು ಸಂಗೀತಶಾಸ್ತ್ರ, ಹಸ್ತನಾಮುದ್ರಿಕ ಶಾಸ್ತ್ರ ಮುಂತಾದವುಗಳನ್ನು ಅರಬ್ಬೀ ಭಾಷೆಗೆ ಭಾಷಾಂತರಿಸಲಾಯಿತು. ಮುಸ್ಲಿಮ ವೈದ್ಯಶಾಸ್ತ್ರವಾದ ಯುನಾನಿ ವೈದ್ಯವಿದ್ಯೆಯನ್ನು ಭಾರತೀಯರಿಗೆ ಪರಿಚಯಿಸಲಾಯಿತು.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಉರ್ದು ಸಾಹಿತ್ಯಕ್ಕೆ ಪ್ರೋತ್ಸಾಹ ದೊರೆಯಿತು. ಇತ್ತೀಚಿನ ದಿನಗಳಲ್ಲಿ ನಾಲ್ಮಡಿ ಕೃಷ್ಣರಾಜ ಒಡೆಯರರು ರಾಜಾಜ್ಞೆಗಳನ್ನು ಉರ್ದು ಮತ್ತು ಕನ್ನಡ ಎರಡರಲ್ಲಿಯೂ ಹೊರಡಿಸುತ್ತಿದ್ದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಅವರ ಕಾಲದಲ್ಲಿ ಉರ್ದು ಮತ್ತು ಪರ್ಷಿಯನ್ ವಿಭಾಗ ತೆರೆಯಲಾಯಿತು. ಮೈಸೂರಿನ ಸಿಲ್ವರ್ ಜುಬಿಲಿ ಪಾರ್ಕ್ ರಸ್ತೆಯಲ್ಲಿ ಉರ್ದು ಶಾಸನವೊಂದನ್ನು ಪ್ರತಿಷ್ಠಾಪಿಸಿದರು. ಕೊಡಗಿನ ಅರಸರು ತಮ್ಮ ಕೆಲವು ಶಾಸನಗಳಲ್ಲಿ ಮತ್ತು ಮುದ್ರೆಗಳಲ್ಲಿ ಕನ್ನಡದ ಜೊತೆಗೆ ಪರ್ಷಿಯನ್ ಭಾಷೆಯನ್ನೂ ಬಳಸಿದ್ದಾರೆ. ರಾಯಚೂರಿನ ರಾಘವೇಂದ್ರರಾಯರು (೧೮೯೪-೧೯೪೭) ಎಂಬುವವರು ಉರ್ದುವಿಗೆ ಅನೇಕ ಸಂಸ್ಕೃತ, ಕನ್ನಡ, ತೆಲುಗು, ಗ್ರಂಥಗಳ ಅನುವಾದ ಮಾಡಿರುವರು. ಕನ್ನಡ ಉರ್ದು ಕೋಶವನ್ನು ಬರೆದಿರುವರು. ಸೋಮೇಶ್ವರ ಶತಕ ಹಾಗೂ ಭರ್ತೃಹರಿ ನೀತಿಶತಕವನ್ನು ಉರ್ದುವಿಗೆ ಅನುವಾದಿಸಿರುವರು.

ಬೆಂಗಳೂರು, ಮೈಸೂರು, ಗುಲ್ಬರ್ಗಾ, ಬೀದರ್, ಹುಬ್ಬಳ್ಳಿ ಮುಂತಾದ ಸ್ಥಳಗಳಿಂದ ಉರ್ದು ಪತ್ರಿಕೆಗಳು ಪ್ರಕಟವಾಗುತ್ತಿರುವುವು ಮತ್ತು ಆಗಾಗ್ಗೆ ಮುಷೈರಾ (ಕವಿ ಮೇಳಗಳು) ನಡೆಯುತ್ತಿರುವುವು. ಇವು ಉರ್ದು ಭಾಷೆಯ ಸೌಂದರ್ಯವನ್ನು ಪ್ರಚುರ ಪಡಿಸುವಲ್ಲಿ ತುಂಬಾ ಸಹಾಯಕವಾಗಿವೆ.

ಕರ್ನಾಟಕ ಸರ್ಕಾರವು ಪ್ರಸ್ತುತ ಉರ್ದು ಭಾಷೆಯ ಅಭಿವೃದ್ಧಿಗೆ ಉರ್ದು ಅಕಾಡೆಮಿಯನ್ನು ಸ್ಥಾಪಿಸಿದೆ. ವಿಶ್ವವಿದ್ಯಾಲಯಗಳಲ್ಲಿ ಉರ್ದು ವಿಭಾಗಗಳನ್ನು ತೆರೆಯಲಾಗಿದೆ. ಹಲವಾರು ಉರ್ದು ಶಾಲೆಗಳಲ್ಲಿ ಪ್ರಾಥಮಿಕ ಹಂತದಲ್ಲಿ ಕನ್ನಡವನ್ನೂ ಕಲಿಸಲಾಗುತ್ತಿದೆ. ಅಲ್ಪ ಸಂಖ್ಯಾತರ ಅಭಿವೃದ್ಧಿಯನ್ನು ಕುರಿತಂತೆ ಆಯೋಗವನ್ನು ರಚಿಸಲಾಗಿದೆ.

ವಾಸ್ತುಶಿಲ್ಪ

ಹಿಂದು ಮುಸ್ಲಿಂ ಕಲಾಶೈಲಿಯನ್ನು ಕರ್ನಾಟಕದಲ್ಲಿ ಹಲವಾರು ಕಡೆ ಕಾಣಬಹುದು. ಅವು ಒಂದರಿಂದ ಇನ್ನೊಂದು ಪ್ರಭಾವಿತವಾಗಿ ಸುಂದರತೆಯನ್ನು ಹೆಚ್ಚಿಸಿಕೊಂಡಿವೆ. ಮುಸ್ಲಿಮರ ಆಳ್ವಿಕೆಯಲ್ಲಿ ದೊಡ್ಡ ಮಸೀದಿಗಳು, ಗೋರಿಗಳು ಸ್ಥಾಪಿತವಾದವು. ದಕ್ಷಿಣದಲ್ಲಿ

ವಿಜಯನಗರ ಬೆಳೆದಂತೆ ಉತ್ತರದಲ್ಲಿ ಬಿಜಾಪುರ, ಗುಲ್ಬರ್ಗ, ಬೀದರ್ ಬೆಳೆದವು. ರಾಯಚೂರಿನ ಮಿನಾರ ಮಸೀದಿ, ಸಿರಾದಲ್ಲಿಯ ಇಬ್ರಾಹಿಮ್ ರೋಜಾ, ಅಥಣಿಯ ಸಿದ್ದೇಶ್ವರ ದೇವಾಲಯ, ಮಡಿಕೇರಿಯ ಓಂಕಾರೇಶ್ವರ ದೇವಾಲಯ, ಸಾವಳಿಗೆಯ ಶಿವಲಿಂಗೇಶ್ವರ ಮಠ, ಶಿರಹಟ್ಟಿ ಫಕೀರ ಸ್ವಾಮಿಗಳ ಮಠ ಇವು ಕೆಲವು ಉದಾಹರಣೆಗಳು. ಬಿಜಾಪುರ, ಬೀದರ್, ಗುಲ್ಬರ್ಗಾ, ಮೈಸೂರು, ಬೆಂಗಳೂರು, ಶ್ರೀರಂಗಪಟ್ಟಣ, ಇವುಗಳಲ್ಲಿ ಇರುವ ಅನೇಕ ಕಟ್ಟಡಗಳಲ್ಲಿ ಹಿಂದೂ ಮುಸ್ಲಿಂ ವಾಸ್ತುಶಿಲ್ಪದ ಸಮ್ಮಿಳನವನ್ನು ಕಾಣಬಹುದು. ಹೂ ತೋಟಗಳೆಂದರೆ ಮುಸ್ಲಿಂ ದೊರೆಗಳಿಗೆ ಪ್ರೀತಿ. ಅವರು ತುರ್ಕಿ, ಪರ್ಷಿಯನ್ ಮಾದರಿಯಲ್ಲಿ ಅನೇಕ ತೋಟಗಳನ್ನು ಭಾರತದಲ್ಲಿ ನಿರ್ಮಿಸಿದರು. ಬೆಂಗಳೂರಿನ ಲಾಲ್‌ಬಾಗ್ ಅವುಗಳಿಗೆ ಒಂದು ಉತ್ತಮ ಉದಾಹರಣೆ.

ಸಂಗೀತ

ಮುಸ್ಲಿಂ ಅಡಳಿತಗಾರರು ಹಿಂದೂ ಅರಬ್ಬೀ ಮತ್ತು ಇರಾನ್ ಸಂಗೀತಗಾರರಿಗೆ ಆಶ್ರಯ ನೀಡಿದ್ದರು. ಆ ಮೂರು ಸಂಗೀತ ಕಲೆಗಳಲ್ಲಿ ಪರಸ್ಪರ ಪ್ರಭಾವವುಂಟಾಗಿ ಹಿಂದೂಸ್ತಾನಿ ಸಂಗೀತ ಪದ್ಧತಿಯು ಉದಯವಾಯಿತು. ಭಾರತದಲ್ಲಿ ಹೊಸ ಸಂಗೀತ ವಾದ್ಯಗಳ ಬಳಕೆ ಪ್ರಾರಂಭವಾಯಿತು. ಉದಾ: ಸಿತಾರ, ತಬಲಾ, ಷಹನಾಯ್ ಮುಂತಾದವುಗಳು. ಹಿಂದೂಸ್ತಾನಿ ಸಂಗೀತದಲ್ಲಿ ಕರ್ನಾಟಕದ ಅನೇಕ ಹಿಂದೂ ಸಂಗೀತಗಾರರು ರಾಷ್ಟ್ರಮಟ್ಟದ ಪ್ರಸಿದ್ಧಿ ಪಡೆದಿದ್ದಾರೆ. ಉದಾ: ಶ್ರೀಮತಿ ಗಂಗೂಬಾಯಿ ಹಾನಗಲ್, ಭೀಮಸೇನ್ ಜೋಷಿ, ಮಲ್ಲಿಕಾರ್ಜುನ ಮನಸೂರ, ಸವಾಯಿ ಗಂಧರ್ವ ಬಸವರಾಜ ರಾಜಗುರು ಮುಂತಾದವರು.

ಹಬ್ಬಗಳ ಆಚರಣೆ

ಭಾರತದಲ್ಲಿ ಆಚರಿಸುವ ಎಲ್ಲಾ ಮುಸ್ಲಿಂ ಹಬ್ಬಗಳು ಕರ್ನಾಟಕದಲ್ಲಿ ಆಚರಿಸಲ್ಪಡುತ್ತವೆ. ಈ ಹಬ್ಬಗಳು ವಿಶೇಷವಾಗಿ ಚಂದ್ರಮಾನ ವರ್ಷಕ್ಕೆ ಅನುಗುಣವಾಗಿ ಆಚರಿಸಲ್ಪಡುತ್ತವೆ. ಹಿಂದೂಗಳ ಹಬ್ಬಗಳಲ್ಲಿ ಮುಸ್ಲಿಮರು ಭಾಗವಹಿಸುವುದು, ಮುಸ್ಲಿಮರ ಹಬ್ಬಗಳಲ್ಲಿ ಹಿಂದೂಗಳು ಭಾಗವಹಿಸುವುದನ್ನು ನಾವು ಮೊದಲಿನಿಂದಲೂ ಕಾಣಬಹುದು. ನಗರ ಪ್ರದೇಶಗಳಿಗಿಂತ ಗ್ರಾಮಾಂತರ ಪ್ರದೇಶಗಳಲ್ಲಿ ನಾವು ಹಬ್ಬ ಹರಿದಿನಗಳ ಆಚರಣೆಯಲ್ಲಿ ಹೆಚ್ಚು ಮೈತ್ರಿ ಸೌಹಾರ್ದತೆಗಳನ್ನು ಕಾಣಬಹುದು. ಮುಸ್ಲಿಂ ಅರಸರು ಹಿಂದೂ ಮತೀಯರ ಚಿಹ್ನೆಗಳನ್ನು ಧರಿಸಿ ಅವರು ಆಚರಿಸುವ ಹಬ್ಬಗಳಾದ ರಕ್ಷಾಬಂಧನ, ದಸರಾ,ದೀಪವಾಳಿ ಮತ್ತು ವಸಂತಮಾಸದ ಇತರ ಹಬ್ಬಗಳನ್ನು ಆಚರಿಸುತ್ತಿದ್ದರು. ಮುಸ್ಲಿಂ ಬಾಂಧವರ ಮೊಹರಂ ಹಬ್ಬಗಳಲ್ಲಿ ಹಿಂದುಗಳು ಹಸಿರು ವಸ್ತ್ರಧರಿಸಿ ಮೆರವಣಿಗೆಯಲ್ಲಿ ಭಾಗವಹಿಸುವುದು, ಮೊಹರಂ ಪದಗಳನ್ನು ಹೇಳುವುದು, ಡೋಲಿಗಳಿಗೆ ಲಾಡು,

ಹಣ್ಣುಗಳನ್ನು, ಧೂಪವನ್ನು ಅರ್ಪಿಸುವುದು, ಸಕ್ಕರೆಯ ನೈವೇದ್ಯ ಏರ್ಪಡಿಸುವುದು, ಊದು ಹಾಕುವುದು ಮುಂತಾದ ಎಲ್ಲದರಲ್ಲಿಯೂ ಸಕ್ರಿಯ ಪಾತ್ರ ವಹಿಸುತ್ತಿದ್ದರು. ಮೊಹರಂ ಮತ್ತು ಹೋಳಿ ಹಬ್ಬಗಳಲ್ಲಿ ಹಿಂದುಗಳು ಹುಲಿ ವೇಷ ಹಾಕುವುದು ಸರ್ವೇ ಸಾಮಾನ್ಯ. ಹಿಂದುಗಳು ಮೊಹರಂ ಹಬ್ಬದಲ್ಲಿ ಉತ್ತರ ಕರ್ನಾಟಕದಲ್ಲಿ 'ಚೊಂಗ್ಯಾ' ಎಂಬ ಸಿಹಿ ತಿಂಡಿಯನ್ನು ಮಾಡುವರು. ಗ್ರಾಮಾಂತರ ಪ್ರದೇಶಗಳಲ್ಲಿ ಮುಸ್ಲಿಮರ ಸಂಖ್ಯೆ ಕಡಮೆ ಇರುವಲ್ಲಿ ಡೋಲಿಯನ್ನು ಹಿಂದುಗಳೇ ಹೊತ್ತುಕೊಂಡು ತಿರುಗುವರು. ಹಬ್ಬಗಳಲ್ಲಿ ಸಕ್ರಿಯವಾಗಿ ಭಾಗವಹಿಸುವರು. ಶಬ್-ಎ-ಬಾರಾತ್ ದಿನದಂದು ಮುಸ್ಲಿಮರು ಆತ್ಮೀಯ ಹಿಂದುಗಳ ಮನೆಗೆ ಹೋಗಿ ಒಬ್ಬರನ್ನೊಬ್ಬರು ಆಲಂಗಿಸುವರು. ಚಿಕ್ಕವರು, ಹಿರಿಯರಿಗೆ ಗೌರವವನ್ನು ಸಲ್ಲಿಸುವರು. ರಂಜಾನ್ ಹಬ್ಬದಲ್ಲಿಯೂ ಪರಸ್ಪರರು ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವರು. ಹಿಂದುಗಳ ಹೋಳಿ ಹಬ್ಬದಲ್ಲಿ ರಂಗಪಂಚಮಿಯ ದಿವಸ ಅನೇಕ ಮುಸ್ಲಿಮರೂ ಭಾಗವಹಿಸುವರು. ಮುಸ್ಲಿಮರು ತಯಾರಿಸಿದ ಸಿರಕುಂಭಾ ಎಂಬ ಪಾನೀಯವನ್ನು ಹಿಂದುಗಳು ಸ್ವೀಕರಿಸುವರು. ಹಿಂದೂ-ಮುಸ್ಲಿಂ ಧರ್ಮಗಳ ಸಾಧು ಸಂತರ ಗೋರಿಗಳಿಗೆ ಭಕ್ತಿಯಿಂದ ನಡೆದುಕೊಂಡು ಬರುತ್ತಿದೆ. ಕಲಬುರ್ಗಿಯ ಶರಣ ಬಸವೇಶ್ವರ ಜಾತ್ರೆಗೆ ಮುಸ್ಲಿಮರು, ಬಂದೇ ನವಾಬರ ಉರಸ್‌ಗೆ ಹಿಂದುಗಳು ಸೇರುವುದನ್ನು ಕಂಡಾಗ, ಧರ್ಮಗಳು ಬೇರೆಯಾದರೂ ಮಾನವ ಜಾತಿ ಒಂದೇ ಅನ್ನಿಸುವುದು.

ಮುಸ್ಲಿಂ ಹಬ್ಬಗಳಲ್ಲಿ ಮೊಹರಂ ಹಬ್ಬದ ಹಾಡುಗಳದೇ ಒಂದು ವೈಶಿಷ್ಟ್ಯ. ಶಾಂತಿ ಹಾಗೂ ಧರ್ಮಕ್ಕಾಗಿ ಬಲಿದಾನ ಗೈದ ಹಸನ್-ಹುಸೇನ್‌ರ ವೀರಚರಿತ್ರೆಯ ಹಾಡುಗಳು ಇವು. ಇವುಗಳನ್ನು 'ಅಲಾವಿ' ಅಥವಾ 'ಕರ್ಬಲ್' ಪದಗಳೆಂದು ಕರೆಯುವರು. ಇದು ಪರಂಪರೆಯಿಂದ ಮುಸ್ಲಿಮರ ಹಬ್ಬವಾದರೂ ಆಚರಣೆಯಿಂದ ಸಾರ್ವಜನಿಕ ಹಬ್ಬವಾಗಿದೆ. ಈ ಹಬ್ಬದ ದಿನಗಳಲ್ಲಿ ಹಿಂದೂ ಮುಸ್ಲಿಮರು ಕೂಡಿ ಯಾವ ಭೇದವೂ ಇಲ್ಲದೆ ಮೇಳಗಳನ್ನು ರಚಿಸಿಕೊಂಡು ಕನ್ನಡದ ಹಾಡುಗಳನ್ನು ಹಾಡುತ್ತ ಕುಣಿಯುತ್ತ ಮನೆಯಿಂದ ಮನೆಗೆ, ಊರಿಂದ ಊರಿಗೆ ಸಂಚರಿಸುವರು. ಉತ್ತರ ಕರ್ನಾಟಕದಲ್ಲಿ ಇಂದಿಗೂ ಅಲಾವಿ ಪದಗಳನ್ನು ರಚಿಸಿ ಮೇಳಗಳಲ್ಲಿ ಹಾಡುವಲ್ಲಿ ಅನೇಕ ಹಿಂದೂಗಳು ಪ್ರಸಿದ್ಧಿಯನ್ನು ಪಡೆದಿರುವರು.

ಹಿಂದೂ-ಮುಸ್ಲಿಮರ ಭಾವೈಕ್ಯತೆ:

ಹಿಂದೂ ಮುಸ್ಲಿಂ ಈ ಎರಡೂ ಧರ್ಮಗಳಲ್ಲೂ ಆಗಿಹೋದ ಅನೇಕ ಸಾಧು, ಸಂತರು, ವಿಭೂತಿ ಪುರುಷರು, ಇಂದಿಗೂ ಈ ಎರಡು ಧರ್ಮಗಳ ಮೈತ್ರಿಗೆ ಸ್ಫೂರ್ತಿಯಾಗಿದ್ದಾರೆ. ಅವರು ಮಾಡಿದ ಪವಾಡಗಳು, ಅವರಲ್ಲಿದ್ದ ದೈವಭಕ್ತಿ, ಮಾನವತೆಯ ಅನುಕಂಪ, ಬಂಧುತ್ವ ಭಾವನೆಗಳೇ ಕಾರಣ. ಅಂತಹ ಶರಣರು ಆಗಿಹೋದ ಸ್ಥಳಗಳನ್ನು ಇಂದಿಗೂ ಪವಿತ್ರ ಸ್ಥಳಗಳೆಂದು ಭಾವಿಸಿ ಎರಡು ಮತೀಯರೂ ತಮ್ಮ ತಮ್ಮ ಸ್ವಂತ ಧರ್ಮದ ಪವಿತ್ರ ಸ್ಥಳಗಳಂತೆ ಕಾಣುವರು ಮತ್ತು ಪೂಜಿಸುವರು. ಉತ್ತರ ಭಾರತದಲ್ಲಿ

ಈ ಕಾರ್ಯವನ್ನು ಗುರುನಾನಕ್, ಕಬೀರರಂಥ ಸೂಫಿ ಸಂತರು ಮಾಡಿದರೆ, ಕರ್ನಾಟಕದಲ್ಲಿ ಅನೇಕರು ಈ ಕಾರ್ಯವನ್ನು ಮಾಡಿರುವರು. ಹಿಂದು ಮತ್ತು ಮುಸ್ಲಿಮರನ್ನು ಒಗ್ಗೂಡಿಸುವುದು ಕಬೀರನ ಜೀವನೋದ್ದೇಶವಾಗಿತ್ತು. ಅವನು ಇವೆರಡು ಧರ್ಮಗಳ ಮಧ್ಯದ ಮಾರ್ಗವನ್ನು ಅನುಸರಿಸಿದನು. ಶುದ್ಧವಾದ ಮನಸ್ಸಿನಿಂದ ದೇವರನ್ನು ಪೂಜಿಸಿದರೆ ದೇವರು ಒಲಿಯುವನೆಂದು ಸಾರಿದನು. ನಾನಕರೂ ಸಹ ಹಿಂದು-ಮುಸ್ಲಿಮ-ರಲ್ಲಿ ಐಕ್ಯತೆಯನ್ನುಂಟು ಮಾಡಲು ಶ್ರಮಿಸಿದರು. ಸತ್ಯಮಾರ್ಗದಲ್ಲಿ ನಡೆಯುವುದರಿಂದ ಮಾತ್ರ ಮೋಕ್ಷ ಸಾಧ್ಯವೆಂದು ನಾನಕರು ಬೋಧಿಸಿದರು. ಹದಿನೈದನೆಯ ಶತಮಾನದಲ್ಲಿ ಪ್ರಾರಂಭವಾದ ಭಕ್ತಿಪಂಥಕ್ಕೆ ಹಿಂದು ಮುಸ್ಲಿಮರಿಬ್ಬರೂ ಸೇರಿಕೊಂಡರು. ಕರ್ನಾಟಕದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಇಂತಹ ಅನೇಕ ಸಾಧು ಸತ್ಪುರುಷರು ಹಿಂದು-ಮುಸ್ಲಿಮರ ಮೈತ್ರಿಯನ್ನು ಬೆಳೆಸಿಕೊಂಡು ಬರಲು ಪ್ರೇರಕ ಶಕ್ತಿಯಾಗಿದ್ದಾರೆ. ಕರ್ನಾಟಕದಲ್ಲಿ ಈ ಮುಂದಿನ ಸ್ಥಳಗಳು ಹಿಂದು ಮುಸ್ಲಿಮ ಭಾವೈಕ್ಯತೆಯನ್ನು ಪ್ರೇರೇಪಿಸುವ ಶಕ್ತಿ ಕೇಂದ್ರಗಳಾಗಿ, ಕರ್ನಾಟಕದಲ್ಲಿನ ಧರ್ಮ ಸಮರಸವನ್ನು ಮುನ್ನಡೆಸಿಕೊಂಡು ಬರುತ್ತಿವೆ. ಇವುಗಳು ಕೇವಲ ಉದಾಹರಣೆಗಳು.

ಅವುಗಳಲ್ಲಿ ಪ್ರಮುಖವಾದವುಗಳು ಎಂದರೆ :

ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಸಾವಳಗಿಯ ಶಿವಲಿಂಗೇಶ್ವರ ಮಠವು ವೀರಶೈವ ಮತ್ತು ಇಸ್ಲಾಮಿಯರಿಗೆ ಪೂಜನೀಯವಾದ ಸ್ಥಳ. ಕರ್ನಾಟಕದ ಪ್ರಥಮ ಕನ್ನಡದ ಮಹಮ್ಮದೀಯ ಸಂತ, ಅನುಭಾವಿ ಕವಿ ಎಂದು ಹೆಸರಾದ ಶಿಶುನಾಳ ಶರೀಫರ(೧೮೧೯-೧೮೮೯) ಗದ್ದುಗೆ ಇರುವ ಶಿಶುನಾಳ (ಧಾರವಾಡ ಜಿಲ್ಲೆ) ಮತ್ತು ಇದೇ ಜಿಲ್ಲೆಯ ಯಮನೂರು ಹಿಂದೂ-ಮುಸ್ಲಿಮರಿಗೆ ಸುಪ್ರಸಿದ್ಧ ಯಾತ್ರಾಸ್ಥಳಗಳಾಗಿವೆ. ಬೀದರ್ ಜಿಲ್ಲೆಯ ಬಸವ ಕಲ್ಯಾಣದ ಶೇರಸವಾರದರ್ಗ ಮತ್ತು ಅಷ್ಟೂರಿನ ಅಹಮ್ಮದ ಶಹನ ಉರುಸು (ಅಲ್ಲಮ ಪ್ರಭು ಜಾತ್ರೆ) ಭಾಲ್ಕಿ ತಾಲ್ಲೂಕಿನ ಸಿದ್ದೇಶ್ವರಹಳ್ಳಿಯ ಜಂತಿಇಮಾಮ (ಸದಾನಂದ ಮಹಾರಾಜಗೋಪುರ) ಮಠೀಯ ಸಾಮರಸ್ಯದ ಸಂಕೇತಗಳಾಗಿವೆ. ಗುಲ್ಬರ್ಗಾ ಜಿಲ್ಲೆಯ ತಿಂತಿಣಿಯಲ್ಲಿ ಪವಾಡವೆರಗಿದ ೧೭ನೇ ಶತಮಾನದ ಜ್ಞಾನಯೋಗಿ, ತಿಂತಿಣಿಯ ಮೌನೇಶ್ವರ ಗದ್ದುಗೆಯನ್ನು ಹಿಂದುಗಳು ದೇಗುಲ ಎಂದು ಆರಾಧಿಸಿದರೆ ಮುಸ್ಲಿಮರು ದರ್ಗಾ ಎಂದು ಪೂಜಿಸುವರು.

ಬೀದರ್ ಜಿಲ್ಲೆಯ ಮೂಲತಹ ದತ್ತ ಸಂಪ್ರದಾಯಕ್ಕೆ ಸೇರಿದ ಹುಮನಾಬಾದಿನ ಮಾಣಿಕಪ್ರಭುಗಳನ್ನು ಮುಸ್ಲಿಮರು ಅನನ್ಯ ಭಕ್ತಿಯಿಂದ ಪೂಜಿಸುವರು. ಅದರಂತೆ ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನಗಿರಿಯ ಗುಹಾ ದೇವಾಲಯದಲ್ಲಿ ಹಿಂದುಗಳು ದತ್ತಾತ್ರೇಯ ಪೀಠ ಎಂದು ಆರಾಧಿಸಿದರೆ ಇದೇ ಸ್ಥಳವನ್ನು ಮುಸ್ಲಿಮರು ಹಜರತ್ ದಾದಾ ಹಯಾರ್ ಮೀರಖಲಂದರ (೧೭ನೇ ಶತಮಾನ) ಎಂಬ ಹೆಸರಿನಿಂದ ಕರೆಯಲ್ಪಡುವ ಸೂಫಿಸಂತನ ಗೋರಿಯೆಂದು ಪೂಜಿಸುವರು. ಮಂಗಳೂರಿನ ಬಳಿಯ ಉಲ್ಲಾಳದ ಶರೀಫ್ ಉಲ್ ಮದಾನಿ ಎಂಬ ಸೂಫಿ (೧೭ನೇ ಶತಮಾನ) ಸಂತನ ಸಮಾಧಿಗೆ ಹಿಂದೂ

ಮುಸ್ಲಿಮರೆನ್ನದೇ ಎಲ್ಲರೂ ಹರಕೆ ಹೊರುವರು.

ಧರ್ಮ ಸಮನ್ವಯಕ್ಕೆ ಕರ್ನಾಟಕದಲ್ಲಿ ಪ್ರಸಿದ್ಧವಾದ ಇನ್ನೊಂದು ಸ್ಥಳ ಗುಲ್ಬರ್ಗಾದ ಖ್ವಾಜಾ ಬಂದೇ ನವಾಜ (೧೩೨೧-೧೪೨೨) ಅವರ ದರ್ಗ ಈ ನಗರದಲ್ಲಿ ಶರಣಬಸವೇಶ್ವರ ದೇವಾಲಯದಷ್ಟೆ ಈ ಸ್ಥಳ ಪ್ರಸಿದ್ಧ ಮತ್ತು ಪವಿತ್ರವಾದದ್ದು. ಬೆಳಗಾವಿ ಜಿಲ್ಲೆಯ ಚಿಕ್ಕೊಡಿಯ ಬಳಿಯ ಖರೋಷಿಯ ಶಾನೂರ ಬಾಬಾ ದರ್ಗ, ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಮುರುಘ ಮಲ್ಲೆ (ಮುರುಘಮಲ್ಲ) ದಲ್ಲಿರುವ ಸಯ್ಯದ ಫಕೀರ ಶಾವಲ ದರ್ಗಾ ಹಿಂದೂ ಮುಸ್ಲೀಮರಿಗೆ ಇಂದಿಗೂ ಹರಕೆ ಹೊರುವ ಪೂಜನೀಯ ಸ್ಥಳವಾಗಿದೆ.

ಕರ್ನಾಟಕದ ಅದ್ವೈತ ಚಕ್ರವರ್ತಿ ಎಂದೆ ಹೆಸರಾದ ಮೂಲತಹ ಬೀದರ ಜಿಲ್ಲೆಯ ಚಳಕಾಪೂರದವರಾದ ಹುಬ್ಬಳ್ಳಿಯ ಶ್ರೀ ಸಿದ್ಧಾರೂಡ ಸ್ವಾಮಿಗಳ (೧೮೩೭-೧೯೨೯) ಪರಮಶಿಷ್ಯರಾಗಿದ್ದ ಹೈದರಾಬಾದ ನೈಜಾಮರ ಹತ್ತಿರ ಬಂಧುವಾಗಿದ್ದ ಶ್ರೀಮಂತ ಖಾಜಾ ಅಜಂ ಎಂಬುವವನು ಶ್ರೀ ಸಿದ್ಧಾರೂಢರಿಂದ ದೀಕ್ಷೆ ಪಡೆದು ಅದ್ಯಾತ್ಮ ಮತ್ತು ಸಂಗೀತದಲ್ಲಿ ದೊಡ್ಡ ಹೆಸರು ಮಾಡಿದ್ದನು. ಅವನೇ ಮುಂದೇ ಕಬೀರದಾಸನೆಂದು ಪ್ರಸಿದ್ಧನಾದನು. ಮಮ್ಮದೀಯನಾದ ಇವನ ಸಮಾಧಿಯು ಗದ್ದುಗೆಯ ರೂಪದಲ್ಲಿದ್ದು ಇಂದಿಗೂ ಹಿಂದೂ ಮುಸ್ಲಿಮರಿಂದ ಪೂಜಿಸಲ್ಪಡುವುದು.

ಧಾರವಾಡ ಜಿಲ್ಲೆಯ ಶಿರಹಟ್ಟಿಯ ಶ್ರೀ ಫಕೀರಸ್ವಾಮಿಗಳ ಮಠ ಹಿಂದು-ಮುಸ್ಲೀಮರ ಧಾರ್ಮಿಕ, ಸಾಂಸ್ಕೃತಿಕ ಸಮನ್ವಯಕ್ಕೆ ಇನ್ನೊಂದು ಹೆಸರು. ಕಳೆದ ಸುಮಾರು ೪೦೦ ವರ್ಷಗಳಿಂದ ವೀರಶೈವ ಮತ್ತು ಇಸ್ಲಾಮ ಪರಂಪರೆಗಳು ಒಂದರೊಳಗೊಂದು ಸಮ್ಮಿಳಿತಗೊಂಡು ಭಾವ ಬಂಧುರಗೊಂಡಿವೆ. ಧರ್ಮ ಸಮನ್ವಯಕ್ಕೆ ಇನ್ನೊಂದು ಹೆಸರು ಗುರುನಾನಕರು, ಅವರ ಹತ್ತಿರದ ಅನುಯಾಯಿಗಳಲ್ಲಿ (ಪಂಚಪ್ಯಾರೆ) ಒಬ್ಬರು ಮುಸ್ಲಿಮರು ಇನ್ನೊಬ್ಬ ಹಿಂದು (ಬಾಲಾ) ಆಗಿದ್ದರು. ಗುರುನಾನಕರು ಬೀದರನಲ್ಲಿ ತಮ್ಮ ಪವಾಡ ಶಕ್ತಿಯಿಂದ ನೀರು ಚಿಮ್ಮಿಸಿದಾಗ (ನಾನಕಜಿರಾ), ಇಬ್ಬರು ಮುಸ್ಲೀಮ ಫಕೀರರು ಅವರ ಶಿಷ್ಯರಾದರು (ಜಲಾಲುದ್ದಿನ ಮತ್ತು ಯಾಕೂಬ ಆಲಿ) ಬೀದರಿನ ಗುರುದ್ವಾರಕ್ಕೆ ಇಂದಿಗೂ ಅನೇಕ ಹಿಂದು ಮುಸ್ಲಿಮರು ನಡೆದುಕೊಳ್ಳುವರು.

ಬೆಂಗಳೂರಿನಲ್ಲಿ ಆದಿಶಕ್ತಿಯನ್ನು ಆರಾಧಿಸುವ ಸಂಕೇತವಾದ ಕರಗ ಮಹೋತ್ಸವಕ್ಕೆ ಹಜರತ್ ಮಸ್ತಾನ್ ಸಾಹೇಬರ ದರ್ಗದಿಂದ ಪೂಜೆ ಸಲ್ಲುವುದು. ಮೇಲೆ ಉದಹರಿಸಿದ ಕರ್ನಾಟಕದ ಈ ಪವಿತ್ರ ಸ್ಥಳಗಳಿಗೆ ಭೇಟಿಕೊಟ್ಟಾಗ ನಮಗೆ ನಿಜವಾದ ಭಾವೈಕ್ಯತೆಯ ಅರಿವು ಮೂಡುವುದು. ಈ ಮೇಲಿನ ಸ್ಥಳಗಳು ಕೇವಲ ನಾನು ಕಂಡ ಉದಾಹರಣೆಗಳು, ಇಂತಹ ನೂರಾರು ಸ್ಥಳಗಳು ಕರ್ನಾಟಕದಲ್ಲಿ ಇನ್ನೂ ಇವೆ. ಸ್ಥಳದ ಅಭಾವದಿಂದ ಅವೆಲ್ಲವುಗಳನ್ನು ಇಲ್ಲಿ ವಿವರಿಸುವುದು ಅಸಾಧ್ಯ.

***

ಸಾಹಿತ್ಯ ಪ್ರಭಾ
ಅವತಾರ ಸಂಧ್ಯಾ

ಪು.ತಿ.ನರಸಿಂಹಾಚಾರ್

ಭಗವಂತನಿಗೆ ನಮ್ಮನ್ನು ಕಂಡರೆ ತುಂಬ ಪ್ರೀತಿ. ನಾವು ಕೆಡುವುದನ್ನು ಆತ ಸಹಿಸಲಾರ. ಆತನಿಗೆ ತಾಪವೇನಾದರೂ ಇದ್ದರೆ ಅದು ವಾತ್ಸಲ್ಯದ ತಾಪ. ಈ ದಿವ್ಯ ತಾಪವೇ ಆತನಿಗೆ ವೈಕುಂಠದಲ್ಲಿ ತನ್ನ ಪಾಡಿಗೆ ತಾನು ನೆಮ್ಮದಿಯಾಗಿ ಇರುವುದನ್ನು ತಪ್ಪಿಸಿ ಭೂಮಿಗಿಳಿಸುತ್ತದೆ. ಇದನ್ನೇ ನಾವು ಅವತಾರ ಎನ್ನುವುದು. ''ಮನುಷ್ಯ ತನ್ನಲ್ಲಿರುವ ದಿವ್ಯತೆಯನ್ನು ಮರೆತು ಪ್ರಾಕೃತನಾದಾಗ ದೇವರು ಅವನನ್ನು ಕೈಹಿಡಿದೆತ್ತಿ ನಿಲ್ಲಿಸುತ್ತಾನೆ. ಅಲ್ಲದೆ ಆತನಂತೆ ಬಾಳಿ ಕಷ್ಟ ಸುಖಗಳನ್ನು ಅಮಿತವಾಗಿ ಅನುಭವಿಸಿ ಗೆದ್ದು ಬಂದು ಆತ್ಮೋತ್ಕರ್ಷದ ಆದರ್ಶವನ್ನು ಅವನ ಮನಸ್ಸಿನ ಮುಂದೆ ಕಡೆದು ನಿಲ್ಲಿಸುತ್ತಾನೆ. ಇದೇ ಭಗವಂತನ ಅವತಾರ ತತ್ತ್ವ'' ಎನ್ನುತ್ತಾರೆ ಆಚಾರ್ಯ ಹಿರಿಯಣ್ಣನವರು.

ಅವತಾರಗಳ ಮುಖ್ಯ ಉದ್ದೇಶ ಧರ್ಮಸಂಸ್ಥಾಪನೆ. ಧರ್ಮ ಕೆಡಬೇಕಾದರೆ ಶಕ್ತರಾದ ಸ್ವಾರ್ಥಿಗಳ ಸ್ವೈರ ವರ್ತನೆಯಿಂದ. ಆಗ, ಮನುಷ್ಯಸಮಾಜ ತನ್ನ ಸನ್ಮೌಲ್ಯಗಳನ್ನೆಲ್ಲ ಮರೆತು ಮಾನವನ ಬಾಳುವೆ ತೀರ ಅಕ್ರಮ ಸ್ಥಿತಿಯಲ್ಲಿರುತ್ತದೆ. ದುರ್ಮಾರ್ಗಿಗಳು ಹೆಚ್ಚಿ ಏಳಿಗೆಯಲ್ಲಿರುತ್ತಾರೆ. ಸಾಧುಗಳು ಕೊರುಗುತ್ತಿರುತ್ತಾರೆ. ಸಜ್ಜನರಾದರೋ ಸಹನಶೀಲರು. ತಿತಿಕ್ಷೆ ಅವರನ್ನೇ ಆಶ್ರಯಿಸಿರುತ್ತದೆ. ಆದರೆ ಅದಕ್ಕೂ ಒಂದು ಮಿತಿಯುಂಟು. ಈ ಮಿತಿಯನ್ನು ಅವರು ಮುಟ್ಟಿದಾಗ ಗತ್ಯಂತರವಿಲ್ಲದೆ ಅವರು ಭಗವಂತನಿಗೆ ಮೊರೆಯಿಡುತ್ತಾರೆ. ಆಗ ಭಗವಂತ ಕೆಳಗಿಳಿದು ಬರುತ್ತಾನೆ. ''**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ಧರ್ಮಸಂಸ್ಥಾಪನಾರ್ಥಾಯ**''.

ಇದರಿಂದ ಒಂದಂಶ ಹೊರಡುತ್ತದೆ. ಭೂಮಿಯ ಬಾಳುವೆ ಎಷ್ಟೇ ಕೆಟ್ಟಿರುವ ಸಮಯದಲ್ಲೂ ಸಾಧುಗಳೂ ವಿವೇಕಿಗಳೂ ಭಗವಂತನ ಅನುಗ್ರಹವನ್ನು ಮಾನವ ಸಮಾಜಕ್ಕೆ ಕೋರುತ್ತಾ. ಆ ಸಮಾಜದ ಸನ್ಮೌಲ್ಯಗಳಿಗೆಲ್ಲ ಎಷ್ಟೇ ಕಷ್ಟವಾದರೂ ಇಂಬುಗೊಡುತ್ತಾ ಇದ್ದೇ ಇರುತ್ತಾರೆ ಎಂಬುದು. ಸಾಧುಗಳು ಎಂದರೆ ಇತರರಿಗೆ ಕೇಡನ್ನು ಬಯಸದೆ ತಾವು ಎಂಥ ಕೇಡನ್ನಾದರೂ ಸಹಿಸಿಕೊಂಡು ಮಂಗಳಾಕಾಂಕ್ಷಿಗಳಾಗಿರುವವರು ; ಎಂದರೆ ಜೀವಕ್ಕೆ ಶಾಂತಿ ಪುಷ್ಟಿ ತುಷ್ಟಿಗಳನ್ನು ಕೋರುವವರು, ಏನೇ ಆದರೂ ದೈವೀಮೌಲ್ಯಗಳ ಕೈ ಬಿಡದಿರುವವರು. ಇಂಥವರ ಸೈರಣೆ ಶೂನ್ಯಕ್ಕಿಳಿದಾಗ ಜಗನ್ನಿಯಾಮಕ ಶಕ್ತಿ ಸುಮ್ಮನಿರುವದಿಲ್ಲ. ಆಗ ದುಷ್ಟರು ನಾಶವಾಗಲೇಬೇಕು, ಅವರ ನಾಶವೂ ಒಂದು ಭಗವಂತನ ಅನುಗ್ರಹವೇ, ಏಕೆಂದರೆ, ಆತನ ಕೈಯಿಂದ ಹತರಾದವರಿಗೆ ಉದ್ಧೃತರಾದವರ ಹಾಗೆಯೇ ಸದ್ಗತಿಯುಂಟು.

ಅಭಿವಂದನಾ

ಈಗೊಂದು ಪ್ರಶ್ನೆ ಏಳುತ್ತದೆ: ಭಗವಂತ ಈ ದುಷ್ಟರು ಹೆಚ್ಚಲು ಏಕೆ ಅವಕಾಶ ಕೊಟ್ಟ? ಮನುಷ್ಯ ದುರ್ಮಾರ್ಗಿಯಾಗಲು ಏಕೆ ಬಿಟ್ಟ? ಇದಕ್ಕೆ ಉತ್ತರವನ್ನು ಹೀಗೆ ಹೇಳಬಹುದು; ದೇವರಿಗೆ ಮನುಷ್ಯನ ಸ್ವಾತಂತ್ರ್ಯವನ್ನು ಹರಣಮಾಡಲು ಇಷ್ಟವಿರುವಂತೆ ತೋರುವುದಿಲ್ಲ. ಸ್ವಾತಂತ್ರ್ಯ ಎಂಬುದು ಮಾನವನ ಮಹಾಸಾಂಸ್ಕೃತಿಕ ಮೌಲ್ಯಗಳಲ್ಲಿ ಪ್ರಧಾನವಾದದ್ದು. ಎಲ್ಲ ಮೌಲ್ಯಗಳಿಗೂ ಸ್ವಾತಂತ್ರ್ಯವೇ ಆಧಾರ. ಅಸ್ವಾತಂತ್ರ್ಯ ಮನುಷ್ಯನ ಘನತೆಗೆ ಕಡಮೆ. ಮಾನವ ಎಷ್ಟು ಸ್ವವಶನೋ ಸ್ವತಂತ್ರನೋ ಅಷ್ಟರ ಮಟ್ಟಿಗೆ ಆತ ಆತ್ಮಶಾಲಿ. ಕಾಮ, ಕ್ರೋಧಾದಿಗಳ ವಶನಾದಾಗ ಮನುಷ್ಯ ಅಸ್ವಾತಂತ್ರ್ಯದ ಪರಾಕಾಷ್ಠೆಯನ್ನು ಮುಟ್ಟುತ್ತಾನೆ. ಹೀಗೆ ಅಸ್ವತಂತ್ರನಾಗುವ ಸ್ವಾತಂತ್ರ್ಯವೂ ಮನುಷ್ಯನಿಗೆ ಭಗವಂತನ ಕೃಪೆಯಿಂದಲೇ ಲಭಿಸಿದೆ. ಅದಕ್ಕೇ ಮಾನವನನ್ನು ಕೆಡಲು ಸಹ ಭಗವಂತ ಬಿಡುವುದು. ಆದರೆ ಈ ಅರಿಷಡ್ವರ್ಗಪಾರವಶ್ಯ ಅತ್ಯಂತವಾದಾಗ ಅದನ್ನು ತಪ್ಪಿಸುವುದೂ ಭಗವಂತನ ಕಾರುಣ್ಯದ ಪರಿಧಿಗೇ ಸೇರಿದುದು. ಮನುಷ್ಯನನ್ನು ಸ್ವವಶತೆಯ ಹಾದಿಯಲ್ಲಿ ನಿಲ್ಲಿಸಲು ಅವನ ಹಾಗೆಯೇ ತಾನು ಬಾಳುವೆಯಲ್ಲಿ ಕ್ಲೇಶಕ್ಕೆ ಸಿಕ್ಕಿ ಜಯಭೇರಿ ಹೊಡೆದು ಆದರ್ಶವನ್ನು ಕಲ್ಪಿಸಿಕೊಡುತ್ತಾನೆ ದೇವರು, ತನ್ನನ್ನು ಅನುಕರಿಸಿ ಮತ್ತು ಅನುಸರಿಸಿ ತಾನೂ ಜಯಶಾಲಿಯಾಗಲೆಂದು. ಅವತಾರ ಹೀಗೆ ಮನುಷ್ಯನ ಸ್ವಾತಂತ್ರ್ಯ ಮೌಲ್ಯವನ್ನು ಉದ್ಧರಿಸುತ್ತದೆ. ಕಾಮಕ್ರೋಧಾದಿ ಜೀವನಿರ್ವಾಹಕ ಚೋದನಗಳನ್ನು ಅವು ನರನ ಪ್ರಗತಿಗೆ ಕಂಟಕವಾಗದಂತೆ ನಿಯಮಿಸುವ ಅಂತಶ್ಶಕ್ತಿಯ ಪುನರುದ್ಧರಣ ಮತ್ತು ಈ ನಿಯಮನ ಶಕ್ತಿಯ ಉತ್ಥಾನವನ್ನು ಪ್ರತಿಭಟಿಸುವ ವಿರುದ್ಧ ಶಕ್ತಿಗಳ ದಮನ- ಇದೇ ಅವತಾರ ಪುರುಷನ ಕಾರ್ಯ. ಇದನ್ನೇ ದುಷ್ಟಶಿಕ್ಷಣ ಶಿಷ್ಟಪರಿಪಾಲನವೆನ್ನುವುದು.

ಭಗವಂತನು ಧರಿಸಿದ ಅವತಾರಗಳು ಅನೇಕ. ಅವುಗಳ ಪಟ್ಟಿ ಆಗಮಗಳಲ್ಲೂ ಪುರಾಣಗಳಲ್ಲೂ ವಿಧವಿಧವಾಗಿವೆ. ಭಾಗವತ ಇಪ್ಪತ್ತೆರಡನ್ನು ಉಲ್ಲೇಖಿಸುತ್ತದೆ. ಹತ್ತು ಅವತಾರಗಳು ಪ್ರಸಿದ್ಧವಾಗಿವೆ. ''**ಬಹೂನಿ ಮೇ ವ್ಯತೀತಾನಿ ಜನ್ಮಾನಿ**'' ಎನ್ನುತ್ತಾನೆ ಭಗವಂತ. ಎಲ್ಲವೂ ಲೋಕದ ಕಲ್ಯಾಣಕ್ಕಾಗಿ, ತುಷ್ಟಿಗಾಗಿ ಪುಷ್ಟಿಗಾಗಿ.

ರಾಮ ಕೃಷ್ಣ ಪರಶುರಾಮಾದಿಗಳಲ್ಲಿ, ಹೊರತು ಮಿಕ್ಕ ಅವತಾರಗಳಲ್ಲಿ ದೇವರು ಮಾನವ ದೇಹವಾಂತು ಪಟ್ಟ ಪಾಡಿನ ವಿವರ ನಮಗೆ ತಿಳಿಯದು. ಅವುಗಳೆಲ್ಲ ಆಯಾ ಸಮಯಕ್ಕೆ ತಕ್ಕ ರೂಪದಲ್ಲಿ ಅವಿರ್ಭವಿಸಿ ಕೆಲಸವಾದ ಮೇಲೆ ಮರಳಿ ವಾಸುದೇವ ವ್ಯೂಹದಲ್ಲಿ ಲೀನವಾಗುತ್ತವೆ. ರಾಮ ಕೃಷ್ಣರ ಅವತಾರಗಳ ವಿವರಗಳನ್ನು ವಾಲ್ಮೀಕಿ ವ್ಯಾಸರು ವಿವರವಾಗಿಯೂ ಹೃದಯಂಗಮವಾಗಿಯೂ ನಿರೂಪಿಸಿದ್ದಾರೆ. ''**ರಾಮೋ ವಿಗ್ರಹವಾನ್ ಧರ್ಮಃ**'' ಎಂಬುದು ರಾಮಾವತಾರದ ರಹಸ್ಯವನ್ನು ಒಂದು ಮಾತಿನಲ್ಲಿ ನಿರೂಪಿಸುತ್ತದೆ. ಕೃಷ್ಣನನ್ನು ಪರಬ್ರಹ್ಮನ ಪೂರ್ಣಾವತಾರವೆಂದೇ ವರ್ಣಿಸಲಾಗಿದೆ. ಈ

ಅವತಾರಗಳಲ್ಲಿ ಭಗವಂತ ನಮಗೆ ಆದರ್ಶರೂಪನಾಗಿಯೂ ಪರಿಣಮಿಸಿದ್ದಾನೆ. ತಮ್ಮ ಕ್ಲೇಶಗಳನ್ನು ಕಳೆದುಕೊಳ್ಳಲು ಜನ ಇಂದಿಗೂ ರಾಮ ಕೃಷ್ಣರನ್ನು ನೆನೆಯುತ್ತಾರೆ. ಶ್ರೀ ಕೃಷ್ಣಸ್ಮರಣೆಯ ಮಹಿಮೆಯನ್ನು ಚೈತನ್ಯಪ್ರಭುಗಳಿಗಿಂತ ಚೆನ್ನಾಗಿ ವರ್ಣಿಸುವುದು ಅಸಾಧ್ಯ-

> ''ಚೇತೋದರ್ಪಣಮಾರ್ಜನಂ ಭವಮಹಾದಾವಾಗ್ನಿನಿರ್ವಾಪಣಂ|
> ಶ್ರೇಯಃಕೈರವಚಂದ್ರಿಕಾವಿತರಣಂ ವಿದ್ಯಾವಧೂಜೀವನಂ||
> ಆನಂದಾಂಬುಧಿವರ್ಧನಂ ಪ್ರತಿಪದಂ ಪೂರ್ಣಾಮೃತಾ ಸ್ವಾದನಂ|
> ಸರ್ವಾತ್ಮಸ್ನಪನಂ ಪರಂ ವಿಜಯತೇ ಶ್ರೀಕೃಷ್ಣಸಂಕೀರ್ತನಂ||

ಮನಸ್ಸೆಂಬ ಕನ್ನಡಿಯನ್ನು ಒರೆಸುತ್ತದೆ. ಸಂಸಾರವೆಂಬ ಕಾಳ್ಗಿಚ್ಚನ್ನು ಆರಿಸುತ್ತದೆ. ಶ್ರೇಯಸ್ಸೆಂಬ ಕನ್ನೈದಿಲೆಯನ್ನು ಅರಳಿಸುವ ಬೆಳುದಿಂಗಳನ್ನು ಹರಿಸುತ್ತದೆ. ವಿದ್ಯೆಯೆಂಬ ವಧುವಿನ ಬದುಕೇ ಆಗಿದೆ. ಆನಂದವೆಂಬ ಕಡಲನ್ನು ಕ್ಷಣ ಕ್ಷಣಕ್ಕೂ ಉಕ್ಕಿಸುತ್ತದೆ. ಮಾತು ಮಾತಿಗೂ ಅಮೃತಪಾನ ಮಾಡಿಸುತ್ತದೆ. ಎಲ್ಲ ಆತ್ಮವನ್ನೂ ಅದ್ದಿ ಅದ್ದಿ ತೊಳೆಯುತ್ತದೆ ಶ್ರೀ ಕೃಷ್ಣ ಸಂಕೀರ್ತನೆ.

''ಸರ್ವಾತ್ಮಸ್ನಪನಂ'' -ಎಲ್ಲರಾತ್ಮವನ್ನೂ ತೊಳೆದು ನಿರ್ಮಲಮಾಡುವಂಥದು ಶ್ರೀಹರಿ ಸ್ಮರಣೆ. ಏಕೆಂದರೆ ಆತನದು ತುಂಬು ಬಾಳುವೆ. ಸಕಲ ಮೌಲ್ಯಗಳನ್ನೂ ಮಾನವ ಹೃದಯದಿಂದ ಉದ್ಧರಿಸಬಲ್ಲಂಥದು.

ಹೀಗೆ ಭಗವಂತನ ಉದಯದ ಪೂರ್ವಾಸಂಧ್ಯೆಯಲ್ಲಿ ಭೂಮಿಹದಗೆಟ್ಟಿದ್ದು ಅವತಾರದ ಅವಧಿಯಲ್ಲಿ ತಿರುಗಿ ಹಸನಾಗುತ್ತದೆ.

ಆದರೆ ಮನುಷ್ಯ ದೇಹವನ್ನು ತಳೆದು ಇಲ್ಲಿ ಬದುಕುವುದು ಭಗವಂತನಿಗೂ ಸುಲಭವಾದ ಮಾತಲ್ಲ. ಅವತಾರಗಳ ಪಶ್ಚಿಮ ಸಂಧ್ಯೆಗಳು ಕ್ಲೇಶಮಯವಾಗಿವೆ. ರಾಮ ಕೃಷ್ಣ ಪರಶುರಾಮರನ್ನು ಬಿಟ್ಟರೆ ಮಿಕ್ಕ ಅವತಾರಗಳ ಉತ್ತರ ಸಂಧ್ಯೆಯ ಪರಿಚಯ ನಮಗಿಲ್ಲ. ಪರಶುರಾಮ ದುಷ್ಟ ಕ್ಷತ್ರಿಯರನ್ನು ಕೊಂದು, ಸಾಮಾನ್ಯ ಜನರಿಗೆ ನೆಮ್ಮದಿಯನ್ನು ತಂದ. ಆದರೆ ಒಳ್ಳೆಯ ಕ್ಷತ್ರಿಯರಿಲ್ಲದೆ, ಭೂಮಿ ಕಂಗೆಡುತ್ತದೆ. ಆಗ ದಾಶರಥಿ ಉದಿಸಿದ. ಪರಶುರಾಮನ ಅಂತ್ಯಕಾಲದಲ್ಲಿ ಆತನ ತೇಜಸ್ಸು ದಾಶರಥಿಯಿಂದ ಅಪಹೃತವಾದುದನ್ನೂ ಆತ ನೆಲೆಯಿಲ್ಲದೆ ತಪಸ್ಸಿನ ಸಂಪತ್ತನ್ನೆಲ್ಲ ಕಳೆದುಕೊಂಡು ತಿರುಕನಾಗುವುದನ್ನೂ ಕಾಣುತ್ತೇವೆ. ಇನ್ನು ರಾಮಾವತಾರದ ಬೈಗಿನ ವೇಳೆಯೋ, ಅದೂ ದುರಂತಮಯ. ಸೀತೆ ಮತ್ತೊಂದು ದಿವ್ಯಕ್ಕೆ ಹೇಸಿ ಭೂಮಿಗಿಳಿದು ಹೋದಳು. ಲಕ್ಷ್ಮಣನನ್ನು ರಾಮನೇ ತ್ಯಜಿಸಬೇಕಾಗಿ ಬಂದು, ಆ ಪ್ರಾಣಕ್ಕಿಂತಲೂ ಪ್ರಿಯವಾದ ತಮ್ಮ ಮೈತೊರೆದ; ಕೊನೆಗೆ ರಾಮನೂ ಕೂಡ ಭರತ ಶತ್ರುಘ್ನ ಸುಗ್ರೀವಾದಿಗಳೊಡನೆ ಅಯೋಧ್ಯಾಪುರವಾಸಿಗಳೆಲ್ಲರೊಡಗೂಡಿ ಸರಯೂ ನದಿಯನ್ನು ಪ್ರವೇಶಿಸುತ್ತಾನೆ. ಈ ಸರಯೂಪ್ರವೇಶ ದುರಂತದ ಸಂಭ್ರಮ ಸಂತೋಷಗಳನ್ನು ಉತ್ತರಕಾಂಡದ ವರ್ಣನೆಗಳಲ್ಲಿ

ನೋಡಬೇಕು. ರಾಮನ ಆಳ್ವಿಕೆ ಭೂಮಿಯನ್ನು ತುಂಬ ಚೆನ್ನಾಗಿ ಮಾಡಿತು. ಜನರಲ್ಲಿ ಎಲ್ಲ ಕಾರ್ಪಣ್ಯಗಳೂ ಹಿಂಗಿ ಹೋದವು. ಆದರೆ ಅವತಾರ ಪುರುಷನಾದ ರಾಮ ಮಾತ್ರ ಸುಖಜೀವನ ನಡೆಸಲಿಲ್ಲ. ಆತ ಧರ್ಮವೇ ಮೈವೆತ್ತು ಬಂದವ. ಅಂಥವನು ಅಜೇಯ ನಿಜ; ಆದರೆ ಅಂಥವನಿಗೆ ಸುಖ ಎಲ್ಲಿ? ಧರ್ಮಿಷ್ಠರು ಧರ್ಮಾಚರಣೆಯಲ್ಲಿಯೇ ನೆಮ್ಮದಿಯನ್ನು ಕಾಣಬೇಕು.

ಇನ್ನು ಶ್ರೀ ಕೃಷ್ಣನ ಬಾಳ ಸಂಜೆಯೋ, ಅದಕ್ಕೂ ವಿಷಾದದ ನೆರಳು ಕವಿದಿದೆ. ಮಹಾಭಾರತ ಯುದ್ಧದಲ್ಲಿ ಬಂಧುಕ್ಷಯ, ಪ್ರಭಾಸದಲ್ಲಿ ಸ್ವಕುಲದ ಸರ್ವನಾಶ. ಮನೆಯಲ್ಲೂ ವೃದ್ಧ ಕೃಷ್ಣ ನೆಮ್ಮದಿಯಿಂದ ಇದ್ದದ್ದು ಕಾಣುವುದಿಲ್ಲ. ನಾರದನೊಡನೆ ಆತ ತನ್ನ ಮನಃಕ್ಲೇಶಗಳನ್ನು ತೋಡಿಕೊಂಡ ರೀತಿ ಬಹು ವಿನೋದಕರವಾಗಿದೆ. "ಅಣ್ಣ ಬಲರಾಮನಿಗೆ ತಾನು ಬಲಶಾಲಿಯೆಂದು ತುಂಬ ವ್ಯಾಮೋಹ. ತಮ್ಮ ಗಹನ ಸೊಗಸುಗಾರಿಕೆಯನ್ನು ಹೇಳತೀರದು. ಮಗ ಪ್ರದ್ಯುಮ್ನ ತನ್ನಷ್ಟು ಸುಂದರ ಪ್ರಪಂಚದಲ್ಲೇ ಇಲ್ಲವೆಂದು ಬೀಗುತ್ತಾನೆ. ಸಾತ್ಯಕಿಗೂ ಅಕ್ರೂರನಿಗೂ ಹತ್ತಿದ ಜಗಳ ಹರಿಯುವುದಿಲ್ಲ. ಈ ನೆಂಟರಿಗೋ ಎಷ್ಟು ಮಾಡಿದರೂ ಸಾಲದು, ಏನು ಕೊಟ್ಟರೂ ತೃಪ್ತಿಯಿಲ್ಲ. ಸದಾ ಗೊಣಗುತ್ತಲೇ ಇದ್ದಾರೆ. ನನಗೆ ಇವರನ್ನೆಲ್ಲ ಕಂಡು ರೋಸಿ ಹೋಗಿದೆ. ಎಲ್ಲಾದರೂ ಓಡಿಹೋಗಿ ಬಿಡೋಣ ಎನ್ನಿಸಿದೆ. ಏನು ಮಾಡೋಣ ನಾರದರೇ" ಎನ್ನುತ್ತಾನೆ ಕೃಷ್ಣ. ನಾರದ ಆತನಿಗೆ ಸೈರಣೆಯನ್ನು ಬೋಧಿಸಿ ನೀನೊಬ್ಬ ಅವತಾರ ಪುರುಷ; ನಿನಗೆ ತಿಳಿಯದ್ದು ಉಂಟೆ? ಎಂದು ನಗೆಯಾಡುತ್ತಾನೆ. ಇದರಿಂದ ಯದುಕುಲದವರ ಸ್ವಭಾವ ಎಂಥದು ಎಂಬುದು ನಮಗೆ ತಿಳಿದು ಬರುತ್ತದೆ, ಪ್ರಭಾಸದಲ್ಲಿ ಅವರು ಊಟದ ರುಚಿಯನ್ನೇ ಎತ್ತಿ ನನ್ನ ಮನೆಯದು ಹೆಚ್ಚು ರುಚಿ ನನ್ನದೇ ಹೆಚ್ಚು ಎಂದೇ ಪಾನಮತ್ತರಾಗಿ ಹೊಡೆದಾಡಿ ಸಾಯುತ್ತಾರೆ. ಬಲರಾಮ ಸಮುದ್ರವನ್ನು ಹೋಗುತ್ತಾನೆ. ಕೃಷ್ಣ ಯೋಗವನ್ನು ಹಿಡಿದು ಒಂದು ಮರದ ನೆರಳಿನಲ್ಲಿ ಮಲಗುತ್ತಾನೆ. ಜರನೆಂಬ ಬೇಡರವನು ಅವನ ಪಾದವನ್ನು ಕಂಡು ಮಗವೆಂದುಕೊಂಡು ಅಂಬನ್ನೆಸೆಯುತ್ತಾನೆ. ಅದೇ ನೆವವಾಗಿ ಕೃಷ್ಣ ಪರಂಧಾಮವನ್ನೈದುತ್ತಾನೆ.

ಕೃಷ್ಣ ಹೋದ ಮೇಲೂ ಆತನ ನೆಂಟರಿಷ್ಟರಿಗೆ ಆದ ಗೋಳನ್ನು ಹೇಳತೀರದು. ಅರ್ಜುನನ ಬೆದರಿಕೆಗೆ ಸಗ್ಗದೆ ಶ್ರೀ ಕೃಷ್ಣನ ಹೆಂಡಿರನ್ನೇ ಹಳ್ಳಿಯ ಪುಂಡರು ಎತ್ತಿಕೊಂಡು ಹೋಗುತ್ತಾರೆ! ಹೀಗೆ ಕೃಷ್ಣಾವತಾರದ ಪಶ್ಚಿಮ ಸಂಧ್ಯೆ ದುರಂತದಲ್ಲಿ ಕೊನೆಗೊಳ್ಳುತ್ತದೆ.

ಆಗಮಗಳು ದೇವರನ್ನು ಆರು ಗುಣಗಳುಳ್ಳವನೆಂದು ವರ್ಣಿಸುತ್ತವೆ. ಅವು ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ,ತೇಜಸ್ಸುಗಳು- ಇವುಗಳ ಪ್ರಕಾಶದಿಂದಲೇ ನಾವು ಅವತಾರ ಪುರುಷನಾದ ಭಗವಂತನನ್ನು ಮನುಷ್ಯಸಮೂಹದಲ್ಲಿ ಗುರುತಿಸುವುದು. ಶ್ರೀ ಕೃಷ್ಣ ರಾಮಾದಿಗಳು ಈ ಗುಣಗಳನ್ನು ಎಲ್ಲರಿಗಿಂತಲೂ ವಿಶೇಷವಾಗಿ ಪ್ರಕಟಿಸಿ ಅವತಾರ

ಪುರುಷರೆನಿಸಿಕೊಂಡರು. ಈ ಗುಣಗಳೋ ವಾತ್ಸಲ್ಯ, ಕೃಪೆ ಈ ಮಹಾಗುಣಗಳ ಪ್ರವರ್ತನೆಗೆ ಅಧೀನವಾಗಿ ಯುಕ್ತಸಮಯದಲ್ಲಿ ಪ್ರಕಟವಾಗುತ್ತವೆ. ದಯಾಹೀನನಾಗಿದ್ದ ಪಕ್ಷದಲ್ಲಿ ಭಗವಂತನಿಗೆ ಈ ಗುಣಗಳೇ ದೋಷಗಳಾಗುತ್ತಿದ್ದವು. ದಯಾಶತಕದಲ್ಲಿ ಶ್ರೀ ವೇದಾಂತ ದೇಶಿಕರು ಇದನ್ನು ಬಹುಮನೋಹರವಾಗಿ ವರ್ಣಿಸುತ್ತಾರೆ-

''ವೃಷಗಿರಿಗೃಹಮೇಧಿಗುಣಾ ಬೋಧಬಲೈಶ್ವರ್ಯ-
ವೀರ್ಯಶಕ್ತಿಮುಖಾಃ। ದೋಷಾ ಭವೇಯುರೇತೇ
ಯದಿ ನಾಮ ದಯೇ ತ್ವಯಾ ವಿನಾ ಭೂತಾಃ''

'ದಯೇ! ನೀನಿಲ್ಲದಿದ್ದರೆ ವೆಂಕಟೇಶ್ವರ ದೇವರ ಜ್ಞಾನ ಬಲ ಐಶ್ವರ್ಯ ವೀರ್ಯಶಕ್ತಿ ಮುಂತಾದ ಗುಣಗಳು ದೋಷಗಳೇ ಆಗಿಬಿಡುತ್ತಿದ್ದವು.'

ದೇವರ ಮರುಕ ಆತನನ್ನು ಹೀಗೆ ಮನುಷ್ಯನಾಗಿ ಬಾಳಬೇಕಾದ ಕಷ್ಟಕ್ಕೆ ಸಿಕ್ಕಿಸುತ್ತದೆ. ಆತನ ಬೋಧ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸುಗಳು ಮನುಷ್ಯ ದೇಹಿಯಾದ ಭಗವಂತನನ್ನು ಆ ಕಷ್ಟಗಳಿಂದ ನಿತ್ತರಿಸುತ್ತವೆ ಮತ್ತು ತಿರೆಯ ಬಾಳನ್ನು ಹಸನುಗೊಳಿಸುವುದರಲ್ಲಿ ಕೃತಾರ್ಥವಾಗುತ್ತವೆ.

ಈ ವಿಭವಾವತಾರಗಳೆಲ್ಲ ಹಿಂದಿನ ಯುಗಗಳಿಗೆ ಸೇರಿದವು. ಈ ಕಲಿಯುಗದಲ್ಲಿ ಮತ್ತೊಂದು ಆಗುವುದಿದೆ. ಅದು ಪ್ರಳಯಕಾರಿ ಕಲ್ಕಿಯ ಅವತಾರ. ಆದರೆ ಅದಕ್ಕೆ ಇನ್ನೂ ಬಹಳ ಸಮಯ ಬೇಕು. ಭೂಮಿ ಇನ್ನೂ ಅಷ್ಟಾಗಿ ಕೆಟ್ಟಿಲ್ಲ. ಈಗ ಭಗವಂತ ನಮಗೆ ಲಭ್ಯವಾಗಿರುವುದು ಅಂತರ್ಯಾಮಿ ಮತ್ತು ಅರ್ಚಾವತಾರಗಳ ರೂಪದಲ್ಲಿ. ''ಅನ್ತಃ ಪ್ರವಿಷ್ಟಃ ಶಾಸ್ತಾ ಜನಾನಾಂ'' ''ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟಃ ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ'' ಆದರೆ ಆತ ನಮ್ಮಲ್ಲಿರುವುದು ನಮಗೆ ಗೊತ್ತಾಗುವುದಿಲ್ಲ, ನಮ್ಮಹಂಕಾರ ತೆಳ್ಳಗಾದ ಹೊರತು. ಅಂತರ್ಯಾಮಿಯಾಗಿ ನಮ್ಮ ಜೀವದೊಳಕ್ಕೆ ಅವತರಿಸಿರುವ ಪರಮಾತ್ಮನ ಸ್ವರೂಪ ಸೂಕ್ಷ್ಮಬುದ್ಧಿಗಳಾದ ಉಪಾಸಿಗಳಿಗೆ ಮಾತ್ರ ಗೋಚರಿಸತಕ್ಕದ್ದು. ಧರ್ಮ ನಿಂತಿರಬೇಕಾದರೆ ಈ ಉಪಾಸಕರಿಂದಲೇ. ಈ ಕಾಲದಲ್ಲಿ ಅಂತರ್ಯಾಮಿಯ ಮಹೋಪಾಸಕರಲ್ಲಿ ಅಗ್ರಗಣ್ಯ ಮಹಾತ್ಮಾಗಾಂಧಿ. ಈ ಮಹಾತ್ಮನ ಬಾಳೂ ದುರಂತವಾಗಿಯೇ ಮುಗಿಯಿತಲ್ಲವೆ? ಈ ಸಂಜೆ ಇರುಳಿಗಿಟ್ಟುಕೊಂಡ ಮೇಲೆ ಆ ನಟ್ಟಿರುಳಿನಲ್ಲಿ ಕಲ್ಕಿಯ ಅವತಾರವನ್ನು ನಿರೀಕ್ಷಿಸಬಹುದು. ಆತ ಅಣ್ವಸ್ತ್ರ ಕ್ಷಿಪಣಿಗಳ ಶಯ್ಯೆಯಲ್ಲಿ ಈಗ ನಿದ್ರಿಸುತ್ತಿದ್ದಾನೆ ಅಷ್ಟೆ.

ಭಗವಂತನ ದಯೆ ಈ ಅಭಯ-ವಿನಯ-ಜ್ಞಾನ-ಧ್ಯಾನ-ಗಮ್ಯನಾದ ಅಂತರ್ಯಾಮಿಯ ಅವತಾರದಷ್ಟಕ್ಕೆ ನಿಲ್ಲದೆ ಅರ್ಚಾವತಾರಕ್ಕೂ ಮುಂದುವರಿದಿದೆ. '**ನ ತೇ ರೂಪಂ ನ ಚಾಕಾರೋ ನಾಯುಧಾನಿ ನ ಚಾಸ್ಪದಂ। ತಥಾಪಿ ಪುರುಷಾಕಾರೋ ಭಕ್ತಾನಾಂ ತ್ವಂ ಪ್ರಕಾಶಸೇ**' ನಿನಗೆ ರೂಪವಿಲ್ಲ, ಆಕಾರವಿಲ್ಲ, ಆಯುಧಗಳೂ ಇಲ್ಲ.

ನೆಲೆಯೂ ಇಲ್ಲ. ಆದರೂ ಭಕ್ತರಿಗೆ ಪುರುಷಾಕಾರನಾಗಿ ಹೊಳೆಯುತ್ತಿದ್ದೇಯೆ ಎಂಬ ಸೂಕ್ತಿ ಆರ್ಚಾವತಾರದ ಹುರುಳನ್ನು ಚೆನ್ನಾಗಿ ಪ್ರತಿಪಾದಿಸುತ್ತದೆ. ಆದರೆ ಗುಡಿಗಳಲ್ಲಿ ಪೂಜಾದಿಗಳ ಮೂಲಕ ದೇವಸಾನ್ನಿಧ್ಯವನ್ನು ಕಲ್ಪಿಸಿ ಪುನೀತರೂ ಸಂತೋಷ ಚಿತ್ತರೂ ಆಗುವ ಕೌಶಲವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಆರ್ಚಾವತಾರಕ್ಕೂ ಸಂಜೆಗವಿದು ಬರುತ್ತಿದೆ. ಪರಮಾತ್ಮ ಮನುಷ್ಯರ ಹೃದಯದಲ್ಲೂ ಗುಡಿಗಳಲ್ಲೂ ಬಹುಕ್ಲೇಶ ಪಡುತ್ತಿದ್ದಾನೆ. ಶುದ್ಧಾಂತಃಕರಣ ಸಂಪನ್ನರಿಗೆ ಮಾತ್ರ ಕೇಳಿಬರುವ ಅಂತರ್ಯಾಮಿಯ ವಾಣಿ ಅವರ ಹೃದಯದಲ್ಲೇ ಅಡಗಿ ಹೋಗುತ್ತಿದೆ. ಗುಡಿಗಳು ಹಾಳುಬೀಳುತ್ತಿವೆ. ಪರವಾಸುದೇವನಿಗೆ ಅವತಾರಗಳ ಕ್ಲೇಶ ತಪ್ಪಿ ಆತ ತನ್ನ ವಿಭವಾವತಾರಗಳ ಕಳೇಬರಗಳನ್ನು ಹೇಗೆ ತ್ಯಜಿಸಿ ಸ್ವಸ್ಥಾನಕ್ಕೆ ಮರಳಿದನೋ ಹಾಗೆಯೇ ಆತ ನಮ್ಮ ಹೃದಯದಲ್ಲೂ ಗುಡಿಗಳಲ್ಲೂ ಪಡುವ ಕ್ಲೇಶಗಳಿಂದ ಪಾರಾಗಲು ಇವುಗಳನ್ನು ತೊರೆದು ಹಾಯಾಗಿ ಮಲಗಿ ಬಿಡುತ್ತಾನೋ ಹೇಗೆ ಕಲ್ಕಿಯಾಗಿ ಈ ಜಗತ್ತನ್ನು ಸಮಾಪ್ತಿಗೊಳಿಸುವವರೆಗೂ ಆದರೆ ನಮ್ಮ ಕರ್ತವ್ಯವೇನು ಈಗ? ಭಗವಂತ ನಿನಗೆ ನಾವು.

‘‘ವಯಂ ತ್ವಾಂ ಸ್ಮರಾಮೋ ವಯಂ ತ್ವಾಂ ಭಜಾಮೋ
ವಯಂ ತ್ವಾಂ ಜಗತ್ಸಾಕ್ಷಿ ರೂಪಂ ನಮಾಮಃ।
ಸದೇಕಂ ನಿಧಾನಂ ನಿರಾಲಂಬಮೀಶಂ
ಭವಾಂಬೋಧಿ ಪೋತಂ ಶರಣ್ಯಂ ವ್ರಜಾಮಃ॥’’
‘‘ನಮೋಸ್ತು ಪರಬ್ರಹ್ಮಣೇ ವಾಸುದೇವಾಯ’’
ಪಾಹಿ, ಪಾಹಿ.

***

ಮಹಿಳಾ ಸಮಸ್ಯೆ: ಅಂದು–ಇಂದು

ಪ್ರೊ॥ ದೇಜಗೌ

ಶಾರೀರಿಕವಾಗಿ ಹಾಗೂ ಭಾವನಾತ್ಮಕವಾಗಿ ಹೆಣ್ಣು ಗಂಡಿಗಿಂತ ಭಿನ್ನಳಾದರೂ, ಬೌದ್ಧಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಇಬ್ಬರು ಅಭಿನ್ನರೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಶಾರೀರಿಕ ಬಲ ಸ್ವಭಾವವೊಂದೆ ಗಂಡಿನ ಮೇಲ್ಸೈತನಕ್ಕೆ ಕಾರಣವೆಂಬುದು ಸುಸ್ಪಷ್ಟ. ಇದೇ ನಿಸರ್ಗ ನಿಯಮವೆಂಬಂತೆ ಪ್ರಾಣಿವರ್ಗದಲ್ಲಿಯೂ ನಿದರ್ಶನ ದೊರೆಯುತ್ತದೆ. ಸಂತಾನವೃದ್ಧಿಯಲ್ಲಿ ಹೆಂಗಸಿನ ಪಾತ್ರವೇ ಮುಖ್ಯವಾದ್ದರಿಂದ, ಅವಳ ಚಟುವಟಿಕೆಗಳು ಗೃಹ ಸಾಮ್ರಾಜ್ಯಕ್ಕೆ ಸೀಮಿತಗೊಂಡು, ಗಂಡಸು ಬಾಹ್ಯವ್ಯವಹಾರಗಳಿಗೆ ತನ್ನ ಸರ್ವ ಲಕ್ಷ್ಯವನ್ನು ಹರಿಸಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಮನೆಯ ಕೆಲಸಕ್ಕೇನೆ ಒಂದೆರಡಾಳು ಬೇಕಾಗುತ್ತಿತ್ತು. ಆದ್ದರಿಂದ ಶ್ರಮವಿಭಜನೆ ಅನಿವಾರ್ಯವಾಗಿತ್ತು. ಗಂಡಸು ಬಹುಕಾಲ ಹೊರಗಿದ್ದು, ಮನೆಯ ಜವಾಬ್ದಾರಿಯೆಲ್ಲ ಹೆಂಗಸಿನ ಮೇಲೆ ಬಿದ್ದದ್ದರಿಂದ ಗೃಹಿಣೀ ಗೃಹಮುಚ್ಯತೇ ಎಂಬ ಸಾರೋಕ್ತಿ ಪ್ರಕಾಶಕ್ಕೆ ಬಂತು. ಪುರುಷ-ಸ್ತ್ರೀಯೆನ್ನುವ ಪದಗಳಿಗೆ ಹಿಂದಿನಿಂದ ಗುಣಲಕ್ಷಣಕರ್ಮಗಳು ಅಂಟಿಕೊಂಡು ಬಂದಿವೆ. ದೈಹಿಕ ಬಲ ಗಡಸುತನಗಳೇ ಕಾರಣವಾಗಿ ಕೃಷಿಯುದ್ಧಾದಿ ಕೆಲವು ಕರ್ಮಗಳು ಪುರುಷನಿಗೆ ಮಾತ್ರವೇ ಮೀಸಲಾಗಿದ್ದಿರಬೇಕು. ಇಷ್ಟಾದರೂ ಸ್ತ್ರೀ ಪುರುಷನ ದಾಸಿ, ಭೋಗ್ಯವಸ್ತುವೆಂದು ಹೇಳಲಾಗುತ್ತಿರಲಿಲ್ಲ; ಭೋಗದಲ್ಲಿ ಇಬ್ಬರೂ ಸಮಭಾಗಿಗಳೆಂಬುದನ್ನು ಮರೆಯಲಾಗದು.

ಪ್ರಾಚೀನ ಕಾಲದಲ್ಲಿ ಅಂದರೆ ವೇದಪೂರ್ವ ಹಾಗೂ ವೇದೋಪ ನಿಷತ್ತುಗಳ ಕಾಲದಲ್ಲಿ ಸ್ತ್ರೀಯನ್ನೆಂದೂ ಕೀಳಾಗಿ ಕಂಡದ್ದಿಲ್ಲ. ದೇವತೆಗಳ ಪಾಲಿನಲ್ಲಿ ಅವಳಿಗೂ ಸಮಾನ ಸ್ಥಾನವಿತ್ತು. ಅರ್ಧನಾರೀಶ್ವರ ಕಲ್ಪನೆಯಲ್ಲಿ ಸ್ತ್ರೀ ಪುರುಷ ಸಮಾನ ಭಾವನೆ ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರಕೃತಿ ಪುರುಷರ ಕಲ್ಪನೆಯಲ್ಲಿಯೂ ಇದೇ ಭಾವನೆ ನೆಲೆಗೊಂಡಿದೆ. ಅಷ್ಟೇ ಅಲ್ಲ, ಮಾಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿಯರೇ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ, ಸಕಲ ಶ್ರೇಯಸ್ಸುಗಳಿಗೆ ಕಾರಣರೆಂಬಂತೆ ವರ್ಣಿತರಾಗಿದ್ದಾರೆ. ಮಹಾಲಕ್ಷ್ಮಿ ಸೌಂದರ್ಯ ಸಂಪತ್ತುಗಳ ಅಧಿದೇವತೆ; ಮಹಾಸರಸ್ವತಿ ಜ್ಞಾನಪ್ರದೆ. ಇದೆಲ್ಲ ಬರಿಯ ಹುಸಿಕಲ್ಪನೆಯಾಗಿರಲಿಕ್ಕಿಲ್ಲ. ಮಾನವನ ಅಭೀಪ್ಸೆ ಹಾಗೂ ವಾಸ್ತವ ಪ್ರಜ್ಞೆ ಈ ಕಲ್ಪನೆಯಲ್ಲಿ ಪ್ರತಿಬಿಂಬಿಸುತ್ತದೆಂದೇ ಹೇಳಬೇಕು. ಪೂಜಾ ಸಮಯದಲ್ಲಿ 'ಪಿತೃದೇವೋ ಭವ' ಎಂದು ಹೇಳುವಾಗ,'ಮಾತೃದೇವೋ ಭವ' ಎಂದು ಕೂಡ ಪ್ರಾರ್ಥಿಸುತ್ತಿದ್ದುದುಂಟು. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಂಬ ವಿಶ್ವಾಸವೂ ಸಮಾಜದಲ್ಲಿ ಬೇರೂರಿತ್ತು. ಶ್ರದ್ಧೆ, ಕಾಮಯಾನಿ,

ಯಮೀ, ಪೌಲೋಮಿ, ಶಚಿ, ಗಾರ್ಗಿ, ಮೈತ್ರೇಯಿ, ಘೋಷಾ, ಲೋಪಾಮುದ್ರೆ, ಮೊದಲಾದ ಸ್ತ್ರೀಯರಲ್ಲಿ ಕೆಲವರು ಋಕ್ಕುಗಳನ್ನು ರಚಿಸಿದ್ದಾರೆ. ಮತ್ತೆ ಕೆಲವರು ಬ್ರಹ್ಮವಿದ್ಯೆಯಲ್ಲಿ ನಿಷ್ಣಾತರಾಗಿ, ಪುರುಷರೊಡನೆ ಸಮಾನಸ್ಕಂಧರಾಗಿ ಕುಳಿತುಕೊಂಡು ವಾದವಿವಾದಗಳನ್ನು ನಡೆಸುತ್ತಿದ್ದರು. ಸ್ತ್ರೀ ಹೊಸಲು ದಾಟಬಾರದು, ಅವಳು ಶಿಕ್ಷಣಕ್ಕರ್ಹಳಲ್ಲ ಎಂಬ ಕಟ್ಟುಪಾಡು ಎರಡು ಸಾವಿರ ವರ್ಷಗಳ ಅಥೆನ್ಸ್‌ನಲ್ಲಿ ಜಾರಿಯಲ್ಲಿದ್ದಾಗ, ಭರತಖಂಡದ ಸ್ತ್ರೀಯರು ಪುರುಷರಂತೆಯೇ ಸಮಾನ ಹಕ್ಕುಗಳನ್ನನುಭವಿಸುತ್ತಿದ್ದರೆಂಬುದು ಮೇಲಿನ ಆಧಾರಗಳಿಂದ ಸ್ಪಷ್ಟವಾಗುತ್ತದೆ.

ಸ್ತ್ರೀಯರ ಸ್ಥಾನಮಾನಗಳ ಅವನತಿಗೆ ವರ್ಣಸಂಸ್ಕೃತಿ ಹಾಗೂ ಅದರ ರಕ್ಷಣೆಗೆ ಬದ್ಧವಾದ ಪುರೋಹಿತ ಸಂಸ್ಕೃತಿ ಕಾರಣವೆಂಬುದರಲ್ಲಿ ಲವಲೇಶವೂ ಸಂದೇಹವಿಲ್ಲ. ವಿದೇಶಿಯರ ದಂಡಯಾತ್ರೆ ಮತ್ತು ಅವರ ಆಡಳಿತದಿಂದಾಗಿ ಬಾಲ್ಯವಿವಾಹ, ಸತಿ-ಸಹಗಮನ, ಘೋಷಾ ಮೊದಲಾದ ಹೇಯ ಪದ್ಧತಿಗಳು ರೂಢಿಗೆ ಬಂದುವೆಂದು ಹೇಳುವುದುಂಟು. ಆದರೆ ಈ ಕಾರಣ ಕ್ಷುದ್ರವಾದದ್ದೇ ಹೊರತು ಭದ್ರವಾದದ್ದಲ್ಲ. ಪುನರ್ವಿವಾಹ ನಿಷೇಧಕ್ಕೆ ಆಸ್ತಿ ಸಂಬಂಧವಾದ ಹಕ್ಕುಚ್ಯುತಿಗೆ, ವ್ಯಭಿಚಾರ ಅಥವಾ ದೇವದಾಸಿಪದ್ಧತಿಗೆ ವಿದೇಶೀಯರು ಹೇಗೆ ಕಾರಣರಾಗುತ್ತಾರೆ? ಪುರುಷಸೂಕ್ತರಚನೆಯಾದ ನಂತರ, ಪುರೋಹಿತ ಸಂಸ್ಕೃತಿ ಪ್ರಬಲವಾದ ನಂತರ ಈ ದುಷ್ಟಪದ್ಧತಿಗಳು ಹಾಗೂ ನೂರಾರು ಮೌಢ್ಯ ಸಂಪ್ರದಾಯಗಳು (ಗೌರೀಪೂಜೆ, ತುಲಸೀ ಪೂಜೆ, ಭೀಮನಮಾವಾಸ್ಯೆ, ಇವೇ ಮೊದಲಾದವು) ಅಜ್ಞಾನಾಂಧಕಾರದಲ್ಲಿ ಮುಳುಗಿಸಿ, ದೇಶವನ್ನು ಅವನತಿಯ ಕಡೆಗೆ ಒಯ್ಯುತ್ತವೆ. ಈ ಪುರೋಹಿತ ಷಾಹಿ ನಾಡಿನ ಒಟ್ಟು ಜನತೆಯಲ್ಲಿ ಶೇಕಡ ತೊಂಬತ್ತು ಭಾಗವನ್ನು ಶೂದ್ರರೆಂದು, ಅತಿಶೂದ್ರರೆಂದು ಕರೆದು ಶಾಶ್ವತ ನರಕದಲ್ಲಿರಿಸಿದ್ದಲ್ಲದೆ, ತಮ್ಮ ಭೋಗಲಾಲಸೆಯನ್ನು ತೃಪ್ತಿಪಡಿಸಿದ, ತಮ್ಮ ಸಂತಾನವನ್ನು ವೃದ್ಧಿಪಡಿಸಿದ, ತಮ್ಮನ್ನು ಹೊತ್ತು ಹೊತ್ತು ಸಾಕಿದ ಮಹಿಳೆಯರನ್ನು ಸಹ ಶೂದ್ರ ವರ್ಗಕ್ಕೆ ಜಮಾ ಮಾಡಿತು. ಈ ದಾಸ್ಯಾಂಧಕೂಪದಲ್ಲಿ ಮುಳುಗಿಸಿತು. ಸ್ತ್ರೀಯರಿಗೆ ಉಪನಯನ ಸಂಸ್ಕಾರವಿಲ್ಲದ್ದರಿಂದ ವೇದೋಪನಿಷತ್ತು ಭಗವದ್ಗೀತೆಗಳನ್ನೋದುವಂತಿಲ್ಲ; ಗಾಯತ್ರಿ ಮಂತ್ರವನ್ನು ಜಪಿಸುವಂತಿಲ್ಲ. ೧೯೬೦ನೆಯ ಸಂವತ್ಸರದಲ್ಲಿ ಮೌಖಿಕ ಪರೀಕ್ಷೆಗೆ ಹಾಜರಾದ ಕನ್ನಡ ಎಂ.ಎ. ವಿದ್ಯಾರ್ಥಿನಿಯೊಬ್ಬಳು ಗಾಯತ್ರಿ ಮಂತ್ರ ಕುರಿತಂತೆ ಪ್ರಶ್ನಿಸಿದಾಗ, ನಾವು (ಅಂದರೆ ಸ್ತ್ರೀಯರು) ಅದನ್ನು ಉಚ್ಚರಿಸುವಂತಿಲ್ಲ ಎಂದು ಕೊಟ್ಟ ಉತ್ತರ ಇನ್ನೂ ನೆನಪಿನಲ್ಲಿದೆ. ಶೃಂಗೇರಿ ಪೀಠದ ಅಧಿಕಾರವನ್ನು ಇತ್ತೀಚೆಗೆ ವಹಿಸಿಕೊಂಡ ಸ್ವಾಮಿ ಉಪನಯನ ಆಗದವರಿಗೆ ವೇದಾಧ್ಯಯನ ಸಾಧ್ಯವಿಲ್ಲವೆಂದು ಶಂಕರ ಸಿಂಹಾಸನದಿಂದ ಅಪ್ಪಣೆ ಕೊಡಿಸಿದ ಉಪದೇಶಾಮೃತ ಜನತೆಯ ನೆನಪಿನಲ್ಲಿ ಇನ್ನೂ ಹಚ್ಚಹಸುರಾಗಿದೆ. ಇಂಥ ವಿಷವೃಕ್ಷಗಳನ್ನು ಬೆಳೆಸುವತನಕ ಸಮಾಜಕ್ಕೆ ಶಾಂತಿಯಿಲ್ಲ, ದೇಶಕ್ಕೆ ಕ್ಷೇಮವಿಲ್ಲ. ದೇಶವನ್ನಾಳುವ ಪ್ರಭೃತಿಗಳು ಇಂಥ ಸ್ವಾಮಿಗಳ ಭಕ್ತರೆಂದ ಮೇಲೆ ಸಾಮಾನ್ಯ ಹಾಗೂ

ಸ್ತ್ರೀಯರು ಅಸಹಾಯಕರೆಂದೇ ಹೇಳಬೇಕಾಗುತ್ತದೆ. ಶೂದ್ರರಲ್ಲಿ ಪ್ರಸಾರದಲ್ಲಿರುವ ಮೌಢ್ಯಗಳಿಗೆ ಮುಖ್ಯವಾಗಿ ಪುರೋಹಿತ ಸಂಸ್ಕೃತಿಯೆ ಕಾರಣವೆಂಬುದು ನೂರಕ್ಕೆ ನೂರುಪಾಲು ಸತ್ಯ. ಕಾನೂರು ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು ಕಾದಂಬರಿಗಳನ್ನು ಓದಿದವರಿಗೆ ಈ ಮಾತಿನ ಯಥಾರ್ಥತೆ ಅರ್ಥವಾಗುತ್ತದೆ.

ಬಹುಪತಿತ್ವ ಮತ್ತು ಬಹುಪತ್ನಿತ್ವ ಆಗಿನ ಸಾಮಾಜಿಕ ವ್ಯವಸ್ಥೆಯ ಭಾಗವಾಗಿದ್ದುವು ನಿಜ. ಆದರೆ ಆ ಪದ್ಧತಿಗಳು ಸಾರ್ವತ್ರಿಕವಾಗಿದ್ದುವೆನ್ನುವುದಕ್ಕೆ ಆಧಾರಗಳಿಲ್ಲ. ದ್ರೌಪದಿ ಒಂದು ಪದ್ಧತಿಯ ಪ್ರತಿನಿಧಿಯೆನ್ನಬಹುದಾದರೂ, ಅದು ಭರತಖಂಡದಲ್ಲೆಲ್ಲ ವ್ಯಾಪಕವಾಗಿ ಹರಡಿತ್ತೆನ್ನಲಾಗದು. ಇದ್ದರೂ ಕೆಲವು ಕಾಲಾನಂತರ ಅದು ರದ್ದಾಗಿರಬೇಕು. ವಿಕ್ರಮಾರ್ಜುನ ವಿಜಯದಲ್ಲಿ ದ್ರೌಪದಿ ಮದುವೆಯಾಗುವುದು ಒಬ್ಬನನ್ನೇ. ಈಚೀಚಿನ ತನಕ ಬಹು ಪತ್ನಿತ್ವ ಎಲ್ಲೆಡೆಯೂ ರೂಢಿಯಲ್ಲಿತ್ತು. ಬಹುಪತ್ನಿತ್ವ ಪ್ರತಿಷ್ಠೆಯ, ಪೌರುಷದ, ಶ್ರೀಮಂತಿಕೆಯ ಕುರುಹಾಗಿತ್ತು. ರಾಜರಲ್ಲಿ ಮತ್ತು ಶ್ರೀಮಂತರಲ್ಲಿ ರೂಢಿಯಲ್ಲಿದ್ದ ಸಂಪ್ರದಾಯ ಸಮಾಜದ ಇತರ ಸ್ತರಗಳಿಗೂ ಹರಡಿದ್ದುಂಟು. ಆ ಸಂಪ್ರದಾಯದಲ್ಲಿ ಸುಖಕ್ಕಿಂತ ಸಮಸ್ಯೆಗಳ ಧಾಳಿಯೇ ಭೀಕರ ಪ್ರಮಾಣವನ್ನು ಮುಟ್ಟುತ್ತಿತ್ತು. ರಾಮಾಯಣದಲ್ಲಿಯೇ ಅದಕ್ಕೆ ನಿದರ್ಶನ ಸಿಗುತ್ತದೆ.'ಇಬ್ಬರೆಂಡಿರ ಕಾಟ ಇರುಳು ತಿಗಣೆಯ ಕಾಟ' ಎಂಬ ದಾಸರ ಪದವೇ ಬಹುಪತ್ನಿತ್ವದ ಸಮಸ್ಯೆಯನ್ನೆತ್ತಿ ಹಿಡಿಯುತ್ತದೆ. ಈಗೇನು ಇವೆರಡು ಪದ್ಧತಿಗಳು ಸಮಸ್ಯೆಗಳಾಗಿ ಉಳಿದಿಲ್ಲ.

ಪುರೋಹಿತ ಸಂಸ್ಕೃತಿ ತನ್ನ ಆಸುರೀನಖ ದುಂಷ್ಟ್ರಪ್ರಾಯದ ಮೌಢ್ಯ ಸಂಪ್ರದಾಯಗಳನ್ನು ಸಮಾಜದಲ್ಲಿ ಚಾಚುತ್ತಿದ್ದಂತೆ, ಮಹಿಳಾ ಸ್ವಾತಂತ್ರ್ಯಕ್ಕೆ ಕುತ್ತು ತಗುಲತೊಡಗಿತು. ಸ್ತ್ರೀ ಪರವಾಗಿದ್ದ ಹಲವು ಸೂಕ್ತಿಗಳ ಸ್ಥಳದಲ್ಲಿ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಹೃದಯವೇದಕ ಅಪಾಯಕಾರೀ ಸೂತ್ರ-ಕಾನೂನು-ಸಮಾಜದಲ್ಲಿ ಜಾರಿಗೆ ಬಂದಿತು. ಸತಿಸಹಗಮನ, ಬಾಲ್ಯವಿವಾಹ ಪದ್ಧತಿಗಳು ಕಾಲ ಕ್ರಮೇಣ ತಲೆಹಾಕತೊಡಗಿದುವು. ಸತಿಗೆ ಪಾತಿವ್ರತ್ಯವನ್ನು ಬೋಧಿಸಿದಂತೆ ಪತಿಗೆ ಸಾತಿವ್ರತ್ಯವನ್ನು ಬೋಧಿಸಲಿಲ್ಲ. ವಿಧುರರು ಮತ್ತೆ ಮದುವೆಯಾಗಬಹುದು, ವಿಧವೆಯರು ಕೂಡದು. ಕಾನೂನು ಮಾಡುವವರೆಲ್ಲ ಪುರುಷರಾದ್ದರಿಂದ ಸ್ತ್ರೀಯರ ಆಶೆ ಆಕಾಂಕ್ಷೆಗಳ ಕಡೆಗೆ ಅವರ ಗಮನ ಹರಿಯುವುದೇ ಇಲ್ಲ; ನಮಗೆ ಬೇಕಾದಂತೆ ಕಾನೂನು ರಚಿಸಿಕೊಳ್ಳುತ್ತಾರೆ. ಇದೆಲ್ಲ ಪುರುಷ ಪ್ರಧಾನ ಸಮಾಜದ ನಡೆವಳಿಕೆಯೆಂಬುದು ನಿಜ. ಈ ನಡೆವಳಿಕೆಯನ್ನು ರೂಪಿಸಿದ್ದು ಪುರೋಹಿತ ಸಂಸ್ಕೃತಿಯೆಂಬುದನ್ನು ಮರೆಯುವಂತಿಲ್ಲ. ಶೂದ್ರರಲ್ಲಿ ಸಾಮಾನ್ಯವಾಗಿ ಬಾಲ್ಯವಿವಾಹವಿಲ್ಲ. ಇದ್ದರೆ ಆ ವರ್ಗದ ಪ್ರತಿಷ್ಠಿತ ಸಮುದಾಯದಲ್ಲಿ ಮಾತ್ರ. ಕೂಡಿಕೆ ಅಥವಾ ಸೀರುಡಿಕೆ ಎಂಬ ಹೆಸರಿನಲ್ಲಿ ವಿಧವಾ ವಿವಾಹ ಶೂದ್ರರಲ್ಲಿ ಜಾರಿಯಲ್ಲಿದೆ; ಮತ್ತೆ ಆ ಗುಂಪಿನ ಡೌಲು ಜನ ವಿಧವೆಯರನ್ನು ಮದುವೆಯಾಗುವುದಿಲ್ಲ.

ಆದರೆ ಕೂಡಿಕೆಯಾದ ವಿಧವೆ ಶುಭಕಾರ್ಯಗಳಿಂದ ದೂರವಿರಬೇಕಾಗುತ್ತದೆ. ಇದಂತು ಪುರೋಹಿತ ಸಂಸ್ಕೃತಿಯ ಪ್ರಭಾವದಿಂದ ಅಸ್ತಿತ್ವಕ್ಕೆ ಬಂದ ಸಂಪ್ರದಾಯವೆನ್ನಬಹುದು.

ಪ್ರಾರಂಭದಿಂದಲೂ ಕನ್ನಡ ಸಾಹಿತ್ಯ ಸ್ತ್ರೀಯನ್ನು ಗೌರವದಿಂದ ಕಂಡಿದೆ. ಖಳನಾಯಕರ ಜತೆ ಖಳನಾಯಿಕೆಯರು ಬರಬಹುದು. ಆದರೆ ಖಳನಾಯಕರಷ್ಟು ಕ್ರೂರವಾಗಿ ಖಳನಾಯಕಿಯರು ಚಿತ್ರಿತವಾಗಿಲ್ಲ. ಒಮ್ಮೆ ಹೊಟ್ಟೆಕಿಚ್ಚಿನಿಂದ ಗಾಂಧಾರಿ ತನ್ನ ಬಸಿರನ್ನು ಹೊಸಕಿಕೊಂಡಿರಬಹುದು. ತದನಂತರ ಅವಳೆಲ್ಲಿಯೂ ದಾರ್ಷ್ಟ್ಯವನ್ನು ಪ್ರದರ್ಶಿಸಲಿಲ್ಲ; ಭಾನುಮತಿಯೂ ಅಷ್ಟೇ. ಮಂಥರೆ ಚಂಡಿಯರಂಥ ಅಲ್ಲೊಂದು ಇಲ್ಲೊಂದು ಪಾತ್ರವನ್ನು ಜಿಗುಪ್ಸೆಯಾಗುವಂತೆ ಚಿತ್ರಿಸಿರಬಹುದು. ಖಳಪುರುಷರನ್ನು ಅದೇ ಧಾಟಿಯಿಂದ ರೂಪಿಸಿರುವುದೂ ಉಂಟು. ಆದರೆ ಸಾಹಿತ್ಯದಲ್ಲಿ ಬರುವ ಪಾತ್ರಗಳು ಇಡೀ ಸಮಾಜದ ನಾನಾಭಿರುಚಿಯ ಮನೋಧರ್ಮದ ವಿವಿಧ ಸ್ವಭಾವದ ಸಮಗ್ರ ಸಮುದಾಯವನ್ನು ಪ್ರತಿನಿಧಿಸುತ್ತಾರೆಂದು ಹೇಳುವಂತಿಲ್ಲ. ಸೀತಾರಾಮರನ್ನು ಕಣ್ಮುಂದಿರಿಸಿಕೊಂಡು, ಇಡೀ ಸಮಾಜವೇ ಅವರಂತಿತ್ತು ಎಂದು ಕಲ್ಪಿಸಿಕೊಳ್ಳುವುದೂ ತಪ್ಪು. ಸೊಸೆಗೆ ಅತ್ತೆ ಕೊಟ್ಟಷ್ಟು ಕಿರುಕುಳವನ್ನು ಪ್ರಾಯಶಃ ಗಂಡ ಹೆಂಡತಿಗೆ ಕೊಟ್ಟಿಲ್ಲವೆಂದೇ ಹೇಳಬೇಕು.

ನೀತ್ಯುಪದೇಶದ ವಿಷಯ ಬಂದಾಗ ಕವಿಗಳು ತಮ್ಮ ಕಾಲದಲ್ಲಿ ಪ್ರಚಲಿತವಿದ್ದ ಧರ್ಮಶಾಸ್ತ್ರಗಳನ್ನು ಮಕ್ಕೀಕಾಮಕ್ಕಿ ತಮ್ಮ ಗ್ರಂಥಗಳಲ್ಲಿ ಇಳಿಸಿ ಬಿಡುತ್ತಾರೆ. ಪುರೋಹಿತ ಸಂಸ್ಕೃತಿಯ ಪ್ರಭಾವದಿಂದ ಅವರು ತಪ್ಪಿಸಿಕೊಳ್ಳಲು ಸಾಧ್ಯವಾಗದು. ಮಹಾಕವಿ ಕುಮಾರವ್ಯಾಸ ಸ್ತ್ರೀ ಪಾತ್ರರಚನೆಯಲ್ಲಿ ಔದಾರ್ಯ ಉದಾತ್ತತೆಗಳನ್ನು ಮೆರೆದಿದ್ದನಾದರೂ, ಶಾಸ್ತ್ರ ಪ್ರಣೀತವಾದ ಅಥವಾ ತನ್ನ ಕಾಲದಲ್ಲಿ ರೂಢಿಯಲ್ಲಿದ್ದ ನಂಬಿಕೆಗಳನ್ನು ವಿಧುರನ ಬಾಯಿಂದ ಹೇಳಿಸುತ್ತಾನೆ.

ವೇಸಿಯಹ ಪರ್ಯಂಕದಲಿ ನಿಜ ದಾಸಿಯಹ ಶುಶ್ರೂಷೆಯಲಿ ನಿ
ರ್ದೋಷಿಯಹ ಪತಿಭಕ್ತಿಯಲಿ ಮೋಹದಲಿ ತಾಯೆನಿಸಿ
ಏಸು ಕಾರ್ಯಕೆ ಮಂತ್ರಿಯೆನಿಸುವ ಮೈಸಿರಿಯನುಳ್ಳವಳು ರಾಣೀ
ವಾಸವಂದೆನಿಸುವಳೆಲೈ ಭೂಪಾಲ ಕೇಳೆಂದ
ಪಿತನಿರಲು ದಾತಾರನಿರೆ ನಿಜಸತಿಯಿರಲು ಸುತದಾಸಸತಿಯೀ
ತ್ರಿತಯರುಂ ಸ್ವಾತಂತ್ರ್ಯದವರಲ್ಲಾವ ಕಾಲದಲಿ

ಈ ಪದ್ಯ ಮತ್ತು ಪದ್ಯ ಭಾಗಗಳಲ್ಲಿ ಸತಿಯರ ಕರ್ತವ್ಯ ನಿರೂಪಣೆಯಿರುವುದಲ್ಲದೆ, ಅವರಿಗೆ ಸ್ವಾತಂತ್ರ್ಯವಿಲ್ಲವೆಂಬ ಸೂಚನೆಯಿದೆ. ಬೇರೆ ಪದ್ಯಗಳಲ್ಲಿ ಪುರುಷ ಅನುಸರಿಸಬೇಕಾದ ನೀತಿಯನ್ನು ಉಲ್ಲೇಖಿಸಲಾಗುತ್ತದೆ.

'ಪೆಣ್ಣು ಪೆಣ್ಣೆಂದೇಕೆ ಅಲ್ಲಗಳೆವರು ಕಣ್ಣುಕಾಣದ ಗಾವಿಲರು' ಎಂದು ಬಿಚ್ಚು

ಮಾತಾಡಿದ ಕವಿಯತ್ರಿ ಸಂಚಿ-ಹೊನ್ನಮ್ಮ ಆಗಿನ ಕಾಲದ ಸಂಪ್ರದಾಯಕ್ಕೆ ಕಟ್ಟುಬಿದ್ದು 'ಒಡೆಯನಿರಿಸಿದಂತಿಪ್ಪುದಲ್ಲದೆ ಪೇಳೊಡವೆಗೆ ಬೇರಿರವುಂಟೆ' ಎಂದು ತನ್ನ ಕುಲಕ್ಕೆ ಬುದ್ಧಿವಾದ ಹೇಳುತ್ತಾಳೆ.

ವಿರಕ್ತನೂ ನೀತಿ ಸೂಕ್ಷ್ಮಜ್ಞನೂ ಆದ ಸರ್ವಜ್ಞ ಸ್ತ್ರೀ ವರ್ಗ ಪದ್ಧತಿಯೆಂಬ ತಲೆಹೆಸರಿನ ಕೆಳಗೆ ನೂರಾರು ತ್ರಿಪದಿಗಳನ್ನು ರಚಿಸಿದ್ದಾನೆ. ಸ್ತ್ರೀಲಕ್ಷಣ, ವಶೀಕರಣ, ಸ್ತ್ರೀಮಹತ್ವ, ಮನೆವಾರ್ತೆ, ಸ್ತ್ರೀನಿಂದೆ, ಸಂಸಾರ ಸುಖ, ಜಾರತ್ವ, ವೇಶ್ಯಾಪದ್ಧತಿ— ಇವೇ ಮುಂತಾದ ಹಲವು ಸಂಗತಿಗಳನ್ನು ತನ್ನ ತ್ರಿಪದಿಗಳಲ್ಲಿ ಅಳವಡಿಸಿದ್ದಾನೆ. ಹೆಣ್ಣಿನ ಬಗ್ಗೆ ಅವನಿಗೆ ಅಪಾರ ಗೌರವವಿದೆ.

> ಹೆಣ್ಣಿನಿಂದಲೆ ಇಹವು ಹೆಣ್ಣಿನಿಂದಲೆ ಪರವು
> ಹೆಣ್ಣಿನಿಂದಲೆ ಸಕಲ ಸಂಪದವು, ಹೆಣ್ಣೊಲ್ಲ
> ದಣ್ಣಗಳು ಯಾರು ಸರ್ವಜ್ಞ

> ಬೆಚ್ಚನ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ
> ಇಚ್ಛೆಯನು ಅರಿವ ಸತಿಯಾಗಿ ಸ್ವರ್ಗಕ್ಕೆ
> ಕಿಚ್ಚು ಹಚ್ಚೆಂದ ಸರ್ವಜ್ಞ

ಈ ವಿರಕ್ತ ಕವಿ, ಸೂಳೆಗಾರಿಕೆಯನ್ನು ವರ್ಣಿಸುವಲ್ಲಿ ವೇಶ್ಯಾಪದ್ಧತಿಯನ್ನೊಪ್ಪಿಕೊಂಡಂತೆ ಕಾಣುತ್ತದೆ. ಆಗಿನ ಪುರುಷ ಸಮಾಜ ಸೂಳೆಗಾರಿಕೆಯನ್ನೊಪ್ಪಿಕೊಂಡಿದ್ದರೂ, ವಿರಕ್ತಕವಿ ಅದನ್ನೊಪ್ಪಿಕೊಂಡದ್ದರಲ್ಲಿ ವಿರೋಧಾಭಾಸ ಎದ್ದು ಕಾಣುತ್ತದೆ. ಜಾರೆಯರಿಗೆ ಸಂಬಂಧಪಟ್ಟ ಪದ್ಯಗಳು ಸರ್ವಜ್ಞ ಬರೆದುವಲ್ಲ, ಬೇರೆ ಯಾರೋ ಬರೆದು ಅವನ ಹೆಸರಿಗೆ ದಾಖಿಲು ಮಾಡಿರಬೇಕೆಂದು ತೋರುತ್ತದೆ[೧].

ವೇಶ್ಯಾಪದ್ಧತಿ ವ್ಯಭಿಚಾರ ಯಾವಾಗಲೂ ಇದ್ದುವೇ. ಮೊದಲನೆಯದನ್ನು ಸಮಾಜ ಒಪ್ಪಿಕೊಂಡು, ಎರಡನೆಯದನ್ನು ತಿರಸ್ಕರಿಸಿದ್ದುಂಟು. ಪ್ರಾಚೀನ ಸಾಹಿತ್ಯದಲ್ಲಿ ಸೂಳೆಗೇರಿಯ ವರ್ಣನೆಯಿಲ್ಲದ ಕಾವ್ಯಗಳೇ ಇಲ್ಲ. ವ್ಯಭಿಚಾರವನ್ನು ಮಾತ್ರ ಎಲ್ಲ ಕಾವ್ಯಗಳು ಖಂಡಿಸುತ್ತವೆ; ಪರಾಂಗನಾರತಿ ತಪ್ಪೆಂದು ಸಾರುತ್ತವೆ. ವೇಶ್ಯಾಪದ್ಧತಿ ಮುಕ್ತಸಂಪ್ರದಾಯವಾದರೆ, ವ್ಯಭಿಚಾರ ಗೂಢಸಂಪ್ರದಾಯ. ದುರ್ಬಲನಾದ, ಪುಂಸತ್ವವಿಲ್ಲದ, ಅನುರೂಪನಲ್ಲದ, ಸಮಾನಮನೋಧರ್ಮನಲ್ಲದ, ರೋಗಿಷ್ಠನಾದ ಗಂಡನನ್ನು ವಂಚಿಸಿ ಹೆಂಗಸರು ಇತರರೊಡನೆ ಗುಟ್ಟಾಗಿ ಪ್ರಣಯ ವ್ಯವಹಾರಗಳಲ್ಲಿ

೧. ಶ್ರೀ ಚನ್ನಪ್ಪ ಉತ್ತಂಗಿಯವರು ಸಂಪಾದಿಸಿರುವ ವಚನಗಳ ಸಂಗ್ರದಲ್ಲಿಯೂ ಈ ತ್ರಿಪದಿಗಳಿವೆ. ಸರ್ವಜ್ಞನ ತ್ರಿಪದಿಗಳು ಯಾವುವು? ಯಾವುವು ಅವನವಲ್ಲ ಎಂದು ತೀರ್ಮಾನಿಸುವುದೇ ಕಷ್ಟ.

ತೊಡಗುವುದು ಅಸಹಜವೇನಲ್ಲ; ಜಗತ್ತಿನ ಎಲ್ಲ ಸಮಾಜಗಳಲ್ಲಿ ಚಾಲ್ತಿಯಲ್ಲಿರುವ ಸಂಗತಿಯಿದು. ಹೆಂಗಸರಂತೆಯೇ ವಿಷಯಲಂಪಟರಾದ, ರತಿರೋಗಿಗಳಾದ, ತನಗೆ ಕಾಮ ತೃಪ್ತಿಯನ್ನುಂಟು ಮಾಡಲಾರದ ಹೆಣ್ಣುಗಳನ್ನು ಪಡೆದ ಗಂಡಸರು ಸಹ ಗುಪ್ತ ವ್ಯವಹಾರದಲ್ಲಿ ತೊಡಗುವುದುಂಟು. ವ್ಯಭಿಚಾರಕ್ಕೆ ಸಮಾಜದ ಕಟ್ಟುಪಾಡುಗಳೇ ಮುಖ್ಯಕಾರಣ. ಸುಂದರನೂ ಮಹಾಮೇಧಾವಿಯೂ, ಉಚ್ಚತಮ ಅಧಿಕಾರಿಯೂ ಆಗಿದ್ದ ವ್ಯಕ್ತಿಯೊಬ್ಬನ ಮಡದಿ ಬೇರೊಬ್ಬನೊಂದಿಗೆ ಹೋದದ್ದನ್ನು ನೋಡಿದ್ದೇವೆ. ದೃಢಾಂಗನೂ, ಸರ್ವಾಂಗ ಸುಂದರನೂ ತೇಜಸ್ವಿಯೂ ಆದ ಮಹಾಯೋಧನನ್ನು ತೊರೆದು ಪರಪುರುಷನೊಡನೆ ಓಡಿಹೋದ ಹೆಂಗಸನ್ನು ಕಂಡಿದ್ದೇವೆ. ಆಗರ್ಭ ಶ್ರೀಮಂತನೂ ಸೌಷ್ಠವಾಂಗನೂ ಸುರೂಪಿಯೂ ಆದ ಗಂಡನಿಂದ ಹೆಂಡತಿಯನ್ನು ಬಿಡಿಸಿ ರಖಾವ್ ಮಾಡಿಕೊಂಡ ಗಂಡಸರೂ ನಮ್ಮ ಕಣ್ಮುಂದಿದ್ದಾರೆ. ಸಂಯಮವಿಲ್ಲದ ಕಾಮವಿಕಾರದ ಕರಾಳತೆಯನ್ನು ಜನ್ನ ತನ್ನೆರಡು ಕಾವ್ಯಗಳಲ್ಲಿಯೂ ವರ್ಣಿಸಿದ್ದಾನೆ. ಪರಸತಿಯರಿಗಳುಪಿತ ಗಂಡಸರ ಅಹಸ್ಯವರ್ತನೆಯನ್ನು ಭಾರತೀಯ ಕವಿಗಳೆಲ್ಲರೂ ತಮ್ಮ ಕೃತಿಗಳಲ್ಲಿ ವರ್ಣಿಸಿದ್ದಾರೆ. ಒಟ್ಟಿನಲ್ಲಿ ವ್ಯಭಿಚಾರಕ್ಕೆ ಹೆಣ್ಣುಗಂಡುಗಳಿಬ್ಬರೂ ಜವಾಬ್ದಾರರು, ವೇಶ್ಯಾಪದ್ಧತಿ ಕಾನೂನಿನ ಮೂಲಕ ಬಹಿಷ್ಕೃತವಾದರೂ, ವ್ಯಭಿಚಾರ ಮಾತ್ರ ಶಾಶ್ವತವಾಗಿ ಉಳಿದೇ ಉಳಿಯುತ್ತದೆಂಬುದನ್ನು ಎಲ್ಲರೂ ಬಲ್ಲರು.

ಮಹಾಭಾರತದ ಕಾಲದಲ್ಲಿ ಮಕ್ಕಳಾಗದ ಹೆಂಗಸರು ಗಂಡನ ಅನುಮತಿ ಪಡೆದು ನಿಯೋಗ ಪದ್ಧತಿಯ ಮೂಲಕ ಬೇರೆಯವರಿಂದ ಮಕ್ಕಳನ್ನು ಪಡೆಯುವ ಅವಕಾಶವಿತ್ತು. ಒಬ್ಬ ಮಹಿಳೆ ಒಬ್ಬರಾದ ಮೇಲೊಬ್ಬರು ಐದಾರು ಮಂದಿ ಗಂಡಸರನ್ನಿಟ್ಟುಕೊಂಡು ಮಕ್ಕಳನ್ನು ಪಡೆಯಬಹುದಿತ್ತು. ಅದಕ್ಕೆ ಕಾನೂನಿನ ಅಂಗೀಕಾರವಿತ್ತು. ಸಮಾಜದ ಸಮ್ಮತಿಯಿತ್ತು. ಆದರೆ ಪರಸ್ತ್ರೀಯನ್ನು ಕೆಣಕಿದವನು ಶಿಕ್ಷಾರ್ಹ ಎಂಬ ನಿಯಮವೂ ರೂಢಿಯಲ್ಲಿತ್ತು. ದ್ಯೂತ ಮತ್ತು ಕೀಚಕ ಪ್ರಸಂಗಗಳೇ ಈ ನಿಯಮಕ್ಕೆ ಲಕ್ಷ್ಯಗಳಾಗಿವೆ.ದ್ಯೂತ ಪ್ರಸಂಗದಲ್ಲಿ ಧರ್ಮರಾಯ ದುರ್ಯೋಧನಾದಿ ಪುರುಷರ ವರ್ತನೆ ಎಷ್ಟು ಖಂಡನಾರ್ಹವೊ, ದ್ರೌಪದಿಯ ದಿಟ್ಟತನ ಸಹ ಅಷ್ಟೇ ಪ್ರಶಂಸಾರ್ಹ. ಅವಳಂತು ದಿಟ್ಟೆಯೋ ಅಂತೆಯೇ ಆದರ್ಶ ಕುಟುಂಬಿನಿಯೆಂಬುದನ್ನು ಮರೆಯುವಂತಿಲ್ಲ.

ವಸ್ತ್ರಾಪಹರಣ ಪ್ರಸಂಗದಲ್ಲಿ
ಹಿರಿಯರಿಲ್ಲದ ಸಭೆ ಮನುಷ್ಯರ
ನೆರವಿಯದು ಸಭೆಯಲ್ಲ ಮೂರ್ಖರು
ಹಿರಿಯರಲ್ಲ ಯಥಾರ್ಥಭಾಷಣಭೀತಚೇತನರು.

ಎಂಬುದಾಗಿ ದ್ರೌಪದಿ ಘೋಷಿಸುವಾಗ ಅವಳ ದಿಟ್ಟತನ ಪ್ರಕಾಶಕ್ಕೆ ಬರುತ್ತದೆ. ಇಂದಿನ ಭಾರತದ ಪರಿಸ್ಥಿತಿಯೇ ಹೀಗಿದೆ. ಭಾರತೀಯ ಮಹಿಳೆಯರು ಅವಳಿಂದ ಸ್ಫೂರ್ತಿ ಪಡೆದುಕೊಳ್ಳಬೇಕಾಗಿದೆ. ಕೀಚಕ ತನ್ನನ್ನು ರೋಡಾಡಿದ ಸಂದರ್ಭದಲ್ಲಿ ಭೀಮನ ಬಳಿಗೆ ಹೊದ್ದಿ

ಅಭಿವಂದನಾ

ಗಂಡರ್ನೈವರು ಮೂರು ಲೋಕದ
ಗಂಡರೊಬ್ಬಳನಾಳಲಾರಿರಿ
ಗಂಡರೋ ನೀವ್ ಭಂಡರೋ ಹೇಳೆಂದಳಿಂದುಮುಖಿ

ಅಸಹಾಯಕಳಾದ ಅವಳ ವರ್ತನೆ ಗ್ರಾಮೀಣವೆನ್ನಿಸಬಹುದಾದರೂ, ಅನಿವಾರ್ಯ; ಅಂಥ ವೀರವನಿತೆಯರು ಈ ದೇಶದಲ್ಲಿ ಹುಟ್ಟಿದರೆ, ಇದರ ಸ್ವರೂಪವೇ ತುಂಬ ವ್ಯತ್ಯಸ್ತವಾಗುತ್ತಿತ್ತೆನ್ನುವುದರಲ್ಲಿ ಸಂಶಯವಿಲ್ಲ.

ಸಮಾಜದ ಉತ್ತಮ ಶ್ರೇಣಿಯ ಸ್ತ್ರೀಯರಿಗಿಂತ ಜನಪದ ಸ್ತ್ರೀಯ ಸ್ಥಿತಿಗತಿ ತುಸು ಮೇಲೇನೋ ಎನಿಸುತ್ತದೆ. ಸುಸಂಸ್ಕೃತ ಸಮಾಜದಲ್ಲಿ ಸ್ತ್ರೀಸಂಬಂಧದ ಬಗೆಗೆ ಕಾಣುವ ಕಟ್ಟುಪಾಡುಗಳು ನಿರಕ್ಷರಿ ಸಮಾಜದಲ್ಲಿ ಕಾಣುವುದಿಲ್ಲ. ನಿರಕ್ಷರಿಗಳು ಭಾವಾವೇಶಕ್ಕೆ ಸುಲಭ ಶೀಘ್ರವಾಗಿ ಒಳಗಾಗುತ್ತಾರೆ ನಿಜ; ಆದರೆ ಅಷ್ಟೇ ಶ್ರೀಘ್ರವಾಗಿ ಅದು ತಣ್ಣಗಾಗುತ್ತದೆ. ಜೀವನ ಪಥ ಸಾಗಬೇಕಾದರೆ ಹೆಂಗಸು ಸಹ ಮನೆಯ ಹೊರಗೊಳಗೆ ಎರಡು ಕಡೆ ದುಡಿಯಬೇಕಾಗುತ್ತದೆ. ಆಧುನಿಕ ನಾಗರಿಕ ಸ್ತ್ರೀಯಂತೆ ಅವರಿಗೆ ದುಡಿಮೆಯೇ ಬದುಕಾಗಿದೆ, ಬದುಕೇ ದುಡಿಮೆಯಾಗಿದೆ. ಜೀವನ ಸಾಗಿಸುವುದೇ ಕಷ್ಟವಾಗಿರುವ ಬಡವರಿಗೆ ಕಟ್ಟುಪಾಡುಗಳ ಗೊಡವೆಯೇ ಇರುವುದಿಲ್ಲ. ಕಟ್ಟುಪಾಡುಗಳೆಲ್ಲ ಆಚಾರ-ವಿಚಾರಗಳೆಲ್ಲ ಸಾಮಾನ್ಯವಾಗಿ ಜೀವನಾನುಕೂಲಗಳಿರುವ, ಶೋಷಕ ಪ್ರವೃತ್ತಿಯ, ವಿರಾಮ ಜೀವನದ ಸಮಾಜಕ್ಕೆ ಮಾತ್ರ ಮೀಸಲು. ಶಿಷ್ಟಪದರನ್ನು ಕಾಡುವ ಸಂಕೀರ್ಣ ಸಮಸ್ಯೆಗಳು ಬಡತನ ಕಿತ್ತು ತಿನ್ನುವ ಜನಪದರನ್ನು ಕಾಡುವಂತಿಲ್ಲ. ಬಡತನವೊಂದೇ ಅವರಿಗೆ ಹಾಸಲುಂಟು, ಹೊದೆಯಲುಂಟು. ಕೋಪಬಂದಾಗ ಗಂಡಹೆಂಡಿರಿಬ್ಬರೂ ಕಚ್ಚಾಡುತ್ತಾರೆ; ಮರುಕ್ಷಣವೇ ವಿರಸ ಮರೆತು ಹೋಗುತ್ತದೆ. ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ, ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ, ಎಂದು ಜನಪದ ಗೀತೆಗಳ ಭಾಗಗಳಲ್ಲಿ ಜನಪದ ಸ್ತ್ರೀ ಪುರುಷರ ಬದುಕು ಪ್ರತಿಬಿಂಬಗೊಂಡಿದೆ. ದೀರ್ಘಕೋಪ ಪ್ರತೀಕಾರದ ಬುದ್ಧಿಗಳು ಸುಸಂಸ್ಕೃತರ, ಬಲ್ಲಿದರ ಹಕ್ಕು; ಅವುಗಳನ್ನು ನೆನೆಯುಲಾಗಲಿ, ಮಸೆಯಲಾಗಲಿ ಸಾಕಷ್ಟು ಕಾಲಾವಕಾಶ ಬಡತನಕ್ಕಿರುವುದಿಲ್ಲ. ಪರಸ್ಪರ ಪ್ರೀತಿ ಗೌರವಗಳೇ ಸಂಸಾರದ ಹಾಲು ಹೆಜ್ಜೇನುಗಳು; ಆದ್ದರಿಂದಲೇ ಸಹಸ್ರಾರು ವರ್ಷಗಳಿಂದ ಕೌಟುಂಬಿಕ ವ್ಯವಸ್ಥೆ ಅನುಚಾನವಾಗಿ ನಡೆದುಕೊಂಡು ಬಂದಿದೆ; ಕ್ಷಾಮಡಾಮರ ಪ್ರಲಯ ಸಂಭವಿಸಿವೆ; ಘೋರಸಂಗ್ರಾಮಗಳು ನಡೆದಿವೆ; ಜನಾಂಗಗಳ ಸಮ್ಮಿಶ್ರಣವಾಗಿದೆ; ಸಾಮ್ರಾಜ್ಯಗಳು ವಿಸ್ತಾರಗೊಂಡಿವೆ, ವಿನಾಶವಾಗಿವೆ; ರಾಜಕೀಯ ವ್ಯವಸ್ಥೆಗಳು ಬದಲಾವಣೆಗೊಂಡಿವೆ; ವೈಚಾರಿಕ ವೈಜ್ಞಾನಿಕ ಯುಗಗಳಲ್ಲಿ ಅನೇಕ ಸಾಮಾಜಿಕ ವ್ಯವಸ್ಥೆಗಳು ಅದಲುಬದಲಾಗಿವೆ; ಆದರೂ ಕೌಟುಂಬಿಕ ವ್ಯವಸ್ಥೆಗೆ ಪರ್ಯಾಯವಾಗಬಹುದಾದ ಮತ್ತೊಂದು ವ್ಯವಸ್ಥೆ ಸದ್ಯಕ್ಕೆ ಕಣ್ಣಾಗುತ್ತಿಲ್ಲ.

ಅಭಿವಂದನಾ

ಅತ್ತೆ ಮಾವಂದಿರ ಪಾದ ತಂದೆತಾಯಿಯರ ಪಾದ
ಮತ್ತೆ ಗಂಡನ ಶ್ರೀಪಾದ ನೆನೆದರೆ
ಬೆನ್ನಹಿಂದಿಕ್ಕು ಕೈಲಾಸ
ಆಕಳಂಥ ಅತ್ತಿ ಗೋಕುಲಂಥ ಮಾವ
ಶ್ರೀಕೃಷ್ಣನಂಥ ಪತಿರಾಯ ನಿದ್ದಾರ
ಸಾಕಿದ ತವರ ಮರತೇನ

ಇಂದಿಗೂ ಗ್ರಾಮೀಣ ಮುಗ್ಧ ಮಹಿಳೆಯ ಆಸೆ ಆಕಾಂಕ್ಷೆಗಳು, ಕನಸುನನಸುಗಳಿವು.

ವರ್ಣಸಂಸ್ಕೃತಿಯನ್ನು ಸಂಪೂರ್ಣವಾಗಿ ಧಿಕ್ಕರಿಸಿ, ಜಾನಪದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಮೂಡಿದ ಕ್ರಾಂತಿಕಾರಕ ವಚನ ಸಂಸ್ಕೃತಿ ಸ್ತ್ರೀಯರಿಗಿದ್ದ ಸ್ಥಾನಮಾನಗಳು ಅಷ್ಟೇ ಜಾಜ್ವಲ್ಯಮಾನವಾಗಿ ಇಂದಿಗೂ ಯಾವ ಸಂಸ್ಕೃತಿಯಲ್ಲಿಯೂ ಕಾಣುವುದಿಲ್ಲ. ಶೋಷಣೆ ಅಸಮಾನತೆ ಮೌಢ್ಯಗಳೇ— ಮೊದಲಾದ ನಾನಾ ಪಿಡುಗುಗಳಿಂದ ಜೀರ್ಣವಾಗುತ್ತಿದ್ದ ಹಳೆಯ ಸಂಸ್ಕೃತಿಯ ಒಡಲಿಂದಲೇ,— ಅದರ ಬೂದಿಯಿಂದಲ್ಲ—ವಚನ ಸಂಸ್ಕೃತಿ ಮೂಡುತ್ತದೆ. ಹಳೆಯ ಸಂಸ್ಕೃತಿಗೆ ಆಶ್ರಯವಾಗಿದ್ದ ವೇದ ಪುರಾಣಾದಿಗಳನ್ನೆಲ್ಲ ಅದು ಸಾರಾಸಗಟಾಗಿ ತಿರಸ್ಕರಿಸುತ್ತದೆ. ಎಲ್ಲಿಯ ತನಕ ಹಳೆಯ ಸಂಸ್ಕೃತಿಯ ಮಾಧ್ಯಮಗಳನ್ನು ವಚನ ಸಂಸ್ಕೃತಿ ತಿರಸ್ಕರಿಸುತ್ತಿತ್ತೊ ಅಲ್ಲಿಯ ತನಕ ಅದು ಕ್ರಾಂತಿಕಾರಕವಾಗಿ ಊರ್ಜಾನ್ವಿತವಾಗಿ ಪ್ರಕಾಶಿಸುತ್ತಿತ್ತು; ಅದು ಹಳೆಯ ಸಂಸ್ಕೃತಿಯ ಜಾಡಿಗೆ ಬೀಳುತ್ತಿದ್ದಂತೆ ತನ್ನ ಸತ್ವಮಹತ್ವಗಳನ್ನು ಕಳೆದುಕೊಂಡದ್ದು ದುರ್ದೈವ. ಅದೇನೇ ಇರಲಿ, ಆ ಸಂಸ್ಕೃತಿ ಜಗತ್ತಿಗೆ ತೋರಿದ ಆದರ್ಶ ಅನ್ಯಾದೃಶವಾದದ್ದು.

ಇಂದು ಜಗತ್ತಿನಲ್ಲಿ ಮುಂದುವರಿದಿರುವ ರಾಷ್ಟ್ರಗಳು ಅನಾಗರಿಕತೆಯ ಅಜ್ಞಾನದ ಕಾಳರಾತ್ರಿಯಲ್ಲಿ ತೊಳಲುತ್ತಿದ್ದಾಗ, ಹೆಂಗಸನ್ನು ಅವಸ್ತುವೆಂದು ಕಾಣುತ್ತಿದ್ದಾಗ ವಚನ ಸಂಸ್ಕೃತಿ ಸ್ತ್ರೀಯರಿಗೆ ಸಮಾನತೆ ಸ್ವಾತಂತ್ರ್ಯಗಳನ್ನು ಘೋಷಿಸಿತೆಂಬುದು ಅಂದಿಗೆ ಮಾತ್ರವಲ್ಲ, ಇಂದಿಗೂ ವಿಸ್ಮಯಕಾರಿ ಸಂಗತಿಯಾಗಿದೆ. ವರ್ಣ ಸಂಸ್ಕೃತಿಯ ಪ್ರಕಾರ ಹೆಂಗಸು ಗಂಡಸಿಗೆ ದಾಸಿಯಾಗಿದ್ದಳು, ವೇಶ್ಯೆಯಾಗಿದ್ದಳು; ಉಪನಯನದ ಅವಕಾಶವಿಲ್ಲದ್ದರಿಂದ, ಅವಳಿಗೆ ವೇದಾಧ್ಯಯನದ ಅಧಿಕಾರವಿರಲಿಲ್ಲ. ಆ ನಿರ್ಬಂಧಗಳನ್ನೆಲ್ಲ ತೊಡೆದು, ಹೆಂಗಸು ಗಂಡಸಿಗೆ ಸಮಾನ, ಗಂಡಸಿನಷ್ಟೇ ಅವಳು ಸ್ವತಂತ್ರಳು, ಅವನಂತೆಯೇ ಅವಳೂ ಧರ್ಮಾಧಿಕಾರಿಣಿ ಎಂದು ಜಗತ್ತಿನಲ್ಲಿಯೇ ಪ್ರಪ್ರಥಮವಾಗಿ ಸಾರಿದ ಯಶಸ್ಸು ವಚನ ಸಂಸ್ಕೃತಿಗೆ ಸಲ್ಲಬೇಕು. ಜನಿವಾರದ ಹಕ್ಕಿಲ್ಲದ ಹೃದಯವಂತಿಕೆಯುಳ್ಳ ಮಹಿಳೆಗೆ ಶಿವದಾರದ ಹಕ್ಕು ಕೊಟ್ಟದ್ದು ಈ ಸಂಸ್ಕೃತಿ. ಆತ್ಮಕ್ಕೆ ಲಿಂಗಭೇದವಿಲ್ಲವೆಂಬ ಸ್ತ್ರೀಯರೂ ಲಿಂಗಾಂಗಸಾಮರಸ್ಯವನ್ನು ಸಾಧಿಸಬಲ್ಲರೆಂಬ ಅರಿವನ್ನು ಕರುಣಿಸಿದ್ದು ಈ ಸಂಸ್ಕೃತಿಯೇ. ಇದು ವಿಧವಾವಿವಾಹವನ್ನು ಪುರಸ್ಕರಿಸಿತು. ಹೊಂದಾಣಿಕೆಯಿಲ್ಲದಾಗ ಗಂಡನನ್ನು ಬಿಟ್ಟುಹೋಗಬಹುದೆಂಬ ಸ್ವಾತಂತ್ರ್ಯವನ್ನು ಮಹಿಳೆಗೆ ನೀಡಿತು. ಗಂಡಸಿಗೆ ಹೆಗಲೆಣೆಯಾಗಿ

ಮುಖಾಮುಖಿಯಾಗಿ ಸಾಮಾಜಿಕಾರ್ಥಿಕ ಧಾರ್ಮಿಕ ಸಮಸ್ಯೆಗಳನ್ನು ಚರ್ಚಿಸುವ ಅವಕಾಶವನ್ನು ಕೊಟ್ಟಿತು; ಬದುಕಿನ ಯಾವ ಕ್ಷೇತ್ರದಲ್ಲಿಯೇ ಆಗಲಿ ಅವರಿಬ್ಬರು ಪರಸ್ಪರ ಪೂರಕಶಕ್ತಿಗಳು. ಒಂದಿಲ್ಲದೆ ಮತ್ತೊಂದು ಅಪೂರ್ಣ ಮಾತ್ರವಲ್ಲ, ಅದರ ಅಸ್ತಿತ್ವವೇ ಸಾಧ್ಯವಿಲ್ಲವೆಂದು ಅದು ತೋರಿಸಿಕೊಟ್ಟಿತು. ಕಲ್ಯಾಣದಲ್ಲಿ ನಡೆದ ಕ್ರಾಂತಿಯಲ್ಲಿ ಅಕ್ಕನಾಗಮ್ಮನ ಪಾತ್ರವಿದ್ದೇ ಇದೆ. ಕರುವಿನ ಹಿಂದೆ ಹೋಗುವ ಹಸುವಿನಂತೆ, ಅವಳು ಯಾವಾಗಲೂ ಬಸವಣ್ಣನ ಸನಿಹದಲ್ಲಿದ್ದುಕೊಂಡು ಸಲಹೆ ಪ್ರೇರಣೆಗಳ ಮೂಲಕ ಮಾತ್ರವಲ್ಲ, ಕ್ರಿಯಾ ಪಟುತ್ವದ ಮೂಲಕವೂ ಬಸವಣ್ಣನ ಶಿವಕಾರ್ಯದಲ್ಲಿ ನೆರವಾಗಿದ್ದಳೆನ್ನುವುದನ್ನು ಮರೆಯುವಂತಿಲ್ಲ. ಕಲ್ಯಾಣವನ್ನು ತ್ಯಜಿಸಿದ ಬಸವಣ್ಣ ಮಡದಿ ನೀಲಾಂಬಿಕೆಗೆ ಹೇಳಿ ಕಳಿಸಿದಾಗ, 'ಅಲ್ಲಿಗೆ ಎನ್ನನು ಬರಹೇಳಿದಂತೆ ಇಲ್ಲಿ ತಾವಿಲ್ಲವೆ ಸಂಗಯ್ಯನು?' ಎಂದವಳು ಪ್ರತ್ಯುತ್ತರ ಕಳಿಸುತ್ತಾಳೆ. ತಾನು ಲಿಂಗದಲ್ಲಿ ಐಕ್ಯವಾಗುವೆನೆಂದು ಮೋಳಿಗೆ ಮಾರಯ್ಯ ತಿಳಿಸಿದಾಗ, ಆತನ ಮಡದಿ ಮಹಾದೇವಿಯಮ್ಮ ತನ್ನ ಗಂಡನ ಅಜ್ಞಾನಕ್ಕೆ ವ್ಯಥೆಪಟ್ಟು, ತಾನು ಬೇರೆ ಲಿಂಗ ಬೇರೆ ಎಂಬ ಭಿನ್ನಭಾವದಿಂದ ತನ್ನ ಗಂಡ ವರ್ತಿಸುತ್ತಿದ್ದಾನಲ್ಲ ಎಂದವನಿಗೆ ಸತ್ಯಬೋಧೆ ಮಾಡುತ್ತಾಳೆ. 'ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಎಲೆ ಅಯ್ಯ?' ಎಂದು ತಮಗೆ ಬೇಕಾಗಿದ್ದುದಕ್ಕಿಂತ ಹೆಚ್ಚು ಅಕ್ಕಿಯನ್ನು ತಂದ ಆಯ್ದಕ್ಕಿ ಮಾರಯ್ಯನಿಗೆ ಅವನ ಮಡದಿ ಲಕ್ಕಮ್ಮ ವಿವೇಕ ಹೇಳುತ್ತಾಳೆ. ಅಣ್ಣ ಅಜಗಣ್ಣ ತೀರಿಕೊಂಡ ದುಃಖದ ಸಮಯದಲ್ಲಿ ಅಲ್ಲಮಪ್ರಭುವನ್ನು ಸಂಧಿಸಿದಾಗ ಅವನೊಡನೆ ದಿಟ್ಟತನದಿಂದ ವಾದಮಾಡಿದ ವಿಚಾರವಾದಿ ಮುಕ್ತಾಯಕ್ಕ. ಹೆಂಗಸು ಮಾಯೆಯಲ್ಲ, ಭೋಗವಸ್ತುವಲ್ಲ, ಗಂಡಿಸಿನ ತೊತ್ತಲ್ಲ ಎಂದು ಸಾರಿ, ಅವಳಿಗೂ ದೀಕ್ಷೆಗೆ ಅವಕಾಸವಿತ್ತ ಹನ್ನೆರಡನೆಯ ಶತಮಾನದ ವೀರಶೈವ ಸಂಸ್ಕೃತಿಗೆ ಸಮನಾದದ್ದು ಜಗತ್ತಿನಲ್ಲೆಲ್ಲಿಯೂ ಇರಲಿಲ್ಲ.

ಇಂಗ್ಲೆಂಡಿನಂಥ ಮುಂದುವರಿದ ರಾಷ್ಟ್ರಗಳಲ್ಲಿ ಸ್ತ್ರೀಯರಿಗೆ ಮತದಾನದ ಹಕ್ಕು ದೊರೆತದ್ದೇ ೧೯೨೮ರಲ್ಲಿ. ಆ ಮುನ್ನ ಎಂದರೆ ೧೮ನೆಯ ಶತಮಾನದಿಂದಲೂ ಜೇನ್ ಆಸ್ಟಿನ್, ಎಮಿಲಿ ಬ್ರಾಂಟೆ, ಜಾರ್ಜ್ ಎಲಿಯಟ್ ಮೊದಲಾದ ಮಹಿಳೆಯರು ಸಾಹಿತ್ಯ ಲೋಕದಲ್ಲಿ ಹೆಸರು ಪಡೆದಿದ್ದರು. ಮಾರ್ಗರೆಟ್ ಫುಲ್ಲರ್ (೧೯ನೆಯ ಶತಮಾನ), ಕ್ರಿಸ್ತಬೆಲ್ ಪ್ಯಾಂಕ್‌ಹರ್ಸ್ಟ್ (೧೯೧೧), ಮೇರಿ ವೊಲ್‌ಸ್ಟನ್ ಕ್ರಾಫ್ಟ್ (೧೭೯೨) ಮೊದಲಾದ ಮಹಿಳೆಯರು ಸ್ತ್ರೀಸ್ವಾಂತಂತ್ರ್ಯಕ್ಕಾಗಿ ನಾನಾ ವೇದಿಕೆಗಳಿಂದ ಹೋರಾಟ ನಡೆಸಿದ್ದುಂಟು. ದೇವರು ಮಾಡಿದ ತಪ್ಪುಗಳಲ್ಲಿ ಹೆಣ್ಣಿನ ಸೃಷ್ಟಿಯೇ ಎರಡನೆಯದೆಂದು ನೀತ್ಸೆಯಂಥವನು ಹೇಳಿದರೂ, ಸ್ವತಂತ್ರ ಸ್ತ್ರೀಯರ ಪೀಳಿಗೆ ಉದಯವಾಗುವ ತನಕ, ಮಹಾಪುರುಷರ ಪೀಳಿಗೆ ಉದಯವಾಗುವುದಿಲ್ಲವೆಂದು ರಾಬರ್ಟ್ ಜಿ. ಇಂಗರ್‌ಸಾಲ್ ಘೋಷಿಸಿದ್ದುಂಟು.

ಅಭಿವಂದನಾ

ಆಂಗ್ಲರ ಆಳ್ವಿಕೆ, ಆಂಗ್ಲ ವಿದ್ಯಾಭ್ಯಾಸ ಮತ್ತು ಸ್ವಾತಂತ್ರ್ಯ ಸಂಗ್ರಾಮಗಳ ಫಲವಾಗಿ ಗುಲಾಮರಿಗಿಂತ ಕಡೆಯಾಗಿ ಬದುಕು ಸಾಗಿಸುತ್ತಿದ್ದವನೇ ಶೂದ್ರಾತಿಶೂದ್ರ. ಸ್ತ್ರೀಯರಿಗೆ ಮಾತಿನ ಜತೆ ಜತೆಗೆ ಎದೆಗಾರಿಕೆಯೂ ಬಂತು; ಸಹಸ್ರ ಸಹಸ್ರ ವರ್ಷಗಳಿಂದ ತಾವನುಭವಿಸುತ್ತಿದ್ದ ದುಃಸ್ಥಿತಿಯ ಅರಿವಾಗಿ, ಸಹಜವಾಗಿಯೆ ಅವರ ಹೃದಯ ಸಿಡಿಮದ್ದಿನ ಆಗರವಾಯಿತು. ರಾಜರಾಮಮೋಹನರಾಯ, ಸ್ವಾಮಿ ವಿವೇಕಾನಂದ, ಗಾಂಧೀಜಿ ಮೊದಲಾದವರು ಸ್ತ್ರೀಯನ್ನು ಬಂಧನದಿಂದ ಪಾರುಮಾಡಲು ಪ್ರಯತ್ನಿಸಿದರು. ಸಕಲ ಜಾಗೃತಿಗೆ ಶಿಕ್ಷಣವೊಂದೆ ದಿವ್ಯ ಭೇಷಜವೆಂದವರು ಸಾರಿದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಸ್ತ್ರೀಯರು ಭಾಗವಹಿಸಿದರು, ಪ್ರಾಣಾರ್ಪಣೆಗೂ ಸಿದ್ಧರಾದರು. ಸ್ತ್ರೀಯರಿಗೆ ಶಿಕ್ಷಣ ದೊರೆತಂತೆಲ್ಲ, ಹಲವರು ಸಾಹಿತ್ಯ ಕ್ಷೇತ್ರದ ಕಡೆಗೂ ಗಮನಹರಿಸಿದರು.

ಸತೀ ಹಿತೈಷಿಣಿ ಗ್ರಂಥಮಾಲೆಯ (೧೯೧೩) ತಿರುಮಲಾಂಬ, ಸರಸ್ವತೀ ಪತ್ರಿಕೆಯ ಹಾಗೂ ಮಕ್ಕಳ ಕೂಟದ ಕಲ್ಯಾಣಮ್ಮ ಮತ್ತು ತಿರುಮಲೆ ರಾಜಮ್ಮನವರು ಆಧುನಿಕ ಮಹಿಳಾ ಸಾಹಿತ್ಯದ ಅಧ್ವರ್ಯುಗಳಾದರು. ಜಯದೇವಿ ತಾಯಿ ಲಿಗಾಡೆಯವರು ಮಹಾಕಾವ್ಯ ರಚನೆಯಲ್ಲಿ ಪ್ರಯತ್ನ ನಡೆಸಿದರು. ಈಗ ಆ ಕ್ಷೇತ್ರದಲ್ಲಿ ನೂರಾರು ಹೆಸರು ಕೇಳಿಬರುತ್ತಿವೆ. ಎಂ.ಕೆ. ಇಂದಿರಾ, ತ್ರಿವೇಣಿ, ವಾಣಿ, ಶಾಂತಾದೇವಿ, ಅನುಪಮಾ, ಮಾತೆ ಮಹಾದೇವಿ, ಗೌರಮ್ಮ, ಆರ್ಯಾಂಬ ಪಟ್ಟಾಭಿ, ಎಚ್.ವಿ. ಸಾವಿತ್ರಮ್ಮ, ಗೀತಾ ಕುಲಕರ್ಣಿ, ನಿರುಪಮಾ, ಸಿ.ಎನ್. ಜಯಲಕ್ಷ್ಮಿ, ಹೇಮಲತಾ ಮಹಿಷಿ, ಎಚ್.ಎಸ್. ಪಾರ್ವತಿ, ಕಮಲಾ ಹಂಪನಾ, ಮಾಲತಿ ಪಟ್ಟಣಶೆಟ್ಟಿ, ಉಷಾನವರತ್ನರಾಂ, ಕಮಲಾಹೆಮ್ಮಿಗೆ, ವಿಜಯಾದಬ್ಬೆ, ಲಲಿತಾನಾಯಕ್, ಪ್ರೇಮಾಭಟ್, ಶಶಿಕಲಾ ವಸ್ತ್ರದ— ನನಗೆ ಥಟ್ಟನೆ ಹೊಳೆಯುವ ಈ ಒಂದೊಂದು ಹೆಸರೂ ಸರಸ್ವತಿಯ ನಾಮಾಂತರಗಳಂತಿವೆ; ಮಹಿಳಾ ಸಾಹಿತ್ಯದ ಸುವರ್ಣಯುಗೋದಯದ ಅರುಣಕಿರಣಗಳಂತಿವೆ.

ಭಾರತೀಯ ಮಹಿಳೆ ಈಗೀಗ ತನ್ನನ್ನು ತಾನರಿತುಕೊಂಡಿದ್ದಾಳೆ; ತನ್ನ ಮುಂದಿನ ಭವಿಷ್ಯವೇನೆಂಬುದನ್ನು ತಾನು ಅಭಿನಯಿಸಬೇಕಾದ ಪಾತ್ರವನ್ನು ಸ್ಪಷ್ಟವಾಗಿ ಚಿತ್ರಿಸಿಕೊಂಡಿದ್ದಾಳೆ. ಬದುಕಿನ ಎಲ್ಲ ಕ್ಷೇತ್ರಗಳನ್ನು ಪ್ರವೇಶಿಸಿ, ತನ್ನ ವ್ಯಾಪಕ ಸಾಮರ್ಥ್ಯವನ್ನು, ಬುದ್ಧಿವಂತಿಕೆಯನ್ನು, ಪ್ರತಿಭೆಯನ್ನು ತೋರಿಸಿಕೊಳ್ಳುತ್ತಿದ್ದಾಳೆ. ಪುರುಷರಿಗೇನೂ ಕಡಿಮೆ ಇಲ್ಲದಂತೆ ಪ್ರಧಾನಿ, ರಾಜ್ಯಪಾಲೆಯರಾಗಿ, ಪ್ರಪಂಚದ ಸಂಸ್ಥೆಯ ಶಾಸನ ಸಭೆಗಳ ಅಧ್ಯಕ್ಷಿಣಿಯರಾಗಿ, ಮಂತ್ರಿಗಳಾಗಿ, ನ್ಯಾಯಮೂರ್ತಿಗಳಾಗಿ, ಪೊಲೀಸ್ ಅಧಿಕಾರಿಗಳಾಗಿ, ಕುಲಪತಿಗಳಾಗಿ, ವಕೀಲರಾಗಿ, ವಿಜ್ಞಾನಿಗಳಾಗಿ, ನಾನಾ ಇಲಾಖೆಗಳ

ಮುಖ್ಯಸ್ಥರಾಗಿ ದಕ್ಷತೆಯಿಂದ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದ್ದಾರೆ. ನಾಡಿನ ಅರ್ಧಪಾಲು ಜನರನ್ನು ಕತ್ತಲೆಯಲ್ಲಿಟ್ಟಿದ್ದಾಗ, ನಾಡಿನ ಅರ್ಧಭಾಗವನ್ನು ಅಂಧಕಾರ ಮುಸುಕಿಕೊಂಡಿತ್ತೆನ್ನುವುದನ್ನು ಕತ್ತಲೆಯಿಂದ ಹೊರ ಬಂದು ಪುರುಷರಿಗೆ ತೋರಿಸಿಕೊಟ್ಟಿದ್ದಾರೆ. ಆದರೆ ಒಂದು ವರ್ಗದ ಮಹಿಳೆಯರು ಇನ್ನೂ ಮತಾಂಧತೆಯ ಕಾಲಾಯಸಸಮ ಮೌಢ್ಯಸಂಪ್ರದಾಯಗಳ ಪರ್ವತ ಭಾರದಡಿ ಸಿಕ್ಕಿಕೊಂಡು ನರಳುತ್ತಿದ್ದಾರೆ. ಇಂಡಿಯಾ ಸರ್ಕಾರ ಮತಾಂಧರ ಜತೆ ಸೇರಿಕೊಂಡು ಆ ವರ್ಗದ ಸ್ತ್ರೀಯರ ದಾಸ್ಯಕ್ಕೆ ಪ್ರಚೋದನೆ ನೀಡುತ್ತಿದೆ; ವರಿಷ್ಠ ನ್ಯಾಯಾಲಯದ ತೀರ್ಪನ್ನು ಅನೂರ್ಜಿತಗೊಳಿಸುವಷ್ಟು ದೂರ ಹೋಗುತ್ತಿದೆ. ಭಾರತೀಯ ಮಹಿಳೆ ಈ ಸಮಸ್ಯೆಯನ್ನು ಗಂಭೀರವಾಗಿ ಕೈಗೆತ್ತಿಕೊಡು, ತಮ್ಮ ಸೋದರಿಯರ ಉದ್ಧಾರಕ್ಕಾಗಿ ಪ್ರಾಣಾರ್ಪಣೆಗೂ ಸಿದ್ಧರಾಗಬೇಕಾಗಿದೆ. ಶಾಲಾಕಾಲೇಜುಗಳ ಪರೀಕ್ಷೆಗಳಲ್ಲಂತು ವಿದ್ಯಾರ್ಥಿನಿಯರೆ ವಿದ್ಯಾರ್ಥಿಗಳಿಗಿಂತ ಮೇಲುಗೈಯಾಗಿದ್ದಾರೆ. ಗಂಡಸಿಗೆ ಕಾಲ್ತೊಡಕಾಗದೆ ಸ್ವತಂತ್ರವಾಗಿ ಬದುಕು ಸಾಗಿಸುವ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದಾಳೆ. ಸಾವಿರಾರು ವರ್ಷಗಳಿಂದ ತಮ್ಮನ್ನು ಬಿಗಿದಿಟ್ಟಿದ್ದ ಮೌಢ್ಯಸಂಕಲೆಗಳಿಂದ ಅವಳು ಮುಕ್ತಳಾಗುತ್ತಿದ್ದಾಳೆ. ಇವೆಲ್ಲ ಕೌಟುಂಬಿಕ ಹಾಗೂ ಸಾಮಾಜಿಕ ಕ್ರಾಂತಿಗೆ ಮುನ್ಸೂಚನೆಗಳೆಂದೇ ಹೇಳಬಹುದು. ಸ್ಥಿತ್ಯಂತರದ ಪರಿಸ್ಥಿತಿಯಲ್ಲಿ, ಪರಿಣಾಮಕಾರಕ ಜಾಗತಿಕ ಘಟನೆಗಳು ವಿದ್ಯುದ್ವೇಗದಲ್ಲಿ ಜರುಗುತ್ತಿರುವ ಈ ಸನ್ನಿವೇಶದಲ್ಲಿ ಮಹಿಳೆ ಎಚ್ಚರಿಕೆಯಿಂದ, ಸಾಮರಸ್ಯಸಮನ್ವಯ ತತ್ತ್ವವನ್ನು ಕಣ್ಮುಂದಿರಿಸಿಕೊಂಡು, ಕೌಟುಂಬಿಕ ಹಾಗೂ ಸಾಮಾಜಿಕ ಕ್ಷೇಮವನ್ನು ಸಂರಕ್ಷಿಸಿಕೊಂಡು ಮುನ್ನಡಿ ಇಡಬೇಕಾಗಿದೆ.

ನಾಗರಿಕ ಮಹಿಳೆಯರ ಸಮಸ್ಯೆಗಳಿಗೂ ಗ್ರಾಮೀಣ ಮಹಿಳೆಯರ ಸಮಸ್ಯೆಗಳಿಗೂ ಮಹದಂತರವಿದೆ. ಬಹು ಸಂಖ್ಯಾತರಾದ ಅಶಿಕ್ಷಿತ ಗ್ರಾಮೀಣ ಮಹಿಳೆಯರ ಕಡೆಗೆ ನಾಗರಿಕ ಮಹಿಳೆಯರು ಆದ್ಯಗಮನ ಹರಿಸಬೇಕಾಗಿದೆ. ಶಿಕ್ಷಿತರ ವರ್ತನೆಯನ್ನು ಅಶಿಕ್ಷಿತರು ಕಣ್ಮುಚ್ಚಿಕೊಂಡು ಅನುಸರಿಸುತ್ತಾರೆ. ಹಳ್ಳಿಯ ಕುಟುಂಬ ವಿಚ್ಛಿದ್ರವಾದ ಪಕ್ಷದಲ್ಲಿ ಸಮಾಜ ಆಘಾತಕ್ಕೊಳಗಾಗುತ್ತದೆ. ವರ್ಣಸಂಸ್ಕೃತಿಯ ಕಪಿಮುಷ್ಟಿಯಿಂದ ಗ್ರಾಮೀಣ ಸಮಾಜವನ್ನು ಪಾರು ಮಾಡಬೇಕಾಗಿದೆ. ಹೀಗೆ ಪಾರುಮಾಡುವಾಗ ಸಾಮಾಜಿಕ ವ್ಯವಸ್ಥೆ ಸಂಪೂರ್ಣವಾಗಿ ಬದಲಾವಣೆಯಾದರೂ ಸರಿಯೆ. ವರ್ಣಸಂಸ್ಕೃತಿ ಮತ್ತು ಪುರೋಹಿತಶಾಹಿಗಳ ನಿರ್ಮೂಲನಕ್ಕಾಗಿ ಎಂಥ ತ್ಯಾಗಕ್ಕಾದರೂ ಸಮಾಜ ಸಿದ್ಧವಾಗಬೇಕು. ಹೊರಗೆ ಓಡಾಡುವ ಗಂಡಸು ಮೌಢ್ಯಗಳಿಗೆ ದಾಸನಾಗದಿದ್ದರೂ, ಆ ಪರಂಪರೆಯನ್ನು

ಅನೂಚಾನವಾಗಿ ಪಾಲಿಸುವಲ್ಲಿ, ಪೋಷಿಸುವಲ್ಲಿ ಮಹಿಳೆಯ ಪಾತ್ರ ದೊಡ್ಡದೆಂದು ಹೇಳಲಾಗಿದೆ. ನಗರದ ಕಮ್ಯೂನಿಷ್ಟ್ ಮಿತ್ರರ ಮನೆಗಳಲ್ಲಿ ನೆಲೆಮಾಡಿಕೊಂಡಿರುವಷ್ಟು ಮೌಢ್ಯ ಸಮೂಹವನ್ನು ಹಳ್ಳಿಯ ನಿರಕ್ಷರಿಗರ ಮನೆಗಳಲ್ಲಿ ಕಾಣಲಾಗದು. ಈಗಿನ ಸ್ತ್ರೀರಚಿತ ಕಾದಂಬರಿಗಳಲ್ಲಿ ನಗರದ ಮಧ್ಯಮವರ್ಗದ ಜೀವನವನ್ನು ಕಾಣಬಹುದೇ ಹೊರತು ಗ್ರಾಮೀಣ ಸ್ತ್ರೀಯ ಬದುಕಲ್ಲ. ಅದು ತಪ್ಪಲ್ಲ. ಆದರೆ ಬಹುಸಂಖ್ಯಾತ ನತದೃಷ್ಟ ಮಹಿಳೆಯರ ಕಡೆಗೆ ಸಾಹಿತಿಗಳ ಗಮನ ಹರಿಯಬೇಕಾಗಿದೆ.

ವರ್ಣಸಂಸ್ಕೃತಿಯ ಪಿಡುಗಗಳಲ್ಲೊಂದಾದ ವರದಕ್ಷಿಣೆ ಹಳ್ಳಿಗಳಿಗೂ ಹಬ್ಬುತ್ತಿದೆ. ಈ ವರದಕ್ಷಿಣೆಯ ರೋಗ ಭಾರಿ ಪ್ರಮಾಣದಲ್ಲಿ ಕಡಿಮೆಯಾಗಬೇಕಾದರೆ, ಮಹಿಳೆಯರಿಗೂ ಆಸ್ತಿಯ ಹಕ್ಕು ದೊರೆಯುವಂತಾಗಬೇಕು. ವಿವಾಹವಿಚ್ಛೇದನ ಹಾಗೂ ವಿಧವಾವಿವಾಹಗಳಿಗೆ ಮುಕ್ತಾವಕಾಶವಿರುವುದಾದರೆ ಅನೇಕ ಸಮಸ್ಯೆಗಳು ಪರಿಹಾರಗೊಳ್ಳುವ ಸಂಭವವಿದೆ ನಿಜ. ಆದರೆ ಅಂಥ ಪರಿಹಾರೋಪಾಯಗಳಿಂದ ಮುಂದಿನ ಪೀಳಿಗೆಯ ಮೇಲೆ ಎಂಥ ಮಾನಸಿಕ ಪರಿಣಾಮವಾಗಬಹುದೆಂಬುದನ್ನು ಸಹ, ಅಮೇರಿಕೆಯ ಸಾಮಾಜಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪರ್ಯಾಲೋಚಿಸಬೇಕಾಗಿದೆ. ಪುನರ್ವಿವಾಹವಾದ ಸ್ತ್ರೀ ಧಾರ್ಮಿಕವಾಗಿ ಸಾಮಾಜಿಕವಾಗಿ ಪ್ರಥಮ ವಿವಾಹದ ಮಹಿಳೆಯಷ್ಟೇ ಗೌರವಸ್ಥಾನಮಾನಗಳನ್ನು ಪಡೆಯುವಂತಾಗಬೇಕು.

ತಾನು ಪ್ರೀತಿಸಿದ ಗಂಡನ್ನು ಹೆಣ್ಣು, ಹೆಣ್ಣನ್ನು ಗಂಡು ಮದುವೆಯಾಗುವುದೇ ಕಷ್ಟವಾಗಿದೆ. ಪ್ರಾಪ್ತವಯಸ್ಕರಾದ ಗಂಡು ಹೆಣ್ಣು ತಂದೆತಾಯಿಯರಿಂದ ಕಣ್ಮರೆಯಾಗಿ, ನೋಂದಣಿ ಅಧಿಕಾರಿಯ ಮುಂದೆಯೋ ಪೊಲೀಸು ಠಾಣೆಯಲ್ಲಿಯೋ ಮದುವೆ ಮಾಡಿಕೊಳ್ಳುತ್ತಾರೆ. ಅಂಥ ಸಂದರ್ಭದಲ್ಲಿ ತಂದೆ ತಾಯಿಯರಾಗಲಿ, ಇತರರಾಗಲಿ, ಅವರನ್ನು ಕೋರ್ಟಿಗೆಳೆಯದಂತೆ ಕಾನೂನು ಬದಲಾವಣೆಯಾಗಬೇಕು. ಸಾಮಾನ್ಯವಾಗಿ ಗಂಡು ಹೆಣ್ಣು ಭಿನ್ನ ಭಿನ್ನ ಜಾತಿಯವರಾದಾಗ ಈ ಸಮಸ್ಯೆ ಉದ್ಭವಿಸುತ್ತದೆ. ಆದರೆ ದೇಶ ಹಿತಾಕಾಂಕ್ಷಿಯಾದ ಸರ್ಕಾರ ಅಂತರ್ಜಾತೀಯ ವಿವಾಹಗಳಿಗೆ ಹೆಚ್ಚು-ಹೆಚ್ಚು ಪ್ರೋತ್ಸಾಹ ಕೊಡಬೇಕು.

ಜಾತೀಯತೆಯೆನ್ನುವುದು ಈ ನಾಡಿನ ಒಡಲಲ್ಲಿ ಸೇರಿಕೊಂಡಿರುವ ಕುಟ್ಟೆಹುಳು. ಅದನ್ನು ನಿರ್ಮೂಲನ ಮಾಡುವ ತನಕ ದೇಶದ ಅಖಂಡತೆಯನ್ನಾಗಲಿ, ಐಕ್ಯವನ್ನಾಗಲಿ

ಕಾಪಾಡಿಕೊಳ್ಳುವುದು ಕಷ್ಟ; ಅಂತೆಯೇ ಬಾಹ್ಯಭದ್ರತೆಗೂ ಅದು ಆತಂಕಕಾರಿಯಾಗುತ್ತದೆ; ಅನೈಕ್ಯದ ಬೃಹತ್ ರಾಷ್ಟ್ರವನ್ನು ಎಂಥ ಸಣ್ಣ ರಾಷ್ಟ್ರವಾದರೂ ಎದುರಿಸಬಹುದು. ಈ ಜಾತೀಯತೆಯ ನಿರ್ಮೂಲನಕ್ಕಿರುವ ಒಂದೇ ಒಂದು ಉಪಾಯವೆಂದರೆ ಅಂತರ್ಜಾತೀಯ ವಿವಾಹ. ಅಂತರ್ಜಾತೀಯ ವಿವಾಹ ಸಾಮೂಹಿಕವಾಗಿ ನಡೆದಾಗಲೇ ಅಖಂಡ ಏಕಶಿಲಾ ಭಾರತೀಯ ಸಮಾಜದ ಸೃಷ್ಟಿ ಸಾಧ್ಯ. ಆಗ ಅಲ್ಪ ಸಂಖ್ಯಾತರ ಸಮಸ್ಯೆ ತಾನಾಗಿಯೇ ನಶಿಸಿಹೋಗುತ್ತದೆ; ಅಸ್ಪೃಶ್ಯತೆ ಮಂಗಮಾಯವಾಗುತ್ತದೆ. ಅಂತರ್ಜಾತೀಯ ವಿವಾಹಿತರಿಗೆ ಮಾತ್ರವೇ ಹುದ್ದೆಗಳನ್ನು ಹಂಚುವ ಮೂಲಕ ಸರ್ಕಾರ ಆ ವ್ಯವಸ್ಥೆಯನ್ನು ಪ್ರಾಮಾಣಿಕವಾಗಿ ಪೋಷಿಸಬೇಕಾಗುತ್ತದೆ.

ಪುರಾಣದಲ್ಲಿ ಅಷ್ಟವಿಧ ವಿವಾಹಗಳು ರೂಢಿಯಲ್ಲಿದ್ದವು; ಅಷ್ಟೇ ಅಲ್ಲ, ಅವುಗಳಿಗೆ ಮಾನ್ಯತೆ ನೀಡಲಾಗಿತ್ತು. ಅವುಗಳಲ್ಲಿ ಗಾಂಧರ್ವ ಹಾಗೂ ಆಸುರೀ ವಿವಾಹಗಳು ಎರಡು. ಈ ಎಲ್ಲ ತೆರನ ಮದುವೆಗಳು ದ್ವಾಪರಯುಗದಲ್ಲಿ ರೂಢಿಯಲ್ಲಿದ್ದುವು. ಅರ್ಜುನ ದುಷ್ಯಂತಾದಿ ವೀರರು ಮಾಡಿಕೊಂಡ ಇಂಥ ಮದುವೆಗಳಿಗೆ ಲೆಕ್ಕವಿಲ್ಲ. ಇಂದಿನ ದೃಷ್ಟಿಯಲ್ಲಿ ದುಷ್ಯಂತ ಶಕುಂತಲೆಯರ ಗಾಂಧರ್ವ ವಿವಾಹವೇ ಅಕ್ರಮ ಮೂಲವಾದದ್ದು. ಅವರ ಮಗನೇ ಭರತ. ಇಬ್ಬರು ಪ್ರೇಮಿಗಳಿಗೆ ವಿವಾಹಪೂರ್ವದಲ್ಲಿ ಮಗುವಾದರೆ, ಆ ನತದೃಷ್ಟಪ್ರಾಣಿಗೆ— ಆ ಕರ್ಣನಿಗೆ—ಗತಿ ಯಾರು? ನೀರೆ? ಅದು ಭಯಂಕರ ಕೊಲೆಯಲ್ಲವೆ? ಮೌಢ್ಯಬದ್ಧ ಕ್ರೂರ ಸಮಾಜಕ್ಕೆ ಕರುಣೆಯಿಲ್ಲದಿದ್ದಾಗ, ಸಕಲ ಜೀವಿಗಳ ಕ್ಷೇಮವನ್ನು ನೋಡಿಕೊಳ್ಳಬೇಕಾದ ಸರ್ಕಾರ ಅದರ ಜವಾಬ್ದಾರಿಯನ್ನು ವಹಿಸಿಕೊಳ್ಳಬಾರದೆ? ಅಕ್ರಮ ಸಂತಾನವನ್ನು ಸಕ್ರಮಗೊಳಿಸಬೇಕಾದ್ದು ಸರ್ಕಾರದ ಕರ್ತವ್ಯವಲ್ಲವೆ? ಅಂಥ ಮಕ್ಕಳು ಮಿಷನ್ ಆಸ್ಪತ್ರೆಗಳಿಗೆ ದತ್ತುವಾಗಬೇಕೆ?

ಜನಸಂಖ್ಯೆಯ ಆಸ್ಫೋಟನೆಯನ್ನು ಸ್ಥಗಿತಗೊಳಿಸಲು ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿಲ್ಲ. ಜನಸಂಖ್ಯೆಯನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಕಷ್ಟದ ಸಮಸ್ಯೆಯಲ್ಲ. ಆಳುವ ಜನರ ಕಣ್ಣು ಯಾವಾಗಲೂ ವೋಟಿನ ಮೇಲಿದೆಯೇ ಹೊರತು, ನಾಡಿನ ಕ್ಷೇಮದಲ್ಲಿಲ್ಲ. ಅದು ರಾಷ್ಟ್ರಹಿತದ ಪ್ರಶ್ನೆಯಾದ್ದರಿಂದ, ಅದನ್ನು ವಿರೋಧಿಸುವ ರಾಷ್ಟ್ರಕರನ್ನು ರಾಷ್ಟ್ರದ್ರೋಹಿಗಳೆಂದೇ ಪರಿಗಣಿಸಬೇಕು. ಯಾರು ಸಂತಾನ ನಿರೋಧ ನಿಯಮವನ್ನು ಪಾಲಿಸುವುದಿಲ್ಲವೋ ಅವರಿಗೆ ಸರ್ಕಾರದ ಸಕಲ ಸೌಲಭ್ಯಗಳನ್ನು ನಿಲ್ಲಿಸಬೇಕು. ಕಾನೂನಿನ ಮೂಲಕ ಗರ್ಭಪಾತವನ್ನು ಸಿಂಧುಗೊಳಿಸಬೇಕು. ಸಂತಾನ ಹರಣ ಮದ್ದನ್ನು ತೆಗೆದುಕೊಳ್ಳದೆಯೆ ಮೈಯಿಳಿಯುವುದುಂಟಷ್ಟೆ. ಹೀಗಿರುವಾಗ ಉದ್ದಿಷ್ಟ ಗರ್ಭಪಾತದಿಂದ ಪಾಪವೂ ಇಲ್ಲ, ಪುಣ್ಯವೂ ಇಲ್ಲ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಪರೀತ ಚೇಷ್ಟೆಯ ಭ್ರಮಾತ್ಮಕ ಲೈಂಗಿಕ ವ್ಯಾಪಾರಗಳು

ರೂಢಿಗೆ ಬರುತ್ತಿವೆ. ಮದುವೆಯಿಲ್ಲದೆಯೇ ಹೆಣ್ಣುಗಂಡುಗಳು ಗಂಡಹೆಂಡಿರಂತೆ ವಾಸಿಸುತ್ತಾರೆ. ಸಲಿಂಗ ಕಾಮಿಗಳೇ ವಿವಾಹವನ್ನು ಇತ್ತೀಚೆಗೆ ಡೆನ್ಮಾರ್ಕ್ ಸರ್ಕಾರ ಕಾನೂನಿನ ಮೂಲಕ ಮನ್ನಮಾಡಿದೆ. ಪಾಶ್ಚಾತ್ಯ ಸಂಸ್ಕೃತಿಗೆ ಮರುಳಾಗಿರುವ ಭಾರತೀಯ ಸಮಾಜದಲ್ಲಿಯೂ ಮುಂದೇನು ವೈಪರೀತ್ಯಗಳು ಜಾರಿಗೆ ಬರುತ್ತವೆಯೋ ಕಾದು ನೋಡಬೇಕಾಗಿದೆ. ವೇಷಭೂಷಣಗಳಂತು ಪಾಶ್ಚಾತ್ಯೀಕರಣಗೊಂಡು ತಟಕ್ಕಣೆ ಹೆಣ್ಣುಗಂಡುಗಳ ವ್ಯತ್ಯಾಸ ಗೊತ್ತಾಗುವುದಿಲ್ಲ.

ಗಂಡಸಾಗಲಿ, ಹೆಂಗಸಾಗಲಿ, ಯಾವ ವ್ಯಕ್ತಿಯೇ ಆಗಲಿ ತನ್ನ ಪರಿಚಯವನ್ನು ಹೇಳಿಕೊಳ್ಳುವಾಗ ಅಥವಾ ದಾಖಲೆಗಳಲ್ಲಿ ಪೂರ್ವಜರ ಹೆಸರು ಸೂಚಿಸುವಾಗ ತಂದೆಯ ಹೆಸರನ್ನು ಉಲ್ಲೇಖಿಸಲಾಗುತ್ತದೆಯೆ ಹೊರತು, ತಾಯಿಯ ಹೆಸರನ್ನು ನಮೂದಿಸುವುದಿಲ್ಲ. ಇಂದಿರಾಗಾಂಧಿ, ಜವಾಹರಲಾಲರ ಮಗಳೆಂದು ಹೇಳುವಂತೆ ಕಮಲಾನೆಹರೂ ಮಗಳೆನ್ನುವುದಿಲ್ಲ. ಹೆಂಗಸರು ತಮ್ಮ ಹೆಸರುಗಳಿಗೆ ಗಂಡಂದಿರ ಹೆಸರುಗಳನ್ನೇಕೆ ಅಂಟಿಸಿಕೊಳ್ಳಬೇಕು? ಅಂತೆಯೇ ಗಂಡಸರು ತಮ್ಮ ಮಡದಿಯರ ಹೆಸರು ಅಂಟಿಸಿಕೊಳ್ಳುತ್ತಾರೆಯೆ? ಇಂಥೆಲ್ಲ ಸಮಸ್ಯೆಗಳಿಗೆ ಆಧುನಿಕ ಮಹಿಳೆ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ.

ಮಹಿಳೆಯರು ಪುರುಷರೊಡನೆ ಸಮಾನವಾಗಿ ಸ್ವತಂತ್ರವಾಗಿ ತಲೆಯೆತ್ತಿಕೊಂಡು ದಿಟ್ಟತನದಿಂದ ಬದುಕಬೇಕೆಂಬುದರಲ್ಲಿ ಸ್ವಲ್ಪವೂ ಭಿನ್ನಾಭಿಪ್ರಾಯವಿಲ್ಲ. ಬದುಕಾಗಲಿ, ಜ್ಞಾನವಾಗಲಿ, ಅನುಭವವಾಗಲಿ ಪೂರ್ಣಗೊಳ್ಳಬೇಕಾದರೆ ಇಬ್ಬರೂ ಸಮರಸವಾಗಿ ಬೆರೆಯಬೇಕು. ಬದುಕು ಸ್ವಾರಸ್ಯವಾಗಬೇಕಾಗದರೆ, ಸಮಾಜ ಹಸನಾಗಬೇಕಾದರೆ, ದೇಶದ ಹಿತ ಸಾಧನೆಯಾಗಬೇಕಾದರೆ ಇಬ್ಬರೂ ಒಮ್ಮತದಿಂದ ದುಡಿಯಬೇಕು. ರಥಕ್ಕೆ ಎರಡು ಚಕ್ರಬೇಕು; ಮನುಷ್ಯನಿಗೆ ಎರಡು ಕಣ್ಣು, ಎರಡು ಕಾಲು, ಎರಡು ಕೈ ಬೇಕು. ಎರಡರಿದ್ದರೇನೇ ಪೂರ್ಣ ಸುಖ. ದ್ವೈತದ ಮೂಲಕ ಅದ್ವೈತವನ್ನು ಸಾಧಿಸಬೇಕು. 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ನಿಜವಾದ ಸುಖ ಹಣ ಆಸ್ತಿಗಳಿಂದ ಲಭಿಸುವುದಿಲ್ಲ. ಪರಸ್ಪರ ಪ್ರೀತಿ ಗೌರವಗಳಿಂದ ಮಾತ್ರ ನಿರ್ಮಲ ಪರಿಪೂರ್ಣ ಸುಖ ಸಾಧ್ಯವೆಂಬುದನ್ನು ಸ್ತ್ರೀಪುರುಷರಿಬ್ಬರೂ ಅರಿತಾಗ ಭೂಮಿಯೇ ಸ್ವರ್ಗವಾಗುತ್ತದೆ.

***

ಅಭಿವಂದನಾ

ನಿಘಂಟು ಶಾಸ್ತ್ರ ಮತ್ತು ನಿಘಂಟು ರಚನೆ

ಜಿ. ವೆಂಕಟಸುಬ್ಬಯ್ಯ

ನಿಘಂಟು ಎಂದರೇನು? ಎಂದು ನನ್ನನ್ನು ಆಗಾಗ ಕೇಳುತ್ತಾರೆ. ಜನಸಾಮಾನ್ಯರಿಗೆ ಡಿಕ್ಷನರಿ ಎಂಬ ಶಬ್ದದ ಪರಿಚಯ ಚೆನ್ನಾಗಿರುತ್ತದೆ. ಆದರೆ ನಿಘಂಟು ಎಂಬ ಶಬ್ದದ ವಿಚಾರವೇನೂ ತಿಳಿದಿರುವುದಿಲ್ಲ. ಇದಕ್ಕೆ ಕಾರಣ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಇಂಗ್ಲಿಷ್ ಭಾಷೆಯನ್ನು ಕಲಿಸುವಾಗ ಆ ಭಾಷೆಯ ಶಬ್ದಗಳ ಅರ್ಥವನ್ನು ಬಾಲಕರೇ ಡಿಕ್ಷನರಿಗಳ ಮೂಲಕ ತಿಳಿದುಕೊಳ್ಳಬೇಕೆಂಬುದು ಬೋಧನ ಪದ್ಧತಿ ಪ್ರಯೋಗದಲ್ಲಿದೆ. ಆದರೆ ಕನ್ನಡದಲ್ಲಿ ನಿಘಂಟನ್ನು ನೋಡಿ ಅರ್ಥವನ್ನು ಹುಡುಕಿ ತಮ್ಮ ಶಬ್ದಜ್ಞಾನವನ್ನು ವೃದ್ಧಿಪಡಿಸಿಕೊಳ್ಳುವ ಬೋಧನ ಮಾರ್ಗ ಇನ್ನೂ ಪ್ರಾರಂಭವಾಗಿಯೇ ಇಲ್ಲ. ಅಲ್ಲದೆ ಬಾಲಕರ ಶಿಕ್ಷಣ ಸಮಯದಲ್ಲಿ ಅವರ ಸಹಾಯಕ್ಕೆ ಬರಬಹುದಾದ ಇಂಥ ನಿಘಂಟುಗಳು ಇನ್ನೂ ಪ್ರಕಟವಾಗಿಯೇ ಇಲ್ಲ. ಈ ದಿಕ್ಕಿನಲ್ಲಿ ಯಾವ ಪ್ರಯತ್ನವೂ ಆಗಿಲ್ಲ. ಆದುದರಿಂದ ನಿಘಂಟು ಶಬ್ದ ಅಪರಿಚಿತವಾಗಿದೆ.

ನಿಘಂಟು ಎಂಬುದು ಸಂಸ್ಕೃತದ ಶಬ್ದ. ವ್ಯಾಡಿ ಎಂಬ ಪ್ರಾಚೀನ ನಿಘಂಟುಕಾರನು ಆ ಶಬ್ದದ ವಿವರಣೆಯನ್ನು ಹೀಗೆ ನೀಡಿದ್ದಾನೆ: ''ಯಸ್ಮಾದರ್ಥಾನ್ ನಿಘಂಟಯತಿ ತಸ್ಮಾನ್ನಿಘಂಟು.'' ಅಂದರೆ ಶಬ್ದಗಳ ಅರ್ಥವನ್ನು ನಿರ್ಧಾರ ಮಾಡಿ ಹೇಳುವುದರಿಂದ ಅಂಥ ಗ್ರಂಥಗಳಿಗೆ ನಿಘಂಟು ಎಂದು ಹೆಸರು. ನಿಜವಾಗಿ ನಿಘಂಟು ಮಾಡುವ ಕೆಲಸ ಇದೇ— ಅರ್ಥವನ್ನು ನಿರ್ಧಾರವಾಗಿ ತಿಳಿಸುವುದು. ಆದರೆ ಒಂದು ಶಬ್ದಕ್ಕೆ ಇದೇ ಅರ್ಥವೆಂದು ನಿರ್ಧಾರ ಮಾಡುವುದು ಎಷ್ಟು ಕಷ್ಟಕರವಾದ ಕೆಲಸವೆಂಬುದನ್ನು ಜನ ಸಾಮಾನ್ಯರು ತಿಳಿಯಲಾರರು. ಒಂದು ಉದಾಹರಣೆಯನ್ನು ನೀಡುತ್ತೇನೆ. ಕನ್ನಡದ ಚಂದ್ರಪ್ರಭ ಪುರಾಣವೆಂಬ ಗ್ರಂಥದಲ್ಲಿ ಒಂದು ಪದ್ಯಭಾಗ ಹೀಗಿದೆ: ''ಗಗನ ಮಂಡಲಮಂ ಚಕ್ರವರ್ತಿ ಮುಖಮಂಡನ ಕ್ರೀಡೆಯಿಂ ನೋಡುತ್ತಿರ್ಪನ್ನೆಗಂ.'' ಈ ಭಾಗದಲ್ಲಿ ಬರುವ ಮುಖಮಂಡನ ಕ್ರೀಡೆ ಎಂಬ ಶಬ್ದಕ್ಕೆ ಅರ್ಥ ಮಾಡಬೇಕು. ಇದಕ್ಕೆ ಯಾವ ನಿಘಂಟುಗಳಲ್ಲಿಯೂ ಹಿಂದೆ ಅರ್ಥವನ್ನು ಹೇಳಿಲ್ಲ. ಕನ್ನಡ ಸಾಹಿತ್ಯದಲ್ಲಿ ಇದೊಂದು ಕಡೆ ಬಿಟ್ಟರೆ ಈ ಶಬ್ದ ಬೇರೆಯ ಕಡೆ ಪ್ರಯೋಗವಾಗಿಲ್ಲ. ಆದುದರಿಂದ ಈ ಒಂದು ಪ್ರಯೋಗದಿಂದಲೇ ನಾವು ಅರ್ಥ ಮಾಡಬೇಕು. ಚಕ್ರವರ್ತಿ ತನ್ನ ಮುಖಕ್ಕೆ ಅಲಂಕಾರ ಮಾಡಿಕೊಳ್ಳುವ ಆಟದಿಂದ ಎಂದರೆ ಏನು ಅರ್ಥ ಎನ್ನುವುದು ಕೂಡಲೆ ಯಾರಿಗೂ ಹೊಳೆಯುವುದಿಲ್ಲ. ಆದುದರಿಂದ ಈ ಶಬ್ದಕ್ಕೆ ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿ ಮುಂದೆ ಹೋಗಿದ್ದಾಯಿತು. ಮತ್ತೆ ಯಾವಾಗಲೋ ಅಮರದ ಟೀಕೆಗಳನ್ನು ಓದುತ್ತಿದ್ದಾಗ ಒಂದು ಕುಂಟುಪಂಕ್ತಿಯಲ್ಲಿ ಟೀಕಾಕಾರನು ಮುಖಭೂಷಣ ಎಂಬ ಶಬ್ದವನ್ನು

ಉಪಯೋಗಿಸಿದ್ದುದೂ ಅದಕ್ಕೆ ಅವನೇ ಅರ್ಥಬರೆಯುತ್ತ ಮುಖಭೂಷಣಂ ತಾಂಬೂಲಂ ಎಂದು ಹೇಳಿದ್ದುದೂ ನನ್ನ ಗಮನಕ್ಕೆ ಬಂತು. ಆಗ ನನಗೆ ಈ ಶಬ್ದಕ್ಕೆ ಮುಖಮಂಡನ ಶಬ್ದಕ್ಕೂ ಇರುವ ಸಾಮ್ಯಗೋಚರವಾಯಿತು. ಮುಖಮಂಡನ ಕ್ರೀಡೆ ಎಂದರೆ ತಾಂಬೂಲಚರ್ವಣ, ಎಲೆಯಡಕೆಯನ್ನು ಬಾಯಿಯಲ್ಲಿ ಅಗಿಯುವುದು ಎಂದು ಸ್ಪಷ್ಟವಾಗಿ ಮಂಡನ ಎಂದರೆ ತುಟಿಗೆ ಕೆಂಪು ಬಣ್ಣ ಬರುವಂತೆ ಮಾಡಿಕೊಳ್ಳುವುದು ಎಂಬ ಚಿತ್ರ ಹೊಳೆಯಿತು. ಸಂಸ್ಕೃತ ಭಾಷೆಯಲ್ಲಿ ಬಾಯಿ ಎಂಬುದಕ್ಕೆ ಸರಿಯಾದ ಶಬ್ದವಿಲ್ಲ. ಮುಖ, ವದನ, ಆನನ ಎಂಬ ಶಬ್ದಗಳಿಗೆ ಬಾಯಿ ಎಂಬ ಅರ್ಥವನ್ನು ಮಾಡುತ್ತಾರೆ. ಈ ಎಲ್ಲ ವಿವರಗಳು ಸ್ಪಷ್ಟವಾಗಬೇಕಾದರೆ ವಾರಗಳೇ ಬೇಕಾದವು. ಶಬ್ದಗಳ ಅರ್ಥ ನಿರ್ಧಾರವೆಂಬುದು ಹೀಗೆ ಕಷ್ಟದ ಕೆಲಸ.

ಗೋವಿನ ಹಾಡು ಎಂಬ ಕಾವ್ಯವನ್ನು ಯಾರು ತಾನೇ ಕೇಳಿಲ್ಲ. ಆ ಹಾಡಿನಲ್ಲಿ ಒಂದು ಪದ್ಯ ಬರುತ್ತದೆ:

ಉದಯಕಾಲದೊಳೆದ್ದು ಗೊಲ್ಲನು
ನದಿಯ ಸ್ನಾನ ಮಾಡಿಕೊಂಡು
ಮುದದಿ ತಿಲಕವ ಹಣೆಯೊಳಿಟ್ಟು
ಚದುರಸಿಕೆಯ ಹಾಕಿದ.

ಈ ಪದ್ಯದಲ್ಲಿ ಚದುರಸಿಕೆ ಎಂಬ ಶಬ್ದವಿದೆ. ಇದರ ಅರ್ಥವೇನೆಂದು ತಿಳಿಯದೆ ಜನರು ಅದನ್ನು ಎರಡು ಭಾಗ ಮಾಡಿ ಚದುರ, ಸಿಕೆ ಎಂದರೆ ಜಾಣನಾದ ಗೊಲ್ಲನು ಸಿಕೆಯನ್ನು ಜುಟ್ಟನ್ನು ಕಟ್ಟಿಕೊಂಡನು ಎಂದು ಅರ್ಥ ಮಾಡಿ ಹುಡುಗರಿಗೂ ಅದನ್ನೇ ಬೋಧಿಸುತ್ತಿದ್ದರು. ಆದರೆ ಚದುರಸಿಕೆ ಒಂದೇ ಶಬ್ದ. ಸಂಸ್ಕೃತದ ಚತುರಶ್ರಿಕಾ ಎಂಬುದರ ತದ್ಭವ. ಅದಕ್ಕೆ ಅರ್ಥ ಚೌಕ. ಹೆಗಲ ಮೇಲೆ ಹಾಕುವ ಚೌಕ.

ಶಬ್ದಕ್ಕೆ ಸರಿಯಾದ ಅರ್ಥವನ್ನು ಮಾಡುವುದಕ್ಕೆ ನಿಘಂಟು ಶಾಸ್ತ್ರ ಎಂಬ ಒಂದು ಶಾಸ್ತ್ರವೇ ಬೆಳೆದು ಬಂದಿದೆ. ಈ ಶಾಸ್ತ್ರವು ತತ್ತ್ವಮೂಲಗಳನ್ನು ಶೋಧಿಸಿ ವೈಜ್ಞಾನಿಕವಾಗಿ ಹೇಗೆ ಒಂದು ನಿಘಂಟನ್ನು ಸಿದ್ಧಪಡಿಸಬೇಕು ಎಂಬುದನ್ನು ನಿರೂಪಿಸುತ್ತದೆ. ಹಾಗೆ ನಿರ್ಮಾಣವಾದ ನಿಘಂಟು ಬಹುಪಯೋಗದ ಸಂದರ್ಭ ಗ್ರಂಥವಾಗಿ ಬೆಳಗುತ್ತದೆ.

ಸಾಮಾನ್ಯರಾದ ಜನರೆಲ್ಲರೂ ನಿಘಂಟನ್ನು ಉಪಯೋಗಿಸುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಒಬ್ಬ ವ್ಯಕ್ತಿ ತನ್ನ ಜೀವಿತಕಾಲದಲ್ಲಿ ಎಂದೂ ಯಾವ ನಿಘಂಟನ್ನೂ ಉಪಯೋಗಿಸದೆಯೇ ಪ್ರಯೋಜನಕರವಾದ ಬಾಳನ್ನು ಬದುಕಿರಬಹುದು. ಆತನಿಗೆ ಬೇಕಾದ ತನ್ನ ಭಾಷೆಯ ಶಬ್ದ ಸಂಪತ್ತನ್ನು ಅವನು ರೂಢಿಸಿಕೊಂಡಿರುತ್ತಾನೆ. ಇದೇ ಸಮಾಜದ ಸಹಾಯಕ್ಕೆ ಸದಾ ಒದಗುವ ನಿಘಂಟು. ಈ ನಿಘಂಟಿನಲ್ಲಿ ವೈಯಕ್ತಿಕವಾದ ಸಂಸ್ಕೃತಿ ಕಂಡು ಬರುತ್ತದೆ. ವಿದ್ವಾಂಸರು ಸೇರಿ ಅನೇಕ ವರ್ಷಗಳ

ದುಡಿಮೆಯಿಂದ ಸಿದ್ಧಪಡಿಸುವ ನಿಘಂಟಿನಲ್ಲಿ ಸಮಾಜದ ಸಂಸ್ಕೃತಿ ಅಡಕವಾಗಿರುತ್ತದೆ. ಹೀಗಿರುವುದರಿಂದ ಒಂದು ನಿಘಂಟು ಏನೆಂಬುದನ್ನು ಹೀಗೆ ನಿರೂಪಿಸಬಹುದು. ಒಂದು ಭಾಷೆಯ ಎಲ್ಲ ಶಬ್ದಗಳನ್ನೂ ಅಕಾರಾದಿಯಾಗಿ ಪಟ್ಟಿ ಮಾಡಿ, ಆ ಶಬ್ದಗಳ ಅರ್ಥಗಳನ್ನು ಒಂದು ಕ್ರಮದಲ್ಲಿ ಜೋಡಿಸಿ ಅವುಗಳಿಗೆ ಸರಿಹೊಂದುವ ಪ್ರಾಚೀನ ನವೀನ ಕಾವ್ಯಪ್ರಯೋಗಗಳನ್ನು ದಾಖಲೆ ಮಾಡಿ, ಈ ಶಬ್ದದ ವ್ಯಾಕರಣ ವಿವರಗಳನ್ನು ವ್ಯುತ್ಪತ್ತಿಯನ್ನೂ ನೀಡಿರುವ ಪುಸ್ತಕ.

ನಿಘಂಟುಗಳಲ್ಲಿ ಸೇರುವ ಶಬ್ದಗಳಲ್ಲಿ ಗ್ರಾಮ್ಯ, ಪ್ರಾದೇಶಿಕ, ಶಿಷ್ಟ, ಅಶಿಷ್ಟ, ಪ್ರಾಚೀನ, ಆಧುನಿಕ ಮುಂತಾದ ಭೇದಗಳಿರುತ್ತವೆ. ಕೆಲವು ಶಬ್ದಗಳಿಗೆ ನಾನಾರ್ಥಗಳಿರುತ್ತವೆ. ಅಲಂಕಾರಿಕ ಅರ್ಥಗಳೂ, ಹೀನಾರ್ಥಗಳೂ ಕಾಲಕ್ರಮದಲ್ಲಿ ಬೆಳೆದುಬಂದಿರುತ್ತದೆ. ಇವುಗಳನ್ನೆಲ್ಲ ಗುರುತಿಸಬೇಕು.

ದೊಡ್ಡ ದೊಡ್ಡ ನಿಘಂಟುಗಳಲ್ಲಿ ವಿವರಗಳು ಹೆಚ್ಚಾಗಿರುತ್ತವೆ. ಉದಾಹರಣೆಗೆ ಕನ್ನಡದ ಬೃಹನ್ನಿಘಂಟಿನಲ್ಲಿ ಕನ್ನಡ ದೇಶದ ಸಂಸ್ಕೃತಿಗೆ ಸೇರಿದ ಎಲ್ಲ ಶಬ್ದಗಳೂ ಕ್ರೋಢೀಕೃತವಾಗುತ್ತವೆ. ಸಾಮಾನ್ಯರಿಗೆ ತಿಳಿಯದೆ ಇದ್ದರೂ ಗಜಶಾಸ್ತ್ರ, ಅಶ್ವಶಾಸ್ತ್ರ, ಪಾಕಶಾಸ್ತ್ರ , ಶಿಲ್ಪ, ನಾಟ್ಯ, ಸಂಗೀತ, ಗಣಿತ, ಜ್ಯೋತಿಷ, ಆಯುರ್ವೇದ, ಯುನಾನಿ, ವೇದಾಂತ ಇತ್ಯಾದಿ ಅನೇಕ ವಿಷಯಗಳಲ್ಲಿ ಪ್ರಯೋಗವಾಗುವ ಎಲ್ಲ ಶಬ್ದಗಳು ಸೇರಿರುತ್ತವೆ.

ನಮ್ಮ ಭಾಷೆಗೆ ಇತರ ಅನೇಕ ಭಾಷೆಗಳಿಂದ ಬಹುಸಂಖ್ಯೆಯ ಶಬ್ದಗಳು ಬಂದು ಸೇರಿರುತ್ತವೆ. ಇಂಥ ಶಬ್ದಗಳು ಮೂಲದಲ್ಲಿ ಯಾವ ಭಾಷೆಗೆ ಸೇರಿದ್ದು, ಅಲ್ಲಿ ಅರ್ಥವೇನು? ಕನ್ನಡದಲ್ಲಿ ಏನು ಅರ್ಥವಿದೆ? ಕನ್ನಡದಲ್ಲಿ ರೂಪ ಬದಲಾವಣೆಯಾಗಿದೆಯೇ? ಇತ್ಯಾದಿ ವಿವರಗಳ ಸಹಿತವಾಗಿ ಬೃಹನ್ನಿಘಂಟಿನಲ್ಲಿ ಉಲ್ಲೇಖಿಸಬೇಕು. ಕನ್ನಡದಲ್ಲಿ ಇಂಥ ಶಬ್ದಗಳು ಕನ್ನಡದ ಜಾಯಮಾನಕ್ಕೆ ಹೊಂದಿಕೊಂಡು ಬಿಟ್ಟಿರುತ್ತವೆ. ಅವುಗಳನ್ನು ಅನ್ಯದೇಶ್ಯ ಎಂದು ಕರೆಯುವುದೇ ತಪ್ಪು ಎನ್ನುವ ಮಟ್ಟಿಗೆ ಕನ್ನಡದೊಡನೆ ಬೆರೆತಿವೆ. ಉದಾಹರಣೆಗೆ ಲುಂಗಿ, ಶಾಲು, ಜುಬ್ಬ, ಗುಲಾಬಿ, ಕೂಜ, ಚಂಚ, ಮಸಾಲೆ, ಜೀರಿಗೆ, ಕುರ್ಚಿ, ಬೇಕೂಫ ಎಂಬ ಶಬ್ದಗಳನ್ನು ನೋಡಿ. ಬೇಕೂಫ ಕೂಡ ನಮ್ಮವನೇ ಆಗಿಬಿಟ್ಟಿದ್ದಾನೆ.

ಹೀಗೆ ಬೇರೆ ಭಾಷೆಯ ಶಬ್ದಗಳು ನಮ್ಮ ಶಬ್ದಗಳಾಗುವುದಕ್ಕೆ ಕೆಲವು ಕಾರಣಗಳಿರುತ್ತವೆ. ಆ ಕಾರಣಗಳನ್ನು ನಾವು ಗುರುತಿಸಬೇಕು. ಕ್ರಿಸ್ತಶಕ ಎರಡನೆಯ ಶತಮಾನದಲ್ಲಿಯೇ ಗ್ರೀಕರು ನಮ್ಮೊಡನೆ ವ್ಯಾಪಾರದ ಸಂಬಂಧವನ್ನು ಹೊಂದಿದ್ದರು. ಆಗ ಗ್ರೀಕ್ ಭಾಷೆಯಿಂದ ಸಂಸ್ಕೃತಕ್ಕೆ ಹೋರಾ, ಜ್ಯಾಮಿತಿ, ಸುರಂಗ ಮುಂತಾದ ಶಬ್ದಗಳು ಸೇರಿಕೊಂಡವು. ಅರಬ್ಬರು ಸುಮಾರು ಏಳನೆಯ ಶತಮಾನದಲ್ಲಿಯೇ ಬೊಂಬಾಯಿಯ ಬಳಿ ಆಕ್ರಮಣಕ್ಕೆ ಪ್ರಯತ್ನಪಟ್ಟರು. ಮಹಮ್ಮದ್ ಘೋರಿಯು

ದೆಹಲಿಗೆ ಬಂದು ನೆಲೆಸಿದ. ಕ್ರಿ.ಶ. ೧೧೯೩ರಿಂದ ೧೮೫೭ರ ತನಕ ದೆಹಲಿಯಲ್ಲಿ ಒಬ್ಬ ಮಹಮ್ಮದೀಯ ದೊರೆ ರಾಜ್ಯವಾಳುತ್ತಿದ್ದ. ಆದುದರಿಂದ ದೆಹಲಿಯ ರಾಜನ ಆಸ್ಥಾನದಲ್ಲಿ ಪರ್ಷಿಯನ್ ಭಾಷೆಗೆ ಪ್ರಾಧಾನ್ಯವಿತ್ತು. ಆದುದರಿಂದ ನಮ್ಮ ಜನರೂ ಪರ್ಷಿಯನ್ ಭಾಷೆಯನ್ನೂ ಚೆನ್ನಾಗಿ ಅಭ್ಯಾಸ ಮಾಡಿದರು. ವಿಜಯನಗರ ಕಾಲದಲ್ಲಿ ಅರಬ್ಬರು ಮಂಗಳೂರಿನ ಸುತ್ತಮುತ್ತ ಸಾವಿರಾರು ಸಂಖ್ಯೆಯಲ್ಲಿ ವ್ಯಾಪಾರಕ್ಕೆ ಬರುತ್ತಿದ್ದರು. ಮೈಸೂರು ದೇಶವು ಹೈದರಾಲಿಯ ವಶವಾದಾಗ ಉರ್ದು ಭಾಷೆಗೆ ಪ್ರಾಧಾನ್ಯಬಂತು. ಬ್ರಿಟಿಷರ ೨೦೦ ವರ್ಷಗಳ ಆಡಳಿತದಲ್ಲಿ ಇಂಗ್ಲಿಷ್ ಭಾಷೆ ಸರ್ವವ್ಯಾಪಿಯಾಯಿತು. ಈ ಎಲ್ಲಾ ಭಾಷೆಗಳಿಂದಲೂ ನಾವು ನೂರಾರು ಶಬ್ದಗಳನ್ನು ಎರವಲು ಪಡೆದಿದ್ದೇವೆ. ಈಗ ಅವು ನಮ್ಮದೇ ಆಸ್ತಿಯಾಗಿ ಉಳಿದಿವೆ.

ಉದಾಹರಣೆಗಾಗಿ ಕೆಲವು ಅರಬ್ಬಿ ಶಬ್ದಗಳನ್ನು ನೋಡೋಣ. ಇರಸಾಲು ಎಂದರೆ, ಅರಬ್ಬಿಯಲ್ಲಿ ಕಳುಹಿಸುವುದು ಎಂದರ್ಥ. ಕನ್ನಡದಲ್ಲಿ ಸರಕಾರದ ಖಜಾನೆಗೆ ಹಣಕಟ್ಟುವುದು. ಕದೀಮ ಎಂದರೆ ಒಬ್ಬ ಗಂಡಾಳು. ಅದು ಕನ್ನಡದಲ್ಲಿ ಖದೀಮ ಆಗಿ ಅನುಭವಸ್ಥ ಎಂಬ ಅರ್ಥವನ್ನು ಪಡೆಯುತ್ತದೆ. ವರಕು ಎಂದರೆ ಎಲೆ, ಅದೇ ಕನ್ನಡದಲ್ಲಿ ವರೇಕು ಎಂದಾಗಿದೆ. ಅದಕ್ಕೆ ಚಿನ್ನದ ಗಿಲೀಟು ಎಂದರ್ಥ. ಅಮಲು ಎಂದರೆ ಕಾರ್ಯ. ಕನ್ನಡದಲ್ಲಿ ಕುಡಿತದಿಂದಾಗುವ ಮದ.

ಕೆಲವು ಶಬ್ದಗಳ ಕಥೆ ವಿಸ್ತಾರವಾಗಿರುತ್ತದೆ. ಅದನ್ನು ತಿಳಿದಾಗ ನಮಗೆ ಆಶ್ಚರ್ಯವಾಗುತ್ತದೆ. ಕನ್ನಡದ ಜನ ಉಪಯೋಗಿಸುವ ಬನೀನು ಎಂಬ ಶಬ್ದವನ್ನು ಪರಿಶೀಲಿಸಿ. ಈ ಶಬ್ದದ ಮೂಲ ಸಂಸ್ಕೃತ ಎಂದರೆ ನೀವು ನಂಬುತ್ತೀರಾ! ಸಂಸ್ಕೃತದಲ್ಲಿ ವಣಿಕ-ವಣಿಜ ಎಂಬ ಶಬ್ದವಿದೆ. ಇದಕ್ಕೆ ವ್ಯಾಪಾರಿ ಎಂದರ್ಥ. ಇದು ಗುಜರಾತಿ ಭಾಷೆಯಲ್ಲಿ ಬನಿಯ ಎಂದಾಗುತ್ತಿದೆ. ಗುಜರಾತು ರಾಜ್ಯದಲ್ಲಿ ಸೆಕೆಕಾಲದಲ್ಲಿ ವ್ಯಾಪಾರಗಾರ ಅರ್ಧತೋಳಿನ ಕೊರಳು ಮುಚ್ಚದ ಅಂಗಿಯನ್ನು ತೊಡುತ್ತಿದ್ದ. ಇದನ್ನು ನೋಡಿದ ಬ್ರಿಟಿಷ್ ಜನರು ಬನಿಯನು ತೊಡುತ್ತಿದ್ದ ಅಂಗಿಯನ್ನು ಬನಿಯನ್ ಎಂದು ಮಾಡಿದರು. ಅದು ಇಂಗ್ಲಿಷ್ ಶಬ್ದವಾಗಿ ಹೋಯಿತು. ಇಂಗ್ಲೆಂಡಿನಲ್ಲಿ ತಯಾರಾಗಿ ಬಂದು ನಮ್ಮ ಪೇಟೆಯಲ್ಲಿ ಮಾರಾಟಕ್ಕೆ ನಿಂತ Banianಗಳನ್ನು ನಾವು ಕೊಂಡು, ಧರಿಸಿ ಆ ಶಬ್ದವನ್ನು ಬನೀನು ಮಾಡಿಕೊಂಡೆವು. ಹೀಗಿದೆ ಬನೀನಿನ ಕಥೆ.

ಆಹಾರದ ಪದಾರ್ಥಗಳ ಬೆಲೆ ಹೆಚ್ಚಾದಾಗ ಹೋಟೆಲುಗಳೆಲ್ಲ ತಿನಿಸುಗಳ ಆಕಾರವನ್ನು ಕಿರಿದುಮಾಡಿದಾಗ ಹುಟ್ಟಿಕೊಂಡ ಹೊಸಶಬ್ದಗಳನ್ನು ನೀವು ಕೇಳಿರಬಹುದು. ಮಿನಿವಡೆ, ಮಿನಿಇಡ್ಲಿ, ಮಿನಿದೋಸೆ. ಈಗ ತಿನಿಸುಗಳ ಸಂಬಂಧ ತಪ್ಪಿ ಈ ಮಿನಿ ಲಂಗಗಳಿಗೆ ಮಾತ್ರ ಅಂಟಿಕೊಂಡಿದೆ. ಈ ಮಿನಿ ಎಂಬುದು ಮಿನಿಮಮ್ ಎಂಬ ಶಬ್ದದ ಪುಕ್ಕವನ್ನು ಕತ್ತರಿಸಿ ಮಾಡಿರುವ ರೂಪ. ಮಿನಿಮಮ್ ಎಂಬುದು ಲ್ಯಾಟಿನ್ ಭಾಷೆಯ

Minimus ಎಂಬ ಶಬ್ದದಿಂದ ಬಂದದ್ದು.

ನಮಗೆ ಪ್ರತಿನಿತ್ಯ ಬೆಳಿಗ್ಗೆ ಪ್ಲಾಸ್ಟಿಕ್ ಚೀಲಗಳಲ್ಲಿ ದೊರಕುವ ಹಾಲನ್ನು ಪಾಶ್ಚೀಕರಿಸಿದ ಹಾಲು ಎಂದು ಕರೆಯುವುದು ಎಲ್ಲರಿಗೂ ತಿಳಿದಿದೆ. ಆದರೆ ಈ ಪಾಶ್ಚೀಕರಿಸು ಎಂಬ ಶಬ್ದಕ್ಕೆ ಏನು ಅರ್ಥ? ಅದು ಎಲ್ಲಿಂದ ಬಂತು? Louis Pasteur ಎಂಬ ವಿಜ್ಞಾನಿಯು ಇನಾಕ್ಯುಲೇಷನ್ ಮೂಲಕ ರೋಗಾಣು ನಿವಾರಕ ಮಾರ್ಗವನ್ನು ಕಂಡು ಹಿಡಿದ ತಾನೆ. ಆದ್ದರಿಂದ ಆ ಶಬ್ದ ಪಾಶ್ಚುರೀಕರಿಸು ಎಂದಾಗಬೇಕು. ಅಂಥ ಸಹಾಯ ಮಾಡಿದ ವಿಜ್ಞಾನಿಯ ಹೆಸರನ್ನೇ ಮುಕ್ಕಮಾಡುವ ಬುದ್ಧಿಗೆ ಏನು ಹೇಳೋಣ! ಇಂಥ ಅನೇಕ ತಪ್ಪುಗಳು ಭಾಷೆಗೆ ನುಸುಳಿಬಿಡುತ್ತವೆ. ಇವನ್ನೆಲ್ಲ ಪರೀಕ್ಷಿಸಿ, ನಿಘಂಟಿನಲ್ಲಿ ಎಲ್ಲ ಶಬ್ದಗಳ ಚರಿತ್ರೆಯನ್ನು ಸ್ವರೂಪ ನಿರ್ಧಾರವನ್ನೂ ಮಾಡಬೇಕು. ಈ ಕೆಲಸ ಮಾಡಬೇಕಾದ ಕೆಲಸಗಾರರಿಗೆ ಕೆಲವು ಅರ್ಹತೆಗಳಿರಬೇಕು. ಪ್ರಪಂಚದ ನಿಘಂಟುಕಾರರು ಆ ಬಗ್ಗೆ ಆಲೋಚನೆ ಮಾಡಿ ನಿಘಂಟುಕಾರರ ಅರ್ಹತೆಗಳನ್ನು ಪಟ್ಟಿಮಾಡಿದ್ದಾರೆ.

ಕನ್ನಡದ ನಿಘಂಟುಕಾರನಿಗೆ ಸಂಸ್ಕೃತ, ತೆಲುಗು, ತಮಿಳು, ಮಲೆಯಾಳಿ ಭಾಷೆಗಳ ಪರಿಚಯ ಚೆನ್ನಾಗಿರಬೇಕು. ಇಂಗ್ಲಿಷಿನಲ್ಲಿ ಇತರ ನಿಘಂಟುಕಾರರೊಡನೆ ಸೂಕ್ಷ್ಮವಾಗಿ ಚರ್ಚೆಮಾಡಬಲ್ಲ ಶಕ್ತಿ ಇರಬೇಕು.

ಅನುವಾದದಲ್ಲಿ ನಿಪುಣನಾಗಿರಬೇಕು. ಮಹಾಕವಿಯೂ ಕತೆಗಾರನೂ ಆಗದಿದ್ದರೂ ಸರಳವಾಗಿ ಸ್ಪಷ್ಟವಾಗಿ ಲೇಖನ ಬರೆಯುವ ಶಕ್ತಿ ಇರಬೇಕು.

ಸ್ವಂತವಾದ ನಿಘಂಟು ವಿಮರ್ಶೆಯ ತತ್ತ್ವವೊಂದನ್ನು ಅವನು ರೂಢಿಸಿಕೊಂಡಿರಬೇಕು.

ಕನ್ನಡ ಕಾವ್ಯಗಳಲ್ಲಿ ಕೈತಪ್ಪಿನಿಂದಾದ ಅನೇಕ ಸ್ಖಾಲಿತ್ಯಗಳು ಕಾಣಬರುತ್ತಿವೆ. ಅಂಥ ಸ್ಖಾಲಿತ್ಯಗಳನ್ನು ಸರಿಪಡಿಸುವ ಸಾಮರ್ಥ್ಯವಿರಬೇಕು.

ಭಾಷಾಶಾಸ್ತ್ರದ ಆಳವಾದ ಜ್ಞಾನ ನಿಘಂಟುಕಾರನಿಗೆ ಅತ್ಯವಶ್ಯವಾದ ತಿಳಿವಳಿಕೆ.

ಶಬ್ದಗಳ ಅರ್ಥನಿರ್ಧಾರಕ್ಕೆ ಅಗತ್ಯವಾದ ರಸಾಸ್ವಾದನ ನೈಪುಣ್ಯವಿರಬೇಕು. ಕಾವ್ಯಮಯವಾದ ದೃಷ್ಟಾಂತಗಳನ್ನು ಆಯ್ಕೆಮಾಡುವುದಕ್ಕೂ, ಅರ್ಥವನ್ನು ತೀರ್ಮಾನಿಸುವುದಕ್ಕೂ ಇದು ಅನಿವಾರ್ಯವಾದ ಗುಣ.

ಇವುಗಳ ಜೊತೆಗೆ ಇತರ ಅನೇಕ ಕ್ಷೇತ್ರಗಳಲ್ಲಿ ಸಾಮಾನ್ಯವಾದ ಪರಿಚಯವಾದರೂ ಇರಬೇಕು.

ಇಂಥ ಸಮರ್ಥನಾದವನ ನೇತೃತ್ವದಲ್ಲಿ ನಿಘಂಟುರಚನಾ ಕಾರ್ಯ ನಡೆದರೆ ನಿಘಂಟು ವಿಶ್ವಾಸಾರ್ಹವಾಗಿ ಗೌರವವನ್ನು. ಸಂಪಾದಿಸುತ್ತದೆ.

ಇಂಥ ನಿಘಂಟು ರಚನೆಗೆ ನಿಘಂಟು ಶಾಸ್ತ್ರವು ಕೆಲವು ಮಾರ್ಗಗಳನ್ನು ಸೂಚಿಸುತ್ತದೆ. ಅವುಗಳನ್ನೆಲ್ಲ ಕೂಡಿಸಿ ಸಾಮಾನ್ಯವಾಗಿ ಐದು ಹಂತಗಳನ್ನಾಗಿ ವಿಂಗಡಿಸಬಹುದು.

ಮೊದಲನೆಯದಾಗಿ ಒಂದು ಭಾಷೆಯ ಎಲ್ಲ ಶಬ್ದಗಳನ್ನೂ ಪಟ್ಟಿಕೆಗಳಲ್ಲಿ ದಾಖಲಿಸುವುದು. ಒಂದು ಭಾಷೆಯಲ್ಲಿ ರಚಿತವಾಗಿರುವ ಎಲ್ಲ ಪ್ರಮುಖ ಗ್ರಂಥಗಳ, ಶಾಸನಗಳ, ಮುದ್ರಿತವಾಗದಿರುವ ಹಸ್ತಪ್ರತಿಗಳ, ಐತಿಹಾಸಿಕ ಕಡತಗಳ ಸರ್ಕಾರೀ ಕೈಪಿಯತ್ತುಗಳ— ಎಲ್ಲ ಶಬ್ದಗಳನ್ನು ಕಲೆಹಾಕಬೇಕು. ಇದಕ್ಕೆ ಬೇಕಾದ ಸಿಬ್ಬಂದಿಗೆ ಮುಂಚೆಯೇ ತಕ್ಕ ತರಬೇತಿಯನ್ನು ನೀಡಬೇಕು. ಈ ಕೆಲಸಕ್ಕೆ ಬೇಕಾಗುವ ಧನಸಹಾಯವನ್ನು ಒದಗಿಸಿಕೊಳ್ಳಬೇಕು. ಈ ಕೆಲಸವೇ ಹಲವು ವರ್ಷಗಳನ್ನು ಹಿಡಿಯುತ್ತದೆ. ಅನ್ಯ ದೇಶ್ಯಗಳನ್ನೂ ಗ್ರಾಮ್ಯ ಶಬ್ದಗಳನ್ನೂ ದಾಖಲಿಸುವಾಗ ಆ ಶಬ್ದಗಳ ಸ್ವರೂಪದ ಬಗ್ಗೆ ತುಂಬ ಎಚ್ಚರಿಕೆ ವಹಿಸಿ ದಾಖಲಿಸಬೇಕು.

ಎರಡನೆಯದಾಗಿ ಆ ಎಲ್ಲ ಶಬ್ದಗಳನ್ನೂ ಅಕಾರಾದಿಯಾಗಿ ಜೋಡಿಸಬೇಕು. ಹೀಗೆ ಜೋಡಿಸದ ಬಳಿಕ ಪರ್ಯಾಯ ಶಬ್ದಗಳಲ್ಲಿ ಸ್ವರೂಪವನ್ನು ಪರಿಶೀಲಿಸಿ ಯಾವುದನ್ನು ಮುಖ್ಯ ಉಲ್ಲೇಖವನ್ನಾಗಿ ಮಾಡಬೇಕು ಎಂಬುದನ್ನು ಭಾಷಾಶಾಸ್ತ್ರ ದೃಷ್ಟಿಯಿಂದ ತೀರ್ಮಾನಿಸಬೇಕು.

ಮೂರನೆಯದಾಗಿ ಅನುಮಾನ ಬಂದ ಶಬ್ದಗಳ ಬಗ್ಗೆ ಗ್ರಂಥಸಂಪಾದಕನ ದೃಷ್ಟಿಯಿಂದ ಸರಿತಪ್ಪುಗಳನ್ನು ನಿರ್ಧಾರಮಾಡಬೇಕು.

ನಾಲ್ಕನೆಯದಾಗಿ ಒಂದು ಶಬ್ದಕ್ಕೆ ಅನೇಕ ಅರ್ಥಗಳಿರುತ್ತವೆ. ಆ ಎಲ್ಲ ಅರ್ಥಗಳಿಗೂ ಉಚಿತವಾಗಿರುವಂತೆ ಕಾವ್ಯಗಳಿಂದ ಉಲ್ಲೇಖಗಳನ್ನು ಜೋಡಿಸಬೇಕು.

ಶಬ್ದಗಳಿಗೆ ಸಮಾನಾರ್ಥಕಗಳನ್ನು ವಿರುದ್ಧಾರ್ಥಕಗಳನ್ನೂ ಸೂಚಿಸಬೇಕು. ವ್ಯಾಕರಣಾಂಶಗಳಿದ್ದರೆ ಅದನ್ನೂ ಯಾವುದಾದರೂ ಶಾಸ್ತ್ರಕ್ಕೆ ಸಂಬಂಧಿಸಿದ್ದರೆ ಅದನ್ನೂ ಗುರುತಿಸಬೇಕು.

ಕೊನೆಯದಾಗಿ ಶಬ್ದವು ಯಾವ ಭಾಷೆಯಿಂದ ಬಂದಿದೆ ಎಂಬ ಅಂಶವನ್ನೂ ಜ್ಞಾತಿಶಬ್ದಗಳಿದ್ದರೆ ಅವನ್ನೂ ಅನ್ಯದೇಶ್ಯವಾದರೆ ಅದನ್ನೂ ಆಧಾರಸಹಿತ ವಿವರಿಸಬೇಕು.

ಇಷ್ಟು ಕಾರ್ಯವಾದರೆ ನಿಘಂಟಿನ ರಚನೆಯಲ್ಲಿ ಒಂದು ನಿರ್ದಿಷ್ಟವಾದ ಘಟ್ಟವನ್ನು ತಲುಪಿದಂತಾಗುತ್ತದೆ. ಮಿಕ್ಕ ವಿಷಯವನ್ನು ಮತ್ತೆ ನಿಧಾನವಾಗಿ ತಿಳಿದುಕೊಳ್ಳಬಹುದು.

ನಿಘಂಟುಗಳ ಬಗ್ಗೆ ಮಾತನಾಡುವಾಗ ಸಾಮಾನ್ಯವಾಗಿ ಜನರು ಕೇಳುವ ಒಂದು ಪ್ರಶ್ನೆಗೆ ಉತ್ತರ ನೀಡಬೇಕು. ಇದು ಬಹುಮುಖ್ಯವಾದ ವಿಚಾರ. ನಿಘಂಟನ್ನು

ಪ್ರಕಟಿಸುವುದಕ್ಕೆ ಏಕೆ ಇಷ್ಟೊಂದು ಕಾಲವನ್ನು ತೆಗೆದುಕೊಳ್ಳುತ್ತಾರೆ? ಇದೇ ಪ್ರಶ್ನೆ. ನಿಘಂಟಿನ ಕೆಲಸದ ಬಗ್ಗೆ ಏನೇನೂ ಪರಿಚಯವಿಲ್ಲದವರು ಕೇಳುವ ಪ್ರಶ್ನೆ ಇದು.

ಪ್ರಪಂಚದ ನಿಘಂಟುಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದ ನಿಘಂಟು ಎಂಬ ಕೀರ್ತಿಗೆ ಪಾತ್ರವಾಗಿರುವ Oxford University Dictionary (O.U.D.)ಯು ಹೊರ ಬರಲು ಎಷ್ಟು ಕಾಲ ಹಿಡಿಯಿತು ಎಂಬುದನ್ನು ಪರಿಶೀಲಿಸೋಣ. ಈ ನಿಘಂಟು ೧೯೨೮ರಲ್ಲಿ ಸಂಪೂರ್ಣಗೊಂಡಿತು. ಅದರ ಮೊದಲ ನೂರು ಪುಟಗಳು ಪ್ರಕಟವಾದುದು ೧೮೮೪ರಲ್ಲಿ ಅಂದರೆ ೪೪ ವರ್ಷಗಳ ಕಾಲದಲ್ಲಿ ಅದು ಮುದ್ರಣಗೊಂಡಿತು. ಆದರೆ ಅದಕ್ಕೂ ಮುಂಚೆ ೧೮೫೭ರಲ್ಲಿ ಈ ನಿಘಂಟಿಗೆ ಶಬ್ದಗಳನ್ನು ಆರಿಸಲು ಕೆಲಸ ಮೊದಲಾಯಿತು. ಅಂದರೆ ೧೮೫೭ರಿಂದ ೧೯೨೮ರ ವರೆಗೆ ಅಂದರೆ ಸುಮಾರು ೭೦ ವರ್ಷಗಳ ಕಾಲ ಬೇಕಾಯಿತು. ಈ ಕೆಲಸಕ್ಕೆ ೧೩೦೦ ಜನ ಶಬ್ದಗಳನ್ನು ಆರಿಸಿ ಕಳುಹಿಸಿದರಂತೆ. ಇಂಗ್ಲೆಂಡಿನ ಹಣ ಕೆಲಸಮಾಡುವ ಸಿಬ್ಬಂದಿ ಇವುಗಳನ್ನು ಗಮನಿಸಿ. ಇಂಥ ಧನಜನಸಹಾಯವಿರುವಲ್ಲಿಯೇ ೭೦ ವರ್ಷಗಳು ಬೇಕಾದರೆ ಧನ ಸಹಾಯವಾಗಲೀ, ತಿಳಿದ ಜನರ ಸಹಾಯವಾಗಲಿ ಇರದ ಕಡೆ ಇದು ಎಷ್ಟು ಕಾಲ ಹಿಡಿಯಬಹುದು ಎಂಬುದನ್ನು ಊಹಿಸಿಕೊಳ್ಳಬಹುದು.

O.U.D.ಗೆ ಒಂದು Suppliment ತರಬೇಕೆಂದು ಪ್ರಯತ್ನಮಾಡಿ ೧೯೩೩ರಲ್ಲಿ ಒಂದು ಸಂಪುಟವನ್ನು ತರಲಾಯಿತು. ಅದೂ ಸಾಲದೆ ೧೯೫೭ರಲ್ಲಿ ಒಟ್ಟು ನಿಘಂಟನ್ನೇ ಪುನಃಪರಿಶೀಲಿಸಿ ಹೊಸ ವಿಷಯಗಳನ್ನು ಸೇರಿಸಿ ತಪ್ಪುಗಳನ್ನು ತಿದ್ದಿ ಮತ್ತೆ ಪ್ರಕಟಿಸುವುದಕ್ಕೆಂದು Ribert W. Burchfield ಎಂಬ ಪ್ರಸಿದ್ಧ ವಿದ್ವಾಂಸರನ್ನು ನೇಮಿಸಲಾಯಿತು. ಅವರ ನೇತೃತ್ವದಲ್ಲಿ ಈ ಸಂಪುಟಗಳು ಬಿಡುಗಡೆಯಾಗಿವೆ. ೧೯೭೨ರಲ್ಲಿ ಮೊದಲ ಸಂಪುಟ, ೧೯೭೬ರಲ್ಲಿ ಎರಡನೆಯ ಸಂಪುಟ, ೧೯೮೨ರಲ್ಲಿ ಮೂರನೆಯ ಸಂಪುಟ ಮತ್ತು ಕೊನೆಯದು ಇತ್ತೀಚೆಗೆ, ಅಂದರೆ ಪರಿಷ್ಕಾರಕ್ಕೆ ೨೦ ವರ್ಷಗಳು ಬೇಕಾಗಿವೆ. ಈಚೆಗೆ ಈ ನಿಘಂಟಿನ ಎರಡನೆಯ ಮುದ್ರಣ ಪ್ರಕಟಿಸಿದೆ. ಅದರ ಪ್ರಕಟಣೆಯಲ್ಲಿ ಈ ಮುದ್ರಣವು ಸಿದ್ಧಗೊಂಡಿರುವುದು ೧೩೨ ವರ್ಷಗಳ ವಿದ್ವತ್ಕಾರ್ಯ ಎಂದು ಜಾಹಿರಾತು ಮಾಡಲಾಗಿದೆ.

ನಿಘಂಟಿನ ಕಾರ್ಯ ಹೀಗೆ ಸಮಯವನ್ನು ತೆಗೆದುಕೊಳ್ಳುವ ಕೆಲಸ ಎಂಬುದನ್ನು ತಿಳಿದು, ಸರಕಾರವೂ ಜನತೆಯೂ ಈ ಕಾರ್ಯದ ಬಗ್ಗೆ ಸಹಾನುಭೂತಿಯನ್ನು ತೋರಿಸಬೇಕು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಶಬ್ದಸಂಗ್ರಹವನ್ನು ಪ್ರಾರಂಭ ಮಾಡಿದ್ದು ೧೯೪೩ರಲ್ಲಿ. ಬರಹ ಪ್ರಾರಂಭವಾಗಿದ್ದು ೧೯೫೬ರಲ್ಲಿ. ಮೊದಲನೆಯ ಸಂಪುಟ ಪ್ರಕಟವಾದದ್ದು ೧೯೭೦ರಲ್ಲಿ. ೨ನೆಯ ಸಂಪುಟ ಪ್ರಕಟವಾದದ್ದು ೧೯೭೩ರಲ್ಲಿ. ಕೊನೆಯ ಸಂಪುಟ ಈಗ ಪ್ರಕಟವಾಗಿದೆ.

ಜನಸಾಮಾನ್ಯರು ಎತ್ತುವ ಮತ್ತೊಂದು ಪ್ರಶ್ನೆ ಇದೆ— "ನಿಘಂಟಿನಲ್ಲಿ ಬೈಗುಳನ್ನೂ ಅಶ್ಲೀಲ ಪದಗಳನ್ನೂ ಏಕೆ ಸೇರಿಸುವುದಿಲ್ಲ?" ಬೈಗುಳ ವಿವಿಧ ರೂಪವಾಗಿವೆ. ಇವುಗಳಿಗೆ ಬೇರೊಂದು ನಿಘಂಟನ್ನು ತಯಾರಿಸಬೇಕು ಎಂಬುದು ಹೆಚ್ಚು ಜನ ವಿದ್ವಾಂಸರ ಅಭಿಪ್ರಾಯ. ಅಲ್ಲದೆ ಜನಸಾಮಾನ್ಯರಲ್ಲಿ ಬೈಗಳನ್ನು ಸಮರ್ಥವಾಗಿ ಉಪಯೋಗಿಸುವ ಅನೇಕರಿರುವುದರಿಂದ ಹೊಸದಾಗಿ ಅವರಿಗೆ ತಿಳಿಸಬೇಕಾದುದು ಏನೂ ಇಲ್ಲ ಎಂದೂ ಹಾಸ್ಯದಿಂದ ಹೇಳುತ್ತಾರೆ. ಶಬ್ದಗಳಲ್ಲಿ ಅಶ್ಲೀಲ ಶಬ್ದಗಳು ಎಂಬುದು ಇಲ್ಲ. ಆದುದರಿಂದ ಈಗೀಗ ಲೈಂಗಿಕ ವಿಷಯಗಳನ್ನು ತಿಳಿಸುವ ಶಬ್ದಗಳನ್ನೂ ನಿಘಂಟುಗಳಲ್ಲಿ ಸೇರಿಸುತ್ತಿದ್ದಾರೆ.

ಜನತೆಯಲ್ಲಿ ವಿಶೇಷ ಆಸಕ್ತಿಯನ್ನು ಕೆರಳಿಸುವ ಶಬ್ದಗಳ ವ್ಯುತ್ಪತ್ತಿಯ ಬಗ್ಗೆ ಅನೇಕರು ಆಸಕ್ತಿಯನ್ನೂ ತಳೆದಿದ್ದಾರೆ. ಈ ವಿವರಗಳನ್ನು ಕಂಡು ಹಿಡಿಯುವುದು ಹೇಗೆ? ಎಂದು ನನ್ನನ್ನು ಅನೇಕರು ಕೇಳಿದ್ದಾರೆ. ಇದು ಆಸಕ್ತಿಯನ್ನು ಕೆರಳಿಸುವ ವಿಷಯ. ಇದನ್ನು ತಿಳಿಯಬೇಕಾದರೆ ಒಂದು ಭಾಷೆಯಲ್ಲಿ ಹೇಗೆ ವ್ಯತ್ಯಾಸಗಳು ಉಂಟಾಗುತ್ತವೆ ಎಂಬುದಕ್ಕೆ ಕೆಲವು ಸೂತ್ರಗಳಿವೆ. ಇವುಗಳನ್ನು ಅಭ್ಯಾಸ ಮಾಡಿ ಈ ವಿವರಗಳನ್ನು ತಿಳಿಯಬೇಕು.

ಕೆಲವು ಶಬ್ದಗಳ ವ್ಯುತ್ಪತ್ತಿಯನ್ನು ಪರಿಶೀಲಿಸೋಣ. ಮನೆಯಲ್ಲಿ ಎಲ್ಲರಿಗೂ ರುಚಿಕರವಾದ ತಿಂಡಿ ಕೋಡುಬಳೆ. ಹೀಗೆಂದರೇನು? ನಾವು ಈ ಶಬ್ದವನ್ನು ತಪ್ಪಾಗಿ ಉಚ್ಚರಿಸುತ್ತಿದ್ದೇವೆ. ಅದು ಕೂಡುಬಳೆ. ಬಳೆಯಾಕಾರದಲ್ಲಿ ಹಿಟ್ಟನ್ನು ತಿರುಗಿಸಿ ಒಂದು ಕಡೆ ಅದನ್ನು ಕೂಡಿಸುತ್ತೇವೆ. ಅದೇ ಕೂಡಿಸಿ ಮಾಡಿದ ಬಳೆ=ಕೂಡುಬಳೆ. ಇನ್ನೊಂದು ಶಬ್ದದ ಉದಾಹರಣೆಯಿಂದ ಇದನ್ನು ಪುಷ್ಟೀಕರಿಸುತ್ತೇನೆ. ಹಿಂದೆ ನಮ್ಮಂಥವರ ಮನೆಯಲ್ಲಿ ಅಡುಗೆಯ ಮನೆಯಲ್ಲಿ ಕೋಡ್ಲೆ ಒಲೆ ಇರುತ್ತಿತ್ತು. ಅದು ಎಂಥ ಒಲೆ. ಇದು ಕೂಡೊಲೆ. ಒಂದೇ ಕಡೆ ಬಾಯಿ ಇದ್ದರೂ ಎರಡು ಕಡೆ ಒಲೆಯ ಉರಿ ಬರುತ್ತಿತ್ತು. ಅದೇ ಕೂಡು+ಒಲೆ. ಸರಿಯಾಗಿದ್ದರೆ ಅದು ಕೂಡೊಲೆ. ನಾವು ಅದನ್ನು ಕೋಡ್ಲೆ ಒಲೆ ಎಂದು ಎರಡು ಸಲ ಒಲೆಯನ್ನೇ ಉಪಯೋಗಿಸುತ್ತಿದ್ದೆವು. ಹೀಗೆ ಭಾಷೆಯಲ್ಲಿ ನಮಗೆ ತಿಳಿಯದೆ ಒಂದೆ ಶಬ್ದವನ್ನು ಎರಡು ಮೂರು ಸಲ ಉಪಯೋಗಿಸುತ್ತೇವೆ.

ನವಿಲು ಕೋಸು ಎಂಬ ಶಬ್ದದಲ್ಲಿ ನವಿಲಿಗೆ ಯಾವ ಸಂಬಂಧವೂ ಇಲ್ಲ. ಅಡುಗೆಗೆ ತುಂಬ ರುಚಿಯನ್ನು ತರುವ ಈ ತರಕಾರಿಯ ನಿಜವಾದ ಹೆಸರು KNOL KHOL. ಇದು ಲ್ಯಾಟಿನ್, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಲ್ಲಿನ ಶಬ್ದ. ಇದರ ಉಚ್ಚಾರಣೆ ನೋಲ್ ಖೋಲ್. ನಮ್ಮ ಜನರಿಗೆ ಕೋಸು ತುಂಬ ಪರಿಚಯವಾಗಿತ್ತು. ನೋಲ್ ನವಿಲಿಗೆ ತುಂಬ ಹತ್ತಿರವಾಗಿದೆ ಉಚ್ಚಾರಣೆಯಲ್ಲ. ಎರಡೂ ಸೇರಿ ನವಿಲು ಕೋಸು ಎಂಬ ಹೊಸಶಬ್ದ ಪ್ರಚಾರಕ್ಕೆ ಬಂದು ಗಟ್ಟಿಯಾಗಿ ನಿಂತುಬಿಟ್ಟಿದೆ.

ಶಂಕರಪೋಳಿ. ಇದು ಒಂದು ತಿಂಡಿಯ ಹೆಸರು. ಗೋದಿಹಿಟ್ಟು ಅಥವಾ

ಮೈದಾಹಿಟ್ಟಿನೊಡನೆ ಬಾಳೆಹಣ್ಣನ್ನು ಕಿವುಚಿ ಸಕ್ಕರೆ ಬೆರೆಸಿ ಜಿಡ್ಡಿನಲ್ಲಿ ಕರಿಯುವ ಒಂದು ತಿನಿಸು. ಇದು ಬೊಂಬಾಯಿಯಲ್ಲಿ ಮೊದಲು ಪ್ರಚಾರಕ್ಕೆ ಬಂದು, ಪುಣೆ, ಹುಬ್ಬಳ್ಳಿ ಧಾರವಾಡಗಳ ಮೂಲಕ ಬೆಂಗಳೂರು ಮೈಸೂರುಗಳಿಗೂ ಹರಡಿ ಜನಪ್ರಿಯತೆಯನ್ನು ಸಂಪಾದಿಸಿಕೊಂಡಿತು. ಈ ತಿಂಡಿಗೂ ಶಂಕರ ಅಥವಾ ಈಶ್ವರನಿಗೂ ಏನೂ ಸಂಬಂಧವಿಲ್ಲ. ಶಂಕರಾಚಾರ್ಯರಿಗೆ ಈ ತಿಂಡಿ ಗೊತ್ತಿರಲೇ ಇಲ್ಲ. ಪೋಳಿ ಎಂದರೇನು? ಈ ತಿಂಡಿಯ ಮೂಲಕ್ಕೆ ಹೋದರೆ ಇದು ಪಾರಸಿ ಜನರು ಹೆಚ್ಚಾಗಿ ತಯಾರಿಸುತ್ತಿದ್ದ ತಿಂಡಿ. ಪಾರಸಿ ಜನರೊಡನೆ ನಮ್ಮ ಜನ ಬೆರೆಯುವುದು ಹೆಚ್ಚಾದಾಗ ಈ ತಿಂಡಿ ನಮ್ಮ ಅಡುಗೆ ಮನೆಯನ್ನೂ ಪ್ರವೇಶಿಸಿತು. ಪರ್ಷಿಯನ್ ಭಾಷೆಯಲ್ಲಿ ಈ ತಿಂಡಿಗೆ ಶರ್ಕರ್ ಪಾರಾ ಎಂದು ಹೆಸರು. ಅದು ನಮ್ಮ ಜನರ ಬಾಯಿಯಲ್ಲಿ ಶಂಕರ್‌ಪಾರಾ ಆಗೆ ಆಗಿ ಮತ್ತೆ ಶಂಕರ್ ಪಾಳಿ ಆಗಿ ಆ ಬಳಿಕ ಶಂಕರ್ ಪೋಳಿ ಆಗಿದೆ. ತಿಂಡಿಯ ಹೆಸರು ಬದಲಾದರೂ ಅದರ ರುಚಿ ಬದಲಾಗಿಲ್ಲ.

ಧಾರವಾಡದ ನನ್ನ ಮಿತ್ರರೊಬ್ಬರು ಒಬ್ಬ ವ್ಯಕ್ತಿಯನ್ನು ವರ್ಣನೆ ಮಾಡುತ್ತ ಅವರು ಒಳಮುಬ್ಬಿಕ ಇದ್ದ ಹಾಗೆ ಎಂದರು. ನನಗೆ ಆ ಶಬ್ದದ ಅರ್ಥವಾಗಲಿಲ್ಲ. ಈಚೆಗೆ ಒಂದು ಬಗೆಯ PRESSURE COOKERನ ಜಾಹಿರಾತಿನಲ್ಲಿ, 'ಅದು ಒಳಗಿಂದ ಮುಚ್ಚಿಕೊಳ್ಳುತ್ತೆ' ಎಂಬ ಮಾತು ನೆನಪಿಗೆ ಬಂತು. ಈ ಬಗ್ಗೆ ನನ್ನ ಮಿತ್ರರನ್ನು ಕೇಳಿದಾಗ ಒಳಮುಚ್ಚುಕ ಎಂಬುದು ಒಂದು ಗಿಡದ ಹೆಸರು ಎಂದು ಗೊತ್ತಾಯಿತು. ಈ ಗಿಡ ಮತ್ತಾವುದೂ ಅಲ್ಲ ನಾವು ಮುಟ್ಟಿದರೆ ಮುದುಡಿಕೊಳ್ಳುವ ಮುಟ್ಟಿದರೆ ಮುನಿಯ. ಇಂಥ ಶಬ್ದಗಳು ದೇಶದ ಬೇರೆ ಬೇರೆಯ ಕಡೆಗಳಲ್ಲಿ ಪ್ರಾದೇಶಿಕವಾಗಿ ಪ್ರಚಾರದಲ್ಲಿರುತ್ತವೆ. ಇವುಗಳನ್ನು ತಿಳಿದಾಗ ಹೊಸ ಶಬ್ದ ಪ್ರಪಂಚವೇ ಗೋಚರವಾದಂತೆ ಭಾಸವಾಗುತ್ತದೆ.

ಬೆಂಗಳೂರಿನಲ್ಲಿ ಸೆಕೆ ಹೆಚ್ಚಾಗಿ ಮಧ್ಯಾಹ್ನದ ಹೊತ್ತು ಹೊರಗೆ ಬರುವುದೇ ಕಷ್ಟ. ನನ್ನ ಸ್ನೇಹಿತರು ''ಇನ್ನೇನು MON SOON ಬಂತಲ್ಲ'' ಎಂದರು. ''ಅಯ್ಯೋ ಅದೆಲ್ಲಿ ಬರುತ್ತೆ ಅದು ಅರಬ್ಬಿ ಶಬ್ದ'' ಎಂದು ನಾನು ಹೇಳಿದೆ. 'ಹಾಗೆಂದರೇನು?' ಎಂದು ಅವರ ಪ್ರಶ್ನೆ. MONSOON ಎಂಬ ಶಬ್ದ ಇಂಗ್ಲಿಷ್ ಭಾಷೆಗೆ ಡಚ್ ಭಾಷೆಯಿಂದ Monssoen ಎಂಬ ಶಬ್ದದ ಮೂಲಕ ಬಂದಿರಬೇಕು. ಆದರೆ ಅದರ ಮೂಲ ಅರಬ್ಬಿಯದು. ಅಲ್ಲಿ ಅದು Mansin ಎಂದಿದೆ. ಅದಕ್ಕೆ ಕಾಲಮಾನ ಋತು ಎಂದರ್ಥ. ಅದೇ ಇಂಗ್ಲೀಷಿನ Monsoon ಎಂದೆ. ಅವರಿಗೆ ಆಶ್ಚರ್ಯವಾಯಿತು. ಅವರು ಆಗ ಹೇಳಿದರು. 'ಸರಿ, ಬಿಡಿ ಅಲ್ಲೇ ಇಲ್ಲದ ಮಳೆ ನಮಗೆಲ್ಲಿ ಬಂದೀತು!'

ಕೂಲಿ ಶಬ್ದ ಎಲ್ಲರಿಗೂ ಗೊತ್ತು. ಭಾರತದ ಎಲ್ಲ ಕಡೆ ಈ ಶಬ್ದ ಪ್ರಯೋಗದಲ್ಲಿದೆ. ಇಂಗ್ಲಿಷ್ ಭಾಷೆಗೂ ಸೇರಿಕೊಂಡು ಬಿಟ್ಟಿದೆ. ಇದರ ಮೂಲ

ಗುಜರಾತಿನಲ್ಲಿರುವ ಕುಲಿ ಎಂಬ ಬುಡಕಟ್ಟು ಜನರ ಹೆಸರಿನಿಂದ ಬಂದಿರಬಹುದು ಎಂದು ಇಂಗ್ಲಿಷ್ ನಿಘಂಟುಗಳು ತಿಳಿಸುತ್ತವೆ. ಆದರೆ ಇದು ಅಚ್ಚ ತಮಿಳು ಶಬ್ದ. ಕೆಲಸಗಾರರಿಗೆ ಕೊಡುವ ಮಜೂರಿಯಿಂದ ಹಿಡಿದು ಆ ಕೆಲಸ ಮಾಡುವರಿಗೂ ಅನ್ವಯವಾಗುತ್ತದೆ. ಇದಕ್ಕೆ ದ್ರಾವಿಡ ಭಾಷೆಗಳಲ್ಲಿ ಜ್ಞಾತಿರೂಪಗಳೂ ಇವೆ.

ಕಾಂಪೌಂಡು. ಈ ಶಬ್ದ ಕನ್ನಡದಲ್ಲಿ ಮನೆಯ ಸುತ್ತಣಗೋಡೆ ಎಂಬ ಅರ್ಥದಲ್ಲಿ ಉಪಯೋಗವಾಗುತ್ತ ಇದೆ. ಇದು ಇಂಗ್ಲಿಷಿಗೆ ಮಲಯಾ ಭಾಷೆಯಿಂದ ಬಂದಿದೆ. ಆ ಭಾಷೆಯಲ್ಲಿ ಅದರ ರೂಪ Kampang ಎಂದಿದೆ. ಇದಕ್ಕೆ ಅರ್ಥ enclosed land around a house. ಅಂದರೆ ಮನೆಯ ಸುತ್ತಣ ಆವರಣ ಎಂದಾಯಿತು. ಆದುದರಿಂದ ಕಾಂಪೌಂಡು ಗೋಡೆ ಎಂಬುದು ತಪ್ಪು ಶಬ್ದವಾಗುವುದಿಲ್ಲ. ಹೀಗಿದೆ ಭಾಷೆಯ ಶಬ್ದಗಳ ಪ್ರಯಾಣ ಸಾವಿರಾರು ಮೈಲಿ, ನಿರಾಯಾಸ.

ಮುದ್ರಾರಾಕ್ಷಸ ಎಂಬ ಶಬ್ದವನ್ನು ನಾವೆಲ್ಲ ಕೇಳಿದ್ದೇವೆ. ಇದು ಇಂಗ್ಲಿಷ್ ಭಾಷೆಯ PRINTER'S DEVIL ಶಬ್ದದ ಅನುವಾದ ಎಂದು ಎಲ್ಲರೂ ತಿಳಿದಿದ್ದಾರೆ. ಅದು ಹಾಗಲ್ಲ. ಇಂಗ್ಲಿಷಿನಲ್ಲಿ PRINTER'S DEVIL ಎಂದರೆ ಮುದ್ರಕರು ಲೇಖಕರ ಬಳಿಗೆ ಕಳುಹಿಸುವ ಆಳು. ಲೇಕಕರು ಈ ಆಳು ಬಂದಾಗ ''ಬಂದ ನೋಡು PRINTER'S DEVIL'' ಎನ್ನುತ್ತಾರೆ! ಮುದ್ರಣದ ತಪ್ಪಿಗೆ ಇಂಗ್ಲಿಷಿನಲ್ಲಿ MISPRINT ಎನ್ನುತ್ತಾರೆ ಅಷ್ಟೆ. ಭಾರತದ ಭಾಷೆಗಳಲ್ಲಿ ಮುದ್ರಾರಾಕ್ಷಸ ಅಥವಾ ಮುದ್ರಣ ಭೂತ ಎಂದು ಪ್ರಚಾರದಲ್ಲಿರುವುದಕ್ಕೆ PRINTER'S DEVIL ಕಾರಣನಲ್ಲ.

ಭಾರತದ ಜನ ತಪ್ಪು ಇಂಗ್ಲಿಷ್ ಶಬ್ದಗಳನ್ನೂ ನಿರ್ಮಾಣ ಮಾಡಿಬಿಡುತ್ತಾರೆ. Postpone ಶಬ್ದದ ಅರ್ಥ ಸ್ಪಷ್ಟವಾಗಿಯೇ ಇದೆ. ಯಾವುದಾದರೂ ಕಾರ್ಯವನ್ನೋ ಸಭೆಯನ್ನೋ ಮುಂದಕ್ಕೆ ಹಾಕುವುದು ಅದು. ಇದರಲ್ಲಿ ಎರಡು ಭಾಗಗಳಿವೆ. Post + ponere ಎಂಬ ಲ್ಯಾಟಿನ್ ಭಾಷೆಯ ರೂಪ ಅದು. To place after ಎಂದರ್ಥ. ಇಲ್ಲಿPONE ಎಂಬ ಭಾಗದ ಶಬ್ದವೇ ಇಲ್ಲ ಇಂಗ್ಲಿಷಿನಲ್ಲಿ ಈ ಅರ್ಥದಲ್ಲಿ. ಹೀಗಿದ್ದು ನಮ್ಮ ಜನ Pre Pone ಎಂಬ ಶಬ್ದವನ್ನು ನಿರ್ಮಾಣ ಮಾಡಿ ಸಾರ್ವತ್ರಿಕವಾಗಿ ಪ್ರಯೋಗಿಸುತ್ತಾರೆ. ಇಂಗ್ಲೆಂಡಿನಲ್ಲಿ ಇದನ್ನು ಕೇಳಿಯೇ ಇಲ್ಲ. ಇಂಥ ತಮಾಷೆಗಳೂ ಭಾಷೆಯಲ್ಲಿ ನಡೆಯುತ್ತವೆ.

ನಮಗೆ ಗೊತ್ತಿಲ್ಲದೆಯೇ ನಾವು ಉಪಯೋಗಿಸುವ ಪದಪುಂಜಗಳ ಮಾಹಿತಿಯನ್ನು ನೀಡುವುದಕ್ಕಾಗಿ ಒಂದು ಉದಾಹರಣೆಯನ್ನು ನೀಡುತ್ತೇನೆ. ಮದುವೆಯ ಹಿಂದಿನ ದಿನ ವರಪೂಜೆ ನಡೆಯುತ್ತದೆ ತಾನೆ. ಅದು ಸಾಮಾನ್ಯ ಸಂಜೆ ೭-೮ಗಂಟೆಯ ವೇಳೆಗೆ ನೆರವೇರುತ್ತದೆ. ಅದಾದ ಮೇಲೆ ಪ್ರಯಾಣ ಮಾಡಿ ಬಂದಿರುವ ಬೀಗರಿಗೆ ಹೆಣ್ಣಿನ ಕಡೆಯವರು ಬಿಸಿಲಡಿಗೆ ಊಟವನ್ನು ಸಿದ್ಧಮಾಡಿರುತ್ತಾರೆ. ಬಿಸಿಲಡಿಗೆ ಊಟ ಎಂದರೇನು?

ಬಿಸಿಲು ಅರಿಮಾಯವಾಗಿರುವ ಸಮಯದಲ್ಲಿ ಬಿಸಿಲಿನ ಮಾತೇಕೆ? ನಿಜವಾಗಿ ಅದು ಬಿಸಿ ಲಡ್ಡಿಗೆಯ ಊಟ. ಚಿರೋಟಿ ಫೇಣಿಗಳು ಮದುವೆಯ ಉತ್ಸವಗಳಿಗೆ ಧಾಳಿ ಮಾಡುವುದಕ್ಕೆ ಮುಂಚೆ ಲಾಡುವೇ ಪ್ರಧಾನ ಭಾಷ್ಯವಾಗಿತ್ತು. ಅದು ಬಿಸಿಯಾಗಿರುವಂತೆ ತಯಾರಿಸಿ ಬೀಗರಿಗೆ ಬಡಿಸುತ್ತಿದ್ದರು ಅದೊಂದು ದೊಡ್ಡ ಗೌರವವಾಗಿತ್ತು. ಹಿಂದೆ ಲಾಡು, ಲಡ್ಡಿಗೆ ಎರಡು ರೂಪಗಳೂ ಇವೆ. ಈ ಹೆಸರಿಗೆ ಇದು ತುಂಬ ಹಳೆಯ ಪದ. ಹೀಗೆ ಬಿಸಿ ಲಡ್ಡಿಗೆ ಹೋಗಿ ಬಿಸಿಲಡಿಗೆಯಾಗಿ ಪ್ರಚಾರದಲ್ಲಿದೆ ಈ ಮಾತು.

ಭಾಷೆಯಲ್ಲಿ ನಿಘಂಟನ್ನು ತಯಾರುಮಾಡಿ ಮುದ್ರಿಸಿದರೂ ಭಾಷೆಗೆ ಹೊಸ ಶಬ್ದಗಳು ಬರುವುದು ನಿಲ್ಲುವುದಿಲ್ಲ. ಎಷ್ಟೋ ಹಳೆಯ ಶಬ್ದಗಳು ಕಣ್ಮರೆಯಾಗುತ್ತವೆ. ಎಷ್ಟೋ ಹೊಸ ಶಬ್ದಗಳು ಸೃಷ್ಟಿಯಾಗುತ್ತವೆ. ಈಗ ತುಂಬ ಪ್ರಯೋಗದಲ್ಲಿರುವ ಪ್ರಾತ್ಯಕ್ಷಿಕೆ, ಪ್ರಾಯೋಜನ, ಪ್ರಾಯೋಜಕ, ಬೊಂಬಾಟ್, ಬೆಂಡೆತ್ತು ಈ ಶಬ್ದಗಳನ್ನು ನೋಡಿ. ಮುಂದೆ ಇವುಗಳೂ ನಿಘಂಟಿನ ಒಳಗೆ ಸೇರಿಕೊಳ್ಳುತ್ತವೆ. ಹೀಗೆ ನಿಘಂಟಿನ ಕಾರ್ಯ ನಿಲುವಿಲ್ಲದ ನದಿಯ ನೀರಿನಂತೆ ಹರಿಯುತ್ತಿರಲೇಬೇಕಾದ ಕಾರ್ಯ. ಯಾವ ವಿದ್ವಾಂಸರು ಮುಂದೆ ಬಂದು ಈ ಕ್ಷೇತ್ರದ ಹಿರಿಮೆಯನ್ನು ಕಾಪಾಡಬೇಕಾಗಿದೆ.

ನಿಘಂಟಿಗೆ ಸೇರಿದ ವಿಷಯಗಳಲ್ಲಿ ಇನ್ನೂ ಸೇರಿಸಬೇಕಾದ ವಿಷಯಗಳು ಬಹಳವಾಗಿವೆ. ಒಂದು ನಿಘಂಟನ್ನು ಉಪಯೋಗಿಸುವುದು ಹೇಗೆ? ಶಬ್ದಗಳಲ್ಲದೆ ಇನ್ನಾವ ವಿಷಯಗಳು ನಿಘಂಟಿನಲ್ಲಿ ಸೇರಿರಬೇಕು. ಭಾಷೆಯ ಚರಿತ್ರೆಯ ವಿಚಾರವಾಗಿ ವಿವರಬೇಡವೇ! ವ್ಯಾಕರಣದ ಹೊಸ ಸೂತ್ರಗಳನ್ನೇ ನಿರ್ಮಾಣ ಮಾಡಬೇಕಾದಂತೆ ಭಾಷೆ ಬೆಳೆಯುತ್ತಿದೆ. ಒಂದು ಶಬ್ದದ ಅರ್ಥವನ್ನು ನಿರ್ದಿಷ್ಟವಾಗಿ ನಿರ್ದುಷ್ಟವಾಗಿ ತಿಳಿಯಪಡಿಸುವುದು ಹೇಗೆ? ಗಾದೆಗಳ ಅರ್ಥವನ್ನು ತಿಳಿದುಕೊಳ್ಳುವುದು ಹೇಗೆ. ಗ್ರಾಮ್ಯಶಬ್ದಗಳಲ್ಲಿ ಯಾವುದು ಹೇಗೆ ನಿರೂಪಿತವಾಗಬೇಕು ಇತ್ಯಾದಿ ವಿವರಗಳಲ್ಲಿ ಒಂದನ್ನೂ ಈ ಲೇಖನದಲ್ಲಿ ತಿಳಿಸಲಾಗಿಲ್ಲ. ಇವೆಲ್ಲ ನಿಧಾನವಾಗಿ ಚರ್ಚಿಸಬೇಕಾದ ವಿಷಯಗಳು. ಆದರೆ ನಿಗಂಟಿನ ಕಾರ್ಯದಲ್ಲಿ ಆಸಕ್ತಿ ಹುಟ್ಟಿಸುವುದು ಮಾತ್ರ ನನ್ನ ಈ ಲೇಖನದ ಉದ್ದೇಶ.

***

ಈ ಬಗ್ಗೆ ಹೆಚ್ಚಿನ ವಿಚಾರಗಳಿಗೆ ಲೇಖಕರೇ ಬರೆದಿರುವ ನಿಘಂಟು ಶಾಸ್ತ್ರದ ಬಗ್ಗೆ ಕನ್ನಡದ ಮೊದಲ ಪುಸ್ತಕ : ''ಕನ್ನಡ ನಿಘಂಟು ಶಾಸ್ತ್ರ ಪರಿಚಯ''ವನ್ನು ನೋಡಿ.(ಪ್ರಕಟಣೆ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩.)

ಅಭಿವಂದನಾ

ಸಾಹಿತ್ಯ ಮತ್ತು ಸಂವಹನ

ಡಾ|| ಹಾ.ಮಾ.ನಾಯಕ

ಸಾಹಿತ್ಯ ಹೇಗಿರಬೇಕು, ಏನು ಮಾಡಬೇಕು ಎಂಬ ಚರ್ಚೆ ಎಲ್ಲ ದೇಶಗಳಲ್ಲಿ ಎಲ್ಲ ಕಾಲದಲ್ಲಿ ನಡೆದುಕೊಂಡು ಬಂದಿದೆ. ಚರ್ಚೆ ದೇಶ ಕಾಲಗಳಿಗೆ ಅನುಸಾರವಾಗಿ ತನ್ನ ವ್ಯಾಪ್ತಿ ಸ್ವರೂಪಗಳನ್ನು ಬದಲಾಯಿಸಿಕೊಳ್ಳುತ್ತಿರುತ್ತದೆ. ಅದೆಷ್ಟೊ ಜನ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಅಸಂಖ್ಯಾತ ಪುಸ್ತಕಗಳು ಬರೆಯಲ್ಪಟ್ಟಿವೆ. ಸಾಹಿತ್ಯದ ಸಾಮಾಜಿಕ ಜವಾಬ್ದಾರಿಯನ್ನು ಮತ್ತೆ ಮತ್ತೆ ಪ್ರಸ್ತಾಪಿಸಲಾಗಿದೆ. ನಮ್ಮ ದೇಶದ ಮಹಾಪಿಡುಗುಗಳಾದ ಜಾತೀಯತೆ, ಮೂಢನಂಬಿಕೆ, ಆರ್ಥಿಕ ಅಸಮಾನತೆ,ಶೋಷಣೆ, ಬಡತನ ಇವುಗಳ ವಿರುದ್ಧ ಜನಸಮುದಾಯದಲ್ಲಿ ತಿಳಿವಳಿಕೆ ಮೂಡಿಸಿ ಜಾಗೃತಿಯನ್ನುಂಟು ಮಾಡುವುದು ಎಲ್ಲರ ಕರ್ತವ್ಯವಾಗಿದೆ ಎಂದು ನಾವು ಹೇಳುತ್ತಿದ್ದೇವೆ. ಇಂದು ನಮಗೆ ಬೇಕಾಗಿರುವ ಸಾಹಿತ್ಯಕೂಡ ಇದೇ ಕೆಲಸ ಮಾಡಬೇಕೆಂಬುದು ಅನೇಕರ ಅಪೇಕ್ಷೆ. ಕಾವ್ಯ ಖಡ್ಗವಾಗುವುದು, ಕಥೆ ಕತ್ತಿಯಾಗುವುದು, ಕಾದಂಬರಿ ಕೊಡಲಿಯಾಗುವುದು ಅಥವಾ ಹಾಗೆ ಆಗಬೇಕೆಂದು ಇಚ್ಛಿಸುವುದು ಈ ಕಾರಣಗಳಿಂದಲೆ, ಈ ಕಾರಣಗಳಿಂದಲೆ ನಾಟಕ ರಂಗದಿಂದ ಬೀದಿಗೆ ಇಳಿಯುತ್ತದೆ. ಸಾಹಿತ್ಯ ಸಾಮಾನ್ಯರ ಸ್ವತ್ತಾಗುತ್ತದೆ.

ಸಾಹಿತ್ಯ ಇದನ್ನೆಲ್ಲ ಮಾಡಬೇಕು ಎಂದು ನಾವು ಅಪೇಕ್ಷೆಪಟ್ಟಾಗ ಅದು ಒಂದು ಮಾಧ್ಯಮವೆಂದು ಒಪ್ಪಿಕೊಂಡಂತಾಯಿತು. ಅದು ಒಂದು ಮಾಧ್ಯಮದ ಮೂಲಕ ರೂಪಗೊಂಡ ಮತ್ತೊಂದು ಮಾಧ್ಯಮ, ಎಂದರೆ ಸಾಹಿತ್ಯ ಭಾಷೆಯ ಮೂಲಕ ರೂಪಗೊಳ್ಳುವ ಕಲೆ. ಭಾಷೆ ಎರಡು ಮುಖಗಳುಂಟು. ಒಂದು, ಆಡುಮಾತು; ಇನ್ನೊಂದು ಬರವಣಿಗೆ, ಆಡು ಮಾತು ಭಾಷೆ ತಿಳಿದವರಿಗೆಲ್ಲ, ಕಿವಿ ಕೇಳುವರಿಗೆಲ್ಲ ಮುಟ್ಟುತ್ತದೆ. ಬರವಣಿಗೆ ಹಾಗಾಗುವುದಿಲ್ಲ. ಅದಕ್ಕೆ ಕಲಿಕೆ ಬೇಕು, ಪರಿಶ್ರಮಬೇಕು. ಲಿಪಿ ಸಂಕೇತಗಳಲ್ಲಿ ಅಂತರ್ಗತವಾದ ಧ್ವನಿಯನ್ನು, ಧ್ವನಿಸಮೂಹವನ್ನು ಒಡೆದು ಓದುವ ಶಕ್ತಿಯನ್ನು ಪ್ರತ್ಯೇಕವಾಗಿ ಪಡೆದುಕೊಳ್ಳಬೇಕು. ಕನ್ನಡ ಆಡುವವರಿಗೆಲ್ಲ ಕನ್ನಡ ಓದಲು ಬರುವುದಿಲ್ಲ.

ಇದರಿಂದ ನಾವು ಒಂದು ಗಂಭೀರವಾದ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಸಾಹಿತ್ಯವನ್ನು ಒಂದು ಮಾಧ್ಯಮ ಎಂದು ಪರಿಗಣಿಸಿ ಅದು ಏನೆಲ್ಲವನ್ನೊ ಹೇಳಬೇಕೆಂದು ನಾವು ಅಪೇಕ್ಷೆಪಟ್ಟಾಗ ನಾವು ಮುಟ್ಟಬೇಕಾದ ಜನ ಬೇರೆ ಇದ್ದಾರೆಂದು ಗೊತ್ತಾಗುತ್ತದೆ. ಯಾವುದೇ ಮಾಧ್ಯಮ ಉಪಯುಕ್ತವಾಗುವುದು ಸಾರ್ಥಕಗೊಳ್ಳುವುದು ಅದರ ಎರಡು ತುದಿಗಳಲ್ಲಿ ಸಂಬಂಧಿಸಿದ ಆಯಾ ವ್ಯಕ್ತಿಗಳು ಇದ್ದಾಗಲೆ. ಆಡುವವನೂ ಕೇಳುವವನೂ ಇದ್ದರೆ ಮಾತ್ರ ಭಾಷೆ ಸಾರ್ಥಕವಾಗುತ್ತದೆ. ಕುಣಿಯುವವನೂ ನೋಡುವವನೂ ಇದ್ದರೆ ಮಾತ್ರ ನೃತ್ಯ ಸಾರ್ಥಕವಾಗುತ್ತದೆ. ಬರೆಯುವವರೂ ಓದುವವರೂ ಇದ್ದರೆ ಮಾತ್ರ

ಸಾಹಿತ್ಯ ಸಾರ್ಥಕವಾಗುತ್ತದೆ. ಬಾಯಿಂದ ಬಾಯಿಗೆ ಹರಿಯುವ ಜನಪದ ಸಾಹಿತ್ಯದ ಕಾಲದಲ್ಲಿ ಮಾತಿನ ಸಾರ್ಥಕತೆಯೊಡನೆಯೇ ಸಾಹಿತ್ಯದ ಸಾರ್ಥಕತೆಯೂ ಸೇರಿಕೊಂಡಿರುತ್ತಿತ್ತು. ಆದರೆ ಸಾಹಿತ್ಯ ಬರವಣಿಗೆಯ ರೂಪಧರಿಸಿದಾಗ ಅದನ್ನು ತಿಳಿಯಲು ಮಾತು ಮಾತ್ರ ಸಾಲದೆ ಓದಿನ ಅಗತ್ಯವೂ ಬಂದಿತು. ನಮ್ಮ ದೇಶದಲ್ಲಿ ಈ ಓದುವವರೇ ಇಲ್ಲ. ಇದ್ದರೂ ತುಂಬ ಕಡಮೆ ಪ್ರಮಾಣದಲ್ಲಿದ್ದಾರೆ. ಆದ್ದರಿಂದ ಸಾಹಿತ್ಯ ಏನನ್ನು ಮಾಡಬೇಕೆಂದು ನಾವು ' ಬಯಸುತ್ತೇವೆಯೊ ಅದು ಪರಿಣಾಮಕಾರಿಯಾಗಿ ಆಗುವುದಿಲ್ಲ ಎಂದರೆ ಸಾಹಿತ್ಯ ಮಾಧ್ಯಮ ಸಾರ್ಥಕವಾಗುವುದಿಲ್ಲ. ಇದು ಸಾಹಿತ್ಯಾಸಕ್ತರೆಲ್ಲ ಗಂಭೀರವಾಗಿ ಎಚ್ಚರಿಕೆಯಿಂದ ಗಮನಿಸಬೇಕಾದ ಪರಿಸ್ಥಿತಿ.

ಹಿಂದಿನ ಕಾಲದಲ್ಲಿ ಬರವಣಿಗೆಯ ಸಾಹಿತ್ಯ ರಾಜ ಮಹಾರಾಜರ ಆಸ್ಥಾನಗಳಲ್ಲಿ ಶೋಭಿಸುತ್ತಿತ್ತು. ಈ ಸಾಹಿತ್ಯವನ್ನು ಜನಸಾಮಾನ್ಯರಿಗೆ, ಓದು ಬರಹ ತಿಳಿಯದವರಿಗೆ, ಮುಟ್ಟಿಸಲು ಬಾಯಿಮಾತಿನ ಮಾಧ್ಯಮಗಳನ್ನು ಯಶಸ್ವಿಯಾಗಿ ಬಳಸಿದರು. ಜೊತೆಗೆ ಸಾಹಿತ್ಯವನ್ನು ಅಳವಡಿಸಿದ ಇತರ ಮಾಧ್ಯಮಗಳನ್ನೂ ಉಪಯೋಗಿಸಿದರು. ಮಹಾಭಾರತವನ್ನು ಓದುವ, ರಾಮಾಯಣ ಪಾರಾಯಣ ಮಾಡುವ ಅವಕಾಶ ಸಾಮರ್ಥ್ಯಗಳು ಯಾವುದೊ ಒಂದು ವರ್ಗದವರ ಪಾಲಿಗೆ ಮೀಸಲಾಗಿದ್ದವು. ಆದರೆ ಆ ರಾಮಾಯಣ ಮಹಾಭಾರತಗಳನ್ನು, ಅವುಗಳ ಮೌಲ್ಯ ಸೂತ್ರಗಳನ್ನು ನಮ್ಮ ಜನರೆಲ್ಲರೂ ತಿಳಿದಿದ್ದರು. ಓದು ಬರಹ ತಿಳಿದವರ ಸಂಖ್ಯೆ ಈಗಿಗಿಂತ ಬಹು ಕಡಮೆಯಿದ್ದ ಆ ಕಾಲದಲ್ಲಿ ಇದು ಹೇಗೆ ಸಾಧ್ಯವಾಯಿತು? ಕಾವ್ಯವಾಚನ,ಹರಿಕಥೆ, ಜನರು ಬಾಯಿಪಾಠ ಮಾಡಿ ತಲೆ ಮಾರಿನಿಂದ ತಲೆಮಾರಿಗೆ ಉಳಿಸಿಕೊಂಡು ಹೋಗಲು ಅನುಕೂಲವಾಗುವಂತೆ ಈ ಮೂಲಕೃತಿಗಳ ಜನಪದ ಅವೃತ್ತಿಗಳ ರಚನೆ, ಯಕ್ಷಗಾನ, ಬಯಲಾಟವೇ ಮೊದಲಾದ ಈ ಸಾಹಿತ್ಯಕೃತಿಗಳ ದೃಶ್ಯ-ಕಾವ್ಯದ ಬಗೆ ಬಗೆಯ ನಮೂನೆಗಳು- ಇವೆಲ್ಲ ಜನಸಾಮಾನ್ಯರ, ಅನಕ್ಷರಸ್ಥರ, ಸ್ವತ್ತಾಗಿದ್ದವು. ಒಂದು ಬಯಲಾಟ ನೋಡಿ ನಮ್ಮ ಜನ ಪುರಾಣಗಳಲ್ಲಿ ಪರಿಣತರಾದರು; ಮೌಲ್ಯಗಳ ವಿಚಾರ ತಿಳಿಯತೊಡಗಿದರು. ಒಂದು ಹರಿಕಥೆಗೆ ಹೋಗಿ ಅವರು ಎಷ್ಟೋ ಜೀವನ ಸೂತ್ರಗಳನ್ನು ಕಂಡುಕೊಂಡರು. ಇಲ್ಲೆಲ್ಲ ಕಲಿಸಿದ್ದು, ಕಲಿತಿದ್ದು ಸರಿಯಾಗಿತ್ತೆ ಎಂದು ಯಾರಾದರೂ ಕೇಳಬಹುದು. ಆ ಪ್ರಶ್ನೆ ಬೇರೆ, ಆದರೆ ನಾವು ಮುಖ್ಯವಾಗಿ ಗಮನಿಸಬೇಕಾದ ವಿಚಾರ ಆ ಕಲಿಸಿದ, ಕಲಿತ ರೀತಿ; ಸಂವಹನದ ಸ್ವರೂಪ.

ಇವತ್ತು ನಮ್ಮ ಸಾಹಿತ್ಯವನ್ನು ನಾವು ಜನರಿಗೆ ಹೀಗೆ ಮುಟ್ಟಿಸುತ್ತಿದ್ದೇವೆಯೆ ಎಂದು ನಮ್ಮನ್ನೆ ನಾವು ಕೇಳಿಕೊಳ್ಳಬೇಕು. ನಮ್ಮ ದೇಶ ಅನಕ್ಷರಸ್ಥರ ದೇಶ. ಈ ದೇಶದ ಬಹು ಸಂಖ್ಯಾತರಿಗೆ ಮಾತೇ ಮಾಧ್ಯಮ, ಅಕ್ಷರವಲ್ಲ. ಆದ್ದರಿಂದ ಸಾಹಿತ್ಯದ ಸಾರ್ಥಕತೆಯನ್ನು ಕುರಿತು ಮಾತನಾಡುವ ನಾವು ನಮ್ಮ ಸಾಹಿತ್ಯಕ್ಕೆ ಓದುಗರ ಸಂಖ್ಯೆಯನ್ನು ಬೆಳೆಸಬೇಕು. ಓದುಬಾರದವರೇ ತುಂಬಿದ್ದರೆ ಓದುಗರ ಸಂಖ್ಯೆ ಹೇಗೆ ಬೆಳೆಯುತ್ತದೆ?

ಜನರನ್ನು ಅಕ್ಷರಸ್ಥರನ್ನಾಗಿಸುವುದರ ಕಡೆ ನಾವು ಈಗ ಆದ್ಯಗಮನ ಕೊಡಬೇಕಾಗಿದೆ. ಅಕ್ಷರಸ್ಥರ ಸಂಖ್ಯೆ ಬೆಳೆಯುತ್ತ, ಹೋದಂತೆ ಸಾಹಿತ್ಯದ ಸಾರ್ಥಕತೆಯ ಪ್ರಮಾಣವೂ ಬೆಳೆಯುತ್ತ ಹೋಗುತ್ತದೆ. ಒಂದು ರೀತಿಯಲ್ಲಿ ಇವು ಪರಸ್ಪರ ಪೂರಕ ಪ್ರಕ್ರಿಯೆಗಳು.

ಅಕ್ಷರಸ್ಥರ ಸಂಖ್ಯೆ ಬೆಳೆದ ಹಾಗೆ ಸಾಹಿತ್ಯದ ಸಾರ್ಥಕತೆಯೂ ಬೆಳೆಯುತ್ತದೆ ಎನ್ನುವುದು ಒಂದು ತಾತ್ಕಾಲಿಕವಾದ ನಂಬಿಕೆ, ಅಂದಾಜು. ಏಕೆಂದರೆ ಇತರ ಜನಸಂಪರ್ಕ ಮಾಧ್ಯಮಗಳು ಪ್ರಬಲವಾದಾಗ ಬರವಣಿಗೆಯ ಮಾಧ್ಯಮ ಕೂಡ ಸಹಜವಾಗಿಯೇ ಹಿಂದೆ ಬೀಳುತ್ತದೆ. ಈಚೆಗೆ ಪ್ರಸಿದ್ಧ ಪತ್ರಿಕೋದ್ಯೋಗಿಯೊಬ್ಬರು ಈ ವಿಷಯದಲ್ಲಿ ಭಾರತವನ್ನೂ, ಅಮೆರಿಕ ಯುರೋಪುಗಳನ್ನೂ ಹೋಲಿಸಿದ್ದಾರೆ. ಅದರ ಅಧ್ಯಯನ ತುಂಬ ಕುತೂಹಲಕಾರಿಯಾಗಿದೆ. ಭಾರತದಲ್ಲಿ ಸ್ವಾತಂತ್ರ್ಯ ಬರುವ ಹೊತ್ತಿಗೆ ಅಕ್ಷರಸ್ಥರ ಸಂಖ್ಯೆ ಕೇವಲ ಶೇ. ಹದಿಮೂರು, ಇದು ಇನ್ನೂ ಶೇ. ೩೦-೩೫ ನ್ನು ದಾಟುವುದು ಸಾಧ್ಯವಾಗಿಲ್ಲ. ಈ ಅಕ್ಷರಸ್ಥರಾದರೂ ಎಂಥವರು? ಚೆನ್ನಾಗಿ ಓದು ಬರಹ ಬಲ್ಲವರಲ್ಲ; ಸಾಹಿತ್ಯವನ್ನು ಓದಿ ಅರ್ಥಮಾಡಿಕೊಳ್ಳಬಲ್ಲವರಲ್ಲ.'ರುಜುಹಾಕಲು ಬರುತ್ತದೆಯೆ?' ಎಂಬ ಖಾನೇಷುಮಾರಿ ಅಧಿಕಾರಿಗಳ ಪ್ರಶ್ನೆಗೆ 'ಹೌದು' ಎಂದು ಉತ್ತರ ಕೊಟ್ಟವರು; ರುಜು ಎಂದು ಬರೆಯುವವರು; ಈ ಬಗೆಯ ಬಹು ಸಂಖ್ಯಾತರು ಅಕ್ಷರಸ್ಥರ ಸಂಖ್ಯೆಯೊಳಗೆ ಸೇರಿದ್ದಾರೆ. ಅಮೆರಿಕ ಯುರೋಪುಗಳಲ್ಲಿ ಓದು ಬರಹ ಬಲ್ಲವರ ಸಂಖ್ಯೆ ಸರಿಸುಮಾರು ಶೇ. ನೂರು ಎಂದೇ ಇಟ್ಟುಕೊಳ್ಳಬಹುದು. ಸ್ವಾರಸ್ಯದ ವಿಷಯ ಎಂದರೆ ೧೯೪೦ ರ ಸುಮಾರಿನಲ್ಲಿ ಮಿಲಿಯಾಂತರ ಪ್ರಸಾರವಿದ್ದ ಅಮೆರಿಕ, ಯುರೋಪಿನ ಪತ್ರಿಕೆಗಳ ಪ್ರಸಾರ ಒಂದೇ ಸಮನೆ ಕುಗ್ಗಿದೆ; ಕೆಲವು ಪತ್ರಿಕೆಗಳು ಮುಕ್ತಾಯ ಹಾಡಿವೆ. ಆದರೆ ನಮ್ಮ ದೇಶದ ಸ್ಥಿತಿ ಇದಕ್ಕೆ ತೀರ ವಿರುದ್ಧವಾಗಿದೆ. ನಮ್ಮಲ್ಲಿ ಪತ್ರಿಕೆಗಳ ಸಂಖ್ಯೆ, ಅವುಗಳ ಚಂದಾದಾರರ ಸಂಖ್ಯೆ ಒಂದೇ ಸಮನೆ ಬೆಳೆದಿದೆ. ಈ ವೈದೃಶ್ಯ ಕಳೆದ ಇಪ್ಪತ್ತು ವರ್ಷಗಳಿಗಿಂತ ಈಗ ಪ್ರಬಲವಾಗಿದೆ. ಎಪ್ಪತ್ತು ಲಕ್ಷ ಜನಸಂಖ್ಯೆಯ ನ್ಯೂಯಾರ್ಕ್ ನಗರದಲ್ಲಿರುವ ಮುಖ್ಯ ದಿನ ಪತ್ರಿಕೆಗಳು ಎರಡೇ ಎರಡು, ನ್ಯೂಯಾರ್ಕಿನ ಜನ ಸಂಖ್ಯೆಯ ಅರ್ಧದಷ್ಟಿರುವ ಅಕ್ಷರಸ್ಥರ ಸಂಖ್ಯೆ ಬಹುಕಡಿಮೆ ಇರುವ, ನಮ್ಮ ರಾಷ್ಟ್ರದ ರಾಜಧಾನಿಯಲ್ಲಿ ಏಳು ಇಂಗ್ಲಿಷ್ ಪತ್ರಿಕೆಗಳು. ಒಂದು ಡಜನ್‌ಗಿಂತ ಹೆಚ್ಚು ಹಿಂದೀ ಪತ್ರಿಕೆಗಳು ಇವೆಯಂತೆ. ಸಣ್ಣಪುಟ್ಟವು ಈ ಲೆಕ್ಕದಲ್ಲಿ ಸೇರುವುದಿಲ್ಲ. ನಮ್ಮ ರಾಜ್ಯದ ರಾಜಧಾನಿ ಬೆಂಗಳೂರಿನ ಸ್ಥಿತಿಯಾದರೂ ಇದರಿಂದ ಭಿನ್ನವಲ್ಲ, ಪತ್ರಿಕೆಗಳ ಸಂಖ್ಯೆ ಬೆಳೆಯದಿದ್ದರೂ, ಓದುಗರ ಸಂಖ್ಯೆ, ಇರುವ ಪತ್ರಿಕೆಗಳ ಪ್ರಸಾರ ಸಂಖ್ಯೆ ಅಗಾಧವಾಗಿ ಬೆಳೆದು ನಿಂತಿದೆ. ಈ ಪರಿಸ್ಥಿತಿಗೆ ಮುಖ್ಯಕಾರಣ ಎಂದರೆ ಅಲ್ಲಿ ಅಮೆರಿಕ ಯುರೋಪುಗಳಲ್ಲಿ ಜನ ಸಂಪರ್ಕ ಮಾಧ್ಯಮಗಳಲ್ಲಿ ಸಾಧಿತವಾದ ಅದ್ಭುತ ಪ್ರಗತಿ; ನಮ್ಮ ದೇಶದಲ್ಲಿನ ಆ ದಿಕ್ಕಿನ ಕೊರತೆ.

ಅಭಿವಂದನಾ

ಜನ ಸಂಪರ್ಕ ಮಾಧ್ಯಮಗಳ ಪ್ರಗತಿಯ ಬಗ್ಗೆ ಈ ಪತ್ರಿಕೋದ್ಯೋಗಿ ಒಂದು ಸ್ವಾರಸ್ಯವಾದ ಹೋಲಿಕೆ ಕೊಡುತ್ತಾರೆ. ಕೊಲಂಬಸ್ ದಾರಿತಪ್ಪಿ ಅಮೆರಿಕೆಯನ್ನು ಕಂಡುಹಿಡಿದಾಗ ಆ ಸುದ್ದಿ ಯುರೋಪನ್ನು ತಲಪಲು ಒಂದು ವರ್ಷ ಹಿಡಿಯಿತು. ಆದರೆ ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ಇಳಿಯುವುದನ್ನು ಜಗತ್ತಿನಾದ್ಯಂತ ಬಿಲಿಯಾಂತರ ಜನರು ಕಣ್ಣಾರೆ ಕಾಣುವಂತಾಯಿತು. ಹೀಗಿದೆ ಈ ಅದ್ಭುತ ಪ್ರಗತಿ. ಈ ಸಂದರ್ಭದಲ್ಲಿ ನನಗೆ ನನ್ನದೇ ಒಂದು ಅನುಭವ ನೆನಪಿಗೆ ಬರುತ್ತದೆ. ಸುಮಾರು ಹದಿನಾರು ಹದಿನೇಳು ವರ್ಷಗಳ ಹಿಂದೆ ಅಧ್ಯಕ್ಷ ಕೆನಡಿಯವರ ಕೊಲೆಯಾದಾಗ ನಾನು ಅಮೆರಿಕೆಯಲ್ಲಿದ್ದೆ. ಹಗಲು ರಾತ್ರಿ ದೂರದರ್ಶನದ ಮುಂದೆ ಕುಳಿತು ಕ್ಷಣಕ್ಷಣಕ್ಕೆ ಏನೇನು ನಡೆಯುತ್ತದೆ ಎಂಬುದನ್ನು ನೋಡುವುದೆ ನಮ್ಮ ಕೆಲಸವಾಗಿತ್ತು. ಆಸ್ವಾಲ್ಡ್ ಎಂಬ ಆರೋಪಿಯನ್ನು ಪೊಲೀಸಿನವರು ಕೋರ್ಟಿಗೆ ಕರೆದುಕೊಂಡು ಹೋಗುತ್ತಿರುವಾಗ ಯಾರೊ ಒಬ್ಬ ಅವನಿಗೆ ಗುಂಡು ಹಾಕಿ ಕೊಲ್ಲುವುದನ್ನು ನಾವು ಕಣ್ಣಾರೆ ಕಂಡು ಕುಳಿತ ಕುರ್ಚಿಯಿಂದ ನೆಗೆದು ಬೀಳುವ ಹಾಗಾಯಿತು. ಮುಂದೆ ಅದಕ್ಕೆ ಸಂಬಂಧಿಸಿದ ಕಥೆ ವಿವರಗಳನ್ನೆಲ್ಲ ದೂರದರ್ಶನದಲ್ಲೆ ನಾವು ಕಂಡು ಕೇಳಿದೆವು. ಫಲವಾಗಿ ಮರುದಿನ'ನ್ಯೂಯಾರ್ಕ್ ಟೈಂಸ್' ಓದುವ ಆಸಕ್ತಿಯೇ ನಮಗೆ ಉಳಿದಿರಲಿಲ್ಲ! ಅದು ಪ್ರಕಟಿಸಿದ್ದ ಆಸ್ವಾಲ್ಡ್ ಕೊಲೆಯ ಚಿತ್ರ ಹಿಂದಿನ ದಿನ ನೋಡಿ ನಮ್ಮ ಕಣ್ಣೆದುರು ನಿಂತಿದ್ದ ಚಿತ್ರದ ಮುಂದೆ ತೀರ ಪೇಲವವಾಗಿತ್ತು. ಅದೇ ಚಿತ್ರವನ್ನೇ ಪತ್ರಿಕೆ ಮುದ್ರಿಸಿದ್ದರೂ ಅದರಲ್ಲಿ ಜೀವವಿರಲಿಲ್ಲ. ಘಟನೆಗಳು ನಡೆಯುವುದನ್ನೇ ನೋಡಿ ಕೇಳುವ ಅವಕಾಶಗಳಿರುವಾಗ, ಅದೇ ಹಳಸಲು ಸುದ್ದಿಗಳನ್ನು ಪತ್ರಿಕೆಗಳಲ್ಲಿ ಯಾಕೆ ಓದಬೇಕು? ಯಾರು ಓದುತ್ತಾರೆ?

ಈ ವಿಷಯಗಳು ಪತ್ರಿಕೋದ್ಯಮಕ್ಕೆ ಸಂಬಂಧಿಸಿದವಾದರೂ ಬರವಣಿಗೆ ಹಾಗೂ ಇತರ ಜನ ಸಂಪರ್ಕ ಮಾಧ್ಯಮಗಳ ನಡುವಣ ಅಂತರವನ್ನು ದೃಢಪಡಿಸುತ್ತವೆ. ಸಾಹಿತ್ಯ ನೇರವಾಗಿ ಜನರನ್ನು ಪುಸ್ತಕಗಳಿಗಿಂತ ಮಿಗಿಲಾಗಿ ಬಾನುಲಿ, ದೂರದರ್ಶನ, ಚಲನಚಿತ್ರಗಳಂಥ ಮಾಧ್ಯಮಗಳ ಮೂಲಕ ಪರಿಣಾಮಕಾರಿಯಾಗಿ ದೊಡ್ಡ ಪ್ರಮಾಣದಲ್ಲಿ ಮುಟ್ಟುತ್ತದೆ. ಒಂದು ಸಿನಿಮಾದ ಮೂಲಕ ಕಾರಂತರ ಒಂದು ಕಾದಂಬರಿ ಜನರನ್ನು ಮುಟ್ಟುವ ಹಾಗೆ ಕಾರಂತರ ಸಮಗ್ರ ಸಾಹಿತ್ಯ ಆ ಪ್ರಮಾಣದಲ್ಲಿ ಜನರನ್ನು ಮುಟ್ಟುವುದಿಲ್ಲ. ಕುವೆಂಪು, ಬೇಂದ್ರೆಯಂಥ ಕವಿಗಳ ರಚನೆಗಳು ಸಿನಿಮಾ ಮೂಲಕ ಜನಪ್ರಿಯವಾದಂತೆ ಅವರ ಪುಸ್ತಕಗಳ ಮೂಲಕ ಆಗಲಿಲ್ಲ. ನಮ್ಮ ದೇಶದಲ್ಲಿ ಈ ಮಾಧ್ಯಮಗಳು ಕೇವಲ ನಗರವಾಸಿಗಳಿಗೆ ಮೀಸಲು ಎನ್ನುವುದು ನಿಜ. ಬಾನುಲಿಯ ವ್ಯಾಪ್ತಿ ಸ್ವಲ್ಪ ಮಿಗಿಲಾಗಿದ್ದರೂ ಸಾಹಿತ್ಯಿಕ ಕಾರ್ಯಕ್ರಮಗಳಿಗೆ ಅಲ್ಲಿ ಆಸ್ಪದ ಅತ್ಯಲ್ಪವಾಗಿರುತ್ತದೆ. ನಮ್ಮ ಸಾಹಿತ್ಯವನ್ನು ಜನರಿಗೆ ಮುಟ್ಟಿಸಬೇಕೆಂಬುದು ನಮ್ಮ ನಿಜವಾದ ಕಳಕಳಿಯಾಗಿದ್ದರೆ, ಜನರನ್ನು ಅಕ್ಷರಸ್ಥರನ್ನಾಗಿಸುವುದರ ಜೊತೆಗೇ, ಅನ್ಯಜನ ಸಂಪರ್ಕ ಮಾಧ್ಯಮಗಳನ್ನು ಜನಸಾಮಾನ್ಯರ

ಬಳಕೆಗೆ ಬರುವಂತೆ ಮಾಡುವುದೂ ಅಗತ್ಯ ಹಾಗೂ ಅನಿವಾರ್ಯ.

ನಮ್ಮ ದೇಶದಲ್ಲಿ ವಿಚಿತ್ರವಾದ ಪರಿಸ್ಥಿತಿ ಇದೆ. ಮಕ್ಕಳ ಶಿಕ್ಷಣಕ್ಕೆ ಗಮನ ಕೊಟ್ಟರೆ ಅನಕ್ಷರಸ್ಥ ವಯಸ್ಕರ ಸಂಖ್ಯೆ ಹಾಗೆಯೇ ಇರುತ್ತದೆ. ವಯಸ್ಕರ ಶಿಕ್ಷಣಕ್ಕೆ ಗಮನಕೊಟ್ಟರೆ ಅನಕ್ಷರಸ್ಥ ಮಕ್ಕಳ ಸಂಖ್ಯೆ ಬೆಳೆಯುತ್ತದೆ. ಈ ಎರಡನ್ನೂ ತೂಗಿಸಿಕೊಂಡು ಹೋಗುವುದರ ಕಡೆ ಗಮನ ಕೊಡಬೇಕಾಗಿದೆ. ಶಾಲೆಗೆ ಹೋಗದೆ ಉಳಿಯುವ ಮಕ್ಕಳ ಸಂಖ್ಯೆಯೇ ಈಗಿರುವಂತೆ ದಿಗಿಲು ಮೂಡಿಸುತ್ತದೆ. ಆದುದರಿಂದ ಜನಸಾಮಾನ್ಯರನ್ನು ವಿದ್ಯಾವಂತರನ್ನಾಗಿಸಲು, ಅನ್ಯಾಯ, ಅಸಮತೆಗಳಿಗೆ ವಿರುದ್ಧವಾಗಿ ಎದ್ದೇಳಲು ಎಚ್ಚರಿಸಲು ಸಾಹಿತ್ಯವನ್ನು ಬಳಸುವುದಕ್ಕೆ ಅನೇಕ ಮಿತಿಗಳಿವೆ. ಅಕ್ಷರಸಾಮ್ರಾಜ್ಯ ಮುಗಿಯುತ್ತ ಬಂದಿದೆ. ಆದ್ದರಿಂದ ಸಾಹಿತ್ಯ ಕಣ್ಣು ಕಿವಿಗಳನ್ನು ಪ್ರಧಾನವಾಗಿ ಅವಲಂಬಿಸಬೇಕಾದ ಅಗತ್ಯ ಬಂದಿದೆ. ಇದಕ್ಕೆ ಜನಸಂಪರ್ಕ ಮಾಧ್ಯಮಗಳನ್ನು ವಿಸ್ತರಿಸುವುದೊಂದೆ ನಮಗುಳಿದಿರುವ ಮಾರ್ಗ. ಈಗ ಇರುವ ಇಂಥ ಮಾಧ್ಯಮಗಳಲ್ಲಿ ಸಾಹಿತ್ಯದ ಬಳಕೆ ಹೆಚ್ಚು ಹೆಚ್ಚು ಆಗುವಂತೆ ನೋಡಿಕೊಳ್ಳಬೇಕಾದದ್ದೂ ನಮ್ಮ ಜವಾಬ್ದಾರಿಯಾಗಿದೆ.

ಜನರನ್ನು ಮುಟ್ಟಬೇಕೆಂದು ಉದ್ದೇಶಿರುವ ನಮ್ಮ ಸಾಹಿತ್ಯದ ಪ್ರಯೋಜನವಾದರೂ ಏನು ಎಂದೂ ಈ ಹೊತ್ತು ನಾವು ಕೇಳಿಕೊಳ್ಳಬೇಕಾಗಿದೆ. ಇದರಲ್ಲಿ ಸಾಹಿತ್ಯ ಸೃಷ್ಟಿಸುವವನ ಹಾಗೂ ಓದುವವನ ಪ್ರಯೋಜನಗಳ ಸ್ವರೂಪವೂ ಸೇರಿಕೊಂಡಿದೆ. ನಮ್ಮ ಕಾವ್ಯಮೀಮಾಂಸೆಯಲ್ಲಿ, ಕಾವ್ಯಪ್ರಯೋಜನಗಳನ್ನು ಪಟ್ಟಿ ಮಾಡುವ ಮಮ್ಮಟನ ಮಾತೊಂದು ತುಂಬ ಪ್ರಸಿದ್ಧವಾಗಿದೆ:

ಕಾವ್ಯಂ ಯಶಸೇಽರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ।
ಸದ್ಯಃಪರನಿರ್ವೃತಯೇ ಕಾಂತಾಸಂಮಿತತಯೋಪದೇಶಯುಜೇ॥

'ಕಾವ್ಯವು ಕೀರ್ತಿಗಾಗಿ, ಧನಾರ್ಜನೆಗಾಗಿ, ವ್ಯವಹಾರ ಜ್ಞಾನಕ್ಕಾಗಿ, ಅಮಂಗಳ ನಿವಾರಣೆಗಾಗಿ, ತತ್ಕಾಲದಲ್ಲೆ ಪರಮಾನಂದ ಹೊಂದುವುದಕ್ಕಾಗಿ, ಕಾಂತೆಯಂತೆ ಉಪದೇಶಿಸುವುದಕ್ಕಾಗಿ'- ಇವು ಕಾವ್ಯದಿಂದ ಪಡೆಯಬಹುದಾದ ಪ್ರಯೋಜನಗಳು ಸಾಹಿತ್ಯದ ಪ್ರಯೋಜನ ಕುರಿತ ನಮ್ಮ ಪ್ರಾಚೀನ ಲಾಕ್ಷಣಿಕರ ದೃಷ್ಟಿ ಈ ಹೇಳಿಕೆಯಲ್ಲಿ ಹರಳುಗಟ್ಟಿದೆ. ಕಾಲದೇಶಗಳ ವ್ಯತ್ಯಾಸವಿಲ್ಲದೆ ಇಲ್ಲಿನ ಹಲವು ಅಂಶಗಳು ಇಂದಿಗೂ ಮೂಲಭೂತವಾಗಿ ಉಳಿದಿವೆ. ಇವನ್ನು ಸಂಪೂರ್ಣವಾಗಿ ಬದಲಾಯಿಸಿ ಹೊಸದು ಮಾಡಿದ ಪ್ರಯತ್ನವನ್ನು ನಾನು ಇದುವರೆಗೂ ಕಂಡಿಲ್ಲ. ಇದರಲ್ಲಿ ಸಾಹಿತ್ಯ ಮಾಧ್ಯಮದ ಎರಡೂ ಕಡೆಯ ದೃಷ್ಟಿಗಳು ಮೇಳವಿಸಿರುವುದೇ ಇದಕ್ಕೆ ಕಾರಣ.

ಪಾಲ್ ರಾಬಿನ್‌ಸನ್ ಎಂಬ ಅಮೆರಿಕೆಯ ಸುಪ್ರಸಿದ್ಧ ಸಮಾಜ ವಿಜ್ಞಾನಿಯೊಬ್ಬ ಇತ್ತೀಚೆಗೆ 'ಬರೆಯುವುದು ಏಕೆ?' ಎಂಬ ಪ್ರಶ್ನೆ ಕೇಳಿಕೊಂಡು, ಉತ್ತರ ಕೊಡುತ್ತ ಮೂರು ಕಾರಣಗಳನ್ನು ಹೇಳುತ್ತಾನೆ.

ಮೊದಲನೆಯದು 'ಹಣ ಮಾಡುವುದಕ್ಕಾಗಿ ಬರೆಯುತ್ತಾರೆ'.

ಆದರೆ ಇದು ಮಿಥ್ಯೆಯೆಂದು ರಾಬಿನ್‌ಸನ್ ಹೇಳುತ್ತಾನೆ. ತನ್ನ ಬರವಣಿಗೆಯಿಂದ ತನಗೆ ಒಂದು ಘಂಟೆಗೆ ಐವತ್ತು ಸೆಂಟುಗಳಷ್ಟು ಸಂಭಾವನೆ ದೊರೆಯುವುದಿಲ್ಲ ಎನ್ನುವ ಅವನು, ವಾಸ್ತವವಾಗಿ ಯಾರಾದರೂ ಹಣಕ್ಕಾಗಿ ಬರೆಯುತ್ತಿದ್ದೇನೆಂದುಕೊಂಡಿದ್ದರೆ ಅವರು ಮೂರ್ಖರೇ ಇರಬೇಕೆಂದು ಅಭಿಪ್ರಾಯ ಪಡುತ್ತಾನೆ. ವೈದ್ಯರು, ದಂತವೈದ್ಯರು, ಲಾಯರು, ಕೊನೆಗೆ ಶಾಲಾ ಅಧ್ಯಾಪಕರು ಲೇಖಕರಿಗಿಂತ ಹೆಚ್ಚುಗಳಿಸುತ್ತಾರಂತೆ. ಇದು ಅಮೆರಿಕದ ಸ್ಥಿತಿ. ಅಲ್ಲಿಯೇ ಹಾಗಿರಬೇಕಾದರೆ ನಮ್ಮ ದೇಶದ ಸ್ಥಿತಿಯನ್ನು ಕೇಳುವುದೇ ಬೇಡ. ಪಠ್ಯಪುಸ್ತಕಗಳ ಲೇಖಕರೂ, ಅಗ್ಗದ ಕಾದಂಬರಿಗಳ ಲೇಖಕರೂ ಸ್ವಲ್ಪಮಟ್ಟಿನ ಸಂಪಾದನೆ ಮಾಡಬಹುದೇನೊ. ಉಳಿದವರಿಗೆ ಆ ಅದೃಷ್ಟವಿಲ್ಲ. ನಮ್ಮಲ್ಲಿ ಲೇಖಕರಿಗೆ ಪ್ರಕಾಶಕರು ದೊರೆಯುವುದೇ ದುರ್ಲಭ, ಅಚ್ಚಾದ ಸಾವಿರ ಪ್ರತಿಗಳನ್ನು ಮಾರಲು ದಶಕಗಳೇ ಬೇಕು. ಲೇಖಕನ ಜೀವಮಾನದಲ್ಲಿಯೇ ಖರ್ಚಾಗದ ಪುಸ್ತಕಗಳೂ ಇರುತ್ತವೆ. ಇವುಗಳಿಂದ ದುಡ್ಡು ಬರುವುದು ಹೇಗೆ?

ಕಾಶ್ಮೀರಿ ಭಾಷೆಯಲ್ಲಿ ವರ್ಷ ವರ್ಷಕ್ಕೂ ಕ್ಷೀಣಗೊಳ್ಳುತ್ತಿರುವ ಪ್ರಕಟಣೆಗಳನ್ನು ಕುರಿತು ಒಬ್ಬ ವಿಮರ್ಶಕ, 'ಕಾಶ್ಮೀರಿಯಲ್ಲಿ ಏಕೆ ಬರೆಯಬೇಕು?' ಎಂದು ಕೇಳುತ್ತಾನೆ. ಓದುವವರೇ ಇಲ್ಲದೆ, ಎಲ್ಲರೂ ಹಿಂದಿಯನ್ನೊ, ಉರ್ದುವನ್ನೊ ಓದತೊಡಗಿದರೆ ಕಾಶ್ಮೀರಿಯಲ್ಲಿ ಬರೆದು ಪ್ರಯೋಜನವಿಲ್ಲ. ಕೆಲವಾದರೂ ಪುಸ್ತಕಗಳು ಯಾಕೆ ಪ್ರಕಟವಾಗುತ್ತಿವೆ ಎಂಬುದಕ್ಕೆ ಆ ವಿಮರ್ಶಕ ಕೊಡುವ ಕಾರಣ ಸ್ವಾರಸ್ಯವಾಗಿದೆ. ಪಠ್ಯ ಪುಸ್ತಕ ಆಗಬಹುದು ಎಂಬ ಆಸೆಯಿಂದ ಮತ್ತು ಕಾಶ್ಮೀರಿ ಬರವಣಿಗೆಗೇ ಮೀಸಲಾಗಿರುವ ಯಾವುದಾದರೂ ಬಹುಮಾನ ಬಂದೀತೆಂಬ ನಿರೀಕ್ಷೆಯಿಂದ ಬರೆಯುತ್ತಾರಂತೆ. ಬಹುಶಃ ನಮ್ಮಲ್ಲಿ ಹಣದ ಮಿತಿ ಇಷ್ಟೇ ಇರಬೇಕು. ಕೇವಲ ಸರ್ಕಾರಿ ಜಾಹಿರಾತುಗಳಿಗಾಗಿರುವ ಪತ್ರಿಕೆಗಳಂತೆ, ಪುಸ್ತಕ ಭಂಡಾರಗಳಿಗಾಗಿ, ಸರ್ಕಾರಿ ಯೋಜನೆಗಳಿಗಾಗಿ ಸಿದ್ಧವಾಗುವ ಪುಸ್ತಕಗಳನ್ನು ಬಿಟ್ಟರೆ ಮಿಕ್ಕ ಪುಸ್ತಕಗಳು ಹಣತರುತ್ತವೆ ಎನ್ನುವುದು ಸುಳ್ಳು.

ರಾಬಿನ್‌ಸನ್ನನ ಎರಡನೆಯ ಕಾರಣ- 'ಕೀರ್ತಿಗಾಗಿ ಬರೆಯುತ್ತಾರೆ'

ಈ ಕೀರ್ತಿ ನಮ್ಮ ಸಾಹಿತ್ಯ ಎಷ್ಟು ಜನ ಓದುಗರನ್ನು ತಲಪುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ. ಬಹುಮಾನ, ಪ್ರಶಸ್ತಿಗಳನ್ನು, ಲೇಖಕನ ಸ್ಥಾನಮಾನಗಳನ್ನೂ ಈ ಕೀರ್ತಿ ಆಧರಿಸಿರುತ್ತದೆ. ಒಟ್ಟಿನಲ್ಲಿ ಇದೊಂದು ಭ್ರಮೆ ಎಂದೇ ಹೇಳಬೇಕು. ಸಾಹಿತ್ಯರಚನೆಯಿಂದ ಕೀರ್ತಿಗಳಿಸುವವರ ಸಂಖ್ಯೆ ಎಲ್ಲ ಭಾಷೆಗಳಲ್ಲೂ ಕಡಮೆ. ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟಿಸುವ ರೇಡಿಯೊದಲ್ಲಿ ಪ್ರಸಾರಗೊಳ್ಳುವ, ದೂರದರ್ಶನದಲ್ಲಿ ಕಾಣಿಸಿಕೊಳ್ಳುವ, ಚಲನಚಿತ್ರಕ್ಕೆ ಬರೆಯುವ ರಾಜಕೀಯದಲ್ಲಿ ಪಾಲುಗೊಳ್ಳುವ ಲೇಖಕ, ಸುಮ್ಮನೆ ಬರೆಯುವ ಲೇಖಕನಿಗಿಂತ ಯಾವಾಗಲೂ ಪ್ರಸಿದ್ಧಿಯ

ಮುಂಚೂಣಿಯಲ್ಲಿರುತ್ತಾನೆ. ಕೀರ್ತಿಯಲ್ಲಿ ಪ್ರಸಿದ್ಧಿಯಲ್ಲಿ ಎರಡು ಬಗೆ: ಒಂದು, ಕೇವಲ ಸದ್ಯದ್ದು. ಇನ್ನೊಂದು, ಕಾಲಾತೀತವಾದದ್ದು. ತಮ್ಮ ಕಾಲದಲ್ಲಿ ಕೀರ್ತಿಯನ್ನು ಪಡೆಯದವರು ಮತ್ತೆಂದೊ ಕೀರ್ತಿಯ ಮರುಹುಟ್ಟನ್ನು ಪಡೆದಿರುವುದೂ ಉಂಟು.

ರಾಬಿನ್‌ಸನ್ನನ ಮೂರನೆಯ ಮಾತು ಮಹತ್ವದ್ದು. ಅವನ ಪ್ರಕಾರ- 'ಲೇಖಕ ಸತ್ಯವನ್ನು ಹೇಳುವುದಕ್ಕಾಗಿ ಬರೆಯುತ್ತಾನೆ'

ಬರವಣಿಗೆಯ ಈ ಆಶಯ ತುಂಬ ಮುಖ್ಯವಾದದ್ದು. ಏಕೆಂದರೆ ಇದರಲ್ಲಿ ಯಾವ ಲೌಕಿಕ ಆಸಕ್ತಿಯೂ ಇಲ್ಲ. ಮೊದಲ ಎರಡು ಕಾರಣಗಳ ಜಿಡ್ಡು ಇದರಲ್ಲಿಲ್ಲ. ಆದರೆ ಇಪ್ಪತ್ತನೆಯ ಶತಮಾನದಲ್ಲಿ ಈ ಕಾರಣಕ್ಕೆ ದುರಸ್ತು ಮಾಡಲಾಗದಷ್ಟು ನಷ್ಟವಾಗಿದೆ ಎನ್ನುವುದು ರಾಬಿನ್‌ಸನ್ನನ ಹೇಳಿಕೆ. ಸತ್ಯ ಯಾವುದು ಎನ್ನುವುದೇ ಬಗೆಹರಿಸಲಾಗದ ಸಮಸ್ಯೆ. ಪ್ರತಿಯೊಬ್ಬ ಲೇಖಕನಿಗೂ ಅವನವನದೇ ಆದ ಸತ್ಯ ಉಂಟು; ಪ್ರತಿಯೊಂದು ಸಾಹಿತ್ಯ ಪಂಥಕ್ಕೂ ಅದರದರದೇ ಆದ ಸತ್ಯ ಉಂಟು. ಒಬ್ಬರ ಪಾಲಿನ ಸತ್ಯ ಇನ್ನೊಬ್ಬರಿಗೆ ಸುಳ್ಳೇ ಆಗಿರಬಹುದು. ಸತ್ಯದರ್ಶನ ನಿರ್ಲಕ್ಷಿಸುವಂಥ ಅಂಶವೇನೂ ಅಲ್ಲ. ಆದರೆ ಅದರ ಸ್ವರೂಪ ಮಾತ್ರ ಸುಲಭವಾಗಿ ಗೋಚರಕ್ಕೆ ಬರುವಂಥದಲ್ಲ.

ಇಂದು ನಾವು ಬಹುಜನರ ಸುಖ ಹಾಗೂ ಬಹುಜನರ ಹಿತ ಇವುಗಳ ಕಾರಣಗಳನ್ನು ಸತ್ಯದ ಆಧಾರವಾಗಿಟ್ಟುಕೊಳ್ಳಬೇಕಾಗಿದೆ. ಆ ದೃಷ್ಟಿಯಿಂದ ನಿರ್ಮಾಣಗೊಳ್ಳುವ ಸಾಹಿತ್ಯ ಮಾತ್ರ ಇಂದು ಸಾಮಾಜಿಕ ಹೊಣೆಯನ್ನು ನಿರ್ವಹಿಸಬಲ್ಲುದಾಗಿದೆ. ಸಾಹಿತ್ಯದ ಪ್ರಯೋಜನಗಳನ್ನು ಹೇಳುವ ಯಾರೇ ಆದರೂ ಈ ಮುಖವನ್ನು ತ್ಯಾಜ್ಯ ಎನ್ನುವಂತಿಲ್ಲ. 'ಅಮಂಗಳ ನಿವಾರಣೆಗಾಗಿ' ಎಂಬ ಮಮ್ಮಟನ ಮಾತಿನ ಅರ್ಥವಾದರೂ ಇದೇ . ಜಾತೀಯತೆ, ಶೋಷಣೆ, ಬಡತನ, ಮೌಢ್ಯ, ಅಸಮಾನತೆ ಮೊದಲಾದುವೆಲ್ಲ ಅಮಂಗಳಗಳಲ್ಲವೆ? ಸಾಹಿತ್ಯ ಈ ಅಮಂಗಳಗಳನ್ನು ನಿವಾರಿಸಬೇಕೆಂಬುದರಲ್ಲಿ ತಪ್ಪೇನಿದೆ?

ಸಾಹಿತ್ಯ ಈ ವ್ಯಾಪ್ತಿಯನ್ನು ಪಡೆದಿರುವುದರಿಂದಲೆ ನಾನು ಈ ಮೊದಲೆ ಹೇಳಿದಂತೆ ಇದನ್ನು ಬಹುಜನರ ಕಿವಿಗೆ ಕಣ್ಣಿಗೆ ಹಾಗೂ ಆ ಮೂಲಕ ಅವರ ಬುದ್ಧಿಗೆ ಹೃದಯಕ್ಕೆ ತಲಪಿಸುವ ಜವಾಬ್ದಾರಿ ಎಂದಿಗಿಂತಲೂ ಮಹತ್ತರದ್ದಾಗುತ್ತದೆ. ಈ ಜವಾಬ್ದಾರಿಯಿಂದ ನಾವು ವಂಚಿತರಾದರೆ ಸಾಹಿತ್ಯದ ಉದ್ದೇಶವೇ ವಿಫಲಗೊಂಡಂತಾಗುತ್ತದೆ. ಇಂದಿನ ಸಂದರ್ಭದಲ್ಲಿ ಯಾವ ಲೇಖಕರಾದರೂ ಸಾಹಿತ್ಯ ಸೃಷ್ಟಿಯಷ್ಟೇ ನನ್ನ ಕೆಲಸ ಎಂದು ಸುಮ್ಮನೆ ಕೂರುವಂತಿಲ್ಲ. ತಮ್ಮ ಸಭಿಕರನ್ನೊ ಶ್ರಾವಕರನ್ನೊ ವಾಚಕರನ್ನೊ ಮುಟ್ಟುವುದೂ ಅವರ ಕರ್ತವ್ಯದ ಒಂದು ಭಾಗವೇ ಆಗುತ್ತದೆ. ಭಾರತದಂಥ ದೇಶದಲ್ಲಿ ಇದು ತುಂಬ ಅಗತ್ಯವಾದ ಆದರೆ ಅಷ್ಟೇ ಕಷ್ಟ ಸಾಧ್ಯವಾದ ಕೆಲಸ.

ಅಭಿವಂದನಾ

ಸಾಹಿತ್ಯದಿಂದ ನಾವು ಆಗಬೇಕೆಂದು ಅಪೇಕ್ಷಿಸುವುದೆಲ್ಲ ಅದು ಓದುಗರನ್ನು ಮುಟ್ಟುವುದನ್ನೇ ಅವಲಂಬಿಸಿರುತ್ತದೆ. ಸೃಷ್ಟಿ ಪ್ರಕ್ರಿಯೆಯಷ್ಟರಿಂದಲೇ ಸಾಹಿತ್ಯದ ಉದ್ದೇಶ ಸಫಲಗೊಳ್ಳುವುದಿಲ್ಲ. ಸಾಹಿತ್ಯದಂತ ಗೋಪುರದಲ್ಲಿ ಉಳಿಯಬಾರದೆಂದು ನಮ್ಮಲ್ಲಿ ಒಂದು ಸವಕಲು ಮಾತು. ಸಾಹಿತ್ಯ ಈಗ ರೇಡಿಯೊ, ದೂರದರ್ಶನ ಗೋಪುರಗಳನ್ನು ಏರಬೇಕಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಇದು ಆಗಲೇ ಪ್ರಾರಂಭವಾಗಿದೆ. ನಮ್ಮ ದೇಶದಲ್ಲಿ ಮಾತ್ರ ಸಾಹಿತ್ಯ ನೇರವಾಗಿ ಓದುಗನನ್ನು ತಲುಪುವ ಮಾರ್ಗವಲ್ಲದೆ ಬೇರೆ ಸಾಧ್ಯತೆಗಳನ್ನು ಕಂಡುಕೊಂಡಿಲ್ಲ. ಕಂಡುಕೊಳ್ಳಲು ಪ್ರಯತ್ನಿಸಿಲ್ಲ. ಸಾಹಿತ್ಯ ಸಂವಹನದ ಪರೋಕ್ಷ ಮಾರ್ಗಗಳನ್ನು ಇಂದು ನಾವು ಶೋಧಿಸಬೇಕಾಗಿದೆ. ಪ್ರತ್ಯಕ್ಷ ಮಾರ್ಗವೊಂದರಿಂದಲೇ ಸಾಹಿತ್ಯಸಿದ್ಧಿ ಲಭಿಸುವುದಿಲ್ಲ. ಸಾಹಿತ್ಯವೂ ಒಂದು ಮಾಧ್ಯಮವಾಗಿರುವುದರಿಂದ ಸಂವಹನವೊಂದೇ ಅದರ ಸಾರ್ಥಕತೆಯನ್ನು ಸ್ಥಾಪಿಸಬಲ್ಲುದು. ಅಕ್ಷರವನ್ನು ಅವಲಂಬಿಸಿದ ಸಾಹಿತ್ಯ ಅನಕ್ಷರಸ್ಥ ದೇಶದಲ್ಲಿ ತನ್ನ ಉದ್ದೇಶದಿಂದ ವಂಚಿತವಾಗುವುದೇ ಜಾಸ್ತಿ. ಕಣ್ಣುಮುಚ್ಚಿಕೊಂಡೂ ಸಾಹಿತ್ಯವನ್ನು ಸವಿಯಬಹುದಾದರೆ, ಕಣ್ಣುಬಿಟ್ಟುಕೊಂಡೇ ಇರುವ ಶ್ರಮಕ್ಕೆ ಬಹುಜನರು ಸಿದ್ಧಗೊಳ್ಳಲಾರರು. ಜನಸಂಪರ್ಕದ, ಸಂವಹನ ಕ್ರಮದ ನಾನಾ ರೂಪ ವಿನ್ಯಾಸಗಳನ್ನು ಎಷ್ಟು ಎಷ್ಟು ಹೆಚ್ಚು ಬಳಸಿಕೊಳ್ಳಬಹುದೆಂಬುದರ ಮೇಲೆ ನಮ್ಮ ಸಾಹಿತ್ಯದ ಜನಪ್ರಿಯತೆಯೂ, ಸಾರ್ಥಕತೆಯೂ ಹೆಚ್ಚುತ್ತವೆಂಬುದನ್ನು ನಮ್ಮ ಲೇಖಕರು, ಪ್ರಕಾಶಕರು, ಸಾಹಿತ್ಯಿಕ ಸಂಘಸಂಸ್ಥೆಗಳು ಲಕ್ಷಿಸಬೇಕು. ಕವಿತೆಗಳ ಸಂಗ್ರಹವನ್ನು ಪ್ರಕಟಿಸುವ ಪ್ರಕಾಶಕರು ಆ ಕವಿತೆಗಳ ಟೇಪುಗಳನ್ನು ಸಿದ್ಧಪಡಿಸಲು ಮುಂದಾಗಬೇಕು. ನಾಟಕಗಳನ್ನು ಪ್ರಕಟಿಸುವ ಪ್ರಕಾಶಕರು ಅವುಗಳ ತಟ್ಟೆಗಳನ್ನೂ ಸಿದ್ಧಪಡಿಸಬೇಕು. ಕಥೆ, ಕಾದಂಬರಿಗಳು ಇತರ ಪ್ರಕಾರಗಳಾಗಿ ರೂಪಾಂತರಗೊಳ್ಳಬೇಕು. ಇದು ಕಾಲದ ಆವಶ್ಯಕತೆ, ಇದನ್ನು ನಾವು ಮರೆಯಬಾರದು ಇದು ಸಂವಹನ ಯುಗ, ಸಾಹಿತ್ಯ ಇದರಲ್ಲಿ ಹಿಂದೆ ಬೀಳಬಾರದು.

***

ಅಭಿವಂದನಾ

ಸಾಹಿತ್ಯ ಮತ್ತು ಸಾಮಾಜಿಕ ಹೊಣೆಗಾರಿಕೆ

ಡಾ||ಸಾ.ಶಿ. ಮರುಳಯ್ಯ

ಕಾವ್ಯಂ ಯಶಸೇsರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ।
ಸದ್ಯಃ ಪರನಿರ್ವೃತಯೇ ಕಾಂತಾಸಮ್ಮಿತತಯೋಪದೇಶಯುಜೇ॥

ಮಮ್ಮಟ, ಕಾವ್ಯಪ್ರಕಾಶ, ೧-೨

"This experience is an end in itself... its poetic value is this intrinsic worth alone... poetry may have also an ulterior value as a means to culture or religion; because it conveys instruction or softens the passions or furthers a good cause, because it brings the poet fame or money or quiet conscience... The consideration of ulterior ends whether by the poet in the act of composing or by the reader in the act of expressing, tends to lower poetic value".

A.C. Bradley, Oxford Lectures on Poetry, p.p. 4,5 & 11.

ಸಾಹಿತ್ಯ ಮನುಕುಲದ ಸಮಷ್ಟಿಚಿತ್ತಿನ ಶ್ರೀಮಂತ ಅನುಭವಗಳ ಜೀವಂತ ದಾಖಲೆ. ಅದು ಬೇಜವಾಬ್ದಾರಿ ರಚನೆ ಅಲ್ಲ. ಅದಕ್ಕೆ ಅದರದೆ ಆದ ಸಾಂಸ್ಕೃತಿಕ ಹೊಣೆಗಾರಿಕೆ ಇದೆ. ಅದು ಸಾಮಾಜಿಕ ಆಲೋಚನಾ ವಿಧಾನದ ಮೇಲೆ ನೇರವಾದ ಪ್ರಭಾವ ಬೀರುವುದರಿಂದ ನೈತಿಕ ಮೌಲ್ಯಗಳ ನಿರೂಪಣೆ ಹಾಗೂ ಸಂರಕ್ಷಣೆಯ ಜವಾಬ್ದಾರಿ ಹೊತ್ತಿದೆ. ಅಂತಹ ಜೀವನದ ಮೌಲ್ಯಗಳ ಪ್ರಕಾಶನಕ್ಕೆ ಬೆಲೆಗಳನ್ನು ಹೆಚ್ಚಿಸುವುದಕ್ಕೆ ಸಾಹಿತ್ಯ ನೆರವಾಗುತ್ತದೆ. ಇದು ಒಂದುವಾದ. ಕಾವ್ಯ ಅಥವಾ ಕಲೆ ತನಗೆ ತಾನೇ ಪರಿಶುದ್ಧವಾದುದು. ಅದಕ್ಕೆ ನೀತಿ ಬೋಧೆ, ಮತ ತತ್ತ್ವ ಮೊದಲಾದ ಮೈಲಿಗೆಯನ್ನು ಮುಟ್ಟಿಸಬೇಡಿ; ಕಾವ್ಯ ಕಾವ್ಯವಾಗಿಯೇ ಇರಲಿ ಬಿಡಿ. ಅದು ಬದುಕಿನಿಂದ ಏನನ್ನೂ ಕೊಳ್ಳುವುದಿಲ್ಲ, ಆತ್ಮ ತೃಪ್ತಿ ಅಥವಾ ಆನಂದ. ಇದು ಹೊರತು ಅದು ಬೇರೆ ಏನನ್ನೂ ಕೊಡುವುದಿಲ್ಲ- ಎಂಬುದು ಮತ್ತೊಂದು ವಾದ. ಅದು ಕಾವ್ಯಕ್ಕಾಗಿ ಕಾವ್ಯ ಎಂಬ ರಸವಾದ, ಇದು ಕಾವ್ಯ ಜೀವನಕ್ಕಾಗಿ ಎಂಬ ಶಿವವಾದ.

ಮಾಘವನ್ನೋದಿ ಮಗ ಕೆಟ್ಟ, ಶಾಸ್ತ್ರ ಓದಿ ಸೊಸೆ ಕೆಟ್ಟಳು. ಆದ್ದರಿಂದ ಕಾವ್ಯ ಓದುವುದನ್ನೇ ಕೈ ಬಿಡಬೇಕು ಎಂಬ ಸೂತ್ರ ಒಂದು ಕಡೆ, ನೀನು ಕಾವ್ಯವನ್ನು ಬರೆಯಲೂ ಬೇಡ, ಒರೆಯಲೂ ಬೇಡ (ಓದಲೂ ಬೇಡ), ನಾನು ಬರೆದ ಕಾವ್ಯದ ಒಂದಕ್ಷರವನ್ನು ಕೇಳು ಸಾಕು ನಿನಗೆ ಮೋಕ್ಷ ಪ್ರಾಪ್ತವಾಗುತ್ತದೆ ಎಂಬ ಹೇಳಿಕೆ

ಇನ್ನೊಂದು ಕಡೆ. ಇವೆರಡೂ ಎರಡು ಧ್ರುವಗಳು. ಕಾವ್ಯ ಎನ್ನುವುದು ಇವುಗಳಿಗಾಗಿ ಇದೆಯೇ? ಅಂದರೆ ಸ್ವರ್ಗ ನರಕಗಳಿಗೆ ಓದುಗ ಅಥವಾ ಕೇಳುಗನನ್ನು ಮುಟ್ಟಿಸುವುದಕ್ಕಾಗಲಿ. ಅಥವಾ ಓದಿದವರೆಲ್ಲಾ ಹಾಳಾಗುತ್ತಾರೆ. ಅವರ ನೈತಿಕ ಮೌಲ್ಯ ಕುಸಿಯುತ್ತ, ಅವರಲ್ಲಿ ನಾಸ್ತಿಕತೆ ನೆಲೆಯೂರಿ. ಅವರು ತಮ್ಮ ತಮ್ಮ ದೋಷಗಳನ್ನೇ ಸಮರ್ಥಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ ಎಂಬ ಆಪಾದನೆಗಾಗಲಿ ಕಾವ್ಯ ಬದ್ಧವೆ?

ಸರಸ್ವತೀ ತತ್ತ್ವ (ಕಾವ್ಯ ತತ್ತ್ವ) ವನ್ನು ಕುರಿತ ಈ ಚಿಂತನೆ ಬಹಳ ದಿನಗಳಿಂದಲೂ - ಹೇಳಬೇಕೆಂದರೆ ಅದು ಹುಟ್ಟಿದಂದಿನಿಂದಲೂ - ಸಮಾನಾಂತರ ಸರಳ ರೇಖೆಯಂತೆ ನಡೆದು. ಕಾಡಿದೆ ಪೂರ್ವ ಪಶ್ಚಿಮಗಳೆರಡನ್ನೂ. ಎರಡೂ ವಲಯಗಳ ಚಿಂತಕರು ಬಹುವಾಗಿ ಚರ್ಚಿಸಿದ್ದಾರೆ.

ಕಾವ್ಯ ಜನಜೀವನದ ಜಾಹೀರಾತಲ್ಲ. ಅದು ಬದುಕಿನ ಪರವಾಗಿ ಅಥವಾ ವಿರುದ್ಧವಾಗಿ ಯಾವುದೇ ಲಾಭ ನಷ್ಟದ ಗುತ್ತಿಗೆ ಹಿಡಿದಿಲ್ಲ. ಆದರೆ ಬದುಕಿನಿಂದಲೇ ಹುಟ್ಟಿ ಬದುಕನ್ನು ಬೆಳಗಿಸುವ ಕಾವ್ಯಕ್ಕೆ ಜೀವನದ ಜವಾಬ್ದಾರಿಗಳಿವೆ. ಅದು ಉಲ್ಲಾಸದ ಜೊತೆಯಲ್ಲಿ ವಿಕಾಸವನ್ನೂ ಉಂಟುಮಾಡುತ್ತದೆ. ಆತ್ಮಾನಂದದ ಮೂಲಕ ಆತ್ಮ ಸಾಕ್ಷಾತ್ಕಾರವಾಗುವಂತೆ ಮಾಡುವ ಗುರುತರ ಹೊಣೆಗಾರಿಕೆ ಹೊತ್ತಿದೆ. ಜೀವನಾನುಭವವೇ ಕಾವ್ಯದ ಮೂಲ ದ್ರವ್ಯವಾದ್ದರಿಂದ ಅದು ಒದಗಿಸುವುದು ಅನುಭವವನ್ನು ಮಾತ್ರ. ಆ ಅನುಭವದಿಂದ ನಮಗೆ ತಿಳಿವಳಿಕೆ ಸಿದ್ಧಿಸುತ್ತದೆ ಕಾವ್ಯ ಪ್ರಯೋಜನಗಳಿಂದ ಆನಂದ ವ್ಯುತ್ಪತ್ತಿಗಳನ್ನು ಬೇರೆ ಬೇರೆ ಎಣಿಸುವುದೇ ತಪ್ಪು. ಎರಡರ ವಿಷಯವೂ ಒಂದೇ ಎಂಬ ಸುವರ್ಣ ಮಾಧ್ಯಮವನ್ನು ಹುಡುಕಿದ್ದಾರೆ. ಈ ಸಮನ್ವಯ ದೃಷ್ಟಿ ಭಾರತೀಯರಲ್ಲಿದ್ದಂತೆ ಪಾಶ್ಚಾತ್ಯರಲ್ಲೂ ಇದೆ. ಗ್ರೀಸಿನ ವಿನೋದ ನಾಟಕಕಾರ ಅರಿಸ್ಟೋಫೇನಸ್ ತನ್ನ ಕಪ್ಪೆಗಳು (ದ ಫ್ರಾಗ್ಸ್) ನಾಟಕದಲ್ಲಿ. ' School boys have a master to teach them; grown ups have the poets. We have a duty to see that what we teach them is right and proper........ ಎಂದು ಈಸ್ಕಲಸ್‌ನ ಬಾಯಲ್ಲಿ ಹೇಳಿಸುತ್ತಾನೆ. ಸಮಾಜ ಸುಧಾರಣೆ ಕವಿಗಳ ಕರ್ತವ್ಯ ಎಂಬ ಎಚ್ಚರಿಕೆ ನೀಡಿದ್ದಾನೆ. ರೋಮಿನ ಖ್ಯಾತ ಕವಿ-ವಿಮರ್ಶಕ ಹೊರೇಸ್ ಕೂಡ ತನ್ನ ಕಾವ್ಯಕಲೆ (Ars Poetica) ಯಲ್ಲಿ ಕಾವ್ಯದ ಗುರಿ ಹರ್ಷವನ್ನೀಯಬೇಕು. ಜನಮನವನ್ನೂ ತಿದ್ದಬೇಕು ಎಂದು ಅಭಿಪ್ರಾಯಪಡುತ್ತಾನೆ. ಇಂಗ್ಲೇಂಡಿನ ಸಿಡ್ನಿ poetry ... to speak metaphorically a speaking picture with this end, to teach and delight' -ಎಂದು ತನ್ನ ಕಾವ್ಯ ಸಮರ್ಥನೆ A Defence of Poetry ಕೃತಿಯಲ್ಲಿ ಸಾರಿದ್ದಾನೆ. ಇವೆಲ್ಲವನ್ನೂ ಕುರಿತ ವಿವೇಚನೆ ನಮಗಿಲ್ಲಿ ಪ್ರಸ್ತುತ.

ಪಾಶ್ಚಾತ್ಯರಲ್ಲಿ ಪ್ಲೇಟೊ ಜೀವನವಾದಿಯಾದರೆ, ಆರಿಸ್ಟಾಟಲ್ ಸೌಂದರ್ಯವಾದಿ. ಅದೇ ರೀತಿ ಆಧುನಿಕ ಇಂಗ್ಲೀಷ್ ಸಾಹಿತ್ಯದ ದಿಗ್ಗಜಗಳೆನಿಸಿದ ಮಾಥ್ಯು ಆರ್ನಾಲ್ಡ್ ಐ.ಎ.ರಿಚರ್ಡ್ಸ್, ಎಲ್. ಅಬರ್‌ಕ್ರಾಂಬ ಮೊದಲಾದವರು ಪ್ಲೇಟೋ ಪಂಥದವರಾದರೆ, ಎ.ಸಿ.ಬ್ರಾಡ್ಲೆ, ಆಸ್ಕರ್ ವೈಲ್ಡ್ ಮತ್ತು ಕಲಾವಿಮರ್ಶಕ ಕ್ಲೈವ್‌ಜಿಲ್ ಮೊದಲಾದವರು ಅರಿಸ್ಟಾಟಲ್ ಪಂಥದವರು. ನೀತಿ ಸಿದ್ಧಾಂತ ಅಥವಾ ಜೀವನಸಿದ್ಧಾಂತದ ವಿರುದ್ಧ ತನ್ನ ಪ್ರತಿಭಟನೆಯನ್ನು ಬ್ರಾಡ್ಲೆ ವ್ಯಕ್ತಪಡಿಸಿದ್ದರೆ, ಅದನ್ನು ಸಮರ್ಥ ರೀತಿಯಲ್ಲಿ ಖಂಡಿಸಿ, ತನ್ನ ಸಮರ್ಪಕ ಮಂಡನೆ ನೀಡಿದ್ದಾನೆ ರಿಚರ್ಡ್ಸ್. ಇಂತಹ ಎರಡು ಪಂಥಗಳು ಭಾರತೀಯರಲ್ಲೂ ಇವೆ. ಧನಂಜಯ, ಭಟ್ಟನಾಯಕ ಮೊದಲಾದವರು ಎಡ ಪಂಥೀಯ ರಸವಾದಿಗಳು, ಆನಂದವರ್ಧನ, ಮಮ್ಮಟ ಮೊದಲಾದವರು ಬಲಪಂಥೀಯ ಶಿವವಾದಿಗಳು.

ಬ್ರಾಡ್ಲೆಯ ಪ್ರಕಾರ ಕಾವ್ಯ ಬದುಕಿನಿಂದ ಭಿನ್ನವಾದದ್ದು. ಕಲಾಲೋಕವೇ ಬೇರೆ, ವಾಸ್ತವಿಕ ಜಗತ್ತೇ ಬೇರೆ, ಕಲಾಲೋಕ ನಾವು ತಿಳಿದಿರುವಂಥಾ ವಾಸ್ತವಿಕ ಜಗತ್ತಿನ ತುಣುಕೂ ಅಲ್ಲ. ನಕಲೂ ಅಲ್ಲ. ಅದು ತನಗೆ ತಾನೆ ಆದ ಸರ್ವತಂತ್ರ ಸ್ವತಂತ್ರವೂ, ಪರಿಪೂರ್ಣವೂ, ಸ್ವಯಂ ಪ್ರಭುತ್ವವುಳ್ಳದ್ದೂ ಆದ ಅನ್ಯಾಶ್ರಯ ನಿರಪೇಕ್ಷಿ. ಆದರೆ ಈ ಹೇಳಿಕೆ ಅರ್ಧಸತ್ಯ ಮಾತ್ರ. ಕಲಾಲೋಕ ವಾಸ್ತವ ಜಗತ್ತಿನ ತುಣುಕಲ್ಲ, ನಕಲಲ್ಲ ಎಂಬ ಮಾತು ಸತ್ಯ. ಆದರೆ ಅದು ಲೋಕವೇ ಅಲ್ಲ ಎಂಬುದು ಅಸಂಬದ್ಧ ಈ ಜಗತ್ತು ಲೋಕವಾದರೆ, ಕಲೆ ಅದರ ಮೇಲೆ ನಿಂತ ಅಥವಾ ನಿರ್ಮಿತವಾದ ಲೋಕೋತ್ತರ, ಅಷ್ಟೆ. ಅದು ತನಗೆ ತಾನೇ ಆದದ್ದಂತೂ ಅಲ್ಲ. ಇಹವಿಲ್ಲದೆ ಪರ ಇಲ್ಲ ಅಂದಂತೆ. ನೆಲ ಇಲ್ಲದೆ ಕಲೆ ಇಲ್ಲ. ಬದುಕೇ ಅದರ ಬುನಾದಿ. ಬದುಕು ಮಾಡುವ ಕವಿಯೇ ಅದರ ಸೃಷ್ಟಿಕರ್ತ. ಅವನು ತನಗೆ ಜನ್ಮಕೊಟ್ಟ, ತಂದೆ ತಾಯಿಗಳಿಗೆ, ಬೆಳೆಸಿದ ಪರಿಸರಕ್ಕೆ, ಶಿಕ್ಷಣವಿತ್ತ ಗುರುಗಳಿಗೆ, ಪೋಷಿಸಿದ ಧರ್ಮಕ್ಕೆ, ರಾಷ್ಟ್ರಕ್ಕೆ ಇಂಥೆಂತೆನಿತೋ ಶಕ್ತಿಗಳಿಗೆ ಋಣಿ. ಅವನೇ ಸ್ವತಂತ್ರನಲ್ಲ; ಅಂದಮೇಲೆ ಅವನು ಸೃಷ್ಟಿಸಿದ ಕಾವ್ಯ ಹೇಗೆ ಸರ್ವತಂತ್ರ ಸ್ವತಂತ್ರ. ಅದು ಅನೇಕ ವ್ಯಕ್ತಿ-ಶಕ್ತಿಗು ಉಪಕೃತಿಗೂ ಬದ್ಧ ಅದರ ಪ್ರಭುತ್ವದ ಪೀಠ ಇರುವುದು ನೆಲದ ಮೇಲೆ. ಕಲಾಲೋಕ ಕಾನೂನು ಸಂಹಿತೆಗಳ ಬೇರಿರುವುದು ಬದುಕಿನಲ್ಲಿ. ಆದ್ದರಿಂದ ಕಾವ್ಯಕ್ಕಾಗಿಯೇ ಕಾವ್ಯ ಎಂಬ ಸ್ವೈರ ಮಂತ್ರ ರಿಚರ್ಡ್‌ನಿಗೆ ಒಪ್ಪಿತ ಅಲ್ಲ.

ಬದುಕನ್ನು ಬಿಟ್ಟು ಯಾವ ಕಲೆಯೂ ಹುಟ್ಟುವುದಿಲ್ಲ. ಬೆಳೆಯುವುದೂ ಇಲ್ಲ. ಬದುಕೇ ಅದರ ಬುನಾದಿ. ಬದುಕನ್ನು ಬಿಟ್ಟ ಕಲೆಯನ್ನು ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ. ಒಂದು ಸರಳ ಉದಾಹರಣೆ : ಆನೆಯನ್ನೂ ಮನಷ್ಯನನ್ನೂ ನೋಡದವನು ಗಣೇಶನನ್ನು ಮಾಡಲಾರ. ಒಂದು ಸಣ್ಣ ಕೈತೋಟದ ನೋಡದವನು ಸ್ವರ್ಗದ ನಂದನವನವನ್ನು ಸೃಷ್ಟಿಸಲಾರ. ಇಲ್ಲಿನ ಒಬ್ಬ ರಾಜ ಮತ್ತು ಅವನ ಆಸ್ಥಾನ ವೈಭವಗಳೇ ದೇವೇಂದ್ರ ಮತ್ತು ಒಡ್ಡೋಲಗಗಳಾಗಿ ರೂಪಿತವಾಗುತ್ತವೆ. ಇಲ್ಲಿನ ಚೆಲುವೆ ಅಲ್ಲಿನ ರಂಭೆ,

ಊರ್ವಶಿ, ಮೇನಕೆ, ತಿಲೋತ್ತಮೆಯರು. ಇಲ್ಲಿನ ಹಸು ಅಲ್ಲಿನ ಕಾಮಧೇನು. ಇಲ್ಲಿನ ಮರ ಅಲ್ಲಿನ ಕಲ್ಪವೃಕ್ಷ. ಮಣ್ಣು ಬಿಟ್ಟು ಮಡಕೆ ಇಲ್ಲ. ನನ್ನ ಬಿಟ್ಟು ದೇವರಿಲ್ಲ. ಅಂದ ಹಾಗೆ ಜೀವನ ಬಿಟ್ಟು ಸಾಹಿತ್ಯ ಇಲ್ಲ. ಜೀವನವೇ ಅದರ ಮೂಲ ಧಾತು. ದ್ರವ್ಯ. ಕಲೆ ನಿಂತಿರುವುದೇ ಜೀವನ ಎಂಬ ಅಡಿಪಾಯದ ಮೇಲೆ. ಅದನ್ನುಳಿದ ಕಲೆ ಕೇವಲ ಗಾಳಿಗೋಪುರ. ಅನುಭವ ದಟ್ಟವಾದಷ್ಟೂ ಕಾವ್ಯ ಗಟ್ಟಿಗೊಳ್ಳುತ್ತದೆ. ಇಲ್ಲವಾದರೆ ಬೂರುಗದ ಹತ್ತಿಯಂತೆ ಚಣಕಾಲ ವಿಸ್ಮಯ ತಂದರೂ ಶಾಶ್ವತತೆಯನ್ನು ಪಡೆಯಲಾರದೆ ಬಹು ಬೇಗ ಕಣ್ಮರೆಯಾಗುತ್ತದೆ. ಅಂತೆಯೇ ಕಲಾನುಭವ ಜೀವನಾನುಭವಗಳೆರಡೂ ನೀರು-ಅಲೆ, ಕಿರಣ-ಕಾಂತಿ, ಹೂವು-ಪರಿಮಳ ಇದ್ದ ಹಾಗೆ ಅವಿನಾಭಾವಿಗಳು. ಜೀವನಾನುಭವವೇ ಕಾವ್ಯದ ಜೀವ ಜೀವಾಳ. ಅನುಭೂತಿಯೇ ಜೀವನಕ್ಕೆ ಚೆಲುವು, ಚೈತನ್ಯ ಬದುಕು ಬೆಳೆದರೆ ಕಾವ್ಯ ಬೆಳೆಯುತ್ತೆ, ಕಾವ್ಯ ಬೆಳೆದರೆ ಬದುಕು ಬೆಳಗುತ್ತೆ. ಜೀವನಾನುಭವದ ಮುಂದಿನ ಮೆಟ್ಟಿಲೇ ಕಾವ್ಯಾನುಭವ. ಕಲಾಲೋಕದಲ್ಲಿ ನಾವು ಅನುಭವಿಸುವುದು ಕಲಾರೂಪಿ ಜೀವನವನ್ನು; ಜೀವ ಸಹಜ ನಿತ್ಯ ಸತ್ಯವನ್ನು. ಜೀವನದ ಮೌಲ್ಯಗಳೇ ಕಾವ್ಯದ ಪರಮ ಮೌಲ್ಯಗಳು. ಇವೆರಡರ ಬಾಂಧವ್ಯ ಬ್ರಾಡ್ಲೆಯೇ ಹೇಳುವಂತೆ ಆಂತರಿಕ; ಅವಿಭಾಜ್ಯವೂ ಹೌದು. ಇದನ್ನು ರಿಚರ್ಡ್ಸ್ ಒಪ್ಪುತ್ತಾನೆ ಕೂಡ.

ಅನುಭವದ ಸಾಗರದಲ್ಲಿ ತೇಲುತ್ತಾ ಆನಂದದ ಬಂದರಿಗೆ ಬಂದು ಮುಟ್ಟುತ್ತದೆ ನಮ್ಮ ಕಾವ್ಯಾನ್ವೇಷಣೆಯ ಹಡಗು. ಕಾವ್ಯದಲ್ಲಿ ಆನಂದ ಅನನ್ಯವಾದದ್ದು , ಅದ್ವಿತೀಯವಾದದ್ದು. ರಸವಾದಿಗಳಿಗೆ ಅದೇ ಮೂಲ, ಅದೇ ಚೂಲ, ಅದನ್ನು ಬಿಟ್ಟು ಬೇರೆ ಏನೂ ಇಲ್ಲ; ಅಲ್ಲಿ ಏನನ್ನೂ ನಿರೀಕ್ಷಿಸುವುದು ಸಲ್ಲ ಎಂಬುದು ಅವರ ಸಿದ್ಧಾಂತ. ಆನಂದ ಒಂದೇ ಕಾವ್ಯದ ಅಂತಿರಕ ಮೌಲ್ಯ (Intrinsic Value) ಕಲಾಲೋಕದಲ್ಲಿ ಇರುವವರೆಗೂ ಅಲ್ಲಿನ ದೃಶ್ಯಾವಳಿಗಳನ್ನು ನೋಡಿ ಆನಂದಿಸು. ಆ ಲೋಕವನ್ನು ಬಿಟ್ಟು ಈ ವಾಸ್ತವ ಜಗತ್ತಿಗೆ ಬರುವಾಗ ನೀನೇನನ್ನೂ ಜೊತೆಯಲ್ಲಿ ತರಬೇಡ. ನೀನು ನೋಡಿದ ನಾಟಕ ಅಥವಾ ಸಿನಿಮಾ, ಓದಿದ ಕಾವ್ಯ ಅಥವಾ ಕಥೆ, ಕೇಳಿದ ಸಂಗೀತ ಅಥವಾ ಹಾಡು ನಿನ್ನ ನೆನಪಿನಲ್ಲಿ ಉಳಿಯದಿರಲಿ. ಕಡೆಗೆ ಅದರ ಶೀರ್ಷಿಕೆಯೂ ಮರೆತು ಹೋಗಲಿ, ಅದರ ಕಾಳಜಿ ಈ ನೆಲಕ್ಕೆ ಬೇಡ. 'This experience is an end initself... its poetic value is this intrinsic worth alone' ಎನ್ನುತ್ತಾನೆ ಬ್ರಾಡ್ಲೆ. ಅವನ ಹಾದಿಯಲ್ಲೇ ಸಿಗುವ ಮತ್ತೊಬ್ಬ ಶ್ರೇಷ್ಠ ಕಲಾವಿದ ಕ್ಲೈವ್‌ಬೆಲ್ ಹೇಳುತ್ತಾನೆ: 'To appreciate a work of art we need bring with us nothing from life, no knowledge of its ideas and affairs, no familiarity with its emotions'. ಎಂದು.

ಇವರಿಬ್ಬರೂ. ಒಬ್ಬರಿಗೊಬ್ಬರು ಪೂರಕ ಅಭಿಪ್ರಾಯ ಉಳ್ಳವರು. ನಾಟಕದ

ಥಿಯೇಟರ್‌ಗೆ ಹೋಗುವಾಗ ಜೊತೆಯಲ್ಲಿ ನೀನು ಏನನ್ನೂ ತೆಗೆದುಕೊಂಡು ಹೋಗಬೇಡ; ನಿನ್ನವೇ ಆದ ಭಾವ-ಭಾವನೆಗಳೂ ಬೇಡ- ಎಂದು ಕ್ಲೈವ್‌ಬೆಲ್ ಹೇಳಿದರೆ ನೀನು ಅಲ್ಲಿಂದ ಬರುವಾಗ ಈ ವಾಸ್ತವಿಕ ಪ್ರಪಂಚಕ್ಕೆ ಏನನ್ನೂ ತರಬೇಡ. ಎಲ್ಲವನ್ನೂ ಥಿಯೇಟರ್ ದ್ವಾರದಲ್ಲೇ ಬಿಟ್ಟುಬಾ. ಅಂದರೆ ಅದು ನೀತಿ, ತತ್ತ್ವ ಏನನ್ನಾದರೂ ಹೇಳಿದ್ದರೆ ಅವುಗಳನ್ನು ಅಲ್ಲೇ ಬಿಟ್ಟು ಬಾ. ಸಿನಿಮಾ ನೋಡಿ ನಮ್ಮ ಹೆಂಗಸರು ಪಾತಿವ್ರತ್ಯ ಕಲಿತುಕೊಳ್ಳುವುದು ಬೇಡ. ನಾಟಕ ಪ್ರದರ್ಶನಗೊಳ್ಳುವುದು ಕೇವಲ ಆನಂದಪಡಿಸುವುದಕ್ಕೆ. ಅಷ್ಟು ಸಾಕು. ಅದು ಸಿಕ್ಕಮೇಲೆ ಬೇರೆ ಯಾವುದನ್ನೂ ಅದರಿಂದ ನಿರೀಕ್ಷಿಸುವುದಾಗಲಿ, ಅಪೇಕ್ಷಿಸುವುದಾಗಲಿ ಸಲ್ಲ ಎಂಬುದು ಬ್ರಾಡ್ಲೆ ವಾದ. ಇವರ ಮಾತುಗಳಲ್ಲಿ ಕಾವ್ಯ ಅಥವಾ ಕಲಾಕೃತಿ ತತ್ತ್ವ ಬೋಧಿಸುತ್ತ ಆ ತತ್ತ್ವಕ್ಕಾಗಿಯೇ ಓದುಗ ಅಥವಾ ರಸಿಕ ಅದನ್ನಾಶ್ರಯಿಸುತ್ತಾನೆ ಎಂಬ ಧ್ವನಿ ಇದೆ. ಆದರೆ ನಿಜವಾದ ಕಲೆ ಎಲ್ಲೂ ಧರ್ಮ ಗುರುವಿನಂತೆ ತತ್ತ್ವಬೋಧೆ ಮಾಡುವುದಿಲ್ಲ. ರಾಮನಂತೆ ಇರು ರಾವಣನಂತೆ ಇರಬೇಡ ಎಂದು ನೇರವಾಗಿ ಹೇಳುವುದಿಲ್ಲ. ಅಲ್ಲಿ ನಡೆಯುವ ಕ್ರಿಯೆಗಳೇ ಕಾಂತಾಸಮ್ಮಿತದಂತೆ ನಮ್ಮನ್ನು ಶುದ್ಧ ಭಾವದ ಸಿದ್ಧಶಿಲೆಗೆ ಕೊಂಡೊಯ್ಯುತ್ತವೆ. ಅದು ಸಕ್ಕರೆ ಅಂಗಿ ತೊಟ್ಟ ಕ್ವಿನೀನು ಮಾತ್ರೆ (Sugar quoted quinine) ನಮಗರಿವಿಲ್ಲದಂತೆ ತನ್ನ ಪ್ರಭಾವ ಬೀರುತ್ತದೆ. ರಸಾನುಭವದ ಪರಿಣಾಮ ನಮ್ಮ ಬಾಳಿಗೂ ವ್ಯಾಪಿಸುತ್ತದೆ. ನಮ್ಮ ವ್ಯವಹಾರಗಳನ್ನು ಹಸನುಗೊಳಿಸುತ್ತದೆ. ಆ ಕಾರಣ ಒಂದು ಸತ್ತ್ವಶಾಲೀ ಕೃತಿ ಏನು ಮಾಡಬಹುದು? ಎಂದರೆ ಏನೆಲ್ಲ ಮಾಡಬಲ್ಲದು ಎಂದು ಹೇಳಬೇಕಾಗುತ್ತದೆ.

ಬ್ರಾಡ್ಲೆಯ ಮುಂದುವರಿದ ಮತ್ತೊಂದು ಅಭಿಪ್ರಾಯ ಇನ್ನೂ ವಿಚಿತ್ರವಾಗಿದೆ. ಆತ ಹೇಳುತ್ತಾನೆ: 'Poetry may have also an ulterior value as a means to culture or religion; because it conveys instruction or softens the passions or furthers a good cause, because it brings the poet fame or money or quiet conscience' ಅಂದರೆ ಆನಂದದಂತಹ ಪರಮ ಪ್ರಯೋಜನವಲ್ಲದೆ ಕಾವ್ಯಕ್ಕೆ ಕವಿಕೀರ್ತಿ, ಹಣಸಂಪಾದನೆ ಹಾಗೂ ಸಂಸ್ಕೃತಿಯ ಸಂವರ್ಧನೆ, ಧರ್ಮ ಪ್ರಚಾರ, ಮಹೋನ್ನತ ಕಾರ್ಯಸಿದ್ಧಿ ಇವೇ ಮೊದಲಾದ ಅನ್ಯ ಪ್ರಯೋಜನಗಳ ಗುರಿಯೂ ಇದ್ದಿರಬಹುದು ಎಂದು. ಆದರೆ ಎಲ್ಲವೂ ಗಣೆಸಬಾರದ ಅನ್ಯ ಪ್ರಯೋಜನಗಳೇನಲ್ಲ. ಒಂದು ವೇಳೆ ಕವಿಕೀರ್ತಿ ಹಣ ಸಂಪಾದನೆಗಳು ಕಾವ್ಯ ಪ್ರಯೋಜನಗಳಲ್ಲಿ ತುಂಬಾ ಗೌಣ ಅಂಶಗಳು ಎಂದು ಭಾವಿಸಿದರೂ, ಒಂದು ಸಂಸ್ಕೃತಿಯ ಸಂವರ್ಧನೆ, ಧರ್ಮ ಪ್ರಚಾರ, ಮಹೋನ್ನತ ಕಾರ್ಯಸಿದ್ಧಿ- ಇವುಗಳನ್ನು ಅನ್ಯ ಪ್ರಯೋಜನಗಳೆನ್ನಲಾಗದು. ಒಂದು ಕಾವ್ಯ ಓದುಗನ ಎದೆಯನ್ನು ಹದಮಾಡಿ, ಒಂದು ಶ್ರೇಷ್ಠ ಸಂಸ್ಕೃತಿಯನ್ನು ರೂಪಿಸಿಕೊಡುವುದಾದರೆ ವಿಶ್ವಮಾನವ ಧರ್ಮವನ್ನು ಬೋಧಿಸಿ ಜನಮನವನ್ನು ತಿದ್ದುವುದಾದರೆ, ಭಾರತ ಸ್ವಾತಂತ್ರ್ಯದಂತಹ ಒಂದು ಮಹೋನ್ನತ

ಕಾರ್ಯಸಿದ್ಧಿಸುವಂತೆ ಪ್ರೇರೇಪಿಸುವುದಾದರೆ ಅದಕ್ಕಿಂತಲೂ ಮಿಗಿಲಾದ ಉಪಕಾರ ಬೇರೊಂದಿಲ್ಲ. ಕಾವ್ಯಕ್ಕಿಂತ ಜೀವನ ದೊಡ್ಡದು. ಎಲ್ಲ ಕಲೆಗಳ ಕಲೆ ರಾಜಕಲೆ ಅಂದರೆ ಜೀವನ ಕಲೆ. ಈ ಕಲೆಯ ಸಿಂಗಾರಕ್ಕಾಗಿಯೇ ಉಳಿದೆಲ್ಲ ಕಲೆ, ವಿಜ್ಞಾನ, ಆತ್ಮ-ಅಧ್ಯಾತ್ಮ ಮತ್ತನಂತ ಸಾಧನಗಳು. ಬಾಳಿದ್ದರೇ ಇವೆಲ್ಲ. ಬಾಳು ಹಾಳಾದರೆ ಇವಾವೂ ಬೇಡ. ಬಾಳು ಬಂಗಾರವಾಗಬೇಕು; ಹಸನಾಗಬೇಕು, ರುಜುವಾಗಬೇಕು, ಸೈತಾಗಬೇಕು, ಸುಂದರವಾಗಬೇಕು, ಶ್ರೇಷ್ಠವಾಗಬೇಕು. ಒಳ್ಳೆಯ ಜೀವನವಿದ್ದರೇನೇ ಒಳ್ಳೆಯ ಕಾವ್ಯ ಹುಟ್ಟುವುದು. ಯಾವುದೂ ಅದಕ್ಕಾಗಿಯೆ ಇಲ್ಲ ಜಗತ್ತಿನಲ್ಲಿ. ಸೂರ್ಯನು ಪ್ರಕಾಶಿಸುವುದೂ ತನಗಾಗಿ ಅಲ್ಲ. ತನ್ನ ಸುತ್ತಣ ಇತರ ಗ್ರಹಗಳ ಪ್ರಕಾಶನಕ್ಕಾಗಿ. ಕಾವ್ಯ ಅಂತಹ ಕೋಟಿ ಸೂರ್ಯ ಪ್ರಭಾಪೂರ್ಣ ಶಕ್ತಿ. ಅದರ ಪ್ರಭೆ ಪ್ರಭಾವಗಳು ಬದುಕಿನ ಮೇಲೆ ಆಗಿಯೇ ಆಗುತ್ತವೆ ಅದರ ಒಳಿತಿಗಾಗಿ. ಆದ್ದರಿಂದ ಜೀವನಾನುಭವವನ್ನೂ ಕಲಾನುಭವವನ್ನೂ ಪೃಥಕ್ಕಾಗಿ ಗುರುತಿಸುವುದೇ ತಪ್ಪು. ಹಿಂದೆಯೇ ಹೇಳಿದಂತೆ ಅವು ಅವಿನಾಭಾವಿಗಳು, ಪರಸ್ಪರ ಪೂರಕ ಪೋಷಕ ವಸ್ತುಗಳು.

ಗಂಭೀರವಾಗಿ ಗಮನಿಸಬೇಕಾದ ಮತ್ತೊಂದು ಅಂಶ ಇದೆ ಬ್ರಾಡ್ಲೆಯ ವಾದದಲ್ಲಿ ಅದು ಕಾವ್ಯ ಮೌಲ್ಯದಂತೆ ಅದರ ಅಪಮೌಲ್ಯಕ್ಕೆ ಸಂಬಂಧಿಸಿದ್ದು. ಆತ ಹೇಳುತ್ತಾನೆ: ‘ The consideration of ulterior ends whether by the poet in the act of composing or by the reader in the act of expressing tends to lower poetic value’ ಎಂದು. ಅಂದರೆ ಸಂಸ್ಕೃತಿ ಸಂವರ್ಧನೆ, ಧರ್ಮ ಪ್ರಚಾರ, ಮಹೋನ್ನತ ಕಾರ್ಯಸಿದ್ಧಿ- ಇವೇ ಮೊದಲಾದ ಅನ್ಯ ಪ್ರಯೋಜನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾವ್ಯಮೂಪನ ಮಾಡಿದಲ್ಲಿ, ಕಾವ್ಯ ಅಪಮೌಲ್ಯಗೊಳ್ಳುತ್ತದೆ. ಇದು ಕಟ್ಟಿದ ಕವಿ ದೃಷ್ಟಿಯಿಂದಲೂ ಹೌದು, ಮುಟ್ಟಿದ ಸಹೃದಯ ಓದುಗನ ದೃಷ್ಟಿಯಿಂದಲೂ ಹೌದು. ಈ ಅಭಿಪ್ರಾಯ ಅಷ್ಟೇನೂ ಆರೋಗ್ಯಕರವಾದುದಲ್ಲ. ನಾವು ಮೊದಲೇ ಹೇಳಿದಂತೆ ಅವಾವೂ ಅನ್ಯ ಪ್ರಯೋಜನಗಳಲ್ಲ. ಅವೂ ಸಹ ರಸಾನುಭವದಂತೆ ಪರಮ ಪ್ರಯೋಜನಗಳೇ! ಅವು ಅನ್ಯ ಅಲ್ಲ, ಅನನ್ಯ ಸಾಧನಗಳು; ಅವುಗಳಿಂದ ಕಾವ್ಯ ಮೌಲ್ಯ ಹೆಚ್ಚಿತೇ ಹೊರತು ಕಡಮೆ ಆಗಲಿಲ್ಲ.

ಇಲ್ಲಿ ಮತ್ತೊಂದು ಹೇಳಿಕೆಯನ್ನೂ ಗಮನಿಸಬೇಕಾಗುತ್ತದೆ. ಅದು ಹೀಗಿದೆ ಕಾವ್ಯವು ಒಂದು ಹೂವಿನ ಹಾಗೆ; ಅದರ ಕೆಲಸವು ಮನೋಹರವಾದ ರೂಪಿನಿಂದಾಗಲಿ, ಸುವಾಸನೆಯಿಂದಾಗಲಿ ಇವೆರಡರಿಂದಾಗಲಿ ಪ್ರೀತಿಯನ್ನುಂಟು ಮಾಡತಕ್ಕದ್ದು. ಅದರೂ ಅದು ಔಷಧಕ್ಕೂ ಉಪಯೋಗವಾಗಬೇಕೆಂದು ಹೇಳುವುದು ನ್ಯಾಯವಲ್ಲ; ಗುಲಾಬಿಯ ಹೂವು ಸುಂದರವೂ, ಸುಗಂಧಿಯೂ, ಔಷಧಕ್ಕೆ ಉಪಯುಕ್ತವೂ ಆಗಿರಬಹುದು; ಅದರೆ ಇದರಂತೆಯೆ ಎಲ್ಲಾ ಹೂವೂ ಔಷಧಕ್ಕೆ ಉಪಯುಕ್ತವಾಗಿರುವುದಿಲ್ಲ. ಔಷಧಕ್ಕೆ

ಉಪಯೋಗವೇ ಹೂವಿನ ಅಸಾಧರಣ ಲಕ್ಷಣವಲ್ಲ, ಅದು ಮೂಲಿಕೆಯ ಲಕ್ಷಣ. ಆದ್ದರಿಂದ ಕಾವ್ಯದಲ್ಲಿ -ಅಷ್ಟೇಕೆ- ಎಲ್ಲಾ ಕುಶಲಕಲೆಯಲ್ಲಿಯೂ- ಆನಂದವೇ ಮುಖ್ಯವೆಂದು ಹೇಳಬಹುದಾಗಿದೆ.

ಈ ಆಲಂಕಾರಿಕ ವಿವರಣೆ ಆಕರ್ಷಕವಾಗಿಯೇನೋ ಇದೆ. ಆದರೆ ಸತ್ಯಕ್ಕೆ ಅಷ್ಟೇ ದೂರವಾಗಿದೆ. ಗುಲಾಬಿ ಹೂ ಹುಟ್ಟಿರುವುದು ಸೌಂದರ್ಯಕ್ಕೆ, ಸೌರಭಕ್ಕೆ; ನಿಜ. ಅದು ಔಷಧಿಗೂ ಬರುವುದಾದರೆ, ಅದರಿಂದ ಗುಲಾಬಿಯ ಗೌರವ ಹೆಚ್ಚಿತೇ ಏನಹ ಕಡಮೆ ಆಗಲಿಲ್ಲ. ಔಷಧಿಗೆ ಬರುವ ಗುಣ ಎಲ್ಲ ಹೂವುಗಳಿಗೂ ಇಲ್ಲ. ಉದಾಹರಣೆಗೆ ಭೋಗನ್‌ವಿಲ್ಲಾ ಇದೆ. ಅದರಲ್ಲಿ ಬಣ್ಣ ಇದೆ, ಬಂಡು ಇಲ್ಲ, ಸುಗಂಧವಂತೂ ಮೊದಲೇ ಇಲ್ಲ. ಮದನಕಾಮರಾಜನ ಹೂವಿನಲ್ಲಿ ಸೌಂಗಧ ಇದೆ, ಸೌಂದರ್ಯ ಇಲ್ಲ. ಅಲ್ಲದೆ ಇವುಗಳಾವುವೂ ಔಷಧಕ್ಕೆ ಬರುವುದಿಲ್ಲ. ತಂಗಡಿ ಹೂ ತುಂಬೆಹೂ ಔಷಧಿಗೆ ಬರುತ್ತವೆ. ಆದರೆ ಮುಡಿಯಲು ಬರುವುದಿಲ್ಲ. ಸೌಂದರ್ಯವೂ, ಸೌರಭವೂ ಇದ್ದು, ಔಷಧಿಗೆ ಬರುವ ಗುಣವನ್ನೂ ಉಳ್ಳ ಗುಲಾಬಿ ನಿಜಕ್ಕೂ ಅಪಮೌಲ್ಯಗೊಳ್ಳಲಿಲ್ಲ. ತನ್ನ ಮೌಲ್ಯವನ್ನು ಹೆಚ್ಚಿಸಿಕೊಂಡಿತು. ಕಾವ್ಯ ಸಂದರ್ಭದಲ್ಲಿ ಹೇಳುವುದಾದರೆ, ಕಾವ್ಯದ ಅರ್ಹತೆಯ ಮೇಲೆ ಅದರ ಮೌಲ್ಯ ನಿಂತಿರುತ್ತದೆ. ಸತ್ಕಾವ್ಯದಿಂದ ಅನಂದವೂ ಲಭಿಸಿ, ಲೋಕ ಕಲ್ಯಾಣವೂ ಆಗುವುದಾದರೆ ಅದರ ಮೌಲ್ಯ ಹತ್ತು ಪಟ್ಟು ನೂರು ಪಟ್ಟು ಹೆಚ್ಚಿತೆಂಬುದೇ ನಮ್ಮವರ, ಭಾರತೀಯರ ಭಾವನೆ. ಆದ್ದರಿಂದ ಅನ್ಯ ಪ್ರಯೋಜನಗಳ ಗಣನೆಯಿಂದ ಕಾವ್ಯ ಅಪಮೌಲ್ಯಗೊಳ್ಳುತ್ತದೆ ಎಂಬ ಮಾತು ಸತ್ಯಕ್ಕೆ ದೂರ.

ಬ್ರಾಡ್ಲೆ ಹೇಳುವ ಪರಮ ಪ್ರಯೋಜನ (Intrinsic Worth) ಅನ್ಯ ಪ್ರಯೋಜನ(Ulterior Value) ಎಂಬ ಪದಗಳೇ ಹಾದಿ ತಪ್ಪಿಸುವಂಥವು. ಕಾವ್ಯಾನಂದವೆ ಪರಮ ಪ್ರಯೋಜನ, ಉಳಿದವುಗಳು ಅನ್ಯ ಪ್ರಯೋಜನಗಳು ಎನ್ನುತ್ತಾನೆ. ಭಾರತೀಯರು ಹಾಗೆ ಹೇಳದೆ ಸಕಲ 'ಪ್ರಯೋಜನಗಳು' ಎಂದು ಅಖಂಡ ದೃಷ್ಟಿಯಿಂದ ಕರೆಯುತ್ತಾರೆ. ಈ ಸಕಲ ಪ್ರಯೋಜನಗಳಲ್ಲಿ ಆನಂದ ಎಂಬುದು ಕಿರೀಟಪ್ರಾಯವಾದದ್ದು ಎನ್ನುತ್ತಾರೆ. ಅಷ್ಟೇ ಅಲ್ಲ ಕಾವ್ಯಾನಂದ ಬ್ರಹ್ಮಾನಂದ ಸಹೋದರ ಎಂತಲೂ ಕರೆದಿದ್ದಾರೆ.

ನೂರಾರು ವರ್ಷಕಾಲ ಘೋರತಪವಾಚರಿಸಿದ ಓರ್ವ ಯೋಗಿಗೆ ಭಗವಂತನ ಸಾಕ್ಷಾತ್ಕಾರವಾದರೆ ಅದೆಷ್ಟು ಆನಂದವಾಗುತ್ತದೊ ಅಂಥದೇ ಆನಂದ ಒಂದು ಕಾವ್ಯವನ್ನು ಓದಿದಾಗ ಆಗುತ್ತದೆ ಎಂಬ ದರ್ಶನ ನಮ್ಮವರದು. ಅದು ಆನಂದದ ತುರೀಯಸ್ತರ. ಅದು ಓಂಕಾರ ಶಂಖನಾದಕ್ಕಿಂತ ಕಿಂಚಿದೂನವಾದರೂ ತುಂಬು ಮೌಲ್ಯವುಳ್ಳದ್ದು. ಆದರೊಡನೆ ಅಭಿವ್ಯಕ್ತಗೊಳ್ಳುವ ಸಕಲ ಪ್ರಯೋಜನಗಳೂ ನಮ್ಮ ಬದುಕನ್ನು ಅರಳಿಸಿ ಪರಿಪೂರ್ಣತೆಯ ಕಡೆಗೆ ಕೊಂಡೊಯ್ಯುವ ಸಾಧನಗಳು. ಆದ್ದರಿಂದ ಕಾವ್ಯಾನುಭವ ಸಂದರ್ಭದಲ್ಲಿ ಅನ್ಯ ಪ್ರಯೋಜನ ಎಂಬ ಮಾತೇ ಮೈಲಿಗೆ.

ಬ್ರಾಡ್ಲೆ ತನ್ನ ವಾದವನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಮತ್ತೊಂದು ಕಾರಣ ಕೊಡುತ್ತಾನೆ. ಅದು ಹೀಗಿದೆ ' It does so because it tends to change the nature of poetry by taking it out of its own atmosphere' ಅನ್ಯ ಪ್ರಯೋಜನಗಳ ದೃಷ್ಟಿಯಿಂದ ಗಣಿಸಿದ್ದಾದರೆ ಕಾವ್ಯ ಕ್ಷೇತ್ರದಿಂದ ಬೇರೆ ಕ್ಷೇತ್ರಕ್ಕೆ ನಾವು ಕಾಲಿರಿಸಿದಂತಾಗುತ್ತದೆ. ಅಂದರೆ ಕಾವ್ಯವು ಕಾವ್ಯ ಕ್ಷೇತ್ರ ಬಿಟ್ಟು ಸಾಂಸ್ಕೃತಿಕ ಕ್ಷೇತ್ರಕ್ಕೋ, ಅಧ್ಯಾತ್ಮ ಕ್ಷೇತ್ರಕ್ಕೋ ಅಥವಾ ರಾಜಕೀಯ ಕ್ಷೇತ್ರಕ್ಕೋ ಕಾಲಿರಿಸಿದಂತಾಗುತ್ತದೆ. ಆದರೆ ಈ ಭಯಕ್ಕೆ ಕಾರಣ ಇಲ್ಲ. ಗಿಡ ಹೂಬಿಟ್ಟಾಗ ಅದು ಬೇರೆ ಕ್ಷೇತ್ರಕ್ಕೆ ತಿರುಗಿತು ಎಂದು ಹೇಳಿದಂತಾಗುತ್ತದೆ. ಅನ್ಯ ಕ್ಷೇತ್ರಗಳಿರುವುದು ಮೂಲ ಕ್ಷೇತ್ರದ ಪ್ರಕಾಶನಕ್ಕಾಗಿಯೇ. ಕಾವ್ಯದ ಚಾರುತ್ವಕ್ಕೆ ಯಾವ ಭಂಗವೂ ಬಾರದೆ, ಅದಕ್ಕೆ ಇನ್ನೊಂದು ಅತೀತವಾದ ಪ್ರಯೋಜನವು ಬಂದೊದಗಿದರೆ, ಅದು ಮತ್ತಷ್ಟು ಉಜ್ವಲಗೊಳ್ಳುತ್ತದೆ. ಬತ್ತಿಗೆ ಜ್ಯೋತಿ ಮುಟ್ಟಿಸಿದರೆ ಬತ್ತಿಯ ಪ್ರಯೋಜನವನ್ನು ಕುಂಠಿತ ಮಾಡಿದಂತಾಗುವುದಿಲ್ಲ. ಅದು ತನ್ನ ತೇಜಸ್ಸನ್ನು ಹೆಚ್ಚಿಸಿಕೊಂಡಂತೆ ಕಾವ್ಯ ತನ್ನ ಮೌಲ್ಯವನ್ನು ಮತ್ತೂ ಮತ್ತೂ ವೃದ್ಧಿಸಿಕೊಳ್ಳುತ್ತದೆ.

ಭಾರತೀಯರದು ಪೂರ್ಣದೃಷ್ಟಿ. ಲೌಕಿಕ ಪಾರಮಾರ್ಥಗಳೆರಡೂ ಅವರಿಗೆ ಗೊತ್ತು. ಆದ್ದರಿಂದಲೇ '**ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ**' ಎಂದು ಸಾರಿದರು. ಆನಂದವೇ ಸರ್ವ ಶ್ರೇಷ್ಠವೆನಿಸಿದರೂ ಲೋಕ ಜೀವನ ಅವರಿಂದ ಮರೆಯಲಾಗಲಿಲ್ಲ. '**ಅನ್ನದೇವರ ಮುಂದು ಇನ್ನು ದೇವರು ಇಲ್ಲ**' ಎಂದು ಸಾರಿದರೂ 'ಹೊಟ್ಟೆಗೆ ಅನ್ನಬೇಕು ಎಂಬ ವಿಚಾರದ ಉತ್ಸಾಹದಲ್ಲಿ ಮನಸ್ಸಿಗೆ ಶಾಂತಿಬೇಕು ಎಂಬುದನ್ನು ಅಲ್ಲಗಳೆಯಲಿಲ್ಲ. ಆ ದೃಷ್ಟಿ ಇಟ್ಟುಕೊಂಡೇ ಮಮ್ಮಟ ತನ್ನ ಕಾವ್ಯ ಪ್ರಕಾಶದಲ್ಲಿ ಕಾವ್ಯ ಪ್ರಯೋಜನ ಕುರಿತು ಹೇಳುತ್ತಾ, ಕಾವ್ಯದಿಂದ ಯಶಸ್ಸು, ಧನ, ವ್ಯವಹಾರ, ಜ್ಞಾನ, ಅಮಂಗಲ ನಾಶ, ಎಲ್ಲ ಜಂಜಾಟಗಳಿಂದಲೂ ದೂರಕೊಂಡೊಯ್ದು ಮೈಮರೆಸುವಂತಾಗುವ ಆನಂದ ಹಾಗೂ ಕಾಂತಾಸಮ್ಮಿತದಂತಹ ಉಪದೇಶ ಪ್ರಯೋಜನಗಳ ಒಂದು ಪಟ್ಟಿ ಕೊಡುತ್ತಾನೆ. ಮೊದಲ ಮೂರೂ ಪ್ರಯೋಜನಗಳು ಕವಿ ದೃಷ್ಟಿಯಿಂದ, ಉಳಿದ ಮೂರೂ ಸಹೃದಯರ ದೃಷ್ಟಿಯಿಂದ, ಶ್ರೇಷ್ಠ ಕೃತಿ ಶಿವೇತರ ಕ್ಷತ ಮಾಡುತ್ತದೆ. ಅಂದರೆ ಶಿವವಲ್ಲದ ಅಶಿವ ಅಥವಾ ಅಮಂಗಲವನ್ನು ನಾಶಪಡಿಸುತ್ತದೆ. ನಮ್ಮ ಮನಸ್ಸಿನ ಕೊಳಚೆ ಕೊಚ್ಚೆಗಳು ಕೊಚ್ಚಿ ಹೋಗುವಂತೆ ಮಾಡಿ, ನಮ್ಮ ಅಂತರಂಗವನ್ನು ಪ್ರಾಂಜಲಗೊಳಿಸುತ್ತದೆ. ಆ ಅರ್ಥದಲ್ಲಿ ಅದು ತೀರ್ಥ ಸಾಹಿತ್ಯವೆನಿಸುತ್ತದೆ. ಅಂತೆಯೇ ಅದು ಗಂಡನ ಮನ ಒಲಿಸಿಕೊಂಡು ತನ್ನ ಕಾರ್ಯ ಸಾಧನೆ ಮಾಡಿಕೊಳ್ಳುವ

ಪ್ರೀತಿಯ ಪತ್ನಿಯಂತೆ, ಓದುಗನ ಅರಿವಿಗೇ ಬರದಂತೆ ಉಪದೇಶಿಸಿ ಅವನನ್ನು ತಿದ್ದುತ್ತದೆ. ಎಲ್ಲಕ್ಕೂ ಮಿಗಿಲಾಗಿ ಬ್ರಹ್ಮಾನಂದ ಸಹೋದರ ಸ್ವರೂಪವಾದ ಆನಂದವನ್ನು ಪ್ರತೀತಗೊಳಿಸಿ ಬದುಕನ್ನು ಹಸನಾಗಿಸುತ್ತದೆ.

ಭಾರತೀಯರ ದೃಷ್ಟಿಯಲ್ಲಿ ಕಾವ್ಯವೆನ್ನುವುದು ಒಮ್ಮೆ ಓದಿ ಬಿಸಾಡುವ ಪುಸ್ತಕ ಅಲ್ಲ. ಚಣಕಾಲ ಲಲ್ಲೈಸಿ ಕೈಬಿಡುವ ಮೋಜಿನ ವಸ್ತುವೂ ಅಲ್ಲ. ಅದು ಬಾಳ ಬಟ್ಟೆಯ ಪರಮಾಗಮ; ಶಿವಾಂಶ ಸಂಭೂತವಾದುದು; ಮಾನವ ಜೀವನವನ್ನು ಪ್ರೋಜ್ವಲಗೊಳಿಸುವ ಅಖಂಡ್ಯ ಜ್ಯೋತಿ. ಆದ್ದರಿಂದಲೇ ಅದರಲ್ಲಿ ಆಧ್ಯಾತ್ಮವನ್ನು ಬೆರೆಸಿ ಆನಂದ ಪಟ್ಟುಕೊಂಡರು. ಲೋಕವಾದಿಗಳಾದ ಪಾಶ್ಚಾತ್ಯರಿಗೂ ಪುಸ್ತಕದ ಮಹತ್ವ ತಿಳಿಯದೆ ಇಲ್ಲ. ಕಾರ್ಲ್ ಮಾರ್ಕ್ಸ್‌ನ 'ಡಾಸ್ ಕ್ಯಾಪಿಟಲ್' ಎಂಬ ಒಂದೆ ಒಂದು ಪುಸ್ತಕ ವಿಶ್ವದ ಶೇಕಡ ೫೦ ಜನರ ಹೃದಯ ಪರಿವರ್ತನೆ ಮಾಡಿದೆ. ರಸ್ಕಿನನ 'ಅನಟು ದಿಸ್ ಲಾಸ್ಟ್' ಗೀತೆಯ ಸ್ಥಿತಪ್ರಜ್ಞ ದರ್ಶನ, ಮಹಾಭಾರತದ ಹರಿಶ್ಚಂದ್ರನ ಕಥೆ (ನಾಟಕ) ಎಂಬ ಗ್ರಂಥಗಳು ಗಾಂಧೀಜಿಯ ಮನಸ್ಸನ್ನು ಕಟ್ಟಿದ ಕಲ್ಯಾಣ ಕೃತಿಗಳು. ಅವುಗಳಿಂದ ಮೋಹನದಾಸ್ ಮಹಾತ್ಮನಾದ. ಅವನಿಂದ ಅಂದಿದ್ದ ಭರತಖಂಡದ ನಾಲ್ವತ್ತು ಕೋಟಿ ಜನತೆಯ ಬದುಕು ಬಂಗಾರವಾಯಿತು. ಅಂದ ಮೇಲೆ ಕಾವ್ಯದ ಮಹತ್ವ ಎಂಥದು ಎಂಬುದು ವೇದ್ಯವಾಗುತ್ತದೆ. ಶೆಸ್ಪೊ ಹೇಳುವಂತೆ '**ಪೆನ್ ಈಸ್ ಮೈಟಿಯರ್ ದ್ಯಾನ್ ಸ್ವೋರ್ಡ್**' ಲೇಖನ ಖಡ್ಗಕ್ಕಿಂತ ಹರಿತ ಅದೊಂದು ಚಿನ್ನದ ಚಾಟಿ. ಖಡ್ಗ ನೂರು ಜನರನ್ನು ಕೊಂದರೆ, ಲೇಖಣಿ ಕೋಟಿ ಕೋಟಿ ಸುಪ್ತ ಚೇತನಗಳನ್ನು ಬಡಿದೆಬ್ಬಿಸುತ್ತದೆ. ರಷ್ಯಾ ದೇಶದಲ್ಲಿ ಜನಜಾಗೃತಿ ಉಂಟು ಮಾಡಿದವರು ಪುಂಡು ರಾಜಕಾರಣಿಗಳಲ್ಲ, ಟಾಲ್‌ಸ್ಟಾಯ್, ಮಾಯಾಕೋಸ್ಕಿ, ಅಲೆಗ್ಸಾಂಡರ್ ಪುಷ್ಕಿನ್, ಮಾಗ್ಸಿಮ್ ಗಾರ್ಕಿ ಮೊದಲಾದ ಕವಿ ಕಲಾವಿದರು, ಸಾಹಿತಿ ಶ್ರೇಷ್ಠರು.

ಕಾವ್ಯ ಅನ್ನ ಕೊಡುವುದಿಲ್ಲ, ಬಟ್ಟೆ ಕೊಡುವುದಿಲ್ಲ. ಆದರೆ ಬದುಕಿಗೆ ಸ್ಫೂರ್ತಿ ಯನ್ನೀಯುತ್ತದೆ. ಬದುಕಬೇಕು ಎಂಬ ಆಸ್ಥೆ ಮೂಡಿಸುತ್ತದೆ. ಏಕೆ ಬದುಕಬೇಕು? ಹೇಗೆ ಬದುಕಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ಮಾಡುತ್ತದೆ. ಜೀವನ ತುಷ್ಟಿ, ತೃಪ್ತಿ, ಆತ್ಮ ಸಾಂತ್ವನ ಏನೆಲ್ಲ ದಯಪಾಲಿಸುತ್ತದೆ; ಬದುಕನ್ನು ಭವ್ಯವಾಗಿಸುವ ಕರಣ ತಾನಾಗುತ್ತದೆ.

ಶ್ರೀ ಕವೆಂಪುರವರು ಹೇಳುವಂತೆ ಕಾವ್ಯ ನವಚೈತನ್ಯ ತುಂಬುತ್ತದೆ. ಎಲೆಕ್ಟ್ರಿಕ್ ಗ್ಯಾಂಗ್‌ಮನ್‌ಗಳು 'ಅಲೋ ಏರ್ ಉಟ' 'ಐಸ' ಎಂದು ಹೇಳಿಕೊಳ್ಳುತ್ತ, ಐವತ್ತು ಜನ ಉತ್ಸಾಹ ಹೀನರು ಎತ್ತಲಾಗದ ಒಂದು ಉಕ್ಕಿನ ಕಂಬವನ್ನು ಐದೇ ಐದು ಜನ

ಎತ್ತಿ ನಿಲ್ಲಿಸುತ್ತಾರೆ. ಅಲ್ಲಿ 'ಐಸ' ಎತ್ತಲಿಲ್ಲ. ಎತ್ತುವವರ ಶಕ್ತಿ ಆ ಕ್ಷಣದಲ್ಲಿ ಕೇಂದ್ರೀಕೃತವಾಗುವಂತೆ ಮಾಡಿ ಕಾರ್ಯ ಈಡೇರುವಂತೆಸಗಿತು. ಅದೇ ರೀತಿ ಯುದ್ಧ ಸಂದರ್ಭದಲ್ಲಿ ರಣಭೇರಿ ಹೊಡೆಯುವುದಾಗಲಿ, ಜೈಕಾರ ಹಾಕುವುದಾಗಲಿ ಶತ್ರುನಾಶ ಮಾಡುವುದಿಲ್ಲ. ನಾಶಮಾಡುವ ಯೋಧರಿಗೆ ಸ್ಫೂರ್ತಿ ತುಂಬುತ್ತವೆ. ಕಾವ್ಯ ಮಾಡುವ ಕೆಲಸ ಅಂಥದು. ನೇತಾಜಿ ಸುಭಾಷ್ ಚಂದ್ರಬೋಸರು ಐ.ಎನ್.ಎ. ಸೇನೆ ಕಟ್ಟಿ, ಅಂಡಮಾನ್ ನಿಕೋಬಾರ್ ದ್ವೀಪಗಳನ್ನು ಸ್ವಾಧೀನಪಡಿಸಿಕೊಂಡು, ಸಿಂಗಪುರವನ್ನು ತಮ್ಮ ಠಾಣ್ಯವನ್ನಾಗಿಸಿಕೊಂಡಿದ್ದರು. ಐ.ಎನ್.ಎ. ಸೈನಿಕರನ್ನು ಅಸ್ಸಾಂ ಘಟ್ಟಗಳಲ್ಲಿ ಅಡಗಿಸಿಟ್ಟಿದ್ದು ಬ್ರಿಟಿಷರ ವಿರುದ್ಧ ಘೋರ ಹೋರಾಟ ಮಾಡುವ ಸನ್ನಾಹದಲ್ಲಿದ್ದರು. ಆದರೆ ಎರಡನೇ ಮಹಾಯುದ್ಧ ಆರಂಭವಾಗಿ ಐ.ಎನ್.ಎ. ಸೈನಿಕರಿಗೆ ಒಬ್ಬನಿಗೆ ಒಂದು ವಾರಕ್ಕೆ ಒಂದು ರೊಟ್ಟಿ ಸಿಗದಾಯಿತು. ಆಗ ಹಸಿವು ತಡೆಯದೆ ಸೈನಿಕರು ಅಸ್ಸಾಂ ಘಟ್ಟಗಳಲ್ಲಿ ಬೆಳೆದಿದ್ದ ಕಾಡು ಬಾಳೆಯ ದಿಂಡನ್ನು ಕಿತ್ತು ತಿನ್ನುತ್ತಿದ್ದರಂತೆ. ಹೊಟ್ಟೆ ಹಿಡಕೊಂಡು ನೋವು ತಡೆಯಲಾರದೆ ಬಂಡೆಗಳ ಕೆಳಗೆ, ಮರಗಳ ಕೆಳಗೆ ಒದ್ದಾಡುತ್ತಿದ್ದರಂತೆ. ಆ ವೇಳಗೆ ನೇತಾಜಿ ಬಂದು, 'ನಡೆಮುಂದೆ ನಡೆಮುಂದೆ ನುಗ್ಗಿ ನಡೆಮುಂದೆ, ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆಮುಂದೆ'. ನಾನಳಿವೆ ನೀನಳಿವೆ ನಮ್ಮೆಲುಬುಗಳ ಮೇಲೆ ಮೂಡುವುದು ಮೂಡುವುದು ನವಭಾರತದ ಲೀಲೆ! ನಾನು ಸತ್ತರೂ, ಚಿಂತೆಯಿಲ್ಲ ನೀನು ಸತ್ತರೂ ನಷ್ಟ ಇಲ್ಲ . ನಮ್ಮಿಬ್ಬರ ಅಸ್ಥಿಪಂಜರದ ಮೇಲೆ ಭವ್ಯ ಭಾರತದ ನಿರ್ಮಾಣ ಆಗಬೇಕು. ನಾವಂತೂ ತೊತ್ತುಗಳಾಗಿ ಪರದಾಸ್ಯದಲ್ಲಿ ಬೆಂದೆವು. ಆದರೆ ನಮ್ಮ ಮಕ್ಕಳು ಮೊಮ್ಮಕ್ಕಳು ಸ್ವತಂತ್ರ ಭಾರತದಲ್ಲಿ ಸ್ವಚ್ಛಂದ ಪಕ್ಷಿಗಳಂತೆ ಸ್ವೇಚ್ಛೆಯಾಗಿ ವಿಹರಿಸುವ ಸುವರ್ಣಾವಕಾಶವನ್ನು ಕಲ್ಪಿಸಿಕೊಡುವ ಸಲುವಾಗಿ ಹೋರಾಡೋಣ ನಡೆಯಿರಿ ಎಂದು ಒಂದು ವೀರಗೀತೆ ಹಾಡಿ, ಪ್ರೋತ್ಸಾಹದ ನುಡಿ ನುಡಿದರೆ ಸಾಕಿತ್ತಂತೆ. 'ನೇತಾಜೀ ನಡೆಯಿರಿ ಕಲ್ಕತ್ತೆ ಲೂಟಿ ಮಾಡಿ ಬಿಡೋಣ. ಭಾರತದಲ್ಲಿ ಓರ್ವ ಬ್ರಿಟಿಷ್ ಪಿಳ್ಳೆಯೂ ಇಲ್ಲದಂತೆ ಮಾಡೋಣ, ಭಾರತ ಮಾತಾಕೀ ಜೈ' ಎಂದು ಅದಮ್ಯೋತ್ಸಾಹದಿಂದ ಎದ್ದು ಕೂಗುತ್ತಿದ್ದರಂತೆ ತಮ್ಮ ನೋವನ್ನೆಲ್ಲಾ ಮರೆತು. ಕಾವ್ಯ ಮಾಡುವ ಕೆಲಸ ಅಂಥದು.

ಬದುಕಿಗೆ ಸ್ಫೂರ್ತಿ ಕೊಡುವಂತೆ ಸತ್ಕಾವ್ಯವು ಆತ್ಮ ಸಾಂತ್ವನಕ್ಕೂ ಕಾರಣವಾಗುತ್ತೆ. ಇಂಗ್ಲೀಷ್‌ನ ಪ್ರಸಿದ್ಧ ಕಾದಂಬರಿಕಾರ ಥಾಮಸ್ ಹಾರ್ಡಿಯು ಉತ್ಕ್ರಮಣಾವಸ್ಥೆಯಲ್ಲಿದ್ದರೂ, ಅವನ ಪ್ರಾಣ ಹೋಗಲೇ ಇಲ್ಲ. ಏನೋ ಒದ್ದಾಟ, ಏನೋ ಬಯಕೆ, ಆಗ ಅವನ ಹೆಂಡತಿ ಏನು ಬೇಕು? ನಿಮ್ಮಾಸೆ ಏನು? ಎಂದು ಪ್ರಶ್ನಿಸಿದಳಂತೆ. ಆತ 'ಉಮರ್ ಖಯ್ಯಾಮಿನ ಒಂದು ಪದ್ಯ ತೆಗೆದು ಓದು ಎಂದನಂತೆ,

ಅವಳು ಹಾಗೆ ಓದುತ್ತಿದ್ದಾಗಲೇ ಆನಂದದಿಂದ ಕೊನೆಯುಸಿರೆಳೆದನಂತೆ!' ಇಂತಹ ಶಾಂತಿ ಸಾಧನವೂ ಆಗಬಲ್ಲದು ಕಾವ್ಯ. ವಿಶ್ವ ವಿಖ್ಯಾತ ವಿಜ್ಞಾನಿ ಚಾರ್ಲಸ್ ಡಾರ್ವಿನ್ ಭಗವಂತನಲ್ಲಿ ತನ್ನ ಪ್ರಾರ್ಥನೆ ಸಲ್ಲಿಸಿದನಂತೆ. 'ದೇವರೆ, ಮರುಜನ್ಮವೊಂದಿದ್ದರೆ ನನ್ನನ್ನು ಓರ್ವ ಪಿಯಾನೊ ನುಡಿಸುವ ಕಲಾವಿದನನ್ನಾಗಿ ಹುಟ್ಟಿಸು' ಎಂದು. ಕಲೆಯಿಂದ ಆತ್ಮಸಾಂತ್ವನ. ಆನಂದಗಳನ್ನು ಕೊಡುವ ಶಕ್ತಿ ಕಲೆಗೆ ಹೊರತು ಬೇರೆಯಾವುದಕ್ಕೂ ಇಲ್ಲ. ಒಂದು ರಾಷ್ಟ್ರ ಜೀವನ ಪಲ್ಲಟಿಸಬಹುದು, ರಾಜಕೀಯ ಬದುಕು ಬದಲಾಗಬಹುದು, ಒಂದು ಸಂಸ್ಕೃತಿ ಸಂಪೂರ್ಣವಾಗಿ ನಾಶವಾಗಬಹುದು. ಆದರೆ ಅವುಗಳ ಜೀವಂತ ದಾಖಲೆಯಾದ ಸಾಹಿತ್ಯ ಮಾತ್ರ ಉಳಿಯುತ್ತದೆ. ಪರಿಕ್ಲೀಸನ ಸುವರ್ಣಯುಗವನ್ನು ನಾವು ಕಾಣಲಾರೆವು. ಆದರೆ ಈಸ್ಕೈಲಸ್, ಸೊಫೋಕ್ಲೀಸ್, ಯೂರಿಪಿಡೀಸ್ ಬದುಕಿದ್ದಾರೆ. ಭೋಜರಾಜನ ಆಸ್ಥಾನ ಇಂದಿಲ್ಲ, ಅದರೂ ಕಾಳಿದಾಸ ನಮ್ಮ ಮನೆ ಮಾತಾಗಿದ್ದಾನೆ. ವಿಜಯನಗರ ಸಾಮ್ರಾಜ್ಯ ವೈಭವ ಕಣ್ಮರೆಯಾಗಿದೆ, ಆದರೆ ಅಲ್ಲಸಾನಿ ಪೆದ್ದನ ಮೊದಲಾದ ಕವಿ ಶ್ರೇಷ್ಠರು ಜೀವಂತ ಬದುಕಿದ್ದಾರೆ. ಪಂಪ ಬದುಕಿ, ಅರಿಕೇಸರಿಯನ್ನೂ ಬದುಕಿಸಿದ್ದಾನೆ. ಹೀಗೆ ಅವಿನಾಶಿಯಾದ ಸಾಹಿತ್ಯ ದೇಶದ ಇತಿಹಾಸ ಸಾಕ್ಷಿಯಾಗಿ ನಿಂತಿದೆ.

ಹೀಗೆ ಹಲವು ಹತ್ತು ಬಗೆಯ ಪ್ರಯೋಜನಗಳು ಕಾವ್ಯದಿಂದ ಲಭಿಸುತ್ತವೆ. ಆದರೆ ಅದು ತನ್ನ ಪಾವಿತ್ರ್ಯವನ್ನು ಕಾಪಾಡಿಕೊಂಡು ಲಭಿಸುತ್ತದೆ. ಆದರೆ ಅದು ತನ್ನ ಪಾವಿತ್ರ್ಯವನ್ನು ಕಾಪಾಡಿಕೊಂಡು ಬರಬೇಕು ಅಷ್ಟೆ. ಅರಣ್ಯ ಸಂರಕ್ಷಣೆ, ಪರಿಸರ ಮಾಲಿನ್ಯ, ಕುಟುಂಬ ಕಲ್ಯಾಣ ಇವೇ ಮೊದಲಾದವುಗಳ ಪ್ರಚಾರದ ಗುತ್ತಿಗೆ ಹಿಡಿದರೆ ಸಾಹಿತ್ಯ ನಿಜಕ್ಕೂ ಅಪಮೌಲ್ಯಗೊಳ್ಳುತ್ತದೆ. ಆದರೆ ಸದುದ್ದೇಶಕ್ಕಾಗಿ ಶ್ರಮಿಸಿದರೆ ಅದು ಶ್ರೇಷ್ಠತೆಯನ್ನು ಸಂಪಾದಿಸಿಕೊಳ್ಳುತ್ತದೆ.

***

ಕುಮಾರ ವಾಲ್ಮೀಕಿಯ ರಾಮಾಯಣ

ಪ್ರೊ|| ಅ.ರಾ. ಮಿತ್ರ

ಡಿ.ವಿ.ಜಿ.ಯವರು ಸಾಹಿತ್ಯರಾಶಿಯನ್ನು ಮೌಲಗಳು ಪ್ರತಿಬುದ್ಧ ಸಾಹಿತ್ಯ ಎಂದು ಎರಡು ಭಾಗವಾಗಿ ವಿಂಗಡಿಸಿದ್ದಾರೆ. ಅವರ ದೃಷ್ಟಿಯಲ್ಲಿ ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳು ಇವೆಲ್ಲ ಮೌಲಗಳು. ಪ್ರತಿಬುದ್ಧ ಸಾಹಿತ್ಯ ಎಂದರೆ ಈ ಮೌಲಗಳನ್ನು ಆಶ್ರಯಿಸಿ ಅವುಗಳ ಆಧಾರದ ಮೇಲೆ ಬರೆದ ಒಂದು ಸಾಹಿತ್ಯ. ಕುವೆಂಪು ಅವರ ಶ್ರೀ ರಾಮಾಯಣದರ್ಶನಂ, ಪುತಿನ ಅವರ ಶ್ರೀ ಹರಿಚರಿತೆ ಮೊದಲಾದುವು ಈ ಪ್ರತಿಬುದ್ಧ ವರ್ಗಕ್ಕೆ ಸೇರುತ್ತವೆ. "**ಕಲೆಯನಲ್ಲದೆ ಶಿಲ್ಪಿ ಶಿಲೆಯೆನೇಂ ಸೃಷ್ಟಿಪನೆ?**" ಎಂದು ಕುವೆಂಪು ಹೇಳಿರುವುದು ಈ ಬಗೆಯ ಪ್ರತಿಬುದ್ಧ ಸಾಹಿತ್ಯದ ಸಮರ್ಥನೆಯೇ ಆಗಿದೆ. "ಈ ವಿಷಮ ಕಾಲದಲ್ಲಿ ಕೂಡ ನಮ್ಮ ವ್ಯಾವಹಾರಿಕ ತೊಡಕುಗಳು ಎಂಬ ಹೆದ್ದೆರೆಯ ಹೊಯ್ಲಿನ ನಡುವೆ ಪುತಿನ ಅವರು ನಡುಗಡ್ಡೆಯಂತೆ ನಾನು ನಿಂತುಕೊಳ್ಳುತ್ತೇನೆ ಸಮಯ-ಅಸಮಯ ಎಂದು ಲೆಕ್ಕಿಸದೆ ಶ್ರೀಹರಿದಾರ್ಢ್ಯವನ್ನು ಪ್ರಕಟಿಸುತ್ತೇನೆ" ಎಂದು ಸ್ಪಷ್ಟವಾಗಿ ಸಾರಿದರು. ರಾಮಾಯಣ, ಮಹಾಭಾರತಗಳು ನಮ್ಮ ಜನಮನದಲ್ಲಿ ಎಷ್ಟು ಹಾಸುಹೊಕ್ಕಾಗಿವೆ ಎಂದರೆ ಇಂದಿಗೂ ನಮ್ಮ ಕವಿಗಳಿಗೆ ಆಧಾರಪ್ರಾಯವಾಗಿವೆ.

ರಾಮಾಯಣದ ಕವಿಗಳ ಭಾರದಲಿ ಫಣಿರಾಯನೇ ತಿಣುಕಿದ ಎಂದು ಹೇಳುವ ಕುಮಾರವ್ಯಾಸನು ತಿಂತಿಣಿಯ ರಘುವರ ಚರಿತ್ರೆಯಲ್ಲಿ ಕಾಲಿಡಲು ತೆರವೆಲ್ಲ ಎಂದು ಹೇಳುತ್ತಾನೆ. ಅಂದರೆ ಕುಮಾರವ್ಯಾಸನ ಕಾಲಕ್ಕಾಗಲೇ ಕನ್ನಡದಲ್ಲಿ ಸಾಕಷ್ಟು ರಾಮಾಯಣಗಳು ಬಂದಿರಬೇಕು. ಆದರೆ ಅವು ಯಾವುವೂ ಸಿಕ್ಕಿಲ್ಲ. ಶಬ್ದಮಣಿದರ್ಪಣ, ಕಾವ್ಯಾವಲೋಕನ ಮತ್ತು ಸೂಕ್ತಿ ಸುಧಾರ್ಣವಗಳಲ್ಲಿ ರಾಮಾಯಣದ ಘಟನೆಗಳ ತುಣುಕುಗಳಿದ್ದು ಸ್ವಾರಸ್ಯಕರವಾಗಿವೆ. ಪೊನ್ನನ 'ಭುವನೈಕ ರಾಮಾಭ್ಯುದಯ' ಎಂಬ ಗ್ರಂಥವು ಸಿಕ್ಕಿದ್ದರೆ ಅದು ಕನ್ನಡದ ಮೊದಲ ರಾಮಾಯಣವಾಗುತ್ತಿದ್ದುದರಲ್ಲಿ ಸಂದೇಹವಿಲ್ಲ. ನಾಗಚಂದ್ರ, ವೆಂಕಾಮಾತ್ಯ, ಕುವೆಂಪು, ತೊರವೆನರಹರಿ, ಮಾಸ್ತಿ ಇವರ ರಾಮಾಯಣಗಳು ಕನ್ನಡದಲ್ಲಿ ಜನಪ್ರಿಯವಾಗಿವೆ. ಅಧ್ಯಾತ್ಮ ರಾಮಾಯಣ, ವಸಿಷ್ಠ ರಾಮಾಯಣ, ಕೌಶಿಕ ರಾಮಾಯಣ, ಬತ್ತಲೇಶ್ವರ ರಾಮಾಯಣ, ಶೇಷ ರಾಮಾಯಣ, ಕುಮುದೇಂದು ರಾಮಾಯಣ, ಅದ್ಭುತ ರಾಮಾಯಣ, ಮೂಲಕ ರಾಮಾಯಣ, ರಾಮವಿಜಯ ರಾಮಕಥಾವತಾರ ಮುಂತಾದ ಹೆಸರುಗಳೇ ಸೂಚಿಸುವಂತೆ ಕನ್ನಡದಲ್ಲಿ ರಾಮಾಯಣಗಳ ಬೆಳೆ ಹುಲುಸಾಗಿದೆ. ಇವುಗಳಲ್ಲಿ ಕ್ರಿ.ಶ. ಸು. ೧೫೫೦ರ ತೊರವೆಯ ನರಹರಿಯ ರಾಮಾಯಣದ ಎರಡು ಸಂಪುಟಗಳನ್ನು ಎನ್. ಬಸವಾರಾಧ್ಯರು ಸಮರ್ಥವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. ಭಾಮಿನೀ ಷಟ್ಪದಿಯ ಸೊಗಸಾದ ಓಟವು ಪಂಡಿತ ಪಾಮರರಿಬ್ಬರನ್ನು ರಂಜಿಸುವ ರೀತಿಯಲ್ಲಿ ಸುಶ್ರಾವ್ಯವಾಗಿ ಸಾಗಿ ಬಂದಿದೆ. ಕನ್ನಡ

ಗಮಕಿಗಳು ಇಂದಿಗೂ ನಾಡಿನಾದ್ಯಂತ ಸೊಗಸಾಗಿ ಹಾಡಿ ಪ್ರಚುರಪಡಿಸುತ್ತಿರುವ ಗ್ರಂಥಗಳಲ್ಲಿ ತೊರವೆಯ ನರಹರಿಯ ರಾಮಾಯಣಕ್ಕೂ ಸಿಂಹಪಾಲು ಸಂದಿರುವುದನ್ನು ಗಮನಿಸಿದರೆ ಈ ಕಾವ್ಯದ ಗೇಯಗುಣದ ಹಿರಿಮೆ ಅರ್ಥವಾಗುತ್ತದೆ. ಈ ಗೇಯಮಯ ಗತಿಯನ್ನು ನೋಡಿ:

ಚಾರುತರ ಕರ್ಣಾಟಕದ ವಿ
ಸ್ತಾರ ರಾಮಾಯಣಕೆ ಕರ್ತೃ ಕು
ಮಾರ ವಾಲ್ಮೀಕಿಯೆ ಕಥಾಪತಿ ತೊರವೆಯಧಿನಾಥ
ವೀರ ನರಹರಿಯೆನಲು ಮೆಚ್ಚದ
ರಾರು ಸತ್ಕವಿತಾ ವಿಲಾಸದ
ಸೂರಿಗಳ ಹೃದಯಾಕರುಷಣ ಕಥಾ ಕುತೂಹಲವ

ಶೋಕಃ ಶ್ಲೋಕತ್ವಮಾಗತಃ ಎಂಬುದು ಮೂಲರಾಮಾಯಣದ ಮಾತು. ಆಗಸದಲ್ಲಿ ವಿಹರಿಸುತ್ತಿದ್ದ ವಿಹಗಗಳಲ್ಲಿ ಒಂದನ್ನು ಹೊಡೆದುರುಳಿಸಿದ ಬೇಡನ ಬಗ್ಗೆ ಆಕ್ರೋಶ, ಚೀರಿ ಉರುಳಿದ ಹಕ್ಕಿಯ ಬಗೆಗೆ ಅಪಾರ ಕರುಣೆ ಈ ಸಮ್ಮಿಶ್ರಭಾವಗಳ ಒಳಗುದಿಯಲ್ಲಿ ವಾಲ್ಮೀಕಿಗಳ ಬಾಯಲ್ಲಿ ಹೊರಟ ಮಾನಿಷಾದ ಪ್ರತಿಷ್ಠಾಂತ್ವಮ್... ಎಂಬ ಶೋಕದ ಶಾಪದ ಮಾತು ಹೇಗೆ ತಂತ್ರೀ ಲಯ ಸಮನ್ವಿತವಾಗಿ ಸೊಗಸಾದ ಹಾಡಾಯಿತು ಎಂಬುದು ವಿಸ್ಮಯಕಾರಿಯಾದ ಸಂಗತಿಯಾಗಿದೆ. ಕುವೆಂಪು ಅವರ ಶ್ರೀರಾಮಾಯಣದರ್ಶನದಲ್ಲಿ ಕೂಡ ಇದೇ ಪ್ರಸಂಗ ಅದ್ಭುತವಾಗಿ ಚಿತ್ರಿತವಾಗಿದೆ. ತಮಸಾ ನದಿಯ ತಟಿಗೆ ಬಂದ ವಾಲ್ಮೀಕಿಗಳು ನದಿಯ ಜೀವನ (ನೀರು)ದ ಅಂಚನ್ನು ಅಡಿಗಳಿಗೆ ಸೋಕಿಸಿದ್ದರು. ಆಗ ಪ್ರಕೃತಿ ರಮ್ಯವಾಗಿತ್ತು. ಬಾನ್, ಬನದ, ಮಲೆ, ತೊರೆಯೆ ಭುವನ, ಕವನ ನಲಿಯುತ್ತಿತ್ತು. ಆದರೆ ಮೇಲೆ ಹಾರುತ್ತಿದ್ದ ಕ್ರೌಂಚಗಳಲ್ಲಿ ಒಂದನ್ನು ಒಬ್ಬ ಬೇಡರವನು ಹೊಡೆದುರುಳಿಸಿದ್ದು.

'ಸುಖದ ಸಂಗೀತಕ್ಕೆ ವಿಷಾದಮಂ ಶ್ರುತಿಯೊಡ್ಡಿದೊಲ್' ಆಯಿತಂತೆ

'ಪರ ಸಂಚರಣೆಯಲಿ ಲಿಪಿ ತಿರುಗಿ ನೋಡದ ಬಿರುದು' ಎಂದು ತನ್ನ ಶಬ್ದ ವೈಭವವನ್ನು ಮೆಚ್ಚುವ ತೊರವೆಯ ನರಹರಿ ಇದೇ ಪ್ರಸಂಗವನ್ನು ಎಷ್ಟು ಸೊಗಸಾಗಿ ಚಿತ್ರಿಸುತ್ತಾನೆ. ಇಲ್ಲೂ ಅದೇ ಗಂಡು ಕ್ರೌಂಚದ ಚಿತ್ರ, ಬೇಡನು ಅದನ್ನು ಕೊಂದದ್ದು.

ಅರೆ ಮುಗಿದ ಲೋಚನದ ಸಂಪುಟ
ವರಳಿ ಚಲಿಸುವ ಚಂಚುಪುಟದು
ಪ್ಪುರಿಸಿದಂಘ್ರಿಯ ಕೆದರಿದೆರಕೆಯ ಬಿರಿತ ತುಪ್ಪುಳಿನ
ಕೊರಳ ಮಿಡುಕಿನ ಮಸೆಯ ಮುಖದಲಿ
ಸುರಿವನೆತ್ತರ ಪತಿಯ ಸುತ್ತಲು
ತಿರುಗಿ ಚೀರುವ ವಿಹಗ ತತಿಯನು ಕಂಡನಾ ಮುನಿಪ.

ಕರುಣವನ್ನು ಹೆಪ್ಪುಗಟ್ಟಿಸುವ ಈ ಪದ್ಯದ ಧಾಟಿಯನ್ನು ಕಂಡು ನಾರದನೇ ಬಂದು''ನಿನ್ನ ಕವಿತೆಯ ವಹಣಿ ಲೇಸಾಯ್ತು!'' ಎಂದು ಹೊಗಳಿದ್ದು ಆಶ್ಚರ್ಯವೇನಲ್ಲ. ಕುಮಾರ ವಾಲ್ಮೀಕಿ ಎಂದು ಹೆಸರು ಪಡೆದ ತೊರವೆಯ ನರಹರಿಯ ರಾಮಾಯಣದಲ್ಲಿ ಉದ್ದಕ್ಕೂ ಮೂಲರಾಮಾಯಣದ ದಟ್ಟಛಾಯೆ ಇದೆ. ಆದರೆ ಪದ್ಮಪುರಾಣ ಮತ್ತು ತಾನು ಕೇಳಿದ ಜಾನಪದ ರಾಮಾಯಣಗಳಿಂದಲೂ ಕವಿ ಪ್ರಭಾವಿತನಾಗಿದ್ದಾನೆ. ಆದುದರಿಂದ ಮೂಲಹಂದರವನ್ನು ಇಟ್ಟುಕೊಂಡು ಕೆಲವೊಂದು ಅರ್ಥಪೂರ್ಣ ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ದಶರಥನಿಗೆ ಕನ್ನಡಿ ನೋಡಿಕೊಂಡಾಗ ಬಿಳಿಗೂದಲು ಕಾಣಿಸಿದುದರಿಂದ ತನಗೆ ವಯಸ್ಸಾಗುತ್ತಿರುವ ನೆನಪಾಗಿ ಮಕ್ಕಳಿಲ್ಲದ್ದಕ್ಕೆ ಕೊರಗುವ ಸಂದರ್ಭ ಪುತ್ರದೋಹಳದ ಸಂದರ್ಭ ಇಲ್ಲಿ ಸ್ವತಂತ್ರವಾಗಿ ಬಂದಿದೆ. ಜೈನಕಾವ್ಯಗಳ ಪ್ರಭಾವವೇ ಇದಕ್ಕೆ ಕಾರಣ. ಮೂಲದಲ್ಲಿ ಮಂಥರೆಯನ್ನು ಜ್ಞಾತಿ ದಾಸಿಯ ತೋ ಜಾತಾ, ಪಾಪದರ್ಶಿನಿ, ವಾನರಿ, ಕುಬ್ಜೆ ಎಂದೆಲ್ಲ ಕರೆದಿದ್ದಾರೆ ವಾಲ್ಮೀಕಿಗಳು. ಆದರೆ ಕುವೆಂಪು ಅವಳನ್ನು 'ಮಮತೆಯಸುಳಿ ಮಂಥರೆ'ಯನ್ನಾಗಿ ಕಲ್ಪಿಸಿಕೊಳ್ಳುವಂತೆ ಪ್ರಭಾವ ಬೀರಿದವನು ತೊರವೆಯ ನರಹರಿ. ಅವನ ಮಂಥರೆ ''ಮನುನಂದನನನೆಬ್ಬಟ್ಟುವೆನು ರಾವಣ ವಧೆಗೆ'' ಎಂದುಕೊಂಡು ಕೈಕೆಯ ಮನಸ್ಸನ್ನು ಪರಿವರ್ತಿಸುವ ಕಾರ್ಯದಲ್ಲಿ ತೊಡಗುತ್ತಾಳೆ. ಅಂದರೆ ರಾಮನನ್ನು ಮಹತ್ತರವಾದ ಕಾರ್ಯಕ್ಕೆ ಸಿದ್ಧಪಡಿಸುವುದೇ ಅವಳ ಉದ್ದೇಶವಾಗಿತ್ತೆಂದು ನರಹರಿಕವಿ ಸೂಚಿಸುತ್ತಾನೆ. ಸೀತಾ ಸ್ವಯಂವರಕ್ಕೆ ರಾವಣನ ಆಗಮನ ಪ್ರಸಂಗವನ್ನು ನರಹರಿಯು ನಿರೂಪಿಸಿರುವುದನ್ನು ನೋಡಿದರೆ ಬೇರೆ ಬೇರೆ ರಾಮಾಯಣಗಳ ಪ್ರಭಾವವೂ ಅವನ ಮೇಲೆ ಇದ್ದದ್ದು ಸ್ಪಷ್ಟವಾಗುತ್ತದೆ.

ಶೂರ್ಪನಖಿಗೆ ರಾಮಾದಿಗಳ ಮೇಲೆ ಕೋಪ ಬರುವುದಕ್ಕೆ ನರಹರಿಯು ಒಂದು ಸಮಂಜಸ ಬದಲಾವಣೆಯನ್ನು ಜೈನ ರಾಮಾಯಣ ಕಾವ್ಯಗಳ ಪ್ರಭಾವದಿಂದ ಕಾಣಿಸುತ್ತಾನೆ. ಇಲ್ಲಿ ಶಂಬೂಕ ಎಂಬುವನು ಶೂರ್ಪನಖಿಯ ಮಗ. ಅವನು ತಪಶ್ಚರಣೆಯಲ್ಲಿ ತೊಡಗಿದ್ದಾಗ ಇಂದ್ರನು ಬೇಟೆಗಾರನ ವೇಷ ಹಾಕಿಕೊಂಡು ಕಾಡಿಗೆ ನುಗ್ಗುವ ತಂತ್ರ ಮಾಡುತ್ತಾನೆ. ಲಕ್ಷ್ಮಣನನ್ನು ರಾಮನು ಬೇಟೆಗೆ ಕಳಿಸಿದಾಗ ಆಕಸ್ಮಿಕವಾಗಿ ಶಂಬೂಕನ ಕೊಲೆಯಾಗುತ್ತದೆ. ಕ್ರೋಧದಿಂದ ಬಂದ ಶೂರ್ಪನಖಿಯ ಸಿಟ್ಟು ಕಾಮಕ್ಕೆ ತಿರುಗುತ್ತದೆ.

ಸೀತಾಸ್ವಯಂವರದ ಪ್ರಸಂಗವೂ ಮೂಲಕ್ಕಿಂತ ಭಿನ್ನವೇ. ಸೀತಾಸ್ವಯಂವರದ ಘೋಷಣೆಯನ್ನು ಜನಕನು ಮಾಡಿದನು. ರಾಜಾಧಿರಾಜರೆಲ್ಲ ಬಂದು ಸೇರಿದರು. ಈ ಸ್ವಯಂವರ ಪ್ರಸಂಗ ಕಾಳಿದಾಸನ ಇಂದುಮತೀ ಸ್ವಯಂವರ ಪ್ರಸಂಗವನ್ನು ಪಂಪ, ಪೊನ್ನ, ಕುಮಾರವ್ಯಾಸರ ವರ್ಣನೆಗಳನ್ನು ನೆನಪಿಗೆ ತರುತ್ತದೆ. ರಾವಣನು ವಿಬುಧವಂಶ ವಿಭಾಡ. ಮಹಾಪರಾಕ್ರಮಿ. ಆದರೆ ಧನುಸ್ಸನ್ನು ಎತ್ತಲು ಹೋದಾಗಿನ ವರ್ಣನೆ ನೋಡಿ.

ಬಲಿದು ಮಕುಟಾವಳಿಯ ಶೋಣಿತ
ಪಳಿಯ ರಕ್ಕಸದೇಸಿಯಲಿ ಬಿಗಿ
ದೆಳೆವ ಹಾಹೆಯ ನೋಚೆಗೊಳಿಸಿಕ್ಕಲಿಸಿ ಪದಯುಗವ
ಅಳುಕಂದು ಹರಾದ್ರಿಯನು ಕಿ
ತ್ತಿಳೆಯನಗಲಿಸುವಂತೆ ಬಾಹಾ
ಲುಳಿತ ಬಲನೆತ್ತಿದನು ನೆಲದೊಲೆದಾಡಲೆಡಬಲಕೆ

ಹೀಗೆ ಬಿಲ್ಲಿನ ಕೆಳಗೆ ಸಿಕ್ಕಿದ ರಾವಣನ ಸ್ಥಿತಿ

''ರಸದ ಲಂಪಟಕಿಳ್ಳುವನು ಖಂ
ಡಿಸಲು ಸಿಲುಕಿದ ನಾಲಗೆಯ ಗರ
ಗಸದ ನರಿಯವೊಲ್...''

ಆಯಿತು ಎಂದು ನರಹರಿಯು ಕುಮಾರವ್ಯಾಸನಂತೆ ಹಾಸ್ಯಪ್ರಜ್ಞೆಯನ್ನು ಮೆರೆದಿದ್ದಾನೆ. ಆಗ ಛಲದಿಂದ ರಾವಣನು ''ಸೀತೆಯ ಕಳವಿನಲಿ ಕೊಂಡೊಯ್ವೆ'' ಎಂದು ತೀರ್ಮಾನಿಸಿಕೊಂಡಂತೆ ಕವಿ ಮೂಲದಿಂದ ಹೀಗೆ ಬದಲಾವಣೆಯನ್ನು ಮಾಡಿಕೊಂಡಿದ್ದಾನೆ.

ರಾವಣ ವಧೆಯ ನಂತರದಲ್ಲಿ ಸೀತೆಯ ಅಗ್ನಿಪ್ರವೇಶದ ಪ್ರಕರಣದಲ್ಲಿ ಕೂಡ ತೊರವೆಯ ನರಹರಿ ಸೀತೆಯನ್ನು ಆಕ್ಷೇಪಿಸುವ ರೀತಿಯು ಮೂಲಕ್ಕಿಂತ ಭಿನ್ನವಾಗಿದೆ; ಅಲ್ಲದೆ ಈ ಹೇಳಿಕೆಯ ವ್ಯಂಗ್ಯವನ್ನು ಪರಿಭಾವಿಸಬೇಕು:

ಸ್ತ್ರೀಯೆ ಲೋಕದೊಳಿವಳು ಲೋಕದ
ಮಾಯಕಾತಿಯರಿವಳ ಶಿಷ್ಯರು
ನೋಯೆ ನುಡಿದಡವಿಯಲಿ ನೂಕಿದಳಿವಳು ಲಕ್ಷ್ಮಣನ
ಮಾಯಕೆರಳೆಯ ನೆವದಲಸುರರ
ರಾಯನಲಿ ಸಂಕೇತ ನಡೆದುದು
ದಾಯ ತಪ್ಪಿತು ಕಡೆಯಲಿದ ನೀವರಿಯಿರ್ಕೆಯೆಂದ.

ರಾಮನು ಸೀತೆಯ ಮೇಲೆ ಆರೋಪ ಹೊರಿಸುತ್ತಿರುವ ರೀತಿಯನ್ನು ನೋಡಿದರೆ ರಾಮನು ಶಂಕಾಶೀಲನಾಗಿದ್ದನೆನ್ನಿಸುತ್ತದೆ. ಅವನ ದೃಷ್ಟಿಯಲ್ಲಿ ಸೀತೆ ರಾವಣನಿಗೆ ಪರಿಚಿತಳೇ. ಅಲ್ಲದೆ ಅವನ ವೈಭವಕ್ಕೆ ಮೋಹಗೊಂಡಿದ್ದವಳೇ. ಆದ್ದರಿಂದ ಸೀತೆಯು ಲೋಕದಲ್ಲಿರುವ ಎಲ್ಲ ಮಾಯಕಾರ್ತಿಯರ ಗುರುವಾಗಿದ್ದಾಳಂತೆ. ಮಾಯಾಜಿಂಕೆಯನ್ನು ರಾವಣ ಕಳುಹಿಸಬೇಕು. ಸೀತೆ ಅದನ್ನು ಹಿಡಿದು ತರುವ ನೆವದಲಿ ಗಂಡನನ್ನು ದೂರ ಅಟ್ಟಬೇಕು ಎಂದು ಮೊದಲೇ ರಾವಣ ಸೀತೆಯರು ಮಾತಾಡಿಕೊಂಡಿದ್ದರಂತೆ. ಆದರೆ ಲಕ್ಷ್ಮಣನು ಅಲ್ಲೇ ಅಲುಗಾಡದೆ ನಿಂತದ್ದರಿಂದ ಕೆಲಸ ಕೆಡುವುದೆಂಬ ಭಯದಿಂದ ಸೀತೆಯು ಲಕ್ಷ್ಮಣನಿಗೆ ತುಂಬ ಕೆಟ್ಟಮಾತುಗಳನ್ನಾಡಿ ಮನನೋಯಿಸಿ ಓಡಿಸಿದಳಂತೆ.

ಅಭಿವಂದನಾ

ಸಂಭಾಷಣೆಗಳಲ್ಲಿ ಲವಲವಿಕೆಯ ಭಾಷೆಯನ್ನು ಬಳಸುವಲ್ಲಿ ತೊರವೆಯ ನರಹರಿ ಯಶಸ್ವಿಯಾಗಿದ್ದಾನೆ. ಸೀತೆಯನ್ನು ರಾಮನ ಬಳಿಗೆ ಕಳುಹಿಸೋಣ ಎನ್ನುವ ವಿಭೀಷಣನ ಹಿತವಚನದ ಮಾತು ಮತ್ತು ರಾವಣನ ಒರಟು ಉತ್ತರ ಈ ಎರಡು ಭಾವಗಳಿಗೆ ಕವಿಯ ಭಾಷೆ ಹೇಗೆ ಪಳಗಿದೆ ನೋಡಿ. ವಿಭೀಷಣನ ತರ್ಕ ವೈಭವ ಮೆಚ್ಚುವಂಥದು. ವಿಭೀಷಣನು ರಾವಣನನ್ನು ಕುರಿತು ಆರಂಭದಲ್ಲಿ ''ಕುಲದಲಲ್ಪನೆ ನೀನು ಮುನಿಕುಲ ತಿಲಕ, ತಿಳಿವಿನಲಿ ಬರಡನೆ, ಬಹುಶ್ರುತಿಗಳು ಮುಖೋದ್ಗತ ನಿನಗೆ'' ಎಂದು ಹೊಗಳಿ ಅಣ್ಣನಿಗೆ ನೀತಿಯನ್ನು ಹೇಳುತ್ತಾನೆ. ಈ ಹಿತವಾದದ ಶೈಲಿಯ ಕೋಮಲತೆಯನ್ನು ರಾವಣನ ಪ್ರತ್ಯುತ್ತರ ಶೈಲಿಯೊಂದಿಗೆ ಹೋಲಿಸಿ ನೋಡಿ:

ವಿಭೀಷಣ:

ಹಿತವ ನುಡಿವರು ಮುಂದೆ ಹಿಂದಪ
ಕೃತಿಯನೆಣಿಸುವರಿದುವೆ ಕುಜನರ
ಕೃತಕ ಬೇಡಕಟಕಟ ಸಾರಿದೆ ಬಿಡು ಮಹೀಸುತೆಯ
ಶ್ರುತಿ ಮತವಿದೀಗಜ್ಞತನದನು
ಚಿತವನಂಗೀಕರಿಸಬೇಡ
ಚ್ಯುತನ ಮಹಿಮೆಯ ಕೇಳು ಕಷ್ಟವನೆಸಗಬೇಡೆಂದ.

ರಾವಣನ ಉತ್ತರ:

ಕೊರಳ ಕಡಿತದಲಾಡುವುದು ಗಡ
ಧರಣಿಜೆಯ ಬಿಡದಿರಲು ರಾಮನ
ಸರಳು ಸೋದರ ಪುತ್ರ ಮಿತ್ರಜ್ಞಾತಿ ಬಾಂಧವರ
ಹರಣವನು ಹೋಗಾಡುವವು ಗಡ
ಹರಮಹಾದೇವಿವನ ಬಾಯನು
ಹರಿಯಕೊಯ್ಯುವರಿಲ್ಲಲಾಯೆನು ತೌಡ ನೊಡೆಯಗಿದ.

ಶೋಕ ಭಾವಪ್ರದರ್ಶನದಲ್ಲಿ ಕವಿಯಶೈಲಿ ಪ್ರೌಢಿಮೆಯನ್ನು ಪಡೆದುಕೊಂಡಿದೆ. ಶ್ರೇಷ್ಠ ಕವಿಗಳಿಗೆ ಇರಬೇಕಾದ ಪದಮೈತ್ರಿಯ ಹಿನ್ನೆಲೆಯಲ್ಲಿ ಈ ಪದ್ಯವನ್ನು ಗಮನಿಸಿ ರಾಮನು ವನವಾಸಕ್ಕೆ ಹೊರಟ ಸಂದರ್ಭದಲ್ಲಿ ಜನ ಗೋಳಿಟ್ಟ ಪ್ರಕರಣ ಇದು. ''ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ ಕೋ'' ಎಂದು ಮುಂತಾಗಿ ಹರಿಶ್ಚಂದ್ರನ ರಾಜ್ಯತ್ಯಾಗದ ಸಂದರ್ಭದಲ್ಲಿ ಪುರಜನ ಪರಿಜನರು ಮಾಡಿದ ಆಲಾಪವನ್ನು ನೆನಪಿಸುವಂತಿದೆ.

ತೆರಳುತಿದೆ ಮಜ್ಜೀವ ರತ್ನಾ
ಭರಣ ತನ್ನ ಮನೋರಥದ ಸಿರಿ
ಸರಿವುತಿದೆ ರಘುರಾಜವಂಶದ ಬಹಳ ಭಾಗ್ಯನಿಧಿ
ಪುರವ ಹೊರವಡುತಿದೆ ಮದೀಯ
ಸ್ಫುರಿತ ಚಂದ್ರಮಕಲ್ಪ ಪಾದಪ
ಪರುಷ ನಿರ್ಜರಧೇನು ಬಿಡುತಿದೆ ತನ್ನನಕಟೆಂದ

7984

ಅಭಿವಂದನಾ

ರಾಮಾಯಣದಂಥ ಮಹಾಕಾವ್ಯದಲ್ಲಿ ಬರುವ ಸೋದರ ಪ್ರೇಮ, ಸ್ನೇಹ ಸಂಬಂಧಗಳು, ವಿಭಿನ್ನ ಸಂಸ್ಕೃತಿಗಳ ಮುಖಾಮುಖಿ, ಮಾತ್ಸರ್ಯ, ವೀರಪ್ರಸಂಗಗಳು ಮೊದಲಾದುವು ರಾಮಾಯಣವನ್ನು 'ಭಾವಪ್ರದರ್ಶನಾಲಯ'ವನ್ನಾಗಿ ಮಾಡಿವೆ. ಈ ಭಾವಪ್ರದರ್ಶನಾಲಯದಲ್ಲಿ ತೊರವೆಯು ಬಿಡಿಸಿರುವ ಚಿತ್ರಗಳು ವರ್ಣವೈಭವವನ್ನಾಗಲಿ ಜೀವಂತಿಕೆಯನ್ನಾಗಲಿ ದೃಶ್ಯ ಚಿತ್ರಣಕ್ಷಮತೆಯನ್ನಾಗಲಿ ವಿಭಿನ್ನರಾಗರುಚಿಗಳನ್ನಾಗಲಿ ಕಳೆದುಕೊಂಡಿಲ್ಲ ಎಂಬುದು ಸಂತೋಷದ ಸಂಗತಿ. ಹರಿಹರ, ಕುಮಾರವ್ಯಾಸ, ಕನಕದಾಸ, ಪಂಪ ಮೊದಲಾದವರಂತೆ ತೊರವೆಯ ನರಹರಿಯಲ್ಲಿ ಪ್ರತಿಮಾಸಂಪದವಾಗಲಿ ಶಬ್ದಲಾಸ್ಯವಾಗಲಿ ಆ ಮಟ್ಟದಲ್ಲಿಲ್ಲ ಎಂಬುದೇ ನಿಜವಾದರೂ ಈ ಕವಿಯನ್ನು ಓದುವುದರಿಂದ ನಡುಗನ್ನಡ ಭಾಷೆಯ ಸೊಗಡನ್ನು ತಿಳಿಯಲು ಸಹಾಯವಾಗುತ್ತದೆಂಬುದನ್ನು ಮರೆಯುವಂತಿಲ್ಲ. ನಿಜವಾಗಿ ಇಂದಿನ ಯುವಕರಿಗೆ ಇಂಥ ಕಾವ್ಯಗಳ ರಸಾಸ್ವಾದನೆಯಲ್ಲಿ ಆಸಕ್ತಿ ಮರುಕಳಿಸಿದರೆ ಕನ್ನಡತನದ ಪುನರುಜ್ಜೀವನವಾಗುವುದರಲ್ಲಿ ಸಂದೇಹವಿಲ್ಲ. ಬೀಸು ಶಬ್ದಗಳನ್ನು ಕವಿ ಎಷ್ಟು ಅರ್ಥಪೂರ್ಣವಾಗಿ ದುಡಿಸಿಕೊಂಡಿದ್ದಾನೆಂಬುದನ್ನು ಈ ಒಂದು ಪದ್ಯದ ನಿದರ್ಶನದಿಂದ ಪರಿಶೀಲಿಸಬಹುದು. ಒಂದು ಘಟ್ಟದಲ್ಲಿ ರಾವಣನಿಗೆ ಸೀತೆಯನ್ನು ರಾಮನ ಬಳಿಗೆ ಕಳಿಸಿಬಿಡಬೇಕು ಎಂಬ ವಿಚಾರದ ಲಹರಿ ಏಳುತ್ತದೆ. ಕಂಬರಾಮಾಯಣ ನಾಗಚಂದ್ರನ ರಾಮಾಯಣಗಳಲ್ಲಿ ಈ ಲಹರಿಯಿದೆ. ತಮಿಳಿನಲ್ಲಂತೂ ''ಕಡಂಬಟ್ಟಾರ್ ನೆಂಜಂ ಬೋಲೆ ಕ ವೈಂಗಿನಾನ್ ಇಲಂಗ್ಯೆ ವೇಂದನ್'' ಎಂಬ ಮಾತು ಬರುತ್ತದೆ. ಅಂದರೆ ಒಡವೆಯನ್ನು ಯಾರಾದರೂ ನಮ್ಮಲ್ಲಿ ನ್ಯಾಸವಾಗಿ ತಂದಿರಿಸಿದ್ದರೆ ಆ ನ್ಯಾಸ ಪಡೆದವರ ಹೃದಯದಲ್ಲಿ ಇದನ್ನು ಒಡೆಯನಿಗೆ ಮರಳಿಸುವ ತನಕ ಸಮಾಧಾನ ಇರುವುದಿಲ್ಲವಲ್ಲ. ಹಾಗೆ ರಾವಣ ನರಳಿದ ಎಂದು ಕವಿ ಹೇಳುತ್ತಾನೆ.

ನರಹರಿಯ ರಾವಣನ ಆತ್ಮ ಪ್ರಾಯಶ್ಚಿತ್ತದ ಲಹರಿಯನ್ನು ನೋಡಿ:

ಮಾಣದಾದೆನು ಮಾವನಾಡಿದ
ವಾಣಿಯನು ಕಾಮುಕ ತನದಿ ತಾ
ಕಾಣದಾದೆನು ಕಲಿವಿಭೀಷಣನುಚಿತ ಭಾಷಿತವ
ಪ್ರಾಣಮಿತ್ರನಲಾ ಪ್ರಹಸ್ತನ
ಲೂಣಯವ ತಾಳಿದೆನು ಜನನಿಯ
ಜಾಣಿಕೆಯ ಜಾತ್ಕುತ್ತರವನತಿಗಳೆದೆ ನಕಟೆಂದ.

***

ಮೂರು ಚಿಂತನಗಳು

-ಡಾ|| ಹಂಪ ನಾಗರಾಜಯ್ಯ

ದುಡಿಮೆಯೇ ದೇವರು ಎಂಬ ಮಾತು ದಿಟ. ಕಾಯಕವು ಕೈಲಾಸವಾಗಬೇಕಾದರೆ ಅಂದಂದಿನ ಕರ್ತವ್ಯವನ್ನು ಅಂದಂದೇ ತ್ರಿಕರಣಪೂರ್ವಕವಾಗಿ ಪೂರೈಸಬೇಕಾಗುತ್ತದೆ. ಕೃಷಿಕ, ಕಾರ್ಮಿಕ, ಶಾಸಕ, ಅಧ್ಯಾಪಕ- ಹೀಗೆ ಪ್ರತಿಯೊಬ್ಬ ಶ್ರಮಿಕನೂ ದಿನನಿತ್ಯದ ಕಾರ್ಯವನ್ನು ನಿರ್ವಹಿಸಬೇಕು. ಆದರೆ ಮನುಷ್ಯ ಸ್ವಭಾವ ವಿಚಿತ್ರವಾದುದು. ಈ ದೇಹಕ್ಕೆ ಸೋಮಾರಿತನದ ರುಚಿ ತೋರಿಸಿದರೆ ಸಾಕು, ಪದೇ ಪದೇ ಅದನ್ನೇ ಬಯಸುತ್ತದೆ. ವಿರಾಮ ವಿಶ್ರಾಂತಿ ಎಲ್ಲರಿಗೂ ಅವಶ್ಯ ಬೇಕು. ೨೪ ತಾಸೂ ದುಡಿಯುವುದು ಅಸಾಧ್ಯ. ಆದರೆ ಬಿಡುವು ಪಡೆಯುವುದು ಬೇರೆ, ಸೋಂಬೇರಿಯಾಗಿರುವುದು ಬೇರೆ. ತಮ್ಮ ಪಾಲಿನ ಕರ್ತವ್ಯವನ್ನು ಸಕಾಲದಲ್ಲಿ ಮಾಡದೆ ವೃಥಾ ಕಾಲಹರಣ ಮಾಡುವುದು ಮೈಗಳ್ಳತನ. ಇದನ್ನು ಕರ್ತವ್ಯಪರಾಙ್ಮುಖತೆಯೆನ್ನುವರು. ನಿಧಾನವಾಗಿ ಮಾಡಿದರಾಯಿತೆಂಬುದು ಆಲಸ್ಯದ ಪ್ರವೃತ್ತಿ.

ವಿದ್ಯಾರ್ಥಿಗಳಲ್ಲಿ ಬಹುಜನರು ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸನಿರತರು. ಪರೀಕ್ಷೆಯ ಕಾಲ ಬಂದಾಗ ಓದಿದರೆ ಆಯಿತು ಎಂದು ಆರಾಮ ಜೀವನಕ್ಕೆ ಒಗ್ಗಿರುತ್ತಾರೆ. ವರ್ಷದ ಮುಕ್ಕಾಲು ಭಾಗವನ್ನು ಆಮೋದ ಪ್ರಮೋದಗಳಲ್ಲಿ ಕಳೆದು ಬಿಡುತ್ತಾರೆ. ಕಾಲ ಯಾರಿಗೂ ಕಾಯುವುದಿಲ್ಲ. ಹ್ಹಾ ಹ್ಹೂ ಅನ್ನುವುದರಲ್ಲಿ ಪರೀಕ್ಷೆ ಬಂದು ಬಿಡುತ್ತದೆ. ಆಗ ಧಾವಂತ, ಆತಂಕ, ಗಾಬರಿ ಪರೀಕ್ಷೆಯ ಕತ್ತಿ ನೆತ್ತಿಯ ಮೇಲೆ ತೂಗಾಡುವಾಗ ರಾತ್ರಿಯೆಲ್ಲಾ ನಿದ್ದೆಗೆಡುತ್ತಾರೆ. ಒಂದೇ ಸಮನೆ ಕಾಫಿ ಟೀ ಕುಡಿದು ಆರೋಗ್ಯವನ್ನೂ ಕೆಡಿಸಿಕೊಳ್ಳುತ್ತಾರೆ. ಪರೀಕ್ಷೆಯ ದಿನ ನೆಮ್ಮದಿ ಇರುವುದಿಲ್ಲ. ವಿಪರೀತ ಗಡಿಬಿಡಿ. ಆರೋಗ್ಯವೂ ಹಾಳು. ಸರಿಯಾಗಿ ಉತ್ತರ ಬರೆಯಲೂ ಆಗದು. ಪರೀಕ್ಷೆಯ ಫಲಿತಾಂಶ ಬಂದ ಮೇಲೆ ನಪಾಸೆಂದು ತಿಳಿಯುತ್ತದೆ. ನಿರಾಶೆಯ ಮೋಡ ಕವಿಯುತ್ತದೆ: ''ಅಯ್ಯೋ, ವೃಥಾ ಇಡೀ ವರ್ಷ ಹಾಳು ಮಾಡಿದೆ. ವರ್ಷದ ಪ್ರಾರಂಭದಿಂದಲೇ ಓದಿದ್ದರೆ ಚೆನ್ನಾಗಿತ್ತು'' ಎಂದು ಈಗ ಮನವರಿಗೆ ಆಗುತ್ತದೆ. ಕೆಟ್ಟಮೇಲೆ ಬುದ್ಧಿ ಬರುತ್ತದೆ. ಮತ್ತೆ ಕೆಲವರಿಗೆ ಕೆಟ್ಟಮೇಲೂ ಬುದ್ಧಿ ಬರುವುದಿಲ್ಲ. ಮುಂದಿನ ವರ್ಷ ಪರೀಕ್ಷೆಗೆ ಕುಳಿತರೆ ಆಯಿತೆಂಬ ತಾತ್ಸಾರ ತೋರುತ್ತ ಒಂದೊಂದು ಪರೀಕ್ಷೆಯಲ್ಲಿ ಎರಡು ಮೂರು ವರ್ಷ ಫೇಲಾಗುವ ಭೂಪತಿಗಳೂ ಇರುತ್ತಾರೆ. ಫೇಲಾದವರೆಲ್ಲ ದಡ್ಡರೆಂದಲ್ಲ. ಅವರು ತಮ್ಮ ಏಕಾಗ್ರತೆಯನ್ನು ಸಾಧಿಸದೆ ಹಗುರ ಜೀವನಕ್ಕೆ ಶರಣಾಗಿರುತ್ತಾರೆ.

ಹೀಗೆ ಅನೇಕ ಜನ ಬಾಲ್ಯವನ್ನು ವಿನೋದ ಲಹರಿಯಲ್ಲಿ ಮುಗಿಸಿಬಿಡುತ್ತಾರೆ. ಯೌವನದಲ್ಲಿ ಸರಿಯಾಗಿ ದುಡಿಯದೆ ಮುಂದೆ ನೋಡೋಣ ಎಂದು ಒಂದೇ ಸಮನೆ

ಕೆಲಸಗಳನ್ನು ಮುಂದೂಡುತ್ತಾರೆ. ಮಾಡಬೇಕಾದ ಅಂದಂದಿನ ಕೆಲಸಗಳನ್ನು ಸಕಾಲದಲ್ಲಿ ಮಾಡಿಮುಗಿಸದೆ ಕುಂಟುನೆಪಗಳನ್ನೊಡ್ಡಿ ನಾಳೆ ನಾಡಿದ್ದು ಎಂದು ಮುಂದು ಮುಂದಕ್ಕೆ ತಳ್ಳುತ್ತಾರೆ. ಕಡೆಗೆ ಜವಾಬ್ದಾರಿಗಳು ಬೆಟ್ಟದಷ್ಟು ಬೆಳೆದಿರುತ್ತವೆ. ಅದರ ಅಗಾಧತೆಗೆ ಆಗ ಎದೆ ಕುಸಿಯುತ್ತದೆ. ಮುಪ್ಪು ಬಂದು ಅಡರಿದಾಗ ಯೌವನದ ಹುರುಪು ಸಹ ಇರುವುದಿಲ್ಲ. ಪಶ್ಚಾತ್ತಾಪದಿಂದ ಕೈ ಕೈ ಹಿಸುಕಿ ಪರದಾಡುತ್ತಾನೆ. ಬಹಳ ಹಿಂದೆಯೇ ಈ ಕೆಲಸ ಕಾರ್ಯಗಳನ್ನು ಮಾಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಪೇಚಾಡುತ್ತಾನೆ.

ಆಯುರ್ವರ್ಷಶತಂ ನೃಣಾಂ ಪರಿಮಿತಂ ರಾತ್ರೌ ತದರ್ಧಂ ಗತಂ
ತಸ್ಯಾರ್ಧಸ್ಯ ಪರಸ್ಯ ಚಾರ್ಧಮಪರಂ ಬಾಲತ್ವವೃದ್ಧತ್ವಯೋಃ।
ಶೇಷಂ ವ್ಯಾಧಿವಿಯೋಗದುಃಖಭರಿತಂ ಸೇವಾದಿಭಿರ್ನೀಯತೇ
ಜೀವೇ ವಾರಿತರಂಗಚಂಚಲತರೇ ಸೌಖ್ಯಂ ಕುತಃ ಪ್ರಾಣಿನಾಮ್॥

ಮನುಷ್ಯರ ಆಯುಸ್ಸಿನ ಪರಿಮಿತಿ ಒಂದು ನೂರು ವರ್ಷಗಳು. ಅದರಲ್ಲಿ ಅರ್ಧಭಾಗವು ರಾತ್ರಿಯಲ್ಲಿ ಕಳೆದುಹೋಗುತ್ತವೆ. ಉಳಿದ ಅರ್ಧದಲ್ಲಿ ಅರ್ಧ ಬಾಲ್ಯದಲ್ಲಿಯೂ ಮುಪ್ಪಿನಲ್ಲಿಯೂ ಹೋಗುತ್ತದೆ. ಇನ್ನುಳಿದುದು ರೋಗ, ವಿರಹ, ದುಃಖ, ಸೇವೆ ಮೊದಲಾದವುಗಳಲ್ಲಿ ಹೋಗುತ್ತದೆ. ನೀರಿನ ಅಲೆಗಳಿಗಿಂತಲೂ ಹೆಚ್ಚು ಚಂಚಲವಾದ ಈ ಬಾಳಿನಲ್ಲಿ ಪ್ರಾಣಿಗಳಿಗೆ ಸುಖ ಎಲ್ಲಿಯದು ಎಂದು ಅನುಭವದ ಅಮೃತವಾಣಿ ಗಂಟೆ ಬಾರಿಸುತ್ತಿದೆ. ಯೋಗಾಯೋಗದಿಂದ ಸಿಕ್ಕಿರುವ ಕಾಲಾವಕಾಶವನ್ನು ಕಳೆದುಕೊಳ್ಳಬಾರದೆಂಬುದು ಇಲ್ಲಿರುವ ವಿವೇಕ. ನಾಳೆ ಎಂಬುದು ಹಾಳು, ನಾಳೆ ಬಪ್ಪುದು ಇಂದೇ ಬರಲಿ ಎಂದು ಮಹಾಪುರುಷರು ನುಡಿದಿರುವುದು ಈ ಕಾರಣಕ್ಕಾಗಿಯೆ. ಮಹಾತ್ಮರಾದ ಕನಕದಾಸರು ಹರಿಭಕ್ತಿಸಾರದಲ್ಲಿ ಇದನ್ನು ಪ್ರಭಾವಶಾಲಿಯಾಗಿ ತಿಳಿಸಿದ್ದಾರೆ.

ಚಿಂತನ: ಎರಡು

ಲೋಕದಲ್ಲಿ ಯಾರೂ ಹೆಚ್ಚಲ್ಲ, ಯಾರೂ ಕಡಮೆಯಲ್ಲ. ಇದು ಪ್ರಕೃತಿಯ ನಿಯಮ, ಪ್ರಕೃತಿ ಧರ್ಮ. ಗಂಡಸು ಅಧಿಕವೆಂದು ಕೆಲವರು ಹೇಳಿರುವುದುಂಟು. ಹೆಂಗಸೇ ಹೆಚ್ಚು ಎಂದು ಪ್ರತಿಪಾದಿಸಿದವರೂ ಇದ್ದಾರೆ. ಇದರ ತದ್ವಿರುದ್ಧವಾದ ಪ್ರತಿಪಾದನೆಗಳೂ ಇವೆ. ಅದರಲ್ಲಿಯೂ ಪುರುಷನಿಗೆ ಪ್ರಾಧಾನ್ಯವಿತ್ತು ಸ್ತ್ರೀಯನ್ನು ನಿಕೃಷ್ಟವಾಗಿ ಕಾಣುವ ಮನೋಧರ್ಮವೊಂದು ಸಾವಿರಾರು ವರ್ಷಗಳಿಂದ ಬೆಳೆದುಬಂದಿದೆ. ಹುಟ್ಟಿದರೆ ಗಂಡು ಮಗು ಹುಟ್ಟಬೇಕು ಎಂಬ ನಂಬಿಕೆಯೊಂದು ಪುರಾತನ ಕಾಲದಿಂದ ಪ್ರಚಲಿತವಾಗಿದೆ. ಪುರಾಣಗಳೂ ಇದೇ ಭಾವನೆಯನ್ನು ಬೆಂಬಲಿಸಿ ಹುರಿದುಂಬಿಸಿವೆ. ಸತ್ತವನಿಗೆ ಸದ್ಗತಿ ಸಿಗಬೇಕಾದರೆ ಮಗನೇ ತರ್ಪಣ ಬಿಡಬೇಕೆಂಬ ಸಿದ್ಧಾಂತವನ್ನೂ ಬರೆಯಲಾಗಿದೆ. 'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ಸೂಕ್ತಿಯೊಂದು ಪ್ರಸಿದ್ಧಿ ಪಡೆದು ಚಲಾವಣೆಯಲ್ಲಿ ನಿಂತುಬಿಟ್ಟಿದೆ. ಗಂಡು ಮಗು, ಪುತ್ರಸಂತಾನ ಇರದಿದ್ದರೆ ಸದ್ಗತಿಯೇ ಸಿಗುವುದಿಲ್ಲವೆಂಬ ನಂಬಿಕೆ

ಬಲವಾಗಿ ಜನಮನದಲ್ಲಿ ಬೇರೂರಿದೆ. ಇಂದಿಗೂ ಈ ಭಾವನೆ ಜೀವಂತವಾಗಿದೆ. ಗಂಡು ಮಗು ಜನಿಸಿದರೆ ತಾಯಿ ತಂದೆಯಾದಿಯಾಗಿ ಬಂಧು ಬಾಂಧವರೆಲ್ಲ ಸಂಭ್ರಮಿಸುತ್ತಾರೆ. ಹೆಣ್ಣು ಮಗು ಹುಟ್ಟಿದರೆ ಮುಖ ಸಿಂಡರಿಸುತ್ತಾರೆ; ಅಯ್ಯೋ ಹೆಣ್ಣು ಮಗು ಹುಟ್ಟಿತೇ ಎಂದು ನೆಂಟರಿಷ್ಟರೆಲ್ಲ ಮೂಗು ಮುರಿಯುತ್ತಾರೆ. ಪಂಚತಂತ್ರದಲ್ಲಿ ಹೇಳಿಯೂ ಇದೆ-

ಪುತ್ರೀತಿ ಜಾತಾ ಮಹತೀಹ ಚಿಂತಾ
ಕಸ್ಮೈ ಪ್ರದೇಯೇತಿ ಮಹಾನ್ವಿತರ್ಕಃ।
ದತ್ವಾ ಸುಖಂ ಪ್ರಾಪ್ಸ್ಯತಿ ವಾ ನ ವೇತಿ
ಕನ್ಯಾಪಿತೃತ್ವಂ ಖಲು ನಾಮ ಕಷ್ಟಮ್॥

ಮಗಳು ಹುಟ್ಟಿದಳೆಂಬುದೇ ಹೆಚ್ಚು ಚಿಂತೆಗಳಿಗೆ ಕಾರಣ. ಇವಳನ್ನು ಯಾರಿಗೆ ಮದುವೆ ಮಾಡಿಕೊಡುವುದು, ಹಾಗೆ ಕೊಟ್ಟಾಗ ಸುಖ ಪಡೆಯುವಳೋ ಇಲ್ಲವೋ ಎಂದು ಬಹಳವಾಗಿ ಯೋಚಿಸಬೇಕಾಗುವುದು. ನಿಜವಾಗಿ ಹೆಣ್ಣಿನ ತಂದೆಯಾಗಿರುವುದು ಬಹಳ ಕಷ್ಟವಂತೆ. ತಾಯಿಯ ಬಸುರಿನಲ್ಲಿ ಇರುವ ಭ್ರೂಣದ ಪರೀಕ್ಷೆಮಾಡಿ ನೋಡುವ ಪರಿಪಾಟಿಯೂ ಈಗ ಫ್ಯಾಷನ್ನೇ ಆಗಿದೆ. ಗರ್ಭದಲ್ಲಿರುವ ಜೀವ ಹೆಣ್ಣಾದರೆ ಅದನ್ನು ಹುಟ್ಟುವ ಮೊದಲೇ ಗರ್ಭಪಾತ ಮಾಡಿಸುವವರೂ ಇದ್ದಾರೆ. ಸ್ತ್ರೀಯ ವಿಚಾರವಾಗಿ ಇಂಥ ತಾತ್ಸಾರ ತಿರಸ್ಕಾರಗಳು ಹಲವು ಶತಮಾನಗಳಿಂದ ರೂಢಿಯಲ್ಲಿವೆ. **ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ**- ಹೆತ್ತ ತಾಯಿ ಮತ್ತು ತಾಯ್ನಾಡು ಸ್ವರ್ಗಕ್ಕಿಂತ ಶ್ರೇಷ್ಠವಾದುದು ಎಂದೂ, **ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ**- ಎಲ್ಲಿ ನಾರಿಯು ಪೂಜನೀಯಳೋ ಅಲ್ಲಿ ದೇವತೆಗಳು ಕೂಡ ರಮಿಸುವರು ಎಂದೂ ಒಂದು ಸ್ತ್ರೀಪರವಾದ ಕಾಳಜಿಯೂ ಕಂಡು ಬರುತ್ತದೆ. ಆದರೆ ಇದು ಕ್ವಚಿತ್ತಾಗಿ ಮಾತ್ರ ಬರುತ್ತದೆ. ಸ್ತ್ರೀಯು ಅಪಶಕುನದ, ವಂಚನೆಯ, ದ್ವೇಷ ಅಸೂಯೆಗಳ ಮೂರ್ತಿಯೆಂದೇ ಭಾರತೀಯ ವಾಙ್ಮಯರಾಶಿ ಚಿತ್ರಿಸಿರುವುದು ದುರ್ದೈವ. ಪ್ರಚಲಿತ ಬಹುಜನರ ಅಭಿಪ್ರಾಯವೂ ಇದಕ್ಕೆ ಸಂವಾದಿಯಾಗಿರುವುದಂತೂ ದುರಂತ. ಏಕೆಂದರೆ ಅವರ ಪ್ರಕಾರ ಹೆಣ್ಣು ಅಡುಗೆ ಮನೆಯಲ್ಲಿ ಇರಲು ಲಾಯಕ್ಕು, ಮಲಗುವ ಮಂಚದಲ್ಲಿ ಆಕೆ ಜತೆಯಲ್ಲಿದ್ದರೆ ಸಾಕು! ಹೆಣ್ಣು ಮಕ್ಕಳನ್ನು ಹೆರುವ ಯಂತ್ರ ಮಾತ್ರ- ಎಂಬಂಥ ಏಕಪಕ್ಷೀಯ ಧೋರಣೆಯೊಂದು ನೂರಾರು ವರ್ಷಗಳಿಂದ ಕ್ರಿಯಾಶೀಲವಾಗಿದೆ. ಇಂದಿಗೂ ಹೆಣ್ಣು ಮಕ್ಕಳಿಗೇಕೆ ಹೆಚ್ಚು ಉನ್ನತ ವಿದ್ಯಾಭ್ಯಾಸ ಕೊಡಬೇಕೆಂದು ಕೇಳುವ ಸಂಕುಚಿತ ಭಾವನೆಯವರಿದ್ದಾರೆ. ಇಂಥ ಶೋಷಣೆಯ ನಡುವೆಯೂ ಮಹಿಳೆ ಕರ್ತವ್ಯ ನಿರತಳಾಗಿದ್ದು ಸಂಸಾರವನ್ನು ನಿರ್ವಹಿಸುತ್ತಿದ್ದಾಳೆ, ಸಮಾಜವನ್ನು ನಡೆಸುತ್ತಿದ್ದಾಳೆ. ತಾಯಿಯಾಗಿ, ಅಕ್ಕತಂಗಿಯಾಗಿ, ಹೆಂಡತಿಯಾಗಿ, ಮಗಳಾಗಿ, ಸೊಸೆಯಾಗಿ ಈ ಮಾನವ ಜೀವನ ಮುನ್ನಡೆಯಲೂ, ಸಹ್ಯವಾಗಿಸಲೂ ಹೆಣ್ಣು ಬಾಳಿನುದ್ದಕ್ಕೂ ಶ್ರಮಿಸುತ್ತಾಳೆ. ಪುರುಷನೂ ಸ್ತ್ರೀಯೂ ಈ ಜೀವನರಥದ ಎರಡು ಗಾಲಿಗಳು. ಒಬ್ಬ ವ್ಯಕ್ತಿ ಒಳ್ಳೆಯವನು ಅಥವಾ

ಕೆಟ್ಟವನು ಆಗುವುದು ಲಿಂಗ ವ್ಯತ್ಯಾಸಗಳಿಂದಾಗಿ ಅಲ್ಲ. ಆಯಾ ವ್ಯಕ್ತಿಯ ವರ್ತನೆ ವಿಕಾರಗಳು, ಅವರವರ ಸಂಸ್ಕಾರ ಸ್ವಭಾವಗಳಿಂದ ರೂಪುಗೊಳ್ಳುತ್ತವೆ. ಸೃಷ್ಟಿಯಲ್ಲಿ ಎಲ್ಲ ಜೀವಿಗಳೂ ಸರಿಸಮಾನರು.

ಚಿಂತನ: ಮೂರು

ಸಂಸಾರ ಅನ್ನುವುದು ಒಂದು ಸಾಮರಸ್ಯದ ಸಂಸ್ಥೆ. ಕುಟುಂಬದಲ್ಲಿ ಒಬ್ಬರು ಹೆಚ್ಚು, ಇನ್ನೊಬ್ಬರು ಕಡಮೆ ಎಂದು ಭಾವಿಸುವುದು ಅಪಾಯಕಾರಿ. ಮನೆಯಲ್ಲಿ ತಂದೆ ಮುಖ್ಯವೊ, ತಾಯಿ ಮುಖ್ಯವೊ ಎಂಬ ಪ್ರಶ್ನೆಗೆ ಪೂರ್ವಿಕರು ತಾಯಿಯೇ ಪ್ರಥಮಳೆಂದಿದ್ದಾರೆ. ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ ಎಂಬ ಉಪನಿಷದ್‌ವಾಣಿ ಸ್ಮರಣೀಯವಾಗಿದೆ. ಮೊದಲು ತಾಯಿಗೆ ವಂದಿಸಿ, ಅನಂತರ ತಂದೆಗೆ ನಮಸ್ಕರಿಸಿ, ಆಮೇಲೆ ಗುರುವಿಗೆ ಗೌರವ ತೋರಲಾಗಿದೆ. ತಾಯಿಗಿಂತ ದೇವರಿಲ್ಲ, ಉಪ್ಪಿಗಿಂತ ರುಚಿಯಿಲ್ಲವೆಂಬ ನಾಣ್ಣುಡಿ ಜನಜನಿತವಾಗಿದೆ. ತಾಯಿ ಸ್ತ್ರೀ ಶಕ್ತಿಯ, ಪ್ರಕೃತಿಯ ಪ್ರತೀಕ. ಯಾವುದೇ ಒಂದು ಮನೆಗೆ ಕಳೆ ಬರಬೇಕಾದರೆ ತಾಯಿಯೊ, ಹೆಂಡತಿಯೊ, ಮಗಳೊ, ಸೊಸೆಯೊ ಅಥವಾ ಇವರೆಲ್ಲರೂ ಇರಬೇಕು. ಗಂಡ-ಹೆಂಡತಿ ಕುಟುಂಬದ ಎರಡು ಕಣ್ಣು. ಸಂಸಾರದ, ಮನೆತನದ ಯಶಸ್ಸು ದಂಪತಿಗಳ ಅನ್ಯೋನ್ಯತೆಯನ್ನು ಅವಲಂಬಿಸುತ್ತದೆ. ಪತಿ-ಪತ್ನಿಯರು ಪರಸ್ಪರ ಪ್ರೀತಿ ಪ್ರೇಮಗಳಿಂದ ಬಾಳುವುದೆಂದರೆ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದು ಎಂದರ್ಥ. ಕಷ್ಟ ಸುಖಗಳಲ್ಲಿ ಸ್ಪಂದಿಸುತ್ತ ಇಹದ ಬದುಕನ್ನು ಸಾರ್ಥಕವಾಗಿ ಪೂರೈಸುವುದಕ್ಕೆ, ವಂಶವಾಹಿನಿಯ ಮುಂದುವರಿಕೆಗೆ ನಲ್ಲ ನಲ್ಲೆಯರ ಪಾತ್ರ ಮಹತ್ತರವಾದುದು. ಅರಮನೆ ಇರಲಿ, ಗುಡಿಸಲಾಗಲಿ ಪತಿ ಪತ್ನಿಯರ ಕರ್ತವ್ಯ ಅಗಾಧವಾಗಿರುತ್ತದೆ. ಅವರಿಬ್ಬರ ತ್ಯಾಗ ಅನುರಾಗ ಅನುಸರಣೆ ಕ್ಷಮಾಗುಣಗಳಿಂದ ಬಾಳು ಬೆಳಗಬೇಕಾಗುತ್ತದೆ.

ಪ್ರಾಚೀನ ಕಾಲದಿಂದ ಉಪಲಬ್ಧವಿರುವ ಶಾಸನ ದಾಖಲೆಗಳಲ್ಲಿ ತನ್ನ ತಾಯಿಗೆ, ಹೆಂಡತಿಗೆ, ಮಗಳಿಗೆ, ಅಕ್ಕನಿಗೆ ಅವರು ಬದುಕಿರುವಾಗಲೂ, ಮರಣಹೊಂದಿದ ಮೇಲೂ ಅಗಾಧ ಪ್ರೀತ್ಯಾದರಗಳನ್ನು ತೋರಿದ ನಿದರ್ಶನಗಳು ನೂರಾರು ಸಿಗುತ್ತವೆ. ಸೇವುಣರಾಜನಾದ ಮಹಾದೇವನ ಮಂತ್ರಿ ಕೂಚಿರಾಜನು ತನ್ನ ನೆಚ್ಚಿನ ಹೆಂಡತಿ ಲಕ್ಷ್ಮಿಯು ಸತ್ತಾಗ ಅವಳ ಹೆಸರಿನಲ್ಲಿ ಲಕ್ಷ್ಮೀಜಿನಾಲಯ ಎಂಬ ದೇವಸ್ಥಾನವನ್ನು ಕಟ್ಟಿಸಿ ೨೩ನೆಯ ತೀರ್ಥಂಕರರಾದ ಪಾರ್ಶ್ವನಾಥರ ಮೂರ್ತಿಯನ್ನು ಪ್ರತಿಷ್ಠಾಪಿಸಿದನು. ಮಹಾಸಾಮಂತನಾಗಿದ್ದ ಗೂಳಿಯ ಬಾಚಿದೇವನು ತನ್ನ ಮುದ್ದು ಮಡದಿಯಾಗಿದ್ದ ಭೀಮವ್ವೆ ನಾಯಕಿತಿಯು ಮರಣಿಸಿದಾಗ ಅವಳ ಹೆಸರಿನಲ್ಲಿ ಪರೋಕ್ಷ ವಿನಯದಿಂದ ತುಮಕೂರು ಜಿಲ್ಲೆ ಕೈದಾಳದಲ್ಲಿ ಭೀಮಜಿನಾಲಯವನ್ನು ಮಾಡಿಸಿದನು. ಅಷ್ಟೇ ಅಲ್ಲದೆ ಒಂದು ಕೆರೆಯನ್ನು ಕಟ್ಟಿಸಿ ಅದಕ್ಕೆ ತನ್ನ ಹೆಂಡತಿಯ ಜ್ಞಾಪಕಾರ್ಥವಾಗಿ 'ಭೀಮಸಮುದ್ರ'

ಎಂದು ಹೆಸರಿಟ್ಟನು. ಚಾಳುಕ್ಯ ಚಕ್ರವರ್ತಿಯಾದ ತ್ರೈಲೋಕ್ಯ ಮಲ್ಲನಿಗೆ ದಕ್ಷಿಣ ವಿಜಯ ಭುಜಾದಂಡವೆನಿಸಿದ್ದವನು ನಾಗವರ್ಮನೆಂಬ ಸೇನಾಪತಿ. ಮಹಾಪ್ರಚಣ್ಡದಂಡನಾಯಕ ನಾಗವರ್ಮನು ಕಾಳಾಮುಖ ಶೈವಗುರುಗಳಾದ ಶ್ರೀ ವಾಗೀಶ್ವರ ಪಂಡಿತರ ಪರಮಭಕ್ತನಾಗಿದ್ದನು. ಈ ನಾಗವರ್ಮನು ಆದರ್ಶ ಪುರುಷನಾಗಿದ್ದನು. ತನ್ನ ತಂದೆಯ ಹೆಸರಿನಲ್ಲಿ ನಾರಾಯಣ ದೇವರ ಮೂರ್ತಿಯನ್ನೂ, ತಾಯಿಯ ನೆನಪಿಗೆ ಆದಿತ್ಯ ದೇವರನ್ನೂ, ಚಿಕ್ಕಪ್ಪನವರ ಸ್ಮರಣೆಗೆ ಅಯ್ಯೇಶ್ವರ ದೇವರನ್ನೂ, ತನ್ನ ಹೆಂಡತಿಯ ಹೆಸರಿನಲ್ಲಿ ಸರಸ್ವತೀ ಮಂಟಪವನ್ನೂ, ಮಗನ ಜ್ಞಾಪಕಾರ್ಥನಾಗಿ ಭೈರವ ದೇವರನ್ನೂ, ಒಡಹುಟ್ಟಿದ ತಂಗಿಯ ನೆನಪಿಗಾಗಿ ಮಲ್ಲಿಕಾರ್ಜುನ ದೇವರನ್ನೂ, ಬೇರೆ ಬೇರೆ ದೇವಾಲಯಗಳನ್ನೂ ಮಾಡಿಸಿದನು. ಇದೊಂದು ಅಪೂರ್ವ ದಾಖಲೆ. ಸಂಸಾರ ಎಂಬುದು ಸುಖಮಯವಾಗಬೇಕಾದರೆ ಒಬ್ಬರಿಗೊಬ್ಬರು ಹೀಗೆ ಕೃತಜ್ಞತೆ, ಪ್ರೀತಿ, ವಿಶ್ವಾಸಗಳನ್ನು ಹೊಂದಿರಬೇಕೆಂಬುದೇ ಇದರ ಸಾರಾಂಶ. ಯಾರೊಬ್ಬರೂ ತನಗೆ ತಾನು ಜೀವಿಸಿರುವುದು ಅಸಾಧ್ಯ. **ಪರಸ್ಪರೋಪಗ್ರಹೋ ಜೀವಾನಾಂ** ಎಂದು ಉಮಾಸ್ವಾತಿ ಮುನಿಯು ತತ್ವಾರ್ಥಸೂತ್ರದಲ್ಲಿ ಹೇಳಿದ್ದಾರೆ. ಪರಸ್ಪರ ಸಹಾಯ, ಪ್ರತಿ ಸಹಾಯ, ಉಪಕಾರಗಳಿಂದಲೇ ಈ ಮಾನವ ಸಮಾಜ ಮುನ್ನಡೆಯಬೇಕು. ಬೆಳಿಗ್ಗೆಯಿಂದ ರಾತ್ರಿ ಮಲಗುವವರಗೆ ಇಡೀ ದಿವಸ ನಾವು ಅದೆಷ್ಟು ಜನರಿಗೆ ಕೃತಜ್ಞರಾಗಿರುತ್ತೇವೆಂಬುದನ್ನು ಒಮ್ಮೆ ಪರಿಭಾವಿಸಿದರೆ ಸಾಕು ಈ ವಿಷಯ ತನಗೆ ತಾನೆ ನಿಚ್ಚಳವಾಗಿ ಪ್ರಕಾಶಿತವಾಗುತ್ತದೆ:

ಎನಿತು ಜನ್ಮದಲಿ ಎನಿತು ಜೀವರಿಗೆ
ಎನಿತು ನಾವು ಋಣಿಯೊ
ತಿಳಿದು ನೋಡಿದರೆ ಬಾಳು ಎಂಬುದಿದು
ಋಣದ ರತ್ನಗಣಿಯೊ

ಗುಣಶಾಲಿಯಾದವರು, ಪ್ರತ್ಯುಪಕಾರ ಬುದ್ಧಿಯವರು, ಕೃತಜ್ಞತೆಯುಳ್ಳವರು ಋಣಮುಕ್ತರಾಗುವರು.

***

ಸರ್ವರಿಗೂ ಸಮಾನ ಅವಕಾಶಗಳು

ಸಾ. ಮಂಚಯ್ಯ

ನಮ್ಮ ಸಂವಿಧಾನದ ಗುರಿಗಳೇನು?

ಭಾರತ ೧೯೪೭ ರ ಆಗಸ್ಟ್ ತಿಂಗಳು ೧೫ ರಂದು ಬ್ರಿಟಿಷರ ಆಡಳಿತದ ಸಂಕೋಲೆಯಿಂದ ಬಿಡುಗಡೆಹೊಂದಿ ಸ್ವತಂತ್ರ ರಾಷ್ಟ್ರವಾಯಿತು. ಸ್ವಾತಂತ್ರ್ಯ ಆದರೊಡನೆ ನಾವು ನಿರೀಕ್ಷಿಸದಿದ್ದ ಹಲವು ಸಮಸ್ಯೆಗಳನ್ನೂ ತಂದಿತು. ಅವೆಲ್ಲವನ್ನೂ ದಿಟ್ಟತನದಿಂದ ಎದುರಿಸಿದ್ದೇವೆ. ನಮ್ಮ ರಾಜ್ಯವ್ಯವಸ್ಥೆ ಹೇಗಿರಬೇಕೆಂಬುದನ್ನು ನಿರ್ಧರಿಸಲು ರಾಜ್ಯಾಂಗ ಸಭೆ ರಚನೆಯಾಯಿತು. ಆ ಸಭೆ ಸಂವಿಧಾನವನ್ನು ರಚಿಸಿ ಅದನ್ನು ೧೯೪೯ ನವೆಂಬರ್ ತಿಂಗಳು ದಿನಾಂಕ ೨೬ ರಂದು ಅಂಗೀಕರಿಸಿತು. ಅದರಂತೆ:

ಭಾರತದ ಪ್ರಜೆಗಳಾದ ನಾವು ಸರ್ವಧರ್ಮ ಸಮಭಾವದ (Secular) ಸಮಾಜವಾದಿ ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ವ್ಯವಸ್ಥೆಗೊಳಿಸುವುದಕ್ಕಾಗಿ,

ಅದರ ಸಮಸ್ತ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಸಮಗ್ರತೆ, ವಾಕ್ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಆರಾಧನಾ ಸ್ವಾತಂತ್ರ್ಯ, ಸ್ಥಾನಮಾನ ಮತ್ತು ಅವಕಾಶಸಮಾನತೆ ದೊರೆಯುವಂತೆ ಮಾಡುವುದಕ್ಕಾಗಿ,

ನಮ್ಮ ರಾಜ್ಯಾಂಗ ಸಭೆಯಲ್ಲಿ ೧೯೪೯ ನೇ ಇಸವಿ ನವೆಂಬರ್ ತಿಂಗಳು ೨೬ ನೇ ತಾರೀಖು ಈ ಮೂಲಕ ಸಂವಿಧಾನವನ್ನು ಅಂಗೀಕರಿಸಿ, ಶಾಸನ ಮಾಡಿ ಆತ್ಮಾರ್ಪಿತ ಮಾಡಿಕೊಂಡಿದ್ದೇವೆ.

ಮುಂದುವರಿದು ಅನುಚ್ಛೇದ ೩೮ ರಲ್ಲಿ 'ರಾಷ್ಟ್ರೀಯ ಜೀವನದ ಎಲ್ಲ ಸಂಸ್ಥೆಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಸಮಗ್ರತೆಯು ದೊರೆಯುವುದಕ್ಕೆ ಪರಿಣಾಮಕಾರಿಯಾದ ವ್ಯವಸ್ಥೆಯನ್ನು ಮಾಡಬೇಕು ಮತ್ತು ಜನರ ಕಲ್ಯಾಣದ ಉನ್ನತಿಗೆ ಸತತ ಪ್ರಯತ್ನ ಮಾಡಬೇಕು. ಅದರಲ್ಲೂ ರಾಜ್ಯವು ಆದಾಯದಲ್ಲಿರುವ ಅಸಮಾನತೆಯನ್ನು ಕಡಮೆ ಮಾಡಲು ಪ್ರಯತ್ನ ಮಾಡಬೇಕು. ವ್ಯಕ್ತಿಗಳಲ್ಲಿ ಮಾತ್ರವಲ್ಲದೆ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿರುವ ಜನಗಳ ಗುಂಪುಗಳಲ್ಲಿ ಇರುವ ಅಸಮಾನತೆಯನ್ನು ತೊಡೆದು ಹಾಕುವ ಪ್ರಯತ್ನ ಮಾಡಬೇಕು, ಎಂದು ಭಾರತೀಯರಿಗೆ ಮತ್ತು ವಿಶ್ವ ಸಮುದಾಯಕ್ಕೆ ಸಾರಿ ಹೇಳಿದ್ದೇವೆ. ಇವೆಲ್ಲವೂ ಮಹೋದ್ದೇಶಗಳೇ! ಈ ಮಹೋದ್ದೇಶಗಳನ್ನು ಕೃತಿಗಿಳಿಸಬೇಕಾದರೆ ಮಹಾ ಪ್ರಯತ್ನವನ್ನೇ ಮಾಡಬೇಕು. ಆದರೆ ಅವುಗಳನ್ನು ಕೃತಿಗಿಳಿಸುವುದು ಎಷ್ಟು ಕಷ್ಟ, ನಮ್ಮ ಮಾರ್ಗದಲ್ಲಿ

ಅಡ್ಡನಿಲ್ಲುವ ಅಡೆತಡೆಗಳೆಷ್ಟು ಎಂಬುದರ ಪರಿಚಯ ನಮಗೀಗಾಗಲೇ ಆಗಿದೆ. ಸಂವಿಧಾನದ ತೊಡಕು, ನ್ಯಾಯಾಂಗದ ವ್ಯಾಖ್ಯಾನ ಮತ್ತು ನಮ್ಮ ರಾಜಕೀಯ ಧುರೀಣರ ಅಸ್ಥಿರ ಮನೋಭಾವ ಎಲ್ಲವೂ ಈ ಪ್ರಯತ್ನಕ್ಕೆ ಅಡ್ಡಿಯಾಗಿ ನಿಲ್ಲುವುದು. ನಾವು ಭಾರತದ ಜನತೆಗಿತ್ತ ಭರವಸೆಗಳನ್ನು ಕೃತಿಗಿಳಿಸಬೇಕಾದರೆ ದೃಢಮನಸ್ಸಿನ ರಾಜಕೀಯ ಸಂಕಲ್ಪ ಬೇಕು. ಅದಿಲ್ಲದೆ ಏನನ್ನೂ ಸಾಧಿಸಲಾಗುವುದಿಲ್ಲ. ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ಆದುದೇನು?

ನಮಗೆ ಸ್ವಾತಂತ್ರ್ಯ ದೊರೆತು ನಾಲ್ಕುವರೆ ದಶಕಗಳ ಮೇಲಾಗಿದೆ. ಆದರೂ ಇನ್ನೂ ನಾವು ಕನಸುಕಂಡ ಸರ್ವೋದಯ ಸಮಾಜವ್ಯವಸ್ಥೆ ಕನಸಾಗಿಯೇ ಉಳಿದಿದೆ. ದೇಶದಲ್ಲಿ ಶೇಕಡ ೪೦ ರಷ್ಟು ಜನರು ಬಡತನದ ರೇಖೆಯ ಕೆಳಗಿದ್ದಾರೆ. ಸಂಪತ್ತು ಕೆಲವೇ ಜನರಲ್ಲಿ ಸಂಚಯವಾಗಿದೆ. ಒಂದೆಡೆ ಭವ್ಯಮಂದಿರಗಳು, ಅಲ್ಲಿಯೇ ಪಕ್ಕದಲ್ಲಿ ಬಡವರ ಜೋಪಡಿಗಳು; ಕೆಲವರು ಮೃಷ್ಟಾನ್ನ ಭೋಜನ ಮಾಡಿ ಸುಖಲೋಲುಪ್ತರಾಗಿದ್ದರೆ, ಅವರ ಮನೆಗಳ ಮುಂದೆಯೇ ಅವರು ಉಂಡು ಎಸೆದ ಎಂಜಲೆಲೆಗಳಲ್ಲಿ ಅಳಿದುಳಿದುದನ್ನು ಹೆಕ್ಕಿ, ತಿನ್ನುವ ಜನರನ್ನು ನೋಡುತ್ತೇವೆ. ಎಂತಹ ವಿಪರ್ಯಾಸ! ಇವರಿಗೆ ಸಮಾನತೆ ಸಮಾನ ಅವಕಾಶ ಪದಗಳ ಅರ್ಥವಾದರೂ ತಿಳಿದಿದೆಯೇ?

೧೯೫೧ ರಲ್ಲಿ ಪಾರ್ಲಿಮೆಂಟಿನಲ್ಲಿ ಸಂವಿಧಾನಕ್ಕೆ ಪ್ರಥಮ ತಿದ್ದುಪಡಿಗೆ ಸಂಬಂಧಿಸಿದ ಚರ್ಚೆಯ ಸಮಯದಲ್ಲಿ ರಾಜ್ಯನೀತಿಯ ನಿರ್ದೇಶಕ ತತ್ತ್ವಗಳು (Directive Principles) ಮತ್ತು ಮೂಲಭೂತ ಹಕ್ಕುಗಳ ನಡುವಿನ ಸಂಘರ್ಷ ಈಗಾಗಲೇ ಸಂಸತ್ತಿನಲ್ಲಿ ನಡೆದ ಚರ್ಚೆಗಳು ಮತ್ತು ನ್ಯಾಯಾಂಗದ ತೀರ್ಪುಗಳಿಂದ ಸ್ಪಷ್ಟವಾಗಿದೆ ಎಂದು ಹೇಳಿದುದಲ್ಲದೆ, ನೆಹರು ಮುಂದುವರಿದು 'ರಾಜ್ಯ ನೀತಿಯ ನಿರ್ದೇಶಕ ತತ್ತ್ವಗಳು ಕೆಲವೊಂದು ನಿರ್ದಿಷ್ಟ ಉದ್ದೇಶಗಳ ಸಾಧನೆಗೆ ಚಾಲಕಶಕ್ತಿಗಳಾಗಿವೆ. ಮೂಲಭೂತ ಹಕ್ಕುಗಳು ಸ್ಥಿರವಾದವುಗಳು ಮತ್ತು ಅಸ್ತಿತ್ವದಲ್ಲಿರುವ ಅವುಗಳನ್ನು ರಕ್ಷಿಸಿಕೊಳ್ಳುವುದೇ ಅವುಗಳ ಉದ್ದೇಶ. ಎರಡೂ ಸರಿಯೆ. ಆದರೆ ಕೆಲವು ವೇಳೆ ಕೆಲವು ಸಮಯದಲ್ಲಿ ಚಲನ ಸ್ವಭಾವದ ತತ್ತ್ವಗಳು ಮತ್ತು ಸ್ಥಾಯಿ ಸ್ವಭಾವದವುಗಳು ಒಂದರೊಡನೊಂದು ಹೊಂದಿಕೊಂಡು ಹೋಗಲಾರವು.

ಇದರ ಪರಿಣಾಮ ಹಂತ ಹಂತವಾಗಿ ಮುನ್ನಡೆದು ನಿರ್ದಿಷ್ಟ ಗುರಿ ತಲುಪಬೇಕಾಗಿದ್ದ ಚಲನಶೀಲವಾದ ನಮ್ಮ ಸಂವಿಧಾನ ಸ್ಥಿರ ಸ್ವಭಾವದ ತತ್ತ್ವಗಳ ಮೇಲೆ ಅಗತ್ಯಕ್ಕಿಂತಲೂ ಹೆಚ್ಚು ಒತ್ತು ಕೊಡುವುದರಿಂದ ಸಂವಿಧಾನದ ಚಲನಾತ್ಮಕ ಸ್ವಭಾವದ ವಿಷಯಗಳ ಮುನ್ನಡೆಗೆ ತಡೆಯೊಡ್ಡಿದಂತಾಗಿದೆ.

ವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುವುದರ ಮೂಲಕ ವ್ಯಕ್ತಿ ಅಥವಾ ಗುಂಪುಗಳ ನಡುವಿನ ಅಸಮಾನತೆಯನ್ನು ರಕ್ಷಿಸಿದರೆ ನಮ್ಮ ಸಂವಿಧಾನದಲ್ಲಿ

ಉದ್ಘೋಷಿಸಿಕೊಂಡಿರುವಂತೆ ಕ್ರಮೇಣ ಅಥವಾ ಬೇರೆ ರೀತಿಯಲ್ಲಿ ಹೇಳುವುದಾದರೆ ಶೀಘ್ರ ಗತಿಯಲ್ಲಿ ಈ ಅಸಮಾನತೆಯನ್ನು ಸಾಧ್ಯವಾದಷ್ಟೂ ಕಡಮೆ ಮಾಡಿ ಸಮಾನತೆಯನ್ನು ಹೆಚ್ಚು ಮಾಡುವ ಉದ್ದೇಶಗಳ ನಡುವೆ ಸಂಘರ್ಷ ಉಂಟುಮಾಡುತ್ತೇವೆ. ವ್ಯಕ್ತಿ ಸ್ವಾತಂತ್ರ್ಯ(ಹಕ್ಕು) ಮತ್ತು ಸ್ವಾತಂತ್ರ್ಯಗಳ ರಕ್ಷಣೆಗೆ ಯಾವುದೇ ರೀತಿಯ ಮನವಿಯು ಈಗಿರುವ ಅಸಮಾನತೆಯನ್ನು ಮುಂದುವರಿಸಿಕೊಂಡು ಹೋಗಬೇಕೆಂದಂತಾಗುವುದು. ಆಗ ತೊಂದರೆಗೆ ಸಿಕ್ಕಿಕೊಳ್ಳುವಿರಿ. ಆಗ ನೀವು ನಿಂತಲ್ಲಿಯೇ ನಿಂತು ಪ್ರಗತಿ ವಿರೋಧಿಗಳಾಗಿ ಬದಲಾವಣೆಯನ್ನೇ ತರಲು ಸಾಧ್ಯವಿಲ್ಲದೆ ನಮ್ಮೆಲ್ಲರ ಏಕೋದ್ದೇಶವಾದ ಸರ್ವಸಮಾನ ಸಮಾಜ ಸ್ಥಾಪಿಸಬೇಕೆಂಬುದು ಸಾಧ್ಯವಾಗದು.

೧೯೫೦ ರಲ್ಲಿ ನೆಹರು ಎತ್ತಿ ತೋರಿದ ಈ ಸಂದಿಗ್ಧತೆ ಇನ್ನೂ ನಮ್ಮನ್ನು ಬೆನ್ನು ಬಿಡದೆ ಕಾಡುತ್ತಿದೆ. ಎಲ್ಲ ರೀತಿಯ ಶೋಷಣೆಯಿಂದ ಮುಕ್ತವಾದ ಸಮಾಜ ರಚನೆಯ ಮಾರ್ಗದಲ್ಲಿ ಅಡ್ಡಗೋಡೆಯಾಗಿ ನಿಂತಿದೆ. ನಾವು ಸ್ವತಂತ್ರ ಗಣರಾಜ್ಯವನ್ನು ಸ್ಥಾಪಿಸಿದ್ದೇವೆ ಎಂದು ಹೆಮ್ಮೆಪಟ್ಟುಕೊಂಡರೂ, ಉತ್ತಮ ವರ್ಗ ಮತ್ತು ಅಸಮಾನತೆಯಿಂದ ಕೂಡಿದ ಭಾರತೀಯ ಸಮಾಜದ ಬಗೆಗೆ ತೃಪ್ತಿಪಟ್ಟುಕೊಳ್ಳುವಂತಿಲ್ಲ. ನೆಹರು ಲೋಕಸಭೆಯ ಮುಂದಿಟ್ಟಿರುವ ಚಿತ್ರ ಅಕ್ಷರಶಃ ಸತ್ಯ. ಇಂದಿಗೂ ಇದೇ ವಾದವಿವಾದದಲ್ಲಿ ತೊಡಗಿದ್ದೇವೆ.

ಸಮಾನತೆಯ ಅರ್ಥ

ಮಾನವ ಸಮಾಜದ ದೃಷ್ಟಿಯಿಂದ 'ಸಮಾನತೆ' ಪದದ ಅರ್ಥವಿವರಣೆ ಪರಿಚಯಿಸಿಕೊಳ್ಳುವುದು ಅಗತ್ಯ ಮತ್ತು ಉಪಯುಕ್ತ. ಎಚ್.ಜಿ. ಗ್ಯಾನ್ಸ್ ಪ್ರಕಾರ'ಸಮಾನತೆ' ಎಂದರೆ ನಾವು ಮೂರು ಪರ್ಯಾಯ ಪರಿಣಾಮಗಳನ್ನು ವಿವೇಚಿಸಬಹುದು. ೧. ಸಮಾನ ಅವಕಾಶ (Equality of opportunity) ; ೨. ಸಮಾನ ಒಪ್ಪಂದ ಅಥವಾ ಕರಾರು (Equality of Treatment) ಮತ್ತು ೩. ಸಮಾನಫಲ (Equality of results) ಸಂವಿಧಾನದ ಅನುಚ್ಛೇದ ೧೬(೧) ರಲ್ಲಿ ಉಕ್ತವಾಗಿರುವ ಸಮಾನ ಅವಕಾಶ ಜೀವನ ಸ್ಪರ್ಧೆಯಲ್ಲಿ ವ್ಯಕ್ತಿ ವ್ಯಕ್ತಿಗಳ, ಗುಂಪು ಗುಂಪುಗಳ ನಡುವೆ ಇರಬಹುದಾದ ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯತ್ಯಾಸಗಳನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲರಿಗೂ ಒಂದೇ ರೀತಿಯ ಸ್ವಾತಂತ್ರ್ಯ ಕೊಡುವುದರಿಂದ ಅದು ಸರ್ವಸಮಾನತೆಯ ಆಧಾರದ ಮೇಲೆ ಸಮಾಜವನ್ನು (Egalitarian society) ವ್ಯವಸ್ಥೆ ಮಾಡುವ ಬದಲು ಇಚ್ಛಾ ಸ್ವಾತಂತ್ರ್ಯವಾದವನ್ನು (Libertarian) ಪ್ರೋತ್ಸಾಹಿಸುತ್ತದೆ. ಹಲವು ಅಡ್ಡಿ ಆತಂಕಗಳನ್ನು ಎದುರಿಸುತ್ತ ಜೀವನ ಪ್ರಾರಂಭಿಸುವವರು ಈ ಸಮಾನ ಅವಕಾಶಗಳಿಂದ ಯಾವುದೇ ರೀತಿಯ ಪ್ರಯೋಜನ ಪಡೆಯಲು ಸಾಧ್ಯವಿಲ್ಲ. ಏಕೆಂದರೆ ಅವರು ಸಮಾಜದಲ್ಲಿ ಮೇಲಿನ ಸ್ತರಕ್ಕೆ ಏರಲು ಅಗತ್ಯವಾದ ತಂತ್ರಗಳು ಮತ್ತು ಶ್ರೇಷ್ಠ ಕೌಶಲಗಳನ್ನು ಗಳಿಸಿಕೊಂಡಲ್ಲದೆ ಪ್ರಗತಿಯ

ಓದಲ್ಲಿ ಅದೃಷ್ಟಶಾಲಿಗಳೊಡನೆ ಸ್ಪರ್ಧಿಸುವುದು ಸಾಧ್ಯವಿಲ್ಲ. 'ಸಮಾನ ಅವಕಾಶ ಎಂಬುದು ಒಂದು ಅಸಾಮಾಜಿಕ ತತ್ತ್ವ, ಏಕೆಂದರೆ ಅನೇಕ ದೃಗ್ಗೋಚರವಾಗದ ಮತ್ತು ಸಂಚಿತವಾಗಿರುವ ಅಡೆತಡೆಗಳು ಅವರನ್ನು ಬಲಹೀನರನ್ನಾಗಿ ಮಾಡಿವೆ ಎಂಬ ಕಟುಸತ್ಯವನ್ನು ಆಲಕ್ಷಿಸುತ್ತದೆ. ಬಡಜನರ ಮಕ್ಕಳನ್ನು ಅವರು ಬೆಳೆಯುತ್ತಿರುವ ಪರಿಸರದಿಂದ ಬಿಡುಗಡೆ ಮಾಡಿ, ಅಥವಾ ಪರಿಸರದ ದುಷ್ಪರಿಣಾಮವನ್ನು ಪರಿಣಾಮಕಾರಿಯಾಗಿ ನಿವಾರಿಸಬಹುದಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅನುಷ್ಠಾನಕ್ಕೆ ತಂದು ಅವರಿಗೆ ಶಿಕ್ಷಣ ವ್ಯವಸ್ಥೆ ಮಾಡಿದರೆ ಮಾತ್ರ ಅವರು ಈ ಸಮಾನ ಅವಕಾಶ ಉಪಯೋಗಿಸಿಕೊಂಡು ಪ್ರಯೋಜನ ಪಡೆಯಲು ಸಮರ್ಥರಾಗಬಹುದು. ಇಲ್ಲದಿದ್ದರೆ ಅದು ಅವರಿಗೆ ಕನ್ನಡಿಯಲ್ಲಿನ ಗಂಟಾಗಿಯೇ ಉಳಿಯುವುದು.

೨. ಗ್ಯಾನ್ಸ್ ಪ್ರಕಾರ ಸಮಾನ ಸೌಲಭ್ಯ (Equality of Treatment) ವನ್ನು ಎರಡು ರೀತಿಯಲ್ಲಿ ವ್ಯಾಖ್ಯಾನಿಸಬಹುದು. ವೈಯಕ್ತಿಕವಲ್ಲದ ಸಾಮಾಜಿಕ ವಿಭಾಗದಲ್ಲಿ ಜನರು ಪರಸ್ಪರ ಸಮಾನರೆಂದು ಭಾವಿಸುವುದು ಒಂದು ರೀತಿ. ಜನರ ಪ್ರಸ್ತುತ ಸಾಮಾಜಿಕ ಆರ್ಥಿಕ ಸಂಪನ್ಮೂಲಗಳನ್ನು ಪರಿಗಣಿಸದೆ ಬಲಿಷ್ಠ ವರ್ಗದವರಿಗೆ ಏನೇನು ಸೌಲಭ್ಯಗಳಿವೆಯೋ ಅವೆಲ್ಲವನ್ನೂ ಅಶಕ್ತ ವರ್ಗದವರಿಗೆ ಒದಗಿಸುವುದು ಮತ್ತೊಂದು ರೀತಿ. ಈ ಅರ್ಥದಲ್ಲಿ ನಾವು ಸಮಾನ ಸೌಲಭ್ಯಗಳನ್ನು ಪರಿಶೀಲಿಸಿದರೆ ಅದು ಸಮಾನ ಅವಕಾಶ ತತ್ತ್ವದ ಕೊರತೆಯನ್ನೇ ಹೊಂದಿದೆ. ಅಂದರೆ ಸಮಾನ ಸೌಲಭ್ಯಗಳಿಲ್ಲದೆ ಸಮಾನ ಅವಕಾಶ ತತ್ತ್ವಕ್ಕೆ ಅರ್ಥವಿಲ್ಲ. ಅದೊಂದು ಕೇವಲ ಕಣ್ಣೊರೆಸುವ ಸೂತ್ರವಾಗಿಯೇ ಉಳಿದು ಬಲಹೀನರಿಗೆ ಅಂದರೆ ಸೌಲಭ್ಯಗಳಿಂದ ವಂಚಿತರಾದವರಿಗೆ ಯಾವುದೇ ರೀತಿಯ ಲಾಭ ನೀಡಬಾರದು. ಈ ಘೋಷಣೆಯನ್ನು ಜನತೆಯ ಮುಂದಿಡುವುದರ ಮೂಲಕ ನಮ್ಮನ್ನು ನಾವು ವಂಚಿಸಿಕೊಳ್ಳುತ್ತಿದ್ದೇವೆ.

ಇಂದಿನ ಪರಿಸ್ಥಿತಿ

'ಶಾಲಾ ಕಾಲೇಜುಗಳ ಪ್ರವೇಶಕ್ಕೆ ವೈದ್ಯಕೀಯ, ಅರೆ ವೈದ್ಯಕೀಯ, ತಾಂತ್ರಿಕ, ಅರೆ ತಾಂತ್ರಿಕ, ಕೃಷಿ ಶಿಕ್ಷಣ ಸಂಸ್ಥೆಗಳು -ಇವುಗಳಲ್ಲಿ ಪ್ರವೇಶ ಪಡೆಯಲು ಪ್ರತಿಭೆಯೊಂದೆ ಅಳತೆಗೋಲು. ಅಂದರೆ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆ ಮತ್ತು ಆಯ್ಕೆ ಪರೀಕ್ಷೆಗಳಲ್ಲಿ ಪಡೆದ ಅಂಕಗಳೇ ಆಧಾರ. ಈ ಪರೀಕ್ಷೆಗಳು ಎಲ್ಲರಿಗೂ ಒಂದೆ. ಅಭ್ಯರ್ಥಿಗಳು ಶಿಕ್ಷಣ ಪಡೆದ ಸಂಸ್ಥೆಗಳು, ಅವುಗಳ ಸ್ಥಿತಿಗತಿಗಳು, ಅಭ್ಯರ್ಥಿಗಳಿಗಿದ್ದ ಸೌಲಭ್ಯಗಳು ಮತ್ತು ಅವರ ಪರಿಸರ ಈ ಯಾವ ಅಂಶಗಳನ್ನೂ ಗಣನೆಗೆ ತೆಗೆದುಕೊಳ್ಳುವುದಿಲ್ಲ.

ನಮ್ಮ ಶಿಕ್ಷಣ ಸಂಸ್ಥೆಗಳನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು.

೧. ನಗರ ಪ್ರದೇಶಗಳಲ್ಲೆ ಹೆಚ್ಚಾಗಿ ಅಸ್ತಿತ್ವದಲ್ಲಿರುವ ಮತ್ತು ಗ್ರಾಮೀಣ

ಪ್ರದೇಶದಲ್ಲಿ ಅಪರೂಪವಾಗಿ ಕಾಣುವ ಸಕಲ ಸೌಲಭ್ಯಗಳನ್ನೂ ಹೊಂದಿರುವ ಶ್ರೀಮಂತ ಶಾಲೆಗಳು;

೨. ಕೆಲವೊಂದು ಕನಿಷ್ಠ ಸೌಲಭ್ಯಗಳನ್ನು ಹೊಂದಿರುವ ನಗರ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶದಲ್ಲಿರುವ ಶಾಲೆಗಳು; ಮತ್ತು

೩. ಕನಿಷ್ಠ ಸೌಲಭ್ಯಗಳನ್ನೂ ಹೊಂದಿರದ ಬಹುಸಂಖ್ಯೆಯ ಶಾಲೆಗಳು.

ಅರ್ಹತಾ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿಯೊ ಇಲ್ಲವೆ ಅಧಿಕ ವಂತಿಗೆ ಸಲ್ಲಿಸಿಯೊ ಮೊದಲ ವರ್ಗದ ಶಾಲೆಗಳಲ್ಲಿ ಪ್ರವೇಶ ಪಡೆಯಲು ಶತಪ್ರಯತ್ನ ಮಾಡುವರು. ಜೊತೆಗೆ ಖಾಸಗಿಯಾಗಿ ಪಾಠ ಹೇಳಿಸಿಕೊಳ್ಳುವ ಚೈತನ್ಯವೂ ಇದೆ. ಅವರಿಗೆ ಶಾಲೆಯಲ್ಲಿ ಮತ್ತು ಮನೆಯಲ್ಲಿ ಉತ್ತೇಜನಕರವಾದ ವಾತಾವರಣ ಇರುವುದರ ಜೊತೆಗೆ ಮಾರ್ಗದರ್ಶನವೂ ಇದೆ. ಮೇಲ್ವರ್ಗದ ಮತ್ತು ಮಧ್ಯಮವರ್ಗದ ಕುಟುಂಬಗಳಿಂದ ಬರುವುದರಿಂದ ಹೊರ ಪ್ರಪಂಚದೊಡನೆಯ ಸಂಪರ್ಕ ಪಡೆದಿರುತ್ತಾರೆ.

ನಗರ ಪ್ರದೇಶ, ಪಟ್ಟಣ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳ ಬಹುಸಂಖ್ಯಾತ ಮಕ್ಕಳು ಎರಡನೆಯ ಮತ್ತು ಮೂರನೆಯ ವರ್ಗದ ಶಾಲೆಗಳಲ್ಲಿ ಶಿಕ್ಷಣ ಪಡೆಯುವರು. ಇಂತಹ ಶಾಲೆಗಳಲ್ಲಿ ದೊರಕುವ ಶಿಕ್ಷಣದ ಗುಣಮಟ್ಟ ಊಹಿಸಬಹುದು. ಅನೇಕ ಶಾಲೆಗಳಲ್ಲಿ ವಿಜ್ಞಾನ ಬೋಧನೆಯಲ್ಲಿ ಒಂದು ಪ್ರಾಣಾಳವನ್ನೂ ನೋಡಿರುವುದಿಲ್ಲ. ಪುಸ್ತಕ ಭಂಡಾರಗಳಲ್ಲಿ, ; ಕಟ್ಟಡಗಳಲ್ಲಿ; ಕೊನೆಗೆ ಅಗತ್ಯ ಸಂಖ್ಯೆಯ ಶಿಕ್ಷಕರೂ ಇರುವುದಿಲ್ಲ. ಇಂಥ ಶಾಲೆಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಾಗಲಿ, ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಾಗಲಿ ಪ್ರವೇಶ ಪಡೆಯಲು ಮೊದಲನೆಯ ವರ್ಗದ ಶಾಲೆಗಳಿಂದ ಬರುವ ವಿದ್ಯಾರ್ಥಿಗಳೊಡನೆ ಸ್ಪರ್ಧೆಗೆ ನಿಲ್ಲಬೇಕು. ಇಬ್ಬರು ಸಮಬಲರ ನಡುವಿನ ಸ್ಪರ್ಧೆ ನ್ಯಾಯಸಮ್ಮತವಾದುದು. ಆದರೆ ಇಬ್ಬರು ಅಸಮಬಲರು- ಒಬ್ಬ ತನಗೆ ಲಭ್ಯವಿರುವ ಎಲ್ಲಸೌಲಭ್ಯಗಳನ್ನೂ ಉಪಯೋಗಿಸಿಕೊಂಡು ಬೆಳೆದಿರುವುದಲ್ಲದೆ ಹೊರ ಪ್ರಪಂಚದ ಪರಿಚಯ ಪಡೆದಿರುವವನು, ಮತ್ತೊಬ್ಬ ಕನಿಷ್ಠ ಸೌಲಭ್ಯಗಳೂ ಇಲ್ಲದೆ ಕುಟುಂಬ ಮತ್ತು ಪರಿಸರದ ದುಷ್ಪರಿಣಾಮಗಳನ್ನು ದಾಟಿ ಮೇಲೆ ಬರಲು ಪ್ರಯತ್ನ ಪಡುತ್ತಿರುವ ಅಸಹಾಯಕ ವ್ಯಕ್ತಿ- ಸ್ಪರ್ಧೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದನ್ನು ಸಾಮಾಜಿಕ ನ್ಯಾಯ ಸಮರ್ಥಿಸುವುದೆ? ಇದಕ್ಕೆ ಯಾರು ಉತ್ತರ ಹೇಳಬೇಕು? ಸಮಾಜ, ಸರ್ಕಾರ, ನ್ಯಾಯಾಲಯ? ಎಲ್ಲರೂ ಇದರ ಜವಾಬ್ದಾರಿ ಹೊರಬೇಕು. ಶತಶತಮಾನಗಳಿಂದ ಶೂದ್ರಶಕ್ತಿಯನ್ನು ತುಳಿದು ಅದರ ಪ್ರತಿಭೆ ಪ್ರಕಟಗೊಳ್ಳಲು ಅವಕಾಶವನ್ನು ಕೊಡದ ಮೇಲ್ವರ್ಗದ ಜನ ಉತ್ತರಿಸಬೇಕು. 'ಕಲ್ಲಕುಂಡದಿ ನೆಟ್ಟ ಅಶ್ವತ್ಥ ಸಸಿಯಂತೆ ಕಿಮುಳ್ಳಿ ಗುಜ್ಜಾಗುತದೆ ಮೊಳೆವ ಚೈತನ್ಯ' ಎಂಬ ರಾಷ್ಟ್ರಕವಿ ಕುವೆಂಪು ಅವರ ನುಡಿಗಳು ಈ ವರ್ಗದ ಜನರಿಗೆ ಸಂಪೂರ್ಣವಾಗಿ ಅನ್ವಯವಾಗುವುವು. ಮೇಲ್ವರ್ಗದ ಜನ ಸ್ವಲ್ಪ

ಮಟ್ಟಿನ ತ್ಯಾಗಕ್ಕೆ ಸಿದ್ಧರಾಗಿ ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿನ ಜನರನ್ನಷ್ಟೆ ಅಲ್ಲ, ಉಳಿದೆಲ್ಲ ಹಿಂದುಳಿದ ಜನರನ್ನೂ ಮೇಲೆತ್ತುವ ಕಾರ್ಯದಲ್ಲಿ ಮುಂದಾದರೆ ಆ ವರ್ಗದ ಜನ ಅವರನ್ನು ತಲೆತಲಾಂತರದವರೆಗೂ ನೆನಪಿಸಿಕೊಳ್ಳುವರು.

ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ತರುವ ಪ್ರಯತ್ನದ ವೈಫಲ್ಯ

ಸಂವಿಧಾನ ಅನುಷ್ಠಾನಕ್ಕೆ ಬಂದ ಹತ್ತು ವರ್ಷಗಳ ಅವಧಿಯೊಳಗೆ ರಾಷ್ಟ್ರದಲ್ಲಿ ೬ ರಿಂದ ೧೪ ವರ್ಷ ವಯೋಮಿತಿಯಲ್ಲಿರುವ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ವ್ಯವಸ್ಥೆ ಮಾಡಬೇಕೆಂದು ಸಂವಿಧಾನದ ೪೫ ನೇ ಅನುಚ್ಛೇದ ನಿರ್ದೇಶಿಸುತ್ತದೆ. ಸಂವಿಧಾನ ಅನುಷ್ಠಾನಕ್ಕೆ ಬಂದು ನಾಲ್ಕೂವರೆ ದಶಕಗಳಾಗಿದ್ದರೂ ಸಂವಿಧಾನದ ಈ ನಿರ್ದೇಶನವನ್ನು ಅನುಷ್ಠಾನಕ್ಕೆ ತರಲು ವಿಫಲರಾಗಿದ್ದೇವೆ. ಈಗ ಪ್ರಸಕ್ತ ಶತಮಾನದ ಅಂದರೆ ೨೦ ನೇ ಶತಮಾನದ ಅಂತ್ಯದ ವೇಳೆಗೆ ದೇಶದಲ್ಲಿ ಅನಕ್ಷರತೆಯನ್ನು ನಿರ್ಮೂಲ ಮಾಡಲು ನಿರ್ಧರಿಸಿದ್ದೇವೆ. ಪ್ರತಿ ಯೋಜನೆಯ ಅವಧಿಯಲ್ಲೂ ನಾನಾ ಕಾರಣಗಳನ್ನು ಮುಂದೊಡ್ಡಿ ಈ ಗುರಿಯನ್ನು ಮುಂದೂಡುತ್ತಾ ಬಂದಿದ್ದೇವೆ. ಇಂದಿನ ಗತಿಯಲ್ಲಿಯೇ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ನಮ್ಮ ಯೋಜನೆಗಳು ಮುಂದುವರಿದರೆ ಈ ಶತಮಾನದ ಅಂತ್ಯದ ವೇಳೆಗೂ ಈ ಗುರಿ ಸಾಧಿಸುವ ಸಾಧ್ಯತೆಯ ಬಗೆಗೆ ಸಂಶಯವೇ ಇದೆ. ಕಾದು ನೋಡಬೇಕು.

ಇಂದು ಲಭ್ಯವಿರುವ ಅಂಕಿ ಅಂಶಗಳ ಆಧಾರದ ಮೇಲೆ ಹೇಳುವುದಾದರೆ ಕರ್ನಾಟಕದಲ್ಲಿ ಶಾಲೆಗೆ ಹೋಗುವ ವಯಸ್ಸಾಗಿದ್ದೂ, ಶಾಲೆಗೆ ಹೋಗದಿರುವ ಮಕ್ಕಳ ಸಂಖ್ಯೆ ೧೦ ಲಕ್ಷಕ್ಕೂ ಹೆಚ್ಚಾಗಿದೆ. ಈ ಮಕ್ಕಳ ಪೋಷಕರು ನಾವೆಷ್ಟೆ ಪ್ರಯತ್ನಪಟ್ಟರೂ ಅವರ ಆರ್ಥಿಕ ಸ್ಥಿತಿ ಗತಿಗಳು ಸುಧಾರಿಸುವವರೆಗೂ ಈ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಅಸಂಭವ. ಇವರ ಜೊತೆಗೆ ಪ್ರಾಥಮಿಕ ಶಾಲೆಯ ವಿವಿಧ ಹಂತದಲ್ಲಿ ಶಾಲೆ ಬಿಡುವವರ ಸಂಖ್ಯೆಯೂ ಗಣನೀಯ ಪ್ರಮಾಣದಲ್ಲಿದೆ. ಇವರೂ ಶೀಘ್ರವಾಗಿಯೇ ಅನಕ್ಷರಸ್ಥರಾಗಿ ಶಾಲೆಗೆ ಹೋಗದಿರುವವರ ಗುಂಪಿಗೆ ಸೇರುವರು; ಸೇರಿ ಅನಕ್ಷರಸ್ಥರ ದಂಡನ್ನು ಬೆಳೆಸುವರು. ಸರ್ಕಾರ ಹಮ್ಮಿಕೊಂಡಿರುವ ಉಚಿತ ಪಠ್ಯಪುಸ್ತಕ ವಿತರಣೆ, ಸಮವಸ್ತ್ರ ವಿತರಣೆ, ಮಧ್ಯಾಹ್ನದ ಉಪಾಹಾರ ವ್ಯವಸ್ಥೆ ಎಲ್ಲವೂ ಇವರಲ್ಲಿ ಕೆಲವರನ್ನು ಆಕರ್ಷಿಸಬಹುದೇ ಹೊರತು ಎಲ್ಲರನ್ನೂ ಆಕರ್ಷಿಸುವುದಿಲ್ಲ. ಇವರಿಗೆ ಆದ್ಯತೆಯ ಮೇರೆಗೆ ಸಾಮಾಜಿಕ ನ್ಯಾಯ ಒದಗಿಸಿಕೊಡುವುದು ಸರ್ಕಾರದ ಮತ್ತು ಸಮಾಜದ ಪ್ರಥಮ ಕರ್ತವ್ಯವಲ್ಲವೆ?

೧. ಧನಿಕರು ಮತ್ತು ಮೇಲ್ಮಟ್ಟದ ಮಧ್ಯಮ ವರ್ಗದವರು ತಮ್ಮ ಮಕ್ಕಳನ್ನು ಪ್ರತಿಷ್ಠಿತ ಶಾಲೆಗಳಿಗೆ ಸೇರಿಸಲು ಪ್ರಯತ್ನ ಮಾಡುವರು. ಶಿಶುವಿಹಾರಗಳಿಗೆ ಪ್ರವೇಶ

ಪಡೆಯಲು ೫೦೦೦ ದಿಂದ ೩೦,೦೦೦ ರೂಪಾಯಿಗಳವರೆಗೂ ವಂತಿಗೆ ಕೊಡಲು ಸಿದ್ಧರಿದ್ದಾರೆ; ಅಷ್ಟು ವಂತಿಗೆಯನ್ನು ಕೊಟ್ಟು ತಮ್ಮ ಮಕ್ಕಳಿಗೆ ಆ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವರು. ಇದು ಕೆಳ ಮಧ್ಯಮ ವರ್ಗದವರಿಗೆ ಮತ್ತು ಬಡವರಿಗೆ ಸಾಧ್ಯವೆ? ಈ ವರ್ಗದ ಜನರೆಲ್ಲರೂ ತಮ್ಮ ಮಕ್ಕಳನ್ನು ಯಾವುದೇ ರೀತಿಯ ವಂತಿಗೆ ತೆರಬೇಕಾಗಿಲ್ಲದ ಸರ್ಕಾರಿ ಶಾಲೆಗೊ ಇಲ್ಲವೆ ಸಮರ್ಪಕವಾಗಿಲ್ಲದ ಖಾಸಗಿ ಸಂಸ್ಥೆಗಳಿಗೊ ಸೇರಿಸುವರು. ಏಕೆಂದರೆ ಇವರಿಗೆ ವಂತಿಗೆ ಕೊಡುವ ಚೈತನ್ಯವೂ ಇಲ್ಲ; ಇವರ ಮಕ್ಕಳು ಶೇಕಡ ೯೦ ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಪ್ರತಿಷ್ಠಿತ ಶಾಲಾ ಕಾಲೇಜುಗಳಲ್ಲಿ ಪ್ರವೇಶ ಪಡೆಯುವುದೂ ಸಾಧ್ಯವಿಲ್ಲ. ಇಂಥವರಿಗೆ ಬೆಂಗಳೂರು ಮತ್ತು ಇನ್ನಿತರ ನಗರಗಳಲ್ಲಿ ಮೂರನೆ ದರ್ಜೆ ಶಿಕ್ಷಣ ಸಂಸ್ಥೆಗಳಲ್ಲಿ ಮಾತ್ರ ಪ್ರವೇಶ ದೊರೆಯುವುದು.

ಗ್ರಾಮೀಣ ಪ್ರದೇಶದ ಸ್ಥಿತಿ

ಗ್ರಾಮೀಣ ಪ್ರದೇಶಗಳ ಸ್ಥಿತಿ ಇನ್ನೂ ಶೋಚನೀಯ. ಕರ್ನಾಟಕದಲ್ಲಿ ಸುಮಾರು ಶೇಕಡ ೫೦ ರಷ್ಟು ಶಾಲೆಗಳು ಏಕೋಪಾಧ್ಯಾಯ ಶಾಲೆಗಳು. ಈಗೇನೋ ಕಪ್ಪು ಹಲಗೆಯ ಅಂದೋಲನದಲ್ಲಿ ಪ್ರತಿಯೊಂದು ಏಕೋಪಾಧ್ಯಾಯ ಶಾಲೆಗೂ ಮತ್ತೊಬ್ಬ ಶಿಕ್ಷಕರನ್ನು ಕೊಡುವುದರ ಮೂಲಕ ಅವುಗಳನ್ನು ಸುಧಾರಿಸಲು ನಿರ್ಧರಿಸಿದ್ದಾರೆ. ಇಷ್ಟಾದರೂ ಒಬ್ಬರೆ ಶಿಕ್ಷಕರು ಒಂದಕ್ಕಿಂತ ಹೆಚ್ಚು ತರಗತಿಗಳಿಗೆ ಬೋಧಿಸಬೇಕಾದ ಪರಿಸ್ಥಿತಿಯನ್ನು ಸಂಪೂರ್ಣವಾಗಿ ತೊಡೆದು ಹಾಕುವುದು ಸಾಧ್ಯವಿಲ್ಲ. ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಏಕೋಪಾಧ್ಯಾಯ ಶಾಲೆಗಳಿಗೆ ಮತ್ತೊಬ್ಬ ಶಿಕ್ಷಕರನ್ನು ಕೊಟ್ಟರೂ ಒಬ್ಬ ಶಿಕ್ಷಕರು ಎರಡು ತರಗತಿಗಳಿಗೆ ಬೋಧಿಸುವುದು ಅನಿವಾರ್ಯವಾಗುವುದು. ಹಿರಿಯ ಪ್ರಾಥಮಿಕ ಶಾಲೆಗಳ ೫, ೬ ಮತ್ತು ೭ ನೇ ತರಗತಿಗಳಲ್ಲೂ ಇಂತಹ ಪರಿಸ್ಥಿತಿ ಇದೆ. ಇದು ಮುಂದುವರಿಯುತ್ತಿದೆ. ಆ ಹಂತದಲ್ಲಾದರೂ ಪ್ರತಿ ತರಗತಿಗೂ ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸದೆ ಒಬ್ಬರು ಶಿಕ್ಷಕರನ್ನು ನೇಮಿಸಬೇಕು. ಸಂಪನ್ಮೂಲಗಳ ಕೊರತೆ ಹಾಗೆ ಮಾಡಲು ಅಡ್ಡಿ ಬಂದರೆ ಸರ್ವೇಕ್ಷಣೆ ನಡೆಸಿ, ಅನಗತ್ಯವಾದ ಹಿರಿಯ ಪ್ರಾಥಮಿಕ ಶಾಲೆಗಳೇನಾದರೂ ಇದ್ದರೆ ಭೌಗೋಳಿಕ ಪರಿಸ್ಥಿತಿಯನ್ನು ಪರಿಶೀಲಿಸಿ ಅಗತ್ಯವೆನಿಸಿದರೆ ಅಂತಹ ಶಾಲೆಗಳಲ್ಲಿ ೫,೬ ಮತ್ತು ೭ ನೇ ತರಗತಿಗಳನ್ನು ರದ್ದು ಮಾಡುವ ನಿರ್ಧಾರ ಕೈಗೊಂಡು ಆ ನಿರ್ಧಾರದಿಂದ ಉಳಿದ ಶಾಲೆಗಳಿಗೆ ಆ ಹಂತದಲ್ಲಿ ಪ್ರತಿ ತರಗತಿಗೂ ಒಬ್ಬರು ಶಿಕ್ಷಕರನ್ನು ಕೊಡುವುದು ಸಾಧ್ಯವಾಗುವುದು. ಆ ಹಂತದಲ್ಲಿ ಪ್ರತಿ ವಿಷಯಕ್ಕೂ ವಿಷಯ ಶಿಕ್ಷಕರನ್ನು ನೇಮಕ ಮಾಡುವುದು ಆವಶ್ಯಕವೇ ಎಂಬ ಅಂಶವನ್ನೂ ಪರಿಶೀಲಿಸಬೇಕು. ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಏಕೋಪಾಧ್ಯಾಯ ಶಾಲೆಗಳನ್ನು ಸಂಪೂರ್ಣವಾಗಿ ಶಿಕ್ಷಣ ಭೂಪಟದಿಂದ ಅಳಿಸಿ ಹಾಕುತ್ತೇವೆಂಬ ನಿರ್ಧಾರ ಕಾರ್ಯ ರೂಪಕ್ಕೆ ತರಲು ಸಾಧ್ಯವಾಗದ ನಿರ್ಧಾರ. ಏಕೆಂದರೆ ಇನ್ನೂ ಅನೇಕ ಹಳ್ಳಿಗಳು ಅಥವಾ

ದಾಖಲೆ ಗ್ರಾಮಗಳಲ್ಲಿ ೩೦೦ ಜನಸಂಖ್ಯೆಯೂ ಇಲ್ಲದಿರುವುದರಿಂದ ಅಂಥ ಗ್ರಾಮಗಳಲ್ಲಿ ೨೦ ರಿಂದ ೨೫ ಮಕ್ಕಳು ಮಾತ್ರ ಪ್ರಾಥಮಿಕ ಶಾಲೆಗೆ ಹೋಗುವ ವಯಸ್ಸಾಗಿದ್ದು ಅಷ್ಟು ಮಕ್ಕಳಿಗೆ ಇಬ್ಬರು ಶಿಕ್ಷಕರನ್ನು ಒದಗಿಸುವುದು ಕಷ್ಟವಾಗುವುದು. ಗ್ರಾಮೀಣ ಪ್ರದೇಶದ ಮಕ್ಕಳು ಶಿಶುವಿಹಾರದ ಹಂತದ ಶಿಕ್ಷಣ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

ಶಾಲೆಗಳ ಸ್ಥಿತಿ

ಪ್ರಾಥಮಿಕ ಶಾಲೆಗಲ್ಲಿ ಒಬ್ಬ ಶಿಕ್ಷಕರಿಗೆ ಒಂದು ಕೊಠಡಿ ಎಂದರೂ ಸುಮಾರು ೧೦೦,೦೦೦ ಕೊಠಡಿಗಳ ಅಗತ್ಯ ಇದೆ. ಒಂದು ಕೊಠಡಿಗೆ ಬೇಕಾಗುವ ಕನಿಷ್ಠ ಹಣ ಇಂದು ೧೦೦,೦೦೦ ರೂಪಾಯಿ ಎಂದು ಅಂದಾಜು ಮಾಡಿದರೂ ಒಂದು ಲಕ್ಷ ಕೊಠಡಿಗಳ ನಿರ್ಮಾಣಕ್ಕೆ ೧೦೦೦ ಕೋಟಿ ರೂಪಾಯಿ ಬೇಕು. ಇನ್ನು ಪೀಠೋಪಕರಣಗಳು, ಪಾಠೋಪಕರಣಗಳು, ಮಕ್ಕಳಿಗೆ ಓದಲು ಪೂರಕ ಪುಸ್ತಕಗಳ ಸರಬರಾಜು ಇವುಗಳಿಗೆ ಆಗಬಹುದಾದ ವೆಚ್ಚವನ್ನು ಅಂದಾಜು ಮಾಡಿದರೆ ಇಷ್ಟೊಂದು ಹಣ ಒದಗಿಸುವುದು ಸಾಧ್ಯವೆ? ಎಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ.

ಪ್ರೌಢಶಾಲೆಗಳ ಸ್ಥಿತಿ

ಪ್ರೌಢಶಾಲೆಗಳ ಸ್ಥಿತಿಯಂತೂ ಇನ್ನೂ ಶೋಚನೀಯ. ಕಳೆದ ೧೫ ವರ್ಷಗಳ ಅವಧಿಯಲ್ಲಿ ೨೦೦೦ ಕ್ಕಿಂತಲೂ ಹೆಚ್ಚು ಸಂಖ್ಯೆಯ ಪ್ರೌಢಶಾಲೆಗಳು ಪ್ರಾರಂಭವಾಗಿವೆ. ಅವುಗಳಿಗೆ ಕಟ್ಟಡಗಳಿಲ್ಲ, ಅವುಗಳಿಗಿಂತ ಮೊದಲು ಪ್ರಾರಂಭವಾದ ಅನೇಕ ಶಾಲೆಗಳಿಗೂ ಕಟ್ಟಡಗಳಿಲ್ಲ. ಕನಿಷ್ಠ ಸೌಲಭ್ಯಗಳೂ ಇಲ್ಲ. ಪದವಿ ಪೂರ್ವ ತರಗತಿಗಳ ಸ್ಥಿತಿ ಇದಕ್ಕಿಂತಲೂ ಉತ್ತಮವಾಗೇನೂ ಇಲ್ಲ. ಪ್ರಯೋಗ ಶಾಲೆಗಳಿಲ್ಲ, ಪುಸ್ತಕ ಭಂಡಾರಗಳಿಲ್ಲ; ಪಾಠೋಪಕರಣಗಳೂ ಇಲ್ಲ; ಪೀಠೋಪಕರಣಗಳೂ ಇಲ್ಲ; ಅಷ್ಟೇಕೆ ಅಗತ್ಯಕ್ಕನುಗುಣವಾಗಿ ಶಿಕ್ಷಕರೂ ಇಲ್ಲ. ಶಿಕ್ಷಕರ ಹುದ್ದೆಗಳು ತೆರವಾದ ಕೂಡಲೆ ಅವುಗಳನ್ನು ತುಂಬುವ ಪ್ರಯತ್ನ ಮಾಡದಿರುವುದರಿಂದ ಪಾಠಗಳೂ ಸರಿಯಾಗಿ ನಡೆಯುವುದಿಲ್ಲ.ಇಂಥ ಶಾಲೆಗಳಲ್ಲಿ ಗ್ರಾಮೀಣ ಪ್ರದೇಶದ ಜನರ ಮಕ್ಕಳು, ಕೆಳಮಧ್ಯಮ ವರ್ಗದ ಜನರ ಮಕ್ಕಳು, ಬಡವರ ಮಕ್ಕಳು, ಮತ್ತು ದಲಿತರ ಮಕ್ಕಳು ಶಿಕ್ಷಣ ಪಡೆಯುವರು. ಅದನ್ನು ಶಿಕ್ಷಣ ಎಂದು ಕರೆಯುವುದಕ್ಕಿಂತ ಈ ರೀತಿಯ ಅಸಮರ್ಪಕವಾದ ಶಿಕ್ಷಣ ನೀಡಿ ಅವರಲ್ಲಿ ಸುಪ್ತವಾಗಿರುವ ಚೈತನ್ಯ ವಿಕಾಸವಾಗಲು ಅವಕಾಶ ನಿರ್ಮಾಣ ಮಾಡಿ, ಅವರು ಆತ್ಮಪ್ರತ್ಯಯ ಬೆಳೆಸಿಕೊಂಡು ಸ್ಪರ್ಧೆಗೆ ಸಿದ್ಧರಾಗುವಂತೆ ಮಾಡುವ ಬದಲು ಅವರು ಪದೇ ಪದೇ ಪರೀಕ್ಷೆಗೆ ಕುಳಿತು ಅನುತ್ತೀರ್ಣರಾಗಿ ಮನೆಯವರ ಮತ್ತು ಸಮಾಜದ ಅವಹೇಳನಕ್ಕೆ ಗುರಿಯಾಗಿ ಅಪ್ರಯೋಜಕರೆಂಬ ಮುದ್ರೆ ಒತ್ತಿಸಿಕೊಂಡು ತಮ್ಮ ಹುಟ್ಟನ್ನೇ ಶಪಿಸುತ್ತ ಜೀವನ ಸಾಗಿಸುವ ಸ್ಥಿತಿ ತಲುಪುವರು. ಕೌಟುಂಬಿಕ ಪರಿಸ್ಥಿತಿ, ಪರಿಸರ, ಶಾಲೆಯ ವಾತಾವರಣ

ಎಲ್ಲವೂ ಆ ಮಕ್ಕಳಲ್ಲಿ ಇರಬಹುದಾದ ಪ್ರತಿಭೆಯು ವಿಕಾಸವಾಗಲು ಅಡ್ಡಿ ಉಂಟುಮಾಡಿ ಅದು 'ಕಲ್ಲುಪೊಟರೆಯಲ್ಲಿ ಮೊಳೆತು ಬೆಳೆಯಲು ಪ್ರಯತ್ನಿಸುವ ಅಶ್ವತ್ಥ ಸಸಿಯಂತಾಗುವುದು'.

ಈ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತ ಶ್ರೀ ಚಿನ್ನಪ್ಪರೆಡ್ಡಿ ಆಯೋಗ 'ಇಂಥ ಪರಿಸ್ಥಿತಿಯಲ್ಲಿ ಶಿಕ್ಷಣ ಪಡೆಯುವ ಹಿಂದುಳಿದ ವರ್ಗದವರ ಮಕ್ಕಳಿಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ, ವೈದ್ಯಕೀಯ ಮತ್ತೆ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಾನಗಳನ್ನು ಮೀಸಲಿಡುವುದರಿಂದ ಏನು ಪ್ರಯೋಜನ ಪಡೆಯುವರು' ಎಂದು ಉದ್ಗಾರವೆತ್ತಿದ್ದಾರೆ. ಪ್ರವೇಶ ಪಡೆಯಬೇಕಾದರೆ ಪಿ.ಯು.ಸಿ ಯಲ್ಲಿ ಕನಿಷ್ಠ ಶೇಕಡ ೫೦ ಅಂಕಗಳನ್ನಾದರೂ ಪಡೆದಿರಬೇಕು. ಇಂಥ ಪರಿಸ್ಥಿತಿ ಕೇವಲ ಹಿಂದುಳಿದ ವರ್ಗದವರಿಗೆ ಮಾತ್ರ ಅನ್ವಯಿಸುವುದಿಲ್ಲ. ಅಂತಹ ಶಾಲೆಗಳಲ್ಲಿ ಶಿಕ್ಷಣ ಪಡೆಯುವ ಎಲ್ಲಾ ವರ್ಗದವರಿಗೂ ಅನ್ವಯವಾಗುವುದು. ಈ ವರ್ಗದ ಜನರಲ್ಲೂ ಧನಿಕರಾಗಿರುವ ಕೆಲವರು ತಮ್ಮ ಮಕ್ಕಳನ್ನು ವಸತಿ ವಿದ್ಯಾಶಾಲೆಗಳಿಗೆ ಸೇರಿಸಿ ಅವರು ಅಲ್ಲಿ ಶಿಕ್ಷಣ ಪಡೆಯಲು ಏರ್ಪಾಡು ಮಾಡುವರು. ಅವರದು ಪ್ರತ್ಯೇಕ ವಿಷಯ. ಒಟ್ಟಿನಲ್ಲಿ ಈ ವರ್ಗದ ಜನರ ಮಕ್ಕಳು ಡೂನ್‌ಶಾಲೆ, ಗ್ವಾಲಿಯರ್ ಪಬ್ಲಿಕ್ ಸ್ಕೂಲ್, ಮೇಯೋ ಕಾಲೇಜು (ಇದು ಕಾಲೇಜಲ್ಲ, ಅಜಮೀರ್‌ನಲ್ಲಿರುವ ಉನ್ನತ ಪ್ರೌಢಶಾಲೆ. ಹಿಂದಿನ ಸಂಸ್ಥಾನೀಕರ ಮಕ್ಕಳಿಗಾಗಿ ಪ್ರಾರಂಭಿಸಿದ್ದುದು), ಪಂಚಗವಿ ಶಾಲೆಗಳು, ಋಷಿ ವ್ಯಾಲಿ ಶಾಲೆ, ಲವ್‌ಡೇಲ್, ಬಿಷಪ್‌ಕಾಟನ್ ಶಾಲೆ, ಎಂ.ಇ.ಎಸ್ ಶಾಲೆಗಳೇ ಮುಂತಾದ ಶಾಲಾ ಕಾಲೇಜುಗಳಿಂದ ಬರುವ ಅಭ್ಯರ್ಥಿಗಳೊಡನೆ ಸ್ಪರ್ಧಿಸಬೇಕು. ಇದು ನಮ್ಮ ಈಗಾಲಿಟೇರಿಯನ್ ಸಮಾಜದ ವೈಪರೀತ್ಯ ಪರಿಸ್ಥಿತಿ.

ಈ ವೈಪರೀತ್ಯ ಸ್ಥಿತಿ ಮೇಲೆ ಹೇಳಿರುವುದಷ್ಟಕ್ಕೇ ಸೀಮಿತಗೊಳ್ಳುವುದಿಲ್ಲ. ಹಣವಿದ್ದವರು ಹೆಚ್ಚು ಅಂಕಗಳನ್ನು ಪಡೆಯದಿದ್ದರೂ ಹಣ ಕೊಟ್ಟು ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ದೊರಕಿಸಿಕೊಳ್ಳಬಹುದು. ಶಿಕ್ಷಣ ವ್ಯಾಪಾರೀಕರಣವಾಗಿದೆ. ಪಿ.ಯು.ಸಿ. ಪರೀಕ್ಷೆ ಮತ್ತು ಪ್ರವೇಶ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಪ್ರವೇಶ ಪಡೆದರೂ ಅಲ್ಲಿನ ದುಬಾರಿ ಶುಲ್ಕವನ್ನು ತೆರಲಾರದೆ ಅವುಗಳಲ್ಲಿ ಶಿಕ್ಷಣ ಮುಂದುವರಿಸುವುದನ್ನು ಕೈಬಿಟ್ಟವರೂ ಇದ್ದಾರೆ. ಅಷ್ಟೊಂದು ಶುಲ್ಕ ಕೊಡಲು ಅವರಿಗೆ ಹಣವೆಲ್ಲಿಂದ ಬರಬೇಕು? ಅಂದರೆ ಈಗಲೂ ಕೂಡ ಶಿಕ್ಷಣ ಅಲ್ಪ ಸಂಖ್ಯೆಯ ಧನಿಕರ ಮತ್ತು ಮುಂದುವರಿದವರ ಗುಂಪನ್ನು ಉಳಿಸಿ ಬೆಳೆಸಿಕೊಂಡು ಹೋಗುವುದರ ಜೊತೆಗೆ ಅಸಮಾನತೆಯನ್ನೂ ಬೆಳೆಸಿ ಅದನ್ನು ಚಿರಂತನವಾಗಿ ಉಳಿಸಿಕೊಳ್ಳುವ ಸಾಧನವಾಗಿದೆ. ಸ್ವಾತಂತ್ರ್ಯಾನಂತರ ಸಮಾನ ಸೌಲಭ್ಯಗಳನ್ನು ಒದಗಿಸಿ ಸಮಾನ ಶಿಕ್ಷಣ ಅವಕಾಶಗಳನ್ನು ಉಂಟುಮಾಡಲಿಲ್ಲ. ಬದಲಾಗಿ ಶಿಕ್ಷಣ ಅಸಮಾನತೆಯು ಮತ್ತಷ್ಟು ಹೆಚ್ಚಲು ಕಾರಣವಾಗಿದೆ.

೧೯೬೬ ಶಿಕ್ಷಣ ಆಯೋಗದ ಸಲಹೆಗಳು

ಆಯೋಗ ವರದಿಯಲ್ಲಿ ಸಂವಿಧಾನದಲ್ಲಿ ಉಕ್ತವಾಗಿರುವ ಉದ್ದೇಶಗಳನ್ನು ಸಾಧಿಸಲು ಅಮೂಲ್ಯವಾದ ಸಲಹೆಗಳನ್ನು ಮಾಡಿತ್ತು. ಶಿಕ್ಷಣವನ್ನು ಸಮಾಜ ಸುಧಾರಣೆಯ ಸಾಧನವನ್ನಾಗಿ ಮಾಡಬೇಕೆಂಬ ಉದ್ದೇಶ ಸಾಧನೆಗೆ ಈ ಸಲಹೆಗಳು ನೆರವಾಗುವುವು. ಅವುಗಳು:

೧. ಸಾಮಾನ್ಯ ಶಾಲಾ ಪದ್ಧತಿಯನ್ನು ಜಾರಿಗೆ ತರುವುದು;

೨. ಶಾಲಾ ಸಮುದಾಯ ರಚಿಸುವುದು

೩. ಕೇಂದ್ರ ಶಾಲೆಗಳನ್ನು ಆಯ್ಕೆ ಮಾಡಿ ಅವುಗಳನ್ನು ಮಾದರಿ ಶಾಲೆಗಳನ್ನಾಗಿ ಪರಿವರ್ತಿಸಿ ಅವುಗಳು ಸುತ್ತಲಿನ ಇತರ ಶಾಲೆಗಳಿಗೆ ಮಾದರಿಯಾಗಿರುವಂತೆ ಮಾಡುವುದು.

ಸರ್ಕಾರ ಈ ಮೂರು ಸಲಹೆಗಳನ್ನೂ ಪ್ರಾಮುಖ್ಯವೆಂದು ಗಣಿಸಲಿಲ್ಲವೊ ಅಥವಾ ಅವುಗಳನ್ನು ಕಾರ್ಯರೂಪಕ್ಕೆ ತರುವುದು ಕಷ್ಟವೆಂದೊ ಆ ಸಲಹೆಗಳನ್ನು ಅಲಕ್ಷಿಸಿದ್ದಾರೆ.

ಆದರೆ ಕೇಂದ್ರ ಸರ್ಕಾರ ಪ್ರತಿಯೊಂದು ಜಿಲ್ಲೆಯಲ್ಲೂ ಒಂದು 'ನವೋದಯ ವಿದ್ಯಾಲಯ' ಪ್ರಾರಂಭಿಸಿ ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಉತ್ತಮ ಶಿಕ್ಷಣ ಸೌಲಭ್ಯಗಳನ್ನು ಒದಗಿಸಿದೆ. ಅವರು ಅವುಗಳ ಲಾಭ ಪಡೆಯುವಂತೆ ಮಾಡಬೇಕೆಂಬುದೇ ಇದರ ಉದ್ದೇಶ. ಇವು ವಸತಿ ವಿದ್ಯಾಲಯಗಳು. ಇವುಗಳಲ್ಲಿ ಪ್ರವೇಶ ೬ ನೇ ತರಗತಿಗೆ. ಆಯ್ಕೆ ಪರೀಕ್ಷೆ ನಡೆಸಿ ಉತ್ತಮ ಅಂಕಗಳನ್ನು ಪಡೆದವರನ್ನು ಮಾತ್ರ ಆಯ್ಕೆ ಮಾಡುವರು. ಇಂಥ ಪ್ರತಿಯೊಂದು ಶಾಲೆಯಲ್ಲೂ ೮೦ ಮಕ್ಕಳಿಗೆ ಮಾತ್ರ ಪ್ರವೇಶಾವಕಾಶವಿದೆ. ಅವರಲ್ಲಿ ೨೦ ಮಂದಿ ಹಿಂದಿ ಮಾತನಾಡುವ ಪ್ರದೇಶದಿಂದ ಬರುವರು (ಹಿಂದಿಯೇತರ ರಾಜ್ಯಗಳಲ್ಲಿರುವ ಶಾಲೆಗಳಿಗೆ) ಉಳಿದ ಸ್ಥಾನಗಳು ಕೇವಲ ೬೦. ಅಂದರೆ ಈ ಶಾಲೆಗಳು ಗ್ರಾಮೀಣ ಪ್ರದೇಶದ ಕೇವಲ ಶೇಕಡ ೦.೨೪ ಮಕ್ಕಳಿಗೆ ಮಾತ್ರ ಉತ್ತಮ ಸೌಲಭ್ಯಗಳನ್ನು ಒದಗಿಸುವುವು. ಉಳಿದ ಶೇಕಡ ೯೯.೭೬ ಮಕ್ಕಳು ದಡ್ಡರೆ? ಅವರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೆ? ಅವರು ಶಿಕ್ಷಣ ಪಡೆಯಲು ಯೋಗ್ಯರಲ್ಲವೆ?

೧೯೪೪ ರಲ್ಲಿ ಇಂಗ್ಲೆಂಡ್‌ನ ಶಿಕ್ಷಣ ಸಚಿವ ಬಾಲ್‌ಪರ್ ಅವರು ಪಾರ್ಲಿಮೆಂಟಿನಲ್ಲಿ ಶಿಕ್ಷಣ ಮಸೂದೆಯನ್ನು ಮಂಡಿಸುತ್ತ ಈ ದೇಶದಲ್ಲಿರುವ ಮಕ್ಕಳನ್ನು ಅರ್ಧ ಅಡಿಗೊಬ್ಬರಂತೆ ಸಾಲಾಗಿ ನಿಲ್ಲಿಸಿದರೆ ಈ ದೇಶದ ದಕ್ಷಿಣದ ಕೊನೆಯಿಂದ ಉತ್ತರದ ತುದಿಯವರೆಗೆ ಒಂದೂವರೆ ಪಾಲು ಆಗುವುದು. ಇವರಲ್ಲಿ ೪೦-೫೦ ವರ್ಷಗಳ

ನಂತರ ಯಾರೊ ಒಬ್ಬ ಈ ದೇಶದ ಪ್ರಧಾನಮಂತ್ರಿ ಆಗುವನು. ಆತ ಯಾರೆಂಬುದು ಇಂದು ನಮಗೆ ತಿಳಿದಿಲ್ಲ. ಆದರೆ ಪ್ರತಿ ವ್ಯಕ್ತಿಯ ವಯಸ್ಸು ಸಾಮರ್ಥ್ಯ ಮತ್ತು ಅಭಿರುಚಿಗಳನ್ನು ಆಧಾರವಾಗಿಟ್ಟುಕೊಂಡು ಅವರಿಗೆ ಶಿಕ್ಷಣ ವ್ಯವಸ್ಥೆ ಮಾಡಬೇಕು ಎಂದು ಹೇಳಿದ. ರಾಷ್ಟ್ರಾಭಿಮಾನವಿರುವ ಪ್ರತಿಯೊಬ್ಬ ವ್ಯಕ್ತಿಯೂ ಮೆಲುಕು ಹಾಕಬೇಕಾದ ಮಾತುಗಳಲ್ಲವೆ ಇವು? ನಮ್ಮ ದೇಶದ ಶಿಕ್ಷಣ ನೀತಿಯನ್ನು ರೂಪಿಸಲು ಇತರ ಹಲವು ವಿಷಯಗಳ ಜೊತೆಗೂ ಈ ಮಾತುಗಳೂ ಮಾರ್ಗಸೂಚಿಯಲ್ಲವೆ?

ಪ್ರಸಕ್ತ ವರ್ಷದಿಂದ ಕರ್ನಾಟಕ ಸರ್ಕಾರವೂ ಪ್ರತಿಯೊಂದು ಜಿಲ್ಲೆಯಲ್ಲಿಯೂ ಹಿಂದುಳಿದ ವರ್ಗದವರ ಮಕ್ಕಳಿಗೆ ಮೊರಾರ್ಜಿ ವಸತಿ ವಿದ್ಯಾಲಯಗಳನ್ನು ಪ್ರಾರಂಭಿಸಿದೆ. ಈ ಯೋಜನೆಯೂ ಹಿಂದುಳಿದವರನ್ನೆ ಗಮನದಲ್ಲಿಟ್ಟುಕೊಂಡು ಪ್ರಾರಂಭಿಸಿರುವ ಯೋಜನೆ. ಈ ಯಾವ ಯೋಜನೆಗಳೂ ಎಲ್ಲರಿಗೂ ಸಮಾನ ಸೌಲಭ್ಯಗಳನ್ನು ಒದಗಿಸುವ ದಿಕ್ಕಿನಲ್ಲಿ ಮುಂದುವರಿಯಲಾರವು. ಇಂಥ ಯೋಜನೆಗಳಿಂದ ಬೆರಳೆಣಿಕೆಯಷ್ಟು ಜನರು ಪ್ರಯೋಜನ ಪಡೆಯುವರೆಂದು ಭಾವಿಸಿದರೂ ಸಮಾನ ಸೌಲಭ್ಯಗಳಿಂದ ವಂಚಿತರಾದವರಲ್ಲಿ ಬಹುಸಂಖ್ಯೆಯ ಜನ ಇಂದಿನ ಸ್ಥಿತಿಯಲ್ಲಿಯೇ ಮುಂದುವರಿಯುವರು. ಇದು ನಮ್ಮ ಸಾಮಾಜಿಕ ನೀತಿಯೇ?

೧೯೮೬ ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸಮಾನ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಂಬಂಧಪಟ್ಟಂತೆ ಉಲ್ಲೇಖಗಳಿದ್ದರೂ ಅವುಗಳನ್ನು ಕಾರ್ಯರೂಪಕ್ಕೆ ತರುವ ಸೂಚನೆಗಳು ಇದುವರೆಗೂ ಕಂಡುಬಂದಿಲ್ಲ. ಅಂದರೆ ನಾವು ಘೋಷಿಸುವ ನೀತಿಗೂ ನಮ್ಮ ಕೃತಿಗೂ ಸಂಬಂಧವೇ ಇರುವುದಿಲ್ಲ. ಏಕೆ ಈ ವಿಪರ್ಯಾಸ? ನಮಗೆ ಹಿಂದುಳಿದವರ ಬಗೆಗೆ, ಗ್ರಾಮೀಣ ಪ್ರದೇಶದ ಜನರ ಬಗೆಗೆ, ಅವರ ಅಭಿವೃದ್ಧಿ ಬಗೆಗೆ ಆಸಕ್ತಿ ಇಲ್ಲದಿರುವುದರ ದ್ಯೋತಕವೇ ಇದು? ಇದಕ್ಕೆ ಅಧಿಕಾರ ಉತ್ತರ ಹೇಳಬೇಕು.

ಇಂದು ಅನುಸರಿಸಬೇಕಾಗ ಮಾರ್ಗ

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒಟ್ಟುಗೂಡಿ ಲಭ್ಯವಿರುವ ಸಂಪನ್ಮೂಲಗಳನ್ನು ಸಂಗ್ರಹಿಸಿ ತಾಲ್ಲೂಕಿಗೊಂದು ವಸತಿ ವಿದ್ಯಾಲಯ ಪ್ರಾರಂಭಿಸಿದರೂ ದೇಶದ ಎಲ್ಲ ಮಕ್ಕಳಿಗೂ ಸಮಾನ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಇದೊಂದು ರೀತಿಯ ಪಕ್ಷಪಾತದಿಂದ ಕೂಡಿದ ನೀತಿಯಾಗುವುದೆ ವಿನಾ ದೇಶದ ಪ್ರತಿಯೊಂದು ಮಗುವಿಗೂ ಅದರ ವಯಸ್ಸು, ಸಾಮರ್ಥ್ಯ ಮತ್ತು ಅಭಿರುಚಿಯನ್ನು ಆಧರಿಸಿ ಶಿಕ್ಷಣ ವ್ಯವಸ್ಥೆ ಮಾಡಿದಂತಾಗುವುದಿಲ್ಲ.

ಈ ಎಲ್ಲ ಯೋಜನೆಗಳನ್ನೂ ಸ್ಥಗಿತಗೊಳಿಸಿ ರಾಜ್ಯದಲ್ಲಿ ವ್ಯವಸ್ಥಿತ ರೀತಿಯಲ್ಲಿ ಸರ್ವೇಕ್ಷಣೆ ನಡೆಸಿ ಎಷ್ಟು ಕಿರಿಯ ಪ್ರಾಥಮಿಕ ಶಾಲೆಗಳು, ಎಷ್ಟು ಹಿರಿಯ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, ಕಿರಿಯ ಕಾಲೇಜುಗಳು, ಪ್ರಥಮ ದರ್ಜೆ ಕಾಲೇಜುಗಳು, ಶಿಕ್ಷಕರ ತರಬೇತಿ ಸಂಸ್ಥೆಗಳು, ಶಿಕ್ಷಣ ಮಹಾವಿದ್ಯಾಲಯಗಳು, ವೈದ್ಯಕೀಯ ಕಾಲೇಜುಗಳು, ತಾಂತ್ರಿಕ ಕಾಲೇಜುಗಳು ಅಗತ್ಯವೆಂದು ನಿರ್ಧರಿಸಿ ಅಗತ್ಯಕ್ಕಿಂತಲೂ ಹೆಚ್ಚಾಗಿರುವ ಸಂಸ್ಥೆಗಳನ್ನು ಮತ್ತು ಆರ್ಥಿಕವಾಗಿ ಲಾಭದಾಯಕವಲ್ಲದ ಸಂಸ್ಥೆಗಳನ್ನು ಮುಚ್ಚುವ ನಿರ್ಧಾರ ಕೈಗೊಳ್ಳುವುದರ ಜೊತೆಗೆ ಸೌಲಭ್ಯಗಳಿಲ್ಲದ ಪ್ರದೇಶಗಳಲ್ಲಿ ಸೌಲಭ್ಯಗಳನ್ನು ಒದಗಿಸಲು ನಿರ್ಧರಿಸಿ ಅಪವ್ಯಯ ಆಗುತ್ತಿರುವ ಸಂಪನ್ಮೂಲಗಳನ್ನು ಉಳಿಸಿ ಶಿಕ್ಷಣ ಸಂಸ್ಥೆಗಳ ಮೂಲ ಸ್ಥಾವರ (Physical Plant) ವನ್ನು ಉತ್ತಮ ಪಡಿಸಲು ಉಪಯೋಗಿಸಬೇಕು. ಜೊತೆಗೆ ಶಾಲಾ ಕಾಲೇಜುಗಳ ಅಗತ್ಯಗಳನ್ನು ಪರಿಶೀಲಿಸಿ ಅವುಗಳಿಗೆ ಒದಗಿಸಬೇಕಾಗಬಹುದಾದ ಹಣದ ಮೊತ್ತವನ್ನು ಅಂದಾಜು ಮಾಡಿ ಮುಂಬರುವ ೫ ವರ್ಷಗಳ ಅವಧಿಯಲ್ಲಿ ಅವುಗಳ ಸ್ವರೂಪವನ್ನು ಪೂರ್ಣವಾಗಿ ಬದಲಾಯಿಸಲು ಅಗತ್ಯ ಯೋಜನೆಯನ್ನು ಸಿದ್ಧಪಡಿಸಿಕೊಂಡು ಯಾವುದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ಈ ಯೋಜನೆಯನ್ನು ಸ್ಥಿರ ಸಂಕಲ್ಪದಿಂದ ಅನುಷ್ಠಾನಕ್ಕೆ ತರುವಂತೆ ಮಾಡುವುದು ಅಗತ್ಯ. ಇಂತಹ ವಿಷಯಗಳನ್ನು ರಾಜಕಾರಣಿಗಳ ಇಚ್ಛಾವರ್ತನೆಗೆ ಬಿಡುವುದು ಕ್ಷೇಮವಲ್ಲ.

ಮೇಲಿನ ಎಲ್ಲ ಚರ್ಚೆಯ ತಿರುಳು ಸಮಾನ ಸೌಲಭ್ಯಗಳನ್ನು ಒದಗಿಸದೆ ಸಮಾನ ಅವಕಾಶ ಅರ್ಥವಿಲ್ಲದ ತತ್ತ್ವವಾಗುತ್ತದೆ. ಆದುದರಿಂದ ಸರ್ಕಾರ ಒಂದು ಶಿಕ್ಷಣ ಪ್ರಗತಿಯ ಸಮೀಕ್ಷಣಾ ಆಯೋಗ ರಚಿಸಿ ಅದು ಈ ಅಂಶವನ್ನು ಪ್ರಧಾನವಾಗಿ ಪರಿಶೀಲಿಸಿ ಒಂದು ವರ್ಷದ ಅವಧಿಯೊಳಗೆ ವರದಿ ಸಲ್ಲಿಸುವಂತೆ ಆದೇಶಿಸಿದರೆ ಸರ್ಕಾರ ತಾನು ಮುಂದೆ ಸಾಗಬೇಕಾದ ಮಾರ್ಗವನ್ನು ಗುರುತಿಸಿಕೊಳ್ಳಲು ಸಾಧ್ಯವಾಗುವುದು.

***

ಅಭಿವಂದನಾ

ಕವಿ ವಾಲ್ಮೀಕಿ ಮತ್ತು ಕುಮಾರವ್ಯಾಸರು ಚಿತ್ರಿಸಿದ ಹನುಮಂತನ ಪಾತ್ರದಲ್ಲಿ ಹೊಳೆಯುವ ಹಾಸ್ಯಪ್ರಜ್ಞೆ

ಎನ್ಕೆ

ಹನುಮಂತನ ಪಾತ್ರದಲ್ಲಿ ಹೊರಹೊಮ್ಮುವ ಹಾಸ್ಯಪ್ರಜ್ಞೆಯೆಂದರೆ ಅದು ತತ್ ನಿರ್ಮಾತೃವಾದ ಕಾವ್ಯರ್ಷಿ ವಾಲ್ಮೀಕಿಯ ಹಾಸ್ಯ ಪ್ರತಿಭೆ ಎಂದೇ ಅರ್ಥವಲ್ಲವೆ? ಹನುಮಂತನ ಪಾತ್ರದ ಪೂರ್ಣಾವತಾರದ ದರ್ಶನವಾಗುವುದು ನಮಗೆ ಸುಂದರಕಾಂಡದಲ್ಲಿಯೆ. ಹನುಮಂತನ ಶ್ರೀರಾಮಭಕ್ತಿಯ ಪಾರಮ್ಯದೊಡನೆ ಆತನ ಕಪಿಚೇಷ್ಟೆ, ಹಾಸ್ಯಪ್ರಜ್ಞೆ , ಒಮ್ಮೊಮ್ಮೆ ಕಪಿಬುದ್ಧಿ ಕೂಡ ಹೊರ ಹೊಮ್ಮುವುದು. ಈ ಪಾತ್ರದ ಮಹಿಮೆಯನ್ನು ಪ್ರತಿಬಿಂಬಿಸುವ ಕನ್ನಡಿಯಂತಿರುವ ಈ ಸುಂದರಕಾಂಡದಲ್ಲಿಯೆ! ಆದರೆ ಹನುಮಂತನೆಂದರೆ ಒಮ್ಮೊಮ್ಮೆ ಕವಿ ವಾಲ್ಮೀಕಿಗಳು ಕರೆಯುವ 'ಕಪಿ', 'ಕಪಿವರ', 'ಕಪಿಶ್ರೇಷ್ಠ', 'ಕಪಿಕುಂಜರ' ಎಂಬ ಶಬ್ದಗಳಿಗೆ ಮಾತ್ರವೆ ಸೀಮಿತವಾದವನಲ್ಲ. ಆತನ ಆಧ್ಯಾತ್ಮಿಕ ಯೋಗಶಕ್ತಿಯೂ ಇದೇ ಸುಂದರಕಾಂಡದಲ್ಲಿಯೆ ಪ್ರಕಟವಾಗುತ್ತದೆ; ಅದು ರಾವಣನ ಸಭೆಗೆ ಹನುಮಂತನನ್ನು ಹಿಡಿತಂದಾಗ, ರಾವಣನ ಎದುರಿನಲ್ಲಿ ತಾನು ಆತನ ಸಿಂಹಾಸನಕ್ಕಿಂತಲೂ ಎತ್ತರದಲ್ಲಿ ಕುಳಿತು ತನ್ನೊಡೆಯ ಶ್ರೀರಾಮಚಂದ್ರನ ಮರ್ಯಾದೆಯನ್ನು ಕಾಪಾಡಬೇಕೆಂದು ತನ್ನ ಬಾಲವನ್ನೆ ಸುತ್ತಿ, ಎತ್ತರದ ಆಸನ ಮಾಡಿಕೊಂಡು, ಆ ರಾಕ್ಷಸೇಶ್ವರನನ್ನು ಉದ್ದೇಶಿಸಿ ಮಾತನಾಡುತ್ತಾನೆ, ಉಪದೇಶ ನೀಡುತ್ತಾನೆ: ''ಧರ್ಮ ವಿರುದ್ಧವಾದ ಬಹು ಅಪಾಯಕಾರಿಯಾದ ಮೂಲಘಾತವಾದ ಕರ್ಮದಲ್ಲಿ ನಿನ್ನಂತಹ ಬುದ್ಧಿವಂತರು ತೊಡಗಬಾರದು. ನನ್ನ ಉಪದೇಶವನ್ನು ಗಮನಿಸು'' ಎನ್ನುತ್ತಾನೆ. ಆ ಉಪದೇಶದ ಉನ್ನತಿಕೆಯನ್ನೂ ಈ ಮಾರುತನ ಔರಸಸುತನೇ ತಿಳಿಹೇಳುತ್ತಾನೆ.

'ತತ್ ತ್ರಿಕಾಲಹಿತಂ ವಾಕ್ಯಂ ಧರ್ಮ್ಯಂ ಅರ್ಥಾನುಬಂಧಿ ಚ।
ಮನ್ಯಸ್ವ ನರದೇವಾಯ ಜಾನಕೀ ಪ್ರತಿದೀಯತಾಂ॥'

ಇಂತಹ ಒಂದು ಉಚ್ಚಮಟ್ಟದ ನೀತಿಜ್ಞ ಈ ಹನುಮಾನ್ ಕಪಿಕುಂಜರ.

ಹೀಗಿದ್ದೂ ಈ ರಾಮದೂತನು ಒಮ್ಮೊಮ್ಮೆ ತನ್ನ ಮೂಲ ಪ್ರಕೃತಿಯನ್ನೂ ಪ್ರದರ್ಶಿಸುತ್ತಾನೆ. ಇದೇ ಕವಿಶ್ರೇಷ್ಠ ವಾಲ್ಮೀಕಿಯ ಜಾಣ್ಮೆ.

ಸೀತೆಯ ಶೋಧಕ್ಕಾಗಿ ಶತಯೋಜನದ ಸಮುದ್ರವನ್ನು ಲಂಘಿಸಿ ಲಂಕೆಯನ್ನು ಸೇರಿದ ಕಪಿವರನು, ಆಕೆಯನ್ನು ಅರಮನೆಯಲ್ಲಿ ಎಲ್ಲೂ ಕಾಣದೆ ನಿರಾಲನಾದರೂ,

ಅಭಿವಂದನಾ

'ಅನಿರ್ವೇದಃ ಕ್ರಿಯೋ ಮೂಲಂ ಅನಿರ್ವೇದಃ ಪರಂಸುಖಂ।
ಅನಿರ್ವೇದೋ ಹಿ ಸತತಂ ಸರ್ವಾರ್ಥೇಷು ಪ್ರವರ್ತನಃ॥

ಎಂದರೆ ಉತ್ಸಾಹವೇ (ಅಥವಾ ಆಶಾವಾದಿತ್ವವೆ) ಗೆಲುವಿನ ಮೂಲ. ಉತ್ಸಾಹವೇ ಪರಮಸುಖ. ಉತ್ಸಾಹವೇ ಎಲ್ಲ ಅನ್ವೇಷಗಳಲ್ಲೂ ಪ್ರವರ್ತಕ ಶಕ್ತಿಯಾಗಿರುತ್ತದೆ ಎಂದು ತನ್ನೊಳಗೆ ತಾನೇ ಹುರುಪು, ಹುಮ್ಮಸ್ಸನ್ನು ತಂದುಕೊಳ್ಳುತ್ತಾನೆ. ಎಂತಹ ವೇದಸಮವಾಕ್ಯವಿದು-ಅನಿರ್ವೇದವೇ ಗೆಲುವಿನದಾರಿ ಎಂಬುದು!

ಭಗವದ್ಗೀತೆಯ ಅರ್ಜುನನಲ್ಲಿ ರಣೋತ್ಸಾಹ ಕಾಣಿಸಿಕೊಳ್ಳಬೇಕಾದಲ್ಲಿ ವಿಷಾದಯೋಗವು ಕಾಣಿಸಿಕೊಳ್ಳುತ್ತದೆ. ಆದರೆ ಆ ಜಲಧಿಯನೆ ಜಿಗಿದ ಹನುಮನಲ್ಲಿ ಮನೆಮಾಡಿಕೊಂಡುದು ಉತ್ಸಾಹಯೋಗ, ಅದರ ಇನ್ನೊಂದು ಮುಖವಾದ ಹಾಸ್ಯಯೋಗ! ನಿಜವಾಗಿಯೂ ''ಹಾಸ್ಯಬ್ರಹ್ಮ'' (ಕವಿಬೇಂದ್ರೆ ಅವರ ಮಾತಿನಲ್ಲಿ) ಈ ಚೇಷ್ಟೆಯ ಸ್ವಭಾವದ ಈ ಕಪಿಶ್ರೇಷ್ಠ.

ಸಾಮಾನ್ಯವಾಗಿ ಈ ಹಾಸ್ಯಬ್ರಹ್ಮನು ನಮಗೆ ದೇವಸ್ಥಾನಗಳಲ್ಲಿ ತನ್ನ ಪ್ರೊಫೈಲ್ ಪೋಜ್‌ನಲ್ಲೇ ಕಾಣಿಸಿಕೊಳ್ಳುತ್ತಾನೆ. 'ಫ್ರಂಟ್ ಪೋಜ್'ನ ಮಾರುತಿ ನೋಡಲು ದೊರಕುವುದು ಅಪರೂಪ. ಆದರೂ ಕಪಿ ಮುಖದ ಮುಖ್ಯಪ್ರಾಣ, ಗಜಮುಖದ ಗಣಪತಿ ತಮ್ಮ ದೈವೀ ಪ್ರಭಾವದಿಂದ ಜಾತ್ಯತೀತ ದೃಷ್ಟಿಯಿಂದ ಬಹುಮತ ಭಕ್ತಕೋಟಿಯ ಹಿತರಕ್ಷಕರೆಂದು ಗುರುತಿಸಲ್ಪಟ್ಟವು. ಹನುಮಂತನ ವಿಗ್ರಹ ಪೂಜೆಗೆ ವಿವಿಧ ಜಾತಿ ಮತಗಳ ಅರ್ಚಕರಿರುವುದನ್ನು ಇಂದಿಗೂ ಕಾಣುತ್ತೇವೆ. ಮಾರುತಿಗೆ ತನ್ನದೇ ಆದ ಒಂದು ವಾನರ ಭಾಷೆ ಇದ್ದರೆ ತನ್ನದೇ ಆದ ಒಂದು ಮತ ಮಾತ್ರ ಇದ್ದಿರಲಿಲ್ಲವೆಂದು ತೋರುತ್ತದೆ. ನಿಜವಾದ ಜಾತ್ಯತೀತ ದೇವರು ಆತ. ಜಾತಿಗಿಂತ ಪ್ರೀತಿ, ಪ್ರೀತಿಗಿಂತ ಭಕ್ತಿ ಮಿಗಿಲು ಎಂದರಿತು ಆ ಭಕ್ತಿಯ ಉದ್ವೇಗದ ತನ್ನ ಎದೆ ಸೀಳಿ ಮೂರಕ್ಷರಗಳನ್ನು ಪ್ರಕಟಿಸಲು ಮೂರು ಮೂರ್ತಿಗಳನ್ನು ಪ್ರಕಟಿಸಿದ: ಶ್ರೀ ರಾಮಚಂದ್ರ, ಸೀತಾದೇವಿ, ಅಗ್ರಜನ ಸೇವಾಸಕ್ತ ಲಕ್ಷ್ಮಣ!

ಹನುಮಂತನ ಶಕ್ತಿಯ ಪಾರಮ್ಯವೂ ಆತನ ಭಕ್ತಿಯ ಪಾರಮ್ಯದಷ್ಟೆ ಪರಮೋಚ್ಚವಾದುದು. ಒಮ್ಮೆ ಕೈಲಾಸಂ ವ್ಯಾಯಾಮ ಪಟುಗಳ ಅಂಗಸಾಧನೆಯ ಪ್ರರ್ದಶನವನ್ನೂ ನೋಡುತ್ತ ನಿಂತಾಗ ಒಬ್ಬ ತರುಣ ಮಸಲ್‌ಕಂಟ್ರೋಲ್ ಪ್ರದರ್ಶಿಸುತ್ತ, ಮೂತಿಯನ್ನು ಸೊಟ್ಟಗೆ ಮಾಡುತ್ತಿದ್ದಾಗ ಕೈ ನುಡಿದರು: 'ಅಲ್ಲಯ್ಯ, ದೇಹಮಾತ್ರ ಮಾರುತಿ ಹಾಗೆ ಆಗಬೇಕು. ಮೂತೀನೂ ಮಾರುತಿ ಹಾಗೆ ಆಗಬೇಕಿಲ್ಲ' ಅಂತ ನಗೆಯಾಡಿದ್ದನ್ನು ನೆನೆದಾಗ ಹನುಮಂತನ ದೇಹ, ಹನುಮಂತನ ಅಂಗಯಷ್ಟಿ, ಹನುಮಂತನ ಮೂತಿ-ಅದರಲ್ಲೂ ಆತನ ಪ್ರೊಫೈಲ್, ಹಿಂದೆ ಬಿಲ್ಲಿನಾಕಾರದಲ್ಲಿ ಬಾಗಿನಿಂತ ಬಾಲ. ಅದಕ್ಕೊಂದು ಗಂಟೆ ಇವೆಲ್ಲಾ ಆತನ ವಿಗ್ರಹವನ್ನು ಕಲ್ಪಿಸಿದವರ ಕಲ್ಪನಾವಿಲಾಸ.

ಅಭಿವಂದನಾ

ಸಾಧ್ವಿ ಸೀತಾದೇವಿಯ ಶೋಧಕ್ಕಾಗಿ ಸಾಗರಕ್ಕೆ ಸಾಗಬಿದ್ದು ಲಂಕೆಯನ್ನು ತಲುಪಿದ ಈ ಬ್ರಹ್ಮಚಾರಿ ಹನುಮಂತರಾಯ ಆ ಪತಿವ್ರತೆಯನ್ನು ಎಲ್ಲಿ ಶೋಧಿಸಬೇಕು? ದಶಶಿರನ ಅಂತಃಪುರ ಪ್ರವೇಶ ಮಾಡುವುದೆ? ಸಾಧ್ವಿಮಣಿಯು ರಾವಣನ ಅಂತಃಪುರದಲ್ಲಿರಲು ಸಾಧ್ಯವೆ? ಇಷ್ಟು ಓಡಲಿಲ್ಲ ಈ ಕಪಿ ಬುದ್ಧಿ! ಅಂತಃಪುರದ ಇಂಚು ಇಂಚು ಜಾಗವನ್ನು ಇಣುಕಿ ಇಣುಕಿ ನೋಡಿದನಂತೆ! ವಾಲ್ಮೀಕಿ ಇಲ್ಲಿ ಈ ಮಹಾರಾಜನಿಗೆ 'ಕಪಿವರ', 'ಕಪಿಕುಂಜರ'- ಎಂದೇ ಕರೆದಿದ್ದಾನೆ. ಇದು ವಾಲ್ಮೀಕಿಯ ಒಂದು ಹಾಸ್ಯದೃಷ್ಟಿಗೆ ನಿದರ್ಶನ! ಹೇಳಿ ಕೇಳಿ ಕನ್ನಡಿಗನಲ್ಲವೆ ನಮ್ಮ ಹನುಮಂತರಾಯ! ಹಂಪೆಯ ಯೂನಿವರ್ಸಿಟಿ ಬಳಿಯೆ ಬೀಡುಮಾಡಿದ್ದ- ಈ ಕನ್ನಡಿಗ, ಕನ್ನಡ ವಿಶ್ವವಿದ್ಯಾಲಯದ ಸಮೀಪ ನಿವಾಸಿ. ಹನುಮ 'ಹಾಸ್ಯಬ್ರಹ್ಮ'ನೆಂದು ಬಗೆದೇ ಬಹುಶಃ ನಮ್ಮ ಬಯಲಾಟದ ವಿದೂಷಕ 'ಹನುಮನಾಯಕ'ನೆಂದು ಹೆಸರಿಸಲ್ಪಟ್ಟಿದ್ದಾನೆ. ಅಣಕಿಸುವುದಕ್ಕೆ aping, monkeying ಎಂದೆಲ್ಲಾ ಪದಪ್ರಯೋಗಗಳಿವೆ. ಅಣಕವು ಕಪಿಚೇಷ್ಟೆಯಿಂದಲೆ ಅರಳಿತು. ನಾಟಕ ಕಂಪನಿಗಳ ಮಾರುತಿ ಪ್ರವೇಶ- ಮೈತುರುಸಿಕೊಳ್ಳುತ್ತ ಕಪಿಯ ಅಂಗಚೇಷ್ಟೆ ಮಾಡುತ್ತವೆ. ಮಾನವನ ಅವತಾರವಾದದ್ದೂ ಕಪಿಯಿಂದಲೇ ಅಲ್ಲವೆ? ಈ ಹನುಮಂತರಾಯ ನಮ್ಮೆಲ್ಲರಿಗೂ ಮುದಿ ಮುದಿ ಮುತ್ತಾತ. ಇಂದು ನಮ್ಮಲ್ಲಿ ಇಳಿದು ಬಂದಿರುವ ಮಂಗಚೇಷ್ಟೆ ಆತನದೇ ಉಂಬಳಿ. 'ಭಾಸೋ ಹಾಸಃ' ಎಂಬ ವಿಶೇಷಣ ಪಡೆದ ನಮ್ಮ ಆದಿ ನಾಟಕಕಾರ ಹನುಮಂತನಲ್ಲಿ ಕಪಿಚೇಷ್ಟೆಯನ್ನೇ ಮೂಡಿಸಿದ್ದಾನೆ.

ಈ ಕಪಿಬುದ್ಧಿಯ ಹನುಮ ರಾವಣನ ಅಂತಃಪುರದಲ್ಲಿ ಸೀತೆಯನ್ನು ಶೋಧಿಸುತ್ತ, ಶೋಧಿಸುತ್ತ, ಸಾತ್ವಿಕಕಳೆಯ ಮಂಡೋದರಿಯನ್ನು ಕಂಡು ಆಕೆಯೆ ಸೀತಾಮಾತೆಯೆಂದು ಭ್ರಮಿಸುತ್ತಾನೆ! ಹರ್ಷಾತಿಶಯದಿಂದ-

'ಆಸ್ಫೋಟಯಾಮಾಸ ಚುಚುಂಬ ಪುಚ್ಛಂ!'

ಜಿಗಿದಾಡಿದ ತನ್ನ ಬಾಲಕ್ಕೆ ಮುದ್ದುಕೊಟ್ಟ, ಓ ಸೀತಾಮಾತೆಯನ್ನು ಶೋಧಿಸಿಬಿಟ್ಟೆ ಎಂದು-

'ನನಂದ ಚಿಕ್ರೀಡ ಜಗೌ ಜಗಾಮ!' ನಲಿದಾಡಿದ, ಕುಣಿದಾಡಿದ, ಹಾರಾಡಿದ. **'ಸ್ತಂಭಾನರೋಹತ್ ನಿಪಪಾತ ಭೂಮೌ!'** ಅಂತಃಪುರ ಅರಮನೆಯ ಕಂಭಗಳನ್ನೇರಿದ. ಮೇಲಿನಿಂದ ಕೆಳಕ್ಕೆ ಜಿಗಿದ! ಹೀಗೆ- **'ನಿದರ್ಶಯನ್ ಸ್ವಾಂ ಪ್ರಕೃತಿಂ ಕಪೀನಾಂ'** ತನ್ನ

ಕಪಿಯ ಪ್ರಕೃತಿಯನ್ನು ಪ್ರದರ್ಶಿಸಿದ. ಹನುಮಂತನ ಈ ಚೇಷ್ಟೆ, ಚಟುವಟಿಕೆಗಳಲ್ಲಿ ವಾಲ್ಮೀಕಿ ಕವಿ ನವುರಾದ, ನಾಜೂಕಾದ ಕಪಿವರನ ಕಪಿಬುದ್ಧಿಯನ್ನು ಸೂಚಿಸುತ್ತಾನೆ. ಸಾಧ್ವಿಯಾದ ಸೀತೆ ರಾವಣಾಸುರನ ಶಯ್ಯಾಗೃಹದಲ್ಲಿ ಹೇಗೆ ನಿದ್ರಿಸುವುದು ಸಾಧ್ಯ- ಎಂಬುದು ಆತನಿಗೆ ಹೊಳೆಯಲಿಲ್ಲವೆಂಬುದನ್ನು ಇಲ್ಲಿ ಸ್ಮರಿಸಲಾಗಿದೆ. ಮೊದಲೆ ಕಪಿ, ಮೇಲೆ ಬ್ರಹ್ಮಚಾರಿ! ಪಾಪ, ಎಂತಹ ಅಮಾಯಕ ಮನಸ್ಸು! ಮುಂದೆ ಅಶೋಕವನದಲ್ಲಿ ಸೀತೆಯನ್ನು ಕಾಣುತ್ತಾನೆ. ಈಗ ಆ ಸಾಧ್ವಿಯ ಮುಖದರ್ಶನ, ಆಮ್ಲಾನವದನ, ಆ ಮಾಸಿದ ಬಟ್ಟೆ, ಆದರೂ ಕಂಗಳಲ್ಲಿ ಎದ್ದು ಕಾಣುವ ಮಂಗಳ ಕಾಂತಿ-ಇವುಗಳಿಂದ ಸೀತಾಮಾತೆಯನ್ನು ಗುರುತಿಸುತ್ತಾನೆ. ತನ್ನ ಗುರುತು, ಪರಿಚಯ ಹೇಳುತ್ತಾನೆ. ಶ್ರೀರಾಮಚಂದ್ರನ ಅಂಗುಲೀಯಕವನ್ನು ನೀಡುತ್ತಾನೆ! ಸೀತೆಗೆ ಶ್ರೀರಾಮಚಂದ್ರನ ಸಾನ್ನಿಧ್ಯಯೇ ದೊರೆಕೊಂಡಂತಾಗುತ್ತದೆ. ಮಾರುತಿ ಅಂಗುಲೀಯಕಕ್ಕೆ ಪ್ರತಿಯಾಗಿ ಸೀತೆಯಿಂದ ಚೂಡಾಮಣಿ ರತ್ನವನ್ನು ಪಡೆಯುತ್ತಾನೆ! ಅದನ್ನೆಲ್ಲಿ ಇಟ್ಟುಕೊಳ್ಳುವುದು? ತನ್ನ ಕಿರುಬೆರಳಿಗೆ ಕಟ್ಟಿಕೊಳ್ಳುತ್ತಾನೆ. ಇನ್ನೊಂದು ತಿಂಗಳಲ್ಲಿ ಸೀತಾದರ್ಶನವಾಗದಿದ್ದರೆ ಶ್ರೀರಾಮಚಂದ್ರ ಜೀವಿಸಿರಲು ಶಕ್ಯವೇ ಇಲ್ಲ ಎನ್ನುತ್ತಾನೆ. ಆಗ ಸೀತೆ, 'ಆತನೆ ನನ್ನನ್ನು ಬಿಡಿಸಿಕೊಂಡು ಹೋಗದ ಹೊರತು ನಾನು ಹೇಗೆ ಬರಲು ಸಾಧ್ಯ?' ಎಂದಾಗ ಈ ಹನುಮಂತ ಮತ್ತೆ ತನ್ನ ಕಪಿಬುದ್ಧಿಯನ್ನು ಪದರ್ಶಿಸುತ್ತಾನೆ: 'ಯಾಕೆ? ಈಗಲೇ ನನ್ನ ಹೆಗಲ ಮೇಲೆ ಕುಳಿತುಕೊಳ್ಳಿ. ನಾನು ವಾಯುಮಾರ್ಗದಿಂದ, ವಾಯುವೇಗದಲ್ಲಿ ನಿಮ್ಮನ್ನು ಒಡೆಯ ಶ್ರೀರಾಮಚಂದ್ರನಲ್ಲಿಗೆ ತಲುಪಿಸುತ್ತೇನೆ' ಎನ್ನುತ್ತ ಡುಬ್ಬ, ಚಪ್ಪರಿಸಿಕೊಳ್ಳುತ್ತಾನೆ. ಅಲ್ಲಾ ರಾಮಲಕ್ಷ್ಮಣರನ್ನೇನೋ ತನ್ನ ಹೆಗಲ ಮೇಲೆ ಕರೆದೊಯ್ದಿರಬಹುದು. ಹಾಗೆಂದು ಸೀತೆಯನ್ನು ಕರೆದೊಯ್ಯುತ್ತೇನೆನ್ನುವುದು ಶ್ಲಾಘ್ಯವೆನಿಸೀತೆ? ಮಾರುತಿ ರಾಮನಿಗೆ ಈ ಬುದ್ಧಿ ಭೇದವಿಲ್ಲ. ಒಡತಿಯಾದ ಸೀತಾಮಾತೆಯನ್ನು ಕರೆದೊಯ್ಯುವಲ್ಲಿ ತಪ್ಪೇನು? ಆದರೆ ಅದರ ಸಾಧ್ಯಾಸಾಧ್ಯತೆಗಳನ್ನೆಣಿಸದೆ ನುಡಿಯುವ ಮಾರುತಿಯ ಮುಗ್ಧ ಮಾತಿಗೆ ಸೀತೆಯು ಮುಗುಳ್ನಗೆ ಬೀರುತ್ತಾಳಷ್ಟೆ. ತಾನು ಪತಿವ್ರತಾಶಿರೋಮಣಿಯೆನಿಸಿ ಪರಪುರುಷಸ್ಪರ್ಶವು ಕೂಡದು ಎಂಬ ಪ್ರಜ್ಞೆ ಬೇಡವೆ ಮಾರುತಿಗೆ? ಹಾಗಾದರೆ ರಾವಣನು ಹೊತ್ತೊಯ್ಯುವಾಗ? ಆತನ ಕರಸ್ಪರ್ಶವಾಗಿಲ್ಲವೆ? ಎಂದರೆ ಅದನ್ನು ಸೀತೆ ಆಯ್ದುಕೊಂಡಿದ್ದಳೆ? ಅಸಹಾಯಕಳಾಗಿ ಅಪಹರಿಸಲ್ಪಟ್ಟಳು. ಅಲ್ಲವೇ? ಇಲ್ಲ, ಶ್ರೀರಾಮನೇ ಸೇನಾಸಮೇತನಾಗಿ ಬಂದು ಲಂಕೇಶನನ್ನು ಸಂಹರಿಸಿ ಇನ್ನೊಂದು ತಿಂಗಳೊಳಗೆ ನನ್ನನ್ನು

ಕರೆದುಕೊಂಡೊಯ್ಯಬೇಕು. ಇಲ್ಲದಿದ್ದಲ್ಲಿ ನಾನು ಜೀವಿಸಿರಲಾರೆ. ಹೀಗೆಂದು ಶ್ರೀರಾಮಚಂದ್ರನಿಗೆ ಹೇಳು ಎಂದು ಅಪ್ಪಣೆ ಮಾಡಿದಾಗ ಕಪಿವರನು ಒಪ್ಪಿಕೊಳ್ಳುತ್ತಾನೆ. ಆದರೆ ಹಿಂತಿರುಗುವ ಮುನ್ನ ರಾವಣನ ಅಶೋಕವನವನ್ನೇ ಹಾಳುಮಾಡುತ್ತಾನೆ. ಅದರ ತಪ್ಪಿಗಾಗಿ ಲಂಕಾಧೀಶನ ಶಿಕ್ಷೆಗೆ ಗುರಿಯಾಗುತ್ತಾನೆ. ವಿವೇಕಿಯಾದ ವಿಭೀಷಣ ಈ ಕಪಿಗೆ ಯೋಗ್ಯ ಶಿಕ್ಷೆಯೆಂದರೆ ಆತನ ಬಾಲಕ್ಕೆ ಬಟ್ಟೆಸುತ್ತಿ ಬೆಂಕಿ ಇಟ್ಟುಬಿಡುವುದು-ಎಂದಾಗ ಎಲ್ಲರೂ ಒಪ್ಪಿ ಆತನ ಬಾಲಕ್ಕೆ ಬೆಂಕಿ ಹಚ್ಚಿ ಬಿಡುತ್ತಾರೆ! ಈಗ ಮಾತ್ರ ಮಾರುತಿ ನಿಜವಾದ ಕಪಿಯ ಹಾವಳಿಯನ್ನೆಸಗಿ ಲಂಕಾಪಟ್ಟಣವನ್ನು ಅಗ್ನಿದೇವನಿಗೆ ಆಹುತಿ ಕೊಟ್ಟುಬಿಡುತ್ತಾನೆ. ಈ ಪೂರ್ಣಾಹುತಿಯ ಯಜ್ಞವನ್ನು ಪೂರೈಸಿ ಹಿಂದಿರುಗುತ್ತಾನೆ. ಸುಂದರಕಾಂಡ ತುಂಬೆಲ್ಲ ಹನುಮನ ಹಾಸ್ಯಪ್ರಜ್ಞೆ ಆತನ ಕಪಿಬುದ್ಧಿಯೊಡನೆ ಬಯಲಾಟವನ್ನೆ ಆಡಿದೆ. ಉದ್ದಕ್ಕೂ ಹನುಮನಲ್ಲಿಯ ಹಾಸ್ಯಪ್ರಜ್ಞೆ ತೂರಾಡಿ ಹೋಗಿದೆ.

ನಮ್ಮ ಹಾಸ್ಯ ಪ್ರಜ್ಞೆಯ ಕವಿ ಕುಮಾರವ್ಯಾಸನೂ ಹನುಮಂತನ ಪಾತ್ರವನ್ನು ಅರಣ್ಯಪರ್ವದ ಸೌಗಂಧಿಕಾಪುಷ್ಪ ಪ್ರಸಂಗದಲ್ಲಿ, ಎಳೆದು ತಂದಿದ್ದಾನೆ. ದ್ರೌಪದಿಯ ವಾಂಛಿತದಂತೆ ಭೀಮನು ಸೌಂಗಧಿಕಾಪುಷ್ಪವನ್ನು ತರಲೆಂದು ಧನಪತಿಯ ಒಡೆತನದ ಕೊಳದತ್ತ ಹೊರಡುತ್ತಾನೆ. ಇಕ್ಕಟ್ಟಿನ ದಾರಿ ಸಾಗುತ್ತಿರುವಾಗ ಮಧ್ಯದಲ್ಲಿ ಒಬ್ಬ ಮುದಿ ಕಪಿ ಅಡ್ಡಮಲಗಿರಲು ಆತನ ಬಾಲ ಅಡ್ಡವಾಗುತ್ತದೆ. ಆ ಕಪಿಗೆ ಭೀಮನು ಬಾಲವನ್ನು ಆಚೆಗೆ ಸರಿಸಲು ಹೇಳಿದರೆ, ಆ ಮುದಿ ಕಪಿ-

ನಾವು ವೃದ್ಧರು ನಮ್ಮ ಬಾಲವ
ನಾವು ಹದುಳಿಸಲಾರೆವೀಗಳು
..............ಮಾಡುವುದೆಂದನಾ ಹಮಮ॥

ಹೇಗಿದೆ ಕಪಿಯ ಹಾಸ್ಯಪ್ರಜ್ಞೆ . ಮುದಿಯಾಗಿದ್ದರೂ ಹಾಸ್ಯಪ್ರಜ್ಞೆ ಹಿಂಗಿರಲಿಲ್ಲ. ಅಷ್ಟೇ ಹಾಸ್ಯಪ್ರಜ್ಞೆ ನಮ್ಮ ಕುಮಾರವ್ಯಾಸನದು. ಈ ಮುದಿಹನುಮ ಭೀಮನ ಕ್ಷಮಾಯಾಚನೆಮಾಡುವಂತೆ ಆತನನ್ನು ಕೆರಳಿಸುತ್ತಲೆ ಕೇಳಿಕೊಳ್ಳುತ್ತಾನೆ. ಆಯಿತು ತಪ್ಪೇನೆನುತ ಭೀಮನು ತನ್ನ ಗದೆಯ ತುದಿಯಿಂದ ಬಾಲವನ್ನು ಸರಿಸಹೋದರೆ ಅದರ ಒಂದು ರೋಮವನ್ನು ಕೂಡ ಅಲ್ಲಾಡಿಸಲಾಗಲಿಲ್ಲ. **'ಈತ ಕಪಿರೂಪ ಸುರೇಂದ್ರನೊ'** ಎಂದುಕೊಳ್ಳುತ್ತ **'ನೀನಾರಯ್ಯ, ನಿಸ್ಸೀಮ ಕಪಿಯೆಂದು ಕಾಣುತ್ತೀ'** ಎಂದು ಉದ್ಗಾರ ತೆಗೆದಾಗ ಭೀಮನಿಗೆ ಕಪಿವೃದ್ಧ ಹೇಳುತ್ತಾನೆ:

ನಾವು ಹಿಂದಣ ಯುಗದ ರಾಘವ

ಅಭಿವಂದನಾ

ದೇವ ನೋಲೆಯಕಾರರಾ ಸು
ಗ್ರೀವ ಸಖ್ಯರು, ಪವನಂದಂಜನೆಗೆ ಜನಿಸಿದೆವು॥

ಎಂದೆಲ್ಲಾ ವೃದ್ಧಕಪಿ ತನ್ನ ಬಾಯೊಡೆದು ವಿವರಿಸಲು ಭೀಮ ಈ ಮಾಹಾನುಭಾವನಿಗೆ ಅಡ್ಡಬಿದ್ದು- '**ಈ ಯುಗದ ಗುಣಧರ್ಮವಾ ತ್ರೇತಾಯುಗದ ಪರಿಗೈದದು**' ಎಂದು ದ್ವಾಪರದವರಿಗಿಂತ ತ್ರೇತಾಯುಗದವರು ಮಿಗಿಲೆಂದು ಸೂಚಿಸುತ್ತ ಆತನಿಂದ ಆಶೀರ್ವಾದ ಪಡೆದು ಮುಂದೆ ತನ್ನ ಸೌಗಂಧಿಕಾ ಪುಷ್ಪದ ಮಿಶನ್ ಮೇಲೆ ಹೊರಡುತ್ತಾನೆ.

ಕಪಿ ಬುದ್ಧಿಯ ಹಾಸ್ಯಪ್ರಜ್ಞೆಯಲ್ಲೂ ಹನುಮನು ತೋರ್ಪಡಿಸುವ ಭಕ್ತಿಯ ಪಾರಮ್ಯವು ಅಲೌಕಿಕವಾದದ್ದು; ಅಷ್ಟೇ ಅಮಾಯಕ ಬುದ್ಧಿಯದು. ಶ್ರೀ ರಾಮಚಂದ್ರನು ದಶಶಿರನನ್ನು ಸಂಹರಿಸಿ, ಅಯೋಧ್ಯೆಗೆ ಮರಳಿದ ಮೇಲೆ ಸ್ವಾಮಿ ಸೇವೆಗಾಗಿ ಹನುಮಂತನನ್ನು ರತ್ನಹಾರವೊಂದನ್ನಿತ್ತು ಸಂಭಾವಿಸುತ್ತಾನೆ. ಮತ್ತೆ ಕಪಿ ಬುದ್ಧಿಯ ಮಾರುತಿ ಆ ಹಾರದ ಒಂದೊಂದೆ ರತ್ನವನ್ನು ಒಡೆದು ನೋಡುತ್ತ ಅದರಲ್ಲೊಂದರಲ್ಲಿ ಶ್ರೀರಾಮಚಂದ್ರನ ಮುಖದರ್ಶನವನ್ನು ಮಾಡದೆ ಅದನ್ನು ಬಿಸಾಟಿಬಿಡುತ್ತಾನೆ. ಶ್ರೀರಾಮಚಂದ್ರನ ದರ್ಶನವಿಲ್ಲದ ರತ್ನಹಾರ ಆತನಿಗೆ ಕಃ ಪದಾರ್ಥ. ಕೊನೆಗೆ ತನ್ನ ಹೃದಯದಲ್ಲಿಯೆ ಶ್ರೀ ರಾಮ ಸೀತೆ ಲಕ್ಷ್ಮಣರನ್ನು ಸದಾಕಾಲ ಪ್ರತಿಷ್ಠಾಪಿಸಿಕೊಂಡಿರುವುದನ್ನು ಎದೆ ಸೀಳಿ ಈರೇಳುಲೋಕಕ್ಕೆ ರಾಮಮಹಿಮೆಯ ನಿದರ್ಶನ ನೀಡುತ್ತಾನೆ.

ಆಂಜನೇಯಸ್ವಾಮಿ ಎಷ್ಟು ಹಾಸ್ಯಪ್ರಜ್ಞೆಯವನೋ, ಅಷ್ಟೆ ಭಕ್ತಿಪ್ರಜ್ಞನೂ ಹೌದು. ಸ್ವಾಮಿನಿಷ್ಠನೂ ಹೌದು. ಕಪಿಬುದ್ಧಿಯ ಈ ಅಮಾಯಕ ಭಕ್ತಿ ಅಲೌಕಿಕ. ಕಪಿ ಹಾಸ್ಯಚೇಷ್ಟೆಗಿಂತ ಮಿಗಿಲಾದ ಮೌಲ್ಯ ಆ ಭಕ್ತಿಗಿದೆ.

***

ಕರ್ನಾಟಕದ ಮೂವರು ಧೀರ ಮಹಿಳೆಯರು.

ಡಾ|| ಕಮಲಹಂಪನಾ.

ಕರ್ನಾಟಕದ ಇತಿಹಾಸವನ್ನು ಮಾತ್ರವಲ್ಲ, ಸಮಗ್ರ ಭಾರತದ ಚರಿತ್ರೆಯನ್ನು ಪುನರ್ ಪರಿಶೀಲಿಸುವ, ಪುನರ್ ಮೌಲೀಕರಿಸುವ ಹಂತದಲ್ಲಿ ಇಂದು ನಾವು ನಿಂತಿದ್ದೇವೆ. ಹಿಂದೆ ಬುದ್ಧಿವಂತರೆಂದು ಭಾವಿಸಿದ್ದ, ಅಕ್ಷರ ಕಲಿತಿದ್ದ ಒಂದು ವರ್ಗದ ಜನ ಕೆಲವು ಮಿತಿಗಳಲ್ಲಿಯೆ ಚರಿತ್ರೆಯನ್ನು ಬರೆದರು. ಆದುದರಿಂದ ರಾಷ್ಟ್ರರಕ್ಷಣೆಯಲ್ಲಿ ತೊಡಗಿದ ಮಹಿಳೆಯರ, ದಲಿತರ, ಬುಡಕಟ್ಟು ಜನಾಂಗದವರ, ಅಲ್ಪಸಂಖ್ಯಾತರ ಇತಿಹಾಸ ಸರಿಯಾದ ಪ್ರಮಾಣದಲ್ಲಿ ದಾಖಲಾಗಲಿಲ್ಲ. ನಿಜವಾಗಿ ಕೆಲಸ ಮಾಡಿದವರ, ಹೋರಾಡಿದವರ ಚರಿತ್ರೆ ಹಿಂದೆ ಸರಿದು ಕೆಲವರದಷ್ಟೇ ವಿಜೃಂಭಣೆಗೊಂಡು ದಾಖಲಾಯಿತು. ಇದರಿಂದ ಇಂದು ನಾವು ಓದುವ ಇತಿಹಾಸ ಕೇವಲ ಒಂದು ವರ್ಗದ ಮುಖವಾಣಿಯಷ್ಟೆ ಆಗಿದೆ. ಅಷ್ಟನ್ನೇ ಓದಿಕೊಂಡು, ಅದನ್ನೆ ಪಾಠ ಮಾಡುತ್ತಾ, ಆ ವಿಷಯಗಳನ್ನೆ ಬರೆಯುತ್ತಿರುವ ಇತಿಹಾಸಕಾರರಲ್ಲಿ ಕೆಲವರಾದರೂ ತಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಂಡು ಚರಿತ್ರೆಯನ್ನು ಪುನರ್ ಪರಿಶೀಲನೆ ಮಾಡಿ, ಪುನರ್ ಮೌಲೀಕರಿಸುವ ತುರ್ತಿನ ಕೆಲಸ ಇಂದು ಆಗಬೇಕಿದೆ. ಸಂಶೋಧನೆಯ ಅಭಿರುಚಿಯನ್ನು ಸ್ವಲ್ಪ ಬೆಳೆಸಿಕೊಂಡರೂ ಸಾಕು. ಅಲ್ಲೊಮ್ಮೆ ಇಲ್ಲೊಮ್ಮೆ ಮಸುಕಾಗಿ ಮಿಂಚುವ ಈ ವರ್ಗದ ಜನತೆಯ ರಾಷ್ಟ್ರಪರ ಹೋರಾಟದ ಅನೇಕ ಸುಳಿವುಗಳು ದೊರೆಯುತ್ತವೆ. ಅವು ಈಗ ಇರುವ ಇತಿಹಾಸದ ದಿಕ್ಕನ್ನೆ ಬದಲಿಸಬಹುದು. ಮಹಿಳೆಯರನ್ನು ಕೀಳಾಗಿಯೇ ಕಂಡು ಅವರ ಬಗೆಗೆ ಅನಿವಾರ್ಯವಾಗಿ ಹೇಳಲೇಬೇಕಾದ ಸಂದರ್ಭ ಬಂದಲ್ಲಿ, ಕ್ವಚಿತ್ತಾಗಿ ಹೇಳಿ ದಾಖಲಾಗಿರುವ ಕೆಲವು ಸಂಗತಿಗಳು, ಕೆಲವು ಪಾಶ್ಚಾತ್ಯ ವಿದ್ವಾಂಸರ ಬರವಣಿಗೆಯಿಂದ ಸ್ವಲ್ಪಮಟ್ಟಿಗೆ ಆಕಾರ ತಳೆದು ನಿಂತಿವೆ. ಅಂಥ ಸಂದರ್ಭದಲ್ಲಿ ಕಾಣಿಸಿಕೊಂಡ ಮೂವರು ಧೀರ ಮಹಿಳೆಯರ ಬಗೆಗಿನ ವಿವರಣೆಯನ್ನು ಕೊಡುವುದೇ ಈ ಲೇಖನದ ಉದ್ದೇಶವಾಗಿದೆ. ಕರಿಮೆಣಸಿನರಾಣಿ ಕಾನ್ನಾಡರಾಣಿ ಎಂದು ಖ್ಯಾತನಾಮಳಾದ ರಾಣಿ ಚೆನ್ನಭೈರಾದೇವಿ (ಕಿ.ಶ. ೧೫೫೮ - ೧೬೦೦) ಗೇರುಸೊಪ್ಪೆಯಿಂದ ಆಳಿದ ಸಾಳುವ ವಂಶದವಳು, ಹೊನ್ನಾವರ (ಸುವರ್ಣಪುರ), ಹಾಡುವಳ್ಳಿ (ಸಂಗೀತಪುರ), ಅಂಕೋಲಾ, ಬಾರಕೂರು, ಗೇರುಸೊಪ್ಪ-ಒಳಗೊಂಡ ಪ್ರದೇಶವನ್ನು ಆಳಿದ ಧೀರೆ. ತನ್ನ ರಾಜ್ಯವನ್ನು, ರಾಜ್ಯದ ಬಂದರುಗಳನ್ನು, ಮುಖ್ಯಪಟ್ಟಣಗಳನ್ನು ಉನ್ನತ ಸ್ಥಿತಿಗೆ ಮುಟ್ಟಿಸಿದ ಮಹಿಳಾಮಣಿ ಚೆನ್ನಭೈರಾದೇವಿ, ದೀರ್ಘಕಾಲ ಆಳಿದ ಏಕೈಕ ಕರ್ನಾಟಕದ ಅರಸಿ. ''ಗೇರುಸೊಪ್ಪೆಯನ್ನಾಳಿದವರ ಪೈಕಿ ಹೆಚ್ಚು ಆಸಕ್ತಿಯನ್ನು ಹುಟ್ಟಿಸುವವಳೇ ಈ ರಾಣಿ. ಇವಳ ಕಾಲದಲ್ಲಿಯೇ ಗೇರುಸೊಪ್ಪೆಯ ಖ್ಯಾತಿ ವಿದೇಶಗಳಿಗೂ ಹರಡಿದ್ದು. ತನ್ನ ರಾಜ್ಯದಲ್ಲಿ ಯಥೇಚ್ಛವಾಗಿ ಬೆಳೆಯುತ್ತಿದ್ದ ಕರಿಮೆಣಸಿನ ವ್ಯಾಪಾರವನ್ನು ಅಭಿವೃದ್ಧಿಗೊಳಿಸಿ ರಫ್ತು ಮಾಡತೊಡಗಿದಳು. ಪೋರ್ಚುಗೀಸರಿಗೆ ಈಕೆ ಕರಿಮೆಣಸಿನರಾಣಿ ಎಂದೇ ಪರಿಚಿತಳು. ಗೇರುಸೊಪ್ಪೆ ರಾಜಧಾನಿಯಲ್ಲಿ ಹಲವು ಬಸದಿಗಳನ್ನು ಕಟ್ಟಿಸಿದವಳೂ ಇವಳೇ. (ಶ್ರೀಮತಿ

ಚಂದ್ರಕಲಾ ಪದ್ಮಪ್ರಸಾದ್, ಜೈನ ಹಂಪೆ ಗೇರುಸೊಪ್ಪೆ, 'ದಿವ್ಯಧ್ವನಿ ' (೧೯೭೫). ಸಂ.ಹಂಪ.ನಾಗರಾಜಯ್ಯ, ಪು. ೧೯೩-೯೪). ಚೆನ್ನಭೈರಾದೇವಿಯನ್ನು ಕುರಿತು, ಡಾಂದುಅರ್ತೆದ ಮೆನೆಜಿಸ್ ಎಂಬ ಪೋರ್ಚುಗೀಸಿನ ಪ್ರವಾಸಿಯೂ, ಪ್ರಿಯತ್ರದೆಲ್ಲವಲ್ಲೆ ಎಂಬ ಇಟಲಿಯ ಪ್ರವಾಸಿಯೂ ಬರೆದಿದ್ದಾರೆ: The queen is a lady of much Virtue and Prudence (Pietro Della Valle : Travels in India) ಎಂಬ ಅಭಿಪ್ರಾಯ ಗಮನಾರ್ಹವಾಗಿದೆ.

ರಾಣಿ ಚೆನ್ನಭೈರಾದೇವಿಯದು ಹೋರಾಟದ ದುರಂತ ಬದುಕು. ಅತ್ತ ವಿದೇಶಿ ಪೋರ್ಚುಗೀಸರೊಡನೆ, ಇತ್ತ ಸ್ವದೇಶಿ ಕೆಳದಿಯ ನಾಯಕರೊಡನೆ ಯುದ್ಧ ಮಾಡಬೇಕಾಯಿತು. ಅಂತಿಮವಾಗಿ ವೆಂಕಟಪ್ಪನಾಯಕನ ಕಡೆಯಿಂದ ಉಂಟಾದ ದುರಾಕ್ರಮಣ ದಾಳಿಯ ಸಂಕಟದಿಂದ ಪಾರಾಗಲು ಪೋರ್ಚುಗೀಸರ ಸಹಾಯ ಬಯಸಿದಳು. ಪಡುವಣ ಕಡಲ ಕಿನಾರೆಯೆಡೆಯಲ್ಲಿ ಪೋರ್ಚುಗೀಸರು ಬೀಡುಬಿಟ್ಟಿದ್ದರು. ಅವರ ನಿರುಂಬಳ ಬದುಕಿಗೆ ಹಲವು ಸಲ ಪರಿಪರಿಯಾಗಿ ನೆರವಿಗೆ ಚೆನ್ನಭೈರಾದೇವಿ ನಿಂತಿದ್ದಳು. ಆದರೆ ಈ ಕ್ಲಿಷ್ಟ ಪರಿಸ್ಥಿತಿಯಲ್ಲಿ ಅವರು ರಾಣಿಯನ್ನು ಕೈಬಿಟ್ಟರು. ಸ್ವಕೀಯರೇ, ನೆಚ್ಚಿನ ಬಂಟರೇ ವಂಚಿಸಿರುವಾಗ ಇನ್ನು ಪರಕೀಯರು ನೆರವಿಗೆ ಒದಗಿಯಾರೆ? ''ಈಕೆ ತನಗಿಂತಲೂ ಕೀಳಾದ ಕುಲದವನೊಬ್ಬನನ್ನು ಮೋಹಿಸಿದಳು. ಅವನು ಮುಂದೆ ತಾನೆ ದೊರೆಯಾಗುವ ಕನಸು ಕಂಡು, ಕೆಳದಿಯ ದೊರೆಗಳ ನೆರವು ಪಡೆದ. ಕೆಳದಿಯ ದೊರೆಗಳು ಚೆನ್ನಭೈರಾದೇವಿಯನ್ನೂ ಅವಳ ಪ್ರಿಯಕರನನ್ನು ಬಂಧಿಸಿ ರಾಜ್ಯವನ್ನು ವಶಪಡಿಸಿಕೊಂಡರು. ಚೆನ್ನಭೈರಾದೇವಿ ರಾಣಿಯು ಬಂದಿಖಾನೆಯಲ್ಲಿಯೇ ಮೃತಳಾದಳು'' (ಪ್ರಿಯತ್ರೊದೆಲ್ಲವಲ್ಲೆ, ಇಟಲಿಯ ಪ್ರವಾಸಿ ದಿನಚರಿಯಿಂದ).

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ನದಿಯ ಒಂದು ದಡದಲ್ಲಿ ಮಂಗಳೂರು ಇದ್ದರೆ ಇನ್ನೊಂದು ದಡದಲ್ಲಿ ಉಳ್ಳಾಲ ಇದೆ. ಈ ಉಳ್ಳಾಲದ ರಾಣಿ ಅಬ್ಬಕ್ಕಳು ಮೂಡುಬಿದಿರೆಯ ಚೌಟರಸರ ಮಗಳು. ಈ ಹಿರಿಯರಾಣಿ ಅಬ್ಬಕ್ಕಳನ್ನು ಸೋಲಿಸಿ ಪೋರ್ಚುಗೀಸರು ಕಪ್ಪಕಾಣಿಕೆ ಪಡೆಯುತ್ತಿದ್ದರು. ರಾಣಿ ಅಬ್ಬಕ್ಕ ಸ್ವಾತಂತ್ರ್ಯ ಪ್ರೇಮಿ, ಸಾಹಸಿ, ಪರಕೀಯರ ನೊಗ ಹೊರಲು ಆಕೆಯ ಹೆಗಲು ಒಪ್ಪಲಿಲ್ಲ. ಸ್ವಾತಂತ್ರ್ಯವನ್ನು ಸಾರಿದಳು. ಕಪ್ಪಕಾಣಿಕೆ ವಗ್ಯೆರೆ ನಿಲ್ಲಿಸಿದಳು. ಗೋವೆಯಲ್ಲಿದ್ದ ಪೋರ್ಚುಗೀಸರ ಗೌರ್ನರ್ ನರೋನನು ರೋಷಗೊಂಡನು. ಮೂರು ಸಾವಿರ ಸೈನಿಕರೊಡನೆ ಅಬ್ಬಕ್ಕನ ಮೇಲೆ ಯುದ್ಧಕ್ಕೆ ಬಂದನು. ಪೋರ್ಚುಗೀಸರ ಯುದ್ಧನೌಕೆಗಳು ಉಳ್ಳಾಲಕ್ಕೆ ಬಂದವು. ಇರುಳಲ್ಲಿ ಸೈನಿಕರು ಕುಡಿದು ಕುಣಿದು ಮೈಮರೆತರು. ಕ್ರಿ.ಶ. ೧೫೬೭-೬೮ರ ಸಮಯವದು. ಉಳ್ಳಾಲದ ರಾಣಿ ಅಬ್ಬಕ್ಕದೇವಿ ನಟ್ಟನಡುರಾತ್ರಿಯಲ್ಲಿ ತನ್ನ ಕಡೆಯ ಪಡೆಗಳನ್ನು ಕಳಿಸಿ ನೀರಿನಲ್ಲಿದ್ದ ಹಗೆಗಳ ಹಡಗುಗಳಿಗೆ ಬೆಂಕಿ ಇಡಿಸಿದಳು. ಸತ್ತೆನೊ ಬದುಕಿದೆನೊ ಎನ್ನುತ ಮಧ್ಯರಾತ್ರಿಯಲ್ಲಿ ಕಂಗಾಲಾದ ಪೋರ್ಚಿಗೀಸರು ಸೋತು ಹಿಂದಿರುಗಿದರು. ಆದರೆ ಮರುದಿನ ಮತ್ತೆ ಸೇನೆ ಸಂಘಟಿಸಿ ಬಂದ ಶತ್ರುಗಳು ಉಳ್ಳಾಲವನ್ನು ಮುತ್ತಿ ಹಾಳು

ಮಾಡಿದರು. ಅಲ್ಲದೆ ಇದೇ ಸಮಯಕ್ಕೆ ಬಂಗಾಡಿಯ ಕಾಮರಾಯನೂ ಉಳ್ಳಾಲದ ಮೇಲೆ ದಂಡೆತ್ತಿ ಬಂದನು. ಅಬ್ಬಕ್ಕರಾಣಿ ಉಪಾಯ ಹುಡುಕಿ ರಾಜಕಾರಣ ತಂತ್ರವೆಂದು ಬಂಗಾಡಿಯ ಕಾಮರಾಯನನ್ನು ಮದುವೆಯಾಗಿ ಗಂಡಾಂತರವನ್ನು ತಪ್ಪಿಸಿದಳು.

ಹಗೆತನ ಒಂದೇ ತಲೆಮಾರಿಗೆ ಮುಗಿಯುವುದಿಲ್ಲ. ಈ ಹಿರಿಯ ಅಬ್ಬಕ್ಕರಾಣಿಯ ಮಗಳಾದ ಕಿರಿಯ ಅಬ್ಬಕ್ಕಳ ಕಾಲದಲ್ಲಿಯೂ ಹಗೆತನ ಮುಂದುವರೆಯಿತು. ವೀರನರಸಿಂಹ ಲಕ್ಷ್ಮಪ್ಪರಸನ ಹೆಂಡತಿಯಾಗಿ ಪಟ್ಟವೇರಿದ ಕಿರಿಯ ಅಬ್ಬಕ್ಕ ಮಹಾ ಮುತ್ಸದ್ದಿ, ಉಳ್ಳಾಲದ ಕೋಟೆಯನ್ನು ಮೊದಲು ಬಲಪಡಿಸಿದಳು. ತನ್ನ ತಾಯಿಯಂತೆ ತಾನೂ ಪೋರ್ಚುಗೀಸರಿಗೆ ಕಪ್ಪಕೊಡಲು ನಿರಾಕರಿಸಿದಳು. ಆದರೆ ಕೈ ಹಿಡಿದ ಗಂಡನೇ ಹೆಂಡತಿಯ ವಿರುದ್ಧ ಪಿತೂರಿ ಹೂಡಿ ವೈರಿಗಳಾದ ಪೋರ್ಚುಗೀಸರ ಕಡೆ ಸೇರಿದನು. ನಿಪುಣ ರಾಜಕಾರಣಿಯಾದ ಕಿರಿಯ ಅಬ್ಬಕ್ಕಳು ಕೆಳದಿರಾಜರ ಮತ್ತು ಕಲ್ಲಿಕೋಟೆ ಜಾಮೊರಿನ್ನನ ಸಹಾಯ ಪಡೆಯಲು ಅವರೊಂದಿಗೆ ಸ್ನೇಹಕೋರಿದಳು. ಅರೇಬಿಯಾಕ್ಕೆ ಹೋಗಿದ್ದ ಈಕೆಗೆ ಸೇರಿದ್ದ ವ್ಯಾಪಾರೀ ಹಡಗನ್ನು ಪೋರ್ಚುಗೀಸರು ಹಿಡಿದು ನಿಲ್ಲಿಸಿದರು. ಯುದ್ಧ ಹೂಡಲು ಇಷ್ಟು ನೆಪಸಾಕು. ಕಿರಿಯ ಅಬ್ಬಕ್ಕರಾಣಿ ಪರಾಕ್ರಮದಿಂದ ಹೋರಾಡಿ ಪೋರ್ಚುಗೀಸರನ್ನು ಸೋಲಿಸಿ ಮಂಗಳೂರನ್ನು ಸ್ವಾಧೀನ ಪಡಿಸಿಕೊಂಡಳು. ಸಂಧಿ ಮಾಡಿಕೊಂಡ ಪೋರ್ಚುಗೀಸರು ಸಮಯಕಾದು ಕ್ರಿ.ಶ. ೧೬೧೮ರಲ್ಲಿ ಇನ್ನೊಮ್ಮೆ ದಂಡೆತ್ತಿ ಬಂದರು. ಆಗಲೂ ಕಿರಿಯರಾಣಿ ಅಬ್ಬಕ್ಕನ ವೀರಾವೇಶದ ಹೋರಾಟದ ಎದುರು ಸೋತು ಹಿಂತಿರುಗಿದರು. ಇಂಗ್ಲೆಂಡಿನ ರಾಣಿ ಎಲಿಸಬೆತಳ ಸೇನೆಗೆ ಸ್ಪೇನ್ ದೇಶದ ಯುದ್ಧದ ಹಡಗುಗಳು ಒಮ್ಮೆ ಮಾತ್ರ ಸೋತರೆ, ಪೋರ್ಚುಗೀಸರು ಅಬ್ಬಕ್ಕರಾಣಿಯಿಂದ ಮೂರು ಬಾರಿ ಸೋತರೆಂದು ಪರ್ಷಿಯಾದ ಷಾ ಪ್ರಶಂಸಿಸಿದನು. ಈ ಮೆಚ್ಚುಗೆಯನ್ನು ಕೇಳಿದ ಇಟಲಿಯ ಪ್ರವಾಸಿಯಾದ ಪ್ರಿತ್ರೊದೆಲ್ಲವಲ್ಲೆ ಎಂಬಾತನು ಈಕೆಯನ್ನು ಕಾಣುವ ಸಲುವಾಗಿ ಉಳ್ಳಾಲದವರೆಗೆ ತಿಂಗಳುಗಟ್ಟಲೆ ಪ್ರವಾಸಮಾಡಿ ಅಬ್ಬಕ್ಕರಾಣಿಯನ್ನು ಕಂಡು ಬಹುವಾಗಿ ಪ್ರಶಂಸಿಸಿದನು. ತನ್ನ ಜೀವಿತಕಾಲದಲ್ಲಿ ಹೀಗೆ ಅಬ್ಬಕ್ಕರಾಣಿ ಹೆಸರುಗಳಿಸಿ ಚರಿತ್ರಾರ್ಹಳಾದಳು. ಜಗತ್ತಿಗೆ ಕನ್ನಡಿಗರ ಸಾಹಸದ ರುಚಿಯನ್ನು ತೋರಿಸಿದಳು.

ಹಿರಿಯ ಅಬ್ಬಕ್ಕರಾಣಿ ಮತ್ತು ಕಿರಿಯ ಅಬ್ಬಕ್ಕಳ, ತಾಯಿಮಗಳ ಸಾಹಸಗಾಥೆ ಅನ್ಯಾದೃಶವಾದದ್ದು. ಈ ತಾಯಿ ಮಗಳು ಒಂದು ವೇಳೆ ಅಂದು ೧೬ ಮತ್ತು ೧೭ ನೆಯ ಶತಮಾನದಲ್ಲಿ ಪೋರ್ಚುಗೀಸರನ್ನು ಹಣ್ಣುಗಾಯಿ ನೀರುಗಾಯಿ ಮಾಡಿ ಸಂಪೂರ್ಣವಾಗಿ ಸೋಲಿಸಿ ಹಿಮ್ಮೆಟ್ಟಿಸದಿದ್ದರೆ, ಇಂದು ಬ್ರಿಟಿಷರ ಬದಲು ಈ ದೇಶವನ್ನು ಪೋರ್ಚುಗೀಸರು ಆಳುತ್ತಿದ್ದರು. ಕರ್ನಾಟಕವಂತೂ ನಿಶ್ಚಯವಾಗಿ ಅವರಿಗೆ ವಶವಾಗುತ್ತಿತ್ತು. ಕನ್ನಡ ನಾಡನ್ನು ಆ ಮೂಲಕ ಇಡಿಯ ಇಂಡಿಯಾವನ್ನು ಒಂದು ವಿದೇಶೀ ಹಿಡಿತಕ್ಕೆ ಒಳಗಾಗದಂತೆ ಉಳಿಸಿದ ಹಿರಿಮೆ ಉಳ್ಳಾಲದ ಈ ತಾಯಿ ಮಗಳಿಗೆ ಸೇರಿದ್ದು.

***

ಅಭಿವಂದನಾ

ಕುವೆಂಪು ರಾಮಾಯಣದಲ್ಲಿ ಮಂಥರೆ

-ಪ್ರೊ॥ ಡಿ. ಲಿಂಗಯ್ಯ

ಮಹಾಕವಿ ಕುವೆಂಪು ತಮ್ಮ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಸ್ತ್ರೀಪಾತ್ರಗಳನ್ನು ಆಧುನಿಕ ಯುಗಧರ್ಮದ ಹಿನ್ನೆಲೆಯಲ್ಲಿ ಕಂಡರಿಸಿದ್ದಾರೆ. ಸ್ತ್ರೀವಾದಿನೆಲೆಯ ಪ್ರತಿರೂಪಗಳಂತೆ ಅವರ ಸ್ತ್ರೀಪಾತ್ರಗಳು ರೂಪುಗೊಂಡಿವೆ. ಸಂಪ್ರದಾಯ ಬದ್ಧವಾದ ಆರ್ಷೇಯ ಪಾತ್ರಗಳು ವೈಚಾರಿಕವಾದ ಆಧುನಿಕ ಪಾತ್ರಗಳಂತೆ ನಡೆದುಕೊಂಡಿವೆ. ಕುವೆಂಪು ಅವರ ವೈಚಾರಿಕತೆ, ವೈಜ್ಞಾನಿಕತೆ, ಮನಃಶಾಸ್ತ್ರೀಯ ವಿಶ್ಲೇಷಣೆಯ ಕಲಾರೂಪಗಳಾಗಿ ಸ್ತ್ರೀಪಾತ್ರಗಳು ಮೆರೆದಿವೆ. ಪುರುಷಪಾತ್ರಗಳಂತೆ ಸ್ತ್ರೀಪಾತ್ರಗಳೂ ಕೂಡ ಸಮಾನ ಕವಿಸೃಷ್ಟಿಯ ನಿರ್ಮಾಣಗಳಾಗಿವೆ. ಇಲ್ಲಿ ಭಾರತೀಯ ಪರಂಪರೆಯ ಸ್ತ್ರೀ ಸಂವೇದನೆಗಳು, ಆಧುನೀಕರಣಗೊಂಡು ಪರಿವರ್ತನೆಯಾಗಿರುವುದನ್ನು ಪ್ರಧಾನವಾಗಿ ಕಾಣಬಹುದು. ಸಾವಿರಾರು ವರ್ಷಗಳಿಂದ ಅಪವಾದದ ಹಣೆಪಟ್ಟಿ ಹೊತ್ತು ಜನಮಾನಸದಲ್ಲಿ ಕಪ್ಪುಚುಕ್ಕೆಯಾಗಿ ಅಚ್ಚೊತ್ತಿದ್ದ ಸ್ತ್ರೀಪಾತ್ರಗಳ ಅಂತರಂಗದ ಮತ್ತೊಂದು ಮುಖವನ್ನು ಅನಾವರಣಗೊಳಿಸುವುದರ ಮೂಲಕ ಆ ಪಾತ್ರದ ಅಪಮಾನ ನಿವಾರಣೆಗೆ, ಉದ್ಧಾರಕ್ಕೆ ಪ್ರಯತ್ನಿಸಿರುವುದು ಗಮನಾರ್ಹವಾಗಿದೆ. ಅಂತಹ ಸ್ತ್ರೀಪಾತ್ರಗಳಲ್ಲಿ ಮಂಥರೆಯ ಪಾತ್ರ ಅಗ್ರಗಣ್ಯವಾಗಿದೆ.

ಕುವೆಂಪು ಸ್ತ್ರೀ ಪಕ್ಷಪಾತಿ ಎನ್ನುವಂತೆ ಅವರ ಸ್ತ್ರೀ ಪಾತ್ರಗಳು ಔನ್ನತ್ಯವನ್ನು ಮೆರೆದಿವೆ. ಮಂಥರೆಯ ಪಾತ್ರ ವಿಕಾಸಕ್ಕೆ, ಅವಳ ಉದ್ಧಾರಕ್ಕೆ, ಅವಳಿಂದಾದ ಸೃಷ್ಟಿಲೀಲೆಯ ವೈಚಿತ್ರ್ಯಕ್ಕೆ ಕವಿ ಮಾರುಹೋಗಿ ಅಪರೂಪದ ಮನೋವ್ಯಾಪಾರಗಳನ್ನು ಕಂಡರಿಸಿದ್ದಾರೆ; ಮಂಥರೆಯ ಮನಃಸ್ಥಿತಿ, ಬದುಕಿನ ನಂಬಿಕೆ, ಜೀವನ ಚಟುವಟಿಕೆಗಳ ಎಳೆಎಳೆಗಳನ್ನು ಸೂಕ್ಷ್ಮವಾಗಿ ಗಮನಿಸಿ, ಸಕಾರಣವಾಗಿ ಸಮರ್ಥಿಸಿ, ಲೋಕಾಪವಾದದಿಂದ ಅವಳನ್ನು ಬಿಡುಗಡೆ ಮಾಡಿದ್ದಾರೆ. ಸ್ತ್ರೀ ಮನೋಧರ್ಮದ ಹಲವು ಆಯಾಮಗಳಿಗೆ ಮಂಥರೆಯ ಪಾತ್ರ ಮಾದರಿಯಾಗಿದೆ.

ಮಹರ್ಷಿ ವಾಲ್ಮೀಕಿ ರಾಮಾಯಣದ ಮಂಥರೆಗೂ ರಸಋಷಿ ಕುವೆಂಪು ರಾಮಾಯಣದ ಮಂಥರೆಗೂ ಅಜಗಜಾಂತರ. ಅಲ್ಲಿ ಬಿಂದುವಾಗಿದ್ದ ಮಂಥರೆಯ ಪಾತ್ರ, ಇಲ್ಲಿ ಸಿಂಧುವಾಗಿದೆ. ಅಲ್ಲಿ ಕೇವಲ ಮಂಥರೆಯಾಗಿದ್ದವಳು, ಇಲ್ಲಿ ಮಂಥರಾದೇವಿಯಾಗಿದ್ದಾಳೆ. ಅಲ್ಲಿ ಪಾಪಿಷ್ಠೆಯಾಗಿದ್ದವಳು, ಇಲ್ಲಿ ಪುಣ್ಯಾತ್ಮಳಾಗಿದ್ದಾಳೆ. ಅಲ್ಲಿ ಖಂಡದೃಷ್ಟಿಯ ಮರ್ತ್ಯರೂಪವಾಗಿದ್ದವಳು, ಇಲ್ಲಿ ಅಖಂಡದೃಷ್ಟಿಯ ಅಮರ್ತ್ಯರೂಪವಾಗಿದ್ದಾಳೆ. ಅಲ್ಲಿ ಸಾಧಾರಣ ಹೆಣ್ಣಾಗಿದ್ದವಳು, ಇಲ್ಲಿ ಅಸಾಧಾರಣ ಅಶರೀರೆಯಾಗಿ ಕವಿ ಕಾವ್ಯದರ್ಶನಕ್ಕೆ ಇಂಬಾಗಿದ್ದಾಳೆ.

ಅಭಿವಂದನಾ

ವಾಲ್ಮೀಕಿ ರಾಮಾಯಣದಲ್ಲಿ ಮಂಥರೆ ಪ್ರವೇಶಿಸುವುದು ಶ್ರೀರಾಮ ಪಟ್ಟಾಭಿಷೇಕದ ಬೆಳಗಿನ ಹೊತ್ತು. ಅನಂತರ ದಶರಥನ ಅಪರಕ್ರಿಯೆ ಮುಗಿದ ಮೇಲೆ ಸರ್ವಾಭರಣಭೂಷಿತಳಾಗಿ ದ್ವಾರಪಾಲಕರ ಮೂಲಕ ಶತ್ರುಘ್ನನ ಮುಂದೆ ಕಾಣಿಸಿಕೊಳ್ಳುವಳು. ಈ ಎರಡು ಸಂದರ್ಭಗಳನ್ನು ಬಿಟ್ಟರೆ ಅದಕ್ಕಿಂತ ಮೊದಲು, ಅದರ ಅನಂತರ, ಅವಳ ಪ್ರಸ್ತಾಪವಿಲ್ಲ. ಕೈಕೆಗೆ ದುರ್ಬೋಧನೆ ಮಾಡುವುದಕ್ಕೇ ಬಂದು ಮರೆಯಾದ ಪಾತ್ರವಾಗಿದ್ದಾಳೆ ಅಲ್ಲಿ. ಆದರೆ, ಕುವೆಂಪು ರಾಮಾಯಣದಲ್ಲಿ ಮಂಥರೆಯ ಹಿನ್ನೆಲೆ, ಮುನ್ನೆಲೆ ಪರಿಪುಷ್ಟವಾಗಿದೆ, ಅರ್ಥಪೂರ್ಣವಾಗಿದೆ, ಸ್ತ್ರೀ ಪಾತ್ರ ಸಮೂಹದಲ್ಲಿ ಗಟ್ಟಿನೆಲೆಗೊಂಡಿದೆ.

ಕುವೆಂಪು ರಾಮಾಯಣದ ಪ್ರಾರಂಭದ ಸಂಚಿಕೆಯಲ್ಲೇ ಮಂಥರೆಯ ಪ್ರವೇಶವಾಗಿದೆ: ಒಂದು ಹುಣ್ಣಿಮೆಯ ರಾತ್ರಿಯಲ್ಲಿ ದಶರಥನ ರಾಣಿಯರು ತಮ್ಮ ಮುದ್ದು ಮಕ್ಕಳೊಡನೆ ಅರಮನೆಯ ಉದ್ಯಾನದಲ್ಲಿ ಆಮೋದ ಪ್ರಮೋದಗಳಲ್ಲಿ ಮಗ್ನರಾಗಿದ್ದಾಗ, ಶಿಶುರಾಮ ಆಕಾಶದ ಪೂರ್ಣಚಂದ್ರನನ್ನು ಕಂಡು, ಅದನ್ನು ತಂದು ಕೊಡಬೇಕೆಂದು ಚಂಡಿ ಹಿಡಿದನು. ಯಾರು ಹೇಗೆ ಪ್ರಯತ್ನಿಸಿದರೂ ಮಗು ಸಮಾಧಾನಗೊಳ್ಳಲಿಲ್ಲ; ಅಳುವುದನ್ನು ನಿಲ್ಲಿಸಲಿಲ್ಲ. ಆಗ ಅಲ್ಲಿಗೆ ಭರತನನ್ನು ಕಂಕುಳಲ್ಲಿ ಇರುಕಿಕೊಂಡು ಮಂಥರೆ ಬಂದಳು. ಅವಳನ್ನು-

ಕಂಡುದೆ ತಡಂ, ಅಮಂಗಳವನೀಕ್ಷಿಸಿದಂತೆ,
ಮೊಗಂ ಮುರಿದು, ಮಾತು ನಿಲ್ಲಿಸಿದರನಿಬರುಮಲ್ಲಿ,
ಕೈಕೆ ಹೊರತಾಗಿ.

ಆ ಮುದುಕಿಯ ದೈಹಿಕ ವಿಕಾರ ರೂಪನ್ನು ಕುವೆಂಪು ಹೀಗೆ ವರ್ಣಿಸಿದ್ದಾರೆ.

ಕುಡುಬಿಲ್ಲು ಬಾಗಿದ ಮೆಯ್ಯ,
ತೊನ್ನ ಬೆಳ್ಗಲೆವಿಡಿದ ಕರ್ರನೆಯ ಕುಬ್ಜತೆಯ,
ಗೂಳಿ ಹಿಣಿಲಿನವೊಲು ಗೂನುವುಬ್ಬಿದ ಬೆನ್ನ,
ಸುಕ್ಕು ನಿರಿನಿರಿಯಾಗಿ ಬತ್ತಿದ ತೊವಲ್ ಪತ್ತಿ
ಬಿಗಿದೆಲ್ವುಗೂಡಿನಾ ಶಿಥಿಲ ಕಂಕಾಲತೆಯ,
ಪಲ್ಲುದುರಿ ಬೋಡಾದ ಬಚ್ಚುಬಾಯಿಯ, ಕುಳಿಯ
ಕೆನ್ನೆಗಳ, ದಿಟ್ಟಿಮಾಸಿದ ಕಣ್ಣ ಕೋಟರದ,
ಕರ್ಬುನದ ಮೊರಡು ಮೊಗದ, ಕೂದಲುದುರಿದ ಬೋಳು
ಪುರ್ಬಿನ ವಿಕಾರದಾ, ಬೆಳ್ನಕ್ಕಿ ತಿಪ್ಪುಳೆನೆ
ಮಂಡೆಯಂ ಮುತ್ತಿ ಕೆದರಿದ ಬೆಳ್ಳನೆಯ ನವಿರ
ಅಸ್ಥಿಪಂಜರದಂತೆವೋಲಸ್ಥಿರ ಸ್ಥವಿರೆ...

ಕವಿಕ್ರತುದರ್ಶನಂ ೫೪೩-೫೫೩

ಅರಮನೆಯ ಪರಿಸರದ ಮಂದಿ ಮಂಥರೆಯನ್ನು ಅಮಂಗಳೆಯೆಂದು ಭಾವಿಸುವುದಕ್ಕೆ ಅವಳ ವಿಕಾರ ರೂಪೂ ಸಾಕಷ್ಟು ಕಾರಣವಾಗಿದೆ. ಅಂತಹವಳನ್ನು ಕಂಡೊಡನೆ ಕೈಕೆ 'ನುಡಿಸಿದಳ್ ತಾಯವೊಲ್ ಸಾಕಿ ಸಲಹಿದ ದಾಸಿ ಮಂಥರೆಯ!'

ಪ್ರಸ್ತುತ ಸಂದರ್ಭದ ಹಿನ್ನೆಲೆಯಲ್ಲಿ ಕೈಕೆಯೊಡನೆ ಏನನ್ನೋ ಪಿಸುಗುಟ್ಟಿದ ಮಂಥರೆ ತನ್ನ ಮಡಿಲಿನಲ್ಲಿದ್ದ ಮುಕುರವನ್ನು ತೆಗೆದುಕೊಟ್ಟಳು. ಅದನ್ನು ತಂದು ಅಳುತ್ತಿದ್ದ ಶಿಶುರಾಮನಿಗೆ ತೋರಿಸಿದಾಗ, ''ಪೊಳೆಯೆ ಪಡಿನೆಳಲಿನಲಿ ಬಾನೆಡೆಯ ಚಂದಿರಂ, ಪಡೆದೆನಿಂದುವನೆಂದು ಕುಣಿಕುಣಿದು ನಲಿಯತೊಡಗಿದನನಿಬರುಂ ಬಿಲ್ಲುಬೆರಗಾಗೆ''

ಚಂಡಿಹಿಡಿದ ಮಗು ರಾಮನ ಮನದಿಂಗಿತವನ್ನು ಮಂಥರೆ ತಿಳಿದದ್ದು ವಿಸ್ಮಯವಾಗಿದೆ. ಶ್ರೀರಾಮನ ಚಂದ್ರಬಯಕೆ ಅವನು ಉದಾತ್ತಧ್ಯೇಯದ ಮಹಾತ್ವಾಕಾಂಕ್ಷೆಯ ಮಹಾಪುರುಷ ಎಂಬುದನ್ನು ತೋರಿಸುತ್ತದೆ. ಅದರ ಪ್ರಕಟಣೆಗೆ ನಾಂದಿ ಹಾಡಿದಂತೆ ಮಂಥರೆಯ ಕನ್ನಡಿ ಪ್ರಸಂಗ ಭಾಸವಾಗುತ್ತದೆ. ತನ್ನ ಪ್ರಯತ್ನದಿಂದ ಅಳುನಿಲ್ಲಿಸಿದ ಶಿಶುರಾಮನ ಬಗೆಗೆ ಅಕ್ಕರೆಯುಕ್ಕಿ-

ಸಂತಸದೊಳಾ ದಾಸಿ, ಮುದಿಗೂನಿ, ರಾಮನಂ
ಮುದ್ದಿಸಲ್ ಬಯಸಿ ತೋಳ್ ಚಾಚಲಾ ಕೌಸಲ್ಯೆ:
ಕಂದಂಗಮಂಗಳಂ. ಮುಟ್ಟದಿರ್ ಮುಟ್ಟದಿರ್.
ಬೇಡವೇಡೆನ್ನುತೆ ನಿವಾರಿಸಿದಳಾಕೆಯಂ,
ಮುದಿ ಮಂಥರೆಯ ಮೈತ್ರಿ ಜಜ್ಜರಿತಮಪ್ಪಂತೆವೋಲ್.
ಮುರಿದೊಲ್ಮೆಯವಮಾನದಿಂದೆ ಕಣ್ಬನಿ ಚಿಮ್ಮಿ
ನಿಲ್ಲದಲ್ಲಿಂ ನಡೆದಳಯ್ ಭರತನಂ ಬಿಗಿದಪ್ಪಿ,
ತುಳಿದ ಸರ್ಪಿಣಿಯಂತೆ ಮುಳಿಸಿನುರಿಯಿಂ ಪೊಗೆದು,
ಸುಯ್ದು, ಹೆಡೆಯೆತ್ತಿ!

ಕವಿಕ್ರತುದರ್ಶನಂ ೫೬೪-೫೭೨

ದಶರಥನ ಹಿರಿಯ.. ಹೆಂಡತಿ ಕೌಸಲ್ಯೆಗೂ ಮಂಥರೆ ಅಮಂಗಳೆ. ಮಂಥರೆಯ ಮನಸ್ಸು ಮುದುಡಲು, ಕಹಿಯಾಗಲು ಪ್ರಾರಂಭವಾಯಿತು; ಈ ಘಟನೆಯಿಂದ, ಶ್ರೀರಾಮನ ಬಗೆಗೆ, ಶ್ರೀರಾಮನ ತಾಯಿ ಕೌಸಲ್ಯೆಯ ಬಗೆಗೆ, ಮಂಥರೆ ಶಾಶ್ವತವಾಗಿ ದ್ವೇಷ ಸಾಧಿಸಲು ಕಾರಣವಾಗುತ್ತದೆ. ಭರತನ ಬಗೆಗೆ, ಭರತನ ತಾಯಿ ಕೈಕೆಯ ಬಗೆಗೆ, ಮಮತೆ ಮತ್ತಷ್ಟು ಅಧಿಕವಾಗಲು ಪ್ರೇರಕವಾಗುತ್ತದೆ. ಶ್ರೀರಾಮ ದೂರವಾದಂತೆ ಭರತ ಇನ್ನೂ ಹತ್ತಿರವಾಗುತ್ತಾನೆ. ಭರತನ ಆಧಾರ ಮಂಥರೆಗೆ ಸರ್ವಸ್ವವಾಗುತ್ತದೆ.

ಇದೇ ಸಂದರ್ಭದಲ್ಲಿ ಕವಿ ಮಂಥರೆಯ ಪೂರ್ವವೃತ್ತಾಂತವನ್ನು ವಿವರಿಸಿದ್ದಾರೆ.

ಅಭಿವಂದನಾ

ಕೈಕೆಯ ತಾತನೊರ್ದಿನಂ
ಬೇಂಟೆಯಾಯಾಸದಿಂ ಬೈಗುವೊಳ್ತಡವಿಯೊಳ್
ಪರಿವಾರದೊಡನೆ ಬರುತಿರೆ, ಪಳುವೆ ತಾನಳುವಂತೆ
ಗೋಳಿಟ್ಟುದೊಂದು ಶಿಶುರೋದನಂ. ಕೂರ್ಗೆಲಸದಿಂ
ಪಿಂತಿರುಗುತಿರ್ದ್ದ ಪಾರ್ಥಿವನೊಳುದಿಸಿತು ಕರುಣೆ,
ಕಟ್ಟಲಿಹ ಕಬ್ಬಕೆ ಮೊದಲ್‌ಗುದ್ದಲಿಯ ಪೂಜೆವೋಲ್.
ನಡೆದು ನೋಡಲ್ಕೆ, ಕಾಣಿಸಿತೊಂದು ದಸ್ಯುಶಿಶು,
ಮುಳ್ ಮಣ್ಣು ತರಗೆಲೆಯಿಡಿದ ನೆಲದ ಮೇಲಿರುವೆ
ಮುತ್ತಿ, ಹಾ, ವಿಕೃತಿ ವಕ್ರತೆ ರೂಹುಗೊಂಡಂತೆ!
ಪೆತ್ತವರ ಸುಳಿವಿಲ್ಲದಿರ್ದ ಆ ಪೆಣ್‌ಪಸುಳೆಯಂ
ಪಿಡಿದೆತ್ತಿ, ಕಟ್ಟಿರುಂಪೆಯನೊರಸಿ, ಸಂತೈಸಿದನ್
ಗೂಬೆಯಪಶಕುನದ ವಿಕಾರದುಲಿಯನ್ನೇರ್ದು
ಕವಿಯುತಿರೆ ಕಾಡುಗಳ್ತಲೆ, ತಂದನೂರಿಗವಳಂ
ದಾರಿಯ ನಡೆವ ಮಾರಿಯಂ ಮನೆಗೆ ತರುವಂತೆ,
ಮುಂದಣ ಮಹಾದುಃಖ ದಾವಾನಳಕೆ ತನ್ನ
ಕಿರುಗಜ್ಜದಾ ಒಂದೆ ಕಿಡಿಯ ಮುನ್ನುಡಿಯಿಡುವ
ವಿಧಿ ವಿಲಾಸದಲಿ! ಬೆಳೆದುದು ಕೂಸುಕುಳ್ಳಾಗಿ,
ಗೂನಾಗಿ, ತೊತ್ತಾಗಿ, ಕರ್ರಗೆ ಜನರಕಣ್ಗೆ
ಹೇಸಿನಾಕೃತಿಯಾಗಿ! ಕಂಡ ಕಂಡವರೆಲ್ಲರುಂ
ಕುಬ್ಜೆಯನನಾರ್ಯೆಯಂ, ತಂದೆತಾಯಿಲ್ಲದಾ
ಪರದೇಶಿಕನ್ನೆಯಂ, ಚಿಃ ಎಂದು, ತೊಲಗೆಂದು,
ಥೂ ಎಂದು, ಸಾಯೆಂದು, ನಾಯ್ಮರಿಗೆ ಕಡೆಯಾಗಿ
ಭಾವಿಸಿದರಾ ನೃಪನ ಕಟ್ಟಾಣೆಯಂ ಮೀರ್ದು
ಕಡೆಗಣ್ಣಿ. ಮನುಜರೊಲ್ಮೆಯ ಸವಿಯನೊಂದಿನಿತುಮಂ
ಕಾಣದೆ, ಮಿಗದ ತೆರದಿ ಮಿದುಳಿಲ್ಲದೆಯೆ ಬೆಳೆದು
ಜಡತೆವೆತ್ತಿರ್ದ ಸೋಂಬೆಗೆ ಮಂದಿ, ಬಯ್ವವೊಲ್
ಜರೆದು, ಮಂಥರೆಯೆಂದು ಪೆಸರನೆಸೆದರ್, ಮೊಗಕೆ
ಕೆಸರನಿಡುವಂತೆ.

ಕವಿಕ್ರತು ದರ್ಶನಂ ೫೭೨-೫೯೯

ಮಂಥರೆಯ ಪೂರ್ವ ವೃತ್ತಾಂತದ ಈ ಭಾಗ ಸಂಪೂರ್ಣವಾಗಿ ಕುವೆಂಪು ಸೃಷ್ಟಿ. ವಾಲ್ಮೀಕಿ ರಾಮಾಯಣದಲ್ಲಿ ಈ ಕಲ್ಪನೆಯಿಲ್ಲ. ತಾಯಿ ತಂದೆಯರ ಗುರುತು ಇಲ್ಲದೆ ಸಿಕ್ಕಿದ ಈ 'ದಸ್ಯುಶಿಶು'ವಿನ ಬಗೆಗೆ ನಾಗರಿಕ ರಾಜನ ಕರುಣೆ ಬಿದ್ದುದು ಆಶ್ಚರ್ಯ. ಆ ಶಿಶುವನ್ನು ಅರಮನೆಗೆ ತಂದು ಸಾಕಿದ್ದು ಪರಮಾಶ್ಚರ್ಯ. ಶಿಶು ಮಂಥರೆಯನ್ನು ಅರಮನೆಗೆ ತಂದುದರಿಂದ ಉಂಟಾಗುವ ವಿಪತ್ಪರಂಪರೆ, ಅದರಿಂದ

ರಾಮಾದಿಗಳ ಮೂಲಕ ನಡೆಯುವ ಸೃಷ್ಟಿಲೀಲೆಯ ಅಪ್ರಾಕೃತಿಕ ಘಟನೆಗಳ ಸಂಭವ-ಮೊದಲಾದವುಗಳ ದರ್ಶನ ಧ್ವನಿಯ ಎಳೆಗಳು ಈ ಭಾಗದಲ್ಲಿ ಅಡಕವಾಗಿವೆ. ಕಾಡಿಗಿಂತಲೂ ಕೀಳಾಗಿ, ಅರಮನೆಯ ಪರಿಸರದಲ್ಲಿ ಅನಾದರಣೀಯಳಾಗಿ ಬೆಳೆದುದರಿಂದ ಅವಳ ಮನಸ್ಸಿನ ಮೇಲಾದ ಪರಿಣಾಮಗಳ ಚಿತ್ರವೂ ಹಣೆದುಕೊಂಡಿದೆ. ದಸ್ಯುಶಿಶುವಿನ ಅಂತರಂಗವನ್ನು ಅರಿಯದೆ ಬಹಿರ್‌ರೂಪನ್ನೇ ಕಂಡು 'ಮಂಥರೆ' ಯೆಂದು ಹೆಸರಿಟ್ಟುದನ್ನೂ ಕವಿ ಮಾರ್ಮಿಕವಾಗಿ ವರ್ಣಿಸಿದ್ದಾರೆ.

ಅರಮನೆಯ ಪರಿಸರದ ನಿಂದೆಯಲ್ಲೇ ಬೆಳೆದ ಶಿಶು ಮಂಥರೆ ಕುವರಿಯಾಗುವ ಹೊತ್ತಿಗೆ ಕೇಕೆಯ ರಾಜಸತಿಗೆ ಕೈಕೆ ಹುಟ್ಟಿದಳು. ರಾಜನು ಮಗು ಕೈಕೆಯನ್ನು ಆಡಿಸುವ ಕೆಲಸಕ್ಕೆ ಮಂಥರೆಯನ್ನು ನೇಮಿಸಿದ. ಆಗ-

ಮಳೆಹೊಯ್ದ ತೆರನಾಯ್ತು ಮಂಥರೆಯ ಮರುಧರೆಗೆ.
ಚೈತ್ರನಾಗಮವಾಯ್ತು ಮಂಥರೆಯ ಶಿಶಿರಕ್ಕೆ,
ಮಂಥರೆಯ ಬಾಳ್‌ನಿಶೆಗೆ ಶಶಿಯುದಿಸಿದಂತಾಯ್ತು,
ಮಂಥರೆಯ ಮೃತ್ಯುವಿಗೆ ತಾನಮೃತಸೇಚನೆಯಾಯ್ತು,
ಶುಷ್ಕತಾ ಶೂನ್ಯತೆಯೊಳೊಲ್ಮೆ ಸಂಚರವಾಯ್ತು;
ಬದುಕು ಸಾರ್ಥಕ ಮಧುರಮಾಯ್ತು ಶಿಶುಸನ್ನಿಧಿಯ
ಪ್ರೇಮಸೌಂದರ್ಯ ಮಹಿಮೆಯಲಿ, ರೂಪ ವಿಹೀನೆ
ರೂಪಸಿಯೊಳಿರ್ದು ತನಗಿಲ್ಲದಾ ಚೆಲ್ವಿನಲಿ
ಲೋಲಾಡಿದಳ್, ತೇಲ್ವವೋಲ್ ಪಾಲೊಳಿರ್ದ್ದಲಿನ
ಚೂರು.

ಕವಿಕ್ರತುದರ್ಶನಂ ೬೦೭-೬೧೬

ಕೈಕೆಯ ಸನಿಹದಿಂದ ವಿಕಾರರೂಪಿನ ಮಂಥರೆಯಲ್ಲಿ ಸ್ತ್ರೀಸಹಜವಾದ ಪ್ರೀತಿ ವಾತ್ಸಲ್ಯಗಳು ಪ್ರಕಾಶಿಸಿದವು. ಮಂಥರೆಯ ಅಂತರಂಗ ಬದುಕಿನ ಅನಾವರಣವಾಗಲು ಕೈಕೆ ಕಾರಣಳಾದಳು.

ಚಕ್ಕಮುಕ್ಕಿಯ ಕಲ್ಲಿನಂತರಂಗದೊಳಗ್ನಿ
ಗುಪ್ತವಾಗಿರ್ಪಂತೆ, ಬಾಹ್ಯ ವಿಕೃತಿಯ ಮಧ್ಯೆ
ಮಂಥರೆಯ ಹೃದಯದಲಿ ಸುಪ್ತವಾಗಿರ್ದ್ದ ರತಿ,
ಚೆಲುವೊಲವುಗಳ ಚಿಲುಮೆ ತಾಂ ಕಣ್ದೆರೆದುದೊಯ್ಯನೆಯಿ
ಮುಕ್ತ ಮುಕ್ತಾಹಾರ ಧಾರೆಯಲಿ. ತನ್ನೊಂದು
ಜೀವಿತಕೆ ರಾಜಪುತ್ರಿಯೆ ಸರ್ವಸುಖಮಾಗೆ
ಮರೆತಳನ್ಯಾಯಮಂ, ಮರೆತಳಪಮಾನಮಂ,
ಮತ್ತೆ ಮರೆತಳು ತನ್ನನುಂ ತಾನೆ, ಕೈಕೆಯೊಳ್
ಸಾಯುಜ್ಯವೊಂದಿ.

ಕವಿಕ್ರತು ದರ್ಶನಂ ೬೧೯-೬೨೭

ಅಭಿವಂದನಾ

ಕೈಕೆ ಬೆಳೆದಂತೆ ಮಂಥರೆ ಮುಪ್ಪಾದಳು. 'ನೆರೆಯೇರಿ, ಸುರ್ಕಡರಿ, ಪೊರಮೆಯ್ ವಿಕೃತಿ ಪೆರ್ಚೆ!' ಆದರೆ, 'ತನುವಿಕಾರಂ ಪೆರ್ಚಿದಂತೆ ಮನಸಿನ ಮಮತೆ ನೂರ್ಮಡಿಸಿದತ್ತು ಕೈಕೆಯ ಮೇಲೆ'. ಆ ಕಾರಣದಿಂದ, ಕೈಕೆ ಮದುವೆಯಾದ ಮೇಲೆ ನೂರಾರು ದಾಸಿಯರಲ್ಲಿ ಒಬ್ಬಳಾಗಿ ಮಂಥರೆ ಅಯೋಧ್ಯೆಗೆ ಬಂದಳು. ಅಲ್ಲಿ ಕೈಕೆಯ ಪ್ರೀತಿಯಿದ್ದರೂ ಉಳಿದವರಿಂದ ಪ್ರೀತಿ ದೊರಕಲಿಲ್ಲ. ಅರಮನೆಯ ಪರಿಸರದ ಸ್ತ್ರೀ ಪುರುಷರಾದಿಯಾಗಿ ಎಲ್ಲರೂ ಅವಳ ವಿಕಾರ ರೂಪಕ್ಕೆ ಹೇಸಿ ದೂರವಿಟ್ಟರು. ರಾಜ್ಯ ಬದಲಾದರೂ ಅವಳ ಮೇಲಿನ ಕಳಂಕ ಬದಲಾಗಲಿಲ್ಲ.

ರವಿ ವಂಶದರಸರೂರಾದೊಡೇಂ
ಮನ್ನಣೆ ಕುರೂಪತೆಗೆ ತಾನೆಲ್ಲಿ? ಮುದಿಗೂನಿ
ಮಂಥರೆಗೆ ಮೊಲದ ಕೋಡಾದುದು ಸೊಗಂ. ಶನಿಯೆನುತೆ
ಶಪಿಸಿದುದು ಮಂದಿ: ಕಂಡರೆ ಹುಬ್ಬು ಗಂಟಿಕ್ಕಿ
ದೂರ ಸರಿದುದು ಮೊಸಳೆಗಂಡಂತೆ. ಸನಿಹಕ್ಕೆ
ಬರಗೊಡರ್, ಗಾಳಿ ಸೋಂಕುವುದೆಂಬ ಮೈಲಿಗೆಗೆ
ಪೇಸಿ. ಬಳಿಗೀಶ್ವರಾರಾಧನೆಗೆ ಸೇರಿಸರ್
ಉಣಲಿಡುವ ಪೊಳ್ತು ಪೊರನೂಂಕುವರ್ ತೊಳ್ತುಗಳ್,
ಕಿರಿರಾಣಿಯಾಳ್ವೆಗೆ ಕಿವುಳ್ಗೇಳ್ಬ. ಕೌಸಲ್ಯೆಯುಂ
ಲಕ್ಷ್ಮಣನ ತಾಯಿ ಮೊದಲಪ್ಪ ಸಿರಿವೆಂಡಿರುಂ
ಮಂಥರೆ ಅನಿಷ್ಟೆಯೆನುತಾ ಸವತಿ ಕೈಕೆಯಂ
ಬಳಿಸೇರಿಸದೆ ಹೆದರಿ ಹೇಸಿ ಹಿಂಜರಿದರಾ
ಗೂನಿಯಿರಲೊಡನೆ. ಸಹಿಸಿದಳನಿತುಮಂ ಕುಬ್ಜೆ
ತನ್ನೊಡತಿಯೊಲ್ಮೆಯ ಸೊಗಕೆ ಜೀವವನೆ ಬೇಳ್ಪ,
ಕಮ್ಮಾರನಡಿಗಲ್ಲೆನಲ್ ಬಾಳ್ಬ.

ಕವಿಕ್ರತು ದರ್ಶನಂ ೬೪೧-೬೫೫

ಕಾಲಕಳೆದಂತೆ, ದಶರಥನ ಪುತ್ರಕಾಮೇಷ್ಟಿಯಾಗದ ಫಲವಾಗಿ ಕೈಕೆ ಭರತನಿಗೆ ಜನ್ಮವಿತ್ತಳು. ಆಗ ಮಂಥರೆಯ ಜೀವನದಲ್ಲಿ ಹೊಸ ಆಸೆ ಮೂಡಿತು. ಮಂಥರೆಗೆ-

ಮೂರನೆಯ ಕಣ್ ಮೂಡಿದಂತಾಯ್ತು. ಬಾಳ್ಗೊಂದು
ಪೊಸವೊಲ್ಮೆ ಚೆಂದಳಿರ್ ಚಿಗುರಿದುದು ತಾನಂದಿನಿಂ
ಜಿಪ್ಪುಣ ಬಡವಂ ಕಡವರವನಪ್ಪಿಕೊಳ್ವಂತೆ,
ಹಗಲಿರುಳ್ ಕೈಕೆಯ ತನೂಜನಂ ಸಲಹಿದಳ್
ಆ ದಸ್ಯುಸತಿ, ಹಡೆದ ತಾಯಿಯೆ ನಾಣ್ಬುವೋಲಂತೆ.

ಕವಿಕ್ರತು ದರ್ಶನಂ ೬೫೭-೬೬೧

'ಮಂಥರೆಯ ಮೋಹಸರಸಿಯೊಳ್ ತಾವರೆಯ ತೆರದಿ, ಭರತಂ ಬೆಳೆದನ್.' ಮಂಥರೆ ಲೋಕನಿಂದೆಯನ್ನು ಸಂಪೂರ್ಣವಾಗಿ ಮರೆತು, ಭರತನ ಏಳಿಗೆಯಲ್ಲಿ ಧನ್ಯತೆ ಪಡೆಯಲು ನಿರ್ಧರಿಸಿದಳು. ಆ ಸಂದರ್ಭದ ಮಂಥರೆಯ ಬದುಕಿನ ದ್ವಂದ್ವವನ್ನು ಕವಿ ಮಾರ್ಮಿಕವಾಗಿ ಹೀಗೆ ಧ್ವನಿಸಿದ್ದಾರೆ.

ಕೋಸಲದೊಳಾ
ಗೂನಿ ಮಂಥರೆಯ ಮೀರಿದ ತಿರಸ್ಕೃತೆಯುಮಂ
ಸಂತೃಪ್ತ ಸುಖಿಯುಮಂ ಕಾಣೆ! ಭರತಾಭ್ಯುದಯ
ಚಂದ್ರೋದಯಕ್ಕುಬ್ಬಿದತ್ತವಳ ಹೃಜ್ಜಲಧಿ,
ಪಾಳು ಕೊರಕಲ್ ಬಂಡೆಯಿಂ ವಕ್ರಮಾಗಿರ್ಪ
ಮೊರಡು ದಡದಂತಿರ್ದ್ದವಳ ಮೊಯ್ಯನುಚ್ಛ್ವಸಿತ
ಹರ್ಷೋರ್ಮಿಮಾಲಾ ಸಮೂಹದಿಂದವ್ವಳಿಸಿ
ಮುಚ್ಚಿ. ನರರನ್ಯರಿಲ್ಲಾಯಿತ್ತು ಮಂಥರೆಯ
ಲೋಕಕ್ಕೆ, ಕೈಕೆ ಭರತರ್ ವಿನಾ. ದಶರಥಂ
ಕೈಕೆ ಭರತರಿಗಾಗಿ; ಕೈಕೆ ಭರತರಿಗಾಗಿ
ಕೋಸಲಮಯೋಧ್ಯೆಗಳ್. ಶಶಿಸೂರ್ಯ ತಾರಾಳಿಗಳ್
ಕೈಕೆ ಭರತರಿಗಾಗಿ; ಭರತನಾಳ್ಕೆಗಾಗಿ ಈ
ಪೃಥಿವಿ! ಹಾ, ಮಂಥರೆಯ ಈ ಮಮತೆಯಾವರ್ತ್ತದೊಳ್,
ಸುಟ್ಟುರೆಗೆ ಧೂಳಿ ತರಗೆಲೆ ತಿರ್ರನೆಯೆ ಸುತ್ತುವೋಲ್,
ಸಿಲ್ಕಿ ಘೂರ್ಣಿಸದಿಹುದೆ ಪೇಳ್ ತ್ರೇತಾ ಮಹಾಯುಗಂ!.

ಕವಿಕ್ರತು ದರ್ಶನಂ ೭೦೦-೭೧೪

ಕೈಕೆ, ಭರತರ ಬಗೆಗೆ ಮಂಥರೆಗೆ ಬೆಳೆದ ಮಮತೆ ಇಡೀ ತ್ರೇತಾಯುಗವನ್ನು ಉಲ್ಲೋಲಕಲ್ಲೋಲ ಮಾಡುವುದೆಂದು ಕವಿ ತಮ್ಮ ಕಾವ್ಯದ ಮೊದಲ ಸಂಚಿಕೆಯಲ್ಲೇ ಸೂಚಿಸಿದ್ದಾರೆ. ಮುಂದಿನ ಕತೆಯೇ ರಾಮಾಯಣ. ಅದರ ಕೇಂದ್ರ ಬಿಂದು ಮಂಥರೆ.

ಈ ನಡುವೆ ಅಯೋಧ್ಯೆಯ ಅರಮನೆಯಲ್ಲಿ ರಾಜಕೀಯದ ಹಲವು ವಿದ್ಯಮಾನಗಳು ಸಂಭವಿಸಿವೆ. ಭರತ ಶತ್ರುಘ್ನರು ಪರಸ್ಥಳಕ್ಕೆ ಹೋಗಿದ್ದಾಗ, ಕಿರಿಯ ರಾಣಿ ಕೈಕೆಗೂ ತಿಳಿಸದೆ, ಕೌಸಲ್ಯೆಯ ಮಗ ರಾಮನಿಗೆ ಪಟ್ಟಾಭಿಷೇಕ ಮಾಡಲು ಸಿದ್ಧತೆಗಳು ನಡೆಯುತ್ತಿವೆ. ಪಟ್ಟಾಭಿಷೇಕದ ಹಿಂದಿನ ರಾತ್ರಿ ಮಂಥರೆ ಭಯಂಕರವಾದ ಕನಸನ್ನು ಕಾಣುತ್ತಾಳೆ. ಅದಕ್ಕೆ ಪೂರ್ವಭಾವಿಯಾಗಿ ಕವಿ ಸೃಷ್ಟಿಲೀಲೆಯ ದರ್ಶನವನ್ನು ಹೀಗೆ ಕಂಡರಿಸಿದ್ದಾರೆ.

ಅಭಿವಂದನಾ

ನೆಯ್ದಾಳುತಿದೆ ಜಗವನೊಂದತಿ ವಿರಾಟ್ ಮನಂ,
ಸೂಕ್ಷ್ಮಾತಿ ಸೂಕ್ಷ್ಮ ತಂತ್ರದಿ ಬಿಗಿದುಕಟ್ಟಿಯುಂ
ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯಭಾವಮಂ
ನೀಡಿ. ಮಂಥರೆ ಸೀತೆ ರಾಮ ರಾವಣರೆಲ್ಲರುಂ
ಸೂತ್ರಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ?
ಮಥಿಸಿದುದು ದಶಶಿರನ ವಿಧಿ ಮಂಥರೆಯ ಮನದಿ
ತನ್ನ ತಂತ್ರದ ಕೃತಿಯನಾ ಇರುಳ್ ಕನಸಿನಲಿ.

ಮಮತೆಯ ಸುಳಿ ಮಂಥರೆ ೧೩೧-೧೩೭

ಕವಿ ಕುವೆಂಪು ವಿಧಿನಿಯಮದಲ್ಲಿ ನಂಬಿಕೆ ಉಳ್ಳವರು. ಸೃಷ್ಟಿಯ ಕ್ರಿಯೆ. ಮನುಷ್ಯನ ಬದುಕು ವಿಧಿನಿಯಮದಂತೆ ನಡೆಯುತ್ತದೆ. ಜೀವಿಗಳಿಗೆ ಇಚ್ಛಾಸ್ವಾತಂತ್ರ್ಯವಿದ್ದರೂ ವಿಧಿನಿಯಮ ಮೀರಲು ಸಾಧ್ಯವಿಲ್ಲ. ಎಲ್ಲವೂ ಎಲ್ಲರೂ ಆ ವಿಧಿಯ ಕೈಯಲ್ಲಿ ಗೊಂಬೆಗಳು. ಇಲ್ಲದಿದ್ದರೆ ರಾವಣನ ಹಣೆಬರಹವನ್ನು ಮಂಥರೆ ನಿರ್ಧರಿಸುವುದಕ್ಕೆ ಸಾಧ್ಯವೆ? ಎಲ್ಲಿಯ ರಾವಣ? ಎಲ್ಲಿಯ ಮಂಥರೆ? ಕಾಡಿನಲ್ಲಿ ಅನಾಥವಾಗಿದ್ದ ದಸ್ಯುಶಿಶು ಅರಮನೆಗೆ ಬಂದು, ಅಗಾಧವಾಗಿ ಬೆಳೆದು, ಅರಮನೆಯ ವಿದ್ಯಮಾನಗಳಲ್ಲಿ ಕೈಹಾಕಿದ್ದು, ಅರಮನೆಯಲ್ಲಿ ಇರಬೇಕಾಗಿದ್ದ ರಾಮ ಲಕ್ಷ್ಮಣ ಸೀತೆಯರು ಕಾಡುಪಾಲಾದದ್ದು ವಿಧಿಲೀಲೆಯಲ್ಲದೆ ಮತ್ತೇನು?

ಶ್ರೀರಾಮಚಂದ್ರನ ಪಟ್ಟಾಭಿಷೇಕದ ಹಿಂದಿನ ರಾತ್ರಿ ಮಂಥರೆ ಕಂಡ ದುಃಸ್ವಪ್ನ ಹೀಗೆ ಮೂಡಿದೆ:

ಮುದುಕಿಯಾದಾ ಕೈಕೆ ಭರತನಂ ಕೈವಿಡಿದು
ಮರುಧರೆಯನಲೆಯುತಿರ್ದಳ್ ವಿಧವೆಯೋಲ್. ಕುಬ್ಜೆ
ಕರೆದೊಡಂ ಕಿವಿಗೊಡದೆ, ಮಗನೊಡನೆ ಕಿರಿರಾಣಿ
ಮುಂದು ಮುಂದೆಯ್ದುತಿರೆ, ಬೈಗುಗಳ್ತಲೆಯಿಳಿದು
ನುಂಗಿದತ್ತಿರ್ವರುಂ

ಮಮತೆಯ ಸುಳಿ ಮಂಥರೆ ೧೩೮-೧೪೨

ತನ್ನ ಸರ್ವಸ್ವವೂ ಆದ ರಾಣಿ ಕೈಕೆ, ರಾಜಕುಮಾರ ಭರತ ಹೀನಾಯ ಸ್ಥಿತಿಯಲ್ಲಿರುವುದನ್ನು ಮಂಥರೆ ಸಹಿಸಲಾರಳು. ಮುದುಕಿಯಾದ ಕೈಕೆ ವಿಧವೆಯಂತೆ ಭರತನೊಡನೆ ಮರುಭೂಮಿಯಲ್ಲಿ ಅಲೆಯುವುದು, ಬಾಯ್ಬಿಟ್ಟು ಕೂಗಿದರೂ ಅವರು ಕಿವಿಗೊಡದಿರುವುದು, ಸಹಾಯಕ್ಕೆ ರಾಮನನ್ನು ಕರೆದರೂ ಪ್ರಯೋಜನವಾಗದಿರುವುದು- ಮಂಥರೆಯನ್ನು ದಿಕ್ಕುಗೆಡಿಸುತ್ತದೆ. ಕನಸಾದರೂ ನಂಬದೆ ಇರುವುದಕ್ಕೆ ಆಗಲಿಲ್ಲ. ಕೈಕೆ, ಭರತರ ಪರವಾದ ಮಂಥರೆಯ ವ್ಯಾವಹಾರಿಕ ಜ್ಞಾನ ಜಾಗೃತವಾಗುತ್ತದೆ. ತ್ರೇತಾಯುಗ ತತ್ತರಿಸುವ ನಿರ್ಧಾರ ತೆಗೆದುಕೊಳ್ಳಲು ಮುಂದಾಗುತ್ತಾಳೆ.

ಶ್ರೀರಾಮ ಪಟ್ಟಾಭಿಷೇಕದ ಸುದ್ದಿ, ಸಿದ್ಧತೆಗಳು ನಿಜವಾದಂತೆ ಮಂಥರೆ ತನ್ನ ಸಾಕುಮಗಳು ರಾಣಿ ಕೈಕೆಯ ಬಳಿಗೆ ಧಾವಿಸುತ್ತಾಳೆ.

ಓ ಕೈಕೆ, ಮತಿಗೇಡಿ, ನಿರ್ಭಾಗ್ಯೆ, ಇನ್ನುಮೇನೀ ನಿದ್ದೆ
ನಿನಗೆ? ಮೇಲೇಳ್ ಏಳ್: ಕೆಡೆದು ಬಿದ್ದಿದೆ ನಿನ್ನ

ಸಿರಿಗುಡಿಯ ಗೋಪುರಂ! ಹೊಂಗನಸು ಹುಡಿಯಾಯ್ತು!
ಬಯಲ ಸೇರ್ದುದು ಬಹುದಿನದ ಬಯಕೆ! ಕೆಟ್ಟೆ ನೀಂ!
ಕೆಟ್ಟೆನಾಂ! ಹಾ ಭರತ! ಭರತ! ಹಾ! ಎಲ್ಲಿಹಯ್?
ಎಲ್ಲಿಹೆಯೊ ಇಂದು? ಬಾ ಬೇಗ ಬಾ!

ಮಮತೆಯ ಸುಳಿ ಮಂಥರೆ ೧೭೭-೧೮೨

ಎಂದು ಅಳುತ್ತಾ 'ದೊಪ್ಪೆಂದು ಸ್ಕೆಗೆಡೆದಳುರುಳಿದಳು' ಕೈಕೆ ಕನಿಕರದಿಂದ ಮಂಥರೆಗೆ ಶಿಶಿರೋಪಚಾರ ಮಾಡಿ, 'ಹೇಳವ್ವ, ಹೇಳ್ ಏನಾದುದು?' ಎಂದು ಕೇಳಿದಾಗ ಮಂಥರೆ'ಭರತ, ಭರತ' ಎಂದು ಗದ್ಗದಿಸಿದಳು. ಮಗನಿಗೆ ಏನೋ ಕೇಡಾಗಿರಬಹುದೆಂದು ಕೈಕೆ ಕುದಿಯುತ್ತಾ ಅತ್ತಳು. ಕೊನೆಗೆ ಗೂನಿ ಮಂಥರೆ ಅರಮನೆಯ ಪ್ರಸ್ತುತ ವಿದ್ಯಮಾನಗಳನ್ನು ತಿಳಿಸಿದಳು:

ವಂಚಕರ ಸಂಚಿನಿಂದೆಮ್ಮ ಭರತಂಗೀ ನೆಲಂ
ಪಳುವಾಯ್ತೆ? ನಾವಿರ್ವರಿರ್ದುಮೇಂ? ಪೇಳ್, ಮುಗ್ಧೆ!
ಸನ್ನಿಹಿತಮಾದೀ ವಿಪತ್ತನರಿತುಂ ಬರಿದೆ
ಕುಳಿತಿಹರೆ, ಮತಿಯಿರ್ಪ ಮಂದಿ? ನಿನಗರಿಯದೆಯೆ
ಮಸೆದಿಹರು ನಿನ್ನ ಕೊರಳಂ ಕೊಯ್ವ ಕತ್ತಿಯಂ!
......
ಭರತನುಪಾಯದಿಂ ನಿನ್ನ ತೌರಿಂಗಟ್ಟಿ, ಕೇಳ್,
ಪಟ್ಟಕಟ್ಟುವನಂತೆ ನಾಳೆ ರಾಮಂಗೆ!

ಮಮತೆಯ ಸುಳಿ ಮಂಥರೆ ೨೦೦-೨೧೩

ಶ್ರೀರಾಮಚಂದ್ರನ ಪಟ್ಟಾಭಿಷೇಕದ ಶುಭ ವಾರ್ತೆಯನ್ನು ಕೇಳಿ ಕೈಕೆಗೆ ಆನಂದವಾಯಿತು ''ನಿನಗಿದೊ ಕೊಡುಗೆ, ಶುಭದ ವಾರ್ತೆಯಂ ತಂದುದಕೆ. ರಾಮನೇಂ? ಭರತನೇಂ? ಮಕ್ಕಳಿರ್ವರುಮೆನ್ನವರ್!'' ಎಂದಳು. ಮಂಥರೆಗೆ ಸಿಟ್ಟು ಬಂತು. ಕೈಕೆ ಕೊಟ್ಟ ಕೊರಳಹಾರವನ್ನು ನೆಲಕ್ಕೆ ಅಪ್ಪಳಿಸಿ, ಸಂತಪ್ತೆಯಾಗಿ ಕೈಕೆಯ ಮನಸ್ಸಿಗೆ ನಾಟುವಂತೆ ತಿಳಿಯಹೇಳಿದಳು:

ಸಾಕು, ನಿಲ್ಲಿಸು, ಮೂರ್ಖೆ;
ಲೇಸಾಯ್ತು ನಿನ್ನ ಮತಿ! ಬಹುಕಾಲಮರಮನೆಯ
ಸುಖ ಸೋಪಾನಮಂ ಗೈದು ಪಲ್ಲಟವಾಯ್ತೆ

ಸದ್ಬುದ್ಧಿ? ಪೆತ್ತ ಮಗುವನೆ ತಿಂಬ ರಕ್ಕಸಿಯ
ಪಾಂಗಿನಿಂದಾಡುತಿಹೆ: ನಿನ್ನ ಕಂದಗೆ ನೀನೆ
ಮಿಳ್ತು. ರಾಮಾಭಿಷೇಕಂ ನಿನಗೆ ಪ್ರಿಯವಾರ್ತೆಯೇ?
ವೈರಿ ಬೇರುಂಟೆ ಲೋಕದಿ ಸವತಿಮಗನಿಗಿಂ?
ಕೌಸಲ್ಯೆಗೇಂ ಕಿರಿಯ ನೀಂ? ಧೀರ ಭರತನೇಂ
ಕೊರತೆ ರಾಮಂಗೆ ? ಜನ್ಮಕ್ರಮದಿ ನೋಳ್ಪೊಡಂ?
ಪೇಳ್ವೆನಾಂ, ಕೇಳ್ ಮುಗ್ಧೆ, ಪಡೆವ ಬೇನೆಯೊಳಿರೆ.
ನೀನರಿಯೆ! ನಾಲ್ವರೊಳ್ ಭರತನೆಯೆ ದಿಟದಿಂದೆಯುಂ
ಜ್ಯೇಷ್ಠನ್! ಅಚ್ಚರಿಯೇಕೆ? ಬಲ್ಲೆ ನಾನೆಲ್ಲಮಂ
ದೊರೆ ಮಂತ್ರಿ ಕುಲಪುರೋಹಿತರೆಲ್ಲರೊಲವರದಿ
ಪಿರಿಯನಾದನ್ ಕೌಸಲ್ಯೆಯ ಮಗಂ. ನಿನಗಾಯ್ತು
ಸೊನ್ನೆ ಬಳುವಳಿ. ತೊಳ್ತು ನೀನಪ್ಪೆಯಿನ್ ಮುಂದೆ
ರಾಮನಾಳ್ವಿಕೆಯಲ್ಲಿ, ಕೌಸಲ್ಯೆಯ ಕಾಲ್ದೆಸೆಯ
ಧೂಳಿಯೋಲ್. ಮರೆತೆಯೇಂ ನೀನಿಲ್ಲಗೈತಂದ
ಮೊದಲಂದು ಕರುಬಿ ಕೌಸಲ್ಯೆಯಿತ್ತ ಕಾಟಮಂ?
ತನ್ನವೋಲನಿಬರುಂ ಸತ್ವಮೂರ್ತಿಗಳೆಂದು
ನಂಬಿ ನೀಂ ಕೆಡುವೆ. ಬೇಗಮೆಳ್ಚರದಿರಲ್, ದಿಟಂ,
ಹುಡಿಸೇರಿ ಹಾಳಾಗಿ ಗತಿಗೆಡುವೆಯೌ. ಗಾಂಪೆ,
ಕೊರಗದಿರ್ ಸಂಚು ಮಿಂಚಿದ ಮೇಲೆ!

ಮಮತೆಯ ಸುಳಿ ಮಂಥರೆ ೨೨೪-೨೪೫

ಕೈಕೆಯ ಮನಸ್ಸು ಮಂಥರೆಯ ಮಮತೆಯ ಸುಳಿಗೆ ಇನ್ನೂ ಸಿಗದಿದ್ದಾಗ, ಮಂಥರೆ ಕಳೆದ ರಾತ್ರಿ ತಾನು ಕಂಡ ಕೆಟ್ಟ ಸ್ವಪ್ನವನ್ನೂ ನಿರೂಪಿಸಿದಳು. ನಿಧಾನವಾಗಿ ಕೈಕೆ, ಮಂಥರೆಯ ದುರ್ಬೋಧನೆಯ ಗಾಳಕ್ಕೆ ಸಿಕ್ಕಿಕೊಂಡಳು. ಸವತಿ ಮಾತ್ಸರ್ಯದ ಕೇಡು ಕುಟುಕಿತು. ಭರತನಿಗೆ ಸಂಭವಿಸುವ ಅವಕಾಶಹೀನತೆಯಿಂದ ಕೈಕೆಗೆ ದುಃಖವಾಯಿತು. ಅತ್ತರೆ ಪ್ರಯೋಜನವಿಲ್ಲ, ದಶರಥ ಕೊಟ್ಟಿದ್ದ ವರಗಳಿಂದ ಕಾರ್ಯಸಾಹಸಿಯಾಗು ಎಂದು ಮಂಥರೆ ಹುರಿದುಂಬಿಸಿದಳು. '**ನಿನ್ನಾ ಕುಮಾರಂಗೆ ನೆಲದ ಸಿರಿಯುಂ ಪಟ್ಟಮಹಿಷಿಯ ಕೌಸಲ್ಯೆಯ ಕುವರ ರಾಮಂಗೆ ಪದಿನಾಲ್ಕು ವರ್ಷಂಬರಂ ವಿಪಿನಯಾತ್ರೆಯಂ ಜೋಡಿಗೊಳ್ಳುವ ತೆರದಿನೆಸಗವೇಳ್ಕುಂ**' ಮಂಥರೆಯ ಸಲಹೆಗೆ ಕೈಕೆ ಒಪ್ಪಿದಾಗ, 'ಕೈಕೊಳ್ವ ಮುಂಬಟ್ಟೆಯಂ' ಸೂಚಿಸಿದಳು. '**ಕೋಪಗೃಹಮಂ ಸೇರ್ದು, ನೆರವೇರುವನ್ನೆಗಂ ನಿನ್ನರಕೆ, ಹೊರ ಬಾರದಿರ್!**' ಎಂದಳು. ಮಂಥರೆಯ ಕಾರ್ಯತತ್ಪರತೆ, ಚಾಣಾಕ್ಷತನ, ಸಮಯಪ್ರಜ್ಞೆ, ತರ್ಕಚಾತುರ್ಯ, ಅನ್ಯರ ಮನದಿಂಗಿತವನ್ನು ಅರಿಯುವ ಸೂಕ್ಷ್ಮಪ್ರಜ್ಞೆ, ಕೈಕೆ ಭರತರ ಮೇಲಿನ ಅನುಪಮ ಪ್ರೇಮ, ಸಾಧಾರಣಳಂತೆ ಕಾಣುತ್ತಿದ್ದವಳಲ್ಲಿ ಹುದುಗಿದ್ದ ಕ್ರತುಶಕ್ತಿ,

ದೃಢನಿರ್ಧಾರ, ಸ್ತ್ರೀಯ ಸಂಕೀರ್ಣ ಸ್ವಭಾವ- ಮೊದಲಾದ ವಿಶಿಷ್ಟಗುಣಗಳು ಈ ವಿಭಾಗದಲ್ಲಿ ಅತ್ಯಂತ ನಾಟಕೀಯವಾಗಿ ವರ್ಣನೆಯಾಗಿವೆ.

ದಶರಥ ಕೊಟ್ಟಿದ್ದ ಭಾಷೆಯ ಹಿನ್ನೆಲೆಯಲ್ಲಿ, ಮಂಥರೆಯ ಉಪಾಯದಂತೆ, ಕೈಕೆ ಕೇಳಿದ ಎರಡು ವರಗಳಿಂದ ದಶರಥ ತತ್ತರಿಸುತ್ತಾನೆ. ಕೈಕೆಯನ್ನು ಇನ್ನಿಲ್ಲದಂತೆ ದೂಷಿಸುತ್ತಾನೆ. 'ಹೊಮ್ಮುವುದೆ ಕೈಕೆಯಿಂ ಮಂಥರೆಯ ವಿಕೃತ ರೂಪ?' ಎಂದು ಚೀರುತ್ತಾನೆ. ದಶರಥನ ಪಾಲಿಗೂ ಮಂಥರೆ ವಿಕೃತಕ್ಕೆ ಉದಾಹರಣೆಯಾಗಿದ್ದಾಳೆ. ದಶರಥನ ಕೋಪ, ಶೋಕ, ದೈನ್ಯತೆಗೆ ಬೆದರಿದ ಕೈಕೆ ವರಗಳನ್ನು ಹಿಂದಕ್ಕೆ ಪಡೆಯಲು ಹೇಳುತ್ತಾಳೆ. ರಾಮನಾಣೆಯಿಟ್ಟು ಕೊಟ್ಟ ವರಗಳನ್ನು ಹಿಂದಕ್ಕೆ ಪಡೆದು ಮಾತಿಗೆ ತಪ್ಪಲು ದಶರಥ ಸಿದ್ಧನಿಲ್ಲ. ಅತೀವವಾದ ದುಃಖದಲ್ಲಿ ಮುಳುಗುತ್ತಾನೆ. ಕೈಕೆ ಕೆಡುನುಡಿಯುತ್ತಾಳೆ. ದಶರಥ ಮತಿಶೂನ್ಯನಾಗಿ ಮೂರ್ಛೆಹೋಗುತ್ತಾನೆ.

ಆಗ ಮಂಥರೆ ಶ್ರೀರಾಮನ ಬಳಿಗೆ ಓಡಿ, ಅಳುತ್ತಾ ಅವನ ಕಾಲಿಗೆ ಬೀಳುವಳು. ಪಟ್ಟಾಭಿಷೇಕದ ಶುಭವಾರ್ತೆಯಿಂದ, ತಾಯಿಯೊಡನೆ ಪೂಜೆಯಲ್ಲಿದ್ದ ಶ್ರೀರಾಮ ಕರುಣೆಯಿಂದ, ಮಂಥರೆಯನ್ನು ಎತ್ತಿ ಪ್ರಶ್ನಿಸಿದಾಗ ಅವಳು ಉತ್ತರಿಸಲಾಗದೆ ತೊದಲಿದಳು. ಸತ್ಯದರ್ಶನಕ್ಕಾಗಿ ರಾಮ ಕೈಕೆಯ ಅರಮನೆಗೆ ಬಂದನು. ನೆಲದ ಮೇಲೆ ಬಿದ್ದಿದ್ದ ತಂದೆಯನ್ನು ಮಂಚದ ಮೇಲೆ ಮಲಗಿಸಿ, ಗಾಳಿ ಬೀಸಿ ಉಪಚರಿಸಿ, ನಡೆದ ಸಂಗತಿಯೇನೆಂದು ಕಿರಿಯ ತಾಯಿಯನ್ನು ಕೇಳಿದನು. ಸಂದರ್ಭದಿಂದ ಘಾಸಿಗೊಂಡು ಮೌನಧಾರಿಯಾದ ಕೈಕೆ ಮಾತಾಡಲಾಗದೆ ಮಂಥರೆಯ ಕಡೆಗೆ ನೋಡಿದಳು. ಮಂಥರೆ ನಡೆದುದನ್ನು ವಿವರಿಸಿದಳು. ಕೊನೆಗೆ- 'ಪೆತ್ತಾತನೆಂತಾದೊಡಂ ಕೊಡುವನೆ ಕುಮಾರಂಗೆ ಪಟ್ಟಮಂ ಬಿಟ್ಟಡವಿಗೆಯ್ದುವ ನಿರೂಪಮಂ? ದೇವನಿಂಗಿತವರಿತು ನಡೆವುದೆ ಪಥಂ ನಿನಗೆ' ಎಂದಳು. ಇಲ್ಲಿ ಮಂಥರೆ ಕೈಕೆಯ ಮುಖವಾಣಿಯಾಗಿ ನಡೆದುಕೊಂಡಿದ್ದಾಳೆ. ಶ್ರೀರಾಮ ತನ್ನ ತಂದೆಗೆ ಪ್ರದಕ್ಷಿಣೆ ಮಾಡಿ, ಕೈಕೆಗೆ ನಮಸ್ಕರಿಸಿ, ಅಲ್ಲಿಂದ ಹೊರಟನು.

ಮಂಥರೆಯ ದುರ್ಬೋಧನೆಯ ಅಸ್ತ್ರ ಸಫಲವಾಯಿತು. ಶ್ರೀರಾಮ ಸೀತೆ ಲಕ್ಷ್ಮಣ ಕಾಡಿಗೆ ಹೋಗಲು ಸಿದ್ಧರಾದರು. ಕಾಡಿಗೆ ಹೊರಟ ಮಕ್ಕಳಿಗೆ ದಶರಥ ಸಕಲ ಸೌಕರ್ಯಗಳನ್ನು ಒದಗಿಸಲು ಮಂತ್ರಿಗೆ ಆಜ್ಞಾಪಿಸಿದನು. ಆಗ ಕುಬ್ಜೆ ಕೈಕೆಯನ್ನು ಇಂಗಿತದಿಂದ ನೋಡಲು, ಅದನ್ನರಿತ ರಾಮ 'ಎಮಗೆ ನಾರುಮಡಿಯಂ ಬಿಟ್ಟು ಬೇಡಮಿನ್ನಾವುದುಂ' ಎಂದ. ಮಂಥರೆ ಕೈಂಕರ್ಯವನ್ನು ಸಲ್ಲಿಸುವವಳಂತೆ 'ಸಂಭ್ರಮದಿ ತಂದು ನೀಡಿದಳೊಡನೆ ನಾರುಡೆಯನೆಲ್ಲರುಂ ಶಪಿಸುತ್ತಿರಲ್ಕೆ' ಜೊತೆಗೆ 'ಗಂಟರೊಳ್ ನಿಂದು ಸಂಕಟವನೀಕ್ಷಿಸಿರ್ದಳ್ ವಿಕಟಕಂಟಕಿತೆ!' ವಾಲ್ಮೀಕಿ ರಾಮಾಯಣದಲ್ಲಿ ರಾಮಾದಿಗಳಿಗೆ ಕೈಕೆ ನಾರುಡೆ ಕೊಟ್ಟರೆ, ಕುವೆಂಪು ರಾಮಾಯಣದಲ್ಲಿ ಮಂಥರೆ ಆ ಕಾರ್ಯವೆಸಗಿದ್ದಾಳೆ.

ಶ್ರೀರಾಮನನ್ನು ಕಳೆದುಕೊಂಡ ದಶರಥನಿಗೆ ಹುಚ್ಚು ಉಮ್ಮಳಿಸಿ ತನ್ನ ಕಣ್ಣನ್ನು ತಾನೇ ಕಿತ್ತುಕೊಂಡು ಪ್ರಲಾಪಿಸಿ, ಹಿಂದೆ ಶಬ್ದವೇಧೀ ಧನುರ್ವಿದ್ಯಾ ಪ್ರತಿಷ್ಠೆಯಿಂದ ಬಾಲಕನನ್ನು ಕೊಂದು ಪಡೆದ ಮುನಿಶಾಪವನ್ನು ನೆನೆದು, ಅದರ ಪ್ರಾಯಶ್ಚಿತ್ತಕ್ಕಾಗಿ ಇಂದಿನ ದುರಂತವೆಂದು ಮನಗಂಡು, ಶಾಂತಿಯಿಂದ ಧನ್ಯನಾಗಿ ನೆಲಕ್ಕುರುಳುವನು. ಭಯಂಕರ ಸ್ಥಿತಿಯಲ್ಲಿದ್ದ ದಶರಥನಿಗೆ ನೆರವು ನೀಡಲು ಮಂಥರೆ ಧಾವಿಸುವಳು. ಆದರೆ ಅಷ್ಟರಲ್ಲಿ ದಶರಥ ಸಾಯುವನು.

ಕೇಕೆಯ ಪುರದ ಮಾವನ ಮನೆಯಿಂದ ಭರತ ಶತ್ರುಘ್ನರು ಹಿಂದಿರುಗಿದರು. ಕೈಕೆ ತನ್ನ ಮಗನಿಗೆ, ಮಂಥರೆಯ ಸನ್ನಾಹದಿಂದ ತಾನು ಮಾಡಿದ ಅಕಾರ್ಯ, ಅದರಿಂದ ಸಂಭವಿಸಿದ ಅನಾಹುತಗಳನ್ನು ವಿವರಿಸಿದಳು. ಭರತ ತಾಯಿಯ ಅಕೃತ್ಯಗಳಿಗೆ ಹೇಸಿ, ದೂಷಿಸಿದನು.

ಭರತ ಬಂದುದರಿಂದ ಮಂಥರೆಗೆ ಹಿಗ್ಗಾಯಿತು. ತನ್ನ ಉಪಾಯದಿಂದ ಭರತನಿಗೆ ದೊರೆತನ ಲಭ್ಯವಾಗುವುದೆಂಬ ಸಂತೋಷದಿಂದ ಕೈಕೆಯ ಅರಮನೆಗೆ ಬರುತ್ತಿದ್ದಾಗ, ಅರಮನೆಯಲ್ಲಿ ನಡೆದ ಸಂಕಟದ ಕಥೆಯಿಂದ ವ್ಯಥೆಗೊಂಡ ಶತ್ರುಘ್ನ, ಇಷ್ಟಕ್ಕೆಲ್ಲಾ ಮಂಥರೆಯೇ ಕಾರಣವೆಂದು ಭಾವಿಸಿ, ಅವಳ ಜುಟ್ಟನ್ನು ಹಿಡಿದು ಎಳೆದು ಕಲ್ಲು ನೆಲದಲ್ಲಿ ಕುಕ್ಕಿದನು. ಅವಳ ಗೂನು ಬೆನ್ನಿನ ಮೇಲೆ ರಪರಪನೆ ಬಡಿದನು. ಮಂಥರೆ ನೋವಿನಿಂದ ಮನಕರಗುವಂತೆ ಗೋಳಿಟ್ಟಳು. ಅವಳ ಕರುಣಾಕ್ರಂದನ ಕೇಳಿ ಭರತ ಅಲ್ಲಿಗೆ ಬಂದು, ರಕ್ಷಣೆ ಬಯಸಿದ ಮಂಥರೆಯ ಬಗೆಗೆ ಮರುಕ ಬಂದರೂ ಅವಳ ಅಕೃತ್ಯಕ್ಕಾಗಿ ನಿಂದಿಸಿದನು:

ತೊಲಗೆಲೆ ಕುರೂಪಿ, ಓ, ತೊಲಗು ಕಣ್ಬೊಲದಿಂದೆ
ತೊಲಗಾಚೆ, ಪಾಪಿ! ಬಳಿಸಾರದಿರ್; ನಿಲ್ಲದಿರ್!
ಅಯ್ಯೊ ನಂಬುವೆನೆಂತುಟೀಯೊಲ್ಮೆವುತ್ತಿನೊಳೆ
ಹಗೆಯ ನಂಜಿನ ಹಾವು. ಹೆಡೆಯೆತ್ತಿ ಹೊರಹೊಮ್ಮಿ
ಕಚ್ಚಿತೆಂಬುದನಯ್ಯೊ? ನಿನ್ನೊಳಿಂದಿನವರೆಗೆ
ವಿಕೃತಿಯಂ ಕಂಡೆನಿಲ್ಲಿಂದೇಕೆ ಪಲ್ಗಿರಿದು
ನಿಂದವೋಲಿದೆ ಕುರೂಪತೆಯ ಪೈಶಾಚಿಕತೆ
ಕರ್ಕಶಮೆನಲ್? ದಿಟಂ, ಮನಸಿಗಲ್ಲದೆ ವಿಕೃತಿ
ಬಾಹ್ಯಪ್ರಕೃತಿಗುಂಟೆ? ಪೆತ್ತವಳನಳುಪುವೊಲ್
ಕಾಣಿಸುತ್ತಳಿಗೆಯ್ತುಕದ್ದಿದ ತನ್ನ ಕಣ್ಗಳನೆ
ಕಿಳ್ತೆಸೆವನಂತೆ ನಾಂ, ಮಂಥರೆ, ಬಿಸುಟ್ಟೆನಿದೊ
ನಿನ್ನನೆಂದೆಂದಿಗುಂ.

ಅಗ್ನಿಯಾತ್ರೆ ೫೩-೬೪

ಎಂದು ಅಲ್ಲಿ ನಿಲ್ಲದೆ ಭರತ ತಮ್ಮನೊಡನೆ ಹೊರಟು ಹೋದನು. ಯಾರಿಗಾಗಿ ಇಷ್ಟನ್ನೆಲ್ಲ ಮಾಡಿದಳೋ ಯಾರಿಗಾಗಿ ಬದುಕಿದ್ದಳೋ ಯಾರನ್ನು ತನ್ನ ಸರ್ವಸ್ವವೆಂದು ನಂಬಿದ್ದಳೋ ಅಂತಹ ತನ್ನ ಸಾಕುಮಗ ಭರತ ತನ್ನನ್ನು ಹೀನಾಯವಾಗಿ ತಿರಸ್ಕರಿಸಿದಾಗ ಮಂಥರೆ ಜರ್ಝರಿತಳಾದಳು. ಅವಳ ನಂಬಿಕೆ ನುಚ್ಚುನುರಿಯಾಯಿತು. ಬದುಕು ಅರ್ಥಹೀನ ಅನ್ನಿಸಿತು. ಇದು ಮಂಥರೆಯ ಅಂತರಂಗದ ಪರಿವರ್ತನೆಯ ಸಮಯ. ಮಂಥರೆಯಲ್ಲಿ ಅವ್ಯಕ್ತವಾಗಿದ್ದ ಅಭೂತಪೂರ್ವ ವ್ಯಕ್ತಿತ್ವದ ಅನಾವರಣಕ್ಕೆ ಕವಿ ಪ್ರತಿಭೆ ತುಡಿಯುವ ಮುಹೂರ್ತ.

ಮಂಥರೆಗಾಗಿ ಯಾರೂ ಕರುಣೆತೋರದಿದ್ದಾಗ ಕವಿ ಆಕೆಯನ್ನು ಹೀಗೆ ಸಮರ್ಥಿಸಿದ್ದಾರೆ :

ಓ ಪತಿತೆ, ಓ ಕುಬ್ಜೆ, ಓ ಮಂಥರೆಯೆ, ಮರುಗುವೆನ್ ನಿನಗೆ
ಕವಿ ಸಹಜ ಕರುಣೆಯಿಂ. ಲೋಕಕ್ರೋಧ ಮದಹಸ್ತಿ
ಪದದಲನ ರೋಷದಾವಾಗ್ನಿಗಾಹುತಿಯಾಗಿ
ಬಿಳ್ದ ನಿನ್ನಾ ಭಸ್ಮರಾಶಿಯಂ ತೊಳೆವುದಿದೊ
ಕಣ್ಗಂಗೆ, ಕಾವ್ಯ ಮಹಿಮಾ ಸಿಂಧುತೀರ್ಥಕ್ಕೆ!
ಕಂಸನರಮನೆಗಾಗಿ ಪರಿಮಳದ್ರವ್ಯಮಂ
ಪೊತ್ತು ಪೊರಮಟ್ಟಿರ್ದ ಕುಬ್ಜಿಕೆಗೆ ದೇವಕಿಯ
ಮಗನ ಸೋಂಕಿಂದೆ ಸಿರಿಚೆಲ್ವು ದೊರೆಕೊಂಡಂತೆ,
ಕಾವ್ಯಕರುಣಾರಸದ ಲಹರಿಯ ಹರಿಯ ಸಿರಿಯ
ಕರಪದ್ಮ ಚುಂಬನಕೆ ನಿನ್ನ ಕೀಳ್ಪರಿಜಳಿದು
ಮತ್ತೆ ಹೃದಯದ ಲಸದ್ರೂಪಂ ಮೆರೆಯದಿಹುದೆ?
ತನ್ನಾವ ಪುರುಷಾರ್ಥಕಿನ್ನಾವ ಸಂಪದಕೆ
ಮೇಣ್ ಸುಖಕೆ ಆ ಗೂನಿ ಪೇಳ್ದಳುಪದೇಶಮಂ
ಕೈಕೆಗೆ? ಜನಿಸಿದಂದಿನಿಂ ಪೆರರ ಚೆಲ್ವಿನೊಳೆ
ತನ್ನ ಚೆಲ್ವಂ ಕಂಡೊಲಿದು, ಪೆರರ ಸೊಗದೊಳೆಯ
ತನ್ನ ಸೊಬಗಂ ಕಂಡುಮುಂಡುಮಿರ್ದಾ ದಾಸಿ
ನಚ್ಚನೊಡತಿಗೆ ಮತ್ತೆ ಮೆಚ್ಚನಾಕೆಯ ಶಿಶುಗೆ
ತೊಳ್ತುಗೆಯ್ಮೆಯ ಪೆರ್ಮೆಗೊಳ್ಪನೆಸಗುವೆನೆಂದು
ಕಜ್ಜಮಂ ಕೈಕೊಂಡೊಡೇಂ ಸ್ವಾರ್ಥದೋಷಮಂ
ಕಾಣ್ಬರಾರಾಕೆಯ ಪರಾರ್ಥತೆಯ ಶುದ್ಧಿಯಲಿ?

ಅಗ್ನಿಯಾತ್ರೆ ೮೦-೯೯

ದೊಡ್ಡಮ್ಮನ ಬಳಿಗೆ ಬಂದ ಭರತನನ್ನು ಕೌಸಲ್ಯೆ ಪ್ರೀತಿಯಿಂದ ಸ್ವಾಗತಿಸಿ, ಕೈಕೆಯಿಂದಾದ ತಪ್ಪಿಗೆ ಮಗ ನಾಚಬಾರದು 'ಮಂಥರೆಯ ಕೈತವಕೆ ತುತ್ತಾದರೆಲ್ಲರುಂ.

ಕೇಳ್, ಮಗುವೆ, ನೀನಿಲ್ಲದಾ ದುರ್ಮುಹೂರ್ತದಲಿ!' ಎಂದು ಸಮಾಧಾನ ಮಾಡಿದಳು. ಭರತ ದುಃಖದಿಂದ'ಮಂಥರೆಯ ಮಾತಿನಗ್ನಿಯ ಮೋಹಕೊಳಗಾಗಿ ದುಃಸ್ಥಿತಿ ನಿಮಿತ್ತಳಾದೆನ್ನ ತಾಯಂ ಕ್ಷಮಿಸಿ' ಎಂದು ಪ್ರಾರ್ಥಿಸಿದ. ಅನಂತರ ವಸಿಷ್ಠಾದಿಗಳ ಸಲಹೆಯಂತೆ ತಂದೆಗೆ ಪ್ರೇತಕಾರ್ಯವನ್ನು ಮಾಡಿದ.

ಮತ್ತೆ ಕವಿಗಾನ ಮಂಥರೆಯತ್ತ ಒಲಿದಿದೆ: ಶತ್ರುಘ್ನನ ಹಸ್ತಾಘಾತ, ಭರತನ ತಿರಸ್ಕಾರದಿಂದ ಮೈಮರೆತ ಕುಬ್ಜೆ ಎಚ್ಚೆತ್ತಾಗ ಅರಮನೆ ಸ್ಮಶಾನದಂತೆ ನಿಶ್ಶಬ್ದವಾಗಿ ಅವಳನ್ನು ಅಪಹಾಸ್ಯ ಮಾಡುವಂತಿತ್ತು

**ನಿಶ್ಶಬ್ದತಾ ಶವದವೋಲೆದ್ದಳಾ ಗೂನಿ:
ಮುಯ್ಗೆ ಮುಯ್ಯಾಗಿ ಕೊಲೆಯಾದವನ ಮೆಯ್ಯಿಂದೆ
ಪಸಿಯ ಗಾಯಂಗಳಿಂ ಬಿಸಿಯಾರ್ದ ನೆತ್ತರಂ
ಸೋರಿ ಭೀಕರಮಾಗಿ ಹೂಳಿನಿಂದೇಳುವಾ
ಪ್ರೇತ ಪ್ರತೀಕಾರ ಭೀಷಣಾಕೃತಿಯಂತೆ
ಸುಯ್ದ್ದಳಾ ಗೂನಿ, ದೃಢಮನದ ಹೆಡೆಯೆತ್ತಿ
ತನ್ನ ನಂಜಂ ತಾನೆ ಹೀರಲೆಳಸುವ ಕಾಳ
ಸರ್ಪಿಣಿಯ ತೆರದಿ, 'ಹಾ, ತನ್ನ ಕೈಕೆಯ ಮಗುಗೆ,
ತನ್ನ ಜೀವಾನಂದ ಸಾಗರ ಸುಧಾಂಶುವಿಗೆ,
ಭರತ ದೇವಗೆ ನೆಲದ ಸಿರಿಯಕ್ಕೆ, ಸೊಗಮಕ್ಕೆ,
ಮುಡಿಗೆ ನೇಸರ ಬಳಿಯ ಮಕುಟಮಕ್ಕೆಂದಲ್ತೆ
ರಾಮನನಡಿವಿಗಟ್ಟಿದೆನ್? ಮತ್ತೆ ರಾಮನಂ
ಮನೆಗೆ ಕರೆತಂದೆನಾದೊಡೆ, ಕಂದ ಭರತಂಗೆ
ಮುದವಪ್ಪುದಂತೆಯೆ ಕೈಕೆಗುತ್ಸವಂ
ಮತ್ತೆ ಮರಳುವುದೆನಗೆ ಮೊದಲಿನಂದದೊಳವರ
ಹಿಂದಣೊಲ್ಮೆಯ ಬಂಡಿನೌತಣಂ!'**

ಅಗ್ನಿಯಾತ್ರೆ ೨೫೧-೨೬೬

ಎಂದು 'ಪುಣ್ಯದನ್ವೇಷಣೆಗೆ ಪೋಪ ಪಾಪದ ತೆರದಿ' ಹೊರನಡೆದಳು. ಅರಮನೆ ದುಃಖದಲ್ಲಿ ಇದ್ದುದರಿಂದ ಅವಳನ್ನು ಯಾರೂ ಗಮನಿಸಲಿಲ್ಲ.

ಮುದುಕಿ ಮಂಥರೆ ಅಯೋಧ್ಯೆಯ ಬೀದಿಯಲ್ಲಿ ನಡೆಯುತ್ತಿದ್ದಾಗ ಕೆಲವರು ಅವಳ ಮುಖದ ಮೇಲೆ ಉಗುಳಿದರು. ಕಲ್ಲು ಮುಳ್ಳುಗಳನ್ನು ಎಸೆದರು. ಇಷ್ಟೆಲ್ಲ ಹಿಂಸೆ ಅನ್ಯಾಯಗಳನ್ನು ಲೆಕ್ಕಿಸದೆ ಅವಳು ನಗರವನ್ನು ತೊರೆದಳು. ಈಗ ಅವಳ ಮನಸ್ಸಿನ ತುಂಬಾ ಶ್ರೀರಾಮಚಂದ್ರ ತುಂಬಿದ್ದಾನೆ. ಕತ್ತಲಾಗುವವರೆಗೆ ನಿಲ್ಲದೆ ನಡೆದಳು.

ಬೆಳಗಿನಿಂದುಣಿಸಿಲ್ಲ,
ನೀರ್ಪನಿಯ ನೀಂಟಿಲ್ಲ, ಪೆಟ್ಟನಲ್ಲದೆ ಬೇರೆ
ತಿಂದಿಲ್ಲ; ಕಣ್ಣೀರನೊಂದಲ್ಲದಿನ್ನೇನುಮಂ
ಕುಡಿದಿಲ್ಲ. ಬೆನ್ನಿಗಂಟಿದ ಹೊಟ್ಟೆಹಸಿವಿಂದೆ
ಗಂಟಲೊಣಗಿದ ನೀರಡಿಕೆಯಿಂದೆ ರಕ್ತಮಂ
ಬಸಿವ ಗಾಯದ ಪಸಿಯ ನೋವಿಂದೆ, ತನಗಾದ
ದುಃಸ್ಥಿತಿಯ ದುಃಖವೊದಗಿಸಿದೊಳಗಿನಾಸರಿಂ
ಮೇರೆ ಮೀರ್ದುಸಿರ ಸೇದೆಗೆ ಜೋಂಪಿಸಲ್ ಪ್ರಜ್ಞೆ,
ದೂಟಂದೆ ದೂಟಿಂಗೆ ಮರವಟ್ಟುಮಾ ಮುದುಕಿ
ತೊಟ್ಟ ನೋಂಪಿಯ ಬಲ್ಮೆಯೂರೆಗೋಲಂ ನೆಮ್ಮಿ
ಸಂಚಲಿಸಿದಳೊ ರಾಮನಂ ಕರೆದೊರಲಿ, ಕರೆದು ಕೂಗಿ.

ಅಗ್ನಿಯಾತ್ರೆ ೨೮೬-೨೯೬

ಕಾಡಿನಲ್ಲೆಲ್ಲ ರಾಮನನ್ನು ಅರಸಿಕೂಗಿದಳು. ‘ಓ ನನ್ನ ಭರತನಣ್ಣಯ್ಯ! ಓ ರಾಮಯ್ಯ! ಹೇಳೆಲ್ಲಿರುವೆಯಯ್ಯ? ದಮ್ಮಯ್ಯ!’ ಎಂದು. ಆ ಕನವರಿಕೆಯಲ್ಲೇ ಮುಂದು ಮುಂದಕ್ಕೆ ಸಾಗಿದಳು.

ತಿಳಿಯದಿರಲೇನ್
ತಿರೆಗೆ ಬಾನರಿಯದೇನೆರ್ದೆಯ ಪರಿವರ್ತನೆಯ
ಪುಣ್ಯ ಸಂಕ್ರಾಂತಿಯಂ? ಬಾಹ್ಯ ಸಂಜ್ಞಾಶಕ್ತಿ
ಶೂನ್ಯತೆಯ ನೇಮಿಯುಯ್ಯಾಲೆಯಂ ತೂಗುತಿರೆ,
ಕಾಣಿಸಿತು ಕುಣ್ಬುದಿಟ್ಟಿಯ ಗೂನುಗಣ್ಣಿಗದೊ
ಗೆಣ್ಬರೊಳ್ ಜ್ಯೋತಿ. ಮಂಥರೆಯಂತರಾತ್ಮಕ್ಕೆ
ರಾಮನೆಸೆದಂತಾಗೆ ‘ಓ ಭರತಣ್ಣಯ್ಯ,
ಓ ನನ್ನ ರಾಮಯ್ಯ, ಬಾರಯ್ಯ, ದಮ್ಮಯ್ಯ! ’
ಎಂದೆರ್ದೆನವಿಲ್ ಕೇಗಿ ಗರಿಗೆದರಿ ಕುಣಿಯುತಿರೆ,
ಹಾರಿ ಮುಂದಕೆ ನುಗ್ಗಿ ನಡೆದೋಡಿದಳ್, ಅಹಾ,
ದಾವಾಗ್ನಿಯಂ ಗೆತ್ತು ರಾಮಂಗೆ!

ಅಗ್ನಿಯಾತ್ರೆ ೩೦೭-೩೧೭

ಶ್ರೀರಾಮನೆಂದು ಭ್ರಮಿಸಿ ಕಾಡ್ಗಿಚ್ಚಿನತ್ತ ನುಗ್ಗಿದಾಗ, ‘ಬಂದಪ್ಪಳಿಸಿದಗ್ನಿಗಾ ಮಂಥರೆಯ ಮೂರ್ತಿ ಹಾ ಸುಟ್ಟು ಸೀದುದೊ ಚಿಟ್ಟೆ ಸೀವಂತೆ!’ ಕಾಡಿನಲ್ಲಿ ಸಿಕ್ಕಿದ ಮಂಥರೆ, ಮತ್ತೆ ಕಾಡಿನಲ್ಲಿ ಅಗ್ನಿಗೆ ಆಹುತಿಯಾಗಿ ಅಂತ್ಯಗೊಳ್ಳುತ್ತಾಳೆ.

ಅಗ್ನಿ ಸ್ಪರ್ಶದಿಂದ ಶ್ರೀಗಂಧದ ವಕ್ರತೆಯಳಿದು ಅದರ ಪರಿಮಳ ನಾಡನ್ನೆಲ್ಲ ತುಂಬುವಂತೆ, ರಾಮನಿಗಾಗಿ ಹಂಬಲಿಸಿ ಅಸುನೀಗಿದ ಮಂಥರೆಯ ವಿಕಾರವಳಿದು ಅವಳ

ಅಂತರಾತ್ಮದ ದಯಾಲಕ್ಷ್ಮಿಯ ಅಮೃತಮಯ ಪುಣ್ಯ ಸೌಂದರ್ಯ ಲೋಕ ಲೋಕಾಂತರಗಳನ್ನು ವ್ಯಾಪಿಸದಿರುತ್ತದೆಯೇ ಎಂದು ಶ್ರೀರಾಮ ಜಪದಲ್ಲಿ ಅಗ್ನಿಗಾಹುತಿಯಾದ ಮಂಥರೆಯ ಬದುಕನ್ನು ಕವಿ ವ್ಯಾಖ್ಯಾನಿಸಿದ್ದಾರೆ. ಭರತಮಯವಾಗಿದ್ದ ಮಂಥರೆ ಶ್ರೀರಾಮಮಯವಾಗಿ ಪರಿವರ್ತನೆಯಾದದ್ದು ಅವಳ ಆತ್ಮೋದ್ಧಾರದ ಗಮನಾರ್ಹ ಅಂಶವಾಗಿದೆ. 'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್' ಎಂಬುದು ಕುವೆಂಪು ರಾಮಾಯಣದ ಮೂಲಮಂತ್ರ. ಇದರ ಸಮರ್ಥನೆಗೆ ಹಿರಿಯ ಸಾಕ್ಷಿ ಮಂಥರೆಯ ಪಾತ್ರ.

ಅಗ್ನಿಗಾಹುತಿಯಾದ ಮಂಥರೆ ಅಶರೀರೆಯಾದಳು. ಭರತನಿಗಾಗಿ ರಾಮನನ್ನು ಕರೆತರುವುದು ಅವಳ ಆತ್ಮದ ಉದ್ದೇಶ. ಅದಕ್ಕಾಗಿ ಅರಣ್ಯವಾಸಿಯಾದ ರಾಮನ ಬೆಂಗಾವಲಿಗೆ ನಿಂತಳು. ಬದುಕಿದ್ದಾಗ ಸಾಧಿಸಲಾಗದ ರಾಮಹಿತವನ್ನು ಸತ್ತ ಮೇಲೆ ಸಾಧಿಸಲು ನಿಶ್ಚಯಿಸಿದಳು. ಶ್ರೀರಾಮ ಹಿಂದಿರುಗಿದರೆ ಭರತ, ಕೈಕೆ ಸಂತೋಷಗೊಳ್ಳುತ್ತಾರೆ; ಅಯೋಧ್ಯೆ ಸಂತೋಷಗೊಳ್ಳುತ್ತದೆ. ಅದರಿಂದ ತನಗೂ ಸಂತೋಷವಾಗುತ್ತದೆ. ಆ ಮಹತ್ಸಾಧನೆಗಾಗಿ ತನ್ನ ಆತ್ಮವನ್ನು ಮುಡುಪಿಟ್ಟಳು. ವಾಲ್ಮೀಕಿ ರಾಮಾಯಣದ ಮಂಥರೆ ಕುವೆಂಪು ರಾಮಾಯಣದ ಮಂಥರಾಲಕ್ಷ್ಮಿಯಾದದ್ದು ಯುಗದರ್ಶನದ ಕುರುಹಾಗಿದೆ.

ವನವಾಸದಲ್ಲಿದ್ದ ರಾಮ ಲಕ್ಷ್ಮಣಾದಿಗಳು, ಆಕಸ್ಮಿಕ ತೊಂದರೆ ಉಂಟಾದಾಗ, ಮಂಥರೆಯಿಂದಾದ ವಿಪತ್ಪರಂಪರೆಗಳನ್ನು ನೆನೆಸಿಕೊಂಡಿರುವುದೂ ಉಂಟು. ಸೀತೆ ಅಶೋಕವನದಲ್ಲಿದ್ದಾಗ, ಮಂಥರೆಯ ಕೃತ್ಯದಿಂದಾದ ಪರಿಣಾಮವನ್ನು, ವಿಶಿಷ್ಟರೀತಿಯಲ್ಲಿ ತ್ರಿಜಟೆಗೆ ಹೀಗೆ ತಿಳಿಸಿದ್ದಾಳೆ.

ಆವುದಾಗಲಿ ನೆಪಂ
ಫಲದಾಯಕಂ ತಪಂ. ನನಗೆ, ರಘೂನಾಥಂಗೆ,
ಮೇಣ್ ರಾಕ್ಷಸೇಂದ್ರಂಗೆ ಮೂವರ್ಗಮವರವರ
ಕರ್ಮಾನುಸಾರಿ ಜನ್ಮೋದ್ದೇಶ ಸಾಧನೆಗೆ
ಮೇಣಾತ್ಮ ವಿಕಸನದ ಪರಿಣಾಮ ಸಿದ್ಧಿಗೆ
ಸಹಾಯಮಾದುದು ಮಂಥರೆಯ ಮೂಲದೀ ಬೃಹದ್
ದುರ್ಘಟನೆ. ಇನ್ನೆನಿತು ಜೀವರಿಗೆ ತಂತಮ್ಮ
ಕರ್ಮಕ್ಷಯಕೆ ಮತ್ತೆ ಧರ್ಮಾಭ್ಯುದಯಕಿದು
ನಿಮಿತ್ತಮಾದುದೊ ಪೇಳ್ವರಾರ್!

ಶ್ರೀರಾಮ ರಾವಣ ಚಿತ್‌ತಪಸ್‌ಶ್ರೀ ೧೯೬-೨೦೪

ಮಂಥರೆಯ ಉಪಾಯವಿಲ್ಲದಿದ್ದರೆ ರಾಮ ರಾವಣರ ಯುದ್ಧ ಸಂಭವಿಸುತ್ತಿರಲಿಲ್ಲ. ಹಲವು ವ್ಯಕ್ತಿಗಳ ಕರ್ಮಕ್ಷಯವಾಗುತ್ತಿರಲಿಲ್ಲ. ಮಂಥರೆಯ ಕಾರ್ಯಾಚರಣೆ ಅಲ್ಪ ದೃಷ್ಟಿಗೆ ಅನಿಷ್ಟವಾಗಿ ಕಂಡರೂ ಅಖಂಡ ದೃಷ್ಟಿಗೆ ಅಭ್ಯುದಯವಾಗಿದೆ.

ಕುವೆಂಪು ರಾಮಾಯಣದ ಅಂತ್ಯದಲ್ಲಿ ಅಶರೀರೆ ಮಂಥರೆಯ ದರ್ಶನವಿದೆ. ನಿಶ್ಚಿತ ಅವಧಿಯಲ್ಲಿ ಶ್ರೀರಾಮ ಕಾಡಿನಿಂದ ಹಿಂದಿರುಗದಿದ್ದಾಗ, ವ್ರತನಿಷ್ಠ ಭರತ ಋಷಿ ಅಗ್ನಿಪ್ರವೇಶ ಮಾಡಲು ನಿಶ್ಚಯಿಸಿದ್ದಾನೆ. ಆಗ ಯಜ್ಞಕುಂಡದಿಂದ ಸುಂದರಾಂಗನಾ ಮೂರ್ತಿಯೊಂದು ಕಾಣಿಸಿಕೊಂಡು, 'ಕಂದ, ನಿನ್ನಗ್ರಜಂ ಇಂದೊ ನಾಳೆಯೊ ದಿಟಂ ಪಿಂತಿರುಗಿ ಬಂದಪನ್. ಮಾಣ್ ಮನದ ತರಿಸಲ್ಕೆಯಂ ಎಂದಿತು. 'ದೇವಿ, ನೀನಾರ್? ಸುಧಾ ಸುಖವನೆರೆಯುತಿಹೆ ಬೆಂದೆದೆಗೆ!' ಎಂದು ಕೇಳಿದ ಭರತ. 'ಮತ್ತಾರ್ ಸದಾ ನಿನ್ನ ಸುಕ್ಷೇಮ ಚಿಂತನೆಯೊಳಿರ್ಪರಾ ಮಂಥರೆ ವಿನಾ?' ಎಂದಿತು ಅಗ್ನಿ ಮೂರ್ತಿ. ಭರತನಿಗೆ ಸಿಟ್ಟುಬಂತು. 'ಬೇಡಮಾ ಪೆಸರನೊರೆಯದಿರ್, ಪೂಜ್ಯೆ, ಆ ಗೂನಿ ಕಾರಣಮಾಗೆ ನಾನಿಂತು, ಇಂದಿಲ್ಲಿ, ಕೈ ಕೊಂಡೆನ್ನೆಸೆ ಕಡುಗಜ್ಜಮಂ' ಎಂದ. ಮಂಥರೆ ಅಂತಃಕರಣ ಪೂರ್ವಕವಾಗಿ ನಿಜಸಂಗತಿಯನ್ನು ಅರುಹಿದಳು.

ವತ್ಸ, ಕಾರಣಳಲ್ತು; ಬರಿ ಕರಣಮಾ ಕುಬ್ಜೆ,
ಮಂಥರಾ ಪ್ರೇಮದಂತ:ಕರಣಮಂ ಕಾಣೆ
ನೀಂ. ರಾಮನಂ ಮತ್ತೆ, ನಿನ್ನಭ್ಯುದಯಕಾಗಿ
ಪಿಂ ಮರಳ್ವುವುದ್ಯೋಗದೊಳ್ ತೊಡಗಿರಲ್ಕವಳ್
ದಾವಾಗ್ನಿಗಾಹುತಿಯಾದಳಲ್ತೆ? ಬಹಿರಂಗದೊಳ್
ಆ ಕುಬ್ಜೆ, ವಿಕೃತಿಯೆಂತಂತೆ ಹೊರ ನೋಟಕಾ
ಗೂನಿ ಗೆಯ್ದುದು ಪಾಪವೇಷಿ. ನಾನೆಯೆ, ನೋಡು
ನಿನ್ನ ಮಂಥರೆಯಂತರಾತ್ಮದ ಪುಣ್ಯಲಕ್ಷ್ಮಿ!

ತಪಸ್ಸಿದ್ಧಿ ೬೭-೭೪

ಉಪವಾಸದಿಂದ ಬಳಲಿ, ಅಗ್ನಿಯ ಮುಂದಿದ್ದ ಭರತನಿಗೆ, ಅಗ್ನಿಮೂಲಕ ಬಂದ ಮಾತಿನಿಂದ ವಿಸ್ಮಯವಾಯಿತು. ಅಶರೀರೆಯ ಮಾತು 'ದಿಟಮೊ? ಮೇಣೆನ್ನ ನಿರಶನದನ್ನರಸ ರಹಿತ ಪಿತ್ತ ಚಿತ್ತದ ವಿಕಾರಮೊ?' ಎಂದು ಪ್ರಶ್ನಿಸಿದ. 'ನಿರ್ಧರಿಸು ನೀನೆ!' ಎಂದು ಹೇಳಿ ಆ ಸ್ತ್ರೀರೂಪ ಅದೃಶ್ಯವಾಯಿತು. ಶ್ರೀ ರಾಮನ ಬರುವಿಕೆಯನ್ನು ತಿಳಿಸಿ, ಪ್ರಾಣ ಉಳಿಸಿದ ಅಗ್ನಿಗೆ ಕೈಮುಗಿದ ಭರತ.

ಭರತ ಮತ್ತು ಅಶರೀರೆ ಮಂಥರೆಯರ ನಡುವೆ ನಡೆದ ನಾಟಕೀಯ ಸಂಭಾಷಣೆಯಲ್ಲಿ, ಪರಿವರ್ತನೆಗೊಂಡ ಮಂಥರೆಯ ಆತ್ಮ ಶ್ರೀರಾಮನ ಬೆಂಗಾವಲಿಗೆ ನಿಂತದ್ದು, ಆ ಮೂಲಕ ಭರತನ ಸಂತೋಷಕ್ಕೆ ಸಂಕಲ್ಪ ಕೈಗೊಂಡಿದ್ದು ವೇದ್ಯವಾಗುತ್ತದೆ. ಅಗ್ನಿಗೆ ಆಹುತಿಯಾಗುತ್ತಿದ್ದ ಭರತನನ್ನು ಉಳಿಸಿದ್ದು ಮಂಥರೆಗೆ ಭರತನ ಮೇಲಿದ್ದ ಮಮತೆಯ ಆಧಿಕ್ಯವನ್ನು ವ್ಯಕ್ತಪಡಿಸುತ್ತದೆ. ಹೀಗೆ ಕುವೆಂಪು ರಾಮಾಯಣದ ಮಂಥರೆ, ಅನಾದಿಕಾಲದಿಂದ ಇದ್ದ ಲೋಕಾಪವಾದವನ್ನು ಕಳೆದುಕೊಂಡು, ಗುಣಾತ್ಮಳಾದ ಮಹಿಳೆಯಾಗಿದ್ದಾಳೆ.

ವಾಲ್ಮೀಕಿ ರಾಮಾಯಣದಲ್ಲಿ, ಮಂಥರೆ ಪಾತ್ರದ ಪ್ರವೇಶದ ಸಂದರ್ಭದಲ್ಲಿ ಹೀಗೆ ಹೇಳಿದೆ. ''ಮಂಥರೆಯೆಂಬ ಕೈಕೆಯ ದಾಸಿಯೊಬ್ಬಳು ಅಂತಃಪುರದ ಮೇಲ್ಮಹಡಿಗೆ ಆಕಸ್ಮಿಕವಾಗಿ ಹತ್ತಿ ಹೋದಳು. ಅವಳು ಕೈಕೆಯ ತವರು ಮನೆಯಿಂದ ಬಂದವಳು. ಅವಳು ಎಲ್ಲಿ ಹುಟ್ಟಿದಳೋ ಅವಳ ತಾಯಿತಂದೆಯರು ಯಾರೋ ತಿಳಿಯದು. ಅವಳು ಮೊದಲಿನಿಂದ ಕೈಕೆಯ ಜೊತೆಯಲ್ಲೇ ಇರುತ್ತಿದ್ದಳು'' ವಾಲ್ಮೀಕಿ ಸೂಚಿಸಿದ್ದ ಮಂಥರೆಯ ಬದುಕಿನ ಸೂಕ್ಷ್ಮ ಎಳೆಗಳನ್ನು ಹಿಡಿದುಕೊಂಡು, ಕುವೆಂಪು ಪ್ರತಿಭೆ ಅಖಂಡವಾದ ಮಂಥರಾದೇವಿಯ ಪಾತ್ರವನ್ನು ಸೃಜಿಸಿದೆ. ಆ ಮೂಲಕ ಹೆಣ್ಣಿನ ಅಂತರಂಗ ಮತ್ತು ಬಹಿರಂಗವನ್ನು ಶೋಧಿಸಿ, ಅಪೂರ್ವವಾದ ದರ್ಶನವನ್ನು ಕಾವ್ಯಕಲಾರೂಪದಲ್ಲಿ ಕಂಡರಿಸಿದೆ.

ವಾಲ್ಮೀಕಿ ರಾಮಾಯಣದಲ್ಲೇ ಮಂಥರೆ ಕ್ರೂರಿ, ಪಾಪಿ, ಪಾಪದರ್ಶಿನಿ, ದುಷ್ಟೆ ಎಂಬ ಅಭಿಪ್ರಾಯವಿದೆ. ಕುವೆಂಪು ರಾಮಾಯಣದಲ್ಲೂ ಪ್ರಾರಂಭದಲ್ಲಿ ಇದೇ ಅಭಿಪ್ರಾಯವಿದೆ. ಮಂಥರೆ ಕ್ರೂರಿಯಾಗಲು ಕುವೆಂಪು ಕೊಟ್ಟಿರುವ ಮನೋವೈಜ್ಞಾನಿಕ ಕಾರಣ ವಾಲ್ಮೀಕಿಗಿಂತಲೂ ಪರಿಣಾಮಕಾರಿಯಾಗಿದೆ. ಮಂಥರೆ ಹುಟ್ಟಿದಾಗಲೇ ತಾಯಿ ತಂದೆಯರ ಅವಕೃಪೆಗೆ ತುತ್ತಾದವಳು; ಕೇಕೆಯ ರಾಜ್ಯದಲ್ಲಾಗಲೀ ಅಯೋಧ್ಯೆಯಲ್ಲಾಗಲೀ ಸರ್ವರಿಂದಲೂ ಅವಹೇಳನಕ್ಕೆ ಗುರಿಯಾದವಳು. ಕೇಕೆಯ ರಾಜ, ಕೈಕೆ, ಭರತ ಮೂವರನ್ನು ಬಿಟ್ಟರೆ ಅವಳಿಗಾಗಿ ಪ್ರೀತಿ ವಿಶ್ವಾಸ ತೋರಿಸಿದವರು ಯಾರೂ ಇಲ್ಲ . ಮಂಥರೆ ತನಗಿಲ್ಲದ ಸೌಂದರ್ಯವನ್ನು ತನ್ನ ಸಾಕುಮಗಳು ಕೈಕೆಯಲ್ಲಿ ಕಂಡು ತನ್ನ ಕೊರತೆಯನ್ನು ಮರೆತಳು; ತನಗಿಲ್ಲದ ತಾಯ್ತನದ ಸುಖವನ್ನು ಕೈಕೆಯ ಮಗ ಭರತನಿಂದ ಪಡೆದು ಸಂತೋಷಿಸಿದಳು; ಅವರ ಏಳಿಗೆಯಲ್ಲಿ ತನ್ನ ಏಳಿಗೆಯನ್ನು ಕಂಡಳು, ಅವರಿಗಾಗಿ ತನ್ನ ಜೀವನವನ್ನು ಮುಡುಪಿಟ್ಟಳು. ವಿವಿಧಕಾರಣಗಳಿಂದ ಅತೃಪ್ತಳಾದ ಹೆಣ್ಣು, ಪರಿವರ್ತನೆಗೊಂಡು ಉದಾತ್ತ ಜೀವನೋದ್ದೇಶವನ್ನು ಸಾಧಿಸಿ, ತೃಪ್ತಳಾಗುವ ಪೂರ್ಣದೃಷ್ಟಿಯ ಬದುಕನ್ನು ಪರಿಣಾಮಕಾರಿಯಾಗಿ ಚಿತ್ರಿಸಿರುವುದು ಕುವೆಂಪು ಪ್ರತಿಭೆಯ ಹೆಚ್ಚುಗಾರಿಕೆಯಾಗಿದೆ.

ವಾಲ್ಮೀಕಿಯ ಮಂಥರೆಗೆ ಅಂಟಿದ ಕಳಂಕವನ್ನು ಕಳೆಯಲು ಅನಂತರದ ಕವಿಗಳು ಪ್ರಯತ್ನಿಸಿದ್ದಾರೆ. ಹಿಂದಿ ಭಾಷೆಯ ತುಳಸೀದಾಸರ 'ರಾಮಚರಿತ ಮಾನಸ' ಕಾವ್ಯದಲ್ಲಿ ಶ್ರೀರಾಮ ಪಟ್ಟಾಭಿಷೇಕಕ್ಕೆ ಅಡ್ಡಿ ಉಂಟುಮಾಡಲು ಕುಚಕ್ರೀ ದೇವತೆಗಳು ಸರಸ್ವತಿಯಿಂದ ಮಂಥರೆಗೆ ದುರ್ಬೋಧನೆ ಮಾಡುವ ಬುದ್ಧಿ ಕೊಡಿಸುತ್ತಾರೆ. ಸವತಿಯರ ಕತೆಗಳಿಂದ ಮಂಥರೆ ಕೈಕೆಯ ಬುದ್ಧಿಯನ್ನು ಕೆಡಿಸುತ್ತಾಳೆ. ಇಲ್ಲಿ ಮಂಥರೆಯ ಮೇಲಿನ ಅಪವಾದವನ್ನು ದೇವತೆಗಳ ಮೇಲೆ, ಸರಸ್ವತಿಯ ಮೇಲೆ ಎತ್ತಿಹಾಕಿದಂತಾಗಿದೆ. ಮಂಥರೆಯ ದುಷ್ಟ ಸ್ವಭಾವಕ್ಕೆ ನೀಡಿರುವ ಕಾರಣಗಳು ಅವಳ ಪಾತ್ರದಲ್ಲಿ ಸಹಜವಾಗಿ ಮೂಡಿಲ್ಲ.

ತಮಿಳು ಭಾಷೆಯ ಕಂಬ ರಾಮಾಯಣದಲ್ಲಿ, ಬಾಲ್ಯದಲ್ಲಿ ರಾಮ ಹಾಸ್ಯಕ್ಕಾಗಿ

ಮಂಥರೆಯ ಮೇಲೆ ಮಣ್ಣಿನ ಉಂಡೆಗಳನ್ನು ಎಸೆದುದರಿಂದ, ಮನಸ್ಸಿನಲ್ಲೇ ದ್ವೇಷ ಇಟ್ಟುಕೊಂಡಿದ್ದ ಮಂಥರೆ ರಾಮನ ಪಟ್ಟಾಭಿಷೇಕವನ್ನು ನಿಲ್ಲಿಸಿದಳು ಎಂದಿದೆ. ಭರತನಿಗೆ ರಾಜ್ಯ ಸಿಗದಿದ್ದರೆ, ಕೈಕೆ ಕೌಸಲ್ಯೆಯ ಸವತಿಕಾಟಕ್ಕೆ ತುತ್ತಾಗಬೇಕಾಗುವುದೆಂದೂ ಜನಕ ಮಹಾರಾಜ ಕೇಕೆಯ ರಾಜ್ಯವನ್ನು ಆಕ್ರಮಿಸುತ್ತಾನೆಂದೂ ಮಂಥರೆ ಚಾಡಿ ಹೇಳುತ್ತಾಳೆ. ಕೈಕೆ ನಂಬುತ್ತಾಳೆ. ಮಂಥರೆಯ ಚಾಡಿಬುದ್ಧಿಗೆ ಇದೂ ಕೂಡ ಸರಿಯಾದ ಕಾರಣವಾಗಲಾರದು.

ಈ ಇಬ್ಬರು ಮುಖ್ಯ ಕವಿಗಳಿಗಿಂತಲೂ ಭಿನ್ನವಾದ, ವೈಜ್ಞಾನಿಕವಾದ, ಮನೋವಿಶ್ಲೇಷಣಾತ್ಮಕವಾದ ಹಂದರವನ್ನು ನಿರ್ಮಿಸಿ ಮಂಥರೆಯ ಪಾತ್ರವನ್ನು ಉಜ್ವಲಗೊಳಿಸಿ ಕುವೆಂಪು ಯಶಸ್ವಿಯಾಗಿದ್ದಾರೆ. ಕುವೆಂಪು ಕಲ್ಪಿಸಿರುವ ಮಂಥರೆಯ ಪೂರ್ವವೃತ್ತಾಂತ ಇಡೀ ಪಾತ್ರದ ಸಹಜ ವಿಕಾಸಕ್ಕೆ ಗಟ್ಟಿಯಾದ ನೆಲಗಟ್ಟನ್ನು ಒದಗಿಸಿದೆ. ಕುವೆಂಪು ಕಂಡರಿಸಿರುವ ಮಂಥರೆಯ ಅಂತರಂಗದ ಪರಿವರ್ತನೆಯ ಕಲ್ಪನೆ ಈ ಯುಗದ ಹೊಸಶೋಧನೆಯಾಗಿದೆ. ಕುವೆಂಪು ಅವರ ಮಂಥರೆಯ ಪಾತ್ರ ಸೃಷ್ಟಿ ವಿನೂತನವಾಗಿದೆ, ರಸಮಯವಾಗಿದೆ, ಧ್ವನಿಪೂರ್ಣವಾಗಿದೆ. ಈ ಪಾತ್ರದ ಆದಿ ಹಾಗೂ ಅಂತ್ಯ ದರ್ಶನಾವತಾರದ ಹೆಗ್ಗುರುತಾಗಿದೆ. ವಾಲ್ಮೀಕಿ ರಾಮಾಯಣದಲ್ಲಿ 'ಅಸ್ಫುಟ' ವಾಗಿದ್ದ ಮಂಥರೆ, ಕುವೆಂಪು ರಾಮಾಯಣದಲ್ಲಿ 'ಸುಸ್ಫುಟ' ವಾಗಿದ್ದಾಳೆ. ಅಷ್ಟೇ ಅಲ್ಲ ಮಂಥರೆ ಕುವೆಂಪು ರಾಮಾಯಣದ ಜೀವಶಕ್ತಿಯಾಗಿದ್ದಾಳೆ, ಕವಿ ದರ್ಶನದ ಕೇಂದ್ರವಾಗಿದ್ದಾಳೆ. ಅನಾದಿಕಾಲದ ಅವಹೇಳನವನ್ನು ಕಳೆದುಕೊಂಡು ಪರಿಶುದ್ಧಳಾಗಿದ್ದಾಳೆ. ಶಿಷ್ಟರಕ್ಷಣೆ ದುಷ್ಟ ಪರಿವರ್ತನೆಗೆ ಸಾಕ್ಷಿಯಾಗಿದ್ದಾಳೆ. ಮಂಥರೆಯ ಕ್ರೂರ ಸ್ವಭಾವಕ್ಕೆ ಜನ್ಮಾರಭ್ಯ ಎದುರಿಸಿದ ಅನ್ಯರ ಅವಕೃಪೆಯೂ ಅಯೋಧ್ಯೆಯ ಅಂತಃಪುರದಲ್ಲಿ ಇದ್ದಿರಬಹುದಾದ ಸವತಿಮಾತ್ಸರ್ಯವೂ ಅಂದಿನ ರಾಜಕೀಯ ಪಿತೂರಿಯೂ ಕಾರಣವಾಗಿರುವುದನ್ನು ಕುವೆಂಪು ರಾಮಾಯಣ ಸೂಚಿಸುತ್ತದೆ. ಕಾವ್ಯ ಧರ್ಮದ ಹಲವು ದೃಷ್ಟಿಗಳಿಂದ ವಿಶ್ಲೇಷಿಸುವ ವಿಮರ್ಶಿಸುವ ಧ್ವನಿಶಕ್ತಿಯನ್ನು ಕುವೆಂಪು ರಾಮಾಯಣದ ಮಂಥರೆಯ ಪಾತ್ರ ಪಡೆದಿದೆ.

***

ಸಾತ್ವಿಕ ದೈವೀಸ್ವರೂಪಿ ಸರಸ್ವತಿ

ಪ್ರೊ॥ಕೆ.ಎಸ್. ನಿಸಾರ್ ಅಹಮದ್

ಯಾರಾದರೂ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರೆ, ಸೊಗಸಾದ ಸಾಹಿತ್ಯವನ್ನು ರಚಿಸಿದರೆ ಅವರಿಗೆ ಸರಸ್ವತಿ ಒಲಿದಿರುವಳೆಂದೂ, ಅವರ ನಾಲಗೆಯ ಮೇಲೆ ಆಕೆ ನರ್ತಿಸುತ್ತಿರುವಳೆಂದೂ ಹೇಳುವುದುಂಟು. ಹಾಗೆಯೇ, ಪರೀಕ್ಷೆಗಳು ಸಮೀಪಿಸುತ್ತಿರುವಾಗ, ತಮ್ಮನ್ನು ಯಶಸ್ವಿಯಾಗಿಸಲು ಆಕೆಯನ್ನು ಪೂಜಿಸುವ ಸಾಮೂಹಿಕ ಭಕ್ತಿ ಗೌರವಾಚಾರವೂ ಕೆಲವು ದಶಕಗಳ ಹಿಂದೆ ಜನಪ್ರಿಯವಾಗಿತ್ತು. ಅಲ್ಲದೆ, 'ದೇವರಾಣೆ'ಯ ಅನಂತರ ಹೆಚ್ಚು ಚಾಲ್ತಿಯಲ್ಲಿದ್ದುದು; 'ಗಣೇಶನಾಣೆ', 'ಲಕ್ಷ್ಮಿಯಾಣೆ', 'ಈಶ್ವರನ ಆಣೆ'ಯಲ್ಲ; ಆಡುಮಾತಿನಲ್ಲಿ ಹೇಳಬೇಕಾದರೆ, 'ಸರಸ್ವತಾಣೆ'! ಒಂದು ಕಾಲಕ್ಕೆ ಲಕ್ಷ್ಮೀ ಕಟಾಕ್ಷಿಗಳಿಗಿಂತ ಸರಸ್ವತಿಯ ಅನುಗ್ರಹಕ್ಕೆ ಒಳಗಾದವರಿಗೆ ಸಮಾಜದಲ್ಲಿ ಮನ್ನಣೆಯ ಮೊದಲ ಮಣೆ ಮೀಸಲಾಗಿರುತ್ತಿತ್ತು. ಈಗ ಸರಸ್ವತಿಗೆ, ಸುಭಿಕ್ಷ ಲಕ್ಷ್ಮೀ ಸಂಸಾರದಲ್ಲಿ ಬಡ ನಂಟಳ ಸ್ಥಾನ. ಸರಸ್ವತಿಯ ಮೂಲಕ ಲಕ್ಷ್ಮಿಯನ್ನು ಅನುನಯಿಸಿಕೊಳ್ಳುವುದಕ್ಕಿಂತ, ಲಕ್ಷ್ಮಿಯ ಮುಖೇನ ವಿದ್ಯಾಸಂಸ್ಥೆಗಳ ದೊಡ್ಡಿಯಿಂದ ಸರಸ್ವತಿಯನ್ನು ಬಲಾತ್ಕಾರದಿಂದ ಹಿಡಿದೆಳೆದು ತರುವುದು ಸುಲಭವೆನ್ನಿಸಿದೆ. ಮೌಲ್ಯಗಳ ಸ್ಥಾನಾಂತರ ಮತ್ತು ಇಳಿಮುಖವನ್ನು ಡಿ.ವಿ.ಜಿ. ತಮ್ಮ ಮರಣೋತ್ತರ ಪ್ರಕಟಣೆಯಾದ 'ಮರುಳ ಮುನಿಯನ ಕಗ್ಗ'ದಲ್ಲಿ ಮಾರ್ಮಿಕವಾಗಿ ನುಡಿದಿದ್ದಾರೆ.

''ಸರಸತಿಯ ಸತ್ರ ಬಳಿಯಿರೆ ತೊರೆದು ದೂರದಾ
ಸಿರಿದೇವಿಯಂಗಡಿಯನರಸಿ ತಟವಟಿಸಿ ॥
ಹೊರ ಹೊಳಪಿನಾಸೆಯಿಂದೊಳಮಬ್ಬನಪ್ಪುವನು
ಕುರುಡನೋ ಕಂಡವನೋ - ಮರುಳ ಮುನಿಯ ॥''

ಒಂದು ಸತ್ರ, ಮತ್ತೊಂದು ಅಂಗಡಿ; ಹೊರಗಿನ ರಂಗುರಂಗಿನ ಆಕರ್ಷಣೆಯಿಂದ ಮಾರುಹೋಗಿ ಒಳಗಿನ ಕತ್ತಲೆಯನ್ನು ಅಪ್ಪಲು ದುಡುಕುವವರು ಕುರುಡರಲ್ಲದೆ ಮತ್ತೇನು? ಮಿಠಾಯಿಯ ಮೇಲೆ ಕೂರುವ ಬದಲು ಕೊಳೆ ಕಸದತ್ತ ಹಾರುವ ನೊಣದ ಸ್ವಭಾವ ಇಂದಿನ ಸಮಾಜ ಜೀವನದ್ದು. ಕಾಲಾಯ ತಸ್ಮೈ ನಮಃ.

ತನ್ನ ಆಲೋಚನೆ ಭಾವ ವಿಭಾವನೆಗಳನ್ನು ರೂಪಿಸಿ, ಕ್ರೋಢೀಕರಿಸಿ ವಾಗರ್ಥ ವಿಶೇಷಗಳ ಮೂಲಕ ವ್ಯಕ್ತಗೊಳಿಸಲು ಸರಸ್ವತಿಯನ್ನು ಪ್ರಾರ್ಥಿಸದ ವಾಙ್ಮಯಕಾರನಿಲ್ಲ. ಆಕೆ ವಿದ್ಯಾಧಿದೇವತೆ, ಜ್ಞಾನಗಳ ಯಜಮಾನಿಯಷ್ಟೇ ಅಲ್ಲ; ಸಮಸ್ತ ವಿಶ್ವ ಭಾಷಾತ್ಮಕಳೂ ಹೌದು. ಹಾಗಾಗಿ 'ಸರ್ವಭಾಷಾ ಸರಸ್ವತೀ'. ಇಂಥ ಉದಾರೋನ್ನತ ಸ್ತೋತ್ರಾರತಿಯನ್ನು ಮಾಡಿದವ ಕನ್ನಡ ಕವಿ ನಾಗವರ್ಮ. ಈ ಮಾತಿನ ಬಳಕೆಯಿಂದ ಆಕೆಯ ವಾಗಧಿಕಾರದ

ಮೇರೆ ಕೇವಲ ಭಾರದ ಎಲ್ಲೆಡೆಗಳಿಗೆ ಸಂಕುಚಿತಗೊಳ್ಳದೆ ವಿಶ್ವವಿಶಾಲವಾಗಿರುವುದನ್ನು ಸೂಚಿಸಿದ್ದಾನೆ. ಆಕೆಯು ನಿಸ್ಸೀರತೆಗೆ ನಿರ್ಮಲಾಂತಃಕರಣದ ನೈವೇದ್ಯ ನೀಡಿದ್ದಾನೆ. ಅಲ್ಲದೆ, ಆಕೆ ದಿವ್ಯಜ್ಞಾನ ಪ್ರದಾಯಿನಿಯೂ ಹೌದು. ಸರಸ್ವತಿಯ ವ್ಯಾವಹಾರಿಕ, ಆತ್ಮಿಕ, ದೈವಿಕ ಹಾಗೂ ಸಾಂಕೇತಿಕ ಸ್ವರೂಪದ ಸ್ಥೂಲ ವಿವೇಚನೆ ಈ ಲೇಖನ.

ಸರಸ್ವತಿಯ ಸಂಸಾರ ದೊಡ್ಡದು. ಅವರಲ್ಲಿ ಸರಸ್ವತೀವರಪ್ರಸಾದರ ಸಂಖ್ಯೆಯೂ ನಗಣ್ಯವಲ್ಲ. ಆಕೆಯ ಕನ್ನಡ 'ಸಾರಸ್ವತ'ರು ತಮ್ಮ ಕೃತಿಗಳ ಮೂಲಕ ಆಕೆಯನ್ನು ಜಗದ್ವಂದ್ಯರಾಗಿಸಿದ್ದಾರೆ; ಆ ನಿಮಿತ್ತದಿಂದ ತಾವೂ ಯಶೋವಂತರಾಗಿದ್ದಾರೆ. ಆಕೆಯ ಕೃಪೆಗೆ ಕಾತರಿಸಿ, ಅವಳ ವಿಶೇಷಣ ರೂಪವಾದ ಹೆಸರುಗಳಿಂದ— ಶಾರದಾ, ವಾಣೀ, ವಾಗೀಶ್ವರೀ, ಗೀರ್ವಾಣೀ, ಬ್ರಾಹ್ಮೀ, ವೀಣಾಪಾಣಿ ಇತ್ಯಾದಿಯಾಗಿ— ಸ್ತುತಿಸಿ ಸಾರ್ಥಕರಾಗಿದ್ದಾರೆ. ಪ್ರಾತಿನಿಧಿಕವಾಗಿ ಕೆಲವರನ್ನು ಪ್ರಸ್ತಾಪಿಸಬಹುದು.

ಮಹಾಕವಿ ಕುವೆಂಪುಗೆ ಮೊದಮೊದಲಿಗೆ, 'ಸೊಬಗಿನ ಸೆರೆಮನೆಯಾಗಿಹೆ ನೀನು ಚೆಲುವೆ ಸರಸತಿಯೆ; ನಿನ್ನೆದೆಯಾಳದಿ ಸೆರೆಯಾಳ್ ನಾನು, ನನ್ನೆದೆಯಾರತಿಯೆ' ಅನ್ನಿಸುತ್ತಾಳೆ ''ರಾಮಾಯಣ ದರ್ಶನ'', ರಚನಾ ಕಾಲದ ವೇಳೆಗೆ ''ವಾಗ್ದೇವಿಯಮೃತ ರಸನೆಯ ಲಸನ್ ನಾವೆಯನ್ನು ಏರಲು'' ತಹತಹಿಸುವ ಕವಿ, ಸರಸ್ವತಿಯನ್ನು ಆತ್ಮಜಿಹ್ವೆಗೆ ಆವಾಹಿಸಿಕೊಳ್ಳಲು ಆಗ್ರಹಿಸುತ್ತಾರೆ. ವೀಣಾಪಾಣಿ, ಬ್ರಹ್ಮನ ರಾಣಿ, ಭಾವಗಂಗಾವೇಣಿಯಾದ ಸರಸತಿ ತನ್ನ ಗಾನದಿಂದ, ಪಂಕವನ್ನು ಕಲಾಪಂಕಜವನ್ನಾಗಿ ಕಂಗೊಳಿಸಬಲ್ಲಳು. ಆಕೆಯ ಕರಗಳು ಹಿಂಡಿದರೆ ಕಬ್ಬಿಣದಿಂದಲೂ ಕಬ್ಬಿನ ರಸ ಹೊರಸೂಸಬಲ್ಲದು. ಮಂತ್ರಮಯಿಯಾದ ಆ ವಾಗಧಿದೇವಿ, ಮುತ್ತಿನ ಚಿಪ್ಪು ಬಿರಿಯುವಷ್ಟು ಸುಲಭವಾಗಿ, ಬಂಡೆಯನ್ನೊಡೆದು ಒಳಬುಗ್ಗೆಯನ್ನು ಚಿಮ್ಮಿಸಬಲ್ಲಳು. ಆ ಕಲಾಮಯಿಯ ರಸಚಿದಾನ್ವಿತ ತಪೋಬಲಕ್ಕೆ ಎಣೆಯುಂಟೆ? ಮೇರೆಯುಂಟೆ? ಎಳವೆಯಲ್ಲಿ ಕುವೆಂಪು ಅವರಿಗೆ ಲಾವಣ್ಯವತಿಯಾಗಿ ಕಣ್ಣುತುಂಬಿದ್ದ ಸರಸ್ವತಿ, ದೃಷ್ಟಿಮಾಗಿದ ಅನಂತರ ಕಾಲದಲ್ಲಿ ಮಾತೆಯಂತೆ ಮಹಿಮಾಸ್ಪದೆಯಾಗಿ ದರ್ಶನದೀಪ್ತಳಾಗಿದ್ದಾಳೆ. ''ಪುಟ್ಟನನ್ನು, ಕನ್ನಡದ ಹೊಸ ಸುಗ್ಗಿ ಬನದ ಪರಪುಟ್ಟ'' (ಕೋಗಿಲೆ)ನನ್ನು ಮಹಾಕಾವ್ಯಯಾತ್ರೆಯಲ್ಲಿ ಮುನ್ನಡೆಸುವಂತೆ ಮೊರೆಯಿಡುತ್ತಾರೆ. ವರಕವಿ ಬೇಂದ್ರೆಯವರು ಸತ್ವತಃ ಸಾರಸ್ವತ ಸಾಧಕರು; ಚಿರಚೈತ್ರಸಮ ಪ್ರತಿಭಾ ಶ್ರೀಮಂತರು. ಸರಸ್ವತೀ ಸ್ತೋತ್ರವನ್ನು ಅನ್ಯಸಾಧ್ಯವಲ್ಲದ ಮಾಂತ್ರಿಕ ಮಾತುಗಳಲ್ಲಿ ಆಗಾಗ್ಗೆ ಹೊಮ್ಮಿಸಿದ್ದಾರೆ. ಆಕೆಯ ವಚನ ವೈಭವ ವಿಲಾಸವನ್ನು ಅಪ್ರತಿಮ ಪ್ರತಿಮಾ ಆಭರಣಗಳಿಂದ ಸಿಂಗರಿಸಿದ್ದಾರೆ. 'ಸಿಂಹ ಮುಖಕ್ಕಿದೆ, ನವಿಲಿನ ಸೋಗೆ, ಶಕ್ತಿ ಶಾರದೆಯ ಮೇಳದ ಹಾಗೆ' ಎಂಬ ರುದ್ರ ಲಲಿತಾರ್ದ್ರವೂ, ಅತ್ಯಮೋಘವೂ, ತಾಂತ್ರಿಕ ಗೂಢಾರ್ಥಸಮನ್ವಿತವೂ ಆದ ಸಂಕೇತದಿಂದ ವಾಙ್ಮಯದ ಅಸಾಮಾನ್ಯತೆಯನ್ನು ಸೂಚಿಸಿದ್ದಾರೆ. ಸಿಂಹವಾಹನೆ ಉಗ್ರದುರ್ಗೆಯ ಹಾಗೂ

ಮಯೂರವಾಹನೆ ಸೌಮ್ಯ ಸರಸ್ವತಿಯ ವಿರುದ್ಧ ಗುಣ ಸಮ್ಮಿಲನ ಮತ್ತು ಸಮನ್ವಯ ವಿಶಾಲಾರ್ಥದಲ್ಲಿ ಸೃಷ್ಟಿಯ ಮೂಲಭೂತ ತತ್ತ್ವವನ್ನು ಪ್ರತೀಕಿಸುತ್ತದೆ. ಹುಲಿ ಹುಲ್ಲೆಗಳೆರಡೂ ಪ್ರಕೃತಿಯ ವಾಸ್ತವಗಳೆಂಬುದನ್ನು ಪ್ರತಿಮಾವೇದ್ಯವಾಗಿಸುತ್ತದೆ. ಈ ಸಂದರ್ಭದಲ್ಲಿ ಶೃಂಗೇರಿಯ ಶಕ್ತಿಸ್ವರೂಪಿ ಶಾರದಾದೇವಿಯತ್ತ ಆಲೋಚನೆ ಹೊರಳುತ್ತದೆ. ಆಕೆಯ ಪ್ರತಿಷ್ಠಾಪನೆಯಾದ ಸಂದರ್ಭ, ಬೇಂದ್ರೆಯವರ ಕಾವ್ಯಪಂಕ್ತಿಯ ಅತಿಶಯಾರ್ಥವನ್ನು ಸ್ಪಷ್ಟೀಕರಿಸಬಲ್ಲುದು. ಮಧ್ಯಾಹ್ನದ ಬಿಸಿಲಬೇಗೆಯಲ್ಲಿ ಶಂಕರಾಚಾರ್ಯರು ನಡೆದು ಬರುತ್ತಿರುವಾಗ ಶೃಂಗೇರಿಯ ಹತ್ತಿರ, ನಾಗರಹಾವೊಂದು ತನ್ನ ಹೆಡೆಬಿಚ್ಚಿ, ತಾಯಿಯಾಗಲಿರುವ ಕಪ್ಪೆಗೆ ಕೂಡ ನೆರಳು ನೀಡಿದ್ದ ಅಘಟನಘಟಿತವನ್ನು ಕಂಡರಂತೆ. ಹಾವು-ಕಪ್ಪೆಗಳು ಸ್ವಭಾವಜನ್ಯವಾದ ಹಗೆತನವನ್ನು ಮರೆತು ಹೀಗೆ ಒಟ್ಟಾಗಿರುವ ಈ ಸ್ಥಳವೇ ಪ್ರಶಸ್ತವೆಂದು ದೇವಾಲಯ ನಿರ್ಮಿಸಿದರಂತೆ. ಶಾರದೆಯ ಗಂಧದ ವಿಗ್ರಹ ಹಾಗೂ ಶ್ರೀಚಕ್ರವನ್ನಿಟ್ಟು ಮಠಸ್ಥಾಪನೆ ಮಾಡಿದರಂತೆ.

'ಶಾರದಾ ಮಂದಿರ'ದ ವತಿಯಿಂದ ಭಾಗವತ ಕವಿ ಪು.ತಿ. ನರಸಿಂಹಚಾರ್ಯರ ಕವನ ಸಂಗ್ರಹದ ಹೆಸರೇ ''ರಸ ಸರಸ್ವತಿ''. ಕವಿಯ ಭಾವನೆಯಲ್ಲಿ 'ಮೃಣ್ಮಯ ಪ್ರಕೃತಿಯಿಂದ ಮನೋವಿಕೃತಿಯ ರಚಿಸುವ ಆತ್ಮವಿಸ್ತಾರವನು ಕಲ್ಪಿಸುವ ಮಾಯೆ' ಸರಸ್ವತಿ.'ಅರ್ಥದೊಳು ರಮಿಸಿಯೂ ವಿರಮಿಸದ ತೆರದೊಳಗೆ ಭಾವಸಾರಥ್ಯದೊಳ ಚಲಿಸುವಂತೆ ನುಡಿಯ ಬೆಳಸುವ' ಆಕೆಯ ಚದುರೇ ಚದುರು. 'ರಸ ಸರಸ್ವತಿ, ದೇವಿ, ಕವಿಯ ಇಷ್ಟಸ್ವಪ್ನ. ಕವಿಯ ಹೃತ್ಕುಹರದಿಂದ ರಸಿಕ ಜನ ಹೊರ ತೆಗೆವ ಭವರತ್ನ'. 'ತುಳಿಯುವೆಡೆಯಲ್ಲೆಲ್ಲ ಚೆಲುಚೆಲುವ ಕೊನರಿಸುವ, ಜಗದೊಲವ ಕೊಳ್ಳುವ ಹೃದಯಂಗಮ' ಅವಳು. ಈ ಸ್ತುತಿವಾಕ್ಯಗಳಾದ ಮೇಲೆ 'ತ್ಯಕ್ತನೆನಿಸದೆ ನನ್ನ ನಿನ್ನಂಕಕೆತ್ತು; ಯೋಗಿಯೆನಲೆನಗಾಗೆ ಮುದದ ಮುತ್ತು' ಎಂದು ಸರಸ್ವತಿಯನ್ನು ಕವಿ ಬಿನ್ನವಿಸುತ್ತಾರೆ.

ಶ್ರೀ ಜಿ.ಪಿ. ರಾಜರತ್ನಂ ಅವರ ''ಪುರುಷ ಸರಸ್ವತಿ'' ಎಂಬ ವಿಡಂಬನ ಕಾವ್ಯ ಒಂದು ಅದ್ವಿತೀಯ ರಚನೆ. ಇದರ ಭಾಷೆಗೂ, ಕೈಲಾಸಂ ನಾಟಕಗಳ ಕನ್ನಡಾಂಗ್ಲ ಅನ್ಯದೇಶೀಯ ಭಾಷೆಗೂ ಹತ್ತಿರದ ಬೀಗತನ. ಸಮಕಾಲೀನ ಗಣ್ಯರನ್ನು, ವಿದ್ಯಮಾನಗಳನ್ನು ಕುರಿತ ವ್ಯಂಗದ ಇಣುಕುನೋಟ ಇಲ್ಲಿದೆ. ಷಟ್ಪದಿಗಳ ಸಾಲುಗಳಲ್ಲಿ ಕಟಕಿ, ಲೇವಡಿ ಗಹಗಹಿಸಿದೆ. 'ಕರ್ನಾಟಕ, ಕರ್ಣಾಟಕ' ವಾದವಿವಾದಿಗಳ ಮುಖಕ್ಕೆ ಮಂಗಳಾರತಿ ಎತ್ತಿರುವುದು ಸ್ವಾರಸ್ಯಕರ ಭಾಗವಾಗಿದೆ. ಸರಸ್ವತಿಗೆ ಮಾಡಿರುವ ಪುರುಷಾರೋಪದ ಕಲ್ಪನೆಯೇ ಆ ಕಾಲಕ್ಕೆ ಕ್ರಾಂತಿಕಾರಕವಾದದ್ದು.''ಪುರುಷ ಸರಸ್ವತಿ''ಯ ಜೊತೆಗೇ ಅವರ ''ರನ್ನನ ಪದಗಳು'' ಸಂಕಲನದ 'ಪ್ರಾರ್ತನೆ' ಪದ್ಯ, ವಾಗ್ದೇವಿಯ ವಶೀಲಿಯ ವಾಕ್ಚಾತುರ್ಯದ ಅನುಪಮ ಅಭಿವ್ಯಕ್ತಿಯಾಗಿದೆ.'ಬ್ರಮ್ಮನಿಂಗೆ ಜೋಡಿಸ್ತೀನಿ ಎಂಡ ಮುಟ್ಟಿದ್ ಕೈನ!' ಎಂಬ ಅಹವಾಲಿನೊಂದಿಗೆ 'ಬುರ್ ಬುರ್ ನೊರೆ ಬಸಿಯೊವಂಥ

ಒಳ್ಳೆ ಉಳಿ ಎಂಡ'ದ ಆಮಿಷವೂ ಇದೆ. ಪಡಖಾನೆಯ ಮುನಿಯ ಕಂಜೂಸಿಯಾಗಿ ಕಳ್ಳನ್ನು ಬಿಡುವಂತೆ 'ಸರಸೋತಮ್ಮ ಅಕ್ವಾನೆಲ್ಲ ಪಟ್ಟಾಗಿ ಇಡಕೊಂಬುಟ್ಟೆ' ಸತಾಯಿಸುತ್ತಿದ್ದಾಳೆ. ಮಾತುಗಳನ್ನು ಧಾರಾಳವಾಗಿ ದಯಪಾಲಿಸುವಂತೆ ಅವಳ ಮನವೊಲಿಸುವ ವಶೀಲಿ ನಡೆಸಿಕೊಡಲು ಬ್ರಹ್ಮನಿಗೆ ರತ್ನನ ಅದಮ್ಯ ಕೋರಿಕೆ.

ಶಬ್ದಮಣಿದರ್ಪಣಕಾರ ಕೇಶಿರಾಜ ಶಬ್ದಪ್ರದಾಯಿನಿ ಶಾರದೆಯನ್ನು 'ಶ್ರೀ ವಾಗ್ದೇವಿಗೆ, ಶಬ್ದದಿನ್ ಆವಾವ ಇಂದ್ರಿಯದ ವಿಷಯಮಂ ಶ್ರೋತ್ರದೊಳು ಉದ್ಭಾವಿಪ ನಿರ್ಮಲಮೂರ್ತಿಗೆ, ಅನನ್ಯಭಾವದಿಂದ ಸ್ತುತಿಸಿ ತನ್ನ ಕೃತಿ ಕಾಯಕವನ್ನು ಕೃತಾರ್ಥಗೊಳಿಸಿಕೊಂಡಿದ್ದಾನೆ. ಪಂಚೇಂದ್ರಿಯಗಳು ನೀಡುವ ಅನುಭವ ವಿಶೇಷಗಳನ್ನು ಕಿವಿಗಳ ದ್ವಾರಾ ಹೃನ್ಮನಗಳಲ್ಲಿ ರಸವೇದ್ಯಗೊಳಿಸುವುದರಲ್ಲಿ ಶಬ್ದಗಳ ಪರಿಚರ್ಯೆ ಮಿಗಿಲಾದದ್ದು. ಅಂಥ ಶಬ್ದಗಳನ್ನು ಪ್ರಸಾದಿಸುವಾಕೆ ಸರಸ್ವತಿ'.

ರನ್ನ ಮಹಾಕವಿ ಒಂದು ಅಪೂರ್ವ ಪದಪ್ರಯೋಗ ಮಾಡಿದ್ದಾನೆ: 'ಸರಸ್ವತೀ ದ್ರೋಹನ್!' ಕವಿನಾಮಕರನ್ನು ಕುರಿತಂತೆ ಹೀಗೆ ಭೂತ ಬಿಡಿಸಿದ್ದಾನೆ : 'ಸರಸತಿಯನ್ ಅಬಲೆಯನ್ ಗೋಣ್ಮುರಿಗೊಂಡು, ಅರ್ಥಕ್ಕೆ ಕುದಿದು ನೋಯಿಸುವವನ್ ಅಕ್ಕರಿಗನೆ? ಪಾತಕನ್! ಆತನೇ ಸರಸ್ವತೀದ್ರೋಹನ್! ಅವನನ್ ಆರ್ ಮುಟ್ಟುವರೋ!' ಇದನ್ನು ಇಂದು ಪದ್ಯಹೊಸಕರಿಗೆ ಮಾತ್ರ ಅನ್ವಯಿಸಬೇಕಾಗಿಲ್ಲ, ಓದುಗ ಮಹಾಶಯರಿಗೂ ವಿಸ್ತರಿಸಬಹುದೆಂದು ರಾಜರತ್ನಂ, ಬೇರೊಂದು ಸಂದರ್ಭದಲ್ಲಿ ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ. ಗ್ರಂಥಾಲಯಗಳಿಗೆ ದಾಳಿಯಿಟ್ಟು ವಾಗ್ದೇವಿಯ ಅಂಗೋಪಾಂಗಗಳಿಂದ ಮೋಹಿತರಾಗಿ, ಅವುಗಳಲ್ಲಿ ಕೆಲವನ್ನು ಕಿತ್ತು ಚಿತ್ರವಧೆ ಮಾಡಿ ವಿರೂಪಗೊಳಿಸುವ ಖೋಡಿಗಳು ಇಂಥವರು. ಇವರಿಗಿಂತ ಅಧಮರು, ಸರಸ್ವತಿಯನ್ನೇ ಅನಾಮತ್ತಾಗಿ ಲಪಟಾಯಿಸಿ ಕದ್ದೊಯ್ಯುವ ಸಂಚು ನಡೆಸಿರುತ್ತಾರೆ. ಸರಸ್ವತೀ ದ್ರೋಹಿಗಳಲ್ಲೇ ಅಧಮತಮ ಮತ್ತು ಹೀನಾಯರೆಂದರೆ ಇವರು: ಪುಸ್ತಕದ ಭಾಗಗಳು ತಮಗೆ ರುಚಿಸಿದ್ದರೆ ಇಲ್ಲವೆ ಅಪಥ್ಯವೆನ್ನಿಸಿದ್ದರೆ, ಬೇರೆಬೇರೆ ಬಣ್ಣದ ಗೀಟುಗಳನ್ನು ಎಳೆದು, ತಮ್ಮ ಒಪ್ಪಿಗೆ ಅಥವಾ ಟೀಕೆಗಳನ್ನು ಟಿಪ್ಪಣಿಸಿ, ಸರಸ್ವತಿಯ ಶರೀರದ ಮೇಲೆಲ್ಲ ಗಾಯದ ಬ್ಯಾಂಡೇಜುಗಳನ್ನು ಮೆರೆಸುವ ಪೈಕಿಯವರು. ಇತರರ ಕಣ್ಣು ಶೂಲೆಗೆ ಕಾರಣರಾದವರು. ಇಂಥವರ ಮನಸ್ಸಿನ ತೆವಲುಗಳಿಗೆ ಪುಸ್ತಕಾಲಯದ ಗ್ರಂಥಗಳು, ಸಾರ್ವಜನಿಕ ಶೌಚಾಲಯದ ಗೋಡೆಗಳು ಬಲಿ. ಈ ವಾಚಕ ರಕ್ಕಸರನ್ನು 'ಕಕ್ಕಸ'ರೆಂದು ಬಿರುದಿಸಬಹುದು.

'ಸರಸ್ವತೀ' ಜ್ಞಾನವಿದ್ಯೆ ತಿಳಿವಳಿಕೆಗಳಿಗೆ, ಸಕಲ ಕಲೆಗಳಿಗೆ, ದಿವ್ಯಸ್ಫೂರ್ತಿ ಧೀಶಕ್ತಿಗಳಿಗೆ ಅಧಿದೇವತೆಯಾಗಿರುವಂತೆ ನದಿಯೂ ಆಗಿರುವುದು ಔಚಿತ್ಯಪೂರ್ಣವಾಗಿದೆ. 'ಸರಸ್' ಪದದಿಂದಲೇ ಇದು ಸುವ್ಯಕ್ತ. 'ಸರಸ್ವತಿ' ಎಂದರೆ 'ನೀರು ತುಂಬಿದ್ದು', 'ಹಲವು ಸರೋವರಗಳು' ಎಂಬ ವಾಚ್ಯಾರ್ಥ ಸ್ಪಷ್ಟವಾಗಿದೆ. ನೀರಿನ ಗುಣ ಹರಿಯುವುದು.

ಪ್ರವಹಿಸುವುದು. ವಿದ್ಯೆ ಜ್ಞಾನ ವಿಜ್ಞಾನಗಳೂ ಅಷ್ಟೇ. ಅವು ಲೋಕದಲ್ಲಿ ನಿರಂತರ ಚಲಿಸುತ್ತಿರಬೇಕು. ಹೊಂಡಗಟ್ಟಿ ಹೆಳವವಾದರೆ, ಹಾವಸೆ ಹೊಲಸುಗಳ ತವರಾಗುತ್ತದೆ. ಕಂದಾಚಾರಗಳ, ಪ್ರಗತಿ ವಿರೋಧಿಯಾದ ಪದ್ಧತಿಗಳ ಎಮ್ಮೆ ದಂಡಿಗೆ ಕ್ರೀಡಾಂಗಣವಾಗುತ್ತದೆ. ಸಾಮಾಜಿಕ ರೋಗರುಜಿನಾದಿಗಳನ್ನು ಹುಟ್ಟುಹಾಕುವ ಹೆರಿಗೆದಾಣವಾಗುತ್ತದೆ. ಕೆಲವು ಪರಂಪರಾಗತ ವಿಚಾರಗಳು ಮೌಢ್ಯಗಳಾಗಿ ಮಡುಗಟ್ಟಿರುವುದರಿಂದ ಆಧುನಿಕ ಬದುಕು ಹೊಲೆಗೆಟ್ಟು ನಾರಿರುವುದು ಎಲ್ಲರಿಗೂ ಅನುಭವವಾಗಿರುವ ಸಂಗತಿಯೇ. ನದಿ ಮುಂದುವರಿಯುತ್ತ ಹೊಸ ಹೊಸ ನೀರುಗಳನ್ನು ಮೈಗೂಡಿಸಿಕೊಂಡು ದಷ್ಟಪುಷ್ಟವಾಗಿ ವರ್ಧಿಸುತ್ತ ಹೋಗುವಂತೆಯೇ ಜ್ಞಾನವಿಜ್ಞಾನಗಳ ವಿಚಾರವೂ ಸಹ. ಬೆಟ್ಟಗಲದ ಜಲಧಾರೆಯಂತೆ ಒಬ್ಬಿಬ್ಬರ ವಿಚಾರ ಅನುಭವಗಳಿಂದ ಉಗಮಗೊಂಡು, ಸಹಸ್ರಾರು ಜನಮನಗಳ ಜಟಿಲ ಪಥಗಳಲ್ಲಿ ಹರಿದು, ಕಸುವುಗೊಳ್ಳುತ್ತ, ವಿಶಾಲಪಾತ್ರದ ಜ್ಞಾನವಾಹಿನಿಯಾಗಿ ಮುಂದುವರೆಯಬೇಕು. ಕಾಲ ದೇಶ ಜನಾಂಗಗಳನ್ನು ಫಲವತ್ತಾಗಿಸುತ್ತ; ಹಾಗೆಯೇ ಅವುಗಳನ್ನು ಉತ್ತರಿಸಿ ಭವಿಷ್ಯೋನ್ಮುಖವಾಗುತ್ತ.

ಪೂರ್ವ ಆರ್ಯಜಗತ್ತಿನ ಏಳು ಪವಿತ್ರತಮ ನದಿಗಳಲ್ಲಿ ಸರಸ್ವತಿಯೂ ಒಂದು ಎಂದಾಗ, ಅದರ ಪ್ರಾಚೀನತೆ ಮನದಟ್ಟಾಗುತ್ತದೆ. ಬಹುಶಃ ಲಕ್ಷ್ಮಿಯ ವೇದಪೂರ್ವ ಜಾನಪದೀಯ ಧಾನ್ಯದೇವತೆಯ ಪರಿಕಲ್ಪನೆಯನ್ನು ಬಿಟ್ಟರೆ, ಸರಸ್ವತಿಯೇ ಪ್ರಾಚೀನಳು ಅನ್ನಿಸುತ್ತದೆ. ವೈದಿಕ ಸ್ತ್ರೀ ದೇವತೆಗಳಲ್ಲಂತೂ ಆಕೆ ಆದ್ಯಳು. ಹಾಗೆಯೇ ಋಷಿಗಣ ಸಂಸ್ತುತಿತಳು. ಕಾವ್ಯಾತ್ಮಕ ಸ್ಫುರಣೆ, ಪ್ರತಿಭೆಗಳಿಗೂ ನದಿಗೂ ಇರುವ ಸಹಚರ ಸಂಬಂಧಕ್ಕೆ ಗ್ರೀಕ್ ಪುರಾಣದಲ್ಲೂ ಸನ್ನೆಗಳಿವೆ. ಕಾವ್ಯದೇವತೆ 'ಮ್ಯೂಸ್'ಗೂ ನದಿಗೂ ನಂಟಿದೆ. ಆದರೆ ಅದು ಭೌತಿಕ ಸ್ವರೂಪಕ್ಕಿಂತ ಹೆಚ್ಚಿನ ಅರ್ಥವಂತಿಕೆಯಿರದ ಒಂದು ಸಾಧಾರಣ ನದಿಯೊಂದಿಗೆ ಮಾತ್ರ. ರೆಕ್ಕೆಯಿರುವ ದಿವ್ಯಾಶ್ವ ಪೆಗೆಸಸ್‌ನ ಗೊರಸು ಹೀಲಿಕಾನ್ ಬೆಟ್ಟದ ಬಂಡೆಗೆ ಘರ್ಷಿಸಿ, ಆ ಎಡೆಯಿಂದ ಸ್ಫೂರ್ತಿ ಜಲ ಚಿಮ್ಮಿ ಹಿಪ್ಪೋಕ್ರೀನ್ ಎಂಬ ನದಿಯಾಯಿತಂತೆ. ಕಾವ್ಯಸ್ಫೂರ್ತಿ ಅಥವಾ ಕವಿತಾಪ್ರತಿಭೆಗೆ ಇದು ರೂಪಕವಾಗಿದೆ. ಆದರೆ ಒಬ್ಬ ಜ್ಞಾನದೇವತೆಯೇ ನದಿಯೂ ಆಗಿರುವುದು, ಒಮ್ಮೆ ದೇವತೆ ಮತ್ತು ನದಿಗಳೆಂದು ಪ್ರತ್ಯೇಕಗೊಂಡು, ಮತ್ತೊಮ್ಮೆ ಅವೆರಡೂ ಅವಿನಾಭಾವದಿಂದ ಒಂದೇ ಎಂದು ಭಾಸವಾಗುವುದು. ಸರಸ್ವತಿಯ ಕಲ್ಪನೆಯಲ್ಲಿ ಮಾತ್ರ ಗುರುತಿಸಲು ಸಾಧ್ಯ. ಪೂಜನೀಯ ಔನ್ನತ್ಯದ ನೆಲೆಯಲ್ಲಿ ದೇವತೆ, ನದಿಗಳೆರಡೂ ಋಷಿಗಳ ಆಲೋಚನೆಗಳಲ್ಲಿ ಪ್ರತಿಷ್ಠಿತವಾಗಿರುವುದಕ್ಕೆ ಸರಸ್ವತಿಯೊಂದು ಅನನ್ಯ ಉದಾಹರಣೆ.

ಸರಸ್ವತಿಗೆ ಇತರ ನದಿಗಳೊಂದಿಗೆ ಸಂಬಂಧವಿರುವಂತೆ, ಅನ್ಯದೇವತೆಗಳ ಬಗೆಗೂ ವಿಶಿಷ್ಟ ನಂಟಿದೆ. ಋಗ್ವೇದದ ದೇವತೆಗಳು ಮನುಷ್ಯನ ವ್ಯಕ್ತಿತ್ವದ ವಿಕಾಸದಲ್ಲಿ ಗಣನೀಯ ಪಾತ್ರ ವಹಿಸುತ್ತವೆ. ಸೂರ್ಯನ ಐದು ರಶ್ಮಿಗಳು ಪಂಚದೇವಿಯರಾಗಿ ಮನುಷ್ಯ ವರ್ಗದಲ್ಲಿ

ವಿಧವಿಧವಾದ ಅಪೂರ್ವ ಶಕ್ತಿಗಳನ್ನು ಪ್ರಚೋದಿಸುತ್ತವೆ. ಇವರ ನೆಲೆ ಕಾರಣಲೋಕ ಅಂದರೆ ಸೂರ್ಯನ ಉಚ್ಚತರವಾದ ಕಾರಣ ಜಗತ್ತು. ವಿಶ್ವಪ್ರಜ್ಞೆಯ ಅವಿಭಾಜ್ಯ ಅಂಶಗಳಾಗಿರುವ ದೇವತೆಗಳು ಮನುಷ್ಯನ ಐಹಿಕ ಬದುಕಿಗೆ ಇಳಿದು, ಅವನಲ್ಲಿ ಆತ್ಮಪ್ರಜ್ಞೆಯನ್ನು ಮೂಡಿಸುತ್ತಾರೆ. ಸರಸ್ವತೀದೇವಿಯನ್ನು ಮಧುಚ್ಛಂದಸನೆಂಬ ಋಷಿ 'ಅಂಬಿತಮೇ, ನದೀತಮೆ, ದೇವಿತಮೇ ಸರಸ್ವತಿ'ಯೆಂದು ಆಕೆಯ ನದಿ ಹಾಗೂ ದೇವತಾ ಸ್ವರೂಪವನ್ನು ಹೊಗಳಿದ್ದಾನೆ. ಉಷೆಯನ್ನು ಕುರಿತು ಗೋತಮ ರಾಹೂಗಣವೆಂಬ ಋಷಿ ನುಡಿದಿರುವ, ಚಿರಂತನ ಹಾಗೂ ತಾತ್ಕಾಲಿಕ ಚರ್ಯೆಗಳ ಚಿತ್ರಣವನ್ನು (ಪುನಃ ಪುನರ್ಜಾಯಮಾನಾ ಪುರಾಣೀ । ಸಮಾನಂ ವರ್ಣಮಭಿಶುಂಭಮಾನಾ) ಸರಸ್ವತಿಗೂ ಅನ್ವಯಿಸಬಹುದು. ವಾಕ್ಕಿನ ಸನಾತನತೆ ಹಾಗೂ ನವೋನ್ಮೇಷತೆಗಳಿಗೆ ಇವು ಹೇಳಿ ಮಾಡಿಸಿದ ಮಾತುಗಳಂತಿವೆ. ಆ ಐವರು ದೇವಿಯರ ಹೆಸರುಗಳನ್ನು ಕ್ರಮವಾಗಿ ಉಲ್ಲೇಖಿಸಬಹುದು: ಸರಸ್ವತೀ, ಇಲಾ, ಸರಮಾ, ದಕ್ಷಿಣಾ, ಭಾರತೀ. ಇವರು ಮನುಷ್ಯಪ್ರಜ್ಞೆಯ ವಿವಿಧ ಸ್ತರಗಳ ಸಂಕೇತಪ್ರಾಯರೂ ಇರಬಹುದು. ಸರಸ್ವತೀ, ವಾಣಿಸ್ವರೂಪಿಣಿ, Audtionನ ದೇವತೆ. ಆ ವಾಣಿ ಮಂತ್ರಸಮ. ಇಲಾ, ಕಾಣ್ಕೆಗಳನ್ನು ಕರುಣಿಸುವಾಕೆ. Pure Intuitionನ ದೇವತೆ. ದಕ್ಷಿಣಾ, ಅಂತಃಸ್ಫುರಣೆ ಮತ್ತು ಬುದ್ಧಿಮತ್ತೆಯ ವಿಹಿತ ಸಮನ್ವಯವನ್ನು ನೀಡುವಾಕೆ. Intuitionised discriminationನ ಪ್ರತೀಕ. ಭಾರತೀ, ಏಕಕಾಲಕ್ಕೇ ಸತ್ಯದ ನಾನಾಮುಖಗಳನ್ನು ದರ್ಶನ ರೂಪದಲ್ಲಿ ದಯಪಾಲಿಸುವಾಕೆ; Simultaneous perception and many facetted truthನ ದೇವತೆ. ಈ ಐವರೂ ಪರಸ್ಪರ ಭಿನ್ನರು ಹಾಗೂ ಸ್ವವಿಶಿಷ್ಟರು; ಸೋಪಾನಪ್ರಾಯರು. ವೇದದಲ್ಲಿ ಇವರನ್ನು— ಅದರಲ್ಲೂ, ಸರಸ್ವತೀ, ಇಲಾ, ಭಾರತಿಯನ್ನು— ಕುರಿತ ಸ್ತುತಿಗಳಿವೆ. ಉದಾಹರಣೆಗೆ, ಅಗ್ನಿಯಜ್ಞ ನಿಮಿತ್ತ ದೇವತೆಗಳನ್ನು ಆಹ್ವಾನಿಸುವಾಗ ಈ ಮೂವರು ಜೊತೆಯಾಗಿರುವುದನ್ನು ಗಮನಿಸಬಹುದು. ಇವರ ಸ್ವಂತಿಕೆ ಮತ್ತು ವಿಶಿಷ್ಟತೆಗಳು ಪೌರಾಣಿಕ ಕಾಲಕ್ಕೆ ಅಳಿಸಿಹೋಗಿ, ಸರಸ್ವತಿಯ ಲಕ್ಷಣಗಳಲ್ಲಿ ಬೆರೆತು ಹೋದವು.

ವಾಗ್ದೇವತೆ ಸರಸ್ವತಿಯ ಬಗ್ಗೆ ತೈತ್ತಿರೀಯ ಬ್ರಾಹ್ಮಣದಲ್ಲಿ, ವಾಗ್ರೂಪವಾದ ಧೇನು ಮಂತ್ರಗಳ ಸ್ತೋತ್ರದಿಂದ ಪ್ರಸನ್ನವಾಗಿ ಬಂದು ಜನರಿಗೆ ಇಷ್ಟವಾದ ಅನ್ನ ಹಾಲುಗಳನ್ನೂ ನೀಡಲೆಂಬ ಸೂಕ್ತವಿದೆ. ಹಾಗೆಯೇ, ಯಾರು ಮೂಕಪ್ರಾಣಿಗಳನ್ನೂ ಮಾತನಾಡುವಂತೆ ಮಾಡಬಲ್ಲಳೊ, ಯಾರು ದೇವತೆಗಳಿಗೆ ಯಜಮಾನಳಾಗಿ ಸಂತೋಷದಿಂದ ನಮ್ಮ ಕರ್ಮಗಳಲ್ಲಿ ಕುಳಿತಿರುವಳೋ, ಮತ್ತು ಯಾರ ಕೃಪೆಯಿಂದ ನಾಲ್ವರು ದಿಗ್ದೇವಿಯರು ಹಾಲು ನೀರನ್ನು ಪಡೆಯುತ್ತಿರುವರೊ ಅಂತಹ ಅಧಿದೇವತೆಯ ಪರಮ ಪದವನ್ನೂ ಮನುಷ್ಯ ಹೊಂದಲು ಸಾಧ್ಯವೆ? ಎಂಬ ಮಾತೂ ಇದೆ. ಸರಸ್ವತಿಯ ಮಾನವರಹಿತ ಲಕ್ಷಣವನ್ನೂ, ಆಕೆಯ ಔನ್ನತ್ಯದ ಅಜೇಯ ಮಹಿಮೆಯನ್ನೂ ಇವು ಮನವರಿಕೆಯಾಗಿಸುತ್ತವೆ.

ಅಭಿವಂದನಾ

ಸೃಷ್ಟಿಕರ್ತ ಬ್ರಹ್ಮವೇದಗಳನ್ನು ಪ್ರತಿನಿಧಿಸಿದರೆ, ಸರಸ್ವತಿ ಅವುಗಳ ಅರ್ಥ ಹಾಗೂ ಅಂತಸ್ಸತ್ವವನ್ನು ಸಂಕೇತಿಸುತ್ತಾಳೆ. ಸಾಕ್ಷಾತ್ ವೇದಮಾತೆಯೆಂದೂ ಸ್ತುತಿಸಲ್ಪಟ್ಟಿದ್ದಾಳೆ. ಅಷ್ಟೇ ಏಕೆ, ಸೃಷ್ಟಿಮಾತೆಯೆಂದು ಪರಿಗಣಿಸಲ್ಪಟ್ಟಿದ್ದಾಳೆ. ಲೌಕಿಕ, ಆಧ್ಯಾತ್ಮಿಕ, ಆಮುಷ್ಮಿಕ ಮೊದಲಾದ ಸಕಲ ಜ್ಞಾನಗಳೂ ಅವಳ ಬಳುವಳಿಯೇ. ತ್ರಿಮೂರ್ತಿಗಳಲ್ಲಿ ಶಿವನ ಶಕ್ತಿಸ್ವರೂಪವಾಗಿ ಪಾರ್ವತಿಯನ್ನು, ವಿಷ್ಣುವಿನ ಶಕ್ತಿಯಾಗಿ ಲಕ್ಷ್ಮಿಯನ್ನು ಮತ್ತು ಬ್ರಹ್ಮನ ಶಕ್ತಿಸ್ವರೂಪಿ ಸರಸ್ವತಿಯನ್ನು ಗುರುತಿಸಲಾಯಿತು. ಇದು ಕ್ರಮೇಣದ ಕಲ್ಪನೆ; ತಾಂತ್ರಿಕ ಪದ್ಧತಿಯ ದೇಣಿಗೆ. ಫಲವತ್ತತೆ ಮತ್ತು ಅಂತಃಶುದ್ಧಿಯನ್ನು ನೆರವೇರಿಸುವ ದೇವತೆಯಾಗಿ ಸಹ ಸರಸ್ವತಿಯ ಕೀರ್ತಿಯುಂಟು. ಸರಸ್ವತಿಯ ವೇದಕಾಲೀನ ಕಲ್ಪನೆಗೂ, ಪುರಾಣಕಾಲದ ಮತ್ತು ಆಮೇಲಿನ ಕಲ್ಪನೆಗೂ ಬಹಳ ವ್ಯತ್ಯಾಸವಿದೆ. ಆಕೆಯ ಸುತ್ತ ಬುದ್ಧಿ ತರ್ಕಗಳಿಗೆ ನಿಲುಕದ ಕಥೆ ಉಪಕಥೆಗಳು ಬೆಳೆದಿವೆ. ಅವು ಕೆಲವೊಮ್ಮೆ ತದ್ವಿರುದ್ಧವೂ ಹೌದು. ಬ್ರಹ್ಮನ ಮಾನಸಪುತ್ರಿಯೆಂದೂ, ಶಕ್ತಿ ಬ್ರಹ್ಮಾಣಿಯೆಂದೂ, ಕೃಷ್ಣನ ಬಾಯಿಯಿಂದ ಜನಿಸಿದವಳೆಂದೂ ದುರ್ಗೆಯ ಮಗಳೆಂದೂ ಗೊಂದಲಗೆಡಿಸುವ ಕಥೆಗಳು ಹಬ್ಬಿಕೊಂಡವು. ಬ್ರಹ್ಮ ತನ್ನ ಪುತ್ರಿಯನ್ನೇ ಕಾಮಿಸಿದ್ದೂ ಇವಕ್ಕೆ ಕಾಣಿಕೆ ಸಲ್ಲಿಸಿದೆ. ಋಗ್ವೇದದ ಅಂಭೃಣಪುತ್ರಿ ಅಂಭೃಣಿಗೆ, ವಾಗಂಭೃಣೀ ಎನ್ನುವ ಹೆಸರೂ ಇದೆ. ಇವಳು ಸರಸ್ವತಿಯ ಮೇಲ್ಮೆಯನ್ನು ಪ್ರಶಂಸಿಸಿದ್ದಾಳೆ. ಬಹುಶಃ ಅಂಭೃಣಿ ಮೊದಲಿಗೆ ವಾಗ್ದೇವಿಯಾಗಿದ್ದು, ಆಮೇಲೆ ಈ ಪಟ್ಟವನ್ನು ಸರಸ್ವತಿಗೆ ನೀಡಿ ಭದ್ರಪಡಿಸಿರಬಹುದೆ? ಎನ್ನಿಸುತ್ತದೆ. ವಾಕ್ಕಿನ ಅಧಿದೇವತೆಯಾದ ಸರಸ್ವತಿ, ಅದನ್ನು ಪರಿಪೂರ್ಣಗೊಳಿಸುವ ಓಜಸ್ಸು, ಬುದ್ಧಿಮತ್ತೆಗಳನ್ನು ನೀಡುವ ಹಾಗೂ ಸುವ್ಯವಸ್ಥಿತವೂ ಸುಸಂಗತವೂ ಆದ ಸೃಜನ ಪ್ರಕ್ರಿಯೆಯನ್ನು ನೆರವೇರಿಸುವ ಕಾರ್ಯವನ್ನೂ ವಹಿಸಿಕೊಂಡಳು.

ಅಥರ್ವಣ ವೇದದಲ್ಲಿ ಕಾಣಿಸಿಕೊಳ್ಳುವ ಘೃತಾಚಿ ಎನ್ನುವವಳು ಸರಸ್ವತಿಯ ಮೂಲರೂಪವಿರಬಹುದೆಂಬ ಅಭಿಮತವೂ ಇದೆ. ಘೃತಾಚಿ ಹಾವಿನ ವಿಷಯವನ್ನು ತೊಡೆಯುವ ಶಕ್ತಿಯಿರುವ ಕನ್ಯೆ. ಸರಸ್ವತಿಗೂ ಈ ಶಕ್ತಿಯಿರುವುದಕ್ಕೆ ವೇದಗಳಲ್ಲೇ ಸುಳಿವಿದೆ. ಸರಸ್ವತಿ, ಶಬರ ಬುಡಕಟ್ಟಿಗೆ ಸೇರಿದವಳೆಂಬ ಪ್ರತೀತಿಯೂ ಇದೆ. ವಿದ್ಯಾಭಿಮಾನಿ ದೇವತೆಯಾಗಿ ಇವಳು ಟಿಬೆಟ್, ಜಪಾನ್, ಜಾವಾ ಮತ್ತಿತರ ಕಡೆಗಳಲ್ಲೂ ಆರಾಧನೆಗೆ ಪಾತ್ರಳಾಗಿದ್ದುದನ್ನು ಅಲ್ಲಿನ ಶಿಲಾಮೂರ್ತಿಗಳು ತಿಳಿಸುತ್ತವೆ. ಮಹಾಯಾನ ಬೌದ್ಧರಲ್ಲಿ ಸರಸ್ವತಿಯ ಪ್ರತಿರೂಪವನ್ನು ವೀಣಾಪಾಣಿಯಾದ ಆರ್ಯೆ ಜಾಂಗುಲಿಯಲ್ಲಿ ಕಾಣಬಹುದು. ಜಾಂಗುಲಿಯ ಅಳವಡಿಕೆಯೇ ಮನಸಾದೇವಿಯೆಂಬ ಒಬ್ಬ ಯೋಗಿನಿ. ಆದರೆ ಒಂದು ಅಭಿಪ್ರಾಯದ ಪ್ರಕಾರ, ಈ ಮನಸಾ ಎನ್ನುವವಳು ಗೌಡದ್ರಾವಿಡ ಗ್ರಾಮದೇವತೆಯಾದ ಮಂಚಮ್ಮ ಎಂಬುವವಳ ಪರಿಷ್ಕೃತ ಆವೃತ್ತಿ. ಹಾಗೆಯೇ ಮಹಾಯಾನ ಬೌದ್ಧರ ಪ್ರಜ್ಞಾಪರಿಮಿತಾ, ಮಂಜುಶ್ರೀ, ವಜ್ರಶಾರದೆ, ವಜ್ರವೀಣಾ ಸರಸ್ವತಿಗಳು, ತಾಂತ್ರಿಕ ಪಂಥ ನೆಲೆಯೂರಿ ಸರಸ್ವತಿ ಶಕ್ತಿಯೆಂದು ಜನಪ್ರಿಯವಾದ ಮೇಲೆ ಬೆಳೆದ ಕಲ್ಪನೆಗಳಿರಬೇಕು. ಈ ಶಾಕ್ತ ಅಥವಾ ತಾಂತ್ರಿಕ ಪಂಥದ ಸರಸ್ವತಿಯ ಒಂದು ಉದಾಹರಣೆಯನ್ನು

ಶೃಂಗೇರಿಯ ಶಾರದೆಯಲ್ಲಿ ಕಾಣುತ್ತೇವೆ. ಈಕೆ ಶಕ್ತಿಯಾಗಿದ್ದೂ, ಸಾತ್ವಿಕ ಗುಣಸಂಪನ್ನೆ. ಮಹಾರಾಷ್ಟ್ರದ ಕೊಲ್ಲಾಪುರದ ಮಹಾಲಕ್ಷ್ಮಿಯೂ ಶಾಕ್ತಳೆ. ಆದರೆ ಈಕೆ ರಜೋಗುಣ ಸಮೃದ್ಧಳು.

ಜೈನ ಧರ್ಮದ ಶ್ರುತದೇವತೆ, ವಾಗೀಶ್ವರೀ, ವಾಗ್ವಾದಿನೀ, ಭಾರತೀಗಳು ಶಾಕ್ತ ಸರಸ್ವತಿಯ ಬಳುವಳಿಗಳೇ. ಶಾಕ್ತಸರಸ್ವತಿಯ ಕಂಠ ನೀಲವರ್ಣದ್ದು; ಆಕೆ ಚಂದ್ರನನ್ನು ಧರಿಸುತ್ತಾಳೆ. ಮೂರು ಕಣ್ಣಿದ್ದು ಕಮಲಾಸನೆಯಾಗಿರುತ್ತಾಳೆ. ಕೈಯಲ್ಲಿ ಅಕ್ಷಮಾಲೆ, ಪುಸ್ತಕಗಳಿರುತ್ತವೆ. ಆದರೆ ವೀಣಾವಾದನದ ಉಲ್ಲೇಖ ಕಾಣದು. ಜೈನರ ವಿದ್ಯಾದೇವಿಯರಲ್ಲಿ ಸರಸ್ವತಿಯ ಉಲ್ಲೇಖ ''ತಿಲೋಯ ಪಣ್ಣತ್ತಿ''ಯಲ್ಲಿ ಸಿಕ್ಕುತ್ತದೆ. ಮಥುರಾದ ಬಳಿಯ ಕಾಂಕಲಿಟಿಲಾ ಮತ್ತು ಬಿಕನೀರ್ ಬಳಿ ಸರಸ್ವತಿಯ ಪ್ರಾಚೀನ ಮೂರ್ತಿಗಳು ಸಿಕ್ಕಿವೆ. ಕ್ರಿ.ಶ. ಒಂದನೆಯ ಅಥವಾ ಎರಡನೆಯ ಶತಮಾನಕ್ಕೆ ಈ ಶಿಲ್ಪ ಸೇರಬಹುದು. ಪುಸ್ತಕವನ್ನು ಹಿಡಿದ ಸರಸ್ವತಿಯ ಅತಿ ಹಳೆಯ ಮಾದರಿಗಳಿವು. ಅದಕ್ಕೆ ಮುಂಚೆ ಸರಸ್ವತಿಯನ್ನು ಕುರಿತಂತೆ ಮೂರ್ತಿ ಲಕ್ಷಣಗಳಲ್ಲಿ ಪುಸ್ತಕದ ಉಲ್ಲೇಖವಿಲ್ಲ. ಸರಸ್ವತಿಯ ಮಿಕ್ಕೆಲ್ಲ ರೂಪಗಳಿಗಿಂತ ಜೈನರು ಶ್ರುತದೇವಿಯೆಂದು ಗುರುತಿಸುವುದೇ ಹೆಚ್ಚು. ದ್ವಾದಶಾಂಗ ಶ್ರುತದೇವರು ತೀರ್ಥಂಕರರ ಉಪದೇಶಗಳು ಹನ್ನೆರಡು ಆಗಮಾಂಗಗಳಲ್ಲಿ ಸಂಗ್ರಹಿಸಿದ್ದಾರೆ. ಅವರ ಅಧಿದೇವತೆಯೇ ಶ್ರುತದೇವಿ; ಏಕೆಂದರೆ ಆ ಹನ್ನೆರಡು ಆಗಮಗಳನ್ನೂ ಶ್ರುತವೆನ್ನುತ್ತಾರೆ.

ಶಾಕ್ತಸಂಪ್ರದಾಯದಲ್ಲಿ ಈಗಾಗಲೇ ಸೂಚಿಸಿದಂತೆ, ಸರಸ್ವತಿ ಅಥವಾ ಶಾರದೆಯೂ ಒಬ್ಬಳು. ಈಕೆ ಸತ್ತ್ವಗುಣವುಳ್ಳವಳು. ದೇವಿಯ ಮೂರು ಮುಖ್ಯ ಅವತರಣಿಕೆಗಳಾದ ಮಹಾಕಾಳಿ, ಮಹಾಲಕ್ಷ್ಮಿ, ಮತ್ತು ಮಹಾಸರಸ್ವತಿಗಳಲ್ಲಿ ಕೊನೆಯವಳೇ ಇವಳು. ಪುರಾಣ ಕಾಲದ ಪಾರ್ವತಿ, ಲಕ್ಷ್ಮಿ, ಸರಸ್ವತಿಯರಿಗೂ ಇವರಿಗೂ ಸಂಬಂಧವಿಲ್ಲ. ಪರಮೋಚ್ಚ ಶಕ್ತಿಯಾದ ಮಾಹೇಶ್ವರಿಯ ಮೂರು ಪ್ರಧಾನಗುಣಗಳನ್ನು—ತಮಸ್ಸು, ಓಜಸ್ಸು, ಸತ್ವಗಳನ್ನು ಕ್ರಮವಾಗಿ ಇವರು ಪ್ರತಿನಿಧಿಸುವವರು. ಮಹಾ ಸರಸ್ವತಿ ಪೂರ್ಣಚಂದ್ರನ ಶೋಭೆಯುಳ್ಳವಳು. ಅವಳಿಗೆ ಎಂಟು ಕೈ. ಅವುಗಳಲ್ಲಿ ಘಂಟೆ, ತ್ರಿಶೂಲ, ಹಲ, ಶಂಖ, ಒನಕೆ, ಚಕ್ರ, ಚಾಪ ಮತ್ತು ಬಾಣಗಳನ್ನು ಹಿಡಿದಿರುತ್ತಾಳೆ. ಪರಿಪೂರ್ಣತೆ ಲಾವಣ್ಯಗಳೇ ಮೂರ್ತೀಭವಿಸಿದಂತೆ ಈಕೆಯ ಬಂಧುರ ರೂಪ. ಪಾರ್ವತಿಯ ಅಥವಾ ದೇವಿಯ ಭೌತಿಕ ಕೋಶದಿಂದ ವ್ಯಕ್ತವಾದ ಇವಳಿಗೆ ಕೌಶಕೀದುರ್ಗಾ ಎಂಬ ಹೆಸರೂ ಇದೆ. ಒಪ್ಪಓರಣ, ಕ್ರಿಯಾತ್ಮಕ ಕಾರ್ಯಗಳು ಮತ್ತು ಸುಸಂಘಟನೆಯನ್ನು ಕರುಣಿಸುವ ಶಕ್ತಿ ಈಕೆ.

ಶಾಕ್ತದೇವಿಯರ ಕೇಶವಿನ್ಯಾಸ ವಿಶಿಷ್ಟವಾಗಿದೆ. ಅದು ಮೂರು ಬಗೆಯದು: ಸರಸ್ವತಿಗೆ ಧಮ್ಮಿಲ್ಲ ಅಥವಾ ಕೇಶಬಂಧ ಎನ್ನುವ ವಿನ್ಯಾಸವಿದ್ದರೆ, ಲಕ್ಷ್ಮಿಗೆ ಕುಂತಲ

ಮತ್ತು ಇತರ ದೇವಿಯರಿಗೆ ಅಲಕ ಚೂಡಕ ಎಂಬ ವಿನ್ಯಾಸವಿರುತ್ತದೆ. ನವರಾತ್ರಿಯ ಸಮಯದಲ್ಲಿ ಕ್ರಮಾಗತವಾಗಿ ಜರುಗುವ ಸರಸ್ವತಿ ಪೂಜೆ, ದುರ್ಗಾಪೂಜೆ ಮತ್ತು ಚಂಡೀಪೂಜೆ ನಡೆಯುವ ಪದ್ಧತಿಯುಂಟಷ್ಟೆ? ಶಾಕ್ತ ಪಂಥಕ್ಕೂ ಸರಸ್ವತಿಗೂ ಇರುವ ತಾಂತ್ರಿಕ ಸಾವಯವ ಸಂಬಂಧಕ್ಕೆ ಇದೂ ಒಂದು ಹೆಗ್ಗುರುತು. ಸರಸ್ವತಿಗೇ ಸ್ವತಂತ್ರವಾದ ದೇವಸ್ಥಾನವಿರುವುದು ಅಪರೂಪ. ದುರ್ಗೆಗೊ ಲಕ್ಷ್ಮಿಗೊ ಪಾರ್ಶ್ವ ದೇವತೆಯಾಗಿ ಮಾತ್ರ ಆಕೆಗೆ ಎಡೆಯಿತ್ತು. ತಂಜಾವೂರಿನ ಬೃಹದೀಶ್ವರ ದೇವಾಲಯದಲ್ಲಿರುವ ಗೋಡೆಯ ಶಿಲ್ಪ ಇದಕ್ಕೊಂದು ಉದಾಹರಣೆ. ವೈದಿಕ ವಾಙ್ಮಯದ ಸರಸ್ವತಿ ಜಾನಪದ ಮನೋಧರ್ಮದ ಮೇಲೆ ಅಷ್ಟಿಷ್ಟು ಪ್ರಭಾವ ಬೀರಿದ್ದರೂ, ಗಾಢ ಪರಿಣಾಮ ಮೂಡಿಸಲಿಲ್ಲವೆಂಬುದು ಸುಸ್ಪಷ್ಟ.

ಸಪ್ತಮಾತೃಕೆಯರ ಪೂಜೆ ಒಂದು ಕಾಲದಲ್ಲಿ ಸಾಕಷ್ಟು ಪ್ರಚಲಿತವಿತ್ತೆಂಬುದಕ್ಕೆ ಬಹುಸಂಖ್ಯೆಯಲ್ಲಿ ಸಿಕ್ಕಿರುವ ಶಿಲಾವಿಗ್ರಹಪಟ್ಟಿಕೆಗಳೇ ಸಾಕ್ಷಿ. ವೇದ ಪೂರ್ವಕಾಲದಲ್ಲೇ ಮಾತೃಪೂಜೆ ಇದ್ದದ್ದಕ್ಕೆ ಸೂಚನೆಗಳಿವೆ. ಉದಾಹರಣೆಗೆ, ಹರಪ್ಪ ಮೊಹೆಂಜದಾರೋ ಉತ್ಖನನಗಳಲ್ಲಿ ಲಭ್ಯವಾಗಿರುವ ಸ್ತ್ರೀಮುದ್ರೆಗಳು ಇದನ್ನು ಖಚಿತಪಡಿಸುತ್ತವೆ. ವೇದಕಾಲದಲ್ಲೂ ಮಾತೃಪೂಜೆಯ ಸುಳಿವುಗಳಿದ್ದರೂ, ಅದು ಪ್ರಧಾನವಾಗಿರಲಿಲ್ಲ ಮತ್ತು ಬೆಳೆದು ವ್ಯಾಪಕವಾಗಿ ಹರಡಲಿಲ್ಲ. ಆದರೆ ಮುಂದೊಮ್ಮೆ ತಾಂತ್ರಿಕ ಕ್ರಿಯಾವಿಧಿಗಳು ಪ್ರಾಮುಖ್ಯ ಪಡೆದಾಗ ಗಂಡುದೇವತೆಗಳಿಗೆ ಕಡ್ಡಾಯವಾಗಿ ಒಬ್ಬೊಬ್ಬ ಶಕ್ತಿಯನ್ನು ಅಳವಡಿಸಿದಾಗ, ಈ ಏಳು ದೇವತೆಗಳ ಆರಾಧನೆಗೂ ಅಡಿಗಲ್ಲು ಹಾಕಿದಂತಾಯಿತು ಈ ಮಾತೃಕೆಗಳಲ್ಲಿ ಮೊದಲನೆಯವಳೇ ಬ್ರಾಹ್ಮೀಯಾಗಿದ್ದಾಳೆ- ಸರಸ್ವತಿಯ ಒಂದು ಶಾಕ್ತರೂಪವಾಗಿ. ಇವಳ ಪಕ್ಕದಲ್ಲಿ, ಅದರಲ್ಲೂ ಬಲಭಾಗದಲ್ಲಿ ವೀರಭದ್ರನಿರುವುದು ಒಂದು ವಿಶೇಷ. ಆಮೇಲೆ ಇತರ ಶಕ್ತಿಗಳು ಕಂಡರಿಸಲ್ಪಟ್ಟಿರುತ್ತಾರೆ. ಸಪ್ತಮಾತೃಕೆಯರು ಪ್ರಾಮುಖ್ಯದಲ್ಲಿ ವಿದ್ಯಾದೇವತೆಗಳಿಗೆ ಎರಡನೆಯವರು. ಶಕ್ತಿಯ ಪಂಚಾವತಾರಗಳಾಗಿ ಕಲ್ಪಿತರಾಗಿರುವವರೇ ಈ ವಿದ್ಯಾದೇವಿಯವರು: ದುರ್ಗಾ, ಲಕ್ಷ್ಮೀ, ಸರಸ್ವತೀ, ರಾಧಾ, ಸಾವಿತ್ರೀ ಸೃಷ್ಟಿಯ ಸಮಯದಲ್ಲಿ ಪ್ರಕೃತಿ ಐದು ಭಾಗಗಳಾಗಿ ವಿಭಜನೆಗೊಂಡು ಬೇರೆಯಾದದ್ದೇ ಈ ದೇವಿಯವರ ಮೂಲವೆಂಬ ಅಭಿಮತವಿದೆ.

ಗಾಯತ್ರೀ, ಸಾವಿತ್ರೀ, ಸರಸ್ವತೀಯರು ದಿನಕ್ಕೆ ಮೂರು ಸಲ ಜಪಿಸುವ ಗಾಯತ್ರೀ ಮಂತ್ರದ ದೇವತೆಗಳೆಂದೂ ಹೆಸರಾಗಿದ್ದಾರೆ. ಗಾಯತ್ರೀ, ಬೆಳಗಿನ ಪ್ರಾರ್ಥನೆಯ ಅಧಿದೇವತೆ; ಋಗ್ವೇದ ಮತ್ತು ಗಾರ್ಹಪತ್ಯ ಅಗ್ನಿಯ ಯಜಮಾನಿ. ಸಾವಿತ್ರೀ, ಮಧ್ಯಾಹ್ನದ ಪ್ರಾರ್ಥನೆಯ ದೇವತೆ; ಯಜುರ್ವೇದ ಮತ್ತು ದಕ್ಷಿಣಾ ಅಗ್ನಿಯ ಒಡತಿ. ಸರಸ್ವತಿ, ಸಂಧ್ಯಾಪ್ರಾರ್ಥನೆಯ ಅಧಿಷ್ಠಾತ್ರಿ; ಸಾಮವೇದ ಮತ್ತು ಆವಾಹನೀಯ ಅಗ್ನಿಯ ಒಡೆಯಳು. ಈ ಸರಸ್ವತಿಗೆ ಒಂದು ಮುಖ, ನಾಲ್ಕು ಹಸ್ತಗಳಿವೆ. ಈಕೆ ಗರುಡವಾಹನೆ.

ಸರಸ್ವತಿಯ ಮೂರ್ತಿ ಶಿಲ್ಪದ ಲಕ್ಷಣಗಳು ಸ್ವೋಪಜ್ಞ ಹಾಗೂ ಅರ್ಥಪೂರ್ಣವಾಗಿವೆ. ಸಂಪ್ರದಾಯದಂತೆ ಬ್ರಹ್ಮನ ರಾಣಿಯಾಗಿದ್ದರೂ ಸ್ವತಂತ್ರ

ದೈವೀಶಕ್ತಿಯೆಂದು ಪರಿಗಣಿತಳಾಗಿ ಆರಾಧಿಸಲ್ಪಡುತ್ತಾಳೆ. ಈಕೆಯ ರೂಪಕಲ್ಪನೆ ಹಿತಕರವೂ ಸಾತ್ವಿಕ ಭಾವೋದ್ದೀಪಕವೂ ಆಗಿದೆ. ಯೌವನಭರಿತಳೂ, ಸೌಮ್ಯವದನೆಯೂ, ಮನಮೋಹನಕರ ಲಾವಣ್ಯವತಿಯೂ ಆದ ಸರಸ್ವತಿಯ ಶರೀರ, ವೇಷಭೂಷಣ ಏನೆಲ್ಲವೂ ಅಪ್ಪಟ ಬಿಳಿಯೇ; ಸ್ವಚ್ಛತೆ ಶುಚಿ ಪರಿಶುಭ್ರತೆಯ ದ್ಯೋತಕವೇ. ಚತುರ್ಭುಜೆಯಾದ ಅವಳು ಎರಡು ಕೈಗಳಿಂದ ವೀಣೆಯನ್ನು ನುಡಿಸುತ್ತಿದ್ದರೆ, ಮತ್ತೆರಡರಲ್ಲಿ ಪುಸ್ತಕ, ಅಕ್ಷಮಾಲೆಗಳನ್ನು ಹಿಡಿದಿರುತ್ತಾಳೆ. ಕೆಲವೊಮ್ಮೆ ಪಾಶವೂ, ಕಮಲದ ಮೊಗ್ಗೆಯೊ ಇರುವುದುಂಟು. ಮೂರ್ತಿಶಿಲ್ಪಗಳಲ್ಲಿ ಸರಸ್ವತಿ ಪದ್ಮಾರೂಢೆ. ಒಂದು ಕೈಯಲ್ಲಿ ಅಮೃತ ಕುಂಭವಿದ್ದರೆ, ಮತ್ತೊಂದು ಕೈ ಬೋಧಿಸುವ ವ್ಯಾಖ್ಯಾನ ಮುದ್ರೆಯಲ್ಲಿರುತ್ತದೆ. ವರ್ಣಚಿತ್ರಗಳಲ್ಲಿ ಅವಳು ಒಂದು ಕಾಲನ್ನು ಇಳಿಬಿಟ್ಟು ಕುಳಿತಂತೆ ರೇಖಿತವಾಗಿರುತ್ತಾಳೆ. ಬೇರೆ ಬೇರೆ ಲಾಂಛನ ಅಥವಾ ಚಿಹ್ನೆಗಳಿರುವ ಸರಸ್ವತಿಯ ತಾಂತ್ರಿಕರೂಪಗಳೂ ಪ್ರಚಲಿತವಾಗಿವೆಯಷ್ಟೆ? ಅವುಗಳಲ್ಲಿ ಕೆಲವಾದ ಧರಣ ಸರಸ್ವತಿ, ನಕುಲ ಸರಸ್ವತಿ, ಬಾಲ ಸರಸ್ವತಿ, ಪರಾ ಸರಸ್ವತಿಗಳಿಗೆ ತಮ್ಮದೇ ಆದ ವೈಶಿಷ್ಟ್ಯವಿದೆ; ಮಂತ್ರವಿದೆ.

ತಮಸ್ಸು, ಅಜ್ಞಾನಗಳ ಪ್ರತಿತತ್ತ್ವ ಬೆಳಕು ಜ್ಞಾನ ವಿದ್ಯೆಗಳಲ್ಲವೆ? ಎಂದೇ ಅವಳ ಬಣ್ಣ ಶ್ವೇತ ಶುಭ್ರ. ಅಪರೂಪಕ್ಕೆ ಸರಸ್ವತಿಗೆ ಐದು ಮುಖ, ಇಲ್ಲವೇ ಎಂಟು ಕೈಗಳಿರುವುದೂ ಉಂಟು. ಆದರೆ ನಾಲ್ಕು ಕೈಗಳ ಶಿಲ್ಪವೇ ಸಾಧಾರಣ, ಜನಪ್ರಿಯ. ಆಕೆ ಎಡಗೈಯಲ್ಲಿ ಹಿಡಿದಿರುವ ಪುಸ್ತಕ ಭೌತಿಕವೂ ವ್ಯಾವಹಾರಿಕವೂ ಆದ ಎಲ್ಲ ಜ್ಞಾನ ವಿಜ್ಞಾನ ತಿಳಿವಿನ ಪ್ರತೀಕ. ಆದರೆ ಉದಾತ್ತ ಭಾವ ಸಂವೇದನೆಗಳಿಲ್ಲದ ಹೃದಯವಂತಿಕೆಯಿರದ ಬರೀ ಬೌದ್ಧಿಕ ತಿಳಿವಳಿಕೆ ನಿರ್ಜೀವ ಒಡಲು. ಎಂದೇ ಆಕೆ ವೀಣೆಯನ್ನು ನುಡಿಸಿದ್ದಾಳೆ- ರಸಾಸ್ವಾದನೆ ನೀಡುವ ಸಂಗೀತಾದಿ ಲಲಿತಕಲೆಗಳ ಪ್ರಾಮುಖ್ಯವನ್ನು ಸಾರುವ ಸಲುವಾಗಿ. ಬಲಗೈಯಲ್ಲಿರುವ ಅಕ್ಷಮಾಲೆ ತಪಸ್ಸು ಧ್ಯಾನ ಜಪತಪಗಳನ್ನೊಳಗೊಂಡ ಯೋಗವಿದ್ಯೆಯನ್ನು, ದಿವ್ಯಜ್ಞಾನವನ್ನು ಸೂಚಿಸುತ್ತದೆ. ವಾಮಹಸ್ತದಲ್ಲಿ ಗ್ರಂಥ, ಬಲಹಸ್ತದಲ್ಲಿ ಅಕ್ಷಮಾಲೆ ಹಿಡಿದಿರುವುದು ಅರ್ಥಪೂರ್ಣ ಸಂಕೇತವಾಗಿದೆ. ಭೌತಿಕ ಜ್ಞಾನವಿಜ್ಞಾನಗಳಿಗಿಂತ ಅಧಿಕ ಬೆಲೆಯುಳ್ಳದ್ದು ಮತ್ತು ಪ್ರಶಸ್ತವಾದದ್ದು ದಿವ್ಯ ವಿದ್ಯೆ ಹಾಗೂ ಯೋಗಾನುಸಂಧಾನವೆಂಬುದನ್ನು ಈ ಚಿಹ್ನೆಗಳು ಸೂಚಿಸುತ್ತವೆ. ಅವಳ ವಾಹನ ನವಿಲು ಇಲ್ಲವೇ ಹಂಸವಾಗಿರುವುದೂ ಮಾರ್ಮಿಕವಾಗಿದೆ.

ಮನೋಹರವಾದ ಗರಿಪುಚ್ಛಗಳಿಂದ ಸರಸ್ವತಿಯ ವಾಹನವಾದ ನವಿಲು, ಪ್ರಾಪಂಚಿಕ ವೈಭವವಿಲಾಸ ಆಕರ್ಷಣೆಗಳನ್ನು ದ್ಯೋತಿಸಿ, ಸಾಧಕನನ್ನೂ ದಿವ್ಯ ಪಥದಿಂದ ದಿಗ್ಗೆಡಿಸುವ ಅವಿದ್ಯೆ ಅಜ್ಞಾನಗಳನ್ನೂ ಸೂಚಿಸುತ್ತದೆ. ಇದಕ್ಕೆ ಪ್ರತಿಯಾಗಿ, ಹಾಲಿನಿಂದ ನೀರನ್ನು ಬೇರ್ಪಡಿಸುವ ಗುಣವುಳ್ಳದ್ದೆಂಬ ಹಂಸ ವಿವೇಕ ವಿದ್ಯೆಗಳನ್ನು ಪ್ರತಿನಿಧಿಸುತ್ತದೆ ಹಾಗೂ ಭಾವಾಲೋಚನೆಗಳ ಪಾರಿಶುದ್ಧ್ಯವೂ, ಅದರ ಬಿಳುಪಿನಿಂದ ವ್ಯಕ್ತವಾಗುತ್ತದೆ. ವಿದ್ಯೆ ಅಥವಾ ಪರಾವಿದ್ಯೆಯೊಂದೇ ಮೋಕ್ಷದಾಯಕವಾಗಿದ್ದರೂ ಲೌಕಿಕಪ್ರಗತಿಯ ಭೌತಿಕಜ್ಞಾನ ವಿಜ್ಞಾನಗಳನ್ನು ಕಡೆಗಣಿಸತಕ್ಕದ್ದಲ್ಲ. ಆದರೆ ಅವಕ್ಕೆ ಒಂದು ಹಿತಮಿತವಾದ ಸ್ಥಾನವನ್ನು ಗೊತ್ತುಪಡಿಸಿಕೊಳ್ಳುವುದೇ ವಿವೇಕ. ಈ ಲೌಕಿಕ ಜ್ಞಾನವಿರದಿದ್ದರೆ ಹಸಿವು

ತೃಷ್ಣೆ ನಿವಾರಿತವಾಗವು. ಇವಾಗದಿದ್ದರೆ ಮನಸ್ಸು ಸ್ತಿಮಿತದಲ್ಲಿರದು. ಈ ಕಾರಣದಿಂದ ದಿವ್ಯಜ್ಞಾನದ ಅರ್ಚನೆಗೆ, ಅಮರತ್ವ ಪ್ರಾಪ್ತಿಗೆ ತಡೆಯಾಗದಂತೆ ಐಹಿಕಾಭ್ಯುದಯಗಳನ್ನು ನೀಡುವ ಜ್ಞಾನವಿಜ್ಞಾನಗಳ ಅಗತ್ಯ ಮನುಷ್ಯನಿಗೆ ಇದ್ದೇ ಇದೆ. ಮಾನವರಿಗೆ ಈ ಸತ್ಯವನ್ನು ಸಾರಲೆಂದೇ ಸರಸ್ವತಿಗೆ ನವಿಲು, ಹಂಸಗಳ ಎರಡು ವಾಹನಗಳಿರುವುದಾಗಿ ಶಾಸ್ತ್ರ ಗ್ರಂಥಗಳು ಭಾವಿಸುತ್ತವೆ.

ಇನ್ನು ಸರಸ್ವತಿ, ನದಿಯಾಗಿ ಪಡೆದಿರುವ ಹೆಚ್ಚಳ ಹಾಗೂ ಅದರ ಪೌರಾಣಿಕ ಹಿನ್ನೆಲೆ, ಉಗಮ ಇತ್ಯಾದಿ ವಿವರಗಳನ್ನು ಪರಿಶೀಲಿಸೋಣ. ಸರಸ್ವತಿಯನ್ನು ವಿಶ್ವಾಮಿತ್ರ ಸೃಷ್ಟಿಸಿದನಂತೆ. ವಸಿಷ್ಠನನ್ನು ವಧೆ ಮಾಡಲು ಸನ್ನಾಹ ನಡೆಸಿದ್ದು, ಅವನನ್ನು ತೇಲಿಸಿ ತನ್ನ ಬಳಿಗೆ ತರುವಂತೆ, ಸರಸ್ವತಿಯನ್ನು ಆತ ಆದೇಶಿಸಿದ. ಶಸ್ತ್ರಗಳನ್ನು ಸಜ್ಜುಗೊಳಿಸಿಕೊಳ್ಳುತ್ತಿರುವಾಗ್ಗೆ, ವಸಿಷ್ಠನನ್ನು ಅವಳು ತೇಲಿಸಿ ತರುತ್ತಾಳೆ. ಆದರೆ ನೆರೆ ಹೆಚ್ಚಿದ್ದರಿಂದ ಅವನು ದೂರಕ್ಕೆ ಕೊಚ್ಚಿ ಹೋಗುತ್ತಾನೆ. ಇದರಲ್ಲಿ ಸರಸ್ವತಿಯ ಕೈವಾಡವಿದೆಯೆಂದು ಶಂಕಿಸಿದ ವಿಶ್ವಾಮಿತ್ರ, ಅವಳ ಜಲರಾಶಿ ರಕ್ತಮಯವಾಗಲೆಂದು ಶಪಿಸುತ್ತಾನೆ. ಅಂದಿನಿಂದ ಆ ನದಿಗೆ 'ಅರುಣಾ' ಎಂಬ ಹೆಸರು ಬಂದಿತಂತೆ. ತರುವಾಯ ಅವಳು ಏಳುಸೀಳುಗಳಾಗಿ ಪ್ರವಹಿಸಿದಳು ಎಂದೇ 'ಸಪ್ತಸಾರಸ್ವತ' ಎನ್ನಿಸಿದಳು.

ಇನ್ನೊಂದು ಪುರಾಣದ ಪ್ರಕಾರ ವಿಷ್ಣುವಿಗೆ ಲಕ್ಷ್ಮಿ, ಗಂಗೆ, ಸರಸ್ವತಿಯರೆಂಬ ಮೂವರು ಪತ್ನಿಯರಿದ್ದರು. ಗಂಗೆ, ಸರಸ್ವತಿಯರ ನಡುವೆ ಜಗಳವಾಗಿ, ಒಬ್ಬರನ್ನೊಬ್ಬರು ನದಿಯಾಗುವಂತೆ ಶಾಪ ಹಾಕಿದರು. ಹೀಗಾಗಿ ಅವರು ನದಿಗಳಾಗಿ ಮಾರ್ಪಟ್ಟು ಭೂಲೋಕಕ್ಕೆ ಇಳಿದರು. ಲಕ್ಷ್ಮಿಯೊಬ್ಬಳೇ ವಿಷ್ಣುವಿನ ಮಡದಿಯಾಗಿ ಉಳಿದುಕೊಂಡಳು. ಗಂಗೆ ಯಥಾಪ್ರಕಾರ ಇಂದಿನಂತೆ ಮುಂದುವರಿದರೆ, ಸರಸ್ವತಿ ವೈದಿಕ ಯುಗದ ಬಳಿಕ ಗುಪ್ತಗಾಮಿನಿಯಾಗಿ ತ್ರಿವೇಣಿಯಲ್ಲಿ ಐಕ್ಯವಾಯಿತು.

ಮತ್ತೊಂದು ದಂತಕತೆ ಹೀಗಿದೆ: ಬ್ರಹ್ಮ ಬಡಬಾಗ್ನಿಯನ್ನು ಕೊಂಡೊಯ್ದು ಪಶ್ಚಿಮ ಸಮುದ್ರದಲ್ಲಿ ಎಸೆದು ಬರುವಂತೆ ಸರಸ್ವತಿಗೆ ಆಜ್ಞಾಪಿಸಿದ. ಭೂಮಿಯ ಮೇಲೆ ಸಾಗುವಾಗ ಪಾತಕಿಗಳ ಸ್ಪರ್ಶವಾಗುವ ದಿಗಿಲಿನಿಂದ ಅವಳು ಹಿಂಜರಿದಳು. ಶೂದ್ರರೂ, ಆಭೀರರೂ ನಿಷಾದರೂ ಅವಳನ್ನು ಮುಟ್ಟುವ ಭೀತಿಯಿಂದ ಅಳುಕಿದಳೆಂದೂ ಒಂದು ಸೂಚನೆಯಿದೆ. ಶಿವ ಒಮ್ಮೆ ಬ್ರಹ್ಮಹತ್ಯೆಯನ್ನು ಎಸಗಿ ಸರಸ್ವತಿಯಲ್ಲಿ ಮೀಯಲು ಬಂದಾಗ, ಅವನಿಂದ ತಪ್ಪಿಸಿಕೊಳ್ಳಲು ಹೀಗೆ ಮಾಡಿದಳು ಎಂಬ ಕವಲೂ ಇದೆ. ಅವಳು ನೆಲದ ಒಳಗೆ ಹರಿಯಬಹುದೆಂದು, ಬಳಲಿಕೆಯಾದಾಗ ಮಾತ್ರ ಮೇಲೆ ಬರಬಹುದೆಂದು ಬ್ರಹ್ಮ ಹೇಳಿದಾಗ ಸರಸ್ವತಿ ವಡವಾನಲವನ್ನು ಒಯ್ಯಲು ಒಪ್ಪಿದಳು. ಬಹುಶಃ ಬಹಳ ಹಿಂದೆ, ಸರಸ್ವತಿಯ ಉಗಮಸ್ಥಾನವಾದ ಹಿಮಾಲಯ ಪ್ರದೇಶದಿಂದ ಪಶ್ಚಿಮ ಸಾಗರದ ತನಕ ಅಗ್ನಿಮುಖಿಗಳು ಕ್ರಿಯಾಶೀಲವಾಗಿದ್ದು ಅದರಿಂದ ಹೊರಬಂದ ಶಿಲಾಗ್ನಿರಸ, ಈ ವಾಡವಾಗ್ನಿಯನ್ನು ಸೂಚಿಸುತ್ತಿರಬಹುದೆ? ಆ ಪ್ರಳಯ ಸಮ ಅಗ್ನಿ, ಶಿಲಾಸ್ಥಾನಾಂತರ ಇತ್ಯಾದಿಗಳು ಸರಸ್ವತಿಗೆ ಅಲ್ಲಲ್ಲಿ ತಡೆಯೊಡ್ಡಿ, ಅವಳು ಆ ಎಡೆಗಳಲ್ಲಿ ಗುಪ್ತಗಮನಳಾಗಿ,

ಉಳಿದೆಡೆ ಮೇಲೆ ಹರಿದಿದ್ದಳೆ? ಹಿಮವತ್ಪರ್ವತದ ಒಂದೇ ಶಿಲಾಖಂಡ ಬಿದ್ದು ಅಡ್ಡಿಯಾಗಿ ಅದು ಅಲ್ಲೇ ಹಿಂಗಿತೆಂದು ಹೇಳುವ ಪರಿಪಾಠವೂ ಇದೆ.

ಸರಸ್ವತಿ ನದಿ, ಇಂದಿನ ಸಿಂಧೂವಿರಿಬಹುದೆಂಬ ಅಭಿಮತವಿದ್ದು, ಅದಕ್ಕೆ ಹೆಚ್ಚಿನ ಚಲಾವಣೆ ಸಿಕ್ಕಿಲ್ಲ. ಘಗ್ಗರ್ ಎಂಬ ನದಿಯೇ ಇದೆಂದು ಹೇಳುವವರಿದ್ದಾರೆ. ಅಯೋಧ್ಯೆಯ ಬಳಿಯ ಫೈಜಾಬಾದಿನಲ್ಲಿ ಹರಿಯುವ ಸರಸ್ವತಿಯೆಂಬ ನದಿಯನ್ನು'ಶರಾವತಿ' ಎಂದೂ ಕರೆಯುತ್ತಾರೆ. ಬ್ರಾಹ್ಮಣಗಳ ಕಾಲದಿಂದಲೂ ರಾಜಾಸ್ಥಾನದ ಮರಳಿನಲ್ಲಿ ಮರೆಯಾದಂತೆ ಅದನ್ನು ವರ್ಣಿಸಲಾಗಿದೆ. ಇದರ ಉಗಮ ಹಿಮಾಲಯದ ಶಿವಾಲಿಕ ಪ್ರದೇಶದ ಸಿರ್‌ಮುರ್ ಬೆಟ್ಟದಲ್ಲಿ ಎನ್ನುತ್ತಾರೆ. ಅಲ್ಲಿ ಪ್ಲಕ್ಷ ಪ್ರಸ್ರವಣವೆಂಬಲ್ಲಿ, ಅತ್ತಿ (ಪ್ಲಕ್ಷ) ಮರದ ಬಳಿ ಹುಟ್ಟುತ್ತದೆ ಎನ್ನುತ್ತಾರೆ. ಬ್ರಹ್ಮಸರ, ಬದರಿಕಾಶ್ರಮದ ಹತ್ತಿರ ಇದರ ಜನ್ಮಸ್ಥಾನವೆನ್ನುವ ಅಭಿಪ್ರಾಯವೂ ಇದೆ. ವಿಂಧ್ಯದ ಉತ್ತರಕ್ಕಿರುವ ಏಳು ಮಹಾನದಿಗಳಲ್ಲಿ ಸರಸ್ವತಿಯೂ ಒಂದೆದು ಎಣಿಸಲಾಗಿದೆ. ಸರಸ್ವತಿ ಮತ್ತು ದೃಷದ್ವತಿ ನದಿಗಳ ನಡುವಣ ಪ್ರದೇಶ 'ಬ್ರಹ್ಮಾವರ್ತ' ಎನಿಸಿತ್ತು. ಕುರುಕ್ಷೇತ್ರ, ಮತ್ಸ್ಯ, ಪಾಂಚಾಲ, ಸುರಸೇನ ನೆರೆಯ ರಾಜ್ಯಗಳಾಗಿದ್ದವು. ಅದು ಮರಳಿನಲ್ಲಿ ಇಂಗಿದ ಪ್ರದೇಶವನ್ನು ವಿನಶನವೆಂದು ಗುರುತಿಸುತ್ತಾರೆ. ಮುಂದುವರೆದು ಅದು ಗೋಪಾಯನ ಪರ್ವತ, ಖರ್ಜೂರ ವನ, ಝಿಲ್ಲತೀರ್ಥದಲ್ಲೂ ಮರೆಯಾಯಿತಂತೆ. ಈ ಎಡೆಗಳೆಲ್ಲ ಅತ್ಯಂತ ಪವಿತ್ರವೆಂದು ಪರಿಗಣಿತವಾಗಿವೆ. ಯಜ್ಞಯಾಗಾದಿಗಳು ಆದಿಕಾಲದಿಂದ ನಡೆದದ್ದಕ್ಕೆ ಪುರಾವೆಗಳಿವೆ. ಈ ಪ್ರದೇಶವನ್ನು'ಸಾರಸ್ವತ ಸತ್ರ'ವೆಂದು ಭಾವಿಸುತ್ತಾರೆ. ಪೌರಾಣಿಕ ವಾಙ್ಮಯದ ಪ್ರಕಾರ ಸರಸ್ವತಿ ರಾಜಾಸ್ಥಾನದ ಮರಳಿನಲ್ಲಿ ಇಂಗಿ, ಮತ್ತೆ ಅಬು ಬೆಟ್ಟಗಳಲ್ಲಿ ಮೈದೋರಿ, ಕಚ್ಛ್ ಮರುಭೂಮಿಯಲ್ಲಿ ಮಾಯವಾಗಿ, ಸೌರಾಷ್ಟ್ರದ ಗಿರ್ ಅರಣ್ಯ ಪ್ರದೇಶದಲ್ಲಿ ಮೂಡಿ ಪ್ರಭಾಸ ಎನ್ನುವಲ್ಲಿ ಸಮುದ್ರ ಲೀನವಾಗುತ್ತದೆ. ತಾಪಿ ನದಿಯನ್ನು ನೆನೆದರೇ ಪುಣ್ಯ ದೊರಕಿದರೆ, ನರ್ಮದೆಯ ನೋಟ ಪುಣ್ಯವನ್ನು ನೀಡುತ್ತದೆ. ಹೀಗೆಯೇ ಗಂಗಾಸ್ನಾನ, ಏಳುದಿನಗಳ ಯುಮನೆಯಲ್ಲಿ ಮೀಹ ಈ ಲಾಭವನ್ನು ಒಮ್ಮೆ ಸಂಪಾದಿಸಿಕೊಡುತ್ತದೆ. ಸರಸ್ವತಿಯಲ್ಲಿ ಮೂರುದಿನ ಮಿಂದರೆ ಪುಣ್ಯಪ್ರಾಪ್ತಿಯೆಂಬ ನಂಬಿಕೆಯಿದೆ.

ಪ್ರಯಾಗದಲ್ಲಿನ ಗಂಗಾ-ಯಮುನಾ-ಸರಸ್ವತಿಗಳ ಸಂಗಮವೆಂದು ಭಾವಿಸಲಾದ ತ್ರಿವೇಣಿಯಲ್ಲಿ ಗುಪ್ತಗಾಮಿಯಾಗಿರುವ ಈ ನದಿಯಲ್ಲಿ ಸತ್ತರೆ ಸ್ವರ್ಗಪ್ರಾಪ್ತಿಯಾಗುವುದೆಂಬ ನಂಬಿಕೆಯುಂಟು.

(೧೯೯೧ರ ಸಾಲಿನ ಸರ್ವೋತ್ಕೃಷ್ಟ ಸೃಜನೇತರ ಗ್ರಂಥವೆಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಮಾನ್ಯವಾದ ಪ್ರೊ||ನಿಸಾರ್ ಅಹಮದ್ ಅವರ ''ಮನದೊಂದಿಗೆ ಮಾತು''ಯಿಂದ ಈ ಲೇಖನವನ್ನು ಆರಿಸಲಾಗಿದೆ.)

***

ಕನ್ನಡ ಸಾಹಿತ್ಯ ಮತ್ತು ಧರ್ಮ

ಎಂ.ಎಚ್.ಲಕ್ಷ್ಮೀನರಸಮ್ಮ

ಭಾರತದಲ್ಲಿ ಸರ್ವಕಲೆಗಳೂ ಧರ್ಮದ ನೆಲೆಯಲ್ಲಿ ಬೆಳೆದುಬಂದವು. ಸಂಗೀತ, ನೃತ್ಯಗಳು ದೇವತಾರಾಧನೆಯ ಅಂಗವಾಗಿದ್ದವು. ಈ ಮಾತನ್ನು ಸಾಹಿತ್ಯಕ್ಕೂ ಅನ್ವಯಿಸಬಹುದು. ಆತ್ಮಜ್ಞಾನಕ್ಕೆ ಕಲೆಯೂ ಒಂದು ಸಾಧನ. ಕಲೆಯ ಅಂಗವಾದ ಸಾಹಿತ್ಯವೂ ಧರ್ಮ ಹಾಗೂ ಕಾವ್ಯ ಧರ್ಮಗಳನ್ನು ಒಟ್ಟಾಗಿಸಿಕೊಂಡದ್ದು ಸಹಜ.

'ಧರ್ಮ' ಎನ್ನುವ ಮಾತು ಮತಾಚರಣೆ, ನಂಬಿಕೆಗಳನ್ನು ಮಾತ್ರ ವ್ಯಕ್ತಪಡಿಸುವ ಪದವಾಗಿರದೆ ವಿಶಾಲಾರ್ಥವನ್ನು ಪಡೆದಿದೆ. 'ಧಾರಯಿತಿ ಇತಿ ಧರ್ಮಃ' (ಧಾರಣೆ ಮಾಡಿದುದು ಧರ್ಮ) ಎನ್ನುವ ನುಡಿಯಲ್ಲಿ ಅಡಕವಾಗಿರುವ ಅರ್ಥ ಆಕಾಶದಷ್ಟು. ದೇವ-ಮಾನವ; ಮಾನವ- ಮಾನವ ಸಂಬಂಧಗಳನ್ನು ಅವನ ನಂಬಿಕೆಗಳನ್ನು, ನಿರೂಪಿಸುವ ಗ್ರಂಥಗಳೇ ಧರ್ಮಗ್ರಂಥಗಳು. ಧರ್ಮವನ್ನು 'Way of life', 'truth', 'The natural order'ಎನ್ನುವ ಅರ್ಥದಲ್ಲಿ ಸ್ವೀಕರಿಸಿದಾಗ ಮಾನವನ ಎಲ್ಲ ಕಾರ್ಯಗಳಿಗೂ ಅನ್ವಯವಾಗುತ್ತದೆ. ಜಾತಿ-ಪಂಗಡಗಳ, ಆಚಾರ-ವಿಚಾರಗಳ ನಂಬಿಕೆ-ನಡವಳಿಕೆಗಳನ್ನು ನಿರೂಪಿಸುವ ಗ್ರಂಥಗಳೆಂದು ಸೀಮಿತಾರ್ಥದಲ್ಲಿ ಅರ್ಥೈಸುವುದೇ ಹೆಚ್ಚು. ಪುರುಷಾರ್ಥಗಳಲ್ಲಿ ಒಂದಾದ ಧರ್ಮಕ್ಕೆ ಮೊದಲ ಮಹತ್ತರ ಸ್ಥಾನ.

ಭಾವ- ಅನುಭವಗಳು ಮಾತಾಗಿ ಮೈದಾಳಿದ ಸಾಹಿತ್ಯದಲ್ಲಿ ಕಾಣುವುದು ಮನುಷ್ಯನನ್ನೇ. ಅವನ ಆಚಾರ ವಿಚಾರಗಳೆಲ್ಲಾ ಕಾವ್ಯದಲ್ಲಿ ಎಡೆಪಡೆದುದು ಅತ್ಯಂತ ಸಹಜ.

'ಸಹಿತವಾದುದು ಸಾಹಿತ್ಯ' ಎಂದದ್ದು ಬರಿ ಶಬ್ದಾರ್ಥಗಳ ಸಹಿತತ್ವವನ್ನು ಮಾತ್ರವಲ್ಲದೆ ಭಾವ- ಭಾಷೆಗಳ, ಅನುಭವ- ಅಭಿವ್ಯಕ್ತಿಗಳ ಸಹಿತತ್ವ ಎಂದಾದಾಗ ಜೀವನದ ಪ್ರತಿಬಿಂಬ; ಗತಿಬಿಂಬ ಎಂಬ ವಿವರಗಳಿಗೆ ಅರ್ಥ ಬರುತ್ತದೆ. ಹೀಗೆ ಭಾವ-ಭಾಷೆಗಳ ವಿಶಿಷ್ಟ ಎರಕವಾದ ಸಾಹಿತ್ಯದಲ್ಲಿ ಧರ್ಮದ ವಿಚಾರಗಳೂ ಜಾಗ ಪಡೆದುದು ದೇಹದಲ್ಲಿ ಉಸಿರಿನ ಹಾಗೆ.

ಧಾರ್ಮಿಕ ಸಾಹಿತ್ಯವೆಂದು ಕರೆದು ಸಾಹಿತ್ಯದಿಂದ ದೂರ ಮಾಡುವ ಪ್ರವೃತ್ತಿ ಹಾಗೂ ಸಾಹಿತ್ಯ ಮತ್ತು ಧರ್ಮಗಳ ಸಂಬಂಧ ಕುರಿತಾದ ವಿವೇಚನೆಗೆ ತೊಡಗಿದ್ದು ಪಾಶ್ಚಾತ್ಯ ಚಿಂತನೆಗಳ ಪ್ರಭಾವದಿಂದಾಗಿ.

'ಪ್ರಯೋಜನ ಮನುದಿಷ್ಯ ನಮಂದೋಽಪಿ ನಪ್ರವರ್ತತೆ - (ದಡ್ಡನೂ ಪ್ರಯೋಜನವಿಲ್ಲದ ಕಾರ್ಯದಲ್ಲಿ ಪ್ರವೃತ್ತನಾಗುವುದಿಲ್ಲ) ಎನ್ನುವಂತೆ ಸಾಹಿತ್ಯದ

ಉದ್ದೇಶದ ಬಗ್ಗೆಯೂ ಚರ್ಚೆ ನಡೆದಿದೆ. Art for Art sake ಎನ್ನುವ ಹಾಗೆ ಕಾವ್ಯ 'ಸ್ವಾಂತಸುಖಾಯ' ಎನ್ನುವ, 'ಕಾವ್ಯ ಆನಂದಾಯ' ಎನ್ನುವ ಮಾತುಗಳು ನಮ್ಮಲ್ಲಿಯೂ ಇವೆ. ಕಾವ್ಯಕ್ಕೆ ಆನಂದವೇ ಮುಖ್ಯ ನೆಲೆಯಾದರೂ, ಅಷ್ಟಕ್ಕೇ ನಿಲ್ಲದೆ ಕಾವ್ಯವು 'ಶಿವೇತರ ಕ್ಷತಯೆ', **ಕಾಂತಾಸಂಮಿತ ತಯೋಪದೇಶಯುಜೆ** 'ಅಮಂಗಳ ಪರಿಹಾರಕ, ಕಾಂತೆಯಂತೆ ಉಪದೇಶಿಸಬಲ್ಲದು' ಆಗಿರಬೇಕೆಂದು ಭಾರತೀಯ ದೃಷ್ಟಿ.

ಕನ್ನಡದ ಮೊದಲ ಗ್ರಂಥವಾದ 'ಕವಿರಾಜಮಾರ್ಗ'ದಲ್ಲಿ ಕಾವ್ಯ ಪ್ರಯೋಜನವನ್ನು ಕುರಿತು ಹೇಳುವಾಗ ಧಾರ್ಮಿಕ ದೃಷ್ಟಿಯನ್ನೇ ಕಾಣಬಹುದು.

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತ ಪ್ರಕಾರಮಿದು ಸುಖಮಿದು ದುಃ
ಖೋಪಾತ್ತಮಿದೆಂದಱಿಪುಗು
ಮಾ ಪರಮ ಕವಿ ಪ್ರಧಾನರಾ ಕಾವ್ಯಂಗಳ್

ಕನ್ನಡದಲ್ಲಿ ಸಾಹಿತ್ಯಕ್ಕೂ ಧರ್ಮಕ್ಕೂ ಇರುವ ನಂಟು ಪುರಾತನವಾದುದು. ಕನ್ನಡದ ಕಾವ್ಯಸಮುದಾಯವನ್ನು ವಿಂಗಡಿಸುವಾಗ ಮತಧರ್ಮಗಳ ಪ್ರಧಾನತೆಯನ್ನು ಗಮನಿಸಿ ಜೈನಯುಗ, ವೀರಶೈವಯುಗ, ಬ್ರಾಹ್ಮಣಯುಗ ಎಂದು ಹೆಸರಿಸುವುದೂ ಉಂಟು. ಬಿ.ಎಂಶ್ರೀ.ಯವರು ಸಾಹಿತ್ಯದ ಬೆಳವಣಿಗೆಯನ್ನು ಕಾವೇರಿ ನದಿಗೆ ಹೋಲಿಸಿ ಜೈನ-ವೀರಶೈವ-ಬ್ರಾಹ್ಮಣ- ಪ್ರವಾಹಗಳು ಒಂದರ ನಂತರ ಒಂದು, ಒಂದರ ಮೇಲೊಂದು ಮಿಳಿತವಾಗಿ 'ಮೂರು ಬಣ್ಣದ ನೀರುಳ್ಳ ದೊಡ್ಡ ಹೊಳೆಯಾಗಿದೆ'- ಎಂದಿದ್ದಾರೆ.(ಕನ್ನಡ ಕೈಪಿಡಿ. ಸಂ. ೨)

ಆದಿಕವಿ ಪಂಪನಿಗಿಂತ ಹಿಂದೆ ಕಾವ್ಯ ಸಮೃದ್ಧಿ ಇತ್ತೆಂದು ಸಾಧಿಸುವ ವಿವರಗಳನ್ನು ಗಮನಿಸಿದಾಗ ಹಿಂದೆಯೂ ಧಾರ್ಮಿಕ ಅಂಶವೇ ಸಾಹಿತ್ಯದಲ್ಲಿ ಪ್ರಧಾನವಾಗಿತ್ತೆಂದು ಹೇಳಬಹುದು. ಈಗ ಕನ್ನಡ ಸಾಹಿತ್ಯ, ಇತಿಹಾಸವನ್ನು ಗಮನಿಸಿದಾಗ ಹಲವು ಮಜಲುಗಳನ್ನು ಕಾಣಬಹುದಾಗಿದೆ. ಹಳಗನ್ನಡ, ನಡುಗನ್ನಡ, ಹೊಸಗನ್ನಡ, ನವೋದಯ, ನವ್ಯ, ಬಂಡಾಯ, ದಲಿತ ಎಂದು ಗುರುತಿಸುವುದುಂಟು.

ಕನ್ನಡ ಸಾಹಿತ್ಯ ಹಾಗೂ ಧರ್ಮದ ಸಂಬಂಧವನ್ನು ಇದೇ ಮಜಲುಗಳಲ್ಲಿ ಗುರುತಿಸುವ ಪ್ರಯತ್ನ ನನ್ನದು.

ಆದಿಕವಿ ಪಂಪ ಎರಡು ಕೃತಿಗಳಲ್ಲಿ ಒಂದನ್ನು ಲೌಕಿಕ ಕಾವ್ಯವೆಂದೂ, ಆದಿ ಪುರಾಣವನ್ನು'ಆಗಮಿಕ ಕಾವ್ಯ'ವೆಂದೂ ಹೇಳಿದನಾದರೂ 'ವಿಕ್ರಮಾರ್ಜುನ ವಿಜಯ'ದಲ್ಲೂ ಧರ್ಮ ನಿರೂಪಣೆ ಕಡಮೆಯಾಗಿಲ್ಲ. ಏಕೆಂದರೆ ಪಂಚಮವೇದವೆನಿಸಿದ ಮಹಾಭಾರತದ ಕತೆಯನ್ನುಳ್ಳದ್ದು ಆ ಕಾವ್ಯ. ಜಿನಾಗಮ ಪ್ರತಿಪಾದನೆಂಬನ್ನೇ ಮುಖ್ಯ ಗುರಿಯಾಗುಳ್ಳ ಆದಿದೇವನ ಕಥೆಯನ್ನುಳ್ಳ ಆದಿಪುರಾಣದಲ್ಲಿ

ಅಭಿವಂದನಾ

ಇದುವೆ ಸುಕವಿ ಪ್ರಮೋದ
ಪ್ರದಮಿದುವೆ ಸಮಸ್ತ ಭವಲೋಕ ಪ್ರಮುದ
ಪ್ರದಮೆನೆ ನೆಗಟ್ದಾರಿ ಪುರಾ
ಣದೊಳರಿವುದು ಕಾವ್ಯಧರ್ಮಮಂ ಧರ್ಮಮುಮಂ

ಎಂದು ಸಾರಿದ ಪ್ರತಿಭಾ ಧೀಮಂತನಾದ ಕವಿ ಇವುಗಳ ಸಮ್ಮಿಲನವನ್ನು ಸೊಗಸಾಗಿ ಮಾಡಿದ್ದಾನೆ.

ಭೋಗ ತೃಷೆಯಲ್ಲಿ ಮುಳುಗಿ, ಭೋಗಾಸಕ್ತಿಯಿಂದ ಭವಭವಗಳಲ್ಲಿ ತೊಳಲಿ ಕೊನೆಗೆ ಭೋಗ ವಿರಕ್ತನಾಗಿ ಕೈವಲ್ಯ ಸಾಧಿಸಿದ ಬಗೆಯನ್ನು ಹೃದಯ ಸ್ಪರ್ಶಿಯಾಗುವಂತೆ ಚಿತ್ರಿಸಿದ್ದಾನೆ ಆದಿಕವಿ.

ಮಹಾಬಲನ ಆಸ್ಥಾನದಲ್ಲಿ ಸ್ವಯಂಬುದ್ಧನೆಂಬ ಮಂತ್ರಿಗೂ ಅನ್ಯಮತ ಪ್ರತಿನಿಧಿಗಳಿಗೂ ನಡೆಯುವ ವಾಗ್ವಾದ, 'ಕಂಡವರಾರ್ ಮರುಭವಂಗಳನಿಲ್ಲಿ' ಎಂದವರಿಗೆ ಆತ್ಮದ ಅನಾದಿ ಅನಂತತ್ವವನ್ನು ಸ್ಥಾಪಿಸಿ 'ದಯೆ ದಾನಂ ತಪಂ ಶೀಲಂ ದಮಂ'ಗಳನ್ನು ಮೈಯಾಗಿರುವ ಧರ್ಮವೇ ಮಾನವರನ್ನು ಎತ್ತಿ ಉದ್ಧರಿಸುವುದೆಂಬುದನ್ನು ಮಂಡಿಸುವಲ್ಲಿ ಸೊಗಸಾಗಿದೆ.

ಈಶಾನಕಲ್ಪದಲ್ಲಿ 'ದಿವಿಜೇಂದ್ರರುಂದ್ರ ಲೋಕದೊಳಮಿದೊಂದೆ ಸಾರಂ'ಎನ್ನುವಂಥ ವೈಭವದಲ್ಲಿ ಲಲಿತಾಂಗನಾಗಿ ಸ್ವಯಂಪ್ರಭೆಯಂಥ ಸುರಕನ್ನಿಕೆಯ ಸಹವಾಸದಲ್ಲಿ ಸಾಗರೋಪಮ ಕಾಲ ಕಳೆದರೂ ಭೋಗತೃಷ್ಣೆ ಆರದೆ ಮರಣದ ಮುನ್ಸೂಚನೆಯಿಂದ ಭಯಭೀತನಾಗಿ, 'ಕೃತಾಂತನಿಂತು ನಿರ್ನೆರಂ ಎಳೆದುಯ್ಯೆ ಬಾರಿಸದೆ ಕೆಮ್ಮನೆ ಉಪೇಕ್ಷಿಸಿ ನೋಡುತಿರ್ಪಿರೇಂ' ಎಂದು ಗೋಳಾಡುವ ರೀತಿ, ಮೆಯ್ಗಳೆರಾಡಗಿಯುಂ ಅಸುವೊಂದೆ ಎಂಬಂತಿದ್ದ ಸ್ವಯಂಪ್ರಭೆಯ ಅಸಹಾಯಕ ಸ್ಥಿತಿಯಲ್ಲಿ ಗೋಳಿಡುವಾಗ ಸಾಮಾನಿಕ ದೇವತೆಗಳು ಬಂದು ಭೋಗದ ನಶ್ವರತೆಯನ್ನು ಒತ್ತಿಹೇಳುತ್ತಾರೆ. ಈ ಹುಟ್ಟು-ಸಾವಿನ ಅವಸ್ಥಾಂತರ ಯಾರಿಗೂ ತಪ್ಪಿದ್ದಲ್ಲ. ಇದರಿಂದ ಬಿಡುಗಡೆ ಹೊಂದಲು ಧರ್ಮವೊಂದೇ ಸಾಧನ-ಎನ್ನುವ ಸತ್ಯವನ್ನು ಸ್ಥಾಪಿಸುವ ಈ ಪ್ರಸಂಗ ಕುಶಲ ಚಿತ್ರಕಾರನ ಬಣ್ಣದ ಕುಂಚದಿಂದ ಮೂಡಿದ ಸುಂದರ ಚಿತ್ರದಂತೆ ಮೂಡಿದೆ. ಶ್ರೀಮತಿ- ವಜ್ರಜಂಘ ಜನ್ಮದಲ್ಲಿ ಬಯಸಿದವಳ ಸಹವಾಸದಲ್ಲಿ, ಸುಖವಾಸದಲ್ಲಿ, ಶಯ್ಯೆಯಲ್ಲಿರುವಾಗ ಭೋಗವಿಲಾಸಕ್ಕಾಗಿ ಹಾಕಿದ ಧೂಪದ ಧೂಮವೇ ಕಾಳೋರಗದಂತೆ ಹಬ್ಬಿ ತೋಳತೆಕ್ಕೆಯಲ್ಲಿರುವಾಗಲೇ ಮರಣವನ್ನಪ್ಪುತ್ತಾರೆ. ಇಲ್ಲಿ ಸಂಸಾರದ ದಾರುಣತೆಯನ್ನು ಚಿತ್ರಿಸಿರುವ ರೀತಿ ಅನನ್ಯ. ಸಂಸಾರವಾದರೂ ಸರ್ಪದ ನೆರಳು, ವಿಷದ ಹನಿ- ಎನ್ನುವ ಸತ್ಯದ ಅರಿವು ಇಹಲೋಕದ ಕ್ಷಣಿಕತ್ವವನ್ನು ಇದಕ್ಕಿಂತ ಸುಂದರವಾಗಿ ವರ್ಣಿಸುವುದಾದರೂ ಹೇಗೆ? ಎನ್ನುವಂತಿದೆ. ಪುರುದೇವನಿಗೆ ವೈರಾಗ್ಯ ಮೂಡುವ ಸಂದರ್ಭದ ನೀಲಾಂಜನೆಯ ನೃತ್ಯ ಪ್ರಸಂಗ ಮಿಗಿಲಾಗಿದೆ.

ಅಭಿವಂದನಾ

ಕೋಟಿತರದಿಂದಮೆಸೆವೀ
ನಾಟಕಮಂ ತೋರಿಮಾಣ್ದಳಿಲ್ಲಳ್ ಬಗೆಯೊಳ್
ನಾಟುವಿನಮರಿ ಸಂಸ್ಕೃತಿ
ನಾಟಕಮುಮೆನಗೆ ನೆರೆಯೆ ತೋರಿದಳೀಗಳ್!

ತೀರ್ಥಂಕರನ ಭವದಿಗ್ವಿಜಯದೊಂದಿಗೆ ಅವನ ಮಕ್ಕಳಾದ ಭರತ-ಬಾಹುಬಲಿಯರ ಯುದ್ಧದ ಪ್ರಸಂಗದಲ್ಲಿ ರಾಜ್ಯಲಾಲಸೆಯ ತೀವ್ರತೆ ಸೋದರತ್ವವನ್ನೇ ಮೆಟ್ಟಿನಿಲ್ಲುವ ಸಂದರ್ಭದಲ್ಲಿ ಬಾಹುಬಲಿಯ ವೈರಾಗ್ಯದ ಔನ್ನತ್ಯವನ್ನು ಚಿತ್ರಿಸಿ ಕಾವ್ಯಧರ್ಮ-ಧರ್ಮ ಮಾತ್ರವಲ್ಲ ವಿಶ್ವಧರ್ಮದ ಸಂಗಮವನ್ನೇ ಮಾಡಿದ್ದಾನೆ. ಎಂದುದ್ಗರಿಸುವಂತಿದೆ. ಹೀಗೆ ಚಿತ್ರಿಸುವ ಕವಿಗಳು ಕನ್ನಡದಲ್ಲಿ ಬಹಳಿಲ್ಲ.

ಪಂಪನ ಮಾರ್ಗವನ್ನು ಹಿಡಿದ ಉಳಿದ ಚಂಪೂ ಕವಿಗಳು ಅವನಂತೆಯೇ ಲೌಕಿಕ, ಆಗಮಿಕ ಕಾವ್ಯ ರಚನೆಗೆ ಮುಂದಾದರು, ಆ ಪರಂಪರೆಯನ್ನು ಬೆಳೆಸಿದರು. ಕವಿಚಕ್ರವರ್ತಿ ರನ್ನ'ಸಾಹಸ ಭೀಮ ವಿಜಯ'ವೆಂಬ ಲೌಕಿಕ ಕಾವ್ಯವನ್ನು, ಎರಡನೆಯ ತೀರ್ಥಂಕರನಾದ ಅಜಿತನಾಥನನ್ನು ಕುರಿತ 'ಅಜಿತ ಪುರಾಣ' ರಚಿಸಿದವನು. ಪಂಪ ಪೊನ್ನರೊಂದಿಗೆ ತನ್ನ ಹೆಸರನ್ನು ಸೇರಿಸಿ ತಾವು ಮಾತ್ರ 'ಜಿನಸಮಯ ದೀಪಕರ್'ಎಂದು ಕರೆದುಕೊಂಡ. ಇಲ್ಲಿ ಭವಾವಳಿಯ ಸುದೀರ್ಘ ಕತೆಯಿಲ್ಲ. ರನ್ನನ ಪ್ರತಿಭೆ ಹಾಗೂ ನಾಟ್ಯಗುಣಗಳನ್ನು ಕಾಣಬಹುದಾದರೂ ಪಂಪನ ಕಾವ್ಯದ ಸೊಗಸಿಲ್ಲ. ಇದನ್ನು 'ಪ್ರತಿಭೆಯೊಡನೆ ನಡೆದ ಪ್ರಥಮ ಪ್ರಣಯದಾವೇಶದ ಗುರುತೆಂಬಂತಿದೆ' ಎಂದಿದ್ದಾರೆ. ರಂ.ಶ್ರೀ. ಮುಗಳಿಯವರು(ಕನ್ನಡ ಸಾಹಿತ್ಯ ಚರಿತ್ರೆ)

ಚಾವುಂಡರಾಯ ರಚಿಸಿದ ಗದ್ಯಕೃತಿ 'ಚಾವುಂಡರಾಯ ಪುರಾಣ'ವು ಜಿನಸೇನ-ಗುಣಭದ್ರರ ಮಹಾಪುರಾಣದ ಸರಳ ಕನ್ನಡ ರೂಪ. ಶಾಸ್ತ್ರೀಯ ಗದ್ಯಕ್ಕೆ ಮಾದರಿ ಈ ಕೃತಿ. ಕತೆಯನ್ನು ಸಂಗ್ರಹಿಸುವಾಗಿನ ಸಂಯಮ ಮೆಚ್ಚುವುದಾಗಿದೆ. ೨೪ ತೀರ್ಥಕರರ ೬೩. ಶಲಾಕಪುರುಷರ ಕತೆಯನ್ನು ಒಳಗೊಂಡಿದೆ.

ಕನ್ನಡ ಜೈನ ರಾಮಾಯಣ ರಚಿಸಿದ ನಾಗಚಂದ್ರನನ್ನು ಸ್ಮರಿಸಬೇಕು. ೧೯ನೇ ತೀರ್ಥಂಕರನ ಕುರಿತ 'ಮಲ್ಲಿನಾಥ ಪುರಾಣ'ದಂತೆ 'ರಾಮಚಂದ್ರ ಚರಿತ ಪುರಾಣ'ವೂ ಜಿನಕಾವ್ಯವೇ. ವಿಮಲಸೂರಿಯ 'ಪವುಮಚರಿಯ'ವನ್ನು ಅನುಸರಿಸಿ ಬರೆದ ಈ ಕಾವ್ಯದಲ್ಲಿ ರಾವಣನ ಪಾತ್ರ ವಿಶಿಷ್ಟವೆನಿಸುವಂತಿದೆಯಾದರೂ 'ಮೂಲದಷ್ಟು ಸೊಗಸು ಇಲ್ಲಿಲ್ಲ' ಎಂದು ಡಿ.ಎಲ್.ಎನ್. ಅವರು ಅಭಿಪ್ರಾಯಪಡುತ್ತಾರೆ. ಕಾವ್ಯದ ನಾಯಕ ರಾಮ ಜಿನಧರ್ಮದಲ್ಲಿ ನಡೆಯುವವನು. ಚರಮದೇಹಿ. ಈ ಹಿಂಸೆ ಇವನ ಕೈಲಿ ಮಾಡಿಸುವಂತಿಲ್ಲ. ರಾವಣನನ್ನು ಕೊಲ್ಲುವವ ಲಕ್ಷ್ಮಣ. ಇದಕ್ಕಾಗಿ ನರಕವನ್ನು ಕಂಡುಬರಬೇಕಾಗುತ್ತದೆ.

ಜೈನ ಸಂಪ್ರದಾಯದಲ್ಲಿ ಜನ್ನನ ಸ್ಥಾನ ವಿಶಿಷ್ಟವಾದುದು. 'ಯಶೋಧರ

ಚರಿತೆ' ಹಾಗೂ 'ಅನಂತನಾಥ ಪುರಾಣ'ಗಳೆರಡೂ ಜೈನ ಧರ್ಮದ ಪ್ರತಿಪಾದನೆಯನ್ನೇ ಮುಖ್ಯವಾಗುಳ್ಳ ಕಂದಪದ್ಯದಲ್ಲಿ ಬರೆದ ಕೃತಿಗಳು. ಸಂಕಲ್ಪಕೊಲೆಯ ಕಾರಣ ಜೀವದ ತೊಳಲಾಟ ವಿವರಿಸುವ ಕೃತಿಯಲ್ಲಿ ಕಾವ್ಯಧರ್ಮವನ್ನೂ ಧರ್ಮವನ್ನೂ ಸಮನ್ವಯಗೊಳಿಸುವಲ್ಲಿ ಸಿದ್ಧಿ ಪಡೆದಿದ್ದಾನೆಂದೇ ಹೇಳಬೇಕು. ಮನಸಿಜನ ಮಾಯೆ ಒಂದು ಅದಮ್ಯ ಶಕ್ತಿ. ಅದಕ್ಕೆ ವಿಧಿಯ ಸಹಾಯವೂ ದೊರೆತರೆ ನರರನ್ನು ಕೊಂದು ಕೂಗದೆ! ಎಂಬ ಆಶಯ ಯಶೋಧರ ಚರಿತ್ರೆಯಲ್ಲಿ ಮಾರ್ಮಿಕವಾಗಿ ಚಿತ್ರಿತವಾಗಿದೆ. ಮಾನವನ ಬದುಕಿನ ಏಳುಬೀಳುಗಳನ್ನು ಜೈನಧರ್ಮಕ್ಕನುಗುಣವಾಗಿ ವರ್ಣಿಸಿದರೂ ತಪ್ಪಿಗೆ ದಂಡ ಅನುಭವಿಸಬೇಕೆಂದು ನಾವು ಒಪ್ಪುವಂತಿದೆ. ವರ್ಣನೆ, ಕತೆ ಹೇಳುವ ಕುಶಲತೆಗಳು ಜನ್ನನ ಸಿದ್ಧಿಗೆ ಪೂರಕಾಂಶಗಳು. ಅನಂತನಾಥ ಪುರಾಣದ ಕೃತಿಯಲ್ಲಿ ಸಂದರ್ಭವಶವಾಗಿ ಬಂದಿರುವ ಚಂಡ ಶಾಸನದ ಪ್ರಣಯ ದುರಂತದ ಕತೆ ಪುರಾಣ ಕಾವ್ಯದ ಪ್ರೌಢಿಮೆಯಲ್ಲಿ ಕಲಾತಿಶಯತೆಯನ್ನು ತಂದಿದೆ.

ವೀರಶೈವಧರ್ಮ ಪ್ರಚಾರಕ್ಕಾಗಿ ಸಾಮಾನ್ಯರಿಗೆ ಮನಮುಟ್ಟುವಂತೆ ಸಿದ್ಧಾಂತ ಹೇಳುವಲ್ಲಿ ಸರಳ ನುಡಿಗಳಲ್ಲಿ ಮೂಡಿ ಬಂದ ವಚನಗಳು 'ಶಾಸ್ತ್ರವೂ ಹೌದು, ಕಾವ್ಯವೂ ಹೌದು.' ಷಟ್‌ಸ್ಥಲ ಸಿದ್ಧಾಂತ, ಶರಣ ಧರ್ಮ- ಪಾದೋದಕ ಪ್ರಸಾದಗಳ ಮಹತ್ವ, ತ್ರಿವಿಧ ದಾಸೋಹ- ಮುಂತಾದ ಕಬ್ಬಿಣದ ಕಡಲೆಯಂಥ ತತ್ವಗಳನ್ನು ಆಡುನುಡಿಯಲ್ಲಿ ಹಿಡಿದಿಟ್ಟು ಕನ್ನಡದ 'ಉಪನಿಷತ್ತು' ಗಳೆಂದೆನ್ನಿಸಿವೆ. ಸಾಧನಾ ಮಾರ್ಗದಲ್ಲಿ ಭಕ್ತನ ಅಂತರಂಗದ ತಳಮಳ, ಶರಣಸತಿ- ಲಿಂಗಪತಿ ಭಾವಗಳು ಹೃದಯಮುಟ್ಟುವಂತೆ ಇದ್ದು ಭಾವಗೀತೆಗಳೆನಿಸಿವೆ. 'ಛಲಬೇಕು ಶರಣಂಗೆ' 'ಕಾಯಕವೇ ಕೈಲಾಸ', 'ದಯವಿಲ್ಲದ ಧರ್ಮ ಯಾವುದಯ್ಯ' ಇಂಥ ನೂರಾರು ವಚನದ ಮಾತುಗಳು ಆಡುನುಡಿಯಲ್ಲಿ ಬೆರೆತುಹೋದಿವೆ.

ಕಳಬೇಡ ಕೊಲಬೇಡ
ಹುಸಿಯ ನುಡಿಯಲು ಬೇಡ
ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗನ ಒಲಿಸುವ ಪರಿ

ಈ ನುಡಿಗಳು ಶರಣರಿಗೆ ಮಾತ್ರವಲ್ಲ. ಸರ್ವ ಮಾನವ ಜನಾಂಗಕ್ಕೂ ಅನ್ವಯಿಸುವ ತತ್ವ.

'ಬಡ ಪಸು ಪಂಕದಲ್ಲಿ ಬಿದ್ದು ದೆಸೆದೆಸೆಗೆ ತಿರುಗಿ'ರಕ್ಷಣೆಗಾಗಿ ಹಂಬಲಿಸುವ ರೀತಿ, ಏರಿಲ್ಲದ ಗಾಯದಲ್ಲಿ ನೋಯುವ, ಧಾವತಿಗೊಳ್ಳುವ ತಳಮಳ, ಅಕ್ಕ ಕೇಳವ್ವ ನಾನೊಂದ ಕನಸಕಂಡೆ' ಎನ್ನುವ ಆತ್ಮೀಯ ಭಾವಗಳು ಓದುಗರ ಹೃದಯದಲ್ಲಿ ನೆಲೆ

ನಿಲ್ಲುವಂತಿವೆ. ಮಾನವ ಸ್ವಭಾವವನ್ನು ತಿಳಿಸುವ 'ಸಿಂಹಾಸನವೇರಿದ ಸೊಣಗ, ಮರವೇರಿದ ಮರ್ಕಟ' ಮುಂತಾದ ಪ್ರಾಣಿರೂಪಕಗಳಲ್ಲಿ ವರ್ಣಿಸಿರುವ ರೀತಿ ಅಸದಳ.

ವಚನಗಳಂತೆ ಭಾಗವತ ತತ್ವ ಪ್ರಚಾರದ ಉದ್ದೇಶದಿಂದ ಮೂಡಿ ಬಂದ ದಾಸರ ಪದಗಳು ಕನ್ನಡ ಸಾಹಿತ್ಯದಲ್ಲಿ ಇನ್ನೊಂದು ವಿಶಿಷ್ಟ ಮಾದರಿಗಳು. ಹರಿಪಾರಮ್ಯವನ್ನು ಎತ್ತಿ ಹಿಡಿಯುವ, ದ್ವೈತ ಮತ ಸಿದ್ಧಾಂತವನ್ನು ಸರಳ ನುಡಿಗಳಲ್ಲಿ ವರ್ಣಿಸಿದ್ದು, ಜತೆಗೆ ಸಂಗೀತದ ಸಾಮರಸ್ಯದಿಂದ ಜನಮನಗೆದ್ದ ದಾಸರ ಪದಗಳು ಧರ್ಮ ಹಾಗೂ ಸಾಹಿತ್ಯದ ಎರಕಗೊಂಡು ಮಿನುಗುವ ರೂಪಗಳು. 'ಆಡಿಸಿದಳೆಶೋಧೆ', 'ಆಡಿದನೊ ರಂಗ', 'ಹರಿ ಕುಣಿದ' 'ಎಲ್ಲಾಡಿ ಬಂದೆ ಮುದ್ದು ರಂಗಯ್ಯ' ಇವುಗಳಲ್ಲಿ ಬಾಲಕೃಷ್ಣನ ಸುಂದರ ರೂಪ ಕಂಡು ' ಈ ಪರಿಯ ಸೊಬಗಾವ ದೇವರಲ್ಲಿ ನಾ ಕಾಣೆ'ಎಂದುದ್ಗರಿಸುವಂತಿವೆ. ಹರಿಯ ನಾಮಬಲದಿಂದ ಮೋಕ್ಷ ಸಾಧನೆಯತ್ತ ಮುನ್ನಡೆದ ದಾಸರು ಲೋಕ ಮೀರಿದವರಲ್ಲ. 'ಈಸಬೇಕು ಇದ್ದು ಜಯಿಸಬೇಕು' ಎಂದು ಪುರುಷ ತತ್ವ ಸಾರಿದವರು. 'ತಲ್ಲಣಿಸದಿರು ಕಂಡ್ಯಾ ತಾಳು ಮನವೇ' ಎಂದು ಸಮಾಧಾನ ಹೇಳಿದವರು. 'ಧರ್ಮವೇ ಜಯವೆಂಬ ದಿವ್ಯ ಮಂತ್ರವನ್ನು ಸಾರುತ್ತಲೆ 'ಮಾನವ ಜನ್ಮ ದೊಡ್ಡದು' ಎಂಬುದನ್ನೂ ಮನಗಾಣಿಸಿದರು. ದಾಸರುಗಳು ಕವಿಗಳಲ್ಲ. ಅನುಭಾವಿಗಳು ಎಂದು ಹೇಳಬಹುದಾದರೂ 'ಇಲ್ಲಿ ಧರ್ಮಕ್ಕೆ ಪ್ರಥಮಸ್ಥಾನ- ಸಾಹಿತ್ಯ ಗುಣ ಗೌಣ'ವೆನ್ನುವ ವಿಮರ್ಶಕರೂ ಇದ್ದಾರೆ. ಸಾಹಿತ್ಯ ಮಂದಿರಕ್ಕೆ ಹೆಬ್ಬಾಗಿಲಿನಿಂದ ಅಲ್ಲದಿದ್ದರೂ ಪಕ್ಕದ ಬಾಗಿಲಿನಿಂದ ಪ್ರವೇಶವಿದೆ' ಎನ್ನುವ ಎಸ್.ವಿ. ರಂಗಣ್ಣನವರ ಅಭಿಪ್ರಾಯ ಒಪ್ಪಬಹುದು.

ಸಾಹಿತ್ಯದಲ್ಲಿ ಧರ್ಮವನ್ನು ಸಮನ್ವಯಗೊಳಿಸಿದ ಕವಿಗಳಲ್ಲಿ ಕುಮಾರವ್ಯಾಸನನ್ನು ಮರೆಯುವಂತಿಲ್ಲ. ಅವನಿಗೆ ಪಂಚಮವೇದವೆನಿಸಿದ ಮಹಾಭಾರತ ಕೃಷ್ಣಕತೆಯಾಗಿದೆ. ಪೀಠಿಕೆಯಲ್ಲಿ ತನ್ನ ಉದ್ದೇಶ ಎತ್ತಿ ಹಿಡಿಯುತ್ತಾನೆ. 'ಅರಸುಗಳಿಗಿದು ವೀರ, ದ್ವಿಜರಿಗೆ ಪರಮವೇದದ ಸಾರ. ಯೋಗಿಗಳ ತತ್ವ ವಿಚಾರ....... ' ಕಾವ್ಯಕೆ ಗುರುವೆನಲು ರಚಿಸಿದ ಭಾರತದ ಮಹಿಮೆಯನ್ನು ಎಲ್ಲರೂ ಒಪ್ಪಿದ್ದಾರೆ. ಕೃಷ್ಣಮಹಿಮೆಯನ್ನು ಹಾಡುತ್ತಲೇ ಮಿಕ್ಕ ಪಾತ್ರಗಳನ್ನು ರಚಿಸಿದ ಜೀವಂತಿಕೆಯನ್ನು ಕಂಡು ತಲೆದೂಗಿ ಜಿಗುಟಿದರೆ ರಕ್ತ ಬರುವಂತಿದೆ' ಎಂದದ್ದೂ ಉಂಟು. 'ಕುಮಾರ ವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು' ಎಂದು ರಸಋಷಿ ಮನದುಂಬಿ ಹಾಡಿದ್ದಾರೆ. ನವೋದಯ ಸಾಹಿತ್ಯದ ಹೊಸಜಾಡು ಮೂಡುವವರೆಗೂ ಸಾಹಿತ್ಯ ಹಾಗೂ ಧರ್ಮ ತಳಕು ಹಾಕಿಕೊಂಡೇ ಇತ್ತು. ಎಷ್ಟೋ ಸಾರಿ ಚರ್ವಿತಚರ್ವಣ ಎನಿಸುವಂತೆ, ಕೇಳುಗರು ತೂಕಡಿಸುವಂತೆ ಮಾಡಿವೆ ಎಂದೆನಿಸಿದೆ.

ಇಂಗ್ಲೀಷ್ ಸಾಹಿತ್ಯಾಭ್ಯಾಸ, ಸ್ವಾತಂತ್ರ್ಯ ಚಳವಳಿಯ ಉತ್ಸಾಹ ತುಂಬಿ ಹೊಸತನವನ್ನು ಪಡೆದ ನವೋದಯ ಸಾಹಿತ್ಯ 'ಧರ್ಮ'ಕ್ಕೆ ಹೊಸ ಭಾಷ್ಯ ಬರೆಯಿತು. ಮತ ಪ್ರಚಾರ, ಸ್ವಮತ ಸ್ಥಾಪನೆ, ಅನ್ಯಮತ ದೂಷಣೆಯೇ ಧರ್ಮ ಎನ್ನುವ ಅಭಿಪ್ರಾಯ ಬದಲಾಯಿತು. ಭಾರತಾಂಬೆಗೆ, ಭಾಷೆಗೆ ದೈವಿಕ ಸ್ಥಾನ ಲಭಿಸಿತು. ದೇಶಪ್ರೇಮ,

ಭಾಷಾಭಿಮಾನಿಗಳು, ಮಾನವೀಯ ಮೌಲ್ಯಗಳು ಮುಖ್ಯವಾದವು.

'ವೇದವಾಣಿ ಪುಣ್ಯ ಜನನಿ ನಮೋ ಮಾತೃ ಭಾರತಿ' ಎಂದರು. ' ಓ ನನ್ನ ಚೇತನಾ ಆಗುನೀ ಅನಿಕೇತನ' ಎಂದು ಮಂತ್ರ ಪಠಿಸಿದರು. 'ನೂರು ಮತದ ಹೊಟ್ಟ ತೂರಿ, ಎಲ್ಲ ತತ್ವದೆಲ್ಲೆ ಮೀರಿ' ಬೆಳೆಯಬೇಕೆನ್ನುವುದು ಧ್ಯೇಯವಾಯಿತು. ಅಲ್ಲದೆ ಪ್ರಕೃತಿಯಲ್ಲಿ ಪರಮನನ್ನು ಕಾಣುವ ದೃಷ್ಟಿ ಗುರುತಿಸಬೇಕಾದ ಅಂಶ. ಸತ್ಯಂ-ಶಿವಂ-ಸುಂದರಂ ಆದ ಮನೋಭೂಮಿಕೆಯಲ್ಲಿ ಕಾಣುವ ಸೌಂದರ್ಯದಲ್ಲಿ ಧಾರ್ಮಿಕ ಮನೋಭಾವವಿದೆ.

ಸೌಂದರ್ಯದ ಚತುರ್ಮುಖವನ್ನು ಹೇಳುವಾಗ ಇಂದ್ರಿಯಗಳ ಮೂಲಕ ಬರುವ ಸೌಂದರ್ಯವನ್ನು ವಸ್ತುಸೌಂದರ್ಯವೆಂದೂ, ಕಲ್ಪನೆಯಲ್ಲಿ ಕಾಣುವ ಸೌಂದರ್ಯವನ್ನು ಮನೋನಿಷ್ಠ ಸೌಂದರ್ಯವೆಂದೂ, ವಿಕೃತಿಯಲ್ಲಿಯೂ ಚೆಲುವನ್ನು ಕಾಣುವ ಮಜಲನ್ನು ಚಿತ್ತ ಸೌಂದರ್ಯವೆಂದೂ, ವಸ್ತುವಿನಲ್ಲಿ ಪರಾತ್ಪರವನ್ನು ಕಾಣುವ ನೆಲೆಯನ್ನು ಆತ್ಮ ಸೌಂದರ್ಯವೆಂದೂ ಹೆಸರಿಸುತ್ತಾರೆ.

ನವೋದಯ ಕವಿಗಳಲ್ಲಿ ಪ್ರಮುಖರಾದ ಕುವೆಂಪು, ಪುತಿನ, ಬೇಂದ್ರೆ, ಕೆ.ಎಸ್.ನ. ಇವರ ಕವನಗಳಲ್ಲಿ ಧ್ಯೇಯ, ದೃಷ್ಟಿಗಳನ್ನು ಗುರುತಿಸುವಂತೆ ಅವರ ಧಾರ್ಮಿಕ ಮನೋಭಾವವೂ ಸಂಗೀತದಲ್ಲಿ ತಂಬೂರಿಯ ಶೃತಿಯಂತೆ ಮಿಡಿಯುತ್ತದೆ.

'ಶಿವಮಂದಿರ ಸಮ ವನಸುಂದರ ಸುಮಮಂದಿರ' ಎನ್ನುವಾಗ, 'ಕವಿಗೆ ಕವಿಯ ತೋರಿಸಿತ್ತು ಸುಪ್ರಭಾತಂ' ಎನ್ನುವಾಗ, ಹಾರುವ ಹಕ್ಕಿಯ ಸಾಲು 'ದೇವರು ರುಜು ಮಾಡಿದನು' ಎಂಬಂತೆ ಕಂಡಾಗ 'ಕನ್ನಡ ನುಡಿ- ಶಕ್ತಿಕಣಾ, ದೇವಿಕಣಾ ಮಂತ್ರಕಣಾ- ಎಂದುದ್ಗರಿಸುವಾಗ- ಭಾರತೀಯ ಸಂಸ್ಕೃತಿಯ ಆಧ್ಯಾತ್ಮಿಕ ಹಿನ್ನೆಲೆಯನ್ನು ಕಾಣುತ್ತೇವಲ್ಲವೆ'. ಈ ಗುಣವೇ ಆಂಗ್ಲ ರೊಮ್ಯಾಂಟಿಕ್ ಕವಿಗಳಿಗಿಂತ ನಮ್ಮ ಕವಿಗಳು ಮುಂದೆ ಹೋಗಲು ಕಾರಣವೆಂದು ಜಿ.ಎಸ್.ಎಸ್.ಗುರುತಿಸುತ್ತಾರೆ.

ಕುವೆಂಪು ಅವರದು ವೇದೋಪನಿಷತ್‌ಗಳಿಂದ ಹಿಡಿದು ಅರವಿಂದರ ದರ್ಶನದವರೆಗೆ ಅರಗಿಸಿಕೊಂಡ ಆಧ್ಯಾತ್ಮಿಕ ಮನೋಧರ್ಮ. 'ಶ್ರೀರಾಮಾಯಣ ದರ್ಶನ'ದಂಥ ಮಹಾಕಾವ್ಯವನ್ನು ಕನ್ನಡಕ್ಕೆ ಕೊಟ್ಟಿತು. ಅಲೌಕಿಕ ನಿತ್ಯ ಸತ್ಯಗಳನ್ನು ಸಾರುವ ಸತ್ಯಸ್ಯ ಸತ್ಯ ಕಥನದ ಅವತಾರಿ ಭೂಮಿಗಿಳಿದು ಬಂದುದು ಸೀತೆಯನ್ನು ವರಿಸುತಾಕೆಯ ನೆವದಿಂದ ಮೃಚ್ಛಕ್ತಿಯನ್ನು ಮರ್ದಿಸಿ ಚಿಚ್ಛಕ್ತಿಯನ್ನು ಸಂವರ್ಧಿಸುವುದಕ್ಕಾಗಿ. ಇಂಥ ಮಹದಾಶಯ ಅನುಭಾವಿಗಳದ್ದಲ್ಲವೆ.

'ಅಂಬಿಕಾತನಯ'ನೆಂಬ ಕಾವ್ಯನಾಮ ಬಳಸುವಲ್ಲಿ ಕವಿ ಬೇಂದ್ರೆಗಿರುವ ಪೂಜ್ಯ ಮಾತೃಪ್ರೇಮ ಭಕ್ತಿಗಳನ್ನೆಲ್ಲಾ ಗುರುತಿಸಬಹುದು. 'ಬೇಂದ್ರೆಯವರು ಕಾವ್ಯ ಜೀವನದ ಪೂರ್ವಾರ್ಧದಲ್ಲಿ ದೃಶ್ಯಜಗತ್ತಿನ ವೈವಿಧ್ಯದಲ್ಲಿ ದೈವೀಶಕ್ತಿಯ ಸಾಕ್ಷಾತ್ಕಾರವನ್ನು ಅನುಭವಿಸಿದರೆ, ಉತ್ತರಾರ್ಧದಲ್ಲಿ ಶ್ರೀ ಅರವಿಂದರ ಸ್ಫೂರ್ತಿ ಪಡೆದು ದೈವೀಶಕ್ತಿಯ ಅರಿವಿನಲ್ಲಿ ದೃಶ್ಯಜಗತ್ತನ್ನು ಕಂಡರು'- ಭುವನದ ಭಾಗ್ಯದಲ್ಲಿ ಜಿ.ಎಸ್. ಅಮೂರರು

ಅಭಿಪ್ರಾಯ ಪಡುತ್ತಾರೆ. ಶ್ರಾವಣದ ಮೋಡದ ಪ್ರಕೃತಿ ಚಿತ್ರದಲ್ಲಿ

ಗುಡ್ಡ ಗುಡ್ಡ ಸ್ಥಾವರ ಲಿಂಗ
ಅವಕ ಅಭ್ಯಂಗ ಎರಿತಾವ ಅನ್ನೋಹಾಂಗ||

ಕಂಡು ಆನಂದಿಸುವ ರೀತಿಯ ಸೊಗಸು.'ಇಳಿದು ಬಾ ತಾಯಿ' ಎಂದು ಗಂಗೆಯ ಅವತರಣಕ್ಕೆ ಕೊಟ್ಟ ಕರೆಯಲ್ಲಿಯ ಸವಿ, ಅವರ ಕಾವ್ಯದಲ್ಲಿ ತುಂಬಿ ಹರಿದಿರುವ ಪ್ರತಿಮೆಗಳ ಹಿನ್ನೆಲೆಯಲ್ಲಿ ದಟ್ಟವಾಗಿ ಅನುಭವಕ್ಕೆ ಬರುವುದು ಭಾರತೀಯತೆಯೆ.

ಮೇಲುಕೋಟೆಯ ಚೆಲುವನಾರಾಯಣನ ಸನ್ನಿಧಿಯಲ್ಲಿಯೇ ಬೆಳೆದು ಬಂದ ಕವಿ ಪುತಿನ ಅವರಲ್ಲಿ ಭಾಗವತ ಪ್ರಜ್ಞೆಯೇ ಪ್ರಮುಖ. 'ಚಿಕುಹೂ' ಎನ್ನುವ ಕೋಗಿಲೆಯ ಕೂಗು ನಿದ್ರಿಸುವ ಆತ್ಮವನ್ನು ಎಚ್ಚರಿಸುವ ಹರಿಕಾರನಂತೆ ಕಾಣುತ್ತದೆ. ಸಂಜೆಯ ಸಮಯ- 'ತವಸಿ ಶಿವ ಪಾರ್ವತಿಯ ನಸು ನೋಡುತವೆ ಮುಚ್ಚಿದಂದದೊಲು' ಕಾಣುತ್ತದೆ. ಅವರ ಬಹಳಷ್ಟು ಕವನಗಳಲ್ಲಿ ದೇಗುಲದ ಪರಿಸರವೇ ಕಾಣುತ್ತದೆ.'ಯದುಗಿರಿಯ ಮೌನ ವಿಕಾಸ', 'ರಂಗವಲ್ಲಿ', ಕವನಗಳನ್ನು ನೋಡಬಹುದು. ಈಚೆಗೆ ಬಂದ ಅವರ 'ಶ್ರೀಹರಿ ಚರಿತೆ' ಕವಿಯ ಧರ್ಮನಿಷ್ಠೆಯನ್ನು ಹೇಳುತ್ತದೆ.

ಅಲ್ಲದೆ ನವೋದಯ ಕವಿಗಳು, ನವ್ಯ ಕವಿಗಳು ಪುರಾಣ ಕತೆಗಳನ್ನು ಕಾವ್ಯದಲ್ಲಿ ಬಳಸಿಕೊಂಡ ಹೊಸರೀತಿಯೂ ಮುಖ್ಯ.

ಇನ್ನು ನವ್ಯ ಕಾವ್ಯದತ್ತ ತಿರುಗಿದರೆ ಭಾರತೀಯ ಸಂಸ್ಕೃತಿ, ಧರ್ಮ, ಸಂಪ್ರದಾಯಗಳೆಲ್ಲಾ ಅರ್ಥಹೀನವೆಂದೆನಿಸಿದ್ದುಂಟು. 'ಬೇರು ಸತ್ತ ಮರ'ವಾಗಿ ಕಂಡು'ಇದು ಬಿದ್ದರೆ ವಾಸಿ' ಎಂದೆನ್ನಿಸಿದ್ದುಂಟು. ನವ್ಯಕವಿಗಳಿಗೆ ಮಾನವನೇ ಕೇಂದ್ರ. ಅವನ ನೋವು, ನಲಿವುಗಳ ತೊಳಲಾಟ, ತಳಮಳ, ಈ ನಾಗರಿಕ ಬದುಕಿನಲ್ಲಿ ಸಿಲುಕಿ ಒದ್ದಾಡುವ ರೀತಿ ಅಭಿವ್ಯಕ್ತಿಯ ಕೇಂದ್ರದಲ್ಲಿ ನಿಂತವು. ಕೆಲವೊಮ್ಮೆ ಈ ಸಂಪ್ರದಾಯ, ಆಚಾರ, ವಿಚಾರಗಳಿಂದ ದೂರವಾಗುವ ಆಸೆಪಟ್ಟಿದ್ದುಂಟು. ಬುರಖಾ ತೊಡುವ ಕರಡಿಯನ್ನು ಮದುವೆಯಾಗಲಾರೆ ಎಂದು ಹಠ ಹಿಡಿದು ತಾಯಿಯ ವಿರೋಧವನ್ನು ಮೀರಿ ಮದುವೆಯಾದ ಡಬಲ್ ಪದವೀಧರೆ ಮೊದಲ ದಿನ ಹೊರಹೊರಟಾಗ ಅಲಂಕರಿಸಿಕೊಂಡ ರೀತಿಗೆ ಆನಂದ ಪುಳಕಿತನಾಗುತ್ತಿರುವಾಗ, ಹೊಸಲು ದಾಟುವಷ್ಟರಲ್ಲಿ 'ಬಂದೆ ತಡೆಯಿರಿ' ಎಂದು 'ಬಂದು ನಡೆಯಿರಿ' ಎಂದಾಗ ಕವಿಗೆ ಆಗುವ ಆಘಾತ, ಮಾತಿಗೆ ಮೀರಿದ್ದು, ಏಕೆಂದರೆ ಅವಳು ತೊಟ್ಟಿದ್ದ 'ನಮ್ಮಮ್ಮನ ಬುರಖಾ' ಬಿಟ್ಟನೆಂದರೆ ಬಿಡದೆ ಕಾಡುವ ಸಾಂಪ್ರದಾಯಿಕತೆಯ ಧ್ವನಿಪೂರ್ಣ ಚಿತ್ರ ಇಲ್ಲಿದೆ.

ಕಾಲ ಪ್ರವಾಹದಲ್ಲಿ ಬದಲಾದ ಸಾಮಾಜಿಕ ನೆಲೆಯಲ್ಲಿ ಮೂಡಿ ಬಂದ ಕವನಗಳ ಉದ್ದೇಶವೂ ಬದಲಾದುದು ಸಹಜ. ಜನ ಬದುಕಬೇಕೆಂದು ರಚಿಸುವ ಕಾವ್ಯ ಧಾರ್ಮಿಕ ಉದ್ದೇಶವಾಗಲಿ, 'ಪರಿವುದು ದುರಿತ ತಮಿಸ್ರಂ' ಎನ್ನುವ ನಂಬಿಕೆಯಾಗಲೀ ನವ್ಯ, ನವ್ಯದ ನಂತರ ದಲಿತ- ಬಂಡಾಯ ಸಾಹಿತಿಗಳಲ್ಲಿ ಕಾಣಲು ಸಾಧ್ಯವಿಲ್ಲ.

ಅಭಿವಂದನಾ

ಲೌಕಿಕ ನೆಲೆಯಲ್ಲಿಯೇ ತೊಳಲಾಡುವ ಜೀವಿಗೆ ಕೆಲವೊಮ್ಮೆ ಆಧ್ಯಾತ್ಮಿಕ ಕರೆಯೂ ಕೇಳಿದ್ದುಂಟು. 'ಯಾವ ಮೋಹನ ಮುರಲಿ ಕರೆಯಿತು ಇದ್ದಕ್ಕಿದ್ದೊಲೆ ನಿನ್ನನು, ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನ ಕಣ್ಣನು' ಎಂದು ಚಕಿತನಾಗಿ ಉದ್ಗರಿಸಿದ್ದುಂಟು. ಆದರೆ ಲೌಕಿಕ ನೆಲೆಯೇ ವಾಸ್ತವ ಬದುಕೇ ಸತ್ಯವಾಗಿದ್ದಾಗ ಧರ್ಮ ಹಿಂದೆ ಸರಿಯಲೇಬೇಕು.

ಬಂಡಾಯ ಹಾಗೂ ದಲಿತ ಕವಿಗಳು ತಮಗಾದ ಅನ್ಯಾಯ ಅಸಮಾನತೆಗಳನ್ನು ಪ್ರಶ್ನಿಸುವ, ಬದಲಿಸುವ ಉದ್ದೇಶದಿಂದ ಮೂಡಿದ ಪ್ರತಿಭಟನೆಗೆ ಅಭಿವ್ಯಕ್ತಿ ಒದಗಿಸಿ ಸಮಕಾಲೀನ ಜಗತ್ತನ್ನು ಬೆಚ್ಚಿಬೀಳಿಸಿದರು. 'ಕ್ರೂರ ವ್ಯವಸ್ಥೆಯ ವಿರುದ್ಧ, ಯಜಮಾನ ಸಂಸ್ಕೃತಿಯ ಎಲ್ಲ ಸಂಚುಗಳ ವಿರುದ್ಧ, ಬಂಡೆದ್ದದ್ದರಿಂದ ಧರ್ಮ ವಿಚಾರಗಳೂ ತಿರಸ್ಕಾರಗೊಂಡವು.

ಅಕ್ಕಿಯಲ್ಲಿ ಭಗವತ್ ಗೀತೆ ಬರೆವ
ಸೂಕ್ಷ್ಮ ತಲೆಗೆ ಬೆರಗಾದ ಗೆಳೆಯನಿಗೆ
ಅಕ್ಕಿಯಿಂದ ಅನ್ನ ಮಾಡುವುದೆ
ಮರೆತುಹೋಯ್ತು (ಅರ್ಕೆ ಮಣಿಪಾಲ)

ಇಲ್ಲಿ ವ್ಯಂಗ್ಯದ ತೀಕ್ಷ್ಣತೆ ಗಮನಿಸಿ. ದಲಿತ ಕವಿ ಸಿದ್ಧಲಿಂಗಯ್ಯನವರ 'ಕತ್ತೆ ಮತ್ತು ಧರ್ಮ' ವಿಡಂಬಕ ಕವಿತೆಯಲ್ಲೂ ಧರ್ಮದ ತಿರಸ್ಕಾರವಿದೆ.

ಭುವಿ-ಬಾನುಗಳೆರಡರ ಸಂಬಂಧವಿಟ್ಟುಕೊಂಡ ಬದುಕಿನಿಂದಲೇ ಉತ್ಕೃಷ್ಟ ಕಾವ್ಯ ಬರುವುದೆನ್ನುತ್ತಾರೆ. ಜಗತ್ತಿನ ಶ್ರೇಷ್ಠ ಕಾವ್ಯಗಳೆಲ್ಲಾ ಧಾರ್ಮಿಕ ಕಾವ್ಯಗಳೇ ಆಗಿರುವುದು ಆಕಸ್ಮಿಕವಲ್ಲ. ದೇವನ ಬಗ್ಗೆ ಚಿಂತನೆ ಕಾವ್ಯದ ಅತಿ ಮಹತ್ವದ ವಿಷಯ ಎನ್ನುತ್ತಾನೆ ರಾಯ್ ಫುಲ್ಲರ್. ಇಂದು ಮಾನವ ಬರಿ ಧರ್ಮದ ಬಗ್ಗೆ ಮಾತ್ರ ನಂಬಿಕೆ ಕಳೆದುಕೊಂಡಿದ್ದಲ್ಲ. ದೇವರು- ಮಾನವರ ಬಗ್ಗೆ ಭಾವನೆಗಳನ್ನು ಕಳೆದುಕೊಂಡಿದ್ದೇವೆ. ಇಂದಿಗೂ ಕಾವ್ಯಕ್ಕೆ ಧರ್ಮ ಅಗತ್ಯ

ಕಾವ್ಯಕ್ಕೆ ಬೇಕು ಬದುಕಿನಂತೆ ಪುರಾಣ
ದೈವ ದೇವರು, ಸ್ವರ್ಗ ಕಳಕೊಂಡ ಪೀಳಿಗೆಗೆ
ಉಂಟೆ ಕಲ್ಪನೆಯ ನೆತ್ತಿ ನಿಲ್ಲಿಸುವ ತ್ರಾಣ-ತಿರುಮಲೇಶ್

'ನಿನ್ನ ಸೂತ್ರದೊಳಿಹುದು ಲೋಕ ನಾಟಕವೆಲ್ಲ, ನೀನಿರುವ ವಿಶ್ವ ಕಾಧಾರವಾಗಿ' ಎಂಬ ನಂಬಿಕೆ. 'ನನ್ನ ಹರಣ! ನಿನಗೆ ಶರಣ! ಸಕಲ ಕಾರ್ಯ ಕಾರಣ' ಎನ್ನುವ ಅರ್ಪಣೆ. 'ದೀಪವೂ ನಿನ್ನದೇ ಗಾಳಿಯೂ ನಿನ್ನದೆ ಆರದಿರಲಿ ಬೆಳಕು' ಎಂಬ ಪ್ರಾರ್ಥನೆ ಎಲ್ಲ ಕಾಲದಲ್ಲೂ ಕಾಣುವ ಸಹಜ ಧಾರ್ಮಿಕ ಪ್ರವೃತ್ತಿ.

***

ದಾರ್ಶನಿಕ ಕವಿ ಡಾ|| ಕುವೆಂಪು

ಎಚ್.ಎಸ್. ಸಿದ್ಧಗಂಗಪ್ಪ

ರಾಷ್ಟ್ರ ಕವಿ, ಜ್ಞಾನ ಪೀಠ ಪ್ರಶಸ್ತಿ ವಿಜೇತ, ಪದ್ಮವಿಭೂಷಣ, ಕರ್ನಾಟಕ ರತ್ನ ಡಾ|| ಕುವೆಂಪು ಅವರು ಜಗದ ಕವಿಯಾಗಿ, ಯುಗದ ಕವಿಯಾಗಿ, ಕಾವ್ಯರ್ಷಿಯಾಗಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ, ವಿಶ್ವಮಾನವ ಸಂದೇಶವನ್ನು ಸಾರಿದ ಮಹಾನ್ ಚೇತನ. ತಮ್ಮ ಕಾವ್ಯದ ಮೂಲಕ ಕನ್ನಡಿಗರ ಹೃದಯ ವೀಣೆಯನ್ನು ಮೀಟಿದ ವಿಶ್ವಕವಿ. ನಿಸರ್ಗಪ್ರಿಯ ಚಿಂತನಶೀಲ, ಕಾವ್ಯ ಗೊಮ್ಮಟ, ದಾರ್ಶನಿಕ!

'ಎಲ್ಲಾದರೂ ಇರು; ಎಂತಾದರು ಇರು, ಎದೆಂದಿಗೂ ನೀ ಕನ್ನಡವಾಗಿರು; 'ಕನ್ನಡಕೆ ಹೋರಾಡು ಕನ್ನಡದ ಕಂದಾ'; 'ಕನ್ನಡಕ್ಕಾಗಿ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ' ಕನ್ನಡಕ್ಕಾಗಿ ಕೊರಳೆತ್ತು ಅಲ್ಲಿ ಪಾಂಚಜನ್ಯ ಮೂಡುತ್ತದೆ; ಕನ್ನಡವೇ ಸತ್ಯ ಕನ್ನಡವೇ ನಿತ್ಯ' ಎಂದು ಕನ್ನಡಕ್ಕಾಗಿ ತುಡಿದರು, ದುಡಿದರು. ಕನ್ನಡ ನಾಡು ನುಡಿಯ ಬಗ್ಗೆ ಅವರಿಗಿದ್ದ ಅಭಿಮಾನ ಕನ್ನಡ ಬಗೆಗಿನ ಚಿಂತನ ಕರ್ನಾಟಕ ಇತಿಹಾಸದಲ್ಲಿ ಹಚ್ಚ ಹಸಿರು.

'ನಾನು ಅವಧೂತನಾಗಿ ಹೋಗುವುದಿಲ್ಲ, ಕನ್ನಡವು ತನ್ನ ಸ್ಥಾನವನ್ನು ಅಧಿಕೃತವಾಗಿ ಪಡೆಯುವತನಕ, ತನ್ನ ಪ್ರಾಣವಿರುವತನಕ ಕನ್ನಡಕ್ಕಾಗಿ ದುಡಿಯುವುದು, ಕನ್ನಡಕ್ಕಾಗಿ ದುಡಿಯಲು ವ್ಯಕ್ತಿಗಳನ್ನು ಪ್ರಚೋದಿಸುವುದು, ಅದಕ್ಕಾಗಿ ಭಗವಂತನಲ್ಲಿ ಮೊರೆಯಿಡುವುದು ಮಾಡುತ್ತೇನೆ' ಎಂದು ನುಡಿದು, ಕೊನೆಯ ತನಕ ಹಾಗೆಯೇ ನಡೆದು ತೋರಿಸಿದ ಮಹಾನ್ ಸಾಧಕ. ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಮಹಾಚೇತನ, ಗೌರಿಶಂಕರ!

ಕನ್ನಡ ಭಾಷೆಯ ಬಗ್ಗೆ ಅಭಿಮಾನ

ಕನ್ನಡ ನಾಡು ನುಡಿಯ ಬಗ್ಗೆ ಅಪಾರ ಅಭಿಮಾನ, ಕಳಕಳಿಯನ್ನು ಹೊಂದಿದ್ದರು. ಶಿಕ್ಷಣ ಮಾಧ್ಯಮ ಮಾತೃ ಭಾಷೆಯಲ್ಲಿಯೇ ನಡೆಯಬೇಕೆಂಬುದು ಅವರ ದೃಢ ನಿಲವಾಗಿತ್ತು. ೧೯೫೭ ರಲ್ಲಿ ಧಾರವಾಡದಲ್ಲಿ ನಡೆದ ಮೂವತ್ತೊಂಬತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪೀಠದಿಂದ ಅವರು ಹೇಳಿದ ಒಂದೊಂದು ನುಡಿ ಮುತ್ತುಗಳು ಅನರ್ಘ್ಯ ರತ್ನಗಳು.

'ಸರಕಾರವಾಗಲಿ, ವಿದ್ಯಾಭ್ಯಾಸ ಇಲಾಖೆಗಳಾಗಲಿ, ವಿಶ್ವ ವಿದ್ಯಾನಿಲಯಗಳಾಗಲಿ, ಇತರ ಸಾಂಸ್ಕೃತಿಕ ಸಂಸ್ಥೆಗಳಾಗಲಿ, ಕಡೆಗೆ ವ್ಯಾಪಾರ ವಾಣಿಜ್ಯಾದಿ ಸಂಸ್ಥೆಗಳಾಗಲಿ, ಭಾಷೆಗೆ ಮೊತ್ತ ಮೊದಲನೆಯ ಸ್ಥಾನ ಕೊಡಬೇಕು. ಹಾಗೆ ಮಾಡದಿದ್ದರೆ ಪ್ರಜಾಪ್ರಭುತ್ವದ ಬುಡದ ಬೇರಿಗೆ ಬನ್ನೀರೆರೆದಂತಾಗುತ್ತದೆ. ನಮ್ಮ ಭಾಷೆ ವಿದ್ಯಾಭ್ಯಾಸದ ಅತ್ಯುನ್ನತ

ಮಟ್ಟಗಳಲ್ಲಿಯೂ ಶಿಕ್ಷಣ ಮಾಧ್ಯಮವಾಗಲು ಸಮರ್ಥವಾಗಿದೆ ಎನ್ನುವುದರ ಬಗೆಗೆ ಯಾರೂ ಸಂದೇಹ ಪಡಬೇಕಾಗಿಲ್ಲ. ವಿವಿಧ ವಿಜ್ಞಾನ ಶಾಸ್ತ್ರಗಳಲ್ಲಿರುವ ಸಾವಿರಾರು ಪಾರಿಭಾಷಿಕ ಪದಗಳನ್ನು ನಾವು ಹಾಗೆ ಹಾಗೆಯೇ ನಮ್ಮ ನಮ್ಮ ಲಿಪಿಗಳಲ್ಲಿ ಬರೆದು ವ್ಯವಹರಿಸಿದ್ದೇ ಆದರೆ ವಿಜ್ಞಾನ ವಿದ್ಯೆಗೂ ಕಾವ್ಯರಂಗದಲ್ಲಿ ಅದರ ಪ್ರಯೋಗಕ್ಕೂ ಸೌಲಭ್ಯವುಂಟಾಗುತ್ತದೆ. ಆದ್ದರಿಂದ ವೈಜ್ಞಾನಿಕ ಪರಿಭಾಷೆಗೆ ನಮ್ಮ ಭಾಷೆಗಳಲ್ಲಿ ಪದಗಳಿಲ್ಲ ಎಂಬ ಕೊರತೆ ಉದ್ಭವಿಸುವುದೇ ಇಲ್ಲ. ಕರ್ನಾಟಕದಲ್ಲಿ ಕನ್ನಡ ಪ್ರಥಮ ಭಾಷೆಯಾಗದಿದ್ದರೆ, ಕನ್ನಡ ಶಿಕ್ಷಣ ಮಾಧ್ಯಮವಾಗದಿದ್ದರೆ ಕನ್ನಡಿಗರ ಬಾಳು ಕುಂಠಿತವಾಗುತ್ತದೆ. ಕನ್ನಡಿಗರ ಏಳಿಗೆಗೆ ಧಕ್ಕೆ ಬರುತ್ತದೆ. ಕರ್ನಾಟಕದ ರಚನೆ ಅರ್ಥಹೀನವಾಗುತ್ತದೆ. ಸಾಹಿತ್ಯದ ಕೆಲವು ಪ್ರಕಾರಗಳಲ್ಲಂತೂ ಕನ್ನಡಿಗರು ಮಾತ್ರವಲ್ಲದೆ ಭಾರತೀಯರೂ ಹೆಮ್ಮೆ ಪಟ್ಟುಕೊಳ್ಳುವಂತಹ ಕೃತಿಗಳೂ ಮೈದೋರಿವೆ. ಅಷ್ಟೇ ಅಲ್ಲ, ಪೂರ್ಣ ಪರಿಣಿತ ಸ್ಥಿತಿಗೇರಿರುವ ಪ್ರಪಂಚದ ಯಾವ ಭಾಷೆಯ ಸಾಹಿತ್ಯಕ್ಕಾದರೂ ಕೋಡು ಮೂಡಿಸುವ ಕೃತಿಗಳೂ ಕವನ, ಕಾದಂಬರಿ, ಸಣ್ಣಕತೆ, ನಾಟಕ, ಕಾವ್ಯ, ಮಹಾಕಾವ್ಯಾದಿ ಪ್ರಕಾರಗಳಲ್ಲಿ ಹೊರ ಹೊಮ್ಮಿವೆ. ಕನ್ನಡಿಗರು ವಿನಯಕ್ಕಾಗಿ ಬಗ್ಗಿ ನಡೆಯಬಹುದು. ಆದರೆ ರಿಕ್ತರಂತೆ ಕುಗ್ಗಿ ನಡೆಯಬೇಕಾಗಿಲ್ಲ.

ಕುವೆಂಪು ಅವರ ಈ ಚಿಂತನೆ ಕಾರ್ಯರೂಪಕ್ಕೆ ಬಂದರೆ ಕನ್ನಡ ಭಾಷೆ ಕನ್ನಡಿಗರ ಸಾರ್ವಭೌಮ ಭಾಷೆಯಾಗುತ್ತದೆ. ಆಡಳಿತದ ಎಲ್ಲ ಹಂತಗಳಲ್ಲಿಯೂ ಕನ್ನಡ ಆದರೂ ಭಾಷೆಯಾಗಿ ವಿಜೃಂಭಿಸುತ್ತದೆ.

ಹುಟ್ಟಿದ ವರ್ಷ ೧೯೦೪, ಡಿಸೆಂಬರ್ ೨೯. ಹಡೆದ ಪುಣ್ಯ ಜೀವಿಗಳು ತಂದೆ ವೆಂಕಟಪ್ಪಗೌಡ, ತಾಯಿ ಸೀತಮ್ಮ, ಹುಟ್ಟಿದ ಸ್ಥಳ ಚಿಕ್ಕಮಗಳೂರು ಜಿಲ್ಲೆಯ ಕೂಡುಗೆ. ಅದು ತಾಯಿಯ ತೌರಮನೆ. ತೊಟ್ಟಿಲಲ್ಲಿ ಮಲಗಿಸಿ ಪ್ರೀತಿಯಿಂದ ಇಟ್ಟ ಹೆಸರು ಪುಟ್ಟಪ್ಪ. ತೊಟ್ಟಿಲಲ್ಲಿ ಬಾಲ ಲೀಲೆ ತೋರಿಸುತ್ತಾ ತಾನು ನಕ್ಕು ಇತರರನ್ನು ನಗಿಸುತ್ತಿದ್ದ ಈ ಪುಟ್ಟ ಕಂದ ಮುಂದೆ ವಿಶ್ವಕವಿಯಾಗುತ್ತಾನೆಂದು ಆಗ ಯಾರೂ ಊಹಿಸಿರಲಿಲ್ಲ!

ಶಿಕ್ಷಣ

ಓ ನಾಮ ಕಲಿತಿದ್ದು ಕುಪ್ಪಳ್ಳಿಯಲ್ಲಿ, ಅದೂ ಕೂಲಿ ಮಠದಲ್ಲಿ. ಮಠಗಳಲ್ಲಿ ಅಕ್ಷರಗಳನ್ನು ತಿದ್ದಿ ಬೆರಳುಗಳನ್ನು ಸವೆಸಿಕೊಂಡು ಅಕ್ಷರ ಕಲಿತರು. ಮನೆಯ ಮಹಡಿಯೇ ಅವರ ಭವಿಷ್ಯವನ್ನು ರೂಪಿಸುವ ಮೊದಲ ಶಾಲೆಯಾಯಿತು. ನಿತ್ಯ ಹರಿದ್ವರ್ಣದಿಂದ ಕಂಗೊಳಿಸುತ್ತಿದ್ದ ನಿಸರ್ಗ ಅವರಿಗೆ ಜೀವನೋತ್ಸಾಹವನ್ನು ತಂದು ಕೊಟ್ಟಿತು ಮುಂದೆ ಕಾವ್ಯರಚನೆಗೆ ಸ್ಫೂರ್ತಿಯ ನೆಲೆಯಾಯಿತು.

ಅಕ್ಷರಾಭ್ಯಾಸವನ್ನು ಮುಗಿಸಿದ ಬಾಲಕ ಪುಟ್ಟಪ್ಪ ತೀರ್ಥಹಳ್ಳಿಯ ಅಂಗ್ಲೋ ವರ್ನಾಕ್ಯೂಲರ್ ಪ್ರಾಥಮಿಕ ಶಾಲೆಗೆ ಸೇರಿದರು. ನಂತರ ಮೈಸೂರಿಗೆ ಪ್ರಯಾಣ. ಅಲ್ಲಿ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಶಿಕ್ಷಣ. ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿ

ಮಹಾರಾಜ ಕಾಲೇಜಿಗೆ ಸೇರಿ ೧೯೨೭ ರಲ್ಲಿ ಬಿ.ಎ. ಪದವಿಯನ್ನು ಗಳಿಸಿದರು. ಪ್ರೊ. ಎ.ಆರ್.ಕೃಷ್ಣಶಾಸ್ತ್ರಿಗಳ ಸಲಹೆ ಹಾಗೂ ಮಾರ್ಗದರ್ಶನದಂತೆ ಎಂ.ಎ. ತರಗತಿಗೆ ಸೇರಿದರು. ಪ್ರೊ. ಟಿ.ಎಸ್. ವೆಂಕಣ್ಣಯ್ಯ ಅವರನ್ನು ಗುರುಗಳಾಗಿ ಪಡೆದ ಹೆಗ್ಗಳಿಕೆ. ಕಾಲೇಜಿನಲ್ಲಿ ಅಧ್ಯಯನಕ್ಕೆ ಆರಿಸಿಕೊಂಡ ಐಚ್ಛಿಕ ವಿಷಯ ಮನಶ್ಶಾಸ್ತ್ರ ಮತ್ತು ತತ್ತ್ವಶಾಸ್ತ್ರ. ನಿರಂತರಗ್ರಂಥಾಧ್ಯಯನ, ಕಾವ್ಯಕೃಷಿಯ ನಿತ್ಯ ಕಾಯಕ ಪರಿಣಾಮವಾಗಿ ವಯಸ್ಸಿಗಿಂತ ವೇಗವಾಗಿ ಬೆಳೆದ ಬುದ್ಧಿಸಾಮರ್ಥ್ಯ. ಪಾಶ್ಚಿಮಾತ್ಯ ಸಾಹಿತ್ಯದಿಂದ ಕಾವ್ಯಾನುಭವ. ಮಿಲ್ಟನ್ ಮತ್ತು ಶೇಕ್ಸ್‌ಪಿಯರ್ ಕವಿಯಿಂದ ಹೆಚ್ಚು ಪ್ರಭಾವ.

ನಿರಂತರ ಅಧ್ಯಯನದಿಂದ ಇಂಗ್ಲಿಷ್ ಸಾಹಿತ್ಯದ ಒಳ ತಿರುಳನ್ನು ಅರ್ಥ ಮಾಡಿಕೊಳ್ಳುವುದರ ಜೊತೆಗೆ ಆ ಸಾಹಿತ್ಯದಲ್ಲಿನ ಸತ್ವವನ್ನು ಅರಿಗಿಸಿಕೊಂಡರು. ಇಂಗ್ಲಿಷಿನಲ್ಲಿ ಕಾವ್ಯ ರಚನೆ ಮಾಡಿ ಆ ಕವನಗಳ ಒಂದು ಸಂಕಲನವನ್ನು ಪ್ರಕಟಿಸಿದರು. ಕುವೆಂಪು ಅವರು ಒಮ್ಮೆ ಶ್ರೀರಂಗಪಟ್ಟಣಕ್ಕೆ ಬಂದಿದ್ದ ಸಾಹಿತಿ ಜೇಮ್ಸ್ ಎಚ್.ಕಸಿನ್ಸ್ ಅವರಿಗೆ ಕವನ [illegible]ವನ್ನು ತೋರಿಸಿದರು. ಅದನ್ನು ನೋಡಿದ ಕಸಿನ್ಸ್ ಮೆಚ್ಚುಗೆಯ ನುಡಿಗಳನ್ನಾಡಿ 'ಕನ್ನಡದಲ್ಲೇಕೆ ಬರೆಯಬಾರದು' ಎಂದು ಕೇಳಿದರು. ಆಗ ಪುಟ್ಟಪ್ಪನವರು 'ಕನ್ನಡದಲ್ಲಿ ಸಾಕಷ್ಟು ಪದ ಸಂಪತ್ತಿಲ್ಲ' ಎಂದು ದಿಟ್ಟತನದ ಉತ್ತರವನ್ನು ಕೊಟ್ಟರು. ಅವರ ಮಾತಿಗೆ ಕಸಿನ್ಸ್ ಅವರು 'ಯಾವ ಭಾಷೆಯೂ ಇನ್ನೊಂದು ಭಾಷೆಗಿಂತ ಕೀಳಲ್ಲ ಬುದ್ಧಿವಂತರು ಪದ ಸಂಪತ್ತನ್ನು ಬೆಳೆಸಬಲ್ಲರು' ಎಂದರು.

ಕಸಿನ್ಸ್ ಅವರ ಈ ಮಾತು ಕುವೆಂಪು ಅವರನ್ನು ಮತ್ತೆ ಮತ್ತೆ ಚಿಂತನೆ ಮಾಡುವಂತೆ ಮಾಡಿತು. ಅವರ ಆಲೋಚನೆ ಹರಿತವಾಯಿತು. ಪ್ರಾಯೋಗಿಕ ದೃಷ್ಟಿಯಿಂದ ಮೊದಲು ಒಂದು ಇಂಗ್ಲಿಷ್ ಕವನವನ್ನು ಕನ್ನಡಕ್ಕೆ ಭಾಷಾಂತರಿಸಿ ನೋಡಿದರು. ಅದು ಇಂಗ್ಲಿಷ್ ಕವನಕ್ಕಿಂತ ಸತ್ವಪೂರ್ಣವಾಗಿ, ಭಾವಪೂರ್ಣವಾಗಿ ನಾದಮಯವಾಗಿ ಕಂಡಿತು. ಈ ಪ್ರಸಂಗ ಅವರ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರಿತು. ಅಂದಿನಿಂದ ಇಂಗ್ಲಿಷ್ ಕಾವ್ಯ ರಚನೆ ಮಾಡುವುದನ್ನು ಬಿಟ್ಟು ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದರು. ೧೯೨೯ ರಲ್ಲಿ ಎಂ.ಎ. ಪದವಿ ಗಳಿಸಿದರು.

ಸಂಕ್ರಮಣ

೧೯೨೯ ರ ಅಕ್ಟೋಬರ್ ೮, ಕುವೆಂಪು ಅವರ ಜೀವನದಲ್ಲಿ ಹೊಸ ತಿರುವು, ಕಲ್ಕತ್ತೆಯ ಬಳಿಯ ಬೇಲೂರಿನ ರಾಮಕೃಷ್ಣಾಶ್ರಮದಲ್ಲಿ ಸ್ವಾಮಿ ಶಿವಾನಂದ ಅವರಿಂದ ದಿವ್ಯಾನುಗ್ರಹ. ಚಿನ್ನ ಮತ್ತಷ್ಟು ಚೊಕ್ಕವಾಯಿತು. ಅಂದಿನಿಂದ ಅವರ ದಾರ್ಶನಿಕ ದೃಷ್ಟಿ ಗಂಭೀರವಾಯಿತು. ಹೃದಯ ವೈಶಾಲ್ಯತೆ ಮತ್ತಷ್ಟು ವಿಶಾಲವಾಯಿತು. ಬುದ್ಧಿ ಶ್ರೀಮಂತವಾಯಿತು. ಆಲೋಚನಾ ಶಕ್ತಿ ಪ್ರಜ್ವಲಗೊಂಡಿತು. ಪ್ರತಿಭೆ ದೇದೀಪ್ಯಮಾನವಾಯಿತು. ಆಧ್ಯಾತ್ಮ ಸಾಧನೆಗೆ ಸ್ಫೂರ್ತಿ ದೊರೆಯಿತು. ಒಟ್ಟಿನಲ್ಲಿ ಹೊಸ ಸಂಕ್ರಮಣ ಅವರ ಜೀವನದಲ್ಲಿ ಆರಂಭವಾಯಿತು.

ವೃತ್ತಿ ಜೀವನ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಜೀವನವನ್ನು ಆರಂಭಿಸಿದ ಕುವೆಂಪು ಅವರು ಉಪಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ೧೯೫೫ ರಲ್ಲಿ ಮೈಸೂರು ಮಹಾರಾಜ ಕಾಲೇಜಿನ ಪ್ರಾಚಾರ್ಯರಾದರು. ಮಾರನೆಯ ವರ್ಷ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದರು. ಮೈಸೂರು ವಿಶ್ವವಿದ್ಯಾನಿಲಯದ ಗಂಗೋತ್ರಿಯ ಗುಡಿ ಕಟ್ಟಿದ ಕೀರ್ತಿ ಅವರದು. ಕನ್ನಡಕ್ಕೆ ಅವರು ಮೂಡಿಸಿದ ಕೋಡು ಎಲ್ಲದಕ್ಕಿಂತ ಎತ್ತರ.

ಪ್ರಥಮ ಕವನ ಸಂಕಲನ

ಕುವೆಂಪು ಅವರು ಕನ್ನಡದಲ್ಲಿ ಬರೆದ ಕವನಗಳ ಪ್ರಥಮ ಸಂಕಲನ 'ಕೊಳಲು' ಮಲೆನಾಡಿನ ನಿಸರ್ಗದ ಚೆಲುವು, ಶಿಲ್ಪವೈಭವ, ಸುಗ್ಗಿಯ ಹಿಗ್ಗು ಮೊದಲಾದ ವಿವಿಧ ವಿಷಯಗಳು ಈ ಕವನ ಸಂಕಲನದ ವಸ್ತು ವಿಷಯಗಳು. ಮಲೆನಾಡಿನ ಗಿಡ, ಮರ, ಬಳ್ಳಿ, ಗಿರಿ, ನದಿ, ಕಂದರ, ಕಾಜಾಣ, ಕೋಗಿಲೆ, ಗಿಳಿ, ತೇನೆ, ಕಾಮಳ್ಳಿ, ಹುಲಿ, ಹಂದಿ, ದೊಡ್ಡ ಕಡ, ಮಿಗ, ಮಸಿಯ, ಕೋಡಗ, ಸಾರಗ, ಸೀತಾಳ, ಬಕುಳ, ಮಲ್ಲಿಗೆ, ಮರಗಿ, ಸುರಹೊನ್ನೆ, ಉದಯಾಸ್ತ, ಋತು ಪರಿವರ್ತನೆ ಒಂದೊಂದು ಗುರುವಾಗಿ ಅವರಿಗೆ ನಡೆಗಲಿಸಿವೆ ನುಡಿಗಲಿಸಿವೆ. ಎನ್ನುತ್ತಾರೆ ಡಾ|| ದೇ.ಜ.ಗೌ. ಅವರು.

'ಸುತ್ತಣ ಪರಿಸರ, ಅವರಲ್ಲಿ ಮೂಡಿಬಂದ ಆಜನ್ಮ ಸಂಸ್ಕಾರ ಬಾಲ್ಯದಲ್ಲೇ ಭಾವಲೋಕ ವಿಹಾರ, ಆತ್ಮಾನುಭೂತಿಯ ವಿಚಾರ, ಮೊದಮೊದಲು ಜನ ಬಳಕೆ, ಕ್ರಮೇಣ ಏಕಾಂತದ ಬಯಕೆ. ಬಹಿರ್ಮುಖಕ್ಕಿಂತ ಅಂತರ್ಮುಖದ್ದೇ ಮೇಲುಗೈ'.

ಸಾಹಿತ್ಯ ಕೃಷಿ

ಕುವೆಂಪು ಅವರ ಸಾಹಿತ್ಯ ಕೃಷಿ ಕ್ಷೇತ್ರ ವಿಶಾಲವಾದುದು. ಅಷ್ಟೇ ವರ್ಣಮಯವಾದುದು. ಕಥೆ, ಕಾದಂಬರಿ, ಮಹಾಕಾವ್ಯ, ಖಂಡಕಾವ್ಯ, ಕಥನ ಕವನ, ಭಾವಗೀತೆ, ನಾಟಕ, ವಿಮರ್ಶೆ, ಕಾವ್ಯ ಮೀಮಾಂಸೆ, ಭಾಷಣ, ಲೇಖನ, ಚೇತನ ಚರಿತ್ರೆ, ಮಕ್ಕಳ ಸಾಹಿತ್ಯ, ಆತ್ಮಕಥೆ, ಅನುವಾದ ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೈಯಾಡಿಸಿ ೭೦ ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ತಾವು ಮುಟ್ಟಿದ್ದೆಲ್ಲವನ್ನು ಚಿನ್ನವಾಗಿಸಿದ್ದಾರೆ.

ಶ್ರೀ ರಾಮಯಣ ದರ್ಶನಂ

ಕನ್ನಡ ಕಾವ್ಯ ದೇವಿಗೆ ಕಿರೀಟ ತೊಡಿಸಿದ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ಒಂಬತ್ತು ವರ್ಷಗಳ ತಪಸ್ಸಿನ ಫಲ. ರಾವಣನಲ್ಲಿ ರಾಮನನ್ನು ಕಾಣುವ

ದಿವ್ಯ ಚೇತನ. ವಾಲ್ಮೀಕಿ ರಾಮಾಯಣದ ತಳಹದಿಯ ಮೇಲೆ ಹೊಸ ದೃಷ್ಟಿಯನ್ನು ಮೇಳವಿಸಿ ಕುವೆಂಪು ಸೃಷ್ಟಿಸಿದ ಮಹಾಸೌಧ. ವೇದಾಂತ ದರ್ಶನದೊಂದಿಗೆ ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ತಿರುಳನ್ನು ಕಸಿಗೊಳಿಸಿ ಮಹಾಕಾವ್ಯದ ಕಲ್ಪನೆಗೆ ಹೊಸ ಅರ್ಥವನ್ನು ಹೊಸ ದರ್ಶನವನ್ನು ನೀಡಿ ಕನ್ನಡಕ್ಕೆ ಆಧುನಿಕ ಭಾರತೀಯ ಸಾಹಿತ್ಯದಲ್ಲಿ ಅಗ್ರಮಾನ್ಯ ಸ್ಥಾನ ನೀಡಿದ್ದು ಅವರ ಅಪೂರ್ವ ಸಾಧನೆ.

ಡಾ॥ ಎಚ್.ತಿಪ್ಪೇರುದ್ರಸ್ವಾಮಿ ಅವರು ಶ್ರೀರಾಮಾಯಣ ದರ್ಶನಂ ಮಹಾಕಾವ್ಯವನ್ನು ಕುರಿತು 'ರಾಮಾಯಣದ ಒಟ್ಟು ಕಥೆಯನ್ನು ಕುವೆಂಪು ಅವರು ಕಂಡಿರುವ ದೃಷ್ಟಿ ವಿಶಿಷ್ಟವಾಗಿದೆ. ಈ ಕಥೆಯನ್ನು ಅವಲಂಬಿಸಿ ಚಿರಂತನವಾದ ಒಂದು ದರ್ಶನದ ಅವತಾರವನ್ನು ಅವರು ಅನುಭವ ವೇದ್ಯವಾಗುವಂತೆ ಇಳಿಸಿ ತಂದಿದ್ದಾರೆ. ಕಥೆಯ ಚೌಕಟ್ಟು ವಾಲ್ಮೀಕಿಯದೇ ಆದರೂ ಅದರ ಆಂತರ್ಯದಲ್ಲಿರುವ ಚಿತ್ರ ಆಧುನಿಕ ಯುಗದ ವೈಜ್ಞಾನಿಕ ಪ್ರಜ್ಞೆಯಿಂದ ಸಿದ್ಧವಾದದ್ದು. ಅಂತೆಯೇ ಭಾರತೀಯ ತಾತ್ತ್ವಿಕ ಪರಂಪರೆಯಿಂದ ಪುಷ್ಟವಾದದ್ದು. ರಾಮ ಅವತಾರಪುರುಷನಾಗಿ ಪರಿಣಮಿಸಿ ನಾಡಿನ ಸಮಷ್ಟಿ ಚೇತನದಲ್ಲಿ ಚೈತನ್ಯ ಶಕ್ತಿಯಾಗಿ ಬೆಳೆದು ಬಂದುದನ್ನು ಕುವೆಂಪು ದಾರ್ಶನಿಕ ದೃಷ್ಟಿಯಿಂದ ನೋಡುತ್ತಾರೆ' ಎಂದು ಹೇಳಿದ್ದಾರೆ.

ಕುವೆಂಪು ಅವರ ಸಮಕಾಲೀನ, ಶ್ರೇಷ್ಠಕವಿ, ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ॥ ದ.ರಾ. ಬೇಂದ್ರೆ ಅವರು ಕುವೆಂಪು ಅವರ ಸಾಹಿತ್ಯ ಸಾಧನೆ ಪ್ರತಿಭೆಯನ್ನು ಕುರಿತು ತಮ್ಮ ಕವನದ ಮೂಲಕ ನುಡಿ ನಮನ ಸಲ್ಲಿಸಿದ್ದಾರೆ.

ಯುಗದ ಕವಿಗೆ ಜಗದ ಕವಿಗೆ
ಶ್ರೀರಾಮಾಯಣ ದರ್ಶನರಿಂದಲೆ ಕೈ
ಮುಗಿದ ಕವಿಗೆ ಮಣಿಯದವರು ಯಾರು?
ರಾಮಕೃಷ್ಣ ವಚನೋದಿತ ಪ್ರತಿಭೆ ತೆರೆದ
ಕವನ ತಲೆಗೆ ತಣಿಯದವರು ಆರು?
ಮಲೆನಾಡಿನ ಸೌಂದರ್ಯಕೆ ಕುಣಿದಾಡಿದ
ಕವಿಯ ಜತೆಗೆ ಕುಣಿಯದವರು ಆರು?

ಬೇಂದ್ರೆಯವರ ಒಂದೊಂದು ನುಡಿ ಮುತ್ತುಗಳು ಕುವೆಂಪು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಒಬ್ಬ ಕವಿ ಮತ್ತೊಬ್ಬ ಕವಿಗೆ ಕೊಡುವ ಅತ್ಯುನ್ನತವಾದ ಗೌರವ.

ಪ್ರಶಸ್ತಿಗಳು

ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಮಹಾ ಕಾವ್ಯಕ್ಕೆ ಮೊದಲ ಪ್ರಶಸ್ತಿ ನೀಡುವುದರ ಮೂಲಕ ಕೇಂದ್ರ ಸಾಹಿತ್ಯ ಅಕಾಡೆಮಿಯು ಕನ್ನಡದ ಬೆಳವಣಿಗೆಯನ್ನು ಗೌರವಿಸಿತು. ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟ ಹೆಗ್ಗಳಿಕೆ.

ಹಲವು ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್, ಪ್ರಶಸ್ತಿಗಳು ಅವರು ಬೇಡವೆಂದರೂ ಬಿಡಲಿಲ್ಲ; ಬೆನ್ನತ್ತಿ ಬಂದವು. ಧಾರವಾಡದಲ್ಲಿ ನಡೆದ ೩೯ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಪದ್ಮಭೂಷಣ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿ, ಪಂಪ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ-ಹೀಗೆ ಹಲವಾರು ಉನ್ನತ ಪ್ರಶಸ್ತಿಗಳನ್ನು ಪಡೆದ ಗೌರವ, ಪ್ರಶಸ್ತಿಗಳಿಂದ ಕುವೆಂಪು ಅವರಿಗಿಂತ ಪ್ರಶಸ್ತಿಗಳಿಗೆ ಘನತೆ ಗೌರವ ಬಂದಿತು.

ಡಾ॥ ಹಾ.ಮಾ. ನಾಯಕ ಅವರು ಹೇಳಿರುವಂತೆ 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರ ಮಾಂತ್ರಿಕ ಲೇಖನಿ ಅಲಂಕರಿಸದ ಸಾಹಿತ್ಯ ಪ್ರಕಾರವಿಲ್ಲ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಹೆಚ್ಚು ಕಡಿಮೆ ಒಂದೇ ಬಗೆಯಾದ ಯಶಸ್ಸನ್ನು ಗಳಿಸಿದ ಲೇಖಕರು, ಯಾವುದೇ ಭಾಷೆಯಲ್ಲಾದರೂ ಹೆಚ್ಚಾಗಿ ಸಿಕ್ಕುವುದಿಲ್ಲ. ಈ ಬಗೆಯ ವಿರಳ ಪಂಕ್ತಿಯಲ್ಲಿ ಕನ್ನಡದ ಕುವೆಂಪು ಒಬ್ಬರೆನ್ನುವುದು ಅಭಿಮಾನದ ಸಂಗತಿ'.

ಡಾ॥ ಹಾ.ಮಾ. ನಾಯಕರ ಈ ಮಾತುಗಳು ಅರ್ಥಪೂರ್ಣ. ಸಮಸ್ತ ಕನ್ನಡಿಗರ ಅಭಿಮಾನಕ್ಕೆ ಪಾತ್ರರಾದ ಕವಿ ಕನ್ನಡದಲ್ಲಿ ಮತ್ತೊಬ್ಬರಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು.

ವ್ಯೋಮ ವ್ಯಕ್ತಿ

ಸಾಹಿತ್ಯದ ಮೂಲಕ ಸಾಮಾಜಿಕ ಬದುಕನ್ನು ಕೆದಕಿ ನೋಡಿರುವ ಈ ನುಡಿ ವೈದ್ಯ ಅದರ ರೋಗ ನಿವಾರಣೆಗೆ ಕೊಟ್ಟ ಗುಳಿಗೆಗಳು ಒಂದೆರಡಲ್ಲ. 'ಶೂದ್ರನಾಗಿ ಸರಸ್ವತಿಯ ವೀಣೆ ಹಿಡಿದು ನುಡಿಸಿದ ಕ್ರಾಂತಿ ಶಕ್ತಿ' 'ಗೊಬ್ಬರದ ಮೇಲೆ ಕಬ್ಬ ಬರೆದು' ಸಂಪ್ರದಾಯದ ಹುಬ್ಬೇರಿಸಿದ ವ್ಯೋಮ ವ್ಯಕ್ತಿ.

ಕಾವ್ಯ ಗೊಮ್ಮಟ

ಕನ್ನಡ ಕವಿಗಳು ಕಂಡ ಕುವೆಂಪು- ಕಾವ್ಯ ಗೊಮ್ಮಟ ದೇವ, ದ್ರಷ್ಟಾರ, ಆದಿಕವಿ, ಸಂಭೂತಿ ಜ್ಞಾನ ಗಂಗೋತ್ರಿ, ನುಡಿ ರೂವಾರಿ, ಶೃಂಗಸಮ ವ್ಯಕ್ತಿ, ನಾಡು ನುಡಿಗಳಿಗೆ ಚಿರಮಂತ್ರ ಶಕ್ತಿ, ಕಾವ್ಯ ಮಯೂರ, ಯುಗದ ಕವಿ, ಜಗದಕವಿ, ಕರುನಾಡ ಸಿರಿನುಡಿಯ ನಿತ್ಯ ನಂದಾದೀಪ.

ಗೊ.ರು. ಚನ್ನಬಸಪ್ಪ ಅವರು ಹೇಳಿದಂತೆ 'ಮಹಾಕವಿ' ಪುಟ್ಟಪ್ಪನವರು ಭಾವ ಲೋಕದಲ್ಲಿದ್ದರೂ ಭೂಮಿ ಬಿಟ್ಟು ನಿಂತವರಲ್ಲ. ವ್ಯಕ್ತಿ, ಸಮಾಜ, ರಾಷ್ಟ್ರಗಳ ಬದುಕಿಗೆ ಬೆಲೆ ಕೊಟ್ಟವರು. ಇಲ್ಲಿನ ಸಿಹಿ ಕಹಿ ಅನುಭವಿಸಿದವರು. ಶಿವಶರಣರು ಹೇಳುವಂತೆ ಕಳ್ಳಗಂಜಿ ಕಾಡ ಹೊಕ್ಕವರಲ್ಲ. ಹುಲಿಗಂಜಿ ಹುತ್ತ ಸೇರಿದವರಲ್ಲ. ಕಾಲಕ್ಕಂಜಿ ಭಕ್ತರಾದವರಲ್ಲ. ಮಾನವ ಜೀವನವನ್ನು ತಮ್ಮದೇ ಆದ ದೃಷ್ಟಿಯಿಂದ ಕಂಡುಕೊಂಡವರು.

ಇದ್ದು ಇಲ್ಲದಂತೆ ಇರುವ ಬಗೆಯನ್ನು ತೋರಿಸಿ ಕೊಟ್ಟವರು.

ಕಾವ್ಯಧರ್ಮಕ್ಕೆ ಕುವೆಂಪು ಒಂದು ವ್ಯಾಖ್ಯಾನ. ಅವರ ತತ್ತ್ವದರ್ಶನ ವಿನೂತನ, ನಿತ್ಯದರ್ಶನ, ಕಲ್ಲು ರೊಟ್ಟಿಯಾದರೆ ಮಾತ್ರ ಪವಾಡವೇನು? ಕಲ್ಲು, ಕಲ್ಲಾಗಿರುವುದೇ ಮಹತ್ತರ ಪವಾಡವಲ್ಲವೇನು? ಕುವೆಂಪು ಅವರದು ಜಡದಲ್ಲಿ ಚೇತನ ಕಾಣುವ ಅಂತರ್ದರ್ಶನ ಪ್ರಕೃತಿಯೇ ಅವರ ಭಗವಂತ.

ಕನ್ನಡದ ಬಗೆಗೆ ಕರ್ನಾಟಕದ ಬಗೆಗೆ, ಕುವೆಂಪು ಅವರು ಬರೆದಂತೆ ಬರೆದವರು ವಿರಳ. ಕನ್ನಡಕ್ಕಾಗಿ, ಕರ್ನಾಟಕಕ್ಕಾಗಿ, ಭಾರತಕ್ಕಾಗಿ ತಮ್ಮ ಬದುಕನ್ನು ಮುಡುಪಾಗಿಟ್ಟ ಮಹಾನ್ ವ್ಯಕ್ತಿ, ನಾಡು ಒಂದಾಗಿ ನುಡಿ ಒಂದಾಗಿ, ಜನಮನದಲ್ಲಿ ಭಾವೈಕ್ಯ ಬೆಳೆಯಬೇಕು ಎಂಬುದು ವಿಶ್ವಕವಿಯ ನಿರಂತರ ಕಾಳಜಿಯಾಗಿತ್ತು.

ಕುವೆಂಪು ಅವರು ಸುಮಾರು ಏಳು ದಶಕಗಳ ಕಾಲ ಕನ್ನಡ ಸಾಹಿತ್ಯವನ್ನು ಅಪೂರ್ವ ರೀತಿಯಲ್ಲಿ ವೈವಿಧ್ಯಮಯವಾಗಿ ಶ್ರೀಮಂತಗೊಳಿಸಿದ ಸಾಹಿತ್ಯ ಕ್ಷೇತ್ರದ ದಿಗ್ಗಜ, ಅಗ್ರಮಾನ್ಯ. ಮನುಜಮತ ವಿಶ್ವಪಥ ಅವರ ಬಾಳಿನ ಉಸಿರಾಗಿತ್ತು. ಎಲ್ಲ ಮೌಢ್ಯಗಳನ್ನು, ಸಂಕುಚಿತ ಭಾವನೆಗಳನ್ನು ತೊಡೆದು ನಿರಂಕುಶಮತಿಗಳಾಗಿ ಎಂಬುದು ಅವರ ದಿವ್ಯ ಸಂದೇಶವಾಗಿತ್ತು.

'ಯುಗದ ಕವಿ, ದೃಷ್ಟಾರ, ಕನ್ನಡದ ಮುಂಬರಿವಿಗಾಗಿ ಸದಾ ಶ್ರಮಿಸಿದ ಮಹಾನ್ ಚೇತನ, ವಿಚಾರವಾದಿ, ವಿಶ್ವಪ್ರೇಮಿ, ಕನ್ನಡಕ್ಕಾಗಿ ಕೆಚ್ಚಿನಿಂದ ಹೋರಾಡುವವರ ತಂಡದ ಸ್ಫೂರ್ತಿ, ಮಾನಸ ಗಂಗೋತ್ರಿಯ ಕನಸುಗಾರ, ಮಹಾ ಮಾನವ ಕುವೆಂಪು ಅವರದು ಈ ಶತಮಾನ ಕಂಡ ಮಹೋನ್ನತ ವ್ಯಕ್ತಿತ್ವ. ಹೀಗೊಬ್ಬರು ನಮ್ಮ ನಡುವೆ ಇದ್ದರು ಇಂಥ ಇನ್ನೊಬ್ಬರನ್ನು ಈ ನಾಡು ಕಾಣಬೇಕಾದರೆ ಇನ್ನೆಷ್ಟು ಯುಗಬೇಕೊ ಎಂದಿರುವ ಎಚ್ಚೆಸ್ಕೆ ಅವರ ಮಾತು ಅರ್ಥ ಪೂರ್ಣ.

ಗ್ರಂಥ

೧. ಶ್ರೀರಾಮಾಯಣ ದರ್ಶನಂ ಮಹಾಕಾವ್ಯ- ಡಾ॥ಎಚ್.ತಿಪ್ಪೇರುದ್ರಸ್ವಾಮಿ

೨. ಸಂದರ್ಭ: ಗೊ.ರು.ಚನ್ನಬಸವಪ್ಪ,

೩. ಕರ್ನಾಟಕವಿಕಾಸ ಡಿಸೆಂಬರ್ ೧೯೯೪: ಎಚ್.ಎಸ್. ಸಿದ್ಧಗಂಗಪ್ಪ

೪. ನಿಯತ ಕಾಲಿಕೆಗಳು

***

ದೇವುಡು ಅವರ ಪೌರಾಣಿಕ ಕಾದಂಬರಿಗಳು

-ಡಾ||ಸಿ.ಎಸ್. ಶಿವಕುಮಾರಸ್ವಾಮಿ (ಕುಮಾರಚಲ್ಯ)

೧

ನವೋದಯ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಶಿಷ್ಟ ಮನೋಧರ್ಮದ ಕಾದಂಬರಿಗಳನ್ನು ಬರೆದ 'ದೇವುಡು' ಹೆಸರು ನೆನಪಾಗುವುದೇ ಅವರ ಪೌರಾಣಿಕ ಕಾದಂಬರಿಗಳಿಂದ ಎನ್ನಬಹುದು. ಕನ್ನಡ ಕಾದಂಬರಿಗಳಲ್ಲಿ ಐತಿಹಾಸಿಕ ಮತ್ತು ಸಾಮಾಜಿಕ ವಸ್ತುವಿಗೆ ದೊರೆತಷ್ಟು ಮಹತ್ವ ಪೌರಾಣಿಕ ವಸ್ತುವಿಗೆ ದೊರೆತಿಲ್ಲ. ಹೀಗಾಗಿ, ಪುರಾಣ ವಸ್ತುವನ್ನು ಒಳಗೊಂಡ ಕಾದಂಬರಿಗಳು ಕನ್ನಡದಲ್ಲಿ ವಿರಳ. ಈ ದೃಷ್ಟಿಯಿಂದ ದೇವುಡು ಅವರ 'ಮಹಾಬ್ರಾಹ್ಮಣ' (೧೯೫೨), 'ಮಹಾಕ್ಷತ್ರಿಯ' (೧೯೬೨), 'ಮಹಾದರ್ಶನ' (೧೯೬೭) ಕನ್ನಡದ ಅಪರೂಪದ ಕೃತಿಗಳು. ಇವು ಕಟ್ಟಿಕೊಡುವ ಪ್ರಪಂಚ ತುಂಬಾ ವಿಸ್ತಾರವಾದುದು.

ದೇವುಡು ಅವರ ಸೃಜನಶೀಲ ನೆಲೆಗಳಿರುವುದು ಸನಾತನ ಭಾರತೀಯ ಸಂಸ್ಕೃತಿಯಲ್ಲಿ. ಅವರ ಚಿಂತನೆಗೆ ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಭಾಗವತ ಮೊದಲಾದ ಗ್ರಂಥಗಳು ಗ್ರಾಸ ಒದಗಿಸಿವೆ. ತಮ್ಮ ತಾತ್ವಿಕ ಅನ್ವೇಷಣೆಗಾಗಿ ಅನೇಕ ಜ್ಞಾನಶಾಖೆಗಳನ್ನು ಅವರು ಅವಲಂಬಿಸುತ್ತಾರೆ. ಅವರ ತತ್ತ್ವಜ್ಞಾನ ಸಂಪತ್ತು, ತರ್ಕನೈಪುಣ್ಯ ಅನನ್ಯವಾದುದು. ಉದ್ಭವಿಸುವ ಅತ್ಯಂತ ಜಟಿಲವಾದ ಸಮಸ್ಯೆಗಳಿಗೆ ಸಮರ್ಪಕವಾದ ಉತ್ತರವನ್ನು ಅವರು ಪ್ರಾಚೀನ ಗ್ರಂಥಗಳಲ್ಲಿ ಕಂಡುಕೊಳ್ಳುತ್ತಾರೆ. ಭಾರತೀಯ ಪರಂಪರಾಗತ ಮೌಲ್ಯಗಳನ್ನು ಶೋಧಿಸಿ ತೆಗೆದುಕೊಡುವುದರೊಂದಿಗೆ, ಅವುಗಳನ್ನು ಕಾಲಾನುಸಾರಿಯಾಗಿ ನವೀನಗೊಳಿಸಿ ನೀಡುವ ಪ್ರಯತ್ನವನ್ನು ಮಾಡಿದ್ದಾರೆ. ಪಾಂಡಿತ್ಯದ ಸೆಳೆತ, ಶಾಸ್ತ್ರದ ನಿರ್ಬಂಧಗಳು ಬರವಣಿಗೆಯಲ್ಲಿ ಪ್ರವೇಶಿಸಿದರೂ, ಸ್ವಂತ ಪ್ರತಿಭೆ ಪ್ರಬಲವಾಗಿ ತೆರೆದುಕೊಳ್ಳುವ ಕಡೆ ಅವು ಗೌಣವೆನಿಸುತ್ತವೆ. ಪ್ರತಿಭೆ, ಪಾಂಡಿತ್ಯ ಹಾಗೂ ಆಧುನಿಕ ವಿಚಾರಸರಣಿ ಮೇಳೈಸಿದಂತಿರುವ ವಿಭಿನ್ನ ಬಗೆಯ ಕಾದಂಬರಿಗಳನ್ನು ದೇವುಡು ಕನ್ನಡಕ್ಕೆ ನೀಡಿದ್ದಾರೆ.

ಯಾವುದೋ ಒಂದು ಕಾಲದಲ್ಲಿ ವಾಸ್ತವವಾಗಿ ನಡೆದಂತೆ ಕಾಣುವ ಕಥಾನಕಗಳನ್ನು ಪುರಾಣಗಳೆಂದು ಹೇಳಲಾಗಿದೆ. ಅವುಗಳನ್ನು ನಡೆದ ಘಟನೆಗಳೆಂದು, ಸತ್ಯಗಳೆಂದು ತೆಗೆದುಕೊಳ್ಳಲು ಸಾಧ್ಯವಿಲ್ಲ. ಪುರಾಣಗಳು ಅಸತ್ಯದ ಕಟ್ಟುಗಳಂತೆ ಭಾಸವಾದರೂ, ಗಹನವಾಗಿ ವಿಚಾರ ಮಾಡಿದರೆ ಅವು ಸತ್ಯಗಳನ್ನು ಸೂಚಿಸುವ ಕಥಾಪ್ರತಿಮೆಗಳು ಮಾತ್ರ. ಅವು ಅನಿಶ್ಚಿತ ಕಾಲಕ್ಕೆ ಸಂಬಂಧಿಸಿದವು. ಏಕೆಂದರೆ, ಸಾವಿರಾರು ವರ್ಷಗಳಿಂದ ಬೆಳೆದು ಬಂದ ಕಲ್ಪನೆಯ ಕಥೆಗಳನ್ನು, ವ್ಯಕ್ತಿಗಳನ್ನು ನಿರ್ದಿಷ್ಟ ಕಾಲಮಾನವಿಲ್ಲದ ಚೌಕಟ್ಟಿನೊಳಗೆ

ಪುರಾಣ ತೋರಿಸುತ್ತದೆ. ನಾವು ಎಷ್ಟೆಷ್ಟು ಸನಾತನ ಯುಗಕ್ಕೆ ಸರಿಯುತ್ತೇವೆಯೋ ಅಷ್ಟಷ್ಟು ಜನಜೀವನದ ಚಿತ್ರ ಕಲ್ಪನೆಯಾಗಿ ಪುರಾಣ ರೂಪವನ್ನು ಧರಿಸುತ್ತದೆ. ಹೀಗಾಗಿ, ಪುರಾಣವೆಂದರೆ ಕೇಳಿ ಮರೆಯುವ ಕತೆ ಎಂಬ ನಿಲುವಿಗೆ ಬರಲಾಗಿದೆ. ಆದರೆ ಇದೇ ಕೊನೆಯ ನಿರ್ಧಾರವಾಗಬೇಕಿಲ್ಲ. ಅವು ಜಗತ್ತಿನ ಅಸ್ತಿತ್ವದ ವಿಕಾಸಶೀಲ ಗತಿಗಳನ್ನು ತೆರೆದು ತೋರುವ ಕಥನಗಳು. ಇಂಥವುಗಳು ಸಾಹಿತ್ಯ ಪರಂಪರೆಯಲ್ಲಿ ಪುನರ್‌ನಿರ್ಮಾಣಗೊಂಡು ಅಥವಾ ನವೀಕರಣಗೊಂಡು ಪ್ರಾಚುರ್ಯಕ್ಕೆ ಬಂದಿವೆ. ಆದ್ದರಿಂದ 'ಪುರಾಣ' ಎಂಬುದನ್ನು ಸೂತ್ರೀಕರಿಸುವುದಾಗಲಿ, ತರ್ಕ ಮತ್ತು ಪ್ರಮಾಣಗಳಿಂದ ಸಮರ್ಥಿಸುವುದಾಗಲಿ ಕಷ್ಟ. ಹೀಗಿದ್ದೂ ಅವುಗಳನ್ನು ಪೂರ್ಣವಾಗಿ ನಿರ್ಲಕ್ಷಿಸಲು ಆಗುವುದಿಲ್ಲ. ಅವುಗಳು ಒಳಗೊಂಡಿರುವ ಆಶಯ, ಪ್ರತಿಪಾದಿಸುವ ಮೌಲ್ಯಗಳು ಕಾಲಕಾಲಕ್ಕೆ ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುವ ಸಾಧ್ಯತೆಗಳಿವೆ. ಕೊನೆಗೂ ಪುರಾಣದ ಅಧಿಕೃತತೆ ಇರುವುದು ಅದು ಪ್ರತಿಪಾದಿಸುವ ಆರ್ಷೇಯ ಪೃಚ್ಛೆ, ಜೀವನ, ಪರಿಸರದ ಮೂಲ ರೂಪಗಳಲ್ಲಿ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಇಂಥ ಕಡೆ ಸಮಾನ ಮೂಲಾಂಶಗಳುಳ್ಳ ಜನಾಂಗವೊಂದರ ತಲೆಮಾರಿನ ಕಥೆ ಸಿದ್ಧವಾಗುವುದರಿಂದ ಪುರಾಣಕ್ಕೆ ಒಂದು ಖಾಚಿತ್ಯ ಲಭ್ಯವಾಗುತ್ತದೆ.

ಕನ್ನಡ ಸಾಹಿತ್ಯ ಪುರಾಣಾಂಶಗಳನ್ನು ಅಪಾರವಾಗಿ ಒಳಗೊಂಡಿದೆ. ವಿವಿಧ ಪ್ರಕಾರಗಳಲ್ಲಿ ಅದು ಬೇರೆ ಬೇರೆ ರೂಪದಲ್ಲಿ ಅನಾವರಣವಾಗಿರುವುದರಿಂದ ಭಿನ್ನ ಭಿನ್ನ ತಿರುವುಗಳಿವೆ. ಕಾವ್ಯಗಳಲ್ಲಿ ಸಾದೃಶ್ಯ, ರೂಪಕ, ಪ್ರತಿಮಾತ್ಮಕವಾಗಿ ಅಳವಟ್ಟಿದೆ. ಗದ್ಯ ಬರಹಗಳಲ್ಲಿ ಕಲ್ಪಕತೆ, ವೈಚಾರಿಕತೆಯ ನೆಲೆಗಟ್ಟಿನಲ್ಲಿ ಬಂದಿದೆ. ಕನ್ನಡ ಕಾದಂಬರಿಗಳಲ್ಲಿ ಪೌರಾಣಿಕತೆಯನ್ನು ಗುರುತಿಸುವಾಗ ತತ್‌ಕ್ಷಣ ನೆನಪಿಗೆ ಬರುವವರು ದೇವುಡು. ಅವರು ಪುರಾಣಜಿಜ್ಞಾಸೆಯ ಮೂಲಕ ಕಟ್ಟಿಕೊಡುವ ಲೋಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹೊಸದು, ವಿಶಿಷ್ಟವಾದದ್ದು. ನಮ್ಮ ದೇಶದಲ್ಲಿ ಪುರಾಣ, ಇತಿಹಾಸಗಳನ್ನು ಕಾಲಕಾಲಕ್ಕೆ ಹೊಸದೃಷ್ಟಿ, ಸಂವೇದನೆಗಳಿಂದ ವಿವೇಚಿಸಿ ಸೃಜನಶೀಲಸಾಹಿತ್ಯ ಸೃಷ್ಟಿಯಾಗುತ್ತಾ ಬಂದಿರುವುದು ಮಹತ್ವದ ವಿಷಯ. ಇದು ನಮ್ಮ ಸಾಂಸ್ಕೃತಿಕ ಜೀವಂತಿಕೆಯನ್ನು ತೋರಿಸುತ್ತದೆ. ಇಂತಹ ಸ್ಪಂದನಗಳು ಮತ್ತು ಸೃಜನಕ್ರಿಯೆಗಳು ಕಲಾತ್ಮಕ ಯಶಸ್ಸನ್ನು ಸಾಧಿಸಿವೆಯೇ ಇಲ್ಲವೇ ಎನ್ನುವುದಕ್ಕಿಂತ ಅವುಗಳ ಆಶಯ ಮತ್ತು ಪ್ರಯತ್ನಗಳೇ ಹೆಚ್ಚು ಗಮನಾರ್ಹವಾದವು. ಈ ಹಿನ್ನೆಲೆಯಲ್ಲಿ ದೇವುಡು ಅವರ ಪ್ರಯೋಗಶೀಲತೆ ಮತ್ತು ಚಿಂತನಶೀಲತೆ ಮುಖ್ಯವೆನಿಸುತ್ತದೆ. ಅವರು ಪುರಾಣ ಸಂಗತಿಗಳಿಗೆ ತಮ್ಮದೇ ಆದ ದೃಷ್ಟಿಯಿಂದ ಸೃಜನಶೀಲವಾಗಿ ಪ್ರತಿಕ್ರಿಯಿಸಿದ್ದಾರೆ. ಅನೇಕ ಕಡೆ ಹೊಸ ವ್ಯಾಖ್ಯಾನಗಳನ್ನು ನೀಡಿದ್ದಾರೆ.

ಅಭಿವಂದನಾ

೨

'ಮಹಾಬ್ರಾಹ್ಮಣ' ವಿಶ್ವಾಮಿತ್ರನನ್ನು ಕುರಿತ ಕಥೆ. ಕ್ಷತ್ರಿಯನೊಬ್ಬ ತಪಸ್ಸಿನಿಂದ ಬ್ರಹ್ಮರ್ಷಿಯಾಗುವುದರ ಮೂಲಕ ವೇದಕಾಲೀನ ವರ್ಣಾಶ್ರಮ ವ್ಯವಸ್ಥೆ ಹೇಗೆ ಬದಲಾಗುತ್ತದೆ ಎಂಬುದನ್ನು ಈ ಕಾದಂಬರಿ ಪ್ರತಿಮಿಸಿದೆ. ನಂದಿನೀಧೇನುವನ್ನು ವಶಪಡಿಸಿಕೊಳ್ಳಬೇಕೆಂದು ಬಂದು, ವಸಿಷ್ಠರಿಂದ ಅವಮಾನಿತನಾದ ಕೌಶಿಕ ಹಠದಿಂದ ತಪಸ್ಸಾಧನೆ ಮಾಡಿ ಬ್ರಹ್ಮರ್ಷಿ ಪದವಿಯನ್ನು ಗಳಿಸಿದ ಕಥೆ ಪುರಾಣ ಪ್ರಸಿದ್ಧವಾಗಿದೆ. ಈ ಕಾದಂಬಂರಿಯಲ್ಲಿ ದೇವುಡು ವೇದ ಕಾಲೀನ ಜೀವನದ ವಿವರಗಳನ್ನು ಅನನ್ಯವಾದ ರೀತಿಯಲ್ಲಿ ವರ್ಣಿಸಿದ್ದಾರೆ. ಕ್ಷತ್ರಿಯನಾದ ಕೌಶಿಕ ವಸಿಷ್ಠರ ಜೊತೆ ಸ್ಪರ್ಧಿಸುತ್ತ ಅನೇಕ ಅನುಭವದ ನೆಲೆಗಳನ್ನು ಕಂಡುಕೊಳ್ಳುವುದು ಪ್ರಧಾನ ಸಂಗತಿಯಾದರೂ, ಮನುಷ್ಯನ ಸ್ವಭಾವ ವಿಕಾಸ ಎಲ್ಲ ಕಾಲಕ್ಕೂ ಸಂಬಂಧಿಸಿದ್ದು ಎಂಬುದರ ಕಡೆ ಹೆಚ್ಚು ಗಮನ ನೀಡಲಾಗಿದೆ. ಆದ್ದರಿಂದ ಕಾದಂಬರಿಯಲ್ಲಿ ಬರುವ ಅಪರಿಚಿತವಾದ ಪೌರಾಣಿಕ ಲೋಕ ತನ್ನದೇ ಆದ ವಾಸ್ತವತೆಯ ಮೂಲಕ 'ಪೌರಾಣಿಕ ವಾಸ್ತವತೆ' ಎನಿಸಿಕೊಳ್ಳುತ್ತದೆ. ಮಹಾಕಾವ್ಯ ಮಾದರಿಯ ಕಥಾಭಿತ್ತಿ, ಕಾದಂಬರಿ ನಿರೂಪಣಾ ಕ್ರಮದಿಂದಾಗಿ ಇಂದು ಹೊಸ ಸಾಧ್ಯತೆಗಳನ್ನು ಸೂಚಿಸುವ ಕೃತಿಯಾಗಿದೆ. 'ಹುಟ್ಟಿನಿಂದ ಕ್ಷತ್ರಿಯ, ತಪೋ ಮಹಿಮೆಯಿಂದ ಬ್ರಾಹ್ಮಣ' ಎಂಬುದನ್ನು ಪ್ರತಿಪಾದಿಸಲು ಹೊರಟಿರುವುದರಿಂದ, ಕೌಶಿಕನ ವ್ಯಕ್ತಿ ಸಾಧನೆ ವರ್ಣ ವ್ಯವಸ್ಥೆಯನ್ನು ಮೀರುವ ಹಾಗೆಯೇ ಆ ವ್ಯವಸ್ಥೆಯನ್ನು ಬದಲಿಸುತ್ತದೆ. ಒಂದು ನಿರ್ದಿಷ್ಟ ನೆಲೆಯಲ್ಲಿ ಈ ಕಾದಂಬರಿ ವರ್ಣವ್ಯವಸ್ಥೆಯ ವಿರುದ್ಧ ನಡೆಯುವ ಆಂತರಿಕ ಕಲಹವನ್ನೇ ಕುರಿತದ್ದಾಗಿದೆ.

ವರ್ಣ ವ್ಯವಸ್ಥೆಯನ್ನು ವೇದಕಾಲದ ಹಿನ್ನೆಲೆಯಲ್ಲಿ ಅರ್ಥೈಸುವುದಾದರೆ, ಅದು ಸಮಾನತೆಯ ತತ್ತ್ವದ ಮೇಲೆಯೇ ನಡೆಯುತ್ತಿತ್ತು. ಎಲ್ಲಾ ವರ್ಣಗಳು ಸಮಾನವಾಗಿದ್ದು ವರ್ಣಗಳೊಳಗೆ ಚಲನೆ ಸಾಧ್ಯವಿತ್ತು; ನಿರ್ಬಂಧಗಳಿರಲಿಲ್ಲ. ಕ್ಷತ್ರಿಯ ಕೌಶಿಕ ವಿಶ್ವಾಮಿತ್ರನೆಂಬ ಬ್ರಾಹ್ಮಣನಾದದ್ದೂ ಹೀಗೆಯೇ. ಸಿ.ಹೆಚ್. ಕೂಲೇ ಹೇಳುವಂತೆ ಅದು 'ಮುಕ್ತ ವರ್ಗ ವ್ಯವಸ್ಥೆ' (Open Classes). ಯಯಾತಿ ಮತ್ತು ದುಷ್ಯಂತ ಅನುಕ್ರಮವಾಗಿ ಬ್ರಾಹ್ಮಣ ವರ್ಣಕ್ಕೆ ಸೇರಿದ್ದ ದೇವಯಾನಿ ಮತ್ತು ಶಕುಂತಲೆಯರನ್ನು ವಿವಾಹವಾದದ್ದನ್ನು ಇಲ್ಲಿ ಉದಾಹರಿಸಬಹುದು. ಅಂದರೆ, ವೇದಕಾಲದ ಅನಂತರದಲ್ಲಿ ವರ್ಣವ್ಯವಸ್ಥೆಯಲ್ಲಿ ಪರಿವರ್ತನೆಗಳಾದವು. ನಾಲ್ಕು ಪ್ರತ್ಯೇಕ ಜೀವನ ವಿಧಾನಗಳು ಏರ್ಪಟ್ಟು ವರ್ಣಗಳೊಳಗಿನ ಭೇದ ಹಾಗೂ ನಿರ್ಬಂಧಗಳು ಹೆಚ್ಚುತ್ತಾ ಹೋದುದರ ಪರಿಣಾಮವಾಗಿ ಮುಂದೆ ಜಾತಿ ಸಮೂಹಗಳು ವರ್ಣವ್ಯವಸ್ಥೆಯೊಳಗಿನಿಂದಲೇ ಹುಟ್ಟಿಕೊಂಡವು. ಇಂತಹ ಒಂದು ಗಂಭೀರ ವಿಚಾರ ಸರಣಿ 'ಮಹಾಬ್ರಾಹ್ಮಣ' ಕಾದಂಬರಿಯಲ್ಲಿ ಪ್ರತಿಪಾದಿತವಾಗಿದೆ.

೩

ಸಂವಿಧಾನದ ದೃಷ್ಟಿಯಿಂದ ಕಥಾವಸ್ತುವನ್ನು ಹೀಗೆ ವಿವೇಚನೆಗೆ ತೊಡಗಿಸಿಕೊಳ್ಳಬಹುದು ಎನಿಸುತ್ತದೆ—

೧. ಸಂಘರ್ಷ
೨. ಮಾರ್ಗದರ್ಶನ
೩. ಸಮಸ್ಯೆ-ಪರಿಹಾರ
೪. ಲೈಂಗಿಕತೆ ಮತ್ತು ಅಧ್ಯಾತ್ಮ
೫. ಸಾಧನೆ-ಪದವಿ.

ಕಾದಂಬರಿಯ ಕಥೆ ಆರಂಭವಾಗುವುದು ವಸಿಷ್ಠ-ಅರುಂಧತಿಯರ ಸಂವಾದದ ಮೂಲಕ.'ಹೊಸದೊಂದು ಸೃಷ್ಟಿಯಾಗಲಿದೆ' ಎಂಬ ವಸಿಷ್ಠರ ನುಡಿ ಕಥೆಗೆ ಒಂದು ನಿರ್ದಿಷ್ಟ ನೆಲೆಯನ್ನು ಹಾಕಿ ಕೊಡುತ್ತದೆ. ಮುಂದೆ ಆಗುವುದನ್ನು ಬಲ್ಲ ವಸಿಷ್ಠ ಸಹಜವಾಗಿಯೇ ಕೌಶಿಕನನ್ನು ಆಶ್ರಮಕ್ಕೆ ಬರಮಾಡಿಕೊಳ್ಳುತ್ತಾನೆ. ರಾಜಸ ಮನೋಭಾವದ ಕ್ಷತ್ರಿಯನಿಗೆ ಯಾವುದರಲ್ಲೂ ತಡೆಯನ್ನು ಸಹಿಸುವ ಅಭ್ಯಾಸವಿಲ್ಲದಿರುವುದರಿಂದ, ಕೌಶಿಕ ನಂದಿನೀಧೇನು ಆಶ್ರಮದಲ್ಲಿರುವುದಕ್ಕಿಂತ ಅರಮನೆಯಲ್ಲಿರುವುದೇ ಸರಿಯೆಂಬ ತೀರ್ಮಾನಕ್ಕೆ ಬರುತ್ತಾನೆ. ಇಲ್ಲಿಂದ ರಾಜ ಮತ್ತು ಋಷಿಯ ಮಧ್ಯೆ ವಾಗ್ವಾದ ಆರಂಭವಾಗುತ್ತದೆ. ಅರಸ-ಬ್ರಹ್ಮರ್ಷಿಯ ನೆಲೆಯಲ್ಲಿ ಹುಟ್ಟಿಕೊಂಡ ಚರ್ಚೆ ಅಧಿಕಾರ-ಧರ್ಮದ ಕಡೆ ಹೊರಳುತ್ತದೆ. ಧರ್ಮಜಿಜ್ಞಾಸೆ ಕ್ಷತ್ರಿಯ-ಬ್ರಾಹ್ಮಣ ಎಂಬ ವರ್ಣಾಶ್ರಮ ಪದ್ಧತಿಯನ್ನು ಕುರಿತದ್ದಾಗುತ್ತದೆ. ಈ ಸಂಘರ್ಷಕ್ಕೆ ಇವರಿಬ್ಬರಲ್ಲಿಯ ಸ್ವಭಾವಬೇಧಕ್ಕಿಂತ ವರ್ಣಭೇದ ಕಾರಣವಾಗುತ್ತದೆ.: 'ಕ್ಷತ್ರಿಯರು ಬಾಹುಬಲ ಸಂಪನ್ನರು. ತಮಗೆ ಬೇಕೆಂದ ವಸ್ತುವನ್ನು ಸಂಗ್ರಹಿಸಲು ಆ ಬಾಹುಬಲವು ಅವರಿಗೆ ದೈವದತ್ತವಾದ ಸಾಧನ. ಮಂತ್ರದಿಂದ ಸಂಪಾದಿಸಲು ಸಾಧ್ಯವಾಗದುದನ್ನು ಸಾಹಸದಿಂದ ಸಾಧಿಸುವುದು ಕ್ಷತ್ರಿಯ ಧರ್ಮ' ಎಂಬುದು ಕೌಶಿಕನ ವಾದವಾದರೆ,'ಧರ್ಮವನ್ನು ರಕ್ಷಿಸಲು ಬದ್ಧಕಂಕಣನಾಗಿ ದೀಕ್ಷಿತನಾಗಿರುವ ರಾಜನು ಲೋಭಮೋಹಗಳಿಂದ ಧರ್ಮವನ್ನು ನಿರ್ಣಯಿಸಬಾರದು. ಧರ್ಮಾಭಿವೃದ್ಧಿಗಾಗಿ ರಾಜನು ಯಾವ ಕೆಲಸವನ್ನು ಮಾಡಿದರೂ, ಧರ್ಮವೇ ಆದರೂ ತಮ್ಮ ತಮ್ಮ ಧರ್ಮಸಾಧನವಾಗಿ ಪ್ರಜೆಗಳು ಇಟ್ಟುಕೊಂಡಿರುವ ವಸ್ತುಗಳಲ್ಲಿ ರಾಜನಿಗೆ ಅಧಿಕಾರವಿಲ್ಲ' ಎಂಬುದು ವಸಿಷ್ಠನ ವಾದ. ಇಂಥಕಡೆ ಅಂದಿನ ಸಾಮಾಜಿಕ ವ್ಯವಸ್ಥೆಯೊಳಗಿನ ಸೂಕ್ಷ್ಮತಾಕಲಾಟಗಳು ಸ್ಪಷ್ಟವಾಗುತ್ತವೆ. ಕಾದಂಬರಿಯಲ್ಲಿ ಬರುವ ವರ್ಣಾಶ್ರಮ ಧರ್ಮದ ಪರಿಕಲ್ಪನೆ ವೇದ, ಉಪನಿಷತ್ತಿನ ಕಾಲದ್ದು, ಪ್ರಚಲಿತವಿದ್ದ ವಿಶ್ವಾಮಿತ್ರನ ಕಥೆ ರಾಮಾಯಣದಿಂದ ಸ್ವೀಕರಿಸಿದ್ದು. ಹುಟ್ಟಿನಿಂದ ಬ್ರಾಹ್ಮಣನಾಗಬೇಕಿದ್ದವನು ಕ್ಷತ್ರಿಯನಾದದ್ದು: ಸತ್ಯವತಿ-ಋಚೀಕನಿಗೆ ಮಗನಾಗಬೇಕಿದ್ದವನು ಗಾಧಿ-ಪುರುಕುತ್ಸಿಗೆ ಮಗನಾಗಿ ಜನಿಸಿದನು. (ಚರವ್ಯತ್ಯಯ ಪ್ರಸಂಗ). ಹರಿವಂಶ,

ವಾಯುಪುರಾಣದಲ್ಲಿದ್ದ ವಿಶ್ವರಥ ಎಂಬ ಹೆಸರನ್ನು ಕೈಬಿಟ್ಟು, ಕೌಶಿಕ ಎಂಬುದನ್ನು ಸ್ವೀಕರಿಸಲಾಗಿದೆ. ಅತೀ ಪುರಾತನ ಕಾಲದ ಜೀವನಕ್ರಮ, ಚಿಂತನ ವಿಧಾನಗಳನ್ನು ಪರಿಚಯಿಸುವಲ್ಲಿ ದೇವುಡು ಬೇರೆ ಬೇರೆ ಮೂಲದ ಕಥೆಗಳನ್ನು ಒಗ್ಗೂಡಿಸಿರುವ ಕ್ರಮ ತುಂಬಾ ಔಚಿತ್ಯಪೂರ್ಣವಾಗಿದೆ.

೨

ನಂದಿನಿಯ ನಿಮಿತ್ತವಾಗಿ ಏರ್ಪಟ್ಟ ಕೌಶಿಕ-ವಸಿಷ್ಠರ ವಾಗ್ವಾದ ಧರ್ಮವನ್ನು ಕುರಿತ ಸೂಕ್ಷ್ಮ ವಿಷಯಗಳ ಕಡೆ ಹೊರಳಿ, ಆ ಎರಡು ಪಾತ್ರಗಳ ಸಂವಾದದಲ್ಲಿಯೇ ಅವರವರ ವ್ಯಕ್ತಿತ್ವ ರೂಪಗೊಳ್ಳುತ್ತದೆ. ಜೊತೆಗೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳನ್ನು ಕುರಿತ ಜಿಜ್ಞಾಸೆ ಬೆಳೆಯುತ್ತದೆ. ಕೊನೆಗೂ ಕೌಶಿಕನಿಗೆ ಸೋಲು ಸಂಭವಿಸುವುದು. ಮುಂದೆ ಕೌಶಿಕನ ತಪಸ್ಸಾಧನೆಯ ದಾರಿ ತೆರೆದುಕೊಳ್ಳುತ್ತದೆ. ಕೌಶಿಕ ಕ್ರೋಧವಶನಾಗಲು ವಸಿಷ್ಠನೇ ಕಾರಣವಾಗುವಂತೆ, ಆತ ಮಹಾಬ್ರಾಹ್ಮಣನಾಗಿ ರೂಪಗೊಳ್ಳಲು ಪರೋಕ್ಷವಾಗಿ ನೆರವಾಗುತ್ತಾನೆ. ವಾಮದೇವನ ಮಾರ್ಗದರ್ಶನದಲ್ಲಿ ಕೌಶಿಕ ತಪೋನಿರತನಾಗುವುದು ಕಾದಂಬರಿಯ ಎರಡನೆಯ ಘಟ್ಟ. ಈ ಕೆಲಸವನ್ನು ವಸಿಷ್ಠನೇ ಮಾಡಬಹುದಿತ್ತು. ಆದರೆ ವೈಯಕ್ತಿಕ ದ್ವೇಷವಿರುವ ಕಡೆ ಮಾರ್ಗದರ್ಶನ ಸಾಧ್ಯವಿಲ್ಲವೆಂಬುದನ್ನು ಬಲ್ಲ ಅವನು ವಾಮದೇವನನ್ನು ನಿಯೋಜಿಸುತ್ತಾನೆ. ಮುಂದೆ ಕೌಶಿಕನು ಕೈಗೊಂಡ ತಪಸ್ಸು ನಿರಾತಂಕವಾಗಿ ಸಾಗುತ್ತದೆ. ವಾಮದೇವ ವಸಿಷ್ಠರ ತಪೋಬಲವನ್ನು ಸಮರ್ಥಿಸುವುದರ ಮೂಲಕ ಕೌಶಿಕನ ಮಿತಿಗಳನ್ನು ಸ್ಪಷ್ಟಪಡಿಸುತ್ತಾನೆ. ಹಲವು ರೀತಿಯ ಮಾನಸಿಕ ಕ್ಷೋಭೆಗಳಿಗೆ ಒಳಗಾಗಿದ್ದ ಕೌಶಿಕನನ್ನು ಪರಿವರ್ತನೆಯ ನೆಲೆಗೆ ಕೊಂಡೊಯ್ದು, ವಸಿಷ್ಠರ ಆದೇಶವನ್ನು ಪೂರ್ಣವಾಗಿ ಪಾಲಿಸಿದೆನೆಂಬ ತೃಪ್ತಿ ಹಾಗೂ ಕೌಶಿಕನನ್ನು ವಿಶ್ವಾಮಿತ್ರನನ್ನಾಗಿ ರೂಪಿಸಿದ ಆನಂದ ವಾಮದೇವನಿಗಿದೆ.

೩

ವಾಮದೇವನ ಸಮಕ್ಷಮದಲ್ಲಿ ಬ್ರಹ್ಮದ್ವೇಷದಿಂದ ಸಂಭವಿಸುವ ಅಪಾಯಗಳನ್ನರಿತ ಕೌಶಿಕ ನಿಶ್ಚಲವಾದ ತಪಸ್ಸಿನಲ್ಲಿ ತೊಡಗಲು ನಿರ್ಧರಿಸುತ್ತಾನೆ. ಆದರೂ ಆತನಿಗೆ ಆತ್ಮವಿಶ್ವಾಸವಿಲ್ಲ. ವೈರ ಮೂಲವಾದ ಸಂಕಲ್ಪವೇನಾದರೂ ಮತ್ತೆ ತನ್ನನ್ನು ಆವರಿಸಿಬಿಡಬಹುದೆಂದು ಭಾವಿಸಿ ವಾಮದೇವನ ಅನುಜ್ಞೆ ಪಡೆದು ವಿಂಧ್ಯವನ್ನು ದಾಟಿ ದಕ್ಷಿಣಕ್ಕೆ ಬಂದು ತಪೋನಿರತನಾಗುತ್ತಾನೆ. ದೇವುಡು ವೇದಾಧ್ಯಯನದ ಫಲವಾಗಿ ಗಳಿಸಿಕೊಂಡ ಹಲವಾರು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ವಿಶ್ವಾಮಿತ್ರನು ವೇದಗಳನ್ನು ಉಪಬೃಂಹಣ ಮಾಡಿಕೊಳ್ಳುವುದು, ದೇವತಾರಹಸ್ಯಗಳನ್ನು ಭೇದಿಸುವುದು, ಆಪೋದೇವಿಯರನ್ನು ಒಲಿಸಿಕೊಳ್ಳುವುದು, ಗಾಯತ್ರೀ ಛಂದಸ್ಸಿನ ಮಂತ್ರವನ್ನು ಹುಡುಕುವುದು— ಈ ಎಲ್ಲಾ ಸಂಗತಿಗಳು ವಿಶ್ವಾಮಿತ್ರನ ಪಾತ್ರ ಬೆಳವಣಿಗೆಗೆ

ಪೋಷಕವೆನಿಸಿದರೂ, ಕಥನ ಮಾದರಿಗೆ ಪೂರ್ಣವಾಗಿ ಒಗ್ಗಿಬರುವುದಿಲ್ಲ ಎನಿಸುತ್ತದೆ. ವಿಶ್ವಾಮಿತ್ರನ ತಪಸ್ಸು ತೀವ್ರವಾಗಿ ಮುಂದುವರಿದಂತೆ ಕಥೆಯಲ್ಲಿ ಮತ್ತೊಂದು ಆಯಾಮ ತೆರೆದುಕೊಳ್ಳುತ್ತದೆ. ತಪಸ್ಸಿನಷ್ಟು ಸಿದ್ಧಿ ಸುಲಭ ಸಾಧ್ಯವಲ್ಲ; ಸಿದ್ಧಿಗೆ ಹಲವಾರು ಪರೀಕ್ಷೆಗಳು ಆಗಬೇಕು ಎಂಬ ಉದ್ದೇಶದಿಂದ ತ್ರಿಶಂಕು, ಶುನಶ್ಶೇಪ, ಮೇನಕೆಯರ ಪ್ರಸಂಗಗಳು ಬರುತ್ತವೆ.

೬

ಸಶರೀರನಾಗಿ ಸ್ವರ್ಗಕ್ಕೆ ಹೋಗಬೇಕೆಂದು ಬಯಸುವ ತ್ರಿಶಂಕುವನ್ನು ದಿವ್ಯದೇಹಿಯನ್ನಾಗಿ ಮಾಡಲು ನೀಡುವ ಚಿಕಿತ್ಸೆಯಿಂದಾಗಿ ಆತನಿಗೆ ಆಕಾಶಗಮನ ಸಾಮರ್ಥ್ಯ ಬರುತ್ತದೆ. ಸ್ವರ್ಗದೆಡೆಗೆ ಹೋದ ತ್ರಿಶಂಕುವನ್ನು ದೇವತೆಗಳು ಅಲ್ಲಿಂದ ತಳ್ಳಿದಾಗ 'ಅನ್ಯಮಿಂದ್ರಂ ಕರಿಷ್ಯಾಮಿ' ಎಂದು ಬೇರೆ ಸ್ವರ್ಗವನ್ನೇ ನಿರ್ಮಿಸಲು ವಿಶ್ವಾಮಿತ್ರ ಪಣ ತೊಡುತ್ತಾನೆ. ವಿಶ್ವಾಮಿತ್ರನ ತಪಸ್ಸಿನಲ್ಲಿ ಆತನ ಸಾಮರ್ಥ್ಯ ಮತ್ತು ಅಹಂಭಾವಗಳು ಒಟ್ಟುಗೂಡಿಯೇ ಬೆಳೆಯುತ್ತಿವೆ ಎಂಬುದನ್ನು ಈ ಭಾಗದಲ್ಲಿ ಸ್ಪಷ್ಟಪಡಿಸಲಾಗಿದೆ. ಇಲ್ಲಿ ಬರುವ ಯಾಗದ ವರ್ಣನೆ ವಿಶಿಷ್ಟವಾದ ಆವರಣ ಕಲ್ಪನೆಯಿಂದಾಗಿ ಚೇತೋಹಾರಿಯಾಗಿದೆ. ವಿಶ್ವಾಮಿತ್ರನಿಗೆ ಬ್ರಹ್ಮರ್ಷಿಯಾಗುವ ಅರ್ಹತೆಗಳಿದ್ದರೂ, ಕ್ಷತ್ರಿಯ ಸಹಜವಾದ ಕಾಮಕ್ರೋಧಗಳಿಂದ ಆತ ಪೂರ್ಣ ಬಿಡುಗಡೆ ಪಡೆದಿಲ್ಲವೆಂಬ ಘಟ್ಟಕ್ಕೆ ಕಥೆ ಬಂದು ನಿಲ್ಲುತ್ತದೆ.

ಯಜ್ಞಕ್ಕೆ ನರಪಶುವಾಗುವ ಶುನಶ್ಶೇಪನ ಪ್ರಸಂಗ ಕಾದಂಬರಿಯ ಒಂದು ಸ್ವಾರಸ್ಯಭಾಗ.

೭

ಈ ಕಾದಂಬರಿಯ ಪ್ರಮುಖ ಸನ್ನಿವೇಶ ವಿಶ್ವಾಮಿತ್ರ-ಮೇನಕೆಯರ ಪ್ರಸಂಗ. ಮನುಷ್ಯನು ತನ್ನ ಸಣ್ಣತನಗಳನ್ನು, ಸ್ವಭಾವದ ಓರೆಕೋರೆಗಳನ್ನು ನೀಗಿಕೊಳ್ಳದೆ ಆಧ್ಯಾತ್ಮಿಕ ಔನ್ನತ್ಯಕ್ಕೆ ಯತ್ನಿಸುವುದಾಗಲೀ, ಲೈಂಗಿಕತೆಯನ್ನು ಪ್ರಚೋದಿಸುವುದಾಗಲೀ ವಿನಾಶಕ್ಕೆ ಆಹ್ವಾನಕೊಟ್ಟಂತೆ ಎನ್ನುವುದನ್ನು ಆರ್ಷೇಯರು ತಿಳಿದಿದ್ದರು. 'ಕಾಮ ಪ್ರವೃತ್ತಿಯನ್ನು ಬೆಳೆಸುವವಳು ಸೂಳೆ; ಅದನ್ನು ನಿಯಂತ್ರಣ ಮಾಡಿದವಳು ಹೆಂಡತಿ' ಎಂಬ ಒಂದು ತಾತ್ವಿಕ ನೆಲೆಗಟ್ಟಿನಲ್ಲಿಯೇ ಮೇನಕೆಯ ಪಾತ್ರ ರೂಪಗೊಂಡಂತಿದೆ. ಹೀಗಾಗಿ, ಆಕೆ ಅಪ್ಸರಸ್ತ್ರೀ ಸಹಜವಾದ ವರ್ತನೆಗಳನ್ನೇ ಮರೆತು ಮಾನವ ಸಹಜ ಸಂವೇದನೆಗಳನ್ನು ಪ್ರಕಟಿಸುತ್ತಾಳೆ. ಅವಳ ಉತ್ಕಟವಾದ ಅಭೀಪ್ಸೆ ಗೃಹಿಣಿಯಾಗಬೇಕೆಂಬುದೇ ಆಗಿದೆ. ಇಲ್ಲಿ ಧರ್ಮಕ್ಕೆ ವಿರುದ್ಧವಾಗದ ಭೋಗ ಮೇಲ್ನೋಟಕ್ಕೆ ತಪಸ್ಸನ್ನು ಹಾಳು ಮಾಡಿದಂತೆ ಕಂಡರೂ ಅದರ ವೃದ್ಧಿಗೆ ನೆರವಾಗುತ್ತದೆ. ಹೀಗಾಗಿ ಲೈಂಗಿಕತೆ ವಿಶ್ವಾಮಿತ್ರನ ಆಧ್ಯಾತ್ಮಿಕ

ಸಾಧನೆಯನ್ನು ವರ್ಧಿಸಿತು. ಒಂದು ಗಂಭೀರ ಆಲೋಚನೆಯ ಪಾತಳಿಯಲ್ಲಿ ಬೆಳೆಯುವ ಈ ಸನ್ನಿವೇಶ ನಿರ್ಮಾಣದಲ್ಲಿ ದೇವುಡು ಕಾದಂಬರಿಯ ಮುಖ್ಯ ಉದ್ದೇಶವನ್ನೇ ಮರೆತಿರುವಷ್ಟು ತಲ್ಲೀನರಾಗಿರುವಂತೆ ಭಾಸವಾಗುತ್ತದೆ.

ಕಾದಂಬರಿಯ ಇಪ್ಪತ್ತೊಂಬತ್ತನೆಯ ತರಂಗದಲ್ಲಿ ವಿಶ್ವಾಮಿತ್ರ ಪ್ರಕೃತಿಯ ಅದಮ್ಯ ಉತ್ಸಾಹವನ್ನೆಲ್ಲಾ ತನ್ನೊಳಗೇ ತುಂಬಿಕೊಂಡವನಂತೆ ಕಾಣುತ್ತಾನೆ. ವಿಶ್ವಾಮಿತ್ರ ಸೃಷ್ಟಿ ಪ್ರೇಮ ಹಾಗೂ ಲೋಕ ಪ್ರೇಮವನ್ನು ದಟ್ಟವರ್ಣನೆಗಳ ಮೂಲಕ ಅನಾವರಣಗೊಳಿಸಿ, ಆತನ 'ವಿಶ್ವಮೈತ್ರಿ'ಯನ್ನು ಪರಿಣಾಮಕಾರಿಯಾಗಿ ಲೇಖಕರು ದಾಖಲಿಸಿದ್ದಾರೆ. ಪ್ರಕೃತಿಯೊಡನೆ ಮನುಷ್ಯ ಪ್ರಕೃತಿಯನ್ನು ಬೆಸೆಯುವ ವಿಧಾನ ವಿಶೇಷವಾದ ಧ್ವನಿ ವಿಸ್ತಾರವನ್ನು ಸಾಧಿಸಿಬಿಡುತ್ತದೆ. ಭೋಗ ಎಂಬುದು ಸೃಷ್ಟಿರಹಸ್ಯದ ಪರಿಣಾಮ ಎಂಬ ನಿಲುವಿಗೆ ಕಾದಂಬರಿಕಾರರು ಬರುತ್ತಾರೆ. ಆದ್ದರಿಂದ ವಿಶ್ವಾಮಿತ್ರ-ಮೇನಕೆಯರ ಪ್ರಸಂಗ ಪರಿಚಿತ ಮಾದರಿಗಿಂತ ಭಿನ್ನವಾಗಿದೆ. ಒಬ್ಬನನ್ನೇ ಪತಿಯನ್ನಾಗಿ ಸ್ವೀಕರಿಸಿ, ಆತನಿಗೆ ನೆರವಾಗುವ ಸಹಧರ್ಮಿಣಿಯಾಗಿ ಬಾಳುವ ಸುಖ ಸ್ವರ್ಗದಲ್ಲಿಲ್ಲ ಎಂಬ ಮೇನಕೆಯ ನಿಲುವಿನಲ್ಲಿ ಪರಿಪಕ್ವ ಗೃಹಿಣಿಯ ಮಹತ್ವಾಕಾಂಕ್ಷೆ ಪ್ರಬಲವಾಗಿದೆ*. ಮುಂದೆ ಅನಿವಾರ್ಯವಾಗಿ ಇಂದ್ರನಲ್ಲಿಗೆ ಹೋಗಬೇಕಾಗಿ ಬಂದಾಗ ಪತಿಪ್ರೇಮ, ಮಾತೃವಾತ್ಸಲ್ಯಕ್ಕಾಗಿ ಹಂಬಲಿಸಿ, ದುಃಖಿಸುತ್ತಾಳೆ. ಶಿಶುವನ್ನು ಒಪ್ಪಿಸಿ ಆತನ ಅನುಮತಿಯನ್ನು ಪಡೆದು ಹೋದ ಅನಂತರ, ವಿಶ್ವಾಮಿತ್ರ ಮಗುವನ್ನು ಕಣ್ವರಿಗೆ ಒಪ್ಪಿಸುತ್ತಾನೆ. ಈ ಸನ್ನಿವೇಶ ನಿರ್ಮಾಣದಲ್ಲಿ ದೇವುಡು ಮಾಡಿಕೊಂಡಿರುವ ಬದಲಾವಣೆಗಳು ಅರ್ಥಪೂರ್ಣ ಎನಿಸುತ್ತವೆ. ಜನಿಸಿದ ಮಗುವನ್ನು ಬಿಟ್ಟು ಮೇನಕೆ ದೇವಲೋಕಕ್ಕೂ, ವಿಶ್ವಾಮಿತ್ರ ತಪಸ್ಸಿಗೂ ಹೋದರೆಂಬುದು ಹಳೆಯ ಕಥೆ. ಶಿಶುವನ್ನು ಶಕುಂತಗಳು ಪೋಷಿಸುತ್ತಿದ್ದರಿಂದ'ಶಕುಂತಲೆ' ಎಂದು ಹೆಸರು ಬಂದಿತು. ಆದರೆ ಕಥೆಯಲ್ಲಿ ಎಲ್ಲಿಯೂ ಶಕುಂತಲೆ ಎಂದು ಹೆಸರಿಸದೆ 'ವಿಶ್ವಾಮಿತ್ರ ಪುತ್ರಿ' ಎನ್ನಲಾಗಿದೆ. ಈ ಮೂಲಕ ತಂದೆಯ ರಕ್ಷಣೆಯಲ್ಲಿ ಮಗು ಬೆಳೆಯಿತು ಎಂಬುದರ ಜೊತೆಗೆ, ತಂದೆಯ ಹೊಣೆಗಾರಿಕೆ ಕೂಡ ವಿಶ್ವಾಮಿತ್ರನಿಗಿತ್ತು ಎಂಬುದನ್ನು ಸೂಚಿಸಲಾಗಿದೆ.

ಕಾದಂಬರಿಯಲ್ಲಿ ಮೇನಕೆ, ಘೃತಾಚಿ, ರಂಭೆ- ಈ ಮೂವರ ಪ್ರಸ್ತಾಪವಿದೆ. ಆದರೆ ಮೇನಕೆಯ ಪಾತ್ರಕ್ಕೆ ದೊರೆತಿರುವಷ್ಟು ಸ್ಥಾನ ಗೌರವ ಉಳಿದವುಗಳಿಗಿಲ್ಲ.

*** ಗಮನಿಸಿ :**

i. 'ದೇವಲೋಕವು ನನ್ನನ್ನು ಮರೆತು ಬಿಟ್ಟರೆ ಸಾಕು ಎನ್ನುವಂತಿದೆ. ರಂಭೆ, ನಿಜವಾಗಿಯೂ ಮನುಷ್ಯರು ಸುಖಿಗಳು; ತಿನ್ನುವುದಿಲ್ಲ, ಕುಡಿಯುವುದಿಲ್ಲ, ಮಾಡುವುದಕ್ಕೆ ಕೆಲಸವಿಲ್ಲದೆ ಅಲೆದುಕೊಂಡಿರುವ ದೇವಲೋಕಕ್ಕಿಂತಲೂ, ಮಾಡುವುದಕ್ಕೆ ಕೈತುಂಬ ಕೆಲಸವಿದ್ದು, ಮಾಡದಿದ್ದರೆ ನಷ್ಟವಾಯಿತು ಎಂಬ ಮನುಷ್ಯ ಲೋಕವೇ ನನಗೆ ಚೆನ್ನಾಗಿದೆ... ಇದು ಅನುಕೂಲ ದಾಂಪತ್ಯ' (ಪುಟ ೧೮೭).

ii. ಯಾವ ಜನ್ಮದ ಪುಣ್ಯವೋ; ನನಗೆ ಈಗ ಗಂಡನೊಲವನ್ನು ಪಡೆಯಬೇಕು. ಆ ಒಲವು ಪಡೆಯಬೇಕಾದ ಭಾಗ್ಯ ಎನಿಸಿದೆ. (ಪುಟ ೧೮೮)

ವಿಶ್ವಾಮಿತ್ರನನ್ನು ಒಲಿಸಿಕೊಳ್ಳಲು ರಂಭೆ, ಘೃತಾಚಿಯರು ಪ್ರಯತ್ನಿಸುವ ಪ್ರಸಂಗಗಳು ಬರುತ್ತವೆ. ವಿಶ್ವಾಮಿತ್ರ ತನ್ನ ಇಂದ್ರಿಯಾಪೇಕ್ಷೆಗಳನ್ನು ಒಂದೊಂದಾಗಿ ಕಳೆದುಕೊಂಡಿರುವಾಗ ಬಂದ ರಂಭೆ ಅಹಂಕಾರಮತ್ತಳಾಗಿ ವರ್ತಿಸಿ ಶಿಲೆಯಾಗುತ್ತಾಳೆ. ಅವಳು ಕಾಲನ ಶಾಪದಿಂದ ಶಿಲೆಯಾಗುವುದು ವಿಶ್ವಾಮಿತ್ರದ ತಪೋಶಕ್ತಿಗೆ ಸಾಕ್ಷಿ. ಆದರೆ ತನ್ನ ಪುರುಷಾರ್ಥದ ಸಾರ್ಥಕತೆಗಾಗಿ ಹಾಗೂ ಪುರೋಗಾಮಿ ಕಾರಣಕ್ಕಾಗಿ ಘೃತಾಚಿಯನ್ನು ವಿಶ್ವಾಮಿತ್ರ ಮದುವೆಯಾಗುತ್ತಾನೆ. ವಿನೀತ ಭಾವದ ಘೃತಾಚಿ ದೇವಸಂಕಲ್ಪದಂತೆ ವಿಶ್ವಾಮಿತ್ರನಿಗೆ ನೂರು ಮಕ್ಕಳನ್ನು ಹೆತ್ತುಕೊಡಲು ಒಪ್ಪಿ ಭಗವತಿ ಕೌಶಿಕಿಯಾಗಿ ಪರಿವರ್ತಿತಳಾಗುತ್ತಾಳೆ. ದೇವಕನ್ಯೆಯರಾದ ಮೇನಕೆ, ಘೃತಾಚಿ ವಿಶ್ವಾಮಿತ್ರನ ಸಂಸರ್ಗದಲ್ಲಿ ಮಾನವ ಸಂವೇದನೆಗಳನ್ನು ಪ್ರಕಟಿಸುತ್ತಾರೆ. ಅವರಲ್ಲಿ ಧರ್ಮಾಧರ್ಮಗಳ ವಿವೇಚನೆ ಬೆಳೆಯುತ್ತದೆ.ಇಂಥ ಕಡೆ ಪುರಾಣ ಮೂಲದ ಪಾತ್ರಗಳು ಹೊಸ ವ್ಯಕ್ತಿತ್ವವನ್ನು ಧಾರಣ ಮಾಡಿಕೊಳ್ಳುತ್ತವೆ.

೮

ವಿಶ್ವಾಮಿತ್ರನ ತಪಸ್ಸಾಧನೆಯ ಪಕ್ವತೆಯನ್ನು ಪರೀಕ್ಷಿಸುವುದೇ ಕಾದಂಬರಿಯ ಕೊನೆಯಭಾಗ. ಋಷಿ ಪರಿಷತ್ತು ವಿಶ್ವಾಮಿತ್ರನ ಬ್ರಹ್ಮರ್ಷಿತ್ವವನ್ನು ಕುರಿತು ಜಿಜ್ಞಾಸೆ ನಡೆಸುವ ಸನ್ನಿವೇಶ ವೇದಕಾಲದ ವೈಚಾರಿಕ ನೆಲೆಗಳನ್ನು ಸ್ಪಷ್ಟಪಡಿಸುತ್ತದೆ. ವಸ್ತುನಿಷ್ಠವಾದ, ನಿಷ್ಪಕ್ಷಪಾತವಾದ ನಿಲುವುಗಳೊಂದಿಗೆ, ಅಂದಿನ ಕಾಲದಲ್ಲಿ ಮಹಿಳೆಯರಿಗೆ ಎಂಥ ಸ್ಥಾನವಿತ್ತು ಎಂಬುದನ್ನು ಋಷಿಪರಿಷತ್ತಿನ ಚರ್ಚೆಗಳು ದೃಢಪಡಿಸುತ್ತವೆ. ಸಭೆಯ ಅಧ್ಯಕ್ಷ ಸ್ಥಾನಕ್ಕೆ ಸರ್ವಾನುಮತದಿಂದ ಗಾರ್ಗಿಯನ್ನು ಆಯ್ಕೆ ಮಾಡಲಾಗುತ್ತದೆ.

'ಮಹಾಬ್ರಾಹ್ಮಣ' ಕಾದಂಬರಿಯ ರಚನೆಯ ಹಿಂದೆ ವೇದಾಧ್ಯಯನ ನಿರತವಾದ, ಉಪನಿಷತ್ತುಗಳ ರಹಸ್ಯವನ್ನು ಬಿಡಿಸಲು ಪ್ರಯತ್ನಿಸುವ ಪ್ರಾಮಾಣಿಕ ವ್ಯಕ್ತಿಯೊಬ್ಬನ ಸಾಧನೆಯೇ ಇದೆ. ಗಾಯತ್ರೀ ಮಂತ್ರದ ಉದಯದ ಹಿಂದೆ ಆಗಿರಬಹುದಾದ ತಪಸ್ಸಾಧನೆಯನ್ನು ಹಂತಹಂತವಾಗಿ ಕಲ್ಪಿಸಿಕೊಂಡು ಬರೆದ ಕೃತಿ ಇದು. ಎಲ್ಲ ಕಾಲದಲ್ಲೂ 'ಬ್ರಾಹ್ಮಣೀಕರಣ'ಕ್ಕಾಗಿ ಶೂದ್ರರೂ, ಬ್ರಾಹ್ಮಣೇತರರು ಹೋರಾಟ ಮಾಡಿದ್ದಾರೆ. ರಾಮಾಯಣ ಕಾಲದ ಶಂಬೂಕನಾಗಲಿ, ವೈದಿಕಕಾಲದ ವಿಶ್ವಾಮಿತ್ರನಾಗಲೀ ಬ್ರಾಹ್ಮಣೀಕರಣಕ್ಕಾಗಿಯೇ ಪಣತೊಟ್ಟರು. ವ್ಯಕ್ತಿಗೆ ಕೊನೆಗೂ ತೃಪ್ತಿ, ಆಂತರಿಕ ನೆಮ್ಮದಿ ನೀಡುವ ಮೌಲ್ಯ ಸಂಸ್ಕೃತಿ. ನಮ್ಮಲ್ಲಿ 'ಬ್ರಾಹ್ಮಣ್ಯ' ಸಂಸ್ಕೃತಿಯ ಒಂದು ಮೇಲಿನ ಸ್ತರವೆಂದು ಭಾವಿಸಿದಾಗ ಬ್ರಾಹ್ಮಣೀಕರಣವೇ ಶೂದ್ರಪ್ರಜ್ಞೆಯ ಒಂದು ಹಂಬಲ, ಹಟವಾಗಿ ಹೋರಾಟಕ್ಕೆ ಕಾರಣವಾಗಿರಬೇಕು. ಇದು ಆತ್ಮಗೌರವದ ಪ್ರಶ್ನೆಯಾಗಿ, ಮೇಲ್ಮಟ್ಟದ ಸ್ಥಾನ, ಗೌರವಗಳನ್ನು ಸಾಧಿಸಲು ಹೊರಡಬೇಕಾಯಿತು. ಈ ಬಗೆಯ ಅನೇಕ ಹೊಳಹುಗಳನ್ನು 'ಮಹಾಬ್ರಾಹ್ಮಣ' ಕಾದಂಬರಿ ಒಳಗೊಂಡಿದೆ.

ಅಭಿವಂದನಾ

ಕಾದಂಬರಿಯ ಓದುಗನಿಗೆ ತುಂಬಾ ಅಚ್ಚರಿಯನ್ನುಂಟುಮಾಡುವ ಸಂಗತಿಯೆಂದರೆ ಅದರ ಕಥಾ ಸಂವಿಧಾನ. ಒಂದು ನಿರ್ದಿಷ್ಟ ನೆಲೆಯಲ್ಲಿ ಕ್ರಿಯೆ ಸಂಘಟಿತವಾಗಿ, ಹಲವಾರು ಪಾತ್ರಗಳು ಕೇಂದ್ರ ಪ್ರಜ್ಞೆಯ ಕಡೆಗೇ ಧಾವಿಸುತ್ತದೆ. ಶಿಥಿಲ ಶಿಲ್ಪ ಏರ್ಪಡುವುದು ಬಹಳ ಕಡಿಮೆ. ವಿಶ್ವಾಮಿತ್ರನ ಅಂತರಂಗ-ಬಹಿರಂಗಗಳನ್ನು ಸೂಕ್ಷ್ಮವಾಗಿ ಹಿಡಿದಿಡುವಾಗ ಅನೇಕ ಕಡೆ ಬಾಹ್ಯ ವಿವರಗಳು ಕಾದಂಬರಿಯಲ್ಲಿ ವಿಸ್ತಾರವಾಗಿ ಬಂದಿದೆ. ಆದ್ದರಿಂದ ವರ್ಣನೆಯ ಬಾಹುಳ್ಯವಿದೆ. ಆದರೂ, ಕಾದಂಬರಿಯ ಗ್ರಹಿಕೆಗೆ ನಿರ್ದಿಷ್ಟ ಶಿಸ್ತು ಅಗತ್ಯ. ಇಂದಿನ ಅನೇಕ ಓದುಗರಿಗೆ ಇದು ಕೇವಲ ಪುರಾಣ ಕಥೆ; ಭಾಷೆ ಆಲಂಕಾರಿಕ ಎನಿಸಬಹುದು. ಆ ಬಗೆಯ ನಿರ್ಧಾರವನ್ನು ಬಿಟ್ಟು ತಲ್ಲೀನತೆಯಿಂದ ಓದಿದಾಗ ಕೃತಿಯೊಳಗೆ ಸನಾತನ ಸಂಸ್ಕೃತಿಯೊಂದರ ಶೋಧ ನಡೆದಿದೆ ಎಂಬ ನಂಬಿಕೆ ಹುಟ್ಟುತ್ತದೆ.

೬

'ಮಹಾಕ್ಷತ್ರಿಯ' ನಹುಷ ಚಕ್ರವರ್ತಿಯ ಕಥೆ. ಋಗ್ವೇದದ ಸೂಕ್ತವೊಂದರಲ್ಲಿ ಹಾಗೂ ಮಹಾಭಾರತದ ಕೆಲವು ಪರ್ವಗಳಲ್ಲಿ ಪ್ರಸ್ತಾಪಗೊಂಡಿದೆ. ವೈದಿಕಯುಗ ಮತ್ತು ಪುರಾಣಯುಗದ ಕಥೆಯ ಪುನರ್‌ರಚನೆ ಮಹಾಕ್ಷತ್ರಿಯ ಎನಿಸಿದರೂ, ವೇದಕಾಲದ ಆವರಣದೊಳಗೆ ಸೃಷ್ಟಿಯಾಗುವ ಪಾತ್ರಗಳ ವರ್ತನೆ, ಸಂವಾದಗಳೆಲ್ಲಾ ಸಾರ್ವಕಾಲಿಕವೆನಿಸುತ್ತವೆ. ಅಂದರೆ ದೇವಲೋಕದ ವ್ಯಕ್ತಿಗಳ ವ್ಯವಹಾರ ಕೂಡ ಮನುಷ್ಯಲೋಕದ್ದೇ ಆಗುತ್ತದೆ. ದೇವಲೋಕವನ್ನು ಆಳಿದ ಮೂವರು ಇಂದ್ರರ ಕಥೆ ಕಾದಂಬರಿಯಲ್ಲಿ ಅನುಕ್ರಮವಾಗಿ ಸಾಗುತ್ತದೆ. (ಇಂದ್ರ-ವೃತ್ರಾಸುರ-ನಹುಷ). ನಹುಷನನ್ನು ಮಹಾಕ್ಷತ್ರಿಯನನ್ನಾಗಿ ರೂಪಿಸಲು ಇಂದ್ರನ ಪದಚ್ಯುತಿಯಾಗಬೇಕು. ಅದಕ್ಕಾಗಿ ಹಲವಾರು ಕಾರಣಗಳನ್ನು ಪುರಾಣ ಮೂಲದಿಂದ ಒದಗಿಸಲಾಗಿದೆ. ಹೀಗಾಗಿ ಅಸಂಖ್ಯಾತ ಪಾತ್ರಗಳ ಸೃಷ್ಟಿಯಾಗುತ್ತವೆ. ಒಂದೊಂದು ಸನ್ನಿವೇಶವನ್ನೂ, ಪಾತ್ರವನ್ನೂ ನಿರ್ಮಿಸುವಲ್ಲಿ ದೇವುಡು ಅವರ ಕಲಾ ನೈಪುಣ್ಯ ಅಚ್ಚರಿಯನ್ನುಂಟುಮಾಡುತ್ತದೆ. ದೇವಲೋಕವನ್ನು ಆಳಿದ ಇಂದ್ರ, ವೃತ್ರ, ನಹುಷ- ಈ ಮೂವರ ಕಥೆ ಇದಾಗುವುದಿಲ್ಲ. ಓದುಗರಲ್ಲಿ ಕುತೂಹಲವನ್ನು ಉಂಟುಮಾಡುವ ಹಲವಾರು ಹೊಸಪಾತ್ರಗಳನ್ನು ಘಟನೆಗಳನ್ನು ಹೆಣೆಯಲಾಗಿದೆ. ದೇವಗಣ, ಋಷಿಗಣ, ಮಾನವಕುಲವನ್ನು ಒಟ್ಟುಗೂಡಿಸಿದ ಒಂದು ವಿಶಿಷ್ಟ ಲೋಕವೇ ಅನಾವರಣಗೊಳ್ಳುತ್ತದೆ. ಆದ್ದರಿಂದ ಇಂದ್ರನ ಕಥೆ ದೀರ್ಘವೆನಿಸಿ, ನಹುಷನ ಕಥೆ ಕಿರಿದಾಗುತ್ತದೆ. ನಹುಷನ ಧರ್ಮಪರವಾದ ನಿಲುವುಗಳು ಸಂಕ್ಷೇಪವಾಗಿ, ಪರಿಣಾಮಕಾರಿಯಾಗಿ ಪ್ರಕಟಗೊಳ್ಳುವುದರ ಜೊತೆಗೆ ಇಂದ್ರನ ಅಹಂಕಾರ, ದೌರ್ಬಲ್ಯಗಳು ವಿಸ್ತೃತವಾಗಿ ನಿರೂಪಿತವಾಗಿವೆ. ಈ ಕಾರಣದಿಂದಾಗಿ ದೇವಕುಲದ ಸಡಿಲವರ್ತನೆಗಳೆದುರು ಮಾನವಕುಲದ ಹಿರಿಮೆಯೇ ಮಿಗಿಲಾಗುತ್ತದೆ. ಹಾಗೆಯೇ ಮಾನವ ಕುಲವನ್ನು

ಸಂದರ್ಭಾನುಸಾರಿಯಾಗಿ ದುಡಿಸಿಕೊಳ್ಳುವ ದೇವಕುಲದ ಕುತಂತ್ರಗಳೂ ಸ್ಪಷ್ಟಗೊಳ್ಳುತ್ತಾ ಹೋಗುತ್ತವೆ.

೧೦

ಇಂದ್ರ-ವಿಶ್ವರೂಪಾಚಾರ್ಯರ ಸ್ವಭಾವಭೇದಗಳು, ಅದಕ್ಕನುಸಾರವಾಗಿ ಅವರು ವರ್ತಿಸುವ ಬಗೆ, ಒಡ್ಡುವ ತರ್ಕಗಳು, ಅರ್ಥಪೂರ್ಣ ಸಂಭಾಷಣೆಗಳು- ಇವು ದೇವುಡು ಅವರ ದೃಶ್ಯಕಲ್ಪನೆಗೆ ಉತ್ತಮ ನಿದರ್ಶನಗಳಾಗಿವೆ. ಆದರೆ ಸಣ್ಣಪುಟ್ಟ ಪಾತ್ರಗಳಿಗಾಗಿ ಕಥೆಯನ್ನು ಬಿಂಬಿಸುವುದರಿಂದ ಕಾದಂಬರಿಯೊಳಗಿನ ಕ್ರಿಯೆ ಅಲ್ಲಲ್ಲಿ ಸ್ಥಗಿತಗೊಂಡು ಮುಂದುವರೆದಂತೆ ಕಾಣುತ್ತದೆ. ವಿಶ್ವರೂಪನ ಹತ್ಯೆಯ ಪ್ರಸಂಗದಲ್ಲಿ ವೀರ, ರೌದ್ರ, ಭಯಾನಕ ಸನ್ನಿವೇಶಗಳನ್ನು ಲೇಖಕರು ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತಾರೆ. ಇಂದ್ರ-ವೃತ್ರರ ಕಥೆ ಕೂಡ ಅತ್ಯಂತ ಪ್ರಾಚೀನವಾದುದು. ಅವರಿಬ್ಬರು ಬದ್ಧವೈರಿಗಳಾಗಿದ್ದರೂ ಕಾರಣಾಂತರದಿಂದ ಸ್ನೇಹದ ಒಪ್ಪಂದಕ್ಕೆ ಬರುವುದು, ಸಮುದ್ರ ತೀರದಲ್ಲಿ ವೃತ್ರನಿಗೆ ಅಕಾರಣವಾಗಿ ಹುಟ್ಟುವ ಮಲ್ಲಯುದ್ಧದ ಬಯಕೆ, ಸಮುದ್ರ ನೊರೆಯಲ್ಲಿ ವಜ್ರಾಯುಧವನ್ನು ಆವಾಹಿಸಿ ಇಂದ್ರ ವೃತ್ರನನ್ನು ಸಂಹರಿಸುವ ರೀತಿ— ಈ ಎಲ್ಲಾ ವಿವರಗಳು ಕಲಾತ್ಮಕವಾಗಿ ಮೂಡಿ ಬಂದು, ಸಾರ್ವಕಾಲಿಕ ಪ್ರತಿಮೆಗಳಾಗಿ ಒಡಮೂಡುತ್ತವೆ. ಇಂದ್ರ-ವೃತ್ರರ ನಡುವೆ ನಡೆದ ಕಾಳಗದ ವರ್ಣನೆ ದೇವುಡು ಬರವಣಿಗೆಯಲ್ಲಿನ ವ್ಯಂಜಕತೆಗೆ ಉತ್ತಮ ಉದಾಹರಣೆಯಾಗಿದೆ. ವಿಶ್ವರೂಪಾಚಾರ್ಯ, ವೃತ್ರಾಸುರ ಹಾಗೂ ಇಂದ್ರ ಇವರ ಉನ್ನತಿ ಮತ್ತು ಪತನಗಳು ಸಾರ್ವಕಾಲಿಕ ಅರ್ಥವನ್ನು ಬಿಚ್ಚಿಕೊಡುತ್ತವೆ. ''ಆನುಷಂಗಿಕವಾದ ಸಮಕಾಲೀನ ಅರ್ಥವೂ ಕಾದಂಬರಿಯಲ್ಲಿದೆ. ಇದನ್ನು ರಾಜಕೀಯ ಅರ್ಥ ಎನ್ನಬಹುದು[೧]'' ಎಂದು ಗಿರಡ್ಡಿಗೋವಿಂದರಾಜ ಅವರ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಅಧಿಕೃತವೆಂದು ಒಪ್ಪಬಹುದು.

ಕಾದಂಬರಿಯ ಪೂರ್ವಾರ್ಧ ಸುರಾಸುರರ ಸಂಘರ್ಷವನ್ನೇ ನಿರೂಪಿಸಿದೆ. ಇದರ ಪರಿಣಾಮವಾಗಿ ಮುಂದೆ ದೇವ-ಮಾನವರ ಸಂಬಂಧ ಏರ್ಪಡುತ್ತದೆ.'ಮಹಾಬ್ರಾಹ್ಮಣ' ಕೃತಿಯಲ್ಲಿ ಕ್ಷತ್ರಿಯ-ಬ್ರಾಹ್ಮಣ ಸಂಘರ್ಷದ ತತ್ಫಲವಾಗಿ ದೇವ ಮಾನವ ಕುಲ ಒಟ್ಟಾಗುತ್ತದೆ. ಅಲ್ಲಿ ಮಾನವನಿಗೆ ಅರ್ಥಾತ್ ತ್ರಿಶಂಕುವಿಗೆ ಸ್ವರ್ಗಾರೋಹಣದ ಅಪೇಕ್ಷೆ ಇರುವಂತೆಯೇ ಇಲ್ಲಿ ಅಸುರರಿಗೆ ಇಂದ್ರಲೋಕದ ಪ್ರಭುತ್ವವನ್ನು ಸಂಪಾದಿಸುವ ಆಕಾಂಕ್ಷೆಯಿದೆ. ಮೂರನೆಯ ಇಂದ್ರನಾಗಿ ಬರುವ ನಹುಷ ಚಕ್ರವರ್ತಿಯ ಕಥೆಯನ್ನು ಆರಂಭಿಸುವುದಕ್ಕೆ ಪೂರ್ವಪೀಠಿಕೆಯಾಗಿ ಧರ್ಮಜಿಜ್ಞಾಸೆಯಿಂದ ಕೂಡಿದ ಸನ್ನಿವೇಶಗಳನ್ನು ಹೆಣೆದಿದ್ದು, ಕಥೆಯ ಕೇಂದ್ರ ಬಿಂದುವಿಗೆ ಪ್ರವೇಶಿಸುವುದು ವಿಳಂಬವಾಗುತ್ತದೆ. ಆದರೂ, ಕಾದಂಬರಿಯ ಉತ್ತರಾರ್ಧದಲ್ಲಿ ಕ್ರಿಯೆ ತ್ವರಿತಗತಿಯಲ್ಲಿ ಸಾಗಿ, ನಿರ್ದಿಷ್ಟ ಉದ್ದೇಶಗಳಿಗೆ ಪಾತ್ರಗಳು ಬದ್ಧವಾಗಿವೆ.

---

೧. ಮಲ್ಲಿ, ಮೊದಲ ಮಾತು, ಪುಟ ೪.

ಅಭಿವಂದನಾ

೧೧

'ಮಹಾಕ್ಷತ್ರಿಯ' ಕಾದಂಬರಿಯಲ್ಲಿ ನಹುಷನ ಪಾತ್ರಕ್ಕೆ ಸಂಬಂಧಿಸಿದಂತೆ ಕೆಲವು ಮಹತ್ವದ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಮಹಾಭಾರತದ ವನಪರ್ವದ ಕಥೆಯಲ್ಲಿ ಇಂದ್ರನಾದ ನಹುಷನಿಗೆ ಶಚಿಯಲ್ಲಿ ಮೋಹ ಉಂಟಾಗಿ, ದೂತರ ಮೂಲಕ ಹೇಳಿಕಳುಹಿಸುತ್ತಾನೆ. ಆಕೆ ಯೋಚಿಸಿ, ಅಪೂರ್ವವಾದ ವಾಹನದಲ್ಲಿ ಕುಳಿತು ಬಂದರೆ ವಶವಾಗುವುದಾಗಿ ಉತ್ತರಿಸುತ್ತಾಳೆ. ನಹುಷ ಸಪ್ತರ್ಷಿಗಳು ಹೊತ್ತ ಪಲ್ಲಕ್ಕಿಯಲ್ಲಿ ಕುಳಿತು ಶಚಿಯ ಅರಮನೆಗೆ ಹೊರಡುತ್ತಾನೆ. ಶಚಿಯನ್ನು ಸಂಧಿಸುವ ಆತುರದಲ್ಲಿದ್ದ ಅವನಿಗೆ ಋಷಿಗಳ ನಡೆ ನಿಧಾನವೆನಿಸಿ, ಅಸಹನೆಯಿಂದ 'ಸರ್ಪಸರ್ಪ' (ಬೇಗ ಬೇಗ) ಎಂದು ಅಗಸ್ತ್ಯನ ತಲೆಗೆ ಕಾಲಿನಿಂದ ತಿವಿಯುತ್ತಾನೆ. ಅದರಿಂದ ಕೋಪಗೊಂಡ ಅಗಸ್ತ್ಯ 'ಸರ್ಪೋಭವ' ಎಂದು ಶಾಪ ನೀಡಿದ ಕೂಡಲೇ ನಹುಷ ಅಜಗರನಾಗುತ್ತಾನೆ. ಕಾಮಿ, ಅಹಂಕಾರಿ, ಅವಿವೇಕಿ ಎನಿಸಿದ ನಹುಷನ ಪಾತ್ರ ಯೋಜನೆ ದೇವುಡು ಅವರ ಅಗಾಧವಾದ ಪುರಾಣ ತಿಳಿವಳಿಕೆ ಹಾಗೂ ಪ್ರತಿಭಾಪೂರ್ಣಕಲ್ಪನೆಯಿಂದಾಗಿ ಪ್ರಕರ್ಷಿಸಿದೆ. ಶಚೀ ಮೋಹದ ಕಲ್ಪನೆ ಆಮೂಲಾಗ್ರವಾಗಿ ಬದಲಾವಣೆ ಹೊಂದುತ್ತದೆ. ಶಚಿ ಇಂದ್ರ ಪತ್ನಿಯೇ ಅಥವಾ ಪದನಿಮಿತ್ತ ಅಧಿಕಾರವೇ ಎಂಬ ಜಿಜ್ಞಾಸೆ ನಡೆದು, ದೇವ-ಋಷಿಗಳ ಸಭೆಯಲ್ಲಿ ಅದೊಂದು ಪದವಿಯೆಂದೇ ತೀರ್ಮಾನವಾಗುತ್ತದೆ. ನಹುಷ ಶಚಿಯನ್ನು ದೊರಕಿಸಿಕೊಳ್ಳಲು ಯತ್ನಿಸಿದ್ದು ಕಾಮುಕತೆಯಿಂದಲ್ಲ; ಇಂದ್ರಪದವಿಯನ್ನು ಪೂರ್ಣಗೊಳಿಸುವ ಉದ್ದೇಶದಿಂದ ಎಂಬುದು ಕಾದಂಬರಿಕಾರರ ಆಶಯವಾಗಿದೆ. ಮೂಲ ಕಥೆಯಲ್ಲಿ ಚಕ್ರವರ್ತಿಯ ಕ್ಷತ್ರಿಯ ದೌರ್ಬಲ್ಯಗಳನ್ನು ಪ್ರಕಟಿಸುವ ನಹುಷ ಕಾದಂಬರಿಯಲ್ಲಿ ವಿನಯ, ಧರ್ಮ, ನ್ಯಾಯ ಹಾಗೂ ತ್ಯಾಗ ನಿಷ್ಠೆಯ ಮೂಲಕ ಮಾನವೀಯ ಮೌಲ್ಯಗಳನ್ನು ಮೆರೆದು ಮನುಷ್ಯತ್ವದ ಘನತೆಯನ್ನು ಸ್ಥಾಪಿಸುತ್ತಾನೆ. ಈ ಕಾರಣದಿಂದಲೇ ಆತ 'ಮಹಾಕ್ಷತ್ರಿಯ' ಆಗುವುದು. ದೊರೆಯುವ ಸ್ಥಾನ ಮುಖ್ಯವಲ್ಲ. ಸ್ಥಾನ ಗೌರವವನ್ನು ಕಾಪಾಡುವದು ಮುಖ್ಯ ಎಂಬ ಉದ್ದೇಶದಿಂದ ಲೇಖಕರು ಮಾಡಿಕೊಂಡ ಬದಲಾವಣೆಗಳು ಸೂಕ್ತವೆಂದು ತೋರುತ್ತದೆ.

೧೨

'ಮಹಾದರ್ಶನ' ದೇವುಡು ಕಾದಂಬರಿಗಳಲ್ಲಿ ಕೊನೆಯದು. ವಸ್ತುದೃಷ್ಟಿಯಿಂದ ಇದು ಪುರಾಣಾಧಾರಿತವೆನಿಸಿದರೂ, ಆಶಯದಲ್ಲಿ ಅದು ದರ್ಶನ ಸಮನ್ವಿತವಾದುದು. ಇದು ಬೃಹದಾರಣ್ಯಕೋಪನಿಷತ್ತನ್ನು ಆಧರಿಸಿ ಬರೆದ ಕಥೆ. ತರ್ಕ, ವೈಚಾರಿಕತೆಯ ಭಾರದಿಂದಾಗಿ ಬೌದ್ಧಿಕ ಆಯಾಮಗಳ ಅತಿ ಹೆಚ್ಚಳದಿಂದಾಗಿ ಕಾದಂಬರಿಯಲ್ಲಿ ಅಸಮತೋಲನ ಅನಿವಾರ್ಯವಾಗಿ ಸಂಭವಿಸುತ್ತದೆ. 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ' ಕೃತಿಗಳಲ್ಲಿ ಕಾಣುವ ಕಲಾನೈಪುಣ್ಯವನ್ನಾಗಲಿ, ನಿರೂಪಣೆಯ ವಿಲಾಸವನ್ನಾಗಲಿ ಗುರುತಿಸುವುದು ಕಷ್ಟ. ವೇದಾಂತ ಪ್ರಕ್ರಿಯೆಗಳನ್ನು ಹರವಿ ತೋರಿರುವ ಈ ಕಾದಂಬರಿಯನ್ನು ಕೆಲವೊಂದು ದೃಷ್ಟಿಯಿಂದ ಶಾಸ್ತ್ರಕಥನ ಎನ್ನಬಹುದು. ಇಂಥ ಕಡೆ ಪ್ರತಿಭೆಗಿಂತ ಬೌದ್ಧಿಕತೆ ಮೆರೆದಿದೆ. ಬೃಹದಾರಣ್ಯಕೋಪನಿಷತ್ತಿನ ಮೂರು ಮತ್ತು

ನಾಲ್ಕನೆಯ ಅಧ್ಯಾಯಗಳು ಉಪನಿಷತ್ತಿನ ಸಾರವನ್ನು ಒಳಗೊಂಡಿವೆ. ಈ ಅಧ್ಯಾಯಗಳಲ್ಲಿ ಯಾಜ್ಞವಲ್ಕ್ಯನು ಆತ್ಮ-ಬ್ರಹ್ಮತತ್ತ್ವವನ್ನು ಅತ್ಯಂತ ವಿಸ್ತಾರವಾಗಿ ಪ್ರಸ್ತಾಪಿಸುತ್ತಾನೆ. ದೇವುಡು ಈ ಎಲ್ಲಾ ವಿಚಾರಗಳನ್ನು ಸವಿವರವಾಗಿ ಹೇಳಲು ತೊಡಗುವುದರಿಂದ ಕಾದಂಬರಿಯ ಹಂದರ ತುಂಬಾ ಹಿರಿದಾಗಿದೆ. ಇದು ಆಧ್ಯಾತ್ಮಿಕ ನೆಲೆಯುಳ್ಳ ಕೃತಿಯಾಗಿರುವುದರಿಂದ ಇಲ್ಲಿ ಕಾಮ-ಪ್ರೇಮ ಸಂಬಂಧಿಯಾದ ಸನ್ನಿವೇಶಗಳು ಇಲ್ಲ. ಮುಖ್ಯವಾಗಿ ವೇದಕಾಲದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಚಿತ್ರಣವನ್ನುಳ್ಳದ್ದು. ಆರ್ಷೇಯ ಬದುಕಿನ ಬಹುಮುಖದರ್ಶನ ಕಾದಂಬರಿಯಲ್ಲಿ ಆಗದಿದ್ದರೂ, ಆಶ್ರಮವಾಸಿಗಳ ಸರಳ ಹಾಗೂ ಸಾತ್ವಿಕ ಜೀವನ ವಿಧಾನ ಸ್ಪಷ್ಟವಾಗುತ್ತದೆ. ಅಂದಿನ ಸಾಮಾಜಿಕ ಜೀವನದಿಂದ ಸಾರ್ವಕಾಲಿಕವಾಗಿ ಒಪ್ಪಬಹುದಾದ ಒಂದು ಮಹತ್ವದ ಸಂಗತಿಯೆಂದರೆ ಸ್ತ್ರೀ ಸಮಾನತೆ. ಬ್ರಹ್ಮಜಿಜ್ಞಾಸೆಯಲ್ಲಿ ಪಾಲ್ಗೊಳ್ಳುವ ಗಾರ್ಗಿಗೆ ಸಮಾನವಾಗಿಯೇ ನಿಲ್ಲುವಂಥವರು ಕಾತ್ಯಾಯಿನಿ ಮತ್ತು ಮೈತ್ರೇಯಿ. ಇವರಿಬ್ಬರ ಸ್ನೇಹ ಅನ್ಯಾದೃಶವಾದದ್ದು. ಕಾತ್ಯಾಯಿನಿಯ ಔದಾರ್ಯ, ಮೈತ್ರೇಯಿಯ ನಿಷ್ಠೆ ಸಮಾವೇಶಗೊಂಡು ಯಾಜ್ಞವಲ್ಕ್ಯನ ಗೃಹಸ್ಥ ಜೀವನ ಸಕಾರಗೊಳ್ಳುತ್ತದೆ. ಆತನ ಸಾಧನೆಗೆ ಹೆಗಲೆಣೆಯಾಗಿ ಇಬ್ಬರೂ ದುಡಿಯುವರೇ ಹೊರತು ಎಂದೂ ವಿಮುಖರಾಗುವುದಿಲ್ಲ. ಧರ್ಮಪತ್ನಿಯಾಗಿ ಯಾಜ್ಞವಲ್ಕ್ಯನ ಅಂತರ್ಮುಖ, ಬಹಿರ್ಮುಖಗಳನ್ನು ಬಲ್ಲ ಕಾತ್ಯಾಯನಿ ಮೈತ್ರೇಯಿಯನ್ನು ಕರೆತಂದು ಮದುವೆ ಮಾಡಿಕೊಳ್ಳಲು ಒಪ್ಪಿಸುವಳು. ಬಹಳಷ್ಟು ಕಡೆ ಜ್ಞಾನ ಕಾಂಡವಾಗಿಯೇ ಕಾಣುವ ಕಾದಂಬರಿಯ ಮಧ್ಯೆ ಇಂಥ ಕೆಲವು ಭಾವಸುಳಿಗಳು ಹುಟ್ಟಿಕೊಂಡು ಲೌಕಿಕ ಬದುಕಿಗೆ ಹತ್ತಿರವೆನಿಸಬಲ್ಲ ಸನ್ನಿವೇಶಗಳು ನಿರ್ಮಾಣವಾಗುತ್ತವೆ.

೧೩

ವೇದಕಾಲೀನ ಸಾಂಸಾರಿಕ ಜೀವನ, ಸಹಬಾಳ್ವೆಯನ್ನು ಕುರಿತಂತೆ ಕಾದಂಬರಿಯ ಅನೇಕ ಕಡೆ ಪ್ರಸ್ತಾಪವಿದೆ. ದೇವರಾತ-ಆಲಂಬಿ, ವೈಶಂಪಾಯನ-ಕಬಂಧಿನಿ, ಉದ್ದಾಲಕ-ಆಲಾಪಿನಿ, ಮಹಿರಾಸ-ಜಾಯಂತಿ, ಬುಡಿಲ ಮತ್ತು ಆತನ ಮಕ್ಕಳಾದ ಕಾತ್ಯಾಯನ, ಕಾತ್ಯಾಯಿನಿ— ಈ ಪಾತ್ರಗಳೆಲ್ಲಾ ಸುವ್ಯವಸ್ಥಿತವಾದ ಕೌಟುಂಬಿಕ ಬದುಕಿನ ಸಕ್ರಿಯ ಸದಸ್ಯರಾಗಿದ್ದಾರೆ. ಆಶ್ರಮ ಯೋಗ್ಯ ವಿದ್ಯುಕ್ತ ಆಚರಣೆಗಳ ವಿವರ ವಿಪುಲವಾಗಿ ದೊರೆಯುತ್ತದೆ. ತರ್ಕ, ವಾದ-ವಿವಾದಗಳ ಭಾರದಿಂದ ಸಾಕಷ್ಟು ಕಡೆ ಕಥೆ ಶುಷ್ಕವಾಗಿದೆ. ವೇದೋಕ್ತ ಶಬ್ದಗಳನ್ನು, ಹಲವು ಸಿದ್ಧಾಂತಗಳಿಗೆ ಸಂಬಂಧಿಸಿದ ಪಾರಿಭಾಷಿಕ ಪದಗಳನ್ನು ಕಾದಂಬರಿಯ ಸಂದರ್ಭದಲ್ಲಿ ನಿರ್ವಚಿಸಿರುವುದು ಗಮನಾರ್ಹ ಸಂಗತಿಯಾಗಿದೆ. ಇದರಿಂದ ಕೆಲವು ಕ್ಲಿಷ್ಟ ವಿಚಾರಗಳನ್ನು ಅರ್ಥಮಾಡಿಕೊಂಡು ಕಾದಂಬರಿಯನ್ನು ಪ್ರವೇಶಿಸಲು ಸಾಧ್ಯವಾಗುತ್ತದೆ.

೧೪

ಒಟ್ಟು ಈ ಮೂರು ಕಾದಂಬರಿಗಳ ಸ್ವರೂಪದ ಹಿನ್ನೆಲೆಯಲ್ಲಿ ಕೆಲವು ಮಾತುಗಳನ್ನು ಹೇಳಬಹುದು. 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ', 'ಮಹಾದರ್ಶನ'

ವಸ್ತುವಿನ ದೃಷ್ಟಿಯಿಂದ ಬೇರೆ ಬೇರೆಯಾದರೂ ಅವು ಕಟ್ಟಿಕೊಡುವ ಆವರಣಗಳು ವಿಶಿಷ್ಟವಾಗಿವೆ. ಸನಾತನ ಕಾಲದ ಜೀವನಕ್ರಮ, ಅದಕ್ಕೆ ಸರಿಹೊಂದುವ ವಾತಾವರಣ ನಿರ್ಮಿಸಿ, ಹದಗೊಂಡು ಬೆರೆತು ಬರುವ ಸಂಸ್ಕೃತ-ಕನ್ನಡ ಭಾಷಾ ಬಳಕೆಯಿಂದಾಗಿ ದೇವುಡು ಅವರು ಪ್ರತಿಭೆ-ಪಾಂಡಿತ್ಯಗಳ ಸಮನ್ವಯವನ್ನು ಸಾಧಿಸಿದ್ದಾರೆ ಎನಿಸುತ್ತದೆ. ಪ್ರಾಚೀನ ಜ್ಞಾನದೊಡನೆ ಅರ್ವಾಚೀನ ಜ್ಞಾನ ಹಾಸು ಹೊಕ್ಕಾಗಿರುವುದನ್ನು ಸಂದರ್ಭಾನುಸಾರಿಯಾಗಿ ಗಮನಿಸಬಹುದು. ಕಾದಂಬರಿಗಳ ಪಾತ್ರವರ್ಗ, ತಂತ್ರವಿಧಾನ ಕೂಡ ಭಿನ್ನವಾದುದಾಗಿದೆ. ಕೌಶಿಕ ವಿಶ್ವಾಮಿತ್ರನಾಗಿ ಬ್ರಹ್ಮರ್ಷಿ ಪದವಿಯನ್ನು ಪಡೆಯುವುದು, ನಹುಷ ಮಹಾಕ್ಷತ್ರಿಯ ಎನಿಸಿಕೊಳ್ಳುವುದು, ಯಾಜ್ಞವಲ್ಕ್ಯ ಉಪಾಸನೆಗಳ ಮೂಲಕ ಸಾಧಿಸುವ ಬ್ರಹ್ಮವಿದ್ಯೆ— ಇವೆಲ್ಲಾ ಅವರವರ ಅನುಭವ ಪರಂಪರೆಗಳನ್ನು ತೆರೆದು ತೋರಿಸುತ್ತವೆ. ಒಂದೊಂದು ತಾತ್ತ್ವಿಕ ನಂಬಿಕೆಗೆ ಬದ್ಧವಾಗಿಯೇ ಹಲವಾರು ಪಾತ್ರಗಳು ಬೆಳೆಯುತ್ತವೆ. ಪ್ರಾಚೀನ ಕಾವ್ಯ ಮಾದರಿಯುಳ್ಳ ಈ ಕಾದಂಬರಿಗಳ ಅಭಿವ್ಯಕ್ತಿ ಕ್ರಮ ಹೊಸದು. ಅಲ್ಲಿ ವರ್ಣನೆಯ ಭಾಗಗಳು ಹೇರಳವಾಗಿವೆ. ಆ ಮೂಲಕ ಅಪರಿಚಿತ ಸಂಗತಿಗಳನ್ನು, ಸನ್ನಿವೇಶಗಳನ್ನು ಪ್ರತ್ಯಕ್ಷ ಅನುಭವದ ನೆಲೆಗೆ ತಂದುಕೊಡುವ ನೈಪುಣ್ಯವನ್ನು ಕಾಣಬಹುದು. ''ಈ ದೃಷ್ಟಿಯಿಂದ ದೇವುಡು ಅವರ ಮೂರೂ ಪೌರಾಣಿಕ ಕಾದಂಬರಿಗಳು ಅತ್ಯಂತ ದಿಟ್ಟಪ್ರಯೋಗಗಳೆಂದೇ ಹೇಳಬೇಕು. ಪುರಾಣ ಕಥೆಗಳ ದೈತ್ಯಕಲ್ಪಕತೆಗಳ ಫಲಗಳಾದ ಅಲೌಕಿಕ, ಅದ್ಭುತ ರಮ್ಯ ಅಂಶಗಳನ್ನು ಸಹಜವೆಂಬಂತೆಯೇ ಒಪ್ಪಿಕೊಂಡು ಅವರಿಲ್ಲಿ ಕಥೆ ಹೇಳಿದ್ದಾರೆ. ಅವರ ಕಥೆಗಳು ಕೇವಲ ರೂಪಕ ಕಥೆಗಳೂ ಅಲ್ಲ. ಅವಾಸ್ತವ ಎಂದು ಅವನ್ನು ತಳ್ಳಿಹಾಕುವಂತೆಯೂ ಇಲ್ಲ. ಹಾಗೆಯೇ ಕೇವಲ ಪುರಾಣ ಕಥೆಗಳ ಪುನರ್ನಿರೂಪಣೆ ಎಂದು ಹೇಳುವಂತಿಲ್ಲ[೧]'' ಎಂಬ ಹೇಳಿಕೆ ಸಮಂಜಸವೆನಿಸುತ್ತದೆ. ಅಲ್ಲಿ ಅಪಪುರಾಣೀಕರಣ (Demythification) ಸಾಧ್ಯವಾಗಿಲ್ಲ.

ಕೊನೆಯ ಮಾತು

ಇಂಥ ಸಾಹಿತ್ಯ ಆಯಾಯಾ ಸಂದರ್ಭದಲ್ಲಿಯೇ ಪರಿಗಣಿಸದೇ ಹೋದುದಕ್ಕೆ ಎರಡು ಕಾರಣಗಳಿರಬಹುದು: ಒಂದು-ಲೇಖಕರೇ ಹಾಕಿಕೊಂಡ ಕೆಲವು ನಿರ್ದಿಷ್ಟ ಚೌಕಟ್ಟುಗಳು. ಅಂದರೆ, ಕೃತಿ ರಚನೆಯೊಳಗೇ ಒಂದು ಬಗೆಯ ಬೌದ್ಧಿಕ ನೆಲೆಗಟ್ಟನ್ನು ರೂಪಿಸಿಕೊಂಡದ್ದು. ಎರಡು-ಕೃತಿಗಳನ್ನು ಗ್ರಹಿಸಲು ಬೇಕಾದ ಬೌದ್ಧಿಕ ಶಿಸ್ತು ಮತ್ತು ಮನೋಧರ್ಮ ಓದುಗನಲ್ಲಿ ಇಲ್ಲದೇ ಹೋದದ್ದು.

***

೧. ಗಿರಡ್ಡಿ ಗೋವಿಂದರಾಜ (ಇದರಲ್ಲಿ: ಶೇಷಗಿರಿರಾವ್, ಎಲ್.ಎಸ್. (ಸಂ), ಕನ್ನಡಭಾರತಿ, ೧೯೮೪, ಪುಟ ೯೮)

ಶಿಕ್ಷಣ

ಪಿ. ಹನುಮೇಗೌಡ

ನಾವಿಕನಿಲ್ಲದ ನಾವೆ ಯಾವ ಬಂಡೆಗಾದರೂ ಬಡಿಯಬಹುದು. ಕಡಿವಾಣವಿಲ್ಲದ ಕುದುರೆ ಎಲ್ಲಿಗಾದರೂ ಹೊತ್ತೊಯ್ಯಬಹುದು. ಅಂತೆಯೇ ಗುರಿಯಿಲ್ಲದ ಶಿಕ್ಷಣ ರಾಷ್ಟ್ರವನ್ನು ಯಾವ ದುರಂತಕ್ಕಾದರೂ ಈಡು ಮಾಡಬಹುದು. ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಣಾಧಿಕಾರಿಗಳು ಶಿಕ್ಷಣದ ಗುರಿಯನ್ನು ಮೊದಲರಿಯಬೇಕು. ಆಗಲೇ ಸಮಾಜ ನಿರ್ದಿಷ್ಟವಾದ ಗುರಿಯತ್ತ ಸಾಗಲು ಸಾಧ್ಯ. ಗುರಿಯಿಲ್ಲದ ಶಿಕ್ಷಣ ಸಮಾಜಕ್ಕೆ ಮಾರಕ. ಮಗು ಶಾಲೆಯಲ್ಲಿ ಏನನ್ನು ಕಲಿಯಬೇಕು ಎನ್ನುವುದರ ಬಗ್ಗೆ ಶಿಕ್ಷಣ ತಜ್ಞರಲ್ಲೇ ಭಿನ್ನಾಭಿಪ್ರಾಯಗಳಿವೆ. ಇದು ಸಹಜ. ಪ್ರತಿಯೊಬ್ಬರಲ್ಲೂ ಒಂದೊಂದು ಕಲ್ಪನಾ ಭಾವನೆಗಳಿವೆ. ಆಧ್ಯಾತ್ಮಿಕತೆಯಲ್ಲಿ ನಂಬಿಕೆ ಇರುವವರು ನೈತಿಕತೆ, ಸಭ್ಯತೆ ಹಾಗೂ ಪ್ರಾಮಾಣಿಕತೆಗೆ ಹೆಚ್ಚು ಗಮನ ಕೊಡುತ್ತಾರೆ. ಪ್ರಗತಿಪರರು ಜ್ಞಾನಕ್ಕೆ ಆದ್ಯತೆ ನೀಡುತ್ತಾರೆ.

ಸನ್ನಿವೇಶ, ದೇಶ, ಕಾಲ ಇವುಗಳೂ ಶಿಕ್ಷಣದ ಗುರಿಗಳನ್ನು ನಿರ್ಧರಿಸುತ್ತವೆ. ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿ ಉತ್ತಮ ನಾಗರಿಕರನ್ನು ಹಾಗೂ ರಾಷ್ಟ್ರಭಕ್ತರನ್ನು ತಯಾರಿಸಲು ರಾಷ್ಟ್ರ ಇಚ್ಛಿಸಿದರೆ, ಸಮತಾವಾದದ ರಾಷ್ಟ್ರದಲ್ಲಿ ಸಮಾಜದ ಶ್ರೇಯೋಭಿವೃದ್ಧಿಗೆ ತಮ್ಮ ಸ್ವಾರ್ಥತೆಯನ್ನು ತ್ಯಾಗಮಾಡಿ ಸಮಾಜಕ್ಕೆ ದುಡಿಯಬೇಕಾಗುತ್ತದೆ.

ಸ್ವಭಾವತಃ ಮನುಷ್ಯ ಸಂಘಜೀವಿ. ಸಮಾಜದಿಂದ ಅವನನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಸಮಾಜ ಹಾಗೂ ರಾಷ್ಟ್ರದ ಭವಿಷ್ಯ ಅದರ ಶಾಲಾ ಕಾಲೇಜುಗಳ ತರಗತಿಗಳಲ್ಲಿ ರೂಪಿತವಾಗುತ್ತದೆಯೇ ಹೊರತು ವಾಙ್ಮಯ ಕಲೆಯಿಂದಲ್ಲ.

ತಾಂತ್ರಿಕ ಹಾಗೂ ವೈಜ್ಞಾನಿಕ ನೆಲೆಗಟ್ಟಿನ ಮೇಲೆ ನಿಂತಿರುವ ಈ ಅಣು ಯುಗದಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವುದರಿಂದ ಮಾತ್ರ ರಾಷ್ಟ್ರದ ಪ್ರಗತಿಯನ್ನು ಸಾಧಿಸಲು ಸಾಧ್ಯ.

ಶಾಲಾ ಕಾಲೇಜುಗಳಿಂದ ಹೊರಬರುವ ತರುಣ ಜನಾಂಗದ ಸತ್ವ ಹಾಗೂ ಸಂಖ್ಯೆಯ ಆಧಾರದ ಮೇಲೆ ರಾಷ್ಟ್ರದ ಪುನರ್ ನಿರ್ಮಾಣ ಸಾಧ್ಯ.

ಆದ್ದರಿಂದ ರಾಷ್ಟ್ರೀಯ ಅಭ್ಯುದಯಕ್ಕೆ ಅನುಗುಣವಾಗಿ ಶಿಕ್ಷಣದ ಪಾತ್ರವನ್ನು ನಿರೂಪಿಸಿ ಅದನ್ನು ದೃಢಸಂಕಲ್ಪದಿಂದ ಸಾಧಿಸಬೇಕು. ಇದೊಂದು ಸಾಟಿಯಿಲ್ಲದ ಸಾಧನೆಯಾಗಬೇಕು. ಆಗ ಮಾತ್ರ ಶಿಕ್ಷಣದ ಮಹತ್ವ ಹಾಗೂ ಗಾಂಭೀರ್ಯ ಹೆಚ್ಚುತ್ತದೆ. ಸ್ವಾತಂತ್ರ್ಯಾನಂತರ ರಾಷ್ಟ್ರೀಯ ಅಭ್ಯುದಯದ ಕ್ಷಿತಿಜ ಸುವಿಶಾಲವಾಗಿದೆ. ರಾಷ್ಟ್ರದ ಸರ್ವಾಂಗೀಣ ಪ್ರಗತಿಯ ಸಾಧನೆಗೆ ಸ್ವಾತಂತ್ರ್ಯ ಹಾಗೂ ರಾಷ್ಟ್ರೀಯ ಭಾವೈಕ್ಯತೆಯ

ಸ್ಥಿರತೆ ಸುಸ್ಪಷ್ಟವಾಗಿರಬೇಕಾಗಿದೆ. ದೂರದೃಷ್ಟಿಯ ಶಿಕ್ಷಣ ನೀತಿ, ಅದರ ಸಾಧನೆಯ ಅಚಲ ನಿಲುವು, ಸ್ಥೈರ್ಯೋತ್ಸಾಹ, ರಾಷ್ಟ್ರದ ಜನತೆಯಲ್ಲಿರಬೇಕು. ರಾಷ್ಟ್ರೀಯ ಜ್ವಲಂತ ಸಮಸ್ಯೆಗಳಿಗೆ ಅಜ್ಞಾನವೇ ಮೂಲ. ಶಿಕ್ಷಣವನ್ನು ರಾಷ್ಟ್ರೀಯ ಅಭಿವೃದ್ಧಿ ನೀತಿಯಿಂದ ಬೇರ್ಪಡಿಸುವಂತಿಲ್ಲ. ಎಲ್ಲಾ ಯೋಜನೆಗಳ ಯಶಸ್ಸು ಶಿಕ್ಷಣದ ನೀತಿಯನ್ನು ಅವಲಂಬಿಸಿದೆ. ಶಿಕ್ಷಣದ ನೀತಿಯನ್ನು ನಿರ್ವಾತದಲ್ಲಿ ರೂಪಿಸುವಂತಿಲ್ಲ. ಅದು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನೀತಿಗಳ ಸುಧಾರಣೆಗಳಿಗೆ ಸಹಕಾರಿಯಾಗಿದೆ.

ಆದ್ದರಿಂದ ಮಕ್ಕಳಿಗೆ ಶಿಕ್ಷಣ ಕೊಟ್ಟು ಅದನ್ನು ತೊಲಗಿಸಬೇಕು. ಶಿಕ್ಷಣವು ಮಗುವಿನ ನಡೆ-ನುಡಿಯ ಮೇಲೆ ಮಹತ್ತರ ಪರಿಣಾಮವನ್ನುಂಟುಮಾಡುತ್ತದೆ. ವಿಶಾಲವಾದ ಅರ್ಥದಲ್ಲಿ ಅದು ಮಗುವಿನ ಮೇಲೆ ಗರ್ಭದಿಂದ ಗೋರಿಯವರೆವಿಗೂ ಪರಿಣಾಮವನ್ನು ಬೀರುತ್ತಲೇ ಇರುತ್ತದೆ. ಮನೆಯ ಸನ್ನಿವೇಶ, ಸಂಗಾತಿಗಳ ಪ್ರಭಾವ, ಮನರಂಜನೆ, ಹವ್ಯಾಸ ಇತ್ಯಾದಿಗಳು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಗುವಿನ ಮನಸ್ಸನ್ನು ಸೆರೆಹಿಡಿದು ಅದರ ವ್ಯಕ್ತಿತ್ವವನ್ನು ರೂಪಿಸುತ್ತವೆ. ಮಗುವಿಗಾಗುವ ಅನುಭವಗಳನ್ನು ಶಿಕ್ಷಣವೆಂದೇ ಭಾವಿಸಬೇಕು. ಜೀವನವೇ ಶಿಕ್ಷಣ, ಶಿಕ್ಷಣವೇ ಜೀವನ, ಹೊರಗಿನ ವಾತಾವರಣ, ಭೌಗೋಳಿಕ ಸನ್ನಿವೇಶ ಆ ನೆಲದ ಮಣ್ಣು ಇತ್ಯಾದಿಗಳು ಮಗುವಿನ ಮೇಲೆ ಪ್ರಭಾವವನ್ನು ಬೀರುತ್ತವೆ. ಮಗುವನ್ನು ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ಮಾಡುವುದು ಶಿಕ್ಷಣ.

ಶಿಕ್ಷಣದ ಗುರಿಗಳು

ಶಿಕ್ಷಣದಲ್ಲಿ ಹಲವಾರು ಗುರಿಗಳಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ತಿಳಿಸಲಾಗಿದೆ. ಶಿಕ್ಷಕರು ಇವುಗಳನ್ನು ಅನುಷ್ಠಾನಕ್ಕೆ ತರುವುದು ಮಾತ್ರವಲ್ಲದೆ , ಮಕ್ಕಳ ಶ್ರೇಯೋಭಿವೃದ್ಧಿಗೆ ಅವಶ್ಯಕವಾದ ಇತರೆ ಗುರಿಗಳನ್ನೂ ಗಮನದಲ್ಲಿಟ್ಟುಕೊಂಡು, ಅನುಷ್ಠಾನಕ್ಕೆ ತರಬೇಕು.

೧. ವೃತ್ತಿ ಶಿಕ್ಷಣ :

ತರುಣ ಜನಾಂಗ, ವೃತ್ತಿಯಲ್ಲಿ ತೊಡಗಿದಾಗ ಕುಟುಂಬ ಹಾಗೂ ರಾಷ್ಟ್ರ ಆರ್ಥಿಕವಾಗಿ ಬಲಗೊಳ್ಳುತ್ತವೆ. ಪರಾವಲಂಬಿಯಾಗದೆ ಪ್ರತಿಯೊಬ್ಬನೂ ದುಡಿದು ತನ್ನ ಜೀವನವನ್ನು ನಡೆಸಬೇಕು. ಮಕ್ಕಳು ಪರಾವಲಂಬಿಗಳಾಗಿರಬಾರದು.

೨. ಜ್ಞಾನ ಸಂಪಾದನೆ :

ಜ್ಞಾನ ಸಂಪಾದನೆ ಶಿಕ್ಷಣದ ಪ್ರಮುಖ ಗುರಿ. ಅಜ್ಞಾನವನ್ನು ತೊಡೆದುಹಾಕಿದರೆ ಮಾತ್ರ ವ್ಯಕ್ತಿತ್ವದ ವಿಕಾಸ ಸಾಧ್ಯ. ಆಗ ಮಕ್ಕಳ ಭವಿಷ್ಯ ಪ್ರಜ್ವಲವಾಗುತ್ತದೆ. ವಿದ್ಯಾರ್ಥಿಗಳಲ್ಲಿ (ಅಂದರೆ ವಿದ್ಯಾರ್ಥಿನಿಯರೂ ಸೇರಿದಂತೆ) ಅಡಗಿರುವ ಅಗೋಚರ

ಶಕ್ತಿಯನ್ನು ಶಿಕ್ಷಕರು, ಶಿಕ್ಷಕಿಯರು ಸೇರಿ ಶಿಕ್ಷಣವನ್ನು ಕೊಟ್ಟು ಹೊರಹೊಮ್ಮುವಂತೆ ಮಾಡಬೇಕು. ಸುಪ್ತಚೇತನವನ್ನು ಸಚೇತನಗೊಳಿಸಬೇಕು.

೩. ಮಕ್ಕಳ ಮಾನಸಿಕ ವೈಜ್ಞಾನಿಕ ಬೆಳವಣಿಗೆ :

ಈ ಅಣುಯುಗದಲ್ಲಿ ನಾವು (ನಮ್ಮ ರಾಷ್ಟ್ರ) ನಮ್ಮ ಬಲವನ್ನೆಲ್ಲಾ ಬಿಟ್ಟು ಓಡಿದರೂ ನಿಂತ ಕಡೆಯೇ ನಿಂತ ಹಾಗೆ ಭಾಸವಾಗುತ್ತದೆ. ಅಂದರೆ ನಮ್ಮ ಸಂಶೋಧನೆಗಳನ್ನು ಅನ್ಯ ರಾಷ್ಟ್ರಗಳ ಸಂಶೋಧನೆಗೆ ಹೋಲಿಸಿ ನೋಡಿದರೆ ನಮ್ಮದು ತೃಣ ಮಾತ್ರ. ಆದ್ದರಿಂದ ವಿಜ್ಞಾನದ ಪಾಠ ಮಾಡುವಾಗ ಪ್ರಯೋಗಗಳನ್ನು ಮಾಡಿ ಮಕ್ಕಳ ಮನಸ್ಸನ್ನು ವಿಕಾಸಗೊಳಿಸಬೇಕು. ಶಾಲೆಗಳಲ್ಲಿ ವಿಜ್ಞಾನ ಬೋಧನೆಗೆ ಹೆಚ್ಚು ಆದ್ಯತೆ ನೀಡಬೇಕು. ನೈತಿಕ ಮಟ್ಟವನ್ನೂ ಹೆಚ್ಚಿಸಬೇಕು.

೪. ದೇಹಶಕ್ತಿಯ ಸಂವರ್ಧನೆ :

ಆರೋಗ್ಯಕರ ಮನಸ್ಸು ಆರೋಗ್ಯಕರ ದೇಹದಲ್ಲಿ ಇರುತ್ತದೆ. ಆರೋಗ್ಯವಂತರು ರಾಷ್ಟ್ರದ ರಕ್ಷಣೆಯನ್ನು ಯಶಸ್ವಿಯಾಗಿ ಮಾಡಬಲ್ಲರು. ರೋಗ ರುಜಿನಗಳಿಗೆ ತುತ್ತಾದ ಜನತೆ ಆರ್ಥಿಕವಾಗಿ ಸಾಮಾಜಿಕವಾಗಿ ವೈಜ್ಞಾನಿಕವಾಗಿ ನೈತಿಕವಾಗಿ ಮಹತ್ತರ ಸಾಧನೆಯನ್ನು ಮಾಡಲಾರರು. ಆದ್ದರಿಂದ ಪ್ರತಿ ಶಾಲೆಯಲ್ಲೂ ದೈಹಿಕ ಶಿಕ್ಷಕರು, ಮಕ್ಕಳು ಆಟಗಳಲ್ಲಿ ಹಾಗೂ ಇತರೆ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಬೇಕು. ರಾಷ್ಟ್ರೀಯ ಭಾವೈಕ್ಯತೆ ಜಾತ್ಯಾತೀತ ಭಾವನೆ, ಸಮಾನತೆ, ಸ್ವಾತಂತ್ರ್ಯ ಮೊದಲಾದ ಭಾವನೆಗಳು ಮಕ್ಕಳ ಮನಸ್ಸಿನಲ್ಲಿ ಪ್ರಫುಲ್ಲಿತವಾಗಿ ಬೆಳೆಯುವಂತೆ ಶಿಕ್ಷಕರು ಮಾಡಬೇಕು.

೫. ಶೀಲ ಸಂವರ್ಧನೆ :

ಹಣ ಹೋದರೆ ಏನೂ ಹೋದಂತಾಗುವುದಿಲ್ಲ. ಆರೋಗ್ಯ ಹೋದರೆ ಸ್ವಲ್ಪ ಹೋದಂತೆ. ಶೀಲ ಹೋದರೆ ಸರ್ವಸ್ವವೂ ಹೋದಂತೆ. ಶೀಲ, ಪ್ರತಿ ವ್ಯಕ್ತಿಯ ರಕ್ಷಾ ಕವಚ ಮಾತ್ರವಲ್ಲದೆ ರಾಷ್ಟ್ರದ ರಕ್ಷಾಕವಚವೂ ಹೌದು. ಶೀಲವಂತ ಜನತೆ, ರಾಷ್ಟ್ರದ ಸಂಪತ್ತು. ಶೀಲವಂತರಿಗೆ ಆತ್ಮಶಕ್ತಿ ಹಾಗೂ ದೃಢ ಸಂಕಲ್ಪವಿರುತ್ತವೆ. ಶಿಕ್ಷಣ ಕ್ಷೇತ್ರದಲ್ಲಿ ಶೀಲಕ್ಕೆ ಪ್ರಾಶಸ್ತ್ಯವಿದೆ. ಶಿಕ್ಷಣ ಮತ್ತು ಶೀಲ ಜೀವನದ ಹಾಸು ಹೊಕ್ಕಾಗಬೇಕು. ಆಗ ಮಾತ್ರ ಇಂದಿನ ಕೊಲೆ, ದರೋಡೆ, ಭಯೋತ್ಪಾದನೆ, ಅಮಾನುಷ ಕೃತ್ಯ ಹಾಗೂ ಭಯಾನಕ ಯುದ್ಧಗಳನ್ನು ತಡೆಯಬಹುದು. ಶಾಂತಿ, ಶೀಲ ಮತ್ತು ಶಿಸ್ತು ಇವುಗಳನ್ನು ಮಕ್ಕಳು ಮೈಗೂಡಿಸಿಕೊಳ್ಳುವಂತೆ ನೀತಿಪಾಠಗಳಲ್ಲಿ ತಿಳಿಸಬೇಕು. ಕ್ರಿಯಾತ್ಮಕನೈತಿಕ ಶಿಕ್ಷಣದಲ್ಲಿ ಮಕ್ಕಳು ಭಾಗವಹಿಸಿ ತಮ್ಮ ಶೀಲವನ್ನು ಬೆಳೆಸಿಕೊಳ್ಳುವಂತೆ ಶಿಕ್ಷಕರು ಮಾಡಬೇಕು.

೬. ಸಂಸ್ಕೃತಿಯನ್ನು ಬೆಳೆಸಿಕೊಳ್ಳುವುದು :

ಸಂಸ್ಕೃತಿ, ಧರ್ಮ (ಮತಾಚಾರವಲ್ಲದ್ದು) ಇವುಗಳು ಒಂದೇ ನಾಣ್ಯದ ಎರಡು ಭಾಗಗಳು. ದೇಶದ ಸಂಸ್ಕೃತಿ ಮತ್ತು ನಾಗರಿಕತೆಯನ್ನು ನಾವು ಉಳಿಸಿಕೊಳ್ಳಬೇಕು. ಸಂಸ್ಕೃತಿ ನಮ್ಮ ವ್ಯಕ್ತಿತ್ವಕ್ಕೆ ಮೆರಗುಕೊಟ್ಟರೆ, ನಾಗರಿಕತೆ ನಮ್ಮ ಭೌತಿಕ ಸಂಪತ್ತಿನ ಸಂಕೇತವಾಗುತ್ತದೆ. ಸುಸಂಸ್ಕೃತ ನಾಗರಿಕರು ನಮ್ಮ ರಾಷ್ಟ್ರದ ಸಂಪತ್ತು. ಇತಿಹಾಸ ಹಾಗೂ ರಾಷ್ಟ್ರದ ಮಹಾನ್ ವ್ಯಕ್ತಿಗಳ ಕಥೆಗಳನ್ನೂ ಹೇಳಿ ಮಕ್ಕಳನ್ನು ಸುಸಂಸ್ಕೃತರನ್ನಾಗಿ ಶಿಕ್ಷಕರು ಮಾಡಬೇಕು.

೭. ನೈತಿಕ ಹಾಗೂ ಧರ್ಮಪಾಲನೆ :

ನೀತಿಯುತ ಜೀವನವೇ ಶಿಕ್ಷಣದ ಕೊಡುಗೆ. ವಿಶ್ವಭ್ರಾತೃತ್ವದ ತಳಹದಿ ನೈತಿಕತೆ. ಮನುಷ್ಯ ಮನುಷ್ಯನನ್ನು ಅರ್ಥಮಾಡಿಕೊಂಡು ಶಾಂತಿ ಹಾಗೂ ಸೌಹಾರ್ದದಿಂದ ಬಾಳಬೇಕಾದರೆ ನೈತಿಕತೆಯನ್ನು ಮಕ್ಕಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸರ್ವಧರ್ಮಗಳ ತತ್ವಗಳನ್ನು ಮಕ್ಕಳಿಗೆ ಬೋಧಿಸಿ, ಯಾರೂ ಯಾವ ಧರ್ಮವನ್ನೂ ದ್ವೇಷಿಸದಂತೆ ತಿಳಿಸಬೇಕು. ಎಲ್ಲಾಧರ್ಮಗಳ ಗುರಿ ಒಂದೇ ದೇವರನ್ನು ಅರ್ಥಮಾಡಿಕೊಂಡು ಮೋಕ್ಷ ಪಡೆಯಲು ಸಾಧನವದು. ನೈತಿಕತೆ ಮತ್ತು ಧರ್ಮ ಒಂದಕ್ಕೊಂದು ಪೂರಕ. ಮತಾಚರಣೆಗಳನ್ನು ಬೋಧಿಸಬಾರದು. ಧರ್ಮ ಪೌರರನ್ನು ಸುಸಂಸ್ಕೃತರನ್ನಾಗಿ ಮಾಡುತ್ತದೆ. ಇದರಿಂದ ಅವರ ಜೀವನ ಮುಂದೆ ಉತ್ತಮವಾಗುತ್ತದೆ. ಸತ್ಯ, ಸಭ್ಯತೆ ಹಾಗೂ ಪ್ರಾಮಾಣಿಕತೆ ಇಂದು ಕತ್ತಲಲ್ಲಿ ಕಾಣುವ ಮಿಣುಕು ಹುಳುವಿನ ಬೆಳಕಾಗಿವೆ. ಸತ್ಯ, ಸೌಂದರ್ಯ, ಶೀಲಗಳ ಆರಾಧನಾ ಭಾವನೆಗಳು ಮಕ್ಕಳಲ್ಲಿ ಬೆಳೆಯುವಂತೆ ಮಾಡಬೇಕು.

೮. ವೈಯಕ್ತಿಕ ಹಾಗೂ ಸಾಮಾಜಿಕ ಬೆಳವಣಿಗೆ :

ವ್ಯಕ್ತಿಗಳು ಸಮಾಜದ ಅವಿಭಾಜ್ಯ ಅಂಗಗಳು, ವ್ಯಕ್ತಿಗಳ ಶ್ರೇಯಸ್ಸು ಮತ್ತು ಪ್ರಗತಿ, ಸಮಾಜದ ಶ್ರೇಯಸ್ಸು ಮತ್ತು ಪ್ರಗತಿ. ಸಮಾಜದ ಪರಿಪಕ್ವತೆಗೆ ವ್ಯಕ್ತಿಗಳ ಪರಿಪಕ್ವತೆ ಅವಶ್ಯಕ. ಸಮಾಜದ ಸಾಮರಸ್ಯದ ಬೆಳವಣಿಗೆಗೆ ವ್ಯಕ್ತಿಗಳ ದೈಹಿಕ, ಬೌದ್ಧಿಕ, ನೈತಿಕ ಹಾಗೂ ಸೌಂದರ್ಯೋಪಾಸನೆಯ ಶಕ್ತಿ ಬೆಳೆಯಬೇಕು. ವ್ಯಕ್ತಿಗಳ ಸರ್ವಾಂಗೀಣ ಬೆಳವಣಿಗೆಯಿಂದ ಸಮಾಜವು ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸುತ್ತದೆ. ಇಲ್ಲದೆಹೋದಲ್ಲಿ ಸಮಾಜಕ್ಕೆ ಪಾರ್ಶ್ವವಾಯು ಬಡಿದಂತಾಗುತ್ತದೆ. ಮಕ್ಕಳ ಸರ್ವಾಂಗೀಣ ಪ್ರಗತಿಯೇ ಶಿಕ್ಷಣದ ಗುರಿ. ಸಂಪ್ರದಾಯ ಹಾಗೂ ಸಂಪ್ರದಾಯರಹಿತ ಶಿಕ್ಷಣದ ಮೂಲಕ ಶಿಕ್ಷಕರು ಮಕ್ಕಳ ಸರ್ವತೋಮುಖ ಪ್ರಗತಿಯನ್ನು ಸಾಧಿಸಬೇಕು.

೯. ಕುಟುಂಬ ಮತ್ತು ಶಿಕ್ಷಣ :

ಮನೆ ಮಗುವಿನ ಮೊದಲ ಪಾಠಶಾಲೆ, ತಾಯಿಯೆ ಪ್ರಥಮ ಗುರು. ಇಲ್ಲಿ

ಕಲಿತ ವಿದ್ಯೆ ಮಗುವಿನಲ್ಲಿ ಜೀವನಾದ್ಯಂತ ಉಳಿಯುತ್ತದೆ. ಶಾಲೆಯು ಸಂಪ್ರದಾಯ ಶಿಕ್ಷಣವನ್ನು ಕೊಟ್ಟರೆ ಮನೆಯು ಸಂಪ್ರದಾಯ ರಹಿತ ಶಿಕ್ಷಣವನ್ನು ಕೊಡುತ್ತದೆ.

ಕುಟುಂಬ ಪ್ರಾಚೀನ ಶಾಲೆ, ಮಗು ಹುಟ್ಟಿ ಬೆಳೆದ ಸ್ಥಳ. ಕುಟುಂಬವನ್ನು ಸಮಾಜದ ಆಘಾತಗಳನ್ನು ಹೀರುವ ಭಕ್ತಿಕೇಂದ್ರವೆಂದು ಕರೆಯುತ್ತಾರೆ. ಕಾಲ ಬದಲಾವಣೆಯಾದಂತೆ ಇದೂ ಬದಲಾವಣೆಯಾಗುತ್ತದೆ. ಮಗುವಿನ ರಕ್ಷಣೆ, ವಿದ್ಯಾರ್ಜನೆ, ಇವುಗಳಲ್ಲಿ ತಾಯಿಯ ಪಾತ್ರ ಹಿರಿದಾದದ್ದು. ಆದ್ದರಿಂದ ತಾಯಿಗೂ ಶಿಕ್ಷಣ ಅತ್ಯಾವಶ್ಯಕ. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಟ್ಟರೆ ಮನೆಯಲ್ಲಿಯೇ ಒಂದು ವಿಶ್ವವಿದ್ಯಾನಿಲಯವನ್ನು ಅವರು ಸ್ಥಾಪಿಸುವರು. ಆದ್ದರಿಂದ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಶಿಕ್ಷಕರು ಹೆಚ್ಚಿನ ಗಮನ · ಕೊಡಬೇಕು.

೨. ಶಾಲೆ ಮತ್ತು ಶಿಕ್ಷಣ

ಸಾಂಪ್ರದಾಯಿಕ ಶಿಕ್ಷಣದ ಕೇಂದ್ರ ಶಾಲೆ, ನಿರ್ದಿಷ್ಟವಾದ ಯೋಜನೆಗಳ, ಪರಂಪರಾ ಕ್ರಮದ ಅನುಭವದ ಮಂದಿರವದು. ಸಮಾಜದ ಪ್ರತಿನಿಧಿಯಾಗಿ ಶಿಕ್ಷಣ ಪ್ರಚಾರ ಮಾಡುವ ಕಾರ್ಯಾಲಯ. ನಿಗದಿಯಾದ ಕಾಲದಲ್ಲಿ, ಗೊತ್ತಾದ ಗುರಿಯನ್ನು ಸಾಧಿಸುವುದೇ ಇದರ ಗುರಿ. ಸಮಾಜದ ಅನಿಸಿಕೆಗಳನ್ನು ಗಮನದಲ್ಲಿಟ್ಟುಕೊಂಡು ಎಚ್ಚರಿಕೆಯಿಂದ ಜ್ಞಾನ ಹಾಗೂ ಕೌಶಲಗಳನ್ನು ಮಕ್ಕಳ ಅಭಿರುಚಿಗನುಗುಣವಾಗಿ ಶಾಲೆ ಕೊಡಬೇಕು.

ಶಾಲೆಯು ಸಮಾಜದ ಪ್ರತಿಭಾನ್ವಿತ ಅನುಭವದ ಅನರ್ಘ್ಯರತ್ನಗಳ ಕಣಜ. ಸಾಮಾಜಿಕ ಬದಲಾವಣೆಗಳು ಶಾಲೆಗಳಿಂದ ಹೊರಹೊಮ್ಮುತ್ತವೆ. ಶಾಲೆ ವಿವೇಚನಾತ್ಮಕ ವ್ಯಕ್ತಿಗಳನ್ನು ತನ್ನ ಅನುಭವದ ಮೂಸೆಯಿಂದ ಎರಕಹೊಯ್ದು ಹೊರತರುತ್ತದೆ. ಸಮಾಜಕ್ಕೆ ಹೊಣೆಯಾದ ಶಾಲೆ, ಕೆಲವಾರು ಸೃಜನಾತ್ಮಕ ಕಾರ್ಯಗಳನ್ನು ಕೈಗೊಳ್ಳಬೇಕು. ಮಕ್ಕಳಿಗೆ ಶಿಕ್ಷಣ ಕೊಡುವುದು, ಸಮಾಜದ ಅಭಿವೃದ್ಧಿಗೆ ಶ್ರಮಿಸುವುದು, ಸ್ವಾತಂತ್ರ್ಯ ಸಮಾನತೆ, ವಿಶ್ವಭ್ರಾತೃತ್ವ ತತ್ವಗಳನ್ನು ಮಕ್ಕಳಿಗೆ ತಿಳಿಸುವುದು, ಹಾಗೂ ಅವರಲ್ಲಿ ವೃತ್ತಿಶಿಕ್ಷಣದ ಆದ್ಯತೆಯನ್ನು ತಿಳಿಸುವುದು, ನೈತಿಕತೆಯನ್ನು ಹಾಗೂ ಶಿಸ್ತನ್ನು ಮಕ್ಕಳು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಮಾಡುವುದು ಶಾಲೆಯ ಕರ್ತವ್ಯ.

೩. ಸಮಾಜ ಮತ್ತು ಶಿಕ್ಷಣ :

ಇದು ಪ್ರಜಾಪ್ರಭುತ್ವದ ಹಾಗೂ ಸಮತಾವಾದದ ಕಾಲ. ಕೇವಲ ಕೆಲವೇ ವ್ಯಕ್ತಿಗಳ ಕಾಲವಲ್ಲ. ಜನತೆ ತಮ್ಮ ಹಾಗೂ ಸಮಾಜದ ಹಿತದೃಷ್ಟಿಯಿಂದ ಶಿಕ್ಷಣ ಪಡೆಯಬೇಕು. ಸಮಾಜಕ್ಕೆ ಶ್ರೇಷ್ಠ ಸ್ಥಾನವಿದೆ. ವ್ಯಕ್ತಿ ಬೆಳೆಯಲು ಸಮಾಜ ಸಹಕಾರಿ. ವ್ಯಕ್ತಿ ಬೆಳೆಯಲು ಜ್ಞಾನಾರ್ಜನೆ ಮುಖ್ಯ. ಶಿಕ್ಷಣವಿಲ್ಲದ ವ್ಯಕ್ತಿಗಳ ಸಮಾಜ ಅಂಧ

ಸಮಾಜವಾಗುತ್ತದೆ. ಒಂದು ಕಡೆ ಸಮಾಜವು ವ್ಯಕ್ತಿಯಿಂದ ಪ್ರಭಾವಿತವಾದರೆ, ಮತ್ತೊಂದು ಕಡೆ ಸಮಾಜದಿಂದ ವ್ಯಕ್ತಿಯೂ ಪ್ರಭಾವಿತನಾಗುತ್ತಾನೆ. ವ್ಯಕ್ತಿಗಳು ಹಾಗೂ ಸಮಾಜ ಪ್ರಭಾವಿತವಾಗುವುದು ಶಿಕ್ಷಣದಿಂದಲೆ. ವ್ಯಕ್ತಿಗಳ ಪ್ರಭಾವ ಸಮಾಜದ ಮೇಲೆ ಹೆಚ್ಚಾಗಿರುತ್ತದೆ. ಆದ್ದರಿಂದ ಪ್ರತಿ ವ್ಯಕ್ತಿಯೂ ಪ್ರಭಾವಶಾಲಿಯಾಗಬೇಕಾದರೆ ಶಿಕ್ಷಣ ಅತ್ಯಾವಶ್ಯಕ. ಸಮಾಜದ ಅಭ್ಯುದಯಕ್ಕೆ ವ್ಯಕ್ತಿಗಳ ಪ್ರಗತಿಗೆ, ಮಕ್ಕಳಿಗೆ ಶಿಕ್ಷಣ ಕೊಟ್ಟು ಶಿಕ್ಷಕರು ದೇಶ ಹಾಗೂ ಸಮಾಜಕ್ಕೆ ಸೇವೆ ಸಲ್ಲಿಸಬೇಕು.

ಶಿಕ್ಷಣ ಮತ್ತು ಪ್ರಜಾಪ್ರಭುತ್ವ :

ಆಧುನಿಕ ಯುಗದಲ್ಲಿ ಬಹಳ ಸುಪ್ರಸಿದ್ಧವಾದ ಎರಡು ರಾಜಕೀಯ ಸಿದ್ಧಾಂತಗಳಿವೆ. ಅವು ಪ್ರಜಾಪ್ರಭುತ್ವ ಮತ್ತು ಸಮತಾವಾದ. ಇವೆರಡು ತತ್ತ್ವಗಳ ಸಮ್ಮಿಳನವಾದ ಮತ್ತೊಂದು ರಾಜಕೀಯ ಸಿದ್ಧಾಂತ, ಸಮತಾವಾದದ ಪ್ರಜಾಪ್ರಭುತ್ವ. ಪ್ರಜಾಪ್ರಭುತ್ವ ಪ್ರಜೆಗಳಿಂದ, ಪ್ರಜೆಗಳಿಗಾಗಿ, ನಿರ್ಮಿತವಾದ ಸರ್ಕಾರ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರ ಪ್ರಮುಖವಾದದ್ದು. ಪ್ರಜೆಗಳೆಲ್ಲ ವಿದ್ಯಾವಂತರಾದರೆ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಆದ್ದರಿಂದ ಭಾವಿ ಪ್ರಜೆಗಳಾದ ಮಕ್ಕಳಿಗೆ ಶಿಕ್ಷಣ ಅವಶ್ಯಕ. ಸಂವಿಧಾನದಲ್ಲಿ ನಿರೂಪಿಸಿರುವಂತೆ, ಭಾರತದಲ್ಲಿ ಈಗ ಪ್ರಜಾಪ್ರಭುತ್ವವಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಜನತೆಗೆ ನ್ಯಾಯ ದೊರಕಿಸುವುದು, ವಿಚಾರ ಚಿಂತನೆ, ಅಭಿಪ್ರಾಯದ ಅಭಿವ್ಯಕ್ತತೆ, ನಂಬಿಕೆ, ಆರಾಧನೆಯಲ್ಲಿ ಇಚ್ಛಾಸ್ವಾತಂತ್ರ್ಯ, ಅಂತಸ್ತು, ಅವಕಾಶ ಇವುಗಳಲ್ಲಿ ಸಮಾನತೆ, ರಾಷ್ಟ್ರದ ಐಕ್ಯತೆ, ವ್ಯಕ್ತಿಯ ಘನತೆ ಹಾಗೂ ಭ್ರಾತೃತ್ವ ಇವುಗಳನ್ನು ಬೆಳೆಸಿಕೊಳ್ಳಲು ಶಾಲೆಗಳಲ್ಲಿ ಶಿಕ್ಷಕರು ಬೋಧನಾವೇಳೆಯಲ್ಲಿ ಮಕ್ಕಳಿಗೆ ತಿಳಿಸಬೇಕು. ಪ್ರಜಾಪ್ರಭುತ್ವ ಒಂದು ರಾಜಕೀಯ ಸಿದ್ಧಾಂತ ಮಾತ್ರವೇ ಅಲ್ಲ, ಅದು ನಮ್ಮ ಜೀವನದ ಮಾರ್ಗವೂ ಹೌದು. ಮಕ್ಕಳು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅರಿಯಬೇಕು. ನ್ಯಾಯದ ಮೌಲ್ಯ ಅಂದರೆ, ತಮ್ಮ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ನ್ಯಾಯವನ್ನು ಪಡೆಯುವುದು. ಅಂದರೆ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ನ್ಯಾಯವನ್ನು ದೊರಕಿಸುವುದೇ ಅದರ ಉದ್ದೇಶವೆಂದು ಮಕ್ಕಳಿಗೆ ಅರುಹಬೇಕು.

ಆಧುನಿಕ ಇತಿಹಾಸದ ಸಾಮಾಜಿಕ ಬದಲಾವಣೆಯ ಈ ಶತಕದಲ್ಲಿ ನಾವು ವಾಸಿಸುತ್ತಿದ್ದೇವೆ. ನಾವು ಗಮನಿಸಲಿ, ಗಮನಿಸದೆ ಇರಲಿ, ನಾವು ಸ್ವಾಗತಿಸಲಿ ಅಥವಾ ಸ್ವಾಗತಿಸದೆ ಇರಲಿ, ಇದು ಗಮನಾರ್ಹ ಪರಿವರ್ತನೆಯ ಕಾಲ. ಹಿಂದೆ ಕೆಲವು ರಾಷ್ಟ್ರಗಳಲ್ಲಿ ಆರ್ಥಿಕ ಪ್ರಜಾಪ್ರಭುತ್ವವಿತ್ತು. ಈಗಲೂ ಕೆಲವು ರಾಷ್ಟ್ರಗಳಲ್ಲಿದೆ. ಮತ್ತೆ ಕೆಲವು ರಾಷ್ಟ್ರಗಳಲ್ಲಿ ರಾಜಕೀಯ ಹಾಗೂ ಆರ್ಥಿಕ ಪ್ರಭುತ್ವವಿದೆ. ಭಾರತದ ಪ್ರಜಾಪ್ರಭುತ್ವ ಸಾಮಾನ್ಯ ವ್ಯಕ್ತಿಯ ಕೈಯ್ಯಲ್ಲಿದೆ. ಅವನಿಗೆ ರಾಷ್ಟ್ರದ ಆಡಳಿತ ನಡೆಸುವ, ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಸಮಸ್ಯೆಗಳನ್ನು ಅರಿಯುವ ಜ್ಞಾನ ಹಾಗೂ ಆಡಳಿತಾತ್ಮಕ

ಕೌಶಲ್ಯಬೇಕು. ನಾಗರಿಕತೆಯ ಬೆಳವಣಿಗೆಗೆ ಇವನು ತನ್ನ ಕಾಣಿಕೆಯನ್ನು ಸಲ್ಲಿಸಬೇಕು. ತನ್ನ ಹಿತ, ಅಭಿರುಚಿ, ಅಭಿಲಾಶೆಗಳನ್ನು ತ್ಯಾಗಮಾಡಿ, ರಾಷ್ಟ್ರದ ಕಲ್ಯಾಣವನ್ನು ಬಯಸಬೇಕು. ಪ್ರಜಾಪ್ರಭುತ್ವದ ಅರ್ಥ ಕೇವಲ ರಾಜಕೀಯ ಸಮಾನತೆ ಹಾಗೂ ಆರ್ಥಿಕ ಸ್ವಾತಂತ್ರ್ಯವಲ್ಲ. ಎಲ್ಲಾ ಕ್ಷೇತ್ರಗಳಲ್ಲೂ ಸ್ವಾತಂತ್ರ್ಯ ಹಾಗೂ ಸಮಾನತೆಗಳನ್ನು ಪಡೆಯಬೇಕು. ಇವುಗಳಿಲ್ಲದೆ ನಾಗರಿಕತೆ ಅರ್ಥಹೀನವಾಗುತ್ತದೆ. ನಾಗರಿಕತೆಯಲ್ಲಿ ಕೆಲವು ಮೌಲ್ಯಗಳಿವೆ. ಉನ್ನತ ಮೌಲ್ಯಗಳನ್ನು ಹೊಂದುವ ರಾಷ್ಟ್ರ ನಾಗರಿಕ ರಾಷ್ಟ್ರ. ಕಲೆ, ಸಾಹಿತ್ಯ, ವೈಜ್ಞಾನಿಕ ವಿಚಾರ ಮಂಥನ ಇದ್ದರೂ ಸಾಲದು. ಇವು ಕೆಲವರ ಸ್ವತ್ತು. ಕೆಲವು ಕಾಲಕ್ಕೆ ಮಾತ್ರ ಇವು ಸೀಮಿತವಾಗಿವೆ. ಹೋಮರ್, ಪ್ಲೇಟೋ, ಷೇಕ್ಸ್‌ಪಿಯರ್ ಇವರುಗಳು ಪ್ರತಿ ದಿನವೂ ಹುಟ್ಟುವುದಿಲ್ಲ. ಇದರಿಂದ ಮೇಲ್ದರ್ಜೆಯ ನಾಗರಿಕತೆಯನ್ನು ನಿರೀಕ್ಷಿಸಲೂ ಸಾಧ್ಯವಿಲ್ಲ. ಮೇಲ್ಮಟ್ಟದ ರಾಷ್ಟ್ರವನ್ನು ನಿರ್ಮಾಣ ಮಾಡಲು ಸಾಮಾನ್ಯ ವ್ಯಕ್ತಿಯೂ ಶೀಲವಂತನಾಗಬೇಕು. ಆಗ ಮಾತ್ರ ಅದು ಮೇಲ್ಮಟ್ಟದ ರಾಷ್ಟ್ರವಾಗುತ್ತದೆ. ಸಚ್ಚಾರಿತ್ರ್ಯ ಕೇವಲ ಕೆಲವೇ ವ್ಯಕ್ತಿಗಳಿಗೆ ಸೀಮಿತವಾಗಿಲ್ಲ. ಇದು ಎಲ್ಲರಿಗೂ ಎಟುಕುವ ಮಟ್ಟದಲ್ಲಿದೆ. ಎಲ್ಲರೂ ಸಚ್ಚಾರಿತ್ರ್ಯ ವ್ಯಕ್ತಿಗಳಾದಾಗ ನಿಜವಾದ ಪ್ರಜಾಪ್ರಭುತ್ವ ನಮಗೆ ದೊರಕುತ್ತದೆ. ಆಗ ಸಮಾಜ ಶೀಲವಂತ ಸಮಾಜವಾಗುತ್ತದೆ. ಆದರೆ ಇಂತಹ ಶೀಲವಂತ ಸಮಾಜ ಎಂದೂ ಇರಲಿಲ್ಲ. ಆದರೂ ಸಾಮಾನ್ಯ ಪ್ರಜೆಗಳು ಇದು ನಮ್ಮ ಸಮಾಜ, ನಮ್ಮ ಜನತೆ, ನಮ್ಮ ರಾಷ್ಟ್ರವೆಂಬ ಭಾವನೆಗಳನ್ನು ಬೆಳೆಸಿಕೊಳ್ಳಬೇಕು. ರಾಷ್ಟ್ರಕ್ಕಾಗಿ ಎಂತಹ ತ್ಯಾಗವನ್ನಾದರೂ ಮಾಡಲು ಸಿದ್ಧರಿರಬೇಕು. ಮಕ್ಕಳನ್ನು ಶಾಲೆಯಲ್ಲಿ ತಯಾರು ಮಾಡಬೇಕು. ಪ್ರಜಾಪ್ರಭುತ್ವದ ಮೌಲ್ಯ, ಶೀಲ, ಘನತೆಯನ್ನವರು ಅರಿಯುವಂತೆ ಶಿಕ್ಷಕರು ಮಾಡಬೇಕು.

ಶಿಕ್ಷಣ ಮತ್ತು ಧರ್ಮ

ಶಿಕ್ಷಣ ಮತ್ತು ಧರ್ಮ ಸ್ವಾಭಾವಿಕ ಸ್ನೇಹಿತರು. ಧರ್ಮದ ಅವಿಭಾಜ್ಯ ಅಂಗಗಳಾದ ಸತ್ಯ, ಸೌಂದರ್ಯ ಹಾಗೂ ಶೀಲಗಳ ಮೌಲ್ಯಗಳನ್ನು ಮಕ್ಕಳು ಮೈಗೂಡಿಸಿಕೊಳ್ಳಬೇಕು. ಧರ್ಮ ಪಾಲನೆಯಿಂದ ಮಾತ್ರ ನಾವು ನಮ್ಮ ಗುರಿಯನ್ನು ಮುಟ್ಟಬಲ್ಲೆವು. ಶಿಕ್ಷಣ ನಮ್ಮ ನಾಗರಿಕತೆಯನ್ನು ಚಿರಸ್ಮರಣೀಯವನ್ನಾಗಿ ಮಾಡಬೇಕು. ಧರ್ಮದ ಆಧಾರದ ಮೇಲೆ ಶಿಕ್ಷಣ ನಿಂತಾಗ ಮಾತ್ರ ಇದು ಸಾಧ್ಯವಾಗುತ್ತದೆ. ಶಿಕ್ಷಣದ ಕ್ಷೇತ್ರದಲ್ಲಿ ಧರ್ಮದ ಮಹತ್ವ ಪ್ರಧಾನವಾಗಿದೆ. ಧರ್ಮ, ವ್ಯಕ್ತಿಗಳ ವ್ಯಕ್ತಿತ್ವದ ಮೇಲೂ ಪ್ರಭಾವ ಬೀರುತ್ತದೆ. ಇದು ಸಂಸ್ಕೃತಿಗೆ ತಳಹದಿ. ಸತ್ಯ, ಸೌಂದರ್ಯ, ಶೀಲಗಳು ಮಾನವನ ಬಾಳಿನ ಮೇಲೆ ಪ್ರಭಾವವನ್ನು ಬೀರುವುದರಿಂದ ಮಕ್ಕಳು ಇವನ್ನು ಮೈಗೂಡಿಸಿಕೊಳ್ಳಬೇಕು.

ಧರ್ಮಪಾಲನೆಯಿಂದ ಸಾಮಾಜಿಕ ಸಂಘಟನೆ ಹಾಗೂ ರಾಷ್ಟ್ರೀಯ ಭಾವೈಕ್ಯತೆ

ಬೆಳೆಯುತ್ತವೆ. ಮತೀಯ ಸಂಘರ್ಷಗಳು ಬೆಳೆಯದಂತೆ ಧರ್ಮ ತಳೆಯುತ್ತದೆ. ಎಲ್ಲಾ ಧರ್ಮಗಳ ತತ್ವ ವೈಶಾಲ್ಯತೆ ಒಂದೇ ಆದ್ದರಿಂದ, ಸಹಕಾರ ಮಕ್ಕಳಲ್ಲಿ ಬೆಳೆಯುತ್ತದೆ. ಎಲ್ಲಾ ಧರ್ಮಗಳು ಒಂದೇ ತತ್ವವನ್ನು ಸಾರುವುದರಿಂದ, ವಿಶ್ವ ಬಂಧುತ್ವ ಬೆಳೆಯುತ್ತದೆ. ತರಗತಿಗಳಲ್ಲಿ ಒಂದೇ ಧರ್ಮದ ತತ್ವಗಳನ್ನು ಬೋಧಿಸಬಾರದು. ಎಲ್ಲಾ ಧರ್ಮಗಳ ತತ್ವಗಳನ್ನು ಬೋಧಿಸಬೇಕು. ಎಲ್ಲಾ ಧರ್ಮಗಳ ತತ್ವಗಳು ಒಂದೇ ಎಂದು ಮಕ್ಕಳಿಗೆ ಅರಿವಾಗುವಂತೆ ಮಾಡಬೇಕು. ಸಮಾಜದ ಜನರಲ್ಲಿ ಸಹೋದರತ್ವ ಬೆಳೆಯುವಂತೆ ಮಾಡಬೇಕಾದರೆ ಮಕ್ಕಳು ಧರ್ಮದ ತತ್ವಗಳನ್ನು ಮೈಗೂಡಿಸಿಕೊಳ್ಳಬೇಕು. ಹಾಗೂ ಸಮಾಜದ ಅಭ್ಯುದಯಕ್ಕೆ ಮಕ್ಕಳು ನೆರವಾಗುವಂತೆ ಮಾಡಬೇಕು. ಶಿಕ್ಷಣದ ಮೂಲಕ ದೈವಿಕ ಭಾವನೆ ಮಕ್ಕಳಲ್ಲಿ ಬೆಳೆಯುವಂತೆ ಮಾಡಬೇಕು. ಬೋಧನಾ ವೇಳೆಯಲ್ಲಿ ಜಾತಿ, ಮತ ಸಂಘರ್ಷಣೆಗೆ ಅವಕಾಶವಾಗದಂತೆ ಶಿಕ್ಷಕರು ಎಚ್ಚರಿಕೆ ವಹಿಸಬೇಕು.

ಧರ್ಮ ಮತ್ತು ನೈತಿಕತೆ ಶಿಕ್ಷಣದ ಹಾಸುಹೋಕ್ಕಾಗಬೇಕು. ಧರ್ಮವನ್ನು ಮತೀಯ ದೃಷ್ಟಿಯಿಂದ ನೋಡದೆ ವಿಶಾಲ ದೃಷ್ಟಿಯಿಂದ ಬೋಧಿಸಿದಾಗ ಸಾಮಾಜಿಕ ಸೌಲಭ್ಯ, ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಸಂಬಂಧ ಬೆಳೆಯುತ್ತದೆ. ಮತೀಯ ಗಲಭೆಗಳು ಕಡಮೆಯಾಗಿ, ವಿಶ್ವಭ್ರಾತೃತ್ವ ಬೆಳೆಯುತ್ತದೆ. ಆತ್ಮ ಗೌರವ, ಘನತೆ, ಸ್ವಾವಲಂಬನೆ, ಸಹಕಾರ, ಸ್ವಾತಂತ್ರ್ಯ ಸಹಾನುಭೂತಿ ಪ್ರಫುಲ್ಲಿತವಾಗಿ ಬೆಳೆಯುತ್ತವೆ. ಎಲ್ಲಾ ಧರ್ಮಗಳೂ ಯಾವುದು ಶ್ರೇಷ್ಠವೋ ಅದನ್ನೇ ಬೋಧಿಸುತ್ತವೆ. ವಿಶಾಲ ದೃಷ್ಟಿಯಿಂದ ಧರ್ಮವನ್ನು ಯಾರು ಅರ್ಥಮಾಡಿಕೊಂಡಿದ್ದಾರೋ ಅವರಲ್ಲಿ ಧರ್ಮದ ಬಗ್ಗೆ ಕಾದಾಟವಿರುವುದಿಲ್ಲ.

ಧರ್ಮಕ್ಕೂ ಶಿಕ್ಷಣಕ್ಕೂ ನಿಕಟವಾದ ಸಂಬಂಧವಿದೆ. ಎರಡೂ ಆಧ್ಯಾತ್ಮಿಕ, ಭೌತಿಕ ಹಾಗೂ ಶರೀರದ ಬಯಕೆಗಳಿಗೆ ಸ್ಪಂದಿಸುತ್ತವೆ. ಎರಡೂ ಮಾನವನ ವಿಮೋಚನೆಗೆ ನೆರವಾಗುತ್ತವೆ. ಶಿಕ್ಷಣ ಜೀವನದ ಮೌಲ್ಯಗಳನ್ನು ಸೃಜಿಸಿ ನಡತೆಯಲ್ಲಿ ಬದಲಾವಣೆ ಮಾಡುತ್ತದೆ. ಶಿಕ್ಷಣ ಜೀವನಕ್ಕೆ ಅಸ್ತಿಭಾರವಾದರೆ, ಧರ್ಮ- ಸತ್ಯಸಂಧತೆ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯವನ್ನು ಕೊಟ್ಟು, ಹೃದಯವನ್ನು ಸ್ವಚ್ಛಗೊಳಿಸುತ್ತದೆ. ಶಿಕ್ಷಣ ಹಾಗೂ ಧರ್ಮ ಸತ್ಯ ಸೌಂದರ್ಯಗಳಾರಾಧನೆಗೆ ಸಹಕಾರಿಗಳಾಗಿವೆ. ಮಾರ್ಗಭಿನ್ನವಾದರೂ ಗುರಿ ಒಂದೇ.

ಪಠ್ಯ ವಿಷಯಗಳಲ್ಲಿ ಧರ್ಮಕ್ಕೆ ಪ್ರಧಾನವಾದ ಸ್ಥಾನ ಕೊಡಬೇಕು. ಧರ್ಮ ಪೂರ್ವಜರ ಕೊಡುಗೆಯಾದ ಸಂಸ್ಕೃತಿಯ ಮೂಲ. ರಾಷ್ಟ್ರೀಯ ಪ್ರಜ್ಞೆ ಉನ್ನತ ಮಟ್ಟದ್ದಾಗಿರುವಾಗ, ಮಾನಸಿಕ ಬೇಡಿಕೆಗಳಾದ ಸೌಂದರ್ಯಾರಾಧನೆ, ವಿಚಾರ ಮಥನ,

ಭಕ್ತಿ, ನೈತಿಕ ಹಾಗೂ ಧರ್ಮದ ಅಧ್ಯಯನ ಉತ್ಕೃಷ್ಟವಾಗಿ ಬೆಳೆಯಬೇಕು. ನೈತಿಕತೆ ಹಾಗೂ ಧಾರ್ಮಿಕತೆಗಳ ಆಧಾರವಿಲ್ಲದ ಶಿಕ್ಷಣ ಹಾಸ್ಯಾಸ್ಪದವಾದದ್ದು. ಸೌಹಾರ್ದಯುತ ಹಾಗೂ ಪ್ರಗತಿದಾಯಕ ಬೆಳವಣಿಗೆಯಿಂದ ಮಗುವಿನ ಅಗೋಚರ ಶಕ್ತಿ ವೃದ್ಧಿಗೊಳ್ಳುತ್ತದೆ. ಉನ್ನತ ಶಿಕ್ಷಣದಲ್ಲಿ ವಿಚಾರ ಸಂಪತ್ತು ವಿಸ್ತಾರವಾಗುತ್ತದೆ. ದೃಷ್ಟಿಕೋನ ವಿಶಾಲವಾಗುತ್ತದೆ. ಮಕ್ಕಳಲ್ಲಿ ಧಾರ್ಮಿಕ ಭಾವನೆಯು ಶಿಕ್ಷಣದ ಮೂಲಕ ವೃದ್ಧಿಗೊಳ್ಳುವಂತೆ ಶಿಕ್ಷಕರು ಮಾಡಬೇಕು.

ಧರ್ಮವೆಂದರೆ ಸಿದ್ಧಾಂತಗಳ ಕರ್ಮಗಳ ಹಾಗೂ ಆಚರಣೆಗಳ ಗಂಟಲ್ಲ, ಅದು ತನ್ನನ್ನು ತಾನರಿಯಲು ಪಡೆಯುವ ಸಾಕ್ಷಾತ್ಕಾರ. ಶಿಕ್ಷಣ ಬೇರೆಯಲ್ಲ, ಧರ್ಮ ಬೇರೆಯಲ್ಲ. ಧರ್ಮ ಮತ್ತು ಶಿಕ್ಷಣ ಮಾನವನನ್ನು ಸಾಕ್ಷಾತ್ಕಾರದೆಡೆಗೆ ಕರೆದೊಯ್ಯುತ್ತವೆ. ಪರಿಪಕ್ವ ಶಿಕ್ಷಣವೇ ಧರ್ಮ. ಭೌತಿಕ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸನ್ನಿವೇಶಗಳಲ್ಲಿ ಬೆಳೆಯುವ ಮಾನವನು ಪರಿಪಕ್ವವಾದಾಗ ಸಾಕ್ಷಾತ್ಕಾರ ದೊರೆಯುತ್ತದೆ. ಹಾಗೂ ವಿಶ್ವಭ್ರಾತೃತ್ವ ಬೆಳೆಯುತ್ತದೆ. ಧರ್ಮದ ಆಧಾರದ ಮೇಲೆ ರೂಪಿತವಾದ ಶಿಕ್ಷಣದಿಂದ ಮಗುವಿನ ಮಾನಸಿಕ ವಿಕಾಸ ಹಾಗೂ ದೈಹಿಕ ರಚನೆ ಉತ್ತಮ ರೀತಿಯಲ್ಲಿ ರೂಪುಗೊಳ್ಳುತ್ತದೆ. ವಿಧಿವತ್ತಾದ ಪೂರ್ಣ ಮನಸ್ಸಿನ ಆರೋಗ್ಯಕರ ಶರೀರದಿಂದ ಅವನ ಮನಸ್ಸು ಹಾಗೂ ಹೃದಯ ಪರಿಪಕ್ವವಾಗುತ್ತದೆ. ಆರೋಗ್ಯಕರ ಮನಸ್ಸು ಆರೋಗ್ಯಕರ ದೇಹದಲ್ಲಿರುತ್ತದೆ. ಆಗ ಮನಸ್ಸು ಸ್ಥಿರತೆಯಿಂದ ಕೂಡಿರುತ್ತದೆ. ವ್ಯಕ್ತಿಯಲ್ಲಿ ಶಿಸ್ತು ಮತ್ತು ಸಂಯಮ ಬೆಳೆಯುತ್ತವೆ. ಮನುಷ್ಯ ನಿಜವಾದ ಮಾನವನಾಗಿ ಪರಿಪೂರ್ಣತೆಯನ್ನು ಹೊಂದುತ್ತಾನೆ. ಸಂಕುಚಿತ ಭಾವನೆಗಳು ಬೆಳೆಯುವುದಿಲ್ಲ. ಧಾರ್ಮಿಕ ಶಿಕ್ಷಣವಿಲ್ಲದ ಮಕ್ಕಳಿಗೆ ಕೊಡುವ ಶಿಕ್ಷಣ ವ್ಯರ್ಥ.

ಈ ನಿಟ್ಟಿನಲ್ಲಿ ನಾವು ಎದುರಿಸಬಹುದಾದ ಸಮಸ್ಯೆ ಏನೆಂದರೆ, ಧಾರ್ಮಿಕ ಶಿಕ್ಷಣವನ್ನು ಯಾವ ರೀತಿಯಲ್ಲಿ ಪಠ್ಯ ವಿಷಯದಲ್ಲಿ ಅಳವಡಿಸಬೇಕು, ಹಾಗೂ ಶಾಲೆಯಲ್ಲಿ ಬೋಧಿಸಬೇಕು ಎಂಬುದು. ಮಕ್ಕಳ ಪರಿಪೂರ್ಣ ವಿಕಾಸಕ್ಕೆ ಸಾಮಾನ್ಯ ಶಿಕ್ಷಣದ ಜೊತೆಯಲ್ಲಿ ಧಾರ್ಮಿಕ ಶಿಕ್ಷಣವನ್ನು ನೀಡಬೇಕು. ಧರ್ಮ ಶಿಕ್ಷಣಕ್ಕೆ ಸ್ಫೂರ್ತಿದಾಯಕವಾಗಿರುವಾಗ ಒಂದು ಮತದ ಅಥವಾ ಧಾರ್ಮಿಕ ಪಂಗಡದ ವಿಧಿವತ್ತಾದ ರೀತಿಯಲ್ಲಿ ಅದನ್ನು ಶಾಲೆಯಲ್ಲಿ ಬೋಧಿಸಕೂಡದು. ಎಲ್ಲಾ ಧರ್ಮಗಳ ಬಗ್ಗೆ ಸಹಿಷ್ಣುತೆ, ತಾಳ್ಮೆ ಬೆಳೆಯುವ ರೀತಿಯಲ್ಲಿರಬೇಕು. ಬೋಧನಾ ಸಮಯದಲ್ಲಿ ಧರ್ಮಾಂಧತೆ ಇರಬಾರದು. ಬೋಧನೆ ದಿನನಿತ್ಯದ ಜೀವನಕ್ಕೆ ಸಂಬಂಧಿಸಿದಂತಿರಬೇಕು. ಧಾರ್ಮಿಕ ಶಿಕ್ಷಣವು ಮತೀಯ ಹಾಗೂ ಜಾತೀಯ ಸಮಸ್ಯೆಗಳನ್ನು ಪರಿಹಾರ ಮಾಡುವಂತಿರಬೇಕು.

ನೈತಿಕ ಶಿಕ್ಷಣ

ಒಳ್ಳೆಯ ನಡತೆ ನೈತಿಕ ಶಿಕ್ಷಣದ ಬೆಳವಣಿಗೆಗೆ ಅತ್ಯಾವಶ್ಯಕ. ಸಮಾಜದಲ್ಲಿ ಇಂದು ನೈತಿಕತೆಯ ಅವಸಾನ ಕಾಣುತ್ತಿದೆ. ರಾಷ್ಟ್ರದ ಮಟ್ಟದಲ್ಲೂ ನೈತಿಕತೆ ತಲೆ ಎತ್ತುತ್ತಿಲ್ಲ. ಶೈಕ್ಷಣಿಕ ಮಟ್ಟದಲ್ಲಿ ನೈತಿಕತೆಯ ಬೆಳವಣಿಗೆಯನ್ನು ಉದಾಸೀನ ಮಾಡಲಾಗಿದೆ. ಮಗುವಿನ ಸರ್ವಾಂಗೀಣ ಬೆಳವಣಿಗೆಯೇ ಶಿಕ್ಷಣದ ಗುರಿ. ಇಂದಿನ ಶೈಕ್ಷಣಿಕ ಪದ್ಧತಿಯಲ್ಲಿ ಬೌದ್ಧಿಕ ಬೆಳವಣಿಗೆಗೆ ಆದ್ಯತೆ ನೀಡಿದೆ. ಆದ್ದರಿಂದ ಯಶಸ್ವಿ ಜೀವನಕ್ಕೆ ಕರುಣೆ, ಸಹಕಾರ, ದಯೆ, ಅನುಕಂಪ, ಪ್ರೀತಿ, ಸತ್ಯ, ನಿಷ್ಠೆ ಇತ್ಯಾದಿಗಳ ಅವಶ್ಯಕತೆ ಇದೆ. ಇವುಗಳನ್ನು ಸಂಪೂರ್ಣವಾಗಿ ಮರೆತಿದ್ದೇವೆ.

ಜೀವನದಲ್ಲಿ ಅತಿ ಮುಖ್ಯವಾದದ್ದು ನಡತೆ. ಐಶ್ವರ್ಯ ಹೋದರೆ ಏನೂ ಹೋದಂತಲ್ಲ, ಆರೋಗ್ಯ ಹೋದರೆ ಸ್ವಲ್ಪ ಹೋದಂತೆ, ನಡತೆ ಹೋದರೆ ಸರ್ವಸ್ವವೂ ಹೋದಂತೆ. ಆದ್ದರಿಂದ ನಡತೆ ವ್ಯಕ್ತಿತ್ವವನ್ನು ಬೆಳೆಸಲು ಅತಿ ಮುಖ್ಯ. ನಡತೆಗೂ, ನೈತಿಕತೆಗೂ ನಿಕಟ ಸಂಬಂಧವಿದೆ. ಭಾವಿ ಪೌರನ ಬೆಳವಣಿಗೆಗೆ ಇಂದಿನ ಮಗುವಿನಲ್ಲಿ ನೈತಿಕತೆ ಬೆಳೆಯಬೇಕು. ಮಕ್ಕಳಿಗೆ ನೈತಿಕ ಶಿಕ್ಷಣದ ಅವಶ್ಯಕತೆ ಇದೆ. ತಂದೆ ತಾಯಿಗಳನ್ನು, ಶಿಕ್ಷಕರನ್ನು ಮಕ್ಕಳು ಅನುಕರಣೆ ಮಾಡುತ್ತವೆ. ಆದ್ದರಿಂದ ತಂದೆ ತಾಯಿಗಳ ಹಾಗೂ ಶಿಕ್ಷಕರ ನಡತೆಯಲ್ಲೂ ಆದರ್ಶತೆ ಇರಬೇಕು. ಎಲ್ಲಾ ಧರ್ಮಗಳ ತತ್ತ್ವಗಳ ಆಧಾರದ ಮೇಲೆ ನೈತಿಕತೆ ನಿಂತಿದೆ. ಎಲ್ಲಾ ಧರ್ಮಗಳು ಸತ್ಯ, ಅಹಿಂಸೆ, ಅನುಕಂಪ, ದಯೆ ಪರೋಪಕಾರ ಇತ್ಯಾದಿಗಳನ್ನು ಬೋಧಿಸುತ್ತವೆ. ಆದರೆ ಇಂದು ಧರ್ಮ, ಮತ, ಜಾತಿ, ಪಂಗಡ, ಇತ್ಯಾದಿಗಳಾಗಿ ವಿಭಜನೆ ಹೊಂದಿದೆ. ಇದು ರಾಷ್ಟ್ರದ ಭಾವೈಕ್ಯತೆಗೆ ಧಕ್ಕೆಯನ್ನುಂಟುಮಾಡಿದೆ.

ಒಳ್ಳೆಯ ನಡತೆಯೇ ನೈತಿಕ ಶಿಕ್ಷಣ. ಪ್ರತಿಭಾನ್ವಿತ ವ್ಯಕ್ತಿಗಳ ಜೀವನಕಥೆಗಳ ಮೂಲಕ ಒಳ್ಳೆಯ ನಡತೆ ಮಕ್ಕಳಲ್ಲಿ ಬೆಳೆಯುವಂತೆ ಮಾಡಬೇಕು. ಮಕ್ಕಳು ಅವುಗಳನ್ನು ಅನುಕರಿಸುವಂತಹವುಗಳಾಗಬೇಕು.

ನಡತೆ

ನಡತೆ ಮಾನಸಿಕವಾದ ವಿಷಯ. ಅದು ಅವನ ಸಾಮಾಜಿಕ ವರ್ತನೆಯನ್ನು ತಿಳಿಸುತ್ತದೆ. ವೈಯಕ್ತಿಕ ಹಾಗೂ ಸಾಮಾಜಿಕ ನೈತಿಕತೆಯ ಆಧಾರದ ಮೇಲೆ ನಡತೆ ನಿರ್ಧರಿತವಾಗುತ್ತದೆ. ನೈತಿಕ ಭಾವನೆಯನ್ನು ನಡತೆಯ ಮೂಲಕ ವ್ಯಕ್ತಪಡಿಸಲಾಗುತ್ತದೆ. ನಡತೆಗೂ, ವ್ಯಕ್ತಿತ್ವಕ್ಕೂ ನಿಕಟವಾದ ಸಂಬಂಧವಿದೆ. ಬೇರೆಯವರ ಭಾವನೆಗೆ

ಆತಂಕವಾಗದಂತೆ ನಡೆದಲ್ಲಿ ಒಳ್ಳೆಯ ನಡತೆಯ ವ್ಯಕ್ತಿ ಎನ್ನುತ್ತಾರೆ. ಉತ್ತಮ ನಡತೆಯನ್ನು ಅಳವಡಿಸಿಕೊಂಡು ನಡೆಯುವುದೇ ಜೀವನದ ಗುರಿ. ಶುದ್ಧ ನಡತೆ ಮಾನವನ ಅಂತರಾತ್ಮದಲ್ಲಿ ಕಂಗೊಳಿಸುವ ಅಮೂಲ್ಯವಾದ ಆಭರಣ. ನಡತೆ ಶುದ್ಧವಿಲ್ಲದಿದ್ದಲ್ಲಿ ಮಾನವ ಕತ್ತಲೆಯ ಬಂದೀಖಾನೆಯಲ್ಲಿ ಬಂಧಿತನಾಗುತ್ತಾನೆ. ನಡತೆ ಹೋದರೆ ಸರ್ವಸ್ವವೂ ಹೋದ ಹಾಗೆ.

ಒಬ್ಬ ವ್ಯಕ್ತಿಯ ಜೀವನದಲ್ಲಿ ನಡತೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಬಹಳ ಸಣ್ಣ ವಯಸ್ಸಿನಲ್ಲಿಯೇ ನಡತೆಯ ರೂಪರೇಖೆಗಳು ಪ್ರಾರಂಭವಾಗುತ್ತವೆ. ಶಿಶುವು ಪಿತನ ಜನಕ (ಚೈಲ್ಡ್ ಈಜ್ ದ ಫಾದರ್ ಆಫ್ ಮ್ಯಾನ್). ಮಾನವನ ವ್ಯಕ್ತಿತ್ವ ಮಗುವಿನ ೩ ಅಥವಾ ೪ ನೆಯ ವಯಸ್ಸಿನಲ್ಲಿಯೇ ನಿರ್ಧರಿತವಾಗುತ್ತದೆ. ಆದ್ದರಿಂದ ಮಕ್ಕಳ ನಡತೆಯನ್ನು ಅವರ ಬಾಲ್ಯದಲ್ಲಿಯೇ ತಿದ್ದಲು ಶಿಕ್ಷಕರು ಪ್ರಯತ್ನಿಸಬೇಕು. ಉತ್ತಮವಾದ ನಡತೆಯುಳ್ಳವನು ತನ್ನ ದೇಶಕ್ಕೆ ತನ್ನ ಸಮಾಜಕ್ಕೆ ಹಾಗೂ ವಿಶ್ವಕ್ಕೆ ಉತ್ತಮ ಕಾಣಿಕೆ ಕೊಡಲು ಶಕ್ತನಾಗುತ್ತಾನೆ. ಆದ್ದರಿಂದ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಕ್ಕಳ ನಡತೆಯನ್ನು ರೂಪಿಸುವುದು ಶಿಕ್ಷಣದ ಆದ್ಯ ಕರ್ತವ್ಯ. ಮಗುವಿನ ಪ್ರವೃತ್ತಿಗಳನ್ನು ಮಾರ್ಪಡಿಸಿದಲ್ಲಿ ಉತ್ತಮ ನಡತೆಯನ್ನು ಮಗುವಿನಲ್ಲಿ ಕಾಣಬಹುದು. ಮಗುವಿಗಿರುವ ಮನಸ್ಸಿನ ಶಕ್ತಿಯಿಂದ ನಡತೆಯನ್ನು ರೂಪಿಸಬಹುದು. ಒಳ್ಳೆಯ ನಡತೆಯುಳ್ಳ ವ್ಯಕ್ತಿಗಳು ಸಮಾಜದ ಪ್ರಜ್ಞಾವಂತ ಜನತೆಯಾಗುವುದರಲ್ಲಿ ಸಂಶಯವಿಲ್ಲ.

***

'ವ್ಯಸನಗಳು' ಒಂದು ಸಮೀಕ್ಷೆ

ಡಾ|| ಹೆಚ್.ಪಿ. ದೇವಕಿ

ಮಾನವನ ಉನ್ನತಿ-ಅವನತಿಗಳಲ್ಲಿ ಅವನ ಮನಸ್ಸಿನ ಪಾತ್ರ ಮಹತ್ತರವಾದುದು. ಬುದ್ಧಭಗವಾನನು ಹೇಳಿರುವಂತೆ ವಿವೇಕವೆಂಬ ಕಡಿವಾಣಕ್ಕೆ ಒಳಪಟ್ಟ ಮನಸ್ಸು'ವಿನಮ್ರ ಸೇವಕ'. ಅವಿವೇಕದ ಹಿಡಿತಕ್ಕೆ ಸಿಲುಕಿದ ಮನಸ್ಸು 'ಮಹಾಘಾತಕ', ಪಾತಕಗಳ ಪ್ರಚೋದಕ ಹಾಗೂ ನರಕದ ಮಾರ್ಗದರ್ಶಕ. ಆದ್ದರಿಂದಲೇ ಭಾರತೀಯ ದರ್ಶನಗಳಲ್ಲಿ ಮನೋನಿಗ್ರಹ ಮೋಕ್ಷಸಾಧನೆಯ ಅನಿವಾರ್ಯ ಅಂಗವಾಗಿ ಹೋಗಿದೆ. ಭಗವದ್ಗೀತೆಯಲ್ಲಿ ಅರ್ಜುನನ **'ಚಂಚಲಂ ಹಿ ಮನಃ ಕೃಷ್ಣ.. ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ'** ಎಂಬ ಕಳಕಳಿಯ ನಿವೇದನೆಯನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಅರಿಷಡ್ವರ್ಗಗಳೆಂದೇ ಪ್ರಸಿದ್ಧವಾಗಿರುವ ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯಗಳು ಮನಸ್ಸಿಗೆ ಮುತ್ತಿಗೆ ಹಾಕಿದಾಗ ಅದು ವಿಕೃತಗೊಳ್ಳುವುದು. ವಿಕೃತಮನಸ್ಸಿನ ಅದಮ್ಯ ಬಯಕೆಗಳು ದುಶ್ಚಟಗಳ ರೂಪದಲ್ಲಿ ಹೊರ ಹೊಮ್ಮುವುವು. 'ಚಟ' ಎಂಬುವ ಪದಕ್ಕೆ 'ಮಾಡಿದ್ದನ್ನೇ ಮಾಡಬೇಕೆಂಬ ಮನಸ್ಸಿನ ಪ್ರಬಲ ಪ್ರೇರಣೆಯ ಕಾರ್ಯರೂಪ' ಎಂದು ಅರ್ಥೈಸಬಹುದು. ಅತಿಯಾದ ಇಂದ್ರಿಯಚಾಪಲ್ಯಕ್ಕೆ ಗುರಿಯಾಗಿ ಅಸ್ಥಿರಗೊಂಡ ಮನಸ್ಸು ಸಮಾಜಘಾತಕವಾದ ದುಶ್ಚಟಗಳಲ್ಲಿ ತೊಡಗುವುದು. ಇಂತಹ ದುಶ್ಚಟಗಳ ಸಾಂಪ್ರದಾಯಿಕ ಹೆಸರೇ 'ವ್ಯಸನ'. ಈ ಪದವೇ ಸೂಚಿಸುವಂತೆ 'ವಿ. ಅಸನ' ಚಿತ್ತಚಾಂಚಲ್ಯ. (ಅಸ್ತ-ವ್ಯಸ್ತಗೊಂಡ ಮನಸ್ಸು).

ವ್ಯಸನಗಳ ಇತಿಹಾಸ ಮಾನವನ ಸಮಾಜ ಜೀವನದ ಇತಿಹಾಸದಷ್ಟೇ ಪ್ರಾಚೀನ. ಇವುಗಳ ಸಂಖ್ಯೆಯಲ್ಲಿ ಸ್ವಭಾವದಲ್ಲಿ ಕಾಲದಿಂದ ಕಾಲಕ್ಕೆ ವೈವಿಧ್ಯತೆಯುಂಟು. ದ್ಯೂತ(ಜೂಜು), ಕಳ್ಳತನ, ಮೋಸ, ವ್ಯಭಿಚಾರವೇ ಮೊದಲಾದ ವ್ಯಸನಗಳ ಉಲ್ಲೇಖಗಳನ್ನು ಪ್ರಾಚೀನ ಗ್ರಂಥಗಳಾದ ವೇದಗಳಲ್ಲಿ, ಉಪನಿಷತ್ತುಗಳಲ್ಲಿ, ಪುರಾಣ, ರಾಮಾಯಣ, ಮಹಾಭಾರತ, ಸ್ಮೃತಿಗಳು ಕಾವ್ಯಾದಿಗಳಲ್ಲಿ ಹೇರಳವಾಗಿ ಕಾಣಬಹುದು. ಇವುಗಳಿಂದಾಗುವ ಸಾಮಾಜಿಕ ಹಾನಿಗಳನ್ನು ವೈದಿಕ ಸಾಹಿತ್ಯದಿಂದಾರಂಭಿಸಿ ಇಂದಿನವರೆಗೂ ಕಾವ್ಯಗಳೂ, ನೀತಿಯಬೋಧೆಯನ್ನೇ ಪರಮಗುರಿಯನ್ನಾಗುಳ್ಳ ಸುಭಾಷಿತಗಳೂ ಬೋಧಿಸುತ್ತಾ ಬಂದಿವೆ. ವ್ಯಸನಗಳ ಬಗ್ಗೆ ಹೆಚ್ಚು ವ್ಯವಸ್ಥಿತವಾದ ವಿವೇಚನೆಯನ್ನೂ, ಇವುಗಳ ನಿಯಂತ್ರಣ ವಿಧಾನವನ್ನೂ ಸೂಚಿಸಿರುವುವು ನಮ್ಮ ಪ್ರಾಚೀನ ಸ್ಮೃತಿಗ್ರಂಥಗಳು.

ಪ್ರಸಿದ್ಧ ಸ್ಮೃತಿಕಾರನಾದ ಮನುಮಹರ್ಷಿ ವ್ಯಸನಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ನೀಡುತ್ತಾ ದ್ಯೂತ ಅಥವಾ ಜೂಜಿನ ಯಾವುದೇ ಪ್ರಕಾರವಾದರೂ ಸರಿಯೇ ಅದು ನಿಷಿದ್ಧವೆಂದೂ, ವಿನೋದಕ್ಕಾಗಿಯೂ ಸಹ ಇವನ್ನು ಆಡಲಾಗದೆಂದೂ ನುಡಿದಿದ್ದಾನೆ. ಪಗಡೆಯಾಟದ ಮೂಲಕ ಧನಕನಕಾದಿಗಳನ್ನು ಪಣವೊಡ್ಡುವುದು 'ದ್ಯೂತವೆನಿಸುತ್ತದೆ'. ಮಲ್ಲರನ್ನೋ ಅಥವಾ ಹುಂಜ, ಟಗರು, ಕೋಣ ಮೊದಲಾದ

ಪ್ರಾಣಿಗಳನ್ನೋ ಕಾಳಗಕ್ಕೆ ಬಿಟ್ಟು ಅವುಗಳ ಸೋಲು ಗೆಲವುಗಳ ಆಧಾರದ ಮೇಲೆ ಪಣವೊಡ್ಡುವುದು'ಸಮಾಹ್ವಯ' ವೆನಿಸುತ್ತದೆಂದು ಮನು ಹೇಳಿದ್ದಾನೆ:

ಅಪ್ರಾಣಿಭಿಃ ಯತ್ ಕ್ರಿಯತೇ ತಲ್ಲೋಕೇ ದ್ಯೂತಮುಚ್ಯತೇ।
ಪ್ರಾಣಿಭಿಃ ಕ್ರಿಯಮಾಣಸ್ತು ಸ ವಿಜ್ಞೇಯಃ ಸಮಾಹ್ವಯಃ ॥[೧]

ರಾಜಧರ್ಮವೆಂಬ ಹೆಸರಿನ ಮನುಸ್ಮೃತಿಯ ಏಳನೆಯ ಅಧ್ಯಾಯದಲ್ಲಿ ರಾಜರಿಗೆ ಅನ್ವಯಿಸುವಂತೆ ಒಟ್ಟು ಹದಿನೆಂಟು ವ್ಯಸನಗಳನ್ನು ನಿರೂಪಿಸಿರುವ ಮನುಮಹರ್ಷಿ, ವ್ಯಸನಗಳಿಂದ ದೂರವಿರದಿದ್ದಲ್ಲಿ ರಾಜರುಗಳು ದುರಂತವನ್ನೆದುರಿಸಬೇಕಾಗುವುದೆಂದು ಎಚ್ಚರಿಸಿದ್ದಾನೆ. ಅತಿಯಾದ ಸುಖಲೋಲುಪತೆಯಿಂದಾಗಿ ಮನುಷ್ಯ ಗುರಿಯಾಗುವ ವ್ಯಸನಗಳು ಯಾವುವೆಂದರೆ ಮೃಗಯಾ (ಬೇಟೆ), ಅಕ್ಷ (ಪಗಡೆಯ ಜೂಜು), ದಿವಾಸ್ವಪ್ನ(ಹಗಲು ನಿದ್ದೆ), ಪರಿವಾದ (ವ್ಯರ್ಥಾರೋಪಣೆ), ಸ್ತ್ರೀಯರು (ವೇಶ್ಯಾ ಸಹವಾಸ), ಮದ (ಮದ್ಯಪಾನ), ಸಂಗೀತ, ನೃತ್ಯ, ವಾದ್ಯ ಮತ್ತು ವೃಥಾಟನೆ. ಎಂಟು ಕ್ರೋಧಜವ್ಯಸನಗಳು ಯಾವುವೆಂದರೆ ಪೈಶುನ್ಯ (ಚಾಡಿಯನ್ನು ಮನ್ನಿಸುವುದು), ಸಾಹಸ (ವ್ಯಥಾಹಿಂಸೆ ನೀಡುವುದು), ದ್ರೋಹ, ಈರ್ಷ್ಯೆ, ಅಸೂಯೆ, ಅರ್ಥದೂಷಣೆ(ಪರರ ಸ್ವತ್ತನ್ನು ಕಸಿದುಕೊಳ್ಳುವುದು), ವಾಕ್‌ಪಾರುಷ್ಯ (ಅವಾಚ್ಯ ಪದಗಳಿಂದ ನಿಂದಿಸುವಿಕೆ), ದಂಡಪಾರುಷ್ಯ (ಅಲ್ಪಕಾರಣಗಳಿಗಾಗಿ ಕಠಿಣ ಶಿಕ್ಷೆ ವಿಧಿಸುವಿಕೆ), ಕಾಮಜ ವ್ಯಸನಗಳ ಪೈಕಿ ಮೃಗಯಾ, ಮದ್ಯಪಾನ, ಸ್ತ್ರೀಸಹವಾಸ, ಪಗಡೆಯ ಜೂಜು ಇವು ನಾಲ್ಕು ವಿಪರೀತ ಅನರ್ಥಕಾರಿಗಳೆಂದೂ ಕ್ರೋಧಜ ವ್ಯಸನಗಳಲ್ಲಿ ಸಾಹಸ, ಅರ್ಥದೂಷಣೆ ಮತ್ತು ವಾಕ್‌ಪಾರುಷ್ಯ ಇವು ಮೂರು ಅತಿಕೆಟ್ಟ ಪರಿಣಾಮಗಳನ್ನುಂಟು ಮಾಡುವುವೆಂದೂ ಮನುಮಹರ್ಷಿ ತಿಳಿಸಿರುವನು. ಒಟ್ಟು ಹದಿನೆಂಟು ವ್ಯಸನಗಳಲ್ಲಿ ಈ ನಾಲ್ಕು ಕಾಮಜ ವ್ಯಸನಗಳು ಮೂರು ಕ್ರೋಧಜ ವ್ಯಸನಗಳು ಹೀಗೆ ಈ ಏಳು ವ್ಯಸನಗಳಿಗೆ ಗುರಿಯಾಗುವುದಕ್ಕಿಂತಲೂ ಸಾವೇ ಶ್ರೇಷ್ಠವೆಂದು ಇವುಗಳ ತೀವ್ರತೆಯನ್ನು ಮನುಮಹರ್ಷಿ ಒತ್ತಿ ನುಡಿದಿರುವನು. ಉಳಿದ ವ್ಯಸನಗಳು ಇವುಗಳಷ್ಟು ಆಕ್ಷೇಪಾರ್ಹ ವ್ಯಸನಗಳಲ್ಲ.

ಮನುವಿನ ಪ್ರಕಾರ ರಾಜನಾದವನು ಮಾತ್ರ ವ್ಯಸನಗಳಿಂದ ದೂರವಿದ್ದರೆ ಸಾಲದು. ಪ್ರಜೆಗಳು ಇವುಗಳಿಂದ ದೂರವಿರುವಂತೆ ನೋಡಿಕೊಳ್ಳಬೇಕಾದುದು ರಾಜನಾದವನ ಕರ್ತವ್ಯ. ಜೂಜಿನಿಂದಾಗಿ ಈ ಹಿಂದೆಯೇ ಮಹಾಕುಲಗಳು ವಿನಾಶಕ್ಕೆ ಗುರಿಯಾಗಿರುವುದರಿಂದ ವಿನೋದಕ್ಕಾಗಿಯೂ ಸಹ ಜೂಜು ಕೂಡದೆಂದು ಮನುಮಹರ್ಷಿಯ ಅಭಿಪ್ರಾಯ. ಕ್ರಿಡಾಮನೋಭಾವಕ್ಕಿಂತಲೂ ಒಬ್ಬ ವ್ಯಕ್ತಿಯನ್ನು ವಿನಾಶದ ಅಂಚಿಗೆ ತಳ್ಳುವ ಹವಣಿಕೆಯೇ ಇವುಗಳಲ್ಲಿ ಪ್ರಬಲವಾಗಿರುವುದೆಂಬುದಾಗಿ ಯುಧಿಷ್ಠಿರ ಮತ್ತು ನಳಮಹಾರಾಜನನ್ನು ದೃಷ್ಟಿಯಲ್ಲಿಟ್ಟುಕೊಂಡೇ ಮನು ಹೀಗೆ ನುಡಿದಿರುಬಹುದೆಂದು ವಿದ್ವಾಂಸರ ಅಭಿಪ್ರಾಯ. ದ್ಯೂತ, ಸಮಾಹ್ವಯಗಳಲ್ಲಿ ಭಾಗವಹಿಸುವ ಪ್ರಜೆಗಳನ್ನು

---

೧. ಮನುಸ್ಮೃತಿ ೯, ೨೨೩

ಕಠಿಣವಾಗಿ ಶಿಕ್ಷಿಸಬೇಕೆಂದು ಮನು ಸೂಚಿಸುತ್ತಾನೆ.[೨] ಜೂಜುಕೋರರು, ಹೆಂಡ ಮಾರುವವರು, ಕುಡುಕರು, ಕಳ್ಳತನ, ವಂಚನೆ ಹಾಗೂ ಸುಲಿಗೆ ಮಾಡುವವರನ್ನು ಅವರ ಅಪರಾಧಗಳ ತೀವ್ರತೆಗನುಗುಣವಾಗಿ ಕೈಕಾಲು ಕತ್ತರಿಸಬೇಕು ಇಲ್ಲವೇ ಗಡೀಪಾರುಮಾಡಬೇಕೆಂಬುದಾಗಿ ಮನುಸ್ಮೃತಿಯ ಒಂಬತ್ತನೆಯ ಅಧ್ಯಾಯದಲ್ಲಿ ಹೇಳಲಾಗಿದೆ. ಬಹಿರಂಗವಾಗಿ ಅಥವಾ ರಹಸ್ಯವಾಗಿ ಮೇಲಿನ ವ್ಯವಹಾರಗಳನ್ನು ನಡೆಸುವವರನ್ನು ಪತ್ತೆಹಚ್ಚಿ, ಬಹಿಷ್ಕಾರ ಹಾಕಿ ರಾಜ್ಯದಿಂದ ಹೊರಗಟ್ಟಬೇಕೆಂದು ಮನು ವಿಧಿಸಿರುವನು.

ಆದರೆ ಮನುವಿನ ನಂತರದವನಾದ ಕೌಟಿಲ್ಯನು[೪] ಜೂಜು, ವೇಶ್ಯಾ ವೃತ್ತಿ, ಮದ್ಯದ ತಯಾರಿಕೆ ಮೊದಲಾದವನ್ನು ರಾಜಶಾಸನದ ನಿಯಂತ್ರಣಕ್ಕೆ ಒಳಪಡಿಸಿ ಅವುಗಳಿಗೆ ವಿಶೇಷ ತೆರಿಗೆಯನ್ನು ವಿಧಿಸಿ ಅವುಗಳಿಂದಲೂ ರಾಜನ ಬೊಕ್ಕಸಕ್ಕೆ ಆದಾಯ ದೊರಕುವ ಮಾರ್ಗವನ್ನು ಸೂಚಿಸಿರುವನು. ವೇಶ್ಯೆಯು ತನ್ನ ಗಳಿಕೆಯ ಅರ್ಧ ಭಾಗವನ್ನೇ ತೆರಿಗೆಯ ರೂಪದಲ್ಲಿ ಸಲ್ಲಿಸಬೇಕಾಗುತ್ತಿತ್ತು. ಜೂಜು ನಡೆಸುವ ದ್ಯೂತ ಗೃಹಗಳ ಮೇಲ್ವಿಚಾರಣೆಗಾಗಿ ದ್ಯೂತಾಧ್ಯಕ್ಷನನ್ನೂ, ಪಾನಗೃಹಗಳಿಗೆ ಸುರಾಧ್ಯಕ್ಷನನ್ನೂ, ವೇಶ್ಯಾವಾಟಿಕೆಗಳಿಗೆ ವೇಶ್ಯಾಧ್ಯಕ್ಷನನ್ನು ನೇಮಿಸಲಾಗುತ್ತಿದ್ದು ಅವರೆಲ್ಲರೂ ಸಂಪೂರ್ಣವಾಗಿ ರಾಜನ ಹತೋಟಿಯಲ್ಲಿರುತ್ತಿದ್ದರು. ಕದ್ದು ಮುಚ್ಚಿ ನಡೆಯುವ ವ್ಯವಹಾರಗಳನ್ನು ತಡೆಯುವುದೂ, ಕೌಟಿಲ್ಯನ ಉದ್ದೇಶವಾಗಿದ್ದಿರಬಹುದು. ಜೊತೆಗೆ ಇವೆಲ್ಲವೂ ರಾಜನು ಗೂಢಚರ್ಯೆಗಾಗಿ ಆರಿಸಿಕೊಳ್ಳುವ ಕೇಂದ್ರಗಳಾಗಿದ್ದು, ಮೇಲೆ ತಿಳಿಸಿರುವ ದ್ಯೂತಾಧ್ಯಕ್ಷರೇ ಮೊದಲಾದವರು ರಾಜನಿಗೆ ಶತ್ರುರಾಜರ ಅಥವಾ ಪ್ರಜೆಗಳ ಭಿನ್ನಾಭಿಪ್ರಾಯಗಳನ್ನು ಸಂಗ್ರಹಿಸುವ ಮಾಹಿತಿದಾರರೂ ಆಗಿರುತ್ತಿದ್ದರು. ಅಂದಮಾತ್ರಕ್ಕೆ ಕೌಟಿಲ್ಯನು ವ್ಯಸನಗಳನ್ನು ಪ್ರೋತ್ಸಾಹಿಸುತ್ತಿದ್ದನೆಂದು ಭಾವಿಸಲಾಗದು. ಅತಿಯಾದ ಸ್ತ್ರೀವ್ಯಸನಿ (ಅರ್ಥಾತ್ ವೇಶ್ಯೆಯಲ್ಲಿಗೆ ಹೋಗುವವನು), ದಾರಿದೋಚುವ ದರೋಡೆಗಾರರು, ಪಿಸುಣರು(ಚಾಡಿಕೋರರು) ಮೊದಲಾದವರಿಗೆ ಅವರವರ ಅಪರಾಧಗಳ ತೀವ್ರತೆಗನುಗುಣವಾಗಿ ಕೈಕಾಲು ಕತ್ತರಿಸುವಿಕೆ, ಗಲ್ಲು ಶಿಕ್ಷೆ ಮೊದಲಾದವನ್ನು ಕೌಟಿಲ್ಯನು ಸೂಚಿಸಿರುವನು. ಜೂಜಾಡುವ ಸಮಯದಲ್ಲಿ ಮೋಸದಿಂದ ಗೆಲ್ಲುವವನು ಅಥವಾ ಮೋಸದ ಪಗಡೆಕಾಯಿಯನ್ನು ಬಳಸುವವನಿಗೆ ಅವನ ಒಂದು ಕೈ ಕತ್ತರಿಸುವ ಶಿಕ್ಷೆಯೊಡನೆ ನಾನೂರು ಪಣಗಳ ದಂಡವನ್ನು ವಿಧಿಸಲಾಗುತ್ತಿತ್ತು. ಯಾಜ್ಞವಲ್ಕ್ಯ ಮಹರ್ಷಿಗಳ ಸ್ಮೃತಿ ಗ್ರಂಥವೂ ಸಹ ಬಹುಪಾಲು ಕೌಟಿಲ್ಯನ ಅರ್ಥಶಾಸ್ತ್ರವನ್ನೇ ವ್ಯಸನಗಳ ವಿಚಾರಕ್ಕೆ ಸಂಬಂಧಪಟ್ಟಂತೆ ಅನುಸರಿಸಿದೆ.

ಮನುವೇ ಮೊದಲಾದ ಸ್ಮೃತಿಕಾರರು ಹೇಳಿರುವ ವ್ಯಸನಗಳಲ್ಲಿ ಜೂಜು, ಮದ್ಯಪಾನ, ವ್ಯಭಿಚಾರ ಮೊದಲಾದವು ಅತಿಪ್ರಾಚೀನ ಕಾಲದಿಂದಲೂ ಮಹಾಪಾಪಗಳೆಂಬ

---

೨. ಮನಸ್ಮೃತಿ ೮.೨೨೪

೪. ಅರ್ಥಶಾಸ್ತ್ರ ೪.೧೧

ಹಣೆಪಟ್ಟಿಯನ್ನು ಹೊತ್ತಿರುವಂತಹವು. ಅರಿಷಡ್ವರ್ಗವೆಂಬ ಗುಂಪಿನಲ್ಲಿ ಪರಿಗಣಿಸಲ್ಪಟ್ಟಿರುವುವು. ಮತ್ತೆ ಕೆಲವು ಒಟ್ಟಿನಲ್ಲಿ ಬಹಳ ಹಿಂದಿನಿಂದಲೂ ಸಹ ಸಾಮಾಜಿಕ ಪಿಡುಗುಗಳಾಗಿ ಘೋರ ಸಮಸ್ಯೆಗಳಾಗಿ ಇಂದಿಗೂ ಸಹ ಉಳಿದು ಹೋಗಿರುವ ಇಂತಹ ವ್ಯಸನಗಳ ಸಂಕ್ಷಿಪ್ತ ವಿವೇಚನೆಯೇ ಈ ಲೇಖನದ ಗುರಿ.

ಭಾರತೀಯರ ಪ್ರಾಚೀನ ಸಂಸ್ಕೃತಿಯ, ಅಂದಿನ ಸಮಾಜದ, ಮಾನವ ಸಹಜ ಪ್ರೇಮ- ಕಾಮಗಳ, ನೋವು-ನಲಿವುಗಳ, ಹರ್ಷ-ದ್ವೇಷಗಳ ಚಿತ್ರಣದ ಪುರಾತನ ದಾಖಲೆಯೆನಿಸಿರುವ ಋಗ್ವೇದದಲ್ಲಿ ಜೂಜು, ಕಳ್ಳತನ, ವ್ಯಭಿಚಾರ, ವಂಚನೆ ಮೊದಲಾದವುಗಳನ್ನು ಪಾಪಗಳೆಂದು ಹೆಸರಿಸಲಾಗಿದೆ. ವೈದಿಕ ಸಮಾಜದಲ್ಲಿ ಪಗಡೆ, ಜೂಜು ಪ್ರಬಲವಾದ ಸಾಮಾಜಿಕ ಸಮಸ್ಯೆಯಾಗಿತ್ತೆಂಬುದಕ್ಕೆ ಋಗ್ವೇದದ ಕಿತವಸೂಕ್ತ(ಮಂಡಲ ೧೦, ಸೂಕ್ತ ೩೪) ಒಂದು ಉತ್ತಮ ನಿದರ್ಶನ. ಪಗಡೆ ಜೂಜಿನ ದುಶ್ಚಟಕ್ಕೆ ಬಲಿಯಾಗಿ ತನ್ನದೆಲ್ಲವನ್ನೂ, ತನ್ನವರೆಲ್ಲರನ್ನೂ ಕಳೆದುಕೊಂಡು ನಿರ್ಗತಿಕನಾಗಿ ಹಲುಬುವ ಜೂಜುಕೋರನೊಬ್ಬನನ್ನು ಹಾಸ್ಯಮಯವಾಗಿ ಕಿತವಸೂಕ್ತವು ವರ್ಣಿಸಿದೆ. ಅತ್ತೆಯಕೋಪಕ್ಕೆ, ಹೆಂಡತಿಯ ತಿರಸ್ಕಾರಕ್ಕೆ ಗುರಿಯಾಗುವ ಅವನನ್ನು ಮುದಿಕುದುರೆಗೆ ಹೋಲಿಸಲಾಗಿದೆ.[೪] ಅವನ ಪತ್ನಿಯನ್ನು ಪರಪುರುಷರು ಆಲಂಗಿಸುವರು. ಸ್ವತಃ ಅವನ ತಂದೆ-ತಾಯಿಗಳೇ, ಒಡಹುಟ್ಟಿದ ಸೋದರರೇ ಅವನನ್ನು ಬಿಗಿದುಕಟ್ಟಿ ಸೆಳೆದೊಯ್ಯಿರೆಂದು ಆದೇಶಿಸುವರು. ಇಷ್ಟೆಲ್ಲಾ ಅನರ್ಥಗಳ ಪರಂಪರೆಯನ್ನೇ ಅನುಭವಿಸಿದರೂ ಅವನಿಗೆ ಪಗಡೆಯಾಟದ ವ್ಯಾಮೋಹ ತಪ್ಪದು. ದಾಳಗಳ ಸದ್ದು ಅವನನ್ನು ತೀವ್ರವಾಗಿ ಸೆಳೆಯುವುದು. ತನ್ನಿಂದಾಗಿ ಹೆಂಡತಿ, ಮಕ್ಕಳು ಭಿಕಾರಿಗಳಾಗಿದ್ದರೂ ಅವನು ಮತ್ತೆ ಜೂಜಾಡಲು ಹಾತೊರೆಯುವನು. ಹಣಕ್ಕಾಗಿ ಕಳ್ಳತನಕ್ಕೂ ಎಳಸುವನು.[೫] ಕಿತವಸೂಕ್ತದ ಒಂದೊಂದು ಮಂತ್ರವೂ ಸಹ ಜೂಜಿನ ದುಷ್ಪರಿಣಾಮವನ್ನು ಮನಮುಟ್ಟುವಂತೆ ನಿರೂಪಿಸಿದೆ. ಒಂದೆರಡು ಮಂತ್ರಗಳ ಭಾವಾನುವಾದವನ್ನು ಗಮನಿಸಬಹುದು.

> ಇದ್ದಬದ್ದುದನೆಲ್ಲ ಕಳೆದುಕೊಂಡಿರಲಾನು
> ಕಂಡವರು ಮುದ್ದಿಸುವರೆನ್ನ ಮಡದಿಯನು
> ತಾಯ್ತಂದೆ ಸೋದರರು ಬಂಧುಮಿತ್ರರು ಎಲ್ಲ
> ನಾ ಕಾಣೆ! ಇವನಾರೋ ಎಂದು ಜಾರುವರು।
> ಕೆಳಗೆ ಉರುಳುವುವೊಮ್ಮೆ ಮೇಲೊಡನೆ ಪುಟಿಯುವುವು
> ಕೈಯಿಂದ ಕಾಯಿಗಳು ಜನರ ಕೈ ಸೇರೆ
> ಜೂಜು ಹಲಗೆಯ ಮೇಲೆ ಮಾಯದಾ ಕೆಂಡದೊಲು
> ತಣ್ಣನೆಯ ಕಾಯಹಹ! ಎದೆಯನುರಿಸುವುದು।

೪. ಋಗ್ವೇದ ಮಂಡಲ ೧೦, ೩೪, ೨

೫. ಋಗ್ವೇದ ಮಂಡಲ ೧೦,೩೪, ೧೦

ಅಭಿವಂದನಾ

(ಡಾ. ಕೆ.ಕೃಷ್ಣಮೂರ್ತಿಯವರ 'ಭಾರತೀಯ ಸಾಹಿತ್ಯದಲ್ಲಿ ಜೂಜು' ಎಂಬ ಲೇಖನದಿಂದ ಮೇಲಿನ ಪದ್ಯಗಳನ್ನು ಉದ್ಧರಿಸಲಾಗಿದೆ).[೬]

ಕಿತವಸೂಕ್ತದ ಕೊನೆಯ ಭಾಗದಲ್ಲಿ ಬರುವ ಮಂತ್ರವೊಂದು ಪಗಡೆಯನ್ನು ಬಿಟ್ಟು ಫಾಲವನ್ನು (ನೇಗಿಲನ್ನು) ನಂಬಲು ಕಿತವನಿಗೆ ಆದೇಶಿಸಿ ಸುಖ, ಶಾಂತಿ, ಗೌರವಯುತ ಬಾಳನ್ನು ಬಾಳಲು ಉಪದೇಶಿಸಿದೆ: **'ಅಕ್ಷೈ ರ್ಮಾ ದೀವ್ಯಃ ಕೃಷಿಮಿತ್ಕೃಷಸ್ವ ವಿತ್ತೇ ರಮಸ್ವ ಬಹು ಮನ್ಯಮಾನಃ'.**[೭]

ಋಗ್ವೇದದ ೧.೧೬೭.೪ ಮತ್ತು ೭.೧೦೪.೮ ನೆಯ ಮಂತ್ರಗಳಲ್ಲಿ ಕಳ್ಳತನ, ವ್ಯಭಿಚಾರಗಳಿಗೆ ಸಂಬಂಧಪಟ್ಟಂತೆ ಉಲ್ಲೇಖಗಳಿದ್ದು ಇವುಗಳನ್ನು ಪಾಪಗಳೆಂದು ಪರಿಗಣಿಸಲಾಗಿದೆ. ವಸಿಷ್ಠ-ವರುಣ ವೃತ್ತಾಂತದಲ್ಲಿ ಕಳ್ಳತನದಿಂದ ದೂರವಿರಬೇಕೆಂಬ ಸಲಹೆಯನ್ನು ಕಾಣುತ್ತೇವೆ. ಯಮ-ಯಮಿಯರ ಸಂವಾದದಲ್ಲಿ ವ್ಯಭಿಚಾರವನ್ನು ಖಂಡಿಸಲಾಗಿದೆ.

ಉಪನಿಷತ್ತುಗಳಲ್ಲಿ ಪ್ರಾಚೀನವಾದ ಛಾಂದೋಗ್ಯ ಉಪನಿಷತ್ತು ಕಳ್ಳತನ, ಕುಡಿತ, ವ್ಯಭಿಚಾರ ಇವುಗಳನ್ನು ಪಾಪವೆಂದೂ, ಇವುಗಳ ಗೀಳಿಗೆ ಬಿದ್ದವರ ಸಹವಾಸವೂ ಸಹ ಪಾಪವೆಂದೇ ಎಚ್ಚರಿಸಿದೆ:

'ಸ್ತೇನೋ ಹಿರಣ್ಯಸ್ಯ ಸುರಾಂ ಪಿಬನ್‌ಶ್ಚ ಗುರೋಃ ತಲ್ಪ ಆವಸನ್[೮]
ಬ್ರಹ್ಮಹಾ ಚೈತೇ ಪತಂತಿ ಚತ್ವಾರಃ ಪಂಚಮೋ ಆಚರನ್ ತೈಃ॥'

ಈಶಾವಾಸ್ಯ ಉಪನಿಷತ್ತಿನ ಪ್ರಥಮ ಮಂತ್ರದಲ್ಲಿಯೇ ಯಾರನ್ನೂ ವಂಚಿಸದೆ, ಪರರ ಸಂಪತ್ತಿಗೆ ಆಸೆಪಡದೆ, ದುಡಿಮೆಯ ಬದುಕನ್ನು ನಡೆಸಬೇಕೆಂಬ ಹಿತೋಪದೇಶವಿದೆ.[೯] ಸತ್ಯಕ್ಕೆ ವಿಶೇಷವಾಗಿ ಗೌರವ ನೀಡಿರುವ ಉಪನಿಷತ್ತುಗಳು ಸುಳ್ಳನ್ನು ಪಾಪವೆಂದೇ ಪರಿಗಣಿಸಿವೆ. ಹಾಗೂ **'ಸತ್ಯಮೇವ ಜಯತೇ ನಾನೃತಂ'**, **'ಸತ್ಯಂ ವದ ಧರ್ಮಂ ಚರ'** ಎಂಬ ಸಂದೇಶಗಳು ಪ್ರತಿಯೊಬ್ಬ ಮನುಷ್ಯನೂ ಅನುಸರಿಸಲೇಬೇಕಾದ ನಿಯಮಗಳಾಗಿದ್ದವು. ಬಹಳಷ್ಟು ಉಪನಿಷತ್ತುಗಳಲ್ಲಿ ಅಧ್ಯಾತ್ಮದತ್ತ ಒಲವುಳ್ಳ, ಗೃಹಸ್ಥರೂ ಆಗಿದ್ದ ಋಷಿಗಳಿಂದ ನೀಡಲ್ಪಟ್ಟ ನೈತಿಕ ಸಂದೇಶಗಳೆಲ್ಲವೂ ವ್ಯಸನಗಳನ್ನು ದೂರವಿಡಬೇಕೆಂಬ ಉಪದೇಶಗಳೇ ಆಗಿದ್ದು ಅವುಗಳೆಲ್ಲವನ್ನಿಲ್ಲಿ ಅತಿವಿಸ್ತರಭಯದಿಂದ ಕೈಬಿಡಲಾಗಿದೆ.

ಇನ್ನು ರಾಮಾಯಣ ಮಹಾಭಾರತಾದಿಗಳಿಗೆ ಬಂದಲ್ಲಿ, ರಾಮಾಯಣದ ರಾವಣನಲ್ಲಿ ಬಹಳಷ್ಟು ವ್ಯಸನಗಳು ಮನೆ ಮಾಡಿಕೊಂಡಿದ್ದವು. ಮನುಮಹರ್ಷಿ ಹೇಳಿರುವ

---

೬. ಕನ್ನಡ ವಿಶ್ವಕೋಶ, ಸಂಪುಟ ೮ ಪುಟಗಳು ೨೮೨, ೨೮೯ ಎ೧೯೭೫ವಿ

೭ ಋಗ್ವೇದ ೧೦.೩೪ ೧೩

೮. ಛಾಂದೋಗ್ಯ ಉಪನಿಷತ್ತು ೫,೧೦,೯.

೯. ತೇನ ತ್ಯಕ್ತೇನ ಭುಂಜೀಥಾಃ ಮಾಗೃಧಃ ಕಸ್ಯಸ್ವಿದ್ಧನಂ

ಸಾಹಸ, ದ್ರೋಹ, ಈರ್ಷ್ಯೆ, ಅಸೂಯೆ, ಅರ್ಥದೂಷಣ ಮೊದಲಾದುವೆಲ್ಲವುಗಳನ್ನೂ, ಪರಸ್ತ್ರೀವ್ಯಾಮೋಹವನ್ನೂ ಹೊಂದಿದ್ದರಿಂದ ರಾವಣ ತನ್ನ ಅವನತಿಗೆ ತಾನೇ ಕಾರಣನಾಗುವನು.

ಮಹಾಭಾರತದ ಯುದ್ಧಕ್ಕೆ ಕೌರವ-ಪಾಂಡವರ ಜೂಜಾಟವೇ ಪ್ರಮುಖ ಕಾರಣ ಎಂಬುದು ಸರ್ವವಿದಿತವಷ್ಟೆ. ಧರ್ಮರಾಯನಂತಹ ವ್ಯಕ್ತಿಗೂ ಸಹ ಜೂಜಿನ ಪ್ರಲೋಭನೆ ಎಷ್ಟು ಬಲವಾಗಿದ್ದಿತೆಂದರೆ ತನ್ನಲ್ಲಿದ್ದ ಧನ-ಕನಕಾದಿಗಳನ್ನೂ, ಸ್ವತಃ ತನ್ನ ಸೋದರರನ್ನೂ ಪಣವಾಗಿಟ್ಟು ಸೋತನಂತರವೂ ದ್ರೌಪದಿಯನ್ನೂ ಪಣವಾಗಿಡಲು ಸಿದ್ಧನಾಗುವನು. ಆಗ ಸಭೆಯಲ್ಲಿದ್ದ ಭೀಷ್ಮಾದಿ ಹಿರಿಯರೆಲ್ಲರೂ ಖೇದದಿಂದ ಉದ್ಗರಿಸುವರು.[೧೦]

ಸಂಸ್ಕೃತ ಸಾಹಿತ್ಯದ ಬಹಳಷ್ಟು ಕಾವ್ಯಗಳಲ್ಲಿ ನೇರವಾಗಿಯೋ ಪರೋಕ್ಷವಾಗಿಯೋ ದುಶ್ಚಟಗಳನ್ನು ಪರಿಹರಿಸಲು ಉಪದೇಶಗಳುಂಟು. ವ್ಯಸನಗಳ ಬೀಡಾಗಿದ್ದ ಅಗ್ನಿವರ್ಣನಿಂದಾಗಿ ಉನ್ನತಾದರ್ಶಗಳಿಗೆ ಕಳಸಪ್ರಾಯವಾಗಿದ್ದ ರಘುವಂಶ ಅವನತಿ ಹೊಂದಿದ್ದನ್ನು ಕವಿಚಕ್ರವರ್ತಿ ಕಾಳಿದಾಸನು ಮನ ಮಿಡಿಯುವಂತೆ ಚಿತ್ರಿಸಿರುವನು. ಶೂದ್ರಕನ ಮೃಚ್ಛಕಟಿಕದ ಎರಡನೆಯ ಅಂಕದಲ್ಲಿ ಬರುವ ಜೂಜುಕೋರ ಸಂವಾಹಕನನ್ನು ಯಾರು ತಾನೇ ಮರೆಯಲು ಸಾಧ್ಯ.

ವ್ಯಸನಗಳ ಬಗ್ಗೆ ಸುದೀರ್ಘ ಉಪದೇಶ ನೀಡಿರುವ ಮತ್ತೊಬ್ಬ ಸಂಸ್ಕೃತ ಕವಿ ಬಾಣಭಟ್ಟ. ಇವನ ಗದ್ಯಕಾವ್ಯ ಕಾದಂಬರಿಯಲ್ಲಿ ಬರುವ ಶುಕನಾಸೋಪದೇಶ ಇಡೀ ಕಾವ್ಯದಲ್ಲೇ ಉಜ್ವಲವೆನಿಸುವಂತಹ ಉಪದೇಶ. ಉಜ್ಜಯಿನಿಯ ರಾಜಪುತ್ರ ಚಂದ್ರಾಪೀಡನಿಗೆ ಮಾತ್ರ ಅನ್ವಯಿಸದೆ ಇಡೀ ಮಾನವಕೋಟಿಯೇ ಅನುಸರಿಸಬೇಕಾದ ಸಾರ್ವಕಾಲಿಕಮೌಲ್ಯವನ್ನುಳ್ಳದ್ದು. ವ್ಯಸನಗಳಿಗೆ ಹಸನಾದ ಬಣ್ಣ ಬಳಿಯುವ ಮೋಸಗಾರರ ಬಗ್ಗೆ ಚಂದ್ರಾಪೀಡನನ್ನು ಎಚ್ಚರಿಸುತ್ತಾನೆ ಶುಕನಾಸ. ಇಂತಹ ವಂಚಕರ ಪ್ರಕಾರ ಜೂಜು ಒಂದು ಮೋಜು, ಪರಸತಿಯರ ಸಂಗವೇ ಚತುರತೆ, ಮೃಗಯಾ ಒಂದು ವ್ಯಾಯಾಮ, ಮದ್ಯಪಾನವು ವಿಲಾಸ, ಮತ್ತೇರಿ ಮೈಮರೆತು ವರ್ತಿಸುವುದು ಶೌರ್ಯದ ಗುರುತು.

ಜಗತ್ತಿನ ಇತಿಹಾಸದ ಪುಟಗಳನ್ನು ಅವಲೋಕಿಸಿದಾಗ ವ್ಯಸನಗಳು ತತ್ರಾಪಿ ಜೂಜು ಅರೆಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದುದಕ್ಕೆ ಲಿಖಿತ ಆಧಾರ ಋಗ್ವೇದದ ಕಿತವಸೂಕ್ತ. ಈಜಿಪ್ಟಿನಲ್ಲಿ ದೊರೆತಿರುವ ಸುಮಾರು ಕ್ರಿ. ಪೂ. ೩೦೦೦ ವರ್ಷಗಳಷ್ಟು ಅಥವಾ ಇನ್ನೂ ಪ್ರಾಚೀನವೆನಿಸಿರುವ ದಾಳಗಳು ಐತಿಹಾಸಿಕ ಆಧಾರ. ಇಂದಿಗೂ ಸಹ ನಾಗರಿಕತೆಯ ಹೊದಿಕೆಯಡಿಯಲ್ಲಿ ವ್ಯಸನಗಳು ವಿವಿಧ ರೀತಿಯ ಸಮಸ್ಯೆಗಳನ್ನು ಹುಟ್ಟು ಹಾಕುತ್ತಲೇ ಇವೆ.

***

---

೧೦. ಸಭಾಪರ್ವ ೨.೮೬.೪೦

ಶರಣರು-ಕಲಿವೀರಧೀರರು

ಪ್ರೊ॥ ಕೆ.ಜಿ. ನಾಗರಾಜಪ್ಪ

ವಚನ ಚಳುವಳಿ ಜಂಗಮ ಮುಂದಾಳತ್ವ ಸ್ಥಾಪಿಸುವ ಸಲುವಾಗಿ ಬ್ರಾಹ್ಮಣ, ಕ್ಷತ್ರಿಯ ಮತ್ತು ದೇವಾಲಯ- ಇವುಗಳ ಮುಂದಾಳತ್ವವನ್ನು ವಿರೋಧಿಸಿ ತೀವ್ರ ಪೈಪೋಟಿಗೆ ಇಳಿಯಿತು. ವಚನ ಚಳುವಳಿ ಕನ್ನಡ ನೆಲದಲ್ಲಿಯೇ ಹುಟ್ಟಿತು. ಅದು ಬೇರೆ ಬೇರೆ ಸ್ತರಗಳ, ವಿವಿಧ ವೃತ್ತಿಗಳ ಹಿನ್ನೆಲೆಯಿಂದ ಜನಸಾಮಾನ್ಯರ ಚಳುವಳಿ ಜೈನ ಮತ್ತು ಬೌದ್ಧಮತಗಳ ಜನಸಾಮಾನ್ಯರ ಚಳುವಳಿಗಳಾದರೂ, ಕ್ಷತ್ರಿಯ ಅನುಶ್ರೇಣಿಯನ್ನು ಅಂಗೀಕರಿಸಿ,ಕ್ರಮೇಣ ಜನರಿಂದ ದೂರ ಸರಿದವು. ವರ್ಣಾಶ್ರಮ ಧರ್ಮವಂತೂ ಅರಣ್ಯ, ಅರಮನೆ ಮತ್ತು ಗುರುಮನೆಯಲ್ಲಿಯೇ ಸುತ್ತಾಡಿತು. ವಚನಕಾರರಾದರೂ ಸ್ವತಂತ್ರ ಜೀವನದ ಮುಕ್ತಚಿಂತಕರು. ಅವರು ಆಸ್ತಿಕರಾಗಿಯೇ ಯಜ್ಞದ ಪ್ರಾಣವಧೆ ಮತ್ತು ವರ್ಣಾಶ್ರಮದ ಸಾಮಾಜಿಕ ಅನ್ಯಾಯವನ್ನು ಮತ್ತು ಬ್ರಾಹ್ಮಣ ಅನುಶ್ರೇಣಿಯನ್ನು ತೀವ್ರವಾಗಿ ಖಂಡಿಸಿದರು. 'ತನುವ ದಂಡಿಸದೆ ಮನವ ದಂಡಿಸದೆ, ತನಗಾಗಿ ಜನರ ಮೋಸಂಗೈದು ತಂದು ಮನೆಯಲ್ಲಿ ಮಡಗಿದ ದ್ರವ್ಯ ಗುರುವಿಂಗೆ ಸಲ್ಲದು, ಲಿಂಗಕ್ಕೆ ಸಲ್ಲದು, ಜಂಗಮಕ್ಕೆ ಸಲ್ಲದು' ಎಂದು ಘಂಟಾ ಘೋಷವಾಗಿ ಸಾರಿ ಕಾಯ ಕ್ಲೇಶಕ್ಕೆ . ಸ್ವಂತ ದುಡಿಮೆಗೆ ಬೆಲೆಕೊಟ್ಟು, ಕಾಯಕ ತತ್ತ್ವವನ್ನು ಜನರ ಮುಂದಿಟ್ಟರು. ಅದೂ ಅಲ್ಲದೆ ಗುರುವಾಗಲಿ, ಲಿಂಗವಾಗಲಿ, ಜಂಗಮನಾಗಲಿ ಕಾಯಕದಿಂದಲೇ ಜೀವನ್ಮುಕ್ತಿ ಎಂದರು. ವಿವಿಧ ವರ್ಗದ ಲೌಕಿಕ ವೃತ್ತಿಗಳು ಷಟ್‌ಸ್ಥಲ ತತ್ತ್ವಗಳನ್ನು ಸಾಮಾಜಿಕ ಮತ್ತು ಆಧ್ಯಾತ್ಮಿಕ ಸಾಧನೆಗೆ ಅಳವಡಿಸಿದರು. 'ತಾನಾರು' ಎಂಬುದನ್ನು ಸಾಧಿಸುವುದನ್ನೇ ಮೂಲ ಗುರಿಯಿಂದ, ತಮ್ಮ ಅನುಭವವನ್ನು ಸಹಜ ಸಾಧನೆ, ಸ್ವಯಮಾನುಭವ ಎಂದು ಕರೆದು, ತಮ್ಮದು ನಡೆ, ನುಡಿ ಸಿದ್ಧಾಂತ ಎಂದು ಸಾರಿದರು. ನುಡಿದಂತೆ ನಡೆಯದಿದ್ದರೆ ಹಿಡಿದಿದ್ದ ಲಿಂಗ ಘಟಸರ್ಪ ಎಂದು ಹೇಳಿ ಅನಾಚಾರಿಗಳಿಗೆ ಎಚ್ಚರಿಕೆ ಕೊಟ್ಟರು. ಪರಧನಬಯಸದ, ಪರಸತಿ ಮುಟ್ಟದ, ಪರಹಿಂಸೆ ಎಸಗದ ವೀರವ್ರತಿಗಳಾದರು. ಧರ್ಮವೇ ದಯೆ ಎಂಬ ತತ್ತ್ವವಿರೋಧಿಸಿ, ದಯವೇ ಧರ್ಮ ಎಂಬ ಮೂಲ ತತ್ತ್ವವನ್ನು ಜನತೆಯ ಮುಂದಿಟ್ಟರು. ಶಾಸ್ತ್ರೋಕ್ತದಯೆಗಿಂತ, ಜೀವನದ ದಯೆಗೆ ಒತ್ತು ಬಿತ್ತು, ವಚನಕಾರರು ಸಂಘಟಿತರಾಗುವಷ್ಟರಲ್ಲಿ ರಾಜಕೀಯ ವಿಪ್ಲವದ ಸುಳಿಗೆ ಸಿಕ್ಕಿದರು. ಹರಳಯ್ಯ-ಮಧುವಯ್ಯ ಅದಕ್ಕೆ ಬಲಿಯಾದರು. ಬಿಜ್ಜಳ ಮತ್ತು ಬಸವಣ್ಣನವರ ಅಂತ್ಯದಿಂದ, 'ದಯೆ(ವೇ) ಧರ್ಮದ ಮೂಲ' ಎಂಬ ಮಾತಿನ ಅಣಕವೊ ಎಂಬಂತೆ ಹಿಂಸೆ ಭುಗಿಲೆದ್ದಿತು. ವಚನಕಾರರು ಚೆಲ್ಲಾಪಿಲ್ಲಿಯಾಗಿ, ವಚನ ರಚನೆಯ ಜಲದ ಕಣ್ಣು ಬತ್ತಿತು. ವಚನಗಳ ಸಂಕಲನ ಮತ್ತು ವ್ಯಾಖ್ಯಾನವೇ ಮುಂದಿನ ಶರಣರ ಪಾಲಿಗೆ ಬಂದ ಕಾಯಕವಾಯಿತು.

ವಚನಕಾರರು ವೀರಶೈವ ಕವಿಗಳಿಗೆ ಪ್ರೇರಣೆಯಾದರು. ಆದರೆ ವಚನಕಾರರ ಕ್ರಾಂತಿಯ ಕಿಡಿಗಳನ್ನು ವೀರಶೈವ ಕವಿಗಳು ಮತ್ತೆ ಸನಾತನ ಸಂಪ್ರದಾಯದ ಜರಡಿಯಲ್ಲಿ ಜಲ್ಲಿಸಿಬಿಟ್ಟರು. ಸ್ಥಾವರ ಸ್ಥಾಪನೆ, ದಾನಧರ್ಮ, ವೇದಪರನಿಲವು ಮತ್ತು ವೈದಿಕ ಧಾರ್ಮಿಕ ವಿಧಿಗಳು ರೂಢಿಗೆ ಬಂದವು. ಅಲ್ಲದೆ ವಚನಕಾರರ ವೀರವಾಣಿ ಮತ್ತೆ ಕಾವ್ಯಗಳ ಸಂಪ್ರದಾಯದ ಭಾಷೆಯ ಜಾಡು ಹಿಡಿಯಿತು.

ಜಂಬೂದ್ವೀಪದ ನವಖಂಡ ಪೃಥ್ವಿಯೊಳಗೆ
ಕೇಳಿರಯ್ಯ ಎರಡಾಳಿನ ಭಾಷೆಯ
ಕೊಲುವೆನೆಂಬ ಭಾಷೆ ದೇವನದು ಗೆಲುವೆನೆಂಬ ಭಾಷೆ ಭಕ್ತನದು
ಸತ್ಯವೆಂಬ ಕೂರಲಗನೆ ತಳೆದುಕೊಂಡು
ಸದ್ಭಕ್ತರು ಗೆದ್ದರು ಕಾಣಾ ಕೂಡಲ ಸಂಗಮದೇವಾ.

ವಚನಕಾರರ ಇಂಥ ಎದೆಗಾರಿಕೆಯ ಮಾತು ಕ್ರಮೇಣ ವೀರಶೈವ ಕಾವ್ಯಗಳಲ್ಲಿ ಸಪ್ಪಗಾಯಿತು.

ಗಾರುಡಿಯ ಕಟ್ಟೆ ಅರವತ್ತು ನಾಲ್ಕುಕೋಲ ಅಭ್ಯಾಸವ ಮಾಡಿದೆನಯ್ಯಾ
ಇರುವ ಗಾಯ ಕಂಡೆಯ ಭೇದವಿನ್ನೂ ತಿಳಿಯದು
ಪ್ರತಿಗಾರುಡಿಕಾರ ಬಿರಿದ ಪಾಡಿಂಗೆ ಒದಗಲು
ವೀರ ಪಟ್ಟೆಯ ಕಟ್ಟೆ ತಿಗುರನೇರಿಸಿಕೊಂಬೆ
ಗುರು ಕಳನೇರಿ ಕಠಾರಿಯ ಕೊಂಡಲ್ಲಿ ಹೋಯಿತ್ತಾಗಳೆ ಎಂದಡೆ
ಎನ್ನ ನಿನ್ನಲ್ಲಿ ನೋಡು ಕೂಡಲ ಸಂಗಮದೇವಾ.

ಇದು ಕೊಲಬಾರದ ಅರಿಗಳ ಗೆಲುವ ಕಲಿಗಳ ಭಾಷೆ! ಅಲ್ಲದೆ ಅದರ ಅನುಭವ 'ರಿಪುಗಳ ಕಾಳಗದ ಕೊಳಗುಳದನುಭಾವ!' ಇಂಥ ಸವಾಲಿನ ವೀರ ಅನುಭಾವಕ್ಕೆ ಕೆಚ್ಚೆದೆ ಬೇಕು'ನಿಮ್ಮುದರವ ಬಗಿದಾನು ಹೊಗುವ ಭರವೆನಗೆ ' ಎಂಬ ಆತ್ಮವಿಶ್ವಾಸದ, ವೀರ ಕಂಕಣದ, ವೀರಾಲಾಪದ ಎರಡಾಳಿನ (ಭಕ್ತ ಮತ್ತು ಭಗಂತ) ಭಾಷೆಯ ಸಾಧಕನ(ಭಕ್ತನ) ಮುಂದೆ 'ಕಾಯುವವನು ಅವನೆ, ಕೊಲುವವನು ಅವನೆ' ಎಂಬ ಒಂದಾಳಿನ ಭಾಷೆಯ ಸಾಧಕನಿಗೂ ಎಷ್ಟು ವ್ಯತ್ಯಾಸ! ಅಹಿಂಸೆಯ ಸತ್ಯ ಸಾಕ್ಷಾತ್ಕಾರಕ್ಕೆ ತೊಟ್ಟ ಹಿಂಸೆಯ ರಣಕವಚ ವಚನಕಾರರ ಕಿಡಿನುಡಿಗಳು. ವೀರಶೈವ ಕವಿಗಳಿಗೂ ಮತ್ತು ವಚನಕಾರರಿಗೂ ಧೋರಣೆಯಲ್ಲಿ ಎಂಥ ವ್ಯತ್ಯಾಸ!

ಹತ್ತು ಮತ್ತರಭೂಮಿ ಬತ್ತದ ಹಯನು ನಂದಾದೀವಿಗೆಯ
ನಡೆಸಿಹೆವೆಂಬರ ಮುಖವ ನೋಡಲಾಗದು
ಅವರ ನುಡಿಯ ಕೇಳಲಾಗದು
ಸೂಳೆಯ ಮಗ ಮಾಳವ ಮಾಡಿದರೆ ತಾಯಿ ಹೆಸರಾಯಿತಲ್ಲದೆ
ತಂದೆಯ ಹೆಸರಿಲ್ಲ ಕೂಡಲ ಸಂಗಮದೇವಾ.

ಅಕ್ಷರಸ್ಥ ವರ್ಗಕ್ಕೆ ಪರರಿಗೆ ಕೈಯೊಡ್ಡಿ ದಾನದಿಂದ ಬದುಕುವ ಹಂಗಿನ ಜೀವನ ತೊರೆದು ಬದುಕುವುದು ಅಸಾಧ್ಯವಾಯಿತು. ಶರೀರ ಶ್ರಮದಿಂದ ಸ್ವತಂತ್ರವಾಗಿ ಬದುಕುವ ವಚನಕಾರರ ಹಂಬಲ ವೀರಶೈವ ಕವಿಗಳಲ್ಲಿ ಹುಸಿಯಾಯಿತು.

ಹೀನ ವರುತ್ತಮರಪಾತ್ರಸತ್ಪಾತ್ರವೆಂ
ಬೀ ನೋಟಮಿಲ್ಲ ಸರ್ವರಿಗೆ ಭೂದಾನ ಗೋ
ದಾನ ಕನ್ಯಾದಾನ ವಸ್ತ್ರದಾನಂ ಮಹಿಷಿದಾನವಖಿಳಾನ್ನದಾನ
ನಾನಾ ಮಹಾದಾನವಂ ಮಾಡಿ ನೆರೆತಣಿಪಿ
ಜ್ಞಾನನಿಧಿ ಸರ್ವದೇವರು ನವಗ್ರಹತಣಿಯೆ
ಮಾನವಿಲ್ಲದೆ ಜಗಜ್ಜನದ ಕೃಪೆಗಾ ನಿತ್ಯಹೋಮಕುದ್ಯೋಗಿಸಿದನು.

ಸಿ.ಚ.ಸಂ.೩-೨೨.

ವೀರಶೈವ ಕವಿಗಳು ಸಂಪೂರ್ಣವಾಗಿ ಬ್ರಾಹ್ಮಣೀಕರಣಕ್ಕೆ ಒಳಗಾದರು. ವೇದ, ಶಾಸ್ತ್ರ, ಪುರಾಣಗಳ ಅಧ್ಯಯನಕ್ಕೆ ತೊಡಗಿದರು. 'ಪುರಾಣ ಪುಂಡರಗೋಷ್ಠಿ' ಎಂಬ ವಚನಕಾರರ ಧೋರಣೆ ಬದಲಾಯಿತು.

ವಚನಕಾರರು ಅಹಿಂಸೆಯನ್ನು ವ್ರತವಾಗಿ ಸ್ವೀಕರಿಸಿದರೂ, ಧರ್ಮರಕ್ಷಣೆಯ ಹೆಸರಿನಲ್ಲಿ ಹಿಂಸೆ ಎಂದೂ ನಿಷಿದ್ಧವಾಗಲಿಲ್ಲ. ಬ್ರಾಹ್ಮಣರು ಅಧರ್ಮೀಯರಾದ ರಾಕ್ಷಸರು, ನಾಸ್ತಿಕರು ಮತ್ತು ಮುಸ್ಲಿಮರನ್ನು ಕೊಲ್ಲಲು ಕ್ಷತ್ರಿಯ ವರ್ಗವನ್ನು ಬಳಸಿದರೆ, ವೀರಶೈವರು ಧರ್ಮವಿರೋಧಿಗಳನ್ನು ಕೊಲ್ಲಲು ಪಂಚಾಚಾರದಲ್ಲಿ 'ಗಣಾಚಾರ' ವರ್ಗವನ್ನು ಸೃಷ್ಟಿಸಿದರು. '**ಶಿವಾಚಾರದ ನಿಂದೆಯ ಕೇಳದಿಹುದೆ ಗಣಾಚಾರ**', ಷಟುಸ್ಥಲವಧಿಕ್ಕರಿಸುವ ಜನರ ಸೀಳುವೆವೆಂಬ ವ್ರತವೇ ಎಂಟನೆಯ ಆಚಾರ, ಗುರುನಿಂದೆ,ಶಿವನಿಂದೆ, ಜಂಗಮನಿಂದೆಯ ಕೇಳದಿಪ್ಪುದೇ ಶೀಲ- ಈ ಮಾತುಗಳಿಂದ 'ಆತ್ಮಸ್ತುತಿ, ಪರನಿಂದೆ' ವೀರಶೈವ ಧರ್ಮದ ಸೂತ್ರವಾಯಿತು. ವೀರಶೈವ ದೀಕ್ಷಾಬುದ್ಧರಲ್ಲದವರನ್ನು ಭವಿಗಳು ಎಂದು ವರ್ಗ ಮಾಡಿದರು. ಅವರು ಶಿವದ್ರೋಹಿಗಳು, ಸಗಣೆಯ ಸಾಸಿರ ಹುಳುಗಳು, ಅವರು ವಾಸಿಸುವ ಸ್ಥಳ ನರವಿಂಧ್ಯೆ. ಶಿವಧರ್ಮನಿಂದಕರನ್ನು ಕೊಲ್ಲುವುದಕ್ಕೆ ವೀರಶೈವ ಅವಕಾಶ ಮಾಡಿತು.

ಸರ್ವವೂ ಶಿವಮಯವೆಂಬರ ಪಾತಕರ ನುಡಿಗಿನ್ನೆಂತೊ
ಜಗದೊಳಗೆ ಶಿವನಿಲ್ಲ, ಶಿವನೊಳಗೆ ಜಗವಿಲ್ಲ

'**ಈಶಾವಾಸ್ಯಮಿದಂ ಸರ್ವಂ**' ಎಂಬ ಈಶೋಪನಿಷತ್ತಿನ ಮಾತನ್ನು ಚನ್ನಬಸವಣ್ಣನ ಈ ಮಾತು ಅಲ್ಲಗಳೆಯುತ್ತದೆ. ಶಿವಧರ್ಮ ಒಪ್ಪದವರು ಪಾತಕಿಗಳೇ ಸರಿ. ಹಾಗಾದರೆ ಅವರು ವಧಾರ್ಹರೆ? ವಚನಗಳಲ್ಲಿಯೂ ಅನ್ಯಧರ್ಮಗಳ ಮತ್ತು ಅನ್ಯದೇವರುಗಳ ನಿಂದೆ ಬರುವುದಿಲ್ಲವೆ? ಪರಸ್ಪರ ಕೊಲ್ಲುವುದನ್ನೇ ಧರ್ಮ ತತ್ತ್ವವಾಗಿ

ಸ್ವೀಕರಿಸಬಹುದೆ? ಹಿಂಸೆಯನ್ನೇ ಧರ್ಮ ಎಂದಂತಾಗುವುದಿಲ್ಲವೆ? ಜಾತಿ ನೀತಿಗಳ ಮುಂದೆ ಲೋಕ ನೀತಿ ಇಲ್ಲವೆ? ಕ್ಷತ್ರಿಯರಿಗಂತೂ ಕೊಲೆಯ ಪಾತಕ ಅಂಟುವುದಿಲ್ಲ, ಹಾಗಾದರೆ ವೀರಶೈವರ ಗಣಾಚಾರಕ್ಕೂ ಪಾಪ ಅಂಟುವುದಿಲ್ಲವೆ? ಗಣಾಚಾರದವರು ಕ್ಷತ್ರಿಯರಿಗೆ ಸಮಾನವೆ? ಈ ಪ್ರಶ್ನೆಗಳಿಗೆ ಉತ್ತರ ಸಿಕ್ಕುವುದು ಕಷ್ಟವೇ ಸರಿ.

ಒಟ್ಟಿನಲ್ಲಿ ತಮ್ಮ ತಮ್ಮ ಜಾತಿರಕ್ಷಣೆಗೆ ಧರ್ಮದ ರಕ್ಷಣೆಯ ಹೆಸರಿನಲ್ಲಿ ಸೈನ್ಯ ಕಟ್ಟಿಕೊಂಡು ಹಿಂಸೆಯನ್ನು ಅಧಿಕೃತ ಧರ್ಮ ತತ್ತ್ವವಾಗಿ ಸ್ವೀಕರಿಸಿ ಸಂಘಟಿತರಾದರು. ಹಾಗಾದರೆ ಅಧಿಕ ಸಂಖ್ಯೆಯ ಅಸಂಘಟಿತ ಜನಸಾಮಾನ್ಯರನ್ನು ರಕ್ಷಿಸುವವರು ಯಾರು? ಈ ಅಸಂಘಟಿತ ಅನಕ್ಷರಸ್ಥ ವರ್ಗ ಯಾವ ಕಾಲದಲ್ಲಿಯೂ ಸಂಘಟಿತ ಪ್ರತಿಷ್ಠಿತ ವರ್ಗದ ಹಿಂಸೆಗೆ ತುತ್ತಾಯಿತು. ಜನಸಾಮಾನ್ಯರಿಗೆ ಒಂದು ಧರ್ಮವಿದೆ. ಅವರೂ ಮನುಷ್ಯರೇ ಎಂಬ ಸೂತ್ರವನ್ನು ಭಕ್ತಿಪಂಥ ಅಥವಾ ಮತ್ತಾವುದೇ ಸೈದ್ಧಾಂತಿಕ ಧರ್ಮವಾಗಲೀ ಸ್ವೀಕರಿಸಲಿಲ್ಲ. ಧರ್ಮಗಳು ಮತ್ತು ಧಾರ್ಮಿಕ ಚಳುವಳಿ ಮಾನವ ಮಾನವರ ನಡುವೆ ಅಡ್ಡಗೋಡೆ ಸೃಷ್ಟಿಸಿದವು. ಜಾತೀಯ ಮಾನವೀಯತೆಯ ಜಗತ್ತುಗಳು (ವಲಯಗಳು) ಸೃಷ್ಟಿಯಾದವೇ ಹೊರತು, ವಿಶಾಲವಾದ ಅರ್ಥದಲ್ಲಿ ಮಾನವೀಯತೆ ರೂಪುಗೊಂಡು ಎಲ್ಲಾ ಮಾನವ ಜನಾಂಗಗಳನ್ನು ತಬ್ಬಿಕೊಳ್ಳಲಿಲ್ಲ. ಬಲಿಷ್ಠ ಬಲಗಳು ದುರ್ಬಲ ಬಣಗಳನ್ನು ಹಿಂಸಿಸುವ, ಬಲಿತೆಗೆದುಕೊಳ್ಳುವ ವಾತಾವರಣ ಸೃಷ್ಟಿಯಾಯಿತು. ಶ್ರೀ ಸಾಮಾನ್ಯ ಸದಾ ಹಿಂಸೆಯ ಭಯದಲ್ಲಿ 'ಕಪ್ಪೆ ಸರ್ಪದ ನೆರಳಿನಲ್ಲಿ' ಬದುಕುವಂತಹ ಅನಿವಾರ್ಯವಿಷಯ ಸ್ಥಿತಿ ಉಂಟಾಯಿತು. ಅಪವಾದವೋ ಎನ್ನುವಂತೆ ಬೌದ್ಧ ಮತ್ತು ಜೈನ ಧರ್ಮಗಳು ಮಾತ್ರ ಸೇಡಿನ ಮತ್ತು ಹಿಂಸೆಯ ಮಾತುಗಳನ್ನಾಡಲಿಲ್ಲ ಅಷ್ಟೆ! ಜೈನ ಮತ್ತು ಬೌದ್ಧ ಧರ್ಮದ ಪ್ರಭಾವದಿಂದ ವೈದಿಕ ಹಿಂಸೆಯು ತಡೆಯಲ್ಪಟ್ಟಿತು. ಆದರೆ ಕ್ಷತ್ರಿಯ ಕ್ಷತ್ರಿಯರೊಳನಡುವೆ ಧಾರ್ಮಿಕ ಯುದ್ಧವು ಈ ದೇಶದಲ್ಲಿ ಸ್ಥಿರವಾಗಿ ನಿಂತಿತು. ಅವರ ಅಂತಃಕಲಹಕ್ಕೆ ಉತ್ತೇಜನ ದೊರೆಯಿತು- ಧರ್ಮಾನಂದ ಕೋಸಂಬಿ.

ಶಿವಶರಣರಲ್ಲಿ ಪುರಾತನರು ಮತ್ತು ನೂತನರು ಎಂದಿದ್ದಾರೆ. ಪುರಾತನರು ತಮಿಳು ನಾಡಿನ ಶಿವಭಕ್ತರು, ನೂತನರ ಕರ್ನಾಟಕದ ವೀರಶೈವ ಶಿವಶರಣರು. ಪುರಾತನರು ಮತು ನೂತನರನ್ನು ಕುರಿತು ಹರಿಹರ ರಗಳೆಗಳನ್ನು ಬರೆದಿದ್ದಾನೆ. ಪುರಾತನರು ಅತ್ಯಂತ ಕಠಿಣ ವ್ರತಸ್ಥರು ಮತ್ತು ಪ್ರಾಚೀನರು. ನೂತನರು ವಚನಕಾರರು ಮತ್ತು ವೀರ ಸಾಧಕರು, ಆಧುನಿಕರು. ಎರಡೂ ವರ್ಗದ ಶರಣರು ತುಳಿದ ಸಾಧನೆಯ ಹಾದಿ ಅತ್ಯಂತ ಕಷ್ಟವಾದುದು. ಶಿವನ ಪರೀಕ್ಷೆಯಲ್ಲಿ ಎರಡೂ ವರ್ಗಗಳು ಗೆದ್ದು ನಿಲ್ಲುತ್ತವೆ. ಎಂಥ ನೋವು ಸಂಕಟಗಳು ಸಂಭವಿಸಿದರೂ ಶಿವಸಾಕ್ಷಾತ್ಕಾರ ಪಥದಿಂದ ವಿಮುಖವಾಗುವುದಿಲ್ಲ. ಅವರಲ್ಲಿ ಉಗ್ರಸಾಧಕರಾದರೆ, ಮತ್ತೆ ಕೆಲವರು ಸೌಮ್ಯ ಸಾಧಕರು (ಸಾತ್ವಿಕ ಸಾಧಕರು) ಅನುಭಾವದಿಂದ ಮಾತ್ರ ಅವರನ್ನು ಅರಿಯುವುದು ಸಾಧ್ಯ. ಅವರು

ಶಿವಸಾಕ್ಷಾತ್ಕಾರಕ್ಕಾಗಿ ಭೌತಿಕ, ಮಾನಸಿಕ ಮತ್ತು ನೈತಿಕ ಹಿಂಸೆಯನ್ನು ಬದುಕಿಗೆ ಆಹ್ವಾನಿಸಿಕೊಂಡವರು ಅವರು ಭಕ್ತಿ ವೀರರು.

ಮುನ್ನಿನ ಕಲಿ ವೀರಧೀರರು ಕಾದಿದ ರಣಗಳನು
ಪರಿಪರಿಯಲಿ ಬಣ್ಣಿಸಿ ಹೇಳಬಹುದಲ್ಲದೆ
ಆ ದಳ ಎದಿರಾದಲ್ಲಿ ಬಿರುದುಪಚಾರಿಸಿ ಕಾದಿ ತೋರಲು ಬಾರದು
ಮುನ್ನಿನ ಪುರುಷ ವ್ರತಿಯರು ಒಲಿಸಿದ ಆಯತವ
ಪರಿಪರಿಯಲು ಬಣ್ಣಿಸ ಬಹುದಲ್ಲದೆ
ಪುರುಷ ನಿರ್ವಾಣಕ್ಕುರಿವಗ್ನಿಯ
ಬಂದು ಹೊಕ್ಕು ತೋರಲು ಬಾರದು
ಮುನ್ನಿನ ಪುರಾತನರೆಲ್ಲರು ತನುಮನಧನವನಿತ್ತು
ಮಾಡಿ ನೀಡಿ ಲಿಂಗವ ಕೂಡಿದ ಪರಿಗಳನು
ಅನುಭಾವದಲರ್ಥೈಸಿ ಹೇಳಬಹುದಲ್ಲದೆ
ಮಾಡಿ ನೀಡಿ ತೋರಲು ಬಾರದು
ಇಂತೀ ಅರೆಬಿರಿದಿನ ಬಂಟರು, ಪುರುಷ ವ್ರತಿಯರು, ಪುರಾತನರು
ಬರಿಯ ಮಾತನಾಡಿ ಹೊರಗೆ ಮೆರೆದವರಲ್ಲ!
ಪರೀಕ್ಷೆಯುಂಟಾಯಿದ್ದಡೆ ಒಳಗಣವರ ಹೆಸರ ಹಿಡಿದು
ಪರಿ ಪರಿಯಲು ಹೊಗಳುವರು
ಶರೀರ ಅರ್ಥ ಪ್ರಾಣ ಗುರು ಲಿಂಗ ಜಂಗಮಕೆ ಪರೀಕ್ಷೆ ಉಂಟಾಗಿಯ
ಆತ ಮಹೇಶ್ವರ ಪುರಾತವಳಿ ಎಂಬ
ಪರಮ ಬಂಧುಗಳಾತನ ನೆನೆನೆನೆದು ಬದುಕುವರು
ಇಂತೀ ಅನುಭಾವದ ಓದಿನ ಅಕ್ಷರಾಭ್ಯಾಸವ
ಸಾಧಿಸಿ ತರ್ಕಿಸಿ ನಿಂದಿಸಲಾಗದು
ಕೂಡಲ ಸಂಗನ ಶರಣರಿಗಲ್ಲದನುಭಾವವಿಲ್ಲ.

ಇದು ಬಸವಣ್ಣನವರು ಕೊಡುವ ಪುರಾತನ ಶರಣಸಾಧಕರ ಚಿತ್ರ. ಅದೇ ಬಸವಣ್ಣನವರು ಪುರಾತನರು ಗಣಪದವಿಗಾಗಿ ಹೋರಾಡಿದ ವ್ಯಾಪಾರಿಗಳು ಎಂದು ಟೀಕಿಸುತ್ತಾರೆ. ಪುರಾತನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಅರ್ಥ ಪ್ರಾಣಾಭಿಮಾನದ ಹೊರಗಿನವುಗಳನ್ನು ಶಿವನಿಗೆ ಕೊಟ್ಟರೇ ಹೊರತು, ತಮ್ಮನ್ನು ಕೊಟ್ಟು ಶಿವನನ್ನು ಒಲಿಸಿಕೊಳ್ಳಲಿಲ್ಲ. ಆದ್ದರಿಂದ ನೂತನ ಶರಣರು ತಮ್ಮನ್ನು ತಾವು ಕೊಟ್ಟು ಶಿವನನ್ನು ಒಲಿಸಿಕೊಂಡ ನಿಷ್ಕಾಮ ಭಕ್ತರು, ಭಕ್ತಿಯ ಕೈಕೂಲಿಕಾರರು ಇವರಲ್ಲ. ಇವರು ಆತ್ಮಸಾಧಕರು. ಭೂಲೋಕದಲ್ಲಿಯೇ ಶಿವಲೋಕದ ಕನಸು ಕಂಡವರು. ಕೈಲಾಸವನ್ನು ತಿರಸ್ಕರಿಸಿದವರು. ಶಿವನ ಸಹವಾಸಕ್ಕಿಂತ ಭೂಮಿಮೇಲಿನ ಶಿವಭಕ್ತರ ಒಡನಾಟ ಬಯಸಿದವರು. ಕೈಲಾಸವನ್ನು ಒಂದು ಹಾಳು ಬೆಟ್ಟ ಎಂದು ಕರೆದು ಧಿಕ್ಕರಿಸಿದ ಕಲಿಗಳು.

ಅರ್ಥವನರ್ಥವ ಮಾಡಿ ಕೋಳಾಹಳಂ ಗೈಯ್ಯುತಿರಲಿ
ಹುಟ್ಟಿದ ಮಕ್ಕಳು ನವಖಂಡವ ಮಾಡಿ ಕಡಿಯುತ್ತಿರಲಿ
ಮುಟ್ಟುವ ಸ್ತ್ರೀಯ ಕಣ್ಣ ಮುಂದೆ
ಅಭಿಮಾನಂಗೊಂಡು ನೆರೆವುತಿರಲಿ
ಇಂತೀ ತ್ರಿವಿಧವು ಹೊರಗಣವು
ಇನ್ನೆನ್ನಂಗದ ಮೇಲೆ ಬರಲಿ ಹಿಡಿ ಖಂಡವ ಮಾಡಿ ಕೊಯ್ಯಲಿ
ಇಕ್ಕುವ ಶೂಲ ಪ್ರಾಪ್ತಿಸಲಿ
ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ
ಮತ್ತೆಯೂ ಲಿಂಗಾರಾಧನೆಯ ಮಾಡುವೆ
ಜಂಗಮಾರಾಧನೆಯ ಮಾಡುವೆ ಪ್ರಸಾದಕ್ಕೆ ತಪ್ಪೆ!
ಇಂತಪ್ಪ ಭಾಷೆ ಕಿಂಚಿತ್ತೂ ಹುಸಿಯಾದಡೆ
ನೀನಂದೆ ಮೂಗ ಕೊಯಿ ಕೂಡಲ ಸಂಗಮ ದೇವಾ.

ಪುರಾತನ ಮತ್ತು ನೂತನ ಶರಣರ ಸಾಧನೆಯ ಬದುಕಿನ ಹಿಂಸೆಯ ಭಾಷೆ ಧಾರ್ಮಿಕ ಕ್ಷೇತ್ರದಲ್ಲಿ ಅತ್ಯಂತ ಅಪೂರ್ವವಾಗಿ ಪ್ರಯೋಗವಾಗಿದೆ. ವೀರಶ್ರೀ ಯುಕ್ತಿ ಶ್ರೀ ಯಾಗಿದೆ. ಇಂಥ ಶರಣರು ಅತ್ಯಂತ ಕ್ರೂರವಾದ ಕರ್ಮದೊಂದಿಗೂ ಹೋರಾಡಿ ಜಯಗಳಿಸಿದ್ದಾರೆ. ಅತ್ತ ಶಿವನ 'ಕೂಟ'ಕ್ಕೆ ಇತ್ತ ಕರ್ಮದ ಬಿಡುಗಡೆಗೆ ಹೋರಾಡುವ ದೀಕ್ಷಾಬದ್ಧ ಶರಣರು ರಣಕಲಿಗಳು! ಭಕ್ತಿ ಶರಣರ ಬದುಕಿಗೆ ಅತ್ತ ಹೋಗುತ್ತ, ಇತ್ತ ಬರುತ್ತ ಕುಯ್ಯುವ ಗರಗಸವಾಯಿತು. ಕರ್ಮವನ್ನು ಈ ಜನ್ಮದಲ್ಲಿಯೇ ಗೆದ್ದು ಜನ್ಮಾಂತರಗಳಿಂದ ಬಿಡುಗಡೆಯಾಗುವ ಆತ್ಮವಿಶ್ವಾಸ ನೂತನ ಶಿವಶರಣರ ವೀರ ಭಾಷೆ.

ಕರ್ಮವೆಂಬ ಅಂಕದೊಡನೆ ತೊಡರಿದೆ
ಭಿನ್ನಪವ ಅವಧಾರು
ನಿಮ್ಮಾಳಿನ ಭಾಷೆಯ ಕಳಗುಳಕ್ಕೆ ನೂಂಕುವೆ
ಕೆಡಹುವೆ ನಂಕವ
ಕರೆದಡೋ ಎನಿಸದಡೆ ನಿಮ್ಮಾಳಲ್ಲ
ಶಿವಶರಣೆಂಬ ದಂಡೆಯ ಹೂಡಿ
ಗಣ ಮೇಳಾಪವೆಂಬಲಗಿನಿಂದಿರಿವೆ ಕೂಡಲ ಸಂಗಮದೇವಾ

ಅಂತರಂಗ ಯುದ್ಧದ ವೀರಾಲಾಪದ ಉಪಮೆ ರೂಪಕಗಳಲ್ಲಿ ಧ್ವನಿಪೂರ್ಣವಾಗಿ ತಮ್ಮ ಸಾಧನೆಯ ಅನುಭಾವವನ್ನು ಶಬ್ದಸೋಪಾನವಾಗಿ ಕಟ್ಟಿದ್ದಾರೆ. ಬಸವಣ್ಣನವರು ಬಳಸಿರುವ ಬೇಟೆಯ ರೂಪಕವು ಶಕ್ತಿಯುತವಾಗಿ ತುಂಬಾ ಅರ್ಥವತ್ತಾಗಿದೆ.

ಬೆಟ್ಟಕ್ಕೆ ಬೆಳ್ಳಾರ ಸುತ್ತಿತಯ್ಯಾ
ಪಾಪದ ಬಲೆಯ ತಂದು ಮುಂದೆ ಒಡ್ಡಿದರಯ್ಯಾ
ಬೇಟೆಕಾರನು ಮೃಗವಟ್ಟಿ ಬರಲು ಮೃಗ ಗೋರಿಗೊಳಗಾಗದಯ್ಯಾ

ಅಭಿವಂದನಾ

ಹರನೊಡ್ಡಿದ ಬಲೆಯಲ್ಲಿ ಸಿಲುಕಿದ ಮೃಗವು
ಕೂಡಲ ಸಂಗಮದೇವಂಗೆ ಓಗರವಾಯಿತ್ತು.

ಶರಣರು ಆಧ್ಯಾತ್ಮಿಕ ವಿಷಯದಲ್ಲಿ ಇಂಥ ದಿಟ್ಟ ನಿಲವು ತಾಳಿದರೆ, ಸಾಮಾಜಿಕ ವಿಷಯಗಳಲ್ಲಿ ಶರಣರಿಂದ ತೀವ್ರ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿವೆ. ಬಡ ಜಂಗಮರನ್ನು ಶ್ರೀಮಂತ ಭಕ್ತರು ಕೆಳವರ್ಗದ ಶರಣರನ್ನು ಜಂಗಮರು-ಅವಮಾನಿಸಿ ಕಿರುಕುಳಕೊಟ್ಟಿರುವುದು ವಚನಗಳಿಂದ ತಿಳಿದು ಬರುತ್ತದೆ. ಒಟ್ಟಿನಲ್ಲಿ ಮತಾಂತರಿ ಕೆಳವರ್ಗದ ಶಿವಶರಣರು ಮತ್ತು ಭವಿಗಳು ಶಿವಶರಣರಿಂದ ಅವಮಾನಿತರಾಗಿರುವುದಂತೂ ಸ್ಪಷ್ಟವಾಗಿ ವಚನಗಳಲ್ಲಿ ಕಂಡು ಬರುತ್ತದೆ. ಮತ್ತು ಶಿವ ಶರಣರ ಸಾಧನೆಯನ್ನು ಬ್ರಾಹ್ಮಣರ ಶಾಸ್ತ್ರ ಸಾಧನೆಗೆ ಸಮಾನವಾಗಿ ಪರಿಗಣಿಸುವ ಮಾತುಗಳಂತೂ ಹೆಚ್ಚು ಅನುಮಾನಕ್ಕೆ ಅವಕಾಶವಾಗುತ್ತದೆ. ಅದೂ ಅಲ್ಲದೆ ದೇಹ ಮತ್ತು ಆತ್ಮಗಳ ಸಂಬಂಧ ಕುರಿತು ಚರ್ಚಿಸುವುದು ವೈದಿಕ ಪರಂಪರೆಗಿಂತ ಹೇಗೆ ಭಿನ್ನ ಎನ್ನಿಸದಿರದು, ಇದು ಚನ್ನಬಸವಣ್ಣನ ವಚನದ ಪರಿಶೀಲನೆಯಿಂದ ಸ್ಪಷ್ಟವಾಗುತ್ತದೆ.

ಹಸಿವು ತೃಷೆ ರೋಗಾದಿ ಬಾಧೆಗಳು
ತನಗಾಗುತ್ತಿಹವೆಂಬ ಜೀವ ಭಾವವ ಮರೆದು
ಅವು ಲಿಂಗದ ಸದಿಚ್ಛೆಯಿಂದ ಅಂಗಕ್ಕುಂಟಾಗಿಹವೆಂಬ
ಶಿವಭಾವವ ಸದಾ ಸನ್ನಿಹಿತವಾಗಿದ್ದಡೆ
ಶರಣನ ಹಸಿವು ತೃಷೆ ಮುಂತಾದವು ಸರ್ವ ಭಂಗವು

ಆತ್ಮನಿಗೆ ಯಾವ ವಿಕಾರವೂ ತಟ್ಟುವುದಿಲ್ಲ. ಅದೆಲ್ಲವೂ ದೇಹದ ಗುಣ. ಆತ್ಮ ನಿರ್ಲಿಪ್ತ. ಆತ್ಮಕ್ಕೆ ಯಾವ ದೇಹ ಬಾಧೆಯೂ ಇರುವುದಿಲ್ಲ. ಎನ್ನುವುದು ಶ್ರೀ ಕೃಷ್ಣನ ದೇಹ ಮತ್ತು ಆತ್ಮತತ್ತ್ವ ಸಿದ್ಧಾಂತಕ್ಕೂ ಭಿನ್ನವಿಲ್ಲ. ಆತ್ಮವಾದಿಗಳು ಹಿಂಸೆ ಕೇವಲ ದೇಹಕ್ಕೆ ಅನ್ವಯಿಸುವುದು ಎನ್ನುವ ಮಾತು ಮತ್ತೆ ಸಮಾಜದ ಭೇದಕ್ಕೆ ಎಡೆ ಮಾಡಿಕೊಡುವುದಕ್ಕೆ ಅವಕಾಶವಾದಂತಾಯಿತು. ಇದಕ್ಕೆ ವಚನಗಳ ಮತ್ತಷ್ಟು ಅಧ್ಯಯನ ಅಗತ್ಯ.

ಕ್ರಮೇಣ ವೀರಶೈವರಲ್ಲಿ ಎರಡು ಸಂಪ್ರದಾಯಗಳು ಪ್ರಚಲಿತವಾದವು. ಒಂದು ವೀರಭದ್ರ ಸಂಪ್ರದಾಯ, ಮತ್ತೊಂದು ಅಲ್ಲಮ ಸಂಪ್ರದಾಯ. ವೀರಭದ್ರ ಸಂಪ್ರದಾಯ ಪ್ರಾಚೀನವಾದದು ಮತ್ತು ಪುರಾತನರಲ್ಲಿ ಕೆಲವರು ಅದಕ್ಕೆ ಸೇರಿದ್ದಾರೆ. ಅಲ್ಲಮನ ಸಂಪ್ರದಾಯ ನೂತನ ಶರಣರ ಮಾರ್ಗ, ಪುರಾತನ ಶರಣರಲ್ಲಿಯೂ ಕೆಲವರಲ್ಲಿ ಅಲ್ಲಮನ ಸಂಪ್ರದಾಯದ ಲಕ್ಷಣಗಳನ್ನು ಗುರುತಿಸಬಹುದಾಗಿದೆ. ಶಿವ ಕಪಾಲಿ ಎಂದು ಕರೆದು, ದಕ್ಷಬ್ರಹ್ಮ ಅವನನ್ನು ಯಜ್ಞಕ್ಕೆ ಕರೆಯದೆ ಅವಮಾನಿಸಿದನು. ಶಿವನ ಆಜ್ಞೆಯಂತೆ ವೀರಭದ್ರ ದಕ್ಷನ ಯಜ್ಞವನ್ನು ಧ್ವಂಸಮಾಡಿದನು. ಅದು ಯಜ್ಞಭಾಗದ ಹಕ್ಕಿಗಾಗಿ ವೀರಭದ್ರ ಮಾಡಿದ ಯುದ್ಧ. ಅದರಲ್ಲಿ ವಿಷ್ಣುಭಕ್ತರಿಗೆ ಸೋಲಾಗುತ್ತದೆ. ಶಿವನಿಂದೆಗೆ

ದಕ್ಷ ಬ್ರಹ್ಮನಿಗೆ ಶಿಕ್ಷೆಯಾಗುತ್ತದೆ. ಶಿವಶರಣರ ಗಣಾಚಾರದಲ್ಲಿ ವೀರಭದ್ರ ಸಂಪ್ರದಾಯ ಅಸ್ತಿತ್ವ ಕಂಡುಕೊಳ್ಳುತ್ತದೆ. ಸೋಮನಾಥ ಚರಿತೆಯ ಆದಯ್ಯ ಮತ್ತು ಅಬ್ಬಲೂರು ಚರಿತೆಯ ಏಕಾಂತದ ರಾಮಯ್ಯ ವೀರಭದ್ರ ಸಂಪ್ರದಾಯದವರು. ಅವರುಗಳಿಂದ ಜೈನ ಬಸದಿಗಳು ನಾಶವಾಗುತ್ತವೆ. ಶಿವಶರಣರ ಗಣಾಚಾರದ ಸೈನ್ಯವೇ ಇತ್ತೆಂಬ ಅಂಶ ವೀರಭದ್ರ ಸಂಪ್ರದಾಯದಿಂದ ಸ್ಪಷ್ಟವಾಗುತ್ತದೆ. ಅಹಿಂಸಾ ಧರ್ಮಿಗಳಾದ ಜೈನರು ಹಿಂಸಾರಭಸ ಮತಿಗಳಾಗಿ ಗಣಾಚಾರ ಸೈನ್ಯದೊಂದಿಗೆ ಹೋರಾಡಿದರು ಎಂದು ವೀರಶೈವ ಕಾವ್ಯಗಳು ವರ್ಣಿಸುತ್ತವೆ. ವೀರಭದ್ರನನ್ನು ಕುರಿತೇ ಹಲವು ಕಾವ್ಯಗಳು ಕನ್ನಡದಲ್ಲಿ ರಚಿತವಾಗಿವೆ. ಶಿವನಿಂದಕರ ನಾಶವೇ ವೀರಭದ್ರ ಸಂಪ್ರದಾಯದ ಗುರಿಯಾಯಿತು. ವೃತ್ತಿ ಧಾರ್ಮಿಕ ಸೈನಿಕರಿಗೆ ಶಿವಭಕ್ತಿ ಪಂಥದಲ್ಲಿ ಅವಕಾಶವಾಯಿತು.

ವೀರಭದ್ರ ಸಂಪ್ರದಾಯದ ಸಂಘಟಿತ ಧಾರ್ಮಿಕ ಸೈನ್ಯ ಅನ್ಯಮತೀಯರಿಗೆ ಭೀತಿ ಹುಟ್ಟಿಸದಿರಲು ಸಾಧ್ಯವೆ? (ವಿಷ್ಣುಭಕ್ತಿಯೂ ಇದಕ್ಕೆ ಅಪವಾದವಲ್ಲ). ವೀರಶೈವ ಧಾರ್ಮಿಕ ತಂಡ, ರಾಜರುಗಳ ಬಲಕ್ಕೆ ಅಂದು ಸವಾಲೇ ಸರಿ. ಕೆಲವು ಸಂದರ್ಭಗಳಲ್ಲಿ ವೀರಶೈವರ ಪರನಿಂದೆಯ ನೀತಿಗೂ ಮತ್ತು ರಾಜರ ಲೌಕಿಕ ನೀತಿಗೂ ಘರ್ಷಣೆ ಅನಿವಾರ್ಯ. ಆಗ ದುರ್ಬಲ ದೊರೆಗಳ ರಾಜಕೀಯ ನೀತಿಯಲ್ಲಿ ಧರ್ಮದ ಪ್ರಭಾವ ಮೇಲುಗೈ ಸಾಧಿಸುತ್ತದೆ. ವೀರಭಕ್ತಸಂಪ್ರದಾಯದ ವೀರಶೈವ ಕಾವ್ಯಗಳಲ್ಲಿ ವೀರ ಶರಣರ ಮುಂದೆ ರಾಜರುಗಳು ನಿಸ್ಸಹಾಯಕರು ಮತ್ತು ದುರ್ಬಲರು. ಗಣಾಚಾರ ಶರಣರದೇ ಮೇಲುಗೈ. ಧರ್ಮರಕ್ಷಣೆಯಲ್ಲಿ ಗಣಾಚಾರ ಹಿಂಸೆಯ ಬಳಕೆಗೆ ಅವಕಾಶ ಮಾಡಿಕೊಟ್ಟಿತು. ಧರ್ಮದಲ್ಲಿಯೇ ಹಿಂಸೆಗೆ ಮಾನ್ಯತೆ ದೊರೆತು, ನೀತಿಯ ಪ್ರಶ್ನೆ ಅತ್ಯಂತ ಸೂಕ್ಷ್ಮವಾಗುತ್ತದೆ. (ವಿಷ್ಣುಭಕ್ತಿಗೂ ಈ ಮಾತು ಅನ್ವಯಿಸುತ್ತದೆ). ಉಗ್ರವಾದಿ ಧರ್ಮವಾಗುವ ಅಪಾಯವಿದೆ. ಹಿಂಸೆಯಲ್ಲಿ ವೀರಭದ್ರ ಮಾದರಿಯೊಂದು ವಿಶಿಷ್ಟವಾಯಿತು. ಹಿಂಸೆ ಧರ್ಮದಲ್ಲಿಯೇ ಅಸ್ತಿತ್ವ ಪಡೆದುದೇ ವೀರಭದ್ರಮಾದರಿ ಹಿಂಸೆಯ ವೈಶಿಷ್ಟ್ಯ.

ವೀರಭದ್ರ ಸಂಪ್ರದಾಯ ಹಿಂಸಾಮಾರ್ಗ ಹಿಡಿದರೆ ಅಲ್ಲಮ ಸಂಪ್ರದಾಯ ಅಹಿಂಸಾ ಮಾರ್ಗ ಹಿಡಿಯಿತು. ಕರಣಗಳ ಮೇಲೆ ವಿಜಯ ಸಾಧಿಸುವುದೇ ಅಲ್ಲಮನ ಸಂಪ್ರದಾಯ. ಅದು ಒಳಗೆ ರಣರಂಗ, ಹೊರಗೆ ಶೃಂಗಾರದ ಹಾದಿ ಹಿಡಿಯಿತು.

> **ಕಾಳಗದ ಕಥೆಯಲ್ಲ ವಿಷಯಗ**
> **ಳೇಳಿಗೆಯ ವಿಧಿಯಲ್ಲ ಹೊಟ್ಟೆಯ**
> **ಹೂಳಿಕೆಯಲಿ ಹಿಂಸೆಯನು ಮಾಡುವ ಹೊಲಬುತಾನಲ್ಲ**
> **ಕಾಳಗವು ಕರಣದಲಿ ಸುರತದ**
> **ಕೀಲು ಕುಂಡಲಿಯಲ್ಲಿ ತೃಪ್ತಿಯ**
> **ದಾಳಿ ಗಗನದೊಳೆಂದು ಪೇಳುವುದೀ ಸುಬೋಧೆಯಲಿ ಚಾಮರಸ**

ಶಿವನ ನಿಷ್ಕಲರೂಪ ಅಲ್ಲಮ. ಅವನು ಮಾಯೆಗೆ ಮರುಳಾಗುವುದಿಲ್ಲ. ಈ ಸಂಪ್ರದಾಯದ ಶರಣರ ಮುಂದೆ ಮಾಯೆ ಮತ್ತು ಮನ್ಮಥರು ಸೋಲನ್ನು ಅನುಭವಿಸುತ್ತಾರೆ. ಪ್ರಭುಲಿಂಗಲೀಲೆಯ ಅಲ್ಲಮ, ಮಾಯೆಯರ ಪ್ರಸಂಗ, ಸಿದ್ಧರಾಮ ಚರಿತೆಯ ಸಿದ್ಧರಾಮ-ಮನ್ಮಥ ಪ್ರಸಂಗಗಳೇ ಇದಕ್ಕೆ ಸಾಕ್ಷಿ. ಬಾಹ್ಯ ಭಕ್ತಿಯನು ಅಲ್ಲಮ ಸಂಪ್ರದಾಯ ಖಂಡಿಸುತ್ತದೆ.

ಖ್ಯಾತ ಪೂಜಾ ಲಾಭದಾಶಾ
ಪ್ರೀತಿಯಿಂದಲಿ ದಾನ ಧರ್ಮ
ವ್ರಾತವನು ಮಾಡಿದಡೆ ಬಿತ್ತಿದ ಬೆಳೆಯನುಂಬಂತೆ
ಆ ತುಂಬದ ಸಮಸ್ತ ಭೋಗವ
ನೋತು ಭೋಗಿಸುತಿರ್ಪರಲ್ಲದೆ
ಮಾತು ಮಾತಿಗೆ ಮುಕ್ತರುಂಟೇ ರಾಮಕೇಳೆಂದ.
ಪ್ರಭುಲಿಂಗಲೀಲೆ.

ಅಲ್ಲಮನ ಸಂಪ್ರದಾಯದಲ್ಲಿ ಗೊಗ್ಗಯ್ಯನ ಕೃಷಿ ಕಾಯಕವೂ ಸಾವು ನೋವಿನದಾಗುತ್ತದೆ. ಗಿಡಮರಗಳೂ ಹಿಂಸೆಗೆ ಒಳಗಾಗುತ್ತವೆ.

ಗಿಡವಳುಕಿ ಹೂ ಪತ್ರಗೋಸುಗ
ಮಡುನಡುಗಿ ಅಗ್ಘವಣಿಗೋಸುಗ
ಕಡಿದುಪಾಹಾರಕ್ಕೆ ಸಕಳೌಷಧಿ ವನಸ್ಪತಿಯ
ಕೆಡಿಸುತೀ ಪರಿ ಹೆರರುಗಳ ತ
ನ್ನೊಡಲ ವಂಚಿಸಿ ಬಾಹ್ಯ ಭಕ್ತಿಯ
ನಡೆವವರ ನಾಮೆಚ್ಚೆನ್ನೆ ಬಸವಣ್ಣ ಕೇಳೆಂದ ಪ್ರಭುಲಿಂಗ ಲೀಲೆ.

'ಕೊಂದವಗೆ ಕೊಲೆ ತಪ್ಪದು' ಎಂದು ಸಾರುವ ಅಲ್ಲಮ ಸಂಪ್ರದಾಯ ಕಾಯದಲಿ ಕಲಿತನ ಮೆರೆಯುವುದೇ ಆಗಿದೆ:

ಲಲನೆಯರ ನಯನ ಬಾಣಕ್ಕಳುದಿಪ್ಪವಂ
ಕಲಿ ಕೋಪಗಿಚ್ಚನೊತ್ತರಿಸುವಂ ಕಲಿ ಲೋಭ
ದಲಗಿಂಗೆ ತೆರಳದವ ಕಲಿ ಮೋಹ ಸಂಕಲೆಯ ಮುರಿದುಕೊಳಲಾ ಪಂಕಲಿ
ಬಲಿದ ಮದ ಮತ್ಸರಾರಣ್ಯದಲಿ ತೊಳಲದಂ
ಕಲಿಯು ವಿದ್ಯಾರಿಪು ಬಲಕ್ಕೆ ಬೆಂಗೊಡದವಂ
ಕಲಿಯಿವೆಲ್ಲವನುಳ್ಳ ನೀವೇ ಕಲಿಯಲ್ಲದಿನ್ನಿಳೆಯೊಳಾರುಂಟೆಂದನು
ಸಿದ್ಧಾರಾಮ ಚರಿತೆ ಸಂಗ್ರಹ

ಅಲ್ಲಮನ ಸಂಪ್ರದಾಯ ಪವಾಡಗಳನ್ನು ಒಪ್ಪುವುದಿಲ್ಲ. ಅಲ್ಲಮ ಸಿದ್ಧರಾಮನ ಕಾರ್ಯಗಳನ್ನು ಜರೆಯುತ್ತಾನೆ. ಆಗ ಸಿದ್ಧರಾಮ ಕೋಪದಿಂದ ಹಣೆಗಣ್ಣನ್ನು ಕಿಡಿ

ಕೆದರುವುದಾಗಿ ಅಲ್ಲಮನನ್ನು ಬೆದರಿಸುತ್ತಾನೆ. ಅದಕ್ಕೆ ಅಲ್ಲಮ 'ನೊಸಲ ಕಣ್ಣಿನ ಬೇಗೆಯಲಿ ಮುನ್ನೆನಿತ ಕೊಂದೆಯೊ' ಎಂದು ಹೇಳಿ 'ಯೋಗಿಯಹುದೈ ನೀನು ಹಿಂಸಾಧರ್ಮ ಕರ್ಮದಲಿ' ಎಂದು ಜಡಿದು ನುಡಿಯುತ್ತಾನೆ. ಅಲ್ಲದೆ ಕಾಪಾಲಿಕ ಮಾರ್ಗದ ಗೋರಕ್ಷಕನ 'ಕಾಯ ಸಿದ್ಧಿಯ' ಸಾಧನೆಯನ್ನು ಅಲ್ಲಗಳೆಯುತ್ತಾನೆ. ಅಂಥ ಕಾಯಸಾಧನೆಯೂ ಮಾಯೆಯಿಂದ ಕೂಡಿರುತ್ತದೆ ಎಂದು ಹೇಳಿ ತನ್ನ ಬಯಲ ದೇಹದ 'ಕುರುಹನ್ನು' ಗೊಗ್ಗಯ್ಯನಿಗೆ ತೋರಿಸಿ ಮಾರ್ಗದರ್ಶನ ಮಾಡುತ್ತಾನೆ. ಅಲ್ಲಮ-ಗೋರಕ್ಷಕರ ಸಂವಾದ ಕೃಷ್ಣ-ಅರ್ಜುನರ ಸಂವಾದವನ್ನು ನೆನಪಿಗೆ ತರುತ್ತದೆ. ಇಲ್ಲಿನ ದೇಹ ಆತ್ಮಗಳ ಸಂಬಂಧದ ಜಿಜ್ಞಾಸೆ, ಕೃಷ್ಣ ಕೊಡುವ ವಿವರಣೆಗಿಂತ ಭಿನ್ನವಾಗುವುದಿಲ್ಲ. ಆದರೆ ಕೃಷ್ಣ ಬೋಧಿಸಿದ್ದು ಹಿಂಸಾಮಾರ್ಗ. ಅಲ್ಲಮ ಗೋರಕ್ಷಕನಿಗೆ ಬೋಧಿಸಿದುದು ಅಹಿಂಸಾ ಮಾರ್ಗ. ಅಂತೂ ಧರ್ಮ ಸಾಧನೆಗೆ ಅನ್ಯರ ದಂಡನೆ ಅಥವಾ ಸ್ವಯಂ ದೇಹ ದಂಡನೆಯಾದರೂ- ಹಿಂಸೆಯೇ ಸಾಧನೆಯ ಸೋಪಾನಗಳು! ಅಲ್ಲಮ ಸಂಪ್ರದಾಯ ಬೌದ್ಧ ಧರ್ಮದ ಸಂಪ್ರದಾಯದ ಮಾದರಿಯನ್ನೇ ಅನುಸರಿಸುತ್ತದೆ. ಬೌದ್ಧ ಧರ್ಮದಲ್ಲಿ ಕಾಮ, ಕ್ರೋಧ, ಲೋಭ, ಮೋಹ ಮದಾದಿ ದುರ್ಗುಣಗಳನ್ನು ಮೂರ್ತಗೊಳಿಸಿ ಆ ದುಷ್ಟ ಪಾತ್ರಗಳೊಂದಿಗೆ ಬುದ್ಧ ಹೋರಾಡುವಂತೆ ಚಿತ್ರಿಸಲಾಗಿದೆ. ಬುದ್ಧ ಮತ್ತು ಮಾರರ ಹೋರಾಟವೇ ಇದಕ್ಕೆ ಸಾಕ್ಷಿ. ಅದೇ ರೀತಿ ವೀರಶೈವ ಸಾಹಿತ್ಯದ ಅಲ್ಲಮಪ್ರಭು ಸಂಪ್ರದಾಯದಲ್ಲಿ ತಾಮಸಿಕ ಕಳೆ ಮಾಯೆಯಾಗಿ ಅಲ್ಲಮನೊಂದಿಗೆ, ಮನ್ಮಥ ಮಾಯಾರೂಪವೊಂದನ್ನು ಸೃಷ್ಟಿಸಿ ಸಿದ್ಧರಾಮನೊಂದಿಗೆ ಹೋರಾಟ ನಡೆಸಿ ಸೋತಿರುವುದು ಕಂಡು ಬರುತ್ತದೆ. ಹೀಗಾಗಿ ಅಲ್ಲಮ ಸಂಪ್ರದಾಯ ಬೌದ್ಧ ಧರ್ಮ ಸಂಪ್ರದಾಯದ ಮಾದರಿಯಲ್ಲಿಯೇ ಅಂತರ್ಗತವಾಗಿದೆ.

***

